ಕರ್ನಾಟಕ ಸರ್ಕಾರ

ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಅವರ

# ಸಮಗ್ರ ಬರೆಹಗಳು

ಮತ್ತು

# ಭಾಷಣಗಳು



೪

ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಮತ್ತು

ಕುವೆಂಪು ಭಾಷಾ ಭಾರತಿ ಪ್ರಾಧಿಕಾರ

ಕಲಾಗ್ರಾಮ, ಜ್ಞಾನಭಾರತಿ, ಬೆಂಗಳೂರು ವಿಶ್ವವಿದ್ಯಾಲಯ ಆವರಣ ಹಿಂಭಾಗ

ಮಲ್ಲತ್ತಹಳ್ಳಿ, ಬೆಂಗಳೂರು-560 056

ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಪ್ರಕಟಣೆ - ೯೧
ವಿಚಾರ ಸಾಹಿತ್ಯಮಾಲೆ - ೧೩

# ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರ
# ಸಮಗ್ರ ಬರೆಹಗಳು

ಮತ್ತು

# ಭಾಷಣಗಳು

ಸಂಪುಟ ೪

## ಸಂಪಾದನ ಸಮಿತಿ


| | |
|---|---|
| **ಅಧ್ಯಕ್ಷರು,** ಕುವೆಂಪು ಭಾಷಾ ಭಾರತಿ ಪ್ರಾಧಿಕಾರ | ಅಧ್ಯಕ್ಷರು |
| **ಡಾ. ಸಿದ್ಧಲಿಂಗಯ್ಯ** | ಸದಸ್ಯರು |
| **ಡಾ. ದೇವನೂರ ಮಹದೇವ** | ಸದಸ್ಯರು |
| **ನಿರ್ದೇಶಕರು,** ಕನ್ನಡ ಮತ್ತು ಸಂಸ್ಕೃತಿ ಇಲಾಖೆ | ಸದಸ್ಯ ಕಾರ್ಯದರ್ಶಿಗಳು |

# ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರ
# ಸಮಗ್ರ ಬರೆಹಗಳು
ಮತ್ತು
# ಭಾಷಣಗಳು
(ಸಂಪುಟ ೪)

**ಕನ್ನಡ ಮತ್ತು ಸಂಸ್ಕೃತಿ ಇಲಾಖೆ**
ಮತ್ತು
**ಕುವೆಂಪು ಭಾಷಾ ಭಾರತಿ ಪ್ರಾಧಿಕಾರ**
ಕಲಾಗ್ರಾಮ, ಜ್ಞಾನಭಾರತಿ
ಬೆಂಗಳೂರು ವಿಶ್ವವಿದ್ಯಾಲಯ ಆವರಣದ ಹಿಂಭಾಗ, ಮಲ್ಲತ್ತಹಳ್ಳಿ
ಬೆಂಗಳೂರು – ೫೬೦ ೦೫೬

**Dr. Baba Saheb Ambedkar Avara Samagra Barehagalu Mattu Bhashanagalu: Samputa 4** — Kannada translation of Collected Works of Baba Saheb Ambedkar; Published by **Kannada Mattu Samskruti Ilakhe**; **Kuvempu Bhasha Bharati Pradhikara**, Kalagrama, Jnanabharathi, Behind Bangalore University Campus, Mallattahalli, Bangalore - 560 056; Third Edition : 2015; Pp. xxii + 530; Price: Rs. 50/-.

© : ಹಕ್ಕುಗಳನ್ನು ಕಾದಿರಿಸಿದೆ

ಮೂರನೇ ಮುದ್ರಣ : ೨೦೧೫
ಪುಟಗಳು : xxii + ೫೩೦
ಬೆಲೆ : ರೂ. ೫೦/–
ಪ್ರತಿಗಳು : ೫೦೦೦

ಪ್ರಕಾಶಕರು :
**ಕನ್ನಡ ಮತ್ತು ಸಂಸ್ಕೃತಿ ಇಲಾಖೆ**
ಮತ್ತು
**ಕುವೆಂಪು ಭಾಷಾ ಭಾರತಿ ಪ್ರಾಧಿಕಾರ**
ಕಲಾಗ್ರಾಮ, ಜ್ಞಾನಭಾರತಿ
ಬೆಂಗಳೂರು ವಿಶ್ವವಿದ್ಯಾಲಯ ಆವರಣದ ಹಿಂಭಾಗ
ಮಲ್ಲತ್ತಹಳ್ಳಿ, ಬೆಂಗಳೂರು – ೫೬೦ ೦೫೬
ದೂ. : ೨೩೧೮೩೩೧೧, ೨೩೧೮೩೩೧೨

ಮುಖಪುಟ ವಿನ್ಯಾಸ ಮತ್ತು ಚಿತ್ರ : **ಮೆ॥ ರಾಜಾ ಪ್ರಿಂಟರ್ಸ್**

**ISBN : 978-81-906513-5-6**

ಮುದ್ರಕರು :
**ಮೆ॥ ರಾಜಾ ಪ್ರಿಂಟರ್ಸ್**
ನಂ. ೫೯, ೪ನೇ ಕ್ರಾಸ್, ಲಾಲ್‌ಬಾಗ್ ರಸ್ತೆ
ಕೆ.ಎಸ್. ಗಾರ್ಡನ್, ಗಂಗಾಧರಪ್ಪ ಬ್ಲಾಕ್
ಬೆಂಗಳೂರು – ೫೬೦ ೦೨೭
ದೂ: ೦೮೦–೨೨೨೩೪೦೬೬, ೦೮೦–೨೨೨೧೯೯೬೫

ಕರ್ನಾಟಕ ಸರ್ಕಾರ

**ಸಿದ್ದರಾಮಯ್ಯ**
ಮುಖ್ಯಮಂತ್ರಿಗಳು

ವಿಧಾನಸೌಧ
ಬೆಂಗಳೂರು – ೫೬೦ ೦೦೧

ಸಿಎಂ/ಪಿಎಸ್/೧೫೦/೨೦೧೫

ದಿನಾಂಕ : ೦೫.೦೬.೨೦೧೫

## ಸಂದೇಶ

ಆಧುನಿಕ ಕನ್ನಡ ಸಾಹಿತ್ಯದ ಅತ್ಯುನ್ನತ ಸಾಹಿತ್ಯಕ ಸಾಧನೆಯ ಪ್ರತೀಕವಾಗಿರುವ ರಾಷ್ಟ್ರಕವಿ ಡಾ. ಕುಪ್ಪಳಿ ವೆಂಕಟಪ್ಪ ಪುಟ್ಟಪ್ಪ ಅವರ ಹೆಸರಿನಲ್ಲಿ ಸ್ಥಾಪಿತವಾಗಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರವು ಸಾಹಿತ್ಯಕ, ಸಾಂಸ್ಕೃತಿಕ, ವೈಜ್ಞಾನಿಕ ಮತ್ತು ತಾಂತ್ರಿಕ ಮಹತ್ವದ ಗ್ರಂಥಗಳನ್ನು ಹೊರತರುವ ದಿಕ್ಕಿನಲ್ಲಿ ಹೊಸ ದಾಖಲೆಯನ್ನು ಸ್ಥಾಪಿಸುತ್ತ ಮುನ್ನಡೆಯುತ್ತಿರುವುದು ಅತ್ಯಂತ ಸಂತಸದ ಸಂಗತಿಯಾಗಿದೆ.

ವಿವಿಧ ವಿದೇಶೀ ಮತ್ತು ಭಾರತೀಯ ಭಾಷೆ–ಸಾಹಿತ್ಯಗಳ ಅತ್ಯುತ್ತಮ ಕೃತಿಗಳನ್ನು ಕನ್ನಡ ಭಾಷೆಯಲ್ಲಿ ಹಾಗೂ ಕನ್ನಡದ ಶ್ರೇಷ್ಠ ಕೃತಿಗಳನ್ನು ಇತರ ಭಾಷೆಗಳಲ್ಲಿ ಹೊರತರುತ್ತಿರುವ ನಮ್ಮ ಕುವೆಂಪು ಭಾಷಾ ಭಾರತಿ ಪ್ರಾಧಿಕಾರವು ರಾಷ್ಟ್ರ ಪ್ರಶಸ್ತಿ ಪುರಸ್ಕೃತ ಲೇಖಕರ ಹಾಗೂ ಕನ್ನಡದ ಇತರ ಪ್ರತಿಷ್ಠಿತ ಲೇಖಕರ ಅತ್ಯುತ್ತಮ ಪ್ರಾತಿನಿಧಿಕ ರಚನೆಗಳ ಸಂಚಯಗಳನ್ನು ಹೊರತರುತ್ತಿರುವುದು ಅಭಿನಂದನೀಯ ಮತ್ತು ಅನುಕರಣ ಯೋಗ್ಯ. ಕುವೆಂಪು, ಪು. ತಿ. ನರಸಿಂಹಾಚಾರ್ ಮತ್ತು ಜಿ. ಎಸ್. ಶಿವರುದ್ರಪ್ಪ ಅವರ ಸಂಚಯಗಳನ್ನು ಈಗಾಗಲೇ ಪ್ರಕಟಿಸಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರವು ಇನ್ನಿತರ ಜ್ಞಾನಪೀಠ ಪ್ರಶಸ್ತಿ ಹಾಗೂ ಸರಸ್ವತೀ ಸಮ್ಮಾನ್ ಪ್ರಶಸ್ತಿ ಪುರಸ್ಕೃತರ ಸಂಚಯಗಳನ್ನೂ ಸಿದ್ಧಪಡಿಸುತ್ತಿರುವುದು ನನ್ನಲ್ಲಿ ಅಭಿಮಾನ ಮತ್ತು ಹೆಮ್ಮೆ ಮೂಡಿಸಿದೆ.

ಇವುಗಳೆಲ್ಲದರ ಹಿಂದಿ ಮತ್ತು ಇಂಗ್ಲಿಷ್ ಆವೃತ್ತಿಗಳು ಪ್ರಕಟವಾದಾಗ ಕನ್ನಡದ ಹಿರಿಮೆ ಮತ್ತು ಗರಿಮೆ ಸಾರಸ್ವತ ಲೋಕದಲ್ಲಿ ಮತ್ತಷ್ಟು ಪ್ರಜ್ವಲಿಸಲಿದೆ. ಜ್ಞಾನ, ವಿಜ್ಞಾನ ಹಾಗೂ ತಂತ್ರಜ್ಞಾನ ಕ್ಷೇತ್ರಗಳಿಗೂ ಕೊಡುಗೆಯಾಗಬಲ್ಲ ಮಹತ್ವದ ಮೌಲಿಕ ಕೃತಿಗಳನ್ನು ಕುವೆಂಪು ಭಾಷಾ ಭಾರತಿ ಪ್ರಾಧಿಕಾರವು ಮತ್ತಷ್ಟು ಹೊರತರಲಿ ಎಂಬುದೇ ನಮ್ಮ ಸರ್ಕಾರದ ಸದಾಶಯ.

**ಭಾರತದ ಸಂವಿಧಾನ ಶಿಲ್ಪಿ** ಭಾರತರತ್ನ ಡಾ. ಬಿ. ಆರ್. ಅಂಬೇಡ್ಕರ್ ಅವರ ಎಲ್ಲಾ ಬರೆಹಗಳು ಮತ್ತು ಭಾಷಣಗಳನ್ನು ಕನ್ನಡ ಭಾಷೆಗೆ ಅನುವಾದಿಸಿ ಪ್ರಕಟಿಸುವ ಯೋಜನೆಯನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಿದ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಹಾಗೂ ಭಾಷಾಂತರದ ಹೊಣೆ ಹೊತ್ತು ಅನುವಾದದ ಕಾರ್ಯವನ್ನು ಅಚ್ಚುಕಟ್ಟಾಗಿ ನಿರ್ವಹಿಸಿದ ಎಲ್ಲಾ ಸದಸ್ಯರಿಗೂ ನನ್ನ ಅಕ್ಕರೆಯ ಅಭಿನಂದನೆಗಳು ಹಾಗೂ ಆತ್ಮೀಯ ವಂದನೆಗಳು.

(ಸಿದ್ದರಾಮಯ್ಯ)

ಕರ್ನಾಟಕ ಸರ್ಕಾರ

**ಹೆಚ್. ಆಂಜನೇಯ**
ಸಮಾಜ ಕಲ್ಯಾಣ ಮತ್ತು
ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು
ಹಾಗೂ
ಚಿತ್ರದುರ್ಗ ಜಿಲ್ಲಾ ಉಸ್ತುವಾರಿ ಸಚಿವರು

ದೂ.ಸಂ. ೦೮೦ ೨೨೩೫ ೩೧೦೪
೨೨೦೩ ೯೮೮
ಕೊಠಡಿ ಸಂಖ್ಯೆ: ೩೪೦/೩೪೦ಎ,
೩ನೇ ಮಹಡಿ, ವಿಧಾನ ಸೌಧ,
ಬೆಂಗಳೂರು – ೫೬೦ ೦೦೧
ದಿನಾಂಕ: ೧೨.೧.೨೦೧೬

## ಸಂದೇಶ

ನಮ್ಮ ಸುತ್ತಣ ಸಮಾಜದಲ್ಲಿ ಇರುವ ಅಸಮಾನತೆಗಳಿಗೆ ಕಾರಣಗಳೇನೇ ಇರಲಿ, ಆ ಅಸಮಾನತೆಯು ಬೆಳೆಯುವ ಮಕ್ಕಳ ದೈಹಿಕ ಮತ್ತು ಮಾನಸಿಕ ವಿಕಾಸಕ್ಕೆ ಅಡ್ಡಿಗಳನ್ನು ಉಂಟು ಮಾಡಬಾರದು. ಇಂತಹ ಅಡ್ಡಿಗಳು ಇರದಂತೆ ನೋಡಿಕೊಳ್ಳಲು ಸರ್ಕಾರಗಳು ತಕ್ಕ ಯೋಜನೆಗಳನ್ನು ರೂಪಿಸಿಕೊಂಡು ಜಾರಿಗೆ ಕೊಡುತ್ತಿವೆ. ಕರ್ನಾಟಕ ಸರಕಾರವೂ ಕೂಡ ತನ್ನ ಸಮಾಜ ಕಲ್ಯಾಣ ಇಲಾಖೆಯ ಮೂಲಕ ಈ ನಿಟ್ಟಿನಲ್ಲಿ ಹಲವು ಯೋಜನೆಗಳನ್ನು ಅನುಷ್ಠಾನಗೊಳಿಸಿದೆ. ನಾಡಿನ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಮಕ್ಕಳು ಓದನ್ನು ಮುಂದುವರಿಸಲು ಅನುಕೂಲವಾಗುವಂತೆ ವಿದ್ಯಾರ್ಥಿನಿಲಯಗಳನ್ನು ನಡೆಸುತ್ತಿದೆ. ಲಕ್ಷಾಂತರ ಮಕ್ಕಳು ಈ ವಿದ್ಯಾರ್ಥಿನಿಲಯ ಗಳಲ್ಲಿದ್ದುಕೊಂಡು ತಮ್ಮ ಶಿಕ್ಷಣವನ್ನು ಮುಂದುವರೆಸುತ್ತಿದ್ದಾರೆ. ಅವರ ಭೌತಿಕ ಅಗತ್ಯಗಳಿಗೆ ಬೇಕಾದ ಎಲ್ಲ ಸೌಲಭ್ಯಗಳು ಅಲ್ಲಿ ದೊರಕುವಂತೆ ನೋಡಿಕೊಳ್ಳಲಾಗಿದೆ.

ಇವೆಲ್ಲದರ ಜೊತೆಗೆ ಆ ವಿದ್ಯಾರ್ಥಿಗಳಿಗೆ ಬೌದ್ಧಿಕ ಬೆಳವಣಿಗೆಗೆ ಬೇಕಾದ ಅವಕಾಶಗಳನ್ನು ಕಲ್ಪಿಸುವುದು ಕೂಡ ಇಲಾಖೆಯ ಹೊಣೆಯಾಗಿದೆ. ಈ ನಿಟ್ಟಿನಲ್ಲಿ ಇಪ್ಪತ್ತನೆಯ ಶತಮಾನದ ಧೀಮಂತ ಚಿಂತಕರಾಗಿ ಎಲ್ಲ ಬಗೆಯ ಅಸಮಾನತೆಗಳ ವಿರುದ್ಧ ನಿರಂತರ ಹೋರಾಟ ಮಾಡಿದ ಬಾಬಾಸಾಹೇಬ್ ಡಾ. ಬಿ. ಆರ್. ಅಂಬೇಡ್ಕರ್ ಅವರ ವಿಚಾರಗಳ ಪರಿಚಯ ಮಾಡಿಕೊಡುವುದು ಅಗತ್ಯವೆನಿಸಿ ಇಲಾಖೆ ಒಂದು ಯೋಜನೆಯನ್ನು ರೂಪಿಸಿತು. ಅಂಬೇಡ್ಕರ್ ಅವರ ಎಲ್ಲ ಬರೆಹಗಳು ಮತ್ತು ಭಾಷಣಗಳು ಕನ್ನಡ ಅನುವಾದದ ಸಂಪುಟಗಳನ್ನು ಈ ವಿದ್ಯಾರ್ಥಿನಿಲಯಗಳಿಗೆ ಒದಗಿಸುವುದೇ ಈ ಯೋಜನೆ. ರಾಜ್ಯದ ಮಾನ್ಯ ಮುಖ್ಯಮಂತ್ರಿಗಳು ೨೦೧೫–೧೬ನೇ ಸಾಲಿನ ವರ್ಷದ ತಮ್ಮ ಆಯವ್ಯಯವನ್ನು ಮಂಡನೆ ಮಾಡುವಾಗ ಈ ಯೋಜನೆಯನ್ನು ಘೋಷಿಸಿದರು. ಅದರಂತೆ ಈ ಸಂಪುಟಗಳನ್ನು ಅಚ್ಚುಮಾಡಿ ವಿದ್ಯಾರ್ಥಿನಿಲಯಗಳಿಗೆ ಒದಗಿಸುವ ಹೊಣೆಯನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ವಹಿಸಲಾಯಿತು. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಈ ಸಂಪುಟಗಳನ್ನು ಅನುವಾದಿಸಿ ಪ್ರಕಟಿಸುವ ಕೆಲಸವನ್ನು ಕುವೆಂಪು ಭಾಷಾ ಭಾರತಿ ಪ್ರಾಧಿಕಾರಕ್ಕೆ ವಹಿಸಿತು. ಈಗ ಈ ಸಂಪುಟಗಳನ್ನು ಸಿದ್ಧಗೊಳಿಸಿ ಪ್ರಾಧಿಕಾರವು ತನ್ನ ಹೊಣೆಯನ್ನು ಯಶಸ್ವಿಯಾಗಿ ಪೂರೈಸಿದೆ.

ಈ ಯೋಜನೆಗೆ ಚಾಲನೆಯನ್ನು ನೀಡಿದ ರಾಜ್ಯದ ಸನ್ಮಾನ್ಯ ಮುಖ್ಯಮಂತ್ರಿಗಳಿಗೆ, ಕಾರ್ಯರೂಪಕ್ಕೆ ತಂದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮಾನ್ಯ ಸಚಿವರಿಗೆ ಮತ್ತು ಕುವೆಂಪು ಭಾಷಾ ಭಾರತಿ ಪ್ರಾಧಿಕಾರಕ್ಕೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

(ಹೆಚ್.ಆಂಜನೇಯ)

ಕರ್ನಾಟಕ ಸರ್ಕಾರ

**ಉಮಾಶ್ರೀ**

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ
ವಿಕಲಚೇತನರ ಮತ್ತು ಹಿರಿಯ ನಾಗರಿಕರ
ಸಬಲೀಕರಣ, ಕನ್ನಡ ಮತ್ತು ಸಂಸ್ಕೃತಿ ಸಚಿವರು

ದೂರವಾಣಿ: ಕಛೇರಿ : ೨೨೨೫೫೨೮೨
೨೨೦೩೩೪೬೯
ಕೊಠಡಿ ಸಂಖ್ಯೆ: ೨೫೨, ೨ನೇ ಮಹಡಿ
ವಿಧಾನ ಸೌಧ, ಬೆಂಗಳೂರು

ಸಂ: ಮ.ಮ.ಅ.ಕ.ಸಂ.ಸ/೨೪೮/೨೦೧೫

ದಿನಾಂಕ: ೦೪.೬.೨೦೧೫

## ಸಂದೇಶ

ರಾಷ್ಟ್ರಕವಿ ಶ್ರೀ ಕುವೆಂಪು ಅವರ ಹೆಸರಿನಲ್ಲಿ ಕರ್ನಾಟಕ ಸರ್ಕಾರ ಸ್ಥಾಪಿಸಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ವಿಜ್ಞಾನ – ತಂತ್ರಜ್ಞಾನ ಮತ್ತು ಸಾಹಿತ್ಯ ವಿಷಯಗಳಿಗೆ ಸಂಬಂಧಿಸಿದಂತೆ ನೂರಾರು ಮಹತ್ವದ ಮೌಲಿಕ ಹಾಗೂ ಅನುವಾದಿತ ಗ್ರಂಥಗಳನ್ನು ಹೊರತಂದಿರುವುದು ತುಂಬ ಶ್ಲಾಘನೀಯ ವಿಚಾರವಾಗಿದೆ. ಕನ್ನಡಿಗರಿಗೆ ಭಾರತೀಯ ಸಾಹಿತ್ಯದ ಮತ್ತು ವಿಶ್ವಸಾಹಿತ್ಯದ ಮಹತ್ವದ ಕೃತಿಗಳನ್ನು ಪರಿಚಯಿಸಿಕೊಡುವ ಕಾರ್ಯಗಳ ಜೊತೆಗೆ ರಾಷ್ಟ್ರೀಯ ಪ್ರಶಸ್ತಿ–ಪುರಸ್ಕಾರಗಳನ್ನು ಗಳಿಸಿರುವ ನಮ್ಮ ಲೇಖಕರ ಪ್ರಾತಿನಿಧಿಕ ಸಂಕಲನಗಳನ್ನು ಹೊರತಂದು ಅವುಗಳನ್ನು ಬೇರೆ ಭಾಷೆಗಳಲ್ಲಿ ಪ್ರಕಟಿಸುತ್ತಿರುವುದು ತುಂಬ ಮಹತ್ವದ ಕಾರ್ಯವಾಗಿದೆ.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮಹತ್ವಾಕಾಂಕ್ಷೆಯ ಯೋಜನೆಗಳಲ್ಲಿ ಭಾರತರತ್ನ ಬಾಬಾ ಸಾಹೇಬ್ ಡಾ. ಬಿ. ಆರ್. ಅಂಬೇಡ್ಕರ್ ಅವರ ಬರೆಹ ಮತ್ತು ಭಾಷಣಗಳನ್ನು ಕನ್ನಡದಲ್ಲಿ ಅನುವಾದಿಸಿ ಪ್ರಕಟಿಸುವುದು ಒಂದಾಗಿದೆ. ಈ ಯೋಜನೆಯನ್ನು ನಿರ್ವಹಿಸಲು ಸಲಹಾ ಸಮಿತಿಯೊಂದನ್ನು ರೂಪಿಸಲಾಗಿದೆ. ಈ ಸಮಿತಿಯ ನೇತೃತ್ವದಲ್ಲಿ ಅನುವಾದಿತ ಕೃತಿಗಳನ್ನು ಹೊರತಂದಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರವನ್ನು ಇಲಾಖೆಯ ಪರವಾಗಿ ಅಭಿನಂದಿಸುತ್ತೇನೆ. ಪ್ರಕಟವಾದ ಎಲ್ಲ ಸಂಪುಟಗಳು ಜನಮನ್ನಣೆ ಗಳಿಸಿವೆ. ಅವುಗಳನ್ನು ಮರುಮುದ್ರಿಸಿ ಓದುಗರಿಗೆ ಒದಗಿಸಲು ನಮ್ಮ ಇಲಾಖೆಯು ಮುಂದಾಗಿದೆ ಮತ್ತು ಈ ಹೊಣೆಯನ್ನು ಕುವೆಂಪು ಭಾಷಾ ಭಾರತಿ ಪ್ರಾಧಿಕಾರಕ್ಕೆ ನೀಡಿದೆ. ಪ್ರಾಧಿಕಾರವು ಈಗ ಈ ಸಂಪುಟಗಳನ್ನು ಓದುಗರ ಮುಂದೆ ಇರಿಸಿದೆ. ಇದಕ್ಕಾಗಿ ಸಂಬಂಧಿಸಿದ ಎಲ್ಲರನ್ನೂ ಇಲಾಖೆಯ ಪರವಾಗಿ ಅಭಿನಂದಿಸುತ್ತೇನೆ.

(ಉಮಾಶ್ರೀ)

ಕರ್ನಾಟಕ ಸರ್ಕಾರ

**ಡಾ. ಎನ್.ಎಸ್. ಚನ್ನಪ್ಪಗೌಡ,** ಭಾ.ಆ.ಸೇ.,
ಸರ್ಕಾರದ ಕಾರ್ಯದರ್ಶಿಗಳು
ಕನ್ನಡ, ಸಂಸ್ಕೃತಿ ಮತ್ತು ವಾರ್ತಾ ಇಲಾಖೆ

ಕೊಠಡಿ ಸಂಖ್ಯೆ: ೩, ನೆಲಮಹಡಿ
ವಿಕಾಸಸೌಧ
ಬೆಂಗಳೂರು – ೫೬೦ ೦೦೧
ಮೊ.: +೯೧ ೮೦ ೨೨೦೩೪೦೦೨
ಫ್ಯಾಕ್ಸ್: +೯೧ ೮೦ ೨೨೩೫೩೧೦೫

## ಹಾರೈಕೆ

ರಾಷ್ಟ್ರಕವಿ ಶ್ರೀ ಕುವೆಂಪು ಅವರ ಹೆಸರಿನಲ್ಲಿ ಸ್ಥಾಪಿತವಾಗಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಕುವೆಂಪು ಅವರ ಆಶಯದಂತೆ ಸಾಹಿತ್ಯ, ಸಂಸ್ಕೃತಿ ಮತ್ತು ಜ್ಞಾನ–ವಿಜ್ಞಾನ ಕ್ಷೇತ್ರಗಳಿಗೆ ಮಹತ್ವದ ಕೊಡುಗೆಯಾಗಬಲ್ಲಂಥ ಗ್ರಂಥಗಳನ್ನು ಹೊರತರುತ್ತಿರುವುದು ತುಂಬ ಮಹತ್ವದ ಸಂಗತಿಯೇ ಆಗಿದೆ. ಇತರ ಯಾವ ಭಾಷೆಗಳಲ್ಲೂ ಇನ್ನೂ ಹೊರಬರದೇ ಇರುವ ವಿಲ್ ಡ್ಯೂರಾಂಟ್ ಅವರ 'ನಾಗರಿಕತೆಯ ಕಥೆ', ಜೆ. ಡಿ. ಬರ್ನಾಲ್ ಅವರ 'ಇತಿಹಾಸದಲ್ಲಿ ವಿಜ್ಞಾನ'ದಂಥ ಮಹತ್ವದ ಸಂಪುಟಗಳನ್ನೂ, ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರ ಮಹತ್ವದ ರಚನೆಗಳನ್ನು ಒಳಗೊಂಡ ಸಂಚಯಗಳನ್ನೂ ಹೊರತರುತ್ತಿರುವುದೂ, ನಾಡಿನ ಇತರ ಪ್ರತಿಷ್ಠಿತ ಸಂಸ್ಥೆಗಳೊಂದಿಗೆ ಸಂಬಂಧವನ್ನು ಏರ್ಪಡಿಸಿಕೊಂಡು ಮಹತ್ವದ ಕೃತಿಗಳನ್ನು ಬೆಳಕಿಗೆ ತರುತ್ತಿರುವುದೂ ಕರ್ನಾಟಕ ಸರ್ಕಾರಕ್ಕೆ ಮಾತ್ರವಲ್ಲದೆ, ಕನ್ನಡ ಜನತೆಗೆ ಹೆಮ್ಮೆಯನ್ನು ತರುವಂಥ ಸಂಗತಿಯಾಗಿರುತ್ತದೆ.

ಇದುವರೆಗೆ ಪ್ರಕಟವಾಗಿರುವ ಡಾ. ಬಿ. ಆರ್. ಅಂಬೇಡ್ಕರ್ ಅವರ ಬರೆಹ ಮತ್ತು ಭಾಷಣಗಳನ್ನು ಕನ್ನಡಕ್ಕೆ ಅನುವಾದಿಸುವ ಯೋಜನೆಯನ್ನು ಕೈಗೊಂಡು, ಅವುಗಳನ್ನು ಹೊರತರುತ್ತಿರುವುದು ಹಾಗೂ ಇದುವರೆಗೆ ಪ್ರಕಟವಾಗದಿರುವ ಅಂಬೇಡ್ಕರ್ ಅವರ ಚಿಂತನೆಗಳನ್ನೊಳಗೊಂಡ ಇತರ ಸಂಪುಟಗಳನ್ನು ಹೊರತರುವ ಕಾರ್ಯವನ್ನು ಹಮ್ಮಿಕೊಂಡಿರುವುದು ವಿಶೇಷವಾಗಿ ಸ್ತುತ್ಯರ್ಹವಾದ ಕಾರ್ಯವಾಗಿದೆ. ಇಪ್ಪತ್ತೆರಡು ಸಂಪುಟಗಳಲ್ಲಿ ಹಲವು ಈಗಾಗಲೇ ಹೊರಬಂದಿದ್ದು ಕನ್ನಡ ಓದುಗರ ಮೆಚ್ಚುಗೆಗೆ ಪಾತ್ರವಾಗಿವೆ. ಕರ್ನಾಟಕ ಸರ್ಕಾರವು ಈ ಸಂಪುಟಗಳನ್ನು ಮರು ಮುದ್ರಿಸುವ ಯೋಜನೆಗೆ ಅಗತ್ಯವಾದ ಅನುದಾನವನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮೂಲಕ ಕುವೆಂಪು ಭಾಷಾ ಭಾರತಿ ಪ್ರಾಧಿಕಾರಕ್ಕೆ ಒದಗಿಸಿದೆ. ಈಗ ಈ ಎಲ್ಲ ಸಂಪುಟಗಳು ಹೊಸ ಮೆರುಗಿನೊಂದಿಗೆ ಪ್ರಕಟಗೊಳ್ಳುತ್ತಿರುವುದು ಸಂತಸದ ಸಂಗತಿಯಾಗಿದೆ.

ಒಟ್ಟಿನಲ್ಲಿ ಸಾಹಿತ್ಯ–ಸಂಸ್ಕೃತಿ–ವಿಜ್ಞಾನ ತಂತ್ರಜ್ಞಾನಗಳ ಬೆಳವಣಿಗೆಯೊಂದಿಗೆ ಆದರ್ಶ ರೀತಿಯಲ್ಲಿ ಪ್ರಾಧಿಕಾರ ಹೆಜ್ಜೆ ಹಾಕುತ್ತಾ ಮುನ್ನಡೆಯಲೆಂದೂ, ಹೊಸ–ಹೊಸ ವಿಕ್ರಮಗಳನ್ನು ಸ್ಥಾಪಿಸಲೆಂದೂ ಹಾರೈಸುತ್ತೇನೆ.

(ಡಾ. ಎನ್.ಎಸ್. ಚನ್ನಪ್ಪಗೌಡ)

ಕರ್ನಾಟಕ ಸರ್ಕಾರ

**ಶ್ರೀ ಕೆ. ಎ. ದಯಾನಂದ**
ನಿರ್ದೇಶಕರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಕನ್ನಡ ಭವನ, ಜೆ.ಸಿ. ರಸ್ತೆ,
ಬೆಂಗಳೂರು – ೫೬೦ ೦೦೨
ದಿನಾಂಕ : ೧೦.೬.೨೦೧೫

## ಸಂದೇಶ

ಕರ್ನಾಟಕ ಸರ್ಕಾರ ಕುವೆಂಪು ಭಾಷಾ ಭಾರತಿ ಪ್ರಾಧಿಕಾರವನ್ನು ಸ್ಥಾಪಿಸಿ ಸಾಹಿತ್ಯಕ–ಸಾಂಸ್ಕೃತಿಕ ಚಟುವಟಿಕೆಗಳಿಗೆ ಹೊಸ ಆಯಾಮಗಳನ್ನು ನೀಡಿದೆ. ಕನ್ನಡದೊಡನೆ ಭಾರತೀಯ ಹಾಗೂ ವಿದೇಶೀಯ ಭಾಷೆಗಳ ನಡುವಣ ಸಂಬಂಧಗಳನ್ನು ಬೆಳೆಸಿಕೊಂಡು ಬರುವುದು, ಆ ಭಾಷೆಗಳ ಶ್ರೇಷ್ಠ ಕೃತಿಗಳನ್ನು ಕನ್ನಡಕ್ಕೆ ತರುವುದರ ಮೂಲಕ ಕನ್ನಡ ಸಾಹಿತ್ಯವನ್ನು ಸಂವೃದ್ಧಿಗೊಳಿಸುವುದು; ಕನ್ನಡ ಸಾಹಿತ್ಯದ ಶ್ರೇಷ್ಠ ಕೃತಿಗಳನ್ನು ಇತರ ಭಾಷೆಗಳಿಗೆ ಕೊಂಡೊಯ್ಯುವುದು; ಮಾನವಿಕ, ವೈಜ್ಞಾನಿಕ ಮತ್ತು ತಾಂತ್ರಿಕ ಕ್ಷೇತ್ರಗಳಲ್ಲಿ ಕನ್ನಡದ ಬಳಕೆಗೆ ಪ್ರೋತ್ಸಾಹ ನೀಡುವಂಥ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು ಮತ್ತು ಸೂಕ್ತ ಪ್ರಕಟಣೆಗಳನ್ನು ಹೊರತರುವುದು ಈ ಪ್ರಾಧಿಕಾರದ ಮುಖ್ಯ ಧ್ಯೇಯೋದ್ದೇಶವಾಗಿರುತ್ತದೆ. ಇದಕ್ಕೆ ಪೂರಕವಾಗಿ ಮತ್ತು ಪೋಷಕವಾಗಿ ರಾಷ್ಟ್ರೀಯ ಪ್ರಾದೇಶಿಕ ವಿಚಾರಗೋಷ್ಠಿಗಳನ್ನು ಏರ್ಪಡಿಸುವುದು ಈ ಧ್ಯೇಯಗಳ ಅಂಗವೇ ಆಗಿದೆ. ಇಂತಹ ಕಾರ್ಯಕ್ರಮಗಳನ್ನು ಯೋಜಿಸುತ್ತಿರುವ ಹಾಗೂ ವಿಶ್ವವಿದ್ಯಾಲಯಗಳ ಮಾನ್ಯತೆಯನ್ನು ಪಡೆದುಕೊಂಡು ಈ ಶೈಕ್ಷಣಿಕ ಕಾರ್ಯಕ್ರಮಗಳನ್ನು ಮುಂದುವರಿಸಿಕೊಂಡು ಹೋಗುತ್ತಿರುವ ವಿಚಾರ ನನಗೆ ವೈಯಕ್ತಿಕವಾಗಿಯೂ ತುಂಬ ಸಂತೋಷವನ್ನುಂಟುಮಾಡಿದೆ.

ಈ ಕೆಲವೇ ವರ್ಷಗಳಲ್ಲಿ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಹೊರತಂದಿರುವ ಪ್ರಕಟಣೆಗಳು ತುಂಬ ಮಹತ್ವದವೇ ಆಗಿವೆ. ವಿಲ್ ಡ್ಯೂರಾಂಟ್ ಅವರ 'ನಾಗರಿಕತೆಯ ಇತಿಹಾಸ', ಜೆ.ಡಿ.ಬರ್ನಾಲ್ ಅವರ 'ವಿಜ್ಞಾನದ ಇತಿಹಾಸ' ಸಂಪುಟಗಳು ಯಾವುದೇ ಭಾಷೆಗೆ ಗೌರವಪ್ರಾಯವಾದ ಕೃತಿಗಳೇ ಆಗುತ್ತವೆ. ಅಂಥ ಸಾಹಸವನ್ನು ಭಾರತೀಯ ಭಾಷೆಗಳಲ್ಲಿ ಮೊದಲ ಬಾರಿಗೆ ಆಗುಮಾಡುತ್ತಿರುವುದು ವಿಶೇಷವಾಗಿ ಅಭಿನಂದನೀಯವಾದ ಕಾರ್ಯವಾಗಿದೆ. ಭಾರತರತ್ನ ಡಾ. ಬಿ. ಆರ್. ಅಂಬೇಡ್ಕರ್ ಅವರ ಅನುವಾದಿತ ಕೃತಿಗಳ ಪರಿಷ್ಕರಣ ಯೋಜನೆ ಮತ್ತು ಅವರ ಇತರ ಸಂಪುಟಗಳ ಹೊಸ ಅನುವಾದದ ಪ್ರಕಟಣೆ ಯೋಜನೆ, ಕೃಷ್ಣಾ ಐತೀರ್ಪಿನ ಕನ್ನಡ ಅನುವಾದ ಯೋಜನೆ ಮುಂತಾದವು – ಹೊಸ ವಿಕ್ರಮವನ್ನು ಸ್ಥಾಪಿಸಲಿವೆ.

ಪ್ರಾಧಿಕಾರವು ಪ್ರಕಟಿಸಿದ್ದ 'ಡಾ. ಅಂಬೇಡ್ಕರ್ ಅವರ ಬರೆಹಗಳು ಮತ್ತು ಭಾಷಣಗಳು' ಮಾಲಿಕೆಯ ಹಲವು ಸಂಪುಟಗಳು ಈಗ ಮರಳಿ ಮುದ್ರಿತವಾಗುತ್ತಿವೆ. ಈ ಸಂಪುಟಗಳು ಓದುಗರಿಗೆ ಸದಾಕಾಲವು ದೊರೆಯುತ್ತಿರಬೇಕೆಂಬುದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಗುರಿಯಾಗಿದೆ. ಅದಕ್ಕಾಗಿ ಅಗತ್ಯವಾದ ಅನುದಾನವನ್ನು ಇಲಾಖೆಯು ಪ್ರಾಧಿಕಾರಕ್ಕೆ ನೀಡಿದೆ. ಈ ಸಂಪುಟಗಳನ್ನು ಸಿದ್ಧಪಡಿಸಲು ನೆರವಾದ ಸಲಹಾ ಸಮಿತಿಯ ಸದಸ್ಯರಿಗೆ, ಅನುವಾದಕರಿಗೆ ಮತ್ತು ಪ್ರಾಧಿಕಾರಕ್ಕೆ ನನ್ನ ಅಭಿನಂದನೆಗಳು ಸಲ್ಲುತ್ತವೆ.

ಮುಂದೆಯೂ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಇಂಥ ವಿಶಿಷ್ಟ ಕಾರ್ಯಕ್ರಮಗಳನ್ನು, ಮಹತ್ವದ ಪ್ರಕಟಣೆಗಳನ್ನು ಹೊರತರುವ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಡೆಸಿಕೊಂಡು ಬರಲಿ, ಕನ್ನಡ ನಾಡಿನ ಮೆಚ್ಚಿನ ಸಾಹಿತ್ಯಕ–ಸಾಂಸ್ಕೃತಿಕ ಸಂಸ್ಥೆಯಾಗಿ ಬೆಳೆಯಲಿ ಎಂದು ಹಾರೈಸುತ್ತೇನೆ.

10/6/15

ಕೆ. ಎ. ದಯಾನಂದ

# ಪರಿಷ್ಕೃತ ಮುದ್ರಣಕ್ಕೆ ಮುನ್ನುಡಿ

ಡಾ. ಬಾಬಾ ಸಾಹೇಬ್ ಅಂಬೇಡ್ಕರ್ (೧೮೯೧ ರಿಂದ ೧೯೫೬) ತಮ್ಮ ಕಾಲಮಾನವನ್ನು ಮೆಟ್ಟಿನಿಂತು ಗೋಪುರೋಪಮವಾಗಿ ಬೆಳೆದುನಿಂತ ಮಹಾಮಾನವರಲ್ಲಿ ಒಬ್ಬರು. ರಾಷ್ಟ್ರೀಯತಾವಾದಿಯಾಗಿ, ಕಾನೂನು ತಜ್ಞರಾಗಿ, ರಾಜಕೀಯ ನೇತಾರರಾಗಿ, ಕ್ರಿಯಾಶೀಲ ಸಾಮಾಜಿಕ ಕಾರ್ಯಕರ್ತರಾಗಿ, ಶ್ರೇಷ್ಠ ಇತಿಹಾಸಕಾರರಾಗಿ, ಮಹಾ ದಾರ್ಶನಿಕರಾಗಿ, ಅಪ್ರತಿಮ ಚಿಂತಕರಾಗಿ, ಮಾನವಶಾಸ್ತ್ರಜ್ಞರಾಗಿ, ಖ್ಯಾತ ಅರ್ಥಶಾಸ್ತ್ರಜ್ಞರಾಗಿ, ಸಮೃದ್ಧ ಬರೆಹಗಾರರಾಗಿ, ಕ್ರಾಂತಿಕಾರಿಯಾಗಿ, ಅಸಾಮಾನ್ಯ ವಾಕ್ಪಟುವಾಗಿ, ಬೌದ್ಧ ಧರ್ಮದ ಪುನರುಜ್ಜೀವಕರಾಗಿ, ಭಾರತೀಯ ಸಂವಿಧಾನದ ಪ್ರಮುಖ ಶಿಲ್ಪಿಯಾಗಿ ಅವರು ಮಾಡಿರುವ ಮಹತ್ತರ ಸಾಧನೆಗಳನ್ನು ಗಮನಿಸಿದರೆ, ಒಬ್ಬ ವ್ಯಕ್ತಿ ಒಂದು ಜೀವಮಾನದಲ್ಲಿ ಇಷ್ಟೆಲ್ಲ ಸಾಧನೆಗಳನ್ನು ಮಾಡಲು ಸಾಧ್ಯವೇ ಎಂದು ಬೆರಗಾಗಿ ನಿಲ್ಲುವಂತೆ ಆಗುತ್ತದೆ. ಆಧುನಿಕ ಅರ್ಥದಲ್ಲಿ ಅವರನ್ನು 'ಪವಾಡ ಪುರುಷ'ರೆಂದೇ ಹೆಸರಿಸಬೇಕಾಗುತ್ತದೆ.

ಸಾಮಾಜಿಕ ಭೇದಭಾವಕ್ಕೊಳಗಾಗಿ ನರಳುತ್ತಿದ್ದ ಬಡ ಕುಟುಂಬದಲ್ಲಿ ಹುಟ್ಟಿದ ಅವರು ತಮ್ಮ ಇಡೀ ಜೀವಮಾನವನ್ನು ಈ ಸಾಮಾಜಿಕ ಭೇದಭಾವಕ್ಕೆ, ಸಮಾಜದ ಎಲ್ಲ ಪಿಡುಗುಗಳಿಗೂ ಕಾರಣವಾಗಿರುವ ಜಾತಿಪದ್ಧತಿಯ ವಿರುದ್ಧವಾಗಿ ಹೋರಾಡುವುದಕ್ಕೆ ಮೀಸಲಾಗಿ ಇಡಬೇಕಾಯಿತು. ತಮ್ಮ ಈ ಅವಿರತ ಹೋರಾಟದಿಂದ, ಈ ಹಿಂದಿನ ಸಮಾಜ ಸುಧಾರಕರು ಯಾರೂ ಸಾಧಿಸದಿದ್ದಂಥ ಮಹಾಕ್ರಾಂತಿಯನ್ನು ಎಸಗಿ ಹೊಸ ಇತಿಹಾಸವನ್ನೇ ಸೃಷ್ಟಿಸಿದರು. ಸಾಮಾಜಿಕ–ಆರ್ಥಿಕ ಸಂಕಷ್ಟಗಳನ್ನು ಮೀರಿ ನಿಂತು ಅನೇಕ ಪ್ರಥಮಗಳನ್ನೂ ಅವರು ಸಾಧಿಸಿದರು. ಕಾಲೇಜು ಶಿಕ್ಷಣವನ್ನು ಪಡೆದ ದಲಿತರಲ್ಲಿಯೂ ಮೊದಲಿಗರಾಗಿದ್ದವರಲ್ಲಿ ಅವರು ಪ್ರಮುಖರಾದರು. ನ್ಯಾಯಶಾಸ್ತ್ರ, ಅರ್ಥಶಾಸ್ತ್ರ, ರಾಜ್ಯಶಾಸ್ತ್ರ ಸಂಬಂಧವಾದ ತಮ್ಮ ಅಧ್ಯಯನ ಮತ್ತು ಸಂಶೋಧನೆಗಳಿಂದಾಗಿ ಕೊಲಂಬಿಯಾದಂಥ ವಿಶ್ವವಿದ್ಯಾನಿಲಯದಿಂದ, ಲಂಡನ್ನಿನ ಅರ್ಥಶಾಸ್ತ್ರ ಶಾಲೆಯಿಂದ ಡಾಕ್ಟೊರೇಟ್ ಪದವಿಗಳನ್ನು ಪಡೆದ ಮಹಾಮೇಧಾವಿಗಳಲ್ಲೂ ಅವರೊಬ್ಬರಾದರು. ಹೀಗೆ ಶ್ರೇಷ್ಠ ವಿದ್ವಾಂಸರಾಗಿ ಭಾರತಕ್ಕೆ ಹಿಂದಿರುಗಿ ಬಂದ ಅವರು ಸಮಾಜದ ಕೆಳವರ್ಗಗಳ ಸಾಮಾಜಿಕ ಸ್ವಾತಂತ್ರ್ಯಕ್ಕಾಗಿ, ರಾಜಕೀಯ ಹಕ್ಕುಗಳಿಗಾಗಿ ಅಹರ್ನಿಶಿ ದುಡಿದರು. ಬರೆಹಗಳ–ಭಾಷಣಗಳ ಮೂಲಕ, ವೈಚಾರಿಕ ಚರ್ಚೆ–ಸಂವಾದಗಳ ಮೂಲಕ ಸಾಮಾಜಿಕ–ರಾಜಕೀಯ ಜಾಗೃತಿಯನ್ನೇ ಮೂಡಿಸಿದರು; 'ಆಧುನಿಕ ಬೋಧಿಸತ್ವ'ರೆಂಬ ಕೀರ್ತಿಗೂ ಪಾತ್ರರಾದರು. ಸಮಾಜದ ಎಲ್ಲ ವರ್ಗಗಳಲ್ಲಿ, ವಿವಿಧ ಧರ್ಮಗಳಲ್ಲಿ ಪ್ರತ್ಯಕ್ಷವಾಗಿ, ಪ್ರಚ್ಛನ್ನವಾಗಿ ಬೇರುಬಿಟ್ಟಿದ್ದ ಸಾಮಾಜಿಕ ಕೆಡಕುಗಳ ವಿರುದ್ಧ ದನಿಯೆತ್ತಿದ ಹಿರಿಮೆಯೂ ಅವರದಾಗಿದೆ. ಅಂತಿಮವಾಗಿ ದೇಶ ವಿಭಜನೆಯ ಅನಿವಾರ್ಯತೆಯನ್ನು ಒಪ್ಪಿದರಾದರೂ, ಅದರ ಭಯಾನಕ ಪರಿಣಾಮಗಳ ವಿರುದ್ಧ ಎಚ್ಚರಿಕೆಯ ಗಂಟೆಯನ್ನೂ ಅವರು ಮೊದಲೇ ಮೊಳಗಿಸಿದ್ದರೆಂಬುದು ಗಮನಾರ್ಹವಾದ ಸಂಗತಿ.

ಬುದ್ಧ, ಕಬೀರ್, ಏಸು, ಅಶೋಕ, ಶಿವಾಜಿ, ಜಾರ್ಜ್ ವಾಷಿಂಗ್‌ಟನ್, ಥಾಮಸ್ ಪೇನ್, ಅಬ್ರಹಾಂ ಲಿಂಕನ್, ಎಡ್ಮಂಡ್ ಬರ್ಕ್, ಮಾರ್ಟಿನ್ ಲೂಥರ್, ಶಾಹೂ ಮಹಾರಾಜ್, ಮಹಾರಾಜ ಸಯ್ಯಾಜಿರಾವ್ ಗಾಯಕ್‌ವಾಡ್–III ಮುಂತಾದವರ ಚಿಂತನೆಗಳಿಂದ ಪ್ರಭಾವಿತರಾಗಿದ್ದ ಅಂಬೇಡ್ಕರ್ ಅವರು ಈಚಿನ ತಲೆಮಾರಿನ ಶ್ರೀ ಎ.ಎಚ್. ಸಾಳುಂಕೆ ಅವರಿಂದ ಹಿಡಿದು ಕು. ಮಾಯಾವತಿಯವರ ವರೆಗೆ ಅನೇಕ ಸಮಾಜ ಚಿಂತಕರು ಮತ್ತು ರಾಜಕೀಯ ನೇತಾರರ ಮೇಲೆ ಅಚ್ಚಳಿಯದ ಪ್ರಭಾವವನ್ನು ಬೀರಿದ್ದಾರೆ. ಅವರ ಅಸಾಮಾನ್ಯ

ಜೀವಿತ–ಸಾಧನೆಗಳನ್ನು ಕುರಿತಂತೆ ವಿವಿಧ ಭಾಷೆಗಳಲ್ಲಿನ ಹಿರಿ–ಕಿರಿಯ ಲೇಖಕರುಗಳು ಹತ್ತಾರು ಜೀವನ–ಚರಿತ್ರೆಗಳನ್ನು ರಚಿಸಿರುವುದು ಆಶ್ಚರ್ಯದ ಸಂಗತಿಯೇನೂ ಅಲ್ಲ. ದೆಹಲಿಯೂ ಸೇರಿದಂತೆ ನಾಡಿನ ಅನೇಕ ಕಡೆಗಳಲ್ಲಿ ಅವರ ಸ್ಮಾರಕಗಳು ನಿರ್ಮಾಣಗೊಂಡಿವೆ. ಹೈದರಾಬಾದಿನಲ್ಲಿ 'ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಮುಕ್ತ ವಿಶ್ವವಿದ್ಯಾನಿಲಯ', ಮುಜಫರ್‌ಪುರದಲ್ಲಿನ 'ಬಿ.ಆರ್. ಅಂಬೇಡ್ಕರ್ ಬಿಹಾರ್ ವಿಶ್ವವಿದ್ಯಾನಿಲಯ'ಗಳು ಸ್ಥಾಪನೆಗೊಂಡಿರುವುದಲ್ಲದೆ, ನಾಗಪುರದಲ್ಲಿನ ಅಂತರ–ರಾಷ್ಟ್ರೀಯ ವಿಮಾನ ನಿಲ್ದಾಣಕ್ಕೂ ಅಂಬೇಡ್ಕರ್ ಅವರ ಹೆಸರನ್ನಿಡಲಾಗಿದೆ. ಸಂಸತ್ ಭವನದಲ್ಲಿಯೂ ಅವರ ಭಾವಚಿತ್ರವನ್ನು ಅನಾವರಣಗೊಳಿಸಲಾಗಿದೆ. ಅವರ ಹುಟ್ಟುಹಬ್ಬವನ್ನು (ಏಪ್ರಿಲ್ ೧೪) ಮತ್ತು ಪರಿನಿರ್ವಾಣ ದಿನವನ್ನು (ಡಿಸೆಂಬರ್ ೬) ನಾಡಿನಾದ್ಯಂತ ಆಚರಿಸಲಾಗುತ್ತಿದೆ. ಅವರ ಬಹುಮುಖೀ ಸಾಧನೆಯನ್ನು ಗುರುತಿಸಿ, ಮರಣೋತ್ತರವಾಗಿ ೧೯೯೦ರಲ್ಲಿ ಅವರಿಗೆ 'ಭಾರತ ರತ್ನ' ಪ್ರಶಸ್ತಿಯನ್ನೂ ನೀಡಲಾಗಿದೆ. ಅಂಬೇಡ್ಕರ್ ಅವರು "ಶಿಕ್ಷಣ ! ಸಂಘಟನೆ !! ಹೋರಾಟ !!! (Educate ! Organize !! Agitate !!!) ಎಂಬ ತತ್ವಗಳನ್ನು ತಮ್ಮ ಅನುಯಾಯಿಗಳಿಗೆ ಹಾಗೂ ನಾಡಿಗೆ ನೀಡಿದ್ದಾರೆ.

ಮಹಾಮಾನವರೇ ಆಗಿದ್ದ ಅಂಬೇಡ್ಕರ್ ಸಮೃದ್ಧವಾಗಿ ಬರೆವಣಿಗೆಯನ್ನೂ ಮಾಡಿದ್ದಾರೆ–ಸಂಸತ್ತಿನ ಒಳಗೆ, ಹೊರಗೆ ಹಾಗೂ ಪತ್ರಿಕೋದ್ಯಮದ ಮೂಲಕ. ಇವೆಲ್ಲ ಐತಿಹಾಸಿಕ ಪ್ರಾಮುಖ್ಯದ ಬರೆವಣಿಗೆಗಳೇ ಆಗಿವೆ. ಇವುಗಳ ಐತಿಹಾಸಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಮಹತ್ವವನ್ನು ಗುರುತಿಸಿದ ಮುಂಬಯಿ ಸರ್ಕಾರ ಡಾ. ಅಂಬೇಡ್ಕರ್ ಅವರ ಸಮಗ್ರ ಬರೆಹಗಳು ಮತ್ತು ಭಾಷಣಗಳನ್ನು ಇಪ್ಪತ್ತೊಂದು ಸಂಪುಟಗಳಲ್ಲಿ ಹೊರತಂದಿದೆ. ಈ ಸಂಪುಟಗಳನ್ನು ಕನ್ನಡದಲ್ಲಿಯೂ ಹೊರತರಬೇಕೆಂದು, ಆ ಮೂಲಕ ಡಾ. ಅಂಬೇಡ್ಕರ್ ಅವರ ವಿಚಾರಧಾರೆಯನ್ನು ಕನ್ನಡಿಗರಿಗೂ ಅವರದೇ ಭಾಷೆಯಲ್ಲಿ ಮುಟ್ಟಿಸಬೇಕೆಂದು ಸಂಕಲ್ಪಿಸಿದ ಕರ್ನಾಟಕ ಸರ್ಕಾರ, ಕರ್ನಾಟಕ ವಿಶ್ವ ವಿದ್ಯಾನಿಲಯದ ರಾಜ್ಯಶಾಸ್ತ್ರ ಪ್ರಾಧ್ಯಾಪಕರಾಗಿದ್ದ ಡಾ. ಎ.ಎಂ. ರಾಜಶೇಖರಯ್ಯನವರ ಅಧ್ಯಕ್ಷತೆಯಲ್ಲಿ ಅನುವಾದ ಸಂಪಾದನ ಸಮಿತಿಯೊಂದನ್ನು ನೇಮಿಸಿ, ೧೪ ಸಂಪುಟಗಳ ಕನ್ನಡ ಆವೃತ್ತಿಯನ್ನು ಹೊರತಂದಿತು. ಡಾ. ಅಂಬೇಡ್ಕರ್ ಅವರ ವಿಚಾರಧಾರೆಯನ್ನು ಕನ್ನಡಕ್ಕೆ ಅಳವಡಿಸುವ ಮಹಾಸಾಹಸದ ಕಾರ್ಯವನ್ನು ಆ ಸಮಿತಿ ನಿರ್ವಹಿಸಿತು. ನಾಡಿನ ಹಲವಾರು ಗಣ್ಯ ವಿದ್ವಾಂಸರು ಆ ಮಹಾಕಾರ್ಯದಲ್ಲಿ ಸಹಕರಿಸಿದರು. ಅಂಬೇಡ್ಕರ್ ಅವರ ಇಂಗ್ಲಿಷ್ ಅತ್ಯಂತ ವಿದ್ವತ್‌ಪೂರ್ಣವೂ, ವಿಶಿಷ್ಟವೂ ಆಗಿದ್ದು, ಅನೇಕ ಬಗೆಯ ಸವಾಲುಗಳನ್ನು ಒಡ್ಡುವಂಥದಾಗಿದ್ದುದರಿಂದ, ಕನ್ನಡ ಅನುವಾದದಲ್ಲಿ ಕೆಲವೊಂದು ಅರೆಕೊರೆಗಳು ಉಳಿದುಕೊಂಡು ಬಿಟ್ಟುದು ಸಹಜವೇ ಆಗಿತ್ತು. ತಜ್ಞ ವಿದ್ವಾಂಸರು ಇಂಥ ಅರೆಕೊರೆಗಳತ್ತ ಬೆಟ್ಟುಮಾಡಿ ತೋರಿಸಿದ್ದೂ ಉಂಟು. ಈ ಆವೃತ್ತಿಯ ಪ್ರತಿಗಳೂ ಮುಗಿದು ಹೋಗಿ, ಅಂಬೇಡ್ಕರ್ ಅವರ ಕೃತಿಗಳಿಗೆ ಇದ್ದ ಬೇಡಿಕೆಯನ್ನು ಗಮನಿಸಿ, ಇದರ ಪರಿಷ್ಕೃತ ಆವೃತ್ತಿಯೊಂದನ್ನು ಹೊರತರುವ ಯೋಜನೆಯನ್ನು ಕರ್ನಾಟಕ ಸರ್ಕಾರ ಹಮ್ಮಿಕೊಂಡಿತು. ಈ ಹೊತ್ತಿಗೆ 'ಕುವೆಂಪು ಭಾಷಾ ಭಾರತಿ'ಯ ಅಂಗವಾಗಿ ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿ ಅಸ್ತಿತ್ವಕ್ಕೆ ಬಂದಿದ್ದುದರಿಂದ, ಈ ಹೊಣೆಯನ್ನು ಸದರಿ ಅಕಾಡೆಮಿಗೆ ವಹಿಸಬೇಕೆಂದು ತೀರ್ಮಾನಿಸಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಈ ಸಂಬಂಧವಾಗಿ ಮಂಜೂರು ಮಾಡಲಾಗಿದ್ದ ೯೫ ಲಕ್ಷ ರೂಪಾಯಿಗಳ ಸಹಾಯಧನವನ್ನೂ, ಕಾರ್ಯನಿರ್ವಹಣೆಯ ಹೊಣೆಯನ್ನೂ ಅನುವಾದ ಸಾಹಿತ್ಯ ಅಕಾಡೆಮಿಗೆ ವರ್ಗಾಯಿಸಲಾಯಿತು. ಈ ಸಂಬಂಧವಾಗಿ ಅನುವಾದ ಸಂಪಾದನ ಸಮಿತಿಯನ್ನು ನೇಮಿಸಲಾಯಿತು. ಅನುವಾದ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗಿದ್ದ ಡಾ. ಪ್ರಧಾನ್ ಗುರುದತ್ತ ಅವರ ಅಧ್ಯಕ್ಷತೆಯಲ್ಲಿ ರಚಿಸಲಾದ ಈ ಸಮಿತಿಯಲ್ಲಿ ಈ ಕೆಳಕಂಡ ಮಹನೀಯರನ್ನು ಸದಸ್ಯರಾಗಿ ನಾಮಕರಣ ಮಾಡಲಾಯಿತು (ಆದೇಶ ಸಂಖ್ಯೆ: ಸಂ ವಾ ಪ್ರ ೨೮ ಕರಹ ೨೦೦೮ ದಿನಾಂಕ ೨೪–೩–೨೦೦೮)

೧. ಡಾ. ಸಿದ್ಧಲಿಂಗಯ್ಯ, ಅಧ್ಯಕ್ಷರು, ಕನ್ನಡ ಅಭಿವೃದ್ಧಿ ಪ್ರಾಧಿಕಾರ; ೧೨-೬-೨೦೦೮ರಿಂದ ಈಚೆಗೆ ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರು

೨. ಶ್ರೀ ದೇವನೂರ ಮಹದೇವ, ಖ್ಯಾತ ಸಾಹಿತಿಗಳು

೩. ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಅನುವಾದ ಅಕಾಡೆಮಿಯನ್ನು ವಿಧ್ಯುಕ್ತವಾಗಿ ಕುವೆಂಪು ಭಾಷಾ ಭಾರತಿ ಪ್ರಾಧಿಕಾರದಲ್ಲಿ ವಿಲೀನಗೊಳಿಸಿದ್ದರಿಂದ ಹಾಗೂ ಡಾ. ಪ್ರಧಾನ್ ಗುರುದತ್ತ ಅವರನ್ನೇ ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಅಧ್ಯಕ್ಷರನ್ನಾಗಿ ನೇಮಿಸಿದ್ದರಿಂದ ಇದೇ ಸಂಪಾದನ ಸಮಿತಿ ಡಾ. ಅಂಬೇಡ್ಕರ್ ಅವರ ಸಮಗ್ರ ಕೃತಿಗಳ ಸಂಪಾದನೆ ಮತ್ತು ಪ್ರಕಟಣೆಯ ಕಾರ್ಯಗಳನ್ನು ಮುಂದುವರಿಸಿಕೊಂಡು ಬರುತ್ತಿದೆ.

ಸಂಪುಟಗಳ ಪರಿಷ್ಕರಣ ಕಾರ್ಯದ ಸ್ವರೂಪದ ಬಗ್ಗೆಯೂ ವ್ಯಾಪಕವಾದ ಚರ್ಚೆಯನ್ನು ನಡೆಸಲಾಯಿತು. ಖ್ಯಾತ ವಿದ್ವಾಂಸರುಗಳೇ ಈ ಅನುವಾದ ಕಾರ್ಯದಲ್ಲಿ ಭಾಗಿಯಾಗಿರುವುದನ್ನು ಗಮನಿಸಿ, ಎದ್ದು ಕಾಣುವಂಥ ಲೋಪದೋಷಗಳು ಇರುವಲ್ಲಿ ಮಾತ್ರವೇ ಅವುಗಳನ್ನು ಸರಿಪಡಿಸುವ, ಓರೆಕೋರೆಗಳನ್ನು ತಿದ್ದುವ ಕೆಲಸಮಾಡಬೇಕೆಂದೂ ನಿರ್ಧರಿಸಲಾಯಿತು. ಅದರಂತೆ, ಮೊದಲ ಪರಿಷ್ಕೃತ ಸಂಪುಟವನ್ನು ೧೯-೮-೨೦೦೯ರಂದು ಹೊರತರಲಾಯಿತು. ಈ ಕಾರ್ಯವನ್ನು ಮುಂದುವರಿಸಿ ೨, ೩ ಮತ್ತು ೪ನೇ ಸಂಪುಟಗಳ ಪರಿಷ್ಕತ ಆವೃತ್ತಿಯನ್ನು ೬.೧೨.೨೦೧೦ ರಂದು ಬಿಡುಗಡೆ ಮಾಡಲಾಯಿತು. ಈ ಕಾರ್ಯದಲ್ಲಿ ಈ ಕೆಳಕಂಡ ವಿದ್ವಾಂಸರು ಸಹಕರಿಸಿದ್ದರು.

೧. ಶ್ರೀ ವಿ. ಕೃಷ್ಣ, ಬೆಂಗಳೂರು (೨ನೆಯ ಸಂಪುಟ)

೨. ಶ್ರೀ ಕೇಶವ ಮಳಗಿ, ಬೆಂಗಳೂರು (೩ನೆಯ ಸಂಪುಟ)

೩. ಶ್ರೀ ಜೆ.ಎನ್. ಶಾಮರಾವ್, ಬೆಂಗಳೂರು (೪ನೆಯ ಸಂಪುಟ)

ಕೆಲಮಂದಿ ಪರಿಷ್ಕರಣಕಾರರ ಅತಿವ್ಯಸ್ತತೆಯಿಂದಾಗಿ, ಪರಿಷ್ಕರಣ ಕಾರ್ಯದಲ್ಲಿಯೂ ವಿಳಂಬವಾಯಿತು. ನಮ್ಮ ಒತ್ತಾಯ-ಒತ್ತಡಗಳನ್ನು ಮನ್ನಿಸಿ ಅವರು ನಮಗೆ ನೆರವು ನೀಡಿದ್ದಾರೆ. ಈ ವಿದ್ವಾಂಸರು ಸಾಧ್ಯವಿದ್ದಷ್ಟು ಮಟ್ಟಿಗೆ ಈ ಸಂಪುಟಗಳನ್ನು ಪರಿಷ್ಕರಿಸಿದ್ದಾರೆ. ಈಗ ೫, ೬, ೭, ೮ ಮತ್ತು ೯ ಸಂಪುಟಗಳ ಪರಿಷ್ಕೃತ ಆವೃತ್ತಿಯನ್ನು ಹೊರತರಲಾಗುತ್ತಿದೆ. ಇವುಗಳ ಪರಿಷ್ಕರಣ ಕಾರ್ಯದಲ್ಲಿ ಈ ಕೆಳಕಂಡ ಮಹನೀಯರು ಸಹಕರಿಸಿದ್ದಾರೆ.

೧. ಶ್ರೀಮತಿ ಬಿ.ಎನ್. ಶಾಂತಾ (ಸಂ. ೫)

೨. ಶ್ರೀ ವಿ. ಕೃಷ್ಣ (ಸಂ. ೬)

೩. ಶ್ರೀ ಕೆ.ಎಲ್. ಚಂದ್ರಶೇಖರ (ಸಂ. ೭)

೪. ಶ್ರೀ ಬಾಲಸುಬ್ರಹ್ಮಣ್ಯ ಕಂಜರ್ಪಣೆ (ಸಂ. ೮)

೫. ಶ್ರೀ ಜೆ. ಎನ್. ಶಾಮರಾವ್ (ಸಂ. ೯)

ಅವರ ಈ ಸಹಾಯ-ಸಹಕಾರಗಳಿಗಾಗಿ ನಾವು ಕೃತಜ್ಞರಾಗಿದ್ದೇವೆ. ಅವರ ಗಮನವನ್ನು ತಪ್ಪಿಸಿ ಬಿಟ್ಟು ಹೋಗಿದ್ದ ಭಾಗಗಳನ್ನು ಸೇರಿಸಲಾಗಿದೆ; ಸಾರಣಿಗಳ ಮಾಹಿತಿಯನ್ನು ಸರಿಪಡಿಸಲಾಗಿದೆ; ಉಲ್ಲೇಖಗಳನ್ನು, ಅಂಕಿತನಾಮಗಳನ್ನು ಪರಿಷ್ಕರಿಸಲಾಗಿದೆ. ಹೀಗೆ ಪರಿಷ್ಕೃತವಾದ ಪಠ್ಯದ ಪ್ರಕಟಣೆಗೆ ಅನುವಾದ ಸಂಪಾದನ ಸಮಿತಿಯ ಒಪ್ಪಿಗೆಯನ್ನೂ ಪಡೆದುಕೊಳ್ಳಲಾಗಿದೆ.

ಹೊಸ ಆಕಾರದಲ್ಲಿ ಹಾಗೂ ಸ್ವರೂಪದಲ್ಲಿ ಹೊರತರಲಾದ ಮೊದಲನೆಯ ಸಂಪುಟ ಸಾರ್ವತ್ರಿಕ ಮೆಚ್ಚುಗೆಯನ್ನು ಗಳಿಸಿದ್ದರಿಂದ, ಅದೇ ವಿನ್ಯಾಸವನ್ನು ಇತರ ಸಂಪುಟಗಳೂ ಅಳವಡಿಸಿಕೊಳ್ಳಲಾಗಿದೆ.

ಈ ದಿಕ್ಕಿನಲ್ಲಿ ನಮಗೆ ಎಲ್ಲ ಸಹಾಯ ಸಹಕಾರ ಮಾರ್ಗದರ್ಶನಗಳನ್ನು ಇತ್ತಿರುವ ಕನ್ನಡ ಮತ್ತು

ಸಂಸ್ಕೃತಿ, ಹಾಗೂ ವಾರ್ತಾ ಇಲಾಖೆಯ ಸನ್ಮಾನ್ಯ ಕಾರ್ಯದರ್ಶಿಗಳಾದ ಶ್ರೀ ರಮೇಶ್ ಬಿ. ಝಳಕಿ ಅವರಿಗೆ ನಮ್ಮ ಕೃತಜ್ಞತೆಗಳು.

ವಿಳಂಬಗೊಂಡಿದ್ದ ಈ ಯೋಜನೆ ಸ್ಫೂರ್ತಿಯುತವಾಗಿ ಹಾಗೂ ಶೀಘ್ರಾತಿಶೀಘ್ರವಾಗಿ ಮುನ್ನಡೆಯುವುದಕ್ಕೆ ಕಾರಣರಾಗಿರುವವರು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸನ್ಮಾನ್ಯ ನಿರ್ದೇಶಕರಾದ ಶ್ರೀ ಮನು ಬಳಿಗಾರ್ ಅವರು. ಅವರಿಗೆ ನಮ್ಮ ಕೃತಜ್ಞತೆಗಳು ಸಲ್ಲುತ್ತವೆ.

ಅಂಬೇಡ್ಕರ್ ಅವರ ಬರೆಹಗಳು ಮತ್ತು ಭಾಷಣಗಳ ಮೂಲ ಪ್ರತಿಗಳು ಹಾಗೂ ಅನುವಾದದ ಎಲ್ಲ ಸಂಪುಟಗಳು ನಮ್ಮಲ್ಲಿಯಾಗಲೀ, ಹೊರಗಾಗಲೀ ಲಭ್ಯವಿಲ್ಲದೆ ಇದ್ದುದರಿಂದ, ಅನಿವಾರ್ಯವಾದ ವಿಳಂಬಕ್ಕೆ ಎಡೆದೊರೆಯಿತು. ಅಂಬೇಡ್ಕರ್ ಸಾಹಿತ್ಯಾಸಕ್ತ ಕೆಲವು ಮಿತ್ರರ ಖಾಸಗಿ ಗ್ರಂಥ ಸಂಗ್ರಹಗಳಿಂದ ಕೆಲವು ಸಂಪುಟಗಳನ್ನು ಸಂಗ್ರಹಿಸಲಾಯಿತು. ಸಂಪಾದನ ಸಮಿತಿಯ ಮಾನ್ಯ ಸದಸ್ಯರುಗಳು ತಮ್ಮ ಮಿತ್ರರುಗಳ ಖಾಸಗಿ ಸಂಗ್ರಹಗಳಿಂದಲೂ ಕೆಲವು ಸಂಪುಟಗಳನ್ನು ಒದಗಿಸಿಕೊಡುವ ಕೃಪೆಯನ್ನು ತೋರಿದರು. ಅವರ ಈ ಕೃಪೆಗಾಗಿ ಹಾಗೂ ಸಂಪಾದನ ಕಾರ್ಯದಲ್ಲಿ ಅವರು ನೀಡುತ್ತಿರುವ ಆತ್ಮೀಯ ಸಹಕಾರಕ್ಕಾಗಿ ವಂದನೆಗಳನ್ನು ಸಲ್ಲಿಸಬಯಸುತ್ತೇನೆ.

ಕರಡು ಪರಿಶೀಲನೆಯಲ್ಲಿ ನಮಗೆ ನೆರವಾಗಿರುವ ಡಾ. ಎಚ್.ಎಂ. ನಾಗರಾಜರಾವ್ ಮತ್ತು ಶ್ರೀಮತಿ ಆರತಿ ನಾಗೇಶ್ ಅವರಿಗೆ ನಮ್ಮ ವಂದನೆಗಳು ಸಲ್ಲುತ್ತವೆ.

ಪ್ರಾಧಿಕಾರದ ಕೆಲಸ-ಕಾರ್ಯಗಳಲ್ಲಿ ಹಾಗೂ ಪ್ರಕಟಣೆಯ ವಿಚಾರದಲ್ಲಿ ಹೃತ್ಪೂರ್ವಕವಾಗಿ ತಮ್ಮನ್ನು ತೊಡಗಿಸಿಕೊಂಡಿರುವ ಪ್ರಾಧಿಕಾರದ ರಿಜಿಸ್ಟ್ರಾರ್ ಪಿ. ನಾರಾಯಣಸ್ವಾಮಿ ಮತ್ತು ಇತರ ಸಿಬ್ಬಂದಿ ವರ್ಗದವರಿಗೂ ಹಾಗೂ ಸುಂದರವಾಗಿ ಮುದ್ರಿಸುವಲ್ಲಿ ಸಹಕರಿಸಿರುವ ಮೆ॥ ಮಯೂರ ಪ್ರಿಂಟ್ ಆಡ್ಸ್‌ನ ಶ್ರೀ ಬಿ.ಎಲ್. ಶ್ರೀನಿವಾಸ ಮತ್ತು ಅವರ ಸಿಬ್ಬಂದಿ ವರ್ಗದವರಿಗೂ ನಮ್ಮ ವಂದನೆಗಳು.

**ಪ್ರಧಾನ್ ಗುರುದತ್ತ**
ಅಧ್ಯಕ್ಷ
ಸಂಪಾದನ ಸಮಿತಿ

## ಎರಡನೇ ಮುದ್ರಣಕ್ಕೆ ಮುನ್ನುಡಿ

'ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಸಮಗ್ರ ಬರೆಹಗಳು ಮತ್ತು ಭಾಷಣಗಳು' ಮಾಲೆಯ ಹಲವು ಹೊತ್ತಿಗೆಗಳು ಅಚ್ಚಾಗಿ ಕನ್ನಡ ಓದುಗರ ಕೈಸೇರಿವೆ. ಪ್ರತಿಗಳು ಮುಗಿದಿರುವ ಹಿನ್ನೆಲೆಯಲ್ಲಿ ಮರುಮುದ್ರಣ ಕೈಗೊಳ್ಳುವ ಯೋಜನೆಗೆ ಕರ್ನಾಟಕ ಸರ್ಕಾರ ಅನುದಾನ ಮತ್ತು ಅನುಮತಿ ನೀಡಿದೆ. ಕುವೆಂಪು ಭಾಷಾ ಭಾರತಿ ಪ್ರಾಧಿಕಾರವು ಈ ಹೊಸ ಆವೃತ್ತಿಯಲ್ಲಿ ಸಂಪುಟಗಳ ಅಳವಡಿಕೆ ಮತ್ತು ಹೊದಿಕೆಯ ವಿನ್ಯಾಸದಲ್ಲಿ ಕೊಂಚ ಬದಲಾವಣೆ ಮಾಡಿದೆ. ಈ ಸಂಪುಟಗಳು ಓದುಗರಿಗೆ ಆಪ್ತವಾಗುತ್ತವೆಂಬ ನಂಬಿಕೆ ನಮ್ಮದು. ಈ ಕಾರ್ಯದಲ್ಲಿ ನೆರವಾದ ಎಲ್ಲರಿಗೂ ಪ್ರಾಧಿಕಾರದ ಪರವಾಗಿ ವಂದನೆಗಳನ್ನು ಸಲ್ಲಿಸುತ್ತೇವೆ.

**ಕೆ.ವಿ. ನಾರಾಯಣ**
ಅಧ್ಯಕ್ಷ
ಸಂಪಾದನ ಸಮಿತಿ

# ಮೂರನೇ ಮುದ್ರಣಕ್ಕೆ ಮುನ್ನುಡಿ

ಕರ್ನಾಟಕ ಸರ್ಕಾರವು ಭಾರತರತ್ನ ಬಾಬಾ ಸಾಹೇಬ್ ಡಾ. ಬಿ. ಆರ್. ಅಂಬೇಡ್ಕರ್ ಅವರ ಸಮಗ್ರ ಬರೆಹಗಳು ಮತ್ತು ಭಾಷಣಗಳನ್ನು ಕನ್ನಡದಲ್ಲಿ ಪ್ರಕಟಿಸಲು ಯೋಜಿಸಿ ಅದನ್ನು ಯಶಸ್ವಿಯಾಗಿ ಪೂರೈಸಿದೆ. ಹಲವು ಸಂಪುಟಗಳಲ್ಲಿ ಪ್ರಕಟಗೊಂಡಿರುವ ಅಂಬೇಡ್ಕರ್ ಅವರ ಬರೆಹಗಳ ಕನ್ನಡ ಅನುವಾದ ಪರಿಷ್ಕರಣಗೊಂಡು ಮತ್ತೆ ಮತ್ತೆ ಅಚ್ಚಾಗುತ್ತಿವೆ. ಇದೀಗ ಎಲ್ಲ ಸಂಪುಟಗಳು ಒಮ್ಮೆಗೆ ಮತ್ತೊಮ್ಮೆ ಅಚ್ಚಾಗಿ ಪ್ರಕಟಗೊಳ್ಳುತ್ತಿವೆ. ಈವರೆಗೆ ಕನ್ನಡದಲ್ಲಿ ದೊರಕದೇ ಇದ್ದ ಅಂಬೇಡ್ಕರ್ ಅವರ ಮರಾಠಿ ಬರೆಹಗಳು ಮತ್ತು ಭಾಷಣಗಳು ಈಗ ಮೊದಲ ಬಾರಿಗೆ ಅಚ್ಚಾಗುತ್ತಿವೆ. ಒಟ್ಟು ಇಪ್ಪತ್ತೆರಡು ಸಂಪುಟಗಳನ್ನು ಈಗ ವಿಷಯಸೂಚಿಯೊಂದಿಗೆ ಪ್ರಕಟಿಸಲಾಗುತ್ತಿದೆ. ಹಿಂದಿನ ಮುದ್ರಣಗಳಲ್ಲಿ ವಿಷಯಸೂಚಿಗಳು ಇಲ್ಲದಿದ್ದುದರಿಂದ ಸಂಪುಟಗಳನ್ನು ಓದುವವರಿಗೆ ಅಗತ್ಯ ವಿಷಯಗಳನ್ನು ಗುರುತಿಸಲು ಕಷ್ಟವಾಗುತ್ತಿದ್ದುದನ್ನು ಗಮನಿಸಿ ಈ ಕ್ರಮ ಕೈಗೊಳ್ಳಲಾಗಿದೆ. ಅಲ್ಲದೆ ಎಲ್ಲ ಸಂಪುಟಗಳ ವಿಷಯಸೂಚಿಗಳ ಸಂಕಲನವೂ ಈಗ ಹೊರಬಂದಿದೆ. ಇದರಿಂದ ಯಾವ ಸಂಪುಟದಲ್ಲಿ ಯಾವ ವಿಷಯದ ಬಗೆಗೆ ಮಾಹಿತಿ ಇದೆ ಎಂಬುದನ್ನು ಗುರುತಿಸಿಕೊಳ್ಳುವುದು ಓದುಗರಿಗೆ ಸುಲಭವಾಗಲಿದೆ. ಹಿಂದೆ ಪ್ರಕಟಗೊಂಡಿದ್ದ ಸಂಪುಟಗಳಲ್ಲಿ ಅಲ್ಲಲ್ಲಿ ಉಳಿದಿದ್ದ ಅಚ್ಚಿನ ತಪ್ಪುಗಳನ್ನು ತಿದ್ದಿ ಸರಿಪಡಿಸಲು ಕ್ರಮ ವಹಿಸಲಾಗಿದೆ.

ಈ ಸಂಪುಟಗಳನ್ನು ಅಚ್ಚು ಮಾಡಲು ಕರ್ನಾಟಕ ಸರ್ಕಾರವು ವಿಶೇಷ ಅನುದಾನವನ್ನು ಒದಗಿಸಿದೆ. ಅಚ್ಚಾದ ಸಂಪುಟಗಳು ರಾಜ್ಯದ ಎಲ್ಲೆಡೆ ಇರುವ ಸಮಾಜ ಕಲ್ಯಾಣ ಇಲಾಖೆಯ ವ್ಯಾಪ್ತಿಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಜನಾಂಗಗಳ ವಿದ್ಯಾರ್ಥಿನಿಲಯಗಳಿಗೆ ಉಚಿತವಾಗಿ ದೊರಕಬೇಕೆಂಬುದು ಸರ್ಕಾರದ ಸದಾಶಯ. ಇದರಿಂದ ಡಾ. ಅಂಬೇಡ್ಕರ್ ಅವರ ಚಿಂತನೆಗಳು ಮುಂದಿನ ತಲೆಮಾರಿಗೂ ಹರಿಯುವ ಅವಕಾಶ ಸೃಷ್ಟಿಯಾಗಿದೆ. ಕುವೆಂಪು ಭಾಷಾ ಭಾರತಿಗೆ ಇಂತಹ ಅಪೂರ್ವ ಹೊಣೆಯನ್ನು ನೀಡಿದ ಕರ್ನಾಟಕ ಸರ್ಕಾರಕ್ಕೆ ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ನಮ್ಮ ಕೃತಜ್ಞತೆಗಳು ಸಲ್ಲುತ್ತವೆ. ಈ ಸಂಪುಟಗಳ ಸಿದ್ಧತೆಗೆ ನಿಯುಕ್ತಿಗೊಂಡಿರುವ ಸಂಪಾದಕ ಮಂಡಲಿಯ ಸದಸ್ಯರಾದ ಡಾ. ದೇವನೂರ ಮಹದೇವ, ಡಾ. ಸಿದ್ಧಲಿಂಗಯ್ಯ ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಾದ ಶ್ರೀ ಕೆ. ಎ. ದಯಾನಂದ ಅವರು ತಮ್ಮ ಸಕಾಲಿಕ ಸೂಕ್ತ ಸಲಹೆಗಳ ಮೂಲಕ ನಮ್ಮ ಕೆಲಸ ಹೆಚ್ಚು ಪರಿಪೂರ್ಣವಾಗುವಂತೆ ಮಾಡಿದ್ದಾರೆ.

**ಕೆ. ವಿ. ನಾರಾಯಣ**
ಅಧ್ಯಕ್ಷ
ಸಂಪಾದನ ಸಮಿತಿ

# ಸಂಪಾದಕೀಯ

ಸ್ವಾತಂತ್ರ್ಯಪೂರ್ವ ಭಾರತದ ರಾಜಕೀಯ ಕ್ಷಿತಿಜದಲ್ಲಿ ಅನೇಕ ಉದ್ದಾಮ ವ್ಯಕ್ತಿಗಳು, ಪ್ರತಿಭಾನ್ವಿತ ಮುಖಂಡರು, ರಾಜಕಾರಣಿಗಳು, ಮುತ್ಸದ್ದಿಗಳು ಮತ್ತು ದೇಶಪ್ರೇಮಿಗಳು ಕಾಣಿಸಿಕೊಂಡು ದೇಶದ ವಿಮೋಚನೆಗಾಗಿ ತಮ್ಮ ಸರ್ವಸ್ವವನ್ನೂ ತ್ಯಾಗ ಮಾಡಿ ಚಿರಸ್ಮರಣೀಯರಾಗಿದ್ದಾರೆ. ಡಾ॥ ಭೀಮರಾವ್ ರಾಮ್‌ಜಿ ಅಂಬೇಡ್ಕರ್ ಅವರು ದೇಶದ ಇಂತಹ ನಾಯಕರಲ್ಲಿ ಒಬ್ಬರಾಗಿದ್ದರು. ಅವರು ಭಾರತದ ದೀನ-ದಲಿತರ ವಿಮೋಚನೆಗಾಗಿ ತಾವು ನಡೆಸಿದ ಹೋರಾಟವನ್ನು ದೇಶದ ಸ್ವಾತಂತ್ರ್ಯ ಹೋರಾಟ ಅಂಗವಾಗಿಯೇ ಸಂಘಟಿಸಿ ಅಸ್ಪೃಶ್ಯತಾ ನಿವಾರಣೆ ಮತ್ತು ಎಲ್ಲಾ ದುರ್ಬಲ ವರ್ಗಗಳ ವಿಮೋಚನೆಯಾಗದ ಹೊರತು ದೇಶದ ಸ್ವಾತಂತ್ರ್ಯ ಅರ್ಥರಹಿತ ಎಂಬ ಮೂಲತತ್ವವನ್ನು ಪ್ರತಿಪಾದಿಸಿದ ಏಕೈಕ ನಾಯಕರಾಗಿದ್ದರು. ಅವರು ಕೇವಲ ಅಸ್ಪೃಶ್ಯರ ನಾಯಕರಾಗಿರದೆ ಇಡೀ ಮಾನವ ಕುಲದ ಹಕ್ಕುಗಳು, ಸ್ವಾತಂತ್ರ್ಯ ಸಮಾನತೆ ಮತ್ತು ಭ್ರಾತೃತ್ವದ ಸ್ಥಾಪನೆಗಾಗಿ ಹೋರಾಡಿದ ಮಹಾನುಭಾವರಾಗಿದ್ದರು. ಅವರು ತಮ್ಮ ಇಡೀ ಜೀವನವನ್ನು ಈ ಗುರಿಸಾಧನೆಗಾಗಿ ಮುಡಿಪಾಗಿಟ್ಟರು.

ಅವರು ಜಾತ್ಯಾತೀತ, ಸಮಾಜವಾದಿ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಅಚಲ ವಿಶ್ವಾಸ ಹೊಂದಿದ್ದರು. ಅವರು ಮಾನವೀಯತೆಯ ಸಾಕಾರಮೂರ್ತಿಗಳಾಗಿದ್ದು, ದೀನದಲಿತರ ನೋವಿಗೆ ಸದಾ ಸ್ಪಂದಿಸುತ್ತಿದ್ದ ಮಹಾಪುರುಷರಾಗಿದ್ದರು.

ಡಾ॥ ಅಂಬೇಡ್ಕರ್ ಅವರು ಕೇವಲ ರಾಜಕೀಯ ಮುಖಂಡರಾಗಿರದೆ, ಆಧುನಿಕ ಭಾರತದ ನಿರ್ಮಾಪಕರೂ ಆಗಿದ್ದರೆಂದರೆ ಅತಿಶಯೋಕ್ತಿಯಾಗಲಾರದು. ಅವರು ಒಬ್ಬ ಘನ ವಿದ್ವಾಂಸರೂ, ವಿಚಾರವೇತ್ತರೂ, ಪ್ರೌಢ ಲೇಖಕರೂ, ಕಾನೂನು ಪಂಡಿತರೂ ಹಾಗೂ ಸಂವಿಧಾನ ತಜ್ಞರೂ ಆಗಿದ್ದರಲ್ಲದೆ, ಗಣ್ಯ ಸಮಾಜಶಾಸ್ತ್ರಜ್ಞರೂ ಖ್ಯಾತ ಸಂಶೋಧಕರೂ ಆಗಿದ್ದರು. ಜಾತಿ ಪದ್ಧತಿ, ಅಸ್ಪೃಶ್ಯತೆ, ಬಡತನ ಮುಂತಾದ ಸಾಮಾಜಿಕ-ಆರ್ಥಿಕ ಸಮಸ್ಯೆಗಳ ಆಳವಾದ ಅಧ್ಯಯನ ಮಾಡಿ ಇವುಗಳ ಉಗಮ, ಬೆಳವಣಿಗೆ ಮತ್ತು ವಸ್ತುಸ್ಥಿತಿಯ ಬಗ್ಗೆ ವಿಶಿಷ್ಟ ಸಿದ್ಧಾಂತಗಳನ್ನು ತಮ್ಮದೇ ಆದ ರೀತಿಯಲ್ಲಿ ಪ್ರಸ್ತುತಪಡಿಸಿದರಲ್ಲದೆ ಇವುಗಳ ನಿವಾರಣೆಯ ವಿಧಾನಗಳನ್ನು ನಿರೂಪಿಸಿದರು. ಅದೃಷ್ಟವಶಾತ್ ಅವರು ತಮ್ಮ ಅಮೂಲ್ಯವಾದ ವಿಚಾರಗಳನ್ನು ತಮ್ಮ ಅನೇಕ ಸಂಶೋಧನಾತ್ಮಕ ಗ್ರಂಥಗಳು, ಲೇಖನಗಳು ಮತ್ತು ವಿದ್ವತ್ಪೂರ್ಣ ಭಾಷಣಗಳಲ್ಲಿ ವ್ಯಕ್ತಪಡಿಸಿದ್ದಾರೆ. ಅವರ ಜೀವಿತ ಕಾಲದಲ್ಲಿಯೇ ಸುಮಾರು ಹದಿಮೂರು ಗ್ರಂಥಗಳು ಇಂಗ್ಲಿಷಿನಲ್ಲಿ ಪ್ರಕಟವಾಗಿದ್ದು ಇವುಗಳಲ್ಲಿ 'ಜಾತಿ ನಿರ್ಮೂಲನೆ'; 'ಶೂದ್ರರು ಯಾರು'; 'ಅಸ್ಪೃಶ್ಯರು ಯಾರು'-'ಅವರು ಹೇಗೆ ಮತ್ತು ಏಕೆ ಅಸ್ಪೃಶ್ಯರಾದರು'?; 'ರೂಪಾಯಿಯ ಸಮಸ್ಯೆ'; 'ಪಾಕಿಸ್ತಾನ ಅಥವಾ ಭಾರತದ ವಿಭಜನೆ' ಪ್ರಮುಖವಾಗಿವೆ. 'ಬುದ್ಧ ಮತ್ತು ಅವನ ಧರ್ಮ' ಅವರ ಮರಣೋತ್ತರ ಪ್ರಕಟಣೆ. ಇವುಗಳೂ ಅಲ್ಲದೇ ಅವರ ಅಪ್ರಕಟಿತ ಬರಹಗಳು ಅಸಂಖ್ಯಾತ. ಅವರ ಮರಣಾನಂತರ ಇವು ಆಸ್ತಿ ವಿವಾದದಲ್ಲಿ ಸಿಲುಕಿಕೊಂಡಿದ್ದರಿಂದ ಇತ್ತೀಚಿನವರೆಗೆ ಅವುಗಳ ಪ್ರಕಟಣೆ ಸಾಧ್ಯವಾಗಿರಲಿಲ್ಲ. ಹೀಗಾಗಿ ಅವುಗಳ ಅಧ್ಯಯನ ಸಾಧ್ಯವಿರಲಿಲ್ಲ. ಆದರೆ ಮಹಾರಾಷ್ಟ್ರ ಸರ್ಕಾರದ ಸತತ ಪ್ರಯತ್ನ, ಪರಿಶ್ರಮದಿಂದಾಗಿ ಮತ್ತು ಡಾ॥ ಅಂಬೇಡ್ಕರ್ ಅವರ ಕುಟುಂಬದ ಸದಸ್ಯರ ಸಹಕಾರ, ಸಮ್ಮತಿಯಿಂದಾಗಿ ಈಗ ಇವುಗಳ ಪ್ರಕಟಣೆಯೂ ಸಾಧ್ಯವಾಗಿದೆ.

ಡಾ॥ ಅಂಬೇಡ್ಕರ್ ಅವರು ಹೆಚ್ಚಾಗಿ ಇಂಗ್ಲಿಷ್ ಭಾಷೆಯಲ್ಲಿ ಬರೆದಿದ್ದಾರೆ. ಅವರ ಬರವಣಿಗೆಯ ಕೆಲ

ಭಾಗಗಳು, ಅದರಲ್ಲಿಯೂ ಅವರು ತಾವೇ ಆರಂಭಿಸಿ, ನಡೆಸಿಕೊಂಡು ಬಂದ ಪಾಕ್ಷಿಕೆಗಳಾದ ಸಮತಾ, ಜನತಾ ಮತ್ತು ಬಹಿಷ್ಕೃತ ಭಾರತ ಇವುಗಳಲ್ಲಿ ಮರಾಠಿಯಲ್ಲಿಯೇ ಅಗ್ರ ಲೇಖನಗಳಾಗಿ ಬಂದಿವೆ. ಅವರು ಮಾಡಿದ ಅನೇಕ ಸಾರ್ವಜನಿಕ ಭಾಷಣಗಳೂ ಮರಾಠಿ ಭಾಷೆಯಲ್ಲಿಯೇ ಇವೆ.

ಡಾ॥ ಅಂಬೇಡ್ಕರ್ ಅವರು ತಮ್ಮ ಕೆಲವು ವಿದ್ವತ್ಪೂರ್ಣ ಪ್ರಬಂಧಗಳನ್ನು ತಾವು ಅಮೆರಿಕದಲ್ಲಿ ವಿದ್ಯಾರ್ಥಿಯಾಗಿದ್ದಾಗಲೇ ಸಿದ್ಧಪಡಿಸಿ ೧೯೧೮ರಿಂದಲೇ ಪ್ರಕಟಿಸಿದರು. ನಂತರ ೧೯೨೩ ರಿಂದ ೧೯೫೫ರವರೆಗೆ ಅವರ ಇತರ ಗ್ರಂಥಗಳು ಪ್ರಕಟವಾದವು. ಇವೂ ಅಲ್ಲದೆ ತಮ್ಮ ಸಾರ್ವಜನಿಕ ಜೀವನದ ಸುಮಾರು ಮೂರು ದಶಕಗಳ ಅವಧಿಯಲ್ಲಿ ಅವರು ಅನೇಕ ಸಮಿತಿಗಳು, ಆಯೋಗಗಳು ಮತ್ತು ದುಂಡುಮೇಜಿನ ಪರಿಷತ್ತುಗಳಿಗೆ ಸಲ್ಲಿಸಿದ ಮನವಿಗಳು, ವಿಜ್ಞಾಪನಾ ಪತ್ರಗಳು, ಮಾಡಿದ ಭಾಷಣಗಳು, ಅವರ ರಾಜಕೀಯ ಮತ್ತು ಸಂವಿಧಾನದ ವಿಚಾರಗಳು ಮಹತ್ವದವುಗಳಾಗಿವೆ ಮತ್ತು ಅವರು ಮುಂಬಯಿ ಪ್ರಾಂತ್ಯ ಮತ್ತು ಕೇಂದ್ರಶಾಸನ ಸಭೆಗಳಲ್ಲಿ, ನಂತರ ಸಂವಿಧಾನ ಸಭೆಯ ಸದಸ್ಯರಾಗಿ, ಕರಡು ಸಮಿತಿಯ ಅಧ್ಯಕ್ಷರಾಗಿ ಸಿದ್ಧಪಡಿಸಿ, ಮಂಡಿಸಿದ ಕರಡು ಸಂವಿಧಾನ ಮತ್ತು ಅದರ ಮೇಲೆ ನಡೆದ ಚರ್ಚೆಗೆ ಅವರು ನೀಡಿದ ಉತ್ತರ, ಸಮಾಧಾನ, ವಿವರಣೆಗಳು ಮತ್ತು ಸ್ವತಂತ್ರ ಭಾರತದ ಪ್ರಥಮ ಕಾನೂನು ಮಂತ್ರಿಯಾಗಿ ಅವರು ವ್ಯಕ್ತಪಡಿಸಿದ ವಿಚಾರಗಳು, ಮಂಡಿಸಿದ ಮಸೂದೆಗಳು ಮುಂತಾದವು ಒಬ್ಬ ಮೇಧಾವಿ ಹಾಗೂ ಮುತ್ಸದ್ದಿ ವ್ಯಕ್ತಪಡಿಸಿದ ಅಮೂಲ್ಯ ವಿಚಾರಗಳಾಗಿದ್ದು ಇಂದಿಗೂ ಸಂವಿಧಾನದ ಪ್ರಸ್ತಾಪ ಬಂದಾಗಲೆಲ್ಲಾ ಅವರು ಅಂದು ನೀಡಿದ ವಿವರಣೆಗಳೇ ಕೊನೆಯ ಮಾತೆಂದು ಪರಿಗಣಿಸಲಾಗಿದೆ. ಆದ್ದರಿಂದ ಡಾ॥ ಅಂಬೇಡ್ಕರ್ ಅವರ ವಿಚಾರಗಳು ಅಂದೂ ಅಲ್ಲದೆ ಇಂದೂ ಪ್ರಸ್ತುತವಾಗಿದ್ದು ಅವುಗಳ ಅಧ್ಯಯನ ಮತ್ತು ಪರಿಚಯ ಅನಿವಾರ್ಯ.

ಆದರೆ ಕಾಲಕ್ರಮೇಣ ಅವರ ಪ್ರಕಟಿತ ಕೃತಿಗಳು ಲಭ್ಯವಾಗುತ್ತಿಲ್ಲ ಮತ್ತು ಅವು ಮುಂದೆ ದೊರೆಯುವ ಸಾಧ್ಯತೆಯೂ ಇಲ್ಲದಾಗಿದೆ. ಅವುಗಳೆಲ್ಲವೂ ಸಂಪೂರ್ಣವಾಗಿ ಅಳಿದು ಹೋಗುವ ಅಪಾಯವಿತ್ತು. ಇದನ್ನರಿತ ಮಹಾರಾಷ್ಟ್ರ ಸರ್ಕಾರವು ಡಾ॥ ಅಂಬೇಡ್ಕರ್ ಅವರ ಇಂಗ್ಲಿಷ್‌ನಲ್ಲಿರುವ ಎಲ್ಲಾ ಪ್ರಕಟಿತ ಮತ್ತು ಅಪ್ರಕಟಿತ ಕೃತಿಗಳನ್ನು ಸಂಗ್ರಹಿಸಿ, ಮುದ್ರಿಸಿ, ಪ್ರಕಟಿಸುವ ಅತ್ಯಂತ ಅವಶ್ಯ ಮತ್ತು ಉಪಯುಕ್ತ ಯೋಜನೆಯನ್ನು ಹಾಕಿಕೊಂಡಿದ್ದು, ಈ ಯೋಜನೆಯ ರೂಪುರೇಷೆಗಳನ್ನು ಸಿದ್ಧಪಡಿಸಿ ಕಾರ್ಯಗತಗೊಳಿಸಲು ಆ ರಾಜ್ಯದ ಶಿಕ್ಷಣ ಸಚಿವರ ಅಧ್ಯಕ್ಷತೆಯಲ್ಲಿ ಡಾ॥ ಅಂಬೇಡ್ಕರ್ ಅವರ ಒಡನಾಡಿಗಳು, ತಜ್ಞರು ಮತ್ತು ಮುಖಂಡರುಗಳಿಂದ ಕೂಡಿಡ "ಡಾ॥ ಬಾಬಾಸಾಹೇಬ್ ಅಂಬೇಡ್ಕರ್ ಅವರ ಮೂಲ ವಿಷಯಗಳ ಪ್ರಕಟಣಾ ಸಮಿತಿ, ಮಹಾರಾಷ್ಟ್ರ ಸರ್ಕಾರ" ಎಂಬ ಸಮಿತಿಯನ್ನು ರಚಿಸಿ, ಕಾರ್ಯತತ್ಪರವಾಯಿತು. ಈ ಸಮಿತಿಯನ್ನು ೧೯೭೮ರಲ್ಲಿ ಅಂದಿನ ಮುಖ್ಯಮಂತ್ರಿ ಶ್ರೀ ಶರದ್ ಪವಾರ್ ಅವರ ನೇತೃತ್ವದಲ್ಲಿ ರಚಿಸಲಾಯಿತು. ಈ ಸಮಿತಿಯ ಯಶಸ್ಸಿಗೆ ಇದರ ವಿಶೇಷ ಅಧಿಕಾರಿ ಶ್ರೀ ವಸಂತ ಮೂನ್ ಅವರ ಪರಿಶ್ರಮ ಮುಖ್ಯ ಕಾರಣ. ಈ ಸಮಿತಿಯು ಡಾ॥ ಅಂಬೇಡ್ಕರ್ ಅವರ ಎಲ್ಲಾ ಬರಹಗಳನ್ನೂ ಸಂಗ್ರಹಿಸಿ ಒಟ್ಟು ಹದಿನಾಲ್ಕು ಬೃಹತ್ ಸಂಪುಟಗಳಲ್ಲಿ "ಡಾ॥ ಬಾಬಾಸಾಹೇಬ್ ಅಂಬೇಡ್ಕರ್ ಬರೆಹಗಳು ಮತ್ತು ಭಾಷಣಗಳು" ಎಂಬ ಶೀರ್ಷಿಕೆಯಲ್ಲಿ ಪ್ರಕಟಿಸುವ ಯೋಜನೆ ಹಾಕಿಕೊಂಡು ಇದುವರೆಗೆ ಒಟ್ಟು ಹದಿಮೂರು ಸಂಪುಟಗಳನ್ನು ಪ್ರಕಟಿಸಿದೆ. ಇನ್ನೂ ಒಂದು ಸಂಪುಟ ಬರಬೇಕಾಗಿದೆ. ಇದುವರೆಗೆ ಪ್ರಕಟಿತವಾದ ಹದಿಮೂರು ಸಂಪುಟಗಳಲ್ಲಿ ಬಹಳಷ್ಟು ಅವರ ಪ್ರಕಟಿತ ಮತ್ತು ಅಪ್ರಕಟಿತ ಬರಹಗಳು ಸೇರಿವೆ. ೧೯೭೯ರಲ್ಲಿ ಬಿಡುಗಡೆಯಾದ ಒಂದನೆಯ ಸಂಪುಟದಲ್ಲಿ ಜಾತಿ ನಿರ್ಮೂಲನೆ, ಭಾಷಾವಾರು ಪ್ರಾಂತ್ಯಗಳು, ರಾನಡೆ, ಗಾಂಧಿ, ಜಿನ್ನಾ, ರಾಜ್ಯಗಳು ಮತ್ತು ಅಲ್ಪಸಂಖ್ಯಾತರು; ಸಂಯುಕ್ತ ರಾಜ್ಯವೇ ಅಥವಾ ಸ್ವಾತಂತ್ರ್ಯವೇ ಮುಂತಾದ ಪರಿಚಿತ ಮತ್ತು ಪ್ರಕಟಿತ ಕೃತಿಗಳು ಸೇರಿವೆ. ಎರಡನೆಯ ಸಂಪುಟ (೧೯೮೨)ದಲ್ಲಿ ಮುಂಬಯಿ ಶಾಸಕಾಂಗದಲ್ಲಿ ಮತ್ತು ದುಂಡುಮೇಜಿನ ಪರಿಷತ್ತುಗಳಲ್ಲಿ

ಅವರು ಮಾಡಿದ ಭಾಷಣಗಳೂ ಅಲ್ಲದೆ ಸೈಮನ್ ಆಯೋಗಕ್ಕೆ ಅವರು ನೀಡಿದ ಹೇಳಿಕೆಗಳೂ ಮನವಿಗಳೂ ಸೇರಿವೆ. ಮೂರನೆಯ ಸಂಪುಟ (೧೯೮೭)ದಲ್ಲಿ ಅಪ್ರಕಟಿತ ಕೃತಿಗಳಾದ ಹಿಂದೂಧರ್ಮ ದರ್ಶನ; ಪ್ರಾಚೀನ ಭಾರತದಲ್ಲಿ ಕ್ರಾಂತಿ ಮತ್ತು ಪ್ರತಿಕ್ರಾಂತಿ; ಭಾರತ ಮತ್ತು ಸಮತಾವಾದದ ಪೂರ್ವಭಾವಿ ಅವಶ್ಯಕತೆಗಳು; ಬುದ್ಧ ಅಥವಾ ಕಾರ್ಲ್‌ಮಾರ್ಕ್ಸ್ ಮುಂತಾದವು ಸೇರಿವೆ. ೧೯೮೭ರಲ್ಲಿಯೇ ಪ್ರಕಟವಾದ ನಾಲ್ಕನೆಯ ಸಂಪುಟ ಮಹಾರಾಷ್ಟ್ರದಲ್ಲಿ ವಿವಾದದ ಅಲೆಯನ್ನೇ ಎಬ್ಬಿಸಿತು. ಇದರಲ್ಲಿ ಅವರ ಇನ್ನೊಂದು ಅಪ್ರಕಟಿತ ಬರಹ ಮಾಲೆ 'ಹಿಂದೂ ಧರ್ಮದ ಸಂದಿಗ್ಧಗಳು' ಪ್ರಕಟವಾಗಿದ್ದೇ ಆಂದೋಲನಕ್ಕೆ ಪ್ರಚೋದನೆಯಾಯಿತು. ಇದರಿಂದಾಗಿ ಮಹಾರಾಷ್ಟ್ರ ಸರ್ಕಾರ ಈ ಸಂಪುಟದ ಮಾರಾಟವನ್ನು ಕೆಲಕಾಲ ತಡೆಹಿಡಿಯಬೇಕಾಯಿತು. ನಂತರ ಆದ ಒಪ್ಪಂದದಿಂದ ಪುನಃ ಇದರ ಮಾರಾಟ ಮುಂದುವರಿಯಿತು. ೧೯೮೯ರಲ್ಲಿ ಪ್ರಕಟವಾದ ಐದನೆಯ ಸಂಪುಟವು ಸಂಪೂರ್ಣವಾಗಿ ಅಪ್ರಕಟಿತ ಬರಹಗಳಿಂದ ಕೂಡಿದ್ದು ಇದರಲ್ಲಿ ಅಸ್ಪೃಶ್ಯರು ಮತು ಅಸ್ಪೃಶ್ಯತೆಯ ಬಗ್ಗೆ ಅವರ ಸಾಮಾಜಿಕ, ರಾಜಕೀಯ ಧಾರ್ಮಿಕ ವಿಶ್ಲೇಷಣೆಯ ಲೇಖನಗಳಿವೆ. ಅದೇ ವರ್ಷ ಪ್ರಕಟವಾದ ಆರನೆಯ ಸಂಪುಟದಲ್ಲಿ ಸೇರಿರುವ ಎಲ್ಲಾ ಲೇಖನಗಳೂ ಅರ್ಥಶಾಸ್ತ್ರ ಸಂಬಂಧವಾಗಿದ್ದು 'ರೂಪಾಯಿಯ ಸಮಸ್ಯೆ' ಇದರಲ್ಲಿ ಸೇರಿದೆ. ೧೯೯೦ರಲ್ಲಿ ಪ್ರಕಟವಾಗಿರುವ ಏಳನೆಯ ಸಂಪುಟದಲ್ಲಿ ಶೂದ್ರರು ಯಾರು? ಮತ್ತು ಅಸ್ಪೃಶ್ಯರು ಯಾರು – ಅವರು ಹೇಗೆ ಮತ್ತು ಏಕೆ ಅಸ್ಪೃಶ್ಯರಾದರು? ಎಂಬ ಅವರ ಈ ಎರಡು ಸಂಶೋಧನಾತ್ಮಕ ಮತ್ತು ಅತಿ ಮಹತ್ವದ ಗ್ರಂಥಗಳನ್ನು ಪುನರ್ ಮುದ್ರಿಸಲಾಗಿದೆ. ಇದೇ ವರ್ಷ ಪ್ರಕಟಿಸಲಾಗಿರುವ ಎಂಟನೆಯ ಸಂಪುಟದಲ್ಲಿ ಡಾ॥ ಅಂಬೇಡ್ಕರ್ ಅವರ ಅತ್ಯಂತ ವಿವಾದಾತ್ಮಕ, ಆದರೆ ಅಷ್ಟೇ ವಿದ್ವತ್‌ಪೂರ್ಣ ಹಾಗೂ ವಾಸ್ತವಿಕತೆಯಿಂದ ಪ್ರೇರಿತವಾದ ಅವರ ಗ್ರಂಥ 'ಪಾಕಿಸ್ತಾನ ಅಥವಾ ಭಾರತದ ವಿಭಜನೆ'ಯ ಪುನರ್ ಮುದ್ರಣವಾಗಿದೆ. ಇದು ಅವರ ಮೇರುಕೃತಿ. ಮುಂಬರುವ ಸಂಪುಟಗಳಲ್ಲಿ ಗವರ್ನರ್ ಜನರಲ್, ಪರಿಷತ್ತು, ಸಂವಿಧಾನ ಸಭೆ ಮತ್ತು ಸಂಸತ್ತಿನಲ್ಲಿ ಡಾ॥ ಅಂಬೇಡ್ಕರ್ ಅವರು ಭಾಗವಹಿಸಿರುವುದು (೧೯೪೨ ರಿಂದ ೧೯೫೬) ಕಾಂಗ್ರೆಸ್ ಮತ್ತು ಮಿಸ್ಟರ್ ಗಾಂಧಿ ಅಸ್ಪೃಶ್ಯರಿಗೆ ಮಾಡಿದುದು ಏನು?; ಹಾಗೂ ಮಿಸ್ಟರ್ ಗಾಂಧಿ ಹಾಗೂ ಅಸ್ಪೃಶ್ಯರ ವಿಮೋಚನೆ. (೯ನೆಯ ಸಂಪುಟ: ೧೯೯೧) ಮುಂಬಯಿಯ ಪೀಪಲ್ಸ್ ಎಜ್ಯುಕೇಶನ್ ಸೊಸೈಟಿ ನೀಡಿರುವ ಇನ್ನೂ ಕೆಲವು ಅಪ್ರಕಟಿತ ಬರಹಗಳು; ಮತ್ತು ಇತರ ಸಮ್ಮಿಶ್ರ ಬರಹಗಳು ಪ್ರಕಟವಾಗಿವೆ. ಹತ್ತನೆಯ ಸಂಪುಟ (೧೯೯೧)ದಲ್ಲಿ ಅವರು ಗವರ್ನರ್ ಜನರಲ್‌ರವರ ಕಾರ್ಯಕಾರಿ ಸಮಿತಿಯ ಸದಸ್ಯರಾಗಿದ್ದಾಗಿನ ದಾಖಲೆಗಳಿವೆ. ಈಗ ಪ್ರಕಟವಾಗಿರುವ ೧೧ನೆಯ ಸಂಪುಟವು 'ಬುದ್ಧ ಮತ್ತು ಅವನ ಧಮ್ಮ' ಗ್ರಂಥದ ಪುನರ್ ಮುದ್ರಣ. ೧೯೯೩ರಲ್ಲಿ ಪ್ರಕಟವಾಗಿರುವ ೧೨ನೆಯ ಸಂಪುಟದಲ್ಲಿ ಅವರ ಅಪ್ರಕಟಿತ ಕೃತಿಗಳಾದ 'ಪ್ರಾಚೀನ ಭಾರತದ ವಾಣಿಜ್ಯ'; 'ಅಸ್ಪೃಶ್ಯರು ಮತ್ತು ಬ್ರಿಟಿಷ್ ಸಾಮ್ರಾಜ್ಯ'; 'ಇಂಗ್ಲಿಷ್ ಸಂವಿಧಾನದ ಮೇಲೆ ಉಪನ್ಯಾಸಗಳು'; 'ಕಾಯ್ದೆ ಮತ್ತು ಕಾನೂನುಗಳ ಮೇಲೆ ಟಿಪ್ಪಣಿಗಳು'; 'ವೀಸಾಕ್ಕಾಗಿ ಕಾದಿದ್ದು' ಮತ್ತು ಇತರ ಸಮ್ಮಿಶ್ರ ಲೇಖನಗಳು ಸೇರಿವೆ. ೧೯೯೪ರಲ್ಲಿ ಪ್ರಕಟವಾಗಿರುವ ಹದಿಮೂರನೆಯ ಸಂಪುಟವು ಬಹಳ ಮಹತ್ವದ್ದಾಗಿದ್ದು ಅತ್ಯಂತ ಉಪಯುಕ್ತವೂ ಆಗಿದೆ. ಇದರಲ್ಲಿ ಡಾ॥ ಅಂಬೇಡ್ಕರ್‌ರವರು ಭಾರತ ಸಂವಿಧಾನದ ಪ್ರಮುಖ ಶಿಲ್ಪಿಯಾಗಿ ಭಾರತ ಸಂವಿಧಾನ ಸಭೆಯಲ್ಲಿ ನಿರ್ವಹಿಸಿದ ಜವಾಬ್ದಾರಿಯ ಸಂಪೂರ್ಣ ಪರಿಚಯವನ್ನು ದಾಖಲೆಗಳೊಂದಿಗೆ ಮಾಡಲಾಗಿದೆ. ಇದರಲ್ಲಿ ಸಂವಿಧಾನದ ಸಿದ್ಧಾಂತಗಳು ಮತ್ತು ನಿಯಮಗಳು ಹಾಗೂ ಅವುಗಳಿಂದ ಉದ್ಭವಿಸಬಹುದಾದ ಸಮಸ್ಯೆಗಳನ್ನು ಮುಂಗಂಡು ಅವುಗಳಿಗೆ ಡಾ॥ ಅಂಬೇಡ್ಕರರು ನೀಡಿದ ವಿವರಣೆಗಳೂ ಸೇರಿವೆ. ಇಂತಹ ಸ್ತುತ್ಯ ಉಪಕ್ರಮಕ್ಕಾಗಿ ಮಹಾರಾಷ್ಟ್ರ ಸರ್ಕಾರ ಅಭಿನಂದನಾರ್ಹ. ಅಲ್ಲದೆ, ಪ್ರತಿ ಸಂಪುಟ ಸರಾಸರಿ ಐದುನೂರು ಪುಟಗಳಿಗಿಂತ ಹೆಚ್ಚಿದ್ದಾಗ್ಯೂ, ಪ್ರತಿಯೊಂದರ ಬೆಲೆ ಕೇವಲ ನಲವತ್ತು ರೂಪಾಯಿಗಳಿರುವುದು (ಮೊದಲನೆಯ ಸಂಪುಟದ ಬೆಲೆ

ಕೇವಲ ಹತ್ತು ರೂಪಾಯಿ) ಅತ್ಯಂತ ಸ್ವಾಗತಾರ್ಹ ಸಂಗತಿಯಾಗಿದೆ. ಡಾ॥ ಅಂಬೇಡ್ಕರ್ ಅವರ ಈ ಅಮೂಲ್ಯ ಮತ್ತು ಸಮಗ್ರ ವೈಚಾರಿಕ ಸಾಹಿತ್ಯವನ್ನು ಒಂದೆಡೆ ಸಂಗ್ರಹಿಸಿ ಓದುಗರಿಗೆ ಅತ್ಯಂತ ಕಡಿಮೆ ಬೆಲೆಯಲ್ಲಿ ದೊರಕುವಂತೆ ಮಾಡುವ ಮೂಲಕ ಮಹಾರಾಷ್ಟ್ರ ಸರ್ಕಾರವು ವೈಚಾರಿಕ ಸಾಹಿತ್ಯಕ್ಕೆ ಹಾಗೂ ಡಾ॥ ಬಾಬಾಸಾಹೇಬ್ ಅಂಬೇಡ್ಕರ್ ಅವರ ವಿಚಾರಗಳನ್ನು ಇಂದಿನ ಹಾಗೂ ಮುಂದಿನ ಪೀಳಿಗೆಗಳಿಗೆ ನೀಡುವ ಮೂಲಕ ಮಹತ್ತರವಾದ ಸೇವೆ ಸಲ್ಲಿಸಿದೆ.

ಡಾ॥ ಬಾಬಾಸಾಹೇಬ್ ಅಂಬೇಡ್ಕರ್ ಅವರ ಈ ಸಮಗ್ರ ಸಾಹಿತ್ಯ ಇಂಗ್ಲಿಷ್ ಭಾಷೆಯಲ್ಲೇ ಪ್ರಕಟವಾಗಿರುವುದರಿಂದ ಈ ಭಾಷೆಯನ್ನು ಚೆನ್ನಾಗಿ ಬಲ್ಲವರು ಮಾತ್ರ ಇದರ ಉಪಯೋಗ ಹೊಂದಬಹುದಾಗಿದೆ. ಆದ್ದರಿಂದ ಈ ಭಾಷೆಯಲ್ಲಿ ಪರಿಶ್ರಮವಿಲ್ಲದ ಇತರ ಭಾಷಿಕರಿಗೆ ಡಾ॥ ಅಂಬೇಡ್ಕರ್ ಅವರ ಉಪಯುಕ್ತ ಸಾಮಾಜಿಕ, ಆರ್ಥಿಕ, ರಾಜಕೀಯ ವಿಚಾರಗಳು ಲಭ್ಯವಿಲ್ಲ. ಇದು ಒಂದು ದೊಡ್ಡ ಕೊರತೆ. ಇದನ್ನು ನಿವಾರಿಸುವ ಏಕೈಕ ಮಾರ್ಗವೆಂದರೆ ಅವರ ಎಲ್ಲಾ ಬರಹಗಳನ್ನು ಭಾರತದ ವಿವಿಧ ಪ್ರಾದೇಶಿಕ ಭಾಷೆಗಳಲ್ಲಿ ಅನುವಾದಿಸಿ ಪ್ರಕಟಿಸುವುದು. ಈ ಕೆಲಸ ಎಲ್ಲಾ ಭಾಷೆಗಳಲ್ಲಿ ತುರ್ತಾಗಿ ಆಗಬೇಕಾಗಿದೆ.

ಈ ಅವಶ್ಯಕತೆಯನ್ನು ಮೊಟ್ಟ ಮೊದಲು ಮನಗಂಡ ಕರ್ನಾಟಕ ರಾಜ್ಯ ಸರ್ಕಾರ ೧೯೮೮ರ ಜೂನ್ ತಿಂಗಳಲ್ಲಿ ಡಾ॥ ಅಂಬೇಡ್ಕರ್ ಅವರ ಕೃತಿಗಳನ್ನು ಕನ್ನಡಕ್ಕೆ ಭಾಷಾಂತರಿಸಲು ಮಹತ್ವದ ನಿರ್ಣಯ ತೆಗೆದುಕೊಂಡು ಈ ಕೆಳಕಂಡವರನ್ನೊಳಗೊಂಡ ಸಂಪಾದಕ ಸಮಿತಿಯನ್ನು ನೇಮಿಸಿ ಆದೇಶ ಹೊರಡಿಸಿತು.

೧) ಡಾ॥ ಎ.ಎಂ. ರಾಜಶೇಖರಯ್ಯ, ಸಂಪಾದಕರು

೨) ಡಾ॥ ಸಿದ್ಧಲಿಂಗಯ್ಯ, ಸದಸ್ಯರು

೩) ಶ್ರೀ ದೇವನೂರು ಮಹದೇವ, ಸದಸ್ಯರು

೪) ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು
ಸದಸ್ಯ ಕಾರ್ಯದರ್ಶಿ

ಸಮಿತಿಯ ಪ್ರಥಮ ಸಭೆ ೩೦-೮-೧೯೮೮ರಂದು ಬೆಂಗಳೂರಿನಲ್ಲಿ ಸೇರಿ ಡಾ॥ ಅಂಬೇಡ್ಕರ್ ಅವರ ಪ್ರಕಟಿತ ಮತ್ತು ಸುಪರಿಚಿತವಾದ ಹದಿನಾಲ್ಕು ಬಿಡಿ ಕೃತಿಗಳನ್ನು ಮಾತ್ರ ಭಾಷಾಂತರ ಮಾಡದೆ ಮತ್ತು ಅವುಗಳಲ್ಲಿ ಕೆಲವು ಲಭ್ಯವಿಲ್ಲದಿರುವ ಕಾರಣದಿಂದಲೂ, ಮಹಾರಾಷ್ಟ್ರ ಸರ್ಕಾರದ ಯೋಜನೆಯಂತೆ ಪ್ರಕಟಿತವಾಗುತ್ತಿರುವ ಎಲ್ಲಾ ಸಂಪುಟಗಳನ್ನು ಮಹಾರಾಷ್ಟ್ರ ಸರ್ಕಾರದ ಅನುಮತಿ ಪಡೆದುಕೊಂಡು ಕನ್ನಡಕ್ಕೆ ಭಾಷಾಂತರಿಸಬೇಕೆಂದು ನಿರ್ಣಯ ತೆಗೆದುಕೊಂಡಿತು. ಈ ಪ್ರಕಾರ ಮಹಾರಾಷ್ಟ್ರ ಸರ್ಕಾರದ ಅನುಮತಿ ಕೋರಿ ಪತ್ರ ಬರೆಯಲಾಯಿತು. ಮಹಾರಾಷ್ಟ್ರ ಸರ್ಕಾರದವರು ದಿನಾಂಕ ೨-೫-೧೯೮೯ರ ತಮ್ಮ ಪತ್ರದಲ್ಲಿ ಅನುಮತಿ ನೀಡಿ, ಕರ್ನಾಟಕ ಸರ್ಕಾರಕ್ಕೆ ತಿಳಿಸಿದರು. ಅನಂತರವೇ ಭಾಷಾಂತರ ಕಾರ್ಯವನ್ನು ವ್ಯವಸ್ಥಿತವಾಗಿ ಕೈಗೆತ್ತಿಕೊಳ್ಳಲಾಯಿತು.

ನಮ್ಮ ಸಂಪಾದಕ ಸಮಿತಿಯು ಭಾಷಾಂತರ ಕಾರ್ಯಕ್ಕಾಗಿ ನಾಡಿನ ಗಣ್ಯ ವಿದ್ವಾಂಸರನ್ನು ಗುರುತಿಸಿ ಅವರ ಸಮ್ಮತಿ, ಸಹಕಾರ ಕೋರಿತು. ಅವರ ಒಪ್ಪಿಗೆ ಪಡೆದ ನಂತರ ಪ್ರತಿಯೊಬ್ಬರಿಗೂ ಮೂಲ ಕೃತಿಯ ಸುಮಾರು ಒಂದು ನೂರು ಪುಟಗಳನ್ನು ವಹಿಸಲಾಯಿತು. ಡಾ॥ ಅಂಬೇಡ್ಕರ್ ಅವರ ಬರಹಗಳ ಭಾಷೆ ಮತ್ತು ವಿಚಾರಗಳು ಅತ್ಯಂತ ಕ್ಲಿಷ್ಟ ಹಾಗೂ ಗಹನವಾದುವುಗಳಾಗಿರುವುದರಿಂದ ಅವುಗಳ ಭಾಷಾಂತರ ಸುಲಭ ಸಾಧ್ಯವಲ್ಲ. ಭಾಷಾಂತರ ಮಾಡುವ ಮೊದಲು ಅದರ ಆಳವಾದ ಅಧ್ಯಯನ ಮತ್ತು ಮನನ ಅವಶ್ಯ. ಆದ್ದರಿಂದ ಭಾಷಾಂತರಕಾರರಿಗೆ ಹೆಚ್ಚು ಅವಧಿ ಬೇಕಾಯಿತು. ಕೆಲವರು ಭಾಷಾಂತರ ಮಾಡಿ ಕಳುಹಿಸಿದ ನಂತರ ಭಾಷೆ, ಶೈಲಿ, ಪಾರಿಭಾಷಿಕ

ಪದಗಳು ಮುಂತಾದವುಗಳ ಪರಿಶೀಲನೆ ಅಗತ್ಯವೆನಿಸಿತು. ಈ ಕಾರ್ಯದಲ್ಲಿ ಭಾಷಾತಜ್ಞರ ನೆರವು ಪಡೆಯಬೇಕೆಂದು ಸಂಪಾದಕ ಸಮಿತಿ ತೀರ್ಮಾನಿಸಿ ಕೆಳಕಂಡ ಮಹನೀಯರನ್ನು ಆಹ್ವಾನಿಸಲಾಯಿತು.

(೧) ಡಾ॥ ಆರ್.ಸಿ. ಹಿರೇಮಠ, ಮಾಜಿ ಕುಲಪತಿಗಳು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, (೨) ಡಾ॥ ದೇ. ಜವರೇಗೌಡ, ಮಾಜಿ ಕುಲಪತಿಗಳು, ಮೈಸೂರು ವಿಶ್ವವಿದ್ಯಾಲಯ, ಮೈಸೂರು ಮತ್ತು (೩) ಶ್ರೀ ವೈ.ಎಂ.ಸಿ. ಶರ್ಮ ಅಂದಿನ ಅಧ್ಯಕ್ಷರು, ಕರ್ನಾಟಕ ರಾಜಭಾಷಾ ಆಯೋಗ, ಬೆಂಗಳೂರು ನಂತರ ಶ್ರೀ ಕಂಠಿರಾವ್ ಇವರು ಅನುವಾದಿತ ಭಾಗಗಳ ಪರಿಶೀಲನೆ ಮಾಡಲು ಒಪ್ಪಿಕೊಂಡರು. ಅನುವಾದ ಮಾಡಿದ ಭಾಗಗಳಲ್ಲಿ ಪದ ಬಳಕೆ, ಭಾಷೆ, ಶೈಲಿ ಮುಂತಾದವುಗಳಲ್ಲಿ ಸಾಧ್ಯವಾದಷ್ಟು ಏಕರೂಪತೆ ತರುವ ಕಾರ್ಯ ಭಾಷಾಂತರ ಮಾಡುವುದಕ್ಕಿಂತಲೂ ಹೆಚ್ಚು ಕಠಿಣ ಮತ್ತು ಪ್ರಯಾಸಕರ. ರಾಜ್ಯದ ವಿವಿಧ ಭಾಗಗಳ ಅನುವಾದಕರು ತಮ್ಮ ತಮ್ಮ ಪ್ರಾದೇಶಿಕ ಭಾಷೆ, ಶೈಲಿಯನ್ನನುಸರಿಸುವುದು ಸಹಜ. ಆದಷ್ಟು ಈ ಪ್ರಾದೇಶಿಕ ವೈವಿಧ್ಯವನ್ನು ಉಳಿಸಿಕೊಂಡು ಬರಲಾಗಿದೆ. ಈ ಹಿರಿಯ ತಜ್ಞರು ತಮ್ಮ ಅಮೂಲ್ಯ ಸಮಯವನ್ನು ಈ ಕಾರ್ಯಕ್ಕಾಗಿ ವಿನಿಯೋಗಿಸಿ ಹೆಚ್ಚು ಶ್ರಮವಹಿಸಿ ಭಾಷಾಂತರದ ಮಟ್ಟವನ್ನು ಸುಧಾರಿಸುವ ಪ್ರಯತ್ನ ಮಾಡಿದ್ದಾರೆ. ಇವರ ಸಹಕಾರವಿಲ್ಲದೆ ಈ ಕಾರ್ಯ ಸುಗಮವಾಗುತ್ತಿರಲಿಲ್ಲ. ಇವರು ಮೊದಲು ಮೈಸೂರಿನ ಆಡಳಿತ ತರಬೇತಿ ಸಂಸ್ಥೆಯಲ್ಲಿ ನಂತರ ಬೆಂಗಳೂರಿನಲ್ಲಿ ಏರ್ಪಡಿಸಲಾಗಿದ್ದ ಮೂರು ದಿನಗಳ ಭಾಷಾಂತರ ಕಮ್ಮಟದಲ್ಲಿ ಭಾಗವಹಿಸಿ ಮಾರ್ಗದರ್ಶನ ಮಾಡಿದರು. ಈ ತಜ್ಞರಿಗೆ ಸಂಪಾದಕ ಸಮಿತಿ ಅತ್ಯಂತ ಋಣಿಯಾಗಿದೆ.

ಈಗ ಪ್ರಕಟವಾಗುತ್ತಿರುವ ಐದನೆಯ ಸಂಪುಟದಲ್ಲಿ ಮೂರನೆ ಮತ್ತು ನಾಲ್ಕನೆಯ ಸಂಪುಟಗಳಲ್ಲಿ ಪ್ರಕಟವಾಗದೆ ಉಳಿದ ಮತ್ತು ಇದುವರೆಗೆ ಪ್ರಕಟವಾಗದೇ ಇದ್ದ ಡಾ॥ ಅಂಬೇಡ್ಕರರ ಬರಹಗಳು ಸೇರಿವೆ. ಅವರ 'ಅಸ್ಪೃಶ್ಯರು ಅಥವಾ ಭಾರತದ ಕೊಳಗೇರಿ (ಘೆಟ್ಟೋ)ಗಳ ಮಕ್ಕಳು' ಮತ್ತು 'ಅಸ್ಪೃಶ್ಯರು ಹಾಗೂ ಅಸ್ಪೃಶ್ಯತೆ; ಸಾಮಾಜಿಕ, ರಾಜಕೀಯ, ಧಾರ್ಮಿಕ' ಎಂಬ ಪ್ರಬಂಧಗಳು ಈ ಸಂಪುಟದಲ್ಲಿ ಪ್ರಕಟವಾಗಿವೆ. ಈ ಲೇಖನಗಳು ಅತಿ ಮಹತ್ವದವುಗಳಾಗಿದ್ದು, ಸಾಮಾಜಿಕ ಸಂಶೋಧನೆಯಲ್ಲಿ ಬಹು ಉಪಯುಕ್ತವೆನಿಸಿವೆ. ನಮ್ಮ ಸಾಮಾಜಿಕ ಜೀವನದಲ್ಲಿ, ಅದರಲ್ಲಿಯೂ ಭಾರತೀಯರು ಪಾಶ್ಚಿಮಾತ್ಯ ನಾಗರಿಕತೆಯೊಂದಿಗೆ ಸಂಪರ್ಕ ಹೊಂದಿದ ನಂತರದ ಸಾಮಾಜಿಕ ಜೀವನ, ಅದರ ಉದಾರ ಮೌಲ್ಯಗಳ ಪರಂಪರೆ, ವೈಚಾರಿಕತೆ, ವೈಜ್ಞಾನಿಕ ವಿಶ್ಲೇಷಣೆ ಹಾಗೂ ಪ್ರಗತಿಯ ಅನ್ವೇಷಣೆ ಇವು ಮಹತ್ವದ ಅಂಶಗಳಾಗಿವೆ. ಡಾ॥ ಅಂಬೇಡ್ಕರರು ಪಾಶ್ಚಿಮಾತ್ಯ ಪರಂಪರೆಯ ಶ್ರೇಷ್ಠ ವಿಮರ್ಶಾತ್ಮಕ ಅಂಶಗಳು ಮತ್ತು ಪೌರ್ವಾತ್ಯ ತತ್ವ ಜ್ಞಾನದ ಸಂಗಮದಂತಿದ್ದರು. ಅವರು ಭಾರತದ ಪುನರುತ್ಥಾನದ ಶ್ರೇಷ್ಠ ಪ್ರತಿನಿಧಿಯಾಗಿದ್ದರು.

ಈ ಐದನೆಯ ಸಂಪುಟವು ಇನ್ನೂ ಹಲವಾರು ಕಾರಣಗಳಿಂದ ವಿಶಿಷ್ಟವಾಗಿದೆ. ಮೊದಲನೆಯದಾಗಿ ಈ ಪ್ರಕಟವಾಗುತ್ತಿರುವ ಈ ಅಪ್ರಕಟಿತ ಕೃತಿಗಳು ಮಹಾರಾಷ್ಟ್ರ ಸರ್ಕಾರದ ಮಹಾ ಆಡಳಿತಗಾರರ ರಕ್ಷಣೆಯಲ್ಲಿದ್ದು ಅವುಗಳು ಅಧ್ಯಯನಕ್ಕೆ ಲಭ್ಯವಿರಲಿಲ್ಲ. ಇವುಗಳನ್ನು ಸಾರ್ವಜನಿಕರಿಗೆ ದೊರಕುವಂತೆ ಮಾಡಲು ಹಲವರು ನ್ಯಾಯಾಲಯಕ್ಕೂ ಹೋಗಿದ್ದುಂಟು. ಇವುಗಳು ನಾಶವಾಗಿ ಹೋಗಬಹುದೆಂಬ ಭೀತಿಯೂ ಉಂಟಾಗಿತ್ತು. ಈ ಹಿನ್ನೆಲೆಯಲ್ಲಿ ಈಗ ಇವುಗಳ ಪ್ರಕಟಣೆ ಅತ್ಯಂತ ಸ್ವಾಗತಾರ್ಹ.

ಎರಡನೆಯದಾಗಿ ಇದರಲ್ಲಿ ಭಾರತದಲ್ಲಿ ಅಸ್ಪೃಶ್ಯರು ಮತ್ತು ಅಸ್ಪೃಶ್ಯತೆಯ ಸಮಸ್ಯೆಯ ವೈಜ್ಞಾನಿಕ ವಿಶ್ಲೇಷಣೆಯನ್ನು ಮಾಡಲಾಗಿದೆ. ಡಾ॥ ಅಂಬೇಡ್ಕರರು ಅಸ್ಪೃಶ್ಯತೆಯ ಉಗಮದ ಸಿದ್ಧಾಂತವನ್ನು ತಮ್ಮ ಗ್ರಂಥ 'ಅಸ್ಪೃಶ್ಯರು ಯಾರು? ಅವರು ಏಕೆ ಮತ್ತು ಹೇಗೆ ಅಸ್ಪೃಶ್ಯರಾದರು?' ಎಂಬ ಗ್ರಂಥದಲ್ಲಿ ಪ್ರತ್ಯೇಕವಾಗಿ ಪ್ರಸ್ತುತಪಡಿಸಿರುವರಾದರೂ, ಈ ಸಂಪುಟದಲ್ಲಿನ ಪ್ರಬಂಧಗಳಿಗೆ ಹಿಂದೂ ಸಮಾಜಕ್ಕೇ ಕಳಂಕವೆನಿಸಿರುವ ಅಸ್ಪೃಶ್ಯತೆಯ ವಿವಿಧ ಆಯಾಮಗಳನ್ನು

ವಿಶ್ಲೇಷಿಸಿದ್ದಾರೆ. ವಿಶ್ವದಲ್ಲಿ ವಿವಿಧ ರೀತಿಯ ಗುಲಾಮಗಿರಿಯನ್ನು ಮನುಕುಲ ಅನುಭವಿಸಿದೆ. ಆದರೆ ವಿಶ್ವದ ಇತರ ಕಡೆಗಳಲ್ಲಿ ಗುಲಾಮಗಿರಿ ಕಣ್ಮರೆಯಾಗಿದ್ದಾಗ್ಯೂ, ಅದು ಭಾರತದಲ್ಲಿ ಮಾತ್ರ ಏಕೆ ಆಚರಣೆಯಲ್ಲಿ ಮುಂದುವರಿದಿದೆ ಎಂಬ ಬಗ್ಗೆ ತಮ್ಮ ವಿಶ್ಲೇಷಣೆ ನೀಡಿದ್ದಾರೆ. ಜಾತಿ ಪದ್ಧತಿ, ಅಸ್ಪೃಶ್ಯತೆ ಮತ್ತು ಹಿಂದೂ ಸಮಾಜ ವ್ಯವಸ್ಥೆಯ ಕುರಿತಾದ ಡಾ॥ ಅಂಬೇಡ್ಕರರ ವಿಶ್ಲೇಷಣೆಯಲ್ಲಿ ಹಿಂದೂ ಸಮಾಜವನ್ನು ಮಾನವೀಯ ಮೌಲ್ಯಗಳಾದ ಸಮಾನತೆ, ಸ್ವಾತಂತ್ರ್ಯ, ನ್ಯಾಯ ಮತ್ತು ವಿಶ್ವಭ್ರಾತೃತ್ವದ ಆಧಾರಗಳ ಮೇಲೆ ಪುನರ್ಘಟಿಸುವ ಉದ್ದೇಶವಿತ್ತು. ಆದ್ದರಿಂದ ಈ ಐದನೆಯ ಸಂಪುಟದಲ್ಲಿನ ಪ್ರಬಂಧಗಳು ಸಾಮಾಜಿಕ ಚಿಂತನೆಗೆ ಅತ್ಯಂತ ಮಹತ್ವದವುಗಳಾಗಿವೆ.

ಈ ಸಂಪುಟದ ಭಾಷಾಂತರವನ್ನು ಆಸಕ್ತಿಯಿಂದ ಮಾಡಿಕೊಟ್ಟಿರುವ ಎಲ್ಲಾ ವಿದ್ವಾಂಸರಿಗೆ ಸಂಪಾದಕ ಸಮಿತಿ ಋಣಿಯಾಗಿದೆ. ಇದರ ಪರಿಷ್ಕರಣೆ ಮಾಡಿದ ಡಾ॥ ಸಿದ್ಧಲಿಂಗಯ್ಯನವರಿಗೆ ಮತ್ತು ಈ ಸಂಪುಟದ ಪ್ರಕಟಣೆಗಾಗಿ ಶ್ರಮಿಸಿದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಾಗಿರುವ ಶ್ರೀ ವೈ.ಕೆ. ಮುದ್ದುಕೃಷ್ಣ ಮತ್ತು ಅವರ ಸಿಬ್ಬಂದಿ ವರ್ಗದವರಿಗೆ ಸಂಪಾದಕ ಸಮಿತಿ ಅಭಾರಿಯಾಗಿದೆ. ಕೊನೆಯದಾಗಿ, ಮುದ್ರಣ ಕಾರ್ಯವನ್ನು ಅಚ್ಚುಕಟ್ಟಾಗಿ ಮಾಡಿಕೊಟ್ಟಿರುವ ಲಕ್ಷ್ಮಿ ಮುದ್ರಣಾಲಯ ಇವರಿಗೆ ನಮ್ಮ ಕೃತಜ್ಞತೆಗಳನ್ನು ಸಲ್ಲಿಸುತ್ತೇವೆ.

**ಡಾ. ಎ. ಎಂ. ರಾಜಶೇಖರಯ್ಯ**

ಸಂಪಾದಕ ಸಮಿತಿಯ ಪರವಾಗಿ

# ಪರಿವಿಡಿ


ಸಂದೇಶಗಳು v

ಪರಿಷ್ಕೃತ ಮುದ್ರಣಕ್ಕೆ ಮುನ್ನುಡಿ x

ಎರಡನೇ ಮುದ್ರಣಕ್ಕೆ ಮುನ್ನುಡಿ xiii

ಮೂರನೇ ಮುದ್ರಣಕ್ಕೆ ಮುನ್ನುಡಿ xiv

ಸಂಪಾದಕೀಯ xv

**ಪರ್ವ– ಒಂದು ಅಸ್ಪೃಶ್ಯನಾಗಿರುವುದೆಂದರೇನು?**

ಅಧ್ಯಾಯ ೧ ಅಸ್ಪೃಶ್ಯತೆ – ಅದರ ಮೂಲ ೩

ಅಧ್ಯಾಯ ೨ ಅಸ್ಪೃಶ್ಯರು – ಅವರ ಸಂಖ್ಯೆ ೭

ಅಧ್ಯಾಯ ೩ ಗುಲಾಮರು ಮತ್ತು ಅಸ್ಪೃಶ್ಯರು ೧೧

ಅಧ್ಯಾಯ ೪ ಭಾರತದ ಕೊಳೆಗೇರಿ – ಅಸ್ಪೃಶ್ಯತೆಯ ಕೇಂದ್ರ ಸಮುದಾಯದಿಂದ ಹೊರಗೆ ೨೩

ಅಧ್ಯಾಯ ೫ ಮಾನವ ಒಡನಾಟಕ್ಕೆ ಅಯೋಗ್ಯರು ೩೨

**ಪರ್ವ – ಎರಡು**

ಅಧ್ಯಾಯ ೬ ಅಸ್ಪೃಶ್ಯತೆ ಮತ್ತು ಅರಾಜಕತೆ ೪೩

ಅಧ್ಯಾಯ ೭ ಅರಾಜಕತೆ ಹೇಗೆ ಶಾಸನವಿಹಿತ? ೭೩

**ಪರ್ವ– ಮೂರು ಸಮಸ್ಯೆಯ ಮೂಲಗಳು**

ಅಧ್ಯಾಯ ೮ ಒಂದೇ ಬಗೆಯ ನಿದರ್ಶನಗಳು ೯೧

ಅಧ್ಯಾಯ ೯ ಹಿಂದೂಗಳು ಮತ್ತು ಸಾರ್ವಜನಿಕ ಅಂತಃಸಾಕ್ಷಿಯ ಕೊರತೆ ೧೦೬

ಅಧ್ಯಾಯ ೧೦ ಹಿಂದೂಗಳು ಮತ್ತು ಅವರ ಸಾಮಾಜಿಕ ಪ್ರಜ್ಞೆಯ ಕೊರತೆ ೧೧೨

ಅಧ್ಯಾಯ ೧೧ ಹಿಂದೂ ಮತ್ತು ಜಾತಿಪದ್ಧತಿಯಲ್ಲಿ ಅವರ ನಂಬಿಕೆ ೧೧೯

**ಭಾಗ – ನಾಲ್ಕು: ಅಸ್ಪೃಶ್ಯರು ಎದುರಿಸಬೇಕಾಗಿರುವ ಸಂಗತಿಗಳು**

ಅಧ್ಯಾಯ ೧೨ ಆಡಳಿತದ ವೈರುಧ್ಯ ೧೨೫

ಅಧ್ಯಾಯ ೧೩ ತಾರತಮ್ಯದ ಸಮಸ್ಯೆ ೧೩೦

ಅಧ್ಯಾಯ ೧೪ ಪ್ರತ್ಯೇಕತೆಯ ಸಮಸ್ಯೆ ೧೩೪

**ಪರ್ವ – ಎರಡು ಸಾಮಾಜಿಕ**

ಅಧ್ಯಾಯ ೧೫ ನಾಗರಿಕತೆಯೋ ನರಕವೋ ೧೫೩
ಅಧ್ಯಾಯ ೧೬ ಹಿಂದೂಗಳು ನಿರ್ಮಿಸಿರುವ ಸೌಧ ೧೭೪
ಅಧ್ಯಾಯ ೧೭ ಅದನ್ನು ನಿರ್ಮಿಸಿದ ಆಧಾರ ಶಿಲೆ ೧೯೩
ಅಧ್ಯಾಯ ೧೮ ಸ್ಪೃಶ್ಯರು ಮತ್ತು ಅಸ್ಪೃಶ್ಯರು ೨೧೦
ಅಧ್ಯಾಯ ೧೯ ಜಾತಿಯೆಂಬ ಶಾಪ ೨೨೫

**ಪರ್ವ – ಮೂರು ರಾಜಕೀಯ**

ಅಧ್ಯಾಯ ೨೦ ವಿಚ್ಛಿದ್ರಗೊಂಡ ಲಕ್ಷಾಂತರ ಜನ ೨೪೧
ಅಧ್ಯಾಯ ೨೧ ಅಸ್ಪೃಶ್ಯರ ಬಂಡಾಯ ೨೫೮
ಅಧ್ಯಾಯ ೨೨ ಇಕ್ಕಟ್ಟಿನಲ್ಲಿ ಸಿಕ್ಕಿದ್ದು ೨೭೦
ಅಧ್ಯಾಯ ೨೩ ಅವರ ಬಯಕೆಗಳು ನಮಗೆ ಕಾನೂನಿದ್ದಂತೆ ೨೮೨
ಅಧ್ಯಾಯ ೨೪ ಶ್ರೀಮಾನ್ ಗಾಂಧಿಯ ಮುಂಜಾಗ್ರತೆಯ ನೆರಳಲ್ಲಿ ೨೯೭
ಅಧ್ಯಾಯ ೨೫ ಗಾಂಧೀಜಿ ಮತ್ತು ಅವರ ಉಪವಾಸ ಸತ್ಯಾಗ್ರಹ ೩೩೯
ಅಧ್ಯಾಯ ೨೬ ಅಸ್ಪೃಶ್ಯರಿಗೊಂದು ಎಚ್ಚರಿಕೆ ೪೦೩

**ಪರ್ವ – ನಾಲ್ಕು ಧಾರ್ಮಿಕ**

ಅಧ್ಯಾಯ ೨೭ ಹಿಂದೂಗಳಿಂದ ದೂರ ೪೧೨
ಅಧ್ಯಾಯ ೨೮ ಜಾತಿ ಮತ್ತು ಮತಾಂತರ* ೪೩೧
ಅಧ್ಯಾಯ ೨೯ ಅಸ್ಪೃಶ್ಯರ ಕ್ರೈಸ್ತೀಕರಣ ೪೩೬
ಅಧ್ಯಾಯ ೩೦ ಮತಾಂತರಿಯ ಪರಿಸ್ಥಿತಿ ೪೫೩

**ವಿಷಯಸೂಚಿ** ೪೮೭

## ಭಾಗ – ಒಂದು

# ಅಸ್ಪೃಶ್ಯನಾಗಿರುವುದೆಂದರೇನು?

## ಅಧ್ಯಾಯ ೧

# ಅಸ್ಪೃಶ್ಯತೆ – ಅದರ ಮೂಲ

"ಅಸ್ಪೃಶ್ಯರಿಗೆ ನಾವೇನಾದರೂ ಮಾಡಬೇಕು" – ಇದನ್ನು ನಾವು ಸಾಮಾನ್ಯವಾಗಿ ಕೇಳುವುದು ಅಸ್ಪೃಶ್ಯರ ಅಮಾಯಕ ಪರಿಸ್ಥಿತಿಯನ್ನು ಕಂಡು ಮರುಗಿ ತಮ್ಮ ಭಾರವನ್ನು ಕಳೆದುಕೊಳ್ಳಲು ಉದ್ಗಾರವೆತ್ತುವವರಿಂದ. "ಸ್ಪೃಶ್ಯನಾಗಿರುವ ಹಿಂದೂವನ್ನು ಬದಲಾಯಿಸಲು ನಾವೇನಾದರೂ ಮಾಡೋಣ" ಎಂದು ಈ ಸಮಸ್ಯೆಯ ಬಗ್ಗೆ ಆಸಕ್ತಿ ಇರುವವರು ಯಾರೂ ಅಪರೂಪಕ್ಕೆ ಸಹ ಹೇಳಿರುವುದನ್ನು ನಾವೆಲ್ಲೂ ಕೇಳಿಲ್ಲ. ಅಸ್ಪೃಶ್ಯರನ್ನು ಹಸನುಗೊಳಿಸುವುದೇ ಉದ್ದೇಶವೆಂದು ತಪ್ಪದೆ ಯಾವಾಗಲೂ ಭಾವಿಸಲಾಗುತ್ತದೆ. ಪ್ರಚಾರಕಾರ್ಯ ಏನಾದರೂ ಇರಬೇಕಾದಲ್ಲಿ ಅದು ಅಸ್ಪೃಶ್ಯರನ್ನು ಕುರಿತದ್ದಾಗಿರಬೇಕು; ಅಸ್ಪೃಶ್ಯರನ್ನು ಉತ್ತಮಗೊಳಿಸಿದರೆ ಆಗ ಅಸ್ಪೃಶ್ಯತೆ ಇಲ್ಲವಾಗುತ್ತದೆ. ಸ್ಪೃಶ್ಯನಿಗೆ ನಾವೇನೂ ಮಾಡಬೇಕಾದ ಅಗತ್ಯವಿಲ್ಲ. ಅವನು ಮಾನಸಿಕವಾಗಿ, ನಡತೆಯ ದೃಷ್ಟಿಯಿಂದ ಮತ್ತು ನೈತಿಕವಾಗಿ ಸರಿಯಾಗಿಯೇ ಇದ್ದಾನೆ. ಅವನು ಪರಿಪೂರ್ಣ, ಅವನಲ್ಲೇನೂ ನ್ಯೂನತೆ ಇಲ್ಲ. – ಈ ರೀತಿಯ ಭಾವನೆ ಸರಿಯೆ? ಅದು ಸರಿ ಇರಲಿ, ಇಲ್ಲದಿರಲಿ, ಹಿಂದೂಗಳಂತೂ ಅದಕ್ಕೆ ಆತುಕೊಳ್ಳಲು ಇಷ್ಟಪಡುತ್ತಾರೆ. ಅಸ್ಪೃಶ್ಯರ ಸಮಸ್ಯೆಗೆ ತಾವು ಜವಾಬ್ದಾರರಲ್ಲ ಎಂಬ ಸಮಾಧಾನವನ್ನು ನೀಡುವ ವಿಪುಲವಾದ ಉತ್ಕೃಷ್ಟತೆ ಈ ಭಾವನೆಗೆ ಇದೆ.

ಇದು ಸ್ವಾಭಾವಿಕವಾದ ಒಂದು ಮನೋಭಾವವೆಂಬುದಕ್ಕೆ ಯೆಹೂದ್ಯರ ಬಗ್ಗೆ ಕ್ರೈಸ್ತಮತದವರ ಮನೋಭಾವವು ಇಂದು ನಿದರ್ಶನ ನೀಡುತ್ತದೆ. ಹಿಂದೂಗಳಂತೆ ಕ್ರೈಸ್ತಧರ್ಮೀಯರು ಸಹ ಯೆಹೂದಿ ಸಮಸ್ಯೆಯು ಮೂಲಭೂತವಾಗಿ ಕ್ರೈಸ್ತಧರ್ಮದವರ ಸಮಸ್ಯೆ ಎಂದು ಒಪ್ಪಿಕೊಳ್ಳುವುದಿಲ್ಲ. ಲೂಯಿ ಗೌಲ್ಡಿಂಗ್ ಅವರ ಈ ವಿಷಯದ ಬಗೆಗಿನ ಅಭಿಪ್ರಾಯಗಳು ಬಹಳ ಬೆಳಕನ್ನು ಚೆಲ್ಲುವಂತಹವು. ಯೆಹೂದಿ ಸಮಸ್ಯೆಯು ಮೂಲಭೂತವಾಗಿ ಕ್ರೈಸ್ತಧರ್ಮೀಯರ ಸಮಸ್ಯೆಯೇ ಆಗಿದೆ ಎಂಬುದನ್ನು ಸ್ಪಷ್ಟಪಡಿಸಲು ಅವರು ಹೀಗೆನ್ನುತ್ತಾರೆ :

"ಯೆಹೂದಿ ಸಮಸ್ಯೆಯು ಮೂಲಭೂತವಾಗಿ ಕ್ರೈಸ್ತಧರ್ಮೀಯರ ಸಮಸ್ಯೆಯೇ ಆಗಿದೆ ಎಂದು ನಾನು ಯಾವ ಅರ್ಥದಲ್ಲಿ ಭಾವಿಸುತ್ತೇನೆಂಬುದಕ್ಕೆ ಒಂದು ಸರಳವಾದ ಉದಾಹರಣೆ ನೀಡಲು ಅಪ್ಪಣೆ ಬೇಡುತ್ತೇನೆ. ನನಗೆ ನಿಕಟವಾಗಿ ಪರಿಚಯವಿರುವ ಒಂದು ಮಿಶ್ರತಳಿಯ ಬಿರುಗೂದಲ ನಾಯಿ ಇದೆ. ಅದು ಐರ್ಲೆಂಡ್ ಮೂಲದ್ದು. ಅದರ ಹೆಸರು ಪ್ಯಾಡಿ. ಅದನ್ನು ಕಂಡರೆ ನನ್ನ ಸ್ನೇಹಿತ ಜಾನ್ ಸ್ಮಿತ್‌ಗೆ ಎಲ್ಲಿಲ್ಲದ ಪ್ರೀತಿ. ಪ್ಯಾಡಿಗೆ ಸ್ಕಾಟ್ಲೆಂಡ್ ಮೂಲದ ಬಿರುಗೂದಲ ನಾಯಿಗಳನ್ನು ಕಂಡರೆ ಆಗುವುದಿಲ್ಲ. ಅಂತಹ ಒಂದು ನಾಯಿಯೇನಾದರೂ ಇಪ್ಪತ್ತು ಗಜದಷ್ಟು ಹತ್ತಿರ ಬಂದರೆ ಸಾಕು, ಸುತ್ತಮುತ್ತಲ ಇಡೀ ಪ್ರದೇಶ ಗಡಗಡಿಕ್ಕುವಂತೆ ಪ್ಯಾಡಿಯು ತನ್ನ ಅಟ್ಟಹಾಸ ಮತ್ತು ತಿರಸ್ಕಾರವನ್ನು ಪ್ರಕಟಪಡಿಸುತ್ತಾನೆ. ಈ ಅಭ್ಯಾಸವು ಜಾನ್ ಸ್ಮಿತ್‌ಗೆ ಒಪ್ಪಿಗೆಯಿಲ್ಲ. ಅದನ್ನು ತಡೆಗಟ್ಟಲು ಆತ ತನ್ನ ಕೈಲಾದಷ್ಟು ಯತ್ನಿಸುತ್ತಾನೆ. ಅಲ್ಲದೆ ಈ ಪ್ಯಾಡಿಯ ಅವಕೃಪೆಗೆ ಒಳಗಾಗುವ ಆ ಪಾಪದ ಪ್ರಾಣಿಗಳು ಎಂದೂ ಸ್ವತಃ ತಾವೇ ಮೊದಲು ಶಬ್ದ ಮಾಡುವಂತಹವಲ್ಲ. ಇದರಿಂದಾಗಿ ಸ್ಮಿತ್ ತಾನು ಪ್ಯಾಡಿಯಲ್ಲಿ ಎಷ್ಟೇ ಪ್ರೀತಿ ಇರಿಸಿಕೊಂಡಿದ್ದರೂ

ನನ್ನಂತೆ ಅವನೂ ಅದರ ಅಸಭ್ಯ ವರ್ತನೆಯನ್ನು ಸಹಿಸಲಾರ. ಸ್ವಲ್ಪಮಟ್ಟಿಗೆ ಇದು ಪ್ಯಾಡಿಯ ಮೂಲ ಪಾಪಸಂಸ್ಕಾರ ಎನ್ನುತ್ತಾನೆ ಅವನು. ಇಲ್ಲಿ ಇರುವುದು ನಿಜಕ್ಕೂ ಸ್ಕಾಟ್ಲೆಂಡ್ ಮೂಲದ ಬಿರುಗೂದಲ ನಾಯಿಗಳ ಸಮಸ್ಯೆ ಎಂದು ಯಾರೂ ಇದುವರೆಗೆ ನಮಗೆ ಸೂಚಿಸಿಲ್ಲ. ತನ್ನಷ್ಟಕ್ಕೆ ತಾನು ಶಾಂತವಾಗಿ ಸಂಧ್ಯಾಕಾಲದ ಗಂಧಗಳನ್ನು ಆಘ್ರಾಣಿಸುತ್ತಾ ಸಂಚರಿಸುತ್ತಿರುವ ನೆರೆಹೊರೆಯವನ ಮೇಲೆ ಪ್ಯಾಡಿಯು ಎರಗಿದಾಗ ಈ ನೆರೆಹೊರೆಯವನನ್ನು ಮೊದಲು ಛೇಡಿಸಬೇಕೆಂದು ಯಾರೂ ಸೂಚಿಸಿಲ್ಲ. ಪಾಪ, ಅವನು ಅಸ್ತಿತ್ವದಲ್ಲಿರುವುದೇ ಅವನ ಮೇಲೆರಗುವುದಕ್ಕೆ ಸಮಂಜಸವಾದ ಕಾರಣವಾಗುತ್ತದೆಯೆ?"

ಯೆಹೂದಿ ಸಮಸ್ಯೆ ಮತ್ತು ಅಸ್ಪೃಶ್ಯರ ಸಮಸ್ಯೆಗಳ ನಡುವೆ ಸಂಪೂರ್ಣವಾದ ಒಂದು ತಾಳಿಕೆ ಇರುವುದು ಇಲ್ಲಿ ಕಾಣುತ್ತದೆ. ಸ್ಕಾಟ್ಲೆಂಡ್ ಮೂಲದ ನಾಯಿಗೆ ಪ್ಯಾಡಿ ಹೇಗೋ ಹಾಗೆ ಯೆಹೂದ್ಯರಿಗೆ ಕ್ರೈಸ್ತಧರ್ಮೀಯರಾಗಿದ್ದಾರೆ. ಅಂತೆಯೇ ಅಸ್ಪೃಶ್ಯರಿಗೆ ಹಿಂದೂ ಸಹ. ಆದರೆ ಯೆಹೂದಿ ಸಮಸ್ಯೆಯು ಕ್ರೈಸ್ತಧರ್ಮೀಯರ ಸಮಸ್ಯೆಗಿಂತಲೂ ಭಿನ್ನವಾಗುವುದು ಒಂದು ವಿಶಿಷ್ಟ ಅಂಶದಲ್ಲಿ. ಮತ ನಂಬಿಕೆಗಳ ನಡುವಣ ವಿರೋಧದ ದೃಷ್ಟಿಯಿಂದ ಅವರಿಬ್ಬರೂ ಪ್ರತ್ಯೇಕವಾಗಿದ್ದಾರೆ. ಯೆಹೂದಿ ಮತಾಭಿಪ್ರಾಯವು ಕ್ರೈಸ್ತ ಮತದ ನಂಬಿಕೆಯನ್ನು ವಿರೋಧಿಸುತ್ತದೆ. ಇಂತಹ ವೈರುಧ್ಯವು ಹಿಂದೂಗಳು ಮತ್ತು ಅಸ್ಪೃಶ್ಯರನ್ನು ಪ್ರತ್ಯೇಕಗೊಳಿಸುವುದಿಲ್ಲ. ಅವರಿಬ್ಬರಿಗೂ ಸಮಾನ ಮತಧರ್ಮಗಳಿವೆ ಮತ್ತು ಸಮಾನ ಪೂಜೆ–ಪುನಸ್ಕಾರಗಳಿವೆ.

ಎರಡನೆಯ ವಿವರಣೆ ಹೀಗಿದೆ : ಯೆಹೂದ್ಯರು ಕ್ರೈಸ್ತಧರ್ಮೀಯರಿಂದ ಬೇರ್ಪಟ್ಟು ಇರಬೇಕೆಂದು ಆಶಿಸುತ್ತಾರೆ. ಮೊದಲನೆಯ ವಿವರಣೆಯು ಅನ್ಯಾಕ್ರಮಣಶೀಲವಾದದ್ದು: ಎರಡನೆಯದು ಚಾರಿತ್ರಿಕ ಸತ್ಯದ ಆಧಾರದ ಮೇಲೆ ನಿಂತಿದೆಯೆಂದು ತೋರುತ್ತದೆ. ಯೆಹೂದ್ಯರನ್ನು ತಮ್ಮೊಡನೆ ಸಮ್ಮಿಳಿತರನ್ನಾಗಿ ಮಾಡಿಕೊಳ್ಳಲು ಕ್ರೈಸ್ತ ಧರ್ಮೀಯರು ಹಿಂದೆ ಅನೇಕ ಪ್ರಯತ್ನಗಳನ್ನು ಮಾಡಿದ್ದಾರೆ. ಆದರೆ ಯೆಹೂದ್ಯರು ಅವನ್ನೆಲ್ಲಾ ಪ್ರತಿಭಟಿಸಿ ತಡೆದಿದ್ದಾರೆ. ಇಂತಹ ಎರಡು ನಿದರ್ಶನಗಳನ್ನು ನಾವು ಗಮನಿಸಬಹುದು.

ಮೊದಲನೆಯದು ನೆಪೋಲಿಯನ್ನನ ಆಡಳಿತಕ್ಕೆ ಸಂಬಂಧಿಸಿದ್ದು. ಫ್ರಾನ್ಸಿನ ರಾಷ್ಟ್ರೀಯ ಶಾಸನಸಭೆಯು "ಮಾನವನ ಹಕ್ಕು" ಗಳನ್ನು ಯೆಹೂದ್ಯರಿಗೆ ಘೋಷಿಸಲು ಒಪ್ಪಿತ್ತು. ಇದಾದ ಮೇಲೆ ಅಲ್ಸೇಸ್ ಪ್ರದೇಶದ ಧಾರ್ಮಿಕ ಪ್ರತಿಗಾಮಿಗಳು ಮತ್ತು ಸಂಘಟಿತ ವ್ಯಾಪಾರಿಗಳು ಯೆಹೂದಿ ಸಮಸ್ಯೆಯ ಪ್ರಶ್ನೆಯನ್ನು ಪುನಃ ಎತ್ತಿದರು. ಯೆಹೂದ್ಯರ ಪ್ರಶ್ನೆಯನ್ನು ಸ್ವತಃ ಅವರ ಪರಿಗಣನೆಗೇ ಬಿಟ್ಟುಬಿಡಲು ನೆಪೋಲಿಯನ್ ತೀರ್ಮಾನಿಸಿದ. ಫ್ರಾನ್ಸ್, ಜರ್ಮನಿ ಮತ್ತು ಇಟಲಿಗಳಲ್ಲಿದ್ದ ಪ್ರಮುಖ ಯೆಹೂದ್ಯರ ಒಂದು ಅಧಿವೇಶನವನ್ನು ಕರೆದ. ಯೆಹೂದಿ ಧರ್ಮದ ತತ್ವಗಳು ಪೌರತ್ವದ ಆವಶ್ಯಕತೆಗಳೊಂದಿಗೆ ಹೊಂದಿಕೊಳ್ಳುತ್ತವೆಯೇ ಎಂಬುದನ್ನು ತಿಳಿಯುವುದು ಅವನ ಉದ್ದೇಶವಾಗಿತ್ತು. ಏಕೆಂದರೆ ಯೆಹೂದಿ ಜನಾಂಗದವರನ್ನು ಬಹುಸಂಖ್ಯಾತರೊಡನೆ ಸಮ್ಮಿಳನಗೊಳಿಸಲು ಅವನು ಇಚ್ಛಿಸಿದ್ದ. ಅಧಿವೇಶನದಲ್ಲಿ ೧೧೧ ಪ್ರತಿನಿಧಿಗಳಿದ್ದರು. ೧೮೦೬ರ ಜುಲೈ ೨೫ ರಂದು ಸಭೆಯು ಪ್ಯಾರಿಸ್ಸಿನ ಪುರಭವನದಲ್ಲಿ ಜರುಗಿತು. ಈ ಸಭೆಯು ಹನ್ನೆರಡು ಪ್ರಶ್ನೆಗಳಿಗೆ ಉತ್ತರಗಳನ್ನು ರೂಪಿಸಬೇಕಾಗಿತ್ತು. ಎಲ್ಲ ಪ್ರಶ್ನೆಗಳೂ ಮುಖ್ಯವಾಗಿ ಯೆಹೂದಿ ದೇಶಪ್ರೇಮದ ಸಾಧ್ಯತೆಗೆ ಸಂಬಂಧಪಟ್ಟವೇ ಆಗಿದ್ದವು. ಯೆಹೂದ್ಯರು ಮತ್ತು ಯೆಹೂದ್ಯರಲ್ಲದವರ ನಡುವೆ ಅಂತರ್ವಿವಾಹಕ್ಕೆ ಪರವಾನಗಿ ಮತ್ತು ದುಬಾರಿ ಬಡ್ಡಿ ವ್ಯವಹಾರದ ಕಾನೂನು ಚೌಕಟ್ಟು – ಇವು ಸಹ ಸಭೆಯ ಮುಂದಿದ್ದ ಪ್ರಶ್ನೆಗಳು. ಅಧಿವೇಶನವು ವ್ಯಕ್ತಪಡಿಸಿದ ಅಭಿಪ್ರಾಯಗಳು ನೆಪೋಲಿಯನ್‌ಗೆ ಎಷ್ಟು ಸಂತುಷ್ಟಿ ನೀಡಿತೆಂದರೆ ಅವನು ಒಂದು ಆಮಂತ್ರಣ ಸಭೆಯನ್ನು ಕರೆದ. ಇದು ಜೆರುಸಲೆಮ್ಮಿನ ಪ್ರಾಚೀನ ಸಭೆಯ ಮಾದರಿಯದಾಗಿತ್ತು. ಅಧಿವೇಶನದ ಅಭಿಪ್ರಾಯಗಳನ್ನು ಶಾಸನವನ್ನಾಗಿ ಮಾರ್ಪಡಿಸುವುದು ಈ ಸಭೆಯ ಉದ್ದೇಶ. ಫ್ರಾನ್ಸ್,

ಜರ್ಮನಿ, ಹಾಲೆಂಡ್ ಮತ್ತು ಇಟಲಿಯ ಒಟ್ಟು ೭೧ ಪ್ರತಿನಿಧಿಗಳು ಈ ಸಭೆಯ ಸದಸ್ಯರು. ಸ್ಟ್ರಾಸ್‌ಬರ್ಗ್‌ನ ಯೆಹೂದಿ ಧಾರ್ಮಿಕ ಪಂಡಿತ ಸಿನ್‌ಸೈಮ್‌ನ ಅಧ್ಯಕ್ಷತೆಯಲ್ಲಿ ೧೮೦೭ರ ಫೆಬ್ರವರಿ ೯ರಂದು ಈ ಸಭೆ ನಡೆಯಿತು. ಅದು ಅಂಗೀಕರಿಸಿದ ಸನ್ನದಿನಲ್ಲಿ ಯೆಹೂದ್ಯರು ಫ್ರಾನ್ಸ್ ಅನ್ನು ತಮ್ಮ ತಾಯ್ನಾಡಾಗಿ ಭಾವಿಸಬೇಕೆಂದೂ, ಆ ದೇಶದ ಜನರನ್ನು ತಮ್ಮ ಸಹೋದರರೆಂದು ಪರಿಗಣಿಸಬೇಕೆಂದೂ, ಆ ದೇಶದ ಭಾಷೆಯನ್ನು ಮಾತನಾಡಬೇಕೆಂದೂ ಉಪದೇಶಿಸಲಾಗಿತ್ತು. ಯೆಹೂದಿ ದೇವಮಂದಿರವು ಯೆಹೂದ್ಯರ ಮತ್ತು ಕ್ರೈಸ್ತಧರ್ಮೀಯರ ನಡುವಣ ವಿವಾಹಗಳನ್ನು ಮಂಜೂರು ಮಾಡಲು ಸಾಧ್ಯವಿಲ್ಲವೆಂದು ಸ್ಪಷ್ಟಪಡಿಸುತ್ತಾ ಈ ಸನ್ನದು ಅಂತಹ ವಿವಾಹಗಳನ್ನು ಸಹನೆಯಿಂದ ಗಮನಿಸಬೇಕೆಂದು ಸಹ ಒತ್ತಾಯಿಸಿತ್ತು. ಯೆಹೂದ್ಯರ ಮತ್ತು ಯೆಹೂದ್ಯೇತರರ ನಡುವೆ ಅಂತರ್ವಿವಾಹವನ್ನು ಒಪ್ಪಲು ಸಭೆಯು ನಿರಾಕರಿಸಿದ್ದುದು ಗಮನಾರ್ಹ. ಅದನ್ನು ಸಹಿಸಬೇಕೆಂಬುದಷ್ಟಕ್ಕೆ ಮಾತ್ರ ತನ್ನ ಒಪ್ಪಿಗೆಯನ್ನು ನೀಡಿತ್ತು.

ಎರಡನೆಯ ನಿದರ್ಶನವು ೧೭೯೫ ರಲ್ಲಿ ಬಟಾವಿಯಾ ಗಣರಾಜ್ಯದ ಸ್ಥಾಪನೆಯಾದಾಗ ನಡೆದ ಪ್ರಸಂಗಕ್ಕೆ ಸಂಬಂಧಿಸಿದ್ದು. ಯೆಹೂದಿ ಜನಾಂಗಕ್ಕೆ ಸೇರಿದವರಲ್ಲಿ ಸ್ವಲ್ಪ ಹೆಚ್ಚಿನ ಪ್ರಾಬಲ್ಯವಿದ್ದಂತಹವರು ತಾವು ಎದುರಿಸುತ್ತಿದ್ದ ಹಲವಾರು ತೊಂದರೆಗಳನ್ನು ನಿವಾರಿಸಬೇಕೆಂದು ಒತ್ತಾಯಿಸಿದರು. ಆದರೆ ಪುರೋಗಾಮಿ ಯೆಹೂದಿಗಳು ಪೌರತ್ವದ ಸಂಪೂರ್ಣ ಹಕ್ಕುಗಳಿಗಾಗಿ ಬೇಡಿಕೆ ಮಂಡಿಸಿದಾಗ ಮೊದಲಿಗೆ ಅದನ್ನು ಆಮ್‌ಸ್ಟರ್ಡಾಮಿನ ಯೆಹೂದಿ ಜನಾಂಗದವರ ನಾಯಕರು ವಿರೋಧಿಸಿದ್ದರು. ಇದು ಆಶ್ಚರ್ಯವೆನಿಸುವಂತಹ ಸಂಗತಿ. ವಿರೋಧಿಗಳ ಆತಂಕವೇನಾಗಿತ್ತೆಂದರೆ ನಾಗರಿಕತ್ವದಲ್ಲಿ ಸಮಾನತೆಯುಂಟಾದರೆ ಯೆಹೂದಿ ಧರ್ಮದ ಉಳಿಯುವಿಕೆಗೆ ಕುತ್ತು ಉಂಟಾಗುತ್ತದೆ ಎಂಬುದಾಗಿತ್ತು. ತಮ್ಮ ಧರ್ಮದ ಆದೇಶಕ್ಕೆ ತಲೆಬಾಗಿ ತಮ್ಮ ಸಹಧರ್ಮಿಯರು ಪೌರತ್ವದ ಹಕ್ಕುಗಳನ್ನು ಬಿಟ್ಟು ಕೊಟ್ಟಿರುವುದಾಗಿ ಆಮ್‌ಸ್ಟರ್‌ಡಾಮಿನ ಸಮುದಾಯದವರು ಘೋಷಿಸಿದರು. ಯೆಹೂದ್ಯರು ಆ ಗಣರಾಜ್ಯದ ಜನರೊಡನೆ ಬೆರೆತು ಬಾಳುವುದರ ಬದಲು ಪರಕೀಯರಾಗಿಯೇ ಉಳಿಯಲು ಹೆಚ್ಚು ಒಲವನ್ನು ತೋರಿದರೆಂದು ಇಂದರಿಂದ ಗೊತ್ತಾಗುತ್ತದೆ.

ಕ್ರೈಸ್ತಧರ್ಮೀಯರು ನೀಡುವ ವಿವರಣೆ ಎಷ್ಟೇ ಬೆಲೆಯುಳ್ಳದ್ದಾಗಿರಲಿ ಇಲ್ಲದಿರಲಿ, ವಿವರಣೆಯನ್ನು ನೀಡಬೇಕಾದ ಜವಾಬ್ದಾರಿ ಹೊತ್ತಿದ್ದಾರೆಂಬುದನ್ನು ಅವರು ತಿಳಿದಿದ್ದಾರೆ; ಯೆಹೂದಿಗಳ ಬಗ್ಗೆ ತಮ್ಮ ಅಸ್ವಾಭಾವಿಕ ವರ್ತನೆಗೆ ಕಾರಣ ಹುಡುಕತೊಡಗಿದ್ದಾರೆ. ಇಂತಹ ಜವಾಬ್ದಾರಿಯನ್ನು ಹಿಂದೂವಾದವನ್ನು ಎಂದೂ ಅರಿತುಕೊಂಡೇ ಇಲ್ಲ. ಅವನು ಅಸ್ಪೃಶ್ಯರನ್ನು ನಡೆಸಿಕೊಳ್ಳುವುದನ್ನು ಸಮರ್ಥಿಸಿಕೊಳ್ಳುವ ಗೋಜಿಗೇ ಹೋಗಿಲ್ಲ. ಹಾಗೆ ನೋಡಿದರೆ ಹಿಂದೂಗಳ ಜವಾಬ್ದಾರಿ ಇನ್ನೂ ಹೆಚ್ಚಿನದು; ಏಕೆಂದರೆ, ಅಸ್ಪೃಶ್ಯತೆಯ ಸಮರ್ಥನೆಗೆ ಅವನು ನೀಡಬಹುದಾದಂತಹ ವಿವರಣೆಗಳೇ ಯಾವುವೂ ಇಲ್ಲ. ಅಸ್ಪೃಶ್ಯನೊಬ್ಬ ಕುಷ್ಠರೋಗಿಯೆಂದೋ ಅನೀತಿವಂತ ಪಾತಕಿಯೆಂದೋ ಹೇಳಿ ಅವನನ್ನು ದ್ವೇಷಿಸುವಂತಿಲ್ಲ. ತನ್ನ ಮತ್ತು ಅಸ್ಪೃಶ್ಯನೊಬ್ಬನ ನಡುವೆ ಪರಿಹರಿಸಲಾಗದಂತಹ ಧಾರ್ಮಿಕ ಭಿನ್ನತೆಯ ಒಂದು ಅಗಾಧ ಕಂದಕವಿದೆಯೆಂದೂ ಅವನು ಹೇಳಲಾಗುವುದಿಲ್ಲ. ಸ್ವತಃ ಅಸ್ಪೃಶ್ಯನೇ ಹಿಂದೂಗಳ ಜೊತೆ ಸೇರ್ಪಡೆ ಹೊಂದಲು ಇಚ್ಛಿಸುವುದಿಲ್ಲವೆಂಬ ಸಬೂಬನ್ನು ಸಹ ಅವನು ನೀಡಲಾಗುವುದಿಲ್ಲ.

ಆದರೆ ಅಸ್ಪೃಶ್ಯರ ದೃಷ್ಟಿಯಿಂದ ಅದು ಹಾಗಿಲ್ಲ. ಬೇರೆಲ್ಲರಿಂದ ಭಿನ್ನವಾಗಿದ್ದು ಚಿರಕಾಲ ಬಾಳಿರುವ ಜನರೆಂದು ಅವರನ್ನು ಇನ್ನೊಂದರ್ಥದಲ್ಲಿ ಹೆಸರಿಸಬಹುದು. ಆದಾಗ್ಯೂ ಈ ಭಿನ್ನತೆಯು, ಸಮಾಜದಿಂದ ಅವರ ಈ ದೂರೀಕರಣವು, ಅವರ ಇಚ್ಛೆಯ ಪರಿಣಾಮವಾಗಿ ಉಂಟಾಗಿರುವುದಲ್ಲ. ಇತರರೊಂದಿಗೆ ಸಮ್ಮಿಳಿತರಾಗಲು ಅವರು ಇಷ್ಟಪಡುವುದಿಲ್ಲವೆಂಬ ಕಾರಣದಿಂದಾಗಿ ಅವರಿಗೆ ಈ ಶಿಕ್ಷೆ ವಿಧಿಸಲಾಗಿಲ್ಲ;

ಬದಲಾಗಿ, ಅವರು ಹಾಗೆ ಇಷ್ಟಪಡುವ ಕಾರಣಕ್ಕಾಗಿ ಅವರಿಗೆ ಈ ಶಿಕ್ಷೆ ಒದಗಿಬಂದಿದೆ. ಬೇರೆ ಮಾತುಗಳಲ್ಲಿ ಹೇಳುವುದಾದರೆ, ಯೆಹೂದ್ಯರ ಮತ್ತು ಅಸ್ಪೃಶ್ಯರ ಸಮಸ್ಯೆಯಲ್ಲಿ ಸಮಾನ ಲಕ್ಷಣಗಳಿವೆ. ನಿಜ; ಎರಡೂ ಸಂದರ್ಭಗಳಲ್ಲಿ ಸಮಸ್ಯೆಯನ್ನು ಬೇರೆಯವರೇ ಸೃಷ್ಟಿಸಿದ್ದಾರೆ. ಇದನ್ನುಳಿದಂತೆ ಎರಡರಲ್ಲೂ ಮೂಲಭೂತವಾದ ವ್ಯತ್ಯಾಸವಿದೆ. ಯೆಹೂದಿಯ ಸಂದರ್ಭದಲ್ಲಿ ಅದು ಸ್ವಯಂಪ್ರೇರಿತವಾದ ಒಂಟಿತನದ ಜೀವನ. ಅಸ್ಪೃಶ್ಯರ ಸಂದರ್ಭದಲ್ಲಿ ಬೇರ್ಪಡಿಸುವಿಕೆಯು ಬಲವಂತವಾಗಿ ಹೇರಲಾಗಿರುವುದು. ಅಂದರೆ, ಅಸ್ಪೃಶ್ಯತೆಯು ಆಯ್ಕೆ ಮಾಡಿಕೊಂಡಿದ್ದಲ್ಲ ಬದಲಾಗಿ ಅದು ಹೇರಿರುವಂಥದ್ದು.

* * * *

# ಅಧ್ಯಾಯ ೨

# ಅಸ್ಪೃಶ್ಯರು – ಅವರ ಸಂಖ್ಯೆ

ಅಸ್ಪೃಶ್ಯನಾಗಿರುವುದೆಂದರೇನು ಎಂಬುದನ್ನು ತಿಳಿಯಲು ಯತ್ನಿಸುವ ಮುನ್ನ ಭಾರತದಲ್ಲಿ ಅಸ್ಪೃಶ್ಯರ ಒಟ್ಟು ಜನಸಂಖ್ಯೆ ಎಷ್ಟಿದೆಯೆಂಬುದನ್ನು ತಿಳಿಯಲಪೇಕ್ಷಿಸುವುದು ಉಚಿತ. ಇದಕ್ಕಾಗಿ ಜನಗಣತಿಯ ವರದಿಯನ್ನು ಆಶ್ರಯಿಸಬೇಕಾಗುತ್ತದೆ.

ಭಾರತದಲ್ಲಿ ಮೊದಲ ಸಾಮಾನ್ಯ ಜನಗಣತಿ ನಡೆದದ್ದು ೧೮೮೧ರಲ್ಲಿ. ಅದು ವಿವಿಧ ಜಾತಿಗಳನ್ನೂ ಧಾರ್ಮಿಕ ಸಂಪ್ರದಾಯಗಳನ್ನೂ ಪಟ್ಟಿಮಾಡಿ ಅವುಗಳೆಲ್ಲದರ ಕೆಳಗಿದ್ದ ಸಂಖ್ಯೆಯನ್ನು ಭಾರತದ ಜನಸಂಖ್ಯೆ ಒಟ್ಟು ಇಷ್ಟಿದೆ ಎಂದು ನಮೂದಿಸಿತು. ೧೮೮೧ರ ಜನಗಣತಿಯು ಇದಕ್ಕಿಂತ ಹೆಚ್ಚಿನದೇನನ್ನೂ ಮಾಡಲಿಲ್ಲ . ಹಿಂದೂಗಳಲ್ಲಿರುವ ಜಾತಿಗಳನ್ನು ಉಚ್ಚ ಮತ್ತು ನೀಚ ಎಂಬ ವಿಂಗಡಣೆಯಿಂದಾಗಲಿ ಸ್ಪೃಶ್ಯ ಮತ್ತು ಅಸ್ಪೃಶ್ಯ ಎಂದಾಗಲಿ ವಿಭಜಿಸಲು ಅದು ಯತ್ನಿಸಲಿಲ್ಲ. ಎರಡನೆಯ ಸಾಮಾನ್ಯ ಗಣತಿಯು ಭಾರತದಲ್ಲಿ ನಡೆದದ್ದು ೧೮೯೧ರಲ್ಲಿ. ಈ ಜನಗಣತಿಯಲ್ಲಿ ಮೊದಲ ಬಾರಿಗೆ ಜನಸಂಖ್ಯೆಯನ್ನು ಜಾತಿ, ಜನಾಂಗ ಮತ್ತು ಶ್ರೇಣಿಗಳ ಆಧಾರದ ಮೇಲೆ ವಿಂಗಡಿಸುವ ಯತ್ನವನ್ನು ಜನಗಣತಿಯ ಆಯುಕ್ತರು ಮಾಡಿದರು. ಆದರೆ ಅದು ಕೇವಲ ಒಂದು ಪ್ರಯತ್ನವಾಗಿತ್ತು. ಅಷ್ಟೇ.

ಭಾರತದಲ್ಲಿ ಮೂರನೆಯ ಸಾಮಾನ್ಯ ಜನಗಣತಿ ನಡೆದದ್ದು ೧೯೦೧ರಲ್ಲಿ. ಈ ಬಾರಿ ಜನಸಂಖ್ಯೆಯ ವಿಂಗಡಣೆಗೆ ಒಂದು ಹೊಸ ತತ್ತ್ವವನ್ನು ಅಳವಡಿಸಿಕೊಳ್ಳಲಾಯಿತು. "ಇಲ್ಲಿಯ ಸಾರ್ವಜನಿಕ ಅಭಿಪ್ರಾಯದಂತೆ ಪರಸ್ಪರವಾಗಿ ಸಾಮಾಜಿಕ ಹಿರಿಮೆ ಯಾರಿಗಿದೆ ಎಂಬುದನ್ನು ಆಶ್ರಯಿಸಿದ ವಿಂಗಡಣೆ" ಇದೆನ್ನಬಹುದು. ಜನಗಣತಿಯ ವರದಿಯು ಜಾತಿಯ ಆಧಾರದ ಮೇಲೆ ಜನಗಣತಿಯನ್ನು ದಾಖಲಿಸುವುದಕ್ಕೆ ಮೇಲ್ಜಾತಿಯ ಹಿಂದೂಗಳು ಪ್ರಬಲವಾದ ವಿರೋಧವನ್ನೆತ್ತಿದರು. ಜಾತಿಯ ಬಗೆಗಿನ ಪ್ರಶ್ನೆಯನ್ನು ಕೈಬಿಡಬೇಕೆಂದು ಅವರು ಆಗ್ರಹಪಡಿಸಿದರು.

ಜನಗಣತಿಯ ಆಯುಕ್ತರ ಮೇಲೆ ಈ ಆಕ್ಷೇಪವು ಯಾವ ಪ್ರಭಾವವನ್ನೂ ಬೀರಲಿಲ್ಲ. ಅವರ ಅಭಿಪ್ರಾಯದಲ್ಲಿ ಈ ರೀತಿ ಜಾತಿಯ ಆಧಾರದ ಮೇಲಿನ ದಾಖಲಾತಿಯು ಮುಖ್ಯ ಮತ್ತು ಆವಶ್ಯಕ ಎನಿಸಿತ್ತು. ಅವರು ಮಂಡಿಸಿದ ವಾದ ಈ ರೀತಿ ಇತ್ತು : "ಒಂದು ಸಾಮಾಜಿಕ ಸಂಸ್ಥೆಯಾಗಿ ಜಾತಿಯ ಅನುಕೂಲ ಮತ್ತು ಪ್ರತಿಕೂಲಗಳು ಏನೆಂಬುದರ ಬಗ್ಗೆ ಯಾವುದೇ ಅಭಿಪ್ರಾಯವಿರಲಿ, ಭಾರತದಲ್ಲಿ ಜನಸಂಖ್ಯೆಗೆ ಸಂಬಂಧಿಸಿದ ಪ್ರಶ್ನೆಗಳನ್ನು ಚರ್ಚಿಸುವಾಗ ಜಾತಿಯು ಮುಖ್ಯವಾದ ಒಂದು ಅಂಗವಾಗಿ ಬರದಿದ್ದರೆ ಯಾವುದೇ ಉಪಯುಕ್ತವಾದ ಚರ್ಚೆ ಸಾಧ್ಯವಾಗುತ್ತದೆಂದು ಕಲ್ಪಿಸಿಕೊಳ್ಳಲು ಸಹ ಸಾಧ್ಯವಿಲ್ಲ." ಜಾತಿಯು ಈಗಲೂ ಸಹ "ಭಾರತದ ಸಾಮಾಜಿಕ ಪಾತಳಿಯ ಅಡಿಗಲ್ಲು"; ಆದ್ದರಿಂದ ಜಾತಿಯ ದಾಖಲಾತಿಯು "ಭಾರತೀಯ ಸಮಾಜದ ವಿವಿಧ ಸಾಮಾಜಿಕ ಸ್ತರಗಳಲ್ಲಿ ಉಂಟಾಗಿರುವ ಬದಲಾವಣೆಗಳಿಗೆ ಅತ್ಯುತ್ತಮವಾದ ಕೈಪಿಡಿಯಾಗಿದೆ". ಹಿಂದೂ ಎಂಬ ಪದವನ್ನು ಅದರ ಅತ್ಯಂತ ವ್ಯಾಪಕವಾದ ಅರ್ಥದಲ್ಲಿ ಬಳಸಿನೋಡಿದರೆ ಪ್ರತಿಯೊಬ್ಬ ಹಿಂದೂವೂ ಒಂದು ಜಾತಿಯಲ್ಲಿ ಹುಟ್ಟಿದ್ದಾನೆ ಮತ್ತು ಆ ಜಾತಿಯು ಅವನ

ಧಾರ್ಮಿಕ, ಸಾಮಾಜಿಕ, ಆರ್ಥಿಕ ಮತ್ತು ಕೌಟುಂಬಿಕ ಜೀವನವನ್ನು ತೊಟ್ಟಿಲಿನಿಂದ ಸ್ಮಶಾನಗುಂಡಿಯವರೆಗೆ ನಿರ್ಧರಿಸುತ್ತದೆ. ಪಾಶ್ಚಾತ್ಯ ದೇಶಗಳಲ್ಲಿ ಸಮಾಜದ ವಿವಿಧ ಸ್ತರಗಳನ್ನು ನಿರ್ಧರಿಸುವುದರಲ್ಲಿ ಪ್ರಮುಖವಾದ ಅಂಶಗಳೆಂದರೆ ಸಂಪತ್ತು, ವಿದ್ಯಾಭ್ಯಾಸ ಮತ್ತು ಉದ್ಯೋಗ ; ಇವು ಅಲ್ಲಿ ಚಲನಾತ್ಮಕವಾಗಿವೆ ಮತ್ತು ಉದಾರ ಭಾವನೆಗಳಿಂದ ಕೂಡಿವೆ. ಇದರಿಂದಾಗಿ ಹುಟ್ಟು ಮತ್ತು ವಂಶಪಾರಂಪರ್ಯತೆಯ ಸ್ಥಾನದ ಬಿಗಿಮುಷ್ಟಿಯನ್ನು ಅವು ಸಹವರ್ತನೆಗೊಳಿಸುತ್ತವೆ. ಭಾರತದಲ್ಲಾದರೋ ಪಾರಮಾರ್ಥಿಕ ಮತ್ತು ಸಾಮಾಜಿಕ ಪರಿವರ್ತನೆ ಹಾಗೂ ಸಾಂಪ್ರದಾಯಿಕ ಉದ್ಯೋಗಗಳು ಉಳಿದೆಲ್ಲ ಅಂಶಗಳನ್ನೂ ಬದಿಗೊತ್ತುತ್ತವೆ. ಹೀಗಾಗಿ ಪಾಶ್ಚಿಮಾತ್ಯ ದೇಶಗಳಲ್ಲಿ ಜನಸಂಖ್ಯೆಯ ಆರ್ಥಿಕ ಅಥವಾ ಕಸುಬು ಆಧಾರಿತ ವಿಭಜನೆಯ ಜನಗಣತಿಗಳಲ್ಲಿ ಸೂಚಿತವಾಗುವ ಅಂಕಿಅಂಶಗಳ ಕಲೆಹಾಕುವಿಕೆಗೆ ಆಧಾರವಾಗಿತ್ತದೆ; ಅದೇ ಭಾರತದ ಜನಸಂಖ್ಯೆಯ ವಿಭಜನೆಗೆ ಧರ್ಮ ಮತ್ತು ಜಾತಿಗಳ ವ್ಯತ್ಯಾಸವೇ ಆಧಾರವಾಗುತ್ತದೆ. ರಾಷ್ಟ್ರೀಯವಾಗಿ ಮತ್ತು ಸಾಮಾಜಿಕವಾಗಿ ಜಾತಿಯೆಂಬ ಸಂಸ್ಥೆಯನ್ನು ನಾವು ಯಾವ ರೀತಿಯಲ್ಲಿ ವ್ಯಾಖ್ಯಾನಿಸಿದರೂ ಸರಿಯೆ, ಅದನ್ನು ತಳ್ಳಿಹಾಕಿ ಪ್ರಯೋಜನವಿಲ್ಲ; ಎಲ್ಲಿಯವರೆಗೆ ಒಬ್ಬನ ಅಧಿಕೃತ ಮತ್ತು ಸಾಮಾಜಿಕ ವ್ಯಕ್ತಿತ್ವದ ಭೇದಾತ್ಮಕ ಲಕ್ಷಣಗಳನ್ನು ಗುರುತಿಸಲು ಜಾತಿಯನ್ನು ಬಳಸುವುದು ಮುಂದುವರೆಯುತ್ತದೆಯೋ ಅಲ್ಲಿಯವರೆಗೆ ಜನಗಣತಿಯಲ್ಲಿ ಜಾತಿಯ ನಮೂದನೆಯೂ ಅನಪೇಕ್ಷಣೀಯ ಸಂಸ್ಥೆಯೊಂದನ್ನು ಮುಂದುವರಿಸಲು ಸೊಪ್ಪು ಹಾಕುತ್ತದೆಂದು ಹೇಳಲಾಗುವುದಿಲ್ಲ.

೧೯೦೧ರ ಜನಗಣತಿಯು ಅಸ್ಪೃಶ್ಯರ ಒಟ್ಟು ಜನಸಂಖ್ಯೆಯನ್ನು ಸರಿಯಾಗಿ ಇಷ್ಟೇ ಎಂದು ನಿಗದಿಗೊಳಿಸುವುದರಲ್ಲಿ ವಿಫಲವಾಯಿತು. ಇದಕ್ಕೆ ಎರಡು ಕಾರಣಗಳಿವೆ. ಮೊದಲನೆಯದಾಗಿ ಅಸ್ಪೃಶ್ಯನು ಯಾರೆಂದು ನಿರ್ಧರಿಸಲು ನಿಷ್ಕೃಷ್ಟವಾದ ಪ್ರಮಾಣಗಳನ್ನು ಅನ್ವಯಿಸಲಿಲ್ಲ. ಎರಡನೆಯದಾಗಿ ನಿಜಕ್ಕೂ ಅಸ್ಪೃಶ್ಯರಾಗಿದ್ದವರೊಂದಿಗೆ ಅಸ್ಪೃಶ್ಯರಲ್ಲದ, ಆದರೆ ಆರ್ಥಿಕ ಮತ್ತು ಶೈಕ್ಷಣಿಕ ದೃಷ್ಟಿಯಿಂದ ಹಿಂದುಳಿದಿದ್ದವರ, ಒಂದು ಭಾಗವನ್ನು ಬೆರೆಸಲಾಯಿತು.

೧೯೧೧ರ ಜನಗಣತಿಯು ಒಂದು ಹೆಜ್ಜೆ ಮುಂದೆ ಹೋಗಿ ಸ್ಪೃಶ್ಯರಿಂದ ಅಸ್ಪೃಶ್ಯರನ್ನು ಹೊರತುಪಡಿಸಿ ಗುರುತಿಸಲು ಬೇಕಾದ ಹತ್ತು ಸೂತ್ರಗಳನ್ನು ವಾಸ್ತವಿಕವಾಗಿ ನಿಬಂಧಗೊಳಿಸಿತು. ಈ ಪ್ರಮಾಣಸೂತ್ರಗಳ ಪ್ರಕಾರ ಜನಗಣತಿಯ ಮೇಲ್ವಿಚಾರಕರು ಜಾತಿಗಳ ಮತ್ತು ಬುಡಕಟ್ಟುಗಳ ನಮೂದನೆಯನ್ನು ಕೆಳಕಂಡಂತೆ ಮಾಡಿದರು : (೧) ಬ್ರಾಹ್ಮಣರ ಶ್ರೇಷ್ಠತೆಯನ್ನು ನಿರಾಕರಿಸುವವರು (೨) ಬ್ರಾಹ್ಮಣ ಅಥವಾ ಇತರ ಹಿಂದೂ ಗುರುಗಳಿಂದ ಮಂತ್ರವನ್ನು ಸ್ವೀಕರಿಸದವರು (೩) ವೇದಗಳ ಪ್ರಾಮಾಣ್ಯವನ್ನು ನಿರಾಕರಿಸುವವರು (೪) ಪ್ರಮುಖ ಹಿಂದೂ ದೇವತೆಗಳನ್ನು ಪೂಜೆ ಮಾಡದವರು (೫) ಕಟ್ಟಾ ಬ್ರಾಹ್ಮಣರಿಂದ ಸೇವೆ ಪಡೆಯದಿದ್ದವರು (೬) ಬ್ರಾಹ್ಮಣ ಪೂಜಾರಿಗಳನ್ನೇ ಹೊಂದದಿದ್ದವರು (೭) ಸಾಮಾನ್ಯ ಹಿಂದೂ ದೇವಾಲಯದೊಳಕ್ಕೆ ಪ್ರವೇಶ ಇಲ್ಲದವರು (೮) ಮಾಲಿನ್ಯ ಉಂಟುಮಾಡುವವರು (೯) ಸತ್ತವರನ್ನು ಹೂಳುವವರು ಮತ್ತು (೧೦) ಗೋವನ್ನು ಪೂಜಿಸದವರು ಮತ್ತು ಗೋಮಾಂಸವನ್ನು ತಿನ್ನುವವರು.

೧೯೧೦ರ ಜನವರಿ ೨೭ ರಂದು ಮುಸ್ಲಿಮರು ಸರ್ಕಾರಕ್ಕೆ ಒಂದು ಮನವಿಯನ್ನರ್ಪಿಸಿ ಅಸ್ಪೃಶ್ಯರನ್ನು ಹಿಂದೂಗಳಿಂದ ಬೇರ್ಪಡಿಸಬೇಕೆಂದು ಒತ್ತಾಯಿಸಿದರು. ರಾಜಕೀಯ ಅಂಗಸಂಸ್ಥೆಗಳಲ್ಲಿ ಹಿಂದೂಗಳಿಗೆ ಸ್ಪೃಶ್ಯರಾದ ಹಿಂದೂಗಳ ಸಂಖ್ಯೆಗನುಗುಣವಾಗಿ ಪ್ರಾತಿನಿಧ್ಯ ನೀಡಬೇಕೇ ವಿನಾ ಇಡೀ ಹಿಂದೂಗಳ ಸಂಖ್ಯೆಗನುಗುಣವಾಗಿ ಅಲ್ಲ ಎಂಬುದು ಅವರ ಕೇಳಿಕೆಯಾಗಿತ್ತು. ಅಸ್ಪೃಶ್ಯರು ಹಿಂದೂಗಳಲ್ಲ ಎಂಬುದು ಇದರ ಹಿಂದೆ ಇದ್ದ ಅವರ ವಾದ.

ಅದೇನೇ ಇರಲಿ, ೧೯೧೧ರ ಜನಗಣತಿಯು ಅಸ್ಪೃಶ್ಯರ ಸಂಖ್ಯೆಯನ್ನು ತಿಳಿಯುವುದರಲ್ಲಿ ಮೊತ್ತಮೊದಲ ಹೆಜ್ಜೆಯನ್ನಿಟ್ಟಿತು. ೧೯೨೧ ಮತ್ತು ೧೯೩೧ರ ಜನಗಣತಿಗಳಲ್ಲಿ ಇದೇ ದಿಕ್ಕಿನಲ್ಲಿ ಪ್ರಯತ್ನವನ್ನು ಮುಂದುವರೆಸಲಾಯಿತು.

ಈ ಪ್ರಯತ್ನಗಳ ಫಲವಾಗಿ ೧೯೩೦ರಲ್ಲಿ ಭಾರತಕ್ಕೆ ಬಂದ ಸೈಮನ್ ಆಯೋಗವು ಸ್ವಲ್ಪ ಮಟ್ಟಿನ ನಿಖರತೆಯಿಂದ ಹೇಳಲು ಸಾಧ್ಯವಾದದ್ದೇನೆಂದರೆ ಬ್ರಿಟಿಷ್ ಆಳ್ವಿಕೆಯಲ್ಲಿದ್ದ ಭಾರತದಲ್ಲಿ ಅಸ್ಪೃಶ್ಯರ ಒಟ್ಟು ಸಂಖ್ಯೆ ೪ ಕೋಟಿ ೪೫ ಲಕ್ಷ ಎಂದು.

ಈ ಮಧ್ಯೆ ೧೯೩೨ರಲ್ಲಿ ಭಾರತಕ್ಕೆ ಲೋಥಿಯನ್ ಸಮಿತಿಯು ಭೇಟಿ ನೀಡಿತು. ಸುಧಾರಿತ ಶಾಸನಸಭೆಗಳಿಗೆ ಮತದಾನದ ಪ್ರಶ್ನೆಯನ್ನು ಕುರಿತು ಅಧ್ಯಯನ ನಡೆಸುವುದು ಅದರ ಉದ್ದೇಶವಾಗಿತ್ತು. ಅಂತೆಯೇ ಸಮಿತಿಯು ತನ್ನ ಕೆಲಸವನ್ನಾರಂಭಿಸಿದಾಗ ಹಿಂದೂಗಳು ಅದನ್ನು ಧಿಕ್ಕರಿಸುವ ಮನೋಭಾವವನ್ನು ತಾಳಿ ಸೈಮನ್ ಆಯೋಗವು ಭಾರತದಲ್ಲಿನ ಅಸ್ಪೃಶ್ಯರ ಸಂಖ್ಯೆಯನ್ನು ಎಷ್ಟಿದೆಯೆಂದು ನೀಡಿತ್ತೋ ಅದನ್ನು ಒಪ್ಪಲು ನಿರಾಕರಿಸಿದರು. ಕೆಲವು ಪ್ರಾಂತ್ಯಗಳಲ್ಲಂತೂ ಅವರು ಯಾವ ಮಟ್ಟಕ್ಕೆ ಹೋದರೆಂದರೆ ಅಲ್ಲಿ ಅಸ್ಪೃಶ್ಯರೇ ಇರಲಿಲ್ಲವೆಂದು ಹೇಳಲಾರಂಭಿಸಿದರು. ಅಸ್ಪೃಶ್ಯರು ಇದ್ದಾರೆಂದು ಒಪ್ಪುವುದು ಅಪಾಯವೆಂದು ಈ ವೇಳೆಗೆ ಹಿಂದೂಗಳು ಅರಿತುಕೊಂಡದ್ದು ಇದಕ್ಕೆ ಕಾರಣವಾಗಿತ್ತು. ಹಿಂದೂಗಳ ಹೆಸರಿನಲ್ಲಿ ತಾನು ಗಳಿಸುತ್ತಿದ್ದ ಪ್ರಾತಿನಿಧ್ಯವನ್ನು ಅಸ್ಪೃಶ್ಯರಿಗೆ ಬಿಟ್ಟುಕೊಡಬೇಕಾದೀತೆಂಬುದು ಇದರ ಹಿಂದಿನ ತಂತ್ರ.

೧೯೪೧ರ ಜನಗಣತಿಯನ್ನು ನಾವು ಗಣನೆಗೆ ತೆಗೆದುಕೊಳ್ಳುವಂತಿಲ್ಲ. ಅದು ಯುದ್ಧದ ಕಾಲದಲ್ಲಿ ನಡೆದದ್ದು ಮತ್ತು ಅದು ಒಂದು ರೀತಿಯ ಅಂದಾಜಿನ ಲೆಕ್ಕ, ಅಷ್ಟೇ.

ಇತ್ತೀಚಿನ ಜನಗಣತಿ ಎಂದರೆ ೧೯೫೧ರದ್ದು. ಜನಗಣತಿ ಆಯುಕ್ತರು ನೀಡಿರುವ ಹೇಳಿಕೆಯಿಂದ ಈ ಕೆಳಗಿನ ಅಂಕಿಅಂಶಗಳನ್ನು ತೆಗೆದುಕೊಳ್ಳಲಾಗಿದೆ. ಭಾರತದಲ್ಲಿ ನಿಮ್ನ ಜಾತಿಗಳಿಗೆ ಸೇರಿದವರ ಜನಸಂಖ್ಯೆ ೫೧೩ ಲಕ್ಷ ಎಂದು ಜನಗಣತಿ ಆಯುಕ್ತರು ನೀಡಿರುವ ಅಂಕಿ ಅಂಶ.

೧೯೫೧ರ ಜನಗಣತಿಯು ತೋರಿಸಿರುವಂತೆ ಭಾರತದ ಒಟ್ಟು ಜನಸಂಖ್ಯೆ ೩೫೬೭ ಲಕ್ಷ. ಜನಗಣತಿಯ ಮಾಹಿತಿ ದಾಖಲೆಗಳು ಜಲಂಧರ್‌ನ ಜನಗಣತಿ ತಃಖ್ತೆಯ ಕೇಂದ್ರದಲ್ಲಿ ಬೆಂಕಿಯಿಂದ ಸುಟ್ಟುಹೋದದ್ದರಿಂದ ಅಲ್ಲಿ ದಾಖಲಾಗಿದ್ದ ೧ ಲಕ್ಷ ೩೫ ಸಾವಿರದ ಸಂಖ್ಯೆ ಇದರಲ್ಲಿ ಸೇರಿಲ್ಲ.

ಈ ಒಟ್ಟು ೩೫೬೭ಲಕ್ಷ ಜನಸಂಖ್ಯೆಯಲ್ಲಿ ೨೯೪೯ ಲಕ್ಷ ಮಂದಿ ಗ್ರಾಮಾಂತರ ಪ್ರದೇಶಗಳಲ್ಲಿ ಮತ್ತು ೬೧೮ ಲಕ್ಷ ಪಟ್ಟಣ ಪ್ರದೇಶಗಳಲ್ಲಿ ವಾಸಿಸುತ್ತಾರೆ. ಗ್ರಾಮಾಂತರ ಪ್ರದೇಶಗಳಲ್ಲಿ ನಿಮ್ನ ಜಾತಿಯವರ ಸಂಖ್ಯೆ ೪೬೨ ಲಕ್ಷ ಮತ್ತು ಪಟ್ಟಣ ಪ್ರದೇಶಗಳಲ್ಲಿ ಅವರ ಸಂಖ್ಯೆ ೫೧ ಲಕ್ಷ.

ಇಡೀ ಜನಸಂಖ್ಯೆಯಲ್ಲಿ ಕೃಷಿಯೇತರ ವರ್ಗಗಳಿಗೆ ಸೇರಿದವರ ಒಟ್ಟು ಸಂಖ್ಯೆ ೧೦೭೬ ಲಕ್ಷ, ಅದರಲ್ಲಿ ನಿಮ್ನ ಜಾತಿಯವರು ೧೩೨ ಲಕ್ಷ.

ಇಡೀ ಜನಸಂಖ್ಯೆಯಲ್ಲಿ ಪೂರ್ಣವಾಗಿ ಅಥವಾ ಪ್ರಮುಖವಾಗಿ ಭೂಮಿಯನ್ನು ಆಸ್ತಿಯಾಗಿ ಹೊಂದಿದ್ದು ಕೃಷಿ ಮಾಡುವವರು ಮತ್ತು ಅವರನ್ನು ಅವಲಂಬಿಸಿದವರು ಒಟ್ಟು ೧೬೭೪ ಲಕ್ಷ, ಆ ಪೈಕಿ ನಿಮ್ನ ಜಾತಿಯವರು ೧೭೪ ಲಕ್ಷ.

ಭೂಮಿಯನ್ನು ಪೂರ್ಣವಾಗಿ ಅಥವಾ ಪ್ರಮುಖವಾಗಿ ಸ್ವಂತದ್ದನ್ನಾಗಿ ಹೊಂದದೆ ಕೃಷಿ ಮಾಡುವವರು ಮತ್ತು ಅವರನ್ನವಲಂಬಿಸಿದವರು ಇಡೀ ಭಾರತದಲ್ಲಿ ಒಟ್ಟು ೩೧೬ ಲಕ್ಷ, ಆ ಪೈಕಿ ನಿಮ್ನ ಜಾತಿಯವರು ೫೬ ಲಕ್ಷ.

ಕೃಷಿ ಕೆಲಸಗಳಲ್ಲಿ ತೊಡಗಿದ ಕಾರ್ಮಿಕರು ಮತ್ತು ಅವರನ್ನವಲಂಬಿಸಿದವರು ಇಡೀ ಭಾರತದಲ್ಲಿ ೪೪೮ ಲಕ್ಷ, ಆ ಪೈಕಿ ನಿಮ್ನ ಜಾತಿಯವರು ೧೪೮ ಲಕ್ಷ.

ಕೃಷಿಯೇತರ ವರ್ಗಗಳಿಗೆ ಸೇರಿದವರ ಅಂಕಿಗಳು ಹೀಗಿವೆ :

ಕೃಷಿಯನ್ನುಳಿದ ಉತ್ಪಾದನೆ : ಒಟ್ಟು ೩೭೭ ಲಕ್ಷ, ನಿಮ್ನ ಜಾತಿಗಳು ೫೩ ಲಕ್ಷ.

ವಾಣಿಜ್ಯ : ಒಟ್ಟು ೨೧೩ ಲಕ್ಷ, ನಿಮ್ನ ಜಾತಿಗಳು ೯ ಲಕ್ಷ.

ಸಾರಿಗೆ : ಒಟ್ಟು ೫೬ ಲಕ್ಷ, ನಿಮ್ನ ಜಾತಿಗಳು ೬ ಲಕ್ಷ.

ಇತರೆ ಸೇವೆಗಳಲ್ಲಿ ನಿರತರಾದವರು ಮತ್ತು ನಾನಾ ಪ್ರಕಾರಗಳ ಮೂಲಗಳನ್ನುಳ್ಳವರು ಒಟ್ಟು ೪೩೦ ಲಕ್ಷ, ನಿಮ್ನ ಜಾತಿಯವರು ೬೪ ಲಕ್ಷ.

ನಿಮ್ನ ಜಾತಿಗೆ ಸೇರಿದ ಒಟ್ಟು ೫೧೩ ಲಕ್ಷ ಜನಸಂಖ್ಯೆಯಲ್ಲಿನ ೧೧೪ ಲಕ್ಷ ಮಂದಿ ಉತ್ತರ ಭಾರತ (ಉತ್ತರ ಪ್ರದೇಶ)ದಲ್ಲಿ ವಾಸಿಸುತ್ತಾರೆ; ೧೨೮ ಲಕ್ಷ ಪೂರ್ವ ಭಾರತದಲ್ಲಿ (ಬಿಹಾರ, ಒರಿಸ್ಸ, ಪಶ್ಚಿಮ ಬಂಗಾಳ, ಅಸ್ಸಾಂ, ಮಣಿಪುರ ಮತ್ತು ತ್ರಿಪುರ); ೧೧೦ ಲಕ್ಷ ದಕ್ಷಿಣ ಭಾರತದಲ್ಲಿ (ಮದರಾಸು, ಮೈಸೂರು, ತಿರುವಾಂಕೂರು–ಕೊಚ್ಚಿ ಮತ್ತು ಕೊಡಗು); ೩೧ ಲಕ್ಷ ಪಶ್ಚಿಮ ಭಾರತದಲ್ಲಿ (ಮುಂಬಯಿ, ಸೌರಾಷ್ಟ್ರ ಮತ್ತು ಕಛ್); ೭೬ ಲಕ್ಷ ಮಧ್ಯಭಾರತದಲ್ಲಿ (ಮಧ್ಯ ಪ್ರದೇಶ, ಮಧ್ಯ ಭಾರತ, ಹೈದರಾಬಾದ್, ಭೋಪಾಲ್ ಮತ್ತು ವಿಂಧ್ಯ ಪ್ರದೇಶ); ವಾಯವ್ಯ ಭಾರತದಲ್ಲಿ ೫೨ ಲಕ್ಷ (ರಾಜಸ್ತಾನ, ಪಂಜಾಬ್, ಪಾಟಿಯಾಲ ಮತ್ತು ಪೂರ್ವ ಪಂಜಾಬ್ ರಾಜ್ಯಗಳ ಒಕ್ಕೂಟ, ಅಜ್ಮೀರ್, ದೆಹಲಿ, ಬಿಲಾಸಪುರ ಮತ್ತು ಹಿಮಾಚಲ ಪ್ರದೇಶ).

* * * *

## ಅಧ್ಯಾಯ ೩

# ಗುಲಾಮರು ಮತ್ತು ಅಸ್ಪೃಶ್ಯರು

ಅಸ್ಪೃಶ್ಯತೆಯನ್ನು ಕುರಿತಂತೆ ನಾಚಿಕೆಗೊಳ್ಳುವುದಿರಲಿ, ಹಿಂದೂಗಳು ಅದನ್ನು ಸಮರ್ಥಿಸಿಕೊಳ್ಳಲು ಯತ್ನಿಸುತ್ತಾರೆ. ಅವರ ಸಮರ್ಥನೆಯ ರೀತಿ ಹೀಗಿದೆ: ಇತರ ದೇಶಗಳಲ್ಲಿ ಮಾಡಿದ್ದಂತೆ ಹಿಂದೂಗಳು ಎಂದೂ ಗುಲಾಮಗಿರಿಯನ್ನು ಎತ್ತಿಹಿಡಿದಿಲ್ಲ ಮತ್ತು ಏನೇ ಆದರೂ ಅಸ್ಪೃಶ್ಯತೆಯು ಗುಲಾಮಗಿರಿಗಿಂತಲೂ ಹೀನಾಯವಾದುದಲ್ಲ. ಲಾಲಾ ಲಜಪತರಾಯ್ ಅವರಂತಹ ಉದ್ದಾಮ ವ್ಯಕ್ತಿ ಸಹ ಈ ವಾದವನ್ನು ತಮ್ಮ "ನೆಮ್ಮದಿಯಿಲ್ಲದ ಭಾರತ" ಎಂಬ ಪುಸ್ತಕದಲ್ಲಿ ಬಳಸಿಕೊಂಡಿದ್ದಾರೆ. ಇಂತಹ ಪ್ರತ್ಯಾಪಾದನೆಯನ್ನು ಖಂಡಿಸುವುದರಲ್ಲಿ ಸಮಯವನ್ನು ವ್ಯರ್ಥ ಮಾಡುವುದು ಅನಗತ್ಯವಾಗಿರುತ್ತಿತ್ತು; ಆದರೆ ಅಂತಹ ವಾದದ ಸಾಧ್ಯತೆ ಇರುವಾಗ ಅಸ್ಪೃಶ್ಯತೆಯು ಗುಲಾಮಗಿರಿಗಿಂತಲೂ ಹೀನವಾದುದಲ್ಲ ಎಂಬ ಭಾವನೆ ತೋರಿಬರಬಹುದು. ಏಕೆಂದರೆ, ಪ್ರಪಂಚದಲ್ಲಿ ಸಾಮಾನ್ಯವಾಗಿ ಗುಲಾಮಗಿರಿಗಿಂತಲೂ ಹೀನಾಯವಾದದ್ದೇನೂ ಕಂಡುಬಂದಿಲ್ಲ.

ಪ್ರತ್ಯಾಪಾದನೆಗೆ ಮೊದಲ ಉತ್ತರ ಹಿಂದೂಗಳು ಗುಲಾಮಗಿರಿಯನ್ನು ಅಂಗೀಕರಿಸಿರಲಿಲ್ಲವೆಂಬುದು ಒಂದು ಶುದ್ಧ ಸುಳ್ಳು ಎಂಬುದಾಗಿದೆ. ಗುಲಾಮಗಿರಿಯು ಹಿಂದೂಗಳ ಒಂದು ಬಹಳ ಪ್ರಾಚೀನವಾದ ಸಂಸ್ಥೆ. ಹಿಂದೂ ಧರ್ಮಶಾಸ್ತ್ರಕಾರನಾದ ಮನು ಅದನ್ನು ಅಂಗೀಕರಿಸಿದ್ದಾನೆ. ಮನುವನ್ನು ಅನುಸರಿಸಿದ ನಂತರದ ಇತರ ಸ್ಮೃತಿಕಾರರು ಅದನ್ನು ವಿಸ್ತರಿಸಿ ಅದಕ್ಕೊಂದು ವ್ಯವಸ್ಥಿತ ರೂಪವನ್ನು ಕೊಟ್ಟಿದ್ದಾರೆ. ಹಿಂದೂಗಳಲ್ಲಿ ಗುಲಾಮಗಿರಿ ಎಂಬುದು ಯಾವುದೋ ಓಬೀರಾಯನ ಕಾಲದಲ್ಲಿ ಅಸ್ತಿತ್ವದಲ್ಲಿದ್ದಂತಹ ಕೇವಲ ಒಂದು ಪ್ರಾಚೀನ ಸಂಸ್ಥೆಯಲ್ಲ. ಭಾರತದ ಇತಿಹಾಸದುದ್ದಕ್ಕೂ ಆ ಸಂಸ್ಥೆಯು ಮುಂದುವರಿಯುತ್ತಲೇ ಬಂದಿದೆ. ೧೮೪೩ರಲ್ಲಿ ಬ್ರಿಟಿಷ್ ಸರ್ಕಾರವು ಕಾನೂನನ್ನು ಮಾಡಿ ಅದನ್ನು ರದ್ದುಪಡಿಸದಿದ್ದರೆ ಇಂದಿಗೂ ಅದು ಮುಂದುವರಿಯುತ್ತಲೇ ಇರುತ್ತಿತ್ತೇನೋ!

ಪ್ರತ್ಯಾಪಾದನೆಯಲ್ಲಿ ಅಡಕವಾಗಿರುವ ಅಂಶವಾದ ಗುಲಾಮಗಿರಿ ಮತ್ತು ಅಸ್ಪೃಶ್ಯತೆಗಳಲ್ಲಿ ಯಾವುದು ಹೆಚ್ಚು ಉತ್ಕೃಷ್ಟವಾದದ್ದೆಂಬುದನ್ನು ತಿಳಿಯಲು ಇರುವ ಉತ್ತಮ ಮಾರ್ಗವೆಂದರೆ ಪ್ರಾಚೀನ ರೋಮ್ ಮತ್ತು ಆಧುನಿಕ ಅಮೆರಿಕಗಳಲ್ಲಿ ಅಸ್ತಿತ್ವದಲ್ಲಿದ್ದ ಗುಲಾಮಗಿರಿಯನ್ನು ಅಸ್ಪೃಶ್ಯತೆಯೊಡನೆ ಹೋಲಿಸುವುದು ಮತ್ತು ವ್ಯತ್ಯಾಸವನ್ನು ತೋರಿಸುವುದು.

ರೋಮ್ ಚಕ್ರಾಧಿಪತ್ಯದಡಿಯಲ್ಲಿ ಗುಲಾಮರ ಸ್ಥಿತಿಯು ವಾಸ್ತವವಾಗಿ ಏನಾಗಿತ್ತು? ಇದಕ್ಕೆ ಸಂಬಂಧಿಸಿದಂತೆ ಇರುವ ವಿವರಣೆಗಳಲ್ಲಿ ನನಗೆ ತಿಳಿದಂತೆ ಬ್ಯಾರೋ ಅವರ "ರೋಮ್ ಚಕ್ರಾಧಿಪತ್ಯದಲ್ಲಿ ಗುಲಾಮಗಿರಿ" ಎಂಬ ಪುಸ್ತಕದಲ್ಲಿರುವುದು ಅತ್ಯುತ್ತಮವಾದದ್ದು. ಬ್ಯಾರೋ ಹೇಳುತ್ತಾರೆ[೧]:

"ಈವರೆಗೆ ಚಿತ್ರಿಸಲಾದದ್ದು ಮನೆಗೆಲಸಗಳಲ್ಲಿ ತೊಡಗಿಸಿಕೊಳ್ಳಲಾಗಿದ್ದ ಗುಲಾಮಗಿರಿಯ ಹೇಯವಾದ ಮುಖ. ಬೇರೊಂದು ಮುಖವೂ ಸಹ ಇದಕ್ಕಿದೆ. ಸಾಹಿತ್ಯದಲ್ಲಿ ತಿಳಿದುಬರುವಂತೆ ವಿಶಾಲ ತಳಹದಿಯ

---

೧. *ಸ್ಲೇವರಿ ಇನ್ ದಿ ರೋಮನ್ ಎಂಪೈರ್*, ಪುಟಗಳು ೪೩–೪೯.

ಕುಟುಂಬಗಳು ಕ್ರಮಬದ್ಧವಾಗಿದ್ದುವು. ಅಂದರೆ ಅದು ಒಂದು ರೀತಿಯ ಅಪವಾದವೆನ್ನಬಹುದು. ಗುಲಾಮರ ದೊಡ್ಡ ದೊಡ್ಡ ಸಿಬ್ಬಂದಿಗಳು ಖಂಡಿತವಾಗಿಯೂ ಇದ್ದವು ಮತ್ತು ರೋಮ್‌ನಲ್ಲಿ ಸಾಮಾನ್ಯವಾಗಿ ಈ ಪರಿಸ್ಥಿತಿಯೇ ಇದ್ದದ್ದು. ಇಟಲಿಯಲ್ಲಿ ಮತ್ತು ಪ್ರಾಂತ್ಯಗಳಲ್ಲಿ ಇದರ ಬಹಿರಂಗ ಪ್ರದರ್ಶನದ ಆವಶ್ಯಕತೆ ಅಷ್ಟಾಗಿ ಇರಲಿಲ್ಲ; ಗೃಹಕೃತ್ಯಕ್ಕೆ ಮೀಸಲಾಗಿದ್ದ ಸಿಬ್ಬಂದಿಯ ಬಹುಭಾಗ ಭೂಮಿಗೆ ಮತ್ತು ಅದರಿಂದ ಉಂಟಾಗುತ್ತಿದ್ದ ಉತ್ಪಾದನೆಗೆ ಸಂಬಂಧಿಸಿದ ಕೆಲಸಗಳಲ್ಲಿ ತೊಡಗಿರುತ್ತಿದ್ದರು. ಹಿಂದೆ ಇರುತ್ತಿದ್ದ ಮೇಸ್ತ್ರಿ ಮತ್ತು ಗುಲಾಮನ ನಡುವಣ ಸಂಬಂಧ ಅಲ್ಲಿ ಕಾಣಬರುತ್ತಿತ್ತು; ಕೆಲವೊಮ್ಮೆ ಗುಲಾಮನು ಒಬ್ಬ ಸಹ ಕೆಲಸಗಾರನಾಗಿರುತ್ತಿದ್ದ (ಅಂದರೆ, ದುಡಿಯುವ ಒಡೆಯನೊಂದಿಗೆ ಅವನೂ ಕೆಲಸ ಮಾಡುತ್ತಿದ್ದ). ತನ್ನ ಸಿಬ್ಬಂದಿಯ ಬಗ್ಗೆ ಪ್ಲಿನಿಗೆ ಇದ್ದ ಕನಿಕರವು ವಿಖ್ಯಾತವಾಗಿದೆ. ಅವನ ಪತ್ರಗಳಲ್ಲಿ ತನ್ನ ಗುಲಾಮರ ಕಾಯಿಲೆ ಮತ್ತು ಮರಣದ ಬಗ್ಗೆ ಆತಂಕವನ್ನು ವ್ಯಕ್ತಪಡಿಸಿರುವುದು ಅವನ ಧರ್ಮಭೀರುತನದ ಮನೋಭಾವದಿಂದ ಅಲ್ಲ; ಮುಂದಿನ ತಲೆಮಾರುಗಳವರು ಆ ಪತ್ರಗಳನ್ನು ಓದುತ್ತಾರೆಂಬ ಆಶಯವನ್ನಿಟ್ಟುಕೊಂಡು ಅವರಿಂದ ಭೇಷ್ ಎನಿಸಿಕೊಳ್ಳಬೇಕೆಂಬ ಇಚ್ಛೆಯಿಂದಲೂ ಅಲ್ಲ. ಪ್ಲಿನಿಯ ಕುಟುಂಬವು ಗುಲಾಮರಿಗೆ ಒಂದು ಗಣರಾಜ್ಯವಿದ್ದಂತೆ. ತನ್ನ ಗುಲಾಮರನ್ನು ಪ್ಲಿನಿಯು ನಡೆಸಿಕೊಳ್ಳುತ್ತಿದ್ದ ಬಗೆಗಿನ ವರದಿಯನ್ನು ಕೆಲವೊಮ್ಮೆ ಕೆಲಸಕ್ಕೆ ಬಾರದ ಸಾಕ್ಷ್ಯಾಧಾರದಂತೆ ಪರಿಗಣಿಸಲಾಗುತ್ತದೆ; ಏಕೆಂದರೆ ಅವನ ನಡತೆಯು ಆಗ್ಗೆ ಸಾಮಾನ್ಯವಾಗಿ ಇರುತ್ತಿದ್ದ ಅಥವಾ ಆಗಾಗ್ಗೆ ಕಂಡುಬರುತ್ತಿದ್ದ ಪ್ರಕ್ರಿಯೆಗಿಂತಲೂ ಬಹಳ ಮುಂದಿನ ಕಾಲದ ಒಂದು ಅಭ್ಯಾಸದಂತಿದೆ. ಈ ಧೋರಣೆಗೆ ಯಾವುದೇ ಕಾರಣವೂ ಇಲ್ಲ.

ಶ್ರೀಮಂತ ಕುಟುಂಬಗಳು ತಮ್ಮ ಮನೆಕೆಲಸದವರನ್ನಾಗಿ ಸಾಹಿತ್ಯ ಮತ್ತು ಕಲೆಯಲ್ಲಿ ತರಬೇತಿ ಹೊಂದಿದ್ದ ಗುಲಾಮರನ್ನು ಸೇರಿಸಿಕೊಳ್ಳುತ್ತಿದ್ದವು. ಅದು ಪ್ರದರ್ಶನ ಮತ್ತು ನೈಜ ಸಾಹಿತ್ಯಕ ಆಸಕ್ತಿ – ಹೀಗೆ ಎರಡೂ ಕಾರಣಗಳಿಂದ. ಸೆನಿಡಾ ಹೇಳಿರುವಂತೆ ಕ್ಲಾವಿಸೆಸ್ ಸಾಬಿನಸ್ ಎಂಬೊಬ್ಬನ ಬಳಿ ಹನ್ನೊಂದು ಗುಲಾಮರಿದ್ದರಂತೆ. ಹೋಮರ್, ಹೆಸಿಯಾಡ್ ಮತ್ತು ಭಾವಗೀತೆ ರಚಿಸಿದ್ದ ಒಂಬತ್ತು ಕವಿಗಳ ಎಲ್ಲ ಕೃತಿಗಳನ್ನೂ ಕಂಠಪಾಠ ಮಾಡಿ ಹಾಡಲು ಅವರಿಗೆ ಕಲಿಸಲಾಗಿತ್ತಂತೆ. ಒಬ್ಬ ಅನಮ್ರ ಸ್ನೇಹಿತ ಇದಕ್ಕೆ 'ಪುಸ್ತಕಗಳ ಕಪಾಟುಗಳು ಇದಕ್ಕಿಂತ ಕಡಿಮೆ ಬೆಲೆಯದಾಗಿರುತ್ತವೆ', ಎಂದು ಹೇಳಿದನಂತೆ: ಅದಕ್ಕೆ ದೊರೆತ ಉತ್ತರ 'ಛೇ, ಛೇ! ಅಲ್ಲ, ಮನೆಯ ಮಂದಿ ಎಷ್ಟು ತಿಳಿದಿರುತ್ತಾರೋ ಯಜಮಾನನೂ ಅಷ್ಟು ತಿಳಿದುಕೊಂಡಿರುತ್ತಾನೆ.' ಇಂತಹ ತೆಗಳಿಕೆಗಳನ್ನು ಉಪೇಕ್ಷಿಸಿ ನೋಡಿದರೆ, ಮುದ್ರಣ ಅಪರೂಪವಾದ ಕಾಲದಲ್ಲಿ ವಿದ್ಯಾವಂತ ಗುಲಾಮರ ಆವಶ್ಯಕತೆ ಇದ್ದಿರಬೇಕೆನಿಸುತ್ತದೆ.....ವಿರಾಮವಿಲ್ಲದ ವಕೀಲ, ಹವ್ಯಾಸಿ ಕವಿ, ತತ್ತ್ವಜ್ಞಾನಿ ಮತ್ತು ಸಾಹಿತ್ಯಾಭಿರುಚಿಯನ್ನು ಹೊಂದಿದ್ದ ವಿದ್ಯಾವಂತ ಸಜ್ಜನರು–ಇವರಿಗೆಲ್ಲಾ ನಕಲು ಬರೆಯುವವರು, ಓದುಗರು ಮತ್ತು ಕಾರ್ಯದರ್ಶಿಗಳು ಬೇಕೆನಿಸಿದ್ದಿರಬೇಕು. ಇವರೆಲ್ಲಾ ಸಹಜವಾಗಿಯೇ ಭಾಷಾ ಚತುರರೂ ಆಗಿದ್ದರು. ಒಬ್ಬ ಗ್ರಂಥಪಾಲಕ ತನ್ನ ಇಪ್ಪತ್ತನೆಯ ವಯಸ್ಸಿನಲ್ಲೇ ಮೃತಿ ಹೊಂದಿದ. ಅದರೂ ಅವನ ಹೆಗ್ಗಳಿಕೆಯು ತಾನು 'ಗ್ರೀಕ್ ಮತ್ತು ಲ್ಯಾಟಿನ್ ಭಾಷೆಗಳಲ್ಲಿ ಪಾರಂಗತ' ಎಂದು. ಉಕ್ತಲೇಖನಗಳನ್ನು ಬರೆದುಕೊಳ್ಳುವವರು ಎಲ್ಲೆಲ್ಲೂ ಕಾಣಸಿಗುತ್ತಿದ್ದರು. ಚಕ್ರಾಧಿಪತ್ಯದಲ್ಲಿ ಶೀಘ್ರಲಿಪಿಯಲ್ಲಿ ಬರೆದುಕೊಳ್ಳುವುದು ಸಾಮಾನ್ಯ ರೂಢಿಯಾಗಿತ್ತು ಮತ್ತು ಗುಲಾಮರನ್ನು ಕಾಗದ ಪತ್ರಗಳನ್ನು ಪ್ರಮಾಣೀಕರಿಸಲು ನೇಮಿಸುವುದು ಸರ್ವೇಸಾಮಾನ್ಯವಾಗಿತ್ತು. ಗುಲಾಮರಲ್ಲದ ಸಾಮಾನ್ಯ ಪ್ರಜೆಗಳು, ಆಲಂಕಾರಿಕರು ಮತ್ತು ವೈಯಾಕರಣಿಗಳನೇಕರನ್ನು ಸ್ವೆಟೋನಿಯಸ್ ಒಂದು ವಿಶಿಷ್ಟ ಗ್ರಂಥದಲ್ಲಿ ಉಲ್ಲೇಖಿಸಿದ್ದಾನೆ. ಆಸ್ಟಸ್ ಎಂಬುವವನ ಮೊಮ್ಮಕ್ಕಳಿಗೆ ವೆರಿಯಸ್ ಫ್ಲಾಕಸ್ ಬೋಧಕನಾಗಿದ್ದ ಮತ್ತು ಅವನು ಸತ್ತಾಗ ಅವನ

ಒಂದು ಪ್ರತಿಮೆಯನ್ನು ನಿಲ್ಲಿಸಿ ಸಾರ್ವಜನಿಕವಾಗಿ ಅವನನ್ನು ಗೌರವಿಸಲಾಗಿತ್ತು. ಅಫ್ರೋಡೀಸಿಯಸ್ ಎಂಬುವವನು ಆರ್ಬಿಲಿಯಸ್‌ನ ಗುಲಾಮ ಮತ್ತು ಶಿಷ್ಯನಾಗಿದ್ದ. ನಂತರ ಅವನನ್ನು ಮುಕ್ತಗೊಳಿಸಿದ್ದು ಸ್ಕ್ರಿಬೋನಿಯ. ಹೈಜಿನಸ್ ಎಂಬುವವನು ಪ್ಯಾಲಟೈನ್ ಗ್ರಂಥಭಂಡಾರದ ಗ್ರಂಥಪಾಲಕನಾಗಿದ್ದ. ಆ ಅಧಿಕಾರಸ್ಥಾನಕ್ಕೆ ಅವನ ನಂತರ ಬಂದವನು ಜೂಲಿಯಸ್ ಮೋಡೆಸ್ಟಸ್ ; ಅವನ ಗುಲಾಮನಾಗಿದ್ದು ಆಮೇಲೆ ಸಾಮಾನ್ಯ ಪ್ರಜೆಯಾದವನು. ಒಬ್ಬ ಗುಲಾಮ ತತ್ತ್ವಜ್ಞಾನಿಯ ಚರಿತ್ರೆಯನ್ನು ಬರೆದ ಸಾಮಾನ್ಯ ಪ್ರಜೆಯೊಬ್ಬನ ಬಗ್ಗೆ ಮಾಹಿತಿ ನಮಗೆ ಕೇಳಿಬಂದಿದೆ. ಆ ತತ್ತ್ವಜ್ಞಾನಿಯು ತನ್ನ ಯಜಮಾನ, ಗುಲಾಮರ ಸ್ನೇಹಿತರು ಮತ್ತು ವಾಸ್ತುಶಿಲ್ಪಿಗಳಾಗಿದ್ದ ಸ್ವತಂತ್ರರು – ಹೀಗೆ ಎಲ್ಲರೊಡನೆಯೂ ವಾದಮಾಡಲು ಅವನಿಗೆ ಪ್ರೋತ್ಸಾಹ ನೀಡಲಾಗುತ್ತಿತ್ತು. ಹೊಸದಾಗಿ ಮುಕ್ತರಾಗಿದ್ದ ಗುಲಾಮರನೇಕರು ವೈದ್ಯರಾಗಿದ್ದರೆಂದು ಶಾಸನಗಳಲ್ಲಿ ಪದೇಪದೇ ಉಲ್ಲೇಖ ಬರುತ್ತದೆ. ಅವರಲ್ಲಿ ಕೆಲವರು ವಿಶೇಷತಜ್ಞರು. ದೊಡ್ಡದೊಡ್ಡ ಮನೆತನಗಳಲ್ಲಿದ್ದ ಗುಲಾಮರಿಗೆ ಈ ರೀತಿಯ ತರಬೇತಿ ನೀಡಲಾಗುತ್ತಿತ್ತು. ಇದಕ್ಕೆ ಒಂದೆರಡು ಉದಾಹರಣೆಗಳು ಸಹ ನಮಗೆ ದೊರೆತಿವೆ. ಗುಲಾಮಗಿರಿಯಿಂದ  ಬಿಡುಗಡೆ ಹೊಂದಿದ ನಂತರ ಅವರು ಖ್ಯಾತಿಯನ್ನು ಗಳಿಸುತ್ತಿದ್ದರು ಹಾಗೂ ಅತಿ ಹೆಚ್ಚಿನ ಸಂಭಾವನೆಯನ್ನು ಪಡೆದು ಕುಖ್ಯಾತಿಯನ್ನು ಪಡೆಯುತ್ತಿದ್ದರು."

ಸಮಾಜದ ಒಂದು ಭಾಗದ ಅಭಿರುಚಿಗಳ ಪೂರೈಕೆಗಾಗಿ ನೃತ್ಯಗಾರರು, ಗಾಯಕರು, ಸಂಗೀತಗಾರರು, ಜೂಜುಗಾರರು, ವಿವಿಧ ರೀತಿಯ ಕಲಾಕಾರರು, ದೈಹಿಕ ಪಟುಗಳಿಗೆ ತರಬೇತಿ ನೀಡುವವರು ಇತ್ಯಾದಿ ಅನೇಕ ಶ್ರೀಸಾಮಾನ್ಯರ ಆವಶ್ಯಕತೆ ಇತ್ತು. ಗುಲಾಮಗಿರಿಯಲ್ಲಿ ಇವೆಲ್ಲಾ ಅಡಕವಾಗಿವೆ; ಕೆಲವು ವೇಳೆ ಅವರಿಗೆ ಹೆಸರುವಾಸಿಯಾಗಿದ್ದ ಅಧ್ಯಾಪಕರಿಂದ ತರಬೇತಿ ದೊರೆಯುತ್ತಿತ್ತು[೧].

ಅಗಸ್ಟಸ್‌ನ ಕಾಲದಲ್ಲಿ ವಾಣಿಜ್ಯ ಮತ್ತು ಔದ್ಯೋಗಿಕ ವಿಸ್ತರಣೆಯು ಆರಂಭವಾಯಿತು.....ಕರಕುಶಲ ಕಸುಬುಗಳಲ್ಲಿ ಅದಕ್ಕೆ ಮುಂಚೆಯೂ ಗುಲಾಮರನ್ನು ನೇಮಿಸಿ ಕೊಳ್ಳಲಾಗುತ್ತಿತ್ತು, ಆದರೆ ವ್ಯಾಪಾರವು ತಕ್ಷಣವೇ ವೃದ್ಧಿಯಾದದ್ದು.....ಅವರಿಗೆ ಅತಿ ಹೆಚ್ಚಿನ ಸಂಖ್ಯೆಯಲ್ಲಿ ಉದ್ಯೋಗ ದೊರೆಯುವಂತಾಯಿತು. ಈ ವೃದ್ಧಿಯಾಗದಿದ್ದರೆ ಅಷ್ಟು ಹೆಚ್ಚಿನ ಪ್ರಮಾಣದಲ್ಲಿ  ಅವರನ್ನು ತೊಡಗಿಸಿಕೊಳ್ಳಬೇಕಾಗಿ ಬರುತ್ತಿರಲಿಲ್ಲ. ಅನೇಕ ಬಗೆಯ ವಾಣಿಜ್ಯ ಮತ್ತು ಔದ್ಯೋಗಿಕ ಚಟುವಟಿಕೆಗಳಲ್ಲಿ ರೋಮನ್ನರು ಸ್ವತಂತ್ರವಾಗಿ ಹಾಗೂ ಮುಕ್ತವಾಗಿ ತಮ್ಮನ್ನು ತಾವು ತೊಡಗಿಸಿಕೊಂಡರು. ಹಾಗಿದ್ದಾಗ್ಯೂ ಈ ಚಟುವಟಿಕೆಗಳಲ್ಲಿ ಮಧ್ಯಸ್ಥಿಕೆದಾರರು ಹೆಚ್ಚಿನ ಪಾತ್ರ ನಿರ್ವಹಿಸುವಂತಾದರು. ಏಕೆಂದರೆ ವಾಣಿಜ್ಯದ ವಹಿವಾಟು ಅಷ್ಟು ವ್ಯಾಪಕವಾಗಿ ಬೆಳೆದಿತ್ತು ಮತ್ತು ಇಂತಹ ಮಧ್ಯಸ್ಥಿಕೆದಾರರೆಲ್ಲ ಬಹುಮಟ್ಟಿಗೆ ಗುಲಾಮರೇ ಆಗಿದ್ದರು..........ಇದು ಹೀಗೇಕಾಯಿತೆಂದರೆ ಗುಲಾಮಗಿರಿಯಲ್ಲಿನ ಬಂಧನವು ಒಂದು ರೀತಿಯ ಹೊಂದಾಣಿಕೆ ಆಗಿದ್ದಿತು. ಬಂಧನವನ್ನು ಸ್ವಲ್ಪಮಟ್ಟಿಗೆ ಸಡಿಲಿಸಿ ಗುಲಾಮನಿಗೆ ಒಂದು ರೀತಿಯ ಉತ್ತೇಜಕ ಭತ್ಯೆ ನೀಡುವ ರೀತಿಯಲ್ಲಿ ಅವನು ಸಂಪತ್ತು ಮತ್ತು ಸ್ವಾತಂತ್ರ್ಯದ ಆಶಯವನ್ನು ಹೊತ್ತು ಕೆಲಸ ಮಾಡುವಂತೆ ಪ್ರೇರೇಪಿಸಲಾಗುತ್ತಿತ್ತು. ಅದೇ ಸಂದರ್ಭದಲ್ಲಿ ಅವನ ಬಂಧನವನ್ನು ಬಿಗಿಗೊಳಿಸುವುದೂ ಸಾಧ್ಯವಿತ್ತು. ಏಕೆಂದರೆ, ತನ್ನ ಕೆಟ್ಟ ನಡತೆಯಿಂದಾಗಿ ಯಜಮಾನನಿಗೆ ಯಾವ ನಷ್ಟವೂ ಉಂಟಾಗದಿರುವಂತೆ ಗುಲಾಮನು ಖಾತರಿ ನೀಡಬೇಕಾಗಿರುತ್ತಿತ್ತು. ವ್ಯಾಪಾರ ವ್ಯವಹಾರಗಳಲ್ಲಿ ಗುಲಾಮ ಮತ್ತು ಯಜಮಾನ ಹಾಗೂ ಇನ್ನಿತರ ಹೊರಗಿನವರ ನಡುವೆ ಒಪ್ಪಂದಗಳು ಸರ್ವೇಸಾಮಾನ್ಯವಾಗಿದ್ದಂತೆ ತೋರುತ್ತದೆ. ಕೆಲಸಗಳು ಈ ರೀತಿಯಲ್ಲಿ ನಡೆದು ಸಾಕಷ್ಟು ಪ್ರಮಾಣದಲ್ಲಿ

---

೧. *ಸ್ಲೇವರಿ ಇನ್ ದಿ ರೋಮನ್ ಎಂಪೈರ್*, ಪು ೬೩.

ಲಾಭಗಳಿಕೆಯೂ ಆಗುತ್ತಿತ್ತು. ......ಗುಲಾಮನಿಗೆ ಭೂಮಿಯನ್ನು ಕಂದಾಯಕ್ಕೆ ಕೊಡಲಾಗುತ್ತಿದ್ದುದನ್ನು ಈಗಾಗಲೇ ಪ್ರಸ್ತಾಪಿಸಿದ್ದಾಗಿದೆ.............ಕೈಗಾರಿಕೆಯ ಕ್ಷೇತ್ರದಲ್ಲೂ ಹೆಚ್ಚು ಕಡಿಮೆ ಅಂಥದೇ ವ್ಯವಸ್ಥೆಯನ್ನು ವಿವಿಧ ರೂಪಗಳಲ್ಲಿ ಅನುಸರಿಸಲಾಗುತ್ತಿತ್ತು. ಯಜಮಾನನು ಗುಲಾಮನಿಗೆ ಒಂದು ಬ್ಯಾಂಕನ್ನೋ ಅಥವಾ ವ್ಯಾಪಾರದ ವಹಿವಾಟು ನಿರ್ವಹಿಸಲು ಬಳಸಲಾಗುತ್ತಿದ್ದ ಒಂದು ಹಡಗನ್ನೊ ಪರಭಾರೆ ಮಾಡಬಹುದಿತ್ತು. ಅದಕ್ಕೆ ಪ್ರತಿಯಾಗಿ ಗುಲಾಮನು ಯಜಮಾನನಿಗೆ ಒಂದು ನಿಗದಿಯಾದ ಮೊತ್ತವನ್ನು ಕೊಡಬೇಕಾಗುತ್ತಿತ್ತು. ಇಲ್ಲವೆ ಗುಲಾಮನು ತನ್ನ ಕೆಲಸಕ್ಕೆ ನಿಗದಿತವಾದ ದಳ್ಳಾಳಿ ಬೆಲೆ ಪಡೆಯಬಹುದಾಗಿತ್ತು[೧].

ಗುಲಾಮನು ಸಂಪಾದಿಸುತ್ತಿದ್ದ ಹಣವು ಕಾನೂನುರೀತ್ಯಾ ಅವನ ಖಾಸಗಿ ಗಂಟೇ ಆಗುತ್ತಿತ್ತು. ಹೀಗೆ ಸಂಗ್ರಹಿಸಿದ ಗಂಟನ್ನು ಹಲವಾರು ಉದ್ದೇಶಗಳಿಗೆ ಆತ ಬಳಸಿಕೊಳ್ಳಬಹುದಾಗಿತ್ತು. ಎಷ್ಟೋ ಸಂದರ್ಭಗಳಲ್ಲಿ ಇದು ಆಹಾರ ಅಥವಾ ರಂಜನೆ ಪಡೆದುಕೊಳ್ಳುವುದಕ್ಕೆ ಖರ್ಚುಮಾಡಲಾಗುತ್ತಿತ್ತು ಎನ್ನುವುದರಲ್ಲಿ ಸಂದೇಹವಿಲ್ಲ. ಆದರೆ ಖಾಸಗಿ ಗಂಟು ಎಂದರೆ ಗಣನೆಗೆ ಬಾರದ ಉಳಿತಾಯ ಮಾತ್ರ ಎಂದು ಭಾವಿಸಬಾರದು. ಅದು ಕೇವಲ ಸಾಂದರ್ಭಿಕ ಸಂಪಾದನೆಯಾಗಿದ್ದು ಅನುಪಯುಕ್ತವಾಗಿ ಖರ್ಚು ಮಾಡಲಾಗುತ್ತಿತ್ತೆಂದು ಹೇಳಲಾಗುವುದಿಲ್ಲ. ಗುಲಾಮನು ತನ್ನ ಯಜಮಾನನ ವ್ಯಾಪಾರ ವ್ಯವಹಾರಗಳಲ್ಲಿ ಲಾಭ ದೊರಕುವಂತೆ ಮಾಡುತ್ತಿದ್ದ. ಅದು ಭಾಗಶಃ ಅವನಿಗೂ ಲಾಭ ತರುತ್ತಿತ್ತು. ಅಲ್ಲದೆ, ತನ್ನ ಗಂಟನ್ನು ಹೆಚ್ಚಿಸಿಕೊಳ್ಳಲು ಯಾವ ರೀತಿಯ ಹಣದ ಹೂಡಿಕೆಯು ಅತ್ಯಂತ ಉತ್ತಮವಾದುದೆಂಬುದರ ಬಗ್ಗೆ ಅವನಿಗೆ ಆಳವಾದ ಅರಿವು ಇತ್ತು. ಕೆಲವೊಮ್ಮೆ ಅವನ ಆದಾಯವನ್ನು ಮತ್ತೆ ಯಜಮಾನನ ವ್ಯವಹಾರಗಳಲ್ಲಿ ಹೂಡುತ್ತಿದ್ದ ಇಲ್ಲವೆ ಯಜಮಾನನಿಗೆ ಸಂಬಂಧವೇ ಇಲ್ಲದ ಇತರೆ ಉದ್ಯಮಗಳಲ್ಲಿ ತೊಡಗಿಸುತ್ತಿದ್ದ. ತನ್ನ ಯಜಮಾನನ ಜೊತೆಯ ವ್ಯವಹಾರದ ಸಂಬಂಧ ಬೆಳೆಸಲು ಗುಲಾಮನಿಗೆ ಅವಕಾಶವಿತ್ತು. ಅಂತಹ ಸಂದರ್ಭದಲ್ಲಿ ಇಬ್ಬರೂ ಸಂಪೂರ್ಣವಾಗಿ ಪ್ರತ್ಯೇಕವಾದ ವ್ಯಕ್ತಿಗಳು ಎಂದು ಅವರನ್ನು ಪರಿಗಣಿಸಲಾಗುತ್ತಿತ್ತು. (ಅಂದರೆ, ಯಜಮಾನ –ಸೇವಕ ಸಂಬಂಧವು ವ್ಯವಹಾರಕ್ಕೆ ಅನ್ವಯವಾಗುತ್ತಿರಲಿಲ್ಲ). ಅಂತೆಯೇ ಅವನು ಹೊರಗಿನ ಬೇರೊಬ್ಬರೊಡನೆಯೂ ವ್ಯವಹಾರ ಸಂಬಂಧ ಬೆಳೆಸಬಹುದಾಗಿತ್ತು. ತನ್ನ ಆಸ್ತಿ ಮತ್ತು ಹಿತಾಸಕ್ತಿಗಳನ್ನು ನೋಡಿಕೊಳ್ಳಲು ಅವನು ತನ್ನ ಏಜೆಂಟರನ್ನು ನೇಮಿಸಿಕೊಳ್ಳಲು ಸಹ ಸಾಧ್ಯವಿತ್ತು. ಆದ್ದರಿಂದ ಗುಲಾಮನ ಗಂಟೆಂದರೆ ಅದರೊಡನೆ ಭೂಮಿ, ಮನೆ, ಅಂಗಡಿ–ಇವೆಲ್ಲಾ ಸೇರಿಕೊಂಡು ಬರುತ್ತವೆ. ಅಂದರೆ, ಅವನ ಗಂಟು ಅವನಿಗೆ ಹಕ್ಕು ಮತ್ತು ವಾರಸುದಾರತನವನ್ನು ತಂದುಕೊಡುತ್ತಿತ್ತು.

ವಾಣಿಜ್ಯದಲ್ಲಿ ಗುಲಾಮರ ಚಟುವಟಿಕೆಗಳಿಗೆ ಮಿತಿಯೇ ಇಲ್ಲ. ಅವರಲ್ಲಿ ಎಷ್ಟೋ ಮಂದಿ ಅಂಗಡಿಗಳನ್ನಿಟ್ಟಿದ್ದಾರೆ. ಅಲ್ಲಿ ಮಾರಲಾಗುವ ವಸ್ತುಗಳೂ ವಿಭಿನ್ನ : ಆಹಾರ ಪದಾರ್ಥಗಳು, ರೊಟ್ಟಿ, ಮಾಂಸ, ಉಪ್ಪು, ಮೀನು, ಮದ್ಯ, ತರಕಾರಿ, ಬೀಜಗಳು, ಜೇನುತುಪ್ಪ, ಮೊಸರು, ಹಂದಿಮಾಂಸ, ಬಾತುಕೋಳಿ ಇತ್ಯಾದಿ; ಬೇರೆ ಕೆಲವು ಅಂಗಡಿಗಳಲ್ಲಿ ಉಡುಪು, ಪಾದರಕ್ಷೆಗಳು ಇತ್ಯಾದಿ. ರೋಮ್‌ನಲ್ಲಿ ಅವರು ವ್ಯಾಪಾರವನ್ನು ನಡೆಸುತ್ತಿದ್ದ ಜಾಗವು ಮ್ಯಾಮಿಮಸ್ ವೃತ್ತದ ಬಳಿಯಲ್ಲಿತ್ತು. ಅಲ್ಲದೇ ಪೋರ್ಟಿಕಸ್ ಟ್ರಿಗೇಮಿಮಸ್, ಎಸ್ಕಿಲೀನ್ ಮಾರುಕಟ್ಟೆ, ಕವೋಲಿಯನ್ ಬೆಟ್ಟದ ಮೇಲಿನ ದೊಡ್ಡ ಅಂಗಡಿಬೀದಿ, ಸುಬುರ್‍ರಾ ಇತ್ಯಾದಿ ಕಡೆಗಳಲ್ಲೂ ಇತ್ತು[೨].

---

೧. *ಸ್ಲೇವರಿ ಇನ್ ದಿ ರೋಮನ್ ಎಂಪೈರ್*, ಪುಟಗಳು ೧೦೧–೧೦೨.
೨. *ಸ್ಲೇವರಿ ಇನ್ ದಿ ರೋಮನ್ ಎಂಪೈರ್*, ಪು. ೧೦೫.

ಪಾಂಪೇ ಎಂಬಲ್ಲಿ ಸೆಸೀಲಿಯಸ್ ಜುಕಂಡಸ್ ಎಂಬುವನೊಬ್ಬನ ಮನೆಯಲ್ಲಿ ಆಗಿನ ಕಾಲದಲ್ಲಿದ್ದ ಕೆಲವು ರಶೀದಿಗಳು ಸಿಕ್ಕಿವೆ. ಗುಲಾಮರು ಅವರ ಒಡೆಯರ ಕಾರ್ಯದರ್ಶಿಗಳಾಗಿ ಮತ್ತು ಏಜೆಂಟರಾಗಿ ಎಷ್ಟರಮಟ್ಟಿಗೆ ಕಾರ್ಯ ನಿರ್ವಹಿಸುತ್ತಿದ್ದರೆಂಬುದು ಈ ರಶೀದಿಗಳಿಂದ ಗೊತ್ತಾಗುತ್ತದೆ[೧].

ಆಗ್ಗೆ ಪ್ರಭುತ್ವವು ಗುಲಾಮರನ್ನು ಹೊಂದಿರುತ್ತಿದ್ದುದರಲ್ಲಿ ಆಶ್ಚರ್ಯವೇನೂ ಇಲ್ಲ. ಯುದ್ಧವನ್ನು ನಡೆಸುತ್ತಿದ್ದುದು ರಾಜ್ಯ ಪ್ರಭುತ್ವದ ಆಶ್ರಯದಲ್ಲಿ ತಾನೆ ! ಹೀಗಾಗಿ ಯುದ್ಧದಲ್ಲಿ ಸೆರೆ ಸಿಕ್ಕಿದವರು ಪ್ರಭುತ್ವದ ಆಸ್ತಿಯಾಗುತ್ತಿದ್ದರು. ಆದರೆ ಇಲ್ಲಿ ಗಮನಿಸಬೇಕಾದ ಸಂಗತಿಯೆಂದರೆ ಚಕ್ರಾಧಿಪತ್ಯದಡಿಯಲ್ಲಿ ಸಾರ್ವಜನಿಕ ಗುಲಾಮರನ್ನು ಉಪಯೋಗಿಸುತ್ತಿದ್ದ ವಿಧಾನಕ್ಕೆ ಮತ್ತು ಆ ಗುಲಾಮರ ಸಾಮಾಜಿಕ ಸ್ಥಾನಕ್ಕೆ ಸಂಬಂಧಿಸಿದ್ದು.

"ಚಕ್ರಾಧಿಪತ್ಯದ ದೃಷ್ಟಿಯಲ್ಲಿ 'ಸಾರ್ವಜನಿಕ ಗುಲಾಮ'ನೆಂದರೆ ರಾಜ್ಯ ಪ್ರಭುತ್ವದಿಂದ ಬೇರೆ ಬೇರೆ ಅಧಿಕಾರ ಸ್ಥಾನಗಳಿಗೆ ನೇಮಿಸಲ್ಪಟ್ಟಿದ್ದ ಗುಲಾಮ ಎಂಬರ್ಥವಿತ್ತು. ಯಾವುದಾದರೊಂದು ಉದ್ಯೋಗ ಮತ್ತು ಕೆಲವೊಮ್ಮೆ ಸಾಮಾಜಿಕ ಸ್ಥಾನವನ್ನು ಆ ಪದವು ಸೂಚಿಸುತ್ತಿತ್ತು. ರಾಜ್ಯ ಪ್ರಭುತ್ವದ ಗುಲಾಮರು, ಪಟ್ಟಣದ ಪ್ರದೇಶಗಳ ಗುಲಾಮರು ಮತ್ತು ಅಧಿಪತಿಯ ಗುಲಾಮರು ಎಂಬ ಪ್ರಭೇದಗಳಿಗೆ ಸೇರಿದ್ದ ಎಲ್ಲ ಗುಲಾಮರ ಕೆಲಸಗಳನ್ನು ನೋಡಿದರೆ ಅವು ಇಂದು ಬೌದ್ಧಿಕವಾಗಿ ಮತ್ತು ದೈಹಿಕವಾಗಿ ಕೆಲಸಮಾಡುವ ಪುರಸಭೆಗಳ ನೌಕರರು, ನಾಗರಿಕ ಸೇವೆ ಸಲ್ಲಿಸುವ ಸರ್ಕಾರಿ ನೌಕರರು ಮತ್ತು ಕೆಲವು ಉನ್ನತ ಅಧಿಕಾರಿಗಳು–ಇವರೆಲ್ಲಾ ಮಾಡುವ ಕೆಲಸಗಳಿಗೆ ಬಹುಮಟ್ಟಿಗೆ ಸರಿದೂಗುತ್ತವೆ. ......ರಾಜ್ಯಬೊಕ್ಕಸದ ಕೆಳಹಂತಗಳಲ್ಲಿ ಅನೇಕ ಕಾರಕೂನರು ಮತ್ತು ವಿತ್ತಾಧಿಕಾರಿಗಳು ಇರುತ್ತಿದ್ದರು. ಅವರೆಲ್ಲಾ ಮುಕ್ತರಾಗಿದ್ದ ಗುಲಾಮರು ಇಲ್ಲವೆ ಗುಲಾಮರೇ ಆಗಿರುತ್ತಿದ್ದರು. ಅಲ್ಲಿ ನಡೆಯುತ್ತಿದ್ದ ವಹಿವಾಟು ಅಗಾಧವಾಗಿಯೇ ಇದ್ದಿರಬೇಕು ....ನಾಣ್ಯಗಳನ್ನು ಮುದ್ರಿಸುವ ವಿಭಾಗದಲ್ಲಿ ಮುಖ್ಯಸ್ಥನು ಸೇನಾಧುರೀಣ ಆಗಿರುತ್ತಿದ್ದ. ನಾಣ್ಯಮುದ್ರೆಯ ಪ್ರಕ್ರಿಯೆಗಳ ಅಧೀಕ್ಷಣಕ್ಕೆ ಮುಕ್ತನಾಗಿದ್ದ ಗುಲಾಮನೊಬ್ಬನನ್ನು ಇರಿಸಲಾಗುತ್ತಿತ್ತು. ಅವನ ಕೆಳಗೆ ಕೆಲಸ ಮಾಡುತ್ತಿದ್ದವರು ಮುಕ್ತ ಗುಲಾಮರು ಮತ್ತು ಗುಲಾಮರು .....ರಾಜ್ಯಪ್ರಭುತ್ವದ ಒಂದು ಸೇವಾ ವಿಭಾಗದಿಂದ ಮಾತ್ರ ಖಂಡಿತಕ್ಕೂ ಗುಲಾಮರನ್ನು ಕಡ್ಡಾಯವಾಗಿ ಹೊರಗೆ ಇರಿಸಲಾಗುತ್ತಿತ್ತು. ಅದರಲ್ಲೂ ವಿಶಿಷ್ಟವಾದ ಒಂದೆರಡು ತುರ್ತು ಸಂದರ್ಭಗಳಲ್ಲಿ ಇದನ್ನು ಸಡಿಲಗೊಳಿಸಿದ್ದಿರಬಹುದು. ಗುಲಾಮರನ್ನು ಸೈನ್ಯಕ್ಕೆ ಭರ್ತಿಮಾಡಿ ಅವರಿಗೆ ಯುದ್ಧಾವಕಾಶವನ್ನು ನೀಡುತ್ತಿರಲಿಲ್ಲ. ಅಂತಹ ಗೌರವಕ್ಕೆ ಪಾತ್ರರಾಗಲು ಅವರು ಅನರ್ಹರೆಂದು ಭಾವಿಸಲಾಗಿತ್ತು. ನಿಶ್ಚಯವಾಗಿಯೂ ಇದಕ್ಕೆ ಬೇರೆ ಪ್ರೇರಕ ಕಾರಣಗಳೂ ಇದ್ದಿರಬೇಕು. ಶಸ್ತ್ರಗಳ ಬಳಕೆಯಲ್ಲಿ ಅನೇಕ ಗುಲಾಮರಿಗೆ ವ್ಯವಸ್ಥಿತವಾದ ತರಬೇತಿ ನೀಡುವುದು ಅಪಾಯಕಾರಿ ಪ್ರಯೋಗವಾಗಿ ಕಂಡಿರಬೇಕು. ನೇರವಾಗಿ ಯುದ್ಧರಂಗದಲ್ಲಿ ಗುಲಾಮರು ಕಾದಾಡುತ್ತಿದ್ದುದು ವಿರಳ; ಆದರೆ ಅವರು ಅಧಿಕ ಸಂಖ್ಯೆಯಲ್ಲಿ ಯುದ್ಧಕ್ಕೆ ಬೇಕಾದ ಸಾಮಾನು ಸರಂಜಾಮು ಮತ್ತು ಸಾರಿಗೆಯನ್ನು ವ್ಯವಸ್ಥೆಗೊಳಿಸುವುದರಲ್ಲಿ ಸೇವಕರಾಗಿ ಅಥವಾ ಸೈನ್ಯಾಧಿಕಾರಿಗಳ ಕಚೇರಿಯಲ್ಲಿ, ಇಲ್ಲವೆ ಸಾರಿಗೆ ಸಂಪರ್ಕ ಕಲ್ಪಿಸುವುದರಲ್ಲಿ ನೌಕೆಗಳಲ್ಲಿ ಸಾಮಾನ್ಯವಾಗಿ ನೇಮಕಗೊಳ್ಳುತ್ತಿದ್ದರು"[೨]

---

೧. ಅದೇ ಪು. ೧೦೬.

೨. *ಸ್ಲೇವರಿ ಇನ್ ದಿ ರೋಮನ್ ಎಂಪೈರ್*, ಪುಟಗಳು ೧೩೦–೧೪೭.

## II

ಅಮೆರಿಕ ಸಂಯುಕ್ತ ಸಂಸ್ಥಾನದಲ್ಲಿ ನೀಗ್ರೋಗಳು ಕಾನೂನುರೀತ್ಯಾ ಗುಲಾಮರಾಗಿದ್ದ ಕಾಲದಲ್ಲಿ ವ್ಯಾವಹಾರಿಕವಾಗಿ ಅವರ ಸ್ಥಾನ ಹೇಗಿತ್ತು ಎಂಬುದನ್ನು ಈಗ ನೋಡೋಣ. ಗುಲಾಮರ ಸ್ಥಾನಮಾನಗಳ ಮೇಲೆ ಬೇಕಾದಷ್ಟು ಬೆಳಕು ಚೆಲ್ಲುವ ಕೆಲವು ಸಂಗತಿಗಳು ಇಲ್ಲಿವೆ[೧] :

"ಕ್ರಾಂತಿಯಲ್ಲಿ ಭಾಗವಹಿಸುತ್ತಿದ್ದಾಗ ನೌಕಾಪಡೆಯಲ್ಲಿ ಮತ್ತು ಸೈನ್ಯದಲ್ಲಿ ಇದ್ದ ಬಿಳಿಯರು ಮತ್ತು ಕರಿಯರು ಯಾವ ಕಹಿ ಪ್ರಸಂಗಕ್ಕೂ ಅವಕಾಶಕೊಡದೆ ಒಟ್ಟಿಗೆ ಕಾದಾಡುತ್ತಿದ್ದರು ಮತ್ತು ಒಟ್ಟಿಗೆ ಊಟ ಮಾಡುತ್ತಿದ್ದರು ಎಂದು ಸ್ವತಃ ಲಫಾಯೆತ್ ಗಮನಿಸಿ ಉಲ್ಲೇಖಿಸಿದ್ದಾನೆ. ಉತ್ತರ ಕ್ಯಾರೊಲೀನಾದ ಗ್ರಾನ್ ವಿಲ್ ಪ್ರದೇಶದಲ್ಲಿ ಅಚ್ಚ ನೀಗ್ರೋ ಆಗಿದ್ದ ಜಾನ್ ಚಾವಿಸ್ ಎಂಬುವನು ಬಿಳಿಯ ವಿದ್ಯಾರ್ಥಿಗಳಿಗೆ ಒಂದು ಖಾಸಗಿ ಶಾಲೆಯನ್ನು ನಡೆಸುತ್ತಿದ್ದ. ಅವನು ಪ್ರಿನ್‌ಸ್ಟನ್ ವಿಶ್ವವಿದ್ಯಾನಿಲಯದಲ್ಲಿ ವ್ಯಾಸಂಗ ಮಾಡಿದ್ದವನು. ಜೊತೆಗೆ ಸ್ಥಾನಿಕ ಚರ್ಚಿನಲ್ಲಿ ಉಪದೇಶ ನೀಡಲು ಪರವಾನಗಿಯನ್ನು ಉಳ್ಳವನಾಗಿದ್ದ. ಆ ರಾಜ್ಯದ ಬಿಳಿಯರ ಧಾರ್ಮಿಕ ಸಭೆಗಳಲ್ಲಿ ಅವನು ಉಪದೇಶಿಸುತ್ತಿದ್ದ. ಅವನ ಒಬ್ಬ ವಿದ್ಯಾರ್ಥಿಯು ಉತ್ತರ ಕ್ಯಾರೊಲೀನಾದ ಗವರ್ನರ್ ಆದ, ಇನ್ನೊಬ್ಬ ರಾಜ್ಯದ ಅತಿಮುಖ್ಯ ಉದಾರವಾದಿ ಸೆನೆಟರ್ ಆದ. ಅವನ ವಿದ್ಯಾರ್ಥಿಗಳಲ್ಲಿ ಇಬ್ಬರು ಉತ್ತರ ಕ್ಯಾರೊಲೀನಾದ ಮುಖ್ಯ ನ್ಯಾಯಾಧೀಶನ ಮಕ್ಕಳು. ರಾಜ್ಯದ ಅತ್ಯಂತ ಹಿರಿದಾದ ಮಿಲಿಟರಿ ಅಕಾಡೆಮಿಯ ಸಂಸ್ಥಾಪಕನಾದವನ ತಂದೆಯು ಇವನ ಶಾಲೆಯಲ್ಲೇ ಕಲಿತದ್ದು ಮತ್ತು ಇವನ ಮನೆಯಲ್ಲೇ ಊಟೋಪಚಾರ ಪಡೆದಿದ್ದದ್ದು. .....ಗುಲಾಮರ ದುಡಿಮೆಯನ್ನು ಎಲ್ಲ ರೀತಿಯ ಕೆಲಸಗಳಿಗೂ ಬಳಸಿಕೊಳ್ಳಲಾಗುತ್ತಿತ್ತು. ಮತ್ತು ನೀಗ್ರೋ ಗುಲಾಮರಲ್ಲಿ ಸ್ವಲ್ಪ ಹೆಚ್ಚು ಬುದ್ಧಿವಂತರಾಗಿದ್ದವರಿಗೆ ಕುಶಲಕರ್ಮಿಗಳಾಗಲು ತರಬೇತಿ ನೀಡಲಾಗುತ್ತಿತ್ತು. ಅಂತಹವರನ್ನು ಬೇರೆಯವರಿಗೆ ಒತ್ತೆ ಇಡುತ್ತಿದ್ದುದೂ ಉಂಟು. ಮಾರುಕಟ್ಟೆಯಲ್ಲಿ ಕುಶಲಕರ್ಮಿಯಾಗಿದ್ದ ಗುಲಾಮಿಗೆ ಬೇರೊಬ್ಬ ಭೂಮಿಕೆಲಸ ಮಾಡುವವನಿಗಿಂತ ಎರಡು ಪಟ್ಟು ಬೆಲೆ ಸಿಕ್ಕುತ್ತಿತ್ತು. ನಿಷ್ಣಾತರಾಗಿದ್ದ ಕುಶಲಕರ್ಮಿಗಳು ತಮ್ಮ ಸಿಬ್ಬಂದಿಯನ್ನು ಆಸ್ತಿಯನ್ನಾಗಿಸಿಕೊಂಡಿದ್ದರು. ವ್ಯವಸ್ಥೆಯು ಸಂಕೀರ್ಣವಾಗುತ್ತಾ ಹೋದಂತೆ ಕೆಲವು ಯಜಮಾನರು ತಮ್ಮ ಗುಲಾಮಿ ಕುಶಲಕರ್ಮಿಗಳಿಗೆ ಬೇರೆ ಗುಲಾಮರನ್ನು ಕೊಂಡು ಸಹಾಯಕರನ್ನಾಗಿ ನೇಮಿಸಿಕೊಂಡರು. ಎಷ್ಟೋ ಗುಲಾಮಿ ಕುಶಲಕರ್ಮಿಗಳು ಅವರು ದುಡಿಯಬೇಕಾದುದಕ್ಕಿಂತಲೂ ಹೆಚ್ಚಿನ ವೇಳೆಯಲ್ಲಿ ದುಡಿದು ತಮ್ಮ ಉಳಿತಾಯದ ಹಣವನ್ನು ಗುಲಾಮಗಿರಿಯಿಂದ ಮುಕ್ತರಾಗಲು ತೆತ್ತರು".

"ಗುಲಾಮರಾಗಿದ್ದು ತಪ್ಪಿಸಿಕೊಂಡು ಓಡಿಹೋಗಿದ್ದವರ ಬಗ್ಗೆ ಮತ್ತು ಬೇರೆ ಗುಲಾಮರ ಮಾರಾಟಕ್ಕೆ ಸಂಬಂಧಿಸಿದಂತೆ ಆಗಿನ ಜಾಹೀರಾತುಗಳು ಗುಲಾಮರ ಕೌಶಲಕ್ಕೆ ಒಂದು ಸ್ಪಷ್ಟಸೂಚನೆ ನೀಡುತ್ತವೆ. ಅವರು ಸಾಮಾನ್ಯ ಬಿಳಿಯ ಕೂಲಿಯಾಳಿನಷ್ಟೇ ಅಥವಾ ಅದಕ್ಕೂ ಉತ್ತಮವಾದ ಕೂಲಿಯನ್ನು ಪಡೆಯುತ್ತಿದ್ದರು. ಒಡೆಯನ ಪ್ರಭಾವವಿದ್ದಾಗ ಬಹಳ ಒಳ್ಳೆಯ ಕೆಲಸಗಳನ್ನು ದೊರಕಿಸಿಕೊಳ್ಳುತ್ತಿದ್ದರು. ಜಾರ್ಜಿಯಾದಲ್ಲಿ ಅಥೆನ್ಸ್ ಎಂಬ ಒಂದು ಪಟ್ಟಣ. ೧೮೩೮ ರಲ್ಲಿ ಅಲ್ಲಿಯ ಮನೆಕಟ್ಟುವ ಮತ್ತು ಮರಗೆಲಸದ ಬಾಬ್ತಿನ ಕಂಟ್ರಾಕ್ಟುದಾರರಿಗೆ ಒಂದು ಮನವಿ ಸಲ್ಲಿಸಲಾಗಿತ್ತು. ನೀಗ್ರೋ ದುಡಿಮೆಗಾರರಿಗೆ ಆದ್ಯತೆ ಕೊಡುವುದನ್ನು ನಿಲ್ಲಿಸಿ, ಎಂದು. 'ಈ ದೇಶದ ಮತ್ತು ರಾಜ್ಯದ ನಿಜವಾದ, ಕಾನೂನುಬದ್ಧ, ನೈತಿಕ ಹಾಗೂ ನಾಗರಿಕ ಮಾಲೀಕರೆಂದರೆ ಬಿಳಿಯ ಜನ. ಈ ಮಾಲೀಕತ್ವದ ಹಕ್ಕು ಸ್ಥಾಪನೆಯಾದದ್ದು ಕೋಪರ್ನಿಕಸ್ ಮತ್ತು

---

೧. ಚಾರ್ಲ್ಸ್ ಸಿ. ಜಾನ್ಸನ್ ಬರೆದಿರುವ *ದಿ ನೀಗ್ರೋ ಇನ್ ಅಮೆರಿಕನ್ ಸಿವಿಲೈಜೇಶನ್.*

ಗೆಲಿಲಿಯೋಗಳಂತಹ ಬಿಳಿಯರು ತಮ್ಮ ಅಧ್ಯಯನಗಳನ್ನು ಮಾಡಲಾರಂಭಿಸಿದಂದೇ. ಅವರಿಂದಲೇ ಭೂಮಿಯ ಗೋಳತ್ವವು ಸೂಚಿತವಾದದ್ದು. ಆ ಸೂಚನೆಯಿಂದಲ್ಲವೆ ಇನ್ನೊಬ್ಬ ಬಿಳಿಯನಾದ ಕೊಲಂಬಸ್‌ಗೆ ಪಶ್ಚಿಮದ ದಿಕ್ಕಿನಲ್ಲಿ ನೌಕೆಯನ್ನು ನಡೆಸಿಕೊಂಡು ಹೋದರೆ ಭೂಮಿಯನ್ನು ಕಾಣಬಹುದು ಎಂಬ ಸಾಧ್ಯತೆ ಹೊಳೆದಿದ್ದು? ಆದ್ದರಿಂದ ಈ ಖಂಡವನ್ನು ಕಂಡುಹಿಡಿದವರು ಬಿಳಿಯರೇ. ಹೌದು, ಯಾವ ಬಿಳಿಯರ ಕುಟುಂಬಗಳ ಹಸಿದವರಿಗೆ ರೊಟ್ಟಿಗೆ ಮತ್ತು ಬಟ್ಟೆಗೆ ನೀವು ಇಂದು ಹಣ ನೀಡುವುದಿಲ್ಲವೋ ಈ ಬಿಳಿಯರಲ್ಲದೆ ಮತ್ತಾರೂ ಈ ಖಂಡವನ್ನು ಕಂಡುಹಿಡಿಯಲಿಲ್ಲ. ಹೀಗಿದ್ದೂ ನೀವು ನೀಗ್ರೋಗಳಿಗೆ ಬೆಂಬಲ ನೀಡಿ ಬಿಳಿಯರಿಗೆ ಕೆಲಸಗಳನ್ನು ತಡೆಹಿಡಿಯುತ್ತಿದ್ದೀರಿ, ಇದು ನ್ಯಾಯಬದ್ಧವಾಗಿಲ್ಲ.' ೧೮೫೮ರಲ್ಲಿ ಅಟ್ಲಾಂಟಾದ ಇಬ್ಬರು ಮೆಕ್ಯಾನಿಕ್‌ಗಳು ಮತ್ತು ಕೆಲಸಗಾರರು ಮನವಿಯೊಂದನ್ನು ಸಲ್ಲಿಸಿ ರಕ್ಷಣೆಗಾಗಿ ಮೊರೆಯಿಟ್ಟರು. ಬೇರೆಕಡೆಗಳಲ್ಲಿ ವಾಸಮಾಡುತ್ತಿದ್ದ ಒಡೆಯರ ಕರಿಯ ಗುಲಾಮ ಕುಶಲಕರ್ಮಿಗಳಿಂದ ಈ ರಕ್ಷಣೆ ಅವರಿಗೆ ಬೇಕಾಗಿತ್ತು. ಅದರ ಮುಂದಿನ ವರ್ಷವೇ ಕೆಲವು ಬಿಳಿಯ ಪೌರರಿಗೆ ಇನ್ನೊಂದು ಅಸಮಾಧಾನ ಕಾದಿತ್ತು. ಅವರ ನಡುವೆಯೇ ಇದ್ದು ಕಾರ್ಯನಿರತನಾಗಲು ಒಬ್ಬ ನೀಗ್ರೋ ದಂತವೈದ್ಯನಿಗೆ ನಗರ ಸಮಿತಿಯು ಅವಕಾಶ ಕೊಟ್ಟಿದ್ದಿತೆಂಬುದು ಆ ಅಸಮಾಧಾನ. 'ನಮಗೆ ಮತ್ತು ನಮ್ಮ ಜನಸಮುದಾಯಕ್ಕೆ ನ್ಯಾಯ ದೊರಕಿಸಿಕೊಡಲು ಕೂಡಲೆ ಇದನ್ನು ರದ್ದುಗೊಳಿಸಬೇಕು. ಅಟ್ಲಾಂಟಾದ ವಾಸಿಗಳಾದ ನಾವು ನಿಮಗೆ ನ್ಯಾಯಕ್ಕಾಗಿ ಈ ಅಹವಾಲು ಸಲ್ಲಿಸುತ್ತಿದ್ದೇವೆ.' ೧೮೯೧ರಲ್ಲಿ ಜಾರ್ಜಿಯಾದ ರಿಚ್‌ಮಂಡ್ ಪ್ರದೇಶದಲ್ಲಿ ನೀಗ್ರೋಗಳ ಜನಗಣತಿಯ ಪ್ರಕಾರ ಅವರಲ್ಲಿದ್ದ ಕಸುಬುದಾರರೆಂದರೆ ಬಡಗಿಗಳು, ಕ್ಷೌರಿಕರು, ದೋಣಿಯನ್ನು ಸರಿಪಡಿಸುವವರು, ಜೀನು ಮಾಡುವವರು, ನೂಲುವವರು, ಯಂತ್ರಶಿಲ್ಪಿಗಳು, ಚರ್ಮದ ಕೆಲಸ ಮಾಡುವವರು, ನೇಯ್ಗೆಯವರು, ರಕ್ಷಾಕವಚಗಳ ತಯಾರಕರು, ಮರ ಕುಯ್ಯುವವರ ಸಹಾಯಕರು, ಉಗಿದೋಣಿಯನ್ನು ನಡೆಸುವವರು ಇತ್ಯಾದಿ. ಮನ್ರೋ ಅವರು ಅಮೆರಿಕದ ಅಧ್ಯಕ್ಷರಾಗಿ ಪ್ರಮಾಣ ವಚನ ಸ್ವೀಕರಿಸುವ ಮೊದಲ ದಿನದಂದು ಹಾಕಿಕೊಂಡಿದ್ದ ಬೂಟುಗಳನ್ನು ತನ್ನ ಕೈಯಿಂದ ಮಾಡಿದ್ದವನು ಒಬ್ಬ ಗುಲಾಮಿ ಕಸುಬುದಾರ. ಮೋಂಟಿಸೆಲ್ಲೋ ಎಂಬಲ್ಲಿ ಥಾಮಸ್ ಜೆಫರ್ಸನ್‌ನ ಮನೆಯ ನೆಲಕ್ಕೆ ಹಾಸಲಾಗಿದ್ದ ನವಿರು ಹಾಸುಗಲ್ಲುಗಳನ್ನು ಮಾಡಿದ್ದ ಗುಲಾಮನ ಹಸನು ಕಸುಬುಗಾರಿಕೆಯನ್ನು ಕಂಡು ಹ್ಯಾರಿಯೆಟ್ ಮಾರ್ಟಿನೋ ನಿಬ್ಬೆರಗಾಗಿದ್ದಳು. ಆ ಹಳೆಯ ನೆಡುತೋಪಿನ ಮಧ್ಯದ ದೊಡ್ಡ ಮನೆಯಲ್ಲಿ ಈಗಲೂ ಆ ನೀಗ್ರೋ ಕುಶಲಕರ್ಮಿಗಳ ಕೈಚಳಕದ ಮಹತ್ತರ ಗುರುತುಗಳು ಕಾಣಸಿಗುತ್ತವೆ. ಆ ಬೃಹತ್ ಓಕ್ ಮರಗಳನ್ನು ಕಡಿದು ಹಲಗೆಗಳನ್ನು ಕುಯ್ದು ಕಟ್ಟಿದ ಬಲವಾದ ಭವನ ಮತ್ತು ಹಲಗೆಗಳನ್ನು ಜೋಡಿಸಿ ಕೂಡಿಸಿರುವ ಶೈಲಿ ಎಲ್ಲಾ ಇಂದಿಗೂ ಕಲಶಪ್ರಾಯವಾಗಿದೆ. ನೂಲುವ ಮತ್ತು ನೇಯ್ಗೆಯ ಕೆಲಸದಲ್ಲಿ ಪಳಗಿದ ನೀಗ್ರೋ ಹೆಂಗಸರು ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿದ್ದರು. ಬಕಿಂಗ್ ಹ್ಯಾಮ್ ಎಂಬುವನು ೧೮೩೯ರಲ್ಲಿ ಜಾರ್ಜಿಯಾದ ಅಥೆನ್ಸ್‌ನಲ್ಲಿ, ಇವರೆಲ್ಲಾ ಬಿಳಿಯ ಹುಡುಗಿಯರೊಂದಿಗೆ ಯಾವುದೇ ಆಕ್ಷೇಪ ಅಥವಾ ಜುಗುಪ್ಸೆ ಇಲ್ಲದೆ ಕೆಲಸ ಮಾಡುತ್ತಿದ್ದುದನ್ನು ಕಂಡಿದ್ದ. ಮುಕ್ತರಾಗಿದ್ದು ಅಥವಾ ಇನ್ನೂ ಗುಲಾಮರಾಗಿಯೇ ಉಳಿದಿದ್ದು ದೇಶದ ದಕ್ಷಿಣದಲ್ಲಿದ್ದ ನೀಗ್ರೋ ಕುಶಲಕರ್ಮಿಗಳು ಉತ್ತರದಲ್ಲಿದ್ದ ಅವರ ಸಹೋದರರಿಗಿಂತ ಹೆಚ್ಚು ಮುನ್ನಡೆ ಸಾಧಿಸಿದ್ದರು. ಫಿಲಡೆಲ್‌ಫಿಯಾ ಎಂಬಲ್ಲಿ ೧೮೫೬ರಲ್ಲಿ ೧೬೩೭ ನೀಗ್ರೋ ಕುಶಲಕರ್ಮಿಗಳಿದ್ದರೆಂದು ದಾಖಲಾಗಿದೆ. ಅವರಲ್ಲಿ ಮೂರನೆಯ ಎರಡು ಭಾಗಕ್ಕಿಂತಲೂ ಕಡಿಮೆ ಜನ ತಮ್ಮ ಕೌಶಲವನ್ನು ಉಪಯೋಗಿಸಲು ಸಾಧ್ಯವಾಗಿತ್ತು. 'ಕಾರಣ: ಹಗೆತನದ ಪೂರ್ವಗ್ರಹ'. ಹತ್ತೊಂಬತ್ತನೆಯ ಶತಮಾನದ ಆದಿಭಾಗದಿಂದಲೇ ಅಮೆರಿಕಕ್ಕೆ ಗುಂಪುಗುಂಪಾಗಿ ಬರುತ್ತಿದ್ದ ಐರ್ಲೆಂಡಿನ

ಜನರನ್ನು ದೇಶದ ಉತ್ತರ ಭಾಗದಲ್ಲಿ ಉಪಯೋಗಿಸಿಕೊಂಡಿದ್ದು ಹೆಚ್ಚು ಕಡಿಮೆ ನೀಗ್ರೋ ಗುಲಾಮರನ್ನು ಬಳಸಿಕೊಂಡ ರೀತಿಯಲ್ಲೇ. 'ಅವರ ಪರವಾಗಿ ಹೂಡಲಾದ ಒಂದು ವಾದವೆಂದರೆ ಐರ್ಲೆಂಡಿನ ಒಬ್ಬ ಕ್ಯಾಥೊಲಿಕ್ ಪಂಥದವನು ತನಗೆ ನೀಡಲಾದ ಸ್ಥಾನದಿಂದ ಉನ್ನತ ಸ್ಥಾನವೊಂದಕ್ಕೇರಲು ಯತ್ನಿಸುವುದೇ ಅಪರೂಪ; ಆದರೆ ನೀಗ್ರೋ ಆದವನು ಆ ಯತ್ನವನ್ನು ಮಾಡುತ್ತಾನೆ ಮತ್ತು ಅದರಲ್ಲಿ ಸಫಲನೂ ಆಗುತ್ತಾನೆ'. ಕರಿಯ ಗುಲಾಮರ ಮಾರಾಟ ಜಾರಿಯಲ್ಲಿದ್ದ ಸಮಯದಲ್ಲಿ ಧರ್ಮ ಶೋಧನವಾದಿ ಆಲಿವರ್ ಕ್ರಾಮ್‌ವೆಲ್ ಎಂಬುವನು ದ್ರೋಘೇಡಾ ಹತ್ಯಾಕಾಂಡದಲ್ಲಿ ಸಾಯದೆ ಉಳಿದಿದ್ದ ಐರ್ಲೆಂಡಿನ ಜನರನ್ನು ಬರ್ಬಡಾಸ್ಗೆ ಮಾರಿರಲಿಲ್ಲವೇನು? ನ್ಯೂಯಾರ್ಕ್ ಮತ್ತು ಪೆನ್ಸಿಲ್ವೇನಿಯಾಗಳಲ್ಲಿದ್ದ ಮುಕ್ತ ಮತ್ತು ತಲೆತಪ್ಪಿಸಿಕೊಂಡಿದ್ದ ನೀಗ್ರೋಗಳು ಈ ಗುಂಪಿನ ವಿರುದ್ಧ ಸದಾಕಾಲವೂ ಘರ್ಷಣೆಯಲ್ಲಿರುತ್ತಿದ್ದರು. ಸೇನಾದಳದ ವಿಭಜನೆಗೆ ಸಂಬಂಧಿಸಿದಂತೆ ನ್ಯೂಯಾರ್ಕ್‌ನಲ್ಲಿ ನಡೆದ ಅತಿ ಹಿಂಸಾತ್ಮಕ ಘರ್ಷಣೆಗಳು ಈ ವಿಷಪೂರಿತ ದ್ವೇಷಭಾವನೆಯ ಭುಗಿಲೆದ್ದಾಗ ಜರುಗಿದ್ದು. ಐರ್ಲೆಂಡಿನ ಈ ಜನ ಗಾರೆ ಕೆಲಸದವರ ಪರಿಕರಗಳನ್ನು ಹೊರುವ ಮತ್ತಿತರ ಸಾಮಾನ್ಯ ದುಡಿಮೆಯ ಎಲ್ಲ ಅವಕಾಶಗಳನ್ನೂ ತಮ್ಮ ಹಿಡಿತದಲ್ಲಿ ಇಟ್ಟುಕೊಂಡಿದ್ದರು. ತಮ್ಮ ಜೀವನಾಧಾರವನ್ನು ಹಾಗೂ ಅಮೆರಿಕದ ಮೇಲೆ ಅವರಿಗಿದ್ದ ಸ್ವಲ್ಪಮಟ್ಟಿನ ಹಿಡಿತವನ್ನು ಕಸಿದುಕೊಳ್ಳುವ ಕೇಡಿಗರೆಂದು ಅವರು ನೀಗ್ರೋಗಳನ್ನು ಹೆಜ್ಜೆ ಹೆಜ್ಜೆಗೂ ವಿರೋಧಿಸುತ್ತಲೇ ಇರಬೇಕಾಯಿತು."

## III

ರೋಮಿನ ಗುಲಾಮ ಮತ್ತು ಅಮೆರಿಕದ ನೀಗ್ರೋ ಗುಲಾಮ ಇವರ ವಾಸ್ತವಿಕ ಸ್ಥಿತಿ ಹೀಗಿದ್ದಿತು. ಭಾರತದ ಅಸ್ಪೃಶ್ಯರ ಸ್ಥಾನಮಾನಗಳಲ್ಲಿ ಇದರೊಂದಿಗೆ ಹೋಲಿಸಬಹುದಾದಂತಹದ್ದೇನಾದರೂ ಇದೆಯೇ? ರೋಮ್ ಚಕ್ರಾಧಿಪತ್ಯದಡಿಯಲ್ಲಿದ್ದ ಗುಲಾಮರ ಸ್ಥಿತಿಗತಿಗಳೊಡನೆ ಅಸ್ಪೃಶ್ಯರ ಸ್ಥಿತಿಗತಿಗಳನ್ನು ಹೋಲಿಸಿ ನೋಡಲು ಆ ಕಾಲವನ್ನೇ ತೆಗೆದುಕೊಳ್ಳುವುದು ನ್ಯಾಯವಾದುದಲ್ಲ. ಆದರೆ ರೋಮ್ ಚಕ್ರಾಧಿಪತ್ಯದ ಗುಲಾಮರ ಪರಿಸ್ಥಿತಿಯೊಡನೆ ಈ ಕಾಲದ ಅಸ್ಪೃಶ್ಯರ ಪರಿಸ್ಥಿತಿಯನ್ನು ಹೋಲಿಸಿ ನೋಡಲು ನನ್ನದೇನೂ ಅಡ್ಡಿಯಿಲ್ಲ. ಒಂದು ಕಡೆಯ ಅತ್ಯಂತ ಹೀನಾಯ ಸ್ಥಿತಿಯನ್ನು ಇನ್ನೊಂದು ಕಡೆಯ ಉಚ್ಛ್ರಾಯ ಸ್ಥಿತಿಯೊಡನೆ ಹೋಲಿಸಿದಂತಾಗುತ್ತದೆ ಅದು; ಏಕೆಂದರೆ ಅಸ್ಪೃಶ್ಯರಿಗೆ ಇಂದಿನ ಕಾಲವು ಸುವರ್ಣಯುಗವೆಂದು ಭಾವಿಸಲಾಗುತ್ತದೆ. ಅಸ್ಪೃಶ್ಯರ ವಾಸ್ತವಿಕ ಸ್ಥಿತಿಯು ಗುಲಾಮರ ವಾಸ್ತವಿಕ ಸ್ಥಿತಿಯೊಡನೆ ಹೋಲಿಕೆಗೆ ವಸ್ತುವಾದಾಗ ನಮಗೆ ಕಾಣುವುದೇನು? ರೋಮಿನಲ್ಲಿ ಗುಲಾಮರು ತೊಡಗಿಸಲ್ಪಟ್ಟಿದ್ದಂತಹ ಉದ್ಯೋಗಗಳಾದ ಗ್ರಂಥಪಾಲಕರು, ಉಕ್ತಲೇಖನ ಬರೆದುಕೊಳ್ಳುವವರು, ಶೀಘ್ರಲಿಪಿಕಾರರು ಇತ್ಯಾದಿಗಳಲ್ಲಿ ಅಸ್ಪೃಶ್ಯರು ಎಷ್ಟು ಮಂದಿ ಇದ್ದಾರೆ? ರೋಮಿನಲ್ಲಿದ್ದಂತೆ ಎಷ್ಟು ಮಂದಿ ಅಸ್ಪೃಶ್ಯರು; ಬೌದ್ಧಿಕ ಉದ್ಯೋಗಗಳಾದ ಆಲಂಕಾರಿಕ, ವ್ಯಾಕರಣಕಾರ, ತತ್ತ್ವಜ್ಞಾನಿ, ಬೋಧಕ, ವೈದ್ಯ, ಕಲಾವಿದ ವೃತ್ತಿಗಳಲ್ಲಿ ತೊಡಗಿದ್ದಾರೆ? ರೋಮಿನ ಗುಲಾಮರಂತೆ ಎಷ್ಟು ಜನ ಅಸ್ಪೃಶ್ಯರು ಉದ್ಯೋಗಗಳಲ್ಲಿದ್ದಾರೆ? ಈ ಯಾವುದೇ ಪ್ರಶ್ನೆಗಳಿಗೆ ಯಾವನಾದರೂ ಹಿಂದೂ ಧೈರ್ಯವಾಗಿ ಅಹುದೆನ್ನುವಂತಹ ಉತ್ತರ ನೀಡಬಲ್ಲನೆ? ಗುಲಾಮರು ಯಾವ ಕ್ಷೇತ್ರಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ತೊಡಗಿಸಲ್ಪಟ್ಟಿದ್ದರೋ ಅವುಗಳಿಂದೆಲ್ಲಾ ಅಸ್ಪೃಶ್ಯರನ್ನು ಹೊರಗಿಡಲಾಗಿದೆ. ಅಸ್ಪೃಶ್ಯತೆಯನ್ನು ಸಮರ್ಥಿಸಲು ಹಿಂದೂಗಳು ಆತುಕೊಳ್ಳುವ ಎಲ್ಲ ಪ್ರತಿವಾದಿ ಮಾರ್ಗಗಳೂ ಎಷ್ಟು ಶುಷ್ಕವಾಗಿವೆ ಎಂಬುದನ್ನು ಇದು ಸಿದ್ಧಪಡಿಸುತ್ತದೆ. ಸೋಜಿಗದ ಸಂಗತಿಯೆಂದರೆ ಬಹುಮಂದಿ ಗುಲಾಮಗಿರಿಯನ್ನು ಖಂಡಿಸುತ್ತಾರೆ;

ಏಕೆಂದರೆ ಅವರ ಪ್ರಕಾರ ಒಬ್ಬ ವ್ಯಕ್ತಿಯ ಅಥವಾ ವರ್ಗದ ಜೀವನ–ಮರಣಗಳ ಶಕ್ತಿಯನ್ನು ಇನ್ನೊಬ್ಬ ವ್ಯಕ್ತಿ ಅಥವಾ ವರ್ಗವು ಕಾನೂನಿನಿಂದ ಪ್ರತಿಬಂಧಿಸುವುದು ಅಸಾಧುವಾದದ್ದು. ಅವರು ಮರೆಯುವ ವಿಷಯವೇನೆಂದರೆ ಗುಲಾಮಗಿರಿಯು ಇಲ್ಲದಿರುವಲ್ಲಿ ಕೂಡ ಕ್ರೂರ ದಮನ, ದಬ್ಬಾಳಿಕೆ ಮತ್ತು ಪೀಡನೆಗಳ ಸರಮಾಲೆಯಿಂದ ದುರವಸ್ಥೆ, ನಿರಾಸೆ ಮತ್ತು ಹತಾಶೆಗಳು ಉಂಟಾಗಬಹುದು ಎಂಬುದು. ಮೇಲೆ ನಮೂದಿಸಲಾಗಿರುವ ಗುಲಾಮರ ವಾಸ್ತವಿಕ ಸ್ಥಿತಿಯನ್ನು ಪರಿಶೀಲಿಸುವವರಿಗೆ ಗುಲಾಮಗಿರಿಯನ್ನು ಸುಮ್ಮನೆ ಖಂಡಿಸುವುದು ಸರಿಯಲ್ಲವೆಂದು ತಿಳಿದುಬರುತ್ತದೆ. ಕಾನೂನು ಬದ್ಧವಾಗಿ ಗುಲಾಮರ ಸ್ಥಿತಿ ಏನಿದ್ದಿತೆಂಬ ಕಲ್ಪನೆಯ ಆಧಾರದ ಮೇಲೆ ಹಗುರವಾಗಿ ಅಥವಾ ಅವಸರವಾಗಿ ಗುಲಾಮಗಿರಿಯನ್ನು ಖಂಡಿಸಲು ಬರುವುದಿಲ್ಲ. ಒಂದು ಸಮಾಜದಲ್ಲಿ ಕಾನೂನು ಅನುಮತಿ ನೀಡುವುದಷ್ಟೇ ಅದರೊಳಗಿನ ಆಗುಹೋಗುಗಳಿಗೆ ನಿದರ್ಶನವಾಗಿರುವುದಿಲ್ಲ. ತಮ್ಮ ಎಲ್ಲ ಗಳಿಕೆಗಳಿಗೆ ಗುಲಾಮಗಿರಿಯೇ ಕಾರಣವೆಂದು ಎಷ್ಟೋ ಗುಲಾಮರು ಯಾವ ಅಂಜಿಕೆಯೂ ಇಲ್ಲದೆ ಒಪ್ಪಲು ಸಿದ್ಧರಾಗಿರುತ್ತಿದ್ದರು. ಅವರು ಅದನ್ನು ಒಪ್ಪಲಿ ಬಿಡಲಿ, ಬಹುಮಂದಿ ಗುಲಾಮರು ಗಳಿಕೆಗಳನ್ನು ಮಾಡಿಕೊಂಡಿದ್ದಂತೂ ನಿಜ.

ಎಲ್ಲರೂ ಒಪ್ಪಬೇಕಾದ ಸಂಗತಿ ಇದು : ಗುಲಾಮಗಿರಿಯು ಸ್ವಾತಂತ್ರ್ಯಯುಕ್ತವಾದ ಸಾಮಾಜಿಕ ರಚನೆ ಅಲ್ಲ. ಆದರೆ ಅಸ್ಪೃಶ್ಯತೆಯನ್ನು ಸ್ವಾತಂತ್ರ್ಯಯುಕ್ತವಾದ ಸಾಮಾಜಿಕ ರಚನೆಯೆಂದು ಬಣ್ಣಿಸಬಹುದೆ? ಅಸ್ಪೃಶ್ಯತೆಯನ್ನು ಸಮರ್ಥಿಸಲು ಮುಂದೆ ಬರುವ ಹಿಂದೂಗಳೇನೋ ಅದನ್ನು ಅಂತಹದ್ದೆಂದು ಕೊಚ್ಚಿಕೊಳ್ಳುತ್ತಾರೆ. ಅಸ್ಪೃಶ್ಯತೆ ಮತ್ತು ಗುಲಾಮಗಿರಿಯ ನಡುವೆ ಕೆಲವು ವ್ಯತ್ಯಾಸಗಳಿವೆ ಎಂಬುದನ್ನವರು ಅಲಕ್ಷಿಸುತ್ತಾರೆ. ಆ ವ್ಯತ್ಯಾಸಗಳು ಅಸ್ಪೃಶ್ಯತೆಯನ್ನು ಗುಲಾಮಗಿರಿಗಿಂತಲೂ ಹೀನವಾದ ಸ್ವಾತಂತ್ರ್ಯರಹಿತ ಸಾಮಾಜಿಕ ರಚನೆಯನ್ನಾಗಿಸುತ್ತವೆ. ಗುಲಾಮಗಿರಿಯು ಎಂದೂ ಕಡ್ಡಾಯವಾಗಿರಲಿಲ್ಲ. ಆದರೆ ಅಸ್ಪೃಶ್ಯತೆಯು ಕಡ್ಡಾಯವಾದದ್ದು. ಒಬ್ಬ ವ್ಯಕ್ತಿಯು ಇನ್ನೊಬ್ಬನನ್ನು ತನ್ನ ಗುಲಾಮನನ್ನಾಗಿ ಇರಿಸಿಕೊಳ್ಳಲು ಅನುಮತಿ ಇದೆ. ಹಾಗೆ ಮಾಡಲು ಅವನಿಗೆ ಇಷ್ಟವಿಲ್ಲದಿದ್ದರೆ ಅವನ ಮೇಲೆ ಯಾವ ನಿರ್ಬಂಧವೂ ಇಲ್ಲ. ಆದರೆ ಅಸ್ಪೃಶ್ಯನಿಗೆ ಆಯ್ಕೆಯ ಪ್ರಶ್ನೆಯೇ ಇಲ್ಲ. ಅವನು ಅಸ್ಪೃಶ್ಯನಾಗಿ ಒಮ್ಮೆ ಹುಟ್ಟಿದರೆ ಸಾಕು, ಒಬ್ಬ ಅಸ್ಪೃಶ್ಯನ ಎಲ್ಲ ದೌರ್ಬಲ್ಯಗಳಿಗೂ ಅವನು ತುತ್ತಾಗಬೇಕು. ಗುಲಾಮಗಿರಿಯ ಕಾನೂನಿನನ್ವಯ ಮುಕ್ತನಾಗಲು ಗುಲಾಮನಿಗೆ ಅವಕಾಶವಿತ್ತು. ಒಮ್ಮೆ ಗುಲಾಮನಾದರೆ ಸದಾಕಾಲಕ್ಕೂ ಗುಲಾಮ ಎಂಬುದು ಗುಲಾಮನ ವಿಧಿಯಾಗಿರಲಿಲ್ಲ. ಅಸ್ಪೃಶ್ಯತೆಯಲ್ಲಿ ಇಂತಹ ಪಾರಾಗುವಿಕೆ ಇಲ್ಲ. ಒಮ್ಮೆ ಅಸ್ಪೃಶ್ಯನೆಂದರೆ ಅವನು ಯಾವಾಗಲೂ ಅಸ್ಪೃಶ್ಯನೇ. ಇನ್ನೊಂದು ವ್ಯತ್ಯಾಸವೇನೆಂದರೆ ಅಸ್ಪೃಶ್ಯತೆಯು ನೇರವಲ್ಲದ ಗುಲಾಮಗಿರಿ ಮತ್ತು ಆ ಕಾರಣದಿಂದ ಅದು ಗುಲಾಮಗಿರಿಯ ಅತ್ಯಂತ ಹೀನಾಯ ಸ್ವರೂಪದ್ದು. ಗುಲಾಮನಾಗುವುದೇ ಇದ್ದರೆ ಮುಕ್ತವಾದ ಮತ್ತು ನೇರವಾದ ರೀತಿಯಲ್ಲಿ ಒಬ್ಬ ವ್ಯಕ್ತಿಯು ತನ್ನ ಸ್ವಾತಂತ್ರ್ಯವನ್ನು ಕಳೆದುಕೊಳ್ಳುವುದು ಉತ್ತಮವಾದ ಮಾರ್ಗ. ಅದು ಗುಲಾಮನಿಗೆ ತನ್ನ ಗುಲಾಮತನವನ್ನು ಎತ್ತಿ ತೋರಿಸುತ್ತದೆ. ಸ್ವಾತಂತ್ರ್ಯಕ್ಕಾಗಿ ಹೋರಾಡುವಲ್ಲಿ ಗುಲಾಮತನದ ಪ್ರಜ್ಞಾಪೂರ್ವಕವಾದ ಅರಿವು ಮೊದಲ ಬಹಳ ಮುಖ್ಯವಾದ ಹೆಜ್ಜೆ. ಆದರೆ ಒಬ್ಬ ವ್ಯಕ್ತಿಯ ಸ್ವಾತಂತ್ರ್ಯವನ್ನು ನೇರವಾಗಿ ಅಪಹರಿಸಿಲ್ಲದಿದ್ದರೆ ಅವನಿಗೆ ತನ್ನ ಗುಲಾಮತನದ ಅರಿವಿರುವುದಿಲ್ಲ. ಅಸ್ಪೃಶ್ಯತೆಯು ನೇರವಾಗಿರದ ಗುಲಾಮಗಿರಿ. ಒಬ್ಬ ಅಸ್ಪೃಶ್ಯನಿಗೆ 'ನೀನು ಸ್ವತಂತ್ರ, ನೀನೊಬ್ಬ ನಾಗರಿಕ, ನಿನಗೆ ನಾಗರಿಕನೊಬ್ಬನಿಗೆ ಇರುವ ಎಲ್ಲ ಹಕ್ಕುಗಳೂ ಇವೆ' ಎಂದು ಹೇಳುತ್ತಲೇ ಅವನನ್ನು ಹಗ್ಗದಿಂದ ಕಟ್ಟಿಹಾಕುವುದು, ತನ್ನ ಪರಾಕಾಷ್ಠೆಯನ್ನು ಮುಟ್ಟಲು ಅವನಿಗೆ ಯಾವ ಅವಕಾಶಗಳೂ ಇಲ್ಲದಂತೆ ಮಾಡುವುದು, ನಿಜಕ್ಕೂ ಕ್ರೂರವಾದ ಮೋಸ. ತಮ್ಮ ಗುಲಾಮತನವು ಅವರಿಗೆ ಗೊತ್ತಾಗದಿರುವಂತೆ

ಅಸ್ಪೃಶ್ಯರನ್ನು ಬಂಧಿಸಿಡುವ ಕ್ರಮ ಇದು. ಅಸ್ಪೃಶ್ಯತೆ ಎನಿಸಿಕೊಂಡರೂ ಅದು ಗುಲಾಮಗಿರಿಯೇ. ಅದು ನೇರವಾದುದಲ್ಲವಾದರೂ ನೈಜವಾದದ್ದೇ. ಅದು ಪ್ರಜ್ಞಾಪೂರ್ವಕವಲ್ಲವಾದ್ದರಿಂದ ಅದು ಬಹುಕಾಲ ಬಾಳುವಂಥದು. ಈ ಎರಡು ರಚನೆಗಳಲ್ಲಿ ಅಸ್ಪೃಶ್ಯತೆಯೇ ಹೆಚ್ಚು ಹೀನವಾದುದೆಂಬುದರಲ್ಲಿ ಯಾವ ಸಂಶಯಕ್ಕೂ ಎಡೆಯಿಲ್ಲ.

ಗುಲಾಮಗಿರಿಯಾಗಲಿ ಅಸ್ಪೃಶ್ಯತೆಯಾಗಲಿ ಸ್ವಾತಂತ್ರ್ಯದಿಂದ ಕೂಡಿದ ಸಾಮಾಜಿಕ ವ್ಯವಸ್ಥೆಯಲ್ಲ. ಅವೆರಡರ ನಡುವೆ ವ್ಯತ್ಯಾಸವಿದೆ ನಿಜ. ಅದನ್ನು ಗುರುತಿಸಬೇಕಾದರೆ ನಮಗಿರುವ ಪರೀಕ್ಷಾವಿಧಾನವೆಂದರೆ ವಿದ್ಯಾಭ್ಯಾಸ, ಶೀಲತೆ, ಸುಖ, ಸಂಸ್ಕೃತಿ ಮತ್ತು ಸಂಪತ್ತು ಗುಲಾಮಗಿರಿಯಡಿ ಸಾಧ್ಯವೋ ಅಥವಾ ಅಸ್ಪೃಶ್ಯತೆಯಡಿಯಲ್ಲೋ ಎಂಬುದು. ಈ ದೃಷ್ಟಿಯಿಂದ ತೀರ್ಮಾನಿಸುವುದಾದರೆ ಅಸ್ಪೃಶ್ಯತೆಗಿಂತ ಗುಲಾಮಗಿರಿಯು ನೂರುಪಟ್ಟು ಉತ್ತಮವಾದದ್ದೆಂಬುದರಲ್ಲಿ ಯಾವ ಭಿನ್ನಾಭಿಪ್ರಾಯವೂ ಇರಲಾರದು. ಗುಲಾಮಗಿರಿಯಲ್ಲಿ ವಿದ್ಯಾಭ್ಯಾಸ, ಶೀಲತೆ, ಸುಖ, ಸಂಸ್ಕೃತಿ ಮತ್ತು ಸಂಪತ್ತುಗಳ ಸಾಧ್ಯತೆ ಇದೆ. ಅಸ್ಪೃಶ್ಯತೆಯಲ್ಲಿ ಅದು ಸೊನ್ನೆ. ಗುಲಾಮಗಿರಿಯಂತಹ ಸ್ವಾತಂತ್ರ್ಯರಹಿತ ಸಾಮಾಜಿಕ ವ್ಯವಸ್ಥೆಯ ಯಾವ ಅನುಕೂಲಕರ ಸಂಗತಿಯೂ ಅಸ್ಪೃಶ್ಯತೆಯಲ್ಲಿಲ್ಲ. ಸ್ವಾತಂತ್ರ್ಯಯುತ ಸಾಮಾಜಿಕ ವ್ಯವಸ್ಥೆಯ ಎಲ್ಲ ಪ್ರತಿಕೂಲ ಸಂಗತಿಗಳೂ ಅದರಲ್ಲಿವೆ. ಸ್ವಾತಂತ್ರ್ಯರಹಿತ ಸಾಮಾಜಿಕ ರಚನೆಯಾದ ಗುಲಾಮಗಿರಿಯಲ್ಲಿ ವ್ಯಾಪಾರ ವಹಿವಾಟು ನಡೆಸಲು, ಕರಕೌಶಲ ಪಡೆಯಲು ಅಥವಾ ಕಲೆಯ ವೃದ್ಧಿಗೊಳಿಸಿಕೊಳ್ಳಲು ತರಬೇತಿಯ ಸೌಲಭ್ಯ ಉಂಟು. ಇದನ್ನೇ ಪ್ರಾಧ್ಯಾಪಕ ಮ್ಯೂರೆಸ್ "ಉನ್ನತ ಸಂಸ್ಕೃತಿಗೆ ಉಪಕ್ರಮ" ಎಂದು ಕರೆದಿದ್ದಾರೆ. ಗುಲಾಮಗಿರಿಯಲ್ಲಿ, ವಿಶೇಷತಃ ರೋಮ್ ಚಕ್ರಾಧಿಪತ್ಯದ ಗುಲಾಮಗಿರಿಯಲ್ಲಿ, ಅಸ್ಪೃಶ್ಯತೆಯಲ್ಲಿರುವಂತೆ ವ್ಯಕ್ತಿಯನ್ನು ನಜ್ಜುಗುಜ್ಜುಗೊಳಿಸುವಂತಹ ಅಥವಾ ವೈಯಕ್ತಿಕ ಬೆಳವಣಿಗೆಯನ್ನು ನಿರಾಕರಿಸುವಂತಹ ಯಾವ ಲಕ್ಷಣವೂ ಬಲವತ್ತರವಾಗಿ ಇಲ್ಲ. ಆದ್ದರಿಂದ ಗುಲಾಮಗಿರಿಗಿಂತಲೂ ಅಸ್ಪೃಶ್ಯತೆಯು ಮೇಲು ಎಂಬುದು ದುಡುಕಿನ ಮಾತಾಗುತ್ತದೆ.

ಅವನಿಗೆ ದೊರೆಯುತ್ತಿದ್ದ ತರಬೇತಿ, ಸಂಸ್ಕೃತಿಗೆ ಅವನ ಉಪಕ್ರಮ, ಗುಲಾಮನಿಗೆ ಖಂಡಿತಕ್ಕೂ ಅತ್ಯಂತ ಲಾಭಕಾರಿಯಾಗಿರುತ್ತಿತ್ತು. ಇದನ್ನು ಅವನಿಗೆ ದೊರಕಿಸಿಕೊಡಲು ಅವನ ಯಜಮಾನನಿಗೆ ಸಾಕಷ್ಟು ಖರ್ಚು ತಗುಲುತ್ತಿತ್ತು ಕೂಡ. 'ಗುಲಾಮರಾಗುವ ಮೊದಲೇ ತರಬೇತಿ ಹೊಂದಿರುತ್ತಿದ್ದ ಅಥವಾ ವಿದ್ಯಾಭ್ಯಾಸ ಪಡೆದಿರುತ್ತಿದ್ದ ಗುಲಾಮರು ಅತಿವಿರಳವಾಗಿದ್ದಿರಬೇಕು. ಅದಕ್ಕೆ ಇದ್ದ ಒಂದೇ ಅನ್ಯಮಾರ್ಗವೆಂದರೆ ಮನೆಗೆಲಸಗಳಲ್ಲಿರುತ್ತಿದ್ದ ಅಥವಾ ಕುಶಲಕರ್ಮಗಳಲ್ಲಿ ತೊಡಗಿರುತ್ತಿದ್ದ ಚಿಕ್ಕವಯಸ್ಸಿನ ಗುಲಾಮಗಿರಿಗೆ ತರಬೇತಿ ನೀಡುವುದು. ಉದಾಹರಣೆಗೆ ಹೇಳುವುದಾದರೆ, ಚಕ್ರಾಧಿಪತ್ಯದ ಸ್ಥಾಪನೆಗೆ ಮುನ್ನ ಹಿರಿಯ ಕ್ಯಾಟೋವಿನ ಕಾಲದಲ್ಲಿ ಸ್ವಲ್ಪಮಟ್ಟಿಗೆ ಮಾಡಿದ್ದು ಇದನ್ನೇ. ತರಬೇತಿ ನೀಡುತ್ತಿದ್ದುದು ಗುಲಾಮನ ಮಾಲೀಕ ಮತ್ತು ಇತರ ಸಿಬ್ಬಂದಿ. ಶ್ರೀಮಂತ ಮನೆತನಗಳಲ್ಲಿ ಹೀಗೆ ತರಬೇತಿ ನೀಡುವ ವಿಶಿಷ್ಟ ತರಬೇತುದಾರರು ಇರುತ್ತಿದ್ದರು ಮತ್ತು ಅಂಥ ತರಬೇತಿಯು ಉದ್ಯಮ, ವ್ಯಾಪಾರ, ಕಲೆ, ಸಾಹಿತ್ಯ ಇತ್ಯಾದಿಗಳಿಗೆ ಸಂಬಂಧಿಸಿದಂತೆ ವಿವಿಧ ರೂಪಗಳನ್ನು ತಳೆಯುತ್ತಿತ್ತು.'

ಗುಲಾಮನಿಗೆ ಇಷ್ಟೊಂದು ಮುತುವರ್ಜಿಯಿಂದ ತರಬೇತಿ ನೀಡುವುದಕ್ಕೆ ಮತ್ತು ಅವನಿಗೆ ದುಡಿಮೆ ಹಾಗೂ ಸಂಸ್ಕೃತಿಗಳ ಉತ್ತಮಮಟ್ಟದ ಪರಿಚಯ ಮಾಡಿಸಿಕೊಡುವುದಕ್ಕೆ ಯಜಮಾನನಿಗೆ ಖಂಡಿತವಾಗಿಯೂ ಲಾಭದ ಆಕಾಂಕ್ಷೆ ಇರುತ್ತಲೇ ಇತ್ತು. ನುರಿತವನಲ್ಲದ ಗುಲಾಮನಿಗಿಂತ ನುರಿತ ಗುಲಾಮನೊಬ್ಬನಿಗೆ ಹೆಚ್ಚಿನ ಬೆಲೆ ಇರುತ್ತಿತ್ತು. ಮಾರಿದರೆ ಅಂಥವನಿಗೆ ಹೆಚ್ಚಿನ ಕ್ರಯ ದೊರೆಯುತ್ತಿತ್ತು; ಅಥವಾ ಬಾಡಿಗೆಗೆ

ಕೊಟ್ಟರೆ ಹೆಚ್ಚಿನ ಕೂಲಿಯನ್ನು ದೊರಕಿಸಿ ಕೊಡುತ್ತಿದ್ದ. ಆದ್ದರಿಂದ ಗುಲಾಮನಿಗೆ ತರಬೇತಿ ನೀಡುವುದು ದಣಿಯ ದೃಷ್ಟಿಯಿಂದ ಒಂದು ಬಂಡವಾಳ ಹೂಡಿಕೆಯೇ ಆಗಿರುತ್ತಿತ್ತು.

ಸ್ವತಂತ್ರವಲ್ಲದ ಒಂದು ಸಾಮಾಜಿಕ ವ್ಯವಸ್ಥೆಯಲ್ಲಿ ಗುಲಾಮನನ್ನು ಜೀವಂತವಾಗಿರಿಸಿ ಪೋಷಿಸುವುದು ದಣಿಯ ಜವಾಬ್ದಾರಿಯಾಗಿರುತ್ತದೆ. ಗುಲಾಮಗಿರಿ ಅಂತಹ ಪದ್ಧತಿ. ತನ್ನ ಆಹಾರ, ಬಟ್ಟೆ ಮತ್ತು ವಸತಿಗಳಿಗೆ ಸಂಬಂಧಿಸಿದಂತೆ ಗುಲಾಮನು ಎಲ್ಲ ಜವಾಬ್ದಾರಿಯಿಂದಲೂ ಮುಕ್ತಗೊಳಿಸಲ್ಪಟ್ಟಿದ್ದ. ಇದನ್ನೆಲ್ಲಾ ದಣಿಯೇ ಒದಗಿಸಿ ಕೊಡಬೇಕಾಗಿತ್ತು. ಇದೇನೂ ಅವನಿಗೆ ಭಾರವಾಗುತ್ತಿರಲಿಲ್ಲ; ಏಕೆಂದರೆ, ತನ್ನ ಜೀವನಾಂಶಕ್ಕಿಂತಲೂ ಎಷ್ಟೋ ಹೆಚ್ಚುಪಟ್ಟು ಗುಲಾಮನು ಸಂಪಾದಿಸಿಕೊಡುತ್ತಿದ್ದ. ಕೂಲಿ ಸಂಪಾದಿಸುವವರೆಲ್ಲ ಸ್ವಾನುಭವದಿಂದ ತಿಳಿದಿರುವಂತೆ ಪ್ರತಿಯೊಬ್ಬ ಸ್ವತಂತ್ರ ವ್ಯಕ್ತಿಗೂ ಊಟ–ವಸತಿ ಸೌಲಭ್ಯವು ಯಾವಾಗಲೂ ಕಟ್ಟಿಟ್ಟಬುತ್ತಿ ಎನ್ನುವಂತೇನೂ ಇಲ್ಲ. ದುಡಿಯಲು ಸಿದ್ಧವಾಗಿರುವವರಿಗೆಲ್ಲ ದುಡಿಮೆಯು ಸದಾಕಾಲವೂ ದೊರತೇ ತೀರುತ್ತದೆ ಎಂಬುವಂತಿಲ್ಲ. ಕೆಲಸವಿಲ್ಲದಿದ್ದರೆ ಊಟವೂ ಇಲ್ಲ ಎಂಬ ನಿಯಮದಿಂದ ಮಾತ್ರ ಕೆಲಸಗಾರನು ಪಾರಾಗುವಂತೆಯೂ ಇಲ್ಲ. ಗುಲಾಮನಿಗೆ ಸಂಬಂಧಿಸಿದಂತೆ "ಕೆಲಸವಿಲ್ಲದಿದ್ದರೆ ಊಟವಿಲ್ಲ" ಎಂಬ ಈ ನಿಯಮವು ಅನ್ವಯವಾಗುವುದಿಲ್ಲ. ಕೆಲಸ ಮತ್ತು ಊಟ, ಎರಡನ್ನೂ ದೊರಕಿಸಿಕೊಡಬೇಕಾದದ್ದು ದಣಿಯ ಕರ್ತವ್ಯ. ದಣಿಯು ಕೆಲಸವನ್ನು ಒದಗಿಸದಿದ್ದರೆ ಗುಲಾಮನು ತನ್ನ ಊಟದ ಹಕ್ಕನ್ನೇನೂ ಕಳೆದುಕೊಳ್ಳುವುದಿಲ್ಲ. ವ್ಯಾಪಾರದ ಏರಿಳಿತಗಳು, ಉತ್ಪಾದನೆಯ ಹೆಚ್ಚಳ ಮತ್ತು ಇಳಿಕೆ, ಇವೆಲ್ಲಾ ಪ್ರತಿಯೊಬ್ಬ ಸ್ವತಂತ್ರ ಕೂಲಿಯಾಳೂ ಎದುರಿಸಬೇಕಾಗುವ ಮುಗ್ಗಟ್ಟುಗಳು. ಆದರೆ ಅವು ಗುಲಾಮನಿಗೆ ತಟ್ಟುವಂತಹ ಬಾಧೆಗಳಲ್ಲ. ಅವು ದಣಿಯನ್ನು ಮಾತ್ರ ತಟ್ಟಬಹುದು, ಅಷ್ಟೆ. ಇವುಗಳಿಂದ ಗುಲಾಮನು ಮುಕ್ತ. ಅವನ ಊಟ ಅವನಿಗೆ ದಕ್ಕುತ್ತದೆ, ಬಹುಶಃ ಎಂದಿನ ಊಟವೇ ಎಂದರೂ ತಪ್ಪಾಗುವುದಿಲ್ಲ ; ಉತ್ಪಾದನೆಯ ಹೆಚ್ಚಳವಾಗಲಿ ಇಳಿತವಾಗಲಿ ಅದು ಅವನಿಗೆ ಅಪ್ರಸ್ತುತ.

ಗುಲಾಮಗಿರಿಯಂತಹ ಸ್ವತಂತ್ರವಲ್ಲದ ಸಾಮಾಜಿಕ ವ್ಯವಸ್ಥೆಯಲ್ಲಿ ಗುಲಾಮನ ಆರೋಗ್ಯ ಮತ್ತು ಕ್ಷೇಮವನ್ನು ದಣಿಯು ಎಚ್ಚರದಿಂದ ನೋಡಿಕೊಳ್ಳಲೇಬೇಕು. ಗುಲಾಮನು ಯಜಮಾನನ ಆಸ್ತಿ. ಈ ಪ್ರತಿಕೂಲವಾದ ಅವನ ಸ್ಥಿತಿಯೇ ಗುಲಾಮನನ್ನು ಒಬ್ಬ ಸ್ವತಂತ್ರ ಕೂಲಿಗಾರನಿಗಿಂತ ಹೆಚ್ಚು ಅನುಕೂಲದ ಸ್ಥಿತಿಯಲ್ಲಿರಿಸಿದ್ದು. ಆಸ್ತಿಯಾಗಿದ್ದುದರಿಂದ ಅವನಿಗೊಂದು ಬೆಲೆಯಿತ್ತು ; ತನ್ನ ಸ್ವಂತದ ಹಿತಕ್ಕಾಗಿಯಾದರೂ ಯಜಮಾನನು ಗುಲಾಮನ ಆರೋಗ್ಯ ಮತ್ತು ಕ್ಷೇಮದ ಬಗ್ಗೆ ಮುತುವರ್ಜಿ ವಹಿಸಬೇಕಾಗಿರುತ್ತಿತ್ತು. ರೋಮಿನಲ್ಲಿ ಗುಲಾಮರನ್ನೆಂದೂ ಜೌಗು ಮತ್ತು ಮಲೇರಿಯಾ ಪೀಡಿತ ಪ್ರದೇಶಗಳಿಗೆ ಕೆಲಸಕ್ಕೆ ಕಳಿಸುತ್ತಿರಲಿಲ್ಲ. ಅಂತಹ ಪ್ರದೇಶಗಳಲ್ಲಿ ಸ್ವತಂತ್ರ ಕೂಲಿಯಾಳುಗಳನ್ನೇ ನೇಮಿಸಲಾಗುತ್ತಿತ್ತು. ರೋಮಿನ ರೈತರಿಗೆ ಕ್ಯಾಟೋವಿನ ಹಿತವಚನವೂ ಇದೇ ಅಗಿತ್ತು : ಜೌಗು ಮತ್ತು ಮಲೇರಿಯಾ ಪೀಡಿತ ಪ್ರದೇಶಗಳಲ್ಲಿ ಗುಲಾಮರನ್ನು ಕೆಲಸಕ್ಕಿಡಬೇಡಿ. ಇದು ಆಶ್ಚರ್ಯವೆನಿಸುವಂತಹ ಸಂಗತಿಯಾಗಿ ತೋರಬಹುದು. ಆದರೆ ಸ್ವಲ್ಪ ಪರೀಕ್ಷಿಸಿ ನೋಡಿದರೆ ಇದು ಸ್ವಾಭಾವಿಕವಾಗಿಯೇ ಇದೆಯೆಂದು ಗೊತ್ತಾಗುತ್ತದೆ. ಗುಲಾಮನು ಬೆಲೆಬಾಳುತ್ತಿದ್ದ ಆಸ್ತಿಯಾಗಿದ್ದ. ಆದ್ದರಿಂದ ತಿಳುವಳಿಕೆಯನ್ನುಳ್ಳವನು, ಸ್ವಂತದ ಹಿತವನ್ನು ಬಲ್ಲವನು, ಎಂದಿಗೂ ತನ್ನ ಬೆಲೆಬಾಳುವ ಸ್ವತ್ತನ್ನು ಮಲೇರಿಯಾದ ಉಪಟಳಕ್ಕೆ ಸಿಲುಕಿಸಲು ಇಚ್ಛಿಸುವುದಿಲ್ಲ. ಸ್ವತಂತ್ರ ಕೂಲಿಯಾಳೊಬ್ಬನ ಬಗೆಗೆ ಇಂತಹ ಕಾಳಜಿಯ ಆವಶ್ಯಕತೆಯಿಲ್ಲ; ಏಕೆಂದರೆ ಅವನು ಬೆಲೆಬಾಳುವ ಆಸ್ತಿಯಲ್ಲ. ಗುಲಾಮನಿಗೆ ಈ ರೀತಿಯ ಪರಿಗಣನೆಯು ಬಹಳ ದೊಡ್ಡ ಅನುಕೂಲವಾಗಿ ಪರಿಣಮಿಸಿತು. ಬೇರಾರಿಗೂ ಇರದಂತಹ ಆರೈಕೆಯು ಅವನಿಗೆ ಸಿಕ್ಕಿತು.

ಮೇಲೆ ತಿಳಿಸಿದ ಅಸ್ವತಂತ್ರವಾದ ಸಾಮಾಜಿಕ ವ್ಯವಸ್ಥೆಯಲ್ಲಿನ ಮೂರು ಅನುಕೂಲಗಳಲ್ಲಿ ಯಾವುದೂ ಅಸ್ಪೃಶ್ಯತೆಯಲ್ಲಿ ಇಲ್ಲ. ಅಸ್ಪೃಶ್ಯನಿಗೆ ನಾಗರಿಕತೆಯು ಉನ್ನತ ಕಲಾ ಸ್ಥಾನಗಳಿಗೆ ಪ್ರವೇಶವಿಲ್ಲ ಮತ್ತು ಒಂದು ಸಾಂಸ್ಕೃತಿಕ ಜೀವನದೊಳಕ್ಕೆ ನುಸುಳಲು ದಾರಿಯಿಲ್ಲ. ಅವನು ಝಾಡಮಾಲಿಯೇ ಆಗಬೇಕು. ಬೇರೇನೂ ಮಾಡಬಾರದು. ಜೀವನ ಸಾಗಿಸಲು ಆವಶ್ಯಕವಾದ ಸಂಪಾದನೆಗೆ ಅಸ್ಪೃಶ್ಯತೆಯು ಭರವಸೆಯನ್ನೇನೂ ನೀಡುವುದಿಲ್ಲ. ಹಿಂದೂಗಳಲ್ಲಿ ಯಾರೂ ಅಸ್ಪೃಶ್ಯನ ಊಟ, ವಸತಿ ಮತ್ತು ಬಟ್ಟೆಗಳಿಗೆ ಜವಾಬ್ದಾರಿ ಹೊರಬೇಕಾಗಿಲ್ಲ. ಅವನ ಆರೋಗ್ಯವು ಯಾರ ಕಾಳಜಿಯೂ ಆಗಿರಬೇಕಾಗಿಲ್ಲ. ಹಾಗೆ ನೋಡಿದರೆ, ಅಸ್ಪೃಶ್ಯನೊಬ್ಬನ ಮರಣವು ಪೀಡೆ ಕಳೆದಂತೆ ಎಂಬ ಭಾವನೆ ಇದೆ. ಹಿಂದೂ ಗಾದೆಯೊಂದು ಹೀಗಿದೆ : "ಮಾದಿಗ ಸತ್ತ, ಮೈಲಿಗೆಯ ಭಯ ಮಾಯವಾಯಿತು".

ಇನ್ನೊಂದು ದೃಷ್ಟಿಯಿಂದ ನೋಡಿದರೆ ಸ್ವತಂತ್ರ ಸಾಮಾಜಿಕ ವ್ಯವಸ್ಥೆಯೊಂದರ ಎಲ್ಲ ಪ್ರತಿಕೂಲಗಳು ಅಸ್ಪೃಶ್ಯತೆಯಲ್ಲಿವೆ. ಈ ವ್ಯವಸ್ಥೆಯಲ್ಲಿ ಜೀವಂತವಾಗಿರಲು ಹೋರಾಟಮಾಡಿ ಹೆಣಗಬೇಕಾದದ್ದು ವ್ಯಕ್ತಿಯ ಜವಾಬ್ದಾರಿಯಾಗಿರುತ್ತದೆ. ಸ್ವತಂತ್ರ ಸಾಮಾಜಿಕ ವ್ಯವಸ್ಥೆಯ ಪ್ರತಿಕೂಲಗಳಲ್ಲಿ ಈ ಜವಾಬ್ದಾರಿಯು ಅತ್ಯಂತ ಕಠಿಣವಾದದ್ದು. ಒಬ್ಬ ವ್ಯಕ್ತಿಯು ಈ ಜವಾಬ್ದಾರಿಯನ್ನು ನಿರ್ವಹಿಸುತ್ತಾನೆಯೇ ಎಂಬುದು ನ್ಯಾಯಯುತವಾದ ಪ್ರಾರಂಭ, ಸಮಾನಾವಕಾಶ ಮತ್ತು ಯೋಗ್ಯವಾದ ವ್ಯವಹಾರ ಈ ಮೂರರನ್ನವಲಂಬಿಸಿದೆ. ಅಸ್ಪೃಶ್ಯನು ಸ್ವತಂತ್ರನಾದ ವ್ಯಕ್ತಿಯೇನೋ ಹೌದು; ಆದರೆ ಅವನಿಗೆ ನ್ಯಾಯವಾದ ಪ್ರಾರಂಭವಾಗಲಿ, ಸಮಾನಾವಕಾಶವಾಗಲಿ, ಯೋಗ್ಯವಾದ ವ್ಯವಹಾರವಾಗಲಿ ಯಾವುದೂ ಇಲ್ಲ. ಈ ದೃಷ್ಟಿಯಿಂದ ಅಸ್ಪೃಶ್ಯತೆಯು ಗುಲಾಮಗಿರಿಗಿಂತಲೂ ಹೀನವಾದದ್ದು ಮಾತ್ರವಲ್ಲ, ಅದರೊಂದಿಗೆ ಹೋಲಿಸಿದರೆ ಇದು ನಿಜಕ್ಕೂ ಕ್ರೂರವಾದದ್ದು ಕೂಡ. ಗುಲಾಮಗಿರಿಯಲ್ಲಿ, ಗುಲಾಮನಿಗೆ ಕೆಲಸ ದೊರಕಿಸಿಕೊಡುವ ಜವಾಬ್ದಾರಿ ದಣಿಗೆ ಇದೆ. ಸ್ವತಂತ್ರ ದುಡಿಮೆಯ ಪದ್ಧತಿಯಲ್ಲಿ ದುಡಿಮೆ ದೊರಕಿಸಿಕೊಳ್ಳಲು ಕೆಲಸಗಾರರು ಪರಸ್ಪರರಲ್ಲಿ ಸ್ಪರ್ಧಿಸಬೇಕಾಗುತ್ತದೆ. ದುಡಿಮೆಗಾಗಿ ನಡೆಯುವ ಈ ಕಚ್ಚಾಟದಲ್ಲಿ ಅಸ್ಪೃಶ್ಯನಿಗೆ ಯೋಗ್ಯವಾದ ವ್ಯವಹಾರ ಎಷ್ಟರಮಟ್ಟಿಗೆ ಲಭ್ಯ ? ಸ್ವಲ್ಪದರಲ್ಲಿ ಹೇಳುವುದಾದರೆ, ಅಸ್ಪೃಶ್ಯನಿಗೆ ಒಂದು ಸಾಮಾಜಿಕ ಕಪ್ಪುಕಲೆ ಅಂಟಿಕೊಂಡೇ ಇದೆ; ಅದರಿಂದಾಗಿ ಈ ಸ್ಪರ್ಧೆಯಲ್ಲಿ ಯಾವಾಗಲೂ ತನ್ನ ವಿರುದ್ಧವಾಗಿಯೇ ತಕ್ಕಡಿ ತೂಗುವಂತಿರುತ್ತದೆ. ಹೀಗಾಗಿ ಕೆಲಸಕ್ಕೆ ನೇಮಕಗೊಳ್ಳುವುದರಲ್ಲಿ ಅವನು ಕಡೆಯವನು ಮತ್ತು ಕೆಲಸದಿಂದ ಹೊರದೂಡಲ್ಪಡುವವರಲ್ಲಿ ಮೊದಲಿಗ. ಈ ಕಾರಣದಿಂದಲೂ ಅಸ್ಪೃಶ್ಯತೆಯು ಗುಲಾಮಗಿರಿಗಿಂತಲೂ ಹೆಚ್ಚು ಕ್ರೂರವಾದದ್ದು; ಅವನ ಜೀವನಾಧಾರವನ್ನು ಅವನೇ ಕಂಡುಕೊಳ್ಳಬೇಕು; ಆದರೆ ಜೀವನೋಪಾಯಕ್ಕೆ ಇರುವ ಮಾರ್ಗಗಳನ್ನು ಅವನಿಗೆ ಪೂರ್ತಿಯಾಗಿ ತೆರೆಯುವುದಿಲ್ಲ.

ಚರ್ಚೆಯನ್ನು ಹೀಗೆ ಮುಗಿಸಬಹುದು : ಗುಲಾಮಗಿರಿಗಿಂತ ಭಿನ್ನವಾದ ರೀತಿಯಲ್ಲಿ ಅಸ್ಪೃಶ್ಯರನ್ನು ಹಿಂದೂಗಳು ಆಸ್ತಿಯನ್ನಾಗಿ ಹೊಂದಿದ್ದಾರೆ. ಅವರ ಹಿತವನ್ನು ವೃದ್ಧಿಗೊಳಿಸುವಂತಿರುವಾಗ ಅಸ್ಪೃಶ್ಯರು ಹಿಂದೂಗಳ ಸ್ವತ್ತು; ಆದರೆ ಮಾಲೀಕತ್ವದಿಂದ ಬೇರೇನಾದರೂ ಭಾರವನ್ನು ಹೊರಬೇಕಾಗಿಬರುವಂತಿದ್ದಾಗ ಅಸ್ಪೃಶ್ಯರ ಮೇಲಿನ ಮಾಲೀಕತ್ವವನ್ನು ಅವರು ಕೊಡವಿಕೊಂಡುಬಿಡುತ್ತಾರೆ. ಅಸ್ವತಂತ್ರವಾದ ಸಾಮಾಜಿಕ ವ್ಯವಸ್ಥೆಯ ಯಾವ ಅನುಕೂಲಗಳನ್ನೂ ಅಸ್ಪೃಶ್ಯರು ಕೇಳಿ ಪಡೆಯುವಂತಿಲ್ಲ; ಆದರೆ ಒಂದು ಸ್ವತಂತ್ರ ಸಾಮಾಜಿಕ ವ್ಯವಸ್ಥೆಯ ಎಲ್ಲ ಪ್ರತಿಕೂಲಗಳನ್ನು ಅವರು ಸಹಿಸಿಕೊಳ್ಳಬೇಕು.

* * * *

## ಅಧ್ಯಾಯ ೪

# ಭಾರತದ ಕೊಳಗೇರಿ – ಅಸ್ಪೃಶ್ಯತೆಯ ಕೇಂದ್ರ ಸಮುದಾಯದಿಂದ ಹೊರಗೆ

ಹಿಂದೂ ಸಾಮಾಜಿಕ ವ್ಯವಸ್ಥೆಯಡಿಯಲ್ಲಿ ಅಸ್ಪೃಶ್ಯರ ಸ್ಥಾನ ಏನು? ಅವರ ಸ್ಥಿತಿಯ ನೈಜಚಿತ್ರಣ ನೀಡುವುದು ಈ ಅಧ್ಯಾಯದ ಮುಖ್ಯ ಉದ್ದೇಶ. ಹಿಂದೂ ಸಮಾಜ ವ್ಯವಸ್ಥೆಯಲ್ಲಿ ಅಸ್ಪೃಶ್ಯರು ಹೇಗೆ ಜೀವಿಸುತ್ತಾರೆ ಅಥವಾ ಹೇಗೆ ಜೀವಿಸುವಂತೆ ಮಾಡಲಾಗಿದೆ ಎಂಬುದರ ಕಲ್ಪನೆ ಇಲ್ಲದವರಿಗೆ ಅವರ ನಿಜವಾದ ಹಾಗೂ ಮೂರ್ತವಾದ ಒಂದು ಚಿತ್ರವನ್ನು ಅತ್ಯಂತ ಪರಿಣಾಮಕಾರಿಯಾಗಿ ಹೇಗೆ ನೀಡಬಹುದೆಂಬುದನ್ನು ಅರಿತುಕೊಳ್ಳುವುದು ಸಹ ಸುಲಭವಲ್ಲ. ಅದಕ್ಕಿರುವ ಒಂದು ಮಾರ್ಗವೆಂದರೆ ಹಿಂದೂ ಸಮಾಜ ವ್ಯವಸ್ಥೆಯ ಒಂದು ಮಾದರಿಯನ್ನು ಚಿತ್ರಿಸಿ ಅದರಲ್ಲಿ ಅಸ್ಪೃಶ್ಯರಿಗೆ ನೀಡಲಾಗಿರುವ ಸ್ಥಾನವನ್ನು ನಿರ್ದೇಶಿಸುವುದು. ಅದನ್ನು ಆಗುಮಾಡಲು ಒಂದು ಹಿಂದೂ ಹಳ್ಳಿಗೆ ಮೊರೆ ಹೋಗುವುದು ಆವಶ್ಯಕ. ನಮ್ಮ ಉದ್ದೇಶದ ಪೂರೈಕೆಗೆ ಇದಕ್ಕಿಂತಲೂ ಉತ್ತಮವಾದ ದಾರಿಯಿಲ್ಲ. ಹಿಂದೂ ಹಳ್ಳಿಯೊಂದು ಹಿಂದೂ ಸಮಾಜ ವ್ಯವಸ್ಥೆಯ ಕ್ರಿಯಾಯುಕ್ತವಾದ ಒಂದು ಕಾರ್ಖಾನೆ ಇದ್ದಂತೆ. ಹಿಂದೂ ಸಮಾಜ ವ್ಯವಸ್ಥೆಯು ಸಂಪೂರ್ಣವಾಗಿ ಕಾರ್ಯಪ್ರವೃತ್ತವಾಗಿರುವುದನ್ನು ನಾವಲ್ಲಿ ಕಾಣಬಹುದು. ಸಾಮಾನ್ಯ ಹಿಂದೂವೊಬ್ಬ ಭಾರತೀಯ ಹಳ್ಳಿಯನ್ನು ಕುರಿತು ಮಾತನಾಡುವಾಗ ಯಾವಾಗಲೂ ಭಾವಾವೇಶಪರನಾಗಿರುತ್ತಾನೆ. ಸಾಮಾಜಿಕ ಸಂಘಟನೆಯ ಆದರ್ಶ ಸ್ವರೂಪ ಅದೆಂದು ಅವನು ಬಗೆಯುತ್ತಾನೆ. ಅದಕ್ಕೆ ಸಮಾನವಾದದ್ದು ಪ್ರಪಂಚದಲ್ಲಿ ಬೇರೆಲ್ಲೂ ಇಲ್ಲವೆಂದು ಅವನ ನಂಬಿಕೆ. ಭಾರತವು ಹೆಮ್ಮೆಪಟ್ಟುಕೊಳ್ಳಬಹುದಾದ ರೀತಿಯಲ್ಲಿ ಈ ರಚನೆಯು ಸಾಮಾಜಿಕ ಸಂಘಟನೆಯ ಸಿದ್ಧಾಂತಕ್ಕೆ ಭಾರತದ ವಿಶಿಷ್ಟ ಕೊಡುಗೆಯೆಂದು ಆಗಾಗ್ಗೆ ಹೇಳಿಕೊಳ್ಳಲಾಗುತ್ತದೆ.

ಭಾರತದ ಹಳ್ಳಿಯ ಸಾಮಾಜಿಕ ಸಂಘಟನೆಯ ಆದರ್ಶ ಸ್ವರೂಪದ್ದೆಂದು ನಂಬುವುದರಲ್ಲಿ ಹಿಂದೂಗಳು ಉನ್ಮತ್ತಾಭಿಮಾನಿಗಳು. ಭಾರತೀಯ ಸಂವಿಧಾನ ರಚನೆಯ ಸಭೆಯಲ್ಲಿ ಹಿಂದೂ ಸದಸ್ಯರು ಕೋಪಾವಿಷ್ಟರಾಗಿ ಭಾಷಣ ಮಾಡುವುದರಲ್ಲಿ ನಾವಿದನ್ನು ನೋಡಬಹುದು. ಭಾರತದ ಹಳ್ಳಿಯನ್ನು ಭಾರತೀಯ ಸಂವಿಧಾನದ ತಳಹದಿಯನ್ನಾಗಿ ಪರಿಗಣಿಸಬೇಕೆಂಬುದು ಅವರ ಅಭಿಮತ. ಸ್ವಯಂ ಅಧಿಕಾರವುಳ್ಳ ಆಡಳಿತಾತ್ಮಕ ಭಾಗಗಳನ್ನು ಹೊಂದಿದ ಸಂವಿಧಾನಾತ್ಮಕ ಪಿರಮಿಡ್ಡಿನಲ್ಲಿ ಹಳ್ಳಿಗಳು ತಳಹದಿ. ಅವಕ್ಕೆ ತಮ್ಮವೇ ಆದ ಶಾಸನಸಭೆ, ಕಾರ್ಯನಿರ್ವಾಹಕ ಮಂಡಲಿ ಮತ್ತು ನ್ಯಾಯಾಂಗ ಇರುತ್ತದೆಂದು ಅವರ ಅಭಿಪ್ರಾಯ. ಅಸ್ಪೃಶ್ಯರ ದೃಷ್ಟಿಯಿಂದ ಇದಕ್ಕಿಂತಲೂ ದೊಡ್ಡ ಹಾನಿ ಇರಲು ಸಾಧ್ಯವಿಲ್ಲ. ಸಂವಿಧಾನ ಸಭೆಯು ಅದನ್ನು ಅಂಗೀಕರಿಸಲಿಲ್ಲವೆಂಬುದು ನೆಮ್ಮದಿಯ ಸಂಗತಿ. ಆದಾಗ್ಯೂ ಭಾರತದ ಹಳ್ಳಿಯು ಸಾಮಾಜಿಕ ಸಂಘಟನೆಯ ಆದರ್ಶ ಸ್ವರೂಪದ್ದೆಂಬ ನಂಬಿಕೆಯಲ್ಲಿ ಹಿಂದೂಗಳು ಬೀಗುತ್ತಾರೆ. ಹಿಂದೂಗಳ ಈ ನಂಬಿಕೆಯು ಪೂರ್ವಿಕರ ನಂಬಿಕೆಯಲ್ಲ, ಪ್ರಾಚೀನ ಕಾಲದಿಂದ ಬಂದದ್ದೂ ಅಲ್ಲ. ಈಸ್ಟ್ ಇಂಡಿಯಾ ಕಂಪನಿಯ ಅಧಿಕಾರಿಯಾಗಿದ್ದ ಸರ್ ಚಾರ್ಲ್ಸ್

ಮೆಟ್‌ಕಾಫ್‌ನಿಂದ ಎರವಲು ತೆಗೆದುಕೊಂಡಿದ್ದು ಇದು. ಕಂದಾಯದ ವಿಭಾಗದಲ್ಲಿ ಅಧಿಕಾರಿಯಾಗಿದ್ದ ಮೆಟ್‌ಕಾಫ್ ತನ್ನ ರೆವಿನ್ಯೂ ದಾಖಲೆಯೊಂದರಲ್ಲಿ ಭಾರತೀಯ ಹಳ್ಳಿಯನ್ನು ಕೆಳಕಂಡಂತೆ ವಿವರಿಸಿದ್ದಾನೆ:[೧]

"ಗ್ರಾಮ ಸಮುದಾಯಗಳು ಚಿಕ್ಕ ಗಣರಾಜ್ಯಗಳಿದ್ದಂತೆ; ತಮಗೆ ಬೇಕಾದದ್ದನ್ನೆಲ್ಲ ಬಹುಮಟ್ಟಿಗೆ ತಮ್ಮಲ್ಲೇ ಹೊಂದಿವೆ ಮತ್ತು ಹೊರಗಣ ಸಂಬಂಧಗಳಿಂದ ಹೆಚ್ಚೂಕಮ್ಮಿ ಸ್ವತಂತ್ರವಾಗಿವೆ. ಬೇರಾವುದೂ ನಿರಂತರವಾಗಿ ಸಾಗದಂತಿರುವಾಗ ಅವು ನಿರಂತರವಾಗಿ ಸಾಗುವಂತೆ ತೋರುತ್ತವೆ. ಸಾಮ್ರಾಜ್ಯದ ಮೇಲೆ ಸಾಮ್ರಾಜ್ಯ ಉರುಳಿಬೀಳುತ್ತವೆ, ಕ್ರಾಂತಿಯ ಮೇಲೆ ಕ್ರಾಂತಿ ಸಿಡಿಯುತ್ತವೆ : ಹಿಂದೂ, ಪಠಾಣ್, ಮೊಗಲ್, ಮರಾಠಾ, ಸಿಖ್, ಇಂಗ್ಲಿಷ್ – ಹೀಗೆ ಒಬ್ಬರಾದ ಮೇಲೊಬ್ಬರು ಆಳುವವರು; ಆದರೆ ಗ್ರಾಮ ಸಮುದಾಯಗಳು ತದೇಕ ಪ್ರಕಾರವಾಗಿಯೇ ಉಳಿದಿವೆ. ಕಷ್ಟಕಾಲಗಳಲ್ಲಿ ಅವು ಶಸ್ತ್ರಸಜ್ಜಿತವಾಗುತ್ತವೆ, ಕೋಟೆಕೊತ್ತಲಗಳನ್ನು ನಿರ್ಮಿಸಿಕೊಳ್ಳುತ್ತವೆ, ದೇಶದಲ್ಲಿ ಒಂದು ಹಗೆಯ ಸೈನ್ಯ ಹಾದುಹೋಗುತ್ತದೆ. ಗ್ರಾಮ ಸಮುದಾಯಗಳು ತಮ್ಮ ಪಶುಗಳನ್ನು ಊರ ಕೊತ್ತಲದೊಳಗೆ ಹಿಡಿದಿಡುತ್ತವೆ ಮತ್ತು ಸೈನ್ಯವು ಯಾವ ಚಿತಾವಣೆಯೂ ಇಲ್ಲದೆ ಮುಂದೆ ಸಾಗುತ್ತದೆ, ಲೂಟಿ ಮತ್ತು ದಾಂದಲೆಗಳನ್ನೇನಾದರೂ ತಮ್ಮ ಮೇಲೆ ತಿರುಗಿಸಿದರೆ ಮತ್ತು ಅದಕ್ಕಾಗಿ ಎದುರಿಸಲಾಗದಂತಹ ಅಗಾಧ ಸೈನ್ಯವನ್ನು ಎರಗಿಸಿದರೆ, ಸ್ವಲ್ಪ ದೂರದಲ್ಲಿರುವ ಮೈತ್ರಿಯುತ ಹಳ್ಳಿಗಳಿಗೆ ಓಡಿಹೋಗುತ್ತಾರೆ. ಬಿರುಗಾಳಿಯ ಹೊಡೆತ ನಿಂತ ಮೇಲೆ ಅವರು ಸ್ವಂತದ ಹಳ್ಳಿಗಳಿಗೆ ಹಿಂದಿರುಗುತ್ತಾರೆ ಮತ್ತು ತಮ್ಮ ಕಸುಬುಗಳಲ್ಲಿ ನಿರತರಾಗುತ್ತಾರೆ. ಹಲವು ವರ್ಷಗಳ ಕಾಲವೇನಾದರೂ ದೇಶದಲ್ಲಿ ದರೋಡೆ ಮತ್ತು ವಿಧ್ವಂಸಗಳು ಮುಂದುವರಿದು ಹಳ್ಳಿಗಳಲ್ಲಿ ವಾಸಮಾಡುವುದು ಅಶಕ್ಯವಾದರೆ, ಚೆದುರಿಹೋಗಿದ್ದ ಗ್ರಾಮನಿವಾಸಿಗಳು ಶಾಂತಿಯುತವಾದ ಜೀವನ ಸಾಧ್ಯವಾಗುವಂತಾದ ಮೇಲೆ ಹೇಗಿದ್ದರೂ ಹಿಂದಿರುಗುತ್ತಾರೆ. ಹೀಗೆ ಒಂದು ತಲೆಮಾರಿನ ಜೀವನವೇ ನಷ್ಟವಾಗಬಹುದು, ಅದರೆ ಮುಂದಿನ ತಲೆಮಾರಿನವರು ಹಿಂದಿರುಗುತ್ತಾರೆ. ಮಕ್ಕಳು ತಮ್ಮ ತಂದೆಯಂದಿರ ಸ್ಥಾನವನ್ನು ಪಡೆಯುತ್ತಾರೆ: ಹಳ್ಳಿಗೆ ಅದೇ ಪ್ರದೇಶದ ಆಯ್ಕೆ, ಅವರವರ ಮನೆಗಳಿಗೆ ಅವೇ ಹಿಂದಿನ ಜಾಗಗಳು; ಹಳ್ಳಿಯು ಗುಳೆ ಎದ್ದಾಗ ಯಾರು ಯಾರು ಯಾವ ಯಾವ ಭೂಮಿ–ಹೊಲಗಳನ್ನು ಕೃಷಿ ಮಾಡುತ್ತಿದ್ದರೋ ಅವೇ ಭೂಮಿ–ಹೊಲಗಳನ್ನು ಅವರವರ ಸಂತತಿಯವರು ಮತ್ತೆ ಪಡೆದುಕೊಳ್ಳುತ್ತಾರೆ ಮತ್ತು ಜುಜುಬಿ ದಾಂದಲೆಗಳಿಗೆಲ್ಲಾ ಬೆದರಿ ಹಳ್ಳಿಗರು ತಮ್ಮ ಗ್ರಾಮಗಳನ್ನು ಬಿಟ್ಟು ಓಡುವುದಿಲ್ಲ. ಎಷ್ಟೋಬಾರಿ ಕ್ಷೋಭೆ ಮತ್ತು ಗೊಂದಲಗಳು ಜರುಗಿದಾಗಲೂ ತಮ್ಮ ಜಾಗಗಳನ್ನು ಈ ಹಳ್ಳಿಗರು ಬಿಟ್ಟುಕೊಡುವುದಿಲ್ಲ; ದರೋಡೆ ಮತ್ತು ದೌರ್ಜನ್ಯಗಳನ್ನು ಯಶಸ್ವಿಯಾಗಿ ಎದುರಿಸಲು ಬೇಕಾದಷ್ಟು ಪೌರುಷವನ್ನವರು ಪಡೆದುಕೊಳ್ಳುತ್ತಾರೆ, ಪ್ರತಿಯೊಂದು ಹಳ್ಳಿಯೂ ತನ್ನ ಮಟ್ಟಿಗೆ ಒಂದು ರಾಜ್ಯವಿದ್ದಂತೆ; ಇಂತಹ ಗ್ರಾಮ ಸಮುದಾಯಗಳ ಸಂಘವು ನನ್ನ ಪ್ರಕಾರ ಭಾರತದ ಜನರ ಉಳಿಕೆಗೆ ಬೇರಾವುದೇ ಕಾರಣಕ್ಕಿಂತಲೂ ಮಿಗಿಲಾದ ಕೊಡುಗೆಯನ್ನಿತ್ತಿದೆ. ಎಲ್ಲ ಬದಲಾವಣೆಗಳನ್ನೂ ಕ್ರಾಂತಿಗಳನ್ನೂ ಸರಿದೂಗಿಸಿಕೊಂಡು ಹೋಗಲು ಇದು ಸಹಕಾರಿಯಾಗಿದೆ, ಈ ಸಮುದಾಯಗಳ ಸುಖಸಂತೋಷಗಳಿಗೆ ಬಹುಮಟ್ಟಿಗೆ ಇದು ಎಡೆಮಾಡಿಕೊಟ್ಟಿದೆ; ಅಂತೆಯೇ ಅವುಗಳ ಸ್ವಾತಂತ್ರ್ಯದ ಬಹುಭಾಗದ ಅನುಭೋಗಕ್ಕೂ ಅದೇ ಕಾರಣವಾಗಿದೆ."

ಆಡಳಿತ ನಡೆಸುತ್ತಿದ್ದ ವರ್ಗದಲ್ಲಿ ಉಚ್ಚಸ್ಥಾನದಲ್ಲಿದ್ದ ಒಬ್ಬ ಸದಸ್ಯನು ಭಾರತೀಯ ಹಳ್ಳಿಯ ಬಗ್ಗೆ ನೀಡಿದ ಈ ವಿವರಣೆಯನ್ನು ಓದಿ ಹಿಂದೂಗಳಿಗೆ ಅಭಿಮಾನ ತಳೆದು ಬಂತು ಮತ್ತು ಅವನ ನಿಲುವನ್ನು

---

೧. ಬೇಡನ್ ಪವೆಲ್ ರಚಿತ *ಲ್ಯಾಂಡ್ ಸಿಸ್ಟಮ್ ಆಫ್ ಬ್ರಿಟಿಷ್ ಇಂಡಿಯಾ*, ಸಂಪುಟ ೧–ಎಂಬಲ್ಲಿ ಉದ್ಧರಿಸಲಾಗಿದೆ.

ಸ್ವಾಗತಾರ್ಹವಾದ ಮೆಚ್ಚಿಗೆಯೆಂದು ಸ್ವೀಕರಿಸಲಾಯಿತು. ಭಾರತೀಯ ಹಳ್ಳಿಗಳ ಬಗ್ಗೆ ಈ ದೃಷ್ಟಿಯನ್ನು ಒಪ್ಪಿಕೊಳ್ಳುತ್ತಾ ಹಿಂದೂಗಳು ತಮ್ಮ ಬುದ್ಧಿಮತ್ತೆಗೆ ಅಥವಾ ತಿಳುವಳಿಕೆಗೆ ಯಾವ ರೀತಿಯಲ್ಲೂ ಆದರವನ್ನು ತೋರಿದ್ದಾರೆನ್ನಲಾಗದು. ಬೇರೆಯವರ ದಾಸ್ಯಕ್ಕೊಳಗಾಗಿರುವ ಯಾವ ಜನರಲ್ಲಿ ಸಾಮಾನ್ಯವಾಗಿ ಕಾಣುವ ದೌರ್ಬಲ್ಯವನ್ನೇ ಅವರೂ ಪ್ರದರ್ಶಿಸಿದ್ದಾರೆ. ಭಾರತೀಯ ಹಳ್ಳಿಯ ಈ ಆದರ್ಶಮಯ ಚಿತ್ರವನ್ನು ಬಹುಮಂದಿ ವಿದೇಶೀಯರು ಅಂಗೀಕರಿಸುತ್ತಾರಾದ್ದರಿಂದ ಒಂದು ಭಾರತೀಯ ಹಳ್ಳಿಯ ನೈಜಚಿತ್ರ ಹೇಗಿರುತ್ತದೆಂಬುದನ್ನು ನೋಡುವುದು ಒಳ್ಳೆಯದು.

ಭಾರತೀಯ ಹಳ್ಳಿಯು ಏಕೀಭೂತವಾದ ಒಂದು ಸಾಮಾಜಿಕ ಘಟಕವಲ್ಲ. ಅದರಲ್ಲಿ ಜಾತಿಗಳಿವೆ. ಆದರೆ ನಮ್ಮ ಪ್ರಕೃತದ ಉದ್ದೇಶಕ್ಕೆ ಕೆಳಗಿನ ಅಂಶಗಳನ್ನು ಗಮನಿಸಿದರೆ ಸಾಕು.

೧) ಹಳ್ಳಿಯಲ್ಲಿರುವ ಜನರನ್ನು ಎರಡು ಭಾಗಗಳಾಗಿ ವಿಂಗಡಿಸಲಾಗಿದೆ :
   (ಅ) ಸ್ಪೃಶ್ಯರು ಮತ್ತು (ಆ) ಅಸ್ಪೃಶ್ಯರು
೨) ಸ್ಪೃಶ್ಯರು ಬಹುಮಂದಿಯ ಸಮುದಾಯ ಮತ್ತು ಅಸ್ಪೃಶ್ಯರು ಅಲ್ಪಸಂಖ್ಯಾತ ಸಮುದಾಯ.
೩) ಸ್ಪೃಶ್ಯರು ಹಳ್ಳಿಯ ಒಳಗೆ ವಾಸಿಸುತ್ತಾರೆ ಮತ್ತು ಅಸ್ಪೃಶ್ಯರು ಬೇರೆಯೇ ಆದ ಗುಡಿಸಲುಗಳಲ್ಲಿ ಹಳ್ಳಿಯ ಹೊರಗೆ ವಾಸಿಸುತ್ತಾರೆ.
೪) ಆರ್ಥಿಕವಾಗಿ, ಸ್ಪೃಶ್ಯರು ಪ್ರಬಲವಾದ ಮತ್ತು ಆಳುವ ಸಮುದಾಯದವರು ; ಅಸ್ಪೃಶ್ಯರಾದರೋ ಬಡವರು ಮತ್ತು ಪರಾಧೀನರಾದ ಸಮುದಾಯದವರು.
೫) ಸಾಮಾಜಿಕವಾಗಿ, ಸ್ಪೃಶ್ಯರದು ಆಳುವ ಜನಾಂಗದ ಸ್ಥಾನ; ಅಸ್ಪೃಶ್ಯರದು ಅಧೀನತ್ವ ಜನಾಂಗದ ಸ್ಥಾನ, ಪರಂಪರಾಗತವಾಗಿ ಜೀತಕ್ಕಿರುವವರ ಸ್ಥಾನ.

ಭಾರತದ ಹಳ್ಳಿಯೊಂದರಲ್ಲಿ ಸ್ಪೃಶ್ಯರು ಮತ್ತು ಅಸ್ಪೃಶ್ಯರು ಸಹಬಾಳ್ವೆ ನಡೆಸುವಾಗ ಅವರ ನಡುವೆ ಇರುವ ಕರಾರು ಎಂಥದ್ದು? ಪ್ರತಿಯೊಂದು ಹಳ್ಳಿಯಲ್ಲೂ ಸ್ಪೃಶ್ಯರ ಒಂದು ಕಾನೂನು ಕಟ್ಟಳೆ ಇರುತ್ತದೆ ಮತ್ತು ಅಸ್ಪೃಶ್ಯರು ಅದನ್ನು ಅನುಸರಿಸಬೇಕು. ಈ ಕಟ್ಟಳೆಯು ಸ್ಪೃಶ್ಯರು ಯಾವುದನ್ನು ಅಪರಾಧವೆಂದು ಎಣಿಸುತ್ತಾರೋ ಅಂತಹ ಲೋಪದೋಷಗಳನ್ನು ಪಟ್ಟಿಮಾಡಿ ಇಡುತ್ತದೆ.
ಈ ಕೆಳಗಿನವು ಅಂತಹ ಅಪರಾಧಗಳ ಪಟ್ಟಿ :

೧) ಹಿಂದೂಗಳ ವಾಸಸ್ಥಾನಗಳಿಂದ ದೂರವಾಗಿ ಪ್ರತ್ಯೇಕ ಜಾಗದಲ್ಲಿ ಅಸ್ಪೃಶ್ಯರು ವಾಸಿಸಬೇಕು. ಈ ಬೇರ್ಪಡಿಸುವಿಕೆಯ ನಿಯಮವನ್ನು ಮುರಿಯುವುದಾಗಲಿ, ಅದರಿಂದ ತಪ್ಪಿಸಿಕೊಳ್ಳುವುದಾಗಲಿ ಅಸ್ಪೃಶ್ಯನಲ್ಲಿ ಒಂದು ಅಪರಾಧವೆನಿಸುತ್ತದೆ.
೨) ಅಸ್ಪೃಶ್ಯರ ವಾಸಪ್ರದೇಶವು ಹಳ್ಳಿಯ ದಕ್ಷಿಣ ದಿಕ್ಕಿನಲ್ಲಿರಬೇಕು; ಏಕೆಂದರೆ ನಾಲ್ಕು ದಿಕ್ಕುಗಳಲ್ಲಿ ದಕ್ಷಿಣವು ಅತ್ಯಂತ ಅಮಂಗಲವಾದುದು. ಈ ನಿಯಮದ ಉಲ್ಲಂಘನೆಯು ಅಪರಾಧವೆನಿಸಿಕೊಳ್ಳುತ್ತದೆ.
೩) ಹತ್ತಿರ ಬರುವುದರಿಂದ ಅಥವಾ ನೆರಳು ಬೀಳುವುದರಿಂದ ಉಂಟಾಗುವ ಮಾಲಿನ್ಯವನ್ನು ಅಸ್ಪೃಶ್ಯನು ಉಂಟುಮಾಡಬಾರದು. ಈ ನಿಯಮವನ್ನು ಉಲ್ಲಂಘಿಸುವುದು ಒಂದು ಅಪರಾಧ.
೪) ಅಸ್ಪೃಶ್ಯರ ಗುಂಪಿಗೆ ಸೇರಿದನೊಬ್ಬ ಭೂಮಿ, ದನ ಇತ್ಯಾದಿ ರೂಪದ ಸಂಪತ್ತನ್ನು ಪಡೆದುಕೊಳ್ಳುವುದು ಒಂದು ಅಪರಾಧ.
೫) ಅಸ್ಪೃಶ್ಯರ ಗುಂಪಿಗೆ ಸೇರಿದವನೊಬ್ಬ ಹೆಂಚಿನ ಹೊದಿಕೆ ಇರುವಂತಹ ಮನೆಯನ್ನು ಕಟ್ಟಿಕೊಳ್ಳುವುದು ಒಂದು ಅಪರಾಧ.

೬) ಅಸ್ಪೃಶ್ಯರ ಗುಂಪಿಗೆ ಸೇರಿದವನು ಶುಭ್ರವಾದ ವಸ್ತ್ರಗಳನ್ನು ತೊಡುವುದು, ಪಾದರಕ್ಷೆಗಳನ್ನು ಹಾಕಿಕೊಳ್ಳುವುದು, ಗಡಿಯಾರ ಅಥವಾ ಯಾವುದೇ ಚಿನ್ನದ ಆಭರಣಗಳಿಂದ ಅಲಂಕರಿಸಿಕೊಳ್ಳುವುದು ಒಂದು ಅಪರಾಧವೆನಿಸುತ್ತದೆ.

೭) ಅಸ್ಪೃಶ್ಯರ ಗುಂಪಿಗೆ ಸೇರಿದವನೊಬ್ಬ ತನ್ನ ಮಕ್ಕಳಿಗೆ ಸೊಗಸಾದ ಹೆಸರುಗಳನ್ನಿಡುವುದು ಒಂದು ಅಪರಾಧ. ಅವನಿಡುವ ಹೆಸರುಗಳು ತಿರಸ್ಕಾರ ಸೂಚಕಗಳಾಗಿರಬೇಕು.

೮) ಒಬ್ಬ ಹಿಂದೂವಿನ ಸಮ್ಮುಖದಲ್ಲಿ ಕುರ್ಚಿಯ ಮೇಲೆ ಕೂರುವುದು ಅಸ್ಪೃಶ್ಯರ ಗುಂಪಿಗೆ ಸೇರಿದವನು ಮಾಡಬಹುದಾದ ಒಂದು ಅಪರಾಧ.

೯) ಅಸ್ಪೃಶ್ಯರ ಗುಂಪಿಗೆ ಸೇರಿದವನು ಒಂದು ಹಳ್ಳಿಯಲ್ಲಿ ಕುದುರೆಯ ಮೇಲೆ ಕುಳಿತು ಹಾದುಹೋಗುವುದು ಅಥವಾ ಪಲ್ಲಕ್ಕಿಯಲ್ಲಿ ಕುಳಿತು ತೆರಳುವುದು ಒಂದು ಅಪರಾಧ.

೧೦) ಅಸ್ಪೃಶ್ಯರ ಗುಂಪಿಗೆ ಸೇರಿದವನು ಅಸ್ಪೃಶ್ಯರ ಮೆರೆವಣಿಗೆಯೊಂದನ್ನು ಹಳ್ಳಿಯ ಮುಖಾಂತರ ಕೊಂಡುಹೋಗುವುದು ಒಂದು ಅಪರಾಧ.

೧೧) ಹಿಂದೂವೊಬ್ಬನಿಗೆ ಪ್ರಣಾಮ ಮಾಡದಿರುವುದು ಅಸ್ಪೃಶ್ಯರ ಗುಂಪಿಗೆ ಸೇರಿದವನು ಅಪರಾಧವನ್ನೆಸಗಿದಂತೆ.

೧೨) ಅಸ್ಪೃಶ್ಯರ ಗುಂಪಿಗೆ ಸೇರಿದವನು ಸುಸಂಸ್ಕೃತ ಭಾಷೆಯೊಂದನ್ನು ಮಾತನಾಡುವುದು ಅಪರಾಧವೆನಿಸುತ್ತದೆ.

೧೩) ಅಸ್ಪೃಶ್ಯರ ಗುಂಪಿಗೆ ಸೇರಿದವನೊಬ್ಬ ಹಿಂದೂಗಳ ಯಾವುದಾದರೂ ಉಪವಾಸದ ಪುಣ್ಯದಿನದಂದು ಅಥವಾ ಉಪವಾಸವ್ರತವು ಮುಕ್ತಾಯವಾಗುವ ವೇಳೆಯಲ್ಲಿ ಹಳ್ಳಿಯೊಳಕ್ಕೆ ಬಂದರೆ ಮಾತನಾಡುವುದು ಒಂದು ಅಪರಾಧವಾಗುತ್ತದೆ; ಏಕೆಂದರೆ ಅವರ ಉಸಿರಿನಿಂದ ಹಿಂದೂಗಳು ಸೇವಿಸುವ ಗಾಳಿ ಮತ್ತು ಆಹಾರ ಮಲಿನಗೊಳ್ಳುತ್ತವೆ.

೧೪) ಅಸ್ಪೃಶ್ಯನೊಬ್ಬ ಸ್ಪೃಶ್ಯನಂತೆ ಬಹಿರಂಗ ಗುರುತುಗಳನ್ನು ಧರಿಸುವುದು ಮತ್ತು ಸ್ಪೃಶ್ಯನಂತೆ ಕಾಣುವುದು ಒಂದು ಅಪರಾಧ.

೧೫) ಅಸ್ಪೃಶ್ಯನು ಕೆಳದರ್ಜೆಯ ಸ್ಥಾನಕ್ಕೆ ಒಪ್ಪುವಂತೆ ನಡೆಯಬೇಕು ಮತ್ತು ಈ ಕೆಳದರ್ಜೆಯ ಸ್ಥಾನವನ್ನು ಸಾರ್ವಜನಿಕರು ತಿಳಿಯುವಂತೆ ಹಾಗೂ ಅವನನ್ನು ಹಾಗೆ ಗುರುತಿಸುವಂತೆ ಅವನು ಎಲ್ಲ ಚಿಹ್ನೆಗಳನ್ನೂ ಪ್ರಕಟಿಸಬೇಕು. ಅದಕ್ಕಾಗಿ ಅವನು (ಅ) ತಿರಸ್ಕಾರ ಸೂಚಕವಾದ ಹೆಸರನ್ನಿರಿಸಿಕೊಳ್ಳಬೇಕು, (ಆ) ಶುಭ್ರವಸ್ತ್ರಗಳನ್ನು ಧರಿಸಬಾರದು, (ಇ) ಹೆಂಚಿನ ಮಾಡು ಇರುವ ಮನೆಯನ್ನಿಟ್ಟುಕೊಳ್ಳಬಾರದು ಮತ್ತು (ಈ) ಚಿನ್ನ ಹಾಗೂ ಬೆಳ್ಳಿ ಆಭರಣಗಳನ್ನು ತೊಡಬಾರದು.

ಈ ಯಾವುದೇ ನಿಯಮದ ವಿರುದ್ಧವಾಗಿ ನಡೆದುಕೊಳ್ಳುವುದೂ ಅಪರಾಧವೆನಿಸುತ್ತದೆ.

ಇದಾದ ನಂತರ ಅಸ್ಪೃಶ್ಯರು ಸ್ಪೃಶ್ಯರಿಗಾಗಿ ಮಾಡಬೇಕಾದ ಕರ್ತವ್ಯಗಳನ್ನು ಪಟ್ಟಿಮಾಡುವ ಆಚಾರ ಸಂಹಿತೆ ಬರುತ್ತದೆ. ಇದರಡಿಯಲ್ಲಿ ಕೆಳಗಿನವುಗಳನ್ನು ನಮೂದಿಸಬಹುದು:

೧) ಅಸ್ಪೃಶ್ಯರ ಗುಂಪಿಗೆ ಸೇರಿದವನು ಹಿಂದೂವೊಬ್ಬನ ಮನೆಯಲ್ಲಿ ಜರುಗುವ ಎಲ್ಲ ರೀತಿಯ ಘಟನೆಗಳ ಬಗೆಗೂ ಸಂದೇಶವನ್ನು ಹೊತ್ತು ಆ ಹಿಂದೂವಿನ ನೆಂಟರಿಷ್ಟರಿಗೆ ಅದನ್ನು ಮುಟ್ಟಿಸಬೇಕು. ಘಟನೆ ಮರಣಕ್ಕೆ ಸಂಬಂಧಿಸಿದ್ದಿರಬಹುದು; ಮದುವೆಗೆ ಸಂಬಂಧಿಸಿದ್ದಿರಬಹುದು, ಮತ್ತು ನೆಂಟರು ವಾಸಿಸುವ ಹಳ್ಳಿಗಳು ಎಷ್ಟೇ ದೂರದಲ್ಲಿಯಾದರೂ ಇರಬಹುದು.

೨) ಹಿಂದೂವೊಬ್ಬನ ಮನೆಯಲ್ಲಿ ವಿವಾಹವು ಜರುಗುವಂತಿದ್ದರೆ ಅವನ ಮನೆಯಲ್ಲಿ ಸೌದೆ ಒಡೆಯುವುದು ಮತ್ತು ಚಿಕ್ಕ ಪುಟ್ಟ ಚಾಕರಿಗಳನ್ನು ಹೇಳಿದಂತೆ ಮಾಡುವುದು ಅಸ್ಪೃಶ್ಯನ ಕೆಲಸ.

೩) ಹಿಂದೂ ಹುಡುಗಿಯೊಬ್ಬಳು ಮದುವೆಯಾಗಿ ತೌರುಮನೆಯಿಂದ ಗಂಡನ ಮನೆಯಿರುವ ಹಳ್ಳಿಗೆ ಹೊರಡುವಾಗ ಅಸ್ಪೃಶ್ಯನು ಅವಳೊಡನೆ ಹೋಗಬೇಕು; ಆ ಹಳ್ಳಿ ಎಷ್ಟು ದೂರವಿದ್ದರೂ ಸರಿ, ಅವಳೊಡನೆ ಹೋಗಬೇಕಾದದ್ದು ಅವನ ಕರ್ತವ್ಯ.

೪) ಕಾಮನ ಹಬ್ಬ, ದಸರಾ ಇತ್ಯಾದಿ ಸಾಮೂಹಿಕ ಉತ್ಸವಗಳನ್ನು ಆಚರಿಸುವುದರಲ್ಲಿ ಇಡೀ ಗ್ರಾಮ ಸಮುದಾಯವು ನಿರತವಾಗಿದ್ದಾಗ ಅಸ್ಪೃಶ್ಯರು ಈ ಉತ್ಸವಕ್ಕೆ ಪೂರಕವಾದ ಎಲ್ಲ ಕೀಳು ಕೆಲಸಗಳನ್ನೂ ಮಾಡಬೇಕು.

೫) ಕೆಲವು ಉತ್ಸವಗಳ ಸಂದರ್ಭದಲ್ಲಿ ಅಶ್ಲೀಲವಾದ ಮೋಜಿಗೆ ಗುರಿಯಾಗಲು ತಮ್ಮ ಹೆಂಗಸರನ್ನು ಅಸ್ಪೃಶ್ಯರು ಗ್ರಾಮ ಸಮುದಾಯದ ಸದಸ್ಯರಿಗೆ ಒಪ್ಪಿಸಬೇಕು.

ಈ ಕರ್ತವ್ಯಗಳನ್ನೆಲ್ಲಾ ಯಾವುದೇ ಸಂಭಾವನೆಯನ್ನು ಪಡೆಯದೆ ನಿರ್ವಹಿಸಬೇಕು.

ಈ ಕರ್ತವ್ಯಗಳ ಮಹತ್ವವನ್ನರಿಯಲು ಅವು ಮೊದಲು ಏಕೆ ಅಸ್ತಿತ್ವಕ್ಕೆ ಬಂದವೆಂಬುದನ್ನು ತಿಳಿದುಕೊಳ್ಳಬೇಕಾದದ್ದು ಮುಖ್ಯ. ಹಳ್ಳಿಯಲ್ಲಿ ಪ್ರತಿಯೊಬ್ಬ ಹಿಂದೂವೂ ತಾನು ಅಸ್ಪೃಶ್ಯರಿಗಿಂತ ಉಚ್ಚಸ್ಥಾನದಲ್ಲಿರುವ ವ್ಯಕ್ತಿ ಎಂಬ ಭಾವನೆಯನ್ನಿರಿಸಿಕೊಂಡಿರುತ್ತಾನೆ. ಅಧಿಪತಿಯಾಗಿ ತನ್ನ ಘನತೆಯನ್ನು ಉಳಿಸಿಕೊಳ್ಳುವುದು ಸರ್ವಥಾ ಆವಶ್ಯಕವೆಂದು ಅವನ ಭಾವನೆ. ಈ ಘನತೆಯನ್ನುಳಿಸಿಕೊಳ್ಳಬೇಕಾದರೆ ತನ್ನ ಪರಿಚಾರಕರಂತಿರುವ ಒಂದು ಸೈನ್ಯಕ್ಕೆ ಅವನು ಯಾವಾಗಲೂ ಆಜ್ಞೆ ನೀಡುವಂತಿರಬೇಕು. ಇಂತಹ ಸದಾ ಸಿದ್ಧವಾದ ಪರಿವಾರವೆಂದರೆ ಅಸ್ಪೃಶ್ಯರದ್ದು; ಅದು ಯಾವಾಗಲೂ ಅವನ ಅಜ್ಞೆಗೆ ಬದ್ಧ ಮತ್ತು ಅದಕ್ಕಾಗಿ ಅವನು ತೆರಬೇಕಾದುದೇನೂ ಇಲ್ಲ. ತಮ್ಮ ಅಸಹಾಯಕತೆಯಿಂದಾಗಿ ಅಸ್ಪೃಶ್ಯರು ಈ ಕರ್ತವ್ಯಗಳನ್ನು ನಿರ್ವಹಿಸಲು ನಿರಾಕರಿಸುವಂತಿಲ್ಲ; ಮತ್ತು ಒಬ್ಬ ಹಿಂದೂ ಹಳ್ಳಿಗನು ಅವನಿಂದ ನಿರ್ಬಂಧವಾಗಿ ಇದನ್ನೆಲ್ಲಾ ಮಾಡಿಸಿಕೊಳ್ಳಲು ಹೇಸುವುದಿಲ್ಲ. ಏಕೆಂದರೆ, ಅವನ ಘನತೆಯನ್ನುಳಿಸಿಕೊಳ್ಳಲು ಇದು ಅಷ್ಟೊಂದು ಆವಶ್ಯಕವಲ್ಲವೆ!

ಬ್ರಿಟಿಷ್ ಸರ್ಕಾರವು ಶಾಸನಗೊಳಿಸಿರುವ ಅಪರಾಧಿಕ ಕಾನೂನು ಸಂಹಿತೆಯಲ್ಲಿ ಈ ಅಪರಾಧಗಳೆಲ್ಲಾ ಸೇರಿಲ್ಲ. ಆದಾಗ್ಯೂ, ಅಸ್ಪೃಶ್ಯರಿಗೆ ಸಂಬಂಧಿಸಿದಂತೆ, ಅವೆಲ್ಲಾ ನಿಜಕ್ಕೂ ಇರುವಂಥವೇ. ಅವುಗಳಲ್ಲಿ ಯಾವುದನ್ನು ಉಲ್ಲಂಘಿಸಿದರೂ ಅಸ್ಪೃಶ್ಯನಿಗೆ ಖಂಡಿತಕ್ಕೂ ಶಿಕ್ಷೆ ಕಾದಿರಿಸಿದ್ದೇ. ಶಿಕ್ಷೆಯನ್ನು ಹೇಗೆ ಜಾರಿಗೊಳಿಸಲಾಗುತ್ತದೆಂಬುದು ೫ ಮತ್ತು ೬ನೇ ಅಧ್ಯಾಯಗಳಲ್ಲಿ ಸ್ಪಷ್ಟವಾಗುತ್ತದೆ.

ಇಲ್ಲಿ ಇನ್ನೊಂದಂಶವನ್ನೂ ಪ್ರಮುಖವಾಗಿ ಗಮನಿಸಬೇಕು : ಈ ಅಪರಾಧಗಳಿಗೆ ಶಿಕ್ಷೆಯು ಯಾವಾಗಲೂ ಸಾಮೂಹಿಕವಾದದ್ದು. ಕೇವಲ ಒಬ್ಬ ವ್ಯಕ್ತಿಯು ಅಪರಾಧವನ್ನೆಸಗಿದ್ದರೂ ಅಸ್ಪೃಶ್ಯರ ಇಡೀ ಗುಂಪು ಶಿಕ್ಷೆಗೆ ಬದ್ಧವಾಗಿರುತ್ತದೆ.

ಅಸ್ಪೃಶ್ಯರು ಜೀವನ ಹೇಗೆ ಸಾಗಿಸುತ್ತಾರೆ? ಅವರ ಜೀವನೋಪಾಯವೇನು? ಜೀವನೋಪಾಯಕ್ಕೆ ಅಸ್ಪೃಶ್ಯರಿಗೆ ಇರುವ ದಾರಿ ಏನೆಂಬುದನ್ನು ತಿಳಿದುಕೊಳ್ಳದೆ ಹಿಂದೂ ಸಮಾಜದಲ್ಲಿ ಅವರ ಸ್ಥಾನವೇನೆಂಬುದನ್ನು ಸ್ಫುಟವಾಗಿ ಗ್ರಹಿಸಲು ಸಾಧ್ಯವಾಗುವುದಿಲ್ಲ.

ಕೃಷಿಪ್ರಧಾನ ದೇಶವೊಂದರಲ್ಲಿ ಜೀವನಕ್ಕೆ ಕೃಷಿಯು ಮುಖ್ಯವಾದ ಆಧಾರವಾಗಿರಲು ಸಾಧ್ಯ. ಆದರೆ ಜೀವನೋಪಾಯವನ್ನು ಕಂಡುಕೊಳ್ಳಲು ಅಸ್ಪೃಶ್ಯರಿಗೆ ಈ ದಾರಿಯು ಸಾಮಾನ್ಯವಾಗಿ ತೆರೆದಿಲ್ಲ. ಇದಕ್ಕೆ ಬಹುಮುಖವಾದ ಕಾರಣಗಳಿವೆ. ಮೊದಲನೆಯದಾಗಿ, ಭೂಮಿಯನ್ನು ಖರೀದಿಸುವುದು ಅವರ ಶಕ್ತಿಯನ್ನು ಮೀರಿದ್ದು. ಎರಡನೆಯದಾಗಿ, ಭೂಮಿಯನ್ನು ಖರೀದಿಸಲು ಅಸ್ಪೃಶ್ಯನೊಬ್ಬನಲ್ಲಿ ಸಾಕಷ್ಟು

ಹಣವಿದ್ದರೂ ಅವನು ಹಾಗೆ ಮಾಡಲು ಅವಕಾಶವಿಲ್ಲ. ಭೂಮಿಯನ್ನು ಖರೀದಿಸಲು ಅಸ್ಪೃಶ್ಯನೊಬ್ಬ ಮುಂದೆ ಬರುವುದನ್ನು ಬಹುತೇಕ ಎಲ್ಲ ಕಡೆಗಳಲ್ಲೂ ಹಿಂದೂಗಳು ತೀವ್ರ ಅಸಮಾಧಾನದಿಂದ ನೋಡುತ್ತಾರೆ. ಹೀಗೆ ಮಾಡಿ ಸ್ಪೃಶ್ಯರ ವರ್ಗದೊಂದಿಗೆ ಸಮಾನನಾಗಲು ಯತ್ನಿಸುವುದು ಹಿಂದೂಗಳಿಗೆ ರುಚಿಸುವುದಿಲ್ಲ. ಅಸ್ಪೃಶ್ಯನೊಬ್ಬ ಹೀಗೆ ಧೈರ್ಯಮಾಡಿ ಮುಂದೆ ಬರುವುದನ್ನು ಕೋಪದಿಂದ ನೋಡಲಾಗುತ್ತದೆ. ಮಾತ್ರವಲ್ಲ, ಅದಕ್ಕೆ ಅವನಿಗೆ ಶಿಕ್ಷೆಯೂ ಕಾದಿರಬಹುದು. ಕೆಲವು ಭಾಗಗಳಲ್ಲಿ ಕಾನೂನಿನ ಪ್ರಕಾರವೇ ಅವರು ಭೂಮಿಯನ್ನು ಖರೀದಿಸುವುದನ್ನು ನಿಷೇಧಿಸಲಾಗಿದೆ. ಉದಾಹರಣೆಗೆ ಪಂಜಾಬ್ ರಾಜ್ಯದಲ್ಲಿ ಭೂಸ್ವಾಧೀನತಾ ಶಾಸನ ಎಂಬ ಒಂದು ಕಾನೂನಿದೆ. ಯಾವ ಯಾವ ಗುಂಪಿನವರು ಭೂಮಿಯನ್ನು ಖರೀದಿಸಬಹುದೆಂಬುದನ್ನು ಈ ಕಾನೂನು ನಿರ್ದಿಷ್ಟಗೊಳಿಸಿದೆ ಮತ್ತು ಅಸ್ಪೃಶ್ಯರನ್ನು ಆ ಪಟ್ಟಿಯಿಂದ ಹೊರಗಿಡಲಾಗಿದೆ. ಇದರ ಪರಿಣಾಮವಾಗಿ ಬಹುತೇಕ ಪ್ರಮಾಣದಲ್ಲಿ ಅಸ್ಪೃಶ್ಯರು ಭೂರಹಿತ ಕಾರ್ಮಿಕರಾಗಿಯೇ ಉಳಿಯಬೇಕಾಗಿ ಬಂದಿದೆ. ಕಾರ್ಮಿಕರಾಗಿ ಅವರು ದುಡಿತಕ್ಕೆ ಸರಿಯಾದ ಕೂಲಿಯನ್ನೂ ಕೇಳುವಂತಿಲ್ಲ. ದಣಿಗಳು ಎಷ್ಟು ಕೊಡಲು ಮನಸ್ಸು ಮಾಡುತ್ತಾರೋ ಅಷ್ಟಕ್ಕೆ ಹಿಂದೂ ರೈತರ ಕೂಲಿಯಾಳುಗಳಾಗಿ ಅಸ್ಪೃಶ್ಯರು ದುಡಿಯಬೇಕಾಗಿದೆ. ಹಿಂದೂ ರೈತರೆಲ್ಲಾ ಒಟ್ಟಾಗಿ ಸೇರಿ ಕೂಲಿಯನ್ನು ಕನಿಷ್ಠ ಪ್ರಮಾಣದ ಮಟ್ಟದಲ್ಲಿರಿಸಲು ಸಹ ಸಾಧ್ಯವಿದೆ ; ಏಕೆಂದರೆ, ಅದು ಅವರ ಹಿತಕ್ಕನುಗುಣವಾಗಿದೆ. ಆದರೆ ಇನ್ನೊಂದೆಡೆ ಅಸ್ಪೃಶ್ಯರಿಗೆ ಅದನ್ನು ಧಾರಣ ಮಾಡುವ ಶಕ್ತಿಯಿಲ್ಲ. ಅವರು ಕೂಲಿಯನ್ನು ಗಿಟ್ಟಿಸಬೇಕು ಇಲ್ಲವೆ ಉಪವಾಸ ಸಾಯಬೇಕು. ಹೋಗಲಿ ಎಂದರೆ, ಅವರಿಗೆ ಚೌಕಾಸಿ ಮಾಡುವ ಶಕ್ತಿಯೂ ಇಲ್ಲ. ನಿಗದಿತವಾದ ಕೂಲಿಗೆ ಅವರು ತಲೆಬಾಗಬೇಕು, ಇಲ್ಲವೆ ಹಲ್ಲೆಗೆ ಗುರಿಯಾಗಲು ಸಿದ್ಧರಿರಬೇಕು.

ಅಸ್ಪೃಶ್ಯರಿಗೆ ಕೂಲಿಯನ್ನು ಹಣದ ರೂಪದಲ್ಲಿ ಇಲ್ಲವೆ ದವಸಧಾನ್ಯದ ರೂಪದಲ್ಲಿ ನೀಡಲಾಗುತ್ತದೆ. ಉತ್ತರ ಪ್ರದೇಶದ ಕೆಲವು ಭಾಗಗಳಲ್ಲಿ ಅಸ್ಪೃಶ್ಯರಿಗೆ ಕೂಲಿಯಾಗಿ ಕೊಡಲಾಗುವ ದವಸಕ್ಕೆ "ಗೋಬರಾಹ" ಎಂಬ ಹೆಸರಿದೆ. ಹಾಗೆಂದರೆ ಪಾಯಿಖಾನೆ ದವಸ ಎಂದರ್ಥ. ಒಂದು ಪ್ರಾಣಿಯ ಸಗಣಿಯಲ್ಲಿರುವ ದವಸ ಎಂದೂ ಅದರರ್ಥ. ಮಾರ್ಚ್ ಅಥವಾ ಏಪ್ರಿಲ್ ತಿಂಗಳಲ್ಲಿ ಬೆಳೆಯು ಸಮೃದ್ಧಿಯಾಗಿ ಬೆಳೆದು, ಕೊಯ್ಲಾಗಿ, ಒಣಗಿಸಿದ್ದಾದ ಮೇಲೆ ಕಾಳು ಬಿಡಿಸಲು ಕಣದಲ್ಲಿ ಅದನ್ನು ಹರಡಲಾಗುತ್ತದೆ. ಹೊಟ್ಟು ಮತ್ತು ದವಸವನ್ನು ಬೇರ್ಪಡಿಸಲು ಹುಲ್ಲಿನ ಮೇಲೆ ಎತ್ತುಗಳನ್ನು ಓಡಾಡಿಸುತ್ತಾರೆ. ಎತ್ತುಗಳ ಗೊರಸಿನ ಒತ್ತಡದಿಂದ ದವಸವು ಹುಲ್ಲಿನಿಂದ ಕಳಚಿ ಬೀಳುತ್ತದೆ. ಹೀಗೆ ಹುಲ್ಲಿನ ಮೇಲೆ ಓಡಾಡುವಾಗ ಎತ್ತುಗಳು ಕೆಲವೊಮ್ಮೆ ಹುಲ್ಲು ಮತ್ತು ದವಸ ಎರಡನ್ನೂ ತಿಂದುಬಿಡುತ್ತವೆ. ಅಗತ್ಯವಾದದ್ದಕ್ಕಿಂತ ಹೆಚ್ಚಾಗಿ ತಿಂದುಬಿಡುತ್ತವಾದ್ದರಿಂದ ತಿಂದದ್ದನ್ನು ಎತ್ತುಗಳು ಜೀರ್ಣಿಸಿಕೊಳ್ಳಲಾರವು. ಹೊಟ್ಟೆಯಲ್ಲಿ ಶೇಖರಣೆಯಾಗಿದ್ದ ದವಸವು ಮಾರನೆಯ ದಿನ ಸಗಣಿಯಲ್ಲಿ ಹೊರಬರುತ್ತದೆ. ಸಗಣಿಯನ್ನು ಶೋಧಿಸಿ ದವಸವನ್ನು ಬೇರ್ಪಡಿಸಲಾಗುತ್ತದೆ. ಈ ದವಸವನ್ನು ಅಸ್ಪೃಶ್ಯ ಕೂಲಿಯಾಳುಗಳಿಗೆ ಅಂದಿನ ಕೂಲಿ ಎಂದು ಕೊಡಲಾಗುತ್ತದೆ. ಅವರು ಅದನ್ನು ಹಿಟ್ಟು ಮಾಡಿ, ಅದರಿಂದ ರೊಟ್ಟಿ ಮಾಡಿಕೊಳ್ಳುತ್ತಾರೆ.

ಬೇಸಾಯದ ಕಾಲ ಮುಗಿದಾದ ಮೇಲೆ ಅಸ್ಪೃಶ್ಯರಿಗೆ ಉದ್ಯೋಗ ಇರುವುದಿಲ್ಲ. ಆದ್ದರಿಂದ ಅವರಿಗೆ ಜೀವನೋಪಾಯಕ್ಕೆ ದಾರಿಯಿಲ್ಲದಂತಾಗುತ್ತದೆ. ಅಂತಹ ಸಮಯಗಳಲ್ಲಿ ಅವರು ಹುಲ್ಲು ಕುಯ್ಯುವುದು, ಕಾಡಿನಿಂದ ಕಟ್ಟಿಗೆ ಒಡೆದು ತರುವುದು ಮತ್ತು ಅವನ್ನು ಹತ್ತಿರದ ಪಟ್ಟಣದಲ್ಲಿ ಮಾರುವುದು – ಹೀಗೆ ಜೀವನ ನಡೆಸುತ್ತಾರೆ. ಕಾಡಿಗೆ ಪ್ರವೇಶ ತೆರೆದಿದ್ದರೂ ಅಲ್ಲಿ ಅರಣ್ಯ ರಕ್ಷಕನ ಮರ್ಜಿ ತಪ್ಪಿದ್ದಲ್ಲ. ಅವನಿಗೆ ಕೈಬಿಸಿ ಮಾಡಿದ್ದಲ್ಲದೆ ಕಾಡಿನ ಹುಲ್ಲು ಮತ್ತು ಕಟ್ಟಿಗೆಯನ್ನು ಮುಟ್ಟಲು ಬಿಡುವುದಿಲ್ಲ. ಅಷ್ಟಾಗಿ ಅದು

ಸರ್ಕಾರಿ ಕಾಡುಪ್ರದೇಶ. ಅಲ್ಲಿಂದ ಪಟ್ಟಣಕ್ಕೆ ತಂದಿದ್ದನ್ನು ಮಾರಬೇಕಾದರೆ ಅಲ್ಲಿ ಕೊಳ್ಳುವವನದೆ ಮೇಲುಗೈ. ಕೊಳ್ಳುವವರಲ್ಲಿ ಹಿಂದೂಗಳೇ ಅತಿ ಹೆಚ್ಚಿನ ಸಂಖ್ಯೆಯವರು. ಕೂಲಿಯನ್ನು ಹೊಡೆದು ಕೆಳಗಿಳಿಸಲು ಅವರದ್ದೇ ಒಂದು ಷಡ್ಯಂತ್ರವಿರುತ್ತದೆ. ಅಲ್ಲಿಯೂ ಅಸ್ಪೃಶ್ಯರು ಮಾರದೆ ಇರಲು ಅಶಕ್ತರಾಗಿ ಕೇಳಿದ ಬೆಲೆಗೆ ಅವರು ತಂದ ವಸ್ತುಗಳನ್ನು ಮಾರಿಕೊಳ್ಳಬೇಕಾಗುತ್ತದೆ. ಎಷ್ಟೋ ಸಾರಿ ಅವರು ಪಟ್ಟಣಕ್ಕೆ ಹೋಗಲು ಹತ್ತು ಮೈಲಿ ನಡೆಯಬೇಕಾಗಬಹುದು ಮತ್ತೆ ಹಿಂದಿರುಗಲು ಹತ್ತು ಮೈಲಿ. ಅವರ ಕಿಂಚಿತ್ ವಸ್ತುಗಳನ್ನು ಮಾರಲು ಅವರ ಪಾಡು ಇದು.

ಜೀವನವನ್ನು ಹೊರೆಯಲು ಸ್ವತಃ ತಾವೇ ತಮ್ಮನ್ನು ಯಾವುದಾದರೂ ಕಸುಬಿನಲ್ಲಿ ತೊಡಗಿಸಿಕೊಂಡಿರುವುದು ಇಲ್ಲವೇ ಇಲ್ಲ. ಅದಕ್ಕೆ ಬೇಕಾದ ಬಂಡವಾಳ ಅವರಲ್ಲಿಲ್ಲ; ಹಾಗೇನಾದರೂ ಇದ್ದಿದ್ದರೂ ಅವರಿಂದ ವಸ್ತುಗಳನ್ನು ಕೊಳ್ಳುವವರು ಯಾರೂ ಇರುವುದಿಲ್ಲ.

ವರಮಾನದ ಈ ಎಲ್ಲ ಮೂಲಗಳೂ ಸಹಜವಾಗಿಯೇ ಅನಿಶ್ಚಿತವಾದುವು ಮತ್ತು ಕ್ಷಣಿಕವಾದುವು. ಅವುಗಳಲ್ಲಿ ನೆಮ್ಮದಿ ಇಲ್ಲ. ನನಗೆ ತಿಳಿದ ದೇಶದ ಕೆಲವು ಭಾಗಗಳಲ್ಲಿ ಅಸ್ಪೃಶ್ಯರಿಗೆ ಒಂದೇ ಒಂದು ಸುಭದ್ರವಾದ ಜೀವನೋಪಾಯದ ಹಾದಿ ತೆರೆದಿದೆ : ಅದೇನೆಂದರೆ ಹಳ್ಳಿಯ ಹಿಂದೂ ರೈತರಲ್ಲಿ ಆಹಾರವನ್ನು ಭಿಕ್ಷೆ ಬೇಡುವ ಹಕ್ಕು. ಪ್ರತಿಯೊಂದು ಹಳ್ಳಿಯಲ್ಲೂ ಒಂದು ಆಡಳಿತ ಯಂತ್ರವಿದೆ. ಹಳ್ಳಿಯ ಆಡಳಿತದಲ್ಲಿ ಕೀಳು ಸೇವಕರಾಗಿ ನೇಮಕಗೊಳ್ಳುವುದೇ ಅಸ್ಪೃಶ್ಯರಿಗೆ ಪರಂಪರಾಗತವಾಗಿ ಬಂದಿರುವ ಭಾಗ್ಯ. ಅದಕ್ಕೆ ಭಾಗಶಃ ಸಂಭಾವನೆಯಾಗಿ ಇಡೀ ಅಸ್ಪೃಶ್ಯರ ಗುಂಪಿಗೆಂದು ಪ್ರಾಚೀನ ಕಾಲದಲ್ಲಿ ಒಂದು ಭೂಮಿಯ ತುಂಡನ್ನು ಬಿಟ್ಟುಕೊಡಲಾಗುತ್ತಿತ್ತು. ಆ ತುಂಡು ಭಾಗಶಃ ಸ್ಥಿರವಾದದ್ದು; ಎಂದೂ ಅದು ಹೆಚ್ಚಾಗುವಂತಿಲ್ಲ. ಅಸ್ಪೃಶ್ಯರು ಅದನ್ನು ಕೃಷಿ ಮಾಡದೆ ಪಾಳು ಬಿಡುವುದೇ ಲೇಸೆಂದು ಬಗೆಯುತ್ತಾರೆ ಏಕೆಂದರೆ ಅದು ಅಷ್ಟೊಂದು ತುಂಡುತುಂಡಾಗಿ ಒಡೆಯಲ್ಪಟ್ಟಿದೆ. ಇದರ ಜೊತೆಗೆ ಅವರಿಗೆ ನೀಡಲಾಗಿರುವುದೆಂದರೆ ಆಹಾರಕ್ಕಾಗಿ ಭಿಕ್ಷೆ ಬೇಡುವ ಹಕ್ಕು.

ಆಘಾತವೆನಿಸುವ ಸಂಗತಿಯೆಂದರೆ ಹೀಗೆ ಭಿಕ್ಷೆ ಬೇಡುವುದು ಅವರ ಸಾಂಪ್ರದಾಯಿಕ ಹಕ್ಕಾಗಿ ಬಿಟ್ಟಿದೆ. ಅಸ್ಪೃಶ್ಯರೇನಾದರೂ ಸರ್ಕಾರಿ ನೌಕರಿಗೆ ನೇಮಿಸಲ್ಪಟ್ಟರೆ ಅಲ್ಲಿ ಅವರ ಸಂಭಾವನೆಯನ್ನು ನಿಗದಿಗೊಳಿಸುವಾಗ ಅವರಿಗೆ ಭಿಕ್ಷೆಯಾಗಿ ದೊರೆಯುವ ಆಹಾರದ ಮೌಲ್ಯವನ್ನು ಲೆಕ್ಕಕ್ಕೆ ತೆಗೆದುಕೊಳ್ಳುವುದು ಸ್ವತಃ ಸರ್ಕಾರದ ಪರಿಪಾಠವೂ ಆಗಿಹೋಗಿದೆ.

ಭಾರತದ ೬ ಕೋಟಿ ಅಸ್ಪೃಶ್ಯರಿಗೆ ತಮ್ಮ ಜೀವನ ಹೊರೆಯಲು ಇರುವ ಮುಖ್ಯಸಾಧನವೆಂದರೆ ಸ್ಪೃಶ್ಯರಿಂದ ಭಿಕ್ಷೆ ಬೇಡುವ ಹಕ್ಕು. ಸಾಮಾನ್ಯವಾಗಿ ಊಟದ ಸಮಯದ ನಂತರ ಯಾರಾದರೂ ಹಳ್ಳಿಯಲ್ಲಿ ಅಡ್ಡಾಡಿದರೆ ಆಹಾರಕ್ಕಾಗಿ ಭಿಕ್ಷೆ ಬೇಡುತ್ತಾ ಅಲೆಯುತ್ತಿರುವ ಅಸ್ಪೃಶ್ಯರ ಸಂದಣಿಯನ್ನೇ ಕಾಣಬಹುದು. ಬೇಡಲು ಅವರದೇ ಒಂದು ತಾರಕಸ್ವರದ ಸೂತ್ರವಿದೆ.

ಜೀವನ ಹೊರೆಯಲು ಶಾಸನಬದ್ಧವಾದ ಈ ಭಿಕ್ಷೆ ಬೇಡುವಿಕೆಯನ್ನು ಅಸ್ಪೃಶ್ಯರ ಸಂಬಂಧದಲ್ಲಿ ಒಂದು ವ್ಯವಸ್ಥೆಯಾಗಿ ಮಾಡಿಬಿಟ್ಟಿದ್ದಾರೆ. ಅಸ್ಪೃಶ್ಯರ ಕುಟುಂಬಗಳನ್ನು ಹಳ್ಳಿಯಲ್ಲಿ ಸ್ಪೃಶ್ಯರ ಕುಟುಂಬಗಳಿಗೆ ಲಗತ್ತಿಸಿಬಿಟ್ಟಿದ್ದಾರೆ. ಮಧ್ಯಯುಗದ ಯುರೋಪಿನಲ್ಲಿ ದೊಡ್ಡ ರೈತಕುಳಗಳಿಗೆ ಜೀತದ ಆಳುಗಳನ್ನೂ ಹಿಡುವಳಿದಾರರನ್ನೂ ಲಗತ್ತಿಸಿದ್ದುದರ ಪ್ರತಿರೂಪ ಇದು. ಸ್ಪೃಶ್ಯ ಕುಟುಂಬಗಳಿಗೆ ಅಂಟಿಸಲ್ಪಟ್ಟಿರುವ ಅಸ್ಪೃಶ್ಯ ಕುಟುಂಬಗಳವರು ಅವರು ಹೇಳಿದಂತೆ ನಡೆದುಕೊಳ್ಳಬೇಕು. ಈ ಸಂಬಂಧವು ಎಷ್ಟು ವೈಯಕ್ತಿಕವಾಗಿ ಬಿಟ್ಟಿದೆಯೆಂದರೆ ಅಸ್ಪೃಶ್ಯನೊಬ್ಬನನ್ನು ಕುರಿತಂತೆ ಸ್ಪೃಶ್ಯನು ಮಾತನಾಡುವಾಗ ಅವನೊಬ್ಬ ಗುಲಾಮನೋ

ಎನ್ನುವಂತೆ "ನನ್ನ ಆಳು"ಎಂದು ವ್ಯವಹರಿಸುವುದು ಸಾಮಾನ್ಯವಾಗಿದೆ. ಸ್ಪೃಶ್ಯ ಕುಟುಂಬಗಳಿಂದ ಅಸ್ಪೃಶ್ಯರು ಆಹಾರವನ್ನು ಬೇಡುವ ವಿಷಯ ಸಹ ಈ ಸಂಬಂಧದಿಂದಾಗಿ ವ್ಯವಸ್ಥಿತಗೊಳಿಸಲ್ಪಟ್ಟಿದೆ.

ಹಿಂದೂಗಳು ಹೆಮ್ಮೆಯಿಂದ ಬೀಗುವ ಹಳ್ಳಿಯ ಗಣರಾಜ್ಯವೆಂದರೆ ಇದೇ. ಈ ಗಣರಾಜ್ಯದಲ್ಲಿ ಅಸ್ಪೃಶ್ಯರ ಸ್ಥಾನವೇನು? ಅವರು ಕೇವಲ ಕಡೆಯವರು ಮಾತ್ರವಲ್ಲ, ಕನಿಷ್ಠರು ಕೂಡ ಆಗಿದ್ದಾರೆ. ಕೀಳಾದವನೆಂದು ಅವನಿಗೆ ಮುಖಪಟ್ಟಿ ಕಟ್ಟಲಾಗಿದೆ ಮತ್ತು ಆ ಸ್ಥಾನಕ್ಕೆ ಅವನನ್ನು ತುಳಿದಿಡಲು ಬಹುಸಂಖ್ಯಾತರು ತಮ್ಮೆಲ್ಲ ಶಕ್ತಿ ಮತ್ತು ಯುಕ್ತಿಗಳನ್ನೂ ಬಳಸುತ್ತಾರೆ. ಈ ಕೀಳುತನವು ಕೇವಲ ವ್ಯಕ್ತಿಯೊಬ್ಬನಿಗೆ ಮೀಸಲಾದ ಸ್ಥಾನವಲ್ಲ. ಅದು ಇಡೀ ವರ್ಗದ ಪಾಡು. ವಯಸ್ಸು ಮತ್ತು ಅರ್ಹತೆಗಳೇನೇ ಇದ್ದರೂ ಎಲ್ಲ ಅಸ್ಪೃಶ್ಯರೂ ಎಲ್ಲ ಸ್ಪೃಶ್ಯರಿಗಿಂತಲೂ ಕೀಳಾದವರು. ವಯಸ್ಸಾದ ಅಸ್ಪೃಶ್ಯನಿಗಿಂತಲೂ ಒಬ್ಬ ಸ್ಪೃಶ್ಯ ಯುವಕ ಮೇಲಿನವನು ಮತ್ತು ಒಬ್ಬ ವಿದ್ಯಾವಂತ ಅಸ್ಪೃಶ್ಯನು ಅನಕ್ಷರಸ್ಥ ಸ್ಪೃಶ್ಯನಿಗಿಂತಲೂ ಕೆಳಗೆ ನಿಲ್ಲಬೇಕು.

ನೆಲೆಗೊಳಿಸಲ್ಪಟ್ಟಿರುವ ಈ ವ್ಯವಸ್ಥೆಯನ್ನು ಕಾನೂನನ್ನಾಗಿ ಮಾಡಿದವರು ಸ್ಪೃಶ್ಯರು. ಅಸ್ಪೃಶ್ಯರಿಗೂ ಅದಕ್ಕೂ ಯಾವ ಸಂಬಂಧವೂ ಇಲ್ಲ. ಅದನ್ನು ಗೌರವಿಸುವುದು ಮತ್ತು ಅದಕ್ಕೆ ವಿಧೇಯರಾಗಿರುವುದಷ್ಟೇ ಅವರ ಸಂಬಂಧ.

ಸ್ಪೃಶ್ಯರಿಗೆ ವಿರೋಧವಾಗಿ ಅಸ್ಪೃಶ್ಯರಿಗೆ ಯಾವ ಹಕ್ಕೂ ಇಲ್ಲ. ಅವರಿಗೆ ಸಮಾನ ಹಕ್ಕಿಲ್ಲ. ಅಸ್ಪೃಶ್ಯರಿಗೆ ಸಲ್ಲಬೇಕಾದದ್ದು ಸಲ್ಲುವಂತೆ ಮಾಡುವ ಯಾವ ನ್ಯಾಯವೂ ಇಲ್ಲ. ಸ್ಪೃಶ್ಯರು ನೀಡಲು ತಯಾರಿರುವುದನ್ನುಳಿದು ಅವರಿಗೆ ಸಲ್ಲುವಂಥದೇನೂ ಇಲ್ಲವೆ ಇಲ್ಲ. ಅಸ್ಪೃಶ್ಯರು ಹಕ್ಕುಗಳಿಗಾಗಿ ಒತ್ತಾಯಿಸಕೂಡದು. ಕನಿಕರ ಮತ್ತು ಅನುಗ್ರಹಗಳಿಗಾಗಿ ಅವರು ಪ್ರಾರ್ಥಿಸಬೇಕು; ಆಮೇಲೆ ಏನು ಕರುಣಿಸಲಾಗುತ್ತದೋ ಅದನ್ನು ಹೊಂದಿ ತೃಪ್ತರಾಗಬೇಕು.

ನೆಲೆಗೊಳಿಸಲ್ಪಟ್ಟಿರುವ ಈ ವ್ಯವಸ್ಥೆಯು ಸ್ಥಾನ ಮತ್ತು ಕರ್ತವ್ಯಗಳೆರಡರಲ್ಲೂ ಸಾಂಪ್ರದಾಯಿಕವಾದ ವ್ಯವಸ್ಥೆ. ಒಮ್ಮೆ ಸ್ಪೃಶ್ಯನಾದರೆ ಯಾವಾಗಲೂ ಸ್ಪೃಶ್ಯನೇ, ಒಮ್ಮೆ ಅಸ್ಪೃಶ್ಯನಾದರೆ ಯಾವಾಗಲೂ ಅಸ್ಪೃಶ್ಯನೇ. ಒಮ್ಮೆ ಬ್ರಾಹ್ಮಣನಾದರೆ ಯಾವಾಗಲೂ ಬ್ರಾಹ್ಮಣ. ಒಮ್ಮೆ ಝಾಡಮಾಲಿಯಾದರೆ ಯಾವಾಗಲೂ ಝಾಡಮಾಲಿ. ಇದರಡಿಯಲ್ಲಿ ಉಚ್ಚ ಜನ್ಮ ತಾಳಿದವರು ಉಚ್ಚರಾಗಿಯೇ ಉಳಿಯುತ್ತಾರೆ; ನೀಚರಾಗಿ ಜನ್ಮ ತಾಳಿದವರು ನೀಚರಾಗಿಯೇ ಉಳಿಯುತ್ತಾರೆ. ಬೇರೆ ರೀತಿಯಲ್ಲಿ ಹೇಳುವುದಾದರೆ, ನೆಲೆಗೊಳಿಸಲ್ಪಟ್ಟಿರುವ ವ್ಯವಸ್ಥೆಯು ಕಟ್ಟು ನಿಟ್ಟಾದ ಕರ್ಮ ಅಥವಾ ಹಣೆಬರಹದ ತತ್ತ್ವದ ಆಧಾರವನ್ನು ಹೊಂದಿದೆ; ಅದು ಸದಾಕಾಲಕ್ಕೂ ನಿಗದಿಗೊಳಿಸಲ್ಪಟ್ಟಿದ್ದು ಮತ್ತು ಅದನ್ನೆಂದೂ ಬದಲಾಯಿಸಲಾಗದು. ಈ ವ್ಯವಸ್ಥೆಯಡಿಯಲ್ಲಿ ಜೀವಿಸುವ ವ್ಯಕ್ತಿಗಳ ಅರ್ಹತೆಗಳಿಗೂ ಅವರ ಹಣೆಬರಹಕ್ಕೂ ಯಾವ ಸಂಬಂಧವೂ ಇಲ್ಲ. ಬೌದ್ಧಿಕವಾಗಿ ಮತ್ತು ನೈತಿಕವಾಗಿ ಅಸ್ಪೃಶ್ಯನೊಬ್ಬ ಎಷ್ಟೇ ಶ್ರೇಷ್ಠನಾಗಿದ್ದರೂ ಬೌದ್ಧಿಕವಾಗಿ ಮತ್ತು ನೈತಿಕವಾಗಿ ಎಷ್ಟೇ ಕನಿಷ್ಠನಾಗಿರುವಂತಹ ಸ್ಪೃಶ್ಯನಿಗಿಂತಲೂ ಅವನು ಕೀಳು ಸ್ಥಾನದವನು. ಸ್ಪೃಶ್ಯನೊಬ್ಬ ಎಷ್ಟೇ ಬಡವನಾಗಿದ್ದರೂ ಅವನು ಶ್ರೀಮಂತಿಕೆಯಿಂದ ಕೂಡಿದ ಅಸ್ಪೃಶ್ಯನೊಬ್ಬನಿಗಿಂತಲೂ ಮೇಲಿನ ಸ್ತರದವನು.

ಭಾರತೀಯ ಹಳ್ಳಿಯೊಂದರ ಅಂತರಂಗ ಜೀವನದ ಚಿತ್ರ ಇದು. ಈ ಗಣರಾಜ್ಯದಲ್ಲಿ ಪ್ರಜಾಪ್ರಭುತ್ವಕ್ಕೆ ಸ್ಥಾನವಿಲ್ಲ. ಸಮಾನತೆಗೆ ಇಲ್ಲಿ ಅವಕಾಶವಿಲ್ಲ. ಸ್ವಾತಂತ್ರ್ಯ ಮತ್ತು ಸೋದರತೆಗೆ ಇಲ್ಲಿ ಅವಕಾಶವಿಲ್ಲ. ಗಣರಾಜ್ಯದ ಕಲ್ಪನೆಯನ್ನು ಸಂಪೂರ್ಣವಾಗಿ ನಿರಾಕರಿಸುವುದು ಭಾರತದ ಹಳ್ಳಿಯ ಲಕ್ಷಣ. ಅದೇನಾದರೂ ಗಣರಾಜ್ಯವೆನಿಸಿಕೊಂಡರೆ ಅದು ಸ್ಪೃಶ್ಯರ, ಸ್ಪೃಶ್ಯರಿಂದ ಮತ್ತು ಸ್ಪೃಶ್ಯರಿಗಾಗಿ ಇರುವ ಗಣರಾಜ್ಯ. ಅಸ್ಪೃಶ್ಯರ ಮೇಲೆ ಹಿಂದೂಗಳ ಸಾಮ್ರಾಜ್ಯವೇ ಈ ಗಣರಾಜ್ಯ. ಅಸ್ಪೃಶ್ಯರನ್ನು ಶೋಷಿಸಲು ಹಿಂದೂಗಳು ರಚಿಸಿಕೊಂಡಿರುವ

ಒಂದು ವಸಾಹತುಶಾಹಿ ಕ್ರಮ ಅದು. ಅಸ್ಪೃಶ್ಯರಿಗೆ ಯಾವ ಹಕ್ಕುಗಳೂ ಇಲ್ಲ. ಅವರಿರುವುದೇ ಪರಿಚಾರಕರಾಗಿರುವುದಕ್ಕೆ, ಸೇವೆ ಮಾಡುವುದಕ್ಕೆ ಮತ್ತು ಅಧೀನರಾಗಿರುವುದಕ್ಕೆ. ಅವರಿರುವುದು ಮಾಡುವುದಕ್ಕೆ ಇಲ್ಲವೆ ಮಡಿಯುವುದಕ್ಕೆ. ಅವರಿಗೆ ಹಕ್ಕುಗಳಿಲ್ಲ; ಏಕೆಂದರೆ ಅವರು ಹಳ್ಳಿಯ ಗಣರಾಜ್ಯಕ್ಕೆ ಬಾಹಿರರಾದವರು. ತಥಾಕಥಿತ ಗಣರಾಜ್ಯದ ಹೊರಗಿರುವವರಾದ್ದರಿಂದ ಅವರು ಹಿಂದೂ ತೆಕ್ಕೆಗೆ ಹೊರಗಿನವರು. ಇದೊಂದು ವಿಷವರ್ತುಲ. ಆದರೆ ಇದು ವಾಸ್ತವಿಕ ಸತ್ಯ. ಅದನ್ನೆಷ್ಟು ಒತ್ತಿ ಹೇಳಿದರೂ ಸಾಲದು.

* * * *

## ಅಧ್ಯಾಯ ೫

# ಮಾನವ ಒಡನಾಟಕ್ಕೆ ಅಯೋಗ್ಯರು

ಹಿಂದಿನ ಅಧ್ಯಾಯದಲ್ಲಿ ವಿವರಿಸಿದಂತೆ ಅಸ್ಪೃಶ್ಯರು ಹಿಂದೂ ತೆಕ್ಕೆಯ ಹೊರಗಿನವರು. ಆದರೂ ಒಂದು ಪ್ರಶ್ನೆ ಉಳಿದೇ ಇದೆ: ಹಿಂದೂಗಳಿಂದ ಎಷ್ಟು ದೂರ ಉಳಿದಿದ್ದಾರೆ ಅವರು? ಹಿಂದೂಗಳಾಗಿ ಅಲ್ಲದಿದ್ದರೆ ಹೋಗಲಿ, ಮಾನವ ಜೀವಿಗಳಾಗಿ ಅವರಿಗೆ ಹಿಂದೂಗಳಿಂದ ದೊರೆಯುವ ಗೌರವ ಮತ್ತು ಪರಿಗಣನೆ ಎಂಥದ್ದು? ಈ ಪ್ರಶ್ನೆಗಳಿಗೆ ಉತ್ತರಿಸದೆ ಅಸ್ಪೃಶ್ಯರ ಜೀವನದ ಪೂರ್ಣ ಚಿತ್ರ ನಮಗೆ ದೊರೆಯುವುದಿಲ್ಲ. ಗಣನೆಗೆ ತೆಗೆದುಕೊಳ್ಳಲು ಅಂಜದ ಯಾರಿಗಾದರೂ ಉತ್ತರ ಇದ್ದೇ ಇದೆ. ಕಷ್ಟದ ಸಂಗತಿಯೆಂದರೆ ಅದನ್ನು ಹೇಗೆ ಪರಿಚಯ ಮಾಡಿಕೊಡಬೇಕೆಂಬುದು. ಅದಕ್ಕೆ ಎರಡು ದಾರಿಗಳಿವೆ: ಹೇಳಿಕೆಯ ರೂಪದಲ್ಲಿ ಮಂಡಿಸುವುದೊಂದು, ಘಟನೆಗಳನ್ನು ಉದಾಹರಿಸುವುದು ಇನ್ನೊಂದು. ನಾನು ಎರಡನೆಯ ದಾರಿಯನ್ನು ಅನುಸರಿಸುತ್ತೇನೆ. ಪರಿಣಾಮಕಾರಿಯಾದ ಕೆಲವೇ ಘಟನೆಗಳನ್ನು ನಾನು ಉದಾಹರಿಸುವೆ.

ಮೊದಲನೆ ಘಟನೆ ಮದರಾಸು ರಾಜ್ಯದಲ್ಲಿ ಘಟಿಸಿದ್ದು.

ಶ್ರೀ ವೆಂಕಟಸುಬ್ಬಾರೆಡ್ಡಿ ಮತ್ತಿತರರು – ಎಲ್ಲಾ ಹಿಂದೂಗಳೇ – ೧೯೦೯ರಲ್ಲಿ ಮದರಾಸಿನ ಉಚ್ಚ ನ್ಯಾಯಾಲಯದಲ್ಲಿ ಒಂದು ಅಹವಾಲನ್ನು ಸಲ್ಲಿಸಿದ್ದರು. ಭಾರತೀಯ ಅಪರಾಧಿ ಕಾನೂನಿನ ೩೩೯ ನೇ ಕಲಮಿನನ್ವಯ ಮ್ಯಾಜಿಸ್ಟ್ರೇಟರು ಅವರಿಗೆ ನೀಡಿದ್ದ ಶಿಕ್ಷೆಯ ವಿರುದ್ಧವಾಗಿತ್ತು ಈ ಅಹವಾಲು. ದೂರಿತ್ತವನ ಮತ್ತು ಆತನ ಸಂಗಡಿಗರಿಗೆ – ಅವರೂ ಎಲ್ಲ ಹಿಂದೂಗಳೇ–ಇವರು ಅಡಚಣೆಯನ್ನುಂಟು ಮಾಡಿದ್ದರೆಂಬುದು ಆಪಾದನೆ. ಈ ಘಟನೆಯ ಬಗೆಗಿನ ಎಲ್ಲ ಮಾಹಿತಿಗಳನ್ನೂ ನೀಡುವ ಮದರಾಸು ಉಚ್ಚ ನ್ಯಾಯಾಲಯದ ತೀರ್ಪು[1] ಅಸ್ಪೃಶ್ಯರ ಮತ್ತು ಹಿಂದೂಗಳ ಪರಸ್ಪರ ಸಂಬಂಧಗಳನ್ನು ಬಹಳ ಗಮನಾರ್ಹವಾದ ರೀತಿಯಲ್ಲಿ ಸ್ಪಷ್ಟಗೊಳಿಸುತ್ತದೆ. ಆದ್ದರಿಂದ ತೀರ್ಪನ್ನು ಉದ್ಧರಿಸುವುದು ಉಚಿತವಾಗಿದೆ. ಅದು ಹೀಗಿದೆ :

"ಮನವಿಗಾರರು (ವೆಂಕಟಸುಬ್ಬಾರೆಡ್ಡಿ ಮತ್ತು ಇತರರು) ಕೆಲವು ಪರಯ್ಯಾಗಳನ್ನು[2] ಕಾನೂನು ನಿಷಿದ್ಧವಾದ ಅಡಚಣೆಯನ್ನುಂಟುಮಾಡಲು ಬಳಸಿಕೊಂಡರೆಂದು ಶಿಕ್ಷೆ ವಿಧಿಸಲಾಗಿದೆ. ಫಿರ್ಯಾದಿಯು ದೇವಸ್ಥಾನದಿಂದ ರಸ್ತೆಯ ಮುಖಾಂತರ ಒಂದು ಮೆರವಣಿಗೆಯನ್ನು ಕೊಂಡೊಯ್ಯುವುದನ್ನು ತಪ್ಪಿಸುವ ಸಲುವಾಗಿ ಪರಯ್ಯಾಗಳನ್ನು ದೇವಸ್ಥಾನದ ಹತ್ತಿರದ ಸಾರ್ವಜನಿಕ ರಸ್ತೆಯಲ್ಲಿ ನಿಲ್ಲುವಂತೆ ಮಾಡಿದ್ದರೆಂದು ಆಪಾದಿಸಲಾಗಿದೆ. ಪರಯ್ಯಾಗಳ ಹತ್ತಿರ ಸುಳಿದಿದ್ದರೆ ತನಗೆ ಮೈಲಿಗೆಯಾಗಬಹುದೆಂಬ ಭಯದಿಂದಾಗಿ ಹಿಂಜರಿದ ಫಿರ್ಯಾದಿಯು ಮೆರವಣಿಗೆಯನ್ನು ನಡೆಸಲಿಲ್ಲವೆಂದು ಕಂಡುಬಂದಿದೆ. ಆಪಾದಿತರು ಹಗೆತನದಿಂದ ಪರಯ್ಯಾಗಳನ್ನು ರಸ್ತೆಯಲ್ಲಿ ಬಂದು ನಿಲ್ಲುವಂತೆ ಮಾಡಿದರೆಂದು ತಿಳಿದುಬಂದಿದೆ. ಫಿರ್ಯಾದಿಯು ತನ್ನ

---

೧. ಕ್ರಿಮಿನಲ್ ಲಾ ಜರ್ನಲ್ ೧ ೧ ರ ೨೬೫ನೇ ಪುಟದಲ್ಲಿ ಇದು ವರದಿಯಾಗಿದೆ.

೨. ಮದರಾಸಿನಲ್ಲಿ ಪರಯ್ಯಾಗಳೆಂಬುವರು ಅಸ್ಪೃಶ್ಯರು.

ಹಕ್ಕನ್ನು ಚಲಾಯಿಸಿ ಎಲ್ಲಿ ಹೋಗಬಹುದಿದ್ದಿತೋ ಅಲ್ಲಿ ಹೋಗದಂತೆ ಮಾಡುವುದು ಇದರ ಏಕೈಕ ಉದ್ದೇಶವಾಗಿದ್ದಿತೆಂದು ಇದರಿಂದ ತಿಳಿಯುತ್ತದೆ.

ಆಪಾದಿತರು ಕಾನೂನು ನಿಷಿದ್ಧವಾದ ಅಡಚಣೆಯನ್ನುಂಟುಮಾಡುವ ಅಪರಾಧವನ್ನೆಸಗಿದ್ದಾರೆಂದು ನಮಗನಿಸುವುದಿಲ್ಲ. ನಮ್ಮ ಅಭಿಪ್ರಾಯದಲ್ಲಿ ಈ ಕೃತಿಯು ೩೩೯ ನೇ ಕಲಮಿನ ವ್ಯಾಪ್ತಿಗೆ ಬರುವಂತಹ ಅಡಚಣೆಯಲ್ಲ. ಪರಯ್ಯಾಗಳು ಅಡಚಣೆಯೇ ಆಗಿರಲಿಲ್ಲ. ಫಿರ್ಯಾದಿಯು ಮೆರವಣಿಗೆಯನ್ನು ಅವರ ಪಕ್ಕದಲ್ಲೇ ಕೊಂಡೊಯ್ಯುವುದನ್ನು ಪ್ರತಿಬಂಧಿಸುವಂತಹ ಯಾವ ಪರಿಸ್ಥಿತಿಯೂ ಅಲ್ಲಿರಲಿಲ್ಲ. ಅವರು ಎಲ್ಲಿದ್ದರೋ ಅಲ್ಲಿರಲು ಅವರಿಗೆ ಹಕ್ಕಿತ್ತು. ದೈಹಿಕ ಹಾನಿಯನ್ನುಂಟುಮಾಡಬಹುದೆಂಬ ಭಯವನ್ನು ಹುಟ್ಟಿಸುವ ದೃಷ್ಟಿಯಿಂದ ಅವರು ಅಲ್ಲಿ ಉಪಸ್ಥಿತರಿದ್ದರೆಂದು ಯಾರೂ ಸೂಚಿಸಿಲ್ಲ. ಫಿರ್ಯಾದಿಗೆ ಬೇರಾವುದೇ ರೀತಿಯ ಭಯವಿತ್ತೆಂದೂ ಸೂಚಿಸಲಾಗಿಲ್ಲ. ಅವರಿದ್ದುದರಿಂದ ಮೆರವಣಿಗೆಗೆ ಮೈಲಿಗೆ ತಗಲುತ್ತದೆಂಬ ಭಯವೊಂದನ್ನು ಮಾತ್ರ ಸೂಚಿಸಲಾಗಿದೆ.

ಫಿರ್ಯಾದಿಯು ಎಲ್ಲಿ ಹೋಗಬೇಕೆಂದಿದ್ದನೋ ಅಲ್ಲಿ ಹೋಗದಿರುವುದಕ್ಕೆ ಪರಯ್ಯಾಗಳ ಇರುವಿಕೆಯು ಕಾರಣವಾಗಿರದೆ ಅವರ ಬಳಿ ಹೋಗದಿರಲು ತನ್ನ ಅನಿಚ್ಛೆಯೇ ಕಾರಣವಾಗಿತ್ತು; ಶ್ರೀ ಕುಪ್ಪುಸ್ವಾಮಿ ಅಯ್ಯರ್ ಅವರು ಹೇಳಿದಂತೆ, ದೇವಸ್ಥಾನದಿಂದ ಹೊರಹೋಗದೆ ಉಳಿಯಲು ತನ್ನ ಆಯ್ಕೆಯೇ ಕಾರಣವಾಯಿತು; ತನ್ನ ಸ್ವಾನುಮತಿಯಿಂದಲೇ ಆತ ಅಲ್ಲಿ ಉಳಿದಿದ್ದು. ಆ ಅನುಮತಿಯು ಸ್ವತಂತ್ರ ಅನುಮತಿಯಾಗಿರಲಿಲ್ಲವೆಂದು ಸೂಚಿಸುವಂತಹ ಯಾವ ನೋವಿನ ಭಯವೂ ಇರಲಿಲ್ಲವಾದ್ದರಿಂದ ಅಪರಾಧಿ ಕಾನೂನಿನ ವ್ಯಾಪ್ತಿಗೆ ಇದು ಬರುವುದಿಲ್ಲ. ಅದು ಹಾಗಿಲ್ಲದಿದ್ದರೆ, ಫಿರ್ಯಾದಿಯ ಸ್ಥಿತಿಯಲ್ಲಿರುವವರು ಯಾರಾದರೂ ತಮ್ಮನ್ನು ಕಾನೂನು ನಿಷಿದ್ಧವಾದ ಅಡಚಣೆಗೆ ಗುರಿಪಡಿಸಲಾಯಿತೆಂದು ಯಾವುದೇ ಪರಯ್ಯಾಗಳ ವಿರುದ್ಧ ಆಪಾದಿಸುವುದು ನ್ಯಾಯಸಮ್ಮತವಾಗುತ್ತದೆ. ತನ್ನ ಸ್ವಂತದ ಕೆಲಸದ ಮೇಲೆ ಒಬ್ಬ ಪರಯ್ಯಾ ಕಾನೂನುಬದ್ಧವಾಗಿ ಸಾರ್ವಜನಿಕ ರಸ್ತೆಯಲ್ಲಿದ್ದಾಗ ಬೇರಾರಾದರೂ ಅವನನ್ನು ದೂರಹೋಗಬೇಕೆಂದು ಆದೇಶಿಸಿ ಅವನು ಹಾಗೆ ಮಾಡಲು ನಿರಾಕರಿಸಿದರೆ ಮತ್ತು ತಾನು ಅಲ್ಲೇ ಉಳಿದರೆ ಫಿರ್ಯಾದಿಯು ಅವನ ಬಳಿ ಸುಳಿಯುವುದರಿಂದ ಅವನಿಗೆ ಮೈಲಿಗೆ ಉಂಟಾಗುತ್ತದೆಂದು ಹೆದರಿ ಹಿಂದೆಯೇ ಉಳಿಯಬೇಕಾಗಿ ಬಂದರೆ ಆಗ ಪರಯ್ಯಾ ನ್ಯಾಯಬಾಹಿರವಾಗಿ ನಡೆದುಕೊಂಡಿದ್ದಾನೆಂದು ಹೇಳಲಾಗದು.

ಇಂತಹ ಸಂದರ್ಭದಲ್ಲಿ ಕಾನೂನು ನಿಷಿದ್ಧವಾದ ಅಡಚಣೆಯನ್ನೊಡ್ಡಲಾಗಿಲ್ಲ ಎಂಬುದು ಸ್ಪಷ್ಟವಾಗಿಯೇ ಇದೆ ಮತ್ತು ಆಪಾದಿತರು ಅಲ್ಲಿ ಪರಯ್ಯಾಗಳನ್ನು ನಿಲ್ಲಿಸಿದ್ದರೆಂಬುದರಿಂದ ಕಾನೂನಿನಲ್ಲಿ ಯಾವ ವ್ಯತ್ಯಯವೂ ಉಂಟಾಗುವುದಿಲ್ಲ.[೧]

ಆದ್ದರಿಂದ ಆಪಾದಿತರಿಗೆ ಶಿಕ್ಷೆವಿಧಿಸಿರುವುದನ್ನು ನಾವು ರದ್ದುಮಾಡುತ್ತಿದ್ದೇವೆ ಮತ್ತು ಅವರಿಂದ ವಸೂಲಾಗಿರುವ ಜುಲ್ಮಾನೆಯನ್ನು ಮರುಪಾವತಿ ಮಾಡಬೇಕೆಂದು ಆದೇಶಿಸುತ್ತಿದ್ದೇವೆ.

ಈ ಘಟನೆಯು ಸಾಕಷ್ಟು ಬೆಳಕು ಚೆಲ್ಲುವಂಥದ್ದು. ಇದರಲ್ಲಿ ಎರಡು ಗುಂಪುಗಳು ಒಳಗೊಂಡಿದ್ದವು ಒಂದು ಗುಂಪಿನ ನಾಯಕ ವೆಂಕಟಸುಬ್ಬಾರೆಡ್ಡಿ. ಎರಡನೇ ಗುಂಪಿನವರೂ ಸವರ್ಣೀಯ ಹಿಂದೂಗಳೇ.

---

೧. ಪರಯ್ಯಾಗಳನ್ನು ನಿಲ್ಲಿಸಿದ್ದು ಅಡಚಣೆಯುಂಟುಮಾಡಲು ಸಾಕಷ್ಟು ಕಾರಣವಾಗಿದ್ದಿತೆಂದೂ ಆಪಾದಿತರು ತಪ್ಪಿತಸ್ಥರೆಂದೂ ವಿಚಾರಣೆ ನಡೆಸಿದ್ದ ಮ್ಯಾಜಿಸ್ಟ್ರೇಟ್ ತೀರ್ಪು ನೀಡಿದ್ದರು.

ಒಂದು ಮೆರವಣಿಗೆಯನ್ನು ನಡೆಸುವ ಹಕ್ಕಿನ ಬಗ್ಗೆ ಎರಡೂ ಗುಂಪುಗಳ ನಡುವೆ ತಕರಾರು ಉಂಟಾಗಿತ್ತು ತನ್ನ ವಿರೋಧಿಗಳನ್ನು ಮೆರವಣಿಗೆ ನಡೆಸದಂತೆ ತಡೆಯಬೇಕೆಂಬುದು ವೆಂಕಟಸುಬ್ಬಾರೆಡ್ಡಿಯ ಆಶಯವಾಗಿತ್ತು; ಆದರೆ ಅದನ್ನು ಹೇಗೆ ಮಾಡಬೇಕೆಂಬುದು ಅವನಿಗೆ ತಿಳಿದಿರಲಿಲ್ಲ. ಅವನಿಗೆ ಹೊಳೆದಿದ್ದೇನೆಂದರೆ ಕೆಲವು ಅಸ್ಪೃಶ್ಯರನ್ನು ಕರೆತಂದು ರಸ್ತೆಯಲ್ಲಿ ನಿಲ್ಲುವಂತೆ ಮತ್ತು ಅಲ್ಲಿಂದ ಕಾಲ್ತೆಗೆಯಕೂಡದೆಂದು ಹೇಳುವುದು ಪರಿಣಾಮಕಾರಿ ವಿಧಾನ ಎಂದು. ಈ ಯುಕ್ತಿಯು ಫಲಪ್ರದವಾಯಿತು ಮತ್ತು ಅವನ ವಿರೋಧಿಗಳು ಮೈಲಿಗೆಯಾಗುತ್ತದೆಂಬ ಭಯದಿಂದ ಮೆರವಣಿಗೆಯಲ್ಲಿ ತೆರಳಲು ಅಂಜಿ ಉಳಿದರು. ಪರಯ್ಯಾಗಳನ್ನು ರಸ್ತೆಯಲ್ಲಿ ನಿಲ್ಲಿಸುವುದು ಕಾನೂನಿನ ಅರ್ಥವ್ಯಾಪ್ತಿಯಲ್ಲಿ ಅಡಚಣೆಯನ್ನುಂಟುಮಾಡಿದಂತೆ ಎಂಬುದನ್ನು ನಿರಾಕರಿಸುವ ತೀರ್ಪನ್ನು ಮದರಾಸು ಉಚ್ಚ ನ್ಯಾಯಾಲಯವು ನೀಡಿತೆಂಬುದು ಬೇರೆಯೇ ವಿಷಯ. ಪರಯ್ಯಾಗಳಿದ್ದುದು ಹಿಂದೂಗಳನ್ನು ಹಿಮ್ಮೆಟ್ಟಿಸಲು ಸಾಕಾಯಿತೆಂಬುದಂತೂ ತಳ್ಳಿಹಾಕಲಾಗದ ಸತ್ಯ. ಇದರರ್ಥವೇನು? ಅಸ್ಪೃಶ್ಯರ ಬಗೆಗೆ ಹಿಂದೂಗಳಿಗೆ ಸಂಪೂರ್ಣವಾಗಿ ಅಸಹ್ಯ ಭಾವನೆ ಇದೆಯೆಂಬುದು ಇದರರ್ಥ.

ಮುಂದಿನ ಘಟನೆಯೂ ಅಷ್ಟೇ ಬೆಳಕು ಚೆಲ್ಲುವಂಥದು. ಇದು ಕಾಥಿಯವಾಡದ ಒಂದು ಹಳ್ಳಿಯಲ್ಲಿ ಶಾಲಾ ಅಧ್ಯಾಪಕನಾಗಿದ್ದ ಒಬ್ಬ ಅಸ್ಪೃಶ್ಯನಿಗೆ ಸಂಬಂಧಿಸಿದ್ದು. ಶ್ರೀ ಗಾಂಧಿಯವರು ಪ್ರಕಾಶಿಸುವ "ಯಂಗ್ ಇಂಡಿಯಾದ' ೧೯೨೯ ನೆಯ ಡಿಸೆಂಬರ್ ೧೨ರ ಸಂಚಿಕೆಯಲ್ಲಿ ಪ್ರಕಟವಾಗಿರುವ ಕೆಳಗಿನ ಪತ್ರದಲ್ಲಿ ಅದು ವರದಿಯಾಗಿದೆ. ಆಗತಾನೆ ಹೆರಿಗೆಯಾಗಿದ್ದ ಮಗು ಮತ್ತು ತನ್ನ ಹೆಂಡತಿಗೆ ವೈದ್ಯಕೀಯ ಉಪಚಾರವನ್ನು ದೊರಕಿಸಿಕೊಡಲು ಹಿಂದೂ ವೈದ್ಯನೊಬ್ಬನನ್ನು ಎಷ್ಟು ಬೇಡಿದರೂ ಪ್ರಯೋಜನವಾಗದೆ ಹೆಂಡತಿ ಮಕ್ಕಳಿಬ್ಬರೂ ಗತಿಸಿದ್ದನ್ನು ಈ ಪತ್ರ ದಾಖಲಿಸುತ್ತದೆ. ಪತ್ರವು ಹೀಗೆನ್ನುತ್ತದೆ:

"ಈ ತಿಂಗಳ ೫ ರಂದು ನನಗೊಂದು ಮಗು ಜನಿಸಿತು. ೭ರಂದು ಅವಳಿಗೆ ಖಾಯಿಲೆ ಬಂದು ಭೇದಿ ಪ್ರಾರಂಭವಾಯಿತು. ಅವಳ ಶಕ್ತಿ ಉಡುಗಿಹೋದಂತಾಗಿ ಎದೆಯೆಲ್ಲಾ ಉರಿಯ ತೊಡಗಿತ್ತು. ಅವಳ ಉಸಿರಾಟ ಕಷ್ಟವಾಗಿತ್ತು ಮತ್ತು ಪಕ್ಕೆಲುಬುಗಳಲ್ಲಿ ಅತೀವ ನೋವುಂಟಾಗಿತ್ತು. ವೈದ್ಯನೊಬ್ಬನನ್ನು ಕರೆಯಲು ಹೋದೆ. ಹರಿಜನನೊಬ್ಬನ ಮನೆಗೆ ತಾನು ಹೋಗುವುದಿಲ್ಲವೆಂದು ಆತ ತಿಳಿಸಿದ. ಮಗುವನ್ನು ಪರೀಕ್ಷಿಸಲು ಸಹ ಆತ ಸಿದ್ಧನಾಗಿರಲಿಲ್ಲ. ಆಮೇಲೆ ನಾನು ನಗರಸೇಠ್ ಮತ್ತು ಗರಾಸಿಯಾ ದರ್ಬಾರ್ ಅವರಲ್ಲಿಗೆ ಹೋಗಿ ನನಗೆ ಸಹಾಯ ಮಾಡಬೇಕೆಂದು ಕೇಳಿಕೊಂಡೆ. ವೈದ್ಯರಿಗೆ ನಾನು ಕೊಡಬೇಕಾದ ಎರಡು ರೂಪಾಯಿಗಳ ಶುಲ್ಕಕ್ಕೆ ಜಾಮೀನು ನಿಲ್ಲಲು ನಗರಸೇಠ್ ಒಪ್ಪಿದರು. ನಂತರ ವೈದ್ಯರೇನೋ ಬಂದರು; ಆದರೆ ಹರಿಜನ ಕಾಲೋನಿಯ ಹೊರಗೆ ಮಾತ್ರ ನನ್ನ ಹೆಂಡತಿ ಮಗುವನ್ನು ಪರೀಕ್ಷಿಸುವುದಾಗಿ ಷರತ್ತು ಹಾಕಿದರು. ಹೊಸದಾಗಿ ಜನಿಸಿದ್ದ ಮಗುವಿನೊಡನೆ ನನ್ನ ಹೆಂಡತಿಯನ್ನು ಕಾಲೋನಿಯಿಂದ ಹೊರಗೆ ಕೊಂಡೊಯ್ದೆ. ಆಗ ವೈದ್ಯರು ತಮ್ಮ ಉಷ್ಣಮಾಪಕವನ್ನು ಒಬ್ಬ ಮುಸಲ್ಮಾನನಿಗೆ ನೀಡಿದರು. ಆತ ಅದನ್ನು ನನಗೆ ನೀಡಿದ, ನಾನದನ್ನು ನನ್ನ ಹೆಂಡತಿಗೆ ಕೊಟ್ಟೆ, ಉಷ್ಣಮಾಪಕವನ್ನು ಪ್ರಯೋಗಿಸಿದ್ದಾದ ಮೇಲೆ ಮತ್ತೆ ಅದೇ ಮಾರ್ಗವಾಗಿ ಅದನ್ನು ವೈದ್ಯರಿಗೆ ತಲುಪಿಸಲಾಯಿತು. ಆಗ ವೇಳೆ ಸಂಜೆಯ ಸುಮಾರು ಎಂಟು ಗಂಟೆ. ಒಂದು ಬುಡ್ಡಿಯ ಬೆಳಕಿನ ಸಹಾಯದಿಂದ ಉಷ್ಣಮಾಪಕವನ್ನು ನೋಡಿದ ವೈದ್ಯರು ರೋಗಿಗೆ ನ್ಯುಮೋನಿಯಾ ತಗುಲಿದೆಯೆಂದು ಹೇಳಿ ಹೊರಟುಹೋದರು. ಔಷಧಿಯನ್ನು ನಂತರ ಕಳುಹಿಸಿದರು. ಅಂಗಡಿಯಿಂದ ಸ್ವಲ್ಪ ನಾರಗಸೆಯ ಬೀಜ ತಂದು ರೋಗಿಯನ್ನು ಅದರಿಂದ ಶುಶ್ರೂಷೆ ಮಾಡಿದೆ. ಎರಡು

ರೂಪಾಯಿಗಳ ಶುಲ್ಕವನ್ನು ತೆತ್ತೆನಾದರೂ ಅವಳನ್ನು ಮತ್ತೆ ನೋಡಲು ವೈದ್ಯರು ನಿರಾಕರಿಸಿದರು. ಇದು ಅಪಾಯಕಾರಿ ರೋಗ, ದೇವರೇ ನಮ್ಮನ್ನು ಕಾಪಾಡಬೇಕು.

ನನ್ನ ಜೀವನ ದೀಪ ಆರಿಹೋಯಿತು. ಇಂದು ಮಧ್ಯಾಹ್ನ ಸುಮಾರು ಎರಡು ಗಂಟೆಗೆ ನನ್ನಾಕೆ ತೀರಿಕೊಂಡಳು."

ಅಸ್ಪೃಶ್ಯ ಶಾಲಾ ಉಪಾಧ್ಯಾಯನ ಹೆಸರನ್ನು ಕೊಟ್ಟಿಲ್ಲ. ಅಂತೆಯೇ ವೈದ್ಯನ ಹೆಸರನ್ನು ನಮೂದಿಸಿಲ್ಲ. ತನ್ನ ಮೇಲೆ ಬರಬಹುದಾದ ಪ್ರತೀಕಾರಕ್ಕೆ ಹೆದರಿ ಅಸ್ಪೃಶ್ಯ ಅಧ್ಯಾಪಕನೇ ಹೆಸರುಗಳನ್ನು ಮುಚ್ಚಿಡಬೇಕೆಂದು ವಿನಂತಿಸಿಕೊಂಡಿದ್ದರಿಂದ ಹಾಗೆ ಮಾಡಿದ್ದು. ಘಟನೆಗಳ ಸತ್ಯತೆಯನ್ನು ಯಾರೂ ಪ್ರಶ್ನಿಸುವಂತಿಲ್ಲ.

ಇದಕ್ಕೆ ವಿವರಣೆಗಳು ಅನಾವಶ್ಯಕ. ವಿದ್ಯಾವಂತನಾಗಿದ್ದೂ ವೈದ್ಯನು ಉಷ್ಣತಾಮಾಪಕವನ್ನು ಸ್ವತಃ ಪ್ರಯೋಗಿಸಲು ಮತ್ತು ಹುಷಾರಿಲ್ಲದ ಹೆಂಗಸು ವಿಷಮಾವಸ್ಥೆ ತಲುಪಿದ್ದರೂ ಆಕೆಗೆ ಔಷಧೋಪಚಾರ ನೀಡಲು ನಿರಾಕರಿಸಿದ. ಅವನ ಈ ನಿರಾಕರಣೆಯಿಂದಾಗಿ ಹೆಂಗಸು ಅಸು ನೀಗಿದಳು. ಅವನ ವೃತ್ತಿಯು ಅಪೇಕ್ಷಿಸುವ ನಡತೆಯ ನಿಯಮವನ್ನು ಗಾಳಿಗೆ ತೂರಿದ್ದಕ್ಕಾಗಿ ಅವನ ಅಂತಸ್ಸಾಕ್ಷಿಗೆ ಯಾವ ಅಳುಕೂ ಉಂಟಾದಂತೆ ತೋರುವುದಿಲ್ಲ. ಅಸ್ಪೃಶ್ಯನನ್ನು ಮುಟ್ಟುವುದಕ್ಕಿಂತ ಮೃಗೀಯ ವರ್ತನೆಯೇ ಹಿಂದೂವಿಗೆ ಹೆಚ್ಚು ಒಪ್ಪಿಗೆಯಾಗುವ ವಿಷಯ.

ಮೂರನೆಯ ಘಟನೆಯನ್ನು 'ಪ್ರಕಾಶ್' ಪತ್ರಿಕೆಯ ೧೯೩೨ನೆಯ ಆಗಸ್ಟ್ ೨೩ರ ಸಂಚಿಕೆಯಿಂದ ತೆಗೆದುಕೊಳ್ಳಲಾಗಿದೆ.

"ಜಾಫರ್‌ವಾಲ್ ತಾಲ್ಲೂಕಿನ ಜಗ್ವಾಲ್ ಎಂಬ ಹಳ್ಳಿಯಲ್ಲಿ ಆಗಸ್ಟ್ ೬ ರಂದು ಒಂದು ಕರುವು ಬಾವಿಯೊಳಕ್ಕೆ ಬಿದ್ದು ಹೋಗಿತ್ತು. ಡೋಮ್ ಜಾತಿಗೆ[೧] ಸೇರಿದ ರಾಮ್ ಮಹಾಶಯ ಎಂಬುವನು ಅಲ್ಲೇ ಹತ್ತಿರದಲ್ಲಿ ನಿಂತಿದ್ದ. ಕೂಡಲೆ ಅವನು ಬಾವಿಯೊಳಕ್ಕೆ ಜಿಗಿದ ಮತ್ತು ಕರುವನ್ನು ತನ್ನ ಕೈಗಳಲ್ಲಿ ತಬ್ಬಿಕೊಂಡ. ಅಷ್ಟರಲ್ಲಿ ಮೂರು–ನಾಲ್ಕು ಮಂದಿ ಅವನ ಸಹಾಯಕ್ಕೆ ಬಂದರು ಮತ್ತು ಕರುವನ್ನು ಬಾವಿಯಿಂದ ಪಾರುಮಾಡಲಾಯಿತು. ಆದರೆ ಹಳ್ಳಿಯ ಹಿಂದೂಗಳು ಒಂದು ದೊಡ್ಡ ಹುಯಿಲನ್ನೇ ಆರಂಭಿಸಿದರು. ಏಕೆಂದರೆ ಅವರ ಬಾವಿಯು ಅಪವಿತ್ರಗೊಂಡಿತ್ತು. ಅದಕ್ಕಾಗಿ ಆ ಪಾಪಿ ರಾಮ್ ಮಹಾಶಯನಿಗೆ ಬಲಿಹಾಕಲಾಗಿತ್ತು. ಅದೃಷ್ಟವೋ ಎಂಬಂತೆ ಆ ವೇಳೆಗೆ ಒಬ್ಬ ಬ್ಯಾರಿಸ್ಟರ್ ಅಲ್ಲಿಗೆ ಪ್ರವೇಶ ಮಾಡಿದ್ದ. ಸಾಧುರಾಮನನ್ನು ಗೋಳು ಹುಯ್ದುಕೊಳ್ಳುತ್ತಿದ್ದ ಅಲ್ಲಿನ ಜನರಿಗೆ ಅವನು ಚೆನ್ನಾಗಿ ಬೈಗುಳ ಸುರಿಸಿ ಅವರಿಗೆ ಬುದ್ಧಿ ನೆಟ್ಟಗಾಗುವಂತೆ ಮಾಡಿದ. ಹೀಗಾಗಿ ಆ ಸಾಧುರಾಮ ಉಳಿದುಕೊಂಡ. ಇಲ್ಲದಿದ್ದರೆ ಅವನ ಗತಿ ಏನಾಗುತ್ತಿತ್ತೋ ಕಂಡವರಾರು!"

ಇದರಲ್ಲಿ ಮುಖ್ಯವಾದ ಸಂಗತಿ ಯಾವುದು? – ಅಸ್ಪೃಶ್ಯನು ಬಾವಿಯನ್ನು ಮಲಿನಗೊಳಿಸಿ ಕರುವನ್ನು ಕಾಪಾಡುವುದೋ ಅಥವಾ ಕರುವನ್ನು ಸಾಯಬಿಟ್ಟು ಅಸ್ಪೃಶ್ಯನು ಬಾವಿಯ ಪಾವಿತ್ರ್ಯವನ್ನು ರಕ್ಷಿಸುವುದೋ? ಹಿಂದೂಗಳ ದೃಷ್ಟಿಯಲ್ಲಿ ಕರುವನ್ನು ಸಾಯಬಿಟ್ಟಿದ್ದರೆ ಅದೇ ಉತ್ತಮವೆನಿಸುತ್ತಿತ್ತು. ಕರುವನ್ನು ಕಾಪಾಡುವ ಸಲುವಾಗಿಯೇ ಆದರೂ ಅಸ್ಪೃಶ್ಯನು ಬಾವಿಯ ಪಾವಿತ್ರ್ಯವನ್ನು ಹಾಳುಮಾಡಬಾರದಾಗಿತ್ತು !

೧೯೩೬ ನೆಯ ಡಿಸೆಂಬರ್ ೧೯ ರಂದು 'ಮುಂಬೈ ಸಮಾಚಾರ್' ಪತ್ರಿಕೆಯು ಅಂಥದೇ ಇನ್ನೊಂದು ಘಟನೆಯನ್ನು ವರದಿ ಮಾಡಿತ್ತು:

---

೧. ಉತ್ತರ ಪ್ರದೇಶ ಮತ್ತು ಬಿಹಾರಗಳಲ್ಲಿ ಡೋಮ್ ಜಾತಿಗೆ ಸೇರಿದವರು ಅಸ್ಪೃಶ್ಯರು.

"ಕಲ್ಲಿಕೋಟೆಯ ಬಳಿಯ ಕಾಲಡಿ ಎಂಬ ಹಳ್ಳಿಯಲ್ಲಿ ಯುವತಿಯೊಬ್ಬಳ ಮಗು ಬಾವಿಯೊಳಕ್ಕೆ ಬಿತ್ತು. ಆಕೆ ಜೋರಾಗಿ ಕೂಗಿಕೊಂಡಳಾದರೂ ಹತ್ತಿರದಲ್ಲೇ ಇದ್ದವರು ಯಾರೂ ಬಾವಿಯೊಳಗೆ ಜಿಗಿಯಲು ಧೈರ್ಯ ತೋರಲಿಲ್ಲ. ಅಲ್ಲೇ ಹಾದುಹೋಗುತ್ತಿದ್ದ ಒಬ್ಬ ವ್ಯಕ್ತಿ ಬಾವಿಗೆ ಧುಮುಕಿ ಮಗುವನ್ನು ಕಾಪಾಡಿದ. ಹೀಗೆ ಸಹಾಯಹಸ್ತ ನೀಡಿದ್ದ ವ್ಯಕ್ತಿಯನ್ನು ಅವನು ಯಾರೆಂದು ವಿಚಾರಿಸಲು ತಾನೊಬ್ಬ ಅಸ್ಪೃಶ್ಯನೆಂದು ಹೇಳಿದ. ಅದನ್ನು ಕೇಳಿ ಅವನಿಗೆ ಕೃತಜ್ಞತೆ ಸೂಚಿಸುವ ಬದಲು ಅವನನ್ನು ವಾಚಾಮಗೋಚರವಾಗಿ ಬೈದರು ಮತ್ತು ಚೆನ್ನಾಗಿ ಥಳಿಸಿದರು. ಕಾರಣ: ಅವನು ಬಾವಿಯನ್ನು ಮಲಿನಗೊಳಿಸಿದ್ದ."

ಲಕ್ನೋದಿಂದ ಹೊರಡುವ 'ಆದಿ ಹಿಂದೂ' ಪತ್ರಿಕೆಯು ಜುಲೈ ೧೯೩೭ ರಲ್ಲಿ ಕೆಳಗಿನ ಘಟನೆಯನ್ನು ವರದಿಮಾಡಿತ್ತು. ಹಿಂದೂವೊಬ್ಬನಿಗೆ ಅಸ್ಪೃಶ್ಯನ ಸಂಸರ್ಗವು ಹೇಗೆ ಆಶುಚಿಕರ ಮತ್ತು ಆಯೋಗ್ಯವಾದದ್ದೆಂದು ಭಾವಿಸಲಾಗುತ್ತದೆಂಬುದಕ್ಕೆ ಇದು ಉತ್ತಮ ನಿದರ್ಶನ :

"ಮದರಾಸು ಹೋಮ್ಸ್ ಕಂಪನಿಯ ಒಬ್ಬ ನೌಕರ ಇತ್ತೀಚೆಗೆ ತೀರಿಕೊಂಡ. ತಾನು ಉಚ್ಚ ಜಾತಿಯವನೆಂದು ಆತ ಹೇಳಿಕೊಳ್ಳುತ್ತಿದ್ದುದುಂಟು. ಸ್ಮಶಾನದಲ್ಲಿ ಅವನ ಚಿತೆಗೆ ಬೆಂಕಿ ಇಟ್ಟಾಗ ಅವನ ಸ್ನೇಹಿತರು ಮತ್ತು ನೆಂಟರಿಷ್ಟರು ಚಿತೆಯ ಮೇಲೆ ಅಕ್ಕಿ ಚೆಲ್ಲಿದರು. ಈ ಸ್ನೇಹಿತರ ಪೈಕಿ ದುರದೃಷ್ಟವಶಾತ್ ಒಬ್ಬ ಅಸ್ಪೃಶ್ಯನಿದ್ದ. ಆತ ಮದರಾಸಿನ ಆದಿ ದ್ರಾವಿಡರವನು. ಅವನೂ ಅಕ್ಕಿ ಚೆಲ್ಲುವುದರಲ್ಲಿ ಜೊತೆಗೂಡಿಕೊಂಡ. ಚಿತೆಯ ಪಾವಿತ್ರ್ಯವನ್ನು ಹೀಗೆ ಹಾಳುಮಾಡಿದ್ದಕ್ಕಾಗಿ ಉಚ್ಚವರ್ಣದ ಹಿಂದೂಗಳು ಅವನನ್ನು ಬೈದರು. ಇದು ಬಿರುಸಿನ ವಾಗ್ವಾದಕ್ಕೆ ತಿರುಗಿ ಕಡೆಗೆ ಇಬ್ಬರಿಗೆ ಹೊಟ್ಟೆ ಇರಿಯುವುದರಲ್ಲಿ ಪರ್ಯವಸಾನವಾಯಿತು. ಅವರಲ್ಲಿ ಒಬ್ಬ ಆಸ್ಪತ್ರೆಗೆ ಕೊಂಡೊಯ್ಯುತ್ತಿದ್ದಂತೆಯೇ ಮೃತಪಟ್ಟ ಮತ್ತು ಇನ್ನೊಬ್ಬನ ಸ್ಥಿತಿ ಚಿಂತಾಜನಕವಾಗಿದೆಯೆಂದು ಹೇಳಲಾಗಿದೆ."

ಇದಕ್ಕಿಂತಲೂ ಹೆಚ್ಚಿನದನ್ನು ಹೇಳುವ ಇನ್ನೊಂದು ಘಟನೆ ಇದೆ. ೧೯೩೮ ನೆಯ ಮಾರ್ಚ್ ೬ ರಂದು ಭಂಗಿಗಳ ಸಭೆಯೊಂದು ಮುಂಬೈನ ದಾದರ್ ಪ್ರದೇಶದ ಕಾಸರ್‌ವಾಡಿಯಲ್ಲಿ, (ಉಣ್ಣೆ ಕಾರ್ಖಾನೆಯ ಹಿಂಬದಿಯಲ್ಲಿ) ಶ್ರೀ ಇಂದುಲಾಲ್ ಯಾಜ್ಞಿಕ್ ಅವರ ಅಧ್ಯಕ್ಷತೆಯಲ್ಲಿ ಜರುಗಿತು. ಈ ಸಭೆಯಲ್ಲಿ ಒಬ್ಬ ಭಂಗಿ ಹುಡುಗ ತನ್ನ ಅನುಭವವನ್ನು ಕೆಳಕಂಡಂತೆ ನಿವೇದಿಸಿಕೊಂಡ:

"೧೯೩೩ ರಲ್ಲಿ ನಾನು ಅಂತಿಮ ಭಾಷಾ ಪರೀಕ್ಷೆಯಲ್ಲಿ ಉತ್ತೀರ್ಣನಾದೆ. ನಾಲ್ಕನೆಯ ಇಯತ್ತೆಯವರೆಗೆ ನಾನು ಆಂಗ್ಲ ಭಾಷೆಯನ್ನು ಕಲಿತಿದ್ದೇನೆ. ಮುಂಬೈ ಪುರಸಭೆಯ ಶಾಲಾ ಸಮಿತಿಗೆ ಅರ್ಜಿ ಸಲ್ಲಿಸಿ ಅಧ್ಯಾಪಕನಾಗಿ ಉದ್ಯೋಗವನ್ನು ನೀಡಬೇಕೆಂದು ಮನವಿ ಮಾಡಿಕೊಂಡೆ. ನೌಕರಿ ಖಾಲಿಯಿಲ್ಲವೆಂದು ಹೇಳಿದ್ದರಿಂದ ನನಗೆ ಆ ಕೆಲಸ ಸಿಗಲಿಲ್ಲ. ನಂತರ ನಾನು ಅಹಮದಾಬಾದಿನ ಹಿಂದುಳಿದ ವರ್ಗಗಳ ಅಧಿಕಾರಿಗೆ ಅರ್ಜಿ ಸಲ್ಲಿಸಿದೆ. ಹಳ್ಳಿಯ ಪಟ್ವಾರಿ ಅಥವಾ ತಲಾಠಿಯ ಕೆಲಸಕ್ಕೆ ಈ ಅರ್ಜಿ. ನನಗೆ ಕೆಲಸ ಸಿಕ್ಕಿತು. ೧೯೩೬ನೆಯ ಫೆಬ್ರವರಿ ೧೯ ರಂದು ಖೇಡ ಜಿಲ್ಲೆಯ ಬೋರ್ಸಾದ್ ತಾಲ್ಲೂಕಿನ ಮಾಮಲೆದಾರರ ಕಛೇರಿಯಲ್ಲಿ ನಾನು ತಲಾಠಿಯಾಗಿ ನೌಕರಿಗೆ ಸೇರಿದೆ.

ನಮ್ಮ ಕುಟುಂಬ ಮೊದಲಿಗೆ ಗುಜರಾತ್‌ಗೆ ಸೇರಿದ್ದುದಾಗಿದ್ದರೂ ನಾನೆಂದೂ ಅದಕ್ಕೆ ಮುಂಚೆ ಗುಜರಾತಿಗೆ ಹೋಗಿದ್ದುದಿಲ್ಲ. ಅಲ್ಲಿಗೆ ಹೋದದ್ದು ಇದೇ ಮೊದಲು. ಅಂತೆಯೇ ಸರ್ಕಾರಿ ಕಚೇರಿಗಳಲ್ಲಿ ಅಸ್ಪೃಶ್ಯತೆಯನ್ನು ಆಚರಿಸಲಾಗುತ್ತದೆಂದು ನನಗೆ ತಿಳಿದಿರಲಿಲ್ಲ. ಜೊತೆಗೆ ನನ್ನ ಅರ್ಜಿಯಲ್ಲೇ ನಾನು ಹರಿಜನರವನೆಂಬುದನ್ನು ನಮೂದಿಸಿದ್ದೆನಾದ್ದರಿಂದ ಕಚೇರಿಯಲ್ಲಿ ನನ್ನ ಸಹೋದ್ಯೋಗಿಗಳಿಗೆ ನಾನು ಯಾರೆಂಬುದು ಮೊದಲೇ ತಿಳಿದಿರುತ್ತದೆಂದು ಎಣಿಸಿದ್ದೆ. ಹೀಗಿದ್ದಾಗ ಮಾಮಲೆದಾರರ ಕಚೇರಿಯಲ್ಲಿ

ತಲಾಠಿಯಾಗಿ ಕೆಲಸ ವಹಿಸಿಕೊಳ್ಳಲು ಅಲ್ಲಿಗೆ ಹೋದಾಗ ಕಾರಕೂನನು ತೋರಿಸಿದ ಮನೋಭಾವ ನನಗೆ ಅಚ್ಚರಿಯೆನಿಸಿತು.

ಕಾರಕೂನ ತಿರಸ್ಕಾರದಿಂದ ಕೇಳಿದ : 'ಯಾರು ನೀನು?' ನಾನೆಂದೆ 'ಸ್ವಾಮಿ, ನಾನು ಹರಿಜನರವನು.' ಅದಕ್ಕೆ ಅವನೆಂದ : 'ಹೋಗಾಚೆ, ದೂರ ನಿಲ್ಲು. ನನ್ನ ಹತ್ತಿರ ಬಂದು ನಿಲ್ಲಲು ನಿನಗೆಷ್ಟು ಪೊಗರು! ಈಗ ನೀನು ಕಚೇರಿಯಲ್ಲಿದ್ದೀಯೆ. ಹೊರಗಡೆ ಹೀಗೆ ಮಾಡಿದ್ದರೆ ಆರು ಒದೆತ ಕೊಡುತ್ತಿದ್ದೆ. ಇಲ್ಲಿಗೆ ಕೆಲಸಕ್ಕೆ ಬರಲು ನಿನ್ನದೆಂತಹ ಜಬರ್ದಸ್ತು !' ಅದಾದ ಮೇಲೆ ನನ್ನ ಯೋಗ್ಯತಾಪತ್ರವನ್ನೂ ತಲಾಠಿಯಾಗಿ ನೇಮಿಸಿದ್ದ ಆದೇಶ ಪತ್ರವನ್ನೂ ನೆಲದ ಮೇಲೆ ಹಾಕಬೇಕೆಂದು ಹೇಳಿದ. ಅಲ್ಲಿಂದ ಅದನ್ನವನು ಮೇಲೆತ್ತಿಕೊಂಡ. ಬೋರ್ಸಾದ್‌ನ ಮಾಮಲೆದಾರರ ಕಚೇರಿಯಲ್ಲಿ ಕೆಲಸ ಮಾಡುತ್ತಿದ್ದಾಗ ಕುಡಿಯಲು ನೀರು ಪಡೆದುಕೊಳ್ಳುವುದರಲ್ಲಿ ಸಹ ನನಗೆ ಕಷ್ಟದ ಅನುಭವವೇ ಆಗಿತ್ತು. ಕಚೇರಿಯ ವರಾಂಡದಲ್ಲಿ ಕುಡಿಯುವ ನೀರನ್ನು ತುಂಬಿದ್ದ ಪಾತ್ರೆಗಳನ್ನಿಟ್ಟಿರುತ್ತಿದ್ದರು. ಈ ಪಾತ್ರೆಗಳನ್ನು ತನ್ನ ಸುಪರ್ದಿನಲ್ಲಿಟ್ಟುಕೊಂಡಿದ್ದ ನೀರಿನವನೊಬ್ಬನಿದ್ದ. ಕಚೇರಿಯಲ್ಲಿದ್ದ ಕಾರಕೂನರಿಗೆ ಬೇಕಾದಾಗಲೆಲ್ಲಾ ನೀರನ್ನು ಹುಯ್ಯುವುದು ಅವನ ಕೆಲಸ. ಅವನಿಲ್ಲದಿದ್ದಾಗ ಸ್ವತಃ ಕಾರಕೂನರೇ ಪಾತ್ರೆಗಳಿಂದ ನೀರನ್ನು ತೆಗೆದುಕೊಂಡು ಕುಡಿಯಬಹುದಾಗಿತ್ತು. ನನ್ನಮಟ್ಟಿಗೆ ಅದು ಅಸಾಧ್ಯವಾಗಿತ್ತು. ನಾನು ಪಾತ್ರೆಗಳನ್ನು ಮುಟ್ಟುವಂತಿರಲಿಲ್ಲ; ಏಕೆಂದರೆ ಅವನ್ನು ನಾನು ಮುಟ್ಟಿದ್ದರೆ ನೀರು ಮಲಿನಗೊಳ್ಳುತ್ತಿತ್ತು.! ಆದ್ದರಿಂದ ನೀರಿಗೆ ನಾನು ನೀರಿನ ಮಹಾನುಭಾವನನ್ನು ಆಶ್ರಯಿಸಲೇಬೇಕಾಗಿದ್ದಿತು. ನನ್ನ ಬಳಕೆಗಾಗಿ ಅಲ್ಲೊಂದು ತುಕ್ಕು ಹಿಡಿದ ಚಿಕ್ಕ ಡಬ್ಬ ಇಡಲಾಗಿತ್ತು. ಅದನ್ನು ಯಾರೂ ಮುಟ್ಟುತ್ತಿರಲಿಲ್ಲ; ನಾನಲ್ಲದೆ ಬೇರೆ ಯಾರೂ ಅದನ್ನು ತೊಳೆಯುತ್ತಲೂ ಇರಲಿಲ್ಲ. ನನಗೆ ಆ ನೀರಿನ ಮಹಾನುಭಾವ ನೀರನ್ನು ದಾನ ಮಾಡುತ್ತಿದ್ದುದು ಆ ಡಬ್ಬದಲ್ಲಿ. ಆದರೆ ನನಗೆ ನೀರು ದೊರೆಯುತ್ತಿದ್ದುದು ನೀರಿನವನಿದ್ದಾಗ ಮಾತ್ರವೇ. ನನಗೆ ನೀರನ್ನು ಸರಬರಾಜು ಮಾಡುವುದು ಅದೇಕೋ ಅವನ ಮನಸ್ಸಿಗೆ ಒಪ್ಪಿಗೆಯಾಗಲಿಲ್ಲ. ನಾನು ನೀರಿಗಾಗಿ ಬರುತ್ತಿದ್ದೆನೆಂಬ ಸುಳಿವು ಸಿಕ್ಕೊಡನೆ ಅವನು ಹೇಗೋ ಪರಾರಿಯಾಗಿ ಬಿಡುತ್ತಿದ್ದ. ಹೀಗಾಗಿ ನಾನು ನೀರಿಲ್ಲದೆಯೇ ಇರಬೇಕಾಗಿ ಬರುತ್ತಿತ್ತು. ಈ ರೀತಿಯಲ್ಲಿ ಕುಡಿಯುವ ನೀರಿಲ್ಲದೆ ಇರುತ್ತಿದ್ದ ದಿನಗಳು ಖಂಡಿತ ಕಡಿಮೆಯೇನೂ ಆಗಿರಲಿಲ್ಲ.

ನನ್ನ ವಸತಿಯ ಬಗೆಗೂ ನನಗೆ ಇಂಥದೇ ಪ್ರಯಾಸಗಳಿದ್ದುವು. ಬೋರ್ಸಾದ್‌ನಲ್ಲಿ ನಾನೊಬ್ಬ ಅಪರಿಚಿತ. ಯಾವ ಸವರ್ಣೀಯ ಹಿಂದೂವೂ ನನಗೆ ಬಾಡಿಗೆಗೆ ಮನೆ ಕೊಡುತ್ತಿರಲಿಲ್ಲ. ನನ್ನ ಸ್ಥಾನಕ್ಕೆ ಮೀರಿ ನಾನೊಬ್ಬ ಕಾರಕೂನನಾಗಿ ಜೀವಿಸುವ ಪ್ರಯತ್ನವು ಹಿಂದೂಗಳಿಗೆ ರುಚಿಸಿರಲಿಲ್ಲ ಮತ್ತು ಅವರೆಲ್ಲಿ ಅಸಂತುಷ್ಟರಾಗುವರೋ ಎಂಬ ಅಂಜಿಕೆಯಿಂದ ಬೋರ್ಸಾದ್‌ನ ಅಸ್ಪೃಶ್ಯರು ನನಗೆ ವಸತಿಸೌಕರ್ಯ ನೀಡಲು ಸಿದ್ಧರಿರಲಿಲ್ಲ. ಆಹಾರದ ಬಗ್ಗೆ ಇದಕ್ಕಿಂತಲೂ ಕಠಿಣವಾದ ಪರಿಸ್ಥಿತಿಯನ್ನು ನಾನು ಎದುರಿಸಬೇಕಾಗಿತ್ತು. ಯಾವುದೇ ಜಾಗದಲ್ಲಾಗಲಿ ವ್ಯಕ್ತಿಯಿಂದಾಗಲಿ ನಾನು ಊಟವನ್ನು ಪಡೆಯುವಂತೆ ಇರಲಿಲ್ಲ ಬೆಳಿಗ್ಗೆ ಮತ್ತು ಸಂಜೆ ನಾನು ಬರೀ "ಭಾಜಾ' (ಬಜ್ಜಿ) ಕೊಳ್ಳುತ್ತಿದ್ದೆ ಮತ್ತು ಹಳ್ಳಿಯ ಹೊರಗೆ ಯಾವುದಾದರೂ ನಿರ್ಜನ ಪ್ರದೇಶವನ್ನು ಆರಿಸಿಕೊಂಡು ಅವನ್ನು ಅಲ್ಲಿ ತಿನ್ನುತ್ತಿದ್ದೆ. ರಾತ್ರಿ ವೇಳೆಯಲ್ಲಿ ಮಾಮಲೆದಾರರ ಕಚೇರಿಯ ವರಾಂಡಾದ ಯಾವುದಾದರೂ ಮೂಲೆಯಲ್ಲಿ ಮುದುರಿಕೊಳ್ಳುತ್ತಿದ್ದೆ. ಹೀಗೆ ನಾನು ನಾಲ್ಕು ದಿನಗಳನ್ನು ಕಳೆದೆ. ಇವೆಲ್ಲಾ ನನಗೆ ಅಸಹನೀಯವಾಗಿತ್ತು. ಅನಂತರ ನನ್ನ ಹಿಂದಿನ ಸಂತತಿಯವರ ಊರಾಗಿದ್ದ ಜೇಂಟ್ರಾಲ್ ಎಂಬಲ್ಲಿ ಉಳಿದುಕೊಳ್ಳಲು ಹೋದೆ. ಬೋರ್ಸಾದ್‌ನಿಂದ

ಅದು ಆರು ಮೈಲಿ ದೂರದಲ್ಲಿತ್ತು. ಪ್ರತಿದಿನ ಹನ್ನೊಂದು ಮೈಲಿ ನಡೆಯಬೇಕಾದ ಪ್ರಸಂಗ. ಹೀಗೆ ಒಂದೂವರೆ ತಿಂಗಳು ಮಾಡಿದೆ.

ಆದಾದ ಮೇಲೆ ಕೆಲಸ ಕಲಿಯಲು ಮಾಮಲೆದಾರರು ನನ್ನನ್ನೊಬ್ಬ ತಲಾಠಿಯ ಬಳಿಗೆ ಕಳಿಸಿದರು. ಈ ತಲಾಠಿಯು ಮೂರು ಹಳ್ಳಿಗಳ ಮೇಲ್ವಿಚಾರಕನಾಗಿದ್ದ : ಜೇಂಟ್ರಾಲ್, ಖಾಪೂರ್ ಮತ್ತು ಸಯೀಜಾಪುರ್. ಜೇಂಟ್ರಾಲ್ ಅವನ ಕೇಂದ್ರಸ್ಥಾನವಾಗಿತ್ತು. ಈ ತಲಾಠಿಯ ಜೊತೆ ಜೇಂಟ್ರಾಲ್‌ನಲ್ಲಿ ನಾನು ಎರಡು ತಿಂಗಳ ಕಾಲ ಇದ್ದೆ. ಅವನು ನನಗೇನನ್ನೂ ಹೇಳಿಕೊಡಲಿಲ್ಲ ಮತ್ತು ಹಳ್ಳಿಯ ಕಚೇರಿಯೊಳಕ್ಕೆ ನನಗೆ ಒಮ್ಮೆಯೂ ಪ್ರವೇಶ ದೊರಕಲಿಲ್ಲ. ಹಳ್ಳಿಯ ಪಟೇಲರು ನನ್ನನ್ನು ಕಂಡರೆ ಸಿಡಿಮಿಡಿಗೊಳ್ಳುತ್ತಿದ್ದರು. ಒಮ್ಮೆ ಅವನು ನನಗೆ ಹೇಳಿದ್ದ: 'ಏ ಹುಡುಗ, ನಿಮ್ಮಪ್ಪ ಮತ್ತು ನಿನ್ನ ಸಹೋದರರು ಹಳ್ಳಿಯ ಕಚೇರಿಯಲ್ಲಿ ಕಸ ಗುಡಿಸುವ ಜನ; ನೀನು ಮಾತ್ರ ಕಚೇರಿಯಲ್ಲಿ ನಮ್ಮ ಸರೀಕನಾಗಿ ಕುಳಿತುಕೊಳ್ಳಬಯಸುತ್ತೀಯಾ? ಹುಷಾರ್, ಈ ಕೆಲಸ ಬಿಟ್ಟುಬಿಡುವುದೇ ನಿನಗೆ ಕ್ಷೇಮ.'

ಒಮ್ಮೆ ತಲಾಠಿಯು ಆ ಹಳ್ಳಿಯ ಜನಸಂಖ್ಯಾ ತಃಖ್ತೆಯನ್ನು ತಯಾರಿಸಲು ನನ್ನನ್ನು ಸಯೀಜಾಪುರ್‌ಗೆ ಕರೆದ. ಜೇಂಟ್ರಾಲ್‌ನಿಂದ ನಾನು ಸಯೀಜಾಪುರಕ್ಕೆ ಹೋದೆ. ಊರಿನ ಪಟೇಲ ಮತ್ತು ತಲಾಠಿ ಇಬ್ಬರು ಏನೋ ಕೆಲಸಮಾಡುತ್ತಾ ಹಳ್ಳಿಯ ಕಚೇರಿಯಲ್ಲಿದ್ದರು. ನಾನು ಕಚೇರಿಯ ಬಳಿ ಹೋದೆ, ಬಾಗಿಲ ಬಳಿ ನಿಂತೆ ಮತ್ತು ಅಲ್ಲಿಂದಲೇ ಇಬ್ಬರಿಗೂ 'ಗುಡ್ ಮಾರ್ನಿಂಗ್' ಹೇಳಿದೆ. ಅವರು ನನ್ನ ಕಡೆ ಗಮನವನ್ನೇ ಹರಿಸಲಿಲ್ಲ. ಹಾಗೆಯೇ ಹೊರಗೆ ೧೫ ನಿಮಿಷ ನಿಂತಿದ್ದೆ. ನನಗಾಗಲೇ ಜೀವನ ಸಾಕಷ್ಟು ಬೇಸರ ತಂದಿತ್ತು; ಈಗ ಹೀಗೆ ನನ್ನನ್ನು ಅಸಡ್ಡೆಯಿಂದ ಕಂಡದ್ದು ಮತ್ತು ಅವಮಾನ ಮಾಡಿದ್ದು ನನಗೆ ಇನ್ನೂ ಉರಿಯನ್ನು ಹೆಚ್ಚಿಸಿತು. ಅಲ್ಲೇ ಬಿದ್ದಿದ್ದ ಒಂದು ಕುರ್ಚಿಯ ಮೇಲೆ ಹಾಗೇ ಕುಳಿತೆ. ಕುರ್ಚಿಯ ಮೇಲೆ ಕುಳಿತಿದ್ದನ್ನು ಕಂಡೊಡನೆ ಪಟೇಲ ಮತ್ತು ತಲಾಠಿ ಇಬ್ಬರೂ ನನಗೆ ಏನೂ ಹೇಳದೆ ಸುಮ್ಮನೆ ಹೊರನಡೆದರು. ಸ್ವಲ್ಪಹೊತ್ತಿನಲ್ಲೇ ಅಲ್ಲಿಗೆ ಜನ ಬರಲಾರಂಭಿಸಿದರು. ಬೇಗನೇ ನನ್ನ ಸುತ್ತ ಒಂದು ದೊಡ್ಡ ಗುಂಪೇ ಜಮಾಯಿಸಿತ್ತು. ಈ ಗುಂಪಿನ ನಾಯಕತ್ವ ವಹಿಸಿದ್ದವನು ಹಳ್ಳಿಯ ಪುಸ್ತಕಭಂಡಾರದ ಗ್ರಂಥಪಾಲಕ. ಒಬ್ಬ ವಿದ್ಯಾವಂತ ಹೀಗೇಕೆ ಒಂದು ಗುಂಪಿಗೆ ಮುಂದಾಳತ್ವ ನೀಡಿದ್ದನೆಂಬುದು ನನಗೆ ಅರ್ಥವಾಗಲಿಲ್ಲ. ನನಗೆ ಆಮೇಲೆ ತಿಳಿಯಿತು. ನಾನು ಕುಳಿತಿದ್ದ ಕುರ್ಚಿ ಅವನದೆಂದು. ನನ್ನನ್ನು ಹೀನಾಮಾನವಾಗಿ ಬೈಯಲು ಉಪಕ್ರಮಿಸಿದ. ಹಳ್ಳಿಯ ತೋಟಿ(ರಾವಾನಿಯ)ಯನ್ನು ಉದ್ದೇಶಿಸಿ ಹೀಗೆಂದ: ಈ ಭಂಗಿ ನಾಯಿಯನ್ನು ಕುರ್ಚಿಯ ಮೇಲೆ ಕುಳಿತುಕೊಳ್ಳಲು ಬಿಟ್ಟವರಾರು? 'ರಾವಾನಿಯ ಬಂದು ನನ್ನನ್ನು ಕುರ್ಚಿಯಿಂದ ಎಬ್ಬಿಸಿದ ಮತ್ತು ಕುರ್ಚಿಯನ್ನು ತೆಗೆದುಕೊಂಡುಹೋದ. ನಾನು ನೆಲದ ಮೇಲೆ ಕುಳಿತೆ. ಜನರ ಗುಂಪು ಆಗ ಕಚೇರಿಯ ಒಳಹೊಕ್ಕು ನನ್ನ ಸುತ್ತ ನಿಂತಿತು. ಕೋಪೋದ್ರಿಕ್ತವಾಗಿದ್ದ ಈ ಗುಂಪು ನನ್ನ ಮೇಲೆ ಬೈಗುಳನ್ನು ಸುರಿಸಿತು. ಕೆಂಡ ಕಾರಿತು. ಕೆಲವರು ಧರ್ಯಾದಿಂದ (ಕತ್ತಿಯಂತಹ ಮೊನಚಾದ ಒಂದು ಆಯುಧ) ನನ್ನನ್ನು ತುಂಡರಿಸುವುದಾಗಿ ಚೀತ್ಕರಿಸಿದರು. ನನ್ನನ್ನು ಕ್ಷಮಿಸುವಂತೆ ಮತ್ತು ನನ್ನ ಮೇಲೆ ದಯೆ ತೋರುವಂತೆ ನಾನವರನ್ನು ಬೇಡಿಕೊಂಡೆ. ಆ ಗುಂಪಿನ ಮೇಲೆ ಇದರಿಂದ ಏನೂ ಪರಿಣಾಮ ಉಂಟಾಗಲಿಲ್ಲ. ನನ್ನನ್ನು ಹೇಗೆ ರಕ್ಷಿಸಿಕೊಳ್ಳಬೇಕೆಂದು ನನಗೆ ಗೊತ್ತಾಗಲಿಲ್ಲ. ಆಗೊಂದು ವಿಷಯ ನನಗೆ ಹೊಳೆಯಿತು. ಮಾಮಲೆದಾರರಿಗೆ ಒಂದು ಪತ್ರ ಬರೆದು ನನ್ನ ಕಷ್ಟವನ್ನು ಅವರಲ್ಲಿ ತೋಡಿಕೊಳ್ಳುವುದು, ಈ ಜನರ ಗುಂಪು ನನ್ನನ್ನು ಕೊಂದು ಹಾಕಿದರೆ ನನ್ನ ಶವವನ್ನು ಹೇಗೆ ವಿಲೇವಾರಿ ಮಾಡಬೇಕೆಂದು ತಿಳಿಸುವುದು. ಅವರ ವಿರುದ್ಧ ಮಾಮಲೆದಾರರಿಗೆ ನಾನು ದೂರು ಸಲ್ಲಿಸುತ್ತಿದ್ದೇನೆಂದು

ತಿಳಿದರೆ ಬಹುಶಃ ಈ ಗುಂಪು ನನ್ನ ಮೇಲೆ ಕೈಮಾಡದಿರಬಹುದೆಂಬ ಒಂದು ಆಶಯವೂ ನನ್ನ ಮನಸ್ಸಿಗೆ ಬಂತು. ಅಲ್ಲೇ ಇದ್ದ ರಾವಾನಿಯನನ್ನು ಒಂದು ತುಂಡು ಕಾಗದ ಕೊಡುವಂತೆ ಕೇಳಿದೆ. ಅವನು ಕೊಟ್ಟ. ಎಲ್ಲರೂ ಓದಿಕೊಳ್ಳಲು ಅನುಕೂಲವಾಗುವಂತೆ ನನ್ನಲ್ಲಿದ್ದ ಫೌಂಟನ್ ಪೆನ್ನಿನಿಂದ ದಪ್ಪಕ್ಷರಗಳಲ್ಲಿ ಹೀಗೆ ಬರೆದೆ :

"ಬೋರ್ಸಾದ್ ತಾಲ್ಲೂಕಿನ ಮಾಮಲೆದಾರರಿಗೆ,

ಸ್ವಾಮಿ,

ಸದರಿ ಪಾರ್ಮಾರ್ ಕಾಳಿದಾಸ ಶಿವರಾಮನ ಸವಿನಯ ಪ್ರಣಾಮಗಳನ್ನು ದಯಮಾಡಿ ಸ್ವೀಕರಿಸಿ. ಸವಿನಯವಾಗಿ ತಮಗೆ ತಿಳಿಸುವುದೇನೆಂದರೆ ಇಂದು ಮೃತ್ಯುವಿನ ಕೈಗಳು ನನ್ನ ಮೇಲೆ ಬೀಳುತ್ತಿವೆ. ನನ್ನ ತಂದೆತಾಯಿಯರು ಹೇಳಿದ್ದಂತೆ ನಡೆದುಕೊಂಡಿದ್ದರೆ ನನಗೆ ಹಾಗೆ ಆಗುತ್ತಿರಲಿಲ್ಲ. ನನ್ನ ಮರಣದ ವಿಷಯವನ್ನು ನನ್ನ ತಂದೆತಾಯಿಯರಿಗೆ ತಿಳಿಸುವ ಕೃಪೆ ಮಾಡಿ."

ನಾನು ಬರೆದಿದ್ದು ಗ್ರಂಥಪಾಲಕ ಓದಿಕೊಂಡ ಮತ್ತು ಕೂಡಲೆ ಅದನ್ನು ಹರಿದುಹಾಕಬೇಕೆಂದು ಹೇಳಿದ. ನಾನು ಹಾಗೇ ಮಾಡಿದೆ. ಮತ್ತೆ ನನ್ನ ಮೇಲೆ ಅಸಂಖ್ಯ ಹೀನಮಾತುಗಳನ್ನು ಸುರಿಸಿದರು. 'ನಿನ್ನನ್ನು ನಾವು ತಲಾಠಿ ಎಂದು ಸಂಬೋಧಿಸಬೇಕೋ? ನೀನೊಬ್ಬ ಭಂಗಿ; ಆದರೂ ನೀನು ಕಚೇರಿಯೊಳಗೆ ಬಂದು ಕುರ್ಚಿಯ ಮೇಲೆ ಕುಳಿತುಕೊಳ್ಳುತ್ತೀಯಾ?' ನನ್ನ ಮೇಲೆ ಕನಿಕರ ತೋರಬೇಕೆಂದು ಬೇಡಿಕೊಂಡು ಮತ್ತೆ ಇಂತಹ ದುಡುಕಿನ ಕೆಲಸ ಮಾಡುವುದಿಲ್ಲವೆಂದೂ ನನ್ನ ಕೆಲಸವನ್ನೇ ಬಿಟ್ಟುಕೊಡುವೆನೆಂದೂ ಆಶ್ವಾಸನೆ ನೀಡಿದೆ. ಸಂಜೆ ಏಳರವರೆವಿಗೂ ನನ್ನನ್ನು ಅಲ್ಲೇ ಇರಿಸಿಕೊಂಡಿದ್ದರು. ಆಮೇಲೆ ಗುಂಪು ಚೆದುರಿತು. ಅಲ್ಲಿಯವರೆಗೆ ತಲಾಠಿ ಮತ್ತು ಮುಖಿಯಾ ಇನ್ನೂ ಬಂದಿರಲಿಲ್ಲ. ನಂತರ ಹದಿನೈದು ದಿನಗಳ ರಜೆ ಪಡೆದು ಮುಂಬೈಗೆ ಹಿಂದಿರುಗಿ ನನ್ನ ತಂದೆತಾಯಿಯರನ್ನು ಸೇರಿಕೊಂಡೆ."

ಅಸ್ಪೃಶ್ಯರ ಬಗೆಗೆ ಹಿಂದೂಗಳ ಸಾಮಾಜಿಕ ನಡತೆಯಲ್ಲಿ ಇನ್ನೊಂದು ಅಂಶವಿದೆ ಮತ್ತು ಅದನ್ನು ಕಡೆಗಾಣಿಸಲಾಗದು. ಈ ಮನೋಭಾವವು ಕೆಳಗಿನ ಘಟನೆಗಳಲ್ಲಿ ಬಹಳ ಚೆನ್ನಾಗಿ ಪ್ರತಿಫಲನಗೊಳ್ಳುತ್ತದೆ. ೮ನೆಯ ಸೆಪ್ಟೆಂಬರ್ ೧೯೪೩ರ 'ಅಲ್ಫಜಲ್' ಪತ್ರಿಕೆಯಿಂದ :

"ಸೆಪ್ಟೆಂಬರ್ ೧ರಂದು ನಾಸಿಕ್‌ನಿಂದ ಬಂದ ವರದಿಯಂತೆ ಒಂದು ಹಳ್ಳಿಯ ಹಿಂದೂಗಳು ಅಛೂತ್ (ಅಸ್ಪೃಶ್ಯ) ಕುಟುಂಬವೊಂದರ ಮೇಲೆ ಹಲ್ಲೆ ನಡೆಸಿದರು. ಒಬ್ಬ ವಯಸ್ಸಾದ ಹೆಂಗಸಿನ ಕೈಕಾಲುಗಳನ್ನು ಕಟ್ಟಿ ಹಾಕಿ, ಒಂದಷ್ಟು ಸೌದೆಯನ್ನು ಪೇರಿಸಿ ಅದರ ಮೇಲಕ್ಕೆ ಆಕೆಯನ್ನು ನೂಕಿ ಅದಕ್ಕೆ ನಂತರ ಬೆಂಕಿ ಹೊತ್ತಿಸಿದರು. ಇದಕ್ಕೆ ಕಾರಣ ಆ ಊರಿನಲ್ಲಿ ತಲೆದೋರಿದ್ದ ಕಾಲರಾಕ್ಕೆ ಅವಳೇ ಕಾರಣವೆಂದು ಅವರು ಬಗೆದಿದ್ದುದು."

೨೯ನೆಯ ಆಗಸ್ಟ್ ೧೯೪೬ರ 'ಟೈಂಸ್ ಆಫ್ ಇಂಡಿಯಾ' ಪತ್ರಿಕೆಯಿಂದ :

"ಕೈರಾ ಜಿಲ್ಲೆಯ ಒಂದು ಹಳ್ಳಿಯ ಹರಿಜನ ವಾಸಸ್ಥಳದ ಮೇಲೆ ಸವರ್ಣೀಯ ಹಿಂದೂಗಳು ದಾಳಿ ನಡೆಸಿದರೆಂದು ವರದಿಯಾಗಿದೆ. ಮಾಟಮಂತ್ರದ ಪ್ರಯೋಗದಿಂದ ದನಕರುಗಳ ಸಾವಿಗೆ ಹರಿಜನರು ಕಾರಣವಾಗಿದ್ದರೆಂಬ ಸಂಶಯದಿಂದ ಹೀಗೆ ಮಾಡಲಾಯಿತು.

ದೊಣ್ಣೆಗಳನ್ನು ಹಿಡಿದು ಸುಮಾರು ೨೦೦ ಗ್ರಾಮಸ್ಥರು ಹರಿಜನರ ಆವಾಸಸ್ಥಾನದ ಮೇಲೆ ದಾಳಿನಡೆಸಿದರೆಂದು ಹೇಳಲಾಗಿದೆ. ಒಬ್ಬ ಮುದುಕಿಯನ್ನು ಮರಕ್ಕೆ ಕಟ್ಟಿ ಹಾಕಿ ಅವಳ ಕಾಲುಗಳನ್ನು ಸುಡಲಾಯಿತೆಂದೂ ಹೇಳಲಾಗಿದೆ. ಇನ್ನೊಬ್ಬ ಹೆಂಗಸನ್ನು ಸದೆಬಡಿಯಲಾಯಿತೆಂದು ವರದಿಯಾಗಿದೆ.

ಭೀತಿಗೊಂಡ ಹರಿಜನರು ಹಳ್ಳಿಯಿಂದ ಓಡಿಹೋಗಿದ್ದರು. ಆದರೆ ಹರಿಜನ ಸೇವಕ ಸಂಘದ ಜಿಲ್ಲಾ ಕಾರ್ಯದರ್ಶಿ ಶ್ರೀ ಛೋಟಾಭಾಯಿ ಪಟೇಲ್ ಅವರು ವಿಷಯ ತಿಳಿದ ಕೂಡಲೆ ಅಲ್ಲಿಗೆ ತೆರಳಿ ಹರಿಜನರನ್ನು ಮತ್ತೆ ಹಳ್ಳಿಗೆ ಕರೆತಂದು ಸಂಬಂಧಪಟ್ಟವರಲ್ಲಿ ರಕ್ಷಣೆಗಾಗಿ ಮನವಿ ಮಾಡಿಕೊಂಡಿದ್ದಾರೆ.

ಇಂಥದೇ ಇನ್ನೊಂದು ಘಟನೆ ಬೇರೊಂದು ಹಳ್ಳಿಯಿಂದ ವರದಿಯಾಗಿದೆ; ಅಲ್ಲಿಯೂ ಹರಿಜನರನ್ನು ತೀವ್ರವಾಗಿ ಸದೆಬಡಿಯಲಾಗಿದೆಯೆಂದು ಹೇಳಲಾಗಿದೆ."

ವಿಷಯ ಇಲ್ಲಿಗೆ ಮುಕ್ತಾಯವಾಗಲಿಲ್ಲ. ಹಿಂಸೆಯು ಮತ್ತೆ ತಾಂಡವವಾಡಿತು. ಅಸ್ಪೃಶ್ಯರ ಮೇಲಿನ ವ್ಯಾಪಕ ಹಲ್ಲೆಯಲ್ಲಿ ಇಡೀ ಹಿಂದೂ ಜನಾಂಗ ಪಾಲ್ಗೊಂಡಿದ್ದಿತೆಂದು ವರದಿಯಾಗಿದೆ. ಕೆಳಗೆ ಉದ್ಧರಿಸಲಾಗಿರುವ ಸಮಾಚಾರವು 'ಭಾರತ್ ಜ್ಯೋತಿ' ಪತ್ರಿಕೆಯಲ್ಲಿ ೨೨ನೆಯ ಸೆಪ್ಟೆಂಬರ್ ೧೯೪೬ರಂದು ಪ್ರಕಟಿಸಲಾಗಿತ್ತು:

"ಹರಿಜನ ಸೇವಕ ಸಂಘದ ಬೋರ್ಸಾದ್ ತಾಲ್ಲೂಕ್ ಕಾರ್ಯದರ್ಶಿಯವರಿಗೆ ಬಂದಿರುವ ವರದಿಯಂತೆ ಕೈರಾ ಜಿಲ್ಲೆಯ ಬೋರ್ಸಾದ್ ತಾಲ್ಲೂಕಿನ ಒಂದು ಹಳ್ಳಿಯಲ್ಲಿ ಗ್ರಾಮಸ್ಥರ ಭಾರಿ ಗುಂಪೊಂದು ಹರಿಜನರ ಮೇಲೆ ಧರ್ಯಾ ಮತ್ತು ಲಾಠಿಗಳಿಂದ ಹಲ್ಲೆ ನಡೆಸಿದಾಗ ಒಬ್ಬ ಮಹಿಳೆಯೂ ಸೇರಿದಂತೆ ಐವರು ಹರಿಜನರು ತೀವ್ರವಾಗಿ ಗಾಯಗೊಂಡಿದ್ದಾರೆ. ಸುಮಾರು ಏಳು ಎಮ್ಮೆಗಳು ಸತ್ತಿದ್ದುದರ ಪರಿಣಾಮ ಈ ಹಲ್ಲೆ. ಹರಿಜನರು ಮಾಟವಿದ್ಯೆಯನ್ನು ಪ್ರಯೋಗಿಸುತ್ತಿದ್ದರೆಂದು ಗ್ರಾಮಸ್ಥರು ಶಂಕಿಸಿ ಎಮ್ಮೆಗಳು ಸತ್ತಿದ್ದು ಅದರಿಂದಾಗಿ ಎಂದು ಆರೋಪಿಸಿದ್ದಾರೆ.

ಗಾಯಗೊಂಡವರನ್ನು ಆಸ್ಪತ್ರೆಗೆ ಕಳುಹಿಸಲಾಗಿದೆ. ಗಲಭೆಯ ಪ್ರದೇಶಕ್ಕೆ ಪೋಲೀಸರು ಧಾವಿಸಿದರು. ಕೆಲವರನ್ನು ದಸ್ತಗಿರಿ ಮಾಡಲಾಗಿದೆ.

ಹರಿಜನರೇನಾದರೂ ಸಂಬಂಧಪಟ್ಟ ಅಧಿಕಾರಿಗಳಿಗೆ ದೂರಿತ್ತರೆ ಅವರನ್ನು ಜೀವಂತ ಸುಟ್ಟುಬಿಡುವುದಾಗಿ ಗ್ರಾಮಸ್ಥರು ಬೆದರಿಕೆ ಹಾಕಿದ್ದಾರೆಂದು ತಿಳಿದುಬಂದಿದೆ.

ಕೈರಾ ಜಿಲ್ಲೆಯ ಹಳ್ಳಿಗಳಲ್ಲಿ ಇಂತಹ ಘಟನೆಗಳು ಆಗಾಗ್ಗೆ ಸಂಭವಿಸುತ್ತಿರುತ್ತವೆ. ಹರಿಜನರಿಗೆ ಇಂತಹ ಕಿರುಕುಳ ಕೊಡುವುದರ ವಿರುದ್ಧ ಪೋಲೀಸರು ಮತ್ತು ಇತರೆ ಕಾರ್ಯಾಂಗದ ಅಧಿಕಾರಿಗಳು ಬಲವಾದ ಕ್ರಮಗಳನ್ನು ಕೈಗೊಳ್ಳಬೇಕೆಂದು ಜಿಲ್ಲಾ ಮ್ಯಾಜಿಸ್ಟ್ರೇಟರು ಅಪ್ಪಣೆ ಮಾಡಿದ್ದಾರೆ."

ಈ ಎಲ್ಲ ಘಟನೆಗಳೂ ಹೇಳುವ ಕತೆ ಸ್ಪಷ್ಟ ಮತ್ತು ಸರಳವಾಗಿದೆ. ಇದರ ಮೇಲೆ ಯಾವ ವ್ಯಾಖ್ಯಾನದ ಅಗತ್ಯವೂ ಇಲ್ಲ. ಒಬ್ಬ ಸಾಮಾನ್ಯ ಹಿಂದೂವಿಗೆ ಅಸ್ಪೃಶ್ಯನೆಂಬುವನು ಮಾನವಸಂಸರ್ಗಕ್ಕೆ ಕೂಡ ಯೋಗ್ಯನಲ್ಲ. ಕೆಡುಕಿನ ವಾಹಕ ಅವನು. ಅವನೊಬ್ಬ ಮಾನವಜೀವಿಯಲ್ಲ, ಅವನನ್ನು ಧಿಕ್ಕರಿಸಬೇಕು.

* * * *

# ಭಾಗ – ಎರಡು

## ಅಧ್ಯಾಯ ೬

# ಅಸ್ಪೃಶ್ಯತೆ ಮತ್ತು ಅರಾಜಕತೆ

ಇಷ್ಟೊಂದು ಅಸಮಾನತೆಗಳು ತುಂಬಿರುವ ಈ ನೆಲೆಗೊಂಡ ವ್ಯವಸ್ಥೆಯು ಹೇಗೆ ಉಳಿದು ಬಂದಿತೆಂಬುದು ಕೆಲವರಿಗೆ ಆಶ್ಚರ್ಯವೆನಿಸುತ್ತಿರಬಹುದು. ಅದನ್ನು ಬೆಂಬಲಿಸುವ ಶಕ್ತಿಗಳು ಯಾವುವು? ವ್ಯವಸ್ಥೆಯನ್ನು ಸುಭದ್ರಗೊಳಿಸುವ ಶಕ್ತಿಗಳಲ್ಲಿ ಅತಿ ಪ್ರಮುಖವಾದುದನ್ನು ಎಷ್ಟು ಬೆಲೆ ತೆರಬೇಕಾದರೂ ಸರಿಯೆ ಉಳಿಸಲೇಬೇಕೆಂಬುದು ಹಿಂದೂಗಳ ದೃಢನಿರ್ಧಾರ. ಅದನ್ನು ಎಳ್ಳಷ್ಟು ಸಹ ಅಲುಗಿಸಲು ಅಸ್ಪೃಶ್ಯರೇನಾದರೂ ಯತ್ನಿಸಿದರೆ ಅವರನ್ನು ದಮನಮಾಡಲು ಹಿಂದೂಗಳು ಎಂತಹ ಉಪಕ್ರಮಗಳನ್ನು ಬೇಕಾದರೂ ಬಳಸಲು ಸಿದ್ಧರಾಗಿರುತ್ತಾರೆ. ಸಾಮಾನ್ಯವಾಗಿ ಹಿಂಸೆಯಲ್ಲಿ ತೊಡಗದಂತಹ ಒಬ್ಬ ಹಿಂದೂವೂ ಅಸ್ಪೃಶ್ಯರ ವಿರುದ್ಧ ಎಂತಹ ಹಿಂಸೆಯನ್ನಾದರೂ ಪ್ರಯೋಗಿಸಲು ಹೇಸುವುದಿಲ್ಲ. ನೆಲೆಗೊಂಡ ವ್ಯವಸ್ಥೆಯನ್ನು ಭದ್ರಪಡಿಸಲು ಅವನು ಅಸ್ಪೃಶ್ಯರ ಮೇಲೆ ಎಂತಹ ಕ್ರೌರ್ಯವನ್ನು ಬೇಕಾದರೂ ಪ್ರದರ್ಶಿಸುತ್ತಾನೆ. ಇದನ್ನು ಬಹಳ ಮಂದಿ ಸುಲಭವಾಗಿ ನಂಬುವುದಿಲ್ಲ. ಆದರೂ ಇದೊಂದು ಸತ್ಯ. ಈ ಅಂಶದ ಬಗ್ಗೆ ಯಾರಿಗಾದರೂ ಸಂಶಯವಿದ್ದರೆ ವೃತ್ತಪತ್ರಿಕೆಗಳಲ್ಲಿ ಆಗಿಂದಾಗ್ಗೆ ವರದಿಯಾಗಿರುವ ಕೆಲವು ಘಟನೆಗಳನ್ನು ನೋಡಬಹುದು. ಇಲ್ಲಿ ನಾನು ಉಲ್ಲೇಖಿಸಿರುವುದೆಲ್ಲಾ ಹಿಂದೂಗಳು ಅಸ್ಪೃಶ್ಯರ ವಿರುದ್ಧ ಹರಿಯಬಿಟ್ಟಿರುವ ದಬ್ಬಾಳಿಕೆ ಮತ್ತು ತುಳಿತಕ್ಕೆ ಕೆಲವು ನಿದರ್ಶನಗಳಷ್ಟೆ :

## I

ಸೆಪ್ಟೆಂಬರ್ ೪, ೧೯೨೭ರಲ್ಲಿ ತನ್ನ ಸಂಚಿಕೆಯಲ್ಲಿ ದೆಹಲಿಯ 'ತೇಜ್' ಪತ್ರಿಕೆಯು ಕೆಳಕಂಡ ಸುದ್ದಿಯನ್ನು ಪ್ರಕಟಿಸಿತ್ತು :

"ವೈಕೋಂನ ಶಿವ ದೇವಾಲಯದ ಬಹಳ ಹತ್ತಿರದವರೆಗೆ ಬಂದು ಹರಿಜನರು ಆ ದೇವಾಲಯವನ್ನು ಹೊಲೆಗೆಡಸಿದ್ದಾರೆ. ಮತ್ತೆ ದೇವಾಲಯದಲ್ಲಿ ಪೂಜೆ ಸಲ್ಲಿಸಲು ಸಾಧ್ಯವಾಗುವ ಮುನ್ನ ಅಗಾಧವಾದ ವೆಚ್ಚದಲ್ಲಿ ದೇವಸ್ಥಾನವನ್ನು ಪವಿತ್ರಗೊಳಿಸುವ ಕೆಲಸವನ್ನು ವಿಧಿವತ್ತಾಗಿ ಮತ್ತು ವ್ಯಾಪಕವಾಗಿ ಕೈಗೊಳ್ಳಲು ಆ ಪ್ರದೇಶದ ಹಿಂದೂಗಳು ತೀರ್ಮಾನಿಸಿದ್ದಾರೆ."

'ಪ್ರತಾಪ್' ಪತ್ರಿಕೆಯ ಪ್ರತಿನಿಧಿಯು ಕೆಳಗಿನ ಘಟನೆಯನ್ನು ಪತ್ರಿಕೆಯ ಸೆಪ್ಟೆಂಬರ್ ೨, ೧೯೩೨ರ ಸಂಚಿಕೆಯಲ್ಲಿ ವರದಿ ಮಾಡಿದ್ದಾನೆ:

"ಮೀರತ್, ಆಗಸ್ಟ್ ೧೯೩೨: ಜನ್ಮಾಷ್ಟಮಿಯ ದಿನದಂದು ಕೆಲವು ಹರಿಜನರು ಸವರ್ಣೀಯ ಹಿಂದೂ ದೇವಾಲಯದೊಳಕ್ಕೆ ಪ್ರವೇಶ ಪಡೆಯಲು ಯತ್ನಿಸಿದರು. ಗೊಂದಲ ಮತ್ತು ಗಲಭೆಯಲ್ಲದೆ ಇದರಿಂದ ಯಾವ ಪ್ರಯೋಜನವೂ ಆಗಲಿಲ್ಲ. ದೇವಾಲಯಗಳ ಬಾಗಿಲುಗಳನ್ನು ಈ ವರ್ಷ ತಮಗೆ ತೆರೆಯದಿದ್ದರೆ ಸತ್ಯಾಗ್ರಹವನ್ನು ಹೂಡಬೇಕೆಂದು ಸ್ಥಳೀಯ ದಲಿತ ಸಂಘವು ತೀರ್ಮಾನಿಸಿತ್ತು. ಹಿಂದೂಗಳಿಗೆ ಇದು ತಿಳಿದಾಗ ಅವರು ಹರಿಜನರ ಪ್ರಯತ್ನವನ್ನು ಹತ್ತಿಕ್ಕಲು ಯೋಜನೆಗಳನ್ನು ಹಾಕಿಕೊಳ್ಳಲಾರಂಭಿಸಿದರು.

ಕಡೆಗೆ ಜನ್ಮಾಷ್ಟಮಿಯ ರಾತ್ರಿ ಹರಿಜನರ ಗುಂಪೊಂದು ಮೆರವಣಿಗೆಯಲ್ಲಿ ಬಂದು ದೇವರುಗಳ ಮಂದಿರಕ್ಕೆ ಪ್ರವೇಶ ಪಡೆಯಲು ಯತ್ನಿಸಿತು. ಆದರೆ ಪೂಜಾರಿಗಳು ಅವರಿಗೆ ಪ್ರವೇಶವನ್ನು ನಿರಾಕರಿಸಿದರು. ಅವರು ಹೇಳಿದರು. 'ನೀವು ಬೀದಿಯಲ್ಲಿ ನಿಂತುಕೊಂಡೇ ದೇವರುಗಳ ಸಾನ್ನಿಧ್ಯವನ್ನು ಪಡೆದುಕೊಳ್ಳಬಹುದು.' ಈ ಸಮಯಕ್ಕೆ ಆ ಜಾಗದಲ್ಲಿ ಒಂದು ದೊಡ್ಡ ಜನಸಂದಣಿ ಜಮಾಯಿಸಿತು. ಪೂಜಾರಿಗಳು ದೇವಸ್ಥಾನದೊಳಕ್ಕೆ ತೂರಿಕೊಳ್ಳಲು ಯತ್ನಿಸಿದಾಗ ಎರಡು ಗುಂಪುಗಳ ನಡುವೆ ಘರ್ಷಣೆ ನಡೆಯಿತು. ಎರಡು ಕಡೆಯವರಿಗೂ ಚೆನ್ನಾಗಿ ಪೆಟ್ಟುಬಿದ್ದಿದೆ."

ಹಿಂದೂ ದೇವಾಲಯಗಳನ್ನು ಪ್ರವೇಶಿಸಲು ಅಸ್ಪೃಶ್ಯರಿಗೆ ಹಿಂದೂಗಳು ಅವಕಾಶ ಕೊಡುವುದಿಲ್ಲ. ತಮ್ಮದೇ ದೇವಾಲಯಗಳನ್ನು ನಿರ್ಮಿಸಿಕೊಂಡು ಅಲ್ಲಿ ದೇವತಾ ಪ್ರತಿಮೆಗಳನ್ನು ಪ್ರತಿಷ್ಠಾಪಿಸಿಕೊಳ್ಳಲು ಅಸ್ಪೃಶ್ಯರಿಗೆ ಅವಕಾಶವಿರಬಹುದೆಂದು ಯಾರಾದರೂ ಅಂದುಕೊಳ್ಳಬಹುದು. ಅದೂ ತಪ್ಪು ಗ್ರಹಿಕೆಯೇ. ಹಿಂದೂಗಳು ಅದಕ್ಕೂ ಅವಕಾಶ ನೀಡುವುದಿಲ್ಲ. ಇದಕ್ಕೆ ಎರಡು ನಿದರ್ಶನಗಳನ್ನು ಉದ್ಧರಿಸಿದರೆ ಸಾಕಾಗಬಹುದು. ಮೊದಲನೆಯದು ೧೨ನೆಯ ಫೆಬ್ರವರಿ ೧೯೨೩ರ 'ಪ್ರತಾಪ್' ಪತ್ರಿಕೆಯಿಂದ ಆಯ್ದುಕೊಂಡಿದ್ದು:

"ಆಗ್ರಾ ಜಿಲ್ಲೆಯಲ್ಲಿ ಬ್ರಾಹ್ಮಣನೊಬ್ಬ ತನ್ನ ಮನೆಯಲ್ಲಿ ವಿಷ್ಣುವಿನ ವಿಗ್ರಹವನ್ನು ಪೂಜಿಸುತ್ತಿದ್ದುದನ್ನು ಒಬ್ಬ ಚಮ್ಮಾರ ನೋಡಿದ್ದ. ಅಂತೆಯೇ ಅವನೂ ಮಾಡಲಾರಂಭಿಸಿದ. ಬ್ರಾಹ್ಮಣನಿಗೆ ಇದು ತಿಳಿದುಬಂದಾಗ ಅವನು ವಿಪರೀತ ಕ್ರುದ್ಧನಾದ ಮತ್ತು ಹಳ್ಳಿಯ ಇತರರ ಸಹಾಯ ಪಡೆದು ಈ ಪಾಪದ ಹರಿಜನನನ್ನು ಹಿಡಿದ. ಅವನಿಗೆ ಚೆನ್ನಾಗಿ ಬಡಿದು ಹೇಳಿದ : 'ವಿಷ್ಣುವಿನಂಥ ದೇವರನ್ನು ಒಲಿಸಿಕೊಳ್ಳುವ ಪ್ರಯತ್ನ ಮಾಡುವಷ್ಟು ಉದ್ಧಟತನ ಬಂತೇ ನಿನಗೆ?' ಕಡೆಗೆ ಅ ಹರಿಜನರವನ ಬಾಯಿಗೆ ಒಂದಿಷ್ಟು ಹೊಲಸನ್ನು ತುರುಕಿ ಬಿಟ್ಟುಬಿಟ್ಟರು. ಒಣ ಹತಾಶೆಯಿಂದ ಕಡೆಗೆ ಆ ಚಮ್ಮಾರ ಹಿಂದೂ ಧರ್ಮವನ್ನು ಒಗೆದ, ಇಸ್ಲಾಂ ಧರ್ಮವನ್ನವಲಂಬಿಸಿದ."

ಇನ್ನೊಂದು ೪ನೆಯ ಜುಲೈ ೧೯೩೮ರ "ಹಿಂದೂ" ಪತ್ರಿಕೆಯಿಂದ ಆಯ್ದದ್ದು :

"ಬಳ್ಳಾರಿಯ ಜಿಲ್ಲೆಯ ಹರಿಜನ ಸಲಹಾ ಮಂಡಲಿಯ ಸಭೆಯು ಜಿಲ್ಲೆಯ ಕಲೆಕ್ಟರ್ ಅವರ ನಿವಾಸದಲ್ಲಿ ೨೯ನೆಯ ಜೂನ್ ೧೯೩೮ರಂದು ನಡೆಯಿತು. ಮಂಡಲಿಯ ಅಧ್ಯಕ್ಷ ಹಾಗೂ ಜಿಲ್ಲೆಯ ಕಲೆಕ್ಟರ್ ಶ್ರೀ ಎ.ಡಿ. ಕ್ರಾಂಬಿ, ಸಿ.ಐ.ಇ., ಐ.ಸಿ.ಎಸ್., ಅವರು ಅಧ್ಯಕ್ಷತೆ ವಹಿಸಿದ್ದರು.

ನಾರಾಯಣದೇವರ ಕೇರಿಯ ಹರಿಜನರ ಬೇಗುದಿಯನ್ನು ಕುರಿತಂತೆ ಒಂದು ಅಧಿಕೃತ ವರದಿಯನ್ನು ಪಡೆಯಲು ತೀರ್ಮಾನಿಸಲಾಯಿತು. ಅವಶ್ಯವೆನಿಸಿದರೆ ನಂತರ ಸೂಕ್ತಕ್ರಮವನ್ನು ಕೈಗೊಳ್ಳಲಾಗುವುದು. ಬಲವಂತ ದುಡಿಮೆಯನ್ನು ಅವರಿಂದ ಸೆಳೆಯುವುದು ಮತ್ತು ಲೇವಾದೇವಿ ಮಾಡುವವರಿಂದ ಕಿರುಕುಳ– ಇವರೆಡೂ ಹರಿಜನರ ದೂರಿನಲ್ಲಿತ್ತು.

ಕುಡತಿನಿ ಹಳ್ಳಿಯಲ್ಲಿ ವಾಸಿಸುವ ಹರಿಜನರು ಧಾರ್ಮಿಕ ದೌರ್ಬಲ್ಯವನ್ನೆದುರಿಸುತ್ತಿರುವುದನ್ನು ಸಮಿತಿಯ ಗಮನಕ್ಕೆ ತರಲಾಯಿತು. ಸುಮಾರು ಹನ್ನೆರಡು ವರ್ಷಗಳಷ್ಟು ಹಿಂದೆಯೇ ಅವರು ತಮ್ಮ ಕಾಲೋನಿಯಲ್ಲಿ ದೇವಸ್ಥಾನವೊಂದನ್ನು ಕಟ್ಟಿಕೊಂಡಿದ್ದರಾದರೂ ಆಗಲೇ ಸಿದ್ಧಗೊಳಿಸಲಾಗಿದ್ದ ದೇವರ ವಿಗ್ರಹವನ್ನು ಪ್ರತಿಷ್ಠಾಪಿಸಿಕೊಳ್ಳಲು ಅವರಿಗೆ ಇನ್ನೂ ಸಾಧ್ಯವಾಗಿಲ್ಲವೆಂದು ಹೇಳಲಾಗಿದೆ. ವಿಗ್ರಹದ ಪ್ರತಿಷ್ಠಾಪನೆಗೆ ಮುನ್ನ ಅದನ್ನು ಗ್ರಾಮದಲ್ಲಿ ಮೆರವಣಿಗೆಯಲ್ಲಿ ಕೊಂಡೊಯ್ಯಲು ಸವರ್ಣೀಯ ಹಿಂದೂಗಳ ಒಂದು ವಿಭಾಗವು ಹರಿಜನರಿಗೆ ಅವಕಾಶಕೊಡಲು ಆಕ್ಷೇಪವೆತ್ತಿರುವುದೇ ಇದಕ್ಕೆ ಕಾರಣವಾಗಿದೆ."

## II

ಹಿಂದೂಗಳಿಗೆ ಸೇರಿದ ಬಾವಿಯಿಂದ ನೀರು ತೆಗೆದುಕೊಳ್ಳಲು ಯತ್ನಿಸಿದರೆ ಹಿಂದೂಗಳು ಅದಕ್ಕೆ ಹೇಗೆ ಶಾಸ್ತಿ ಮಾಡುತ್ತಾರೆಂಬುದಕ್ಕೆ ಕೆಳಗಿನ ನಿದರ್ಶನಗಳು ಉಪಯುಕ್ತವಾಗಿವೆ. ಮೊದಲನೆಯ ೧೨ನೆಯ ಫೆಬ್ರವರಿ ೧೯೨೩ರಂದು 'ಪ್ರತಾಪ್' ಪತ್ರಿಕೆಯಲ್ಲಿ ಪ್ರಕಟವಾಗಿತ್ತು :

"ಇದು ಮಹಾಶಯ ಭೇದಿ ಲಾಲ್‌ಜಿ ಎಂಬುವರ ವರದಿ : ಒಬ್ಬ ಚಮ್ಮಾರ ವಿಗ್ರಹಾರಾಧನೆಯಲ್ಲಿ ತೊಡಗಲು ಹೊರಟಿದ್ದ. ದಾರಿಯಲ್ಲಿ ಅವನಿಗೆ ಬಾಯಾರಿಕೆಯಾಯಿತು. ತನ್ನದೇ ಕಬ್ಬಿಣದ ಬಿಂದಿಗೆಯನ್ನು ಬಾವಿಯೊಳಕ್ಕೆ ಇಳಿಬಿಟ್ಟು ನೀರನ್ನು ಎಳೆದುಕೊಂಡ. ಒಬ್ಬ ಸವರ್ಣೀಯ ಹಿಂದೂ ಇದಕ್ಕಾಗಿ ಅವನಿಗೆ ಛೀಮಾರಿ ಹಾಕಿದ. ನಂತರ ಅವನನ್ನು ಚೆನ್ನಾಗಿ ಥಳಿಸಿ, ಒಂದು ಕೋಣೆಯಲ್ಲಿ ಕೂಡಿಹಾಕಿದ. ಆಕಸ್ಮಾತ್ತಾಗಿ ಆಗ ನಾನು ಅತ್ತ ಹೋಗುತ್ತಿದ್ದೆ ಅವನನ್ನು ಕೂಡಿ ಬೀಗ ಹಾಕಿಟ್ಟಿರುವುದು ಏಕೆಂದು ವಿಚಾರಿಸಲಾಗಿ ದಿವಾನ್ ಸಾಹೇಬರು ಹೇಳಿದ್ದು : ಅವನು ತನ್ನ ಬಿಂದಿಗೆಯನ್ನು ಬಾವಿಯೊಳಕ್ಕೆ ಇಳಿಬಿಟ್ಟು ನೀರು ಸೇದಿಕೊಳ್ಳಲು ಹೋಗಿದ್ದ, ಧರ್ಮವನ್ನು ಕೆಡಿಸಲು ಹೊರಟಿದ್ದಾನೆ ಅವನು."

ಹಿಂದೂಗಳ ಬಾವಿಯಿಂದ ನೀರು ಸೇದಿಕೊಳ್ಳುವ ಹುಚ್ಚು ಧೈರ್ಯ ತೋರಿದರೆ ಅಸ್ಪೃಶ್ಯರನ್ನು ಬಡಿದುಹಾಕುವ ಹಿಂದೂಗಳ ಉಪಕ್ರಮದಲ್ಲಿ ಹಿಂದೂ ಹೆಂಗಸರು ಸಹ ಪಾಲ್ಗೊಳ್ಳಲು ಅಂಜುವುದಿಲ್ಲವೆಂಬುದು ಒಂದು ಸತ್ಯ. ೨೬ನೆಯ ಫೆಬ್ರವರಿ ೧೯೩೨ರ 'ಪ್ರತಾಪ್' ಪತ್ರಿಕೆಯಲ್ಲಿ ಪ್ರಕಟವಾದ ಕೆಳಗಿನ ವರದಿಯನ್ನು ಗಮನಿಸಿ :

"ಪೂಲ್ ಬಾಜ್ವಾನ್ ಎಂಬ ಹಳ್ಳಿಯಲ್ಲಿ ೧೯ನೆಯ ಫೆಬ್ರವರಿ ೧೯೩೨ರಂದು ಒಂದು ದುರಂತ ಸಂಭವಿಸಿತು. ಮಹಾಶಯ ರಾಮಲಾಲ್ ಎಂಬುವನು ಬಾವಿಯಿಂದ ನೀರು ತರಲು ಹೋದಾಗ ನಡೆದದ್ದು ಇದು. ೧೩ನೆಯ ಜನವರಿ ೧೯೩೨ರಂದು ಮಹಾಶಯ ರಾಮಲಾಲ್ ಮತ್ತು ಆತನ ಸಂಗಡಿಗ ಪಂಡಿತ ಬನ್ಸೀಲಾಲ್ ಇಬ್ಬರನ್ನೂ ಕೆಲವು ರಜಪೂತರು ಸದೆಬಡಿದಿದ್ದದ್ದು ಇದೇ ಬಾವಿಯ ಬಳಿ. ಆಗ ರಜಪೂತ ಹೆಂಗಸರ ಒಂದು ಗುಂಪು ಎಲ್ಲ ಬಗೆಯ ದಡಿಗಳನ್ನೂ ದೊಣ್ಣೆಗಳನ್ನು ಹಿಡಿದು ಬಂದು ಮಹಾಶಯನಿಗೆ ವರ್ಣಿಸಲಸದಳವಾದ ರೀತಿಯಲ್ಲಿ ಚಚ್ಚಿಹಾಕಿದ್ದರು. ರಜಪೂತ ಹೆಂಗಸರು ಚಚ್ಚುವ ಕೆಲಸವನ್ನು ಮುಗಿಸುವ ವೇಳೆಗೆ ಆತನ ಮೈಯೆಲ್ಲಾ ರಕ್ತದಿಂದ ತೊಯ್ದುಹೋಗಿತ್ತು. ಈ ಬಾರಿ ಆತನನ್ನು ಫೂಕ್ಲಿಯಾನ್‌ನಲ್ಲಿ ಆಸ್ಪತ್ರೆಗೆ  ದಾಖಲು ಮಾಡಲಾಗಿದೆ."

ಬಾವಿಯಿಂದ ನೀರು ತೆಗೆದುಕೊಳ್ಳುವ ಹಕ್ಕನ್ನು ಅಸ್ಪೃಶ್ಯರು ಚಲಾಯಿಸಿದರೆ ಒಬ್ಬ ಸರ್ಕಾರಿ ಅಧಿಕಾರಿಯ ಬೆಂಬಲವಿದ್ದರೂ ಅವರ ಮೇಲೆ ಹಲ್ಲೆ ತಪ್ಪಿದ್ದಲ್ಲವೆಂಬುದನ್ನು ಕೆಳಗಿನ ಘಟನೆ ಸ್ಪಷ್ಟಪಡಿಸುತ್ತದೆ. ೮ನೆಯ ಜೂನ್ ೧೯೨೪ರಂದು 'ಮಿಲಾಪ್' ಪತ್ರಿಕೆಯಲ್ಲಿ ಅದು ಪ್ರಕಟವಾಗಿತ್ತು:

"ಕೆಲವು ದಿನಗಳ ಹಿಂದೆ ನಾಲಾ ವಿಭಾಗದ ಅಧಿಕಾರಿಯೊಬ್ಬ ಸಭಾ ತೇಹ್ಸಿಲ್‌ನ ರಾಹಿಯಾನ್ ಎಂಬ ಹಳ್ಳಿಗೆ ಹೋಗಿದ್ದ. ಒಂದು ಬಾವಿಯಿಂದ ನೀರು ಸೇದಿಕೊಡಬೇಕೆಂದು ಕೆಲವು ಮೇಘಾ ಅಸ್ಪೃಶ್ಯರಿಗೆ ಅವನು ಆಜ್ಞೆ ಮಾಡಿದ. ಹಾಗೆ ಮಾಡಲು ಮೊದಲಿಗೆ ಅವರು ನಿರಾಕರಿಸಿದರು. ಅಧಿಕಾರಿಯು ಅವರನ್ನು ನಿಷ್ಠುರವಾಗಿ ಬೈದು ನೀರು ಸೇದಿಕೊಡಲು ಬಲವಂತ ಮಾಡಿದ. ಮಾರನೆಯ ದಿನ ಹಿಂದೂಗಳು ಬಾವಿಯ ಬಳಿ ಜಮಾಯಿಸಿದರು. ಒಬ್ಬ ಚೌಕಿದಾರನ ಕೈಯಲ್ಲಿ ಆ ಮೇಘಾ ಅಸ್ಪೃಶ್ಯರು ಅಲ್ಲಿಗೆ ಬರಬೇಕೆಂದು ಹೇಳಿಕಳುಹಿಸಿದರು. ಬಾವಿಯ ಬಳಿಗೆ ಬಂದು ನಿಲ್ಲಲು ನಿಮಗೆಷ್ಟು ಧೈರ್ಯ ಎಂದು ಅವರನ್ನು ತರಾಟೆಗೆ ತೆಗೆದುಕೊಂಡರು. ಹಾಗೆ ಮಾಡಲು ಅವರನ್ನು ನಿರ್ಬಂಧಿಸಲಾಯಿತೆಂದೂ ಅದು ಅವರ ತಪ್ಪಲ್ಲವೆಂದೂ

ಒಬ್ಬ ಮೇಘಾ ಉತ್ತರ ಕೊಟ್ಟ. ಈ ಧಾರ್ಷ್ಟ್ಯವನ್ನು ತೋರಿಸಿದ್ದಕ್ಕೆ ಹಿಂದೂಗಳು ಕೋಲು ಮತ್ತು ಕೈಗಳಿಂದ ಅವನ ಮೇಲೆರಗಿಬಿದ್ದರು. ಈ ವರದಿಯನ್ನು ಬರೆಯುತ್ತಿರುವ ಸಮಯದಲ್ಲಿ ಇನ್ನೂ ಆತ ಪ್ರಜ್ಞಾಹೀನನಾಗಿಯೇ ಉಳಿದಿದ್ದಾನೆ. ಅವನಿಗಾಗಿರುವುದು ಲಘು ಗಾಯಗಳು ಮಾತ್ರವೇ ಎಂದು ವೈದ್ಯರು ಹೇಳಿದ್ದಾಗ್ಯೂ ಪೊಲೀಸರಲ್ಲಿ ಒಂದು ಫಿರ್ಯಾದನ್ನು ದಾಖಲುಮಾಡಿ ಕೊಲ್ಲುವ ಯತ್ನ ಮತ್ತು ಕಾನೂನು ಬಾಹಿರವಾದ ಜಮಾವಣೆಯ ಆಪಾದನೆಗಳನ್ನು ಮಾಡಲಾಗಿದೆ. ಆದರೆ ಇದನ್ನು ಗಣನೆಗೆ ತೆಗೆದುಕೊಂಡಿಲ್ಲ. ಪೊಲೀಸರ ಔದಾಸೀನ್ಯವು ಮೇಘಾ ಜನರಲ್ಲಿ ಅಭದ್ರತೆಯ ಭಾವನೆಯನ್ನು ಹೆಚ್ಚಿಸಿದೆ. ಗ್ರಾಮಸ್ಥರು ಅವರಿಗೆ ಬಹಳವಾಗಿ ಕಿರುಕುಳ ನೀಡುತ್ತಿದ್ದಾರೆ. ಅವರ ದನಕರುಗಳಿಗೆ ಸಹ ನೀರು ಕುಡಿಯಲು ಬಿಡುತ್ತಿಲ್ಲ. ಎಲ್ಲ ಬಾವಿ–ಕೆರೆಗಳನ್ನೂ ಅವರಿಗೆ ಮುಚ್ಚಲಾಗಿದೆ."

ಹಿಂದೂಗಳ ಬಾವಿಯಿಂದ ಅಸ್ಪೃಶ್ಯರು ನೀರು ತೆಗೆದುಕೊಳ್ಳಲಾರರೆಂಬುದಷ್ಟೇ ವಿಷಯವಲ್ಲ. ತಮ್ಮ ಸ್ವಂತಕ್ಕೆ ಅವರು ಇಟ್ಟಿಗೆಯಿಂದ ಕಟ್ಟಿದ ಪಕ್ಕಾ ಬಾವಿಯನ್ನು ತೋಡಿಕೊಳ್ಳುವಂತೆಯೂ ಇಲ್ಲ. ಅದಕ್ಕೆ ಅವರದೇ ಹಣವನ್ನು ತೊಡಗಿಸುವುದಾದರೂ ಇದಕ್ಕೆ ಅಡ್ಡಿಯಿದೆ. ಸ್ವಂತಕ್ಕೆ ಅವರು ಪಕ್ಕಾ ಬಾವಿಯನ್ನು ಇರಿಸಿಕೊಳ್ಳುವುದೆಂದರೆ ಹಿಂದೂಗಳ ಜೊತೆ ಸಮಾನಸ್ಥಾನಕ್ಕೆ ಏರುವುದು ಎಂದರ್ಥ ಮತ್ತು ಸ್ಥಾಪಿತ ವ್ಯವಸ್ಥೆಗೆ ವಿರುದ್ಧವಾದದ್ದು ಅದು.

೭ನೆಯ ಜೂನ್ ೧೯೩೪ರ ತನ್ನ ಸಂಚಿಕೆಯಲ್ಲಿ 'ಮಿಲಾಪ್' ಪತ್ರಿಕೆಯು ಕೆಳಕಂಡ ವರದಿಯನ್ನು ಪ್ರಕಟಿಸಿದೆ :

"ಪಂಜಾಬಿನ ಅಛೂತ್ ಉದ್ಧಾರಕ ಸಮಿತಿಯ ಕಾರ್ಯದರ್ಶಿ ಲಾಲಾ ರಾಮ್ ಪ್ರಸಾದ್‌ಜೀಯವರು ಬರೆದು ಕಳುಹಿಸಿರುವುದು ಇದು"

"ಈ ವರ್ಷದ ಬೇಸಿಗೆಯಲ್ಲಿ ನೀರಿನ ಸರಬರಾಜು ದೊಡ್ಡ ಸಮಸ್ಯೆಯಾಗಿದೆಯೆಂದು ಎಲ್ಲ ಕಡೆಗಳಿಂದಲೂ ದೂರುಗಳು ಬರುತ್ತಿವೆ. ತಮ್ಮದೇ ಆದ ಬಾವಿಗಳಿಲ್ಲದಿರುವ ಕೀಳುವರ್ಗದ ಜನ ತಮ್ಮ ಪಾತ್ರೆಗಳನ್ನು ಹಿಡಿದು ಬಾವಿಗಳ ಬಳಿ ಕುಳಿತಿರುತ್ತಾರೆ. ಯಾರಾದರೂ ಕನಿಕರ ತೋರಿ ಒಂದಿಷ್ಟು ನೀರು ಸುರಿದರೇನೋ ಸರಿ. ಇಲ್ಲದಿದ್ದರೆ ಅವರು ಅಸಹಾಯಕರಾಗಿ ಕುಳಿತೇ ಇರಬೇಕಾಗಿದೆ. ಕೆಲವೆಡೆಗಳಲ್ಲಿ ಅವರು ಹಣ ಕೊಟ್ಟರೂ ಹಾಗೆ ಅವರಿಗೆ ನೀರು ಸುರಿಯಕೂಡದೆಂಬ ಪ್ರತಿಬಂಧಕವಿದೆ; ಇದಕ್ಕೆ ವಿರುದ್ಧವಾಗಿ ಯಾರಾದರೂ ನೀರು ಸುರಿದರೆ ಜಿದ್ದಾಜಿದ್ದಿನ ಹೊಡೆದಾಟಗಳು ಸಂಭವಿಸುತ್ತವೆ."

೨೧ನೆಯ ಏಪ್ರಿಲ್ ೧೯೨೪ರ 'ತೇಜ್' ಪತ್ರಿಕೆಯಲ್ಲಿ ವರದಿಯಾದ ಒಂದು ಘಟನೆಯೂ ಇದೇ ರೀತಿಯದ್ದು.

"ಓಪಾಡ್ ಎಂಬ ಹಳ್ಳಿಯಲ್ಲಿರುವ ಚಮ್ಮಾರರು ಒಟ್ಟು ಸುಮಾರು ೨೫೦. ಸುಮಾರು ಒಂದೂವರೆ ತಿಂಗಳ ಹಿಂದೆ ಮುಸಲ್ಮಾನ ನೀರುವಾಹಕರು ಚರ್ಮದ ಚೀಲಗಳಲ್ಲಿ ತುಂಬಿ ತರುತ್ತಿದ್ದ ನೀರು ಕುಡಿಯುವುದನ್ನು ಅವರು (ಆರ್ಯಸಮಾಜದ ಪಂಡಿತರ ಸೂಚನೆಯ ಮೇರೆಗೆ?) ಬಿಟ್ಟುಬಿಟ್ಟರು. ಈಗ ನೀರು ಪೂರೈಕೆಯ ಮುಗ್ಗಟ್ಟನ್ನು ಅವರು ಎದುರಿಸುತ್ತಿದ್ದಾರೆ. ಹಳ್ಳಿಯ ಬಾವಿಗಳಿಂದ ನೀರು ಸೇದಿಕೊಳ್ಳಲು ಊರಿನ ಜಾಟರು ಅವರಿಗೆ ಬಿಡುವುದಿಲ್ಲ; ಮಾತ್ರವಲ್ಲ, ಸ್ವಂತದ ಬಾವಿಗಳನ್ನು ತೋಡಿಕೊಳ್ಳಲು ಸಹ ಅವರನ್ನು ಬಿಡುತ್ತಿಲ್ಲ. ಹೊಂಡ ಮತ್ತು ಗುಂಡಿಗಳಿಂದ ತಂದ ನೀರಿನಿಂದ ಈ ಬಡ ಚಮ್ಮಾರರು ಜೀವನ ಸಾಗಿಸುತ್ತಿದ್ದಾರೆ. ದಲಿತ ಸುಧಾರಕ ಸಮಿತಿ (ಹರಿಜನೋದ್ಧಾರ ಸಮಿತಿ)ಯ ಕಾರ್ಯದರ್ಶಿ ಡಾ॥ ಸುಖದೇವ್‌ಜೀಯವರು ಗ್ರಾಮದಲ್ಲಿ ತನಿಖೆ ನಡೆಸಲು ಬಂದಿದ್ದು ಎಲ್ಲವನ್ನೂ ತಮ್ಮ ಕಣ್ಣುಗಳಿಂದಲೇ ನೋಡಿದರು. ವಿವರಿಸಲು ಅಸಾಧ್ಯವಾದಂತಹ

ಬೇನೆಯು ಚಮ್ಮಾರರದ್ದಾಗಿದೆಯೆಂಬುದನ್ನೂ ಜಾಟರಿಂದ ಅಸ್ಪೃಶ್ಯರಿಗೆ ಉಂಟಾಗುತ್ತಿರುವ ಉಪಟಳ ನಿಜವಾದುದೆಂದೂ ಅವರು ಕಂಡುಕೊಂಡರು."

ಕೆಳಗಿನದನ್ನು ೯ನೆಯ ಮೇ ೧೯೩೧ರ 'ಟೈಂಸ್ ಆಫ್ ಇಂಡಿಯಾ'ದಿಂದ ತೆಗೆದುಕೊಳ್ಳಲಾಗಿದೆ:

"ಬರೋಡ ರಾಜ್ಯದಲ್ಲಿ ಅಸ್ಪೃಶ್ಯರನ್ನು ಪಕ್ಕದ ಬ್ರಿಟಿಷ್ ಭಾಗದಲ್ಲಿ ನೋಡಿಕೊಳ್ಳುವುದಕ್ಕಿಂತ ಉತ್ತಮವಾಗಿ ನೋಡಿಕೊಳ್ಳುತ್ತಾರೆಂಬ ಮಾತಿದೆ. ಏಕೆಂದರೆ ಸವರ್ಣೀಯರೊಡನೆ ಅಂತ್ಯಜರು ಸಮಾನರೆಂಬುದನ್ನು ಎತ್ತಿಹಿಡಿಯುವ ಕಾನೂನನ್ನು ಆ ರಾಜ್ಯದಲ್ಲಿ ಜಾರಿಗೊಳಿಸಲಾಗಿದೆ. ಹಾಗಿದ್ದರೂ ಪಾದ್ರಾಸ್ ತಾಲೂಕಿನಲ್ಲಿ ಇತ್ತೀಚೆಗೆ ಒಬ್ಬ ಅಂತ್ಯಜ ಬಡಹೆಂಗಸಿಗೆ ಸೇರಿದ ಫಸಲನ್ನು ಸುಟ್ಟುಹಾಕಲಾಯಿತು. ಮತ್ತು ಅವಳನ್ನು ಅಮಾನುಷ ಹಲ್ಲೆಗೆ ಗುರಿಪಡಿಸಲಾಯಿತು. ಅವಳ ಚಿಕ್ಕಮಗನನ್ನು ಸ್ಥಳೀಯ ಪ್ರಾಥಮಿಕ ಶಾಲೆಗೆ ಕಳಿಸುವ ಧೈರ್ಯ ತೋರಿದ್ದೇ ಇದಕ್ಕೆ ಕಾರಣ. ಕಡೀ ಪ್ರಾಂತ್ಯದ ಚನಾಸ್ಮಾದಿಂದ ಇನ್ನೊಂದು ದಾರುಣ ಘಟನೆ ಇದೀಗ ನಡೆದಿದೆ. ಅಲ್ಲಿ ಒಂದು ಬುಗ್ಗೆಯ ಕೊಳವೆ ಬಾವಿಯನ್ನು ಕೊರೆಯಲಾಗಿದೆ. ಅದನ್ನು ಉಪಯೋಗಿಸಲು ಅಪ್ಪಣೆ ನೀಡಲಾಗುವುದೆಂದು ಹೇಳಿ ಅಂತ್ಯಜರ ದುಡಿಮೆಯಿಂದ ಅದನ್ನು ಕಟ್ಟಿಸಿದ್ದು, ಆದರೆ ಬಾವಿಯು ಸಿದ್ಧವಾದ ಮೇಲೆ ಅದು ಅವರ ಬಳಕೆಗಲ್ಲವೆಂದು ಮೊದಲು ಅವರಿಗೆ ಖಡಾಖಂಡಿತವಾಗಿ ಹೇಳಲಾಯಿತು. ಇದರ ಬಗ್ಗೆ ಪಂಚರಿಗೆ ದೂರಿತ್ತಾಗ ಆತ ಉದಾರವಾಗಿ ಅವರಿಗೆ ೫೦೦ ಅಡಿ ಉದ್ದದ ಪೈಪನ್ನು ಹಾಸಿ ಅದರ ತುದಿಯಲ್ಲಿ ಕೇವಲ ತಮ್ಮ ಉಪಯೋಗಕ್ಕಾಗಿ ಒಂದು ನಲ್ಲಿಯನ್ನು ಇಟ್ಟುಕೊಳ್ಳಬಹುದೆಂದು ತಿಳಿಸಿದ. ಇಷ್ಟರಲ್ಲಿ ನಲ್ಲಿಯನ್ನು ಇರಿಸಲಾಗಿದ್ದ ಜಾಗವು ತನ್ನದೆಂದು ಹೇಳಿಕೊಳ್ಳುವವನೊಬ್ಬ ಅನಿರೀಕ್ಷಿತವಾಗಿ ಹುಟ್ಟಿಕೊಂಡ. ಆದ್ದರಿಂದ ಪೈಪನ್ನು ಸ್ಥಳೀಯ ಕೆರೆಯ ಹತ್ತಿರದ ಒಂದು ಜಾಗದವರೆಗೆ ವಿಸ್ತರಿಸಲಾಯಿತು. ಇದು ಕೆರೆಯನ್ನು ಮಲಿನಗೊಳಿಸುತ್ತದೆಂಬ ಶಂಕೆಯನ್ನು ಆಮೇಲೆ ಎತ್ತಲಾಯಿತು. ಅಲ್ಲಿ ಬಟ್ಟೆ ಒಗೆಯಲು ತೊಂದರೆಯಾಗುತ್ತದೆಂದೂ ಹೇಳಲಾಯಿತು. ಆದ್ದರಿಂದ ನಲ್ಲಿಯನ್ನು ಬೇರೊಂದು ಕಡೆ ಇಡಲಾಯಿತು. ಅಂದರೆ, ಇಲ್ಲಿಗೆ ತೊಂದರೆಯ ನಿವಾರಣೆಯಾಯಿತೆನ್ನಬಹುದೆ? ಇಲ್ಲ. ಕೋಪಗೊಂಡ ಸವರ್ಣೀಯರು ಈಗಾಗಲೆ ಹಲವು ಬಾರಿ ಪೈಪನ್ನು ಬೇರೆಬೇರೆ ಕಡೆ ಒಡೆದುಹಾಕಿದ್ದಾರೆ ಮತ್ತು ಅಂತ್ಯಜರಿಗೆ ಕುಡಿಯಲು ನೀರಿಲ್ಲದಾಗಿದೆ. ಶ್ರೀ ಗಾಂಧಿಯವರ ಪದವನ್ನು ಪ್ರಯೋಗಿಸುವುದಾದರೆ ಅಸ್ಪೃಶ್ಯರಿಗೆ ತಮ್ಮ ಸಹಧರ್ಮೀಯರು ನೀಡುವ ವರ್ತನೆ ಎಷ್ಟು 'ಸಮರ್ಪಕ'ವೆಂಬುದು ಇದರಿಂದ ತಿಳಿಯುತ್ತದೆ."

ಶ್ರೀ ಸಂಜನ ಎಂಬುವರು 'ಟೈಂಸ್ ಆಫ್ ಇಂಡಿಯಾ' ದ ೭ನೆಯ ನವೆಂಬರ್ ೧೯೨೮ರ ಸಂಚಿಕೆಯಲ್ಲಿ ಪತ್ರ ಬರೆದು ವರದಿಯೊಂದನ್ನು ನೀಡಿದ್ದಾರೆ. ನೀರಿಗೆ ಸಂಬಂಧಿಸಿದಂತೆ ಅಸ್ಪೃಶ್ಯರು ಅನುಭವಿಸುವ ದಾರುಣತೆಯನ್ನು ೧೯೨೮ರಲ್ಲಿ ಶ್ರೀ ಠಕ್ಕರ್ ಅವರು ಕಂಡಿದ್ದುದರ ವರದಿ ಅದು:

"ಯಾರಾದರೂ ಕರುಣಾಮಯಿ ಜನ ಸ್ವಲ್ಪ ನೀರು ಕೊಡುತ್ತಾರೇನೋ ಎಂದು ಒಬ್ಬ ಭಂಗಿ ಹೆಂಗಸು ಬಲ್ಸಾದ್ ತಾಲೂಕಿನ ಹಳ್ಳಿಯೊಂದರ ಬಾವಿಯ ಬಳಿ ಕಾಯುತ್ತಿದ್ದುದನ್ನು ಶ್ರೀ ಠಕ್ಕರ್ ನೋಡಿದರು. ಬೆಳಗಿನಿಂದ ಮಧ್ಯಾಹ್ನದವರೆಗೆ ಆಕೆ ಹಾಗೆ ಕಾದುನಿಂತಿದ್ದಳು. ಆದರೆ ಯಾರೂ ಅವಳಿಗೆ ಒಂದು ಹನಿ ನೀರನ್ನೂ ಕೊಟ್ಟಿರಲಿಲ್ಲ. ಭಂಗಿಗಳಿಗೆ ನೀರು ಕೊಡುವ ವೈಖರಿಯಲ್ಲಿ ಅತ್ಯಂತ ನಾಜೂಕಾದ ಆಧ್ಯಾತ್ಮಿಕತೆಯ ಭಾವ ಪ್ರಕಟಗೊಳ್ಳುತ್ತದೆ; ನೀರನ್ನು ನೇರವಾಗಿ ಅವರ ಗಡಿಗೆಗಳಿಗೆ ಹುಯ್ಯಲಾಗುವುದಿಲ್ಲ. 'ಜನ' ಏನಾದರೂ ಹಾಗೆ ಮಾಡಿದರೆ ಅವರು ಮೈಲಿಗೆಯಾಗಿ ಬಿಡುತ್ತಾರೆ. ಶ್ರೀ ಠಕ್ಕರ್ ಅವರು ಹೇಳುತ್ತಾರೆ: 'ನಮ್ಮ ಅಧ್ಯಾಪಕ ಚುನೀಭಾಯಿ ಒಮ್ಮೆ ನೀರನ್ನು ತಮ್ಮ ಬಕೆಟ್ಟಿನಿಂದ ನೇರವಾಗಿ ಭಂಗಿಯ ಗಡಿಗೆಗೆ ಹುಯ್ಯುವ ದಿಟ್ಟತನ

ತೋರಿದ್ದಕ್ಕೆ ಪ್ರತಿಯಾಗಿ ಒಂದು ಕಟ್ಟುನಿಟ್ಟಾದ ಎಚ್ಚರಿಕೆಯನ್ನು ಪಡೆದಿದ್ದರು. – ಸ್ವಾಮಿಗಳೇ, ಇಂಥದನ್ನೆಲ್ಲಾ ನಾವಿಲ್ಲಿ ಸಹಿಸುವುದಿಲ್ಲ.' ಬಾವಿಯ ಬಳಿ ಇಳಿಜಾರು ಭಾಗದಲ್ಲಿ ಒಂದು ಚಿಕ್ಕ ತೊಟ್ಟಿ ಕಟ್ಟಲಾಗುತ್ತದೆ. ಯಾರಾದರೂ ಕನಿಕರದಿಂದ ಪ್ರೇರೇಪಿತರಾದರೆ ಆ ತೊಟ್ಟಿಯೊಳಕ್ಕೆ ಸ್ವಲ್ಪ ನೀರನ್ನು ಸುರಿಯಬಹುದು. ತೊಟ್ಟಿಯಿಂದ ಹೊರಕ್ಕೆ ನೀರು ಸಣ್ಣಗೆ ಸುರಿಯಲು ಒಂದು ಬಿದಿರಿನ ಕೊಳವೆ ಇಟ್ಟಿರುತ್ತಾರೆ. ಭಂಗಿ ಹೆಂಗಸರು ತಮ್ಮ ಗಡಿಗೆಗಳನ್ನು ಅದರ ತುದಿಯಲ್ಲಿ ಕೆಳಗಡೆ ಇಡಬಹುದು. ಸುಮಾರು ಒಂದು ಗಂಟೆಯಲ್ಲಿ ಅದು ತುಂಬುವ ಸಾಧ್ಯತೆ ಇರುತ್ತದೆ. ಏಕೆಂದರೆ, ಶ್ರೀ ಠಕ್ಕರ್ ಅವರು ಹೇಳುವಂತೆ, ನೀರು ಸೇದುವ ಹೆಂಗಸು ಬಕೆಟ್ಟಿನಲ್ಲಿ ಹೆಚ್ಚಳವಾಗಿ ಉಳಿಯುವ ಅನಗತ್ಯವಾದ ಕೊಂಚ ನೀರನ್ನಷ್ಟೇ ಸಾಮಾನ್ಯವಾಗಿ ತೊಟ್ಟಿಗೆ ಸುರಿಯುವುದು; ಅದೂ ಕಾದು ನಿಂತಿರುವ ಭಂಗಿ ಹೆಂಗಸಿನ ಬಗ್ಗೆ ಅವಳಲ್ಲಿ ಕನಿಕರ ಮೂಡಿದ್ದರೆ ಮಾತ್ರ."

## III

ಸ್ಥಾಪಿತ ವ್ಯವಸ್ಥೆಯಡಿಯಲ್ಲಿ ಅಸ್ಪೃಶ್ಯರಿಗೆ ವಿದ್ಯಾಭ್ಯಾಸದ ಹಕ್ಕಿಲ್ಲ; ಹಳ್ಳಿಯ ಶಾಲೆಯಲ್ಲಿ ಪ್ರವೇಶ ಪಡೆಯುವ ಹಕ್ಕಂತೂ ಸುತರಾಂ ಇಲ್ಲ. ಈ ರೀತಿ ನೆಲೆಗೊಂಡಿರುವ ವ್ಯವಸ್ಥೆಯ ನಿಯಮಗಳನ್ನು ಮುರಿಯುವ ಕೆಟ್ಟ ಧೈರ್ಯ ತೋರಿಸಿರುವ ಅಸ್ಪೃಶ್ಯರಿಗೆ ಹಿಂದೂಗಳು ತೀವ್ರವಾದ ಶಿಕ್ಷೆ ಕೊಟ್ಟಿದ್ದಾರೆ. ಘಟಿಸಿರುವ ಅನೇಕಾನೇಕ ಸಂಗತಿಗಳಲ್ಲಿ ಕೆಳಗಿನವು ಕೆಲವು ಮಾತ್ರ :

ಲಾಹೋರಿನ 'ಆರ್ಯ ಗೆಜೆಟ್'ನ ೩೦ನೆಯ ಜೂನ್ ೧೯೨೧ರ ಸಂಚಿಕೆಯಿಂದ :

"ಸೂರತ್ ಜಿಲ್ಲೆಯಲ್ಲಿ ಸಿಸೋದ್ರಿ ಎಂಬ ಹಳ್ಳಿಯೊಂದಿದೆಯೆಂದು 'ಯಂಗ್ ಇಂಡಿಯಾ' ಪತ್ರಿಕೆಯಲ್ಲಿ ಲೇಖನ ಬರೆದಿರುವ ಒಬ್ಬ ಮಹಾಶಯರು ವರದಿ ಮಾಡಿದ್ದಾರೆ. ಅಸಹಕಾರ ಚಳುವಳಿಗೆ ಮಾದರಿಯೆಂದು ಹೆಸರಿಸಬಹುದಾದ ಈ ಹಳ್ಳಿಯು ಅತ್ಯಲ್ಪಕಾಲದಲ್ಲಿ ರಾಷ್ಟೀಯತೆಯ ಹಾದಿಯಲ್ಲಿ ಅಗಾಧವಾದ ಪ್ರಗತಿ ಸಾಧಿಸಿದೆ. ಇಷ್ಟೆಲ್ಲ ಇದ್ದಾಗ್ಯೂ ಈ ಹಳ್ಳಿಯಲ್ಲಿ ಹರಿಜನರ ಬಗೆಗಿನ ನಿಕೃಷ್ಟ ಭಾವನೆ ಹಿಂದಿನಂತೆಯೇ ಇದೆ. ಲೇಖಕರು ಹೇಳುವಂತೆ ಅಲ್ಲಿಯ ರಾಷ್ಟ್ರೀಯತಾ ಶಾಲೆಯಲ್ಲಿ ಧೇಡ್ ಜಾತಿಗೆ ಸೇರಿದ ಒಂದು ಮಗು ಪ್ರತ್ಯೇಕವಾಗಿ ಒಂದು ಮೂಲೆಯಲ್ಲಿ ಕುಳಿತಿದ್ದುದನ್ನು ಅವರು ನೋಡಿದ್ದಾರೆ. ಆ ಮಗುವಿನ ಮುಖಭಾವವೇ ಸಾರಿ ಹೇಳುತ್ತಿತ್ತು, ಅದು ಅಸ್ಪೃಶ್ಯರ ಮಗುವೆಂದು. ಆ ಮಗುವನ್ನು ತಮ್ಮ ಜೊತೆಯಲ್ಲಿ ಕುಳಿತುಕೊಳ್ಳಲು ಏಕೆ ಬಿಡುವುದಿಲ್ಲವೆಂದು ನಾನು ಬೇರೆ ಮಕ್ಕಳನ್ನು ಕೇಳಿದೆ. ಅವರ ಉತ್ತರ ಇದು : ಹರಿಜನರು ಹೆಂಡ ಕುಡಿಯುವುದು ಮತ್ತು ಮಾಂಸ ತಿನ್ನುವುದನ್ನು ಬಿಡುವತನಕ ಅದು ಸಾಧ್ಯವಿಲ್ಲ. ಇವನ್ನೆಲ್ಲಾ ಆಗಲೆ ಬಿಟ್ಟುಬಿಟ್ಟಿದ್ದುದಾಗಿ ಆ ಹರಿಜನರ ಹುಡುಗ ಹೇಳಿದ. ಇದಕ್ಕೆ ಪ್ರತಿಯಾಗಿ ಉಚ್ಚಜಾತಿಯ ಹುಡುಗರು ಏನನ್ನೂ ಹೇಳದಾದರು."

೧೨ನೆಯ ಫೆಬ್ರವರಿ ೧೯೨೩ರ 'ಪ್ರತಾಪ್' ಪತ್ರಿಕೆಯಿಂದ:

"ಮಹಾಶಯ ಶಾಂತಾರಾಮ್‌ಜಿ ವರದಿ ಮಾಡಿರುವುದಿದು: ಇತ್ತೀಚೆಗೆ ನಡೆದ ಘಟನೆ ಹೀಗಿದೆ. ಒಂದು ಹಳ್ಳಿಯ ಶಾಲೆಯಲ್ಲಿ ಚಮ್ಮಾರ ಹುಡುಗರಿಗೆ ಪಾಠ ಹೇಳಲು ಒಬ್ಬ ಬ್ರಾಹ್ಮಣ ಉಪಾಧ್ಯಾಯನನ್ನು ಸರ್ಕಾರ ನೇಮಿಸಿತು. ಆತ ಅಲ್ಲಿಗೆ ಹೋದಾಗ ಬ್ರಾಹ್ಮಣರು, ಕ್ಷತ್ರಿಯರು ಮತ್ತು ಇತರರು ಆ ಉಪಾಧ್ಯಾಯನನ್ನು ಬಹಿಷ್ಕರಿಸಿದರು. ಅವರೆಂದರು: 'ನೀನು ಚಮ್ಮಾರರಿಗೆ ವಿದ್ಯೆ ಹೇಳಿಕೊಟ್ಟು ಅವರನ್ನು ನಮ್ಮ ಸಮಕ್ಕೇರಿಸಲು ಬಂದಿದ್ದೀಯೆ ಅಲ್ಲವೆ?"

೧೧ನೆಯ ಏಪ್ರಿಲ್ ೧೯೨೪ರ 'ತೇಜ್' ಪತ್ರಿಕೆಯಿಂದ:

"ಸ್ವಾಮಿ ಶ್ರದ್ಧಾನಂದ್‌ಜಿಯವರು ಬರೆದಿರುವುದಿದು: ನವೆಂಬರ್ ೧೯೨೧ರ ಕೊನೆಯಲ್ಲಿ ಖಾತ್ಯಯಾಸ್‌ನಲ್ಲಿರುವ ರಾಷ್ಟ್ರೀಯ ಶಾಲೆಗೆ ನಾನು ಭೇಟಿ ನೀಡಿದ್ದೆ. ಅಲ್ಲಿ ಎಷ್ಟು ಮಂದಿ ಹರಿಜನ ಮಕ್ಕಳು ವ್ಯಾಸಂಗ ಮಾಡುತ್ತಿದ್ದಾರೆಂದು ಕೇಳಲಾಗಿ ಕೇವಲ ಮೂರು ಮಕ್ಕಳಿದ್ದಾರೆಂದು ತಿಳಿದುಬಂತು. ಅವರು ಸಹ ತರಗತಿಯ ಕೊಠಡಿಯ ಹೊರಗೆ ವರಾಂಡಾದಲ್ಲಿ ಕುಳಿತುಕೊಳ್ಳುತ್ತಾರೆ. ಈ ಕಾರ್ಯವಿಧಾನಕ್ಕೆ ಆಕ್ಷೇಪವನ್ನೆತ್ತಿ ನಾನು ಭಾಷಣ ಮಾಡಿದೆ. ಒಂದು ರಾಷ್ಟ್ರೀಯ ಸಂಸ್ಥೆಯಲ್ಲಿ ಆ ಹುಡುಗರನ್ನು ತರಗತಿಯ ಕೊಠಡಿಯೊಳಗೆ ಕುಳಿತುಕೊಳ್ಳಲು ಬಿಡುವುದು ಉಚಿತವಾಗಿರುತ್ತದೆಂದು ಹೇಳಿದೆ. ಶಾಲೆಯ ನಿರ್ವಾಹಕರು ನನ್ನ ಬುದ್ಧಿವಾದದಂತೆ ನಡೆದುಕೊಂಡರು. ಮಾರನೆಯ ದಿನ ಶಾಲೆಯ ಎಲ್ಲ ಬೆಂಚುಗಳೂ ಖಾಲಿಯಾಗಿದ್ದವು. ಮತ್ತು ಇಂದಿನವರೆಗೆ ಆ ರಾಷ್ಟ್ರೀಯ ಶಾಲೆಯ ಮಹಾನ್ ಕಟ್ಟಡಕ್ಕೆ ಬೀಗ ಹಾಕಿರುವುದು ಹಾಗೆಯೇ ಇದೆ ಮತ್ತು ಅದು ಹಾಗೇ ಹಾಳು ಸುರಿಯುತ್ತಿದೆ."

೧೮ನೆಯ ಏಪ್ರಿಲ್ ೧೯೨೪ರ 'ಮಿಲಾಪ್' ಪತ್ರಿಕೆಯಿಂದ:

"ಹೋಷಂಗಾಬಾದ್‌ನಲ್ಲಿ ಜರುಗಿದ ಒಂದು ಘಟನೆ ಇಲ್ಲಿದೆ. ಜಿಲ್ಲಾ ಮಂಡಲಿಯು ಶಾಲೆಗಳಿಗೆ ಒಂದು ಸುತ್ತೋಲೆಯನ್ನು ಕಳಿಸಿ ಹರಿಜನ ಮಕ್ಕಳಿಗೆ ಶಾಲೆಯಲ್ಲಿ ವಿದ್ಯಾಭ್ಯಾಸ ನೀಡಬೇಕೆಂದು ಆದೇಶಿಸಿತು. ಶಾಲಾ ಮುಖ್ಯೋಪಾಧ್ಯಾಯರು ಆಜ್ಞೆಗನುಸಾರವಾಗಿ ಕಾರ್ಯನಿರ್ವಹಿಸಲಾರಂಭಿಸಿದರು. ಹರಿಜನ ಬಾಲಕನೊಬ್ಬನನ್ನು ಒಂದು ಶಾಲೆಗೆ ದಾಖಲೆ ಮಾಡಿಕೊಂಡಾಗ ಒಬ್ಬ ಗೌರವ ಮ್ಯಾಜಿಸ್ಟ್ರೇಟರು ಎಷ್ಟು ರೇಗಿದರೆಂದರೆ ತಮ್ಮ ಮಕ್ಕಳನ್ನೆಲ್ಲಾ ಆ ಶಾಲೆಯಿಂದ ಬಿಡಿಸಿಬಿಟ್ಟರು. ಬೇರೆ ಪೋಷಕರು ಇವರಂತೆಯೇ ಮಾಡಿದರು. ಆಮೇಲೆ ಇವರೆಲ್ಲಾ ಸೇರಿ ಶಾಲಾ ಸಮಿತಿಯ ಸಭೆಯನ್ನು ಕರೆಸಿ ಅಲ್ಲಿ ನಿರ್ಣಯಗಳನ್ನು ಅಂಗೀಕರಿಸಿದರು. ಶಾಲೆಯಲ್ಲಿ ಹರಿಜನರಿಗೆ ವಿದ್ಯಾಭ್ಯಾಸ ನೀಡುವುದು ಸಾರ್ವಜನಿಕರ ಇಚ್ಛೆಗೆ ವಿರೋಧವಾದುದು, ಎಂದು. ಹರಿಜನರೊಡನೆ ಸಂಪರ್ಕ ಬೆಳೆದ ಮೇಲೆ ಬ್ರಾಹ್ಮಣ ಮಕ್ಕಳು ತಮ್ಮ ಜನಿವಾರ (ಒಂದು ಪವಿತ್ರವಾದ ದಾರ) ಬದಲಾಯಿಸಬೇಕಾಗುತ್ತಾದ್ದರಿಂದ ಹರಿಜನ ಮಕ್ಕಳಿಗೆ ಶಾಲೆಯಲ್ಲಿ ವಿದ್ಯಾಭ್ಯಾಸ ನೀಡುವುದು ಈ ಶಾಲಾ ಸಮಿತಿಗೆ ಆಗದೆಂದು ತಿಳಿಸಿದರು."

೩ನೆಯ ಏಪ್ರಿಲ್ ೧೯೩೨ರ 'ಪ್ರತಾಪ್' ಪತ್ರಿಕೆಯಿಂದ:

"ಅಹಮದಾಬಾದ್, ೧ನೆಯ ಏಪ್ರಿಲ್ ೧೯೩೨: ಬರೋಡ ರಾಜ್ಯದ ನವಾಗಾಂವ್ ಎಂಬ ಹಳ್ಳಿಯಿಂದ ಬಂದಿರುವ ವರದಿಯಂತೆ ಹರಿಜನರ ಶಾಲೆಗಳನ್ನು ಮುಚ್ಚಿ ಅವರಿಗೆ ಹಳ್ಳಿಗಳ ಸಾಮಾನ್ಯ ಶಾಲೆಗಳನ್ನು ಪ್ರವೇಶಿಸಲು ಪರವಾನಗಿ ನೀಡಿದಾಗಿನಿಂದ ಹರಿಜನರಿಗೆ ಗ್ರಾಮಸ್ಥರು ಎಣೆಯಿಲ್ಲದ ಕಿರುಕುಳ ಕೊಡಲಾರಂಭಿಸಿದ್ದಾರೆ. ಹರಿಜನ ರೈತರಿಗೆ ಸೇರಿದ ಒಂದು ಸಾವಿರ ಹುಲ್ಲಿನ ಮೆದೆಗಳಿಗೆ ಬೆಂಕಿ ಇಡಲಾಗಿದೆಯೆಂದೂ ಹರಿಜನರ ಬಾವಿಗಳಿಗೆ ಸೀಮೆಎಣ್ಣೆ ಸಿಂಪಡಿಸಲಾಗಿದೆಯೆಂದೂ ಮತ್ತು ಅವರ ಮನೆಗಳಿಗೆ ಬೆಂಕಿಹಚ್ಚುವ ಯತ್ನಗಳನ್ನು ಮಾಡಲಾಗಿದೆಯೆಂದೂ ವರದಿಯಾಗಿದೆ. ಶಾಲೆಗೆ ಹೋಗುತ್ತಿದ್ದ ಒಬ್ಬ ಹರಿಜನ ಬಾಲಕನ ಮೇಲೆ ಹಲ್ಲೆ ನಡೆಸಲಾಗಿದೆ ಮತ್ತು ಎಲ್ಲ ಹರಿಜನರ ಮೇಲೂ ಸಾಮಾನ್ಯ ಬಹಿಷ್ಕಾರವೊಂದನ್ನು ಘೋಷಿಸಲಾಗಿದೆ."

೨೬ನೆಯ ಮೇ ೧೯೩೫ರ ತನ್ನ ಸಂಚಿಕೆಯಲ್ಲಿ 'ಹಿಂದೂಸ್ತಾನ್ ಟೈಂಸ್' ಹೇಳುವುದಿದು:

"ಒಂದು ಜಿಲ್ಲೆಯ ಕಟೀಪುರ್ ಎಂಬ ಗ್ರಾಮದಲ್ಲಿ ರೈತರಿಗೆ ಮತ್ತು ಇತರರಿಗೆ ಪಾಠ

ಹೇಳಿಕೊಡಲಾಗುತ್ತಿದ್ದ ರಾತ್ರಿಯ ಶಾಲೆಯ ಮೇಲೆ ಅನೇಕ ಜನ ಒಟ್ಟಿಗೆ ದಾಳಿ ನಡೆಸಿದರು. ಅಲ್ಲಿಯ ಉಪಾಧ್ಯಾಯರನ್ನು ಹಿಡಿದು ಶಾಲೆಯನ್ನು ಮುಚ್ಚಬೇಕೆಂದು ಆಗ್ರಹಪಡಿಸಲಾಯಿತು. ಕಾರಣ : ಅಸ್ಪೃಶ್ಯರ ಹುಡುಗರು ವಿದ್ಯಾಭ್ಯಾಸವನ್ನು ಪಡೆದ ಮೇಲೆ ತಮ್ಮನ್ನು ಸಮಾನಸ್ಕಂಧರಂತೆ ನಡೆಸಿಕೊಳ್ಳಬೇಕೆಂದು ಆಗ್ರಹಿಸುತ್ತಾರೆ. ಶಾಲೆಯನ್ನು ಮುಚ್ಚಲು ಉಪಾಧ್ಯಾಯರು ಸಮ್ಮತಿಸದಿದ್ದಾಗ ಅವರನ್ನು ಸದೆಬಡಿದು, ವಿದ್ಯಾರ್ಥಿಗಳಿಗೆ ಚದುರಬೇಕೆಂದು ಆಜ್ಞೆ ನೀಡಲಾಯಿತು."

ನಾನು ಪ್ರಸ್ತಾಪಿಸಬೇಕೆಂದಿರುವ ಕಡೆಯ ಘಟನೆ ಜರುಗಿದ್ದು ೧೯೩೫ರಲ್ಲಿ ; ಮುಂಬೈ ಪ್ರಾಂತ್ಯದ ಅಹಮದಾಬಾದ್ ಜಿಲ್ಲೆಯ ಧೋಲ್ಕಾ ತಾಲ್ಲೂಕಿನ ಕವಿತಾ ಎಂಬ ಹಳ್ಳಿಯಲ್ಲಿ. ಘಟನೆ ನಡೆದದ್ದು ೮ನೆಯ ಆಗಸ್ಟ್ ೧೯೩೫ರಂದು.

ಸಾರ್ವಜನಿಕ ಶಾಲೆಗಳಲ್ಲಿ ಹರಿಜನರ ಮಕ್ಕಳನ್ನು ದಾಖಲು ಮಾಡಿಕೊಳ್ಳಬೇಕೆಂಬ ಆಜ್ಞೆಯನ್ನು ಮುಂಬೈ ಸರ್ಕಾರ ಹೊರಡಿಸಿದ್ದುದರಿಂದ ಕವಿತಾ ಗ್ರಾಮದ ಅಸ್ಪೃಶ್ಯರು ಆ ಆಜ್ಞೆಯ ಅನುಕೂಲ ಪಡೆದುಕೊಳ್ಳುವ ಯೋಚನೆ ಮಾಡಿದರು. ಪರಿಣಾಮವಾಗಿ ಅವರಿಗೇನಾಯಿತೆಂಬುದನ್ನು ಕೆಳಗೆ ವರದಿ ಮಾಡಿದೆ :

"೮–೮–೧೯೩೫ ರಂದು ಕವಿತಾ ಗ್ರಾಮದ ಅಸ್ಪೃಶ್ಯರು ತಮ್ಮ ನಾಲ್ಕು ಮಕ್ಕಳನ್ನು ಶಾಲೆಗೆ ದಾಖಲು ಮಾಡಿಸಲು ಕರೆದುಕೊಂಡು ಹೋದರು. ಇದನ್ನು ವೀಕ್ಷಿಸಲು ಗ್ರಾಮದ ಸವರ್ಣೀಯ ಹಿಂದೂಗಳನೇಕರು ಶಾಲೆಯ ಬಳಿ ಗುಂಪು ಕಟ್ಟಿದ್ದರು. ಶಾಲೆಗೆ ದಾಖಲು ಮಾಡಿಸುವ ಸಂದರ್ಭವು ಶಾಂತಿಯುತವಾಗಿ ಕೊನೆಗೊಂಡಿತು; ಯಾವ ಅಹಿತಕಾರಿ ಘಟನೆಯೂ ಸಂಭವಿಸಲಿಲ್ಲ. ಆದರೆ ಮಾರನೆಯ ದಿನದಿಂದ ಗ್ರಾಮದ ಸವರ್ಣೀಯ ಹಿಂದೂಗಳು ತಮ್ಮ ಮಕ್ಕಳನ್ನು ಶಾಲೆಯಿಂದ ಬಿಡಿಸಿದರು. ಏಕೆಂದರೆ ಅಸ್ಪೃಶ್ಯರ ಮಕ್ಕಳೊಂದಿಗೆ ಕುಳಿತು ತಮ್ಮ ಮಕ್ಕಳು ಮೈಲಿಗೆಯಾಗುವುದು ಅವರಿಗೆ ಹಿಡಿಸಲಿಲ್ಲ."

"ಅದಾದ ಸ್ವಲ್ಪ ಕಾಲಾನಂತರ ಹಳ್ಳಿಯ ಒಬ್ಬ ಅಸ್ಪೃಶ್ಯನನ್ನು ೧೩ನೆಯ ಆಗಸ್ಟ್ ೧೯೩೫ರಂದು ಬ್ರಾಹ್ಮಣನೊಬ್ಬ ಚೆನ್ನಾಗಿ ಹೊಡೆದ. ಗ್ರಾಮದ ಅಸ್ಪೃಶ್ಯರ ಕುಟುಂಬಗಳ ಗಂಡಸರೆಲ್ಲಾ ಈ ಬ್ರಾಹ್ಮಣನ ಮೇಲೆ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ತಕ್ರಾರು ದೂರು ದಾಖಲೆಮಾಡಲು ಧೋಲ್ಕಾಗೆ ತೆರಳಿದ್ದರು. ಅಸ್ಪೃಶ್ಯರ ಪೈಕಿಯ ಹಿರಿಯ ಮಂದಿಯೆಲ್ಲಾ ಗೈರುಹಾಜರಾಗಿದ್ದರೆಂಬುದನ್ನು ತಿಳಿದ ಮೇಲೆ ಗ್ರಾಮದ ಹಿಂದೂಗಳು ಅಸ್ಪೃಶ್ಯರ ವಸತಿಗಳ ಮೇಲೆ ಆಕ್ರಮಣ ನಡೆಸಿದರು. ದೊಣ್ಣೆಗಳು, ಭರ್ಜಿಗಳು ಮತ್ತು ಕತ್ತಿಗಳಿಂದ ಅವರು ಸಜ್ಜಿತರಾಗಿದ್ದರು. ಆಕ್ರಮಣ ನಡೆಸಿದವರಲ್ಲಿ ಹಿಂದೂ ಹೆಂಗಸರೂ ಸೇರಿದ್ದರು. ಅಸ್ಪೃಶ್ಯರ ಮುದುಕ ಮುದುಕಿಯರ ಮೇಲೆ ಹಲ್ಲೆ ನಡೆಸಲು ಅವರೆಲ್ಲಾ ಆರಂಭಿಸಿದರು. ಆಕ್ರಮಣಕ್ಕೆ ತುತ್ತಾದವರಲ್ಲಿ ಕೆಲವರು ಪಕ್ಕದ ಕಾಡಿಗೆ ಓಡಿಹೋಗಿ ಅಲ್ಲಿ ಅಡಗಿ ಕುಳಿತರು. ಗ್ರಾಮದ ಶಾಲೆಯಲ್ಲಿ ತಮ್ಮ ಮಕ್ಕಳನ್ನು ದಾಖಲು ಮಾಡಿಸುವುದರಲ್ಲಿ ಮುಂದಾಳತ್ವ ವಹಿಸಿದ್ದವರೆಂದು ಶಂಕಿಸಲಾಗಿದ್ದ ಅಸ್ಪೃಶ್ಯರ ಮೇಲೆ ಆಕ್ರಮಣಕಾರರು ತಮ್ಮ ಆವೇಶವನ್ನು ಕೇಂದ್ರಿಕರಿಸಿದ್ದರು. ಅವರ ಮನೆಗಳ ಬಾಗಿಲುಗಳನ್ನು ಒಡೆದು ಒಳನುಗ್ಗಿದರು. ಮನೆಯವರನ್ನು ಅಲ್ಲಿ ಕಾಣದೆ ಆ ಮನೆಗಳ ಮೇಲಿನ ಹೊದಿಕೆಯ ಹೆಂಚುಗಳನ್ನೂ ತೀರುಗಳನ್ನೂ ಆಕ್ರಮಣಕಾರರು ಧ್ವಂಸ ಮಾಡಿದರು."

"ದಿಗಿಲುಗೊಂಡಿದ್ದ ಈ ಅಸ್ಪೃಶ್ಯ ಗಂಡಸರು ಮತ್ತು ಹೆಂಗಸರು ಆಕ್ರಮಣದಲ್ಲಿ ಏಟುತಿಂದಾದ ಮೇಲೆ ಧೋಲ್ಕಾಗೆ ತೆರಳಿದ್ದು ಅಂದು ರಾತ್ರಿ ಹಿಂದಿರುಗಬೇಕಾಗಿದ್ದ ಅವರ ಹಿರಿಯರ ಕ್ಷೇಮದ ಬಗ್ಗೆ ಚಿಂತಾಕ್ರಾಂತರಾದರು. ಧೋಲ್ಕಾಗೆ ಹೋಗಿದ್ದ ಅಸ್ಪೃಶ್ಯರ ಮುಂದಾಳುಗಳು ಹಿಂದಿರುಗುತ್ತಾರೆಂಬುದರ ಸುಳಿವು ಸಿಕ್ಕಿದ್ದರಿಂದ ಸವರ್ಣೀಯ ಹಿಂದೂಗಳು ಹಳ್ಳಿಯ ದಾರಿಯಲ್ಲಿ ಪೊದೆಗಳ ಮತ್ತು ಗಿಡಗಂಟಿಗಳ

ಹಿಂದೆ ಅವಿತು ಕುಳಿತಿದ್ದರು. ಇದನ್ನು ಹೇಗೋ ತಿಳಿದುಕೊಂಡ ಒಬ್ಬ ಅಸ್ಪೃಶ್ಯ ಮಹಿಳೆ ಕತ್ತಲೆಯಲ್ಲಿ ಹಳ್ಳಿಯಿಂದ ನುಸುಳಿಹೋಗಿ ಹಿಂದಿರುಗುತ್ತಿದ್ದ ಮುಂದಾಳುಗಳನ್ನು ಸಂಧಿಸಿದಳು. ದಾರಿಯಲ್ಲಿ ಅವರನ್ನು ಅಡ್ಡಗಟ್ಟಲು ಶಸ್ತ್ರಸಜ್ಜಿತ ಸವರ್ಣೀಯ ಹಿಂದೂಗಳ ತಂಡವೊಂದು ಅವಿತುಕುಳಿತಿದೆಯೆಂದೂ ಆದ್ದರಿಂದ ಅವರು ಹಳ್ಳಿಯೊಳಕ್ಕೆ ಪ್ರವೇಶಿಸಬಾರದೆಂದೂ ತಿಳಿಸಿದಳು. ತಮ್ಮ ಗೈರುಹಾಜರಿಯಲ್ಲಿ ಸವರ್ಣೀಯ ಹಿಂದೂಗಳು ಇನ್ನೂ ಹೆಚ್ಚಿನ ಉಪಟಳ ಮಾಡಿಯಾರೆಂಬ ತವಕದಿಂದ ಅವರು ಆಕೆಯ ಮಾತಿಗೆ ಕಿವಿಗೊಡಲಿಲ್ಲ. ಅದೇ ಸಮಯದಲ್ಲಿ ಅವರು ಹಳ್ಳಿಯನ್ನು ಪ್ರವೇಶಿಸಿದರೆ ಹಲ್ಲೆಗೊಳಗಾಗಬಹುದೆಂಬ ಅಂಜಿಕೆಯೂ ಅವರಲ್ಲಿತ್ತು. ಆದ್ದರಿಂದ ಮಧ್ಯರಾತ್ರಿ ಕಳೆಯುವವರೆಗೆ ಹಳ್ಳಿಯಾಚೆಯ ಹೊಲದಲ್ಲಿ ಕಾದಿರಬೇಕೆಂದು ಅವರು ತೀರ್ಮಾನಿಸಿದರು. ಇಷ್ಟೆಲ್ಲಾ ನಡೆಯುತ್ತಿದ್ದಾಗ ಅಡಗಿ ಕುಳಿತಿದ್ದ ಸವರ್ಣೀಯ ಹಿಂದೂಗಳು ಕಾದು ಕಾದು ಬೇಸತ್ತು ತಮ್ಮ ಆಟಕ್ಕೆ ಮುಕ್ತಾಯ ಹಾಡಿ ನಿರ್ಗಮಿಸಿದರು. ರಾತ್ರಿ ಸುಮಾರು ೩ ಗಂಟೆಯ ನಂತರ ಅಸ್ಪೃಶ್ಯರ ಮುಂದಾಳುಗಳು ಹಳ್ಳಿಯೊಳಕ್ಕೆ ನಡೆದರು. ಅವರೇನಾದರೂ ಮುಂಚೆಯೇ ಬಂದಿದ್ದರೆ ಮತ್ತು ಕೊಲೆಮಾಡಲು ಸಜ್ಜಾಗಿದ್ದ ತಂಡದ ಕೈಗೆ ಸಿಕ್ಕಿದ್ದರೆ ಬಹುಶಃ ಅವರೆಲ್ಲಾ ಸಾವಿಗೀಡಾಗಿರುತ್ತಿದ್ದರು. ಜನ ಮತ್ತು ಆಸ್ತಿಗೆ ಉಂಟಾಗಿದ್ದ ಹಾನಿಯನ್ನು ನೋಡಿ ಅವರು ಬೆಳಗಾಗುವುದಕ್ಕೆ ಮುಂಚೆಯೇ ಅಹಮದಾಬಾದ್‌ಗೆ ಹೋಗಲು ತೆರಳಿದರು. ಅಸ್ಪೃಶ್ಯರ ಹಿತರಕ್ಷಣೆಗಾಗಿ ಶ್ರೀ ಗಾಂಧಿಯವರು ಸಂಘಟಿಸಿದ್ದ ಹರಿಜನ ಸೇವಕ ಸಂಘದ ಕಾರ್ಯದರ್ಶಿಯನ್ನು ಅಲ್ಲಿ ಕಂಡು ಅವರಿಗೆ ವಿಷಯ ತಿಳಿಸಿದರು. ಆದರೆ ಕಾರ್ಯದರ್ಶಿ ಅಸಹಾಯಕರಾಗಿದ್ದರು. ಸವರ್ಣೀಯ ಹಿಂದೂಗಳು ದೈಹಿಕ ಹಿಂಸೆಯನ್ನು ಬಳಸಿದ್ದೇ ಅಲ್ಲ, ಅಸ್ಪೃಶ್ಯರ ಜೀವನವನ್ನು ಅಸಹನೀಯವನ್ನಾಗಿಸಲು ಷಡ್ಯಂತ್ರಗಳನ್ನು ಸಹ ಹೂಡಿದರು. ಕೂಲಿಗಳನ್ನಾಗಿ ಅವರನ್ನು ನೇಮಿಸಿಕೊಳ್ಳಲು ನಿರಾಕರಿಸಿದರು. ಆಹಾರ ಪದಾರ್ಥಗಳನ್ನು ಅವರಿಗೆ ಮಾರುವುದನ್ನೂ ನಿಲ್ಲಿಸಿದರು. ಅವರ ದನಕರುಗಳನ್ನು ಮೇಯಿಸಲು ಬೇಕಾದ ಸೌಕರ್ಯಕ್ಕೆ ಸಂಚುತಂದರು ಹಾಗೂ ಅಲ್ಲಲ್ಲಿ ಅಸ್ಪೃಶ್ಯ ಗಂಡಸರು ಮತ್ತು ಹೆಂಗಸರ ಮೇಲೆ ಹಲ್ಲೆಗಳನ್ನೂ ಮುಂದುವರಿಸಿದರು. ಅಷ್ಟೇ ಸಾಲದೆಂಬಂತೆ, ಸವರ್ಣೀಯ ಹಿಂದೂಗಳು ತಮ್ಮ ರೊಚ್ಚಿನಲ್ಲಿ ಅಸ್ಪೃಶ್ಯರು ಕುಡಿಯುವ ನೀರನ್ನು ತರುತ್ತಿದ್ದ ಬಾವಿಗೆ ಸೀಮೆಯೆಣ್ಣೆ ಸುರಿದರು. ಇದನ್ನು ಸತತವಾಗಿ ಎಷ್ಟೋ ದಿನ ನಡೆಸುತ್ತಲೇ ಬಂದರು. ಪರಿಣಾಮವಾಗಿ ಆ ಹಳ್ಳಿಯ ಅಸ್ಪೃಶ್ಯರಿಗೆ ಕುಡಿಯುವ ನೀರಿಲ್ಲದಂತಾಯಿತು. ಪರಿಸ್ಥಿತಿಯು ಈ ಮಟ್ಟವನ್ನು ಮುಟ್ಟಿದಾಗ ಮ್ಯಾಜಿಸ್ಟ್ರೇಟರಲ್ಲಿ ತಕ್ಸೀರಿನ ದೂರೊಂದನ್ನು ದಾಖಲು ಮಾಡುವ ಯೋಚನೆಮಾಡಿ ಅಕ್ಟೋಬರ್ ೧೭ರಂದು ಅದನ್ನು ಮಾಡಿದರು. ಕೆಲವು ಸವರ್ಣೀಯ ಹಿಂದೂಗಳನ್ನು ದೂರಿನಲ್ಲಿ ಆಪಾದಿತರನ್ನಾಗಿಸಿದರು."

ಈ ಘಟನೆಯಲ್ಲಿ ಶ್ರೀ ಗಾಂಧಿ ಮತ್ತು ಅವರ ಅನುಯಾಯಿ ಸರ್ದಾರ್ ವಲ್ಲಭಬಾಯಿ ಪಟೇಲ್ ಅವರ ಪಾತ್ರವು ಸೋಜಿಗದ ಸಂಗತಿಯಾಗಿದೆ. ಅಸ್ಪೃಶ್ಯರ ವಿರುದ್ಧ ಕವಿತಾ ಗ್ರಾಮದ ಸವರ್ಣೀಯ ಹಿಂದೂಗಳು ನಡೆಸುತ್ತಿದ್ದ ದಬ್ಬಾಳಿಕೆ ಮತ್ತು ದೌರ್ಜನ್ಯದ ಸಂಪೂರ್ಣ ಅರಿವಿದ್ದಾಗ್ಯೂ ಶ್ರೀ ಗಾಂಧಿಯವರಿಗೆ ಮಾಡಬೇಕೆನಿಸಿದ್ದು ಕೇವಲ ಹಳ್ಳಿಯನ್ನು ಬಿಟ್ಟುಬಿಡಬೇಕೆಂಬ ಹಿತವಚನವನ್ನು ಅಸ್ಪೃಶ್ಯರಿಗೆ ನೀಡುವುದಷ್ಟೆ. ನ್ಯಾಯಾಸ್ಥಾನದೆದುರು ಹಲ್ಲೆಕೋರರನ್ನು ವಿಚಾರಣೆಗೆ ಒಳಪಡಿಸಬೇಕೆಂದು ಸಹ ಅವರು ಸೂಚಿಸಲಿಲ್ಲ. ಅವರ ಅನುಯಾಯಿ ಶ್ರೀ ವಲ್ಲಭ ಬಾಯಿ ಪಟೇಲ್ ಅವರ ಪಾತ್ರ ಇದಕ್ಕಿಂತಲೂ ಹೆಚ್ಚು ಸೋಜಿಗ ಉಂಟುಮಾಡುವಂಥದು. ಅಸ್ಪೃಶ್ಯರಿಗೆ ಕಿರುಕುಳ ನೀಡಬಾರದೆಂದು ಸವರ್ಣೀಯ ಹಿಂದೂಗಳ ಮನವೊಲಿಸಲು ಅವರು ಕವಿತಾ ಗ್ರಾಮಕ್ಕೆ ಹೋಗಿದ್ದರು. ಆದರೆ ಅವರು ಇವರ ಮಾತನ್ನು ಕೇಳಲು ಸಹ ತಯಾರಿರಲಿಲ್ಲ. ಹೀಗಿದ್ದರೂ ಅಸ್ಪೃಶ್ಯರು ಅವರನ್ನು ನ್ಯಾಯಾಸ್ಥಾನದೆದುರು ವಿಚಾರಣೆಗೆ ಗುರಿಪಡಿಸಿ ಶಿಕ್ಷೆ ನೀಡುವಂತೆ

ಮಾಡುವುದನ್ನು ಇದೇ ವ್ಯಕ್ತಿ ವಿರೋಧಿಸಿದರು. ಅವರ ವಿರೋಧವನ್ನು ಕಡೆಗಣಿಸಿ ಅಸ್ಪೃಶ್ಯರು ದೂರನ್ನಿತ್ತರು. ಆದರೆ ಸವರ್ಣೀಯ ಹಿಂದೂಗಳ ವಿರುದ್ಧದ ದೂರನ್ನು ಹಿಂತೆಗೆದುಕೊಳ್ಳುವಂತೆ ಬಲಾತ್ಕರಿಸಿದ್ದು ಅವರು. ಅದಕ್ಕೆ ಅಸ್ಪೃಶ್ಯರಿಗೆ ಕಿರುಕುಳ ನೀಡುವುದಿಲ್ಲವೆಂಬ ತಿಪ್ಪೆ ಸಾರಿಸುವಂಥ ಒಂದು ಸಮಜಾಯಿಷಿಯನ್ನು ಅವರು ಮಾಡಿಸಿದರು; ಇಂತಹ ಭರವಸೆಯನ್ನು ಅಸ್ಪೃಶ್ಯರು ಎಂದೆಂದಿಗೂ ಜಾರಿಗೊಳಿಸಲಾಗುವುದಿಲ್ಲವೆಂಬುದು ತಿಳಿದೇ ಇದೆ. ಇದರ ಪರಿಣಾಮವಾಗಿ ಅಸ್ಪೃಶ್ಯರು ಸಂಕಟಕ್ಕೆ ಗುರಿಯಾದರು ಮತ್ತು ಅವರ ಪೀಡಕರು, ಶ್ರೀ ಗಾಂಧಿಯವರ ಸ್ನೇಹಿತ ಶ್ರೀ ವಲ್ಲಭಬಾಯಿ ಪಟೇಲರ ಸಹಾಯದಿಂದ ತಪ್ಪಿಸಿಕೊಂಡರು."

## IV

ಹಿಂದೂಗಳು ಅಸ್ಪೃಶ್ಯರನ್ನು ಹಿಂದೂಗಳೇ ಎಂದು ಹೇಳಿಕೊಳ್ಳುತ್ತಾರೆ. ಆದರೆ ಅಸ್ಪೃಶ್ಯರ ಹೆಣವನ್ನು ಹಿಂದೂಗಳ ಸ್ಮಶಾನದಲ್ಲಿ ಸುಡಲಾಗದು.

೭ನೆಯ ಜೂನ್ ೧೯೪೬ರ 'ಫ್ರೀ ಪ್ರೆಸ್' ಪತ್ರಿಕೆಯಲ್ಲಿ ಕೆಳಗಿನ ವರದಿಯನ್ನು ನೀಡಿದೆ:

"ಮಧುರೆಯ ಇಬ್ಬರು ಹರಿಜನರನ್ನು ನಾಲ್ಕು ತಿಂಗಳ ಕಠಿಣ ಶಿಕ್ಷೆಗೆ ಗುರಿಪಡಿಸಿ, ಸೆರೆಮನೆಗೆ ಕಳುಹಿಸಲಾಯಿತು. ಇತರರ ಭಾವನೆಗಳಿಗೆ ನೋವನ್ನುಂಟುಮಾಡಬಹುದಾದಂತಹ ಒಂದು ಕೆಲಸವನ್ನು ಮಾಡಿದ್ದರೆಂಬುದು ಅವರ ಅಪರಾಧ. ಇದು ಈಚಿನ ಒಂದು ತಕ್ಸೀರಿನ ವಿಚಾರಣೆಯಾಗಿತ್ತೆಂಬುದನ್ನು ಉಲ್ಲೇಖಿಸುತ್ತಾ ಶ್ರೀ ಎ. ಎಸ್. ವೈದ್ಯನಾಥ ಅಯ್ಯರ್ ಎಂಬುವರು ಪತ್ರಿಕಾಮಾಧ್ಯಮಕ್ಕೆ ಒಂದು ಪತ್ರ ಕಳಿಸಿದ್ದಾರೆ. ಅದರಲ್ಲಿ 'ಅಸ್ಪೃಶ್ಯತೆಯಿಂದಾಗಿ ಹರಿಜನರು ಅನುಭವಿಸುತ್ತಿರುವ ಒಂದು ದಾರುಣ ಸಂಕಷ್ಟ'ದ ಬಗ್ಗೆ ಸಾರ್ವಜನಿಕರ ಗಮನವನ್ನು ಸೆಳೆಯಲಾಗಿದೆ.

ಶ್ರೀ ವೈದ್ಯನಾಥ ಅಯ್ಯರ್ ಹೇಳುವುದಿದು: 'ಮಧುರೆಯ ಒಬ್ಬ ಹರಿಜನರವನು ತನ್ನ ಮೊದಲನೆಯ ಮಗುವನ್ನು ಕಳೆದುಕೊಂಡಿದ್ದು ಮಧುರೆಯ ಪೌರಸಭಾ ಸ್ಮಶಾನ ಕ್ಷೇತ್ರದ ಒಂದು ಜೋಪಡಿಯಲ್ಲಿ ಶವಸಂಸ್ಕಾರ ಮಾಡಿದ. ಅದು ಸವರ್ಣೀಯ ಹಿಂದೂಗಳ ಉಪಯೋಗಕ್ಕಾಗಿ ಮೀಸಲಿರಿಸಲಾಗಿದೆಯೆಂದು ಹೇಳಲಾಗಿದೆ. ಹರಿಜನರಿಗೆ ಮೀಸಲಿಟ್ಟಿರುವ ಎಡೆಯಲ್ಲಿ ಅವನು ಶವಸಂಸ್ಕಾರ ಮಾಡುವ ಬದಲು ಅದನ್ನು ಆತ ಇಲ್ಲಿ ಮಾಡಿದ್ದ. ಆತನ ಅಹವಾಲು ಏನೆಂದರೆ ತನಗೆ ಈ ರೀತಿಯ ಮೀಸಲಾಗಿರಿಸುವಿಕೆಯು ತಿಳಿದಿರಲಿಲ್ಲ ಎಂದು. ಅಲ್ಲದೆ ಅಂದು ಸೋನೆಮಳೆ ಬೀಳುತ್ತಿದ್ದುದರಿಂದ ತಾನು ಆಯ್ಕೆ ಮಾಡಿಕೊಂಡ ಜಾಗ ಹೆಚ್ಚು ಅನುಕೂಲಕರವಾಗಿತ್ತೆಂದು ಅವನ ಹೇಳಿಕೆ. ಯಾವ ಸವರ್ಣೀಯ ಹಿಂದೂವೂ ಅದಕ್ಕೆ ಆಕ್ಷೇಪವೆತ್ತಲಿಲ್ಲ ಮತ್ತು ತನ್ನ ಆ ಕ್ರಿಯೆಯಿಂದ ಯಾರ ಮನಸ್ಸಿಗೂ ನೊವುಂಟಾಗಿರುವುದಕ್ಕೆ ಪುರಾವೆ ಇಲ್ಲವೆಂದು ಅವನು ಹೇಳಿದ್ದಾನೆ. ಈ ಘಟನೆಯು ಮಧುರೆಯ ಪೊಲೀಸರ ಗಮನಕ್ಕೆ ಬಂದಾಗ ಮಗುವಿನ ತಂದೆಯ ಮತ್ತು ಆತನ ಒಬ್ಬ ಹತ್ತಿರದ ಸಂಬಂಧಿಯ ವಿರುದ್ಧ ಅವರು ಮೊಕದ್ದಮೆ ಹೂಡಿದರು. ಹರಿಜನರು ಅಸ್ಪೃಶ್ಯರಾದ್ದರಿಂದ ಆತನ ಈ ಕ್ರಿಯೆಯು ಇತರರ ಮನಸ್ಸನ್ನು ನೋಯಿಸುವ ಸಾಧ್ಯತೆ ಇದೆಯೆಂಬುದು ಅವರ ವಾದ."

ಮುಂದುವರೆದು ಶ್ರೀ ಅಯ್ಯರ್ ಅವರು ಈ ವಿಷಯವನ್ನು ಮದರಾಸಿನ ಮಂತ್ರಿಮಂಡಲದ ಗಮನಕ್ಕೆ ತಂದಿರುವುದಾಗಿ ತಿಳಿಸಿದ್ದಾರೆ.

೨೨ನೇ ಏಪ್ರಿಲ್ ೧೯೪೫ರ 'ಸಾವಧಾನ್' ಪತ್ರಿಕೆ ಹೀಗೆ ಹೇಳಿದೆ:

೧೮ನೆಯ ಮಾರ್ಚ್ ೧೯೪೫ರಂದು ಮುಜಾಫರ್ ನಗರ ಜಿಲ್ಲೆಯ ಫ್ಲೋಡಾ ಎಂಬ ಹಳ್ಳಿಯಲ್ಲಿ ಒಬ್ಬ ಝಾಡಮಾಲಿ ಸತ್ತ. ಗ್ರಾಮದ ಝಾಡಮಾಲಿಗಳು ಶವವನ್ನು ಸ್ಮಶಾನಕ್ಕೆ ಕೊಂಡೊಯ್ದರು. ಇದು ಗ್ರಾಮದ ತ್ಯಾಗಿ ಬ್ರಾಹ್ಮಣರನ್ನು ರೊಚ್ಚಿಗೆಬ್ಬಿಸಿತು. ಸವರ್ಣೀಯ ಹಿಂದೂಗಳ ಸ್ಮಶಾನಕ್ಷೇತ್ರಕ್ಕೆ ಶವವನ್ನು ತರುವ ದಿಟ್ಟತನ ತೋರಿದ್ದಕ್ಕಾಗಿ ಝಾಡಮಾಲಿಗಳನ್ನು ಅವರು ಬೈದರು. ತಾವು ಹಿಂದೂಗಳೆಂದು ಶವಸಂಸ್ಕಾರ ಮಾಡುವುದಾಗಿ ಝಾಡಮಾಲಿಗಳು ಪ್ರತಿಭಟಿಸಿದರು. ಆದರೆ ಬ್ರಾಹ್ಮಣರು ಈ ತರ್ಕಕ್ಕೆ ಮಣಿಯುವಂತಿರಲಿಲ್ಲ. ಅವರು ಹಿಂದೂಗಳಾಗಿರಲಿ, ಮುಸಲ್ಮಾನರಾಗಿರಲಿ ಶವವನ್ನು ಹೂಳಬೇಕೆಂದು ಝಾಡಮಾಲಿಗಳನ್ನು ಬ್ರಾಹ್ಮಣರು ಆಗ್ರಹಪಡಿಸಿದರು. ಅವರು ಹಾಗೆ ಮಾಡದಿದ್ದಲ್ಲಿ ತಾವೇ (ಅಂದರೆ ಬ್ರಾಹ್ಮಣರೇ) ಶವವನ್ನು ಹೂಳುವುದಾಗಿ ಎಚ್ಚರಿಸಿದರು. ಹೀಗೆ ಬೆದರಿಸಲ್ಪಟ್ಟಾಗ ಮತ್ತು ತಮಗೆ ಪೆಟ್ಟುಬೀಳುವ ಭೀತಿಯಿದೆ ಎಂದು ತಿಳಿದಾಗ ಝಾಡಮಾಲಿಗಳು ಶವವನ್ನು ಹೂತರು."

ಇಷ್ಟೇ ಅಲ್ಲ. ಇದಕ್ಕೆ ಸಂಬಂಧಿಸಿದಂತೆ ಇನ್ನೊಂದಂಶವನ್ನು ನಾವು ಗಣನೆಗೆ ತಂದು ಕೊಳ್ಳಬೇಕು. ಸ್ಪೃಶ್ಯ ಹಿಂದೂಗಳು ಶವವನ್ನು ಸುಡುವ ಮೂಲಕ ಸಂಸ್ಕಾರ ನಡೆಸುತ್ತಾರೆ. ಹಿಂದೂಗಳ ಉನ್ನತ ಸ್ಥಾನದ ದ್ಯೋತಕವಾದ ಮಾರ್ಗವನ್ನು ಅನುಸರಿಸಲು ಅಸ್ಪೃಶ್ಯರು ಹವಣಿಸುತ್ತಾರೆಂಬ ಆಪಾದನೆ ಬರುತ್ತದೆಂಬ ಒಂದೇ ಕಾರಣದಿಂದ ತಮಗೆ ಅಂತಹ ಇಚ್ಛೆಯಿಲ್ಲದಿದ್ದರೂ ಅಸ್ಪೃಶ್ಯರು ಆವಶ್ಯಕವಾಗಿ ಶವವನ್ನು ಹೂಳುವ ರೀತಿಯ ಸಂಸ್ಕಾರ ಮಾಡಬೇಕಾಗಿದೆ.

ಈ ರೀತಿಯ ಬಲಾತ್ಕಾರದ ಹೂಳುವಿಕೆಯ ಒಂದು ಘಟನೆಯನ್ನು ೬ನೆಯ ಜೂನ್ ೧೯೨೪ರ 'ಮಿಲಾಪ್' ಪತ್ರಿಕೆಯು ವರದಿ ಮಾಡಿದೆ:

"ಅಸ್ಪೃಶ್ಯರು ಎಚ್ಚೆತ್ತುಕೊಳ್ಳುವುದಕ್ಕಿರುವ ಪ್ರಮುಖ ಕಾರಣ ಹಿಂದೂಗಳ ದಬ್ಬಾಳಿಕೆ. ನನಗಿದು ತಿಳಿದಿರಲಿಲ್ಲ. ಆದರೆ ಅನೇಕ ಕೆಲಸಗಾರರು ನೀಡಿರುವ ವರದಿಗಳು ನನ್ನ ಮನಸ್ಸಿಗೆ ಬಹಳ ನೋವನ್ನುಂಟುಮಾಡಿವೆ. ಒಂದು ಜಾಗದಿಂದ ನನಗೆ ಬಂದಿರುವ ವರದಿಯ ಪ್ರಕಾರ ಅಲ್ಲಿ ಅಸ್ಪೃಶ್ಯರು ತಮ್ಮ ಪೈಕಿ ಸತ್ತವರನ್ನು ಸುಡಲು ಸಹ ಅವಕಾಶವಿಲ್ಲ. ಆದರೆ ಇದು ಅಲ್ಲಿಯ ಝಾಡಮಾಲಿಗಳಲ್ಲಿ ಒಂದು ಹೊಸ ಚೇತನವನ್ನು ಚಿಮ್ಮಿಸಿದೆಯೆಂದು ತೋರುತ್ತದೆ. ಶವಗಳನ್ನು ತಲೆಕೆಳಗು ಮಾಡಿ ಹೂಳುವ ಉಪಕ್ರಮವನ್ನಾರಂಭಿಸಿದ್ದಾರೆ. ಶವವನ್ನು ಮಲಗಿರುವ ರೀತಿಯಲ್ಲಿ ಹೂಳುವವರಿಂದ ತಮ್ಮನ್ನು ಭಿನ್ನವಾಗಿಸಿಕೊಳ್ಳಲು ಅವರು ಬಹುಶಃ ಹೀಗೆ ಮಾಡುತ್ತಿದ್ದಾರೆ. ತಾವೂ ಇತರರನ್ನು ಅಣಕಮಾಡಿ ನಡೆದುಕೊಳ್ಳುವುದು ಕೀಳಾದದ್ದೆಂದು ಝಾಡಮಾಲಿಗಳು ಭಾವಿಸಿದಂತಿದೆ."

## V

ಪವಿತ್ರವಾದ ದಾರವೊಂದನ್ನು ಧರಿಸುವುದು ಶ್ರೇಷ್ಠ ಜನ್ಮದ ಕುರುಹೆಂದು ಕೆಲವರ ನಂಬಿಕೆ. ತಮ್ಮನ್ನು ಶ್ರೇಷ್ಠ ಪದವಿಗೆ ಏರಿಸಿಕೊಳ್ಳುವ ದೃಷ್ಟಿಯಿಂದ ಅಸ್ಪೃಶ್ಯರು ಈ ಪವಿತ್ರ ದಾರವನ್ನು ಧರಿಸುವ ಯೋಚನೆ ಮಾಡಿದರು. ಪರಿಣಾಮವಾಗಿ ಸವರ್ಣೀಯ ಹಿಂದೂಗಳು ಗ್ರಾಮದ ಅಸ್ಪೃಶ್ಯರ ವಿರುದ್ಧ ದೌರ್ಜನ್ಯಗಳನ್ನೆಸಗಿದರು. ಉತ್ತರ ಪ್ರದೇಶದ ಗಢವಾಲ್ ಜಿಲ್ಲೆಯ ರಿಂಗ್ವಾರಿ ಎಂಬ ಹಳ್ಳಿಯ ಈ ಘಟನೆ ನೋಡಿ. ಜೂನ್ ೬ರಂದು 'ನ್ಯಾಷನಲ್ ಹೆರಾಲ್ಡ್' ಪತ್ರಿಕೆ ಅದನ್ನು ವರದಿ ಮಾಡಿದೆ:

"ತಲೆತಪ್ಪಿಸಿಕೊಂಡು ಸುಮಾರು ಎರಡು ತಿಂಗಳನ್ನು ಕಳೆದು ೩೩ ಹರಿಜನರನ್ನೊಳಗೊಂಡ ಹತ್ತು ಕುಟುಂಬಗಳು ತಮ್ಮ ಮನೆಗಳಿಗೆ ಇದೀಗ ಹಿಂದಿರುಗಲು ಸಾಧ್ಯವಾಗಿದೆ. ಸವರ್ಣೀಯ ಹಿಂದೂಗಳ

ಕಾಟದಿಂದಾಗಿ ತಲೆಮರೆಸಿಕೊಂಡಿದ್ದ ಇವರು ಗಢವಾಲ್ ಜಿಲ್ಲೆಯ ಅಧಿಕಾರಿಗಳ ಸಹಾಯದಿಂದ ಚಾಂದ್ ಕೋಟ್ ಬಳಿಯ ರಿಂಗ್ವಾರಿ ಗ್ರಾಮಕ್ಕೆ ಹಿಂದಿರುಗಿದ್ದಾರೆ. ಮಹಾತ್ಮಾ ಗಾಂಧಿ ಮತ್ತು ದಿವಂಗತ ಸ್ವಾಮಿ ಶ್ರದ್ಧಾನಂದ ಅವರು ಅಸ್ಪೃಶ್ಯರ ಏಳಿಗೆಗಾಗಿ ಆರಂಭಿಸಿದ್ದ ಸಾಮಾಜಿಕ ಚಳವಳಿಯ ಪೂರ್ಣ ಉಪಯೋಗವನ್ನು ಅವರು ಪಡೆಯಹೊರಟಿದ್ದರೆಂಬುದನ್ನು ಇಲ್ಲಿ ಸ್ಮರಿಸಬಹುದು. ಪವಿತ್ರ ದಾರವನ್ನವರು ಧರಿಸಿದ್ದರು ಮತ್ತು 'ಸಂಧ್ಯಾವಂದನೆ' ಮಾಡುವುದನ್ನು ತಮ್ಮ ದಿನನಿತ್ಯದ ಕರ್ಮವನ್ನಾಗಿ ಮಾಡಿಕೊಂಡಿದ್ದರು. ಗಢವಾಲ್‌ನ ಸವರ್ಣೀಯ ಹಿಂದೂಗಳು ಇದರಿಂದ ತೀವ್ರವಾಗಿ ಅಸಮಾಧಾನಗೊಂಡಿದ್ದರು. ಏಕೆಂದರೆ, ಅವರ ಪ್ರಕಾರ ಇದು ಅವರ 'ಹಕ್ಕು ಮತ್ತು ಸವಲತ್ತು'ಗಳ ಮೇಲಿನ ನೇರವಾದ ಆಕ್ರಮಣವೇ ಆಗಿತ್ತು. ಹರಿಜನರ ಮೇಲಿನ ಅನೇಕ ಹಲ್ಲೆಗಳು ಹಾಗೂ ಎಡೆಬಿಡದ ಸಾಮಾಜಿಕ ಕಿರುಕುಳದ ರೂಪದಲ್ಲಿ ಈ ಅಸಮಾಧಾನ ವ್ಯಕ್ತಗೊಂಡಿತ್ತು. 'ಅಡ್ಡೆ' ಮತ್ತು 'ಪಲ್ಲಕ್ಕಿ'ಗಳನ್ನು ತಮ್ಮ ಕುಟುಂಬಗಳ ಮದುವೆ ಮೆರವಣಿಗೆಗಳಲ್ಲಿ ಉಪಯೋಗಿಸುವುದರಿಂದ ವಿಮುಖರಾಗಬೇಕೆಂದು ಅವರಿಗೆ ಹೇಳಲಾಗಿತ್ತು. ಒಂದೆಡೆ ಅವರ ಪೈಕಿ ನಾಲ್ಕು ಮಂದಿಯನ್ನು, ಒಂದು ಎಮ್ಮೆಯನ್ನು ಕೊಂದು ಅದರ ಬಾಡು ತಿನ್ನುವಂತೆ ಬಲಾತ್ಕರಿಸಿದ್ದರು. ಈ ರೀತಿಯ ದೌರ್ಜನ್ಯಗಳು ರಿಂಗ್ವಾರಿಯಲ್ಲಿ ಪರಾಕಾಷ್ಠೆಯನ್ನು ಮುಟ್ಟಿದವು: ಸವರ್ಣೀಯ ಹಿಂದೂಗಳಿಗೆ ಮಣಿಯಲು ನಿರಾಕರಿಸಿದ ಹರಿಜನರಿಗೆ ಎಲ್ಲ ನೀರಿನ ಸೆಲೆಗಳು, ಗೋಮಾಳಗಳು ಮತ್ತು ಇತರ ಸಾರ್ವಜನಿಕ ಸ್ಥಳಗಳು ಮುಚ್ಚಲ್ಪಟ್ಟವು. ಇದರ ಪರಿಣಾಮವಾಗಿ ಮೇಲೆ ಹೇಳಿದ ಹತ್ತು ಕುಟುಂಬಗಳು ಇನ್ನೂ ಹೆಚ್ಚಿನ ಕಿರುಕುಳಗಳಿಂದ ಪಾರಾಗಲು ತಮ್ಮ ಗ್ರಾಮಗಳನ್ನು ರಾತ್ರೋರಾತ್ರಿ ಬಿಟ್ಟು ನಿರ್ಗಮಿಸಬೇಕಾಯಿತು.

ಇಂಥವೇ ಕೆಲವು ಇತರೆ ಘಟನೆಗಳನ್ನು ಕೆಳಗೆ ಕೊಟ್ಟಿದೆ :

೧) "ಕೆಲವು ಅಸ್ಪೃಶ್ಯರನ್ನು ಜಾತಿಯಲ್ಲಿ ಮೇಲೇರಿಸಲು ಯತ್ನಿಸಿದ ಆರ್ಯಸಮಾಜದ ಕೆಲವರು ಅವರಿಗೆ ಜಾತಿಯ ಚಿಹ್ನೆಯನ್ನು ಒದಗಿಸಿದರು; ಅಂದರೆ, ಅವರಿಗೆ ಕೊರಳ ಸುತ್ತ ಸುತ್ತಿಕೊಳ್ಳುವ ಧಾರ್ಮಿಕ ದಾರವನ್ನು ಸುತ್ತಿದರು. ಸನಾತನಿಗಳ ಹಿಂಡು ಇದನ್ನು ಸಹಿಸದಾಯಿತು; ಏಕೆಂದರೆ, ಅಸ್ಪೃಶ್ಯರು ಆ ದಾರವನ್ನು ಧರಿಸುವುದು ಅವರ ಧರ್ಮದ ಪ್ರಕಾರ ನಿಷಿದ್ಧವಾದುದು. ಆದ್ದರಿಂದಲೇ ಉಚ್ಚ ಜಾತಿಯ ಹಿಂದೂಗಳು ದಾರವನ್ನು ಧರಿಸಿರುವ ಅಸ್ಪೃಶ್ಯರನ್ನು ದಿನಂಪ್ರತಿ ಕಿರುಕುಳಕ್ಕೀಡುಮಾಡುತ್ತಿರುವುದು."

೨) "ಜಮ್ಮು ರಾಜ್ಯದ ಮೀರ್ ಪುರ್ ಜಿಲ್ಲೆಯ ಮೊಯ್ಲಾದ ಭಗತ್ ಹರಿಚಂದ್ ಎಂಬುವನನ್ನು ಆರ್ಯಸಮಾಜವಾದಿಗಳು ಪವಿತ್ರಗೊಳಿಸಿ ಧರಿಸಲು ಒಂದು ದಾರವನ್ನು ಕೊಟ್ಟರು. ಆ ಊರಿನ ಹಿಂದೂ ಜಾಟ್‌ಗಳು ಅವನನ್ನು ಬಲಿಹಾಕಲಾರಂಭಿಸಿದರು ಮತ್ತು ದಾರವನ್ನು ತೆಗೆದುಹಾಕುವಂತೆ ಹೇಳಿದರು. ಹರಿಚಂದ್ ಇದಕ್ಕೆ ಬಗ್ಗದೆ ತನ್ನ ಧರ್ಮಕ್ಕೆ ಬಲವಾಗಿ ಕಟ್ಟುಬಿದ್ದೇ ಉಳಿದ. ಕೊನೆಗೊಂದು ದಿನ ಭಗತ್ ಹರಿಚಂದ್ ತನ್ನ ಗಾಯತ್ರಿ ಪಾಠವನ್ನು ಮುಗಿಸುತ್ತಿದ್ದಂತೆ ಹಿಂದೂ ಜಾಟರು ಅವನನ್ನು ಹಿಡಿದು ಚೆನ್ನಾಗಿ ಥಳಿಸಿದರು ಮತ್ತು ದಾರವನ್ನು ಕಿತ್ತುಹಾಕಿದರು. ಅವರು ಹೀಗೆ ಕೇಳಲು ಕಾರಣ ಇದು: ಪವಿತ್ರಗೊಳಿಸಿಕೊಳ್ಳುವ ಮುನ್ನ ಈ ಶುಧಮೇಘರು (ಅಸ್ಪೃಶ್ಯರು) ಜಾಟರನ್ನು 'ಬಡವರ ಆಶ್ರಯದಾತರು' (ಗರೀಬ್ ನವಾಜ್) ಎಂದು ಸಂಬೋಧಿಸುತ್ತಿದ್ದರು; ಆದರೆ ಈಗ ಸುಮ್ಮನೆ 'ನಮಸ್ತೆ' ಎಂದಷ್ಟೇ ಅನ್ನುತ್ತಾರೆ."

೧೪ನೆಯ ಸೆಪ್ಟೆಂಬರ್ ೧೯೨೮ರ 'ಆರ್ಯ ಗೆಜೆಟ್' ನಿಂದ:

"ಗುರ್ದಾಸ್‌ಪುರ ಜಿಲ್ಲೆಯ ಬೆರ್ಹಾಂಪುರ ಪಟ್ಟಣದ ಬಳಿ ಇರುವ ರಮಣಿ ಎಂಬ ಹಳ್ಳಿಯ ಹಿಂದೂ ರಜಪೂತರು ಆ ಊರಿನ ಅಸ್ಪೃಶ್ಯರನ್ನೆಲ್ಲಾ ಮನೆಗಳಿಂದ ಹೊರಬರುವಂತೆ ಹೇಳಿ ಆ ಕ್ಷಣವೇ ತಮ್ಮ ಪಾವನವಾದ ದಾರವನ್ನು ತೆಗೆದುಹಾಕಬೇಕೆಂದೂ ಮತ್ತೆ ಅದನ್ನೆಂದೂ ಧರಿಸುವುದಿಲ್ಲವೆಂದು ಆಣೆ ಇಡಬೇಕೆಂದೂ ಆಜ್ಞಾಪಿಸಿದರು. ಹಾಗೆ ಮಾಡದಿದ್ದಲ್ಲಿ ಅವರ ಪ್ರಾಣಕ್ಕೆ ಸಂಚು ಬರಬಹುದೆಂದೂ ಎಚ್ಚರಿಸಿದರು. ಇದಕ್ಕೆ ಅಸ್ಪೃಶ್ಯರು ಶಾಂತವಾಗಿ ಉತ್ತರ ಕೊಟ್ಟರು: 'ಮಹಾಸ್ವಾಮಿ ನೀವೇಕೆ ಇಷ್ಟು ಕೋಪಗೊಳ್ಳುತ್ತೀರಿ? ನಿಮ್ಮ ಸಹೋದರರೇ ಆದ ಆರ್ಯಸಮಾಜವಾದಿಗಳು ಈ ದಾರಗಳನ್ನು ಕೃಪೆಮಾಡಿ ನಮ್ಮ ಕೊರಳಿಗೆ ಹಾಕಿದ್ದಾರೆ ಮತ್ತು ಅವು ಹಿಂದೂಧರ್ಮದ ನೈಜ ಪ್ರತೀಕಗಳಾದ್ದರಿಂದ ಅವನ್ನು ಎಂದೆಂದಿಗೂ ರಕ್ಷಿಸಬೇಕೆಂದು ಅಪ್ಪಣೆ ನೀಡಿದ್ದಾರೆ. ಅದಕ್ಕೆ ನೀವು ಆಕ್ಷೇಪಿಸುವುದಾದರೆ ನಮ್ಮ ದೇಹದಿಂದ ಅವನ್ನು ನಿಮ್ಮ ಕೈಗಳಿಂದಲೇ ಹರಿದು ಹಾಕಿ'. ಇದರಿಂದ ಉದ್ವಿಗ್ನಗೊಂಡ ರಜಪೂತರು ಆ ಬಡಜನರ ಮೇಲೆರಗಿದರು. ಲಾಠಿಗಳಿಂದ ಚಚ್ಚಿದರು ಮತ್ತು ಬಹಳ ಕಾಲದವರೆಗೆ ಹಾಗೆ ಹೊಡೆಯುತ್ತಲೇ ಇದ್ದರು. ಈ ಪ್ರಹಾರಗಳನ್ನು ಅಸ್ಪೃಶ್ಯರು ಬಹಳ ಸ್ಥೈರ್ಯದಿಂದ ಸಹಿಸುತ್ತಿದ್ದರೇ ವಿನಾ ಅದನ್ನವರು ಪ್ರತಿಭಟಿಸಲೂ ಇಲ್ಲ ಅಥವಾ ವಿರೋಧಿಸಲೂ ಇಲ್ಲ. ಅವರ ಅಸಹಾಯಕ ಪರಿಸ್ಥಿತಿಯ ಬಗ್ಗೆ ಆ ಪೀಡಕರಿಗೆ ಯಾವ ಕನಿಕರವೂ ಮೂಡಲಿಲ್ಲ. ಮೂರು–ನಾಲ್ಕು ಮಂದಿ ರಜಪೂತರು ಗೋರಿರಾಮ್ ಎಂಬ ಹರಿಜನರವನು ಧರಿಸಿದ್ದ ಪವಿತ್ರ ದಾರವನ್ನು ನಿಜಕ್ಕೂ ಕಿತ್ತೆಸೆದರು. ದಾರದ ಗುರುತನ್ನು ಅಣಕಿಸುವ ಅನುಕರಣದೋಪಾದಿಯಲ್ಲಿ ಒಂದು ಕಳೆಗುದ್ದಲಿಯಿಂದ ಅವನ ಮೈಮೇಲೆ ಗಾಯವನ್ನು ಉಂಟುಮಾಡಿದರು.

೧೨ನೆಯ ಅಕ್ಟೋಬರ್ ೧೯೨೮ರ 'ಮಿಲಾಪ್' ಪತ್ರಿಕೆಯಿಂದ:

"ಬಹ್ಮನೀಗ್ರಾಮದ ರಜಪೂತರು ಅಸ್ಪೃಶ್ಯರ ವಿರುದ್ಧ ಒಂದು ಕಾರ್ಯಕ್ರಮವನ್ನು ಈಗ ಕೆಲವು ದಿನಗಳಿಂದ ಸಾರಿದ್ದಾರೆ. ಪವಿತ್ರ ದಾರವನ್ನು ಕಿತ್ತುಹಾಕಿದ್ದುದನ್ನು ಕುರಿತು ನ್ಯಾಯಾಲಯದಲ್ಲಿ ಒಂದು ಮೊಕದ್ದಮೆ ಈಗಾಗಲೆ ಜಾರಿಯಲ್ಲಿದೆ. ಇದಲ್ಲದೆ ಇನ್ನೊಂದು ಮೊಕದ್ದಮೆಯೂ ಇದೆ. ಅದು ಒಬ್ಬ ಅಸ್ಪೃಶ್ಯಳಿಗೆ ಸಂಬಂಧಿಸಿದ್ದು. ೭ನೆಯ ಅಕ್ಟೋಬರ್ ೧೯೨೮ರಂದು ಆಕೆ ಪೈರು ಕುಯ್ಲುಮಾಡಲು ಹೊಲಕ್ಕೆ ಹೋಗುತ್ತಿದ್ದಾಗ ಒಬ್ಬ ರಜಪೂತನು ಅವಳಿಗೆ ತೀವ್ರವಾಗಿ ಹೊಡೆದು ರಣಗುಟ್ಟುವ ಗಾಯಗಳನ್ನು ಉಂಟುಮಾಡಿದ್ದಾನೆ. ಆ ಹೆಂಗಸನ್ನು ಮನೆಗೆ ಹೊತ್ತು ತರಬೇಕಾಯಿತು."

## VI

ಒಬ್ಬ ಹಿಂದೂವಿನ ಸಮ್ಮುಖದಲ್ಲಿ ಅಸ್ಪೃಶ್ಯನೊಬ್ಬ ಒಂದು ಮಂಚದ ಮೇಲೆ ಕುಳಿತುಕೊಂಡನೆನ್ನಿ. ಅವನಿಗೆ ಉಂಟಾಗುವ ಪರಿಣಾಮವು ಜುಲೈ ೧೯೩೮ರ 'ಜೀವನ್' ಪತ್ರಿಕೆಯಲ್ಲಿ ವರದಿಯಾಗಿರುವ ಕೆಳಗಿನ ಘಟನೆಯಿಂದ ತಿಳಿಯುತ್ತದೆ :

"ಸೀತಾಪುರ ತಾಲ್ಲೂಕು ಮತ್ತು ಜಿಲ್ಲೆಯ ಮಾಡ್‌ಗಾಂವ್ ಪೊಲೀಸ್ ಠಾಣೆಯ ಸುಪರ್ದಿನ ಪಥಾಹೇರ ಎಂಬ ಗ್ರಾಮದಲ್ಲಿ ನಂದರಾಮ್ ಮತ್ತು ಮಂಗಲೀಪ್ರಸಾದ್ ಎಂಬುವವರು ತಮ್ಮ ನೆಂಟರಿಷ್ಟರನ್ನು ಒಂದು ಸಾಮೂಹಿಕ ಔತನಕೂಟಕ್ಕೆ ಆಹ್ವಾನಿಸಿದರು. ಅತಿಥಿಗಳು ಪಲ್ಲಂಗಗಳ ಮೇಲೆ ಕುಳಿತು ಹೊಗೆ ಎಳೆಯುತ್ತಿದ್ದಾಗ ಗ್ರಾಮದ ಜಮೀನ್ದಾರರಾದ ಠಾಕೂರ್ ಬಕ್ಷ್ ಸಿಂಗ್ ಮತ್ತು ಹರಪಾಲ್ ಸಿಂಗ್ ಅಲ್ಲಿಗೆ ಬಂದರು. ನಂದರಾಮ್ ಮತ್ತು ಮಂಗಲೀಪ್ರಸಾದರನ್ನು ಕರೆಯಿಸಿ ಪಲ್ಲಂಗಗಳ ಮೇಲೆ ಕುಳಿತು ಹೊಗೆ

ಎಳೆಯುತ್ತಿರುವವರು ಯಾರು ಮತ್ತು ಅವರೇಕೆ ಹಾಗೆ ಪಲ್ಲಂಗಗಳ ಮೇಲೆ ಕುಳಿತಿದ್ದಾರೆ ಎಂಬುದನ್ನು ವಿಚಾರಿಸಿದರು. ಅವರು ತನ್ನ ನೆಂಟರಿಷ್ಟರೆಂದು ಮಂಗಲೀಪ್ರಸಾದ ಹೇಳಿ ಠಾಕೂರರು ಮಾತ್ರವೇ ಪಲ್ಲಂಗಗಳ ಮೇಲೆ ಕುಳಿತುಕೊಳ್ಳಬೇಕೇ ಎಂದು ಕೇಳಿದ. ಇದರಿಂದ ಕೋಪಗೊಂಡ ಠಾಕೂರರಿಬ್ಬರೂ ನಂದರಾಮ್ ಮತ್ತು ಮಂಗಲೀಪ್ರಸಾದ್ ಸೋದರರನ್ನು ಹೊಡೆಯುವುದಲ್ಲದೆ ಅತಿಥಿಗಳ ಮೇಲೂ ಹಲ್ಲೆ ನಡೆಸಿದರು. ಪರಿಣಾಮವಾಗಿ ಒಬ್ಬ ಗಂಡಸು ಮತ್ತು ಒಬ್ಬ ಹೆಂಗಸು ಪ್ರಜ್ಞಾಹೀನರಾದರು ಮತ್ತು ಇತರರು ತೀವ್ರವಾಗಿ ಗಾಯಗೊಂಡರು".

## VII

ಅಸ್ಪೃಶ್ಯರು ಹಿಂದೂಗಳು. ಅವರೂ ಸಮಾನ ನಾಗರಿಕ ಹಕ್ಕುಗಳನ್ನುಳ್ಳ ಪ್ರಜೆಗಳೇ ಆಗಿದ್ದಾರೆ. ಆದರೆ ಪ್ರತಿಷ್ಠಿತ ವ್ಯವಸ್ಥೆಯ ನಿಯಮಗಳಿಗೆ ವಿರೋಧವಾಗಿದ್ದರೆ ಅಸ್ಪೃಶ್ಯರು ಆ ನಾಗರಿಕತ್ವದ ಹಕ್ಕನ್ನು ಸಾಧಿಸಿಕೊಳ್ಳಲಾಗದು.

ಉದಾಹರಣೆಗೆ, ಸಾರ್ವಜನಿಕವಾದೊಂದು ತಂಗುದಾಣದಲ್ಲಿ ಅಸ್ಪೃಶ್ಯರು ವಸತಿಯನ್ನು ಪಡೆದುಕೊಳ್ಳುವಂತಿಲ್ಲ. ಆಗಸ್ಟ್ ೧೯೩೮ರ 'ಜೀವನ್' ಪತ್ರಿಕೆಯಲ್ಲಿ ಫತೇಘರ್ ನ ಕನ್ಹಯ್ಯಲಾಲ್ ಜಾಟವ್ ಎಂಬೊಬ್ಬ ಅಸ್ಪೃಶ್ಯನ ಅನುಭವವು ಹೀಗೆ ವರದಿಯಾಗಿದೆ :

"೧೯೩೮ನೆಯ ಆಗಸ್ಟ್ ೧೫ರ ರಾತ್ರಿ ೧೦ ಗಂಟೆಗೆ ಅಲಹಾಬಾದ್ ಜಂಕ್ಷನ್ ಬಳಿಯ ಧರ್ಮಶಾಲೆಯಲ್ಲಿ ತಂಗಲು ನಾನು ಹೋದಾಗ ಅಂತಹ ಕಷ್ಟವೇನೂ ಆಗಲಿಲ್ಲ; ಒಂದು ರೂಪಾಯಿಯ ಮುಂಗಡ ಹಣವನ್ನು ತೆತ್ತು ನಾನೊಂದು ಮಂಚದ ಮೇಲೆ ಒರಗಿದೆ. ಆದರೆ ೧೧ ಗಂಟೆಗೆ ಅಲ್ಲಿ ತಂಗಿದ್ದವರೆಲ್ಲಾ ಧರ್ಮಶಾಲೆಯ ಮೇಲ್ವಿಚಾರಕನ ಬಳಿಗೆ ಹೋಗಿ ತಮ್ಮ ತಮ್ಮ ವಿಳಾಸಗಳನ್ನು ನಮೂದಿಸುವುದಿತ್ತು. ನನ್ನ ವಿಳಾಸವನ್ನು ಬರೆಯುವಾಗ ನಾನು ಜಾಟವ ಜಾತಿಯವನೆಂದು ಉಲ್ಲೇಖಿಸಿದೆ. ಮೇಲ್ವಿಚಾರಕನಿಗೆ ಎಲ್ಲಿಲ್ಲದ ಉದ್ರೇಕ ಉಕ್ಕಿ ಬಂದು ಧರ್ಮಶಾಲೆಯು ಹೀನಜಾತಿಯವರ ವಸತಿಗಾಗಿ ಅಲ್ಲವೆಂದು ಹೇಳಿ ನನ್ನನ್ನು ಕೂಡಲೆ ಹೊರಹೋಗಬೇಕೆಂದು ಆಗ್ರಹಪಡಿಸಿದ. ಧರ್ಮಶಾಲೆಯ ನಿಯಮಗಳ ಪ್ರಕಾರ ಅದು ಹಿಂದೂಗಳಿಗೆ ಮಾತ್ರವೇ ಮೀಸಲಾಗಿದೆಯೆಂದೂ ಅಸ್ಪೃಶ್ಯರನ್ನು ನಿಷೇಧಿಸಿಲ್ಲವೆಂದೂ ನಾನವನಿಗೆ ತಿಳಿಯಹೇಳಿದೆ. ನನ್ನನ್ನು ಹೊರಹೋಗುವಂತೆ ಆಗ್ರಹಪಡಿಸಲು ನಾನೇನು ಹಿಂದೂವಲ್ಲವೇ ಎಂದು ಆತನನ್ನು ಕೇಳಿದೆ. ಫರೂಕಾಬಾದ್‌ನ ನಿವಾಸಿಯಾದ್ದರಿಂದ ಅಲಹಾಬಾದ್ ನಲ್ಲಿ ನನಗೆ ಪರಿಚಿತರಾರೂ ಇಲ್ಲವೆಂದೂ ರಾತ್ರಿ ೧೧ ಗಂಟೆಯ ವೇಳೆಯಲ್ಲಿ ನನಗಿನ್ನೆಲ್ಲಿಗೂ ಹೋಗಲು ತಿಳಿಯದೆಂದೂ ಆತನಲ್ಲಿ ಮನವಿ ಮಾಡಿಕೊಂಡೆ. ಇದರಿಂದ ಮೇಲ್ವಿಚಾರಕ ಇನ್ನೂ ಕ್ರುದ್ಧನಾದ. ಅನಕ್ಷರಸ್ಥ ಶೂದ್ರರು, ದನಗಳು ಮತ್ತು ಹೆಂಗಸರು ಚೆನ್ನಾಗಿ ಹೊಡೆಸಿಕೊಳ್ಳಲು ಯೋಗ್ಯರು ಎನ್ನುವ ಒಂದು ರಾಮಾಯಣದ ಶ್ಲೋಕವನ್ನು ಉದ್ಧರಿಸಿದ ಮತ್ತು ಹೀನಜಾತಿಯವನಾಗಿದ್ದುಕೊಂಡು ನಿಯಮ ಮತ್ತು ಕಾನೂನನ್ನು ಉಲ್ಲೇಖಿಸುವ ಉದ್ಧಟತನ ನನ್ನದೆಂದು ಮೂದಲಿಸಿದ. ಚೆನ್ನಾಗಿ ಹೊಡೆಯದಿದ್ದರೆ ನೀನು ಹೊರಹೋಗಲೊಲ್ಲೆಯಲ್ಲವೆ ಎಂದು ಜರೆದ. ಆಮೇಲೆ ನನ್ನ ಹಾಸಿಗೆ ಬಟ್ಟೆಗಳನ್ನು ಒಮ್ಮೆಲೇ ಧರ್ಮಶಾಲೆಯಿಂದ ಹೊರಗೆ ಬಿಸಾಡಿದ ಮತ್ತು ಅಲ್ಲಿದ್ದವರೆಲ್ಲಾ ನನ್ನನ್ನು ಹೊಡೆಯಲು ಸಿದ್ಧರಾಗಿದ್ದರು. ಇಂತಹ ಪ್ರತಿಕೂಲ ಸನ್ನಿವೇಶದಲ್ಲಿ ನಾನು ಕೂಡಲೆ ಧರ್ಮಶಾಲೆಯನ್ನು ಬಿಟ್ಟು ಹೊರಹೋದೆ. ಧರ್ಮಶಾಲೆಯ ಎದುರಿನ ಅಂಗಡಿಯ ಮುಂದೆ ಒಂದು ಮರದ ಹಲಗೆಯ ಮೇಲೆ ನಾನಂದು ರಾತ್ರಿ ಮಲಗಬೇಕಾಯಿತು. ಅಂಗಡಿಯ ಮಾಲೀಕನಿಗೆ ನಾನದಕ್ಕೆ ತೆರಬೇಕಾಗಿ ಬಂದ ಬಾಡಿಗೆ ಎರಡು ಆಣೆ. ಆದ್ದರಿಂದ ಪರಿಶಿಷ್ಟ ಜಾತಿಯ ನನ್ನ ಬಾಂಧವರಿಗೆ

ನನ್ನ ಮನವಿ ಇದು : ಎಲ್ಲೆಲ್ಲೂ ಸಭೆಗಳನ್ನು ನಡೆಸಿ ಪ್ರತಿಯೊಂದು ಪಟ್ಟಣದಲ್ಲೂ ನಮ್ಮ ಜನಗಳಿಗೆ ಪ್ರತ್ಯೇಕ ಧರ್ಮಶಾಲೆಗಳನ್ನು ಕಟ್ಟಿಸಬೇಕೆಂದು ಸರ್ಕಾರವನ್ನು ಒತ್ತಾಯಿಸಿ, ಇಲ್ಲವೇ ಈಗಾಗಲೆ ಇರುವ ಧರ್ಮಶಾಲೆಗಳಲ್ಲಿ ನಮಗೂ ಅವಕಾಶ ದೊರಕಿಸಿಕೊಡಬೇಕೆಂದು ಸರ್ಕಾರವನ್ನು ಒತ್ತಾಯಿಸಿ."

## VIII

ಪ್ರತಿಷ್ಠಿತ ವ್ಯವಸ್ಥೆಯಡಿಯಲ್ಲಿ ಸತ್ತ ದನಗಳನ್ನು ಎತ್ತಿ ದೂರ ಸಾಗಿಸುವುದು ಮತ್ತು ಝಾಡಮಾಲಿಯ ಕೆಲಸ ಮಾಡುವುದು ಹಿಂದೂಗಳ ಘನತೆಗೆ ಚ್ಯುತಿ ತರುತ್ತದೆಂದು ಭಾವಿಸಲಾಗಿದೆ. ಅದನ್ನು ಮಾಡಬೇಕಾದವರು ಅಸ್ಪೃಶ್ಯರು. ಇದನ್ನು ಮಾಡುವುದು ತಮ್ಮ ಸ್ಥಾನಮಾನಗಳಿಗೂ ತಕ್ಕುದಲ್ಲವೆಂದು ಭಾವಿಸಲು ಅಸ್ಪೃಶ್ಯರು ಆರಂಭಿಸಿದ್ದಾರೆ ಮತ್ತು ಅದನ್ನು ಮಾಡಲು ನಿರಾಕರಿಸುತ್ತಿದ್ದಾರೆ. ಆದರೆ ತಮ್ಮ ಇಚ್ಛೆಗೆ ವಿರುದ್ಧವಾಗಿ ಇದನ್ನು ಮಾಡುವಂತೆ ಅಸ್ಪೃಶ್ಯರನ್ನು ಹಿಂದೂಗಳು ಬಲವಂತ ಪಡಿಸುತ್ತಿದ್ದಾರೆ. ೧೯೩೮ರ ಜೂನ್ ತಿಂಗಳ 'ಜೀವನ್' ಪತ್ರಿಕೆಯಲ್ಲಿ ಪ್ರಕಟವಾಗಿರುವ ಈ ವರದಿಯನ್ನು ಗಮನಿಸಿ:

"ಮೇ ೧೯೩೮ರ ಒಂದು ದಿನ ಅಲಿಘರ್ ಜಿಲ್ಲೆಯ ಬರ್ಲಾ ಪೊಲೀಸ್ ಠಾಣೆಯ ಸುಪರ್ದಿಗೆ ಸೇರುವ ಬಿಪೋಲಿ ಎಂಬ ಹಳ್ಳಿಯ ಭಜ್ಜು ರಾಮ್ ಜಾಟವ್ ಎಂಬಾತ ತನ್ನ ಮನೆಯಲ್ಲಿ ಕುಳಿತಿದ್ದ. ಆಗ ಸಮಯ ಬೆಳಿಗ್ಗೆ ೧೧ ಗಂಟೆ. ಪೃಥಿಕ್, ಹೋದಾಲ್, ಸೀತಾರಾಂ, ದೇವಿ ಮತ್ತು ಚುನಿ ಎಂಬ ಕೆಲವು ಬ್ರಾಹ್ಮಣರು ಲಾಠಿಗಳನ್ನು ಹಿಡಿದು ನುಗ್ಗಿಬಂದರು. ಸತ್ತ ದನವನ್ನು ಎತ್ತಿ ಸಾಗಿಸಲು ಅವನನ್ನು ಬಲವಂತಪಡಿಸುವುದು ಅವರ ಉದ್ದೇಶವಾಗಿತ್ತು. ತನಗೆ ಆ ಕೆಲಸ ಅಭ್ಯಾಸವಿಲ್ಲವೆಂದು ಹೇಳಿ ಅದನ್ನು ಮಾಡಲು ಆತ ನಿರಾಕರಿಸಿದ. ಅಂತಹ ಕಾರ್ಯಭಾರದಲ್ಲಿ ಪಳಗಿದ ಬೇರೆ ಯಾರನ್ನಾದರೂ ಅವರು ಸಂಪರ್ಕಿಸಬೇಕೆಂದು ಅವನು ಹೇಳಿದ್ದಕ್ಕೆ ಅವನನ್ನು ಲಾಠಿಗಳಿಂದ ನಿರ್ದಯವಾಗಿ ಚಚ್ಚಲಾಯಿತು."

ಅದೇ ಪತ್ರಿಕೆಯು ತನ್ನ ಅಕ್ಟೋಬರ್ ೧೯೩೮ರ ಸಂಚಿಕೆಯಲ್ಲಿ ಕೆಳಗಿನ ವಾರ್ತೆಯನ್ನು ನೀಡಿದೆ :

"೧೯೩೮ರ ಅಕ್ಟೋಬರ್ ೨೪ರಂದು ಮುಟ್ರಾ ಜಿಲ್ಲೆಯ ಸದಾಬಾದ್ ತಾಲ್ಲೂಕಿನ ಲೋಧಾರಿ ಎಂಬ ಹಳ್ಳಿಯಲ್ಲಿ ಒಬ್ಬ ಬ್ರಾಹ್ಮಣನ ಕೆಲವು ದನಗಳು ಸತ್ತಿದ್ದವು. ಅವನ್ನು ಎತ್ತಿ ಸಾಗಿಸಬೇಕೆಂದು ಹೇಳಿದಾಗ ಆ ಹಳ್ಳಿಯ ಪರಿಶಿಷ್ಟ ಜಾತಿಯವರು ನಿರಾಕರಿಸಿದರು. ಇದು ಸವರ್ಣೀಯ ಹಿಂದೂಗಳ ಸಿಟ್ಟನ್ನು ಎಷ್ಟು ಏರಿಸಿತೆಂದರೆ ಅವರು ಈ ಪರಿಶಿಷ್ಟ ಜಾತಿಯವರನ್ನು ಮಲವಿಸರ್ಜನೆಗೆ ತಮ್ಮ ಹೊಲಗಳಿಗೆ ಹೋಗಕೂಡದೆಂದು ಆಜ್ಞಾಪಿಸಿದ್ದಾರೆ ಮತ್ತು ದನಗಳನ್ನು ಮೇಯಿಸಲು ತಮ್ಮ (ಸವರ್ಣೀಯ ಹಿಂದೂಗಳ) ಹೊಲಗಳ ಬದುಗಳ ಬಳಿ ಸುಳಿಯಕೂಡದೆಂದು ಸಹ ಆಜ್ಞೆ ನೀಡಿದ್ದಾರೆ."

## IX

ಅಸ್ಪೃಶ್ಯರು ಅಂದವಾದ ಮತ್ತು ಶುಭ್ರವಾದ ಬಟ್ಟೆಗಳನ್ನು ಧರಿಸುವಂತಿಲ್ಲ; ಅಂತೆಯೇ ಚಿನ್ನ ಮತ್ತು ಬೆಳ್ಳಿಯ ಆಭರಣಗಳನ್ನು ತೊಡುವಂತೆಯೂ ಇಲ್ಲ. ಈ ನಿಯಮಗಳನ್ನೇನಾದರೂ ಅಸ್ಪೃಶ್ಯರು ಉಲ್ಲಂಘಿಸಿದರೆ ಹಿಂದೂಗಳು ಅವರಿಗೆ ತಕ್ಕ ಶಿಕ್ಷೆ ನೀಡಲು ಹೇಸುವುದಿಲ್ಲ. ಈ ನಿಯಮಗಳನ್ನು ಉಲ್ಲಂಘಿಸಲು ಅಸ್ಪೃಶ್ಯರು ಯತ್ನಿಸುತ್ತಿದ್ದಾರೆ: ಆದರೆ ಅದರ ಪರಿಣಾಮ ಏನಾಗುತ್ತಿದೆಯೆಂಬುದು ಕೆಳಗಿನ ಘಟನೆಗಳಿಂದ ತಿಳಿದುಬರುತ್ತದೆ. ಅವು ವೃತ್ತಪತ್ರಿಕೆಗಳಲ್ಲಿ ವರದಿಯಾಗಿವೆ.

"ಬುಂದಿಯ ಬೇರಾರ್ ಜಿಲ್ಲೆಯ ದಲೈ ಎಂಬ ಅಸ್ಪೃಶ್ಯ ಜಾತಿಯವರನ್ನು ಗೋಧಿ ತಿನ್ನದಂತೆ

೧೯೨೨ರ ತನಕ ನಿರ್ಬಂಧಿಸಲಾಗಿತ್ತು. ಫೆಬ್ರವರಿ ೧೯೨೨ರಲ್ಲಿ ಜೈಪುರದ ಬಳಿಯ ಸಕತ್‌ಫರ್ ಎಂಬಲ್ಲಿ ಒಬ್ಬ ಚಮ್ಮಾರ ಹೆಂಗಸನ್ನು ಬಂಡೆಯ ಮೇಲೆ ನಿಂತಿರುವಂತೆ ವಿಧಿಸಲಾಯಿತು. ಅದಕ್ಕೆ ಕಾರಣ ಕೇವಲ ಅವಳು ತನ್ನ ಕಾಲಿಗೆ ಬೆಳ್ಳಿಯ ಆಭರಣ ತೊಟ್ಟಿದ್ದಳು ಎಂಬುದಾಗಿತ್ತು. ಅವರ ಸಮಜಾಯಿಷಿ ಇಷ್ಟೇ! ಮೇಲ್ಜಾತಿಯ ಪುರುಷರು ಮಾತ್ರ ಬೆಳ್ಳಿಯ ಆಭರಣ ತೊಡುವುದು ಮತ್ತು ಗೋಧಿ ತಿನ್ನುವುದು ಎರಡಕ್ಕೂ ಅಂಗೀಕಾರ ಪಡೆದಿದ್ದಾರೆ. ಇವುಗಳಿಗೆ ಆಶಿಸುವಷ್ಟು ಧೈರ್ಯವನ್ನು ಕೆಳಜಾತಿಯ ಜನ ತೋರಬಾರದು. ಈ ವೇಳೆಗೆ ಇಂತಹ ಹಳೆಯ ಕಂದಾಚಾರದ ಭಾವನೆಗಳು ಬಹುಶಃ ಸತ್ತುಹೋಗಿದ್ದಿರಬಹುದೆಂದು ನಾವು ಈವರೆಗೆ ಆಲೋಚಿಸುತ್ತಿದ್ದೆವು."

೧೯೨೮ನೆಯ ಜನವರಿ ೪ರ ಸಂಚಿಕೆಯಲ್ಲಿ 'ಟೈಂಸ್ ಆಫ್ ಇಂಡಿಯಾ' ಪತ್ರಿಕೆಯ ಮಧ್ಯಭಾರತದ ಅಸ್ಪೃಶ್ಯ ಜನಾಂಗಕ್ಕೆ ಸೇರಿದ ಬಲೈಗಳ ಮೇಲೆ ಎಂತಹ ದೌರ್ಜನ್ಯ ಮತ್ತು ದಬ್ಬಾಳಿಕೆ ನಡೆಸಲಾಗುತ್ತಿದೆಯೆಂಬುದನ್ನು ವರದಿಮಾಡಿದೆ. ಈ ಅಸ್ಪೃಶ್ಯರ ಅಪರಾಧವೇನೆಂದರೆ ಶುಭ್ರವಾದ ಬಟ್ಟೆ ಮತ್ತು ಚಿನ್ನದ ಆಭರಣಗಳನ್ನು ತೊಡುವಷ್ಟು ಧೈರ್ಯವನ್ನು ಪ್ರದರ್ಶಿಸಿದ್ದು. 'ಟೈಂಸ್' ಪತ್ರಿಕೆಯ ವರದಿ ಹೀಗಿದೆ :

"೧೯೨೭ರ ಮೇ ತಿಂಗಳಲ್ಲಿ ಇಂದೋರ್ ಜಿಲ್ಲೆಗೆ ಸೇರಿದ ಕನೇರಿಯ, ಬಿಥೋಲಿ ಹಫ್‌ಸೀ, ಬಿಥೋಲಿ ಮರ್ದಾನಾ ಮತ್ತಿತರ ೧೫ ಹಳ್ಳಿಗಳ ಮೇಲ್ಜಾತಿಯ ಹಿಂದೂಗಳು, ಅಂದರೆ ಪಾಟೀಲ್ ಮತ್ತು ಪಟ್ವಾರಿಗಳೂ ಸೇರಿದಂತೆ ಕಲೋಟಾಗಳು, ರಜಪೂತರು ಮತ್ತು ಬ್ರಾಹ್ಮಣರು ತಮ್ಮ ತಮ್ಮ ಹಳ್ಳಿಗಳಿಗೆ ಸೇರಿದ ಬಲೈಗಳಿಗೆ ಆ ಹಳ್ಳಿಗಳಲ್ಲಿ ವಾಸಿಸಲು ಇಷ್ಟವಿದ್ದಲ್ಲಿ ಈ ಕೆಳಗಿನ ನಿಯಮಗಳನ್ನವರು ಪಾಲಿಸಬೇಕೆಂದು ಹೇಳಿದರು :

೧) ಬಲೈಗಳು ಚಿನ್ನದ ಜರಿಯಂಚಿನ ಪಗಡಿಗಳನ್ನು ಧರಿಸಕೂಡದು.
೨) ಬಣ್ಣದ ಅಥವಾ ಮನಸೂರೆಮಾಡುವ ಯಾವುದೇ ಅಂಚಿನ ಧೋತಿಗಳನ್ನು ಅವರು ಉಡಕೂಡದು.
೩) ಹಿಂದೂ ಕುಟುಂಬಗಳಲ್ಲಿ ಸಂಭವಿಸುವ ಮರಣದ ವಾರ್ತೆಯನ್ನು ಮೃತರ ನೆಂಟರು ಎಷ್ಟೇ ದೂರದಲ್ಲಿ ವಾಸಿಸುತ್ತಿದ್ದರೂ ಅವರಿಗೆ ಮುಟ್ಟಿಸಬೇಕು.
೪) ಹಿಂದೂಗಳ ಮದುವೆಗಳಲ್ಲಿ ಬಲೈಗಳು ಮೆರವಣಿಗೆಯ ಮುಂದೆ ಹಾಗೂ ಮದುವೆಯ ಸಂದರ್ಭದಲ್ಲಿ ಸಂಗೀತ ನುಡಿಸಬೇಕು.
೫) ಕುಪ್ಪಸವಾಗಿ ಬಲೈ ಹೆಂಗಸರು ಬಣ್ಣಬಣ್ಣದ ಗೌನುಗಳನ್ನು ತೊಡಬಾರದು.
೬) ಹಿಂದೂ ಹೆಂಗಸರ ಪ್ರಸವದ ಸಮಯದಲ್ಲಿ ಬಲೈ ಹೆಂಗಸರು ಶುಶ್ರೂಷೆ ಮಾಡಬೇಕು.
೭) ಯಾವ ಸಂಭಾವನೆಗೂ ಒತ್ತಾಯಮಾಡದೆ ಬಲೈಗಳು ಸೇವೆ ಸಲ್ಲಿಸಬೇಕು ಮತ್ತು ಹಿಂದೂವು ತಾನಾಗಿ ಏನು ನೀಡುತ್ತಾನೋ ಅದನ್ನು ಸ್ವೀಕರಿಸಬೇಕು.
೮) ಈ ಸೂತ್ರಗಳನ್ನು ಬಲೈಗಳು ಒಪ್ಪದಿದ್ದ ಪಕ್ಷದಲ್ಲಿ ಅವರು ಕೂಡಲೆ ಹಳ್ಳಿಗಳನ್ನು ಬಿಟ್ಟುಹೋಗಬೇಕು.

ಬಲೈಗಳು ಇವಕ್ಕೆ ಅಂಗೀಕಾರ ನೀಡಲಿಲ್ಲ; ಅದಕ್ಕೆ ಹಿಂದೂ ವಿಭಾಗವು ಅವರ ವಿರುದ್ಧ ಕ್ರಮ ಕೈಗೊಳ್ಳಲಾರಂಭಿಸಿತು. ಹಳ್ಳಿಗಳ ಬಾವಿಗಳಿಂದ ನೀರು ಪಡೆಯದಂತೆ ಬಲೈಗಳನ್ನು ನಿರ್ಬಂಧಿಸಲಾಯಿತು. ಅವರ ದನಗಳನ್ನು ಮೇಯಲು ಹೊರಗೆ ಅಟ್ಟುವುದನ್ನು ತಡೆದರು. ಹಿಂದೂಗಳಿಗೆ ಸೇರಿದ ಜಮೀನಿನ ಮೂಲಕ ಹಾದುಹೋಗಕೂಡದೆಂದು ಬಲೈಗಳನ್ನು ಬಲಾತ್ಕರಿಸಲಾಯಿತು. ಹೀಗಾಗಿ ಯಾರಾದರೂ ಬಲೈಗಳ ಜಮೀನು ಹಿಂದೂಗಳ ಜಮೀನಿನಿಂದ ಸುತ್ತುವರಿದಿದ್ದರೆ ತಮ್ಮ ಸ್ವಂತದ ಜಮೀನಿನಲ್ಲಿ ಕಾಲಿರಿಸುವುದು

ಅಸಾಧ್ಯವಾಯಿತು. ಬಲೈಗಳ ಜಮೀನಿನಲ್ಲಿ ಮೇಯಲು ಹಿಂದೂಗಳು ತಮ್ಮ ದನಗಳನ್ನು ಬಿಟ್ಟರು.

ಈ ಉಪಟಳಗಳ ವಿರುದ್ಧ ಬಲೈಗಳು ಇಂದೋರಿನ ದರ್ಬಾರಿಗೆ ಮನವಿಗಳನ್ನು ಸಲ್ಲಿಸಿದರು; ಆದರೆ ಸಮಯದಲ್ಲಿ ಅವರಿಗೆ ರಕ್ಷಣೆ ಸಿಗಲಿಲ್ಲ ಮತ್ತು ಅವರ ಮೇಲಿನ ದಬ್ಬಾಳಿಕೆ ಮುಂದುವರೆಯಿತು. ಹಲವಾರು ತಲೆಮಾರುಗಳಿಂದ ಅವರ ಪೂರ್ವಜರು ರೂಢಿಸಿಕೊಂಡಿದ್ದ ಮನೆಮಠಗಳನ್ನು ತೊರೆದು ನೂರಾರು ಬಲೈಗಳು ತಮ್ಮ ಹೆಂಡತಿ–ಮಕ್ಕಳೊಂದಿಗೆ ಗುಳೆ ಹೋಗಬೇಕಾಯಿತು. ಅವರು ಅಕ್ಕಪಕ್ಕದ ಧಾರ್, ದೇವಸ್, ಬಾಗ್ಲಿ, ಭೋಪಾಲ್, ಗ್ವಾಲಿಯರ್ ಇತ್ಯಾದಿ ರಾಜ್ಯಗಳ ಹಳ್ಳಿಗಳನ್ನು ಹೊಕ್ಕರು.

ಕೆಲವೇ ದಿನಗಳ ಹಿಂದೆ ಇಂದೋರ್ ನಗರದ ಉತ್ತರಕ್ಕೆ ಕೇವಲ ಎಂಟು ಮೈಲಿಗಳ ದೂರದಲ್ಲಿರುವ ರೇವತಿ ಎಂಬ ಹಳ್ಳಿಯಲ್ಲಿ ಹಿಂದೂಗಳು ಬಲೈಗಳನ್ನು ಸ್ಟಾಂಪ್ ಕಾಗದದ ಮೇಲೆ ಒಪ್ಪಂದವೊಂದಕ್ಕೆ ಸಹಿ ಹಾಕಬೇಕೆಂದು ಆಜ್ಞಾಪಿಸಿದರು. ಬೇರೆ ಹಳ್ಳಿಗಳಲ್ಲಿ ಹಿಂದೂಗಳು ಬಲೈಗಳ ಮೇಲೆ ಹೇರಿದ್ದ ನಿಯಮಗಳನ್ನು ಈ ಒಪ್ಪಂದದಲ್ಲೂ ಅಳವಡಿಸಲಾಗಿತ್ತು. ಬಲೈಗಳು ಇದಕ್ಕೆ ಒಪ್ಪಲಿಲ್ಲ. ಹಿಂದೂಗಳು ಅವರಲ್ಲಿ ಹಲವರನ್ನು ಹೊಡೆದರೆಂದು ಆಪಾದಿಸಲಾಗಿದೆ. ಒಬ್ಬ ಬಲೈನನ್ನು ಕಂಬಕ್ಕೆ ಕಟ್ಟಿಹಾಕಿ ಅವನು ಒಪ್ಪಂದಕ್ಕೆ ಸಹಿಹಾಕಲು ಅನುಮತಿ ನೀಡುವುದಾದರೆ ಮಾತ್ರ ಬಿಡುಗಡೆ ಮಾಡುವುದಾಗಿ ಹೇಳಲಾಯಿತು. ಅವನು ಒಪ್ಪಂದಕ್ಕೆ ಸಹಿಹಾಕಿ ಬಿಡುಗಡೆ ಹೊಂದಿದ."

ಮುಂದಿನದು ೧೯೨೮ನೆಯ ಜನವರಿ ೨೧ರಂದು 'ಆರ್ಯ ಗೆಜೆಟ್'ನಲ್ಲಿ ಪ್ರಕಟವಾದದ್ದು:

"ಹರಿಜನರಿಗೆ ನೀಡಲಾಗುವ ಕಿರುಕುಳಗಳ ಬಗೆಗಿನ ಹೃದಯವಿದ್ರಾವಕ ಘಟನೆಗಳನ್ನು ಕುರಿತಂತೆ ಈವರೆಗೆ ಸಾಮಾನ್ಯವಾಗಿ ಮದರಾಸು ಪ್ರಾಂತ್ಯದಿಂದ ವರದಿಗಳು ಬರುತ್ತಿದ್ದುವು. ಆದರೆ ಈಗ ಸಿಮ್ಲಾ ಪರ್ವತಪ್ರದೇಶದ ಮಹಾರಾಣನ ನಡೆವಳಿಕೆಯಿಂದಾಗಿ ಅಂತಹ ಕತೆಗಳನ್ನು ಹುಡುಕಿಕೊಂಡು ಅಷ್ಟು ದೂರ ಹೋಗುವ ಪ್ರಮೇಯವಿಲ್ಲ. ಸಿಮ್ಲಾ ಜಿಲ್ಲೆಯಲ್ಲಿ "ಕಾಲೀ" ಎಂಬ ಜಾತಿಯವರು ವಾಸವಾಗಿದ್ದಾರೆ. ಅವರು ಒಳ್ಳೆಯ ಮೈಕಟ್ಟಿನವರು ಮತ್ತು ಶ್ರಮಜೀವಿಗಳು. ಹಿಂದೂ ಧರ್ಮದ ಕಣ್ಣಿನಲ್ಲಿ ಯಾವುದೇ ಆಕ್ಷೇಪಣೀಯವಾದ ಕೆಲಸದಲ್ಲಿ ಅವರು ತೊಡಗಿರದಿದ್ದರೂ ಅವರನ್ನು ಆ ಭಾಗದ ಹಿಂದೂಗಳು ಅಸ್ಪೃಶ್ಯರೆಂದು ಪರಿಗಣಿಸುತ್ತಾರೆ. ಈ ಜಾತಿಯ ಜನ ಬಲಶಾಲಿಗಳು ಹಾಗೂ ಒಳ್ಳೆಯ ಮೈಕಟ್ಟಿನವರು ಮಾತ್ರವಾಗಿರದೆ ಬುದ್ಧಿವಂತರೂ ಆಗಿದ್ದಾರೆ. ಸಿಮ್ಲಾ ಪರ್ವತಪ್ರದೇಶದ ನಿವಾಸಿಗಳು ಹಾಡುವ ಹಾಡುಗಳೆಲ್ಲಾ ಬಹುಮಟ್ಟಿಗೆ ಈ "ಕಾಲೀ"ಗಳಿಂದಲೇ ರಚಿತವಾದುವು. ಈ ಜನ ದಿನವಿಡೀ ದುಡಿಯುತ್ತಾರೆ ಮತ್ತು ಬ್ರಾಹ್ಮಣರನ್ನು ಬಹುವಾಗಿ ಗೌರವಿಸುತ್ತಾರೆ. ಆದಾಗ್ಯೂ ಅವರು ಬ್ರಾಹ್ಮಣರ ಮನೆಗಳ ಬಳಿ ಸುಳಿಯುವುದು ಸಹ ಸಾಧ್ಯವಿಲ್ಲ. ಅವರ ಮಕ್ಕಳು ಶಾಲೆಗಳಲ್ಲಿ ಓದುವಂತಿಲ್ಲ ಮತ್ತು ಧಾರ್ಮಿಕ ಪಾಠಶಾಲೆಗಳಲ್ಲಿ ಪ್ರವೇಶ ಪಡೆಯುವಂತಿಲ್ಲ. ಅವರ ಹೆಂಗಸರು ಚಿನ್ನದ ಆಭರಣಗಳನ್ನು ತೊಡುವಂತಿಲ್ಲ. ಕೆಲವು ಕಾಲೀಗಳು ಪಂಜಾಬಿಗೆ ತೆರಳಿ ಅಲ್ಲಿ ಅಲ್ಪಸ್ವಲ್ಪ ಹಣವನ್ನು ಸಂಪಾದಿಸಿ ಚಿನ್ನದ ಬಳೆ ಮತ್ತು ಓಲೆಗಳನ್ನು ಮಾಡಿಸಿಕೊಂಡಿದ್ದಾರೆಂದು ಸಹ ವರದಿಯಾಗಿದೆ. ಅವನ್ನು ಅವರ ಮನೆಗಳಿಗೆ ತಂದಾಗ ಅವರನ್ನು ಕಾರಾಗೃಹಗಳಿಗೆ ದಬ್ಬಲಾಗಿದೆ ಮತ್ತು ಅವು ರಾಜ್ಯದ ಅಧಿಕಾರಿಗಳ ಕೈಸೇರುವವರೆಗೂ ಅವರನ್ನು ಬಿಡುಗಡೆ ಮಾಡಲಾಗುತ್ತಿಲ್ಲ."

೧೯೨೬ನೆಯ ಜೂನ್ ೨೩ರ 'ಪ್ರತಾಪ್' ಪತ್ರಿಕೆಯಲ್ಲಿ ಕೆಳಗಿನ ಪತ್ರವು ಪ್ರಕಟವಾಗಿದೆ:

"ಸ್ವಾಮಿ ರಾಮಾನಂದಜಿ ಸನ್ಯಾಸಿಯವರು ಬರೆಯುತ್ತಾರೆ:

೧೯೨೬ನೆಯ ಮಾರ್ಚ್ ೨೩ರಂದು ಸಂಜೆ ಒಬ್ಬ ಚಮ್ಮಾರನು ನನ್ನಲ್ಲಿಗೆ ಬಂದ. ಅವನು

ಜಾಟ್‌ಗಳ ಕ್ರೂರ ಮುಷ್ಟಿಯಿಂದ ಆಗತಾನೆ ಹೇಗೋ ತಪ್ಪಿಸಿಕೊಂಡು ಬಂದಿದ್ದ. ಗುರ್ಗಾಂವ್ ಜಿಲ್ಲೆಯ ಫರೀದಾಬಾದ್ ಬಳಿಯ ಖೇರಿ ಎಂಬ ಹಳ್ಳಿಯಲ್ಲಿ ಅವನ ಜಾತಿ ಜನ ಅನುಭವಿಸುತ್ತಿದ್ದ ಅಳಲಿನ ಕತೆಯನ್ನು ಮನಕರಗುವಂತೆ ಅವನು ವಿವರಿಸಿದ. ಮಾರ್ಚ್ ೨೪ರಂದು ಬೆಳಿಗ್ಗೆ ನಾನು ಗುರ್ಗಾಂವ್ ಜಿಲ್ಲೆಯ ಫರೀದಾಬಾದನ್ನು ಮುಟ್ಟಿದೆ. ನಾನೇ ಸ್ವತಃ ಅಲ್ಲಿಯ ಪರಿಸ್ಥಿತಿಯನ್ನು ಅನ್ವೇಷಿಸುವುದು ನನ್ನ ಉದ್ದೇಶವಾಗಿತ್ತು. ನಾನು ವಿಚಾರ ಮಾಡಿದುದರ ಫಲಿತಾಂಶವು ಸ್ಥೂಲವಾಗಿ ಹೀಗಿದೆ :

"ಮಾರ್ಚ್ ೫ ರಂದು ಗೋರ್ಖಿ ಎಂಬ ಚಮ್ಮಾರನ ಮಗಳ ಮದುವೆ ನಡೆಯಿತು. ಈ ಚಮ್ಮಾರನ ಆರ್ಥಿಕ ಪರಿಸ್ಥಿತಿಯು ಸ್ವಲ್ಪಮಟ್ಟಿಗೆ ಉತ್ತಮವಾಗಿದ್ದಿತು. ಮೇಲ್ಜಾತಿಯ ಜನ ಮಾಡುವಂತೆಯೇ ಅವನು ಅತಿಥಿಗಳನ್ನು ವಿಜೃಂಭಣೆಯಿಂದ ಸತ್ಕರಿಸಿದ. ಜೊತೆಗೆ ತನ್ನ ಮಗಳನ್ನು ಧಾರೆಯೆರೆದು ಕೊಡುವಾಗ ಅವಳಿಗೆ ಮೂರು ಚಿನ್ನದ ಆಭರಣಗಳನ್ನು ಬಳುವಳಿಯಾಗಿ ನೀಡಿದ. ಈ ಸಮಾಚಾರವು ಜಾಟರಲ್ಲಿ ಹರಡಿತು ಮತ್ತು ವಿಪುಲವಾದ ಚರ್ಚೆಗೆ ವಿಷಯವಾಯಿತು. ಮೇಲ್ಜಾತಿಯವರನ್ನು ಅನುಕರಿಸಿ ಅವರೊಡನೆ ಕೆಳಜಾತಿಯವರು ಸ್ಪರ್ಧೆಗೆ ಇಳಿದು ಅವರನ್ನು ಅವಮಾನಗೊಳಿಸಿದಂತಾಗಿದೆಯೆಂದು ಅಂತಿಮವಾಗಿ ತೀರ್ಮಾನಿಸಲಾಯಿತು. ಮಾರ್ಚ್ ೨೦ರ ವರೆಗೆ ಯಾವ ಅಹಿತಕರ ಘಟನೆಯೂ ಜರುಗಲಿಲ್ಲ. ಆದರೆ ೨೧ರ ಬೆಳಿಗ್ಗೆ ಈ ವಿಷಯವನ್ನು ಚರ್ಚಿಸಲು ಜಾಟರು ಗ್ರಾಮದ ಪಂಚಾಯಿತಿಯ ಸಭೆಯನ್ನು ಕರೆದರು. ಅದೇ ವೇಳೆಗೆ ದಿನನಿತ್ಯದ ರೂಢಿಯಂತೆ ಫರೀದಾಬಾದಿನಲ್ಲಿ ದುಡಿಯಲು ಚಮ್ಮಾರರ ಒಂದು ಗುಂಪು ಹೊರಟಿತ್ತು; ಅದರಲ್ಲಿದ್ದವರು ಬಹುತೇಕ ಹುಡುಗರು, ಹುಡುಗಿಯರು ಮತ್ತು ಹೆಂಗಸರು. ಈ ಗುಂಪು ಆಗತಾನೆ ಹಳ್ಳಿಯ ಬಳಿಯ ಧರ್ಮಶಾಲೆಯನ್ನು ತಟಾಯಿಸಿದ್ದಿತು; ಒಮ್ಮೆಲೇ ಜಾಟರ ಒಂದು ತಂಡ ಅದರ ಮೇಲೆರಗಿತು. ಚಮ್ಮಾರರ ಮೇಲೆ ಪ್ರಬಲವಾದ ಹಲ್ಲೆ ನಡೆಯಿತು. ಮತ್ತು ಹೆಂಗಸರನ್ನಂತೂ ಪಾದರಕ್ಷೆಗಳಿಂದ ಥಳಿಸಿದರು. ಕೆಲವರ ಬೆನ್ನು ಮುರಿಯಿತು. ಇನ್ನು ಕೆಲವರ ಕೈಗಳು ಮುರಿದುವು. ಅಷ್ಟೇ ಅಲ್ಲ, ಅವರಿಂದ ಅವರ ಕೆಲಸದ ಉಪಕರಣಗಳನ್ನು ಕಸಿದುಕೊಳ್ಳಲಾಯಿತು. ಆ ವೇಳೆಗೆ ಒಬ್ಬ ಮುಸಲ್ಮಾನರವನು ಆ ಹಾದಿಯಲ್ಲಿ ಹಾದುಹೋಗುತ್ತಿದ್ದ; ಜಾಟರು ಅವನನ್ನೂ ಹಿಡಿದರು ಮತ್ತು ಅವನ ಚಿನ್ನದ ದೊಡ್ಡ ಕಿವಿಯುಂಗುರ ಹಾಗೂ ಅವನಲ್ಲಿದ್ದ ಇಪ್ಪತ್ತೆಂಟು ರೂಪಾಯಿಗಳನ್ನು ಕಿತ್ತುಕೊಂಡರು. ಮಾರ್ಚ್ ೨೨ರಂದು ಜಾಟರ ಕೆಲವು ಹಿಂಡುಗಳು ಚಮ್ಮಾರರ ಹೊಲಗಳಿಗೆ ನುಗ್ಗಿ ಅಲ್ಲಿ ದಾಂದಲೆ ನಡೆಸಿದವು. ಅಲ್ಲಿ ನಷ್ಟವಾದ ಬೆಳೆಗಳ ಬೆಲೆ ಸುಮಾರು ಒಂದು ಸಾವಿರ ರೂಪಾಯಿಗಳೆಂದು ಅಂದಾಜು ಮಾಡಲಾಗಿದೆ. ಆ ಸಮಯದಲ್ಲಿ ಕೋರಿ ಎಂಬುವನ ಮಗ ನನ್ವಾ ಹೊಲದಲ್ಲಿ ಕೆಲಸ ಮಾಡುತ್ತಿದ್ದ. ಜಾಟರು ಅವನನ್ನು ಸದೆಬಡಿದರು. ಅದೇ ಮಾರ್ಚ್ ೨೨ರಂದು ಮತ್ತೆ ಜಾಟರ ಇನ್ನೊಂದು ಗುಂಪು ದರ್ಪದಿಂದ ಮುನ್ನುಗ್ಗಿತು; ಈ ಬಾರಿ ಅವರಲ್ಲಿ ಆಯುಧಗಳಿದ್ದುವು ಹಾಗೂ ಉರಿಯುವ ಪಂಜುಗಳನ್ನು ಹಿಡಿದಿದ್ದರು. ಅವು ಸೀಮೆಎಣ್ಣೆಯಲ್ಲಿ ಅದ್ದಿದ್ದ ಪಂಜುಗಳು. ಚಮ್ಮಾರರ ಮನೆಗಳಿಗೆ ಬೆಂಕಿ ಇಕ್ಕುವುದು ಅವರ ಉದ್ದೇಶವಾಗಿತ್ತು. ಆದರೆ ಹಾಗೆ ಮಾಡದೆ ಗುಂಪು ಹಿಂದಿರುಗಿತು. ಮಾರ್ಚ್ ೨೩ರ ಮಧ್ಯರಾತ್ರಿಯಲ್ಲಿ ಒಂದು ಮನೆಗೆ ಬೆಂಕಿ ಹೊತ್ತಿಸಲಾಯಿತು. ಹಿಂದೆ ಹೇಳಿದ ವಿವಾಹಿತ ಹುಡುಗಿಯ ತಾತನಿಗೆ ಸೇರಿದ್ದು ಆ ಮನೆ. ಸಂಪೂರ್ಣವಾಗಿ ಸುಟ್ಟು ಬೂದಿಯ ರಾಶಿಯಾಗಿದೆ. ೯೦ ರೂಪಾಯಿ ಬೆಲೆಬಾಳುವ ಹದಿನಾರು ಚರ್ಮದ ಕಟ್ಟುಗಳನ್ನು ಮನೆಯಲ್ಲಿಡಲಾಗಿತ್ತು. ಹದಮಾಡಿದ್ದ ಈ ಚರ್ಮವು ಪಾದರಕ್ಷೆಗಳನ್ನು ಮಾಡಲು ಸಿದ್ಧಗೊಳಿಸಿದ್ದದ್ದು. ಮನೆಯಲ್ಲಿದ್ದ ಬೇರೆಲ್ಲ ಸಾಮಗ್ರಿಗಳೊಟ್ಟಿಗೆ ಇದೂ ಸುಟ್ಟುಹೋಯಿತು. ಈಗಿನ ಸಾಮಾನ್ಯ ಪರಿಸ್ಥಿತಿ ಹೇಗಿದೆಯೆಂದರೆ ಜಾಟರು ಇಡೀ ಊರನ್ನು ಸುತ್ತುಗಟ್ಟಿ ನಿಂತಿದ್ದಾರೆ; ಯಾವ ಚಮ್ಮಾರನೂ

ಊರ ಹೊರಗೆ ಸುಳಿಯುವಂತಿಲ್ಲ. ಜಾಟರಿಗೆ ಹೆದರಿ ಬನಿಯಾಗಳು ಸಹ ಚಮ್ಮಾರರಿಗೆ ಏನನ್ನೂ ಮಾರಲು ನಿರಾಕರಿಸುತ್ತಿದ್ದಾರೆ. ಚಮ್ಮಾರರು ಹಾಗೂ ಅವರ ದನಗಳು ಮೂರು ದಿನಗಳಿಂದ ಅನ್ನ–ನೀರಿಲ್ಲದೆ ಸೊರಗಿದ್ದಾರೆ."

ಈ ಕೆಳಗಿನದು ಇನ್ನೂ ಇತ್ತೀಚಿನ ಒಂದು ಘಟನೆ. ಅದು ನಡೆದದ್ದು ಮಲಬಾರಿನಲ್ಲಿ. ಘಟನೆಯ ವಿವರಗಳನ್ನು ಕೆಳಗಿನ ನಿರ್ಣಯವು ಹೊರಗೆಡಹುತ್ತದೆ. ಶಾಸಕ ಶ್ರೀ ಕೆ. ಕಣ್ಣನ್ ಅವರ ಅಧ್ಯಕ್ಷತೆಯಲ್ಲಿ ೧೯೪೫ನೆಯ ಜೂನ್ ೫ ರಂದು ಮಲಬಾರಿನ ಚೇರುಕುನ್ ಎಂಬಲ್ಲಿ ಜರುಗಿದ ಚಿರಕ್ಕಲ್ ತಾಲ್ಲೂಕಿನ ಮೊದಲ ಹರಿಜನ ಸಮ್ಮೇಳನದಲ್ಲಿ ಅಂಗೀಕೃತವಾದ ನಿರ್ಣಯ ಇದು:

"ಹರಿಜನರು ಚಿನ್ನದ ಆಭರಣಗಳನ್ನು ತೊಡುವುದು, ಶುಭ್ರವಾದ ಬಟ್ಟೆ ಧರಿಸುವುದು, ಒಳ್ಳೆಯ ಛತ್ರಿ ಉಪಯೋಗಿಸುವುದು ಇತ್ಯಾದಿಗಳಿಗೆ ಪ್ರತಿಕ್ರಿಯೆಯಾಗಿ ದಿನಂಪ್ರತಿ ಹರಿಜನರ ಬೇಟೆಯಾಡುವುದು ಪೊನ್ನಾನಿ ತಾಲ್ಲೂಕಿನ ನಟ್ಟಿಕಾ ಫಿರ್ಕಾದಲ್ಲಿ ಸರ್ವೇಸಾಮಾನ್ಯವಾಗಿ ಹೋಗಿದೆ. ಯಾವ ಅಡೆತಡೆಯೂ ಇಲ್ಲದೆ ಇಂತಹ ದಬ್ಬಾಳಿಕೆಯು ತೀವ್ರತರವಾದ ಮಟ್ಟದಲ್ಲಿ ನಡೆಯುತ್ತಿದೆ. ಇದು ಪರಿಶಿಷ್ಟ ಜಾತಿಗಳವರ ಮೇಲೆ ಮಲಬಾರಿನ ಹಿಂದೂ, ಮುಸಲ್ಮಾನ ಮತ್ತು ಇಸಾಯಿಗಳೆಲ್ಲ ನಡೆಸುತ್ತಿರುವ ಅಮಾನವೀಯ ದಬ್ಬಾಳಿಕೆಯು ಕ್ರಮೇಣ ಹೆಚ್ಚುತ್ತಿರುವುದಕ್ಕೆ ಸೂಚಕವಾಗಿದೆ. ಈ ಸಮ್ಮೇಳನವು ಸರ್ಕಾರದ ಮತ್ತು ಸಾರ್ವಜನಿಕರ ಗಮನವನ್ನು ಇದರತ್ತ ತುರ್ತಾಗಿ ಸೆಳೆಯಬಯಸುತ್ತದೆ. ಮೇಲೆ ತಿಳಿಸಿದ ನಟ್ಟಿಕಾ ಫಿರ್ಕಾದಲ್ಲಿ ಹಲವಾರು ಹಲ್ಲೆಗಳನ್ನು ನಡೆಸುವುದಲ್ಲದೆ ಹರಿಜನರ ಒಂದು ಮದುವೆಯ ಗುಂಪನ್ನು ದಾರಿತಪ್ಪಿಸಿ ಎಳೆದೊಯ್ದು ಹಲ್ಲೆ ಮಾಡಲಾಗಿದೆ. ಈ ಗುಂಪಿನ ಗಂಡಸರ ಅಂಗಿಗಳನ್ನೂ ಹೆಂಗಸರ ಸೀರೆಗಳನ್ನೂ ಬಲಾತ್ಕಾರದಿಂದ ಕಿತ್ತುಹಾಕಲಾಗಿದೆ. ೧೯೪೫ನೆಯ ಮೇ ೨೭ರಂದು ವಡಂಪಿಲ್ಲಿ ಎಂಬಲ್ಲಿ ಒಬ್ಬ ಹರಿಜನ ವಿದ್ಯಾರ್ಥಿಯನ್ನು ಅಮಾನುಷವಾಗಿ ಥಳಿಸಲಾಗಿದೆ. ಶ್ರೀಯುತರುಗಳಾದ ಸಿ.ಎಸ್. ಗೋಪಾಲನ್, ಎಂ.ಎಸ್. ಶಂಕರನಾರಾಯಣ್ ಮತ್ತು ಪಿ.ಸಿ. ರಾಮಕೃಷ್ಣ ವೈದ್ಯರ್ ಅವರ ಹಸನು ತಿಳಿವಳಿಕೆಯ ನೇತೃತ್ವದಲ್ಲಿ ಪ್ರಗತಿಪರ ಥಿಯಾ ಯುವಕರು ಅಲ್ಲಿ ಹರಿಜನರ ಸಹಾಯಕ್ಕಾಗಿ ಮಾಡುತ್ತಿರುವ ಅಮೋಘ ಪ್ರಯತ್ನಗಳಿಗಾಗಿ ಈ ಸಮ್ಮೇಳನವು ಅವರನ್ನು ಅಭಿನಂದಿಸುತ್ತದೆ. ಅದೇ ಸಮಯದಲ್ಲಿ ಈ ಬಗ್ಗೆ ಸ್ಥಳೀಯ ಅಧಿಕಾರಿಗಳು ತೋರಿರುವ ದಿವ್ಯ ನಿರ್ಲಕ್ಷ್ಯಕ್ಕಾಗಿ ಸಮ್ಮೇಳನವು ಅವರನ್ನು ಖಂಡಿಸುತ್ತದೆ. ಅದರಲ್ಲೂ ಹರಿಜನರು ದುರಾಚರಣೆಗೆ ಗುರಿಯಾಗಿದ್ದಾಗ ಸಮಯಕ್ಕೆ ಸರಿಯಾದ ರಕ್ಷಣೆ ನೀಡದೆಹೋದ ಪೊಲೀಸ್ ವಿಭಾಗವನ್ನು ಸಮ್ಮೇಳನ ಖಂಡಿಸುತ್ತದೆ.

ಮೇಲೆ ನಮೂದಿಸಲಾದ ಬಹುತೇಕ ಎಲ್ಲ ದೌರ್ಜನ್ಯಗಳ ಸಂದರ್ಭಗಳಲ್ಲೂ ಬಾಧೆಗೀಡಾಗಿದ್ದ ಹರಿಜನರಿಗೆ ಪೊಲೀಸರಿಂದ ರಕ್ಷಣೆ ಮತ್ತು ನ್ಯಾಯಗಳು ದೊರಕಿಲ್ಲವೆಂಬುದನ್ನು ದಾಖಲಿಸಲು ಸಮ್ಮೇಳನವು ಇಚ್ಛಿಸುತ್ತದೆ. ಬದಲಾಗಿ ಇಂತಹ ಘಟನೆಗಳಲ್ಲಿ ಸಾಕ್ಷ್ಯ ನೀಡಲು ಮುಂದೆ ಬಂದುದಕ್ಕಾಗಿ ಪೊಲೀಸರು ಬಡ ಹರಿಜನರನ್ನು ಹೊಡೆದಿರುವ ಸಂದರ್ಭಗಳೂ ಉಂಟು. ಮಲಬಾರಿನ ಹರಿಜನರನ್ನು ಈ ಘಟನೆಗಳು ಅತೀವ ಸಂಕಷ್ಟದ ಸ್ಥಿತಿಗೆ ಮುಟ್ಟಿಸಿವೆಯಾದ್ದರಿಂದ ಮತ್ತು ಪರಿಸ್ಥಿತಿಯನ್ನು ಹೀಗೇ ಬಿಟ್ಟರೆ ಮಲಬಾರಿನ ಸ್ಥಾಪಿತ ಹಿತಾಸಕ್ತಿಗಳು ಆತುಕೊಂಡಿರುವ ಆರ್ಥಿಕ ಶೋಷಣೆ ಮತ್ತು ಜಾತಿಯ ಸಂಕೋಲೆಗಳನ್ನು ಮುರಿಯಲು ಯತ್ನಿಸುತ್ತಿರುವ ಪ್ರಗತಿಪರ ಹರಿಜನರ ಜೀವಕ್ಕೆ ಸಂಚಕಾರ ಸಹ ಒದಗಬಹುದಾದ ಸಾಧ್ಯತೆ ಇರುವುದರಿಂದ ಈ ಸಮ್ಮೇಳನವು ಭಾರತ ಸರ್ಕಾರಕ್ಕೆ, ಡಾ॥ ಬಿ.ಆರ್. ಅಂಬೇಡ್ಕರ್ ಅವರಿಗೆ ಮತ್ತು ದೇಶದ ಎಲ್ಲ ತಿಳಿವಳಿಕಸ್ಥ ಜನರಿಗೆ ಕಳಕಳಿಯಿಂದ ಮನವಿ ಮಾಡಿಕೊಳ್ಳುವುದೇನೆಂದರೆ ಹರಿಜನರು ಈ ನಾಡಿನಲ್ಲಿ ಸ್ವತಂತ್ರ ನಾಗರಿಕರಾಗಿ ಬಾಳುವೆ ನಡೆಸಲು ತಕ್ಕುದಾದ ವ್ಯವಸ್ಥೆ ನಿರ್ಮಿಸಬೇಕು.

ಪ್ರಜಾಪ್ರಭುತ್ವವಿರುವ ರಾಷ್ಟ್ರದಲ್ಲಿ ಯಾರೇ ಆಗಲಿ ಅವರನ್ನು ಹಿಂಸಿಸುವಂತಿರಬಾರದು ಮತ್ತು ಯಾರಾದರೂ ಅವರ ಮೇಲೆ ದೌರ್ಜನ್ಯವೆಸಗಿದರೆ ಆಡಳಿತ ಯಂತ್ರವು ಅವರಿಗೆ ಸೂಕ್ತ ರಕ್ಷಣೆ ಒದಗಿಸಬೇಕು."

## X

ಅಸ್ಪೃಶ್ಯರು ಪೌಷ್ಟಿಕ ಆಹಾರವನ್ನು ಸೇವಿಸುವಂತಿಲ್ಲ. ಅವರಿಗೆ ಹಾಗೆ ಮಾಡಲು ಚೈತನ್ಯವಿದ್ದರೂ ಹಾಗೆ ಮಾಡುವಂತಿಲ್ಲ. ಅವರಿಗೆ ನಿಗದಿತವಾದ ಸ್ಥಾನಕ್ಕೆ ಮೀರಿ ಜೀವನ ನಡೆಸುವುದು ಅಸ್ಪೃಶ್ಯರು ಅಪರಾಧವೆಸಗಿದಂತೆ.

೧೯೨೮ನೆಯ ಫೆಬ್ರವರಿ ೨೬ರಂದು 'ಪ್ರತಾಪ್' ಪತ್ರಿಕೆಯು ಕೆಳಗಿನ ಘಟನೆಯನ್ನು ವರದಿ ಮಾಡಿದೆ:

"ಜೋಧ್‌ಪುರ್ ರಾಜ್ಯದ ಚಾಂದಯಾಲ್ ಎಂಬ ಊರಿನಲ್ಲಿ ಈಗಲೂ ಎಂತಹ ಜನರಿದ್ದಾರೆಂದರೆ ಹರಿಜನರು  ಹಲ್ವಾ ತಿನ್ನುವುದನ್ನವರು ಸಹಿಸಲಾರರು. ಸರ್ಗರೋಗಳೆಂಬುವರು ಅಸ್ಪೃಶ್ಯ ಜಾತಿಗೆ ಸೇರಿದ ಒಂದು ಗುಂಪು. ಇತ್ತೀಚೆಗೆ ಇಬ್ಬರು–ಮೂವರು ಹುಡುಗಿಯರ ಮದುವೆ ಸಮಾರಂಭದಲ್ಲಿ ಮದುವೆಯ ದಿಬ್ಬಣದವರಿಗಾಗಿ ಹಲ್ವಾ ತಯಾರಿಸಲಾಗಿತ್ತು. ಇದಕ್ಕಾಗಿ ಸ್ಥಳೀಯ ಠಾಕೂರ್ ಸಾಹೇಬರಿಂದ ಮೈದಾ ಹಿಟ್ಟನ್ನು ತರಲಾಗಿತ್ತು. ಊಟದ ವೇಳೆಗೆ ಮದುವೆಯ ದಿಬ್ಬಣ ಆಗಮಿಸಿದಾಗ ಚಾಂದವಾಲಾದ ಕನ್ವರ್ ಸಾಹೇಬ್ ಎಂಬುವನು ಸರ್ಗರೋಗಳಿಗೆ ಒಂದು ಆಜ್ಞೆ ಕಳುಹಿಸಿದ. ಅವರು ಹಲ್ವಾ ತಿನ್ನಕೂಡದೆಂದು ಅವನ ಆಜ್ಞೆಯಾಗಿತ್ತು. ಕೆಲವು ವ್ಯಕ್ತಿ ಆರಾಧಕರು ದುಂಬಾಲು ಬಿದ್ದು ಒಂದು ಒಪ್ಪಂದಕ್ಕೆ ಬಂದರು : ಅದೇನೆಂದರೆ ಕನ್ವರ್ ಸಾಹೇಬನಿಗೆ ೨೦೦ ರೂಪಾಯಿಗಳನ್ನು ಕೊಟ್ಟರೆ ಹಲ್ವಾ ತಿನ್ನಲು ಅವನು ಪರವಾನಗಿ ನೀಡುವುದು, ಎಂದು. ಇದರಿಂದ ಸರ್ಗರೋಗಳು ರೊಚ್ಚಿಗೆದ್ದರು ಮತ್ತು ಹಣ ನೀಡಲು ನಿರಾಕರಿಸಿದರು."

## XI

ಮದುವೆಯ ಮೆರವಣಿಗೆಯೊಂದನ್ನು ಹಳ್ಳಿಯ ಮುಖ್ಯ ರಸ್ತೆಗಳಲ್ಲಿ ಕೊಂಡೊಯ್ಯುವುದು ಪ್ರತಿಯೊಬ್ಬ ಸವರ್ಣೀಯ ಹಿಂದೂವಿಗೂ ಇರುವ  ಒಂದು ಹಕ್ಕು. ಈ ಹಕ್ಕನ್ನು ಚಲಾಯಿಸುವವರು ಗೌರವಾನ್ವಿತ ಸಾಮಾಜಿಕ ಪಂಗಡದವರೆಂಬುದಕ್ಕೂ ಪುರಾವೆಯಿದೆ. ಅಸ್ಪೃಶ್ಯರಿಗೆ ಅಂತಹ ಹಕ್ಕಿಲ್ಲ. ತಮ್ಮ ಸಾಮಾಜಿಕ ಘನತೆಯನ್ನು ಸ್ಥಾಪಿಸಿಕೊಳ್ಳಲು ಹೀಗೆ ಮದುವೆಯ ಮೆರವಣಿಗೆಯನ್ನು ಹಳ್ಳಿಯ ಮುಖ್ಯಬೀದಿಗಳಲ್ಲಿ ಕೊಂಡೊಯ್ಯಲು ತಮಗೂ ಹಕ್ಕಿದೆ ಎಂಬುದನ್ನು ತೋರಿಸಿಕೊಡಲು ಅಸ್ಪೃಶ್ಯರು ಯತ್ನಿಸುತ್ತಿದ್ದಾರೆ. ಇದಕ್ಕೆ ಪ್ರತಿಯಾಗಿ ಹಿಂದೂಗಳು ಹೇಗೆ ನಡೆದುಕೊಂಡಿದ್ದಾರೆಂಬುದನ್ನು ಕೆಳಗಿನ ಘಟನೆಯು ತೋರಿಸುತ್ತದೆ.

ಜುಲೈ ೧೯೨೭ರ 'ಆದಿ–ಹಿಂದೂ' ಎಂಬ ಪತ್ರಿಕೆಯಿಂದ :

"ಬೆಂಗಳೂರು, ಮೇ ೨೭, ೧೯೨೭ : ಇಲ್ಲಿಯ ಪ್ರಥಮ ದರ್ಜೆಯ ಮ್ಯಾಜಿಸ್ಟ್ರೇಟರು ತಲಾ ಒಂದುನೂರು ರೂಪಾಯಿಗಳ ದಂಡ ತೆರುವಂತೆ ಏಳು ಮಂದಿ ಬ್ರಾಹ್ಮಣರಿಗೆ ಶಿಕ್ಷೆ ವಿಧಿಸಿದ್ದಾರೆ. ಬ್ರಾಹ್ಮಣರೇ ವಾಸಿಸುವ ಮಾಲ್ ಕೋಟ್ ರಸ್ತೆಯಲ್ಲಿ, ಪರಯ್ಯಾಗಳೆನಿಸಿದ ಅಸ್ಪೃಶ್ಯ ಜಾತಿಯವರ ಒಂದು ಮೆರವಣಿಗೆಯನ್ನು ಈ ಮಂದಿ ತಡೆದು ಸ್ವೇಚ್ಛೆಯಿಂದ ಹಲ್ಲೆ ನಡೆಸಿದ್ದರು."

ಅಕ್ಟೋಬರ್ ೨೫, ೧೯೩೧ರ 'ಪ್ರತಾಪ್' ಪತ್ರಿಕೆಯಿಂದ :

"ಗರ್‌ವಾಲ್ ಜಿಲ್ಲೆಯ ಹರ್ಗಾಂವ್ ಎಂಬ ಹಳ್ಳಿಯಲ್ಲಿ ಮೇಲ್ಜಾತಿಯ ಹಿಂದೂಗಳಿಗೆ ಅಸ್ಪೃಶ್ಯರ

ಒಂದು ಮದುವೆಯ ದಿಬ್ಬಣದ ಆಗಮನದ ವಿಷಯ ತಿಳಿಯಿತು. ಮದುವೆಯಾಗಲಿದ್ದವನು ಪಲ್ಲಕ್ಕಿಯನ್ನೇರಿದ್ದ. ಅಗಾಧ ಸಂಖ್ಯೆಯಲ್ಲಿ ಹಿಂದೂಗಳು ಮುನ್ನುಗ್ಗಿ ದಿಬ್ಬಣದವರನ್ನು ಸುತ್ತುವರಿದು ನಿಂತರು ಮತ್ತು ಅವರನ್ನು ಚೆನ್ನಾಗಿ ಹೊಡೆದರು. ಮದುವೆಯ ದಿಬ್ಬಣದವರನ್ನು ಕೊರೆಯುವ ಚಳಿಯಲ್ಲಿ ನಡುಗುವಂತೆ ದಿಗ್ಬಂಧಿಸಿ ೨೪ ಗಂಟೆಗಳ ಕಾಲ ಯಾವ ಆಹಾರವೂ ದೊರೆಯದಂತೆ ತಡೆಹಿಡಿದರು. ದಿಬ್ಬಣದವರನ್ನು ಅಮಾನವೀಯವಾಗಿ ನಡೆಸಿಕೊಂಡು ಪೊಲೀಸರು ಬಂದ ನಂತರವೇ ಈ ಕಷ್ಟದ ಸನ್ನಿವೇಶದಿಂದ ಅವರನ್ನು ಪಾರುಮಾಡಿದರು."

ನವೆಂಬರ್ ೩, ೧೯೩೧ರ ಲಾಹೋರಿನ ಪತ್ರಿಕೆ 'ಸತ್ಯ ಸಂವಾದ್' ದಿಂದ:

"ಪಲ್ಲಕ್ಕಿಯಲ್ಲಿ ಕುಳಿತಿದ್ದ ಮದುವೆಯ ಗಂಡನ್ನು ಹೊತ್ತು ಒಂದು ಮದುವೆಯ ದಿಬ್ಬಣ ದೆಹಲಿಯ ಬಳಿ ಆಗಮಿಸಿತು. ಮೇಲ್ಜಾತಿಯ ಹಿಂದೂಗಳು ಇದರಿಂದ ಕೋಪಗೊಂಡರು; ಏಕೆಂದರೆ, ಅವರ ಪ್ರಕಾರ ಇದು ಅವರಿಗೆ ಮಾಡಲಾದ ಒಂದು ಅವಮಾನ. ದಿಬ್ಬಣವನ್ನು ಎರಡು ದಿನಗಳ ಕಾಲ ಅವರು ತಡೆಹಿಡಿದರು, ತಿನ್ನಲು ಅಥವಾ ಕುಡಿಯಲು ಅವರಿಗೆ ಏನನ್ನೂ ಕೊಡಲಿಲ್ಲ. ಕಡೆಗೆ ಪೊಲೀಸರು ಬಂದು ಈ ಘಾತುಕರನ್ನು ಓಡಿಸಿ ಮದುವೆಯ ದಿಬ್ಬಣವನ್ನು ಬಿಡುಗಡೆ ಮಾಡಿಸಿದರು."

'ಜೀವನ್' ಎಂಬ ಹಿಂದೂ ಪತ್ರಿಕೆಯು ಜೂನ್ ೧೯೩೮ರಲ್ಲಿ ನೀಡಿದ ವರದಿ:

೧) "ಸೇವ್ರಾ ಎಂಬ ಹಳ್ಳಿಯ ಗೋಲಾಗಳು (ಪೂರ್ವ ಠಾಕೂರರು) ತಾವು ಕಾಂಗ್ರೆಸ್ಸಿಗರೆಂದು ಮೆರೆಯುತ್ತಾರೆ. ಅದೇ ಹಳ್ಳಿಯ ನಿರಾಯುಧ ಜಾಟವರನ್ನು ಈಟಿ ಮತ್ತು ದೊಣ್ಣೆಗಳಿಂದ ಅವರು ಅಮಾನುಷವಾಗಿ ಚಚ್ಚಿದ್ದಾರೆ. ಏಟು ತಿಂದವರಲ್ಲಿ ಐದು ಮಂದಿ, ಕೈಗಳು ಮತ್ತು ಪಕ್ಕೆಲುಬುಗಳನ್ನು ಮುರಿಸಿಕೊಂಡು ಗಾಯಾಳುಗಳಾಗಿ ಆಸ್ಪತ್ರೆಯಲ್ಲಿ ಬಿದ್ದಿದ್ದಾರೆ. ಬನ್ಸಿ ಎಂಬುವನಿಗೆ ರುಂಡದ ಮೂಳೆ ಮುರಿದಿದೆ ಮತ್ತು ಆಸ್ಪತ್ರೆಯಲ್ಲಿ ಇನ್ನೂ ಪ್ರಜ್ಞಾಹೀನಸ್ಥಿತಿಯಲ್ಲೇ ಇದ್ದಾನೆ. ಇದೆಲ್ಲಾ ನಡೆದಿದ್ದು ಒಂದು ಮದುವೆಯ ದಿಬ್ಬಣ ಆ ಹಳ್ಳಿಗೆ ಬಂದಾಗ ಮದುವೆಯ ಗಂಡು ಒಂದು 'ಪಕ್ಕಾ ಮೊಹರ್' ಎನಿಸಿಕೊಳ್ಳುವ ಹೊಳೆಯುವ ಕಿರೀಟ ಧರಿಸಿದ್ದುದರಿಂದ, ಇದು ಠಾಕೂರರಿಗೆ ಉದ್ರೇಕವನ್ನುಂಟುಮಾಡಿತು. ಆದ್ದರಿಂದ ಮದುವೆಯ ದಿಬ್ಬಣವನ್ನು ಹಲ್ಲೆಗೆ ಗುರಿಪಡಿಸಬೇಕೆಂದಿದ್ದರು. ಆದರೆ ದಿಬ್ಬಣವು ಅಧಿಕ ಸಂಖ್ಯೆಯಿಂದ ಕೂಡಿದ್ದು ಬಲಶಾಲಿಯಾಗಿತ್ತೆಂದು ತಿಳಿದು ಜಮೀನ್ದಾರಿಯಲ್ಲಿದ್ದಷ್ಟೇ ದಿಬ್ಬಣದ ಸಂಬಂಧಿಗಳನ್ನು ಅಪಮಾನಗೊಳಿಸಿ ತೃಪ್ತರಾಗಿದ್ದಾರೆ."

೨) "ಆಗ್ರಾ ಜಿಲ್ಲೆಯ ಫತೇಚಂದ್ ತಾಲ್ಲೂಕಿನ ದೋರ್ರಾ ಎಂಬ ಹಳ್ಳಿಯಲ್ಲಿ ಒಂದು ಮದುವೆಯ ದಿಬ್ಬಣವು ರಾಮಪುರ ಎಂಬ ಹಳ್ಳಿಯಿಂದ ಮೋತಿರಾಂ ಜಾಟವ್ ಎಂಬುವನ ಮನೆಗೆ ಬಂತು. ಮದುವೆಯ ಗಂಡು ಒಂದು ಹೊಳೆಯುವ ಕಿರೀಟವನ್ನು ಧರಿಸಿದ್ದ ಮತ್ತು ದಿಬ್ಬಣದೊಂದಿಗೆ ಒಂದು ವಾದ್ಯವೃಂದವನ್ನೂ ಕರೆತರಲಾಗಿತ್ತು. ಜೊತೆಗೆ ಪಟಾಕಿಗಳನ್ನು ಸುಡುವ ಯೋಜನೆಯೂ ಇತ್ತು. ವಾದ್ಯವೃಂದದವರು ಸಂಗೀತ ನುಡಿಸುತ್ತಾ ಹೋಗುವುದು ಮತ್ತು ಪಟಾಕಿ ಸುಡುವುದು ಎರಡಕ್ಕೂ ಸವರ್ಣೀಯ ಹಿಂದೂಗಳು ಆಕ್ಷೇಪಿಸಿದರು. ಇದರ ವಿರುದ್ಧ ಮೋತಿರಾಂ ಪ್ರತಿಭಟಿಸಿದ ಮತ್ತು ಇತರರಂತೆ ತಾವು ಮನುಷ್ಯರು ಎಂದು ಗುಡುಗುಡುಸಿದ. ಅಷ್ಟಕ್ಕೆ ಸವರ್ಣೀಯ ಹಿಂದೂಗಳು ಮೋತಿರಾಂನನ್ನು ಹಿಡಿದುಕೊಂಡು ಚೆನ್ನಾಗಿ ಥಳಿಸಿ ಮದುವೆಯ ದಿಬ್ಬಣದ ಮೇಲೆ ಹಲ್ಲೆ ನಡೆಸಿದರು. ಮೋತಿರಾಂನ ಪೇಟದಲ್ಲಿ ಕಟ್ಟಿಡಲಾಗಿದ್ದ ಹದಿನೈದು ರೂಪಾಯಿ ಒಂದು ಆಣೆಯನ್ನು ಸಹ ಅಪಹರಿಸಲಾಯಿತು."

೩) "ಅಲಿಘರ್ ಜಿಲ್ಲೆಯ ಸಾಕಿನಿ ಪೊಲೀಸ್ ಸುಪರ್ದಿಗೆ ಸೇರುವ ಖುರ್ವ ಎಂಬ ಹಳ್ಳಿಯಲ್ಲಿ ಪ್ರೇಂ ಸಿಂಗ್ ಮತ್ತು ಗಿರ್ವಾರ್ ಸಿಂಗ್ ಎಂಬ ಜಾಟವರ ಮನೆಯತ್ತ ಒಂದು ಮದುವೆಯ ದಿಬ್ಬಣ ಹೊರಟಿತ್ತು. ವಾದ್ಯ ನುಡಿಸುವುದನ್ನು ನಿಲ್ಲಿಸದೆ ಮುಂದಕ್ಕೆ ನಡೆಯಕೂಡದೆಂದು ಸವರ್ಣೀಯ ಹಿಂದೂಗಳು ದಿಬ್ಬಣವನ್ನು ತಡೆದರು. ವಾದ್ಯಸಂಗೀತವನ್ನು ನಿಲ್ಲಿಸದಿದ್ದರೆ ಮೆರವಣಿಗೆಯವರನ್ನು ಕೊಂದು ಲೂಟಿ ಮಾಡುವುದಾಗಿ ಬೆದರಿಕೆ ಹಾಕಲಾಯಿತು. ಸವರ್ಣೀಯ ಹಿಂದೂಗಳು ರೊಚ್ಚಿಗೇಳಲು ಇನ್ನೂ ಒಂದು ಕಾರಣವಿತ್ತು. ಜಾಟವರು 'ಬೇಗಾರ್' (ಒಂದು ರೀತಿಯ ಬಲವಂತದ ದುಡಿಮೆ) ಮಾಡಲು ನಿರಾಕರಿಸಿದ್ದು ಮತ್ತು ಮದುವೆಯ ದಿಬ್ಬಣದಲ್ಲಿ ವಾದ್ಯಸಂಗೀತ ನುಡಿಸಲು ತೊಡಗುವಷ್ಟು ಧೈರ್ಯ ತೋರಿದ್ದು. ಮದುವೆಯ ದಿಬ್ಬಣದವರು ವಾದ್ಯಸಂಗೀತವನ್ನು ನಿಲ್ಲಿಸಲು ನಿರಾಕರಿಸಿದ್ದರಿಂದ ಸವರ್ಣೀಯರು ಎಷ್ಟು ರೊಚ್ಚಿಗೆದ್ದರೆಂದರೆ ಅವರು ದಿಬ್ಬಣದ ಮೇಲೆ ಇಟ್ಟಿಗೆ ಚೂರು ಮತ್ತು ಕಲ್ಲುಗಳ ಮಳೆ ಸುರಿಸಿದರು."

೧೯೪೫ನೆಯ ಮಾರ್ಚ್ ೨೪ರಂದು 'ಹಿಂದೂಸ್ತಾನ್ ಟೈಂಸ್' ಪತ್ರಿಕೆಯು ಅಂಥದೇ ವಿಷಯಕ್ಕೆ ಸಂಬಂಧಿಸಿದ ಈ ಕೆಳಗಿನ ಘಟನೆಯನ್ನು ವರದಿ ಮಾಡಿದೆ :

"ಲ್ಯಾನ್ಸ್ ಡೌನ್ ಉಪವಿಭಾಗಕ್ಕೆ ಸೇರಿದ ಧನೌರಿ ಎಂಬ ಹಳ್ಳಿಯ ಶಿಲ್ಪಕಾರರ ಮದುವೆಯ ದಿಬ್ಬಣವೊಂದು ಮದುವೆಯ ಗಂಡನ್ನು 'ಪಾಲ್ಕಿ'ಯಲ್ಲಿ ಹೊತ್ತು ಮಾಲ್ ಥಾಂಗು ಎಂಬ ಹಳ್ಳಿಯ ವಧುವಿನ ಮನೆಯತ್ತ ತೆರಳುತ್ತಿತ್ತು. ಮಾಲ್ ಥಾಂಗು ಹಳ್ಳಿಯ ಪಟ್ವಾರಿಯ ಪ್ರತಿನಿಧಿಯೆಂದು ಪರಿಚಯಿಸಿಕೊಂಡ ಒಬ್ಬ ವ್ಯಕ್ತಿಯು ದಿಬ್ಬಣವನ್ನು ಸಂಧಿಸಿ ಸವರ್ಣೀಯ ಹಿಂದೂಗಳು ಉಂಟುಮಾಡಬಹುದಾದ ಗೊಂದಲದಿಂದ ಪಾರಾಗಲು ದಿಬ್ಬಣವು ನೇರರಸ್ತೆಯಲ್ಲದ ಬೇರೊಂದು ಮಾರ್ಗದಲ್ಲಿ ಹೋಗುವಂತೆ ಸೂಚಿಸಿದ.

ಅದರಂತೆ ದಿಬ್ಬಣವು ಕಾಡಿನ ಮೂಲಕ ಹಾದುಹೋಗುವ ರಸ್ತೆಗೆ ತಿರುಗಿತು. ಒಂದು ನಿರ್ಜನ ಪ್ರದೇಶವನ್ನವರು ತಲುಪಿದಾಗ ಒಂದು ಸಿಳ್ಳು ಕೇಳಿ ಬಂತು. ಹಠಾತ್ತನೆ ಸುಮಾರು ೨೦೦ ಮಂದಿ ಸವರ್ಣೀಯ ಹಿಂದೂಗಳು ಕಾಣಿಸಿಕೊಂಡಿತು. ದಿಬ್ಬಣದವರನ್ನು ಅವರು ಹಲ್ಲೆಗೆ ಗುರಿಪಡಿಸಿ 'ಪಾಲ್ಕಿ'ಯನ್ನು ಕಿತ್ತುಕೊಂಡು ಹೋದರೆಂದು ಆಪಾದಿಸಲಾಗಿದೆ.

ಶಿಲ್ಪಕಾರರ ದಿಬ್ಬಣವು ಎರಡು ದಿನಗಳ ನಂತರ ಮದುವೆಯ ಹೆಣ್ಣಿನ ಮನೆಯನ್ನು ಸೇರಿತು. ಪೊಲೀಸರ ಪಡೆಯನ್ನು ಕರೆತಂದಿದ್ದ ಉಪವಿಭಾಗೀಯ ಮ್ಯಾಜಿಸ್ಟ್ರೇಟರ ಸಮ್ಮುಖದಲ್ಲಿ ಮದುವೆಯನ್ನು ನಡೆಸಲಾಯಿತೆಂದು ವರದಿಯಾಗಿದೆ.

ಈ ಸಂಬಂಧದಲ್ಲಿ ಪಟ್ವಾರಿಯನ್ನು ಅಮಾನತ್ತಿನಲ್ಲಿಡಲಾಗಿದೆ."

೧೯೪೫ನೆಯ ಜೂನ್ ೨೪ರ ತನ್ನ ಸಂಚಿಕೆಯಲ್ಲಿ 'ಲಾಹೋರಿನ ಸಿವಿಲ್ ಅಂಡ್ ಮಿಲಿಟರಿ ಗೆಜೆಟ್' ವರದಿ ಮಾಡಿದ್ದಿದು:

"ರಜಪೂತರ ಒಂದು ಭಾರಿ ತಂಡವು ಕೊಡಲಿ, ದೊಣ್ಣೆ ಮತ್ತು ಚೂರಿಗಳನ್ನು ಹಿಡಿದು ನಿನ್ನೆಯ ದಿನ ಗ್ವಾಲಿಯರ್ ರಾಜ್ಯದ ಒಂದು ಹಳ್ಳಿಯ ಹರಿಜನರ ಮೇಲೆ ದಾಳಿ ನಡೆಸಿ ಒಬ್ಬನನ್ನು ಕೊಂದಿತು. ಮತ್ತು ನಾಲ್ವರನ್ನು ತೀವ್ರವಾಗಿ ಗಾಯಗೊಳಿಸಿತು.

ಈ ಹಳ್ಳಿಯ ರಜಪೂತರು ಮತ್ತು ಹರಿಜನರು ಕಳೆದ ಕೆಲಕಾಲದಿಂದ ಹಗೆತನದಿಂದಿದ್ದರು. ಗ್ವಾಲಿಯರ್ ದರ್ಬಾರಿಗೆ ರಕ್ತಸಂಬಂಧದ ಹಕ್ಕುದಾರನ ಜನನವನ್ನು ಹರ್ಷದಿಂದ ಸ್ವಾಗತಿಸಿ ಹರಿಜನರು ಮೆರವಣಿಗೆಯೊಂದನ್ನು ಹೊರತೆಗೆದಾಗಿನಿಂದ ಈ ಹಗೆತನ ನಡೆದುಬಂದಿತ್ತು. ರಜಪೂತರು ಇದರ

ವಿರುದ್ಧ ಬಲವಾಗಿ ಪ್ರತಿಭಟಿಸಿದ್ದರು. ಏಕೆಂದರೆ, ಅವರ ಪ್ರಕಾರ ಹರಿಜನರಿಗೆ ಈ ರೀತಿಯ ಉತ್ಸವ ನಡೆಸುವ ಹಕ್ಕಿಲ್ಲ.

ಹರಿಜನರಿಗೆ ಸಮಾನ ಹಕ್ಕುಗಳನ್ನು ನೀಡುವ ಪ್ರಸಿದ್ಧ ಪತ್ರಿಕೆಯನ್ನು ಕಳೆದ ತಿಂಗಳಷ್ಟೇ ಮಹಾರಾಜರು ಹೊರಡಿಸಿದ್ದರು."

ತಮ್ಮಲ್ಲಿ ಸ್ವಲ್ಪ ಹೆಮ್ಮೆಯನ್ನು ತುಂಬಿಕೊಳ್ಳಲಾಗಲಿ, ಹಿಂದೂಗಳ ಆಚಾರ–ವಿಚಾರಗಳನ್ನು ಅನುಕರಿಸಲಾಗಲಿ ಅಸ್ಪೃಶ್ಯರೇನಾದರೂ ಯತ್ನಿಸಿದರೆ ಅವರನ್ನು ಹಿಂದೂಗಳು ಎಷ್ಟು ಕ್ರೂರವಾಗಿ ದಂಡಿಸುತ್ತಾರೆಂಬುದಕ್ಕೆ ಕೆಲವು ಸಂಗತಿಗಳನ್ನಿಲ್ಲಿ ಕೊಡಲಾಗಿದೆ. ಕೆಳಗಿನದು ೧೯೩೬ ನೆಯ ನವೆಂಬರ್ ೪ ರಂದು "ಮುಂಬೈ ಸಮಾಚಾರ್" ಪತ್ರಿಕೆಯಲ್ಲಿ ಪ್ರಕಟವಾಗಿದ್ದುದು :

"(ಮಲಬಾರಿನಲ್ಲಿ) ಉಟ್ಟಪಾಲಂ ಎಂಬಲ್ಲಿ ೧೭ ವರ್ಷ ವಯಸ್ಸಿನ ಶಿವರಾಮನ್ ಎಂಬ ಎಷವ ಜಾತಿಯವನು ಉಪ್ಪು ಕೊಳ್ಳಲು ಸವರ್ಣೀಯ ಹಿಂದೂವೊಬ್ಬನ ಅಂಗಡಿಗೆ ಹೋಗಿ ಮಲಯಾಳಂ ಭಾಷೆಯಲ್ಲಿ 'ಉಪ್ಪು' ಬೇಕೆಂದು ಕೇಳಿದ. ಮಲಬಾರಿನ ಸಂಪ್ರದಾಯದಂತೆ ಸವರ್ಣೀಯ ಹಿಂದೂಗಳು ಮಾತ್ರ ಉಪ್ಪಿಗೆ 'ಉಪ್ಪು' ಎಂಬ ಪದ ಬಳಸಬಹುದು. ಹರಿಜನರವನಾಗಿ ಅವನು 'ಪುಲಿಚಾತನ್' ಎಂಬ ಪದ ಬಳಸಬೇಕಿತ್ತು. ಅದರಿಂದ ಮೇಲ್ಜಾತಿಯ ಅಂಗಡಿಯವನು ಕೋಪಗೊಂಡು ಶಿವರಾಮನ್‌ಗೆ ಚೆನ್ನಾಗಿ ಥಳಿಸಿದನೆಂದೂ ಮತ್ತು ಅದರಿಂದ ಆತ ಮರಣಹೊಂದಿದನೆಂದೂ ಹೇಳಲಾಗಿದೆ."

ಕೆಳಗಿನ ಘಟನೆಗಳನ್ನು 'ಸಮತಾ' ಪತ್ರಿಕೆಯಿಂದ ಆಯ್ದುಕೊಂಡಿದೆ :

೧) "(ಪುಣೆ ಜಿಲ್ಲೆಯ) ಕಾಥಿ ಎಂಬಲ್ಲಿ ಜನ ಅಸ್ಪೃಶ್ಯರಿಗೆ ಕಿರುಕುಳ ಕೊಡಲು ಆರಂಭಿಸಿದ್ದಾರೆ; ಏಕೆಂದರೆ ಅಲ್ಲಿಯ ಅಸ್ಪೃಶ್ಯರು 'ರಾಂ ರಾಂ' ಮತ್ತು 'ನಮಸ್ಕಾರ್' ಹೇಳತೊಡಗಿದ್ದಾರೆ. ತಿಳಿದಿಲ್ಲದವರಿಗೆ ಗೊತ್ತುಪಡಿಸಲು ಹೇಳಬೇಕಾದದ್ದೇನೆಂದರೆ ಈ ರೀತಿ ನಮಸ್ಕಾರ ಹೇಳುವ ಪದ್ಧತಿಯು ಕೇವಲ ಮೇಲ್ಜಾತಿಯವರಿಗೆ ಮೀಸಲಾಗಿರುವ ಹಕ್ಕು. ಮಹಾರರು ಮತ್ತಿತರರು 'ಜೋಹಾರ್' ಅಥವಾ 'ಪಾಯಾಲಾಗೂ'(ನಿನ್ನ ಕಾಲು ಮುಟ್ಟುತ್ತೇನೆ) ಎಂದು ಹೇಳಬೇಕು.

೨) (ಪುಣೆ ಜಿಲ್ಲೆಯ) ಟಾಣೂವಿನಲ್ಲಿ ಅಸ್ಪೃಶ್ಯರು ಸ್ಪೃಶ್ಯ ಹಿಂದೂ ಜನರಂತೆ ನಡೆದುಕೊಳ್ಳಲು ಯತ್ನಿಸಿದರು. ಈ ಉದ್ಧಟತನದ ಅತಿಕ್ರಮಣದ ಫಲವಾಗಿ ಅವರಲ್ಲಿ ಅನೇಕರು ಹಳ್ಳಿಯನ್ನು ಬಿಡಬೇಕಾಗಿ ಬಂತು. ಅವರಲ್ಲಿ ಕೆಲವರು ಬಾವ್ಡಾ ಎಂಬಲ್ಲಿಗೆ ವಲಸೆ ಹೋದರು.

೩) (ಶೋಲಾಪುರ ಜಿಲ್ಲೆಯ) ವಾಲಾಪುರ ಎಂಬಲ್ಲಿ ಮಹಾರರಿಗೆ ಕಿರುಕುಳ ನೀಡಲಾಗುತ್ತಿದೆ: ಏಕೆಂದರೆ ಸ್ಪೃಶ್ಯರನ್ನು 'ಸಾಹೇಬ್' ಎಂದು ಕರೆಯಲು ಮತ್ತು ನಮಸ್ಕಾರ ಹೇಳುವಾಗ 'ಪಾಯಾಲಾಗೂ' (ನಿನ್ನ ಕಾಲು ಮುಟ್ಟುತ್ತೇನೆ) ಎನ್ನಲು ನಿರಾಕರಿಸುವಷ್ಟು ಧೈರ್ಯ ತೋರಿದ್ದಾರೆ.

೪) (ಶೋಲಾಪುರ ಜಿಲ್ಲೆಯ) ಜಾಂಬಾದ್ ಎಂಬಲ್ಲಿ ತಮ್ಮ ಸ್ಪೃಶ್ಯ ಯಜಮಾನರ ವಿನೋದಕ್ಕಾಗಿ 'ನಾಚ್' ಮತ್ತು 'ತಮಾಶಾ' ಗಳನ್ನು ಪ್ರದರ್ಶಿಸಲು ಅಸ್ಪೃಶ್ಯರು ನಿರಾಕರಿಸಿದರು. ಆದ್ದರಿಂದ ಈ ಅಸ್ಪೃಶ್ಯರಿಗೆ ಹೊಡೆತ ಬಿತ್ತು, ಅವರ ಗುಡಿಸಲುಗಳನ್ನು ಕಿತ್ತುಹಾಕಲಾಯಿತು. ಇಲ್ಲವೆ ಅವಕ್ಕೆ ಬೆಂಕಿ ಇಡಲಾಯಿತು ಮತ್ತು ಅವರನ್ನು ಹಳ್ಳಿಯ ಗಡಿಯಿಂದಾಚೆಗೆ ಹೊರದೂಡಲಾಯಿತು.

೫) (ಪುಣೆ ಜಿಲ್ಲೆಯ) ಬಾವ್ಡಾ ಎಂಬಲ್ಲಿ ಕೆಲವು ಅಸ್ಪೃಶ್ಯರು ತಮ್ಮ ಸಹ ಜಾತಿ ಬಾಹಿರರನ್ನು ಮೇಲ್ಜಾತಿಯ ಜನ ಬಿಸಾಕಿದ ತಿನಿಸುಗಳನ್ನೂ ಸತ್ತ ಪ್ರಾಣಿಗಳನ್ನೂ ತಿನ್ನಬಾರದೆಂದು ಪುಸಲಾಯಿಸಿದರು. ಅಂತೆಯೇ ಇತರ ಜನರ ಕೊಳಕು ಕೆಲಸಗಳಿಗೂ ಕೈಹಾಕಬಾರದೆಂದು ಪ್ರೇರೇಪಿಸಿದರು. ಹಳ್ಳಿಯ

ಪ್ರಮುಖರು ಈ ರೀತಿ ಹೊಸದಾಗಿ ಆಲೋಚಿಸುವ ಮಹಾರರಿಗೆ ತಾವು ಅನೂಚಾನವಾಗಿ ತಿನ್ನುತ್ತಾ ಬಂದಿರುವುದನ್ನು ತಿನ್ನುವುದು ಮತ್ತು ಮಾಡುತ್ತಾ ಬಂದಿರುವುದನ್ನು ಮಾಡುತ್ತಲೇ ಇರುವುದು ಅವರ 'ಧರ್ಮ' ಎಂದು ಹೇಳಿದ್ದಾರೆ. ಪ್ರಾಚೀನ ಮತ್ತು ನಿತ್ಯವಾದ ಈ 'ಧರ್ಮ'ವನ್ನು ಪಾಲಿಸದಿರುವಂತಹ ಮಹಾರರಿಗೆ ಜನ ಚೆನ್ನಾಗಿ ಹೊಡೆದಿದ್ದಾರೆ ಮತ್ತು ಹಳ್ಳಿಯಿಂದ ಹೊರಹಾಕುವುದಾಗಿ ಬೆದರಿಕೆ ಹಾಕಿದ್ದಾರೆ."

## XII

ಹಿಂದೂ ಸಮಾಜಕ್ಕೆ ಸೇವೆಮಾಡಲು ಹುಟ್ಟಿರುವವನೋ ಎಂಬಂತೆ ಹಿಂದೂವು ಅಸ್ಪೃಶ್ಯರನ್ನು ನಡೆಸಿಕೊಳ್ಳುತ್ತಾನೆ. ಸೇವೆಮಾಡುವುದು ತನ್ನ ಕರ್ತವ್ಯವಾದ್ದರಿಂದ ಅಸ್ಪೃಶ್ಯನು ಹಿಂದೂವಿನಿಂದ ಕರೆಬಂದಾಗಲೆಲ್ಲಾ ಅದನ್ನು ನಿರಾಕರಿಸದೆ ಅವನಿಗೆ ಸೇವೆ ಮಾಡಬೇಕು. ಅಸ್ಪೃಶ್ಯರ ದುಡಿಮೆಯನ್ನು ಮನಸ್ವಿಯಾಗಿ ಪಡೆದುಕೊಳ್ಳಬಹುದೆಂದು ಹಳ್ಳಿಗಳ ಹಿಂದೂಗಳು ಭಾವಿಸಿದ್ದಾರೆ. ಈ ಪದ್ಧತಿಗೆ 'ಬೇಗಾರ್' ಅಥವಾ 'ಬಲವಂತದ ದುಡಿಮೆ' ಎಂದು ಹೆಸರು. ಈ ಪದ್ಧತಿಗೆ ಅಸ್ಪೃಶ್ಯರೇನಾದರೂ ತಲೆಬಾಗದಿದ್ದರೆ ಎಂತಹ ಭೀಕರ ಪರಿಣಾಮಗಳುಂಟಾಗಬಹುದೆಂಬುದಕ್ಕೆ ಕೆಲವು ಘಟನೆಗಳು ಸಾಕು.

ಕೆಳಗಿನ ಘಟನೆಗಳನ್ನು 'ಜೀವನ್' ಪತ್ರಿಕೆಯು ೧೯೩೮ರ ಡಿಸೆಂಬರ್‌ನಲ್ಲಿ ವರದಿ ಮಾಡಿತ್ತು:

"೧೯೩೮ನೆಯ ನವೆಂಬರ್ ೨೯ರಂದು ಮುತ್ರಾ ಜಿಲ್ಲೆಯ ಕೋಹಾನಾ ಎಂಬ ಹಳ್ಳಿಯ ಜಾಟವರು ಬೇಗಾರ್ ಮಾಡಲು ನಿರಾಕರಿಸಿದ್ದರಿಂದ ಅಲ್ಲಿಯ ಜಾಟ್ ಮತ್ತು ಬ್ರಾಹ್ಮಣ ಜಾತಿಯವರಿಂದ ತೀವ್ರವಾಗಿ ಹಿಂಸಿಸಲ್ಪಟ್ಟರು.

ಜಾಟವರಿಂದ ಬೇಗಾರನ್ನು ಕಸಿದುಕೊಳ್ಳುವುದು ಮತ್ತು ಅವರನ್ನು ಪೀಡಿಸುವುದು ಈ ಹಳ್ಳಿಯ ಠಾಕೂರರಿಗೆ ಮತ್ತು ಬ್ರಾಹ್ಮಣರಿಗೆ ರೂಢಿಯಾಗಿತ್ತು. ಜಾಟವರು ಬೇಗಾರನ್ನು ಮಾಡುವುದನ್ನು ನಿಲ್ಲಿಸಿ ಕೂಲಿಗೆ ಮಾತ್ರವೇ ಕೆಲಸ ಮಾಡಬೇಕೆಂದು ತೀರ್ಮಾನಿಸಿದರು. ಇತ್ತೀಚೆಗೆ ಹಳ್ಳಿಯಲ್ಲಿ ಒಂದು ಎತ್ತು ಸತ್ತಿತು. ಅದನ್ನು ಎತ್ತಿಹಾಕುವಂತೆ ಠಾಕೂರರು ಮತ್ತು ಇತರ ಸವರ್ಣೀಯ ಹಿಂದೂಗಳು ಜಾಟವರನ್ನು ಬಲಾತ್ಕರಿಸಲು ಯತ್ನಿಸಿದರು. ಅದಕ್ಕೆ ಕೂಲಿ ನೀಡಿದರೆ ಮಾತ್ರ ಆ ಕೆಲಸ ಮಾಡುವುದಾಗಿ ಜಾಟವರು ತಿಳಿಸಿದರು. ಇದು ಸವರ್ಣೀಯ ಹಿಂದೂಗಳಿಗೆ ಎಷ್ಟು ಕೋಪ ತಂದಿತೆಂದರೆ ಅವರು ಒಬ್ಬ ಕಸಗುಡಿಸುವವನನ್ನು ಕರೆದು ಜಾಟವರ ಬಾವಿಗೆ ಹೇಲು ತುಂಬಲು ಹೇಳಿದರು. ತಮ್ಮ ನಿತ್ಯ ಕರ್ಮಗಳಿಗೆ ಹೊಲದ ಕಡೆ ಹೋಗಲು ಅವರಿಗೆ ಅವಕಾಶವೀಯಬಾರದೆಂದೂ ಆಜ್ಞಾಪಿಸಿದರು. ಹೀಗೆ ಎಲ್ಲ ವಿಧಗಳಲ್ಲೂ ಜಾಟವರನ್ನು ನಗೆ ಪಾಟಲು ಮಾಡುವುದು ಅವರ ಉದ್ದೇಶವಾಯಿತು. ತಮ್ಮ ಬಾವಿಯೊಳಕ್ಕೆ ಹೇಲು ತುಂಬಲು ಆಗದಂತೆ ಜಾಟವರು ಆ ಕಸಗುಡಿಸುವವನನ್ನು ತಡೆಗಟ್ಟಿದರು. ಆಗ್ಗೆ ಆಗಲೇ ಸರ್ವಸಿದ್ಧತೆಯನ್ನು ನಡೆಸಿಕೊಂಡಿದ್ದ ಜಾಟರು, ಠಾಕೂರರು ಮತ್ತು ಬ್ರಾಹ್ಮಣರು ಈ ಕಸಗುಡಿಸುವವನು ಒಮ್ಮೆ ಕೂಗಿದ ಕೂಡಲೆ ಹಲ್ಲೆ ನಡೆಸಲು ನುಗ್ಗಿದರು. ಜಾಟವರನ್ನು ಲಾಠಿಗಳಿಂದ ಹೊಡೆದು ಅವರನ್ನು ನುಚ್ಚುನೂರು ಮಾಡಿದರು. ಅವರ ಮನೆಗಳಿಗೂ ಬೆಂಕಿಯಿಟ್ಟರು. ಅದರ ಪರಿಣಾಮವಾಗಿ ಆರು ಮನೆಗಳು ಸುಟ್ಟು ಬೂದಿಯಾದುವು ಮತ್ತು ೧೮ ಜಾಟವರಿಗೆ ತೀವ್ರ ಗಾಯಗಳಾದುವು. ರೌಡಿಗಳು ಅವರ ಮನೆಗಳ ಅನೇಕ ಪಾತ್ರೆ ಪಡಿಗೆಗಳನ್ನು ಲಪಟಾಯಿಸಿಕೊಂಡು ಹೋದರು."

ಅದೇ ಪತ್ರಿಕೆಯು ತನ್ನ ೧೯೩೯ರ ಫೆಬ್ರವರಿ ಸಂಚಿಕೆಯಲ್ಲಿ ನೀಡಿದ ವರದಿ :

"ಆಗ್ರಾ ಜಿಲ್ಲೆಯ ಕೀರ್ವಾಲಿ ತಾಲ್ಲೂಕಿಗೆ ಸೇರಿದ ಅಭೈಪುರ ಎಂಬ ಹಳ್ಳಿಯ ಜಾಟರು ನಿಮ್ನಜಾತಿಯ ಬಡವರಿಂದ ಬಿಟ್ಟಿ ಕೂಲಿಯನ್ನು ಪಡೆಯುವುದು ರೂಢಿಯಾಗಿದೆ. ಅದಕ್ಕೇನಾದರೂ ಕೂಲಿ ಕೇಳಿದರೆ ಅವರಿಗೆ ಏಟು ಬೀಳುವುದು ಖಚಿತ. ಈಗ ಮೂರು ತಿಂಗಳ ಹಿಂದೆ ಸುಖೀ ಜಾಟ್ ಎಂಬುವನು ಸುಖ್‌ರಾಂ, ಘನಶ್ಯಾಮ್ ಮತ್ತು ಹುಂಕಾ ಎಂಬ ಜಾಟವರಿಂದ ಕೆಲಸ ಮಾಡಿಸಿಕೊಂಡ ಮತ್ತು ಅದಕ್ಕೆ ಕೂಲಿಯನ್ನೇನೂ ಕೊಡಲಿಲ್ಲ. ಇಂತಹ ದುಬಾರಿ ವರ್ತನೆಯಿಂದ ಈ ಜನರೆಲ್ಲಾ ರೋಸಿಹೋಗಿದ್ದಾರೆ ಮತ್ತು ಎಷ್ಟೋ ವೇಳೆ ತಮ್ಮ ಊರುಗಳನ್ನು ತೊರೆದು ಬೇರೆ ಹಳ್ಳಿಗಳಲ್ಲಿ ನೆಂಟರೊಡನೆ ವಾಸಿಸತೊಡಗಿದ್ದಾರೆ. ಹೀಗಾದಾಗ ಅವರ ಮನೆಗಳಲ್ಲಿರುವ ಮಡಕೆ ಕುಡಿಕೆಗಳನ್ನು ಜಾಟರು ತೆಗೆದುಕೊಂಡು ಹೋಗಿ ಎಲ್ಲೆಲ್ಲೋ ಕೊಟ್ಟಿಗೆಗಳಲ್ಲಿ ಅವಿಸಿಡುತ್ತಾರೆ."

'ಸಾವಧಾನ್' ಎಂಬ ಪತ್ರಿಕೆಯು ೧೯೪೫ನೆಯ ಜೂನ್ ೩ರ ತನ್ನ ಸಂಚಿಕೆಯಲ್ಲಿ ಕೆಳಗಿನ ಘಟನೆಯನ್ನು ವರದಿ ಮಾಡಿದೆ:

"ನಿಮ್ನಜಾತಿಗೆ ಸೇರಿದ ಮೆಹ್ರಾಜಿ ಕೋರಿ ಎಂಬಾಕೆ ನಗರದ ಮ್ಯಾಜಿಸ್ಟ್ರೇಟ್ ಶ್ರೀ ಮಹಬೂಬ್ ಆಲಂ ಎಂಬುವರ ಕೋರ್ಟಿನಲ್ಲಿ ಒಂದು ದೂರನ್ನು ದಾಖಲಿಸಿದ್ದಾಳೆ. ಜೂಬಿ ಪೊಲೀಸು ಠಾಣೆಯ ಪೇದೆಗಳಾದ ಬ್ರಹ್ಮಾಸಿಂಗ್, ಸುಲೇಮಾನ್ ಮತ್ತು ಆಫ್ತಾಬ್ ಎಂಬುವರ ವಿರುದ್ಧ ಕಲಂ ೩೭೬, ೩೪೧ ಮತ್ತು ೩೫೪ (ಅ) ಇವುಗಳ ಪ್ರಕಾರ ದೂರು ದಾಖಲಾಗಿದೆ. ಈ ಮೂವರು ಪೊಲೀಸು ಪೇದೆಗಳು ೧೯೪೫ ನೆಯ ಮೇ ೨ರಂದು ರಾತ್ರಿ ಸುಮಾರು ಹತ್ತೂವರೆ ಗಂಟೆಗೆ ಸುಮರ್, ಕಹರ್, ಕಲ್ಲು ಬೀಬಿಯ ಮಗ ಮತ್ತಿತರರೊಡಗೂಡಿ ಬಂದು ತನ್ನ ಮನೆಯನ್ನು ಶೋಧಿಸಿದರೆಂದು ಆಪಾದಿಸಿರುವ ಆಕೆ ತನ್ನನ್ನು ನಂತರ ಪೊಲೀಸ್ ಠಾಣೆಗೆ ಕೊಂಡೊಯ್ದರೆಂದೂ ಇಡೀ ರಾತ್ರಿ ತನ್ನನ್ನು ಅಲ್ಲೇ ಇರಿಸಲಾಗಿತ್ತೆಂದೂ ಹೇಳಿದ್ದಾಳೆ. ಮಧ್ಯರಾತ್ರಿಯ ನಂತರ ಈ ಪೇದೆಗಳು ಅವಳನ್ನು ಒಂದು ಚಿಕ್ಕ ಕೋಣೆಗೆ ಕರೆದುಕೊಂಡು ಹೋಗಿ ಒಳಗಿನಿಂದ ಚಿಲುಕ ಹಾಕಿ ಮೂವರೂ ಸರತಿಯಾಗಿ ಆಕೆಯ ಮೇಲೆ ಅತ್ಯಾಚಾರ ಎಸಗಿದರು. ನಂತರ ಆಕೆಯನ್ನು ಬೇರೊಂದು ಚಿಕ್ಕ ಕೋಣೆಗೆ ವರ್ಗಾಯಿಸಲಾಯಿತು. ಅಲ್ಲಿ ಅವಳ ಗುಪ್ತಾಂಗದೊಳಕ್ಕೆ ಇದ್ದಿಲು ಮತ್ತು ಕಾಗದದ ಚೂರುಗಳನ್ನು ತುಂಬಿ ಆಕೆಯ ಬಾಯೊಳಕ್ಕೆ ಆ ಪೇದೆಗಳು ತಮ್ಮ ಜನನಾಂಗವನ್ನು ತುರುಕಿದರು. ಅವಳ ಬಟ್ಟೆಗಳೆಲ್ಲಾ ಹರಿದು ರಕ್ತದ ಮುದ್ದೆಯಾಗಿವೆ. ಮಾರನೆಯ ಇಡೀ ದಿನ ಆಕೆಯ ತಾಯಿಯನ್ನು ಬಿಟ್ಟಿಕೂಲಿ (ಬೇಗಾರ್) ಮಾಡುವಂತೆ ಬಲಾತ್ಕರಿಸಲಾಯಿತು. ನಂತರ ಇಬ್ಬರನ್ನೂ ರಾತ್ರಿ ಹತ್ತು ಗಂಟೆಗೆ ಬಿಟ್ಟುಬಿಟ್ಟರು.

ಮಹರಾಜಿಯ ಗಂಡನ ತಮ್ಮನ ಹೆಂಡತಿ ಮುರಾಲಾ ಎಂಬುವಳೂ ಇಂಥದೇ ದೂರನ್ನು ದಾಖಲು ಮಾಡಿದ್ದಾಳೆ. ಅದೇ ಪೊಲೀಸ್ ಪೇದೆಗಳು ಅದೇ ರಾತ್ರಿ ತನ್ನನ್ನು ಪೊಲೀಸ್ ಠಾಣೆಗೆ ಕೊಂಡೊಯ್ದು ಮತ್ತೆ ಮನೆಗೆ ಹಿಂದಿರುಗಿಸಿದರೆಂದು ಅವಳು ಆಪಾದಿಸಿದ್ದಾಳೆ. ಮನೆಗೆ ಹಿಂದಿರುಗುತ್ತಿದ್ದಾಗ ಕುಮಾರ್ ತೋಲಾದ ಬಳಿ ಮದಾರಿ ತೇಲಿ ಎಂಬುವನು ಆಕೆಯನ್ನು ಹಿಡಿದು ಒಂದು ಪಾಳುಮನೆಗೆ ಸೆಳೆದೊಯ್ದು, ಅಲ್ಲಿ ಅವಳ ಮಾನಭಂಗ ಮಾಡಿದ. ದೂರಿತ್ತಿರುವವರ ಪರವಾಗಿ ಶ್ರೀಯುತರಾದ ಮುನ್ನಾಲಾಲ್, ಭೂಷಣ್ ಮತ್ತು ರಾಂ ಭರೋಸೆ ಎಂಬ ವಕೀಲರು ವಾದ ಮಾಡಲಿದ್ದಾರೆ."

೧೯೪೫ನೆಯ ಏಪ್ರಿಲ್ ೧೫ರಂದು 'ಹಿಂದುಸ್ತಾನ್ ಟೈಂಸ್' ಪತ್ರಿಕೆಯಲ್ಲಿ ಕೆಳಗಿನ ಸಮಾಚಾರ ಪ್ರಕಟವಾಗಿದ್ದಿತು :

"ಬಲವಂತದ ದುಡಿಮೆಮಾಡಲು ನಿರಾಕರಿಸಿದ್ದಕ್ಕಾಗಿ ಅಂಬಾಲಾ ಜಿಲ್ಲೆಯ ದುಖೇರಿ ಎಂಬ

ಹಳ್ಳಿಯ ಅನೇಕ ಹರಿಜನರನ್ನು ರಜಪೂತರ ಒಂದು ಹಿಂಡು ಹಲ್ಲೆಗೆ ಗುರಿಮಾಡಿತೆಂದು ಆಪಾದಿಸಲಾಗಿದೆ. ಹರಿಜನರ ಗುಂಪಿಗೆ ಸೇರಿದ ಒಬ್ಬ ಗಂಡಸು ಮತ್ತು ಒಬ್ಬ ಹೆಂಗಸು ಸತ್ತಿದ್ದಾರೆ. ಹರಿಜನರಿಗೆ ಸೇರಿದ ಅನೇಕ ಗುಡಿಸಲುಗಳಿಗೆ ಬೆಂಕಿ ಇಡಲಾಯಿತೆಂದು ಸಹ ಆಪಾದನೆ ಮಾಡಲಾಗಿದೆ. ಈ ವಿಷಯಕ್ಕೆ ಸಂಬಂಧಿಸಿದಂತೆ ತನಿಖೆ ನಡೆಸಬೇಕೆಂದು ಕಮಿಷನರ್ ಮತ್ತು ಪೊಲೀಸ್ ಡೆಪ್ಯುಟಿ ಇನ್‌ಸ್ಪೆಕ್ಟರ್ ಜನರಲ್ ಅವರುಗಳಿಗೆ ತಂತಿ ಸಂದೇಶ ಕಳುಹಿಸಲಾಗಿದೆ."

ಅಸ್ಪೃಶ್ಯರನ್ನು ಅದುಮಿಡಲು ಹಿಂದೂಗಳು ಹಿಂಸೆಯನ್ನು ಬಳಸಲು ಹೇಸುವುದಿಲ್ಲವೆಂಬುದು ಈ ಎಲ್ಲ ಘಟನೆಗಳಿಂದ ಯಾರಿಗಾದರೂ ಸ್ಪಷ್ಟವಾಗುತ್ತದೆ. ಪ್ರತಿಷ್ಠಿತ ವ್ಯವಸ್ಥೆಯನ್ನು ಮುಂದುವರಿಸುವುದಕ್ಕಾಗಿ ಅವರು ಕೊಲೆಯನ್ನು ಮಾಡಲು ಸಹ ಅಂಜುವುದಿಲ್ಲ.

ಶ್ರೀ ಲಜಪತ್ ರಾಯ್ ಅವರು ತಮ್ಮ 'ಅನ್‌ಹ್ಯಾಪಿ ಇಂಡಿಯಾ' ಎಂಬ ಪುಸ್ತಕದಲ್ಲಿ ಕುಮಾರಿ ಮೇಯೋ ಬರೆದಿರುವ 'ಮದರ್ ಇಂಡಿಯಾ' ಎಂಬ ಪುಸ್ತಕದಲ್ಲಿ ಮಾಡಿರುವ ಆಪಾದನೆಗಳನ್ನು ಅಲ್ಲಗಳೆಯುಲು ಅನೇಕ ಉತ್ತರಗಳನ್ನು ನೀಡಲು ಯತ್ನಿಸಿದ್ದಾರೆ. ಅಮೆರಿಕ ಸಂಯುಕ್ತ ಸಂಸ್ಥಾನಗಳಲ್ಲಿ ನೀಗ್ರೋಗಳನ್ನು ಬಲಿ ತೆಗೆದುಕೊಳ್ಳುವ ಬಗ್ಗೆ ಸ್ಫುಟವಾದ ಮತ್ತು ದೀರ್ಘವಾದ ವಿವರಣೆಗಳನ್ನವರು ನೀಡಿದ್ದಾರೆ. ಕು ಕ್ಲುಕ್ಸ್ ಕ್ಲಾನ್ ಪಂಥದವರು ಅವರ ಮೇಲೆ ನಡೆಸುವ ಕ್ರೂರ ಪಾತಕಗಳನ್ನೂ ಅವರು ನಮೂದಿಸಿ ಒಂದು ಪ್ರಶ್ನೆಯನ್ನೆತ್ತಿದ್ದಾರೆ :

"ಆಕೆ (ಅಂದರೆ, ಕುಮಾರಿ ಮೇಯೋ) ಕೇಳಬೇಕಾಗಿದ್ದ ಪ್ರಶ್ನೆ ಪ್ರಸ್ತುತವಾಗಿ ಇದು : ನೀಗ್ರೋಗಳ ವಿರುದ್ಧವಾಗಿ ಅಮೆರಿಕದ ಈ ಕ್ಲಾನ್ ಪಂಥೀಯರು ಎಸಗುವ ದುಷ್ಕೃತ್ಯಗಳಿಗಿಂತಲೂ ಬ್ರಾಹ್ಮಣರು ಪರಯ್ಯಾಗಳ ವಿರುದ್ಧ ತೋರುವ ಅನ್ಯಾಯದ ಮತ್ತು ಕ್ರೌರ್ಯದ ಭಾವನೆಯು ಹೆಚ್ಚು ಅಸಮ್ಮತವೇ ಮತ್ತು ಕ್ರೂರವೇ?"

"ಬಿಳಿಯ ಬಿಳಿಯವನಲ್ಲದವನಿಗೆ ಮಾಡಿರುವ ಪಾತಕದ ಜೊತೆಗೆ ಹೋಲಿಸಿದರೆ ಭಾರತದ ಜಾತೀಯ ಕ್ರೌರ್ಯಗಳು ಏನು ಮಹಾ ದೊಡ್ಡವು?"

ವಿಚಾರಣೆ ನಡೆಸುವ ಕಾಳಜಿಯನ್ನು ಲಾಲಾ ಲಜಪತ್ ರಾಯ್ ಅವರು ತೋರಿದ್ದರೆ ಹಿಂದೂಗಳು ಅಸ್ಪೃಶ್ಯರ ವಿರುದ್ಧ ನಡೆಸಿರುವ ಕ್ರೌರ್ಯಗಳು ಮತ್ತು ದೌರ್ಜನ್ಯಗಳು ಅಮೆರಿಕದವರು ನೀಗ್ರೋಗಳ ಮೇಲೆ ನಡೆಸಿರುವ ಕ್ರೌರ್ಯ ಮತ್ತು ದೌರ್ಜನ್ಯಗಳಿಗಿಂತಲೂ ಯಾವ ರೀತಿಯಲ್ಲೂ ಕಡಿಮೆಯಿಲ್ಲವೆಂದು ತಿಳಿಯಬಹುದಿತ್ತು. ನೀಗ್ರೋಗಳ ಮೇಲೆ ಜರುಗಿಸಲಾಗಿರುವ ದೌರ್ಜನ್ಯದಷ್ಟು ಈ ದೌರ್ಜನ್ಯಗಳು ಪ್ರಪಂಚದಲ್ಲಿ ಪ್ರಸಿದ್ಧವಾಗಿಲ್ಲದಿದ್ದರೆ ಅದಕ್ಕೆ ಕಾರಣವು ದೌರ್ಜನ್ಯ ನಡೆದಿಲ್ಲವೆಂಬುದಲ್ಲ. ಅವು ತಿಳಿದಿಲ್ಲದಿರುವುದಕ್ಕೆ ಕಾರಣವೇನೆಂದರೆ ತನ್ನ ನಾಚಿಕೆಯನ್ನು ಮುಚ್ಚಿಕೊಳ್ಳುವುದಕ್ಕೋಸ್ಕರ ಸತ್ಯವನ್ನೇ ಮರೆಮಾಚುವ ಹಿಂದೂಗಳು ಇದ್ದದ್ದು. ಇದಕ್ಕೆ ಅಪವಾದವಾಗಿ ಒಬ್ಬನೇ ಒಬ್ಬ ಹಿಂದೂವೂ ಇರಲಿಲ್ಲ ಎಂಬುದೂ ಪ್ರಮುಖ ಕಾರಣವಾಗುತ್ತದೆ.

ಪ್ರತಿಷ್ಠಿತ ವ್ಯವಸ್ಥೆ ಮತ್ತು ಅದರಡಿ ಮಾಡಲಾಗಿರುವ ನಿಯಮಗಳ ವಿವರಣೆಯು ಅತಿ ಪ್ರಾಚೀನವಾದ ಕಾಲಕ್ಕೆ ಸಂಬಂಧಿಸಿದ ಸಂಗತಿಗಳೆಂದು ಕೆಲವರು ಭಾವಿಸಬಹುದು. ಇದು ಶುದ್ಧ ತಪ್ಪು. ಪ್ರತಿಷ್ಠಿತ ವ್ಯವಸ್ಥೆಯು ಇಂದಿಗೂ ಜೀವಂತವಾಗಿದೆ ಮತ್ತು ಅದರ ನಿಯಮಗಳು ಅವನ್ನು ರೂಪಿಸಿದಾಗ ಎಷ್ಟು ಪ್ರಚಲಿತವಾಗಿದ್ದುವೋ ಅಷ್ಟೇ ಇಂದೂ ಪ್ರಚಲಿತವಾಗಿವೆ. ಅಸ್ಪೃಶ್ಯರ ಪರಿಸ್ಥಿತಿಗೆ ಸಂಬಂಧಿಸಿದಂತೆ "ಹಿಂದೂಸ್ತಾನ್ ಟೈಂಸ್" ಪತ್ರಿಕೆಯಲ್ಲಿ ಪ್ರಕಟವಾಗಿರುವ ಕೆಳಗಿನ ಎರಡು ಹೇಳಿಕೆಗಳು ಇದನ್ನು ಸಮರ್ಥಿಸುತ್ತವೆ. ಅವುಗಳಲ್ಲಿ

ಮೊದಲನೆಯದು ೧೯೪೫ನೆಯ ಮಾರ್ಚ್ ೮ರ ಸಂಚಿಕೆಯಲ್ಲಿ ಪ್ರಕಟವಾದುದು. ಅದನ್ನು ಬರೆದವರು ಉದಯಪುರದಲ್ಲಿರುವ ವಿದ್ಯಾಭುವನ್ ಎಂಬ ಶಾಲೆಯ ಮುಖ್ಯೋಪಾಧ್ಯಾಯರಾದ ಕೇಸರಿಲಾಲ್ ಜಿ ಬೋರ್ಡಿಯ ಎಂಬುವರು. ಹೇಳಿಕೆ ಹೀಗಿದೆ :

"ಮೇವಾರದಲ್ಲಿ ವಾಸಿಸುವ ಹರಿಜನರು ಹತ್ತು ಹಲವು ಮುಗ್ಗಟ್ಟುಗಳನ್ನೆದುರಿಸಬೇಕಾಗಿದೆ. ಅವರು ದೇವಸ್ಥಾನಗಳನ್ನು ಪ್ರವೇಶಿಸುವಂತಿಲ್ಲ. ಸಾರ್ವಜನಿಕ ಬಾವಿಗಳಿಂದ ಅವರು ನೀರನ್ನು ಪಡೆಯುವಂತೆಯೂ ಇಲ್ಲ. ಹಬ್ಬ ಮತ್ತು ಉತ್ಸವಗಳಲ್ಲಿ ಅವರು ಸವರ್ಣೀಯ ಹಿಂದೂಗಳೊಡನೆ ಸೇರುವಂತಿಲ್ಲ. ಅವರದೇ ರಥಯಾತ್ರೆಯನ್ನೋ ಮೂರ್ತಿಯ ಉತ್ಸವವನ್ನೋ ಹೊರಡಿಸುವಾಗಲೂ ಬೇರೆ ದಿನ ಮತ್ತು ಬೇರೆ ಮಾರ್ಗವನ್ನು ಆರಿಸಿಕೊಳ್ಳಬೇಕು. ಅವರು ಹಳ್ಳಿಯಲ್ಲಿ ವಾಹನವನ್ನೇರಿ ಹೋಗುವಂತಿಲ್ಲ.

ಚಿನ್ನದ ಆಭರಣಗಳಂತಿರಲಿ, ಅವರು ಬೆಳ್ಳಿಯ ಆಭರಣಗಳನ್ನು ಸಹ ತಮ್ಮ ಮೈಮೇಲೆ ಧರಿಸುವುದನ್ನು ಸವರ್ಣೀಯ ಹಿಂದೂಗಳು ಸಹಿಸಲಾರರು. ಅದರ ಪರಿಣಾಮವಾಗಿ ಅವರು ಕೇವಲ ತವರ ಮತ್ತು ತಾಮ್ರದ ವಸ್ತುಗಳಿಂದ ತೃಪ್ತಿ ತಂದುಕೊಳ್ಳಬೇಕಾಗಿದೆ. ಅವರು ಮದುವೆಯ ಔತಣಗಳಲ್ಲಿ ಬೆಣ್ಣೆ, ಬೆಲ್ಲ ಇತ್ಯಾದಿಗಳನ್ನು ಬಳಸುವುದನ್ನು ಅನೂಚಾನವಾಗಿ ನಡೆದು ಬಂದಿರುವ ಪದ್ಧತಿಯು ಅಡ್ಡಿಪಡಿಸುತ್ತದೆ.

ಶಾಲೆಗಳಲ್ಲಿ ಮತ್ತು ಇತರ ಸಾರ್ವಜನಿಕ ಸ್ಥಳಗಳಲ್ಲಿ ಸವರ್ಣೀಯ ಹಿಂದೂಗಳ ಮಕ್ಕಳೊಡನೆ ಹರಿಜನರ ಮಕ್ಕಳು ಕುಳಿತುಕೊಳ್ಳುವಂತಿಲ್ಲ ಅಧಿಕಾರಿಗಳು ತನಿಖೆಗೆ ಬರುವ ದಿನಗಳಂದು ಅವರು ಶಾಲೆಗೆ ಬಾರದಿರುವಂತೆ ಆದೇಶಿಸಲಾಗುತ್ತದೆ; ಇದು ತನಿಖಾಧಿಕಾರಿಗೆ ಮುಜುಗರ ಉಂಟಾಗದಿರಲೆಂದು ಕೈಗೊಳ್ಳುವ ಕ್ರಮ.

ರಾಜ್ಯ ಸರ್ಕಾರಕ್ಕೆ ಒಂದು ಮನವಿ ಪತ್ರವನ್ನು ಸಲ್ಲಿಸಲಾಗಿದೆ. ಮೇಲೆ ಉಲ್ಲೇಖಿಸಿರುವಂತಹ ಮುಗ್ಗಟ್ಟುಗಳನ್ನು ತೆಗೆದುಹಾಕುವುದಾಗಿ ನಿಸ್ಸಂದಿಗ್ಧವಾಗಿ ಘೋಷಿಸಲು ಸರ್ಕಾರವು ಮುಂದೆ ಬಂದರೆ ಅಸ್ಪೃಶ್ಯತೆಯ ವಿರುದ್ಧ ಹೋರಾಡುತ್ತಿರುವ ಅನಧಿಕೃತ ಸಂಘಸಂಸ್ಥೆಗಳವರ ಕೈಗಳನ್ನು ಬಲಪಡಿಸಿದಂತಾಗುತ್ತದೆ."

ಎರಡನೆಯದು 'ಹರಿಜನ ಸೇವಕ ಸಂಘ'ದ ಅಧ್ಯಕ್ಷರು ನೀಡಿರುವ ಹೇಳಿಕೆಯ ರೂಪದಲ್ಲಿದೆ. ಮೇವಾರ್ ರಾಜ್ಯದಲ್ಲಿ ಅಸ್ಪೃಶ್ಯರ ಪರಿಸ್ಥಿತಿಯನ್ನು ಅದು ಎತ್ತಿ ಹೇಳುತ್ತದೆ. ಅದರ ಪಾಠ ಕೆಳಕಂಡಂತಿದೆ:

"ಮೇವಾರದ ಹರಿಜನ ಸೇವಕ ಸಂಘವು ಮೇವಾರ್ ಸರ್ಕಾರಕ್ಕೆ ಮನವಿ ಪತ್ರವೊಂದನ್ನು ಕಳಿಸಿ ರಾಜ್ಯದಲ್ಲಿರುವ ಹರಿಜನರು ಎದುರಿಸುತ್ತಿರುವ ಹಲವು ಮುಗ್ಗಟ್ಟುಗಳು ಹಾಗೂ ಅದರಿಂದ ಉದ್ಭವಿಸುವ ಬಾಧೆಗಳತ್ತ ಸರ್ಕಾರದ ಗಮನವನ್ನು ಸೆಳೆದಿದೆ. ಸವರ್ಣೀಯ ಹಿಂದೂಗಳ ಸಾಂಪ್ರದಾಯಿಕತೆ ಮತ್ತು ಪೂರ್ವಗ್ರಹ ಪೀಡೆಯಿಂದಾಗಿ ಹರಿಜನರ ನಾಗರಿಕ ಹಕ್ಕುಗಳನ್ನು ಹಲವು ರೀತಿಗಳಲ್ಲಿ ಹೇಗೆ ಮೊಟಕುಗೊಳಿಸಲಾಗುತ್ತವೆ ಎಂಬುದನ್ನು ಮನವಿಪತ್ರವು ಹೊರಗೆಡಹುತ್ತದೆ.

ರಾಜ್ಯದಲ್ಲಿ ಇನ್ನೂ ಬೇರೂರಿ ನಿಂತಿರುವ, ಆದರೆ ಅವುಗಳನ್ನು ಸರಿಪಡಿಸಲು ಸರ್ಕಾರವು ಯಾವುದೇ ಪರಿಣಾಮಕಾರಿ ಕ್ರಮಗಳನ್ನು ಕೈಗೊಳ್ಳದಿರುವಂತಹ, ಕೆಲವು ಅನ್ಯಾಯಯುಕ್ತವಾದ ಪದ್ಧತಿಗಳನ್ನು ಈ ಕೆಳಗೆ ನಾನು ನಮೂದಿಸುತ್ತೇನೆ. ಅವು ಹೀಗಿವೆ :

೧) ತಾವು ತೊಡುವ ಬಟ್ಟೆಗಳ ಆಯ್ಕೆಯಲ್ಲಿ ಹರಿಜನರಿಗೆ ಸ್ವಾತಂತ್ರ್ಯವಿಲ್ಲ. ಅವರ ಉಡಿಗೆ–ತೊಡಿಗೆಗಳು ಪರಂಪರಾಗತವಾದ ಸ್ವರೂಪದಲ್ಲೇ ಇರಬೇಕು. ಅವರ ವೈಯಕ್ತಿಕ ಆಸೆ ಮತ್ತು ಅಭಿರುಚಿಗಳಿಗೆ ಬಟ್ಟೆಗಳ ಆಯ್ಕೆಯಲ್ಲಿ ಯಾವ ಸ್ಥಾನವೂ ಇಲ್ಲ.

೨) ಮದುವೆಯ ಔತಣಗಳಲ್ಲಿ ಯಾವ ಆಹಾರ ಪದಾರ್ಥಗಳನ್ನು ಉಣಬಡಿಸಬೇಕೆಂದು ಅವರು

ಆಯ್ಕೆ ಮಾಡಿಕೊಳ್ಳುವಂತಿಲ್ಲ. ಹಣ ಕೊಡಲು ಸಿದ್ಧರಿದ್ದರೂ ಅವರು ಬೆಲೆ ಬಾಳುವ ಪದಾರ್ಥಗಳನ್ನು ಬಳಸುವಂತಿಲ್ಲ.

೩) ಕುದುರೆಯನ್ನೇರಿ ಒಂದು ಹಳ್ಳಿಯ ಮೂಲಕ ಅವರು ಹಾದು ಹೋಗುವಂತಿಲ್ಲ.

೪) ಸಾರ್ವಜನಿಕ ವಾಹನಗಳಲ್ಲಿ ಅವರಿಗೆ ಅವಕಾಶ ಮಾಡಿಕೊಡಲಾಗುತ್ತಿಲ್ಲ.

೫) ಧಾರ್ಮಿಕ ಹಬ್ಬದ ಸಂದರ್ಭಗಳಲ್ಲಿ ನಿಗದಿತವಾದ ಮಾರ್ಗಗಳನ್ನು ಬಿಟ್ಟು ಅವರು ತಮ್ಮ ದೇವತಾಮೂರ್ತಿಗಳನ್ನು ಮೆರವಣಿಗೆಗಳಲ್ಲಿ ಕೊಂಡೊಯ್ಯವಂತಿಲ್ಲ.

೬) ಬಾವಿ ಮತ್ತು ದೇವಸ್ಥಾನಗಳಿಗೆ ಅವರಿಗೆ ಪ್ರವೇಶವಿಲ್ಲ."

ಲೇಖಕರು ಮುಂದುವರಿದು ಹೇಳುತ್ತಾರೆ :

"ಮೂರು ವರ್ಷಗಳ ಹಿಂದೆ ಠಕ್ಕರ್ ಬಾಪಾ ಅವರೊಡಗೂಡಿ ನಾನು ಇಡೀ ರಾಜ್ಯದಲ್ಲಿ ಸಂಚರಿಸಿದ್ದೆ. ರಾಜ್ಯದಲ್ಲಿದ್ದ ಪರಿಸ್ಥಿತಿಯ ಬಗೆಗಿನ ನನ್ನ ಅನಿಸಿಕೆಗಳನ್ನು ಸರ್ಕಾರದ ಮತ್ತು ಸಾರ್ವಜನಿಕರ ಮುಂದೆ ಇರಿಸಿದ್ದೆ ಹಾಗೂ ಅದರ ಸುಧಾರಣೆಗಾಗಿ ಅಹವಾಲು ಸಲ್ಲಿಸಿದ್ದೆ. ಮೇಲೆ ತಿಳಿಸಲಾಗಿರುವ ಮನವಿ ಪತ್ರ ಹಾಗೂ ನನಗೆ ಕಳುಹಿಸಲಾಗಿರುವ ಬೇರೆ ವರದಿಗಳನ್ನು ಗಮನಿಸಿದರೆ ಕಳೆದ ಕೆಲವು ವರ್ಷಗಳಲ್ಲಿ ಯಾವುದೇ ಬದಲಾವಣೆ ಉಂಟಾಗಿಲ್ಲವೆಂಬುದು ನನಗೆ ಗೋಚರಿಸುತ್ತದೆ. ಪರಿಸ್ಥಿತಿಯು ಹೆಚ್ಚು ಕಡಿಮೆ ಸ್ಥಗಿತವಾಗಿದೆ ಎನ್ನಬಹುದು.

ಸಮಯ ಕಳೆದಂತೆ ನಮ್ಮ ಮೇಲೆ ಯಾವ ಪ್ರಭಾವವೂ ಉಂಟಾಗುತ್ತಿಲ್ಲವೆಂಬುದು ನಿಜಕ್ಕೂ ಎದೆಯೊಡೆಯುವಂತಹ ಪ್ರಸಂಗ. ಇದರ ಫಲಿತಾಂಶವೇನೆಂದರೆ ನಮ್ಮ ಪರಂಪರಾಗತವಾದ ಆಚಾರಗಳಲ್ಲಿ ಮತ್ತು ಪೂರ್ವಗ್ರಹಗಳಲ್ಲಿ ಹೇಳಿಕೊಳ್ಳಬಹುದಾದ ಯಾವ ಬದಲಾವಣೆಯೂ ಇಲ್ಲ. ನಮ್ಮ ಪದ್ಧತಿಯಲ್ಲಿನ ದಬ್ಬಾಳಿಕೆ ಮತ್ತು ಅನ್ಯಾಯಗಳತ್ತ ನಮ್ಮನ್ನು ಅಂಧರನ್ನಾಗಿಸುವ ಈ ವಿಕೃತಿಯು ಅದರ ಪರಿಣಾಮವಾಗಿ ಈಗಾಗಲೆ ನಾವು ಅನುಭವಿಸಿರುವ ಅಪಾರ ಹಾನಿಯ ಬಗೆಗೂ ನಮ್ಮನ್ನು ಕಲ್ಲು ಮಾಡಿದೆ. ಒಬ್ಬ ಸಾಮಾನ್ಯ ವ್ಯಕ್ತಿಯ ತಿಳುವಳಿಕೆಯಿಲ್ಲದ ಪೂರ್ವಗ್ರಹವು ಅಲುಗಾಡದೆ ಉಳಿದಿದ್ದರೂ ಇಪ್ಪತ್ತನೆಯ ಶತಮಾನದ ಎಚ್ಚೆತ್ತ ಸರ್ಕಾರಗಳು ತಮ್ಮ ಜವಾಬ್ದಾರಿಗಳ ಬಗೆಗೆ ಇನ್ನೂ ಹೆಚ್ಚು ಜೀವಂತವಾಗಿ ಕಾಣಬರಬೇಕು."

ಈ ಹೇಳಿಕೆಗಳ ಮತ್ತು ಪತ್ರಗಳ ದಿನಾಂಕಗಳನ್ನು ಮುಖ್ಯವಾಗಿ ಗಮನಿಸಬೇಕು. ಅವು ೧೯೪೫ನೆಯ ಇಸವಿಯವು. ಹಿಂದೂ ಪ್ರತಿಷ್ಠಿತ ವ್ಯವಸ್ಥೆಯು ಪ್ರಾಚೀನ ಕಾಲದ ಸಮಾಚಾರವೆಂದು ಯಾರೂ ಹೇಳುವಂತಿಲ್ಲ. ಈ ಇತ್ತೀಚಿನ ವರದಿಗಳು ಭಾರತೀಯ ರಾಜ್ಯಗಳಿಗೆ ಸಂಬಂಧಿಸಿವೆಯೆಂಬ ಕಾರಣದಿಂದ ಪ್ರತಿಷ್ಠಿತ ವ್ಯವಸ್ಥೆಯಲ್ಲಿ ಬ್ರಿಟಿಷರ ನೇರ ಆಳ್ವಿಕೆಯಲ್ಲಿರುವ ಭಾರತದ ಬೇರೆ ಭಾಗಗಳಿಂದ ಮಾಯವಾಗಿದೆ ಯೆಂದು ಯಾರೂ ತಿಳಿಯಬಾರದು. ಆ ಭಾಗಗಳಲ್ಲೂ ಇದೇ ಪ್ರತಿಷ್ಠಿತ ವ್ಯವಸ್ಥೆಯು ಬಹುವಾಗಿ ಜೀವಂತವಾಗಿದೆಯೆಂಬುದಕ್ಕೆ ಮುಂದಿನ ಅಧ್ಯಾಯಗಳಲ್ಲಿ ಸಾಕಷ್ಟು ಪುರಾವೆಯನ್ನೊದಗಿಸಲಾಗುತ್ತದೆ.

೧೯೫೦ನೆಯ ಆಗಸ್ಟ್ ೩೧ರ ತನ್ನ ಸಂಚಿಕೆಯಲ್ಲಿ 'ಟೈಂಸ್ ಆಫ್ ಇಂಡಿಯಾ' ಪತ್ರಿಕೆಯು ಕೆಳಗಿನ ಸುದ್ದಿಯನ್ನು ಪ್ರಕಟಿಸಿದೆ:

"ಗ್ರಾಮಾಂತರ ಪ್ರದೇಶಗಳಲ್ಲಿ ಕೆಳಜಾತಿಗಳ ಜನರ ಸಾಮಾಜಿಕ–ಆರ್ಥಿಕ ಪರಿಸ್ಥಿತಿಗಳು ಹೇಗಿವೆಯೆಂಬುದಕ್ಕೆ ಅಲಹಾಬಾದ್ ಉಚ್ಚ ನ್ಯಾಯಾಲಯದಲ್ಲಿ ವಿಚಾರಣೆಗೆ ಬಂದ ಒಂದು ಮನವಿಯ ಕೆಳಗಿನ ಘಟನೆಗಳು ನಿದರ್ಶನಗಳಾಗಿವೆ:

"ಏಟಾ ಜಿಲ್ಲೆಯ ಸರ್ರಾಸ್ ಎಂಬ ಹಳ್ಳಿಯ ಅಗಸ ಚಿರಂಜಿ ಎಂಬುವನು ಕಳೆದ ಯುದ್ಧದ

ಸಮಯದಲ್ಲಿ ಮಿಲಿಟರಿ ನೌಕರನಾಗಿ ಊರಿಂದ ಹೊರಹೋದ. ಹೀಗೆ ಐದಾರು ವರ್ಷಗಳ ಕಾಲ ಅವನು ತನ್ನ ಹಳ್ಳಿಯಿಂದ ದೂರವಿದ್ದ. ಮಿಲಿಟರಿಯಿಂದ ಅವನನ್ನು ಬಿಡುಗಡೆ ಮಾಡಿದಾಗ ಅವನು ತನ್ನ ಮನೆಗೆ ಹಿಂದಿರುಗಿದ. ಅವನು ಬಟ್ಟೆಗಳನ್ನು ಒಗೆಯುವ ಕೆಲಸ ನಿಲ್ಲಿಸಿದ್ದ ಮತ್ತು ತನ್ನ ಮಿಲಿಟರಿ ಪೋಷಾಕಿನಲ್ಲಿ ಊರಲ್ಲೆಲ್ಲಾ ಸುತ್ತಾಡುತ್ತಿದ್ದ. ಹಳ್ಳಿಯ ಎಲ್ಲ ಜಮೀನಿಗೂ ಒಡೆಯನಾಗಿದ್ದ ಸರ್ದಾರ್ರನ ರಾಜನ ಉಂಬಳಿಯಲ್ಲಿದ್ದವರ ಬಟ್ಟೆಗಳನ್ನು ಒಗೆಯಲು ಸಹ ಅವನು ನಿರಾಕರಿಸಿದ್ದುದೂ ಇದರ ಜೊತೆ ಸೇರಿ, ಹಳ್ಳಿಯವರಲ್ಲಿ ಅವನ ಬಗೆಗೆ ತೀವ್ರ ಅಸಮಾಧಾನವು ಮನೆಮಾಡಿತು.

೧೯೪೭ನೆಯ ಡಿಸೆಂಬರ್ ೩೧ರಂದು ಅಗಸನು ತನ್ನ ಬಟ್ಟೆಗಳನ್ನು ಒಗೆದುಕೊಳ್ಳುತ್ತಿದ್ದಾಗ ರಾಜನ ಸೇವಕರೂ ಸೇರಿದಂತೆ ನಾಲ್ಕು ಮಂದಿ ಗ್ರಾಮಸ್ಥರು ಅವನ ಬಳಿ ನಡೆದರು ಮತ್ತು ಅವರ ಬಟ್ಟೆಗಳನ್ನು ಒಗೆದುಕೊಡುವಂತೆ ಕೇಳಿದರು. ಅವನು ನಿರಾಕರಿಸಿದ. ಚಿರಂಜಿಯನ್ನು ಗ್ರಾಮಸ್ಥರು ರಾಜನ ಮನೆಗೆ ಎಳೆದು ತಂದು ಅಲ್ಲಿ ಅವನನ್ನು ಥಳಿಸಿದರು. ಅವನ ಪರವಾಗಿ ಮಧ್ಯ ಪ್ರವೇಶ ಮಾಡಲು ಅಲ್ಲಿಗೆ ಅವನ ತಾಯಿ ಮತ್ತು ಆಕೆಯ ತಂಗಿ ತೆರಳಿದರು; ಆದರೆ ಅವರನ್ನೂ ಸಹ ಹಲ್ಲೆಗೆ ಗುರಿಪಡಿಸಲಾಯಿತು.

ರಾಂ ಸಿಂಗ್ ಎಂಬುವವನೊಬ್ಬನ ಸುಪರ್ದಿನಲ್ಲಿ ಚಿರಂಜಿಯನ್ನು ಬಿಟ್ಟು ಹಲ್ಲೆಕೋರರು ಅಲ್ಲಿಂದ ಹೊರಟುಹೋದರು. ರಾಂ ಸಿಂಗ್ ಒಬ್ಬನೇ ಇದ್ದುದರಿಂದ ಚಿರಂಜಿಯು ಅವನಿಗೆ ಕಪಾಳಕ್ಕೆ ಬಿಗಿದು ಅಲ್ಲಿಂದ ಓಡಿಹೋದನೆಂದು ಆಪಾದಿಸಲಾಗಿದೆ. ತನ್ನ ಸ್ವಂತದ ಮನೆಯಲ್ಲಿ ಇರುತ್ತಿದ್ದ ಅವನನ್ನು ರಾಂ ಸಿಂಗ್ ಮತ್ತು ಇತರ ಆಳುಗಳು ಅಲ್ಲಿಯವರೆಗೂ ಅಟ್ಟಿಸಿಕೊಂಡು ಹೋದರು. ಅವನು ಒಳಗೆ ಅಡಗಿ ಕುಳಿತ. ಬಾಗಿಲು ತೆಗೆಯಬೇಕೆಂದು ಗ್ರಾಮಸ್ಥರು ಆಗ್ರಹಪಡಿಸಿದರಾದರೂ ಅವನಿಂದ ಯಾವ ಪ್ರತಿಕ್ರಿಯೆಯೂ ಬರಲಿಲ್ಲ. ಆಗ ಅವನ ಮನೆಗೆ ಬೆಂಕಿ ಹಾಕಲಾಯಿತು. ಬೇರೆ ಇತರ ಕೆಲವು ಗುಡಿಸಲುಗಳೂ ಸುಟ್ಟುಬೂದಿಯಾದವು.

ಅಗಸನು ಪೊಲೀಸರಲ್ಲಿ ದೂರು ದಾಖಲೆ ಮಾಡಿದಾಗ ಅವನ ಹೇಳಿಕೆಯನ್ನು ಅವರು ನಂಬಲಿಲ್ಲ. ಬದಲಾಗಿ ಸುಳ್ಳು ವರದಿ ನೀಡಿದ್ದನೆಂಬ ಆಪಾದನೆಯ ಮೇಲೆ ಅವನನ್ನು ವಿಚಾರಣೆಗೆ ಗುರಿಮಾಡಲು ಅವರು ಉದ್ದೇಶಿಸಿದ್ದರು. ನಂತರ ಅವನು ಒಂದು ಮ್ಯಾಜಿಸ್ಟ್ರೇಟ್ ಕೋರ್ಟಿಗೆ ತನ್ನ ದೂರನ್ನು ದಾಖಲುಮಾಡಿದ. ಆಪಾದಿತರಿಗೆ ಶಿಕ್ಷೆ ನೀಡಲಾಯಿತು. ಪ್ರತಿಯೊಬ್ಬನಿಗೂ ಮೂರು ವರ್ಷಗಳ ಕಾರಾಗೃಹವಾಸವನ್ನು ವಿಧಿಸಲಾಗಿತ್ತು. ಮ್ಯಾಜಿಸ್ಟ್ರೇಟರು ವಿಧಿಸಿದ್ದ ಶಿಕ್ಷೆಯನ್ನು ಉಚ್ಚ ನ್ಯಾಯಾಲಯವು ಎತ್ತಿ ಹಿಡಿಯಿತು."

೧೯೫೦ನೆಯ ಆಗಸ್ಟ್ ೩೧ರ ಸಂಚಿಕೆಯಲ್ಲಿ 'ಇಂಡಿಯನ್ ನ್ಯೂಸ್ ಕ್ರಾನಿಕಲ್' ಪತ್ರಿಕೆಯು ಕೆಳಗಿನ ಸುದ್ದಿಯನ್ನು ಪ್ರಕಟಿಸಿದೆ :

ಪೆಪ್ಸುವಿನಲ್ಲಿ ಹರಿಜನರ ಮೇಲೆ ಅಮಾನುಷ ವರ್ತನೆ : ಹಿಂದುಳಿದ ವರ್ಗಗಳ ಒಕ್ಕೂಟದಿಂದ ಸರ್ಕಾರಕ್ಕೆ ಮನವಿ ಪತ್ರ.

ಪಾಟಿಯಾಲ, ಆಗಸ್ಟ್ ೧೯೫೦ : 'ಹಿಂದುಳಿದ ವರ್ಗಗಳ ಜನರಿಗೆ ಯಾವ ಪ್ರಚೋದನೆಯೂ ಇಲ್ಲದಿದ್ದಾಗ್ಯೂ, ಹೊಡೆಯುವುದು, ಅವರ ಹೆಂಗಸರ ಮೇಲೆ ಅವಾಚ್ಯವಾದ ದೂಷಣೆಗಳಿಂದ ಗೂಬೆ ಕೂರಿಸುವುದು, ಜಮೀನುಗಳಿಂದ ಹರಿಜನರನ್ನು ಗೊತ್ತುಗುರಿಯಿಲ್ಲದೆ ಹೊರಹಾಕುವುದು, ಯಾವ ತಪ್ಪೂ ಇಲ್ಲದಿದ್ದರೂ ತಮ್ಮ ಮಣ್ಣಿನ ಮನೆಗಳಲ್ಲಿ ಹರಿಜನರನ್ನೂ ಅವರ ದನಗಳನ್ನೂ ದಿನಗಟ್ಟಲೆ ಸುಮ್ಮನೆ ಕೂಡಿಹಾಕುವುದು ಇತ್ಯಾದಿಗಳು ನೋವಿನ ಒಂದು ದೊಡ್ಡ ಕತೆಯಾಗಿದೆ. ಸಾಮಾನ್ಯ ಅಪರಾಧಗಳ ಪ್ರತಿಧ್ವನಿಗಳು ಕಡಿಮೆಯಾಗುತ್ತಿದ್ದಂತೆ ಈ ನೋವುಗಳ ಪ್ರತಿಧ್ವನಿಗಳು ಅದೇ ಪ್ರಮಾಣದಲ್ಲಿ ಹೆಚ್ಚುತ್ತಿವೆ.' –

ಪೆಪ್ಸು ಪ್ರಾದೇಶಿಕ ಹಿಂದುಳಿದ ವರ್ಗಗಳ ಒಕ್ಕೂಟವು ಸರ್ಕಾರಕ್ಕೆ ಸಲ್ಲಿಸಿರುವ ಮನವಿಪತ್ರದಲ್ಲಿ ಹೀಗೆ ಹೇಳಲಾಗಿದೆ.

"ಮನವಿ ಪತ್ರವು ಮುಂದುವರಿದು ಹೀಗೆ ಹೇಳುತ್ತದೆ : 'ಪೊಲೀಸರ ಗಂಭೀರ ಪ್ರಯತ್ನಗಳಿಂದಾಗಿ ಅಪರಾಧಗಳ ಸಂಖ್ಯೆಯು ಪೆಪ್ಸು ಪ್ರದೇಶದಲ್ಲಿ ಕಡಿಮೆಯಾಗಿದೆಯಾದರೂ ಸಮಾಜವಿರೋಧಿ ಶಕ್ತಿಗಳಿಂದ ಹಿಂದುಳಿದ ವರ್ಗಕ್ಕೆ ಉಂಟಾಗುತ್ತಿರುವ ಉಪಟಳದಿಂದ ಈ ವಿಭಾಗದವರಿಗೆ ರಕ್ಷಣೆ ಸಿಗುತ್ತಿಲ್ಲವೆಂಬುದು ಶೋಚನೀಯವಾಗಿದೆ.' – ಆರ್ಥಿಕವಾಗಿ ಪ್ರತಿಕೂಲಗಳನ್ನೆದುರಿಸಬೇಕಾಗಿರುವ ಈ ಹಿಂದುಳಿದ ವರ್ಗಗಳವರು ತಮ್ಮ ದಿನನಿತ್ಯದ ಕುಂದುಕೊರತೆಗಳನ್ನು ಸಂಬಂಧಪಟ್ಟ ಅಧಿಕಾರಿಗಳಲ್ಲಿ ಹೇಳಿಕೊಳ್ಳುವುದು ಸಹ ಕಷ್ಟಸಾಧ್ಯವಾಗಿದೆ. ಹಾಗೆ ಹೇಳಿಕೊಳ್ಳುವಂತಿದ್ದರೆ ಅಧಿಕಾರಿಗಳು ಅವರ ಸಹಾಯಕ್ಕೆ ಕೂಡಲೆ ಧಾವಿಸಬಹುದಿತ್ತೋ ಏನೋ. ಆದರೆ ಈಗ ತಮ್ಮ ಪರಿಸ್ಥಿತಿಯನ್ನು ಸುಮ್ಮನೆ ಒಪ್ಪಿಕೊಳ್ಳುವುದಾಗಿದೆ. ಇದರಿಂದ ಅವರ ಮೇಲಿನ ಆಕ್ರಮಣಕಾರರಿಗೆ ಪ್ರೋತ್ಸಾಹ ದೊರೆತಂತಾಗಿದ್ದು ವರ್ತಮಾನದ ಪರಿಸ್ಥಿತಿಯ ಬಗೆಗಿನ ಅವರ ಜುಗುಪ್ಸೆಯ ಅಳಲು ಇನ್ನೂ ಗಾಢವಾಗಿದೆ. ಮತ್ತೆ ಇದು ಆಸಕ್ತ ವಲಯಗಳವರಿಗೆ ಕುಮ್ಮಕ್ಕು ನೀಡುವಂತಹ ಪ್ರಸಂಗವಾಗಿದೆ."

ಮುಂದುವರಿದು, ಪೆಪ್ಸುವಿನಲ್ಲಿ ಹರಿಜನರತ್ತ ತೋರಲಾಗುತ್ತಿರುವ ಅಮಾನುಷ ವರ್ತನೆಗೆ ಉದಾಹರಣೆಯಾಗಿ ಪ್ರಾದೇಶಿಕ ಹಿಂದುಳಿದ ವರ್ಗಗಳವರ ಒಕ್ಕೂಟವು ಒಂದು ಘಟನೆಯನ್ನು ನಮೂದಿಸಿತ್ತು. ಬರ್ನಾಲಾ ಜಿಲ್ಲೆಯ ಕಾಟೂ ಎಂಬ ಹಳ್ಳಿಯಲ್ಲಿ ಚಾಂದ್ ಸಿಂಗ್ ಎಂಬುವನ ಮುಖಕ್ಕೆ ಮಸಿಬಳಿದು ಕತ್ತೆಯ ಮೇಲೆ ಕುಳ್ಳಿರಿಸಿ ಊರಿನಲ್ಲೆಲ್ಲಾ ಮೆರವಣಿಗೆಯಲ್ಲಿ ಕೊಂಡೊಯ್ಯಲಾಯಿತು. ಅವನೆಸಗಿದ್ದ ಅಪರಾಧ ಇಷ್ಟೇ : ಮೇಲ್ಜಾತಿಯ ಒಬ್ಬ ಜಮೀನ್ದಾರನ ಬಾವಿಯಿಂದ ಅವನು ನೀರು ಕುಡಿದಿದ್ದ. "ಸ್ವತಂತ್ರ ಭಾರತದ ಬದಲಾದ ವಾತಾವರಣದಲ್ಲಿ ಪೆಪ್ಸುವಿನ ನಿಮ್ನ ಜಾತಿಗಳಿಗೆ ಸೇರಿದ ಜನರಿಗೆ ದಿನದಿಂದ ದಿನಕ್ಕೆ ಉಸಿರು ಕಟ್ಟಿಸುವಂತಹ ಪರಿಸ್ಥಿತಿ ಉಂಟಾಗುತ್ತಿದೆ. ಮೇಲ್ಜಾತಿಯವರು ಅವರ ಮೇಲೆ ಹರಿಬಿಟ್ಟಿರುವ ಹಿಂದೆಂದೂ ಇಲ್ಲದಂತಹ ದಬ್ಬಾಳಿಕೆಯ ಫಲ ಇದು."

ಹರಿಜನರಿಂದ ಬರುವ ದೂರುಗಳನ್ನು ಸ್ಥಳದಲ್ಲೇ ತನಿಖೆ ಮಾಡಲು ಮತ್ತು ಬೇರೆ ಸೌಕರ್ಯಗಳನ್ನು ಅವರಿಗೆ ಒದಗಿಸಿಕೊಡಲು ವ್ಯಾಪಕವಾದ ಅಧಿಕಾರವಿರುವಂತಹ ವಿಶೇಷ ಆಯೋಗಗಳನ್ನು ಜಿಲ್ಲೆ ಮತ್ತು ಕೇಂದ್ರದ ಮಟ್ಟದಲ್ಲಿ ರಾಜ್ಯದಲ್ಲೆಲ್ಲಾ ರಚಿಸುವಂತೆಯೂ ಪ್ರಾದೇಶಿಕ ಹಿಂದುಳಿದ ವರ್ಗಗಳ ಒಕ್ಕೂಟವು ಸೂಚನೆ ನೀಡಿದೆ.

ತನ್ನ ಮಂಡನೆಯನ್ನು ಮುಕ್ತಾಯಗೊಳಿಸುತ್ತಾ ಒಕ್ಕೂಟವು ಪ್ರಸಕ್ತ ಪರಿಸ್ಥಿತಿಯು ಇನ್ನೂ ಹದಗೆಡದಿರುವಂತೆ ಮಾಡಲು ರಾಜ್ಯ ಸರ್ಕಾರವನ್ನು ಒತ್ತಾಯಿಸಿದೆ. ಈ ಸಂಬಂಧದಲ್ಲಿ, ಅಖಿಲಭಾರತ ಮಟ್ಟದ ಶಾಸನವೊಂದು ಅಸ್ತಿತ್ವಕ್ಕೆ ಬರುವವರೆಗೆ, ಹಂಗಾಮಿಯಾಗಿ ಹಳ್ಳಿಯ ಗೋಮಾಳಗಳಲ್ಲಿ ಹರಿಜನರಿಗೆ ಸಮಾನ ಹಕ್ಕುಗಳಿವೆಯೆಂದು ರಾಜ್ಯ ಸರ್ಕಾರವು ಆಜ್ಞೆ ಹೊರಡಿಸಬೇಕೆಂದು ಒಕ್ಕೂಟವು ಒತ್ತಾಯಿಸಿದೆ.

* * * *

# ಅಧ್ಯಾಯ ೭

## ಅರಾಜಕತೆ ಹೇಗೆ ಶಾಸನವಿಹಿತ?*

ಈವರೆಗಿನ ಚರ್ಚೆಯು ಎರಡು ವಿಷಯಗಳನ್ನು ಸ್ಪಷ್ಟಗೊಳಿಸಿರಬೇಕು. ಅವನ್ನು ನಾವು ಮನಸ್ಸಿನಲ್ಲಿರಿಸಿಕೊಳ್ಳಬೇಕು. ಒಂದು, ಸ್ಪೃಶ್ಯರು ಮತ್ತು ಅಸ್ಪೃಶ್ಯರ ನಡುವಣ ತೀವ್ರವಾದ ಪ್ರತ್ಯೇಕತೆ; ಎರಡು, ಅವರ ನಡುವಣ ಆಳವಾದ ಶತ್ರುತ್ವ.

ಪ್ರತಿಯೊಂದು ಹಳ್ಳಿಯಲ್ಲೂ ಎರಡು ಭಾಗಗಳಿವೆ. ಸ್ಪೃಶ್ಯರ ಮನೆಗಳಿರುವ ಭಾಗ ಮತ್ತು ಅಸ್ಪೃಶ್ಯರ ಗುಡಿಸಲುಗಳಿರುವ ಭಾಗ. ಭೌಗೋಳಿಕವಾಗಿ ಎರಡೂ ಬೇರೆ ಬೇರೆ. ಯಾವಾಗಲೂ ಇವರೆಡರ ನಡುವೆ ಗಮನೀಯವಾದಷ್ಟು ಅಂತರವಿರುತ್ತದೆ. ಏನೇ ಆದರೂ ಅವರೆಡೂ ಅಕ್ಕಪಕ್ಕದಲ್ಲಿರುವಂಥವಲ್ಲ; ಅವುಗಳ ನಡುವೆ ಸಾಮೀಪ್ಯವಿಲ್ಲ. ಅಸ್ಪೃಶ್ಯರ ಗುಡಿಸಲುಗಳಿರುವ ಜಾಗಕ್ಕೆ ವಿಶಿಷ್ಟವಾದ ಹೆಸರಿದೆ : ಉದಾಹರಣೆಗೆ ಮಹಾರ್‌ವಾಡಾ. ಮಂಗ್‌ವಾಡಾ. ಚಮ್ರೋಟ್ಟಿ ಖಾತ್ಕಾನಾ ಇತ್ಯಾದಿ. ಇವು ನ್ಯಾಯವಾಗಿ ಬೇರೆಬೇರೆಯೇ ಆಗಿದ್ದಾಗ್ಯೂ ಕಂದಾಯದ ಆಡಳಿತ ವ್ಯವಸ್ಥೆಗೆ ಮತ್ತು ಅಂಚೆಯ ಸಂಪರ್ಕಕ್ಕೆ ಹಳ್ಳಿಯಲ್ಲಿ ಸೇರ್ಪಡೆಗೊಂಡಿವೆ. ಆದರೆ ವ್ಯಾವಹಾರಿಕವಾಗಿ ಅವು ಹಳ್ಳಿಗಳಿಂದ ಪ್ರತ್ಯೇಕವಾದವು. ತನ್ನ ಹಳ್ಳಿಯ ಬಗ್ಗೆ ಹಿಂದೂ ನಿವಾಸಿಯೊಬ್ಬ ಮಾತನಾಡುವಾಗ ಅವನ ಮನಸ್ಸಿನಲ್ಲಿರುವುದು ಸವರ್ಣೀಯ ಹಿಂದೂ ನಿವಾಸಿಗಳು ವಾಸಿಸುವ ಭಾಗ ಮಾತ್ರವೇ. ಅವರು ಒಕ್ಕಲಿರುವ ಭಾಗ ಮಾತ್ರ ಅವನ ಕಲ್ಪನೆಯಲ್ಲಿ ಹಳ್ಳಿ ಎನಿಸಿಕೊಳ್ಳುತ್ತದೆ. ಅಂತೆಯೇ ಅಸ್ಪೃಶ್ಯನು ತನ್ನ ಹಳ್ಳಿಯ ಬಗ್ಗೆ ಮಾತನಾಡುವಾಗ ಸ್ಪೃಶ್ಯರನ್ನೂ ಅವರು ವಾಸಿಸುವ ಭಾಗವನ್ನೂ ಗಮನದಲ್ಲಿರಿಸಿಕೊಂಡಿರುವುದಿಲ್ಲ. ಆದ್ದರಿಂದ ಸ್ಪೃಶ್ಯರೂ ಅಸ್ಪೃಶ್ಯರೂ ಪ್ರತಿಯೊಂದು ಹಳ್ಳಿಯಲ್ಲೂ ಪ್ರತ್ಯೇಕವಾದ ಎರಡು ಗುಂಪುಗಳವರಾಗಿದ್ದಾರೆ. ಅವರ ನಡುವೆ ಸಮಾನವಾದದ್ದೇನೂ ಇಲ್ಲ. ಅವರು ಒಂದು ಜನ ಸಮೂಹ ಎನಿಸಿಕೊಳ್ಳುವುದಿಲ್ಲ. ನಾವು ಗಮನಿಸಬೇಕಾದ ಮೊದಲ ಅಂಶ ಇದು.

ಹಳ್ಳಿಯ ಎರಡು ಗುಂಪುಗಳಾಗಿ ಪ್ರತ್ಯೇಕಗೊಂಡಿರುವುದರಲ್ಲಿ ನಾವು ಗಮನಿಸಬೇಕಾದ ಎರಡನೆಯ ಅಂಶವೇನೆಂದರೆ ಇವೆರಡೂ ನಿಜವಾದ ಪೌರಸಂಸ್ಥೆಗಳು; ಅವುಗಳಿಗೆ ಸೇರಿದವರಾರೂ ಅವುಗಳಿಂದ ತಪ್ಪಿಸಿಕೊಳ್ಳುವಂತಿಲ್ಲ. ಪ್ರಸಿದ್ಧ ಹೇಳಿಕೆಯೊಂದಿದೆ: ಒಬ್ಬ ಅಮೆರಿಕನ್ ಅಥವಾ ಯೂರೋಪಿಯನ್ ವಿವಿಧ ರೀತಿಯ ಗುಂಪುಗಳಿಗೆ ಸೇರಿದವನಾಗಿರುತ್ತಾನೆ; ಆದರೆ ಅವುಗಳಲ್ಲಿ ಬಹುಪಾಲು ಗುಂಪುಗಳಿಗೆ ಅವನೇ "ಸೇರುತ್ತಾನೆ." ಸಹಜವಾಗಿಯೇ ಅವನೊಂದು ಕುಟುಂಬದಲ್ಲಿ ಜನಿಸಿರುತ್ತಾನೆ, ಆದರೆ ತನಗಿಷ್ಟವಿಲ್ಲದಿದ್ದರೆ ಸಾಯುವವರೆಗೂ ಅವನು ಅದರೊಟ್ಟಿಗೇ ವಾಸಿಸುವುದಿಲ್ಲ. ತನಗೆ ತಾನೇ ತನ್ನ ವೃತ್ತಿ, ನಿವಾಸಸ್ಥಾನ, ಹೆಂಡತಿ, ರಾಜಕೀಯ ಪಕ್ಷ ಇತ್ಯಾದಿಗಳನ್ನು ಆರಿಸಿಕೊಳ್ಳುತ್ತಾನೆ; ಸಾಮಾನ್ಯವಾಗಿ ಹೇಳುವುದಾದರೆ ತನ್ನ

---

* ಈ ಲೇಖನವು ಶ್ರೀ ಎಸ್.ಎಸ್. ರೇಗೆಯವರಿಂದ ಸ್ವೀಕರಿಸಲ್ಪಟ್ಟಿದೆ. ಹಿಂದಿನ ಅಧ್ಯಾಯದ ಶೀರ್ಷಿಕೆಯೊಡನೆ ಇಲ್ಲಿ ಸೂಚಿತವಾಗಿರುವ ಶೀರ್ಷಿಕೆಯು ಹೊಂದಿಕೆಯುಳ್ಳದ್ದಾದ್ದರಿಂದ ಅದನ್ನಿಲ್ಲಿ ಸೇರಿಸಲಾಗಿದೆ. ಅಲ್ಲದೆ ಹಿಂದಿನ ಅಧ್ಯಾಯದ ಚರ್ಚೆಯನ್ನು ಇಲ್ಲಿ ಮುಂದುವರಿಸಿರುವಂತೆಯೂ ತೋರುತ್ತದೆ. – ಸಂ.

ಸ್ವಂತದ ಕೃತ್ಯಗಳಿಗಲ್ಲದೆ ಬೇರೆಯವರ ಕೃತ್ಯಗಳಿಗೆ ಅವನು ಜವಾಬ್ದಾರನಾಗಿರುವುದಿಲ್ಲ. ಹೆಚ್ಚಿನ ಅರ್ಥದಲ್ಲಿ ಅವನೊಬ್ಬ "ವ್ಯಕ್ತಿ"; ಏಕೆಂದರೆ ತನ್ನೆಲ್ಲ ಸಂಬಂಧಗಳೂ ತನ್ನಿಂದಲೇ ಮತ್ತು ತನಗಾಗಿಯೇ ತೀರ್ಮಾನವಾಗಿರುತ್ತವೆ. ಸ್ಪೃಶ್ಯರಾಗಲಿ ಅಸ್ಪೃಶ್ಯರಾಗಲಿ ಯಾವ ಅರ್ಥದಲ್ಲೂ ವ್ಯಕ್ತಿಗಳಲ್ಲ; ಏಕೆಂದರೆ ಅವರ ಎಲ್ಲ ಅಥವಾ ಬಹುಮಟ್ಟಿಗೆ ಎಲ್ಲ ಸಂಬಂಧಗಳೂ ಅವರು ಯಾವುದೋ ಒಂದು ಗುಂಪಿನಲ್ಲಿ ಹುಟ್ಟಿದಾಗಲೇ ದೃಢಪಟ್ಟಿರುತ್ತವೆ. ಅವನ ವೃತ್ತಿ, ಮನೆ, ದೇವರುಗಳು ರಾಜಕೀಯ ಇತ್ಯಾದಿ ಎಲ್ಲವೂ ಅವನು ಯಾವ ಗುಂಪಿಗೆ ಸೇರಿದವನೆಂಬುದರ ಆಧಾರದ ಮೇಲೆ ನಿರ್ಧಾರಿತವಾಗುತ್ತವೆ. ಸ್ಪೃಶ್ಯರೂ ಅಸ್ಪೃಶ್ಯರೂ ಸಂಧಿಸಿದಾಗ ಒಬ್ಬ ಮನುಷ್ಯ ಬೇರೊಬ್ಬ ಮನುಷ್ಯನನ್ನು ಸಂಧಿಸಿದಂತೆ ಸಂಧಿಸುವುದಿಲ್ಲ. ವ್ಯಕ್ತಿ–ವ್ಯಕ್ತಿಯ ಭೇಟಿ ಅದಲ್ಲ. ಎರಡು ಗುಂಪುಗಳವರು ಅಥವಾ ಬೇರೆ ಬೇರೆ ರಾಷ್ಟ್ರಗಳ ಪ್ರಜೆಗಳು ಭೇಟಿಯಾದಂತೆ ಅವರ ಭೇಟಿ.

ಒಂದು ಹಳ್ಳಿಯಲ್ಲಿನ ಸ್ಪೃಶ್ಯರ ಮತ್ತು ಅಸ್ಪೃಶ್ಯರ ನಡುವಣ ಪರಸ್ಪರ ಸಂಬಂಧದಲ್ಲಿ ಇದು ಮಹತ್ತರವಾದ ಪ್ರಭಾವವನ್ನು ಬೀರುತ್ತದೆ. ಆದಿಕಾಲದ ಸಮಾಜದಲ್ಲಿ ಬೇರೆ ಬೇರೆ ಬುಡಕಟ್ಟುಗಳಿಗೆ ಸೇರಿರುತ್ತಿದ್ದವರ ನಡುವಣ ಸಂಬಂಧಕ್ಕೆ ಸಮಾನವಾದದ್ದು ಈ ಸಂಬಂಧ. ಆದಿಕಾಲದ ಸಮಾಜದಲ್ಲಿ ಒಂದು ಬುಡಕಟ್ಟಿಗೆ ಸೇರಿದವನಿಗೆ ಆ ಬುಡಕಟ್ಟಿನಲ್ಲಿ ಕೆಲವು ಹಕ್ಕುಗಳಿವೆ. ಆದರೆ ಪರಕೀಯನಾದವನಿಗೆ ಅಂತಹ ಸ್ಥಾನವಿಲ್ಲ. ಅತಿಥಿಯಾಗಿ ಅವನಿಗೆ ಸತ್ಕಾರ ದೊರಕಬಹುದು, ಆದರೆ "ನ್ಯಾಯವಾದ" ಹಕ್ಕೆಂದು ತನ್ನ ಬುಡಕಟ್ಟಿನಲ್ಲಿ ಅಲ್ಲದೆ ಬೇರೆಡೆ ಅವನಿಗೆ ಮಾನ್ಯತೆ ಇಲ್ಲ. ಒಂದು ಬುಡಕಟ್ಟು ಇನ್ನೊಂದರೊಡನೆ ನಡೆದುಕೊಳ್ಳುವ ವಿಧಾನವು ಯುದ್ಧ ಇಲ್ಲವೆ ಸಂಧಾನಕ್ಕೆ ಯೋಗ್ಯವಾದ ವಸ್ತುವೇ ವಿನಾ ಕಾನೂನಿನ ಚೌಕಟ್ಟಿಗೆ ಸೇರಿದ್ದಲ್ಲ; ಬುಡಕಟ್ಟೇ ಇಲ್ಲದವನು 'ಕಾನೂನುಬಾಹಿರವಾದವನು', ಅಂದರೆ ಬಹಿಷ್ಕೃತನಾದವನು, ಹೆಸರಿನಲ್ಲಿ ಮತ್ತು ವ್ಯಾವಹಾರಿಕವಾಗಿ, ಎರಡು ರೀತಿಯಲ್ಲೂ ಇದು ನಿಜ. ಆದ್ದರಿಂದ ಪರಕೀಯರ ವಿರುದ್ಧ ಶಾಸನಬದ್ಧವಲ್ಲದ ನಡತೆಯು ಶಾಸನವಿಹಿತವಾದುದೇ ಆಗಿದೆ. ಸ್ಪೃಶ್ಯರ ಗುಂಪಿಗೆ ಸೇರಿದವನಲ್ಲವಾದ್ದರಿಂದ ಅಸ್ಪೃಶ್ಯನು ಅವರ ದೃಷ್ಟಿಯಲ್ಲಿ ಪರಕೀಯನೆನಿಸಿಕೊಳ್ಳುತ್ತಾನೆ. ಅವನು ರಕ್ತಸಂಬಂಧಿಯಲ್ಲ. ಅವನು ಬಹಿಷ್ಕೃತ. ಅವನು ನ್ಯಾಯವನ್ನು ಹಕ್ಕಾಗಿ ಒತ್ತಾಯಿಸುವಂತಿಲ್ಲ. ಸ್ಪೃಶ್ಯನು ಗೌರವಿಸಲೇಬೇಕಾದಂತಹ ಹಕ್ಕುಗಳನ್ನು ಅವನು ಪಡೆಯುವಂತಿಲ್ಲ.

ನಾವು ಗಮನಿಸಬೇಕಾದ ಮೂರನೆಯ ಅಂಶವು ಸ್ಪೃಶ್ಯರ ಮತ್ತು ಅಸ್ಪೃಶ್ಯರ ನಡುವಣ ಸಂಬಂಧವು ಇತ್ಯರ್ಥವಾಗಿದೆ ಎಂಬುದು. ಅದು ಸ್ಥಾನಮಾನಕ್ಕೆ ಸಂಬಂಧಿಸಿದ ವಿಷಯವಾಗಿ ಹೋಗಿದೆ. ಸ್ಪೃಶ್ಯರೊಡನೆ ಹೋಲಿಸಿದರೆ ಅಸ್ಪೃಶ್ಯರದ್ದು ಕೆಳಮಟ್ಟದ ಸ್ಥಾನ. ಇದರಲ್ಲಿ ಯಾವ ಅನುಮಾನವೂ ಇಲ್ಲ. ಈ ಕೆಳಮಟ್ಟದ ಸ್ಥಾನಮಾನವು ಅಸ್ಪೃಶ್ಯರು ಅನುಸರಿಸಬೇಕಾದ ಸಾಮಾಜಿಕ ನಡತೆಯ ಸೂತ್ರದಲ್ಲಿ ಅಳವಡಿಸಲ್ಪಟ್ಟಿದೆ. ಅದೆಂತಹ ನಿಯಮಾವಳಿ ಎಂಬುದನ್ನು ಈಗಾಗಲೇ ಹೇಳಿಯಾಗಿದೆ. ಅಂತಹ ನಿಯಮಾವಳಿಗೆ ಬದ್ಧನಾಗಿರುವುದು ಅಸ್ಪೃಶ್ಯನಿಗೆ ಇಷ್ಟವಿಲ್ಲ. ಪ್ರಭುವಿಗೆ ಸಲ್ಲಬೇಕಾದ ಕೈಂಕರ್ಯವನ್ನು ಪ್ರಭುವಿಗೆ ಸಲ್ಲಿಸಲು ಅವನು ಸಿದ್ಧನಿಲ್ಲ. ಸ್ಪೃಶ್ಯರೊಡನೆ ಅಸ್ಪೃಶ್ಯನು ಇರಿಸಿಕೊಳ್ಳಲಿಚ್ಛಿಸುವ ಸಂಪರ್ಕವು ಒಂದು ಒಡಂಬಡಿಕೆಯ ಆಧಾರದ್ದಾಗಿರಬೇಕೆಂಬುದು ಅವನ ಆಶಯ. ಅಸ್ಪೃಶ್ಯರು ತಮ್ಮ ಸ್ಥಾನಮಾನದ ಬಗೆಗಿನ ನಿಯಮದ ಪ್ರಕಾರ ಜೀವಿಸಬೇಕೇ ವಿನಾ ಅದಕ್ಕಿಂತ ಮೇಲೇರುವುದು ಸಾಧುವಲ್ಲವೆಂಬುದು ಸ್ಪೃಶ್ಯರ ಆಶಯ. ಆದ್ದರಿಂದ ಹಳ್ಳಿಯ ಎರಡು ಭಾಗಗಳು – ಸ್ಪೃಶ್ಯರು ಮತ್ತು ಅಸ್ಪೃಶ್ಯರು – ಸ್ಪೃಶ್ಯರು ಸದಾಕಾಲಕ್ಕೂ ತೀರ್ಮಾನವಾಗಿಬಿಟ್ಟಿದೆಯೆಂದು ಅಂದುಕೊಂಡಿರುವ ಪ್ರಶ್ನೆಯನ್ನು ಮರು ಇತ್ಯರ್ಥಗೊಳಿಸಲು ಹೋರಾಟ ನಡೆಸುತ್ತಿವೆ. ಸಂಘರ್ಷವಿರುವುದು ಒಂದು ಪ್ರಶ್ನೆಗೆ ಸಂಬಂಧಿಸಿದಂತೆ : ಈ ಪರಸ್ಪರ ಸಂಬಂಧದ ಆಧಾರ

ಏನಾಗಿರಬೇಕು? ಅದು ಒಡಂಬಡಿಕೆಯ ಆಧಾರದ್ದೋ ಅಥವಾ ಸ್ಥಾನಮಾನದ ಆಧಾರದ್ದೋ?

ಇದು ಕೆಲವು ಆಸಕ್ತಿ ಕೆರಳಿಸುವಂತಹ ಪ್ರಶ್ನೆಗಳಿಗೆ ಎಡೆಮಾಡಿಕೊಡುತ್ತದೆ. ಕೆಳಗಿನದರಲ್ಲಿ ಅತಿ ಕೆಳಮಟ್ಟದ ಸ್ಥಾನವನ್ನು ಅಸ್ಪೃಶ್ಯರು ಪಡೆದದ್ದಾದರೂ ಹೇಗೆ? ಅಸ್ಪೃಶ್ಯರ ಬಗ್ಗೆ ಹಿಂದೂವು ಏಕಿಷ್ಟು ವೈರ ಮತ್ತು ತಿರಸ್ಕಾರದ ಭಾವನೆಯನ್ನು ಮೈಗೂಡಿಸಿಕೊಂಡಿದ್ದಾನೆ? ಶಾಸನಬದ್ಧವಲ್ಲದ್ದು ಶಾಸನವಿಹಿತವಾದುದೆಂಬಷ್ಟು ಮಟ್ಟಿಗೆ ಅಸ್ಪೃಶ್ಯನನ್ನು ತುಳಿದಿಡಲು ಹಿಂದೂವು ಏಕಿಷ್ಟೊಂದು ಸ್ವಚ್ಛಂದತೆಯಿಂದ ಮೆರೆಯುತ್ತಾನೆ?

ಇದಕ್ಕೆ ಸಮರ್ಪಕವಾದ ಉತ್ತರ ನೀಡಬೇಕಾದರೆ ಹಿಂದೂಗಳ ಕಾನೂನಿನ ಸೂತ್ರಗಳನ್ನು ನಾವು ಪರಾಮರ್ಶಿಸಬೇಕು. ಹಿಂದೂ ಕಾನೂನಿನ ನಿಯಮಗಳ ಆಮೂಲಾಗ್ರ ಪರಿಚಯವಿಲ್ಲದೆ ಈ ಪ್ರಶ್ನೆಗೆ ಸಮರ್ಪಕವಾದ ಉತ್ತರವೊಂದನ್ನು ನೀಡುವುದು ಅಸಾಧ್ಯವೇ ಸರಿ. ನಮ್ಮ ಪ್ರಸಕ್ತ ಆವಶ್ಯಕತೆ ಹಿಂದೂ ಕಾನೂನಿನ ಎಲ್ಲ ಶಾಖೆಗಳನ್ನೂ ಸಂಪೂರ್ಣವಾಗಿ ಶೋಧಿಸಿ, ನೋಡಬೇಕಾದ ಪ್ರಮೇಯವಿಲ್ಲ. ಹಿಂದೂ ಕಾನೂನಿನ ಯಾವ ಶಾಖೆಯನ್ನು ವ್ಯಕ್ತಿಗತ ಕಾನೂನು ಎಂದು ಕರೆಯಬಹುದೋ ಅದೊಂದನ್ನು ತಿಳಿದುಕೊಂಡರೆ ಸಾಕು ಅಥವಾ ತಾಂತ್ರಿಕ ಭಾಷೆಯನ್ನು ಕೈಬಿಟ್ಟು ಹೇಳುವುದಾದರೆ ಸ್ಥಾನಮಾನಗಳ ವ್ಯತ್ಯಾಸದಿಂದಾಗಿ ಹಕ್ಕು, ಕರ್ತವ್ಯ ಮತ್ತು ಸಾಮರ್ಥ್ಯಗಳಲ್ಲಿ ಉಂಟಾಗುವ ವ್ಯತ್ಯಾಸಗಳನ್ನು ನಮೂದಿಸುವ ಹಿಂದೂ ಕಾನೂನಿನ ಆ ಶಾಖೆಯೊಂದನ್ನು ತಿಳಿದುಕೊಂಡರೆ ಸಾಕು.

ಆದ್ದರಿಂದ ವ್ಯಕ್ತಿಗಳಿಗೆ ಅನ್ವಯವಾಗುವ ಹಿಂದೂ ಕಾನೂನಿನ ನಿಯಮಗಳನ್ನು ಪಟ್ಟಿಮಾಡಿಕೊಡಲು ಇಲ್ಲಿ ಉದ್ದೇಶಿಸಲಾಗಿದೆ. ಈ ನಿಯಮಗಳನ್ನು ಮನು, ಯಾಜ್ಞವಲ್ಕ್ಯ, ನಾರದ ವಿಷ್ಣು, ಕಾತ್ಯಾಯನ ಮುಂತಾದವರ ಧರ್ಮಶಾಸ್ತ್ರ ಗ್ರಂಥಗಳಿಂದ ಆಯ್ದುಕೊಳ್ಳಲಾಗಿದೆ. ನಿಯಮಗಳನ್ನು ನಿರೂಪಿಸಲು ಅಧಿಕಾರವಿರುವವರೆಂದು ಹಿಂದೂಗಳು ಮಾನ್ಯತೆ ನೀಡುವ ಪ್ರಮುಖ ಧರ್ಮಶಾಸ್ತ್ರಕಾರರು ಇವರು. ವ್ಯಕ್ತಿಗಳಿಗೆ ಸಂಬಂಧಿಸಿದ ಹಿಂದೂ ಕಾನೂನಿನ ಮೂಲ ಕಲ್ಪನೆಗಳ ಬಗ್ಗೆ ತಿಳಿವಳಿಕೆ ಮೂಡಬೇಕಾದರೆ ಕೇವಲ ನಿಯಮಗಳನ್ನು ಉದ್ಧರಿಸಿಟ್ಟರೆ ಆಗುವುದಿಲ್ಲ. ಅವೆಷ್ಟೇ ಆಸಕ್ತಿ ಕೆರಳಿಸುವಂತಿದ್ದರೂ ಅದಷ್ಟರಿಂದಲೇ ನಮಗೆ ಪೂರ್ಣವಾಗಿ ಅದರ ಕಲ್ಪನೆ ಸಿಗುವುದಿಲ್ಲ. ನಿಯಮಗಳನ್ನು ಉದ್ಧರಿಸುವುದರಲ್ಲಿ ಒಂದು ಕ್ರಮ ಸಹಜವಾಗಿಯೇ ಆವಶ್ಯಕವಾಗುತ್ತದೆ. ಆದ್ದರಿಂದ ಈ ನಿಯಮಗಳನ್ನು ಕೆಲವು ಶೀರ್ಷಿಕೆಗಳಡಿಯಲ್ಲಿ ವಿಂಗಡಿಸಲಾಗಿದೆ. ಇಡೀ ಉದ್ಧೃತ ಭಾಗವನ್ನು ಒಂದು ಸುವ್ಯವಸ್ಥಿತ ಸಂಗ್ರಹದ ರೂಪದಲ್ಲಿ ಕೊಡಲಾಗಿದೆ. ಹಾಗೆ ಕೊಡುವಾಗ ಅದನ್ನು ಬೇರೆ ಬೇರೆ ಭಾಗಗಳನ್ನಾಗಿ ವಿಂಗಡಿಸಲಾಗಿದೆ. ಪ್ರತಿಯೊಂದು ಭಾಗವೂ ಒಂದು ನಿರ್ದಿಷ್ಟವಾದ ವಿಷಯಕ್ಕೆ ಸಂಬಂಧಿಸಿದ ನಿಯಮಗಳ ಸಂಘಾತವಾಗಿದೆ.

## ವಿವಿಧ ವರ್ಗಗಳು: ಅವುಗಳ ಉಗಮ ಮತ್ತು ಅವುಗಳ ಕರ್ತವ್ಯಗಳು

೧) ಈ ವಿಶ್ವವು ಕತ್ತಲೆಯ ಸ್ವರೂಪದಲ್ಲಿತ್ತು. ಅಗೋಚರವಾಗಿದ್ದು, ವಿಶಿಷ್ಟ ಲಕ್ಷಣಗಳನ್ನು ಹೊಂದಿರದೆ, ತರ್ಕದಿಂದ ನಿಗದಿತವಾಗಲು, ಆಗದಂತೆ ತಿಳಿವಳಿಕೆಗೆ ನಿಲುಕದಂತಿದ್ದು, ಸುಷುಪ್ತಿಯಲ್ಲಿ ಸಂಪೂರ್ಣವಾಗಿ ಲೀನವಾಗಿದ್ದಂತೆ ತೋರುತ್ತಿತ್ತು. (ಮನು: ೧.೫)

೨) ಆಮೇಲೆ ವಿವೇಚನೆಗೆ ಅತೀತನಾದ, ಆದರೆ ಇದನ್ನೆಲ್ಲಾ ಮಾಡಿದ ಅಂದರೆ ಮಹಾನ್ ಭೂತಗಳು ಇತ್ಯಾದಿಗಳನ್ನು ಮಾಡಿರುವ, ದಿವ್ಯಾತ್ಮ ಸ್ವರೂಪದ ಸ್ವಯಂಭುವನು ಸ್ವಯಂ ತಾನೇ ಅಪ್ರತಿಮವಾದ

ಸೃಷ್ಟಿಶಕ್ತಿಯಿಂದ ಈ ಕತ್ತಲನ್ನು ಹೋಗಲಾಡಿಸಿದನು. (ಮನು : ೧.೬)

೩) ವಿಶ್ವಗಳ ಏಳಿಗೆಗಾಗಿ, ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರರನ್ನು ತನ್ನ ಮುಖ, ಕೈಗಳು, ತೊಡೆಗಳು ಮತ್ತು ಕಾಲುಗಳಿಂದ ಉದ್ಭವಿಸುವಂತೆ ಅವನು ಮಾಡಿದ. (ಮನು : ೧.೩೧)

೪) ಆದರೆ ವಿಶ್ವವನ್ನು ರಕ್ಷಿಸುವ ಸಲುವಾಗಿ ಆ ದೇದೀಪ್ಯಮಾನ ಸ್ವಯಂಭುವನು ತನ್ನ ಮುಖ, ಕೈಗಳು, ತೊಡೆಗಳು ಮತ್ತು ಕಾಲುಗಳಿಂದ ಉದ್ಭವಿಸಿದ್ದವರಿಗೆ ಬೇರೆ ಬೇರೆ ಕರ್ತವ್ಯಗಳು ಮತ್ತು ಉದ್ಯೋಗಗಳನ್ನು ಗೊತ್ತುಪಡಿಸಿದ. (ಮನು : ೮೭)

೫) ಬ್ರಾಹ್ಮಣರಿಗೆ ಅವನು ನಿರ್ದೇಶಿಸಿದ ಕರ್ತವ್ಯಗಳಿವು : ವೇದಾಧ್ಯಯನ ಮತ್ತು ಅಧ್ಯಾಪನ, ತಮ್ಮ ಮತ್ತು ಇತರರ ಶ್ರೇಯಸ್ಸಿಗಾಗಿ ಯಜ್ಞಾದಿ ವಿಧಿಗಳನ್ನು ಮಾಡುವುದು, ದಾನವನ್ನು ಕೊಡುವುದು ಮತ್ತು ಸ್ವೀಕರಿಸುವುದು. (ಮನು : ೧.೮೮)

೬) ಕ್ಷತ್ರಿಯರಿಗೆ ನಿರ್ದೇಶ ಇದು : ಪ್ರಜಾರಕ್ಷಣೆ, ದಾನ ಮಾಡುವುದು, ಯಜ್ಞ ನೆರವೇರಿಸುವುದು, ವೇದಾಧ್ಯಯನ ಮತ್ತು ಐಂದ್ರಿಯಕ ಭೋಗಗಳಲ್ಲಿ ತಲ್ಲೀನನಾಗದೆ ಅವುಗಳನ್ನು ವರ್ಜಿಸುವುದು. (ಮನು : ೧.೮೯)

೭) ವೈಶ್ಯನಿಗೆ ನಿರ್ದೇಶಿತವಾದ ಕರ್ತವ್ಯಗಳಿವು : ಪಶುಪಾಲನೆ, ದಾನ ಮಾಡುವುದು, ಯಜ್ಞಾದಿಗಳನ್ನು ನೆರವೇರಿಸುವುದು, ವೇದಾಧ್ಯಯನ, ವ್ಯಾಪಾರ, ಲೇವಾದೇವಿ ಮತ್ತು ಭೂಮಿಯನ್ನು ಕೃಷಿ ಮಾಡುವುದು. (ಮನು : ೧.೯೦)

೮) ಶೂದ್ರನಿಗೆ ಭಗವಂತನು ಒಂದೇ ಒಂದು ಕರ್ತವ್ಯವನ್ನು ಪಾಲಿಸಲು ನಿರ್ದೇಶಿಸಿದ : ಈ (ಇತರ) ಮೂರು ಜಾತಿಗಳವರನ್ನು ನಮ್ರತೆಯಿಂದ ಶುಶ್ರೂಷೆ ಮಾಡುವುದು. (ಮನು : ೧.೯೧)

೯) ಕೆಲಸ ಮಾಡುವವರೆಂದು ಪರಿಗಣನೆಗೆ ಬರುವವರು ಇವರು : ವಿದ್ಯಾರ್ಥಿ, ಉದ್ಯೋಗಾಭ್ಯಾಸಿ, ಕೂಲಿಗೆ ನೇಮಿಸಲಾದ ಸೇವಕ ಮತ್ತು ನಾಲ್ಕನೆಯದಾಗಿ ಅಧಿಕಾರಿ. ಊಳಿಗದ ಮನೆಯಲ್ಲಿ ಹುಟ್ಟಿದವರು ಮತ್ತಿತರರು ದಾಸರು. (ನಾರದ : ೫.೩)

೧೦) ಕಾನೂನಿನನ್ವಯ ಋಷಿಗಳು ಐದು ವಿಧದ ಸೇವಕರನ್ನು ವಿಂಗಡಿಸಿದ್ದಾರೆ. ಅವರಲ್ಲಿ ನಾಲ್ಕು ವಿಧದ ಸೇವಕರು ಮೇಲೆ ನಮೂದಿಸಲಾಗಿರುವಂತೆ. ಐದನೆಯ ವಿಧದವರೆಂದರೆ ದಾಸರು ಅಥವಾ ಗುಲಾಮರು. ಅವರಲ್ಲಿ ಹದಿನೈದು ವಿಧದವರಿದ್ದಾರೆ. (ನಾರದ : ೫.೨)

೧೧) ತನ್ನ ಯಜಮಾನನ ಮನೆಯಲ್ಲಿ ಹುಟ್ಟಿದವನು; ಕೊಂಡುಕೊಳ್ಳಲ್ಪಟ್ಟವನು; ದಾನವಾಗಿ ಪಡೆಯಲ್ಪಟ್ಟವನು; ಉತ್ತರಾಧಿಕಾರ ರೀತ್ಯಾ ಪಡೆಯಲ್ಪಟ್ಟವನು; ವ್ಯಾಪಕ ಕ್ಷಾಮದ ಕಾಲದಲ್ಲಿ ನೋಡಿಕೊಳ್ಳಲ್ಪಟ್ಟವನು; ಅಧಿಕೃತ ಯಜಮಾನನಿಂದ ಒತ್ತೆಯಿಡಲ್ಪಟ್ಟವನು. (ನಾರದ : ೫.೨೬)

೧೨) ದೊಡ್ಡ ಸಾಲದಿಂದ ಬಿಡುಗಡೆ ಮಾಡಲ್ಪಟ್ಟವನು; ಯುದ್ಧದಲ್ಲಿ ಕೈದಿಯಾದವನು; ಬಾಜಿ ಕಟ್ಟಿ ಗೆಲ್ಲಲ್ಪಟ್ಟವನು; 'ನಾನು ನಿನ್ನವನು' ಎಂದು ಹೇಳಿ ಮುಂದೆ ಬರುವವನು; ಧರ್ಮ ಪರಿತ್ಯಾಗ ಮಾಡಿರುವ ಸನ್ಯಾಸಿ; ನಿಗದಿತ ಕಾಲಾವಧಿಗೆ ದಾಸ್ಯತ್ವಕ್ಕೆ ಬದ್ಧನಾಗಿರುವವನು. (ನಾರದ : ೫.೨೭)

೧೩) ತನ್ನ ಸ್ವಯಂ ಪೋಷಣೆಗಾಗಿ ದಾಸನಾಗಿರುವವನು ; ಒಬ್ಬ ದಾಸಿಯ ಸಂಬಂಧಿಕನಾಗಿರುವುದರಿಂದ ದಾಸನಾಗಿರುವವನು; ತನ್ನನ್ನು ತಾನು ಮಾರಿಕೊಂಡಿರುವವನು. – ಈ ಹದಿನೈದು ವಿಧದವರು ದಾಸರೆಂದು ಧರ್ಮಶಾಸ್ತ್ರದಲ್ಲಿ ನಿರೂಪಿಸಲ್ಪಟ್ಟಿದ್ದಾರೆ. (ನಾರದ : ೫.೨೮)

೧೪) ಇವುಗಳಲ್ಲಿ ಮೊದಲ ನಾಲ್ಕು ವಿಧದವರನ್ನು ದಾಸ್ಯದಿಂದ ವಿಮುಕ್ತರನ್ನಾಗಿಸುವಂತಿಲ್ಲ. ಹಾಗೆ

ಮಾಡಬೇಕಾದರೆ ಅವರ ಯಜಮಾನರ ಕೃಪೆಯಿಂದ ಮಾತ್ರ ಸಾಧ್ಯ. ಅವರ ದಾಸ್ಯವು ವಂಶಪಾರಂಪರ್ಯವಾಗಿ ಬಂದದ್ದು. (ನಾರದ : ೫.೨೯)

೧೫) ಪರತಂತ್ರವು ಈ ಎಲ್ಲ ವಿಧದವರಿಗೂ ಸಾಮಾನ್ಯ ಲಕ್ಷಣವೆಂದು ಮುನಿಗಳು ಘೋಷಿಸಿದ್ದಾರೆ. ಆದರೆ ಅವರವರ ಸ್ಥಾನ ಮತ್ತು ವರಮಾನಗಳು ಅವರವರ ಜಾತಿ ಮತ್ತು ಉದ್ಯೋಗಗಳಿಂದ ತೀರ್ಮಾನಿಸಲ್ಪಡುತ್ತವೆ. (ನಾರದ : ೫.೪)

## ಕಾನೂನು ಸಮ್ಮುಖದಲ್ಲಿ ಸಮಾನತೆ

೧) ಇಬ್ಬರ ನಡುವೆ ಬೈದಾಟ ನಡೆದಿದ್ದರೆ ಅವರು ಸಮಾನ ಜಾತಿಯವರಾಗಿದ್ದಲ್ಲಿ ಅವರಿಬ್ಬರಿಗೂ ಶಿಕ್ಷೆ ಸಮಾನವಾಗಿರುತ್ತದೆ; ಒಬ್ಬನು ಇನ್ನೊಬ್ಬನಿಗಿಂತ ಕೀಳು ಜಾತಿಯವನಾಗಿದ್ದಲ್ಲಿ ಅವನಿಗೆ ಶಿಕ್ಷೆ ದ್ವಿಗುಣವಾಗಿರುತ್ತದೆ; ಮೇಲ್ಜಾತಿಯವನಿಗೆ ಸಾಮಾನ್ಯ ಶಿಕ್ಷೆಯ ಅರ್ಧದಷ್ಟನ್ನು ವಿಧಿಸಲಾಗಿದೆ. (ಬೃಹಸ್ಪತಿ: ೨೦.೫)

೨) ಜಾತಿ ಮತ್ತು ಗುಣಗಳಲ್ಲಿ ಸಮಾನರಾದವರು ಪರಸ್ಪರರನ್ನು ಬೈದರೆ ಅವರಿಗೆ ಧರ್ಮದ ವ್ಯವಸ್ಥೆಯಲ್ಲಿ ವಿಧಿಸಲಾಗಿರುವ ಶಿಕ್ಷೆಯೆಂದರೆ ಹದಿಮೂರೂವರೆ ಪಣಗಳನ್ನು ತೆರುವುದು. (ಬೃಹಸ್ಪತಿ : ೨೦.೬)

೩) ಬ್ರಾಹ್ಮಣನು ಕ್ಷತ್ರಿಯನನ್ನು ಬೈದರೆ ಅವನು ತೆರಬೇಕಾಗುವ ದಂಡವು ಅರ್ಧ ನೂರು ಅಂದರೆ ಐವತ್ತು ಪಣಗಳು, ವೈಶ್ಯನನ್ನು ಬೈದರೆ ಐವತ್ತರ ಅರ್ಧ (ಇಪ್ಪತ್ತೈದು ಪಣಗಳು), ಶೂದ್ರನನ್ನು ಬೈದರೆ ಹನ್ನೆರಡೂವರೆ ಪಣಗಳು (ಬೃಹಸ್ಪತಿ : ೨೦.೭)

೪) ಯಾವ ತಪ್ಪನ್ನೂ ಮಾಡದ ಸದ್ಗುಣಿ ಶೂದ್ರನನ್ನು ಬೈದುದಕ್ಕೆ ಈ ಶಿಕ್ಷೆಯನ್ನು ವಿಧಿಸಲಾಗಿದೆ. ಸದ್ಗುಣರಹಿತನಾದ ಶೂದ್ರನನ್ನು ಬೈದುದಕ್ಕೆ ಬ್ರಾಹ್ಮಣನಿಗೆ ಯಾವುದೇ ಅಪರಾಧವನ್ನೂ ಆರೋಪಿಸಲಾಗದು. (ಬೃಹಸ್ಪತಿ : ೨೦.೮)

೫) ಒಬ್ಬ ಕ್ಷತ್ರಿಯನನ್ನು ಕಟುವಾಗಿ ನಿಂದಿಸಿದ ವೈಶ್ಯನೊಬ್ಬನು ಒಂದು ನೂರು ಪಣಗಳ ದಂಡ ತೆರಬೇಕು; ಒಬ್ಬ ವೈಶ್ಯನನ್ನು ಹಾಗೆ ಕ್ಷತ್ರಿಯನೊಬ್ಬನು ನಿಂದಿಸಿದರೆ ಅದರ ಅರ್ಧದಷ್ಟು ಮೊತ್ತವನ್ನು ದಂಡವಾಗಿ ತೆರಬೇಕು. (ಬೃಹಸ್ಪತಿ : ೨೦.೯)

೬) ಒಬ್ಬ ಕ್ಷತ್ರಿಯನು ಶೂದ್ರನನ್ನು ನಿಂದಿಸಿದರೆ ಅವನು ತೆರಬೇಕಾದ ದಂಡ ಇಪ್ಪತ್ತು ಪಣಗಳು. ಅದೇ ಒಬ್ಬ ವೈಶ್ಯನು ಹಾಗೆ ಮಾಡಿದರೆ ಅವನು ತೆರಬೇಕಾದ ದಂಡವು ಇದರ ಎರಡರಷ್ಟಿರುವುದು ಸೂಕ್ತವೆಂದು ಧರ್ಮಶಾಸ್ತ್ರವೇತ್ತರು ನಿಗದಿಗೊಳಿಸಿದ್ದಾರೆ. (ಬೃಹಸ್ಪತಿ : ೨೦.೧೦)

೭) ವೈಶ್ಯನೊಬ್ಬನಿಗೆ ಶೂದ್ರನು ನಿಂದಿಸಿದರೆ ಸಾಮಾನ್ಯ ದಂಡವನ್ನು ತೆರಲು ಅವನನ್ನು ಒತ್ತಾಯಿಸಬೇಕು. ಅದೇ ಕ್ಷತ್ರಿಯನನ್ನು ನಿಂದಿಸಿದರೆ ಮಧ್ಯಮವೆನಿಸಿಕೊಳ್ಳುವಷ್ಟು ದಂಡವನ್ನು ತೆರುವಂತೆ ಮಾಡಬೇಕು. ಬ್ರಾಹ್ಮಣನನ್ನು ನಿಂದಿಸಿದರೆ ಅತಿಹೆಚ್ಚಿನ ದಂಡ ಅವನಿಗೆ ವಿಧಿಸಬೇಕು. (ಬೃಹಸ್ಪತಿ : ೨೦.೧೧)

೮) ಒಬ್ಬ ಕ್ಷತ್ರಿಯನು ಬ್ರಾಹ್ಮಣನನ್ನೇನಾದರೂ ಅಪಮಾನಗೊಳಿಸಿದರೆ ಅವನು ಒಂದು ನೂರು ಪಣಗಳನ್ನು ದಂಡವಾಗಿ ತೆರಬೇಕು. ವೈಶ್ಯನೇನಾದರೂ ಹಾಗೆ ಮಾಡಿದರೆ ಅವನು ತೆರಬೇಕಾದ ದಂಡ ನೂರೈವತ್ತು ಅಥವಾ ಇನ್ನೂರು ಪಣಗಳು. ಅದೇ ಶೂದ್ರನೊಬ್ಬನು ಹಾಗೆ ಮಾಡಿದರೆ ಅವನಿಗೆ ದೈಹಿಕ ಶಿಕ್ಷೆ ವಿಧಿಸಬೇಕು. (ಮನು : ೮.೨೬೭)

೯) ಒಬ್ಬ ಬ್ರಾಹ್ಮಣನು ಕ್ಷತ್ರಿಯನನ್ನು ಅಪಮಾನಗೊಳಿಸಿದರೆ ಅವನು ತೆರಬೇಕಾದ ದಂಡ ಐವತ್ತು ಪಣಗಳು. ವೈಶ್ಯನಾದಲ್ಲಿ ಇಪ್ಪತ್ತೈದು ಪಣಗಳು. ಶೂದ್ರನಿಗೆ ಹಾಗೆ ಮಾಡಿದರೆ ದಂಡವು ಹನ್ನೆರಡು ಪಣಗಳು. (ಮನು : ೮.೨೬೮)

೧೦) ಒಂದು ಬಾರಿ ಜನ್ಮತಾಳಿದಂತಹ ಶೂದ್ರನೊಬ್ಬನು ಎರಡು ಬಾರಿ ಜನ್ಮ ತಾಳಿದಂತಹ ದ್ವಿಜನೊಬ್ಬನನ್ನು ಅವಾಚ್ಯ ಬೈಗಳಿಂದ ಮುಖಭಂಗಮಾಡಿದರೆ ಅವನ ನಾಲಿಗೆಯನ್ನು ಕತ್ತರಿಸಿಹಾಕಬೇಕು; ಏಕೆಂದರೆ, ಅವನು ಹೀನಜಾತಿಯವನು. (ಮನು : ೮.೨೭೦)

೧೧) ದ್ವಿಜನೊಬ್ಬನ ಹೆಸರು ಹಿಡಿದು, ಅವನ ಜಾತಿಯನ್ನು ತುಚ್ಛೀಕರಿಸಿ, ಶೂದ್ರನೊಬ್ಬನು ಅವನನ್ನು ಅಪಮಾನಗೊಳಿಸಿದರೆ ಹತ್ತು ಅಂಗುಲ ಉದ್ದದ ಕಬ್ಬಿಣದ ಮೊಳೆಯನ್ನು ಕೆಂಪಾಗುವಂತೆ ಕಾಯಿಸಿ ಅದನ್ನು ಅವನ ಗಂಟಲಲ್ಲಿ ತುರುಕಬೇಕು. (ಮನು : ೮.೨೭೧)

೧೨) ಅವನೇನಾದರೂ ಬ್ರಾಹ್ಮಣರಿಗೆ ಅವರ ಕರ್ತವ್ಯವೇನೆಂದು ತಿಳಿಸಹೋಗುವಷ್ಟು ದರ್ಪವನ್ನು ತೋರಿದರೆ ರಾಜನು ಅವನ ಬಾಯಿ ಮತ್ತು ಕಿವಿಗಳೊಳಕ್ಕೆ ಕಾದ ಎಣ್ಣೆಯನ್ನು ಸುರಿಯಿಸಬೇಕು. (ಮನು : ೮.೨೭೨)

೧೩) ಬ್ರಾಹ್ಮಣ–ಕ್ಷತ್ರಿಯರಿಬ್ಬರು ಪರಸ್ಪರವಾಗಿ ಬೈದಾಡಿದರೆ ಒಬ್ಬ ತಿಳಿವಳಿಕಸ್ಥ ರಾಜನು ಬ್ರಾಹ್ಮಣನಿಗೆ ಅತಿಕಡಿಮೆ ಮೊತ್ತದ ದಂಡವನ್ನೂ, ಕ್ಷತ್ರಿಯನಿಗೆ ಅತಿ ಹೆಚ್ಚಾದ ಮಧ್ಯಮ ಮಟ್ಟದ ದಂಡವನ್ನೂ ವಿಧಿಸಬೇಕು. (ಮನು : ೮.೨೭೬)

೧೪) ಕೀಳುಜಾತಿಯವನೊಬ್ಬ ಮೇಲಿನ ಮೂರು ಜಾತಿಗಳ ಯಾರನ್ನಾದರೂ ಗಾಯಗೊಳಿಸಿದರೆ ಅವನು ತನ್ನ ಯಾವ ಅಂಗದಿಂದ ಹಾಗೆ ಗಾಯಗೊಳಿಸುತ್ತಾನೋ ಅದನ್ನು ಕತ್ತರಿಸಿ ಹಾಕಬೇಕು. ಅದು ಮನುವಿನ ಉಪದೇಶ. (ಮನು : ೮.೨೭೯)

೧೫) ಕೀಳುಜಾತಿಯವನೊಬ್ಬ ಕೈಯೆತ್ತಿ ಅಥವಾ ದೊಣ್ಣೆಯಿಂದ ಮೇಲ್ಜಾತಿಯವರನ್ನು ಹೊಡೆದರೆ ಅವನ ಕೈಯನ್ನು ಕಡಿದುಹಾಕಬೇಕು. ಕೋಪದಿಂದ ಏನಾದರೂ ಅವನು (ಮೇಲ್ಜಾತಿಯವರನ್ನು) ಕಾಲಿನಿಂದ ಒದ್ದರೆ ಅವನ ಕಾಲನ್ನು ಕತ್ತರಿಸಿ ಹಾಕಬೇಕು. (ಮನು : ೮.೨೮೦)

೧೬) ಕೀಳುಜಾತಿಯವನೊಬ್ಬ ಮೇಲ್ಜಾತಿಯವನೊಡನೆ ಒಂದೇ ಆಸನದಲ್ಲಿ ಕೂಡಲು ಯತ್ನಿಸಿದರೆ ಅವನ ಕುಂಡಿಯ ಮೇಲೆ ಬರೆ ಹಾಕಬೇಕು ಮತ್ತು ರಾಜ್ಯಭ್ರಷ್ಟನನ್ನಾಗಿಸಬೇಕು ಅಥವಾ (ರಾಜನು) ಅವನ ಕುಂಡಿಯನ್ನು ಕೊಚ್ಚಿ ಹಾಕಿಸಬೇಕು. (ಮನು : ೮. ೨೯೧)

೧೭) (ಕೀಳುಜಾತಿಯವನು) ದರ್ಪದಿಂದ (ಮೇಲ್ಜಾತಿಯವನ ಮೇಲೆ) ಉಗಿದರೆ, ರಾಜನು ಅವನ ಎರಡು ಕುಂಡಿಗಳನ್ನು ಕತ್ತರಿಸಿ ಹಾಕಿಸಬೇಕು; (ಅವನ ಮೇಲೆ) ಉಚ್ಚೆ ಹುಯ್ದರೆ ಶಿಶ್ನವನ್ನು ಕತ್ತರಿಸಿಹಾಕಬೇಕು; (ಅವನ ಮೇಲೆ) ಹೂಸು ಬಿಟ್ಟರೆ ಗುದಸ್ಥಾನವನ್ನು ಕತ್ತರಿಸಿ ಹಾಕಿಸಬೇಕು. (ಮನು : ೮.೨೯೨)

೧೮) (ಮೇಲ್ಜಾತಿಯವನ) ತಲೆಗೂದಲನ್ನು (ಕೀಳುಜಾತಿಯವನೊಬ್ಬ) ಹಿಡಿದೆಳೆದರೆ (ರಾಜನು) ಯಾವ ಅಂಜಿಕೆಯೂ ಇಲ್ಲದೆ ಅವನ ಕೈಗಳನ್ನು ಕತ್ತರಿಸಿ ಹಾಕಿಸಬೇಕು; ಅಂತೆಯೇ (ಅವನು ತನ್ನ ಕಾಲುಗಳಿಂದ ಮೇಲ್ಜಾತಿಯವನನ್ನು ಸ್ಪರ್ಶಿಸಿದರೆ) ಅವನ ಗಡ್ಡ, ಕುತ್ತಿಗೆ ಮತ್ತು ವೃಷಣಕೋಶವನ್ನು ತೆಗೆಸಿಹಾಕಿಸಬೇಕು. (ಮನು : ೮.೨೯೩)

## ಆಯಾಯಾ ವರ್ಗಗಳ ಅಂತಸ್ತು, ಘನತೆ ಮತ್ತು ಸ್ಥಾನಗಳು

೧) ಮನುಷ್ಯನು ಹೊಕ್ಕಳಿನಿಂದ ಮೇಲಕ್ಕೆ (ಅದರ ಕೆಳಗಿನ ಭಾಗಕ್ಕಿಂತಲೂ) ಹೆಚ್ಚು ಶುದ್ಧನೆಂದು ಹೇಳಲಾಗಿದೆ. ಆದ್ದರಿಂದ (ಸ್ವಯಂಭುವನು) ತನ್ನ ಅತ್ಯಂತ ಶುದ್ಧಭಾಗವು ಬಾಯಿ ಎಂದು ಹೆಸರಿಸಿದ್ದಾನೆ ( ಮನು : ೧.೯೨)

೨) ಬ್ರಾಹ್ಮಣನು ಬಾಯಿಯಿಂದ ಹೊರಬಂದನಾದ್ದರಿಂದ, ಅವನು ಮೊದಲು ಹುಟ್ಟಿದವನಾದ್ದರಿಂದ ಮತ್ತು ವೇದವನ್ನು ತನ್ನದನ್ನಾಗಿಸಿಕೊಂಡಿರುವುದರಿಂದ ಅವನು (ಸ್ವಯಂಭುವನು) ಇಡೀ ಸೃಷ್ಟಿಯಲ್ಲಿ ಅಗ್ರಸ್ಥಾನದಲ್ಲಿರಲು ಹಕ್ಕುದಾರನಾಗಿದ್ದಾನೆ. (ಮನು : ೧.೯೩)

೩) (ಸ್ವಯಂಭುವನು) ತಪಶ್ಚರ್ಯೆಯಿಂದ ತನ್ನ ಬಾಯಿಯಿಂದ ಮೊದಲು ಅವನನ್ನು (ಬ್ರಾಹ್ಮಣನನ್ನು) ಸೃಷ್ಟಿಸಿದ. ದೇವತೆಗಳಿಗೆ ಮತ್ತು ಪಿತೃಗಳಿಗೆ ಆಹುತಿಯನ್ನು ತಲುಪಿಸುವುದು ಮತ್ತು ಈ ವಿಶ್ವವನ್ನು ಕಾಪಾಡುವುದು ಸಾಧ್ಯವಾಗಲೆಂದು ಹೀಗೆ ಮಾಡಿದ್ದು. (ಮನು: ೧.೯೪)

೪) ಯಾರ ಬಾಯಿಯಿಂದ ದೇವತೆಗಳು ಸದಾಕಾಲವೂ ಯಜ್ಞದ ಆಹುತಿಗಳನ್ನು ಸ್ವೀಕರಿಸುತ್ತಾರೋ ಮತ್ತು ಪಿತೃಗಳು ಮೃತರಿಗೆ ಸಲ್ಲಿಸಲಾದ ಬಲಿಯನ್ನು ಪಡೆಯುತ್ತಾರೋ ಅಂತಹವರನ್ನು (ಅಂದರೆ, ಬ್ರಾಹ್ಮಣರನ್ನು) ಸೃಷ್ಟಿಗೊಂಡ ಯಾರು ತಾನೆ ಮೀರಿಸಲು ಸಾಧ್ಯ? (ಮನು: ೧.೯೫)

೫) ಸೃಷ್ಟಿಗೊಂಡಿರುವ ಸಕಲ ವಿಷಯಗಳಲ್ಲೆಲ್ಲಾ ಜೀವಂತ ಪ್ರಾಣಿಗಳು ಅತಿಶ್ರೇಷ್ಠರೆಂದು ಹೇಳಲಾಗಿದೆ; ಜೀವಂತ ಪ್ರಾಣಿಗಳ ಪೈಕಿ ಬುದ್ಧಿಶಕ್ತಿಯುಳ್ಳವರು ಶ್ರೇಷ್ಠರು; ಬುದ್ಧಿಶಕ್ತಿಯನ್ನುಳ್ಳ ಮಾನವರ ಪೈಕಿ ಬ್ರಾಹ್ಮಣರು ಅತಿ ಶ್ರೇಷ್ಠರು. (ಮನು : ೧.೯೬)

೬) ಅಸ್ತಿತ್ವಕ್ಕೆ ಬರುವಾಗಲೆ ಬ್ರಾಹ್ಮಣನು ಭೂಮಿಯ ಮೇಲಿನ ಅತ್ಯುಚ್ಚ ವ್ಯಕ್ತಿಯಾಗಿ, ಸೃಷ್ಟಿಗೊಂಡ ವಸ್ತುಗಳಿಗೆಲ್ಲಾ ಅಧಿಪತಿಯಾಗಿ ಹುಟ್ಟುತ್ತಾನೆ. (ಮನು : ೧.೯೯)

೭) ಪ್ರಪಂಚದಲ್ಲಿ ಅಸ್ತಿತ್ವದಲ್ಲಿರುವ ಸಂಪತ್ತೆಲ್ಲಾ ಬ್ರಾಹ್ಮಣನಿಗೆ ಸೇರಿದ್ದು; ತನ್ನ ಹುಟ್ಟಿನಿಂದಲೇ ಅತಿಶ್ರೇಷ್ಠನಾಗಿರುವ ಬ್ರಾಹ್ಮಣನು ನಿಜಕ್ಕೂ ಇದಕ್ಕೆಲ್ಲಾ ವಾರಸುದಾರನಾಗಲು ಅರ್ಹನಾಗಿದ್ದಾನೆ. (ಮನು : ೧.೧೦೦)

೮) ಯಜ್ಞದಲ್ಲಿ ಸಮರ್ಪಿಸಲಾಗುವ ಹವಿಸ್ಸನ್ನು ಕೊಂಡೊಯ್ಯಲು ವಾಹಕನಾಗಿ ಸ್ಥಾಪಿಸಲಾಗಿರಲಿ, ಇಲ್ಲದಿರಲಿ ಅಗ್ನಿಯು ಹೇಗೆ ದೈವತ್ವದಿಂದ ಕೂಡಿದ್ದೇ ಆಗಿರುತ್ತದೆಯೇ ಹಾಗೆಯೇ ಬ್ರಾಹ್ಮಣನು ಅಜ್ಞಾನಿಯಾಗಿರಲಿ ಇಲ್ಲವೆ ಜ್ಞಾನಿಯಾಗಿರಲಿ ಅವನು ದೈವತ್ವದಿಂದ ಕೂಡಿದವನೇ ಆಗಿರುತ್ತಾನೆ. (ಮನು : ೯.೩೧೭)

೯) ಆದ್ದರಿಂದ ಬ್ರಾಹ್ಮಣರು ಎಲ್ಲ (ವಿಧದ) ನಿಕೃಷ್ಟ ಉದ್ಯೋಗಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದರೂ ಸಹ ಅವರು ಸಕಲರೀತಿಗಳಲ್ಲೂ ಗೌರವಕ್ಕೆ ಪಾತ್ರರೇ ಆಗಿರುತ್ತಾರೆ. ಏಕೆಂದರೆ, ಅವರಲ್ಲಿ ಪ್ರತಿಯೊಬ್ಬರೂ ದೈವೀಪುರುಷರೇ ಆಗಿರುತ್ತಾರೆ. (ಮನು : ೯.೩೧೯)

೧೦) (ಮಗುವಿಗೆ ಹೆಸರಿಸಲಾಗುವ ಸಂಸ್ಕಾರವಾದ) ನಾಮಧೇಯ ಕ್ರಿಯೆಯನ್ನು ತಂದೆಯು (ಮಗು ಹುಟ್ಟಿದ) ಹತ್ತನೆಯ ಅಥವಾ ಹನ್ನೆರಡನೆಯ ದಿನ ಇಲ್ಲವೆ ಅದೃಷ್ಟವನ್ನು ತರುವ (ಯಾವುದಾದರೊಂದು) ಚಾಂದ್ರಮಾನದ ದಿನದಲ್ಲಿ, ಅದೃಷ್ಟವನ್ನು ತರುವ ಮುಹೂರ್ತದಲ್ಲಿ, ಶುಭನಕ್ಷತ್ರದಲ್ಲಿ ಜರುಗಿಸಲಿ. (ಮನು : ೨.೩೦)

೧೧) ಬ್ರಾಹ್ಮಣನ ಹೆಸರಿನ ಮೊದಲ ಭಾಗವು ಏನಾದರೊಂದು ಶುಭವನ್ನು ಸೂಚಿಸಲಿ, ಕ್ಷತ್ರಿಯನ ಹೆಸರು ಶಕ್ತಿಗೆ ಸಂಬಂಧಿಸಿದ್ದಾಗಿರಲಿ, ವೈಶ್ಯನದು ಸಂಪತ್ತಿನ ಸೂಚಕವಾಗಿರಲಿ; ಆದರೆ ಶೂದ್ರನ ಹೆಸರು ಏನಾದರೊಂದು ನಿಕೃಷ್ಟತೆಯನ್ನು ತೋರಿಸುವಂತಿರಲಿ. (ಮನು ; ೨.೩೧)

೧೨) ಬ್ರಾಹ್ಮಣನ ಹೆಸರಿನ ಎರಡನೆಯ ಭಾಗವು ಸಂತೋಷವನ್ನು ಸೂಚಿಸುವ ಒಂದು ಪದವಾಗಿರಬೇಕು, ಕ್ಷತ್ರಿಯನದು ರಕ್ಷಣೆಯನ್ನು ಸೂಚಿಸುವುದಾಗಿರಬೇಕು, ವೈಶ್ಯನದು ಏಳಿಗೆಯನ್ನು ಅಭಿವ್ಯಕ್ತಿಗೊಳಿಸಬೇಕು ಮತ್ತು ಶೂದ್ರನದು ಸೇವೆಯನ್ನು ಸೂಚಿಸುವುದಾಗಿರಬೇಕು. (ಮನು : ೨.೩೨)

೧೩) ಶೂದ್ರರು ಆಳುವವರಾಗಿರುವಂತಹ ದೇಶದಲ್ಲಿ ಬ್ರಾಹ್ಮಣರು ವಾಸಿಸದಿರಲಿ; ಧರ್ಮಬಾಹಿರರಾದವರಿಂದ ಸುತ್ತುವರಿಯಲ್ಪಟ್ಟ ದೇಶದಲ್ಲೂ ಅವರು ನಿವಾಸಿಗಳಾಗಬಾರದು. ನಾಸ್ತಿಕರ ಆಳ್ವಿಕೆಗೆ ಒಳಪಟ್ಟ ದೇಶದಲ್ಲೂ ಅವರು ವಾಸಿಸಕೂಡದು. ಅತಿನಿಕೃಷ್ಟವಾದ ಜಾತಿಗಳವರಿಂದಲೇ ತುಂಬಿರುವ ದೇಶದಲ್ಲಿ ಸಹ ಅವರಿರಬಾರದು. (ಮನು : ೪.೬೧)

೧೪) ನ್ಯಾಯವನ್ನು ಕೋರಿ ಬರುವವರ ಮೊಕದ್ದಮೆಗಳನ್ನು ರಾಜನು ತಾನೇ ಸ್ವತಃ ತೀರ್ಮಾನ ಕೊಡಲಾಗದಿದ್ದಲ್ಲಿ ಅವನು ಬೇರೆ ಬೇರೆ ಶಾಸ್ತ್ರಗಳಲ್ಲಿ ನಿಷ್ಣಾತನಾದ ಒಬ್ಬ ಬ್ರಾಹ್ಮಣನನ್ನು ಅದಕ್ಕಾಗಿ ನೇಮಿಸಬೇಕು. (ಕಾತ್ಯಾಯನ : ೬೩)

೧೫) ಮೇಲೆ ನಮೂದಿಸಲಾದ ಗುಣಗಳಿಂದ ಕೂಡಿದ ಬ್ರಾಹ್ಮಣನೊಬ್ಬನು ರಾಜನಿಗೆ ದೊರಕದಿದ್ದಲ್ಲಿ ಅವನು ಧರ್ಮಶಾಸ್ತ್ರದಲ್ಲಿ ನಿಪುಣನಾದ ಒಬ್ಬ ಕ್ಷತ್ರಿಯನನ್ನೋ ವೈಶ್ಯನನ್ನೋ ನೇಮಿಸಬೇಕು. ಆದರೆ ಶೂದ್ರನೊಬ್ಬನನ್ನು ನ್ಯಾಯಮೂರ್ತಿಯನ್ನಾಗಿ ನೇಮಿಸುವುದನ್ನು ಎಚ್ಚರಿಕೆಯಿಂದ ತಪ್ಪಿಸಬೇಕು. (ಕಾತ್ಯಾಯನ : ೬೭)

೧೬) ಇಲ್ಲಿ ಹೇಳಲಾಗಿರುವವರನ್ನುಳಿದು ಬೇರೆಯವರು ನ್ಯಾಯಮೂರ್ತಿಗಳಾದರೆ ಅವರು ಮಾಡುವುದನ್ನು ತಪ್ಪಾಗಿ ಮಾಡಲಾದದ್ದೆಂದು ಭಾವಿಸಬೇಕು. – ಅವರು ರಾಜನನ್ನು ಪ್ರತಿನಿಧಿಸುವ ಅಧಿಕಾರಿಗಳೇ ಆಗಿದ್ದು ಒಂದು ವೇಳೆ ನೀಡುವ ತೀರ್ಮಾನವು ಧರ್ಮಶಾಸ್ತ್ರ ಗ್ರಂಥಗಳಿಗನುಗುಣವಾಗಿದ್ದರೂ ಅದನ್ನು ತಪ್ಪೆಂದು ಗ್ರಹಿಸಬೇಕು. (ಕಾತ್ಯಾಯನ : ೬೮)

೧೭) ಕೇವಲ ತನ್ನ ಜಾತಿಯಿಂದ ಮಾತ್ರವೇ ಬ್ರಾಹ್ಮಣನಾಗಿರುವವನಾಗಲಿ, ತನ್ನ ಮೂಲವು ಅನಿಶ್ಚಿತವಾಗಿದ್ದು ತನ್ನನ್ನು ತಾನು ಬ್ರಾಹ್ಮಣನೆಂದು ಕರೆದುಕೊಳ್ಳುವವನಾಗಲಿ ರಾಜನು ಹಾಗೆ ಇಚ್ಛಿಸಿದಲ್ಲಿ ಧರ್ಮವನ್ನು (ಅವನಿಗೆ) ಅರ್ಥೈಸಿ ಹೇಳಬಹುದು. ಶೂದ್ರನು ಮಾತ್ರ ಅದನ್ನೆಂದೂ ಮಾಡಲೇಕೂಡದು. (ಮನು ; ೮.೨೦)

೧೮) ಶೂದ್ರನೊಬ್ಬನು ಧರ್ಮವನ್ನು ಅರ್ಥೈಸುತ್ತಿರುವಂತಹ ಪ್ರಸಂಗವನ್ನು ನೋಡಿಯೂ ರಾಜನು ಸುಮ್ಮನಿದ್ದರೆ ಅಂತಹ ದೊರೆಯ ರಾಜ್ಯವು ಹಸುವು ಉಸುಬುನೆಲದಲ್ಲಿ ಹೂತುಹೋಗುವಂತೆ ಮುಳುಗಿ ಹೋಗುತ್ತದೆ. (ಮನು: ೮.೨೧)

೧೯) ಧರ್ಮವನ್ನರಿತ ಬ್ರಾಹ್ಮಣನು ಅಪರಾಧವೊಂದನ್ನು ರಾಜನ ಗಮನಕ್ಕೆ ತರುವ ಆವಶ್ಯಕತೆಯಿಲ್ಲ; ಯಾರು ಅವನಿಗೆ ಹಾನಿಯುಂಟುಮಾಡುತ್ತಾರೋ ಅವರನ್ನು ತನ್ನ ಸ್ವಂತ ಶಕ್ತಿಯಿಂದ ಶಿಕ್ಷಿಸಬಹುದು. (ಮನು ; ೧೧. ೩೧)

೨೦) ಅವನ ಸ್ವಂತ ಶಕ್ತಿಯು ರಾಜನ ಶಕ್ತಿಗಿಂತಲೂ ಮಿಗಿಲಾದುದು. ಆದ್ದರಿಂದ ಬ್ರಾಹ್ಮಣನು ಅವನ ಶತ್ರುಗಳನ್ನು ತನ್ನ ಶಕ್ತಿಯಿಂದಲೇ ಶಿಕ್ಷಿಸಬಹುದು. (ಮನು : ೧೧.೩೨)

೨೧) ಬ್ರಾಹ್ಮಣನು ಪ್ರಪಂಚದ ಸೃಷ್ಟಿಕರ್ತ, ಅಲ್ಲಿ ಶಿಕ್ಷೆ ನೀಡುವವನು ಮತ್ತು ಅದಕ್ಕೆ ಗುರುವಾಗಿರುವವನು ಎಂದು ಹೇಳಲಾಗಿದೆ; ಆದ್ದರಿಂದ ಸೃಷ್ಟಿಗೊಂಡಿರುವುದಕ್ಕೆಲ್ಲಾ ಅವನು ಉಪಕಾರಿ. ಯಾರೂ ಅವನಿಗೆ ಅಪ್ರಸನ್ನವಾದುದೇನನ್ನೂ ಹೇಳದಿರಲಿ ಮತ್ತು ಕಟುವಾದ ಮಾತುಗಳನ್ನೇನೂ ಅನ್ನದಿರಲಿ. (ಮನು: ೧೧.೩೫)

## ವರ್ಗಗಳ ನಡುವಣ ಆಂತರಿಕ ಸಂಬಂಧ

### I

೧) ನಾಲ್ಕು ಜಾತಿಗಳ ತಿರುಗುಮುರುಗು ಕ್ರಮದಲ್ಲಿ ದಾಸ್ಯವನ್ನು ನಿಯಮಗೊಳಿಸಲಾಗಿಲ್ಲ. (ನಾರದ ೫.೩೯)

೨) ಮೂರು ವರ್ಣಗಳವರು ದಾಸರಾಗಬಹುದು, ಆದರೆ ಬ್ರಾಹ್ಮಣನು ಎಂದಿಗೂ ದಾಸನಾಗುವಂತಿಲ್ಲ. ಕ್ಷತ್ರಿಯ, ವೈಶ್ಯ ಮತ್ತು ಶೂದ್ರ ವರ್ಣಗಳವರಲ್ಲಿ ದಾಸ್ಯವು ಅನುಕ್ರಮವಾಗಿಯೇ ಹೊರತು ವಿಪರ್ಯಯ ಕ್ರಮದಲ್ಲಿ ಅಲ್ಲ. ಒಬ್ಬ ಶೂದ್ರನು ನಾಲ್ಕು ವರ್ಣಗಳವರಲ್ಲಿ ಯಾವುದೇ ದಣಿಯ ದಾಸನಾಗಬಹುದು. ಒಬ್ಬ ವೈಶ್ಯನು ಮೊದಲ ಮೂರು ವರ್ಣಗಳಲ್ಲಿ ಯಾವುದೇ ದಣಿಯ ದಾಸನಾಗಬಹುದು. ಆದರೆ ಶೂದ್ರನ ದಾಸನಾಗುವಂತಿಲ್ಲ. ಕ್ಷತ್ರಿಯನೊಬ್ಬನು ಬ್ರಾಹ್ಮಣ ಅಥವಾ ಕ್ಷತ್ರಿಯ ಧಣಿಯ ದಾಸನಾಗಬಹುದು, ಆದರೆ ವೈಶ್ಯ ಅಥವಾ ಶೂದ್ರನ ದಾಸನಾಗುವಂತಿಲ್ಲ. (ಕಾತ್ಯಾಯನ : ೭೧೫–೭೧೬)

೩) ಬ್ರಾಹ್ಮಣನೊಬ್ಬನನ್ನು ಅದೇ ಜಾತಿಯ ಇನ್ನೊಬ್ಬನು ಸಹ ದಾಸನಾಗಿ ಕೆಲಸ ಮಾಡುವಂತೆ ಮಾಡಕೂಡದು. .....ಕ್ಷತ್ರಿಯ, ವೈಶ್ಯ ಮತ್ತು ಶೂದ್ರರ ಪೈಕಿ ಅದೇ ಜಾತಿಯ ಇನ್ನೊಬ್ಬನಿಗಾಗಿ ಸಮಯಬಿದ್ದರೆ ದಾಸನಾಗಿ ಕೆಲಸ ಮಾಡುವಂತೆ ಮಾಡಬಾರದು.
(ಕಾತ್ಯಾಯನ : ೭೧೭–೭೧೮)

### II

೪) ದ್ವಿಜರಾದ ಪುರುಷರಿಗೆ ಮೊದಲನೆಯ ಮದುವೆಯು ಸಮಾನ ಜಾತಿಯ ಹೆಂಗಸರೊಡನೆ ಆಗಬೇಕೆಂದು ಶಿಫಾರಸು ಮಾಡಲಾಗಿದೆ. ಆದರೆ ಯಾರು ತಮ್ಮಿಚ್ಛೆಯಂತೆ ಮತ್ತೆ ಮದುವೆ ಮಾಡಿಕೊಳ್ಳಬಯಸುತ್ತಾರೋ ಅವರು ಜಾತಿಗಳ ನೇರಕ್ರಮದಲ್ಲಿ ಕೆಳಕಂಡಂತೆ ಹೆಂಗಸರನ್ನು ಆಯ್ಕೆ ಮಾಡಿಕೊಳ್ಳುವುದನ್ನು ಅಂಗೀಕರಿಸಲಾಗಿದೆ. (ಮನು : ೩.೧೨)

೫) ಶೂದ್ರನೊಬ್ಬನ ಹೆಂಡತಿಯೂ ಶೂದ್ರಳೇ ಆಗಿರಬೇಕೆಂದು ಘೋಷಿಸಲಾಗಿದೆ; ವೈಶ್ಯನಿಗೆ ಅದೇ ಜಾತಿಯವಳು ಮತ್ತು ಶೂದ್ರಳು ಹೆಂಡತಿಯಾಗಬಹುದು; ಕ್ಷತ್ರಿಯನಿಗೆ ಅದೇ ಜಾತಿಯವಳು ಮತ್ತು ವೈಶ್ಯ–ಶೂದ್ರ ಹೆಂಗಸು ಹೆಂಡತಿಯಾಗಬಹುದು; ಬ್ರಾಹ್ಮಣನಿಗೆ ಅದೇ ಜಾತಿಯವಳು ಮತ್ತು ಇತರ ಮೂರು ವರ್ಣಗಳ ಹೆಂಗಸು ಹೆಂಡತಿಯಾಗಬಹುದು. (ಮನು : ೩–೧೩)

೬) ದ್ವಿಜರು ತಮ್ಮ ಜಾತಿಯ ಮತ್ತು ಇತರ ಕಡಿಮೆ ಜಾತಿಗಳ ಹೆಂಗಸರನ್ನು ಮದುವೆಯಾಗಿದ್ದರೆ ಹೆಂಡತಿಯರಲ್ಲಿ ಹಿರಿತನ, ಗೌರವ ಮತ್ತು ವಾಸಸ್ಥಾನಗಳು ಅವರವರ ಜಾತಿಗಳ ಕ್ರಮಕ್ಕೆ ಸರಿಯಾಗಿ ನಿರ್ಧರಿಸಬೇಕು. (ಮನು: ೯.೮೫)

೭) ದ್ವಿಜರ ಪೈಕಿ ಎಲ್ಲಾ ಸಮಯಗಳಲ್ಲೂ ಸ್ವಜಾತಿಯ ಹೆಂಡತಿಯೇ ಗಂಡನಿಗೆ ವೈಯಕ್ತಿಕ ನೆರವು ನೀಡಬೇಕು ಮತ್ತು ಪೂಜಾಕರ್ಮಗಳಲ್ಲಿ ಅವನೊಟ್ಟಿಗೆ ಸಹಕರಿಸಬೇಕು. ಯಾವುದೇ ಕಾರಣಕ್ಕೂ ಬೇರೆ ಜಾತಿಯ ಹೆಂಡತಿಯನ್ನು ಇದನ್ನು ಮಾಡುವಂತಿಲ್ಲ. (ಮನು: ೯.೮೬)

೮) ಶೂದ್ರನೊಬ್ಬನು ದ್ವಿಜ ವರ್ಣಗಳ ಹೆಂಗಸಿನೊಡನೆ, ಆಕೆ ರಕ್ಷಣೆ ಹೊಂದಿದ್ದಾಗ ಅಥವಾ ಹೊಂದಿಲ್ಲದಿದ್ದಾಗ ಸಂಭೋಗ ನಡೆಸಿದರೆ ಕೆಳಕಂಡಂತೆ ಅವನಿಗೆ ಶಿಕ್ಷೆ ವಿಧಿಸಬೇಕು. ಅವಳು ರಕ್ಷಣೆ ಪಡೆದಿಲ್ಲದಿದ್ದಾಗ ಆದರೆ ಅಪರಾಧಗೈದ ಅವನ ಅಂಗವನ್ನು ತನ್ನೆಲ್ಲಾ ಆಸ್ತಿಯನ್ನು ಅವನು ಕಳೆದುಕೊಳ್ಳುತ್ತಾನೆ. ಅವಳು ರಕ್ಷಣೆ ಹೊಂದಿದ್ದಾಗ ಆದರೆ ತನ್ನ ಜೀವವೂ ಸೇರಿದಂತೆ ಎಲ್ಲವನ್ನೂ ಅವನು ಕಳೆದುಕೊಳ್ಳುತಾನೆ. (ಮನು : ೮.೩೭೪)

೯) (ರಕ್ಷಣೆ ಹೊಂದಿದ್ದ ಒಬ್ಬ ಬ್ರಾಹ್ಮಣ ಹೆಂಗಸಿನೊಡನೆ ಸಂಭೋಗ ನಡೆಸಿದರೆ) ವೈಶ್ಯನೊಬ್ಬನು ಒಂದು ವರ್ಷ ಕಾರಾಗೃಹವಾಸವನ್ನು ಅನುಭವಿಸಿ ತನ್ನೆಲ್ಲ ಆಸ್ತಿಯನ್ನು ಕಳೆದುಕೊಳ್ಳುತ್ತಾನೆ. ಅದನ್ನೇ ಕ್ಷತ್ರಿಯನು ಮಾಡಿದರೆ ಅವನಿಗೆ ಒಂದು ಸಾವಿರ ಪಣಗಳ ದಂಡವನ್ನು ವಿಧಿಸಬೇಕು ಮತ್ತು ಕತ್ತೆಯ ಉಚ್ಚೆಹಾಕಿ ಕ್ಷೌರ ಮಾಡಿಸಬೇಕು. (ಮನು : ೮.೩೭೫)

೧೦) ರಕ್ಷಣೆಯಿಲ್ಲದ ಬ್ರಾಹ್ಮಣ ಹೆಂಗಸಿನೊಡನೆ ಕ್ಷತ್ರಿಯನಾಗಲಿ ವೈಶ್ಯನಾಗಲಿ ಸಂಬಂಧ ಬೆಳೆಸಿದರೆ ವೈಶ್ಯನಿಗೆ ಐದು ನೂರು ಪಣಗಳ ದಂಡವನ್ನು ವಿಧಿಸಬೇಕು ಮತ್ತು ಕ್ಷತ್ರಿಯನಿಗೆ ಒಂದು ಸಾವಿರ ಪಣಗಳ ದಂಡವನ್ನು ವಿಧಿಸಬೇಕು. (ಮನು : ೮.೩೭೬)

೧೧) ವೈಶ್ಯನೊಬ್ಬನು ರಕ್ಷಣೆ ಹೊಂದಿದ ಕ್ಷತ್ರಿಯ ಹೆಂಗಸಿನ ಬಳಿ ಸಾರಿದರೆ ಅಥವಾ ಕ್ಷತ್ರಿಯನೊಬ್ಬನು ಅಂಥದೇ ವೈಶ್ಯ ಹೆಂಗಸಿನ ಬಳಿ ಸಾರಿದರೆ ಅವರಿಬ್ಬರಿಗೂ ರಕ್ಷಣೆಯಿಲ್ಲದ ಬ್ರಾಹ್ಮಣ ಹೆಂಗಸಿನ ಬಳಿ ಸಾರಿದರೆ ಏನು ಶಿಕ್ಷೆಯಾಗುವುದೋ ಅದೇ ಶಿಕ್ಷೆಯನ್ನು ವಿಧಿಸಬೇಕು. (ಮನು: ೮.೩೮೨)

೧೨) ಆ ಎರಡು (ಅಂದರೆ ಕ್ಷತ್ರಿಯ ಮತ್ತು ವೈಶ್ಯ ) ವರ್ಣಗಳ ರಕ್ಷಣೆ ಹೊಂದಿದ ಹೆಂಗಸರೊಡನೆ ಸಂಭೋಗ ಮಾಡಿದರೆ ಬ್ರಾಹ್ಮಣನೊಬ್ಬನನ್ನು ಒಂದು ಸಾವಿರ ಪಣಗಳನ್ನು ತೆರುವಂತೆ ಒತ್ತಾಯಿಸಬೇಕು; ಒಬ್ಬ ಕ್ಷತ್ರಿಯ ಅಥವಾ ವೈಶ್ಯನು ರಕ್ಷಣೆ ಹೊಂದಿರುವ ಶೂದ್ರ ಹೆಂಗಸಿನೊಡನೆ ತಪ್ಪಿ ನಡೆದರೆ ಒಂದು ಸಾವಿರ ಪಣಗಳ ದಂಡವನ್ನು ವಿಧಿಸಬೇಕು. (ಮನು : ೮.೩೮೩)

೧೩) ವೈಶ್ಯನು ರಕ್ಷಣೆಯಿಲ್ಲದ ಕ್ಷತ್ರಿಯ ಹೆಂಗಸಿನೊಡನೆ ಸಂಭೋಗ ನಡೆಸಿದರೆ ಐನೂರು ಪಣಗಳ ದಂಡವು ಅವನ ತಲೆಯ ಮೇಲೆ ಬೀಳಬೇಕು; ಆದರೆ ಅದೇ ಅಪರಾಧಕ್ಕೆ ಕ್ಷತ್ರಿಯನಿಗೆ ಕತ್ತೆಯ ಮೂತ್ರದಿಂದ ಕ್ಷೌರ ಮಾಡಿಸಬೇಕು ಇಲ್ಲವೆ ಅಷ್ಟೇ ಮೊತ್ತದ (ಅಂದರೆ, ಐನೂರು ಪಣಗಳ) ದಂಡವನ್ನು ವಿಧಿಸಬೇಕು. (ಮನು : ೮.೩೮೪)

೧೪) ರಕ್ಷಣೆಯಿಲ್ಲದ ಕ್ಷತ್ರಿಯ ಅಥವಾ ವೈಶ್ಯರ ಹೆಂಗಸಿನ ಬಳಿ ಸಾರಿದರೆ ಇಲ್ಲವೆ ಶೂದ್ರ ಹೆಂಗಸಿನ ಬಳಿ ಸಾರಿದರೆ, ಬ್ರಾಹ್ಮಣನಿಗೆ ಐನೂರು ಪಣಗಳ ದಂಡ ವಿಧಿಸಬೇಕು; ಆದರೆ ಅತಿನಿಕೃಷ್ಟ ಜಾತಿಯ ಹೆಂಗಸನ್ನು ಸಂಭೋಗಿಸಿದರೆ ಅವನು ತೆರಬೇಕಾದ ದಂಡವು ಒಂದು ಸಾವಿರ ಪಣಗಳಾಗಿರುತ್ತದೆ. (ಮನು ; ೮.೩೮೫)

## III

೧೫) ಅತಿಥಿಯೊಬ್ಬನು ಆಹ್ವಾನವಿಲ್ಲದೆ ತನ್ನಷ್ಟಕ್ಕೆ ತಾನೇ ಬಂದರೆ ಗೃಹಸ್ಥನಾದವನು ನಿಯಮಾನುಸಾರವಾಗಿ ಆತನಿಗೆ ಆಸನ ಮತ್ತು ನೀರನ್ನು ನೀಡುವುದು ಉಚಿತವಾಗಿರುತ್ತದೆ. ಅಂತೆಯೇ, ತನ್ನ ಶಕ್ತ್ಯನುಸಾರವಾಗಿ ಭಕ್ಷ್ಯಗಳನ್ನು ಅಣಿಮಾಡಿ ಆಹಾರವನ್ನೂ ನೀಡಬೇಕು. (ಮನು ; ೩.೯೯)

೧೬) ಆದರೆ ಬ್ರಾಹ್ಮಣನೊಬ್ಬನ ಮನೆಗೆ ಬರುವ ಕ್ಷತ್ರಿಯನು ಅತಿಥಿಯೆನಿಸಿಕೊಳ್ಳುವುದಿಲ್ಲ; ಅಂತೆಯೇ ವೈಶ್ಯ ಮತ್ತು ಶೂದ್ರರೂ ಕೂಡ. ಆತ್ಮೀಯ ಸ್ನೇಹಿತ, ಸಂಬಂಧಿ ಮತ್ತು ಗುರು – ಇವರೂ ಸಹ ಅತಿಥಿಗಳೆಂದು ಪರಿಗಣಿಸಲ್ಪಡುವುದಿಲ್ಲ. (ಮನು : ೩.೧೧೦)

೧೭) ಕ್ಷತ್ರಿಯನೊಬ್ಬನು ಬ್ರಾಹ್ಮಣನ ಮನೆಗೆ ಅತಿಥಿಯಾಗಿ ಏನಾದರೂ ಬಂದರೆ, ಬ್ರಾಹ್ಮಣರು ಭೋಜನ ಮಾಡಿದ ನಂತರ, ಬ್ರಾಹ್ಮಣ ಗೃಹಸ್ಥನು ತನ್ನಿಚ್ಛೆಗೆ ಅನುಗುಣವಾಗಿ ಅವನನ್ನು ಸತ್ಕರಿಸಬಹುದು. (ಮನು : ೩.೧೧೧)

೧೮) ಅತಿಥಿಗಳಾಗಿ ತನ್ನ ಮನೆಗೆ ಬಂದ ವೈಶ್ಯ ಮತ್ತು ಶೂದ್ರರನ್ನು ಸಹ (ಬ್ರಾಹ್ಮಣ ಗೃಹಸ್ಥನು) ಸತ್ಕರಿಸಬಹುದು; ಆದರೆ ಅವರಿಗೆ ತನ್ನ ಸೇವಕರೊಡನೆ ಊಟ ಮಾಡಲು ಅವಕಾಶ ಮಾಡಿಕೊಟ್ಟು ಸಹಾನುಭೂತಿಯ ಪ್ರವೃತ್ತಿಯನ್ನು ಪ್ರಕಟಿಸಬೇಕು. (ಮನು : ೩.೧೧೨)

### ಕರ್ತವ್ಯಗಳು – ಸವಲತ್ತುಗಳು – ವಿನಾಯಿತಿಗಳು – ದೌರ್ಬಲ್ಯಗಳು

೧) ಪರಬ್ರಹ್ಮನಲ್ಲಿ ಐಕ್ಯಹೊಂದುವ ಉದ್ದೇಶವಿರುವ ಹಾಗೂ ತಮ್ಮ ಕರ್ತವ್ಯ ಪಾಲನೆಯಲ್ಲಿ ಅಚಲನಿಷ್ಠೆ ಇರಿಸಿಕೊಂಡಿರುವ ಬ್ರಾಹ್ಮಣರು ಕೆಳಕಂಡ ಆರು ಕರ್ಮಗಳನ್ನು ಯಥಾವತ್ತಾಗಿ ಮಾಡಬೇಕು. ಅವನ್ನು ಅವುಗಳ ಸೂಕ್ತ ಕ್ರಮದಲ್ಲಿ ನಮೂದಿಸಲಾಗಿದೆ. (ಮನು : ೧೦.೭೪)

೨) ಅಧ್ಯಾಪನ, ಅಧ್ಯಯನ, ತನಗಾಗಿ ಯಜ್ಞ ಮಾಡುವುದು, ಬೇರೆಯವರಿಂದ ಯಜ್ಞ ಮಾಡಿಸುವುದು, ದಾನ ಮಾಡುವುದು ಮತ್ತು ತೆಗೆದುಕೊಳ್ಳುವುದು– ಇವು ಬ್ರಾಹ್ಮಣನಿಗೆ ವಿಧಿಸಲಾದ ಆರು ಕರ್ಮಗಳು. (ಮನು : ೧೦.೭೫)

೩) ಆದರೆ ಹೀಗೆ ವಿಧಿಸಲಾದ ಆರು ಕರ್ಮಗಳಲ್ಲಿ ಮೂರು ತನ್ನ ಜೀವನೋಪಾಯಕ್ಕೆ ಮಾರ್ಗಗಳು; ಅವು ಯಾವುವೆಂದರೆ ಅಧ್ಯಾಪನ, ಬೇರೆಯವರಿಂದ ಯಜ್ಞ ಮಾಡಿಸುವುದು ಮತ್ತು ಶುದ್ಧರಾದವರಿಂದ ದಾನವನ್ನು ಸ್ವೀಕರಿಸುವುದು. (ಮನು : ೧೦.೭೬)

೪) ಬ್ರಾಹ್ಮಣನಿಂದ ಕ್ಷತ್ರಿಯನತ್ತ ಗಮನ ಹರಿಸಿದರೆ, ಬ್ರಾಹ್ಮಣನಿಗೆ ವಿಧಿಸಿರುವ ಮೂರು ಕರ್ಮಗಳು ಅವನಿಗೆ ನಿಷಿದ್ಧವಾದುವು. ಅವು ಯಾವುವೆಂದರೆ, ಅಧ್ಯಾಪನ, ಬೇರೆಯವರಿಂದ ಯಜ್ಞ ಮಾಡಿಸುವುದು ಮತ್ತು ತನ್ಮೂಲಕ ದಾನವನ್ನು ಸ್ವೀಕರಿಸುವುದು. (ಮನು : ೧೦.೭೭)

೫) ಅವು ವೈಶ್ಯನಿಗೂ ಸಹ ನಿಷಿದ್ಧವಾದುದೆಂಬುದು ನಿಶ್ಚಿತ ಧರ್ಮ; ಏಕೆಂದರೆ, ಪ್ರಜಾಪತಿಯಾದ ಮನುವು ಆ ಎರಡು (ಕ್ಷತ್ರಿಯ ಮತ್ತು ವೈಶ್ಯ) ವರ್ಣಗಳವರಿಗೆ (ಆ ಮೂರು ಕರ್ಮಗಳನ್ನು) ವಿಧಿಸಿಲ್ಲ. (ಮನು : ೧೦.೭೮)

೬) ತನ್ನ ಜೀವನೋಪಾಯಕ್ಕೆ ಕ್ಷತ್ರಿಯನಿಗೆ ವಿಧಿಸಲಾದ ಕರ್ಮಗಳೆಂದರೆ ಎರಗಿ ಬೀಳಲು ಮತ್ತು ಎಸೆಯಲು ಆಯುಧಗಳನ್ನು ಭರಿಸುವುದು; ವೈಶ್ಯನಿಗೆ ವಿಧಿಸಲಾದ ಕರ್ಮಗಳೆಂದರೆ ವಾಣಿಜ್ಯ,

ಪಶುಪಾಲನೆ ಮತ್ತು ಕೃಷಿ. ಆದರೆ ಅವರ (ಅಂದರೆ, ಕ್ಷತ್ರಿಯರ ಮತ್ತು ವೈಶ್ಯರ) ಕರ್ತವ್ಯಗಳೇನೆಂದರೆ ದಾನ ಮಾಡುವುದು, ವೇದಾಧ್ಯಯನ ಮತ್ತು ಯಜ್ಞಕ್ರಿಯೆಯಲ್ಲಿ ತೊಡಗುವುದು. (ಮನು : ೧೦.೭೯)

೭) ಒಬ್ಬನು ತೊಡಗಬಹುದಾದ ಅನೇಕ ಉದ್ಯೋಗಗಳಲ್ಲಿ ಶ್ರೇಷ್ಠವಾದುವು ಇವು; ಬ್ರಾಹ್ಮಣನಿಗೆ ವೇದದ ಅಧ್ಯಾಪನ, ಕ್ಷತ್ರಿಯನಿಗೆ ಪ್ರಜಾಪಾಲನೆ ಮತ್ತು ವೈಶ್ಯನಿಗೆ ವಾಣಿಜ್ಯ. (ಮನು : ೧೦.೮೦)

೮) ಬ್ರಾಹ್ಮಣರ ಶುಶ್ರೂಷೆಯೊಂದೇ ಶೂದ್ರನಿಗೆ ಅತಿಶ್ರೇಷ್ಠವಾದ ಉದ್ಯೋಗವೆಂದು ಘೋಷಿಸಲಾಗಿದೆ; ಏಕೆಂದರೆ, ಇದರೊಟ್ಟಿಗೆ ಅವನು ಬೇರೇನೇ ಮಾಡಿದರೂ ಅದು ಅವನಿಗೆ ಫಲ ನೀಡುವುದಿಲ್ಲ. (ಮನು : ೧೦.೧೨೩)

## II

೯) ಮೇಲೆ ಹೇಳಿದ ವಿಶಿಷ್ಟ ಉದ್ಯೋಗಗಳಿಂದ ಬ್ರಾಹ್ಮಣನು ಹೊಟ್ಟೆ ಹೊರೆಯಲು ಅಶಕ್ತನಾದರೆ ಅವನು ಕ್ಷತ್ರಿಯರಿಗೆ ಅನ್ವಯವಾಗುವ ನಿಯಮವನ್ನು ಪಾಲಿಸಿ ಜೀವಿಸಬಹುದು; ಏಕೆಂದರೆ ಕ್ಷತ್ರಿಯನು ಬ್ರಾಹ್ಮಣನ ನಂತರದ ಶ್ರೇಣಿಯವನು. (ಮನು ; ೧೦.೮೧)

೧೦) ಇವೆರಡರಲ್ಲಿ (ಅಂದರೆ ಬ್ರಾಹ್ಮಣ ಮತ್ತು ಕ್ಷತ್ರಿಯರಿಗೆ ವಿಧಿಸಲಾಗಿರುವ ಉದ್ಯೋಗಗಳಲ್ಲಿ) ಯಾವುದರಿಂದಲೂ ಹೊಟ್ಟೆ ಹೊರೆಯಲು ಅಶಕ್ತನಾದರೆ ಆಗೇನು ಮಾಡಬೇಕು ಎಂಬ ಪ್ರಶ್ನೆ ಬಂದರೆ ಉತ್ತರ ಇದು: ತನ್ನನ್ನು ತಾನು ಕೃಷಿ ಮತ್ತು ಪಶುಪಾಲನೆಯಲ್ಲಿ ತೊಡಗಿಸಿಕೊಂಡು ಅವನು ವೈಶ್ಯನ ಜೀವನ ವಿಧಾನವನ್ನು ಅನುಸರಿಸಬಹುದು. (ಮನು; ೧೦.೮೨)

೧೧) ಅತಿ ಬೇಗುದಿಯ ಸ್ಥಿತಿಯಲ್ಲಿರುವ ಕ್ಷತ್ರಿಯನು ಸಹ ವೈಶ್ಯನಿಗೆ ವಿಧಿಸಲಾದ ಜೀವನೋಪಾಯಗಳನ್ನು ಅನುಸರಿಸಿ ಜೀವನ ಸಾಗಿಸಬಹುದು. (ಮನು : ೧೦.೯೫)

೧೨) ತನಗೆ ವಿಧಿಸಲಾದ ಕರ್ಮಗಳಿಂದ ಜೀವನ ಭರಿಸಲು ಅಶಕ್ತನಾದ ವೈಶ್ಯನು ಶೂದ್ರನ ಜೀವನಕ್ರಮವನ್ನು ಆತುಕೊಂಡು ಜೀವಿಸಬಹುದು. ಆದರೆ ಹಾಗೆ ಮಾಡುವಾಗ ಅವನಿಗೆ ನಿಷಿದ್ಧವಾದ ಕರ್ಮಗಳಲ್ಲಿ ತೊಡಗಬಾರದು ಮತ್ತು ಯಾವಾಗ ಇದನ್ನು (ಅಂದರೆ, ಶೂದ್ರನ ಜೀವನಕ್ರಮವನ್ನು) ತೊರೆಯಲು ಶಕ್ತನಾಗುತ್ತಾನೋ ಆಗ ಅದನ್ನು ತೊರೆದುಬಿಡಬೇಕು. (ಮನು : ೧೦.೯೮)

೧೩) ಆದರೆ ದ್ವಿಜರಲ್ಲಿ ಸೇವಕನಾಗಲು ಶೂದ್ರನು ಸ್ಥಾನ ಪಡೆಯದಿದ್ದು ತನ್ನ ಹೆಂಡಿರು ಮಕ್ಕಳನ್ನು ತೊರೆದು ಹಸಿವಿನಿಂದ ಬಾಧೆಯನ್ನು ಎದುರಿಸಬೇಕಾದ ಪರಿಸ್ಥಿತಿ ಬಂದರೆ ಅವನು ಕರಕುಶಲ ಕರ್ಮಗಳಿಂದ ಜೀವನ ಹೊರೆಯಬಹುದು. (ಮನು ; ೧೦. ೯೯)

## III

೧೪) ತನಗಿಂತಲೂ ಉಚ್ಚರಾದ ಬ್ರಾಹ್ಮಣರಿಗೆ ವಿಧಿಸಲಾದ ಜೀವನಕ್ರಮವನ್ನು ಕ್ಷತ್ರಿಯನು ಎಂದಿಗೂ ದುರಭಿಮಾನದಿಂದ ಅನುಸರಿಸಬಾರದು. (ಮನು : ೧೦.೯೫)

೧೫) ವೈಶ್ಯನಿಗೆ ವಾಣಿಜ್ಯ, ಲೇವಾದೇವಿ, ಭೂಮಿಯ ಕೃಷಿ ಮತ್ತು ಪಶುಪಾಲನೆಗಳಲ್ಲಿ ತೊಡಗುವಂತೆಯೂ

ಶೂದ್ರರು ದ್ವಿಜರ ಸೇವೆಯಲ್ಲಿ ತೊಡಗುವಂತೆಯೂ ರಾಜನು ಆಜ್ಞಾಪಿಸಬೇಕು. (ಮನು ೮.೪೧೦)

೧೬) ವೈಶ್ಯ ಮತ್ತು ಶೂದ್ರರಿಗೆ ವಿಧಿಸಲಾಗಿರುವ ಕರ್ಮಗಳನ್ನು ಮಾಡಲು ಅವರನ್ನು ರಾಜನು ಎಚ್ಚರದಿಂದ ಒತ್ತಾಯಿಸಬೇಕು; ಏಕೆಂದರೆ ಈ ಎರಡು ವರ್ಣದವರು ತಮ್ಮ ಕರ್ತವ್ಯಗಳಿಂದ ವಿಮುಖರಾದರೆ ಅವರು ಇಡೀ ಪ್ರಪಂಚವನ್ನೇ ಗೊಂದಲಕ್ಕೆ ಸಿಲುಕಿಸುತ್ತಾರೆ. (ಮನು : ೮. ೪೧೮)

## IV

೧) ಕುರುಡ, ಮನೋವಿಕಲ, ಕೂರಿಗೆಗಳ ಸಹಾಯದಿಂದ ಅಡ್ಡಾಡುವ ಕುಂಟ, ಎಪ್ಪತ್ತು ವರ್ಷಗಳ ಮುದುಕ ಮತ್ತು ಶ್ರೋತ್ರಿಯರಿಗೆ ಅನುಕೂಲಗಳನ್ನು ಕಲ್ಪಿಸಿಕೊಡುವವನು – ಇವರನ್ನು ತೆರಿಗೆ ನೀಡಲು ಯಾವ ರಾಜನೂ ಒತ್ತಾಯಿಸಬಾರದು. (ಮನು ; ೮.೩೯೪)

೨) ಎಷ್ಟೇ ಆವಶ್ಯಕತೆಯಿಂದ ತೊಂದರೆಗೆ ಸಿಲುಕಿದ್ದರೂ ರಾಜನು ಶ್ರೋತ್ರಿಯರಿಗೆ ತೆರಿಗೆಯನ್ನು ವಿಧಿಸಬಾರದು; ಮತ್ತು ತನ್ನ ಆಧಿಪತ್ಯದಲ್ಲಿರುವ ಯಾವ ಶ್ರೋತ್ರಿಯನೂ ಹಸಿವಿನಿಂದ ಸೊರಗಿಹೋಗಬಾರದು. (ಮನು : ೭. ೧೩೩)

೩) ರಾಜನು ತನ್ನ ಆಧಿಪತ್ಯದಲ್ಲಿ ಸಾರಿಗೆಯಿಂದ ಜೀವನ ಹೊರೆಯುವ ಸಾಮಾನ್ಯ ಒಕ್ಕಲಿನವರನ್ನು ಸ್ವಲ್ಪ ಹಣವನ್ನು ವಾರ್ಷಿಕ ತೆರಿಗೆಯಾಗಿ ತೆರುವಂತೆ ಮಾಡಬಹುದು. (ಮನು : ೭. ೧೩೭)

೪) ದೈಹಿಕ ದುಡಿಮೆಯಿಂದ ಜೀವನ ಹೊರೆಯುವ ಕುಶಲಕರ್ಮಿಗಳು, ಕೈಕೆಲಸಗಾರರು ಹಾಗೂ ಶೂದ್ರರು ಪ್ರತಿ ತಿಂಗಳಲ್ಲಿ ಒಂದು ದಿನ ತನಗಾಗಿ ಕೆಲಸ ಮಾಡುವಂತೆ ರಾಜನು ವಿಧಿಸಬಹುದು. (ಮನು : ೭. ೧೩೮)

೫) ಮರಣದಂಡನೆಗೆ ಬದಲಾಗಿ ಬ್ರಾಹ್ಮಣನಿಗೆ ತಲೆಯನ್ನು ಬೋಳಿಸುವುದು ವಿಧಿಸಲಾಗಿದೆ; ಆದರೆ ಇತರ ವರ್ಣದವರು ಮರಣದಂಡನೆಗೆ ಗುರಿಯಾಗಬಹುದು. (ಮನು : ೮.೩೭೯)

೬) ಎಷ್ಟೇ ಅಗಾಧವಾದ ಅಪರಾಧಗಳನ್ನೆಸಗಿದ್ದರೂ ಬ್ರಾಹ್ಮಣನನ್ನು ರಾಜನು ಹತ್ಯೆಗೆ ಗುರಿ ಮಾಡಬಾರದು; ಅಂತಹ ಅಪರಾಧಿಯ ಶರೀರಕ್ಕೆ ಯಾವ ಊನವನ್ನೂ ಉಂಟುಮಾಡದೆ, ತನ್ನೆಲ್ಲ ಆಸ್ತಿಯನ್ನು ಬಿಟ್ಟುಕೊಟ್ಟು, ಅವನು ರಾಜ್ಯ ಭ್ರಷ್ಟನಾಗುವಂತೆ ರಾಜನು ವಿಧಿಸಬಹುದು. (ಮನು : ೮. ೩೮೦)

೭) ಬ್ರಾಹ್ಮಣನನ್ನು ಹತ್ಯೆ ಮಾಡುವುದಕ್ಕಿಂತಲೂ ಮಹತ್ತರವಾಧ ಅಪರಾಧ ಈ ಭೂಮಿಯ ಮೇಲೆ ಬೇರೊಂದಿಲ್ಲ; ಆದ್ದರಿಂದ, ಬ್ರಾಹ್ಮಣನನ್ನು ಕೊಲ್ಲುವ ಯೋಚನೆಯನ್ನು ರಾಜನು ಮನಸ್ಸಿನಲ್ಲಿ ಸಹ ಮಾಡಬಾರದು. (ಮನು : ೮.೩೮೧)

೮) ಹಿಂದಿನ ಕಾಲದಲ್ಲಿ ಯಾವಾಗಲೋ ಹೂತಿಟ್ಟಿದ್ದ ಸಂಪತ್ತು ಸಿಕ್ಕಿದರೆ ಒಬ್ಬ ವಿದ್ಯಾವಂತ ಬ್ರಾಹ್ಮಣನು ಅದನ್ನು ಪೂರ್ತಿಯಾಗಿ ಅವನೇ ಉಳಿಸಿಕೊಳ್ಳಬಹುದು ಕೂಡ; ಏಕೆಂದರೆ, ಅವನು ಸರ್ವಸ್ವಕ್ಕೂ ಒಡೆಯ. (ಮನು : ೮.೩೭)

೯) ಭೂಮಿಯಲ್ಲಿ ಹಿಂದೆಂದೋ ಅಡಗಿಸಿಟ್ಟಿದ್ದ ಸಂಪತ್ತೇನಾದರೂ ರಾಜನಿಗೆ ಸಿಕ್ಕಿದರೆ ಅದರ ಅರ್ಧಭಾಗವನ್ನು ಬ್ರಾಹ್ಮಣನಿಗೆ ನೀಡಬೇಕು ಮತ್ತು ಉಳಿದರ್ಧ ಭಾಗವನ್ನು ರಾಜ್ಯದ ಖಜಾನೆಗೆ ಸೇರಿಸಬೇಕು. (ಮನು : ೮.೩೮)

## ಜೀವನ ವಿಧಾನ

೧) ಶುದ್ಧನಾದ, ತನಗಿಂತಲೂ ಉತ್ತಮರಾದವರ ಸೇವಕನಾದ, ಭಾಷೆಯಲ್ಲಿ ಮೃದುವಾದ, ಅಹಂಕಾರದಿಂದ ಮುಕ್ತನಾದ ಮತ್ತು ಯಾವಾಗಲೂ ಬ್ರಾಹ್ಮಣರಲ್ಲಿ ಆಸರೆಯನ್ನು ಅರಸುವ ಶೂದ್ರನು ತನ್ನ ಮುಂದಿನ ಜನ್ಮದಲ್ಲಿ ಒಂದು ಮೇಲ್ಜಾತಿಯಲ್ಲಿ ಹುಟ್ಟುತ್ತಾನೆ. (ಮನು : ೯. ೩೩೫)

೨) ಸ್ವರ್ಗವನ್ನು ಸೇರಲು ಇಲ್ಲವೆ ಇಹಪರಗಳೆರಡರ ದೃಷ್ಟಿಯಿಂದ ಒಬ್ಬ ಶೂದ್ರನು ಬ್ರಾಹ್ಮಣರ ಸೇವೆ ಮಾಡಬೇಕು; ಏಕೆಂದರೆ, ಬ್ರಾಹ್ಮಣನೊಬ್ಬನ ಸೇವಕನೆನಿಸಿಕೊಂಡ ಮಾತ್ರಕ್ಕೆ ತನ್ನೆಲ್ಲ ಅಭಿಲಾಷೆಗಳನ್ನೂ ಅವನು ಪೂರೈಸಿಕೊಳ್ಳಬಹುದು. (ಮನು : ೧೦.೧೨೨)

೩) ಬ್ರಾಹ್ಮಣರ ಸೇವೆ ಮಾಡಿ ಜೀವನ ಹೊರೆಯುವುದು ಶೂದ್ರನಿಗೆ ಆಗದಿದ್ದರೆ ಆಗ ಅವನು ಕ್ಷತ್ರಿಯನ ಸೇವೆ ಮಾಡಬಹುದು ಇಲ್ಲವೆ ಶ್ರೀಮಂತ ವೈಶ್ಯನೊಬ್ಬನ ಉಪಚಾರಕನಾಗಿಯೂ ತನ್ನ ಹೊಟ್ಟೆ ಹೊರೆಯಲು ಯತ್ನಿಸಬಹುದು. (ಮನು : ೧೦.೧೨೧)

೪) (ಅವನಿಂದ ಸೇವೆ ಮಾಡಿಸಿಕೊಳ್ಳುವ ಇತರ ವರ್ಣಗಳವರು) ತಮ್ಮ ಕುಟುಂಬದ ಆಸ್ತಿಯಿಂದ ಜೀವನಾಧಾರಕ್ಕೆಂದು ತಕ್ಕಷ್ಟನ್ನು ಅವನಿಗೆ (ಅಂದರೆ, ಶೂದ್ರನಿಗೆ) ತೆಗೆದಿರಿಸಬೇಕು. ಅದಕ್ಕಾಗಿ ಅವನ ಸಾಮರ್ಥ್ಯ, ದಕ್ಷತೆ ಮತ್ತು ಅವನ ಸಂಸಾರದಲ್ಲಿ ಎಷ್ಟು ಮಂದಿಯನ್ನು ಪೋಷಿಸಬೇಕು ಎಂಬಂಶಗಳನ್ನು ಗಣನೆಗೆ ತೆಗೆದುಕೊಳ್ಳಬೇಕು. (ಮನು : ೧೦.೧೨೪)

೫) ಅವರು ಭೋಜನ ಮಾಡಿ ಉಳಿದದ್ದನ್ನು ಅವನಿಗೆ ಕೊಟ್ಟು ಬಿಡಬೇಕು; ಅಂತೆಯೇ ಅವರ ಹಳೆಯ ಬಟ್ಟೆಗಳು, ದವಸದಲ್ಲಿ ಜೊಳ್ಳೆಂದು ಬೇರೆ ಮಾಡಿಟ್ಟಿದ್ದು ಮತ್ತು ಹಳೆಯ ಪೀಠೋಪಕರಣಗಳು – ಇವನ್ನೂ ಅವರು ಅವನಿಗೆ ಕೊಡಬೇಕು. (ಮನು : ೧೦.೧೨೫)

೬) ತನಗೆ ಸಾಮರ್ಥ್ಯವಿದ್ದರೂ ಶೂದ್ರನು ಸಂಪತ್ತನ್ನು ಶೇಖರಿಸಲೆಳಸಬಾರದು ಏಕೆಂದರೆ ಸಂಪತ್ತನ್ನು ಗಳಿಸಿಕೊಂಡ ಶೂದ್ರನು ಬ್ರಾಹ್ಮಣನಿಗೆ ಬಾಧೆಯನ್ನುಂಟುಮಾಡುತ್ತಾನೆ. (ಮನು : ೧೦.೧೨೯)

೭) ಧರ್ಮಕ್ಕೆ ಅನುಗುಣವಾಗಿ ಜೀವನ ನಡೆಸುವ ಶೂದ್ರರು ತಿಂಗಳಿಗೊಮ್ಮೆ ಅವರ ತಲೆಗಳನ್ನು ಬೋಳಿಸಿಕೊಳ್ಳಬೇಕು. ಅವರ ಶುದ್ಧಿಕರ್ಮವು ವೈಶ್ಯರಿಗೆ ಅನ್ವಯವಾಗುವ ಶುದ್ಧಿಕರ್ಮದ ವಿಧಾನವನ್ನೇ ಹೋಲುತ್ತದೆ ಮತ್ತು ಅವರ ಆಹಾರವು ಆರ್ಯನೊಬ್ಬನು ಭೋಜನ ಮಾಡಿ ಉಳಿದದ್ದೇ ಆಗಿರುತ್ತದೆ. (ಮನು : ೫.೧೪೦)

ಮೊದಲೇ ಹೇಳಿದಂತೆ ಪ್ರಾಚೀನ ಧರ್ಮಶಾಸ್ತ್ರಕಾರರು ನಿಗದಿಗೊಳಿಸಿದ ನಿಯಮಗಳು ಅನ್ವಯವಾಗುವ ಸಮಾಜದಲ್ಲಿ ಎರಡು ವಿಭಾಗಗಳಿದ್ದವು. ಒಂದು ಚಾತುರ್ವರ್ಣ್ಯದ ವ್ಯವಸ್ಥೆಯ ಒಳಗೇ ಸೇರ್ಪಡೆ ಹೊಂದಿದ್ದವರದು; ಇನ್ನೊಂದು ಅದರ ಛಾಯೆಯಿಂದ ಹೊರಗೆ ಉಳಿದಿದ್ದವರದು. ಮನುಧರ್ಮಶಾಸ್ತ್ರದಲ್ಲಿ ಅವರನ್ನು ಬಾಹ್ಯರು, ಅಂದರೆ ಚಾತುರ್ವರ್ಣ್ಯದ ಛಾಯೆಯ ಹೊರಗಿನವರು ಎಂದು ಹೆಸರಿಸಲಾಗಿದೆ. ಅವರು ಕೀಳುಜಾತಿಯವರು ಎಂದು ಹೆಸರಿಸಲ್ಪಟ್ಟಿದ್ದಾರೆ. ಸದ್ಯದಲ್ಲಿ ಈ ಕೀಳುಜಾತಿಯವರ ಉಗಮದ ಬಗೆಗಿನ ಪ್ರಶ್ನೆಯನ್ನು ನಾನು ಎತ್ತಿಕೊಳ್ಳುತ್ತಿಲ್ಲ. ಇಷ್ಟನ್ನು ಮಾತ್ರ ಈಗ್ಗೆ ಹೇಳಬಹುದು : ಹಿಂದೂಗಳ ಈ ಪ್ರಾಚೀನ ಧರ್ಮಶಾಸ್ತ್ರಕಾರರ ಪ್ರಕಾರ ಈ ಕೀಳುಜಾತಿಗಳವು ಚಾತುರ್ವರ್ಣ್ಯ ಪದ್ಧತಿಯಲ್ಲಿ ಸೇರಿದ ನಾಲ್ಕು ವರ್ಗಗಳಾದ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರರ ನಡುವಣ ಅಂತರ್ವಿವಾಹಗಳಿಂದ ಸಂಜಾತರಾದ ಸಂತತಿಯವರು. ಇದು ಎಷ್ಟರಮಟ್ಟಿಗೆ ಸತ್ಯವೆಂಬುದನ್ನು ಬೇರೊಂದು ಸಮಯದಲ್ಲಿ

ಪರೀಕ್ಷೆ ಮಾಡಲಾಗುತ್ತದೆ. ನಮ್ಮ ಮುಂದಿರುವ ಪ್ರಮುಖವಾದ ಪ್ರಶ್ನೆಯು ಸಾಮಾಜಿಕ ಸಂಬಂಧಗಳಿಗೆ ಸಂಬಂಧಿಸಿದ್ದು, ಅದರ ಉಗಮದ ಪ್ರಶ್ನೆ ಅಲ್ಲ. ಚಾತುರ್ವರ್ಣ್ಯ ಪದ್ಧತಿಯೊಳಗಿನವರಿಗೆ ಅನ್ವಯವಾಗುವ ನಿಯಮಗಳನ್ನು ನಾವು ಈವರೆಗೆ ಕೊಟ್ಟಿದ್ದೇವೆ. ಇದರ ಹೊರಗಿನವರಿಗೆ ಅಥವಾ ಕೀಳುಜಾತಿಗಳವರು ಎಂದೆನಿಸಿಕೊಳ್ಳುವವರಿಗೆ, ಅನ್ವಯವಾಗುವ ನಿಯಮಗಳನ್ನು ಕೊಡುವುದು ಬಾಕಿಯಿದೆ. ಕೀಳುಜಾತಿಯವರ ಜೀವನವನ್ನು ನಿಯಮನಗೊಳಿಸುವ ಸೂತ್ರಗಳು ಆಶ್ಚರ್ಯಗೊಳಿಸುವಷ್ಟು ಕಡಿಮೆ ಇವೆ. ಅವೆಷ್ಟೇ ಕಡಿಮೆಯಿದ್ದರೂ ಅವರಿಗೆ (ಅಂದರೆ, ಕೀಳುಜಾತಿಯವರಿಗೆ) ಅವು (ಅಂದರೆ, ನಿರ್ದೇಶಕ ಸೂತ್ರಗಳು) ಎಷ್ಟು ಅಲ್ಪ ಅವಕಾಶಗಳನ್ನೊದಗಿಸುತ್ತವೆಂದರೆ ಒಂದು ದೀರ್ಘವಾದ ನಿಯಮಾವಳಿಗೆ ಸಂಹಿತೆಯನ್ನು ಮಾಡುವ ಆವಶ್ಯಕತೆಯೇ ಬರುವುದಿಲ್ಲ. ಅವು ಕೆಳಕಂಡಂತಿವೆ :

೧) ಬಾಯಿ, ಬಾಹುಗಳು, ತೊಡೆಗಳು ಮತ್ತು ಪಾದಗಳಿಂದ ಜನಿಸಿದ ಸಮೂಹದಿಂದ ಹೊರಗಿರುವ ಎಲ್ಲ ವಿಶ್ವದ ಬುಡಕಟ್ಟುಜನರನ್ನೂ ದಸ್ಯುಗಳು ಎಂದು ಕರೆಯಲಾಗುತ್ತದೆ. ಅವರು ಮ್ಲೇಚ್ಛರ (ಅಂದರೆ ಒರಟು ಜನರ) ಭಾಷೆಯನ್ನಾಡಲಿ ಅಥವಾ ಆರ್ಯರ ಭಾಷೆಯನ್ನಾಡಲಿ, ಒಟ್ಟಿನಲ್ಲಿ ಅವರು ದಸ್ಯುಗಳೇ. (ಮನು : ೧೦. ೪೫)

೨) ಈ ಬುಡಕಟ್ಟುಗಳವರು ವಾಸಿಸಬೇಕಾದದ್ದು ಸುಪರಿಚಿತ ಮರಗಳ ಮತ್ತು ಸ್ಮಶಾನಗಳ ಬಳಿ, ಬೆಟ್ಟಗುಡ್ಡಗಳಲ್ಲಿ ಮತ್ತು ಕಾಡು ಪ್ರದೇಶಗಳಲ್ಲಿ. ಅವಕ್ಕೆ ಕೆಲವು ಗುರುತುಗಳಿರಬೇಕು ಮತ್ತು ಅವರು ತಮ್ಮ ಹೊಟ್ಟೆ ಹೊರೆಯಲು ತಮ್ಮದೇ ಆದ ವಿಲಕ್ಷಣ ಕಸುಬುಗಳನ್ನು ಆಶ್ರಯಿಸಬೇಕು. (ಮನು : ೧೦.೫೦)

೩) ಆದರೆ ಚಂಡಾಲರ ಮತ್ತು ಶ್ವಪಚರ ವಾಸಸ್ಥಾನವು ಹಳ್ಳಿಯಿಂದ ಹೊರಗಿರಬೇಕು. ಅವರನ್ನು ಅಪಾತ್ರರನ್ನಾಗಿಸಬೇಕು. (ಅಂದರೆ, ಏನನ್ನೂ ಸ್ವೀಕರಿಸಲು ಅನರ್ಹರು ಎಂದು ಪರಿಗಣಿಸಬೇಕು) ಅವರ ಸಂಪತ್ತೆಂದರೆ ನಾಯಿಗಳು, ಕತ್ತೆಗಳು. (ಮನು : ೧೦. ೫೧)

೪) ಸತ್ತವರ ಬಟ್ಟೆಗಳು ಅವರ ಉಡುಪು, ಅವರು ಊಟ ಮಾಡಬೇಕಾದದ್ದು ಚೂರಾದ ಮಡಕೆ ಕುಡಿಕೆಗಳಲ್ಲಿ, ಕಪ್ಪು ಕಬ್ಬಿಣವೇ ಅವರ ಆಭರಣಗಳು. ಅವರು ಸದಾ ಕಾಲವೂ ಒಂದೆಡೆಯಿಂದ ಇನ್ನೊಂದೆಡೆಗೆ ಅಲೆದಾಡುತ್ತಿರಬೇಕು. (ಮನು ; ೧೦. ೫೨)

೫) ಧಾರ್ಮಿಕ ಕರ್ತವ್ಯಗಳಲ್ಲಿ ನಿರತರಾದವರು ಅವರೊಡನೆ ಸಂಪರ್ಕವನ್ನಿರಿಸಿಕೊಳ್ಳಬಾರದು. ಅವರ ವ್ಯವಹಾರಗಳೆಲ್ಲಾ ಅವರವರಲ್ಲೇ ನಡೆಯಬೇಕು. ಅವರ ಮದುವೆಗಳು ಅವರ ಸಮಾನರಲ್ಲೇ ಜರುಗಬೇಕು. (ಮನು; ೧೦.೫೩)

೬) ಅವರಿಗೆ ಆರ್ಯರಲ್ಲದವರು ಒಡೆದ ಪಾತ್ರೆಗಳಲ್ಲಿ ಆಹಾರ ಕೊಡಬೇಕು. ರಾತ್ರಿಯ ವೇಳೆಗಳಲ್ಲಿ ಅವರು ಹಳ್ಳಿಗಳಲ್ಲಿ ಮತ್ತು ಪಟ್ಟಣಗಳಲ್ಲಿ ಸಂಚರಿಸಕೂಡದು (ಮನು : ೧೦.೫೪)

೭) ದಿನದ ವೇಳೆಯಲ್ಲಿ ಕೆಲಸಕ್ಕೆ ಹೋಗುವಾಗ ಅವರು ರಾಜಾಜ್ಞೆಯಂತೆ ಸ್ಪಷ್ಟವಾದ ಗುರುತುಗಳನ್ನು ಹಾಕಿಕೊಂಡೇ ಹೋಗಬೇಕು ಮತ್ತು ಸಂಬಂಧಿಗಳಿಲ್ಲದವರ ಹೆಣಗಳನ್ನು ಎತ್ತುವುದು ಅವರ ಕೆಲಸ. ಇದು ನಿಯಮಿತವಾದ ಸೂತ್ರ. (ಮನು : ೧೦.೫೫)

೮) ಕಾನೂನಿನನ್ವಯ ಅಪರಾಧಿಗಳನ್ನು ರಾಜಾಜ್ಞೆಯಂತೆ ಕಡಿದುಹಾಕುವುದು ಅವರ ಯಾವತ್ತಿನ ಕೆಲಸ. ಅಂತಹ ಅಪರಾಧಿಗಳ ಬಟ್ಟೆಗಳು, ಹಾಸಿಗೆ, ಆಭರಣ ಇತ್ಯಾದಿಗಳನ್ನು ಅವರು ತಮಗೇ ಇರಿಸಿಕೊಳ್ಳಬಹುದು. (ಮನು; ೧೦.೫೬)

೯) ಕೀಳುಜಾತಿಗಳಿಗೆ ಸೇರಿದ ಹೆಂಗಸೊಬ್ಬಳೊಡನೆ ಸಂಬಂಧವನ್ನಿರಿಸಿಕೊಂಡವನನ್ನು ಮರಣದಂಡನೆಗೆ ಗುರಿಮಾಡಲಾಗುತ್ತದೆ. (ವಿಷ್ಣು : ೫.೪೩)

೧೦) ದ್ವಿಜರ ಜಾತಿಗೆ ಸೇರಿದವನೊಬ್ಬನನ್ನು ಬೇರೊಬ್ಬ ದ್ವಿಜರ ಜಾತಿಯವನು ಮಾತ್ರವೇ ಮುಟ್ಟಬಹುದೆಂದಿರುವಾಗ ಮತ್ತು ಅವನು ಚಂಡಾಲ ಅಥವಾ ಬೇರೆ ಯಾವುದಾದರೂ ಕೀಳು ಜಾತಿಗೆ ಸೇರಿದವರನ್ನು ಮುಟ್ಟಿಸಿಕೊಳ್ಳಬಾರದೆಂದಿರುವಾಗ ಈ ಚಂಡಾಲ ಅಥವಾ ಇತರ ಕೀಳು ಜಾತಿಯವರು ಯಾರಾದರೂ ಉದ್ದೇಶಪೂರ್ವಕವಾಗಿ (ದ್ವಿಜರನ್ನು) ಮೈಲಿಗೆಮಾಡಿದರೆ ಅಂತಹವರನ್ನು ಮರಣದಂಡನೆಗೆ ಗುರಿಮಾಡಬೇಕು. (ವಿಷ್ಣು : ೫.೧೦೪)

* * * *

# ಭಾಗ – ಮೂರು

# ಸಮಸ್ಯೆಯ ಮೂಲಗಳು

## ಅಧ್ಯಾಯ ೮

# ಒಂದೇ ಬಗೆಯ ನಿದರ್ಶನಗಳು

I) ರೋಮನ್ ಸಾಮ್ರಾಜ್ಯದಲ್ಲಿ ಗುಲಾಮಗಿರಿ

II) ಇಂಗ್ಲೆಂಡಿನ ಜೀತ ಪದ್ಧತಿ

III) ಯೆಹೂದಿಗಳು ಹಾಗೂ ದಾಸ್ಯ

IV) ನೀಗ್ರೋ ಗುಲಾಮಗಿರಿ

ಸಾಮಾಜಿಕ ಅಸಮಾನತೆಯೆನ್ನುವುದು ಹಿಂದೂ ಸಮಾಜಕ್ಕೆ ಸೀಮಿತವಾದದ್ದೇನೂ ಅಲ್ಲ. ಬೇರೆ ದೇಶಗಳಲ್ಲೂ ಹಲವು ಸಂದರ್ಭಗಳಲ್ಲಿ ಇದ್ದ ಇಂಥ ಅಸಮಾನತೆ, ಸಮಾಜವನ್ನು ಮೇಲು ಮತ್ತು ಕೆಳಸ್ತರಗಳಾಗಿ, ಸ್ವತಂತ್ರ ಮತ್ತು ಅಸ್ವತಂತ್ರ ವರ್ಗಗಳಾಗಿ, ಗೌರವಯುತ ಮತ್ತು ಹೀನಜನಗಳೆಂದು ಒಡೆದು ವಿಂಗಡಿಸಿತ್ತು. ಅಂತಹ, ಬೇರೆ ದೇಶಗಳ ಪ್ರಾಚೀನ ಮತ್ತು ಆಧುನಿಕ ಕಾಲಗಳ, ಅಸ್ವತಂತ್ರ – ಹೀನ ವರ್ಗಗಳನ್ನು ಭಾರತದ ಅಸ್ಪೃಶ್ಯ ವರ್ಗದೊಂದಿಗೆ ಹೋಲಿಸಿ ನೋಡುವುದು ಕುತೂಹಲಕಾರಿಯಾದದ್ದು. ಆ ರೀತಿ ಹೋಲಿಸಿ ಅವುಗಳ ಸಾಮ್ಯ ಮತ್ತು ಭಿನ್ನತೆಯನ್ನು ಅರ್ಥಮಾಡಿಕೊಳ್ಳುವ ಮೊದಲು ಅಂತಹ ಸಮಾನಾಂತರ ನಿದರ್ಶನಗಳ ಇತಿಹಾಸವನ್ನೂ ಸ್ವಲ್ಪಮಟ್ಟಿಗೆ ತಿಳಿಯಬೇಕು. ಪ್ರಪಂಚದ ಎಲ್ಲ ಭಾಗಗಳ ಅಂತಹ ಉದಾಹರಣೆಗಳೆಲ್ಲವನ್ನೂ ಸಮೀಕ್ಷೆ ಮಾಡುವುದು ಅಸಾಧ್ಯದ ಕೆಲಸ; ಅನಗತ್ಯ ಕೂಡ. ಕೆಲವು ಮುಖ್ಯ ನಿದರ್ಶನಗಳನ್ನು ಮಾತ್ರ ಇಲ್ಲಿ ಉದಾಹರಣೆಗಳಾಗಿ ಎತ್ತಿಕೊಳ್ಳಲಾಗಿದೆ.

ಹಿಂದೂ ಮತ್ತು ಅಸ್ಪೃಶ್ಯ ಸಮುದಾಯಗಳ ನಡುವಿನ ಸಂಬಂಧವನ್ನು ವಿಶ್ಲೇಷಿಸುವಾಗ ಮೂರು ಪ್ರಶ್ನೆಗಳು ತಟ್ಟನೆ ಏಳುತ್ತವೆ. ಅಸ್ಪೃಶ್ಯತೆ ಇನ್ನೂ ಏಕೆ ಮಾಯವಾಗಿಲ್ಲ? ಅಸ್ಪೃಶ್ಯರ ವಿರುದ್ಧ ನಡೆಸುವ ಕಾನೂನು ವಿರೋಧಿ ಅನ್ಯಾಯಗಳನ್ನು ಹಿಂದೂಗಳು ಏಕೆ ಕಾನೂನುಬದ್ಧ ಮತ್ತು ನ್ಯಾಯ ಎಂದು ಪರಿಗಣಿಸುತ್ತಾರೆ? ಮತ್ತು ಅಸ್ಪೃಶ್ಯರೊಂದಿಗಿನ ಹಿಂದೂಗಳ ನಡವಳಿಕೆಯಲ್ಲಿ ಹಿಂದೂಗಳಿಗೆ ಅಂತಃಸಾಕ್ಷಿಯ ಅಳುಕು ಏಕೆ ಉದ್ಭವಿಸುವುದಿಲ್ಲ?

## I

ಅಸ್ಪೃಶ್ಯರು ಹಾಗೆಯೇ, ನೀಚ ಮತ್ತು ಹೀನ ಎಂದು ಪರಿಗಣಿಸಲ್ಪಟ್ಟ ವರ್ಗಗಳು ಒಂದು ಕಾಲದಲ್ಲಿ ಬೇರೆ ಸಮಾಜಗಳಲ್ಲೂ ಇದ್ದವು. ಉದಾಹರಣೆಗೆ ಪ್ರಾಚೀನ ರೋಮನ್ ಸಾಮ್ರಾಜ್ಯವನ್ನೇ ನೋಡಬಹುದು. ಪ್ರಾಚೀನ ರೋಮನ್ ಸಮಾಜ ಐದು ವರ್ಗಗಳಾಗಿ ವಿಂಗಡಿಸಲ್ಪಟ್ಟಿತ್ತು: ೧) ಶ್ರೀಮಂತರು (Patricians) ೨) ಸಾಮಾನ್ಯರು (Plebians) ೩) ಆಶ್ರಿತರು (Clients) ೪) ಗುಲಾಮರು ಮತ್ತು ೫) ಸ್ವತಂತ್ರರು (Freemen)

ಶ್ರೀಮಂತರು ಆಳುವ ವರ್ಗವಾಗಿದ್ದರು. ಅವರು ಎಲ್ಲ ರೀತಿಯಿಂದಲೂ 'ನಾಗರಿಕ' ರೆನಿಸಿಕೊಂಡಿದ್ದರೆ ಉಳಿದವರು ಅವರಿಗೆ ಅಡಿಯಾಳಾಗಿದ್ದರು. ಯುದ್ಧದಲ್ಲಿ ನಿರ್ನಾಮರಾಗಿ ಶರಣು ಬಂದವರು, ಸಾಮಾನ್ಯರು

ಮತ್ತು ಆಶ್ರಿತರಾಗಿರುತ್ತಿದ್ದರು. ಶ್ರೀಮಂತ ಕುಟುಂಬಗಳ ಮುಖ್ಯರಿಗೆ ಶರಣಾಗಿ ಬಂದು ಅವರ ಅಡಿಯಾಳಾಗಿ ಬದುಕುವವರಿಗೆ ಆಶ್ರಿತರು ಎಂಬ ಹೆಸರು ಬಂದರೆ, ಹಾಗೆ ಖಾಸಗಿ ಒಡೆಯರ ಅಡಿಯಾಳಾಗಲು ಒಪ್ಪದ ಸ್ವತಂತ್ರ ಮನೋವೃತ್ತಿಯವರು ನೇರವಾಗಿ ರಾಜ್ಯದ ರಕ್ಷಣೆಗೊಳಪಟ್ಟು ಸಾಮಾನ್ಯರಾದರು. ಸಾಮಾನ್ಯರಿಗೆ ಸ್ಥಿರ ಮತ್ತು ಚರ ಆಸ್ತಿಯ ಹಕ್ಕಿತ್ತು. ರೋಮನ್ ಕಾನೂನಿನ ಚೌಕಟ್ಟಿನಲ್ಲಿ ಅದನ್ನು ವರ್ಗಾಯಿಸುವ ಹಕ್ಕೂ ಇತ್ತು. ಹಾಗೂ ನ್ಯಾಯಾಲಯಗಳ ರಕ್ಷಣೆ ಅವರಿಗಿತ್ತು. ಆದರೆ ಅವರಿಗೆ ನಗರದ ಆಡಳಿತದಲ್ಲಿ ಯಾವುದೇ ಪಾತ್ರವಿರಲಿಲ್ಲ. ಹಾಗಾಗಿ ಅವರು ಓಟಿನ ಹಕ್ಕಿಲ್ಲದ ಪ್ರಜೆಗಳಾಗಿ, ಒಂದು ರೀತಿಯ ಅರೆ–ನಾಗರಿಕ ಸ್ಥಿತಿಯಲ್ಲಿ ಬದುಕಬೇಕಿತ್ತು. ಅಲ್ಲದೆ, ಸಾಮಾನ್ಯರಿಗೆ ನಗರದ ಧಾರ್ಮಿಕ ಚಟುವಟಿಕೆಗಳಲ್ಲೂ ಯಾವುದೇ ಅವಕಾಶವಿರಲಿಲ್ಲ ಮತ್ತು ಅವರು ಅಶಕ್ತರೆಂಬ ಭಾವನೆಯಿಂದ ಶ್ರೀಮಂತ ವರ್ಗದೊಂದಿಗೆ ವೈವಾಹಿಕ ಸಂಬಂಧ ಬೆಳೆಸುವಂತಿರಲಿಲ್ಲ. ಇನ್ನು ಆಶ್ರಿತವರ್ಗ, ತನ್ನ ಜೀವನೋಪಾಯಕ್ಕೆ, ಪೋಷಣೆಗೆ ಶ್ರೀಮಂತ ಪೋಷಕರನ್ನು ಅವಲಂಬಿಸಬೇಕಿತ್ತು. ಶ್ರೀಮಂತ ಪೋಷಕರು ಆಶ್ರಿತರ ಮತ್ತು ಅವರ ಹೆಂಡಿರು ಮಕ್ಕಳ ಜೀವನ ನಿರ್ವಹಣೆಗೆ ಬೇಕಾದಷ್ಟನ್ನು ಅವರಿಗೆ ಕೊಡುತ್ತಿದ್ದರು. ಹೀಗೆ ಜೀವನ ನಿರ್ವಹಣೆಗೆ ಮಾತ್ರವಲ್ಲದೆ ಕಾನೂನಿನ ರಕ್ಷಣೆಗೂ ಆಶ್ರಿತ ವರ್ಗ ಶ್ರೀಮಂತ ಪೋಷಕರನ್ನು ಅವಲಂಬಿಸಿಕೊಂಡಿತ್ತು. ಆಶ್ರಿತರಿಗೆ ನಾಗರಿಕ ಸ್ಥಾನಮಾನವಿರದಿದ್ದುದರಿಂದ ಅವರು ಯಾವುದೇ ದಾವೆ ಹಾಕುವಂತಿರಲಿಲ್ಲ ಮತ್ತು ಒಮ್ಮೆ ಯಾವುದೇ ವ್ಯಾಜ್ಯದಲ್ಲಿ ಸಿಲುಕಿದರೆ ಅವರ ಪರವಾಗಿ ಅವರ ಪೋಷಕರು ನ್ಯಾಯಪರಿಹಾರಕ್ಕಾಗಿ ಬೇಡಿಕೊಳ್ಳಬೇಕಾಗುತ್ತಿತ್ತು.

ಇನ್ನು ಗುಲಾಮರು ಮಿಲಿಯಗಟ್ಟಲೆ ಇದ್ದರು. ಬಡ ಜಮೀನ್ದಾರರು ಕೆಲವೇ ಗುಲಾಮರನ್ನಿಟ್ಟುಕೊಂಡಿದ್ದರೆ ಶ್ರೀಮಂತ ಜಮೀನ್ದಾರರು ಒಬ್ಬೊಬ್ಬರೇ ಸಾವಿರಾರು ಗುಲಾಮರಿಗೆ ಒಡೆಯರಾಗಿರುತ್ತಿದ್ದರು. ಕಾನೂನಿನ ಕಣ್ಣಿಗೆ ಗುಲಾಮರು ಮನುಷ್ಯರಾಗಿರಲಿಲ್ಲ. ಆಸ್ತಿಯ ವಸ್ತುವಾಗಿದ್ದರು. ಹಾಗಾಗಿ ಅವರಿಗೆ ಯಾವುದೇ ಹಕ್ಕಿರಲಿಲ್ಲ. ಕೆಲವು ಮಾನವೀಯ ಒಡೆಯರು ಅವರನ್ನು ತುಸು ಕರುಣೆಯಿಂದ ನೋಡಿಕೊಳ್ಳುತ್ತಿದ್ದರಾದರೂ ಹೆಚ್ಚಾಗಿ ಅವರನ್ನು ತೀರ ಕ್ರೌರ್ಯದಿಂದಲೇ ನಡೆಸಿಕೊಳ್ಳಲಾಗುತ್ತಿತ್ತು. ಸೆನೆಕಾ ಬರೆಯುತ್ತಾನೆ : "ಊಟ ಮಾಡುವಾಗ ಒಬ್ಬ ಗುಲಾಮ ಕೆಮ್ಮಿದರೆ, ಸೀನಿದರೆ, ಬೀಗದ ಕೈಯನ್ನು ಶಬ್ದಮಾಡಿ ಕೆಡವಿದರೆ ನಮಗೆ ಯದ್ವಾತದ್ವಾ ರೋಷ ಉಕ್ಕುತ್ತದೆ, .....ಆಗ ನಾವು ಕಾಲು ಮುರಿಯುವಂತೆ, ಹಲ್ಲು ಉದುರುವಂತೆ ಅವನಿಗೆ ಬಾರಿಸುವುದಿದೆ." ಒಬ್ಬ ರೋಮನ್ ಶ್ರೀಮಂತನಂತೂ ಕೆಲಸದಲ್ಲಿ ನಿರ್ಲಕ್ಷ್ಯ ತೋರಿಸಿದ್ದ ಗುಲಾಮರನ್ನು ಕೊಳದ ಮೀನುಗಳಿಗೆ ಆಹಾರವಾಗಿ ಎಸೆಯುತ್ತಿದ್ದನಂತೆ. ತಮ್ಮ ಒಡೆಯರಿಗೆ ಅಸಂತೋಷವುಂಟುಮಾಡಿದ ಗುಲಾಮರನ್ನು ಸಾಧಾರಣವಾಗಿ ನೆಲಮಾಳಿಗೆಯ ಕಾರಾಗೃಹವೊಂದಕ್ಕೆ ಕಳಿಸಲಾಗುತ್ತಿತ್ತು. ಹಗಲು ಹೊತ್ತು ಅವರು ಕಾಲಿಗೆ ಕಟ್ಟಿದ ಭಾರದ ಸರಪಳಿಯೊಂದಿಗೆ ದುಡಿಯಬೇಕಿತ್ತು. ಹಲವರಿಗೆ ಕಬ್ಬಿಣ ಕಾಯಿಸಿ ಬರೆ ಹಾಕಲಾಗುತ್ತಿತ್ತು. ಗುಲಾಮರು ಕೆಲಸ ಮಾಡಬೇಕಿದ್ದ ಒಂದು ಗಿರಣಿಯನ್ನು ರೋಮನ್ ಲೇಖಕನೊಬ್ಬ ಹೀಗೆ ವರ್ಣಿಸಿದ್ದಾನೆ : "ದೇವರೇ ಎಂಥಾ ಕುಗ್ಗಿಹೋದ ಬಡಮನುಷ್ಯರು. ಛಡಿಯೇಟಿನಿಂದ ಚರ್ಮ ಕಿತ್ತು ಬಿಳಿಯಾಗಿದೆ.................ನೇತುಬಿದ್ದಿರುವ ಚಿಂದಿ ನಿಲುವಂಗಿ, ಬಾಗಿದ ಬೆನ್ನು, ಬೋಳಿಸಿದ ತಲೆ, ಸರಪಳಿಬಿಗಿದ ಕಾಲು, ಬೆಂಕಿಯ ಬಿಸಿಗೆ ವಿರೂಪಗೊಂಡ ದೇಹ, ಹೊಗೆಯ ಜಂಗುಹಿಡಿದ ರೆಪ್ಪೆಗಳು, ಮೈತುಂಬ ಹೊಟ್ಟಿನ ಧೂಳು[೧]."

---

೧. *ಸೀನ್ ಬೋಸ್–'ಹಿಸ್ಟರಿ ಆಫ್ ಏನ್ಷೆಂಟ್ ಸಿವಿಲೈಜೇಷನ್'.*

ಇಂಗ್ಲಿಷ್ ಸಮಾಜದಲ್ಲೂ ಒಂದು ಕಾಲಕ್ಕೆ ದಾಸ್ಯದಲ್ಲಿದ್ದ ವರ್ಗಗಳಿದ್ದವು. ನಾರ್ಮನ್ ದಾಳಿಯ ಕಾಲದಲ್ಲಿ ಇಂಗ್ಲಿಷ್ ಸಮಾಜದ ಸ್ಥಿತಿ ಹೇಗಿತ್ತೆಂದು ನೋಡುವುದಕ್ಕೆ 'ಡೂಮ್ಸ್‌ಡೇ ಬುಕ್' ಎಂಬ ಒಂದೇ ದಾಖಲೆ ನೋಡಿದರೆ ಸಾಕು. ೧೦೮೬ರಲ್ಲಿ ದಂಡನಾಯಕ ವಿಲಿಯಂ ತನ್ನ ದಾಳಿ ಮುಗಿಸಿಯಾದ ಮೇಲೆ ಮಾಡಿದ ಸಮೀಕ್ಷೆ ಈ 'ಡೂಮ್ಸ್‌ಡೇ ಬುಕ್'. ಇಂಗ್ಲೆಂಡಿನ ಭೂಮಿ ಮತ್ತು ಆ ಕಾಲದ ಭೂ ಹಿಡುವಳಿಗೆ ಸಂಬಂಧಿಸಿದ ಈ ಸಮೀಕ್ಷೆಯಲ್ಲಿ ಆಗಿನ ಜನಸಂಖ್ಯೆ ಈ ಕೆಳಕಂಡಂತೆ ವರ್ಗೀಕೃತವಾಗಿತ್ತೆಂದು ತಿಳಿಯುತ್ತದೆ.

| | | | | |
|---|---|---|---|---|
| ಕುಲೀನ ವರ್ಗ ಮತ್ತು ಪುರೋಹಿತವರ್ಗ | ಕ್ಕೆ ಸೇರಿದ | ಗೇಣಿ ಒಡೆಯರು | ೧,೪೦೦ | ೯,೩೦೦ |
| | | ಉಪ–ಗೇಣಿ ಒಡೆಯರು | ೭,೯೦೦ | |
| ಉಂಬಳಿದಾರ ಒಕ್ಕಲಿಗವರ್ಗ | ಕ್ಕೆ ಸೇರಿದ | ಸ್ವತಂತ್ರರು | ೧೨,೦೦೦ | ೪೪,೦೦೦ |
| | | ಗೇಣಿದಾರರು | ೩೨,೦೦೦ | |
| ಅರೆ ಸ್ವತಂತ್ರರು ಅಥವಾ ಅಸ್ವತಂತ್ರ ವರ್ಗ | ಕ್ಕೆ ಸೇರಿದ | ಜೀತದಾಳುಗಳು | ೧,೬೯,೦೦೦ | ೨,೫೯,೦೦೦ |
| | | ಸ್ಕಾಟ್ಲೆಂಡ್ ಮತ್ತು ಗಡಿನಾಡಿನ ರೈತರು | ೯೦,೦೦೦ | |
| ಗುಲಾಮರು | | | | ೨೫,೦೦೦ |

ಒಟ್ಟು ಇದ್ದ ೩,೩೭,೦೦೦ ಜನಸಂಖ್ಯೆಯಲ್ಲಿ ೨,೮೪,೦೦೦ ದಷ್ಟು ಜನ ಅಸ್ವತಂತ್ರರಾಗಿದ್ದರು ಅಥವಾ ಗುಲಾಮರಾಗಿದ್ದರು.

ಮೇಲಿನ ಉದಾಹರಣೆಗಳು ಜನಾಂಗ ಮತ್ತು ಧರ್ಮದ ಪಾಲಿಲ್ಲದಂತಹ ದಾಸ್ಯದ ನಿದರ್ಶನಗಳು. ಆದರೆ ಜನಾಂಗ ಅಥವಾ ಧರ್ಮ ದಾಸ್ಯಕ್ಕೆ ಕಾರಣವಾದ ಉದಾಹರಣೆಗಳಿಗೆ ಇತಿಹಾಸದಲ್ಲಿ ಕೊರತೆಯಿಲ್ಲ. ಅದರಲ್ಲಿ ಮುಖ್ಯವಾದ ಉದಾಹರಣೆ ಯೆಹೂದಿ ಜನಾಂಗದ್ದು. ಯೆಹೂದಿ ಜನಾಂಗ ಏಸು ಕ್ರಿಸ್ತನ ಸಾವಿಗೆ ಕಾರಣವಾಯಿತು ಎಂಬ ನಂಬಿಕೆಯ ಕಾರಣದಿಂದಾಗಿ ದಂಡನೆಗೆ ಒಳಪಡುತ್ತ ಬಂದಿದೆ. ಮಧ್ಯಯುಗದಲ್ಲಿ ಹೆಚ್ಚೂ ಕಡಿಮೆ, ಯೂರೋಪಿನ ಎಲ್ಲ ಪಟ್ಟಣಗಳಲ್ಲಿ ಯೆಹೂದಿಗಳು ಪಟ್ಟಣದ ಒಂದು ಭಾಗದಲ್ಲಿ ಪ್ರತ್ಯೇಕವಾಗಿ ಬದುಕಬೇಕಾಗಿತ್ತು. ಇಂಥ ಪ್ರತ್ಯೇಕಿತ ಯೆಹೂದಿ ವಸತಿಗೆ ಆಮೇಲೆ 'ಘೆಟ್ಟೋ' ಎಂದು ಹೆಸರು ಬಂತು. ೧೦೫೦ ರಲ್ಲಿ ಆಸ್ಟ್ರೇಲಿಯಾದ ಕೊಯಾನ್ಜಾದಲ್ಲಿ ನಡೆದ ಧರ್ಮಸಭೆಯೊಂದು ಹೀಗೆಂದು ಕಾನೂನು ಮಾಡಿತ್ತು: "ಯಾವನೇ ಕ್ರಿಶ್ಚಿಯನ್ನನೂ ಯೆಹೂದಿಗಳೊಂದಿಗೆ ಒಂದೇ ಮನೆಯಲ್ಲಿ ವಾಸಿಸಕೂಡದು, ಜೊತೆಗೆ ಆಹಾರ ಸೇವಿಸಕೂಡದು. ಈ ಆಜ್ಞೆಯನ್ನು ಉಲ್ಲಂಘಿಸಿದವರು ಏಳುದಿನಗಳ

ಪ್ರಾಯಶ್ಚಿತ್ತ ಮಾಡಬೇಕು. ಒಮ್ಮೆ ಅದಕ್ಕೊಪ್ಪದೇಹೋದರೆ ಆ ತಪ್ಪಿತಸ್ಥ ಕುಲೀನನಾಗಿದ್ದರೆ ಆತನನ್ನು ಬಹಿಷ್ಕರಿಸಬೇಕು. ಆತ ಹೀನನಾಗಿದ್ದರೆ ಆತನಿಗೆ ನೂರು ಛಡಿಯೇಟು ಕೊಡಬೇಕು." ೧೩೮೮ರ ಫಾಲೆನ್ಸಿಯಾ ಧರ್ಮ ಸಭೆ ಹೀಗೆಂದು ಕಾನೂನು ಮಾಡಿತು : "ಕ್ರಿಶ್ಚಿಯನ್ನರು ಯೆಹೂದಿ ಮತ್ತು ಆಫ್ರಿಕನ್ ಅರಬ್ಬಿಗಳಿಗೆ ನಿಗದಿಪಡಿಸಿದ ಪ್ರದೇಶದಲ್ಲಿ ವಾಸಮಾಡಬಾರದು ಮತ್ತು ಈಗ ಹಾಗೆ ವಾಸಿಸುತ್ತಿರುವವರು ಈ ಆಜ್ಞೆ ಪ್ರಕಟವಾದ ಎರಡು ತಿಂಗಳೊಳಗಾಗಿ ಅಲ್ಲಿಂದ ಜಾಗ ಖಾಲಿ ಮಾಡತಕ್ಕದ್ದು. ತಪ್ಪಿದರೆ, ಧಾರ್ಮಿಕ ದಂಡನೆಗೆ ಒಳಗಾಗುತ್ತಾರೆ." ಮಧ್ಯಯುಗದಲ್ಲಿ ಯೆಹೂದಿಯರು ಸಾಮೂಹಿಕ ಸ್ನಾನ ಮಾಡಲೇಬೇಕಿತ್ತು. ಕ್ರಿಶ್ಚಿಯನ್ನರು ಸ್ನಾನಮಾಡುವ ನದಿಗಳನ್ನು ಸ್ನಾನಕ್ಕೆ ಬಳಸಬಾರದು ಎಂದು ಸರ್ಕಾರ ಯೆಹೂದಿಗಳಿಗೆ ಕಟ್ಟಪ್ಪಣೆ ಮಾಡಿದ್ದರಿಂದ ಅವರಿಗೆ ಈ ಸಾಮೂಹಿಕ ಸ್ನಾನವಲ್ಲದೆ ಬೇರೆ ಗತಿಯಿರಲಿಲ್ಲ. ಹದಿನಾಲ್ಕನೇ ಶತಮಾನದಲ್ಲಿ ಅಗರ್ಸ್ ನಗರಕ್ಕೆ ಮತ್ತೆ ಯೆಹೂದಿಗಳಿಗೆ ಪ್ರವೇಶಾವಕಾಶ ನೀಡಿದರೂ ತೀರ ದುರ್ಭರ ಷರತ್ತುಗಳನ್ನು ಹಾಕಲಾಯಿತು. ಅವರು ಮೈನ್ ನದಿಯಲ್ಲಿ ಸ್ನಾನ ಮಾಡಬಾರದು ಎಂಬುದು ಮುಖ್ಯವಾದ ಷರತ್ತಾಗಿತ್ತು. ಇದಲ್ಲದೆ ಸರ್ಕಾರ ಯೆಹೂದಿಗಳ ಮೇಲೆ ಕೆಲವು ನಿರ್ದಿಷ್ಟ ತೆರಿಗೆಗಳನ್ನೂ ಹಾಕಿತ್ತು. ಅಂಥ ಮೂರು ರೀತಿಯ ತೆರಿಗೆಗಳಿದ್ದವು – ತಲೆಗಂದಾಯ, ವಿವಿಧ ರೀತಿಯ ದಂಡಗಳು ಮತ್ತು ವೈಯಕ್ತಿಕ ವ್ಯವಹಾರ ಮತ್ತು ಸಂಪತ್ತಿನ ಮೇಲಿನ ತೆರಿಗೆ. ತಲೆಗಂದಾಯ ಪ್ರಾರಂಭವಾಗುವ ವಯಸ್ಸು ಸ್ಥಳದಿಂದ ಸ್ಥಳಕ್ಕೆ ಬೇರೆಯಾಗಿದ್ದರೂ ಸಾಕಷ್ಟು ಕಡಿಮೆ ವಯಸ್ಸಿಗೇ ಅದು ಪ್ರಾರಂಭವಾಗುತ್ತಿತ್ತು. ೧೨೭೩ ರ ಇಂಗ್ಲೆಂಡಿನಲ್ಲಿ ಹಾಗೂ ಸ್ಪೆಯಿನ್‌ನಲ್ಲಿ ಹತ್ತು ವರ್ಷದ ಮೇಲಿನ ಎಲ್ಲ ಯೆಹೂದಿಗಳೂ ತಲೆಗಂದಾಯಕ್ಕೊಳಪಟ್ಟಿದ್ದರು. ಇನ್ನೊಂದು ಸುಲಿಗೆಯ ಮಾರ್ಗವೆಂದರೆ ಶಾಂತಿಕಾಲದಲ್ಲಿ ಸೈನಿಕರ ಆಹಾರ ವಸತಿಯ ವ್ಯವಸ್ಥೆಯನ್ನು ಯೆಹೂದಿಗಳ ಮೇಲೆ ಹಾಕುವುದು. ಮಧ್ಯಯುಗದಲ್ಲಿ ಯೆಹೂದಿಯರ ಮೇಲೆ ನಡೆಯುತ್ತಿದ್ದ ಇಂಥ ಕಿರುಕುಳಗಳು ಪಟ್ಟಿಮಾಡಲಿಕ್ಕು ಅಸಾಧ್ಯವೆನಿಸುವಷ್ಟಿವೆ. ಇವೆಲ್ಲಕ್ಕೆ ಕಿರೀಟವೆಂಬಂತೆ ೧೨೧೫ರಲ್ಲಿ ಪೋಪ್ ಮೂರನೇ ಇನ್ನೋಸೆಂಟ್ ಎಲ್ಲ ಯೆಹೂದಿಯರಿಗೂ ಪ್ರತ್ಯೇಕವಾದ ಗುರುತೊಂದನ್ನು ಹಾಕಬೇಕೆಂಬ ನಿರ್ಧಾರ ಮಾಡಿದ. ಕ್ರಿಶ್ಚಿಯನ್ನರಿಂದ ಪ್ರತ್ಯೇಕವಾಗಿ ಕಾಣುವಂತೆ ಅವರು ತಮ್ಮ ಹೊರ ಉಡುಪಿನ ಮೇಲೆ ಒಂದು ಬ್ಯಾಡ್ಜನ್ನು ಧರಿಸಬೇಕಿತ್ತು. ಈ ಆದೇಶವೇನೋ ಬಹಳ ಸ್ಪಷ್ಟವಾಗಿತ್ತು. ಆದರೆ ವಿವರಗಳು ಅಷ್ಟು ನಿಖರವಾಗಿರಲಿಲ್ಲ. ಆ ಬ್ಯಾಡ್ಜಿನ ಅಳತೆ, ಬಣ್ಣ ರೀತಿ ಮುಂತಾದ ವಿವರಗಳನ್ನು ಆಯಾ ಸ್ಥಳೀಯ ಆಡಳಿತಗಾರರೇ ನಿರ್ಧರಿಸಬೇಕೆಂದು ಬಿಡಲಾಯಿತು. ಹಾಗಾಗಿ ಪ್ರತಿ ಸರ್ಕಾರ, ಆಡಳಿತ ತನ್ನ ತನ್ನ ಆಯ್ಕೆಯ ಮಾದರಿಗಳನ್ನು ನಿಗದಿಪಡಿಸಿತು. ಹೀಗೆ ಹಲವಾರು ಮಾದರಿಯ, ಆಕಾರದ, ಬಣ್ಣದ, ಅಳತೆಯ ಬ್ಯಾಡ್ಜುಗಳಿದ್ದುದರಿಂದ ಅದು ರೂಢಿಗೆ ಬರದೆ ಯೆಹೂದಿಗಳು ಅದನ್ನು ತಪ್ಪಿಸಿಕೊಂಡೇ ಇರಲೂ ಸಾಧ್ಯವಾಯಿತು. ಬ್ಯಾಡ್ಜನ್ನು ಕೆಲವೊಮ್ಮೆ ಮುಚ್ಚಿಟ್ಟುಕೊಳ್ಳುತ್ತಾರೆಂಬ ಕಾರಣದಿಂದ ೧೫೨೫ರಲ್ಲಿ ಏಳನೆಯ ಪೋಪ್ ಕ್ಲಿಮೆಂಟ್, ಯೆಹೂದಿಗಳು ಬ್ಯಾಡ್ಜಿನ ಬದಲು ಹಳದಿ ಹ್ಯಾಟು ಅಥವಾ ಟೊಪ್ಪಿಗೆ ಧರಿಸಬೇಕೆಂದು ಮಾಡಿದ.

ಅಸ್ಪೃಶ್ಯರ ಸ್ಥಿತಿಗೆ ಹೋಲುವ ಇನ್ನೊಂದು ಸ್ಥಿತಿ ಇಂಗ್ಲೆಂಡಿನ ಕ್ಯಾಥೋಲಿಕ್ ಸಮುದಾಯದ್ದು. ಕ್ಯಾಥೋಲಿಕರ ಮೇಲೆ ಹಲವಾರು ನಿಷೇಧಗಳನ್ನು ಹೇರಲಾಗಿತ್ತು. ಅಂಥ ನಿಷೇಧಗಳ ಒಂದು ಪಟ್ಟಿ ಇಲ್ಲಿದೆ :

೧) ಕ್ಯಾಥೋಲಿಕ್ ವಿವಾಹಗಳು ಅಥವಾ ಕ್ಯಾಥೋಲಿಕ್ ಪಾದ್ರಿಗಳ ಮೂಲಕ ಕ್ಯಾಥೋಲಿಕ್ ಸಮುದಾಯ ಆಚರಿಸುವ ವಿವಾಹ ಸಮಾರಂಭಗಳು ಪ್ರಸ್ತುತ ಕಾನೂನಿನ ಪ್ರಕಾರ ಅನೂರ್ಜಿತವಾಗುತ್ತವೆ.

ಆದ್ದರಿಂದ ವಿವಾಹವಾದ ಯಾವುದೇ ವ್ಯಕ್ತಿ ಯಾವುದೇ ಕಾರಣಕ್ಕಾಗಿ ತನ್ನ ಪತಿ (ಪತ್ನಿ)ಯಿಂದ ತ್ಯಜಿಸಲ್ಪಟ್ಟರೆ, ಹಾಗೆ ತ್ಯಜಿಸಲ್ಪಟ್ಟ ವ್ಯಕ್ತಿಗೆ ಸ್ಥಳೀಯ ಸಮುದಾಯದಿಂದ ಯಾವುದೇ ಸಹಾಯವಾಗಲೀ ದೇಶದ ಕಾನೂನಿನಿಂದ ಯಾವುದೇ ಪರಿಹಾರವಾಗಲೀ ದೊರಕುವುದಿಲ್ಲ. ಅಲ್ಲದೆ, ಇಂಥ ವಿವಾಹ ನಡೆಸಿದ ಪಾದ್ರಿಗಳನ್ನು ಸ್ಥಳಾಂತರಿಸಬಹುದು, ಬಂಧಿಸಬಹುದು ಮತ್ತು ಗಡಿಪಾರು ಮಾಡಬಹುದಾಗಿರುತ್ತದೆ.

೨) ಕ್ಯಾಥೋಲಿಕ್ ಪೂಜೆ, ಆಚರಣೆಗಳಿಗೆ ಸಹಾಯಮಾಡಲು ಅಥವಾ ಪಾದ್ರಿಗಳ ಜೀವನಕ್ಕೆ ಅನುಕೂಲವಾಗಲು ಸಂಗ್ರಹಿಸಿದ ಹಣ ಹಾಗೂ ಹಾಗೆ ಹಣ ಸಂಗ್ರಹಿಸುವ ಯಾವುದೇ ಸಂಘಟನೆ, ಪ್ರಸ್ತುತ ಕಾನೂನಿನ ಪ್ರಕಾರ ಕ್ಷುದ್ರ ಧಾರ್ಮಿಕ ಉದ್ದೇಶವುಳ್ಳದ್ದೆಂದು ಪರಿಗಣಿಸಲ್ಪಡುತ್ತದೆ. ಆದ್ದರಿಂದ, ಅದನ್ನು ಮುಟ್ಟುಗೋಲು ಹಾಕಿಕೊಳ್ಳಬಹುದು. ಅಲ್ಲದೆ, ಅದನ್ನು ದುಷ್ಟರು ಅಪಹರಿಸಿದರೆ ಅದಕ್ಕೆ ಕಾನೂನಿನ ಯಾವುದೇ ಪರಿಹಾರ ದೊರೆಯುವುದಿಲ್ಲ.

೩) ಘನ ಸರ್ಕಾರದ ಭೂಸೇನೆ ಮತ್ತು ನೌಕಾ ಪಡೆಯಲ್ಲಿ ಕೆಲಸಮಾಡುವ ಕ್ಯಾಥೋಲಿಕರು ತಮ್ಮ ಧರ್ಮದ ಆಚರಣೆಗೆ ರವಿವಾರ ಮತ್ತು ಹಬ್ಬದ ದಿನ ಚರ್ಚಿಗೆ ಹೋಗಬಾರದು. ಬದಲು ಪ್ರೊಟೆಸ್ಟೆಂಟ್ ಚರ್ಚುಗಳಿಗೆ ಹೋಗತಕ್ಕದ್ದು. ಕಾರಣ–ಶತ್ರುಗಳನ್ನೆದುರಿಸಲು ಎಲ್ಲ ಕೈಗಳೂ ಹೃದಯಗಳೂ ಕೂಡಬೇಕಾಗಿರುವಾಗ ಮತ್ತು ಇಡೀ ಬ್ರಿಟಿಷ್ ಸಾಮ್ರಾಜ್ಯವೇ ಒಬ್ಬ ಮನುಷ್ಯನಂತೆ ಹೋರಾಡಬೇಕಾಗಿರುವಾಗ ಇಂಥ ವಿಧರ್ಮೀಯ ಕಿರಿಕಿರಿಗಳು ಉಂಟಾಗಬಾರದು.

೪) ೧೩ ನೇ ಚಾರ್ಲ್ಸ್ ಘೋಷಣೆ : ಸಾಧಾರಣವಾಗಿ ಕಾರ್ಪೊರೇಷನ್ ಆ್ಯಕ್ಟ್ ಎನ್ನಲಾಗುವ ಈ ಕಾನೂನಿನ ಪ್ರಕಾರ ಇಡೀ ಕ್ಯಾಥೋಲಿಕ್ ಸಮುದಾಯ, ನಗರ ಮತ್ತು ನಗರಸಭೆಯ ಆಡಳಿತದಲ್ಲಿ ಯಾವುದೇ ರೀತಿ ಪಾಲ್ಗೊಳ್ಳಲಾಗದು.

೫) ೨೫ನೇ ಚಾರ್ಲ್ಸ್ ಘೋಷಣೆ : ಸಾಧಾರಣವಾಗಿ ಟೆಸ್ಟ್ ಆ್ಯಕ್ಟ್ ಎಂದು ಕರೆಯಲಾಗುವ ಈ ಕಾನೂನಿನ ಪ್ರಕಾರ ಕ್ಯಾಥೋಲಿಕ್ ಸಮುದಾಯ ನಾಗರಿಕ ಮತ್ತು ಸೈನಿಕ ಆಡಳಿತದಲ್ಲಿ ಪಾಲ್ಗೊಳ್ಳಲಾಗದು.

೬) ೭ ಮತ್ತು ೮ನೇ ವಿಲಿಯಂ – ಸಿ. ೨೭ – ಈ ಕಾನೂನಿನ ಪ್ರಕಾರ ರೋಮನ್ ಕ್ಯಾಥೋಲಿಕರನ್ನು ಚುನಾವಣೆಯಲ್ಲಿ ಮತ ನೀಡದಂತೆ ತಡೆಯಲು ಅವಕಾಶವಿರುತ್ತದೆ.

೭) ೩೦ ನೇ ಚಾರ್ಲ್ಸ್, ಎಸ್ ೨, ಸಿ ೧ – ಈ ಕಾನೂನಿನ ಪ್ರಕಾರ ರೋಮನ್ ಕ್ಯಾಥೋಲಿಕ್ ಶ್ರೀಮಂತರು ವಂಶಪಾರಂಪರ್ಯವಾಗಿ ತಮಗೆ ದೊರಕುತ್ತ ಬಂದ ಶಾಸನಸಭೆಯ ಸದಸ್ಯತ್ವ ಪಡೆಯಲಾರರು.

೮) ಅದೇ ಕಾನೂನಿನ ಪ್ರಕಾರ ರೋಮನ್ ಕ್ಯಾಥೋಲಿಕರು ಹೌಸ್ ಆಫ್ ಕಾಮನ್ಸ್‌ನಲ್ಲಿ ಕೂಡುವಂತಿಲ್ಲ.

೯) ಹಲವು ಕಾನೂನುಗಳ ಪ್ರಕಾರ ಧಾರ್ಮಿಕ ದತ್ತಿ ದಾನ ನೀಡುವ ಹಕ್ಕು ಯೆಹೂದಿಯರಿಗೇ ಇದ್ದಿತ್ತಾದರೂ ಕ್ಯಾಥೋಲಿಕರಿಗೆ ಇಲ್ಲ.

೧೦) ಘನ ಸರ್ಕಾರದ ಸೈನ್ಯದಳದಲ್ಲಿ ಗಮನಾರ್ಹ ಪ್ರಮಾಣದ ಕ್ಯಾಥೋಲಿಕರು ಇದ್ದರೂ ಕೂಡ ಅವರಿಗೆ ತಮ್ಮ ಧಾರ್ಮಿಕ ಆಚರಣೆಗಳನ್ನು ಅನುಸರಿಸುವ ಅವಕಾಶ ಇರಲಿಲ್ಲ. ಅಷ್ಟೇ ಅಲ್ಲ. ಯುದ್ಧ ನಿಯಮಗಳ ಪ್ರಕಾರ ಅವರು ಇಂಗ್ಲಿಷ್ ಚರ್ಚಿನ ವಿಧಿವಿಧಾನಗಳಿಗೆ ಬದ್ಧರಾಗಲು ನಿರಾಕರಿಸಿದಲ್ಲಿ ಭಾರೀ ಕಷ್ಟ ಮತ್ತು ದಂಡನೆಗಳಿಗೆ ಒಳಗಾಗಬೇಕಿತ್ತು. ಯುದ್ಧ ನಿಯಮಾವಳಿಯ

ಒಂದನೆಯ ಪರಿಚ್ಛೇದದಂತೆ – ಧಾರ್ಮಿಕ ಆರಾಧನೆ, ಪ್ರವಚನಗಳಿಗೆ ಯಾವನೇ ಸೈನಿಕ ಮೊದಲ ಬಾರಿಗೆ ಗೈರುಹಾಜರಾದರೆ ಒಂದು ಷಿಲಿಂಗ್ ದಂಡ, ಎರಡನೆಯ ಮತ್ತು ಅನಂತರದ ಗೈರು ಹಾಜರಿಗಳಿಗೆ ತಲಾ ಒಂದು ಷಿಲಿಂಗ್ ದಂಡವಲ್ಲದೆ ಕೈಕೋಳದ ಶಿಕ್ಷೆಗೆ ಗುರಿಯಾಗಬೇಕಿತ್ತು. ಅದೇ ನಿಯಮಾವಳಿಯ ೨ನೆಯ ಮತ್ತು ೫ನೆಯ ಪರಿಚ್ಛೇದದಂತೆ ಅವನ ಮೇಲಧಿಕಾರಿಯ ಯಾವುದೇ ಕಾನೂನುಬದ್ಧ ಆಣತಿಯನ್ನು ಉಲ್ಲಂಘಿಸಿದರೆ (ಅಂದರೆ ಧಾರ್ಮಿಕ ಆರಾಧನೆ ಮತ್ತು ಪ್ರವಚನಕ್ಕೆ ಹಾಜರಾಗುವ ಆಜ್ಞೆಯನ್ನು ಉಲ್ಲಂಘಿಸಿದರೆ) ಮರಣದಂಡನೆ ಅಥವಾ ಅಂಥ ಯಾವುದೇ ಶಿಕ್ಷೆಯನ್ನು ಮಿಲಿಟರಿ ನ್ಯಾಯಾಲಯ ವಿಧಿಸಬಹುದಾಗಿತ್ತು.

(೧೧) ಘನ ಸರ್ಕಾರದ ಉಳಿದ ಪ್ರಜೆಗಳ ಹಾಗೆಯೇ ರೋಮನ್ ಕ್ಯಾಥೋಲಿಕರೂ ಕೂಡಾ ಸರ್ಕಾರ ವ್ಯವಸ್ಥೆಗೊಳಿಸಿದ ಧರ್ಮಕ್ಕೆ ಬೆಂಬಲವಾಗಿದ್ದು ಚಂದಾ ನೀಡಬೇಕು. ಜತೆಗೇ ತಮ್ಮ ಧಾರ್ಮಿಕ ಚಟುವಟಿಕೆಗಳಿಗೂ ಹಣಕೊಡಬೇಕು. ಹಾಗಾಗಿ ಅವರು ಎರಡು ಧಾರ್ಮಿಕ ವ್ಯವಸ್ಥೆಗೆ ವೆಚ್ಚ ಮಾಡಬೇಕಾದ ಸ್ಥಿತಿಯಿತ್ತು. ಹಾಗಿದ್ದರೂ ಅದರ ಬಗ್ಗೆ ಅವರು ದೂರುತ್ತಿರಲಿಲ್ಲ. ಆದರೆ ಪ್ರೊಟೆಸ್ಟೆಂಟರಂತೆ ತಮ್ಮ ಧಾರ್ಮಿಕ ಉಂಬಳಿಗಳು ಕಾನೂನಿನ ಚೌಕಟ್ಟಿಗೊಳಪಟ್ಟಿಲ್ಲ ಎಂಬುದು ಅವರ ಮುಖ್ಯ ಅಳಲಾಗಿತ್ತು.

(೧೨) ಆಸ್ಪತ್ರೆಗಳಲ್ಲಿ, ಅನಾಥಾಲಯಗಳಲ್ಲಿ ಮತ್ತು ಇತರ ಸಾರ್ವಜನಿಕ ಸಂಸ್ಥೆಗಳಲ್ಲಿ ತಮ್ಮ ಸಮುದಾಯದ ಆಡಳಿತಗಾರರೇ ಇಲ್ಲದೆ, ಕೆಲವು ಬಾರಿ, ರೋಮನ್ ಕ್ಯಾಥೋಲಿಕ್ ಧರ್ಮದ ಬಡವರಿಗೆ ತೊಂದರೆಯಾಗುತ್ತಿತ್ತು. ಅಂಥ ಬಡ ಕ್ಯಾಥೋಲಿಕ್ ಮಕ್ಕಳು ಅವರ ಪೋಷಕರ ಕಣ್ಣೆದುರಿಗೇ ಪ್ರೊಟೆಸ್ಟೆಂಟ್ ಶಾಲೆಗಳಿಗೆ ಒತ್ತಾಯದಿಂದ ದೂಡಲ್ಪಡುತ್ತಿದ್ದರು.

## II

(ಈ ಮುಂದಿನ ಬರಹ ಶ್ರೀ ಎಸ್.ಎಸ್. ರೇಗೆಯವರಿಂದ ಲಭ್ಯವಾದದ್ದು. ಇದರ ವಿಷಯ 'ಕಪ್ಪು ಜನ ಹಾಗೂ ಗುಲಾಮಗಿರಿ'. ಈ ಅಧ್ಯಾಯದ ವಿಷಯ ರಚನೆಗೆ ಪ್ರಸ್ತುತವಾದದ್ದು ಮತ್ತು ಮೇಲಿನ ಬರಹದಲ್ಲಿ ಇದನ್ನು ಚರ್ಚಿಸಿಲ್ಲವಾದ್ದರಿಂದ ಇಲ್ಲಿ ಅದನ್ನು ಸೇರಿಸಿಕೊಳ್ಳಲಾಗಿದೆ.)

ಏಷ್ಯಾ ಮತ್ತು ಯೂರೋಪಿನ ಸ್ವತಂತ್ರ ನಾಗರಿಕ ಜನರಿಗೆ ಗುಲಾಮರನ್ನು ಪೋಷಿಸಿಕೊಡುವ ಕ್ಷೇತ್ರ – ಎಂಬ ದುರ್ಗತಿ ಒದಗಿದ್ದು ಆಫ್ರಿಕಾ ಖಂಡದ ಕಠೋರ ದುರದೃಷ್ಟ. ಯೂರೋಪಿಯನ್ನರು ಅಮೆರಿಕದಲ್ಲಿ ಕಪ್ಪು ಗುಲಾಮರನ್ನು ಕರೆತರುವ ಮೊದಲೇ ಅರಬರು ಏಷ್ಯಾದಲ್ಲಿ ಅವರನ್ನು ಗುಲಾಮಗಿರಿಗಾಗಿ ಆಮದು ಮಾಡಿಕೊಂಡಿದ್ದರು. ಹಾಗಿದ್ದರೂ ಅಮೆರಿಕ ಮತ್ತು ಬ್ರಿಟನ್ನಿನ ನೀಗ್ರೋ ಗುಲಾಮಗಿರಿಯ ವಿಷಾದಪೂರ್ಣ ಇತಿಹಾಸ ಜನರ ಮನಸ್ಸನ್ನು ಎಷ್ಟು ಆಕ್ರಮಿಸಿದೆಯೆಂದರೆ ಏಷ್ಯದಲ್ಲೂ ನೀಗ್ರೋ ಗುಲಾಮರನ್ನು ಬಳಸಿಕೊಂಡಿದ್ದರೆಂಬುದನ್ನೇ ಮರೆಸಿಬಿಟ್ಟಿದೆ. ಹೀಗಾಗಿದ್ದು ವಿಶೇಷವಲ್ಲ. ಕಾರಣ – ಬ್ರಿಟನ್ ಮತ್ತು ಅಮೆರಿಕದಲ್ಲಿ ರೂಢಿಯಲ್ಲಿದ್ದ ನೀಗ್ರೋ ಗುಲಾಮಗಿರಿ ಅಸಹ್ಯ ಹುಟ್ಟಿಸುವಂಥದು. ಈ ಪದ್ಧತಿ ೧೬ನೇ ಶತಮಾನದ ಮೊದಲ ದಶಕದಲ್ಲಿ ಪ್ರಾರಂಭವಾಗಿ ೧೯ನೇ ಶತಮಾನದ ಮಧ್ಯಭಾಗದವರೆಗೂ ಮುಂದುವರೆಯಿತು.

೧೪೯೨ರಲ್ಲಿ ಕೊಲಂಬಸ್ ಬಹಾಮಾ ದ್ವೀಪಗಳಲ್ಲಿ ಕಾಲಿಟ್ಟ ಅನಂತರ, ಆಮೇಲಿನ ಐವತ್ತು ವರ್ಷಗಳಲ್ಲಿ, ಸ್ಪ್ಯಾನಿಷರು ಆ ಭೂಭಾಗವನ್ನು ಜಯಿಸಿದರು. ಸ್ಪ್ಯಾನಿಷರು ಆ ನಾಡಿನ ಸಾಕಷ್ಟು ವಿಸ್ತಾರವಾದ

ಪ್ರದೇಶವನ್ನು – ಅಂದರೆ, ಮೆಕ್ಸಿಕೋದಿಂದ ಹಿಡಿದು ಪೆರುವನ್ನೊಳಗೊಂಡು ಉರುಗ್ವೆಯತನಕ, ಎಲ್ಲ ದೊಡ್ಡ ವೆಸ್ಟ್ ಇಂಡಿಯನ್ ದ್ವೀಪಗಳನ್ನೂ ಕೂಡಿ – ಆಕ್ರಮಿಸಿಕೊಂಡರು. ಆಮೇಲೆ ೧೫೩೧ರಲ್ಲಿ ಪೋರ್ಚುಗೀಸರು ಬ್ರೆಜಿಲನ್ನು ತಮ್ಮ ವಸಾಹತನ್ನಾಗಿಸಿಕೊಳ್ಳಲು ಪ್ರಯತ್ನಿಸ ತೊಡಗಿದರು. ಹೀಗೆ ಬಂದಿಳಿದದ್ದೇ ತಡ , ಈ ಹೊಸಬರು – ಸ್ಪ್ಯಾನಿಷರು ಮತ್ತು ಪೋರ್ಚುಗೀಸರು ತಮ್ಮದಾಗಿಸಿಕೊಂಡ ಈ ಭೂಮಿಯ ಶ್ರೇಷ್ಠ ಪ್ರಾಕೃತಿಕ ಸಂಪತ್ತನ್ನು ಕೊಳ್ಳೆ ಹೊಡೆಯತೊಡಗಿದರು. ಮುಖ್ಯ ಭೂಭಾಗಗಳಲ್ಲಿ ಬಂಗಾರ ಮತ್ತು ಬೆಳ್ಳಿಯ ಗಣಿಗಳನ್ನು ಅಗೆದರು; ದ್ವೀಪಗಳ ಫಲವತ್ತಾದ ನೆಲದಲ್ಲಿ ತಂಬಾಕು, ನೀಲಿ ಮತ್ತು ಕಬ್ಬಿನ ತೋಟಗಳನ್ನು ಎಬ್ಬಿಸಿದರು. ಆಗ ಅವರಿಗೆ ಎದುರಾದ ಒಂದು ಮುಖ್ಯ ಸಮಸ್ಯೆ ಈ ಕೆಲಸಕ್ಕೆ ಅಗತ್ಯವಾದ ಕೂಲಿಯನ್ನು ಒದಗಿಸಿಕೊಳ್ಳುವುದು. ಆ ಕೆಲಸಕ್ಕೆ ಕೂಲಿಗಳ ಅಗತ್ಯ ತುಂಬಾ ಇತ್ತು. ಜೊತೆಗೆ ಬಿಳಿಯ ಜನರಿಗಾದರೆ ಹೆಚ್ಚಿನ ಸಂಬಳ ಕೊಡಬೇಕಾಗುತ್ತಿದ್ದುದರಿಂದ ಹಾಗೂ ಅಲ್ಲಿಯ ಉಷ್ಣವಲಯದ ತಾಪ ಬಿಳಿಯರಿಗೆ ಒಗ್ಗುತ್ತಿರಲಿಲ್ಲವಾದ್ದರಿಂದ ಈ ದಾಳಿಕಾರರಿಗೆ ತಮ್ಮ ಜನಾಂಗದಿಂದಲೇ ಕೂಲಿಗಳನ್ನು ಒದಗಿಸಿಕೊಳ್ಳಲು ಸಾಧ್ಯವಾಗದಂತಾಯಿತು. ಇನ್ನು ಅಲ್ಲಿ ಸಿಗಬಹುದಾಗಿದ್ದ ಯೂರೋಪಿಯನ್ನರಲ್ಲದ ಕೂಲಿಕಾರರೆಂದರೆ ಸ್ಥಳೀಯ ಇಂಡಿಯನ್ನರು. ಆದರೆ, ಪೋರ್ಚುಗೀಸರು ಮತ್ತು ಸ್ಪ್ಯಾನಿಷರು ತಮ್ಮ ದಾಳಿಯ ಸಮಯದಲ್ಲೇ ಸಾಕಷ್ಟು ಇಂಡಿಯನ್ನರನ್ನು ಕೊಂದು ಹಾಕಿದ್ದರು. ಮತ್ತೆ ಬಹಳಷ್ಟು ಜನ ದಾಳಿಕಾರರ ದಂಡನೆಗೆ ಹೆದರಿ ಗುಡ್ಡ ಮತ್ತು ಕಾಡಿಗೆ ಓಡಿಹೋಗಿ ಅಡಗಿದ್ದರು. ಹಾಗಿದ್ದರೂ, ಸಿಗುವಷ್ಟು ಜನರನ್ನೆಲ್ಲ ಗುಲಾಮರಾಗಿಸಿ ಗಣಿಕೆಲಸಕ್ಕೆ ಹಚ್ಚಲಾಯಿತು. ಆದರೆ, ಅವರಲ್ಲಿ ಹಲವರು ಪೋರ್ಚುಗೀಸರ ಮತ್ತು ಸ್ಪ್ಯಾನಿಷರ ಚಾವಟಿಯಿಂದಾಗಿ, ಹೊಲ, ಗಣಿಗಳಲ್ಲಿ ನಿರ್ದಯವಾದ ಶೋಷಣೆಯ ದುಡಿಮೆಯ ಶ್ರಮದಿಂದಾಗಿ ರೋಗಗ್ರಸ್ತರಾದರು ಅಥವಾ ಸತ್ತರು.

ದಕ್ಷಿಣ ಅಮೆರಿಕಕ್ಕೆ ಬಂದ ಮೊದಲ ಸ್ಪ್ಯಾನಿಷ್ ದಾಳಿಕಾರರಿಗೆ ಕಾಂಕ್ವಿಸ್ಟಾಡರ್ಸ್ ಎಂಬ ಹೆಸರಿತ್ತು. ಅವರು ನಿಕೋಲಾಸ್ ಡೆ ಒವಾಂಡೋ ಎಂಬುವವನ ನಾಯಕತ್ವದಲ್ಲಿ ಕೊಲಂಬಸ್ ಹಿಡಿದ ಹಾದಿಯನ್ನೇ ಅನುಸರಿಸಿ ಬಂದಿದ್ದರು. ಬರುವಾಗ ಬಾತ್ರೋಲೋಮ್ ಡಿ ಲಾ ಕಾಸಸ್ ಎಂಬ ಯುವ ಪಾದ್ರಿಯನ್ನು ಕರೆತಂದರು. ಆತ ತನ್ನ ದೈವಶ್ರದ್ಧೆಗೆ ಹೆಸರಾದವನಾಗಿದ್ದ. ಸ್ಪ್ಯಾನಿಷ್ ನ್ಯಾಯಾಲಯ ಅವನಿಗೆ ಇಂಡಿಯನ್ನರನ್ನು ಪ್ರೀತಿಯಿಂದ ಕಂಡು ಪವಿತ್ರ ಕ್ರಿಶ್ಚಿಯನ್ ನಂಬಿಕೆಯನ್ನು ಅವರಿಗೆ ಅರ್ಥ ಮಾಡಿಸುವ ಜವಾಬ್ದಾರಿಯನ್ನು ಹೊರಿಸಿತ್ತು. ಆತ ಮೆಕ್ಸಿಕೋದ ಮೊದಲ ಬಿಷಪ್ ಆದ. ತನಗೆ ಹೊರಿಸಿದ ಜವಾಬ್ದಾರಿಯನ್ನು ನಿರ್ವಹಿಸುವಾಗ, ಆತ, ಹೈಟಿಯಲ್ಲಿ ಈ ದಾಳಿಕಾರರು ಸ್ಥಳೀಯ ಇಂಡಿಯನ್ನರನ್ನು ನಡೆಸಿಕೊಳ್ಳುವ ಕ್ರೌರ್ಯವನ್ನು ಕಣ್ಣಾರೆ ಕಂಡು, ಮುಂದೆ ತನ್ನ ಜೀವನಪರ್ಯಂತ ಹೈಟಿಯ ಆ ಇಂಡಿಯನ್ನರನ್ನು ತಮ್ಮ ಒಡೆಯರ ಕೈಯಲ್ಲಿ ಸಿಕ್ಕು ನಾಶವಾಗದಂತೆ ಉಳಿಸಲು ಪ್ರಯತ್ನಮಾಡಿದ. ಹೈಟಿಯ ಇಂಡಿಯನ್ನರು – ಅವರನ್ನು ಕೆರೆಬಿಯನ್ನರು ಎಂದೂ ಕರೆಯಲಾಗುತ್ತಿತ್ತು – ಪರಪೀಡೆಯಿಲ್ಲದ, ಸಾತ್ವಿಕಗುಣದ, ಅತಿಥಿಮನೋಭಾವದ ಜನಾಂಗವಾಗಿದ್ದರು. ಕೊಲಂಬಸ್ ಅವರನ್ನು ಅನ್ವೇಷಿಸಿದಾಗ ಅವರ ಸಂಖ್ಯೆ ಹತ್ತು ಲಕ್ಷಕ್ಕೆ ಕಡಿಮೆಯಿಲ್ಲದಷ್ಟಿತ್ತು : ಸ್ಥಳೀಯ ನಾಯಕರಿಂದ ಆಳಲ್ಪಡುತ್ತಿದ್ದ ಹಲವಾರು ಪುಟ್ಟರಾಜ್ಯಗಳಲ್ಲಿ ಅವರು ಹಂಚಿಕೊಂಡಿದ್ದರು. ಕೊಲಂಬಸ್‌ನ ಅನಂತರ ಬಂದ ಈ ಸ್ಪ್ಯಾನಿಷ್ ದಾಳಿಕಾರರ ವ್ಯವಸ್ಥಿತ ಕ್ರೌರ್ಯಗಳಿಂದಾಗಿ ಅವರ ಸಂಖ್ಯೆ ಅರವತ್ತು ಸಾವಿರಕ್ಕೆ ಇಳಿಯಿತು.ಈ ದಾಸ್ಯ ಮತ್ತು ದಬ್ಬಾಳಿಕೆಯಿಂದ ಬಚಾವಾಗಲು ಇನ್ನೇನೂ ದಾರಿಯಿಲ್ಲದೆ ಇಡೀ ಹಳ್ಳಿಯೇ ಆತ್ಮಹತ್ಯೆ ಮಾಡಿಕೊಂಡ ಹಾಗೂ ಉಳಿದ ಹಳ್ಳಿಗಳನ್ನು ಹಾಗೆ ಮಾಡಲು ಉತ್ತೇಜಿಸಿದ ದಾಖಲೆಗಳಿವೆ. ಲಾ ಕಾಸಸ್ ಇಂಥ ಹಲವಾರು ಸಾಮೂಹಿಕ ಹತ್ಯಾಕಾಂಡಗಳಿಗೆ ಪ್ರತ್ಯಕ್ಷ ಸಾಕ್ಷಿಯಾಗಿದ್ದ.

ಇದನ್ನು ಆತ ತನ್ನ ನೈತಿಕ ಆಗ್ರಹದಿಂದ ಪ್ರತಿಭಟಿಸಿದ. ಆದರೆ ಅವನ ಪ್ರತಿಭಟನೆ ವ್ಯರ್ಥವಾಯಿತು, ವ್ಯರ್ಥವಾಗದೆ ಬೇರೆ ದಾರಿಯಿರಲಿಲ್ಲ. ಕಾಡು ಕಡಿಯುವ, ಭೂಮಿಯನ್ನು ಉಳುವ, ಗಣಿಗಳನ್ನು ಅಗೆಯುವ ಕೆಲಸ ಮುಂದುವರೆಯಲೇಬೇಕಿತ್ತು. ಇದಾಗದೇ ದೇವರು ಕೊಟ್ಟ ಆ ಸಾಮ್ರಾಜ್ಯ ಮನುಷ್ಯನ ಸ್ವರ್ಗವಾಗಿ ಮಾರ್ಪಡುವುದು ಸಾಧ್ಯವಾಗುತ್ತಿರಲಿಲ್ಲ. ಲಾ ಕಾಸಸ್‌ನೂ ಇದನ್ನು ತಿಳಿದುಕೊಂಡ. ಆದರೆ ಈ ಯೋಜನೆಯನ್ನು ಕೃತಿಗಿಳಿಸಲಿಕ್ಕಾಗಿ ಇಲ್ಲಿನ ಇಂಡಿಯನ್ನರು ಪಡಬೇಕಾದ ಬವಣೆಯನ್ನು ನೆನೆದು ಆತ ದುಃಖದಿಂದ ಮರುಗಿದ. ಈ ಉದಾರ ಮನಸ್ಸಿನಿಂದಾಗಿ ಆತ ಇಲ್ಲಿಗೆ ನೀಗ್ರೋಗಳನ್ನು ಕರೆದೊಯ್ಯಲು ಅಪ್ಪಣೆ ಕೊಡಬೇಕೆಂದು ಸ್ಪೆಯಿನ್‌ನ ರಾಜನನ್ನು ಪ್ರಾರ್ಥಿಸಿದ. ೧೫೧೧ರಲ್ಲಿ ಸ್ಪ್ಯಾನಿಷ್ ಸರ್ಕಾರ ಈ ಹೊಸ ಜಗತ್ತಿಗೆ ಬಹುಸಂಖ್ಯೆಯಲ್ಲಿ ನೀಗ್ರೋಗಳನ್ನು ಸಾಗಿಸಬೇಕೆಂದು ಆಜ್ಞೆ ಮಾಡಿತು. ಕೂಡಲೇ ಆಫ್ರಿಕನ್ ನೀಗ್ರೋಗಳನ್ನು ಸಾಗಣೆ ಸರಕಿನಂತೆ ಹೊತ್ತ ಹಲವಾರು ಹಡಗುಗಳು ಬಂದವು – ಈ ಹೊಸ ಜಗತ್ತನ್ನು ಮನುಷ್ಯ ಸ್ವರ್ಗವಾಗಿಸಲಿಕ್ಕಾಗಿ. ಕೆಲವು ವರ್ಷ ನೀಗ್ರೋಗಳು ಮತ್ತು ಸ್ಥಳೀಯ ಇಂಡಿಯನ್ನರು-ಇಬ್ಬರೂ ಈ ದಾಳಿಕಾರರ ಅಡಿಯಲ್ಲಿ ದುಡಿದರು. ಅಷ್ಟರಲ್ಲಾಗಲೇ ಇಂಡಿಯನ್ನರಿಗಿಂತ ಹೆಚ್ಚಿನ ದೇಹಬಲ ನೀಗ್ರೋಗಳಿಗಿದೆಯೆಂಬುದು ಸಾಬೀತಾಯಿತು. ದಾಳಿಕಾರನೊಬ್ಬ ದಾಖಲಿಸಿದ್ದ ಪ್ರಕಾರ – ಅಟ್ಲಾಂಟಿಕ್ ಭೂಸಂಧಿಯಿಂದ ಪೆಸಿಫಿಕ್ ಸಾಗರಕ್ಕೆ ಹೋಗುವ ಒಂದು ಹಡಗಿಗೆ ಮರದ ದಿಮ್ಮಿಗಳನ್ನು ತುಂಬುವ ಕೆಲಸಕ್ಕಾಗಿ ಆತ ಹಲವು ನೂರು ಇಂಡಿಯನ್ನರನ್ನೂ ಮೂವತ್ತು ನೀಗ್ರೋಗಳನ್ನೂ ಬಳಸಿಕೊಂಡನಂತೆ. ಕೆಲಸ ಮುಗಿಯುವ ವೇಳೆಗೆ ಐದು ನೂರು ಇಂಡಿಯನ್ನರು ಅಸುನೀಗಿದ್ದರು. ಆದರೆ ಮೂವತ್ತು ನೀಗ್ರೋಗಳೂ ಬದುಕಿ ಉಳಿದಿದ್ದರು. ನೀಗ್ರೋಗಳು ಇಂತಹ ಶ್ರಮ ಸಹಿಸಿಯೂ ಬದುಕಿ ಉಳಿದದ್ದಷ್ಟೇ ಅಲ್ಲ, ಬಲದಿಂದ ವೃದ್ಧಿಗೊಂಡರು. ಹಾಗಾಗಿ ಅವರ ಬಗ್ಗೆ ಇಂಥದೊಂದು ಅಭಿಪ್ರಾಯ ಪ್ರಚಲಿತವಾಯಿತು: "ಒಬ್ಬ ನೀಗ್ರೋನನ್ನು ನೇಣಿಗೆ ಹಾಕಿದರಲ್ಲದೆ ಇನ್ನಾವುದೇ ರೀತಿಯಿಂದ ಆತ ಸಾಯುವುದಿಲ್ಲ; ಇಲ್ಲಿಯವರೆಗಂತೂ ದೌರ್ಬಲ್ಯದಿಂದಾಗಿ ಯಾವ ನೀಗ್ರೋನೂ ಸತ್ತಿದ್ದು ಕಾಣುವುದಿಲ್ಲ." ತನ್ನ ನಡವಳಿಕೆ ಮತ್ತು ವ್ಯಕ್ತಿ ಬಲದಿಂದಾಗಿಯೇ ನೀಗ್ರೋ ತಾನು ಇಂಡಿಯನ್ನರಿಗಿಂತ ಶಕ್ತಿಯುತವಾದ ಉಪಕರಣವೆಂಬುದನ್ನು ತೋರಿಸಿಕೊಟ್ಟ. ಇದರ ಪರಿಣಾಮ – ಇಂಡಿಯನ್ನರನ್ನು ಬಿಟ್ಟು ಕೂಲಿಕೆಲಸಕ್ಕೆ ನೀಗ್ರೋಗಳನ್ನೇ ಆರಿಸಿಕೊಂಡರು. ದೇವರು ಇಂಡಿಯನ್ನರನ್ನು ಶಕ್ತಿವಂತರನ್ನಾಗಿ ಮಾಡಲಿಲ್ಲ. ಹಾಗಾಗಿ ಅವರನ್ನು ಬಿಟ್ಟರು; ದೇವರು ನೀಗ್ರೋಗಳಿಗೆ ಶಕ್ತಿ ಕೊಟ್ಟಿದ್ದಾನೆ, ಹಾಗಾಗಿ ಅವರನ್ನು ಹಿಡಿದರು. ಇದರ ಫಲವಾಗಿ ಇಂಡಿಯನ್ನರು ಗುಲಾಮಗಿರಿಯಿಂದ ಬಚಾವಾದರು. ದಾಳಿಕಾರರು ಇಂಡಿಯನ್ನರನ್ನು ನೂಕಬೇಕೆಂದಿದ್ದ ಗುಲಾಮಗಿರಿಯ ಹಣೆಬರಹಕ್ಕೆ ನೀಗ್ರೋಗಳು ಸಿಲುಕಿಕೊಂಡರು. ಮತ್ತೆ ಇದಿಷ್ಟೂ ದುರ್ಗತಿಗೆ ಕಾರಣ ಪಾದ್ರಿ ಲಾ ಕಾಸಸ್‌ನ ಶ್ರದ್ಧೆ ಮತ್ತು ಕರುಣೆಯ ಅನುಕಂಪ. ಅಲ್ಲದೆ, ಆಮೇಲೆ ಬಂದ ನೀಗ್ರೋ ಜನಾಂಗ ಈ ಕೆಲಸಕ್ಕೆ ಹೊಂದಿಕೊಂಡು ಕಾಣಿಸಿದ ದಾರ್ಢ್ಯ.

"ಒಬ್ಬ ನೀಗ್ರೋ ನಾಲ್ಕು ಇಂಡಿಯನ್ನರಿಗಿಂತ ಹೆಚ್ಚು ದುಡಿಯುತ್ತಾನೆ"ಎಂಬುದನ್ನು ಕಂಡುಕೊಂಡ ಮೇಲೆ, ಕೂಡಲೇ ನೀಗ್ರೋಗಳನ್ನು ಕೊಂಡು ತರುವುದಕ್ಕಾಗಿ ಒಂದು ವ್ಯವಸ್ಥಿತ ಮಾರುಕಟ್ಟೆಯೇ ನಿರ್ಮಿತವಾಯಿತು. ಪೋರ್ಚುಗೀಸರು ಆಫ್ರಿಕಾದ ಪಶ್ಚಿಮ ಕರಾವಳಿಯಲ್ಲಿ ತೆರೆದ ಇಂಥ ಮಾರುಕಟ್ಟೆ ಕೂಡಲೇ ಆ ವ್ಯಾಪಾರದಲ್ಲಿರುವ ಲಾಭವನ್ನು ಕಾಣಿಸತೊಡಗಿತು. ನೀಗ್ರೋ ದುಡಿಮೆಗಾರರಿಲ್ಲದೆ ಹೊಸ ಜಗತ್ತಿನ ಅನರ್ಘ್ಯ ಸಂಪತ್ತನ್ನು ಕೈವಶವಾಗಿಸಿಕೊಳ್ಳುವುದು ಅಸಾಧ್ಯವಾದದ್ದೆನಿಸಿದ್ದರಿಂದ ಇದು ಸಹಜವೂ ಆಗಿತ್ತು. ಮನುಷ್ಯ ಜೀವಿಗಳನ್ನೇ ಲೇವಾದೇವಿ ಮಾಡುವ ಈ ವ್ಯಾಪಾರದಲ್ಲಿ ಜನ ಎಷ್ಟು ಮುಳುಗಿದರೆಂದರೆ,

ಆ ಉತ್ಸಾಹದಲ್ಲಿ ಈ ಅನ್ವೇಷಣೆಯ ಮೂಲ ಉದ್ದೇಶವಾದ ಪೂರ್ವಕ್ಕೆ ಹೊಸಹಾದಿ ಹುಡುಕುವ ಕೆಲಸವನ್ನು ಮರೆತೇಬಿಟ್ಟರು.

ಈ ಹೊಸದಿಕ್ಕಿನ ವಾಣಿಜ್ಯೋದ್ಯಮದಲ್ಲಿ ಒಂದು ಪಾಲು ಪಡೆಯಲಿಕ್ಕೆ ಯೂರೋಪಿನ ಹಲವಾರು ದೇಶಗಳು ತೀವ್ರವಾದ ಪೈಪೋಟಿಯನ್ನೇ ನಡೆಸಿದವು. ಆದರೆ ಪೋಪರ ಒಂದು ಆಜ್ಞೆಯ ಪ್ರಕಾರ ಈ ಹೊಸ ಜಗತ್ತಿನಿಂದ ಹರಿದು ಬರುವ ಸಂಪತ್ತು ಸ್ಪೇಯಿನ್ ಮತ್ತು ಪೋರ್ಚುಗಲ್ ದೇಶಗಳ ಏಕಸ್ವಾಮ್ಯವೆಂದು ನಿಗದಿತವಾಗಿತ್ತು. ಅಮೆರಿಕನ್ ಸಂಪನ್ಮೂಲದ ಈ ಏಕಸ್ವಾಮ್ಯ ಜಾರಿಗೆ ಬರುವುದು ಯೂರೋಪಿನ ಎಲ್ಲ ದೇಶಗಳಿಗೆ ಅಪಾಯಕಾರಿಯೆಂದರಿತ ಇಂಗ್ಲಿಷರು ಮತ್ತು ಡಚ್ಚರು ಈ ಆಜ್ಞೆಯ ವಿರುದ್ಧ ನಿಂತರು.

ಇಂಗ್ಲಿಷರು ತಮ್ಮ ದೇಶದ ಅನುಕೂಲಕ್ಕಾಗಿ ಈ ಉದ್ಯಮದಲ್ಲಿ ತಾವೂ ತೊಡಗಿಕೊಳ್ಳಬೇಕೆಂದು ಪ್ರಯತ್ನಿಸತೊಡಗಿದರು. ಈ ವ್ಯಾಪಾರ ಇಂಗ್ಲೆಂಡಿನಲ್ಲಿ ತೊಡಗಿದ್ದು ೧೫೬೨ರಲ್ಲಿ, ೨೪ ನೀಗ್ರೋಗಳನ್ನು ಆಫ್ರಿಕನ್ ದಡದಿಂದ ತಂದು ಇಂಗ್ಲಿಷ್ ಮಾರುಕಟ್ಟೆಯಲ್ಲಿ ಸದ್ದಿಲ್ಲದೇ ಮಾರಿದಾಗ. ಈ ಉದ್ಯೋಗದಲ್ಲಿ ತೊಡಗಿದ ಅತ್ಯಂತ ಧೈರ್ಯಸ್ಥ ವ್ಯಕ್ತಿ, ಆಮೇಲೇ ಇತಿಹಾಸದಲ್ಲೇ ಹೃದಯಹೀನ ಮನುಷ್ಯ ವ್ಯಾಪಾರಿಯೆಂದು ಕುಪ್ರಸಿದ್ಧನಾದ ಜಾನ್ ಹಾಕಿನ್ಸ್. ಎಲಿಜಬೆತ್ ರಾಣಿಯ ಆಶ್ರಯದಲ್ಲಿ ಆತ 'ಜೀಸಸ್' ಎಂಬ ಹಡಗನ್ನೇರಿ ಆಫ್ರಿಕಾಕ್ಕೆ ಪಯಣಿಸಿದ. ಅಲ್ಲಿ ನೀಗ್ರೋಗಳನ್ನು ಕೊಂಡು ಸ್ಪ್ಯಾನಿಷ್ ವಸಾಹತುಗಳಿಗೆ ಮಾರಿದ. ಈ ವ್ಯಾಪಾರದಲ್ಲಿ ಸ್ಪ್ಯಾನಿಷರ ಏಕಸ್ವಾಮ್ಯವನ್ನು ಮುರಿಯುವ ಹಠದಿಂದ ಸರ್ ಫ್ರಾನ್ಸಿಸ್ ಡ್ರೇಕನೂ ಹಾಕಿನ್ಸ್‌ನನ್ನು ಅನುಸರಿಸಿದ. ಈ ಕಡಲ್ಗಳ್ಳತನದ ಸಾಹಸಗಳು ಅಂತರರಾಷ್ಟ್ರೀಯ ವ್ಯಾಜ್ಯಗಳನ್ನು ಹುಟ್ಟುಹಾಕಿದವು ; ಅಂತಿಮವಾಗಿ ಸ್ಪ್ಯಾನಿಷ್ ಆರ್ಮಡಾದ ವಿರುದ್ಧ ಘರ್ಷಣೆ ಮತ್ತು ಆರ್ಮಡಾದ ನಾಶಕ್ಕೆ ಕಾರಣವಾದವು. ಇದರಲ್ಲಿ ಸ್ವಾರಸ್ಯದ ಸಂಗತಿಯೆಂದರೆ, ಈ ಜಗಳದೊಳಗೆ ಸೇರಿದ ಪ್ರತಿಯೊಂದು ದೇಶವೂ ನೀಗ್ರೋ ಗುಲಾಮರ ಕಳ್ಳತನದಲ್ಲಿ ಶಾಮೀಲಾದ ತಮ್ಮ ಪ್ರಜೆಗಳನ್ನು 'ಇದು ಅವರ ವೈಯಕ್ತಿಕ ಕಾರ್ಯವಲ್ಲ, ಸರ್ಕಾರದ ಅಂಗೀಕಾರ ಪಡೆದ ಸಾರ್ವಜನಿಕ ಉದ್ಯೋಗ' ಎಂಬಂತೆ ನಾಚಿಕೆಯಿಲ್ಲದೆ ಸಮರ್ಥಿಸಿಕೊಂಡವು.

ನೀಗ್ರೋ ಗುಲಾಮರನ್ನು ಸಾಗಿಸಿ ತರಲು 'ಜೀಸಸ್' ಎಂಬ ಹಡಗನ್ನು ಬಳಸಿದ ವ್ಯಂಗ್ಯ ಸಾಲದೆಂಬಂತೆ ಇನ್ನೊಂದು ವ್ಯಂಗ್ಯದ ಘಟನೆ ಆಗಲೇ ನಡೆಯಿತು. ಯೂರೋಪಿನಿಂದ ಹೊರಟ ಧರ್ಮಯಾತ್ರಿಗಳು (Pilgrim Fathers) 'ಮೇಫ್ಲವರ್' ಎಂಬ ಹಡಗಿನಲ್ಲಿ ಪ್ಲೈಮತ್ ಪ್ರಾಂತ್ಯಕ್ಕೆ ಹೋಗಿ ಇಳಿದ ಸಮಯದಲ್ಲೇ ಇಪ್ಪತ್ತು ನೀಗ್ರೋ ಗುಲಾಮರನ್ನು ಹೊತ್ತ ಒಂದು ಹರಕುಮುರುಕು ಹಡಗು ವರ್ಜೀನಿಯಾದ ಜೇಮ್ಸ್ ಟೌನಿನಲ್ಲಿ ಲಂಗರು ಹಾಕಿತು. ಆ ಹಡಗು ಜೇಮ್ಸ್ ನದಿಯ ಮೂಲಕ ಹಾದು ಅಮೆರಿಕದ ಪ್ರಥಮ ಯಶಸ್ವಿ ಇಂಗ್ಲಿಷ್ ವಸಾಹತಾದ ವರ್ಜೀನಿಯಾದ ಗಣ್ಯ ಅನ್ವೇಷಕರಿಗಾಗಿ ಗುಲಾಮರನ್ನು ಹೊತ್ತು ತಂದಿತ್ತು.

ಹೀಗೆ, ನೀಗ್ರೋ ಗುಲಾಮರು ಮತ್ತು ಹೆಚ್ಚೂಕಮ್ಮಿ ಅದೇ ಹೊತ್ತಿಗೆ ಬಂದಿಳಿದ ಧರ್ಮಯಾತ್ರಿಗಳು ಒಟ್ಟಿಗೇ ಅಮೆರಿಕವನ್ನು ಪ್ರವೇಶಿಸಿದರು. ಧರ್ಮಯಾತ್ರಿಗಳು ತಮ್ಮ ಸ್ವಾತಂತ್ರ್ಯದ ರಕ್ಷಣೆಗಾಗಿ ಬಂದಿದ್ದರು. ಆದರೆ ನೀಗ್ರೋಗಳು ಸ್ವಾತಂತ್ರ್ಯ ಕಳೆದುಕೊಂಡು ಬಂದಿದ್ದರು. ಆಮೇಲೆ ಬಹುಕಾಲ ನೀಗ್ರೋಗಳು ಅಮೆರಿಕನ್ ವಸಾಹತುಗಳಲ್ಲಿ ಸಂಖ್ಯೆಯ ದೃಷ್ಟಿಯಿಂದ ಜನಸಂಖ್ಯೆಯ ಒಂದು ಮುಖ್ಯಭಾಗವಾಗುವಷ್ಟಿದ್ದರು. ದ್ವೀಪಗಳೂ ಸೇರಿದ ಅಮೆರಿಕ ಭೂಭಾಗದ ಮುಖ್ಯ ಜನವಸತಿ ಆಫ್ರಿಕಾದಿಂದ ಬಂದ ನೀಗ್ರೋಗಳದ್ದೇ ಆಗಿತ್ತು. ೧೮೦೦ ಕ್ಕೆ ಮುಂಚೆ ಅಮೆರಿಕಕ್ಕೆ ತಂದ ನೀಗ್ರೋಗಳ ಸಂಖ್ಯೆ ಅಲ್ಲಿದ್ದ ಎಲ್ಲ ಯೂರೋಪಿಯನ್ನರ ಇಪ್ಪತ್ತರಷ್ಟಿತ್ತು. ಇದು ಅನಿವಾರ್ಯವಾಗಿತ್ತು–ಯೂರೋಪಿನ ಜನಸಂಖ್ಯೆ ಕಡಿಮೆಯಿತ್ತು. ಅಲ್ಲದೆ

ದೀರ್ಘಯುದ್ಧಗಳಿಂದ ಅದು ಇನ್ನೂ ಕಡಿಮೆಯಾಗಿ ಅಲ್ಲಿನ ಸಂಸ್ಕೃತಿ ಆಗಿನ್ನೂ ಎಚ್ಚೆತ್ತು ಮುಂದೆ ಬರತೊಡಗಿದಂತಿತ್ತು. ಹೀಗೆ ಕೊಂಡುತಂದು ನೀಗ್ರೋಗಳ ಸ್ಥಾನಮಾನ ಏನೆಂದು ಬಹಳಕಾಲದವರೆಗೆ ಸ್ಪಷ್ಟವಾಗಿರಲಿಲ್ಲ. ಡಚ್ಚರು ಕರೆತಂದ ಜೇಮ್ಸ್ ಟೌನಿನಲ್ಲಿಳಿಸಿದ ಇಪ್ಪತ್ತು ನೀಗ್ರೋಗಳನ್ನು ಕೂಡಲೇ ಗುಲಾಮರೆಂಬ ಹಣೆಪಟ್ಟಿ ಹಾಕಿ ಪ್ರತ್ಯೇಕಿಸಲಿಲ್ಲ. ಅವರನ್ನು ಬಾಡಿಗೆಗಾಗಿ ಕರೆತಂದ ಸೇವಕರು ಎಂಬ ರೀತಿಯಲ್ಲೇ ಸ್ವೀಕರಿಸಲಾಯಿತು. ೧೬೨೪ ಮತ್ತು ೧೬೨೫ರ ವರ್ಜೀನಿಯಾ ವಸಾಹತಿನಲ್ಲಿ ಬಳಸಿದ ಸೈನಿಕ ಹಾಜರಿ ಪಟ್ಟಿಯಲ್ಲಿ ಕಾಣುವ ಪ್ರಕಾರ ೨೩ ನೀಗ್ರೋಗಳನ್ನು, ಆ ವರ್ಗದ ಬಿಳಿಯ ಜನರಂತೆಯೇ "ಸೇವಕರು' ಎಂಬ ಹೆಸರಿನಲ್ಲೇ ದಾಖಲಿಸಲಾಗಿತ್ತು. ಇನ್ನೊಂದು ದಾಖಲೆಯ ಪ್ರಕಾರ ಆ ೨೦ ನೀಗ್ರೋಗಳು ಬಂದು ನೆಲೆಸಿ ३೫ ವರ್ಷಗಳ ನಂತರ, ಅವರಲ್ಲೊಬ್ಬ – ಆ್ಯಂತೋನಿ ಜಾನ್ ಸನ್ ಎಂಬವ – ತಾನು ಜಾನ್ ಕಾಸ್ಟರ್ ಎಂಬ ಇನ್ನೊಬ್ಬ ನೀಗ್ರೋನ ಕಾಯಂ ಸೇವೆಯಲ್ಲಿರುವ ಬಗ್ಗೆ ನ್ಯಾಯಾಲಯದಿಂದ ದೃಢೀಕರಣ ಪಡೆದ ಉದಾಹರಣೆಯಿದೆ. ಐವತ್ತು ವರ್ಷಗಳತನಕವೂ ಗುಲಾಮಗಿರಿಯ ಸ್ಥಿತಿ ಪೂರ್ಣ ಹರಳುಗಟ್ಟಿರಲಿಲ್ಲ, ಹಾಗೆ ಹರಳುಗಟ್ಟಿದ್ದು ಬಹಳ ನಿಧಾನವಾಗಿ; ಹಲವು ಹಂತಗಳಲ್ಲಿ.

ಪ್ರಾರಂಭದಲ್ಲಿದ್ದದ್ದು ದಾಸ್ಯ ಕಾನೂನು. ಬಿಳಿಯರಿರಲಿ ಅಥವಾ ನೀಗ್ರೋಗಳಿರಲಿ, ಎಲ್ಲ ಸೇವಕರಿಗೂ ಈ ಕಾನೂನು ಸಮಾನವಾಗಿ ಅನ್ವಯವಾಗುತಿತ್ತು. ಕಾಲಾನಂತರದಲ್ಲಿ, ಪರಕೀಯರು ಮತ್ತು ಕ್ಷುದ್ರ ಧರ್ಮೀಯರೆಂಬ ಕಾರಣದಿಂದ ಆಫ್ರಿಕನ್ ನೀಗ್ರೋಗಳನ್ನು ಬಿಳಿಯ ಸೇವಕರಿಗಿಂತ ಬೇರೆಯಾಗಿ ಕಾಣುವ ಭೇದ ಹುಟ್ಟಿಕೊಂಡಿತು. ಈ ಭೇದವೇ ರೂಢಿಗತವಾಗಿ ಕಟ್ಟಲೆಗಳ ಸಮ್ಮತಿ ಪಡೆದು ನಿಧಾನವಾಗಿ ಆಫ್ರಿಕನ್ನರ ಸ್ಥಾನಮಾನವನ್ನು ಬದಲಿಸಿ ನೀಗ್ರೋ ದಾಸ್ಯವನ್ನು ನೀಗ್ರೋ ಗುಲಾಮಗಿರಿಯಾಗಿ ರೂಪಾಂತರಿಸಿತು. ಅಮೆರಿಕನ್ ವಸಾಹತುಗಳಲ್ಲಿ ದುಡಿಮೆಯ ಕಾನೂನುಗಳನ್ನು ಒಂದೊಂದಾಗಿ ಬದಲಾಯಿಸುತ್ತ ಬಂದ ಹಾಗೆ ನೀಗ್ರೋ ಗುಲಾಮಗಿರಿ ಬೆಳೆಯುತ್ತ ಹೋಯಿತು. ಹೀಗೆ ದಾಸ್ಯದಿಂದ ಗುಲಾಮಗಿರಿಗೆ ಆದ ರೂಪಾಂತರದಲ್ಲಿ ಎರಡು ಮುಖ್ಯ ಮಜಲುಗಳಿವೆ. ಮೊದಲನೆಯ ಮಜಲು ನೀಗ್ರೋಗಳನ್ನು 'ಜೀವನಪರ್ಯಂತ ಸೇವಕ'ರಾಗಿ ಇಟ್ಟುಕೊಳ್ಳುವ ರೂಢಿಗೆ ಮನ್ನಣೆ ಸಿಕ್ಕಿದ್ದು. ಗುಲಾಮಗಿರಿಯ ಮುಖ್ಯ ಲಕ್ಷಣ ಸ್ಪಷ್ಟವಾಗಿ ಕಾಣುವಂತೆ ರಾಜಕೀಯ ಮತ್ತು ನಾಗರಿಕ ಸ್ವಾತಂತ್ರ್ಯಗಳ ಹರಣ ಮಾತ್ರವೇ ಅಲ್ಲ, ಅಂಥ ಸ್ವಾತಂತ್ರ್ಯ ಹರಣ ಉದ್ದೇಶಪೂರ್ವಕವಾಗಿಯೋ ಅಲ್ಲದೆಯೋ ಯಾವ ಕಾಲಕ್ಕೂ ಸಮಗ್ರವಾಗಿ ಆಗುವಂಥದ್ದು. ಆದ್ದರಿಂದ ಗುಲಾಮಗಿರಿಗೂ ಮತ್ತು ಸೀಮಿತ ಕಾಲದೇಶಗಳಲ್ಲಿ ರೂಢಿಯಲ್ಲಿದ್ದ ಮಧ್ಯಯುಗದ ಗೇಣಿ, ಜೀತಪದ್ಧತಿ, ಆಧುನಿಕ ಗೇಣಿ ಪದ್ಧತಿ ಮುಂತಾದವಕ್ಕೂ ವ್ಯತ್ಯಾಸವಿದೆ. ಉಳಿದವು ತಾಂತ್ರಿಕವಾದ ದಾಸ್ಯವಾದರೆ, ಗುಲಾಮಗಿರಿ ದಾಸ್ಯವನ್ನೇ ಪೂರ್ಣ ಲಕ್ಷಣವಾಗಿಟ್ಟುಕೊಂಡಿರುವಂಥದು. ತಮ್ಮ ಸೇವಕರ ಜೀತದ ಅವಧಿಯನ್ನು ಹೆಚ್ಚಿಸಿಕೊಳ್ಳುವ ತೋಟಗಾರರ ಪ್ರಯತ್ನ ಬಿಳಿಯ ಸೇವಕರೊಡನೆ ವಿಫಲವಾಯಿತು. ಆದರೆ ಕರಿಯರೊಂದಿಗೆ ಯಶಸ್ವಿಯಾಯಿತು. ಇದಕ್ಕೆ ಸಾರ್ವಜನಿಕ ಅಭಿಪ್ರಾಯವೂ ಕಾರಣ – ಏಕೆಂದರೆ ಹತೋಟಿಯಲ್ಲಿಡದ ಕರಿಯರು ಅಪಾಯಕಾರಿ ಎಂಬ ಭಾವನೆ ಪ್ರಚಲಿತವಾಗಿತ್ತು, ನೀಗ್ರೋ ದಾಸ್ಯ ಗುಲಾಮಗಿರಿಯಾಗಿ ಪರಿವರ್ತನೆಯಾದ ಎರಡನೆಯ ಮಜಲು – ಆ ದಾಸ್ಯದ ನಿಬಂಧನೆಗಳು ತಾಯಿಯ ಮೂಲಕ ಅವಳ ಮಕ್ಕಳಿಗೂ ವಿಸ್ತರಿಸಲ್ಪಟ್ಟಿದ್ದು. ಗುಲಾಮಗಿರಿಯ ಬಂಧ ತಾಯಿಯಿಂದ ಮಗುವಿಗೂ ವಿಸ್ತಾರವಾದ ಕಾರಣವೆಂದರೆ ತಾಯಿಗೆ ಒಡೆಯನಾದವ ಮಗುವಿಗೂ ಒಡೆಯನಾಗುತ್ತಾನೆಂಬ ಸಂಗತಿಯೇ. ಜೀವನಪರ್ಯಂತ ಜೀತಕ್ಕಿರುವ ತಾಯಿತಂದೆಯರು ಸಹಜವಾಗಿಯೇ ತಮ್ಮ ಮಕ್ಕಳ ಆವಶ್ಯಕತೆಯನ್ನು ಪೂರೈಸಲಾಗುತ್ತಿರಲಿಲ್ಲ. ಆದ್ದರಿಂದ ಒಡೆಯನೇ ಆ ಮಗುವಿನ ಪೋಷಕನಾಗಿರುತ್ತಿದ್ದ. ಹಾಗಾಗಿ ಮಗುವಿನ

ದಾಸ್ಯದ ವಾರಸುದಾರನೂ ಅವನೇ ಆಗುತ್ತಿದ್ದ. ಸಾಕಷ್ಟು ಕಾಲದಿಂದಲೂ ನಡೆದುಕೊಂಡು ಬಂದು ರೂಢಿಯಾಗಿದ್ದ ಈ ಪದ್ಧತಿ ವಿಧ್ಯುಕ್ತವಾಗಿ ಕಾನೂನಾಗಿ ಘೋಷಿತವಾಗಿದ್ದು ಅಮೆರಿಕದ ಬೇರೆ ಬೇರೆ ರಾಜ್ಯಗಳಲ್ಲಿ ಬೇರೆ ಬೇರೆ ಕಾಲಗಳಲ್ಲಿ –೧೬೬೨ ಮತ್ತು ೧೭೪೧ರ ನಡುವಿನ ಅವಧಿಯಲ್ಲಿ.

ಈ ರೀತಿಯಲ್ಲಿ ಮೂಲತಃ ಒಬ್ಬ ಸೇವಕನಾಗಿದ್ದ ನೀಗ್ರೋ, ಗುಲಾಮನಾಗಿ ಬದಲಾದ. ಇಲ್ಲಿ ಗಮನಿಸಬೇಕಾದ ಇನ್ನೊಂದು ಸಂಗತಿ – ನೀಗ್ರೋಗಳ ಜನ್ಮ ಸ್ಥಾನ. ಆಫ್ರಿಕಾದಲ್ಲಿ ಗುಲಾಮಗಿರಿ ಒಂದು ಸ್ಥಳೀಯ ವ್ಯವಸ್ಥೆಯಾಗಿ ಪ್ರಾಚೀನಕಾಲದಿಂದ ರೂಢಿಯಲ್ಲಿತ್ತು. ಆ ವ್ಯವಸ್ಥೆಯಲ್ಲಿದ್ದಂತೆ ಸಾಧಾರಣವಾಗಿ ಗುಲಾಮನಾಗುವ ಸನ್ನಿವೇಶಗಳೆಂದರೆ ೧) ಗುಲಾಮಕುಲದಲ್ಲಿ ಹುಟ್ಟುವುದರಿಂದ ೨) ಸಾಲಕ್ಕೆ ಪ್ರತಿಯಾಗಿ ಗುಲಾಮನಾಗಿ ಮಾರಲ್ಪಡುವುದರಿಂದ ೩) ಯುದ್ಧದಲ್ಲಿ ಸೆರೆಯಾಳಾಗಿ ಸಿಕ್ಕು ಗುಲಾಮನಾಗುವುದರಿಂದ ಮತ್ತು ೪) ಸೇಡು ಅಥವಾ ಲಾಭದ ಆಸೆಗಾಗಿ ಜನರನ್ನು ಅಪಹರಿಸಿ ಗುಲಾಮರಾಗಿಸಿ ಮಾರುವ ಮೂಲಕ. ನೀಗ್ರೋ ಜನಾಂಗಕ್ಕೆ ಗುಲಾಮಗಿರಿ ಪರಿಚಿತವಾದ ಪದ್ಧತಿಯಾಗಿತ್ತು ಮತ್ತು ಅವರು ಗುಲಾಮರ ಒಡೆಯರಾಗಿದ್ದ ಸುಖವನ್ನು ಅನುಭವಿಸಿದ್ದರು. ಆದ್ದರಿಂದ ಗುಲಾಮರ ಒಡೆಯರಾಗಿದ್ದು, ಆಮೇಲೆ ಗುಲಾಮರಾಗಿ ಬದಲಾದ ನೀಗ್ರೋಗಳ ಸ್ಥಿತಿಯ ಬಗ್ಗೆ ಅನುಕಂಪ ಹುಟ್ಟದಿರಬಹುದು. ಆದರೆ, ಹೀಗೆ ಮಾಡಿ ಅವರಿಗೆ ಸರಿಯಾದ ಪ್ರತೀಕಾರವಾಯಿತು ಎಂಬ ದೃಷ್ಟಿಯನ್ನಿಟ್ಟು ನೋಡಿದರೂ ಕೂಡಾ ಹೊಸ ಜಗತ್ತಿಗೆ ಸ್ಥಳಾಂತರಿಸಿ ಹೊಸ ಪರಕೀಯ ಒಡೆಯರ ಕೈಯಲ್ಲಿ ಅವರು ದುರ್ಭರವಾಗಿ ನರಳುವಂತೆ ಮಾಡಿದ ಬಗ್ಗೆ ನೈತಿಕ ಆಕ್ರೋಶವುಂಟಾಗಿಯೇ ಆಗುತ್ತದೆ.

ಹೊಸ ಜಗತ್ತಿನಲ್ಲಿ ಗುಲಾಮಗಿರಿಗೆ ಗುರಿಯಾದ ನೀಗ್ರೋ ಜನಾಂಗದ ಕಷ್ಟಕಾರ್ಪಣ್ಯಗಳು ಎಷ್ಟು ಅಸಾಧಾರಣವಾಗಿದ್ದವೆಂಬುದನ್ನು ಯೂರೋಪ್ ಮತ್ತು ಏಷ್ಯಾ ವಾಸಿಗಳಿಗೆ ಊಹಿಸಲೂ ಆಗದು. ಆ ಗುಲಾಮರ ಕಷ್ಟದ ಅನುಭವಗಳನ್ನು ಮೂರು ಪಟ್ಟಿಯಲ್ಲಿ ವಿಂಗಡಿಸಿ ವಿವರಿಸಬಹುದು. ಗುಲಾಮಗಿರಿಗೆಂದು ಸೆರೆ ಹಿಡಿಯುವಾಗಿನ ಕಷ್ಟ, ಆಮೇಲಿನ ಪ್ರಯಾಣದ ಕಷ್ಟ ಮತ್ತು ಕಡು ದುಡಿಮೆಯ ಕಷ್ಟ. ಮೊದಲು ನೀಗ್ರೋಗಳನ್ನು ಗುಲಾಮಗಿರಿಗಾಗಿ ಹಿಡಿಯುತ್ತಿದ್ದ ಮಾರ್ಗಗಳನ್ನು ನೋಡೋಣ. ಮೊದಲ ದಿನಗಳಲ್ಲಿ ಕರಾವಳಿಯಲ್ಲಿ ತಟ್ಟನೆ ಬಂದು ಇಳಿಯುವುದರಿಂದಲೇ ಹಲವರನ್ನು ಗುಂಪುಕಟ್ಟಿ ಹಿಡಿಯಬಹುದಿತ್ತು. ಆದರೆ ಆಮೇಲೆ, ನೀಗ್ರೋಗಳು ಹಡಗಿನ ಬರವನ್ನು ನೋಡುತ್ತಲೇ ಓಡಿ ಅಡಗುವುದನ್ನು ಕಲಿತರು. ಕೆಲವು ಸಾಹಸಿ ವ್ಯಾಪಾರಿಗಳು ಅಂಥಲ್ಲಿ ತಾವೇ ಒಳಹೊಕ್ಕು ಹಿಡಿಯುವ ಕೆಲಸ ಮಾಡಿದ್ದುಂಟು. ಆದರೆ ಸಾಧಾರಣ ಪದ್ಧತಿಯಂತೆ ಅವರ ಲೇವಾದೇವಿ ನಡೆದಿದ್ದು ಸ್ಥಳೀಯ, ಅರೆ–ಸ್ಥಳೀಯ ಸಮಾನ ಉದ್ಯೋಗಿಗಳೊಂದಿಗೆ. ಮಧ್ಯವರ್ತಿಗಳು ಯೂರೋಪಿನಿಂದ ಈ ವ್ಯಾಪಾರಿಗಳು ತಂದ ಚಿಲ್ಲರೆ ವಸ್ತುಗಳನ್ನು – ಬಟ್ಟೆ, ಮಣಿಗಳು, ಪಾತ್ರೆಗಳು, ಬಂದೂಕು, ಪೌಡರು, ಮದ್ಯ ಮುಂತಾದವನ್ನು – ಪಡೆದು ಪ್ರತಿಯಾಗಿ ಸ್ಥಳೀಯ ನಾಯಕರ ಮೂಲಕ ಪಡೆದ ಗುಲಾಮರನ್ನು ಕೊಡುತ್ತಿದ್ದರು. ಬಂದೂಕು ಮತ್ತು ಮದ್ಯ – ಇಂಥ ಮೋಜಿನ ವಸ್ತುಗಳ ಚಪಲಕ್ಕೆ ಸ್ಥಳೀಯ ನಾಯಕರು, ಮುಖ್ಯವಾಗಿ ಶಕ್ತಿಶಾಲಿ ಗುಂಪಿನ ನಾಯಕರು– ಬಲಿಯಾಗಲಿಲ್ಲ ಎನ್ನುವುದಕ್ಕೆ ಏನೂ ಆಧಾರವಿಲ್ಲ. ಹಾಗಾಗಿ ಒಂದು ಪಂಗಡದ ಆಡಳಿತದೊಳಗೆ ಸಣ್ಣ ಸಣ್ಣ ಅಪರಾಧಗಳಿಗೂ ಗುಲಾಮಗಿರಿಯ ಶಿಕ್ಷೆ ವಿಧಿಸುವ ರೂಢಿ ಪ್ರಾರಂಭವಾಯಿತು. ಅಲ್ಲದೆ ಗುಲಾಮರನ್ನು ಹಿಡಿಯುವ ಉದ್ದೇಶಕ್ಕೇ ನಡೆಯುವ ಪಂಗಡ ಪಂಗಡದ ಯುದ್ಧ, ಯುದ್ಧವಿಲ್ಲದಾಗ ಹೆಂಗಸರು ಮಕ್ಕಳನ್ನು ಅಪಹರಿಸುವುದು ಆಫ್ರಿಕನ್ ಬದುಕಿನ ಸಾಧಾರಣ ಸಂಗತಿಗಳಾಗತೊಡಗಿದವು; ವ್ಯಾಪಾರ ಹೆಚ್ಚಾದಂತೆಲ್ಲ ಈ ಪಿಡುಗು ಆಫ್ರಿಕಾ ಖಂಡದ ಮತ್ತೂ ಮತ್ತೂ ಒಳಕ್ಕೆ ಹಬ್ಬತೊಡಗಿತ್ತು.

ಎರಡನೆಯದಾಗಿ, ನೀಗ್ರೋಗಳನ್ನು ಅಮೆರಿಕಕ್ಕೆ ಸಾಗಿಸುತ್ತಿದ್ದ ವ್ಯವಸ್ಥೆಯ ಬಗ್ಗೆ. ಗುಲಾಮರನ್ನು ಕೊಂಡಾದ ಮೇಲೆ ವ್ಯಾಪಾರಿ ಅವರನ್ನು ನಡೆಸಿಕೊಂಡು ಹೊರಡುತ್ತಿದ್ದ. ಹೆಂಗಸರು, ಗಂಡಸರು, ಮಕ್ಕಳು ಕೂಡಿ ಉದ್ದನೆಯ ಕ್ಯಾರವಾನುಗಳಲ್ಲಿ ಕರಾವಳಿಯ ತನಕ ನಡೆಯುತ್ತಿದ್ದ ಆ ಯಾತ್ರೆ ಕೆಲವೊಮ್ಮೆ ತುಂಬ ದೀರ್ಘವಾಗಿರುತ್ತಿತ್ತು. ತಪ್ಪಿಸಿಕೊಳ್ಳಲಾಗದಂತೆ ಅವರಿಗೆ ಕೋಳ ತೊಡಿಸಲಾಗುತ್ತಿತ್ತು ಮತ್ತು ಕೆಲವೊಮ್ಮೆ 'ಗುಲಾಮರ ನೊಗ' ಎಂದೇ ಹೆಸರಾದ ತುದಿಗೆ ಕುಣಿಕೆಯಿರುವ ಉದ್ದನೆಯ ಕೋಲನ್ನು ಕುತ್ತಿಗೆಗೆ ಕಟ್ಟಲಾಗುತ್ತಿತ್ತು. ಅವರ ತಲೆಯ ಮೇಲೆ ಬುತ್ತಿಯ ಗಂಟುಗಳು, ಪ್ರಯಾಣಕ್ಕೆ ಬೇಕಾದ ಸರಂಜಾಮುಗಳು ಅಥವಾ ವ್ಯಾಪಾರಿಗಳು ಇಲ್ಲಿಂದ ಕೊಂಡುಕೊಂಡ ದಂತವೇ ಮೊದಲಾದ ಸ್ಥಳೀಯ ಉತ್ಪನ್ನಗಳ ಹೊರೆ ಹೇರಲಾಗುತ್ತಿತ್ತು. ಈ ನಡಿಗೆಯ ಶ್ರಮ ತಂಡದ ದುರ್ಬಲರಿಗೆ ಒಮ್ಮೊಮ್ಮೆ ಅಸಾಧ್ಯವಾಗುತ್ತಿತ್ತು. ಹಾಗೆ ರೋಗಗ್ರಸ್ತರಾದವರನ್ನು ಅಲ್ಲೇ ಬಿಟ್ಟು ಹೋಗುತ್ತಿದ್ದರು ಅಥವಾ ಕೊಂದು ಹಾಕುತ್ತಿದ್ದರು. ಇಂಥ ಗುಲಾಮ ಯಾತ್ರೆಗಳು ಪದೇಪದೇ ನಡೆಯುತ್ತಿದ್ದ ಹಾದಿಯಲ್ಲಿ ಮನುಷ್ಯರ ಎಲುಬುಗಳು ಚೆಲ್ಲಾಡಿರುತ್ತಿದ್ದವು. ಸಮುದ್ರತೀರ ತಲುಪಿದೊಡನೆ ಗುಲಾಮರನ್ನು ಸಾಗಿಸಲೆಂದೇ ವಿಶೇಷವಾಗಿ ನಿರ್ಮಿತವಾದ ಹಡಗುಗಳಲ್ಲಿ ಅವರನ್ನು ತುರುಕಿ ತುಂಬುತ್ತಿದ್ದರು. ಹಡಗಿನಲ್ಲಿರುವ ಸ್ಥಳವನ್ನು ಮೂರು ಅಡಿ ಅಂತರದಲ್ಲಿ ಒಂದರ ಮೇಲೊಂದು ಹಲಗೆಗಳನ್ನು ಜೋಡಿಸಿ, ಖಾನೆ ಮಾಡಿರುತ್ತಿದ್ದರು. ನಡುವೆ ಒಂದು ಓಣಿಯನ್ನು ಬಿಟ್ಟಿರುತ್ತಿದ್ದರು. ಈ ಖಾನೆಗಳಲ್ಲಿ ಗಂಡಸರು ಹೆಂಗಸರನ್ನು ಪ್ರತ್ಯೇಕಿಸಿ ಇಬ್ಬರಿಗೊಂದರಂತೆ ಕೋಳ ಹಾಕಿ ಮಲಗಿಸಲಾಗುತ್ತಿತ್ತು. ಸರಕು ಜಾಸ್ತಿಯಿದ್ದಷ್ಟೂ ಲಾಭವೂ ಜಾಸ್ತಿಯಾಗುತ್ತಿದ್ದುದರಿಂದ ಕೆಲವೊಮ್ಮೆ ಅವರಿಗೆ ಹೊರಳಿಕೊಳ್ಳಲು ಸ್ಥಳವಿಲ್ಲದಂತೆ ಇಕ್ಕಟ್ಟಾಗಿ ತುಂಬುತ್ತಿದ್ದರು. ೧೫೦ ಟನ್ ಸಾಮರ್ಥ್ಯದ ಹಡಗಿನಲ್ಲಿ ೬೦೦ ರಷ್ಟು ಗುಲಾಮರನ್ನು ಸಾಗಿಸಲಾಗುತ್ತಿತ್ತು. ಬ್ರೆಜಿಲ್‌ಗೆ ನೇರ ಪ್ರಯಾಣವಾದರೆ ಈ ಪ್ರಯಾಣ ಸಾಕಷ್ಟು ಹತ್ತಿರವಾದದ್ದೇ ಆಗಿತ್ತು. ಆದರೆ ಮುಖ್ಯ ಗುಲಾಮರ ವ್ಯಾಪಾರ ಸ್ಥಾನ ವೆಸ್ಟ್ ಇಂಡೀಸ್‌ಗೆ ಹೋಗುವ 'ಮಧ್ಯಮಾರ್ಗ' ಎಂದು ಹೆಸರಾಗಿದ್ದ ಹಾದಿ ಸಾಕಷ್ಟು ದೀರ್ಘವಾಗಿತ್ತು. ಗಾಳಿ ಇಲ್ಲದಾಗ, ವಿರುದ್ಧವಾಗಿದ್ದಾಗ ಹಲವು ವಾರಗಳಷ್ಟು ಈ ಹಾದಿ ದೀರ್ಘವಾಗುತ್ತಿತ್ತು. ಸಮುದ್ರ ಶಾಂತವಾಗಿದ್ದಾಗ ಗುಲಾಮರನ್ನೆಲ್ಲ ಹಡಗಿನ ಅಟ್ಟಕ್ಕೆ ತಂದು ವ್ಯಾಯಾಮಕ್ಕೆಂದು ಅವರನ್ನು ಒತ್ತಾಯದಿಂದ ಕುಣಿಸುತ್ತಿದ್ದರು. ಇನ್ನು ಪ್ರತಿಕೂಲ ಹವೆಯಲ್ಲಿ ಅವರ ಗತಿ ಊಹಿಸುವುದೇ ಬೇಡ. ರೋಗಗಳಂತೂ ಹಡಗಿನ ತುಂಬ ಹಬ್ಬಿಕೊಂಡಿರುತ್ತಿದ್ದವು. ಉಣ್ಣಲು ನಿರಾಕರಿಸುವವರಿಗೆ ಒತ್ತಾಯದಿಂದ ಉಣಿಸುವ ಉಪಕರಣಗಳು ಇದ್ದರೂ ಕೂಡಾ ಹದಿನೆಂಟನೇ ಶತಮಾನದ ಒಂದು ಲೆಕ್ಕಾಚಾರದಂತೆ ಸಾಗಿಸಲಾಗುತ್ತಿದ್ದ ಆರನೆಯ ಒಂದು ಭಾಗದಷ್ಟು ಜನ ಹಡಗಿನಲ್ಲೇ ಸಾಯುತ್ತಿದ್ದರು. ಪ್ರಯಾಣ ಕೊನೆಯ ಹಂತಕ್ಕೆ ಬಂದಂತೆ, ಗುಲಾಮರನ್ನು ಪರೀಕ್ಷಿಸಿ ಮಾರಾಟಕ್ಕೆ ತಯಾರು ಮಾಡಲಾಗುತ್ತಿತ್ತು. ಬಿರುಗಾಳಿಯಿಂದ ಮತ್ತು ದೌರ್ಜನ್ಯದಿಂದಾದ ಗಾಯಗಳಿಗೆ ಇಲಾಜು ಮಾಡಿ ಅದನ್ನು ಆದಷ್ಟು ಅಡಗಿಸಲಾಗುತ್ತಿತ್ತು. ಆದರೂ ಹಲವಾರು ಬಾರಿ ಬಂದರಿನಲ್ಲಿ ಅವರನ್ನು ಕೊಳ್ಳುವ ಏಜೆಂಟರು ಬಂದಿಳಿದ 'ನೀಗ್ರೋ ಸರಕುಮೂಟೆಗಳು' 'ಕೆಟ್ಟಿವೆ' ಅಥವಾ 'ಹಾಳಾಗಿವೆ' ಅಥವಾ 'ತೀರಾ ಸಾಧಾರಣ' ಎಂದು ದೂರುತ್ತಿದ್ದರು. ಅಂತಿಮವಾಗಿ ಹಡಗಿನಲ್ಲೇ ಅಥವಾ ಸಾರ್ವಜನಿಕ ಗುಲಾಮರ ಮಾರುಕಟ್ಟೆಗಳ ಹರಾಜಿನ ಮೂಲಕ ಅಥವಾ ಹುಂಡಾ ಗುತ್ತಿಗೆಯ ಮೂಲಕ ಅವರನ್ನು ಮಾರಲಾಗುತ್ತಿತ್ತು. ಹದಿನೆಂಟನೆಯ ಶತಮಾನದಲ್ಲಿ ಆರೋಗ್ಯವಂತ ಮನುಷ್ಯನೊಬ್ಬನ ಬೆಲೆ ೬೦ ಪೌಂಡುಗಳಷ್ಟು ತುಟ್ಟಿಯಾಗಿತ್ತು. ಕಾಯಿಲೆ ಬಿದ್ದವರನ್ನೂ ಗಾಯಗೊಂಡವರನ್ನೂ ದುರ್ಬಲ ಹೆಂಗಸರು, ಮಕ್ಕಳೊಂದಿಗೆ ಕೂಡಿಸಿ, 'ಉಪಯೋಗಕ್ಕೆ ಬಾರದ' ಸರಕೆಂದು ಕಡಿಮೆ ಬೆಲೆಗೆ ಮಾರುತ್ತಿದ್ದರು. ಇಷ್ಟೆಲ್ಲ ಆಗಿ ಕಡೆಗೊಮ್ಮೆ ಅವರು ತೋಟಗಳಿಗೆ

ತಲುಪಿಯಾದ ಮೇಲೂ ಅವರಿಗಿದ್ದ ಬದುಕೆನ್ನುವುದನ್ನು ತೊಡಗುವ ಮೊದಲು ಅವರು ಇನ್ನೊಂದು ಪರೀಕ್ಷೆಯೆದುರಿಸಬೇಕಿತ್ತು. ದುಡಿಮೆಯ ಮೊದಲ ತಿಂಗಳುಗಳಿಗೆ "ಹದಗೊಳಿಸುವ" ಸಮಯ ಎನ್ನುತ್ತಿದ್ದರು. ಆ ಸಮಯದಲ್ಲಿ ಕನಿಷ್ಠ ಮೂರನೆಯ ಒಂದು ಭಾಗದಷ್ಟು ಜನರು ತಮ್ಮ ಮೈಮನಸ್ಸುಗಳನ್ನು ಈ ಹೊಸ ವಾತಾವರಣದ ಹವೆಗೆ, ಆಹಾರಕ್ಕೆ, ಶ್ರಮಕ್ಕೆ ಹೊಂದಿಸಿಕೊಳ್ಳಲಾಗದೆ ಸಾಯುತ್ತಿದ್ದರು. ಈ ಎಲ್ಲ ಸಾವುಗಳನ್ನೂ ಕೂಡಿಸಿದರೆ – ಗುಲಾಮರನ್ನು ಹಿಡಿಯುವ ಯುದ್ಧ ಅಥವಾ ದಾಳಿ, ಸಮುದ್ರ ಪ್ರಯಾಣ, ಮಧ್ಯ ಮಾರ್ಗ ಹಾಗೂ ಹದಗೊಳಿಸುವ ಹಂತ – ಎಲ್ಲ ಕೂಡಿ ಕನಿಷ್ಠ ಲೆಕ್ಕಾಚಾರ ಹಾಕಿದರೂ ಒಬ್ಬ 'ಹದಗೊಳಿಸಿದ' ನೀಗ್ರೋಗೆ ಇನ್ನೊಬ್ಬ ನೀಗ್ರೋ ಸತ್ತಿರುತ್ತಿದ್ದನೆಂಬುದು ವ್ಯಕ್ತವಾಗುತ್ತದೆ.

ಮೂರನೆಯದಾಗಿ, ಹೀಗೆ 'ಹದಗೊಳಿಸಿದ' ಒಬ್ಬ ನೀಗ್ರೋ ಗುಲಾಮ ಅನುಭವಿಸಬೇಕಿದ್ದ ಬದುಕಿನ ವಾಸ್ತವ ಸ್ಥಿತಿ, ನೀಗ್ರೋ ಗುಲಾಮಗಿರಿಯಲ್ಲಿ ಅದರ ಒಡೆಯನಿಗೆ ಎರಡು ಹಕ್ಕುಗಳು ನಿಸ್ಸಂದಿಗ್ಧವಾಗಿ ದೊರಕಿದ್ದವು. ಗುಲಾಮನನ್ನು ತನ್ನ ಆಸ್ತಿಯಾಗಿಸಿಕೊಳ್ಳುವ ಹಕ್ಕು ಒಂದು, ಶಿಕ್ಷಿಸುವ ಹಕ್ಕು ಇನ್ನೊಂದು ಆಸ್ತಿಯಾಗಿಸಿಕೊಳ್ಳುವ ಹಕ್ಕು ಎಂಬುದಕ್ಕೆ ವಿಶಾಲ ಅರ್ಥವ್ಯಾಪ್ತಿಯಿತ್ತು. ಆ ಹಕ್ಕಿನಂತೆ ನೀಗ್ರೋ ಗುಲಾಮನ ಸೇವೆಯನ್ನು ಅನುಭವಿಸುವುದಷ್ಟೇ ಅಲ್ಲದೆ, ಆ ಸೇವೆಯನ್ನು ಮಾಡುವ, ವಂಶಪಾರಂಪರ್ಯವಾಗಿ ಮುಂದಿನ ಪೀಳಿಗೆಗೆ ಮುಂದುವರೆಸುವ ಮತ್ತು ಇನ್ನಾವುದೇ ರೀತಿಯಿಂದ ಹಸ್ತಾಂತರಿಸುವ ಹಕ್ಕುಗಳು ಅದರಲ್ಲಿ ಅಡಕವಾಗಿದ್ದವು. ಈ ಕಲ್ಪನೆಯ ಪರಿಣಾಮ 'ಗುಲಾಮನ ಮನುಷ್ಯತ್ವವನ್ನೇ ನಾಶಗೊಳಿಸಿ ವಸ್ತುವಾಗಿ ಸಮೀಕರಿಸುವುದೇ' ಆಗಿತ್ತು. ಗುಲಾಮ ಒಂದು ಆಸ್ತಿ ಎಂಬ ಕಲ್ಪನೆಯಿಂದಾಗಿ ಆತನ ಒಡೆಯನ ಸಾಲಕ್ಕೆ ಅವನನ್ನು ಸ್ವಾಧೀನಪಡಿಸಿಕೊಳ್ಳಲು ಅವಕಾಶವಿತ್ತು. ಗುಲಾಮರು ತಮ್ಮ ಗುಲಾಮತನದಿಂದ ಬಿಡುಗಡೆ ಹೊಂದಿದಮೇಲೂ, ಅವರ ಬಿಡುಗಡೆಗೆ ಮುಂಚೆ ಅವರ ಒಡೆಯ ಮಾಡಿದ ಸಾಲಕ್ಕೆ ಅವರನ್ನು ಸ್ವಾಧೀನಗೊಳಿಸಿಕೊಳ್ಳಲು ಸಾಧ್ಯವಿತ್ತು. ಗುಲಾಮ ಮನುಷ್ಯನಲ್ಲ, ಆಸ್ತಿ ಎಂಬ ಕಲ್ಪನೆ ಕಾನೂನಿನ ಚೌಕಟ್ಟಿನಲ್ಲಿ ಆತನಿಗೆ ಯಾವತ್ತೂ ದೌರ್ಬಲ್ಯವನ್ನು ಸೃಷ್ಟಿಸಿತ್ತು. ಈ ಕಲ್ಪನೆ ರೋಮನ್ ಕಾನೂನಿಗಿಂತ ಭಿನ್ನವಾದುದು. ಏಕೆಂದರೆ ರೋಮನ್ ಕಾನೂನಿನಲ್ಲಿ ಗುಲಾಮರಿಗೂ ಆಸ್ತಿ ಹೊಂದಲು ಅವಕಾಶವಿತ್ತು. ಅಂಥ ಆಸ್ತಿಯನ್ನವರು ಪೆಕ್ಯುಲಿಯಮ್ ಎಂದು ಕರೆದರು. ಆ ಹಕ್ಕು ಸೀಮಿತವಾಗಿದ್ದರೂ ಮುಖ್ಯವಾಗಿತ್ತು. ಏಕೆಂದರೆ ರೋಮನ್ ಕಾನೂನು ಗುಲಾಮ ಒಂದು ಆಸ್ತಿ, ಜೊತೆಗೇ ಒಬ್ಬ ಮನುಷ್ಯ ಎಂಬುದನ್ನು ಒಪ್ಪಿಕೊಂಡಿತ್ತು. ಮನುಷ್ಯನಾಗದೆ ಬರೀ ಆಸ್ತಿಯಾಗಿದ್ದ ನೀಗ್ರೋ ಗುಲಾಮ ವ್ಯಾಪಾರದಲ್ಲಿ ತೊಡಗುವಂತಿರಲಿಲ್ಲ, ಮದುವೆಯಾಗುವಂತಿರಲಿಲ್ಲ. ಇನ್ನು ಗುಲಾಮನನ್ನು ಶಿಕ್ಷಿಸುವ ಹಕ್ಕಿಗೂ ನೀಗ್ರೋ ಗುಲಾಮರಿಗೆ ಸಂಬಂಧಿಸಿದಂತೆ ತೀರ ಕ್ರೂರವಾದ ಅರ್ಥವ್ಯಾಪ್ತಿಯನ್ನು ನೀಡಲಾಗುತ್ತಿತ್ತು. ೧೮೨೯ರಲ್ಲಿ ಉತ್ತರ ಕೆರೋಲಿನಾ ನ್ಯಾಯಾಲಯದಲ್ಲಿ ಬಂದ ಒಂದು ವಿವಾದದಲ್ಲಿ ತನ್ನ ಗುಲಾಮನನ್ನು ಹೊಡೆದ ಒಬ್ಬ ಒಡೆಯನನ್ನು ನಿರಪರಾಧಿಯೆಂದು ಸಾರಿದ ಮುಖ್ಯ ನ್ಯಾಯಾಧೀಶರು ಹೀಗೆಂದು ಸೂಚಿಸಿದರು :

"ಒಡೆಯ ಮತ್ತು ಗುಲಾಮನ ಸಂಬಂಧವನ್ನು ತಂದೆ ಮತ್ತು ಮಗುವಿನ ಸಂಬಂಧ ಎಂದೆನ್ನುವುದು ತಪ್ಪಾಗುತ್ತದೆ. ತನ್ನ ಮಗನನ್ನು ತರಬೇತುಗೊಳಿಸುವ ತಂದೆಯ ಉದ್ದೇಶ ಅವನನ್ನು ಸ್ವತಂತ್ರ ಮನುಷ್ಯನ ಬದುಕಿಗೆ ಸಮರ್ಥನನ್ನಾಗಿಸುವುದು. ಈ ಉದ್ದೇಶಕ್ಕಾಗಿ ಆತ ಮಗನಿಗೆ ನೈತಿಕ ಮತ್ತು ಬೌದ್ಧಿಕ ಶಿಕ್ಷಣ ನೀಡುತ್ತಾನೆ. ಗುಲಾಮನ ವಿಷಯದಲ್ಲಿ ಇದು ಪೂರ್ಣ ಬೇರೆ. ಗುಲಾಮನಿಗೆ ನೈತಿಕ ಮೌಲ್ಯಗಳನ್ನು ಹೇಳಹೊರಡುವುದು ಮೂರ್ಖತನವೇ ಸರಿ. ಗುಲಾಮಗಿರಿಯ ಅಂತಿಮ ಫಲ ಒಡೆಯನ ಲಾಭ ಮತ್ತು ಭದ್ರವಾದ ಹಾಗೂ ಸುರಕ್ಷಿತವಾದ ಬದುಕು. ಪ್ರತಿಯಾಗಿ ಗುಲಾಮ ತನ್ನ ವರ್ತಮಾನದಲ್ಲಿ ಮತ್ತು

ಭವಿಷ್ಯದಲ್ಲಿ ಯಾವುದೇ ಬುದ್ಧಿಯಿಲ್ಲದೆ, ಯಾವುದನ್ನೂ ತನ್ನದಾಗಿಸಿಕೊಳ್ಳುವ ಸಾಮರ್ಥ್ಯವಿಲ್ಲದೆ, ತಾನು ದುಡಿದ ಫಲವನ್ನು ತನ್ನದಾಗಿಸಿಕೊಳ್ಳಲಾಗದಂತಹ ವ್ಯಕ್ತಿತ್ವಕ್ಕೆ ವಿಧಿತನಾದಂತಹವನು. ಅಂತಹ ಪ್ರಾಣಿಗೆ ಯಾವ ನೈತಿಕ ವಿಚಾರದಿಂದ ಬುದ್ಧಿ ಹೇಳಲು ಸಾಧ್ಯ ? ಇಂತಹ ಸೇವೆಯನ್ನು ತನ್ನ ಸ್ವಂತ ಸಂಕಲ್ಪವೆಂಬುದು ಇಲ್ಲದವನಿಂದ ಮಾತ್ರ ಪಡೆಯಲು ಸಾಧ್ಯ. ಅದಕ್ಕಾಗಿ ಆತ ತನ್ನ ಸ್ವಂತ ಇಚ್ಛೆಯನ್ನು ಇನ್ನೊಬ್ಬನ ಇಚ್ಛೆಗೆ ವಿಧೇಯವಾಗಿಸಿ ಶರಣಾಗಬೇಕು. ಅಂಥ ವಿಧೇಯತೆ ಬರುವುದು ದೇಹದ ಮೇಲೆ ಸಂಪೂರ್ಣ ಅಧಿಕಾರ ಸಾಧಿಸಲು ಸಾಧ್ಯವಾದಾಗ ಮಾತ್ರ, ಇನ್ನಾವ ರೀತಿಯಿಂದಲೂ ಅದನ್ನು ಸಾಧಿಸಲು ಸಾಧ್ಯವಿಲ್ಲ. ಆದ್ದರಿಂದ ಗುಲಾಮನ ಸಂಪೂರ್ಣ ಶರಣಾಗತಿಯನ್ನು ಸಾಧಿಸಿಕೊಳ್ಳಲು ಒಡೆಯನಿಗೆ ಪರಮಾಧಿಕಾರವಿರುವುದು ಅಗತ್ಯವಾಗುತ್ತದೆ."

ಒಡೆಯನಿಗೆ ಇದ್ದ ಶಿಕ್ಷಿಸುವ ಹಕ್ಕಿನ ಈ ಬಗೆಯ ವ್ಯಾಖ್ಯಾನ ಬಹುಕಾಲ ಅಮೆರಿಕದಲ್ಲಿ ರೂಢಿಯಲ್ಲಿದ್ದಂತಹುದು. ಇಂತಹ 'ಕಾಯಿದೆಬದ್ಧ ಶಿಕ್ಷಣ' ದಿಂದಾಗಿ ಒಂದು ವೇಳೆ ಯಾವುದೇ ಗುಲಾಮ ಸತ್ತರೆ ಅದನ್ನು ಕಾನೂನು ಆಕಸ್ಮಿಕವಾಗಿ ನಡೆದ ವಿಷಾದದ ನರಹತ್ಯೆ ಎಂದು ಪರಿಗಣಿಸುತ್ತಿತ್ತು. ಈ ಶಿಕ್ಷಿಸುವ ಹಕ್ಕನ್ನು ಒಡೆಯರು ಎಷ್ಟು ದಯಾಹೀನರಾಗಿ ಬಳಸಿಕೊಳ್ಳುತ್ತಿದ್ದರು ಎಂಬುದನ್ನು ತಿಳಿಯಲು ೧೭೮೭ರಲ್ಲಿ ಅಂಟಿಗ್ವಾದ ಒಬ್ಬ ನಿವಾಸಿ ಬರೆದ ಕಾಗದದ ಕೆಲವು ಭಾಗಗಳನ್ನು ಗಮನಿಸಬಹುದು: "ನೀಗ್ರೋಗಳನ್ನು ಸೂರ್ಯೋದಯದ ವೇಳೆಗೇ ಎಬ್ಬಿಸುತ್ತಾರೆ, ಅವರನ್ನು ೨೦ ರಿಂದ ೬೦ ರ ತನಕದ ಗುಂಪುಗಳಾಗಿ ಒಡೆಯುತ್ತಾರೆ. ಇವರ ಮೇಲ್ವಿಚಾರಕರು ಬಿಳಿಯರು, ಸಾಧಾರಣವಾಗಿ ಬಡ ಸ್ಕಾಟಿಷ್ ಹುಡುಗರು. ಬಹಳ ನಿಯತ್ತಿನ ಸೇವಕರಾಗಿರುವ ಈ ಹುಡುಗರು ತಮ್ಮ ನಿಷ್ಠೆ ಮತ್ತು ಉದ್ಯೋಗಶೀಲತೆಯಿಂದಾಗಿ ಸ್ವತಃ ತೋಟದ ಮಾಲೀಕರಾಗಿ ಬೆಳೆಯುವುದೂ ಇದೆ. ಈ ಮೇಲ್ವಿಚಾರಕರ ಕೈಕೆಳಗೆ ಇರುವವರು ಚಾಲಕರು. ಇವರು ಹೆಚ್ಚಾಗಿ ಕರಿಯರು ಅಥವಾ ಕರಿಯರಿಗೂ ಬಿಳಿಯರಿಗೂ ಹುಟ್ಟಿದ ಕೆಳವರ್ಗದ ಮಿಶ್ರ ಸಂತತಿಯವರು. ಇವರು ತಮ್ಮ ಕೈಯಲ್ಲಿ ಚಾವಟಿಗಳನ್ನು ಹಿಡಿದಿರಲೇಬೇಕು ಮತ್ತು ಕೆಲಸದಲ್ಲಿ ಸ್ವಲ್ಪ ಸಡಿಲಕಂಡರೂ ಅದನ್ನೆತ್ತಿ ಬಾರಿಸಬೇಕು. ಸೋಮಾರಿತನದಿಂದ ಹಾಗಾಗುತ್ತಿದೇಯೋ. ದುರ್ಬಲತೆಯಿಂದಲೋ, ಹೆಂಗಸರೋ ಮಕ್ಕಳೋ ನೋಡದೇ ಅವರು ಚಾವಟಿ ಬಾರಿಸಬೇಕು–ಹಾಗೆಂದು ಅವರಿಗೆ ಅಪ್ಪಣೆಯಂತೆ. ೧೨ ಗಂಟೆಗೆ ಅವರಿಗೆ ಒಮ್ಮೆ ಬಿಡುವು, ಕೊಟ್ಟದ್ದನ್ನು ಪಡೆದು ತಮ್ಮ ಪ್ರಕೃತಿ ಸುಧಾರಿಸಿಕೊಳ್ಳಲಿಕ್ಕೆ. ಮತ್ತೆ ಒಂದೂವರೆ ಗಂಟೆಗೆ ಕೆಲಸ ಮುಂದುವರೆಯಬೇಕು, ಸೂರ್ಯಾಸ್ತದತನಕ......."

* * *

"ಈ ದ್ವೀಪದಲ್ಲಿ ಗುಲಾಮರಿಗೆ ವಿಧಿಸಲಾಗುವ ಶಿಕ್ಷೆಗಳು ನಾನಾ ರೀತಿಯವು, ಅಸಹನೀಯವಾದಂಥವು..... ಅವುಗಳಲ್ಲಿ ಒಂದರ ಹೆಸರು ಹೆಬ್ಬೆರಳುಕಟ್ಟು, ಭಾರೀ ನೋವುಂಟಾಗುವಂತೆ ಎರಡು ಹೆಬ್ಬೆರಳುಗಳನ್ನು ಸೇರಿಸಿ ಬಿಗಿಯುವ ಬರ್ಬರ ಅನ್ವೇಷಣೆ ಇದು. 'ಕಬ್ಬಿಣದ ಸರ' ಎಂಬ ಇನ್ನೊಂದು ಶಿಕ್ಷೆಯಲ್ಲಿ ಕುತ್ತಿಗೆಗೆ ಒಂದು ಕಬ್ಬಿಣದ ಪಟ್ಟಿ ಹಾಕಲಾಗುತ್ತದೆ. ಆಮೇಲೆ ಅದಕ್ಕೆ ಇನ್ನೊಂದಿಷ್ಟು ಪಟ್ಟಿಗಳನ್ನು ಸೇರಿಸಿ ತಲೆಯನ್ನು ಒರಗಿಸಲಾಗದಂತೆ ಮಾಡಲಾಗುತ್ತದೆ. 'ಬೂಟ್ಸ್' ಎಂಬುದು ಕಾಲಿನ ಮಣಿಕಟ್ಟಿನ ಮೇಲೆ ನಾಲ್ಕಿಂಚು ಸುತ್ತಳತೆಯ ಒಂದು ಬಳೆಕೂಡಿಸಿ ಅದಕ್ಕೆ ಸರಪಳಿ ಕಟ್ಟಿ ಎಳೆಯುವಂತಹ ಶಿಕ್ಷೆ. ಇಂಥ ಸರಪಳಿ ಹಾಕಿಯೇ ಕೆಲವು ಒಡೆಯರು ಅವರನ್ನು ದುಡಿಸುತ್ತಿದ್ದುದುಂಟು ಮತ್ತು ನಡುಹಗಲಿನಲ್ಲೂ ಹೀಗೆ ಸರಪಳಿ ಬಿಗಿದ ಗುಲಾಮನನ್ನು ಅವನ ಒಡೆಯ ಎಳೆದೊಯ್ಯುವ ದೃಶ್ಯವನ್ನು ಈ ಊರಿನ ಬೀದಿಗಳಲ್ಲಿ ಕಾಣಬಹುದು. ಕುತ್ತಿಗೆ ಮತ್ತು ಕಾಲಿಗೆ ಸರಪಳಿ ಹಾಕಿ ಸೇರಿಸಿದ ನೀಗ್ರೋಗಳನ್ನು ಕೂಡಾ ನೋಡಬಹುದು.... 'ಬೂಟ್ಸ್'

ಶಿಕ್ಷೆಯಲ್ಲಿ ಕಾಲಿಗೆ ಹಾಕುವ ಬಳೆಗೆ ಮೂರರಿಂದ ನಾಲ್ಕಿಂಚು ಉದ್ದದ ಮೊನೆಗಳನ್ನು ಕೂಡಿಸುವ 'ಮುಳ್ಳು' ಶಿಕ್ಷೆ, ಇಡೀ ದೇಹಕ್ಕೆ ಸರಪಳಿಯಿಂದ ಸುತ್ತಿ ಬಿಗಿದು ಹಾಕಿ ಓಡಾಡಿಸುವುದು – ಇವೆಲ್ಲ ಈ ಶೋಷಿತ ಜನಾಂಗವನ್ನು ಹಿಂಸಿಸಲು ಬಳಸುವ ಇನ್ನಿತರ ಶಿಕ್ಷಾವಿಧಾನಗಳು."

ಇಂಥ ಬಿಡಿ ಒಡೆಯರ ಕ್ರೌರ್ಯವನ್ನು ಮುಂದಿಟ್ಟುಕೊಂಡು ಇಡೀ ಒಡೆಯ ವರ್ಗವೇ ಹಾಗಿತ್ತೆಂದು ತೀರ್ಮಾನಿಸುವುದು ದೊಡ್ಡ ತಪ್ಪು. ಹಲವಾರು ಬಾರಿ ತಮ್ಮ ಒಡೆಯರನ್ನು ವಿಶ್ವಾಸದಿಂದ ಕಾಣುವ ಗುಲಾಮರು ಇದ್ದಿದ್ದನ್ನೂ, ತಮ್ಮ ಗುಲಾಮರನ್ನು ಪ್ರೀತಿಯಿಂದ ನೋಡುವ ಒಡೆಯರು ಇದ್ದಿದ್ದನ್ನೂ ನೋಡಬಹುದು. ಹಾಗಿದ್ದರೂ ಈ ಒಟ್ಟು ವ್ಯವಸ್ಥೆ ಇದ್ದದ್ದು ಆರ್ಥಿಕ ಲಾಭದ ತಳಹದಿಯ ಮೇಲೆ. ಈ ವ್ಯವಸ್ಥೆ ಮನುಷ್ಯರನ್ನು ಉಪಕರಣಗಳು ಎಂಬಂತೆ ಗ್ರಹಿಸುತ್ತಿತ್ತು. ಮನುಷ್ಯತ್ವ ಲವಲೇಶವೂ ಇಲ್ಲದಂತೆ ಮನುಷ್ಯರೊಂದಿಗೆ ವ್ಯವಹರಿಸುವ ಗುಣ ಪಡೆದಿತ್ತು.

ಭಾರತವಲ್ಲದೆ ಬೇರೆ ದೇಶಗಳ ಇತಿಹಾಸದಲ್ಲೂ ನೀಚ, ಅಸ್ವತಂತ್ರ ಮತ್ತು ಗೌರವಹೀನ ವರ್ಗಗಳಿದ್ದವು ಎಂಬುದನ್ನು ವಿವರಿಸಲು ಇನ್ನೂ ಹೆಚ್ಚು ಉದಾಹರಣೆಗಳು ಅಗತ್ಯವಿಲ್ಲ. ಮುಖ್ಯವಾದ ಸಂಗತಿಯೆಂದರೆ ಅಲ್ಲಿ, ಇಂಥ ಅಸ್ವತಂತ್ರ ಗೌರವ ಹೀನ ವರ್ಗಗಳು ತಮ್ಮ ಪ್ರತ್ಯೇಕ ಅಸ್ತಿತ್ವವನ್ನು ಕಳೆದುಕೊಂಡು ಸಮಾಜದ ಮುಖ್ಯ ವಾಹಿನಿಯಲ್ಲಿ ಮರೆಯಾಗಿ ಹೋಗಿವೆ. ಆದರೆ ಭಾರತಕ್ಕೆ ಸಂಬಂಧಿಸಿದ ಪ್ರಶ್ನೆ : ಇಲ್ಲಿ ಯಾಕೆ ಅಸ್ಪೃಶ್ಯತೆ ಮಾಯವಾಗಲಿಲ್ಲ?

ಅದಕ್ಕೆ ಕಾರಣಗಳು ಹಲವಾರು. ಅವನ್ನೇ ಮುಂದಿನ ಅಧ್ಯಾಯಗಳಲ್ಲಿ ಚರ್ಚಿಸಲಾಗಿದೆ.

* * * *

## ಅಧ್ಯಾಯ ೯

# ಹಿಂದೂಗಳು ಮತ್ತು ಸಾರ್ವಜನಿಕ ಅಂತಃಸಾಕ್ಷಿಯ ಕೊರತೆ

ಅಸ್ಪೃಶ್ಯರ ವಿರುದ್ಧ ಹಿಂದೂಗಳು ಹಿಂಸೆಗೆ ಇಳಿದಿರುವ ಸಂದರ್ಭಗಳೆಂದರೆ, ಎಲ್ಲರಿಗೂ ಸಮಾನ ಸ್ವಾತಂತ್ರ್ಯ ಬೇಕು ಎಂಬ ಹೋರಾಟ ನಡೆದಿರುವ ಸಂದರ್ಭಗಳು, ಅಸ್ಪೃಶ್ಯರು ತಾವು ಮೆರವಣಿಗೆ ನಡೆಸಬೇಕೆನ್ನುವಾಗ, ಹಿಂದೂಗಳು ಮೆರವಣಿಗೆ ನಡೆಸಕೂಡದು ಎನ್ನುವುದಿಲ್ಲ. ಅಸ್ಪೃಶ್ಯರಿಗೆ ತಾವು ಬೆಳ್ಳಿ ಬಂಗಾರದ ಆಭರಣ ಧರಿಸಬೇಕೆನ್ನಿಸಿದರೆ, ಹಿಂದೂಗಳಿಗೂ ಹಾಗೆ ಮಾಡುವ ಹಕ್ಕಿರುವುದನ್ನು ಅವರು ಅಲ್ಲಗೆಳೆಯುವುದಿಲ್ಲ. ಅಸ್ಪೃಶ್ಯರಿಗೆ ತಮ್ಮ ಮಕ್ಕಳನ್ನು ಶಾಲೆಗೆ ಕಳಿಸಬೇಕೆಂದು ಅನಿಸಿದರೆ, ಹಿಂದೂಗಳೂ ತಮ್ಮ ಮಕ್ಕಳಿಗೆ ಯೋಗ್ಯ ಶಿಕ್ಷಣ ಕೊಡುವ ಬಗ್ಗೆ ಅವರು ವಿರೋಧಿಸುವುದಿಲ್ಲ. ಅಸ್ಪೃಶ್ಯರು ಬಾವಿಯಿಂದ ನೀರೆಳೆದುಕೊಳ್ಳಲು ಬಯಸಿದರೆ ಹಿಂದೂಗಳೂ ಹಾಗೆ ನೀರು ಪಡೆಯಲು ಅವರ ವಿರೋಧವಿಲ್ಲ. ಹೀಗೆ ಅಸಂಖ್ಯ ಉದಾಹರಣೆಗಳನ್ನು ಹೇಳುತ್ತ ಹೋಗಬಹುದು. ಆದರೆ ಅದರ ಅಗತ್ಯವಿಲ್ಲ. ಅರ್ಥ ಸರಳವಾದದ್ದು, ಸುಲಭವಾಗಿ ಗ್ರಹಿಸಬಹುದಾದಂಥದು. ಅಸ್ಪೃಶ್ಯರು ಯಾವುದೇ ಸ್ವಾತಂತ್ರ್ಯಕ್ಕಾಗಿ ಒತ್ತಾಯ ಮಾಡಿದರೂ ಅದನ್ನು ತಮಗೆ ಮಾತ್ರ ವಿಶೇಷವಾಗಿ ಬೇಕೆಂದು ಕೇಳುವುದಿಲ್ಲ. ಹಿಂದೂಗಳಿಗೂ ಸಮಾನರೀತಿಯ ಸ್ವಾತಂತ್ರ್ಯಗಳಿರುವುದನ್ನು ವಿರೋಧಿಸುವುದಿಲ್ಲ. ಹಾಗಾದರೆ ಹಿಂದೂಗಳು ಯಾಕೆ ಇಂಥ ಮುಗ್ಧ ಮತ್ತು ಪೂರ್ಣ ಕಾನೂನುಬದ್ಧ ಬೇಡಿಕೆಗಳನ್ನು ಹಿಂಸೆಯ ಮೂಲಕ ಹತ್ತಿಕ್ಕುತ್ತಾರೆ? ಯಾಕೆ ಅವರು ತಮ್ಮ ಅನ್ಯಾಯಗಳನ್ನೇ ನ್ಯಾಯಬದ್ಧವೆಂದು ಭಾವಿಸುತ್ತಾರೆ? ಅಸ್ಪೃಶ್ಯರೊಂದಿಗಿನ ಹಿಂದೂಗಳ ನಡವಳಿಕೆ ಮತ್ತು ಲೋಪಗಳನ್ನು ಸಾಮಾಜಿಕ ಅನ್ಯಾಯ ಎಂದಲ್ಲದೆ ಇನ್ನಾವ ರೀತಿಯಿಂದಲೂ ಕರೆಯಲಾಗುವುದಿಲ್ಲ ಎಂಬುದು ಯಾರಿಗೆ ಅರ್ಥವಾಗುವುದಿಲ್ಲ? ಈ ನಡವಳಿಕೆಗಳು ಮತ್ತು ಲೋಪಗಳು ಬರೀ ಅಸಮಾನತೆಯಲ್ಲ, ಬರೀ ಅಗೌರವವಲ್ಲ, ಅವು ಮನುಷ್ಯ, ಮನುಷ್ಯನಿಗೆ ತೋರಿಸುವ ಅಮಾನವೀಯತೆಯ ಸ್ಪಷ್ಟ ದೃಷ್ಟಾಂತಗಳು. ಒಬ್ಬ ಡಾಕ್ಟರು ತನ್ನ ರೋಗಿ ಅಸ್ಪೃಶ್ಯನೆಂಬ ಕಾರಣದಿಂದ ಅವನಿಗೆ ಇಲಾಜು ಮಾಡದೆ ಹೋದರೆ, ಹಿಂದೂ ಸಮುದಾಯಗಳು ಅಸ್ಪೃಶ್ಯರ ಮನೆಗಳಿಗೆ ಬೆಂಕಿ ಹಚ್ಚಿದರೆ, ಅಸ್ಪೃಶ್ಯರ ಬಾವಿಗಳಿಗೆ ಮಲ ಎಸೆದರೆ – ಅದಕ್ಕೆ ಅಮಾನವೀಯ ಅನ್ನದೆ ಮತ್ತೇನು ಹೇಳಬೇಕು? ಒಟ್ಟು ಪ್ರಶ್ನೆ – ಹಿಂದೂಗಳಿಗೆ ಅಂತಃಸಾಕ್ಷಿ ಯಾಕಿಲ್ಲ? ಎನ್ನುವುದು.

ಈ ಪ್ರಶ್ನೆಗಳಿಗೆ ಉತ್ತರ ಒಂದೇ. ಬೇರೆ ದೇಶಗಳಲ್ಲಿ ವರ್ಗರಚನೆ ಉಂಟಾಗಿದ್ದು ಆರ್ಥಿಕ ಮತ್ತು ಸಾಮಾಜಿಕ ಪ್ರೇರಣೆಗಳಿಂದಾಗಿ. ಗುಲಾಮಗಿರಿಗಾಗಲಿ, ಗೇಣಿಪದ್ಧತಿಗಾಗಲಿ ಯಾವುದೇ ಧಾರ್ಮಿಕ ತಳಹದಿ ಇರಲಿಲ್ಲ. ಅಸ್ಪೃಶ್ಯತೆ ಹಿಂದೂಗಳಿಗೆ ಆರ್ಥಿಕ ಅನುಕೂಲಗಳನ್ನು ಒದಗಿಸಿಕೊಡಬಲ್ಲದು. ಆದರೆ ಅದು ಮೂಲತಃ ಧರ್ಮದ ಮೇಲೆ ನಿಂತಿರುವಂಥದು. ಆರ್ಥಿಕ ಮತ್ತು ಸಾಮಾಜಿಕ ಪ್ರೇರಣೆಗಳಲ್ಲಿ ಪವಿತ್ರವಾದದ್ದೇನೂ ಇಲ್ಲ. ಸ್ಥೂಲವಾಗಿ ಈ ಕಾರಣಕ್ಕಾಗಿಯೇ, ಗುಲಾಮಗಿರಿ ಮತ್ತು ಗೇಣಿಪದ್ಧತಿ ಮಾಯವಾದವು. ಆದರೆ ಅಸ್ಪೃಶ್ಯತೆ ಮಾಯವಾಗಲಿಲ್ಲ ಎಂಬುದನ್ನು ವಿವರಿಸಬಹುದು. ಉಳಿದೆರೆಡು ಪ್ರಶ್ನೆಗಳಿಗೂ ಇದೇ ಉತ್ತರ. ಹಿಂದೂಗಳು ಅಸ್ಪೃಶ್ಯತೆಯನ್ನು ಆಚರಿಸುತ್ತಾರಾದರೆ ಅದಕ್ಕೆ ಕಾರಣ ಅವರ ಧರ್ಮ ಅವರನ್ನು ಬೆಂಬಲಿಸುತ್ತದೆ.

ಅಸ್ಪೃಶ್ಯರು ಈ ಸ್ಥಾಪಿತ ವ್ಯವಸ್ಥೆಯ ವಿರುದ್ಧ ಬಂಡೆದ್ದರೆ ಹಿಂದೂಗಳು ಅದನ್ನು ಅನ್ಯಾಯವಾಗಿ, ಅಮಾನವೀಯವಾಗಿ ತುಳಿಯುತ್ತಾರಾದರೆ ಅದಕ್ಕೆ ಕಾರಣ, ಅವರ ಧರ್ಮ ಅವರಿಗೆ ಈ ಸ್ಥಾಪಿತ ವ್ಯವಸ್ಥೆ ದೈವನಿರ್ಮಿತವೆಂದೂ ಪವಿತ್ರವೆಂದೂ ಹೇಳುತ್ತದೆ ಹಾಗೂ ಯಾವುದೇ ಮಾರ್ಗವನ್ನು ಬಳಸಿಯಾದರೂ ಈ ಸ್ಥಾಪಿತ ವ್ಯವಸ್ಥೆಯನ್ನು ಉಳಿಸಿಕೊಳ್ಳಬೇಕೆಂದು ಒತ್ತಾಯಿಸುತ್ತದೆ. ಹಿಂದೂಗಳು ಮಾನವೀಯ ತುಡಿತಕ್ಕೆ ಒಳಗೊಳ್ಳುವುದಿಲ್ಲವಾದರೆ ಅದಕ್ಕೆ ಕಾರಣ, ಅವರ ಧರ್ಮ ಅವರಿಗೆ ಅಸ್ಪೃಶ್ಯರನ್ನು ಮನುಷ್ಯರನ್ನಾಗಿ ನೋಡದಿರುವಂತೆ ಹೇಳುತ್ತದೆ. ಅಸ್ಪೃಶ್ಯರ ವಿರುದ್ಧ ದಾಳಿ, ಲೂಟಿ, ದಹನ ಮುಂತಾದ ಅತ್ಯಾಚಾರಗಳನ್ನು ಮಾಡಿಯೂ ಅವರಿಗೆ ಅಂತಃಸಾಕ್ಷಿಯ ಅಳುಕು ಉಂಟಾಗುವುದಿಲ್ಲವಾದರೆ ಅದಕ್ಕೆ ಕಾರಣ, ಅವರ ಧರ್ಮ ಸಾಮಾಜಿಕ ವ್ಯವಸ್ಥೆಯನ್ನು ಕಾಪಾಡಿಕೊಂಡು ಹೋಗಲು ಏನು ಮಾಡಿದರೂ ಅದು ಪಾಪವಲ್ಲ ಎಂದು ಹೇಳುತ್ತದೆ.

ಹಲವು ಹಿಂದೂಗಳಿಗೆ ಮೇಲಿನ ಮಾತುಗಳು ತಮ್ಮ ಧರ್ಮವನ್ನು ವಿರೂಪಗೊಳಿಸಿವೆ ಅನಿಸಬಹುದು. ಅದಕ್ಕೆ ಒಳ್ಳೆಯ ಉತ್ತರ, ಹಿಂದೂ ಸಮಾಜದ ನಿರ್ಮಾಪಕನಾದ ಮನುವಿನ ನಿಬಂಧನೆಗಳ ಉಲ್ಲೇಖ. ನಾನು ಹೇಳುವುದನ್ನು ತಪ್ಪು ಎಂದು ವಾದಿಸುವವರು – ಅಸ್ಪೃಶ್ಯರು, ಅಸ್ಪೃಶ್ಯತೆ ಮತ್ತು ಅವರ ಬಗ್ಗೆ ಹಿಂದೂಗಳ ಧೋರಣೆ – ಇವುಗಳನ್ನು ಕುರಿತು ಮನು ಬರೆದ ನೀತಿಸೂತ್ರಗಳನ್ನು ನೋಡಲಿ:

೧) ಪ್ರಪಂಚದ ಎಲ್ಲಾ ಕುಲಗಳೂ ಎಂದರೆ, ಬಾಯಿಯಿಂದ, ಭುಜದಿಂದ, ತೊಡೆಯಿಂದ, ಪಾದಗಳಿಂದ ಹುಟ್ಟಿದವರನ್ನು ಬಿಟ್ಟು ಉಳಿದೆಲ್ಲ ಕುಲಗಳೂ ದಸ್ಯುಗಳು ಎಂದು ಕರೆಯಲ್ಪಡುತ್ತಾರೆ – ಅವರು ಮ್ಲೇಚ್ಛ ಭಾಷೆಯನ್ನು ಮಾತನಾಡಬಹುದು ಅಥವಾ ಆರ್ಯ ಭಾಷೆಯನ್ನಾಡಬಹುದು.

೨) ಈ ಕುಲಗಳು ಮರದ ಬುಡದಲ್ಲಿ ಅಥವಾ ಸ್ಮಶಾನದಲ್ಲಿ ವಾಸಿಸಬಹುದು, ಗುಡ್ಡಗಳಲ್ಲಿ ಅಥವಾ ಕಾಡುಗಳಲ್ಲಿ ವಾಸಿಸಬಹುದು; ತಮ್ಮ ವಿಶಿಷ್ಟ ಗುರುತುಗಳಿಂದ ಪ್ರತ್ಯೇಕಿಸಲ್ಪಟ್ಟು ತಮ್ಮ ಅಸಾಧಾರಣ ವೃತ್ತಿಗಳಿಂದ ಜೀವಿಸಬಹುದು.

೩) ಆದರೆ ಚಾಂಡಾಲರು ಮತ್ತು ಶ್ವಪಚರ ವಾಸಸ್ಥಾನಗಳು ಊರಿನ ಹೊರಗಿರಬೇಕು ಮತ್ತು ಅವರನ್ನು ಅಪಾತ್ರರೆಂದೂ ನಾಯಿ, ಕತ್ತೆಗಳಲ್ಲದೆ ಬೇರಾವ ಸಂಪತ್ತನ್ನು ಇಟ್ಟುಕೊಳ್ಳಲು ಅನರ್ಹರೆಂದೂ ಗಣಿಸತಕ್ಕದ್ದು.

೪) ಸತ್ತವರ ಉಡುಪುಗಳನ್ನು ಮಾತ್ರ ಅವರು ಧರಿಸತಕ್ಕದ್ದು, ಒಡಕು ಪಾತ್ರೆಗಳಲ್ಲಿ ಮಾತ್ರ ಅವರು ಉಣ್ಣತಕ್ಕದ್ದು. ಕರಿ ಕಬ್ಬಿಣದ ಆಭರಣಗಳನ್ನು ಮಾತ್ರ ಧರಿಸತಕ್ಕದ್ದು ಮತ್ತು ಊರಿಂದ ಊರಿಗೆ ಅಲೆಯುತ್ತಲೇ ಅವರು ಜೀವನ ಸಾಗಿಸತಕ್ಕದ್ದು.

೫) ಧರ್ಮ ದೀಕ್ಷೆಯನ್ನು ಪಡೆದ ಯಾವನೇ ಮನುಷ್ಯ ಅವರೊಡನೆ ಸಂಬಂಧ ಇರಿಸಿಕೊಳ್ಳಕೂಡದು; ಅವರ ಎಲ್ಲ ವ್ಯವಹಾರಗಳು ಅವರ ನಡುವೆಯೇ ನಡೆಯತಕ್ಕದ್ದು; ಅವರು ತಮ್ಮ ಸಮಾನರನ್ನು ಮಾತ್ರ ವಿವಾಹವಾಗತಕ್ಕದ್ದು.

೬) ಆರ್ಯೇತರರು ಒಡಕು ಪಾತ್ರೆಯಲ್ಲಿ ಕೊಟ್ಟಿದ್ದು ಅವರ ಆಹಾರವಾಗತಕ್ಕದ್ದು. ರಾತ್ರಿ ಕಾಲದಲ್ಲಿ ಊರು ಪೇಟೆಗಳಲ್ಲಿ ಅವರು ಸಂಚರಿಸತಕ್ಕದ್ದಲ್ಲ.

೭) ಹಗಲು ಹೊತ್ತಿನಲ್ಲಿ ಅವರು ರಾಜಾಜ್ಞೆಗನುಸಾರ ವಿಶಿಷ್ಟ ಚಿಹ್ನೆಯನ್ನು ಧರಿಸಿ ತಮ್ಮ ಕೆಲಸಗಳಿಗೆ ಹೋಗತಕ್ಕದ್ದು. ದಾತಾರರಿಲ್ಲದ ಹೆಣಗಳನ್ನು ಅವರೇ ಹೊರಗೆ ಒಯ್ಯತಕ್ಕದ್ದು – ಇದು ವಿಧಿತವಾದ ನಿಯಮ.

೮) ರಾಜನ ಆಜ್ಞೆಯ ಪ್ರಕಾರ, ಕಾನೂನುಬದ್ಧವಾಗಿ ಅವರು ಅಪರಾಧಿಗಳನ್ನು ಶೂಲಕ್ಕೇರಿಸತಕ್ಕದ್ದು ಮತ್ತು ಅಂಥ ಅಪರಾಧಿಗಳ ಬಟ್ಟೆಯನ್ನು, ಹಾಸಿಗೆಯನ್ನು, ಆಭರಣಗಳನ್ನೂ ತಾವೇ ತೆಗೆದುಕೊಳ್ಳಬಹುದು.

೯) ಅಂಥ ನೀಚ ಜಾತಿಯ ಹೆಂಗಸಿನೊಂದಿಗೆ ಸಂಬಂಧವಿಟ್ಟುಕೊಂಡಿರುವ ಯಾವನಿಗೇ ಆಗಲಿ ಜೀವದಂಡನೆ ವಿಧಿಸಬಹುದಾಗಿದೆ.

೧೦) ಸ್ಪೃಶ್ಯನಲ್ಲದ ಅಂಥ ಚಾಂಡಾಲ ಕುಲದ ಅಥವಾ ನೀಚ ಜಾತಿಯ ಯಾವನೇ ವ್ಯಕ್ತಿ, ದ್ವಿಜ ಕುಲದವರಿಂದ ಮಾತ್ರ ಸ್ಪೃಶ್ಯನಾಗಿರುವ ಯಾವುದೇ ದ್ವಿಜಕುಲದವರನ್ನು ಉದ್ದೇಶಪೂರ್ವಕವಾಗಿ ಸ್ಪರ್ಶಿಸಿದರೆ ಅವನಿಗೆ ಮರಣದಂಡನೆ ವಿಧಿಸಬಹುದಾಗಿದೆ.*

ಮನುವಿನ ಈ ನೀತಿ ಸೂತ್ರಗಳನ್ನು ಓದಿದ ಯಾರಿಗೇ ಆಗಲಿ–ಹಿಂದೂ ಧರ್ಮವೇ ಅಸ್ಪೃಶ್ಯತೆಯ ಮುಂದುವರಿಕೆಗೆ ಕಾರಣ ಎಂಬುದನ್ನು ಮತ್ತು ಹಿಂದೂ ಧರ್ಮವೇ ಹಿಂದೂಗಳಿಗೆ ಅಸ್ಪೃಶ್ಯರ ಬಗ್ಗೆ ನ್ಯಾಯವಿಲ್ಲದ, ಅಂತಃಸಾಕ್ಷಿಯಿಲ್ಲದ ಧೋರಣೆಯನ್ನು ರೂಪಿಸಿಕೊಟ್ಟಿದೆ – ಎಂಬುದನ್ನು ನಿರಾಕರಿಸಲು ಸಾಧ್ಯವೆ ? ಮನುವಿನ ಈ ಪುಸ್ತಕದ ಹಿಂದಿನ ಅಧ್ಯಾಯಗಳಲ್ಲಿ ವಿಧಿ ನಿಷೇಧಗಳಾಗಿ ಸೂಚಿಸಿರುವ ವಿಷಯಗಳನ್ನು ಈ ಹತ್ತು ನೀತಿ ಸೂತ್ರಗಳೊಂದಿಗೆ ಕೂಡಿಸಿಕೊಂಡರೆ ಹಿಂದೂಗಳು ಅಸ್ಪೃಶ್ಯರ ಮೇಲೆ ಎಸಗುವ ಎಲ್ಲ ಅತ್ಯಾಚಾರವೂ ಮನುವಿನ ನೀತಿಸೂತ್ರಗಳ ಆಚರಣೆಯೇ ಸರಿ – ಎನಿಸುವುದರಲ್ಲಿ ಸಂದೇಹವಿಲ್ಲ. ಹಿಂದೂಗಳು ಅಸ್ಪೃಶ್ಯರನ್ನು ಮುಟ್ಟದೇ ಹೋದರೆ ಹಾಗೂ ಅಸ್ಪೃಶ್ಯರು ತಮ್ಮನ್ನು ಮುಟ್ಟುವುದು ಅಪರಾಧ ಎಂದು ಭಾವಿಸಿದರೆ ಅದು ಸೂತ್ರ ೫ ಮತ್ತು ೧೦ರ ಸಮರ್ಥನೆ. ಅಸ್ಪೃಶ್ಯರು ಪ್ರತ್ಯೇಕವಾಗಿದ್ದುಕೊಂಡೇ ಬದುಕಬೇಕೆಂದು ಹಿಂದೂಗಳು ಭಾವಿಸಿದರೆ ಅದು ಸೂತ್ರ ೩ರ ಸಮರ್ಥನೆ. ಅಸ್ಪೃಶ್ಯರು ಚೊಕ್ಕವಾದ ಬಟ್ಟೆ, ಬಂಗಾರದ ಆಭರಣ ಧರಿಸಬಾರದೆಂದು ಹಿಂದೂಗಳು ಆಕ್ಷೇಪಿಸಿದರೆ ಅದು ಸೂತ್ರ ೮ರ ಅನುಸರಣೆ ಎಂದು ಅರ್ಥ. ಅಸ್ಪೃಶ್ಯರು ಸಂಪತ್ತು ಗಳಿಸುವುದನ್ನು ಹಿಂದೂಗಳು ಸಹಿಸಲಾರರೆಂದರೆ ಅವರು ಸೂತ್ರ ೩ನ್ನು ಅನುಸರಿಸುತ್ತಿದ್ದಾರೆ ಅಷ್ಟೇ.

ಈ ವಿಷಯವನ್ನು ಇನ್ನೂ ಕಷ್ಟಪಟ್ಟು ಸಮರ್ಥಿಸುವ ಅಗತ್ಯವಿಲ್ಲ. ಅಸ್ಪೃಶ್ಯರ ದುರ್ಗತಿಗೆ ಹಿಂದೂ ಧರ್ಮ ಮತ್ತು ಉಪದೇಶಗಳೇ ಮುಖ್ಯ ಕಾರಣ ಎಂಬುದು ನಿರ್ವಿವಾದ. ಗುಲಾಮಗಿರಿಯ ಬಗ್ಗೆ ಕ್ರೈಸ್ತ ಮತ್ತು ಯೆಹೂದಿ ಧರ್ಮದ ಧೋರಣೆ ಹಾಗೂ ಅಸ್ಪೃಶ್ಯತೆಯ ಬಗ್ಗೆ ಹಿಂದೂ ಧರ್ಮದ ಧೋರಣೆ – ಇವೆರಡನ್ನೂ ಹೋಲಿಸಿ ನೋಡಿದರೆ ಈ ಎರಡು ಧರ್ಮಗಳು ಮಾನವ ಸಂಘಟನೆಯ ಮೇಲೆ ಬೀರಿದ ಪ್ರಭಾವದಲ್ಲಿ ಎಷ್ಟೆಲ್ಲ ವ್ಯತ್ಯಾಸಗಳಿವೆಯೆಂಬುದು ಅರ್ಥವಾಗುತ್ತದೆ. ಮೊದಲನೆಯದರ ಪ್ರಭಾವ ಮೇಲೆತ್ತುವಂತಹುದು, ಎರಡನೆಯದು ಕೆಳಕ್ಕೆ ತಳ್ಳುವಂತಹುದು. ಗುಲಾಮಗಿರಿಯನ್ನು ಅಸ್ಪೃಶ್ಯತೆಯೊಂದಿಗೆ ಹೋಲಿಸುವವರು ಆ ಹೋಲಿಕೆಯಲ್ಲಿ ಒಂದು ವಿರೋಧಾಭಾಸ ಇರುವುದನ್ನು ಗಮನಿಸುವುದಿಲ್ಲ. ಕಾನೂನಿನ ಪ್ರಕಾರ ಒಬ್ಬ ಗುಲಾಮ ಸ್ವತಂತ್ರ ಮನುಷ್ಯನಾಗಿರಲಿಲ್ಲ. ಆದರೆ ಸಾಮಾಜಿಕವಾಗಿ ಆತ ತನ್ನ ವ್ಯಕ್ತಿತ್ವ ಸುಧಾರಣೆಗೆ ಅಗತ್ಯವಾದ ಸ್ವಾತಂತ್ರ್ಯ ಪಡೆದಿದ್ದ. ಅದೇ ಒಬ್ಬ ಅಸ್ಪೃಶ್ಯ, ಕಾನೂನಿನ ಪ್ರಕಾರ ಸ್ವತಂತ್ರ

---

* (೧) ಮನು, X–೪೫ (೨) ಅದೇ, X–೫೦ (೩) ಅದೇ, X–೫೧ (೪) ಅದೇ, X–೫೨ (೫) ಅದೇ, X–೫೩ (೬) ಅದೇ, X–೫೪ (೭) ಅದೇ, X–೬೫ (೮) ಅದೇ, X–೫೬ (೯) ವಿಷ್ಣು, V–೪೩ (೧೦) ವಿಷ್ಣು, X–೧೦೪

ಮನುಷ್ಯ. ಆದರೆ ಸಾಮಾಜಿಕವಾಗಿ ತನ್ನ ವ್ಯಕ್ತಿತ್ವ ಸುಧಾರಣೆಗೆ ಆತನಿಗೆ ಯಾವುದೇ ಅವಕಾಶವಿಲ್ಲ.

ಇದೊಂದು ಕಣ್ಣಿಗೆ ಹೊಡೆಯುವಂತಹ ವಿರೋಧಾಭಾಸ. ಇದನ್ನು ವಿವರಿಸುವುದು ಹೇಗೆ? ಈ ವಿರೋಧಾಭಾಸಕ್ಕೆ ಒಂದೇ ಒಂದು ವಿವರಣೆ ಕೊಡಲು ಸಾಧ್ಯ. ಅದೇಂದರೆ, ಗುಲಾಮಗಿರಿಯ ಸಂದರ್ಭದಲ್ಲಿ ಧರ್ಮ ಗುಲಾಮನ ಪರವಾಗಿತ್ತು. ಆದರೆ ಅಸ್ಪೃಶ್ಯರಿಗೆ ಧರ್ಮ ವಿರೋಧವಾಗಿತ್ತು. ರೋಮನ್ ಕಾನೂನು ಗುಲಾಮ ಒಬ್ಬ ಮನುಷ್ಯನಲ್ಲವೆಂದು ಸಾರಿತು. ಆದರೆ ರೋಮನ್ ಸಾಮ್ರಾಜ್ಯದ ಧರ್ಮ ಆ ತತ್ವವನ್ನು ಒಪ್ಪಲಿಲ್ಲ. ಕನಿಷ್ಠ ಈ ತತ್ವವನ್ನು ಸಾಮಾಜಿಕ ಕ್ಷೇತ್ರಕ್ಕೆ ವಿಸ್ತರಿಸಲು ಬಿಡಲಿಲ್ಲ. ಅಲ್ಲದೆ, ಅದು ಗುಲಾಮನನ್ನು ಸಹವರ್ತಿಯಾಗಲಿಕ್ಕೆ ಯೋಗ್ಯನೆಂದು ಗಣಿಸಿತು. ಹಿಂದೂ ಕಾನೂನು ಅಸ್ಪೃಶ್ಯನು ಮನುಷ್ಯನಲ್ಲವೆಂದು ಸಾರಿತು. ಹಿಂದೂಧರ್ಮ ಈ ತತ್ವವನ್ನು ಒಪ್ಪಿಕೊಂಡಿದ್ದಷ್ಟೇ ಅಲ್ಲದೆ ಅದನ್ನು ಸಾಮಾಜಿಕ ಕ್ಷೇತ್ರಕ್ಕೂ ವಿಸ್ತರಿಸಿತು. ಹಿಂದೂ ಕಾನೂನು ಅಸ್ಪೃಶ್ಯನನ್ನು ಮನುಷ್ಯನಲ್ಲವೆಂದು ಗಣಿಸಿದ್ದರಿಂದ ಹಿಂದೂ ಧರ್ಮ ಅವನನ್ನು ಸಹವರ್ತಿಯಾಗಲಿಕ್ಕೆ ಯೋಗ್ಯನಲ್ಲವೆಂದು ನಿರಾಕರಿಸಿತು.

ಕಾನೂನಿನ ಪ್ರಕಾರ ನೀಚನೆಂದು ಪರಿಗಣಿತನಾಗಿದ್ದ ರೋಮನ್ ಗುಲಾಮ, ಸಾಮಾಜಿಕವಾಗಿಯೂ ಕೀಳೆಂದು ಪರಿಗಣಿತವಾಗದ ಹಾಗೆ ರಕ್ಷಿಸಿದ್ದು ರೋಮನ್ ಧರ್ಮ ಎಂಬುದರಲ್ಲಿ ಅನುಮಾನವಿಲ್ಲ. ಗುಲಾಮ ಸಾಮಾಜಿಕವಾಗಿ ಅಪಮಾನಿತನಾಗದ ಹಾಗೆ ಆ ಧರ್ಮ ರಕ್ಷಿಸಿದ್ದು ಮೂರು ಮಾರ್ಗಗಳಿಂದ. ಒಂದನೇ ಮಾರ್ಗ, ಅತ್ಯಂತ ಪವಿತ್ರವಾದ ಸ್ಥಳಗಳನ್ನೂ ಗುಲಾಮನ ಪ್ರವೇಶಕ್ಕೆ ತೆರೆದಿಟ್ಟಿದ್ದು. ಒಂದು ಬರಹ ದಾಖಲಿಸುವಂತೆ :

"........ರೋಮನ್ ಧರ್ಮ ಗುಲಾಮನಿಗೆ ಎಂದೂ ವಿರುದ್ಧವಾಗಿರಲಿಲ್ಲ. ಅದು ಆತನಿಗೆ ದೇವಾಲಯದ ಬಾಗಿಲುಗಳನ್ನು ಮುಚ್ಚಲಿಲ್ಲ; ಹಬ್ಬಗಳಿಗೆ ಅವನನ್ನು ಬಹಿಷ್ಕರಿಸಲಿಲ್ಲ. ಕೆಲವು ಆಚರಣೆಗಳಿಗೆ ಸಂಬಂಧಿಸಿ ಗುಲಾಮರಿಗೆ ಪ್ರವೇಶ ನಿಷಿದ್ಧವಾಗಿದ್ದ ಹಾಗೆ ಸ್ವತಂತ್ರರಿಗೂ ನಿಷಿದ್ಧವಾಗಿತ್ತು. ಉದಾಹರಣೆಗೆ, ಬೋನಾದೇವಾ, ಸೆರಾಸ್ ಮತ್ತು ವೆಸ್ಟಾ ದೇವರ ವಿಧಿಗಳಿಗೆ ಗಂಡಸರಿಗೆ ಪ್ರವೇಶವಿರಲಿಲ್ಲ. ಅರಾ ಮ್ಯಾಕ್ಸಿಮಾದ ಹರ್ಕ್ಯುಲಸ್ ಆಚರಣೆಗೆ ಹೆಂಗಸರಿಗೆ ಪ್ರವೇಶವಿರಲಿಲ್ಲ. ಪುರಾತನ ರೋಮನ್ ದೇವತೆಗಳನ್ನು ಪೂಜಿಸಲಾಗುತ್ತಿದ್ದ ಕಾಲದಲ್ಲಿ ಕುಟುಂಬದ ಸದಸ್ಯರಲ್ಲಿ ಅನೌಪಚಾರಿಕವಾಗಿ ಗುಲಾಮರನ್ನೂ ಕೂಡಿಸಿಕೊಳ್ಳಲಾಗುತ್ತಿತ್ತು. ಕುಟುಂಬದ ದೇವರು ಗುಲಾಮರ ದೇವರೂ ಆಗಿರುತ್ತಿದ್ದ.......ಗುಲಾಮಗಿರಿಯಿಂದ ಸ್ವತಂತ್ರರಾದ ಹೆಂಗಸರು ವೆಸ್ಟಾ ದೇವರ ಅರ್ಚಕಿಯಾಗಬಹುದೆಂದು ಅಗಸ್ಟಸ್ ಆಜ್ಞೆ ಮಾಡಿದ. ರೋಮನ್ ಕಾನೂನು ಗುಲಾಮನ ಸಮಾಧಿಯನ್ನೂ ಉಳಿದ ಸಮಾಧಿಗಳಷ್ಟೇ ಪವಿತ್ರವೆಂದು ಗಣಿಸಿತ್ತು ಹಾಗೂ ರೋಮನ್ ಪುರಾಣ, ಗುಲಾಮರ ಆತ್ಮಗಳಿಗೆ ಪ್ರತ್ಯೇಕ ಸ್ವರ್ಗ ಅಥವಾ ನರಕಗಳನ್ನು ಸೃಷ್ಟಿಸಲಿಲ್ಲ. ಗುಲಾಮರ ದೇಹ ಮತ್ತು ಆತ್ಮ ಅವರ ಒಡೆಯರ ದೇಹ ಆತ್ಮಗಳ ಹಾಗೆಯೇ, ಅದೇ ವಸ್ತುಗಳಿಂದ ರಚಿತವಾದದ್ದೆಂದು ಜುವೆನಾಲ್ ಕೂಡಾ ಒಪ್ಪುತ್ತಾನೆ."

ರೋಮನ್ ಧರ್ಮ ಗುಲಾಮರಿಗೆ ಸಹಾಯ ಮಾಡಿದ ಇನ್ನೊಂದು ಮಾರ್ಗ – ನಗರದ ಧರ್ಮಾಧಿಕಾರಿಯ ಎದುರು ಗುಲಾಮರು ತಮಗೆ ತಮ್ಮ ಒಡೆಯರಿಂದ ಆದ ಅನ್ಯಾಯದ ಬಗ್ಗೆ ದೂರು ಸಲ್ಲಿಸಲು ನೀಡಿದ ಅವಕಾಶ. ದೂರನ್ನು ಆಲಿಸುವುದು ಧರ್ಮಾಧಿಕಾರಿಯ ಕರ್ತವ್ಯವಾಗಿತ್ತು. ಈ ಪರಿಹಾರ ಧರ್ಮ ನಿರಪೇಕ್ಷವಾದದ್ದು. ಆದರೆ ರೋಮನ್ ಧರ್ಮ ಇನ್ನೂ ಉತ್ತಮ ಪರಿಹಾರವೊಂದನ್ನೂ ಒದಗಿಸಿಕೊಟ್ಟಿತ್ತು. ಅದೇಂದರೆ, ಒಬ್ಬ ಗುಲಾಮ ಚರ್ಚಿನ ಪೀಠದ ಮುಂದೆ ನಿಂತುಕೊಂಡು ತುಸು ಹೆಚ್ಚು ಕರುಣಾಳು ಒಡೆಯನಿಗೆ ತನ್ನನ್ನು ಮಾರಿ ಎಂದು ಬೇಡಿಕೊಳ್ಳಬಹುದಾಗಿದ್ದ ಅವಕಾಶ.

ರೋಮನ್ ಧರ್ಮ ಗುಲಾಮರಿಗೆ ಸಹಾಯ ಮಾಡಿದ ಮೂರನೆಯ ರೀತಿಯೆಂದರೆ – ಅದು ಗುಲಾಮನ ಮನುಷ್ಯತ್ವ ಮತ್ತು ವ್ಯಕ್ತಿತ್ವಗಳನ್ನು ರೋಮನ್ ಕಾನೂನು ನಾಶಗೊಳಿಸದ ಹಾಗೆ ಕಾಪಾಡಿಕೊಟ್ಟಿತು. ಮನುಷ್ಯ ಸಂಬಂಧಕ್ಕೆ, ಸಹವರ್ತನೆಗೆ ಗುಲಾಮ ಅಯೋಗ್ಯನಲ್ಲವೆಂದು ಹೇಳಿತು. ರೋಮನ್ ಗುಲಾಮನಿಗೆ ಇದೇ ಅತ್ಯಂತ ದೊಡ್ಡ ಉಳಿವಿನ ಗೌರವವಾಯಿತು. ಒಂದು ವೇಳೆ ರೋಮನ್ ಸಮಾಜ ಗುಲಾಮನ ಕೈಯಿಂದ ಹಾಲು, ಬೆಣ್ಣೆ, ತರಕಾರಿ ಕೊಳ್ಳಬಾರದೆಂದೂ ನೀರು, ವೈನುಗಳನ್ನು ಸ್ವೀಕರಿಸಬಾರದೆಂದೂ ನಿಷೇಧಿಸಿತ್ತೆನ್ನೋಣ ; ಒಂದು ವೇಳೆ ರೋಮನ್ ಸಮಾಜ ಗುಲಾಮ ಜನರಿಗೆ ಉಳಿದವರನ್ನು ಮುಟ್ಟಲು, ಉಳಿದವರ ಮನೆಗೆ ಹೋಗಲು, ಅವರೊಡನೆ ಗಾಡಿಯಲ್ಲಿ ಸಂಚರಿಸಲು ಆಕ್ಷೇಪಿಸಿತ್ತೆನ್ನೋಣ. ಆಗ ಗುಲಾಮರ ಒಡೆಯರು ಗುಲಾಮರನ್ನು ಅವರ ಅರೆಬರ್ಬರ ಸ್ಥಿತಿಯಿಂದ ಸುಸಂಸ್ಕೃತ ಸ್ಥಿತಿಗೆ ತರಲು ಸಾಧ್ಯವಾಗುತ್ತಿತ್ತೆ ? ಖಂಡಿತ ಇಲ್ಲ. ಗುಲಾಮ ಅಸ್ಪೃಶ್ಯನಾಗಿರಲಿಲ್ಲ ಎಂಬ ಕಾರಣಕ್ಕೇ ಒಡೆಯನಿಗೆ ಅವನನ್ನು ಮೇಲೆತ್ತಲು ಸಾಧ್ಯವಾಯಿತು. ನಾವೀಗ ಮತ್ತೆ ಅದೇ ತೀರ್ಮಾನಕ್ಕೆ ಮರಳುತ್ತೇವೆ – ಗುಲಾಮನ ವ್ಯಕ್ತಿತ್ವವನ್ನು ರೋಮನ್ ಸಮಾಜ ರಕ್ಷಿಸಿತು. ಹಾಗಾಗಿ ಅವನು ಬಚಾವಾದ. ಹಿಂದೂ ಸಮಾಜ ಅಸ್ಪೃಶ್ಯನ ವ್ಯಕ್ತಿತ್ವವನ್ನು ಗುರುತಿಸಲಿಲ್ಲ. ಹಾಗಾಗಿ ಅವನು ಹಾಳಾದ. ಹಿಂದೂ ಸಮಾಜ ಅಸ್ಪೃಶ್ಯನ ವ್ಯಕ್ತಿತ್ವ ಗುರುತಿಸಲಿಲ್ಲವಷ್ಟೇ ಅಲ್ಲ, ಅವನ ವ್ಯಕ್ತಿತ್ವವನ್ನು ಅಶುದ್ಧವೆಂದು ಪರಿಗಣಿಸಿತು. ಆದ್ದರಿಂದ ಮನುಷ್ಯ ಸಂಬಂಧಕ್ಕೂ, ನಿತ್ಯ ವ್ಯವಹಾರಗಳಿಗೂ ಅಸ್ಪೃಶ್ಯ ಅಯೋಗ್ಯನೆಂದು ಪರಿಗಣಿಸಲ್ಪಟ್ಟ.

ಗುಲಾಮನನ್ನು ಅವನ ಸಮಾಜದಿಂದ ಪ್ರತ್ಯೇಕಿಸಿದಂತಹ ಯಾವುದೇ ಕಂದರ – ಸಾಮಾಜಿಕವಾದದ್ದು ಅಥವಾ ಧಾರ್ಮಿಕವಾದದ್ದು – ಇರಲಿಲ್ಲ. ಬಾಹ್ಯ ರೂಪದಲ್ಲಿ ಆತ ಸ್ವತಂತ್ರ ಮನುಷ್ಯನಿಗಿಂತ ಭಿನ್ನವಾಗಿರಲಿಲ್ಲ; ಬಟ್ಟೆಯಾಗಲಿ, ಮೈಬಣ್ಣವಾಗಲಿ ಅವನ ಸ್ಥಿತಿಯನ್ನು ಸೂಚಿಸುತ್ತಿರಲಿಲ್ಲ ; ಸ್ವತಂತ್ರ ಮನುಷ್ಯ ನೋಡುವ ಎಲ್ಲ ಮನರಂಜನಾ ಕಾರ್ಯಕ್ರಮಗಳನ್ನೂ ಆತ ವೀಕ್ಷಿಸುತ್ತಿದ್ದ ; ಸ್ಥಳೀಯ ನಗರ ಜೀವನದಲ್ಲಿ ಆತ ಪಾಲ್ಗೊಳ್ಳುತ್ತಿದ್ದ, ಸರ್ಕಾರಿ ಇಲಾಖೆಗಳಲ್ಲಿ ದುಡಿಯುತ್ತಿದ್ದ, ವ್ಯಾಪಾರ ವ್ಯವಹಾರಗಳಲ್ಲಿ ತೊಡಗುತ್ತಿದ್ದ, ಎಲ್ಲ ಸ್ವತಂತ್ರ ಮನುಷ್ಯರಂತೆ ಬದುಕುತ್ತಿದ್ದ. ಹಲವು ಬಾರಿ ಒಬ್ಬ ವ್ಯಕ್ತಿಗೆ ಬಾಹ್ಯ ಸಂಗತಿಗಳಲ್ಲಿ ತೋರುವ ಸಮಾನತೆಯೇ ಕಾನೂನಿನ ಪ್ರಕಾರ ಇರುವ ಸಮಾನತೆಯ ಹಕ್ಕಿಗಿಂತ ಹೆಚ್ಚು ಮುಖ್ಯವಾಗುತ್ತದೆ. ಗುಲಾಮ ಮತ್ತು ಗುಲಾಮಗಿರಿಯಿಂದ ಸ್ವತಂತ್ರನಾದವನ ಮಧ್ಯೆ ಹೆಚ್ಚೂ ಕಮ್ಮಿ ಯಾವುದೇ ಸಾಮಾಜಿಕ ಅಡ್ಡ ಗೋಡೆಯಿರಲಿಲ್ಲ. ಗುಲಾಮರು ಹಾಗೂ ಸ್ವತಂತ್ರರಾದವರ ನಡುವೆ, ಅಷ್ಟೇ ಅಲ್ಲ. ಸ್ವತಂತ್ರರಾದವರು ಹಾಗೂ ಗುಲಾಮರ ನಡುವೆ ಕೂಡಾ ವಿವಾಹಗಳು ಸಾಧಾರಣವಾಗಿ ನಡೆಯುತ್ತಿದ್ದವು. ಗುಲಾಮ ಎಂಬ ಸ್ಥಾನ, ಗುಲಾಮನ ಒಳಗಿರುವ ಮನುಷ್ಯನ ಮೇಲೆ ಕಳಂಕವಾಗಿ ಕೂರಲಿಲ್ಲ. ಅವನು ಸ್ಪೃಶ್ಯನಾಗಿದ್ದ, ಗೌರವಯುತನೂ ಆಗಿದ್ದ, ಇದೆಲ್ಲಕ್ಕೂ ಕಾರಣ ಗುಲಾಮನ ಬಗ್ಗೆ ರೋಮನ್ ಧರ್ಮದ ಧೋರಣೆಯೇ.

ಗುಲಾಮಗಿರಿಯ ಬಗ್ಗೆ ಕ್ರಿಶ್ಚಿಯನ್ ಧರ್ಮದ ಧೋರಣೆಯನ್ನು ವಿವರವಾಗಿ ವಿಶದಪಡಿಸಲು ಇಲ್ಲಿ ಸ್ಥಳವಿಲ್ಲ. ಆದರೆ ಆ ಧೋರಣೆ ಬೇರೆ ಧರ್ಮಗಳ ಧೋರಣೆಗಿಂತ ಭಿನ್ನವಾಗಿತ್ತು. ಒಂದು ವಿಷಯ ಬಹುಜನರಿಗೆ ತಿಳಿದಿರಲಾರದು–ಅಮೆರಿಕದಲ್ಲಿ ಗುಲಾಮಗಿರಿಯಿದ್ದ ಸಮಯದಲ್ಲಿ ಕ್ರಿಶ್ಚಿಯನ್ ಪಾದ್ರಿಗಳು ನೀಗ್ರೊ ಗುಲಾಮರನ್ನು ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರಗೊಳಿಸಲು ಸಿದ್ಧರಿರಲಿಲ್ಲ. ಕಾರಣ, ಅವರ ದೃಷ್ಟಿಯಲ್ಲಿ ಮತಾಂತರವಾದಮೇಲೂ ಒಬ್ಬ ಗುಲಾಮ ಗುಲಾಮನಾಗಿಯೇ ಉಳಿದರೆ ಅದು ಧರ್ಮಕ್ಕೆ ಕಳಂಕ ಎಂಬ ಭಾವನೆಯಿತ್ತು. ಅವರ ಅಭಿಪ್ರಾಯದಲ್ಲಿ ಒಬ್ಬ ಕ್ರಿಶ್ಚಿಯನ್ ಇನ್ನೊಬ್ಬ ಕ್ರಿಶ್ಚಿಯನ್ನನಿಗೆ

ಗುಲಾಮನಾಗಿರುವುದು ಸಾಧ್ಯವಿರಲಿಲ್ಲ ; ಅವರು ಸಹಚರರೇ ಆಗಬೇಕೆಂದು ಅವರು ಭಾವಿಸಿದ್ದರು.

ಒಟ್ಟಿನಲ್ಲಿ ಹೇಳುವುದಾದರೆ, ಕಾನೂನು ಮತ್ತು ಧರ್ಮ ಮನುಷ್ಯ ನಡವಳಿಕೆಯನ್ನು ರೂಪಿಸುವ ಎರಡು ಶಕ್ತಿಗಳು. ಕೆಲವು ಸಮಯಗಳಲ್ಲಿ ಅವು ಪರಸ್ಪರ ಪೂರಕವಾಗಿ ಕೆಲಸ ಮಾಡುತ್ತವೆ ಮತ್ತು ಕೆಲವೊಮ್ಮೆ ಪ್ರತಿಬಂಧಕವೂ ಪ್ರತಿಬಂಧಕಕ್ಕೆ ತಡೆಯೂ ಆಗಿ ಕೆಲಸ ಮಾಡುತ್ತವೆ. ಈ ಎರಡು ಶಕ್ತಿಗಳಲ್ಲಿ, ಕಾನೂನು ವೈಯಕ್ತಿಕ ವ್ಯಾಪ್ತಿಯುಳ್ಳದ್ದು, ಧರ್ಮ ವೈಯಕ್ತಿಕವನ್ನು ಮೀರಿದ ವ್ಯಾಪ್ತಿಯುಳ್ಳದ್ದು. ಕಾನೂನಿನ ವ್ಯಾಪ್ತಿ ವೈಯಕ್ತಿಕವಾದದ್ದರಿಂದ ಅದು ಅನ್ಯಾಯ ಅಸಮಾನತೆಗಳನ್ನು ಹುಟ್ಟಿಸಬಲ್ಲದು. ಆದರೆ ಧರ್ಮದ ವ್ಯಾಪ್ತಿ ವ್ಯಕ್ತಿ ನಿರಪೇಕ್ಷವಾದದ್ದರಿಂದ ಅದು ಪಕ್ಷಪಾತವಿಲ್ಲದ ಗುಣ ಪಡೆಯಲು ಸಾಧ್ಯ. ಧರ್ಮವು ಪಕ್ಷಪಾತವನ್ನು ಮಾಡದೇ ಹೋದರೆ ಅದು ಕಾನೂನು ಸೃಷ್ಟಿಸಿದ ಅಸಮಾನತೆಗಳನ್ನು ಸೋಲಿಸಬಲ್ಲದು. ರೋಮ್‌ನಲ್ಲಿ ಗುಲಾಮಗಿರಿಯ ಸಂದರ್ಭದಲ್ಲಿ ಆಗಿದ್ದು ಇದೇ. ಆದ್ದರಿಂದಲೇ ಧರ್ಮ ಮನುಷ್ಯನನ್ನು ಸಂಸ್ಕರಿಸುತ್ತದೆ, ಅವನನ್ನು ಹೀನಗೊಳಿಸುವುದಿಲ್ಲ ಎಂಬ ನಂಬಿಕೆಯಿದೆ. ಹಿಂದೂ ಧರ್ಮ ಅದಕ್ಕೆ ಒಂದು ಅಪವಾದ. ಅದು ಅಸ್ಪೃಶ್ಯನನ್ನು ಮಾನವೀಯ ಘನತೆಯಿಂದ ತಗ್ಗಿಸಿದೆ. ಹಿಂದೂವನ್ನು ಅಮಾನವೀಯಗೊಳಿಸಿದೆ. ಸ್ಥಾಪಿತ ಧರ್ಮವ್ಯವಸ್ಥೆಯಲ್ಲಿ ಈ ತಗ್ಗಿದ ಮತ್ತು ಅಮಾನವೀಯ ಸ್ಥಿತಿಗಳಿಂದ, ಈ ಇಬ್ಬರಿಗೂ ಹೊರದಾರಿಗಳಿಲ್ಲದಂತಾಗಿದೆ.

* * * *

## ಅಧ್ಯಾಯ ೧೦

# ಹಿಂದೂಗಳು ಮತ್ತು ಅವರ ಸಾಮಾಜಿಕ ಪ್ರಜ್ಞೆಯ ಕೊರತೆ

ಅಸ್ಪೃಶ್ಯರ ದುಃಸ್ಥಿತಿಯನ್ನು ಕಂಡು ವಿಚಲಿತರಾಗಿದ್ದೇವೆಂದು ಭಾವಿಸುವ ಪ್ರತಿಯೊಬ್ಬರೂ "ಅಸ್ಪೃಶ್ಯರಿಗಾಗಿ ನಾವೇನಾದರೂ ಮಾಡಲೇಬೇಕು......." ಎಂಬ ಮಾತಿನಿಂದ ಪ್ರಾರಂಭಿಸುತ್ತಾರೆ. ಆದರೆ "ಹಿಂದೂಗಳನ್ನು ಬದಲಾಯಿಸಲು ನಾವೇನಾದರೂ ಮಾಡಬೇಕು" ಎಂದು ಹೇಳುವವರು ಅಪರೂಪ. ಬಹುಪಾಲು ಅಭಿಪ್ರಾಯದಲ್ಲಿ ಅಸ್ಪೃಶ್ಯರೇ ಉದ್ಧಾರಗೊಳ್ಳಬೇಕಾದ ವರ್ಗ ಎಂಬ ಅನಿಸಿಕೆಯಿರುತ್ತದೆ – ಅಸ್ಪೃಶ್ಯರ ಈ ಸ್ಥಿತಿಗೆ ಅವರಲ್ಲಿರುವ ಯಾವುದೋ ಒಂದು ಕೊರತೆ ಕಾರಣವೆನ್ನುವ ಹಾಗೆ ಅಥವಾ ಅಸ್ಪೃಶ್ಯರು ಹೀಗಾಗಿರುವುದಕ್ಕೆ ಅವರೇ ಜವಾಬ್ದಾರರು ಎನ್ನುವ ಹಾಗೆ. ಆದ್ದರಿಂದ ಉದ್ಧಾರಕಾರ್ಯ ಅಸ್ಪೃಶ್ಯರನ್ನು ಉದ್ದೇಶಿಸಿ ನಡೆಯಬೇಕು ಎಂಬ ಭಾವನೆಯಿದೆ. ಹಿಂದೂಗಳ ಬಗ್ಗೆ ಯಾವುದೇ ಉದ್ಧಾರ ಕಾರ್ಯ ನಡೆಯಬೇಕಿಲ್ಲ. ಅವರ ಮನಸ್ಸು ಆರೋಗ್ಯವಾಗಿದೆ, ನೀತಿ ನಡವಳಿಕೆಗಳು ಯೋಗ್ಯವಾಗಿದೆ, ಅವರು ಪರಿಪೂರ್ಣ ಮನುಷ್ಯರು, ಅವರಲ್ಲೇನೂ ತಪ್ಪಿಲ್ಲ, ಅವರು ಪಾಪಿಗಳಲ್ಲ–ಎಂಬ ಭಾವನೆಗಳಿವೆ.

ಸತ್ಯ ಸಂಗತಿ ನೋಡೋಣ. ಹಿಂದೂಗಳಲ್ಲಿ ಏನೂ ದೋಷವಿಲ್ಲ, ಅಸ್ಪೃಶ್ಯರು ಅನುಭವಿಸುತ್ತಿರುವ ಯಾವತ್ತೂ ದುಃಸ್ಥಿತಿಗೆ ಸ್ವತಃ ಅವರೇ ಕಾರಣರು ಎಂಬ ಈ ವಾದ, ಕ್ರಿಶ್ಚಿಯನ್ನರು ಯೆಹೂದಿಗಳೊಂದಿಗೆ ಅಮಾನವೀಯವಾಗಿ ವರ್ತಿಸಿದ್ದನ್ನು ಸಮರ್ಥಿಸಿಕೊಳ್ಳಲಿಕ್ಕೆ ಬಳಸಿದ ವಾದವೇ. ಈ ವಾದವನ್ನು ಖಂಡಿಸಿ, ಲೂಯಿಸ್ ಗೌಲ್ಡಿಂಗ್ ಎಂಬುವವರು ಎಲ್ಲ ಯೆಹೂದಿಗಳ ಪರವಾಗಿ ಕ್ರಿಶ್ಚಿಯನ್ನರಿಗೆ ಪ್ರತ್ಯುತ್ತರ ಕೊಟ್ಟಿದ್ದರು. ಆ ಉತ್ತರದಲ್ಲಿ ಯೆಹೂದಿ ಸಮಸ್ಯೆಯ ಮೂಲವನ್ನು ಚರ್ಚಿಸುತ್ತ ಗೌಲ್ಡಿಂಗ್ ಅವರು ಹೀಗೆ ಹೇಳುತ್ತಾರೆ:

> "ನಾನೀಗ ಒಂದು ಸರಳ ದೃಷ್ಟಾಂತಕ್ಕೆ ಹೋಗುವ ಮೂಲಕ ಹೇಗೆ ಯೆಹೂದಿ ಸಮಸ್ಯೆ ಮೂಲತಃ ಯೆಹೂದ್ಯೇತರರ ಸಮಸ್ಯೆ ಎಂಬುದನ್ನು ಸೂಚಿಸ ಬಯಸುತ್ತೇನೆ. ನನ್ನೊಂದಿಗೆ ತೀರ ಸಲುಗೆಯುಳ್ಳ ಒಂದು ಪ್ರಾಣಿ – ಮಿಶ್ರತಳಿಯ ಒಂದು ಐರಿಷ್ ಸಾಕು ನಾಯಿ. ಪ್ಯಾಡಿ ಎಂಬ ಹೆಸರಿನ ಆ ನಾಯಿ ನನ್ನ ಸ್ನೇಹಿತ ಜಾನ್ ಸ್ಮಿತ್‌ಗೆ ಕಣ್ಮಣಿ. ಪ್ಯಾಡಿಗೆ ಸ್ಕಾಟಿಷ್ ಸಾಕುನಾಯಿಗಳನ್ನು ಕಂಡರಾಗದು. ಅಂಥ ನಾಯಿಯೊಂದು ಇಪ್ಪತ್ತು ಗಜ ಫಾಸಲೆಯೊಳಗೆ ಹಾಯ್ದರೆ ಸಾಕು, ಪ್ಯಾಡಿ ಇಡೀ ವಠಾರವೇ ಕಿವುಡಾಗುವಂತೆ ಬೈಯುತ್ತ, ಕಾಲು ಕೆರೆಯುತ್ತ ಬೊಗಳುತ್ತದೆ. ಈ ನಡವಳಿಕೆ ಜಾನ್‌ಸ್ಮಿತ್‌ಗೆ ಹಿಡಿಸುವುದಿಲ್ಲ. ಆದ್ದರಿಂದ ಆತ ಪ್ಯಾಡಿ ಹೀಗೆ ಮಾಡುವುದನ್ನು ತಡೆಯಲು ಯತ್ನಿಸುತ್ತಾನೆ – ಅದರಲ್ಲೂ ಎದುರಿಗೆ ನಿರುಪದ್ರವಿ ಪ್ರಾಣಿಗಳು ತಾವಾಗಿ ಕೂಗದೇ ಇದ್ದಾಗಲೂ ಪ್ಯಾಡಿ ಅದರ ಮೇಲೆ ಜಗಳ ತೆಗೆದಾಗ. ಪ್ಯಾಡಿಯ ಬಗ್ಗೆ ಪ್ರೀತಿಯಿದ್ದರೂ ಅವನಿಗೆ ಮತ್ತು ನನಗೆ, ಪ್ಯಾಡಿಯ ಈ ನಡವಳಿಕೆ ಮೂಲತಃ ಪ್ಯಾಡಿಯ ದೋಷ ಎಂದು ಎನಿಸುತ್ತದೆ. ಇದುವರೆಗೂ ಯಾರೂ ನಮಗೆ ಇದು ಮೂಲತಃ ಪ್ಯಾಡಿಯ ಎದುರು ಬರುವ ಸ್ಕಾಟಿಷ್ ನಾಯಿಗಳ ಸಮಸ್ಯೆ ಎಂದು ಹೇಳಿದವರಿಲ್ಲ. ಸಂಜೆಯ ಪರಿಮಳವನ್ನು ಮೂಸಿ ಪರೀಕ್ಷಿಸುತ್ತ ಶಾಂತಿಯುತವಾಗಿ ಓಡಾಡುವ ನೆರೆಹೊರೆಯ ನಾಯಿಗಳ ಮೇಲೆ ಪ್ಯಾಡಿ ಎರಗಿದರೆ, ಅದು ನೆರೆಯ ಸ್ಕಾಟಿಷ್ ನಾಯಿಗಳದ್ದೇ ತಪ್ಪು. ಅವು ತಮ್ಮ ಇರುವಿಕೆಯ

ಮೂಲಕವೇ ಪ್ಯಾಡಿಯನ್ನು ಸಿಟ್ಟಿಗೆಬ್ಬಿಸುತ್ತವೆ ಎಂಬ ದೋಷಾರೋಪಣೆಯನ್ನು ಇದುವರೆಗೆ ನಾವು ಕೇಳಿಲ್ಲ."

ಇಲ್ಲಿ ಪ್ಯಾಡಿ ಎಂದಿರುವಲ್ಲಿ ಹಿಂದೂ ಎಂದೂ, ಸ್ಕಾಟಿಷ್ ಸಾಕುನಾಯಿ ಎಂದಿರುವಲ್ಲಿ ಅಸ್ಪೃಶ್ಯ ಎಂದೂ ಸಮೀಕರಿಸಿಕೊಂಡರೆ ಗೌಲ್ಡಿಂಗ್‌ನ ವಾದ ಕ್ರಿಶ್ಚಿಯನ್ನರಿಗೆ ಹೊಂದುವಷ್ಟೇ ಹಿಂದೂಗಳಿಗೂ ಹೊಂದಿಕೊಳ್ಳುತ್ತದೆ. ಗೌಲ್ಡಿಂಗ್ ಕೊಡುವ ಕಾರಣಗಳ ಪ್ರಕಾರ ಯೆಹೂದಿ ಸಮಸ್ಯೆ ಮೂಲತಃ ಒಂದು ಕ್ರಿಶ್ಚಿಯನ್ ಸಮಸ್ಯೆ ಎಂದಾಗುವುದಾದರೆ, ಅದೇ ರೀತಿ ಅಸ್ಪೃಶ್ಯರ ಸಮಸ್ಯೆಯೂ ಮೂಲತಃ ಹಿಂದೂ ಸಮಸ್ಯೆಯೇ ಎನ್ನಬಹುದು. ಹಿಂದೂಗಳಿಗೆ ಈ ಸಮಸ್ಯೆಯ ಬಗ್ಗೆ ಪ್ರಜ್ಞೆಯಿದೆಯೇ? ಅಸ್ಪೃಶ್ಯರು ತಮ್ಮ ನಡುವಿನ ಒಂದು ದೊಡ್ಡ ಸಮಸ್ಯೆ ಎಂದು ಅವರಿಗೆ ಅನಿಸಿದೆಯೇ? ಆ ಬಗ್ಗೆ ಅವರು ಚಿಂತಿಸಿದ್ದಾರೆಯೇ? ಈ ಸಮಸ್ಯೆ ಅವರ ಮನಸ್ಸಿನ ಮೇಲೆ ಭಾರವಾಗಿ ಕಾಡಿದೆಯೆ? ಇದಕ್ಕೆ ಉತ್ತರ ಹುಡುಕಲು ಕೆಲವು ಸರಳ ಪರೀಕ್ಷೆಗಳನ್ನು ಮಾಡಬಹುದು. ಒಂದು ಪರೀಕ್ಷೆ – ಈ ವಿಷಯದ ಮೇಲೆ ಬಂದಿರುವ ಬರವಣಿಗೆಗಳ ಪ್ರಮಾಣವನ್ನು ನೋಡುವುದು. ಹೋಲಿಸಿ ನೋಡಲೆಂದು ಅಮೆರಿಕನ್ ನೀಗ್ರೋಗಳ ಬಗ್ಗೆ ಪ್ರಕಟವಾದ ಬರವಣಿಗೆಗಳ ಪ್ರಮಾಣವನ್ನು ಮಾದರಿ ಎಂದಿಟ್ಟುಕೊಳ್ಳಬಹುದು. ಸಂಯುಕ್ತ ಸಂಸ್ಥಾನಗಳಲ್ಲಿ ನೀಗ್ರೋ ಸಮಸ್ಯೆಯ ಬಗ್ಗೆ ಬಂದ ಮುದ್ರಿತ ಸಾಹಿತ್ಯದ ಪ್ರಮಾಣ ದಂಗು ಬಡಿಸುವಷ್ಟು ಅಗಾಧವಾದುದು. ನೀಗ್ರೋ ಸಮಸ್ಯೆಯ ಮೇಲೆ ಅಲ್ಲಿ ಪ್ರಕಟವಾದ ಸಾಹಿತ್ಯದ ಪೂರ್ಣ ಗ್ರಂಥ ಸೂಚಿಯೊಂದನ್ನು ತಯಾರಿಸಿದರೆ ಅದು ಹಲವು ಲಕ್ಷ ಹೆಸರುಗಳ ಗ್ರಂಥಗಳಾಗಬಹುದು ಎನ್ನುತ್ತಾರೆ. ನಿಜವಾಗಿ ಈ ಸಾಹಿತ್ಯದ ಪ್ರಮಾಣ ಅಳೆಯಲಾಗದಷ್ಟು ಅಗಾಧವಾಗಿದೆ. ಈ ಸಂಗತಿಯೇ ಎಲ್ಲಕ್ಕಿಂತ ಚೆನ್ನಾಗಿ ಈ ಸಮಸ್ಯೆ ಬಿಳಿಯರನ್ನು ಎಷ್ಟು ಕಲಕಿತ್ತು ಎಂಬುದನ್ನು ಸೂಚಿಸುತ್ತದೆ. ಈ ಸಮಸ್ಯೆ ಅಮೆರಿಕದ ಹಲವು ತಲೆಮಾರುಗಳ ಹಲವು ವರ್ಗದ ಜನಗಳನ್ನು ಕಾಡಿದೆ. ಧಾರ್ಮಿಕ ನೀತಿವಾದಿಗಳು, ರಾಜನೈತಿಕ ಚಿಂತಕರು, ರಾಜ ತಾಂತ್ರಿಕರು, ಮಾನವತಾವಾದಿಗಳು, ಸಮಾಜ ವಿಜ್ಞಾನಿಗಳು, ರಾಜಕಾರಣಿಗಳು, ವ್ಯಾಪಾರಿಗಳು ಮತ್ತು ಸಾಮಾನ್ಯ ನಾಗರಿಕರು ಈ ಪಟ್ಟಿಗೆ ಸೇರುತ್ತಾರೆ.

ಅದೇ, ಭಾರತದಲ್ಲಿ ಅಸ್ಪೃಶ್ಯರ ಬಗ್ಗೆ ದೊರಕುವ ಸಾಹಿತ್ಯದ ಪ್ರಮಾಣ ಎಷ್ಟು? ಅರ್ಧ ಡಜನ್ ಪ್ರಚಾರಪುಸ್ತಿಕೆಗಳಿಗಿಂತ ಹೆಚ್ಚಲ್ಲ !

ಇನ್ನೊಂದು ಪರೀಕ್ಷೆ – ಸಾಮಾಜಿಕ ನಡವಳಿಕೆಗಳನ್ನು ಗಮನಿಸುವುದು. ಪತ್ರಿಕೆಗಳಲ್ಲಿ ವರದಿಯಾದ ಎರಡು ದೃಷ್ಟಾಂತಗಳನ್ನು ನಾನಿಲ್ಲಿ ಕೊಡುತ್ತಿದ್ದೇನೆ. ೧೯೨೬ರ ಮಾರ್ಚ್ ೫ನೇ ತಾರೀಖಿನ 'ಪ್ರತಾಪ್' ಪತ್ರಿಕೆಯ ವರದಿ ಹೀಗಿದೆ :

> "ಫೆಬ್ರವರಿ ೨೩ ರಂದು ಬೆಳಿಗ್ಗೆ ೧೧ ಗಂಟೆಯ ಸುಮಾರಿಗೆ, ಲಕ್ನೋದ ಬೇಗಮ್ ಗಂಜ್ ಪ್ರದೇಶದಲ್ಲಿ ಸುಮಾರು ೧೨–೧೩ ಜನರು ಕಲ್ಲುಗಣಿಯೊಂದನ್ನು ಅಗೆಯುತ್ತಿದ್ದಾಗ ಭೂಕುಸಿತವುಂಟಾಗಿ ಅವರೆಲ್ಲರೂ ಮಣ್ಣಿನಲ್ಲಿ ಹೂತುಹೋದರು. ಮಣ್ಣು ತೆಗೆದು ಅದರಲ್ಲಿ ಒಬ್ಬ ಹುಡುಗ ಮತ್ತು ಆರು ಹೆಂಗಸರನ್ನು ಮೇಲಕ್ಕೆತ್ತಲಾಯಿತಾದರೂ ಅವರಲ್ಲಿ ಮೀರ್‌ಪುರದ ಒಬ್ಬ ಹೆಂಗಸಿಗೆ ಮಾತ್ರ ಜೀವ ಉಳಿದಿತ್ತು. ಅವಳಿಗೆ ಗಂಭೀರ ಸ್ವರೂಪದ ಗಾಯಗಳಾಗಿದ್ದು ಅವಳ ಸ್ಥಿತಿ ಚಿಂತಾಜನಕವಾಗಿತ್ತು. ಆದರೆ ಬೇಗಮ್ ಗಂಜಿನ ಹಿಂದೂ ನಿವಾಸಿಗಳು ಆಕೆಯನ್ನು ಮಲಗಿಸಲು ಒಂದು ಹಾಸಿಗೆ ಕೊಡುವುದಕ್ಕೂ ನಿರಾಕರಿಸಿದರು. ಕಡೆಗೆ ಒಬ್ಬ ಮುಸ್ಲಿಮ್ ಹಾಸಿಗೆ ಕೊಡಲೊಪ್ಪಿದ. ಆದರೆ, ಅವಳನ್ನು ಅಲ್ಲಿಂದ ಸಾಗಿಸಲು ಯಾವ ಹಿಂದೂವೂ ತಯಾರಿರಲಿಲ್ಲ. ಅಂತಿಮವಾಗಿ, ಆಕೆಯನ್ನು

ಮಲಗಿದ್ದಂತೆಯೇ ಮನೆಯವರೆಗೆ ಸಾಗಿಸಲು ಒಬ್ಬ ಝಾಡಮಾಲಿಯನ್ನು ಕರೆದು ಆ ಕೆಲಸವನ್ನು ಅವನಿಗೆ ಒಪ್ಪಿಸಲಾಯಿತು."

ಅಸ್ಪೃಶ್ಯರ ಬಗ್ಗೆ ಹಿಂದೂಗಳಿಗೆ ಸಾಮಾಜಿಕ ಪ್ರಜ್ಞೆಯಿಲ್ಲದಿರುವುದನ್ನು ಈ ಕೆಳಗಿನ ಘಟನೆ ಚೆನ್ನಾಗಿ ಚಿತ್ರಿಸುತ್ತದೆ. ೧೯೪೬ರ ಜುಲೈ ೧೧ನೇ ತಾರೀಖಿನ 'ಸಂಗ್ರಾಮ್' ಪತ್ರಿಕೆಯಲ್ಲಿ ಈ ವರದಿ ಪ್ರಕಟವಾಗಿದೆ. ಆ ವರದಿಗಾರರ ಬರೆದಿದ್ದಾನೆ :

"೧೯೪೬ ರ ಜುಲೈ ೮ ರಂದು, ಗೋವಾದ ಮಾಪ್ಸೆ ಎಂಬ ಹಳ್ಳಿಯಲ್ಲಿ ಕ್ರಿಶ್ಚಿಯನ್ನರು ನಡೆಸುತ್ತಿರುವ ಅಜಿಲ್ ಎಂಬ ಅನಾಥಾಶ್ರಮದಲ್ಲಿ ಒಬ್ಬ ಹೆಂಗಸು ಸತ್ತಳು. ಆಕೆ ಹಿಂದೂ ಎಂದು ಎಲ್ಲರ ಭಾವನೆಯಾಗಿತ್ತು. ಒಬ್ಬಂಟಿಯಾಗಿದ್ದ ಆಕೆಗೆ ಯಾರೂ ಬಂಧುಗಳಿರಲಿಲ್ಲ. ಆಕೆಯ ಶವವನ್ನು ಒಯ್ಯಲು ಮತ್ತು ಅಂತ್ಯ ಸಂಸ್ಕಾರಗಳನ್ನು ಮಾಡಲು ಯಾರೂ ಇಲ್ಲದಿರುವುದನ್ನು ತಿಳಿದು, ಹಳ್ಳಿಯ ಹಿಂದೂಗಳು ಒಟ್ಟಾಗಿ ಸಂಸ್ಕಾರಕ್ಕೆಂದು ಚಂದಾ ಹಾಕಿ ಹಣ ಒಟ್ಟುಮಾಡಿದರು. ಅವರು ಅನಾಥಾಶ್ರಮದಿಂದ ಹೆಣವನ್ನು ಹೊರತಂದು ಒಯ್ಯುವಷ್ಟರಲ್ಲಿ ಅಲ್ಲಿಗೆ ಬಂದ ಕೆಲವು ಅಸ್ಪೃಶ್ಯರು ಆಕೆಯನ್ನು ಬಲ್ಲವರಾಗಿದ್ದು ಗುರುತು ಹಿಡಿದರು. ಆ ಹೆಂಗಸು ಅಸ್ಪೃಶ್ಯಳು ಎಂಬುದು ಗೊತ್ತಾದದ್ದೇ ತಡ, ಅಲ್ಲಿ ಸೇರಿದ ಹಿಂದೂಗಳು ಆ ಹೆಣವನ್ನು ಅಲ್ಲೇ ಬಿಟ್ಟು ಹೊರಟರು. ಆ ಅಸ್ಪೃಶ್ಯರು, ಸಂಗ್ರಹಿಸಿದ ಹಣವನ್ನು ಕೊಡಬೇಕೆಂದು ಅದು ಶವ ಪೆಟ್ಟಿಗೆ, ಬಟ್ಟೆಗಳನ್ನು ಕೊಳ್ಳಲು ಬೇಕೆಂದೂ ಹಿಂದೂಗಳನ್ನು ಬೇಡಿಕೊಂಡರು. ಹಿಂದೂಗಳು ಹಣ ಕೊಡಲು ಒಪ್ಪಲಿಲ್ಲ. ಸತ್ತವಳು ಹಿಂದೂ ಹೆಂಗಸೆಂಬ ಮನವಿಯಿಂದ ಹಣ ಸಂಗ್ರಹವಾಗಿರುವುದರಿಂದ ಅದನ್ನು ಹಿಂದೂ ಅಲ್ಲದ ಆ ಅಸ್ಪೃಶ್ಯ ಹೆಂಗಸಿನ ಸಂಸ್ಕಾರಕ್ಕೆ ಬಳಸಲಾಗದೆಂದು ನಿರಾಕರಿಸಿದರು. ಅಸ್ಪೃಶ್ಯರು ಬಹಳ ಕಷ್ಟದಿಂದ ಸಂಸ್ಕಾರ ಮಾಡಬೇಕಾಯಿತು. ಹಿಂದೂಗಳು ತಮ್ಮ ಮೇಲೆ ತೋರಿಸುವ ಪ್ರೀತಿ ವಾತ್ಸಲ್ಯಗಳ ಒಂದು ಒಳ್ಳೆಯ ನಿದರ್ಶನ ಅಸ್ಪೃಶ್ಯರಿಗೆ ಅಲ್ಲಿ ದೊರೆಯಿತು."

ಇನ್ನೊಂದು ವರದಿ – 'ಮಿಲಾಪ್' ಪತ್ರಿಕೆಯ ೨ನೆಯ ಅಕ್ಟೋಬರ್ ೧೯೨೫ ರ ಸಂಚಿಕೆಯಿಂದ:

"ಸುದ್ದಿಯೊಂದರ ಪ್ರಕಾರ ರುದ್ರ ಪ್ರಯಾಗದಲ್ಲಿ ಸೆಪ್ಟೆಂಬರ್ ಮೊದಲ ವಾರ, ಒಂದು ಸಂಜೆ, ಅಲ್ಲಿಯ ಧರ್ಮಶಾಲೆಗೆ ಒಬ್ಬ ಹರಿಜನ ಬಂದ. ಅಲ್ಲಿಗೆ ಪ್ರತಿ ರಾತ್ರಿ ಒಂದು ಹುಲಿ ಬರುತ್ತಿದೆ ಎಂಬ ಸುದ್ದಿ ತಿಳಿದ ಅವನು ಧರ್ಮಶಾಲೆಯ ಮುತಾಲಿಕನಿಗೆ ಆ ರಾತ್ರಿ ಧರ್ಮಶಾಲೆಯ ಒಂದು ಮೂಲೆಯಲ್ಲಿ ಅಡಗಿ ಮಲಗಲು ಜಾಗ ಕೊಡಬೇಕೆಂದು ಬೇಡಿಕೊಂಡ. ಆ ಒರಟು ಮುತಾಲಿಕ ಅವನ ಬೇಡಿಕೆಗೆ ಇಂಬುಗೊಡದೆ ಧರ್ಮಶಾಲೆಯ ಬಾಗಿಲನ್ನು ಮುಚ್ಚಿಬಿಟ್ಟ. ಆ ದುರದೃಷ್ಟವಂತ ಹರಿಜನ ಹೊರಗೆ ಅಲ್ಲೇ ಒಂದು ಮೂಲೆಯಲ್ಲಿ ಹುಲಿಯ ಭಯದಲ್ಲಿ ನಡುಗುತ್ತಲೇ ಮಲಗಿದ. ಬೆಳಗಿನ ಜಾವ ಹುಲಿ ಬಂತು, ಹರಿಜನ ವ್ಯಕ್ತಿಯ ಮೇಲೆ ಎರಗಿತು. ಅದರೆ ಆತ ಆರೋಗ್ಯವಂತನೂ ಸದೃಢನೂ ಆಗಿದ್ದರಿಂದ ಮತ್ತು ಹತಾಶೆ ಅವನ ಭಯವನ್ನು ಒದ್ದೋಡಿಸಿದ್ದರಿಂದ ಆತ ಹುಲಿಯ ಕುತ್ತಿಗೆಯನ್ನು ಅಮುಕಿ ಹಿಡಿದುಕೊಂಡು 'ಹುಲಿಯನ್ನು ಹಿಡಿದಿದ್ದೇನೆ, ಬನ್ನಿ, ಕೊಲ್ಲಿ' ಎಂದು ಕೂಗಿದ. ಆದರೆ ಮೇಲುಜಾತಿಯ ಆ ಮುತಾಲಿಕ ಬಾಗಿಲು ತೆಗೆಯಲಿಲ್ಲ, ಏನೂ ಸಹಾಯ ಮಾಡಲಿಲ್ಲ. ಸ್ವಲ್ಪ ಹೊತ್ತಿನಲ್ಲೇ ಹರಿಜನ ವ್ಯಕ್ತಿಯ ಹಿಡಿತ ಸಡಿಲವಾಯಿತು. ಹುಲಿಯೂ ಓಡಿಹೋಯಿತು. ಈಗ ಆ ಮನುಷ್ಯ ಶ್ರೀನಗರ (ಗಡವಾಲ್)ದಲ್ಲಿ ಗಾಯಗೊಂಡು ಮಲಗಿದ್ದಾನೆ, ಚಿಕಿತ್ಸೆ ಪಡೆಯುತ್ತಿದ್ದಾನೆ. ಆತನ ಸ್ಥಿತಿ ಗಂಭೀರವಾಗಿದೆ ಎಂದೂ ವರದಿಯಾಗಿದೆ."

ಈ ದೃಷ್ಟಾಂತಗಳು ಬಿಚ್ಚಿ ತೋರಿಸುವ ಹಿಂದೂಗಳ ಹೃದಯಹೀನತೆ ಒಂದು ವಿಷಯವನ್ನು ಸ್ಪಷ್ಟವಾಗಿ ಕಾಣಿಸುತ್ತದೆ : ಹಿಂದೂಗಳಿಗೆ ತಾವೇನು ಮಾಡುತ್ತಿದ್ದೇವೆ ಎಂಬುದರ ಪ್ರಜ್ಞೆಯೂ ಇಲ್ಲ, ಇದರಿಂದ ಅಸ್ಪೃಶ್ಯರಿಗೆ ಏನಾಗುತ್ತಿದೆ ಎಂಬ ಪರಿವೆಯೂ ಇಲ್ಲ.

ಮೂರನೆಯ ಪರೀಕ್ಷೆ – ಅಸ್ಪೃಶ್ಯರನ್ನು ಮೇಲೆತ್ತಲು ನಡೆದ ಸೇವೆ ಹಾಗೂ ತ್ಯಾಗಗಳ ಪರೀಕ್ಷೆ. ಇಲ್ಲಿ ಮತ್ತೆ ಮಾದರಿಗಾಗಿ ಅಮೆರಿಕನ್ನರು ನೀಗ್ರೋಗಳನ್ನು ಮೇಲೆತ್ತಲು ಮಾಡಿದ ಸೇವೆ ಹಾಗೂ ತ್ಯಾಗಗಳನ್ನು ಮುಂದಿಟ್ಟುಕೊಳ್ಳಬಹುದು. ಈ ಬಗ್ಗೆ ಕೆಲವು ಅಂಕಿಅಂಶ ಇಲ್ಲಿದೆ : ನೀಗ್ರೋ ಶಿಕ್ಷಣದ ಉಪಯೋಗಕ್ಕೆಂದು ಬಿಳಿಯರು ಉಯಿಲು ಬರೆದು ಬಿಟ್ಟುಹೋದ ಹಣದ ಈ ಪಟ್ಟಿ ನೋಡಿ.[೧]

| ಉಯಿಲು ಬರೆದವರು | ಮೊತ್ತ (ಡಾಲರುಗಳಲ್ಲಿ) | ಉಯಿಲು ಬರೆದವರು | ಮೊತ್ತ (ಡಾಲರುಗಳಲ್ಲಿ) |
|---|---|---|---|
| ಕೇನ್ | ೫೦,೦೦೦ | ಮೇಸನ್ | ೧,೦೦,೦೦೦ |
| ಹಾರ್ಟನ್ | ೫,೦೦೦ | ನಾನ್‌ಬರ್ಟ್ | ೪೦,೦೦೦ |
| ಟ್ರಾಟನ್ | ೧,೬೦,೬೦೦ | ಹ್ಯಾರಿಸನ್ | ೨,೩೦,೦೦೦ |
| ಅಟಿಂಜೆರ್ | ೫೦೦ | ಮುಂಗರ್ | ೭೫,೦೦೦ |
| ಗ್ಯಾಂಬ್ರಿಲ್ | ೩೫,೦೦೦ | ಕಾರ್ಲಿಸ್ | ೪೫,೦೦೦ |
| ಜರೇಷ್ಕಿ | ೧,೦೦೦ | ರೋಸೆನ್ ಬ್ಯಾನಿನ್ | ೧,೦೦೦ |
| ಸ್ಟ್ರಾಕ್ | ೫೦೦ | ಬರ್ಟನ್ | ೧,೦೦೦ |
| ಕಿಡ್ಡರ್ | ೫,೦೦೦ | ಕಾನ್ರಾಯ್ | ೧,೦೦,೦೦೦ |
| ಕ್ಲಾಡಿನ್ | ೧೦,೦೦೦ | ಕೆಂಟ್ | ೧೦,೦೦೦ |
| ವುಡ್ | ೫೦೦ | ಡ್ಯೂಕ್ | ೧,೪೦,೦೦೦ |
| ಹಾರ್ಕ್ನೆಸ್ | ೧೨,೫೦,೦೦೦ | ಮರ್ಸಿಲಿಯಾಟ್ | ೫,೦೦೦ |
| ಬೀಟೀ | ೨,೯೦,೦೦೦ | ಮೇಸೀ | ೨೫,೦೦೦ |
| ಮಾರ್ಕ್ವಾಂಟ್ | ೫,೦೦೦ | ನಿಕೋಲಾಸ್ | ೨೦,೦೦೦ |
| ನ್ಯೂಟನ್ | ೫,೦೦೦ | ಗ್ಯಾರೆಟ್‌ಸನ್ | ೧೫,೦೦,೦೦೦ |
| ಹಮ್ಮಿಂಗ್‌ಟನ್ | ೨೫,೦೦೦ | ಹ್ಯಾಚರ್ | ೨೦,೦೦೦ |
| ಫೆಲ್ಪ್ಸ್ – ಸ್ಟೋಕ್ಸ್ | ೨,೮೦,೦೦೦ | ರೈಟ್ | ೧೦,೦೦೦ |
| ಬಟ್ಲರ್ | ೩೦,೦೦೦ | | |

ಈ ಸಂಖ್ಯೆಗಳು ೧೯೩೦ಕ್ಕೆ ಮೊದಲಿನ ಅವಧಿಯ ದಾಖಲೆಗಳು ಮಾತ್ರ ಅಲ್ಲದೆ ಇದರಲ್ಲಿ ಆಸ್ತಿ ಉಳಿಕೆಯಿಂದ ಬಂದ ಹಣ ಸೇರಿಲ್ಲ.

---

೧. ಈ ಪಟ್ಟಿಯನ್ನು *ನೀಗ್ರೋ ಇಯರ್ ಬುಕ್* ೧೯೩೧–೩೨ ರ ಪು. ೨೦೨ರಲ್ಲಿ ಕೊಟ್ಟ ವಿವರಗಳನ್ನಾಧರಿಸಿ ತಯಾರಿಸಲಾಗಿದೆ.

ನೀಗ್ರೋಗಳ ಶಿಕ್ಷಣಕ್ಕೆ ಪ್ರೋತ್ಸಾಹ ನೀಡಲೆಂದು ಸ್ಥಾಪಿತವಾದ ಶೈಕ್ಷಣಿಕ ನಿಧಿಗಳನ್ನು ಹೋಲಿಸಿ ನೋಡಿ[೧] :

೧) ಅವೆರಿ ನಿಧಿ
೨) ವಿಲಾಸ್ ಇಷ್ಟಪತ್ರ ನಿಧಿ
೩) ಆಫ್ರಿಕನ್ ನಿಧಿ
೪) ಬಕಿಂಗ್‌ಹ್ಯಾಂ ನಿಧಿ
೫) ಜಾರ್ಜ್ ವಾಷಿಂಗ್ಟನ್ ಶೈಕ್ಷಣಿಕ ನಿಧಿ
೬) ಮೈನರ್ ನಿಧಿ
೭) ಸ್ಟೀವರ್ಡ್ ಮಿಶನರಿ ಪ್ರತಿಷ್ಠಾನ
೮) ಡೇನಿಯಲ್ ಹ್ಯಾಂಡ್ ನಿಧಿ
೯) ಜಾನ್ ಸ್ಲೇಟರ್ ನಿಧಿ
೧೦) ಫೆಲ್ಪ್ಸ್ ಸ್ಟೋಕ್ಸ್ ನಿಧಿ

ಇದರ ಜತೆಗೆ ಕಾರ್ನೇಗಿ ಕಾರ್ಪೊರೇಶನ್ ಜೂಲಿಯಸ್ ರೋಸೆನ್‌ವಾಲ್ಡ್ ನಿಧಿಯಂತಹ ಸಾಧಾರಣ ಉದ್ದೇಶದ ನಿಧಿಗಳೂ ರಾಕ್‌ಫೆಲ್ಲರ್ ಪ್ರತಿಷ್ಠಾನದಂತಹ ಸಂಸ್ಥೆಗಳೂ ನೀಗ್ರೋಗಳಿಗೆ ಸಹಾಯ ಮಾಡಿವೆ. ಈ ಮೂಲಗಳಿಂದ ಬಂದ ಹಣದ ಮಾಹಿತಿ ಲಭ್ಯವಿಲ್ಲ. ಆದರೆ ಅವು ಮಿಲಿಯಗಟ್ಟಲೆ ಆಗುವಷ್ಟು ಇದ್ದೀತು.

ಹಾಗೆಯೇ, ನೀಗ್ರೋ ಶಿಕ್ಷಣದ ಮೇಲೆ ಧಾರ್ಮಿಕ ಸಂಸ್ಥೆಗಳು ವೆಚ್ಚ ಮಾಡಿದ ಹಣವನ್ನೂ ಹೋಲಿಸಿ ನೋಡಬಹುದು. ಅಂಥ ಕುತೂಹಲಕರ ಅಂಕಿ ಅಂಶ ಇಲ್ಲಿದೆ[೨].

| | ವಾರ್ಷಿಕ ವೆಚ್ಚ (ಡಾಲರುಗಳಲ್ಲಿ) | ನೀಗ್ರೋ ಶಿಕ್ಷಣಕ್ಕೆ ಮೀಸಲಿಟ್ಟ ಕಾಯಂನಿಧಿ (ಡಾಲರುಗಳಲ್ಲಿ) | ಶಾಲಾಸಾಮಗ್ರಿಗಳು ಇತ್ಯಾದಿಗಳ ಮೌಲ್ಯ (ಡಾಲರುಗಳಲ್ಲಿ) |
|---|---|---|---|
| ಅಮೆರಿಕನ್ ಬ್ಯಾಪ್ಟಿಸ್ಟ್ ಹೋಂ ಮಿಶನ್ ಬೋರ್ಡ್ | ೧೧೬,೨೪೭ | ೧,೫೯೭,೭೦೦ | ೩,೫೯೪,೨೫೧ |
| ಅಮೆರಿಕನ್ ಚರ್ಚ್ ಇನ್‌ಸ್ಟಿಟ್ಯೂಟ್ ಫಾರ್ ನೀಗ್ರೋಸ್ (ಎಪಿಸ್ಕೋಪಲ್) | ೧೮೫,೧೦೦ | ೪೫೦,೦೦೦ | ೩,೦೦೦,೦೦೦ |

---

೧. *ನೀಗ್ರೋ ಇಯರ್ ಬುಕ್*, ೧೯೩೧–೩೨, ಪು. ೨೧೩–೧೮

೨. ಈ ಪಟ್ಟಿಯನ್ನು *ನೀಗ್ರೋ ಇಯರ್ ಬುಕ್*, ೧೯೩೧–೩೨ರ ಪು. ೨೧೩ರಲ್ಲಿ ಕೊಟ್ಟಿರುವ ದಾಖಲೆಗಳಿಂದ ತಯಾರಿಸಲಾಗಿದೆ.

| | | | |
|---|---|---|---|
| ಅಮೆರಿಕನ್ ಮಿಶನರಿ ಅಸೋಸಿಯೇಶನ್ | ೩೬೮,೦೫೭ | ೩,೨೨೮,೪೨೧ | ೩,೨೦೦,೦೦೦ |
| ಚರ್ಚ್ ಆಫ್ ಕ್ರೈಸ್ಟ್ (ಡಿಸೈಪಲ್ಸ್) ಯುನೈಟೆಡ್ ಕ್ರಿಶ್ಚಿಯನ್ ಮಿಶನರಿ ಸೊಸೈಟಿ | ೯೧,೦೭೨ | – | ೫೦೦,೦೦೦ |
| ಲುಥೆರನ್ ಎವೆಂಜೆಲಿಕಲ್ ಸಿನಾಡಿಕಲ್ ಕಾನ್ಫರೆನ್ಸ್ ಆಫ್ ನಾರ್ತ್ ಅಮೆರಿಕ ಬೋರ್ಡ್ ಕಲರ್ಡ್ ಮಿಶನ್ | ೭೪,೯೦೦ | – | ೧೭೫,೦೦೦ |
| ಮೆಥಾಡಿಸ್ಟ್ ಎಪಿಸ್ಕೋಪಲ್ ಚರ್ಚ್ ಬೋರ್ಡ್ ಆಫ್ ಎಜುಕೇಶನ್ ಇನ್‌ಸ್ಟಿಟ್ಯೂಶನ್ಸ್ ಫಾರ್ ನೀಗ್ರೋಸ್ | ೨೫೯,೨೬೪ | ೧,೯೬೨,೭೨೯ | ೫,೦೦೦,೦೦೦ |
| ಮೆಥಾಡಿಸ್ಟ್ ಎಪಿಸ್ಕೋಪಲ್ ಚರ್ಚ್ ವುಮನ್ಸ್ ಹೋಂ ಮಿಶನರಿ ಸೊಸೈಟಿ | ೧೦೪,೯೭೫ | – | ೩೬೦,೦೦೦ |
| ಪ್ರಿಸ್‌ಬೈಟೇರಿಯನ್ ಚರ್ಚ್ ಇನ್‌ದಿ ಯು.ಎಸ್.ಎ. ಡಿವಿಜನ್ ಆಫ್ ಮಿಶನ್ ಫಾರ್ ಕಲರ್ಡ್ ಪೀಪಲ್ | ೪೦೫,೩೨೭ | ೧,೯೯೪,೦೩೨ | ೩,೫೬೦,೦೦೦ |
| ಯನೈಟೆಡ್ ಪ್ರಿಸ್‌ಬೈಟೇರಿಯನ್ ಚರ್ಚ್ ಬೋರ್ಡ್ ಆಫ್ ಮಿಶನ್ ಫಾರ್ ಫ್ರೀಮೆನ್ | ೯೮,೦೦೦ | ೬೪೫,೦೦೦ | ೧,೦೦೦,೦೦೦ |

೧೮೬೫ ರಿಂದ ೧೯೩೦ ರ ತನಕ ನೀಗ್ರೋ ಅಭಿವೃದ್ಧಿಗಾಗಿ ಧಾರ್ಮಿಕ ಮತ್ತು ಮಾನವತಾವಾದಿ ಸಂಸ್ಥೆಗಳು ಖರ್ಚು ಮಾಡಿದ ಒಟ್ಟು ಹಣ ೧೩೫,೦೦೦,೦೦೦ ಡಾಲರುಗಳೆಂದು ಅಂದಾಜು ಮಾಡಲಾಗಿದೆ. ಇದರಲ್ಲಿ ೮೫,೦೦೦,೦೦೦ ಡಾಲರ್‌ನಷ್ಟು ಹಣ ಬಿಳಿಯರಿಂದ ವಂತಿಗೆಯಾಗಿ ಬಂದಿದ್ದು.

ಇದ್ದಕ್ಕೆ ಹೋಲಿಸಿದರೆ, ಅಸ್ಪೃಶ್ಯರ ಏಳಿಗೆಗಾಗಿ ಹಿಂದೂಗಳು ಮಾಡಿದ ಸೇವೆ ಮತ್ತು ತ್ಯಾಗಗಳ ಪ್ರಮಾಣ ಎಷ್ಟು? ಹಾಗೆ ಹೇಳಿಕೊಳ್ಳಬಹುದಾದ ಒಂದೇ ಸಂಸ್ಥೆ ಹರಿಜನ ಸೇವಕ ಸಂಘ.[೧] ಅದರ ಮೂಲ ಬಂಡವಾಳವೇ ಬಹುಶಃ ೧೦ ಲಕ್ಷಕ್ಕಿಂತ ಹೆಚ್ಚಿರಲಾರದು, ಅದರ ವಾರ್ಷಿಕ ವೆಚ್ಚ ಹಲವು ಸಾವಿರ

ರೂಪಾಯಿಗಳಿಗಿಂತ ಹೆಚ್ಚಿರಲಾರದು, ಅದೂ ಅನುಪಯುಕ್ತ ಚಿಲ್ಲರೆ ಉದ್ದೇಶಗಳ ಮೇಲೆ ಖರ್ಚು ಮಾಡಿರುವಂತಹುದು. ಈ ನಿಧಿ ಒಂದು ಕಲ್ಯಾಣ ನಿಧಿಯಲ್ಲ. ಇದೊಂದು ರಾಜಕೀಯ ನಿಧಿ–ಅಸ್ಪೃಶ್ಯರು ಹಿಂದೂಗಳಿಗೆ ಓಟು ಹಾಕುವಂತೆ ಮಾಡಲಿಕ್ಕಾಗಿ ಸೃಷ್ಟಿಯಾದದ್ದು.

ಇಂಥ ವ್ಯತ್ಯಾಸ ಏಕಿದೆ? ಏಕೆ ಅಮೆರಿಕನ್ನರು ನೀಗ್ರೋ ಏಳಿಗೆಗಾಗಿ ಇಷ್ಟೆಲ್ಲ ಸೇವೆ ತ್ಯಾಗಗಳ ಶ್ರಮ ಹಾಕುತ್ತಾರೆ, ಏಕೆ ಹಿಂದೂಗಳು ಅಸ್ಪೃಶ್ಯರ ಏಳಿಗೆಗಾಗಿ ಏನು ಮಾಡಲೂ ಆಸಕ್ತಿ ತೋರಿಸಿಲ್ಲ? ಅದಕ್ಕೆ ಉತ್ತರ –ಅಮೆರಿಕನ್ನರಿಗೆ ಸಾಮಾಜಿಕ ಪ್ರಜ್ಞೆಯಿದೆ. ಹಿಂದೂಗಳಿಗೆ ಸಾಮಾಜಿಕ ಪ್ರಜ್ಞೆ ಇಲ್ಲ. ಇದರರ್ಥ ಹಿಂದೂಗಳಿಗೆ ಸರಿ–ತಪ್ಪು, ಒಳಿತು–ಕೆಡುಕು, ನೀತಿ–ಅನೀತಿಗಳ ಅರಿವು ಇಲ್ಲ ಎಂದಲ್ಲ. ಅವರ ನೈತಿಕ ಕಾಳಜಿಗಳು ಸಣ್ಣ ಜನವರ್ಗವೊಂದಕ್ಕೆ ಮಾತ್ರ, ಅಂದರೆ ತನ್ನ ಜಾತಿಯ ಜನರಿಗೆ ಮಾತ್ರ ಸೀಮಿತವಾಗಿಬಿಟ್ಟಿವೆ. ಇದು ಹಿಂದೂಗಳಲ್ಲಿ ಇರುವ ದೋಷ. ಎಚ್.ಜೆ.ಪೇಟನ್ ಅವರು ಹೇಳುವಂತೆ–[೨]

"ಖಂಡಿತವಾಗಿಯೂ ಒಬ್ಬ ಮನುಷ್ಯ ಒಂದು ಸೀಮಿತ ಜನವರ್ಗದ ಸಭ್ಯ ಸದಸ್ಯನಾಗಿದ್ದುಕೊಂಡೂ ನೈತಿಕವಾಗಿ ಒಳ್ಳೆಯ ಮನುಷ್ಯನಾಗದೇ ಇರಲು ಸಾಧ್ಯವಿದೆ. ತನ್ನ ವೈಯಕ್ತಿಕ ಜೀವನತತ್ತ್ವವನ್ನು ಸಂಬದ್ಧವಾಗಿ ಆಚರಣೆಗೆ ತರುವ ಒಬ್ಬ ಮನುಷ್ಯನಲ್ಲಿ ನೈತಿಕ ಔನ್ನತ್ಯದ ಸೂಚನೆ ಅಥವಾ ಛಾಯೆ ಇದೆಯೆಂದು ಆಗಾಗ ಅನಿಸುವುದುಂಟು; ಅಂಥ ಒಂದು ಗುಣವನ್ನು ಕಂಡು ನಾವು ಅದನ್ನೇ ಆದರ್ಶ ಎಂದು ಭ್ರಮಿಸುವುದುಂಟು: ಆ ಮನುಷ್ಯ ಯಾವ ಸಮಾಜದ ಸದಸ್ಯನಾಗಿದ್ದರೂ ಸರಿ, ಕಳ್ಳರ ಗುಂಪಿನ ಸದಸ್ಯನಾಗಿದ್ದರೂ ಕೂಡಾ ಈ ಆದರ್ಶ ಇರಬಹುದು ಎಂದು ಅನಿಸುವುದುಂಟು. ಆದರೆ ಕಳ್ಳರ ಗುಂಪಿನಲ್ಲೂ ಗೌರವಯುತ ಸದಸ್ಯರಿದ್ದಾರೆ ಎಂದ ಮಾತ್ರಕ್ಕೆ ಕಳ್ಳರನ್ನೇ ಗೌರವಸ್ಥರು ಎನ್ನಲಿಕ್ಕೆ ಬರುವುದಿಲ್ಲ. ಆದ್ದರಿಂದ ನಿಜವಾದ ಅರ್ಥದಲ್ಲಿ ನೈತಿಕ ಒಳ್ಳೆಯತನವಿರುವ ಒಬ್ಬ ಮನುಷ್ಯ, ಒಂದು ಸೀಮಿತ ಸಮಾಜದ ಸತ್ಸದಸ್ಯನಾಗಿದ್ದರೆ ಸಾಲದು; ವಿಸ್ತಾರ ಜನವರ್ಗದ, ಹಲವು ಸಮಾಜಗಳನ್ನೊಳಗೊಂಡ ವಿಶಾಲ ಸಮಾಜದ ಸತ್ಸದಸ್ಯನಾಗಿರಬೇಕು. ಇಂಥ ವಿಶಾಲ ಸಮಾಜದಲ್ಲಿದ್ದು ಆತ ಎಲ್ಲ ಸಮಾಜಗಳ ಉದ್ದೇಶಗಳನ್ನೂ ತನ್ನ ಉದ್ದೇಶಗಳಲ್ಲಿ ಮೈಗೂಡಿಸಿಕೊಂಡಿರಬೇಕು. ಯಾವುದೇ ಸಮಾಜವನ್ನೂ ಹೊರಗಿಟ್ಟು ಅದಕ್ಕೆ ವಿರುದ್ಧವಾದ ಕರ್ತವ್ಯಪ್ರಜ್ಞೆಯನ್ನು ಬೆಳೆಸಿಕೊಳ್ಳುವಂತಹ ಪ್ರತ್ಯೇಕತೆಯನ್ನು ಸೃಷ್ಟಿಸಿಕೊಳ್ಳಬಾರದು."

ಅಸ್ಪೃಶ್ಯರು ಹಿಂದೂಗಳ ಸಮಾಜಕ್ಕೆ ಸೇರುವುದಿಲ್ಲ ಮತ್ತು ಹಿಂದೂಗಳಿಗೆ, ತಾವು ಮತ್ತು ಅಸ್ಪೃಶ್ಯರು ಒಂದೇ ಸಮಾಜಕ್ಕೆ ಸೇರಿದವರೆಂಬ ಭಾವನೆ ಬರುವುದಿಲ್ಲ. ಈ ಕಾರಣದಿಂದಾಗಿಯೇ ಅಸ್ಪೃಶ್ಯರೊಂದಿಗಿನ ಹಿಂದೂಗಳ ನಡವಳಿಕೆಯಲ್ಲಿ ಯಾವ ನೈತಿಕ ಕಾಳಜಿಗಳಿಲ್ಲದ ಅಸಡ್ಡೆ ವ್ಯಕ್ತವಾಗುತ್ತದೆ.

ಸಾಮಾಜಿಕ ಪ್ರಜ್ಞೆ ಇಲ್ಲದಿರುವುದರಿಂದ ಹಿಂದೂಗಳಿಗೆ, ಅಸ್ಪೃಶ್ಯರ ಕಷ್ಟಕ್ಕೆ ಕಾರಣವಾದ ಅಸಮಾನತೆ ಅನ್ಯಾಯಗಳ ವಿರುದ್ಧ ಸಕಾರಣವಾದ ಸಿಟ್ಟು ಹುಟ್ಟುವುದೇ ಇಲ್ಲ. ಒಬ್ಬ ಹಿಂದೂ ಈ ಅನ್ಯಾಯ ಅಸಮಾನತೆಗಳಲ್ಲಿ ಯಾವ ತಪ್ಪನ್ನೂ ಕಾಣುವುದಿಲ್ಲವಾದ್ದರಿಂದ ಆತ ಅದಕ್ಕೆ ಸ್ಪಂದಿಸಲು ನಿರಾಕರಿಸುತ್ತಾನೆ. ಇಂತಹ ಅಂತಃಸಾಕ್ಷಿಯ ಕೊರತೆಯಿಂದಾಗಿ ಹಿಂದೂಗಳೇ ಅಸ್ಪೃಶ್ಯತೆಯ ನಿವಾರಣೆಯ ಹಾದಿಯಲ್ಲಿ ದೊಡ್ಡ ಕಾಲ್ತೊಡಕಾಗಿ ಪರಿಣಮಿಸುತ್ತಾರೆ.

* * * *

## ಅಧ್ಯಾಯ ೧೧

# ಹಿಂದೂ ಮತ್ತು ಜಾತಿಪದ್ಧತಿಯಲ್ಲಿ ಅವನ ನಂಬಿಕೆ

ಹಿಂದೂ ಸಮಾಜ ಸುಧಾರಕರಲ್ಲಿ ಸೌಮ್ಯವಾದಿ ಗುಂಪೊಂದಿದೆ. ಈ ಗುಂಪು ಅಸ್ಪೃಶ್ಯತೆ ಮತ್ತು ಜಾತಿಪದ್ಧತಿಗಳು ಪ್ರತ್ಯೇಕವಾದವು ಎಂದು ನಂಬುತ್ತದೆ. ಈ ತಾತ್ವಿಕ ತಳಹದಿಯ ಮೇಲೆ ಅವರು ಜಾತಿಪದ್ಧತಿಯನ್ನು ವಿರೋಧಿಸದೆಯೇ ಅಸ್ಪೃಶ್ಯತೆಯನ್ನು ನಿವಾರಿಸಲು ಸಾಧ್ಯ ಎಂದು ವಾದಿಸುತ್ತಾರೆ. ಮತೀಯ ಮನಸ್ಸಿನ ಹಿಂದೂವು ಜಾತಿಪದ್ಧತಿಯ ನಿವಾರಣೆಯನ್ನು ವಿರೋಧಿಸುವಷ್ಟೇ ಅಸ್ಪೃಶ್ಯತೆಯ ನಿವಾರಣೆಯನ್ನೂ ವಿರೋಧಿಸುತ್ತಾನೆ. ಆತ ಈ ಸಮಾಜವನ್ನು ಒಂದೇ ಹಂತದಲ್ಲಿ ಬದಲಾಯಿಸುವುದನ್ನು ವಿರೋಧಿಸುವಷ್ಟೇ ಎರಡು ಹಂತಗಳಲ್ಲಿ ಬದಲಾಯಿಸುವುದನ್ನೂ ವಿರೋಧಿಸುತ್ತಾನೆ. ಆದರೆ ಈ ಯೋಚನೆ ರಾಜಕೀಯ ಬುದ್ಧಿಯ ಹಿಂದೂವಿಗೆ ಆಕರ್ಷಣೀಯವಾಗಿದೆ. ಅದಕ್ಕೆ ಎರಡು ಕಾರಣ – ಒಂದು, ಇದರಿಂದಾಗಿ ಹಿಂದೂವಿಗೆ ಅಂತರರಾಷ್ಟ್ರೀಯ ಮಟ್ಟದಲ್ಲಿ ತಾನೆಷ್ಟಿದ್ದಾನೋ ಅದಕ್ಕಿಂತ ಹೆಚ್ಚು ಜನತಂತ್ರವಾಗಿಯಾಗಿ ತೋರಿಸಿಕೊಳ್ಳಲು ಸಾಧ್ಯವಾಗುತ್ತದೆ ಮತ್ತು ಎರಡನೆಯದಾಗಿ – ಜಾತಿ ಪದ್ಧತಿಯನ್ನು, ಮುಟ್ಟದೆ ಇರುವುದರಿಂದ ಮತೀಯ ಹಿಂದೂಗಳು ಕಾಂಗ್ರೆಸ್ಸನ್ನು ಕೈಬಿಡುವ ಅಪಾಯವಿರುವುದಿಲ್ಲ.

ಜಾತಿ ಪದ್ಧತಿಯನ್ನು ನಾಶಗೊಳಿಸದೆ ಅಸ್ಪೃಶ್ಯತೆಯನ್ನು ನಿವಾರಿಸುವ ಯೋಜನೆ ಹಾಕಿಕೊಂಡವರು ಮನುಸ್ಮೃತಿಯ ಅಧ್ಯಾಯ ಹತ್ತರ ನಾಲ್ಕನೇ ಶ್ಲೋಕವನ್ನು ತಮ್ಮ ಸಮರ್ಥನೆಗಾಗಿ ಬಳಸಿಕೊಳ್ಳುತ್ತಾರೆ. ಆ ಶ್ಲೋಕದಲ್ಲಿ ಮನು, ಇರುವುದು ನಾಲ್ಕೇ ವರ್ಣಗಳು, ಐದನೆಯ ವರ್ಣವೆಂಬುದಿಲ್ಲ ಎನ್ನುತ್ತಾನೆ. ಈ ಶ್ಲೋಕವನ್ನು ಹೀಗೆ ವ್ಯಾಖ್ಯಾನಿಸಿ ಅರ್ಥೈಸಲಾಗುತ್ತದೆ – ಐದನೆಯ ವರ್ಣವಿಲ್ಲವಾದ್ದರಿದ ಅಸ್ಪೃಶ್ಯರೂ ನಾಲ್ಕನೆಯ ವರ್ಣಕ್ಕೇ ಸೇರುತ್ತಾರೆ ಮತ್ತು ಆಗ ಅವರು ಶೂದ್ರರೆ ಎಂದಾಗುವುದರಿಂದ ಹಾಗೂ ಶೂದ್ರರನ್ನು ಮುಟ್ಟಲು ನಿಷೇಧವಿಲ್ಲದಿರುವುದರಿಂದ ಅಸ್ಪೃಶ್ಯರನ್ನೂ ಮುಟ್ಟಲು ಯಾವುದೇ ನಿಷೇಧವಿರುವುದಿಲ್ಲ. ಈ ವ್ಯಾಖ್ಯಾನ ರಾಜಕೀಯ ಬುದ್ಧಿಯ ಹಿಂದೂವಿನ ಕಿವಿಗಳಿಗೆ ಎಷ್ಟೇ ಆಪ್ಯಾಯಮಾನವಾಗಿರಲಿ, ಇದರ ಅರ್ಥ ಮನು ಒಟ್ಟಾರೆಯಾಗಿ ಹೇಳಹೊರಟಿರುವುದಕ್ಕಿಂತ ಭಿನ್ನವಾಗುವುದಿಲ್ಲ. ಈ ಶ್ಲೋಕವನ್ನು ಇನ್ನೊಂದು ರೀತಿಯಲ್ಲೂ ವ್ಯಾಖ್ಯಾನಿಸಬಹುದು : ಮನು ಚಾತುರ್ವರ್ಣ್ಯ ವ್ಯವಸ್ಥೆಯನ್ನು ವಿಸ್ತರಿಸಿ, ಆ ನಾಲ್ಕು ವರ್ಣಗಳ ಹೊರಗಿದ್ದ ಸಮುದಾಯಗಳನ್ನು ಕೂಡಿಸುವ ಮೂಲಕ ಪಂಚಮ ವರ್ಣವೊಂದನ್ನು ಸೃಷ್ಟಿಸಲು ಹಾಗೂ ಈ ವ್ಯವಸ್ಥೆಯನ್ನು ಪಂಚವರ್ಣ ವ್ಯವಸ್ಥೆಯಾಗಿ ಬದಲಿಸಲು ಸಿದ್ಧನಿರಲಿಲ್ಲ ಎಂದಾಗುತ್ತದೆ. ಮನು ಈ ನಾಲ್ಕೂ ವರ್ಣಗಳ ಹೊರಗಿರುವ ಜನರನ್ನು ಬಾಹ್ಯರು[೧] ಅಥವಾ ವರ್ಣಬಾಹ್ಯರು ಎಂದು ವರ್ಗೀಕರಿಸುವುದರಿಂದಲೇ ಅವನ ಈ ಉದ್ದೇಶ ಸ್ಪಷ್ಟವಾಗುತ್ತದೆ. ಮನುವು ಎಲ್ಲ ಜನರನ್ನೂ ನಾಲ್ಕು ವರ್ಣಗಳೊಳಗೇ ಸೇರಿಸ ಬಯಸಿದ್ದರೆ ಆತ ವರ್ಣಬಾಹ್ಯ ಎಂಬ ವರ್ಗದ ಬಗ್ಗೆ ಮಾತಾಡುವುದಕ್ಕೆ ಕಾರಣವಿಲ್ಲ. ಅಷ್ಟೇ ಅಲ್ಲ, ಆತ ಈ ವರ್ಣಬಾಹ್ಯ ವರ್ಗದಲ್ಲಿ ಎರಡು ವಿಭಾಗಗಳನ್ನು ಗುರುತಿಸುತ್ತಾನೆ –

---

೧. ಮನು, X–೨೮

ಹೀನರು[೨] ಮತ್ತು ಅಂತ್ಯಾವಸಾಯಿಗಳು.[೩] ಈ ಕಾರಣಗಳಿಂದಾಗಿ ಮನುಸ್ಮೃತಿಯ ಈ ಶ್ಲೋಕಕ್ಕೆ ಸೌಮ್ಯವಾದಿಗಳೂ ಕೊಟ್ಟ ವ್ಯಾಖ್ಯಾನ ಆಸ್ತಿಕ ಹಿಂದೂವನ್ನು ಮೋಸಗೊಳಿಸಲಾರದು. ಆದ್ದರಿಂದ ಆಸ್ತಿಕ ಹಿಂದೂ, ಅಸ್ಪೃಶ್ಯತೆಯ ಆಚಾರಣೆ ಮನುಸ್ಮೃತಿಗೆ ವಿರುದ್ಧ ಎಂಬುದನ್ನಾಗಲಿ, ಅಸ್ಪೃಶ್ಯತೆಯ ನಿವಾರಣೆ ಹಿಂದೂ ಧರ್ಮಸೂತ್ರಗಳಿಗೆ ವಿರೋಧವಾದದ್ದಲ್ಲ ಎಂಬ ವಾದವನ್ನಾಗಲಿ ಒಪ್ಪಿಕೊಳ್ಳಲಾರ.

ಮನುವಿನ ಬರಹಕ್ಕೆ ಮೇಲೆ ನೀಡಲಾದ ವ್ಯಾಖ್ಯಾನ ಮತ್ತು ಅದನ್ನು ಆಧರಿಸಿದ ವಾದ ಸಾಧಾರಣ ಅಶಿಕ್ಷಿತ ಹಿಂದೂವಿಗೆ ತೀರ ಬೌದ್ಧಿಕ ಕಸರತ್ತು ಎನಿಸುವಂಥದು. ಅವನಿಗೆ ಗೊತ್ತಿರುವುದು ಎರಡೇ. ಮೊದಲನೆಯದಾಗಿ, ಸಾಮಾಜಿಕ ವ್ಯವಹಾರಗಳಲ್ಲಿ ತಾನು ಆಚರಿಸಬೇಕಾದ ಮೂರು ನಿಷೇಧಗಳು ಅವನಿಗೆ ಗೊತ್ತು. ೧) ವಿಜಾತೀಯರೊಂದಿಗೆ ಸಹಭೋಜನ ಕೂಡದು ೨) ವಿಜಾತೀಯರೊಂದಿಗೆ ವಿವಾಹ ಕೂಡದು ಮತ್ತು ಅಸ್ಪೃಶ್ಯತೆಗೆ ಸಂಬಂಧಿಸಿದ ಮೂರನೆಯ ನಿಷೇಧ ೩) ಕೆಲವು ಜನವರ್ಗಗಳನ್ನು ದೈಹಿಕವಾಗಿ ಸ್ಪರ್ಶಿಸಕೂಡದು ಎಂಬ ನಿಷೇಧ. ಮೊದಲ ಎರಡು ನಿಷೇಧಗಳಿಂದ ಜಾತಿ ಹುಟ್ಟುತ್ತದೆ, ಮೂರನೆಯ ನಿಷೇಧದಿಂದ ಅಸ್ಪೃಶ್ಯತೆ ಹುಟ್ಟುತ್ತದೆ. ಜಾತಿವಾದಿ ಹಿಂದೂವಿಗೆ ಈ ನಿಷೇಧಗಳ ಸಂಖ್ಯೆಯ ಬಗ್ಗೆಯೂ ಚಿಂತೆಯಿಲ್ಲ. ಈ ನಿಷೇಧಗಳನ್ನು ಆಚರಿಸುವುದರ ಬಗ್ಗೆ ಮಾತ್ರ ನಿಯತಿಯಿದೆ. ಇದನ್ನು ಆಚರಿಸಬಾರದು ಎಂದರೆ, ಏಕೆ ಆಚರಿಸಬಾರದು ಎಂದ ಆತ ತಿರುಗಿ ಕೇಳುತ್ತಾನೆ. ಅವನ ವಾದ–ನಾನು ಮೊದಲೆರಡು ನಿಷೇಧಗಳನ್ನು ಆಚರಿಸಬಹುದಾದರೆ ಮೂರನೆಯದನ್ನೂ ಆಚರಿಸುವುದು ಏಕೆ ತಪ್ಪು? ಮನೋವೈಜ್ಞಾನಿಕವಾಗಿ ಜಾತಿಪದ್ಧತಿ ಮತ್ತು ಅಸ್ಪೃಶ್ಯತೆ ಎರಡೂ ಒಂದೇ ತತ್ವದ ಮೇಲೆ ರೂಪಿತವಾದ ಎರಡು ವ್ಯವಸ್ಥೆಗಳು. ಜಾತಿವಾದಿ ಹಿಂದೂಗಳು ಅಸ್ಪೃಶ್ಯತೆಯನ್ನು ಆಚರಿಸುತ್ತಾರೆ, ಏಕೆಂದರೆ ಅವರು ಜಾತಿಪದ್ಧತಿಯನ್ನು ನಂಬುತ್ತಾರೆ.

ಈ ದೃಷ್ಟಿಯಿಂದ ನೋಡಿದಾಗ, ಜಾತಿ ಪದ್ಧತಿಯನ್ನು ನಾಶಮಾಡದೆ ಅಸ್ಪೃಶ್ಯತೆಯನ್ನು ನಿವಾರಿಸುವ ಯೋಜನೆ ಪೂರ್ಣ ನಿರರ್ಥಕವಾದದ್ದು ಎಂಬುದು ತಿಳಿಯುತ್ತದೆ. ಜಾತಿ ಪದ್ಧತಿ ಮತ್ತು ಅಸ್ಪೃಶ್ಯತೆ ಎರಡೂ ಬೇರೆ ಬೇರೆ ಸಂಗತಿಗಳು ಎಂಬ ಈ ವಾದದ ಮೂಲ ತತ್ವವೇ ಹುರುಳಿಲ್ಲದ್ದು. ಅವೆರಡೂ ಒಂದೇ ಮತ್ತು ಪ್ರತ್ಯೇಕಿಸಲಾಗದಂಥವು. ಅಸ್ಪೃಶ್ಯತೆಯೆನ್ನುವುದು ಜಾತಿ ಪದ್ಧತಿಯ ಒಂದು ವಿಸ್ತರಣೆ ಮಾತ್ರ. ಅವೆರಡರ ಮಧ್ಯೆ ಯಾವುದೇ ಬಿರುಕು ಇಲ್ಲ. ಎದ್ದು ನಿಂತರೆ ಅವೆರಡೂ ನಿಲ್ಲುತ್ತವೆ, ಬಿದ್ದರೆ ಎರಡೂ ಬೀಳುತ್ತವೆ.

ಅಸ್ಪೃಶ್ಯತೆಯು ಕಾನೂನಿನ ಅಥವಾ ವೈಚಾರಿಕವಾದ ತಂತ್ರದಿಂದ ನಿವಾರಣೆಯಾಗುವುದಿಲ್ಲ ಎನ್ನುವುದಕ್ಕೆ ಇನ್ನೊಂದು ಕಾರಣವಿದೆ. ಮೊದಲೇ ನೋಡಿರುವಂತೆ, ಹಿಂದೂ ಸಮಾಜ ವ್ಯವಸ್ಥೆ ನಿಂತಿರುವುದು ತಾರತಮ್ಯವಿರುವ ಅಸಮಾನತೆಯ ತಳಹದಿಯ ಮೇಲೆ. ಈ ವೈಶಿಷ್ಟ್ಯವನ್ನು ಹಲವರು ಸರಿಯಾಗಿ ಅರ್ಥಮಾಡಿಕೊಂಡಿಲ್ಲ ಎಂದರೆ ಉತ್ಪ್ರೇಕ್ಷೆಯಾಗಲಾರದು. ಅಸಮಾನತೆಯ ಮೇಲೆ ನಿಂತಿರುವ ಸಮಾಜ ವ್ಯವಸ್ಥೆಗೂ ತರತಮಗಳ ಅಸಮಾನತೆಯ ಮೇಲೆ ನಿಂತಿರುವ ಸಮಾಜವ್ಯವಸ್ಥೆಗೂ ಅದರ ತಳಪಾಯದಲ್ಲೇ ವ್ಯತ್ಯಾಸಗಳಿವೆ. ಮೊದಲನೆಯದು, ದುರ್ಬಲ, ಹಾಗಾಗಿ ತನ್ನಿಂದ ತಾನೇ ಮುಂದುವರೆದುಕೊಂಡು ಹೋಗಲಾರದು. ಆದರೆ ಎರಡನೆಯದು, ತನ್ನನ್ನು ತಾನೇ ರಕ್ಷಿಸಿ ಮುಂದುವರೆಸಿಕೊಳ್ಳಬಲ್ಲದು.

---

೨. ಮನು, X–೩೧

೩. ಮನು X–೩೯

ಅಸಮಾನತೆಯನ್ನು ಆಧರಿಸಿದ ವ್ಯವಸ್ಥೆಯಲ್ಲಿ ಕೆಲವರ್ಗಗಳು ಒಟ್ಟಾಗಿ ವ್ಯವಸ್ಥೆಯನ್ನು ಕಿತ್ತೊಗೆಯಲು ಸಾಧ್ಯ. ಏಕೆಂದರೆ ಕೆಳವರ್ಗದ ಯಾರಿಗೂ ಅದನ್ನು ಹಾಗೇ ಮುಂದುವರೆಸುವ ಆಸಕ್ತಿ ಇರುವುದಿಲ್ಲ. ತರತಮವುಳ್ಳ ಅಸಮಾನತೆಯ ಮೇಲೆ ನಿಂತಿರುವ ಸಮಾಜವ್ಯವಸ್ಥೆಯಲ್ಲಿ, ಶೋಷಿತ ಜನರೆಲ್ಲ ಒಟ್ಟಾಗಿ ಉಳಿದವರನ್ನು ಎದುರಿಸುವ ಸಾಧ್ಯತೆ ಇಲ್ಲವೇ ಇಲ್ಲ. ತರತಮವುಳ್ಳ ಅಸಮಾನತೆಯ ವ್ಯವಸ್ಥೆಯಲ್ಲಿ ಶೋಷಿತ ಜನರೆಲ್ಲ ಒಂದೇ ಮಟ್ಟದವರಾಗಿರುವುದಿಲ್ಲ. ಎಲ್ಲರೂ ಉಚ್ಚರು ಅಥವಾ ನೀಚರು ಆಗಿದ್ದಾಗ ಮಾತ್ರ ಅವರಿಗೆ ಸಾಧಾರಣವಾದ ಕ್ರಿಯೆ ಹುಟ್ಟುವುದು ಸಾಧ್ಯ. ತರತಮವುಳ್ಳ ಅಸಮಾನತೆಯ ವ್ಯವಸ್ಥೆಯಲ್ಲಿ ಉಚ್ಚ ಉತ್ತಮರು (ಬ್ರಾಹ್ಮಣರು) ಇದ್ದಾರೆ. ಅವರ ಕೆಳಗೆ ಉಚ್ಚ ಮಧ್ಯಮರು (ಕ್ಷತ್ರಿಯರು) ಹಾಗೂ ಅವರ ಕೆಳಗೆ ಉಚ್ಚರು (ವೈಶ್ಯರು) ಇದ್ದಾರೆ. ಈ ಉಚ್ಚರ ಕೆಳಗೆ ನೀಚರು (ಶೂದ್ರರು) ಮತ್ತು ನೀಚರ ಕೆಳಗೆ ನೀಚಕನಿಷ್ಠರು (ಅಸ್ಪೃಶ್ಯರು) ಇದ್ದಾರೆ. ಇವರೆಲ್ಲರಿಗೂ ಉಚ್ಚ ಉತ್ತಮರ ಬಗ್ಗೆ ಅಸಮಾಧಾನವಿದೆ ಮತ್ತು ಅವರನ್ನು ಉರುಳಿಸುವ ಹಂಬಲವಿದೆ. ಆದರೆ ಅವರೆಲ್ಲ ಒಟ್ಟಾಗುವುದಿಲ್ಲ. ಉಚ್ಚಮಧ್ಯಮರು ಉಚ್ಚಉತ್ತಮರನ್ನು ನಿವಾರಿಸಬಯಸುತ್ತಾರೆ. ಆದರೆ ಅವರು ಉಚ್ಚ, ನೀಚ, ನೀಚ ಕನಿಷ್ಠರೊಂದಿಗೆ ಸೇರ ಬಯಸುವುದಿಲ್ಲ. ಹಾಗೆ ಸೇರಿದರೆ ಅವರೂ ತಮ್ಮೊಂದಿಗೆ ಕೂಡು ಸಮಾನರಾಗುತ್ತಾರೆಂಬ ಭಯವಿದೆ. ಉಚ್ಚರಿಗೆ ಉಚ್ಚಮಧ್ಯಮರನ್ನು ಕೆಡವಬೇಕೆಂದಿದೆ, ಆದರೆ ಅವರು ನೀಚ, ನೀಚ ಕನಿಷ್ಠರೊಂದಿಗೆ ಕೈಗೂಡಿಸುವುದಿಲ್ಲ. ಕಾರಣ, ಅವರು ಮೇಲೆ ಬಂದು ತಮ್ಮ ಸಮಾನ ಸ್ಥಾನಮಾನ ಗಳಿಸಿಬಿಡುತ್ತಾರೆಂಬ ಭಯ. ನೀಚನಿಗೆ ಉಚ್ಚ, ಉಚ್ಚಮಧ್ಯಮ, ಉಚ್ಚ ಉತ್ತಮರನ್ನು ಕೆಳಗೆಳೆಯುವ ಹಂಬಲವಿದೆ, ಆದರೆ ನೀಚ ಕನಿಷ್ಠನೊಂದಿಗೆ ಸೇರಿದರೆ ನೀಚ ಕನಿಷ್ಠನ ಸ್ಥಾನಮಾನ ಹೆಚ್ಚಾಗಿ ಆತ ತಮಗೆ ಸಮಾನನಾಗುತ್ತಾನೆಂಬ ಭಯದಿಂದ ಅವನೊಡನೆ ಸೇರಲು ಸಿದ್ಧನಿಲ್ಲ. ತರತಮವುಳ್ಳ ಅಸಮಾನತೆಯ ಸಮಾಜ ವ್ಯವಸ್ಥೆಯಲ್ಲಿ ಈ ವ್ಯವಸ್ಥೆಯ ಗೋಪುರದ ಅತ್ಯಂತ ಕೆಳಗಿರುವ ಒಂದು ವರ್ಗವನ್ನು ಬಿಟ್ಟರೆ ಇನ್ನಾವ ವರ್ಗವನ್ನೂ ವಿಶೇಷ ಗೌರವ ಸ್ಥಾನಮಾನಗಳಿಲ್ಲದ ವರ್ಗ ಎನ್ನುವಂತಿಲ್ಲ. ಈ ವಿಶೇಷ ಗೌರವ ಸ್ಥಾನಮಾನಗಳಲ್ಲಿ ತಾರತಮ್ಯವಿದೆ ಅಷ್ಟೇ. ನೀಚ ವರ್ಗವೂ ಕೂಡ ನೀಚ ಕನಿಷ್ಠರಿಗೆ ಹೋಲಿಸಿದರೆ ಸ್ಥಾನಮಾನವುಳ್ಳ ವರ್ಗವೇ. ಹೀಗೆ ಪ್ರತಿ ವರ್ಗಕ್ಕೂ ಅದರ ಸ್ಥಾನಮಾನ ಇರುವುದರಿಂದ ಪ್ರತಿವರ್ಗವೂ ಈ ಸಮಾಜ ವ್ಯವಸ್ಥೆಯನ್ನು ಹೀಗೇ ಮುಂದುವರೆಸಲು ಬಯಸುತ್ತದೆ.

ಅಸ್ಪೃಶ್ಯತೆಯೆನ್ನುವುದು ಅಸ್ಪೃಶ್ಯರಿಗೆ ಒಂದು ದುರದೃಷ್ಟವಾಗಿರಬಹುದು, ಆದರೆ ಹಿಂದೂಗಳಿಗೆ ಅದು ಖಂಡಿತವಾಗಿಯೂ ಒಂದು ಅದೃಷ್ಟವೇ. ಇದು ಅವರಿಗೆ ನೀಚರೆಂದು ಗಣಿಸಬಹುದಾದ ಒಂದು ವರ್ಗವನ್ನು ಕಲ್ಪಿಸಿಕೊಡುತ್ತದೆ. ಹಿಂದೂಗಳು ಅಸ್ತಿತ್ವಹೀನರಿಗೂ ಒಂದು ಅಸ್ತಿತ್ವ ಸಿಗುವ ವ್ಯವಸ್ಥೆಯನ್ನು ಬಯಸುವುದಿಲ್ಲ. ಎಲ್ಲರಿಗೂ ಸಮಾನ ಅಸ್ತಿತ್ವವಿರುವ ವ್ಯವಸ್ಥೆಯನ್ನೂ ಬಯಸುವುದಿಲ್ಲ. ಅವರು ಬಯಸುವ ವ್ಯವಸ್ಥೆ, ಕೆಲವು ಅಸ್ತಿತ್ವ ಇರುವವರು ಮತ್ತು ಉಳಿದವರು ಅಸ್ತಿತ್ವ ಹೀನರು ಆಗಿರುವಂಥ ವ್ಯವಸ್ಥೆ. ಅಸ್ಪೃಶ್ಯರು ಅಸ್ತಿತ್ವಹೀನರು. ಇದರಿಂದಾಗಿ ಹಿಂದೂಗಳಿಗೆ ಒಂದು ಅಸ್ತಿತ್ವ ದೊರಕುತ್ತದೆ. ಅಸ್ಪೃಶ್ಯತೆಯ ವ್ಯವಸ್ಥೆ ಹಿಂದೂಗಳ ಸಹಜ ಹೆಗ್ಗಳಿಕೆಯನ್ನು ಉಳಿಸಿ ಬೆಳೆಸುತ್ತದೆ ಮತ್ತು ತಾವು ದೊಡ್ಡವರೆಂಬ ಗರ್ವವನ್ನು ಅವರಿಗೆ ತಂದುಕೊಡುತ್ತದೆ. ಹಿಂದೂಗಳು ಅದರಲ್ಲೂ ಮುಖ್ಯವಾಗಿ ಬಹುಸಂಖ್ಯಾತ ಕ್ಷುದ್ರ ಹಿಂದೂಗಳು ಅಸ್ಪೃಶ್ಯತೆಯನ್ನು ಬಿಡಲು ಸಿದ್ಧರಿಲ್ಲದಿರುವುದಕ್ಕೆ, ಇದೂ ಒಂದು ಮುಖ್ಯ ಕಾರಣ.

ಅಸ್ಪೃಶ್ಯತೆ ಮಾಯವಾಗುವುದು ಒಟ್ಟಾರೆ ಹಿಂದೂ ಸಮಾಜ ವ್ಯವಸ್ಥೆ, ಮುಖ್ಯವಾಗಿ ಜಾತಿ ಪದ್ಧತಿ ಪೂರ್ಣ ನಿರ್ನಾಮವಾದಾಗ ಮಾತ್ರ. ಇದು ಆಗಲು ಸಾಧ್ಯವೆ ? ಯಾವುದೇ ಸಂಘಟನೆ ಉಳಿದುಕೊಳ್ಳುವುದು

ಒಂದಲ್ಲ ಒಂದು ರೀತಿಯ ಅನುಮೋದನೆಯಿಂದ. ಒಂದು ಸಂಘಟನೆಗೆ ಮೂರು ಮೂಲಗಳಿಂದ ಅನುಮೋದನೆ ದೊರಕಬಹುದು – ಕಾನೂನಿನಿಂದ, ಸಮಾಜದಿಂದ ಮತ್ತು ಧರ್ಮದಿಂದ. ಈ ಅನುಮೋದನೆಯ ಶಕ್ತಿ ಆ ಸಂಘಟನೆಯ ಜೀವಂತಿಕೆಯನ್ನು ನಿರ್ಧರಿಸುತ್ತದೆ. ಜಾತಿ ಪದ್ಧತಿಯ ಹಿಂದಿರುವ ಅನುಮೋದನೆಯ ಸ್ವರೂಪ ಎಂಥದು? ದುರದೃಷ್ಟವಶಾತ್ ಜಾತಿ ಪದ್ಧತಿಗೆ ಸಿಕ್ಕಿರುವುದು ಧಾರ್ಮಿಕ ಅನುಮೋದನೆ. ಏಕೆಂದರೆ ವರ್ಣ ವ್ಯವಸ್ಥೆಯ ಹೊಸ ರೂಪವಾಗಿ ಬಂದ ಜಾತಿ ಪದ್ಧತಿಗೆ ವೇದಗಳ ಅನುಮೋದನೆ ದೊರಕಿದೆ ಹಾಗೂ ವೇದಗಳು ಎಂದೂ ಸುಳ್ಳಾಗದ ಹಿಂದೂ ಧರ್ಮದ ಪವಿತ್ರ ಗ್ರಂಥಗಳಾಗಿವೆ. ದುರದೃಷ್ಟವಶಾತ್ ಹೀಗಾದರೆ ಎಂದು ನಾನು ಹೇಳುವುದಕ್ಕೆ ಕಾರಣ, ಧಾರ್ಮಿಕ ಅನುಮೋದನೆ ದೊರೆತ ಯಾವುದೇ ವ್ಯವಸ್ಥೆಗೆ ಪವಿತ್ರ ಮತ್ತು ಸರ್ವಕಾಲೀನ ಗುಣಗಳು ಒದಗಿಬರುತ್ತವೆ. ಹಾಗಾಗಿ ಜಾತಿಪದ್ಧತಿಯೇ ಮಾಯವಾಗುವಂಥದಲ್ಲವಾದರೆ, ಇನ್ನು ಅಸ್ಪೃಶ್ಯತೆ ಮಾಯವಾಗುವ ಬಗೆ ಹೇಗೆ?

* * * *

# ಭಾಗ – ನಾಲ್ಕು

# ಅಸ್ಪೃಶ್ಯರು ಎದುರಿಸಬೇಕಾಗಿರುವ ಸಂಗತಿಗಳು

## ಅಧ್ಯಾಯ ೧೨

# ಆಡಳಿತದ ವೈರುಧ್ಯ

ಭಾರತೀಯ ದಂಡ ಸಂಹಿತೆಯ ಎರಡನೆಯ ಪರಿಚ್ಛೇದ ಹೀಗಿದೆ : "ಪ್ರತಿಯೊಬ್ಬ ವ್ಯಕ್ತಿಯು ಈ ಕಾನೂನಿನಲ್ಲಿ ಸೂಚಿಸಲಾದ ನಿಬಂಧನೆಗಳಿಗೆ ವಿರುದ್ಧವಾದಂತಹ ಕಾರ್ಯವನ್ನಾಗಲೀ ಕರ್ತವ್ಯಲೋಪವನ್ನಾಗಲೀ ಎಸಗಿ ಬ್ರಿಟಿಷ್ ಭಾರತದ ಒಳಗೆ ತಪ್ಪಿತಸ್ಥನಾದಲ್ಲಿ ಆತ ಈ ಸಂಹಿತೆಯ ಪ್ರಕಾರ ದಂಡನೆಗೆ ಅರ್ಹನಾಗುತ್ತಾನೆ."

ಇದಕ್ಕೆ ಹಿನ್ನೆಲೆಯಾಗಿ, ಈ ಸಂಹಿತೆಯ ಕರಡನ್ನು ತಯಾರಿಸಿದ ಅಧಿಕಾರಿಗಳು, ಸರ್ಕಾರದ ಕಾರ್ಯದರ್ಶಿಗಳಿಗೆ ಬರೆದು ಇದರಲ್ಲಿರುವ "ಪ್ರತಿಯೊಬ್ಬ ವ್ಯಕ್ತಿ" ಎಂಬ ಪದಗಳ ಬಗ್ಗೆ ಅವರ ಗಮನ ಸೆಳೆಯುವುದು ಅಗತ್ಯವೆಂದು ಯೋಚಿಸಿದರು. ಅದರಲ್ಲಿ ಅವರು ಹೀಗೆಂದು ಬರೆದಿದ್ದಾರೆ:

> "ಮಂಡಳಿಯ ಘನಪ್ರಭುಗಳು ಗಮನಿಸುವಂತೆ ನಾವು ಈ ಸಂಹಿತೆಯ ವ್ಯಾಪ್ತಿಯಿಂದ ಕಂಪನಿ ಸರ್ಕಾರದ ಗಡಿಯೊಳಗಿನ ಭಾರತದ ಯಾವುದೇ ಪ್ರಾಚೀನ ರಾಜ ಕುಟುಂಬಗಳನ್ನೂ ಹೊರತುಪಡಿಸಬೇಕೆಂದು ಯೋಚಿಸಿಲ್ಲ. ಹಾಗೆ ಹೊರತುಪಡಿಸಬೇಕೇ ಎಂಬ ಪ್ರಶ್ನೆಯನ್ನು – ಪ್ರಸ್ತುತ ಅಸ್ತಿತ್ವದಲ್ಲಿರುವ ಒಪ್ಪಂದಗಳ ಬಗ್ಗೆ ಹೆಚ್ಚಿನ ನಿಖರ ಮಾಹಿತಿ ನಮಗೆ ಇಲ್ಲದೇ ಇರುವ ಕಾರಣದಿಂದ ಆ ಒಪ್ಪಂದಗಳನ್ನು ಹೇಗೆ ಅರ್ಥೈಸಿಕೊಳ್ಳಲಾಗಿದೆ, ಅದರ ಹಿನ್ನೆಲೆಯ ಚರ್ಚೆ, ಹೊಂದಾಣಿಕೆಗಳ ಇತಿಹಾಸವೇನು, ಅಂಥ ನಿರ್ದಿಷ್ಟ ಕುಟುಂಬಗಳ ಶಕ್ತಿ ಮತ್ತು ಮನೋಧರ್ಮ ಎಂಥದು ಮತ್ತು ಅಂಥ ಕುಟುಂಬಗಳ ಬಗ್ಗೆ ಜನಸಮುದಾಯಕ್ಕಿರುವ ಭಾವನೆಯೇನು – ಇವೆಲ್ಲವೂ ನಮಗೆ ತಿಳಿದಿಲ್ಲವಾದ್ದರಿಂದ ಈ ಪ್ರಶ್ನೆಯನ್ನು ನಾವು ನಿರ್ಧರಿಸುವ ಗೋಜಿಗೆ ಹೋಗಿಲ್ಲ. ಇದರ ಬಗ್ಗೆ ತುಂಬಾ ಗೌರವದಿಂದ ತಮ್ಮ ಅಪ್ಪಣೆಯೊಂದಿಗೆ ನಾವು ಹೇಳಬಯಸುವುದೇನೆಂದರೆ, ಹೀಗೆ ಕೆಲವರನ್ನು ಈ ಕಾನೂನಿನ ವ್ಯಾಪ್ತಿಯಿಂದ ಹೊರತುಪಡಿಸುವುದು ಒಂದು ಕೆಡುಕು ; ಅದಕ್ಕಿಂತಲೂ ದೊಡ್ಡ ಕೆಡುಕು ಈ ಕಾನೂನಿಗಿಂತ ಮೇಲಿರುವುದೇ ದೊಡ್ಡ ಜನರ ಒಂದು ವಿಶೇಷಾಧಿಕಾರ ಎಂದು ಜನ ಭಾವಿಸುತ್ತಾರೆನ್ನುವುದು; ಹಾಗೂ ಇಂಥ ವಿಶೇಷಾಧಿಕಾರಗಳನ್ನು ಎಷ್ಟೆಷ್ಟು ಕಾಲ ಮುಂದುವರೆಸಲಾಗುತ್ತದೋ ಅಷ್ಟಷ್ಟು ಅದನ್ನು ವಾಪಸು ಪಡೆಯುವುದು ಕಷ್ಟವಾಗುತ್ತ ಹೋಗುತ್ತದೆನ್ನುವುದು ; ಮತ್ತು – ಹಾಗಿರುವ ವಿಶೇಷ ಅಧಿಕಾರಿಗಳನ್ನು ತೆಗೆದುಹಾಕಲು ಸರ್ಕಾರಕ್ಕೆ ಈಗಿರುವಂತಹ ಅವಕಾಶಕ್ಕಿಂತ ಒಳ್ಳೆಯ ಅವಕಾಶ ಇನ್ನೆಂದೂ ಸಿಕ್ಕಲಾರದು ಎಂಬುದು. ಏಕೆಂದರೆ ಈಗ ಸರ್ಕಾರ ಎಲ್ಲ ಧರ್ಮಗಳ ಎಲ್ಲ ಜನಾಂಗಗಳ ಎಲ್ಲ ಜನರಿಗೂ ಅನ್ವಯವಾಗುವಂತಹ ಹೊಸ ಸಂಹಿತೆಯನ್ನು ಜಾರಿಗೆ ತರುತ್ತಿದೆ. ಈ ಎಲ್ಲ ಕಾರಣಗಳಿಂದಾಗಿ ನಾವು ಸೂಚಿಸುತ್ತಿರುವುದೇನೆಂದರೆ, ಸಂಪೂರ್ಣವಾಗಿ ನೀಡಲ್ಪಟ್ಟಿರುವ ಸಾರ್ವಜನಿಕ ವಿಶ್ವಾಸವೊಂದನ್ನು ಬಿಟ್ಟು, ಇನ್ನಾವುದೇ ದಾಕ್ಷಿಣ್ಯವೂ ಸಮಾನ ನ್ಯಾಯದ ಕಲ್ಪನೆಯ ಎದುರು ನಿಲ್ಲಬಾರದು."

ಇಂಥ ಸಮಾನ ನ್ಯಾಯದ ಕಲ್ಪನೆ ಸ್ಥಾಪಿತ ವ್ಯವಸ್ಥೆಗೆ ಮರಣಾಘಾತವನ್ನು ಕೊಡುತ್ತದೆ. ಎಂದು

ಅವರು ಆಗ ಭಾವಿಸಿರಬೇಕು. ಆದರೆ ನಿಜವಾಗಿ ಆದದ್ದೆಂದರೆ, ಸ್ಥಾಪಿತ ವ್ಯವಸ್ಥೆಗೆ ಆಘಾತವಾಗುವ ಬದಲು ಅದು ಯಾವುದೇ ಎಗ್ಗಿಲ್ಲದೆ ಮುಂದುವರೆದುಕೊಂಡಿದೆ. ಸಮಾನ ನ್ಯಾಯದ ಕಲ್ಪನೆ ನಿರೀಕ್ಷಿತ ಪರಿಣಾಮ ತರಲು ಯಾಕೆ ಸೋತಿತೆಂದು ಇಲ್ಲಿ ಕೇಳಿಕೊಳ್ಳಬಹುದು. ಉತ್ತರ ಸರಳ. ನ್ಯಾಯದ ತತ್ತ್ವವನ್ನು ಘೋಷಿಸುವುದು ಒಂದು ಕಾರ್ಯ, ಅದನ್ನು ಜಾರಿಗೆ ತರುವುದು ಇನ್ನೊಂದು ಕಾರ್ಯ. ಸಮಾನ ನ್ಯಾಯದ ತತ್ವ ಜಾರಿಯಲ್ಲಿದೆಯೇ ಇಲ್ಲವೇ ಎಂಬುದು ಆ ತತ್ವವನ್ನು ಆಚರಣೆಗೆ ತರುವ ಸರ್ಕಾರಿ ನೌಕರರ ಪಾತ್ರವನ್ನು ಮತ್ತು ರೀತಿಯನ್ನು ಅವಲಂಬಿಸಿದೆ. ತಮ್ಮ ವರ್ಗ ಪಕ್ಷಪಾತದ ಕಾರಣದಿಂದ ಸರ್ಕಾರಿ ನೌಕರರು, ಸ್ಥಾಪಿತ ವ್ಯವಸ್ಥೆಯ ಮಿತ್ರರೂ ಹೊಸ ವ್ಯವಸ್ಥೆಯ ಶತ್ರುಗಳೂ ಆಗಿದ್ದರೆ, ಹೊಸ ವ್ಯವಸ್ಥೆ ಹುಟ್ಟಲಿಕ್ಕೇ ಸಾಧ್ಯವಿಲ್ಲ. ಹೊಸ ವ್ಯವಸ್ಥೆಯೊಂದು ಯಶಸ್ವಿಯಾಗಲು ಹೊಸ ವ್ಯವಸ್ಥೆಗೆ ಸಹಸ್ಪಂದಿಯಾಗಿರುವ ಅಧಿಕಾರವರ್ಗವೊಂದು ಇರಬೇಕೆಂಬ ಸತ್ಯವನ್ನು ೧೮೭೧ರಲ್ಲಿ ಕಾರ್ಲ್‌ಮಾರ್ಕ್ಸ್ ಪ್ಯಾರಿಸ್ ಕಮ್ಯೂನ್‌ನ ನಿರ್ಮಾಣದ ಸಂದರ್ಭದಲ್ಲಿ ಮನಗಂಡಿದ್ದ. ಮುಂದೆ ಲೆನಿನ್ ರಷಿಯನ್ ಕಮ್ಯುನಿಸಮ್‌ನ ಸ್ಥಾಪನೆಯಲ್ಲೂ ಇದನ್ನೇ ಬಳಸಿಕೊಂಡ. ದುರದೃಷ್ಟವಶಾತ್, ಬ್ರಿಟಿಷ್ ಸರ್ಕಾರ ತನ್ನ ಅಧಿಕಾರವರ್ಗದಲ್ಲಿ ಇರಬೇಕಾದ ಜನಗಳ ಬಗ್ಗೆ ತಲೆಕೆಡಿಸಿಕೊಳ್ಳಲೇ ಇಲ್ಲ. ಹಾಗಾಗಿ ಬ್ರಿಟಿಷ್ ಸರ್ಕಾರ, ಸ್ಥಾಪಿತ ವ್ಯವಸ್ಥೆಯನ್ನು ನಂಬುವ ಮತ್ತು ಸಮಾನ ನ್ಯಾಯದ ಕಲ್ಪನೆಯನ್ನಿಟ್ಟುಕೊಂಡಿರದ ಹಿಂದೂ ಜನ ವರ್ಗಗಳಿಗೆ ತಮ್ಮ ಆಡಳಿತ ಯಂತ್ರದ ಬಾಗಿಲುಗಳನ್ನು ತೆರೆದುಕೊಟ್ಟಂತಾಯಿತು. ಇದರ ಪರಿಣಾಮ ಭಾರತವನ್ನು ಬ್ರಿಟಿಷರು ಆಳಿದರು, ಆದರೆ ಆಡಳಿತವನ್ನು ಹಿಂದೂಗಳೇ ನಡೆಸಿದರು. ಈ ವಿಷಯವನ್ನು ದೃಢಪಡಿಸಿಕೊಳ್ಳಲು ಆಡಳಿತವರ್ಗದ ಸಂರಚನೆಗೆ ಸಂಬಂಧಿಸಿದ ಕೆಲವೇ ಅಂಕಿ ಅಂಶಗಳನ್ನು ನೋಡಿದರೂ ಸಾಕು.

ಭಾರತದ ರಾಜಧಾನಿಯಿಂದ ಹಳ್ಳಿಹಳ್ಳಿಯತನಕ ಇಡೀ ಆಡಳಿತ ಯಂತ್ರದಲ್ಲಿ ಹಿಂದೂಗಳು ಜಾಗ ಹಿಡಿದುಕೊಂಡಿದ್ದಾರೆ. ಸರ್ವಾಂತರ್ಯಾಮಿ ಜಗನ್ನಿಯಾಮಕನಂತೆ ಆಡಳಿತದ ಎಲ್ಲ ರೆಂಬೆಕೊಂಬೆಗಳಲ್ಲಿ ಚಾಚಿಕೊಂಡು ಎಲ್ಲ ಸಂದಿಗೊಂದಿಗಳಲ್ಲೂ ತಮ್ಮ ಹತೋಟಿ ಸ್ಥಾಪಿಸಿಕೊಂಡಿದ್ದಾರೆ. ಹಳೆಯ ವ್ಯವಸ್ಥೆಯನ್ನು ವಿರೋಧಿಸುವವರು ಅಪ್ಪಿತಪ್ಪಿಯೂ ನುಸುಳಲು ಅಲ್ಲಿ ಸ್ಥಳವಿಲ್ಲದಂತಾಗಿದೆ. ಅದು ಯಾವುದೇ ಇಲಾಖೆಯಾಗಿರಲಿ – ಕಂದಾಯ ಇಲಾಖೆಯಿರಲಿ, ಪೊಲೀಸ್ ಇಲಾಖೆಯಿರಲಿ, ನ್ಯಾಯಾಂಗ ಇಲಾಖೆಯಿರಲಿ– ಅದರ ಚಾಲಕರು ಹಿಂದೂಗಳು. ಸ್ಥಾಪಿತ ವ್ಯವಸ್ಥೆ ಇನ್ನೂ ತನ್ನ ಅಸ್ತಿತ್ವವನ್ನು ಮುಂದುವರೆಸಿಕೊಂಡು ಹೋಗುತ್ತಿದ್ದರೆ ಅದಕ್ಕೆ ಕಾರಣ, ಸರ್ಕಾರದ ಹಿಂದೂ ಅಧಿಕಾರಿವರ್ಗ ಪೂರ್ವವ್ಯವಸ್ಥೆಗೆ ಕೊಡುತ್ತಿರುವ ತಪ್ಪದಂಥ ಬೆಂಬಲ. ಹಿಂದೂ ಅಧಿಕಾರಿಗಳು ಯಾವುದೇ ವಿಷಯವನ್ನು ಜಾರಿಗೆ ತರುವಾಗ ಆ ವಿಷಯದ ಯೋಗ್ಯತೆಯನ್ನಷ್ಟೇ ಯೋಚಿಸುವುದಿಲ್ಲ, ಆ ವಿಷಯ ಯಾವ ವರ್ಗಕ್ಕೆ ಸಂಬಂಧಿಸಿದ್ದೆಂಬುದರ ಮೇಲೆ ಒಂದು ಕಣ್ಣಿಟ್ಟುಕೊಂಡೇ ನೋಡುತ್ತಾರೆ. ಅವರ ಮೂಲ ನಂಬಿಕೆ ಎಲ್ಲರಿಗೂ ಸಮಾನವಾದ ನ್ಯಾಯ ಎಂಬುದಲ್ಲ. ಅವರ ಗುರಿ–ಸ್ಥಾಪಿತ ವ್ಯವಸ್ಥೆಗೆ ಸಂಬದ್ಧವಾದಂತಹ ನ್ಯಾಯ. ಇದು ಅನಿವಾರ್ಯ. ಏಕೆಂದರೆ ಅವರು ಸಮಾಜದ ಬೇರೆ ಬೇರೆ ವರ್ಗಗಳನ್ನು ಸ್ಥಾಪಿತ ವ್ಯವಸ್ಥೆಯು ಹೇಗೆ ನೋಡಬೇಕೆನ್ನುತ್ತದೆಯೋ ಆ ಧೋರಣೆಯನ್ನು ತಮ್ಮೊಂದಿಗೆ ಆಡಳಿತದೊಳಕ್ಕೆ ತಂದಿರುತ್ತಾರೆ. ಆಡಳಿತ ಕ್ಷೇತ್ರದಲ್ಲಿ ಅಸ್ಪೃಶ್ಯರ ಬಗ್ಗೆ ಸರ್ಕಾರಿ ಅಧಿಕಾರಿಗಳು ತೋರಿಸುವ ಧೋರಣೆಯನ್ನು ನೋಡಿದರೆ ಇದು ಚೆನ್ನಾಗಿ ತಿಳಿಯುತ್ತದೆ.

ಪ್ರತಿಯೊಬ್ಬ ಅಸ್ಪೃಶ್ಯನೂ ಸಾಕ್ಷಿಯಾಗಬಲ್ಲ. ಇಂಥ ಹಲವಾರು ನಿದರ್ಶನಗಳಿವೆ. ಒಂದು ವೇಳೆ ಒಬ್ಬ ಅಸ್ಪೃಶ್ಯ ಜಾತಿಯ ಹಿಂದೂ ವ್ಯಕ್ತಿಯೊಬ್ಬನ ಮೇಲೆ ಒಂದು ದೂರು ದಾಖಲಿಸಲು ಪೊಲೀಸ್ ಅಧಿಕಾರಿಯ ಬಳಿ ಹೋದರೆ, ಆತನಿಗೆ ರಕ್ಷಣೆ ದೊರೆಯುವ ಬದಲು, ಹೇರಳ ಬೈಗುಳ ಸಿಗುತ್ತದೆ. ಆತನ

ದೂರನ್ನು ದಾಖಲಿಸಿಕೊಳ್ಳದೆಯೇ ಆತನನ್ನು ಒದ್ದೋಡಿಸುತ್ತಾರೆ ಅಥವಾ ಒಮ್ಮೆ ದಾಖಲಿಸಿಕೊಂಡರೆ, ಸ್ಪೃಶ್ಯ ಆಕ್ರಮಣವಾದಿಗಳಿಗೆ ಬಚಾವಾಗಲು ಅವಕಾಶ ಸಿಗುವಂತೆ ತಪ್ಪಾಗಿ ದಾಖಲಿಸಿಕೊಳ್ಳುತ್ತಾರೆ. ಒಮ್ಮೆ ಆತ ತನ್ನ ಮೇಲೆ ಆಕ್ರಮಣ ನಡೆಸಿದವರನ್ನು ನ್ಯಾಯಾಲಯಕ್ಕೊಯ್ದರೆ ಆ ವ್ಯಾಜ್ಯದ ಗತಿ ಏನಾಗುತ್ತದೆಂದು ಮೊದಲೇ ಊಹಿಸಬಹುದು. ಅವರ ಪಕ್ಷ ಎಷ್ಟು ನ್ಯಾಯಯುತವಾಗಿದ್ದರೂ. ಅಸ್ಪೃಶ್ಯರನ್ನು ಬೆಂಬಲಿಸಬಾರದೆಂಬ ಹಳ್ಳಿಯ ಕುಟಿಲೋಪಾಯಗಳಿಂದ, ಅಸ್ಪೃಶ್ಯರಿಗೆ ಎಂದೂ ಹಿಂದೂಗಳು ಸಾಕ್ಷಿಯಾಗಿ ಬರುವುದಿಲ್ಲ. ಒಂದು ವೇಳೆ ಅವರು ಅಸ್ಪೃಶ್ಯ ಸಾಕ್ಷಿಗಳನ್ನು ತಂದರೆ ಅವರಿಗೆ ಈ ವ್ಯಾಜ್ಯದಲ್ಲಿ ಸ್ವಂತ ಆಸಕ್ತಿಯಿರುವುದರಿಂದ ಅವರು ಸ್ವತಂತ್ರ ಸಾಕ್ಷಿಗಳಲ್ಲ ಎಂಬ ಕಾರಣಕ್ಕಾಗಿ ನ್ಯಾಯಾಧೀಶ ಅವರ ಹೇಳಿಕೆಯನ್ನು ಸ್ವೀಕರಿಸುವುದಿಲ್ಲ. ಒಮ್ಮೆ ಸ್ವತಂತ್ರ ಸಾಕ್ಷಿಗಳು ಎಂದಾದಾಗಲೂ ಕೂಡಾ, ನ್ಯಾಯಾಧೀಶ ಈ ಅಸ್ಪೃಶ್ಯರ ಹೇಳಿಕೆಗಳು ತನಗೆ ಸತ್ಯವಾದ ಸಾಕ್ಷಿಗಳೆಂದೆನಿಸುವುದಿಲ್ಲ ಎಂದು ಸೀದಾ ಹೇಳಿ ಸುಲಭವಾಗಿ ಆರೋಪಿಗಳನ್ನು ದೋಷಮುಕ್ತರಾಗಿಸಿ ಬಿಡಬಹುದು. ನ್ಯಾಯಾಧೀಶ ಇದನ್ನು ಧೈರ್ಯವಾಗಿ ಮಾಡಬಹುದು. ಏಕೆಂದರೆ, ಅವನಿಗೆ ಚೆನ್ನಾಗಿ ಗೊತ್ತಿದೆ – ಮೇಲಿನ ನ್ಯಾಯಾಲಯ ಅವನ ತೀರ್ಪನ್ನು ರದ್ದುಗೊಳಿಸುವುದಿಲ್ಲ. ಕಾರಣ, ಸುಪ್ರಸಿದ್ಧವಾದ ನಿಯಮವೊಂದರಂತೆ ಕೆಳನ್ಯಾಯಾಲಯದ ನ್ಯಾಯಾಧೀಶನೊಬ್ಬ ಕೊಟ್ಟ ಸಾಕ್ಷ್ಯಗಳನ್ನಾಧರಿಸಿದ ತೀರ್ಪನ್ನು ಮೇಲ್ಮನವಿ ಸ್ವೀಕರಿಸುವ ನ್ಯಾಯಾಲಯ, ತನಗೆ ಸ್ವತಃ ಸಾಕ್ಷಿಗಳ ವರ್ತನೆಯನ್ನು ನೋಡುವ ಅವಕಾಶವಿಲ್ಲದಿರುವುದರಿಂದ ವ್ಯತ್ಯಸ್ತಗೊಳಿಸಬಾರದು – ಎಂಬುದಾಗಿದೆ.

ಅಂತಹ ಭೇದ ಪಕ್ಷಪಾತಗಳನ್ನು ತೋರಲಾಗುತ್ತಿದೆ ಎಂಬುದನ್ನು ಈಗ ಕಾಂಗ್ರೆಸ್ಸಿಗರೂ ಕೂಡಾ ಒಪ್ಪಿಕೊಳ್ಳತೊಡಗಿದ್ದಾರೆ. ತಮಿಳುನಾಡಿನ ಹರಿಜನ ಸೇವಕ ಸಂಘ ಸೆಪ್ಟೆಂಬರ್ ೩೦, ೧೯೩೭ಕ್ಕೆ ಮುಗಿಯುವ ವರ್ಷದ ತನ್ನ ವಾರ್ಷಿಕ ವರದಿಯಲ್ಲಿ ಹೀಗೆ ಹೇಳಿದೆ.[೧]

> "ತಮ್ಮ ಹಕ್ಕುಗಳ ಬಗ್ಗೆ ಎಚ್ಚೆತ್ತು ರಾಜಕೀಯ ಪ್ರಜ್ಞೆಯನ್ನು ಮೂಡಿಸಿಕೊಂಡಿರುವ ಮೂಲೆಯ ಕುಗ್ರಾಮಗಳ ಹರಿಜನರು, ಪೊಲೀಸು ಪೇದೆಯೇ ಅಲ್ಲಿಯ ಸಮಸ್ತ ಆಡಳಿತಗಾರನೂ ಆಗಿರುವಂಥ ಕುಗ್ರಾಮಗಳ ಹರಿಜನರು, ಯಾವತ್ತೂ ತಮ್ಮ ಹಕ್ಕುಗಳ ಬಗ್ಗೆ ಹೋರಾಡುವಂತಿಲ್ಲ. ಕಾರಣ, ಅವರು ತಮ್ಮ ಹಕ್ಕುಗಳನ್ನು ಸ್ಥಾಪಿಸ ಹೊರಟರೆ ಅದು ಅವರಿಗೂ ಮತ್ತು ಜಾತಿವಾದಿಗಳಿಗೂ ನಡುವಿನ ವ್ಯಾಜ್ಯಕ್ಕೆ ಎಡೆಮಾಡಿಕೊಡುತ್ತದೆ ಮತ್ತು ಅಂಥ ವ್ಯಾಜ್ಯಗಳಲ್ಲಿ ಸಾಧಾರಣವಾಗಿ ಜಾತಿವಾದಿಗಳ ಕೈಯೇ ಮೇಲಾಗುತ್ತದೆ. ಹೀಗಾದಾಗ ಸಹಜವಾಗಿ ಇಂಥ ಜಗಳಗಳು ಪೊಲೀಸರ ಬಳಿ ಅಥವಾ ನ್ಯಾಯಾಧೀಶರ ಬಳಿ ಹೋಗುತ್ತವೆ. ನ್ಯಾಯಾಧೀಶರ ಬಳಿ ಹೋಗುವುದು ಹರಿಜನರ ಕೈಮೀರಿದ ವಿಷಯ ಮತ್ತು ಪೊಲೀಸರ ಬಳಿ ಹೋದರೆ ಅದು ನಿರರ್ಥಕ ಎನ್ನುವುದಕ್ಕಿಂತ ಕೇಡೇ ಆಗುತ್ತದೆ. ಹಲವು ನಿದರ್ಶನಗಳಲ್ಲಿ, ದೂರಿನ ಬಗ್ಗೆ ವಿಚಾರಣೆಯನ್ನೇ ನಡೆಸುವುದಿಲ್ಲ ಮತ್ತು ಹಲವು ಬಾರಿ ಜಾತೀಯರಿಗೆ ಪರವಾದಂತಹ ತೀರ್ಮಾನಗಳನ್ನೇ ಕೊಡಲಾಗುತ್ತದೆ. ನಾವು ಪೊಲೀಸರಿಗೆ ನೀಡಿದ ದೂರಿಗೂ ಇದೇ ಗತಿ ಒದಗಿದೆ. ನಮಗನಿಸುವಂತೆ ಇಲ್ಲಿರುವ ಸಮಸ್ಯೆಯೆಂದರೆ ಕೆಳಸ್ತರದ ಪೋಲೀಸರ ಮನೋಭಾವದಲ್ಲಿ ಯಾವ ಬದಲಾವಣೆಯೂ ಆಗದಿರುವುದು. ಒಂದು, ಆತನಿಗೆ ಹರಿಜನರಿಗಿರುವ ಹಕ್ಕುಗಳ ಬಗ್ಗೆ ಹಾಗೂ ಅವರಿಗೆ ತಾನು ರಕ್ಷಣೆಯೊದಗಿಸಬೇಕೆಂಬ ಬಗ್ಗೆ ತಿಳಿದೇ ಇರುವುದಿಲ್ಲ ಅಥವಾ ಆತ ಜಾತೀಯ ಜನಗಳಿಂದ ಪ್ರಭಾವಿತನಾಗಿರುತ್ತಾನೆ ಅಥವಾ ಆತ

---

೧. ೭ನೆ ಮಾರ್ಚ್ ೧೯೩೮ರ 'ಹಿಂದೂ' ನೋಡಿ.

ಈ ವಿಷಯದಲ್ಲಿ ಸಂಪೂರ್ಣ ಅನಾಸಕ್ತಿ ತೋರಿಸುತ್ತಾನೆ ಎಂದೂ ಹೇಳಬಹುದು. ಇನ್ನೂ ಕೆಲವು ನಿದರ್ಶನಗಳಲ್ಲಿ, ಭ್ರಷ್ಟಾಚಾರದ ಕಾರಣದಿಂದಾಗಿ ಆತ ಶ್ರೀಮಂತ ಜಾತಿವಾದಿಗಳ ಪಕ್ಷ ವಹಿಸುತ್ತಾನೆ."

ಹಿಂದೂ ಅಧಿಕಾರಿ ಹೇಗೆ ಅಸ್ಪೃಶ್ಯ ವಿರೋಧಿ ಮತ್ತು ಹಿಂದೂಗಳ ಪರ ಎಂಬುದನ್ನು ಇದು ತೋರಿಸುತ್ತದೆ. ಯಾವುದೇ ವಿಷಯ ಅವನ ಅಧಿಕಾರ ಅಥವಾ ವಿವೇಚನೆಗೆ ಬಿಡಲ್ಪಟ್ಟರೆ ಆತ ಅದನ್ನು ಅಸ್ಪೃಶ್ಯ ವಿರೋಧಿ ಪಕ್ಷಪಾತದಿಂದಲೇ ನಿರ್ಧರಿಸುತ್ತಾನೆ.

ಪೋಲೀಸರು ಮತ್ತು ನ್ಯಾಯಾಧೀಶರು ಕೆಲವೊಮ್ಮೆ ಭ್ರಷ್ಟರಾಗಿರುತ್ತಾರೆ. ಅವರು ಭ್ರಷ್ಟರಷ್ಟೇ ಆಗಿದ್ದರೆ ಅಸ್ಪೃಶ್ಯರಿಗೆ ಅದೇನೂ ಕೆಡುಕಾಗುತ್ತಿರಲಿಲ್ಲ ಏಕೆಂದರೆ ಭ್ರಷ್ಟ ಅಧಿಕಾರಿಯನ್ನು ಯಾವ ಪಕ್ಷದವರೂ ಕೊಂಡುಕೊಳ್ಳಬಹುದು. ದುರ್ದೈವವೆಂದರೆ, ಪೋಲೀಸರು ಮತ್ತು ನ್ಯಾಯಾಧೀಶರು ಭ್ರಷ್ಟರಾಗಿರುವುದಕ್ಕಿಂತ ಹೆಚ್ಚು ಪಕ್ಷಪಾತಿಗಳಾಗಿರುತ್ತಾರೆ. ಅವರ ಈ ಹಿಂದೂ ಪಕ್ಷಪಾತ ಮತ್ತು ಅಸ್ಪೃಶ್ಯರ ಬಗ್ಗೆ ಅನುಕಂಪಹೀನತೆಗಳಿಂದಾಗಿ ಅಸ್ಪೃಶ್ಯರಿಗೆ ನ್ಯಾಯ ಮತ್ತು ರಕ್ಷಣೆಗಳೆರಡೂ ದೊರಕುವುದಿಲ್ಲ. ಒಬ್ಬನ ಬಗ್ಗೆ ಪಕ್ಷಪಾತ, ಇನ್ನೊಬ್ಬನ ಬಗ್ಗೆ ಅನುಕಂಪಹೀನತೆ – ಈ ರೋಗಕ್ಕೆ ಯಾವುದೇ ಮದ್ದಿಲ್ಲ. ಕಾರಣ, ಇದು ಸಾಮಾಜಿಕ ಮತ್ತು ಧಾರ್ಮಿಕ ದ್ವೇಷದಲ್ಲಿಯೇ ಕಾಣಿಸುತ್ತದೆ. ಈ ದ್ವೇಷ ಪ್ರತಿಯೊಬ್ಬ ಹಿಂದೂವಿಗೂ ಹುಟ್ಟಿನೊಂದಿಗೇ ಬಂದಿರುತ್ತದೆ. ಪೋಲೀಸರು ಮತ್ತು ನ್ಯಾಯಾಧೀಶರು, ತಮ್ಮ ಮೂಲೋದ್ದೇಶಗಳ ಕಾರಣದಿಂದ, ತಮ್ಮ ಆಸಕ್ತಿಯ ಕಾರಣದಿಂದ ತಮ್ಮ ವಂಶವಾಹಿಯ ಕಾರಣದಿಂದ ಅಸ್ಪೃಶ್ಯರ ಜೀವಶಕ್ತಿಯನ್ನು ಅನುಕಂಪದಿಂದ ಗುರುತಿಸದೇ ಹೋಗುತ್ತಾರೆ. ಅಸ್ಪೃಶ್ಯರನ್ನು ಪ್ರಚೋದಿಸುವ ಬಯಕೆಗಳು, ನೋವುಗಳು, ಹಂಬಲಗಳು ಮತ್ತು ಆಕಾಂಕ್ಷೆಗಳು ಅವರನ್ನು ಮುಟ್ಟುವುದೇ ಇಲ್ಲ. ಪರಿಣಾಮವಾಗಿ ಅವರು ಅಸ್ಪೃಶ್ಯರ ಎಲ್ಲ ಕನಸುಗಳಿಗೆ ನೇರವಾದ ವಿರೋಧಿಗಳೂ ಪ್ರತಿಕೂಲರೂ ಆಗುತ್ತಾರೆ. ಅಸ್ಪೃಶ್ಯರನ್ನವರು ಮುಂದುವರೆಯಲು ಬಿಡುವುದಿಲ್ಲ, ಅವರ ಬೇಡಿಕೆಗಳನ್ನು ಗಮನಿಸುವುದಿಲ್ಲ ಮತ್ತು ಯಾವುದೇ ವಿಷಯದಲ್ಲಿ ಅಸ್ಪೃಶ್ಯರ ಆತ್ಮಗೌರವ ಮತ್ತು ಹೆಗ್ಗಳಿಕೆಗಳ ವಾಸನೆ ಬಂದರೂ ತಟ್ಟನೆ ಅದನ್ನು ಹೊಸಕಿಹಾಕುತ್ತಾರೆ. ಇನ್ನೊಂದು ಕಡೆಯಿಂದ, ಅವರು ಹಿಂದೂ ಭಾವನೆಗಳನ್ನು ಹಂಚಿಕೊಂಡಿದ್ದಾರೆ. ಅಸ್ಪೃಶ್ಯರ ಎದುರು ಹಿಂದೂಗಳು ತಮ್ಮ ಶಕ್ತಿ, ಅಧಿಕಾರ, ಘನತೆ, ಗಾಂಭೀರ್ಯಗಳನ್ನು ಮುಂದುವರೆಸಿಕೊಂಡು ಹೋಗಲು ಇವರು ಸಹಾಯ ಮಾಡುತ್ತಾರೆ. ಈ ಎರಡು ವರ್ಗದ ನಡುವಣ ಯಾವುದೇ ವ್ಯಾಜ್ಯದಲ್ಲಿ ಇವರು ಹಿಂದೂಗಳ ದಲ್ಲಾಳಿಗಳೆಂಬಂತೆ ಕೆಲಸ ಮಾಡಿ ಅಸ್ಪೃಶ್ಯರ ಬಂಡಾಯವನ್ನು ಹತ್ತಿಕ್ಕುತ್ತಾರೆ ಮತ್ತು ಒಳಿತೋ ಕೆಡುಕೋ ಸಾಧ್ಯವಿರುವ ಎಲ್ಲ ಸಾಧನಗಳನ್ನು ಬಳಸಿ, 'ಅಸ್ಪೃಶ್ಯರಿಗೆ ಒಂದು ಪಾಠ ಕಲಿಸಬೇಕು, ಅವರನ್ನು ಅವರ ಸ್ಥಾನದಲ್ಲೇ ಇರುವಂತೆ ಮಾಡಬೇಕು' ಎಂದು ಹಿಂದೂ ದುಷ್ಟ ಕೂಟದಲ್ಲಿ ಕಣ್ಣಿಗೆ ಕಾಣುವಂತೆ ಯಾವುದೇ ನಾಚಿಕೆಯಿಲ್ಲದೆ ಶಾಮೀಲಾಗುತ್ತಾರೆ.

ಈ ಎಲ್ಲ ಅನ್ಯಾಯಗಳನ್ನೂ ದಂಡನೆಗಳನ್ನೂ ಕಾನೂನಿನ ಪರಿಧಿಯಲ್ಲೇ ನಡೆಸಬಹುದೆಂಬುದು ಎಲ್ಲಕ್ಕಿಂತ ಹೀನವಾದ ಸಂಗತಿ. ಒಬ್ಬ ಹಿಂದೂವು ಅಸ್ಪೃಶ್ಯನನ್ನು ತಾನು ಕೆಲಸಕ್ಕೆ ನೇಮಿಸಿಕೊಳ್ಳುವುದಿಲ್ಲ, ಅವನಿಗೆ ಏನನ್ನೂ ಮಾರುವುದಿಲ್ಲ. ಅವನನ್ನು ತನ್ನ ಭೂಮಿಯಿಂದ ಒಕ್ಕಲೆಬ್ಬಿಸುವುದಿಲ್ಲ, ಅವನ ಜಾನುವಾರುಗಳನ್ನು ತನ್ನ ಹೊಲದ ಮೂಲಕ ಹಾದುಹೋಗಲು ಬಿಡುವುದಿಲ್ಲ ಎನ್ನಬಹುದು–ಇಷ್ಟೆಲ್ಲ ಮಾಡಿಯೂ ಆತ ಕಾನೂನನ್ನು ಕಿಂಚಿತ್ತೂ ಮುರಿಯುವುದಿಲ್ಲ, ಆತ ತನ್ನ ಹಕ್ಕುಗಳನ್ನು ಅಭಿವ್ಯಕ್ತಿಸುತ್ತಾನೆ, ಅಷ್ಟೇ. ಈ ಕೆಲಸಗಳನ್ನು ಹಿಂದೂ ಯಾವ ಉದ್ದೇಶದಿಂದ ಮಾಡಿದ ಎಂಬ ಬಗ್ಗೆ ಕಾನೂನು ತಲೆಕೆಡಿಸಿಕೊಳ್ಳುವುದಿಲ್ಲ. ಇದರಿಂದ ಅಸ್ಪೃಶ್ಯನಿಗೆ ಆಗುವ ನೋವು ಎಂಥದು ಎಂಬ ಬಗ್ಗೆ ಕಾನೂನು

ಚಿಂತಿಸುವುದಿಲ್ಲ. ಪೊಲೀಸರೂ ಹಾಗೆಯೇ. ಅವರು ತಮ್ಮ ಅಧಿಕಾರದ, ಶಕ್ತಿಯ ದುರ್ಬಳಕೆ ಮಾಡಬಹುದು, ಹೇಳಿದ್ದನ್ನು ಬರೆದುಕೊಳ್ಳದೆ ಅಥವಾ ಹೇಳಿದ್ದಕ್ಕಿಂತ ಬೇರೆಯಾದದ್ದನ್ನು ಬರೆದುಕೊಂಡು ಉದ್ದೇಶಪೂರ್ವಕವಾಗಿ ಸುಳ್ಳು ದಾಖಲೆಗಳನ್ನು ಸೃಷ್ಟಿಸಬಹುದು, ತಮಗೆ ಬೇಕಾದ ಪಕ್ಷಕ್ಕೆ ಎದುರು ಸಾಕ್ಷಿಗಳ ಹೇಳಿಕೆಯನ್ನು ತೋರಿಸಬಹುದು, ಬಂಧಿಸಲು ನಿರಾಕರಿಸಬಹುದು – ಹೀಗೆ ನೂರಾರು ವಿಧಾನಗಳ ಮೂಲಕ ಆ ಮೊಕದ್ದಮೆಯನ್ನು ಹಾಳು ಮಾಡಬಹುದು. ಆದರೆ, ಇಷ್ಟು ಮಾಡಿಯೂ ಪೊಲೀಸರು ಸಿಕ್ಕಿಬೀಳದೇ ಇರಲು ಸಾಧ್ಯ. ಏಕೆಂದರೆ ಕಾನೂನಿನಲ್ಲಿ ಹಲವು ಒಳದಾರಿಗಳಿವೆ ಮತ್ತು ಅವೆಲ್ಲವೂ ಪೊಲೀಸರಿಗೆ ಗೊತ್ತಿವೆ. ನ್ಯಾಯಾಧೀಶ ಅವರ ಮೇಲೆ ಭಾರಿ ನಂಬಿಕೆಯನ್ನು ಇಟ್ಟಿದ್ದಾನೆ. ವಿವೇಚನೆಗೆ ಅವಕಾಶ ಕೊಟ್ಟಿದ್ದಾನೆ. ಅದನ್ನು ಬಳಸಿಕೊಳ್ಳಲು ಪೊಲೀಸರು ಸ್ವತಂತ್ರರು. ಒಂದು ಮೊಕದ್ದಮೆಯ ತೀರ್ಮಾನ ಆ ಮೊಕದ್ದಮೆಯಲ್ಲಿ ಸಾಕ್ಷಿ ಹೇಳಬಲ್ಲ ಸಾಕ್ಷಿಗಳ ಮೇಲೆ ನಿಂತಿರುತ್ತದೆ. ಆದರೆ ಜೊತೆಗೆ ಆ ಸಾಕ್ಷಿಗಳು ನಂಬಿಕೆಗೆ ಅರ್ಹರೋ ಅಲ್ಲವೋ ಎಂಬ ತೀರ್ಮಾನದ ಮೇಲೂ ಅವಲಂಬಿಸಿರುತ್ತದೆ. ನ್ಯಾಯಾಧೀಶ ಯಾವುದೇ ಪಕ್ಷವನ್ನು ನಂಬಬಹುದು, ಇನ್ನೊಂದನ್ನು ನಂಬದೇ ಹೋಗಬಹುದು. ಅಕಾರಣವಾಗಿ, ಸ್ವೇಚ್ಛೆಯಾಗಿ ಆತ ಹೀಗೆ ಒಂದು ಪಕ್ಷವನ್ನು ನಂಬಬಹುದು. ಆದರೆ ಅದನ್ನು ಯಾರೂ ಪ್ರಶ್ನಿಸುವಂತಿಲ್ಲ. ಅದು ನ್ಯಾಯಾಧೀಶರ ವಿವೇಚನೆ. ಅಸಂಖ್ಯ ಮೊಕದ್ದಮೆಗಳಲ್ಲಿ ನ್ಯಾಯಾಧೀಶರು ತಮ್ಮ ಈ ವಿವೇಚನೆಯ ಅಧಿಕಾರವನ್ನು ಅಸ್ಪೃಶ್ಯರ ವಿರುದ್ಧವಾಗಿ ಚಲಾಯಿಸಿದ್ದಾರೆ. ಅಸ್ಪೃಶ್ಯರ ಸಾಕ್ಷಿ ಎಷ್ಟೇ ಸತ್ಯವಾದದ್ದಾಗಿರಲಿ, ನ್ಯಾಯಾಧೀಶರು 'ನಾನು ಈ ಸಾಕ್ಷಿಯನ್ನು ನಂಬುವುದಿಲ್ಲ' ಎಂಬ ಒಂದೇ ಪರಿಚಿತ ಸಾಲಿನಲ್ಲಿ ನಿವಾರಿಸಬಹುದು ಹಾಗೂ ಯಾರಿಗೂ ಅದನ್ನು ಪ್ರಶ್ನಿಸುವ ಅಧಿಕಾರವಿಲ್ಲ. ಯಾವ ಶಿಕ್ಷೆ ನೀಡಬೇಕೆಂಬ ವಿಷಯದಲ್ಲೂ ಕೂಡಾ ನ್ಯಾಯಾಧೀಶರ ವಿವೇಚನೆಗೆ ಅವಕಾಶವಿರುತ್ತದೆ. ಕೆಲವು ಶಿಕ್ಷೆಗಳಿಗೆ ಮೇಲ್ಮನವಿ ಸಲ್ಲಿಸುವ ಅವಕಾಶವಿರುವುದಿಲ್ಲ. ಮೇಲ್ಮನವಿ ಮಾಡಿಕೊಳ್ಳುವುದು ಪರಿಹಾರ ಪಡೆಯುವ ಒಂದು ಮಾರ್ಗ. ಆದರೆ ನ್ಯಾಯಾಧೀಶರು ಮೇಲ್ಮನವಿಗೆ ಅವಕಾಶವಿಲ್ಲದ ಶಿಕ್ಷೆ ಕೊಡುವ ಮೂಲಕ ಈ ಮಾರ್ಗವನ್ನು ಮುಚ್ಚಿಬಿಡಬಹುದು.

ಸ್ಥಾಪಿತ ವ್ಯವಸ್ಥೆಯನ್ನು ಮುಂದುವರೆಸಿಕೊಂಡು ಹೋಗುವ ಪ್ರಯತ್ನದಲ್ಲಿ ಹಿಂದೂ ಸಮಾಜ ಎಷ್ಟು ಭಾಗಿಯೋ ಅಷ್ಟೇ ಹಿಂದೂ ಅಧಿಕಾರಿಯೂ ಭಾಗಿ. ಈ ಇಬ್ಬರೂ ಕೂಡಿ ಈ ಸ್ಥಾಪಿತ ವ್ಯವಸ್ಥೆಯನ್ನು ಅವಿಚ್ಛಿನ್ನವಾಗುವಂತೆ ಮಾಡಿಬಿಟ್ಟಿದ್ದಾರೆ.

* * * *

## ಅಧ್ಯಾಯ ೧೩

# ತಾರತಮ್ಯದ ಸಮಸ್ಯೆ

ಅಸ್ಪೃಶ್ಯರಿಗೆ ತಾವೂ ಮನುಷ್ಯರೆನ್ನಿಸಿಕೊಳ್ಳಬೇಕು ಎನ್ನುವುದರ ಅನಂತರ ಒದಗುವ ಅತಿ ಮುಖ್ಯ ಸಮಸ್ಯೆ, ಈ ಭೇದ ಪಕ್ಷಪಾತಗಳ ಸಮಸ್ಯೆ. ಅಸ್ಪೃಶ್ಯರ ವಿರುದ್ಧ ಹಿಂದೂಗಳು ತೋರಿಸುವ ಭೇದ ಪಕ್ಷಪಾತಗಳು ಯಾವ ಪ್ರಮಾಣದ ವ್ಯಾಪ್ತಿ ಹೊಂದಿವೆ ಎಂದರೆ, ಅದನ್ನು ಹೊರಗಿನವರು ಯಾರೇ ಆಗಲಿ ಕಲ್ಪಿಸಿಕೊಳ್ಳಲೂ ಸಾಧ್ಯವಾಗದು. ಅಸ್ಪೃಶ್ಯರು ಮತ್ತು ಹಿಂದೂಗಳು ಪರಸ್ಪರ ಎದುರಾಗುವ ಬದುಕಿನ ಯಾವುದೇ ಕ್ಷೇತ್ರದಲ್ಲೂ ಅಸ್ಪೃಶ್ಯರು ತಾರತಮ್ಯಕ್ಕೆ ಬಲಿಯಾಗದೆ ಉಳಿಯಲಾರರು. ಈ ಪಕ್ಷಪಾತ ವಿಷದ ಹಾಗೆ ಕಟುವಾದದ್ದು ಕೂಡ.

ಸಾಮಾಜಿಕ ಸಂಬಂಧಗಳ ವಿಷಯ ಹೇಳುವುದಾದರೆ – ಕುಣಿತ, ಸ್ನಾನ, ಊಟೋಪಚಾರ, ಕುಸ್ತಿ, ಪೂಜೆ ಮುಂತಾದ ಸಾಮೂಹಿಕ ಕೂಟಗಳಲ್ಲೆಲ್ಲ ಈ ಪಕ್ಷಪಾತ ಅಸ್ಪೃಶ್ಯರನ್ನು ಬಹಿಷ್ಕರಿಸುತ್ತದೆ. ಅಂದರೆ, ಸಾಮೂಹಿಕ ಸಮಾವೇಶಗಳ ಸಾಮಾನ್ಯ ವೃತ್ತಗಳಲ್ಲೆಲ್ಲ ಈ ಬಹಿಷ್ಕಾರ ಚಲಾವಣೆಯಲ್ಲಿರುತ್ತದೆ.

ಸಾರ್ವಜನಿಕ ಸೌಲಭ್ಯಗಳನ್ನು ಪಡೆದುಕೊಳ್ಳುವಲ್ಲಿಯೂ ಈ ಪಕ್ಷಪಾತವಿದ್ದು, ಶಾಲೆ, ಬಾವಿ, ದೇವಸ್ಥಾನ ಹಾಗೂ ಸಾರಿಗೆ ವಾಹನಗಳಲ್ಲಿ ಅಸ್ಪೃಶ್ಯರನ್ನು ಹೊರಗಿಡಲಾಗುತ್ತದೆ. ಸಾರ್ವಜನಿಕ ಆಡಳಿತವಂತೂ ಅಸ್ಪೃಶ್ಯರ ವಿರುದ್ಧವಾದ ಪಕ್ಷಪಾತ ಮನೋಭಾವದಲ್ಲಿ ಆಳವಾಗಿ ಅದ್ದಿಕೊಂಡಿದೆ. ನ್ಯಾಯಾಲಯಗಳು, ಸರ್ಕಾರಿ ಇಲಾಖೆಗಳು, ಸಹಕಾರಿ ಬ್ಯಾಂಕುಗಳು, ಎಲ್ಲಕ್ಕಿಂತ ಮುಖ್ಯವಾಗಿ ಪೋಲೀಸು ವ್ಯವಸ್ಥೆ – ಇವೆಲ್ಲ ಪಕ್ಷಪಾತಕ್ಕೆ ಎರವಾಗಿವೆ. ಭೂಮಿಯನ್ನೋ ಸಾಲವನ್ನೋ ಕೆಲಸವನ್ನೋ ಪಡೆದುಕೊಳ್ಳಬೇಕೆಂದರೆ ಅಂಥಲ್ಲಿ ಅಸ್ಪೃಶ್ಯರ ವಿರುದ್ಧವಾದ ಪಕ್ಷಪಾತ ಹೆಡೆಯೆತ್ತಿ ನಿಲ್ಲುತ್ತದೆ. ಸಾರ್ವಜನಿಕ ಸೇವೆಗಳಲ್ಲಂತೂ ಈ ಪಕ್ಷಪಾತ ತುಂಬ ಬಲವತ್ತರವಾಗಿದೆ. ಸಾರ್ವಜನಿಕ ಸೇವೆಗಳಲ್ಲಿ ಅಸ್ಪೃಶ್ಯರು ಪ್ರವೇಶಿಸಲು ಅಥವಾ ಬಡ್ತಿ ಪಡೆದುಕೊಳ್ಳಲು ತಡೆ ಹಾಕುವ ಕಾನೂನುಗಳಿಲ್ಲದಿದ್ದರೂ, ರೂಢಿಯಿಂದ ಸ್ಥಾಪಿತವಾಗಿ ನಿಂತಿರುವ ಸ್ಪಷ್ಟ ಕಟ್ಟಳೆಗಳಿವೆ. ಬಹಳಷ್ಟು ಸಲ ಸಾರ್ವಜನಿಕ ಸೇವೆಯಲ್ಲಿ ಅಸ್ಪೃಶ್ಯರಿಗೆ ಪ್ರವೇಶವೇ ಸಿಕ್ಕುವುದಿಲ್ಲ. ಇಡೀ ಇಲಾಖೆಗಳೇ ಅವರಿಗೆ ಬಾಗಿಲು ಮುಚ್ಚಿಕೊಂಡಿವೆ. ಬಟ್ಟೆ ಕಾರ್ಖಾನೆಗಳ ನೆಯ್ಗೆ ವಿಭಾಗ ಪೂರ್ಣ ಅಥವಾ ಸೈನ್ಯದ ಸಮಸ್ತ ವಿಭಾಗಗಳು ಅಸ್ಪೃಶ್ಯರಿಗೆ ಮನ್ನಾ ಆಗಿಬಿಟ್ಟಿವೆ. ಒಂದು ಪಕ್ಷ, ಅಸ್ಪೃಶ್ಯನೊಬ್ಬನಿಗೆ ಪ್ರವೇಶ ಸಿಕ್ಕುವಂಥಲ್ಲೂ ಆತ ನಿಶ್ಚಿತವಾದ ಒಂದು ಮಿತಿಯನ್ನು ದಾಟಿ ಮುಂದಕ್ಕೆ ಹೋಗುವಂತಿಲ್ಲ. ದಕ್ಷತೆ, ದೀರ್ಘ ಸೇವಾವಧಿ ಮುಂತಾದ ಅರ್ಹತೆಗಳಿದ್ದಾಗ್ಯೂ, ಹಿಂದೂಗಳ ಮೇಲೆ ಆಡಳಿತ ನಡೆಸಬಹುದಾದ ಯಾವುದೇ ಹುದ್ದೆಗೂ ಅಸ್ಪೃಶ್ಯರು ಏರತಕ್ಕದ್ದಲ್ಲ ಎಂಬ ಸಾಮಾನ್ಯ ಕಟ್ಟಳೆಯನ್ನು ಸದಾ ಪಾಲಿಸಲಾಗುತ್ತದೆ. ಇದರ ಪರಿಣಾಮವೆಂದರೆ, ಸಂಪೂರ್ಣ ಅಸ್ಪೃಶ್ಯರಿಂದಲೇ ತುಂಬಿಕೊಂಡಿರುವ ಇಲಾಖೆಯೊಂದನ್ನು ಬಿಟ್ಟು ಬೇರೆ ಇಲಾಖೆಗಳಲ್ಲಿ ಯಾವುದೇ ಮುಖ್ಯ ಹುದ್ದೆಗೂ ಅಸ್ಪೃಶ್ಯನಿಗೆ ಪ್ರವೇಶವಿರುವುದಿಲ್ಲ. ಇನ್ನೂ ಸ್ಪಷ್ಟವಾಗಿ ಹೇಳುವುದಾದರೆ, ಅಸ್ಪೃಶ್ಯರ ವಿರುದ್ಧ ಪಕ್ಷಪಾತವಿಲ್ಲದೆ ಉಳಿದಿರುವ ಒಂದೇ ಒಂದು ಕ್ಷೇತ್ರ – ಝಾಡಮಾಲಿ ಕ್ಷೇತ್ರ. ಈ ಕ್ಷೇತ್ರದಲ್ಲಿ ಪಕ್ಷಪಾತದ ಅಗತ್ಯವೇ ಇರುವುದಿಲ್ಲ. ಇಲ್ಲಿ ಕೂಡ, ಮೇಲುಮೇಲಿನ ಹುದ್ದೆಗಳಿಗೆ ಬಂದರೆ

ಪಕ್ಷಪಾತ ಕಾಲಿರಿಸುತ್ತದೆ. ಹೇಸಿಗೆಯ ಕೆಲಸಗಳನ್ನೆಲ್ಲ ಅಸ್ಪೃಶ್ಯರು ಮಾಡುತ್ತಾರೆ. ಹೆಚ್ಚಿನ ಸಂಬಳ ಸಿಗುವ ಹಾಗೂ ಹೇಸಿಗೆಯನ್ನು ನೇರ ಮುಟ್ಟಬೇಕಿಲ್ಲದ ಉಸ್ತುವಾರಿ ಹುದ್ದೆಗಳಿಗೆ ಹಿಂದೂಗಳ ನೇಮಕವಾಗುತ್ತದೆ. ಇಂಥ ಸನ್ನಿವೇಶದಲ್ಲಿ – ನಾಗರಿಕ ಹಕ್ಕು ಎಂದರೆ ಅಸ್ಪೃಶ್ಯರ ಹಕ್ಕು ಎಂದಾಗುವುದಿಲ್ಲ; ಜನರಿಗೋಸ್ಕರವಾಗಿರುವ ಜನರದ್ದೇ ಸರ್ಕಾರ ಎಂಬುದಕ್ಕೆ ಅಸ್ಪೃಶ್ಯರಿಗೋಸ್ಕರವಾಗಿ ಇರುವ ಸರ್ಕಾರ ಎಂಬ ಅರ್ಥ ಬರುವುದಿಲ್ಲ.; ಸರ್ವರಿಗೂ ಸಮಾನಾವಕಾಶ ಎಂದರೆ ಅಸ್ಪೃಶ್ಯರಿಗೆ ಸಮಾನಾವಕಾಶ ಎಂದಾಗುವುದಿಲ್ಲ ; ಸರ್ವರಿಗೂ ಸಮಾನ ಹಕ್ಕು ಎಂದರೆ ಅಸ್ಪೃಶ್ಯರಿಗೆ ಸಮಾನ ಹಕ್ಕು ಎಂದಲ್ಲ. ಇಡೀ ದೇಶದ ಮೂಲೆಮೂಲೆ ಬಿಡದೆ ಎಲ್ಲೆಲ್ಲೂ ಅಸ್ಪೃಶ್ಯನೆಂಬುವನು ಆತಂಕವನ್ನೆದುರಿಸುತ್ತಾನೆ, ಪಕ್ಷಪಾತಕ್ಕೆ ಸಿಕ್ಕು ನರಳುತ್ತಾನೆ. ಇಂಡಿಯಾದ ಈ ಅವಕಾಶಹೀನ ನಿರ್ಭಾಗ್ಯನಿಗೆ ಎಲ್ಲ ಕಡೆಯೂ ಅನ್ಯಾಯವೇ ಎದುರಾಗುತ್ತದೆ. ಸುತ್ತುಕೋಟಲೆಗಳ ನೆರೆಯಲ್ಲಿ ಮೈಮುರಿದು ಗೆಯ್ಯುವ ಅಸ್ಪೃಶ್ಯರಿಗೆ ಮಾತ್ರವೇ ಈ ಕಟುಸತ್ಯ ಅರಿವಾಗಲು ಸಾಧ್ಯ. ಪಕ್ಷಪಾತವೆನ್ನುವುದು ಅಸ್ಪೃಶ್ಯರ ಎದುರು ಕಟ್ಟಿ ನಿಲ್ಲಿಸಿರುವ ಕಲ್ಲಿನ ಕೋಟೆಯಾಗಿದೆ. ಅದನ್ನು ದಾಟಿ ಹೊರಕ್ಕೆ ಬರುವುದು ಅವರಿಗೆ ಅಸಾಧ್ಯವಾಗುತ್ತದೆ. ಇದರಿಂದ ಅಸ್ಪೃಶ್ಯರ ಬದುಕು ಭಯದ ಹುತ್ತವಾಗಿದೆ – ನಿರುದ್ಯೋಗದ ಭಯ, ಆಕ್ರಮಣದ ಭಯ, ದಂಡ ಶಿಕ್ಷೆಗಳ ಭಯ, ಸದಾ ಒಂದಲ್ಲ ಒಂದು ಭಯ, ಭರವಸೆಯೇ ಕಾಣದ ಅಭದ್ರತೆಯ ಬದುಕು ಅವರದು.

ಇನ್ನೊಂದು ಬಗೆಯ ಪಕ್ಷಪಾತವಿದೆ, ಸೂಕ್ಷ್ಮವಾದದ್ದು, ಆದರೆ ಅಷ್ಟೇ ನಿಜವಾದದ್ದು. ಅದೆಂದರೆ – ಸಮರ್ಥನಾದ ಅಸ್ಪೃಶ್ಯನಿದ್ದರೆ ಆತನ ಗೌರವ ಪ್ರತಿಷ್ಠೆಗಳನ್ನು ಕ್ರಮಬದ್ಧ ರೀತಿಯಲ್ಲಿ ಹಗುರಗೊಳಿಸಿ ಬಿಡುವಂಥದು. ಹಿಂದೂ ನಾಯಕನೊಬ್ಬನನ್ನು ಬಣ್ಣಿಸುವಾಗ, ಇಂಡಿಯಾದ ಮಹಾನಾಯಕ ಎಂದು ಬಣ್ಣಿಸುತ್ತಾರೆ, ಅವನು ಕಾಶ್ಮೀರಿ ಬ್ರಾಹ್ಮಣನಿದ್ದರೂ. ಕಾಶ್ಮೀರಿ ಬ್ರಾಹ್ಮಣರ ನಾಯಕ ಎನ್ನುವುದಿಲ್ಲ. ಅದೇ ಅಸ್ಪೃಶ್ಯನೊಬ್ಬ ನಾಯಕನಾಗಿದ್ದರೆ ಆತನನ್ನು ಅಸ್ಪೃಶ್ಯರ ನಾಯಕ ಎಂದು ಹೆಸರಿಸುತ್ತಾರೆ. ಒಬ್ಬ ಹಿಂದೂ ಡಾಕ್ಟರನ್ನು ಇಂಡಿಯಾದ ಶ್ರೇಷ್ಠ ಡಾಕ್ಟರ್ ಎಂದೇ ವರ್ಣಿಸುತ್ತಾರೆ. ಅವನು ಅಯ್ಯಂಗಾರ್ ಜಾತಿಯವನಾಗಿದ್ದರೂ ಅಯ್ಯಂಗಾರ್ ಜಾತಿಯ ಡಾಕ್ಟರ್ ಎನ್ನುವುದಿಲ್ಲ. ಅವನೇನಾದರೂ ಅಸ್ಪೃಶ್ಯನಾಗಿದ್ದರೆ ಮಾತ್ರ ಆತನನ್ನು ಅಸ್ಪೃಶ್ಯ ವರ್ಗದ ಡಾಕ್ಟರ್ ಎಂದು ಹೆಸರಿಸುತ್ತಾರೆ. ಹಿಂದೂ ಸಂಗೀತಗಾರನಿದ್ದರೆ ಆತನನ್ನು ಇಂಡಿಯಾದ ಶ್ರೇಷ್ಠ ಸಂಗೀತ ಕಲಾವಿದ ಎನ್ನುತ್ತಾರೆ. ಅವನೇ ಅಸ್ಪೃಶ್ಯನಾಗಿದ್ದರೆ ಅಸ್ಪೃಶ್ಯ ಸಂಗೀತಗಾರ ಎನ್ನುತ್ತಾರೆ. ಹಿಂದೂ ಪೈಲ್ವಾನನಿದ್ದರೆ ಅವನನ್ನು ಇಂಡಿಯಾದ ಉತ್ತಮ ಪೈಲ್ವಾನ್ ಎನ್ನುತ್ತಾರೆ. ಅದೇ ಅಸ್ಪೃಶ್ಯನಿದ್ದರೆ ಆತನನ್ನು ಅಸ್ಪೃಶ್ಯರ ಪೈಲ್ವಾನ್ ಎಂದೇ ಹೆಸರಿಸುತ್ತಾರೆ.

ಈ ಬಗೆಯ ಪಕ್ಷಪಾತದ ಮೂಲ ಹಿಂದೂಗಳ ದೃಷ್ಟಿಯಲ್ಲೇ ಇರುವಂಥದು. ಅಸ್ಪೃಶ್ಯರು ಮೂಲತಃ ಕೆಳವರ್ಗದ ಜನರು; ಅವರಲ್ಲಿ ಶ್ರೇಷ್ಠರೆಂದರೆ ಅಸ್ಪೃಶ್ಯ ವರ್ಗದಲ್ಲಿ ಶ್ರೇಷ್ಠರಾದವರು ಎಂದು ಮಾತ್ರವೇ ಭಾವಿಸತಕ್ಕದ್ದು – ಎನ್ನುವುದು ಅವರ ನಂಬಿಕೆ. ಅದರಂತೆ, ಅಸ್ಪೃಶ್ಯರು ಎಷ್ಟೇ ಉತ್ತಮರಾದರೂ ಹಿಂದೂಗಳಿಗಿಂತ ಉತ್ತಮರಾಗಲಾರರು, ಮಾತ್ರವಲ್ಲ, ಯಾವತ್ತೂ ಅವರಿಗೆ ಸಮಾನರೂ ಆಗಲಾರರು. ಈ ಬಗೆಯ ಪಕ್ಷಪಾತ ಸಾಮಾಜಿಕ ಸ್ವರೂಪದ್ದಾಗಿದ್ದರೂ ಇದು ಕ್ರೌರ್ಯ ಕಟುತ್ವಗಳಲ್ಲಿ ಆರ್ಥಿಕ ಭೇದ ಪಕ್ಷಪಾತಗಳಿಗಿಂತ ಕಿಂಚಿತ್ತೂ ಕಡಿಮೆಯಾದದ್ದಲ್ಲ.

ತಾರತಮ್ಯವೆನ್ನುವುದು ಸ್ವಾತಂತ್ರ್ಯವಿಹೀನತೆಗೆ ಇನ್ನೊಂದು ಹೆಸರು, ಅಷ್ಟೇ. ಮಿ. ಟಾನೆ ಹೀಗೆ ಹೇಳುತ್ತಾನೆ[೧] :

೧. *'ವಿ ಮೀನ್ ಫ್ರೀಡಮ್ ಇನ್ ವಾಟ್ ಲೇಬರ್ ಕೆನ್ ಡು'?* – ಪು. ೮೩–೮೫

"ಯಾವುದೇ ಒಂದು ಕಾಲ ಮತ್ತು ದೇಶದ ವಾಸ್ತವಕ್ಕೆ ಸಂಬಂಧಿಸದಿರುವ ಕೇವಲವಾದ ಸ್ವಾತಂತ್ರ್ಯ ಮಾರುಕಟ್ಟೆಯಲ್ಲಿ ಸಿಕ್ಕದು. ಸ್ವಾತಂತ್ರ್ಯವೆನ್ನುವುದು ಮತ್ತೇನನ್ನೇ ಸೂಚಿಸಲಿ ಬಿಡಲಿ, ಹಲವರಲ್ಲಿ ಬೇಕಾದದ್ದನ್ನು ಆಯ್ಕೆ ಮಾಡಿಕೊಳ್ಳುವ ಅಧಿಕಾರವನ್ನಂತೂ ನಿಶ್ಚಿತವಾಗಿ ಸೂಚಿಸುತ್ತದೆ. ಆಯ್ಕೆಯೆಂದರೆ ನಿಜವಾದ ಆಯ್ಕೆ, ನಾಮಮಾತ್ರವಾದದ್ದಲ್ಲ. ಅಂದರೆ, ವಾಸ್ತವವಾಗಿಯೂ ಹಲವಾರು ವಸ್ತುಗಳು ಎದುರಿನಲ್ಲಿದ್ದು ಅವುಗಳಲ್ಲಿ ತನಗೆ ಬೇಕಾದದ್ದನ್ನು ಆಯ್ಕೆ ಮಾಡಿಕೊಳ್ಳಬಹುದಾದ ನಿಜವಾದ ಅಧಿಕಾರ. ಕಾಗದದಲ್ಲಷ್ಟೇ ನಮೂದಾಗಿರುವ ಅಮೂರ್ತ ಅಧಿಕಾರವಲ್ಲ. ಸಂಕ್ಷಿಪ್ತವಾಗಿ ಹೇಳುವುದಾದರೆ ಸ್ವಾತಂತ್ರ್ಯದ ಅರ್ಥ ನಿಶ್ಚಿತ ಸಂದರ್ಭದ ನಿಶ್ಚಿತ ಕ್ಷಣದಲ್ಲಿ ನಿಶ್ಚಿತವಾದ ಯಾವುದೋ ಒಂದನ್ನು ಮಾಡಲು ಅಥವಾ ಮಾಡದೇ ಇರಲು ನಮಗೆ ಅಧಿಕಾರವಿರುವುದು. ಹಾಗಿಲ್ಲದಿದ್ದಲ್ಲಿ ಸ್ವಾತಂತ್ರ್ಯ ಎಂಬುದಕ್ಕೆ ಅರ್ಥವೇ ಇಲ್ಲ. ಚಿಂತನೆ, ಸಂಕಲ್ಪ, ಕ್ರಿಯೆ ಇವುಗಳಿದ್ದಲ್ಲಿ ಮನುಷ್ಯ ಪೂರ್ಣ ಮನುಷ್ಯನಾಗುತ್ತಾನೆ ಎನ್ನುತ್ತಾರೆ. ಹಾಗೆಂದುಕೊಂಡು ಕವಿಗಳು ಲೇಖಿಸುವ ಚಿತ್ರ ರೇಖೆಗಳು ಮೋಹಕವೆನ್ನಿಸುತ್ತವೆ. ಅದೇನೇ ಇರಲಿ, ಕಾವ್ಯ ಬಿಟ್ಟು ದಿನನಿತ್ಯದ ಬದುಕಿನ ಗದ್ಯದಲ್ಲಿ, ಸ್ವಾತಂತ್ರ್ಯವೆನ್ನುವುದು ಬದುಕಿನ ಒಂದು ಅಂಗ, ವಾಸ್ತವವಾದದ್ದು ಮತ್ತು ಕ್ರಿಯಾ ರೂಪವುಳ್ಳದ್ದು. ಪ್ರತಿಯೊಬ್ಬ ವ್ಯಕ್ತಿಗೂ ಕೆಲವು ನಿಶ್ಚಿತವಾದ ಅಗತ್ಯಗಳಿವೆ. ಬದುಕಿರಲು ಬೇಕಾದ ಭೌತಿಕ ವಸ್ತು ಸರಕುಗಳಿಂದ ಮೊದಲುಗೊಂಡು ಮಾತು ಬರವಣಿಗೆಗಳ ಮೂಲಕ ತನ್ನನ್ನು ಅಭಿವ್ಯಕ್ತಗೊಳಿಸಿಕೊಳ್ಳುವ ಅಗತ್ಯದ ತನಕ, ಸಾರ್ವತ್ರಿಕ ಆಸಕ್ತಿಯ ವ್ಯವಹಾರಗಳಲ್ಲಿ ತಾನೂ ಪಾಲುಗೊಳ್ಳಬೇಕೆಂಬ ಅಗತ್ಯದತನಕ, ತನ್ನದೇ ರೀತಿಯಲ್ಲಿ ತನ್ನ ದೇವರನ್ನು ಪೂಜಿಸುವ ಅಥವಾ ಪೂಜಿಸುವುದಿಲ್ಲ ಎಂದು ನಿಷೇಧಿಸುವ ಅಗತ್ಯದ ತನಕ. ವ್ಯಕ್ತಿಯ ಸ್ವಾಸ್ಥ್ಯ ಉಳಿಸಿಕೊಳ್ಳಲಿಕ್ಕೆ ಈ ಅಗತ್ಯಗಳನ್ನು ಪೂರೈಸಿಕೊಳ್ಳಬೇಕಾಗುತ್ತದೆ. ಸಂಕ್ಷೇಪದಲ್ಲಿ ಸಾರಾಂಶ ಹೇಳುವುದಾದರೆ – ಒಬ್ಬ ವ್ಯಕ್ತಿಯ ಸ್ವಾತಂತ್ರ್ಯವೆಂಬುದು, ನಿಸರ್ಗದ ಮಿತಿಯಲ್ಲಿ ಮತ್ತು ತನ್ನ ಹಾಗೇ ಬದುಕುವ ಇತರ ಸಹವಾಸಿಗಳಿಗೂ ಇಂಥ ಫಲಾನುಭವ ಸಿಗಬೇಕಾಗುವ ಮಿತಿಯಲ್ಲಿ, ತನ್ನ ಭೌತಿಕ ಹಾಗೂ ಭೌತಿಕೇತರ ಅಗತ್ಯಗಳನ್ನು ಪೂರೈಸಿಕೊಳ್ಳಲಿಕ್ಕೆ ಸಿಗುವ ಅಧಿಕಾರ."

ಈಗಾಗಲೇ ಇರುವ ಪಟ್ಟಿಗೆ ಇನ್ನೂ ಕೆಲವು ಸಂಗತಿಗಳನ್ನು ಸೇರಿಸಿ ಬೆಳೆಸಬೇಕೆನ್ನುವುದು ನನ್ನ ಇರಾದೆಯಲ್ಲ. ಆದರೆ ಎಲ್ಲಕ್ಕೂ ಅನ್ವಯವಾಗುವ ಎರಡು ಅಂಶಗಳನ್ನು ಪ್ರಸ್ತಾಪಿಸುತ್ತೇನೆ. ಮೊದಲನೆಯದಾಗಿ – ಹಕ್ಕು ಎನ್ನುವುದು ನಿಜವಾಗಿಯೂ ಸ್ವಾತಂತ್ರ್ಯವೆನ್ನಿಸಿಕೊಳ್ಳಬೇಕಾದರೆ, ಅದು ಬರೀ ನಮೂದಿನಲ್ಲಿದ್ದರೆ ಸಾಲದು. ರಿಟ್ಸ್ ಹೋಟೆಲ್‌ನ ಔತಣಕೂಟದಲ್ಲಿ ಭಾಗವಹಿಸಲು ಎಲ್ಲರಿಗೂ ಹಕ್ಕಿದೆ ಎಂದರೆ ಏನು ಬಂತು? ಇರುವ ಹಕ್ಕನ್ನು ಚಲಾಯಿಸುವ ಅಗತ್ಯ ಬಂದಾಗ ಚಲಾಯಿಸಲು ಸಾಧ್ಯವೂ ಆಗುವಂತಿರಬೇಕು – ಅದು ಸ್ವಾತಂತ್ರ್ಯ. ನಿಮಗೆ ಮತ ನೀಡುವ, ಮತ ಸಂಘಟಿಸುವ ಅಧಿಕಾರವಿದೆ. ಅದನ್ನು ಚಲಾಯಿಸುವುದರಿಂದ ಊರಿನ ಹೊರಗೆ ಗಡೀಪಾರಾಗುವುದೋ ಅಥವಾ ನಿರ್ನಾಮವಾಗಿ ಹೋಗುವುದೋ ಫಲವಾಗುವಂತಿದ್ದರೆ – ಅಂಥ ಅಧಿಕಾರ ನಿಷ್ಫಲ ಎನ್ನದಿದ್ದರೂ ದುರ್ಬಲ ಎಂದು ಹೇಳಬೇಕು. ಯಾವುದೊಂದು ವೃತ್ತಿಯನ್ನು ಪ್ರವೇಶಿಸಲು ತಗಲುವ ವೆಚ್ಚವೇ ಭರಿಸಲು ಅಸಾಧ್ಯವಾಗಿರುವಾಗ, ವೃತ್ತಿಯ ಆಯ್ಕೆಯಲ್ಲಿ ಸ್ವಾತಂತ್ರ್ಯವಿದೆ ಎಂದರೆ ಏನು ಪ್ರಯೋಜನ? ನ್ಯಾಯ ಪಡೆಯಲು ತೆರಬೇಕಾದ ಶುಲ್ಕ ಬಡವನ ಕೈಗೆ ಎಟುಕಲಾರದಷ್ಟಿರುವಾಗ, ಎಲ್ಲರಿಗೂ ನ್ಯಾಯ ಪಡೆದುಕೊಳ್ಳುವ ಅಧಿಕಾರವಿದೆ ಎಂದರೆ ಏನು ಬಂತು? ಹುಟ್ಟಿದ ಶಿಶುಗಳಲ್ಲಿ ಬಹುಪಾಲು ಹನ್ನೆರಡು ತಿಂಗಳೊಳಗೇ ನಿಶ್ಚಿತ ಸಾಯುತ್ತವೆ ಎನ್ನುವಂಥ ಸ್ಥಿತಿಯಲ್ಲಿ, ಸುಖ ಸಾಧನೆಯ ಸ್ವಾತಂತ್ರ್ಯವಿದ್ದು ಪ್ರಯೋಜನವೇನು? ಎರಡನೆಯದಾಗಿ – ಸ್ವಾತಂತ್ರ್ಯಕ್ಕೆ ಅಗತ್ಯವಾದ ಅಧಿಕಾರ ಎಲ್ಲರಿಗೂ ಎಟುಕುವಂತಿರಬೇಕು. ಅಲ್ಪ ಸಂಖ್ಯಾತವಾದ ಒಂದು ವರ್ಗಕ್ಕೆ ಮಾತ್ರ ಸಿಗುವಂತಿದ್ದರೆ ಸಾಲದು. ಒಬ್ಬ

ಸಾಧು ಹೇಳಿರುವುದು ನೆನಪಾಗುತ್ತದೆ – ಶೇಕಡಾ ಐದು ಮಂದಿ ವಿವಾಹಿತರಾಗಿ ಉಳಿದವರು ಗಂಡ ಹೆಂಡತಿಯೆಂಬ ಸಂಬಂಧವನ್ನೇ ಕಾಣದೆ ಹೇಗೋ ಜೀವಿತ ಸವೆಸುತ್ತಿರುವ ಒಂದು ಪ್ರದೇಶದಲ್ಲಿ, ವಿವಾಹವೆನ್ನುವುದು ಇಲ್ಲಿನ ಲೋಕಪದ್ಧತಿ ಎನ್ನಲು ಬಂದೀತೆ – ಎಂದು ಆ ಸಾಧು ಪ್ರಶ್ನಿಸಿದ್ದಾನೆ. ಈ ಮಾತು ಸ್ವಾತಂತ್ರ್ಯಕ್ಕೂ ಅನ್ವಯಿಸುತ್ತದೆ. ಒಂದು ಸಮಾಜದಲ್ಲಿ ಕೆಲವೇ ಗುಂಪುಗಳು ತಮಗೆ ಬೇಕೆನ್ನಿಸುವುದರಲ್ಲಿ ಬಹಳಷ್ಟನ್ನು ಪಡೆದುಕೊಳ್ಳಬಲ್ಲರು ಮತ್ತು ಇನ್ನುಳಿದವರು ತೀರಾ ಬೇಕಾದದ್ದನ್ನೂ ಗಳಿಸಿಕೊಳ್ಳಲಾರರು – ಎನ್ನುವಂತಿದ್ದರೆ, ಅಂಥ ಸಮಾಜದಲ್ಲಿ ತನ್ನದೇ ಆದ ವಿಶಿಷ್ಟ ಗುಣಗಳಿರಬಹುದು, ಸ್ವಾತಂತ್ರ್ಯ ಎನ್ನುವ ವಸ್ತು ಮಾತ್ರ ಖಂಡಿತ ಇಲ್ಲ ಎಂದು ಒಪ್ಪಿಕೊಳ್ಳಬೇಕು. ಯಾವ ಸಮಾಜದಲ್ಲಿ ಅದರ ಎಲ್ಲ ಘಟಕಗಳೂ ಕೇವಲ ತಾತ್ತ್ವಿಕವಾಗಿ ಮಾತ್ರವಲ್ಲದೆ ವಾಸ್ತವಿಕವಾಗಿಯೂ ತಮ್ಮ ತಮ್ಮ ಶಕ್ತಿಯ ಸಂಪೂರ್ಣ ವಿನಿಯೋಗಕ್ಕೆ ಅವಕಾಶ ಪಡೆದುಕೊಂಡಿರುತ್ತವೋ, ತಮ್ಮ ಸಾಧ್ಯತೆಯ ಎತ್ತರಕ್ಕೆ ಬೆಳೆಯಲು ಮುಕ್ತ ಅವಕಾಶ ಪಡೆದಿರುತ್ತವೋ, ತಮ್ಮ ಕರ್ತವ್ಯ ಎನ್ನಿಸುವುದನ್ನು ನೆರವೇರಿಸಲು ಮತ್ತು ತಮ್ಮ ಆಸೆಗಳನ್ನು ಪೂರೈಸಿಕೊಳ್ಳಲು ಶಕ್ತಿ ಹೊಂದಿರುತ್ತವೋ – ಅಂಥ ಸ್ಥಿತಿಯನ್ನು ಸ್ವಾತಂತ್ರ್ಯ ಎನ್ನಬಹುದು. ಸ್ವಾತಂತ್ರ್ಯವೆಂಬುದು ಅಷ್ಟೆಲ್ಲ ಕಠಿಣವಾಗಿರಬೇಕಿಲ್ಲ. ಮನುಷ್ಯಯೋಗ್ಯವಾದ ಬದುಕನ್ನು ಬಾಳುವ ಅವಕಾಶ ಒಂದು ಅಲ್ಪಸಂಖ್ಯಾತ ವರ್ಗಕ್ಕೆ ಮಾತ್ರವೇ ಸೀಮಿತವಾಗಿರುವ ಪರಿಸ್ಥಿತಿಯಲ್ಲಿ ಯಾವುದನ್ನು ನಾವು ಸ್ವಾತಂತ್ರ್ಯವೆಂದು ಹೊಗಳುತ್ತೇವೋ ಅದು 'ಅವಕಾಶ ಗೌರವ' ವಾಗಿರುತ್ತದೆ, 'ಸ್ವಾತಂತ್ರ್ಯ'ವಾಗಿರುವುದಿಲ್ಲ.

ಅಸ್ಪೃಶ್ಯರ ವಿರುದ್ಧ ವ್ಯಕ್ತವಾಗುವ ಭೇದ ಪಕ್ಷಪಾತಗಳು ಅತ್ಯಂತ ಆಳವೂ ಪ್ರಬಲವೂ ಆದ ಹಿಂದೂ ಮನೋಧರ್ಮದ ಪ್ರತಿಬಿಂಬ ಎನ್ನಬಹುದು. ಈ ಮನೋಧರ್ಮ ನ್ಯಾಯ, ಆಡಳಿತ ಮುಂತಾದ ಕ್ಷೇತ್ರಗಳನ್ನು ಆಕ್ರಮಿಸಿಕೊಂಡು ಹಿಂದೂಗಳಿಗೆ ಅನುಕೂಲವನ್ನೂ ಅಸ್ಪೃಶ್ಯರಿಗೆ ಕಂಟಕವನ್ನೂ ಸೃಷ್ಟಿಸಿಕೊಡುತ್ತಿದೆ. ಮತ್ತು ಹಿಂದೂಗಳಿಗಿರುವ ಒಂದು ದೊಡ್ಡ ಭಯವೇ ಈ ಪಕ್ಷಪಾತಕ್ಕೆ ಮೂಲವಾಗಿದೆ. ನಿಷ್ಪಕ್ಷಪಾತ ವಾತಾವರಣದಲ್ಲಿ ಅಸ್ಪೃಶ್ಯರು ತಮಗೆ ನಿಗದಿಪಡಿಸಿದ ಮಿತಿಯನ್ನು ಮೀರಿ ಬೆಳೆದು ಹಿಂದೂ ಸಮಾಜ ವ್ಯವಸ್ಥೆಗೆ ಆತಂಕ ತಂದುಬಿಡಬಹುದು ಎನ್ನುವ ಭಯ. ಅಸ್ಪೃಶ್ಯರ ಎದುರು ಹಿಂದೂಗಳು ಯಾವತ್ತೂ ಶ್ರೇಷ್ಠರಾಗಿಯೇ ಉಳಿಯಬೇಕು. ಅವರನ್ನು ತಮ್ಮ ಪ್ರಭುತ್ವದ ಅಡಿಯಲ್ಲಿ ಇಟ್ಟುಕೊಳ್ಳಬೇಕು ಎನ್ನುವುದು ಹಿಂದೂ ಸಮಾಜ ವ್ಯವಸ್ಥೆಯ ಉದ್ದೇಶ. ಆದ್ದರಿಂದ ಯಾವತ್ತಿನ ತನಕ ಹಿಂದೂ ಸಮಾಜವ್ಯವಸ್ಥೆ ಬಾಳಿಕೊಂಡಿರುತ್ತದೋ ಅಲ್ಲಿಯತನಕ ಅಸ್ಪೃಶ್ಯರ ಬಗ್ಗೆ ಭೇದಪಕ್ಷಪಾತಗಳು ಬಾಳಿಕೊಂಡೇ ಇರುತ್ತವೆ.

## ಅಧ್ಯಾಯ ೧೪

# ಪ್ರತ್ಯೇಕತೆಯ ಸಮಸ್ಯೆ

ಅಸ್ಪೃಶ್ಯರ ಚಳವಳಿ ಯಾಕೆ ಗೆಲ್ಲಲಿಲ್ಲ? ಅವರಿಗೆ ಜೊತೆಗಾರರು, ಮಿತ್ರವರ್ಗ ಇಲ್ಲವೇ? ಇದ್ದರೆ ಆ ಸಹಚರವರ್ಗಗಳು ಯಾಕೆ ಅಸ್ಪೃಶ್ಯರನ್ನು ಬೆಂಬಲಿಸಿ ಸಹಾಯ ನೀಡುವುದಿಲ್ಲ? ಇದು ಸೂಕ್ಷ್ಮವಾದ ಪ್ರಶ್ನೆ. ಸರಿಯಾದ ರೀತಿಯಲ್ಲಿ ಇದನ್ನು ಗ್ರಹಿಸಿ ಅರ್ಥಮಾಡಿಕೊಳ್ಳಬೇಕು. ಈ ಪ್ರಶ್ನೆಯನ್ನು ಉತ್ತರಿಸುವುದಕ್ಕೆ, ಹಿಂದೂ ಸಾಮಾಜಿಕ ಸಂಘಟನೆ ಹಾಗೂ ಅದು ಒಳಗೊಂಡಿರುವ ವರ್ಗಗಳು – ಇವುಗಳ ಬಗ್ಗೆ ಅತಿ ಸ್ಪಷ್ಟವಾದ ತಿಳಿವು ಅಗತ್ಯ.

ಹಿಂದೂ ಸಮಾಜದ ಸಂರಚನೆ ತುಂಬ ಸಂಕೀರ್ಣವಾದದ್ದು. ಅದರೊಳಕ್ಕೆ ಸ್ವತಃ ನೆಯ್ದುಕೊಂಡಿರುವ ಒಬ್ಬ ವ್ಯಕ್ತಿಗಲ್ಲದೆ ಬೇರೆಯವರಿಗೆ ಇದರ ವಿನ್ಯಾಸಕ್ರಮವನ್ನು ಅರಿತುಕೊಳ್ಳುವುದೂ ಕಷ್ಟವೇ. ಅದನ್ನು ರೇಖಾಚಿತ್ರದ ರೂಪದಲ್ಲಿ ಕಾಣಿಸಿದರೆ, ಪ್ರಾಯಶಃ ಗ್ರಹಿಸಲು ಸುಲಭವಾದೀತು. ಹಿಂದೂಗಳ ಸಾಮಾಜಿಕ ಸಂರಚನೆಯನ್ನು ತಿಳಿಯಲು ಸಹಾಯಕ ಎಂದು ನನಗೆ ತೋರುವಂಥ ರೇಖಾನಕ್ಷೆಯನ್ನು ಕೆಳಗೆ ಕೊಡುತ್ತೇನೆ :

**ಹಿಂದೂಗಳು**

| ಜಾತಿ ಹಿಂದೂಗಳು (ಸವರ್ಣ ಹಿಂದೂ) | | ಜಾತಿಹೀನ ಹಿಂದೂಗಳು (ಅವರ್ಣ ಹಿಂದೂ) | |
|---|---|---|---|
| ಮೊದಲನೆ ವರ್ಗ | ಎರಡನೆ ವರ್ಗ | ಮೂರನೆ ವರ್ಗ | ನಾಲ್ಕನೆ ವರ್ಗ |
| ಮೇಲುಜಾತಿ : ದ್ವಿಜರು, ತ್ರೈವರ್ಣಿಕರು – ಬ್ರಾಹ್ಮಣ, ಕ್ಷತ್ರಿಯ ವೈಶ್ಯ ಎಂಬ ಮೂರು ವರ್ಣಗಳಿಂದ ಉಂಟಾದ ಜಾತಿಗಳು | ಕೆಳಜಾತಿ ೪ನೆ ವರ್ಣವಾದ ಶೂದ್ರರಿಂದ ಉಂಟಾದ ಜಾತಿಗಳು. | ೧. ಆದಿಮ ಬುಡಕಟ್ಟುಗಳು<br>೨. ಅಪರಾಧಿ ಬುಡಕಟ್ಟುಗಳು | ಅಸ್ಪೃಶ್ಯರು |

ಹಿಂದೂಗಳಲ್ಲಿ ಅಸಂಖ್ಯ ಜಾತಿಗಳಿದ್ದಾಗ್ಯೂ ಅವೆಲ್ಲವನ್ನೂ ನಾಲ್ಕು ವರ್ಗಗಳಲ್ಲಿ ವಿಂಗಡಿಸಬಹುದು – ಮೇಲಿನ ನಕ್ಷೆಯಲ್ಲಿ ಕಾಣಿಸಿದ ಹಾಗೆ. ಈ ನಾಲ್ಕರಲ್ಲಿ ಮೊದಲನೇ ವರ್ಗವೇ ಆಳುವ ಪ್ರಭುವರ್ಗ ಮತ್ತು ಮೂರು ನಾಲ್ಕನೆಯ ವರ್ಗಗಳು ಅಧೀನ ವರ್ಗಗಳು.

ಈ ವರ್ಗಗಳಲ್ಲಿ ಯಾವ ವರ್ಗ ಅಸ್ಪೃಶ್ಯರಿಗೆ ಸಹಜವಾಗಿಯೇ ಮಿತ್ರ ಪಕ್ಷವಾಗಬಲ್ಲುದು ಎಂಬುದನ್ನು ಗಮನಿಸೋಣ.

ಮೊದಲನೆಯ ವರ್ಗದಲ್ಲಿರುವ ಜಾತಿಗಳು ಹಿಂದೂ ಸಮಾಜದ ಪಟ್ಟಭದ್ರ ಜಾತಿಗಳು. ಹಿಂದೂ ಸಮಾಜ ವ್ಯವಸ್ಥೆ ರಚನೆಯಾದದ್ದೇ ಅವರಿಂದ. ಈ ಸಮಾಜ ವ್ಯವಸ್ಥೆಯ ಸಮಸ್ತ ಪ್ರಯೋಜನವನ್ನೂ ಪಡೆದುಕೊಳ್ಳುವುದು ಅವರೇ. ಆದ್ದರಿಂದ ಈ ವ್ಯವಸ್ಥೆಯನ್ನು ಕಾಪಾಡಿಕೊಳ್ಳುವುದು ಅವರ ಉದ್ದೇಶವಾಗಿರುತ್ತದೆ. ಸ್ವಹಿತದ ದೃಷ್ಟಿಯಿಂದಾಗಲಿ ಅಥವಾ ತಾತ್ತ್ವಿಕ ನಂಬಿಕೆಗಳ ದೃಷ್ಟಿಯಿಂದಾಗಲಿ ಈ ವರ್ಗದ ಜಾತಿಗಳಲ್ಲಿ ಪರಸ್ಪರ ಭಿನ್ನಾಭಿಪ್ರಾಯ ಹುಟ್ಟಲಾರದು.

ಅಪರಾಧಿ ಹಾಗೂ ಆದಿಮ ಬುಡಕಟ್ಟು ಜಾತಿಗಳ ವಿಷಯ ಹೇಳುವುದಾದರೆ, ಹಿಂದೂ ಸಾಮಾಜಿಕ ವ್ಯವಸ್ಥೆಯನ್ನು ಮೂಲೋತ್ಪಾಟನೆ ಮಾಡಲು ಅವರಿಗೆ ಅತ್ಯಂತ ಪ್ರಬಲವಾದ ಕಾರಣಗಳಿವೆ.

ಶೂದ್ರರ ವಿಷಯ ಹೇಳುವುದಾದರೆ, ಹಿಂದೂ ಸಾಮಾಜಿಕ ವ್ಯವಸ್ಥೆ ನಾಲ್ಕನೆಯ ವರ್ಗದ ಅಸ್ಪೃಶ್ಯರಿಗೆ ಹೀನಾಯವಾಗಿರುವಷ್ಟೇ ಶೂದ್ರರಿಗೂ ಹೀನಾಯವಾಗಿದೆ. ಹಿಂದೂ ಸಮಾಜ ವ್ಯವಸ್ಥೆಯ ನಿರ್ಮಾಪಕನೂ ಅದರ ನ್ಯಾಯ ಸಂಸ್ಥಾಪಕನೂ ಆದ ಮನುವು ನಿರ್ದೇಶಿಸಿರುವ ಪ್ರಕಾರ, ಶೂದ್ರರ ಸ್ಥಾನ ಎಂಥದೆನ್ನುವುದನ್ನು ತಿಳಿದುಕೊಳ್ಳುವುದು ಕುತೂಹಲಕಾರಿ. ಸುಲಭವಾಗಿ ಗ್ರಹಿಸಲಿಕ್ಕಾಗಿ, ಶೂದ್ರರ ಸ್ಥಾನಮಾನಗಳ ಬಗ್ಗೆ ಆತ ಬೇರೆ ಬೇರೆ ಕಡೆ ಹೇಳಿರುವುದನ್ನು ಇಲ್ಲಿ ಕೆಳಗೆ ಕೊಟ್ಟಿದೆ :

IV. ೬೧ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಕುಟುಂಬಗಳಿಗೆ ಅನ್ವಯಿಸಿ ಮನು – 'ಶೂದ್ರನು ಆಳುತ್ತಿರುವ ರಾಜ್ಯದಲ್ಲಿ ಇವರು ವಾಸ ಮಾಡಕೂಡದು' ಎಂದು ಹೇಳುತ್ತಾನೆ.

XI. ೨೪ 'ಶೂದ್ರನು ಗೌರವಾರ್ಹನೆಂದು ಪರಿಗಣಿಸತಕ್ಕದ್ದಲ್ಲ' ಎಂದು ಸೂಚಿಸುವ ಮನು ಹೀಗೆ ನಿರ್ದೇಶಿಸುತ್ತಾನೆ 'ಬ್ರಾಹ್ಮಣನು ಯಜ್ಞಕರ್ಮಕ್ಕಾಗಿ ಶೂದ್ರನಿಂದ ಧನವನ್ನು ಯಾವತ್ತೂ ಬೇಡಲೇಕೂಡದು.'

ಶೂದ್ರರ ಜೊತೆಯಲ್ಲಿ ಎಲ್ಲಾ ರೀತಿಯ ವೈವಾಹಿಕ ಸಂಬಂಧಗಳನ್ನು ನಿಷೇಧಿಸಲಾಗಿತ್ತು. ಎರಡು–ಮೂರು–ನಾಲ್ಕನೆಯ ವರ್ಗಗಳಲ್ಲಿ ಯಾವುದೇ ವರ್ಗಕ್ಕೆ ಸೇರಿದ ಹೆಣ್ಣಿನ ಜೊತೆ ವೈವಾಹಿಕ ಸಂಬಂಧ ವರ್ಜ್ಯವಾಗಿತ್ತು. ಶೂದ್ರನು ತನಗಿಂತ ಮೇಲಿನ ವರ್ಗದ ಹೆಣ್ಣಿನ ಜೊತೆ ಸಂಬಂಧವಿಟ್ಟುಕೊಳ್ಳುವಂತಿರಲಿಲ್ಲ. ಶೂದ್ರನೊಬ್ಬ ಮೇಲಿನ ವರ್ಗದ ಹೆಣ್ಣಿನ ಸಂಗಡ ವ್ಯಭಿಚಾರ ನಡೆಸಿದರೆ ಅದು ಮರಣದಂಡನೆಗೆ ಯೋಗ್ಯವಾದ ಅಪರಾಧವಾಗುತ್ತಿತ್ತು.

VIII. ೩೭೪ 'ಶೂದ್ರನು ತನಗಿಂತ ಮೇಲು ಜಾತಿಯ ಹೆಣ್ಣಿನೊಡನೆ ಸಂಭೋಗ ನಡೆಸಿದರೆ ಅದಕ್ಕೆ ಶಿಕ್ಷೆ: 'ಆಕೆ ಅರಕ್ಷಿತ ಹೆಣ್ಣಾಗಿದ್ದ ಪಕ್ಷದಲ್ಲಿ ಅಪರಾಧಕಾರಕವಾದ ಆತನ ಅಂಗವನ್ನು ಛೇದಿಸತಕ್ಕದ್ದು ಮತ್ತು ಆಕೆ ರಕ್ಷಿತ ಹೆಣ್ಣಾಗಿದ್ದಲ್ಲಿ ಆತನಿಗೆ ಮರಣದಂಡನೆ ವಿಧಿಸಿ ಆತನ ಆಸ್ತಿಯನ್ನು ವಶಪಡಿಸಿಕೊಳ್ಳತಕ್ಕದ್ದು.'

VIII. ೨೦ 'ಬ್ರಾಹ್ಮಣವಿಹಿತವಾದ ವೈದಿಕ ಕರ್ಮಗಳನ್ನು ನೆರವೇರಿಸದೆ ಕೇವಲ ಜನ್ಮ ಮಾತ್ರದಿಂದ ಬ್ರಾಹ್ಮಣನಾಗಿರುವವನೂ ರಾಜನಿಗೆ ಧರ್ಮಬೋಧೆ ಮಾಡಲು ಅರ್ಹತೆ ಹೊಂದಿರುತ್ತಾನೆ. ಆದರೆ ಶೂದ್ರನು (ಅವನು ಎಷ್ಟೇ ಜ್ಞಾನಿಯಾಗಿದ್ದರೂ) ಈ ಅಧಿಕಾರ ಪಡೆಯಲಾರ.'

VIII. ೨೧ 'ಶೂದ್ರನಿಂದ ನ್ಯಾಯ ನಿರ್ಣಯವಾಗುವುದನ್ನು ನೋಡುತ್ತ ಕುಳಿತಿರುವಂಥ ರಾಜನ ರಾಜ್ಯವು ಕೆಸರಿನಲ್ಲಿಳಿದು ಮೇಯುವ ಹಸುವಿನಂತೆ ಕೆಳಕ್ಕಿಳಿಯುತ್ತ ಕ್ಲೇಶದಲ್ಲಿ

ಮುಳುಗಿಹೋಗುವುದು.'

VIII. ೨೭೨ 'ಬ್ರಾಹ್ಮಣರಿಗೆ ಧರ್ಮೋಪದೇಶ ಮಾಡುವ ಅಹಂಕಾರಿ ಶೂದ್ರನನ್ನು ರಾಜನು ಬಾಯಿಗೂ ಕಿವಿಗೂ ಕುದಿಯುವ ಎಣ್ಣೆ ಸುರಿಸಿ ದಂಡಿಸತಕ್ಕದ್ದು.'

ಜ್ಞಾನದಾನ ಹಾಗೂ ಜ್ಞಾನ ಸಂಗ್ರಹಣೆಗೆ ಸಂಬಂಧಿಸಿ ಮನು ಹೀಗೆ ವಿಧಿಸುತ್ತಾನೆ:

III. ೧೫೬ 'ಶೂದ್ರರಿಗೆ ಗುರುವಾದಂಥವನು ಮತ್ತು ಶೂದ್ರ ಗುರುವಿನ ಶಿಷ್ಯನಾಗಿರುವಂಥವನು ಶ್ರಾದ್ಧ ಭೋಜನಕ್ಕೆ (ಆಮಂತ್ರಣಕ್ಕೆ) ಅನರ್ಹನು.'

IV. ೯೯ 'ಶೂದ್ರರ ಸಮ್ಮುಖದಲ್ಲಿ ವೇದಮಂತ್ರವನ್ನು ಪಠಿಸಕೂಡದು.'

ಮನುವಿನ ಅನಂತರ ಬಂದ ಧರ್ಮಶಾಸ್ತ್ರಕಾರರು ಮತ್ತೂ ಮುಂದಕ್ಕೆ ಹೋಗಿ ವೇದವನ್ನು ಪಠಿಸುವ ಶೂದ್ರನಿಗೆ ಇನ್ನೂ ಹೆಚ್ಚಿನ ಕ್ರೂರ ಶಿಕ್ಷೆಗಳನ್ನು ಹೇಳಿದರು. ಉದಾಹರಣೆಗೆ, ಕಾತ್ಯಾಯನ ಎನ್ನುವವನು ಶೂದ್ರನು ವೇದಪಾಠವನ್ನು ಕೇಳಿಸಿಕೊಂಡರೆ ಅಥವಾ ವೇದದ ಒಂದೇ ಶಬ್ದವನ್ನಾದರೂ ಉಚ್ಚರಿಸುವ ಧಾರ್ಷ್ಟ್ಯ ತೋರಿಸಿದರೆ, ರಾಜನು ಆತನ ನಾಲಗೆಯನ್ನು ಸೀಳಿಸಿ ಕಿವಿಗೆ ಕಾದ ಸೀಸವನ್ನು ಸುರಿಸತಕ್ಕದ್ದು ಎಂದು ವಿಧಿಸುತ್ತಾನೆ.

ಶೂದ್ರನ ಆಸ್ತಿಯ ಬಗ್ಗೆ ಮನು ಕಲ್ಪಿಸಿರುವ ವಿಧಗಳು ಇವು :

X. ೧೨೯ 'ಶೂದ್ರನು ತನಗೆ ಸಾಮರ್ಥ್ಯವಿದ್ದಾಗ್ಯೂ ಹೆಚ್ಚುವರಿ ಸಂಪತ್ತನ್ನು ಸಂಗ್ರಹಿಸಿಕೊಳ್ಳಬಾರದು. ಏಕೆಂದರೆ, ದಾಸ್ಯವೃತ್ತಿಯವನಿಗೆ ಐಶ್ವರ್ಯ ಸಿಕ್ಕರೆ ಆತ ಅಹಂಕಾರಿಯಾಗಿ ಬ್ರಾಹ್ಮಣನ ಬಗ್ಗೆ ತಿರಸ್ಕಾರ ತಾತ್ಸಾರಗಳನ್ನು ತೋರಿಸಿ ಬ್ರಾಹ್ಮಣನಿಗೆ ಖೇದವನ್ನುಂಟುಮಾಡುತ್ತಾನೆ.'

VIII. ೪೧೭ 'ತನ್ನ ಬದುಕಿಗೆ ಅಗತ್ಯವೆನ್ನಿಸಿದಾಗ ಬ್ರಾಹ್ಮಣನು ಯಾವ ಸಂಶಯವೂ ಇಲ್ಲದೆ ತನ್ನ ಆಶ್ರಿತನಾದ ಶೂದ್ರನಿಂದ ದ್ರವ್ಯಾದಿಗಳನ್ನು ಸೆಳೆದುಕೊಳ್ಳಬಹುದು.'

ಶೂದ್ರನಿಗೆ ಒಂದೇ ವೃತ್ತಿ ಎನ್ನುವುದು ಮನುವಿನ ಅನುಲ್ಲಂಘನೀಯವಾದ ವಿಧಿಗಳಲ್ಲೊಂದು. ಆತ ಹೀಗೆ ಹೇಳುತ್ತಾನೆ :

I. ೯೧ 'ದೇವರು ಶೂದ್ರನಿಗೆ ವಿಧಿಸಿರುವ ಏಕೈಕ ಕರ್ಮವೆಂದರೆ, ಉಳಿದ (ಬ್ರಾಹ್ಮಣ, ಕ್ಷತ್ರಿಯ, ವೈಶ್ಯ) ಮೂರು ವರ್ಗಗಳಿಗೆ ವಿಧೇಯತೆಯಿಂದ ಸೇವೆ ಮಾಡುವುದು.'

X. ೧೨೧ 'ಶೂದ್ರನು ಬ್ರಾಹ್ಮಣನ ಸೇವೆಯಿಂದ ಜೀವನ ನಡೆಸಲು ಸಾಧ್ಯವಾಗದಿರುವಂಥ ಪಕ್ಷದಲ್ಲಿ ಆತ ಧನಿಕನಾದ ವೈಶ್ಯನ ಸೇವೆ ಮಾಡಿ ಬದುಕತಕ್ಕದ್ದು.'

X. ೧೨೨ 'ಇಹಲೋಕದ ಆಸೆಯಿರಲಿ ಅಥವಾ ಪರಲೋಕದ ಆಸೆಯಿರಲಿ, ಎರಡು ಪಕ್ಷದಲ್ಲೂ ಶೂದ್ರನು ಬ್ರಾಹ್ಮಣನನ್ನೇ ಸೇವಿಸತಕ್ಕದ್ದು. ಬ್ರಾಹ್ಮಣ ಸೇವಕನೆನಿಸಿಕೊಳ್ಳುವ ಶೂದ್ರನೇ ಕೃತಕೃತ್ಯನೆಂದು ಪರಿಗಣಿತನಾಗುತ್ತಾನೆ.'

X. ೧೨೩ 'ಬ್ರಾಹ್ಮಣ ಸೇವೆಯೇ ಶೂದ್ರನ ವಿಶಿಷ್ಟಕರ್ಮವಾಗಿರುತ್ತದೆ. ಅದಲ್ಲದೆ ಆತ ಬೇರೆ ಏನನ್ನು ಮಾಡಿದರೂ ಅದು ನಿಷ್ಫಲ.'

ಶೂದ್ರನ ಸೇವೆ ಸ್ವತಂತ್ರವಾದ ಒಪ್ಪಂದಕ್ಕೆ ಬದ್ಧವಾಗಿ ನಡೆಯತಕ್ಕದ್ದು ಎಂದು ಮನು ಭಾವಿಸುವುದಿಲ್ಲ. ಒಂದು ಪಕ್ಷ, ಶೂದ್ರನು ಸೇವೆಯನ್ನು ನಿರಾಕರಿಸಿದಲ್ಲಿ ಅದಕ್ಕೆ ಬಲಪ್ರಯೋಗದ ವಿಧಿಗಳನ್ನು ಮನು ಕಲ್ಪಿಸಿದ್ದಾನೆ :

VIII. ೪೧೩ 'ಕ್ರಯ ಕೊಟ್ಟು ಕೊಂಡವನಾಗಿರಲಿ ಅಥವಾ ಅಲ್ಲದಿರಲಿ, ಶೂದ್ರನು ಬ್ರಾಹ್ಮಣನ

ದಾಸನಾಗಿರತಕ್ಕದ್ದು. ಏಕೆಂದರೆ, ಬ್ರಾಹ್ಮಣರ ಸೇವೆಗೆಂದೇ ಸ್ವಯಂಭುವು ಶೂದ್ರನನ್ನು ಸೃಷ್ಟಿಸಿದ್ದಾನೆ.'

X. ೧೨೪ 'ಬ್ರಾಹ್ಮಣನಾದವನು ತನ್ನ ಸೇವಕನಾದ ಶೂದ್ರನಿಗೆ ಆತನ ಸೇವಾ ಸಾಮರ್ಥ್ಯ, ದಕ್ಷತೆ ಹಾಗೂ ಅವನ ಕುಟುಂಬದ ಗಾತ್ರ ಮುಂತಾದವನ್ನು ಪರಿಗಣಿಸಿ ಯೋಗ್ಯವಾದ ವೃತ್ತಿಯನ್ನು ಕಲ್ಪಿಸಿಕೊಡತಕ್ಕದ್ದು.'

X. ೧೨೫ 'ಬ್ರಾಹ್ಮಣನು ತಾನು ಉಂಡುಳಿದ ಅನ್ನವನ್ನೂ ತಾನುಟ್ಟು ಹಳೆಯದಾದ ಬಟ್ಟೆ ಮತ್ತು ಬಳಸಿದ ಪರಿಕರಗಳನ್ನೂ ಶೂದ್ರನಿಗೆ ಕೊಡತಕ್ಕದ್ದು.'

ಶೂದ್ರನು ಉಳಿದ ಜಾತಿಗಳ ಸಂಗಡ ನಡೆಸುವ ಮಾತು ಮತ್ತು ನಡವಳಿಕೆಗಳಲ್ಲಿ ವಿಧೇಯನಾಗಿರತಕ್ಕದ್ದು ಎಂದು ಮನು ನಿರ್ಣಯಿಸಿದ್ದಾನೆ.

VIII. ೨೭೦ 'ದ್ವಿಜರನ್ನು ಕ್ರೂರವಾಕ್ಯಗಳಿಂದ ಆಕ್ಷೇಪಿಸಿ ನಿಂದಿಸುವ ಶೂದ್ರನ ನಾಲಗೆಯನ್ನು ಕತ್ತರಿಸತಕ್ಕದ್ದು. ಏಕೆಂದರೆ ಶೂದ್ರನು ಕೀಳು ಹುಟ್ಟಿನವನಾಗಿರುತ್ತಾನೆ.'

VIII. ೨೭೧ 'ಹೆಸರು ಜಾತಿಗಳನ್ನು ಹಿಡಿದು ಬ್ರಾಹ್ಮಣನನ್ನು ನಿಂದಿಸುವ ಶೂದ್ರನಿಗೆ, ಆತನ ಬಾಯಿಯಲ್ಲಿ ಕೆಂಪಾಗಿ ಕಾಯಿಸಿದ ಹತ್ತಂಗುಲ ಉದ್ದದ ಸರಳನ್ನು ತೂರಿಸತಕ್ಕದ್ದು.'

ಇದಿಷ್ಟರಿಂದ ಮನುವಿಗೆ ತೃಪ್ತಿಯಿಲ್ಲ. ಶೂದ್ರನ ದಾಸ್ಯತ್ವ, ಆತನ ಜಾತಿಯಲ್ಲಿನ ಸಮಸ್ತರ ಹೆಸರು (ನಾಮ–ಉಪನಾಮ) ಗಳಲ್ಲೂ ವ್ಯಕ್ತವಾಗುವಂತಿರಬೇಕು ಎನ್ನುತ್ತಾನೆ ಮನು.

II. ೩೧ 'ಹೆಸರಿಡುವಾಗ, ಬ್ರಾಹ್ಮಣನಿಗೆ ಮಂಗಳಸೂಚಕವಾದ, ಕ್ಷತ್ರಿಯನಿಗೆ ಬಲಸೂಚಕವಾದ, ವೈಶ್ಯನಿಗೆ ಧನಸೂಚಕವಾದ ಹಾಗೂ ಶೂದ್ರನಿಗೆ ಜುಗುಪ್ಸಾಸೂಚಕವಾದ ಹೆಸರುಗಳನ್ನಿಡತಕ್ಕದ್ದು.'

II. ೩೨ "ಬ್ರಾಹ್ಮಣರಿಗೆ ಶರ್ಮಾ ಮುಂತಾದ ಸಂತೋಷ ಸೂಚಕವಾದ, ಕ್ಷತ್ರಿಯರಿಗೆ ರಕ್ಷಣಾ ಸೂಚಕವಾದ (ವರ್ಮಾ ಇ.), ವೈಶ್ಯರಿಗೆ ಐಶ್ವರ್ಯ ಸೂಚಕವಾದ (ಗುಪ್ತಾ ಇ.) ಹಾಗೂ ಶೂದ್ರರಿಗೆ ಸೇವಾಸೂಚಕವಾದ (ದಾಸ ಇ.), ಉಪನಾಮಗಳಿರತಕ್ಕದ್ದು.

ಮೊದಲ ವರ್ಗ ಬಿಟ್ಟು ಉಳಿದ ಮೂರು ವರ್ಗದ ಜಾತಿಗಳು ಒಗ್ಗೂಡಿ ಮೈತ್ರಿಯಲ್ಲಿ ಒಂದು ಪಕ್ಷವಾಗಬೇಕಾದದ್ದು ತೀರ ಸಹಜವಿತ್ತು. ಇವರೆಲ್ಲ ಒಗ್ಗೂಡಿಕೊಂಡು ಹಿಂದೂ ಸಮಾಜ ವ್ಯವಸ್ಥೆಯನ್ನು ನಾಶಗೊಳಿಸಲು ಪ್ರಬಲವಾದ ಕಾರಣಗಳಿದ್ದವು. ಆದರೆ ಅದು ಸಾಧ್ಯವಾಗಿಲ್ಲ. ಹಾಗೆಂದು, ಇವರನ್ನೆಲ್ಲ ಒಗ್ಗೂಡಿಸುವ ಪ್ರಯತ್ನಗಳು ನಡೆದೇ ಇಲ್ಲ ಎನ್ನುವಂತಿಲ್ಲ. ೧೯೧೯–೩೫ರ ಮಧ್ಯಾವಧಿಯಲ್ಲಿ ಪ್ರಬಲವಾಗಿದ್ದ 'ಬ್ರಾಹ್ಮಣೇತರ ಪಕ್ಷ'ವೆನ್ನುವುದು ಇವರನ್ನೆಲ್ಲ ಒಂದು ರಾಜಕೀಯ ಪಕ್ಷವಾಗಿ ಸಂಘಟಿಸುವ ಒಂದು ದೊಡ್ಡ ಪ್ರಯತ್ನವಾಗಿತ್ತು. ಹಿಂದೂ ಸಾಮಾಜಿಕ ವ್ಯವಸ್ಥೆಯ ನಿರ್ಮಾಪಕರೂ ಆ ವ್ಯವಸ್ಥೆಯ ಬಹ್ವಂಶ ಲಾಭಗಳನ್ನು ದೋಚಿಕೊಂಡವರೂ ಮತ್ತು ಈ ಕಾರಣಗಳಿಂದ ಆ ವ್ಯವಸ್ಥೆಯನ್ನು ಪ್ರಬಲವಾಗಿ ಸಮರ್ಥಿಸಿಕೊಳ್ಳುತ್ತ ಬಂದವರೂ ಬ್ರಾಹ್ಮಣರೇ. ಅಂಥ ಬ್ರಾಹ್ಮಣರ ಏಕಪ್ರಭುತ್ವವನ್ನು ನಾಶಮಾಡುವುದೇ ಬ್ರಾಹ್ಮಣೇತರ ಪಕ್ಷದ ಉದ್ದೇಶವಾಗಿತ್ತು.

ಇದೊಂದೇ ಅಲ್ಲ. ಕಾರ್ಮಿಕ ನಾಯಕರು, ಅವರಲ್ಲೂ ಮುಖ್ಯವಾಗಿ ಕಮ್ಯುನಿಸ್ಟರು, ಮೂರು ವರ್ಗಗಳಲ್ಲಿ ಐಕ್ಯ ಸಾಧಿಸಲಿಕ್ಕಾಗಿ ಪ್ರಯತ್ನ ನಡೆಸಿದ್ದಾರೆ. ಯಾವುದೇ ಜಾತಿ ಪಂಗಡಗಳಿಗೆ ಸೇರಿದ್ದರೂ ಸರಿಯೆ, ಒಟ್ಟಿನಲ್ಲಿ ಕಾರ್ಮಿಕರ ಹಿತಾಸಕ್ತಿ ಒಂದೇ ಇರುತ್ತದೆ. ಅವರಲ್ಲಿ ವರ್ಗ ಪ್ರಜ್ಞೆ ಮತ್ತು ವರ್ಗದ

ಐಕಮತ್ಯ ಬೆಳೆಯುವಂತೆ ಮಾಡಬೇಕು. ಒಮ್ಮೆ ಈ ವರ್ಗ ಒಗ್ಗೂಡಿತೆಂದರೆ, ಅದರ ಭಯಂಕರ ಸಂಖ್ಯಾಸಾಮರ್ಥ್ಯದಿಂದ ಪ್ರಸ್ತುತ ಆರ್ಥಿಕ ವ್ಯವಸ್ಥೆ ಛಿದ್ರಗೊಂಡು ನೆಲಕಚ್ಚುತ್ತದೆ. ಒಮ್ಮೆ ಆರ್ಥಿಕ ವ್ಯವಸ್ಥೆ ನಾಶವಾಯಿತೆಂದರೆ ಹಿಂದೂ ಸಾಮಾಜಿಕ ವ್ಯವಸ್ಥೆಯೂ ಛಿದ್ರವಿಚ್ಛಿದ್ರವಾಗಿ ನಾಶಹೊಂದುವುದು ಅನಿವಾರ್ಯ. ಹಾಗೆಂದು ಅವರು ಬೋಧಿಸಿದರು. ಇದರ ಪರಿಣಾಮವೇನಾಗಿದೆ? ಏನೂ ಆಗಿಲ್ಲ. ವರ್ಗ ಐಕಮತ್ಯ ಸಾಧಿತವಾಗದೆ ಉಳಿದಿದೆ. ಶೂದ್ರರೂ, ಮತ್ತು 'ಅಪರಾಧಿ' ಹಾಗೂ ಆದಿಮ ಬುಡಕಟ್ಟುಗಳ ಜನರೂ ಬ್ರಾಹ್ಮಣರನ್ನು ದ್ವೇಷಿಸುವುದಕ್ಕಿಂತ ಹೆಚ್ಚಾಗಿ ಅಸ್ಪೃಶ್ಯರನ್ನೇ ದ್ವೇಷಿಸತೊಡಗಿದ್ದಾರೆ. ವಾಸ್ತವವಾಗಿ, ಹಿಂದೂ ಸಮಾಜವ್ಯವಸ್ಥೆಯ ಮೇಲೆ ಅಸ್ಪೃಶ್ಯರಿಂದ ಉಂಟಾಗುವ ದಾಳಿಯನ್ನು ತಡೆಗಟ್ಟಲು ಶೂದ್ರರೇ ಪೊಲೀಸ್ ಪಡೆಯಂತೆ ಬ್ರಾಹ್ಮಣರಿಗೆ ನೆರವಾಗುತ್ತಿದ್ದಾರೆ. ಇದೊಂದು ವಿಲಕ್ಷಣವಾದ ಪ್ರಕ್ರಿಯೆ, ಆದರೆ ಸತ್ಯವಾದದ್ದು. ಹಿಂದಣ ಅಧ್ಯಾಯಗಳಲ್ಲಿ ವಿವರಿಸಿರುವಂತೆ, ಈ ಸ್ಥಾಪಿತ ವ್ಯವಸ್ಥೆಯ ವಿಧಿನಿಯಮಗಳನ್ನು ಅಸ್ಪೃಶ್ಯರೇನಾದರೂ ಉಲ್ಲಂಘಿಸಿದ ಪಕ್ಷದಲ್ಲಿ, ಅವರ ಮೇಲೆ ಹಿಂಸ್ರ ಹಲ್ಲೆ ನಡೆಸುವುದು ಶೂದ್ರರ ಕೆಲಸವಾಗಿದೆ.

ಹೀಗೆ ಮೂರು ವರ್ಗಗಳ ಮಧ್ಯೆ ಒಗ್ಗಟ್ಟು ಸಾಧಿಸದೆ ಹೋಗಿರುವುದಕ್ಕೆ ಕಾರಣಗಳನ್ನು ಹುಡುಕುತ್ತ ದೂರ ಹೋಗಬೇಕಾಗಿಲ್ಲ. ಎಲ್ಲರಿಗಿಂತ ಮೇಲೆ ಬ್ರಾಹ್ಮಣ ಮತ್ತು ಬ್ರಾಹ್ಮಣನಿಗಿಂತ ಕೆಳಗೆ ಹಾಗೂ ಅಸ್ಪೃಶ್ಯನಿಗಿಂತ ಮೇಲೆ ಶೂದ್ರ – ಈ ರೀತಿಯಲ್ಲಿ ಮೆಟ್ಟಲು ಮೆಟ್ಟಲಾಗಿ ಅಸಮಾನತೆಯನ್ನು ಸುಸ್ಥಾಪಿಸಿರುವ ಈ ವ್ಯವಸ್ಥೆಯಲ್ಲೇ ಅದರ ಕಾರಣಗಳಿವೆ. ಹಿಂದೂ ಸಮಾಜ ವ್ಯವಸ್ಥೆ ಕೇವಲ ಅಸಮಾನತೆಯ ಮೇಲೆ ಮಾತ್ರ ಸ್ಥಾಪಿತವಾಗಿದ್ದರೆ ಬಹಳ ಹಿಂದೆಯೇ ಅದು ನಿರ್ನಾಮವಾಗಿ ಹೋಗಿರುತ್ತಿತ್ತು. ಆದರೆ ಅದು ಅಸಮಾನತೆಯ ಸೋಪಾನಗಳಲ್ಲಿ – ತರತಮಗಳಲ್ಲಿ – ಸುನಿರ್ಮಿತವಾಗಿರುವುದರಿಂದ, ಶೂದ್ರನಿಗೆ ಬ್ರಾಹ್ಮಣನನ್ನು ತನ್ನ ಮಟ್ಟಕ್ಕೆ ಕೆಳಕ್ಕೆಳೆಯಬೇಕೆಂಬ ಆಕಾಂಕ್ಷೆಯಾಗುತ್ತದಾದರೂ ಅಸ್ಪೃಶ್ಯನು ತನ್ನ ಮಟ್ಟಕ್ಕೆ ಏರಬಯಸುವುದನ್ನು ಸಹಿಸಿಕೊಳ್ಳಲಾಗುವುದಿಲ್ಲ. ಇಡೀ ಸಾಮಾಜಿಕ ವ್ಯವಸ್ಥೆ ಒಂದು ಮಟ್ಟಕ್ಕೆ ನೆಲೆಗೊಳ್ಳುವಂತೆ ಶೂದ್ರನು ಅಸ್ಪೃಶ್ಯನ ಜೊತೆ ಕೂಡಿಕೊಳ್ಳಲು ಯಾವತ್ತೂ ಇಚ್ಛಿಸುವುದಿಲ್ಲ. ಅದಕ್ಕೆ ಬದಲು, ಬ್ರಾಹ್ಮಣರು ತನ್ನ ಮೇಲೆ ರಾಶಿ ಹಾಕುವ ಅಪಮಾನ ಅವಹೇಳನಗಳನ್ನು ಸಹಿಸುವುದೇ ಲೇಸು ಎಂದು ಅದನ್ನೇ ಆಯ್ಕೆ ಮಾಡಿಕೊಳ್ಳುತ್ತಾನೆ. ಇದರ ಫಲಶ್ರುತಿಯೆಂದರೆ, ಅಸ್ಪೃಶ್ಯನ ಜೊತೆ ಹೋರಾಡಲು ಯಾರೂ ಸಿದ್ಧರಾಗುವುದಿಲ್ಲ. ಆತ ಸಂಪೂರ್ಣ ಪ್ರತ್ಯೇಕಿತನಾಗುತ್ತಾನೆ. ಪ್ರತ್ಯೇಕಿತನಾಗಿರುವುದಷ್ಟೇ ಅಲ್ಲ, ಯಾರು ಅವನ ಸಹಜ ಮಿತ್ರರಾಗಬೇಕಿತ್ತೋ ಅಂಥ ವರ್ಗಗಳವರೇ ಅವನ ಕಡುವಿರೋಧಿಗಳಾಗುತ್ತಾರೆ. ಇಂಥ ಪ್ರತ್ಯೇಕತೆ, ಅಸ್ಪೃಶ್ಯತೆಯ ನಿವಾರಣೆಯಲ್ಲಿ ಮತ್ತೊಂದು ದೊಡ್ಡ ಆತಂಕವಾಗಿ ನಿಂತಿದೆ.

* * * *

## ಭಾಗ I

# ಅನುಬಂಧಗಳು[೧]

## ಅನುಬಂಧ I

## ಅಸ್ಪೃಶ್ಯತೆಯಿಂದ ಉಲ್ಬಣಗೊಂಡ ಸಮಸ್ಯೆಗಳು[೨]

೧೯೫೩ರ ಜೂನ್‌ನಲ್ಲಿ ನಡೆದ ಕೆಳಗಿನ ಘಟನೆಯನ್ನು ನಮ್ಮ ವರದಿಗಾರ ಜಯಪುರದಿಂದ ವರದಿ ಮಾಡಿದ್ದಾನೆ :

**ಜಯಪುರ – ಜೂನ್ ೨೫**

ನಾರುಹುಣ್ಣಿನ ರೋಗ ಈ ರಾಜ್ಯದಲ್ಲಿ ಹಬ್ಬಿಕೊಂಡಿರುವ ಒಂದು ಸಾಂಕ್ರಾಮಿಕ ರೋಗ. ಇಲ್ಲಿನ ಜನ ಅದನ್ನು ನಹ್ರು ಅಥವಾ ಬಲ ಎಂದು ಕರೆಯುತ್ತಾರೆ. ಈ ಜಾಡ್ಯ ತಗುಲಿದ ರೋಗಿ ತಿಂಗಳುಗಟ್ಟಲೆ ಕೆಲವೊಮ್ಮೆ ಒಂದು–ಎರಡು ವರ್ಷಕಾಲ ಕೂಡ ನರಳಬೇಕಾಗುತ್ತದೆ. ಈ ರೋಗದಿಂದಾಗಿ ಯಾವುದೋ ಒಂದು ಅಂಗವನ್ನೇ ಕಳೆದುಕೊಂಡವರೂ ಅನೇಕರಿದ್ದಾರೆ.

ಈ ರೋಗ ಹಬ್ಬುವುದು ಕುಡಿಯುವ ನೀರಿನ ಮೂಲಕ. ಇದನ್ನು ತಡೆಗಟ್ಟಲು ವೈದ್ಯರು ಸೂಚಿಸುವ ಉಪಾಯ, ನೀರನ್ನು ಕುದಿಸಿ ಅನಂತರ ಶೋಧಿಸಿ ಕುಡಿಯಬೇಕು ಎನ್ನುವುದು.

ಹೆಚ್ಚಾಗಿ ಮಳೆಗಾಲ ಪ್ರಾರಂಭವಾಗುತ್ತಿದ್ದಂತೆ ಈ ರೋಗ ಕಾಣಿಸಿಕೊಳ್ಳುತ್ತದೆ (ಇದು ಬಿತ್ತನೆ ಪ್ರಾರಂಭಿಸಬೇಕಾದ ಸಮಯ ಕೂಡ). ಇದರ ಪರಿಣಾಮವೆಂದರೆ, ಹಳ್ಳಿಯ ರೈತ ತನ್ನ ವರ್ಷದ ಅನ್ನಕ್ಕಾಗಿ ತಯಾರಿ ಮಾಡಕೊಳ್ಳಬೇಕಾದ ಸಮಯದಲ್ಲಿ ಆತ ಹಾಸಿಗೆ ಹಿಡಿದು ಮಲಗುವಂತಾಗುತ್ತದೆ.

ಬನ್‌ಸ್ವಾರಾ ಹತ್ತಿರ ಕೊಪ್ರಾ ಎಂಬ ಒಂದು ಹಳ್ಳಿಯಲ್ಲಿ ಪರಿಶೀಲನೆ ನಡೆಸಿದಾಗ, ೫೭ ಕುಟುಂಬಗಳಲ್ಲಿ ಒಟ್ಟು ೧೨೫ ಮಂದಿ ನಾರುಹುಣ್ಣಿಗೆ ಬಲಿಯಾದ ರೋಗಿಗಳಿರುವುದು ವ್ಯಕ್ತವಾಯಿತು. ಒಂದು ಹರಿಜನ ಕುಟುಂಬದಲ್ಲಿ ಆರು ಮಂದಿಯಿದ್ದರು ; ಅವರಲ್ಲಿ ಐದು ಮಂದಿ ನಾರುಹುಣ್ಣಿನ ರೋಗಕ್ಕೆ ತುತ್ತಾಗಿ ನರಳುತ್ತಿದ್ದರು. ಅವರ ಸಂಗ್ರಹದಲ್ಲಿದ್ದದ್ದು ಒಂದಿಷ್ಟು ಒಣ ಮಾಂಸದ ಚೂರುಗಳು, ಅಷ್ಟೇ.

ಎಷ್ಟೋ ಸಲ, ಸಮಾಜವೇ ಈ ಜನರ ಮೇಲೆ ರೋಗವನ್ನು ತಂದು ಹೇರುತ್ತದೆ. ಆ ಊರಿನಲ್ಲಿ ಹರಿಜನರು ನೀರೆತ್ತಿಕೊಂಡು ಬಳಸುವ ಒಂದು ಕೊಳ ಇದೆ. ಆ ಕೊಳ ಗಲೀಜುಗಳ

---

೧. ಈ ಒಂದನೇ ಭಾಗದ ಅನುಬಂಧಗಳಾಗಿ ಕೊಟ್ಟಿರುವ ಪತ್ರಿಕಾ ವರದಿಗಳನ್ನು ಮೂಲ ಹಸ್ತಪ್ರತಿಯಲ್ಲಿ ಪುಸ್ತಕದ ಕೊನೆಯಲ್ಲಿ ಸೇರಿಸಿಡಲಾಗಿತ್ತು.

೨. ೧ನೇ ಅನುಬಂಧ 'ಸ್ಟೇಟ್ಸ್‌ಮನ್' ಪತ್ರಿಕೆಯ ಜೂನ್ ೨೭, ೧೯೫೩ರ ಸಂಚಿಕೆಯಲ್ಲಿ ಪ್ರಕಟವಾಗಿತ್ತು.

ಮಡುವಾಗಿ ಅಸಹ್ಯವಾಗಿತ್ತು, ನಾರುಹುಣ್ಣಿನ ಕ್ರಿಮಿಗಳ ಉಗಮ ಸ್ಥಾನದಂತಿತ್ತು. ಬನ್‌ಸ್ವಾರಾದ ಜಿಲ್ಲಾಧಿಕಾರಿಗಳಿಗೆ ಅದನ್ನು ತೋರಿಸಿದಾಗ, ಅವರು ದಿಗ್ಭ್ರಮೆಗೊಂಡರಂತೆ. ತಕ್ಷಣವೇ ಆ ಬಾವಿಯನ್ನು ಮುಚ್ಚಲು ಆಜ್ಞೆ ಮಾಡಿದರಂತೆ.

ಸಮೀಪದಲ್ಲೇ ಒಂದು ಪಕ್ಕಾ ಬಾವಿಯೂ ಇತ್ತು. ಆ ಆವರಣವನ್ನು ಪ್ರವೇಶಿಸಿ ಬಾವಿಯಿಂದ ನೀರನ್ನು ಎತ್ತಿಕೊಂಡು ಒಯ್ಯಬಹುದಿತ್ತು. ಹರಿಜನರಿಗೆ ಈ ಬಾವಿಯಿಂದ ನೀರನ್ನು ಒಯ್ಯಲು ಅವಕಾಶ ಕೊಡುವಂತೆ ಹಿಂದೂಗಳನ್ನು ವಿನಂತಿಸಿಕೊಂಡಾಗ ಅವರು ಅದಕ್ಕೆ ಒಪ್ಪಲಿಲ್ಲ. ಜಿಲ್ಲಾಧಿಕಾರಿಗಳು ಅವರನ್ನು – ಈ ಕೊಳದ ನೀರು ಕುಡಿಯಿರಿ ಎಂದರೆ ನೀವು ಕುಡಿಯುತ್ತೀರಾ – ಎಂದು ಕೇಳಿದರಂತೆ. ಕೊಳದ ನೀರು ಮನುಷ್ಯರು ಬಳಸಲಿಕ್ಕೇ ಬಾರದಂಥದ್ದು ಎಂದು ಊರವರು ಒಪ್ಪಿಕೊಂಡರಂತೆ. ಹಾಗಿದ್ದರೂ ಹರಿಜನರು ಈ ಬಾವಿಯನ್ನು ಬಳಸಲು ಅವಕಾಶ ಕೊಡಲಾರೆವು ಎಂದರಂತೆ.

ಪರಿಸ್ಥಿತಿ ಕೆಟ್ಟದಾಗಿದೆ. ಆದರೆ ಎಲ್ಲರಿಗಿಂತ ಹೆಚ್ಚಾಗಿ ಕೋಟಲೆ ಅನುಭವಿಸುವವರು ಹರಿಜನರು. ಅಸ್ಪೃಶ್ಯತೆ ಅಪರಾಧ ಎಂದು ಕಾನೂನು ವಿಧಿಸುತ್ತದೆ. ಅದರ ನಿರ್ಮೂಲನಕ್ಕಾಗಿ ಹರಿಜನ ಸೇವಕ ಸಂಘ ದೀರ್ಘಕಾಲ ಶ್ರಮಿಸಿ ಕೆಲಸ ಮಾಡಿದೆ. ಆದರೆ, ಗ್ರಾಮೀಣ ಪ್ರದೇಶಗಳಲ್ಲಿನ ಸವರ್ಣೀಯ ಹಿಂದೂಗಳ ಹೃದಯ, ಮನಸ್ಸು ನಿಜವಾಗಿ ಪರಿವರ್ತನೆಗೊಂಡಿದೆ ಎಂದು ಹೇಳುವ ಸ್ಥಿತಿ ಇಲ್ಲ. ಈ ವಿಷಯದಲ್ಲಿ ರಾಜ್ಯ ಸರ್ಕಾರಗಳು ಗಣನೀಯವಾಗಿ ಏನನ್ನೂ ಮಾಡಲು ಶಕ್ತವಾಗಿಲ್ಲ.

## ಅನುಬಂಧ II

(ಮಾರ್ಚ್ ೯, ೧೯೫೨ರ 'ಸಂಡೆ ಟೈಮ್ಸ್' ಪತ್ರಿಕೆಯಿಂದ)

### ಅಂಗಿ ತೊಟ್ಟುಕೊಳ್ಳುವುದೂ ಇಲ್ಲಿ ಅಪರಾಧ

ದಕ್ಷಿಣ ಭಾರತದಲ್ಲಿ ಹರಿಜನರ ಸಂಕಷ್ಟಗಳು

ಒಬ್ಬ ಸಾಮಾಜಿಕ ಕಾರ್ಯಕರ್ತನ ಅನುಭವ

(ಅಖಿಲ ಭಾರತ ಹರಿಜನ ಸೇವಕ ಸಂಘದ ಪ್ರಾದೇಶಿಕ ಅಧಿಕಾರಿ ಸ್ವಾಮಿ ಆನಂದತೀರ್ಥ ಅವರ ಲೇಖನ)

ನಾಗರಿಕ ಅನರ್ಹತೆಗಳ ನಿವಾರಣಾ ಕಾನೂನು ಸುಮಾರು ಐದು ವರ್ಷಗಳ ಹಿಂದೆಯೇ ಜಾರಿಗೆ ಬಂದಿದ್ದರೂ ನಮ್ಮ ಹಳ್ಳಿಗಳಲ್ಲಿ ಇಂದಿಗೂ ಹರಿಜನರ ಬಗ್ಗೆ ಇರುವ ನಾಗರಿಕ ಅನರ್ಹತೆಗಳು ಹಾಗೇ ಮುಂದುವರೆದಿವೆ ಎನ್ನುವುದನ್ನು ಗಮನಿಸಿದಾಗ ಖೇದವಾಗುತ್ತದೆ. ಮಧುರೈ ಜಿಲ್ಲೆಯ ಮೇಲೂರು ತಾಲೂಕಿನಲ್ಲಿ ಅಖಿಲ ಭಾರತ ಹರಿಜನ ಸೇವಕ ಸಂಘವು ಕಳೆದ ಒಂಬತ್ತು ತಿಂಗಳಿಂದ ಹರಿಜನರಿಗಿರುವ ನಾಗರಿಕ ನಿಷೇಧಗಳನ್ನು ತೊಡೆದುಹಾಕಲು ತೀವ್ರವಾಗಿ ಕೆಲಸ ಮಾಡುತ್ತಿದೆ. ಈ ಅವಧಿಯಲ್ಲಿ, ಚಾ ಅಂಗಡಿಗಳಲ್ಲಿ, ಕ್ಷೌರಿಕರ ಸಲೂನುಗಳಲ್ಲಿ, ಬಾವಿ–ಕೆರೆ ಚಾವಡಿಗಳಲ್ಲಿ ಹರಿಜನರಿಗೆ ಉಂಟಾಗುತ್ತಿರುವ ಕಷ್ಟ, ಅವಹೇಳನಗಳನ್ನು ಬೆಳಕಿಗೆ ತರಲಾಗಿದೆ. ಕೆಲವು ಕಡೆಗಳಲ್ಲಿ, ಅಸ್ಪೃಶ್ಯ ವಿರೋಧಿ ಕಾನೂನನ್ನು ವ್ಯಾಪಕವಾಗಿ ಪ್ರಚುರಪಡಿಸಿ ಅದನ್ನು ಜಾರಿಗೆ ತರುವುದಕ್ಕಾಗಿಯೇ ನೇಮಕಗೊಂಡ ಗ್ರಾಮ ನ್ಯಾಯದರ್ಶಿ (ವಿಲೇಜ್ ಮುನ್ಸಿಫ್) ಗಳು ತಾವೇ ಪ್ರತಿಗಾಮಿಶಕ್ತಿಯಾಗಿ, ಅಸ್ಪೃಶ್ಯರು ತಮ್ಮ ಪ್ರಾಥಮಿಕ ಹಕ್ಕುಗಳನ್ನು ಪಡೆಯಲು ಆತಂಕವಾಗಿ ನಿಂತಿದ್ದಾರೆ. ನಮ್ಮ ಸಮಾಜದಲ್ಲಿ ಹರಿಜನರ ವಿರುದ್ಧ ಎಂಥ ದುರಭಿಪ್ರಾಯ ಬೇರುಬಿಟ್ಟು ಬೆಳೆದಿದೆ ಎನ್ನುವುದನ್ನು ಈ ಮುಂದಿನ ಕೆಲವು ಉದಾಹರಣೆಗಳೇ ಕಾಣಿಸುತ್ತವೆ.

ನಾಥಮ್ ಹತ್ತಿರದ ಪಾರ್ಲಿ ಎಂಬಲ್ಲಿ, ಹರಿಜನ ಯುವಕನೊಬ್ಬ ತೆಂಗಿನ ಚಿಪ್ಪಿನಲ್ಲಿ ಟೀ ತೆಗೆದುಕೊಳ್ಳಲು ನಿರಾಕರಿಸಿ ಗಾಜಿನ ಲೋಟದಲ್ಲೇ ಕೊಡಿ ಎಂದು ಕೇಳಿದಾಗ ಒಬ್ಬ ಸವರ್ಣ ಹಿಂದೂ ಆತನನ್ನು ಒದೆದು, ಅವನ ತಲೆಯ ಮೇಲೆ ಬೂಟು ಹೇರಿದ. ಹಾಗೆ ಮಾಡಿದ ಆತನಿಗೆ ಮೇಲೂರಿನ ಸಬ್ ಮ್ಯಾಜಿಸ್ಟ್ರೇಟ್ ಕೇವಲ ಹತ್ತು ರೂಪಾಯಿಗಳ ದಂಡ ವಿಧಿಸಿದರು. ಮೇಲವಳವು ಎಂಬಲ್ಲಿ, ಇಬ್ಬರು ಹರಿಜನ ಹುಡುಗರೊಂದಿಗೆ ನಾನು ಒಂದು ಟೀ ಅಂಗಡಿಗೆ ಹೋದಾಗ, ಅಲ್ಲಿದ್ದ ಒಂದು ಗುಂಪು ನನ್ನ ಮೇಲೆ ಹಲ್ಲೆ ಮಾಡುವುದಾಗಿ ಬೆದರಿಸಿತು. ಆ ಇಬ್ಬರು ಹುಡುಗರನ್ನು ಹೊರಗೆ ಅಟ್ಟಿತು. ಟೀ ಅಂಗಡಿಯ ಮಾಲೀಕ ತಾನೇ ಒಂದು ಗಾಜಿನ ಲೋಟವನ್ನು ಎತ್ತಿ ಹಾಕಿ ಒಡೆದು ನಾನು ಅದರ ಬೆಲೆ ತೆರಬೇಕೆಂದೂ ಇಲ್ಲದಿದ್ದರೆ ನನ್ನನ್ನು ಬಡಿಯುವುದಾಗಿಯೂ ಬೆದರಿಸಿದ. ನಾನು ಹೇಗೋ ಅಲ್ಲಿಂದ ಜಾರಿಕೊಂಡು ಹತ್ತಿರದ ಪ್ರಾಥಮಿಕ ಶಾಲೆಯೊಂದರಲ್ಲಿ ಆಶ್ರಯ ಪಡೆದುಕೊಂಡೆ. ಆಮೇಲೆ, ಅಲ್ಲಿನ ಪಂಚಾಯಿತಿ ಬೋರ್ಡ್‌ನ ಅಧ್ಯಕ್ಷ ಮಧ್ಯೆ ಪ್ರವೇಶಿಸಿ ಹೇಳಿದ ಮೇಲೆ ಮಾತ್ರವೇ ಆ ಗುಂಪು ಅಲ್ಲಿಂದ ಜಾಗ ಬಿಟ್ಟಿತು.

ಕೆಳವಳವು ಎಂಬಲ್ಲಿ, ಜನ ಜಾನುವಾರು ಮೈ ತೊಳೆದು ಗಲೀಜಾಗಿರುವ ಒಂದು ಕೊಳದಿಂದ

ಹರಿಜನರು ನೀರನ್ನು ಒಯ್ಯುತ್ತಾರೆ. ಅಲ್ಲಿರುವ ಚೊಕ್ಕಟವಾದ ಸಾರ್ವಜನಿಕ ಬಾವಿಯಿಂದ ನೀರನ್ನು ಒಯ್ಯುವಂತೆ ಹರಿಜನರಿಗೆ ಧೈರ್ಯ ಕೊಟ್ಟಾಗ, ಅಲ್ಲಿನ ಸವರ್ಣ ಹಿಂದೂಗಳು ಹರಿಜನರನ್ನು ಬೈದು ಬೆದರಿಸಿ ಧೈರ್ಯಗುಂದಿಸಿದರು. ಆ ಊರಿನಲ್ಲಿ ಒಂದು ಪೊಲೀಸ್ ಠಾಣೆಯಿದೆ, ಆದರೆ ಅಲ್ಲಿನ ಪೊಲೀಸರು ಹರಿಜನರ ಮೇಲೆ ನಡೆಯುವ ಅನ್ಯಾಯವನ್ನು ಕಂಡು ಚಕಾರವೆತ್ತದೆ ಸುಮ್ಮನಿರುತ್ತಾರೆ. ಅಟ್ಟುಕುಳಮ್ ಎನ್ನುವಲ್ಲಿ ಸಾರ್ವಜನಿಕ ಬಾವಿಯಿಂದ ನೀರೆತ್ತಿಕೊಳ್ಳುವಂತೆ ನಾವು ಹರಿಜನರನ್ನು ಪ್ರೋತ್ಸಾಹಿಸಿದಾಗ, ನೇರ ಅವರನ್ನು ಮೈಮುಟ್ಟಿ ತಡೆಯಲು ಸಾಧ್ಯವಾಗದ ಸವರ್ಣ ಹಿಂದೂಗಳು ಆ ಸಾರ್ವಜನಿಕ ಬಾವಿಯೊಳಗೆ ಮಲವನ್ನು ತಂದು ಸುರಿದರು. ಎಟ್ಟಮಂಗಳಮ್ ಎಂಬಲ್ಲಿ ಸಾರ್ವಜನಿಕ ಸಭೆಯೊಂದು ನಡೆಯುತ್ತಿದ್ದಾಗ ಆ ಚಾವಡಿಯೊಳಕ್ಕೆ ಹರಿಜನರು ಪ್ರವೇಶಿಸಿದರೆಂಬ ಕಾರಣಕ್ಕಾಗಿ, ಆ ಹರಿಜನರು ಸರ್ಕಾರಿ ಭೂಮಿಯಲ್ಲಿ ನಾಟಿಗಾಗಿ ಬೆಳೆಸಿಕೊಂಡಿದ್ದ ಭತ್ತದ ಸಸಿಗಳನ್ನು ನಾಶಮಾಡಿದರು. ಈ ಬಗ್ಗೆ ಬಡ ಹರಿಜನರು ದೂರು ಕೊಟ್ಟಾಗ್ಯೂ ಪೊಲೀಸರು ಏನೂ ಮಾಡದೆ ಸುಮ್ಮನೆ ಕೂತರು.

ತಿರುವಡೂರ್‌ನಲ್ಲಿ, ಊರಿನ ಬಾವಿಯಿಂದ ನೀರು ತೆಗೆದುಕೊಳ್ಳುವಂತೆ ನಾವು ಹರಿಜನರಿಗೆ ಸೂಚಿಸಿ ಕಳಿಸಿದಾಗ ಒಬ್ಬ ಸವರ್ಣ ಹಿಂದೂ ಯುವಕ, ಗರ್ಭಿಣಿಯಾಗಿದ್ದ ಹರಿಜನ ಯುವತಿಯೊಬ್ಬಳ ಮೇಲೆ ಹಲ್ಲೆ ಮಾಡಿದ, ಆಕೆಯ ಕೊಡವನ್ನು ಒಡೆದು ಹಾಕಿದ. ಆಮೇಲೆ ಪೊಲೀಸರು ಆ ಸವರ್ಣ ಹಿಂದೂ ಯುವಕನ ಮೇಲೆ ಆಪಾದನೆ ಹಾಕಿದರು. ಹಾಗೂ ಸಬ್ ಮ್ಯಾಜಿಸ್ಟ್ರೇಟರು ಆತನಿಗೆ ಕೇವಲ ಹದಿನೈದು ರೂಪಾಯಿ ದಂಡ ವಿಧಿಸಿದರು. ಅದಾದ ಮೇಲೆ, ಹರಿಜನರು ಆ ಬಾವಿಯಿಂದ ನೀರೆತ್ತಿಕೊಳ್ಳುತ್ತಿದ್ದಾರೆ. ಕೊಟ್ಟಾಗುಡಿ ಎಂಬಲ್ಲಿ ಒಬ್ಬ ಕ್ಷೌರಿಕ, ಹರಿಜನ ಹುಡುಗನೊಬ್ಬನಿಗೆ ಕ್ಷೌರ ಮಾಡಲು ನಿರಾಕರಿಸಿದಾಗ ಪೊಲೀಸರು ಆರೋಪ ದಾಖಲು ಮಾಡಿ ಸಬ್ ಮ್ಯಾಜಿಸ್ಟ್ರೇಟರು ದಂಡ ವಿಧಿಸಿದರು. ಆದರೆ ಇದಾದ ನಂತರ, ಸವರ್ಣ ಹಿಂದೂಗಳು ಹರಿಜನರನ್ನು ಚಾವಡಿಗೆ ಕರೆಯಿಸಿ, ಅವರೇನಾದರೂ ಕ್ಷೌರಿಕನ ಸೇವೆಗಾಗಿ ಒತ್ತಾಯಿಸಿದರೆ ಅವರೆಲ್ಲರ ಮೇಲೆ ಸಾಮೂಹಿಕ ದಂಡ ವಿಧಿಸುವುದಾಗಿ ಎಚ್ಚರಿಕೆ ನೀಡಿದರು.

ಕಿದರಿಪಟ್ಟಿ ಎನ್ನುವಲ್ಲಿ ಹರಿಜನರು ಸಾರ್ವಜನಿಕ ಕಾಲುದಾರಿಯಲ್ಲಿ ಹೆಣವನ್ನು ಒಯ್ಯಲು ಬಿಡುವುದಿಲ್ಲ. ಆ ಹಳ್ಳಿಯ ರಸ್ತೆಗಳಲ್ಲಿ ಹರಿಜನರು ಸೈಕಲ್ ಸವಾರಿ ಮಾಡಲೂ ಅವಕಾಶ ಕೊಡುವುದಿಲ್ಲ. ಮೇಲೂರು ಎನ್ನುವಲ್ಲಿನ ಸಬ್ ಮ್ಯಾಜಿಸ್ಟ್ರೇಟ್ ನ್ಯಾಯಾಲಯದಲ್ಲಿ, ಹೀಗೆ ಹರಿಜನನೊಬ್ಬ ರಸ್ತೆಯಲ್ಲಿ ಸೈಕಲ್ ಸವಾರಿ ಮಾಡಲು ಅಡ್ಡಿಪಡಿಸಿದ್ದರ ವಿರುದ್ಧ ಒಂದು ಕೇಸು ದಾಖಲಾಗಿ ವಿಚಾರಣೆಗೆ ಕಾಯುತ್ತಿದೆ. ಮೇಲೂರು ತಾಲೂಕು ಕಛೇರಿಯಿಂದ ಕೇವಲ ಮೂರು ಫರ್ಲಾಂಗು ದೂರದಲ್ಲಿರುವ ನಂದಿಕೋವಿಲಪಟ್ಟಿ ಎಂಬಲ್ಲಿ, ಹರಿಜನರಿಗೆ ಸಾರ್ವಜನಿಕ ಬಾವಿಯನ್ನು ಬಳಸಲು ಅವಕಾಶವಿಲ್ಲದೆ ಅವರು ಅಲ್ಲಿನ ಗಲೀಜಾಗಿರುವ ನೀರುನಾಲೆಯಿಂದ ನೀರನ್ನು ಕೊಂಡೊಯ್ಯುತ್ತಿದ್ದರು. ಇದರ ವಿರುದ್ಧ ಪೊಲೀಸರಿಗೆ ಎರಡು ದೂರು ಸಲ್ಲಿಸಲಾಯಿತು. ಅದಾದ ಮೇಲೆ ಸವರ್ಣೀಯ ಹಿಂದೂಗಳು ಹರಿಜನರನ್ನು ತಡೆಯಲು ಧೈರ್ಯ ಮಾಡಲಿಲ್ಲ. ತೆಕ್ಕಿತೇರುನಲ್ಲಿ, ಚಾವಡಿಯಲ್ಲಿ ಸಾರ್ವಜನಿಕ ಸಭೆಯೊಂದು ನಡೆಯುತ್ತಿದ್ದಾಗ ಬಂದು ಕೂತ ಹರಿಜನರ ಮೇಲೆ ಕಲ್ಲುಗಳನ್ನೆಸೆದು ಬೆದರಿಸಲಾಯ್ತು. ಅವರು ಎದ್ದು ಭಯದಿಂದ ಓಡಿಹೋಗುವವರೆಗೂ ಕಲ್ಲುಗಳ ಮಳೆ ನಿಲ್ಲಲಿಲ್ಲ.

ಮೇಲೂರಿನ ಸುಮಾರು ಎರಡು ಮೈಲಿ ದೂರದಲ್ಲಿರುವ ನವಿನಿಪಟ್ಟಿಯಲ್ಲಿ ಪೊಂಗಲ್ ದಿನ ಹರಿಜನರು ಒಳ್ಳೆಯ ಬಟ್ಟೆ ತೊಟ್ಟುಕೊಳ್ಳುವುದನ್ನು ಅಲ್ಲಿನ ಗ್ರಾಮ ಮುನ್ಸೀಫನೇ ಆಕ್ಷೇಪಿಸಿದನೆಂದೂ, ಇಬ್ಬರು ಹರಿಜನ ಯುವಕರು ತೊಟ್ಟುಕೊಂಡಿದ್ದ ಮೇಲಂಗಿಗಳನ್ನು ತೆಗೆಯಿಸಿ ಬೆತ್ತಲುಗೊಳಿಸಿದನೆಂದೂ

ಆಪಾದನೆಯಿದೆ. ಆ ಯುವಕರು ತಮ್ಮ ತಪ್ಪಿಗಾಗಿ ಉದ್ದಂಡ ನಮಸ್ಕಾರ ಮಾಡಿ ಅನಂತರ ಲಂಗೋಟಿಯಲ್ಲಿ ಮನೆಗೆ ವಾಪಸಾಗುವಂತೆ ಮಾಡಲಾಯಿತು.

ಮಧುರೈ ನಗರದಿಂದ ಸುಮಾರು ಹತ್ತು ಮೈಲಿ ದೂರದ ಮಂಕುಲಮ್ ಎಂಬಲ್ಲಿ ನಡೆದ ಘಟನೆಗಳು ತೀರ ನೋವಿನ, ತುಳಿತದ ಸಂಗತಿಗಳು. ಅಲ್ಲಿ ಗ್ರಾಮ ಮುನ್ಸೀಫನೂ ಹರಿಜನರ ಬಗ್ಗೆ ದ್ವೇಷ ತಾಳಿದ್ದ. ಅಲ್ಲಿ, ಇಬ್ಬರು ಹರಿಜನ ಯುವಕರು ಚಾ ಅಂಗಡಿಗೆ ಹೋದಾಗ ಅವರಿಗೆ ಒಳಹೋಗಲು ಬಿಡಲಿಲ್ಲ. ಅವರು ಪೊಲೀಸರಿಗೆ ದೂರು ಕೊಟ್ಟರು. ದೂರು ಕೊಟ್ಟದ್ದಕ್ಕಾಗಿ ಅವರೊಲ್ಲೊಬ್ಬನನ್ನು ಕಂಬಕ್ಕೆ ಕಟ್ಟಿ ಥಳಿಸಲಾಯಿತು. ಊರಿನ ಹಿರಿಯರ ಆಜ್ಞೆಯಂತೆ ಸವರ್ಣ ಹಿಂದೂ ಹುಡುಗನೊಬ್ಬ ಅವನನ್ನು ಥಳಿಸಿದ. ಇನ್ನೊಬ್ಬ ಹರಿಜನ ವ್ಯಕ್ತಿಯ ಮೇಲೆ ಗ್ರಾಮ ಮುನ್ಸೀಫನ ಸೇವಕನೇ ಚೂರಿ ಹಿಡಿದು ಹಲ್ಲೆ ಮಾಡಿದ. ಒಮ್ಮೆ ಹರಿಜನರು ಸಾರ್ವಜನಿಕ ಬಾವಿಯಿಂದ ನೀರು ಎತ್ತಿದರೆಂಬ ಕಾರಣಕ್ಕಾಗಿ ಅವರ ಮೇಲೆ ಬಹಿಷ್ಕಾರ ಹಾಕಿದರು ಮತ್ತು ಅವರಿಗೆ ಯಾರೂ ಕೆಲಸ ಕೊಡಬಾರದೆಂದು ನಿರ್ಣಯಿಸಿದರು. ಅಂಗಡಿಯವರೂ ಅವರನ್ನು ಬಹಿಷ್ಕರಿಸಿದ್ದರಿಂದ ಅವರು ಎರಡು ದಿನ ಉಪವಾಸವಿರಬೇಕಾಯಿತು. ಅಲ್ಲಿನ ಪ್ರಾಂತಾಧಿಕಾರಿ ಮಧ್ಯೆ ಪ್ರವೇಶಿಸಿದ ಮೇಲೆ ಪರಿಸ್ಥಿತಿ ಸುಧಾರಿಸಿತು.

ಇತ್ತೀಚೆಗೆ, ಇಬ್ಬರು ಹರಿಜನರು ಮತ್ತು ನಾನು ಕೂಡಿ ಕೊಳದಲ್ಲಿ ಸ್ನಾನ ಮಾಡಿ ಚಾವಡಿ ಎದುರಿನ ಕಾಫಿ ಹೋಟೆಲ್‌ಗೆ ಹೋದೆವು. ಸವರ್ಣೀಯ ಹಿಂದೂಗಳ ಒಂದು ತಂಡ ನಮ್ಮ ಮೇಲೆ ಹಲ್ಲೆ ಮಾಡಿ ನಮ್ಮನ್ನು ಕಟ್ಟಿಗೆಯ ಕೋಲುಗಳಿಂದ ಥಳಿಸಿತು. ಆಮೇಲೆ ನಮ್ಮನ್ನು ಮಧುರೈನಲ್ಲಿರುವ ಸರ್ಕಾರಿ ಆಸ್ಪತ್ರೆಗೆ ಸೇರಿಸಿ ಶುಶ್ರೂಷೆ ಮಾಡಿಸಲಾಯ್ತು. ಈ ಸಂದರ್ಭದಲ್ಲಿ ನನ್ನ ಬಲಗಾಲಿನ ಎಲುಬು ಬಿರುಕಾಗಿ ನಾನು ಬಲಗಾಲನ್ನೂರಿ ನಡೆಯದಂತಾಗಿದೆ. ಇಲ್ಲಿ, ಇಲ್ಲಿನ ಗ್ರಾಮ ಮುನ್ಸೀಫನೂ ಸೇರಿದಂತೆ ಹದಿನಾರು ಜನ ಹಲ್ಲೆ ಮಾಡಿದರೆಂಬ ಅಪರಾಧಕ್ಕಾಗಿ ಪೊಲೀಸರೇ ಅವರ ಮೇಲೆ ಮೊಕದ್ದಮೆ ದಾಖಲು ಮಾಡಿದ್ದಾರೆ. ಕೆಲವು ಕಾಂಗ್ರೆಸಿಗರು ಈ ಮೊಕದ್ದಮೆಗೆ ಸಂಬಂಧಿಸಿ ರಾಜಿ ಮಾಡಿಸಲು ಪ್ರಯತ್ನಿಸುತ್ತಿದ್ದಾರೆ. ಇದಕ್ಕೆ ಕಾರಣ, ಅವರ ಸಂಬಂಧಿಗಳೂ ಮೊಕದ್ದಮೆಯಲ್ಲಿ ಪಾಲುಗೊಂಡಿದ್ದಾರೆ. ಈ ಕಾಂಗ್ರೆಸ್ ಮಿತ್ರರು ಈ ಸಂಬಂಧ ಮೇಲಿನ ಅಧಿಕಾರಿಗಳನ್ನು ಸಂಪರ್ಕಿಸಿದ್ದಾರೆ ಎನ್ನಲಾಗಿದೆ. ಮಹಾತ್ಮಾಜಿ ಹರಿಜನರನ್ನು ನಮ್ಮ ರಕ್ತಬಂಧುಗಳೆಂದು ಕಾಣಬೇಕು ಎಂದಿದ್ದರು. ಆದರೆ, ದುರ್ದೈವ, ರಕ್ತ ನೀರಿಗಿಂತ ಹೆಚ್ಚು ಮಂದವಾಗಿದೆ.

ಮಹಾತ್ಮಾಜಿ ತಮ್ಮ ಅಪಾರತ್ಯಾಗದಿಂದ ನಮಗೆ ಸ್ವಾತಂತ್ರ್ಯ ತಂದುಕೊಟ್ಟರು ಮತ್ತು ದಲಿತರಾದ ಹರಿಜನರಿಗೂ ಈ ಸ್ವಾತಂತ್ರ್ಯ ಸಿಗುವಂತೆ ನಾವು ಮಾಡಬೇಕು ಎಂದು ಅಪೇಕ್ಷಿಸಿದರು. ಈ ಹಿನ್ನೆಲೆಯಲ್ಲಿ ಸವರ್ಣೀಯ ಹಿಂದೂಗಳ ಮನೋಭಾವವನ್ನು ಗಮನಿಸಿದರೆ, ಅಸಹ್ಯವೆನಿಸುತ್ತದೆ, ಹತಾಶೆ ಮೂಡುತ್ತದೆ. ರೆವಿನ್ಯೂ ಮತ್ತು ಪೊಲೀಸು ಅಧಿಕಾರಿಗಳು ಹರಿಜನರ ಸಂಕಷ್ಟಗಳನ್ನು ನಿವಾರಿಸಲು ಬೇಕಾದಷ್ಟು ಕೆಲಸ ಮಾಡಬಹುದು, ಮಹಾತ್ಮಾಜಿಯ ಮಗ ಮಣಿಲಾಲ್, ದಕ್ಷಿಣ ಆಫ್ರಿಕಾದಲ್ಲಿ ಭಾರತೀಯರ ವಿರುದ್ಧ ಇರುವ ಭೇದ ಪಕ್ಷಪಾತಗಳನ್ನು ನಿವಾರಿಸಲು ಸತ್ಯಾಗ್ರಹ ಹೂಡುತ್ತೇನೆ ಎಂದು ಮುಂದೆ ಬಂದಿದ್ದಾರೆ. ಆದರೆ, ನಾವು ನಮ್ಮಲ್ಲಿ, ಮಹಾತ್ಮಾಜಿ ಯಾರನ್ನು ತನ್ನ ಕುಲಬಂಧುಗಳೆಂದು ಆತ್ಮೀಯಗೊಳಿಸಿಕೊಂಡರೋ ಅಂಥ ಹರಿಜನರಿಗೆ ಬೇರೆಡೆ ಅವರು ಅಪೇಕ್ಷಿಸುವ ಅಂಥದೇ ಸ್ವಾತಂತ್ರ್ಯವನ್ನು ನೀಡಲು ನಿರಾಕರಿಸಿದ್ದೇವೆ. ಮಹಾತ್ಮಾಜಿಯವರನ್ನು ಕೊಂಡಾಡುವ ಸವರ್ಣೀಯ ಹಿಂದೂಗಳೂ ಕಾಂಗ್ರೆಸ್ಸಿಗರೂ – ಈ ದೇಶದ ಮೂಲೆಮೂಲೆಗಳಲ್ಲಿ, ಬೇರು ಕೊಂಬೆಗಳು ಬಿಡದಂತೆ, ದೇಶಾದ್ಯಂತ ಅಸ್ಪೃಶ್ಯತೆಯ ಶಾಪ ಸಂಪೂರ್ಣ ಮೂಲೋತ್ಪಾಟನೆಯಾಗುವ ತನಕ ಅವರ ಆತ್ಮ ಶಾಂತಿಯಲ್ಲಿ ನೆಲೆಸುವುದಿಲ್ಲ

ಎನ್ನುವುದನ್ನು ನೆನಪಿಡಬೇಕು. ನಮ್ಮ ಸರ್ಕಾರ ಕೂಡ, ನಮ್ಮ ಸಮಾಜದಿಂದ ಈ ಉಗ್ರರೋಗವನ್ನು ನಿರ್ನಾಮಗೊಳಿಸುವುದಕ್ಕೆ ಇನ್ನೂ ಹೆಚ್ಚಿನ ಪ್ರಯತ್ನ ಮಾಡಬೇಕು ಎನ್ನುವುದನ್ನು ಮನಗಾಣಬೇಕು.

## ಅನುಬಂಧ III

## ಹರಿಜನರ ವಿರುದ್ಧ ಅಂಧಾ ದರ್ಬಾರ್ ನ್ಯಾಯ

(ತುಂಬಪಟ್ಟಿಯಲ್ಲಿ ಕ್ರೂರ ನಿರ್ಲಜ್ಜ ಅತ್ಯಾಚಾರಗಳು)
ಹಳ್ಳಿಗಳಲ್ಲಿ ಚಾವಡಿ ನ್ಯಾಯಾಲಯಗಳನ್ನು ರದ್ದುಗೊಳಿಸಿ

**ಚಾವಡಿ ನ್ಯಾಯಾಲಯಗಳು**

ತಮಿಳುನಾಡಿನ ಸಾರ್ವಜನಿಕ ಗ್ರಾಮಚಾವಡಿಗಳಲ್ಲಿ ಹರಿಜನರ ಪ್ರವೇಶಕ್ಕೆ ನಿಷೇಧವಿದೆ ಎನ್ನುವುದು ಎಲ್ಲರಿಗೂ ಗೊತ್ತಿರುವ ಸಂಗತಿ. ಆದರೆ, ಈ ಚಾವಡಿಗಳಲ್ಲೇ ಸವರ್ಣೀಯ ಹಿಂದೂಗಳು ಹರಿಜನರ ವಿಚಾರಣೆಗಳನ್ನು ನಡೆಸಿ ಅವರನ್ನು ಬಲಿಪಶುಗಳನ್ನಾಗಿ ಮಾಡುತ್ತಾರೆ. ಇದರ ಪರಿಣಾಮವೆಷ್ಟೆಂದರೆ ಹರಿಜನರು ಯಾವ ಕಾಲಕ್ಕೂ ಸವರ್ಣೀಯ ಹಿಂದೂಗಳ ಭಯದಲ್ಲೇ ಬದುಕುತ್ತಾರೆ. ಹರಿಜನರಿಗಿರುವ ಸಾಮಾಜಿಕ ನಿಷೇಧಗಳ ವಿರುದ್ಧ ನಾವು ಚಳವಳಿ ನಡೆಸುವಾಗ, ಹರಿಜನರೇ ಪ್ರತಿಕ್ರಿಯಿಸುವುದಿಲ್ಲ. ಇದಕ್ಕೆ ಒಂದು ಮುಖ್ಯ ಕಾರಣವೆಂದರೆ, ಗ್ರಾಮದಲ್ಲಿ ಸವರ್ಣೀಯ ಹಿಂದೂಗಳ ನಾಯಕನಾಗಿರುವ ಚಾವಡಿ 'ಹೆಗ್ಗಡೆ'ಯ ನೇತೃತ್ವದಲ್ಲಿ, ಆ ಸವರ್ಣೀಯ ಹಿಂದೂಗಳು ತಮ್ಮನ್ನು ನಿರ್ನಾಮಗೊಳಿಸಿಬಿಡುತ್ತಾರೆ ಎನ್ನುವ ಹರಿಜನರ ಸತತವಾದ ಭಯ. ಅನೇಕ ಕಡೆಗಳಲ್ಲಿ, ಗ್ರಾಮಸಭೆಯ ಹೆಸರಿನಲ್ಲಿ ಗ್ರಾಮಸ್ಥರು ಈ ಗ್ರಾಮಚಾವಡಿಗಳನ್ನು ನಡೆಸುತ್ತಾರೆ. ಬಡ ಹರಿಜನರನ್ನು ಅಲ್ಲಿಗೆ ಕರೆಸಿ, ಅವರನ್ನು ಗುಲಾಮರ ಹಾಗೆ ವಿಚಾರಣೆಗೆ ಒಳಪಡಿಸುತ್ತಾರೆ. ಹರಿಜನರಲ್ಲಿ ಯಾರಾದರೂ 'ಹೆಗ್ಗಡೆ'ಯ ಆಜ್ಞೆಗಳಿಗೆ ವಿರೋಧವಾಗಿ ನಡೆದುಕೊಂಡರೆ, ಅಂಥಲ್ಲಿ ಅಂಧಾದರ್ಬಾರ್ ನ್ಯಾಯ ಬಳಕೆಯಾಗುತ್ತದೆ. ಗ್ರಾಮದ 'ಹೆಗ್ಗಡೆ'ಗೆ ಇರುವ ಸರ್ವಾಧಿಕಾರವನ್ನು ಪ್ರದರ್ಶಿಸಿ ತೋರಿಸುವುದಕ್ಕೆ ಮತ್ತು ಅವರಲ್ಲಿ ಭಯ ಹುಟ್ಟಿಸಲು ಅವರನ್ನು ನಿಷ್ಕರುಣೆಯಿಂದ ಥಳಿಸಿ ಹಿಂಸಿಸಲಾಗುತ್ತದೆ. ಚಾವಡಿಗಳಲ್ಲಿ ಹರಿಜನರನ್ನು ಹೀಗೆ ಬಲಿಯಾಗಿಸುವ ಕೆಲಸ ಅನೇಕ ಪ್ರಕಾರಗಳಲ್ಲಿ ನಡೆಯುತ್ತದೆ – ಸನ್ನಿವೇಶವನ್ನನುಸರಿಸಿ ಮತ್ತು 'ಹೆಗ್ಗಡೆ'ಯ ಹಾಗೂ ಪಂಚಾಯಿತಿ ಸದಸ್ಯರ ಮನೋಲಹರಿಯನ್ನನುಸರಿಸಿ ಸಾರ್ವಜನಿಕವಾಗಿ ಚಾಟಿ ಏಟು, ಹೇರಳವಾದ ದಂಡ ಹಾಗೂ ಅದನ್ನು ಕೊಡದಿದ್ದ ಪಕ್ಷದಲ್ಲಿ ವಸ್ತು, ಆಸ್ತಿಗಳ ಮುಟ್ಟುಗೋಲು, ಸುಳ್ಳು ಮೊಕದ್ದಮೆಗಳ ದಾಖಲೆ, ಕೆಲಸ ಕೊಡದೆ, ಸಂಬಳ ತಡೆಹಿಡಿದು ಮುಂತಾಗಿ ಹೇರುವ ಆರ್ಥಿಕ ಬಹಿಷ್ಕಾರ, ಸಾಮಾಜಿಕ ಸಮಾರಂಭ, ಧಾರ್ಮಿಕ ಆಚರಣೆ ಇತ್ಯಾದಿಗಳಲ್ಲಿ ಭಾಗವಹಿಸದಂತೆ ಸಾಮಾಜಿಕ ದಿಗ್ಬಂಧನ, ಕೊಳ, ಬಾವಿಗಳಿಗೆ ಪ್ರವೇಶ ಕೊಡದೆ ನೀರಿಲ್ಲದಂತೆ ಮಾಡುವುದು, ಹಳ್ಳಿಯ ಅಂಗಡಿಗಳಲ್ಲಿ ಅವರಿಗೆ ಆಹಾರ ಪದಾರ್ಥಗಳನ್ನು ಮಾರದಂತೆ ತಡೆಹಿಡಿದು ಹಸಿದುಕೊಂಡಿರುವಂತೆ ಮಾಡುವುದು ಇತ್ಯಾದಿ ಇತ್ಯಾದಿ. ಗ್ರಾಮಸ್ಥರು ಪಂಚಾಯಿತಿಯ ಹೆಸರಿನಲ್ಲಿ ಇಂಥ ಕಾನೂನು ಹಾಗೂ ನ್ಯಾಯಬಾಹಿರವಾದ ಸ್ವೇಚ್ಛೆಯ ನ್ಯಾಯಾಲಯಗಳನ್ನು ನಡೆಸದ ಹಾಗೆ ಸರ್ಕಾರ ಕಟ್ಟುನಿಟ್ಟಿನ ಕಠಿಣ ಕ್ರಮಗಳನ್ನು ಕೈಗೊಂಡಾಗ ಮಾತ್ರವೇ ಹರಿಜನರ ವಿಮೋಚನೆ ಸಾಧ್ಯ.

ಮೇಲೆ ಹೇಳಿದ ಹಲವು ರೀತಿಗಳಲ್ಲಿ ಹಳ್ಳಿಗಳು ಹಿಂದುಳಿದ ಮತ್ತು ಅಲ್ಪಸಂಖ್ಯಾತ ಸಮುದಾಯವನ್ನು ದಂಡಿಸಿ ಹಿಂಸಿಸುವಾಗ ಯಾವುದೇ ನಾಗರಿಕ ಸರ್ಕಾರ ಅದನ್ನು ತಾಳಿಕೊಂಡು ತೆಪ್ಪಗಿರಬಾರದು.

**ತುಂಬಪಟ್ಟಿಯಲ್ಲಿ ಅತ್ಯಾಚಾರಗಳು**

೧೯೫೩ ಆಗಸ್ಟ್ ೧ ರಂದು ತುಂಬಪಟ್ಟಿಯಲ್ಲಿ ನಡೆದ ಹರಿಜನರ ವಿಚಾರಣೆಯ ಕೆಳಗಿನ ವಿವರಗಳು ಹೃದಯದಲ್ಲಿ ನೆತ್ತರನ್ನುಕ್ಕಿಸುತ್ತವೆ. ಈ ಹಳ್ಳಿ ಮಧುರೆಯಿಂದ ಇಪ್ಪತ್ತೆರಡು ಮೈಲು ದೂರದಲ್ಲಿದೆ. ಪಾರ್ಲಿಮೆಂಟ್ ಸದಸ್ಯರೂ ತಮಿಳುನಾಡಿನ ಪ್ರಮುಖ ಹರಿಜನ ನಾಯಕರಲ್ಲಿ ಒಬ್ಬರೂ ಆಗಿರುವ ಶ್ರೀ ಪಿ.ಕಕ್ಕನ್ ಈ ಊರಿನವರು.

ಘಟನೆ ಇದು : ಹರಿಜನ ಕೇರಿಯಲ್ಲಿರುವ ವಯಸ್ಕರೆಲ್ಲರೂ ಚಾವಡಿಯ ಎದುರಿನ ಅಂಗಳಕ್ಕೆ ಬಂದು ಸೇರತಕ್ಕದ್ದೆಂದು ಹೇಳಿಕಳುಹಿಸಿ ಕರೆಸಲಾಯ್ತು. ಅಲ್ಲಿದ್ದ ಸವರ್ಣೀಯ ಹಿಂದೂಗಳು ರೂಢಿಯಂತೆ ಗ್ರಾಮದ 'ಹೆಗ್ಗಡೆ'ಗೂ ಪಂಚಾಯಿತಿ ಸದಸ್ಯರಿಗೂ ಹೊಟ್ಟೆಯನ್ನು ನೆಲಕ್ಕೆ ಮುಟ್ಟಿಸಿ ಉದ್ದಂಡ ನಮಸ್ಕಾರ ಮಾಡಿದರು. ಆಮೇಲೆ, ಹರಿಜನರ ಪೈಕಿ ಹತ್ತು ಹನ್ನೆರಡು ಯುವಕರನ್ನು, ಊರಿನಲ್ಲಿ ಆಗಾಗ ನಡೆಯುತ್ತಿದ್ದ ಹಲವಾರು ಸಣ್ಣಪುಟ್ಟ ಕಳ್ಳತನಗಳ ಬಗ್ಗೆ ಅನುಮಾನವಿದೆಯೆನ್ನುವ ಕಾರಣ, ಪ್ರತ್ಯೇಕ ವಿಚಾರಣೆಗೆ ನಿಲ್ಲಿಸಲಾಯ್ತು. ಆ ಹರಿಜನ ಯುವಕರಲ್ಲೂ ಯಾರು ಸವರ್ಣೀಯ ಹಿಂದೂಗಳಿಗೆ ಸಾಮಾನ್ಯವಾಗಿ ವಿಧೇಯರಾಗಿದ್ದರೋ ಅಂಥವರನ್ನು ಬಿಟ್ಟು ಸ್ವಲ್ಪ ಸೆಟೆಸಿ ನಿಂತವರನ್ನು ಪ್ರತ್ಯೇಕಿಸಲಾಯ್ತು. ಅಂಥವರನ್ನು ಹಿಡಿದು ಕೋಲಿನಿಂದ ಚೆನ್ನಾಗಿ ಥಳಿಸಿ, ಕಳ್ಳತನವನ್ನು ಒಪ್ಪಿಕೊಳ್ಳುವಂತೆ ಒತ್ತಾಯಿಸಲಾಯ್ತು. ಉಳಿದ ಹರಿಜನರನ್ನು ಮತ್ತೆ ಪ್ರಶ್ನಿಸಿದಾಗ, ತಮ್ಮನ್ನು ಮುಗಿಸಿಬಿಡುತ್ತಾರೆಂಬ ಹೆದರಿಕೆಯಿಂದ ಅವರು, ಆ ಕೆಲವರೇ ಎಲ್ಲಾ ಕಳ್ಳತನಕ್ಕೂ ಕಾರಣರೆಂದು ಹೇಳಿಕೆ ಕೊಟ್ಟರು. ಅಂತಿಮವಾಗಿ ಆ ಕೆಲವು ಯುವಕರು ಅಪರಾಧಿಗಳೆಂದು ತೀರ್ಪು ಕೊಡಲಾಯ್ತು. ಅವರಿಗೆ ಸೂಕ್ತ ದಂಡನೆ ವಿಧಿಸುವುದಕ್ಕಾಗಿ ಕೈಕೋಳ ತೊಡಿಸಲಾಯ್ತು. ಆದರೆ ಅವರಲ್ಲೊಬ್ಬ ಇದನ್ನು ಆಕ್ಷೇಪಿಸಿದ ಮತ್ತು ಹೇಗೋ ತಪ್ಪಿಸಿಕೊಳ್ಳಲು ಯತ್ನಿಸಿದ. ಆತ ಚಾವಡಿಗೆ ಅಗೌರವ ತೋರಿಸಿದನೆಂದು ಗ್ರಾಮಸ್ಥರೆಲ್ಲ ಅಸಮಾಧಾನ ವ್ಯಕ್ತಪಡಿಸಿದರು. ಆದಾದ ಮೇಲೆ ಚಾವಡಿಯ 'ಹೆಗ್ಗಡೆ', ಈ ಹರಿಜನ ಯುವಕರಿಗೆ ತಕ್ಕ ದಂಡನೆಯಾಗತಕ್ಕದ್ದೆಂದು ಪಂಚಾಯಿತಿ ಆಜ್ಞೆಯನ್ನು ಪ್ರಕಟಿಸಿದ. ಸ್ವೇಚ್ಛಾನ್ಯಾಯ ಬಳಕೆಗೆ ಬಂದಿತು. ಹರಿಜನ ಯುವಕರ ಮೇಲೆ ಅತ್ಯಂತ ಕ್ರೂರ ಹಲ್ಲೆ ನಡೆಯಿತು. ಹರಿಜನರ ಮೇಲೆ ಬೇರೆ ಯಾವುದೋ ಅಸಮಾಧಾನ ಆಕ್ಷೇಪಗಳಿದ್ದವರಿಗೆಲ್ಲ, ನ್ಯಾಯದಂಡನೆಯ ಈ ನೆಪವೇ ರಕ್ಷಣೆಯಾಗಿ, ಇದೇ ತಕ್ಕ ಅವಕಾಶವೆಂದು ಸೇಡು ತೀರಿಸಿಕೊಳ್ಳಲು ಮುಂದಾದರು. ತಪ್ಪಿಸಿಕೊಳ್ಳಲು ಯತ್ನಿಸಿದ್ದ ಹರಿಜನ ಯುವಕನನ್ನು ನೆಲಕ್ಕೆ ಕೆಡವಿ ಕಾಲು ಹಿಡಿದು ಒರಟು ನೆಲದ ಮೇಲೆ ದರದರ ಎಳೆದರು. ಉಳಿದವರನ್ನು ಕೋಲಿನಿಂದ ಥಳಿಸಿ ಮರಕ್ಕೆ ಕಟ್ಟಿದರು. ಮರಕ್ಕೆ ಕಟ್ಟಿ ಮತ್ತೆ ಎಲುಬು ಮುರಿಯುವತನಕ ಥಳಿಸಿದರು. ಆಮೇಲೆ ಸುಮಾರು ಎಂಟು ತಾಸುಗಳ ಕಾಲ, ಮರಕ್ಕೆ ಕಟ್ಟಿದ್ದಂತೆಯೇ ಸಾರ್ವಜನಿಕ ಅವಹೇಳನಕ್ಕೆ ಗುರಿಮಾಡಿ, ಕರುಣಾಜನಕ ಸ್ಥಿತಿಯಲ್ಲಿ ನಿಲ್ಲಿಸಿದರು.

**ಸುಳ್ಳು ಮೊಕದ್ದಮೆಗಳ ದಾಖಲೆ**

ಇಷ್ಟಕ್ಕೆ ಬಿಡದೆ ಗ್ರಾಮಸ್ಥರು ಮತ್ತೂ ಮುಂದುವರಿದದ್ದು ತೀರ ಹೀನಕೃತ್ಯ. ಹರಿಜನರ ಮೇಲೆ ಬೇಕಾದಾಗ ಸುಳ್ಳು ಮೊಕದ್ದಮೆ ಹಾಕಿ ಪೋಲೀಸರು ತತ್‌ಕ್ಷಣ ಕ್ರಮ ಕೈಗೊಳ್ಳುವಂತೆ ಮಾಡುವುದು ಇಲ್ಲಿ ರೂಢಿಯ ಸಂಗತಿ. ಹರಿಜನರಿಗೆ ತೀವ್ರ ಗಾಯಗಳಾಗಿವೆ ಎಂಬುದು ಅರಿವಾದಾಗ ಗ್ರಾಮಸ್ಥರು ತಾವು

ಮುಂದೆ ತೊಂದರೆಗೆ ಸಿಕ್ಕಿಕೊಳ್ಳಬಹುದೆಂಬುದನ್ನು ಮನಗಂಡರು. ಆಗ, ಅಲ್ಲಿ ಗ್ರಾಮದ ತೋಟಿಯಾಗಿ ಕೆಲಸ ಮಾಡುತ್ತಿದ್ದ ವೃದ್ಧ ಶ್ರೀ ಪೂಸರಿ ಕಕ್ಕನ್ ಎನ್ನುವವನಿಗೆ (ಈತ ಲೋಕಸಭಾ ಸದಸ್ಯ ಶ್ರೀ ಪಿ. ಕಕ್ಕನ್ ಅವರ ತಂದೆ, ಎಂಬತ್ತೈದು ವರ್ಷದ ವೃದ್ಧ) ಊರಿನ ಹರಿಜನ ದೇವಸ್ಥಾನದಲ್ಲಿ ಹಿಂದಣ ದಿನ ಸಂಜೆ ಕೆಲವು ವಸ್ತುಗಳು ಕಳುವಾಗಿವೆ ಎಂದು ಪೊಲೀಸರಿಗೆ ಸುಳ್ಳು ದೂರು ಕೊಡಲು ಹೇಳಿದರು. ಜೊತೆಗೆ, ಈ ವಸ್ತುಗಳು ಹರಿಜನ ಯುವಕರ ಬಳಿ ದೊರಕಿದವೆಂದು ಗ್ರಾಮ ಮುನ್ಸೀಫರಿಂದ ಪೊಲೀಸರಿಗೆ ವರದಿ ಕಳಿಸಲಾಯ್ತು. ಶ್ರೀ ಪೂಸರಿ ಕಕ್ಕನ್ ಮತ್ತು ಆತನ ಜೊತೆಯಲ್ಲಿ ಗ್ರಾಮದಲ್ಲಿ ಇನ್ನೊಬ್ಬ ತೋಟಿಯಾಗಿ ಕೆಲಸ ಮಾಡುತ್ತಿದ್ದ ಈತನ ಸಂಬಂಧಿಕ ಶ್ರೀ ಎಟ್ಟಿಕಕ್ಕನ್ – ಈ ಇಬ್ಬರು ಆ ವಸ್ತುಗಳನ್ನು ಗ್ರಾಮದ ಮುನ್ಸೀಫರಿಗೆ ತಾವೇ ತಂದುಕೊಟ್ಟರಂತೆ. ಮುನ್ಸೀಫರ ವರದಿ ಬಂದ ತತ್‌ಕ್ಷಣವೇ ಪೊಲೀಸರು ಬಂದು, ಕಳುವಿನ ಆಪಾದನೆಯ ಮೇಲೆ ಈ ಹರಿಜನ ಯುವಕರನ್ನು ಬಂಧಿಸಿದರು ಮತ್ತು ಮೈತುಂಬ ಗಾಯಗಳಿದ್ದ ಕಾರಣ ಅವರನ್ನು ಆಸ್ಪತ್ರೆಗೆ ಸೇರಿಸಲಾಯ್ತು. ಪೊಲೀಸರ ಈ ಕೃತ್ಯವನ್ನು ಸಾರ್ವಜನಿಕವಾಗಿ ಟೀಕಿಸಬೇಕೆಂಬುದು ನಮ್ಮ ಇರಾದೆಯಲ್ಲ. ಗ್ರಾಮಸ್ಥರು ಹರಿಜನರ ಮೇಲೆ ನಡೆಸಿದ ಅತ್ಯಾಚಾರ, ಅನಾಚಾರಗಳನ್ನು ಪೊಲೀಸರ ಅಧಿಕಾರದ ಕಣ್ಣು ಗ್ರಹಿಸಲೇ ಇಲ್ಲ ಎಂದು ಮಾತ್ರ ಹೇಳಬಯಸುತ್ತೇವೆ.

**ಹೊರಬಿದ್ದ ಸತ್ಯ**

ಇದೆಲ್ಲ ಆದ ಮೇಲೆ ಗ್ರಾಮಸ್ಥರು, ತಮ್ಮ ನಡವಳಿಕೆಗಳನ್ನು ಸಮರ್ಥಿಸಿಕೊಂಡು ತಮಿಳುನಾಡು ಹರಿಜನ ಸೇವಕ ಸಂಘದ ಅಧ್ಯಕ್ಷ ಶ್ರೀ ವೈದ್ಯನಾಥ್ ಅಯ್ಯರ್ ಅವರಿಗೆ ಒಂದು ಸಾಮೂಹಿಕ ಅರ್ಜಿ ಸಲ್ಲಿಸುವಷ್ಟು ಒಳ್ಳೆಯತನ ತೋರಿಸಿದರು. ಈ ಅರ್ಜಿಯನ್ನು ತನಿಖೆ ಮಾಡಿ ವರದಿ ಸಲ್ಲಿಸಲೆಂದು ನನಗೆ ಕಳುಹಿಸಲಾಯ್ತು. ಮೇಲೂರು ತಾಲೂಕು ಕಾಂಗ್ರೆಸ್ ಕಮಿಟಿ ಅಧ್ಯಕ್ಷ, ತಾಲೂಕು ಹರಿಜನ ಸೇವಕ ಸಂಘದ ಕಾರ್ಯದರ್ಶಿ, ಸೇವಾ ಸಮಾಜದ ಕಾರ್ಯದರ್ಶಿ ಮತ್ತು ನಾನು ಕೂಡಿದ ಒಂದು ಚಿಕ್ಕ ಸಮಿತಿ ರಚನೆಯಾಗಿ ತನಿಖೆ ಪ್ರಾರಂಭಿಸಿದೆವು. ತನಿಖೆಯಲ್ಲಿ ಹೊರಬಿದ್ದ ಅಂಶವೆಂದರೆ – ಗ್ರಾಮಸ್ಥರು ಹರಿಜನ ಯುವಕರ ಮೇಲೆ ನಿಷ್ಕರುಣೆಯಿಂದ ಹಲ್ಲೆ ನಡೆಸಿದ್ದು ಮತ್ತು ಸುಮಾರು ಎಂಟು ತಾಸುಗಳ ಕಾಲ, ಪೊಲೀಸರು ಅಲ್ಲಿ ಹಾಜರಾಗುವತನಕ, ಆ ಯುವಕರನ್ನು ಮರಕ್ಕೆ ಬಿಗಿದು ನಿಲ್ಲಿಸಿದ್ದು ನಿಜ ಎನ್ನುವುದು. ಶ್ರೀ ಪೂಸರಿ ಕಕ್ಕನ್ ಮತ್ತು ಊರಿನ 'ಹೆಗ್ಗಡೆ' ಕೊಟ್ಟ ದೂರುಗಳ ಬಗ್ಗೆ ಶ್ರೀ ವೈದ್ಯನಾಥ್ ಅಯ್ಯರ್ ವಿಚಾರಣೆ ನಡೆಸಿದಾಗ, ಆ ದೂರು ಸಂಪೂರ್ಣ ಸುಳ್ಳು ಮತ್ತು ಕಪೋಲಕಲ್ಪಿತ ಎನ್ನುವುದನ್ನು ಅವರೇ ಒಪ್ಪಿಕೊಂಡರು. ಹರಿಜನರ ಮೇಲೆ ನಡೆದ ಅನ್ಯಾಯಕ್ಕಾಗಿ 'ಹೆಗ್ಗಡೆ' ಖೇದವನ್ನೂ ವ್ಯಕ್ತಪಡಿಸಿದನಂತೆ. ಅದೇ ದೂರನ್ನು ಕುರಿತು ಪೊಲೀಸರು ಕೂಡ ವಿಚಾರಣೆ ನಡೆಸಿ ಕೊನೆಯಲ್ಲಿ ಇದು "ಶೋಧಕ್ಕೆ ಸಿಗಲಾರದ್ದು' ಎಂಬ ಅಭಿಪ್ರಾಯಕ್ಕೆ ಬಂದರು. ಆದರೆ ಗ್ರಾಮಸ್ಥರ ಮೇಲೆ ಯಾವುದೇ ಮೊಕದ್ದಮೆ ದಾಖಲಾಗಲೇ ಇಲ್ಲ. ಹರಿಜನ ಯುವಕರ ಮೂಳೆ ನಿಜವಾಗಿಯೂ ಮುರಿದಿರಲಿಲ್ಲ ಎಂದು ತಿಳಿಯಿತು. ಅವರ ದೇಹದ ಮೇಲೆ ದೊಣ್ಣೆಯ ಪೆಟ್ಟಿನ ಬಾಸುಂಡೆಗಳು ಮತ್ತು ಬಿಗಿದ ಹಗ್ಗದ ಗುರುತುಗಳು ಅನೇಕ ದಿನಗಳ ಕಾಲ ಸ್ಪಷ್ಟ ಕಾಣುತ್ತಿದ್ದವಂತೆ. ಅವರಲ್ಲಿ ಇಬ್ಬರನ್ನು ಎರಡು ದಿನ ಆಸ್ಪತ್ರೆಯಲ್ಲಿ ಇಟ್ಟುಕೊಂಡಿದ್ದರು. ಕಾಲಿನ ಮೂಳೆ ಮುರಿದಿದೆಯೇ ಎಂದು ಎಕ್ಸ್‌ರೇ ಮಾಡಿ ನೋಡಿದರು. ಆಮೇಲೆ ಕಾಲಿಗೆ ಪ್ಲಾಸ್ಟರ್ ಹಾಕಿ ಆಸ್ಪತ್ರೆಯಿಂದ ಕಳುಹಿಸಿಕೊಟ್ಟರು. ಸುಮಾರು ಹದಿನೈದು ದಿನಗಳ ಕಾಲ ಅವರಿಗೆ ಸರಿಯಾಗಿ ನಡೆಯಲು ಸಾಧ್ಯವಾಗಲಿಲ್ಲ.

**ವಿಚಾರಣೆ ನಡೆಸಿದ್ದು**

ಡೆಪ್ಯುಟಿ ಕಲೆಕ್ಟರ್ ಅವರ ಸೂಚನೆ ಮೇಲೆ ಮಧುರೆಯ ಡೆಪ್ಯುಟಿ ವೆಲ್‌ಫೇರ್ ಆಫೀಸರ್ (ಉಪಕಲ್ಯಾಣಾಧಿಕಾರಿ) ಒಂದು ವಿಚಾರಣೆಯನ್ನು ನಡೆಸಿದರಂತೆ. ಇತ್ತೀಚೆಗೆ, ಸರ್ಕಾರದ ಆಜ್ಞೆಯನ್ನನುಸರಿಸಿ ರೆವಿನ್ಯೂ ಡಿವಿಜನಲ್ ಆಫೀಸರ್ ಇನ್ನೊಂದು ವಿಚಾರಣೆಯನ್ನು ನಡೆಸಿದರಂತೆ. ಇವುಗಳ ಫಲಿತಾಂಶವಂತೂ ತಿಳಿದುಬಂದಿಲ್ಲ.

**ತುಂಬಪಟ್ಟಿಯಲ್ಲಿನ ನಾಗರಿಕ ನಿಷೇಧಗಳು**

೧೯೪೮ರಲ್ಲಿ ಹರಿಜನರು ಸಾರ್ವಜನಿಕ ಬಾವಿಯಿಂದ ನೀರನ್ನೆತ್ತಿಕೊಂಡಾಗ, ತುಂಬಪಟ್ಟಿಯ ಗ್ರಾಮಸ್ಥರಿಂದ ಭಯಂಕರ ವಿರೋಧ ವ್ಯಕ್ತವಾಯಿತು. ಅಲ್ಲಿಯತನಕ ಆ ಹರಿಜನರು, ಜನ ಜಾನುವಾರುಗಳು ಮಿಂದು ಗಲೀಜಾಗಿರುತ್ತಿದ್ದ ಒಂದು ಕೊಳದಿಂದ ನೀರನ್ನು ಒಯ್ಯುತ್ತಿದ್ದರು. ಕೆಲವು ಹರಿಜನ ಯುವಕರನ್ನು ಕ್ರೂರವಾಗಿ ಥಳಿಸಲಾಯಿತು ಮತ್ತು ಹರಿಜನರ ಮನೆಗಳಿಗೆ ಬೆಂಕಿ ಹಚ್ಚುವ ಪ್ರಯತ್ನ ನಡೆಯಿತು. ಈ ಸಂಬಂಧವಾಗಿ ಗ್ರಾಮದ ಮುನ್ಸೀಫ್ ಮತ್ತು ಇನ್ನು ಕೆಲವರಿಗೆ ಮೇಲಿನ ಅಧಿಕಾರಿಗಳಿಂದ ಎಚ್ಚರಿಕೆಯ ತಿಳಿವಳಿಕೆಯೂ ಬಂದಿತ್ತಂತೆ. ೧೯೫೩ರಲ್ಲಿ, ಆಗಸ್ಟ್ ೧೯ನೆಯ ದಿನ ತುಂಬಪಟ್ಟಿಯಲ್ಲಿನ ಒಂದು ಚಾ ಅಂಗಡಿಯವನು ಹರಿಜನನೊಬ್ಬನಿಗೆ ಗಾಜಿನ ಲೋಟದಲ್ಲಿ ಕಾಫಿ ಕೊಡಲು ನಿರಾಕರಿಸಿದ ಬಗ್ಗೆ ಪೊಲೀಸರು ದೂರು ಸ್ವೀಕರಿಸಿದ್ದರು. ಅನಂತರ, ಚಾ ಅಂಗಡಿಯವನನ್ನು ಬಂಧಿಸಲಾಯಿತು ಮತ್ತು ಸಬ್ ಮ್ಯಾಜಿಸ್ಟ್ರೇಟರು ಹತ್ತು ರೂಪಾಯಿ ದಂಡ ವಿಧಿಸಿದರು. ಗ್ರಾಮದ ಕ್ಷೌರಿಕ, ತಾನು ಹರಿಜನರಿಗೆ ಕ್ಷೌರ ಮಾಡಲು ಸಿದ್ಧ ಎನ್ನುತ್ತಾನೆ. ಆದರೆ ಹರಿಜನರು ಅವನ ಹತ್ತಿರ ಹೋಗುವುದಿಲ್ಲ. ಸವರ್ಣೀಯ ಹಿಂದೂಗಳು ಈ ಬಗ್ಗೆ ಹರಿಜನರಿಗೆ ಗುಪ್ತ ಬೆದರಿಕೆ ಹಾಕಿರುವುದೇ ಇದಕ್ಕೆ ಕಾರಣವಿದ್ದರೂ ಇರಬಹುದು. ೧೯೫೩ರ ಜುಲೈ ೧ ರಂದು ಕೆಲವು ಹರಿಜನರು ಕ್ಷೌರಿಕನ ಹತ್ತಿರ ಹೋಗಿದ್ದರು ಮತ್ತು ಅದೇ ದಿನ ಕೆಲವು ಹರಿಜನ ಯುವಕರ ವಿಚಾರಣೆಯೂ ನಡೆಯಿತು. ಇದರಿಂದ, ಕ್ಷೌರದ ವಿಷಯವಾಗಿ ಹರಿಜನರಲ್ಲಿ ಭೀತಿ ಹುಟ್ಟಿಸುವುದಕ್ಕಾಗಿಯೇ ಈ ವಿಚಾರಣೆ ನಡೆದಿರಬಹದು ಎಂದು ನಂಬಿಕೊಳ್ಳಲು ಅವಕಾಶವಿದೆ.

**ನಮ್ಮ ಸಾಮಾನ್ಯ ಅನುಭವಗಳು**

ಹರಿಜನರೇನಾದರೂ ತಮ್ಮ ಪ್ರಾಥಮಿಕ ಹಕ್ಕುಗಳ ಬಗ್ಗೆ ಒತ್ತಾಯಿಸಿದರೆ ಗ್ರಾಮಸ್ಥರು ಅವರನ್ನು ಚಾವಡಿಗೆ ಕರೆಯಿಸಿ ಯಾವುದಾದರೂ ಒಂದು ರೀತಿಯಲ್ಲಿ ಅವರನ್ನು ಶಿಕ್ಷಿಸುತ್ತಾರೆ – ಇದು ನಮ್ಮ ಸಾಮಾನ್ಯ ಅನುಭವವಾಗಿದೆ. ಇಂಥ ಘಟನೆಗಳು ಮಂಗುಲಮ್‌ನಲ್ಲಿ, ಕರುವಂಕುಲಮ್ ನಲ್ಲಿ, ಅಡನೂರ್, ಪತಿಯಟ್ಟಮ್ ಗುಡಿ ಮತ್ತು ಕರುಗಕೊಟ್ಟೈಗಳಲ್ಲಿ ನಡೆದಿವೆ. ಪೊಲೀಸು ಇಲಾಖೆಯ ಉನ್ನತಾಧಿಕಾರಿಗಳು ಅಲ್ಲಿಗೆ ಹೋಗಿ ಪರಿಶೀಲಿಸುವಷ್ಟು ಎಚ್ಚರ ತೋರಿಸಿದ್ದಾರೆ. ಕೊಟ್ಟಗುಡಿ, ಕಿದರಿಪಟ್ಟಿ ಮತ್ತು ಮುಲ್ಲಿಪಟ್ಟಿಯಂಥ ಕೆಲವು ಕಡೆಗಳಲ್ಲಿ, ಹರಿಜನರನ್ನು ಚಾವಡಿಗೆ ಕರೆಯಿಸಿ ಬೆದರಿಸಿ ಎಚ್ಚರಿಕೆ ಕೊಟ್ಟಿದ್ದೂ ಉಂಟು. ಪೊಲೀಸು ಇಲಾಖೆಯ ಕೆಳದರ್ಜೆಯ ನೌಕರರು ಸಾಮಾನ್ಯವಾಗಿ ಸವರ್ಣೀಯ ಹಿಂದೂಗಳನ್ನೇ ಬೆಂಬಲಿಸುತ್ತಾರೆ. ಇದರಿಂದ ಹಿಂದೂಗಳು ತಮ್ಮ ಸ್ವೇಚ್ಛಾ ಕಾನೂನನ್ನು ಜಾರಿಗೊಳಿಸಿ ಅದರಿಂದ ಹರಿಜನರು ತಮ್ಮ ಸಾಮಾಜಿಕ ದಾಸ್ಯವನ್ನು ಮೌನವಾಗಿ ಒಪ್ಪಿಕೊಳ್ಳುವ ಹಾಗೆ ಮಾಡುತ್ತಾರೆ.

**ಇದನ್ನು ಸಹಿಸುತ್ತೇವೆಯೇ?**

ಪ್ರಶ್ನೆ ಇದು – ಜಲಿಯನ್‌ವಾಲಾಬಾಗ್‌ನಲ್ಲಿ ಡೈಯರ್‌ನ ಹಿಂಸಾಕಾಂಡದ ವಿರುದ್ಧ ದಂಗೆಯೆದ್ದಂಥ ನಾವು, ಈ ದಿನಗಳಲ್ಲಿ ಹರಿಜನರ ಮೇಲೆ ನಡೆಯುವ ಇಂಥ ಅವಹೇಳನ, ಸ್ವೇಚ್ಛಾಚಾರಗಳನ್ನು ಮೌನವಾಗಿ ಸಹಿಸಿಕೊಳ್ಳಬಹುದೆ? ಜಲಿಯನ್‌ವಾಲಾಬಾಗ್‌ನಲ್ಲಿ ನಡೆದ ಹಿಂಸಾಕಾಂಡ, ಸಭೆ ಸೇರಿಕೊಂಡಿದ್ದ ನಮ್ಮ ಸ್ತ್ರೀಪುರುಷರ ಮೇಲೆ ವಿದೇಶೀ ಅಧಿಕಾರವರ್ಗ ನಡೆಸಿದ ಅತ್ಯಾಚಾರ, ಭಯೋತ್ಪಾದನೆ ಮಾಡಿ ಇಡೀ ಹರಿಜನ ವರ್ಗವನ್ನೇ ಸತತ ಭೀತಿಯಲ್ಲಿ ಅದ್ದಿಡುವುದಕ್ಕಾಗಿ. ಇಲ್ಲಿ ಚಾವಡಿಯಲ್ಲಿ ವಿಚಾರಣೆಗಾಗಿ ಕರೆಸಿದ್ದ ಕೆಲವು ಹರಿಜನ ಯುವಕರ ಮೇಲೆ ನಮ್ಮ ಗ್ರಾಮಸ್ಥರು ಅತ್ಯಾಚಾರ ನಡೆಸಿದರು.

**ಸರ್ಕಾರ ಏನು ಮಾಡಬೇಕು?**

ಹಳ್ಳಿಗಳಲ್ಲಿ ಹರಿಜನರು ಸೇರಿದಂತೆ ಚುನಾಯಿತ ಸದಸ್ಯರುಗಳಿರುವ ಗ್ರಾಮ ಪಂಚಾಯಿತಿಗಳನ್ನು ಸರ್ಕಾರ ರಚಿಸಿದೆ. ಈ ಸರ್ಕಾರಿ ಮನ್ನಣೆ ಪಡೆದ ಗ್ರಾಮ ಪಂಚಾಯಿತಿಗಳಿಗೆ ಸಮಾನಾಂತರವಾಗಿ ಸವರ್ಣೀಯ ಹಿಂದೂಗಳು ತಮ್ಮದೇ ಆದ ಚಾವಡಿ ನ್ಯಾಯಾಲಯಗಳನ್ನು ನಡೆಸುತ್ತಿರುವಾಗ ಸರ್ಕಾರ ಅದಕ್ಕೆ ಏಕೆ ಅವಕಾಶ ಕೊಡುತ್ತದೆ ಎಂದು ಆಶ್ಚರ್ಯವಾಗುತ್ತದೆ. ಈ ಚಾವಡಿ ನ್ಯಾಯಾಲಯಗಳು ಹಳ್ಳಿಗಳಲ್ಲಿ ಬಡ ಹಿಂದುಳಿದ ವರ್ಗದ ಜಾತಿಗಳ ಸಾಮಾಜಿಕ, ಆರ್ಥಿಕ, ರಾಜಕೀಯ ಪ್ರಗತಿಗೆ ದೊಡ್ಡ ಆತಂಕವಾಗಿ ನಿಂತಿವೆ. ಸರ್ಕಾರ ಈ ಚಾವಡಿ ನ್ಯಾಯಾಲಯಗಳನ್ನು ನಿಷೇಧಿಸಿ ರದ್ದುಗೊಳಿಸುವತನಕ ಹಳ್ಳಿಗಳಲ್ಲಿನ ಹರಿಜನರಿಗೆ ಬಿಡುಗಡೆಯಾಗಲಿ, ಪರಿಹಾರವಾಗಲಿ ಸಾಧ್ಯವಿಲ್ಲ. ಚಾವಡಿ ನ್ಯಾಯಾಲಯಗಳು ಹರಿಜನರ ಬಗ್ಗೆ ಇರುವ ಸಾಮಾಜಿಕ ಆತಂಕಗಳಿಗೆದುರಾಗಿ ನಾವು ನಡೆಸುವ ಎಲ್ಲಾ ಪ್ರಯತ್ನಗಳೂ ನಿಷ್ಫಲವಾಗಿ ಹೋಗುತ್ತವೆ. ಅಸ್ಪೃಶ್ಯತಾ ನಿವಾರಣೆಗಾಗಿ ಸರ್ಕಾರ ಮೂರು ಲಕ್ಷ ರೂಪಾಯಿಗಳನ್ನು ವೆಚ್ಚ ಮಾಡುತ್ತದೆ. ಇದಕ್ಕೆ ಮೊದಲು, ಚಾವಡಿ ನ್ಯಾಯಾಲಯಗಳಲ್ಲಿ ಹರಿಜನರು ಬಲಿಯಾಗದಂತೆ ಹಾಗೂ ಅವರು ಮನುಷ್ಯರಾಗಿ ತಲೆಯೆತ್ತಿ ನಿಲ್ಲಲು ಸಾಧ್ಯವಾಗುವಂತೆ ಅಗತ್ಯವಿರುವ ಎಲ್ಲ ಕಾರ್ಯಕ್ರಮಗಳನ್ನೂ ಸರ್ಕಾರ ಕೈಗೊಳ್ಳತಕ್ಕದ್ದು. ಕೇರಳದಲ್ಲಿ ಇಂಥ ಚಾವಡಿ ನ್ಯಾಯಾಲಯಗಳಿಲ್ಲ. ಅದರಿಂದಾಗಿಯೇ ಕೇರಳದಲ್ಲಿ ಸಾರ್ವಜನಿಕ ಅಸ್ಪೃಶ್ಯತೆಯೆನ್ನುವುದು ಗತಕಾಲದ ಸಂಗತಿಯಾಗಿದೆ.

**ಒಂದು ವಿನಂತಿ**

ಹಳ್ಳಿಗಳಲ್ಲಿ ಬಡ ಹರಿಜನರನ್ನು ಕೀಳು ಜಾತಿಯ ಗುಲಾಮರು ಎಂದು ಪರಿಗಣಿಸಿ ನಾವು ಮಾಡಿದ ಅನ್ಯಾಯವನ್ನು ನಮಗೆ ಅರಿವು ತಂದುಕೊಟ್ಟವರು ಮಹಾತ್ಮಾಗಾಂಧಿ. ಅವರಿಲ್ಲದಿದ್ದರೆ, ಸವರ್ಣೀಯ ಹಿಂದೂಗಳಿಂದ ಅನುಭವಿಸಿದ ಅಸಹ್ಯ ಹಿಂಸೆಗಳಿಂದಾಗಿ ದೇಶದ ವಿವಿಧ ಭಾಗಗಳಲ್ಲಿನ ಹರಿಜನರೆಲ್ಲ ಇಷ್ಟರಲ್ಲಾಗಲೇ ಹಿಂದೂ ಧರ್ಮದಿಂದ ಬೇರೆಯಾಗಿ ಹೊರಗೆ ನಿಂತಿರುತ್ತಿದ್ದರು. ಹರಿಜನರ ಪರವಾಗಿ ಸಾರ್ವಜನಿಕ ಅಭಿಪ್ರಾಯ ರೂಪಿಸಲೆಂದು ಮಹಾತ್ಮಾಗಾಂಧಿ ಪುಣೆಯಲ್ಲಿ ತಮ್ಮ ಚರಿತ್ರಾರ್ಹ ಉಪವಾಸ ನಡೆಸಿ ಅದಾಗಲೇ ಇಪ್ಪತ್ತೊಂದು ವರ್ಷಗಳು ಕಳೆದಿವೆ. ಕಳೆದ ದಶಕಗಳಲ್ಲಿ ಈ ಬಗ್ಗೆ ದೊಡ್ಡ ಜಾಗೃತಿ ಹುಟ್ಟಿದೆ ಮತ್ತು ಹರಿಜನ ಚಳವಳಿಯ ಬಗ್ಗೆ ಈಗ ಸಾಮಾನ್ಯವಾದ ಸಹಾನುಭೂತಿ ಮೂಡಿದೆ ಎನ್ನುವುದರಲ್ಲಿ ಸಂದೇಹವಿಲ್ಲ. ಸರ್ಕಾರ, ಹರಿಜನರ ಬಗ್ಗೆ ಇರುವ ಸಾಮಾಜಿಕ, ನಾಗರಿಕ ನಿಷೇಧ, ಆತಂಕಗಳನ್ನು ನಿವಾರಿಸಲು ಪಣ ತೊಟ್ಟಿದೆ ಮತ್ತು ಹರಿಜನರ ಸಾಮಾಜಿಕ ಅಂತಸ್ತನ್ನು ಸುಧಾರಿಸಲು ನಡೆಯುವ ಶಾಂತಿಯುತವೂ ನ್ಯಾಯಯುತವೂ ಆದ ಎಲ್ಲ ಪ್ರಯತ್ನಗಳಿಗೂ ತನ್ನ ಸಹಕಾರ ನೀಡುತ್ತಿದೆ. ಇಷ್ಟಾದರೂ

ಗ್ರಾಮೀಣ ಪ್ರದೇಶಗಳಲ್ಲಿ ಹರಿಜನರ ಬಗ್ಗೆ ಅಪಾರವಾದ ದುರಭಿಪ್ರಾಯವಿದೆ ಎನ್ನುವುದನ್ನು ಒಪ್ಪಿಕೊಳ್ಳಲೇಬೇಕು. ಸಾರ್ವಜನಿಕ ಕಾರ್ಯಕರ್ತರಿಗೆಲ್ಲ ಹಳ್ಳಿಗಳಲ್ಲಿ ಹರಿಜನರನ್ನು ಪ್ರತ್ಯೇಕ ಅಸ್ಪೃಶ್ಯ ವರ್ಗವೆಂದು ಮುಂದೆಂದೂ ಪರಿಭಾವಿಸದಂತೆ ಸವರ್ಣೀಯ ಹಿಂದೂಗಳಲ್ಲಿ ಹೃದಯ ಪರಿವರ್ತನೆಯಾಗಬೇಕು, ಅದಕ್ಕೆ ಶ್ರಮಿಸಿ – ಎಂದು ನಾವು ವಿನಂತಿಸಿಕೊಳ್ಳುತ್ತೇವೆ. ಅಸ್ಪೃಶ್ಯತೆಯ ಮೂಲೋತ್ಪಾಟನೆಗಾಗಿ ದುಡಿಯಬೇಕು ಮತ್ತು ಹರಿಜನರನ್ನು ಹಿಂದೂ ಸಮಾಜದ ಅವಿಭಾಜ್ಯ ಭಾಗದಂತೆ ನಡೆಸಿಕೊಳ್ಳಬೇಕು – ಎಲ್ಲ ನಾಯಕರಲ್ಲೂ ಇದೇ ನಮ್ಮ ವಿನಂತಿ.

**ಸ್ವಾಮಿ ಆನಂದತೀರ್ಥ,** ಎಂ.ಎ.
ಪ್ರಾದೇಶಿಕ ಅಧಿಕಾರಿ
ಅಖಿಲ ಭಾರತ ಹರಿಜನ ಸೇವಕ ಸಂಘ

ದಕ್ಷಿಣ ವಲಯ
ಮುಖ್ಯ ಕಛೇರಿ : ಮೇಲೂರು

## ಭಾಗ – ಎರಡು

# ಸಾಮಾಜಿಕ

ಈ ಸಂಪುಟದ ಒಂದನೇ ಭಾಗದಲ್ಲಿ ಸಂಕಲಿತವಾಗಿರುವ "ಅಸ್ಪೃಶ್ಯರು ಅಥವಾ ಇಂಡಿಯಾದ ಕೊಳಗೇರಿಯ ಮಕ್ಕಳು" ಎಂಬ ಯೋಜಿತ ಲೇಖನ ಸಂಗ್ರಹವಲ್ಲದೆ ಡಾ॥ ಅಂಬೇಡ್ಕರರು "ಅಸ್ಪೃಶ್ಯರು ಮತ್ತು ಅಸ್ಪೃಶ್ಯತೆ" ಕುರಿತು ಬೇರೆ ಅನೇಕ ಲೇಖನಗಳನ್ನು ಬರೆದಿದ್ದಾರೆ. ಈ ಪ್ರಬಂಧಗಳನ್ನು – ಸಾಮಾಜಿಕ, ರಾಜಕೀಯ, ಧಾರ್ಮಿಕ – ಎಂದು ಮೂರು ವರ್ಗಗಳಾಗಿ ವಿಂಗಡಿಸಿದೆ. ಎರಡನೇ ಭಾಗದಲ್ಲಿ, 'ಸಾಮಾಜಿಕ' ವರ್ಗದ ಐದು ಲೇಖನಗಳನ್ನು ಸೇರಿಸಿಕೊಳ್ಳಲಾಗಿದೆ.

# ಅಧ್ಯಾಯ ೧೫

# ನಾಗರಿಕತೆಯೋ ನರಕವೋ

I. ಇಂಡಿಯಾದ ಜನಪದದ ಇನ್ನೊಂದು ಬಗೆಯ ಸೀಳುನೋಟ II. ದಲಿತ ವರ್ಗಗಳು ಅವುಗಳ ಕಣ್ಣಿನಲ್ಲೇ ಅ) ಆದಿಮ ಬುಡಕಟ್ಟುಗಳು ಆ) ಅಪರಾಧಿ ಬುಡಕಟ್ಟುಗಳು ಇ) ಅಸ್ಪೃಶ್ಯರು III. ಈ ವರ್ಗಗಳ ಜೀವನಸ್ಥಿತಿಯ ಮೇಲೆ ಹಿಂದೂ ನಾಗರಿಕತೆಯ ಪರಿಣಾಮ IV. ಈ ವರ್ಗಗಳಲ್ಲಿ ಒಂದೊಂದಕ್ಕೂ ಇರುವ ಪ್ರತ್ಯೇಕ ಸಮಸ್ಯೆಗಳು.

ಇಂಡಿಯಾದ ಜನಪದವನ್ನು ಸಾಮಾನ್ಯವಾಗಿ, ಭಾಷೆಯ ಆಧಾರದ ಮೇಲೆ ಅಥವಾ ಧರ್ಮದ ಆಧಾರದ ಮೇಲೆ ವರ್ಗೀಕರಿಸುತ್ತಾರೆ. ಇಂಡಿಯಾದ ಜನರನ್ನು ವರ್ಗೀಕರಿಸುವಲ್ಲಿ, ದೀರ್ಘಕಾಲದಿಂದಲೂ ಸತತ ರೂಢಿಯಾಗಿ ಬಂದಿರುವ ಮಾರ್ಗಗಳು ಇವೆರಡು ಮಾತ್ರವೇ. ಇದರ ಪರಿಣಾಮವೆಂದರೆ, ಇಂಡಿಯಾದ ಜನ ಯಾವ ಧರ್ಮವನ್ನು ಅನುಸರಿಸುತ್ತಾರೆ ಅಥವಾ ಯಾವ ಭಾಷೆಯನ್ನು ಮಾತನಾಡುತ್ತಾರೆ ಎಂಬುದು ಮಾತ್ರವೇ ಈ ಜನರ ಬಗ್ಗೆ ತಿಳಿಯಬೇಕಾದ ಮುಖ್ಯ ಹಾಗೂ ಕುತೂಹಲಕಾರಿ ಅಂಶ ಎಂದು ಹೊರಗಿನವರು ಭಾವಿಸುವಂತಾಗಿದೆ. ಹೊರಗಿನವರ ಆಸಕ್ತಿಯೇನಿದ್ದರೂ ಈ ಎರಡು ಅಂಶಗಳಿಗೇ ಮಿತಿಗೊಳ್ಳುವ ಕಾರಣ ಅವರು ಇಲ್ಲಿನ ಧರ್ಮ ಮತ್ತು ಭಾಷೆಗಳ ಬಗ್ಗೆ ಗಳಿಸಿಕೊಳ್ಳುವ ತಿಳಿವಳಿಕೆಯಿಂದಲೇ ತೃಪ್ತರಾಗುತ್ತಾರೆ. ಹೊರದೇಶದ ಜನ, ಧರ್ಮದಲ್ಲಿ ಆಸಕ್ತಿಯುಳ್ಳವರಾಗಿದ್ದರೆ ಇಲ್ಲಿ ಹಿಂದೂಗಳಿದ್ದಾರೆ, ಮುಸ್ಲಿಮರಿದ್ದಾರೆ ಎಂದು ಮುಂತಾಗಿ ಅಥವಾ ಭಾಷೆಯಲ್ಲಿ ಆಸಕ್ತಿಯುಳ್ಳವರಾಗಿದ್ದರೆ ಇವರಲ್ಲಿ ಕೆಲವರು ಮರಾಠಿ, ಕೆಲವರು ಗುಜರಾತಿ, ಕೆಲವರು ಬಂಗಾಳಿ, ಕೆಲವರು ತಮಿಳು ಇತ್ಯಾದಿ ಭಾಷೆಗಳನ್ನು ಬಳಸುತ್ತಾರೆ ಎಂದು ಮುಂತಾಗಿ ಅಷ್ಟನ್ನೇ ತಲೆಯಲ್ಲಿ ದಾಖಲು ಮಾಡಿಕೊಂಡುಬಿಡುತ್ತಾರೆ.

ಇಂಡಿಯಾದ ಜನರನ್ನು ವರ್ಗೀಕರಿಸುವ ಈ ಎರಡು ಮಾರ್ಗಗಳಲ್ಲಿ ವಿದೇಶೀಯರನ್ನು ಹೆಚ್ಚಾಗಿ ಮುಟ್ಟಿ ಆಕರ್ಷಿಸುವಂಥದು ಧಾರ್ಮಿಕ ವರ್ಗೀಕರಣ. ಅವರಿಗೆ ಭಾಷೆಗಳಿಗಿಂತ ಹೆಚ್ಚಾಗಿ ಧರ್ಮಗಳಲ್ಲಿ ಆಸಕ್ತಿ ಕಾಣುತ್ತದೆ. ಇಷ್ಟಾದರೂ ಅವರಿಗೆ ಕೂಡ, ಇಂಡಿಯಾದಲ್ಲಿನ ಎಲ್ಲಾ ಧಾರ್ಮಿಕ ಜಾತಿಪಂಗಡಗಳ ಬಗ್ಗೆ ಅರಿವು ಇರುವುದಿಲ್ಲ. ಅವರಿಗೆ ಹಿಂದೂಗಳು ಮುಸ್ಲಿಮರು ಮಾತ್ರ ಗೊತ್ತಾಗುತ್ತದೆ. ಕೆಲವು ವೇಳೆ ಸಿಖ್ಖರ ವಿಚಾರ ಕೇಳುತ್ತಾರೆ. ಇಲ್ಲಿ ಕ್ರಮೇಣ ಬೆಳೆದುಕೊಳ್ಳುತ್ತಿರುವ ಕ್ರಿಶ್ಚಿಯನ್ನರ ಬಗ್ಗೆ ಅವರಿಗೆ ತಿಳಿಯುವುದು ಅಪರೂಪ. ಬೌದ್ಧರ ಹೆಸರು ಅವರಿಗೆ ಗೊತ್ತಾಗುವುದೇ ಇಲ್ಲ. ಇವತ್ತಿನ ಇಂಡಿಯಾದಲ್ಲಿ ನೋಡಿದರೆ ಹೇಗೂ ಬೌದ್ಧರು ಇಲ್ಲವೇ ಇಲ್ಲ.[೧]

ವಿದೇಶೀಯರಿಗೆ ಉಂಟಾಗುವ ಭಾವನೆಯೆಂದರೆ, ಇಂಡಿಯಾದಲ್ಲಿ ಹಿಂದೂಗಳು ಮತ್ತು ಮುಸ್ಲಿಮರು

---

೧. ಕಲ್ಕತ್ತಾದ ಮಹಾಬೋಧಿ ಸಂಘ ಬೌದ್ಧಧರ್ಮದ ಪುನರುಜ್ಜೀವನಕ್ಕಾಗಿ ಪ್ರಯತ್ನ ನಡೆಸಿದೆ. ಆದರೆ ಅದು ಅತ್ಯಂತ ದುರ್ಬಲ ಪ್ರಯತ್ನ.
(ಇಲ್ಲಿನ ವಿವರಗಳನ್ನು *ಸೆನ್ಸಸ್ ಆಫ್ ಇಂಡಿಯಾ*, ೧೯೩೧, ಸಂ. I. ಪು. ೩ ರಿಂದ ಸಂಗ್ರಹಿಸಿಕೊಂಡಿದೆ.)

ಮಾತ್ರವೇ ಇರುವುದು, ಅವರಲ್ಲದೆ ಯೋಚಿಸಬಹುದಾದಂಥ ಬೇರೆ ಮುಖ್ಯ ವರ್ಗಗಳಿಲ್ಲ – ಎನ್ನುವುದು. ಅವರಲ್ಲಿ ಇಂಥ ಭಾವನೆ ಉಂಟಾಗತಕ್ಕದ್ದು ಸಹಜವೇ. ಇಲ್ಲಿನ ಗಾಳಿಯಲ್ಲಿ ಹಿಂದೂ ಮುಸ್ಲಿಮರ ಘರ್ಷಣೆ ಸದಾ ಮೊಳಗುತ್ತಿರುತ್ತದೆ. ಈಚಿನ ವರ್ಷಗಳಲ್ಲಿ ನೋಡಿದರೂ, ಇಲ್ಲಿ ನಡೆದ ಅಸಂಖ್ಯ ಹಿಂದೂ ಮುಸ್ಲಿಂ ಘರ್ಷಣೆಗಳೂ ಅವುಗಳಿಂದುಂಟಾದ ಅಪಾರ ಸಾವುನೋವುಗಳೂ ಈ ಸಮಸ್ಯೆ ಎಷ್ಟು ಭಯಂಕರವಾದದ್ದೆನ್ನುವುದನ್ನು ಕಾಣಿಸುತ್ತದೆ.

ಆದರೆ ಈ ಹೋರಾಟ ಒಂದು ಸಾಮ್ರಾಜ್ಯವನ್ನು ಸ್ಥಾಪಿಸುವುದಕ್ಕಾಗಿ ನಡೆದಿರುವ ಹೋರಾಟ. ಇಂಡಿಯಾದಲ್ಲಿ ಮುಸ್ಲಿಮರು ಅಧೀನ ಪ್ರಜೆಗಳಾಗಿರುವಂಥ ಹಿಂದೂ ರಾಜ್ಯವನ್ನು ಸ್ಥಾಪಿಸಬೇಕು ಎಂದು ಕೆಲವರು ಹಿಂದೂಗಳು ಒತ್ತಾಯಿಸುತ್ತಾರೆ. ಇಸ್ಲಾಂ ಪ್ರಪಂಚವೊಂದನ್ನು ಕನಸುಗಾಣುತ್ತ, ಇಂಡಿಯಾವನ್ನು ಮುಸ್ಲಿಮ್ ಚಕ್ರಾಧಿಪತ್ಯದ ಒಂದು ಭಾಗವಾಗಿಸಬೇಕು ಮತ್ತು ಹಿಂದೂಗಳಿಗೆ ಕುರಾನ್ ಅಥವಾ ಕತ್ತಿ– ಇವೆರಡರಲ್ಲಿ ಒಂದನ್ನು ಆಯ್ಕೆ ಮಾಡಿಕೊಳ್ಳಲು ಅವಕಾಶ ಕೊಡಬೇಕು ಎನ್ನುವ ಮಹಮ್ಮದೀಯರಿದ್ದಾರೆ. ಈ ಎರಡು ತುದಿಗಳ ನಡುವಣ ಅಂತರದಲ್ಲಿ, ಹಿಂದೂ ಮುಸ್ಲಿಮರಿಬ್ಬರೂ ಸಮಾನ ಸಹಭಾಗಿಗಳಾಗಿ ಬದುಕಬಲ್ಲಂಥ ಒಂದು ರಾಷ್ಟ್ರವಾಗಬೇಕು ಇದು ಎಂದು ಅಪೇಕ್ಷಿಸುವಂಥ ವಿವೇಕಿಗಳಿದ್ದಾರೆ. ತೀವ್ರವಾದಿಗಳು ಗೆಲ್ಲುತ್ತಾರೋ ಅಥವಾ ಮಂದಗಾಮಿಗಳು ಗೆಲ್ಲುತ್ತಾರೋ ಎನ್ನುವುದನ್ನು ಕಾಲ ಮಾತ್ರವೇ ಕಾಣಿಸಿಕೊಡಬೇಕಾಗಿದೆ. ಈಗಂತೂ ಎರಡೂ ಪಕ್ಷದ ತೀವ್ರವಾದಿಗಳು ರಕ್ತಸ್ನಾನ ಮಾಡುತ್ತ ತಲೆಬರಹ ಗಳಿಸಿಕೊಳ್ಳುತ್ತಿದ್ದಾರೆ. ಒಂದು ಕಡೆ ಪರಿಸ್ಥಿತಿ ಹೀಗಿರುವಾಗ, ಇನ್ನೊಂದು ಕಡೆ ಈ ಹಿಂದೂ ಮುಸ್ಲಿಮರ ಹೋರಾಟದಲ್ಲಿ ಯಾವ ಹೆಚ್ಚಿನ ಆಸಕ್ತಿಯೂ ಇಲ್ಲದೆ ಇರುವ ಕೆಲವರಿದ್ದಾರೆ ಎನ್ನಲು ಧೈರ್ಯ ಮಾಡುತ್ತೇನೆ. ಹಿಂದೂ ಮುಸ್ಲಿಮರ ನಡುವಣ ಹೋರಾಟ ರಾಜ್ಯಭಾರದ ಯಜಮಾನಿಕೆಗಾಗಿ ನಡೆದಿರುವ ಹೋರಾಟ. ಆದರೆ ಈ ಎರಡನೇ ಪಕ್ಷದ ಕೆಲವರು ಬಿಡುಗಡೆಗಾಗಿ ನಡೆದಿರುವ ಮತ್ತೊಂದು ಹೋರಾಟವನ್ನು ಆಸಕ್ತಿಯಿಂದ ಗಮನಿಸುತ್ತಾರೆ. ಅವರದೇನಿದ್ದರೂ ಒಬ್ಬರು ಇನ್ನೊಬ್ಬರ ಮೇಲೆ ತಮ್ಮದೇ ಸಾಮ್ರಾಜ್ಯ ಕಟ್ಟಿ ನಿಲ್ಲಿಸುವ ಹೋರಾಟ. ಇವರ ಆಸಕ್ತಿ ಅದರಲ್ಲಿಲ್ಲ, ಬದಲು, ತಾವೂ ಮಾನವ ಗೌರವದ ಅರ್ಹತಾ ಪತ್ರ ದೊರಕಿಸಿಕೊಳ್ಳಬೇಕೆನ್ನುವ ದಲಿತರ ಹೋರಾಟದಲ್ಲಿ ಇವರು ಆಸಕ್ತಿ ತಾಳುತ್ತಾರೆ. ಫ್ರಾನ್ಸಿಸ್ ಪೋಸ್, ಇಂಗ್ಲೆಂಡಿನ ವಿಗ್ಸ್ ಮತ್ತು ಟೋರೀಸ್ ನಡುವಣ ಹಳೆಯ ಜಗಳವನ್ನು ವಿವರಿಸುತ್ತಾನೆ. ಅದರಲ್ಲಿ, ವಿಗ್ಸ್ ಪಕ್ಷದವರ ರಾಜಕೀಯ ನೀತಿಯನ್ನು ಹೇಳುವಾಗ, ಅವರು ಒಂದು ಕಡೆ ರಾಜನನ್ನೂ ಇನ್ನೊಂದು ಕಡೆ ಜನರನ್ನೂ ಹತ್ತಿಕ್ಕಿ ತಮ್ಮ ಶ್ರೀಮಂತಶಾಹಿ ಪ್ರಭುವರ್ಗವನ್ನು ಸ್ಥಾಪಿಸಲು ಮುಂದಾದರು ಎನ್ನುತ್ತಾನೆ. ಈಗ ಇಲ್ಲಿ ಹೋರಾಡುತ್ತಿರುವ ಹಿಂದೂಗಳು, ಮುಸ್ಲಿಮರು – ಇಬ್ಬರೂ ಇಂಡಿಯಾದ ರಾಜಕಾರಣದಲ್ಲಿ ಅದೇ ರಾಜನೀತಿಯನ್ನು ರೂಢಿಸಲು ಯತ್ನಿಸುತ್ತಿದ್ದಾರೆ. ಹಿಂದೂ ಮುಸ್ಲಿಂ ಜನರ ಮೂಲಕ ಆಯಾ ಉಚ್ಚವರ್ಗ ತನ್ನ ಆಡಳಿತವನ್ನು ಸ್ಥಾಪಿಸಿಕೊಳ್ಳಲು ಹೆಣಗುತ್ತಿದೆ. ಹಿಂದೂ ಇರಲಿ, ಮುಸ್ಲಿಂ ಇರಲಿ, ಆಯಾ ಸಮುದಾಯದ ಜನಸಾಮಾನ್ಯರನ್ನು ಉಚ್ಚ ವರ್ಗಗಳ ಪೀಠಾರೋಹಣಕ್ಕಾಗಿ ಮಾತ್ರವೇ ಬಳಸಿಕೊಳ್ಳಲಾಗುತ್ತಿದೆ. ಹೀಗಿರುವುದರಿಂದ ಹಿಂದೂ ಮುಸ್ಲಿಂ ಎಂಬ ಹೆಸರಿನಲ್ಲಿ ನಡೆದಿರುವ ಹೋರಾಟ ವರ್ಗಗಳ ಹೋರಾಟವಾಗಿದೆ. ಸಮುದಾಯ ಹೋರಾಟವಲ್ಲ.

ಯಾರಿಗೆ ಸಮುದಾಯ ಹೋರಾಟದಲ್ಲಿ ಆಸಕ್ತಿಯಿದೆಯೋ ಅಂಥವರು ಇಂಡಿಯಾದ ಜನಸಮುದಾಯವನ್ನು ಇನ್ನೊಂದು ದೃಷ್ಟಿಕೋನದಿಂದ ನೋಡಲು ಕಲಿತುಕೊಳ್ಳಬೇಕು. ಅದನ್ನು ಕೇವಲ ಜಾತಿಧರ್ಮಗಳ ದೃಷ್ಟಿಕೋನದಿಂದಲೇ ನೋಡುವುದನ್ನು ಬಿಡಬೇಕು. ಬದಲು, ಸಾಮಾಜಿಕ ಆರ್ಥಿಕ

ದೃಷ್ಟಿಕೋನಗಳಿಂದ ನೋಡಲು ತೊಡಗಬೇಕು. ಇದರ ಅರ್ಥ ಜಾತಿ ಧರ್ಮಗಳು ಇಂಡಿಯಾದ ಜನಸಮೂಹದ ಆರ್ಥಿಕ ಮತ್ತು ಸಾಮಾಜಿಕ ಜೀವನದ ಮೇಲೆ ಯಾವ ಬಗೆಯ ಪರಿಣಾಮವನ್ನುಂಟುಮಾಡಿವೆ ಎಂಬುದನ್ನು ಗಮನಿಸದೆ ಬಿಟ್ಟುಬಿಡಬೇಕು ಎಂದಲ್ಲ. ವಾಸ್ತವವಾಗಿ, ಜಾತಿ ಧರ್ಮಗಳನ್ನು ಪರಿಗಣಿಸದೆಯೇ ಇಂಡಿಯಾದ ಜನರನ್ನು – ಅವರು ಹಿಂದೂಗಳಿರಲಿ ಮುಸ್ಲಿಮರಿರಲಿ – ಅಭ್ಯಾಸ ಮಾಡಹೊರಟರೆ, ಅವರ ಬದುಕಿನ ಸಂಪೂರ್ಣ ಚಿತ್ರಣ ನಮಗೆ ಸಿಗಲಾರದು. ಏಕೆಂದರೆ, ಇಂಡಿಯಾದಲ್ಲಿ ಧರ್ಮವೆಂಬುದು ಸರ್ವಪ್ರಧಾನವಾದದ್ದು. ಯೂರೋಪಿನಲ್ಲಿ ಮಧ್ಯಯುಗದಲ್ಲಿ ರೋಮನ್ ಕ್ಯಾಥೋಲಿಕ್ ಚರ್ಚ್ ಇತ್ತಲ್ಲ ಹಾಗೆ. ಅಲ್ಲಿ, ಚರ್ಚ್‌ನ ಸರ್ವವ್ಯಾಪಿ ಆಡಳಿತ ಜನರ ಬದುಕನ್ನು ಹೇಗೆ ಆವರಿಸಿಕೊಂಡು ಬಿಟ್ಟಿತ್ತೆನ್ನುವುದನ್ನು ಬ್ರೈಸ್[೧] ವರ್ಣಿಸುತ್ತಾನೆ. ಅದು ಗಮನಿಸುವಂತಿದೆ : “ಬೆಳಗಾಗುತ್ತಿದ್ದಂತೆ ಇಡೀ ಸಮುದಾಯಕ್ಕೆ ಆಶೀರ್ವಾದ ಸುರಿಯುವ, ಸಂಜೆ ಸಾಯಂಪ್ರಾರ್ಥನೆಯ ಶಾಂತಿಯಿಂದ ವಿಶ್ರಾಂತಿಗೆ ಮರಳಿಸುವ, ಮೇಲಿಂದ ಮೇಲೆ ಧಾರ್ಮಿಕ ವಿಧಿಗಳಿಂದ ಸ್ಫೂರ್ತಿಯುಕ್ಕಿಸಿ ಪೋಷಿಸುವ ಚರ್ಚ್‌ನ ಮಡಿಲಲ್ಲಿ – ತಪ್ಪೊಪ್ಪಿಗೆಗಳಿಂದ ಪುನಃ ಪುನಃ ನಿರಾಳಗೊಳ್ಳುತ್ತ, ವ್ರತನೋಂಪಿಗಳಿಂದ ಪರಿಶುದ್ಧನಾಗುತ್ತ, ಧ್ಯಾನ ಪೂಜೆಗಳಿಗೆ ಸೆಳೆಯುವ ಪವಿತ್ರ ದೃಶ್ಯಗಳಿಂದ ಬೋಧೆ ಪಡೆಯುತ್ತ ತೃಪ್ತವಾದ ಬದುಕು. ಇಂಥ ಬದುಕೇ ಮನುಷ್ಯನಿಗೆ ಕರ್ಮಶುದ್ಧವಾದ ಬದುಕು – ಎಂದು ಮಧ್ಯಯುಗದ ಜನ ಸಾಮಾನ್ಯವಾಗಿ ಕಲ್ಪಿಸಿಕೊಂಡಿದ್ದರು. ಅನೇಕರು ಹೀಗೇ ಬದುಕುತ್ತಿದ್ದರು; ಸಮಸ್ತರೂ ಇದೇ ಆದರ್ಶವೆಂದು ಭಾವಿಸಿದ್ದರು.”

ಇವತ್ತಿನ ಇಂಡಿಯಾದಲ್ಲಿ ಜನರ ಬದುಕಿನ ಮೇಲೆ ಧರ್ಮಕ್ಕಿರುವ ಪ್ರಭುತ್ವ, ಮಧ್ಯಯುಗದ ಜನರ ಬದುಕಿನ ಮೇಲೆ ಚರ್ಚ್‌ಗಿದ್ದ ಪ್ರಭುತ್ವಕ್ಕಿಂತ ಕಿಂಚಿತ್ತೂ ಕಡಿಮೆಯಾದದ್ದಲ್ಲ. ಆದ್ದರಿಂದ ಇಲ್ಲಿ ಧರ್ಮವನ್ನು ಗಮನಿಸದೆ ಕೈಬಿಡುವುದು ತಪ್ಪಾಗುತ್ತದೆ. ಆದರೆ, ಶುದ್ಧ ಧಾರ್ಮಿಕವಾದ ದೃಷ್ಟಿಕೋನವೊಂದೇ ಇದ್ದರೆ ನಮಗೆ ಮೇಲು ಮೇಲಿನ ನೋಟ ಮಾತ್ರ ದೊರಕೀತು ಎನ್ನುವುದೂ ಸತ್ಯವಾದದ್ದು. ಮುಖ್ಯವಾಗಿ, ಇಂಡಿಯಾದಲ್ಲಿ ಒಟ್ಟು ಜನಸಮೂಹ ಮತ್ತು ಪ್ರತ್ಯೇಕ ಜನವರ್ಗಗಳು ಹೇಗೆ ಬದುಕುತ್ತವೆ ಎನ್ನುವುದನ್ನು ತಿಳಿಯಬೇಕು ಮತ್ತು ವರ್ಗಗಳ ಪರಸ್ಪರ ಸಹಯೋಗವನ್ನು ರೂಪಿಸಲು ಕಾರಣವಾದ ಸಾಮಾಜಿಕ ಆರ್ಥಿಕ ಷರತ್ತುಗಳಾವುವು? ಇವು ಎಷ್ಟರಮಟ್ಟಿಗೆ ಧರ್ಮದಿಂದ ಪ್ರಭಾವಿತವಾಗಿವೆ? ಈ ಮುಂತಾದ ಪ್ರಶ್ನೆಗಳಿಗೆ ಹಿಂದೂ ಧರ್ಮದ ವ್ಯಾಪ್ತಿಯಲ್ಲಿರುವ ಕೆಲವು ನಿಶ್ಚಿತ ವರ್ಗಗಳು ಯಾವ ಸ್ಥಿತಿಯಲ್ಲಿ ಬದುಕುತ್ತಿವೆ ಎಂಬುದನ್ನು ಅರಿತುಕೊಳ್ಳುವುದರ ಮೂಲಕ ಉತ್ತರ ಸಿಕ್ಕುವುದು.

## II

ಪ್ರೊಫೆಸರ್ ಮ್ಯಾಕ್ಸ್ ಮುಲರ್ ಇಂಡಿಯಾಕ್ಕೆ ಭೇಟಿಕೊಡಲಿಲ್ಲ ಎನ್ನುವುದು ಖೇದದ ಸಂಗತಿ. ಇಲ್ಲಿರುವ ತತ್ತ್ವ ಮತ್ತು ಆಚರಣೆಗಳ ವೈರುಧ್ಯವನ್ನು ಸ್ವತಃ ಕಂಡಿದ್ದರೆ, ಅವರು ಈ ವೈರುಧ್ಯವನ್ನು ವರ್ಣಿಸಬಹುದಿತ್ತು. ಪ್ರಸ್ತುತದಲ್ಲಿ ಈ ವೈರುಧ್ಯ ಒಂದು ಒಗಟಾಗಿ ಉಳಿದಿದೆ.

ಬ್ರಹ್ಮನು ಪ್ರತಿಯೊಬ್ಬ ಮನುಷ್ಯ ಜೀವಿಯೊಳಗಿದ್ದಾನೆ, ಪ್ರತಿಯೊಬ್ಬರನ್ನೂ ಆವರಿಸಿದ್ದಾನೆ ಎಂದು ಬ್ರಹ್ಮತತ್ತ್ವವನ್ನು ಪ್ರತಿಷ್ಠಾಪಿಸುವ ಬ್ರಾಹ್ಮಣರು ಇಲ್ಲಿದ್ದೂ ಹೀಗಾಗಿದೆ. ಬ್ರಾಹ್ಮಣನಲ್ಲಿ ಇರುವ ಹಾಗೆ ಆದಿಮ ಬುಡಕಟ್ಟಿನವನಲ್ಲೂ ಅಪರಾಧಿ ಜನಾಂಗದವನಲ್ಲೂ ಮತ್ತು ಅದೇ ರೀತಿ ಅಸ್ಪೃಶ್ಯನೊಬ್ಬನಲ್ಲೂ ಬ್ರಹ್ಮ

೧. *‘ಹೋಲಿ ರೋಮನ್ ಎಂಪೈರ್’*, ಪು. ೩೬೭.

ಇರುವುದಾದರೆ, ಈ ಬ್ರಹ್ಮತತ್ತ್ವ ಒಂದು ಕಡೆ ಇದ್ದೂ ಇನ್ನೊಂದು ಕಡೆ ಅದಕ್ಕೆ ತದ್ವಿರುದ್ಧವಾಗಿ ಆದಿಮ ಬುಡಕಟ್ಟು, ಅಪರಾಧಿ ಜನಾಂಗ ಅಸ್ಪೃಶ್ಯರು ಎಂಬ ಭೇದಗಳು ಹೇಗೆ ನಿಂತಿಕೊಂಡಿವೆ? ಈ ಇಬ್ಬಂದಿತನವನ್ನು ಹೇಗೆ ಅನ್ವಯಿಸಿ ಅರ್ಥಮಾಡಿಕೊಳ್ಳುವುದು?

ಇಲ್ಲಿನ ಪತಿತ ಮಾನವಕುಲ, ಮೂರು ಪ್ರತ್ಯೇಕ ಪಂಗಡಗಳಲ್ಲಿ ಹಂಚಿಕೊಂಡಿದೆ. ಮೊದಲನೆಯದು, ಆದಿಮ ಜನಾಂಗವೆಂದು ಹೆಸರಾದ ಜನವರ್ಗ, ಎರಡನೆಯದು, ಅಪರಾಧಿ ಜನಾಂಗವೆಂದು ಪಟ್ಟಿಮಾಡಿರುವ ಜಾತಿಗಳದ್ದು, ಮೂರನೆಯದು ಅಸ್ಪೃಶ್ಯರೆಂದು ಪರಿಗಣಿತರಾದವರ ವಿಶಿಷ್ಟ ಪಂಗಡ.

ಈ ಮೂರು ಪಂಗಡಗಳಲ್ಲಿ ಒಳಗೊಂಡಿರುವ ಜನರ ಒಟ್ಟು ಜನಸಂಖ್ಯೆ ಯಾವ ರೀತಿಯಿಂದಲೂ ಅಲ್ಪ ಎನ್ನುವಂತಿಲ್ಲ. ೧೯೩೧ರ ಜನಗಣತಿಯ ಪ್ರಕಾರ, ಇಂಡಿಯಾದಲ್ಲಿರುವ ಆದಿಮ ಬುಡಕಟ್ಟುಗಳ ಜನಸಂಖ್ಯೆ, ಇಪ್ಪತ್ತೈದು ಮಿಲಿಯ. ಅಪರಾಧಿ ಜನಾಂಗವೆಂದು ಅಧಿಕೃತಪಟ್ಟಿಯಲ್ಲಿ ನಮೂದಾಗಿರುವ ಜನವರ್ಗಗಳ ಒಟ್ಟು ಜನಸಂಖ್ಯೆ ಸುಮಾರಾಗಿ ನಾಲ್ಕೂವರೆ ಮಿಲಿಯದಷ್ಟು. ಅದೇ ೧೯೩೧ರ ಜನಗಣತಿಯಂತೆ ಇಡೀ ಇಂಡಿಯಾದಲ್ಲಿರುವ ಅಸ್ಪೃಶ್ಯ ವರ್ಗಗಳ ಜನಸಂಖ್ಯೆ ಐವತ್ತು ಮಿಲಿಯ. ಅಂದರೆ, ಈ ಮೂರೂ ವಿಭಾಗಗಳ ಒಟ್ಟು ಜನಸಂಖ್ಯೆ ಎಪ್ಪತ್ತೊಂಬತ್ತೂವರೆ ಮಿಲಿಯ (೭.೯೫ ಕೋಟಿ). ಈಗ ಪ್ರಶ್ನೆ – ಈ ಸುಮಾರು ಎಂಟು ಕೋಟಿ ಜೀವಗಳು ಯಾವ ಸ್ಥಿತಿಯಲ್ಲಿ ಬದುಕಿಕೊಂಡಿವೆ ಎನ್ನುವುದು.

ಮೊದಲನೆಯದಾಗಿ, ಆದಿಮ ಜನಾಂಗಗಳು, ಅವು ನಾಗರಿಕತೆಯ ಯಾವ ಹಂತದಲ್ಲಿವೆ?

ಆದಿಮ ಜನಾಂಗ ಎನ್ನುವ ಹೆಸರೇ, ಹಾಗೆ ನಾವು ಕರೆಯುವ ಆ ಜನ ಇವತ್ತು ಯಾವ ಸ್ಥಿತಿಯಲ್ಲಿದ್ದಾರೆ ಎನ್ನುವುದನ್ನು ಸ್ಪಷ್ಟಗೊಳಿಸಿ ಹೇಳುತ್ತದೆ. ಅವರು ಕಾಡುಗಳಲ್ಲಿ ಅಲ್ಲಲ್ಲಿ ಚೆದುರಿಕೊಂಡ ಕಿರುಜೋಪಡಿಗಳಲ್ಲಿ ವಾಸಿಸುತ್ತಾರೆ. ಕಾಡು ಹಣ್ಣುಗಳು, ಕಾಯಿಗಳು, ಗಡ್ಡೆಗಳು ಮುಂತಾದವುಗಳ ಮೇಲೆ ಅವರು ಬದುಕುತ್ತಿದ್ದಾರೆ. ಆಹಾರ ಸಂಪಾದನೆಗಾಗಿ ಅವರು ಮೀನು ಹಿಡಿಯುವುದು, ಬೇಟೆ ಮುಂತಾದುವನ್ನೂ ಅವಲಂಬಿಸುತ್ತಾರೆ. ಅವರ ಸಾಮಾಜಿಕ ಅರ್ಥವ್ಯವಸ್ಥೆಯಲ್ಲಿ ವ್ಯವಸಾಯದ ಪಾಲು ಅತ್ಯಲ್ಪ. ಆಹಾರ ಸಂಗ್ರಹಣೆ ತುಂಬ ಕಷ್ಟದಾಯಕವಾಗಿ ಅವರು ಅರೆಹಸಿವಿನಲ್ಲೇ ಬದುಕಬೇಕು, ಬೇರೆ ದಾರಿಯೇ ಇಲ್ಲ. ಬಟ್ಟೆಯ ವಿಚಾರ ಹೇಳುವುದಾದರೆ, ಅವರು ಅದನ್ನು ಕಾಣಿಸಲಾರದಷ್ಟು ಕನಿಷ್ಠಕ್ಕಿಳಿಸಿಕೊಂಡಿದ್ದಾರೆ. ಬಹುಮಟ್ಟಿಗೆ ಬೆತ್ತಲಾಗಿಯೇ ತಿರುಗುತ್ತಾರೆ. 'ಬೊಂಡಾ ಪೊರಜ'ರು ಎಂಬ ಬುಡಕಟ್ಟಿದೆ. ಅದರ ಅರ್ಥ, 'ಬೆತ್ತಲೆ ಪೊರಜ'ರು ಎಂದೇ. ಈ ಜನರ ಹೆಂಗಸರು ಒಂದು ಕಿರುಪಟ್ಟಿಯನ್ನಷ್ಟೇ ಸುತ್ತಿಕೊಳ್ಳುತ್ತಾರಂತೆ. ಅಸ್ಸಾಮಿನ ಕೊಮ್‌ಜಾಕ್ ನಾಗಾಗಳ ಹಾಗೆಯೇ ಇವರಿಗೂ ಒಂದು ಕಿರುಪಟ್ಟಿಯೇ ಸೊಂಟವನ್ನು ಸುತ್ತಿ ಲಂಗವಾಗುತ್ತದೆ. ಎಡತೊಡೆಯ ಮೇಲುಭಾಗದಲ್ಲಿ ಆ ಪಟ್ಟಿಯ ಎರಡು ತುದಿಗಳು ಕೂಡಿಕೊಳ್ಳುವಷ್ಟು ಉದ್ದವಿರುವುದಿಲ್ಲ ಅದು. ಈ ಪಟ್ಟಿ ಸ್ಥಳೀಯವಾದ ಒಂದು ಮರದ ತೊಗಟೆಯ ನಾರುಗಳಿಂದ ನೆಯ್ದುಕೊಂಡದ್ದು. ಹುಡುಗಿಯರು, ಕೊಮ್ ಜಾಕ್ ಹೆಂಗಸರ ರೀತಿಯಲ್ಲಿ, ಮಣಿಸರ ಮತ್ತು ತಾಳೆಗರಿಗಳ ತುಂಡುಗಳನ್ನು ಜೋಡಿಸಿ ತೊಟ್ಟುಕೊಳ್ಳುತ್ತಾರೆ. ಕೊರಳ ತುಂಬ ಮಣಿಸರ ಮುಂತಾದವುಗಳನ್ನು ಕಟ್ಟಿಕೊಳ್ಳುತ್ತಾರೆ. ಇದೇ ಅವರು ತೊಡುವ ಬಟ್ಟೆ. ಹೆಂಗಸರು ತಲೆಯನ್ನು ಪೂರ್ಣ ಬೋಳಿಸಿಕೊಳ್ಳುತ್ತಾರೆ. ನಿಜಾಮರ ರಾಜ್ಯದಲ್ಲಿ ಫರಾಬಾದ್ ಎಂಬಲ್ಲಿಗೆ ಸಮೀಪವಾಗಿ ವಾಸಿಸುವ ಚೆಂಚುಗಳು ಎಂಬ ಬುಡಕಟ್ಟಿನವರು, ಚೂಪು–ತ್ರಿಕೋಣಾಕೃತಿಯಲ್ಲಿ ಬಿದಿರು ಬೊಂಬುಗಳಿಂದ ಜೋಪಡಿ ಕಟ್ಟಿಕೊಂಡು ಅದರ ಮೇಲೆ ತೆಳುವಾಗಿ ಹುಲ್ಲು ಹರಡಿಕೊಂಡಿರುತ್ತಾರಂತೆ........ ಹೀಗೆ ಇವರೆಲ್ಲ ತೊಡಗುವುದು ಚಿಂದಿಚೂರುಗಳು. ಹೆಚ್ಚೆಂದರೆ, ಒಂದು ಲಂಗೋಟಿ, ಒಂದು ತುಂಡುಬಟ್ಟೆ ಗಂಡಸರಿಗೆ ಮತ್ತು ಕಿರುರವಿಕೆ, ಲಂಗ ಹೆಂಗಸರಿಗೆ. ಇದಲ್ಲದೆ

ಅವರಲ್ಲಿರುವ ಚರಾಸ್ತಿ, ಬಹಳವೆಂದರೆ, ಒಂದೆರಡು ಅಡಿಗೆ ಮಡಕೆಗಳು, ಒಂದೆರಡು ಬುಟ್ಟಿಗಳು. ಬುಟ್ಟಿಯಲ್ಲಿ ಇದ್ದರೆ ಒಂದು ಮುಷ್ಟಿ ಕಾಳು. ಕೆಲವೊಮ್ಮೆ ಅವರು ಜಾನುವಾರು ಮತ್ತು ಮೇಕೆಗಳನ್ನು ಸಾಕಿಕೊಂಡಿರುವುದುಂಟು. ಒಂದು ಹಳ್ಳಿಯಲ್ಲಿ ನೆಲೆಸಿರುವವರು ಚೂರುಪಾರು ಸಾಗುವಳಿ ಮಾಡಿರುವುದೂ ಉಂಟು. ಉಳಿದಂತೆ, ಜೇನು ಮುಂತಾದ ಅರಣ್ಯ ಉತ್ಪನ್ನಗಳನ್ನು ಸಂಗ್ರಹಿಸಿ ಮಾರಿ ಜೀವಿಸುತ್ತಾರೆ. ಮೊರಿಯಾಗಳೂ ಎಂಬ ಒಂದು ಬುಡಕಟ್ಟಿನ ಜನಾಂಗದಲ್ಲಿ ಗಂಡಸರು ಒಂದು ಅರಿವೆಪಟ್ಟಿಯನ್ನು ಸೊಂಟಕ್ಕೆ ಸುತ್ತಿ, ಅದರ ತುದಿಯನ್ನು ಎದುರಿನಲ್ಲಿ ತೇಲಿಬಿಡುತ್ತಾರೆ. ಅವರು ಕುತ್ತಿಗೆಗೆ ಮಣಿಸರ ಹಾಕಿಕೊಳ್ಳುತ್ತಾರೆ. ಕುಣಿತದ ಸಮಯದಲ್ಲಿ ಮುಂಡಾಸು ಸುತ್ತಿ ಅದಕ್ಕೆ ಕೋಳಿಯ ಪುಕ್ಕ ಮತ್ತು ನವಿಲುಗರಿ ಸಿಕ್ಕಿಸಿಕೊಳ್ಳುತ್ತಾರೆ. ಇವರಲ್ಲಿ ಹುಡುಗಿಯರೆಲ್ಲ ಮೈತುಂಬ, ಮುಖದ ತುಂಬ ಹೆಚ್ಚಾಗಿ ಹಚ್ಚೆ ಹಾಕಿಸಿಕೊಳ್ಳುತ್ತಾರೆ. ಕೆಲವೊಮ್ಮೆ ಕಾಲಿನ ಮೇಲೂ ಹಾಕಿಸಿಕೊಂಡಿರುತ್ತಾರೆ. ಆ ಹಚ್ಚೆ ವೈಯಕ್ತಿಕ ಇಚ್ಛೆಗನುಸಾರ ವಿಧವಿಧವಾಗಿ ಹಾಕಿಸಿಕೊಳ್ಳುವಂಥದು. ಸೂಜಿ ಅಥವಾ ಮುಳ್ಳಿನಿಂದ ಇದನ್ನು ಹಾಕಿಸಿಕೊಳ್ಳುತ್ತಾರೆ. ಅನೇಕರು ತಲೆಗೂದಲಿಗೆ ಕಾಡುಕೋಳಿಗಳ ಪುಕ್ಕ ಸಿಕ್ಕಿಸಿಕೊಳ್ಳುತ್ತಾರೆ. ಕೆಲವರು ಮರದ ಅಥವಾ ತಗಡಿನ ಬಾಚಣಿಗೆಗಳಿಂದ ತಲೆಯನ್ನು ಸಿಂಗರಿಸಿಕೊಂಡಿರುತ್ತಾರೆ.

ಈ ಆದಿಮ ಜನಾಂಗಗಳಿಗೆ ತಿನ್ನಲು ನಿಷಿದ್ಧವಾದದ್ದು ಯಾವುದೂ ಇರುವುದಿಲ್ಲ. ಹುಳುಗಳು, ಕ್ರಿಮಿಕೀಟಗಳು ಮೊದಲುಗೊಂಡು ಯಾವ ಬಗೆಯ ಮಾಂಸವೂ ಇವರಿಗೆ ಆಹಾರವಾಗುತ್ತದೆ. ಯಾವತ್ತೋ ತಾನಾಗಿಯೇ ಸತ್ತಿರುವ ಪ್ರಾಣಿಯಿರಲಿ, ನಾಲ್ಕೆಂಟು ದಿನದ ಹಿಂದೆ ಹುಲಿ ಕಚ್ಚಿ ಕೊಂದಿರುವ ಪ್ರಾಣಿಯ ಅವಶೇಷವಾಗಿರಲಿ – ಅದರ ಮಾಂಸ ತೆಗೆದುಕೊಂಡು ತಿನ್ನುತ್ತಾರೆ ಅವರು.

ಈ ಆದಿಮ ಜನಾಂಗಗಳ ಧರ್ಮವೆಂದರೆ – ಮೇಲಿನಿಂದ ಕೆಳಗಿನತನಕದ ಎಲ್ಲ ರೀತಿಯ ದೆವ್ವಭೂತಗಳ ಆರಾಧನೆ ಮತ್ತು ಯಾವುದೋ ಕಾಲದಲ್ಲಿ ತೀರಿಕೊಂಡ ಹಿರಿಯರ ಪಿತೃಪೂಜೆ; ಮಾಟ, ಮಂತ್ರ, ಪ್ರಾಣಿಬಲಿ, ನರಬಲಿ – ಇವುಗಳೇ. ವಿದ್ಯೆಯಿಲ್ಲದೆ, ವಿಜ್ಞಾನವೆಂಬುದರ ಕಲ್ಪನೆಯೇ ಇಲ್ಲದೆ, ಪ್ರಕೃತಿ ವ್ಯಾಪಾರಗಳ ಕಿಂಚಿತ್ ಜ್ಞಾನವೂ ಇಲ್ಲದೆ ಪಶುಮಾನವರಂತಿರುವ ಈ ಆದಿಮ ಬುಡಕಟ್ಟಿನ ಜನ, ನಾಗರಿಕತೆಯ ನೆರೆಯಲ್ಲೇ ನಾಗರಿಕತೆಯ ಸೆರಗಿಗೆ ಅಂಟಿಕೊಂಡು ಬದುಕಿಕೊಂಡು ಬರುತ್ತಿದ್ದಾರೆ, ಯುಗಯುಗಗಳಿಂದಲೂ ಒಂದು ಹೆಜ್ಜೆಯೂ ಮುಂದೆ ನಡೆಯದೆ, ಯಾವುದೋ ಪ್ರಾಚೀನಕಾಲದಲ್ಲಿದ್ದಂತೆ ಕಾಲವನ್ನೆಣಿಸುತ್ತ ಹಾಗೇ ಬಿದ್ದುಕೊಂಡಿದ್ದಾರೆ.

ಅಪರಾಧಿ ವರ್ಗಗಳ ಬಗ್ಗೆ ಪರಿಗಣಿಸುವುದಾದರೆ – ಒಂದು ಕಾಲಕ್ಕೆ, ಸುಸಂಘಟಿತ ಗಣಗಳಾಗಿ ಅಪರಾಧವನ್ನು ಜೀವನವೃತ್ತಿಯಾಗಿಸಿಕೊಂಡಿದ್ದ ಪಿಂಡಾರಿಯವರು, ಥಗ್ಗರು ಮುಂತಾದವರು ಈ ವರ್ಗಕ್ಕೆ ಸೇರಿದವರೇ.

ಪಿಂಡಾರಿಯವರು ಸಶಸ್ತ್ರ ದರೋಡೆಕೋರ ಅಪರಾಧಿ ತಂಡಗಳಾಗಿದ್ದವರು. ಅವರ ಸಂಘಟನೆಯೆಂದರೆ, ಸ್ವೇಚ್ಛೆಯಾಗಿ ಲೂಟಿ ಮಾಡುತ್ತ ನಡೆಯುತ್ತಿದ್ದ ಸಶಸ್ತ್ರ ಸಂಘಟನೆಯೇ ಆಗಿತ್ತು. ಕೆಲವೊಮ್ಮೆ ಇಪ್ಪತ್ತು ಸಾವಿರ, ಇನ್ನೂ ಹೆಚ್ಚು ಕುದುರೆಗಳ ದಳ ಕಟ್ಟಿಕೊಂಡಿದ್ದರು ಅವರು. ಅವರ ತಂಡ ಡಕಾಯಿತ ನಾಯಕನೊಬ್ಬನ ಅಧೀನದಲ್ಲಿರುತ್ತಿತ್ತು. ಅತ್ಯಂತ ಪ್ರಬಲನಾಗಿದ್ದ ಚಿತು ಎಂಬ ಪಿಂಡಾರಿ ನಾಯಕನೊಬ್ಬ ತನ್ನೊಬ್ಬನದೇ ಆಡಳಿತದಲ್ಲಿ ಹತ್ತುಸಾವಿರ ಕುದುರೆಗಳನ್ನಿಟ್ಟುಕೊಂಡಿದ್ದ, ಐದು ಸಾವಿರ ಅಶ್ವಾರೋಹಿಗಳು, ಅಸಂಖ್ಯ ಭೂಸೈನ್ಯ ಮತ್ತು ಬಂದೂಕುಗಳನ್ನಿಟ್ಟುಕೊಂಡಿದ್ದ. ಅನಿಯತ ಸೈನ್ಯದ ಅನಿಶ್ಚಿತ ಕೆಲಸದ ಈ ಪಿಂಡಾರಿಗಳಿಗೆ ತಮ್ಮನ್ನು ತೊಡಗಿಸಿಕೊಳ್ಳಲು ಯಾವುದೇ ನಿಶ್ಚಿತ ಸೈನ್ಯ ಸಂಘಟನಾ ಯೋಜನೆ

ಇಲ್ಲದ ಕಾರಣ, ಅವರು ವೃತ್ತಿ ದರೋಡೆಕೋರರ ತಂಡಗಳಾಗಿ ರೂಪುಗೊಂಡರು. ಪಿಂಡಾರಿಯವರು ಯಾವುದೇ ರಾಜ್ಯಗಳನ್ನು ಗೆಲ್ಲಲು ಉದ್ದೇಶಿಸಿರಲಿಲ್ಲ. ಅವರ ಉದ್ದೇಶವೆಂದರೆ ವಸ್ತುಗಳನ್ನೂ ಹಣವನ್ನೂ ದೋಚಿಕೊಳ್ಳುವುದು. ಲೂಟಿ ಮತ್ತು ಅತ್ಯಾಚಾರಗಳೇ ಅವರ ವೃತ್ತಿಯಾಯ್ತು. ಅವರು ಯಾರನ್ನೂ ರಾಜರೆಂದು ಒಪ್ಪಿಕೊಳ್ಳಲಿಲ್ಲ. ಯಾರಿಗೂ ಅವರು ಪ್ರಜೆಗಳಾಗಿರಲಿಲ್ಲ. ಯಾರಿಗೂ ವಿಧೇಯತೆ ನಿಷ್ಠೆ ತೋರಿಸಲಿಲ್ಲ. ಅವರು ಯಾರನ್ನೂ ಗೌರವಿಸದೆ, ಎಲ್ಲ ಮೇಲುವರ್ಗದ ಮತ್ತು ಕೆಳವರ್ಗದ ಶ್ರೀಮಂತ ಹಾಗೂ ಬಡವರನ್ನೂ ಯಾವ ಭಯ ಅಥವಾ ಅಳುಕಿಲ್ಲದೆ ಲೂಟಿ ಮಾಡಿದರು.

ಥಗ್‌ಗಳು ಸುಸಂಘಟಿತ ಕೊಲೆಗಡುಕ ಗುಂಪುಗಳಾಗಿದ್ದರು.[೧] ಹತ್ತರಿಂದ ಇನ್ನೂರರ ತನಕದ ಸಂಖ್ಯೆಯ ಗುಂಪುಗಳಾಗಿ ಅವರು ವಿವಿಧ ಮಾರುವೇಷಗಳಲ್ಲಿ ಇಂಡಿಯಾದಲ್ಲಿ ಸುತ್ತಾಡುತ್ತಿದ್ದರು. ಶ್ರೀಮಂತ ವರ್ಗದ ಪ್ರವಾಸಿಗಳನ್ನು ಸೇರಿಕೊಂಡು ಮೊದಲಿಗೆ ನಿಧಾನವಾಗಿ ಅವರ ವಿಶ್ವಾಸ ಗಳಿಸಿ, ಆಮೇಲೆ ಸರಿಯಾದ ಅವಕಾಶ ಒದಗಿದಾಗ ಅವರ ಕುತ್ತಿಗೆಗೆ ಕರ್ಚೀಫನ್ನೋ ಹಗ್ಗದ ಉರುಲನ್ನೋ ಎಸೆದು ಬಿಗಿದು, ಅವರಲ್ಲಿದ್ದುದನ್ನೆಲ್ಲ ದೋಚಿ ಅನಂತರ ಅವರನ್ನು ಹುಗಿದು ಬಿಡುತ್ತಿದ್ದರು. ಇದೆಲ್ಲವನ್ನೂ ಮಾಡುವಾಗ ಅವರು ಪ್ರಾಚೀನಕಾಲದಿಂದ ನಿಷ್ಠಾಪೂರ್ವಕ ಅನುಸರಿಸಿಕೊಂಡು ಬಂದ ರೂಢಿಗಳಿಗೆ ಪೂರ್ಣ ಬದ್ಧರಾಗಿ ಅದರಂತೆಯೇ ಚಾಚೂ ತಪ್ಪದೆ ನಡೆದುಕೊಳ್ಳುತ್ತಿದ್ದರು; ಕೊಡಲಿಗೆ ಅಭಿಷೇಕ ಮಾಡಿ ಸಕ್ಕರೆ ಬಲಿ ಕೊಡುತ್ತಿದ್ದರು. ಅವರು ಹಿಂದೂಗಳ ಪ್ರಳಯ ದೇವತೆ ಕಾಳಿಯ ಗಾಢ ಭಕ್ತರಾಗಿದ್ದವರು. ಸಂಪಾದನೆಗಾಗಿ ಕೊಲೆ ಮಾಡುವುದು ಅವರಿಗೆ ಧಾರ್ಮಿಕ ಕರ್ತವ್ಯವೇ ಆಗಿತ್ತು. ಅದನ್ನವರು ಪವಿತ್ರ ಹಾಗೂ ಗೌರವಯುತ ವೃತ್ತಿಯೆಂದು ಭಾವಿಸಿಕೊಂಡಿದ್ದರು. ತಾವು ಅಪರಾಧ ಮಾಡುತ್ತಿದ್ದೇವೆ ಎಂಬ ಭಾವನೆಯೇ ಅವರಿಗಿರುತ್ತಿರಲಿಲ್ಲ ಮತ್ತು ನೈತಿಕ ಭಾವನೆಗಳು ಅವರನ್ನು ಕಾಡುತ್ತಿರಲಿಲ್ಲ. ತಾವು ಯಾರ ಆಜ್ಞೆ ಮತ್ತು ಕೃಪೆಗಾಗಿ ಹಾರೈಸುತ್ತಿದ್ದರೋ ಅಂಥ ದೇವತೆಯ ಇಚ್ಛೆ ಅನಿಚ್ಛೆಗಳನ್ನು ತುಂಬಾ ಸಂಕೀರ್ಣವಾದ ಪ್ರಾಚೀನ ಶಕುನ–ನಿಮಿತ್ತಗಳ ಕಲ್ಪನೆಯ ಮೂಲಕ ಗ್ರಹಿಸಿ ಅವರು ತಮ್ಮ ಕೆಲಸ ನಡೆಸುತ್ತಿದ್ದರು. ಶಕುನ – ನಿಮಿತ್ತಗಳನ್ನು ನಿಷ್ಠೆಯಿಂದ ನಂಬಿಕೊಂಡು ಅದರ ಸೂಚನೆಗನುಸಾರ ಅವರು, ತಾವು ಕೊಲ್ಲಬೇಕಾದ ಮನುಷ್ಯನನ್ನು ಅನುಸರಿಸಿಕೊಂಡೋ ಅಥವಾ ಅವನಿದ್ದಲ್ಲಿಗೆ ತಲುಪುವುದಕ್ಕೋ ನೂರಾರು ಮೈಲಿ ದೂರ ನಡೆದುಹೋಗುತ್ತಿದ್ದರು. ಶಕುನವಾಗಿ ತಮ್ಮ ಹಂಚಿಕೆ ಫಲಿಸುವತನಕ ತಾಳ್ಮೆಯಿಂದ ಕಾಯುತ್ತಿದ್ದರು. ಅದಾಗಿ ತಮ್ಮ ಕೆಲಸ ಫಲಿಸಿದ ಮೇಲೆ ತಮ್ಮ ರಕ್ಷಕ ದೇವತೆಯ ಗೌರವಾರ್ಥ ಧಾರ್ಮಿಕ ವಿಧಿಗಳನ್ನು ನಡೆಸುತ್ತಿದ್ದರು. ತಾವು ಕೊಳ್ಳೆ ಹೊಡೆದದ್ದರಲ್ಲಿ ಒಂದು ದೊಡ್ಡ ಪಾಲನ್ನು ದೇವತೆಗೆ ಕಾಣಿಕೆ ನೀಡುತ್ತಿದ್ದರು. ಥಗ್ ಜನ ತಮ್ಮದೇ ಆದ ಕೆಲವು ಭಾಷಾಸಂಜ್ಞೆಗಳನ್ನೂ ಸಂಕೇತಗಳನ್ನೂ ಬಳಸುತ್ತಿದ್ದರು. ಇದರಿಂದ ಇಂಡಿಯಾದ ಯಾವುದೇ ದೂರದ ಮೂಲೆಯಲ್ಲಾದರೂ ಅವರು ತಮ್ಮವರು ಯಾರೆನ್ನುವುದನ್ನು ಸುಲಭವಾಗಿ ಗುರುತಿಸಿಕೊಂಡು ಪರಸ್ಪರ ವ್ಯವಹರಿಸುತ್ತಿದ್ದರು. ಅವರಲ್ಲಿ ಕಾರಣಾಂತರದಿಂದ ಹಲವು ಪೀಳಿಗೆಗಳ ಕಾಲ ಇಂಥ ವೃತ್ತಿ ಕೃತ್ಯಗಳಲ್ಲಿ ನೇರ ಪಾಲುಗೊಳ್ಳದೆ ಉಳಿದುಕೊಂಡವರು ಕೂಡ, ಕಾವಲುಗಾರರಾಗಿ, ಗೂಢಚಾರರಾಗಿ ಅಥವಾ ಆಹಾರ ಸರಬರಾಜು ಮಾಡುವವರಾಗಿ ಕೆಲಸ ಮಾಡಿಕೊಂಡಿದ್ದು ತಮ್ಮವರ ಕೃತ್ಯಗಳಲ್ಲಿ ನೆರವು ಕೊಡುತ್ತಿದ್ದರು. ಈ ಬಗೆಯ ತಮ್ಮ ಕಸುಬನ್ನು ಅವರು ಹಲವು ಶತಮಾನಗಳ ಕಾಲ ತಡೆಯಿಲ್ಲದೆ ಮುಂದುವರೆಸಿಕೊಂಡು ಹೋಗಲು ಸಾಧ್ಯವಾದದ್ದು, ತಮ್ಮ ಬಲು ಗಟ್ಟಿಯಾದ ಸಂಘಟನೆಯಿಂದ ಹಾಗೂ ಕಾಯ್ದುಕೊಳ್ಳುತ್ತಿದ್ದ ರಹಸ್ಯ

---

೧. *ಎನ್‌ಸೈಕ್ಲೋಪೀಡಿಯಾ ಬ್ರಿಟಾನಿಕಾ*, ೧೧ನೇ ಮುದ್ರಣ, ಸಂ. XXVI, ಪು. ೮೯೬

ರಕ್ಷಣಾವ್ಯವಸ್ಥೆಗಳಿಂದ. ಅದಕ್ಕಿಂತ ಮುಖ್ಯವಾಗಿ, ಧಾರ್ಮಿಕ ವಿಧಿಗಳ ಮುಸುಕಿನಲ್ಲಿ ಅವರ ಕೊಲೆಗಳು ಮುಚ್ಚಿಹೋಗಿರುತ್ತಿದ್ದವು. ಅಸಾಧಾರಣವಾದ ಸಂಗತಿಯೆಂದರೆ, ಇಂಡಿಯಾದಲ್ಲಿ ಹಿಂದೂ ರಾಜರು, ಮುಸ್ಲಿಮ್ ರಾಜರು – ಇಬ್ಬರೂ ಈ ಥಗ್ಗರ ವೃತ್ತಿಯನ್ನು ಸಹಜವಾದ ವೃತ್ತಿಯೆಂದೇ ಪರಿಗಣಿಸಿದ್ದರು. ಥಗ್ಗರು ರಾಜ್ಯಕ್ಕೆ ತೆರಿಗೆ ಸಲ್ಲಿಸುತ್ತಿದ್ದರು ಮತ್ತು ರಾಜ್ಯ ಅವರನ್ನು ಹತ್ತಿಕ್ಕದೆ ಬಿಟ್ಟುಬಿಟ್ಟಿತ್ತು.

ಬ್ರಿಟಿಷರು ಬಂದು ಈ ದೇಶದ ರಾಜ್ಯಾಡಳಿತವನ್ನು ಹಿಡಿದುಕೊಳ್ಳುವತನಕವೂ ಥಗ್ಗರನ್ನು ಹತ್ತಿಕ್ಕುವ ಬಗ್ಗೆ ಯಾವುದೇ ಪ್ರಯತ್ನ ನಡೆದದ್ದಿಲ್ಲ. ಕ್ರಿ.ಶ. ೧೮೩೫ರ ಹೊತ್ತಿಗೆ, ಮೂನ್ನೂರ ಎಂಬತ್ತೆರಡು ಥಗ್ಗರನ್ನು ಗಲ್ಲಿಗೇರಿಸಲಾಗಿತ್ತು. ಮತ್ತು ಒಂಬೈನೂರ ಎಂಬತ್ತಾರು ಮಂದಿಯನ್ನು ಗಡೀಪಾರು ಮಾಡಲಾಗಿತ್ತು ಇಲ್ಲವೆ ಜೀವಾವಧಿ ಶಿಕ್ಷೆಗೆ ಒಳಪಡಿಸಲಾಗಿತ್ತು. ೧೮೭೯ರಷ್ಟು ತಡವಾಗಿ ಕೂಡ, ಮುನ್ನೂರ ನಲವತ್ತನಾಲ್ಕು ಜನ ಥಗ್ಗರು ದಾಖಲೆಯಲ್ಲಿದ್ದರು. ೧೯೦೪ರ ತನಕವೂ ಇಂಡಿಯಾ ಸರ್ಕಾರದ 'ಥಗ್ಗರ ಹಾಗೂ ಡಕಾಯಿತರ ಇಲಾಖೆ' ಮುಂದುವರಿದುಕೊಂಡು ಬಂದಿದ್ದು ಆಮೇಲೆ ಅದು 'ಕೇಂದ್ರ ಅಪರಾಧ ಪತ್ತೇದಾರಿ ಇಲಾಖೆ' (ಕ್ರಿಮಿನಲ್ ಇಂಟೆಲಿಜೆನ್ಸ್) ಎಂಬುದಾಗಿ ಪರಿವರ್ತನೆಗೊಂಡಿತು.

ಈಗ ಈ ಬಹಿರಂಗ ವೃತ್ತಿ ಕೊಲೆಗಡಕರು ಪೂರ್ಣ ನಿರ್ನಾಮಗೊಂಡಿದ್ದಾರೆ. ಜನರ ಬಲಿ ನಿಂತಿದೆ. ಶಾಂತಿಗೆ ಭಂಗವಿಲ್ಲ. ಇಷ್ಟಾದರೂ ಇವತ್ತಿಗೂ ಇಂಡಿಯಾದಲ್ಲಿ ಅಪರಾಧವನ್ನೇ ವೃತ್ತಿಯಾಗಿಸಿಕೊಂಡ ಸಮುದಾಯಗಳಿದ್ದು ಅವುಗಳನ್ನು ಸರ್ಕಾರ 'ಅಪರಾಧಿ ಬುಡಕಟ್ಟು' ಗಳೆಂದು ದಾಖಲೆಯಲ್ಲಿ ಇಟ್ಟುಕೊಂಡಿದೆ.

ಅಪರಾಧಿ ಬುಡಕಟ್ಟುಗಳು ಸಾಮಾನ್ಯವಾಗಿ ಬಯಲುನಾಡಿನಲ್ಲಿ, ನಾಗರಿಕ ಜೀವನದ ಮಧ್ಯದಲ್ಲೇ ಅಲ್ಲದಿದ್ದರೂ ಅದಕ್ಕೆ ತೀರ ಸಮೀಪದಲ್ಲೇ ಬದುಕುತ್ತಿವೆ. ಸಂಘಟಿತವಾದ ಲೂಟಿ ಸುಲಿಗೆಗಳ ಮೂಲಕವೇ ಅವರ ಬದುಕು ಸಾಗುತ್ತದೆಯಾದ ಕಾರಣ, ಇಂಡಿಯಾ ಸರ್ಕಾರ ಅವರನ್ನು 'ಅಪರಾಧಿ ಬುಡಕಟ್ಟುಗಳು' ಎಂದು ತಲೆಪಟ್ಟಿ ಹಾಕಿ ನಿಷೇಧಿಸಿ ಇಟ್ಟಿದೆ. "ಸಂಯುಕ್ತ ಪ್ರಾಂತಗಳಲ್ಲಿನ ಅಪರಾಧಿ ಜನಾಂಗಗಳು" (Hollius : *Criminal Tribes of the United Provinces)* ಎಂಬ ಪುಸ್ತಕದಲ್ಲಿ ಹೊಲ್ಲಿ ಎಂಬಾತ ಅವರ ಚಟುವಟಿಕೆಗಳ ವಿವರ ಕೊಟ್ಟಿದ್ದಾನೆ. ಕೇವಲ ಅಪರಾಧಗಳನ್ನು ಅವಲಂಬಿಸಿಯೇ ಅವರು ಬದುಕುತ್ತಿದ್ದಾರೆ. ತೀರ ಕೆಲವರು ತೋರಿಕೆಗೆ ವ್ಯವಸಾಯದಲ್ಲಿ ತೊಡಗಿಕೊಂಡಿದ್ದರೂ ಅದು ಅವರ ಅಪರಾಧಿಕೃತ್ಯಗಳನ್ನು ಮರೆಗೊಳಿಸುವ ಉಪಾಯವಷ್ಟೇ. ಅವರ ಪಾತಕ ಕ್ರಿಯೆಗಳೇನಿದ್ದರೂ ಹೆಚ್ಚಾಗಿ ಹಿಂಸಾತ್ಮಕವಾದ ಲೂಟಿ ದರೋಡೆಗಳಲ್ಲಿ ವ್ಯಕ್ತವಾಗುತ್ತದಾದರೂ ಅವರ ಜನಾಂಗವು ಅಪರಾಧಗಳಲ್ಲಿ ಅಷ್ಟು ಚೆನ್ನಾಗಿ ಸಂಘಟಿತವಾಗಿರುವ ಕಾರಣ, ಯಾವುದಕ್ಕೇ ಕೈ ಹಾಕಿದರೂ ಅವರು ಗುರಿ ತಪ್ಪುವುದಿಲ್ಲ. ಯಾವುದೇ ಒಂದು ನಿಶ್ಚಿತ ಸ್ಥಳದಲ್ಲಿ ಡಕಾಯಿತಿ ನಡೆಸುವುದು ಎಂಬ ನಿರ್ಧಾರವಾದ ಕೂಡಲೇ ಅವರು ಮೊದಲಿಗೆ, ಸೂಕ್ತವಾದ ಬಲಿವ್ಯಕ್ತಿಯನ್ನು ಆಯ್ಕೆ ಮಾಡಲು, ಆ ಹಳ್ಳಿಯ ಸಾಮಾನ್ಯ ರೂಢಿ ನಡಾವಳಿಗಳನ್ನು ಅಭ್ಯಾಸ ಮಾಡಲು, ಆ ಹಳ್ಳಿಗೆ ಸಮೀಪದ ನೆರವು ಸಿಗಬಹುದಾದ ದೂರವನ್ನು ಗುರುತಿಸಿಕೊಳ್ಳಲು ಗೂಢಚಾರರನ್ನು ಕಳಿಸುತ್ತಾರೆ. ದೊರೆತ ವಿವರಗಳ ಆಧಾರದ ಮೇಲೆ ದಾಳಿಗೆ ಎಷ್ಟು ಜನ ಮತ್ತು ಎಷ್ಟು ಬಂದೂಕು ಬೇಕು ಎನ್ನುವುದನ್ನು ನಿರ್ಧರಿಸುತ್ತಾರೆ. ದಾಳಿ ನಡೆಸುವುದು ಸಾಮಾನ್ಯವಾಗಿ ಮಧ್ಯರಾತ್ರಿಯ ವೇಳೆಗೆ. ಗೂಢಚಾರರಿಂದ ಪಡೆದ ಮಾಹಿತಿ ಆಧರಿಸಿ, ಊರಿನ ಬೇರೆ ಬೇರೆ ಕಡೆಗಳಲ್ಲಿ ತಮ್ಮ ಜನರನ್ನಿರಿಸಿ ಅಲ್ಲಲ್ಲಿ ಗುಂಡು ಹಾರಿಸತೊಡಗುತ್ತಾರೆ. ಜನರೆಲ್ಲ ಈ ಗುಂಡಿನ ಸಪ್ಪಳದಿಂದ ಬೆದರಿ ತಮ್ಮ ಗಮನ ಆ ಕಡೆ ಕೇಂದ್ರೀಕರಿಸಿರುವಾಗ ಮುಖ್ಯ ಡಕಾಯಿತ ಗುಂಪು, ನಿಗದಿಪಡಿಸಿಕೊಂಡ ಮನೆಯ ಮೇಲೆ ದಾಳಿ ನಡೆಸುತ್ತದೆ. ಗುಂಪಿನಲ್ಲಿ ಸಾಮಾನ್ಯವಾಗಿ ೩೦–೪೦ ಮಂದಿ ಇರುತ್ತಿದ್ದರು.

ಈ ಜನರ ಸಾಮಾನ್ಯ ಬದುಕಿನಲ್ಲಿ ಅಪರಾಧಕ್ಕಿರುವ ಬಲು ದೊಡ್ಡ ಪಾತ್ರವನ್ನು ಗಮನಿಸಲೇಬೇಕು. ಹುಟ್ಟಿದ ಹುಡುಗ ನಡೆದಾಡಲು, ಮಾತಾಡಲು ಕಲಿಯುತ್ತಿದ್ದ ಹಾಗೇ ಅವನಿಗೆ ಅಪರಾಧದ ದೀಕ್ಷೆ ಕೊಡಲಾಗುತ್ತದೆ. ಇದರ ಉದ್ದೇಶ ಬಹುಮಟ್ಟಿಗೆ ಹೀಗೆ : ಚಿಲ್ಲರೆ ಕಳ್ಳತನಗಳಲ್ಲಿ ಮಕ್ಕಳನ್ನು ಮುಂದುಮಾಡುವುದೇ ಒಳ್ಳೆಯದು ; ಒಮ್ಮೆ ಹಿಡಿದರೂ ಅವರನ್ನು ಹೆದರಿಸಿ ಬಿಟ್ಟು ಬಿಡುತ್ತಾರೆ, ದೊಡ್ಡವರಾದರೆ ಬಂಧಿಸುತ್ತಾರೆ, ಶಿಕ್ಷಿಸುತ್ತಾರೆ, ಇವರ ಹೆಂಗಸರು ದರೋಡೆದಾಳಿಗಳಲ್ಲಿ ನೇರ ಭಾಗವಹಿಸದ್ದರೂ ಅನೇಕ ಬೇರೆ ಜವಾಬ್ದಾರಿಗಳನ್ನು ನಿರ್ವಹಿಸುತ್ತಾರೆ. ಕಳ್ಳಮಾಲುಗಳನ್ನು ಒಯ್ದು ಮಾರುವುದು ಅವರ ಮುಖ್ಯ ಕೆಲಸ. ಮೇಲಾಗಿ ಅಂಗಡಿಗಳ್ಳತನದಲ್ಲಿ ಅವರು ನಿಸ್ಸೀಮರು.

ಅಪರಾಧಿ ಜನಾಂಗಗಳ ರೀತಿಯಲ್ಲೇ ಅಸ್ಪೃಶ್ಯರು ಕೂಡ ನಾಗರಿಕ ಹಿಂದೂ ಸಮಾಜದ ನಡುವಿನಲ್ಲೇ ಬದುಕುತ್ತಾರೆ ಮತ್ತು ಆದಿಮ ಜನಾಂಗ – ಅಪರಾಧಿ ಜನಾಂಗಗಳೆರಡಕ್ಕಿಂತಲೂ ಭಿನ್ನವಾದ ಸಂಸ್ಕೃತಿ ಹಾಗೂ ನೈತಿಕತೆಯ ಸ್ತರಗಳಲ್ಲಿ ಬಾಳಿಕೊಂಡಿರುತ್ತಾರೆ. ಅಸ್ಪೃಶ್ಯರಿಗಿರುವ ಸಂಸ್ಕೃತಿ ಹಿಂದೂ ಜಾತಿಗಳಿಗಿರುವ ಸಂಸ್ಕೃತಿಯೇ. ಹಿಂದೂ ಜಾತಿಗಳ ಧಾರ್ಮಿಕ ವಿಧಿಗಳನ್ನು ಅವರೂ ಆಚರಿಸುತ್ತಾರೆ. ಹಿಂದೂಗಳ ಧಾರ್ಮಿಕ–ಲೌಕಿಕ ಕಟ್ಟುಕಟ್ಟಳೆಗಳನ್ನು ಅವರು ಒಪ್ಪಿಕೊಳ್ಳುತ್ತಾರೆ. ಹಿಂದೂಗಳ ಹಬ್ಬ ಹರಿದಿನಗಳನ್ನು ಅವರ ಹಾಗೇ ಆಚರಿಸುತ್ತಾರೆ. ಆದರೆ ಇದರಿಂದ ಅವರಿಗೆ ಸಿಗುವ ಪ್ರಯೋಜನ ಏನೂ ಇಲ್ಲ. ತದ್ವಿರುದ್ಧವಾಗಿ, ಅವರ ದೇಹಸ್ಪರ್ಶವೇ ಮಾಲಿನ್ಯವುಂಟು ಮಾಡುತ್ತದೆ ಎಂದುಕೊಂಡು ಹಿಂದೂಗಳು ಅವರನ್ನು ಪ್ರತ್ಯೇಕಗೊಳಿಸಿ ದೂರವಾಗಿ ಇಟ್ಟಿದ್ದಾರೆ. ತೀರ ಅನಿವಾರ್ಯವಾದ ಸಂದರ್ಭಗಳನ್ನು ಬಿಟ್ಟು ಉಳಿದಂತೆ ಅವರು ಎಲ್ಲಾ ಸಾಮಾಜಿಕ ಸಂಪರ್ಕಗಳಿಂದ ನಿಷಿದ್ಧರಾಗಿ ಬದುಕುತ್ತಾರೆ. ಹಳ್ಳಿಯ ಹೊರ ಸೆರಗಿನಲ್ಲಿ ಅವರು ವಾಸಿಸಬೇಕು, ಹಳ್ಳಿಯ ನಡುವೆ ಇರುವಂತಿಲ್ಲ. ಪ್ರತಿಯೊಂದು ಹಳ್ಳಿಯಲ್ಲೂ ಒಂದು ಅಸ್ಪೃಶ್ಯ ಕೇರಿ ಇರುತ್ತದೆ. ಹಳ್ಳಿಗೆ ಕೂಡಿಕೊಂಡಿರುತ್ತಾರಾದರೂ ಅವರು ಹಳ್ಳಿಯ ಭಾಗವಾಗುವುದಿಲ್ಲ. ಉಳಿದ ಹಿಂದೂ ಜನವರ್ಗದಿಂದ ಪ್ರತ್ಯೇಕಗೊಳಿಸಲ್ಪಟ್ಟ ಅವರು ಗುಲಾಮ ವರ್ಗಕ್ಕೆ ಹೊಂದುವಂಥ ವಿಧೇಯ ನಡವಳಿಕೆ ಕಟ್ಟಳೆಗಳಿಗೆ ಬದ್ಧರಾಗಿ ಇರಬೇಕಾಗಿದೆ. ಅವರಿಗೆ ವಿಧಿಸಿರುವ ಕಟ್ಟಳೆಗಳ ಪ್ರಕಾರ, ಅಸ್ಪೃಶ್ಯನಾದವನು ತನಗೆ ನಿಗದಿತವಾಗಿರುವ ಮಟ್ಟದಿಂದ ಮೇಲಿನ ಮಟ್ಟಕ್ಕೆ ಏರುವ ಯಾವುದೇ ಕೃತ್ಯಕ್ಕೂ ಕೈ ಹಾಕಬಾರದು. ತನ್ನ ಮಟ್ಟಕ್ಕಿಂತ ಮೀರಿದ ಬಟ್ಟೆ ಬರೆಗಳನ್ನು ಆತ ತೊಡಬಾರದು. ಅಸ್ಪೃಶ್ಯ ಹೆಂಗಸರು ಮೇಲು ವರ್ಗದ ಜಾತಿಯ ಹಿಂದೂಗಳ ಹೆಂಗಸರಂತೆ ಆಭರಣಗಳಿಂದ ಸಿಂಗರಿಸಿಕೊಳ್ಳಬಾರದು. ಹಳ್ಳಿಯಲ್ಲಿರುವ ಇತರ ಹಿಂದೂಗಳ ಮನೆಗಳಿಗಿಂತ ದೊಡ್ಡದಾದ ಅಥವಾ ಉತ್ತಮವಾದ ಮನೆಯನ್ನು ಆತ ಹೊಂದಿರಬಾರದು. ಯಾವುದೇ ಸಂದರ್ಭದಲ್ಲೂ ಆತ ಮನೆಗೆ ಹೆಂಚು ಹಾಕಿಕೊಳ್ಳುವಂತಿಲ್ಲ. ಹಿಂದೂವಿನ ಎದುರಿನಲ್ಲಿ ಆತ ಕುಳಿತಿರಬಾರದು, ನಿಂತಿರಬೇಕು. ಹಿಂದೂವಿಗೆ ತಾನೇ ಮೊದಲು ನಮಸ್ಕರಿಸಬೇಕು. ಅಸ್ಪೃಶ್ಯನಾದವನು ಸ್ವಚ್ಛವಾದ ಬಟ್ಟೆ ಧರಿಸಕೂಡದು, ತಾಮ್ರ, ಹಿತ್ತಾಳೆ ಪಾತ್ರೆಗಳನ್ನು ಬಳಸಬಾರದು. ಬೆಳ್ಳಿ ಬಂಗಾರದ ಆಭರಣಗಳನ್ನು ತೊಟ್ಟುಕೊಳ್ಳಬಾರದು. ಹಿಂದೂಗಳ ಮನೆಯಲ್ಲಿ ಯಾರಾದರೂ ಸತ್ತರೆ, ಅಸ್ಪೃಶ್ಯನೇ ಅವರ ಸಂಬಂಧಿಕರ ಮನೆಗಳಿಗೆಲ್ಲ ಹೋಗಿ ಆ ಸುದ್ದಿಯನ್ನು ತಿಳಿಸಿ ಬರಬೇಕು. ಸಂಬಂಧಿಕರು ಎಷ್ಟೇ ಮೈಲುಗಳ ದೂರದಲ್ಲಿ ವಾಸಿಸುತ್ತಿದ್ದರೂ ಈತ ನಡೆದುಕೊಂಡೇ ಹೋಗಿ ಅವರಿಗೆಲ್ಲ ತಿಳಿಸಬೇಕು. ಹೀಗೆ ಸಾವಿನ ಸುದ್ದಿಯನ್ನು ಅಸ್ಪೃಶ್ಯನ ಮೂಲಕ ಕಳಿಸುವುದಲ್ಲದೆ ಅಂಚೆಯ ಮೂಲಕ ತಿಳಿಸುವುದು ಸಂಬಂಧಿಕರ ಕಣ್ಣಿನಲ್ಲಿ ಅವಮಾನಕಾರಕ ಎಂದೇ ಎಲ್ಲರೂ ಭಾವಿಸುತ್ತಾರೆ. ಹಿಂದೂಗಳ ಹೆಣ್ಣು ಮಕ್ಕಳನ್ನು ಗಂಡನ ಮನೆಯಿಂದ ತವರಿಗೂ ತವರಿನಿಂದ ಗಂಡನ ಮನೆಗೂ ಕಳಿಸುವಾಗ, ಕರೆಸುವಾಗ, ಅವರ ಜತೆಯಲ್ಲಿ ಹೋಗಬೇಕಾದದ್ದು ಅಸ್ಪೃಶ್ಯನ ಕೆಲಸ.

ಹೆಣ್ಣಿನ ಜೊತೆಯಲ್ಲಿ ಜೊತೆಯಾಳು ಇರಬೇಕಾದದ್ದು ಅವರ ಗೌರವದ ದೃಷ್ಟಿಯಿಂದ ತೀರ ಅಗತ್ಯ. ಈ ಗೌರವ ಉಳಿಸಿಕೊಳ್ಳಲು ಹಣ ವೆಚ್ಚವಾಗದೆ ಆಳು ಸಿಗಬೇಕು ಎಂದರೆ ಅದು ಅಸ್ಪೃಶ್ಯ ವರ್ಗದಿಂದ ಮಾತ್ರವೇ ಸಾಧ್ಯ. ಹಿಂದೂಗಳ ಮನೆಗಳಲ್ಲಿ ಪ್ರತಿಯೊಂದು ಸಮಾರಂಭದಲ್ಲೂ ಹೀನಾಯವಾದ ಸಫಾಯಿ ಕೆಲಸಗಳನ್ನು ಅಸ್ಪೃಶ್ಯರೇ ಬಂದು ಮಾಡಿಕೊಡಬೇಕಾದದ್ದು ಕಡ್ಡಾಯವಾಗಿದೆ. ಅಸ್ಪೃಶ್ಯನು ಸ್ವಂತ ಭೂಮಿಯನ್ನು ಹೊಂದಿರಬಾರದು, ಸ್ವಯಂ ಸಾಗುವಳಿ ಮಾಡಬಾರದು. ಆತ ಸ್ವತಂತ್ರವಾಗಿ ಬದುಕಕೂಡದು. ಊರಿನ ಹಿಂದೂ ಮನೆಗಳಲ್ಲಿ ತಿಂದುಳಿಯುವ ಹಳಸಲು ಅನ್ನಾಹಾರ ಮತ್ತು ಊರಿನಲ್ಲಿ ಸತ್ತ ಜಾನುವಾರುಗಳ ಮಾಂಸ – ಇವುಗಳನ್ನವಲಂಬಿಸಿ ಆತ ಬದುಕಬೇಕು. ಆತ ಊರಿನಲ್ಲಿ ಮನೆಮನೆಗೆ ಹೋಗಿ ಹಳಸಲು ಅನ್ನಾಹಾರಗಳನ್ನು ಬೇಡಿ ಪಡೆದುಕೊಳ್ಳಬೇಕು. ಇದಕ್ಕಾಗಿ ಪ್ರತಿದಿನ ಸಂಜೆ ಆತ ಊರಲ್ಲಿ ಭಿಕ್ಷಾಯಾತ್ರೆ ಮಾಡಬೇಕು. ಇದೇ ರೀತಿ, ಊರಲ್ಲಿ ಸತ್ತ ಜಾನುವಾರುಗಳನ್ನು ಊರಿನ ಹೊರಗೆ ಕೊಂಡೊಯ್ಯುವವನು ಅಸ್ಪೃಶ್ಯನೇ. ಇದನ್ನು ಅವನೇ ಮಾಡಬೇಕು. ಬೇರೆ ಹಿಂದೂಗಳಾರೂ ಈ ಕೆಲಸ ಮಾಡಲು ಸಮ್ಮತಿಸುವುದಿಲ್ಲ. ಸವರ್ಣೀಯ ಹಿಂದೂಗಳ ಮೇಲೆ ಅಧಿಕಾರ ಆಜ್ಞೆ ಮಾಡಲು ಬರುವಂಥ ಯಾವುದೇ ವೃತ್ತಿಯನ್ನು ಆತ ಸ್ವೀಕರಿಸಬಾರದು. ಆತ ದೀನನಾಗಿರತಕ್ಕದ್ದು ಮತ್ತು ಈ ಕಟ್ಟಳೆಗಳ ಮಿತಿಯನ್ನು ಮೀರಿ ಏನನ್ನೂ ಅಪೇಕ್ಷಿಸಬಾರದು. ಕೆಲವು ಅಸ್ಪೃಶ್ಯರು ಈಗ, ಸಾಂಪ್ರದಾಯಿಕವಾದ ಈ ಕಟ್ಟಳೆಗಳನ್ನು ಮೀರಿ ಆ ಕೆಳಮಟ್ಟದಿಂದ ತುಂಬ ಮೇಲಕ್ಕೆ ಏರಿಕೊಳ್ಳಲು ಸಾಧ್ಯವಾಗಿದೆ, ನಿಜ. ಆದರೆ, ಅವರಲ್ಲಿ ಬಹುಸಂಖ್ಯಾತರು ಈಗಲೂ ಸಾಮಾಜಿಕವಾಗಿ ಹಳೆಯ ಗುಲಾಮಗಿರಿಯಲ್ಲೇ ನವೆಯುತ್ತಿದ್ದಾರೆ ಮತ್ತು ಆರ್ಥಿಕವಾಗಿ ದಟ್ಟದಾರಿದ್ರ್ಯದಲ್ಲಿ ಮುಳುಗಿದ್ದಾರೆ.

ನಮ್ಮ ಎಪ್ಪತ್ತೊಂಬತ್ತೂವರೆ ಮಿಲಿಯ (೭.೯೫ ಕೋಟಿ) ಜನರ ಪರಿಸ್ಥಿತಿ ಹೀಗಿದೆ. ಬಹುಮಟ್ಟಿಗೆ ಮೃತಾವಸ್ಥೆಯಲ್ಲಿರುವ ಈ ಅಸಂಖ್ಯಾತ ಜೀವಗಳ ಸಮಸ್ಯೆ ಸಣ್ಣ ಸಮಸ್ಯೆಯಲ್ಲ. ಈ ಮೂರು ವರ್ಗಗಳ ಒಟ್ಟು ಜನಸಂಖ್ಯೆ, ಹೇಳುವುದಾದರೆ – ಅಮೆರಿಕ ಸಂಯುಕ್ತ ಸಂಸ್ಥಾನದ ಜನಸಂಖ್ಯೆಯ ಶೇ. ೬೦ ರಷ್ಟಾಗುತ್ತದೆ ; ಬ್ರಿಟಿಷ್ ಸಾಮ್ರಾಜ್ಯದಲ್ಲಿರುವ ಒಟ್ಟು ಬಿಳಿಯರ ಸಂಖ್ಯೆಗಿಂತ ಒಂಬತ್ತೂವರೆ ಮಿಲಿಯದಷ್ಟು ಹೆಚ್ಚಾಗುತ್ತದೆ ; ಅಥವಾ ಜಪಾನಿನ ಒಟ್ಟು ಜನಸಂಖ್ಯೆಗಿಂತಲೂ ಒಂಬತ್ತೂವರೆ ಮಿಲಿಯ ಹೆಚ್ಚಾಗುತ್ತದೆ ; ಇಟಲಿಯ ಜನಸಂಖ್ಯೆಗಿಂತ ಮೂವತ್ತೇಳು ಮಿಲಿಯ ಅಧಿಕವಾಗುತ್ತದೆ; ಜರ್ಮನಿಯ ಜನಸಂಖ್ಯೆಗಿಂತ ಹದಿಮೂರೂವರೆ ಮಿಲಿಯ, ಫ್ರಾನ್ಸ್‌ನ ಜನಸಂಖ್ಯೆಗಿಂತ ಮೂವತ್ತೇಳೂವರೆ ಮಿಲಿಯ ಅಧಿಕವಾಗುತ್ತದೆ; ಬೆಲ್ಜಿಯಮ್‌ನ ಜನಸಂಖ್ಯೆಯ ಹತ್ತರಷ್ಟು, ಡೆನ್‌ಮಾರ್ಕ್ ದೇಶದ ಜನಸಂಖ್ಯೆಯ ಇಪ್ಪತ್ತರಷ್ಟು. ಎಂದರೆ, ಮಾನವಕುಲದ ದೊಡ್ಡಭಾಗಕ್ಕೆ ಎಂಥ ಭಯಾನಕ ದುರ್ಗತಿ?

## III

ಖೇದ ಹುಟ್ಟಿಸುವ ಅಥವಾ ಹಾಗೆನ್ನಬಹುದಾದರೆ, ಅಸಹ್ಯ ಹುಟ್ಟಿಸುವ ವಿಷಯ ಉನ್ನತ ನಾಗರಿಕತೆಯಿಂದ ಆವೃತವಾಗಿ ಅದರಿಂದಲೇ ಪೋಷಿತವಾಗಿದ್ದೂ ಈ ನಿರ್ಭಾಗ್ಯ ಜೀವಿಗಳು ಈ ಸ್ಥಿತಿಯಲ್ಲಿದ್ದಾರೆ ಎನ್ನುವುದು. ಯಾವ ನಾಗರಿಕತೆ ಹೀಗೆ ತನ್ನ ಎಪ್ಪತ್ತೊಂಬತ್ತೂವರೆ ಮಿಲಿಯ ಮಾನವ ಜೀವಿಗಳನ್ನು ಮನುಷ್ಯತ್ವಕ್ಕೆ ಎತ್ತಿಕೊಳ್ಳಲಾರದೆ ಹೋಯಿತೋ ಅಂಥ ನಾಗರಿಕತೆಯಲ್ಲಿ ಮೂಲಭೂತವಾಗಿಯೇ ಏನೋ ಲೋಪವಿದೆ ಎನ್ನುವುದು ಮಾತ್ರ ಯಾವುದೇ ನಿಷ್ಪಕ್ಷಪಾತನಾದ ವೀಕ್ಷಕನಿಗೆ ಹೊಳೆಯದೆ ಹೋಗುವುದಿಲ್ಲ.

ನಾಗರಿಕತೆ ಎಂದರೆ – ಮನುಷ್ಯ ಮತ್ತು ಪ್ರಕೃತಿಯ, ಕಲೆ ಮತ್ತು ಕಸಬುಗಾರಿಕೆಗಳ ಪ್ರಸ್ತುತ ಹಾಗೂ ಸಂಚಿತ ಜ್ಞಾನ. ಮನುಷ್ಯ ತನ್ನ ಸಹಜೀವಿಗಳ ಜೊತೆ ಹೊಂದಿಕೊಂಡು ನಡೆದುಕೊಳ್ಳಬೇಕಾದ್ದನ್ನು ತಿಳಿಸುವ ನೀತಿಸಂಹಿತೆ. ವ್ಯಕ್ತಿಗಳಿಗೆ ಬದುಕಿನ ರೀತಿ ರೂಢಿಗಳನ್ನು ಕಲ್ಪಿಸಿಕೊಡುವ ಸಾಮಾಜಿಕ ಸಂಬಂಧಸಂಹಿತೆ, ಆಳುವವರಿಗೆ ಮತ್ತು ಆಳಿಸಿಕೊಳ್ಳುವವರಿಗೆ ಹಕ್ಕು ಹೊಣೆಗಾರಿಕೆಗಳನ್ನು ನಿಶ್ಚಯಿಸಿ ವಿಧಿಸುವ ಪ್ರಜಾಸಂಹಿತೆ, ಭೌತಿಕವನ್ನು ದೈವಿಕದೊಡನೆ ಬೆಸೆಯಲೆತ್ನಿಸುವ ಧರ್ಮಸಂಹಿತೆ – ಈ ಮುಂತಾದವುಗಳ ಘನ ಸಂಚಯವಾದ ನಾಗರಿಕತೆಯೆನ್ನುವುದು ಅಸಾಧಾರಣವಾದ ಒಂದು ಸೌಭಾಗ್ಯ. ಇಂಥ ನಾಗರಿಕತೆಯನ್ನು ಅದರ ಪೂರ್ಣ ಸ್ವರೂಪಕ್ಕೆ ಅರಳಿಸಿ ಕಂಡುಕೊಳ್ಳುವ ಅದೃಷ್ಟ ಎಲ್ಲ ಜನಾಂಗಗಳಿಗೂ ದೊರಕಲಿಲ್ಲ ಎನ್ನುವುದನ್ನು ನೆನಪಿಡಬೇಕು. ಅನೇಕ ಜನಾಂಗಗಳು ಪ್ರಗತಿ ಕಾಣದೆ ಪ್ರಾರಂಭಿಸಿದಲ್ಲೇ ನಿಂತು ಬಿಟ್ಟವು. ಅನೇಕವು ಒಂದೆರಡು ಹೆಜ್ಜೆ ಮಾತ್ರ ಮುಂದೆ ನಡೆದು ಅಲ್ಲಿ ಸ್ಥಗಿತಗೊಂಡವು. ಕೆಲವು ಪ್ರಗತಿಗೆ ಬದಲಾಗಿ ಅಲ್ಲಲ್ಲೇ ಗಾಣದ ಹಾಗೆ ಸುತ್ತಿದವು. ಕೆಲವು ತಲೆಮಾರುಗಳ ಹಿಂದಿನ ಸಂಶೋಧನೆಯ ಪ್ರಕಾರ, ಆಸ್ಟ್ರೇಲಿಯಾ ಮತ್ತು ಪೊಲಿನೇಸಿಯಾಗಳ ಆದಿಮ ಜನಾಂಗಗಳು ಸ್ಪಷ್ಟ ಅಭಿವ್ಯಕ್ತಿ ಸಾಧ್ಯವಾಗುವಂಥ ಭಾಷೆಯನ್ನು ರೂಪಿಸಿಕೊಂಡಿದ್ದವು ಮತ್ತು ಬೆಂಕಿಯ ಉತ್ಪಾದನೆಯನ್ನು ಕಂಡುಕೊಂಡಿದ್ದವು ಎಂಬುದು ತಿಳಿಯುತ್ತದೆ. ಆದರೆ ಅವು ಕಿರಾತ ನಾಗರಿಕತೆಯ ಮಧ್ಯಹಂತ ದಾಟಿ ಮುಂದುವರಿಯಲಿಲ್ಲ. ಹಡ್ಸನ್ ಕೊಲ್ಲಿ ಪ್ರಾಂತದ ಅಲಿಯಾಪೊಸ್ ಕಾಸ್ ಎಂಬ ಆದಿಮ ಜನಾಂಗ ಮತ್ತು ಕೊಲಂಬಿಯಾ ಕಣಿವೆಯ ಇಂಡಿಯನ್ನರು ಬಿಲ್ಲು ಬಾಣಗಳ ಹಂತವನ್ನು ದಾಟಿ ಮುಂದುವರಿಯಲಿಲ್ಲ. ಅವರಿಗೆ ಮಡಕೆ ತಯಾರಿಸುವುದಾಗಲಿ, ಪಶುಗಳನ್ನು ಪಳಗಿಸಿಕೊಳ್ಳುವುದಾಗಲಿ, ಕಬ್ಬಿಣ ಕರಗಿಸುವ ಕೌಶಲವಾಗಲಿ ಕರಗತವಾಗಲಿಲ್ಲ. ಈಜಿಪ್ಟ್, ಬೆಬಿಲೊನಿಯಾ, ಅಸ್ಸೀರಿಯಾ ಮತ್ತು ರೋಮನ್ ಹಾಗೂ ಗ್ರೀಕ್ ನಾಗರಿಕತೆಗಳು ಕೂಡ ಗಾಣ ಸುತ್ತುವ ನಾಗರಿಕತೆಗಳಾಗಿದ್ದವು. ಕಾಡು ಪ್ರಾಣಿಯ ಸ್ಥಿತಿಯಲ್ಲಿದ್ದ ಮನುಷ್ಯ ಏನನ್ನು ಸಾಧಿಸಿ ಕೈಗಿಟ್ಟುಕೊಟ್ಟನೋ ಆ ಮಾರ್ಗ ಮತ್ತು ಆಶಯಗಳನ್ನೇ ಇವರು ವಿವರವಿವರವಾಗಿ ವಿಸ್ತರಿಸಿಕೊಂಡರು. ಅದೇ ಅವರ ಸಾಧನೆ ಮತ್ತು ಪ್ರಗತಿ. ವಾರಸುದಾರರಾಗಿ ತಮಗೆ ಹಿಂದಿನವರಿಂದ ದೊರೆತ ನಾಗರಿಕತೆಯ ಒಟ್ಟು ಮೊತ್ತಕ್ಕೆ ಕ್ರಾಂತಿಕಾರಕವಾದ ಹೊಸದೇನನ್ನೂ ಇವರು ಸೇರಿಸಲಿಲ್ಲ. ತಮ್ಮ ಪೂರ್ವಜರು ಒರಟೊರಟಾಗಿ ಮಾಡುತ್ತಿದ್ದುದನ್ನು ಇವರು ನಯಗೊಳಿಸಿಕೊಂಡರು, ಅಷ್ಟೇ. ಮಾನವ ಪ್ರಗತಿಯೆಂಬುದು ಹಂತದಿಂದ ಹಂತಕ್ಕೆ ಬಲು ವೇಗವಾಗಿ ನಡೆದುಹೋಗಲಿಲ್ಲ. ಕಾಡುಮಾನವನೆಂದು ಕರೆಸಿಕೊಳ್ಳುವ ಹಂತಕ್ಕೇರಲು ಮನುಷ್ಯ ನಡೆಸಿದ ಪ್ರಗತಿಯಾತ್ರೆಗೆ ಮುಂಚೆ, ದೀರ್ಘ ಯುಗಯುಗಗಳ ಕಾಲ ಆತ ಕಿರಾತಮಾನವನ ಸ್ಥಿತಿಯಲ್ಲಿದ್ದ ಮತ್ತು ಕಾಡುಮಾನವ ಅಂತಿಮವಾಗಿ ನಾಗರಿಕತೆಯ ತೀರ ಕೆಳಗಿನ ಮಜಲು ಮುಟ್ಟುವ ಮೊದಲು, ಕಾಡುಸ್ಥಿತಿಯಲ್ಲೇ ದೀರ್ಘವಾದ ಅನೇಕಾನೇಕ ಯುಗಗಳನ್ನು ಸವೆಸಬೇಕಾಯಿತು ಎಂಬುದೂ ನಿಸ್ಸಂದೇಹವೇ. ಈ ಪರಿವರ್ತನೆಯ ಅನೇಕ ದೀರ್ಘ ಯುಗಗಳ ಅವಧಿ ಎಷ್ಟಿದ್ದೀತೆಂಬುದು ಊಹೆಗೆ ಬಿಟ್ಟದ್ದು. ಆದರೆ ಅದು ಕನಿಷ್ಠ ಒಂದು ನೂರು ಸಹಸ್ರ ವರ್ಷಗಳಷ್ಟಾದರೂ ಇದ್ದಿರಬೇಕು ಎಂದಿಟ್ಟುಕೊಳ್ಳಬಹುದು.

ನಾಗರಿಕತೆಯೆಂಬುದು ವಾಸ್ತವವಾಗಿ ಸುಲಭದ ಗಳಿಕೆಯಲ್ಲ. ಆದರೆ, ಅದು ಪ್ರಸ್ತುತಕ್ಕಲ್ಲದೆ ಅದರ ಮುಂದಿನ ಪೀಳಿಗೆಗೂ ತ್ರಾಣ ಕೊಡುವಂಥ ಜೀವಸತ್ತ್ವ. ಒಂದು ಪೀಳಿಗೆಯ ನಾಗರಿಕತೆ ಅದರ ಮುಂದಿನ ಪೀಳಿಗೆಗೆ ದತ್ತವಾಗಿ ದೊರಕಿದಾಗ ಅದು ಆ ಹೊಸ ಪೀಳಿಗೆಯ ಬದುಕಿನ ಹತ್ಯಾರವಾಗುತ್ತದೆ. ಪ್ರತಿಯೊಂದು ಪೀಳಿಗೆಗೂ ಸಾಮಾಜಿಕ ಪರಂಪರೆ ತೀರ ಅಗತ್ಯವಾದದ್ದು. ಈ ಸಾಮಾಜಿಕ ಪರಂಪರೆಯನ್ನು ನಾಶ ಮಾಡಿದರೆ ಪ್ರಗತಿಯೆನ್ನುವುದೇ ಸತ್ತು ಹೋಗುತ್ತದೆ. ಅಂಥ ಸ್ಥಿತಿಯನ್ನು ಹೀಗೆ, ತುಂಬ ಚೆನ್ನಾಗಿ ವರ್ಣಿಸಲಾಗಿದೆ:

"ಒಂದು ಪಕ್ಷ, ಎಚ್.ಜಿ. ವೆಲ್ಸ್ ಅವರ ಕಲ್ಪನೆಯ ಧೂಮಕೇತು ಈ ಭೂಮಿಗೆ ಬಡಿಯುತ್ತದೆ ಮತ್ತು ಅದರಿಂದಾಗಿ ಮನುಷ್ಯಕುಲ ತಮ್ಮ ಹಿಂದಿನ ಅಸಂಖ್ಯ ಪೀಳಿಗೆಗಳಿಂದ ಪರಂಪರೆಯಾಗಿ ಪಡೆದುಕೊಂಡ ಎಲ್ಲ ಜ್ಞಾನ ನಡವಳಿಕೆಗಳೂ ನಷ್ಟವಾಗಿ ಹೋಗುತ್ತವೆ ಎಂದಿಟ್ಟುಕೊಳ್ಳೋಣ. ಆಗ ಮನುಷ್ಯ, ಸ್ಮರಣೆ, ಸಂಶೋಧನೆಗಳ ಹಾಗೂ ಜಗತ್ತಿನಲ್ಲಿ ಬಾಳಿಕೊಳ್ಳುವ ತನ್ನ ಸ್ವಂತದ ಸಮಸ್ತ ಶಕ್ತಿಗಳನ್ನೂ ಹಾಗೇ ಉಳಿಸಿಕೊಂಡಿದ್ದರೂ ಅವನ ಸ್ಥಿತಿ ಏನಾಗುತ್ತದೆ? ನೂರರಲ್ಲಿ ತೊಂಬತ್ತು ಜನ ಒಂದೇ ತಿಂಗಳಲ್ಲಿ ನಾಶವಾಗುತ್ತಾರೆ. ಉಳಿದವರಲ್ಲಿ ಪುನಃ ನೂರಕ್ಕೆ ತೊಂಬತ್ತೊಂಬತ್ತು ಮಂದಿ ಮುಂದಿನ ಆರು ತಿಂಗಳುಗಳೊಳಗೆ ನಿರ್ನಾಮಗೊಳ್ಳುತ್ತಾರೆ. ಅವರಿಗೆ ಹೇಳಿಕೊಳ್ಳಲು ಕೇಳಿಕೊಳ್ಳಲು ಅರಚಿ ಕಿರುಚಿಕೊಳ್ಳುವುದಲ್ಲದೆ ಸ್ಪಷ್ಟ ಭಾಷೆಯೆನ್ನುವುದಿರುವುದಿಲ್ಲ. ಫಲಕಗಳನ್ನು ಓದಲಾರರು, ಮೋಟಾರು ನಡೆಸಲಾರರು, ಕುದುರೆ ಸವಾರಿ ಮಾಡಲಾರರು. ಜನ ಗುಂಪು ಗುಂಪಾಗಿ ಅಲೆಯತೊಡಗಬಹುದು. ಅವರಲ್ಲೇ ಸಹಜವಾಗಿ ಗಟ್ಟಿಗರಾಗಿರುವವರು ಕೂಗಿ ಕಿರುಚಿ ಓಡುತ್ತಿರಬಹುದು. ಬಾಯಾರಿಕೆಯಾಯಿತೆಂದರೆ ಗುಂಪಿಗೆ ಗುಂಪೇ ನದಿಯ ಕಡೆ ಓಡುತ್ತ ಹೋಗಿ ನೀರು ತೆಗೆದುಕೊಳ್ಳುವ ಸಂಭ್ರಮದಲ್ಲಿ ನದಿಯೊಳಕ್ಕೆ ಮುಳುಗಿ ಹೋಗಬಹುದು. ಅಗತ್ಯಕ್ಕೆ ತಕ್ಕಂತೆ ಆ ಕ್ಷಣದಲ್ಲಿ, ಸಮಯಕ್ಕೆ ಸರಿಯಾಗಿ ಅವರಿಗೆ ಜೀವ ಉಳಿಸಿಕೊಳ್ಳುವ, ಆಹಾರ ಬೆಳೆಸಿಕೊಳ್ಳುವ, ಪಶುಗಳನ್ನು ಪಳಗಿಸಿಕೊಳ್ಳುವ, ಬೆಂಕಿ ಉತ್ಪಾದಿಸಿಕೊಳ್ಳುವ, ಬಟ್ಟೆ ಮಾಡಿಕೊಳ್ಳುವ ತಂತ್ರಗಳು ಸಿದ್ಧಿಸದೆ ಹೋಗುತ್ತವೆ. ಬದುಕು ಮತ್ತೆ ಆದಿಮ ಸ್ಥಿತಿಯಿಂದ ಮೊದಲಾಗಬೇಕಾಗುತ್ತದೆ. ಸಾಮಾಜಿಕ ಪರಂಪರೆಯನ್ನು ಕಳೆದುಕೊಂಡು ಒಂದು ಜನಾಂಗ, ಆದಿಮ ಜನಾಂಗಗಳ ಹಾಗೇ ಕಾಡು ಹಣ್ಣು, ಹುಳುಹುಪ್ಪಟೆಗಳನ್ನು ಹಿಡಿದು ತಿನ್ನುವುದರಿಂದ ಬದುಕನ್ನು ಪ್ರಾರಂಭಿಸಬೇಕಾಗುತ್ತದೆ – ಕ್ರಮೇಣ ತಾವೂ ಒಂದು ಸಾಮಾಜಿಕ ಪರಂಪರೆಯನ್ನು ಗಳಿಸಿಕೊಳ್ಳುವತನಕ. ಹಾಗೇ ಸಹಸ್ರಾರು ತಲೆಮಾರುಗಳು ಕಳೆದ ಮೇಲೆ, ಅಷ್ಟು ಹೊತ್ತಿಗೆ, ಅವರು ಭಾಷೆಯೆಂದು ಗುರುತಿಸಬಹುದಾದಂಥ ಒಂದು ಸಾಧನವನ್ನು ರೂಪಿಸಿಕೊಳ್ಳಬಹುದು; ಪಶುಗಳನ್ನು ಪಳಗಿಸಿಕೊಳ್ಳುವುದೋ ಬೇಸಾಯದ ಮೊದಲ ಹಂತವೋ ಆಗಿನ್ನೂ ಪ್ರಾರಂಭವಾಗಿರಬಹುದು. ಅಲ್ಲಿಗೆ ಕೂಡ – ನಾವು ಧರ್ಮ ಎಂದು ಕರೆಯುವಂಥದನ್ನೋ ನಮ್ಮ ಸರಳ ಯಾಂತ್ರಿಕ ಹತ್ಯಾರಗಳನ್ನೋ ಅಥವಾ ನಮ್ಮ ರಾಜಕೀಯದ ಆದಿಮ ಕಲ್ಪನೆಗಳನ್ನೋ ಅವರು ರೂಪಿಸಿಕೊಂಡಿರಬಹುದು ಅಥವಾ ರೂಪಿಸಿಕೊಳ್ಳದೆ ಇರಬಹುದು. ಕಾನೂನು, ಸ್ವಾತಂತ್ರ್ಯ, ನ್ಯಾಯ ಮುಂತಾದ ಕಲ್ಪನೆಗಳು ಆಗಿನ್ನೂ ಅಂಕುರಿಸತೊಡಗಿರಬಹುದು ಅಥವಾ ಅದೂ ಇಲ್ಲದಿರಬಹುದು. ಸಾಮಾಜಿಕ ಪರಂಪರೆಯಿಂದ ದೊರೆಯುವ ಈ ಭಿನ್ನತೆ ನಿಸ್ಸಂಶಯವಾಗಿ ಬಹಳ ವಿಸ್ತಾರವಾದದ್ದು."

ನಾಗರಿಕತೆಯ ಸದವಕಾಶ ಎಲ್ಲರಿಗೂ ಸಿದ್ಧಿಸಿದ್ದಲ್ಲ ಎನ್ನುವುದು ನಿಜ. ಆ ಸಿದ್ಧಿಯ ಭಾಗ್ಯ ದೊರೆತಲ್ಲಿಯೂ ಅದು ಅತ್ಯಂತ ಮಂದಗತಿಯಲ್ಲಿ, ಮಧ್ಯೆ ಮಧ್ಯೆ ಬೇಸರ ತರುವಷ್ಟು ದೀರ್ಘಕಾಲ ಸ್ಥಗಿತವಾಗಿ ಮತ್ತೆ ಏಕಗತಿಯಲ್ಲಿ ಮುಂದುವರಿದು ಬಂದಿದ್ದು. ಹೀಗೆ ನಾಗರಿಕತೆಯನ್ನು ಗಳಿಸಿಕೊಂಡಂಥವರಿಗೂ ಅವರ ನಾಗರಿಕತೆ ಅನುಕೂಲಕ್ಕಿಂತ ಹೆಚ್ಚಾಗಿ ಆತಂಕವನ್ನೇ ತಂದು ಕೊಟ್ಟಿತು ಎಂಬುದು ಕೂಡ ಸತ್ಯ ಸಂಗತಿ. ಅದು ತಪ್ಪು ದಾರಿಯಲ್ಲಿ ನಡೆದದ್ದಿರಬಹುದು, ಸುಳ್ಳು ಮೌಲ್ಯಗಳನ್ನೂ ಪೊಳ್ಳುನೆಲಗಟ್ಟನ್ನೂ ಆಧರಿಸಿದ್ದಿರಬಹುದು. ಅಂಥ ಮಿಥ್ಯಾ ನಾಗರಿಕತೆ ಸುಲಭವಾಗಿ ಆ ಜನಪದದ ಬದುಕನ್ನು ನಿಂತ ನೀರಿನಂತೆ ಕೊಳೆಯಿಸಬಹುದು, ವ್ಯಕ್ತಿಗಳ ವಿಕಾಸವನ್ನು ಕುಂಠಿತವಾಗಿಸಿ ಅವರನ್ನು ಜಡರನ್ನಾಗಿ

ಮಾಡಿಬಿಡಬಹುದು. ಅಂಥದೊಂದು ನಾಗರಿಕತೆಯ ಭಾರ ಹೊತ್ತು ಅದರ ಬಂಧನದಲ್ಲಿ ಕೊಳೆಯುವುದಕ್ಕಿಂತ ನಾಗರಿಕತೆಯೇ ಇಲ್ಲದಿರುವುದು ಲೇಸು.

ಪ್ರತಿಯೊಬ್ಬ ದೇಶಭಕ್ತ ಹಿಂದೂವೂ ಹಿಂದೂ ಅಥವಾ ವೈದಿಕ ನಾಗರಿಕತೆ ಜಗತ್ತಿನಲ್ಲೇ ಅತ್ಯಂತ ಪ್ರಾಚೀನವಾದದ್ದು ಎಂದು ಹೆಮ್ಮೆಯಿಂದ ಕೊಚ್ಚಿಕೊಳ್ಳುತ್ತಿರುತ್ತಾನೆ. ಉಳಿದ ಜನಗಳೆಲ್ಲ ಇನ್ನೂ ಆದಿಮ ಸ್ಥಿತಿಯಲ್ಲಿ ಬೆತ್ತಲೆ ತಿರುಗಾಡಿಕೊಂಡಿದ್ದಾಗ ಇಂಡಿಯಾ ಉನ್ನತ ನಾಗರಿಕತೆಯನ್ನು ರೂಢಿಸಿಕೊಂಡಿತ್ತು – ಎಂದು, ಎಷ್ಟೋ ಸಲ ಒಬ್ಬ ಹಿಂದೂ ಕೆಲಮಟ್ಟಿನ ಮತ್ಸರಪೂರ್ವಕ ಗರ್ವದಿಂದ ಉದ್ರೇಕಿತನಾಗಿ ಮತ್ತೆ ಮತ್ತೆ ಹೇಳುತ್ತಿರುವುದನ್ನು ಕೇಳಿಸಿಕೊಳ್ಳಬಹುದು. ನಮ್ಮ ನಾಗರಿಕತೆಯಲ್ಲಿ ಅಂಥ ಅಂತಸ್ಸತ್ವವಿರುವುದರಿಂದಲೇ ಈಜಿಪ್ಟ್, ಬೆಬಿಲೋನ್, ಜುಡಿಯಾ, ರೋಮ್ ಮತ್ತು ಗ್ರೀಸ್‌ಗಳ ನಾಗರಿಕತೆಗಳೆಲ್ಲ ನಾಶವಾಗಿ ಹೋದರೂ ನಮ್ಮದು ಸ್ಥಿರವಾಗಿ ಉಳಿದುಕೊಂಡು ಬಂದಿದೆ – ಎಂದು ಹಿಂದೂಗಳು ಹೇಳಿಕೊಳ್ಳುವುದನ್ನು ಕೂಡ ಕೇಳಿಸಿಕೊಳ್ಳುತ್ತೇವೆ. ಇಂಥ ಅಭಿಪ್ರಾಯಗಳು ಅದೆಷ್ಟೇ ಸತ್ಯವಾಗಿರಲಿ, ಒಂದು ಮುಖ್ಯಾಂಶವನ್ನು ಕಡೆಗಣಿಸಿಬಿಡುತ್ತವೆ. ಮುಖ್ಯಾಂಶವೆಂದರೆ, ಈ ನಾಗರಿಕತೆ ಎಷ್ಟು ಪ್ರಾಚೀನವಾದದ್ದು ಹಾಗೂ ಎಷ್ಟು ದೀರ್ಘ ಬಾಳಿತು ಎನ್ನುವುದಲ್ಲ; ಅದರ ಮೌಲ್ಯ ಎಷ್ಟು, ದೀರ್ಘ ಕಾಲ ಬಾಳಿದ್ದರೆ ಯಾವ ಕಾರಣದಿಂದ ಎನ್ನುವುದು.[೧] ಅರ್ಥಾತ್, ಮುಖ್ಯವಾದ ಪ್ರಶ್ನೆ : ಈ ಹಿಂದೂ ನಾಗರಿಕತೆ ಮತ್ತು ಈ ಸಾಮಾಜಿಕ ಪರಂಪರೆ ಒಂದು ವರವಾಗಿದೆಯೇ ಅಥವಾ ಭಾರವಾಗಿದೆಯೇ? ಬೆಳೆದು ಹಬ್ಬಿ ಅದು ಜನವರ್ಗಗಳಿಗೂ ವ್ಯಕ್ತಿಗೂ ಏನನ್ನು ಕೊಟ್ಟಿದೆ?

ಮನುಷ್ಯ ಮತ್ತು ಪ್ರಕೃತಿಯನ್ನು ಕುರಿತು ಜ್ಞಾನಭಂಡಾರಕ್ಕೆ ಹಿಂದೂ ನಾಗರಿಕತೆಯ ಕೊಡುಗೆ ಏನು? ಮನುಷ್ಯ ಮತ್ತು ಪ್ರಕೃತಿಯ ಬಗೆಗಿನ ಜ್ಞಾನ ಹುಟ್ಟಿಕೊಂಡಿದ್ದೇ ಹಿಂದೂಗಳಿಂದ ಎಂದು ಅನೇಕ ದೇಶಭಕ್ತ ಹಿಂದೂಗಳು ಭಾವಿಸಿ ಹೆಮ್ಮೆಪಟ್ಟುಕೊಳ್ಳುತ್ತಾರೆ. ಅದು ಹೌದೆಂದು ಒಪ್ಪಿಕೊಂಡರೂ ಆ ಜ್ಞಾನ ತೀರ ಪ್ರಾಥಮಿಕ ಹಂತದಿಂದ ನಿಜವಾಗಿ ಮುಂದಕ್ಕೆ ದಾಟಲೇ ಇಲ್ಲ. ಹಿಂದೂ ಭಾಷಾ ಶಾಸ್ತ್ರ, ಅದು ಸರಿಯೋ ತಪ್ಪೋ, ಪಾಣಿನಿ ಮತ್ತು ಕಾತ್ಯಾಯನರು ಎಲ್ಲಿ ಬಿಟ್ಟರೋ ಅಲ್ಲೇ ನಿಂತುಹೋಯಿತು ಎನ್ನುವುದನ್ನೂ ಯಾವನೇ ಹಿಂದೂ ಸಂದೇಹಿಸಬಲ್ಲನೇನು? ಅವರ ತತ್ತ್ವಶಾಸ್ತ್ರ, ಸರಿಯಿರಲಿ ತಪ್ಪಿರಲಿ, ಕಪಿಲ ಮತ್ತು ಗೌತಮರು ಎಲ್ಲಿ ತಂದು ನಿಲ್ಲಿಸಿದರೋ ಅಲ್ಲೇ ನಿಂತುಬಿಟ್ಟಿತು ಎನ್ನುವುದನ್ನು ಸಂದೇಹಿಸಲಿಕ್ಕಾದೀತೆ? ವ್ಯಾಸವಾಲ್ಮೀಕಿಗಳು ಬಿಟ್ಟಲ್ಲಿಗೇ ಸಾಹಿತ್ಯ ನಿಂತುಹೋಯಿತು ಎನ್ನುವುದನ್ನು ಸಂದೇಹಿಸಲಿಕ್ಕಾದೀತೆ? ಆಧ್ಯಾತ್ಮಿಕ ಜ್ಞಾನದಲ್ಲಿ ಹಿಂದೂಗಳು ಪರಿಪೂರ್ಣತೆಯನ್ನು ಸಾಧಿಸಿದರು ಎನ್ನುತ್ತಾರೆ. ಹಿಂದೂ ಆಧ್ಯಾತ್ಮಿಕ ಜ್ಞಾನ ಕುರಿತು ಪ್ರೊ. ಹರದಯಾಳ್ ಹೇಳುವುದನ್ನು ಕೇಳಿ.[೨]

> "ಅಧ್ಯಾತ್ಮವೆಂಬುದು ಇಂಡಿಯಾಕ್ಕೆ ಬಡಿದ ಶಾಪ. ಅದು ಇಲ್ಲಿನ ಇತಿಹಾಸವನ್ನು ರೋಗಗ್ರಸ್ತಗೊಳಿಸಿ ಇಂಡಿಯಾವನ್ನು ಕಬಳಿಸಿಬಿಟ್ಟಿದೆ. ಇಲ್ಲಿನ ಮಹೋನ್ನತರನ್ನು ಅದು ಕೇವಲ ಶುಷ್ಕ ಪಂಡಿತರನ್ನಾಗಿಸಿ ಹಾಸ್ಯಾಸ್ಪದರನ್ನಾಗಿಸಿದೆ. ನಿರರ್ಥಕ ತರ್ಕ ಪ್ರಯತ್ನಗಳಲ್ಲಿ ಅವರನ್ನು ತೊಡಗಿಸಿ ತಳ್ಳಿಬಿಟ್ಟಿದೆ. ಅನೇಕ ಶತಮಾನಗಳ ಕಾಲ ಅದು ರಾತ್ರಿ ಮಿಂಚುವ ಭಯಂಕರ ಕೊಳ್ಳಿದೆವ್ವದ ಹಾಗೆ ಇಂಡಿಯಾದ ಧೀಮಂತರನ್ನು ಭ್ರಮೆಗೆ ಸೆಳೆಯಿತು. ಕುತರ್ಕವನ್ನೇ ಅದು ಕಲೆಯ ಮಟ್ಟಕ್ಕೆ ಏರಿಸಿ ನಿಲ್ಲಿಸಿತು ;

---

೧. ನೋಡಿ – ನನ್ನ *ಅನಿಹಿಲೇಷನ್ ಆಫ್ ಕ್ಯಾಸ್ಟ್.*

೨. *'ಮಾಡರ್ನ್ ರಿವ್ಯೂ',* ಜುಲೈ, ೧೯೧೨.

ಜ್ಞಾನದ ಸ್ಥಳದಲ್ಲಿ ಊಹೆಯ ಗುಳ್ಳೆಗಳಿಗೆ ಮಣೆಯಿಟ್ಟುಕೊಟ್ಟಿತು. ಅದು ಇಂಡಿಯಾದ ಧೀಮಂತಿಕೆ ನೂರಾರು ವರ್ಷಗಳ ಕಾಲ ಅದೇ ಹಳೆಯ ಕೊರಕಲಲ್ಲಿ ತೆವಳುತ್ತಿರುವಂತೆ ವಿಧಿಸಿತು. ಇಲ್ಲಿನ ದಾರ್ಶನಿಕರನ್ನು ಅದು ಕುರುಡಾಗಿಸಿ, ಭ್ರಾಂತಿಯನ್ನೇ ಪರಮ ಸತ್ಯವೆಂದು ಅವರು ಭ್ರಮಿಸುವ ಹಾಗೆ ಮಾಡಿತು.... ಸೊಕ್ಕಿನ, ಸೋಗಿನ, ಕುರುಡು ಶಬ್ದಾಡಂಬರದ ಈ ಅಧ್ಯಾತ್ಮ ತನ್ನ ತೊದಲು ಆಲಾಪವನ್ನೇ ಮೊಳಗುವ ದಿವ್ಯವಾಣಿಯೆಂದೂ ಅದ್ಭುತವಾದ ತನ್ನ ಶೂನ್ಯ ಶಬ್ದ ಗುಮ್ಮಟವನ್ನೇ ಚಿಂತನವಾಸ್ತುವಿನ ಘನ ಶಿಲಾಖಂಡಗಳೆಂದೂ ಕಲ್ಪಿಸಿಕೊಂಡಿತು......"

".......ಉಪನಿಷತ್ತುಗಳು, 'ಯಾವುದನ್ನು ಅರಿತರೆ ಸಮಸ್ತವೂ ಅರಿವಾಗುತ್ತದೋ ಅಂಥದನ್ನು' ವ್ಯಾಖ್ಯಾನಿಸುವುದಕ್ಕೆ ಹೊರಟಂಥವು ಎಂದುಕೊಳ್ಳುತ್ತವೆ. ಇಂಡಿಯಾದ ಉನ್ನತ ಅಧ್ಯಾತ್ಮವೆಲ್ಲಕ್ಕೂ ಮೂಲವೆಂದರೆ, ಮಧ್ಯಯುಗದ 'ಪರಮ ಪರತತ್ತ್ವದ ಹುಡುಕಾಟ'. ಇಲ್ಲಿನ ಅಧ್ಯಾತ್ಮ ಗ್ರಂಥಗಳು ಅರ್ಥಶೂನ್ಯ ಗರ್ವಾಡಂಬರಗಳಿಂದ, ಬಯಲು ಲಹರಿಗಳಿಂದ ಹುಚ್ಚು ಊಹಾಪೋಹಗಳಿಂದ ತುಂಬಿಹೋಗಿವೆ. ಅವು ಕೆಲಸಕ್ಕೆ ಬಾರದ ಕಂತೆಗಳೆಂಬುದನ್ನು ಇನ್ನೂ ನಾವು ಅರಿತುಕೊಂಡಿಲ್ಲ. 'ಸಮಾಧಿ'ಯೆಂಬುದು ಅಧ್ಯಾತ್ಮದ ಪರಾಕಾಷ್ಠೆಯೆಂದು ಭಾವಿಸಲಾಗಿದೆ. ಮೂರ್ಛೆಯಲ್ಲಿ ಮೈಮರೆಯುವುದನ್ನು ಜ್ಞಾನದ ಹೆಗ್ಗುರುತೆಂದು ಭಾವಿಸುವುದು ಎಂಥ ವಿಚಿತ್ರ. ಭಾವನೆಗಳು ಬಲವಾಗಿ ಬುದ್ಧಿ ದುರ್ಬಲಗೊಂಡಾಗ ಎಚ್ಚರ ಕಳೆದುಕೊಳ್ಳುವುದು ಬಹು ಸುಲಭವಾಗುತ್ತದೆ. ಅದಕ್ಕಾಗಿಯೇ ಹೆಂಗಸರು ಕಿಂಚಿತ್ ಪ್ರಚೋದನೆಯಿಂದಲೇ ಪ್ರಜ್ಞಾಹೀನರಾಗುವುದನ್ನು ಕಾಣುತ್ತೇವೆ. ಇಂಡಿಯಾದಲ್ಲಿ, ಇಂಥ ಸಮಾಧಿಯನ್ನು ಯೋಗದ ಅಷ್ಟಮಾವಸ್ಥೆ ಎನ್ನುತ್ತಾರೆ. 'ಪರಮಹಂಸ'ರಿಗೆ ಮಾತ್ರವೇ ಈ ಸ್ಥಿತಿ ಲಭ್ಯವಾಗುತ್ತದಂತೆ. ಇವರೆಲ್ಲ ನಿನಗೆ ಸೇರಿದ ದೇವರುಗಳು ಓ, ಇಸ್ರೇಲ್! ಕೃತಕ ಸಾಧನಗಳಿಂದ ತಂದುಕೊಂಡ ವಿಕೃತ ಮನಃಸ್ಥಿತಿಯನ್ನು ಜ್ಞಾನೋದಯವೆಂದು ತಿಳಿಯುವ ಅವಿವೇಕ ಇಂಡಿಯಾದ ತತ್ತ್ವಶಾಸ್ತ್ರಜ್ಞರಿಗೆ ಮೀಸಲಾಗಿರುವಂಥದು...."

ವಿಜ್ಞಾನ, ಕಲೆ ಮತ್ತು ಕಸಬು ಕೌಶಲಗಳ ಕ್ಷೇತ್ರದಲ್ಲಿ ಹಿಂದೂ ನಾಗರಿಕತೆಯ ಕೊಡುಗೆ ತೀರಾ ಆದಿಮ ಸ್ಥಿತಿಯದು. ಮನುಷ್ಯ ಪ್ರಕೃತಿಯ ಎದುರು ಹೋರಾಡಿ ಪಶುವಿಗಿಂತ ಕಿಂಚಿತ್ತಾದರೂ ಉತ್ತಮವಾದ, ಸರಳ ಬದುಕನ್ನಾದರೂ ನಡೆಸಬೇಕಲ್ಲ – ಅಂಥದಕ್ಕಾದರೂ ಹಿಂದೂ ನಾಗರಿಕತೆ, ನೂಲು ನೆಯ್ಗೆ ಮುಂತಾದ ಕೆಲವು ರಂಗಗಳಲ್ಲಿ ಬಿಟ್ಟರೆ, ಬೇರೆ ತಾಂತ್ರಿಕ ಸಾಧನಗಳನ್ನು ರೂಢಿಸಿಕೊಂಡದ್ದಲ್ಲ. ವೈಜ್ಞಾನಿಕ ಹಾಗೂ ತಾಂತ್ರಿಕ ಸಾಧನಗಳನ್ನು ರೂಢಿಸಿಕೊಳ್ಳುವಲ್ಲಿ ಸಂಪೂರ್ಣ ವಿಫಲವಾದ ಕಾರಣ ಮತ್ತು ಪರಮಾರ್ಥವೆಂಬ ಲೊಟ್ಟೆಯನ್ನು ಸತತವಾಗಿ ಬೆಳೆಸಿಕೊಳ್ಳುತ್ತ ಬಂದ ಕಾರಣ, ಕ್ಷಾಮಡಾಮರಗಳು ಈ ದೇಶವನ್ನು ಸದಾ ಕಾಡಿವೆ. ಅವಿವೇಕ, ಮೂಢನಂಬಿಕೆ ಮುಂತಾದ ಮಾನಸಿಕ ರೋಗಗಳು, ಮಲೇರಿಯಾ, ಪ್ಲೇಗು ಮುಂತಾದ ಶಾರೀರಿಕ ರೋಗಗಳು ಹೆಣಕ್ಕೆ ಹೊದೆಸುವ ಕಪ್ಪು ಬಟ್ಟೆಯಂತೆ ಯಾವ ಕಾಲಕ್ಕೂ ಈ ದೇಶವನ್ನು ಆವರಿಸಿಕೊಂಡಿವೆ.

ಧರ್ಮ ಮತ್ತು ನೀತಿಯ ಕ್ಷೇತ್ರಗಳಲ್ಲಿ ಹಿಂದೂಗಳು ಬಹುದೊಡ್ಡ ಪ್ರಯತ್ನಗಳನ್ನು ನಡೆಸಿದ್ದಾರೆ. ಅವರ ಸಾಧನೆಗಳಲ್ಲಿ ಅತ್ಯಂತ ವ್ಯಾಪಕವಾಗಿ ವರ್ಧಿಸಿರುವಂಥವು ಇವು. ಮನುಷ್ಯನಿಗೆ ಇವು ಮುಖ್ಯವಾದ ಜೀವಸತ್ತ್ವಗಳೆಂಬುದರಲ್ಲಿ ಸಂದೇಹವಿಲ್ಲ. ಏಕೆಂದರೆ, ಇವೇ ಮನುಷ್ಯನಲ್ಲಿ ಚಿಂತನೆಯ ಮತ್ತು ಕ್ರಿಯೆಯ ಜಲಮೂಲಗಳನ್ನು ಸಂಸ್ಥಾಪಿಸಿ ಕೊಡುತ್ತವೆ. ಅವು ಬದುಕಿನ ಬಗ್ಗೆ ಮನುಷ್ಯನ ದೃಷ್ಟಿಕೋನವನ್ನು ರೂಪಿಸಿಕೊಡುತ್ತವೆ. ಒಬ್ಬ, ತನ್ನ ಜೊತೆಯ ಇನ್ನೊಬ್ಬನ ಬಗ್ಗೆ ರೂಢಿಸಿಕೊಳ್ಳಬೇಕಾದ ಮನೋಭಾವವನ್ನು

ರೂಪಿಸಿಕೊಡುತ್ತವೆ. ಅವು ನಡವಳಿಕೆಗಳನ್ನು ನಿಯಂತ್ರಿಸಲು ಬೇಕಾಗುವ ಸೂತ್ರಗಳನ್ನು ವಿಧಿಸಿಕೊಡುತ್ತವೆ; ಚಾರಿತ್ರ್ಯವನ್ನು ಹದಗೊಳಿಸುತ್ತವೆ; ಮನುಷ್ಯ ತಪ್ಪುದಾರಿಯಲ್ಲಿ ನಡೆಯದಂತೆ ಆತನನ್ನು ಕಾಯ್ದುಕೊಳ್ಳುವ ಅಂತಃಸಾಕ್ಷಿಯೆಂಬ ರಹಸ್ಯ ಸತ್ತ್ವವನ್ನು ಅವನಲ್ಲಿ ನೆಟ್ಟುಕೊಡುತ್ತವೆ.

ಹಿಂದೂ ನಾಗರಿಕತೆ ರೂಢಿಸಿ ವಿಧಿಸಿರುವ ಧಾರ್ಮಿಕ ಸತ್ತ್ವ, ಜೀವನಕ್ರಮ – ಇವುಗಳನ್ನು ಪರೀಕ್ಷಿಸಹೊರಟಾಗ ನಮಗೆ ಸಂದೇಹ ಉಂಟಾಗುತ್ತದೆ – ಈ ಹಿಂದೂ ನಾಗರಿಕತೆ ಅದರ ವಾರಸುದಾರಿಕೆಯ ವಿಧಿ ಹೊತ್ತು ಬಂದ ತಲೆಮಾರುಗಳಿಗೆ ಏನಾದರೂ ಸದವಕಾಶ ಕಲ್ಪಿಸಿದೆಯೆ ಎಂಬುದು. ಈ ನಾಗರಿಕತೆ, ಅದರ ಸೆರಗಿನಲ್ಲೇ ಬದುಕಿಕೊಂಡಿರುವ ಆದಿಮ ಜನಾಂಗದ ಇಪ್ಪತ್ತೈದು ಮಿಲಿಯ ಜನಕ್ಕೆ ಏನನ್ನು ಕೊಟ್ಟಿತು? ತನ್ನ ನಡುವಿನಲ್ಲೇ ಬದುಕಿಕೊಂಡಿರುವ ಐದು ಮಿಲಿಯ ಅಪರಾಧಿ ಜನಾಂಗದವರಿಗೆ ಏನನ್ನು ಕೊಟ್ಟಿತು? ತನ್ನ ಮಧ್ಯೆ ಬದುಕುತ್ತಿರುವುದು ಮಾತ್ರವಲ್ಲದೆ ತನ್ನನ್ನು ಸೇವಿಸಿ ಪೋಷಿಸಲು ನೇಮಿಸಿಕೊಂಡಿರುವ ಐವತ್ತು ಮಿಲಿಯ ಅಸ್ಪೃಶ್ಯರಿಗೆ ಈ ನಾಗರಿಕತೆ ಏನನ್ನು ಕೊಟ್ಟಿತು? ಅವರನ್ನು ತನ್ನ ಆವಾರದೊಳಕ್ಕೆ ಕರೆದು ಸೇರಿಸಿಕೊಳ್ಳಲು ಯಾವ ಪ್ರಯತ್ನವನ್ನೂ ಮಾಡದಿರುವ ಈ ನಾಗರಿಕತೆಯ ಬಗ್ಗೆ ಆದಿಮ ಜನಾಂಗದವರು ಏನೆಂದಾರು? ಅಪರಾಧಗಳ ಮೊರೆಹೊಕ್ಕು ಬದುಕುವಂತೆ ತಮ್ಮನ್ನು ಈ ದಿಕ್ಕಿಗೆ ತಳ್ಳಿದ ಈ ನಾಗರಿಕತೆಯ ಬಗ್ಗೆ ಅಪರಾಧಿ ಜನಾಂಗದವರು ಏನೆಂದಾರು? ಅವರೆಲ್ಲರೂ ಇದು ನಾಗರಿಕತೆಯಲ್ಲ ನಾರಕೀಯತೆ ಎಂದರೆ, ಆ ಮಾತು ಸೂಕ್ತವಲ್ಲ ಎನ್ನಲಿಕ್ಕಾದೀತೆ?

ಅಸ್ಪೃಶ್ಯರ ವಿಷಯ ಹೇಳುವುದಾದರೆ – ಹಿಂದೂ ನಾಗರಿಕತೆಯ ಕೆಳಗೆ ದೈನ್ಯದಾರಿದ್ರ್ಯಗಳ ಅಧೋಗತಿಯಲ್ಲಿ ತಲೆತಗ್ಗಿ ಬಾಳುವುದೇ ಈತನಕವೂ ಅವರ ಹಣೆಬರಹವಾಗಿದೆ. ಭವಿಷ್ಯದಲ್ಲಾದರೂ ಈ ನಾಗರಿಕತೆಯ ಅಡಿಯಲ್ಲಿ ಅವರಿಗೆ ಮುಕ್ತಿ ಕಾಣುವುದಿಲ್ಲ. (ಹಿಂದೂಗಳಲ್ಲದ ಇತರ) ಭಾರತೀಯರು ಕೂಡ, ಈ ಅಸ್ಪೃಶ್ಯತೆಯಿಂದ ಯಾವ ಪ್ರಮಾಣದ ದೈನ್ಯ ದಾರಿದ್ರ್ಯಗಳು ಉಂಟಾಗಿವೆ ಎಂಬುದನ್ನು ಅರಿತಂತೆ ಕಾಣಿಸುವುದಿಲ್ಲ. ೧೯೨೮ರಲ್ಲಿ, ಹಿಂದುಳಿದ ವರ್ಗಗಳು ಹಾಗೂ ಮೂಲನಿವಾಸಿ ಬುಡಕಟ್ಟುಗಳ ಕುಂದುಕೊರತೆಗಳ ಬಗ್ಗೆ ವಿಚಾರಿಸಲು ಬೊಂಬಾಯಿ ಸರ್ಕಾರ ಸಮಿತಿಯೊಂದನ್ನು ನೇಮಿಸಿತ್ತು. ಆ ಸಮಿತಿಯ ಅವಲೋಕನ ಸೂಕ್ತವಾಗಿದೆ. ಅದು ಹೀಗೆನ್ನುತ್ತದೆ:

> "ಶುಚಿಯಾಗಿಲ್ಲದ ವ್ಯಕ್ತಿ ಅಥವಾ ವಸ್ತು ಅಸಹ್ಯವನ್ನುಂಟುಮಾಡುತ್ತದೆ ಎನ್ನುವುದೇನೂ ವಿಚಿತ್ರವಲ್ಲ. ಅದೇ 'ಮೈಲಿಗೆ' ಅನ್ನುವ ಕಲ್ಪನೆ ಹುಟ್ಟಿಸಿದೆ. ಆದರೆ, ವಿಷಾದನೀಯವೆಂದರೆ, ಈ ಕಲ್ಪನೆ ಅಸ್ಪೃಶ್ಯರ ವಿಷಯದಲ್ಲಿ ತರ್ಕಹೀನವಾಗಿ ಅನ್ವಯವಾಗಿರುವುದು. ಅದು ಹುಟ್ಟಿನ ಆಕಸ್ಮಿಕಕ್ಕಾಗಿಯೇ ಒಬ್ಬನನ್ನು ಅಸ್ಪೃಶ್ಯನೆಂದು ಮುದ್ರೆ ಹಾಕಿಬಿಡುತ್ತದೆ. ಅಸ್ಪೃಶ್ಯನಾಗಿ ಹುಟ್ಟಿದವನೊಬ್ಬನು ಸ್ಪೃಶ್ಯನೆಂದು ಕರೆಸಿಕೊಳ್ಳುವವನಿಗಿಂತ ಎಷ್ಟೇ ಹೆಚ್ಚು ಶುಚಿಯಾಗಿರುತ್ತಿದ್ದರೂ ಅಸ್ಪೃಶ್ಯನಾಗಿಯೇ ಉಳಿಯಬೇಕು. ಈ ದುರ್ವಿಧಿಯಿಂದ ತಪ್ಪಿಸಿಕೊಳ್ಳಲು ಅವನಿಗೆ ದಾರಿಯೇ ಇಲ್ಲ. ಈ ಸಂಬಂಧ ತೀರ ಆಶ್ಚರ್ಯಕರವಾದ ಸಂಗತಿಯೆಂದರೆ – ಒಬ್ಬ ಸಂಪ್ರದಾಯಶೀಲ ಹಿಂದೂ, ಧಾರ್ಮಿಕ ಮನೋವೃತ್ತಿ, ಜೀವನಕ್ರಮ ಮತ್ತು ಲೋಕದೃಷ್ಟಿ ಮುಂತಾದವುಗಳಲ್ಲಿ ತನಗಿಂತ ತೀರ ಭಿನ್ನವಿರುವ ಮಹಮ್ಮದೀಯ, ಪಾರ್ಸಿ ಮತ್ತು ಕ್ರಿಶ್ಚಿಯನ್‌ನನ್ನು ಸ್ಪೃಶ್ಯನೆಂದು ಭಾವಿಸುತ್ತಾನೆ. ಫಲಿತಾಂಶವೆಂದರೆ, ಇದರಿಂದ ಅಸ್ಪೃಶ್ಯರ ಪರಿಸ್ಥಿತಿ ಮತ್ತೂ ಶೋಚನೀಯವಾಗುವಂತಾಗಿದೆ. ಸಾಂಪ್ರದಾಯಿಕ ಹಿಂದೂಗಳು ತಾವು ಸ್ವತಃ ತೋರುವ ಹಾಗೂ ಕೆಲವು ವೇಳೆ ತಮ್ಮ ಪ್ರಭಾವದಿಂದ ಬೆಳೆಸುವ ಇಂಥ ಅನ್ಯಾಯವಾದ ಪಕ್ಷಪಾತದಿಂದಾಗಿ, ಮುಖ್ಯವಾಗಿ ಹಳ್ಳಿಗಳಲ್ಲಿ, ಮಹಮ್ಮದೀಯರು, ಪಾರ್ಸಿಗಳು ಮತ್ತು ಕ್ರಿಶ್ಚಿಯನ್ನರು

ಕೂಡ – ತಮ್ಮ ಧರ್ಮಗಳು ಅಸ್ಪೃಶ್ಯತೆಯ ತತ್ತ್ವಕ್ಕೇ ವಿರೋಧವಾಗಿದ್ದರೂ ಅಸ್ಪೃಶ್ಯರ ಬಗ್ಗೆ ಅಸ್ಪೃಶ್ಯತೆಯನ್ನು ಆಚರಿಸುತ್ತಾರೆ. ಇಲ್ಲಿ ನಮ್ಮ ಮುಖ್ಯ ಕಾಳಜಿಯೆಂದರೆ, ಅಸ್ಪೃಶ್ಯತೆಯ ನೇರ ಪರಿಣಾಮಗಳಲ್ಲದೆ ಅದು ಹುಟ್ಟಿಸುವ ಪ್ರತ್ಯೇಕತೆ ಮತ್ತು ಕೀಳರಿಮೆಗಳು ಕಾರಣವಾಗಿ ಉಂಟಾಗುವ ದುಷ್ಕೃತ್ಯಗಳು. ಅವುಗಳನ್ನು ನಾವಿಲ್ಲಿ ಸೂಚಿಸಬೇಕು. ಇನ್ನು, ಅಸ್ಪೃಶ್ಯತೆಯ ನೇರ ಪರಿಣಾಮವಾಗಿ ಉಂಟಾಗುವ ದೌಷ್ಟ್ಯಗಳು ಬೇರೆ. ಅಸ್ಪೃಶ್ಯತೆಯ ತರ್ಕ ಎಲ್ಲಿನ ತನಕ ಮುಂದುವರಿಯುತ್ತದೆಂದರೆ, ಸಂಪ್ರದಾಯಬದ್ಧವಾದ ಹಿಂದೂ ಸಮಾಜದಲ್ಲಿ, ಅಲ್ಲಿನ ಸಾರ್ವಜನಿಕ ಶಾಲೆಗಳು ಪೂರ್ಣ ಸರ್ಕಾರಿ ವೆಚ್ಚದಲ್ಲೇ ನಡೆಯುತ್ತಿದ್ದರೂ ಅಸ್ಪೃಶ್ಯರಿಗೆ ಆ ಶಾಲೆಗಳಲ್ಲಿ ಪ್ರವೇಶ ಸಿಗದಂತೆ ನಿರ್ಬಂಧ ಹಾಕಲಾಗುತ್ತದೆ; ಎಲ್ಲ ಅರ್ಹತೆಗಳನ್ನು ಪಡೆದುಕೊಂಡಿರುವವನಿಗೆ ಕೂಡ, ಸಾಂಪ್ರದಾಯಿಕವಾಗಿ ಅವರಿಗೇ ಮೀಸಲಾಗಿಟ್ಟಿರುವ ಸೇವೆಗಳಲ್ಲದೆ ಬೇರೆ ಸಾರ್ವಜನಿಕ ಸೇವೆಗಳಲ್ಲಿ ಪ್ರವೇಶ ಸಿಗುವುದಿಲ್ಲ. ಸಾರ್ವಜನಿಕ ಹಣದಿಂದ ನಿರ್ಮಾಣವಾಗಿ ನಡೆಯುತ್ತಿರುವ ಸಾರ್ವಜನಿಕ ಬಾವಿ, ಕೆರೆ ಮುಂತಾದ ಸ್ಥಳಗಳಿಂದ ನೀರನ್ನೊಯ್ಯಲೂ ಅವರಿಗೆ ನಿರ್ಬಂಧವಿರುತ್ತದೆ. ಈ ದೃಷ್ಟಿಯಿಂದ ನೋಡಿದಾಗ ಅಸ್ಪೃಶ್ಯತೆಯೆಂಬುದು ಕೇವಲ ಸಾಮಾಜಿಕ ಸಮಸ್ಯೆಯಷ್ಟೇ ಅಲ್ಲ. ಇದು ರಾಜಕೀಯವಾಗಿ ಅತ್ಯಂತ ಪ್ರಮುಖವಾಗಿರುವ ಪ್ರಶ್ನೆ; ಒಂದು ರಾಜ್ಯದ ಪ್ರಜೆಗಳ ನಾಗರಿಕ ಹಕ್ಕುಗಳ ಮೇಲೆ ತೀವ್ರ ಪರಿಣಾಮ ಬೀರುವ ಮೂಲಭೂತ ಪ್ರಶ್ನೆ.''

ಮೇಲೆ ಹೇಳಿದುದೆಲ್ಲ ಅಸ್ಪೃಶ್ಯರಿಗೆ ಮಾತ್ರ ಸಂಬಂಧಿಸಿದ ಸಂಕಷ್ಟಗಳು. ಆದರೆ, ಈ ರೀತಿಯ ಹೀನಾವಸ್ಥೆಗೆ ಬಲಿಯಾದವರು ಅಸ್ಪೃಶ್ಯರು ಮಾತ್ರವೇ ಅಲ್ಲ. ಇವರಿಗಿಂತಲೂ ನಿಕೃಷ್ಟವಾದ ಸ್ಥಿತಿಯಲ್ಲಿರುವವರಿದ್ದಾರೆ. ಅಸ್ಪೃಶ್ಯರು ಶಾರೀರಕವಾದ ಸ್ಪರ್ಶದಿಂದ ಮಾತ್ರ ಮೈಲಿಗೆಯನ್ನುಂಟು ಮಾಡುತ್ತಾರೆ. ಇವರಲ್ಲದೆ, ನಿರ್ದಿಷ್ಟ ದೂರದಿಂದ ಈಚೆ, ಹತ್ತಿರಕ್ಕೆ ಬಂದರೆ ಮೈಲಿಗೆಯನ್ನುಂಟು ಮಾಡುವ ಜನರಿದ್ದಾರೆ. ಅವರು ದೂರಾಶೌಚಕಾರಿಗಳು. ಇದಲ್ಲದೆ ಇವರಿಗಿಂತಲೂ ಮತ್ತೂ ನಿಕೃಷ್ಟರಿದ್ದಾರೆ. ಅಂಥವರು ಕಣ್ಣಿಗೆ ಬಿದ್ದರೆ ಸಾಕು, ಮೈಲಿಗೆಯುಂಟು ಮಾಡುತ್ತಾರೆ. ಅವರು ದೃಶ್ಯಾಶೌಚಕಾರಿಗಳು. ದೂರಾಶೌಚಕಾರಿಗಳಾದ ನಾಯಡಿಗಳ ಬಗ್ಗೆ ಹೀಗೆ ಹೇಳುತ್ತಾರೆ.[೧]

''ಅವರು ನಾಯಿಯನ್ನು ತಿನ್ನುವವರು, ಹಿಂದೂಗಳಲ್ಲಿ ಅತ್ಯಂತ ನಿಕೃಷ್ಟರು. ಅತಿದೈನ್ಯದಿಂದ ಸದಾ ಗೋಗರೆದು ಬೇಡುವಂಥವರು. ನಡೆದು ಹೋಗುವವನಾಗಲಿ, ವಾಹನದಲ್ಲಿ ಅಥವಾ ದೋಣಿಯಲ್ಲಿ ಚಲಿಸುತ್ತಿರುವವನಾಗಲಿ, ಆತನಿಗಿಂತ ಸಾಕಷ್ಟು ದೂರದಲ್ಲಿ ಗೌರವದಿಂದ ಬಾಗಿಕೊಂಡು ಮೈಲುಗಟ್ಟಲೆ ದೂರ ಅವರು ಬೇಡುತ್ತ ಹಿಂಬಾಲಿಸಿಕೊಂಡು ಹೋಗುತ್ತಾರೆ. ಅವರಿಗೇನಾದರೂ ಕೊಡುವುದಿದ್ದರೆ ಅದನ್ನು ನೆಲದ ಮೇಲೆ ಇಟ್ಟುಬಿಡತಕ್ಕದ್ದು. ಕೊಡುವವನು ಕೊಡುವುದನ್ನು ಹಾಗೆ ನೆಲದ ಮೇಲಿಟ್ಟು ಸ್ವಲ್ಪ ದೂರ ನಡೆದುಹೋದ ಮೇಲೆ ತೆಗೆದುಕೊಳ್ಳುವ ಈ ನಿಕೃಷ್ಟ, ದೈನ್ಯದಿಂದ ಮುಂದಕ್ಕೆ ಬಂದು ಅದನ್ನು ಎತ್ತಿಕೊಳ್ಳುತ್ತಾನೆ.''

ಆ ಜನಗಳ (ನಾಯಡಿಗಳು) ಬಗ್ಗೆ ಮಿ. ಥರ್ಸ್‌ಟನ್ ಹೀಗೆಂದಿದ್ದಾನೆ :

''ಶೊರನೂರ್‌ನಲ್ಲಿ ನಾನು ಪರಿಶೀಲಿಸಿದ ಈ (ನಾಯಡಿ) ಜನ, ಇಲ್ಲಿಂದ ಸುಮಾರು ಮೂರು ಮೈಲಿ ದೂರದಲ್ಲಿ ವಾಸಮಾಡಿಕೊಂಡಿದ್ದಾರೆ. ಆದರೆ ಸಾಂಪ್ರದಾಯಿಕವಾಗಿ ಇವರು ಮೈಲಿಗೆಯುಂಟು

---

೧. *ಮಲಬಾರ್ ಮ್ಯಾನ್ಯುಯಲ್*

ಮಾಡುವವರಾಗಿರುವ ಕಾರಣ ಹಾಗೂ ದಾರಿಯ ಮಧ್ಯೆ ನದಿಗೆ ಒಂದು ಉದ್ದವಾದ ಸೇತುವೆಯಿರುವ ಕಾರಣ, ಮೈಲಿಗೆಯ ಭಯಕ್ಕಾಗಿ ಅವರು ಸೇತುವೆಯ ಮೇಲೆ ನಡೆಯದೆ, ಮತ್ತೆ ಎಷ್ಟೋ ಮೈಲಿ ಹೆಚ್ಚಾಗಿ ಸುತ್ತಿಕೊಂಡು ಬೇರೆ ದಾರಿಯಲ್ಲಿ ಇಲ್ಲಿಗೆ ಬರುತ್ತಾರೆ."

ಮದರಾಸು ಪ್ರಾಂತದ ತಿನ್ನೇವಲ್ಲಿ ಜಿಲ್ಲೆಯಲ್ಲಿ 'ಪುರಡಾವಣ್ಣ'ರೆಂಬ ಒಂದು ವರ್ಗದ ಜನರಿದ್ದಾರೆ. ಅವರು ದೃಶ್ಯಾಶೌಚಕಾರಿಗಳು. ಅವರ ಬಗ್ಗೆ ಹೀಗೆ ಹೇಳುತ್ತಾರೆ :

"ಅವರನ್ನು ನೋಡಿದರೇ ಮೈಲಿಗೆ ಉಂಟಾಗುತ್ತದೆಯಾದ ಕಾರಣ ಹಗಲು ಹೊತ್ತಿನಲ್ಲಿ ಅವರು ಹೊರಗೆ ಬರುವಂತಿಲ್ಲ. ಈ ನಿರ್ಭಾಗ್ಯ ಜನ, ಕರಡಿ ಹೆಗ್ಗಣಗಳಂಥ ಪಶುಗಳ ಹಾಗೆ ರಾತ್ರಿ ಸಂಚಾರಿಗಳಾಗಿ ಕತ್ತಲಾದ ಮೇಲೆ ಹಕ್ಕೆಯ ಬಿಲದಿಂದ ಹೊರಟು ಮತ್ತೆ ಹುಸಿಬೆಳಗು ಕಾಣುವಷ್ಟರಲ್ಲಿ ಮರಳಿ ಬಿಲ ಸೇರಿಕೊಳ್ಳಬೇಕು. ಹಾಗೆ ಅವರನ್ನು ನಿಯಂತ್ರಿಸಿ ಇಡಲಾಗಿದೆ."

ದೂರಾಶೌಚಕಾರಿಗಳು, ದೃಶ್ಯಾಶೌಚಕಾರಿಗಳು ಮುಂತಾದ ವರ್ಗದವರ ಸಂಕಷ್ಟಗಳು ಎಂಥವಿರಬೇಕು? ಹೇಗೆ ಅವರು ತಮ್ಮ ಬದುಕನ್ನು ತಳ್ಳುತ್ತಿರಬಹುದು? ಅವರು ಹತ್ತಿರ ಬರುವುದೂ ಕಣ್ಣಿಗೆ ಬೀಳುವುದೂ ನಿಷಿದ್ಧವಾಗಿರುವಾಗ ದುಡಿಮೆಗೆ ಅವರಿಗೆ ಯಾವ ಕೆಲಸ ಸಿಕ್ಕೀತು? ಭಿಕ್ಷೆ ಬೇಡುವುದು ಅಥವಾ ನಾಯಿಯ ಮಾಂಸ ತಿನ್ನುವುದು ಇಂಥದಲ್ಲದೆ ಅವರು ಇನ್ನೇನು ಮಾಡಲು ಸಾಧ್ಯ? ನಿಶ್ಚಿತವಾಗಿಯೂ ಜಗತ್ತಿನ ಯಾವುದೇ ನಾಗರಿಕತೆ ಇದಕ್ಕಿಂತ ಹೆಚ್ಚಿನ ಕ್ರೌರ್ಯದ ಆರೋಪಕ್ಕೆ ಗುರಿಯಾಗಲಾರದು. ದೂರಾಶೌಚ–ದೃಶ್ಯಾಶೌಚ ವರ್ಗಗಳ ಒಟ್ಟು ಜನಸಂಖ್ಯೆ ತುಂಬ ಕಡಿಮೆಯೆನ್ನುವುದೇ ಒಂದು ಸಮಾಧಾನ. ಆದರೆ ಐವತ್ತು ಮಿಲಿಯ ಅಸ್ಪೃಶ್ಯರಿಗೆ ಯಾವ ನಾಗರಿಕತೆ ದಕ್ಕಿದೆ?

ಅಸ್ಪೃಶ್ಯ ಯಾವತ್ತೂ ಸ್ಪೃಶ್ಯನಾಗುವಂತಿಲ್ಲ. ಹೀಗಾಗಿ ಅವನಿಗೆ ತನ್ನ ದುರ್ವಿಧಿಯಿಂದ ಯಾವತ್ತೂ ಮೋಕ್ಷವಿಲ್ಲ. ವಾಸಿಸುವ ಹಳ್ಳಿಯಲ್ಲಿ ಆತ ಎಲ್ಲರಿಗೂ ಪರಿಚಿತನೇ ಆಗಿರುವ ಕಾರಣ ಆತನಿಗೆ ಅಲ್ಲಿರುವತನಕ ಮರೆಸಿಕೊಳ್ಳುವ ಸಾಧ್ಯತೆ ಇಲ್ಲವೇ ಇಲ್ಲ. ಒಮ್ಮೆ, ತನ್ನ ಹಳ್ಳಿಯನ್ನು ಬಿಟ್ಟು ಯಾವುದೋ ಒಂದು ಪಟ್ಟಣಕ್ಕೆ ಹೋಗಿ ಸೇರಿಕೊಂಡರೆ, ಮರೆಸಿಕೊಂಡು ಸ್ಪೃಶ್ಯನೆನ್ನಿಸಿಕೊಳ್ಳಲು ಸಾಧ್ಯ. ಆದರೆ, ಅಲ್ಲಿ ಎಲ್ಲಾದರೂ ಒಂದು ವೇಳೆ ನಿಜಸಂಗತಿ ತಿಳಿದುಬಿಟ್ಟರೆ ತನ್ನ ಗತಿ ಏನಾದೀತು ಎಂಬುದು ಆತನಿಗೆ ಚೆನ್ನಾಗಿ ಗೊತ್ತು.

ಹೀಗೆ ಮರೆಸಿಕೊಂಡು ಬದುಕಲು ಪ್ರಯತ್ನಿಸಿದರೆ ಎಂಥ ಗಂಡಾಂತರ ಎದುರಾಗಬಹುದು ಎನ್ನುವುದನ್ನು ಪತ್ರಿಕೆಗಳಲ್ಲಿ ವರದಿಯಾದ ಕೆಳಗಿನ ಘಟನೆ ಸೂಚಿಸುತ್ತದೆ.

ಹುಚ್ಚು ಕುಣಿಯುವ ಸನಾತನ ಮಡಿವಂತಿಕೆ:*

ಅಸ್ಪೃಶ್ಯರ ಮೇಲೆ ಪಾಶವೀಯ ದೌರ್ಜನ್ಯ : ಮಹರ್ ಜಾರಿಯವರಾಗಿ ಬದುಕುವುದೇ ಅಪರಾಧ

ಅಹಮದಾಬಾದ್‌ನ ಶ್ರೀ ಕೇಶವಜಿ ರಾಂಛೋಡ್‌ಜಿ ವಾಘೇಲ ಎನ್ನುವವರು ಬಹಿಷ್ಕೃತ ಹಿತಕಾರಣಿ ಸಭಾದ ಡಾ. ಬಿ. ಆರ್. ಅಂಬೇಡ್ಕರ್ ಅವರಿಗೆ ಈ ಸಂಗತಿಯನ್ನು ತಿಳಿಸಿದ್ದಾರೆ :

ಬಾಪುರಾವ್ ಲಕ್ಷ್ಮಣ ಎಂಬುವವರೊಬ್ಬರು ಮತ್ತು ಅವರ ಸಹೋದರ ಕೌರವ ಕಳೆದ ಆರು ವರ್ಷಗಳಿಂದ ಅಹಮದಾಬಾದ್‌ನ ನಿವಾಸಿಗಳಾಗಿದ್ದಾರೆ. ಅವರು ದಖ್ಖಣದಿಂದ ಬಂದ ಮರಾಠಾ ಜಾತಿಯ ಕೆಲವರ ಜತೆ ಕೂಡಿಕೊಂಡಿರುತ್ತಿದ್ದರು. ಕೌರವನ ಇಬ್ಬರು ಮಕ್ಕಳು, ದಾಮು ಮತ್ತು ಲಕ್ಷ್ಮಣ ಎಂಬವರು ಮರಾಠಾ ಜನರ ಭಜನಮೇಳಗಳಲ್ಲಿ ಯಾವಾಗಲೂ ಭಾಗವಹಿಸುತ್ತಿದ್ದರು. ಆದರೆ ಈಚೆಗೆ, ದಾಮು

---

* ೨೫ನೇ ಫೆಬ್ರವರಿ ೧೯೩೮ರ 'ಬಾಂಬೆ ಕ್ರಾನಿಕಲ್'

ಮತ್ತು ಲಕ್ಷ್ಮಣ ಎಂಬ ಈ ಸೋದರರು ಮಹರ್ ಜಾತಿಗೆ ಸೇರಿದವರೆಂದು ಮರಾಠರಿಗೆ ತಿಳಿದುಬಂದಿತು. ಇದನ್ನು ನಿಶ್ಚಿತಗೊಳಿಸಿಕೊಳ್ಳಲು, ಸೂರತ್–ಅಹಮದಾಬಾದ್ ಗೂಡ್ಸ್ ರೈಲಿನಲ್ಲಿ ನೇಮಕವಾಗಿ ಕೆಲಸ ಮಾಡಿಕೊಂಡಿದ್ದ ಇಬ್ಬರು ಮಹರ್‌ರನ್ನು ಹೇಳಿ ಕರೆಸಲಾಯಿತು. ಆ ಇಬ್ಬರು ಬಂದು ಈ ಸೋದರರು ಮಹರ್ ಜಾತಿಯವರೇ ಎನ್ನುವುದನ್ನು ದೃಢಗೊಳಿಸಿದರು. ಆದಾದ ಮೇಲೆ, ೧೧ನೆಯ ತಾರೀಖಿನಂದು ಭಂಡಾರಿಪೊಳೆ ಎಂಬಲ್ಲಿನ ಕಾಳುಪೂರ್‌ನಲ್ಲಿ ನಡೆಯುತ್ತಿದ್ದ ಭಜನಮೇಳಕ್ಕೆ ಅವರಿಬ್ಬರನ್ನು ನಡುರಾತ್ರಿಯ ವೇಳೆಗೆ ಕರೆಸಿದರು. ದಾಮು ಮತ್ತು ಲಕ್ಷ್ಮಣರನ್ನು ಅಲ್ಲಿ ನೀವು ಯಾವ ಜಾತಿಯವರೆಂದು ಪ್ರಶ್ನಿಸಿದಾಗ ಅವರು ತಾವು ಸೋಮವಂಶಿಗಳು ಎಂದರು. ಹಾಗೆ ಹೇಳಿದ್ದು ಕೇಳಿ ಮರಾಠರು ಕೋಪೋದ್ರಿಕ್ತರಾದರು. ತಮ್ಮೆಲ್ಲರನ್ನೂ ಹಾಗೂ ತಮ್ಮ ಮನೆ ದೇವಾಲಯಗಳನ್ನೂ ಮೈಲಿಗೆಗೊಳಿಸಿದ್ದಕ್ಕಾಗಿ ಇವರನ್ನು ಮನಸೋ ಇಚ್ಛೆ ಬೈದರು. ಅವರ ಮೇಲೆ ಕೈ ಮಾಡಿದರು. ಆ ಸೋದರರಲ್ಲಿ ಒಬ್ಬನ ಹತ್ತಿರ ಒಂದು ಬಂಗಾರದ ಉಂಗುರವಿತ್ತು. ಅದನ್ನು ಕಿತ್ತುಕೊಂಡು ಅಲ್ಲಿಯೇ ಹನ್ನೊಂದು ರೂಪಾಯಿಗಳಿಗೆ ಮಾರಿದರು. ಅದರಲ್ಲಿ ಆರು ರೂಪಾಯಿಗಳನ್ನು ಸೂರತ್‌ನಿಂದ ಇವರನ್ನು ಗುರುತಿಸಲಿಕ್ಕಾಗಿ ಕರೆಯಿಸಿದ ಮಹರ್ ಕೆಲಸಗಾರನಿಗೆ ಕೊಟ್ಟರು. ದಾಮು ಮತ್ತು ಲಕ್ಷ್ಮಣರು ಇದರಿಂದ ಭಯಗೊಂಡು. ತಮ್ಮನ್ನು ಊರಿಗೆ ಹೋಗಲು ಬಿಟ್ಟುಬಿಡಿ, ಎಂದು ಮರಾಠರಲ್ಲಿ ಬೇಡಿಕೊಂಡರು. ಆದರೆ, ಐದುನೂರು ರೂಪಾಯಿಗಳ ದಂಡ ತೆರುವತನಕ ಅವರನ್ನು ಬಿಡಲಾಗುವುದಿಲ್ಲ ಎಂದು ಅವರ ಬೇಡಿಕೆಯನ್ನು ನಿರಾಕರಿಸಲಾಯ್ತು. ಅಷ್ಟು ದೊಡ್ಡಮೊತ್ತದ ಹಣ ತಮ್ಮಲ್ಲಿಲ್ಲ ಎಂದು ಆ ಸೋದರರು ಹೇಳಿಕೊಂಡರು. ಮರಾಠರಲ್ಲಿ ಒಬ್ಬ ದಂಡವನ್ನು ನೂರಿಪ್ಪತ್ತೈದು ರೂಪಾಯಿಗೆ ಇಳಿಸಬಹುದೆಂದು ಸೂಚಿಸಿದ. ಆದರೆ ಅಷ್ಟರಲ್ಲಿ ಇನ್ನೊಬ್ಬ, ಈ ಸೂಚನೆಗಳನ್ನು ವಿರೋಧಿಸಿ ತಾವು ದಂಡ ಹಾಕಿ ತೃಪ್ತರಾಗಬಾರದೆಂದೂ ಹೀಗೆ ಜಾತಿ ಮರೆಸಿದ್ದಕ್ಕಾಗಿ ಅವರಿಗೆ ಸರಿಯಾದ ಶಿಕ್ಷೆ ಕೊಡತಕ್ಕದ್ದೆಂದೂ ವಾದಿಸಿದ. ಈ ಬಗ್ಗೆ ಚರ್ಚೆಯಾಗಿ ನಿರ್ಣಯ ತೆಗೆದುಕೊಂಡ ಮೇಲೆ, ರಾತ್ರಿಯಿಡೀ ಅವರನ್ನು ಅಲ್ಲೇ ಉಳಿಸಿಕೊಳ್ಳಲಾಯಿತು. ಬೆಳಿಗ್ಗೆ ಒಂಬತ್ತು ಗಂಟೆ ಸಮಯಕ್ಕೆ ಶಿಕ್ಷೆಯೆಂದು ಅವರ ಮೇಲೆ ಹೀನಾಯ ದೌರ್ಜನ್ಯಗಳನ್ನು ನಡೆಸಲಾಯಿತು. ಅವರ ಎಡ ಮೀಸೆಗಳನ್ನೂ ಬಲ ಹುಬ್ಬುಗಳನ್ನೂ ನುಣ್ಣಗೆ ಬೋಳಿಸಲಾಯಿತು; ಎಣ್ಣೆಯಲ್ಲಿ ಮಸಿಯನ್ನೂ ಮಣ್ಣನ್ನೂ ಕಲೆಸಿ ಅವರ ಮೈತುಂಬ ಬಳಿದರು; ಹರಿದ ಹಳೆಯ ಬೂಟುಗಳನ್ನು ಮಾಲೆಮಾಡಿ ಅವರಿಗೆ ತೊಡಿಸಿದರು; ಒಬ್ಬನ ಕೈಯಲ್ಲಿ ಪೊರಕೆ ಹಿಡಿಸಿದರು ಮತ್ತು ಇನ್ನೊಬ್ಬನ ಕೈಯಲ್ಲಿ 'ಮೇಲುಜಾತಿಯವರನ್ನು ಮುಟ್ಟಿದುದಕ್ಕೆ ಅನುಭವಿಸುತ್ತಿರುವ ಶಿಕ್ಷೆ ಇದು' ಎಂದು ಬರೆದ ಫಲಕವನ್ನು ಹಿಡಿಸಿದರು. ಈ ಸ್ಥಿತಿಯಲ್ಲಿ ಆ ಮಹರ್ ಸೋದರರನ್ನು ಮೆರವಣಿಗೆ ಮಾಡಲಾಯ್ತು. ಮೆರವಣಿಗೆಯಲ್ಲಿ ಸುಮಾರು ಎಪ್ಪತ್ತೈದು ಮಂದಿ ಭಾಗವಹಿಸಿದ್ದರು. ಎದುರಿನಲ್ಲಿ ಒಬ್ಬ ತಮಟೆ ಬಡಿದುಕೊಂಡು ನಡೆಯುತ್ತಿದ್ದ.

ಅದಾದಮೇಲೆ, ಈ ಇಬ್ಬರು ಸೋದರರು ಪೊಲೀಸರಲ್ಲಿ ಹೋಗಿ ದೂರು ಸಲ್ಲಿಸಿದರು. ವಿಚಾರಣೆ ಮಾಡಿದಾಗ ಆಪಾದಿತರು, ದಾಮು–ಲಕ್ಷ್ಮಣರಿಗೆ ತಾವು ಆ ಬಗೆಯಲ್ಲಿ ಶಿಕ್ಷೆ ವಿಧಿಸಿದ್ದು ನಿಜ ಎಂದು ಒಪ್ಪಿಕೊಂಡರು. ಆದರೆ ಈ ಶಿಕ್ಷೆಯನ್ನು ಅನುಭವಿಸುತ್ತೇವೆಂದು ಅವರು ತಾವೇ ಸ್ವತಃ ಇಚ್ಛಾಪೂರ್ವಕವಾಗಿ ಒಪ್ಪಿಕೊಂಡಿದ್ದರು ಎಂದು ವಾದಿಸಿದರು. ಬೈದು, ಹೊಡೆದು, ಬೆದರಿಸಿ, ಕ್ರೂರಶಿಕ್ಷೆಯ ಭಯ ಹುಟ್ಟಿಸಿ ಆಮೇಲೆ ಹೀನಾಯವಾಗಿ ಹಿಂಸೆಗೊಳಿಸಿದಾಗ ದಾಮು–ಲಕ್ಷ್ಮಣರು ನಿಸ್ಸಹಾಯಕರಾಗಿ ಸೋತಿದ್ದರು ಎನ್ನುವುದು ಸ್ಪಷ್ಟ. ಈ ಪ್ರಕರಣ, ಅಸ್ಪೃಶ್ಯರೆಂದು ಕರೆಸಿಕೊಳ್ಳುವ ಜಾತಿಗಳವರಲ್ಲಿ ಭಾರೀ ಅಲ್ಲೋಲಕಲ್ಲೋಲವೆಬ್ಬಿಸಿದೆ ಹಾಗೂ ನೊಂದವರಿಗೆ ಸೂಕ್ತವಾದ ಕಾನೂನಿನ ರಕ್ಷಣೆ ಕೊಡಿಸಲು ಪ್ರಯತ್ನ

ನಡೆದಿದೆ. ಆದರೆ ಅಸ್ಪೃಶ್ಯತೆಯನ್ನು ಕುರಿತು ಹಿಂದೂ ನಾಗರಿಕತೆಯ ಕಟ್ಟಳೆಗಳು ಅವೆಷ್ಟು ಸೂಕ್ಷ್ಮಬಂಧಕಗಳಾಗಿವೆಯೆಂದರೆ, ಅಸ್ಪೃಶ್ಯನಾದವನು ಸ್ಪೃಶ್ಯನಂತೆ ವರ್ತಿಸಿ ಕಾಣಿಸಿಕೊಳ್ಳುವುದು ಯಾವತ್ತೂ ಅಸಾಧ್ಯ. ಅದಕ್ಕೆ ಹೊಂದಿ, ಕೆಲವು ಭಾಗಗಳಲ್ಲಿ ನಿಗದಿತವಾದ ಕಟ್ಟಳೆಗಳೇ ಇವೆ. ಅದರ ಪ್ರಕಾರ, ಅಸ್ಪೃಶ್ಯರಾದವರು ಸುಲಭವಾಗಿ ಗುರುತಿಗೆ ಸಿಗುವಂತೆ ಹಾಗೂ ಸವರ್ಣೀಯ ಹಿಂದೂಗಳು ತಪ್ಪಿಯಾದರೂ ಅವರನ್ನು ಮುಟ್ಟಿಸಿಕೊಂಡು ಮೈಲಿಗೆಗೊಳ್ಳದಂತೆ, ಜನ ಗುರುತಿಸಿ ಬೇರೆಯವರಿಗೂ ಹೇಳಲು ಸಾಧ್ಯವಾಗುವಂತೆ ಅವರು ಸದಾ ಕಪ್ಪು ದಾರವನ್ನು ಕಟ್ಟಿಕೊಂಡಿರತಕ್ಕದ್ದು ಎಂಬ ನೇಮವಿದೆ. ಬೊಂಬಾಯಿ ಪ್ರಾಂತದ ದ್ವಾರಕಾ ಎಂಬ ಪಟ್ಟಣದಲ್ಲಿ ಹಿಂದೂಗಳ ಮಹೋನ್ನತ ದೇವರಾದ ಕೃಷ್ಣನ ದೇವಾಲಯವಿದೆ. ಅಲ್ಲಿ, ಅಸ್ಪೃಶ್ಯರು ರಸ್ತೆಗಳಲ್ಲಿ ಸಂಚರಿಸುವಾಗ ಕೈ ಚಪ್ಪಾಳೆ ತಟ್ಟಿಕೊಳ್ಳುತ್ತ "ಕಂಬ, ಕಂಬ" ಎಂದು ಕೂಗಿಕೊಳ್ಳುತ್ತ ನಡೆಯಬೇಕು ಎಂಬ ಕಟ್ಟಳೆಯಿದೆ. ತಾನು ಅಸ್ಪೃಶ್ಯನೆಂಬುದನ್ನೂ ಸ್ಪೃಶ್ಯರು ತನ್ನನ್ನು ಮುಟ್ಟದಂತೆ ಎಚ್ಚರವಿರಿ ಎಂಬುದನ್ನೂ ಆತ ಈ ಮೂಲಕ ಸಾರಿಕೊಳ್ಳುತ್ತ ಹೋಗಬೇಕು. ಮದರಾಸು ಪ್ರಾಂತದ ಚೆರುಮಾನರ ಬಗ್ಗೆ ಕೆಳಕಂಡಂತೆ ದಾಖಲೆಯಿದೆ :

> "ಈ ದರಿದ್ರ ದೀನಜೀವಿಗಳ ಸಾಮಾಜಿಕ ಸ್ಥಿತಿ ನಿಜವಾಗಿಯೂ ಅತ್ಯಂತ ಹೀನಾಯವಾದದ್ದು. ಚೆರುಮಾನ್ ಒಬ್ಬ ಮೇಲಿನ ಜಾತಿಯವನ ಎದುರು ಬಂದಾಗ ಆತ ಮೂವತ್ತು ಅಡಿ ದೂರದಲ್ಲಿ ನಿಂತಿರಬೇಕು. ಅವನೇನಾದರೂ ನಿಷೇಧಿತವಾದ ಆ ಮೂವತ್ತು ಅಡಿಗಳಿಗಿಂತ ಸಮೀಪವಾಗಿ ಬಂದರೆ ಅದರಿಂದ ಮೈಲಿಗೆಯುಂಟಾಗುತ್ತದೆ. ನೀರಿನಲ್ಲಿ ಸ್ನಾನಮಾಡಿ ಆ ಮೈಲಿಗೆಯನ್ನು ತೊಳೆದುಕೊಳ್ಳಬೇಕಾಗುತ್ತದೆ. ಚೆರುಮಾನ್ ಜಾತಿಯವನು ಬ್ರಾಹ್ಮಣರಿರುವ ಗ್ರಾಮಕ್ಕೂ ದೇವಾಲಯಕ್ಕೂ ಬಾವಿಯಿರುವ ಸ್ಥಳಕ್ಕೂ ಬರುವ ಹಾಗೆ ಇಲ್ಲ. ಹಾಗೇನಾದರೂ ಬಂದರೆ ಶುದ್ಧಿ ಮಾಡಿಕೊಳ್ಳಬೇಕಾಗುತ್ತದೆ. ಸಾರ್ವಜನಿಕ ರಸ್ತೆಯಲ್ಲಿ ಆತ ನಡೆಯುತ್ತಿದ್ದರೂ ಎದುರಿನಲ್ಲಿ ಆತನ ಒಡೆಯ ಬಂದರೆ, ದಾರಿ ಬಿಟ್ಟು ಆಚೆಗೆ ಕೆಸರಿಗಾದರೂ ಇಳಿದು ನಡೆದುಹೋಗಬೇಕು. ಆಕಸ್ಮಾತ್ ಎಲ್ಲಾದರೂ ಒಡೆಯನಿಗೆ ಮೈಲಿಗೆಯಾಗಿ ಅಸಮಾಧಾನವಾದೀತು ಎಂಬ ಕಾರಣ. ದಾರಿಯಲ್ಲಿ ನಡೆಯುವಾಗ ಬೇರೆ ದಾರಿಗರಿಗೆ ಮೈಲಿಗೆಯುಂಟುಮಾಡದಿರುವುದಕ್ಕಾಗಿ ಆತ 'ಓ...ವೋ...' ಎಂದು ಕರ್ಕಶವಾಗಿ ಕೂಗುತ್ತ ನಡೆಯತಕ್ಕದ್ದು. ಕೆಲವು ಕಡೆಗಳಲ್ಲಿ, ಉದಾಹರಣೆಗೆ ಪಾಲ್‌ಘಾಟ್‌ನಲ್ಲಿ, ಚೆರುಮಾನ್ ಜಾತಿಯವರು ರಸ್ತೆಯ ಪಕ್ಕಕ್ಕೆ ಒಂದು ಕೊಳೆಯಾದ ಬಟ್ಟೆ ತುಂಡು ಹಾಸಿಕೊಂಡು ಕೀರುದನಿಯಲ್ಲಿ 'ಅಂಬ್ರಾಣಿ, ಅಂಬ್ರಾಣಿ, ಏನಾದರೂ ಚೂರು ಕೊಡಿ, ಈ ಬಟ್ಟೆ ಮೇಲೆ ಬಿಸಾಕಿ' ಎಂದು ಕಿರುಚುತ್ತ ನಿಂತಿರುವುದನ್ನು ಕಾಣಬಹುದು. ಬ್ರಾಹ್ಮಣರ ಪ್ರಭಾವ ಹೆಚ್ಚಿಕೊಳ್ಳುತ್ತಲೇ ಇರುವ ಕೊಚಿನ್ ಮತ್ತು ತಿರುವಾಂಕೂರು ದೇಶೀಯ ಸಂಸ್ಥಾನಗಳಲ್ಲಿ ಈ ಜನರ ಸ್ಥಿತಿ ಅಸಹನೀಯವಾದದ್ದಾಗಿದೆ. ಪಾಲ್ಘಾಟ್ ತಾಲೂಕಿನಲ್ಲಿ ಇವತ್ತಿಗೂ ಚೆರುಮಾನ್ ಜಾತಿಯವರು ಅಂಗಡಿ ಪೇಟೆಗೆ ಪ್ರವೇಶಿಸುವಂತಿಲ್ಲ." ಮಲಬಾರಿನಲ್ಲಿ ಹೀಗಿದೆ ಎನ್ನುತ್ತಾರೆ.[೧]
>
> "ಉತ್ತಮ ಜಾತಿಯವರು ರಸ್ತೆಯಲ್ಲಿ ನಡೆಯುತ್ತ ಹೋಗುವಾಗ, ಕೀಳು ಜಾತಿಯ ಜನ ರಸ್ತೆಯಿಂದ ಬದಿಗೆ ಸರಿದು ತಮಗೆ ಮೈಲಿಗೆಯಾಗದಂತೆ ನೋಡಿಕೊಳ್ಳಲಿ ಎಂಬುದಕ್ಕಾಗಿ, ಆಗಾಗ ಕೂಗು ಹಾಕುತ್ತ ಹೋಗುತ್ತಾರೆ. ಅತ್ಯಂತ ಕೆಳಗಿನ ಜಾತಿಯವರೂ ರಸ್ತೆಯಲ್ಲಿ ನಡೆಯುತ್ತ, ತಾವು ಮೈಲಿಗೆಯವರು

---

೧. ಥರ್ಸ್ಟನ್ – *ಟ್ರೈಬ್ಸ್ ಅಂಡ್ ಕ್ಯಾಸ್ಟ್ಸ್ ಇನ್ ಸದರನ್ ಇಂಡಿಯಾ* – ಸಂ. ೫, ಪು. ೧೯೬

ಬರುತ್ತಿದ್ದೇವೆಂದು ಸೂಚಿಸಲಿಕ್ಕಾಗಿ ಕೂಗುತ್ತ ಹೋಗುತ್ತಾರೆ. ಮೇಲಿನ ಜಾತಿಯವರ ಕೂಗು ಕೇಳಿಸಿದ ಮಾತ್ರಕ್ಕೆ ರಸ್ತೆಯಿಂದ ಆಚೆ ಸರಿದುಕೊಳ್ಳುತ್ತಾರೆ. ಕೆಳಜಾತಿಯ ಜನ ರಸ್ತೆಯಲ್ಲಿ ನಡೆದುಹೋಗುವ ಧೈರ್ಯ ಮಾಡದೆ, ರಸ್ತೆಗೆ ಸಮಾನಾಂತರವಾಗಿ ಪಕ್ಕದಲ್ಲಿ ನಡೆದುಕೊಂಡು ಹೋಗುತ್ತಿರುವುದು ಇಲ್ಲಿ ಸಾಮಾನ್ಯ ದೃಶ್ಯವಾಗಿದೆ."

ಈ ಹಿಂದೂ ನಾಗರಿಕತೆ ಸಾಮಾಜಿಕ ಕುಷ್ಟರೋಗಿಗಳನ್ನಾಗಿ ಪರಿವರ್ತಿಸಿರುವ ಅಸ್ಪೃಶ್ಯರೆಂಬ ದುರ್ದೈವಿ ಜೀವಿಗಳದ್ದು ಎಂಥ ಹೀನಾಯಸ್ಥಿತಿ! ಅಸ್ಪೃಶ್ಯರೆಂದು ಕರೆಸಿಕೊಳ್ಳುವುದೇ ಒಂದು ದೊಡ್ಡ ದುರದೃಷ್ಟ ಮೇಲಾಗಿ, ತಾನು ಅಸ್ಪೃಶ್ಯನೆನ್ನುವ ಅವಮಾನವನ್ನು ಆತ ತನ್ನ ಬಾಯಿಂದಲೇ ಸ್ವತಃ ಸಾರಿಕೊಳ್ಳುವಂತೆ ವಿಧಿಸುವ ಈ ಕ್ರೌರ್ಯಕ್ಕೆ ಸಾಟಿಯಾದ ಕ್ರೌರ್ಯ ಇನ್ನೊಂದಿಲ್ಲ ಎನ್ನುವುದು ನನ್ನ ಅಭಿಪ್ರಾಯ. ಇಂಥ ಈ ಹಿಂದೂ ನಾಗರಿಕತೆಯ ಬಗ್ಗೆ ಒಬ್ಬ ಅಸ್ಪೃಶ್ಯ ಏನೆಂದಾನು? ಇದು ನಾಗರಿಕತೆಯಲ್ಲ, ನರಪಾತಕ ಎಂದು ಆತ ಹೇಳುವುದಾದರೆ ಅದು ತಪ್ಪಾದೀತೆ?

ಹಿಂದೂ ನಾಗರಿಕತೆಯ ಮೂಲತತ್ತ್ವಗಳೇ ಈ ಆದಿಮಜನಾಂಗಗಳ, ಅಪರಾಧಿ ಬುಡಕಟ್ಟುಗಳ ಹಾಗೂ ಅಸ್ಪೃಶ್ಯ ವರ್ಗದ ಹೀನಸ್ಥಿತಿಗೆ ಕಾರಣವಾಗಿವೆ ಎನ್ನುವುದರಲ್ಲಿ ಕಿಂಚಿತ್ತೂ ಸಂದೇಹವಿರಬೇಕಿಲ್ಲ.

ಕೆಲವು ಈ ಆದಿಮಜನಾಂಗಗಳನ್ನು ಹಿಂದೂ ಪ್ರಕಾರದೊಳಕ್ಕೆ ತಂದು ಸೇರಿಸಿಕೊಳ್ಳಲು ಕ್ರಮವಾದ ಧರ್ಮಪ್ರಚಾರಕ–ಪ್ರಸಾರಕ ಸಂಘಟನೆಗಳ ಪ್ರಯತ್ನ ನಡೆದಿಲ್ಲವೇಕೆ? ಬುಡಕಟ್ಟುಗಳಿಗೆ ಅಪರಾಧವೇ ವೃತ್ತಿಯಾಗಿರುವುದೇತಕ್ಕೆ? ಅಸ್ಪೃಶ್ಯರಂಥ ಕೆಲವು ವರ್ಗಗಳನ್ನು ಮಾನವ ಸಂಪರ್ಕಕ್ಕೇ ಅನರ್ಹವೆಂದು ಪರಿಗಣಿಸುವುದು ಏತಕ್ಕೆ?

ಈ ಒಂದೊಂದು ಪ್ರಶ್ನೆಗೂ ಸಿಗುವ ಉತ್ತರ, ಹಿಂದೂ ನಾಗರಿಕತೆಯ ಯಾವುದೋ ಮೂಲತತ್ತ್ವವನ್ನೇ ಬೆಟ್ಟುಮಾಡಿ ತೋರಿಸುತ್ತದೆ.

ಮೊದಲನೆಯ ಪ್ರಶ್ನೆಗೆ ಉತ್ತರ–ಹಿಂದೂ ಧರ್ಮದಲ್ಲಿರುವ ಜಾತಿಪದ್ಧತಿಯೇ ಅದು ಪ್ರಚಾರಕ – ಪ್ರಸಾರಕ ಧರ್ಮವಾಗದಂತೆ ಅದನ್ನು ತಡೆದು ನಿಲ್ಲಿಸಿದೆ ಮತ್ತು ಈ ಜಾತಿಪದ್ಧತಿ ಹಿಂದೂ ನಾಗರಿಕತೆಯ ಒಂದು ಮೂಲಭೂತ ತತ್ತ್ವವಾಗಿದೆ. ಎರಡನೆಯ ಪ್ರಶ್ನೆಗೆ ಉತ್ತರ–ಯಾವನೇ ಒಬ್ಬನು ಗೌರವಯುತವಾದ ಬದುಕನ್ನು ದುಡಿದು ಗಳಿಸಿಕೊಳ್ಳಲು ಮುಕ್ತ ಅವಕಾಶವಿಲ್ಲದಂತೆ, ಹಿಂದೂಗಳ ಚಾತುವರ್ಣ ವ್ಯವಸ್ಥೆ ನಿಶ್ಚಲವಾದ ಲಕ್ಷ್ಮಣರೇಖೆಗಳನ್ನು ಹಾಕಿಟ್ಟಿದೆ. ಜ್ಞಾನ ಸಂಬಂಧವಾದದ್ದೆಲ್ಲ ಬ್ರಾಹ್ಮಣರ ಮೀಸಲು; ಯುದ್ಧ, ಶೌರ್ಯ ಸಂಬಂಧವಾದದ್ದೆಲ್ಲ ಕ್ಷತ್ರಿಯರ ಮೀಸಲು; ವ್ಯಾಪಾರ ವೈಶ್ಯರಿಗೆ ಮಾತ್ರ ಮೀಸಲು ಹಾಗೂ ಶೂದ್ರರು ಸೇವೆಗೇ ಮೀಸಲು. ಇದರಿಂದ ಹೊರಗುಳಿದವರು, ಬದುಕಲು ಗೌರವಯುತವಾದ ವೃತ್ತಿಯೇ ಇಲ್ಲದೆ, ಹೀನ ಅಥವಾ ಅಪರಾಧೀ ವೃತ್ತಿಗಳಿಗೆ ತಳ್ಳಲ್ಪಟ್ಟವರಾಗಿದ್ದಾರೆ. ಇದು ಚಾತುರ್ವರ್ಣದ ಫಲ ಮತ್ತು ಚಾತುರ್ವರ್ಣವೆಂಬುದು ಹಿಂದೂನಾಗರಿಕತೆಯ ಮೂಲತತ್ತ್ವಗಳಲ್ಲಿ ಒಂದು.

## IV

ಹಿಂದಿನ ವಿಚಾರವನ್ನೇ ಹೇಳುವುದಾದರೆ, ಇಂಡಿಯಾದ ಈ ಎಲ್ಲ ಮೂರು ವರ್ಗಗಳ ಒಟ್ಟು ಎಪ್ಪತ್ತೊಂಬತ್ತೂವರೆ ಮಿಲಿಯ ಜನರದ್ದೂ ಒಂದೇ ಹೀನಾಯದ ಹಣೆಬರಹವಾಗಿದೆ, ನಿಜ. ಆದರೆ, ಇವರೆಲ್ಲರ ಮುಂದಿನ ಭವಿಷ್ಯ ಕೂಡ ಹೀಗೆ ಸಮಾನವಾದದ್ದಾಗಿಯೇ ಉಳಿಯುತ್ತದೆ ಎನ್ನುವಂತಿಲ್ಲ. ಅದಕ್ಕೆ ಕಾರಣ, ಅವರೆಲ್ಲರ ವಸ್ತುಸ್ಥಿತಿ ಕಾಣುವುದಕ್ಕೆ ಸಮಾನವಾಗಿ ಕಂಡರೂ ಈ ಮೂರು ವರ್ಗಗಳ ನೆಲೆಗಳು ಮೂಲತಃ ಭಿನ್ನವಾದದ್ದಾಗಿವೆ.

ಗಮನಿಸಬೇಕಾದ ಮೊದಲನೆಯ ಸಂಗತಿಯೆಂದರೆ, ಆದಿಮ ಜನಾಂಗ, ಅಪರಾಧಿ ಜನಾಂಗಗಳು ಈ ಅಸ್ಪೃಶ್ಯತೆಯ ರಾಹುಗ್ರಹಣದಿಂದ ಮುಕ್ತವಾಗಿರುವಂಥವು. ಅವರು ಹಿಂದೂಗಳಿಗೆ ಮೈಲಿಗೆಯಲ್ಲ. ವಾಸ್ತವವಾಗಿ, ಈ ಆದಿಮ–ಅಪರಾಧಿ ಜನಾಂಗಗಳವರೂ ಅಸ್ಪೃಶ್ಯತೆಯ ಸಂಬಂಧದಲ್ಲಿ ಅಸ್ಪೃಶ್ಯತೆಯನ್ನಾಚರಿಸುತ್ತಾರೆ. ಆಧಿಮ–ಅಪರಾಧಿ ಜನಾಂಗಗಳ ಜನ, ಅಸ್ಪೃಶ್ಯರನ್ನು ಮುಟ್ಟಿದರೆ ತಮಗೆ ಮೈಲಿಗೆಯಾಗುತ್ತದೆ ಎಂದು ಭಾವಿಸುವುದನ್ನು ಕಂಡಾಗ, ಆ ಇಡೀ ಸನ್ನಿವೇಶ ನಗೆ ತರಿಸುತ್ತದೆ. ಅವರು ಅಸ್ಪೃಶ್ಯರಿಗಿಂತಲೂ ಎಷ್ಟೋ ಪಾಲು ಹೆಚ್ಚಾಗಿ ದರಿದ್ರರು, ಕೊಳಕರು, ಮೂಢನಂಬಿಕೆಯುಳ್ಳವರು, ಮೂಢರು. ಹಾಗಿದ್ದರೂ ತಾವು ಸಾಮಾಜಿಕವಾಗಿ ಅಸ್ಪೃಶ್ಯರಿಗಿಂತ ಮೇಲು ಎಂದು ಗರ್ವ ಪಟ್ಟುಕೊಳ್ಳುತ್ತಾರೆ. ಇದು ಅವರು ಹಿಂದೂಗಳಿಂದ ಅಂಟಿಸಿಕೊಂಡ ಸಾಂಕ್ರಾಮಿಕ. ಇಲ್ಲಿ ಗಮನಿಸಬೇಕಾದದ್ದೆಂದರೆ, ಹಿಂದೂಗಳೂ ಈ ಎರಡು ವರ್ಗಗಳನ್ನು ಅಸ್ಪೃಶ್ಯರೆಂದು ಭಾವಿಸುವುದಿಲ್ಲ. ಅಸ್ಪೃಶ್ಯರಿಗಿಲ್ಲದೆ ಈ ಜನಾಂಗಗಳಿಗೆ ಮಾತ್ರ ದೊರೆತಿರುವ ಸವಲತ್ತು ಇದು. ಇದರಿಂದಾಗಿ ಈ ಎರಡು ಜನಾಂಗಗಳಿಗೆ ಭವಿಷ್ಯದಲ್ಲಿ ಭರವಸೆಯಿಟ್ಟುಕೊಳ್ಳಲು ಸಾಧ್ಯ. ಈಗ ಆದಿಮ ಜನಾಂಗಗಳಿಗೆ ಅಭಿವೃದ್ಧಿಯ ಸಾಧ್ಯತೆಯಿಲ್ಲ ಎಂದರೆ ಅದಕ್ಕೆ ಕಾರಣ, ಅವರು ಪ್ರತ್ಯೇಕತೆಯಲ್ಲಿ ಉಳಿದಿರಲು ನಿರ್ಧರಿಸಿರುವುದು. ಆದರೆ, ಒಮ್ಮೆ ಅವರು ತಮ್ಮ ಕಾಡಿನ ಮೂಲೆಗಳಿಂದ ಹೊರಬಂದು ನಾಗರಿಕತೆಯಲ್ಲಿ ಪಾಲ್ಗೊಳ್ಳ ತೊಡಗಿದರೆ, ಅವರ ಪ್ರಗತಿಯ ಹಾದಿಯಲ್ಲಿ ಕಂಟಕವಿರಲಾರದು. ಅವರಂತೆಯೇ ಅಪರಾಧಿ ಜನಾಂಗಗಳಿ ಭವಿಷ್ಯದಲ್ಲಿ ಭರವಸೆ ಇರಲು ಸಾಧ್ಯ. ಸರ್ಕಾರಗಳು ಈಗ ಅಪರಾಧಿ ಜನಾಂಗಗಳಿಗಾಗಿ ವಸತಿನೆಲೆಗಳನ್ನು ಸ್ಥಾಪಿಸಿ ಅಲ್ಲಿ ದುಡಿಮೆಗೆ ಉಪಯುಕ್ತವಾದ ಕಸುಬುಗಳನ್ನು ಕಲಿಸಿಕೊಡುವ ವ್ಯವಸ್ಥೆ ಮಾಡಿವೆ. ಇದರಿಂದಾಗಿ ಕೆಲವು ಸಮಯದಲ್ಲಿಯೇ ಅವರು ತಮ್ಮ ದುಷ್ಟ ಅಭ್ಯಾಸಗಳನ್ನು ಸಂಪೂರ್ಣವಾಗಿ ತ್ಯಜಿಸಿ ಉಳಿದವರಂತಾಗುತ್ತಾರೆ ಎಂಬುದರಲ್ಲಿ ಸಂದೇಹವಿಲ್ಲ.

ಅಸ್ಪೃಶ್ಯ ಜನರ ಸಂಗತಿ ಮಾತ್ರ ಸಂಪೂರ್ಣ ಬೇರೆಯೇ ಆದ ನೆಲಗಟ್ಟಿನ ಮೇಲೆ ನಿಂತುಕೊಂಡಿದೆ. ಅವರಿಗಿರುವ ದುರವಸ್ಥೆಯೇನಿದ್ದರೂ ಅದು ಅವರ ಮೇಲೆ ಹೊರಗಿನಿಂದ ಬಲವಂತವಾಗಿ ಹೇರಿದ್ದು. ಅಸ್ಪೃಶ್ಯರ ಸಮಸ್ಯೆ ಆದಿಮ ಜನಾಂಗಗಳ ಸಮಸ್ಯೆಗಿಂತ ಭಿನ್ನವಾದದ್ದು. ಏಕೆಂದರೆ, ಅಸ್ಪೃಶ್ಯರಿಗಿರುವ ಪ್ರತ್ಯೇಕತೆಯ ದುಃಸ್ಥಿತಿ ಅಸ್ಪೃಶ್ಯತೆಯ ಕಾರಣದಿಂದ ಉಲ್ಬಣಿಸಿ ತೀವ್ರಗೊಂಡಿದೆ. ಆದಿಮ ಜನಾಂಗಗಳ ಸಮಸ್ಯೆಯಿರುವುದು ಭೌಗೋಳಿಕ ಪ್ರತ್ಯೇಕತೆಯಲ್ಲಿ ಮತ್ತು ಉತ್ತಮಗೊಳ್ಳಲು ಬೇಕಾದ ಸದವಕಾಶಗಳನ್ನು ತಾವು ಪಡೆದುಕೊಳ್ಳಬೇಕು ಎಂಬ ಹಂಬಲವೇ ಹುಟ್ಟದಿರುವ ಜಡತೆಯಲ್ಲಿ. ಆದರೆ ಅಸ್ಪೃಶ್ಯರ ವಿಷಯ ಹಾಗಲ್ಲ. ಇವರಿಗೆ ಎಲ್ಲ ಅವಕಾಶಗಳನ್ನೂ ವಿಧ್ಯುಕ್ತವಾಗಿ ನಿಷೇಧಿಸಲಾಗಿದೆ. ಅದು ಇವರ ಅಪರಿಹಾರ್ಯ ಸಮಸ್ಯೆ.

ಅಸ್ಪೃಶ್ಯರ ಉದ್ಧಾರದ ವಿಷಯದಲ್ಲಿ ಯಾವ ಹೆಚ್ಚಿನ ಆಶೆಯೂ ಉಳಿಯುವಂತೆ ಕಾಣುವುದಿಲ್ಲ. ಅದೇನೇ ಇರಲಿ, ಅಸ್ಪೃಶ್ಯರ ಉದ್ಧಾರವೆನ್ನುವುದು ಆದಿಮ ಜನಾಂಗಗಳ ಉದ್ಧಾರಕ್ಕಿಂತ ಹೆಚ್ಚು ಸಮಸ್ಯಾತ್ಮಕವಾದದ್ದು ಮತ್ತು ಹೆಚ್ಚು ದೂರಸಾಧ್ಯವಾದದ್ದು ಎಂಬುದಂತೂ ಸತ್ಯ. ಗುಲಾಮಗಿರಿಯ ವ್ಯವಸ್ಥೆಗಳಲ್ಲಿ ಆ ಜನಕ್ಕೆ ಇದ್ದ ಸಮಸ್ಯೆಯೆಂದರೆ, ಅವರಿಗೆ ರಾಜಕೀಯ ಅಥವಾ ಆರ್ಥಿಕ ಹಕ್ಕುಗಳನ್ನು ನಿರಾಕರಿಸಿದ್ದು. ರಾಜಕೀಯ ಅಥವಾ ಆರ್ಥಿಕ ಹಕ್ಕುಗಳ ನಿರಾಕರಣವೇ ಅಸ್ಪೃಶ್ಯರ ಸಮಸ್ಯೆಯಾಗಿದ್ದಲ್ಲಿ ಅದನ್ನು ಕಾನೂನು ಮತ್ತು ರಾಜ್ಯಾಂಗದ ಕ್ರಮಗಳಿಂದ ಪರಿಹರಿಸಬಹುದಿತ್ತು. ಇಲ್ಲಿ, ರಾಜಕೀಯ – ಆರ್ಥಿಕ ಹಕ್ಕುಗಳ ನಿರಾಕರಣೆಗೆ ಮೂಲವಾಗಿರುವುದು ಹಿಂದೂಗಳ ಸಾಮಾಜಿಕ ಮನಸ್ಥಿತಿ. ಅಸ್ಪೃಶ್ಯರ ಸಮಸ್ಯೆ ಹಿಂದೂಗಳ ಸಾಮಾಜಿಕ ನಡವಳಿಕೆಯಿಂದ ನೇರ ಉದ್ಭವಿಸಿರುವಂಥದು. ಅಸ್ಪೃಶ್ಯತೆ

ನಿರ್ನಾಮಗೊಳ್ಳುವುದು ಹಿಂದೂಗಳು ತಮ್ಮ ಮನಸ್ಥಿತಿಯನ್ನು ಬದಲಿಸಿಕೊಂಡಾಗ ಮಾತ್ರವೇ. ಅಂದರೆ, ಹಿಂದೂಗಳು ತಮ್ಮ ರೂಢಿಯ ವ್ಯವಸ್ಥೆಗಳನ್ನು ಬಿಡುವಂತೆ ಮಾಡುವುದು ಹೇಗೆಂಬುದು ಸಮಸ್ಯೆ. ಇಡೀ ಒಂದು ರಾಷ್ಟ್ರ ತನ್ನ ರೂಢಿಯ ಜೀವನಕ್ರಮವನ್ನು ಬಿಡುವಂತೆ ಮಾಡುವುದು ಸಣ್ಣ ಸಂಗತಿಯೇನಲ್ಲ. ಅದಲ್ಲದೆ, ಹಿಂದೂಗಳಿಗೆ ರೂಢಿಯಾಗಿ ಬಂದಿರುವ ಜೀವನ ಕ್ರಮ ಅವರ ಧರ್ಮಕ್ಕೆ ಒಪ್ಪಿಗೆಯಾಗಿರುವಂಥದು, ಧರ್ಮ ಸಮ್ಮತವಾದದ್ದು, ಹಾಗಾಗಿ ಪವಿತ್ರವಾದದ್ದು. ಹಾಗೆಂದು ಅವರು ನಂಬುತ್ತಾರೆ. ಅವರ ಜೀವನ ರೂಢಿಯನ್ನು ಬದಲಿಸುವುದೆಂದರೆ ಅದರ ಅರ್ಥ ಬಹುಮಟ್ಟಿಗೆ ಅವರ ಧರ್ಮವನ್ನು ಬದಲಿಸುವುದು ಎಂದೇ ಆಗುತ್ತದೆ.

ಇದು ಹೇಗೆ ಸಾಧ್ಯ? ಅಸ್ಪೃಶ್ಯರಿಗೆ ಯಾವುದು ದುರಂತವಾಗಿದೆಯೋ ಅದು ಹಿಂದೂಗಳಿಗೆ ಪಾತಕವಾಗಿರುವಂಥದು ಎಂಬ ಅರಿವಾದಾಗ ಮಾತ್ರ ಸಾಧ್ಯವಾದೀತು. ಹಿಂದೂಗಳ ಧಾರ್ಮಿಕ ಮನೋಭೂಮಿಕೆಯಲ್ಲಿ ಈ ಕ್ರಾಂತಿಯುಂಟಾದೀತೆಂದು ಅಸ್ಪೃಶ್ಯರು ಎಷ್ಟು ದೀರ್ಘಕಾಲ ಕಾಯುತ್ತ ಕೂರಬೇಕು? ಭವಿಷ್ಯ ಹೇಳುವ ತಾಕತ್ತು ಉಳ್ಳವರು ಇದಕ್ಕೆ ಉತ್ತರ ಹೇಳಲಿ. ಸದ್ಯಕ್ಕಂತೂ ಅವರ ಬದುಕಿನ ವಸ್ತುಸ್ಥಿತಿಯನ್ನು ವಿಶದಗೊಳಿಸಿ ಅವರು ಮತ್ತು ಅವರ ಸಹಚರರು ಎದುರಿಸಬೇಕಾದ ಸಮಸ್ಯೆಗಳೇನೆಂಬುದನ್ನು ಸಾದರಪಡಿಸಬೇಕಾದದ್ದು ಅಗತ್ಯವಾಗಿದೆ.

* * * *

## ಅಧ್ಯಾಯ ೧೬

# ಹಿಂದೂಗಳು ನಿರ್ಮಿಸಿರುವ ಸೌಧ

೧

ಹಿಂದೂಗಳು ನಿರ್ಮಿಸಿಕೊಂಡ ಸಾಮಾಜಿಕ ಸಂಘಟನೆಯಲ್ಲಿ ವಿಶೇಷವಾದದ್ದು ಏನಾದರೂ ಇದೆಯೇ? ಸರಳ ಮತ್ತು ನಿಷ್ಕಪಟ ಹಿಂದೂವನ್ನು ಕೇಳಿದರೆ ತನ್ನ ಹಿಂದೂ ಸಮಾಜದಲ್ಲಿ ಯಾವುದೇ ಅಸ್ವಾಭಾವಿಕ ಮತ್ತು ಅಸಹಜ ಅಂಶಗಳಿಲ್ಲವೆಂದು ಆತನು ಹೇಳುತ್ತಾನೆ. ಅವನಿಗೆ ಹಿಂದೂ ಸಮಾಜದ ವ್ಯವಸ್ಥೆಯ ಕೂಲಂಕಷ ಪರಿಶೀಲನೆ ವಿದ್ವಾಂಸರಿಂದ ನಡೆದ ಬಗೆಗೆ ತಿಳಿವಳಿಕೆ ಇರುವುದಿಲ್ಲ. ಇದು ತೀರ ಸಹಜವಾದ ವಿಷಯವೇ. ತಾವೇ ನಿರ್ಮಿಸಿಕೊಂಡ ಪ್ರಪಂಚದಲ್ಲಿ ಜೀವಿಸುವವರಿಗೆ ತಮ್ಮ ಬಾಳಿನ ರೀತಿನೀತಿಗಳ ವೈಪರೀತ್ಯದ ಅರಿವಿರುವುದಿಲ್ಲ. ಪೀಳಿಗೆಗಳುದ್ದಕ್ಕೂ ತಮ್ಮನ್ನು ತಾವು ವಿಮರ್ಶಿಸದೇ ಹೆಸರಿಸಿಕೊಳ್ಳದೇ ಇದ್ದುದೂ ಉಂಟು. ಆದರೆ ಬಾಹ್ಯ ಜಗತ್ತಿನವರಿಗೆ – ವಿಶೇಷತಃ ಹಿಂದೂವಲ್ಲದವರಿಗೆ ಹಿಂದೂ ಸಮಾಜದ ಸಂಘಟನೆಯ ಬಗೆಗೆ ಇರುವ ಅಂಶಗಳು ಸ್ವಾಭಾವಿಕ ಮತ್ತು ಸಹಜವೆಂದು ಅನಿಸುತ್ತವೆಯೇ?

ಚಂದ್ರಗುಪ್ತ ಮೌರ್ಯನ ರಾಜಾಸ್ಥಾನಕ್ಕೆ ಕ್ರಿ. ಪೂ. ೩೦೫ರ ಸುಮಾರಿಗೆ ಭಾರತಕ್ಕೆ ಆಗಮಿಸಿದ ಗ್ರೀಕ್ ಅರಸ ಸೆಲಿಕೋಸ್ ನಿಕೇಟೋರಸನ ರಾಯಭಾರಿ ಮೆಗಾಸ್ತನೀಸ್ ಹಿಂದೂ ಸಮಾಜದ ವ್ಯವಸ್ಥೆಯು ವಿಚಿತ್ರವಾದುದು ಎಂದು ಅಭಿಪ್ರಾಯಪಡುತ್ತಾನೆ. ಇಲ್ಲದಿದ್ದರೆ ಇಷ್ಟೊಂದು ಮುತುವರ್ಜಿ ವಹಿಸಿ ಈ ಸಮಾಜದ ಬಗೆಗಿನ ವಿಚಿತ್ರ ಅಂಶಗಳನ್ನು ಆತನು ಈ ರೀತಿ ದಾಖಲಿಸುತ್ತಿರಲಿಲ್ಲ :

"ಭಾರತದ ಜನಸಂಖ್ಯೆಯನ್ನು ಏಳು ವಿಭಾಗಗಳಾಗಿ ವಿಂಗಡಿಸಲಾಗಿದೆ. ಸಂಖ್ಯೆಯಿಂದ ತೀರ ಕಡಿಮೆಯಾದ ವರ್ಗದ ತತ್ತ್ವಜ್ಞಾನಿಗಳು ಪ್ರಥಮ ದರ್ಜೆಯಲ್ಲಿರುವವರು. ಧಾರ್ಮಿಕ ವಿಧಿ ಆಚರಣೆಗಳಲ್ಲಿ ಮತ್ತು ಆಹುತಿ ವಗೈರೆ ಕೊಡುವಾಗ ಇಂಥವರ ಸೇವೆಯನ್ನು ಖಾಸಗಿಯಾಗಿ ಪಡೆಯಬಹುದು. ಇನ್ನು 'ಮಹಾನ್ ಧರ್ಮ ವ್ಯವಸ್ಥಾಪಕರ ಸಭೆ' ಎಂದು ಕರೆಯಲ್ಪಡುವ ಸಮಾರಂಭ ಹೊಸ ವರ್ಷದ ಪ್ರಾರಂಭದಲ್ಲಿ ನಡೆಯುತ್ತದೆ. ಅಂದು ಎಲ್ಲ ತಾತ್ವಿಕ ವಿದ್ವಾಂಸರು ಅರಮನೆಯೆದುರು ಸೇರುತ್ತಾರೆ. ಯಾವುದೇ ವಿದ್ವಾಂಸನು ಪ್ರಯೋಜನಕಾರಿಯಾದ ಸಲಹೆಯನ್ನು ಬರೆದು ಸಿದ್ಧಪಡಿಸಿದ್ದರೆ ಅದನ್ನು ಸಾರ್ವಜನಿಕವಾಗಿ ಪ್ರಸ್ತುತ ಪಡಿಸಬಹುದು. ಆ ಸಲಹೆ ಬೆಳೆಗಳ ಸುಧಾರಣೆ, ಪ್ರಾಣಿಗಳ ಅಥವಾ ಸಾರ್ವಜನಿಕರ ಹಿತರಕ್ಷಣೆಗೆ ಸಂಬಂಧಪಟ್ಟಿದ್ದಾಗಿರಬಹುದು. ಒಂದು ಪಕ್ಷ ಹೀಗೆ ಪ್ರಸ್ತುತಪಡಿಸಿದ ಮಾಹಿತಿ ಮೂರು ಸಲ ಸತತವಾಗಿ 'ಸುಳ್ಳು' ಎಂದು ಸಿದ್ಧವಾದಲ್ಲಿ ಕಾನೂನಿನಂತೆ ತನ್ನ ಉಳಿದ ಜೀವನಪೂರ್ತಿ ಮೌನವನ್ನು ಆಚರಿಸಲೇಬೇಕಾದ ಶಿಕ್ಷೆ ಅವನಿಗೆ ಕೊಡಲಾಗುವುದು. ಅದರಂತೆ ಯೋಗ್ಯ ಸಲಹೆ ಕೊಟ್ಟವರು ಮಾತ್ರ ಸರ್ಕಾರಕ್ಕೆ ಯಾವುದೇ ಕರವನ್ನಾಗಲೀ, ಕಾಣಿಕೆಯನ್ನಾಗಲೀ ಸಂದಾಯ ಮಾಡಬೇಕಿಲ್ಲ."

"ಜನಸಂಖ್ಯೆಯ ಹೆಚ್ಚಿನ ಭಾಗವಾದ ಎರಡನೇ ಜಾತಿಯೆಂದರೆ ಬೇಸಾಯಗಾರರದು. ಇವರು ಸಭ್ಯರು ಮತ್ತು ಮೃದುಸ್ವಭಾವದವರಾಗಿದ್ದಾರೆ. ದೇಶದ ಸೇನಾಪಡೆಯ ಸೇವೆಯಿಂದ ವಿನಾಯಿತಿ ಪಡೆದಿರುವ ಇವರು ನಿರ್ಭೀತಿಯಿಂದ ಕೃಷಿಯನ್ನು ಸಾಗಿಸುತ್ತಾರೆ. ಗಲಭೆ–ಗೊಂದಲಗಳಲ್ಲಿ ಭಾಗವಹಿಸುವುದಕ್ಕಾಗಲಿ

ಅಥವಾ ಇನ್ನಾವುದಕ್ಕೇ ಆಗಲಿ ಅವರೆಂದೂ ಪಟ್ಟಣಗಳಿಗೆ ಹೋಗುವುದಿಲ್ಲ. ಹೀಗಾಗಿ ಒಂದೇ ಕಾಲದಲ್ಲಿ, ದೇಶದ ಒಂದೇ ಭಾಗದಲ್ಲಿ ಎರಡು ಬಗೆಯ ದೃಶ್ಯಗಳನ್ನು ನೋಡಬಹುದು : ತಮ್ಮ ಪ್ರಾಣವನ್ನೆ ಪಣಕ್ಕಿಟ್ಟು ಹೋರಾಡುವ ಸೈನಿಕರು ಒಂದು ಕಡೆ; ತಮ್ಮನ್ನು ಈ ಸೈನಿಕರು ರಕ್ಷಿಸುವರೆಂಬ ನಂಬಿಕೆಯಲ್ಲಿ, ಭದ್ರತೆಯಲ್ಲಿ ಉಳುವ, ಬಿತ್ತುವ ಕಾರ್ಯದಲ್ಲಿ ಮಗ್ನರಾದ ರೈತರು ಇನ್ನೊಂದು ಕಡೆ. ಎಲ್ಲ ಭೂಮಿಯು ಅರಸನ ಒಡೆತನದ್ದಾಗಿದ್ದು ಕೃಷಿಕರು ಅದರ ಉತ್ಪನ್ನದ ಕಾಲುಭಾಗವನ್ನು ಪಡೆಯುವುದಕ್ಕೆ ಬಾಧ್ಯರಾಗುತ್ತಾರೆ."

"ಮೂರನೆಯದಾಗಿ ಗೊಲ್ಲರು ಮತ್ತು ಬೇಡರು. ಇವರಿಗೆ ಮಾತ್ರ ಬೇಟೆಯ ಹಕ್ಕು ಇದ್ದು ಪ್ರಾಣಿಗಳ ಕ್ರಯವಿಕ್ರಯ, ಬಾಡಿಗೆ ಕೊಡುವುದು ಇತ್ಯಾದಿಯಾಗಿ ಮಾಡುತ್ತಾರೆ. ಕಾಡು ಮೃಗಗಳನ್ನು, ಪ್ರಾಣಿಗಳನ್ನು, ಹೊಲಗಳಲ್ಲಿ ಬಿತ್ತಿರುವ ಬೀಜಗಳನ್ನು ನುಂಗುವ ಹುಂಜ ಮುಂತಾದವುಗಳಿಂದ ಕೃಷಿಭೂಮಿಯನ್ನು ಸುರಕ್ಷಿತವಾಗಿಡುವ ಈ ಜನರಿಗೆ ಅರಸನಿಂದ ಧಾನ್ಯವನ್ನು ಕೊಡಿಸಲಾಗುತ್ತದೆ. ಇವರು ಅಲೆಮಾರೀ ಜೀವನಕ್ರಮ ಹೊಂದಿದ್ದು ಡೇರೆಗಳಲ್ಲಿ ಜೀವಿಸುವರು."

"ಇವರ ನಂತರ ಬರುವುದು ನಾಲ್ಕನೆಯ ವರ್ಗ. ವ್ಯಾಪಾರ–ವ್ಯವಹಾರ ಮತ್ತು ಶ್ರಮಜೀವಿಗಳದು. ಇವರಲ್ಲಿ ಕೆಲವರು ಸರ್ಕಾರಕ್ಕೆ ನಿಗದಿಯಾದ ಕಾಣಿಕೆ ಮತ್ತು ಸೇವೆಯನ್ನು ಸಲ್ಲಿಸುತ್ತಾರೆ. ಆದರೆ ಆಯುಧ ತಯಾರಕರು, ಹಡಗು ಕಟ್ಟುವವರು, ಅರಸನಿಗಾಗಿ ಮಾತ್ರ ದುಡಿಯುವವರು ಕೂಲಿ ಮತ್ತು ಅನ್ನದಾನ ಸಾಮಗ್ರಿಗಳನ್ನು ಅವನಿಂದ ಪಡೆಯುತ್ತಾರೆ. ಸೇನಾಧಿಪತಿಯು ತನ್ನ ಸೈನಿಕರಿಗೆ ಆಯುಧಗಳನ್ನು ಒದಗಿಸಿದರೆ ನೌಕಾದಳದ ಮುಖ್ಯಸ್ಥನು ಹಡಗುಗಳನ್ನು ಪ್ರಯಾಣಿಕ ಮತ್ತು ಸರಕು ಸಾರಿಗೆಗಾಗಿ ಅನುವು ಮಾಡಿಕೊಡುತ್ತಾನೆ."

"ಐದನೆಯ ವರ್ಗ ಸೈನಿಕರದ್ದು. ಯುದ್ಧವಿರದ ಕಾಲದಲ್ಲಿ ಮದ್ಯ ಸೇವಿಸುತ್ತ, ಕಾಲಹರಣ ಮಾಡುವ ಇವರ ಖರ್ಚು–ವೆಚ್ಚ ಅರಸನ ಬೊಕ್ಕಸದಿಂದ. ಹೀಗಾಗಿ ಏನೂ ಸ್ವಂತದ್ದನ್ನು ಹೊಂದದ ಇವರು ಸದಾ ರಣರಂಗಕ್ಕೆ ಸಿದ್ಧರಾಗಿರುತ್ತಾರೆ."

"ಮೇಲು – ಉಸ್ತುವಾರಿದಾರರದು ಆರನೆಯ ವರ್ಗ. ಸುತ್ತಲೆಲ್ಲ ನಡೆದುದನ್ನು ರಹಸ್ಯವಾಗಿ ಅರಸನಿಗೆ ತಿಳಿಸುವುದು ಇವರ ಕೆಲಸ. ಕೆಲವರು ನಗರವನ್ನು ನೋಡಿಕೊಂಡರೆ ಇನ್ನು ಕೆಲವರು ಸೈನ್ಯದ ಮೇಲ್ವಿಚಾರಣೆ ಮಾಡುವವರು. ವೇಶ್ಯೆಯರನ್ನು ನೇಮಿಸಿಕೊಂಡು ನಗರದಲ್ಲಿ ಮತ್ತು ದಂಡು ಪ್ರದೇಶಗಳಲ್ಲಿಯ ವಿದ್ಯಮಾನಗಳನ್ನು ಅರಿಯುವರು."

"ಏಳನೆಯ ವರ್ಗದಲ್ಲಿ ಅರಸನ ಸಭಾಸದಸ್ಯರು ಮತ್ತು ಲೆಕ್ಕ ತಪಾಸಿಗರು, ಮೌಲ್ಯ ಮಾಪಕರು ಬರುತ್ತಾರೆ. ನ್ಯಾಯಮಂಡಲಿ ಮತ್ತು ಸಾರ್ವಜನಿಕ ಆಡಳಿತ ವ್ಯವಹಾರಗಳಿಗೆ ಸಂಬಂಧಿಸಿದಂತೆ ಎಲ್ಲ ಉನ್ನತ ಹುದ್ದೆಗಳು ಇವರಿಗಾಗಿವೆ. ತಮ್ಮ ಜಾತಿಯನ್ನು ತೊರೆದು ಬೇರೆ ಜಾತಿಯಲ್ಲಿ ಮದುವೆಯಾಗುವಂತಿಲ್ಲ. ವೃತ್ತಿಯನ್ನು, ವ್ಯಾಪಾರವನ್ನು ಅದಲುಬದಲು ಮಾಡುವಂತಿಲ್ಲ. ತತ್ವಜ್ಞಾನಿಗಳಿಗೆ ಮಾತ್ರ ಈ ನಿಯಮ ಅನ್ವಯಿಸುವುದಿಲ್ಲ. ಅವರ ಗುಣವಿಶೇಷಗಳಿಗೆ ಸಿಗುವ ಗೌರವವಿದು."

ಸುಮಾರು ಕ್ರಿ.ಶ. ೧೦೩೦ರ ಸುಮಾರಿಗೆ ಭಾರತವನ್ನು ಸಂದರ್ಶಿಸಿದ ಅಲ್‌ಬೆರೂನಿ ಹಿಂದೂ ಸಮಾಜದ ವಿಲಕ್ಷಣತೆಯನ್ನು ತನ್ನ ಪ್ರವಾಸಕಥನದಲ್ಲಿ ಚಿತ್ರಿಸಿದ್ದಾನೆ. ಅವನು ಇದನ್ನು ಗಮನಿಸದೇ ಹೋಗಿಲ್ಲ. ಅವನು ಬರೆಯುತ್ತಾನೆ :

"ಜಾತಿಯನ್ನು ವರ್ಣ ಅಂದರೆ ಬಣ್ಣಗಳ ಮೇಲಿಂದ ಹಿಂದೂಗಳು ಗುರುತಿಸುತ್ತಾರೆ. ವಂಶಾವಳಿಯ ದೃಷ್ಟಿಯಿಂದ ಅವರು ಜಾತಕವೆಂದು ಕರೆಯುತ್ತಾರೆ. ಕೇವಲ ಈ ರೀತಿಯ ನಾಲ್ಕು ಜಾತಿಗಳು ಮೊದಲಿನಿಂದಲೂ ಇವೆ.

I. ಬ್ರಾಹ್ಮಣರು ಉಚ್ಚ ಜಾತಿಯವರು. ಅವರು ಬ್ರಹ್ಮನ ಶಿರದಿಂದ ಸೃಷ್ಟಿಯಾದವರು ಎಂದು ಹಿಂದೂ ಗ್ರಂಥಗಳಲ್ಲಿ ಹೇಳಲಾಗುತ್ತದೆ. ಸೃಷ್ಟಿಯ ಇನ್ನೊಂದು ಹೆಸರು ಬ್ರಾಹ್ಮಣರು. ತಲೆ, ಪ್ರಾಣಿಶರೀರದ ಅತೀ ಮುಖ್ಯ ಭಾಗವು. ಬ್ರಾಹ್ಮಣರು ಒಟ್ಟು ಸೃಷ್ಟಿಕ್ರಿಯೆಯ ಜಾತಿ ವಿಧಿಯ ಆಯ್ಕೆ. ಆದ್ದರಿಂದ ಹಿಂದೂಗಳು ಮಾನವರಲ್ಲಿಯೇ ತಮ್ಮನ್ನು ಶ್ರೇಷ್ಠರು ಎಂದು ತಿಳಿದುಕೊಳ್ಳುತ್ತಾರೆ.

II. ಆನಂತರದವರು ಕ್ಷತ್ರಿಯರು, ಬ್ರಹ್ಮನ ಭುಜ ಮತ್ತು ಕೈಗಳಿಂದ ಸೃಷ್ಟಿಯಾದವರೆಂದು ಹೇಳಲಾಗುತ್ತದೆ. ಅವರ ದರ್ಜೆ ಬ್ರಾಹ್ಮಣರಿಗಿಂತ ಬಹಳ ಕಡಿಮೆಯದಲ್ಲ.

III. ವೈಶ್ಯರು ಬ್ರಹ್ಮನ ತೊಡೆಯಿಂದ ಸೃಷ್ಟಿಯಾದವರು.

IV. ವೈಶ್ಯರ ನಂತರ ಶೂದ್ರರು. ಇವರು ಬ್ರಹ್ಮನ ಕಾಲಿನಿಂದ ಸೃಷ್ಟಿಯಾದವರು.

ವೈಶ್ಯರು ಮತ್ತು ಶೂದ್ರರ ವರ್ಗಗಳಲ್ಲಿ ಅಷ್ಟೊಂದು ಹೆಚ್ಚಿನ ಅಂತರವಿಲ್ಲ. ವರ್ಗಗಳಲ್ಲಿ ಭಿನ್ನತೆಯಿದ್ದರೂ ಒಂದೇ ಪಟ್ಟಣ ಅಥವಾ ಹಳ್ಳಿಯಲ್ಲಿ ಕೂಡಿಯೇ ವಾಸಿಸುತ್ತಾರೆ.

ಅಂತ್ಯಜರೆಂದು ಕರೆಯಲ್ಪಡುವವರು ಕೊನೆಯವರು. ಯಾವ ಜಾತಿಗೂ ಸೇರದ ಇವರು ಎಲ್ಲ ತರಹದ ಸೇವೆ ಮಾಡಿಕೊಂಡು ಜೀವಿಸುತ್ತಾರೆ. ಯಾವುದೋ ಒಂದು ವೃತ್ತಿ ಅಥವಾ ಕೈಕಸಬಿಗೆ ಸೇರಿದವರು ಇವರು. ಎಲ್ಲ ತರಹದವರು ಸೇರಿ ಸುಮಾರು ಎಂಟು ವರ್ಗದ ಜನರು ಪರಸ್ಪರರಲ್ಲಿ ಸ್ವಚ್ಛಂದವಾಗಿ ಮದುವೆ ಮಾಡಿಕೊಳ್ಳುವರು. ಆದರೆ ಅಗಸ, ಚರ್ಮಕಾರ, ನೇಕಾರರಿಗೆ ಮಾತ್ರ ಇದು ಸಾಧ್ಯವಿರಲಿಲ್ಲ. ಬೇರೆ ವರ್ಗದ ಜನ ಇವರ ಜೊತೆ ಯಾವುದೇ ರೀತಿ ಸಂಪರ್ಕ ಇಟ್ಟುಕೊಳ್ಳುವ ಕೃಪೆ ತೋರುತ್ತಿರಲಿಲ್ಲ. ಎಂಟು ವೃತ್ತಿಸಂಘಗಳು ಯಾವುವೆಂದರೆ ಅಗಸ, ಚರ್ಮಕಾರ, ಗಾರುಡಿಗ, ಬುಟ್ಟಿ ಹೆಣೆಯುವ ಮೇದಾರರು, ನಾವಿಕರು, ಮೀನುಗಾರರು, ಬೇಡರು, ನೇಕಾರರು, ಮೇಲಿನ ನಾಲ್ಕು ವರ್ಣದ ಜನರು ಇವರೊಂದಿಗೆ ಒಂದು ಸ್ಥಳದಲ್ಲಿ ವಾಸಿಸುತ್ತಿರಲಿಲ್ಲ. ಹಳ್ಳಿ ಅಥವಾ ಪಟ್ಟಣದ ಹೊರವಲಯದಲ್ಲಿ ಜೀವಿಸುತ್ತಿದ್ದರು.

ಡೋಮರು, ದೊಂಬರು, ಹದಿ, ಕಂಡಾಲಾ ಮತ್ತು ಬಧಾತೌ (ಸಿಖ್) ಮುಂತಾದವರನ್ನು ಯಾವ ಜಾತಿ ಅಥವಾ ವರ್ಗಗಳಲ್ಲಿ ಗುರುತಿಸುತ್ತಿರಲಿಲ್ಲ. ಹಳ್ಳಿಗಳಲ್ಲಿ ಅವರನ್ನು ಹಳ್ಳಿಗಳನ್ನು ಸ್ವಚ್ಛಗೊಳಿಸುವ ಮತ್ತಿತರ ಮಲಿನ ಕೆಲಸಗಳಿಗೆ ಬಳಸುತ್ತಿದ್ದರು. ಅವರೆಲ್ಲ ಒಂದು ಪ್ರತ್ಯೇಕವಾದ ವರ್ಗವಾಗಿ ಕೇವಲ ಅವರ ಕೆಲಸದಿಂದ ಗುರುತಿಸಲ್ಪಡುತ್ತಿದ್ದರು. ಹಾಗೆ ನೋಡಿದಲ್ಲಿ ಅವರನ್ನು ಶೂದ್ರ ತಂದೆ ಮತ್ತು ಬ್ರಾಹ್ಮಣ ತಾಯಿಯಿಂದ ಹುಟ್ಟಿದ ಅನ್ಯಾಯದ ಜಾರಜ ಮಕ್ಕಳೆಂದು ತಿಳಿಯಲಾಗುತ್ತಿತ್ತು. ವ್ಯಭಿಚಾರಕ್ಕೆ ಹುಟ್ಟಿದುದರಿಂದ ಅವರನ್ನು ಜಾತಿ ಬಾಹಿರರು ಎಂದು ಮತ್ತು ಕೆಳದರ್ಜೆಯವರು ಎಂದು ಪರಿಗಣಿಸಲಾಗುತ್ತಿತ್ತು.

ಚಾತುರ್ವರ್ಣದ ಪ್ರತಿ ವ್ಯಕ್ತಿಗೆ ಹಿಂದೂಗಳು ಅವರವರ ವೃತ್ತಿ ಮತ್ತು ಜೀವನ ವಿಧಾನಗಳನ್ನು ಆಧರಿಸಿ ಗುಣವಿಶೇಷ ಹೆಸರುಗಳನ್ನು ಕೊಡುತ್ತಿದ್ದರು. ಉದಾ : ಮನೆಯಲ್ಲಿಯೇ ಇದ್ದುಕೊಂಡು ಕೆಲಸ ಮಾಡುವ ಬ್ರಾಹ್ಮಣನಿಗೆ ಅವನ ಹೆಸರಿನಿಂದ ಕರೆದು ಒಂದು ಅಗ್ನಿಕಾರ್ಯಕ್ಕೆ ಸಂಬಂಧಿಸಿದಂತೆ ಅವನ ಸೇವೆ ಇದ್ದರೆ ಇಷ್ಟಿನ್ ಎಂದೂ ಮೂರು ಅಗ್ನಿಕಾರ್ಯಗಳಿಗೆ ಸಂಬಂಧಿಸಿದ ಧರ್ಮಕಾರ್ಯಗಳಿಗೆ ಅಗ್ನಿಹೋತ್ರಿ ಎಂದೂ ಕರೆಯಲಾಗುತ್ತಿತ್ತು. ಅಗ್ನಿಗೆ ಆಹುತಿ ಕೊಡುವ ಅಧಿಕಾರವಿದ್ದವನು ದೀಕ್ಷಿತನಾಗುತ್ತಿದ್ದನು. ಇದೇ ತರಹದ ವ್ಯವಸ್ಥೆ ಉಳಿದ ಜಾತಿಗಳಲ್ಲಿ ಅನ್ವಯವಾಗುತ್ತಿತ್ತು. ಹದಿ (Hadi) ಜಾತಿಯ ಜನರನ್ನು ಮಾತ್ರ ಮಲಿನಕಾರ್ಯದ ಜೊತೆಗೆ ಗುರುತಿಸಲಾಗುತ್ತಿತ್ತು. ಡೋಮರು ಕೊಳಲೂದಿ ಹಾಡುವ ವರ್ಗದವರು. ಇದಕ್ಕಿಂತ ಕೆಳಗಿನ ಜಾತಿಯವರೆಂದರೆ ಕಟುಕರದು. ಪ್ರಾಣಿವಧೆ, ಅಪರಾಧಿವಧೆ ಇತ್ಯಾದಿ ಅವರ ಕಸುಬು. ಅತಿ ಕೀಳಾದ ಜನರೆಂದರೆ 'ಬಧಾತೌ'. ಅವರು ಸತ್ತನಾಯಿ, ಪಶುಗಳು, ಪ್ರಾಣಿಗಳ ಮಾಂಸವನ್ನು

ಭಕ್ಷಿಸುತ್ತಿದ್ದರು. ಪ್ರತಿ ಜಾತಿಯವರೂ ಭೋಜನದಂತಹ ವೇಳೆಯಲ್ಲಿಯೂ ತಮ್ಮದೇ ಆದ ಗುಂಪನ್ನು ರೂಪಿಸಿಕೊಳ್ಳಬೇಕು. ಒಂದು ಗುಂಪಿನ ಜನರಿಗೆ ಇನ್ನೊಂದರಲ್ಲಿ ಪ್ರವೇಶವಿರಲಿಲ್ಲ. ಬ್ರಾಹ್ಮಣರಲ್ಲಿಯೂ ಒಬ್ಬರ ಬಳಿ ಇನ್ನೊಬ್ಬರು ಕುಳಿತಾಗ ತಮ್ಮ ವಿಶಿಷ್ಟ ಬ್ರಾಹ್ಮಣ ವರ್ಗಕ್ಕೆ ಸೇರಿರದ ವ್ಯಕ್ತಿಯ ಜೊತೆಗೆ ಕೂಡಬೇಕಾದಾಗ ಮಧ್ಯದಲ್ಲಿ ಹಲಗೆಯನ್ನು ಇಟ್ಟು ಅಥವಾ ಬಟ್ಟೆಯ ತುಂಡನ್ನು ಹಾಸಿಯೋ ಇಲ್ಲವೇ ಮತ್ತಾವುದಾದರೂ ವಿಧದಿಂದ ಬೇರ್ಪಡಿಸಿಕೊಂಡು ಕುಳಿತುಕೊಳ್ಳುತ್ತಿದ್ದರು. ಮಿಕ್ಕಿದ ಅಡಿಗೆ ನಿಷಿದ್ಧವಾದುದರಿಂದ ಪ್ರತಿಯೊಬ್ಬರೂ ತಮ್ಮದೇ ಆದ ಪ್ರತ್ಯೇಕ ಅಡಿಗೆಯನ್ನು ಮಾಡಿಕೊಳ್ಳುತ್ತಿದ್ದನು. ಒಂದೇ ತಟ್ಟೆಯಲ್ಲಿ ಉಣ್ಣುವುದು ಎಂದರೆ ಎಂಜಲು ಎಂದು ತಿಳಿಯಲಾಗುತ್ತಿದ್ದುದರಿಂದ ಪ್ರತಿಸಲ ಪ್ರತಿ ವ್ಯಕ್ತಿ ಬೇರೆ ಆಹಾರ ತಯಾರಿಸಿ ಉಣ್ಣುತ್ತಿದ್ದರು.'' ಅಲ್‌ಬೆರೂನಿ ಇಷ್ಟು ಮಾತ್ರ ಹೇಳಿ ತೃಪ್ತನಾಗಲಿಲ್ಲ. ಅವನು ಹಿಂದೂ ಸಾಮಾಜಿಕ ಸಂಘಟನೆಯ ಬಗೆಗೆ ಮುಂದುವರಿಯುತ್ತ ಹೀಗೆ ಬರೆಯುತ್ತಾನೆ :

``ಹಿಂದೂಗಳಲ್ಲಿ ಈ ಮೇಲಿನ ವ್ಯವಸ್ಥೆ ಹೆಚ್ಚಾಗಿ ಪ್ರಚಲಿತವಾಗಿದೆ. ಮುಸಲ್ಮಾನರಾದ ನಮ್ಮದೇ ಬೇರೆ ವಿಧ. ನಾವು ಧರ್ಮ ನಿಷ್ಠೆಯ ವಿಚಾರವೊಂದನ್ನು ಬಿಟ್ಟು ಎಲ್ಲರನ್ನೂ ಸರಿಸಮಾನರೆಂದು ಬಗೆಯುತ್ತೇವೆ. ಈ ಅಂಶವೇ ಹಿಂದೂ-ಮುಸಲ್ಮಾನರಲ್ಲಿಯ ಪರಸ್ಪರ ತಿಳುವಳಿಕೆಗೆ ದೊಡ್ಡ ಅಡ್ಡಿಯಾಗಿದೆ.'' ದ್ಯರಾಟೆ ಬಾರ್ಬೊಸಾ ಎಂಬ ಪೋರ್ಚುಗೀಸ್ ಅಧಿಕಾರಿಯು ಕ್ರಿ.ಶ. ೧೫೦೦-೧೫೧೭ ರ ವರೆಗೆ ಭಾರತದಲ್ಲಿ ಇದ್ದನು. ಹಿಂದೂ ಸಮಾಜದ ಬಗೆಗೆ ತನ್ನ ಅನಿಸಿಕೆಗಳನ್ನು ಹೀಗೆ ದಾಖಲಿಸಿದ್ದಾನೆ :

``ಗುರ್ಜರಾಟೆಯ ರಾಜ್ಯಸತ್ತೆ ಕಳೆದು ಮೂರರು ಅಧಿಕಾರ ಪಡೆದಾಗ ರೆಸ್‌ಬುಟೋಸ್ ಎಂದು ಅವರು ಕರೆದ ಜನಾಂಗ ಆ ಕಾಲದಲ್ಲಿ ಜಮೀನುದಾರರು ಮತ್ತು ಸರದಾರರಿಂದ ಕೂಡಿದ್ದಿತು. ಇವರು ಆವಶ್ಯಕತೆ ಇದ್ದಾಗ ಯುದ್ಧಗಳಲ್ಲಿ ಭಾಗವಹಿಸುತ್ತಿದ್ದರು. ಕುರಿ ಮಾಂಸ, ಮೀನು ಇತ್ಯಾದಿ ತಿನ್ನುತ್ತಿದ್ದರು. ಗುಡ್ಡಗಾಡಿನಲ್ಲಿ ಇಂತಹ ಹಲವಾರು ಜನರು ಹಳ್ಳಿಗಳಲ್ಲಿ ವಾಸವಾಗಿದ್ದು ಗುರ್ಜರಾಟೆ ಅರಸರ ಪ್ರಭುತ್ವ ಒಪ್ಪದೇ ಅವರ ಜೊತೆಗೆ ಆಗಾಗ ಯುದ್ಧ ಮಾಡುತ್ತಿದ್ದರು. ಅವರು ಉತ್ತಮ ಕುದುರೆ ಸವಾರರು, ಗುರಿಕಾರರು ಆಗಿದ್ದರು. ಚಿಲ್ಲರೆ ಆಯುಧಗಳನ್ನು ಹೊಂದಿದವರಾಗಿದ್ದರಿಂದ ಇಂಥ ನಿರಂಕುಶರಾದ ಮೂರರ ವಿರುದ್ಧ ಹೆಚ್ಚಿನದೇನೂ ಮಾಡುವುದಾಗುತ್ತಿರಲಿಲ್ಲ.

``ಈ ರಾಜ್ಯದಲ್ಲಿ ಇನ್ನೊಂದು ಪ್ರಕಾರದ ಬನಿಯಾರೆಂಬ ವಿಧರ್ಮಿಗಳಿದ್ದರು. ಇವರು ಪರಿಚಿತರು. ಇವರ ವೃತ್ತಿ ವ್ಯಾಪಾರ. ಮೂರರೊಂದಿಗೆ ಇವರ ವ್ಯವಹಾರವಿದೆ. ಇವರು ಮಾಂಸಾಹಾರಿಗಳಲ್ಲ. ಅಹಿಂಸೆಯಲ್ಲಿ ಇವರಿಗೆ ಪರಮ ವಿಶ್ವಾಸ. ಈ ವಿಶ್ವಾಸ ಅತ್ಯಾಶ್ಚರ್ಯಕರವಾಗಿದೆ. ಮೂರರು ಕೊಲ್ಲಲು ಸಿದ್ಧವಿರುವ ಪ್ರಾಣಿ, ಪಕ್ಷಿ, ಕೀಟಗಳನ್ನು ಒಪ್ಪಿತ ಹಣ ಕೊಟ್ಟು ಬಿಡಿಸಿಕೊಂಡು ಅವುಗಳ ಪಾಡಿಗೆ ಸ್ವತಂತ್ರವಾಗಿ ಬಿಡುವ ಜನ ಇವರು. ರಾಜಾಜ್ಞೆಯಿಂದ ಮರಣದಂಡನೆಗೆ ಗುರಿಯಾದ ಅಪರಾಧಿಗಳನ್ನು ಸಹ ಖರೀದಿಸಿ ಅವರಿಗೆ ಬಿಡುಗಡೆಯನ್ನು ದಯಪಾಲಿಸುತ್ತಿದ್ದರು. ಮೂರ್ ಭಿಕ್ಷುಕರು ದೈಹಿಕ ಪೀಡನೆ ಮಾಡಿಕೊಂಡು ಅದನ್ನು ತೋರಿಸುತ್ತ ಭಿಕ್ಷೆ ಕೇಳಿದಾಗ ದೊಡ್ಡ ಮೊತ್ತದ ಭಿಕ್ಷೆ ಕೊಟ್ಟು ಶಾಂತಿಯಿಂದ ಕಳುಹಿಸುತ್ತಿದ್ದರು. ಆಯುಧಗಳಿಂದ ದೇಹಕ್ಕೆ ಗಾಯಮಾಡಿಕೊಳ್ಳುತ್ತ ಸ್ವಹಿಂಸೆಗೆ ಗುರಿ ಮಾಡಿಕೊಂಡು ಭಿಕ್ಷೆ ಬೇಡುವ ಇನ್ನೂ ಕೆಲವರಿಗೆ ಅವರು ಹೆಚ್ಚಿನ ಪ್ರಮಾಣದ ಭಿಕ್ಷೆ ನೀಡಿ ಸಾವಿನಿಂದ ತಪ್ಪಿಸುತ್ತಿದ್ದರು. ಇಲಿ, ಹಾವುಗಳನ್ನು ಕೊಲ್ಲುತ್ತೇವೆ ಎಂದು ಕೇಳಿ ಬಂದ ಜನರಿಗೆ ಸಾಕಷ್ಟು ದುಡ್ಡು ಕೊಟ್ಟು ಇಂತಹುದನ್ನು ಮಾಡದಂತೆ ತಡೆಹಿಡಿಯುತ್ತಿದ್ದರು. ಹೀಗಾಗಿ ಮೂರರು ಈ ಜನರನ್ನು ಗೌರವದಿಂದ ಕಾಣುತ್ತಿದ್ದರು !

``ಅಹಿಂಸೆಯಲ್ಲಿ ಇವರ ವಿಶ್ವಾಸ ಎಷ್ಟಿತ್ತೆಂದರೆ ದಾರಿಯಲ್ಲಿ ಇರುವೆ ಸಾಲುಗಳನ್ನು ಕಂಡಾಗ ಭೀತರಾಗಿ

ಅವುಗಳನ್ನು ತುಳಿಯದೇ ಪಕ್ಕದಲ್ಲಿ ನಿಧಾನವಾಗಿ ಸಾಗಿ ಹೋಗುತ್ತಿದ್ದರು. ರಾತ್ರಿಯ ಊಟವನ್ನು ಸೂರ್ಯಾಸ್ತಕ್ಕಿಂತ ಮೊದಲು ಮಾಡುತ್ತಿದ್ದರು. ಸದಾ ಕ್ರಿಮಿಕೀಟಗಳು ಅರಿಯದೆ ಸಾಯಬಹುದೆಂಬ ಕಾಳಜಿಯಿಂದ ಹಗಲಾಗಲಿ–ರಾತ್ರಿಯಾಗಲಿ ದೀಪ ಹಚ್ಚುತ್ತಿರಲಿಲ್ಲ. ಅಷ್ಟಕ್ಕೂ ದೀಪ ಬೇಕಾದಾಗ ಬಟ್ಟೆ ಸುತ್ತಿದ ಅಥವಾ ವಾರ್ನಿಶ್ ಎಣ್ಣೆಯ ಲೇಪದ ಕಂದೀಲುಗಳನ್ನು ಉಪಯೋಗಿಸಿ ಕ್ರಿಮಿ ಕೀಟಗಳು ದೀಪಕ್ಕೆ ತಗಲದಂತೆ ಎಚ್ಚರವಹಿಸುತ್ತ ಅವುಗಳ ಸಾವನ್ನು ತಪ್ಪಿಸುತ್ತಿದ್ದರು. ತಲೆಯಲ್ಲಿ ಹೇನು ಆದರೂ ಅವುಗಳನ್ನು ಕೊಲ್ಲುತ್ತಿರಲಿಲ್ಲ. ಬಹಳ ಕಷ್ಟ ಕೊಟ್ಟಾಗ ಮಾತ್ರ ಋಷಿಯೋಪಾದಿ ಜೀವನ ನಡೆಸುವ ದೈವಭಕ್ತ ಸಾಧುಗಳನ್ನು ಆಮಂತ್ರಿಸುತ್ತಿದ್ದರು. ಅವರು ಈ ಸೀರು ಅಥವಾ ಹೇನುಗಳನ್ನು ತಮ್ಮ ತಲೆಗೆ ಸ್ಥಳಾಂತರಿಸಿ ಬೆಳೆಸುತ್ತಿದ್ದರು. ಇದು ಅವರ ದೇವಕಲ್ಪನೆಯಾಗಿತ್ತು. ಈ ರೀತಿಯಲ್ಲಿ ಸ್ವನಿಯಂತ್ರಣ ಶಕ್ತಿಯಿಂದ ಅಹಿಂಸಾ ಮಾರ್ಗವನ್ನು ಎಚ್ಚರಿಕೆಯಿಂದ ನಿರ್ವಹಿಸುತ್ತಿದ್ದರು. ಇವರ ಇನ್ನೊಂದು ಮುಖವೆಂದರೆ ಇವರು ಬಡ್ಡಿ ವ್ಯಾಪಾರಿಗಳು. ತೂಕ–ಅಳತೆಯಲ್ಲಿ ಸುಳ್ಳು ಸಾಧಿಸುವವರಾಗಿದ್ದರು. ಇವರು ವಿಧರ್ಮಿಗಳಾದ ಕಂದು ಬಣ್ಣದ ಜನರು. ಎತ್ತರದ ಸ್ಫುರದ್ರೂಪಿ ವ್ಯಕ್ತಿತ್ವದ ವರ್ಣಮಯ ವೇಷಧಾರಿಗಳಾದ ಇವರು ಆಹಾರದ ವಿಷಯದಲ್ಲಿ ಮಿತಾಹಾರಿಗಳಾಗಿದ್ದರು. ಹಾಲು, ಬೆಣ್ಣೆ, ಸಕ್ಕರೆ, ಅಕ್ಕಿ ಇತ್ಯಾದಿ ವೈವಿಧ್ಯಮಯ ಆಹಾರ ಪದಾರ್ಥಗಳನ್ನು ಸೇವಿಸುತ್ತಿದ್ದರು. ತರಕಾರಿ, ಹಣ್ಣುಗಳು ಮತ್ತು ಸೊಪ್ಪು ಇವರ ಊಟವಾಗಿತ್ತು. ತಮ್ಮ ವಾಸಸ್ಥಾನಗಳಲ್ಲಿ ಹಣ್ಣಿನ ತೋಟ ಬೆಳೆಸುತ್ತಿದ್ದರು. ನೀರಿನ ತೊಟ್ಟಿಗಳನ್ನು ಇಟ್ಟುಕೊಂಡು ದಿನಕ್ಕೆ ಎರಡು ಬಾರಿ ಸ್ತ್ರೀ–ಪುರುಷರು ಸ್ನಾನ ಮಾಡುತ್ತಿದ್ದರು. ಹೀಗೆ ಸ್ನಾನ ಮಾಡಿದಾಗ ಆ ತಾಸಿನವರೆಗೆ ಮಾಡಿದ ಪಾಪ ತೊಳೆದುಹೋಗುತ್ತದೆ ಎಂದು ತಿಳಿಯಲಾಗುತ್ತಿತ್ತು. ನಮ್ಮಲ್ಲಿಯ ಮಹಿಳೆಯರಂತೆ ಇವರು ಕೂದಲನ್ನು ಉದ್ದಾಗಿ ಬೆಳೆಸುತ್ತಾರೆ. ಮತ್ತು ಅದನ್ನು ಗಂಟು ಹಾಕಿಕೊಂಡು ಮೇಲೆ ಬಿಗಿಯಾಗಿ ಪೇಟ ಧರಿಸುತ್ತಾರೆ. ಕೂದಲಿಗೆ ಹೂ ಮುಡಿಯುತ್ತ ಸುವಾಸನೆಯ ದ್ರವ್ಯಗಳನ್ನು ಉಪಯೋಗಿಸುತ್ತಾರೆ. ಬಿಳೀಗಂಧದ ಹುಡಿ, ಕೇಶ ಮತ್ತು ಉಳಿದ ಸುಗಂಧ ದ್ರವ್ಯಗಳನ್ನು ಸೇರಿಸಿದ ಪುಡಿಯನ್ನು ಉಪಯೋಗಿಸಿ ಸ್ನಾನ ಮಾಡುತ್ತಿದ್ದರು. ಇವರು ಬಹಳ ರಸಿಕರಾಗಿದ್ದರು. ಹತ್ತಿಯ ಅಥವಾ ರೇಶಿಮೆಯ ಉದ್ದನೆ ನಿಲುವಂಗಿಯ ಜೊತೆಗೆ ಪಾದಕ್ಕೆ ಚೂಪಾದ ಮುಖವುಳ್ಳ ಆಲಂಕಾರಿಕ ಪಾದರಕ್ಷೆಗಳನ್ನು ಹಾಕಿಕೊಳ್ಳುತ್ತಾರೆ. ಕೆಲವರು ರೇಶಿಮೆ ಮತ್ತು ಕಲಾಬತ್ತಿನ ಜರತಾರಿ ಚಿಕ್ಕ ಕೋಟುಗಳನ್ನು ಹಾಕಿಕೊಳ್ಳುತ್ತಾರೆ. ತಮ್ಮ ಜೊತೆಗೆ ಅಂತಹ ವಿಶೇಷ ಆಯುಧಗಳನ್ನು ಇಟ್ಟುಕೊಳ್ಳುವುದಿಲ್ಲ. ಬಹಳವಾದರೆ ಬೆಳ್ಳಿ ಮತ್ತು ಚಿನ್ನದ ಕಲಾಬತ್ತಿನ ಚಿಕ್ಕ ಚಾಕು ಅವರ ಜೊತೆಗಿರುತ್ತದೆ. ಆಯುಧಗಳು ಇರದಿದ್ದುದಕ್ಕೆ ಎರಡು ಕಾರಣಗಳಿದ್ದವು. ಮೊದಲನೆಯದಾಗಿ ಆಯುಧಗಳ ಉಪಯೋಗವನ್ನೇ ಅವರು ಕಡಿಮೆ ಮಾಡುತ್ತಿದ್ದರು. ಎರಡನೆಯದಾಗಿ ಮೂರರು ಅವರನ್ನು ಸಂರಕ್ಷಿಸುತ್ತಿದ್ದರು.

ಬ್ರಾಹ್ಮಣರೆಂಬ ಇನ್ನೊಂದು ವಿಶಿಷ್ಟ ವರ್ಗವಿದ್ದಿತು. ಇವರಲ್ಲಿ ಪೂಜಾರಿಗಳು ಇದ್ದರು. ದೊಡ್ಡ ಪ್ರಮಾಣದ ಸಾಕಷ್ಟು ಉತ್ಪನ್ನದ ದೇವಸ್ಥಾನ ಅಥವಾ ಪ್ರಾರ್ಥನಾ ಮಂದಿರಗಳನ್ನು ನೋಡಿಕೊಳ್ಳುತ್ತಿದ್ದರು. ಇವುಗಳಲ್ಲಿ ಕೆಲವು ಭಕ್ತರ ಕಾಣಿಕೆಗಳಿಂದ ನಡೆಯುತ್ತಿದ್ದವು. ಇಂಥ ದೇವಸ್ಥಾನ, ಮಠಗಳಲ್ಲಿ ಮರದ, ತಾಮ್ರ ಅಥವಾ ಕಲ್ಲಿನ ವಿಗ್ರಹಗಳು ಇರುತ್ತಿದ್ದವು. ಇವುಗಳ ಪೂಜೆಗಾಗಿ ವೈಭವದಿಂದ ಎಣ್ಣೆ ದೀಪಗಳು, ಮೇಣದ ಬತ್ತಿಗಳು, ಗಂಟೆಗಳು ಇತ್ಯಾದಿಯಾಗಿ ನಮ್ಮ ಪದ್ಧತಿಯಂತೆ ಬಳಸಲಾಗುತ್ತಿತ್ತು. ಈ ಬ್ರಾಹ್ಮಣರಲ್ಲಿ ಪವಿತ್ರ ತ್ರಿಮೂರ್ತಿ ಕಲ್ಪನೆ ಗಾಢವಾಗಿದ್ದಿತು. ದೇವತಾ ಪ್ರಾರ್ಥನೆಯಿಂದ ಸೃಷ್ಟಿ ದೇವತೆಯನ್ನು ನಿಜವಾದ ದೇವರೆಂದು ಮನ್ನಿಸಿ ಅವನ ಜೊತೆಗೆ ಉಳಿದ ದೇವರನ್ನು ಪೂಜಿಸುತ್ತಿದ್ದರು. ಬ್ರಾಹ್ಮಣರು ಮತ್ತು

ಬ್ರಾಹ್ಮಣೇತರರು ನಮ್ಮ ಚರ್ಚುಗಳನ್ನು ಕಂಡಾಗ ಅಲ್ಲಿಯೂ ಪ್ರವೇಶಿಸಿ ನಮ್ಮ ಮೂರ್ತಿಗಳಿಗೆ ಪ್ರಾರ್ಥನೆ ಸಲ್ಲಿಸುತ್ತಿದ್ದರು. ಸಂತ ಮರಿಯಾಳನ್ನು ವಿಶೇಷವಾಗಿ ಪೂಜಿಸುತ್ತಿದ್ದರು. ನಮ್ಮಷ್ಟು ಚರ್ಚಿಗೆ ಮನ್ನಣೆ ಕೊಡುತ್ತಿದ್ದ ಇವರು ನಮ್ಮಿಬ್ಬರ ಮಧ್ಯ ಬಹಳ ಅಂತರವಿಲ್ಲವೆಂದು ಹೇಳುತ್ತಿದ್ದರು. ಕೊಂಡು ತಿನ್ನುವುದಾಗಲೀ, ಮಾಂಸ ಭಕ್ಷಣವಾಗಲೀ ಇವರಲ್ಲಿರಲಿಲ್ಲ. ಸ್ನಾನವನ್ನು ಸಮಾರಂಭದ ತೆರದಿ ಆಚರಿಸುತ್ತಿದ್ದರು. ಇದರಿಂದಲೇ ವಿಷಯಗಳು ಶುದ್ಧವಾಗುತ್ತವೆ ಎಂದು ತಿಳಿದಿದ್ದರು.

“ಕ್ಯಾಲಿಕಟ್ ರಾಜ್ಯದಲ್ಲಿ ಪೂಜಾರಿ ಬ್ರಾಹ್ಮಣರ ಬಗೆಗೆ ಆಗಲೇ ಬೇರೆಡೆಗೆ ಹೇಳಿದ್ದೇನೆ. ನಮ್ಮಲ್ಲಿಯಂತೆ ಅವರಲ್ಲಿಯೂ ಪೂಜಾರಿ ಅಥವಾ ಅರ್ಚಕರಿರುತ್ತಾರೆ. ಇವರೆಲ್ಲ ಮಾತನಾಡುವ ಭಾಷೆ ಒಂದೇ. ಬ್ರಾಹ್ಮಣನ ಮಗನು ಮಾತ್ರ ಬ್ರಾಹ್ಮಣನಾಗಬಲ್ಲ. ಏಳು ವರ್ಷವಾದಾಗ ಬ್ರಾಹ್ಮಣ ಮಗುವಿಗೆ ಎರಡು ಬೊಟ್ಟು ಅಗಲದ ಚರ್ಮದ ತುಣಕೊಂದನ್ನು ಹೆಗಲ ಬದಿಗೆ ಹಾಕುತ್ತಾರೆ. ಅದು ಕಾಡುಕತ್ತೆಯನ್ನು ಹೋಲುವ ವನ್ಯ ಮೃಗದ್ದಾಗಿರುತ್ತದೆ. ಅದರ ಜೊತೆಗೆ ಮುಂದಿನ ಏಳು ವರ್ಷಗಳವರೆಗೆ ಅವನು ಅಡಿಕೆಯನ್ನು ಸೇವಿಸಬಾರದು. ಹದಿನಾಲ್ಕು ವರ್ಷ ಪ್ರಾಪ್ತವಾದಾಗ ಅವನ ಆ ಚರ್ಮದ ತುಂಡನ್ನು ತೆಗೆದು ಮೂರು ಎಳೆಯ ದಾರ (ಜನಿವಾರ)ವನ್ನು ತೊಡಿಸಲಾಗುತ್ತದೆ. ಅವನು ಅದನ್ನು ತನ್ನ ಜೀವನದುದ್ದಕ್ಕೂ ತಾನು ಬ್ರಾಹ್ಮಣನೆಂದು ತೋರಿಸುವದಕ್ಕಾಗಿ ಧರಿಸಿಕೊಂಡೇ ಇರುತ್ತಾನೆ. ಈ ಜನಿವಾರ ತೊಡಿಸುವ ಸಮಾರಂಭವನ್ನು ಬಹು ಸಂಭ್ರಮದಿಂದ ಮಾಡುತ್ತಾರೆ, ನಾವು ನಮ್ಮಲ್ಲಿ ಮೊದಲ ಪ್ರಾರ್ಥನೆಗೆ ಅರ್ಪಿಸಿದಾಗ ಮಾಡುವಂತೆ. ಅನಂತರ ಅವನು ಎಲೆ ಅಡಿಕೆ ತಿನ್ನಬಹುದಾದರೂ ಮೀನು ಅಥವಾ ಮಾಂಸವನ್ನು ಮುಟ್ಟಕೂಡದು. ಭಾರತೀಯರಲ್ಲಿ ಈ ವರ್ಗದವರಿಗೆ ಬಹಳ ಗೌರವವಿದೆ. ನಮ್ಮ ಪದ್ಧತಿಯಂತೆ ಒಂದು ಸಲ ಮಾತ್ರ ಮದುವೆಯಾಗುತ್ತಾರೆ ಮತ್ತು ಕುಟುಂಬದ ಹಿರಿಯ ಮಗನಿಗೆ ಮಾತ್ರ ಈ ಹಕ್ಕಿದೆ. ಅವನಿಗೆ ವಿಶೇಷವಾದ ಸ್ಥಾನವಿದೆ. ಉಳಿದ ಸೋದರರು ಜೀವನದುದ್ದಕ್ಕೂ ಬ್ರಹ್ಮಚಾರಿಗಳಾಗಿಯೇ ಉಳಿಯುತ್ತಾರೆ. ಬ್ರಾಹ್ಮಣರು ತಮ್ಮ ಪತ್ನಿಯರನ್ನು ಗೌರವದಿಂದ ನೋಡಿಕೊಳ್ಳುತ್ತಾರೆ ಮತ್ತು ಅವರಿಗೆ ಬೇರೆಯವರ ದೇಹಸಂಪರ್ಕ ಬರದಂತೆ ಎಚ್ಚರವಹಿಸುತ್ತಾರೆ. ಪತ್ನಿ ಮರಣ ಹೊಂದಿದಾಗ ಮರು ಮದುವೆ ಮಾಡಿಕೊಳ್ಳುವುದಿಲ್ಲ. ಆದರೆ ಹೆಂಡತಿಯು ತನ್ನ ಪತಿಗೆ ವಿಶ್ವಾಸಘಾತ ಮಾಡಿದಾಗ ಮಾತ್ರ ಅವಳನ್ನು ವಿಷ ಕೊಟ್ಟು ಕೊಲ್ಲಲಾಗುತ್ತದೆ. ಮದುವೆಯಾಗದ ಸೋದರರು ನಾಯರೆ (ನಾಯರು?) ಹೆಣ್ಣುಮಕ್ಕಳ ಜೊತೆಗೆ ದೇಹಸಂಪರ್ಕವಿಟ್ಟುಕೊಂಡಿರುತ್ತಾರೆ. ತಾವು ಬ್ರಾಹ್ಮಣರಾಗಿರುವುದರಿಂದ ಇದು ಒಂದು ಗೌರವದ ವಿಷಯವೆಂದು ಅವರು ಭಾವಿಸುತ್ತಾರೆ. ನಾಯರೆ ಹೆಣ್ಣುಮಕ್ಕಳು ಕೂಡ ಬ್ರಾಹ್ಮಣರ ಈ ಇಚ್ಛೆಯನ್ನು ನಿರಾಕರಿಸುವಂತಿಲ್ಲ. ಆದರೆ ಉಳಿದ ಬೇರೆ ಜಾತಿಯ ಹೆಣ್ಣಿನ ಸಂಬಂಧ ಅವರು ಇಟ್ಟುಕೊಳ್ಳುವಂತಿಲ್ಲ. ತಮ್ಮದೇ ದೇವಸ್ಥಾನಕ್ಕೆ ನಿಶ್ಚಿತ ಸಮಯಕ್ಕೆ ತೆರಳಿ ನಿತ್ಯ, ಪೂಜೆ, ನಮಸ್ಕಾರ, ಪ್ರಾರ್ಥನೆ ಸಲ್ಲಿಸುವ ಇವರು ಉಳಿದ ವೇಳೆಯನ್ನು ತಮ್ಮ ಮನೆಗಳಲ್ಲಿಯೇ ಕಳೆಯುವರು.

ಈ ಬ್ರಾಹ್ಮಣರಲ್ಲಿ ಕೆಲವರು ಶಾಸ್ತ್ರಾಸ್ತ್ರಗಳ ವಿಷಯವೊಂದನ್ನು ಬಿಟ್ಟು ಉಳಿದ ಎಲ್ಲ ಕ್ಷೇತ್ರಗಳಲ್ಲಿ ಅರಸನಿಗೆ ಸೇವೆ ಸಲ್ಲಿಸುವವರು. ಅರಸನಿಗೆ ಆಹಾರ ತಯಾರಿಸುವ ಹಕ್ಕು ಇವರದ್ದು ಅಥವಾ ಇವರ ಸಂಬಂಧಿಕರದ್ದು ಹೊರತು ಬೇರೆಯವರದ್ದಲ್ಲ. ಬೇರೆ ದೇಶಗಳಿಗೆ ಪತ್ರ, ದುಡ್ಡು, ಸಾಮಾನುಗಳನ್ನು ಇವರ ಮುಖಾಂತರ ಶಾಂತಿ ಕಾಲದಲ್ಲಿದ್ದಂತೆ ಯುದ್ಧ ಕಾಲದಲ್ಲಿಯೂ – ಸುರಕ್ಷಿತವಾಗಿ ಕಳುಹಿಸಬಹುದು. ಯಾರೂ ಇವರಿಗೆ ಏನೂ ಮಾಡುವ ಭಯವಿಲ್ಲ. ಈ ಬ್ರಾಹ್ಮಣರು ತಮ್ಮ ಮೂರ್ತಿ ಆರಾಧನೆಯಲ್ಲಿ ತಿಳಿದವರಿರುತ್ತಾರೆ. ಮತ್ತು ಎಷ್ಟೋ ಗ್ರಂಥಗಳನ್ನು ಹೊಂದಿರುತ್ತಾರೆ. ಅರಸನು ಇವರನ್ನು ತುಂಬಾ

ಗೌರವದಿಂದ ಕಾಣುತ್ತಾನೆ.

ನಾಯರೆಯವರ ವಿಷಯವಾಗಿ ನಾನು ಈಗಾಗಲೇ ಬಹಳ ಸಲ ಚರ್ಚಿಸಿದ್ದೇನೆ. ಆದರೂ ಅವರು ಯಾವ ಬಗೆಯ ಜನರು ಎಂಬ ಬಗೆಗೆ ಹೇಳಿಲ್ಲ. ಮಲಬಾರವೆಂಬ ಈ ಭೂಭಾಗದಲ್ಲಿ ನಾಯರ್ಸ್ ಎಂಬ ಇನ್ನೊಂದು ಜಾತಿಯ ಜನ ಇರುತ್ತಾರೆ ಎಂಬುದನ್ನು ತಿಳಿದುಕೊಳ್ಳಬೇಕು. ಅವರಲ್ಲಿ ಇರುವ ಸರದಾರರು ಯುದ್ಧದಲ್ಲಿ ದೇಶಕ್ಕಾಗಿ ಸೇವೆ ಸಲ್ಲಿಸುತ್ತಾರೆ. ಅದುವೇ ಅವರ ಕಾರ್ಯ. ಅವರು ತಮ್ಮ ಸಂಚಾರದಲ್ಲಿ ಆಯುಧಗಳನ್ನು ತಮ್ಮ ಜೊತೆಯಲ್ಲಿ ಇಟ್ಟುಕೊಂಡಿರುತ್ತಾರೆ. ಕೆಲವರು ಖಡ್ಗ, ಢಾಲ ಮತ್ತೆ ಕೆಲವರು ಬಾಣ–ಬಿಲ್ಲುಗಳನ್ನು, ಭರ್ಜಿಗಳನ್ನು ಹೊಂದಿರುತ್ತಾರೆ. ಕೆಲವರು ಅರಸನ ಜೊತೆಗೆ, ಉಳಿದವರು ಜಮೀನುದಾರರ ಜೊತೆಗೆ ಇರುತ್ತಾರೆ. ಅರಸನಿಂದ ಅಥವಾ ತಮ್ಮ ಮಾಲೀಕರಿಂದ ಅವರು ಜೀವನಭತ್ಯೆಯನ್ನು ಪಡೆಯುತ್ತಾರೆ. ನಾಯರರು ಮಾತ್ರ ನಾಯರರಾಗಿ ಮುಂದುವರಿಯಬಹುದು. ಉಳಿದವರಿಗೆ ಅವರ ಜಾತಿಯಲ್ಲಿ ಪ್ರವೇಶವಿಲ್ಲ. ಅವರ ಘನತೆಗೆ ಕುಂದು ಬರದಂತೆ ಇರುತ್ತಾರೆ. ನಾಯರ ಜಾತಿಯ ಮನೆಯವರನ್ನು ಬಿಟ್ಟು ಬೇರೆ ಯಾವುದೇ ಕೆಳಜಾತಿಯಲ್ಲಿ ಅನ್ನ, ನೀರು ಅವರು ಮುಟ್ಟುವುದಿಲ್ಲ.

ಇವರು ಮದುವೆಯಾಗುವುದಿಲ್ಲ. ತಮ್ಮ ಸೋದರಿಯರ ಮಕ್ಕಳೇ ಇವರ ಆಸ್ತಿಗೆ ಹಕ್ಕುದಾರರಾಗುತ್ತಾರೆ. ಉತ್ತಮ ಕುಲದಲ್ಲಿ ಜನಿಸಿದ ನಾಯರೆ ಹೆಣ್ಣು ಮಕ್ಕಳು ಸ್ವತಂತ್ರವಾಗಿದ್ದುಕೊಂಡು ಬ್ರಾಹ್ಮಣರು ಮತ್ತು ಉಳಿದ ನಾಯರೆಯವರ ಜೊತೆಗೆ ತಮ್ಮ ಇಚ್ಛೆಯಂತೆ ನಡೆದುಕೊಳ್ಳುತ್ತಾರೆ. ಆದರೆ ತಮ್ಮ ಜಾತಿಗಿಂತ ಕೆಳಗಿನವರೊಂದಿಗೆ ದೇಹಸಂಬಂಧ ಬೆಳೆಸುವುದಿಲ್ಲ. ಹೆಣ್ಣು ಮಕ್ಕಳು ೧೨ನೆಯ ವಯಸ್ಸಿಗೆ ಬಂದಾಗ ದೊಡ್ಡ ಸಮಾರಂಭ ನಡೆಸಲಾಗುತ್ತದೆ. ತನ್ನ ಮಗಳು ವಯಸ್ಸಿಗೆ ಬಂದಾಗ ನಾಯರೆ ಹೆಣ್ಣು ಮಗಳು ತನ್ನ ಜಾತಿಯವರಿಗೆ, ಸ್ನೇಹಿತರಿಗೆ ವಿಷಯ ತಿಳಿಸಿ ಅವಳಿಗೆ ಈ ಸಂದರ್ಭದಲ್ಲಿ ಮರ್ಯಾದೆ ಸಲ್ಲಿಸಲು ಹೇಳಿ ಅವರಲ್ಲಿ ತಮ್ಮ ನೆಚ್ಚಿನ ಸ್ನೇಹಿತ ಅಥವಾ ಜಾತಿ ಬಾಂಧವರಲ್ಲಿ ಅವಳನ್ನು ಮದುವೆಯಾಗಲು ಕೇಳಿಕೊಳ್ಳುತ್ತಾಳೆ. ಜಾತಿ ಬಾಂಧವನು ಅದರಂತೆ ಚಿನ್ನದ ವಿಶೇಷ ಆಭರಣ ಮಾಡಿಸುತ್ತಾನೆ. ಒಂದು ನಿರ್ಧಾರಿತ ದಿನ ಅದನ್ನು ತೆಗೆದುಕೊಂಡು ಬರುತ್ತಾನೆ. ಎಲ್ಲರೂ ಸೇರಿದಂತೆ ಉತ್ಸಾಹ, ಸಡಗರದ ಸಮಾರಂಭದಲ್ಲಿ ತಾಯಿ ಒಡವೆಗಳನ್ನು ತೊಡಿಸಿ ಅವಳನ್ನು ಕರೆದುಕೊಂಡು ಬರುತ್ತಾಳೆ. ಬಾಂಧವರಲ್ಲಿ ಒಬ್ಬರು ವಿಶೇಷವಾಗಿ ಕೊಟ್ಟ ಆ ಆಭರಣವನ್ನು ಮಗಳ ಕೊರಳಿಗೆ ಎಸೆಯುತ್ತಾರೆ. ಆ ಸ್ನೇಹಿತ ಅಂದು ಅವಳ ಜೊತೆಗೆ ದೇಹ ಸಂಪರ್ಕ ಪ್ರಾರಂಭಿಸುವಂತಿಲ್ಲ. ಅದು ಅವನ ಇಚ್ಛೆ. ಅನಂತರ ತಾಯಿ ತಮ್ಮ ಜಾತಿಯಲ್ಲಿ ಯುವಕರನ್ನು ಹುಡುಕುತ್ತಾ ಮಗಳ ಕನ್ಯತ್ವವನ್ನು ಪರೀಕ್ಷಿಸಬೇಕೆಂದು ಆಹ್ವಾನಿಸುತ್ತಾಳೆ. ಅವಳ ಜೊತೆಗೆ ಒಂದು ಸಲ ಯಾರಾದರೊಬ್ಬರು ದೇಹ ಸಂಪರ್ಕಿಸಿದರೆ ಆಗ ಅವಳು ಉಳಿದವರಿಗೆ ಯೋಗ್ಯಳು ಎಂದಾಗುತ್ತದೆ. ನಾಯರೆ ಜನಾಂಗದ ತರುಣರ ಬಳಿ ತೆರಳಿ ತಾಯಿ ತನ್ನ ಮಗಳಿಗೆ ಯಾರಾದರೂ ಆಶ್ರಯ ಕೊಡುತ್ತೀರಾ ಎಂದು ಕೇಳುತ್ತಾಳೆ ಮತ್ತು ಅವಳನ್ನು ತಮ್ಮ ಉಪಪತ್ನಿಯಾಗಿ ಇಟ್ಟುಕೊಳ್ಳುವಿರಾ ಎಂದು ಬಿನ್ನವಿಸುತ್ತಾಳೆ. ಆಗ ೩–೪ ಜನ ನಾಯರೆಯವರು ಸಿದ್ಧರಾಗುತ್ತಾರೆ. ಪ್ರತಿದಿನಕ್ಕೆ ಇಷ್ಟೆಂದು ಹಣ ಕೊಟ್ಟು ಅವಳಿಂದ ಸುಖಪಡುತ್ತಾರೆ. ಹೀಗೆ ಹೆಚ್ಚು ಜನ ಪ್ರೇಮಿಗಳನ್ನು ಪಡೆದ ಹೆಣ್ಣಿಗೆ ಹೆಚ್ಚು ಗೌರವ ಎಂದು ಭಾವಿಸಲಾಗುತ್ತದೆ. ಒಂದು ಮಧ್ಯಾಹ್ನದಿಂದ ಮರು ಮಧ್ಯಾಹ್ನದವರೆಗೆ ಒಬ್ಬೊಬ್ಬ ಯುವಕರು ಅವಳನ್ನು ಇಟ್ಟುಕೊಳ್ಳುತ್ತಾರೆ. ಈ ಸ್ಪಷ್ಟ ತಿಳಿವಳಿಕೆ ಇರುವದರಿಂದ ಯಾವ ಜಗಳ ಬರುವ ಪ್ರಶ್ನೆ ಇಲ್ಲವಾಗುತ್ತದೆ. ಬೇಸರವಾದಾಗ ನಾಯರೆ ಮಹಿಳೆಯಾಗಲಿ ಯುವಕರಾಗಲಿ ಜೊತೆಗಾರರನ್ನು ಬದಲು ಮಾಡುತ್ತಾ ಹೋಗುತ್ತಾರೆ. ಹೀಗೆ ಹುಟ್ಟಿದ ಮಕ್ಕಳು ತಾಯಿಯ ಜೊತೆಗೆ ಬೆಳೆಯುತ್ತವೆ. ಹೋಲಿಕೆಯಲ್ಲಿ ಒಂದಾಗಿ ಇಂಥವನ ಮಗನು

ಎಂದು ಗೊತ್ತಾದರೂ ಅವನು ತಂದೆಯ ಆಸ್ತಿಗೆ ಬಾಧ್ಯನಲ್ಲ. ಏಕೆಂದರೆ ಆಗಿನ ಪದ್ಧತಿಯಂತೆ ಸೋದರಿಯರ ಮಕ್ಕಳಿಗೆ ಆಸ್ತಿ ಹೋಗುತ್ತಿತ್ತು ಎಂದು ಆಗಲೇ ನೋಡಿದ್ದೇವೆ (ಈ ಕಲ್ಪನೆ ವಿಚಾರ ಸಾಮಾನ್ಯರಿಗೆ ವಿಚಿತ್ರವೆನಿಸಬಹುದಾದರೂ ಬಹು ವಿಶಾಲವಾದ ಅರ್ಥದಲ್ಲಿ ಈ ವ್ಯವಸ್ಥೆ ಬಂದಿದೆ). ಇದಕ್ಕೆ ಇನ್ನೊಂದು ಕಾರಣವೆಂದರೆ ನಾಯರೆ ಗಂಡಸರು ತಮ್ಮ ಮಕ್ಕಳ ಪೋಷಣೆಯಲ್ಲಿ ಜವಾಬ್ದಾರಿ ಹೊಂದಿ ಕಾಲಹರಣ ಮಾಡಬಾರದೆಂದು ಅರಸರು ಈ ಪದ್ಧತಿ ಜಾತಿಗೆ ತಂದರು.

ಮಲಬಾರ್ ರಾಜ್ಯದಲ್ಲಿ ಇನ್ನೊಂದು ಬಯಾಬೇರ್ಸ್ (Biabares) ಎಂಬ ಜಾತಿ ಇದೆ. ಇವರು ಇಲ್ಲಿಯ ಈ ಪ್ರದೇಶದ ವ್ಯಾಪಾರಿ ಜನಾಂಗ, ವಿದೇಶದಿಂದ ಜನರು ಅಲ್ಲಿಗೆ ಬರುವುದಕ್ಕಿಂತ ಮೊದಲೇ ಇದ್ದವರು. ಬಂದರುಗಳಲ್ಲಿ ಮತ್ತು ಒಳನಾಡಿನಲ್ಲಿ ಅವರು ಎಲ್ಲ ತರಹದ ಸರಕುಗಳಲ್ಲಿ ವ್ಯವಹರಿಸುತ್ತಿದ್ದು ಲಾಭಕ್ಕಾಗಿ ದುಡಿಯುತ್ತಿದ್ದರು. ಮೆಣಸು ಮತ್ತು ಶುಂಠಿ ಮುಂತಾದ ಎಲ್ಲ ಪದಾರ್ಥಗಳನ್ನು ನಾಯರೆ ಜನರಿಂದ ಪಡೆಯುತ್ತಿದ್ದರು. ಬೆಳೆಗಳ ಫಸಲು ಬರುವ ಮೊದಲೇ ಅದನ್ನು ಮುಂಗಡವಾಗಿ ಅವರಿಂದ ಪಡೆದು ಹತ್ತಿಯ ಬಟ್ಟೆಯನ್ನು ವಿನಿಮಯಿಸಿಕೊಳ್ಳುತ್ತಿದ್ದರು. ಮುಂದೆ ಸರಿಯಾದ ಸಮಯ ನೋಡಿ ಅದನ್ನು ಮಾರಿ ಲಾಭಗಳಿಸುತ್ತಿದ್ದರು. ಅರಸನ ಕಾನೂನಿನ ಕಟ್ಟಳೆಗಳ ಬಂಧನದಿಂದ ಅವರಿಗೆ ಮುಕ್ತಿ ಇತ್ತು ಎಂಬುದೇ ಅವರ ವಿಶೇಷ ಗೌರವ.

ಕ್ಯುವೆಮ್ (Cuiavem) ಎಂಬುದು ಇನ್ನೊಂದು ಜಾತಿ. ನಾಯರರಿಗಿಂತ ಬಹಳ ಭಿನ್ನವಾಗಿರದಿದ್ದರೂ ಅವರಿಂದ ದೂರವಿರುತ್ತಿದ್ದರು. ಇಟ್ಟಿಗೆ ಮಾಡುವುದು ಮತ್ತು ಕುಂಬಾರಿಕೆ ಅವರ ಉದ್ಯೋಗ. ಅರಮನೆ, ದೇವಸ್ಥಾನಗಳಿಗೆ ಇವುಗಳನ್ನು ಪೂರೈಸುತ್ತಿದ್ದರು. ಅವರ ಮೂರ್ತಿಗಳು ಮತ್ತು ಮೂರ್ತಿಪೂಜೆ ಭಿನ್ನವಾಗಿತ್ತು.

ಇನ್ನೊಂದು ಜಾತಿ ಎಂದರೆ ಮೇನ್‌ಟೋಸ್ (Maintos) ಅರಸ, ಬ್ರಾಹ್ಮಣ ಮತ್ತು ನಾಯರೆಯವರ ಬಟ್ಟೆ ಒಗೆಯುವ ಅಗಸರ ಕೆಲಸ ಅವರದಾಗಿತ್ತು. ಇದನ್ನು ಬಿಟ್ಟು ಅವರು ಬೇರೆ ಉದ್ಯೋಗ ಮಾಡುತ್ತಿರಲಿಲ್ಲ.

ಕ್ಯಾಲೆಟಸ್ (Caletis) ಎಂಬುದು ಇನ್ನೊಂದು ಕೆಳಜಾತಿ. ಇವರು ನೇಕಾರರು. ಹತ್ತಿಬಟ್ಟೆ, ರೇಶಿಮೆ ನೇಯುವ ಇವರು ಬಡವರಾಗಿದ್ದರು. ಅವರದೇ ಅದ ಮೂರ್ತಿಪೂಜೆ ಹೊಂದಿದ್ದರು. ಈ ಮೇಲಿನ ಜಾತಿಗಳಲ್ಲದೆ ಹನ್ನೊಂದು ಇತರ ಕೆಳಜಾತಿಗಳಿದ್ದವು. ಇವರ ಜೊತೆಗೆ ಉಳಿದವರ ವ್ಯವಹಾರವಿರಲಿಲ್ಲ. ಅವರಲ್ಲಿಯೇ ಟ್ಯೂಅಸ್ (Tuias) ಎಂಬುವರು ಕೊಂಚ ಉತ್ತಮರು, ತಾಳೆ ಮರಗಳ ಪೋಷಣೆ, ಹಣ್ಣು ಸಂಗ್ರಹಿಸುವಿಕೆ ಮತ್ತು ಅವುಗಳನ್ನು ತಮ್ಮ ಬೆನ್ನಮೇಲೆ ಹೊತ್ತು ಒಯ್ಯುವ ಕೆಲಸ ಮಾಡುತ್ತಿದ್ದರು.

ಮ್ಯಾನೆನ್ (Manen) ಇನ್ನೊಂದು ಕೆಳಜಾತಿ. ('ಮಾಂಕು' ಎಂಬುದು ಮುದ್ರಿತ ಶಬ್ದ). ಇವರು ಅಸ್ಪೃಶ್ಯರು. ಸಾಮಾನ್ಯ ಜನರಿಗಾಗಿ ಅಗಸರ ಕೆಲಸ ಮಾಡುತ್ತಿದ್ದರು. ಅವರ ಮಕ್ಕಳು ಅದನ್ನೇ ಮುಂದುವರಿಸಿಕೊಂಡು ಹೋಗಬೇಕು. ಚಾಪೆ ಹೆಣೆಯುವುದೂ ಅವರಿಗೆ ನಿಷಿದ್ಧ ಕಸಬಾಗಿತ್ತು.

ಕ್ಯಾನಾಕಸ್ (Canaqus) ಎಂಬ ಕೆಳಜಾತಿಯವರು ಕೊಡೆ ಮತ್ತು ಬಕಲ್‌ಗಳನ್ನು ಸಿದ್ಧಪಡಿಸುತ್ತಿದ್ದರು. ಅವರಿಗೆ ಜ್ಯೋತಿಷ್ಯ ಶಾಸ್ತ್ರದ ಜ್ಞಾನವಿದ್ದಿತು. ಕೆಲ ಶ್ರೀಮಂತರು ಇವರನ್ನು ಪೋಷಿಸುತ್ತಿದ್ದರು. ಆ್ಯಗ್ರೀಸ್ (Agrees) ಎಂಬ ಜಾತಿಯವರು ಬಡಗಿತನ, ಕಮ್ಮಾರಿಕೆ, ಲೋಹ ಪಾತ್ರೆಗಳ ಕೆಲಸ, ಪತ್ತುರಿಗೆ ಇತ್ಯಾದಿಯಾಗಿ ನಿರ್ವಹಿಸುತ್ತಿದ್ದರು. ಮಕ್ಕಳು ಇದೇ ಉದ್ಯೋಗ ಮುಂದುವರಿಸುತ್ತಿದ್ದರು.

ಮೊಗೇರಸ್ (Mogeres) ಇನ್ನೊಂದು ಜಾತಿ. ಅರಸನ ಪರಿವಾರದ ಸಾಮಾನುಗಳ ಸಾಗಾಣಿಕೆ ಇವರ ಕೆಲಸ. ಇವರು ಸಂಖ್ಯೆಯಲ್ಲಿ ಬಹಳ ಕಡಿಮೆ ಜನ. ಇವರಿಗೆ ಮದುವೆಯ ಬಗೆಗೆ ಕಾನೂನಿರಲಿಲ್ಲ. ಮೀನುಗಾರರು, ನಾವಿಕರಾದ ಇವರು ನಾಯರೆ ಜನರ ಗುಲಾಮರೂ ಆಗಿರುತ್ತಿದ್ದರು.

ಮಾಂಕರ್ (Monquer) ಎನ್ನುವ ಜಾತಿಯ ಜನ ಮೀನುಗಾರರು. ಮೂರ್ ಜನರ ಹಡಗುಗಳಲ್ಲಿ ಇರುವ ಇವರು ಜಾಣ ಈಜುಗಾರರಾಗಿದ್ದರು. ಈ ಜನಾಂಗ ಬಹಳ ಒರಟು. ಲಜ್ಜೆಗೆಟ್ಟ ಅವರು ಕಳ್ಳತನದಿಂದ ಜೀವಿಸುತ್ತಿದ್ದರು. ಅವರ ಹೆಣ್ಣು ಮಕ್ಕಳು ಚಾರಿತ್ರ್ಯ ಹೀನರಾಗಿರುತ್ತಿದ್ದರು. ಬೇಕೆಂದವರ ಜೊತೆಗೆ ಮಲಗುವ ಅವರಿಗೆ ಇದು ದೋಷವೆಂದು ಕಾಣಿಸುತ್ತಿರಲಿಲ್ಲ. ಅವರಿಗೆ ಅವರದೇ ಆದ ಮೂರ್ತಿಪೂಜೆ ಇದ್ದಿತು.

ಬೆಟ್ಯೂನ್ಸ್ (Betunes) ಎಂಬ ಕೆಳದರ್ಜೆಯ ಇನ್ನೊಂದು ಜಾತಿಯ ಜನ ಉಪ್ಪು ತಯಾರಿಸುವುದು, ಅಕ್ಕಿ ಬೆಳೆಯುವುದನ್ನು ಬಿಟ್ಟರೆ ಬೇರೆ ಯಾವುದೇ ಜೀವನೋಪಾಯ ಇಲ್ಲದೇ ಬದುಕುತ್ತಾರೆ.

ರಸ್ತೆಗಳಿಂದ ದೂರ ಇರುವ ಹೊಲಗಳಲ್ಲಿ ಮನೆಮಾಡಿಕೊಂಡು ಜೀವಿಸುವ ಇವರಿಗೆ ತಮ್ಮದೇ ಆದ ಮೂರ್ತಿಪೂಜೆ ಇದೆ. ಬಡತನದಲ್ಲಿಯೇ ಬದುಕುವ ಇವರು ಅರಸನ ಮತ್ತು ನಾಯರೆಯವರ ದಾಸರಾಗಿ ಬಾಳುತ್ತಾರೆ. ನಾಯರೆಯವರು ನಡೆಯುವಾಗ ಅವರಿಂದ ದೂರದಲ್ಲಿದ್ದು ದೂರದಿಂದಲೇ ಮಾತನಾಡುತ್ತಾರೆ. ಇವರು ಬೇರೆ ಜಾತಿಯವರೊಂದಿಗೆ ದೇಹಸಂಪರ್ಕ ಮಾಡುವುದಿಲ್ಲ.

ಪನೀನ್ಸ್ (Paneens) ಎಂಬ ಇನ್ನೊಂದು ಕೆಳಜಾತಿಯ ಜನ ಮಾಟಮಂತ್ರಗಳಿಂದ ಉಪ ಜೀವನ ಸಾಗಿಸುತ್ತಾರೆ.

ರೆವೋಲಿನ್ಸ್ (Revoleens) ಎಂಬ ಅವರಿಗಿಂತ ಕೀಳು ಮತ್ತು ಒರಟು ಜನರಾದ ಇವರು ಬಡಜನಾಂಗ. ಅರಣ್ಯದಿಂದ ಉರುವಲು ಮತ್ತು ಹುಲ್ಲು ತಂದು ಮಾರಿ ಬದುಕುತ್ತಾರೆ. ಯಾರನ್ನೂ ಮುಟ್ಟದ ಇವರು ತಮ್ಮ ಮಾನ ಮುಚ್ಚುವಷ್ಟು ಬಟ್ಟೆ, ಗಿಡಗಳ ಎಲೆಗಳನ್ನು ಧರಿಸಿ ಮೈಯನ್ನು ಎಲೆಗಳಿಂದ ಹೊದ್ದುಕೊಳ್ಳುತ್ತಾರೆ. ಈ ಜಾತಿಯ ಹೆಂಗಸರು ಹಿತ್ತಾಳೆಯ ಕಿವಿಯೋಲೆ, ಕೊರಳಸರ, ಕಾಲಿಗೆ ಕೈಗೆ ಆಭರಣಗಳನ್ನು ಧರಿಸುತ್ತಾರೆ.

ಪೋಲಿಯಾಸ್ (Poleas) ಎಂಬ ಜಾತಿಯ ಇನ್ನೊಂದು ಕೆಳದರ್ಜೆಯ ಇವರು ಸಮಾಜಬಾಹಿರರು. ಹೊಲಗದ್ದೆ ಮತ್ತು ರಹಸ್ಯ ಸ್ಥಳಗಳಲ್ಲಿ ವಾಸಿಸುತ್ತಿದ್ದು ಬಹಳ ಹೀನಾಯವಾಗಿ ಬಾಳುತ್ತಾರೆ. ಉಚ್ಚಜಾತಿಯ ಯಾರೂ ಇವರ ಬಳಿ ಸುಳಿಯುವುದಿಲ್ಲ. ಎತ್ತುಗಳ ಸಹಾಯದಿಂದ ಭೂಮಿ ಉತ್ತು ಭತ್ತ ಬೆಳೆಯುತ್ತಾರೆ. ನಾಯರರ ಜೊತೆಗೆ ದೂರದಿಂದಲೇ, ಎತ್ತರದ ಧ್ವನಿಯಲ್ಲಿ ಮಾತನಾಡುತ್ತಾರೆ. ಇವರು ದೊಡ್ಡ ಧ್ವನಿಯಿಂದ ಕೂಗುತ್ತ ಬಂದಾಗ ಉಳಿದವರು ಗಿಡಗಳ ಮಧ್ಯೆ ಮರೆಯಾಗಿ ಇವರು ಹೋದ ಮೇಲೆ ಹೊರಗೆ ಬರುತ್ತಾರೆ. ಒಂದು ವೇಳೆ ಬೇರೆ ಯಾರಾದರೂ ಅವರನ್ನು ಮುಟ್ಟಿದರೆ ಅವರ ಜಾತಿಯವರು ಇವರನ್ನು ಮುಗಿಸಿಬಿಡುತ್ತಾರೆ. ಅಲ್ಲದೆ, ಆ ಸೇಡಿನಿಂದ ಪೋಲಿಯಾಸರನ್ನು ಶಿಕ್ಷಿಸದೇ ಬಿಡುವುದಿಲ್ಲ.

ಪರೀನ್ಸ್ (Pareens) ಎಂಬುದು ಇನ್ನೊಂದು ಹೀನಜಾತಿ. ಇವರು ಎಲ್ಲ ಜಾತಿಯವರನ್ನು ತೊರೆದು ದೂರದಲ್ಲಿ ವಾಸಿಸುತ್ತಾರೆ. ಯಾರೂ ಇವರ ಜೊತೆ ದೇಹ ಸಂಬಂಧವಿಟ್ಟುಕೊಳ್ಳುವುದಿಲ್ಲ. ಹಾಗೆ ಇಟ್ಟುಕೊಂಡವರನ್ನು ಹೀನಾಯವಾಗಿ ನೋಡಲಾಗುತ್ತದೆ.

ಈ ವಿದೇಶೀ ಪ್ರವಾಸಿಗರಿಗೆ ಜಾತಿಗಳ ಸಂಪೂರ್ಣ ಮತ್ತು ವಿವರವಾದ ಚಿತ್ರವನ್ನು ಕೊಡಲು ಸಾಧ್ಯವಾಗಿಲ್ಲ. ಇದು ಸಹಜವಾದದ್ದು. ಹಿಂದೂವಿನ ಖಾಸಗಿ ಜೀವನ ಪ್ರತಿ ವಿದೇಶೀಯನಿಗೂ ಮುಚ್ಚಿದ ಪರದೆಯಂತೆ ರಹಸ್ಯವಾಗಿಯೂ ಇದ್ದಿತು. ಅದನ್ನು ಒಳಹೊಕ್ಕು ತಿಳಿಯುವುದು ಅವರಿಗೆ ಸಾಧ್ಯವಾಗುತ್ತಿರಲಿಲ್ಲ. ಭಾರತದ ಸಾಮಾಜಿಕ ಜೀವಕಣ ಮತ್ತು ಅದರ ಸೂತ್ರ ಶಕ್ತಿ ಕಾನೂನಿನ ಪಠ್ಯಪುಸ್ತಕದಿಂದ ಸುಲಭವಾಗಿ ಎತ್ತಿ ಹೇಳಬಹುದಾದ ಸೂತ್ರದಷ್ಟು ಸುಲಭವಾಗಿರಲಿಲ್ಲ. ರೂಢಿ, ಪದ್ಧತಿಗಳಿಂದ ಅಗಣಿತ ರೀತಿಯಲ್ಲಿ

ರೂಪಿತವಾಗಿದ್ದ ಅದು ಸ್ಥಳದಿಂದ ಸ್ಥಳಕ್ಕೆ ಬದಲಾಗುತ್ತ ನಡೆಯುತ್ತದೆ. ಅಲ್ಲದೆ ಅದರ ಸಂಕೀರ್ಣತೆ ಅಚ್ಚರಿಯನ್ನುಂಟುಮಾಡುತ್ತಿತ್ತು. ಆದರೆ ಜಾತಿ ಮಾತ್ರ ಹಿಂದೂ ಸಮಾಜದ ತೀರ ಎದ್ದುಕಾಣುವ ವಿಶಿಷ್ಟ ಅಂಶವೆಂದು ವಿದೇಶೀಯರಿಗೆ ಒಮ್ಮೆಲೇ ಹೊಳೆಯುತ್ತಿತ್ತು. ಇಲ್ಲದಿದ್ದರೆ ಅದರ ಬಗೆಗೆ ಅವರು ಭಾರತಕ್ಕೆ ಪ್ರವಾಸ ಬಂದಾಗ ಇಷ್ಟೊಂದು ಪ್ರಮಾಣದಲ್ಲಿ ದಾಖಲಿಸುತ್ತಿರಲಿಲ್ಲ.

ಆದ್ದರಿಂದ ಹಿಂದೂ ಸಾಮಾಜಿಕ ವ್ಯವಸ್ಥೆಯಲ್ಲಿ ಜಾತಿ ಪ್ರಮುಖ ಅಂಶವಾಗಿದ್ದು ಅದು ಉಳಿದವರಿಂದ ಭಿನ್ನವಾಗಿ ಗುರುತಿಸಲು ಸಹಾಯ ಮಾಡುತ್ತದೆ. ಜಾತಿ, ಒಂದು ರೀತಿಯಲ್ಲಿ, ಬೆಳೆಯುತ್ತಿರುವ ಸಂಸ್ಥೆಯಾಗಿದೆ. ಯಾವ ಕಾಲಕ್ಕೂ ಇದು ಒಂದೇ ತೆರನಾಗಿ ಬೆಳೆದುಬಂದಿಲ್ಲ. ಮೆಗಾಸ್ತನೀಸ್ ವಿವರಿಸಿದ ಜಾತಿಯ ಸ್ವರೂಪಕ್ಕೂ ಅಲ್‌ಬೆರೂನಿ ಪೋರ್ಚುಗೀಸರಿಗೆ ಕೊಟ್ಟ ಚಿತ್ರಕ್ಕೂ ಅಂತರವಿದೆ. ಆದರೆ ಜಾತಿಯನ್ನು ಅರ್ಥೈಸಿಕೊಳ್ಳಲು ಅದರ ನೈಜಸ್ವರೂಪವನ್ನು ಅರಿಯಬೇಕೇ ವಿನಾ ವಿದೇಶೀಯರು ಕೊಡಬಲ್ಲ ವಿವರಣೆಗಳಿಂದಲ್ಲ.

ಜಾತಿಯ ಮೇಲಿನ ಚರ್ಚೆಯನ್ನು ತಿಳಿಯಬೇಕಾದಾಗ ಓದುಗರನ್ನು ಹಿಂದೂ ಸಾಮಾಜಿಕ ವ್ಯವಸ್ಥೆ ಹೊಂದಿರುವ ಕೆಲ ಮೂಲ ವಿಚಾರಗಳೊಂದಿಗೆ ಹೆಚ್ಚು ಪರಿಚಿತರನ್ನಾಗಿ ಮಾಡಬೇಕಾಗುತ್ತದೆ. ಮುಖ್ಯ ವಿಚಾರವೆಂದರೆ ಹಿಂದೂಗಳು ವರ್ಣಾಶ್ರಮ ಪದ್ಧತಿಯಲ್ಲಿ ವಿಶ್ವಾಸವಿಡುತ್ತಾರೆ. ಈ ವರ್ಣಗಳಾವುವೆಂದರೆ:

೧) ಬ್ರಾಹ್ಮಣ : ಅರ್ಚಕ, (ಪೂಜಾರಿ) ಮತ್ತು ಶಿಕ್ಷಿತ ವರ್ಗ

೨) ಕ್ಷತ್ರಿಯರು : ಯೋಧರು

೩) ವೈಶ್ಯರು : ವ್ಯಾಪಾರಸ್ಥರು

೪) ಶೂದ್ರರು : ಸೇವಕವರ್ಗ

ಮೊದಲು ಕೇವಲ ವರ್ಣಗಳಾಗಿದ್ದವು ಕಾಲ ಕಳೆದಂತೆ ಜಾತಿಗಳಾದವು. ನಾಲ್ಕು ಜಾತಿಗಳು ನಾಲ್ಕು ಸಹಸ್ರ ಜಾತಿಗಳಾದವು. ಆಧುನಿಕ ಜಾತಿಪದ್ಧತಿಯು ಪುರಾತನ ವರ್ಣಪದ್ಧತಿಯ ನಿಧಾನಗತಿಯ ಬೆಳವಣಿಗೆಯೇ ಸರಿ. ಹಾಗಿದ್ದರೂ ಜಾತಿಯ ವ್ಯವಸ್ಥೆಯನ್ನು ಅರಿಯಲು ಪ್ರತ್ಯೇಕವಾಗಿ ಅದನ್ನೇ ಹೆಚ್ಚಾಗಿ ಆಳವಾಗಿ ಅಧ್ಯಯನ ಮಾಡಬೇಕಾಗುತ್ತದೆ.

ಕುಸ್ತಿ ಪಟುವಾದ ಜಟ್ಟಿಯೊಬ್ಬ ತನ್ನ ತಾತ್ವಿಕ ನಿಲುವನ್ನು ಒಮ್ಮೆ ಈ ರೀತಿ ವ್ಯಕ್ತಪಡಿಸಿದನಂತೆ:

"ನನಗೆ ಏನೂ ತಿಳಿಯದು ಎಂಬುದು ಮಾತ್ರ ನನಗೆ ಗೊತ್ತು. ಆದರೆ ಆ ಮಾತು ಚೆನ್ನಾಗಿ ಗೊತ್ತು ಎಂಬ ವಿಷಯ ಮಾತ್ರ ನನಗೆ ಖಾತ್ರಿಯಾಗಿ ಗೊತ್ತಿಲ್ಲ."

ಪಂಜಾಬದಲ್ಲಿಯ ಜಾತಿಗಳ ವಿಷಯವಾಗಿ ಬರೆಯಲು ಸಿದ್ಧನಾದ ಸರ್ ಡೆಂಝಿಲ್ ಇಬ್ಬೆಟ್‌ಸನ್ (Sir Denzil Ibbetson) ಕೂಡ ಇದೇ ರೀತಿಯ ಭಾವನೆಗಳನ್ನು ವ್ಯಕ್ತಪಡಿಸಿದನು. ಪಂಜಾಬದಲ್ಲಿಯ ಸ್ಥಾನೀಯ ವಾಸ್ತವಿಕ ಸ್ಥಿತಿಯನ್ನು ಗಮನಿಸಿದಾಗ, ಅಲ್ಲಿಯ ಜಾತಿಯಲ್ಲಿಯ ವೈವಿಧ್ಯಗಳನ್ನು ನೋಡಿದಾಗ ಯಾವುದೇ ಜಾತಿಯ ವಿಷಯವಾಗಿ ನಿಶ್ಚಿತವಾಗಿ ಹೇಳಿಕೆ ನೀಡುವುದು ಕಠಿಣವಾಗುತ್ತಿತ್ತು. ಏಕೆಂದರೆ ಅದೇ ಮಾತು ಬೇರೆ ಭಾಗದಲ್ಲಿ ಅನ್ವಯವಾಗುತ್ತಿರಲಿಲ್ಲ. ಅಷ್ಟೇ ಏಕೆ, ವಿರೋಧಾತ್ಮಕವಾಗಿ ಪರಿಣಮಿಸುತ್ತಿತ್ತು. ಜಾತಿ ಬಾಹಿರರಾಗಿ ಮಾಡಲು ಕಾರಣಗಳು ಯಾವುವೆಂದು ನೋಡಿದರೆ ಈ ವಿಷಯ ತಿಳಿಯುವುದು. ಶ್ರೀ ಭಟ್ಟಾಚಾರ್ಯ ಈ ಕೆಳಗಿನ ಕಾರಣಗಳನ್ನು ಗುರುತಿಸಿದ್ದಾರೆ :

೧) ಕ್ರೈಸ್ತ ಅಥವಾ ಇಸ್ಲಾಂ ಧರ್ಮವನ್ನು ಸ್ವೀಕರಿಸುವುದು.

೨) ಯೂರೋಪ್ ಅಥವಾ ಅಮೆರಿಕೆಗೆ ಪ್ರಯಾಣ.

೩) ವಿಧವೆಯನ್ನು ಮದುವೆಯಾಗುವುದು.
೪) ಜನಿವಾರವನ್ನು ಸಾರ್ವಜನಿಕವಾಗಿ ತ್ಯಜಿಸುವುದು.
೫) ಗೋಮಾಂಸ, ಕೋಳಿ, ಹಂದಿ ಮಾಂಸ ಭಕ್ಷಣೆ.
೬) ಸಾರ್ವಜನಿಕವಾಗಿ ಮುಸಲ್ಮಾನ ಅಥವಾ ಕ್ರೈಸ್ತರು ಅಥವಾ ಕೆಳಜಾತಿಯವರು ಬೇಯಿಸಿದ ಊಟವನ್ನು ಮಾಡುವುದು
೭) ಕೆಳಜಾತಿಯವರ ಮನೆಯಲ್ಲಿ ಧಾರ್ಮಿಕ ವಿಧಿಗಳ ಕೆಲಸ ಮಾಡಲು ಒಪ್ಪಿಕೊಳ್ಳುವುದು
೮) ಮನೆಯ ಮಹಿಳೆ ಅನೈತಿಕ ವ್ಯವಹಾರಕ್ಕಾಗಿ ಮನೆಬಿಟ್ಟು ಹೊರಗೆ ಹೋಗುವುದು
೯) ವಿಧವೆ ಬಸುರಿಯಾಗುವುದು.

ಈ ಪಟ್ಟಿ ಪೂರ್ಣ ವಿವರ ಹೊಂದಿಲ್ಲ. ಮೂರು ಕಾರಣಗಳನ್ನು ಬಿಟ್ಟಿದೆ. ಅವು ಯಾವುವೆಂದರೆ:
೧೦) ಜಾತಿ ಬಿಟ್ಟು ಹೊರಗಿನ ಜಾತಿಯವರಲ್ಲಿ ಮದುವೆಯಾಗುವುದು.
೧೧) ಬೇರೆ ಜಾತಿಯವರ ಜೊತೆ ಸಹಭೋಜನ.
೧೨) ವೃತ್ತಿಯನ್ನು ಬದಲು ಮಾಡುವುದು.

ಭಟ್ಟಾಚಾರ್ಯರ ಹೇಳಿಕೆಯಲ್ಲಿನ ಎರಡನೆಯ ದೋಷವೆಂದರೆ ಅವರು ಆವಶ್ಯಕ ಮತ್ತು ಅನಾವಶ್ಯಕಗಳಲ್ಲಿ ಅಂತರವನ್ನು ತೋರಿಸುವುದಿಲ್ಲ. ಒಂದು ವೃತ್ತಿಯನ್ನು ಜಾತಿಯಿಂದ ಹೊರಗೆ ಹಾಕಿದಾಗ ಶಿಕ್ಷೆ ಸಮಾನವಾಗುತ್ತದೆ. ಅವನ ಮಿತ್ರರು, ಸಂಬಂಧಿಕರು, ಜೊತೆಗಾರರು ಅವನ ಆತಿಥ್ಯ ನಿರಾಕರಿಸುತ್ತಾರೆ. ಅವರ ಮನೆಗೆ ಮನರಂಜನೆಗೆ ಆಹ್ವಾನಿಸುವುದಿಲ್ಲ. ತನ್ನ ಮಗ ಅಥವಾ ಮಗಳಿಗೆ ಹೊರಗಿನಿಂದ ಸಂಬಂಧ ತಂದುಕೊಳ್ಳುವುದಿಲ್ಲ. ಮದುವೆಯಾದ ಅವನ ಹೆಣ್ಣು ಮಕ್ಕಳು ಜಾತಿಯಿಂದ ಹೊರಗೆ ಹಾಕಲ್ಪಡುವ ಭಯದಿಂದ ಅವನ ಭೇಟಿಗೆ ಹೋಗುವಂತಿಲ್ಲ. ಅವನ ಧರ್ಮ ಗುರುಗಳು, ಕ್ಷೌರಿಕ, ಅಗಸ ತಮ್ಮ ಸೇವೆಯನ್ನು ಅವನಿಗೆ ನೀಡುವುದಿಲ್ಲ. ಶವಸಂಸ್ಕಾರದ ವೇಳೆಯಲ್ಲಿಯೂ ಅವನ ಜಾತಿಯವರೇ ಅವನೊಂದಿಗೆ ಸಹಕರಿಸುವುದಿಲ್ಲ. ಜಾತಿಬಾಹಿರನಾದ ವ್ಯಕ್ತಿಗೆ ದೇವಸ್ಥಾನ, ಸ್ಮಶಾನಗಳಲ್ಲಿಯೂ ಪ್ರವೇಶ ನಿರಾಕರಿಸಲಾಗುತ್ತದೆ.

ಜಾತಿ ಬಾಹಿರರನ್ನಾಗಿ ಮಾಡುವಾಗ ಪಾಲಿಸಲಾಗುವ ಈ ಕಾರಣಗಳು ಆ ಜಾತಿಯ ನಿಯಮ ಮತ್ತು ಕಟ್ಟಳೆಗಳನ್ನು ಪರೋಕ್ಷವಾಗಿ ತಿಳಿಸುತ್ತವೆ. ಆದರೆ ಎಲ್ಲ ನಿಬಂಧನೆಗಳು ಮೂಲಭೂತ ಕಾರಣಗಳಲ್ಲ. ಅದರಲ್ಲಿ ಎಷ್ಟೋ ಅನಾವಶ್ಯಕವಾದವುಗಳೂ ಇವೆ. ಅವುಗಳನ್ನು ಪಾಲಿಸದಿರುವ ಇತರ ಜಾತಿಗಳುಂಟು. ಅದೇ ಆವಶ್ಯಕ ಮತ್ತು ಅನಾವಶ್ಯಕ ಕಾರಣಗಳನ್ನು ಇನ್ನೂ ಒಂದು ಆಧಾರದ ಮೇಲೆ ನಿರ್ಧರಿಸಬಹುದು. ತನ್ನ ಜಾತಿಯಿಂದ ಹೊರಗೆ ಕಳುಹಿಸಲ್ಪಟ್ಟ ಒಬ್ಬ ಹಿಂದೂ ಮತ್ತೆ ತನ್ನ ಜಾತಿಯನ್ನು ಯಾವಾಗ ಸೇರಬಲ್ಲ? ಹಿಂದೂಗಳಲ್ಲಿ ಪ್ರಾಯಶ್ಚಿತ್ತವೆಂಬ ಪದ್ಧತಿ ಪ್ರಚಲಿತವಾಗಿದೆ. ಉಪವಾಸದಿಂದ, ದೇಹದಂಡನೆ ಮತ್ತು ಪಶ್ಚಾತ್ತಾಪದಿಂದ ಅವನು ಮತ್ತೆ ಹಿಂದುತ್ವ ಪಡೆಯಬಲ್ಲ. ಈ ಪ್ರಾಯಶ್ಚಿತ್ತದ ಬಗೆಗೆ ಕೆಲ ಮಾತುಗಳನ್ನು ತಿಳಿಯಲೇಬೇಕು. ಮೊದಲನೆಯದಾಗಿ ಜಾತಿ ದ್ರೋಹ ಮಾಡಿದ ಕೆಲ ಅಪರಾಧಗಳಿಗೆ ಪ್ರಾಯಶ್ಚಿತ್ತಗಳಿಲ್ಲ. ಮಾಡಿದ ಅಪರಾಧಗಳ ಮೇಲಿಂದ ಪ್ರಾಯಶ್ಚಿತ್ತವೂ ಬದಲಾಗುತ್ತ ಹೋಗುತ್ತದೆ. ಕೆಲ ಅಪರಾಧಗಳಲ್ಲಿ ದಂಡ ತುಂಬಾ ಅಲ್ಪ ಪ್ರಮಾಣದ್ದಾಗಿರುತ್ತದೆ. ಇನ್ನು ಕೆಲ ವಿಷಯಗಳಲ್ಲಿ ಘೋರವಾಗಿರುತ್ತದೆ.

'ಪ್ರಾಯಶ್ಚಿತ್ತದ ಕಲ್ಪನೆಯ ಅಸ್ತಿತ್ವ ಅಥವಾ ಅದರ ಅನುಪಸ್ಥಿತಿಯ ಅರ್ಥವನ್ನು ಸ್ಪಷ್ಟವಾಗಿ ತಿಳಿದುಕೊಳ್ಳಬೇಕು. ಪ್ರಾಯಶ್ಚಿತ್ತ ಮಾಡಿಕೊಳ್ಳುವುದೆಂದರೆ ಬೇಕಾದ ಅಪರಾಧ ಎಸಗಲು ವಿನಾಯಿತಿ ಇದೆ ಎಂದಲ್ಲ. ಇದರರ್ಥ ಅಪರಾಧದ ಪ್ರಮಾಣ ಹೆಚ್ಚಿನದಾಗಿದ್ದು ಒಮ್ಮೊಮ್ಮೆ ಅಪರಾಧಿಗೆ ಸಂರಕ್ಷಣೆ ಅಥವಾ

ಉಳಿಗಾಲವಿಲ್ಲವೆಂದು ಅರ್ಥೈಸಬಹುದು. ತನ್ನ ಜಾತಿಯಲ್ಲಿ ಮತ್ತೆ ಅವನಿಗೆ ಮರು ಪ್ರವೇಶವಿಲ್ಲ. ಪ್ರಾಯಶ್ಚಿತ್ತ ಇರುವ ಕಲ್ಪನೆ ಅಪರಾಧಗಳನ್ನು ಮಿಶ್ರಣ ಮಾಡುತ್ತ ಸಂಖ್ಯೆ ಬೆಳೆಸುತ್ತ ಹೋಗಬಹುದೆಂದು ಆಗಬಹುದು. ನಿಶ್ಚಿತ ಪ್ರಾಯಶ್ಚಿತ್ತಗಳನ್ನು ಮಾಡಿಕೊಳ್ಳುತ್ತ ಅಪರಾಧಗಳನ್ನು ಮಾಡುತ್ತ ಹೋಗಬಹುದು ಎಂದೂ ಆಗಬಹುದು. ಹೀಗಾಗಿ ತನ್ನನ್ನು ಹೊರದೂಡಿದ ಜಾತಿಗೆ ಆಗಾಗ ಮರು ಪ್ರವೇಶ ಮಾಡುತ್ತಲೂ ಇರಬಹುದು. ಎರಡು ಅಪರಾಧಗಳಿಗೆ ಮಾತ್ರ ಪ್ರಾಯಶ್ಚಿತ್ತವಿಲ್ಲ. (೧) ಹಿಂದೂ ಧರ್ಮದಿಂದ ಬೇರೆ ಧರ್ಮಕ್ಕೆ ಮತಾಂತರ ಹೊಂದಿದಾಗ (೨) ಬೇರೆ ಧರ್ಮ, ಜಾತಿಯಲ್ಲಿ ಮದುವೆ ಮಾಡಿಕೊಂಡಾಗ, ಈ ಕಾರಣಗಳಿಗೆ ಜಾತಿ ಬಾಹಿರನಾದಾಗ ಅವನಿಗೆ ಮರು ಪ್ರವೇಶವಿಲ್ಲ.

ಇನ್ನು ಕೆಲ ಅಪರಾಧಗಳಿಗೆ ಶಿಕ್ಷೆ ಉಗ್ರವಾಗಿದೆ.

೧) ಹಿಂದೂವಲ್ಲದ ಜಾತಿಯವರೊಡನೆ ಸಹಭೋಜನ.

೨) ತಮ್ಮ ಜಾತಿಯದಲ್ಲದ ವೃತ್ತಿಯನ್ನು ಮಾಡುವುದು. ಉಳಿದ ಚಿಕ್ಕಪುಟ್ಟ ಅಪರಾಧಗಳಿಗೆ ದಂಡ ಗಣನೀಯವಾಗಿಲ್ಲ. ಪ್ರಾಯಶ್ಚಿತ್ತ ವಿವರಗಳನ್ನು ನೋಡಿದಾಗ ವಿವಿಧ ಜಾತಿಯ ನಿಯಮ ನಿಬಂಧನೆಗಳು ತಾವಾಗಿಯೇ ತಿಳಿದುಬರುತ್ತವೆ. ಶಿಕ್ಷಾರ್ಹ ಅಪರಾಧಗಳು ಈ ಕಲ್ಪನೆಯನ್ನು ಸ್ಪಷ್ಟಪಡಿಸುತ್ತವೆ. ಜಾತಿಯ ನಾಲ್ಕು ಮೂಲಭೂತ ನಿಯಮಗಳಿವೆ.

ಹಿಂದೂ ಧರ್ಮದಲ್ಲಿ ವಿಶ್ವಾಸವಿರುವ ಸಾಮಾಜಿಕ ಗುಂಪಿಗೆ ಜಾತಿ ಎಂದು ಹೇಳಬಹುದು. ಅವರು (೧) ವಿವಾಹ (೨) ಭೋಜನ (೩) ವೃತ್ತಿ ಮುಂತಾದವುಗಳಲ್ಲಿ ಶಿಸ್ತಿನ ನಿಯಮ ಪಾಲಿಸಬೇಕು. ಒಟ್ಟು ಸಮುದಾಯದ ಒಂದೇ ಗುಂಪಿಗೆ ಜಾತಿ ಎಂದು ಗುರುತಿಸಬಹುದು.

ಅದೇ ಕುಲದಲ್ಲಿ ಮಾತ್ರ ವಿವಾಹ ಜರುಗಬೇಕೆಂಬುದು ಜಾತಿಯ ಕಟ್ಟಳೆಯಾಗಿರುತ್ತದೆ. ಅಂತರ್ಜಾತೀಯ ವಿವಾಹಕ್ಕೆ ಅವಕಾಶವಿಲ್ಲ. ಈ ಮುಖ್ಯ ಅಂಶವನ್ನು ಆಧರಿಸಿ ಜಾತಿಯ ಕಲ್ಪನೆ ಬೆಳೆದುಬಂದಿದೆ.

ಅಂತರ್ಜಾತೀಯ ಭೋಜನವೂ ನಿಷಿದ್ಧವಿದೆ. ಅಂದರೆ ವೈವಾಹಿಕ ಸಂಬಂಧಗಳನ್ನು ಮಾಡಲು ಬರುವವರಿಗೆ ಮಾತ್ರ ಅವರೊಡನೆ ಸಹಭೋಜನದ ಅವಕಾಶವಿದೆ ಎಂದಂತಾಯಿತು. ಆದ್ದರಿಂದ ಒಂದೇ ಕುಲದ ಗುಂಪಿನ ಜೊತೆಗೆ ಜಾತಿಯನ್ನು ಗುರುತಿಸಬಹುದು.

ಕಸಬಿನ ವಿಷಯದಲ್ಲಿ ಹೇಳುವುದಾದರೆ ತನ್ನ ಜಾತಿಯು ಪರಂಪರಾಗತವಾಗಿ ಅನುಸರಿಸಿಕೊಂಡು ಬಂದ ಕಸಬು ಅಥವಾ ವೃತ್ತಿಯನ್ನೇ ಮಾಡುವುದು. ಜಾತಿಗೆ ವಿಶಿಷ್ಟವಾದ ವೃತ್ತಿ ಇಲ್ಲದ ಪಕ್ಷದಲ್ಲಿ ತನ್ನ ತಂದೆಯ ವೃತ್ತಿಯನ್ನು ಅನುಸರಿಸುವುದು.

ವ್ಯಕ್ತಿಯ ಸಾಮಾಜಿಕ ಅಂತಸ್ತು ಅವನ ವಂಶದಿಂದ ನಿರ್ಧಾರಿತವಾಗುತ್ತದೆ. ಅವನ ಜಾತಿಯ ಅಂತಸ್ತಿನ ಮೇಲೆ ಅವನ ಸಾಮಾಜಿಕ ಅಂತಸ್ತನ್ನು ಗುರುತಿಸಲಾಗುತ್ತದೆ. ಒಬ್ಬ ಹಿಂದೂವನ್ನು ಅವನ ಪಾಲಕರ ಮತ್ತು ಜಾತಿಯ ಆಧಾರದ ಮೇಲೆ ಗುರುತಿಸಲಾಗುತ್ತದೆ. ಒಬ್ಬ ಹಿಂದೂವು ತನ್ನ ಜಾತಿಯನ್ನಾಗಲಿ, ಅಂತಸ್ತನ್ನಾಗಲಿ ಬದಲಿಸಲು ಸಾಧ್ಯವಿಲ್ಲ. ಅವನು ಹಿಂದೂವಾಗಿಯೇ ಹುಟ್ಟಿ ಹಿಂದೂವಾಗಿಯೇ ಮರಣ ಹೊಂದುತ್ತಾನೆ. ಒಂದು ಸಲ ತನ್ನ ಜಾತಿಯನ್ನು ಕಳೆದುಕೊಂಡರೆ ಮತ್ತೆ ಆತ ಹಿಂದೂವಾಗಲಾರ. ಅಲ್ಲದೇ ಹೆಚ್ಚಿನ ಸ್ಥಾನವನ್ನೂ ಪಡೆಯಲಾರ.

ಜಾತಿಗೆ ಒಂದು ಸಾಮಾನ್ಯ ಹೆಸರಿರುವ ಅಂಶದ ಮಹತ್ವವೇನು? ಇದನ್ನು ತಿಳಿಯುವುದಕ್ಕಾಗಿ ಎರಡು ಪ್ರಶ್ನೆಗಳಿಗೆ ನಾವು ಉತ್ತರವನ್ನು ಹುಡುಕಬೇಕು. ಸಾಮಾಜಿಕ ವರ್ಗಗಳು ಸಂಘಟಿಸಿದ ಅಥವಾ ಅಸಂಘಟಿಸಿದವುಗಳಾಗಿರಬಹುದು. ಪ್ರತಿಯೊಂದು ವರ್ಗಕ್ಕೆ ಅದರದೇ ಆದ ನಿಯಮಗಳಿರುತ್ತವೆ. ಸ್ವಯಂ

ಇಚ್ಛೆಯಿಂದ ಸಂಘಟಿತವಾದ ವರ್ಗಕ್ಕೂ ಉದ್ಯೋಗ ಮತ್ತು ಗುರಿಗಳಿರುತ್ತವೆ. ಇನ್ನೊಂದು ಪ್ರಕಾರದಲ್ಲಿ ವ್ಯಕ್ತಿಯ ಸಾಮಾಜಿಕ ಆವಶ್ಯಕತೆಗಾಗಿ ಒಂದು ವರ್ಗವನ್ನು ಸೇರುತ್ತಾನೆ. ಮತ್ತು ಇಂಥ ಪರಿಸ್ಥಿತಿಯಲ್ಲಿ ಅವನಿಗೆ ತಾನು ಸೇರಿದ ವರ್ಗದ ಮೇಲೆ ಯಾವ ನಿಯಂತ್ರಣವೂ ಇರುವುದಿಲ್ಲ. ಒಟ್ಟಿನಲ್ಲಿ ಜಾತಿಯೆಂಬುದು ವ್ಯವಸ್ಥಿತ ಸಾಮಾಜಿಕ ಸಂಘಟನೆಯೆಂದು ಬೇರೆ ಹೇಳಬೇಕಾಗಿಲ್ಲ. ಇದರ ಸುವ್ಯವಸ್ಥೆಯನ್ನು ಅಲ್ಲಗಳೆಯಲು ಆಗುವುದಿಲ್ಲ. ಜಾತಿ ಎಂಬುದು ಸ್ವಯಂ ಇಚ್ಛೆಯಿಂದ ರೂಪುಗೊಂಡ ಸಾಮಾಜಿಕ ಸಮೂಹ. ಹೀಗಾಗಿ ಹಿಂದೂವಿಗೆ ಹುಟ್ಟಿನಿಂದ ಸಾವಿನವರೆಗೆ ಹಲವಾರು ಬಂಧನಗಳು ಸದಾ ಇರುತ್ತವೆ. ಜಾತಿ ಕಲ್ಪನೆ ಶತಮಾನಗಳಿಂದ ಬಂದದ್ದು ಮತ್ತು ತೀರ ವೈಶಿಷ್ಟವನ್ನು ಪಡೆದ ಈ ವಿಷಯದ ಮೇಲೆ ಬರೆದ ಲೇಖಕರು ಇದನ್ನು ಸಾಕಷ್ಟು ಅರ್ಥೈಸಿಕೊಂಡಿಲ್ಲ. ಇದರಿಂದ ಸಾಮಾಜಿಕ ಮಹತ್ವವನ್ನು ಪಡೆದ ಜಾತಿಯ ವರ್ಗಗಳನ್ನು ವಿವರಿಸಲು ಅವರಿಗೆ ಸಾಧ್ಯವಾಗಿಲ್ಲ. ಭಾರತದಲ್ಲಿಯ ಸಾಮಾಜಿಕ ವರ್ಗಗಳನ್ನು ವಿದೇಶಗಳಲ್ಲಿಯ ಹಲವು ವರ್ಗಗಳಿಗೆ ಹೋಲಿಸಬಹುದು. ಕುಂಬಾರರು, ಅಗಸರು ಮತ್ತು ಬುದ್ಧಿ ಜೀವಿಗಳು ಎಲ್ಲ ಕಡೆಯೂ ಇರುತ್ತಾರೆ. ಆದರೆ ಬೇರೆ ದೇಶಗಳಲ್ಲಿ ಅವರು ಸ್ವಯಂ ಇಚ್ಛೆಯಿಂದ ಸಂಘಟಿತವಾಗಿರುವುದಿಲ್ಲ ಮತ್ತು ಒಂದೇ ಜಾತಿಗೆ ಸೇರ್ಪಡೆ ಆಗಿರುವುದಿಲ್ಲ. ಭಾರತದಲ್ಲಿ ಇವರಿಗಾಗಿ ಒಂದು ಜಾತಿಯನ್ನು ನಿರ್ಮಿಸಲಾಗಿದೆ. ಅವರ ಅಸ್ತಿತ್ವ, ವ್ಯಕ್ತಿತ್ವ ಮತ್ತು ಮುಂದುವರಿಕೆಯ ಮೇಲೆ ಅದು ಅವಲಂಬಿಸಿದೆ. ಹೆಸರಿನ ಮೇಲಿಂದ ಜಾತಿಯನ್ನು ಗುರುತಿಸಬಹುದು. ಜಾತಿಯನ್ನು ಒಮ್ಮೊಮ್ಮೆ ಅಡ್ಡ ಹೆಸರಿನ ಭಾಗವಾಗಿ ಗುರುತಿಸುವುದುಂಟು. ಹೆಸರಿನ ಸಹಾಯದಿಂದ ಜಾತಿಯ ನಿಯಮಗಳನ್ನು, ಕಟ್ಟಳೆಗಳನ್ನು ಜಾರಿಗೆ ತರಲು ಅನುಕೂಲವಾಗುವುದು. ಮೊದಲನೆಯದಾಗಿ, ಅಡ್ಡ ಹೆಸರಿರುವುದರಿಂದ ಬೇರೆ ಜಾತಿಯ ಯಾವ ನಿರ್ಬಂಧಗಳೂ ಅವನಿಗೆ ಅನ್ವಯವಾಗುವುದಿಲ್ಲ. ಎರಡನೆಯದಾಗಿ ಜಾತಿಯ ನಿಯಮಗಳನ್ನು ಮುರಿದಾಗ ಅವನನ್ನು ಗುರುತಿಸಿ ಶಿಕ್ಷಿಸಲು ಅನುಕೂಲವಾಗುವುದು.

ಇಷ್ಟನ್ನು ಜಾತಿಯೆಂದು ಹೇಳಬಹುದು. ಇನ್ನು ಜಾತಿ ವ್ಯವಸ್ಥೆಯ ಬಗೆಗೆ ಅಂತರ್ಜಾತಿಯ ಸಂಬಂಧಗಳನ್ನು ಅಭ್ಯಸಿಸಿದಂತೆ ಇದು ಅರ್ಥವಾಗುವುದು. ಜಾತಿ ವ್ಯವಸ್ಥೆ ಹಲವಾರು ವಿಶೇಷ ಅಂಶಗಳನ್ನು ಎತ್ತಿ ತೋರಿಸುತ್ತದೆ. ಹಾಗೆ ಮಾಡಿದಲ್ಲಿ ಒಂದೊಂದು ಜಾತಿಗೂ ತನ್ನದೇ ಆದ ಸ್ವತಂತ್ರ ಸಾರ್ವಭೌಮ ವ್ಯವಸ್ಥೆಯೂ ಇದ್ದೇ ಇದೆ. ಒಂದು ಜಾತಿ ಮತ್ತೊಂದು ಜಾತಿಯ ಸಾಮೀಪ್ಯಕ್ಕೆ ಬರಬಹುದು. ಆದರೆ ಒಂದನ್ನೊಂದು ಒಳಹೊಕ್ಕು ಸೇರುವ ಅಭ್ಯಾಸವಿಲ್ಲ. ಜಾತಿಗಳಲ್ಲಿ ಅವುಗಳದೇ ಆದ ಕ್ರಮವಿದೆ. ಅದು ಸಮಾನಾಂತರವಿರದೇ ಉಚ್ಚ–ನೀಚ ಎಂಬ ಅಂಶದ ಮೇಲೆ ಅವಲಂಬಿಸಿದೆ. ಎಲ್ಲ ಜಾತಿಗಳಿಗೂ ಒಂದೇ ಅಂತಸ್ತು ಇಲ್ಲವೆಂದರ್ಥ. ಹೆಚ್ಚು ಕಡಿಮೆ ಶ್ರೇಷ್ಠತೆ ಜಾತಿಯ ಕ್ರಮವನ್ನು ನಿರ್ಧರಿಸುತ್ತದೆ. ಶ್ರೇಷ್ಠತೆ ಅಥವಾ ಕನಿಷ್ಠತೆ ಮುಖ್ಯವಾಗಿ (೧) ಧಾರ್ಮಿಕ ಆಚರಣೆ ಮತ್ತು ಸಹಪಂಕ್ತಿ ಭೋಜನಗಳಿಂದ ನಿರ್ಧರಿಸಲ್ಪಡುತ್ತದೆ. ಧರ್ಮದ ಶ್ರೇಷ್ಠತೆಯೇ ಮುಖ್ಯವಾಗಿ ಮೂರು ಅಂಶಗಳಲ್ಲಿ ಅಡಕವಾಗಿದೆ.

೧) ಧಾರ್ಮಿಕ ವ್ರತಾಚರಣೆ

೨) ಮಂತ್ರಗಳು (ಜಪ–ತಪ)

೩) ಪುರೋಹಿತನ ಸ್ಥಾನಬಲ

ಹಿಂದೂ ಧಾರ್ಮಿಕ ಗ್ರಂಥಗಳು ಹದಿನಾರು ಧಾರ್ಮಿಕ ವ್ರತ ಆಚರಣೆಗಳನ್ನು ಉಲ್ಲೇಖಿಸುತ್ತವೆ. ಆದರೆ ಪ್ರತಿಯೊಬ್ಬ ಹಿಂದೂಧರ್ಮೀಯು ಎಲ್ಲವನ್ನೂ ಮಾಡಲು ಅರ್ಹನೆಂದು ಅರ್ಥವಲ್ಲ. ಕೆಲವು ಜನರಿಗೆ ಮಾತ್ರ ಆ ಹಕ್ಕು ಇದೆ. ಕೆಲವರು ಮಾತ್ರ ಕೆಲವನ್ನು ಆಚರಿಸಬಹುದು. ಉದಾಹರಣೆಗಾಗಿ

ಉಪನಯನವನ್ನೇ ತೆಗೆದುಕೊಳ್ಳೋಣ. ಜನಿವಾರವನ್ನು ಎಲ್ಲ ಹಿಂದೂಗಳೂ ಧರಿಸಲು ಪಾತ್ರರಲ್ಲ. ಹಿಂದಿನಿಂದ ನಡೆದು ಬಂದ ಪದ್ಧತಿ ಇದ್ದಲ್ಲಿ ಮಾತ್ರ ಒಪ್ಪಿತವಾಗುವುದು. ಯಾವ ಜಾತಿಯಲ್ಲಿ ಹದಿನಾರನೆಯ ವಯಸ್ಸಿನಲ್ಲಿ ಗರಿಷ್ಠ ಧಾರ್ಮಿಕ ಆಚರಣೆಗಳನ್ನು ಆಚರಿಸಲು ಅರ್ಹರೋ ಅವರನ್ನು ಶ್ರೇಷ್ಠ ಜಾತಿಯವರೆಂದು, ಕ್ರಮಸಂಖ್ಯೆ ಕಡಿಮೆ ಇದ್ದಷ್ಟೂ ಕೆಳದರ್ಜೆಯವರೆಂದು ಪರಿಗಣಿಸಲಾಗುತ್ತದೆ. ಮಂತ್ರಗಳ ಬಗೆಗೂ ಒಂದು ವಿಧಾನ ಬೆಳೆದು ಬಂದಿದೆ. ಹಿಂದೂ ಧರ್ಮದಂತೆ ಒಂದೇ ಆಚರಣೆಯನ್ನು, ಶಿಷ್ಟಾಚಾರವನ್ನು ಮೂರು ವಿಧದಲ್ಲಿ ಆಚರಿಸಬಹುದು. (೧) ವೇದೋಕ್ತ (೨) ಶಾಸ್ತ್ರೋಕ್ತ (೩) ಪುರಾಣೋಕ್ತ. ವೇದೋಕ್ತದಲ್ಲಿ ವೇದಗಳ ಮಂತ್ರಗಳಿಂದ ಆಚರಿಸುತ್ತಾರೆ. ಶಾಸ್ತ್ರೋಕ್ತದಲ್ಲಿ ಶಾಸ್ತ್ರಗಳ ಮಂತ್ರಗಳನ್ನು ಉಪಯೋಗಿಸುತ್ತಾರೆ. ಮೂರನೆಯದರಲ್ಲಿ ಪುರಾಣಗಳ ಮಂತ್ರಗಳ ಸಹಾಯದಿಂದ ವಿಧಿಗಳ ಆಚರಣೆಯ ರೂಢಿ ಇದೆ. ಹಿಂದೂ ಧಾರ್ಮಿಕ ಗ್ರಂಥಗಳನ್ನು ಮೂರು ಭಾಗಗಳಲ್ಲಿ ವಿಂಗಡಿಸಬಹುದು: (೧) ನಾಲ್ಕು ವೇದಗಳು (೨) ಆರು ಶಾಸ್ತ್ರಗಳು (೩) ಹದಿನೆಂಟು ಪುರಾಣಗಳು. ಎಲ್ಲ ಗ್ರಂಥಗಳಿಗೆ ಸಾಮಾನ್ಯ ಮಾನ್ಯತೆ ಇದ್ದರೂ ಒಂದೇ ಪಾವಿತ್ರ್ಯ ಇಲ್ಲ. ವೇದಗಳಿಗೆ ಅಗ್ರಸ್ಥಾನ. ಆನಂತರ ಶಾಸ್ತ್ರಗಳಿಗೆ ಸ್ಥಾನ. ಪುರಾಣಗಳಿಗೆ ನಂತರದ ಸ್ಥಾನವಿದೆ. ಪ್ರತಿ ಜಾತಿಯ ಹಿಂದೂವಿಗೂ ವೇದ ಮಂತ್ರಗಳ ಮುಖಾಂತರ ಆಚರಣೆಯ ಹಕ್ಕಿಲ್ಲ. ಹದಿನಾರರಲ್ಲಿ ಒಂದು ಶಿಷ್ಟಾಚಾರಕ್ಕೆ ಮೂರು ಜಾತಿಗಳು ಮಾತ್ರ ಅರ್ಹವಾಗುವುವು. ಅವು ವೇದ, ಶಾಸ್ತ್ರ, ಪುರಾಣಗಳ ಮಂತ್ರಗಳಿಂದ ಆಚರಿಸಬಹುದು. ವೇದ ಮಂತ್ರಗಳು ಆ ಜಾತಿಯ ಹೆಚ್ಚಳವನ್ನು ನಿರ್ಧರಿಸಬಲ್ಲದು.

ಒಂದು ಧಾರ್ಮಿಕ ಆಚರಣೆಯ ಪೂರ್ಣ ಲಾಭ ಅದನ್ನು ನಡೆಸಿಕೊಡುವ ಪುರೋಹಿತನ ಅಂತಸ್ತಿನ ಮೇಲೆ ಅವಲಂಬಿಸಿದೆ. ಧಾರ್ಮಿಕ ಗ್ರಂಥಗಳು ಈ ಪುರೋಹಿತನು ಬ್ರಾಹ್ಮಣನಿರಬೇಕು ಎಂದು ಹೇಳುತ್ತವೆ. ಆದ್ದರಿಂದ ಬ್ರಾಹ್ಮಣನಿರದೇ ಕಾರ್ಯ ಸಾಗುವುದಿಲ್ಲ. ಯಾವ ಜಾತಿಯ ಆಮಂತ್ರಣವನ್ನು ಸ್ವೀಕರಿಸಬೇಕು ಮತ್ತು ಯಾವ ಜಾತಿಯವರದು ಸ್ವೀಕರಿಸಬಾರದು ಎಂಬುದರ ಬಗೆಗೆ ಧರ್ಮಗ್ರಂಥಗಳು ಸ್ಪಷ್ಟವಾಗಿ ಹೇಳಿಲ್ಲ. ಹೀಗಾಗಿ ಈ ನಿರ್ಣಯ ಬ್ರಾಹ್ಮಣನೇ ತೆಗೆದುಕೊಳ್ಳಬೇಕಾಗುತ್ತದೆ. ಹಿಂದಿನಿಂದಲೂ ನಡೆದು ಬಂದ ಪದ್ಧತಿಯನ್ನು ಗಮನದಲ್ಲಿಟ್ಟುಕೊಂಡು ಅವನು ನಿರ್ಧಾರ ತೆಗೆದುಕೊಳ್ಳುತ್ತಾನೆ. ಈ ಅಂಶವೂ ಜಾತಿಗಳ ದರ್ಜೆಯನ್ನು ಸೂಚಿಸುತ್ತದೆ. ಸಹಪಂಕ್ತಿ ಭೋಜನದ ಅರ್ಹತೆಯ ಆಧಾರದ ಮೇಲೆಯೂ ಹೆಚ್ಚಳವನ್ನು ನಿರ್ಧರಿಸಲಾಗುವುದು. ವಿವಾಹದ ನಿಬಂಧನೆಗಳು ಅಂತರ್ಜಾತಿ ಮತ್ತು ಸಹಭೋಜನಗಳು ಅಲ್ಲಿ ಮಹತ್ವದ್ದಾಗಿವೆ. ಸಹಭೋಜನದ ವಿಚಾರವನ್ನು ಆಚರಿಸುವುದು ಒಮ್ಮೊಮ್ಮೆ ಕಷ್ಟವಾಗಬಹುದು. ಏಕೆಂದರೆ ಮನುಷ್ಯ ಮೂಲತಃ ಸಂಚಾರಿ ಸ್ವಭಾವದವನು. ಹೀಗಾಗಿ ಎಲ್ಲ ಕಡೆಗೂ ಅವನ ಜಾತಿಯವರು ಸಿಗುವುದು ದುಸ್ತರವಾಗಬಹುದು. ಅಪರಿಚಿತರ ಮಧ್ಯ ಇರುವ ಪ್ರಸಂಗ ಬರಬಹುದು. ವಿವಾಹ ಸಂಬಂಧ ನಿರ್ಧಾರಕ್ಕೆ ಸಾಕಷ್ಟು ಸಮಯ ದೊರೆಯುತ್ತದೆ. ಆದರೆ ಊಟದ ವಿಷಯದಲ್ಲಿ ತುರ್ತತೆ ಅಗತ್ಯವಾಗುತ್ತದೆ. ಯಾವ ಜಾತಿಯವರಲ್ಲಿ ಭೋಜನ ಸ್ವೀಕಾರ ಮಾಡಬೇಕೆಂದು ನಿರ್ಧಾರ ಮಾಡಬೇಕಾಗುತ್ತದೆ. ಭೋಜನ ವಿಷಯದಲ್ಲಿ ಉಚ್ಚ ಜಾತಿಯವರಿಗೆ ಆಯ್ಕೆಯ ಅವಕಾಶಲಾಭ ಇದೆಯೇ ಹೊರತು ನೀಚ ಜಾತಿಯವರಿಗಲ್ಲ ಎಂಬುದು ನಿಯಮವಾಗುತ್ತದೆ. ಕೆಲವರನ್ನು ಬಿಟ್ಟು ಇನ್ನು ಕೆಲವೇ ಹಿಂದೂಗಳಲ್ಲಿ ಭೋಜನದ ಸ್ವೀಕಾರ ಪದ್ಧತಿ ಹೇಗೆ ಬೆಳೆದು ಬಂದಿದೆ ಎಂಬುದನ್ನು ಹೇಳುವುದು ಕಠಿಣವಾಗುತ್ತದೆ. ಪರಂಪರಾಗತವಾಗಿ ನಡೆದು ಬಂದ ಪದ್ಧತಿಯನ್ನು ಅನುಸರಿಸಲಾಗುತ್ತದೆ. ಬ್ರಾಹ್ಮಣನು ಭೋಜನ ಸ್ವೀಕರಿಸುವ ಅಂಶವು ಜಾತಿಯ ಉಚ್ಚತೆ, ನೀಚತೆಯನ್ನು ನಿರ್ಧರಿಸುತ್ತದೆ. ಅವನು ಎಲ್ಲಿ

ಭೋಜನವನ್ನು, ನೀರನ್ನು ಸ್ವೀಕರಿಸಬೇಕೆಂಬುದರ ಬಗೆಗೆ ದೀರ್ಘವಾದ ನಿಯಮಗಳಿವೆ :

೧) ಕೆಲವೇ ಜಾತಿಯ ಜನರಲ್ಲಿ ಅವನು ನೀರನ್ನು ಸ್ವೀಕರಿಸುತ್ತಾನೆ. ಇನ್ನು ಕೆಲವರಲ್ಲಿ ಹಾಗೆ ನೇರವಾಗಿ ಸ್ವೀಕರಿಸುವುದು ನಿಷಿದ್ಧವಿದೆ.

೨) ಅದರಂತೆ ಅಡುಗೆ ಸಿದ್ಧತೆಯ ಮೇಲೂ ಬಂಧನಗಳಿವೆ.

೩) ಎಣ್ಣೆ ಪದಾರ್ಥಗಳನ್ನು ಕೆಲವೇ ಜಾತಿಯವರಲ್ಲಿ ಸ್ವೀಕರಿಸುತ್ತಾನೆ.

ಊಟ ಮತ್ತು ನೀರಿನ ಪಾತ್ರೆಗಳ ಬಗೆಗೂ ನಿಯಮಗಳಿವೆ. ಕೆಲವರಲ್ಲಿ ಕೇವಲ ಮಣ್ಣಿನ ಪಾತ್ರೆ, ಮತ್ತೆ ಕೆಲವರಲ್ಲಿ ಲೋಹಪಾತ್ರೆ, ಇನ್ನೂ ಕೆಲವರಲ್ಲಿ ಗಾಜಿನ ಪಾತ್ರೆಗಳಲ್ಲಿ ಅವನು ಸ್ವೀಕರಿಸುತ್ತಾನೆ. ಈ ಅಂಶಗಳ ಮೇಲಿಂದಲೂ ಜಾತಿಯ ಮೇಲು ಕೀಳನ್ನು ನಿರ್ಧರಿಸಲಾಗುವುದು. ಗಾಜಿನ ಪಾತ್ರೆಯನ್ನು ನಿರ್ಲೇಪ ಎಂದು ತಿಳಿಯುತ್ತಿದ್ದು ಅದರಿಂದ ತೀರ ಕೆಳಜಾತಿಯವರಲ್ಲಿ ನೀರು ಕುಡಿಯಬಹುದು. ಆದರೆ ಆಯಾ ಧಾತು ಪಾತ್ರೆಗಳು ಆಯಾ ಜಾತಿಯ ಮೇಲುಕೀಳನ್ನು ಅಂತಸ್ತನ್ನು ಸೂಚಿಸುತ್ತಿದ್ದವು. ಈ ಸಂಗತಿಗಳು ಒಟ್ಟು ಹಿಂದೂ ಜಾತಿಯ ವ್ಯವಸ್ಥೆಯನ್ನು ಸೂಚಿಸುತ್ತಿದ್ದವು.

ಹಿಂದೂ ಜಾತಿಯ ವ್ಯವಸ್ಥೆಯನ್ನು ತಿಳಿದುಕೊಳ್ಳಲು ಇಷ್ಟೇ ಸಾಕೆ? ಎಂದು ಒಮ್ಮೊಮ್ಮೆ ಅನಿಸುತ್ತದೆ. ಈ ಜಾತಿ ವ್ಯವಸ್ಥೆಯನ್ನು ಟೆನಿಸ್ ಚೆಂಡುಗಳ ಒಂದು ಸರಕ್ಕೆ ಹೋಲಿಸಬಹುದು. ಚೆಂಡುಗಳು ಒಂದೇ ಸರದಲ್ಲಿದ್ದರೂ ಒಂದಕ್ಕೊಂದು ಪರಸ್ಪರ ಅಂತರವನ್ನು ಕಾಯ್ದುಕೊಂಡು ಬರುತ್ತವೆ. ಜಾತಿ ಪದ್ಧತಿಯ ಆಚರಣೆಯನ್ನು ಅರಿಯುವ ಇನ್ನೊಂದು ಮಾರ್ಗವೆಂದರೆ ವರ್ಗಭೇದ, ಜಾತಿಭೇದಗಳ ವ್ಯವಸ್ಥೆ. ಇದು ಸಾಕಷ್ಟು ವಿವಾದಗಳಿಗೆ ಎಡೆಮಾಡಿಕೊಟ್ಟಿದೆ. ಎರಡೂ ಒಂದೇ ಎನ್ನುವವರೂ ಇದ್ದಾರೆ. ಆದರೆ ಈ ವಿಚಾರಗಳು ವಿರೋಧಾತ್ಮಕ ಅಂಶಗಳಿಂದ ಕೂಡಿವೆ ಎಂದು ಅಭಿಪ್ರಾಯಪಡುವವರೂ ಇದ್ದಾರೆ. ಆದರೆ ಜಾತಿಭೇದವು ವರ್ಣಭೇದಗಳನ್ನು ನಿರ್ಮಿಸುತ್ತದೆ ಎಂಬುದಂತೂ ಸುಳ್ಳಲ್ಲ. ಹಿಂದೂ ಜಾತಿಯಲ್ಲಿಯೇ ವಿವಿಧ ಭೇದಗಳಿದ್ದಂತೆ ಉಳಿದ ಜಾತಿಗಳಲ್ಲಿಯೂ ಹಲವು ವರ್ಗಗಳುಂಟು. ಹಿಂದೂ ಯಾವಾಗಲೂ ತನ್ನ ಜಾತಿಯ ಬಗೆಗೆ ಎಚ್ಚರವಾಗಿರುತ್ತಾನೆ. ಪ್ರಜ್ಞಾವಂತನಾಗಿರುತ್ತಾನೆ. ಅದರಂತೆ ವರ್ಗಭೇದಗಳ ಬಗೆಗೆ ಅವನಿಗೆ ಅರಿವು ಇರುತ್ತದೆ. ಜಾತಿಭೇದದ ತಿಕ್ಕಾಟದ ಸಮಯದಲ್ಲಿ ಈ ವಿಷಯದ ಬಗೆಗೆ ಅವನ ನಿಲುವು ತಿಳಿಯುತ್ತದೆ. ತನ್ನ ಜಾತಿಯವರಲ್ಲಿಯೇ ಈ ತಿಕ್ಕಾಟ ಬಂದಾಗ ಅವನ ಜಾತಿಯ ಬಗೆಗೂ ಅವನು ಧೋರಣೆಯನ್ನು ತೋರಿಸುತ್ತಾನೆ. ಇದರ ಬಗೆಗೆ ಯಾರಿಗಾದರೂ ಪುರಾವೆಗಳು ಬೇಕಿದ್ದಲ್ಲಿ ಮದರಾಸು ಮತ್ತು ಮುಂಬೈ ರಾಜ್ಯಗಳ ಬ್ರಾಹ್ಮಣೇತರರ ಚಳವಳಿಯನ್ನು ಅಧ್ಯಯನ ಮಾಡಬೇಕು. ಈ ಅಧ್ಯಯನದಿಂದ ವರ್ಗ ಮತ್ತು ಜಾತಿಭೇದಗಳ ಪರಿಧಿಯ ಬಗೆಗೆ ಯಾವ ಶಂಕೆಯೂ ಉಳಿಯಲಾರವು.

ವರ್ಣಭೇದ ವ್ಯವಸ್ಥೆಯಿಂದ ಜಾತಿ ವ್ಯವಸ್ಥೆ ನಿರ್ಮಾಣವಾಯಿತು ಎಂಬುದು ಎಷ್ಟು ಅರ್ಥವಿಹೀನ ಮಾತು ಎಂಬುದನ್ನು ನಾನು ಮುಂದೆ ವಿವರಿಸುತ್ತೇನೆ.

ವರ್ಣ ವ್ಯವಸ್ಥೆಯ ವಿಕಾಸವೇ ಜಾತಿ ಎಂದು ಹೇಳಲಾಗಿದೆ. ಇದು ಅವಿವೇಕ ಎಂಬುದನ್ನು ನಂತರ ತೋರಿಸುತ್ತೇನೆ. ಜಾತಿಯು ವರ್ಣವ್ಯವಸ್ಥೆಯ ಒಂದು ವಿಕೃತ ರೂಪ. ಹೇಗೆ ನೋಡಿದರೂ, ಇದು ವಿರೋಧ ದಿಕ್ಕಿನಲ್ಲಿ ಆದ ವಿಕಾಸವೇ. ವರ್ಣ ವ್ಯವಸ್ಥೆಯನ್ನು ಜಾತಿ ಸಂಪೂರ್ಣವಾಗಿ ವಿಕೃತಗೊಳಿಸಿತು. ಆದರೆ ಅದು ವರ್ಗ ವ್ಯವಸ್ಥೆಯನ್ನು ವರ್ಣ ವ್ಯವಸ್ಥೆಯಿಂದಲೇ ಎರವಲು ಪಡೆಯಿತು. ವರ್ಗ–ಜಾತಿ ವ್ಯವಸ್ಥೆಯು, ವರ್ಣ ವ್ಯವಸ್ಥೆಯ ವರ್ಗ ಒಡಕುಗಳನ್ನು ತೀರ ನಿಕಟವಾಗಿ ಅನುಸರಿಸಿದೆ.

ಈ ದೃಷ್ಟಿಕೋನದಿಂದ ಜಾತಿ ವ್ಯವಸ್ಥೆಯನ್ನು ನೋಡಿದರೆ, ಜಾತಿಯ ಪಿರಮಿಡ್ಡುಗಳನ್ನು, ಈ

ಪಿರಮಿಡ್ಡುಗಳು ಒಡೆದು ಮತ್ತೆ ಬಣಗಳಾಗಿರುವುದನ್ನು ಇವೇ ವರ್ಗ ಒಡಕುಗಳಾಗಿರುವುದನ್ನು ಕಾಣಬಹುದು. ಈ ಒಡಕಿನ ಮೊದಲ ಬಿರುಕು ಕಾಣಿಸುವುದು ಪುರಾತನ ಚಾತುರ್ವರ್ಣ ವ್ಯವಸ್ಥೆಯಲ್ಲಿ. ಬ್ರಾಹ್ಮಣ, ಕ್ಷತ್ರಿಯ ಮತ್ತು ವೈಶ್ಯ – ಈ ಮೂವರು ಒಂದು ಕಡೆ ಆದರೆ ಶೂದ್ರರು ಮಾತ್ರ ಸುಧಾರಿಸದ, ಪುನರುಜ್ಜೀವಗೊಳಿಸಲಾಗದ ವರ್ಗಕ್ಕೆ ಸೇರಿದವರು. ಮೊದಲಿನ ಮೂರು ವರ್ಗದವರು ಪವಿತ್ರ ದಾರ (ಜನಿವಾರ) ಧಾರಣೆ ಮತ್ತು ವೇದಾಧ್ಯಾಯನಗಳ ಅಂಶಗಳಲ್ಲಿ ಶೂದ್ರರಿಂದ ಸಂಪೂರ್ಣವಾಗಿ ಬೇರ್ಪಡುತ್ತಾರೆ. ಆದ್ದರಿಂದ ಅವರನ್ನು ಪುನರುಜ್ಜೀವಗೊಳಿಸಲಾಗದ ವರ್ಗ ಎಂದು ಪರಿಗಣಿಸಲಾಗುತ್ತದೆ. ಈ ಅಂತರ ವರ್ತಮಾನ ಸ್ಥಿತಿಯಲ್ಲಿಯೂ ಬೆಳೆದುಕೊಂಡು ಬಂದಿದೆ. ಈ ಅಂತರವು ಜಾತಿ ಮತ್ತು ವರ್ಗಗಳಲ್ಲಿ ಮೇಲು ಕೀಳನ್ನು ಸೂಚಿಸಿಕೊಂಡು ಬಂದಿದೆ.

ಈ ಒಡಕಿನ ನಂತರ ಕಾಣುವುದೇ ವರ್ಗ ಒಡಕಿನ ಪಿರಮಿಡ್ಡು. ಕೆಳ ವರ್ಗಗಳ ಜಾತಿಗಳ ತಳದಲ್ಲಿಯೇ ಇದು ನಿರ್ಮಾಣವಾಗಿದೆ. ಚಾತುರ್ವರ್ಣ್ಯಗಳಿಂದ ಹುಟ್ಟಿದ ಎಲ್ಲ ಜಾತಿಗಳ ಮೇಲೆ ಇದು ರೂಪ ತಳೆಯುತ್ತದೆ. ಅಂದರೆ, ಉಳಿದ ಜಾತಿಗಳಲ್ಲಿ ಮೇಲ್ ಜಾತಿಗಳು ಮತ್ತು ಕೆಳಜಾತಿಗಳಲ್ಲಿ ಈ ಪಿರಮಿಡ್ಡು ಇರುತ್ತದೆ. ಈ ಜಾತಿಗಳನ್ನು ನಾನು ಕೇವಲ 'ಉಳಿದ ಜಾತಿಗಳು' ಎಂದು ಹೆಸರಿಸುತ್ತೇನೆ. ಈ ವರ್ಗದ ಒಡಕೇ ವಾಸ್ತವವಾದದ್ದು ಮತ್ತು ಚಾತುರ್ವರ್ಣ ಪದ್ಧತಿಯ ಸ್ಪಷ್ಟ, ಮೂಲತತ್ವಗಳನ್ನು ಆಧರಿಸಿದ್ದು. ಈ ಚಾತುರ್ವರ್ಣ್ಯ ಪದ್ಧತಿ ನಾಲ್ಕು ವರ್ಣಗಳಲ್ಲಿ ಸ್ಪಷ್ಟ ಭೇದವನ್ನು ಮಾಡುತ್ತದೆ; ನಾಲ್ಕನೇ ವರ್ಣದ ಮೇಲೆ ಮೂರು ವರ್ಣಗಳನ್ನು ಸ್ಥಾಪಿಸುತ್ತದೆ. ಜೊತೆಗೆ ಚಾತುರ್ವರ್ಣ್ಯದ ಒಳಗೆ ಮತ್ತು ಚಾತುರ್ವರ್ಣ್ಯದ ಹೊರಗೆ ಸ್ಪಷ್ಟ ಭೇದವನ್ನೂ ಇದು ಕಲ್ಪಿಸುತ್ತದೆ. ಈ ಭೇದವನ್ನು ಹೇಳುವ ಪರಿಭಾಷೆಯೂ ಇದಕ್ಕಿದೆ. ಚಾತುರ್ವರ್ಣ್ಯದ ಒಳಗಿರುವವರು–ಮೇಲಾಗಲಿ, ಕೀಳಾಗಲಿ, ಬ್ರಾಹ್ಮಣರಾಗಲಿ, ಶೂದ್ರರಾಗಲಿ ಅವರನ್ನು ಸವರ್ಣೀಯರೆಂದು ಕರೆಯಲಾಗುತ್ತದೆ. ಅಂದರೆ ವರ್ಣದ ಮುದ್ರೆ ಬಿದ್ದವರು. ಚಾತುರ್ವರ್ಣ್ಯದ ಹೊರಗಿನವರನ್ನು ಅವರ್ಣೀಯರೆಂದು ಕರೆಯಲಾಗುತ್ತದೆ. ಅಂದರೆ ವರ್ಣದ ಮುದ್ರೆ ಇಲ್ಲದವರು.

ಚಾತುರ್ವರ್ಣ್ಯ ಪದ್ಧತಿಯ ಪರಿಧಿಯಲ್ಲಿ ಬರುವವರಿಗೆ ಸವರ್ಣೀಯರೆಂದು ಮತ್ತು ಪರಿಧಿಯ ಹೊರಗೆ ಬರುವವರಿಗೆ ಅವರ್ಣೀಯರೆಂದು ಕರೆಯಲಾಯಿತು. ಜಾತಿಯಿಂದ 'ಹಿಂದೂ' ಎನ್ನುವ ಶಬ್ದ ಹೀಗೆ ರೂಪಿತವಾಯಿತು. ಅವರ್ಣೀಯರೆಂದರೆ ಯೂರೋಪಿಯನ್ನರು–ಹಿಂದೂಯೇತರರು ಎಂದು ಕರೆಯಲಾಯಿತು. ಸವರ್ಣೀಯ ಹಿಂದೂಗಳನ್ನು ಕುರಿತು ಬಹಳ ಬರೆಯಲಾಗಿದೆ. ಅವರ್ಣೀಯರ ಬಗೆಗೆ ಬಹಳ ವಿಷಯ ತಿಳಿದುಬಂದಿಲ್ಲ. ಹಿಂದೂ ಸಮಾಜದಲ್ಲಿ ಸವರ್ಣೀಯರ ಜೊತೆಗೆ ಇವರಿಗಿರುವ ಸಂಬಂಧ, ಅವರ ಸ್ಥಾನಮಾನ – ಈ ಅಂಶಗಳ ಬಗೆಗೆ ಸಾಕಷ್ಟು ಗಮನ ಹರಿದಿಲ್ಲ. ಈ ಎಲ್ಲ ವಿವರಗಳನ್ನು ತಿಳಿಯದೆ ಹಿಂದೂಗಳು ಕಟ್ಟಿದ ಈ ಸಾಮಾಜಿಕ ರಚನೆಯ ಬಗೆಗೆ ನಿಜವಾದ ಚಿತ್ರ ದೊರೆಯುವುದಿಲ್ಲ. ಲೇಖಕ ಗ್ರಿಮ್‌ನು ಬರೆದ 'ಗಂಧರ್ವಕತೆ'ಯಲ್ಲಿಯ ಮಾಟಗಾತಿ ಭೂತ ಮತ್ತು ನರಭಕ್ಷಕ ದೈತ್ಯ ವಿವರಗಳನ್ನು ತಿಳಿಯದೆ ಆ ಕಥೆಯನ್ನು ತಿಳಿಯಲು ಹೋದಂತೆ, ಹಿಂದೂ ಸಮಾಜವನ್ನು ಅರಿಯುವ ಪ್ರಯತ್ನವಾದಂತಾಗುತ್ತದೆ. ಅವರ್ಣೀಯರಲ್ಲಿ (೧) ಪುರಾತನ ಜಾತಿ (೨) ಅಪರಾಧಿ ಪ್ರವೃತ್ತಿಯ ಜಾತಿ (೩) ಅಸ್ಪೃಶ್ಯ ಜಾತಿಗಳು. ಹೀಗೆ ಮೂರು ವರ್ಗಗಳ ಜನಸಂಖ್ಯೆ ಕಡಿಮೆಯೇನಿಲ್ಲ. ೧೯೩೧ ರ ಜನಗಣತಿಯ ಪ್ರಕಾರ ಪುರಾತನ ಜನಾಂಗಗಳ ಜನಸಂಖ್ಯೆ ೨೫ ಮಿಲಿಯ ಆಗಿತ್ತು. ಅಪರಾಧಿ ಜಾತಿ ೪ ೧/೨ ದಶಲಕ್ಷ, ಅಸ್ಪೃಶ್ಯ ಜಾತಿ ೫೦ ದಶಲಕ್ಷವಾಗಿತ್ತು. ಮೂರೂ ಸೇರಿ ೭೯ ೧/೨ ದಶಲಕ್ಷ ಜನ ಸಂಖ್ಯೆಯಾಗಿತ್ತು.

ಸವರ್ಣೀಯ ಮತ್ತು ಅವರ್ಣೀಯರ ಪರಸ್ಪರ ಸಂಬಂಧಗಳನ್ನು ವಿಷಮತೆಗಳ ಪರಿಣಾಮಗಳಲ್ಲಿ ಏಕರೂಪತೆ ಇಲ್ಲದಿರುವದರಿಂದ ತಿಳಿದುಕೊಳ್ಳಲು ಸುಲಭವಾಗುವುದಿಲ್ಲ. ಸವರ್ಣೀಯರಲ್ಲಿಯ ವಿಷಮತೆಯಂತೆ, ಅವರ್ಣೀಯರಲ್ಲಿಯೂ ಅದರಲ್ಲಿಯೂ ಅಸ್ಪೃಶ್ಯರೊಡನೆ ಇರುವ ಅಂತರ ವಿಷಮತೆ ಗಮನೀಯವಾಗುತ್ತದೆ. ಹೊಂದಿಕೆಯಾದ ಸಂಬಂಧವಿರುತ್ತದೆ ಎಂಬುದು ಬಂಧುಗಳು ಮತ್ತು ಸ್ನೇಹಿತರಲ್ಲಿ ಕಾಣಸಿಗುತ್ತದೆ.

ಈ ರೀತಿ ವಿಷಮತೆ ಅಥವಾ ಅಂತರದ ಆಧಾರವೇನು? ಇದನ್ನು ವ್ಯಾಖ್ಯಾನಿಸಲು ಆಗಿಲ್ಲ. ದ್ವಿಜರು ಮತ್ತು ಶೂದ್ರರ ಮಧ್ಯೆ ಇರುವ ಅಂತರವೇ ಇದಾಗಿದೆ. ಶೂದ್ರರಂತೆ ಅವರ್ಣೀಯರು ಸುಧಾರಿಸಲಾಗದ ಜನರಿಂದ ಕೂಡಿದ್ದಾರೆ. ಅವರಿಗೆ ಜನಿವಾರ ಧರಿಸುವ ಹಕ್ಕಿಲ್ಲ. ಶೂದ್ರರು ಮತ್ತು ಅಪರಾಧಿ ಪ್ರವೃತ್ತಿಯ ಜನರ ಮಧ್ಯದಲ್ಲಿರುವ ಅಂತರ ಬಹಳ ಸೂಕ್ಷ್ಮ. ಸಂಸ್ಕೃತಿಯ ಮಟ್ಟದಲ್ಲಿಯೂ ಇದನ್ನು ಗುರುತಿಸಬಹುದು. ಸತ್‌ಶೂದ್ರರೂ ಮತ್ತು ಶೂದ್ರರು ಎಂಬ ಎರಡು ವಿಭಾಗಗಳನ್ನು ಮಾಡಿದರು. ಈ ಹೊಸ ಶಬ್ದ ಹೆಚ್ಚಿಗೇನೂ ಸೂಚಿಸಲಿಲ್ಲ. ಶೂದ್ರರ ಹಕ್ಕುಗಳು ಮತ್ತು ಕರ್ತವ್ಯಗಳಲ್ಲಿ ಯಾವ ವ್ಯತ್ಯಾಸವನ್ನೂ ಮಾಡಲಿಲ್ಲ.


ಅವರ್ಣೀಯ ಜಾತಿಗಳ ನಡುವಣ ಪರಸ್ಪರ ಸಂಬಂಧವೇನು? ಅವುಗಳಿಗೆ ಅಸ್ತಿತ್ವ ಇದೆಯೆ? ಅಥವಾ ಅವು ಕೇವಲ ಜಾತಿಗಳ ಒಂದು ಸಮೂಹವೇ? ಅವು ಖಂಡಿತವಾಗಿಯೂ ಜಾತಿಗಳ ಒಂದು ಸಮೂಹ. ಈ ಜಾತಿಗಳ ನಡುವೆ ವರ್ಗಗಳಿರುವುದು ಖಚಿತ. ಆದಿಮ ಜಾತಿಗಳು ಮತ್ತು ಅಪರಾಧ ಪ್ರವೃತ್ತಿಯ ಜಾತಿಗಳ ಮಧ್ಯೆ ವರ್ಗ ವ್ಯತ್ಯಾಸವಿದೆಯೇ ಎಂಬುವ ವಿಚಾರದಲ್ಲಿ ಅನುಮಾನಕ್ಕೆ ಎಡೆಯಿದೆ. ಬಹುಶಃ ಈ ವರ್ಗ ವ್ಯತ್ಯಾಸ ಬಹಳ ಮಸುಕು ಮಸುಕಿನದು. ಆದರೆ ಆದಿಮ ಜಾತಿಗಳು, ಅಪರಾಧ ಪ್ರವೃತ್ತಿಯ ಜಾತಿಗಳು ಮತ್ತು ಅಸ್ಪೃಶ್ಯರ ನಡುವೆ ವರ್ಗ ವ್ಯತ್ಯಾಸ ಬಹಳ ಸ್ಪಷ್ಟವಾಗಿಯೇ ಇದೆ. ಆದಿಮ ಮತ್ತು ಅಪರಾಧ ಪ್ರವೃತ್ತಿಯ ಜಾತಿಗಳು ತಾವು ಅವರ್ಣೀಯ ಜಾತಿಗಳಲ್ಲಿ ಅಸ್ಪೃಶ್ಯರಿಗಿಂತ ಮೇಲ್ವರ್ಗದ ಜಾತಿಗಳು ಎಂಬ ಭಾವನೆಯನ್ನು ಇಟ್ಟುಕೊಂಡಿವೆ.

ಮೇಲಿನ ಚರ್ಚೆಯಿಂದ ಮೂರು ಮುಖ್ಯ ಅಂಶಗಳು ಬೆಳಕಿಗೆ ಬರುವುವು. (೧) ಜಾತಿ (೨) ಕ್ರಮಬದ್ಧವಾದ ಜಾತಿವ್ಯವಸ್ಥೆ (೩) ಜಾತಿವ್ಯವಸ್ಥೆಯನ್ನು ವಿಶ್ಲೇಷಿಸುವ ಒಂದು ವರ್ಗ ವ್ಯವಸ್ಥೆ.

ಈ ಕಟ್ಟಣದ ಸ್ವರೂಪ ನಿಸ್ಸಂಶಯವಾಗಿಯೂ ತೀರ ಸಂಕೀರ್ಣವಾದುದು. ಮಾನಸಿಕವಾಗಿ ಇದರ ಒಟ್ಟು ಚಿತ್ರ ರೂಪಿಸಿಕೊಳ್ಳುವುದು ಕಷ್ಟವಾಗುತ್ತದೆ. ಆಕೃತಿಯ ಮುಖಾಂತರ ಪ್ರಯೋಜನವಾಗಬಹುದು. ಈ ಕೆಳಗಿನ ವಿವರ ಹಿಂದೂಗಳ ಸಾಮಾಜಿಕ ಸಂಘಟನೆಯ ಕಲ್ಪನೆ ಕೊಡಬಹುದು.

ಹಸ್ತ ಪ್ರತಿಯಲ್ಲಿ ಈ ಆಕೃತಿಯನ್ನು ಹಾಗೇ ಖಾಲಿ ಬಿಡಲಾಗಿದೆ – ಸಂ.

| ಜಾತಿಯಿಂದ ಹಿಂದೂ ಗಳು ಸವರ್ಣೀಯ ಜಾತಿಗಳು | ಹಿಂದೂ ಜಾತಿ ಸವರ್ಣೀಯ | ಹಿಂದೂ ಅವರ್ಣೀಯ | ಅಹಿಂದೂ |
|---|---|---|---|
| ವರ್ಗ I<br>ಉಚ್ಚಜಾತಿಗಳು<br>ದ್ವಿಜರು–ಬ್ರಾಹ್ಮಣ, ಕ್ಷತ್ರಿಯ ಮತ್ತು ವೈಶ್ಯರೆಂಬ ವರ್ಣಾಶ್ರಮ ವ್ಯವಸ್ಥೆಯಿಂದ ಬಂದವರು | ವರ್ಗ II<br>ಕೆಳಜಾತಿ<br>ಶೂದ್ರರು<br>ನಾಲ್ಕನೇ ವರ್ಣ ಶೂದ್ರರಿಂದ ಬಂದವರು | ವರ್ಗ III<br>ಅನಾಗರಿಕ<br>(Primitive)<br>ಅಪರಾಧೀ ಜಾತಿ<br>(Criminal) | ವರ್ಗ IV<br>ಅಸ್ಪೃಶ್ಯರು |




ಈ ನಕ್ಷೆಯು ಹಿಂದೂಗಳ ವರ್ಣ–ಜಾತಿ ವ್ಯವಸ್ಥೆಯ ಒಂದು ನಿಜವಾದ ಮತ್ತು ಪೂರ್ಣವಾದ ಚಿತ್ರವನ್ನು ಕೊಡಲು ಸಾಧ್ಯವಾಗಬಹುದು. ಈ ರೇಖಾಚಿತ್ರ ಹಿಂದೂ ಸಮಾಜ ವ್ಯವಸ್ಥೆಯ ಹಲವಾರು ಮಹತ್ವದ ಗುಣಾಂಶಗಳನ್ನು ಹೊರತರುತ್ತದೆ. ಹಿಂದೂಗಳಲ್ಲಿ (೧) ಸವರ್ಣ (೨) ಅವರ್ಣ ಎಂಬ ಎರಡು ಭಾಗಗಳಿವೆ. ಮೊದಲನೆಯದರಲ್ಲಿ ದ್ವಿಜರು ಮತ್ತು ಶೂದ್ರರು ಎಂಬ ಎರಡು ಭಾಗಗಳಿವೆ. ಎರಡನೆಯದರಲ್ಲಿ ಆದಿಕಾಲದ ಅಥವಾ ಪ್ರಾಚೀನ ಮತ್ತು ಅಪರಾಧೀ ಪ್ರವೃತ್ತಿಯ ಜಾತಿಗಳಿವೆ. ಒಂದು ಜಾತಿಯಿಂದ ಇನ್ನೊಂದು ಜಾತಿಯನ್ನು ಬೇರ್ಪಡಿಸಲಾಗಿದೆ. ನಾಲ್ಕು ವರ್ಣಗಳಲ್ಲಿ ಈ ಜಾತಿಗಳನ್ನು ವಿಂಗಡಿಸಲಾಗಿದೆ. ಇದನ್ನು ರೇಖಾಚಿತ್ರದಲ್ಲಿ ತೋರಿಸಲಾಗಿಲ್ಲ. ಜಾತೀಯ ವರ್ಗಗಳನ್ನು ಚೌಕದಲ್ಲಿ ಭಿನ್ನ ಭಿನ್ನವಾಗಿ ತೋರಿಸಲಾಗಿದೆ. ಮೇಲಿನ ವಿಭಾಗದ ಕೆಲವು ಆವರಣಗಳು ಕಾಯಂ ಆಗಿವೆ. ಇನ್ನೂ ಕೆಲವು ಕೆಲಕಾಲ ಉಳಿಯಬಲ್ಲವು. ದ್ವಿಜರು ಮತ್ತು ಶೂದ್ರರ ನಡುವಣ ವಿಭಜನೆ ವಿಭಜನೆಯೇ ಅಲ್ಲ. ಅದೊಂದು ತೆರೆ ಮಾತ್ರ. ಅವರನ್ನು ಪ್ರತ್ಯೇಕವಾಗಿ ಇಡಲು ಮಾಡಿದ ಉಪಾಯ. ಶೂದ್ರ ಜಾತಿಗಳು ಮತ್ತು ಅವರ್ಣೀಯ ಜಾತಿಗಳಲ್ಲಿ ಮೊದಲಿನ ಎರಡು ಜಾತಿಗಳ ನಡುವೆ ಆದ ವಿಭಜನೆ ಮಾತ್ರ ಕ್ರಮಬದ್ಧವಾದದ್ದು. ಆದರೆ ಇದು ಚಿಕ್ಕದು ಮತ್ತು ತೆಳುವಾದದ್ದು. ಇದು ದಾಟಬಹುದಾದದ್ದು. ವಿಭಜನೆ ಬೇರ್ಪಡಿಸುತ್ತದೆ. ಆದರೆ ವಿಚ್ಛೇದನಕ್ಕೆ ಅವಕಾಶ ಕಲ್ಪಿಸುವುದಿಲ್ಲ. ಇದೆಲ್ಲಕ್ಕಿಂತ ಮೊದಲಿನ ಮೂರು ವರ್ಣಾಶ್ರಮದ ಜನರು ಅಸ್ಪಶ್ಯ ಜಾತಿಯವರೊಡನೆ ನಿರ್ಮಿಸಿಕೊಂಡ ಅಂತರ ಮಾತ್ರ ವಾಸ್ತವವಾದದ್ದು ಮತ್ತು ತೆಗೆದುಹಾಕಲು ಸಾಧ್ಯವಿಲ್ಲದ್ದು. ಇದೊಂದು ಮುಳ್ಳಿನ ಬೇಲಿ. ಇದರ ಉದ್ದೇಶ ವಿಚ್ಛೇದನವೇ. ಮೊದಲಿನ ಮೂರು ಸವರ್ಣೀಯ ಹೊಂದಾಣಿಕೆ ಒಂದೊಂದು ರೀತಿಯಲ್ಲಿ ಸಾಧ್ಯವಿದೆ. ಈ ವಿಂಗಡಣೆಗಳನ್ನು ಹೊಂದಾಣಿಕೆ ಮಾಡಬಹುದು. ಆದರೆ ಮೂರನೇ ವಿಭಾಗ ಅಸ್ಪೃಶ್ಯರ ಜೊತೆಗೆ ಹೊಂದಾಣಿಕೆ ಸಾಧ್ಯವಿಲ್ಲ. ಈ ಬೆರಳಚ್ಚಿನ ಪ್ರತಿಯಲ್ಲಿ ಸ್ಥಳವನ್ನು ಉದ್ದೇಶಪೂರ್ವಕವಾಗಿ ಖಾಲಿ ಬಿಡಲಾಗಿದೆ ('ಒಂದು' – ಈ ಶಬ್ದ

* ಹಸ್ತಪ್ರತಿಯಲ್ಲಿ ಈ ಆಕೃತಿಯನ್ನು ಹಾಗೇ ಖಾಲಿ ಬಿಡಲಾಗಿದೆ – ಸಂ.

ನಾವು ಉಪಯೋಗಿಸಿದ್ದೇವೆ – ಸಂ). ಈ ಎಲ್ಲರೂ ಸೇರಿ 'ಒಂದು' ಎಂಬ ಭಾವನೆಯನ್ನು ತರಲು ಉಳಿದ ಜಾತಿಯಿಂದ ವಿಭಜಿಸಲು ಉಪಯೋಗಿಸುವ ದುಷ್ಟ ಮತ್ತು ಅತಿ ನಿಂದ್ಯವಾದ ವಿಭಜನ ಕ್ರಮ. ಅವರನ್ನು ಸಮಾಜದಿಂದ ಹೇಗೆ ದೂರ ಮತ್ತು ಹೊರಗೆ ಇಟ್ಟಿದೆ ಎಂದು ತೋರಿಸಲು ಇದನ್ನು ಬಳಸಲಾಗುತ್ತದೆ.

ರೇಖಾಚಿತ್ರ ತೋರಿಸುವ ವಿವಿಧ ವರ್ಗಗಳು ಮತ್ತು ಜಾತಿಗಳ ಕ್ರಮಾಂಕ ಜಾತಿಯ ಪದ್ಧತಿ ವಿಶಿಷ್ಟತೆ. ಸವರ್ಣೀಯರಲ್ಲಿಯೇ ಉಚ್ಚ ಮತ್ತು ನೀಚ ವರ್ಗದವರಿರುವ ವಿಷಯವನ್ನು ನಾನು ವಿವರಿಸಿದ್ದೇನೆ. ಅವರ್ಣೀಯರಲ್ಲಿ ನಾನು ಭೇದವನ್ನು ತೋರಿಸಿಲ್ಲ. ಸಾಮಾಜಿಕ ದೃಷ್ಟಿಯಲ್ಲಿ ಅವರು ಕೆಳಜಾತಿಯವರಾಗಿರಬಹುದು. ಉಚ್ಚ, ಮಧ್ಯಮ, ನೀಚ, ತೀರ ಕೆಳದರ್ಜೆ – ಹೀಗೆ ವಿವರಿಸುವುದು ಒಂದು ಅರ್ಥದಲ್ಲಿ ತಪ್ಪು. ಏಕೆಂದರೆ ಎಲ್ಲರೂ ಕೂಡಿಯೇ ಒಟ್ಟು ಸಮಾಜವಾಗಿರುತ್ತದೆ. ಆದರೆ ಅವರ್ಣ ಮತ್ತು ಸವರ್ಣ ಜಾತಿಗಳು ಈ ಪೂರ್ಣತೆಯ ಭಾಗಗಳೇ ? ಇಲ್ಲ, ಹಾಗಾಗಲಿಲ್ಲ. ಪ್ರಾಚೀನ ಯುಗದ ಮತ್ತು ಅಪರಾಧಿ ಜಾತಿಗಳ ವಿಭಜನೆ ವರ್ಣಾಶ್ರಮದಲ್ಲಿ ಇರಲಿಲ್ಲ. ಅಸ್ಪೃಶ್ಯರನ್ನು ಕುರಿತು ಹಾಗೆ ಹೇಳಲಾಗುವುದಿಲ್ಲ. ಅವರು ವರ್ಣಾಶ್ರಮದ ಅವಿಭಾಜ್ಯ ಅಂಗವಾಗಿದ್ದರು. ಹಿಂದೂ ಧರ್ಮದ ಕಾನೂನುಗಳನ್ನು ಹೇಳಿದ ಮನು ವರ್ಣಗಳಲ್ಲಿ ಕೇವಲ ನಾಲ್ಕು, ಐದನೆಯದು ಎಂದು ಮತ್ತಾವುದಿಲ್ಲ ಎಂದು ಸ್ಪಷ್ಟವಾಗಿ ಹೇಳುತ್ತಾನೆ. ಗಾಂಧೀಜಿಯವರ ಸುಧಾರಣಾವಾದಿ ಮಿತ್ರರು ಅಸ್ಪೃಶ್ಯತೆಯನ್ನು ನಿರ್ಮೂಲ ಮಾಡುವ ಭರದಲ್ಲಿ ಮನುವಿನ ಅರ್ಥವನ್ನು ತಪ್ಪು ತಿಳಿಯಲಾಗಿದೆ ಎಂದು ವಾದಿಸುತ್ತಾರೆ. ಮನುವಿನಂತೆ ಅಸ್ಪೃಶ್ಯರು ನಾಲ್ಕು ವರ್ಣಗಳಲ್ಲಿ ಒಂದಾದ ಶೂದ್ರರಲ್ಲಿ ಬರುತ್ತಾರೆ ಎಂದು ಅರ್ಥೈಸುತ್ತಾರೆ. ಮನುವು ಈ ಅಸ್ಪೃಶ್ಯರನ್ನು ಶೂದ್ರರೆಂದು ನಾಲ್ಕನೆಯ ವರ್ಣದಲ್ಲಿ ಉದ್ದೇಶಪೂರ್ವಕವಾಗಿ ಸೇರಿಸಿದ್ದಾನೆ. ಐದನೆಯ ವರ್ಗವನ್ನು ನಿರ್ಮಿಸಿಲ್ಲ. ಮೂಲತಃ ನಾಲ್ಕೇ ವರ್ಣಗಳು ಇದ್ದು ಪುರಾತನರು ಕಟ್ಟಿದ ಈ ಹಿಂದೂ ಸಮಾಜದ ಸೌಧದಲ್ಲಿ ಅಸ್ಪೃಶ್ಯರನ್ನು ಐದನೆಯ ವರ್ಣವೆಂದು ನಿರ್ಮಾಣ ಮಾಡಿ ಗುರುತಿಸುವುದು ಅವನ ಉದ್ದೇಶವಾಗಿರಲಿಲ್ಲ. ಅದಕ್ಕೆಂದೇ ನಾಲ್ಕೇ ವರ್ಣಗಳಿಗೆ ಜಾತಿಗಳನ್ನು ಸೀಮಿತಗೊಳಿಸಿದನು. ಉದ್ದೇಶಪೂರ್ವಕವಾಗಿ ಅವನು ಅವರನ್ನು ಹಿಂದೂ ಸಮಾಜದ ಸಂಘಟನೆಯಿಂದ ಹೊರಗೆ ಇಟ್ಟನು. ಅವರನ್ನು 'ವರ್ಣ ಬಾಹ್ಯ'ರೆಂದು ಕರೆಯುತ್ತಾನೆ. ಪುರಾತನ ಮತ್ತು ಅಪರಾಧೀ ಜಾತಿಗಿಂತ ಇದು ಭಿನ್ನವಾಗಿದೆ. ಯಾವುದೇ ಅಡೆತಡೆ ಇಲ್ಲವಾದ್ದರಿಂದ ಅವರು ಹಿಂದೂಗಳಾಗಿ ಕಾಲಕ್ರಮೇಣ ಪ್ರವೇಶಿಸಲು ಅವಕಾಶ ಉಂಟು. ಹಿಂದೂ ಸಮಾಜಕ್ಕೆ ಒಂದಲ್ಲ ಒಂದು ರೀತಿಯಲ್ಲಿ ಅವರ ಸಂಪರ್ಕವಿದೆ. ಹೀಗಾಗಿ ಅವರು ಹಿಂದೂ ಸಮಾಜದ ಭಾಗವಾಗಬಹುದಾದ ಸಾಧ್ಯತೆ ಉಂಟು. ಆದರೆ ಅಸ್ಪೃಶ್ಯರ ಪ್ರಕರಣ ಹಾಗಲ್ಲ. ಹಿಂದೂ ಸಮಾಜದಲ್ಲಿ ಪ್ರವೇಶಿಸಲು ಅವರಿಗೆ ನಿಷೇಧವಿದೆ. ಸುಧಾರಣೆಗೆ ಅಲ್ಲಿ ಅವಕಾಶವಿಲ್ಲ. ಅವರನ್ನು ಸಮಾಜದಿಂದ ಯಾವಾಗಲೂ ದೂರದಲ್ಲಿ ಇಡಲಾಗಿದೆ. ಸಮಾಜದ ಭಾಗವಾಗಿ ಪರಿವರ್ತಿತವಾಗುವ ಅವಕಾಶವಿಲ್ಲ. ಅವರು ಹಿಂದೂ ಸಮಾಜದ ಭಾಗವಾಗಿಲ್ಲ. ಭಾಗವಾಗಿದ್ದರೂ ಒಟ್ಟು ಸಮಾಜದ ಅಂಗವಾಗಿಲ್ಲ. ಮುಂಬೈಯಲ್ಲಿ ನಡೆದ ಕಟ್ಟಾ ಸಂಪ್ರದಾಯ ಬದ್ಧ ಹಿಂದೂ ಮಹಾಸಭೆಯಲ್ಲಿ ಐನಾಪೂರೆ ಶಾಸ್ತ್ರಿಗಳು ಹಿಂದೂ ಮತ್ತು ಅಸ್ಪೃಶ್ಯರ ಸಂಬಂಧವನ್ನು ಪಾದ ಮತ್ತು ಪಾದರಕ್ಷೆಗಳ ಉದಾಹರಣೆ ಕೊಟ್ಟು ಹೋಲಿಸಿ ಹೇಳಿದರು. ಮನುಷ್ಯ ಪಾದರಕ್ಷೆ ಧರಿಸುತ್ತಾನೆ. ಹಾಗೆ ನೋಡಿದಲ್ಲಿ ಅದು ಅವನ ಕಾಲಿನ ಭಾಗವೇ. ಆದರೆ ಅದನ್ನು ಮನಬಂದಾಗ ಬಿಟ್ಟು ಬಿಡಬಹುದು. ಹೆಚ್ಚು ಕಡಿಮೆ ಈ ಹೋಲಿಕೆ ನಿಖರವಾಗಿದೆ.

* * * *

## ಅಧ್ಯಾಯ ೧೭

# ಅದನ್ನು ನಿರ್ಮಿಸಿದ ಆಧಾರ ಶಿಲೆ

ಹಿಂದೂ ಸಮಾಜವೆಂದರೆ ಜಾತಿಗಳ ಒಂದು ಬೃಹತ್ ಮನೆಯಂತೆ. ಹಿಂದೂಗಳೆಂದರೆ ಅವರು ಕೇವಲ ಜನಸಮೂಹವಲ್ಲ. ಅಸಂಖ್ಯಾತ ಜಾತಿಗಳಲ್ಲಿ ಹಂಚಿಹೋದ ಒಂದು ಒಟ್ಟು ಜನ ಸಮುದಾಯ. ಇದೇ ಅದರ ವೈಶಿಷ್ಟ್ಯ. ಭಾರತವನ್ನು ಹಿಂದೆ ಸಂದರ್ಶಿಸಿದ ಅಸಂಖ್ಯಾತ ವಿದೇಶಿ ಸಂದರ್ಶಕರಿಗೆ ಕಂಡುಬಂದ ಅಂಶವೇ ಇದಾಗಿದೆ. ಇನ್ನು ಕೆಲವರು ಜಾತಿಗಳ ಬಗೆಗೆ ಅಂತಹ ವೈಶಿಷ್ಟ್ಯಪೂರ್ಣವಾದದ್ದು ಏನಿಲ್ಲವೆಂದು ಹೇಳುವವರೂ ಉಂಟು. ಪ್ರೊ. ಬೇನ್ಸ ಅವರ ಈ ಕೆಳಗಿನ ಮಾತನ್ನು ಉದಾಹರಿಸಬಹುದು:

"ಈ ವ್ಯವಸ್ಥೆಯಲ್ಲಿ ಇದ್ದುದನ್ನು ಈಗಾಗಲೇ ಸಾಕಷ್ಟು ಶೋಧಿಸಲಾಗಿದೆ. ಈ ತರಹದ ಸಂಗತಿಗಳು ಕೇವಲ ಇಲ್ಲಿ ಏಕೆ ಪಶ್ಚಿಮ ದೇಶಗಳಲ್ಲಿಯೂ ಇದ್ದೇ ಇವೆ. ಉಳಿದ ಪ್ರಭಾವಗಳಿಂದ ಅವುಗಳ ಮೊದಲಿನ ಸ್ವರೂಪ ಈಗ ಉಳಿದುಕೊಂಡಿಲ್ಲ. ಹಲವು ವ್ಯವಸ್ಥೆಗಳು, ಸಂಘಟನೆಗಳು ರೂಪುಗೊಳ್ಳುವ ಪ್ರಕ್ರಿಯೆ ಸಾರ್ವತ್ರಿಕವಾದದ್ದು. ಅಲ್ಲದೆ ಅವುಗಳಲ್ಲಿ ಕೆಲವು ವಂಶಾತ್ಮಕವಾಗಿ ಮುಂದುವರಿದು ಬಂದಿರುವುದರಲ್ಲಿ ಅತಿ ಅಸ್ವಾಭಾವಿಕವಾದುದು ಯಾವುದೂ ಇಲ್ಲ. ಪರಿಸ್ಥಿತಿ ಒತ್ತಡದಲ್ಲಿ ಅವುಗಳ ಸ್ವರೂಪ ತೀರ ಸ್ವಾಭಾವಿಕವಾದ ಬೆಳವಣಿಗೆ."

ಪುರಾತನ ಕಾಲದ ಜನರ ಸಾಮಾಜಿಕ ಸಂಘಟನೆಯನ್ನು ದೃಷ್ಟಿಯಲ್ಲಿಟ್ಟುಕೊಂಡಾಗ ಈ ಬಗೆಯ ವಾದಕ್ಕೆ ಸಾಕಷ್ಟು ಪುಷ್ಟಿ ಸಿಗುತ್ತದೆ. ಪುರಾತನ ಸಮಾಜದಲ್ಲಿ ಮಾನವನು ಯಾವಾಗಲೂ ಏಕಾಕಿಯಾಗಿ ಉಳಿಯಲು ಸಾಧ್ಯವಿರಲಿಲ್ಲ.

ತೀರ ಸಾಮಾನ್ಯವಾದ ಆದರೆ ಸ್ವಾಭಾವಿಕವಾದ ಸ್ಥಿತಿಯೆಂದರೆ ಆಗ ಜನರು ಗುಂಪಿನಲ್ಲಿಯೇ ವಾಸಿಸಬೇಕಾಗುತ್ತಿತ್ತು. ಕಾಲ ಕಳೆದಂತೆ ಸಾಮಾಜಿಕ ಗುಂಪುಗಳು ನಿರ್ಮಾಣವಾಗುತ್ತ ನಡೆದವು. ಇದುವರೆಗೆ ಉಳಿದುಕೊಂಡಿರುವ ಕುಟುಂಬವೆಂಬ ವ್ಯವಸ್ಥೆಯು ಅಂತಹುದರಲ್ಲಿ ಪ್ರಮುಖವಾದ ಸಂಸ್ಥೆ. ಅದು ವಿಶ್ವದಾದ್ಯಂತ ಇರುವ ವ್ಯವಸ್ಥೆಯೂ ಹೌದು. ಕುಟುಂಬಕ್ಕಿಂತ ವಿಶಾಲವಾದದ್ದು ಪಂಗಡವಾಗಿತ್ತು. ಇದರ ಸಣ್ಣ ಪ್ರಮಾಣದಲ್ಲಿ ಬಂಧು-ಬಾಂಧವರ, ಸಂಬಂಧಿಕರ ಗುಂಪು ಅಸ್ತಿತ್ವದಲ್ಲಿದ್ದಿತು. ತಾಯಿ ಅಥವಾ ತಂದೆಯ ಕುಟುಂಬದ ಸಂಬಂಧಿಕರ ಹಿನ್ನೆಲೆಯಲ್ಲಿ ಇದು ರೂಪುಗೊಳ್ಳುತ್ತಿತ್ತು. ಉದಾಹರಣೆಗೆ ಹೇಳುವುದಾದರೆ ಸೋದರ-ಸೋದರಿಯರ ಮಕ್ಕಳು ಒಂದು ಕುಟುಂಬದ ಗುಂಪಿನ, ಅವಿಭಾಜ್ಯ ಅಂಗವಾಗುತ್ತಿದ್ದರು. ಸಂಬಂಧಗಳು ಕಲ್ಪಿತವಾಗಿದ್ದರೂ ಸಾಮಾಜಿಕ ದೃಷ್ಟಿಕೋನದಿಂದ ಈ ರಕ್ತಸಂಬಂಧವನ್ನು ಕಡೆಗಣಿಸಲಾಗುತ್ತಿರಲಿಲ್ಲ. ಸಾಮಾಜಿಕ ಗುಂಪುಗಳ ಬೃಹತ್ ಸಂಘಟನೆ ಮುಂದಿನ ಹೆಜ್ಜೆ. ಎರಡಕ್ಕಿಂತ ಹೆಚ್ಚಿನ ಇಂತಹ ಗುಂಪುಗಳು ನಿರ್ಮಾಣವಾದಾಗ ಪ್ರತಿಯೊಂದನ್ನೂ ಅರೆವಾಸಿ ಗುಂಪೆಂದು ಗುರುತಿಸಲಾಯಿತು. ಈ ದ್ವಿವಿಧ ವ್ಯವಸ್ಥೆ ವಿಶ್ವವ್ಯಾಪಿಯಾಗಿತ್ತು ಎಂಬುದು ನಿಶ್ಚಿತವಾಗಿ ತಿಳಿದುಬಂದಿಲ್ಲ. ಈ ಭಾಗ ಮತ್ತು ಉಪವಿಭಾಗ ಬುಡಕಟ್ಟಿನ ಸಾಮಾಜಿಕ ಸಂಘಟನೆಯ ಸ್ವರೂಪವಾಗಿ ಬೆಳೆದು ಬಂದವು ಮತ್ತು ಸೋದರ ಬಾಂಧವ್ಯವನ್ನು ಬೆಸೆಯುವುದರಲ್ಲಿ ಯಶಸ್ವಿಯಾದವು. ಉಳಿದ ಬುಡಕಟ್ಟಿನ ಜನಾಂಗದ

ಸ್ವರೂಪ, ಬೆಳವಣಿಗೆ ಮುಂದಿನ ಸಾಧ್ಯತೆಯಾಯಿತು. ಈ ಬುಡಕಟ್ಟಿನ ಜನಾಂಗದಲ್ಲಿ ಸ್ವರೂಪ, ವ್ಯವಸ್ಥೆಯಲ್ಲಿ ವಿಭಿನ್ನತೆ ಸಾಕಷ್ಟಿದ್ದಿತು. ಹಳ್ಳಿವಾಸದ ಆಧಾರದ ಮೇಲೆ ಕೆಲವು ಸಲ ಈ ಬುಡಕಟ್ಟಿನ ಸ್ವರೂಪ ಸ್ಥಾಪಿತವಾಯಿತು. ಆ ಸಂದರ್ಭದಲ್ಲಿ ಆಂತರಿಕ ಉಪವಿಭಾಗಗಳನ್ನು ಲಕ್ಷಿಸಲಾಗುತ್ತಿರಲಿಲ್ಲ. ಒಟ್ಟಂದದ ಒಕ್ಕೂಟದ ಸಾಮಾನ್ಯ ಅಂಶ ಹೆಚ್ಚು ಪ್ರಮುಖವಾಗಿತ್ತು. ತಾವು ಯಾವ ಬುಡಕಟ್ಟಿಗೆ ಸೇರಿದ್ದೇವೆ ಎಂಬ ಅಂಶ ಗೌಣವಾಗಿತ್ತು. ಆದರೂ ಈ ಬುಡಕಟ್ಟು ನಿರ್ಮಾಣದ ಹಂತದಲ್ಲಿ ನಾಡಭಾಷೆ, ಸಾಮಾನ್ಯ ರೂಢಿ – ಸಂಪ್ರದಾಯಗಳು, ಪ್ರಾದೇಶಿಕ ಮೇರೆಗಳು, ಆಡಳಿತ ಪದ್ಧತಿ ಮುಂತಾದ ಅಂಶಗಳು ನಿಶ್ಚಿತವಾಗಿ ಸಾಮಾನ್ಯ ಬಂಧನದ ಮುಖ್ಯ ಲಕ್ಷಣವಾಗಿರುತ್ತಿದ್ದವು. ಮುಂದಿನ ವಿಸ್ತೃತ ಸ್ವರೂಪವೇ ಇಂಥ ಬುಡಕಟ್ಟಿನ ಒಂದು ರಾಜ್ಯ ಅಥವಾ ರಾಷ್ಟ್ರಕೂಟ. ಆದರೆ ಇಂತಹ ಸಾಧ್ಯತೆ ವಿಶಿಷ್ಟ, ಸಾಮಾನ್ಯ ಭೀತಿ–ಭಯದ ಉದ್ದೇಶಗಳು ಹುಟ್ಟಿಕೊಂಡಾಗ ಮಾತ್ರ ಕಂಡುಬರುತ್ತಿತ್ತು. ಹೀಗಾಗುವುದು ವಿರಳವಾಗಿದ್ದಿತು. ಪುರಾತನ ಜನಾಂಗದ ಒಕ್ಕೂಟದಲ್ಲಿ ಇಂತಹ ಘಟನೆಗಳು ಕಡಿಮೆ ಎಂದೇ ಹೇಳಬೇಕು. ಇರೋಕ್ಯುಯೋಸ್ ನಾಡಕೂಟದ ಉದಾಹರಣೆ ಇದಕ್ಕೆ ಒಂದು ಅಪವಾದ.

ಈ ಮೇಲಿನ ಸಾಮಾಜಿಕ ಗುಂಪುಗಳು ಒಂದು ವೈಚಾರಿಕ ವ್ಯವಸ್ಥೆಯಿಂದ ಬೆಳೆದವುಗಳು ಅಥವಾ ಒಂದು ಸೀಮಿತ ಪ್ರದೇಶಕ್ಕೆ ಸಂಬಂಧಿಸಿದವುಗಳಾಗಿದ್ದವು. ಈ ಪುರಾತನ ಜನರ ವಿಭಜನಾ ಕ್ರಮದ ಹಲವಾರು ಉಳಿದ ಅಂಶಗಳೂ ಇಲ್ಲದೇ ಇರಲಿಲ್ಲ. ಲಿಂಗಭೇದ, ವಯಸ್ಸು ಕೂಡ ಆಧಾರವಾಗಿದ್ದವು. ಆದ್ದರಿಂದ ಜಾತಿ ಸಾಮಾಜಿಕ ಗುಂಪಾಗಿ ಪರಿವರ್ತನೆ ಆದಾಗ ಹೀಗಾಗುವದು ವಿಶೇಷವಾದ ಪ್ರಕ್ರಿಯೆ ಏನಲ್ಲ. ಜಾತಿಯೂ ಒಂದು ಪಂಗಡದ ಸಾಮಾಜಿಕ ಸಂಘಟನಾ ಸ್ವರೂಪದ ವ್ಯವಸ್ಥೆ.

ಜಾತಿ ಮತ್ತು ಬುಡಕಟ್ಟಿನ ಗುಂಪು ಒಂದೇ ಎಂದು ಒಪ್ಪಿಕೊಂಡರೂ ಅದರ ಉದ್ದೇಶ ಮತ್ತು ಅರ್ಥ ಒಂದೇ ಎಂದು ಹೇಳಲಾಗುವುದಿಲ್ಲ. ಜಾತಿ ಪದ್ಧತಿಗೂ ಉಳಿದ ಬಣ ಪದ್ಧತಿಗೂ ಮೂಲಭೂತ ವ್ಯತ್ಯಾಸಗಳಿವೆ. ಬಣ ಪದ್ಧತಿಯಲ್ಲಿ ಮೇಲು–ಕೀಳುಗಳಿಲ್ಲ. ಒಂದು ರೀತಿಯಲ್ಲಿ ಜಾತಿಪದ್ಧತಿ–ಬಣಪದ್ಧತಿ ಎರಡೂ ವಿರೋಧ ವಿಚಾರಗಳೇ. ವರ್ಗ ಬಣಪದ್ಧತಿಗೂ–ವರ್ಗ ಜಾತಿಪದ್ಧತಿಗೂ ವ್ಯತ್ಯಾಸಗಳಿವೆ. ಆದಿಕಾಲದ ವರ್ಗ ಬಣ ಪದ್ಧತಿಗೂ ಆಧುನಿಕ ಹಿಂದೂ ಜಾತಿಪದ್ಧತಿಗೂ ಇರುವ ಅಂತರಗಳು ಸ್ಪಷ್ಟವಾಗಿವೆ.

ಸಾಮಾನ್ಯ ವಿವರಣೆ, ಕಲ್ಪನೆಯನ್ನು ಕೊಡಲು ಅವೆರಡರಲ್ಲಿಯ ಅಂಶಗಳನ್ನು ಎತ್ತಿ ಹೇಳಿದೆ ಅಷ್ಟೇ. ನನ್ನ ತಿಳುವಳಿಕೆಯಂತೆ ಜಾತಿವ್ಯವಸ್ಥೆ, ಸ್ವಾಭಾವಿಕವೊ ಅಸ್ವಾಭಾವಿಕವೊ, ಸಾಮಾನ್ಯವೊ, ಅಸಾಮಾನ್ಯವೊ ಎಂಬ ಮಾತು ನಿಸ್ಸಂಶಯವಾಗಿ ಆಸಕ್ತಿ ಮತ್ತು ಬೋಧಪ್ರದವಾದುದು. ನಾನು ಈ ಪ್ರಶ್ನೆಯನ್ನು ಬಹುಮಹತ್ವದ ಪ್ರಶ್ನೆಯಾಗಿ ಭಾವಿಸುವುದಿಲ್ಲ. ನನ್ನ ಮುಖ್ಯ ಪ್ರಶ್ನೆಯೆಂದರೆ ಉಳಿದ ದೇಶಗಳಲ್ಲಿ ಹೇಗೆ ಈ ರೀತಿಯ ಸಾಮಾಜಿಕ ಗುಂಪುಗಾರಿಕೆ ನಾಗರಿಕತೆ ಬೆಳೆಯುತ್ತಿದ್ದಂತೆ ಮಾಯವಾಗಲು ಸಾಧ್ಯವಾಯಿತು? ಆದರೆ ಈ ದೇಶದಲ್ಲಿ ಅದು ಗಟ್ಟಿಯಾಗಿ ತಳವೂರಲು ಕಾರಣವೇನು?

ಹಿಂದೂಗಳ ಮಾದರಿಯದೇ ರೋಮನ್ನರಲ್ಲಿಯೂ ಒಂದು ಸಾಮಾಜಿಕ ಸಂಘಟನೆ ಅಸ್ತಿತ್ವದಲ್ಲಿದ್ದಿತು. ಸಮಾನವಾದ ಇಂಥ ಸಾಮಾಜಿಕ ವ್ಯವಸ್ಥೆಗಳು ಉಳಿದ ಕಡೆಗಳಲ್ಲಿ ಇಲ್ಲವಾದಾಗ ಇಲ್ಲಿ ಯಾಕೆ ಬೇರೂರಿತು? ಜನರು ಏಕೆ ಈ ಪದ್ಧತಿಗೆ ತಲೆಬಾಗುತ್ತಾರೆ. ಜಾತಿಗೆ ಮಂಜೂರಾತಿ ಪದ್ಧತಿ ಅದೆಂತು ಉಳಿಯಿತು?

ಸಾಮಾಜಿಕ ಕಟ್ಟಳೆಗಳನ್ನು ಜನರು ಪಾಲಿಸಲು ನಾಲ್ಕು ಕಾರಣಗಳಿರುತ್ತವೆ.

೧) ಸ್ವಾಭಾವಿಕತೆ

೨) ಜನಪ್ರಿಯತೆ

೩) ಕಾಯಿದೆಯ ಅನುಗುಣತೆ

೪) ಧಾರ್ಮಿಕತೆ

ಇವುಗಳಲ್ಲಿ ಯಾವ ಅಂಶ ಜಾತಿಪದ್ಧತಿಯನ್ನು ಬೆಂಬಲಿಸುತ್ತದೆ? ಅದನ್ನು ಉತ್ತರಿಸುವುದಕ್ಕಿಂತ ಮೊದಲು ಈ ಮೇಲಿನ ನಾಲ್ಕು ಆಧಾರಗಳು ಯಾವ ರೀತಿ ಕಾರ್ಯವೆಸಗುತ್ತವೆ ಎಂಬುದನ್ನು ಗಮನಿಸೋಣ.

ಸ್ವಾಭಾವಿಕತೆ ಚಟವಾಗಿ ಬರುತ್ತದೆ. ಒಬ್ಬ ವ್ಯಕ್ತಿ ಹಾಗೇ ರೂಢಿಸಿಕೊಂಡೇ ಬರುತ್ತಾನೆ. ಅವನಿಗೆ ಅದರ ಬಗೆಗೆ ಒತ್ತಾಯಿಸುವ ಕಾರಣವೇ ಬೀಳುವುದಿಲ್ಲ. ಸಾಂಪ್ರದಾಯಿಕತೆ ಸ್ವಭಾವವಾಗಿ ಬೆಳೆಯುತ್ತದೆ. ದಿನ ನಿತ್ಯದ ಚಟವಾಗಿ ರೂಪುಗೊಳ್ಳುತ್ತದೆ.

ಜನಮನ್ನಣೆ ಜನಾಭಿಪ್ರಾಯದ ಮೂಲಕ ಜನ್ಮತಾಳುತ್ತದೆ. ಬಹಳ ಕಾಲದ ರೂಢಿಗಳು ಸ್ವೀಕೃತಿ ಅಥವಾ ಅಸ್ವೀಕೃತಿಯ ಮೇಲೆ ಆಧಾರಿತವಾಗಿರುತ್ತವೆ. ಮತ್ತು ಪ್ರಯೋಜನ ಹಾಗೂ ಅಪ್ರಯೋಜನಕಾರಿ ಅಂಶಗಳು ನಿರ್ಧರಿಸುವ ಅಂಶಗಳಾಗುತ್ತವೆ. ಸರ್ವ ಜನಮನ್ನಣೆ ಜನಾಂಗ ಜೀವನದ ಪದ್ಧತಿಯಾಗಿ ಬೆಳೆದುಬರುತ್ತದೆ.

ಸ್ವಾಭಾವಿಕ ಮಂಜೂರಾತಿ ಅಥವಾ ಜನಪ್ರಿಯತೆಯ ಆಧಾರದ ಮೇಲೆ ಮಂಜೂರಾತಿ ಅಂಶಗಳು ವಿಶೇಷವಾದವುಗಳೇನಲ್ಲ. ಸಾಮಾಜಿಕ ಸಂಬಂಧದ ಎಲ್ಲ ವಿಷಯಗಳಲ್ಲಿಯೂ ಈ ಪ್ರಭಾವವನ್ನು ಎಲ್ಲ ಸ್ಥಳಗಳಲ್ಲಿಯೂ ಗಮನಿಸುತ್ತೇವೆ. ಉಳಿದೆರಡು ಪ್ರಭಾವಗಳಿಂದ ನಿರ್ಮಾಣವಾದ ಪರಿಸ್ಥಿತಿ ಮಾತ್ರ ಇದಕ್ಕಿಂತ ಹೆಚ್ಚಾಗಿ ಮೂಲದಲ್ಲಿ ಗಂಭೀರವಾಗಿರುತ್ತದೆ. ಕಾಯಿದೆಬದ್ಧ ಮತ್ತು ಧಾರ್ಮಿಕ ಅಂಶಗಳಿಂದ ದೊರೆಯುವ ಮಂಜೂರಾತಿ ಮಾತ್ರ ಯಾವುದೇ ಸಂಸ್ಥೆಗೆ ಸಬಲವಾದ ಅಸ್ತಿತ್ವವನ್ನೂ ಒದಗಿಸುತ್ತದೆ. ಹಿಂದೂ ಕಾಯಿದೆ ಜಾತಿ ಪದ್ಧತಿಯನ್ನು ಒಪ್ಪಿಕೊಳ್ಳುತ್ತದೆ ಎಂಬ ಬಗೆಗೆ ಸಂಶಯವಿಲ್ಲ. ಜಾತಿ ಒಂದು ಕಾಯಿದೆಬದ್ಧ, ಕಾಯಿದೆಗೆ ಸಮ್ಮತಿ ಇರುವ ಪದ್ಧತಿ ಎಂದು ಪ್ರತಿ ಹಿಂದೂ ಕಾಯಿದೆಯ ಗ್ರಂಥಗಳು ಗುರುತಿಸುತ್ತವೆ. ಜಾತಿಪದ್ಧತಿಯನ್ನು ಉಲ್ಲಂಘಿಸಿದಾಗ ಶಿಕ್ಷೆಯು ಸೂಚಿತವಾಗಿದೆ. ಮನುವು ರಚಿಸಿದ ಮಾನವ ಧರ್ಮಶಾಸ್ತ್ರವು ಹಿಂದೂಗಳಿಗೆ ಪುರಾತನವಾದುದಷ್ಟೇ ಅಲ್ಲ; ಅಧಿಕೃತವಾದುದು, ಅಧಿಕಾರಯುತವಾದುದು. ಇದರಿಂದ ಉದ್ಧೃತಮಾಡಬಲ್ಲ ಹಲವಾರು ಅಂಶಗಳು ಕಾಯಿದೆ ಹೇಗೆ ಜಾತಿ ಪದ್ಧತಿಯನ್ನು ಒಪ್ಪಿಕೊಂಡಿತ್ತು ಎಂಬುದನ್ನು ಸ್ಪಷ್ಟಪಡಿಸುತ್ತವೆ. ಹಿಂದೂ ಕಾಯ್ದೆ ರೂಪಿಸಿದ ಮನುವು ನಾಲ್ಕು ವರ್ಣಗಳಿಗೆ ಕಾಯಿದೆಬದ್ಧ ಸ್ಥಾನವನ್ನು ಕಲ್ಪಿಸುತ್ತಾನೆ. ಅವನ ನಿಬಂಧನೆಗಳ ಮುಖ್ಯ ಉದ್ದೇಶವೇ ಅದು ಆಗಿರಬಹುದು ಎಂದು ಅನ್ನಿಸುತ್ತದೆ. ಆ ನಿಬಂಧನೆಯ ಪ್ರಾರಂಭದ ಶ್ಲೋಕಗಳಿಂದ ಈ ಮಾತು ಸ್ಪಷ್ಟ. ಅವನು ಹೇಳುತ್ತಾನೆ :

೧.೧ ಮಹಾನ್ ಋಷಿಗಳು ವಿಚಾರಮಗ್ನನಾದ ಮನುವನ್ನು ತಲುಪಿ, ಅವನನ್ನು ಪೂಜಿಸಿ ಹೀಗೆ ನುಡಿಯುತ್ತಾರೆ.

೧.೨ "ದೈವಸ್ವರೂಪರೇ ನಮಗೆ ದಯವಿಟ್ಟು ನಾಲ್ಕು ವರ್ಣಗಳ ಪ್ರತಿಯೊಂದರ ಸ್ವರೂಪ ಮತ್ತು ಕ್ರಮಗಳ ಬಗೆಗೆ ಇರುವ ತಮ್ಮ ಪವಿತ್ರ ನಿಯಮಗಳನ್ನು ವಿಶದೀಕರಿಸುವ ಕೃಪೆ ಮಾಡಬೇಕು." ಆಗ ಮನುವು ಜಾತಿಪದ್ಧತಿಗೆ ಕಾನೂನುಬದ್ಧ ಮಂಜೂರಾತಿ ಕೊಡುವುದಷ್ಟೇ ಅಲ್ಲ, ಅರಸನು ಈ ವ್ಯವಸ್ಥೆಯನ್ನು ಚೆನ್ನಾಗಿ ಪಾಲಿಸಬೇಕೆಂದು ನುಡಿಯುತ್ತಾನೆ :

VII ೩೫. ಅರಸನು ಈ ಜಾತಿಯ (ವರ್ಣ) ಸಂರಕ್ಷಕನಾಗಿರುವುದೇ ಅವನ ಕರ್ತವ್ಯವು. ಆಯಾ ಜಾತಿಗೆ (ವರ್ಣ) ಸೇರಿದವರು ತಮ್ಮ ತಮ್ಮ ಕೆಲಸವನ್ನು ಮಾಡಿಕೊಂಡು ಹೋಗಬೇಕು.

VIII ೨೪. ಅಂತರ್ಜಾತಿಯ ಮಿಶ್ರಣವಾಗುವುದುಂಟು, ನಿಬಂಧನೆಗಳನ್ನು ಮುರಿಯುವ ಸಾಧ್ಯತೆ ಉಂಟು ಮತ್ತು ಈ ಅಂಶದ ಮೇಲೆಯೇ ಒಂದು ವರ್ಣದ ಜನ ಉಳಿದವರೊಡನೆ ಕಾದುವ ಸಾಧ್ಯತೆಯೂ ಇದೆ.

ಜಾತಿ ಉಲ್ಲಂಘನೆಯನ್ನು ಮನುವು ಒಂದು ಪಾಪವೆಂದು ಪರಿಗಣಿಸುತ್ತಾನೆ. ಜಾತಿ ಬಾಹಿರನಾದ ಪತಿತನಿಗೆ ಮೂರು ಬಗೆಯ ಶಿಕ್ಷೆಗಳನ್ನು ಸೂಚಿಸುತ್ತಾನೆ.

ಮೊದಲನೆಯ ಶಿಕ್ಷೆ ಮರಣದ ನಂತರ ದೊರೆಯುವಂತಹದ್ದು. ಅವನೆನ್ನುತ್ತಾನೆ:

XII ೬೦. ಜಾತಿಬಾಹಿರನ ಜೊತೆಗೆ ಸಂಬಂಧ ಬೆಳೆಸಿದರೆ, ಪರಪತ್ನೀ ಸಂಗ ಬಯಸಿದರೆ ಮತ್ತು ಬ್ರಾಹ್ಮಣರ ಆಸ್ತಿಯನ್ನು ಕದ್ದರೆ ಅಂಥವರು ಬ್ರಹ್ಮರಾಕ್ಷಸರಾಗುವರು. ಆದರೆ ಈ ಜನ್ಮದಲ್ಲಿ ಇಂತಹ ಪತಿತನಿಗೆ ಜಾತಿಯಿಂದ ಹೊರಗೆ ಹಾಕಲಾಗುತ್ತಿತ್ತು. ಈ ಜಾತಿಬಾಹಿರತೆಯ ವಿವರಗಳು ಹೀಗಿವೆ :

XI ೧೮೧. ಜಾತಿಬಾಹಿರನ ಜೊತೆಗೆ ಸಂಪರ್ಕವಿಟ್ಟವನು ಒಂದು ವರ್ಷದ ನಂತರ ಅವನೂ ಜಾತಿಬಾಹಿರನಾಗುತ್ತಾನೆ. ಇದು ಅಂತಹವನ ಜೊತೆಗೆ ಮದುವೆಯ ಸಂಬಂಧ ಅಥವಾ ಬೋಧನೆ ಅಥವಾ ಅವನ ಧಾರ್ಮಿಕ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದಾನೆಂಬ ಗಂಭೀರ ಆರೋಪಗಳಿಗಲ್ಲ. ಅವನು ಕೇವಲ ಜಾತಿಬಾಹಿರನ ಜೊತೆ ಸಂಪರ್ಕಕ್ಕೆ ಬಂದು ಮತ್ತು ಸಹಭೋಜನ ಮಾಡಿದ ಕಾರಣಕ್ಕಾಗಿ ಜಾತಿಯಿಂದ ಹೊರದೂಡಲ್ಪಡುವನು.

XI ೧೮೨. ಇಂಥ ಜಾತಿಬಾಹಿರನ ಜೊತೆಗೆ ಲೈಂಗಿಕ ಸಂಪರ್ಕಕ್ಕಾಗಿ ಬಂದ ಆ ಪಾಪಿಯೂ ಪ್ರಾಯಶ್ಚಿತ್ತಕ್ಕೆ ಅರ್ಹನು.

XI ೧೮೩. ಇಂಥ ಪಾಪಿಯು ಸಪಿಂಡ ಮತ್ತು ಸಮಾನ ಉದಕವನ್ನು ಅಶುಭ ದಿನದಂದು ಸಾಯಂಕಾಲ ಹಳ್ಳಿಯ ಹೊರಗೆ ತನ್ನ ಸಂಬಂಧಿಕರು, ಪುರೋಹಿತರು ಮತ್ತು ತನ್ನ ಗುರುಗಳ ಎದುರು ಅರ್ಪಿಸಿ ಪ್ರಾಯಶ್ಚಿತ್ತ ಮಾಡಿಕೊಳ್ಳಬೇಕು.

XI ೧೮೪. ಕೀಳು ದಾಸಿಯು ನೀರು ತುಂಬಿದ ಮಡಕೆಯನ್ನು, ಸತ್ತವನಿಗಾಗಿ ಮಾಡುವಂತೆ, ತನ್ನ ಕಾಲಿನಿಂದ ಒದ್ದು ಒಡೆಯುವದು, ಸಮಾನ ಉದಕಗಳು ಒಂದು ರಾತ್ರಿ ಮತ್ತು ಒಂದು ದಿನ ಅಶುದ್ಧವಾಗಿರುವಂತೆ ನೋಡಿಕೊಳ್ಳುವುದು.

XI ೧೮೫. ಅನಂತರ ಅವನ ಜೊತೆ ಮಾತುಕತೆ, ಸಂಪರ್ಕ, ಆಸ್ತಿಪಾಲು, ಸಾಮಾನ್ಯ ವ್ಯವಹಾರಗಳನ್ನು ನಿಷಿದ್ಧಗೊಳಿಸುವುದು. ಆಸ್ತಿಯ ಹಕ್ಕನ್ನು ಕಸಿದುಕೊಳ್ಳುವುದು.

IX ೨೦೧. ಜಾತಿಯಿಂದ ಹೊರದೂಡಲ್ಪಟ್ಟವನು, ಕುರುಡನು, ಕಿವುಡನು, ಹುಚ್ಚ, ನಪುಂಸಕ, ಮೂರ್ಖ ಮತ್ತು ಮೂಕ ಹಾಗೂ ಯಾವುದೇ ಅಂಗವಿಕಲನಿಗೆ ಆಸ್ತಿಯಲ್ಲಿ ಪಾಲು ಇಲ್ಲ.

XI ೧೮೬. ಇಂಥ ಜಾತಿಬಾಹಿರನು ಕುಟುಂಬದಲ್ಲಿ ಹಿರಿಯಮಗನಾಗಿದ್ದರೆ ಜೇಷ್ಠಪುತ್ರನ ಹಕ್ಕನ್ನು ಕಸಿದುಕೊಳ್ಳಲಾಗುವುದು ಮತ್ತು ಅವನ ಪಾಲಿನ ಹಕ್ಕಿನ ಆಸ್ತಿಯನ್ನು ಅವನ ಕಿರಿಯ ತಮ್ಮ ಪಡೆಯುವನು. ಜಾತಿಬಾಹಿರನು ಮೇಲಿನ ಎರಡು ಶಿಕ್ಷೆಗಳನ್ನು (ಜಾತಿಯಿಂದ ಹೊರದೂಡಲ್ಪಡುವುದು ಮತ್ತು ಆಸ್ತಿಯ ಹಕ್ಕನ್ನು ಕಳೆದುಕೊಳ್ಳುವುದು) ತಪ್ಪಿಸಿಕೊಳ್ಳುವ ಇಚ್ಛೆ ಇದ್ದರೆ ಅದಕ್ಕೆ ನಿಗದಿತ ಪ್ರಾಯಶ್ಚಿತ್ತವನ್ನು ನಿಯಮಾನುಸಾರ ಮಾಡಿಕೊಳ್ಳಬೇಕಾಗುತ್ತಿತ್ತು. ಈ ಪರಿಹಾರದ ಬಗೆಗೆ ಮನುವು ಹೀಗೆ ಹೇಳುತ್ತಾನೆ:

XI ೧೮೭. ಇಂಥವನು ಪ್ರಾಯಶ್ಚಿತ್ತವನ್ನು ಆಚರಿಸಿದ ಮೇಲೆ ಅವನ ಜೊತೆಗೆ ಉಳಿದವರು ಪವಿತ್ರ ಜಲಾಶಯದಲ್ಲಿ ಸ್ನಾನ ಮಾಡಿ ನೀರು ತುಂಬಿದ ಒಂದು ಹೊಸ ಮಡಕೆಯನ್ನು ಎಸೆಯುವುದು.

XI ೧೮೮. ಹಾಗೆ ಅವನು ಆ ಮಡಕೆಯನ್ನು ಎಸೆದ ಮೇಲೆ ತನ್ನ ಮನೆಯನ್ನು ಪ್ರವೇಶಿಸಿ ಎಲ್ಲ ಕರ್ತವ್ಯಗಳನ್ನು ನಿರ್ವಹಿಸುವುದು. ಪತಿತನಿಗೂ ಪತಿತಳಿಗೂ ಶಿಕ್ಷೆಯಲ್ಲಿ ಅಂತರವಿದ್ದಿತು. ಈರ್ವರಿಗೂ ರಿಯಾಯಿತಿ ಇರಲಿಲ್ಲ. ನಿಯಮಗಳು ಇಬ್ಬರಿಗೂ ಅನ್ವಯವಾಗುತ್ತಿದ್ದವು. ಮನುವು ಹೇಳುತ್ತಾನೆ :

XI ೧೮೯. ಜಾತಿಬಾಹಿರವಾಗುವ ಪಾಪವೆಸಗಿದ್ದರೆ ಸ್ತ್ರೀ–ಪುರುಷನಿಗೆ ಸಮಾನ ಶಿಕ್ಷಾ ನಿಯಮಗಳಿವೆ. ಆದರೆ ಅನ್ನ, ನೀರು, ಬಟ್ಟೆ ಮೊದಲಾದವುಗಳನ್ನು ಮಾತ್ರ ಅವರಿಗೆ ಕೊಡುವುದು ಮತ್ತು ಅವರ ಕುಟುಂಬದ ಸಮೀಪದ ಸ್ಥಳದಲ್ಲಿಯೇ ಇರುವಂತೆ ನೋಡಿಕೊಳ್ಳುವುದು.

ಕಾನೂನುಬದ್ಧ ಮಂಜೂರಾತಿಗಳು ಹೆಚ್ಚು ಪ್ರಭಾವಕಾರಿಯಾಗಿದ್ದವು ಎಂಬುದರಲ್ಲಿ ಯಾವ ಸಂಶಯವೂ ಇಲ್ಲ.

ಜಾತಿ ಬಾಹಿರತೆಗೆ ಕಾನೂನಿನಂತೆ ಇದ್ದ ಶಿಕ್ಷೆ ಎರಡು ಬಗೆಯದಾಗಿತ್ತು. ಆಗಲೇ ಹೇಳಿದಂತೆ ಜಾತಿಯಿಂದ ಹೊರಗೆ ಕಳಿಸುವುದಷ್ಟೇ ಅಲ್ಲ, ಆಸ್ತಿಯ ಹಕ್ಕನ್ನೂ ಕಳೆದುಕೊಳ್ಳುತ್ತಿದ್ದರು. ಸರ್ ಥಾಮಸ್ ಸ್ಟ್ರೇಂಜ್ ಹಿಂದೂ ಕಾಯಿದೆಯ ಮೇಲಿನ ತನ್ನ ಗ್ರಂಥದಲ್ಲಿ ಈ ಮೇಲಿನ ಶಿಕ್ಷಾ ನಿಬಂಧನೆಗಳು ಎಷ್ಟು ಕಡುತರವಾಗಿದ್ದವು ಎಂಬುದರ ಬಗೆಗೆ ಹೀಗೆ ಬರೆಯುತ್ತಾನೆ :

“ಜಾತಿಬಾಹಿರತೆಯ ಒಂದು ಪ್ರಕರಣವನ್ನು ಗಮನಿಸೋಣ. ಎಲ್ಲ ಪ್ರಾಯಶ್ಚಿತ್ತಗಳನ್ನು ಅವನು ಮಾಡುವುದಷ್ಟೇ ಅಲ್ಲ. ಸಾಮಾಜಿಕ, ಧಾರ್ಮಿಕ ಕಾರ್ಯಕ್ರಮದಲ್ಲಿ ಭಾಗವಹಿಸುವಿಕೆ, ಸಾಮಾಜಿಕ ಸಂಪರ್ಕ, ಜೀವನದಲ್ಲಿ ಎಲ್ಲರ ಜೊತೆ ಒಡನಾಟ, ಮಾತುಕತೆ, ಅಧಿಕಾರ ಅಂತಸ್ತು, ಸಂಬಂಧಿಕರಿಂದ ದೂರ, ಆಸ್ತಿಹಕ್ಕು ಕಳೆದುಕೊಳ್ಳುವುದು–ಇತ್ಯಾದಿಯಾಗಿ ಎಲ್ಲವನ್ನೂ ಕಳೆದುಕೊಂಡು ಇಂತಹ ಜಾತಿಬಾಹಿರ ವ್ಯಕ್ತಿ ಜೀವನ್ಮೃತ ಸ್ಥಿತಿಯಲ್ಲಿ ಇದ್ದಂತೆ. ಹಾಗೆ ಕೇಳಿದಲ್ಲಿ ಮೃತನೆಂದೇ ಹೇಳಬಹುದು. ಅವನು ಪ್ರಾಯಶ್ಚಿತ್ತಕ್ಕಾಗಿ ಪ್ರಯತ್ನ ಮಾಡುತ್ತಾನೆ. ಬಹುಶಃ ಪುರಾತನ ಕಾಲದಲ್ಲಿ ಇದಕ್ಕೂ ಹೆಚ್ಚಿನ ಕಠಿಣ ಶಿಕ್ಷೆ, ಪ್ರಾಯಶ್ಚಿತ್ತ ಬಹುಶಃ ಇರಬಹುದು. ಆದರೆ ಈ ಯುಗದ ಪ್ರಾರಂಭದಲ್ಲಿ ಇದರ ಕಾಠಿಣ್ಯತೆಯನ್ನು ಕೊಂಚ ಸಡಿಲಿಸಿರಬಹುದು. ಯಾಕೆಂದರೆ 'ಪಾಪಿ ಮಾತ್ರ ಪಾಪವನ್ನು ಅನುಭವಿಸಬೇಕೆಂಬ' ತತ್ತ್ವ ಬಂದಿರಲು ಸಾಕು. ಏಕೆಂದರೆ ಸಹಭೋಜನವನ್ನು ಪ್ರಮುಖ ಕಾರಣವಿಲ್ಲದೆ ನಿರಾಕರಿಸಿದಾಗ ಶಿಕ್ಷಾರ್ಹರಾಗುವುದೂ ಇದ್ದಿತು. ಜಾತಿಯಿಂದ ವಿನಾಕಾರಣ ಅಥವಾ ಸಾಕಷ್ಟು ಶಕ್ತಿಯುತ ಕಾರಣವಿಲ್ಲದೆ ಹೊರಗೆ ಕಳುಹಿಸಿದಾಗ ಕಾನೂನಿನಂತೆ ಹಾನಿಯನ್ನು ತುಂಬಿ ಕೊಡಬೇಕಾಗಿ ಬಂದ ಪ್ರಕರಣಗಳನ್ನು ಮುಂಬೈ ವರದಿಯಲ್ಲಿ ಕಾಣಬಹುದು. ಆಸ್ತಿ ಹಕ್ಕನ್ನು ಕಳೆದುಕೊಳ್ಳುವ ಅಂಶವೂ ಹಾಗೆಯೇ ಬೇರೆ ಸ್ವರೂಪ ಪಡೆಯಿತು.

ಈ ಬಗೆಗೆ ನಾವು ೧೮೧೪ರಲ್ಲಿ ಬಂಗಾಲದಲ್ಲಿ ಸದ್ದರ್ ದೇವಾನೀ ಅದಾಲತ್‌ದಲ್ಲಿ ನಡೆದ ಒಂದು ಪ್ರಕರಣ ಉಲ್ಲೇಖಿಸಬಹುದು. ಅದು ಸಂಪೂರ್ಣ ಜಾತಿಬಾಹಿರರು ಮತ್ತು ಭಾಗಶಃ ಜಾತಿಬಾಹಿರರು – ಹೀಗೆ ಎರಡು ಭೇದವನ್ನು ಈ ಪ್ರಕರಣದಲ್ಲಿ ಪಂಡಿತರು ಕಲ್ಪಿಸಿದ್ದನ್ನು ಚರ್ಚಿಸಿತು. ಅಲ್ಲದೆ, ಕಾನೂನುಬದ್ಧವಾಗಿ ಆಸ್ತಿಯ ಹಕ್ಕನ್ನು ಒಂದು ಸಲ ಕಳೆದುಕೊಂಡರೆ ಆತ ಕೊನೆಯವರೆಗೂ ಅರ್ಹನಲ್ಲ ಎಂದು ಎತ್ತಿ ಹಿಡಿಯಿತು. ಶಿಯನ್ನೌತ್ ಎಂಬ ವ್ಯಕ್ತಿಯು ಎಲ್ಲ ಪಾಪದ ಕೆಲಸಗಳನ್ನು ಮಾಡಿದ್ದನು. ಮದ್ಯಪಾನ, ಕೆಳಜಾತಿಯವರೊಂದಿಗೆ ಸಹಭೋಜನ, ದೇಹಸಂಬಂಧ, ಹಲವಾರು ಸಲ ಹಲವು ಜನರಿಗೆ ಮಾಡಿದ

ಗಾಯಗಳು, ತನ್ನ ದತ್ತ ತಾಯಿಯ ಮನೆಯನ್ನು ಸುಡುವ ಪ್ರಯತ್ನ–ಇತ್ಯಾದಿಯಾಗಿ ಒಂದು ಉದ್ದನೆಯ ಪಟ್ಟಿಯ ಅಪರಾಧಗಳೇ ಇದ್ದವು. ಆದರೆ ಇವುಗಳಲ್ಲಿ ತನ್ನ ಜಾತಿಗಿಂತ ಕೀಳು ಜಾತಿಯವಳೊಬ್ಬಳೊಡನೆ ಲೈಂಗಿಕ ಸಂಪರ್ಕದ ಪಾಪ ಗುರುತರವಾಯಿತು ಎಂದು ಪರಿಗಣಿಸಿ ಜಾತಿಬಾಹಿರತೆಯನ್ನು ಎತ್ತಿ ಹಿಡಿಯಲಾಯಿತು. ಕೇವಲ ಜಾತಿಬಾಹಿರತೆಗೆ ಆಗ ಆಳರಸರ ನ್ಯಾಯಾಲಯಕ್ಕೆ ಅಪೀಲು ಮಾಡಿಕೊಳ್ಳಬಹುದಾಗಿತ್ತು.

ಈ ಪ್ರಕರಣದಲ್ಲಿ ಜನಸಮೂಹದ ಸಮಾಜದ ನೀತಿ ಹೆಚ್ಚಾಗಿ ಮಾರ್ಗಸೂಚಿಯಾಯ್ತು. ಹೊರತಾಗಿ ಕಾನೂನು ಏನೂ ಮಾಡಲಾಗಲಿಲ್ಲ. ಕಾನೂನುಬಾಹಿರತೆ ಅತೀ ಕೊನೆಯ ಕ್ರಮವಾಗಿದ್ದರೆ ಭಾಗಶಃ ಶಿಕ್ಷೆಯೂ ಕೊಡಲ್ಪಡುತ್ತಿತ್ತು. ಅಪರಾಧದ ಮೊದಲಿಗೆ ಜನಿಸಿದ ಜಾತಿಬಾಹಿರನ ಮಕ್ಕಳಿಗೆ ಆಸ್ತಿಯ ಹಕ್ಕಿನ ಚ್ಯುತಿ ಬರುತ್ತಿರಲಿಲ್ಲ. ಆದರೆ ಅನಂತರವಾಗಿದ್ದರೆ ಅವರೂ ಆ ಪಾಪಕ್ಕೆ ಸಹಾನುಭವಿಗಳಾಗಬೇಕಾಗುತ್ತಿತ್ತು. ಪರಪುರುಷನ ಸಂಗದ ಪಾಪವನ್ನು ಹೊಂದಿದ ಮಹಿಳೆಯೂ ಕಾನೂನುಬದ್ಧಳಾಗಿದ್ದಳು. ಅವಳು ಶಿಕ್ಷೆ ಅನುಭವಿಸಿಯೂ ಆಸ್ತಿಹಕ್ಕಿನ ಚ್ಯುತಿ ಹೊಂದುತ್ತಿದ್ದಳು. ಒಟ್ಟಿನಲ್ಲಿ ಹೇಳುವುದಾದರೆ ಮಹಿಳೆ–ಪುರುಷ ಈರ್ವರಿಗೂ ಈ ಅಂಶದಲ್ಲಿ ಸಮಾನಾರ್ಹ ಶಿಕ್ಷೆ ವಿಧಿಸಲಾಗುತ್ತಿತ್ತು.

ಆಗಿದ್ದ ಕಾನೂನಿನ ನಿಬಂಧನೆ ಗಮನಿಸಿದಾಗ ಎಷ್ಟೇ ವೈಪರೀತ್ಯಗಳಿದ್ದರೂ, ವಿರೋಧಾಭಾಸಗಳನ್ನು ಹೊಂದಿದ್ದರೂ ಮಾನವೀಯತೆ ಮತ್ತು ನ್ಯಾಯಪರತೆಯ ಅಂಶಗಳನ್ನು ನಿಶ್ಚಿತವಾಗಿ ಹೊಂದಿದ್ದವು ಎಂದು ಹೇಳಲು ಅಡ್ಡಿ ಇಲ್ಲ.

ಈ ಕಾನೂನನ್ನು ಪಾಲಿಸುವ ಆಗಿನ ಹಿಂದೂ ಸಮಾಜ ಈ ರೀತಿ ಆಸ್ತಿ ಹಕ್ಕಿನ ವಂಚನೆಯನ್ನು ತಂದೆ–ಮಗ ಹೀಗೆ ಪರಂಪರಾಗತವಾಗಿ ಕಳೆದುಕೊಳ್ಳಬೇಕಾಗುತ್ತಿತ್ತು ಮತ್ತು ಧಾರ್ಮಿಕವಾಗಿ ಇಬ್ಬಗೆಯ ರೂಢಿಗಳು ಪ್ರಚಲಿತವಾಗಿದ್ದವು. ಧಾರ್ಮಿಕವಾಗಿ ನಡೆದುಕೊಳ್ಳುವ ಕೃತ್ರಿಮ ವರ್ತನೆಯನ್ನು ರೂಢಿಸಿಕೊಳ್ಳುತ್ತಿದ್ದರು. ಹೀಗಾಗಿ ಧರ್ಮರಕ್ಷಕರು, ಮತ್ತು ಧರ್ಮದ ಕಟ್ಟಳೆಗಳನ್ನು ಮುರಿಯುವವರು ಎಂಬ ಎರಡು ವರ್ಗಗಳು ನಿರ್ಮಾಣವಾದಂತೆ ಕಾಣುತ್ತಿತ್ತು. ಸ್ವಂತ ಹಿತಾಸಕ್ತಿಗಳನ್ನು ಹೊಂದಿ ಹೊರಗೆ ಧರ್ಮರಕ್ಷಣೆಯ ಸೋಗಿನ ವಂಚಕರು ಎಂದು ಇವರನ್ನು ಹೆಸರಿಸಬಹುದು.

ಅಸಮಾನ ಮದುವೆ ಇನ್ನೊಂದು ಕ್ಷೇತ್ರ. ಶೂದ್ರರನ್ನು ಬಿಟ್ಟು ಉಳಿದ ವರ್ಣಗಳಲ್ಲಿ ಇದನ್ನು ಬಹು ಗಂಭೀರವಾಗಿ ಪರಿಗಣಿಸಲಾಗುತ್ತಿತ್ತು. ವರ್ಣದಲ್ಲಿ ಇರುವ ನಿಬಂಧನೆಗಳನ್ನು ಮುರಿದು ಮದುವೆಯಾದರೆ ಆಸ್ತಿಯ ಹಕ್ಕನ್ನು ಕಳೆದುಕೊಳ್ಳಬೇಕಾಗುತ್ತಿತ್ತು. ಜಾತಿ ವ್ಯವಸ್ಥೆಗೆ ಧಾರ್ಮಿಕ ಅನುಮತಿ ಇದೆಯೇ? ವೇದಗಳು ಜಾತಿಯನ್ನು ಒಪ್ಪಿಕೊಳ್ಳುತ್ತವೆ. ಋಗ್ವೇದ, ಜಾತಿಯ ಮೂಲವನ್ನು ಗುರುತಿಸಿ ಹೀಗೆ ವಿವರಿಸುತ್ತದೆ.

೧) "ಪುರುಷನಿಗೆ ಸಹಸ್ರ ತಲೆಗಳು; ಸಹಸ್ರ ಕಣ್ಣುಗಳು, ಸಹಸ್ರ ಕಾಲುಗಳು, ಪೃಥ್ವಿಯನ್ನು ಎಲ್ಲ ಕಡೆಯಿಂದ ಬಳಸಿಕೊಂಡು ಹತ್ತು ಬೆರಳಿನ ಅಂತರದಿಂದ ಆಕ್ರಮಿಸಿದನು.

೨) ಯಾವದು ಏನೇ ಆದಾಗ್ಯೂ ಈ ಪುರುಷನೇ ಇಡೀ ವಿಶ್ವವು. ಅವನು ಅಮರತ್ವದ ದೇವತೆಯು. ಅನ್ನದಿಂದ ವಿಕಸಿತನಾಗುವವನು.

೩) ಪುರುಷನು ಇದಕ್ಕಿಂತ ಶ್ರೇಷ್ಠನು, ಉಳಿದ ಎಲ್ಲ ಚರಾಚರಶಕ್ತಿ ಅವನ ಕಾಲು ಭಾಗ ಮಾತ್ರ. ಅವನ ಮುಕ್ಕಾಲು ಅಂಶವೆಂದರೆ ವಿಶಾಲ ಆಕಾಶ ಮಾತ್ರ.

೪) ಮುಕ್ಕಾಲು ಅಂಶಗಳೊಂದಿಗೆ ಪುರುಷ ಮೇಲೇರುತ್ತಾನೆ. ಅವನ ಒಂದು ಭಾಗ ಮಾತ್ರ ಇಲ್ಲಿ ಉತ್ಪನ್ನವಾಯಿತು. ಅವನಿಂದ ಉತ್ಪನ್ನವಾದ ಎರಡು ತರಹದ ಸೃಷ್ಟಿ ನಿರ್ಮಾಣವಾಯಿತು. ಆಹಾರ

ತೆಗೆದುಕೊಳ್ಳುವ ಮತ್ತು ಆಹಾರ ತೆಗೆದುಕೊಳ್ಳದ ಭಾಗಗಳು.

೫) ಪುರುಷನಿಂದ ವಿರಾಜ ಮತ್ತು ವಿರಾಜನಿಂದ ಪುರುಷ ಜನ್ಮತಾಳಿದರು. ಜನಿಸುತ್ತಿದ್ದಂತೆ ಪುರುಷನು ಪೃಥ್ವಿಯನ್ನು ಮೀರಿ ಬೆಳೆದನು.

೬) ದೇವತೆಗಳು ಯಜ್ಞವನ್ನು ಮಾಡಿದಾಗ ಪುರುಷನನ್ನು ಬಲಿಯಾಗಿ ಕೊಟ್ಟರು. ವಸಂತ ಋತು ತುಪ್ಪವಾಗಿ ಪರಿಣಮಿಸಿತು. ಬೇಸಿಗೆ ಅದಕ್ಕೆ ಬೆಂಕಿಯಾಗಿ, ಚಳಿಗಾಲ ಅದರ ಜೊತೆ ಕಾಣಿಕೆಯಾಗಿ ಅರ್ಪಿತವಾದವು.

೭) ಮೊದಲು ಹುಟ್ಟಿದ ಪುರುಷನನ್ನು ದರ್ಭೆಯ ಜೊತೆಗೆ ಬಲಿ ಕೊಟ್ಟರು. ಈ ಯಜ್ಞದಲ್ಲಿ ಸಾಧ್ಯರು, ಋಷಿಗಳು ಭಾಗವಹಿಸಿದ್ದರು.

೮) ಆ ವಿಶ್ವಯಜ್ಞದಲ್ಲಿ ಮೊಸರು, ಬೆಣ್ಣೆ ದೊರಕಿಸಲಾಗಿತ್ತು. ಇವುಗಳಿಂದ ಸಾಕು ಪ್ರಾಣಿ ಮತ್ತು ವನ್ಯಮೃಗಗಳು ನಿರ್ಮಾಣವಾದವು.

೯) ಯಜ್ಞದಿಂದಲೇ ಅರ್ಥಪೂರ್ಣ ಶ್ಲೋಕಗಳು, ಕಾವ್ಯದ ಛಂದಸ್ಸು ಮತ್ತು ಯಜುಸ್‌ಗಳು ನಿರ್ಮಾಣವಾದವು.

೧೦) ಇದರಿಂದ ಹಲ್ಲಿರುವ ಪ್ರಾಣಿಗಳಾದ ಕುದುರೆ ಮೊದಲಾದವುಗಳು, ಮುಂದೆ ಆಡು–ಕುರಿ ಇತ್ಯಾದಿ ರೂಪಿತವಾದವು.

೧೧) ಪುರುಷನನ್ನು ಎಷ್ಟು ಭಾಗವಾಗಿ ತುಂಡರಿಸಿದರು? ಅವನ ಬಾಯಿ ಯಾವುದು? ಕೈಗಳು ಯಾವುವು? ಅವನ ಕಾಲು ಮತ್ತು ತೊಡೆಗಳು ಯಾವುವು?

೧೨) ಬ್ರಾಹ್ಮಣರು ಪುರುಷನ ಬಾಯಿಯಿಂದ ಜನ್ಮತಾಳಿದರು. ಕ್ಷತ್ರಿಯರು ಅವನ ಭುಜಗಳು, ತೊಡೆಯಿಂದ ವೈಶ್ಯರು ಮತ್ತು ಕಾಲಿನಿಂದ ಶೂದ್ರರು ನಿರ್ಮಾಣಗೊಂಡರು.

೧೩) ಮನಸ್ಸಿನಿಂದ ಚಂದ್ರ ರೂಪುಗೊಂಡ. ಕಣ್ಣುಗಳಿಂದ ಸೂರ್ಯ, ಇಂದ್ರ ಮತ್ತು ಅಗ್ನಿ ಅವನ ಬಾಯಿಯಿಂದ, ವಾಯು ಅವನ ಉಸಿರಿನಿಂದ ರೂಪುಗೊಂಡರು.

೧೪) ಅವನ ಹೊಕ್ಕುಳಿಂದ ಗಾಳಿ, ತಲೆಯಿಂದ ಆಕಾಶ, ಕಾಲಿನಿಂದ ಪೃಥ್ವಿ, ಕಿವಿಯಿಂದ ಉಳಿದ ಮೂರುಪಾಲು ಸೃಷ್ಟಿ– ಹೀಗೆ ಒಟ್ಟು ಸೃಷ್ಟಿ ನಿರ್ಮಾಣವಾಯಿತು.

೧೫) ಪುರುಷನನ್ನು ಬಲಿಯಾಗಿ ಕೊಟ್ಟ ಈ ಯಾಗದಲ್ಲಿ ಬೆಂಕಿಯ ಸುತ್ತ ಏಳು ಕಟ್ಟಿಗೆಗಳ ಕಟ್ಟೊಂದು ಇದ್ದಿತು. ಈ ರೀತಿ ದೇವರು ವಿಶ್ವವನ್ನು ನಿರ್ಮಿಸಿದನು.

೧೬) ಬಲಿಯೊಂದಿಗೆ ನಡೆದ ಈ ಯಾಗದಲ್ಲಿ ಹಲವಾರು ಧಾರ್ಮಿಕ ವಿಧಿ–ವಿಧಾನಗಳು ಇದ್ದವು. ಹೆಚ್ಚಿನ ಶಕ್ತಿಗಳನ್ನು ಪ್ರಾರ್ಥಿಸಿ ಇದನ್ನು ನಡೆಸಲಾಯಿತು.

ಬ್ರಾಹ್ಮಣರೂ ಜಾತಿ ಪದ್ಧತಿಯನ್ನು ಒಪ್ಪಿಕೊಳ್ಳುತ್ತಾರೆ. 'ಶತಪಥ ಬ್ರಾಹ್ಮಣ'ದಲ್ಲಿ ಜಾತಿಯನ್ನು ಹೀಗೆ ವಿವರಿಸಲಾಗುತ್ತದೆ.

"೨೩) ಬ್ರಹ್ಮನಿಂದ ಬ್ರಾಹ್ಮಣ ಜಾತಿ (ಇಲ್ಲಿ ಬ್ರಾಹ್ಮಣನು ಸೃಷ್ಟಿಯನ್ನು ಪ್ರತಿನಿಧಿಸುತ್ತಿದ್ದನು ಎಂದು ವಿವರಣಕಾರರ ಹೇಳಿಕೆ). ಶಕ್ತಿಯಿಂದ ನಿರ್ಮಾಣವಾದವರು ಕ್ಷತ್ರಿಯರು. ದೇವತೆಗಳಲ್ಲಿಯೂ ಇಂದ್ರ, ವರುಣ, ಸೋಮ, ರುದ್ರ, ಪರ್ಜನ್ಯ, ಯಮ, ಮೃತ್ಯು ಇತ್ಯಾದಿ ಶಕ್ತಿ ದೇವತೆಗಳು. ಆದ್ದರಿಂದ ಕ್ಷತ್ರಿಯರಿಗಿಂತ ಶ್ರೇಷ್ಠರಿಲ್ಲ. ರಾಜಸೂಯ ಯಾಗದಲ್ಲಿ ಬ್ರಾಹ್ಮಣರು ಕ್ಷತ್ರಿಯರ ಕೆಳಗೆ ಕೂಡುತ್ತಾರೆ ಮತ್ತು ಅವರಿಗೆ ಎಲ್ಲ ವೈಭವಗಳನ್ನು ಅನುಭವಿಸಲು ಅನುವು ಮಾಡಿಕೊಡುತ್ತಾರೆ. ಈ ಬ್ರಹ್ಮನು ಶಕ್ತಿಯ ಮೂಲ.

ಆದ್ದರಿಂದ ಅರಸನು ಶ್ರೇಷ್ಠತೆಯನ್ನು ಪಡೆದರೂ ಕೊನೆಯಲ್ಲಿ ಬ್ರಹ್ಮನೇ ತನಗೆ ಮೂಲಶಕ್ತಿ ಎಂದು ತಿಳಿಯುತ್ತಾನೆ. ಬ್ರಹ್ಮನನ್ನು ನಾಶಪಡಿಸುವುದೆಂದರೆ ಸ್ವಯಂ ತನ್ನನ್ನೇ ನಾಶಪಡಿಸಿಕೊಂಡಂತೆ. ತನ್ನ ವರಿಷ್ಠರನ್ನು ನೋವಿಗೆ ಗುರಿಮಾಡಿದ ದುಃಖ ಅವನದಾಗುತ್ತದೆ.

೨೫) ಅವನು ವಿಕಸಿತಗೊಳ್ಳಲಿಲ್ಲ. ಶಕ್ತಿಯ ಸಹಾಯದಿಂದ ಧರ್ಮವೆಂಬ ಅತ್ಯುತ್ತಮ ರೂಪ ನಿರ್ಮಿಸಿದನು.

೨೬) ಅನಂತರ ಅದಕ್ಕಿಂತ ಪ್ರಭಾವಯುತವಾದ ನ್ಯಾಯ ರೂಪುಗೊಂಡಿತು. ಅದು ಧರ್ಮಕ್ಕಿಂತ ಶ್ರೇಷ್ಠವಾದುದು. ಆದುದರಿಂದ ದುರ್ಬಲರು ಶಕ್ತಿವಂತರನ್ನು ನ್ಯಾಯದಿಂದ ಸೋಲಿಸಬಹುದು. ಈ ನ್ಯಾಯವೇ ಸತ್ಯವು. ನ್ಯಾಯವನ್ನು ನುಡಿಯುವವನು ಸತ್ಯವನ್ನು ನುಡಿಯುತ್ತಾನೆ.

೨೭) ಇದುವೇ ಬ್ರಹ್ಮ, ಕ್ಷತ್ರ, ವೈಶ್ಯ, ಶೂದ್ರರು ರೂಪಿತವಾದ ಬಗೆ. ಅಗ್ನಿಯಿಂದ ಈತ ದೇವತೆಗಳಲ್ಲಿ ಬ್ರಹ್ಮನಾದ. ಮನುಷ್ಯರಲ್ಲಿ ಬ್ರಾಹ್ಮಣನೆಂದು ಕರೆಸಿಕೊಂಡನು. ಉಳಿದವರು ದೇವರನ್ನು ಕುರಿತು ಪ್ರಾರ್ಥಿಸುವಾಗ ಅಗ್ನಿಯ ಮುಖಾಂತರವೂ ಮನುಷ್ಯರಲ್ಲಿ ಬ್ರಾಹ್ಮಣರ ಮುಖಾಂತರವೂ ಪರಲೋಕಕ್ಕೆ ಪ್ರಾರ್ಥಿಸುತ್ತಾರೆ."

ತೈತ್ತಿರೀಯ ಬ್ರಾಹ್ಮಣ : ೨, ೬, ೭ ರಲ್ಲಿ 'ದೈವೋ ವೈ ವರ್ಣೋ ಬ್ರಾಹ್ಮಣಾಃ ಅಸುರಯೋ ಶೂದ್ರಃ' – ಬ್ರಾಹ್ಮಣ ಜಾತಿಯು ದೇವರಿಂದಲೂ ಶೂದ್ರರು ಅಸುರರಿಂದಲೂ ಜನಿಸಿದರು ಎಂಬ ಮಾತಿದೆ.

ಈ ಜಾತಿಪದ್ಧತಿಯ ಯಶಸ್ವಿ ಚಾಲನೆಗೆ ಧರ್ಮದ ಅನುಮತಿ ಮತ್ತು ಕಾನೂನಿನ ಒಪ್ಪಿಗೆ – ಈ ಎರಡು ಮೂಲ ಶಕ್ತಿಗಳು ಕಾರಣೀಭೂತವಾದವು ಎಂಬುದನ್ನು ಒಪ್ಪಲೇಬೇಕಾಗುತ್ತದೆ. ಧರ್ಮದ ಅನುಮತಿ ಮತ್ತು ರೂಢಿಯ ಕಾರಣದಿಂದ ಹೆಚ್ಚಾಗಿ ಜಾತಿಪದ್ಧತಿ, ಅಸ್ತಿತ್ವದಲ್ಲಿ ಬರುತ್ತ ಹೋಯಿತು. ಕಾನೂನಿನ ನಿಬಂಧನೆಗಳಿಗೆ ಮೊರೆ ಹೋಗುವದು ವಿರಳವಾಗುತ್ತಿತ್ತು. ಹೋದಾಗಲೂ ಧಾರ್ಮಿಕತೆ ಹೆಚ್ಚಿನ ಪ್ರಭಾವ ಬೀರುತ್ತಿತ್ತು. ೧೮೫೦ರ ವರೆಗೆ ಮಾತ್ರ ಈ ಕಾನೂನು ಒಪ್ಪಿಗೆ ಹೆಚ್ಚಾಗಿ ಜಾರಿಯಲ್ಲಿದ್ದಿತು. ಜಾತಿ ಅನರ್ಹತಾ ಕಾಯಿದೆ ಆ ವರ್ಷ ಬ್ರಿಟಿಷ್ ಸರ್ಕಾರದಿಂದ ಅನುಮೋದಿತವಾಗಿ ಧರ್ಮದ ಹಿಡಿತ ಕಾನೂನಿನ ಹಿಡಿತಕ್ಕಿಂತ ಹೆಚ್ಚು ಪರಿಣಾಮಕಾರಿಯಾಯಿತು. ಧರ್ಮ ಕಾನೂನಿಗಿಂತ ಸದಾ ಶಕ್ತಿಶಾಲೀ ಯಂತ್ರ. ಧಾರ್ಮಿಕ ಮಂಜೂರಾತಿಯಲ್ಲಿ ಸಾಮಾಜಿಕ ಅಂಶಗಳು ಹೇರಳವಾಗಿರುತ್ತವೆ ಎಂಬ ಮಾತು ನಿಜ. ಪ್ರೊ. ಡರ್ಖೀಮ್ ಇದರ ಬಗೆಗೆ ಹೀಗೆ ಉಲ್ಲೇಖಿಸುತ್ತಾರೆ.[೧]

"ಧಾರ್ಮಿಕ ವಿಶ್ವಾಸ, ಕಟ್ಟಳೆಗಳು ಒಂದು ಸಮೂಹಕ್ಕೆ ಸಾಮಾನ್ಯವಾಗಿ ಎಲ್ಲರಿಗೂ ಒಪ್ಪಿತವಾಗಿದ್ದುದ್ದೇ ಇರುತ್ತದೆ. ಈ ವೈಚಾರಿಕ ಪ್ರಣಾಲಿಗೆ ಬದ್ಧರಾಗಿಯೇ ಅವರ ಜಾತಿಯ ಗುಂಪು ಒಂದಾಗಿ ನಿರ್ಮಾಣವಾಗಿರುತ್ತದೆ. ಹೀಗಾಗಿ ಈ ವಿಷಯದಲ್ಲಿ ಒಮ್ಮತ, ಒಗ್ಗಟ್ಟು ಅವರಲ್ಲಿ ಇದ್ದೇ ಇರುತ್ತದೆ."

ಎರಡನೆಯದಾಗಿ ಧಾರ್ಮಿಕವಾದದ್ದು, ಸಂಸ್ಕಾರಜನ್ಯವಾಗಿರುತ್ತದೆ. ಪ್ರೊ. ಡರ್ಖೀಮ್ ಅವರ ಈ ವಿಚಾರ ಕೇಳೋಣ:[೨]

"ಎಲ್ಲ ಧಾರ್ಮಿಕ ಶ್ರದ್ಧೆಗಳನ್ನು ವಿಶ್ಲೇಷಿದಾಗ ಎರಡೇ ವರ್ಗಗಳು ಕಂಡುಬರುತ್ತವೆ. – ಒಂದು ಧರ್ಮಶ್ರದ್ಧೆಯ ಮತ್ತು ಇನ್ನೊಂದು ಲೌಕಿಕ ಶ್ರದ್ಧೆಯ ಗುಂಪು. ಮಾನವ ಇತಿಹಾಸದ ಎಲ್ಲ ಹಂತದಲ್ಲಿಯೂ ಈ ವಿಭಜನೆ ಮಾನವನ ನೈತಿಕ ನಿಲುವಿನ ಮೇಲೆ ನಿಂತಿದೆ. ಪರಂಪರಾಗತವಾದ ಶಿಷ್ಟಶಕ್ತಿಗಳು ಮತ್ತು

---

೧. *ಎಲಿಮೆಂಟರಿ ಫಾರ್ಮ್ಸ್ ಆಫ್ ರಿಲಿಜಿಯಸ್ ಲೈಫ್* : ಪು. ೩೭–೪೦.

೨. ಅದೇ, ಪು. ೪೩.

ದುಷ್ಟಶಕ್ತಿಕೂಡ ಆರೋಗ್ಯ–ಅನಾರೋಗ್ಯ ಜೀವನದ ಭಾಗವಾಗಿದ್ದಂತೆ – ಜೀವನದ ವಾಸ್ತವ ಸಂಗತಿಗಳಾಗಿ ನಿಂತಿವೆ. ಧಾರ್ಮಿಕ ರೀತಿನೀತಿಗಳು, ನಿಬಂಧನೆಗಳು ಇವಕ್ಕೆ ಹೊರತಾಗಿಲ್ಲ. ಮನುಷ್ಯ ಅವುಗಳಿಗೂ ಬದ್ಧನಾಗಿ ಇರಬೇಕಾದುದು ಒಂದು ಮನುಕುಲದ ಲಕ್ಷಣವಾಗಿ ಬಂದಿದೆ."

ಈ ಮೇಲಿನ ಮಾತುಗಳಿಂದ ಸ್ಪಷ್ಟವಾಗುವ ಅಂಶವೆಂದರೆ ಸಾಮಾಜಿಕ, ಧಾರ್ಮಿಕ, ಲೌಕಿಕ ವಿಶ್ವಾಸಗಳು ಪರಸ್ಪರ ಪೂರಕವಾಗಿ ಹೆಣೆದುಕೊಂಡಿವೆ. ಧಾರ್ಮಿಕವಾದದ್ದು ಸಾಮಾಜಿಕ ಹರವನ್ನು ಪಡೆದಿರಲೇಬೇಕು. ಆದರೆ ಸಾಮಾಜಿಕವಾದುದು ಧಾರ್ಮಿಕವಾಗಿರಬೇಕೆಂದೇನೂ ಇಲ್ಲ. ಲೌಕಿಕವಾದದ್ದು ಸಾಮಾಜಿಕವಾದರೂ, ಎಲ್ಲ ಸಾಮಾಜಿಕವಾದ ವಿಚಾರಗಳು ಲೌಕಿಕವಾಗಿರಲಿಕ್ಕಿಲ್ಲ. ಆದರೆ ಧಾರ್ಮಿಕವಾದದ್ದು ಮಾತ್ರ ಲೌಕಿಕ ಮತ್ತು ಸಾಮಾಜಿಕ ಪ್ರಭಾವವನ್ನು ಹೊಂದಿಯೇ ಇರುತ್ತದೆ.

ಧಾರ್ಮಿಕ ವಿಶ್ವಾಸಗಳನ್ನು ಗುಂಪಿನ ಪ್ರತಿ ವ್ಯಕ್ತಿಯ ಮೇಲೆ ನೇರವಾಗಿ ಹೇರಬಹುದು, ನಿರೀಕ್ಷಿಸಬಹುದು. ಏಕೆಂದರೆ ಗುಂಪಿನ ಸ್ವರೂಪದ ಆಧಾರ ಧರ್ಮವಾಗಿರುತ್ತದೆ. ಲೌಕಿಕ ಮತ್ತು ಸಾಮಾಜಿಕ ಅಪರಾಧ ಮನ್ನಿಸಬಹುದು. ಆದರೆ ಧಾರ್ಮಿಕ ಅಪರಾಧ ಶಿಕ್ಷಾರ್ಹವಾಗಿರುತ್ತದೆ. ಈ ಬಗೆಗೆ ವ್ಯಕ್ತಿ ಸರ್ವ ಸಮಾಜದೆದುರು ದುರ್ಬಲನಾಗುತ್ತಾನೆ. ಆದ್ದರಿಂದ ಸಾಮಾಜಿಕ ಅನುಮತಿಗಿಂತ ಧಾರ್ಮಿಕ ಅನುಮತಿ ದೊರಕಿಸುವುದು ಕಠಿಣವಾಗುತ್ತದೆ. ಲೌಕಿಕ ವಿಷಯಗಳ ಬಗೆಗಿನ ನಿಲುವು, ನಿರ್ಧಾರ ಒಮ್ಮೊಮ್ಮೆ ವ್ಯಕ್ತಿಗತವಾಗುವ ಸಂಭವ ಉಂಟು. ಆದರೆ ಧಾರ್ಮಿಕತೆ ಹಾಗಾಗುವುದಿಲ್ಲ. ಏಕೆಂದರೆ ಗುಂಪಿನಲ್ಲಿ ವ್ಯಕ್ತಿಯ ಸ್ವೀಕೃತಿ ಅಥವಾ ಅಸ್ವೀಕೃತಿಯ ಅಂಶ ಅದರಲ್ಲಿ ಅಡಕವಾಗಿದೆ. ಪವಿತ್ರವಾದುದು, ಪೂಜನೀಯವಾದುದು ಎಂದು ಗುಂಪಿನ ಒಟ್ಟು ಅಭಿಪ್ರಾಯವಾದಾಗ ಒಬ್ಬ ವ್ಯಕ್ತಿ ಗುಂಪಿನ ಅನಿಸಿಕೆ – ನಿರ್ಣಯಕ್ಕೆ ಗೌರವ ಕೊಡಲೇಬೇಕಾಗುತ್ತದೆ. ಪ್ರೊ. ಡರ್ಖೀಮ್‌ನ ವಿವರಣೆ ಇದು:

"ಧರ್ಮ ಸಂಬಂಧಿ ವಿಷಯಗಳನ್ನು ನಿರ್ಣಯ ಮಾಡುವಾಗ ಹೇಗೆ ಒಬ್ಬ ಹಿರಿಯ ಪ್ರಭಾವಶಾಲಿ ವ್ಯಕ್ತಿಯೊಡನೆ ವ್ಯವಹರಿಸುತ್ತೇವೆಯೋ ಹಾಗೆ ಜವಾಬ್ದಾರಿ, ಭಯ, ಆದರಗಳಿಂದ ನೋಡಬೇಕಾಗುತ್ತದೆ. ಅಂತಹ ವ್ಯಕ್ತಿಯೊಡನೆ ವ್ಯವಹರಿಸುವಾಗ ತೆಗೆದುಕೊಳ್ಳುವಾಗಿನ ಎಲ್ಲ ಎಚ್ಚರದ ಕ್ರಮಗಳನ್ನೂ ತೆಗೆದುಕೊಳ್ಳಬೇಕಾಗುತ್ತದೆ. ಸಾಮಾನ್ಯ ಮನುಷ್ಯರೊಡನೆ ಮಾತನಾಡಿದಂತೆ ಸುಲಭವಾಗಿ, ಹಗುರವಾಗಿ ವರ್ತಿಸಲು ಆಗುವುದಿಲ್ಲ."

ಪಾವಿತ್ರ್ಯ ಪೂಜ್ಯತೆಯ ಭಾವನೆಗೆ ಕಾರಣವಾಗುತ್ತದೆ. ಆದರೆ ಅದೇ ಕಾಲಕ್ಕೆ ಎಲ್ಲರಿಂದ ಸರ್ವಸಮ್ಮತವಾದ ಕಲ್ಪನೆಯ ವಿಚಾರ ಅದಾದುದರಿಂದ ಅದನ್ನು ಪ್ರಶ್ನಿಸುವುದಾಗಲಿ ಚರ್ಚಿಸುವುದಾಗಲಿ ಅಪರಾಧವೆಂಬ ಭಾವನೆ ಜನಸಮುದಾಯದಲ್ಲಿ ಬೆಳೆಯುತ್ತದೆ. ವ್ಯಕ್ತಿಯಲ್ಲಿ ಈ ವಿಚಾರಗಳು ಹೆಚ್ಚುಹೆಚ್ಚಾಗಿ ಬೇರೂರಿದಾಗ ಅವನೇ ಅವುಗಳ ರಕ್ಷಣೆಗಾಗಿ ಹೋರಾಟ ಮಾಡುವ ಶಕ್ತಿಯಾಗಿ ಪರಿಣಮಿಸುತ್ತಾನೆ. ಹಿಂದೂಗಳಲ್ಲಿ ಜಾತಿವ್ಯವಸ್ಥೆ ಬೇರೂರಿದ ಕ್ರಮವೇ ಈ ಮೇಲೆ ವಿವರಿಸಿದ ರೀತಿಯದು. ವೇದಗಳಲ್ಲಿ ಜಾತಿಯ ಉಲ್ಲೇಖವಿದೆ. ಆದ್ದರಿಂದ ಪವಿತ್ರವಾದುದು; ಪಾಲಿಸಲೇಬೇಕಾದುದು. ಏಕೆಂದರೆ ವೇದಗಳು ಹಿಂದೂಗಳಿಗೆ ಪವಿತ್ರವಾದದ್ದು. ವೇದಗಳು ಧಾರ್ಮಿಕತೆಯನ್ನು ಹೊಂದಿವೆ ಎಂದ ಮಾತ್ರಕ್ಕೆ ಪವಿತ್ರವೆಂದು ಒಪ್ಪುವುದು ಸಮ್ಮತವಲ್ಲದ ವಿಚಾರ. ಅವು ಪವಿತ್ರವಾದವು, ಏಕೆಂದರೆ ಧರ್ಮದ ವಿಚಾರ ಅಲ್ಲಿ ಪ್ರಸ್ತಾಪ ಬಂದಿದೆ. ವೇದಗಳು

---

೧. ಎಮ್. ಕೃಷ್ಣಮಾಚಾರಿಯಾರ್ – *ಕ್ಲ್ಯಾಸಿಕಲ್ ಸ್ಯಾನ್‌ಸ್ಕ್ರಿಟ್ ಲಿಟರೇಚರ್,* (ಇಂಟ್ರಡಕ್ಷನ್) ಪು. vii-viii ಮತ್ತು ಪು. ೮೩೬.

ಹಿಂದೂವಿಗೆ ಜ್ಞಾನದ ಆಧಾರ, ವೇದಗಳು ಎಂದರೇನೇ ಜ್ಞಾನ–ತಿಳಿವಳಿಕೆ. 'ಪವಿತ್ರ' ಶಬ್ದಕ್ಕಿರುವ ಅರ್ಥಕ್ಕಿಂತಲೂ ಹೆಚ್ಚುಪಟ್ಟು ಅರ್ಥವನ್ನು ಅವರು ವೇದಕ್ಕೆ ಹಚ್ಚಲು ಪ್ರಯತ್ನಿಸುತ್ತಾರೆ. ವೇದವನ್ನು ಶ್ರುತಿ, ಎಂದರೆ ದೇವರಿಂದ ಕೇಳಿದ್ದು ಎಂದು ಹೆಚ್ಚಿಗೆ ಅರ್ಥೈಸುತ್ತಾರೆ. ಪುರಾತನ ಕಾಲದ ಧರ್ಮದಲ್ಲಿ ಪವಿತ್ರತೆಯ ಕಲ್ಪನೆ ಮಾನವನೇ ಮಾಡಿದ್ದ ಅಲ್ಲವೇ? ಹಿಂದೂ ಧರ್ಮದಲ್ಲಿ ಪವಿತ್ರವಾದದ್ದು ಯಾವುದೆಂದರೆ ದೇವರು ಹೇಳಿದ್ದು. ಆದ್ದರಿಂದ ಪರಮಪವಿತ್ರ.

ಹಿಂದೂಗಳು ವೇದಗಳನ್ನು ಒಂದು ವೈಶಿಷ್ಟ್ಯಪೂರ್ಣ ಗ್ರಂಥಗಳೆಂದು ಪರಿಗಣಿಸುತ್ತಾರೆ. ಸೃಷ್ಟಿ ನಿರ್ಮಾಣದಲ್ಲಿ 'ಕಲ್ಪ'ಗಳ ಕಲ್ಪನೆಯನ್ನು ಅವರು ನಂಬುತ್ತಾರೆ.[೧] ಸೃಷ್ಟಿ ಪ್ರತಿ ಕಲ್ಪದ ಕೊನೆಗೆ ಸರ್ವನಾಶವಾಗಿ ಪುನಃ ನಿರ್ಮಾಣವಾಗುತ್ತದೆ ಎಂದು ತಿಳಿಯುತ್ತಾರೆ. ಪ್ರತಿ ಕಲ್ಪದ ಪ್ರಾರಂಭದಲ್ಲಿ ವೇದಗಳು ದೇವರಿಂದ ಮನುಷ್ಯನಿಗೆ ಸಾಗಿಸಲ್ಪಡುತ್ತವೆ ಎಂಬ ಕಲ್ಪನೆ ಅವರದು. ಕೃತಯುಗದ ಪ್ರಾರಂಭದಲ್ಲಿ ದೇವರಿಂದ ಋಷಿಗಳಿಗೆ ದೊರೆತವು. ವೇದಗಳನ್ನು ಹಿಂದೂಗಳು ಅನಾದಿ ಮತ್ತು ಅಜರಾಮರ ಎಂದು ಭಾವಿಸುತ್ತಾರೆ. ಅವು ಅಪೌರುಷೇಯ ಅಂದರೆ ಮಾನವ ನಿರ್ಮಿತವಲ್ಲ. ಒಟ್ಟಿನಲ್ಲಿ ಹೇಳಬೇಕೆಂದರೆ ವೇದಗಳೆಂದರೆ ದೇವನುಡಿ ಮತ್ತು ದೇವರ ಆದೇಶ.

'ಶ್ರುತಿ'ಯೆಂದು ಕರೆಯದಿದ್ದರೂ ವೇದಗಳು ಪರಮಪವಿತ್ರ. ಪ್ರೊ. ಮ್ಯಾಕ್ಸಮುಲರ್‌ರ[೧] ವಿಭಜನೆ ಗಮನಾರ್ಹ :

ಸ್ವಾಭಾವಿಕ ಅಥವಾ ಹೇಳಲ್ಪಟ್ಟದ್ದು ಎಂದು ವರ್ಗೀಕರಿಸಬಹುದು. ಇದು ಒಂದು ಪರಿ. ವೈಯಕ್ತಿಕ ಅಥವಾ ರಾಷ್ಟ್ರೀಯ ಎಂದೂ ಇನ್ನೊಂದು ರೀತಿಯಲ್ಲಿ ವಿಭಜಿಸಬಹುದು. ಮೂರನೆಯ ವಿಭಜನೆಯ ರೀತಿಯೆಂದರೆ ಅವುಗಳನ್ನು ನಾಸ್ತಿಕತೆ, ಪ್ರಕೃತಿಸಿದ್ಧವಾದ, ದ್ವೈತ ಬಹುದೇವತಾರಾಧನೆಯ, ಏಕದೇವತಾರಾಧನೆಯ, ಉಗ್ರ ದೇವತಾರಾಧನೆಯ, ಸರ್ವಚೇತನವಾದ ಅಥವಾ ಮಿಥ್ಯಾವಾದವೆಂದೇ ಧರ್ಮವನ್ನು ವಿಭಜಿಸುತ್ತ ಹೋಗಬಹುದು. ಗ್ರಂಥರಹಿತ ಧರ್ಮ ಮತ್ತು ಗ್ರಂಥಾಧಾರಿತ ಧರ್ಮ ಎಂದೂ ಧರ್ಮವನ್ನು ವಿಭಜಿಸಬಹುದು. ಧರ್ಮವನ್ನು ಹೀಗೆ ಅವಿರತವಾಗಿ ವಿಭಜಿಸುತ್ತಲೇ ಹೋಗಬಹುದು. ಸಂಸ್ಥಾಪಕರಿಂದ ನಿರ್ಮಾಣವಾದ ಧರ್ಮ, ಸಂಸ್ಥಾಪಕರಹಿತ ಧರ್ಮ ಎಂದೂ ವಿಭಜಿಸಬಹುದು.

ಎರಡನ್ನು ಬಿಟ್ಟು ಉಳಿದೆಲ್ಲ ಬಗೆಗೂ ಸಾಮಾಜಿಕ ಮಹತ್ವ ಇದೆ. ಗ್ರಂಥಾಧಾರಿತ ಧರ್ಮಕ್ಕೆ ಹೆಚ್ಚಿನ ಲಾಭವಿದೆ. ಇದಕ್ಕೆ ಲಿಖಿತ ಸಂವಿಧಾನದ ಆಧಾರವಿದೆ. ಮತ್ತು ಸತ್ಯಸಾಧನೆಯಲ್ಲಿ ಪ್ರಭಾವಕಾರಿ ಅಸ್ತಿತ್ವವನ್ನು ತೋರಿಸುವಲ್ಲಿ ಯಶಸ್ವಿಯಾಗುತ್ತದೆ. "ಗ್ರಂಥದಲ್ಲಿ ಬೋಧಿಸುವ ತತ್ವಗಳು ಆಚರಣೆಗೆ ದೂರವಿದ್ದರೂ ಶ್ರೇಷ್ಠತೆಯನ್ನು ಪ್ರದರ್ಶಿಸುತ್ತವೆ. ಗ್ರಂಥ ರಹಿತ ಧರ್ಮಕ್ಕೆ ಕೀಳರಿಮೆ ಇಲ್ಲ, ಆದರೆ ಹಾಗೆನಿಸುತ್ತದೆ" ಎಂದು ಮ್ಯಾಕ್ಸಮುಲರ್ ಹೇಳುತ್ತಾನೆ.[೨] ಗ್ರಂಥ, ಧರ್ಮದ ಅಸ್ತಿತ್ವವನ್ನು ಎತ್ತಿ ಹೇಳುತ್ತದೆ. ಸಾಮಾಜಿಕ ಪರಿಸರದಲ್ಲಿ ಇದು ವಿಶೇಷ ವೈಶಿಷ್ಟ್ಯವನ್ನು ಪಡೆಯಿತು. ಇದರಿಂದ ಜನರ ಮೇಲೆ ಹೆಚ್ಚಿನ ಪ್ರಭಾವ ಬೀರಲು ಸಾಧ್ಯವಾಯಿತು. ಜನರು ಧರ್ಮಕ್ಕೆ ವಿಧೇಯರಾಗುತ್ತಾರೆ. ಬೋಧಿಸಿದ ಧಾರ್ಮಿಕ ತತ್ತ್ವ ಗ್ರಂಥದಲ್ಲಿ ಇದ್ದರೂ ಅದು ಆಚರಣೆಯಲ್ಲಿ ಮಿಥ್ಯವಾಗಿದ್ದರೆ ಬಹಳ ದಿನ ಉಳಿಯುವುದಿಲ್ಲ. ಒಂದು ಗುಂಪಿನ ಧಾರ್ಮಿಕ ವಿಶ್ವಾಸಗಳು ಗಟ್ಟಿಯಾಗಿ ಉಳಿಯದಿದ್ದರೆ ಆ ಧರ್ಮದ ಪ್ರಚಲಿತತೆ, ಸ್ವಾಭಾವಿಕತೆ ಕಡಿಮೆಯಾಗುತ್ತ ನಡೆಯುತ್ತದೆ.

---

೧. *ಇಂಟ್ರಡಕ್ಷನ್ ಟು ದಿ ಸೈನ್ಸ್ ಆಫ್ ರಿಲಿಜನ್.*
೨. *ನ್ಯಾಚುರಲ್ ರಿಲಿಜನ್,* ಪು. *೫೪೯.*

ಸ್ವಾಭಾವಿಕವಾಗಿ ಬೆಳೆದು ಬಂದ ಧರ್ಮ ಜನರಿಂದ ಉಗಮವಾಗಿರುತ್ತದೆ. ಸತ್ಯದ ಬಲದ ಮೇಲೆ ಆಧಾರಿತವಾಗಿರುತ್ತದೆ. ಆದರೆ ದೇವರು ತಿಳಿಸಿದ ಎಂದು ಹೇಳಿದ ಧರ್ಮವನ್ನು ಪ್ರಶ್ನಿಸುವ ಧೈರ್ಯವಿಲ್ಲದ್ದರಿಂದ ಅಂಧತೆಯಿಂದ ಶ್ರೇಷ್ಠವಾದದ್ದು ಎಂದು ಒಪ್ಪಿಕೊಳ್ಳಲಾಗುತ್ತದೆ. ಇಂಥ ಧರ್ಮದ ಪವಿತ್ರತೆ ಪ್ರಶ್ನಾತೀತವಾಗಿರುತ್ತದೆ, ವಿಮರ್ಶಾತೀತವಾಗಿರುತ್ತದೆ.

ವೇದಗಳಿಗೆ ಕೆಲವು ಲಾಭಗಳಿವೆ. ಇವುಗಳಲ್ಲಿ ಧಾರ್ಮಿಕ ನಿಬಂಧನೆಗಳ ಸಂವಿಧಾನವೂ ಇದೆ. ಅಲ್ಲದೆ ಶ್ರುತಿ ಎಂದು ಹೇಳಲ್ಪಟ್ಟಿರುವುದರಿಂದ ಹೆಚ್ಚು ಮಹತ್ವ ಪಡೆಯುತ್ತವೆ. ಸ್ವಾಭಾವಿಕತೆ ಮತ್ತು ಗ್ರಂಥಸ್ಥತೆ ಎರಡು ವಿಶಿಷ್ಟ ಗುಣ ಪಡೆಯುತ್ತವೆ.

ಈ ಮೇಲಿನ ವಿವರಣೆಯ ಕಾರಣವೆಂದರೆ ವೇದಗಳು ಜಾತಿಪದ್ಧತಿಯನ್ನು ಬೋಧಿಸುತ್ತವೆ. ಆದ್ದರಿಂದ ಸರ್ವಮಾನ್ಯವಾಗಬೇಕೆಂಬ ತಪ್ಪು ಗ್ರಹಿಕೆ. ದೇವತಾ ಮಾನ್ಯತೆಯೂ ಇದೆ ಎಂಬ ಇನ್ನೊಂದು ತಪ್ಪು ಗ್ರಹಿಕೆಯ ಆಧಾರ. ಹೀಗೆ ಎರಡು ರೀತಿಯಲ್ಲಿ ಈ ವಿಚಾರ ರಕ್ಷಿತವಾಗಿದೆ. ವೇದದಲ್ಲಿ ನಮೂದಿತವಾಗಿರುವುದರಿಂದ ದೈವೀಸತ್ಯವಾದುದು. ಆದ್ದರಿಂದ  ಪ್ರತಿಯೊಬ್ಬರೂ ಇದನ್ನೇ ಸ್ವೀಕರಿಸಲೇಬೇಕು ಎಂಬ ಆಗ್ರಹ. ಇದು ದೈವಿಕವಾದ್ದರಿಂದ ಪವಿತ್ರವಾಗಿದೆ. ಆದ್ದರಿಂದ ಇದನ್ನು ಯಾರೂ ಆಕ್ರಮಣ ಮಾಡುವಂತಿಲ್ಲ. ಹಾಗೆ ಮಾಡಿದಲ್ಲಿ ತಪ್ಪಿತಸ್ಥರಾಗುವರು ಮತ್ತು ಶಿಕ್ಷಾರ್ಹರು ಎಂಬ ಕಲ್ಪನೆ.

ಇದು  ಜಾತಿಪದ್ಧತಿಯತ್ತ ನೋಡುವ ಹಿಂದೂವಿನ ದೃಷ್ಟಿ. ಸಾಮಾನ್ಯ ಹಿಂದೂವು ರಿಸ್ಲೆಯವರ ಆಧುನಿಕ ವಿವರಣೆಯತ್ತ ಗಮನ ಹರಿಸುವುದಿಲ್ಲ. ಸೆನಾರ್ಟನ ವ್ಯವಸಾಯ ಆಧಾರಿತ ವಿಶ್ಲೇಷಣೆ ಆಕರ್ಷಣೆಯಾಗುವುದಿಲ್ಲ. ನೆಸ್‌ಫೀಲ್ಡ್‌ನ ಕಾರ್ಯಾತ್ಮಕ ವಿವರಣೆಯೂ ಸ್ವೀಕಾರಾರ್ಹವಾಗುವುದಿಲ್ಲ. ಏಕೆಂದರೆ ವೇದದಲ್ಲಿರುವುದರಿಂದ ಅವನು, ಜಾತಿ ದೇವರಿಂದ ನಿರ್ಮಾಣವಾಗಿದೆ ಎಂದು ತಿಳಿಯುತ್ತಾನೆ. ಅಲ್ಲದೆ, ಶ್ರುತಿಯಾಗಿರುವುದರಿಂದ ಸತ್ಯವಾದದ್ದು, ನಿತ್ಯವಾದದ್ದು ಎಂದು ಭಾವಿಸುತ್ತಾನೆ.

ಜಾತಿಪದ್ಧತಿಯನ್ನು ವಿಮರ್ಶಿಸಲು ಹೊರಟಾಗಲೆಲ್ಲ ಅದರ ರಕ್ಷಕರ ವಾದವಿಷ್ಟೇ. ಜಾತಿ ದೈವಸಂಭೂತ, ಪವಿತ್ರ ಮತ್ತು ಅನೂಚಾನ ವ್ಯವಸ್ಥೆ, ಬ್ರಾಹ್ಮಣರು ಮತ್ತು ಬುದ್ಧ ಮತ್ತು ಅವನ ಶಿಷ್ಯರ ನಡುವೆ ಒಮ್ಮೆ ನಡೆದ ಈ ವಿಷಯದ ಚರ್ಚೆ ಈ ಮಾತನ್ನು ಸ್ಪಷ್ಟಪಡಿಸುತ್ತದೆ.[೧]

> "ಒಂದು ಸಲ ಜಾತಿ ವ್ಯವಸ್ಥೆಗೆ ದೈವೀಬೆಂಬಲವಿದೆ ಎಂದಾಕ್ಷಣ ಬ್ರಾಹ್ಮಣರ ತಾತ್ವಿಕತೆಗೆ ಒಂದು ಪ್ರಬಲ ಬಲ ಸಿಗುತ್ತದೆ. ಆದ್ದರಿಂದ ಮನುಷ್ಯ ಮಾತ್ರರು ಅದನ್ನು ಆಕ್ರಮಣ ಮಾಡಲು ಸಾಧ್ಯವಾಗದು. ಅದಕ್ಕೆ ವೇದಗಳ ಬೆಂಬಲವೂ ಇದೆ. ರಾಜ್ಯ ವ್ಯವಸ್ಥೆಯಲ್ಲಿ ಅದಕ್ಕೆ ಒಮ್ಮೆ ಒಪ್ಪಿತ ಸ್ಥಾನ ದೊರಕುವುದುಂಟು. ಶ್ರುತಿಯ ಆಧಾರದ ಮೇಲೆ ತತ್ವದ ಪವಿತ್ರತೆಯನ್ನು, ಸರಳತೆಯನ್ನು, ಶುದ್ಧತೆಯನ್ನು ಬ್ರಾಹ್ಮಣರು ತಾತ್ವಿಕ ಚಿಂತನೆಯಲ್ಲಿ ಸಾಕಷ್ಟು ಚರ್ಚೆಗೆ ಅವಕಾಶವನ್ನು ಅವರು ಕೊಟ್ಟರೂ ಮೊದಲ ಮೂರು ತಾತ್ವಿಕ ಚೌಕಟ್ಟಾದ ಮೀಮಾಂಸ, ನ್ಯಾಯ ಮುಂತಾದವುಗಳನ್ನು ಬಹಳ ಮಡಿವಂತಿಕೆಯ ಸಂಪ್ರದಾಯದವುಗಳೆಂದರೂ ವೈಶೇಷಿಕ, ಸಾಂಖ್ಯ, ಯೋಗ, ವೈಚಾರಿಕ ಪ್ರಣಾಲಿಗಳನ್ನು ಅವರು ತಾತ್ವಿಕ ಚರ್ಚೆಗೆ ಒಳಪಡಿಸಿದರು. ವಾದ, ಚರ್ಚೆ ನಡೆದರೂ ಮೂಲದ ವೈಚಾರಿಕ ಆಧಾರ ಸಡಿಲಾಗಿರಲಿಲ್ಲ. ಕೆಲವೆಡೆ ಅರ್ಥ, ಪ್ರತಿ ಅರ್ಥ, ಶಂಕೆಗೆ ಎಡೆಮಾಡಿಕೊಡುವ ಅವಕಾಶಗಳಿದ್ದರೂ ಒಟ್ಟಿನಲ್ಲಿ ಮುಖ್ಯ ವೈಚಾರಿಕ ನೆಲಗಟ್ಟು ಬಿಟ್ಟುಕೊಡಲಿಲ್ಲ. ಮಾನವ ಜ್ಞಾನದ ಮೂಲವೇ ವೇದ.

---

೧. ಮೇಲಿನ ಎಲ್ಲ ಉಲ್ಲೇಖಗಳ ಮೂಲ (ಪುಟ ೧೬೭ ರವರೆಗೆ) ಹಸ್ತಪ್ರತಿಯಲ್ಲಿಲ್ಲ. –ಸಂ.

ಆದ್ದರಿಂದ ಸತ್ಯವಾದುದು ಎನ್ನುವ ಅವರ ವಾದ ನಡೆದೇ ಇದ್ದಿತು. ಬ್ರಾಹ್ಮಣರ ಮೇಲೆ ಉಳಿದ ಯಾವ ಮೂಲಭೂತ ವಿಚಾರಗಳು ಅಡ್ಡಿ ಬರುತ್ತಿರಲಿಲ್ಲ. ಶಾಕ್ಯಮುನಿ ಬುದ್ಧ ಹೆಚ್ಚಿನ ಆಧಾರರಹಿತ ಹೇಳಿಕೆ ಕಂಡುಹಿಡಿಯಲಾಗಲಿಲ್ಲ. ಕಪಿಲನ ನಾಸ್ತಿಕವಾದದಲ್ಲಿ ಅಂತಹ ಸತ್ವಯುತ ಅಂಶಗಳು ಕಂಡುಬರಲಿಲ್ಲ. ಬುದ್ಧನು ಬ್ರಾಹ್ಮಣರ ದೈವೀ ಸೃಷ್ಟಿಯನ್ನು ವಿರೋಧಿಸಿದನು. ಅದನ್ನು ಸ್ಪಷ್ಟ ಶಬ್ದಗಳಲ್ಲಿ ವ್ಯಕ್ತಪಡಿಸಿದನು.

ಬುದ್ಧನು ಮೂಲತಃ ಕ್ಷತ್ರಿಯನು. ಬ್ರಾಹ್ಮಣರ ಮಹತ್ವಾಕಾಂಕ್ಷಾ ಗುಣವನ್ನು ಅವನ ಜಾತಿಯಲ್ಲಿ ವಿರೋಧಿಸಿದವರಲ್ಲಿ ಮೊದಲಿಗನಾಗಿರಲಿಲ್ಲ. ಎಷ್ಟೋ ಶತಮಾನಗಳ ಹಿಂದೆ ಬುದ್ಧನಂತೆ ವಿಶ್ವಾಮಿತ್ರನು ಬ್ರಾಹ್ಮಣರ ವೈಶಿಷ್ಟ್ಯವನ್ನು ಪ್ರಶ್ನಿಸಿದ್ದನು. ಆದರೆ ಆಗ ಬ್ರಾಹ್ಮಣರ ಸ್ಥಿತಿ ಬಹಳ ಭದ್ರವಾಗಿತ್ತು. ವಿಶ್ವಾಮಿತ್ರನು ಬ್ರಾಹ್ಮಣರ ವಿಶೇಷ ಹಕ್ಕುಗಳನ್ನು ತನಗೂ ತನ್ನ ಕುಟುಂಬ ವರ್ಗಕ್ಕೂ ದೊರಕಿಸಲು ಬಹಳ ಹೋರಾಡಿ ಪಡೆದನು. ಅದಕ್ಕೂ ಮೊದಲು ಅವು ಬ್ರಾಹ್ಮಣರಿಗಾಗಿ ಮಾತ್ರ ಸೀಮಿತವಾಗಿದ್ದವು. ವಿದೇಹದ ರಾಜ ಜನಕನೂ ಕೂಡ ಬ್ರಾಹ್ಮಣರ ಶ್ರೇಷ್ಠತೆಯನ್ನು ಒಪ್ಪದೆ ತಾನೂ ಯಜ್ಞಗಳಿಗೆ ಯೋಗ್ಯನು ಎಂಬುದನ್ನು ತೋರಿಸಿದನು ಎಂಬ ಮಾತು ಬ್ರಾಹ್ಮಣದಲ್ಲಿ ಉಲ್ಲೇಖವಾಗುತ್ತದೆ. ಹಲವಾರು ರೀತಿಯಲ್ಲಿ ಅವರ ವ್ಯಕ್ತಿತ್ವ ವಿಭಿನ್ನವಾಗಿರಬಹುದು. ಆದರೆ ಅವರು ಹೋರಾಡಿ ಪ್ರತಿಭಟಿಸಿದ ಕೇಂದ್ರ ವಿಷಯ ಒಂದೇ ಆಗಿತ್ತು. ಒಟ್ಟಿನಲ್ಲಿ ಮೂವರೂ ಒಂದಲ್ಲ ಒಂದು ರೀತಿಯಲ್ಲಿ ಬ್ರಾಹ್ಮಣತ್ವದ ಹೆಚ್ಚಳವನ್ನು ಪ್ರಶ್ನಿಸಿದವರೇ ಆಗಿದ್ದರು.

ವಿಶ್ವಾಮಿತ್ರ, ತನ್ನ ಗುರಿ ಸಾಧಿಸಿರಬಹುದು. ಜನಕರಾಜ, ಯಾಜ್ಞವಲ್ಕ್ಯ ಮತ್ತು ಉಳಿದ ಬ್ರಾಹ್ಮಣರಿಂದ ತನ್ನ ಗೌರವವನ್ನು ಪಡೆದು ತೃಪ್ತನಾಗಿರಬಹುದು. ಆದರೆ ಬ್ರಾಹ್ಮಣ ಕುಲದ ವಿರುದ್ಧ ಒಂದು ಅತೃಪ್ತಿಯ ಹೊಗೆ ಆಡುತ್ತಿತ್ತು ಎಂಬುದರಲ್ಲಿ ಸಂದೇಹವಿಲ್ಲ. ಪರಶುರಾಮನಿಂದ ಎಲ್ಲ ಕ್ಷತ್ರಿಯರ ನಾಶದ ಪ್ರಯತ್ನದ ಕಥೆ ಭಾರತದ ಇತಿಹಾಸದ ಒಂದು ಕರಾಳ ಪ್ರಕರಣವೂ ಹೌದು.

ಬ್ರಾಹ್ಮಣ ಜಾತಿಯ ಶ್ರೇಷ್ಠತೆಯನ್ನು ಸಾರುವ ಕಾಲದ ಮೊದಲ ಘಟನೆಯೂ ಅದಾಯಿತು. ಪ್ರಭುತ್ವ ರಾಜಸತ್ತೆಗೆ ಬ್ರಾಹ್ಮಣ ಬಹಳ ಆಶೆ ಪಡೆದಿದ್ದರೂ ಭಾರತೀಯ ಇತಿಹಾಸವನ್ನು ಗಮನಿಸಿದಾಗ ಒಂದಲ್ಲ ಒಂದು ವಿಧದಲ್ಲಿ ಆಳುವ ಜಾತಿಯಾಗಿಯೇ ಪರಿಣಮಿಸಿದ್ದಾರೆ. ತಮ್ಮ ಅಧಿಕಾರ ನೇರವಾಗಿ ದೈವತ್ವದ ಕಡೆಗೆ ಮತ್ತು ತತ್ವಗಳು ದೋಷರಹಿತ, ತಮ್ಮ ದೇವತೆಗಳೆ ನಿಜವಾಗಿ ಪೂಜನೀಯ ಅರ್ಹ ದೇವತೆಗಳು, ತಮ್ಮ ಅಧಿಕಾರದ ಧ್ವನಿಯಿಂದ ಋಷಿಗಳನ್ನು ಬಾಯಿ ಮುಚ್ಚಿಸಬಹುದು ಮತ್ತು ಬ್ರಾಹ್ಮಣಗಳ ರಚನಕಾರರಿಗಿಂತಲೂ ತಮ್ಮ ದೈವೀಶಕ್ತಿ ಹೆಚ್ಚಿನದು ಎಂದು ಮುಂತಾಗಿ ಅವರು ಭಾವಿಸಿದ್ದರು. ಆದರೆ ಈ ಕೊನೆಯ ಹೆಜ್ಜೆಯ ತಿಳಿವಳಿಕೆಯ ಮೊದಲೇ ಬ್ರಾಹ್ಮಣತ್ವದ ವಿಜಯ ಭಾರತದಲ್ಲಿ ಉಳಿದ ದೇಶಗಳಿಗಿಂತ ಹೆಚ್ಚಾಗಿ ಪತನದತ್ತ ನಡೆಯಿತು. ಸತ್ಯದ ಏಕಸ್ವಾಮ್ಯವನ್ನು ಒಪ್ಪಿದ ಜನಸಮುದಾಯವೇ ಈಗ ಈ ಬೌದ್ಧಿಕ ಹಿಂಸಾಚಾರದ ವಿರುದ್ಧ ಧ್ವನಿ ಎತ್ತಿತು. ವಿಶ್ವದ ತೀರ ಪುರಾತನ ಜಾತಿ ಸಂಪ್ರದಾಯಗಳಲ್ಲಿ ಒಂದಾದ ಬ್ರಾಹ್ಮಣತ್ವದ ಹೆಚ್ಚಳವನ್ನು, ಭೂದೇವನನ್ನು ಪ್ರಶ್ನಿಸಲು ಒಬ್ಬ ವ್ಯಕ್ತಿ ಸಾಕಾಯಿತು. ಮುಕ್ತಿ ಅರ್ಚಕರ ಧ್ಯಾನಗಳಿಲ್ಲದೇ ಸಾಧ್ಯ. ಋಷಿಗಳ ಪವಿತ್ರ ಗ್ರಂಥಗಳಿಂದ ಬೋಧಿಸಲ್ಪಟ್ಟರೆ ಮಾತ್ರ ಇದು ಸಾಧ್ಯವೆಂಬ ಕಲ್ಪನೆ ಆಧಾರರಹಿತ. ಇವನೇ ಶಾಕ್ಯಮುನಿಯಾದ ಬುದ್ಧನು: ಬ್ರಾಹ್ಮಣರು ಬುದ್ಧನ ತತ್ವಗಳನ್ನು ತಮ್ಮ ತಾರ್ಕಿಕ ವಾದಗಳಿಂದ ದುರ್ಬಲಗೊಳಿಸಲು ಪ್ರಯತ್ನಿಸಿದ್ದಾರೆ. ವಾಚಸ್ಪತಿ ಮಿಶ್ರರು ಬರೆದ ವೇದಾಂತ ಸೂತ್ರಗಳ ಮೇಲಿನ ವ್ಯಾಖ್ಯಾನದ ಗ್ರಂಥದಲ್ಲಿ ಇದಕ್ಕೊಂದು ದೃಷ್ಟಾಂತ ದೊರೆಯುತ್ತದೆ. ವಿಚಾರಗಳ ಸ್ವರೂಪವನ್ನು ಕುರಿತು ಚರ್ಚಿಸುತ್ತಲೇ ಬುದ್ಧ ತಾರ್ಕಿಕತೆಯನ್ನು ಒಪ್ಪಿಕೊಳ್ಳುತ್ತಾನೆ. ಆದ್ದರಿಂದ ತರ್ಕವಿಲ್ಲದ

ವಿಚಾರವಿಲ್ಲ ಇತ್ಯಾದಿಯಾಗಿ ವಾದಿಸುತ್ತಾರೆ. ಬ್ರಾಹ್ಮಣರು ಬೌದ್ಧಧರ್ಮದ ವಿರುದ್ಧ ಹೋರಾಡಿದ ತಾತ್ವಿಕ ಆಧಾರಗಳು, ಅಂಶಗಳು ಇದಕ್ಕೂ ಹೆಚ್ಚಿಗೆ ಶಕ್ತಿಯುತವಾಗಿದ್ದವು. ಅವರ ಮುಖ್ಯ ತಕರಾರೆಂದರೆ ಬುದ್ಧನ ಬೋಧನೆಗೆ ಸತ್ಯದ ಬೆಂಬಲವಿಲ್ಲ. ಏಕೆಂದರೆ ಅವು ಶ್ರುತಿಯಿಂದ ಜನಿತವಾಗಿಲ್ಲ. ಬುದ್ಧನ ಸಾಂಖ್ಯತತ್ವ, ಬ್ರಾಹ್ಮಣ ತತ್ವದ ಆಕಾರ ನಿರಾಕಾರದ ಬಗೆಗೆ ಸಂಪೂರ್ಣ ವಿರೋಧಮುಖವಾದ ತಾತ್ವಿಕ ನಿಲುವನ್ನು ಹೊಂದಿದೆ. ಅಂದರೆ ವೇದಾಂತದ ವಿರೋಧಿಯಾಗಿದೆ. ಸಾಂಖ್ಯ ತಾತ್ವಿಕ ಪ್ರಣಾಳಿಯ ಕಪಿಲ, ಬ್ರಾಹ್ಮಣರಂತೆ ತರ್ಕ ಮತ್ತು ಅನುಭವಕ್ಕಿಂತ ಶ್ರುತಿಗಳಿಗೆ ಹೆಚ್ಚು ಪ್ರಧಾನ ಮತ್ತು ಬಹು ಪ್ರಮುಖ ಸ್ಥಾನ ಕೊಟ್ಟನು. ಆದರೆ ಬುದ್ಧ ಇದನ್ನು ಒಪ್ಪಲಿಲ್ಲ. ಕಪಿಲನ ತಾತ್ವಿಕತೆ (ಅಭಿಧರ್ಮ) ಮತ್ತು ನೈತಿಕ, ಧಾರ್ಮಿಕ ತತ್ವಗಳಿಗೆ (ವಿನಯಗಳಿಗೆ) ಒಪ್ಪಿಕೊಳ್ಳಲಿಲ್ಲ – ಮಾನವನ ಮನಸ್ಸಿನ ವಿವಿಧ ಸ್ತರಗಳು ಹೇಗೆ ಸ್ವಾಭಾವಿಕವಾಗಿ ವೇದವಾಕ್ಯಗಳಲ್ಲಿ ಪ್ರತಿಬಿಂಬಿತವಾಗಿವೆ ಎಂಬುದನ್ನು ಅವನು ತನ್ನ ತಾತ್ವಿಕ ಸಮಾನತೆಯ ಮುಖಾಂತರ ಬಿಂಬಿಸಬಹುದಾಗಿತ್ತು.

ಬುದ್ಧನು ಹೇಳಿದ ತತ್ವಗಳಾದ 'ನೀನು ಯಾರನ್ನೂ ಕೊಲ್ಲಬಾರದು', 'ನೀನು ಮದ್ಯ ಸೇವಿಸಬಾರದು,' 'ನೀನು ನಿಂತುಕೊಂಡು ತಿನ್ನು' ಇತ್ಯಾದಿ ವಿವರಿಸಲು ಪ್ರಯತ್ನಿಸಿದರೂ ಅವನ ಮರಣದ ನಂತರ ರೂಢಿಯಲ್ಲಿ ಬಂದ ಅವನ ಕೆಲ ತತ್ವಗಳನ್ನು, ಬ್ರಾಹ್ಮಣರು ಶ್ರುತಿಯ ಸತ್ಯದ ಆಧಾರರಹಿತ ತತ್ವಗಳು ಎಂದು ವಿವರಿಸಿ ಅವನ ತತ್ವಗಳನ್ನು ನಿರಾಕರಿಸುತ್ತಿದ್ದರು.

ಕಾಲ ಕಳೆದಂತೆ ಬೌದ್ಧರೂ ತಮ್ಮ ಧರ್ಮದ ತತ್ವಗಳಲ್ಲಿಯೂ ದೈವಾದೇಶದ ಅಂಶವಿದೆ ಎಂದು ವಾದಿಸಹತ್ತಿದರು. ವೇದಗಳನ್ನು ಬ್ರಾಹ್ಮಣರು ದೈವಸಂಭೂತವೆಂದು, ಪವಿತ್ರವೆಂದು ಸ್ಥಾಪಿಸಿ ಒಪ್ಪಿದ ಹಾಗೆ ಬೌದ್ಧ ಧರ್ಮದ ಬರಹಗಳು ದೈವೀಗುಣಗಳನ್ನು ಹೊಂದಿವೆಯೆಂದು ಹೇಳಹತ್ತಿದರು. ಕುಮಾರಿಲನ 'ತಂತ್ರ ವಾರ್ತಿಕಾ' ಎಂಬ ಗ್ರಂಥದಲ್ಲಿಯ ಒಂದು ಚರ್ಚೆಯಿಂದ ಇದು ವಿದಿತವಾಗುತ್ತದೆ. ಪೂರ್ವಪಕ್ಷದ ವಾದದಂತೆ ವೇದಗಳು ಮನುಷ್ಯ ರಚಿತವಲ್ಲ ಎಂಬುದು ಶಾಕ್ಯನ ತತ್ವಬೋಧನೆಗೂ ಅನ್ವಯಿಸುತ್ತದೆ. ಈ ಕೃತಿಯ ಲೇಖಕನಂತೆ ಶಾಕ್ಯನ ಅಧಿಕಾರವಾಣಿಯನ್ನು ಪ್ರಶ್ನಿಸುವಂತಿಲ್ಲ. ಏಕೆಂದರೆ ಶಾಕ್ಯನ ತತ್ವಗಳು ಸ್ಪಷ್ಟ ಮತ್ತು ತಿಳಿಯುವಂತಹುದಿವೆ. ಶಾಕ್ಯನು ಕೇವಲ ತತ್ವಗಳ ಬೋಧಕನೇ ಹೊರತಾಗಿ ಅವನು ಅವುಗಳ ಜನಕನಲ್ಲ. ಮೀಮಾಂಸಕರು ವೇದಗಳ ಅಧಿಕಾರಯುತ ಧ್ವನಿಯನ್ನು ಗುರುತಿಸಿದಂತೆ ಬುದ್ಧನ ತತ್ವಗಳಲ್ಲಿ ದೈವಿಕತೆ ಗುರುತಿಸಬಹುದು. ಕುಮಾರಿಲನ ವ್ಯಾಖ್ಯಾನ ಈ ಬಗೆಯದಿದೆ: ಈ ಶಾಕ್ಯರು, ವೈಶೇಷಿಕರು ಮತ್ತು ಉಳಿದ ಧರ್ಮವಿರೋಧಕರು ತಮ್ಮ ಪವಿತ್ರ ಗ್ರಂಥಗಳು ಅಮರವಾಗಿವೆ ಎಂದು ಮತ್ತು ಕೇವಲ ತಿರಸ್ಕಾರದ ಭಾವನೆ ಹೊಂದಿರುವ ಅವರು ವೇದಗಳು ಪುರಾತನ ಗ್ರಂಥಗಳು ಎಂದು ಒಪ್ಪುತ್ತಿಲ್ಲ. ಬುದ್ಧನ ಹಲವಾರು ತತ್ವಗಳು ವೇದದ ವಿರುದ್ಧ ಕಲ್ಪನೆಗಳು? ಹೀಗಾಗಿ ವಿಶ್ವ, ದಯೆ ಮೊದಲಾದ ತತ್ವಗಳು ವೇದಗಳಲ್ಲಿ ಇದ್ದರೂ ಅವುಗಳನ್ನು ಎರವಲು ಪಡೆದರೂ ಈ ತಾರ್ಕಿಕರು ಅದನ್ನು ಮೊಂಡುತನದಿಂದ ಒಪ್ಪುವುದಿಲ್ಲ. ನಮ್ಮ ವಾದವನ್ನೇ ಆಧಾರವಾಗಿಟ್ಟು ಪ್ರತಿವಾದ ಮಾಡುತ್ತಾರೆ. ಮೀಮಾಂಸಕರ ಶಕ್ತಿಯುತ ವಾದಕ್ಕೆ ಅವರಲ್ಲಿ ಉತ್ತರಗಳಿಲ್ಲ. 'ನನ್ನ ಕುಟುಂಬ ನಿನ್ನ ಕುಟುಂಬದಷ್ಟೇ ಚೆನ್ನಾಗಿದೆ ಆದ್ದರಿಂದ ಮದುವೆಯಾಗು' ಎಂದು ಕೇಳುವ ಮೂರ್ಖ ಮದುವೆಯಾಗುವಂತೆ, ಅತಾರ್ಕಿಕ ವಾದಗಳನ್ನು ಆಧಾರವಾಗಿಟ್ಟುಕೊಂಡು ತಮ್ಮ ಗ್ರಂಥಗಳು ಅಮರ, ದೇವರಿಂದ ಸಂಭೂತವಾದವುಗಳು ಇತ್ಯಾದಿಯಾಗಿ ವಾದ ಮಾಡುತ್ತ ಹೋಗುತ್ತಾರೆ. ಅರ್ಥವಿಲ್ಲದೇ ದಿಶೆಯಿಲ್ಲದೇ, ಕೇವಲ ಎದುರಾಳಿಯನ್ನು ಸೋಲಿಸಬೇಕೆಂಬ ಹುಚ್ಚು ಉತ್ಸಾಹದಲ್ಲಿ ವಾದಿಸುತ್ತ ಹೋಗುತ್ತಾರೆ!

ತನ್ನ ಆರ್ಭಟದ ಭಾಷಣದ ಕೊನೆಯಲ್ಲಿ ಕುಮಾರಿಲ ಹೇಳುತ್ತಾನೆ: ಪ್ರತಿಯೊಂದರ ಅಸ್ತಿತ್ವವೂ ತಾತ್ಕಾಲಿಕ ಎಂದು ಹೇಳದ ಬುದ್ಧನಿಗೆ ಶಾಶ್ವತವಾದ ಜ್ಞಾನೋದಯದ ಬಗ್ಗೆ ಮಾತನಾಡಲು ಯಾವ ಹಕ್ಕಿದೆ?

ಮೇಲಿನ ಚರ್ಚೆಯಿಂದ ಒಂದು ಮಾತು ನಿಶ್ಚಿತ. ಏನೆಂದರೆ ಜಾತಿಯ ಕಲ್ಪನೆ ಧರ್ಮದಿಂದ ಜನಿತವಾದದ್ದು. ಆದ್ದರಿಂದ ಪಾವಿತ್ರ್ಯ ಪಡೆದಿದೆ. ಆದ್ದರಿಂದಲೇ ಧರ್ಮವೆಂಬ ಬಹು ಶಕ್ತಿಯುತ ಬಂಡೆಗಲ್ಲಿನ ಮೇಲೆ ಹಿಂದೂಗಳು ತಮ್ಮ ಸಾಮಾಜಿಕ ಚೌಕಟ್ಟನ್ನು ಕಟ್ಟಿದ್ದಾರೆ.

ಆದ್ದರಿಂದ ಉಳಿದ ಯಾವುದೇ ಸಾಮಾಜಿಕ ಗುಂಪುಗಳಲ್ಲಿ ಜಾತಿ ವ್ಯವಸ್ಥೆ ಎಂಬ ಗುಂಪೇ ವಿಶಿಷ್ಟವಾದದ್ದು ಅಲ್ಲವೇ ? ಜಾತಿಯಲ್ಲಿ ಅಂತಹ ವಿಚಿತ್ರವಾದದ್ದು ಏನಿದೆ ಎಂದು ವಾದಿಸುವವರನ್ನು ಕಂಡಾಗ ಇಂಥವರಿಗೆ ಜಾತಿ ಎಂದರೇನೇ ಗೊತ್ತಿಲ್ಲ ಎಂದು ಜೋರಿನಿಂದ ಹೇಳಬೇಕೆನಿಸುತ್ತದೆ. ನಾನು ಮತ್ತೊಮ್ಮೆ ಪುನರುಚ್ಚರಿಸುವ ಮಾತೆಂದರೆ ಜಾತಿ ತುಂಬಾ ಪವಿತ್ರವಾದ ಕಲ್ಪನೆಯಾಗಿರುವುದರಿಂದಲೇ ಅದಕ್ಕೆ ಜನರಿಂದ ವಿಧೇಯತೆ ತಾನಾಗಿ ಪ್ರಾಪ್ತವಾಗುತ್ತದೆ.

ಪ್ರೊ. ಮ್ಯಾಕ್ಸಮುಲರ್ ಸಮಾಜದ ಉನ್ನತಿಯ ಮೇಲೆ ಧರ್ಮ ಮತ್ತು ಪವಿತ್ರ ಗ್ರಂಥಗಳ ಪ್ರಭಾವವನ್ನು ಗುರುತಿಸುತ್ತ ಹೀಗೆ ವಿವರಿಸುತ್ತಾರೆ :

> "ಇತಿಹಾಸ ನಮಗೆ ಇನ್ನೊಂದು ಮಹತ್ವದ ಪಾಠ ಕಲಿಸುತ್ತದೆ. ಕಾನೂನು ಹೆಚ್ಚಿನ ಪ್ರಶ್ನೆ ಮಾಡದೆ ಮನುಷ್ಯ ಒಪ್ಪಿಕೊಳ್ಳಬೇಕಾದ ವಸ್ತುಗಳಲ್ಲಿ ಒಂದು. ಒಂದು ಕಾನೂನಿನ ಪಾತ್ರತೆ, ಅಪಾತ್ರತೆ, ತಪ್ಪು, ಸರಿ ಇವು ಯಾವುವೂ ಕೇಳುವ ಪ್ರಶ್ನೆಗಳಾಗದೇ ಕಾಯದೆಬದ್ಧ ಕಾನೂನು ಇದು ಎಂದಾಕ್ಷಣ ಅದನ್ನು ಮನುಷ್ಯ ಅದಕ್ಕಿರುವ ಐತಿಹಾಸಿಕ ಬೆಳವಣಿಗೆ, ಹಿನ್ನೆಲೆ, ಅಸ್ತಿತ್ವ ಗಮನಿಸಿ ನೇರವಾಗಿ ಒಪ್ಪಿಕೊಳ್ಳುತ್ತಾನೆ ಮತ್ತು ಅದು ಗ್ರಂಥರೂಪದಲ್ಲಿ ಉಲ್ಲೇಖವಾಗಿದ್ದರೂ ಹೆಚ್ಚಿನ ಮಹತ್ವವನ್ನು ಪಡೆಯುತ್ತದೆ.
>
> ಪೌರ್ವಾತ್ಯ ಧರ್ಮಗಳು ಕಲಿಸುವ ಪಾಠವೊಂದಿದು. ಸಂಪೂರ್ಣ ಅಚಲ ಭಕ್ತಿ ವಿಶ್ವಾಸಗಳನ್ನು ಪವಿತ್ರ ಧಾರ್ಮಿಕ ಗ್ರಂಥಗಳು ಮನುಷ್ಯರಲ್ಲಿ ನಿರ್ಮಾಣ ಮಾಡುವಲ್ಲಿ ಯಶಸ್ವಿಯಾಗುತ್ತವೆ. ಐತಿಹಾಸಿಕತೆ ಮತ್ತು ಅವುಗಳ ಸ್ವಾಭಾವಿಕ ಹುಟ್ಟಿನ ಮೂಲಗಳ ಅಂಶ ಸಂಪೂರ್ಣವಾಗಿ ಮರೆಯಲಾಗುತ್ತದೆ. ಸತ್ಯ ಮತ್ತು ದೈವಿಕವಾದದ್ದು ಎಂಬ ಬಲದ ಮೇಲೆ ಪುರಾತನವಾದ ಗ್ರಂಥ ಮನುಷ್ಯನಿಗೆ ಅತಿಮಾನ್ಯವಾಗುತ್ತದೆ."

ಇತಿಹಾಸ ಬೋಧಿಸುವ ಇನ್ನೊಂದು ಮೂರನೇ ಪಾಠವಿದೆ. ಕಾನೂನನ್ನು ಪಾಲಿಸುವ ಪ್ರತಿ ನಾಗರಿಕ ಶತಮಾನಗಳಿಂದ ಸಾಗಿ ಬಂದ ಕಾನೂನನ್ನು ಯಾಂತ್ರಿಕವಾಗಿ ಪಾಲಿಸುತ್ತಾ ಹೋಗಿ ತಪ್ಪು–ಸರಿ ಎಂಬ ತನ್ನ ವಿವೇಕದಿಂದ ಕಾನೂನನ್ನೇ ಪ್ರಶ್ನಿಸದೇ ವಿವೇಚನೆಯನ್ನು ಕಳೆದುಕೊಳ್ಳುವ ಭಯಂಕರ ಅಪಾಯವುಂಟು. ಧರ್ಮದ ಕಟ್ಟಳೆ ಮತ್ತು ಕಾನೂನನ್ನು ಪಾಲಿಸುವ ಪ್ರತಿ ನಾಗರಿಕನಿಗೂ ಈ ಅಪಾಯ ತಪ್ಪಿದ್ದಲ್ಲ. ಧರ್ಮ ಒಂದು ವೃತ್ತಿಯಾದಾಗ ಮತ್ತು ಅದನ್ನು ಆಚರಣೆಯ ಬಿಗಿ ಚೌಕಟ್ಟಿಗೆ ಹೊಂದಿಸಿ ರೂಢಿಸಿಕೊಂಡಾಗ ಮನುಷ್ಯ ತನ್ನ ವಿವೇಚನೆ ಮತ್ತು ಯೋಚನಾದೃಷ್ಟಿ ಕಳೆದುಕೊಳ್ಳುವುದುಂಟು.

ಇಲ್ಲಿ ನನ್ನ ಉದ್ದೇಶ ಪವಿತ್ರ ಗ್ರಂಥಗಳ ಮೂಲಕ ಉಂಟಾಗುವ ಅಪಾಯಗಳನ್ನು ನಿರೂಪಿಸುವುದಲ್ಲ. ಆದರೆ ಪವಿತ್ರ ಗ್ರಂಥಗಳನ್ನು ಹೊಂದದಂತಹ ಧರ್ಮಗಳ ಬಗೆಗೆ ಇರುವ ಪೂರ್ವಗ್ರಹಿಕೆಗಳನ್ನು ಹೋಗಲಾಡಿಸುವುದು.

ಗ್ರಂಥಾಧಾರಿತ ಧರ್ಮ ಮತ್ತು ಗ್ರಂಥರಹಿತ ಧರ್ಮಗಳ ವಿಭಜನೆಯ ಆಧಾರದ ಐತಿಹಾಸಿಕ ದೃಷ್ಟಿ ಗಮನಿಸೋಣ, ಗ್ರಂಥಾಧಾರಿತ ಧರ್ಮಗಳಿಗೆ ಕೆಲವು ಲಾಭಗಳಿವೆಯೆಂದು ಗ್ರಂಥರಹಿತ ಧರ್ಮಗಳನ್ನು ನಾವು ನಿರ್ಲಕ್ಷಿಸಲಾಗುವುದಿಲ್ಲ. ಅವುಗಳಿಗೂ ವಿಶಿಷ್ಟ ಲಾಭಗಳೂ ಇಲ್ಲದೇ ಇಲ್ಲ. ಒಬ್ಬ ಕಪ್ಪು ವರ್ಣದ ಭಾರತೀಯ ಹಿಂದೂ, ಕ್ರಿಶ್ಚಿಯನ್ ಪಾದ್ರಿಯೊಬ್ಬನೆದುರು ತನ್ನ ಮತ್ತು ಕ್ರೈಸ್ತಧರ್ಮದ ಭಿನ್ನತೆಯನ್ನು ಹೀಗೆ ವಿವರಿಸಿದನು:

"ವಿಶ್ವದ ಅತಿ ಉನ್ನತ ಶಕ್ತಿ ಎರಡು ಧರ್ಮಗಳನ್ನು ದಯಪಾಲಿಸಿತು. ಗ್ರಂಥಗಳಲ್ಲಿ ಸೂತ್ರರೂಪವಾಗಿ ಕಾನೂನಿನಾಚೆ ಬಿಳಿಯರು ಪಾಲಿಸಿ ಸ್ವರ್ಗ ಸೇರಬೇಕಾದ ಬೋಧನೆಗಳು ಒಂದಾದರೆ, ಎರಡನೆಯದು ಭಾರತೀಯರಿಗೆ ಆಕಾಶ, ಬೆಟ್ಟಗಳು, ಪರ್ವತಗಳು, ನದಿಗಳ ರೂಪದಲ್ಲಿ ಕೊಟ್ಟ ಒಂದು ಸೃಷ್ಟಿರೂಪಿತ ಧರ್ಮ. ಸೃಷ್ಟಿಯಲ್ಲಿಯ ಧ್ವನಿಯನ್ನು ಕೇಳಬಲ್ಲ, ಕೆಂಪುವರ್ಣೀಯ, ನಿಶ್ಚಿತವಾಗಿಯೂ ಆ ಪರಮಾತ್ಮನ ಧ್ವನಿಯನ್ನು, ಆದೇಶವನ್ನು ಕೇಳಬಲ್ಲ ಮತ್ತು ಸ್ವರ್ಗದ ಬಾಗಿಲನ್ನು ತಟ್ಟಬಲ್ಲ.

"ಮನುಷ್ಯನ ತಲೆ ಮತ್ತು ಹೃದಯದಲ್ಲಿರುವ ಧರ್ಮ ಮತ್ತು ಆಕಾಶ, ಬಂಡೆಗಳು, ನದಿಗಳು ಹಾಗೂ ಪರ್ವತಗಳಲ್ಲಿರುವ ಧರ್ಮವನ್ನು ನಾವು ನಿಸರ್ಗ ಧರ್ಮವೆಂದು ಕರೆಯುತ್ತೇವೆ. ಸೃಷ್ಟಿಯಲ್ಲಿ ಮತ್ತು ಮನುಷ್ಯನ ಸ್ವಭಾವದಲ್ಲಿ ಈ ಧರ್ಮದ ಬೇರಿರುವುದರಿಂದ ದೈವಿಕ ಪ್ರಕಟನೆಯೂ ಈ ಧರ್ಮದ ಭಾಗವಾಗಿ ಬರುವ ಅಂಶವಾಗುತ್ತದೆ. ಕಾಲಕಳೆದಂತೆ ಈ ಧರ್ಮ ಕಾಲಾನುಸಾರ ಹೊಂದಾಣಿಕೆಯನ್ನು ಮಾಡುತ್ತ ಸಾಗುತ್ತದೆ. 'ನೀನು ಈ ರೀತಿ ಮಾಡು' ಎಂದು ಹೇಳುವುದಕ್ಕಿಂತ 'ನಾನು ಹೀಗೆ ಮಾಡುತ್ತೇನೆ' ಎಂದು ಈ ಧರ್ಮ ಹೇಳುತ್ತದೆ. ಈ ರೀತಿಯ ಈ ಸ್ವಾಭಾವಿಕ ಧರ್ಮ ಅಥವಾ ನಿಸರ್ಗಧರ್ಮಗಳಿಗೆ ಗ್ರಂಥಗಳ ಆಧಾರವಿರುವುದಿಲ್ಲ. ಆದರೆ ಅವುಗಳಿಗೂ ಒಂದು ತಾತ್ವಿಕ ಚೌಕಟ್ಟಿನ ಪ್ರಣಾಲಿ ಮತ್ತು ಸ್ಥಾಪಿತ ರೂಢಿಗಳು ಇರುತ್ತವೆ. ವಿಶ್ವಾಸ, ನೈತಿಕತೆ ಮತ್ತು ಆಚರಣೆಗಳಲ್ಲಿ ಇವುಗಳಿಗೂ ಅಧಿಕಾರಯುತ ಬೋಧಕರಿರುತ್ತಾರೆ. ಆದರೆ ಬಹು ಬಿಗಿಯಾದ ಕಟ್ಟಳೆಗಳನ್ನು ಹೊಂದಿರುವುದಿಲ್ಲ. ಹೊಂದಾಣಿಕೆ ಇವುಗಳ ವಿಶೇಷಗುಣ. ಆಗಾಗ ಕಂಡುಬಂದ ದೋಷಗಳ ನಿವಾರಣೆಯೂ ನಡೆದೇ ಇರುತ್ತದೆ. ಹೊಸಘಟ್ಟ ಶೋಧನೆಯಾದಾಗ ಮತ್ತು ಅದನ್ನು ವಾದದಿಂದ ಸಿದ್ಧಪಡಿಸಿದಾಗ ತಿದ್ದಿಕೊಳ್ಳುವ ಪ್ರಕ್ರಿಯೆ ನಡೆಯುತ್ತದೆ. ಆದರೆ ಗ್ರಂಥಸ್ಥ ಧರ್ಮಕ್ಕೆ ಈ ಲಾಭವಿಲ್ಲ ; ಅವಕಾಶವಿಲ್ಲ. ಗ್ರಂಥದಲ್ಲಿ ಒಂದು ಸಲ ಯಾವುದೇ ಕಾರಣ ಅಥವಾ ಹಿನ್ನೆಲೆಯಲ್ಲಿ ಒಂದು ಬೋಧನೆ ದಾಖಲಾದಾಗ ಅದನ್ನು ಪ್ರಶ್ನಿಸುವುದು ಸಾಧ್ಯವಾಗದೇ ಕೇವಲ ಕುರುಡುನಂಬಿಕೆಯಿಂದ ಒಪ್ಪಿಕೊಳ್ಳಬೇಕಾಗುತ್ತದೆ. 'ದೇವರು ಹೇಳಿದ್ದಾನೆ' ಎಂಬ ನಂಬಿಕೆಯಿಂದ ಶತಮಾನಗಳಿಂದ ಬೆಳೆದು ಬಂದ ವೇದದ ಬೋಧನೆಗಳು, ವಿಚಾರಗಳು ಪ್ರಶ್ನಾತೀತ, ಸಂಶಯಾತೀತ, ವಿವೇಚನಾತೀತವಾಗಿ ಬಿಡುತ್ತವೆ. ಮನುಷ್ಯನ ವಿವೇಕ ಹೆಚ್ಚಿಗೆ ಪ್ರಯೋಜನವಾಗುವುದಿಲ್ಲ. ಇದನ್ನು ಬೋಧಿಸುವವರು ತಮ್ಮ ಅನಿಸಿಕೆ, ಅನುಭವಗಳಿಗಿಂತ ಈಗಾಗಲೇ ದಾಖಲಾದುವುಗಳ ಮೇಲೆ ಹೆಚ್ಚು ಅವಲಂಬಿಸುತ್ತಾರೆ. ಪುರಾತನ ಕವಿಗಳು ವೇದ ಅಪೌರುಷೇಯ ಎಂದು ಹೇಳುವ ಮಾತಿಗೆ ಈ ಮೇಲಿನ ತಿರುವುಗಳು ಎಂಬುದನ್ನು ನಾವು ಅರ್ಥಮಾಡಿಕೊಳ್ಳಬೇಕು. ಆದರೆ ಕಾಲಾನುಸಾರ ಹೊಸ ಪೀಳಿಗೆಗಳು ಈ ಬೋಧನೆಗಳಿಗೆ ಹೊಸ ಅರ್ಥಗಳನ್ನು ಹೇಳಲು ಪ್ರಯತ್ನಿಸಿದವು. ಆದರೆ ಕೊನೆಗೆ ಮೊದಲಿನ ಸಿದ್ಧಾಂತವಾದ ವೇದ ದೈವಸಂಭೂತ–ಶ್ರುತಿ ಎಂಬುದನ್ನೇ ಮತ್ತೆ ಪುನರುಕ್ತಿ ಪಡಿಸಿದವು. ಹೀಗಾಗಿ ವೈದಿಕ ಧರ್ಮಕ್ಕೆ ಹಾನಿ ಹೆಚ್ಚಾಯಿತು. ಏಕೆಂದರೆ ಬೆಳೆಯದ ಮತ್ತು ಬದಲಾಗದ ಯಾವ ವಸ್ತುವೇ ಆಗಲಿ, ತತ್ವವೇ ಆಗಲೀ ನಾಶವನ್ನು ಎದುರಿಸಬೇಕಾಗುತ್ತದೆ. ಆದರೆ ಗ್ರಂಥರಹಿತ ಧರ್ಮಗಳಿಗೆ ಈ ಅಪಾಯವಿಲ್ಲ."

ಸರ್ ವಿಲಿಯಮ್ ಮ್ಯೂರ್ ಇದೇ ರೀತಿಯ ಭಾವನೆಗಳನ್ನು ಹೀಗೆ ವ್ಯಕ್ತಪಡಿಸಿದ್ದಾನೆ. ಅದರಲ್ಲೂ ಪವಿತ್ರ ಗ್ರಂಥದ ಆಧಾರದ ಮೇಲೆ ಸ್ಥಾಪಿತವಾದ ಇಸ್ಲಾಂ ಧರ್ಮದ ಬಗೆಗೆ ಅವನ ಹೇಳಿಕೆ ಇದು :

"ಬಹು ಗಡುಚಾದ ಆಚರಣೆಯ ತತ್ವಗಳಿಂದ ಕೂಡಿದ ಇಸ್ಲಾಂ ಧರ್ಮ ಹೊಂದಾಣಿಕೆಯ ಗುಣವಿರದಿದ್ದುದರಿಂದ ಅರಳುವುದು, ಬೆಳೆಯುವುದು ದುಸ್ತರವಾದ ವಿಷಯ. ಪ್ರಾರಂಭದ ಕೆಲ ಕಾಲ ಬಿಟ್ಟರೆ ಇದು ಹೊಂದಾಣಿಕೆ ಗುಣವನ್ನು ಕಳೆದುಕೊಂಡುಬಿಟ್ಟದೆ. ಹೀಗಾಗಿ ಇದನ್ನು ಪಾಲಿಸುವವರೂ ಬದಲಾವಣೆಗೆ ವಿಮುಖರಾಗುತ್ತಾರೆ. ಮನುಷ್ಯನ ನಾಗರಿಕತೆಯ ಬೆಳವಣಿಗೆಯ ದೃಷ್ಟಿಯಿಂದ ಈ ಧರ್ಮಾಚರಣೆಯುನ್ನು ಪಾಲಿಸುವವರೂ ಹೀಗಾಗುವುದರಿಂದ ಹಲವಾರು ಕಷ್ಟಗಳನ್ನು ಅನುಭವಿಸಬೇಕಾಗುತ್ತದೆ."[೧]

ಮಾನವನ ಪ್ರಗತಿಯಲ್ಲಿ ಆಸಕ್ತಿಯಿರುವ ಯಾವ ವ್ಯಕ್ತಿಯೂ ಧರ್ಮದ ಪವಿತ್ರ ಕಟ್ಟಳೆಗಳ ವಿರುದ್ಧ ಸಾಮಾಜಿಕ ಪರಿಣಾಮಗಳಿಗಾಗಿ ಧ್ವನಿ ಎತ್ತದೇ ಇರಲಾರ. ನನಗೆ ಅನ್ನಿಸಿದಂತೆ ಪವಿತ್ರ ಕಟ್ಟಳೆಗಳ ಧರ್ಮಗಳ ಇನ್ನೊಂದು ವರ್ಗವನ್ನು ನಾವು ಮಾಡಬಹುದು. ಪ್ರೊ. ಮಾಕ್ಸ್‌ಮುಲರ್ ದುರದೃಷ್ಟವಶಾತ್ ಈ ವಿಷಯವನ್ನು ಮುಂದುವರಿಸಿಕೊಂಡು ಹೋಗಲಿಲ್ಲ. ಆದರೆ ನಾವು ಹಾಗೆ ಮುಂದುವರಿಸಿಕೊಂಡು ಹೋದಾಗ ಪವಿತ್ರ ಕಟ್ಟಳೆಗಳ ಹಿಂದೂಧರ್ಮವನ್ನು ಇನ್ನೊಂದು ಅಂಥದೇ ಬೇರೆ ಧರ್ಮದೊಂದಿಗೆ ಹೋಲಿಸಿ ನೋಡಲು ಅನುಕೂಲವಾಗುವುದು. ಬೇರೆಬೇರೆ ಧರ್ಮಗಳ ಮುಖ್ಯ ಉದ್ದೇಶಗಳನ್ನು ಕೂಲಂಕಷವಾಗಿ ಅಭ್ಯಸಿಸಿದಾಗ ಈ ವಿಷಯ ಸ್ಪಷ್ಟವಾಗುವುದು.

ವಿಷಯವನ್ನು ಆಳವಾಗಿ ಅಧ್ಯಯನ ಮಾಡಿದಾಗ ನಿರ್ಜೀವ ವಸ್ತುಗಳನ್ನು ಪವಿತ್ರ ವಸ್ತುಗಳೆಂದು ಮನುಷ್ಯರ ಮನಸ್ಸಿನಲ್ಲಿ ಧರ್ಮದ ಪವಿತ್ರತೆಯ ಕಲ್ಪನೆಗಳ ಮೂಲಕ ಮಾಡಿದ ದೃಷ್ಟಾಂತಗಳುಂಟು. ಕಲ್ಲುಗಳು, ನದಿಗಳು, ಗಿಡ–ಮರಗಳನ್ನು, ದೇವ–ದೇವತೆಗಳೆಂದು ಪರಿಗಣಿಸಿದ್ದುಂಟು. ಪ್ರಾಣಿಗಳನ್ನು ಒಂದು ಜನ ಸಮುದಾಯದೊಡನೆ ಸಂಬಂಧವನ್ನು ಸೂಚಿಸಲು ಬಳಸಿದ್ದುಂಟು. ಹಲವು ಸಲ ಮನುಷ್ಯರನ್ನು ಪವಿತ್ರವೆಂದು ಗಣಿಸಿದ್ದುಂಟು. ಆದರೆ ಒಂದು ಸಾಮಾಜಿಕ ವರ್ಗವನ್ನು ಪವಿತ್ರವೆಂದು ಪರಿಗಣಿಸಿದ ಉದಾಹರಣೆ ಒಂದೂ ಸಿಗುವುದಿಲ್ಲ. ಪ್ರಾಚೀನ ಜಗತ್ತಿನಲ್ಲಿ ಜನ ವರ್ಗದ ಕ್ರಮ ಜಾರಿಯಲ್ಲಿದ್ದಿತು. ಅದರಂತೆ ಬುಡಕಟ್ಟಿನ ಪಂಗಡದ ಪದ್ಧತಿಯೂ ಇದ್ದಿತು. ಈಜಿಪ್ಟ್, ಪರ್ಶಿಯಾ, ರೋಮ್ ಮತ್ತು ಗ್ರೀಸ್ ಇತ್ಯಾದಿ ದೇಶಗಳಲ್ಲಿ ಅವುಗಳದೇ ಆದ ಒಂದು ಸಾಮಾಜಿಕ ವರ್ಗ ಸ್ವರೂಪಗಳಿದ್ದವು. ಕೆಲವಡೆ ಸ್ವತಂತ್ರ ಪ್ರಜೆಗಳಿದ್ದರೆ ಇನ್ನು ಕೆಲವಡೆ ಗುಲಾಮಿ ಪದ್ಧತಿ ಅಸ್ತಿತ್ವದಲ್ಲಿದ್ದವು. ಕೆಲವೆಡೆ ಪರದೇಶಗಳ ಜನರಿದ್ದರೆ ಇನ್ನು ಕೆಲವೆಡೆ ಒಂದೇ ಜನಾಂಗದ ಜನ ಕೂಡಿ ಬಾಳುತ್ತಿದ್ದರು. ಈ ವರ್ಗ ಒಂದು ಸಾಮಾಜಿಕ ಪರಿಶ್ರಮವಾಗಿತ್ತೇ ಹೊರತು ಅದಕ್ಕೆ ಧರ್ಮದ ಒಂದು ಚೌಕಟ್ಟು ಇರಲಿಲ್ಲ. ಆಧುನಿಕ ಕಾಲದಲ್ಲಿಯೂ ನಮ್ಮಲ್ಲಿ ಪ್ರಜಾಪ್ರಭುತ್ವವಿದೆ, ಸಮತಾವಾದದ ವಿರೋಧಿ (ಕಮ್ಯುನಿಸಂ ವಿರೋಧಿ) ಸಂಘಟನೆಗಳಿವೆ. ನಾಝಿ ವಾದ ಮುಂತಾದವುಗಳೂ ಇವೆ. ಆದರೆ ಇವೆಲ್ಲ ಸಾಮಾಜಿಕ ವರ್ಗಗಳೇ ವಿನಾ ಧಾರ್ಮಿಕವಾದ ಸಂಘಟನೆಗಳಲ್ಲ. ಬೇಟೆಗಾರರ ಸಮಾಜಕ್ಕೆ ಧರ್ಮವೆಂಬುದೊಂದು ಇತ್ತು. ಆದರೆ ಬೇಟೆಯನ್ನು ಉದ್ಯೋಗ ಮಾಡಿಕೊಂಡಿರುವವರಿಗೆ ಒಂದೇ ಧರ್ಮ ಪವಿತ್ರವಾಗಿತ್ತೆಂದು ಹೇಳಲಾಗುವದಿಲ್ಲ.

---

೧. 'ಚರ್ಚಿನಲ್ಲಿ ಮಹಮ್ಮದನ ಸ್ಥಾನ' ಎಂಬ ಲೇಖನದಿಂದ *ಏಶಿಯಾಟಿಕ್ ಕ್ವಾರ್ಟರ್ಲಿ ರಿವ್ಯೂ* ಏಪ್ರಿಲ್ ೧೮೮೯ ಇ ದ ಬುನ್‌ಸೆನ್ ಉದ್ಧೃತ; ಪು. ೨೮೭.

ಜೀವನೋಪಾಯ ಯಾವುದೇ ಕಾಲದಲ್ಲಿ ಧರ್ಮವನ್ನು ಅವಲಂಬಿಸಿಲ್ಲ. ಆರ್ಥಿಕ ಚಟುವಟಿಕೆಗಳು ಸದಾ ಧರ್ಮದ ಪರಿಧಿಯಿಂದ ಹೊರಗೆ ಉಳಿದಿವೆ, ಗೊಲ್ಲ ಸಮಾಜಕ್ಕೆ ಧರ್ಮವೆಂಬುದು ಇದ್ದಿತು. ಆದರೆ ದನಕಾಯುವುದು ಧಾರ್ಮಿಕವಾಗಿ ಪಾವಿತ್ರತೆಯನ್ನು ಪಡೆದಿತ್ತು ಎಂದಲ್ಲ. ಬೇಸಾಯ ಜೀವನಪರಿಯಾಗಿದ್ದಿತು. ಆದರೆ ಧರ್ಮದ ಪವಿತ್ರತೆಯ ಬಂಧನ ಅದಕ್ಕಿರಲಿಲ್ಲ. ಪಾಳೆಯಗಾರಿಕೆ, ಜಮೀನುದಾರಿಕೆಗಳು ಅವುಗಳ ವಿಶಿಷ್ಟ ಪದ್ಧತಿಗಳು ಸಮಾಜದಲ್ಲಿ ಇದ್ದಿಲ್ಲವೆಂದಲ್ಲ. ಆದರೆ ಅವುಗಳ ಗುಣವಿಶೇಷಗಳೆಲ್ಲ ಸಾಮಾಜಿಕ ಚೌಕಟ್ಟಿನಲ್ಲಿದ್ದವು ಮತ್ತು ಯಾವುದೇ ಪಾವಿತ್ರ್ಯವನ್ನು ಅವುಗಳಿಗೆ ಸಂಕೇತಿಸಿರಲಿಲ್ಲ.

ಇಡೀ ವಿಶ್ವದಲ್ಲಿ ಹಿಂದೂಗಳಲ್ಲಿ ಮಾತ್ರ, ಅವರ ಸಾಮಾಜಿಕ ವರ್ಗ ಚೌಕಟ್ಟಿನಲ್ಲಿ ಮಾತ್ರ, ಪರಸ್ಪರ ಮನುಷ್ಯ ಸಂಬಂಧದಲ್ಲಿ ಧರ್ಮದ ಪವಿತ್ರತೆ ಸದಾ ಜಾಗೃತ ಅಂಶವಾಗಿದೆ. ಅವರ ಉದ್ಯೋಗ ಕ್ಷೇತ್ರಗಳಲ್ಲಿಯೂ ಅವರು ಈ ಭೇದವನ್ನು ಪರಿಗಣಿಸುತ್ತಾರೆ.

ಹೀಗಾಗಿ ಹಿಂದೂಗಳಿಗೆ ಮಾತ್ರ ಲಿಖಿತ ಧಾರ್ಮಿಕ ಕಟ್ಟಳೆಗಳ ಪವಿತ್ರ ಗ್ರಂಥಗಳಿವೆ ಎಂದು ತಿಳಿಯಲಾಗದು. ಜೊರಾಷ್ಟ್ರಿಯನ್ಸ್ ಧರ್ಮದವರಿದ್ದಾರೆ, ಇಸ್ರೇಲಿಗಳಿದ್ದಾರೆ, ಕ್ರೈಸ್ತ ಮತ್ತು ಮುಸ್ಲಿಮರಂತೂ ಇದ್ದೇ ಇದ್ದಾರೆ. ಇವರೆಲ್ಲರಿಗೂ ಪವಿತ್ರ ಧಾರ್ಮಿಕ ಲಿಖಿತ ಕಟ್ಟಳೆಗಳಿವೆ. ಹಿಂದೂಗಳು ಮಾತ್ರ ಎಲ್ಲ ವಿಧದಿಂದಲೂ ವಿಶೇಷವಾಗಿ ಜಾತಿಯ ವಿಷಯದಲ್ಲಿ ತಮ್ಮದೇ ಆದ ಪದ್ಧತಿ ಹೊಂದಿದ್ದಾರೆ. ಹೀಗಾಗಿ ಕಾಲ ಕಳೆದರೂ ಹಿಂದೂಗಳಲ್ಲಿ ಜಾತಿಪದ್ಧತಿ ತನ್ನ ಕಪಿಮುಷ್ಟಿಯನ್ನು ಬಿಟ್ಟಿಲ್ಲವೆಂದು ಹೇಳಬಹುದು.

ಇನ್ನೊಂದು ಅಂಶದಲ್ಲಿ ಹಿಂದೂಗಳು ಉಳಿದವರಿಗಿಂತ ಭಿನ್ನರಾಗಿದ್ದಾರೆ. ವೇದಗಳನ್ನು ಶ್ರುತಿ, ದೈವ ಸಂಭೂತವೆಂದು ಅವರು ಮಾನ್ಯ ಮಾಡುತ್ತಾರೆ. ಕ್ರೈಸ್ತರೂ, ಮುಸ್ಲಿಮರೂ, ಜ್ಯೂಗಳೂ ಧರ್ಮದ ಬಗೆಗೆ ಹಾಗೇ ತಿಳಿದುಕೊಳ್ಳುತ್ತಾರೆ. ಪವಿತ್ರ ಗ್ರಂಥಗಳಲ್ಲಿ ನಮೂದಿಸಿದ ವಿಚಾರಗಳು ತಮಗೆ ಜೊರಾಷ್ಟ್ರಿಯನ್ಸ್‌ನಿಂದ ತಿಳಿದವೆಂದು ಯುರೋಪಿಯನ್ನರು, ಕ್ರೈಸ್ತನಿಂದ ಬಂದವೆಂದು ಕ್ರೈಸ್ತರು, ಮಹಮ್ಮದನಿಂದ ಬಂದವೆಂದು ಮುಸ್ಲಿಮರು ನಂಬುತ್ತಾರೆ. ಆದರೆ ಯಾವ ಹಿಂದೂಗಳೂ ಯಾವ ದೇವನಿಂದ ಇವುಗಳನ್ನು ಕೇಳಿದರು? ಮತ್ತು ಅವು ಶ್ರುತಿಗಳಾಗಿ ಹೇಗೆ ಜನ್ಮ ತಳೆಯಲು ಸಾಧ್ಯವಾಯಿತು? ಈ ಪ್ರಶ್ನೆಗೆ ಹಿಂದೂವಿನಲ್ಲಿ ಉತ್ತರಗಳಿಲ್ಲ. ವೇದಗಳಲ್ಲಿ ನಮೂದಿಸಿದ ಮಂತ್ರಗಳು ಯಾರಿಂದ ಬರೆಯಲ್ಪಟ್ಟಿವೆ ಎಂಬುದನ್ನು ಸ್ಪಷ್ಟವಾಗಿ ಗುರುತಿಸಬಹುದು. ಉಳಿದ ಧರ್ಮದ ಗ್ರಂಥಗಳ ಕರ್ತೃ ಗೊತ್ತಿರುವುದರಿಂದ ಅವರ ವಿಚಾರಗಳನ್ನು ಖಂಡಿಸುವ ಧೈರ್ಯ ಮಾಡಬಹುದು. ಆದರೆ ಹಿಂದೂಗಳ ವೇದಗಳನ್ನು ದೈವಸಂಭೂತವೆಂದದ್ದರಿಂದ ಇದನ್ನು ಪ್ರಶ್ನಿಸುವದು ಕಷ್ಟವಾಗುತ್ತದೆ ಮತ್ತು ದೇವರನ್ನು ತೆಗಳುವುದು ಅಸಾಧ್ಯವಾಗುತ್ತದೆ. ಉಳಿದ ಧರ್ಮಗಳ ದೂತರು ವಿಮರ್ಶೆಗೆ ಅರ್ಹರು. ಆದರೆ ಇಲ್ಲಿ ಯಾವ ಧರ್ಮದೂತರೂ ಇರದಿದ್ದರಿಂದ ವಿಮರ್ಶೆ, ವಿವೇಚನೆ ಅಸಾಧ್ಯ, ಅಸಂಭವವಾಗುತ್ತದೆ.

ನಾನು ಆಗಲೇ ಹೇಳಿದಂತೆ ಹಿಂದೂಗಳು ತಮ್ಮ ಧರ್ಮದ ಕಲ್ಪನೆಯನ್ನು ಬಹು ಪ್ರಬಲ ಬಂಡೆಗಲ್ಲಿನ ಮೇಲೆ ಆಧರಿಸಿದ್ದಾರೆ. ಆದರೆ ಈ ಬಂಡೆಗಲ್ಲು ಸಾಧಾರಣವಾಗಿಲ್ಲ. ಗ್ರಾನೈಟ್ ಪ್ರಕಾರದ ಭದ್ರವಾದ ಶಕ್ತಿಯುತ ಕಲ್ಲಾಗಿದೆ.

* * * *

## ಅಧ್ಯಾಯ ೧೮

# ಸ್ಪೃಶ್ಯರು ಮತ್ತು ಅಸ್ಪೃಶ್ಯರು

ಸ್ಪೃಶ್ಯ ಮತ್ತು ಅಸ್ಪೃಶ್ಯರ ನಡುವಿನ ಸಂಬಂಧ ಆಶ್ಚರ್ಯವನ್ನುಂಟುಮಾಡುವಂತಹುದು. ಈ ಅಚ್ಚರಿಗೆ ಕಾರಣವಿಲ್ಲದೇ ಇಲ್ಲ. ಸ್ಪೃಶ್ಯ ಎಂದೆನ್ನಿಸಿಕೊಳ್ಳುವ ಜನ ಒಂದು ಜನಸಮುದಾಯವಾಗಿಲ್ಲ. ಅವರಲ್ಲಿಯೇ ಅಸಂಖ್ಯಾತ ಜಾತಿ-ಉಪಜಾತಿಗಳಿವೆ. ಪ್ರತಿ ಹಿಂದೂ ತನ್ನ ಜಾತಿಯ ಬಗೆಗೆ ಬಹಳ ಎಚ್ಚರವಾಗಿಯೇ ಇರುತ್ತಾನೆ. ಈ ವಿಭಿನ್ನತೆ ಇರುವುದರಿಂದ ಎರಡು ಗುಂಪುಗಳನ್ನು ಸ್ಪಷ್ಟವಾಗಿ ಗುರುತಿಸುವದು ದುಸ್ತರವಾಗುತ್ತದೆ. ಈ ಗುಂಪುಗಳ ವಿಭಜನೆಯ ತಳಹದಿಯ ವಿವರಣೆ ಅಗತ್ಯವಾಗಿರುವುದಾದರೂ ಆಧುನಿಕ ಭಾರತವನ್ನು ಗಮನಿಸಿದಾಗ ಇದು ಅಸ್ತಿತ್ವದಲ್ಲಿ ನಿಜವಾಗಿಯೂ ಇದುದ್ದನ್ನು ಒಪ್ಪಿಕೊಳ್ಳಲೇಬೇಕಾಗುತ್ತದೆ.

ಈ ವಿಭಜನೆಯನ್ನು ತಿಳಿಯುವುದೆಂದರೆ, ಅಸ್ಪೃಶ್ಯರಾರು ಎಂಬುದನ್ನು ವಿಶದೀಕರಿಸಲು ಹೋಗುವುದಲ್ಲದೆ ಬೇರೇನಲ್ಲ. ಇದು ನಾಲ್ಕು ವರ್ಣಗಳ ಪರಸ್ಪರ ಪೂರಕ ಸಂಬಂಧಗಳನ್ನು ವಿಶ್ಲೇಷಿಸಿದಂತೆ.

ಗಾಂಧೀಜಿಯನ್ನು ಇಷ್ಟಪಡುವ ಪ್ರತಿಯೊಬ್ಬರೂ ಚಾತುರ್ವರ್ಣ ಪದ್ಧತಿಯನ್ನು ಒಪ್ಪುತ್ತಾರೆ ಎಂಬ ಮಾತನ್ನು ಗಮನದಲ್ಲಿಟ್ಟುಕೊಂಡು ಮುಂದೆ ಸಾಗುವುದು. ಈ ಚಾತುರ್ವರ್ಣದ ಸಮಾಜವು ಆದರ್ಶ ಸಮಾಜವೆಂಬ ಕಲ್ಪನೆಯನ್ನು ಅವರು ಹೊಂದಿರುತ್ತಾರೆ. ಇಂತಹವರು ನಿಜವಾಗಿಯೂ ಈ ವ್ಯವಸ್ಥೆಯ ಅರಿವಿಲ್ಲದವರು, ಅಥವಾ ಕಾಲ್ಪನಿಕವಾಗಿ ತಿಳಿದವರು ಅಥವಾ ತಾವು ಸಾಧಿಸಬೇಕೆಂದಿರುವ ವಿಚಾರಗಳಿಗೆ ಇವುಗಳನ್ನು ಬಳಸಬಯಸುವವರು. ನಾಲ್ಕು ವರ್ಣಗಳ ಮೇಲೆ ನಡೆದ ಸಮಾಜವು ಎಂದೂ ಬಂಧುತ್ವದಿಂದ ಕೂಡಿರಲಿಲ್ಲ ಮತ್ತು ಯಾವ ಸಾಮಾನ್ಯ ಸಹಕಾರೀ ಭಾವನೆಗಳಿಂದ ಪ್ರೇರಿತವಾಗಿ ಆರ್ಥಿಕ ಚಟುವಟಿಕೆ ಮುಂದುವರಿಸಲಿಲ್ಲ. ಹಿಂದೂಗಳ ಸಾಮಾಜಿಕ ಇತಿಹಾಸ ವರ್ಗಕಲಹ ಮತ್ತು ವರ್ಗಕಾಳಗಗಳಾಗಿದ್ದವು. ಕಹಿರೂಪ ತಾಳಿದ ಇವು ಯಾವ ಮಾರ್ಕ್ಸ್‌ವಾದಿಗಳನ್ನೂ ಅಚ್ಚರಿಗೊಳಿಸುತ್ತವೆ. ಅವುಗಳಿಗೆ ಬೇರೆ ಸಮಾನ ಉದಾಹರಣೆಗಳು ಸಿಗುವುದಿಲ್ಲವೆಂಬುದೇ ಅವುಗಳ ವೈಶಿಷ್ಟ್ಯ.

ಮೊದಲ ವರ್ಗಕಲಹ ನಡೆದುದು ಮುಖ್ಯವಾಗಿ ಎರಡು ಗುಂಪಾಗಿ ಬ್ರಾಹ್ಮಣ, ಕ್ಷತ್ರಿಯ, ವೈಶ್ಯರು ಒಂದೆಡೆಗೆ ಮತ್ತು ಶೂದ್ರರು ಇನ್ನೊಂದೆಡೆಗೆ. ಕಾತ್ಯಾಯನನ ಸೂತ್ರದಂತೆ ಅಂಗವಿಕಲರು, ವೇದ ಓದದವರು ಮತ್ತು ಶೂದ್ರರು ಯಜ್ಞಕ್ಕೆ ಅಪಾತ್ರರು ಎಂದಿದೆ. ಬ್ರಾಹ್ಮಣರು, ರಾಜವಂಶಜರು, ವೈಶ್ಯರಿಗೆ ಯಾಗದ ಅಧಿಕಾರವಿದೆ.

ಮನು ಹೇಳಿದಂತೆ....(ಯಾವುದು ಎಂಬುದು ಹಸ್ತಪ್ರತಿಯಲ್ಲಿ ಉಲ್ಲೇಖವಾಗಿಲ್ಲ)

ಮನು ಮತ್ತೆ ಹೇಳಿದಂತೆ ........(ಯಾವುದು ಎಂಬುದು ಹಸ್ತಪ್ರತಿಯಲ್ಲಿ ಉಲ್ಲೇಖವಾಗಿಲ್ಲ)

ಈ ಮೇಲಿನ ಮಾತುಗಳನ್ನು ಶೂದ್ರರ ಸಾಮಾಜಿಕ ಅಂತಸ್ತಿನ ಬಗೆಗೆ ವೇದಗಳಲ್ಲಿ ಮನುವಿಗಿಂತ ಮತ್ತು ಕಾತ್ಯಾಯನನಿಗಿಂತ ಮೊದಲೇ ಹೇಳಿದ ಮಾತುಗಳ ಜೊತೆಗೆ ಹೋಲಿಸೋಣ.

ಪ್ರೊ. ಮ್ಯಾಕ್ಸ್‌ಮುಲರ್ ಶೂದ್ರರನ್ನು ಯಾಗಗಳಿಗೆ ಆಹ್ವಾನಿಸಿದ, ಅದರಲ್ಲೂ ಗಾವೇಧು ಕಭಾರು ? ಎಂಬ ಯಜ್ಞಗಳಾದ ರಥತಾರಾ, ನಿಷಾಢ ಸ್ಥಪತಿಗಳಿಗೆ ಅನುಮತಿಯ ಉದಾಹರಣೆಗಳನ್ನು ಉಲ್ಲೇಖಿಸುತ್ತಾನೆ.

ಶೂದ್ರರಲ್ಲಿ ಕೆಲವರಿಗೆ ವಿಶಿಷ್ಟವಾದ ಅವಕಾಶ ಕಲ್ಪಿಸಿದ ವಿರಳ ಉದಾಹರಣೆ ಇದಾಗಿರಬಹುದು. ಅಷ್ಟೇ ಅಲ್ಲ, ಅದರಲ್ಲಿ ಅವರು ಹಕ್ಕಿನಿಂದ ಭಾಗವಹಿಸಿರುವ ಸಾಧ್ಯತೆ ಉಂಟು ಎಂಬ ಮಾತಿನಲ್ಲಿ ಸಂಶಯವಿಲ್ಲ. ವೇದದ ಭಾಗವಾದ ಶತಪಥ ಬ್ರಾಹ್ಮಣದಲ್ಲಿ ಯಜ್ಞದಲ್ಲಿ ಆಹುತಿಯನ್ನು ಅರ್ಪಿಸಲು ಯಜ್ಞದ ಪುರೋಹಿತರು ಹೇಗೆ ಕರೆಯುತ್ತಾರೆ ಎಂಬ ಬಗೆಗೆ ಸೂತ್ರಗಳಿವೆ. ಅವನು 'ಎಹಿ' ಎಂದು ಹೇಳಿ ಬ್ರಾಹ್ಮಣನನ್ನು ಸ್ವಾಗತಿಸುತ್ತಾನೆ. 'ಅಕ್ಷಿ' ಇಲ್ಲಿ ಬನ್ನಿ ಎಂದು ವೈಶ್ಯರನ್ನು ಮತ್ತು 'ಆದ್ರವಾ' ಅಂದರೆ 'ಬೇಗ ಬನ್ನಿ' ಎಂದು ಕ್ಷತ್ರಿಯರನ್ನು ಮತ್ತು 'ಆಧ್ವಾ' ಅಂದರೆ 'ಓಡಿ ಬಾ ಇತ್ತ' ಎಂದು ಶೂದ್ರರನ್ನು ಸಂಬೋಧಿಸುತ್ತಾನೆ.

ಈ ವಾಕ್ಯವೃಂದ ನಿಜವಾಗಿ ತುಂಬಾ ಮಹತ್ವದ್ದಾಗಿದೆ. ಶೂದ್ರರಿಗೂ ಒಂದು ಕಾಲದಲ್ಲಿ ಈ ಯಜ್ಞದಲ್ಲಿ ಭಾಗವಹಿಸುವ ಈ ಗೌರವ ಇತ್ತೆಂದು ಇದರಿಂದ ತಿಳಿಯುತ್ತದೆ. ಇಲ್ಲದಿದ್ದರೆ ವೇದದಲ್ಲಿ ಶೂದ್ರನನ್ನು ಈ ಗೌರವಕ್ಕೆ ಕರೆಯುವ ಉಲ್ಲೇಖವಿರುತ್ತಿರಲಿಲ್ಲ. ಯಜ್ಞ-ಯಾಗಗಳಲ್ಲಿ ಭಾಗವಹಿಸುವ ಹಕ್ಕನ್ನು ಅವರು ಹೊಂದಿದವರಾಗಿದ್ದಾರೆ ಎಂದ ಮೇಲೆ ವೇದಗಳನ್ನು ಅಧ್ಯಯನ ಮಾಡುವ ಹಕ್ಕನ್ನೂ ಪಡೆದಿರಲು ಸಾಕು.

ಕಾತ್ಯಾಯನನ ಅಭಿಪ್ರಾಯದಂತೆ ವೇದಾಧ್ಯಯನದ ಅಧಿಕಾರ-ಹಕ್ಕು ಇದ್ದವರು ಮಾತ್ರ ಯಜ್ಞಗಳಲ್ಲಿ ಭಾಗವಹಿಸುವ ಹಕ್ಕನ್ನು, ಅನುಮತಿಯನ್ನು ಪಡೆದಿದ್ದರು. ಶೂದ್ರರಿಗೆ ಒಂದು ಕಾಲದಲ್ಲಿ ವೇದಾಧ್ಯಯನದ ಹಕ್ಕು ಇತ್ತು ಎಂಬ ಅಂಶಕ್ಕೆ ಬೆಂಬಲವಾಗಿ ಮಹಾಭಾರತದ ಶಾಂತಿಪರ್ವದ ಭೃಗುವಿನ ಈ ಮಾತಿನಲ್ಲಿ ಉದಾಹರಣೆ ಇದೆ. 'ವರ್ಣವನ್ನು ನಿರ್ಧರಿಸುವದು ಹೇಗೆ?' ಎಂಬ ಪ್ರಶ್ನೆಗೆ ಅವನು ಹೀಗೆ ಉತ್ತರಿಸುತ್ತಾನೆ :

> "ಬ್ರಹ್ಮನು ಮೊದಲು ನಿರ್ಮಿಸಿದ ಈ ಜಗತ್ತಿನಲ್ಲಿ ಮೊದಲು ಬ್ರಾಹ್ಮಣರದೇ ಸರ್ವಸ್ವವಾಗಿತ್ತು. ಆದರೆ ಕಾಲ ಕಳೆದಂತೆ ೯೪೧೦ ಜಾತಿಭೇದಗಳಾಗುತ್ತ ನಡೆಯಿತು. ಕ್ಷತ್ರಿಯರನ್ನು ಅವರ ಗುಣಗಳಾದ, ಹಿಂಸಾವಾದಿತ್ವ ಮತ್ತು ಐಹಿಕ ಭೋಗತ್ವದಿಂದ ಗುರುತಿಸಲಾಯಿತು. ಯಾವ ಬ್ರಾಹ್ಮಣರು ವ್ಯವಸಾಯದಿಂದ ಬದುಕುವವರು, ಕರ್ತವ್ಯಚ್ಯುತರಾದವರು ಅವರು ವೈಶ್ಯರಾದರು. ಆದರೆ ಯಾವ ಕಪ್ಪು ವರ್ಣದ ಬ್ರಾಹ್ಮಣರು ಸುಳ್ಳು-ವಂಚನೆಗಳಿಂದ ಬಾಳಹತ್ತಿದರೋ ಅವರು ಶೂದ್ರರಾದರು. ಕೆಲಸ ಮತ್ತು ಹೋಮಗಳು ಯಾವಾಗಲೂ ಯಾರೂ ಮಾಡಬಹುದಿತ್ತು. ಯಾರಿಗೂ ನಿರಾಕರಣವಿರಲಿಲ್ಲ. ಈ ರೀತಿಯಲ್ಲಿ ಮೊದಲ ಸಲ ಬ್ರಾಹ್ಮಣ ಸಾರಸ್ವತರನ್ನು ಬ್ರಹ್ಮನು ನಿರ್ಮಿಸಿದನು. ಆದರೆ ತಮ್ಮ ದುರಾಶೆಯಿಂದ ಅವರು ಅಜ್ಞಾನದ ದಾರಿ ಹಿಡಿದರು."

'ಬ್ರಾಹ್ಮಣ ಸರಸ್ವತಿ' ಎಂಬ ಶಬ್ದದ ವಿಶ್ಲೇಷಣೆಯನ್ನು ಮಾಡುತ್ತ ವ್ಯಾಖ್ಯಾನಕಾರನು ಹೀಗೆ ಹೇಳುತ್ತಾನೆ :

"ವೇದಗಳಿಂದ ಒಡಗೂಡಿದ ಸರಸ್ವತಿಯನ್ನು ಮೊದಲು ನಿರ್ಮಾಣ ಮಾಡಿದವನು ಬ್ರಹ್ಮನು. ಆದರೆ ಅಜ್ಞಾನದಿಂದ ಅಂಧಕಾರದತ್ತ ತೆರಳಿದ ಶೂದ್ರರು ವೇದಗಳ ಮೇಲಿನ ತಮ್ಮ ಹಕ್ಕನ್ನು ಕಳೆದುಕೊಂಡರು."

ಶೂದ್ರರ ನಂತರ ಬಂದಿತು ವೈಶ್ಯರ ಸರದಿ. ಬ್ರಾಹ್ಮಣ ಮತ್ತು ಕ್ಷತ್ರಿಯರ ಮಧ್ಯೆ ಬಹು ದ್ವೇಷಭಾವದ ವರ್ಗಕಲಹ ನಡೆಯಿತು. ಹಿಂದೂ ಪುರಾತನ ಗ್ರಂಥಗಳು ಈ ಎರಡೂ ವರ್ಗಗಳಲ್ಲಿ ನಡೆದ ಈ ಕಲಹದ ಉಲ್ಲೇಖಗಳನ್ನು ಹೇರಳವಾಗಿ ಕೊಡುತ್ತವೆ.

ಮೊದಲನೆಯದಾಗಿ ಬ್ರಾಹ್ಮಣರು ಮತ್ತು ವೇನನೆಂಬ ಅರಸನ ಜೊತೆಗೆ ನಡೆದ ಹೋರಾಟ. "ಮೊದಲು ಪುಣ್ಯಶೀಲನಾದ ಪ್ರಜಾಪತಿಯಾಗಿ ಅತ್ರಿವಂಶದ ಅಂಗನೆಂಬುವನಿದ್ದನು. ಅವನ ಮಗನೇ

ಪ್ರಜಾಪತಿ ವೇನ. ಮೃತ್ಯುವಿನ ಮಗಳಾದ ಸುನೀತಾಳ ಮಗನು ಅವನು. ಇವನು ತನ್ನ ಕರ್ತವ್ಯವನ್ನು ಮರೆತು ಭೋಗಕ್ಕೆ ಬಲಿಯಾಗಿದ್ದನು. ರಾಜನು ಎಲ್ಲ ಸ್ಥಾಪಿತ ವೈದಿಕ ಪದ್ಧತಿ ಮರೆತು ಅರಾಜಕತೆಗೆ ಕಾರಣನಾದನು. ಅವನ ಕಾಲದಲ್ಲಿ ಧಾರ್ಮಿಕ ಗ್ರಂಥಗಳನ್ನು ಜನರು ನಿರ್ಲಕ್ಷಿಸಿದರು ಮತ್ತು ಯಜ್ಞ–ಯಾಗಗಳು ನಡೆಯದೇ ದೇವತೆಗಳು ಕುಪಿತರಾದರು. "ನಾನೇ ಸರ್ವಸ್ವ, ನನಗೆ ಎಲ್ಲ ಗೌರವಾದಿಗಳು ಸಲ್ಲಬೇಕು." ಎಂಬ ಅಹಂಭಾವದ ವರ್ತನೆ ಅವನದಾಗಿತ್ತು. ಇದನ್ನು ನೋಡಿದ ಋಷಿವೃಂದ ಮರೀಚಿಯ ನೇತೃತ್ವದಲ್ಲಿ ಬಂದು ಅವನಿಗೆ ಉಪದೇಶ ಮಾಡಿತು. "ಎಲೈ ವೇಣನೇ, ನೀನು ನಿನ್ನ ಕರ್ತವ್ಯವನ್ನು ಮರೆತು ತಪ್ಪು ದಾರಿಯಲ್ಲಿ ಹೋಗುತ್ತಿರುವಿ. ನಾವು ಒಂದು ಪವಿತ್ರವಾದ ಬಹುಕಾಲ ಪುಣ್ಯ ತರುವ ಯಜ್ಞವನ್ನು ನೇರವೇರಿಸಲಿದ್ದೇವೆ. ನೀನು ನಿನ್ನ ಪ್ರಜೆಗಳನ್ನು ರಕ್ಷಿಸುವುದನ್ನು ಬಿಟ್ಟು ಬೇರೆ ದಾರಿಯಲ್ಲಿ ನಡೆದಿರುವೆ". ಆದರೆ ವಿವೇಚನೆಯನ್ನು ಕಳೆದುಕೊಂಡಿರುವ ಅವಿವೇಕಿ ವೇನ ರಾಜನು. ಆ ಶ್ರೇಷ್ಠ ಋಷಿವೃಂದವನ್ನು ಕುರಿತು ಹೀಗೆ ಹೇಳುತ್ತಾನೆ :

> "ಕರ್ತವ್ಯವನ್ನು ನಿರ್ಧರಿಸುವ ಅಧಿಕಾರ ನನ್ನದು. ನಾನು ಯಾರಿಗೆ ವಿಧೇಯನಾಗಿರಬೇಕು? ಈ ಪೃಥ್ವಿಯಲ್ಲಿ ಪವಿತ್ರ ಗ್ರಂಥಗಳ ಜ್ಞಾನ ಮತ್ತು ಶೌರ್ಯ ನನ್ನದು. ನನಗೆ ಸಮನಾರು? ಇದನ್ನು ತಿಳಿಯದವರು ನೀವು. ನನ್ನಿಂದಲೇ ಎಲ್ಲ ಶಕ್ತಿ – ಸ್ವರೂಪ. ನಾನು ಮನಸ್ಸು ಮಾಡಿದರೆ ಪೃಥ್ವಿಯನ್ನು ಭಸ್ಮಮಾಡಬಲ್ಲೆ. ಜಲಪ್ರಳಯ ಮಾಡಿಸಬಲ್ಲೆ. ಸ್ವರ್ಗ–ಮರ್ತ್ಯಗಳನ್ನು ಒಂದು ಮಾಡಬಲ್ಲೆ."

ಇಂಥ ಗರ್ವದ ಅರಸನನ್ನು ನೋಡಿದ ಋಷಿಗಳು ಇನ್ನು ಪ್ರಯೋಜನವಿಲ್ಲವೆಂದು ತಿಳಿದು ಅವನನ್ನು ಹಿಡಿದು ಅವನ ಎಡ ತೊಡೆಯನ್ನು ತಿಕ್ಕಿದರು. ಆ ಘರ್ಷಣೆಯಲ್ಲಿ ಒಬ್ಬ ಕುಳ್ಳಗಿನ ಕಪ್ಪು ವರ್ಣದ ಮನುಷ್ಯ, ಹುಟ್ಟಿಕೊಂಡು ಕೈಜೋಡಿಸಿ ನಿಂತುಕೊಂಡನು. ಅತ್ರಿ ಋಷಿ ಅವನಿಗೆ 'ಕೆಳಗೆ ಕುಳಿತುಕೊ (ನಿಷಿಧಾ)' ಎಂದರು. ಅವನೇ ನಿಷಿಧ ವಂಶದ ಮೂಲಪುರುಷನು. ಅಲ್ಲದೇ ಮೀನುಗಾರ ಜಾತಿಗೂ ಮೊದಲನೆಯವನು. ಅದೇ ಕ್ರಮದಲ್ಲಿ ವಿಂಧ್ಯದಲ್ಲಿ ಅರಾಜಕತೆಯಿಂದ ವಾಸಿಸುವ ತುಖಾರರು ಮತ್ತು ತುಂಬುರರು ಜನ್ಮತಾಳಿದರು. ಋಷಿಗಳು ಉತ್ತೇಜಿತರಾಗಿ ವೇನನ ಬಲಗೈಯನ್ನು ಆರಣಿ ಕಟ್ಟಿಗೆಯನ್ನು ತಿಕ್ಕಿದಂತೆ ತಿಕ್ಕಿದಾಗ ಪ್ರಜ್ವಲಿತ ಬೆಂಕಿಯಂತೆ ಪೃಥು ಹುಟ್ಟಿಕೊಂಡನು"

ಆಗ ವೇನನ ಮಗನಾದ ಪೃಥು ಕೈಮುಗಿದು ಋಷಿಪುಂಗವರನ್ನು ಹೀಗೆ ಪ್ರಾರ್ಥಿಸಿದನು:

"ಕರ್ತವ್ಯ ಪ್ರಜ್ಞೆಯ ಬಗೆಗೆ ನನಗೆ ದೊರೆತಿರುವ ಅರಿವು ತುಂಬ ಕಡಿಮೆ. ಆದ್ದರಿಂದ ದಯವಿಟ್ಟು ಈ ವಿಷಯ ತಿಳಿಸಿ, ನನ್ನ ಕರ್ತವ್ಯ, ಗುರಿಗಳ ಬಗೆಗೆ ಹೆಚ್ಚು ತಿಳಿಸಿ." ಆಗ ದೇವತೆಗಳು ಮತ್ತು ಋಷಿಗಳು ಕೂಡಿಯೇ ಅವನಿಗೆ ತಿಳಿಸಿ ಹೇಳಿದರು. 'ನಿನಗೆ ಜೊತೆಗೆ ಬಂದ ಕರ್ತವ್ಯವನ್ನು ಪಾಲಿಸು. ಎಲ್ಲರನ್ನು ಸಮಾನತೆಯಿಂದ ಕಂಡು ನಿನ್ನ ಅಧಿಕಾರ ನಡೆಯಿಸು. ಅಹಂಕಾರ, ಕೋಪ, ಭೋಗದಿಂದ ದೂರವಿರು. ಸಜ್ಜನರನ್ನು ನಿನ್ನ ಶಕ್ತಿಯಿಂದ ಕಾಪಾಡು. ಸದಾಕಾಲ ಬ್ರಾಹ್ಮಣರನ್ನು ರಕ್ಷಿಸು (ವೇದ ಅಥವಾ ಬ್ರಾಹ್ಮಣ?) – ಬ್ರಾಹ್ಮಣರನ್ನು ಶಿಕ್ಷಿಸುವುದಿಲ್ಲವೆಂದು ವಚನ ಕೊಡು ಮತ್ತು ಜಾತಿಗಳ ಗೊಂದಲದಿಂದ ಸಮಾಜವನ್ನು ದೂರವಿಡು. ವೇನನ ಪುತ್ರನು "ನಾನು ಹಿರಿಯ ಬ್ರಾಹ್ಮಣರನ್ನು ರಕ್ಷಿಸುತ್ತೇನೆ ಮತ್ತು ಅವರಿಗೆ ನನ್ನ ಗೌರವ ಸದಾ ಸಲ್ಲುತ್ತದೆ" ಎಂದನು 'ಹಾಗೇ ಆಗಲಿ' ಎಂದರು ಅವರು. ದೈವಜ್ಞಾನವನ್ನು ಪಡೆದ ಶುಕ್ರ ಅವನ ಪುರೋಹಿತನಾದ. ವಾಲಖಿಲ್ಯ, ಸಾರಸ್ವತೇಯರು ಅವನ ಮಂತ್ರಿಗಳಾದರು. ಮತ್ತು ಶ್ರೇಷ್ಠ ಋಷಿಗಳಲ್ಲೊಬ್ಬರಾದ ಗರ್ಗ ಅವನ ಜ್ಯೋತಿಷಿಯಾದರು."

ಎರಡನೆಯ ಬ್ರಾಹ್ಮಣ–ಕ್ಷತ್ರಿಯರ ಹೋರಾಟದ ಉದಾಹರಣೆ ಪುರೂರವನದು ಮಹಾಭಾರತದ ಆದಿಪರ್ವದಲ್ಲಿ ಇದರ ಉಲ್ಲೇಖವಿದೆ.

"ಆನಂತರದಲ್ಲಿ ಪುರೂರವ ಜನ್ಮ ತಾಳಿದ, ಕೀರ್ತಿಶಾಲಿಯಾದ ಇವನು ಹದಿಮೂರು ದ್ವೀಪಗಳ ಮತ್ತು ಮಹಾಶಕ್ತಿಶಾಲಿ ಅರಸನಾಗಿದ್ದನು. ತನ್ನ ಶಕ್ತಿಯಿಂದ ಮದೋನ್ಮತ್ತನಾದ ಇವನು ಬ್ರಾಹ್ಮಣರೊಡನೆ ತಿಕ್ಕಾಟಕ್ಕಿಳಿದು ಅವರು ಪ್ರತಿಭಟಿಸಿದರೂ ಅವರ ಒಡವೆಗಳನ್ನು ದೋಚಿಕೊಂಡನು. ಬ್ರಹ್ಮದೇವರ ಸ್ವರ್ಗದಿಂದ ಬಂದ ಸನತ್ ಕುಮಾರ ಅವನನ್ನು ಬಯ್ದು ಬುದ್ಧಿ ಹೇಳಿದನು. ಆದರೆ ಅವನು ಅದಕ್ಕೆ ಕಿವಿಗೊಡಲಿಲ್ಲ. ಕುಪಿತರಾದ ಋಷಿಗಳಿಂದ ಶಾಪ ಹೊಂದಿದ ರಾಜನು ನಾಶಹೊಂದಿದನು. ತನ್ನ ಶಕ್ತಿಯ ದುರಹಂಕಾರಿತನಕ್ಕೆ ಹೆಸರಾದ ಅವನು ವಿವೇಚನಾಶಕ್ತಿಯನ್ನು ಕಳೆದುಕೊಂಡಿದ್ದನು. ಊರ್ವಶಿಯೊಡನೆ ಬಂದ ವಿರಾಟನು– ಪವಿತ್ರ ಧಾರ್ಮಿಕ ಆಚರಣೆಗಳಿಗಾಗಿ ಗಂಧರ್ವರು ವಾಸಿಸುವ ಸ್ವರ್ಗದಿಂದ ಅಗ್ನಿಯನ್ನು ತಂದವನು ಮೂರು ಪಾಲು ಮಾಡಿದನು."

ಬ್ರಾಹ್ಮಣರು ಮತ್ತು ಕ್ಷತ್ರಿಯರ ವಿರೋಧದ ಮೂರನೇ ಉದಾಹರಣೆ ನಹುಷ ರಾಜನದು. ಮಹಾಭಾರತದ ಉದ್ಯೋಗಪರ್ವದಲ್ಲಿ ಇದರ ದೀರ್ಘ ವಿವರಗಳಿವೆ. ಅದರ ದಾಖಲೆಗಳಿವೆ. ಅದು ಈ ರೀತಿ ಇದೆ :

"ವೃತ್ರ ಎಂಬ ದಾನವನನ್ನು ಸಂಹರಿಸಿದ ನಂತರ ಇಂದ್ರನು ತಾನು ಬ್ರಾಹ್ಮಣನನ್ನು ಸಂಹರಿಸಿದೇನೇನೊ ಎಂಬ ಭಯದಿಂದ (ವೃತ್ರನನ್ನು ಬ್ರಾಹ್ಮಣನೆಂದು ತಿಳಿಯಲಾಗುತ್ತಿತ್ತು) ನೀರಿನಲ್ಲಿ ಬಚ್ಚಿಟ್ಟುಕೊಂಡನು. ದೇವರಸನಾದ ಇಂದ್ರನ ಅನುಪಸ್ಥಿತಿಯಿಂದ ಸ್ವರ್ಗದ ಮತ್ತು ಗಂಧರ್ವಲೋಕದ ಚಟುವಟಿಕೆಗಳು ಸ್ಥಗಿತಗೊಂಡವು. ಋಷಿಗಳು, ದೇವತೆಗಳು ನಹುಷನನ್ನು ತಮ್ಮ ಪ್ರಭುವಾಗಲು ವಿನಂತಿಸಿಕೊಂಡರು. ಮೊದಲಿಗೆ ಹಿಂದೇಟು ಹಾಕಿದರೂ ಕೊನೆಗೆ ಈ ದೊಡ್ಡ ಸ್ಥಾನವನ್ನು ಒಪ್ಪಿಕೊಂಡನು. ಈ ಪದವಿಗೆ ಬರುವವರೆಗೆ ಅವನು ಗುಣವಂತನಾಗಿ ಬಾಳಿದವನು. ಆದರೆ ಅಧಿಕಾರಬಂದನಂತರ ಅವನ ತಲೆ ತಿರುಗಿ ಅಧಿಕಾರಮದದಿಂದ ಐಹಿಕ ಭೋಗಲಾಲಸೆ ಮತ್ತು ಐಷಾರಾಮ ಜೀವನಕ್ಕೆ ಒಗ್ಗಿದನು. ಅಲ್ಲದೆ ಇಂದ್ರನ ಪತ್ನಿಯಾದ ಇಂದ್ರಾಣಿಯನ್ನೇ ಬಯಸಿದನು. ದೇವತೆಗಳ ಗುರುಗಳಾದ ಅಂಗೀರಸ, ಬೃಹಸ್ಪತಿ ಅವರು ವಿನಂತಿಯ ಪ್ರಕಾರ ರಕ್ಷಿಸಲು ತೊಡಗಿದರು. ಹೀಗೆ ಈ ವ್ಯವಹಾರದಲ್ಲಿ ಅಂಗೀರಸರ ಮಧ್ಯಸ್ಥಿಕೆ ಅರಸನಿಗೆ ಇಷ್ಟವಾಗದೇ ಅವನನ್ನು ಕೆಣಕಿದಂತಾಯಿತು. ದೇವತೆಗಳು ಅವನನ್ನು ಸಮಾಧಾನಪಡಿಸಲು ಪ್ರಯತ್ನಿಸಿದರು ಮತ್ತು ಪರಪತ್ನಿಯನ್ನು ಬಯಸುವುದು ಅನೀತಿಕರ ಎಂದು ತಿಳಿಸಿ ಹೇಳಿದರು. ಆದರೆ ಆ ಬುದ್ಧಿವಾದ ಪ್ರಯೋಜನವಾಗದೇ ಇಂದ್ರನಿಗಿಂತಲೂ ತಾನೇನು ಈ ವಿಷಯದಲ್ಲಿ ಕಡಿಮೆ ಇಲ್ಲ ಎಂದು ವಾದಿಸಿದನು (೩೭೩). ಋಷಿ ಪತ್ನಿಯಾದ ಅಹಲ್ಯೆಯನ್ನು ಇಂದ್ರನು ಬಯಸಿದಾಗ ನೀವೇಕೆ ಅವನನ್ನು ತಡೆಯಲಿಲ್ಲ? (೩೭೪). ಇಂದ್ರನು ಹಿಂದೆ ಹಲವಾರು ಬಾರಿ ಅನಾಗರಿಕನಾಗಿ ನಡೆದುಕೊಂಡಿದ್ದನು, ಸೌಜನ್ಯತೆಯನ್ನು ಮೀರಿ ನಡೆದುಕೊಂಡಿದ್ದನು. ಆಗ ನೀವೇಕೆ ಅವನನ್ನು ತಡೆಯಲಿಲ್ಲ ? ನಹುಷನಿಂದ ಒತ್ತಾಯಿಸಲ್ಪಟ್ಟ ಇಂದ್ರನು ಇಂದ್ರಾಣಿಯನ್ನು ಕರೆತರಲು ಹೋಗುತ್ತಿದ್ದಂತೆ ಬೃಹಸ್ಪತಿಯು ಅವಳನ್ನು ಬಿಟ್ಟುಕೊಡಲಿಲ್ಲ. ತನ್ನ ಪತಿಯ ಕ್ಷೇಮದ ಬಗೆಗೆ ಕಾತರಳಾಗಿದ್ದರಿಂದ ಅವಳು ಕೊಂಚ ಕಾಲ ಮಿತಿಗಾಗಿ ಪ್ರಾರ್ಥಿಸಿದಳು. ಅವಳ ವಿನಂತಿ ಮಾನ್ಯವಾಯಿತು. ಅವರು ವಿಷ್ಣುವನ್ನು ಪ್ರಾರ್ಥಿಸಿದಾಗ ಇಂದ್ರನು ಒಂದು ವೇಳೆ ತನಗೆ ಯಾಗವನ್ನು ಮಾಡಿದರೆ ಅವನು ದೋಷಮುಕ್ತನಾಗಿ ತನ್ನ ರಾಜ್ಯ ಪಡೆಯುವನು ಮತ್ತು ನಹುಷನು ತನ್ನಿಂದ ನಾಶವಾಗುವನು ಎಂದು ಹೇಳಿದನು. ಇಂದ್ರನು ಅದರಂತೆ ಯಾಗವನ್ನು ಮಾಡಿದನು ಮತ್ತು ಅದರ ನಂತರದ ಫಲಿತಾಂಶಗಳನ್ನು

ಈ ರೀತಿ ವಿವರಿಸಲಾಗಿದೆ : "ಸೃಷ್ಟಿ ಮತ್ತು ಬ್ರಾಹ್ಮಣತ್ವದ ರೂಪದ ಹಲವು ವಸ್ತುಗಳಲ್ಲಿ ಹಂಚಿಹೋದ ಇಂದ್ರನ ದೋಷಗಳನ್ನು ನಿವಾರಿಸಿ ವಾಸವ (ಇಂದ್ರ)ನನ್ನು ಅವನ ಪಾಪದಿಂದ ಮುಕ್ತಗೊಳಿಸಿದನು." ಇದರಿಂದ ನಹುಷನನ್ನು ಅವನ ಅಧಿಕಾರದಿಂದ ಚ್ಯುತಿಗೊಳಿಸಲಾಯಿತು. ಆದರೆ (ಈ ನಿರೂಪಣೆ ಪರಿಣಾಮಕ್ಕೋಸ್ಕರವಾಗಿಯೋ ಅಥವಾ ವಿವರಣೆಯಲ್ಲಿ ಯಾವುದಾದರೂ ಗೊಂದಲವಿದೆಯೋ) ತನ್ನ ಮೊದಲಿನ ಅಧಿಕಾರ ವೈಭವಗಳನ್ನು ಪುನಃ ಪಡೆದಿರಲು ಸಾಕು. ಆದರೆ ನಮಗೆ ತಿಳಿಯುವಂತೆ ಇಂದ್ರನು ಮತ್ತೆ ನಾಶವಾಗಿ ಅಂತರ್ಧಾನನಾದನು. ಇಂದ್ರಾಣಿ ಮತ್ತೆ ತನ್ನ ಪತಿಯನ್ನು ಅರಸುತ್ತ ಹೊರಡುತ್ತಾಳೆ. ಅಪಶ್ರುತಿಯ (ರಹಸ್ಯಗಳ ಮತ್ತು ನಿಶಾದೇವತೆ) ಸಹಾಯದಿಂದ ಅವನನ್ನು ಹಿಮಾಲಯದ ಉತ್ತರ ದಿಕ್ಕಿನಲ್ಲಿರುವ ಒಂದು ಸರೋವರದಲ್ಲಿ ಕಮಲದ ದಂಟಿನಲ್ಲಿ ಶೋಧಿಸುತ್ತಾಳೆ. ನಹುಷನ ದುಷ್ಟ ಲಾಲಸೆಯನ್ನು ಅವನ ಗಮನಕ್ಕೆ ತಂದು ತನ್ನನ್ನು ರಕ್ಷಿಸಿ ಮತ್ತೆ ತನ್ನ ಸಾಮ್ರಾಜ್ಯಕ್ಕೆ ವಾಪಸಾಗಬೇಕೆಂದು ಪ್ರಾರ್ಥಿಸುತ್ತಾಳೆ. ನಹುಷನ ಶಕ್ತಿ ಹೆಚ್ಚಿನದಾಗಿರುವುದರಿಂದ ಈ ಕೂಡಲೇ ಇದು ಸಾಧ್ಯವಾಗದ ವಿಷಯವೆಂದು ಇಂದ್ರನು ಹೇಳಿ ಅವನನ್ನು ಅವನ ಸ್ಥಾನದಿಂದ ಉರುಳಿಸುವ ಒಂದು ಸೂಚನೆಯನ್ನು ಕೊಡುತ್ತಾನೆ. 'ನೀನು ಋಷಿಗಳಿಂದ ಎಳೆಯಲ್ಪಡುವ ಸ್ವರ್ಗಲೋಕದ ರಥದಲ್ಲಿ ಬರುವುದಾದರೆ ನಾನು ನಿನಗೆ ಶರಣಾಗುವೆನು ಎಂದು ಹೇಳು' ಎಂದು ಸೂಚನೆ ಕೊಡುತ್ತಾನೆ. ಅದರಂತೆ ಇಂದ್ರಾಣಿ ನಹುಷನಿಗೆ "ವಿಷ್ಣು, ರುದ್ರರು, ಅಸುರರು, ರಾಕ್ಷಸರು ಇದುವರೆಗೆ ಉಪಯೋಗಿಸದ ಮತ್ತು ಋಷಿಗಳಿಂದ ಎಳೆಯಲ್ಪಡುವ ವಿಶಿಷ್ಟ ವಾಹನವನ್ನು ಹತ್ತಿ ನನ್ನ ಬಳಿ ಬಾ" ಎಂದಾಗ ನಹುಷ ತನ್ನ ಆತ್ಮ ಪ್ರಶಂಸೆಯ ಈ ಮಾತುಗಳನ್ನು ನುಡಿಯುತ್ತಾನೆ: "ನಾನು ತ್ರಿಕಾಲವೂ ಶಕ್ತಿಶಾಲಿ, ಆದ್ದರಿಂದ ಎಲ್ಲ ಏಳು ಋಷಿಗಳು ಮತ್ತು ಬ್ರಾಹ್ಮಣ ಋಷಿಗಳು ನನ್ನನ್ನು ಎತ್ತಿಕೊಂಡು ಹೋಗುವರು. ಆದ್ದರಿಂದ ಸುಂದರ ಇಂದ್ರಾಣಿಯೇ, ನೀನು ಚಿಂತಿಸದಿರು. ನನ್ನ ಪರಾಕ್ರಮ ಮತ್ತು ಸಂಪತ್ತನ್ನು ನೋಡು" ಎಂದನಂತೆ. ಈ ಕತೆ ಹೀಗೇ ಸಾಗುತ್ತದೆ: "ಅತಿ ಅಹಂಭಾವದ ದುಷ್ಟನಾದ ಅರಸ ಬ್ರಾಹ್ಮಣ ಋಷಿಗಳನ್ನು ತನ್ನ ವಾಹಕರನ್ನಾಗಿ ಬಳಸಿದನಂತೆ." ಇಂದ್ರಾಣಿ ಈಗ ಬೃಹಸ್ಪತಿಯನ್ನು ಮತ್ತೆ ಮೊರೆಹೋದಳು. ಆಗ ಅವನು ಈ ಸೇಡನ್ನು ತೀರಿಸಿಕೊಳ್ಳಲಾಗುವುದು ; ಅಲ್ಲದೆ ಇಂದ್ರನ ಪ್ರತಿಷ್ಠೆ ಮೊದಲಿನಂತಾಗಲು ತಾನು ಒಂದು ವಿಶೇಷ ಯಾಗವನ್ನು ಮಾಡುವೆನೆಂದು ಮಾತುಕೊಟ್ಟನು. ಇಂದ್ರನನ್ನು ಶೋಧಿಸಿ ತರಲು ಅಗ್ನಿಯನ್ನು ಕರೆಯಲಾಯಿತು. ಬೃಹಸ್ಪತಿ ಇಂದ್ರನ ಅನುಪಸ್ಥಿತಿಯಲ್ಲಿ ಆದುದನ್ನು ವಿವರಿಸಿದನು. ಕುಬೇರನೊಂದಿಗೆ ಇಂದ್ರನು ಯಮ, ಸೋಮ, ವರುಣ ಮೊದಲಾದವರು ನಹುಷನನ್ನು ನಾಶಮಾಡಲು ಹವಣಿಸಿ ಯಶಸ್ವಿಯಾದರು. ಅಗಸ್ತ್ಯ ಋಷಿಗಳು ಬಂದು ಇಂದ್ರನನ್ನು ಅಭಿನಂದಿಸಿದರು ಮತ್ತು ನಹುಷ ನಾಶವಾದ ಬಗೆಯನ್ನು ವಿವರಿಸಿದರು. ಋಷಿಗಳು ಮತ್ತೆ ಬ್ರಾಹ್ಮಣರನ್ನು ವಾಹಕವಾಗಿ ಮಾಡಿಕೊಂಡು ಬರುತ್ತಿದ್ದಾಗ ಒಂದು ಸಮಸ್ಯೆಯನ್ನು ಬಿಡಿಸಲು ಹೇಳಿದರು.

"ಪರಾಕ್ರಮಿಯಾದ, ಶ್ರೇಷ್ಠ ರಾಜನೇ, ಬ್ರಾಹ್ಮಣ ಗ್ರಂಥಗಳನ್ನು ನೀನು ಅಧಿಕಾರಯುತವಾದವು ಎಂದು ತಿಳಿಯುತ್ತೀಯೋ ಇಲ್ಲವೋ ?" ಅಜ್ಞಾನದ ಕತ್ತಲೆಯಲ್ಲಿರುವ ಅರಸನು 'ಇಲ್ಲ ನಾನು ನಂಬುವುದಿಲ್ಲ' ಎಂದಾಗ ಋಷಿಗಳು "ನೀನು ಅನಾಚಾರದ, ಪಾಪದ ಮಾರ್ಗವನ್ನು ಅನುಸರಿಸಿರುವಿ. ಆದ್ದರಿಂದ ಈ ಗ್ರಂಥಗಳ ಪವಿತ್ರತೆಯ ಬಗೆಗೆ ನಿನಗೆ ವಿಶ್ವಾಸವಿಲ್ಲ. ಮಹಾನ್ ಋಷಿಗಳಿಂದ ಪಠಿಸಲ್ಪಡುವ ಈ ಮಂತ್ರಗಳು ಅಧಿಕಾರಯುತವಾದ ಧರ್ಮಸೂತ್ರಗಳು." ಎಂದು ಹೇಳಿದರು.

ಅಗಸ್ತ್ಯರು ಮುಂದುವರಿಯುತ್ತ, "ನಹುಷ, ಮುನಿಗಳ ಈ ಮಾತನ್ನು ತನ್ನ ಅನಾಚಾರದ ವರ್ತನೆ ಮತ್ತು ಧೋರಣೆಯಿಂದ ತಿರಸ್ಕರಿಸಿ ನನ್ನ ತಲೆಯ ಮೇಲೆ ಕಾಲಿಟ್ಟನು. ಈ ಪರಿಣಾಮ ಕೂಡಲೇ ತನ್ನ

ವೈಭವ ಮತ್ತು ಸಮೃದ್ಧಿಯನ್ನು ಕಳೆದುಕೊಂಡುಬಿಟ್ಟನು. ಅವನು ದುಗುಡಗೊಂಡು ಭೀತನಾದಾಗ ನಾನು ಹೇಳಿದೆ. 'ಎಲೈ ಮೂರ್ಖನೇ, ಪವಿತ್ರ ಗ್ರಂಥಗಳನ್ನು ಪುರಾತನ ಋಷಿಗಳು ರಚಿಸಿರುವುದರಿಂದ ಸದಾ ಗೌರವದಿಂದ ಕಾಣಬೇಕು. ಬ್ರಾಹ್ಮಣ ಋಷಿಗಳು ಪವಿತ್ರವೆಂದು ಪರಿಗಣಿಸ ಹತ್ತಿದರು. ನೀನು ನನ್ನ ತಲೆಗೆ ಕಾಲಿನಿಂದ ಒದ್ದಿರುವೆ ಮತ್ತು ನೀನು ಋಷಿಗಳಿಂದ ಎತ್ತಿಕೊಂಡು ಹೊರಡಲ್ಪಟ್ಟಿರುವೆ. ಆದ್ದರಿಂದ ನಿನ್ನ ಪಾಪ ನಿನ್ನನ್ನು ಬಿಡದು. ನಿನ್ನ ಘನತೆ, ಗೌರವ, ವೈಭವ ಎಲ್ಲ ಮಣ್ಣು ಪಾಲಾದವು. ನೀನು ಸ್ವರ್ಗದಿಂದ ಭೂಮಿಗೆ ಬರಬೇಕಾಗುತ್ತದೆ. ಸಾವಿರ ವರ್ಷಗಳವರೆಗೆ ನೀನು ಮಹಾಸರ್ಪವಾಗಿ ನೆಲದ ಮೇಲೆ ಉರುಳಬೇಕಾಗುತ್ತದೆ. ಆ ಅವಧಿಯ ನಂತರ ಮತ್ತೆ ಸ್ವರ್ಗಕ್ಕೆ ಮರಳುತ್ತಿಯೇ' ಹೀಗೆ ಮಹಾಸಾಮ್ರಾಟ ತನ್ನ ದೈವತ್ವದ ಪದದಿಂದ ಕೆಳಗೆ ಉರುಳಿದನು."

ಬ್ರಾಹ್ಮಣ-ಅರಸರ ಹೋರಾಟದ ಮುಂದಿನ ಉದಾಹರಣೆಯಾಗಿ ನಿಮಿ ಅರಸನನ್ನು ಹೆಸರಿಸಬಹುದು. ವಿಷ್ಣುಪುರಾಣವು ಈ ಕಥೆಯನ್ನು ಈ ಬಗೆಯಲ್ಲಿ ಹೇಳುತ್ತದೆ :

"ಬ್ರಹ್ಮರ್ಷಿ ವಸಿಷ್ಠರನ್ನು ನಿಮಿ ರಾಜನು ಹೋಮವೊಂದರಲ್ಲಿ ಮುಖ್ಯ ಪಾತ್ರವಹಿಸಲು ಆಹ್ವಾನಿಸಿದ್ದನು. ಇದು ಸಾವಿರ ವರ್ಷಗಳವರೆಗೆ ಪ್ರಭಾವ ತಳೆಯಬೇಕಾಗಿತ್ತು. ಇಂದ್ರ ಈಗಾಗಲೇ ಐದುನೂರು ವರ್ಷಕ್ಕೆ ಪೂರ್ವಭಾವಿಯಾಗಿ ಒಪ್ಪಿಕೊಂಡಿದ್ದರಿಂದ ಅವಧಿ ಮುಗಿದ ನಂತರ ಬರುವುದಾಗಿ ಉತ್ತರಿಸಿದರು. ಅರಸನು ಯಾವ ಉತ್ತರವನ್ನೂ ಕೊಡಲಿಲ್ಲ. ಆದ್ದರಿಂದ ವಸಿಷ್ಠರು ಅವನ ಮೌನ ಸಮ್ಮತಿಯೆಂದು ತಿಳಿದು ಹೊರಟುಹೋದರು. ಬಂದನಂತರ ಅವರಿಗೆ ಅರಸನು ಗೌತಮ ಋಷಿಗಳನ್ನು ಇತರರ ಜೊತೆಗೆ ಆಹ್ವಾನಿಸಿದ್ದಾನೆ ಎಂದು ತಿಳಿಯಿತು. ಕುಪಿತರಾದ ಅವರು ಅರಸನಿಗೆ ಶಾಪವನ್ನಿತ್ತರು. ಆಗ ನಿದ್ದೆಯಲ್ಲಿದ್ದ ಅರಸನು ತನ್ನ ಭೌತಿಕ ಶಾರೀರಕ ಅಸ್ತಿತ್ವವನ್ನು ಕಳೆದುಕೊಂಡನು. ನಿದ್ದೆಯಿಂದ ಎಚ್ಚೆತ್ತ ನಿಮಿ ರಾಜನು ತನಗೆ ತಿಳಿಯದೇ ಸಿಕ್ಕ ಶಾಪವನ್ನು ಲಕ್ಷಿಸಿ ಕೋಪಗೊಂಡು ತಾನೂ ಅಂತಹುದೇ ಶಾಪವನ್ನು ವಸಿಷ್ಠರಿಗೆ ಕೊಟ್ಟು ಮರಣಹೊಂದಿದನು." ವಿಷ್ಣು ಪುರಾಣದ ಪುಟ IV ೫-೬ ಭಾಗದಲ್ಲಿ ಹೇಳಿರುವಂತೆ ವಸಿಷ್ಠರ ಶಕ್ತಿವರುಣ ಮತ್ತು ಮಿತ್ರರಲ್ಲಿ ಪ್ರವೇಶಿಸಿತು ಮತ್ತು ಊರ್ವಶಿಯನ್ನು ನೋಡಿದ ಕ್ಷಣ ಹೊರಬಿದ್ದ ಬೀಜದಿಂದ ಮತ್ತೆ ಭೌತಿಕ ಶರೀರವನ್ನು ಪಡೆದರು. ನಿಮಿ ರಾಜನ ದೇಹವನ್ನು ರಕ್ಷಿಸಿದರು. ಯಾಗದ ಕೊನೆಗೆ ಪುರೋಹಿತರ ಮಾತಿನಂತೆ ದೇವತೆಗಳು ಅರಸನನ್ನು ಮತ್ತೆ ಜೀವಂತ ಮಾಡಲು ಸಿದ್ಧರಿದ್ದರು. ಆದರೆ ಅವನ ಇಚ್ಛೆಯಂತೆ ಮರುಜನ್ಮ ಕೊಡದೇ ಹಾಗೇ ಬಿಟ್ಟುಬಿಟ್ಟರು. ಎಲ್ಲರ ಕಣ್ಣುಗಳಲ್ಲಿ ಅವನು ಉಳಿಯಬೇಕೆಂದು ಅವನ ಇಚ್ಛೆ ಇದ್ದಿತು. ಆದ್ದರಿಂದಲೇ ಮನುಷ್ಯ ಕಣ್ಣುಮುಚ್ಚುವ – ಕಣ್ಣು ತೆರೆಯುವ ಸ್ವಾಭಾವಿಕ ಪ್ರಕ್ರಿಯೆ ಪ್ರಾರಂಭವಾಯಿತು. (ನಿಮಿಷಗಳಿಂದ ಕಣ್ಣು ರೆಪ್ಪೆ ಬಡಿಯುವುದು). ಸುಮುಖರಾಜ ಮತ್ತು ಬ್ರಾಹ್ಮಣರ ಇನ್ನೊಂದು ತಿಕ್ಕಾಟವನ್ನು ಮನು ಉಲ್ಲೇಖಿಸಿದರೂ ಅದರ ಬಗೆಗೆ ಬಹಳ ವಿವರಗಳು ಉಪಲಬ್ಧವಿಲ್ಲ.

ಈ ಮೇಲಿನ ಉದಾಹರಣೆಗಳಿಂದ ಬ್ರಾಹ್ಮಣ-ಕ್ಷತ್ರಿಯ ಅರಸರ ತಿಕ್ಕಾಟದ ಕಲ್ಪನೆ ಬರುತ್ತದೆ. ಇದು ಕೇವಲ ಬ್ರಾಹ್ಮಣ-ಕ್ಷತ್ರಿಯರ ವೈಯಕ್ತಿಕ ತಿಕ್ಕಾಟವಾಗಿರಲಿಲ್ಲ. ಆದರೆ ವರ್ಗ ಕಲಹಗಳಾಗಿದ್ದವು ಇದಕ್ಕಾಗಿ ಮೂರು ಘಟನೆಗಳನ್ನು ಹೆಸರಿಸಬಹುದು.

ಮೊದಲನೆಯದಾಗಿ, ಕ್ಷತ್ರಿಯ ವಿಶ್ವಾಮಿತ್ರ ಮತ್ತು ಬ್ರಾಹ್ಮಣ ವಸಿಷ್ಠರ ತಿಕ್ಕಾಟ. ಕ್ಷತ್ರಿಯನೊಬ್ಬನು ಬ್ರಾಹ್ಮಣತ್ವವನ್ನು ಹೊಂದಲು ಸಾಧ್ಯವೇ ಎಂಬುದು ಅವರ ತಾತ್ವಿಕ ಜಗಳವಾಗಿತ್ತು.

ಈ ಕಥೆ ರಾಮಾಯಣದಲ್ಲಿ ಈ ರೀತಿ ಉಲ್ಲೇಖವಾಗಿದೆ :

"ಅರಸ ಪ್ರಜಾಪತಿಯ ಮಗ ಕುಶ. ಅವನ ಮಗ ಕುಶನಾಭ. ಅವನ ಮಗ ಗಾಧಿ. ಇವನ ಮಗನೇ ವಿಶ್ವಾಮಿತ್ರ. ಸಹಸ್ರಾರು ವರ್ಷಗಳವರೆಗೆ ಪೃಥ್ವಿಯನ್ನು ಇವನು ಆಳಿದನು. ಒಂದು ಸಲ ಪೃಥ್ವಿಯನ್ನು ಸುತ್ತು ಹಾಕುವಾಗ ವಸಿಷ್ಠರ ಆಶ್ರಮಕ್ಕೆ ಬಂದನು. ಈ ಆಶ್ರಮ ಎಷ್ಟೋ ಸಾಧುಸಂತರು, ಋಷಿಗಳು, ಭಕ್ತಾದಿಗಳಿಗೆ ಶಾಂತಿಯ ತಾಣವಾಗಿತ್ತು. ಮೊದಲು ನಿರಾಕರಿಸಿದರೂ ಬ್ರಾಹ್ಮಣ ಮಗನ ಕಡೆಯಿಂದ ಆತಿಥ್ಯ–ಸತ್ಕಾರ ಸ್ವೀಕರಿಸಲು ಒಪ್ಪಿದನು. ಕೇಳಿದ್ದನ್ನು ಕೊಟ್ಟರೂ ಕಾಮಧೇನುವನ್ನು ನೋಡಿ ಅದನ್ನು ತನಗೆ ಕೊಡಬೇಕೆಂದು ಒತ್ತಾಯಿಸಿದನು. ಅದರ ಬದಲಾಗಿ ಸಹಸ್ರಾರು ಸಾಮಾನ್ಯ ಆಕಳುಗಳನ್ನು ಕೊಡುವುದಾಗಿ ಹೇಳಿದರು. ಈ ಆಕಳು ಬಹುಮೌಲ್ಯವಾದದ್ದು ಮತ್ತು ಅತಿಮೌಲ್ಯದ ವಸ್ತುಗಳನ್ನು ರಾಜಮಾತ್ರ ಹೊಂದಬಲ್ಲ. ಆದ್ದರಿಂದ ಈ ಕಾಮಧೇನು ನನ್ನ ಹಕ್ಕು" ಎಂದು ವಾದಿಸಿದನು. ವಸಿಷ್ಠ ಎಲ್ಲಕ್ಕೂ ನಿರಾಕರಿಸಿದಾಗ ಅದನ್ನು ಬಲಾತ್ಕಾರ ಮತ್ತು ಒತ್ತಾಯದಿಂದ ಒಯ್ಯುತ್ತಿರುವಂತೆ ಅದು ಎಲ್ಲರಿಂದ ಬಿಡಿಸಿಕೊಂಡು ತನ್ನ ಯಜಮಾನನಾದ ವಸಿಷ್ಠರ ಕಡೆಗೆ ಬರಹತ್ತಿತು. 'ನನ್ನನ್ನು ನೀನು ಬಿಟ್ಟುಬಿಡುತ್ತಿರುವೆ' ಎಂದು ಕಾಮಧೇನು ನುಡಿದಾಗ 'ನಾನು ನಿನ್ನನ್ನು ಬಿಟ್ಟುಕೊಡುತ್ತಿಲ್ಲ. ಆದರೆ ಅರಸನು ಶಕ್ತಿಶಾಲಿಯಾಗಿರುವುದರಿಂದ ಕಿತ್ತುಕೊಳ್ಳುತ್ತಿದ್ದಾನೆ' ಎಂದರು ವಸಿಷ್ಠರು. ಆಗ ಕಾಮಧೇನು "ಅರಸರನ್ನು ಬಹಳ ಪರಾಕ್ರಮಶಾಲಿ ಎಂದು ಹೇಳುತ್ತ ಹೋಗಬೇಡಿ. ನಿಜವಾದ ಅರ್ಥದಲ್ಲಿ ಬ್ರಾಹ್ಮಣರು ಶಕ್ತಿಶಾಲಿಗಳು. ಅವರಲ್ಲಿ ದೈವೀಶಕ್ತಿ ಇರುತ್ತದೆ. ಅದು ಕ್ಷತ್ರಿಯರ ದೈಹಿಕ ಶಕ್ತಿಗಿಂತ ಹೆಚ್ಚಿನದು. ದೈವೀಶಕ್ತಿ ಅಳೆಯಲಸಾಧ್ಯವಾದುದು. ವಿಶ್ವಾಮಿತ್ರನು ಶಕ್ತಿಶಾಲಿಯಾಗಿದ್ದರೂ ನಿನಗಿಂತ ಹೆಚ್ಚಿನವನಲ್ಲ. ನೀನು ನನ್ನನ್ನು ನಿನ್ನ ಬ್ರಾಹ್ಮಣ ಶಕ್ತಿಯಿಂದ ಪಡೆದಿರುವಿ. ಆದ್ದರಿಂದ ನನ್ನನ್ನು ಕರೆದುಕೊ. ನಾನು ಈ ದುರಭಿಮಾನಿ, ದುಷ್ಟ ಅರಸನನ್ನು ನಾಶಪಡಿಸುತ್ತೇನೆ." ಎಂದು ಹೇಳುತ್ತಿದ್ದಂತೆ ನೂರಾರು ಆಕಳುಗಳನ್ನು ಸೃಷ್ಟಿಸಿ ವಿಶ್ವಾಮಿತ್ರನ ಪರಿವಾರವನ್ನು ನಾಶಪಡಿಸಿತು. ಆದರೆ ಈ ಹೋರಾಟದಲ್ಲಿ ಅವು ಕೊಲ್ಲಲ್ಪಟ್ಟವು. ಶಕರು, ಯವನರು ಮೊದಲಾದ ಪರಾಕ್ರಮಿ, ಧೈರ್ಯಶಾಲಿಗಳನ್ನು ಸೃಷ್ಟಿಸಲಾಗಿ ಅವರು ಅರಸನ ಸೈನಿಕರನ್ನು ಕೊಂದರು. ಆದರೆ ವಿಶ್ವಾಮಿತ್ರನ ಎದುರು ಅವರ ಆಟ ನಡೆಯಲಿಲ್ಲ. ಆಗ ಕಾಮಧೇನು ಧ್ವನಿ ಮಾಡಿ ತನ್ನ ದೇಹದ ಬೇರೆ ಬೇರೆ ಭಾಗಗಳಿಂದ ಸೈನ್ಯವನ್ನು ಸೃಷ್ಟಿಸುತ್ತದೆ. ವಿಶ್ವಾಮಿತ್ರನ ಸೈನ್ಯ ಹೀಗೆ ಸರ್ವರೀತಿಯಲ್ಲಿ ನಾಶವಾಗುತ್ತ ಹೋಗುತ್ತದೆ. ಪದಾತಿದಳ, ಆನೆಗಳು, ಅಶ್ವಗಳು, ರಥಗಳು ಇತ್ಯಾದಿ ಒಂದರ ಹಿಂದೆ ಒಂದು ನಾಶವಾಗುತ್ತವೆ. ಅರಸನ ನೂರು ಮಕ್ಕಳು ಆಯುಧಗಳಿಂದ ಸುಸಜ್ಜಿತರಾಗಿ ವಸಿಷ್ಠರ ಕಡೆಗೆ ಕ್ರೋಧದಿಂದ ನುಗ್ಗುತ್ತಾರೆ. ಆದರೆ ವಸಿಷ್ಠನ ಬಾಯಿಯಿಂದ ಹೊರಟ ಸಿಡಿತದಿಂದ ಬೂದಿಯಾಗಿ ಪರಿವರ್ತಿತರಾಗುತ್ತಾರೆ. ಹೀಗೆ ಸೋತು, ಹತಾಶನಾದ ವಿಶ್ವಾಮಿತ್ರನು ತನ್ನ ಒಬ್ಬ ಮಗನನ್ನು ಪ್ರತಿನಿಧಿಯಾಗಿ ನೇಮಿಸಿ ಹಿಮಾಲಯದ ಕಡೆಗೆ ತೆರಳುತ್ತಾನೆ. ಅಲ್ಲಿ ಘೋರ ತಪಸ್ಸು ಮಾಡಿ ಮಹಾದೇವನ ಕೃಪಾದೃಷ್ಟಿಯನ್ನು ಪಡೆಯುತ್ತಾನೆ. ಆಗ ಶಿವನು ಅಸ್ತ್ರವಿದ್ಯೆಯ ಎಲ್ಲ ಶಾಖೆಗಳ ಜ್ಞಾನವನ್ನು ಧಾರೆ ಎರೆದು, ಸ್ವರ್ಗದ ಅಸ್ತ್ರಗಳನ್ನು ದಯಪಾಲಿಸುತ್ತಾನೆ. ಹೀಗೆ ಸರ್ವಶಕ್ತಿ ಪಡೆದು ವಿಶ್ವಾಮಿತ್ರ ಅಭಿಮಾನದಿಂದ ಬೀಗಿ ಮತ್ತೆ ವಸಿಷ್ಠನ ಆಶ್ರಮಕ್ಕೆ ದಾಳಿ ಇಡುತ್ತಾನೆ. ಆಗ ವಸಿಷ್ಠ ತನ್ನ ಬ್ರಾಹ್ಮಣತ್ವದ ಗದೆಯನ್ನು ಅವನ ಅಸ್ತ್ರದ ವಿರುದ್ಧ ಎತ್ತಿ ಯುದ್ಧಕ್ಕೆ ಸಿದ್ಧನಾಗುತ್ತಾನೆ. ವಸಿಷ್ಠನು ವಿಶ್ವಾಮಿತ್ರನಿಗೆ ತನ್ನ ಶಕ್ತಿಯನ್ನು ಪ್ರದರ್ಶಿಸಲು ಆಹ್ವಾನಿಸುತ್ತಾನೆ. ಅವನು ಕೇಳುತ್ತಾನೆ : "ಕ್ಷತ್ರಿಯನ ಶೂರತನ ಬ್ರಾಹ್ಮಣನ ಮಹಾನ್ ಶಕ್ತಿಯ ಎದುರು ಯಾವ ಮೂಲೆಯದು? ಹೋಲಿಕೆಗಾಗಿ ನಿಲ್ಲಬಲ್ಲದೇ? ಈಗ ನೋಡು ನನ್ನ ಬ್ರಹ್ಮಶಕ್ತಿಯ ತೇಜಸ್ಸನ್ನು" ಅನ್ನುತ್ತಿದ್ದಂತೆ ವಿಶ್ವಾಮಿತ್ರನ ಆಗ್ನೇಯಾಸ್ತ್ರವನ್ನು ವಸಿಷ್ಠನ ಜಲಾಸ್ತ್ರವು ಕ್ಷಣದಲ್ಲಿ ಉಪಶಮನಗೊಳಿಸಿತು. ಅದರಂತೆ ವಿಶ್ವಾಮಿತ್ರ ಹೊಂದಿದ ಹಲವು ದೈವಾಸ್ತ್ರಗಳಾದ

ಬ್ರಹ್ಮನ ಹಗ್ಗದ ಸುತ್ತು, ಕಾಲಾಸ್ತ್ರ, ವರುಣಾಸ್ತ್ರ, ವಿಷ್ಣುವಿನ ಚಕ್ರ ಮತ್ತು ಶಿವನ ತ್ರಿಶೂಲ ಇತ್ಯಾದಿಯಾಗಿ ಅಸ್ತ್ರಗಳನ್ನು ವಿಶ್ವಾಮಿತ್ರ ಎಸೆದನು. ಆದರೆ ಬ್ರಹ್ಮನ ಮಗನು ಅವುಗಳನ್ನು ತನ್ನ ಗದೆಯ ಅಸ್ತ್ರ ಪ್ರಹಾರಗಳಿಂದ ನುಂಗಿ ಹಾಕಿದನು. ಕೊನೆಗೆ ಬ್ರಹ್ಮಾಸ್ತ್ರವನ್ನು ತೆಗೆದಾಗ ಮಾತ್ರ ದೇವತೆಗಳು ಗಾಬರಿಯಾದರು. ಆದರೂ ವಸಿಷ್ಠನ ಶ್ರೇಷ್ಠ ಬ್ರಾಹ್ಮಣತ್ವದ ರೂಪವಾದ ವಸಿಷ್ಠರ ಮೇಲೆ ಯಾವ ಪರಿಣಾಮ ಬೀರಲಿಲ್ಲ. ಆಗ ಅವರು ಭಯಾನಕ ಸ್ವರೂಪವನ್ನು ತಾಳಿದರು. "ಇಡೀ ದೇಹ ಬೆಂಕಿಯ ಜ್ವಾಲೆಗಳನ್ನು ಚಾಚುತ್ತ, ಬ್ರಾಹ್ಮಣ ಗದೆ ಬೀಸುತ್ತಾ ನಡೆದಂತೆ ಯಮನ ಎರಡನೇ ಅವತಾರದಂತೆ ಕಂಡರು." ಮುನಿಗಳು ಸಮಾಧಾನಪಡಿಸಿದ್ದರಿಂದ ವಸಿಷ್ಠರು ಶಾಂತರಾದರು. ಆದರೆ ವಿಶ್ವಾಮಿತ್ರ ನೋವಿನಿಂದ ನುಡಿದನು. "ಕ್ಷತ್ರಿಯರ ಶಕ್ತಿಗೆ ಧಿಕ್ಕಾರ. ಬ್ರಾಹ್ಮಣನ ಶಕ್ತಿಯೇ ನಿಜವಾದ ಶಕ್ತಿ. ಒಬ್ಬ ಶ್ರೇಷ್ಠ ಬ್ರಾಹ್ಮಣನ ಗದೆ ನನ್ನ ಎಲ್ಲ ಅಸ್ತ್ರಗಳನ್ನು ನಾಶ ಮಾಡಿದೆ." ಹೀಗೆ ಸೋತ ಸಾಮ್ರಾಟನಿಗೆ ಬೇರೆ ದಾರಿಯೇ ಇರಲಿಲ್ಲ. ಬ್ರಾಹ್ಮಣನ ಶ್ರೇಷ್ಠತ್ವವನ್ನು ಮತ್ತು ತನ್ನ ಕೆಳದರ್ಜೆಯನ್ನು ಒಪ್ಪಿಕೊಳ್ಳಲೇಬೇಕು ಅಥವಾ ತಾನೂ ತಪಸ್ಸು ಮಾಡಿ ಬ್ರಾಹ್ಮಣತ್ವದ ಶ್ರೇಷ್ಠ ಮಟ್ಟವನ್ನು, ಪದವಿಯನ್ನು ಪಡೆಯಬೇಕು. ಆಗ ಎರಡನೆಯದನ್ನೇ ಸಾಧಿಸುತ್ತೇನೆ ಎಂದು ಪಣ ತೊಡುತ್ತಾನೆ. "ನನ್ನ ಸೋಲಿನ ಮೇಲೆ ಸಾಕಷ್ಟು ಯೋಚಿಸಲಾಗಿ ನಾನು ಘೋರ ತಪಸ್ಸನ್ನು ಆಚರಿಸಲು ನಿರ್ಧರಿಸಿದ್ದೇನೆ. ಮತ್ತು ಇದರಿಂದ ಬ್ರಾಹ್ಮಣ ತೇಜಸ್ಸನ್ನು, ಶ್ರೇಷ್ಠತೆಯನ್ನು ಪಡೆದೇ ತೀರುತ್ತೇನೆ." ಈ ಹತಾಶ ಮತ್ತು ನೊಂದ ಮನಃಸ್ಥಿತಿಯಲ್ಲಿಯೇ ತನ್ನ ಹೆಂಡತಿಯೊಡನೆ ದಕ್ಷಿಣದ ಕಡೆಗೆ ಪ್ರಯಾಣ ಬೆಳೆಸುತ್ತಾನೆ. "ನಾನು ಸಾಕಷ್ಟು ತಪಶ್ಚರ್ಯ ಮಾಡಿದರೂ ನನ್ನನ್ನು ದೇವತೆಗಳು ರಾಜರ್ಷಿ ಎಂದು ಪರಿಗಣಿಸುತ್ತಾರೆ. ಆದ್ದರಿಂದ ನನ್ನ ಈವರೆಗಿನ ಪ್ರಯತ್ನ ವ್ಯರ್ಥ." ಈ ವಿಚಾರಧಾರೆಯೊಂದಿಗೆ ಬ್ರಾಹ್ಮಣತ್ವವನ್ನು ಸಂಪಾದಿಸಲು ಮತ್ತೆ ಕಷ್ಟತಮ ಮಾರ್ಗವನ್ನು ಆಯ್ಕೆ ಮಾಡಿಕೊಂಡನು.

ಈ ವೇಳೆಗೆ ಅವನ ತಪಸ್ಸು ಈ ಕೆಳಗಿನ ಘಟನಾವಳಿಗಳಿಂದ ಭಂಗವಾಗುವ ಪ್ರಸಂಗಗಳು ಒದಗಿದವು. ಇಕ್ಷ್ವಾಕು ವಂಶದ ಅರಸ ತ್ರಿಶಂಕುವು ಸ್ವರ್ಗ ಪ್ರಾಪ್ತಿಗಾಗಿ ಯಾಗವೊಂದನ್ನು ಯೋಜಿಸಿದನು. ಆದರೆ ವಸಿಷ್ಠರನ್ನು ಆಮಂತ್ರಿಸಿದಾಗ ಇದು ಅಶಕ್ಯವೆಂದು ಸಾರಿದರು. ತ್ರಿಶಂಕು ದಕ್ಷಿಣದಲ್ಲಿ ಪ್ರವಾಸ ಕೈಗೊಂಡನು. ದಾರಿಯಲ್ಲಿ ವಸಿಷ್ಠರ ನೂರು ಮಕ್ಕಳನ್ನು ಅವರ ತಪಸ್ಸಿನ ಅವಧಿಯಲ್ಲಿ ಸಂಧಿಸಿದಾಗ ಅವರ ತಂದೆ ನಿರಾಕರಿಸಿದ ಕಾರ್ಯವನ್ನು ಇವರು ನೆರವೇರಿಸಿಕೊಡಬೇಕೆಂದು ಕೇಳಿಕೊಂಡನು. ಅವರನ್ನು ತುಂಬಾ ಪೂಜ್ಯ ಮತ್ತು ಗೌರವ ಭಾವನೆಯಿಂದ ಸಂಬೋಧಿಸಿ ಈ ರೀತಿ ನುಡಿದನು. "ಇಕ್ಷ್ವಾಕು ವಂಶ ಸದಾಕಾಲ ತನ್ನ ಕುಲಗುರುಗಳನ್ನು ಗೌರವಿಸಿದೆ ಮತ್ತು ಸಂಕಟದಲ್ಲಿ ಸಾಂತ್ವನ ಮತ್ತು ಮಾರ್ಗದರ್ಶನವನ್ನು ಅವರಿಂದ ಬಯಸಿದೆ. ಆದ್ದರಿಂದ ವಸಿಷ್ಠರ ನಂತರ ನಿಮ್ಮನ್ನೇ ಈ ಕೆಲಸ ಕೂಡಿದೆ" ಎಂದಾಗ ಕುಪಿತ ಋಷಿ ಕುಮಾರರು ಅರಸನನ್ನು ಚೆನ್ನಾಗಿ ತೆಗಳಿದರು. "ಎಲೈ ಮೂರ್ಖನೆ, ಸತ್ಯಬೋಧನೆಯ ಆ ಗುರುಗಳೇ ನಿನ್ನ ಕಾರ್ಯ ನಿರಾಕರಿಸಿದ್ದಾರೆ. ಅವರ ಅಭಿಪ್ರಾಯ ಮನ್ನಿಸದೆ ಮತ್ತೆ ಈ ಬೇರೆ ಪ್ರಯತ್ನ ಏಕೆ ಮಾಡುತ್ತಿರುವೆ? ಇಕ್ಷ್ವಾಕು ವಂಶಜರಿಗೆ ಕುಲಗುರುವಿನ ಮಾತೇ ಮುಖ್ಯವಾದದ್ದಾಗಿರಬೇಕು. ಅದನ್ನು ಯಾರೂ ಮೀರಬಾರದು. ದಿವ್ಯ ಋಷಿಗಳಾದ ವಸಿಷ್ಠರೇ 'ಸಾಧ್ಯವಾಗದ್ದು' ಎಂದು ಅಪ್ಪಣೆ ಕೊಡಿಸಿದ ಮೇಲೆ ಇಂತಹ ಯಾಗವನ್ನು ಮಾಡಲು ನೀನು ಏಕೆ ಹವಣಿಸುತ್ತಿ? ನೀನು ಮೂರ್ಖನಿರುವಿ. ನಮ್ಮನ್ನು ಕೇಳಿದರೆ ನಿನ್ನ ರಾಜ್ಯಕ್ಕೆ ತಿರುಗಿಹೋಗು. ವಸಿಷ್ಠರೇ ಮುಖ್ಯವಾಗಿದ್ದುಕೊಂಡು ನಡೆಸಿಕೊಡಬೇಕಾದ ಈ ಯಾಗಕ್ಕೆ ನಾವು ಅದೆಂತು ಬಂದೇವು? ಮತ್ತು ಅದರಿಂದ ಅವರಿಗೆ ಅಗೌರವ ಸೂಚಿಸದಂತಾಗುವುದಿಲ್ಲವೇ?" ಎಂದರು. ಆಗ ತ್ರಿಶಂಕು ಹೀಗೆ ತಂದೆ ಮತ್ತು ಮಕ್ಕಳು ಕೂಡಿಯೇ ನಿರಾಕರಿಸಿದ ಈ ಸಂದರ್ಭದಲ್ಲಿ ಏನು

ಮಾಡಬೇಕೆಂದು ಯೋಚಿಸಹತ್ತಿದ್ದನು. ಇದನ್ನು ತಿಳಿದ ಅವರು ಅವನನ್ನು ಚಾಂಡಾಲನಾಗು ಎಂದು ಶಪಿಸಿದರು. ಅದರ ಪರಿಣಾಮವಾಗಿ ಅವನ ರೂಪ ಬದಲಾಗಿ ಚಾಂಡಾಲನಾಗಿ ಪರಿವರ್ತಿತನಾದ. ಅವನು ವಿಶ್ವಾಮಿತ್ರನನ್ನು ಭೇಟಿಯಾದನು (ಆಗ ವಿಶ್ವಾಮಿತ್ರನು ದಕ್ಷಿಣದಲ್ಲಿ ಇದ್ದನು) ಮತ್ತು ತನ್ನ ಗುಣ ಗೌರವಗಳನ್ನು ಹೇಳಿಕೊಂಡು ತನ್ನ ಈ ದುರ್ದೈವದ ಬಗೆಗೆ ಹೇಳಿಕೊಂಡನು. ಇದರಿಂದ ಕನಿಕರಗೊಂಡ ವಿಶ್ವಾಮಿತ್ರನು, ತಾನು ಯಾಗವನ್ನು ನಡೆಸಿಕೊಡುವೆನು ಎಂದು ಆಶ್ವಾಸನವಿತ್ತನು. ಅಲ್ಲದೇ, ಚಾಂಡಾಲನ ಸ್ವರೂಪದಲ್ಲಿಯೇ ಸ್ವರ್ಗಕ್ಕೆ ಕಳಿಸುವೆನು ಎಂದು ಹೇಳಿದನು. 'ಸ್ವರ್ಗವು ಈಗ ನಿನ್ನ ಕೈಯಲ್ಲಿಯೇ ಇದೆ' ಎನ್ನುತ್ತಾ ಸಮಾಧಾನ ಮಾಡಿದನು. ಎಲ್ಲ ಸಿದ್ಧತೆಗಳು ಪ್ರಾರಂಭವಾಗಲಿ ಎಂದು ಹೇಳಿದ ಅವನು ವಸಿಷ್ಠರನ್ನೂ ಉಳಿದ ಋಷಿಗಳೊಂದಿಗೆ ಆಹ್ವಾನಿಸು ಎಂದು ಆದೇಶಿಸಿದನು. ಇದಕ್ಕೆ ವಿಶ್ವಾಮಿತ್ರರು "ಎಲ್ಲ ಕಡೆಯಿಂದ ಬ್ರಾಹ್ಮಣರು, ಋಷಿಗಳು ಆಗಮಿಸಿದ್ದಾರೆ. ಆದರೆ ವಸಿಷ್ಠರು ಮತ್ತು ಅವರ ಮಕ್ಕಳು ಬಂದಿಲ್ಲ." ಕೋಪಾವಿಷ್ಟರಾದ ವಸಿಷ್ಠರ ನೂರು ಮಕ್ಕಳು ಹೀಗೆ ನುಡಿದರು. "ಚಾಂಡಾಲನಿಂದ ನಡೆಯುವ ಈ ಯಜ್ಞಕ್ಕೆ ಕ್ಷತ್ರಿಯನಾದ ವಿಶ್ವಾಮಿತ್ರ ಪ್ರಧಾನ ಪುರೋಹಿತ. ಅದು ಹೇಗೆ ದೇವತೆಗಳು ಈ ಚಾಂಡಾಲ ಮತ್ತು ಕ್ಷತ್ರಿಯನ ಕಡೆಯಿಂದ ಆಹುತಿಯನ್ನು ಸ್ವೀಕರಿಸುತ್ತಾರೆ? ಚಾಂಡಾಲನ ಕೈಯಿಂದ ಸ್ವೀಕರಿಸಿದ ಅನ್ನವನ್ನು ಸ್ವೀಕರಿಸಿ ಅದೆಂತು ಬ್ರಾಹ್ಮಣರು ಸ್ವರ್ಗಪ್ರಾಪ್ತಿ ಮಾಡಿಕೊಳ್ಳುತ್ತಾರೆ.?" ಈ ಸೊಕ್ಕಿನ ಮಾತುಗಳನ್ನು ಕೇಳಿದ ವಿಶ್ವಾಮಿತ್ರ ಕೋಪದಿಂದ ವಸಿಷ್ಠರ ನೂರು ಮಕ್ಕಳನ್ನು ಶಪಿಸಿದ ತಕ್ಷಣ ಅವರು ಭಸ್ಮವಾಗಿ ಪರಿವರ್ತಿತರಾಗಿ ಮತ್ತೆ ಪುನರ್ಜನ್ಮದಲ್ಲಿ ಜಾತಿಬಾಹಿರರಾಗಿ ಏಳುನೂರು ಸಲ ಜನ್ಮ ಪಡೆದರು ಮತ್ತು ಮಹೋದಯನೇ ನಿಷಾದನಾಗಿ ಜನ್ಮತಾಳಿದನು. ತನ್ನ ಶಾಪದ ಪ್ರಭಾವದ ಪರಿಣಾಮ ಕಂಡ ವಿಶ್ವಾಮಿತ್ರ ತ್ರಿಶಂಕುವನ್ನು ಹೊಗಳಿ ಯಜ್ಞ ಮುಂದುವರಿಯಲಿ ಎಂದು ಆಜ್ಞೆ ಇತ್ತನು. ಅಲ್ಲಿ ಸೇರಿದ ಬ್ರಾಹ್ಮಣರು ಈ ಮಾತು ಒಪ್ಪಿ ಭೀತರಾಗಿಯೇ ಕೆಲಸ ಮುಂದುವರಿಸಿದರು. ವಿಶ್ವಾಮಿತ್ರ ತಾನೇ ಯಾಜಕನಾಗಿ ಉಳಿದ ಋಷಿಗಳು ಋತ್ವಿಕರಾಗಿ ಯಾಗದ ಕೆಲಸ ಪ್ರಾರಂಭಿಸಿದರು. ಯಾಗದ ಆಹುತಿಯನ್ನು ಸ್ವೀಕರಿಸಬೇಕೆಂದು ದೇವತೆಗಳನ್ನು ವಿಶ್ವಾಮಿತ್ರನು ಆಹ್ವಾನಿಸಿದಾಗ ಅವರು ಬರದಿದ್ದನ್ನು ಕಂಡು ಕೋಪಾವಿಷ್ಟನಾಗಿ ತ್ರಿಶಂಕುವಿಗೆ ಹೀಗೆ ನುಡಿದನು: "ಎಲೈ ಸಾಮ್ರಾಟನೇ, ತನ್ನ ತಪಸ್ಸಿನ ಪ್ರಭಾವದಿಂದ ಗಳಿಸಿದ ಶಕ್ತಿಯಿಂದ ನಾನು ನಿನಗೆ ಸ್ವರ್ಗಪ್ರಾಪ್ತಿಯಾಗುವಂತೆ ಮಾಡುತ್ತೇನೆ. ನೀನು ನಿನ್ನ ಲೌಕಿಕ ಶರೀರ ಬಿಟ್ಟು ಸ್ವರ್ಗೀಯ ಆನಂದವನ್ನು ಪಡೆ. ನನ್ನ ತಪಸ್ಸಿನ ಸಿದ್ಧಿಯೂ ಇದಾಗುತ್ತದೆ" ಎಂದನು. ಮುನಿಗಳ ಎದುರೇ ತ್ರಿಶಂಕು ಸ್ವರ್ಗಕ್ಕೆ ತೆರಳಿದನು. ಆದರೆ ಇಂದ್ರನು ಅವನನ್ನು ತಿರುಗಿ ತೆರಳು ಎಂದು ಹೇಳಿದನು. ಹಿರಿಯ ವಸಿಷ್ಠ ಮೊದಲಾದ ಗುರುವೃಂದದಿಂದ ತಿರಸ್ಕರಿಸಲ್ಪಟ್ಟ ಅವನು ಸ್ವರ್ಗಕ್ಕೆ ಅರ್ಹನಲ್ಲ ಎಂದು ಹೇಳಿ ತಲೆಕಳಗೆ ಮಾಡಿ ನೀನು ಪೃಥ್ವಿಗೆ ಬಿದ್ದುಹೋಗು ಎಂದು ಅಂದಾಗ ಅದರಂತೆ ತ್ರಿಶಂಕು ಕೆಳಗೆ ಬೀಳುತ್ತಾ ಹೋಗುತ್ತಿದ್ದನು. ತನ್ನ ಗುರುಗಳಾದ ವಿಶ್ವಾಮಿತ್ರನನ್ನು ಸಹಾಯ ಕೋರುತ್ತಾ ಜೋರಾಗಿ ಕೂಗುತ್ತ ನಡೆದನು. ಇದನ್ನು ಕೇಳಿದ ವಿಶ್ವಾಮಿತ್ರ ಅಲ್ಲಿಯೇ ನಿಲ್ಲು ಎಂದು ಹೇಳಿದನು. ತನ್ನ ದೈವೀಜ್ಞಾನದಿಂದ ಮತ್ತು ತಪಸ್ಸಿನ ಪ್ರಭಾವದಿಂದ, ಇನ್ನೊಬ್ಬ ಪ್ರಜಾಪತಿಯಂತೆ, ದಕ್ಷಿಣದ ಆಕಾಶಭಾಗದಲ್ಲಿ ಸಪ್ತರ್ಷಿಗಳನ್ನು ಸೃಷ್ಟಿಸಿದನು. ಮುಂದುವರಿದು ಮತ್ತೊಂದು ನಕ್ಷತ್ರಮಾಲೆಯನ್ನು ನಿರ್ಮಿಸಿದನು. "ನಾನು ಇನ್ನೊಬ್ಬ ಇಂದ್ರನನ್ನೇ ಸೃಷ್ಟಿಸುತ್ತೇನೆ ಅಥವಾ ಇಂದ್ರನೇ ಇರದ ಸೃಷ್ಟಿ ನಿರ್ಮಿಸುತ್ತೇನೆ" ಎಂದೆಲ್ಲ ಕೋಪಾವಿಷ್ಟನಾಗಿ ನುಡಿಯುತ್ತ ಎಲ್ಲ ದೇವತೆ ಮತ್ತು ಋಷಿಮುನಿಗಳನ್ನು ಆಹ್ವಾನಿಸಿದನು. ವಿಶ್ವಾಮಿತ್ರನ ಈ ಎಚ್ಚರಿಕೆಯ ಮಾತುಗಳನ್ನು ಕೇಳಿದ ದೇವತೆಗಳು ಒಪ್ಪಂದದ ಧ್ವನಿಯಲ್ಲಿ ಹೀಗೆ ನುಡಿದರು : "ಅವನನ್ನು ಪೂಜ್ಯ ವಸಿಷ್ಠರೇ ತಿರಸ್ಕರಿಸಿದ್ದರಿಂದ ಮತ್ತು

ಶಾಪಕೊಟ್ಟಿದ್ದರಿಂದ ಸಜೀವವಾಗಿ ಸ್ವರ್ಗದಲ್ಲಿ ಸೇರಿಸುವುದು ಸಾಧ್ಯವಿಲ್ಲ. ಅವನನ್ನು ಶುದ್ಧೀಕರಣವಿಲ್ಲದೇ ಅನುಮತಿಸುವುದು ಅಸಾಧ್ಯ." ಆದರೆ ವಿಶ್ವಾಮಿತ್ರನು ತಾನು ಈಗಾಗಲೇ ತನ್ನ ಶಿಷ್ಯ ತ್ರಿಶಂಕುವಿಗೆ ಮಾತು ಕೊಟ್ಟಿರುವುದರಿಂದ ದೈಹಿಕವಾಗಿ ತ್ರಿಶಂಕುವಿಗೆ ಸ್ವರ್ಗದಲ್ಲಿರಲು ಅನುಮತಿ ಕೊಡಬೇಕೆಂದು ಮತ್ತು ತಾನು ಸೃಷ್ಟಿಸಿದ ನಕ್ಷತ್ರ ಮಾಲೆಗಳು ಅನಂತ ಕಾಲ ಸೃಷ್ಟಿಯಲ್ಲಿರುವಂತಾಗಬೇಕೆಂದು ಕೇಳಿಕೊಂಡನು. ದೇವತೆಗಳು ಈ ಮಾತಿಗೆ ಒಪ್ಪಿ "ತ್ರಿಶಂಕು ಅರ್ಧ ಆಕಾಶದಲ್ಲಿ ಮತ್ತು ಅರ್ಧ ಸ್ವರ್ಗದಲ್ಲಿ ತಲೆಕೆಳಗಾಗಿ ಇರಲಿ ಮತ್ತು ಅವನು ಪ್ರಕಾಶಮಾನವಾಗಿರಲಿ" ಎಂದು ಹೇಳಿದರು. ಇದರಿಂದ ಎರಡೂ ಮಾತುಗಳು ನಡೆದಂತಾದವು ಎಂದರು. ವಿಶ್ವಾಮಿತ್ರ ಈ ರೀತಿ ನಿರ್ಣಯವಾದ ಜಗಳಾಟವನ್ನು ಈ ಒಪ್ಪಂದದಿಂದ ಒಪ್ಪಿಕೊಳ್ಳಬೇಕಾಯಿತು.

ಹರಿವಂಶದಲ್ಲಿ ವಿವರಿಸಿದ ತ್ರಿಶಂಕುವಿನ ಘಟನಾವಳಿಗಳಿಗೂ ಇದಕ್ಕೂ ಅಂತರವಿದೆ. ಆದರೆ ಅದು ಏನೇ ಇದ್ದರೂ ಇದು ವಿಶ್ವಾಮಿತ್ರ ಮತ್ತು ವಸಿಷ್ಠರ ತಿಕ್ಕಾಟದ ಕಥೆಯನ್ನು ಹೇಳುತ್ತದೆ.

"ಎಲ್ಲ ದೇವತೆಗಳೂ ಋಷಿಗಳೂ ಯಾಗದ ನಂತರ ತೆರಳಿದಾಗ ತನ್ನ ಭಕ್ತರಿಗೆ ವಿಶ್ವಾಮಿತ್ರ, ಇದರಿಂದ ನಮ್ಮ ತಪಸ್ಸಿಗೆ ಬಹಳ ಭಂಗ ಬಂದಂತಾಯಿತು. ಆದ್ದರಿಂದ ದಕ್ಷಿಣದಿಂದ ಬೇರೆ ದಿಕ್ಕಿಗೆ ನಮ್ಮ ತಪಸ್ಸಿಗಾಗಿ ತೆರಳುವೆವು" ಎನ್ನುತ್ತ ಪಶ್ಚಿಮದ ಕಾಡುಗಳಿಗೆ ತೆರಳಿ ಹೊಸದಾಗಿ ತಪಸ್ಸು ಆಚರಿಸಿದನು. ಈ ಹಂತದಲ್ಲಿ ಕಥೆ ಮತ್ತೆ ಇನ್ನೊಂದು ಉಪಕಥೆಯನ್ನು ಪರಿಚಯಿಸುತ್ತದೆ. ಅದುವೆ ಅಯೋಧ್ಯೆಯ ಅರಸನಾದ ಅಂಬರೀಷನದು. ಅವನು ರಾಮಾಯಣವು ತಿಳಿಸುವಂತೆ ಇಕ್ಷ್ವಾಕು ವಂಶದಲ್ಲಿ ತ್ರಿಶಂಕುವಿನಿಂದ ಇಪ್ಪತ್ತೆರಡನೆಯ ಪೀಳಿಗೆಯವನು. ವಿಶ್ವಾಮಿತ್ರ ಮಾತ್ರ ಈ ಎರಡೂ ಅರಸರ ಸಮಕಾಲೀನನು ಎಂಬಂತೆ ಪ್ರತಿನಿಧಿಸಲಾಗಿದೆ. ಅಂಬರೀಷನು ಯಾಗವನ್ನು ಮಾಡುವಾಗ ಅವನ ಯಾಗವನ್ನು ಪ್ರವೇಶಿಸಿ ಬಲಿಯನ್ನು ಇಂದ್ರನು ಎತ್ತಿಕೊಂಡು ಹೋದನು. ಈ ಅಮಂಗಳ ಘಟನೆಗೆ ಕಾರಣ ಅರಸನ ದುರ್ಬಲ ಆಡಳಿತವೆಂದು ಪುರೋಹಿತರು ಅಭಿಪ್ರಾಯಪಟ್ಟರಂತೆ. ಮಹಾನ್ ಪಶ್ಚಾತ್ತಾಪವೆಂದು ಮನುಷ್ಯನನ್ನು ಬಲಿಕೊಡಬೇಕಾಗುತ್ತದೆ ಎಂದರು. ಅಂಬರೀಷ ಕೊನೆಗೆ ಬ್ರಾಹ್ಮಣ ಋಷಿಯಾದ ಭೃಗುವಿನ ವಂಶಜ ಋಚೀಕ ಹತ್ತಿರ ಬಂದು, ಅವನ ಮಗನೊಬ್ಬನನ್ನು ಬಲಿಕೊಡಲು ಮಾರಾಟದಲ್ಲಿ ಮೂರು ಆಕಳಿನ ಬೆಲೆಗೆ ಕೊಡಲು ಕೇಳಿಕೊಂಡನು. ಋಚೀಕ ತನ್ನ ಹಿರಿಯ ಮಗನನ್ನು ಮತ್ತು ಅವನ ಹೆಂಡತಿ ಕಿರಿಯನನ್ನು ತಮಗೆ ಇಷ್ಟವಾದ್ದರಿಂದ ಕೊಡಲು ನಿರಾಕರಿಸಿದರು. ಎರಡನೇ ಮಗನಾದ ಶುನಶ್ಯೇಫನನ್ನು ಸ್ವೀಕರಿಸಲಾಯಿತು. ಆಗ ನೂರು ಹಸುಗಳು, ಲಕ್ಷ ಲಕ್ಷ ಚಿನ್ನದ ವರಹಗಳು, ಅಸಂಖ್ಯಾತ ಒಡವೆಗಳನ್ನು ಕೊಟ್ಟು ಶುನಶ್ಯೇಫನನ್ನು ಒಯ್ಯಲಾಯಿತು. ದಾರಿಯಲ್ಲಿ ಪುಷ್ಕರ ಸರೋವರದ ಬಳಿ ತನ್ನ ಸೋದರಮಾವನಾದ ವಿಶ್ವಾಮಿತ್ರನನ್ನು ನೋಡಿದ ಶುನಶ್ಯೇಫನು ಅವನ ತೆಕ್ಕೆಗೆ ಬಿದ್ದು ತನ್ನ ಗೋಳು ಹೇಳಿ, ಅಸಹಾಯಕತೆಯನ್ನು ವಿವರಿಸಿ, ತನ್ನನ್ನು ಇದರಿಂದ ಮುಕ್ತಗೊಳಿಸೆಂದು ಗೋಗರೆದನು. ವಿಶ್ವಾಮಿತ್ರ ಅವನನ್ನು ಸಮಾಧಾನಗೊಳಿಸಿದನು ಮತ್ತು ತನ್ನ ಮಕ್ಕಳನ್ನು ಅವನ ಸ್ಥಾನದಲ್ಲಿ ಹೋಗಲು ಹೇಳಿದಾಗ ಅವರು ಅದನ್ನು ಒಪ್ಪಿಕೊಳ್ಳಲಿಲ್ಲ. ಅಷ್ಟೇ ಅಲ್ಲ, ತುಂಬಾ ಜೋರಿನಿಂದ ಮಾತನಾಡಿದರು. "ನೀನು ನಿನ್ನ ಮಕ್ಕಳನ್ನು ಬಲಿಕೊಟ್ಟು ಬೇರೆಯವರ ಮಗನನ್ನು ಅದೆಂತು ರಕ್ಷಿಸಲು ಹೊರಟಿರುವೆ? ಇದು ತಪ್ಪೆಂದು ನಮ್ಮ ಅನಿಸಿಕೆ." ಆದರೆ ವಿಶ್ವಾಮಿತ್ರ ಈ ಪ್ರತಿಕ್ರಿಯೆಯಿಂದ ಕೋಪಾವಿಷ್ಟನಾಗಿ "ನನ್ನ ಮಕ್ಕಳು ವಸಿಷ್ಠರ ಮಕ್ಕಳ ಹಾಗೆ ಕೆಳಜಾತಿಯಲ್ಲಿ ಹುಟ್ಟಲಿ, ನಾಯಿಯ ಮಾಂಸ ತಿನ್ನಲಿ. ಸಾವಿರವರುಷ ಇದೇ ಜನ್ಮ ಅವರಿಗಿರಲಿ" ಎಂದು ಶಪಿಸಿದನು ಮತ್ತು ಶುನಶ್ಯೇಫನಿಗೆ "ನಿನ್ನನ್ನು ಬಲಿಪೀಠಕ್ಕೇರಿಸಿ ಸಿದ್ಧಪಡಿಸಿದಾಗ ಅಗ್ನಿಯನ್ನು ಕುರಿತು ಈ ಎರಡು ದೈವೀ ಶ್ಲೋಕಗಳಿಂದ ಪ್ರಾರ್ಥಿಸಿಕೋ. ಆಗ ನಿನ್ನ ಇಚ್ಛೆ ಪೂರ್ಣವಾಗುವುದು.'' ಎಂದು ಹೇಳಿದನು. ಅದರಂತೆ

ಆ ಶ್ಲೋಕಗಳನ್ನು ಹೊಂದಿ ಅಂಬರೀಷನ ಜೊತೆಗೆ ಶುನಶ್ಯೇಫನು ಮುಂದುವರಿದನು. ಬಲಿಪೀಠದ ಮೇಲೆ ಕೆಂಪುಬಟ್ಟೆ ಧರಿಸಿ ಇನ್ನೇನು ಬಲಿಕೊಡುವ ವೇಳೆಯಲ್ಲಿ ಸರಿಯಾಗಿ ಇಂದ್ರ ಮತ್ತು ವಿಷ್ಣುವನ್ನು ಆ ಎರಡು ರಹಸ್ಯ ಶ್ಲೋಕಗಳಿಂದ ಸ್ತುತಿಸಿದನು. ಸಹಸ್ರ ಕಣ್ಣುಗಳ ಇಂದ್ರನು ಇದರಿಂದ ಸುಪ್ರೀತನಾಗಿ ಅವನಿಗೆ ದೀರ್ಘ ಆಯುಸ್ಸನ್ನು ದಯಪಾಲಿಸಿದನು. ಅರಸ ಅಂಬರೀಷನು ತಾನು ನೆರವೇರಿಸಿದ ಯಾಗದಿಂದ ಸಾಕಷ್ಟು ಸವಲತ್ತುಗಳನ್ನು ಪಡೆದನು. ವಿಶ್ವಾಮಿತ್ರ ಮಾತ್ರ ತನ್ನ ತಪಸ್ಸನ್ನು ಸಾವಿರ ವರ್ಷಗಳವರೆಗೆ ಮುಂದುವರಿಸಿದನು.

ಈ ವೇಳೆಗೆ ಸರಿಯಾಗಿ ದೇವತೆಗಳು ಪ್ರತ್ಯಕ್ಷರಾಗಿ ಅವನಿಗೆ ಋಷಿಯ ಸ್ಥಾನವನ್ನು ದಯಪಾಲಿಸಿದರು. ಆದರೆ ಇಷ್ಟಕ್ಕೆ ಅವನು ಸಮಾಧಾನ ಹೊಂದದೇ ಮತ್ತೆ ತಪಸ್ಸನ್ನು ಆಚರಿಸಿದನು. ಆಗ ಮೇನಕೆ ಎಂಬ ಅಪ್ಸರೆ ಪುಷ್ಕರ ಸರೋವರದಲ್ಲಿ ಸ್ನಾನ ಮಾಡಲು ಬಂದಾಗ ಅವಳ ಸೌಂದರ್ಯಕ್ಕೆ ಮೋಹಿತನಾದ ವಿಶ್ವಾಮಿತ್ರ ತನ್ನ ತಪಸ್ಸಿಗೆ ಭಂಗ ತಂದುಕೊಂಡು ಅವಳೊಡನೆ ಹತ್ತು ವರ್ಷ ಆಶ್ರಮದಲ್ಲಿ ಜೀವನ ನಡೆಸಿದಾಗ ಒಮ್ಮೆಲೇ ಮೇನಕೆಯನ್ನು ತನ್ನ ತಪಸ್ಸನ್ನು ಭಂಗಮಾಡಲೆಂದೇ ದೇವತೆಗಳು ಹೂಡಿದ ಸಂಚು ಎಂದು ಅರ್ಥವಾಗಿ ಅವಳನ್ನು ತಿರಸ್ಕರಿಸಿ ಮತ್ತೆ ಘೋರ ತಪಸ್ಸಿಗಾಗಿ ಕೌಶಿಕೀ ನದಿಯ ದಂಡೆಗೆ ತೆರಳಿ ಸಹಸ್ರ ವರ್ಷ ತಪಸ್ಸನ್ನು ಆಚರಿಸಿದನು. ಕೊನೆಗೆ ದೇವತೆಗಳು ಎಚ್ಚೆತ್ತು ಅವನ ತೇಜಸ್ಸನ್ನು ಮನ್ನಿಸಿ ಅವನಿಗೆ ಮಹರ್ಷಿ ಪದವಿಯನ್ನು ದಯಪಾಲಿಸಿದರು. ಆದರೆ ಬ್ರಹ್ಮನು ಅವನಿಗೆ "ಇನ್ನೂ ನೀನು ಎಲ್ಲ ಇಂದ್ರಿಯಗಳನ್ನು ಸಂಪೂರ್ಣವಾಗಿ ಜಯಿಸಬೇಕು" ಎಂದು ತಿಳಿಸಿದನು. ಅದನ್ನು ಕೇಳಿದ ವಿಶ್ವಾಮಿತ್ರ ಮತ್ತೆ ಇನ್ನೂ ಘೋರವಾದ ತಪಸ್ಸನ್ನು ಆಚರಿಸಲೆಂದು ಒಂದೇ ಕಾಲಿನ ಮೇಲೆ ನಿಂತು ಎರಡು ಕೈಗಳನ್ನು ಮೇಲಕ್ಕೆ ಚಾಚಿ ಯಾವುದೇ ಸಹಾಯವಿಲ್ಲದೇ ಗಾಳಿಮಳೆ ಲೆಕ್ಕಿಸದೇ ಗಾಳಿಯನ್ನೇ ಆಹಾರವಾಗಿ ಸೇವಿಸಿ ಎಲ್ಲ ಋತುಗಳ ಹವಾಮಾನಕ್ಕೆ ಶರೀರವನ್ನು ಒಡ್ಡಿ ಸಹಸ್ರ ವರ್ಷಗಳವರೆಗೆ ಕಠಿಣತಮ ತಪಸ್ಸನ್ನು ಆಚರಿಸಿದನು. ಈ ರೀತಿ ವಿಶ್ವಾಮಿತ್ರ ಗಳಿಸುತಿದ್ದ ಅಪಾರ ಶಕ್ತಿಯನ್ನು, ತೇಜಸ್ಸನ್ನು ಕಂಡು ಕಳವಳಗೊಂಡು ರಂಭೆಯನ್ನು ತಪಸ್ಸು ಭಂಗಮಾಡಲು ಕಳುಹಿಸಲು ಯೋಚಿಸಿದರು. ಆದರೆ ಮೊದಲು ಆ ಅಪ್ಸರೆ ಋಷಿಯ ಕ್ರೋಧವನ್ನು ಎದುರಿಸಲು ಭಯಗೊಂಡು ನಿರಾಕರಿಸಿದಳು. ಆದರೆ ಇಂದ್ರನು ಬಹಳ ಸಲ ಆಜ್ಞಾಪಿಸಿದ್ದರಿಂದ ಒಪ್ಪಿಕೊಂಡಳು. ಇಂದ್ರನು, ತಾನು ಮತ್ತೆ ಪ್ರೇಮದೇವತೆಯಾದ ಕಂದರ್ಪ ಕೂಡಿ ವಿಶ್ವಾಮಿತ್ರನನ್ನು ಅವಳು ತಪಸ್ಸಿನಿಂದ ಭಂಗಪಡಿಸಲು ಸಹಾಯ ಮಾಡುವುದಾಗಿ ಹೇಳಿದನು. ಆದರೆ ಇದರ ಸುಳಿವು ಸಿಕ್ಕ ವಿಶ್ವಾಮಿತ್ರ ಕೋಪಿಷ್ಠನಾಗಿ ರಂಭೆಯನ್ನು ಸಾವಿರಾರು ವರ್ಷಗಳವರೆಗೆ ಕಲ್ಲಾಗು ಎಂದು ಶಪಿಸಿದನು. ಹೀಗಾಗಿ ಎಲ್ಲ ಇಂದ್ರಿಯಗಳನ್ನು ಜಯಿಸಿದರೂ ಕೋಪಕ್ಕೇ ಬಲಿಯಾದದ್ದರಿಂದ ಇದುವರೆಗೆ ಗಳಿಸಿದ ತಪಶ್ಶಕ್ತಿಯನ್ನು ಕಳೆದುಕೊಂಡು ಮತ್ತೆ ಘೋರವಾದ ತಪಸ್ಸಿಗಾಗಿ ಹಿಮಾಲಯವನ್ನು ಬಿಟ್ಟು ಪಶ್ಚಿಮಕ್ಕೆ ತೆರಳಿದನು. ನೂರು ವರ್ಷಗಳವರೆಗೆ ಉಸಿರಾಟವನ್ನು ಬಿಟ್ಟು, ದೇಹ ಒಣಗಿದರೂ ಬ್ರಹ್ಮತ್ವ ಪದವಿ ಸಿಗುವವರೆಗೆ ತಪಸ್ಸನ್ನಾಚರಿಸಿ ಸಿದ್ಧಿಪಡೆದು ಕೊನೆಕೊನೆಗೆ ಒಮ್ಮೆ ತಾನೇ ಸಿದ್ಧಪಡಿಸಿದ ಆಹಾರವನ್ನು ಇನ್ನೇನು ತೆಗೆದುಕೊಳ್ಳಬೇಕೆಂದುಕೊಂಡಾಗ ಇಂದ್ರನು ಬ್ರಾಹ್ಮಣನ ರೂಪದಲ್ಲಿ ಬಂದು ಆ ಆಹಾರವನ್ನು ಕೇಳಿದನು. ಕೋಪವನ್ನು ಜಯಿಸಿದ್ದ ವಿಶ್ವಾಮಿತ್ರ ಅದನ್ನು ಸಂತೋಷದಿಂದ ಕೊಟ್ಟನು. ಅವನ ತಪಃಪ್ರಭಾವದಿಂದ ಉಸಿರನ್ನೇ ನಿಲ್ಲಿಸಿದ ಅವನ ತಲೆಯಿಂದ ಹೊರಟ ಹೊಗೆ ಮೂರು ಲೋಕಗಳನ್ನು ನಡುಗಿಸಿತು. ಆಗ ದೇವತೆಗಳು, ಮುನಿಗಳು, ದೇವೇಂದ್ರನನ್ನು ಕುರಿತು ಹೀಗೆ ಹೇಳಿದರು : "ಯಾವುದೇ ರೀತಿಯಲ್ಲಿ ಮಹರ್ಷಿ ವಿಶ್ವಾಮಿತ್ರನ ಪ್ರಯತ್ನವನ್ನು ನಾವು ವಿಫಲಗೊಳಿಸದೇ ಹೋದೆವು. ಒಂದು ವೇಳೆ

ಅವನಿಗೆ ಬ್ರಹ್ಮತ್ವ ಪ್ರಾಪ್ತಿಯಾದರೆ ಅವನು ತನ್ನ ತಪಸ್ಸಿನ ಪ್ರಭಾವದಿಂದ ಮೂರು ಲೋಕಗಳನ್ನು ನಾಶಪಡಿಸಬಲ್ಲ. ಎಲ್ಲೆಡೆಗೆ ಕೋಲಾಹಲ ಉಂಟಾಗಬಹುದು. ಮಾನವಲೋಕ ನಾಸ್ತಿಕವಾಗುವ ಸಾಧ್ಯತೆಯುಂಟು. ಆದ್ದರಿಂದ ಹೇಗಾದರೂ ಮಾಡಿ ಅವನನ್ನು ಒಲಿಸಿಕೊಳ್ಳಬೇಕು. ಆಗ ಇಂದ್ರನು ವಿಶ್ವಾಮಿತ್ರನನ್ನು ಸಂಬೋಧಿಸುತ್ತ "ಎಲೈ ಮಹರ್ಷಿಯೇ, ನಿನ್ನ ಘೋರ ತಪಸ್ಸಿಗೆ ಮೆಚ್ಚಿ ನಿನಗೆ ಬ್ರಹ್ಮರ್ಷಿ ಪದವಿ ದಯಪಾಲಿಸುತ್ತೇನೆ ಮತ್ತು ನೀನು ಚಿರಾಯುವಾಗು." ಆಗ ವಿಶ್ವಾಮಿತ್ರನು "ನನಗೆ ಬ್ರಹ್ಮತ್ವ ಪ್ರಾಪ್ತಿಯಾಗಿದ್ದರೆ 'ಓಂಕಾರ' ಶಬ್ದ ಮತ್ತು 'ಸ್ವಾಹಾಕಾರ' (ಯಜ್ಞದಲ್ಲಿ ಆಹುತಿ ಕೊಡುವ ಮಂತ್ರ), ವೇದಗಳು ನನ್ನ ಶಕ್ತಿಯನ್ನು ಗುರುತಿಸಲಿ. ಬ್ರಹ್ಮನ ಮಗನಾದ ವಸಿಷ್ಠ, ಕ್ಷಾತ್ರ ವೇದದಲ್ಲಿ ಶ್ರೇಷ್ಠನಾದವ, ನನ್ನ ಬ್ರಹ್ಮತ್ವವನ್ನು ಒಪ್ಪಿ ಗೌರವಿಸಲಿ. ಆಗ ವಸಿಷ್ಠ ಉಪಾಯವಿಲ್ಲದೇ ಕೊನೆಗೆ ವಿಶ್ವಾಮಿತ್ರನ ಈ ಕರಾರುಗಳನ್ನು ಒಪ್ಪಿಕೊಳ್ಳಬೇಕಾಯಿತು. ವಿಶ್ವಾಮಿತ್ರನೂ ಅವನ ಅರ್ಹತೆಗೆ ಸಲ್ಲಿಸಬೇಕಾದ ಗೌರವವನ್ನು ಅರ್ಪಿಸಿದನು.

ಕ್ಷತ್ರಿಯರಿಂದ ಬ್ರಾಹ್ಮಣರ ಹತ್ಯೆಯಾದುದು ಇನ್ನೊಂದು ಘಟನೆ. ಮಹಾಭಾರತದ ಆದಿಪರ್ವದಲ್ಲಿ ಇದರ ವಿವರಗಳು ಈ ಕೆಳಗಿನಂತಿವೆ :

ಕೃತವೀರ್ಯ ಎಂಬ ಅರಸನಿದ್ದನು. ಅವನ ಕುಲಗುರುಗಳಾದ ಭೃಗುವಿಗೆ ಸಾಕಷ್ಟು ಧನಕನಕಗಳನ್ನು ದಯಪಾಲಿಸಿದ್ದನು. ಅವನು ಸ್ವರ್ಗಕ್ಕೆ ತೆರಳಿದ ನಂತರ ಅವನ ವಂಶಜರಿಗೆ ಹಣದ ಆವಶ್ಯಕತೆ ಉಂಟಾಗಿ ಭೃಗುವನ್ನು ಬಂದು ಕೇಳಿದರು. ಭೃಗುವಿನ ಸಂಬಂಧಿಕರಲ್ಲಿ ಕೆಲವರು ಹಣವನ್ನು ನೆಲದಲ್ಲಿ ಮುಚ್ಚಿಟ್ಟಿದ್ದರು. ಇನ್ನು ಕೆಲವರು ಬ್ರಾಹ್ಮಣರಿಗೆ ದಾನ ಮಾಡಿದ್ದರು. ಕ್ಷತ್ರಿಯರಿಂದ ಭೀತಿಗೊಂಡ ಕೆಲವರು ತಮ್ಮಲ್ಲಿದ್ದದ್ದನ್ನು ಕೊಟ್ಟರು. ಭೃಗುವಿನ ಮನೆಯ ನೆಲವನ್ನು ಅಗೆಯುವಾಗ ಹಣವು ಕ್ಷತ್ರಿಯನೊಬ್ಬನಿಗೆ ದೊರೆಯಿತು. ಇದರಿಂದ ಪ್ರೇರಿತರಾದ ಎಲ್ಲ ಕ್ಷತ್ರಿಯರು ಭೃಗುವಿನ ವಂಶಜರನ್ನು ಕೊಂದರು. ಅಷ್ಟೇ ಅಲ್ಲದೆ ಮುಂದೆ ಹುಟ್ಟಿಬರಬಹುದಾದ ಭ್ರೂಣಗಳನ್ನು ನಾಶಮಾಡಿದರು. ವಿಧವೆಯರು ಹಿಮಾಲಯದ ಕಡೆಗೆ ಪಲಾಯನಗೈದರು. ಅವರಲ್ಲೊಬ್ಬಳು ತನ್ನ ಮಗುವನ್ನು ತೊಡೆಯಲ್ಲಿ ಮುಚ್ಚಿಕೊಂಡು ಹೊರಟಾಗ ಈ ಸುದ್ದಿ ಕ್ಷತ್ರಿಯರ ಕ್ರೋಧವನ್ನು ಕೆರಳಿಸಿ ಅವರು ಅದನ್ನು ಕೊಲ್ಲಲು ಯತ್ನಿಸಿದಾಗ, ಹೊರಗೆ ಪ್ರಕಟವಾದ ಆ ಮಗುವಿನ ಪ್ರಭೆ ಕ್ಷತ್ರಿಯರ ಕಣ್ಣನ್ನು ಕೋರೈಸಿತು. ಈ ಘಟನೆಯಿಂದ ವಿಚಲಿತರಾಗಿ ಕಣ್ಣು ಕಳೆದುಕೊಂಡ ಕ್ಷತ್ರಿಯರು ತಮ್ಮ ದೃಷ್ಟಿಯನ್ನು ತಿರುಗಿ ದಯಪಾಲಿಸಬೇಕೆಂದು ಆ ತಾಯಿಯನ್ನು ಕೇಳಿಕೊಂಡಾಗ ಅವಳು ಈ ವಿಷಯವನ್ನು ತನ್ನ ಪ್ರಚಂಡ ಶಕ್ತಿಯ ಮಗುವಾದ ಅಪೂರ್ವನಿಗೆ ತಿಳಿಸಿದಳು. ಅವನಲ್ಲಿ ವೇದವ್ಯಾಸಪ್ರಣೀತ ವೇದದ ಶಕ್ತಿಯ ತೇಜಸ್ಸು ಅಡಗಿಕೊಂಡಿತ್ತು. ಇದು ಅದುವರೆಗೆ ನಾಶಮಾಡಲ್ಪಟ್ಟ ಬ್ರಾಹ್ಮಣರ ತೇಜಸ್ಸಿನ ಫಲವಾಗಿತ್ತು. ಈಗ ಅವನಿಂದ ಮಾತ್ರ ಅವರ ದೃಷ್ಟಿ ವಾಪಸಾಗಲು ಸಾಧ್ಯವಿತ್ತು. ಅವರ ಬಿನ್ನಹದಂತೆ ಅವರ ದೃಷ್ಟಿ ತಿರುಗಿ ದೊರೆಯಿತು. ಆದರೆ ತನ್ನ ಭೃಗು ವಂಶಜರ ಸರ್ವನಾಶವಾದದ್ದರಿಂದ ಸಿಟ್ಟಿಗೆದ್ದ ಬ್ರಾಹ್ಮಣ ಅಯುವಾನ ಸೇಡಿನಿಂದ ಘೋರ ತಪಸ್ಸಿಗೆಂದು ಹೊರಟಾಗ ದೇವತೆಗಳು, ಅಸುರರು, ಮನುಷ್ಯರು ಭಯಭೀತರಾದರು. ಆದರೆ ಅವನ ವಂಶಜರು ಪ್ರತ್ಯಕ್ಷರಾಗಿ ಅವನ ಈ ಉದ್ದೇಶವನ್ನು ಮರೆಯಲು ತಿಳಿಸಿದರು. ಮತ್ತು ಕ್ಷತ್ರಿಯರ ವಿರುದ್ಧ ಅವನ ಸೇಡಿನ ಪ್ರಯತ್ನವನ್ನು ಬಿಡಲು ತಿಳಿಸಿದರು. "ಕ್ಷತ್ರಿಯರು ಭೃಗುವಿನ ವಂಶಜರ ಹತ್ಯೆಯನ್ನು ಗಂಭೀರವಾಗಿ ತೆಗೆದುಕೊಳ್ಳದೇ ಇರಲು ಅವರಲ್ಲಿಯ ಯಾವ ದೌರ್ಬಲ್ಯವೂ ಕಾರಣವಲ್ಲ. ನಮಗೆ ಮುಪ್ಪಿನಿಂದ ತೊಂದರೆ ಬರುತ್ತಿದ್ದಂತೆ ನಾವೇ ಅವರು ನಮ್ಮನ್ನು ಕೊಲ್ಲುವಂತೆ ಇಚ್ಛೆಪಡುತ್ತೇವೆ. ಭೂಮಿಯಲ್ಲಿ ಹೂತಿಟ್ಟು ಆ ಕ್ಷತ್ರಿಯರಲ್ಲಿ ನಮ್ಮ ಬಗೆಗೆ ತಿರಸ್ಕಾರವನ್ನು ಹೆಚ್ಚು ಮಾಡಲು ಅನುವಾಗಲೆಂದು ಮಾಡಿದ ಉಪಾಯ. ಸ್ವರ್ಗವನ್ನು ಬಯಸುವ ನಮಗೆ ಹಣದ ಚಿಂತೆ ಏಕೆ ? ಈ

ಉಪಾಯವನ್ನು ಯೋಚಿಸಲು ಕಾರಣವೇನೆಂದರೆ ನಮಗೆ ನಮ್ಮ ಆತ್ಮಹತ್ಯೆಯ ದೋಷ ಬೇಕಿರಲಿಲ್ಲ. ಆದ್ದರಿಂದ ನೀನು ಮಾಡಬೇಕೆಂದಿರುವ ಪಾಪವನ್ನು ಮರೆ. ನಿನ್ನನ್ನು ನಿಯಂತ್ರಿಸಿಕೋ". "ಅಯುವಾನ್ ಕ್ಷತ್ರಿಯನನ್ನು ಕೊಲ್ಲಬೇಡ. ಅಥವಾ ಸಪ್ತಲೋಕಗಳನ್ನು ನಾಶಪಡಿಸಬೇಕು". "ನಿನ್ನ ತಪಶ್ಚರ್ಯದ ಪ್ರಭಾವದಿಂದ ದೊರೆತ ಶಕ್ತಿಯನ್ನು ವ್ಯರ್ಥಗೊಳಿಸಬೇಡ." ಆದರೆ ಅಯುವಾನ್ "ಈ ಕೆಲಸ ಮಾಡದೇ ಬಿಡುವುದಿಲ್ಲ"ಎಂದು ನುಡಿದನು.

ತನ್ನಲ್ಲಿ ಉತ್ಪನ್ನವಾದ ಈ ಸೇಡಿನ ಕ್ರೋಧ ಮತ್ತೆಲ್ಲಿಯಾದರೂ ಪ್ರಕಟಗೊಳ್ಳಲೇಬೇಕು, ಇಲ್ಲವಾದರೆ ಸಾಧ್ಯವಿಲ್ಲ. ತನ್ನನ್ನೇ ನುಂಗಿ ಹಾಕುತ್ತದೆ. ಅವನು ತನ್ನ ವಾದವನ್ನು ನ್ಯಾಯ, ಕರ್ತವ್ಯ, ತೀವ್ರಕ್ರಮದ ಆವಶ್ಯಕತೆಯ ಅಂಶಗಳನ್ನು ಮಂಡಿಸಿದನು. ತನ್ನ ಮೂಲ ಪುರುಷರು ಹೇಳಿದ ಕ್ಷತ್ರಿಯರ ವಿರುದ್ಧ ಕರುಣೆಯ ಅಂಶವನ್ನು ಒಪ್ಪಿಕೊಳ್ಳಲಿಲ್ಲ. ಅವನ ಪಿತೃಗಳು ಅವನ ಕ್ರೋಧವನ್ನು ಸಾಗರದಲ್ಲಿ ಮುಳುಗಿಸಬೇಕೆಂದು ಸಲಹೆ ಇತ್ತರು. ಈ ರೀತಿ ಅವನ ಸೇಡಿಗೂ ಒಂದು ಕೊನೆ ಬಂದಿತೆಂದರು.

ಮಹಾಭಾರತದಲ್ಲಿ ಹಲವೆಡೆ ಹೇಳಿರುವ ಕ್ಷತ್ರಿಯರನ್ನು ಬ್ರಾಹ್ಮಣರು ನಾಶಗೊಳಿಸಿದ ಕಥೆಗಳು ಮೂರನೆಯ ಇಂಥ ಘಟನೆಗೆ ಉದಾಹರಣೆ ಎಂದು ಹೇಳಬಹುದು.

"ಮಾಹಿಷ್ಮತಿಯಲ್ಲಿ ವಾಸಿಸುವ ಸಹಸ್ರಬಾಹು ಶಕ್ತಿಶಾಲಿ, ಮಹಾಕಾಂತಿಯ ಕಾರ್ತವೀರ್ಯ ಅರಸನು ಸಂಪೂರ್ಣ ಪೃಥ್ವಿಗೆ ಅರಸನಾಗಿದ್ದನು. ಅವನು ದತ್ತಾತ್ರೇಯ ಮುನಿಗಳಿಂದ ವಿಶ್ವವನ್ನು ಗೆಲ್ಲಲು ಹೋದಾಗಲೆಲ್ಲ ತನಗೆ ಸಹಸ್ರಬಾಹುಗಳು ಬರುವಂತೆ ವರವೊಂದನ್ನು ಪಡೆದಿದ್ದನು. ಆದರೆ ಸದಾ ಸುಮಾರ್ಗದಲ್ಲಿ ಹಿರಿಯರಿಂದ ಉಪದೇಶ ಪಡೆಯುತ್ತ ರಾಜ್ಯವಾಳುವುದೂ ಅವನ ಕರ್ತವ್ಯವಾಗಿತ್ತು.

"ಸೂರ್ಯ ಪ್ರಭೆಯಷ್ಟು ಕಾಂತಿಯುಕ್ತವಾಗಿ ತನ್ನ ರಥವನ್ನು ಏರಿ ಶಕ್ತಿಯಿಂದ ಮದೋನ್ಮತ್ತನಾಗಿ ಹೀಗೆ ನುಡಿದನು. "ಧೈರ್ಯ ಸ್ಥೈರ್ಯ, ಕೀರ್ತಿ, ನಾಯಕತ್ವ, ಶಕ್ತಿ ಬಲಗಳಲ್ಲಿ ನನ್ನನ್ನು ಯಾರು ಮೀರಿಸಬಲ್ಲರು?" ಆಗ ಅವನ ಮಾತಿನ ಕೊನೆಯಲ್ಲಿ ಆಕಾಶವಾಣಿಯೊಂದು ಈ ರೀತಿ ಕೇಳಿಸಿತು: ಮೂರ್ಖಾ, ಬ್ರಾಹ್ಮಣನು ಕ್ಷತ್ರಿಯನಿಗಿಂತ ಶ್ರೇಷ್ಠನು ಎಂದು ನೀನರಿಯೆ. ಬ್ರಾಹ್ಮಣರ ಸಹಾಯದಿಂದಲೇ ಕ್ಷತ್ರಿಯರು ಪ್ರಜೆಗಳ ಮೇಲೆ ಆಳ್ವಿಕೆ ನಡೆಸಲು ಸಾಧ್ಯವಾಗುವುದು. ಅರ್ಜುನನು ಉತ್ತರಿಸುತ್ತಾನೆ "ನನಗೆ ಖುಷಿಯಾದರೆ ಸೃಷ್ಟಿ ಮಾಡಬಲ್ಲೆ, ಬೇಡವೆಂದರೆ ಯಾವದನ್ನೂ ನಾಶಪಡಿಸಬಲ್ಲೆ. ಯಾವ ಬ್ರಾಹ್ಮಣನೂ ಕೃತಿ, ವಿಚಾರ ಮತ್ತು ಶಬ್ದಗಳಲ್ಲಿ ನನಗಿಂತ ಶ್ರೇಷ್ಠನಾಗಲು ಸಾಧ್ಯವಿಲ್ಲ. ಬ್ರಾಹ್ಮಣರು ಕ್ಷತ್ರಿಯರ ಮೇಲೆ ಅವಲಂಬಿತರಾಗಿರುತ್ತಾರೆ. ಆದರೆ ಬ್ರಾಹ್ಮಣರು ಕ್ಷತ್ರಿಯರನ್ನು ಸೋಲಿಸಲು ಸಾಧ್ಯವಿಲ್ಲ. ವೇದದ ನೆಪವನ್ನು ಹೇಳಿ ದೊಡ್ಡಸ್ತಿಕೆಯನ್ನು ತೋರುತ್ತಾರೆ. ನ್ಯಾಯದ ಮೂಲ ಕ್ಷತ್ರಿಯರ ಕೈವಶದಲ್ಲಿದೆ. ಬ್ರಾಹ್ಮಣರ ಜೀವನೋಪಾಯಕ್ಕೆ ಕ್ಷತ್ರಿಯರ ಆಶ್ರಯವೇ ಕಾರಣ. ಆದ್ದರಿಂದ ಬ್ರಾಹ್ಮಣರು ಅದೆಂತು ಕ್ಷತ್ರಿಯರಿಗಿಂತ ಶ್ರೇಷ್ಠರು? ಎಂದು ಕೇಳಿದನು. ಗಾಯತ್ರಿಯಿಂದ ಮಾತ್ರ ಸತ್ಯದ ನುಡಿ ಸಾಧ್ಯ. ಎಲ್ಲ ಬ್ರಾಹ್ಮಣರನ್ನು ನಾನು ವಶಮಾಡಿ ನಿಯಂತ್ರಣದಲ್ಲಿಟ್ಟುಕೊಳ್ಳುವೆ. ಮೂರು ಲೋಕದಲ್ಲಿ ಯಾವ ದೇವತೆಯಾಗಲೀ ಮನುಷ್ಯರಾಗಲೀ ನನ್ನ ರಾಜ್ಯ, ಪದವಿ, ಅಧಿಕಾರ ಕಸಿದುಕೊಳ್ಳಲು ಸಾಧ್ಯವಿಲ್ಲ. ನಾನು ಎಲ್ಲ ಬ್ರಾಹ್ಮಣರಿಗಿಂತಲೂ ಶ್ರೇಷ್ಠನು. ಬ್ರಾಹ್ಮಣರು ತಮ್ಮ ಅಧಿಕಾರವಿದೆ ಎಂದು ತಿಳಿದುಕೊಂಡ ರಾಜ್ಯಗಳನ್ನು ಬುಡಮೇಲು ಮಾಡಿ ತೋರಿಸಲೇ? ನನ್ನ ಶಕ್ತಿಯನ್ನು ಯುದ್ಧದಲ್ಲಿ ಯಾರೂ ಪ್ರಶ್ನಿಸಲಾರರು." ಅರ್ಜುನ ಈ ಮಾತನ್ನು ಆಲಿಸಿದ ವಾಯು ಈ ರೀತಿ ಉತ್ತರಿಸಿದನು. "ಈ ಪಾಪದ ವಿಚಾರಗಳನ್ನು ಬಿಟ್ಟುಬಿಡು ಮತ್ತು ಬ್ರಾಹ್ಮಣರಿಗೆ ತಲೆಬಾಗು. ನೀನು ಅವರಿಗೆ ಕೆಟ್ಟದ್ದೇನಾದರೂ ಮಾಡಿದರೆ ನಿನ್ನ ರಾಜ್ಯ ನಾಶವಾಗುವುದು. ನಿನ್ನನ್ನು ಅವರು ಸೋಲಿಸಿ

ರಾಜ್ಯದಿಂದ ಹೊರಗೆ ಹಾಕುವರು." 'ನೀನಾರು' ಎಂದು ಅರ್ಜುನ ಕೇಳಿದಾಗ "ನಾನು ವಾಯು–ದೇವತೆಗಳ ಸಂದೇಶವಾಹಕ. ನಾನು ನಿನ್ನ ಕಲ್ಯಾಣಕ್ಕೆ ಈ ಮಾತನ್ನು ತಿಳಿಸುತ್ತಿರುವೆ" ಎಂದನು. ಅದಕ್ಕೆ ಅರ್ಜುನನು "ಬ್ರಾಹ್ಮಣರ ಪರವಾಗಿ ನೀನು ಇಷ್ಟೊಂದು ಭಕ್ತಿಯನ್ನು ಪ್ರಕಟಪಡಿಸುತ್ತಿ. ಅವರೂ ಪೃಥ್ವಿಯ ಮೇಲೆ ಹುಟ್ಟಿದ ಸಾಮಾನ್ಯ ಜೀವಿಗಳು. ಅವರದೇನು ಹೆಚ್ಚಳ" ಎಂದನಂತೆ.

ಈ ಅರಸನು ಬ್ರಾಹ್ಮಣನಾದ ಜಮದಗ್ನಿಯ ಮಗ ಪರಶುರಾಮನ ಜೊತೆಗೂ ಹೋರಾಟ ನಡೆಸಿದನು. ಅದರ ಕಥೆ ಈ ರೀತಿಯಾಗಿದೆ :

"ಗಾಧಿ ಎಂಬ ಅರಸನು ಕನ್ಯಾಕುಬ್ಜ ಎಂಬ ರಾಜ್ಯವಾಳುತ್ತಿದ್ದನು. ಅವನಿಗೆ ಸತ್ಯವತಿ ಎಂಬ ಮಗಳಿದ್ದಳು. ರಾಜಕುವರಿಯ ಮದುವೆ ಋಚೀಕ ಮುನಿಯ ಜೊತೆ ಮತ್ತು ಜಮದಗ್ನಿಯ ಜನನದ ಕಥೆ ಮೇಲೆ ಈಗಾಗಲೇ ವಿವರಿಸಿದ ಪರಿಯಲ್ಲಿಯೇ ನಡೆಯುತ್ತದೆ. ಜಮದಗ್ನಿ ಮತ್ತು ಸತ್ಯವತಿಯರಿಗೆ ಐದು ಗಂಡು ಮಕ್ಕಳು. ಅದರಲ್ಲಿ ಕೊನೆಯವನೇ ಪರಶುರಾಮ. ತನ್ನ ಹಿರಿಯ ಸೋದರರು ನಿರಾಕರಿಸಿದಾಗ ಅವನು ತನ್ನ ತಂದೆಯ ಆಜ್ಞೆಯಂತೆ ತನ್ನ ತಾಯಿಯನ್ನು ಕೊಲ್ಲುತ್ತಾನೆ. ಆದರೆ ಮತ್ತೆ ತಿರುಗಿ ಪರಶುರಾಮನ ಪ್ರಾರ್ಥನೆಯಂತೆ ಅವನ ತಾಯಿಯನ್ನು ಜಮದಗ್ನಿ ಬದುಕಿಸಿ ಕೊಡುತ್ತಾನೆ. ಮಾತೃಹತ್ಯೆಯ ಪಾಪದಿಂದ ಅವನನ್ನು ಮುಕ್ತಮಾಡುತ್ತಾನೆ. ಅಲ್ಲದೆ ಅಜೇಯತ್ವ ಮತ್ತು ದೀರ್ಘ ಜೀವನದ ವರವನ್ನು ದಯಪಾಲಿಸುತ್ತಾನೆ. ಅವನ ಕಥೆ ಮುಂದೆ ಅರ್ಜುನ ಅಥವಾ ಕಾರ್ತವೀರ್ಯನ ಸಂಬಂಧದಲ್ಲಿ ಮುಂದುವರಿಯುತ್ತದೆ. ಕಾರ್ತವೀರ್ಯ ಜಮದಗ್ನಿಯ ಆಶ್ರಮಕ್ಕೆ ಬಂದು ಗೌರವದ ಉಪಚಾರ ಪಡೆದರೂ ಒತ್ತಾಯದಿಂದ ಜಮದಗ್ನಿ ಋಷಿಗಳ ಯಜ್ಞದ ಆಕಳನ್ನು ಒಯ್ದಿರುತ್ತಾನೆ. ವಿಷಯ ತಿಳಿದು ಕ್ರೋಧಗೊಂಡ ಪರಶುರಾಮನು ಎತ್ತರವಾದ ಮರಗಳನ್ನು ಕೈಯಲ್ಲಿ ಎತ್ತಿಕೊಂಡು ಅರ್ಜುನನ ಮೇಲೆ ಆಕ್ರಮಣ ಮಾಡುತ್ತಾನೆ. ಅವನ ಸಹಸ್ರಬಾಹುಗಳನ್ನು ಕಡಿದು ಹಾಕುತ್ತಾನೆ. ಮತ್ತು ಕೊನೆಗೆ ಅವನನ್ನೂ ಕೊಂದು ಹಾಕುತ್ತಾನೆ. ಆದರೆ ಅರ್ಜುನನ ಮಕ್ಕಳು ಶಾಂತ ಸ್ವಭಾವದ ಜಮದಗ್ನಿಯನ್ನು ಪರಶುರಾಮನ ಅನುಪಸ್ಥಿತಿಯಲ್ಲಿ ಸಂಹರಿಸುತ್ತಾರೆ.

ತಂದೆಯ ಶವಸಂಸ್ಕಾರದ ನಂತರ ತಿರುಗಿ ಬಂದ ಪರಶುರಾಮ ಕ್ಷತ್ರಿಯರ ಪೂರ್ಣ ಜನಾಂಗವನ್ನೇ ನಾಶ ಮಾಡುವುದಾಗಿ ಪಣತೊಟ್ಟನು. ಮೊದಲು ಅರ್ಜುನನ ಮಕ್ಕಳು ಅವನ ಹಿಂಬಾಲಕರನ್ನು ಸದೆಬಡಿದನು. ಇಪ್ಪತ್ತೊಂದು ಸಲ ಈ ಪೃಥ್ವಿಯನ್ನು ಸುತ್ತಿ ಎಲ್ಲ ಕ್ಷತ್ರಿಯರನ್ನು ನಾಶ ಮಾಡಿದನು. ಐದು ರಕ್ತದ ಸರೋವರಗಳನ್ನು ಸಮಂತ ಪಂಚಕ ಎಂಬ ಸ್ಥಳದಲ್ಲಿ ನಿರ್ಮಿಸಿದನು. ಆಗ ಅದರಲ್ಲಿ ಭೃಗುವಿನ ತಾತಂದಿರಾದ ಋಚೀಕ ಕಾಣಿಸಿಕೊಂಡು ಪರಶುರಾಮನನ್ನು ಸಂಬೋಧಿಸಿದರು. ಇಂದ್ರನಿಗೆ ಅವರು ಮಹಾನ್ ಆಹುತಿಯನ್ನು ಅರ್ಪಿಸಿದರು. ಅಲ್ಲದೆ ಪೃಥ್ವಿಯನ್ನು ಒಪ್ಪಿಸಿದರು. ಕಶ್ಯಪರಿಗೆ ಚಿನ್ನದ ದೊಡ್ಡ ಯಜ್ಞವೇದಿಕೆಯನ್ನು ಕಾಣಿಕೆಯಾಗಿ ಕೊಟ್ಟರು. ಬ್ರಾಹ್ಮಣರು ಇದನ್ನು ಅನುಮತಿಯೊಂದಿಗೆ ಹಂಚಿಕೊಂಡರು. ಖಾಂಡವ ವನಗಳೆಂದು ಆಮೇಲೆ ಅದಕ್ಕೆ ಹೆಸರು ಬಂದಿತು. ಕಶ್ಯಪರಿಗೆ ಪೃಥ್ವಿ ದಾನವಾಗಿ ಕೊಟ್ಟಿದ್ದುದರಿಂದ ಪರಶುರಾಮನು ಮಹೇಂದ್ರ ಪರ್ವತದ ಮೇಲೆ ವಾಸಿಸಹತ್ತಿದನು. ಹೀಗೆ ಕ್ಷತ್ರಿಯರಿಗೆ ಮತ್ತು ಪರಶುರಾಮನಿಗೆ ವೈರತ್ವ ಬೆಳೆದುಬಂದಿತು. ಆದರೆ ಪರಶುರಾಮನ ಅದ್ಭುತ ಪರಾಕ್ರಮದಿಂದ ಇಡೀ ಪೃಥ್ವಿ ಅವನದಾಯಿತು."

ಮಹಾಭಾರತದ ದ್ರೋಣ ಪರ್ವದಲ್ಲಿ ಪರಶುರಾಮನು ಕೊಂದ ರಾಜವಂಶಗಳ ಹೆಸರುಗಳು ಉಲ್ಲೇಖವಾಗಿವೆ. ಕಾಶ್ಮೀರ, ದಾರದರು, ಕುಂತಿ, ಕ್ಷುದ್ರಕ, ಮಾಲವ, ಅಂಗ, ವಂಗ, ಕಳಿಂಗ, ವಿದೇಹ, ತಾಮ್ರಲಿಪ್ತಕ ಮಾರ್ತಿಕವತ, ಶಿವಿ ಮುಂತಾದ ಉಳಿದ ರಾಜವಂಶಜರು.

ಕ್ಷತ್ರಿಯರು ಮತ್ತೆ ರಾಜ್ಯಗಳನ್ನು ಸ್ಥಾಪಿಸಿದ ಬಗೆಯ ವಿವರಗಳು ನಮಗೆ ದೊರೆತಿವೆ :

"ಇಪ್ಪತ್ತೊಂದು ಸಲ ಸತತವಾಗಿ ಕ್ಷತ್ರಿಯರನ್ನು ನಾಶಗೊಳಿಸಿದ ಪರಶುರಾಮನು ಮಹೇಂದ್ರಪರ್ವತಕ್ಕೆ ತೆರಳಿದನು. ನಾಶಹೊಂದಿದ ಅರಸರ ವಿಧವೆಯರು ಬ್ರಾಹ್ಮಣರ ಬಳಿ ಬಂದು ತಮ್ಮ ಮುಂದಿನ ವಂಶವನ್ನು ಬೆಳೆಸುವವರಾರು? ನಮ್ಮನ್ನು ರಕ್ಷಿಸಿ ಎಂದಾಗ ಬ್ರಾಹ್ಮಣರು ಋತುವಿಗೆ ತಕ್ಕಂತೆ ಈ ರಾಣಿಯರ ಜೊತೆಗೆ ದೇಹಸಂಪರ್ಕ ನಡೆಸಿ ಅವರಿಗೆ ಶೂರ ಪುತ್ರ–ಪುತ್ರಿ ಸಂತಾನಗಳನ್ನು ದಯಪಾಲಿಸಿದರು. ಅವರೇ ಮುಂದೆ ಕ್ಷತ್ರಿಯ ವಂಶಗಳನ್ನು ಮುಂದುವರಿಸಿಕೊಂಡು ಹೋದರು. ಹೀಗೆ ಕ್ಷತ್ರಿಯರ ವಂಶ ಮುಂದುವರಿಯಲು ಬ್ರಾಹ್ಮಣರೇ ಕಾರಣರಾದರು. ಆದ್ದರಿಂದ ಬ್ರಾಹ್ಮಣರಿಗಿಂತ ಉಳಿದ ನಾಲ್ಕು ಜಾತಿಗಳು ಕೆಳದರ್ಜೆಯ ಜಾತಿಗಳು ಎಂದು ಬೆಳೆದುಬಂದವು.

* * * *

## ಅಧ್ಯಾಯ ೧೯

# ಜಾತಿಯೆಂಬ ಶಾಪ

ನಾನು ನನ್ನ ಮೊದಲ[೧] ಪ್ರಬಂಧದಲ್ಲಿ ಆಗಲೇ ಹೇಳಿದಂತೆ (ಜಾತಿ ಎನ್ನುವುದು ಏಕವಚನದಲ್ಲಿ ಹೇಳುವಂತಹುದಲ್ಲ) ಜಾತಿ ಸಂಖ್ಯೆಯಲ್ಲಿ ಒಂದೇ ಇರುವುದಿಲ್ಲ. ಅದು ಬಹುಸಂಖ್ಯೆಯನ್ನು ಸೂಚಿಸುತ್ತದೆ. ಜಾತಿ ಎಂದರೆ ವಿಭಜನೆ, ವಿಂಗಡನೆಯ ಕಲ್ಪನೆ ತರುತ್ತದೆ. ಇದು ಎಂತಹ ಮಹಾನ್ ಶಾಪವಾಗಿದೆ ಎಂಬುದನ್ನು ಅರಿಯುವವರು ತುಂಬಾ ವಿರಳ. ಈ ಶಾಪದ ವೈಶಾಲ್ಯವನ್ನು, ಇದು ನಿರ್ಮಿಸುವ ವಿಚ್ಛೇದನೆಯ, ವಿಭಜನೆಯ ಪ್ರಮಾಣವನ್ನು ತಿಳಿಸುವುದು ಅವಶ್ಯವಾಗುತ್ತದೆ. ಒಂದು ಜಾತಿಯ ವಿವರಗಳನ್ನು ಕೇವಲ ಅದು ರೂಪಿಸುವ ವಿಚ್ಛೇದನಾಕ್ರಮ, ಸ್ವರೂಪದಿಂದಲೂ ಹೇಳಲು ಸಾಧ್ಯವಾಗುವುದಿಲ್ಲ. ಒಂದು ಜಾತಿಯ ಇತಿಹಾಸ ಕೊಟ್ಟ ತೃಪ್ತಿ ಮಾತ್ರ ನಮ್ಮದಾಗುತ್ತದೆ. ಬ್ರಾಹ್ಮಣರನ್ನು ನಾನು ಉದಾಹರಣೆಯಾಗಿ ಇಟ್ಟುಕೊಂಡು ಅವರೇ ಈ ಜಾತಿಯೆಂಬ ಕಲ್ಪನೆಯ ವಿಶಾಲರೂಪದಿಂದ ಯಾವ ರೀತಿ ಅವರು ಸಂಖ್ಯೆಯ ದೃಷ್ಟಿಯಿಂದ ಮಿತಿಮೀರಿದ್ದಾರೆ ಎಂಬುದನ್ನು ನೋಡೋಣ. ಏಕೆಂದರೆ ಬ್ರಾಹ್ಮಣರೇ ಮೂಲತಃ ಈ ಜಾತಿಯ ಕಲ್ಪನೆಯ ಹುಟ್ಟಿಗೆ ಕಾರಣರು ಮತ್ತು ಅದನ್ನು ಎತ್ತಿ ಹಿಡಿಯುವವರು. ಭಾರತದ ಬ್ರಾಹ್ಮಣರನ್ನು ಪ್ರಮುಖವಾಗಿ ಎರಡು ಧಾರ್ಮಿಕ ಪಂಗಡವಾಗಿ ವಿಭಜಿಸಬಹುದು. ಒಂದು ಪಂಗಡವನ್ನು ದ್ರಾವಿಡರೆಂದು ಮತ್ತು ಇನ್ನೊಂದನ್ನು ಗೌಡರೆಂದು ವರ್ಗೀಕರಿಸಬಹುದು. ಅವರಿಬ್ಬರೂ ಸಮಾನ ಸ್ವರೂಪದ ಒಂದು ಭಾಗವಂತೂ ಅಲ್ಲ. ಈ ವಿಭಜನೆ ಎಲ್ಲಿಯವರೆಗೆ ಸಾಗಿದೆ ಎಂದರೆ ಅವುಗಳ ಸಂಖ್ಯೆ ಕಲ್ಪನೆ ಮೀರಿ ಪಟ್ಟಿಯನ್ನು ಮಾಡುತ್ತ ಹೋಗಬೇಕಾಗುತ್ತದೆ. ಮುಂದಿನ ಪುಟಗಳಲ್ಲಿ ಈ ದಿಶೆಯಲ್ಲಿ ಒಂದು ಪ್ರಯತ್ನ ಮಾಡಲಾಗಿದೆ.

## I

### ದ್ರಾವಿಡ ಬ್ರಾಹ್ಮಣರು

ದ್ರಾವಿಡ ಬ್ರಾಹ್ಮಣರ ಪಂಗಡಗಳಲ್ಲಿ ಐದು ಉಪವಿಭಾಗಗಳಿವೆ. ಅವರನ್ನು ಪಂಚ ದ್ರಾವಿಡರೆಂದೂ ಕರೆಯಲಾಗುತ್ತದೆ.

೧) ಮಹಾರಾಷ್ಟ್ರೀಯರು

೨) ಆಂಧ್ರದವರು

೩) ದ್ರಾವಿಡರು (ಮೂಲತಃ)

೪) ಕರ್ನಾಟಕದವರು

೫) ಗುರ್ಜರರು

ಈ ಪಂಚದ್ರಾವಿಡರು ಪುನಃ ಹೇಗೆ ವಿಭಜಿಸಲ್ಪಟ್ಟಿದ್ದಾರೆ ಎಂಬುದನ್ನು ಈಗ ನೋಡೋಣ.

---

೧. ಇದರ ಉಲ್ಲೇಖ 'ಭಾರತದಲ್ಲಿಯ ಜಾತಿಗಳು' ಎಂಬ ಲೇಖನ. ಸಂಪುಟ ೧ರಲ್ಲಿ ಲೇಖನ ಮಾಲೆಯಲ್ಲಿ – ಸಂ.

### ೧. ಮಹಾರಾಷ್ಟ್ರ ಬ್ರಾಹ್ಮಣರು

ಅವರಲ್ಲಿಯ ಜಾತಿ ಮತ್ತು ಉಪಜಾತಿಗಳು ಹೀಗಿವೆ :

(೧) ದೇಶಸ್ಥ (೨) ಕೊಂಕಣಿಸ್ಥ (೩) ಕರಾಡರು (೪) ಕಾಣ್ವರು (೫) ಮಧ್ಯಾಹ್ನದಿನರು (೬) ಪಾಧ್ಯರು (೭) ದೇವರುಬಾ (೮) ಪಾಲಾಶರು (೯) ಕಿರವಂತರು (೧೦) ತಿರಗುಲರು (೧೧) ಜಾವಲರು (೧೨) ಅಭೀರರು (೧೩) ಸಾವಸ (೧೪) ಕಾಸ್ತ (೧೫) ಕುಂದಗೋಲಕ (೧೬) ರಾಂಡಗೋಲಕ (೧೭) ಬ್ರಾಹ್ಮಣ ಜೈ (೧೮) ಸೋಪಾರಾ (೧೯) ಖಿಸ್ತೀ (೨೦) ಹ್ಯುಸೀನೀ (೨೧) ಕಾಲಾಂಕಿ (೨೨) ಮೈತ್ರಯಾನಿಯಾಸ (೨೩) ವಾರಾಡಿ – ಮಧ್ಯಾಹ್ನದಿನ ಯಜುರ್ವೇದಿ (೨೪) ವಾರಾಡಿ – ಮಧ್ಯಾಹ್ನದಿನ – ಋಗ್ವೇದಿ (೨೫) ಝಾಡೆ.

ಶೆನ್ವಿಗಳಲ್ಲಿ ಮತ್ತೆ ಈ ರೀತಿ ೯ ಉಪಜಾತಿಗಳಾಗಿವೆ: (೨೬) ನರವನಕರ್ (೨೭) ಕೆಲೋಸ್ಕರ್ (೨೮) ಬರ್ಡೇಶಕರ್ (೨೯) ಕುಡಾಲದೇಶ್ಕರ್ (೩೦) ಪೇಡ್ನೆಕರ್ (೩೧) ಭಾಲವೇಲೇಕರ್ (೩೨) ಕುಷ್ಪಸ್ಥಲಿ (೩೩) ಖಾಡಪೆ (೩೪) ಖಾಜುಲೆ.

### ೨. ಆಂಧ್ರದ ಬ್ರಾಹ್ಮಣರು

ಈ ಕೆಳಗಿನ ಜಾತಿ ಉಪಜಾತಿಗಳಲ್ಲಿ ಆಂಧ್ರದ ಬ್ರಾಹ್ಮಣರನ್ನು ಗುರುತಿಸಬಹುದು :

(೧) ವಾರ್ನಾಸಾಲು (೨) ಕಮರಕುಬೀ (೩) ಕರನಕಾಮುಲು (೪) ಮಧ್ಯಾಹ್ನದಿನ (೫) ತೈಲಂಗಣಾ (೬) ಮುರುಕುನಾಡು (೭) ಆರಾಧ್ಯರು (೮) ಯಾಜ್ಞವಲ್ಕ್ಯ (೯) ಕಾಸರನಾಡು (೧೦) ವೇಲಾಂಡು (೧೧) ವೆಂಗಿನಾಡು (೧೨) ವೇಡಿನಾಡು (೧೩) ಸಾಮವೇದಿಗಳು (೧೪) ರಾಮಾನುಜರು (೧೫) ಮಾಧ್ವಾಚಾರಿಗಳು (೧೬) ನಿಯೋಗಿಗಳು.

### ೩. ತಮಿಳು ಬ್ರಾಹ್ಮಣರು

(೧) ಋಗ್ವೇದಿಗಳು (೨) ಕೃಷ್ಣಯಜುರ್ವೇದಿಗಳು (೩) ಶುಕ್ಲ ಯಜುರ್ವೇದಿ – ಮಧ್ಯಾಹ್ನದಿನರು (೪) ಶುಕ್ಲಯಜುರ್ವೇದಿ – ಕಾಣ್ವರು (೫) ಸಾಮವೇದಿಗಳು (೬) ಅಥರ್ವರು (೭) ವೈಷ್ಣವರು (೮) ವೀರ ವೈಷ್ಣವರು (೯) ಶ್ರೀ ವೈಷ್ಣವರು (೧೦) ಭಾಗವತರು (೧೧) ಶಾಕ್ತರು.

### ೪. ಕರ್ನಾಟಕ ಬ್ರಾಹ್ಮಣರು

(೧) ಋಗ್ವೇದಿಗಳು (೨) ಕೃಷ್ಣಯಜುರ್ವೇದಿಗಳು (೩) ಶುಕ್ಲಯಜುರ್ವೇದಿಗಳು – ಮಧ್ಯಾಹ್ನದಿನರು (೪) ಶುಕ್ಲ ಯಜುರ್ವೇದಿಗಳು – ಕಾಣ್ವರು (೫) ಸಾಮವೇದಿಗಳು (೬) ಕಮ್ಮೆ ಬ್ರಾಹ್ಮಣರು (೭) ನಾಗರಬ್ರಾಹ್ಮಣರು

### ೫. ಗುರ್ಜರ ಬ್ರಾಹ್ಮಣರು

**I ಅಂಡಿಭ್ಯಾ ಬ್ರಾಹ್ಮಣರು**

ಅವರ ಉಪಜಾತಿಗಳು ಹೀಗಿವೆ :

(೧) ಸಿದ್ಧಾಪುರಾ ಅಂಡಿಭ್ಯಾ (೨) ಶಿಹೋರ್ ಅಂಡಿಭ್ಯಾ (೩) ಟೋಲ್‌ಕಿಯಾ ಅಂಡಿಭ್ಯಾ (೪) ಕುನ್‌ಬಿಗೋರ್ (೫) ಇನೋಚಿಗೋರ್ (೬) ದಾರ್ಜಿಗೋರ್

(೭) ಗ್ರಾಂಧ್ರಾರಪಾಗೋರ್ (೮) ಕೋಲಿಗೋರ್ (೯) ಮಾರವಾಡಿ ಅಂಡಿಛ್ಯಾ (೧೦) ಕಚ್ಚಿ ಅಂಡಿಛ್ಯಾ (೧೧) ವಾಗ್ಡೆಯಾ ಅಂಡಿಛ್ಯಾ.

II **ನಾಗರಬ್ರಾಹ್ಮಣರಲ್ಲಿ ಈ ಕೆಳಗಿನ ಉಪಜಾತಿಗಳು**

(೧೨) ವಾದಾನಾಗರ ಬ್ರಾಹ್ಮಣರು (೧೩) ವಿಶಾಲನಗರ ಬ್ರಾಹ್ಮಣರು (೧೪) ಸಥೋದ್ರಾ (೧೫) ಪ್ರಶ್ನೋರಾ (೧೬) ಕ್ರಿಶ್ನೋರಾ (೧೭) ಚಿತ್ರೋಡಾ (೧೮) ಬರಾಡರು.

ನಾಗರಬ್ರಾಹ್ಮಣರ ಉಳಿದ ವಿಭಾಗಗಳು ಹೀಗಿವೆ :

(೧೯) ಗುಜರಾತಿ ನಾಗರರು (೨೦) ಸೋರಾಥಿ ನಾಗರರು (೨೧) ಉಳಿದ ಪಟ್ಟಣಗಳ ನಾಗರರು.

III **ಗಿರಿನಾರಾಬ್ರಾಹ್ಮಣರು :** ಅವರಲ್ಲಿ –

(೨೨) ಜುನಾಗಡದ ಗಿರಿನಾರರು (೨೩) ಚೋರವಾಡಾ ಗಿರಿನಾರರು (೨೪) ಅಜಕಿಯಾಜ ಬ್ರಾಹ್ಮಣರು ಎಂಬ ಉಪವಿಭಾಗಗಳಿವೆ.

IV **ಮೇವಾಡ ಬ್ರಾಹ್ಮಣರು :** ಅವರಲ್ಲಿ –

(೨೫) ಭಾಟಾ ಮೇವಾಡರು (೨೬) ತ್ರಿವಡಿ ಮೇವಾಡರು (೨೭) ಛಾರೋಸೀ ಮೇವಾಡರು.

V **ದೇಶವಾಲ ಬ್ರಾಹ್ಮಣರು :** ಅವರಲ್ಲಿ –

(೨೮) ದೇಶವಾಲ್ ಬ್ರಾಹ್ಮಣ ಸುರಟಿ ಎಂಬ ವಿಭಾಗವಿದೆ.

VI **ರಾಯಕಾವಲಾ ಬ್ರಾಹ್ಮಣರು :** ಅವರಲ್ಲಿ –

(೨೯) ನವ್ಯರು (೩೦) ಮೋತಾ (ಹಳಬರು).

VII **ಖೇಡವಲಾ ಬ್ರಾಹ್ಮಣರಲ್ಲಿ :** ಐದು ಉಪಜಾತಿಗಳಿವೆ :

(೧) ಖೇಡಾವಲಾ ಬಾಜಾ (೨) ಖೇಡಾವಲಾ ಭಿತ್ರಾ (೩) ಖೇಡವಾ ಬಾಜಾ (೪) ಖೇಡವಾ ಭಿತ್ರಾ.

VIII **ಮೋಧಾ ಬ್ರಾಹ್ಮಣರು :** ಅವರಲ್ಲಿ ೧೧ ಉಪಜಾತಿಗಳಿವೆ –

(೧) ತ್ರಿವೇದಿ ಮೋಧಾ (೨) ಚತುರ್ವೇದಿ ಮೋಧಾ (೩) ಅಗಿಹಂಸ ಮೋಧಾ (೪) ತ್ರಿಪಾಲ ಮೋಧಾ (೫) ಖಿಜಾದಿಯಾ ಸನವನಾ ಮೋಧಾ (೬) ಏಕದಶ ಧರಮೋದಾ (೭) ತಂಡುಲೋಧಾ ಮೋಧಾ (೮) ಉತಂಜಲಿಯ ಮೋಧಾ (೯) ಜೇಠಿಮಲ್ ಮೋಧಾ (೧೦) ಚತುರ್ವೇದಿ ಧಿನೋಜಾ ಮೋಧಾ (೧೧) ಧಿನೋಜಾ ಮೋಧಾ.

IX **ಶ್ರೀಮಾಳಿ ಬ್ರಾಹ್ಮಣರಲ್ಲಿ :** ಈ ಉಪಜಾತಿಗಳಿವೆ :

(೧) ಮಾರವಾಡಿ ಶ್ರೀಮಾಳಿ (೨) ಮೇವಾಡಿ ಶ್ರೀಮಾಳಿ (೩) ಕಚ್ಚಿ ಶ್ರೀಮಾಳಿ (೪) ಕಾಠೇವಾಡಿ ಶ್ರೀಮಾಳಿ (೫) ಗುಜರಾಥಿ ಶ್ರೀಮಾಳಿ.

**ಗುಜರಾಥಿ ಶ್ರೀಮಾಳಿಗಳಲ್ಲಿ :**

(೧) ಅಹಮ್ಮದಾಬಾದಿ ಶ್ರೀಮಾಳಿ (೨) ಸುರತಿ ಶ್ರೀಮಾಳಿ (೩) ಘೋಗಾರಿ ಶ್ರೀಮಾಳಿ (೪) ಖಾಂಬಾಟೀ ಶ್ರೀಮಾಳಿ.

**ಖಾಂಬಾಟೀ ಶ್ರೀಮಾಳಿಗಳಲ್ಲಿ :**

(೧) ಯಜುರ್ವೇದಿ ಖಾಂಬಾಟೀ ಶ್ರೀಮಾಳಿ (೨) ಸಾಮವೇದಿ ಖಾಂಬಾಟೀ ಶ್ರೀಮಾಳಿ.

**X ಚೋವಿಸಾ ಬ್ರಾಹ್ಮಣರಲ್ಲಿ** : ಎರಡು ಉಪಜಾತಿಗಳಿವೆ :
(೧) ಮೋಟಾ (ದೊಡ್ಡವರು) (೨) ಲಹಾನಾ (ಸಣ್ಣವರು).

**XI ಸಾರಸ್ವತ ಬ್ರಾಹ್ಮಣರಲ್ಲಿ** : ಎರಡು ಉಪಜಾತಿಗಳಿವೆ :
(೧) ಸೋರಾಥಿಯಾ ಸಾರಸ್ವತ (೨) ಸಿಂಧವಾ ಸಾರಸ್ವತ.

**XII ಈ ಕೆಳಗಿನ ಗುಜರಾಥಿ ಬ್ರಾಹ್ಮಣರಲ್ಲಿ ಉಪಜಾತಿಗಳಿಲ್ಲ** :
(೧) ಸಥೋರಾ ಬ್ರಾಹ್ಮಣರು (೨) ಉದಂಬರಾ (೩) ನರಸೀಪಾರಾ (೪) ವಾಲಾದಾರು (೫) ಪರಗೋರಾ (೬) ನಂದೋದ್ರಾ (೭) ವಾಯದಾ (೮) ತಮಿಳು (ದ್ರಾವಿಡರು) (೯) ರೋಢಾವಾಲಾ (೧೦) ಪಾದ್ಮೀವಾಲಾ (೧೧) ಗೋಮತಾವಾಲಾ (೧೨) ಇಟಾವಾಲಾ (೧೩) ಮೇಧಾತವಾಲಾ (೧೪) ಗಾಯವಾಲಾ (೧೫) ಅಗಸ್ತ್ಯವಾಲಾ (೧೬) ಪ್ರೇತಾವಾಲಾ (೧೭) ಉನೇವಾಲಾ (೧೮) ರಾಜಾವಾಲಾ (೧೯) ಕನೋಜಿಯಾ (೨೦) ಸರವಾರಿಯಾ (೨೧) ಕನೋಲಿಯಾ (೨೨) ಖರ್ಕೇಲಿಯಾ (೨೩) ಪಾರವಾಲಿಯಾ (೨೪) ಸೋರಥಿಯಾ (೨೫) ತಂಗಮಾದಿಯಾ (೨೬) ಸನೋದಿಯಾ (೨೭) ಮೋಟಾಲಾ (೨೮) ಝಾಲೋರಾ (೨೯) ರಾಯಪುಲಾ (೩೦) ಕಪಿಲಾ (೩೧) ಅಕ್ಷಯ ಮಂಗಲಾ (೩೨) ಗುಗ್ಲಿ (೩೩) ನಾಪಾಲಾ (೩೪) ಅನಾವಾಲಾ (೩೫) ವಾಲ್ಮೀಕಾ ಬ್ರಾಹ್ಮಣರು (೩೬) ಕಳಿಂಗಾ ಬ್ರಾಹ್ಮಣರು (೩೭) ತೈಲಿಂಗಾ (೩೮) ಭಾರ್ಗವಾ (೩೯) ಮಾಲವಿ (೪೦) ಬಂಡೋಆನ್ (೪೧) ಭಾರತಾನಾ (೪೨) ಪುಷ್ಕರಣಾ (೪೩) ಖಾದಯತಾ (೪೪) ಮಾರು ಬ್ರಾಹ್ಮಣರು (೪೫) ದಾಹಿಮಾ (೪೬) ಚೋವೀಸಾ (೪೭) ಜಾಂಬು (೪೮) ಮರಾಠಾ ಬ್ರಾಹ್ಮಣರು (೪೯) ದಧೀಛಾ (೫೦) ಲಲಾಟಾ (೫೧) ವಾಲೂಟಾ (೫೨) ಬೋರಸಿದ್ಧಾ (೫೩) ಗೋಲಾವಾಲಾ (೫೪) ಪ್ರಯಾಗವಾಲಾ (೫೫) ನಾಯಕವಾಲಾ (೫೬) ಉತ್ಕಲ (೫೭) ಪಲ್ಲಿವಾಲಾ (೫೮) ಮಥುರಾ (೫೯) ಮೈಥಿಲಾ (೬೦) ಕುಲಾಭಾ (೬೧) ಬೇಡುಆ (೬೨) ರಾವವಾಲಾ (೬೩) ದಶಹರಾ ಬ್ರಾಹ್ಮಣರು (೬೪) ಕರ್ನಾಟಿಕ (೬೫) ತಾಲಾಜಿಯಾ (೬೬) ಪರಾಶರಿಯಾ (೬೭) ಅಭಿರಾ (೬೮) ಕುಂಡು (೬೯) ಹಿರಾವಮಾಜಿಯಾ (೭೦) ಮಾಸ್ತವಾ (೭೧) ಸ್ಥಿತಿಕ್ಷಾ (೭೨) ಜಿಲಾ (೭೩) ತಿಲೋತಿಯಾ (೭೪) ದುರ್ಮಾಲಾ (೭೫) ಕೊಡ್ಡಾ (೭೬) ಹನುಷನಾ (೭೭) ಶೇವಡಾ (೭೮) ತಿತ್ರಾಗಾ (೭೯) ಬಾಸುಲದಾಸ್ (೮೦) ಮಾಗವಾರ್ಯಾ (೮೧) ರಾಯಸ್ಥಲಾ (೮೨) ಛಾಪಿಲಾ (೮೩) ಬಾರಾಡಾ (೮೪) ಭುಕಾನಿಯಾ (೮೫) ಗರೋಡಾ (೮೬) ತಪೋರ್ಣಾ.

## II ಗೌಡ ಬ್ರಾಹ್ಮಣರು

ದ್ರಾವಿಡರಂತೆ ಗೌಡ ಬ್ರಾಹ್ಮಣರಲ್ಲಿಯೂ ಐದು ಉಪವಿಭಾಗಗಳಿವೆ :
(೧) ಸಾರಸ್ವತರು (೨) ಕನ್ಯಾಕುಬ್ಜಾ (೩) ಗೌಡ ಬ್ರಾಹ್ಮಣರು (೪) ಉತ್ಕಲ (೫) ಮೈಥಿಲಬ್ರಾಹ್ಮಣರು. ಪಂಚದ್ರಾವಿಡರಂತೆಯೇ ಈ ಪಂಚ ಗೌಡರಲ್ಲಿಯೂ ಆಂತರಿಕ ಸ್ವರೂಪ ರಚನೆ, ಆಂತರಿಕ

ವಿಭಾಗಗಳು, ಉಪವಿಭಾಗಗಳು ಹೆಚ್ಚು ಕಡಿಮೆ ಇರುವ ಪ್ರಶ್ನೆಯ ಸಾಧ್ಯತೆ ಉಂಟು. ಆದ್ದರಿಂದ ಈ ಉದ್ದೇಶದಿಂದ ಪ್ರತಿ ಗುಂಪನ್ನು ಪ್ರತ್ಯೇಕವಾಗಿ ತೆಗೆದುಕೊಳ್ಳೋಣ.

**ಸಾರಸ್ವತ ಬ್ರಾಹ್ಮಣರು**

ಪ್ರಾದೇಶಿಕವಾಗಿ ಇವರನ್ನು ಮೂರು ವಿಭಾಗಗಳಲ್ಲಿ ವಿಂಗಡಿಸಬಹುದು.

(೧) ಪಂಜಾಬದ ಸಾರಸ್ವತರು (೨) ಕಾಶ್ಮೀರದ ಸಾರಸ್ವತರು (೩) ಸಿಂಧದ ಸಾರಸ್ವತರು.

**ಪಂಜಾಬದ ಸಾರಸ್ವತರು**

ಲಾಹೋರ್, ಅಮೃತಸರ, ಬಟಾಳಾ, ಗುರುದಾಸಪುರ, ಜಲಂಧರ್, ಮುಲ್ತಾನ್, ಝಾಂಗ, ಶಾಹಾಪೂರ– ಇವರಲ್ಲಿಯೂ ಉಚ್ಚ ಮತ್ತು ನೀಚ ಉಪಜಾತಿಗಳಿವೆ.

**ಉಚ್ಚ ಜಾತಿಯವರು**

(೧) ನವಾಲೆ (೨) ಚುನಿ (೩) ರಾವಡೆ (೪) ಸಂವಾಲಿಯ (೫) ಪಂಡಿತ (೬) ತಿಖೆ (೭) ಝಿಂಗಾನ್ (೮) ಕುಮಾದಿಯ (೯) ಜೇಟ್ಲೆ (೧೦) ಮೋಹ್ಲೆ ಅಥವಾ ಮೋಲೆ (೧೧) ತಿಖೆ–ಅಂಡೆ (೧೨) ಝಿಂಗನ್ ಪಿಂಗನ್ (೧೩) ಜೇಟ್ಲಿ–ಪೇಟ್ಲಿ (೧೪) ಕುಮಾದಿಯೆ – ಲುಮಾದಿಯೆ (೧೫) ಮೋಹ್ಲೆ–ಬೋಹ್ಲೆ (೧೬) ಬಾಗೆ (೧೭) ಕಾಪುರಿಯೆ (೧೮) ಭಾತುರಿಯೆ (೧೯) ಮಾಲಿಯ (೨೦) ಕಾಲಿಯ (೨೧) ಸಾಂಡಾ (೨೨) ಪಾಠಕ (೨೩) ಕುರಾಲ್ (೨೪) ಭಾರದ್ವಾಜೀ (೨೫) ಜೋಶಿ (೨೬) ಶೋರಿ (೨೭) ತಿವಾಡಿ (೨೮) ಮಾರುಡ (೨೯) ದತ್ತಾ (೩೦) ಮುಜ್ವಾಲ (೩೧) ಛಿಬಾರ್ (೩೨) ಬಾಲಿ (೩೩) ಮೋಹನಾ (೩೪) ಲಾವಾ (೩೫) ವೈದ್ಯ (೩೬) ಪ್ರಭಾಕರ (೩೭) ಶಾಮೆ–ಮೋತ್ರೆ (೩೮) ಭೋಜಾ–ಮೋತ್ರೆ (೩೯) ಸಿಂಘೇ–ಮೋತ್ರೆ (೪೦) ವಟ್ಟೆ–ಮೋತ್ರೆ (೪೧) ಧನ್ಸ್ನ್–ಪೋತ್ರೆ (೪೨) ದ್ರಾವಡೆ (೪೩) ಗೈಂಧಾರ (೪೪) ತಖ್ತ ಲಾಲಡಿ (೪೫) ಶಾಮಾದಾಸಿ (೪೬) ಸೆತ್‌ಪಾಲ್ (೪೭) ಮುಫ್ರತ್ (೪೮) ಭಾರದ್ವಾಜೀ (೪೯) ಕಾಟ್‌ಪಾಲೆ (೫೦) ಘೋಟಕೆ (೫೧) ಮುಕರ್ಜಿ.

**ಕೆಳಜಾತಿಗಳು**

(೫೨) ದಿಡ್ಡಿ (೫೩) ಶ್ರೀಧರಾ (೫೪) ವಿನಾಯಕಾ (೫೫) ಮಜ್ಜು (೫೬) ಖಿಂಡಾರಿಯೆ (೫೭) ಹಾರದ (೫೮) ಪ್ರಭಾಕರ (೫೯) ವಾಸುದೇವ (೬) ಪರಾಶರಾ (೬೧) ಮೋಹನಾ (೬೨) ಪಂಜಾನ್ (೬೩) ತಿವಾರಾ (೬೪) ಕಪಾಲಾ (೬೫) ಭಾರಖಾರಿ (೬೬) ಸೋಧಿ (೬೭) ಕಾಜಾರ್ (೬೮) ಸಂಗದ್ (೬೯) ಭಾರದ್ವಾಜಿ (೭೦) ನಾಗೇ (೭೧) ಮಕಾವರ (೭೨) ವಶಿಷ್ಠಾ (೭೩) ದಂಗಾವಲ (೭೪) ಜಲಪ್ (೭೫) ತ್ರಿಪಾನೆ (೭೬) ಭಾರತೆ (೭೭) ಬನಸಾಲೆ (೭೮) ಗಂಗಾಹರ್ (೭೯) ಜೋತಾಷಿ (೮೦) ರಿಖಿ (ಅಥವಾ ರಿಷಿ) (೮೧) ಮಂದಾರ್ (೮೨) ಬ್ರಾಹ್ಮೀ (೮೩) ತೇಜಪಾಲ್ (೮೪) ಪಾಲ್ (೮೫) ರೂಪಾಲ್ (೮೬) ಲಖಿನ್ ಪಾಲ್ (೮೭) ರತನ್ ಪಾಲ್ (೮೮) ಶೇತ್ ಪಾಲ್ (೮೯) ಭಿಂಡೆ (೯೦) ಧಾಮಿ (೯೧) ಛಾನನ್ (೯೨) ರನದೇಹಾ (೯೩) ಭೂಟಾ (೯೪) ರತಿ (೯೫) ಕುಂಡಿ (೯೬) ಹಸಧೀರ

(೯೭) ಪಂಜ್ (೯೮) ಸಾಂಧಿ (೯೯) ಬಾಹೋಯೆ (೧೦೦) ವಿರಾದ (೧೦೧) ಕಾಲಂದ (೧೦೨) ಸುರನ್ (೧೦೩) ಸೂದನ್ (೧೦೪) ಓಝೆ (೧೦೫) ಬ್ರಾಹ್ಮ ಸಕುಲ (೧೦೬) ಹರಿಯ (೧೦೭) ಗಷೇಷು (೧೦೮) ಭಾನೋಟ್ (೧೦೯) ಟಿನುನಿ (೧೧೦) ಜಲ್ಲಿ (೧೧೧) ಟೋಲೆ (೧೧೨) ಜಾಲಾಪ್ (೧೧೩) ಚಿಟ್ ಘೋಟ್ (೧೧೪) ಪಾಧೆ ಅಥವಾ ಪಾಂಧೆ (೧೧೫) ಮಾರುದ್ (೧೧೬) ಲಾಲ್‌ದಿಯ (೧೧೭) ಟೋಟೆ (೧೧೮) ಕುಸಾರಿಟ್ (೧೧೯) ರಾಮತಲ್ (೧೨೦) ಕಾಪಲೆ (೧೨೧) ಮಸೋದಾರೆ (೧೨೨) ರತ್‌ನಿಯೆ (೧೨೩) ಚಂದನ್ (೧೨೪) ಭುರವಾನ್ (೧೨೫) ಮನ್‌ಧಾರ್ (೧೨೬) ಮಧಾರೆ (೧೨೭) ಲಾಕರ್‌ಫಾರ್ (೧೨೮) ಕುಂಡ (೧೨೯) ಕರದವ್ (೧೩೦) ಧಾಂಡೆ (೧೩೧) ಸಹಜಪಾಲ್ (೧೩೨) ಪಾಭಿ (೧೩೩) ರತಿ (೧೩೪) ಜೈಕ್ತೆ (೧೩೫) ದೈದ್ರಿಯೆ (೧೩೬) ಭಾತರೆ (೧೩೭) ಕಾಲಿ (೧೩೮) ಜಾಲ್‌ಪಾಟ್ (೧೩೯) ಮೈತ್ರಾ (೧೪೦) ಸಂಖಾತ್ರೆ (೧೪೧) ಉದ್ರಾ (೧೪೨) ವ್ಯಾಸ (೧೪೩) ಪಾಲ್ತು (೧೪೪) ಕಿರಾರ್ (೧೪೫) ಪುಜೆ (೧೪೬) ಇಸಾರ್ (೧೪೭) ಲಟ್ಟಾ (೧೪೮) ಧಾಮಿ (೧೪೯) ಕಲ್ಭನ್ (೧೫೦) ಮದಾರಖಂಬ್ (೧೫೧) ಬೇಡೇಸರ (೧೫೨) ಸಲ್‌ವಹನ್ (೧೫೩) ಧಂಡೆ (೧೫೪) ಮರುದ್ (೧೫೫) ಬಾತುರೆ (೧೫೬) ಜೋಟಿ (೧೫೭) ಸೋಯಾರಿ (೧೫೮) ತೇಜಪಾಲ (೧೫೯) ಕುರುಲಪಾಲ್ (೧೬೦) ಕಾಲಸ್ (೧೬೧) ಜಾಲಪ (೧೬೨) ತಿನ್ನಣಿ (೧೬೩) ತಂಗಾನಿವಾತ್ (೧೬೪) ಜಾಲ್‌ಪಾಟ್ (೧೬೫) ಪಟ್ಟು (೧೬೬) ಜಾಸ್ರವಾ (೧೬೭) ಜಯಚಂದ್ (೧೬೮) ಸನ್ ವಾಲ (೧೬೯) ಅಗ್ನಿಹೋತ್ರಿ (೧೭೦) ಅಗ್ರಫಕ್ಕಾ (೧೭೧) ರುಥಾಡೆ (೧೭೨) ಭಾಜಿ (೧೭೩) ಕಚ್ಚಿ (೧೭೪) ಸಲೀಲಿ (೧೭೫) ಭಾಂಬಿ (೧೭೬) ಮೇಡು (೧೭೭) ಮೇಹಡ್ (೧೭೮) ಯಾಮೆ (೧೭೯) ಸಂಗಾರ್ (೧೮೦) ಸ್ಯಾಂಗ್ (೧೮೧) ನೇಹರ್ (೧೮೨) ಚಾತ್‌ಪಾಲಿಯು (೧೮೩) ಬಿಜರಾಯೆ (೧೮೪) ನಾರದ್ (೧೮೫) ಕುತ್‌ವಾಲ್ (೧೮೬) ಕೋತ್‌ಪಾಲ್ (೧೮೭) ನಾಭ (೧೮೮) ನಾದ (೧೮೯) ಪರಾಂಜೆ (೧೯೦) ಖೇತಿ (೧೯೧) ಅರಿ (೧೯೨) ಭಾವ್ದೆ (೧೯೩) ಬಿಬ್ಡೆ (೧೯೪) ಬಾಂಡು (೧೯೫) ಮಚ್ಚು (೧೯೬) ಸುಂದರ್ (೧೯೭) ಕರಾಡಗೆ (೧೯೮) ಛಿಬ್ಬೆ (೧೯೯) ಸಾಧಿ (೨೦೦) ತಲ್ಲನ್ (೨೦೧) ಕರದ್ದಾಮ್ (೨೦೨) ಝುಮಾನ್ (೨೦೩) ರಾನಗಡೆ (೨೦೪) ಭೋಗ್ (೨೦೫) ಪಾಂಡೆ (೨೦೬) ಗಾಂಡೆ (೨೦೭) ಪಾಂಟೆ (೨೦೮) ಗಾಂಧೆ (೨೦೯) ಧಿಂಡೆ (೨೧೦) ಟಾಗಲೆ (೨೧೧) ದಾಗಲೆ (೨೧೨) ಲಾಹದ್ (೨೧೩) ತಾಡ್ (೨೧೪) ಕಾಯಿ (೨೧೫) ಲುಥ್ (೨೧೬) ಗಂಧರ್ (೨೧೭) ಮಾಹೆ (೨೧೮) ಸೈಲಿ (೨೧೯) ಭಾಗಿ (೨೨೦) ಪಾಂಡೆ (೨೨೧) ಪಿಪರ್ (೨೨೨) ಜಾಥೀ.

(ಬಿ) ಕಾಂಗಡಾದ ಸಾರಸ್ವತ ಬ್ರಾಹ್ಮಣರು ಮತ್ತು ಅದರ ಎದುರಿನ ಗುಡ್ಡುಗಾಡು ಬ್ರಾಹ್ಮಣರು. ಅವರಲ್ಲಿಯೂ ಉಚ್ಚ ಮತ್ತು ನೀಚ ಜಾತಿಗಳಿವೆ.

**ಉಚ್ಚ ಜಾತಿ**

(೧) ಓಸ್ದಿ (೨) ಪಂಡಿತ್ ಕಾಶ್ಮೀರಿ (೩) ಸೋತ್ರಿ (೪) ವೇದ್ವಿ (೫) ನಾಗಾ (೬) ದೀಕ್ಷಿತ್ (೭) ಮಿಶ್ರಿ ಕಾಶ್ಮೀರಿ (೮) ಮಾದಿಹಾತು (೯) ಪಂಚಕರ್ಣ (೧೦) ರೈನೆ (೧೧) ಕುರುಡು (೧೨) ಆಚಾರಿಯೆ.

**ಕೆಳಜಾತಿಗಳು**

(೧೩) ಛಿಥು (೧೪) ಪನ್ಯಾಲು (೧೫) ದುಂಬು (೧೬) ದೇಹ್ಯೈಡು (೧೭) ರುಖೆ (೧೮) ಪಂಬಾರ್ (೧೯) ಗುತ್ರೆ (೨೦) ದ್ಯಾಬುದು (೨೧) ಮೈತೆ (೨೨) ಪ್ರೋಟ್ (ಪುರೋಹಿತ್) ಜಾಡತೋತ್ರೋತಿಯೆ (೨೩) ವಿಶಿಪ್ರೋತ್ (೨೪) ಪಾಧೆ ಸರೋಜ್ (೨೫) ಪಾಧೆ ಖಾಜುರೆ (೨೬) ಪಾಧೆ ಮಾಹಿತೆ (೨೭) ಖಾಜುರೆ (೨೮) ಛುಟವನ್ (೨೯) ಭಾನ್ ವಾಲ್ (೩೦) ರಾಂಬೆ (೩೧) ಮಾಂಗ್ರುಡಿಯ (೩೨) ಖುರವಧ (೩೩) ಗಲವಧ (೩೪) ಡಾಂಗಮಾರ್ (೩೫) ಛಾಲಿವಾಲೆ.

(ಸಿ) ದತ್ತಾರಸುರ್ ಹೋಸಿಯಾರಪುರ್ ಮತ್ತು ಎದುರಿನ ಪ್ರದೇಶಗಳ ಸಾರಸ್ವತ ಬ್ರಾಹ್ಮಣರು.

**ಉಚ್ಚ ಜಾತಿಗಳು**

(೨) ಡೋಗ್ರೆ (೩) ಸರಮಾಯಿ (೪) ದುಭೆ ಲರ್ಖಪಾಲ್ (೫) ಪಾಧೆ ಧೋಲೆ ಬಾಲವೊಯೆ (೬) ಪಾಧೆ ಘೋಹಾಸನಿಯೆ (೭) ಪಾಧೆ ದಾಡಿಯೆ (೮) ಪಾಧೆ ಖಿಂದಾದಿಯಾ (೯) ಖಾಜುರಿವೆ.

**ಕೆಳಜಾತಿಗಳು**

ಕಪಾಹಟಿಯ, ಭಾರಯಾಲ್, ಛಾಪ್ರೋಹಿಯೆ, ಮಾಕಡೆ, ಕುಟಾಲಿಡಿಯ, ಸರದ, ದಗಾಡು, ವಾಂಟಡೆ, ಮುಛಲೆ, ಸಮ್ಮೋಲ್, ಧೋಸೆ, ಭಾಟೋಲ್, ರಾಜೋಹ, ಧಾನಿಕ್, ಪಾನಯಾಲ್, ಛಿಬ್ಬೆ, ಮಾಡೋತೆ, ಮಿಶಾರ್, ಛಾಕೋತಾರ್ ಜಾಲ್ರಿರಿಯ, ಲಹದ್, ಸೆಲ್, ಭಾಸುಲ್, ಪಂಡಿತ್, ಛಂಗೈಲ್, ಲಥ, ಸಾಂಡ್, ಲೈ, ಗಡೋತ್ರೆ, ಛಿರನೋಲ್ ಬಾಧಲೆ, ಶ್ರೀಧರ್ ಪಟ್ಟು, ಜುವಾಲ್ ಮೈತೆ, ಕಾಕ್ಲಿಯ ಟಕ್ ಝೋಲ್ ಭಾಡೋ, ತಂಡಿಕ್ ಝುಮುತಿಯಾರ್, ಎ–೧. ಮೀರಾತ್, ಮುಕತಿ, ದಾಲಭಾಲ್ಲಿ, ಭಾತೋಹಯೆ, ತ್ಯಾಹಯೆ ಭಾತಾತ್ರೆ.

**ಕಾಶ್ಮೀರ ಸಾರಸ್ವತರು**

ಅವರಲ್ಲಿ ಎರಡು ಒಳ ವಿಭಾಗಗಳಿವೆ.

ಅ) ಜಮ್ಮು, ಜಾಸ್ರೋತಾ ಮತ್ತು ಪಕ್ಕದ ಗುಡ್ಡಗಾಡಿನ ಸಾರಸ್ವತ ಬ್ರಾಹ್ಮಣರು. ಅವರಲ್ಲಿ ಉಚ್ಚ ಮಧ್ಯಮ ಮತ್ತು ನೀಚ ಜಾತಿಯವರೆಂದು ವರ್ಗೀಕರಣವಿದೆ.

**ಉಚ್ಚ ಜಾತಿಗಳು**

ಅಂಗೋತ್ರೆ, ಥಾಪ್ಪೆ, ದುಬೆ ಸಪೋಲಿಯೆ, ಪಾಧೆ ಬಡಿಯಾಲ್, ಕೇಸರ್, ನಾದ, ಖಾಜುರೆ ಪ್ರಹೋತ್, ಜಾಮವಲ್ ಪಂಡಿತ್, ವೈದ್ಯ, ಲಾವಾ, ಛಿಬಾರ್, ಅಲಿಯೆ ಮೋಹನ್, ಬಾಂಬಾವಲ್.

**ಮಧ್ಯಮ ಜಾತಿಗಳು**

ರೈನೆ, ಸಾತೋತ್ರೆ, ಕಾತೋತ್ರೆ, ಲಾಲೋತ್ರೆ, ಭಾಂಗೋತ್ರೆ, ಸಾಮನೋತ್ರೆ, ಕಾಶ್ಮೀರಿಪಂಡಿತ್, ಪಾಂಡೋತ್ರೆ, ವಿಲ್ಹ ನೋಕ್, ಬಾಡು, ಕೆರನಾಯೆ ಪಂಡಿತ್, ದಾನಾಲ್ ಪಾಧೆ, ಆಧೋತ್ರೆ, ಮಿಶ್ರಾ, ಪರಾಶಾರಾ, ಬಾವಗೋತ್ರೆ, ಮಾನಸೋತ್ರೆ ಸುಧಾತಿಯೆ.

**ಕೆಳಜಾತಿಗಳು**

ಸುದಾನ್, ಸುಖೆ, ಭುರೆ, ಛಂದನ್, ಜಾಲೋತ್ರೆ, ನಭೋತ್ರೆ, ಖಾಡೋತ್ರೆ, ಸಾಗ್‌ದೋಲೆ, ಭುರಿಯೆ, ಭಾಗನಭಾಹಲ್, ರಾಜುಲಿಯೆ, ಸಾಂಗ್ಡೆ, ಮುಂಡೆ, ಸುರನ್‌ಭಾಲ್, ಲಡಂಝುನ್, ಜಾಖೋತ್ರೆ, ಲಖನ್‌ಪಾಲ್, ಗೌಡ, ಪುರೋಹಿತ್, ಷಾಗೋತ್ರೆ, ಖಾನೋತ್ರೆ ಗರೋಕ್, ಮಾರೋತ್ರೆ, ಉಪಾಧೆ, ಖಿಂಧಯೆಪಾಧೆ, ಕಾಲಾಂದರಿ, ಜರದ್, ಉದಿಹಾಲ್, ಘೋಡ, ಬಸ್‌ನೋತ್ರೆ, ಬರತ್, ಭಾರ್‌ಗತ್, ಲಾವಂತಿ, ಭರಂಗೋಲ್, ಜಾರಂಗಲ್, ಗುಹಾಲಿಯೆ, ಧಾರಿಯಾಂಭಾ, ಪಿಂಡಾದ್ ರಾಜುನಿಯೆ, ಬಡಾಕುಲಿವೆ ಸಿರಖಂಡಿಯೇ, ಕಿರಪಾದ್, ಬಲ್ಲಿ, ಸಲುರ್ನ್, ರತನ್‌ಪಾಲ್, ಬನೋಟ್ರೆ, ಯಂತ್ರಧಾರಿ, ದಾದ್ರೋರಿಚ್, ಭಾಲೋಕ್, ಭಾಭಿಹೈಲ್, ಜಂಗೋತ್ರೆ, ಮಾಗ್‌ದೋಲ್, ಫಾಲುನ್‌ಫಾನ್, ಸಾರೋಚ್, ಗುಡ್ಡೆ, ಕಿರ್ಲೆ, ಮಾನಸೋತ್ರೆ, ತಮ್ಮೋತ್ರೆ, ಥನ್‌ಮಾಥ್, ಬ್ರಾಮಿಯೆ, ಕುಂದನ್, ಗೋಕುಲಿಯ ಗೋಸೈನ್, ಛಾಕೋತ್ರೆ, ರಾಡ್, ಬಾರ್‍ಗ್ಗೋತ್ರೆ, ಕಾವಡೆ, ಮಾಗಟಯಾಲಿಯೆ, ಮಾಥಾರ್, ಮಾಹಿಜಿಯೆ, ಧಾಕುರೆ, ಪುರೋಹಿತ, ಗಲ್‌ಹಾಲ್, ಛಾಮ, ರಾಡ್, ಲಾಬೋತ್ರೆ, ರೇಡಾಥಿಯೆ, ಪಾಟಲ್, ಕಾಮಾನಿಯೆ, ಗಂಧಾರಗಾಲ್, ಪೃಥ್ವಿಪಾಲ್, ಮಾಧೋತ್ರೆ, ಕಾಂಬೋ, ಸರಮಾಯೀ, ಬಾಭಾಲ್ ಮಾಖೋತ್ರೆ ಜಾಡ್, ಬಾಟೈಲಿಯೆ, ಕುಡಿದಾಬ್, ಜಾಂಬೆ, ಕುರಾನ್‌ಥಿಯ, ಸುಸಾಡೆ, ಸಿಗಾಡ್, ಗರಾಡಿಯೆ, ಮಾಭಾರ್, ಭಾಗೋತ್ರೆ, ಸೈನ್‌ಹಾಸನ್, ಉತ್ರಿಯಲ್, ಸುಹಾಂಡಿಯಾ, ಝಿಂದಾದ್, ಬಟ್ವಲ್, ಬೈಖಾಂರೆ, ಬಿಸ್‌ಗೋತ್ರೆ, ಝೂಲು, ದಾಬ್, ಭುಟಾ ಕಾಠಿಯಾಲು, ಪಾಲಾಧು, ಜಾಖೊತ್ರಿ, ಪಾಂಗೇ, ಸೋಲ್ಡೆ, ಸುಗುಣಿಯೆ, ಸನ್‌ಹೋಕ್, ದುಹಾಲ್, ಬಾಂಡೋ, ಕಾನುಂಗೋ, ಝೂವಡು, ಝೂಪಾರು, ಕಾಲಿಯೆ, ಖಪಾಂಖೋ.

**ಕಾಶ್ಮೀರ ಸಾರಸ್ವತರು**[೧]

ಕಾಶ್ಮೀರಿ ಬ್ರಾಹ್ಮಣರ ಪಟ್ಟಿ ಕೆಳಗಿನಂತಿದೆ :

ಕೌಲ, ರಾಜದಾನ್, ಗುರಿಟಿ, ಜಾಟಿಶ್, ದಾರ, ತ್ರಾಕಾರಿ, ಮುಝಿ, ಮನಸಿ, ಬೂತಲ್, ಜಾವಿ, ಬಾಜೆಯೆ, ರೀ, ಹುಂಡೋ, ದಿಪ್ತಿ, ಚಿಛವಾಲಿ, ರುಗಿ, ಕಾಲ್, ಸಮ್ ಹಾಂಜ್ ಹಾಸ್ತಿವಾಲಿ, ಮುಟು, ಟಿಕ್ಕು, ಗೈಸ್, ಗಡಿ, ಬ್ರಾರಿ, ಗಂಜ್, ವಂಗನ್, ವಾಗ್‌ನಾ, ಭುಟ್, ಭೈರವಾ, ಮದನ್, ದಿನಾ, ಶರಗಲ್, ಹಕಚಾರ್, ಹಕ್, ಕುಕರ್, ಛಾತರಿ, ಸೌನಮುರಿ, ಮಟ್ಟಿ, ಖುಶ್, ಶಖಧರ್, ವೈಷ್ಣಿವಾ, ಕೋಟಾರ್, ಕಕ್, ಕಛಾರಿ, ತೋಟೆ, ಸರಾಫ್, ಗುರಾಹ, ಥಂಥಾರ್, ಖಾರ್, ಥಾವುರ್, ಟೆಂಗ, ಸೈಯದ್, ಟ್ರುಪುರಾಯ, ಮುತಿ, ಸಫಾಯ್, ಭಾನ್, ವನ್ಯೆ, ಗಾರಿಯಲ್, ಥಾಪಲ್ ನೌರಿ, ಮಸಾಲ್‌ದಾನ್, ಮುಷರಾನ್, ಟರ್ಕಿ, ಪೋತೆದಾರ್, ಖಾರು, ಕರಬಾಂಗಿ, ಭಾಟ್, ಕಿಛಿಲು, ಛಾನ್, ಮುಕಾದಮ್, ಖಪಾರಿ, ಬುಲಾಕಿ, ಕರ್, ಜೇಲಾಲಿ ಸಫಾಯು, ಬಾಟಫಾಲಿ, ಹುಖಿ, ಕುಕಪರಿ, ಕಾಲಿ, ಜಾರಿ, ಗಂಜ, ಕಿಮ್, ಮುಂಡಿ, ಜಂಗಲ್, ಜಾಟಿ, ರಖ್ಯಾಸ್, ಬಾಕಾಯಿ, ಜೆರಿ, ಗಾರಿ, ಕಾಲಿ, ಪಂಜಿ, ಬಾಂಗಿ, ಸಾಹಿಬ, ಬೇಲಾವ್, ರಾಯಿ, ಗಾಲಿಕಾರಪ್, ಛಾನ್, ಕಬಾಬಿ, ಯಾಛ, ಜಾಲ್‌ಪುರಿ, ಸವಸಹಾರಿ, ಕಿಸಿ, ಧುಸಿ, ಗಾಮಖುರ್, ಧೋಲಾಲ್, ಪಿಸ್ತಾ, ಬದಾಮ್, ತ್ರಭಾಲ್, ನಾಡಿರ್, ಲಿಡಾರಿಗರಿ, ಪ್ಯಾಲ್, ಕಾಬಿ, ಛಾತ್ರಿ, ವಂತಿ, ವಾಟಿಲಿಲು, ಖಾರಿ,

---

೧. ಕಾಶ್ಮೀರಿ ಬ್ರಾಹ್ಮಣರು ಸಾರಸ್ವತರು ಹೌದೊ ಅಲ್ಲವೊ ಎಂಬ ಬಗೆಗೆ ವಿವಾದಗಳಿವೆ. ಕೆಲವರು ಅವರು ಸಾರಸ್ವತರು ಎಂದರೆ ಇನ್ನು ಕೆಲವರು ಹಾಗೆ ಅಲ್ಲ ಎನ್ನುತ್ತಾರೆ.

ವಾಸ್, ಜಾತಿ, ಸಾಬಂ, ದಂಡಿ, ರಾವಲ್, ಮಿಸಾರಿ, ಸಿಬ್ಬಿ, ಸಿಂಗಾರಿ, ಮಿಜ್ರೆ, ಮಾಲ, ವಾರಿಕಿ, ಜಾನ್, ಲುಟಾರಿ, ಪಾರಿಮ್, ಹಾಲಿ, ನಾಕಿಬ, ಮೇನ್, ಅಂಬಾರಾದಾರ್, ಉಖಾಲ್, ಕಾಂಥ, ಬಾಲಿ, ಜಂಗಲಿ, ದುಲಿ, ಪಾರವಾ, ಹಾರಕರ್, ಗಾಗರ್, ಪಂಡಿತ್, ಜಾರಿ, ಲಂಗೀ, ಮುಕ್ಕಿ, ಬಿಹಿ, ಪಡೋರ್, ಪಾಡೆ, ಜಾಂಡ, ತೆಂಗ್, ತುಂಡ, ಡ್ರಾಬಿ, ಡ್ರಾಲ್, ಫಾಂಬ್ಬಿ, ಸಾಜಾವುಲ್, ಬಕ್ಷಿ, ಉಗ್ರಾ, ನಿಚ್ವೆ, ಪಠಾಣ್, ವಿಚಾರಿ, ಉಂಥ್, ಕುಭಾರಿ, ಶಾಲ್‌ಬಾಬಿ, ಮಖಾನಿ, ಲಬಾರಿ, ಖಾನ್ಯಾ, ಖಾನ್ಯಕಾತಿ, ಶಾಹ, ಪಿರ್, ಖಿರಡಿ, ಖಿಂಕಿ, ಕಲ್‌ಪೋಷ್, ಪಿಷಾನ್, ಬಿಷಾನ್, ಬುಲ್, ಚೋಕಿ, ಛಕ್, ರಾಯ, ಪ್ರಿತಿ, ಪತಿ, ಕಿಛಲಿ, ಕಾಹಿ, ಜಿಜಿ, ಕಿಲ್‌ಮಕ್, ಸಲ್‌ಮಾನ್, ಕಡಾಲ್‌ಬಾಜು, ಕಂಡಾಹಾರಿ, ಬಾಲಿ, ಮಾನಟಿ, ಬಂಕನ್, ಹಕೀಮ್, ಗರೀಬ್ ಮಂಡಲ್, ಮಂಜಾಹಾ, ಷೇರ್, ನನ್, ಟೆಲಿ, ಖಲಾಶಿ, ಛಾಂದ್ರಾ, ಗಾಡಿರ್, ಜಾರಾಬಿ, ಸಿಹಾರಿ, ಕಲ್‌ವಿಟ್, ನಾಗರಿ ಮಂಗುವುಛ, ಬೈಬಾರಿ, ಕುಳ್ಳಿ, ಕಾಬಿ, ಖೋಸಾ, ದುರಾನಿ ತುಲಿ, ಗರಿಬ್, ಗಾಡಿ, ಜಾಟಿ, ರಕ್ಷಸಾಸ್, ಹಾರ್‌ಕರ್, ಗ್ರಾಡ್, ವಾಗಾರಿ – ಇತ್ಯಾದಿ ಇತ್ಯಾದಿ.

**ಸಿಂಧದ ಸಾರಸ್ವತರು**

ಅವರಲ್ಲಿಯ ಒಳವಿಭಾಗಗಳು

(೧) ಷಿಕಾರ್‌ಪುರೀಸ್ (೨) ಬಾರೋವಿಸ್ (೩) ರವನಜಾಹಿಸ್ (೪) ಶೇಟಪಾಲಸ್ (೫) ಕುವಛಂಡಾಸ (೬) ಪೋಖಾರನಾ.

## II ಕನ್ಯಾಕುಬ್ಜ ಬ್ರಾಹ್ಮಣರು

ಕನ್ಯಾಕುಬ್ಜರ ಹೆಸರು ಕನೋಜ ಎಂಬ ರಾಜಧಾನಿಯ ಮೇಲಿನಿಂದ ಬಂದಿದೆ. ಅದು ಅವರ ಸಾಮ್ರಾಜ್ಯದ ರಾಜಧಾನಿಯಾಗಿತ್ತು. ಅವರನ್ನು ಕನೋಜರು ಎಂದು ಕರೆಯಲಾಗುತ್ತಿತ್ತು. ಕನ್ಯಾಕುಬ್ಜ ಬ್ರಾಹ್ಮಣರ ಎರಡು ಕ್ರಮಾಂಕಗಳಿವೆ. ಸರ್‌ವಾರಿಯಾ ಮತ್ತು ಕನ್ಯಾಕುಬ್ಜರೆಂದು. ಸರ್‌ವಾರಿಯಾ ಎಂಬ ಹೆಸರು ಸರಯೂ ನದಿಯಿಂದ ಬಂದುದು ಮತ್ತು ಅದರ ಪೂರ್ವ ಭಾಗದಲ್ಲಿ ಈ ಜನರು ಇದ್ದರು. ಕನೌಜರ ಪ್ರಾದೇಶಿಕ ಭಿನ್ನತೆಯ ಜನತೆ ಅವರು. ಸರಯೂ ಮತ್ತು ಕನೌಜರ ಉಪಜಾತಿಗಳು ಒಂದೇ ಬಗೆಯದಾಗಿದ್ದವು. ಆದ್ದರಿಂದ ಕನೌಜರ ಉಪವಿಭಾಗಗಳನ್ನು ಹೇಳಿದರೆ ಸಾಕಾಗಬಹುದು.

(೧) ಮಿಶ್ರಾ (೨) ಶುಕ್ಲಾ (೩) ತಿವಾರಿ (೪) ದುಬೆ (೫) ಪಾಠಕ (೬) ಪಾಂಡೆ (೭) ಉಪಾಧ್ಯ (೮) ಚೌಬೆ (೯) ದೀಕ್ಷಿತ್ (೧೦) ವಾಜಪೇಯಿ.

ಈ ಮೇಲಿನ ಉಪವಿಭಾಗಗಳಿಗೆ ಮತ್ತೆ ಮರು ಉಪವಿಭಾಗಗಳಿವೆ.

**೧. ಮಿಶ್ರರು**

(೧) ಮಾಧಬನಿ (೨) ಛಂಪಾರನ್ (೩) ಪಾಟ್ಲಾಲ್ ಅಥವಾ ಪಾಟ್ಲಂಯಾಲ್ (೪) ರತನವಾಲಾ (೫) ಬಂಡೋಲ್ (೬) ಮಾಟೊಲ್ ಅಥವಾ ಮಾಟೇವಾಲ (೭) ಕಟಾರಿಯಾ (ಸಾಮವೇದ) (೮) ವತ್ಸ ಗೋತ್ರದ ನಾಗಾರಿಯಾ (೯) ಪಾಯಸಿ (ವತ್ಸಗೋತ್ರ) (೧೦) ಗಣಾ (೧೧) ಟೆವುಂಟಾ (೧೨) ಮಾರ್ಜಾನಿ ಗುರ್‌ಹಾ (೧೩) ಮಾರ್‌ಕರಾ (೧೪) ಜಿಗ್ನ್ಯಾ (೧೫) ಪಾರಾಯನಾ (೧೬) ಪೇಪಾರಾ (೧೭) ಆಟೇರ್ಪಾ ಅಥವಾ ಅಥರ್ಪಾ (೧೮) ಹಾಥೊಪಾರಾ

(೧೯) ಸುಗಂತಿ (೨೦) ಖೇತಾ (೨೧) ಗ್ರಾಂಬಾಸಿ (೨೨) ಬಿರಹ (೨೩) ಕೌಸಿ (೨೪) ಕೇವತಿ (೨೫) ರೈಸಿ (೨೬) ಭಾಹ್ಯಾಜಿಯಾ (೨೭) ಬೆಲ್ವ (೨೮) ಉಸ್ರೈನಾ (೨೯) ಕೋಡಿಯಾ (೩೦) ತವಕಪುರಿ (೩೧) ಜಿವಾಲ್‌ಪುರಿ (೩೨) ಶೃಂಗರಪುರಿ (೩೩) ಸೀತಾಪುರಿ (೩೪) ಪುಟಾವಾ (೩೫) ಸಿರಾಜಪುರಿ (೩೬) ಭಾಮ್‌ಪುರಿ (೩೭) ಟೆರ್ಕಾ (೩೮) ದುಧಾಗಾಮಿ (೩೯) ರತ್ನಾಪುರಿ (೪೦) ಸುನಹಸ್ಲಾ.

**೨. ಶುಕ್ಲರು**

(೧) ಎರಡು ಹಳ್ಳಿಗಳಿಂದ ಕೂಡಿ ಹೆಸರಾದ ಖಾಖಯಿಖೋರ್ (೨) ಎರಡು ಹಳ್ಳಿಗಳಿಂದ ಹೆಸರಾದ ಮಾಮ್‌ಖೋರ್ (೩) ತಿಪ್ತಿ (೪) ಭೇಡಿ (೫) ಬಕಾರುವಾ (೬) ಕಾಂಜಾ (೭) ಖಂಡೈಲ್ (೮) ಬೇಲಾ (೯) ಅವಸ್ತಿಯ ಬದಲಾವಣೆ (೧೦) ತೇವರಾಸಿ ಪ್ರಭಾಕರ (೧೧) ಮೇಹುಲಿಯಾರ್ (೧೨) ಬರಬಾಹಿಯಾ (೧೩) ಭಾಂಡಾ (೧೪) ಗ್ರಾಗ (೧೫) ಗೌತಮಿ (೧೬) ಪಾರಸಾ (೧೭) ತಾರಾ (೧೮) ಬಾರಿಖಪುರಿ (೧೯) ಕಾರ್ಯವ (೨೦) ಅಜ್ಜಮದ್ ಗಧ್ಯ (೨೧) ಪಿಚೌರ (೨೨) ಮಾಸುವಾ (೨೩) ಸೋಂಥೈನ್ವಾ (೨೪) ಆಕಿನ್ (೨೫) ಬಿರ್ (೨೬) ಗೋಪಿನಾಥ.

**೩. ತಿವಾರಿಗಳು**

(೧) ಲೋನಾಖರ (೨) ಲೋನಾಪಾರ್ (೩) ಮಂಜುವಾನಾ (೪) ಮಂಗ್ರೈಥ (೫) ಝುನಾದಿಯಾ (೬) ಸೊಹಗಾವುರಾ (೭) ತಾರಾ (೮) ಗೋರಖಪುರಿಯಾ (೯) ದಾವುರಾವಾ (೧೦) ಪೆಂಡಿ (೧೧) ಸಿರಜಾಮ್ (೧೨) ಧಾತುರಾ (೧೩) ಪನೌಲಿ (೧೪) ನಾಡೌಲಿ ಅಥವಾ ತಂಡೌಲಿ (೧೫) ಬುರಹಿಯಾಬಾರಿ (೧೬) ಗುರಾಲುಲಿ (೧೭) ಜೋಗಿಯಾ (೧೮) ದೀಕ್ಷಿತ (೧೯) ಸೊನೌರಾ (೨೦) ಅಗೋರಿ (೨೧) ಭಾರ್ಗವಾ (೨೨) ಬಾಕಿಯಾ (೨೩) ಕುಕುರ್ಗ್ ಗಾರಿಯಾ (೨೪) ದಾವಾ (೨೫) ಗೋಪಾಲಾ (೨೬) ಗೋವರ್ಧನಾ (೨೮) ಟುಕೆ (೨೯) ಭಟ್ಟು (೨೯) ಶಿವಾಲಿ (೩೦) ಶಖಾರಾಜ (೩೧) ಉಮಾರಿ (೩೨) ಮನೋಹಾ (೩೩) ಶಿವರಾಜಪುರ (೩೪) ಮಾನಧನಾ (೩೫) ಸಾಪೆ (೩೬) ಮಾನಧನ ತ್ರಿವೇದಿ (೩೭) ಲಾಹರಿ ತ್ರಿವೇದಿ (೩೮) ಜೇಠಿ ತ್ರಿವೇದಿ.

**೪. ದುಬೆಯವರು**

(೧) ಕಂಭಾನಿ (೨) ಸಿಂಘವಾ (೩) ಬೆಲವಾ (೪) ಪಾರವಾ (೫) ಕರೈಯಾ (೬) ಬರಗೈನ್ಯ (೭) ಪಂಭಾನಿ (೮) ಲಾಧಿಹಿ (೯) ಗುರುದ್ವನ (೧೦) ಮೇಥಿಬರ್ (೧೧) ಬರಮಪುರಿಯಾ (೧೨) ಸಿಂಗಿಲಾವಾ (೧೩) ಕುಭಾಲಾ (೧೪) ಮುಂಜಾಲ್ವಾ (೧೫) ಪಾಲಿಯಾ (೧೬) ಧೇಗ್ವಾ (೧೭) ಸಿಸ್ರಾ (೧೮) ಸಿನಾನಿ (೧೯) ಕುಡವಾರೆ (೨೦) ಕಟ್ಟೆಯಾ (೨೧) ಪಾನ್ವಾ

**೫. ಪಾಠಕರು**

(೧) ಸೋನೌರಾ (೨) ಅಂಬಾತಾರಾ (೩) ಪಾಠಕವಲಿಯಾ (೪) ಧಿಗ್‌ವಾಥ (೫) ಭಂಡಾರಿ.

### ೬. ಪಾಂಡೆಯವರು

(೧) ತಿರ್‌ಫಾಲಾ ಅಥವಾ ತ್ರಿಫಲಾ (೨) ಜೋರವಾ (೩) ಮಾಟ್ಯೆನ್ಯಾ (೪) ತೋರ್‍ಯಾ (೫) ನಖಭೌರಿ (೬) ಪಾರೀಷಾ (೭) ಸಹನ್‌ಕೋಲ್ (೮) ಬಾರಹದಿಯಾ (೯) ಗೇಗಾ (೧೦) ಖೋರಿಯಾ (೧೧) ಪಿಚೌರಾ (೧೨) ಪಿಚೌರಾಪ್ಯಾಸಿ (೧೩) ಜುಟಿಯಾ ಅಥವಾ ಜಾಟ್ಯಾ (೧೪) ಇತಾರ್ ಅಥವಾ ಇಂತಾರ್ (೧೫) ಬೆಸ್ತೌಲ ಅಥವಾ ಬೆಸ್ತಾವಾಲಾ (೧೬) ಛಾರಪಾಂಡ (೧೭) ಸಿಲಾ (೧೮) ಅಧುರ್ಜ (೧೯) ಮಾದರಿಯಾ (೨೦) ಮಾಜಗೌಮ್ (೨೧) ದಿಲಿಪಾಪಾರ್ (೨೨) ಪಾಯಣತ್ಯಾ (೨೩) ನಾಗದ (೨೪) ತಾಲವ (೨೫) ಜಾಂಬು.

### ೭. ಉಪಾಧ್ಯರು

ಅವರಲ್ಲಿ ನಾಲ್ಕು ವಿಭಾಗಗಳಿವೆ :

(೧) ಹರ್‍ಯೆನ್ಯಾ ಅಥವಾ ಹಿರಿನ್ಯ (೨) ದೇವರ್‍ಯೆನ್ಯಾ (೩) ಖೋರಿಯಾ (೪) ಜೈಥ್ಯ (೫) ದಹೇಂದ್ರ (೬) ಗೋರತ್ (೭) ರಾನೀಸರಪ್ (೮) ನಿಝಾಮಬಾದ್ (೯) ದುಧೋಲಿಯಾ (೧೦) ಬಾಸಗವಾ

### ೮. ಚೌಬೆಗಳು

(೧) ನಾಯಪುರಾ (೨) ರಾರಗಾಡಿ (೩) ಛೌಖಾರ (೪) ಕಟಯ್ಯಾಸ್ (೫) ರಾಮಪುರಾ (೬) ಪಾಲಿಯಾ (೭) ಹರದಾಸಪುರ (೮) ತಿಬ್ಯೆಯಾ (೯) ಜಮಾದುವಾ (೧೦) ಗಾರ್ಗೇಯಾ

### ೯. ದೀಕ್ಷಿತರು

(೧) ದೇವಗೌಮ (೨) ಕಾಕರಿ (೩) ನೇವರ್ಶಿಯಾ (೪) ಆಂಟರ್ (೫) ಸುಕಾಂತಾ (೬) ಚೌಧರಿ (೭) ಜುಜಾವಾತಿಯಾರ್.

### ೧೦. ವಾಜಪೇಯರು

(೧) ಉಂಚೆ ಅಥವಾ ಉಚ್ಚ (೨) ನೀಚೆ ಅಥವ ಕೆಳದರ್ಜೆ

ಈ ಮೇಲಿನ ವಿಭಾಗ–ಉಪವಿಭಾಗಗಳಲ್ಲದೇ ಕನ್ಯಾಕುಬ್ಜರಲ್ಲಿಯ ಇನ್ನು ಕೆಲವರನ್ನು ಕೆಳದರ್ಜೆಯ ಜಾತಿ ಎಂದು ಗುರುತಿಸಲಾಗುತ್ತದೆ. ಅವರಲ್ಲಿ :

(೧) ಸಾಮದಾರಿಯಾ (೨) ತಿರಗುವಾತಿ (೩) ಭಾಲುರ್‍ಧಾ (೪) ಖಬೀಸಾ (೫) ಕೇವಟಿ (೬) ಚಾಂದ್ರಾವಾಲಾ (೭) ಕುಸುಂಬಿಯಾ (೮) ಬಿಸೋಯ್ಯಾ (೯) ಕನಹಾಲಿ (೧೦) ಖಜವಾಯಿ (೧೧) ಕಿಸಿರಮನ್ (೧೨) ಪೈಹಿಯಾ (೧೩) ಮಸೋನಾದ (೧೪) ಬಿಜಾರಾ (೧೫) ಅನ್ಸಾನೌರಾ.

### III ಗೌಡ ಬ್ರಾಹ್ಮಣರು

ಗೌಡ ಎಂಬ ಈಗ ಹಾಳಾದ ಊರಿನಿಂದ ಅವರಿಗೆ ಈ ಹೆಸರು ಬಂದಿತು. ಬಹಳ ಕಾಲ ಅದು ಬಂಗಾಳ –ಬಿಹಾರಗಳ ರಾಜಧಾನಿಯಾಗಿತ್ತು (ಅಂಗ ವಂಗ ಮತ್ತು ಬಂಗರ ಚಟುವಟಿಕೆಯ ಕೇಂದ್ರವಾಗಿತ್ತು). ಅವರಲ್ಲಿ ಮುಖ್ಯವಾಗಿ ಈ ಕೆಳಗಿನ ಉಪವಿಭಾಗಗಳಿವೆ :

(೧) ಗೌಡರು ಅಥವಾ ಕೇವಲ ಗೌಡರು (೨) ಆದಿ ಗೌಡರು (೩) ಶುಕ್ಲಾವಲಾ ಆದಿ ಗೌಡರು

(೪) ಓಝಾ (೫) ಸನಧ್ಯಾಗೌಡ (೬) ಚಿಂಗಾಲಾ (೭) ಖಂಡೇವಾಲಾ (೮) ದೇಮಯಾ (೯) ಶ್ರೀ ಗೌಡರು (೧೦) ತಾಂಬೋಲಿ ಗೌಡ (೧೧) ಆದಿ ಶ್ರೀ ಗೌಡರು (೧೨) ಗುರ್ಜರ ಗೌಡ (೧೩) ಟೇಕಬಾರಾ ಗೌಡರು (೧೪) ಛವಾರ್ ಗೌಡರು (೧೫) ಹರಿಯಾನಾ (೧೬) ಕೀರ್ತನ್ಯಾ (೧೭) ಸುಕುಲ ಗೌಡರು.

### IV ಉತ್ಕಲ್ ಬ್ರಾಹ್ಮಣರು

ಉತ್ಕಲ್ ಎಂಬುದು ಒರಿಸ್ಸಾದ ಪುರಾತನ ಹೆಸರು. ಉತ್ಕಲ್ ಬ್ರಾಹ್ಮಣರೆಂದರೆ ಒರಿಸ್ಸಾದ ಬ್ರಾಹ್ಮಣರು ಎಂದರ್ಥ. ಅವರಲ್ಲಿ ಈ ವಿಭಾಗಗಳಿವೆ :

(೧) ಶಷಾನಿ ಬ್ರಾಹ್ಮಣರು (೨) ಶ್ರೋತ್ರೀಯರು (೩) ಪಂಡಾ (೪) ಘಾಟಿಯಾ (೫) ಮಹಾಸ್ಥಾನಾ (೬) ಕಲಿಂಗ.

ಶಷಾನಿ ಬ್ರಾಹ್ಮಣರಲ್ಲಿ ಈ ಉಪವಿಭಾಗಗಳಿವೆ :

(೧) ಸಾವಂತ (೨) ಮಿಶ್ರಾ (೩) ನಂದಾ (೪) ಪಾಟೆ (೫) ಕಾರಾ (೬) ಆಚಾರ್ಯ (೭) ಸತ್‌ಪಾಸ್ತಿ (೮) ಬೇಡಿ (೯) ಸೇನಾಪತಿ (೧೦) ಪಾರನ್‌ಗ್ರಾಹಿ (೧೧) ನಿಶಾಂಕ (೧೨) ರಾನಿಪತಿ.

ಶ್ರೋತ್ರೀಯ ಬ್ರಾಹ್ಮಣರಲ್ಲಿ –

(೧) ಶ್ರೋತ್ರೀಯರು (೨) ಸೋನಾರಬಾನಿ (೩) ತೇಲಿ (೪) ಅಗ್ರಬಕ್ಷ.

### V ಮೈಥಿಲ್ಯಾ ಬ್ರಾಹ್ಮಣರು

ಮಿಥಿಲಾದಿಂದ ಮೈಥಿಲ್ಯಾ ಬ್ರಾಹ್ಮಣರು ಬರುತ್ತಾರೆ. ಮಿಥಿಲಾದ ಈಗಿನ ಆಧುನಿಕ ಜಿಲ್ಲೆಗಳಾದ ತಿರಹತ್, ಸರನ್, ಪುರ್ನಿಯಾ ಮತ್ತು ನೇಪಾಳದ ಪಕ್ಕದ ಭಾಗಗಳನ್ನು ಒಳಗೊಳ್ಳಲಾದ ಅವರ ಉಪವಿಭಾಗಗಳು :

(೧) ಓಝಾ (೨) ಠಾಕುರರು (೩) ಮಿಶ್ರಾ (೪) ಪುರಾ (೫) ಶ್ರೋತ್ರೀಯಾ (೬) ಭುಯಿಹಾರಾ.

### ಉಪ ವಿಭಾಗಗಳು

(೧) ಚಾಂದಹಾರಿ (೨) ರಾಯಾ (೩) ಪರಿಹಸ್ತಾ (೪) ಖನ್ನಾ (೫) ಕುಮಾರರು.

### III ಉಳಿದ ಬ್ರಾಹ್ಮಣರು

ವಿಂಧ್ಯದ ಕೆಳಗಿನ ಪ್ರದೇಶದಲ್ಲಿರುವ ಬ್ರಾಹ್ಮಣರು ಪಂಚದ್ರಾವಿಡರು. ಪಂಚಗೌಡರು ವಿಂಧ್ಯದ ಮೇಲಿನ ಭಾಗದಲ್ಲಿರುವ ಬ್ರಾಹ್ಮಣರು. ಅಂದರೆ ಉತ್ತರ ಭಾರತದ ಬ್ರಾಹ್ಮಣರಿಗೆ ಪಂಚಗೌಡರೆಂದು, ದಕ್ಷಿಣ ಭಾರತದ ಬ್ರಾಹ್ಮಣರಿಗೆ ಪಂಚ ದ್ರಾವಿಡರೆಂದು ಹೆಸರು. ಐದು ವಿಭಾಗಗಳನ್ನು ಉಲ್ಲೇಖಿಸಿದ ಮಾತ್ರಕ್ಕೆ ಉತ್ತರ ಮತ್ತು ದಕ್ಷಿಣ ಭಾಗಗಳ ಎಲ್ಲ ಬ್ರಾಹ್ಮಣರು ಬರುತ್ತಾರೆಂದೇನಲ್ಲ. ಅವರನ್ನು ಉಲ್ಲೇಖಿಸುತ್ತಿದ್ದಂತೆ ಅವರಲ್ಲಿಯ ಉಪವಿಭಾಗಗಳನ್ನು ಹೇಳಬೇಕು :

### ದಕ್ಷಿಣ ಭಾರತದ ಉಳಿದ ಬ್ರಾಹ್ಮಣರು

(೧) ಕೊಂಕಣಿ ಬ್ರಾಹ್ಮಣರು[೧] (೨) ಹುಬು[೨] (೩) ಗೌರ್ಕರ್ಣ[೩] (೪) ಹವಿಕಾ[೪] (೫) ತುಳ್ವ[೫] (೬) ಅಮ್ಮ ಕೊಡಗಾ[೬] (೭) ನಂಬೂದ್ರಿ.

ಮಲಬಾರ ಪ್ರದೇಶದಲ್ಲಿ ಇರುವ ಪ್ರಧಾನ ಬ್ರಾಹ್ಮಣರೆಂದರೆ ನಂಬೂದ್ರಿ ಬ್ರಾಹ್ಮಣರು. ಅವರನ್ನು ಬಿಟ್ಟು ಉಳಿದ ಬ್ರಾಹ್ಮಣರೆಂದರೆ : (೧) ಪೋತೀಸ್ (೨) ಮುಟ್ಟಾದಸ್ (೩) ಫೆಡುಸ್ (೪) ರಾಮನಾಡ್–ರಿಟ್ ಪರಸಾಹಾ (೫) ಪತ್ತಾರರು (೬) ಅಂಬಾಲ್‌ವಾಸಿ.

### ಉಳಿದ ರಜಪೂತ ಬ್ರಾಹ್ಮಣರು

ಗುರ್ಜರ ಬ್ರಾಹ್ಮಣರ ಪಟ್ಟಿಯಲ್ಲಿ ಹೇಳಿಲ್ಲದ ಬ್ರಾಹ್ಮಣರ ಪಟ್ಟಿ ಇಂತಿದೆ :

(೧) ಶ್ರೀಮಾಳಿ ಬ್ರಾಹ್ಮಣರು (೨) ಸಭೋಡಾ (೩) ಪಲ್ಲಿವಾಲಾರ್ (೪) ನಂದನರು (೫) ಪುಷ್ಕರರು (೬) ಪೋಖಾರ ಸೇವಕಾ ಬ್ರಾಹ್ಮಣರು (೭) ಮೇಡತ್‌ವಾಲಾ (೮) ಪಾರೀಖಾ ಬ್ರಾಹ್ಮಣರು (೯) ಲಾವಣಾ (೧೦) ಡಕೋಟಾ (೧೧) ಗಾರುಡಿಯಾ (೧೨) ಅಥರಜಾ (೧೩) ಬುರಾ (೧೪) ಕಾಪಿಡಾ (೧೫) ದಹಿಮಾ (೧೬) ಖಂಡೇಲವಾಲಾ (೧೭) ದಿವಾ (೧೮) ಶಿಕಾವದರು (೧೯) ಭಮತ್‌ವಾಲರು (೨೦) ಮರುಗಳು (೨೧) ಶ್ರೀವಂತರು (೨೨) ಅಭಿರರು (೨೩) ಭಾರತನರು (೨೪) ಸನಾಕಾದರು (೨೫) ವೇಗಾದೀಗಳು (೨೬) ಮೇವಾಡರು (೨೭) ರಾಜಗುರು (೨೮) ಭಟ್‌ರು (೨೯) ಚಾರಣರು.

* * * *

---

೧. ಕೊಂಕಣಿ ಬ್ರಾಹ್ಮಣರನ್ನು ಮಹಾರಾಷ್ಟ್ರದ ಕೊಂಕಣಸ್ಥಳದಿಂದ ಬೇರೆ ತಿಳಿಯಬೇಕು. ಪೋರ್ಚುಗೀಸರ ಕಡೆ ಹಿಂದೆ ಇದ್ದ ಗೋವಾದ ಬ್ರಾಹ್ಮಣರು ಕೊಂಕಣಿ ಬ್ರಾಹ್ಮಣರು.

೨. ಕಾರವಾರದ ಕಡೆಯವರು.

೩. ಇವರ ಸ್ಥಳದ ಬಗೆಗೆ ಹಸ್ತಪ್ರತಿಯಲ್ಲಿ ಉಲ್ಲೇಖವಿಲ್ಲ–ಸಂ.

೪ ತೆಲ್ಲಿಚೇರಿಯ ಸಮೀಪ ಇರುವವರು

೫ ಉಡುಪಿಯ ಬಳಿ ಇರುವವರು

೬ ಕೊಡಗಿನವರು

## ಭಾಗ ಮೂರು

# ರಾಜಕೀಯ

ಈ ಹಿಂದೆ ಪ್ರಕಟವಾಗಿಲ್ಲದ ರಾಜಕೀಯ
ವಿಷಯ ಕುರಿತು ಏಳು ಪ್ರಬಂಧಗಳನ್ನು
ಈ ಶೀರ್ಷಿಕೆಯಡಿ ಸೇರಿಸಲಾಗಿದೆ.

## ಅಧ್ಯಾಯ ೨೦

# ವಿಚ್ಛಿದ್ರಗೊಂಡ ಲಕ್ಷಾಂತರ ಜನ

೧) ಅಸ್ಪೃಶ್ಯರ ಸಂಖ್ಯೆ ಎಷ್ಟೆಂಬುದು ಬಹುಕಾಲದವರೆಗೆ ತಿಳಿದಿರಲಿಲ್ಲ.
೨) ೧೯೧೧ರ ಜನಗಣತಿ ಮೊತ್ತಮೊದಲನೆಯ ಅವರ ಪ್ರತ್ಯೇಕ ಗಣನೆಯ ಯತ್ನ.
೩) ೧೯೧೧ನೆಯ ಇಸವಿಯ ಜನಗಣತಿಯ ಅಂಕಿಅಂಶಗಳ ದೃಢೀಕರಣ.
೪) ಲೋಥಿಯನ್ ಮಂಡಳಿ ಮತ್ತು "ಅಸ್ಪೃಶ್ಯರೇ ಇಲ್ಲ" ಎಂಬ ಹಿಂದೂಗಳ ಕೂಗು.
೫) ಈ ಕೂಗಿಗೆ ಕಾರಣಗಳು.
೬) ಹಿಂದುಳಿದ ಜನಾಂಗದ ಮತ್ತು ಮಹಮದೀಯರ ದೃಷ್ಟಿಕೋನ.

## I

ಭಾರತದಲ್ಲಿ ಅಸ್ಪೃಶ್ಯರ ಜನಸಂಖ್ಯೆ ಎಷ್ಟು? ಅಸ್ಪೃಶ್ಯರ ವಿಚಾರದಲ್ಲಿ ಏನಾದರೂ ಸ್ವಲ್ಪ ವಿಷಯವನ್ನು ತಿಳಿಯಬಯಸುವ ಯಾರೇ ಆದರೂ ಖಂಡಿತ ಕೇಳುವ ಪ್ರಶ್ನೆ ಇದು. ಈಗ ಇದಕ್ಕೆ ಉತ್ತರ ಹೇಳುವುದು ಸುಲಭ. ಏಕೆಂದರೆ ೧೯೩೧ರಲ್ಲಿ ನಡೆದ ಜನಗಣತಿಯ ಪ್ರಕಾರ ಅವರ ಸಂಖ್ಯೆ ೫೦ ದಶಲಕ್ಷ. ಈಗ ಅಸ್ಪೃಶ್ಯರ ಸಂಖ್ಯೆ ಎಷ್ಟೆಂದು ನಿಖರವಾಗಿ ಹೇಳಲು ಸಾಧ್ಯವಿದ್ದರೂ ಬಹಳ ಕಾಲದವರೆಗೆ ಹಾಗೆ ಮಾಡಲು ಸಾಧ್ಯವಿರಲಿಲ್ಲ.

ಇದಕ್ಕೆ ಅನೇಕ ಕಾರಣಗಳಿವೆ. ಮೊದಲನೆಯದಾಗಿ ಅಸ್ಪೃಶ್ಯತೆ ಎಂಬುದು ಶಾಸನಸಮ್ಮತವಾದ ಪದವಲ್ಲ. ಅಸ್ಪೃಶ್ಯತೆಯೆಂಬುದಕ್ಕೆ ಶಾಸನಸಮ್ಮತವಾದ ಸ್ಪಷ್ಟ ನಿರೂಪಣೆಯಿಲ್ಲದಿರುವುದರಿಂದ ಯಾರು ಅಸ್ಪೃಶ್ಯರು ಯಾರು ಅಸ್ಪೃಶ್ಯರಲ್ಲ ಎಂಬುದನ್ನು ನಿಷ್ಕರ್ಷೆ ಮಾಡುವುದು ಕಷ್ಟದ ಕೆಲಸ. ಅಸ್ಪೃಶ್ಯತೆಯೆಂಬುದು ಒಂದು ಸಾಮಾಜಿಕ ಕಲ್ಪನೆಯಾಗಿದ್ದು ಅದು ನಮ್ಮ ಸಂಪ್ರದಾಯದಲ್ಲಿ ಮೈಗೂಡಿರುವುದರಿಂದ ನಮ್ಮ ಸಂಪ್ರದಾಯಗಳು ಮಾರ್ಪಾಡಾದಂತೆಲ್ಲಾ ಅಸ್ಪೃಶ್ಯತೆಯ ಸ್ವರೂಪವೂ ಮಾರ್ಪಾಡಾಗಿದೆ. ಆದುದರಿಂದಾಗಿ ಅಸ್ಪೃಶ್ಯರ ಸಂಖ್ಯೆಯನ್ನು ಗಣಿತಶಾಸ್ತ್ರದಲ್ಲಿ ಹೇಳುವಷ್ಟು ಖಚಿತವಾಗಿ ಹೇಳುವುದು ಕಷ್ಟ. ಎರಡನೆಯದಾಗಿ ಜನಗಣತಿಯನ್ನು ಜಾತಿಯ ಆಧಾರದ ಮೇಲೆ ಮಾಡಲು ಸವರ್ಣ ಹಿಂದೂಗಳು ಯಾವಾಗಲೂ ವಿರೋಧಿಸುತ್ತಾರೆ. ಜನಗಣತಿಯ ಮಾಹಿತಿಯಲ್ಲಿ ಜಾತಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಒಪ್ಪದ ಅವರು ಜನಸಂಖ್ಯೆಯನ್ನು ಜಾತಿ ಮತ್ತು ಬುಡಕಟ್ಟುಗಳಾಗಿ ವಿಭಜಿಸುವ ಪ್ರಯತ್ನವನ್ನು ಅದುಮಿಟ್ಟರು. ಜಾತಿ ಮತ್ತು ಬುಡಕಟ್ಟುಗಳ ವಿಭಜನೆಯ ಸ್ವರೂಪ ನಿಧಾನವಾಗಿ ಬದಲಾಗುತ್ತಿರುವುದರಿಂದ, ಹತ್ತು ವರ್ಷಕ್ಕೊಮ್ಮೆ ನಡೆಯುವ ಜನಗಣತಿಯಿಂದ ಈ ಸಂಖ್ಯೆಯನ್ನು ನಿರ್ಣಯಿಸಬಾರದೆಂದು ೧೯೦೧ರಲ್ಲಿ ನಡೆದ ಜನಗಣತಿಯಲ್ಲಿ ಒಂದು ಸಲಹೆ ಬಂದಿತು.

ಇಂತಹ ಆಕ್ಷೇಪಣೆಗಳು ಜನಗಣತಿಯ ನಿರ್ದೇಶಕರ ಮೇಲೆ ಯಾವ ಪರಿಣಾಮವನ್ನೂ ಬೀರಲಿಲ್ಲ.

ಜನಗಣತಿಯ ನಿರ್ದೇಶಕರ ದೃಷ್ಟಿಯಲ್ಲಿ ಜಾತಿಯ ಆಧಾರದ ಮೇಲೆ ಜನಗಣತಿಯನ್ನು ಮಾಡುವುದು ಅತಿ ಮುಖ್ಯ ಮತ್ತು ಅತ್ಯಾವಶ್ಯಕವೆನಿಸಿತು. ಅದಕ್ಕೆ ಪೋಷಕವಾಗಿ ಜನಗಣತಿಯ ನಿರ್ದೇಶಕರು ಮಂಡಿಸಿದ ವಾದವೇನೆಂದರೆ –

"ಸಾಮಾಜಿಕ ವ್ಯವಸ್ಥೆಯೆಂದೆನಿಸಿದ ಜಾತಿಯ ಅನುಕೂಲತೆ ಮತ್ತು ಅನಾನುಕೂಲತೆಯು ಅದೇನೆ ಇರಲಿ ಭಾರತದ ಜನಸಂಖ್ಯೆ ವಿಚಾರದಲ್ಲಿ ಯಾವುದಾದರೂ ಉಪಯುಕ್ತವಾದ ಚಿಂತನೆ ನಡೆಯಬೇಕಾದರೆ ಅಲ್ಲಿ ಜಾತಿ ಪದ್ಧತಿಯ ಮಹತ್ವವನ್ನು ಮರೆತು ಚಿಂತಿಸುವುದನ್ನು ನಾವು ಊಹಿಸುವುದು ಕಷ್ಟ. ಇಂದಿಗೂ ಭಾರತದ ಸಾಮಾಜಿಕ ವ್ಯವಸ್ಥೆಯ ತಳಹದಿ ಜಾತಿಯೇ. ಆದ್ದರಿಂದ ಭಾರತದ ಸಾಮಾಜಿಕ ಪರಿವರ್ತನೆಯನ್ನು ಗುರುತಿಸಲು ಜಾತಿಯ ಗಣನೆಯು ಅತ್ಯಾವಶ್ಯಕ. ಪ್ರತಿಯೊಬ್ಬ ಹಿಂದೂವೂ (ಈ ಪದವನ್ನು ವಿಸ್ತೃತ ರೂಪದಲ್ಲಿ ಬಳಸಿದೆ) ಒಂದಲ್ಲ ಒಂದು ಜಾತಿಯಲ್ಲಿ ಹುಟ್ಟಿದ್ದು ಅದಕ್ಕೆ ಅನುಗುಣವಾಗಿ ಅವನ ಧಾರ್ಮಿಕ, ಸಾಮಾಜಿಕ, ಆರ್ಥಿಕ ಮತ್ತು ಕೌಟುಂಬಿಕ ಜೀವನ ಹುಟ್ಟಿನಿಂದ ಸಾವಿನವರೆಗೂ ನಿರ್ಣಯಗೊಳ್ಳುತ್ತದೆ. ಪಾಶ್ಚಿಮಾತ್ಯ ರಾಷ್ಟ್ರದಲ್ಲಿ ಅವರ ಸಾಮಾಜಿಕ ಸ್ಥಾನಮಾನವನ್ನು ನಿರ್ಣಯಿಸುವ ಪ್ರಮುಖ ಅಂಶಗಳಾದ ಐಶ್ವರ್ಯ, ಶಿಕ್ಷಣ ಮತ್ತು ವೃತ್ತಿ – ಇವು ಉದಾರವಾಗಿದ್ದು ಹಾಗೂ ಮಾರ್ಪಡುವಂತಿದ್ದು ಹುಟ್ಟು ಮತ್ತು ವಂಶಪಾರಂಪರ್ಯದ ಬಿಗಿಯನ್ನು ಸಡಿಲಿಸುವಂತಿವೆ. ಭಾರತದಲ್ಲಿ ಧಾರ್ಮಿಕ ಮತ್ತು ಸಾಮಾಜಿಕ ವ್ಯವಸ್ಥೆ ಹಾಗೂ ಸಾಂಪ್ರದಾಯಿಕ ವೃತ್ತಿ–ಇವು ಮಿಕ್ಕೆಲ್ಲ ಅಂಶಗಳನ್ನು ಮೀರಿ ಮೇಲಕ್ಕೇರುತ್ತವೆ. ಪಾಶ್ಚಿಮಾತ್ಯರಲ್ಲಿ ಜನಗಣತಿಗೆ ವೃತ್ತಿ ಮತ್ತು ಆರ್ಥಿಕ ಸ್ಥಿತಿಗತಿಗಳು ಆಧಾರವಾದರೆ, ಭಾರತದಲ್ಲಿ ಅದಕ್ಕೆ ಸಮಾನಾಂತರವಾಗಿ ಧರ್ಮ ಮತ್ತು ಜಾತಿಭೇದಗಳು ಆಧಾರವಾಗುತ್ತವೆ. ಸಾಮಾಜಿಕ ಮತ್ತು ರಾಷ್ಟ್ರೀಯ ವ್ಯವಸ್ಥೆಯೆನಿಸಿದ ಜಾತಿಯ ವಿಚಾರದಲ್ಲಿ ಯಾವುದೇ ದೃಷ್ಟಿಕೋನವಿರಲಿ ಅದರ ಮಹತ್ವವನ್ನು ಅಲ್ಲಗಳೆಯುವಂತಿಲ್ಲ ಮತ್ತು ಎಲ್ಲಿಯವರೆಗೆ ಜಾತಿಯು ಒಬ್ಬ ವ್ಯಕ್ತಿಯ ಸಾಮಾಜಿಕ ಸ್ಥಾನ ಮತ್ತು ವೃತ್ತಿಯನ್ನು ಗುರುತಿಸುವ ಸಾಧನವಾಗಿರುವುದೋ ಅಲ್ಲಿಯವರೆಗೆ ಜಾತಿಯ ಆಧಾರದ ಮೇಲೆ ನಡೆಯುವ ದಶವಾರ್ಷಿಕ ಜನಗಣತಿಯು ಅನಪೇಕ್ಷಿತ ವ್ಯವಸ್ಥೆಯನ್ನು ನಿರಂತರಗೊಳಿಸಲು ಕಾರಣವಾಗುತ್ತದೆಂಬ ವಾದ ಒಪ್ಪುವಂತಹುದಲ್ಲ.

೧೯೧೧ ನೆಯ ಜನಗಣತಿಯಲ್ಲಿ ಹತ್ತು ರೀತಿಯ ಪ್ರಮಾಣಗಳನ್ನು ವಿಧಿಸಿ ಆ ಪ್ರಮಾಣಗಳನ್ನು ಮಾನ್ಯ ಮಾಡುವ ಜಾತಿಗಳನ್ನು ಒಂದೇ ಶ್ರೇಣಿಯಲ್ಲಿ ಸೇರಿಸಿ ಎಣಿಸಲು ಪ್ರಯತ್ನಿಸಿದಾಗ, ಜಾತಿಯ ಆಧಾರದ ಮೇಲೆ ಇಂತಹ ಎಣಿಕೆ ಕೂಡದೆಂಬ ಹಿಂದೂಗಳ ವಿರೋಧ ಪ್ರಬಲವಾಯಿತು. ಆಗ ವಿಧಿಸಿದ ಪ್ರಮಾಣಗಳು ದಲಿತವರ್ಗದವರನ್ನು ಸವರ್ಣ ಹಿಂದೂಗಳಿಂದ ಬೇರ್ಪಡಿಸುವಂತಿದ್ದುವು ಎಂಬುದರಲ್ಲಿ ಯಾವ ಸಂದೇಹವೂ ಇರಲಿಲ್ಲ. ದಲಿತರನ್ನು ಹಿಂದೂಗಳಿಂದ ಬೇರ್ಪಡಿಸಿ ಹಿಂದೂಗಳ ಸಂಖ್ಯೆಯನ್ನು ಕಡಿಮೆ ಮಾಡಿ ಅವರ ಪ್ರಾಬಲ್ಯವನ್ನು ಕುಗ್ಗಿಸಬೇಕೆಂದು ಬಯಸಿದ ಮಹಮದೀಯರು ಭಾರತ ಸರ್ಕಾರದ ಕೇಂದ್ರ ಕಾರ್ಯದರ್ಶಿಗಳಿಗೆ ಅರ್ಪಿಸಿದ ವಿಜ್ಞಾಪನಾ ಪತ್ರವೇ ಈ ಸುತ್ತೋಲೆಗೆ ಕಾರಣವೆಂದು ಸವರ್ಣ ಹಿಂದೂಗಳು ಹೆದರಿದರು.

ಇವರ ವಿರೋಧದಿಂದ ಯಾವ ಪ್ರಯೋಜನವೂ ಆಗಲಿಲ್ಲ. ಮತ್ತು ಜನಗಣತಿಯಲ್ಲಿ ಮಾನ್ಯ ಮಾಡಿದ್ದ ಹತ್ತು ಪ್ರಮಾಣಗಳನ್ನು ಒಪ್ಪಿ ಅದಕ್ಕನುಗುಣವಾಗಿ ಜಾತಿಗಳನ್ನು ಬೇರೆಯಾಗಿಯೇ ಎಣಿಸಲಾಯಿತು. ಆದರೂ ಅವರ ವಿರೋಧ ತಪ್ಪಲಿಲ್ಲ. ೧೯೨೧ರಲ್ಲಿ ನಡೆದ ಜನಗಣತಿಯಲ್ಲಿ ಅದು ಮತ್ತೆ ತಲೆಯೆತ್ತಿತು. ಈ ಸಾರಿ ಜಾತಿಯ ಆಧಾರದ ಜನಗಣತಿಯನ್ನು ಕಾನೂನುಬದ್ಧವಾಗಿ ವಿರೋಧಿಸಲು ಪ್ರಯತ್ನ ನಡೆಯಿತು. ಬ್ರಿಟಿಷ್ ಸಾಮ್ರಾಜ್ಯದ ಕೇಂದ್ರ ಶಾಸನಸಭೆಯಲ್ಲಿ ೧೯೨೦ರಲ್ಲಿ ಈ ಕೆಳಗಿನ ಆಧಾರದ ಮೇಲೆ ಜಾತಿ

ಆಧಾರಿತ ಜನಗಣತಿಯನ್ನು ವಿರೋಧಿಸುವ ಒಂದು ಗೊತ್ತುವಳಿಯನ್ನು ಮಂಡಿಸಲಾಯಿತು. (ಅ) ಜಾತಿಭೇದದಂತಹ ವ್ಯವಸ್ಥೆಯನ್ನು ಅಧಿಕಾರಯುತವಾದ ಕಾರ್ಯದಲ್ಲಿ ಗುರುತಿಸಿ ಬೆಳೆಸುವುದು ಅಸಾಧುವಾದದ್ದು. (ಆ) ಈ ಅಂಕಿ ಅಂಶಗಳು ಕರಾರುವಾಕ್ಕಾಗಿ ದೊರೆಯುವುದಿಲ್ಲ ಮತ್ತು ಕೆಲಸಕ್ಕೆ ಬಾರದವುಗಳಾಗುತ್ತವೆ. ಏಕೆಂದರೆ ಕೆಳಗಿನ ಜಾತಿಯ ಜನ ಈ ಅವಕಾಶವನ್ನು ಬಳಸಿ ತಾವು ಮೇಲು ವರ್ಗದವರೆಂದು ಹೇಳಿಕೊಳ್ಳುತ್ತಾರೆ. ಈ ವಿರೋಧಿ ಗೊತ್ತುವಳಿಯೇನಾದರೂ ಅಂಗೀಕಾರವಾಗಿದ್ದರೆ, ಆಗ ಅಸ್ಪೃಶ್ಯರ ಸಂಖ್ಯೆ ಎಷ್ಟು ಎಂಬುದನ್ನು ತಿಳಿಯಲು ಸಾಧ್ಯವಾಗುತ್ತಿರಲಿಲ್ಲ. ಪುಣ್ಯವಶಾತ್ ಈ ಗೊತ್ತುವಳಿಯನ್ನು ಮಂಡಿಸಿದವರು ಆ ದಿನ ಗೈರುಹಾಜರಾದ್ದರಿಂದ ಅದು ಚರ್ಚೆಗೆ ಬರಲಿಲ್ಲ. ಆದ್ದರಿಂದ ೧೯೨೧ನೆಯ ಇಸವಿಯ ಜನಗಣತಿಯ ನಿರ್ದೇಶಕರು ಎಂದಿನಂತೆ ಮುಂದುವರಿಯಲು ಸ್ವತಂತ್ರರಾದರು.

ಮೂರನೆಯದಾಗಿ ೧೯೧೧ಕ್ಕೆ ಮೊದಲು ಅಸ್ಪೃಶ್ಯರನ್ನು ಪ್ರತ್ಯೇಕವಾಗಿ ಗಣನೆ ಮಾಡಲು ಯಾವ ಜನಗಣತಿಯ ನಿರ್ದೇಶಕರೂ ಪ್ರಯತ್ನ ಮಾಡಲಿಲ್ಲ. ಮೊತ್ತಮೊದಲಿಗೆ ಭಾರತದಲ್ಲಿ ಜನಗಣತಿ ನಡೆದದ್ದು ೧೮೮೧ರಲ್ಲಿ. ೧೮೮೧ರಲ್ಲಿ ನಡೆದ ಈ ಜನಗಣತಿಯಲ್ಲಿ ಬೇರೆ ಬೇರೆ ಜಾತಿ ಮತಗಳನ್ನು ಪಟ್ಟಿಮಾಡಿ ಅವುಗಳ ಸಂಖ್ಯೆಯನ್ನು ಒಟ್ಟು ಗೂಡಿಸಿ ಭಾರತದ ಜನಸಂಖ್ಯೆ ಎಷ್ಟೆಂಬುದನ್ನು ಕಂಡುಕೊಳ್ಳಲಾಯಿತೇ ಹೊರತು ಅದಕ್ಕಿಂತ ಹೆಚ್ಚೇನನ್ನೂ ಮಾಡಲಿಲ್ಲ. ಹಿಂದೂಗಳನ್ನು ಮೇಲು ಕೀಳೆಂದು ಸ್ಪೃಶ್ಯರು ಅಸ್ಪೃಶ್ಯರೆಂದು ವರ್ಗೀಕರಿಸುವ ಯಾವ ಪ್ರಯತ್ನವನ್ನೂ ಅದು ಮಾಡಲಿಲ್ಲ. ಭಾರತದ ಎರಡನೆ ಜನಗಣತಿ ೧೮೯೧ರಲ್ಲಿ ನಡೆಯಿತು. ಈ ಜನಗಣತಿಯಲ್ಲಿ ಅದರ ನಿರ್ದೇಶಕರು ಮೊತ್ತಮೊದಲಿಗೆ ಜನಸಂಖ್ಯೆಯನ್ನು ಜಾತಿ, ಬುಡಕಟ್ಟು ಮತ್ತು ವಿವಿಧ ಶ್ರೇಣಿಗಳಾಗಿ ವರ್ಗೀಕರಿಸಿದರು.

ಭಾರತದ ಮೂರನೆಯ ಜನಗಣತಿ ೧೯೦೧ರಲ್ಲಿ ನಡೆಯಿತು. ಆ ಜನಗಣತಿಯಲ್ಲಿ ಅನುಸರಿಸಿದ ಒಂದು ಹೊಸ ವಿಭಜನಾ ನಿಯಮವೇನೆಂದರೆ "ಸ್ಥಳೀಯ ಜನಾಭಿಪ್ರಾಯವು ಗುರುತಿಸಿದ ಪರಂಪರಾನುಗತ ವರ್ಗೀಕರಣ ಪದ್ಧತಿ." ಸಾಮಾಜಿಕ ಸಮಾನತೆಯನ್ನು ಒಪ್ಪದ, ಮೇಲು ಕೀಳೆಂಬ ಸಾಮಾಜಿಕ ವ್ಯವಸ್ಥೆಯನ್ನು ನಂಬಿದ, ಹಿಂದೂ ಸಮಾಜಕ್ಕೆ ಮೇಲಿನ ನಿಯಮ ಬಹು ಸೂಕ್ತವೆನಿಸುತ್ತದೆ. ಭಾರತದಂತಹ ಜನನಿಬಿಡವಾದ ಸಾಮಾಜಿಕ ಜೀವನದ ವರ್ಗೀಕರಣ, ಸಮ್ಮತಿಯಿಂದಲೋ ಅಥವಾ ಮೌನದಿಂದಲೋ, ಜಾತಿಯ ಆಧಾರದ ಮೇಲೆ ಬೆಳೆದುಬಂದದ್ದನ್ನು, ಅದು ಒಂದು ಪರಂಪರಾನುಗತ ಸಾಮಾಜಿಕ ವ್ಯವಸ್ಥೆ ಎನ್ನುವುದಕ್ಕಿಂತಲೂ, ಬೇರೆ ಯಾವ ರೀತಿಯಿಂದಲೂ ಸ್ಪಷ್ಟಗೊಳಿಸಲು ಸಾಧ್ಯವಿಲ್ಲ.

## II

ಅಸ್ಪೃಶ್ಯರನ್ನು ಸ್ಪಷ್ಟವಾಗಿ ನಿರ್ದೇಶಿಸಿ ಅವರ ಜನಸಂಖ್ಯೆಯನ್ನು ತಿಳಿಯುವ ಉದ್ದೇಶಪೂರ್ವಕ ಪ್ರಯತ್ನವು ೧೯೧೧ರಲ್ಲಿ ಜನಗಣತಿ ನಿರ್ದೇಶಕರಿಂದ ನಡೆಯಿತು.

೧೯೧೧ನೆಯ ಇಸವಿಯ ಜನಗಣತಿಯ ವೇಳೆಗೆ ಮಾರ್ಲೆಮಿಂಟೋ ಸುಧಾರಣೆಗಳು ಆಗಲೇ ರೂಪುಗೊಳ್ಳುತ್ತಿದ್ದುವು. ಆ ವೇಳೆಗೆ ಭಾರತದ ಮಹಮದೀಯರು ಶಾಸನ ಸಭೆಗಳಲ್ಲಿ ತಮಗೆ ಸೂಕ್ತವಾದ ಪ್ರಾತಿನಿಧ್ಯವನ್ನು ಪ್ರತ್ಯೇಕ ಚುನಾವಣೆಗಳ ಮೂಲಕ ದೊರಕಿಸಿಕೊಡಬೇಕೆಂದು ಒತ್ತಾಯಿಸಲು ಆರಂಭಿಸಿದ್ದರು. ತಮ್ಮ ಈ ಒತ್ತಾಯದ ಅಂಗವಾಗಿ ಮಹಮದೀಯರು ಅಂದಿನ ಬ್ರಿಟಿಷ್ ಕೌನ್ಸಿಲ್‌ನಲ್ಲಿ ಭಾರತದ ಸೆಕ್ರೆಟರಿ ಆಫ್ ಸ್ಟೇಟ್ ಆಗಿದ್ದ ಲಾರ್ಡ್ ಮಾರ್ಲೆಯವರನ್ನು ೧೯೦೯ನೆಯ ಜನವರಿ ೨೭ರಂದು ಭೇಟಿ ಮಾಡಿ,

ಅವರಿಗೆ ಒಂದು ವಿಜ್ಞಾಪನಾ ಪತ್ರವನ್ನು ಸಲ್ಲಿಸಿದ್ದರು. ಆ ವಿಜ್ಞಾಪನಾ ಪತ್ರದಲ್ಲಿ ಈ ಕೆಳಗಿನ ಹೇಳಿಕೆಯನ್ನು ಕಾಣಬಹುದು.

(ಹೇಳಿಕೆಯು ಹಸ್ತಪ್ರತಿಯಲ್ಲಿ ದಾಖಲೆಯಾಗಿಲ್ಲ–ಸಂ.)

೧೯೦೭ ರಲ್ಲಿ ಮಹಮದೀಯ ನಿಯೋಗವು ಅರ್ಪಿಸಿದ ವಿಜ್ಞಾಪನಾ ಪತ್ರದಲ್ಲಿ ಅಸ್ಪೃಶ್ಯರನ್ನು ಕುರಿತಂತೆ ಮಾಡಿದ್ದ ಒತ್ತಾಯಕ್ಕೂ, ಅದಾದ ನಾಲ್ಕು ವರ್ಷದ ನಂತರ ಜನಗಣತಿಯ ನಿರ್ದೇಶಕರು ಅಸ್ಪೃಶ್ಯರನ್ನು ಪ್ರತ್ಯೇಕವಾಗಿ ಎಣಿಕೆ ಮಾಡಬೇಕೆಂದು ನಿರ್ಧರಿಸಿದ್ದಕ್ಕೂ ಏನಾದರೂ ಸಂಬಂಧವಿದೆಯೇ ಎಂಬುದನ್ನು ನಿರ್ದಿಷ್ಟವಾಗಿ ಹೇಳಲು ಸಾಧ್ಯವಿಲ್ಲ. ತಮ್ಮ ಹಿಂದಿನ ಜನಗಣತಿಯ ನಿರ್ದೇಶಕರು ಜನಗಣತಿಯಲ್ಲಿ ಜಾತಿಪಂಗಡಗಳ ಸ್ಥಿತಿಗತಿಗಳನ್ನು ತಿಳಿಯಲು ಮಾಡಿದ್ದ ವಿವಿಧ ಪ್ರಯತ್ನಗಳ ಫಲವಾಗಿ, ೧೯೧೧ರಲ್ಲಿ ಅಂದಿನ ಜನಗಣತಿಯ ನಿರ್ದೇಶಕರು ಈ ನಿರ್ಣಯವನ್ನು ಮಾಡಿರಲೂ ಸಾಧ್ಯ. ಅದೇನಾದರೂ ಇರಲಿ, ಜನಗಣತಿಯ ನಿರ್ದೇಶಕರು ಅಸ್ಪೃಶ್ಯರನ್ನು ಪ್ರತ್ಯೇಕವಾಗಿ ಎಣಿಸಲಾಗುವುದು ಎಂಬುದಾಗಿ ಪ್ರಕಟಿಸಿದಾಗ, ಹಿಂದೂಗಳಲ್ಲಿ ಒಂದು ದೊಡ್ಡ ಕೋಲಾಹಲವೇ ಉಂಟಾಯಿತು. ಜನಗಣತಿಯ ನಿರ್ದೇಶಕರ ಈ ಪ್ರಯತ್ನ ಹಿಂದೂಗಳನ್ನು ಒಡೆದು, ಅವರನ್ನು ಅಶಕ್ತರನ್ನಾಗಿ ಮಾಡಲು ಮಹಮದೀಯರು ಮತ್ತು ಬ್ರಿಟಿಷ್ ಸರಕಾರ ಜೊತೆಯಾಗಿ ಮಾಡಿದ ಒಂದು ಒಳತಂತ್ರ ಎಂದು ಹೇಳಲಾಯಿತು. ಈ ಪ್ರಯತ್ನದ ಹಿಂದಿನ ನಿಜವಾದ ಉದ್ದೇಶ, ಅಸ್ಪೃಶ್ಯರ ಸಂಖ್ಯೆಯೆಷ್ಟೆಂಬುದನ್ನು ತಿಳಿಯಬೇಕೆಂಬುದಿಲ್ಲ, ಇದರಿಂದಾಗಿ ಹಿಂದೂಗಳ ಸಂಘಟನೆಯನ್ನು ಒಡೆದು ಅಸ್ಪೃಶ್ಯರನ್ನು ಹಿಂದೂಗಳಿಂದ ಬೇರ್ಪಡಿಸಬೇಕೆಂಬುದಷ್ಟೆ ಎಂದು ಅವರು ತಿಳಿದರು. ಜನಗಣತಿಯ ನಿರ್ದೇಶಕರ ಈ ಉದ್ದೇಶವನ್ನು ಅತ್ಯಂತ ಪ್ರಬಲ ರೀತಿಯಲ್ಲಿ ವಿರೋಧಿಸಲು ಹಿಂದೂಗಳು ರಾಷ್ಟ್ರಾದ್ಯಂತ ಅನೇಕ ಪ್ರತಿಭಟನಾ ಸಭೆಗಳನ್ನು ನಡೆಸಿದರು.

ಜನಗಣತಿಯ ನಿರ್ದೇಶಕರು ಈ ಪ್ರತಿಭಟನಾ ದಾಳಿಯಿಂದ ಎದೆಗುಂದದೆ, ತನ್ನ ಉದ್ದೇಶಿತ ಯೋಜನೆಯನ್ನು ಕಾರ್ಯಗತಗೊಳಿಸಲು ನಿರ್ಣಯಿಸಿದರು. ಅಸ್ಪೃಶ್ಯರನ್ನು ಪ್ರತ್ಯೇಕವಾಗಿ ಗಣನೆಮಾಡಲು ಅವರು ಅನುಸರಿಸಿದ ಕಾರ್ಯವಿಧಾನವಂತೂ ವಿನೂತನವಾದದ್ದೇ. ಕೆಲವು ಮಾನದಂಡಕ್ಕೆ ನಿಲ್ಲದ ಅಥವಾ ಕೆಲವು ನ್ಯೂನತೆಗಳಿಗೊಳಗಾದ, ಹಿಂದೂಜಾತಿ ಮತ್ತು ಬುಡಕಟ್ಟಿಗೆ ಸೇರಿದ ಜನರನ್ನು, ಪ್ರತ್ಯೇಕವಾಗಿ ಎಣಿಸುವಂತೆ ಬೇರೆ ಬೇರೆ ಪ್ರಾಂತ್ಯಗಳ ಜನಗಣತಿಯ ಮೇಲ್ವಿಚಾರಕರಿಗೆ ಜನಗಣತಿಯ ನಿರ್ದೇಶಕರು ಅಪ್ಪಣೆ ಮಾಡಿದರು.

ಈ ಕೆಳಗಿನ ಪರೀಕ್ಷೆಗಳನ್ನಾಧರಿಸಿ ಪ್ರಾಂತ್ಯಗಳ ಜನಗಣತಿಯ ಮೇಲ್ವಿಚಾರಕರು ವಿವಿಧ ಜಾತಿ ಮತ್ತು ಬುಡಕಟ್ಟುಗಳ ಜನರನ್ನು ಪ್ರತ್ಯೇಕವಾಗಿ ಎಣಿಸಿದರು. (೧) ಬ್ರಾಹ್ಮಣರ ಶ್ರೇಷ್ಠತೆಯನ್ನು ನಿರಾಕರಿಸುವವರು (೨) ಬ್ರಾಹ್ಮಣರು ಮತ್ತು ಹಿಂದೂ ಗುರುಗಳಿಂದ ಮಂತ್ರ ದೀಕ್ಷೆಯನ್ನು ಪಡೆಯದವರು (೩) ವೇದ ಪ್ರಮಾಣವನ್ನು ಒಪ್ಪದವರು (೪) ಹಿಂದೂಧರ್ಮದ ಹಿರಿಯ ದೇವತೆಗಳನ್ನು ಪೂಜಿಸದವರು (೫) ಬ್ರಾಹ್ಮಣ ಪುರೋಹಿತರನ್ನು ಒಪ್ಪದವರು (೬) ಸಂಪ್ರದಾಯದ ಬ್ರಾಹ್ಮಣರು ಸೇವಿಸಬಯಸದವರು (೭) ಸಾಧಾರಣ ಹಿಂದೂ ದೇವಾಲಯದ ಅಂತರಂಗಕ್ಕೆ ಪ್ರವೇಶ ಪಡೆಯದವರು (೮) ಹೊಲೆಗಡುಕರಾದವರು (೯) ಸತ್ತವರನ್ನು ಹೂಳುವವರು (೧೦) ಗೋವನ್ನು ಆರಾಧಿಸದವರು ಮತ್ತು ಗೋಮಾಂಸವನ್ನು ತಿನ್ನುವವರು.

ಜನಗಣತಿಯ ನಿರ್ದೇಶಕರು ನಡೆಸಿದ ಈ ತನಿಖೆಯಲ್ಲಿ ಯಾವ ರೀತಿಯ ಸಂಶಯಕ್ಕೂ ಎಡೆಯಿರಲಿಲ್ಲ. ಏಕೆಂದರೆ ಅಸ್ಪೃಶ್ಯರ ಸಂಖ್ಯೆ ಎಷ್ಟೆಂಬುದನ್ನು ಅವರು ಸ್ಪಷ್ಟವಾಗಿಯೇ ಕಂಡುಕೊಂಡರು. ೧೯೧೧ನೆಯ

ಇಸವಿಯ ಜನಗಣತಿಯ ಪ್ರಕಾರ ಪ್ರತಿಯೊಂದು ಪ್ರಾಂತದಲ್ಲಿಯೂ ಇದ್ದ ಅಸ್ಪೃಶ್ಯರ ಜನಸಂಖ್ಯೆ ಎಷ್ಟೆಂಬುದನ್ನು ಈ ಕೆಳಗಿನ ಪಟ್ಟಿಯಲ್ಲಿ ಕಾಣಬಹುದು.*

| ಪ್ರಾಂತ | ಒಟ್ಟು ಜನಸಂಖ್ಯೆ (ದಶಲಕ್ಷಗಳಲ್ಲಿ) | ಅಸ್ಪೃಶ್ಯರ ಸಂಖ್ಯೆ (ದಶಲಕ್ಷಗಳಲ್ಲಿ) | ಒಟ್ಟು ಸ್ಥಾನಗಳು | ಅಸ್ಪೃಶ್ಯ ಜನಾಂಗದ ಸ್ಥಾನಗಳು |
|---|---|---|---|---|
| ಮದರಾಸ್ | ೩೯.೮ | ೬.೩ | ೧೨೦ | ೨ |
| ಬೊಂಬಾಯಿ | ೧೯.೫ | ೦.೬ | ೧೧೩ | ೧ |
| ಬಂಗಾಳ | ೪೫.೦ | ೯.೯ | ೧೨೭ | ೧ |
| ಸಂಯುಕ್ತ ಪ್ರಾಂತಗಳು | ೪೭.೦ | ೧೦.೧ | ೧೨೦ | ೧ |
| ಪಂಜಾಬ್ | ೧೯.೫ | ೧.೭ | ೮೫ | – |
| ಬಿಹಾರ್ ಮತ್ತು ಒರಿಸ್ಸಾ | ೩೨.೪ | ೯.೩ | ೧೦೦ | ೧ |
| ಮಧ್ಯಪ್ರಾಂತಗಳು | ೧೨.೦ | ೩.೭ | ೭೨ | ೧ |
| ಅಸ್ಸಾಂ | ೬.೦ | ೦.೩ | ೫೪ | – |
| | **೨೨೧.೨** | **೪೧.೯** | **೭೯೧** | **೭** |

ಈ ಪರೀಕ್ಷೆಗಳ ಪ್ರಭಾವ ಮತ್ತು ಪರಿಣಾಮಗಳನ್ನು ಹೊರಗಿನವರು ಗ್ರಹಿಸಲಾರರು.

ಈ ಪ್ರಶ್ನೆಗಳಿಗೂ ಅಸ್ಪೃಶ್ಯತೆಗೂ ಏನು ಸಂಬಂಧ ಎಂದು ಅವರು ಕೇಳಬಹುದು. ಅಸ್ಪೃಶ್ಯ ಜನರ ಜನಸಂಖ್ಯೆಯನ್ನು ತಿಳಿಯುವುದರಲ್ಲಿ ಈ ಪ್ರಶ್ನೆಗಳ ಪ್ರಭಾವ ಮತ್ತು ಪರಿಣಾಮವನ್ನು ಅವರು ಗಮನಿಸಬೇಕು. ಆಗಲೇ ಹೇಳಿರುವಂತೆ ಅಸ್ಪೃಶ್ಯತೆಗೆ ಕಾನೂನುಬದ್ಧವಾದ ವಿವರಣೆ ಇಲ್ಲ ಮತ್ತು ಇರಲು ಸಾಧ್ಯವೂ ಇಲ್ಲ. ಅಸ್ಪೃಶ್ಯತೆಯೆಂಬುದು ತಲೆಗೂದಲಿನಿಂದಾಗಲಿ ಅಥವಾ ಮೈಬಣ್ಣದಿಂದಾಗಲಿ ವ್ಯಕ್ತವಾಗುವುದಿಲ್ಲ. ಅದು ರಕ್ತದಲ್ಲಿ ಕಾಣುವುದಿಲ್ಲ. ಅಸ್ಪೃಶ್ಯತೆಯೆಂಬುದು ಕೆಲವು ರೀತಿಯ ವರ್ತನೆ ಮತ್ತು ಆಚರಣೆಯಲ್ಲಿ ವ್ಯಕ್ತವಾಗುವಂತಹುದು. ಹಿಂದೂಗಳಿಂದ ಭಿನ್ನವಾದ ಕೆಲವು ಆಚರಣೆಗಳನ್ನುಳ್ಳ ಅಸ್ಪೃಶ್ಯನನ್ನು ಹಿಂದೂಗಳು ಒಂದು ವಿಶಿಷ್ಟ ರೀತಿಯಲ್ಲಿ ಕಾಣುತ್ತಾರೆ. ಸಾಮಾಜಿಕ ವಿಚಾರಗಳಲ್ಲಿ ಹಿಂದೂಗಳು ಅಸ್ಪೃಶ್ಯರನ್ನು ಕಾಣುವ ಕೆಲವು ರೀತಿಗಳೇ ಇವೆ. ಹೀಗಿರುವುದರಿಂದ ಅಸ್ಪೃಶ್ಯರನ್ನು ಗುರುತಿಸಲು ಅವರ ಆಚರಣೆ ಮತ್ತು ರೀತಿಯನ್ನು ಆಧಾರವಾಗಿಟ್ಟುಕೊಂಡು ಅವುಗಳನ್ನು ಅನುಸರಿಸುವ ಜನಾಂಗವಾವುದು ಎಂಬುದನ್ನು ಕಂಡುಹಿಡಿಯುವುದೊಂದೇ ಸರಿಯಾದ ಮಾರ್ಗ. ಅದು ಹೊರತು ಬೇರೆ ಮಾರ್ಗವಿಲ್ಲ. ಹೊರಗಿನವರಿಗೆ ಈ ಅಂಶ ಮನದಟ್ಟಾದರೆ, ಆಗ ಜನಗಣತಿಯ ನಿರ್ದೇಶಕರ ಪ್ರಶ್ನೆಗಳಲ್ಲಿ ಅಸ್ಪೃಶ್ಯತೆಯ ಬಣ್ಣ ಕಾಣದಿದ್ದರೂ ಅಸ್ಪೃಶ್ಯತೆಯ ಚೊಕ್ಕಮುದ್ರೆ ಅಲ್ಲಿ ಅಡಗಿದೆಯೆಂಬುದು ಅರಿವಾಗುತ್ತದೆ. ಹೀಗಿರುವುದರಿಂದ ಅವರು ಅನುಸರಿಸಿದ ಮಾರ್ಗ ಮತ್ತು ಅವರ ಪ್ರಶ್ನೆಗಳು ಸಮರ್ಪಕವಾಗಿದ್ದವು ಎಂಬುದರಲ್ಲಿ ಯಾವ ಸಂಶಯವೂ ಇಲ್ಲ. ಆದ್ದರಿಂದ ಈ ರೀತಿಯ ತನಿಖೆ ಮಹತ್ವಪೂರ್ಣವಾಗಿದ್ದು ಇಂತಹ ವಿಚಾರದಲ್ಲಿ ಇದರಿಂದ ದೊರೆತ ಚಿತ್ರಣವು ಕರಾರುವಾಕ್ಕಾಗಿದೆ ಎಂದು ಖಂಡಿತವಾಗಿಯೂ ಹೇಳಬಹುದು.

---

* (ಈ ಪಟ್ಟಿಯು ಮಹಾರಾಷ್ಟ್ರ ಸರ್ಕಾರದ ಶಿಕ್ಷಣ ಇಲಾಖೆಯವರ *ಡಾ. ಬಾಬಾ ಸಾಹೇಬ್ ಅಂಬೇಡ್ಕರ್‌ರವರ ಬರಹಗಳು ಮತ್ತು ಭಾಷಣಗಳು, ಸಂ.೨* ಇದರಿಂದ ಪುನರ್‌ಮುದ್ರಣಗೊಂಡಿದೆ. ಪು. ೩೬೪. ಇದು ಹಸ್ತ ಪ್ರತಿಯಲ್ಲಿ ದಾಖಲೆಯಾಗಿಲ್ಲ.)

## III

೧೯೧೧ನೆಯ ಇಸವಿ ಜನಗಣತಿಯ ನಿರ್ದೇಶಕರು ಅಸ್ಪೃಶ್ಯರ ಒಟ್ಟು ಜನಸಂಖ್ಯೆ ಎಷ್ಟೆಂದು ಹೇಳಿದರೋ ಅದನ್ನೇ ೧೯೨೧ರ ಜನಗಣತಿಯ ನಿರ್ದೇಶಕರು ದೃಢೀಕರಿಸಿದರು.

೧೯೨೧ನೆಯ ಇಸವಿಯ ಜನಗಣತಿಯ ನಿರ್ದೇಶಕರೂ ಅಸ್ಪೃಶ್ಯರ ಜನಸಂಖ್ಯೆ ಎಷ್ಟೆಂಬುದನ್ನು ನಿರ್ಧರಿಸಲು ಸೂಕ್ತ ರೀತಿಯಲ್ಲಿ ತನಿಖೆ ಮಾಡಿದರು. ೧೯೩೧ನೆಯ ಜನಗಣತಿಯ ವರದಿಯ ಒಂದನೆಯ ಭಾಗದಲ್ಲಿ ಜನಗಣತಿಯ ನಿರ್ದೇಶಕರು ಈ ರೀತಿ ಟೀಕಿಸಿದ್ದಾರೆ :

"ಇತ್ತೀಚಿನ ಕಾಲದಲ್ಲಿ ಸಮಾಜದ ಒಂದು ಭಾಗದ ಜನರನ್ನು 'ದಲಿತವರ್ಗ' ಎಂದು ಹೇಳುವುದು ಸರ್ವೇಸಾಮಾನ್ಯವಾಗಿದೆ. ನನಗೆ ತಿಳಿದಿರುವ ಮಟ್ಟಿಗೆ ಆ ಪದಕ್ಕೆ ಒಂದು ಕೊನೆಯ ವಿವರಣೆಯೆಂಬುದಿಲ್ಲ ಅಥವಾ ಅದು ಯಾರನ್ನು ನಿರ್ದೇಶಿಸುತ್ತದೆಂಬುದೂ ಖಚಿತವಿಲ್ಲ. ೧೯೧೭/೧೭ರ ನಡುವಿನ ಐದು ವರ್ಷದ ಶಿಕ್ಷಣದ ಪ್ರಗತಿಯ ಪುನರ್ವಿಮರ್ಶೆಯ ವರದಿಯಲ್ಲಿ (೧೮ನೆಯ ಅಧ್ಯಾಯದ ೫೦೫ನೆಯ ಪರಿಚ್ಛೇದ) ದಲಿತ ವರ್ಗಗಳಿಗೆ ದೊರೆತ ಶೈಕ್ಷಣಿಕ ನೆರವು ಮತ್ತು ಅವರ ಪ್ರಗತಿಯನ್ನು ಕುರಿತು ವಿಶೇಷವಾಗಿ ವಿವರಿಸಲಾಗಿದೆ ಮತ್ತು ಆ ವರದಿಯ ೧೨ನೆಯ ಅನುಬಂಧದಲ್ಲಿ ದಲಿತವರ್ಗವೆನಿಸಿಕೊಳ್ಳುವ ಜಾತಿಗಳು ಮತ್ತು ಬುಡಕಟ್ಟುಗಳ ಒಂದು ಪಟ್ಟಿಯನ್ನು ಕೊಡಲಾಗಿದೆ. ಆ ಪಟ್ಟಿಯಲ್ಲಿ ಕಾಣುವ ಒಟ್ಟು ದಲಿತರ ಸಂಖ್ಯೆ ೩೧ ದಶಲಕ್ಷ ಅಥವಾ ಬ್ರಿಟಿಷ್ ಭಾರತದ ಹಿಂದೂ ಮತ್ತು ಬುಡಕಟ್ಟು ಜನಾಂಗದ ಶೇಕಡಾ ೧೯ರಷ್ಟು ಎಂದಾಗುತ್ತದೆ. ಭೇದಕಾರಕವಾದ ಸಾಮಾಜಿಕ ತಾರತಮ್ಯವನ್ನು ಬಹಿರಂಗವಾಗಿ ವರದಿ ಮಾಡುವುದರಿಂದ ದೊಡ್ಡ ಅಪಾಯವಿದೆಯೆಂಬುದರಲ್ಲಿ ಯಾವ ಅನುಮಾನವೂ ಇಲ್ಲ ನಿಜ. ಆದರೆ ದಲಿತವರ್ಗದ ಪಟ್ಟಿ ಈಗಾಗಲೇ ಸಿದ್ಧಗೊಂಡಿದ್ದು ಅದರಲ್ಲಿಯೂ ದಕ್ಷಿಣ ಭಾರತದಲ್ಲಿ ಜನ ಸೇವಾ ಸಂಘಸಂಸ್ಥೆಗಳ ಪ್ರಯತ್ನದಿಂದಾಗಿ ದಲಿತರ ವರ್ಗದವರಲ್ಲಿ ಅರಿವು ಮತ್ತು ಸಂಘಟನೆ ಬೆಳೆದಿದ್ದು, ಶಾಸನ ಸಭೆಗಳಲ್ಲಿ ಅಧಿಕಾರಯುತವಾದ ಪ್ರಾತಿನಿಧ್ಯವಿದ್ದುದರಿಂದ, ಈ ಸಮಸ್ಯೆಯನ್ನು ನೇರವಾಗಿ ಎದುರಿಸಿ ದಲಿತರ ಸಂಖ್ಯೆ ಎಷ್ಟು ಎಂಬುದನ್ನು ತಿಳಿಯಲು ಯತ್ನಿಸುವುದು ಸೂಕ್ತವೆನಿಸಿತು. ಆದ್ದರಿಂದ ದಲಿತವರ್ಗಕ್ಕೆ ಸೇರುವ ಜಾತಿಗಳ ಜನಸಂಖ್ಯೆಯೆಷ್ಟೆಂಬುದನ್ನು ಜನಗಣತಿಯ ಆಧಾರದ ಮೇಲೆ ಕಂಡುಹಿಡಿಯಲು ನಾನು ಪ್ರಾಂತೀಯ ಜನಗಣತಿಯ ಮೇಲ್ವಿಚಾರಕರಿಗೆ ಸೂಚಿಸಿದೆನು".

"ಸಂಯುಕ್ತ ಪ್ರಾಂತದ ಹೊರತು ಮಿಕ್ಕೆಲ್ಲ ಪ್ರಾಂತಗಳಿಂದಲೂ ಒಂದಲ್ಲ ಒಂದು ರೀತಿಯಲ್ಲಿ ಸಿದ್ಧಗೊಂಡ ದಲಿತರ ಸಂಖ್ಯೆಯ ಪಟ್ಟಿ ನನಗೆ ತಲುಪಿತು. ಆದರೆ ಸಂಯುಕ್ತ ಸಂಸ್ಥಾನದಲ್ಲಿ ಒಂದು ರೀತಿಯ ಸೂಕ್ಷ್ಮ ಪರಿಸ್ಥಿತಿಯಿಂದಾಗಿ ದಲಿತರ ಒಂದು ಅಂದಾಜು ಪಟ್ಟಿಯೂ ದೊರೆಯಲಿಲ್ಲ. ಭಾರತದ ಬೇರೆ ಬೇರೆ ಭಾಗದಲ್ಲಿ ದಲಿತರನ್ನು ಗುರುತಿಸಲು ಏಕರೂಪದ ಪ್ರಮಾಣವಿರಲಿಲ್ಲವಾದ್ದರಿಂದ, ಒಂದೇ ಗುಂಪಿನ ಜನ ಬೇರೆ ಬೇರೆ ರೀತಿಯಲ್ಲಿ ವರ್ಗೀಕರಣಗೊಂಡಿದ್ದರಿಂದ ೧೯೧೧ನೆಯ ಇಸವಿಯ ಜನಗಣತಿಯ ವರದಿ ಮತ್ತು ಶೈಕ್ಷಣಿಕ ವರದಿಗಳ ಆಧಾರದ ಮೇಲೆ ಹಲಕೆಲವು ಬದಲಾವಣೆಗಳನ್ನು ಮಾಡಬೇಕಾಯಿತು. ಈ ಮೊದಲೇ ವಿವರಿಸಿರುವಂತೆ ಯಾವ ಒಂದು ಜಾತಿಯ ಒಟ್ಟು ಜನಸಂಖ್ಯೆಯನ್ನು ತಿಳಿಯಲಾಗದಷ್ಟು ದೋಷ ಇಲ್ಲಿಯೂ ಮರುಕಳಿಸಿತು. ಹಿಂದೂ ಜನಾಂಗದಲ್ಲಿ ಕೊನೆಯ ಪಕ್ಷ ಎಷ್ಟು ಜನರನ್ನು "ದಲಿತ ವರ್ಗಕ್ಕೆ" ಸೇರಿಸಬಹುದು ಎಂಬ ಅಂಶ ವರದಿಗಳಿಂದ ನಮಗೆ ದೊರೆಯುತ್ತದೆ. ಈ ವಿವಿಧ ಪ್ರಾಂತಗಳಿಂದ ದೊರೆತ ಒಟ್ಟು ಸಂಖ್ಯೆ ಸುಮಾರು ೫೩ ದಶಲಕ್ಷವೆಂದಾಗುತ್ತದೆ. ಇದು ಬಹುಕಡಿಮೆಯ ಹಾಗು ಜಿಪುಣತನದ ಅಂದಾಜು ಎಂದೇ ಹೇಳಬೇಕು. ಏಕೆಂದರೆ ಇದರಲ್ಲಿ (೧) ಆಯಾ ಜಾತಿಯ ಮತ್ತು ಬುಡಕಟ್ಟುಗಳ ಒಟ್ಟು

ಸಂಖ್ಯೆಯಾಗಲಿ (೨) ಹಿಂದೂ ಜನಾಂಗಕ್ಕೆ ಇತ್ತೀಚೆಗೆ ಸೇರಿದ ಅನಾಗರಿಕ ಬುಡಕಟ್ಟಿನ ಮೈಲಿಗೆಯ ಜನವಾಗಲಿ ಸೇರಿಲ್ಲ. ಭಾರತದಲ್ಲಿ ಮೈಲಿಗೆಯವರೆನಿಸಿದ ದಲಿತರ ಒಟ್ಟು ಸಂಖ್ಯೆ ೫೫ ರಿಂದ ೬೦ ದಶಲಕ್ಷವಿರಬಹುದೆಂದು ಖಂಡಿತವಾಗಿಯೂ ಹೇಳಬಹುದು.

ಅಷ್ಟರಲ್ಲಿ ೧೯೧೯ನೆಯ ಇಸವಿಯ ಭಾರತ ಸರ್ಕಾರದ ಅಧಿನಿಯಮದಂತೆ ಜಾರಿಗೊಳಿಸಿದ ಸುಧಾರಣೆಗಳ ಫಲಶ್ರುತಿಯೇನೆಂಬುದನ್ನು ಪರೀಕ್ಷಿಸಿ ಇನ್ನು ಮುಂದೆ ತರಬೇಕಾದ ಸುಧಾರಣೆಗಳ ಸ್ವರೂಪವನ್ನು ಸೂಚಿಸಲು ಬ್ರಿಟಿಷ್ ಪಾರ್ಲಿಮೆಂಟಿನಿಂದ ನಿಯೋಜಿತವಾದ ೧೯೨೮ರ ಸೈಮನ್ ಕಮೀಷನ್ ತನ್ನ ತನಿಖೆಯನ್ನು ಆರಂಭಿಸಿತು.

೧೯೧೯ರ ಕಾನೂನಿನಲ್ಲಿ ಸೇರಿಬಂದ ಸುಧಾರಣೆಗಳನ್ನು ಕುರಿತು ಪರಿಶೀಲನೆ ಪ್ರಾರಂಭವಾದಾಗ ಮಾಂಟೆಗೋ ಚೆಲ್ಮ್ಸ್‌ಫರ್ಡ್ ವರದಿಯ ಕರ್ತೃಗಳು ಅಸ್ಪೃಶ್ಯರ ಸಮಸ್ಯೆಯನ್ನು ಸ್ಪಷ್ಟವಾಗಿ ಗುರುತಿಸಿದ್ದು. ಶಾಸನಸಭೆಗಳಲ್ಲಿ ಅವರ ಪ್ರಾತಿನಿಧ್ಯಕ್ಕೆ ಸೂಕ್ತ ವ್ಯವಸ್ಥೆ ಮಾಡುತ್ತೇವೆಂದು ಪಣತೊಟ್ಟರು. ಆದರೆ ಲಾರ್ಡ್ ಸೌತ್ ಬರೋರವರ ಅಧ್ಯಕ್ಷತೆಯಲ್ಲಿ ಮತಚಲಾವಣೆ ಮತ್ತು ಚುನಾವಣಾ ಸ್ವರೂಪವನ್ನು ನಿರ್ಣಯಿಸಲು ನೇಮಕವಾದ ಸಮಿತಿಯು ಈ ಅಂಶವನ್ನು ಪೂರ್ಣವಾಗಿ ಮರೆಯಿತು. ಈ ಮನೋವೃತ್ತಿಯನ್ನು ಒಪ್ಪದ ಭಾರತ ಸರ್ಕಾರ ಈ ರೀತಿ ಟೀಕೆ ಮಾಡಿತು :

"ಅವರು (ಅಸ್ಪೃಶ್ಯರು) ಒಟ್ಟು ಜನಸಂಖ್ಯೆಯ ಐದನೆಯ ಒಂದರಷ್ಟಿದ್ದಾರೆ. ಆದರೆ ಮಾರ್ಲೆ–ಮಿಂಟೋ ಸಮಿತಿಯಲ್ಲಿ ಅವರಿಗೆ ಪ್ರಾತಿನಿಧ್ಯವೇ ಇಲ್ಲ. ಆ ಸಮಿತಿಯ ವರದಿಯಲ್ಲಿ ಅವರನ್ನು (ಅಸ್ಪೃಶ್ಯರನ್ನು) ಎರಡು ಸಾರಿ ಹೆಸರಿಸಲಾಗಿದೆಯಾದರೂ ಅದು ಅವರಿಗೆ ಚುನಾವಣೆಯಲ್ಲಿ ಸೂಕ್ತ ಪ್ರಾತಿನಿಧ್ಯ ದೊರೆಯದಿದ್ದರೆ ನಾಮಕರಣದಿಂದಲಾದರೂ ದೊರಕಿಸಿಕೊಡಬೇಕು ಎಂಬುದನ್ನು ವಿವರಿಸಲೋಸುಗ ಮಾತ್ರ. ಆ ಸಮಿತಿಯ ಈ ಜನರ ಸ್ಥಿತಿಗತಿ ಅಥವಾ ಅವರಿಗೆ ತಮ್ಮ ಹಿತಾಸಕ್ತಿಗಳನ್ನು ನೋಡಿಕೊಳ್ಳುವ ಸಾಮರ್ಥ್ಯವಿದೆಯೇ ಎಂಬ ವಿಚಾರವನ್ನು ಕುರಿತು ಚರ್ಚಿಸಲೇ ಇಲ್ಲ. ಅವರಿಂದ ಎಷ್ಟು ಜನರನ್ನು ನಾಮಕರಣ ಮಾಡಬೇಕೆಂಬುದನ್ನು ಆ ಸಮಿತಿ ವಿವರಿಸಲಿಲ್ಲ. ಅವರು ಸೂಚಿಸಿದ ಪ್ರಾತಿನಿಧ್ಯವೆಂದರೆ ಬ್ರಿಟಿಷ್ ಭಾರತ ಜನಸಂಖ್ಯೆಯ ಐದನೆಯ ಒಂದರಷ್ಟಿರುವ ಈ ಜನರಿಗೆ ಎಂಟುನೂರು ಸ್ಥಾನಗಳಿರುವ ಕಡೆ ಏಳು ಸ್ಥಾನಗಳನ್ನು ಹಂಚಿಕೊಡಬೇಕು ಎಂದು. ಎಲ್ಲ ಪ್ರತಿನಿಧಿ ಸಭೆಗಳಲ್ಲಿಯೂ ಅಸ್ಪೃಶ್ಯರ ಹಿತವನ್ನು ಗಮನಿಸುವ ಸುಮಾರು ಆರನೆ ಒಂದು ಭಾಗದಷ್ಟು ಅಧಿಕಾರಿ ಸದಸ್ಯರಿರುತ್ತಾರೆಂಬುದು ನಿಜ; ನಮ್ಮ ಅಭಿಪ್ರಾಯದಲ್ಲಿ ಸುಧಾರಣಾ ವರದಿಯ ಉದ್ದೇಶ ಅದಿರಲಾರದು. ಸುಧಾರಣಾ ಸಮಿತಿಯ ಕರ್ತೃಗಳು ಅಸ್ಪೃಶ್ಯರು ತಮ್ಮ ಹಿತವನ್ನು ತಾವು ಕಾಪಾಡಲು ಕಲಿಯಬೇಕೆಂದು ಹೇಳಿದ್ದಾರೆ. ಅರವತ್ತು ಅಥವಾ ಎಪ್ಪತ್ತು ಸವರ್ಣ ಹಿಂದೂಗಳಿರುವ ಒಂದು ಸಮಿತಿಯಲ್ಲಿ ಒಬ್ಬ ಅಸ್ಪೃಶ್ಯ ಸದಸ್ಯನಿರುವುದರಿಂದ ಈ ಉದ್ದೇಶ ಸಾಧ್ಯವಾಗುತ್ತದೆ ಎಂಬುದು ಖಂಡಿತ ಹಾಸ್ಯಾಸ್ಪದ. ಆ ವರದಿಯ ಉದ್ದೇಶವನ್ನು ಸಾಧ್ಯಗೊಳಿಸಬೇಕಾದರೆ ಅಸ್ಪೃಶ್ಯರನ್ನು ಕುರಿತಂತೆ ಮತ್ತಷ್ಟು ಉದಾರವಾಗಿ ಯೋಚಿಸಬೇಕಾಗುತ್ತದೆ."

ಆ ಸಮಿತಿಯು ಅಸ್ಪೃಶ್ಯರಿಗೆ ಹಂಚಿರುವ ಸ್ಥಾನಗಳನ್ನು ಎರಡರಷ್ಟು ಮಾಡಬೇಕು ಎಂದು ಸರ್ಕಾರವು ಶಿಫಾರಸು ಮಾಡಿತು. ಅದರಂತೆ ಏಳು ಸ್ಥಾನಗಳಿಗೆ ಬದಲಾಗಿ ಹದಿನಾಲ್ಕು ಸ್ಥಾನಗಳನ್ನು ಅವರಿಗೆ ಕೊಡಲಾಯಿತು. ಭಾರತ ಸರ್ಕಾರದ ಈ ಔದಾರ್ಯವು ಕೃತಿಗಿಳಿದಾಗ ಅಷ್ಟೇನು ಹೆಚ್ಚು ಎಂದೆನಿಸಲಿಲ್ಲ. ಅಸ್ಪೃಶ್ಯರಿಗೆ ದೊರಕಬೇಕಾದ ನ್ಯಾಯ ಇದರಿಂದ ದೊರೆಯಲಿಲ್ಲ.

೧೯೧೯ರಲ್ಲಿ ಸಮರ್ಪಕವಾಗಿ ಬಗೆಹರಿಯದ ಸಮಸ್ಯೆಗಳಲ್ಲಿ ಸೈಮನ್ ಕಮೀಷನ್‌ನ ಮುಂದೆ

ಬೃಹದಾಕಾರವಾಗಿ ನಿಂತ ಅಸ್ಪೃಶ್ಯರ ಸಮಸ್ಯೆಯೂ ಒಂದು. ಅಂದಿನ ಭಾರತದ ಕಾರ್ಯದರ್ಶಿಯಾಗಿದ್ದ ಲಾರ್ಡ್ ಬಿರ್ಕನ್‌ಹೆಡ್‌ನ ದೃಷ್ಟಿಯಲ್ಲಿ ಈ ಸಮಸ್ಯೆಯು ಅನಿರೀಕ್ಷಿತವಾದ ಮಹತ್ವವನ್ನು ಪಡೆಯಿತು. ಸೈಮನ್ ಕಮಿಷನ್ನನ್ನು ನೇಮಿಸುವ ಮುನ್ನ ಅವನು ಮಾಡಿದ ಭಾಷಣದಲ್ಲಿ ಈ ರೀತಿ ಹೇಳಿದನು.[೧]

ಸಹಜವಾಗಿ ಸೈಮನ್ ಕಮಿಷನ್‌ಗೆ ಈ ಸಮಸ್ಯೆ ಹೆಚ್ಚಿನ ಹೊಣೆಗಾರಿಕೆಯನ್ನು ತಂದಿತು. ಈ ಸಮಸ್ಯೆಯು ಅದರ ಹೊರನೋಟಕ್ಕೆ ಕಾಣುವಂತೆ ಅವರ ಪ್ರಾತಿನಿಧ್ಯ ನಿರ್ಣಯಿಸಬೇಕಾದ ರಾಜಕೀಯ ಸಮಸ್ಯೆಯಂತೆ ಕಂಡರೂ ಅವರ ಜನಸಂಖ್ಯೆಯನ್ನು ನಿರ್ಣಯಿಸುವ ಮೂಲಭೂತ ಸಮಸ್ಯೆಯೂ ಅದರಲ್ಲಿದ್ದಿತು. ಅವರ ಜನಸಂಖ್ಯೆ ಎಷ್ಟು ಎಂಬುದು ನಿರ್ಣಯವಾಗದೆ ಶಾಸನಸಭೆಗಳಲ್ಲಿ ಅವರ ಪ್ರಾತಿನಿಧ್ಯವೆಷ್ಟಿರಬೇಕೆಂಬುದನ್ನು ನಿರ್ಣಯಿಸುವುದು ಸಾಧ್ಯವಾಗದು.

ಆದ್ದರಿಂದ ಸೈಮನ್ ಕಮಿಷನ್ ಅಸ್ಪೃಶ್ಯರ ಜನಸಂಖ್ಯೆಯ ವಿಚಾರದಲ್ಲಿ ಆಳವಾದ ಅನ್ವೇಷಣೆ ಮಾಡಬೇಕಾಯಿತು. ವಿವಿಧ ಪ್ರಾಂತ್ಯಗಳಲ್ಲಿ ವಾಸಿಸುವ ಅಸ್ಪೃಶ್ಯರ ಸಂಖ್ಯೆಯ ಮಾಹಿತಿಯನ್ನು ಕೊಡುವಂತೆ ಪ್ರಾಂತೀಯ ಸರ್ಕಾರಗಳಿಗೆ ಕರೆನೀಡಿತು ಮತ್ತು ಆ ಸರ್ಕಾರಗಳು ಬಹಳ ಎಚ್ಚರದಿಂದ ಆ ಮಾಹಿತಿಯನ್ನು ಸಿದ್ಧಗೊಳಿಸಿದವು. ಆದ್ದರಿಂದ ಅಸ್ಪೃಶ್ಯರ ಜನಸಂಖ್ಯೆಯ ನಿಖರತೆಯ ವಿಚಾರದಲ್ಲಿ ಅನುಮಾನಕ್ಕೆ ಅವಕಾಶವಿಲ್ಲ. ಸೌತ್‌ಬರೋ ಸಮಿತಿ ಮತ್ತು ಸೈಮನ್ ಕಮಿಷನ್‌ಗಳಲ್ಲಿ ಕೊಡಲಾದ ಅಸ್ಪೃಶ್ಯರ ಜನಸಂಖ್ಯೆಯ ಈ ಮುಂದಿನ ಪಟ್ಟಿ ನೀಡಲಾಗಿದೆ.[೨]

## IV

ಅಸ್ಪೃಶ್ಯರ ಸಂಖ್ಯೆ ಸುಮಾರು ಐವತ್ತು ದಶಲಕ್ಷ ಎಂದು ಅಂದಾಜು ಮಾಡಿರುವುದು ಸ್ಪಷ್ಟವಾಗುತ್ತದೆ. ಇದು ಅಸ್ಪೃಶ್ಯರ ಜನಸಂಖ್ಯೆ ಎಂಬುದನ್ನು ೧೯೧೧ರ ಜನಗಣತಿಯ ನಿರ್ದೇಶಕರು ಕಂಡುಹಿಡಿದು ೧೯೨೧ರ ಜನಗಣತಿಯ ನಿರ್ದೇಶಕರು ಮತ್ತು ೧೯೨೯ರ ಸೈಮನ್ ಕಮಿಷನ್‌ನಿಂದ ದೃಢಪಡಿಸಲಾಗಿದೆ. ಅದರ ಇಪ್ಪತ್ತು ವರ್ಷಗಳಲ್ಲಾದ ದಾಖಲೆಯಲ್ಲಿ ಯಾವ ಹಿಂದೂವೂ ಈ ಸಂಖ್ಯೆ ತಪ್ಪೆಂದು ಆಕ್ಷೇಪಿಸಿಲ್ಲ. ಸೈಮನ್ ಕಮಿಷನ್‌ನೊಂದಿಗೆ ಸಹಕರಿಸಲು ಪ್ರಾಂತೀಯ ಮತ್ತು ಕೇಂದ್ರ ಶಾಸನ ಸಭೆಗಳಿಂದ ರಚಿತವಾದ ಬೇರೆ ಬೇರೆ ಸಮಿತಿಗಳನ್ನು ಗಮನದಲ್ಲಿಟ್ಟು ಹೇಳುವುದಾದರೆ ಹಿಂದೂಗಳು ಅಸ್ಪೃಶ್ಯರ ಈ ಸಂಖ್ಯೆಯನ್ನು ಯಾವ ತಕರಾರೂ ಇಲ್ಲದೆ ಒಪ್ಪಿರುವುದು ಕಾಣುತ್ತದೆ.

೧೯೩೨ರ ಲೋಥಿಯನ್ ಸಮಿತಿ ತನ್ನ ತನಿಖೆಯನ್ನು ಆರಂಭಿಸಿದಾಗ ಹಿಂದೂಗಳು ಇದ್ದಕ್ಕಿದ್ದಂತೆ ಈ ಸಂಖ್ಯೆಯನ್ನು ಒಪ್ಪದೆ ತಕರಾರು ಮಾಡಿದರು. ಕೆಲವು ಪ್ರಾಂತಗಳಲ್ಲಿ ಅಸ್ಪೃಶ್ಯರೇ ಇಲ್ಲವೆಂದು ಹೇಳುವವರೆಗೂ ಹಿಂದೂಗಳು ಹೋದರು. ಈ ಘಟನೆ ಹಿಂದೂಗಳ ಮನೋಧರ್ಮವೆಂತಹುದು ಎಂಬುದನ್ನು ಸೂಚಿಸುತ್ತದೆ. ಮತ್ತು ಆ ಕಾರಣದಿಂದ ಅದನ್ನು ಕುರಿತು ಸ್ವಲ್ಪ ವಿವರಣೆಯನ್ನು ನೀಡಬೇಕು.

ಭಾರತದ ದುಂಡುಮೇಜಿನ ಪರಿಷತ್ತಿನ ನಾಗರಿಕ ಉಪ ಸಮಿತಿಯ ಸಲಹೆಯಂತೆ ಲೋಥಿಯನ್ ಕಮಿಟಿಯನ್ನು ನೇಮಿಸಲಾಯಿತು. ಈ ಸಮಿತಿಯು ಮಧ್ಯಪ್ರಾಂತ ಮತ್ತು ಅಸ್ಸಾಂ ಪ್ರಾಂತವನ್ನು ಬಿಟ್ಟು ಭಾರತದ ಮಿಕ್ಕೆಲ್ಲ ಪ್ರಾಂತಗಳನ್ನು ಭೇಟಿಮಾಡಿತು. ಈ ಸಮಿತಿಯೊಂದಿಗೆ ಸಹಕರಿಸಲು ಬೇರೆ ಬೇರೆ

---

೧. ಹಸ್ತಪ್ರತಿಯಲ್ಲಿ ಖಾಲಿ ಬಿಟ್ಟಿದೆ. – ಸಂ.

೨. ಹಸ್ತಪ್ರತಿಯಲ್ಲಿ ಪಟ್ಟಿಯನ್ನು ನೀಡಿಲ್ಲ. – ಸಂ.

ವಿಚಾರಧಾರೆಯನ್ನು ಪ್ರತಿನಿಧಿಸುವ ಹಾಗೂ ಆಯಾ ಪ್ರಾಂತದಲ್ಲಿ ಕಾಣುವ ವಿವಿಧ ರಾಜಕೀಯ ಆಸಕ್ತಿಗಳನ್ನು ಪ್ರತಿಪಾದಿಸುವ, ಜನರನ್ನೊಳಗೊಂಡ ಪ್ರಾಂತೀಯ ಸಮಿತಿಗಳನ್ನು ಆಯಾ ಪ್ರಾಂತದ ಸರಕಾರಗಳು ರಚಿಸಿದವು. ಅಧಿಕಾರೇತರ ವ್ಯಕ್ತಿಯ ಅಧ್ಯಕ್ಷತೆಯಲ್ಲಿ ರಚಿತವಾದ ಈ ಪ್ರಾಂತೀಯ ಸಮಿತಿಗಳಲ್ಲಿ ಬಹುಮಟ್ಟಿಗೆ ಕೌನ್ಸಿಲ್ ಸದಸ್ಯರೇ ಇದ್ದರು. ಈ ಸಮಿತಿಗಳು ತಮ್ಮ ವಿವೇಚನೆಯನ್ನು ಉದ್ದೇಶಿತ ಗುರಿಯ ಮೇಲೆ ಕೇಂದ್ರೀಕರಿಸಲೆಂಬ ಕಾರಣದಿಂದ ಭಾರತ ನಾಗರಿಕ ಉಪ ಸಮಿತಿಯು ಕೆಲವು ಪ್ರಶ್ನಾವಳಿಗಳನ್ನು ಸಿದ್ಧಗೊಳಿಸಿದ್ದಿತು. ನಾಗರಿಕ ಉಪಸಮಿತಿಯು ಸೂಚಿಸಿದ ಕಾರ್ಯವಿಧಾನವೆಂದರೆ, ಪ್ರಶ್ನಾವಳಿಯಲ್ಲಿ ಸೂಚಿಸಿರುವ ವಿಷಯಗಳನ್ನು ಕುರಿತು ಸಾಕ್ಷ್ಯಾಧಾರದೊಂದಿಗೆ ಚಿಂತಿಸಿ, ಅವರ ಲಿಖಿತ ಅಭಿಪ್ರಾಯಗಳನ್ನು ಪಡೆದು, ಪ್ರಾಂತೀಯ ಸರ್ಕಾರ ತನ್ನ ಅಭಿಪ್ರಾಯವನ್ನು ಕೇಂದ್ರ ಸಮಿತಿಗೆ ಸಾಧಾರಯುತವಾದ ಸಲಹೆಯೊಂದಿಗೆ ನೀಡಬೇಕು ಎಂಬುದಾಗಿತ್ತು. ಭಾರತದ ನಾಗರಿಕ ಸಮಿತಿಯ ವರದಿಯು ವಿವರವಾದ ಪರಿಶೀಲನೆಯನ್ನಾಧರಿಸಿ ರೂಪುಗೊಂಡ ಒಂದು ಖಚಿತವಾದ ದಾಖಲೆಯಾಯಿತು.

ಭಾರತದ ನಾಗರಿಕ ಸಮಿತಿಯ ಅಧ್ಯಕ್ಷರಾದ ಲಾರ್ಡ್ ಲೋಥಿಯನ್‌ಗೆ ಆ ಸಮಿತಿಯ ಉದ್ದೇಶವನ್ನು ಕುರಿತಂತೆ ಪ್ರಧಾನಮಂತ್ರಿಯವರು ಬರೆದ ಪತ್ರದಲ್ಲಿ ಈ ಕೆಳಗಿನ ವಿಚಾರಗಳ ಕಡೆಗೆ ಅವರ ಗಮನವನ್ನು ಸೆಳೆಯಲಾಯಿತು.

"ದುಂಡು ಮೇಜಿನ ಪರಿಷತ್ತಿನಲ್ಲಿ ಚರ್ಚೆಗಳಿಂದ ತಿಳಿದುಬಂದ ಅಂಶವೆಂದರೆ ಹೊಸ ಸಂವಿಧಾನದಲ್ಲಿ ದಲಿತರ ಸೂಕ್ತ ಪ್ರಾತಿನಿಧ್ಯ ವ್ಯವಸ್ಥೆ ಮಾಡಬೇಕು ಮತ್ತು ಅವರ ಪ್ರಾತಿನಿಧ್ಯವನ್ನು ಇನ್ನು ಮುಂದೆ ನಾಮಕರಣದಿಂದ ನಿರ್ಣಯಿಸುವಂತಿರಬಾರದು. ನಿಮಗೆ ತಿಳಿದಿರುವಂತೆ ದಲಿತರಿಗೆ ಪ್ರತ್ಯೇಕವಾದ ಚುನಾವಣೆಯಿರಬೇಕೆಂಬ ವಿಚಾರದಲ್ಲಿ ಭಿನ್ನಾಭಿಪ್ರಾಯವಿದ್ದು, ಸಾಮಾನ್ಯ ಚುನಾವಣೆಯಲ್ಲಿಯೇ ದಲಿತರೂ ತಮ್ಮ ಮತಚಲಾಯಿಸಲು ಅವಕಾಶ ಕೊಡುವುದು ಸೂಕ್ತವೇ ಎಂಬ ವಿಚಾರವನ್ನು ನಿರ್ಣಯಿಸಲು ನಿಮ್ಮ ಸಮಿತಿಯ ಸಲಹೆಯು ಸಹಕಾರಿಯಾಗುವಂತಿರಬೇಕು. ದಲಿತರ ಸಂಖ್ಯೆ ಸ್ಪಷ್ಟವೂ ನಿರ್ದಿಷ್ಟವೂ ಆಗಿರುವ ಪ್ರಾಂತ್ಯಗಳಲ್ಲಿ ಅಥವಾ ಎಲ್ಲ ಪ್ರಾಂತ್ಯಗಳಲ್ಲಿ ದಲಿತ ವರ್ಗದವರನ್ನೇ ಒಂದು ಪ್ರತ್ಯೇಕ ಚುನಾವಣಾ ಸಮುದಾಯವಾಗಿ ರೂಪಿಸಬಯಸಿದರೆ, ಆಗ ದಲಿತರಿಗೆ ಮತದಾನದ ಹಕ್ಕನ್ನು ಚುನಾವಣಾ ಸಮುದಾಯವಾಗಿ ರೂಪಿಸಬೇಕೇ ಎಂಬ ವಿಚಾರದಲ್ಲಿಯೂ ಬೆಳಕು ಚೆಲ್ಲುವಂತಿರಬೇಕು.

ಅದರಂತೆಯೇ ಭಾರತದ ನಾಗರಿಕ ಸಮಿತಿಯು ತಯಾರಿಸಿದ ಪ್ರಶ್ನಾವಳಿಯಲ್ಲಿ ಈ ಕೆಳಗಿನ ಪ್ರಶ್ನೆಯನ್ನು ಸೇರಿಸಲಾಯಿತು.

"ದಲಿತ ವರ್ಗದಲ್ಲಿ ಯಾವ ಯಾವ ಜಾತಿಗಳನ್ನು ನೀವು ಸೇರಿಸುತ್ತೀರಿ? ಅಸ್ಪೃಶ್ಯರಲ್ಲದ ವರ್ಗದವರನ್ನೂ ಸೇರಿಸುತ್ತೀರಾ? ಹಾಗಾದರೆ ಆ ವರ್ಗಗಳಾವುವು?"

ಭಾರತದ ನಾಗರಿಕ ಸಮಿತಿಯಲ್ಲಿ ನಾನೂ ಒಬ್ಬ ಸದಸ್ಯನಾಗಿದ್ದೆ. ನಾನು ಸದಸ್ಯನಾಗಿ ಅಸ್ಪೃಶ್ಯರಿಗೆ ಪ್ರತ್ಯೇಕ ಚುನಾವಣಾ ಸಮುದಾಯ ಬೇಕೆ ಅಥವಾ ಬೇರೆಯವರೊಂದಿಗೆ ಸೇರಿ ಚುನಾವಣೆ ನಡೆಸಬಹುದೆ ಎಂಬ ವಿಚಾರದಲ್ಲಿ ಸವರ್ಣ ಹಿಂದೂಗಳೊಂದಿಗೆ ಹೋರಾಡಬೇಕಾಗುತ್ತದೆಂಬುದರ ಅರಿವು ನನಗಿದ್ದಿತು. ಭಾರತದ ನಾಗರಿಕ ಸಮಿತಿಯಲ್ಲಿ ಹೆಚ್ಚಿನವರ ಅಭಿಪ್ರಾಯ ಅವರಿಗೆ ವಿರುದ್ಧವಾಗಿರುತ್ತದೆಂಬುದು ನನಗೆ ತಿಳಿದಿದ್ದಿತು. ಆ ಸಮಿತಿಯಲ್ಲಿ ಅರ್ಧ ಡಜನ್ ಸವರ್ಣ ಹಿಂದೂ ಪ್ರತಿನಿಧಿಗಳಿಗೆ ಎದುರಾಗಿ ನಾನೊಬ್ಬನೇ ಅಸ್ಪೃಶ್ಯರ ಪ್ರತಿನಿಧಿಯಾಗಿರಬೇಕಾದೀತು. ಅಷ್ಟೊಂದು ಅಸಮ ಸಂಖ್ಯೆಯ ಎದುರು ನಿಲ್ಲಲು ನಾನು

ಸಿದ್ಧನಿದ್ದೆ. ಭಾರತದ ನಾಗರಿಕ ಸಮಿತಿಯ ಸದಸ್ಯತ್ವವನ್ನು ನಾನು ಒಪ್ಪುವ ಮುನ್ನ ಅಸ್ಪೃಶ್ಯರಿಗೆ ಬೇರೆ ಚುನಾವಣೆ ಸಮುದಾಯವಿರಬೇಕೆ ಅಥವಾ ಎಲ್ಲರ ಜೊತೆಯಲ್ಲಿ ನಡೆಯಬಹುದೆ ಎಂಬ ವಿಚಾರ ಆ ಸಮಿತಿಯ ಕಾರ್ಯವ್ಯಾಪ್ತಿಗೆ ಬರಕೂಡದು ಎಂಬ ನಿಬಂಧನೆಯನ್ನು ಹಾಕಿದ್ದೆ. ಈ ನಿಬಂಧನೆಯನ್ನು ಒಪ್ಪಿ ಆ ಪ್ರಶ್ನೆಯನ್ನೂ ಭಾರತ ನಾಗರಿಕ ಸಮಿತಿಯ ವ್ಯಾಪ್ತಿಯಿಂದ ಕೈಬಿಡಲಾಗಿದ್ದಿತು. ಆದ್ದರಿಂದ ನಾನು ಆ ಸಮಿತಿಯಲ್ಲಿ ಸೋಲುವ ಭಯವಿಲ್ಲವೆಂದು ಧೈರ್ಯವಾಗಿದ್ದೆ. ಆದರೆ ನನ್ನ ಈ ಯುಕ್ತಿಗಾಗಿ ಆ ಸಮಿತಿಯ ಹಿಂದೂ ಸದಸ್ಯರು ನನ್ನನ್ನು ಕ್ಷಮಿಸಲು ಸಿದ್ಧವಿರಲಿಲ್ಲ. ಆದರೆ ನನ್ನ ಅರಿವಿಗೇ ಬರದ ಮತ್ತೊಂದು ಸಮಸ್ಯೆ ಅಲ್ಲಿ ತಲೆದೋರಿತು. ಆ ಸಮಸ್ಯೆ ಜನಸಂಖ್ಯೆಗೆ ಸಂಬಂಧಿಸಿದುದು. ಅಸ್ಪೃಶ್ಯರ ಜನಸಂಖ್ಯೆಯನ್ನು ೧೯೧೧ ರಿಂದ ೧೯೨೯ರ ವರೆಗೆ ನಾಲ್ಕು ಸಾರಿ ಅಧಿಕಾರಯುತವಾಗಿ ಪರಿಶೀಲಿಸಿ ಅದು ಸುಮಾರು ೫೦ ದಶಲಕ್ಷ ಎಂದು ನಿರ್ಣಯವಾಗಿದ್ದರಿಂದ ಅದರ ಬಗ್ಗೆ ಯಾವ ವಿರೋಧವೂ ಬರಲಾರದೆಂದು ನಾನು ತಿಳಿದಿದ್ದೆ.

ಭಾರತೀಯ ನಾಗರಿಕ ಸಮಿತಿಯ ಮುಂದೆ ಅಸ್ಪೃಶ್ಯರ ಜನಸಂಖ್ಯೆಯನ್ನು ಕುರಿತಂತೆ ತುಂಬಾ ಬಿರುಸಾದ ಮತ್ತು ಸಂಘಟಿತ ವಿರೋಧ ತಲೆದೋರಿದ್ದು ಆಶ್ಚರ್ಯವೆನಿಸಿತು. ಅಸ್ಪೃಶ್ಯತೆಯೆಂಬುದೇ ಇಲ್ಲ ಎಂದು ಸ್ಥಾಪಿಸಲು ಸಾಕ್ಷಿಗಳ ಮೇಲೆ ಸಾಕ್ಷಿಗಳು, ಸಮಿತಿಗಳ ಮೇಲೆ ಸಮಿತಿಗಳು ಮುಂದೆ ಬಂದವು. ಇದು ನನ್ನನ್ನು ಚಕಿತನನ್ನಾಗಿ ಮಾಡಿತು. ಅಸ್ಪೃಶ್ಯರೆಂಬ ಜನಾಂಗವೇ ಇಲ್ಲ ಎಂದು ಸ್ಥಾಪಿಸಲು ಮುಂದೆ ಬಂದ ವ್ಯಕ್ತಿಗತ ಸಾಕ್ಷಿಗಳ ಹೇಳಿಕೆಗಳನ್ನು ಗಮನಿಸುವುದು ಸಾಧ್ಯವಿಲ್ಲವಾದ್ದರಿಂದ ಪ್ರಾಂತೀಯ ನಾಗರಿಕ ಸಮಿತಿಗಳು ಮತ್ತೆ ಅದರ ಸದಸ್ಯರ ಅಭಿಪ್ರಾಯಗಳನ್ನು ಇಲ್ಲಿ ಉದಾಹರಿಸಿ ನನ್ನ ಅಭಿಪ್ರಾಯವನ್ನು ನಿರೂಪಿಸಿದರೆ ಸಾಕು.

## ಪಂಜಾಬ್

### ಪಂಜಾಬ್ ಸರ್ಕಾರದ ಅಭಿಪ್ರಾಯ

"ಹಿಡುವಳಿದಾರರಿಗೂ ಚುನಾವಣಾ ಹಕ್ಕನ್ನು ಕೊಡುವುದಾದರೆ ದಲಿತ ವರ್ಗದ ಅನೇಕರಿಗೆ ಓಟು ಕೊಡುವ ಹಕ್ಕು ದೊರೆಯುವುದರಿಂದ ಕೌನ್ಸಿಲ್ ಸದಸ್ಯರ ಚುನಾವಣೆಯಲ್ಲಿ ಅವರಿಗೆ ಪ್ರಭಾವ ದೊರೆಯುತ್ತದೆ ಎಂಬುದಾಗಿ ಪಂಜಾಬ್ ಸರ್ಕಾರ ಅಭಿಪ್ರಾಯಪಡುತ್ತದೆ."[೧]

"ದಲಿತ ವರ್ಗದ ಜನರನ್ನು ಕುರಿತು ಹೇಳುವುದಾದರೆ, ಭಾರತದ ಶಾಸನಬದ್ಧ ನಿಯೋಗಕ್ಕೆ ಸರ್ಕಾರಿ ಸದಸ್ಯರು ಒಪ್ಪಿಸಿದ ಜ್ಞಾಪನಪತ್ರದ ೨೫ನೇ ಪ್ಯಾರಾದಲ್ಲಿ ಹೇಳಿರುವುದಕ್ಕಿಂತ ಭಿನ್ನವಾದದ್ದನ್ನು ಹೇಳಲಾಗುವುದಿಲ್ಲ ಮತ್ತು ಪಂಜಾಬಿನಲ್ಲಿ ಈ ವರ್ಗ ಇಷ್ಟೊಂದು ಸಮಸ್ಯಾತ್ಮಕವಾದದ್ದಲ್ಲ ಹಾಗೂ ಹಿಡುವಳಿದಾರರಾಗಿ ಅವರಿಗೆ ಸ್ವಲ್ಪ ಪ್ರಾತಿನಿಧ್ಯ ದೊರೆಯುತ್ತದೆ.[೨]

ಪಂಜಾಬ್ ಪ್ರಾಂತೀಯ ನಾಗರಿಕ ಸಮಿತಿಯ ಅಭಿಪ್ರಾಯ

"ಕೆ.ಬಿ. ದಿನ್ ಮಹಮದ್ ಮತ್ತು ಶ್ರೀ ಹನ್ಸರಾಜ್ (ಆ ಸಮಿತಿಯಲ್ಲಿ ಅಸ್ಪೃಶ್ಯರ ಪ್ರತಿನಿಧಿಗಳು)

---

೧. ಐ.ಎಫ್.ಸಿ. ಸಂ. III ಪು. ಹಸ್ತಪ್ರತಿಯಲ್ಲಿ ನೀಡಿಲ್ಲ. ಪಂಜಾಬ್ ಸರ್ಕಾರವು ಭಾರತದ ನಾಗರಿಕ ಸಮಿತಿಗೆ ಒಪ್ಪಿಸಿದ ಜ್ಞಾಪಕಪತ್ರ ಇನೇ ಸಂಪುಟ.

೨. ಐ.ಎಫ್.ಸಿ. ಸಂ. III ಪು. ೨೯ ಪಂಜಾಬ್ ಸರ್ಕಾರದ ಪೂರಕ ಜ್ಞಾಪಕ ಪತ್ರ ಇನೇ ಸಂಪುಟ ೨೯ನೇ ಪುಟ.

ಇವರ ಅಭಿಪ್ರಾಯದಲ್ಲಿ ಮಹಮದೀಯರಲ್ಲಿ ದಲಿತವರ್ಗವೆಂಬುದೇ ಇಲ್ಲ. ಆದರೆ ಹಿಂದೂ ಮತ್ತು ಸಿಖ್ಖರಲ್ಲಿ ದಲಿತವರ್ಗವೆಂಬುದಿದೆ – ಅವರ ಸಂಖ್ಯೆ ೧೩,೧೦,೭೦೯. ಶ್ರೀ ಹನ್ಸರಾಜ್ ಪ್ರಕಾರ ಈ ಪಟ್ಟಿ ಅಪೂರ್ಣವೆಂದೆನಿಸಿದೆ."

"ದಲಿತರನ್ನು ಬೇರೆ ಸಮೂಹವೆಂದೇ ಗುರುತಿಸಿ ಅವರಿಗೆ ಪ್ರತ್ಯೇಕ ಪ್ರಾತಿನಿಧ್ಯದ ವ್ಯವಸ್ಥೆ ಮಾಡಬೇಕೆಂದು ಅವರು ಅಭಿಪ್ರಾಯಪಟ್ಟರು. ದಲಿತವರ್ಗ ಅಂದರೆ ತಾವು ಹುಟ್ಟಿದ ಧರ್ಮದಿಂದಾಗಿ ತಮ್ಮ ಪೌರ ಹಕ್ಕುಗಳ ನಷ್ಟವನ್ನನುಭವಿಸುವವರು ಪಂಜಾಬಿನಲ್ಲಿ ಇಲ್ಲವೇ ಇಲ್ಲವೆಂದು ಶ್ರೀ ನಜೀರ್ ಹುಸೇನ್, ರಾಯಬಹದ್ದೂರ್ ಚೌಧರಿ, ಚೊಟೂರಾಮ್, ಶ್ರೀ ಓನ್ ರಾಬರ್ಟ್ಸ್, ಕೆ.ಬಿ. ಮುಹಮದ್ ಹಯಾತ್, ಶ್ರೀ ಕುರೇಷಿ, ಶ್ರೀ ಚಟರ್ಜಿ, ಸರ್ದಾರ್ ಬೂಟಾಸಿಂಗ್ ಮತ್ತು ಪಂಡಿತ ನಾನಕ್‌ಚಂದರು ಅಭಿಪ್ರಾಯಪಟ್ಟರು. ಸಮಿತಿಯ ಅಧ್ಯಕ್ಷರಾದ ಪಂಡಿತ ನಾನಕ್‌ಚಂದ್ ಮತ್ತು ಸರ್ದಾರ್ ಬೂಟಾಸಿಂಗ್‌ರ ಪ್ರಕಾರ ದಕ್ಷಿಣ ಭಾರತದಲ್ಲಿರುವ ರೀತಿಯಲ್ಲಿ ಇಲ್ಲಿ ದಲಿತ ವರ್ಗವೆಂಬುದೊಂದಿಲ್ಲ. ಹಳ್ಳಿಯಲ್ಲಿ ಕೆಲವರ್ಗದ ಜನ ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಖಂಡಿತವಾಗಿ ಕೀಳಾಗಿದ್ದರೂ, ಹಿಂದೂಗಳಲ್ಲಿ ದಲಿತ ವರ್ಗವೆಂದು ಹೇಳಲಾಗುವ ಚರ್ಮದ ಕೆಲಸ ಮಾಡುವ ಚಮ್ಮಾರನನ್ನು, ಮಹಮದೀಯರಲ್ಲಿ ಚರ್ಮದ ಕೆಲಸ ಮಾಡುವ ಮೋಚಿಯನ್ನು ಬೇರೆ ವರ್ಗಕ್ಕೆ ಸೇರಿದವರೆಂದು ಹೇಳಲಾಗುವುದಿಲ್ಲ."[೧]

ಹೀಗಾಗಿ ಪಂಜಾಬ್ ಪ್ರಾಂತೀಯ ಸರ್ಕಾರ ಈ ಪ್ರಶ್ನೆಗೆ ಉತ್ತರ ಹೇಳದೆ ತಪ್ಪಿಸಿಕೊಂಡಿತು. ಪಂಜಾಬ್‌ನ ಪ್ರಾಂತೀಯ ಸಮಿತಿಯು ಇಲ್ಲಿ ದಲಿತ ಅಥವಾ ಅಸ್ಪೃಶ್ಯ ಎಂಬುವವರು ಇಲ್ಲವೇ ಇಲ್ಲ ಎಂದು ಬಹುಮತದಿಂದ ತೀರ್ಮಾನಿಸಿತು.

## ಸಂಯುಕ್ತ ಸಂಸ್ಥಾನಗಳು

### ಪ್ರಾಂತೀಯ ನಾಗರಿಕ ಸಮಿತಿಯ ಅಭಿಪ್ರಾಯ

"ಸಂಯುಕ್ತ ಸಂಸ್ಥಾನಗಳ ಪ್ರಾಂತೀಯ ನಾಗರಿಕ ಸಮಿತಿಯ ದೃಷ್ಟಿಯಲ್ಲಿ ಅಸ್ಪೃಶ್ಯರನ್ನು ಮಾತ್ರ "ದಲಿತರು" ಎಂದು ಕರೆಯಬಹುದು. ಈ ಆಧಾರದ ಮೇಲೆ ಹೇಳುವುದಾದರೆ ಭಂಗಿಗಳು, ದೋಮರು, ಮತ್ತು ಧನುಕರ ಒಟ್ಟು ಜನಸಂಖ್ಯೆ ೫೮೨,೦೦೦ನ್ನು ಬಿಟ್ಟರೆ ಈ ಪ್ರಾಂತಗಳಲ್ಲಿ ಅಸ್ಪೃಶ್ಯರೆಂಬುವವರು ಇಲ್ಲವೇ ಇಲ್ಲ."[೨]

ಸಂಯುಕ್ತ ಸಂಸ್ಥಾನದ ಪ್ರಾಂತೀಯ ನಾಗರಿಕ ಸಮಿತಿಯಲ್ಲಿ ಅಸ್ಪೃಶ್ಯ ಜನರ ಪ್ರತಿನಿಧಿಯಾಗಿದ್ದ ಬಾಬುರಾಮ್ ಸಹಾಯ್ ತಮ್ಮ ಭಿನ್ನಮತದ ಸೂಚಿಯಲ್ಲಿ ಸಂಯುಕ್ತ ಸಂಸ್ಥಾನದಲ್ಲಿ ಅಸ್ಪೃಶ್ಯರ ಸಂಖ್ಯೆ ೧,೧೪,೩೫,೪೧೭ ಎಂದು ಬರೆದಿದ್ದಾರೆ. ಇದೇ ಸಮಿತಿಯ ಮತ್ತೊಬ್ಬ ಅಸ್ಪೃಶ್ಯರ ಪ್ರತಿನಿಧಿಯಾದ ರಾಯಿಸಾಹಿಬ್ ರಾಮಚಂದ್ರನ್ ತನ್ನ ಭಿನ್ನಮತ ಸೂಚಿಯಲ್ಲಿ ಸಂಯುಕ್ತ ಸಂಸ್ಥಾನದಲ್ಲಿ ದಲಿತರ ಸಂಖ್ಯೆ ಇಪ್ಪತ್ತು ದಶಲಕ್ಷ ಎಂದು ಬರೆದಿದ್ದಾರೆ.[೩]

ಸಂಯುಕ್ತ ಸಂಸ್ಥಾನದ ಸರ್ಕಾರ ತನ್ನ ವರದಿಯಲ್ಲಿ ದಲಿತರ ಈ ಸಂಖ್ಯೆ ಅತಿ ಹೆಚ್ಚೆಂದರೆ ೧೭

---

೧. ಐ.ಎಫ್.ಸಿ. ಸಂ. III ಪು. ೩೫ ಪಂಜಾಬ್ ಪ್ರಾಂತಿಯ ನಾಗರಿಕ ಸಮಿತಿಯ ಜ್ಞಾಪನಪತ್ರ.

೨. ಐ.ಎಫ್.ಸಿ. ಸಂ. III, ಪು. ೩೯೮

೩. ಅದೇ ಪು. ೪೪೦

ದಶಲಕ್ಷ; ಅತಿ ಕಡಿಮೆ ಎಂದರೆ ಒಂದು ದಶಲಕ್ಷ ಎಂದು ಹೇಳಿದೆ. ಅದರ ಅಭಿಪ್ರಾಯದ ಪ್ರಕಾರ ದಲಿತರ ಸಂಖ್ಯೆ ಅತ್ಯಂತ ಕಡಿಮೆಯೆಂದರೆ ೬೭,೭೩,೮೧೪.

**ಬಂಗಾಳ**

ಬಂಗಾಳದ ಪ್ರಾಂತೀಯ ನಾಗರಿಕ ಸಮಿತಿಯು ತನ್ನ ಮೊದಲ ವರದಿಯಲ್ಲಿ ಈ ರೀತಿ ಹೇಳಿತು.[೧]

"ಈ ಸಮಿತಿಯು ಈ ವಿಚಾರದಲ್ಲಿ ಯಾವ ತೀರ್ಮಾನಕ್ಕೂ ಬರಲಾಗದ ಕಾರಣ ಕೇಂದ್ರ ಸಮಿತಿಯೊಂದಿಗೆ ಪರಿಶೀಲಿಸಬೇಕೆಂದು ನಿರ್ಣಯಿಸಿತು,"

ಅದೇ ಸಮಿತಿಯು ತನ್ನ ಅಂತಿಮ ವರದಿಯಲ್ಲಿ ಈ ರೀತಿ ಹೇಳಿತು– "ಅಸ್ಪೃಶ್ಯರು ಮತ್ತು ಸಮೀಪಕ್ಕೆ ಸೇರಿಸಬಾರದವರು ಈ ಮೊದಲಾದ ಪದಗಳನ್ನು ಭಾರತದ ಇತರ ಕಡೆ ಬಳಸಿರುವ ರೀತಿಯಲ್ಲಿ ಮತ್ತು ಅರ್ಥದಲ್ಲಿ ಬಂಗಾಳದಲ್ಲಿ ಭೂಯಿಮಾಲಿಗಳ ಹೊರತು ಬೇರೆ ಯಾವ ಜನಾಂಗವನ್ನೂ ಅಸ್ಪೃಶ್ಯ ವರ್ಗಕ್ಕೆ ಸೇರುವುದಿಲ್ಲ ಎಂದು ಈ ಸಮಿತಿಯು ಅಭಿಪ್ರಾಯಪಡುತ್ತದೆ."[೨]

ಬಂಗಾಳ ಪ್ರಾಂತ್ಯದ ನಾಗರಿಕ ಸಮಿತಿಯಲ್ಲಿ ದಲಿತ ವರ್ಗದ ಪ್ರತಿನಿಧಿಯಾಗಿದ್ದ ಶ್ರೀ ಮಲ್ಲಿಕ್ ತಮ್ಮ ಭಿನ್ನಮತ ಸೂಚಿಯಲ್ಲಿ ಅಸ್ಪೃಶ್ಯರ ವರ್ಗಕ್ಕೆ ಸೇರಿದವರೆಂದು ಹೇಳಲಾದ ೮೬ ಜಾತಿಯ ಒಂದು ಪಟ್ಟಿಯನ್ನು ಕೊಟ್ಟಿದ್ದಾರೆ.

**ಬಿಹಾರ ಮತ್ತು ಒರಿಸ್ಸಾ**

೧೯೧೧ನೆಯ ಇಸವಿಯ ಜನಗಣತಿಯ ಪ್ರಕಾರ ಬಿಹಾರ ಮತ್ತು ಒರಿಸ್ಸಾದಲ್ಲಿನ ಅಸ್ಪೃಶ್ಯರ ಜನಸಂಖ್ಯೆ ೯೩,೦೦,೦೦೦ ಮತ್ತು ೧೯೨೧ರ ಪ್ರಕಾರ ಅವರ ಜನಸಂಖ್ಯೆ ೮೦,೦೦,೦೦೦[೩]

ಆದರೆ ಬಿಹಾರ್ ಮತ್ತು ಒರಿಸ್ಸಾ ಪ್ರಾಂತೀಯ ನಾಗರಿಕ ಸಮಿತಿಯು ತನ್ನ ಪ್ರಾಂತೀಯ ಜ್ಞಾಪನ ಪತ್ರದಲ್ಲಿ ಈ ಕೆಳಗಿನ ವಿಚಾರವನ್ನು ಗಮನಿಸಿತು.[೧]

"ದಲಿತ ಜನಾಂಗದ ವ್ಯಾಪ್ತಿಯಲ್ಲಿ ಬರುವ ಜಾತಿ ಮತ್ತು ಪಂಗಡಗಳ ಸಮಗ್ರ ಪಟ್ಟಿಯನ್ನು ತಯಾರಿಸುವುದು ತುಂಬಾ ಕಷ್ಟದ ಕೆಲಸ. ದಲಿತರೆಂದು ಹೇಳಬಹುದಾದ ವರ್ಗಗಳೆಂದರೆ ಮುಷಹರರು, ದುಸದ್ಯರು, ಚಮ್ಮಾರರು, ಧೂಮರು ಮತ್ತು ಮೆಹತರು. ಅವರುಗಳನ್ನು ಬೇರೆ ಒಂದು ಚುನಾವಣಾ ವರ್ಗವೆಂದು ಹೆಸರಿಸಲು ಅವರ ಸಂಖ್ಯೆ ಬಹಳ ಕಡಿಮೆ. ದಲಿತ ವರ್ಗದ ಸಮಸ್ಯೆ ಬೊಂಬಾಯಿ ಮತ್ತು ದಕ್ಷಿಣ ಭಾರತದಲ್ಲಿರುವಷ್ಟು ತೀವ್ರವಾಗಿ ಬಿಹಾರದಲ್ಲಿಲ್ಲ. ಈ ಸಮಿತಿಯ ಅಭಿಪ್ರಾಯದಲ್ಲಿ ದಲಿತವರ್ಗಕ್ಕೆ ಒಂದು ವಿಶೇಷ ಪ್ರಾತಿನಿಧ್ಯವಿರಬೇಕು ಎಂದು ಅನ್ನಿಸುವುದಿಲ್ಲ."[೪]

ಅದೇ ಸಮಿತಿಯು ತನ್ನ ಅಂತಿಮ ವರದಿಯಲ್ಲಿ ಈ ರೀತಿ ಹೇಳಿತು :

"ಸಾಮಾನ್ಯವಾಗಿ ಅಸ್ಪೃಶ್ಯರೆಂದು ಕರೆಯಲಾದ ವರ್ಗಗಳೆಂದರೆ ಚಮಾರ್, ಬುಸದ್, ದಾಮ್ ಹಲಾಲ್‌ಕೋರ್, ಹರಿ, ಮೋಚಿ ಮುಷಹರ್, ಪನ್‌ಪಾಸಿ. ಆ ಸಮಿತಿಯ ಬಹುಮತಾಭಿಪ್ರಾಯವೇನೆಂದರೆ

---

೧. ಅದೇ, ಪು. ೨೮೫

೨. ಐ.ಎಫ್.ಸಿ. ಸಂ. III ಪು. ೨೯೭–೯೮

೩. *ಅಂಬೇಡ್ಕರ್ ಅವರ ಬರಹ ಮತ್ತು ಭಾಷಣಗಳು*, ಸಂ. ೨ ಪುಟ ೪೩೭

೪. ಐ.ಎಫ್.ಸಿ. ಸಂ. III ಪು. ೪೩೧ – ಸಂ.

೫. ಐ.ಎಫ್.ಸಿ. ಸಂ. III ಪು. ೧೮೮

ದಲಿತ ವರ್ಗಕ್ಕೆ ವಿಶೇಷವಾದ ಪ್ರಾತಿನಿಧ್ಯ ಬೇಡ[೫] ಏಕೆಂದರೆ ಬೊಂಬಾಯಿ ಮತ್ತು ದಕ್ಷಿಣ ಭಾರತದಲ್ಲಿ ಕಾಣುವಷ್ಟು ಗಂಭೀರವಾಗಿ ಅವರ ಸಮಸ್ಯೆ ಇರಲಿಲ್ಲ ಎಂಬ ಕಾರಣದಿಂದ.

ಹಿಂದೂಗಳು ಅಸ್ಪೃಶ್ಯರ ಸಂಖ್ಯೆಯನ್ನು ಇದ್ದಕ್ಕಿದ್ದಂತೆಯೆ ಲಕ್ಷಗಟ್ಟಲೆಯಿಂದ ಅತ್ಯಲ್ಪ ಸಂಖ್ಯೆಗೆ ಇಳಿಸಲು ಕಾರಣವೇನು? ೧೯೧೧ ರಿಂದಲೂ ಅವರ ಸಂಖ್ಯೆ ೫೦ ದಶಲಕ್ಷವೆಂದು ಎಲ್ಲ ಕಡೆಯೂ ದಾಖಲಾಗಿದ್ದಿತು. ಅದನ್ನು ಯಾರೂ ಕೂಡ ಪ್ರಶ್ನೆ ಮಾಡಿರಲಿಲ್ಲ. ೧೯೩೨ರಲ್ಲಿ ಹಿಂದೂಗಳು ಯಾವ ಮಾರ್ಗದಿಂದಲಾದರೂ ಈ ಸಂಖ್ಯೆಯನ್ನು ಪ್ರತಿಭಟಿಸಬೇಕೆಂದು ಏಕೆ ಸಂಕಲ್ಪ ಮಾಡಿದರು?

ಇದಕ್ಕೆ ಉತ್ತರ ಸುಲಭ. ೧೯೩೨ರ ವರೆಗೆ ಅಸ್ಪೃಶ್ಯರಿಗೆ ರಾಜಕೀಯವಾಗಿ ಯಾವ ಮಹತ್ವವೂ ಇರಲಿಲ್ಲ. ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಎಂಬ ನಾಲ್ಕು ವರ್ಣದ ಹಿಂದೂಗಳಿಂದ ಅಸ್ಪೃಶ್ಯರನ್ನು ಹೊರಗಿಟ್ಟಿದ್ದರೂ ರಾಜಕೀಯ ಉದ್ದೇಶಗಳಿಗೆ ಮಾತ್ರ ಅವರನ್ನು ಹಿಂದೂ ಸಮಾಜದ ಅಂಗವೆಂದೇ ಗುರುತಿಸುತ್ತಿದ್ದರು. ಆದ್ದರಿಂದ ಶಾಸನಸಭೆಗಳಲ್ಲಿ ಪ್ರಾತಿನಿಧ್ಯ ಮುಂತಾದ ರಾಜಕೀಯ ಉದ್ದೇಶಗಳಿಗೆ ಅವರ ಜನಸಂಖ್ಯೆಯಿಂದ ಯಾವ ಪರಿಣಾಮವೂ ಆಗುತ್ತಿರಲಿಲ್ಲ. ೧೯೩೨ರ ವರೆಗೆ ಶಾಸನ ಸಭೆಗಳ ಸ್ಥಾನಗಳು ಹಿಂದೂ ಮತ್ತು ಮುಸ್ಲಿಮರ ನಡುವೆ ಹಂಚಿಕೆಯಾಗುತ್ತಿದ್ದುವೇ ಹೊರತು ಹಿಂದೂಗಳ ಪಾಲಿಗೆ ಬಂದ ಸ್ಥಾನಗಳ ಸಂಖ್ಯೆಯಲ್ಲಿ ಅಸ್ಪೃಶ್ಯರು ಮತ್ತು ಸ್ಪೃಶ್ಯರ ನಡುವೆ ಹಂಚಿಕೆಯಾಗುತ್ತಿರಲಿಲ್ಲವಾಗಿ ಆ ಎಲ್ಲ ಸ್ಥಾನಗಳೂ ಸ್ಪೃಶ್ಯರ ಪಾಲಿಗೆ ಹೋಗುತ್ತಿದ್ದುದರಿಂದ ಅಸ್ಪೃಶ್ಯರ ಸಂಖ್ಯೆ ಎಷ್ಟೆಂಬುದನ್ನು ತಿಳಿಯುವ ಪ್ರಯತ್ನವೇ ನಡೆಯಲಿಲ್ಲ. ೧೯೩೨ರ ಹೊತ್ತಿಗೆ ಪರಿಸ್ಥಿತಿ ಪೂರ್ಣವಾಗಿ ಬದಲಾಯಿತು. ಹಂಚಿಕೊಳ್ಳುವ ಸಮಸ್ಯೆ ಈಗ ಹಿಂದೂ ಮತ್ತು ಮುಸಲ್ಮಾನರ ನಡುವೆ ಮಾತ್ರವಲ್ಲ; ಹಿಂದೂ ಮುಸಲ್ಮಾನರು ಮಾತ್ರ ತಮ್ಮ ತಮ್ಮಲ್ಲೆ ಹಂಚಿಕೊಂಡರೆ ಸಾಲದು. ಹಿಂದೂಗಳ ಪಾಲಿಗೆ ಬಂದ ಒಟ್ಟು ಸ್ಥಾನಗಳಲ್ಲಿ ಅಸ್ಪೃಶ್ಯರ ಪಾಲಿನ ಸ್ಥಾನಗಳನ್ನು ಅಸ್ಪೃಶ್ಯರೇ ಅನುಭವಿಸುವಂತೆ ಅವರಿಗೆ ಕೊಡಬೇಕು ಎಂದು ಅಸ್ಪೃಶ್ಯರು ಒತ್ತಾಯ ಮಾಡಲು ಆರಂಭಿಸಿದರು. ಪ್ರತ್ಯೇಕತೆಯ ಇವರ ಒತ್ತಾಯವನ್ನು ಮನ್ನಿಸಿ ದುಂಡುಮೇಜಿನ ಸಭೆಯಲ್ಲಿ ಅಸ್ಪೃಶ್ಯರಿಗೆ ಪ್ರತ್ಯೇಕವಾದ ಪ್ರಾತಿನಿಧ್ಯವನ್ನು ಕೊಡಲಾಯಿತು. ಅಸ್ಪೃಶ್ಯರ ಪ್ರತ್ಯೇಕ ಅಸ್ತಿತ್ವವನ್ನು ಈ ರೀತಿ ಮಾನ್ಯಮಾಡಿದ್ದು ಮಾತ್ರವಲ್ಲದೆ ಹೊಸ ಸಂವಿಧಾನದ ಪ್ರಕಾರ ಎಲ್ಲ ಶಾಸನಸಭೆಗಳಲ್ಲೂ ಅಸ್ಪೃಶ್ಯರ ಜನಸಂಖ್ಯೆಗೆ ಅನುಗುಣವಾಗಿ ಅವರ ಪ್ರಾತಿನಿಧ್ಯವಿರಬೇಕೆಂದು ದುಂಡುಮೇಜು ಸಭೆಯ ಅಲ್ಪಸಂಖ್ಯಾತರ ಉಪ ಸಮಿತಿಯು ಒಪ್ಪಿಗೆ ಕೊಟ್ಟಿತು. ಹೀಗಾಗಿ ಅಸ್ಪೃಶ್ಯರ ಜನಸಂಖ್ಯೆಯ ವಿಷಯ ಅತ್ಯಂತ ಮಹತ್ವ ಪಡೆಯಿತು. ಅಸ್ಪೃಶ್ಯರ ಸಂಖ್ಯೆ ಕಡಿಮೆಯಿದ್ದಷ್ಟೂ ಸ್ಪೃಶ್ಯರಾದ ಹಿಂದೂಗಳಿಗೆ ದೊರೆಯುವ ರಾಜಕೀಯ ಪ್ರಾತಿನಿಧ್ಯ ಹೆಚ್ಚಾಗುತ್ತಿದ್ದಿತು. ೧೯೩೨ಕ್ಕೆ ಮುಂಚೆ ಸ್ಪೃಶ್ಯರೆನಿಸಿದವರು ಅಸ್ಪೃಶ್ಯರ ಜನಸಂಖ್ಯೆಯ ವಿಚಾರದಲ್ಲಿ ವಿರೋಧವನ್ನು ಮಾಡದೆ ಇದ್ದ ಮತ್ತು ೧೯೩೨ರ ನಂತರ ಅಸ್ಪೃಶ್ಯರೆಂಬುವವರು ಇಲ್ಲವೇ ಇಲ್ಲ ಎಂಬುದಾಗಿ ಹೇಳುವುದರ ಉದ್ದೇಶ ಇದರಿಂದ ತಿಳಿಯುತ್ತದೆ.

ಅಸ್ಪೃಶ್ಯರ ಜನಸಂಖ್ಯೆಯನ್ನು ಕಡಿಮೆ ಮಾಡಲು ಲೋಥಿಯನ್ ಸಮಿತಿಯ ಮುಂದೆ ಹಿಂದೂಗಳು ಕೊಟ್ಟ ಕೋರಿಕೆಯ ಕಾರಣಗಳು ಎರಡು. ಜನಗಣತಿಯ ನಿರ್ದೇಶಕರು ಕೊಟ್ಟ ಸಂಖ್ಯೆ ದಲಿತ ವರ್ಗದ ಸಂಖ್ಯೆಯೇ ಹೊರತು ಅಸ್ಪೃಶ್ಯರ ಸಂಖ್ಯೆಯಲ್ಲ. ಏಕೆಂದರೆ ದಲಿತ ವರ್ಗದಲ್ಲಿ ಅಸ್ಪೃಶ್ಯರಲ್ಲದೆ ಬೇರೆ ವರ್ಗದವರೂ ಸೇರಿದ್ದಾರೆ ಎಂಬುದು ಮೊದಲ ಕಾರಣ. ಅವರು ಕೊಟ್ಟ ಎರಡನೆಯ ಕಾರಣವೆಂದರೆ, ಅಸ್ಪೃಶ್ಯ ಎಂಬ ಪದಕ್ಕೆ ಭಾರತಾದ್ಯಂತ ಎಲ್ಲ ಪ್ರಾಂತ್ಯಗಳಲ್ಲಿಯೂ ಒಂದೇ ಅರ್ಥವಿರುವಂತೆ ಅವರ

ಜನಸಂಖ್ಯೆಯನ್ನು ಕಂಡುಹಿಡಿಯಬೇಕು. ಇದನ್ನೇ ಮತ್ತೊಂದು ರೀತಿಯಲ್ಲಿ ಹೇಳುವುದಾದರೆ ಅಸ್ಪೃಶ್ಯತೆಯ ಸ್ಥಳೀಯ ಪ್ರಮಾಣಗಳನ್ನು ಅವರು ವಿರೋಧಿಸಿದರು.

ಅವರ ಮೊದಲನೆಯ ವಾದ ಸಂಪೂರ್ಣವಾಗಿ ಅಸತ್ಯವಾದದ್ದು. ದಲಿತ ಮತ್ತು ಅಸ್ಪೃಶ್ಯ ಎಂಬ ಪದಗಳು ಸಮಾನಾರ್ಥದಲ್ಲಿ ಬಳಕೆಯಾಗಿದ್ದು ಎರಡನೆಯ ಪದದ ಸಂಬೋಧನೆ ಅಸಭ್ಯತೆಯ ಸೂಚಕವೆನಿಸಿದ್ದಿತು. ಅಸ್ಪೃಶ್ಯರನ್ನು ಸಂಬೋಧಿಸಲು ಮಾತ್ರ ಆ ಪದ ಬಳಕೆಯಾಗಿದ್ದಿತೇ ಹೊರತು ಮೂಲ ನಿವಾಸಿಗಳು ಅಥವಾ ಅಪರಾಧಿ ಜನಾಂಗದವರನ್ನು ಅದು ಒಳಗೊಳ್ಳುವುದಿಲ್ಲ ಎಂಬ ಅಂಶ ೧೯೧೬ರಲ್ಲಿ ಕೇಂದ್ರ ಶಾಸನ ಸಭೆಯಲ್ಲಿ ಮಾನ್ಯ ಶ್ರೀ ದಾದಬೊಹೈರವರು ಸೂಚಿಸಿದ ನಿರ್ಣಯದ ಮೇಲೆ ನಡೆದ ಚರ್ಚೆಯಿಂದ ಮನವರಿಕೆಯಾಗುತ್ತದೆ. ಸವರ್ಣ ಹಿಂದೂಗಳ ಎರಡನೆಯ ವಾದವೇನೆಂದರೆ ಅಸ್ಪೃಶ್ಯತೆಯನ್ನು ನಿರ್ಣಯಿಸುವ ಪ್ರಮಾಣಗಳು ರಾಷ್ಟ್ರಾದ್ಯಂತ ಒಂದೇ ಇರಬೇಕು ಎಂಬುದು. ಈ ವಾದದ ಉದ್ದೇಶ ಅಸ್ಪೃಶ್ಯರ ಸಂಖ್ಯೆಯನ್ನು ಕಡಿಮೆ ಮಾಡಬೇಕೆಂಬುದಷ್ಟೆ. ಭಾರತದ ವಿವಿಧ ಪ್ರದೇಶದಲ್ಲಿ ಅಸ್ಪೃಶ್ಯತೆ ಬೇರೆ ಬೇರೆ ರೂಪದಲ್ಲಿದೆ ಎಂಬುದು ಚೆನ್ನಾಗಿ ಗೊತ್ತಿರುವ ವಿಚಾರ. ಕೆಲವು ಭಾಗಗಳಲ್ಲಿ ಅಸ್ಪೃಶ್ಯರು ಸ್ಪೃಶ್ಯರ ದೃಷ್ಟಿ ವ್ಯಾಪ್ತಿಗೆ ಬರುವುದೂ ಅಪವಿತ್ರ. ಈ ರೀತಿ ಹತ್ತಿರ ಬಾರದವರಲ್ಲಿ ಎರಡು ವಿಧ. ಸ್ಪೃಶ್ಯರನ್ನು ಒಂದು ನಿರ್ದಿಷ್ಟ ದೂರಕ್ಕಿಂತ ಹೆಚ್ಚು ಸಮೀಪ ಸಂಧಿಸಬಾರದ ಅಸ್ಪೃಶ್ಯರು ಒಂದು ವರ್ಗ. ಅಸ್ಪೃಶ್ಯರ ನೆರಳು ಹಿಂದೂಗಳ ಮೇಲೆ ಬೀಳದಷ್ಟು ದೂರವಿರಬೇಕಾದವರು ಮತ್ತೊಂದು ವರ್ಗ. ಭಾರತದ ಕೆಲವು ಭಾಗದಲ್ಲಿ ಅಸ್ಪೃಶ್ಯರನ್ನು ನೋಡುವುದು ಅಥವಾ ಸಮೀಪ ಬರುವುದು ಅಪವಿತ್ರ ಎಂಬ ಆಚರಣೆಯಿಲ್ಲ. ಕೇವಲ ಮುಟ್ಟಿದರೆ ಮಾತ್ರ ಅಪವಿತ್ರ. ಕೆಲವು ಭಾಗಗಳಲ್ಲಿ ಅಸ್ಪೃಶ್ಯನನ್ನು ನೀರು ಮತ್ತು ಆಹಾರವನ್ನು ಮುಟ್ಟಲು ಬಿಡುವುದಿಲ್ಲ. ಕೆಲವು ಕಡೆ ದೇವಸ್ಥಾನಕ್ಕೆ ಪ್ರವೇಶವಿಲ್ಲದವರನ್ನು ಅಸ್ಪೃಶ್ಯರೆಂದು ಕರೆಯುತ್ತಾರೆ. ಈ ರೀತಿಯ ಭಿನ್ನತೆಯಲ್ಲಿ, ಅಸ್ಪೃಶ್ಯತೆಯೆಂದರೆ ಕೇವಲ ದರ್ಶನಕ್ಕೂ ಹೊರತಾದ ಜನ ಎಂದು ನಿರ್ದಿಷ್ಟಗೊಳಿಸುವುದಾದರೆ ದರ್ಶನ ಬಾಹಿರರಾದ ಜನರನ್ನು ಅಸ್ಪೃಶ್ಯರಿಂದ ಬೇರ್ಪಡಿಸಬೇಕಾಗುತ್ತದೆ. ದರ್ಶನಕ್ಕೆ ಅನರ್ಹರಾದವರು ಅಸ್ಪೃಶ್ಯರು ಎಂದು ನಿರ್ಧರಿಸುವುದಾದರೆ ಆಗ ಅವರನ್ನು ಸ್ಪರ್ಶಕ್ಕೆ ಅನರ್ಹರಾದವರಿಂದ ಪ್ರತ್ಯೇಕಿಸಬೇಕಾಗುತ್ತದೆ. ಸ್ಪರ್ಶಕ್ಕೆ ಅನರ್ಹರಾದವರು ಅಸ್ಪೃಶ್ಯರು ಎಂದು ನಿರ್ಧರಿಸುವುದಾದರೆ ಆಗ ಅಂತಹವರನ್ನು ನೀರು ಆಹಾರವನ್ನು ಮುಟ್ಟಲು ಅನರ್ಹರಾದ ಅಥವಾ ದೇವಾಲಯದ ಪ್ರವೇಶಕ್ಕೆ ಅನರ್ಹರಾದ ಅಸ್ಪೃಶ್ಯರ ಗುಂಪಿನಿಂದ ಬೇರ್ಪಡಿಸಬೇಕಾಗುತ್ತದೆ. ಈ ರೀತಿ ಮಾಡುವುದನ್ನು ಹಿಂದೂಗಳು ಬಯಸಿದ್ದರು. ಅಸ್ಪೃಶ್ಯರ ವರ್ಗದಿಂದ ಬೇರೆ ಬೇರೆ ವರ್ಗಗಳನ್ನು ಪ್ರತ್ಯೇಕಿಸಿ ಅಸ್ಪೃಶ್ಯ ವರ್ಗದ ಜನಸಂಖ್ಯೆಯನ್ನು ಕ್ಷೀಣಿಸಲು ಬಯಸಿದರು. ಅವರ ಈ ಪ್ರಯತ್ನ ದೋಷಪೂರ್ಣವಾದದ್ದೆಂಬುದು ಖಂಡಿತ. ಒಬ್ಬ ವ್ಯಕ್ತಿಯ ವಿಚಾರದಲ್ಲಿ ಹಿಂದೂವೊಬ್ಬನ ಅಂತರಂಗದಲ್ಲಿ ಮೂಡಿದ ತಿರಸ್ಕಾರದ ಬಾಹ್ಯ ಸ್ವರೂಪವೇ ಅಸ್ಪೃಶ್ಯತೆ. ತಿರಸ್ಕಾರದ ಈ ಬಾಹ್ಯ ಸ್ವರೂಪದಲ್ಲಿ ತಾರತಮ್ಯವಿರಲು ಸಾಧ್ಯ. ತಿರಸ್ಕಾರದ ತೀಕ್ಷ್ಣತೆಯನ್ನು ಅದರ ಬಾಹ್ಯ ಆಚರಣೆಯಲ್ಲಿ ಕಾಣಬಹುದು. ಎಲ್ಲೆಲ್ಲಿ ತಿರಸ್ಕಾರವಿದೆಯೊ ಅಲ್ಲೆಲ್ಲಾ ಅಸ್ಪೃಶ್ಯತೆಯಿದೆ. ಈ ಸರಳ ಸತ್ಯ ಹಿಂದೂಗಳಿಗೂ ಗೊತ್ತು. ಆದರೂ ಅವರು ಏಕತೆಯ ವಾದವನ್ನು ಮುಂದೊಡ್ಡಿ, ಅಸ್ಪೃಶ್ಯರ ಸಂಖ್ಯೆಯನ್ನೂ ಕ್ಷೀಣಗೊಳಿಸಿ, ರಾಜಕೀಯವಾಗಿ ಹೆಚ್ಚು ಪ್ರಾತಿನಿಧ್ಯದ ಲಾಭವನ್ನು ತಾವು ಅನುಭವಿಸಲು ಬಯಸಿದರು.

ಹಿಂದೂಗಳು ಮತ್ತು ಅಸ್ಪೃಶ್ಯರ ನಡುವಿನ ಈ ಹೋರಾಟ ಒಂದು ಮಹತ್ವದ ಘಟನೆಯೇ ಆಯಿತು. ಇದರಲ್ಲಿ ಅಂತರ್ಗತವಾದಂತೆ ಮತ್ತೊಂದು ಸಣ್ಣ ಪ್ರಮಾಣದ ಆದರೆ ಮಹತ್ವಪೂರ್ಣವಾದ ಸಂಗತಿ ನಡೆಯಿತು. ಅದು ಹಿಂದುಳಿದ ಜನಾಂಗ ಮತ್ತು ಅಸ್ಪೃಶ್ಯರ ನಡುವಿನ ಕಲಹ. ದಲಿತ ವರ್ಗ ಎಂಬ

ಶ್ರೇಣಿಯಲ್ಲಿ ಅಸ್ಪೃಶ್ಯರೇ ಅಲ್ಲದೆ ಆರ್ಥಿಕವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿದ ಇತರ ವರ್ಗದ ಜನರೂ ಸೇರುತ್ತಾರೆ ಎಂಬುದಾಗಿ ಹಿಂದುಳಿದ ಜನಾಂಗದ ನಾಯಕರು ಸ್ಪರ್ಧೆಗಿಳಿದರು. ಅಸ್ಪೃಶ್ಯರು ಮಾತ್ರವಲ್ಲದೆ ಆರ್ಥಿಕವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿದ ಜನರಿಗೂ ಪ್ರತ್ಯೇಕ ಪ್ರಾತಿನಿಧ್ಯವಿರಬೇಕೆಂಬ ಇವರ ವಾದ ಮೆಚ್ಚುವಂತಹುದೆ. ಅವರ ಈ ವಾದದಲ್ಲಿ ಹೊಸದೇನನ್ನು ಅವರು ಬಯಸಿರಲಿಲ್ಲ. ೧೯೨೦ರಲ್ಲಿ ಜಾರಿಗೆ ಬಂದ ಸುಧಾರಿತ ಸಂವಿಧಾನದಲ್ಲಿ ಆರ್ಥಿಕವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿದವರ ಹಕ್ಕುಗಳನ್ನು ಬೊಂಬಾಯಿ ಪ್ರಾಂತ್ಯದಲ್ಲಿ ಮರಾಠರು ಮತ್ತು ಅವರಿಗೆ ಸಂಬಂಧಿಸಿದ ಜಾತಿಗಳಿಗೆ ಹಾಗೂ ಮದರಾಸ್ ಪ್ರಾಂತದಲ್ಲಿ ಬ್ರಾಹ್ಮಣೇತರರಿಗೆ ಅವರು ಆರ್ಥಿಕವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿದವರೆಂಬ ಕಾರಣದಿಂದಲೇ ಅವರಿಗೆ ಪ್ರತ್ಯೇಕ ಪ್ರಾತಿನಿಧ್ಯ ಕೊಡಲಾಗಿದ್ದಿತು. ಹಿಂದುಳಿದ ಈ ಜನಾಂಗದವರಿಗೆ ಪ್ರತ್ಯೇಕ ಪ್ರಾತಿನಿಧ್ಯ ಕೊಡದಿದ್ದರೆ ಅಲ್ಪಸಂಖ್ಯಾತರಾದ ಬ್ರಾಹ್ಮಣರೇ ಮುಂತಾದ ಮುಂದುವರೆದ ಹಿಂದೂಗಳಿಂದ ಅವರು ರಾಜಕೀಯವಾಗಿ ದಮನಗೊಳ್ಳುತ್ತಾರೆ ಎಂಬ ಭಯವಿದ್ದಿತು. ಈ ರೀತಿ ಪ್ರತ್ಯೇಕ ಪ್ರಾತಿನಿಧ್ಯವಿಲ್ಲದಿದ್ದರೆ ರಾಜಕೀಯವಾಗಿ ಉನ್ನತ ಜಾತಿಯವರಿಂದ ದಮನಗೊಳ್ಳುವಂತಹ ಅನೇಕ ಜಾತಿಗಳು ಇತರ ಪ್ರಾಂತ್ಯಗಳಲ್ಲಿಯೂ ಇವೆ. ಆದ್ದರಿಂದ ಹಿಂದೂಗಳಲ್ಲಿ ಹಿಂದುಳಿದ ವರ್ಗದ ಪ್ರತಿನಿಧಿಗಳು ತಮಗೆ ಪ್ರತ್ಯೇಕ ಪ್ರಾತಿನಿಧ್ಯ ಬೇಕೆಂದು ಪ್ರತಿಪಾದಿಸಿದ್ದು ಖಂಡಿತವಾಗಿಯೂ ಸರಿಯಾದ ಕ್ರಮ.[೧] ಹಿಂದುಳಿದ ವರ್ಗದವರನ್ನು ದಲಿತ ವರ್ಗದಲ್ಲಿ ಸೇರಿಸಬೇಕೆಂಬ ಹಿಂದುಳಿದ ವರ್ಗದ ಪ್ರತಿನಿಧಿಗಳ ವಾದವನ್ನು ಒಪ್ಪಿದ್ದರೆ ಆಗ ದಲಿತ ವರ್ಗದ ಸಂಖ್ಯೆ ಅಗಾಧವಾಗಿ ಹಿಗ್ಗುತ್ತಿದ್ದಿತು. ಆದರೆ ಅವರ ವಾದವನ್ನು ಅಸ್ಪೃಶ್ಯರು ಮತ್ತು ಸವರ್ಣ ಹಿಂದೂಗಳು ಯಾರೂ ಒಪ್ಪಲಿಲ್ಲ. ಈ ವಾದವನ್ನು ಒಪ್ಪಿದರೆ ದಲಿತರ ಜನಸಂಖ್ಯೆ ಹೆಚ್ಚುತ್ತದೆ ಎಂಬ ಕಾರಣದಿಂದ ಸವರ್ಣ ಹಿಂದೂಗಳು ವಿರೋಧಿಸಿದರು. ಅಸ್ಪೃಶ್ಯರಾದರೋ ಅಸ್ಪೃಶ್ಯರಲ್ಲದ ಯಾರನ್ನೂ ದಲಿತರ ವ್ಯಾಪ್ತಿಗೆ ಸೇರಿಸಬಾರದೆಂದು ಆ ವಾದವನ್ನು ವಿರೋಧಿಸಿದರು. ಹಿಂದುಳಿದ ವರ್ಗದವರಿಗೆ ಇದ್ದ ಸರಿಯಾದ ಮಾರ್ಗವೆಂದರೆ ಸ್ಪೃಶ್ಯ ಹಿಂದೂಗಳನ್ನು ಮುಂದುವರಿದವರು ಮತ್ತು ಹಿಂದುಳಿದವರೆಂದು ವಿಭಜಿಸಿ, ಹಿಂದುಳಿದವರಿಗೆ ಪ್ರತ್ಯೇಕ ಪ್ರಾತಿನಿಧ್ಯಬೇಕೆಂದು ಹೋರಾಡುವುದು. ಆ ರೀತಿ ಮಾಡಿದ್ದರೆ ಅಸ್ಪೃಶ್ಯರೂ ಸಹ ಅವರನ್ನು ಬೆಂಬಲಿಸುತ್ತಿದ್ದರು. ಆದರೆ ಅವರು ಇದಕ್ಕೊಪ್ಪದೆ, ತಮ್ಮನ್ನು ದಲಿತ ವರ್ಗಕ್ಕೆ ಸೇರಿಸಬೇಕೆಂದು ತಮ್ಮ ಹೋರಾಟವನ್ನು ಮುಂದುವರಿಸಿದರು. 'ಏಕೆಂದರೆ ಇದರಿಂದ ತಮ್ಮ ಉದ್ದೇಶವನ್ನು ಸಾಧಿಸುವುದು ಸುಲಭ' ಎಂದು ಅವರು ಭಾವಿಸಿದರು. ಅಸ್ಪೃಶ್ಯರು ತಮ್ಮ ಬೇಡಿಕೆಗೆ ಅಡ್ಡಿ ಬಂದರೆಂಬ ಕಾರಣ, ಹಿಂದುಳಿದ ಜನಾಂಗದವರು ಮುಂದುವರೆದ ಹಿಂದೂಗಳೊಂದಿಗೆ ಸೇರಿ ಅಸ್ಪೃಶ್ಯರೆಂಬುವವರು ಇಲ್ಲವೇ ಇಲ್ಲ ಎಂಬುದಾಗಿ ಮುಂದುವರಿದವರಿಗಿಂತಲೂ ಹೆಚ್ಚಾಗಿ ವಾದಿಸಲು ತೊಡಗಿದರು.

---

೧. ಈ ರೀತಿ ಹಿಂದುಳಿದ ಜನಾಂಗಕ್ಕೆ ಪ್ರತ್ಯೇಕ ಹಂಚಿಕೆ ಬೇಕೆಂಬ ಒತ್ತಾಯ ತಂದ ಸಂಯುಕ್ತ ಪ್ರಾಂತದ ಸರ್ಕಾರ ಸೈಮನ್ ಕಮಿಷನ್‌ಗೆ ತಾನು ಒಪ್ಪಿಸಿದ ವಿಜ್ಞಾಪನಾ ಪತ್ರದಲ್ಲಿ ತಮ್ಮ ನಿಲುವನ್ನು ಸಮರ್ಥವಾಗಿ ಪ್ರತಿಪಾದಿಸಿದ್ದರು. ಸಂಯುಕ್ತ ಪ್ರಾಂತದ ಶಾಸನಸಭೆಯ ರಚನೆಯ ರೀತಿ ಹೀಗಿದೆ – "ಈ ಪ್ರಾಂತದಲ್ಲಿ ಹಿಂದೂಗಳಲ್ಲಿ ಪ್ರಮುಖ ಜಾತಿಗಳೆನಿಸಿದ ಬ್ರಾಹ್ಮಣ, ಠಾಕೂರ್, ವೈಶ್ಯ ಮತ್ತು ಕಾಯಸ್ತರು ಒಟ್ಟು ಜನಸಂಖ್ಯೆಯ ಶೇ ೨೧.೪ರಷ್ಟಿದ್ದಾರೆ. ಆದರೆ ಶಾಸನಮಂಡಲದಲ್ಲಿ ಇವರು ಪ್ರತಿನಿಧಿಸುತ್ತಿರುವ ಹಿಂದೂಗಳ ಸಂಖ್ಯೆ ಶೇ. ೯೩ ರಷ್ಟಿದೆ. ಜಾಟರ ಜನಸಂಖ್ಯೆ ಶೇ. ೧.೮ ರಷ್ಟಿದ್ದು ಅವರು ಹಿಂದೂಗಳಲ್ಲಿ ಶೇ. ೪ರಷ್ಟು ಪ್ರಾತಿನಿಧ್ಯ ಹೊಂದಿದ್ದಾರೆ : ಇನ್ನು ಉಳಿದ ಲಕ್ಷಾಂತರ ಜನ ಹಿಂದೂಗಳು, ವ್ಯವಸಾಯದ ಜನಾಂಗವೆಲ್ಲಾ ಸೇರಿ ಶೇ ೭೬ ರಷ್ಟು ಜನಸಂಖ್ಯೆಯಿದ್ದರೂ, ಅವರು ಶಾಸನಮಂಡಲದಲ್ಲಿ ಪ್ರತಿನಿಧಿಸುವ ಸಂಖ್ಯೆ ಶೇ ೨ ರಷ್ಟು ಮಾತ್ರ" ಪು. ೪೬೦.

ಈ ರೀತಿ ಸ್ಪೃಶ್ಯರು ಮತ್ತು ಅಸ್ಪೃಶ್ಯರ ನಡುವಿನ ಕಲಹದಲ್ಲಿ ಅಸ್ಪೃಶ್ಯರಿಗೆ ಮಹಮದೀಯರಿಂದ ಯಾವ ನೆರವೂ ದೊರೆಯಲಿಲ್ಲ. ಪಂಜಾಬ್ ಪ್ರಾಂತದ ನಾಗರಿಕ ಸಮಿತಿಯಲ್ಲಿದ್ದ ಮಹಮದೀಯ ಸದಸ್ಯರ ಪೈಕಿ ಒಬ್ಬನು ಮಾತ್ರ ಪಂಜಾಬ್ ಪ್ರಾಂತದಲ್ಲಿ ಅಸ್ಪೃಶ್ಯರೆನಿಸಿದ ಕೆಲವು ಜನಾಂಗಗಳಿವೆ ಎಂಬ ವಾದವನ್ನು ಬೆಂಬಲಿಸಿದನು. ಉಳಿದ ಮಹಮದೀಯ ಸದಸ್ಯರು ಇದನ್ನು ಬೆಂಬಲಿಸಲಿಲ್ಲ. ಬಂಗಾಳ ಪ್ರಾಂತದ ನಾಗರಿಕ ಸಮಿತಿಯಲ್ಲಿ ಹಿಂದೂ ಮತ್ತು ಮಹಮದೀಯ ಸದಸ್ಯರು ಜೊತೆಯಾಗಿ ಈ ವಿಚಾರದಲ್ಲಿ ತಮ್ಮ ಅಭಿಪ್ರಾಯವನ್ನೇ ಹೇಳದೆ ಸುಮ್ಮನಾದರು. ಮಹಮದೀಯರು ಮೌನವಹಿಸಿದ್ದು ಅತ್ಯಂತ ಆಶ್ಚರ್ಯದ ವಿಚಾರ. ಅಸ್ಪೃಶ್ಯರನ್ನು ರಾಜಕೀಯವಾಗಿ ಪ್ರತ್ಯೇಕ ಜನಾಂಗವೆಂದು ಗುರುತಿಸುವುದು ಮಹಮದೀಯರಿಗೂ ಲಾಭದಾಯಕವಾಗುತ್ತಿದ್ದಿತು. ಅಸ್ಪೃಶ್ಯರನ್ನು ಸ್ಪೃಶ್ಯರಿಂದ ಬೇರ್ಪಡಿಸುವುದು ಅವರಿಗೆ ಅನುಕೂಲವಾಗುತ್ತಿದ್ದಿತ್ತು. ಆದರೂ ಅಸ್ಪೃಶ್ಯರ ಪ್ರತ್ಯೇಕ ಗಣನೆಗೆ ಅವರೇಕೆ ಉಪಕಾರ ಮಾಡಲಿಲ್ಲ? ಮಹಮದೀಯರು ಈ ನಿಲುವು ತಾಳಿದುದಕ್ಕೆ ಎರಡು ಕಾರಣಗಳಿವೆ. ಮೊದಲನೆಯದಾಗಿ ಮಹಮದೀಯರು ತಮ್ಮ ಜನಸಂಖ್ಯೆಗಿಂತಲೂ ಹೆಚ್ಚು ಪ್ರಾತಿನಿಧ್ಯಕ್ಕಾಗಿ ಹೋರಾಡುತ್ತಿದ್ದರು. ಭಾರತದ ರಾಜಕೀಯ ಪರಿಭಾಷೆಯಲ್ಲಿ ಹೇಳುವುದಾದರೆ ತಮಗೆ ತೂಕ ಕಟ್ಟಿಕೊಡಬೇಕು ಅಂದರೆ ತಮಗೆ ಬರಬೇಕಾದದ್ದಕ್ಕಿಂತಲೂ ಹೆಚ್ಚು ಕೊಡಬೇಕು ಎಂದು ಅವರು ಬಯಸುತ್ತಿದ್ದರು. ಅವರಿಗೆ ತೂಕ ಕಟ್ಟಿಕೊಡಬೇಕಾದರೆ ಹಿಂದುಗಳಿಗೆ ಪ್ರಾತಿನಿಧ್ಯದ ನಷ್ಟವಾಗುತ್ತದೆಂಬುದನ್ನು ಅವರೂ ಬಲ್ಲರು. ಹಿಂದೂಗಳಲ್ಲಿ ಯಾವ ವರ್ಗದವರು ಈ ನಷ್ಟವನ್ನು ಭರಿಸಬೇಕು ಎಂಬ ಪ್ರಶ್ನೆ ಮುಖ್ಯವಾಗಿದ್ದಿತು. ತಮ್ಮ ಪ್ರಾತಿನಿಧ್ಯಕ್ಕೆ ನಷ್ಟವಾಗದಂತೆ ಈ ತೂಕ ಕಟ್ಟಿಕೊಡಲು ಉನ್ನತವರ್ಗದ ಹಿಂದೂಗಳು ಸಿದ್ಧರಿದ್ದರು. ಇದನ್ನು ಹೇಗೆ ಮಾಡುವುದು ಎಂಬ ಸಮಸ್ಯೆ ಬಂದಾಗ ಅಸ್ಪೃಶ್ಯರ ಪಾಲನ್ನು ಕಡಿಮೆ ಮಾಡಬೇಕೆಂಬುದೇ ಸರಿಯಾದ ಮಾರ್ಗ ಎಂದು ಅವರಿಗೆ ಅನಿಸಿತು. ಅವರ ಪಾಲನ್ನು ಕಡಿಮೆ ಮಾಡುವುದು ಎಂದರೆ ಅವರ ಜನಸಂಖ್ಯೆಯನ್ನು ಕಡಿಮೆ ಮಾಡುವುದು ಎಂದಾಯಿತು. ಹೀಗಾಗಿ ಅಸ್ಪೃಶ್ಯರ ಸಂಖ್ಯೆಯ ವಿಚಾರದಲ್ಲಿ ಅಸ್ಪೃಶ್ಯರಿಗೆ ಮಹಮದೀಯರು ನೆರವಾಗದಿರಲು ಇದು ಒಂದನೆಯ ಕಾರಣ. ಮಹಮದೀಯರು ಅಸ್ಪೃಶ್ಯರಿಗೆ ನೆರವಾಗದಿರಲು ಎರಡನೆಯ ಕಾರಣವೆಂದರೆ ಹಿಂದೂಗಳಿಂದ ತಮ್ಮ ಸ್ವರೂಪ ಬಯಲಾದೀತೆಂಬ ಭಯ. ಇಸ್ಲಾಂ ಧರ್ಮದಲ್ಲಿ ಮಾತ್ರ ವರ್ಣ ಮತ್ತು ಜನಾಂಗದ ಭೇದವನ್ನು ಮೀರಿ ತನ್ನ ಅನುಯಾಯಿಗಳಲ್ಲಿ ಸೋದರಭಾವವನ್ನು ವೃದ್ಧಿಪಡಿಸುವುದು ಎಂಬ ಮಾತು ನಿಜವಾದರೂ, ಭಾರತದ ಮಹಮದೀಯರಲ್ಲಿ ಜಾತಿಭೇದ ಪೂರ್ಣವಾಗಿ ನಾಶವಾಗಿಲ್ಲ. ಮಹಮದೀಯರಲ್ಲಿ ಹಿಂದೂಗಳಲ್ಲಿರುವಷ್ಟು ತೀವ್ರವಾಗಿಲ್ಲ ನಿಜ. ಆದರೂ ಅಲ್ಲಿಯೂ ಇದೆ ಎಂಬುದಂತೂ ನಿಜ. ಮಹಮದೀಯರ ಈ ಜಾತಿಯ ಭೇದ ಭಾರತದ ಮಹಮದೀಯರಲ್ಲಿ ಕಾಣುವಂತಹ ಸಾಮಾಜಿಕ ತಾರತಮ್ಯಕ್ಕೆ ಕಾರಣವಾಗಿದೆ ಎಂಬುದನ್ನು, ಆ ಸಮಾಜವನ್ನು ಕುರಿತು ವಿವೇಚನೆ ಮಾಡಿರುವವರೆಲ್ಲರೂ ಬಲ್ಲರು. ಬಂಗಾಳದ ಜನಸಂಖ್ಯೆ ನಿರ್ದೇಶಕರು ತಮ್ಮ ವರದಿಯಲ್ಲಿ ಹೀಗೆ ಹೇಳಿದ್ದಾರೆ : (ಈ ಉದ್ಧರಣವು ಹಸ್ತಪ್ರತಿಯಲ್ಲಿ ದಾಖಲಾಗಿಲ್ಲ – ಸಂ.)

ಈ ವಿಚಾರಗಳು ಸವರ್ಣ ಹಿಂದೂಗಳಿಗೆ ಚೆನ್ನಾಗಿ ಗೊತ್ತಿದ್ದರಿಂದ ಒಂದು ವೇಳೆ ಮಹಮದೀಯರು ಅಸ್ಪೃಶ್ಯರ ಜನಸಂಖ್ಯೆಯ ನಿರ್ಣಯದಲ್ಲಿ ಹೆಚ್ಚು ಸಹಕರಿಸಿ ಅದರ ಪರಿಣಾಮವಾಗಿ ಶಾಸನಸಭೆಗಳಲ್ಲಿ ಸವರ್ಣ ಹಿಂದೂಗಳ ಪ್ರಾತಿನಿಧ್ಯ ಕುಗ್ಗುವಂತಾದರೆ, ಆಗ ಮಹಮದೀಯರಿಗೆ ವಿರುದ್ಧವಾಗಿ ಈ ವಿಚಾರಗಳನ್ನು ಎತ್ತಿ ಹೇಳಲು ಹಿಂದೂಗಳು ಸಿದ್ಧರಿದ್ದರು. ಮಹಮದೀಯರಿಗೆ ತಮ್ಮ ಈ ದೌರ್ಬಲ್ಯದ ಅರಿವಿದ್ದಿತು. ಮುಸಲ್ಮಾನರಲ್ಲಿದ್ದ ಸಾಮಾಜಿಕ ಪ್ರಭೇದವನ್ನು ಕೆಣಕಲು ಹಿಂದೂಗಳಿಗೆ ಅವಕಾಶ ಕೊಡುವುದರ ಬದಲು

ಯಾರ ಪರವನ್ನೂ ವಹಿಸದೆ ಮೌನದಿಂದಿರುವುದರಿಂದ ತಮ್ಮ ಹಿತರಕ್ಷಣೆಯಾಗುತ್ತದೆಂಬುದನ್ನು ಮಹಮದೀಯರು ತಿಳಿದಿದ್ದರು.

ಹೀಗಾಗಿ ಅಸ್ಪೃಶ್ಯರು ತಮ್ಮ ಸಂಖ್ಯಾನಿರ್ಣಯಕ್ಕೆ ತಾವು ಮಾತ್ರವೇ ಹೋರಾಡಬೇಕಾಯಿತು. ಈ ಉದ್ದೇಶಕ್ಕಾಗಿ ಅವರನ್ನು ಒಗ್ಗೂಡಿಲು ಅವರನ್ನೇ ಅವಲಂಬಿಸುವಂತೆಯೂ ಇರಲಿಲ್ಲ. ಅಸ್ಪೃಶ್ಯರ ಸಂಖ್ಯೆಯನ್ನು ಕಡಿಮೆಗೊಳಿಸಲು ತಮ್ಮ ಪ್ರಯತ್ನದಲ್ಲಿ ಸೋತ ಹಿಂದೂಗಳು ಅಸ್ಪೃಶ್ಯರನ್ನೇ ತಪ್ಪುದಾರಿಗೆಳೆಯಲು ಯತ್ನಿಸಿದರು. ಸರ್ಕಾರವು ಅಸ್ಪೃಶ್ಯರ ಒಂದು ಪಟ್ಟಿಯನ್ನು ತಯಾರಿಸುತ್ತಿದೆ, ಆ ಪಟ್ಟಿಯಲ್ಲಿ ಒಮ್ಮೆ ಸೇರಿದರೆ ಅದರಿಂದ ಬಿಡುಗಡೆಯೇ ಇಲ್ಲದಂತಾಗಿ, ಅಂತಹವರು ಶಾಶ್ವತವಾಗಿ ಅಸ್ಪೃಶ್ಯರೆನಿಸುವುದರಿಂದ, ಆ ಪಟ್ಟಿಯಲ್ಲಿ ಸೇರುವುದು ತಪ್ಪು ಎಂದು ಅಸ್ಪೃಶ್ಯರಿಗೆ ಹಿಂದೂಗಳು ಹೇಳತೊಡಗಿದರು. ಈ ಸಲಹೆಯ ಪರಿಣಾಮವಾಗಿ, ಅನೇಕ ಅಸ್ಪೃಶ್ಯ ವರ್ಗಗಳು, ಈ ರೀತಿ ಅಸ್ಪೃಶ್ಯರನ್ನು ಪಟ್ಟಿ ಮಾಡುತ್ತಿರುವ ಉದ್ದೇಶ ಅವರ ಜನಸಂಖ್ಯೆಯನ್ನು ತಿಳಿದು ಅವರಿಗೆ ಶಾಸನಸಭೆಗಳಲ್ಲಿ ಪ್ರಾತಿನಿಧ್ಯವನ್ನು ನಿರ್ಣಯಿಸುವುದೇ ಹೊರತು, ಬೇರೇನೂ ಅಲ್ಲವೆಂದು ಆ ಜನರಿಗೆ ತಿಳಿಯಹೇಳಿ, ಅವರ ಬೇಡಿಕೆಗಳನ್ನು ಹಿಂತೆಗೆಯುವಂತೆ ಮಾಡಲು ಅತ್ಯಂತ ಶ್ರಮಪಡಬೇಕಾಯಿತು.

ಪುಣ್ಯವಶಾತ್ ಈ ಹೋರಾಟವೆಲ್ಲಾ ಮುಗಿದಿದ್ದು, ವಾದವಿವಾದ ಕೊನೆಗೊಂಡು, ಈಗ ಅಸ್ಪೃಶ್ಯರ ಜನಸಂಖ್ಯೆಯ ವಿಚಾರದಲ್ಲಿ ಯಾವ ಭಿನ್ನಾಭಿಪ್ರಾಯವೂ ಇಲ್ಲದಂತಾಗಿದೆ. ಅಸ್ಪೃಶ್ಯರು ಈಗ ಕಾನೂನಿನಿಂದ ಮನ್ನಣೆ ಪಡೆದಿದ್ದಾರೆ. ಅಸ್ಪೃಶ್ಯರು ಯಾರು ಎಂಬುದನ್ನು ನಿರೂಪಿಸುವ ೧೯೩೫ರ ಕಾನೂನಿನ ತಪಸೀಲಿನಲ್ಲಿ ಅವರನ್ನು ದಲಿತವರ್ಗ ಎಂದು ವಿವರಿಸಲಾಗಿದೆ. ಆದರೆ ಈ ಹೋರಾಟದಿಂದಾಗಿ ಹಿಂದೂಗಳ ಸ್ವಭಾವವೆಂತಹುದು ಎಂಬುದು ಈಗ ಚೆನ್ನಾಗಿ ಅರಿವಾಯಿತು. ಅಸ್ಪೃಶ್ಯರು ಧ್ವನಿಸತ್ತವರಾದರೆ ಹಿಂದೂವಿಗೆ ನಾಚಿಕೆಯೆನಿಸುವುದಿಲ್ಲ ಮತ್ತು ಅವರ ಸಂಖ್ಯಾಬಲದ ವಿಚಾರದಲ್ಲಿ ಅವನು ಉದಾಸೀನನಾಗುತ್ತಾನೆ. ಅವರು ಸಾವಿರ ಸಂಖ್ಯೆಯಲ್ಲಿದ್ದಾರೆಯೇ, ಲಕ್ಷಗಟ್ಟಲೆಯಿದ್ದಾರೆಯೇ ಎಂಬ ವಿಚಾರವನ್ನು ಗಮನಿಸುವುದೇ ಇಲ್ಲ. ಆದರೆ ಅಸ್ಪೃಶ್ಯರು ತಲೆಯೆತ್ತಿ ತಮ್ಮ ಅಸ್ತಿತ್ವವನ್ನು ಗುರುತಿಸಿರಿ ಎಂದು ಕೇಳಿದಾಗ ಅವರ ಅಸ್ತಿತ್ವವನ್ನೇ ಇಲ್ಲಗೊಳಿಸಿ, ತನ್ನ ಹೊಣೆಗಾರಿಕೆಯನ್ನು ಮರೆತು, ಅವರಿಗೆ ಅಧಿಕಾರವನ್ನು ಹಂಚಿಕೊಡಲು ಯಾವ ಪಶ್ಚಾತ್ತಾಪವೂ ಇಲ್ಲದೆ ನಿರಾಕರಿಸುತ್ತಾರೆ.

* * * *

## ಅಧ್ಯಾಯ ೨೧

# ಅಸ್ಪೃಶ್ಯರ ಬಂಡಾಯ

ಹಿಂದೂಗಳ ಸಾಮಾಜಿಕ ವ್ಯವಸ್ಥೆಯಿಂದ ಅಸ್ಪೃಶ್ಯರಿಗಾದ ಅನ್ಯಾಯದ ವಿರುದ್ಧ ನಡೆದ ಹೋರಾಟಕ್ಕೆ, ಅದರಲ್ಲಿಯೂ ವಿಶೇಷವಾಗಿ ಮಹಾರಾಷ್ಟ್ರದ ಹೋರಾಟಕ್ಕೆ, ಒಂದು ದೊಡ್ಡ ಇತಿಹಾಸವೇ ಇದೆ. ಇದರ ಇತಿಹಾಸದಲ್ಲಿ ಎರಡು ಹಂತಗಳನ್ನು ಕಾಣಬಹುದು. ಮೊದಲನೆಯ ಹಂತವನ್ನು ಅರ್ಜಿ ಮತ್ತು ಅಹವಾಲುಗಳ ಹಂತವೆಂದು ಕರೆಯಬಹುದು. ಹಿಂದೂಗಳು ಸ್ಥಿರಗೊಳಿಸಿದ ಸಾಮಾಜಿಕ ವ್ಯವಸ್ಥೆಗಳ ವಿರುದ್ಧ ನೇರ ಹೋರಾಟವನ್ನು ಎರಡನೆಯ ಹಂತದಲ್ಲಿ ಕಾಣುತ್ತೇವೆ. ಅವರ ಈ ರೀತಿಯ ಬದಲಾವಣೆಗೆ ಎರಡು ರೀತಿಯ ಹಿನ್ನೆಲೆಯುಂಟು. ನಮ್ಮ ಅರ್ಜಿ ಅಹವಾಲುಗಳಿಂದ ಹಿಂದೂಗಳ ಮನಸ್ಸು ಪರಿವರ್ತನೆಯಾಗುತ್ತಿಲ್ಲ ಎಂಬುದು ಒಂದು. ಎರಡನೆಯದಾಗಿ ಎಲ್ಲ ಸಾರ್ವಜನಿಕ ಸಂಸ್ಥೆಗಳು ಮತ್ತು ಸಾರ್ವಜನಿಕ ಬಳಕೆಯ ಮಾಧ್ಯಮಗಳು ಅಸ್ಪೃಶ್ಯರೂ ಸೇರಿದಂತೆ ಎಲ್ಲ ಜನರ ಬಳಕೆಗೂ ತೆರೆದಿವೆ ಎಂದು ಸರ್ಕಾರ ಸಾರಿದುದು. ಬ್ರಿಟಿಷ್ ಭಾರತದ ಕಾನೂನು ಅಸ್ಪೃಶ್ಯರಿಗೆ ಒದಗಿಸಿದ ಅನೇಕ ಹಕ್ಕುಗಳಲ್ಲಿ ಅವರು ತಮಗೆ ಬೇಕಾದ ಉಡುಗೆತೊಡಿಗೆಗಳನ್ನು ಧರಿಸಬಹುದು ಎಂಬುದು ಒಂದು. ಇವುಗಳ ಜೊತೆಗೆ ಸಾರ್ವಜನಿಕ ಸಂಸ್ಥೆಗಳು ಮತ್ತು ಸಾರ್ವಜನಿಕ ಕಚೇರಿಗಳು ಮುಂತಾದವುಗಳ ಬಳಕೆಗೆ ಕಾನೂನಿನ ಪೂರ್ಣ ಸಮ್ಮತಿ ದೊರೆಯಿತು. ಆದರೆ ಹಿಂದೂಗಳ ವಿರೋಧದಿಂದಾಗಿ ಅಸ್ಪೃಶ್ಯರು ಇವುಗಳನ್ನು ಬಳಸುವಂತಿರಲಿಲ್ಲ. ಇವರ ವಿರೋಧವನ್ನು ಎದುರಿಸಿ ತಮ್ಮ ನೋವುಗಳನ್ನು ಪರಿಹರಿಸಿಕೊಳ್ಳಲೋಸುಗ ಅವರು ತಮ್ಮ ಮಾರ್ಗವನ್ನು ಬದಲಿಸಿ ನೇರ ಹೋರಾಟಕ್ಕಿಳಿದರು. ೧೯೨೦ರ ಸುಮಾರಿಗೆ ಈ ಬದಲಾವಣೆಯಾಯಿತು.

## I

ಹಿಂದೂಗಳ ಸಾಮಾಜಿಕ ವ್ಯವಸ್ಥೆಯ ವಿರುದ್ಧ ಅಸ್ಪೃಶ್ಯರು ನಡೆಸಿದ ಬಂಡಾಯದ ಸ್ವರೂಪವನ್ನು ತಿಳಿಸಲು ಅವರ ನೇರ ಹೋರಾಟದ ಕೆಲವು ನಿದರ್ಶನಗಳನ್ನು ಇಲ್ಲಿ ಕೊಡಬಹುದು. ಸಾರ್ವಜನಿಕ ರಸ್ತೆಗಳನ್ನು ಬಳಸುವ ಹಕ್ಕನ್ನು ಸ್ಥಾಪಿಸಲು ನಡೆಸಿದ ಹೋರಾಟದ ಒಂದು ಪ್ರಮುಖ ನಿದರ್ಶನವೆಂದರೆ ತಿರುವಾಂಕೂರು ಸಂಸ್ಥಾನದ ಅಸ್ಪೃಶ್ಯರು ೧೯೨೪ರಲ್ಲಿ ವೈಕ್ಕಂ ದೇವಸ್ಥಾನದ ಪಕ್ಕದ ರಸ್ತೆಯ ಬಳಕೆಗಾಗಿ ಮಾಡಿದ ಹೋರಾಟ. ಈ ರಸ್ತೆಗಳು ಸರ್ಕಾರದ ಖರ್ಚಿನಿಂದ ವ್ಯವಸ್ಥಿತವಾಗಿದ್ದರೂ ಆ ರಸ್ತೆಗಳು ದೇವಸ್ಥಾನಕ್ಕೆ ಬಹು ಸಮೀಪದಲ್ಲಿವೆಯೆಂಬ ಕಾರಣದಿಂದ ದೇವಸ್ಥಾನದ ಸಮೀಪದ ಕೆಲವು ರಸ್ತೆಗಳಿಗೆ ಅಸ್ಪೃಶ್ಯರು ಪ್ರವೇಶಿಸುವಂತಿರಲಿಲ್ಲ. ಕೊನೆಗೆ ಈ ಸತ್ಯಾಗ್ರಹದ ಫಲವಾಗಿ ದೇವಸ್ಥಾನದ ಕಾಂಪೌಂಡನ್ನು ವಿಸ್ತಾರಗೊಳಿಸಿ ಅಸ್ಪೃಶ್ಯರು ಆ ರಸ್ತೆಯನ್ನು ಬಳಸಿದರೂ ದೇವಸ್ಥಾನದ ಪಾವಿತ್ರ್ಯಕ್ಕೆ ಅಡ್ಡಿಯಾಗದಷ್ಟು ದೂರ ಆ ರಸ್ತೆಯನ್ನು ದಬ್ಬಿದರು.

## II

ಸಾರ್ವಜನಿಕ ಜಲಾಶಯಗಳಿಂದ ನೀರನ್ನು ತರುವ ಹಕ್ಕನ್ನು ಸ್ಥಾಪಿಸಲು ನಡೆಸಿದ ಹೋರಾಟಕ್ಕೆ ಚಾದರ್ ಕೆರೆಯ ನಿದರ್ಶನವನ್ನು ಹೇಳಿದರೆ ಸಾಕು.

ಈ ಚಾದರ್ ಕೆರೆಯಿರುವುದು ಬೊಂಬಾಯಿ ಪ್ರಾಂತದ ಕೊಲಾಬ ಜಿಲ್ಲೆಯ ಮಹಡ್ ನಗರದಲ್ಲಿ. ನದಿಗಳಿಂದ ಹರಿದುಬರುವ ಮಳೆಯ ನೀರು ಮತ್ತು ಕೆಲವು ನೈಸರ್ಗಿಕವಾದ ಚಿಲುಮೆಗಳಿಂದ ಬಂದ ನೀರನ್ನು ಸಂಗ್ರಹಿಸುವ ಈ ಕೆರೆ ತುಂಬಾ ವಿಶಾಲವಾದದ್ದು, ಈ ಕೆರೆಯ ಎಲ್ಲ ಕಡೆಯೂ ಒಡ್ಡು ಕಟ್ಟಲಾಗಿದೆ; ಈ ಕೆರೆಯ ಸುತ್ತ ಸಾರ್ವಜನಿಕರಿಗೆ ಸೇರಿದ ಸಣ್ಣ ಸಣ್ಣ ಭೂಮಿಗಳಿವೆ. ಈ ಜಮೀನುಗಳಿಂದ ಆಚೆಗೆ ಕೆರೆಯ ಸುತ್ತ ಪೌರಸಭೆಗೆ ಸೇರಿದ ರಸ್ತೆಯಿದ್ದು ಅದರಿಂದಾಚೆಗೆ ಸ್ಪೃಶ್ಯರಿಗೆ ಸೇರಿದ ಮನೆಗಳಿವೆ. ಆದ್ದರಿಂದ ಈ ಕೆರೆಯು ಹಿಂದೂಗಳ ನಿವಾಸದ ಮಧ್ಯೆ ಇದ್ದು ಅವರ ಮನೆಗಳಿಂದ ಆವರಿಸಲ್ಪಟ್ಟಿದೆ.

ಈ ಕೆರೆ ತುಂಬಾ ಹಳೆಯದಾಗಿದ್ದು ಇದನ್ನು ಯಾರು ಯಾವಾಗ ಕಟ್ಟಿಸಿದರೆಂಬುದು ಯಾರಿಗೂ ಗೊತ್ತಿಲ್ಲ. ೧೮೬೯ರಲ್ಲಿ ಮಹಡ್ ನಗರ ಸಭೆ ಮೊತ್ತಮೊದಲಿಗೆ ಆರಂಭವಾದಾಗ ಸರ್ಕಾರವು ಈ ಕೆರೆಯನ್ನು ನಗರಸಭೆಗೆ ಸಾರ್ವಜನಿಕ ಆಸ್ತಿಯಾಗಿ ವಹಿಸಿಕೊಟ್ಟಿತು.

ಮಹಡ್ ನಗರ ವ್ಯಾಪಾರದ ಕೇಂದ್ರ. ಅದು ತಾಲ್ಲೂಕು ಕೇಂದ್ರವೂ ಅಹುದು. ಸುತ್ತಣ ಹಳ್ಳಿಗಳ ಅಧಿಕಾರಿಗಳ ಸೇವೆಯಲ್ಲಿದ್ದ ಅಸ್ಪೃಶ್ಯರು ತಮ್ಮ ಅಧಿಕಾರಿಗಳು ಕೊಟ್ಟ ಪತ್ರಗಳನ್ನು ಮತ್ತು ವಸೂಲಾದ ಕಂದಾಯವನ್ನು ತಾಲ್ಲೂಕು ಕಚೇರಿಗೆ ತಲುಪಿಸಲು ಅಥವಾ ತಮ್ಮ ವ್ಯಾಪಾರ ವ್ಯವಹಾರಕ್ಕಾಗಿ ಮಹಡ್ ನಗರಕ್ಕೆ ಬರಬೇಕಾಗುತ್ತಿದ್ದಿತು. ಹೊರಗಿನಿಂದ ಬಂದವರಿಗೆ ನೀರನ್ನು ಪಡೆಯಲು ಇದ್ದ ಸಾರ್ವಜನಿಕ ಕೆರೆಯೆಂದರೆ ಚಾದರ್ ಕೆರೆ ಒಂದೇ. ಆದರೆ ಅಸ್ಪೃಶ್ಯರು ಈ ಕೆರೆಯ ನೀರನ್ನು ಮುಟ್ಟುವಂತಿರಲಿಲ್ಲ. ಆದ್ದರಿಂದ ಅಸ್ಪೃಶ್ಯರಿಗೆ ಮಹಡ್ ನಗರದ ಅಸ್ಪೃಶ್ಯರ ಕೇರಿಯಲ್ಲಿದ್ದ ಬಾವಿಯೊಂದೇ ನೀರಿನ ಆಶ್ರಯವಾಗಿದ್ದಿತು. ಈ ಬಾವಿ ನಗರದ ಕೇಂದ್ರ ಸ್ಥಳದಿಂದ ಸ್ವಲ್ಪ ದೂರದಲ್ಲಿದ್ದಿತು. ನಗರ ಸಭೆಯವರ ಅಲಕ್ಷ್ಯದಿಂದಾಗಿ ಈ ಬಾವಿಯ ಹೂತುಹೋಗಿದ್ದಿತು.

ಆದ್ದರಿಂದ ನೀರಿಗಾಗಿ ಅಸ್ಪೃಶ್ಯರು ತುಂಬಾ ತೊಂದರೆಪಡುತ್ತಿದ್ದರು. ಬಹು ಕಾಲ ಹೀಗೆಯೇ ನಡೆಯಿತು. ೧೯೨೩ರಲ್ಲಿ ಬೊಂಬಾಯಿ ಶಾಸನಸಭೆಯು ಸಾರ್ವಜನಿಕ ಹಣದಿಂದ ರಚಿತವಾದ ಮತ್ತು ಸರ್ಕಾರದ ಮತ್ತು ಅಧೀನ ಸಂಸ್ಥೆಗಳ ನಿರ್ವಹಣೆಗೆ ಸೇರಿದ ಸಾರ್ವಜನಿಕ ಬಾವಿಗಳು, ನೀರಿನ ಕೇಂದ್ರಗಳು, ಧರ್ಮಶಾಲೆಗಳು, ಸಾರ್ವಜನಿಕ ಶಾಲೆಗಳು, ಕೋರ್ಟು ಕಚೇರಿಗಳು, ಆಸ್ಪತ್ರೆಗಳು ಮುಂತಾದವುಗಳಿಗೆ ಅಸ್ಪೃಶ್ಯರಿಗೆ ಪ್ರವೇಶಾವಕಾಶವಿರಬೇಕು ಎಂಬ ಶಾಸನವನ್ನು ಅಂಗೀಕರಿಸಿತು. ಸರ್ಕಾರವು ಈ ಶಾಸನವನ್ನು ಒಪ್ಪಿ ಈ ಕೆಳಗಿನ ಆಜ್ಞೆಯನ್ನು ಹೊರಡಿಸಿತು :

"ಶಾಸನ ಸಭೆಯು ಸರ್ಕಾರಕ್ಕೆ ಸೇರಿದ ಮತ್ತು ಅದರ ನಿರ್ವಹಣೆಗೆ ಒಳಪಟ್ಟ ಸಾರ್ವಜನಿಕ ಸ್ಥಳಗಳು ಮತ್ತು ಸಂಸ್ಥೆಗಳಿಗೆ ಸಂಬಂಧಿಸಿದಂತೆ ಮಾಡಿರುವ ನಿರ್ಣಯವನ್ನು ಜಾರಿಗೊಳಿಸುವಂತೆ ಇಲಾಖೆಯ ಉನ್ನತಾಧಿಕಾರಿಗಳನ್ನು ಬೊಂಬಾಯಿ ಸರ್ಕಾರವು ಕೋರುತ್ತದೆ. ಈ ನಿರ್ಣಯದಲ್ಲಿ ಮಾಡಿರುವ ಸಲಹೆಗಳನ್ನು ಒಪ್ಪುವುದರ ಔಚಿತ್ಯವನ್ನು ಸ್ಥಳೀಯ ಸಂಸ್ಥೆಗಳಿಗೆ ಮನವರಿಕೆ ಮಾಡಿಕೊಡುವಂತೆ ಜಿಲ್ಲಾಧಿಕಾರಿಗಳನ್ನು ಈ ಮೂಲಕ ಪ್ರಾರ್ಥಿಸುತ್ತದೆ."

ಸರ್ಕಾರದ ಈ ಆಜ್ಞೆಗನುಸಾರವಾಗಿ ಜಿಲ್ಲಾಧಿಕಾರಿಗಳು ಅದರ ಒಂದು ಪ್ರತಿಯನ್ನು ಮಹಾಡ್ ನಗರಸಭೆಯ ಪರಿಶೀಲನೆಗಾಗಿ ಕಳುಹಿಸಿದರು. ೧೯೨೪ರ ಜನವರಿ ೫ ರಂದು ಮಹಾಡ್ ನಗರಸಭೆಯು ತನ್ನ ಸಭೆಯಲ್ಲಿ ಅಸ್ಪೃಶ್ಯರು ಕೆರೆಯ ನೀರನ್ನು ಬಳಸಲು ಯಾವ ಅಭ್ಯಂತರವೂ ಇಲ್ಲ ಎಂಬ ನಿರ್ಣಯವನ್ನು ಅಂಗೀಕರಿಸಿತು. ಈ ನಿರ್ಣಯ ಅಂಗೀಕಾರವಾದ ಕೂಡಲೆ ಕೊಲಾಬಾ ಜಿಲ್ಲೆಯ ಅಸ್ಪೃಶ್ಯರ ಸಭೆ ಮಹಾಡ್‌ನಲ್ಲಿ ನಡೆಯಿತು ಮತ್ತು ನಾನು ಅದರ ಅಧ್ಯಕ್ಷತೆ ವಹಿಸಿದ್ದೆ. ೧೯೨೭ನೆ ಮಾರ್ಚಿ ೧೮ ಮತ್ತು ೨೦ರ ಈ ಎರಡು

ದಿನ ಈ ಸಭೆ ನಡೆಯಿತು. ಕೊಲಾಬಾ ಜಿಲ್ಲೆಯಲ್ಲಿ ಅಸ್ಪೃಶ್ಯರ ಸಭೆ ನಡೆದಿದ್ದು ಇದೇ ಮೊದಲು. ಸುಮಾರು ೨೫೦೦ ಜನ ನೆರೆದಿದ್ದ ಈ ಸಭೆಯಲ್ಲಿ ಉತ್ಸಾಹ ತುಂಬಿದ್ದಿತು. ಮೊದಲನೆಯ ದಿನದ ನನ್ನ ಅಧ್ಯಕ್ಷ ಭಾಷಣದಲ್ಲಿ ಅವರಿಗೆ ತಮ್ಮ ಕೆಟ್ಟ ಅಭ್ಯಾಸಗಳನ್ನು ಬಿಟ್ಟು ತುಂಬು ಮಾನವರಂತೆ ತಮ್ಮ ಹಕ್ಕುಗಳಿಗಾಗಿ ಹೋರಾಡುವಂತೆ ನಾನು ಕರೆಕೊಟ್ಟೆನು. ಅದಾದ ನಂತರ ಅಲ್ಲಿ ನೆರೆದಿದ್ದ ಸವರ್ಣ ಹಿಂದೂಗಳು ತಾವೂ ಅಸ್ಪೃಶ್ಯರು ಸ್ನೇಹಿತರೆಂದೂ, ಅವರು ತಮಗೆ ಕಾನೂನುದತ್ತವಾಗಿ ದೊರೆತಿರುವ ಹಕ್ಕುಗಳಿಗಾಗಿ ಧೈರ್ಯವಾಗಿ ಹೋರಾಡಬೇಕೆಂದೂ ಕರೆಕೊಟ್ಟರು. ಇದರೊಂದಿಗೆ ಮೊದಲ ದಿನದ ಕಾರ್ಯಕಲಾಪಗಳು ಮುಗಿದವು. ಮರು ದಿನದ ಬಹಿರಂಗ ಸಭೆಯಲ್ಲಿ ಮಂಡಿಸಬೇಕಾದ ನಿರ್ಣಯಗಳನ್ನು ಕುರಿತು ಚರ್ಚಿಸಲು ವಿಷಯ ನಿರ್ಣಾಯಕ ಸಭೆ ಅಂದು ಸಂಜೆ ಸೇರಿತು. ಮಹಾಡ್ ನಗರದಲ್ಲಿ ಅಸ್ಪೃಶ್ಯರಿಗೆ ಕುಡಿಯುವ ನೀರಿಗೆ ಅತ್ಯಂತ ತೊಂದರೆಯಿದೆಯೆಂದೂ ಈ ಸಭೆಗೆ ಬಂದ ಸ್ವಾಗತ ಸಮಿತಿಯ ಸದಸ್ಯರು ಮೊದಲುಗೊಂಡು, ಜನರೆಲ್ಲಾ ಕೆರೆಯಿಂದ ಕುಡಿಯುವ ನೀರನ್ನು ತುಂಬಿಕೊಡುವ ಸವರ್ಣ ಹಿಂದೂಗಳಿಗೆ ೧೫ ರೂ. ಕೊಡಬೇಕಾಯಿತೆಂಬ ವಿಚಾರ ವಿಷಯ ನಿರ್ಣಾಯಕ ಸಮಿತಿಯ ಗಮನಕ್ಕೆ ಬಂದಿತು.

ಮರುದಿವಸ ೨೦ನೆಯ ತಾರೀಖು ಸುಮಾರು ೯ ಗಂಟೆಗೆ ಸಭೆ ಆರಂಭವಾಯಿತು. ವಿಷಯ ನಿರ್ಣಾಯಕ ಸಭೆಯಲ್ಲಿ ಒಪ್ಪಿತವಾದ ನಿರ್ಣಯಗಳನ್ನು ಮಹಾಸಭೆಯಲ್ಲಿ ಮಂಡಿಸಿ ಒಪ್ಪಿಗೆ ಪಡೆಯಲಾಯಿತು. ಇದಕ್ಕೆಲ್ಲಾ ಒಟ್ಟು ೩ ಗಂಟೆ ಬೇಕಾಯಿತು. ಕೊನೆಯಲ್ಲಿ ಅಧ್ಯಕ್ಷರಿಗೆ ಮತ್ತು ಸಭೆಯನ್ನು ನಡೆಸಲು ನೆರವಾದವರಿಗೆಲ್ಲಾ ವಂದನಾರ್ಪಣೆ ಮಾಡಲು ಬಂದ ನಮ್ಮ ಸಹ ಕಾರ್ಯಕರ್ತನು, ಸಭೆಗೆ ಬಂದ ಜನ ಕುಡಿಯುವ ನೀರಿಗಾಗಿ ಪಟ್ಟ ಬವಣೆಯನ್ನು ವಿವರಿಸಿ, ಅಸ್ಪೃಶ್ಯರು ಕೆರೆಯ ನೀರನ್ನು ಕುಡಿಯಲು ನಗರಸಭೆಯ ಅನುಮತಿಯು ಇರುವುದರಿಂದ ಮತ್ತು ಸವರ್ಣ ಹಿಂದೂಗಳ ಸಹಕಾರವು ಇರುವುದರಿಂದ ನೀರು ಕುಡಿಯಬಹುದು ಎಂದು ಪ್ರೋತ್ಸಾಹಿಸಿದನು. ಅಸ್ಪೃಶ್ಯರು ಕೆರೆಯ ನೀರನ್ನು ಕುಡಿಯುವ ಹಕ್ಕನ್ನು ಧೈರ್ಯದಿಂದ ಚಲಾಯಿಸಬಹುದೆಂದು ಪ್ರಚೋದಿಸಿದ್ದ ಸುವರ್ಣ ಹಿಂದೂಗಳು ಇದನ್ನು ಕಂಡು ಹೆದರಿ ಅಲ್ಲಿಂದ ಓಡಿಬಿಟ್ಟರು. ಇದರಿಂದ ಅಸ್ಪೃಶ್ಯರ ಮೇಲೆ ಭಿನ್ನ ರೀತಿಯ ಪ್ರಭಾವವಾಯಿತು. ಅವರಲ್ಲಿ ಒಂದು ರೀತಿಯ ವಿದ್ಯುತ್ ಸಂಚಾರವಾದಂತಾಯಿತು. ನನ್ನ ಮುಂದಾಳತ್ವದಲ್ಲಿ ಒಂದಾಗಿ ಜೊತೆಗೂಡಿ ನಿಂತ ೨೫೦೦ ಜನ ಅಸ್ಪೃಶ್ಯರು, ನಗರದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಹೊರಟರು. ಈ ವಾರ್ತೆ ಬಿರುಗಾಳಿಯಂತೆ ಹಬ್ಬಿತು ಮತ್ತು ನಗರದ ಜನರೆಲ್ಲರು ಇದನ್ನು ನೋಡಲು ಎಲ್ಲೆಲ್ಲಿಯೂ ನೆರೆದರು.

ಆ ನಗರವಾಸಿಗಳಾದ ಸವರ್ಣ ಹಿಂದೂಗಳು ಈ ದೃಶ್ಯವನ್ನು ನೋಡಿದರು. ಅದರಿಂದ ಅವರು ಬೆದರಿಹೋದರು. ಹಿಂದೆಂದೂ ಕಾಣದ ಈ ದೃಶ್ಯವನ್ನು ಕಂಡು ಅವರು ಮೂಕರಾದರು. ಅದರಿಂದಾಗಿ ಅವರು ತತ್‌ಕ್ಷಣದಲ್ಲಿ ಭಯಭೀತರಾದಂತೆ ಕಂಡರು. ಈ ಮೆರವಣಿಗೆಯು ನಾಲ್ಕು ಜನರಂತೆ ಸಾಲುಗಟ್ಟಿ ನಡೆದು ಚಾದರ್ ಕೆರೆಯನ್ನು ಸಮೀಪಿಸಿತು ಮತ್ತು ಮೊತ್ತಮೊದಲಿಗೆ ಅಸ್ಪೃಶ್ಯರು ಕೆರೆಯ ನೀರನ್ನು ತಾವೆ ಎತ್ತಿ ಕುಡಿದರು. ನಡೆದದ್ದೇನೆಂಬುದನ್ನು ಅರಿತ ಸವರ್ಣ ಹಿಂದೂಗಳೂ ನೀರನ್ನು ಅಪವಿತ್ರಗೊಳಿಸಿದ ಅಸ್ಪೃಶ್ಯರ ಮೇಲೆ ನಾನಾ ರೀತಿಯ ದೌರ್ಜನ್ಯವನ್ನೆಸಗಿದರು. ಆ ದೌರ್ಜನ್ಯದ ವಿವರಗಳನ್ನು ಸೂಕ್ತವಾದ ಕಡೆ ಮುಂದೆ ನಿರೂಪಿಸಲಾಗುತ್ತದೆ.

ಮಹಾಡ್‌ನಗರದ ಚಾದರ್ ಕೆರೆಯನ್ನು ಪ್ರವೇಶಿಸಿದ ಅಸ್ಪೃಶ್ಯರ ಮೇಲೆ ಹಿಂದೂಗಳು ಎಸಗಿದ ಆಕ್ರಮಣ ಅವರ ಹೋರಾಟಕ್ಕೆ ದೊರೆತ ಒಂದು ಪ್ರಚೋದನೆಯೆಂಬ ವಿಚಾರದಲ್ಲಿ ಸಂಶಯವಿರಲಿಲ್ಲ. ಅಸ್ಪೃಶ್ಯರು ತಾವು ಚಲಾಯಿಸಿದ ಈ ಹಕ್ಕನ್ನು ನಿರಂತರವಾಗಿ ಸ್ಥಾಪಿಸಲೇಬೇಕೆಂದು ದೃಢಸಂಕಲ್ಪ ಮಾಡಿದರು.

ಹಿಂದೂಗಳ ಹೋರಾಟದ ಈ ಕೆರೆಯನ್ನು ಸೂಕ್ತ ರೀತಿಯಲ್ಲಿ ಎದುರಿಸಲು ಅವರು ಸಿದ್ಧರಾದರು. ಅದರಂತೆ ಅಸ್ಪೃಶ್ಯರ ಎರಡನೆ ಸಭೆಯನ್ನು ಅಲ್ಲಿ ಕರೆದರು. ಸತ್ಯಾಗ್ರಹದ ಎಲ್ಲಾ ಪರಿಣಾಮಗಳಿಗೂ ಸಿದ್ಧರಾಗಿ ಅಲ್ಲಿಗೆ ಬರುವಂತೆ ಅಸ್ಪೃಶ್ಯರಿಗೆ ತಿಳಿಸಲಾಯಿತು. (ಕಾನೂನು ನಿರಾಕರಣೆ ಮತ್ತು ಬಂಧನಕ್ಕೆ)

ಇದನ್ನು ತಿಳಿದ ಹಿಂದೂಗಳು ಅಸ್ಪೃಶ್ಯರು ಚಾದರ್ ಕೆರೆಗೆ ಬಂದು ಅದರ ನೀರನ್ನು ಅಪವಿತ್ರಗೊಳಿಸದಂತೆ ಅಪರಾಧ ಶಾಸನದ ೧೪೪ನೆಯ ವಿಧಿಯ ಪ್ರಕಾರ ಅವರ ಪ್ರವೇಶವನ್ನು ಪ್ರತಿಬಂಧಿಸುವಂತೆ ಕೊಲಾಬ ಜಿಲ್ಲಾ ಮ್ಯಾಜಿಸ್ಟ್ರೇಟರನ್ನು ಪ್ರಾರ್ಥಿಸಿದರು. ಆ ಕೆರೆಯು ಸಾರ್ವಜನಿಕರ ಕೆರೆಯಾಗಿರುವುದರಿಂದ ಅದರ ನೀರನ್ನು ಮುಟ್ಟದಂತೆ ಕಾನೂನು ಪ್ರಕಾರ ಅಸ್ಪೃಶ್ಯರನ್ನು ನಿರೋಧಿಸಲು ಸಾಧ್ಯವಿಲ್ಲವೆಂದು ಜಿಲ್ಲಾ ನ್ಯಾಯಾಧೀಶರು ತಿಳಿಸಿದರು. ತಮಗೆ ಮಾತ್ರ ಅದರ ನೀರನ್ನು ಬಳಸುವ ಹಕ್ಕಿದೆ ಎಂಬುದನ್ನು ಸ್ಥಾಪಿಸಲು ಹಿಂದೂಗಳು ನ್ಯಾಯಾಲಯಕ್ಕೆ ಹೋಗುವಂತೆ ಅವರು ಸೂಚಿಸಿದರು. ೧೯೨೭ನೇ ಡಿಸೆಂಬರ್ ೨೫, ೨೬ ಮತ್ತು ೨೭ರಂದು ಅಸ್ಪೃಶ್ಯರ ಎರಡನೆಯ ಸಮ್ಮೇಳನ ನಡೆಯಲು ನಿರ್ಣಯವಾಯಿತು. ಸಮ್ಮೇಳನದ ದಿನ ಸಮೀಪಿಸಿದಂತೆ ಅಸ್ಪೃಶ್ಯರ ಉತ್ಸಾಹ ಹೆಚ್ಚುತ್ತಿದ್ದುದನ್ನು ಕಂಡು ಹಾಗೂ ಜಿಲ್ಲಾ ಮ್ಯಾಜಿಸ್ಟ್ರೇಟರು ತಮ್ಮ ನೆರವಿಗೆ ಬರುವುದಿಲ್ಲವೆಂದು ತಿಳಿದ ಹಿಂದೂಗಳು, ತಮಗಿನ್ನು ಉಳಿದದ್ದು ಒಂದೇ ಮಾರ್ಗ ಎಂದು ಅರಿತು, ಕಾನೂನಿನಂತೆ ಸ್ಥಾಪಿತವಾಗಿರುವ ಈ ಸಾರ್ವಜನಿಕ ಬಾವಿಗೆ ಅಸ್ಪೃಶ್ಯರ ಪ್ರವೇಶ ಕೂಡದೆಂದು ನ್ಯಾಯಾಲಯಕ್ಕೆ ಹೋದರು. ಹಿಂದೂಗಳ ವಿವಿಧ ಜಾತಿಗಳಿಗೆ ಸೇರಿದ ೯ ಜನರು ವಾದಿಗಳಾಗಿ ೧೯೨೭ರ ಡಿಸೆಂಬರ್ ೧೨ರಂದು ಮಹಡ್ ನಗರದ ಸಬ್ ಜಡ್ಜ್‌ರ ಕೋರ್ಟಿನಲ್ಲಿ ೧೯೨೭ನೆಯ ಇಸವಿಯ ದಾವಾ ಸಂಖ್ಯೆ ೪೦೫ ರಂತೆ ದಾವೆ ಹೂಡಿದರು. ಅಸ್ಪೃಶ್ಯರ ಪ್ರತಿನಿಧಿಗಳಾಗಿ ನನ್ನನ್ನು ಮತ್ತು ಉಳಿದ ನಾಲ್ವರನ್ನು ಪ್ರತಿವಾದಿಗಳಾಗಿ ಹೆಸರಿಸಿದರು. ಈ ದಾವೆಯ ಉದ್ದೇಶ ಚಾದರ್ ಕೆರೆಯು ಸ್ಪೃಶ್ಯರಿಗೆ ಸೇರಿದ ಸ್ವಂತ ಆಸ್ತಿಯಾಗಿದ್ದು ಅಸ್ಪೃಶ್ಯರು ಅದರ ಸಮೀಪ ಹೋಗುವುದಾಗಲಿ ಅಥವಾ ಅದರ ನೀರನ್ನು ತೆಗೆದುಕೊಳ್ಳುವುದಾಗಲಿ ಕೂಡದೆಂದು ಸ್ಥಿರವಾದ ನಿಷೇಧಾಜ್ಞೆಯನ್ನು ಪಡೆಯುವುದು. ಈ ದಾವೆಯನ್ನು ಹಾಕಿದ ದಿನವೆ ಈ ಫಿರ್ಯಾದಿಗಳು, ನ್ಯಾಯಾಲಯದ ಶಾಶ್ವತ ನಿಷೇಧಾಜ್ಞೆ ಬರುವುದಕ್ಕೆ ಮುನ್ನ, ಸದ್ಯಕ್ಕೆ ಆ ಕೆರೆಯಿಂದ ನೀರು ತೆಗೆದುಕೊಳ್ಳದಂತೆ ಒಂದು ತಾತ್ಕಾಲಿಕ ಪ್ರತಿಬಂಧಕಾಜ್ಞೆಯನ್ನು ಹೊರಡಿಸಬೇಕೆಂದು ಪ್ರಾರ್ಥಿಸಿದರು. ಈ ಪ್ರಾರ್ಥನೆಯು ಯುಕ್ತವಾದದ್ದು ಎಂದು ತಿಳಿದ ನ್ಯಾಯಾಧೀಶರು ೧೯೨೭ನೆಯ ಡಿಸೆಂಬರ್ ೧೪ರಂದು ನಾನು ಮತ್ತು ಉಳಿದ ನಾಲ್ಕು ಜನರ ಮೇಲೆ ತಾತ್ಕಾಲಿಕ ಪ್ರತಿಬಂಧಕಾಜ್ಞೆಯನ್ನು ಜಾರಿ ಮಾಡಿದರು.

ನ್ಯಾಯಾಧೀಶರ ಈ ತಾತ್ಕಾಲಿಕ ಪ್ರತಿಬಂಧಕಾಜ್ಞೆಯನ್ನು ಬೊಂಬಾಯಿಯಲ್ಲಿದ್ದ ನನಗೆ, ಸಮ್ಮೇಳನವು ಆರಂಭವಾಗುವ ಎರಡು ಮೂರು ದಿನಕ್ಕೆ ಮುಂಚೆ ಜಾರಿ ಮಾಡಿದರು. ನಾವುಗಳು ಇದನ್ನು ಕುರಿತು ಚರ್ಚಿಸುವುದಕ್ಕಾಗಲಿ ಅಥವಾ ಸಮ್ಮೇಳನವನ್ನು ಮುಂದೂಡುವುದಕ್ಕಾಗಲಿ ನಮಗೆ ಕಾಲವೇ ಇರಲಿಲ್ಲ. ಈ ಸಮಸ್ಯೆಯನ್ನು ಸಮ್ಮೇಳನವೇ ನಿರ್ಣಯಿಸಲೆಂದು ನಾನು ಸುಮ್ಮನಾದೆ.

ಕೆರೆಯ ನೀರನ್ನು ತೆಗೆದುಕೊಳ್ಳುವ ಹಕ್ಕನ್ನು ಹಿಂದೆ ನಿರಾಕರಿಸಿದ ಹಿಂದೂಗಳ ಕೃತ್ಯವನ್ನು ಪ್ರತಿಭಟಿಸಲೆಂದೇ ಈಗಿನ ಸಮ್ಮೇಳನವನ್ನು ಕರೆಯಲಾಗಿದ್ದಿತು. ಜಿಲ್ಲಾ ಮ್ಯಾಜಿಸ್ಟ್ರೇಟರು ದಾರಿಯನ್ನು ತೆರವು ಮಾಡಿದ್ದರು. ಆದರೆ ಮತ್ತೊಬ್ಬ ನ್ಯಾಯಾಧೀಶರು ಈ ಸಮ್ಮೇಳನಕ್ಕೆ ವಿರುದ್ಧವಾಗಿ ಪ್ರತಿಬಂಧಕಾಜ್ಞೆಯನ್ನು ನೀಡಿದ್ದರು. ಸಮ್ಮೇಳನ ಸೇರಿದಾಗ – ನ್ಯಾಯಾಧೀಶರ ಪ್ರತಿಬಂಧಕಾಜ್ಞೆಯನ್ನು ವಿರೋಧಿಸಿ ಕೆರೆಯನ್ನು ಪ್ರವೇಶಿಸುವುದೇ ಇಲ್ಲವೆ ಎಂಬುದು ಮೊದಲು ನಿರ್ಣಯಿಸಬೇಕಾದ ವಿಚಾರ. ಆದರೆ ಅಸ್ಪೃಶ್ಯರಿಗೆ

ಸಹಾಯಕರಾಗಿದ್ದ ಜಿಲ್ಲಾ ಮ್ಯಾಜಿಸ್ಟ್ರೇಟರು ಈಗ ಬೇರೆ ನಿಲುವನ್ನು ತಾಳಿದರು. ಜಿಲ್ಲಾ ಮ್ಯಾಜಿಸ್ಟ್ರೇಟರು ತಾವೇ ಸಮ್ಮೇಳನಕ್ಕೆ ಬಂದು ತಮ್ಮ ಅಭಿಪ್ರಾಯವನ್ನು ಸ್ಪಷ್ಟವಾಗಿ ವಿವರಿಸಿದರು. ಸಿವಿಲ್ ಕೋರ್ಟಿನ ಪ್ರತಿಬಂಧಕಾಜ್ಞೆ ಇಲ್ಲದಿದ್ದರೆ, ಹಿಂದೂಗಳ ವಿರುದ್ಧ ಅಸ್ಪೃಶ್ಯರು ಕೆರೆಯ ಪ್ರವೇಶಕ್ಕಾಗಿ ಮಾಡುತ್ತಿರುವ ಈ ಹೋರಾಟದಲ್ಲಿ ಅವರಿಗೆ ನೆರವಾಗುತ್ತಿದ್ದೆ. ಆದರೆ ಈಗ ಸಬ್ ಜಡ್ಜರು ಆಜ್ಞೆಯಿತ್ತಿರುವುದರಿಂದ ನನ್ನ ನಿಲುವು ಬೇರೆಯಾಗಿದೆ. ಈಗ ಕೆರೆಯ ಪ್ರವೇಶಕ್ಕೆ ಅವಕಾಶ ಕೊಡುವುದರಿಂದ ಪರೋಕ್ಷವಾಗಿ ಸಾಮ್ರಾಜ್ಯದ ಶಾಸನವನ್ನು ಮೀರಲು ದುರುದ್ದೇಶದಿಂದ ಅವಕಾಶ ಕೊಟ್ಟಂತಾಗುತ್ತದೆ, ಆದ್ದರಿಂದ ಅಸ್ಪೃಶ್ಯರಿಗೆ ತಡೆಯಾಜ್ಞೆ ನೀಡುವುದು ನನಗೆ ಈಗ ಅನಿವಾರ್ಯವಾಗಿದೆ ಎಂದರು ಹಾಗೂ ಒಂದು ವೇಳೆ ಅಸ್ಪೃಶ್ಯರು ಈ ತಡೆಯನ್ನು ಮೀರಿ ಕೆರೆಯನ್ನು ಪ್ರವೇಶಿಸುವುದೇ ಆದರೆ, ಆಗ ಹಿಂದೂಗಳ ಪರ ವಹಿಸುವುದಕ್ಕಾಗಿ ಅಲ್ಲ, ಸಿವಿಲ್ ಕೋರ್ಟಿನ ಘನತೆಯನ್ನು ಕಾಪಾಡುವುದಕ್ಕಾಗಿ, ಅದರ ತಡೆ ಆಜ್ಞೆಯನ್ನು ಜಾರಿಗೊಳಿಸಲೇಬೇಕಾಗುತ್ತದೆ ಎಂದರು.

ಸಮ್ಮೇಳನವು ಜಿಲ್ಲಾಧಿಕಾರಿಗಳ ಈ ಮಾತನ್ನು ಮತ್ತು ಅಸ್ಪೃಶ್ಯರು ನಿಷೇಧಾಜ್ಞೆಯನ್ನು ಮೀರಿ ಕೆರೆಯನ್ನು ಪ್ರವೇಶಿಸಿದರೆ ಹಿಂದೂಗಳ ಪ್ರತಿಕ್ರಿಯೆ ಹೇಗಿರಬಹುದೆಂಬುದನ್ನು ಕುರಿತು ಪರಿಶೀಲಿಸಿತು. ಕೊನೆಗೆ ಕಾನೂನಿನಂತೆ ನಡೆದು ಅದರಿಂದ ತಮ್ಮ ಹಕ್ಕುಗಳ ರಕ್ಷಣೆ ಎಷ್ಟರಮಟ್ಟಿಗೆ ಸಾಧ್ಯವಾಗುತ್ತದೆ ಎಂಬುದನ್ನು ಪರೀಕ್ಷಿಸುವುದೇ ಕ್ಷೇಮಕರವೆಂದು ಸಮ್ಮೇಳನ ನಿರ್ಣಯಿಸಿತು. ಹಾಗಾಗಿ ನ್ಯಾಯಾಲಯದ ದಾವೆ ತೀರ್ಮಾನವಾಗುವವರೆಗೂ ನಿಷೇಧಾಜ್ಞೆಯನ್ನು ಮೀರುವ ಯತ್ನವನ್ನು ಮುಂದೂಡಲಾಯಿತು.

ಈ ನಾಗರಿಕ ಕಾನೂನನ್ನು ಮುರಿಯುವ ಆವಶ್ಯಕತೆಯೇ ಬರಲಿಲ್ಲ. ಏಕೆಂದರೆ ದಾವೆಯಲ್ಲಿ ಅಸ್ಪೃಶ್ಯರು ಗೆದ್ದರು ಮತ್ತು ಹಿಂದೂಗಳು ಸೋತರು. ನಾಗರಿಕ ಕಾನೂನನ್ನು ಮೀರದೆ ಅದನ್ನು ಗೌರವಿಸಬೇಕೆಂಬ, ಅಸ್ಪೃಶ್ಯತೆಯ ಆಚರಣೆಯನ್ನು ಸರಿ ಅಥವಾ ತಪ್ಪು ಎಂಬುದನ್ನು ನ್ಯಾಯಾಲಯವು ಕಾನೂನಿನಿಂದ ನಿರ್ಣಯಿಸಿ ಹೇಳಲಿ ಎಂಬುದು ಅಸ್ಪೃಶ್ಯರ ನಿರ್ಣಯದ ಮೂಲ ಉದ್ದೇಶ. ಒಂದು ಸಂಪ್ರದಾಯವು ನ್ಯಾಯಸಮ್ಮತವೆನಿಸಬೇಕಾದರೆ ಅದು ಬಹು ಪುರಾತನವಾಗಿದ್ದು, ನಿಶ್ಚಿತಗೊಂಡು ಜನತೆಯ ಆಚರಣೆ ಮತ್ತು ನೈತಿಕ ಸಿದ್ಧಾಂತಗಳಿಗೆ ವಿರುದ್ಧವಿಲ್ಲದಂತಿರಬೇಕು. ಅಸ್ಪೃಶ್ಯತೆಯು ಅನೀತಿಯುತವಾಗಿದ್ದು ಜನಮನಕ್ಕೆ ಒಪ್ಪುವಂತಹುದಲ್ಲ ಎಂಬುದು ಅಸ್ಪೃಶ್ಯರ ಅನಿಸಿಕೆ. ಆದರೆ ಈ ಮಾತನ್ನು ನ್ಯಾಯಾಲಯವು ತೀರ್ಮಾನಿಸಿ ಹೇಳುವವರೆಗೂ ಯಾವ ಪ್ರಯೋಜನವೂ ಇಲ್ಲ. ಅಸ್ಪೃಶ್ಯತೆಯಂಥ ಆಚರಣೆ ಕ್ರಮಬದ್ಧವಲ್ಲವೆಂದು ನ್ಯಾಯಾಲಯವು ತೀರ್ಮಾನಿಸಿದರೆ, ಆಗ ಅಸ್ಪೃಶ್ಯರಿಗೆ ತಮ್ಮ ಸಾಮಾಜಿಕ ಹಕ್ಕುಗಳ ಹೋರಾಟ ನ್ಯಾಯಸಮ್ಮತವೆನಿಸಿ ಅದರಲ್ಲಿ ಮುಂದುವರಿಯಲು ಧೈರ್ಯ ಬರುತ್ತದೆ. ಚಾದರ್ ಕೆರೆಯ ಹೋರಾಟದಲ್ಲಿ ಅಸ್ಪೃಶ್ಯರಿಗೆ ದೊರೆತ ಕಾನೂನಿನ ಗೆಲುವು ಬಹಳ ಮಹತ್ವದ್ದು. ಆದರೆ ಬೊಂಬಾಯಿ ಉಚ್ಚನ್ಯಾಯಾಲಯ ಅಸ್ಪೃಶ್ಯತೆಯ ಆಚರಣೆಯು ಸರಿಯೇ ತಪ್ಪೇ ಎಂಬುದನ್ನು ನಿರ್ಣಯಿಸಿ ಹೇಳದಿದ್ದುದು ಒಂದು ರೀತಿಯಲ್ಲಿ ನಿರಾಶೆಗೆ ಕಾರಣವಾಯಿತು. ಅಸ್ಪೃಶ್ಯರಿಗೆ ಕೆರೆಯ ಪ್ರವೇಶಕ್ಕೆ ಹಕ್ಕಿಲ್ಲ ಎಂಬ ಹಿಂದೂಗಳ ವಾದವನ್ನು ಸಿದ್ಧಪಡಿಸಲು, ಈ ಆಚರಣೆಯ ಪುರಾತನತೆಯನ್ನು ಸ್ಥಾಪಿಸಲು ಹಿಂದೂಗಳು ಸೋತದ್ದರಿಂದ ಹಿಂದೂಗಳಿಗೆ ವಿರುದ್ಧವಾಗಿ ಉಚ್ಚ ನ್ಯಾಯಾಲಯ ತೀರ್ಪಿತ್ತಿತು. ಆ ಆಚರಣೆ ಸ್ಥಾಪಿತವಾಗಲಿಲ್ಲ ಎಂದು ಮಾತ್ರ ಹೇಳಿದ್ದಿತು. ಅಸ್ಪೃಶ್ಯರಿಗೆ ಆ ಕೆರೆಗೆ ಪ್ರವೇಶವೇನೋ ದೊರೆಯಿತು. ಆದರೆ ಅಸ್ಪೃಶ್ಯರಿಗೆ ಜಯದೊರೆತಂತಾಗಲಿಲ್ಲ. ಅಸ್ಪೃಶ್ಯತೆ ಎಂಬುದು ನ್ಯಾಯಬದ್ಧ ಆಚರಣೆಯೆ ಎಂಬುದು ನಿರ್ಣಯವಾಗಬೇಕಿದ್ದ ಮುಖ್ಯ ವಿಚಾರ.

ದುರದೃಷ್ಟದಿಂದ ಉಚ್ಚ ನ್ಯಾಯಾಲಯ ಆ ವಿಚಾರದಲ್ಲಿ ನಿರ್ಣಯಹೇಳಲು ಜಾರಿಕೊಂಡಿತು. ಅಸ್ಪೃಶ್ಯರು ತಮ್ಮ ಹೋರಾಟವನ್ನು ಮುಂದುವರಿಸಲೇಬೇಕಾಯಿತು.

## IV

ನೇರ ಹೋರಾಟದ ಇತಿಹಾಸದಲ್ಲಿ ಹೇಳಬಹುದಾದ ಮತ್ತೊಂದು ಮುಖ್ಯ ಘಟನೆ, ನಾಸಿಕದ ಕಲಾರಾಮನ ದೇವಾಲಯಕ್ಕೆ ಅಸ್ಪೃಶ್ಯರ ಪ್ರವೇಶಕ್ಕೆ ಸಂಬಂಧಿಸಿದ್ದು. ನಿರ್ದಿಷ್ಟ ಉದ್ದೇಶ ಸಾಧನೆಗಾಗಿ ಮಾಡಿದ ನೇರ ಹೋರಾಟದಲ್ಲಿ ಇದೂ ಒಂದು. ಹಿಂದೂ ಸಾಮಾಜಿಕ ವ್ಯವಸ್ಥೆಯ ಬುನಾದಿಗೆ ಸಿಡಿಮದ್ದನ್ನಿಟ್ಟು ಸಿಡಿಸಿ ಅದನ್ನು ನಾಶಗೊಳಿಸಲು ಯತ್ನಿಸಿದ ಎರಡು ನಿದರ್ಶನಗಳು ಈ ಹೋರಾಟದಲ್ಲಿ ಸೇರಿವೆ. ಒಂದು ಮನುಸ್ಮೃತಿಯನ್ನು ಸುಟ್ಟುಹಾಕಿದ್ದು ಮತ್ತು ಇನ್ನೊಂದು ಹಿಂದೂಗಳಿಗೆ ಸೇರಿದ ಸತ್ತ ದನಗಳನ್ನು ಹೊತ್ತು ಅದರ ಚರ್ಮವನ್ನು ಸುಲಿಯಲು ನಿರಾಕರಿಸಿದುದು.

೧೯೨೭ರ ಡಿಸೆಂಬರ್ ೨೦ನೆಯ ತಾರೀಖು ಮಹಡ್ ನಗರದಲ್ಲಿ ಮನುಸ್ಮೃತಿಯನ್ನು ಸುಡಲಾಯಿತು. ಚಾದರ್ ಕೆರೆಯಿಂದ ನೀರು ತೆಗೆದುಕೊಳ್ಳಲು ನಡೆಸಿದ ಹೋರಾಟದ ಅಂಗವಾಗಿ ಈ ಸಮಾರಂಭವು ನಡೆಯಿತು. ಮನುಸ್ಮೃತಿಯನ್ನು ಸುಡುವ ಕೆಲಸವು ಬಹಿರಂಗವಾಗಿ ಅಸ್ಪೃಶ್ಯರ ಸಮ್ಮೇಳನದಲ್ಲಿ ಸಾರ್ವಜನಿಕರ ಎದುರು ನಡೆಯಿತು. ಮನುಸ್ಮೃತಿಯನ್ನು ಸುಡುವ ಮುನ್ನ ಸಮ್ಮೇಳನದಲ್ಲಿ ಕೆಲವು ಠರಾವುಗಳನ್ನು ಮಾಡಲಾಯಿತು. ಅಸ್ಪೃಶ್ಯರ ಹೋರಾಟದ ಇತಿಹಾಸದಲ್ಲಿ ಈ ಠರಾವುಗಳು ಹೆಗ್ಗುರುತುಗಳಂತಿರುವುದರಿಂದ ಅವುಗಳನ್ನು ಇಲ್ಲಿ ಕೊಡಲಾಗಿದೆ :

**ಠರಾವು ೧** : ಹಿಂದೂಗಳ ಹಕ್ಕುಗಳ ಘೋಷಣೆ

"ಹಿಂದೂ ಸಮಾಜದ ಇಂದಿನ ಶೋಚನೀಯ ಸ್ಥಿತಿ ಹೇಗಿದೆ ಎಂದರೆ, ಒಂದು ಸಮಾಜ ತನ್ನ ಸಾಮಾಜಿಕ ಅನ್ಯಾಯಗಳನ್ನೆಲ್ಲಾ ಸೈರಿಸಿ ತಪ್ಪು ಧಾರ್ಮಿಕ ಆಚರಣೆಗಳನ್ನು ಅನುಸರಿಸಿ, ಆರ್ಥಿಕ ದುರಾಚಾರಗಳನ್ನು ಬೆಂಬಲಿಸಿ, ತಾನು ಹಾಳಾಗುತ್ತದೆಂಬುದಕ್ಕೆ ಒಂದು ನಿದರ್ಶನವಾಗಿದೆ. ಹಿಂದೂ ಸಮಾಜದ ಅವನತಿಗೆ ಕಾರಣ, ಅಲ್ಲಿಯ ಜನ ಸಮುದಾಯವು ಮಾನವನ ಜನ್ಮಸಿದ್ಧವಾದ ಹಕ್ಕುಗಳೇನೆಂಬುದನ್ನು ಅರಿತು ಅವುಗಳ ಮನ್ನಣೆಗೆ ಹೋರಾಡದೆ, ಮತ್ತು ಸ್ವಾರ್ಥಿ ಜನರ ಕೀಳು ಪ್ರವೃತ್ತಿಗಳನ್ನು ಬದಿಗೊತ್ತದೆ ಬಂದದ್ದು, ಮಾನವನ ಜನ್ಮಸಿದ್ಧ ಹಕ್ಕುಗಳಾವುವು ಎಂಬುದನ್ನು ತಿಳಿದು ಅವು ವ್ಯಕ್ತಿ ವ್ಯಕ್ತಿಗಳ ಮತ್ತು ವರ್ಗ ವರ್ಗಗಳ ನಡುವಿನ ಘರ್ಷಣೆಯಿಂದ ನಾಶವಾಗದಂತೆ ನೋಡಿಕೊಳ್ಳುವುದು ಪ್ರತಿಯೊಬ್ಬ ವ್ಯಕ್ತಿಯ ಪವಿತ್ರ ಕರ್ತವ್ಯ. ಮಾನವನಲ್ಲಿರುವ ಮೊಟಕುಗೊಳಿಸಲಾರದಂತಹ ಜನ್ಮಸಿದ್ಧ ಹಕ್ಕುಗಳು ಯಾವುವು ಎಂಬುದನ್ನು ಪ್ರತಿಯೊಬ್ಬ ಹಿಂದೂವು ತಿಳಿದಿರಲಾರನೆಂಬ ಕಾರಣ, ಈ ಸಮ್ಮೇಳನವು ಆ ಹಕ್ಕುಗಳನ್ನೊಳಗೊಂಡ ಈ ಕೆಳಗಿನ ಘೋಷಣೆಯನ್ನು ನೀಡುತ್ತದೆ –

೧) ಎಲ್ಲ ಹಿಂದೂಗಳಿಗೂ ಹುಟ್ಟಿನಿಂದಲೂ ಸಮಾನವಾದ ಸಾಮಾಜಿಕ ಸ್ಥಾನಮಾನವಿದೆ. ಈ ಸಾಮಾಜಿಕ ಸಮಾನತೆ ಅವರ ಸಾವಿನವರೆಗೂ ಉಳಿದುಬರುತ್ತದೆ. ಸಮಾಜದಲ್ಲಿ ಅವರು ನಿರ್ವಹಿಸುವ ಕಾರ್ಯಗಳಲ್ಲಿ ವೈವಿಧ್ಯ ಮತ್ತು ಭಿನ್ನತೆಯಿರಬಹುದು. ಆದರೆ ಆ ಕಾರಣದಿಂದ ಅವರ ಸಾಮಾಜಿಕ ಸ್ಥಾನಮಾನಗಳು ವ್ಯತ್ಯಾಸವಾಗಬಾರದು. ಆದ್ದರಿಂದ ರಾಜಕೀಯವಾಗಿ, ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಇರಬಹುದಾದ ವೈವಿಧ್ಯದಿಂದ ವ್ಯಕ್ತಿಯ ಸಾಮಾಜಿಕ ಸ್ಥಾನಮಾನವನ್ನು ಹೀನಾಯಗೊಳಿಸುವ ಯಾವ ಕ್ರಮವನ್ನೂ

ಈ ಸಮ್ಮೇಳನವು ವಿರೋಧಿಸುತ್ತದೆ.

೨) ನಮ್ಮ ರಾಜಕೀಯ, ಆರ್ಥಿಕ ಮತ್ತು ಸಾಮಾಜಿಕ ಪರಿವರ್ತನೆಯ ಮೂಲ ಉದ್ದೇಶ ಎಲ್ಲ ಹಿಂದೂಗಳಿಗೂ ಸಮಾನವಾದ ಸ್ಥಾನಮಾನವನ್ನು ಗಳಿಸುವುದೇ ಆಗಿದೆ. ಈ ಸಮ್ಮೇಳನದ ಉದ್ದೇಶವೂ ಅದೇ ಆಗಿರುವುದರಿಂದ ಹಿಂದೂ ಸಮಾಜದಲ್ಲಿ ಅಂತರ್ಗತವಾಗಿರುವ ವಿನಾಶಕಾರಕವಾದ ಸಾಮಾಜಿಕ ಅಸಮತೆಯನ್ನು ಬೆಂಬಲಿಸುವ ಸನಾತನ ಮತ್ತು ವಿನೂತನ ಧರ್ಮಶಾಸ್ತ್ರಗಳನ್ನು ಈ ಸಮ್ಮೇಳನವು ಪ್ರಬಲವಾಗಿ ವಿರೋಧಿಸುತ್ತದೆ.

೩) ನಮ್ಮೆಲ್ಲ ಸಾಮಾಜಿಕ ಶಕ್ತಿಯೂ ಜನತೆಯಿಂದ ದೊರೆತದ್ದು. ಯಾವುದೇ ಒಂದು ವರ್ಗ ಅಥವಾ ವ್ಯಕ್ತಿ ಬಯಸುವ ವಿಶೇಷಾಧಿಕಾರವನ್ನು ಸಮಾಜವು ಒಪ್ಪದಿದ್ದರೆ ಆ ಅಧಿಕಾರಕ್ಕೆ ಬೆಲೆಯೇ ಇಲ್ಲ. ಆದ್ದರಿಂದ ಹಿಂದೂಗಳಲ್ಲಿ ಕೆಲವು ವರ್ಗದವರು ವೇದ, ಸ್ಮೃತಿ ಮತ್ತು ಪುರಾಣಗಳ ಆಧಾರದಿಂದ ಸಾಮಾಜಿಕವಾಗಿ ಮತ್ತು ಧಾರ್ಮಿಕವಾಗಿ ಅನುಭವಿಸುತ್ತಿರುವ ಜನತೆಯ ಮನ್ನಣೆಯಿಲ್ಲದೆ ವಿಶೇಷಾಧಿಕಾರಗಳನ್ನು ಈ ಸಮ್ಮೇಳನವು ನಿರಾಕರಿಸುತ್ತದೆ.

೪) ವಾಕ್ ಸ್ವಾತಂತ್ರ್ಯ ಮತ್ತು ಕ್ರಿಯಾ ಸ್ವಾತಂತ್ರ್ಯ ಪ್ರತಿಯೊಬ್ಬ ಮಾನವನ ಜನ್ಮದತ್ತವಾದ ಹಕ್ಕು. ಇನ್ನೊಬ್ಬ ವ್ಯಕ್ತಿಯ ಸ್ವಾತಂತ್ರ್ಯಕ್ಕೆ ಅಡ್ಡಿ ಬಂದಾಗ ಮಾತ್ರ ಈ ಹಕ್ಕುಗಳನ್ನು ಮಿತಿಗೊಳಿಸಬಹುದು, ಮತ್ತಾವ ಕಾರಣದಿಂದಲೂ ಅಲ್ಲ. ಅಲ್ಲದೆ ಇಂತಹ ಮಿತಿಯನ್ನು ಹೇರಲು ಜನತೆಯ ಒಪ್ಪಿಗೆ ಬೇಕೇ ಹೊರತು, ಶಾಸ್ತ್ರಾಧಾರದಿಂದಲ್ಲ. ಜನಮತವಿಲ್ಲದೆ ಕೇವಲ ಶಾಸ್ತ್ರಾಧಾರದಿಂದ ಹಿಂದೂಗಳ ಧಾರ್ಮಿಕ, ಸಾಮಾಜಿಕ ಮತ್ತು ಆರ್ಥಿಕ ಸ್ವಾತಂತ್ರ್ಯವನ್ನು ಮೊಟಕುಗೊಳಿಸುವ ಎಲ್ಲ ವಿಧಿವಿಧಾನಗಳನ್ನು ಈ ಸಮ್ಮೇಳನವು ವಿರೋಧಿಸುತ್ತದೆ.

೫) ಹಿಂದೂಗಳ ಜನ್ಮದತ್ತವಾದ ಈ ಹಕ್ಕುಗಳ ಹೊರತು ಬೇರೆ ಹಕ್ಕುಗಳನ್ನು ಕಾನೂನಿನ ಮೂಲಕ ಮಾತ್ರ ಕಿತ್ತುಕೊಳ್ಳಬಹುದು. ಕಾನೂನಿನ ವಿರುದ್ಧವಲ್ಲದ ಕೆಲಸಗಳನ್ನು ಮಾಡುವ ಸ್ವಾತಂತ್ರ್ಯ ಹಿಂದೂಗಳಿಗೆಲ್ಲರಿಗೂ ಇರಬೇಕು ಮತ್ತು ಕಾನೂನಿನ ಮನ್ನಣೆ ಇಲ್ಲದ ಕಾರ್ಯಗಳನ್ನು ಮಾಡಲು ಯಾವ ಹಿಂದೂವಿಗೂ ಒತ್ತಾಯವಿರಬಾರದು. ಈ ಕಾರಣದಿಂದಲೇ ಜನತೆಗೆ ಸಾರ್ವಜನಿಕ ರಸ್ತೆ, ಸಾರ್ವಜನಿಕ ಬಾವಿ, ಕೆರೆ, ದೇವಸ್ಥಾನ ಮುಂತಾದ ಸಾರ್ವಜನಿಕ ಉಪಯೋಗದ ಸ್ಥಳಗಳು – ಇವುಗಳ ಬಳಕೆಯನ್ನು ವಿರೋಧಿಸಬಾರದು. ಕಾನೂನಿನಿಂದ ಯಾವ ಅಡ್ಡಿಯು ಇಲ್ಲದ ವಿಚಾರಗಳಲ್ಲಿ ಅಡ್ಡಿಯನ್ನು ತಂದೊಡ್ಡುವ ಜನ ಈ ಸಮ್ಮೇಳನದ ದೃಷ್ಟಿಯಲ್ಲಿ ಜನತೆಯ ವೈರಿಗಳು ಎಂದಾಗುತ್ತದೆ.

೬) ಕಾನೂನೆಂಬುದು ಯಾವುದೋ ಒಬ್ಬ ವ್ಯಕ್ತಿಯ ಅಥವಾ ಕೆಲವು ಜನರ ಆದೇಶವಲ್ಲ. ಕಾನೂನೆಂಬುದು ಪರಿವರ್ತನೆಯನ್ನು ನಿಯಂತ್ರಿಸುವ ಒಂದು ವಿಧಿ, ಹೀಗಿರುವಾಗ ಸರ್ವಮಾನ್ಯವಾದ ಕಾನೂನು ಯಾವ ಭೇದವು ಇಲ್ಲದೆ ಎಲ್ಲರಿಗೂ ಅನ್ವಯವಾಗುವಂತಿದ್ದು ಎಲ್ಲರ ಒಪ್ಪಿಗೆಗೂ ಅರ್ಹವಾಗಿರಬೇಕು. ಸಾಮಾಜಿಕ ವಿಭಜನೆ ಸಾಮಾಜಿಕ ಹಿತದೃಷ್ಟಿಯಿಂದ ಆವಶ್ಯಕವೆನಿಸಿದಾಗ ಅದು ಜನತೆಯ ಸಾಮರ್ಥ್ಯಕ್ಕೆ ಅನುಗುಣವಾಗಿ ಆಗಬೇಕೆ ಹೊರತು ಅವರ ಹುಟ್ಟಿನಿಂದ ನಿರ್ಣಯವಾಗಬಾರದು. ಹಿಂದೂ ಧರ್ಮದ ಜಾತಿ ಪದ್ಧತಿಯು, ಮೊದಲನೆಯದಾಗಿ ಸಮಾಜಘಾತಕವಾಗಿರುವುದರಿಂದ, ಎರಡನೆಯದಾಗಿ ಅದು ಹುಟ್ಟಿನಿಂದ ನಿರ್ಣಯವಾಗುವುದರಿಂದ ಮತ್ತು ಮೂರನೆಯದಾಗಿ ಅದು ಜನತೆಯ ಅಂಗೀಕಾರವನ್ನು ಗಳಿಸಿಲ್ಲವಾದ್ದರಿಂದ, ಈ ಸಮ್ಮೇಳನವು ಅದನ್ನು ವಿರೋಧಿಸುತ್ತದೆ."

ಈ ಸಮ್ಮೇಳನವು ಅಂಗೀಕರಿಸಿದ ಎರಡನೆಯ ಠರಾವು ಈ ರೀತಿ ಇದೆ :

**ಠರಾವು – ೨**

"ಹಿಂದೂ ಧರ್ಮಶಾಸ್ತ್ರದ ಕರ್ತೃವಾದ ಮನುವಿನಿಂದ ರೂಪುಗೊಂಡು, ಹಿಂದೂಗಳ ಕಾನೂನು ಗ್ರಂಥವಾಗಿರುವ ಮನುಧರ್ಮಶಾಸ್ತ್ರದಲ್ಲಿ ಕಾಣುವ ವಿಧಿಗಳು, ಕೆಳವರ್ಗದ ಹಿಂದೂಗಳಿಗೆ ಅವಮಾನಕರವಾಗಿದ್ದು, ಅವರ ಮಾನವೀಯ ಹಕ್ಕುಗಳನ್ನು ಅಪಹರಿಸಿ, ಅವರ ವ್ಯಕ್ತಿತ್ವವನ್ನು ನಾಶಗೊಳಿಸುವಂತಿವೆ. ಸುಸಂಸ್ಕೃತ ಜಗತ್ತಿನ ಬೇರೆ ಜನಾಂಗದ ಜನರ ಹಕ್ಕುಬಾಧ್ಯತೆಗಳೊಂದಿಗೆ ಹೋಲಿಸಿ ನೋಡಿದಾಗ, ಮನುಸ್ಮೃತಿ ಎಂಬುದು ಯಾವ ಗೌರವಕ್ಕೂ ಅರ್ಹವಲ್ಲದ ಅಧರ್ಮಿ ಗ್ರಂಥವಾದ್ದರಿಂದ, ಅದರ ಬಗ್ಗೆ ಸಮ್ಮೇಳನವು ತನ್ನ ಅತೀವ ನಿರ್ಲಕ್ಷ್ಯವನ್ನು ತೋರಿಸಲು, ಅದರ ಒಂದು ಪ್ರತಿಯನ್ನು ಸಮ್ಮೇಳನದ ಕೊನೆಯಲ್ಲಿ ಸುಟ್ಟುಹಾಕಿ, ಧರ್ಮದ ಹೆಸರಿನಲ್ಲಿ ಆ ಗ್ರಂಥದಲ್ಲಿ ಪ್ರತಿಪಾದಿಸಿರುವ ಸಾಮಾಜಿಕ ಅಸಮತೆಯನ್ನು ವಿರೋಧಿಸುತ್ತದೆ."

ಈ ಠರಾವುಗಳನ್ನು ಸ್ಥೂಲವಾಗಿ ನೋಡಿದರೂ ಆ ಸಮ್ಮೇಳನದ ಚಿಂತನೆ ಯಾವ ದಿಕ್ಕಿನಲ್ಲಿ ಹರಿಯುತ್ತಿದೆ ಎಂಬುದು ಅರಿವಾಗುತ್ತದೆ. ಆ ಸಮ್ಮೇಳನದ ಉದ್ದೇಶ ಯಾವುದೋ ಒಂದು ನಿರ್ದಿಷ್ಟ ಸಮಸ್ಯೆಗೆ ಪರಿಹಾರವನ್ನು ಹುಡುಕುವುದಾದರೂ, ಅಂತಹ ಸಣ್ಣ ಸಣ್ಣ ಸಮಸ್ಯೆಗಳನ್ನು ಪರಿಹರಿಸುವುದರಿಂದ ಅದು ತೃಪ್ತವಾಗುವುದಿಲ್ಲ ಎಂಬುದನ್ನು ತೋರಿಸಿಕೊಟ್ಟಿತು. ಅಸ್ಪೃಶ್ಯರ ಮೂಲ ಉದ್ದೇಶವೇನೆಂಬುದನ್ನು ನಿರ್ಣಯಿಸುವ ಕಾಲ ಬಂದಿದೆ ಎಂಬುದಾಗಿ ಸಮ್ಮೇಳನ ಮನಗಂಡಿತು. ಅದು ಸೂಚಿಸಿದ ಗುರಿಯನ್ನು ಮುಟ್ಟಲು ಬಹುಕಾಲ ಬೇಕಾಯಿತು. ಹಿಂದೂಗಳ ಸಾಮಾಜಿಕ ವ್ಯವಸ್ಥೆಯಲ್ಲಿ ಪೂರ್ಣ ಪರಿವರ್ತನೆ ಬೇಕೆಂದು ಅಸ್ಪೃಶ್ಯರು ಬಯಸಿದರು. ಇದರ ಪುನರ್‌ನಿರ್ಮಾಣ ಹಿಂದಿನಂತೆ ಶಾಸ್ತ್ರಗಳ ಆಧಾರದ ಮೇಲಿರಬಾರದೆಂದೂ ಸಮ್ಮೇಳನ ಘೋಷಿಸಿತು. ಈ ಪುನರ್‌ನಿರ್ಮಾಣ ಏನೇ ಇರಲಿ ಅದರಲ್ಲಿ ಒಬ್ಬ ಹಿಂದೂ ಮತ್ತೊಬ್ಬ ಹಿಂದೂವಿನ ನಡುವೆ ಸಮಾನತೆ ಮತ್ತು ನ್ಯಾಯಪಾಲನೆಗೆ ಅವಕಾಶವಿದ್ದು, ಹಿಂದೂಧರ್ಮ ಶಾಸ್ತ್ರಗಳ ಪ್ರಭಾವಕ್ಕೆ ಅವಕಾಶವಿರಬಾರದು ಎಂದು ಸಾರಿತು. ಈ ಸಮ್ಮೇಳನವು ಶಾಸ್ತ್ರಗಳನ್ನು ನಿರಾಕರಿಸಿದ್ದು ಮಾತ್ರವಲ್ಲದೆ ಅವುಗಳನ್ನು ಸುಟ್ಟು ಬೂದಿ ಮಾಡಿತು.

ಅದು ವಾಲ್ಟೇರನು ತನ್ನ ಕಾಲದ ಕ್ಯಾಥೋಲಿಕ್ ಧರ್ಮವನ್ನು ನಿರಾಕರಿಸಿದ್ದರ ಪ್ರತಿ ಧ್ವನಿಯಂತಿದ್ದಿತು. ಹಿಂದೂ ಸಾಮಾಜಿಕ ವ್ಯವಸ್ಥೆಯ ಎದುರು ಮೊತ್ತಮೊದಲಿಗೆ "ಇದು ನಾಚಿಕೆಗೇಡಿನ ವ್ಯವಸ್ಥೆ" ಎಂಬ ಕೂಗೆದ್ದಿತು.

ಹಿಂದೂ ಸಾಮಾಜಿಕ ವ್ಯವಸ್ಥೆ ಮನುಸ್ಮೃತಿಯನ್ನು ಆಧರಿಸಿ ಬೆಳೆದು ನಿಂತಿದೆ. ಅದು ಹಿಂದೂ ಧರ್ಮಶಾಸ್ತ್ರದ ಅಂಗವಾದ್ದರಿಂದ ಎಲ್ಲ ಹಿಂದೂಗಳಿಗೂ ಪವಿತ್ರವೆನಿಸಿದೆ. ಅದು ಪವಿತ್ರವೆಂದೆನಿಸಿದ್ದರಿಂದ ಅದನ್ನು ನಿರ್ದೋಷವೆಂದು ಕರೆಯಲಾಗಿದೆ. ಪ್ರತಿಯೊಬ್ಬ ಹಿಂದೂವು ಅದರ ಪಾವಿತ್ರ್ಯವನ್ನು ಒಪ್ಪುತ್ತಾನೆ ಮತ್ತು ಅದರ ಶಾಸನಕ್ಕೆ ತಲೆ ಬಾಗುತ್ತಾನೆ. ಮನುವು ಜಾತಿ ಮತ್ತು ಅಸ್ಪೃಶ್ಯತೆಯನ್ನು ಒಪ್ಪುವುದು ಮಾತ್ರವಲ್ಲದೆ ಅದಕ್ಕೆ ಕಾನೂನಿನ ಮನ್ನಣೆಯನ್ನು ಕೊಡುತ್ತಾನೆ. ಮನುಧರ್ಮಶಾಸ್ತ್ರವನ್ನು ಸುಡುವುದಕ್ಕೆ ಬಹಳ ಸಾಹಸ ಬೇಕು. ಅದು ಹಿಂದೂ ಧರ್ಮದ ಕೋಟೆಗೆ ಮುತ್ತಿಗೆ ಹಾಕಿದಂತೆ. ಪುರಾತನ ಫ್ರೆಂಚ್ ಸಾಮ್ರಾಜ್ಯದ ಪ್ರತೀಕವಾದ ಬೆಸ್ಟಿಲ್ಲಾ ಸೆರೆಮನೆಯ ಗೋಡೆಗಳಿದ್ದಂತೆ. ಹಿಂದೂಗಳ ಜೀವನ ಮತ್ತು ಚಿಂತನೆಯ ಆಧಾರವಾದ ಅಸಮತೆಯ ಪ್ರತೀಕವೇ ಮನುಸ್ಮೃತಿ. ಅಸ್ಪೃಶ್ಯರು ಮಹಡ್ ನಗರದಲ್ಲಿ ೧೯೨೭ರಲ್ಲಿ ಮನುಸ್ಮೃತಿಯನ್ನು ಸುಟ್ಟದ್ದು ಅಸ್ಪೃಶ್ಯರ ಬಿಡುಗಡೆಯ ಇತಿಹಾಸದಲ್ಲಿ ಯುರೋಪ್ ಮತ್ತು ಫ್ರಾನ್ಸಿನ ಜನತೆಯು ಸ್ವಾತಂತ್ರ್ಯ

ಸಮರದಲ್ಲಿ ಬೆಸ್ಟಿಲ್ಲಾ ಸೆರೆಮನೆಯ ಗೋಡೆಗಳನ್ನು ಕೆಡವಿದಷ್ಟು ಮಹತ್ವದ ವಿಚಾರ.

ಹಿಂದೂಗಳ ಸಾಮಾಜಿಕ ವ್ಯವಸ್ಥೆಯ ವಿರುದ್ದವಾಗಿ ಅಸ್ಪೃಶ್ಯರು ನಡೆಸಿದ ನೇರ ಕಾರ್ಯಾಚರಣೆಯ ಎರಡನೆಯ ಮಹತ್ವದ ಘಟನೆಯೆಂದರೆ ಹಿಂದೂಗಳಿಗೆ ಸೇರಿದ ಸತ್ತ ದನಗಳನ್ನು ಹೊತ್ತು ಅವುಗಳ ಚರ್ಮವನ್ನು ಸುಲಿಯಲು ನಿರಾಕರಿಸಿದ್ದು.

ಅಸ್ಪೃಶ್ಯರನ್ನು ಅಸ್ಪೃಶ್ಯರನ್ನಾಗಿಸಿದ ಅವರ ಜೀವನ ಕ್ರಮಕ್ಕಾಗಿ, ಅವರನ್ನು ಕೆಲವರು ನಿಂದಿಸುವುದನ್ನು ಕೇಳಿದ್ದೇವೆ. ಅಸ್ಪೃಶ್ಯರು ಹಿಂದೂಗಳಿಗೆ ಸೇರಿದ ಸತ್ತ ಪ್ರಾಣಿಗಳನ್ನು ಹೊತ್ತು ಅವುಗಳ ಚರ್ಮವನ್ನು ಸುಲಿದು ಅವುಗಳ ಕೊಳೆತ ಮಾಂಸವನ್ನು ತಿನ್ನುವ ಈ ಆಚರಣೆಗಾಗಿ ಅವರನ್ನು ನಿಂದಿಸಲಾಗುತ್ತದೆ.

ದುರ್ಬಲವರ್ಗದ ಜನರ ಪರಮ ಸ್ನೇಹಿತನೆನಿಸಿದ ಅಬಿ ದುಬಾಯ್ಸನು ಮದರಾಸು ಪ್ರಾಂತ್ಯದ ಪರೆಯ ಜನರನ್ನು ಕುರಿತು ಈ ರೀತಿ ಹೇಳುತ್ತಾನೆ.

"ಸ್ಥಳೀಯರಿಗೆ ಪರೆಯರ ವಿಚಾರದಲ್ಲಿ ಅಸಹ್ಯವೆನಿಸುವ ಕಾರಣವೇನೆಂದರೆ ಅವರು ತಿನ್ನುವ ಆಹಾರ. ಕೊಳೆತ ಮಾಂಸದ ವಾಸನೆಯಿಂದ ಆಕರ್ಷಿತರಾದ ಇವರು ಮಾಂಸಕ್ಕಾಗಿ, ನಾಯಿ, ನರಿ, ಕಾಗೆ ಮುಂತಾದ ಮಾಂಸಾಹಾರಿ ಪ್ರಾಣಿಗಳೊಂದಿಗೆ ಸ್ಪರ್ಧೆಗಿಳಿಯುತ್ತಾರೆ. ಅರ್ಧ ಕೊಳೆತ ಆ ಮಾಂಸವನ್ನು ಗುಡಿಸಲಿಗೆ ತೆಗೆದುಕೊಂಡು ಹೋಗಿ ಅದಕ್ಕೆ ಯಾವ ಮಸಾಲೆಯನ್ನು ಸೇರಿಸದೆ, ಜೊತೆಗೆ ಅನ್ನವೂ ಇಲ್ಲದೆ ಹಾಗೆಯೇ ಅದನ್ನು ತಿಂದುಹಾಕುತ್ತಾರೆ. ಆ ಪ್ರಾಣಿ ಯಾವ ರೋಗದಿಂದ ಸತ್ತಿದೆ ಎಂಬ ಅರಿವು ಅವರಿಗೆ ಇರುವುದಿಲ್ಲ ಮತ್ತು ಕೆಲವು ಬಾರಿ ಅವರು ಹಸು ಮತ್ತು ಎಮ್ಮೆಗಳಿಗೆ ಗುಟ್ಟಾಗಿ ವಿಷಹಾಕಿ ಸಾಯಿಸಿ ನಂತರ ಅವುಗಳ ಕೊಳೆತ ಮಾಂಸವನ್ನು ತಿಂದು ಸಂತೋಷಪಡುತ್ತಾರೆ. ಹಳ್ಳಿಯಲ್ಲಿ ಸತ್ತ ಪ್ರಾಣಿಗಳ ದೇಹವು ತೋಟಿ ಅಥವಾ ಜಾಡಮಾಲಿಗೆ ಸೇರಬೇಕೆಂಬ ನಿಯಮವಿದ್ದು ಅದರ ಮಾಂಸವನ್ನು ಮಿಕ್ಕ ಪರೆಯರಿಗೆ ಕಡಿಮೆ ಬೆಲೆಗೆ ಅವನು ಮಾರುತ್ತಾನೆ. ಒಂದೇ ದಿನದಲ್ಲಿ ಆ ಮಾಂಸವನ್ನು ತಿಂದು ಮುಗಿಸಲು ಸಾಧ್ಯವಾಗದಿದ್ದರೆ, ಅದನ್ನು ಬಿಸಿಲಿನಲ್ಲಿ ಒಣಗಿಸಿಟ್ಟು ಆಹಾರವಿಲ್ಲದಿದ್ದಾಗ ಅದನ್ನು ತಿನ್ನುತ್ತಾರೆ. ಇದರ ಚೂರುಗಳ ತೋರಣ ಅವರ ಗುಡಿಸಲಿನಲ್ಲಿ ನೇತಾಡುತ್ತದೆ. ಅದು ನೇತಾಡದೆ ಇರುವ ಪರೆಯರ ಮನೆಗಳನ್ನು ಕಾಣುವುದೇ ಅಪರೂಪ. ಇದರ ವಾಸನೆ ಪರೆಯರಿಗೆ ಅಸಹ್ಯವೆನಿಸದಿದ್ದರೂ ಹಳ್ಳಿಯ ಸಮೀಪದಲ್ಲಿ ಹೋಗುವ ಪ್ರಯಾಣಿಕರು ಈ ವಾಸನೆಯನ್ನು ಗ್ರಹಿಸಿ ಅಲ್ಲಿ ವಾಸಿಸುವ ಜನರು ಯಾವ ಜಾತಿಯವರೆಂಬುದನ್ನು ಸುಲಭವಾಗಿ ಹೇಳಬಹುದು.....

ಈ ವಿವರಗಳನ್ನು ಕೇಳಿದ ಮೇಲೆ ಉಳಿದ ಜಾತಿಯ ಜನ ಇವರ ವಿಚಾರದಲ್ಲಿ ಅಸಹ್ಯಪಟ್ಟುಕೊಂಡರೆ ಆಶ್ಚರ್ಯವೇನು? ಇಂತಹ ಅನಾಗರಿಕರೊಂದಿಗೆ ಯಾವ ಸಂಪರ್ಕವೂ ಬೇಡವೆಂದದ್ದು ಅವರ ತಪ್ಪೆ ಅಥವಾ ಅವರಿಂದ ದೂರವಿದ್ದು, ತಮ್ಮದೇ ಆದ ಗ್ರಾಮದಲ್ಲಿ ವಾಸಿಸುವುದು ಅವರ ತಪ್ಪೇನು?................."

ಈ ಆಚರಣೆಯಿಂದಾಗಿ ಅಸ್ಪೃಶ್ಯರ ವಿಚಾರದಲ್ಲಿ ಹಿಂದೂಗಳ ಮನಸ್ಸಿನಲ್ಲಿ ಅಸಹ್ಯ ಭಾವನೆ ಹುಟ್ಟಿದುದು ನಿಜ. ಆದರೆ ವಿಚಾರವಂತ ಜನ ಪ್ರಮುಖವಾದ ಎರಡು ಪ್ರಶ್ನೆಗಳನ್ನು ಕೇಳಲು ಮರೆಯಬಾರದು. ಮೊದಲನೆಯದಾಗಿ ಅಸ್ಪೃಶ್ಯರು ಕೊಳೆತ ಮಾಂಸವನ್ನು ಏಕೆ ತಿನ್ನುತ್ತಾರೆ? ತಮ್ಮ ಸತ್ತ ಪ್ರಾಣಿಗಳನ್ನು ಕೊಂಡುಹೋಗಿ ಅವುಗಳ ಚರ್ಮ ಸುಲಿಯುವ ಕೆಲಸವನ್ನು ನಿರಾಕರಿಸುವ ಸ್ವಾತಂತ್ರ್ಯವನ್ನು ಹಿಂದೂಗಳು ಅಸ್ಪೃಶ್ಯರಿಗೆ ನೀಡಲು ಸಿದ್ಧರಾಗಿದ್ದಾರೆಯೇ? ಅಸ್ಪೃಶ್ಯರು ಕೊಳೆತ ಮಾಂಸವನ್ನು ಏಕೆ ತಿನ್ನುತ್ತಾರೆ? ಎಂಬ ಪ್ರಶ್ನೆಗೆ ಉತ್ತರವನ್ನು ಹಿಂದಿನ ಅಧ್ಯಾಯಗಳಲ್ಲಿಯೇ ಕೊಡಲಾಗಿದೆ.

ಹೊಸ ಮಾಂಸ ದೊರೆಯುವಂತಿದ್ದರೆ ಕೊಳೆತ ಮಾಂಸವನ್ನು ಯಾರೂ ತಿನ್ನುವುದಿಲ್ಲ. ಅಸ್ಪೃಶ್ಯರು

ಕೊಳೆತ ಮಾಂಸವನ್ನು ತಿಂದು ಬದುಕುತ್ತಿದ್ದರೆ ಅವರು ಅದನ್ನು ಇಚ್ಛೆಪಡುತ್ತಾರೆ ಎಂಬ ಕಾರಣದಿಂದಲ್ಲ. ಅವರು ಕೊಳೆತ ಮಾಂಸವನ್ನು ತಿನ್ನುವುದಕ್ಕೆ ಕಾರಣ ಅವರಿಗೆ ತಿನ್ನಲು ಬೇರೆ ಏನೂ ಇಲ್ಲ. ಅವರು ಅಸ್ಪೃಶ್ಯರೆಂಬ ಕಾರಣ ಅವರಿಗೆ ಹೊಟ್ಟೆಹೊರೆಯಲು ಯಾವ ವೃತ್ತಿಯೂ ದೊರೆಯುತ್ತಿಲ್ಲ. ಎಲ್ಲ ಕಸುಬುಗಳೂ ಅವರ ಪಾಲಿಗೆ ಇಲ್ಲದಂತಾಗಿವೆ. ಭೂಮಿಯಿಂದ ದುಡಿದು ಜೀವಿಸೋಣವೆಂದರೆ ಅವರಿಗೆ ಭೂಮಿಯೇ ಇಲ್ಲ. ಅವರು ಕೈಗೊಳ್ಳಬಹುದಾದ ವ್ಯಾಪಾರ ಯಾವುದೂ ಇಲ್ಲ. ಆದ್ದರಿಂದ ಅವರ ಜೀವನಾಧಾರವೆಂದರೆ ಹಳ್ಳಿಗಳಲ್ಲಿ ದೊರೆಯುವ ಆಹಾರ ಮತ್ತು ಯಾರಿಗೂ ಬೇಡವಾದ ಕೊಳೆತ ಮಾಂಸ. ಈ ಮಾಂಸವಿಲ್ಲದಿದ್ದರೆ ಉಪವಾಸದಿಂದ ಅವರು ಅಕ್ಷರಶಃ ಸಾಯಬೇಕಾಗುತ್ತದೆ. ಆದ್ದರಿಂದ ತಪ್ಪು ಅವರದಲ್ಲ ಎಂಬುದು ಇದರಿಂದ ಗೊತ್ತಾಗುತ್ತದೆ. ಅವರು ಅಸ್ಪೃಶ್ಯರು ಗೌರವಯುತವಾದ ಯಾವ ವೃತ್ತಿಯಿಂದಲೂ ಜೀವನ ಮಾಡಲು ಹಿಂದೂಗಳು ಅವಕಾಶವನ್ನು ಕೊಟ್ಟಿಲ್ಲ ಎಂಬ ಕಾರಣದಿಂದ ಕೊಳೆತ ಮಾಂಸವನ್ನು ತಿನ್ನುತ್ತಾರೆ.

ಎರಡನೆಯ ಪ್ರಶ್ನೆಗೆ ಉತ್ತರ ಅಷ್ಟೇ ಸ್ಪಷ್ಟವಾಗಿದೆ. ಅಸ್ಪೃಶ್ಯರು ಹಿಂದೂಗಳ ಮನೆಯ ಸತ್ತ ಪ್ರಾಣಿಗಳನ್ನು ಕೊಂಡು ಹೋಗಿ ಚರ್ಮ ಸುಲಿಯುತ್ತಾರೆ ಎಂದರೆ, ಅದು ಅವರಿಗೆ ಅನಿವಾರ್ಯ. ಅದನ್ನು ಅವರು ಆವಶ್ಯಕವಾಗಿ ಮಾಡಬೇಕಾಗಿದೆ. ಅದನ್ನು ಮಾಡುವುದಿಲ್ಲವೆಂದರೆ, ಅದಕ್ಕೆ ಅವರಿಗೆ ಶಿಕ್ಷೆಯಾಗುತ್ತದೆ ಮತ್ತು ಕಾನೂನಿನ ಪ್ರಕಾರ ಅವರಿಗೆ ದಂಡನೆಯಾಗುತ್ತದೆ. ಕೆಲವು ಪ್ರಾಂತ್ಯಗಳಲ್ಲಿ ಇಂತಹ ಅಸಹ್ಯ ಕೆಲಸವನ್ನು ಮಾಡುವುದಿಲ್ಲ ಎನ್ನುವುದು ನಂಬಿಕೆಗೆ ದ್ರೋಹವೆನಿಸುತ್ತದೆ. ಉಳಿದ ಪ್ರಾಂತ್ಯಗಳಲ್ಲಿ ಇದು ಒಂದು ಅಪರಾಧವೆನಿಸಿದ್ದು, ಅದಕ್ಕೆ ಸೂಕ್ತ ದಂಡ ತೆರಬೇಕಾಗುತ್ತದೆ. ಬೊಂಬಾಯಿಯಂತಹ ಪ್ರಾಂತ್ಯಗಳಲ್ಲಿ ಅಸ್ಪೃಶ್ಯರು ಗ್ರಾಮದ ಸೇವಕರೆನಿಸುತ್ತಾರೆ. ಗ್ರಾಮಸೇವಕರಾದ ಕಾರಣ ಅವರು ಸರ್ಕಾರ ಮತ್ತು ಹಿಂದೂ ಜನತೆಯ ಸೇವೆಯನ್ನು ಮಾಡಬೇಕು. ಅವರ ಈ ಸೇವೆಗಾಗಿ ಅವರಿಗೆ ಸ್ವಲ್ಪ ಭೂಮಿಯನ್ನು ಕೊಟ್ಟಿರುತ್ತಾರೆ. ಮತ್ತು ಆ ಭೂಮಿಯ ವ್ಯವಸಾಯದಿಂದ ತಮ್ಮ ಜೀವನ ನಡೆಸುತ್ತಾರೆ. ಹಿಂದೂಗಳ ಮನೆಯ ಪ್ರಾಣಿಗಳು ಸತ್ತಾಗ ಅವುಗಳನ್ನು ತೆಗೆದುಕೊಂಡು ಹೋಗಿ ಅದರ ಚರ್ಮ ಸುಲಿಯುವುದು ಅವರ ಕರ್ತವ್ಯಗಳಲ್ಲಿ ಒಂದು. ಅಸ್ಪೃಶ್ಯರು ಈ ಕರ್ತವ್ಯವನ್ನು ನಿರ್ವಹಿಸದಿದ್ದರೆ ಅವರ ಜೀವನಕ್ಕೆ ಆಧಾರವಾದ ಭೂಮಿಯನ್ನು ಹಿಂತೆಗೆದುಕೊಳ್ಳಲಾಗುತ್ತದೆ. ಈ ಅಸಹ್ಯ ಕೆಲಸ ಮಾಡುವುದು ಇಲ್ಲವೇ ಉಪವಾಸವಿರುವುದು ಈ ಎರಡರಲ್ಲಿ ಯಾವುದಾದರೊಂದನ್ನು ಅವರು ಆರಿಸಿಕೊಳ್ಳಬೇಕಾಗುತ್ತದೆ.

ಸಂಯುಕ್ತ ಪ್ರಾಂತ್ಯಗಳಂತಹ ಪ್ರಾಂತ್ಯಗಳಲ್ಲಿ ಜಲಗಾರರು ಭಂಗಿಯ ಕೆಲಸವನ್ನು ಮಾಡದಿರುವುದು ಅಪರಾಧವೆನಿಸುತ್ತದೆ. ಸಂಯುಕ್ತ ಪ್ರಾಂತ್ಯಗಳ ಪೌರಸಭೆಯ ೧೯೧೬ರ ಕಾನೂನಿನ ೨ನೇ ವಿಭಾಗದಲ್ಲಿ ಈ ಕೆಳಗಿನ ಅಂಶ ಹೇಳಲಾಗಿದೆ :

**ಪರಿಚ್ಛೇದ ೨೦೧**

೧) "ಮನೆಗಳಲ್ಲಿ ಸಾಂಪ್ರದಾಯಿಕವಾಗಿ ಭಂಗಿಯ ಕೆಲಸವನ್ನು ನಿರ್ವಹಿಸುವ ಯಾವನೇ ಜಲಗಾರನು (ಇಲ್ಲಿ ಇನ್ನೂ ಮುಂದೆ ಸಾಂಪ್ರದಾಯಿಕ ಜಲಗಾರನೆಂದು ಕರೆಯಲಾಗುತ್ತದೆ) ತನ್ನ ಭಂಗಿ ಕೆಲಸವನ್ನು ಸಮರ್ಪಕವಾಗಿ ನಿರ್ವಹಿಸದಿದ್ದರೆ ಮನೆಯ ಯಜಮಾನನು ನ್ಯಾಯಾಧೀಶರಲ್ಲಿ ದೂರು ಕೊಡಬಹುದು."

೨) "ಆ ದೂರನ್ನು ಸ್ವೀಕರಿಸಿದ ನ್ಯಾಯಾಧೀಶರು ಅದರ ವಿಚಾರಣೆ ನಡೆಸಿ ಸಾಂಪ್ರದಾಯಿಕ ಜಲಗಾರನು ಮನೆಯ ಭಂಗಿ ಕೆಲಸವನ್ನು ಸಮರ್ಪಕವಾದ ರೀತಿಯಲ್ಲಿ ಮಾಡಿಲ್ಲವೆಂಬುದು ತಿಳಿದರೆ, ಆಗ ಆ

ಜಲಗಾರನಿಗೆ ಹತ್ತು ರೂಪಾಯಿಯವರೆಗೂ ಜುಲ್ಮಾನೆ ವಿಧಿಸಬಹುದು ಮತ್ತು ಅದೇ ತಪ್ಪನ್ನು ಎರಡು ಅಥವಾ ಮೂರು ಸಾರಿ ಅದೇ ಮನೆಯ ವಿಚಾರದಲ್ಲಿ ಅವನು ಮಾಡಿದರೆ, ಅವನು ಆ ಮನೆಯ ಭಂಗಿ ಕೆಲಸದ ಹಕ್ಕನ್ನು ಕಳೆದುಕೊಳ್ಳುತ್ತಾನೆ."

೧೯೧೧ರ ಪಂಜಾಬ್ ಪ್ರಾಂತ್ಯದ ಪೌರಸಭೆಯ ಅಧಿನಿಯಮದ ಪ್ರಕರಣ ೧೬೫ರಲ್ಲಿ ಇಂತಹದೇ ನಿಯಮವು ಸೇರಿದೆ. ಸಂಯುಕ್ತ ಪ್ರಾಂತ್ಯದ ಅಧಿನಿಯಮಕ್ಕಿಂತ ಪಂಜಾಬ್ ಪ್ರಾಂತ್ಯದ ಅಧಿನಿಯಮ ಸ್ವಲ್ಪ ಮುಂದುವರಿದಂತಿದ್ದು ಸಂಪ್ರದಾಯದ ಜಲಗಾರನಿಗೆ ಬದಲು ಗುತ್ತಿಗೆ ಜಲಗಾರನಿಗೆ ಶಿಕ್ಷೆ ವಿಧಿಸಲು ಅವಕಾಶ ಮಾಡಿಕೊಡುತ್ತದೆ. ಪಂಜಾಬ್ ಪ್ರಾಂತ್ಯದ ಅಧಿನಿಯಮ ಈ ರೀತಿ ಇದೆ:

೩) "ಒಬ್ಬ ಜಲಗಾರನು (ಸಾಂಪ್ರದಾಯಿಕ ಜಲಗಾರನ ಹೊರತು) ಒಂದು ಮನೆಯಲ್ಲಿ ಭಂಗಿ ಕೆಲಸ ಮಾಡಲು ಗುತ್ತಿಗೆ ಪಡೆದ ಮೇಲೆ ಸೂಕ್ತ ಕಾರಣವಿಲ್ಲದೆ ಅಥವಾ ಹದಿನಾಲ್ಕು ದಿನಗಳ ನೋಟೀಸು ಕೊಡದೆ ತನ್ನ ಕೆಲಸವನ್ನು ನಿಲ್ಲಿಸಿದರೆ ಅವನಿಗೆ ಹತ್ತು ರೂಪಾಯಿಗಳಿಗಿಂತಲೂ ಹೆಚ್ಚು ದಂಡ ವಿಧಿಸಬಹುದು."

"೨೨೭, ಪ್ರಕರಣ ೧೬೫ರ ವ್ಯಾಪ್ತಿಯಲ್ಲಿ ವಿಧಿಸಲಾದ ತೀರ್ಪಿನಂತೆ ಜುಲ್ಮಾನಿತರು ಅದಕ್ಕಿಂತ ಉನ್ನತ ನ್ಯಾಯಾಲಯಕ್ಕೆ ಅಪೀಲು ಮಾಡಬಹುದೇ ಹೊರತು ಅನ್ಯಥಾ ಯಾರಿಗೂ ದೂರು ಕೊಡುವಂತಿಲ್ಲ."

ಈ ರೀತಿ ಜೀತಪದ್ಧತಿಯನ್ನು ಕಡ್ಡಾಯಗೊಳಿಸಲು ಕಾನೂನಿನಲ್ಲಿ ಅವಕಾಶವಿದೆ ಎಂಬುದನ್ನು ನೋಡಿ ಯಾರಿಗಾದರೂ ಗಾಬರಿಯಾಗಬಹುದು. ಇದು ನಿಜವಾಗಿಯೂ ಗುಲಾಮಗಿರಿ. ಗುಲಾಮನಿಗೂ ಸ್ವತಂತ್ರ ಕೂಲಿಗಾರನಿಗೂ ಇರುವ ವ್ಯತ್ಯಾಸ ಇದು. ಗುಲಾಮಗಿರಿಯಲ್ಲಿ ಸೇವೆಯ ಒಪ್ಪಂದವನ್ನು ಉಲ್ಲಂಘಿಸಿದರೆ ಅದು ಅಪರಾಧವೆನಿಸಿ ಅದಕ್ಕೆ ಜುಲ್ಮಾನೆ ಅಥವಾ ಸೆರೆಮನೆಯ ವಾಸವನ್ನು ವಿಧಿಸಬಹುದು. ಸ್ವತಂತ್ರ ಕೂಲಿಯ ವಿಚಾರದಲ್ಲಿ ಒಪ್ಪಂದದ ಉಲ್ಲಂಘನೆಯಾದರೆ ಅದು ನಾಗರಿಕ ತಪ್ಪು ಎಂದೆನಿಸಿ ಅದರಿಂದ ಆದ ನಷ್ಟವನ್ನು ಕೂಲಿಗಾರನು ಕಟ್ಟಿಕೊಡಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ಪರೀಕ್ಷಿಸಿ ನೋಡಿದರೆ ಭಂಗಿಯ ಕೆಲಸವೆಂಬುದು ಕಾನೂನಿನ ಪ್ರಕಾರ ಅಸ್ಪೃಶ್ಯರ ಮೇಲೆ ವಿಧಿಸಿದ ವೃತ್ತಿ ಎಂದೆನಿಸಿ ಅದರಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ ಎಂದಂತಾಯಿತು.

ಈ ಎಲ್ಲ ಪರಿಸ್ಥಿತಿಯನ್ನು ಅರಿತ ಮೇಲೆ ಅಸ್ಪೃಶ್ಯರು ಇಂತಹ ಅಸಹ್ಯದ ಕೆಲಸಗಳನ್ನು ಸ್ವ ಇಚ್ಛೆಯಿಂದಲೆ ಮಾಡುತ್ತಿದ್ದಾರೆ ಎಂದು ಅವರನ್ನು ದೂರುವುದಾದರೂ ಹೇಗೆ?

ಅಸ್ಪೃಶ್ಯರು ಹಿಂದೂಗಳ ಅಸಹ್ಯಕರವಾದ ಸೇವಾ ಕೆಲಸಗಳನ್ನು ಮಾಡಿ ಅಸ್ಪೃಶ್ಯತೆಯಂತಹ ಶಾಪಕ್ಕೆ ಗುರಿಯಾಗಿದ್ದಾರೆ ಎಂದು ಅವರನ್ನು ನಿಂದಿಸುವ ಮಾತು ಹಾಗಿರಲಿ ಮಹಡ್ ನಗರದಲ್ಲಿ ಸೇರಿದ ಅಸ್ಪೃಶ್ಯರ ಸಮ್ಮೇಳನವು ಯಾವ ಅಸ್ಪೃಶ್ಯನೂ ಇನ್ನು ಮೇಲೆ ಹಿಂದೂಗಳ ಮನೆಯ ಸತ್ತ ಪ್ರಾಣಿಗಳನ್ನು ಹೊತ್ತು ಅವುಗಳ ಚರ್ಮವನ್ನು ಸುಲಿದು ಕೊಳೆತ ಮಾಂಸವನ್ನು ತಿನ್ನಬಾರದು ಎಂದು ನಿರ್ಣಯಿಸಿದ್ದು ಮುಖ್ಯವಾಗಿ ಗಮನಿಸಬೇಕಾದ ವಿಚಾರ. ಈ ನಿರ್ಣಯಗಳ ಉದ್ದೇಶ ಎರಡು ರೀತಿಯದ್ದು. ಅಸ್ಪೃಶ್ಯರಲ್ಲಿ ಆತ್ಮಗೌರವ ಮತ್ತು ಆತ್ಮವಿಶ್ವಾಸವನ್ನು ಮೂಡಿಸುವುದು ಮೊದಲನೆಯ ಉದ್ದೇಶ. ಇದು ಅಲ್ಪ ಪ್ರಮಾಣದ್ದು. ಇದಕ್ಕಿಂತಲೂ ಮಹತ್ವದ್ದೆಂದರೆ ಹಿಂದೂಗಳ ಸಾಮಾಜಿಕ ವ್ಯವಸ್ಥೆಯ ಮೇಲೆ ಬಲವಾದ ಗದಾಪ್ರಹಾರ ಮಾಡುವುದು. ಹಿಂದೂ ಸಾಮಾಜಿಕ ವ್ಯವಸ್ಥೆಗೆ ಆಧಾರವಾದ ವೃತ್ತಿ ವಿಭಜನೆಯ ಹೆಸರಿನಲ್ಲಿ ಸವರ್ಣ ಹಿಂದೂಗಳಿಗೆ ಶುಚಿಕರವಾದ ಮತ್ತು ಗೌರವಯುತವಾದ ವೃತ್ತಿಗಳನ್ನು ಮೀಸಲಿಟ್ಟು ತಮ್ಮ ಘನತೆ ಗೌರವಗಳನ್ನು ಕಾಪಾಡಿಕೊಂಡು ತುಚ್ಛವಾದ ಕೀಳು ದರ್ಜೆಯ ವೃತ್ತಿಗಳನ್ನು ಅಸ್ಪೃಶ್ಯರಿಗೆ ಕೊಟ್ಟು ಅಸ್ಪೃಶ್ಯರ ಮೇಲೆ ಸಲ್ಲದ

ಕಳಂಕವನ್ನು ಇವರು ಹೊರಿಸಿದ್ದಾರೆ. ಸಮ್ಮೇಳನದಲ್ಲಿ ಮಾಡಿದ ನಿರ್ಣಯ ಹಿಂದೂಗಳ ಇಂತಹ ಸಾಮಾಜಿಕ ವ್ಯವಸ್ಥೆಯ ವಿರುದ್ಧ ಎದ್ದ ಬಂಡಾಯ ಎಂದೆನಿಸಿತು. ಹಿಂದೂಗಳು ತಮಗೆ ಅಸಹ್ಯವೆನಿಸುವ ಕೆಲಸಗಳನ್ನು ತಾವೇ ಮಾಡಲು ಕಲಿಯಬೇಕೆಂಬುದು ಇದರ ನಿಜವಾದ ಉದ್ದೇಶ.

ಇವು ಹಿಂದೂಗಳ ವ್ಯವಸ್ಥಿತ ಸಾಮಾಜಿಕ ಜೀವನದ ಮೇಲೆ ಅಸ್ಪೃಶ್ಯರು ಎಸಗಿದ ಐತಿಹಾಸಿಕ ಕ್ರಾಂತಿಯ ಒಂದು ಸ್ಥೂಲ ಸ್ವರೂಪ. ಅದು ಬೊಂಬಾಯಿಯಲ್ಲಿ ಆರಂಭವಾಯಿತು. ನಂತರ ಭಾರತದ ಎಲ್ಲ ಭಾಗಕ್ಕೂ ವ್ಯಾಪಿಸಿತು.

* * * *

## ಅಧ್ಯಾಯ ೨೨

# ಇಕ್ಕಟ್ಟಿನಲ್ಲಿ ಸಿಕ್ಕಿದ್ದು

೧) ಅಸ್ಪೃಶ್ಯರ ಬಂಡಾಯಕ್ಕೆ ಹಿಂದೂಗಳ ಪ್ರತಿಕ್ರಿಯೆ
೨) ದಯೆ ಇಲ್ಲದ ದಮನಕ್ಕೆ ಅನ್ಯಾಯದ ಮಾರ್ಗ
೩) ಅಸ್ಪೃಶ್ಯರು, ಒಂದು ದುರ್ಬಲ ಶಕ್ತಿ
೪) ನಾಚಿಕೆ ಇಲ್ಲದ ಅಧಿಕಾರಿಗಳ ಸಹಕಾರ
೫) ಮೊಂಡಾದ ಆಯುಧ

## I

ಅಸ್ಪೃಶ್ಯರ ಬಂಡಾಯದ ಇತಿಹಾಸವು ಹಳೆಯ ವಿಧಾನದ ನಿರ್ಗಮನ ಮತ್ತು ಹೊಸ ವಿಧಾನದ ಆಗಮನದ ಸೂಚಕವಾಗಿದೆ. ಈ ಬಂಡಾಯಕ್ಕೆ ಹಿಂದೂಗಳ ಪ್ರತಿಕ್ರಿಯೆ ಏನು? ಇದರ ವಿಚಾರವನ್ನು ಸ್ವಲ್ಪಮಟ್ಟಿಗೆ ತಿಳಿದವರು ಈ ಪ್ರಶ್ನೆಗೆ ಉತ್ತರ ಹೇಳಲು ಹಿಂಜರಿಯುವುದಿಲ್ಲ. ಅವರ ಪ್ರತಿಕ್ರಿಯೆ ಬಹುಮಟ್ಟಿಗೆ ಇದಕ್ಕೆ ವಿರುದ್ಧವಾದದ್ದು ಎಂಬುದು ಸ್ಪಷ್ಟವಿದೆ. ಹಿಂದೂಗಳು ಇದನ್ನು ವಿರೋಧಿಸುವುದು ಏಕೆ ಎಂಬುದನ್ನು ಅರ್ಥಮಾಡಿಕೊಳ್ಳುವುದು ಕಷ್ಟದ ವಿಚಾರ. ಅವರ ವಿರೋಧವಂತೂ ಇದೆ ಎಂಬುದರಲ್ಲಿ ಯಾವ ಸಂಶಯವೂ ಇಲ್ಲ.

ಸವರ್ಣ ಹಿಂದೂಗಳು ಮತ್ತು ಅಸ್ಪೃಶ್ಯರ ನಡುವೆ ಇರುವ ಕೆಲವು ಪ್ರಮುಖ ರೀತಿಯ ಸಂಬಂಧಗಳನ್ನು ಅರ್ಥಮಾಡಿಕೊಂಡರೆ ಆಗ ಅಸ್ಪೃಶ್ಯರ ಸ್ವಾತಂತ್ರ್ಯದ ಹೋರಾಟವನ್ನು ಹಿಂದೂಗಳು ಏಕೆ ವಿರೋಧಿಸುತ್ತಾರೆ ಎಂಬುದು ಸುಲಭವಾಗಿ ಅರ್ಥವಾಗುತ್ತದೆ.

ಅಸ್ಪೃಶ್ಯರು ಮತ್ತು ಸ್ಪೃಶ್ಯರ ನಡುವಿನ ತೀವ್ರವಾದ ಭಿನ್ನತೆಯನ್ನು ನಾವು ಎಂದೂ ಮರೆಯಬಾರದು. ಏಕೆಂದರೆ ಇದು ಬಹು ಮುಖ್ಯವಾದ ವಿಚಾರ. ಪ್ರತಿಯೊಂದು ಹಳ್ಳಿಯಲ್ಲಿಯೂ ಸ್ಪೃಶ್ಯರ ಕೇರಿ ಮತ್ತು ಅಸ್ಪೃಶ್ಯರ ಕೇರಿ ಎಂದು ಎರಡು ಭಾಗಗಳಿವೆ. ಭೌಗೋಳಿಕವಾಗಿ ಅವೆರಡು ಪೂರ್ಣ ಭಿನ್ನವಿದ್ದು, ಅವೆರಡರ ನಡುವೆ ಗಣನೀಯವಾದ ದೂರವಿರುತ್ತದೆ. ಯಾವ ಕಾರಣದಿಂದಲೂ ಆ ಎರಡರ ನಡುವೆ ಸಾಮೀಪ್ಯ ಅಥವಾ ಅವಿಚ್ಛಿನ್ನತೆ ಇರುವುದಿಲ್ಲ. ಅಸ್ಪೃಶ್ಯರ ಕೇರಿಗಳಿಗೆ ತಮ್ಮದೇ ಆದ ಮಹರ್‌ವಾಡ, ಮಂಗವಾಡ, ಚಾಮ್‌ರೊಟ್ಟಿ, ಖಾಯಕಾನ ಮುಂತಾದ ಹೆಸರುಗಳಿರುತ್ತವೆ. ಕಂದಾಯದ ಆಡಳಿತ ನಿರ್ವಹಣೆ ಮತ್ತು ಅಂಚೆಯ ವಹಿವಾಟಿಗಾಗಿ ಅಸ್ಪೃಶ್ಯರ ಕೇರಿಯನ್ನು ಗ್ರಾಮದೊಂದಿಗೆ ಸ್ಥೂಲವಾಗಿ ಸೇರಿಸಿರುತ್ತಾರೆ. ಆದರೆ ವಸ್ತುತಃ ಅದು ಹಳ್ಳಿಯಿಂದ ಬೇರ್ಪಟ್ಟಂತಿರುತ್ತದೆ. ಒಂದು ಹಳ್ಳಿಯ ಹಿಂದೂವು ಹಳ್ಳಿಯ ವಿಚಾರವನ್ನು ಹೇಳುವಾಗ ಅವನು ಸವರ್ಣ ಹಿಂದೂಗಳ ವಾಸಮಾಡುವ ಕೇರಿಯನ್ನು ಕುರಿತಂತೆ ಮಾತ್ರ ಮಾತನಾಡುತ್ತಾನೆ. ಅದೇ ರೀತಿ ಅಸ್ಪೃಶ್ಯರು ಹಳ್ಳಿಯನ್ನು ಕುರಿತು ಹೇಳುವಾಗ ತಮ್ಮ ಕೇರಿಯನ್ನು ಹಳ್ಳಿಯಿಂದ ಬೇರ್ಪಡಿಸಿ ಮಾತನಾಡುತ್ತಾರೆ. ಹೀಗಾಗಿ ಪ್ರತಿಯೊಂದು ಹಳ್ಳಿಯಲ್ಲಿಯೂ ಸ್ಪೃಶ್ಯರು ಮತ್ತು ಅಸ್ಪೃಶ್ಯರು ಎಂಬ ಎರಡು

ಗುಂಪುಗಳಾಗಿರುತ್ತವೆ. ಅವರಿಬ್ಬರ ನಡುವೆ ಸಮಾನವಾದದ್ದೇನೂ ಇರುವುದಿಲ್ಲ. ಅವರು ಒಂದೇ ಜನಾಂಗವೆಂದೆನಿಸುವುದಿಲ್ಲ. ಇದನ್ನು ನಾವು ಮೊದಲು ಗಮನಿಸಬೇಕು.

ಈ ರೀತಿ ಹಳ್ಳಿಯ ಎರಡು ಗುಂಪುಗಳಾಗಿ ವಿಭಜನೆಗೊಂಡಿದ್ದು, ಅಲ್ಲಿರುವ ಪ್ರತಿಯೊಬ್ಬರೂ ಭಿನ್ನ ಪೌರಸಂಸ್ಥೆಗೆ ಸೇರಿದಂತಿರುತ್ತಾರೆಂಬುದು ಎರಡನೆಯ ಅಂಶ. ಅಮೆರಿಕ ದೇಶದ ಅಥವಾ ಯೂರೋಪ್ ದೇಶದ ಒಬ್ಬ ವ್ಯಕ್ತಿ ಬೇರೆ ಬೇರೆ ರೀತಿಯ ಸಮುದಾಯಗಳೊಂದಿಗೆ ಸೇರಿಕೊಂಡಿದ್ದರೂ, ಅವನು ಅವರೊಂದಿಗೆ ತಾನೆ ಬಯಸಿ ಒಂದಾಗಿರುತ್ತಾನೆ. ಅವನು ಒಂದು ಕುಟುಂಬದಲ್ಲಿ ಹುಟ್ಟಿದ್ದರೂ ಅವನು ತಾನು ಬಯಸದ ಹೊರತು ತನ್ನ ಜೀವಮಾನವೆಲ್ಲಾ ಅದಕ್ಕೆ ಅಂಟಿಕೊಂಡಂತಿರುವುದಿಲ್ಲ. ಅವನು ತನಗೆ ಬೇಕಾದ ವೃತ್ತಿಯನ್ನು ಆರಿಸಿಕೊಂಡು, ತಾನು ಬಯಸಿದ ಕಡೆ ವಾಸಮಾಡುತ್ತ ತನಗೆ ಸರಿಕಂಡ ಹೆಂಡತಿಯನ್ನು ಮತ್ತು ರಾಜಕೀಯ ಪಕ್ಷವನ್ನು ಆರಿಸಿಕೊಳ್ಳುತ್ತಾನೆ. ಸಾಮಾನ್ಯವಾಗಿ ಹೇಳುವುದಾದರೆ ಅವನು ತನಗೆ ಸರಿಕಂಡದ್ದನ್ನು ಮಾಡುತ್ತಾನೆಯೇ ಹೊರತು ಬೇರೆಯವರು ಮಾಡಿದ್ದನ್ನಲ್ಲ. ಅವನು ಪೂರ್ಣ ಅರ್ಥದಲ್ಲಿ ಒಬ್ಬ "ವ್ಯಕ್ತಿ". ಏಕೆಂದರೆ ಅವನ ಎಲ್ಲ ಸಂಬಂಧಗಳು ಅವನಿಂದಲೇ ಅವನಿಗಾಗಿ ನಿರ್ಣಯಗೊಳ್ಳುತ್ತವೆ. ಸ್ಪೃಶ್ಯರಾಗಲಿ ಅಸ್ಪೃಶ್ಯರಾಗಲಿ ಅವರಾರೂ ನಿಜವಾದ ಅರ್ಥದಲ್ಲಿ ವ್ಯಕ್ತಿಗಳಲ್ಲ. ಏಕೆಂದರೆ ಅವರೆಲ್ಲರ ಸಂಬಂಧಗಳು ಅವರು ಹುಟ್ಟಿದ ಸಮೂಹ ಮತ್ತು ಸಮುದಾಯದಿಂದಲೇ ನಿರ್ಣಯಗೊಳ್ಳುತ್ತವೆ. ಅಸ್ಪೃಶ್ಯರು ಮತ್ತು ಸ್ಪೃಶ್ಯರು ಭೇಟಿಯಾದಾಗ ಅವರು ವ್ಯಕ್ತಿ ವ್ಯಕ್ತಿಗಳಂತೆ ಸಂಧಿಸುವುದಿಲ್ಲ. ಅವರು ಬೇರೆ ಬೇರೆ ಜನಾಂಗಕ್ಕೆ ಸೇರಿದವರಂತೆ ಅಥವಾ ಬೇರೆ ರಾಷ್ಟ್ರದ ಪ್ರಜೆಗಳಂತೆ ಸಂಧಿಸುತ್ತಾರೆ.

ಈ ಅಂಶವು ಹಳ್ಳಿಯಲ್ಲಿ ವಾಸಿಸುವ ಸ್ಪೃಶ್ಯ ಮತ್ತು ಅಸ್ಪೃಶ್ಯರ ಪರಸ್ಪರ ಸಂಬಂಧದ ಮೇಲೆ ಮುಖ್ಯವಾದ ಪರಿಣಾಮವನ್ನು ಬೀರುತ್ತದೆ. ಆ ಸಂಬಂಧ ಪ್ರಾಚೀನ ಕಾಲದ ಸಮಾಜದ ವಿಭಿನ್ನ ವಂಶಗಳ ನಡುವಿನ ಸಂಬಂಧಕ್ಕೆ ಹೋಲುತ್ತದೆ. ಪ್ರಾಚೀನ ಕಾಲದ ಸಮಾಜದಲ್ಲಿ ಅಲ್ಲಿಯ ವಂಶಸ್ಥರಿಗೆ ಮಾತ್ರ ಕೆಲವು ಹಕ್ಕುಗಳಿರುತ್ತವೆ. ಆದರೆ ಪರಕೀಯರಿಗೆ ಯಾವ ಸ್ಥಾನವೂ ಇರುವುದಿಲ್ಲ. ಪರಕೀಯನನ್ನು ಅತಿಥಿಯಂತೆ ಆದರಿಸಬಹುದು. ಆದರೆ ಅವನಿಗೆ ನ್ಯಾಯದ ಹಕ್ಕು ದೊರೆಯುವುದಿಲ್ಲ. ಬೇರೆ ಬೇರೆ ವಂಶಸ್ಥರ ನಡುವೆ ಯುದ್ಧ ಅಥವಾ ಸಂಧಾನ ಸಾಧ್ಯವೇ ಹೊರತು ನ್ಯಾಯದ ಹಕ್ಕು ಸಾಧ್ಯವಿಲ್ಲ. ವಂಶಕ್ಕೆ ಹೊರತಾದವನು ಕಾನೂನಿಗೂ ಹೊರತಾಗುತ್ತಾನೆ. ಆದುದರಿಂದ ಪರಕೀಯರು ಕಾನೂನಿನಿಂದ ಬಹಿಷ್ಕೃತರಾಗುತ್ತಾರೆ. ಅಸ್ಪೃಶ್ಯನು ಸ್ಪೃಶ್ಯರ ಗುಂಪಿಗೆ ಸೇರಿದವನಲ್ಲವಾದ್ದರಿಂದ ಅವನು ಪರಕೀಯನಿದ್ದಂತೆ. ಅವನು ಒಂದು ವರ್ಗಕ್ಕೆ ಸೇರಿದವನಲ್ಲ. ಅವನು ಕಾನೂನಿನಿಂದ ಬಹಿಷ್ಕೃತನಾದವನು. ಅವನು ಸ್ಪೃಶ್ಯರಂತೆ ನ್ಯಾಯ ಮತ್ತು ಹಕ್ಕುಗಳನ್ನು ಕೇಳಲು ಅರ್ಹನಲ್ಲ.

ಇನ್ನು ನಾವು ಗಮನಿಸಬೇಕಾದ ಮೂರನೆಯ ಅಂಶವೆಂದರೆ ಸ್ಪೃಶ್ಯರು ಮತ್ತು ಅಸ್ಪೃಶ್ಯರ ನಡುವೆ ಸ್ಥಿರಗೊಂಡಿರುವ ಸಂಬಂಧ. ಅದು ಸ್ಥಾನದ ಪ್ರತೀಕವಾಗಿದ್ದು, ಅದರಿಂದಾಗಿ ಅಸ್ಪೃಶ್ಯನು ಕೀಳು ಸ್ಪೃಶ್ಯನು ಮೇಲು ಎಂಬ ಭಾವನೆ ದೃಢಗೊಂಡಿದೆ. ಅಸ್ಪೃಶ್ಯರು ಅನುಸರಿಸುವ ಸಾಮಾಜಿಕ ನಿಬಂಧನೆಗಳಲ್ಲಿ ತಾವು ಕೀಳೆಂಬ ಭಾವನೆ ಅಂತರ್ಗತವಾಗಿದೆ. ಆ ನಿಬಂಧನೆಗಳು ಎಂಥವು ಎಂಬುದನ್ನು ಈ ಮೊದಲೇ ಹೇಳಲಾಗಿದೆ. ಅಸ್ಪೃಶ್ಯನು ಆ ನಿಬಂಧನೆಗಳನ್ನು ಪಾಲಿಸಲು ಸಿದ್ಧನಿಲ್ಲ. 'ಸೀಸರರ್' ಕೇಳಿದ್ದನ್ನು 'ಸೀಸರನಿಗೆ ಕೊಡಲು ಅಸ್ಪೃಶ್ಯನು ಸಿದ್ಧನಿಲ್ಲ. ಅಸ್ಪೃಶ್ಯನು ಸ್ಪೃಶ್ಯನೊಂದಿಗೆ ಕರಾರಿಗನುಗುಣವಾದ ಸಂಬಂಧವನ್ನು ಬೆಳೆಸಲು ಬಯಸುತ್ತಾನೆ. ಅಸ್ಪೃಶ್ಯರು ಸ್ಥಾನ ಗೌರವದ ನಿಯಮಗಳಿಗೆ ಅಧೀನವಾಗಿ ಬಾಳಬೇಕೆಂದು ಸ್ಪೃಶ್ಯರು ಬಯಸುತ್ತಾರೆ. ಹೀಗಾಗಿ ಹಳ್ಳಿಯ ಎರಡು ಹೋಳುಗಳಾದ ಅಸ್ಪೃಶ್ಯರು ಮತ್ತು ಸ್ಪೃಶ್ಯರ ನಡುವಿನ

ಸಂಬಂಧವು ಈ ಮೊದಲೆ ಅಂತಿಮವಾಗಿ ನಿರ್ಣಯವಾಗಿದೆ ಎಂದು ಸ್ಪೃಶ್ಯರು ಭಾವಿಸಿದ್ದರೆ, ಅದು ಈಗ ಹೊಸ ರೀತಿಯಲ್ಲಿ ನಿರ್ಣಯಗೊಳ್ಳಬೇಕು ಎಂದು ಅಸ್ಪೃಶ್ಯರು ಹೋರಾಡುತ್ತಿದ್ದಾರೆ. ಇವರ ನಡುವಿನ ಸಂಬಂಧವು ಕರಾರಿಗನುಗುಣವಾಗಿರಬೇಕೇ ಅಥವಾ ಸ್ಥಾನದ ಹಿರಿಮೆಯನ್ನು ಆಧರಿಸಿ ನಿಲ್ಲಬೇಕೆ ? ಎಂಬುದು ಇವರ ಹೋರಾಟದ ಕೇಂದ್ರ ಬಿಂದು.

ಹೀಗಾಗಿ ಈ ಪ್ರಶ್ನೆಯಿಂದ ಹಿಂದೂಗಳು ತುಂಬಾ ವ್ಯಗ್ರಗೊಂಡಿದ್ದಾರೆ. ಅಸ್ಪೃಶ್ಯರು ನಡೆಸಿದ ಹೋರಾಟವು ಅವರ ಆರ್ಥಿಕ ಮತ್ತು ಸಾಮಾಜಿಕ ಪ್ರಗತಿಗಾಗಿ ಮಾಡಿದ ಹೋರಾಟವೆಂದು ಹಿಂದೂಗಳು ಗುರುತಿಸುವುದಿಲ್ಲ. ತಮಗೆದುರಾಗಿ ನಡೆಯುವ ಇವರ ಹೋರಾಟ ತಮ್ಮೊಂದಿಗೆ ಸಮಾನತೆಗಾಗಿ ನಡೆಯುತ್ತಿದೆ ಎಂದು ಅವರು ತಿಳಿಯುತ್ತಾರೆ. ಅದಕ್ಕಾಗಿಯೆ ಹಿಂದೂಗಳ ವಿರೋಧ.

## II

ಹಿಂದೂಗಳ ವಿರೋಧ ಅಸ್ಪೃಶ್ಯರ ಹೋರಾಟವನ್ನು ಹೇಗಾದರೂ ಮಾಡಿ ತುಳಿದು ಹಾಕಬೇಕೆಂಬ ದೃಢಸಂಕಲ್ಪದಿಂದ ಮೂಡಿದ್ದಿತು. ಈ ಉದ್ದೇಶಕ್ಕಾಗಿ ಅವರು ಯಾವ ಮಾರ್ಗದಲ್ಲಿಯಾದರೂ ಎಷ್ಟು ದೂರ ಬೇಕಾದರೂ ಹೋಗಲು ಸಿದ್ಧರಿದ್ದರು. ಅಸ್ಪೃಶ್ಯರ ಬಂಡಾಯವನ್ನು ಅಷ್ಟೇ ನಿರ್ಧಾರದಿಂದ ಹಿಂದೂಗಳು ಎದುರಿಸಿದರು. ಅಸ್ಪೃಶ್ಯರ ಈ ಹೋರಾಟವನ್ನು ದಮನಮಾಡಲು ಹಿಂದೂಗಳು ಅದೆಷ್ಟು ಕ್ರೂರಿಗಳಾಗಬಲ್ಲರೆಂಬುದನ್ನು ಒಂದೆರಡು ನಿದರ್ಶನಗಳಲ್ಲಿ ನಾವು ಕಾಣಬಹುದು.

ಅಸ್ಪೃಶ್ಯರು ಸಾರ್ವಜನಿಕ ಸ್ಥಳಗಳಿಂದ ನೀರನ್ನು ಬಳಸುವ ತಮ್ಮ ಹಕ್ಕನ್ನು ಚಲಾಯಿಸಲು ಮಹಡ್ ನಗರದ ಚಾದರ್ ಕೆರೆ ಪ್ರವೇಶಿಸಿದಾಗ ಆ ಸಮ್ಮೇಳನದಲ್ಲಿ ನಡೆದ ಅಸ್ಪೃಶ್ಯರ ಮೇಲಿನ ಆಕ್ರಮಣವನ್ನು ಬಾಂಬೆ ಕ್ರಾನಿಕಲ್ ಈ ಕೆಳಗಿನ ರೀತಿಯಲ್ಲಿ ವಿವರಿಸಿದೆ :

"ಅವರ ಮೆರವಣಿಗೆ ತುಂಬ ಶಾಂತ ರೀತಿಯಿಂದ ನಡೆದು ಎಲ್ಲವೂ ಸುಗಮವಾಗಿ ಸಾಗಿದ್ದಿತು. ಸುಮಾರು ಎರಡು ಗಂಟೆಗಳ ನಂತರ ಕೆಲವು ದುರುದ್ದೇಶಪೂರಿತ ನಾಯಕರು, ಅಸ್ಪೃಶ್ಯರು ವಿಶ್ವೇಶ್ವರ ದೇವಸ್ಥಾನವನ್ನು ಪ್ರವೇಶಿಸಲು ಸಿದ್ಧಗೊಳ್ಳುತ್ತಿದ್ದಾರೆ, ಎಂಬ ಸುಳ್ಳು ಸುದ್ದಿಯನ್ನು ಹಬ್ಬಿಸಿದರು. ಅದರಿಂದಾಗಿ ಅನೇಕ ಪೋಕರಿ ಜನ ಆಯುಧಗಳೊಂದಿಗೆ ದೊಣ್ಣೆ ಸಮೇತ ಅಲ್ಲಿ ನೆರೆದರು. ಜನಸಮೂಹವು ಬಹು ಬೇಗ ಆಕ್ರಮಣಕಾರಿ ಮನೋಭಾವವನ್ನು ತಳೆದು, ಒಂದೇ ಕ್ಷಣದಲ್ಲಿ, ನಗರವೆಲ್ಲ ಅಸ್ಪೃಶ್ಯರ ರಕ್ತವನ್ನು ಹೀರಬಯಸುವ ಪುಂಡರಿಂದ ತುಂಬಿ ಹೋಯಿತು.

ಅಸ್ಪೃಶ್ಯರು ತಮ್ಮ ಹಳ್ಳಿಗಳಿಗೆ ಹಿಂದಿರುಗುವ ಮುನ್ನ ಊಟದ ಸಿದ್ಧತೆಯಲ್ಲಿದ್ದರು. ಅವರಲ್ಲಿ ಅನೇಕರು ನಗರವನ್ನು ಬಿಟ್ಟಮೇಲೆ, ಅವರು ಊಟ ಮಾಡುತ್ತಿದ್ದ ಅಡಿಗೆ ಶಾಲೆಯ ಕಡೆ ಈ ಪುಂಡರು ನುಗ್ಗಿದರು. ಅಸ್ಪೃಶ್ಯರ ನಾಯಕರು ಅವರ ಜನರನ್ನು ಶಾಂತಗೊಳಿಸದೆ ಹೋಗಿದ್ದರೆ, ಈ ಎರಡು ಗುಂಪಿನ ನಡುವೆ ಒಂದು ದೊಡ್ಡ ಯುದ್ಧವೇ ನಡೆಯುತ್ತಿದ್ದಿತು. ಹೀಗಾಗಿ ಒಂದು ದೊಡ್ಡ ಕದನ ನಡೆಯುವುದು ತಪ್ಪಿತು. ಆ ಪುಂಡರಿಗೆ ತಮ್ಮ ಕಲಹಕ್ಕೆ ಯಾವ ಪ್ರಚೋದನೆಯೂ ದೊರೆಯದಿದ್ದುದರಿಂದ, ಸಣ್ಣ ಗುಂಪುಗಳಲ್ಲಿ ಹಳ್ಳಿಗೆ ಹಿಂದಿರುಗುತ್ತಿದ್ದ ಅಸ್ಪೃಶ್ಯರ ಮೇಲೆ ದೊಂಬಿ ನಡೆಸಿದರು. ಮತ್ತು ಅಸ್ಪೃಶ್ಯರ ಮನೆಗೆ ನುಗ್ಗಿ ಅತ್ಯಾಚಾರವೆಸಗಿದರು. ಇವರ ದೊಂಬಿಯಿಂದ ಗಾಯಗೊಂಡ ದಲಿತವರ್ಗದವರ ಸಂಖ್ಯೆ ೨೦ರಷ್ಟು. ಈ ಸನ್ನಿವೇಶದಲ್ಲಿ ಉತ್ತಮ ವರ್ಗದವರು ಎಷ್ಟು ಕೀಳಾಗಿ ನಡೆದುಕೊಂಡರೋ ದಲಿತರು ಅಷ್ಟೇ ಮೇಲಾಗಿ ನಡೆದುಕೊಂಡರು. ಅಲ್ಲಿ ನೆರೆದ ದಲಿತರ ಸಂಖ್ಯೆ ಉನ್ನತ ವರ್ಗದವರ ಸಂಖ್ಯೆಗಿಂತ ಬಹು ದೊಡ್ಡದಾಗಿದ್ದಿತು.

ಆದರೆ ಅವರ ನಾಯಕರ ಉದ್ದೇಶ ಎಲ್ಲವನ್ನೂ ಶಾಂತ ರೀತಿಯಿಂದ ನಡೆಸಬೇಕು ಎಂಬುದಾದ್ದರಿಂದ, ದಲಿತವರ್ಗದ ಜನ ತಮಗಾದ ಹಿಂಸೆಯನ್ನು ಸಹಿಸಿದರು. ದಲಿತ ವರ್ಗದ ಜನಕ್ಕೆ ನಾನಾ ರೀತಿಯ ಪ್ರಚೋದನೆ ಬಂದರೂ ಸಹ, ಅವರು ಹಿಂಸೆಗೆ ಇಳಿಯದೆ ಸಂಯಮದಿಂದಿದ್ದುದು ಅವರ ಸುಗುಣವೆನಿಸಿತು. ಉತ್ತಮ ಕುಲದ ಜನ ದಲಿತವರ್ಗದ ಜನರಿಗೆ ಸಾರ್ವಜನಿಕ ಸ್ಥಳದಿಂದ ನೀರು ತೆಗೆದು ಕೊಳ್ಳುವಂತಹ ಸಾಧಾರಣ ನಾಗರಿಕ ಹಕ್ಕುಗಳನ್ನು ಕೊಡಲು ಸಿದ್ಧರಿಲ್ಲ, ಎಂಬುದನ್ನು ಮಹಾಡ್ ಸಮ್ಮೇಳನ ತೋರಿಸಿಕೊಟ್ಟಿತು.

ಮಹಾಡ್ ಮತ್ತು ಕೊಲಾಬಾ ಜಿಲ್ಲೆಯ ಉತ್ತಮ ವರ್ಗದ ಹಿಂದೂಗಳು, ಕೂಡಲೇ ತಮ್ಮ ಸುತ್ತಮುತ್ತಣ ಹಳ್ಳಿಗಳ ಉತ್ತಮ ವರ್ಗದವರಿಗೆ ಸಂದೇಶ ಕಳುಹಿಸಿ, ದಲಿತ ಸಮ್ಮೇಳನದ ಪ್ರತಿನಿಧಿಗಳು ಊರಿಗೆ ಹಿಂದಿರುಗಿದ ಮೇಲೆ ಅವರನ್ನು ಶಿಕ್ಷಿಸುವಂತೆ ಮಾಡಿದುದು, ಅವರ ದಮನಕಾರಿ ಪ್ರವೃತ್ತಿಯನ್ನು ತೋರಿಸುತ್ತದೆ. ಈ ಆಜ್ಞೆಯ ಫಲವಾಗಿ ಹಳ್ಳಿಗಳಲ್ಲಿ ಬಹುಸಂಖ್ಯಾತರಾದ ಉನ್ನತ ವರ್ಗದ ಜನ ಮಹಾಡ್ ಸಮ್ಮೇಳನದಲ್ಲಿ ಭಾಗಿಗಳಾದ ಮಹರ್ ಜನರನ್ನು ನಾನಾ ರೀತಿಯಲ್ಲಿ ದಂಡಿಸಿದರು. ದಲಿತ ವರ್ಗದ ಜನನಾಯಕರು ರಕ್ಷಣೆಗಾಗಿ ಪ್ರಾರ್ಥಿಸಿದ್ದರಿಂದ, ಜಿಲ್ಲಾ ಪೊಲೀಸು ಅಧಿಕಾರಿ ಮತ್ತು ಇತರ ಜಿಲ್ಲಾ ಅಧಿಕಾರಿಗಳು ಸ್ಥಳದಲ್ಲಿಯೆ ಇದ್ದು ಸೂಕ್ತವಾದ ವಿಚಾರಣೆ ನಡೆಸುತ್ತಿದ್ದಾರೆ. ಆದರೆ ಅಂದು ಅಲ್ಲಿದ್ದ ಸ್ಥಳೀಯ ನ್ಯಾಯಾಧಿಕಾರಿಯು, ಅಮೂಲ್ಯವಾದ ಆ ಎರಡು ಗಂಟೆ, ನಿಷ್ಕ್ರಿಯನಾಗದಿದ್ದರೆ ಈ ದೊಂಬಿಯೇ ನಡೆಯುತ್ತಿರಲಿಲ್ಲ."

ಕಾಲರಾಮ್ ದೇವಾಲಯ ಸತ್ಯಾಗ್ರಹದಲ್ಲಿ ನಡೆದ ಆಕ್ರಮಣವು ಇದಕ್ಕಿಂತಲೂ ಕಡಿಮೆಯದೇನಲ್ಲ.

೧೯೩೫ರಲ್ಲಿ ಅಹಮದಾಬಾದ್ ಜಿಲ್ಲೆಯ ಡೋಲಕ್ ತಾಲ್ಲೂಕಿನ ಕವಿತ ಎಂಬ ಗ್ರಾಮದಲ್ಲಿ ನಡೆದ ಘಟನೆ ಇತ್ತೀಚಿನದು.

ಬಾಂಬೆ ಸರ್ಕಾರವು ಅಸ್ಪೃಶ್ಯರ ಮಕ್ಕಳನ್ನು ಸಾರ್ವಜನಿಕ ಶಾಲೆಗಳಿಗೆ ಸೇರಿಸಬಯಸಿ ಹೊರಡಿಸಿದ ಆಜ್ಞೆಯನ್ನು ಕುರಿತ ವರದಿ ಹೀಗಿದೆ.[೧]

"೧೯೩೫ರ ಆಗಸ್ಟ್ ೮ನೆಯ ತಾರೀಖು ಕವಿತ ಗ್ರಾಮದ ಅಸ್ಪೃಶ್ಯರು ತಮ್ಮ ನಾಲ್ಕು ಮಕ್ಕಳನ್ನು ಗ್ರಾಮದ ಶಾಲೆಗೆ ಸೇರಿಸಲು ಕರೆದುಕೊಂಡು ಹೋದರು. ಇದನ್ನು ನೋಡಲು ಗ್ರಾಮದ ಉತ್ತಮ ಜಾತಿಯ ಹಲವು ಜನ ಶಾಲೆಯ ಬಳಿ ಸೇರಿದ್ದರು. ಮಕ್ಕಳನ್ನು ಸೇರಿಸುವ ಈ ಕೆಲಸ ಯಾವ ದುರ್ಘಟನೆಯೂ ಇಲ್ಲದೆ ಸುಸೂತ್ರವಾಗಿ ನಡೆಯಿತು."

ಮರುದಿನ, ಹರಿಜನರೊಂದಿಗೆ ತಮ್ಮ ಮಕ್ಕಳು ಸೇರಿ ಅಪವಿತ್ರವಾಗುವುದನ್ನು ಬಯಸದ ಸವರ್ಣ ಹಿಂದೂಗಳು, ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸಲಿಲ್ಲ.

ಅದಾದ ಕೆಲವು ದಿನಗಳ ನಂತರ, ಬ್ರಾಹ್ಮಣರು ಆ ಹಳ್ಳಿಯ ಅಸ್ಪೃಶ್ಯನೊಬ್ಬನನ್ನು ದಂಡಿಸಿದರು. ಆಗಸ್ಟ್ ೧೨ರಂದು ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ಬ್ರಾಹ್ಮಣರ ಮೇಲೆ ಅಪರಾಧವನ್ನು ದಾಖಲು ಮಾಡಲು ಅಸ್ಪೃಶ್ಯರ ಗಂಡಸರು ಡೋಲಕ್ ನಗರಕ್ಕೆ ಬಂದಿದ್ದರು. ಅಸ್ಪೃಶ್ಯರ ವಯಸ್ಕರಾರೂ ಊರಿನಲ್ಲಿಲ್ಲದಿದ್ದುದನ್ನು ತಿಳಿದ ಹಳ್ಳಿಯ ಹಿಂದೂಗಳು ಅಸ್ಪೃಶ್ಯರ ಮನೆಯ ಮೇಲೆ ದಾಳಿ ಮಾಡಿದರು. ಅವರು ಕತ್ತಿ, ದೊಣ್ಣೆ ಭರ್ಜಿಗಳೊಂದಿಗೆ ಸನ್ನದ್ಧರಾಗಿದ್ದರು. ಆ ರೀತಿ ದಾಳಿ ಮಾಡಿದವರಲ್ಲಿ ಹಿಂದೂ ಹೆಂಗಸರೂ ಇದ್ದರು.

೧. ಡೋಲಕ್‌ನ ನವಯುವ ಮಂಡಲಿಯವರು ಆ ಘಟನೆಯನ್ನು ಕುರಿತು ನನಗೆ ಕಳುಹಿಸಿದ ಹೇಳಿಕೆಯ ಭಾಷಾಂತರ ಇದು.

ಅವರು ಅಸ್ಪೃಶ್ಯರ ಹೆಂಗಸರು ಮತ್ತು ಮುದುಕರ ಮೇಲೆ ದಾಳಿಮಾಡಲು ಆರಂಭಿಸಿದರು. ದಾಳಿಗೊಳಗಾದ ಕೆಲವರು ಬಾಗಿಲು ಮುಚ್ಚಿಕೊಂಡರು. ಮತ್ತೇ ಕೆಲವರು ಕಾಡಿಗೆ ಓಡಿದರು. ಹಳ್ಳಿಯ ಶಾಲೆಗೆ ತಮ್ಮ ಮಕ್ಕಳನ್ನು ಸೇರಿಸಲು ಮುಂದಾಳುತನವನ್ನು ವಹಿಸಿದ ಅಸ್ಪೃಶ್ಯರ ಮೇಲೆ ಈ ಆಕ್ರಮಣಕಾರರು ಸೇಡು ತೀರಿಸಲು ಈ ರೀತಿ ಯತ್ನಿಸಿದರು. ಅವರ ಮನೆಗಳ ಬಾಗಿಲುಗಳನ್ನು ಒಡೆದರು ಮತ್ತು ಅವರು ಇಲ್ಲದಿದ್ದುದನ್ನು ಕಂಡು ಅವರ ಮನೆಯ ಹೆಂಚು ಮತ್ತು ಚಾವಣಿಯನ್ನು ಹಾಳುಮಾಡಿದರು.

ಈ ರೀತಿ ದಾಳಿಗೊಳಗಾಗಿ ಏಟು ತಿಂದು ಭಯಭೀತರಾದ ಅಸ್ಪೃಶ್ಯ ಹೆಂಗಸರು ಮತ್ತು ಗಂಡಸರು, ಡೋಲಕ್ ನಗರಕ್ಕೆ ಹೋಗಿದ್ದು ರಾತ್ರಿ ಹಳ್ಳಿಗೆ ಹಿಂದಿರುಗಬೇಕಾದ ತಮ್ಮ ಹಿರಿಯರ ಕ್ಷೇಮದ ವಿಚಾರದಲ್ಲಿ ಆತಂಕಗೊಂಡರು. ಡೋಲಕ್‌ಗೆ ಹೋಗಿರುವ ಅಸ್ಪೃಶ್ಯರ ನಾಯಕರು ರಾತ್ರಿ ಹಿಂದಿರುಗುತ್ತಾರೆ ಎಂಬುದನ್ನು ತಿಳಿದ ಸವರ್ಣ ಹಿಂದೂಗಳು ಅವರ ಮೇಲೆ ಆಕ್ರಮಣ ನಡೆಸಲು ಆಯುಧಗಳೊಂದಿಗೆ ಸನ್ನದ್ಧರಾಗಿ ಹಳ್ಳಿಯಿಂದ ಹೊರಗಡೆ ಗಿಡಮರಗಳ ಪೊದೆಯಲ್ಲಿ ಅವಿತುಕೊಂಡರು. ಇದನ್ನು ಅರಿತ ಅಸ್ಪೃಶ್ಯರ ಹೆಂಗಸರು ಕತ್ತಲಿನಲ್ಲಿ ಹಳ್ಳಿಯಿಂದ ನುಸುಳಿಹೋಗಿ, ಹಿಂತಿರುಗುತ್ತಿದ್ದ ತಮ್ಮ ನಾಯಕರನ್ನು ಸಂಧಿಸಿ, ಶಸ್ತ್ರಾಸ್ತ್ರಗಳೊಂದಿಗೆ ಸವರ್ಣ ಹಿಂದೂಗಳು ಅವರಿಗಾಗಿ ಹೊಂಚು ಹಾಕಿ ಕಾಯುತ್ತಿರುವುದರಿಂದ, ಅವರು ಹಳ್ಳಿಗೆ ಬರುವುದು ಬೇಡವೆಂದು ಹೇಳಿದರು. ತಾವಿಲ್ಲದಿದ್ದಾಗ ಸವರ್ಣ ಹಿಂದೂಗಳು ಮತ್ತೆಷ್ಟೊ ಅನರ್ಥ ಮಾಡಬಹುದೆಂದು ಹೆದರಿದ ಹಿರಿಯರು ಇವರ ಮಾತಿಗೆ ಕಿವಿಗೊಡಲಿಲ್ಲ. ತಾವು ಹಳ್ಳಿಯನ್ನು ಪ್ರವೇಶಿಸಿದರೆ ತಮ್ಮ ಮೇಲೆ ದಾಳಿಯಾಗುತ್ತದೆಂಬ ಭಯವೂ ಅವರಿಗಿದ್ದಿತು. ಆದ್ದರಿಂದ ಅವರು ಮಧ್ಯರಾತ್ರಿಯವರೆಗೂ ಹಳ್ಳಿಯಿಂದ ಹೊರಗೆ ಹೊಲದಲ್ಲಿ ಕಾಯುವುದು ಸೂಕ್ತವೆಂದು ನಿರ್ಧರಿಸಿದರು. ಈ ಮಧ್ಯೆ ಇವರಿಗಾಗಿ ಅವಿತು ಕಾಯುತ್ತಿದ್ದ ಸವರ್ಣ ಹಿಂದೂಗಳು ಕಾದು ಕಾದು ಸಾಕಾಗಿ, ಬೇಸತ್ತು ಮನೆಗೆ ಹಿಂದಿರುಗಿದರು. ರಾತ್ರಿ ಮೂರು ಗಂಟೆ ನಂತರ ಅಸ್ಪೃಶ್ಯರ ನಾಯಕರು ಹಳ್ಳಿಗೆ ಹಿಂತಿರುಗಿದರು. ಅವರೇನಾದರೂ ಮೊದಲೇ ಬಂದು ಕೊಲೆಗಡುಕರ ಗುಂಪನ್ನು ಎದುರಿಸಿದ್ದರೆ ಅವರೆಲ್ಲ ಸಾಯಬೇಕಾಗಿತ್ತು. ತಮ್ಮ ಜನಕ್ಕೆ ಮತ್ತು ಆಸ್ತಿಗೆ ಆಗಿದ್ದ ಹಾನಿಯನ್ನು ಕಂಡ ಈ ಜನ ಬೆಳಗಾಗುವುದರೊಳಗೆ ಅಹಮದಾಬಾದಿಗೆ ಹೋಗಿ ಅಸ್ಪೃಶ್ಯರ ಕ್ಷೇಮಕ್ಕಾಗಿ ಗಾಂಧಿ ಸ್ಥಾಪಿಸಿದ್ದ ಹರಿಜನ ಸೇವಾ ಸಂಘದ ಕಾರ್ಯದರ್ಶಿಯವರಿಗೆ ಈ ವಾರ್ತೆಯನ್ನು ಮುಟ್ಟಿಸಿದರು. ಆದರೆ ಆ ಕಾರ್ಯದರ್ಶಿ ಅಸಹಾಯಕರಾದರು. ವರ್ಣೀಯ ಹಿಂದೂಗಳು ಅಸ್ಪೃಶ್ಯರನ್ನು ಶಾರೀರಿಕವಾಗಿ ಹಿಂಸಿಸಿದರಲ್ಲದೆ ಅವರಿಗೆ ಬದುಕಲು ಸಾಧ್ಯವಾಗದಂತೆ ಪಿತೂರಿ ಮಾಡಿದರು. ಅವರನ್ನು ತಮ್ಮ ಕೂಲಿ ಕೆಲಸಗಳಿಗೆ ಸೇರಿಸಲಿಲ್ಲ ಮತ್ತು ಅವರಿಗೆ ದವಸ ಧಾನ್ಯಗಳನ್ನು ಮಾರಲು ನಿರಾಕರಿಸಿದರು. ಅಸ್ಪೃಶ್ಯರು ತಮ್ಮ ದನಕರುಗಳನ್ನು ಮೇಯಿಸಲು ಅವಕಾಶವಿಲ್ಲದಂತೆ ಮಾಡಿ, ಅಸ್ಪೃಶ್ಯರ ಹೆಂಗಸರು ಮತ್ತು ಗಂಡಸರ ಮೇಲೆ ಆಗಾಗ್ಗೆ ಹಲ್ಲೆ ನಡೆಸಿದರು. ಅಷ್ಟೇ ಅಲ್ಲದೆ, ಸವರ್ಣ ಹಿಂದೂಗಳು ತಮ್ಮ ಆವೇಶದಲ್ಲಿ ಅಸ್ಪೃಶ್ಯರು ನೀರು ತರುತ್ತಿದ್ದ ಬಾವಿಗಳಿಗೆ ಸೀಮೆ ಎಣ್ಣೆ ಸುರಿದರು. ಇದನ್ನು ಅನೇಕ ದಿನಗಳವರೆಗೂ ಮಾಡಿದರು. ಅದ್ದರಿಂದಾಗಿ ಹಳ್ಳಿಯ ಅಸ್ಪೃಶ್ಯರಿಗೆ ಕುಡಿಯುವ ನೀರೇ ಇಲ್ಲದಂತಾಯಿತು. ಸ್ಥಿತಿಗತಿ ಈ ಮಟ್ಟವನ್ನು ಮುಟ್ಟಿದಾಗ ಅಸ್ಪೃಶ್ಯರು ಅಕ್ಟೋಬರ್ ೧೭ನೆಯ ತಾರೀಖು ಕೆಲವು ಹಿಂದೂಗಳ ಮೇಲೆ ಆಪಾದನೆ ಹೊರಿಸಿ ಮ್ಯಾಜಿಸ್ಟ್ರೇಟರ ಮುಂದೆ ದೂರು ಕೊಟ್ಟರು.

ಗಾಂಧಿ ಮತ್ತು ಅವರ ಸೇನಾನಿ ಎನಿಸಿದ ಸರದಾರ್ ವಲ್ಲಭಬಾಯಿ ಪಟೇಲ್‌ರವರು ಈ ಸನ್ನಿವೇಶದಲ್ಲಿ ವಹಿಸಿದ ಪಾತ್ರ ಆಶ್ಚರ್ಯಕರವೆನಿಸುತ್ತದೆ. ಕವಿತ ಗ್ರಾಮದ ಸವರ್ಣ ಹಿಂದೂಗಳು ಅಸ್ಪೃಶ್ಯರಿಗೆ ಎಸಗಿದ ಹಿಂಸೆ ಮತ್ತು ಅನ್ಯಾಯದ ಪೂರ್ಣ ಅರಿವಿದ್ದ ಶ್ರೀಮಾನ್ ಗಾಂಧಿ ಮಾಡಿದ

ಕೆಲಸವೆಂದರೆ ಅಸ್ಪೃಶ್ಯರಿಗೆ ಆ ಗ್ರಾಮವನ್ನು ತೊರೆದು ಹೋಗುವಂತೆ ಬುದ್ಧಿ ಹೇಳಿದರು. ಆ ದುಷ್ಕರ್ಮಿಗಳಿಗೆ ಕಾನೂನಿನಂತೆ ಶಿಕ್ಷೆಯಾಗಬೇಕೆಂದೂ ಅವರು ಹೇಳಲಿಲ್ಲ. ಅವರ ನೆಚ್ಚಿನ ಅನುಯಾಯಿಯಾದ ಶ್ರೀಮಾನ್ ವಲ್ಲಭಬಾಯಿ ಪಟೇಲ್‌ರು ಇನ್ನೂ ಆಶ್ಚರ್ಯವೆನಿಸುವ ರೀತಿಯಲ್ಲಿ ನಡೆದುಕೊಂಡರು. ಅವರು ಕವಿತ ಗ್ರಾಮಕ್ಕೆ ಹೋಗಿ ಅಸ್ಪೃಶ್ಯರಿಗೆ ಕಿರುಕುಳ ಕೊಡಬಾರದೆಂದು ಸವರ್ಣ ಹಿಂದೂಗಳಿಗೆ ಬುದ್ಧಿ ಹೇಳಿದರು. ಅವರಾರೂ ಇವರ ಮಾತಿಗೆ ಕಿವಿಗೊಡಲಿಲ್ಲ. ಸವರ್ಣ ಹಿಂದೂಗಳನ್ನು ನ್ಯಾಯಾಲಯಕ್ಕೆ ಎಳೆದು ಶಿಕ್ಷೆ ಕೊಡಿಸಲು ಅಸ್ಪೃಶ್ಯರು ನ್ಯಾಯಾಲಯದಲ್ಲಿ ದೂರು ಸಲ್ಲಿಸಿದರು. ಅಸ್ಪೃಶ್ಯರಿಗೆ ನಾವು ಕಿರುಕುಳಕೊಡುವುದಿಲ್ಲವೆಂಬ ತೋರಿಕೆಯ ಒಪ್ಪಂದವನ್ನು ಸವರ್ಣ ಹಿಂದೂಗಳಿಂದ ಮಾಡಿಸಿ, ಅಸ್ಪೃಶ್ಯರು ಅದನ್ನು ಕಾರ್ಯಗತಗೊಳಿಸುವಂತೆ ಕಡ್ಡಾಯ ಮಾಡಲು ಸಾಧ್ಯವಿಲ್ಲವೆಂಬುದನ್ನು ತಿಳಿದು ಸಹ ವಲ್ಲಭಬಾಯಿ ಪಟೇಲರು ಅಸ್ಪೃಶ್ಯರು ನ್ಯಾಯಾಲಯಕ್ಕೆ ಸಲ್ಲಿಸಿದ್ದ ದೂರನ್ನು ಹಿಂದಕ್ಕೆ ತೆಗೆಸಿದರು. ಇದರ ಪರಿಣಾಮವೆಂದರೆ ಶ್ರೀಮಾನ್ ಗಾಂಧಿಯ ಸ್ನೇಹಿತ ವಲ್ಲಭಬಾಯಿ ಪಟೇಲರ ಸಹಾಯದಿಂದಾಗಿ ಅಸ್ಪೃಶ್ಯರು ತೊಂದರೆಯನ್ನು ಅನುಭವಿಸಿದರು. ಆದರೆ ಅವರ ಪೀಡಕರು ಶಿಕ್ಷೆಯಿಂದ ತಪ್ಪಿಸಿಕೊಂಡರು.

ಬಹು ಸಾಧಾರಣ ವಿಷಯಗಳಾದ, ಒಂದು ಒಳ್ಳೆಯ ಬಟ್ಟೆ ಧರಿಸಿದ್ದಕ್ಕೆ, ಒಂದು ಒಡವೆಯನ್ನು ಧರಿಸಿದ ಕಾರಣಕ್ಕಾಗಿ, ಅಸ್ಪೃಶ್ಯರು ಸವರ್ಣ ಹಿಂದೂಗಳ ನಿರಂತರ ಕಿರುಕುಳಕ್ಕೆ ಬಲಿಯಾಗಬೇಕಾಯಿತು. ಅಂತಹ ಎರಡು ನಿದರ್ಶನಗಳನ್ನು ಇಲ್ಲಿ ಉದಾಹರಿಸಬಹುದು.

## III

ಅಸ್ಪೃಶ್ಯರ ಹೋರಾಟವನ್ನು ಮುನ್ನಡೆಸುತ್ತಿರುವವರು ಅಂದಿನ ಸ್ಥಿತಿಗತಿಗಳನ್ನು ಬಹಳ ಎಚ್ಚರದಿಂದ ನಿರ್ವಹಿಸುತ್ತಿದ್ದರೂ ಅಂತಿಮ ಜಯ ಯಾರಿಗೆ ಎಂಬುದು ಕುತೂಹಲಕರವಾದ ಊಹೆಯಷ್ಟೇ. ಕೊನೆಯ ಪರಿಣಾಮ ಏನಾದರೂ ಅಗಲಿ ಒಂದು ಮಾತಂತೂ ನಿಜ. ಬಹುಪಾಲು ಘಟನೆಗಳು ಅಸ್ಪೃಶ್ಯರಿಗೆ ವಿರುದ್ಧವಾಗಿಯೇ ಇವೆ.

ಹಿಂದೂಗಳೊಂದಿಗೆ ತಮ್ಮ ಹೋರಾಟದಲ್ಲಿ ಅಸ್ಪೃಶ್ಯರು ಯಾವಾಗಲೂ ಅಸಹಾಯಕ ಸ್ಥಿತಿಯಲ್ಲಿಯೇ ಇದ್ದಾರೆ. ಜಾತಿವಾದಿಗಳ ಪುಂಡಾಟದ ಮುಂದೆ ಅಸ್ಪೃಶ್ಯರು ದಿಕ್ಕಿಲ್ಲದಂತಾಗುತ್ತಾರೆ. ಪ್ರಶ್ನೆಯೆಂದರೆ ಅಸ್ಪೃಶ್ಯರಿಗೆ ಸದಾ ಏಟು ಬೀಳುತ್ತವಲ್ಲ, ಏಕೆ? ಅವರು ಅಸಹಾಯಕರಾಗುತ್ತಾರಲ್ಲ, ಏಕೆ? ಇದು ಅತ್ಯಂತ ಪ್ರಮುಖವಾದ ಪ್ರಶ್ನೆಯಾದುದರಿಂದ, ಇದಕ್ಕೆ ಉತ್ತರ ಹೇಳಲೇಬೇಕು.

ಸವರ್ಣ ಹಿಂದೂಗಳೊಂದಿಗಿನ ತಮ್ಮ ಕಲಹದಲ್ಲಿ ಅಸ್ಪೃಶ್ಯರು ಅಸಹಾಯಕರಾಗುತ್ತಿರುವುದಕ್ಕೆ ಕಾರಣ ಬಹು ಸರಳ. ಮೊದಲನೆಯದಾಗಿ ಸಂಖ್ಯೆಯ ದೃಷ್ಟಿಯಿಂದ ಇವರು ಅವರಿಗೆ ಸರಿಸಮರಲ್ಲ. ಯಾವ ಹಳ್ಳಿಯಲ್ಲಿ ನೋಡಿದರೂ ಸವರ್ಣ ಹಿಂದೂಗಳಿಗೆ ಹೋಲಿಸಿದರೆ ಅಸ್ಪೃಶ್ಯರ ಸಂಖ್ಯೆ ಗಣನೀಯವೆನಿಸುವುದಿಲ್ಲ. ಬಹುಪಾಲು ಹಳ್ಳಿಗಳಲ್ಲಿ ಕೇವಲ ಕೆಲವು ಕುಟುಂಬಗಳಲ್ಲಿರುವ ಅಸ್ಪೃಶ್ಯರ ಅಲ್ಪ ಸಂಖ್ಯೆ, ಹಿಂದೂಗಳ ಆಕ್ರಮಣವನ್ನು ವಿರೋಧಿಸಲು ಸಾಕಾಗುವುದಿಲ್ಲ. ಅಸ್ಪೃಶ್ಯರ ಒಟ್ಟು ಜನಸಂಖ್ಯೆ ೫೦ ದಶಲಕ್ಷದಷ್ಟಿದ್ದು, ಅದು ಅಗಾಧವಾಗಿ ಕಂಡರೂ, ಅವರು ಎಲ್ಲ ಹಳ್ಳಿಗಳಲ್ಲಿಯೂ ಹಂಚಿಹೋಗಿದ್ದು ಬಹುಸಂಖ್ಯಾತ ಸವರ್ಣ ಹಿಂದೂಗಳಿಗೆ ಹೋಲಿಸಿದರೆ ಅವರು ಅಲ್ಪಸಂಖ್ಯಾತರಾಗುತ್ತಾರೆ. ಹೋರಾಟದ ದೃಷ್ಟಿಯಿಂದ ನೋಡಿದರೆ ಅಸ್ಪೃಶ್ಯರ ಬಲ ತುಂಬಾ ಕಡಿಮೆ ಇದ್ದು, ಸವರ್ಣ ಹಿಂದೂಗಳು ಇವರನ್ನು ಮೀರಿಸಿ ನಿಲ್ಲುತ್ತಾರೆ.

ಮಹಮದೀಯರು ಸಹ, ಕೆಲವು ಪ್ರಾಂತ್ಯಗಳಲ್ಲಿ ಹಳ್ಳಿಗಳಲ್ಲಿ, ಅಸ್ಪೃಶ್ಯರಷ್ಟೇ ಅಲ್ಪಸಂಖ್ಯಾತರು ನಿಜ. ಅವರೂ ಹಳ್ಳಿಗಳಲ್ಲಿ ಹಂಚಿಹೋಗಿದ್ದು, ಕೆಲವು ಹಳ್ಳಿಗಳಲ್ಲಿ ಮಹಮದೀಯರ ಸಂಖ್ಯೆ ಅಸ್ಪೃಶ್ಯರ ಸಂಖ್ಯೆಗಿಂತಲೂ ಕಡಿಮೆ ಇರುತ್ತದೆ. ಆದರೂ ಮಹಮದೀಯರು ಹಿಂದೂಗಳಿಂದ ಅಸ್ಪೃಶ್ಯರಷ್ಟು ಅವಮಾನ ಮತ್ತು ನ್ಯೂನತೆಗೆ ಒಳಗಾಗಿಲ್ಲ. ಇದರಲ್ಲಿ ಆಶ್ಚರ್ಯಕರವಾದ ವಿಷಯವೇನೆಂದರೆ, ಹಿಂದೂ ಮುಸ್ಲಿಂರಲ್ಲಿ ಹಿಂದೂ ಅಸ್ಪೃಶ್ಯರಲ್ಲಿರುವಷ್ಟೇ, ಆಳವಾದ ವಿರೋಧವಿದೆ. ಇವರಿಬ್ಬರನ್ನು ನಡೆಸಿಕೊಳ್ಳುವ ರೀತಿಯಲ್ಲಿ ವ್ಯತ್ಯಾಸವೇಕೆಂದರೆ ಮಹಮದೀಯರಿಗೆ ಅಸ್ಪೃಶ್ಯರಿಗಿಲ್ಲದ ಒಂದು ಸೌಲಭ್ಯವಿದೆ.

ಪರಕೀಯರನ್ನು ಪವಿತ್ರ ದೃಷ್ಟಿಯಿಂದ ಕಾಣುವುದು ಎಲ್ಲ ಪುರಾತನ ಸಾಮ್ರಾಜ್ಯಗಳಲ್ಲಿ ಇರುವ ಒಂದು ನಿಯಮ. ಅವನ ವ್ಯಕ್ತಿತ್ವಕ್ಕೆ ಆಘಾತ ಅಥವಾ ಅವಮಾನವಾಗದಂತೆ ನೋಡಿಕೊಳ್ಳಲಾಗುತ್ತದೆ. ಪರಕೀಯರನ್ನು ಬಂಧುಗಳಿಗಿಂತಲೂ ಚೆನ್ನಾಗಿ ಸತ್ಕರಿಸಬೇಕೆಂಬುದು ರೋಮನ್ ಸಮಾಜದ ನಿಯಮ. "ಯಾರಲ್ಲಿ ಒಂದು ಅಣುವಿನಷ್ಟು ಜವಾಬ್ದಾರಿ ಇದೆಯೋ ಅವರು ಪರಕೀಯರ ವಿಚಾರದಲ್ಲಿ ಅಪರಾಧವಾಗದಂತೆ ತಮ್ಮ ಜೀವನವನ್ನು ಸಾಗಿಸುತ್ತಾರೆ" ಎಂಬುದಾಗಿ ಪ್ಲೇಟೋ ಹೇಳುತ್ತಾನೆ. ಪರಕೀಯರ ವಿಚಾರದಲ್ಲಿ ಇಷ್ಟೊಂದು ಪವಿತ್ರ ಭಾವನೆ ಬೆಳೆದುಬಂದಿರುವುದು ಆಶ್ಚರ್ಯ. ಪರಕೀಯರ ವಿಚಾರದಲ್ಲಿ ಇಷ್ಟೊಂದು ಪವಿತ್ರ ಕಲ್ಪನೆ ಬೆಳೆಯಲು ಕೇವಲ ಸೌಜನ್ಯ ಮಾತ್ರವೇ ಕಾರಣ ಇರಲಾರದು. ಸಾಮಾಜಿಕ ಜೀವನದ ನಡೆನುಡಿಗಳು ಸಾಧಾರಣವಾಗಿ ಪರಕೀಯರ ವಿಚಾರದಲ್ಲಿ ಅವರ ಸಹಜವಾದ ಧೋರಣೆಗಿಂತಲೂ ಭಿನ್ನವಾಗಿರುತ್ತದೆ. ಪರಕೀಯರನ್ನು ಇಷ್ಟೊಂದು ಪವಿತ್ರ ಭಾವನೆಯಿಂದ ಕಂಡು ಗೌರವಿಸಲು ನಿಜವಾದ ಕಾರಣವೆಂದರೆ, ಅವನು ವೈರಿಗಳ ಗುಂಪಿಗೆ ಸೇರಿದವನಾದ್ದರಿಂದ ಅವನಿಗೆ ಹಾನಿಯಾದರೆ, ಅದು ರಕ್ತಪಾತಕ್ಕೆ ಕಾರಣವಾಗುತ್ತದೆ. ರಕ್ತಪಾತಕ್ಕೆ ಕಾರಣವಾದೀತೆಂಬ ಭಯದಿಂದ, ಪರಕೀಯರ ವಿಚಾರದಲ್ಲಿ ಈ ರೀತಿ ಉದಾರವಾಗಿ ನಡೆದುಕೊಳ್ಳಲಾಗುತ್ತದೆ.

ಹಳ್ಳಿಯ ಮಹಮದೀಯರ ವಿಚಾರದಲ್ಲಿ ಈ ಮಾತು ಸತ್ಯ. ಹಿಂದೂಗಳ ದೃಷ್ಟಿಯಲ್ಲಿ ಅವನು ಪರಕೀಯ. ಹಿಂದೂಗಳು ಅವನಿಗೆ ಕಿರುಕುಳ ಕೊಡಲಾರರು. ಏಕೆಂದರೆ ಅವನಿಗೆ ಏನಾದರೂ ಹಾನಿಯಾದರೆ ಮಹಮದೀಯರೆಲ್ಲರೂ ಹಿಂದೂಗಳ ಮೇಲೆ ಬಿದ್ದು ರಕ್ತಪಾತಕ್ಕೆ ಕಾರಣವಾಗುತ್ತದೆಂಬುದನ್ನು ಅವರು ಬಲ್ಲರು. ಹಿಂದೂ ಮಹಮದೀಯರ ಕಲಹಗಳು ರಕ್ತಪಾತಕ್ಕೆ ಕಾರಣವಾಗಿವೆ ಮತ್ತು ಅವು ಒಬ್ಬ ಮಹಮದೀಯನಿಗೆ ಅಥವಾ ಅವನ ಆಸ್ತಿಗೆ ಹಾನಿಯಾಯಿತೆಂಬ ಕಾರಣದಿಂದ ನಡೆದಿದೆ. ಈ ರೀತಿಯ ರಕ್ತಪಾತದ ಭಯದಿಂದಾಗಿ ಹಳ್ಳಿಗಳಲ್ಲಿ ಮಹಮದೀಯರ ಜೀವನ ಸುರಕ್ಷಿತವಾಗಿದೆ.

ಅಸ್ಪೃಶ್ಯನೊಬ್ಬನಿಗೆ ಹಾನಿಯಾದರೆ ಅದಕ್ಕೆ ಪ್ರತಿಕಾರ ಮಾಡುವವರು ಯಾರೂ ಇಲ್ಲ. ರಕ್ತಪಾತವಾಗುವಂತಹ ಕಲಹದ ಭಯವಿಲ್ಲ. ಆದ್ದರಿಂದ ಅಸ್ಪೃಶ್ಯರನ್ನು ಹಿಂದೂಗಳು ನಿರ್ಭಯವಾಗಿ ಹಿಂಸಿಸಬಹುದು. ಮಹಮದೀಯರಾದರೋ ತಮ್ಮ ಸಮಾಜಕ್ಕೆ ಅಥವಾ ತಮ್ಮ ಜನಾಂಗಕ್ಕೆ ಏನಾದರೂ ಕೆಡಕಾದರೆ ತಾವೆಲ್ಲರೂ ಒಂದಾಗಿ ಒಗ್ಗಟ್ಟಿನಿಂದ ಹೋರಾಡಿ, ಸೇಡು ತೀರಿಸಿಕೊಳ್ಳುವಷ್ಟು ಅವರು ಸಂಘಟಿತರು. ಅಸ್ಪೃಶ್ಯರಾದರೊ ಸವರ್ಣ ಹಿಂದೂಗಳಂತೆ ಜಾತಿ ಉಪಜಾತಿಗಳ ಕಲ್ಪನೆಗೆ ತುತ್ತಾಗಿ, ಅಸಂಘಟಿತರಾಗಿದ್ದಾರೆ. ಅಸ್ಪೃಶ್ಯರಲ್ಲಿರುವ ಜಾತೀಯ ಭಾವನೆಯಿಂದಾಗಿ ಪರಸ್ಪರ ದ್ವೇಷ ಅಸೂಯೆ ಹೆಚ್ಚಾಗಿ, ಅವರಲ್ಲಿ ಸಂಘಟಿತ ಕ್ರಿಯೆ ಅಸಾಧ್ಯವಾಗಿದೆ. ಮಹಮದೀಯರಲ್ಲಿಯೂ ವಿವಿಧ ಜಾತಿಯ ಕಲ್ಪನೆಯಿದೆ. ಅಸ್ಪೃಶ್ಯರಂತೆ ಅವರೂ ದೇಶದ ತುಂಬೆಲ್ಲಾ ಹರಡಿದ್ದಾರೆ. ಅವರಿಗೆ ಜಾತಿಯೆಂಬುದು ಅವರನ್ನು ಒಗ್ಗೂಡಿಸುವ ಸಾಧನವಾಗಿದ್ದು, ತಾವು ವಿಭಾಗವಾಗಿದ್ದರೂ ಮೂಲತಃ ಮಹಮದೀಯ ಧರ್ಮದ ಒಂದು ಭಾಗವಾಗಿದ್ದೇವೆ, ಎಂಬ

ಕಲ್ಪನೆ ಅವರಲ್ಲಿದೆ. ಅಂತಹ ಏಕತೆಯ ಭಾವವನ್ನು ಮೂಡಿಸುವ ಯಾವ ಅಂಶವೂ ಅಸ್ಪೃಶ್ಯರಲ್ಲಿಲ್ಲ. ಅಸ್ಪೃಶ್ಯರನ್ನು ಒಗ್ಗೂಡಿಸುವ ಯಾವ ಶಕ್ತಿಯೂ ಇಲ್ಲದ್ದರಿಂದ, ಅವರು ಪರಸ್ಪರ ಅಂಟಿಕೊಳ್ಳದ ಚೂರುಗಳಂತಿದ್ದು ಅವರ ಸಂಖ್ಯೆಯಿಂದ ಯಾವ ಪ್ರಯೋಜನವೂ ಇಲ್ಲವಾಗಿದೆ.

ಹಳ್ಳಿಯಲ್ಲಿರುವ ಬಹುಪಾಲು ಅಸ್ಪೃಶ್ಯರು ಗ್ರಾಮಸೇವಕರು, ಅಥವಾ ಜಮೀನಿಲ್ಲದ ಕೂಲಿಗಾರರು. ಗ್ರಾಮಸೇವಕರಾಗಿ ಅವರು ತಾವು ಹಿಂದೂಗಳಿಗೆ ಮಾಡುವ ಸಾಂಪ್ರದಾಯಿಕ ಸೇವೆಗಾಗಿ ಪ್ರತಿದಿನವೂ ಹಿಂದೂಗಳ ಮನೆಮನೆಗೂ ಹೋಗಿ ಅವರಿಂದ ಮಾಡಿದ ಅಡಿಗೆಯನ್ನೋ ರೊಟ್ಟಿಯನ್ನೋ ಸ್ವೀಕರಿಸಿ ಬದುಕುತ್ತಾರೆ. ಇದು ಅವರ ವೇತನದ ಒಂದು ಭಾಗ. ಹಿಂದೂಗಳು ಸುಗ್ಗಿಯ ಕಾಲದಲ್ಲಿ ಕೊಡುವ ದವಸ ಧಾನ್ಯಗಳು ಅವರ ವೇತನದ ಮತ್ತೊಂದು ಭಾಗ. ಹಿಂದೂಗಳಿಗೂ ಅಸ್ಪೃಶ್ಯರಿಗೂ ಭಿನ್ನಾಭಿಪ್ರಾಯ ಬಂದಾಗ ಹಿಂದೂಗಳು ಮಾಡುವ ಮೊದಲನೆಯ ಕೆಲಸವೆಂದರೆ ಅವರಿಗೆ ದಿನವೂ ನೀಡುವ ರೊಟ್ಟಿ ಮತ್ತು ಸುಗ್ಗಿಯಲ್ಲಿ ಕೊಡುವ ದವಸ ಧಾನ್ಯವನ್ನು ನಿಲ್ಲಿಸುತ್ತಾರೆ. ಜೊತೆಗೆ ಅವರನ್ನು ಕೂಲಿಯ ಕೆಲಸಕ್ಕೆ ಕರೆಯುವುದನ್ನು ನಿಲ್ಲಿಸುತ್ತಾರೆ. ಪರಿಣಾಮವೆಂದರೆ, ಹೋರಾಡಬೇಕಾದ ಅಸ್ಪೃಶ್ಯರು ಉಪವಾಸವನ್ನೆದುರಿಸಬೇಕಾಗುತ್ತದೆ.

ಅಸ್ಪೃಶ್ಯರಿಗೆ ಹಳ್ಳಿಯಲ್ಲಿ ಜೀವನಕ್ಕೆ ಸಂಪಾದಿಸಲು ಬೇರೆ ಯಾವ ಮಾರ್ಗವೂ ಇಲ್ಲ. ಅವನು ಹಾಲು ತರಕಾರಿ ಮುಂತಾದವುಗಳನ್ನು ಮಾರುವಂತಿಲ್ಲ. ಅವನು ಅಸ್ಪೃಶ್ಯನಾದ್ದರಿಂದ ಇವನಿಂದ ಯಾರೂ ಅವುಗಳನ್ನು ಕೊಳ್ಳುವುದಿಲ್ಲ. ಅವನು ಬೇರೆ ಯಾವ ಉದ್ಯೋಗವನ್ನೂ ಕೈಗೊಳ್ಳುವಂತಿಲ್ಲ. ಏಕೆಂದರೆ ಎಲ್ಲ ಉದ್ಯೋಗಗಳು ವಂಶಪಾರಂಪರ್ಯವಾಗಿ ಬಂದಿರುತ್ತವಾದ್ದರಿಂದ ಇವರ ಸೇವೆಯನ್ನು ಅಲ್ಲಿ ಸ್ವೀಕರಿಸುವುದಿಲ್ಲ. ಆರ್ಥಿಕವಾಗಿ ಹಿಂದೂಗಳನ್ನೇ ಪೂರ್ಣವಾಗಿ ಅವಲಂಬಿಸಿರುವುದರಿಂದ ಇವನು ಸ್ಪೃಶ್ಯರ ದೃಷ್ಟಿಯಲ್ಲಿ ಗರ್ವಿಷ್ಠ ಅಥವಾ ಅಸಭ್ಯ ಎಂದರೆ ಆಗ ಹಿಂದೂಗಳು ಅದರ ಪೂರ್ಣ ಲಾಭ ಪಡೆಯುತ್ತಾರೆ.

ಅಸ್ಪೃಶ್ಯರು ತಮ್ಮ ಹೊಟ್ಟೆ ಹೊರೆಯಲು ಸ್ಪೃಶ್ಯರನ್ನು ಅವಲಂಬಿಸಿರುವುದು ಮಾತ್ರವಲ್ಲದೆ ಅವರ ಜೀವನಕ್ಕೆ ಬೇಕಾದ ವಸ್ತುಗಳನ್ನು ಕೊಳ್ಳಲು ಸಹ ಅವರು ಸ್ಪೃಶ್ಯರನ್ನೇ ಅವಲಂಬಿಸಬೇಕು. ಹಳ್ಳಿಯ ಎಲ್ಲ ಅಂಗಡಿಗಳು ಸ್ಪೃಶ್ಯರಿಗೆ ಸೇರಿರುತ್ತವೆ. ವ್ಯಾಪಾರವು ಸ್ಪೃಶ್ಯರ ಕೈಯಲ್ಲಿಯೇ ಇರುವ ಮತ್ತು ಇರಬೇಕಾದ ಒಂದು ವೃತ್ತಿ. ಅಂಗಡಿಯನ್ನಿಟ್ಟು ಸ್ಪೃಶ್ಯನಿಂದ ಅಸ್ಪೃಶ್ಯನು ಸಾಮಾನುಗಳನ್ನು ಕೊಳ್ಳಬೇಕು. ಸ್ಪೃಶ್ಯನಾದ ಅಂಗಡಿಯ ಮಾಲೀಕನು ಮಾರಲು ಸಿದ್ಧನಿದ್ದರೆ ಮಾತ್ರ ಅಸ್ಪೃಶ್ಯನಿಗೆ ಆವಶ್ಯಕವಾದ ಸಾಮಾನು ದೊರೆಯುತ್ತವೆ? ಅಂಗಡಿಯವನು ಸಾಮಾನುಗಳನ್ನು ಮಾರಲು ಸಿದ್ಧನಿಲ್ಲದಿದ್ದರೆ ಅಸ್ಪೃಶ್ಯನಲ್ಲಿ ಕೊಳ್ಳಲು ಹಣವಿದ್ದರೂ ಅವನು ಉಪವಾಸವಿರಬೇಕಾಗುತ್ತದೆ. ಸ್ಪೃಶ್ಯರು ಮತ್ತು ಅಸ್ಪೃಶ್ಯರ ನಡುವೆ ಕಲಹವಾದಾಗ ಸ್ಪೃಶ್ಯರು ಅಸ್ಪೃಶ್ಯರಿಗೆ ಸಾಮಾನನ್ನು ಮಾರದಂತೆ ಅಂಗಡಿಯವನಿಗೆ ವಿಧಿಸಲು ಮರೆಯುವುದಿಲ್ಲ. ಸ್ಪೃಶ್ಯರು ಒಗ್ಗಟ್ಟಾಗಿ ಅಸ್ಪೃಶ್ಯರೊಂದಿಗೆ ಯಾವ ಆರ್ಥಿಕ ಸಂಬಂಧವೂ ಇಲ್ಲದಂತೆ ದಿಗ್ಬಂಧನ ಮಾಡುತ್ತಾರೆ. ಅಸ್ಪೃಶ್ಯರೊಂದಿಗೆ ಯುದ್ಧವನ್ನೇ ಸಾರುತ್ತಾರೆ. "ವೈರಿ" ಯನ್ನು ದುರ್ಬಲಗೊಳಿಸಲು ಪೋಕರಿಗಳನ್ನೊಳಗೊಂಡ ದಂಡನ್ನು ಅಸ್ಪೃಶ್ಯರ ಕೇರಿಗೆ ಕಳುಹಿಸಿ ಅವರ ಆಸ್ತಿಪಾಸ್ತಿಗಳನ್ನು ದಯಾದಾಕ್ಷಿಣ್ಯವಿಲ್ಲದೆ ನಾಶಗೊಳಿಸಿ ಅವರ ಹೆಂಗಸರು ಮತ್ತು ಮಕ್ಕಳ ಮೇಲೆ ದೌರ್ಜನ್ಯವೆಸಗುತ್ತಾರೆ.

ಅವರು ಸರ್ವೇಸಾಧಾರಣವಾಗಿ ಹಾಗೂ ಪರಿಣಾಮಕಾರಿಯಾಗಿ ಬಳಸುವ ಅಸ್ತ್ರವೆಂದರೆ, ತಪ್ಪಿತಸ್ಥರಾದ ಅಸ್ಪೃಶ್ಯರ ಮೇಲೆ ಪೂರ್ಣ ಬಹಿಷ್ಕಾರ ವಿಧಿಸುವುದು. ಗಾಂಧಿಯ "ಅಸಹಕಾರ ಮಾರ್ಗ"ದ ಮತ್ತೊಂದು ರೂಪದಂತೆ ಕಾಣುವ ಬಹಿಷ್ಕಾರದ ಭೀಕರತೆಯನ್ನು ಇಲ್ಲಿ ವಿವರಿಸಿ ಮುಗಿಸಲು ಸಾಧ್ಯವಿಲ್ಲ. ಹಿಂದುಳಿದ

ಜನತೆಯ ಕುಂದುಕೊರತೆಗಳನ್ನು ವಿಚಾರಿಸಿ ತಿಳಿಯಲು ಬೊಂಬಾಯಿ ಸರ್ಕಾರವು ನೇಮಿಸಿದ ಸಮಿತಿಯು ಸಾಮಾಜಿಕ ಬಹಿಷ್ಕಾರದ ಸ್ವರೂಪವನ್ನು ಈ ರೀತಿ ವಿವರಿಸಿದೆ.

"ಅಸ್ಪೃಶ್ಯರಿಗೆ ಸಾರ್ವಜನಿಕ ಸ್ಥಳಗಳ ಬಳಕೆಗೆ ನೆರವಾಗುವಂತಹ ಅನೇಕ ಪರಿಹಾರಗಳನ್ನು ನಾವು ಸೂಚಿಸಿದ್ದರೂ ಅವುಗಳನ್ನು ಬಳಸಲು ಅವರಿಗೆ ಬಹಳ ರೀತಿಯ ಅನಾನುಕೂಲಗಳಿದ್ದು ಅವುಗಳ ಬಳಕೆಗೆ ಇನ್ನೂ ಕಾಲ ಬೇಕಾಗಬಹುದೆನಿಸುತ್ತದೆ. ಸಂಪ್ರದಾಯಸ್ಥ ಜನಾಂಗದವರು ಅವರ ಮೇಲೆ ನೇರವಾಗಿ ಹಿಂಸೆಗೆ ತೊಡಗಬಹುದೆಂಬುದು ಮೊದಲನೆಯ ಅಡಚಣೆ. ಪ್ರತಿಯೊಂದು ಹಳ್ಳಿಯಲ್ಲಿಯೂ ಅಸ್ಪೃಶ್ಯರು ಅಲ್ಪ ಸಂಖ್ಯಾತರಾಗಿದ್ದು ಅಸ್ಪೃಶ್ಯರ ಕಲ್ಪಿತ ಆಕ್ರಮಣದಿಂದ ತಮ್ಮ ಘನತೆ ಗೌರವಗಳಿಗೆ ಚ್ಯುತಿ ಬಂದರೆ ಅದನ್ನು ಯಾವ ರೀತಿಯಿಂದಲಾದರೂ ನಾವು ಎದುರಿಸುತ್ತೇವೆ ಎಂದು ಹೇಳುವ ಸಂಪ್ರದಾಯಸ್ಥರ ಸಂಖ್ಯೆಯೆ ಅತಿ ಹೆಚ್ಚಾಗಿರುವುದನ್ನು ನಾವು ಗಮನಿಸಬೇಕು. ಪೊಲೀಸಿನವರು ಕಾನೂನಿನ ಕ್ರಮ ಜರುಗಿಸಿಯಾರೆಂಬ ಭಯದಿಂದ ಸಂಪ್ರದಾಯಸ್ಥರು ಹಿಂಸಾಚಾರಕ್ಕೆ ಇಳಿಯುತ್ತಿಲ್ಲ ಮತ್ತು ಅಂತಹವರ ಸಂಖ್ಯೆ ಕಡಿಮೆಯಾಗಿದೆ.

ಅಸ್ಪೃಶ್ಯರ ಇಂದಿನ ಆರ್ಥಿಕ ದುಸ್ಥಿತಿಯಿಂದ ಬಂದದ್ದು ಎರಡನೆಯ ಅಡಚಣೆ. ಈ ಪ್ರಾಂತದ ಬಹುಭಾಗದಲ್ಲಿ ಅಸ್ಪೃಶ್ಯರಿಗೆ ಆರ್ಥಿಕವಾಗಿ ಸ್ವಾವಲಂಬನೆಯಿಲ್ಲ. ಕೆಲವರು ಸಂಪ್ರದಾಯಸ್ಥ ವರ್ಗದವರ ಭೂಮಿಯನ್ನು ಅವರ ಇಷ್ಟದಂತೆ ಹಿಡುವಳಿದಾರರಾಗಿ ಬೇಸಾಯಮಾಡುತ್ತಿದ್ದಾರೆ. ಇನ್ನು ಕೆಲವರು ಸಂಪ್ರದಾಯಸ್ಥರ ಜಮೀನಿನಲ್ಲಿ ಕೂಲಿಗಾರರಾಗಿ ಕೆಲಸ ಮಾಡುತ್ತಾ ಮತ್ತು ಉಳಿದವರು ಗ್ರಾಮಸೇವಕರಾಗಿ ದುಡಿಯುತ್ತ ಅವರು ಕೊಟ್ಟ ದವಸಧಾನ್ಯಗಳಿಂದ ಜೀವನ ಸಾಗಿಸುತ್ತಾರೆ. ಹಳ್ಳಿಯ ದಲಿತ ವರ್ಗದ ಜನರು ತಮ್ಮ ಹಕ್ಕುಗಳಿಗಾಗಿ ಧ್ವನಿಯೆತ್ತಿದರೆ ಸಂಪ್ರದಾಯಸ್ಥರು ತಮ್ಮ ಆರ್ಥಿಕ ಪ್ರಾಬಲ್ಯವನ್ನು ಬಳಸಿ ಹಿಡುವಳಿದಾರರಾದ ದಲಿತರಿಂದ ತಮ್ಮ ಭೂಮಿಯನ್ನು ಹಿಂದಕ್ಕೆ ಕಿತ್ತುಕೊಂಡು ಅವರಿಗೆ ಕೂಲಿಯು ಸಿಕ್ಕದಂತೆ ಮಾಡಿ ಗ್ರಾಮಸೇವಕರಿಗೆ ವೇತನ ರೂಪದಲ್ಲಿ ಕೊಡುವ ದವಸವನ್ನು ಕೊಡದೆ ತೊಂದರೆ ಕೊಟ್ಟ ಅನೇಕ ನಿದರ್ಶನವನ್ನು ನಾವು ಕೇಳಿದ್ದೇವೆ. ಕೆಲವು ಸಾರಿ ಅವರ ಬಹಿಷ್ಕಾರ ಅದೆಷ್ಟು ವ್ಯಾಪಕವಾಗಿರುತ್ತದೆಂದರೆ ಅಸ್ಪೃಶ್ಯರನ್ನು ಅವರು ಸಾಮಾನ್ಯವಾಗಿ ನಡೆಯುತ್ತಿದ್ದ ದಾರಿಯಲ್ಲಿಯೂ ನಡೆಯಬಿಡದೆ ಹಳ್ಳಿಯ ಅಂಗಡಿಗಳಲ್ಲಿ ಅವರಿಗೆ ಸಾಮಾನುಗಳು ದೊರೆಯದಂತೆ ಮಾಡಲಾಗುತ್ತದೆ. ಅಸ್ಪೃಶ್ಯರಿಗೆ ಸಾಮಾಜಿಕ ಬಹಿಷ್ಕಾರವನ್ನು ಹೇರಲು ಕೇವಲ ಒಂದು ಕ್ಷುಲ್ಲಕ ಕಾರಣವೇ ಸಾಕೆಂಬುದನ್ನು ಅನೇಕ ನಿದರ್ಶನಗಳಲ್ಲಿ ಕಾಣಬಹುದು. ಅನೇಕ ಸಾರಿ ಅಸ್ಪೃಶ್ಯರು ಸಾರ್ವಜನಿಕ ಬಾವಿಗಳಿಂದ ನೀರನ್ನು ತಂದ ಕಾರಣದಿಂದ ಬಹಿಷ್ಕಾರಕ್ಕೊಳಗಾಗಿದ್ದರೂ, ಕೆಲವೊಮ್ಮೆ ಅಸ್ಪೃಶ್ಯನು ಜನಿವಾರವನ್ನು ಧರಿಸಿದನೆಂಬುದಕ್ಕೋ, ಒಂದು ತುಂಡು ಭೂಮಿಯನ್ನು ಕೊಂಡನೆಂಬುದಕ್ಕೋ, ಒಳ್ಳೆಯ ಬಟ್ಟೆ ಅಥವಾ ಆಭರಣವನ್ನು ಧರಿಸಿದನೆಂಬುದಕ್ಕೋ ಅಥವಾ ಮದುವೆ ಗಂಡನ್ನು ಕುದುರೆ ಮೇಲೆ ಕೂಡಿಸಿ ಬಹಿರಂಗವಾಗಿ ಉತ್ಸವ ಮಾಡಿದನೆಂಬ ಕಾರಣದಿಂದಲೋ ಬಹಿಷ್ಕಾರಕ್ಕೊಳಗಾದ ನಿದರ್ಶನಗಳು ಸಾಕಷ್ಟಿವೆ.

ಅಸ್ಪೃಶ್ಯರನ್ನು ದಮನಗೊಳಿಸಲು ರೂಪಿಸಿದ ಈ ಸಾಮಾಜಿಕ ಬಹಿಷ್ಕಾರದಷ್ಟು ಪ್ರಬಲವಾದ ಮತ್ತೊಂದು ಅಸ್ತ್ರವನ್ನು ನಾವು ಕೇಳಿಲ್ಲ. ಇದರ ಮುಂದೆ ನೇರವಾದ ಹಿಂಸಾಮಾರ್ಗವೂ ಮಂಕಾಗುತ್ತದೆ. ಏಕೆಂದರೆ ಇದರ ವಿನಾಶಕಾರಿ ಪ್ರಭಾವ ಬಹುದೂರದವರೆಗೂ ಚಾಚುತ್ತದೆ. ನಮಗಿರುವ ಕರಾರಿನ ಸ್ವಾತಂತ್ರ್ಯಕ್ಕನುಗುಣವಾಗಿಯೇ ಇರುವಂತೆ ತೋರುವ ಈ ಅಸ್ತ್ರ ಕಾನೂನು ಬದ್ಧವೆನಿಸಿ, ಬಹಳ ಹೆಚ್ಚಿನ ರೀತಿಯಲ್ಲಿ ವಿನಾಶಕಾರಿಯಾಗಬಲ್ಲದು. ಬಹುಸಂಖ್ಯಾತರ ಈ ಕ್ರೌರ್ಯವನ್ನು ಬಿಗಿಮುಷ್ಟಿಯಿಂದ ನಿಗ್ರಹಿಸದೆ

ಹೋದರೆ, ಅಸ್ಪೃಶ್ಯರ ಉದ್ಧಾರಕ್ಕೆ ಆವಶ್ಯಕವಾದ ವಾಕ್ ಮತ್ತು ಕ್ರಿಯಾ ಸ್ವಾತಂತ್ರ್ಯದ ಭರವಸೆ ಅವರಿಗೆ ಇಲ್ಲವಾಗುತ್ತವೆಂಬುದನ್ನು ನಾವು ಒಪ್ಪುತ್ತೇವೆ."

## IV

ಅಸ್ಪೃಶ್ಯರ ಅಸಹಾಯಕತೆಗೆ ಮೂರನೆಯ ಕಾರಣವೇನೆಂದರೆ ಅವರಿಗೆ ಪೊಲೀಸಿನವರಿಂದ ರಕ್ಷಣೆ ದೊರೆಯುವುದಾಗಲಿ ಅಥವಾ ನ್ಯಾಯಾಲಯದಿಂದ ನ್ಯಾಯ ದೊರೆಯುವುದಾಗಲಿ ಸಾಧ್ಯವಿಲ್ಲ. ಪೊಲೀಸ್ ಸೇವೆಯಲ್ಲಿರುವವರೆಲ್ಲಾ ಸವರ್ಣೀಯ ಹಿಂದೂಗಳೇ. ನ್ಯಾಯಾಧಿಕಾರಿಗಳೆಲ್ಲಾ ಸವರ್ಣೀಯ ಹಿಂದೂಗಳೇ. ಪೊಲೀಸರು ಮತ್ತು ನ್ಯಾಯಾಧಿಕಾರಿಗಳು ಹಿಂದೂಗಳ ಬಂಧುಬಳಗಕ್ಕೆ ಸೇರಿದವರು. ಅಸ್ಪೃಶ್ಯರ ವಿಚಾರದಲ್ಲಿ ಅವರು ಸವರ್ಣೀಯ ಹಿಂದೂಗಳ ಮನೋಧರ್ಮವನ್ನೇ ತಳೆಯುತ್ತಾರೆ. ಅಸ್ಪೃಶ್ಯನೊಬ್ಬನು ಸವರ್ಣೀಯ ಹಿಂದೂ ಒಬ್ಬನ ಮೇಲೆ ದೂರು ಕೊಡಲು ಪೊಲೀಸು ಠಾಣೆಗೆ ಹೋದರೆ, ಅವನಿಗೆ ರಕ್ಷಣೆಗೆ ಬದಲು ಚೆನ್ನಾಗಿ ಬೈಗಳು ದೊರೆಯುತ್ತವೆ. ಅವನ ದೂರನ್ನು ದಾಖಲು ಮಾಡಿಕೊಳ್ಳದೆ ಹಿಂತಿರುಗಿಸುತ್ತಾರೆ ಅಥವಾ ಅದನ್ನು ತಪ್ಪಾಗಿ ದಾಖಲು ಮಾಡಿಕೊಂಡು, ಅವನ ಮೇಲೆ ಆಕ್ರಮಣ ಮಾಡಿದ ಸ್ಪೃಶ್ಯನು ತಪ್ಪಿಸಿಕೊಳ್ಳಲು ನೆರವಾಗುತ್ತಾರೆ. ಹಳ್ಳಿಗರ ಒಳಸಂಚಿನಿಂದಾಗಿ ಅವನಿಗೆ ಸ್ಪೃಶ್ಯರಿಂದ ಒಬ್ಬ ಸಾಕ್ಷಿಯೂ ದೊರೆಯುವುದಿಲ್ಲ. ಅಸ್ಪೃಶ್ಯರೇ ಆದ ಸಾಕ್ಷಿಗಳನ್ನು ಕರೆತಂದರೆ ಆಗ ನ್ಯಾಯಾಧೀಶರು ಅವರು ಸ್ವತಂತ್ರ ಸಾಕ್ಷಿಗಳಲ್ಲ ಪಕ್ಷ ಪಾತ ವಹಿಸುತ್ತಾರೆಂಬುದಾಗಿಯೋ ಅಥವಾ ಅವರು ಸ್ವತಂತ್ರವಾದ ಸಾಕ್ಷಿಗಳಾಗಿದ್ದಲ್ಲಿ ಆಗ ದೂರು ಕೊಟ್ಟ ಅಸ್ಪೃಶ್ಯನು ಆ ಸಾಕ್ಷಿಗಳು ಸತ್ಯಸಂಧರು ಎಂಬುದನ್ನು ಸ್ಥಾಪಿಸಲು ಸೋತಿದ್ದಾನೆ ಎಂಬ ಸುಲಭ ಮಾರ್ಗದಿಂದ ಅಪರಾಧಿಯನ್ನು ಖುಲಾಸೆ ಮಾಡುತ್ತಾರೆ. ಇದನ್ನು ಅವರು ನಿರ್ಭಯವಾಗಿ ಮಾಡುತ್ತಾರೆ. ಏಕೆಂದರೆ ಮೇಲ್ಮನವಿಯ ಮೊಕದ್ದಮೆಗಳನ್ನು ನಡೆಸುವ ನ್ಯಾಯಾಲಯವು ಮ್ಯಾಜಿಸ್ಟ್ರೇಟರೊಬ್ಬರು ಸಾಕ್ಷಿಯ ವರ್ತನೆಯನ್ನು ಲಕ್ಷಿಸಿ, ಅವನ ಸಾಕ್ಷ್ಯವನ್ನು ಗಮನಿಸಿ ಮಾಡಿದ ತೀರ್ಮಾನವನ್ನು ಭಂಗಗೊಳಿಸಿ ಅದಕ್ಕೆ ವಿರುದ್ಧವಾಗಿ ತೀರ್ಪು ನೀಡಬಾರದೆಂಬ ಅರಿವು ಅವರಿಗೆ ಚೆನ್ನಾಗಿದೆ. ಕಾಂಗ್ರೆಸ್ಸಿನಲ್ಲಿರುವ ಅಸ್ಪೃಶ್ಯರು ಸಹ ಈ ಅಂಶವನ್ನು ಈಗ ಒಪ್ಪುತ್ತಿದ್ದಾರೆ.

ತಮಿಳುನಾಡು ಹರಿಜನ ಸೇವಕ ಸಂಘವು ೧೯೩೭ರ ಸೆಪ್ಟೆಂಬರ್ ೩೦ನೆಯ ತಾರೀಖು ಮುಕ್ತಾಯವಾಗುವ ಅದರ ವಾರ್ಷಿಕ ವರದಿಯಲ್ಲಿ ಹೀಗೆ ಹೇಳಿದೆ. "ದೇಶದ ಮೂಲೆಯಲ್ಲಿ ಕೇವಲ ಪೊಲೀಸಿನವರೆ ಆಳುತ್ತಿರುವ ಹಳ್ಳಿಗಳಲ್ಲಿಯೂ ಹರಿಜನರಲ್ಲಿ ಅವರ ಹಕ್ಕುಗಳೊಂದಿಗೆ ಅವರ ರಾಜಕೀಯ ಪ್ರಜ್ಞೆ ಜಾಗ್ರತಗೊಂಡಿದ್ದರೂ ಇದನ್ನು ಸದಾ ಮಾಡುವುದು ಕಷ್ಟ. ಏಕೆಂದರೆ ಹರಿಜನರು ತಮ್ಮ ಹಕ್ಕುಗಳನ್ನು ಪ್ರತಿಪಾದಿಸಿದಾಗಲೆಲ್ಲ ಸವರ್ಣೀಯ ಹಿಂದೂಗಳೊಂದಿಗೆ ಘರ್ಷಣೆಯಾಗಿ ಕೊನೆಯಲ್ಲಿ ಹಿಂದೂಗಳೇ ಮೇಲ್ಮೆಯನ್ನು ಪಡೆಯುತ್ತಾರೆ. ಈ ಕಲಹದ ಪರಿಣಾಮವೇನೆಂದರೆ ಪೊಲೀಸರಿಗೆ ಅಥವಾ ನ್ಯಾಯಾಲಯಗಳಿಗೆ ದೂರು ಹೋಗುತ್ತವೆ. ನ್ಯಾಯಾಲಯಗಳಿಗೆ ಹೋಗಲು ಹರಿಜನರಿಗೆ ಆರ್ಥಿಕವಾಗಿ ಸೌಲಭ್ಯವಿಲ್ಲ. ಮತ್ತೆ ಪೊಲೀಸರಲ್ಲಿಗೆ ಹೋದರೆ ಉಪಯೋಗವಿಲ್ಲ. ಅನೇಕ ಸಾರಿ ನಮ್ಮ ದೂರುಗಳನ್ನು ವಿಚಾರಿಸುವುದೇ ಇಲ್ಲ. ಮತ್ತೆ ಕೆಲವು ಸಾರಿ, ಉನ್ನತ ಜಾತಿಯವರ ಪರವಾದ ತೀರ್ಮಾನ ದಾಖಲಾಗುತ್ತದೆ. ನಾವು ಪೊಲೀಸರಿಗೆ ಕೊಟ್ಟ ದೂರುಗಳಿಗೂ ಅದೇ ಗತಿಯಾಗುತ್ತದೆ. ಇದಕ್ಕೆ ಕಾರಣ ಎಲ್ಲಿದೆ ಎಂದರೆ, ಕೆಳವರ್ಗದ ಪೊಲೀಸರಲ್ಲಿ ಮಾನಸಿಕ ಪರಿವರ್ತನೆಯಾಗಿಲ್ಲ. ಹರಿಜನರ ಹಕ್ಕುಗಳನ್ನು ರಕ್ಷಿಸಬೇಕಾದಾಗ ಅವರಿಗೆ ಹರಿಜನರ ಹಕ್ಕುಗಳ ಅರಿವೇ ಇರುವಂತಿಲ್ಲ ಅಥವಾ ಅವನು ಸವರ್ಣೀಯ ಹಿಂದೂಗಳಿಂದ

ಪ್ರಭಾವಿತನಾಗಿರುತ್ತಾನೆ ಅಥವಾ ಅವನು ಪೂರ್ಣ ನಿರ್ಲಕ್ಷ್ಯದಿಂದ ಇರಲೂ ಸಾಧ್ಯ. ಇನ್ನೂ ಕೆಲವು ಸಾರಿ ಲಂಚದಿಂದಾಗಿ ಅವರು ಶ್ರೀಮಂತ ಜಾತಿವಾದಿಗಳ ಪರ ವಹಿಸುತ್ತಾರೆ" (ಹಿಂದೂ, ಮಾರ್ಚ್ ೭, ೧೯೩೮.)

ಇದರ ಅರ್ಥ, ಅಧಿಕಾರಿಗಳು ಹಿಂದೂಗಳ ಪರವಿದ್ದು ಅಸ್ಪೃಶ್ಯರಿಗೆ ವಿರೋಧವಾಗಿದ್ದಾರೆ. ಅವನ ಅಧಿಕಾರ ಅಥವಾ ನಿರ್ಣಯಕ್ಕೆ ಬಿಟ್ಟಾಗಲೆಲ್ಲ ಅವನು ಅಸ್ಪೃಶ್ಯರಿಗೆ ವಿರುದ್ಧವಾಗಿಯೇ ನಿರ್ಣಯಿಸುತ್ತಾರೆ.

ಪೊಲೀಸರು ಮತ್ತು ನ್ಯಾಯಾಧೀಶರು ಲಂಚಕೋರರಾಗಿರುತ್ತಾರೆ. ಅವರು ಕೇವಲ ಲಂಚಕೋರರಾಗಿದ್ದರೆ ಸ್ಥಿತಿ ಇಷ್ಟೊಂದು ಕೆಡುತ್ತಿರಲಿಲ್ಲ. ಏಕೆಂದರೆ ಲಂಚಕೋರ ಅಧಿಕಾರಿಯನ್ನು ಎರಡು ಕಡೆಯವರೂ ಕೊಂಡುಕೊಳ್ಳಬಹುದು. ಹೆಚ್ಚಿನ ದುರ್ದೈವದ ವಿಷಯವೆಂದರೆ ಪೊಲೀಸರು ಮತ್ತು ನ್ಯಾಯಾಧೀಶರು ಲಂಚಕೋರರಾಗಿರುವುದಕ್ಕಿಂತ ಹೆಚ್ಚಾಗಿ ಪಕ್ಷಪಾತಿಗಳಾಗಿದ್ದಾರೆ. ಹಿಂದೂಗಳ ವಿಚಾರದಲ್ಲಿ ಅವರಿಗೆ ಹೆಚ್ಚು ಒಲವಿರುವುದರಿಂದ ಅಸ್ಪೃಶ್ಯರಿಗೆ ಅವರಿಂದ ರಕ್ಷಣೆಯಾಗಲಿ ನ್ಯಾಯವಾಗಲಿ ದೊರೆಯದಂತಾಗಿದೆ. ಒಬ್ಬರ ವಿಚಾರದಲ್ಲಿ ಒಲವು ಮತ್ತೊಬ್ಬರಲ್ಲಿ ದ್ವೇಷವಿದ್ದಾಗ ಅದಕ್ಕೆ ಪರಿಹಾರವೇ ಇಲ್ಲ. ಪ್ರತಿಯೊಬ್ಬ ಹಿಂದೂವಿನಲ್ಲಿಯೂ ಹುಟ್ಟಿನಿಂದಲೆ ಬಂದಿರುವ ಸಾಮಾಜಿಕ ಮತ್ತು ಧಾರ್ಮಿಕ ವಿದ್ವೇಷದಲ್ಲಿ ಈ ಪಕ್ಷಪಾತ ಮನೆಮಾಡಿದೆ. ಪೊಲೀಸರು ಮತ್ತು ನ್ಯಾಯಾಧೀಶರಲ್ಲಿ ತಮ್ಮ ಹುಟ್ಟಿನಿಂದಲೇ ಬೆಳೆದು ಬಂದ ಉದ್ದೇಶ ಮತ್ತು ಆಸಕ್ತಿಯಿಂದಾಗಿ ಅಸ್ಪೃಶ್ಯರಲ್ಲಿ ಕಾಣುವ ಜೀವ ಚೈತನ್ಯ ವಿಚಾರದಲ್ಲಿ ಯಾವ ಅನುಕಂಪವೂ ಮೂಡುವುದಿಲ್ಲ. ಅಸ್ಪೃಶ್ಯರ ಬಯಕೆ, ನೋವು, ಆಸೆ, ಆಕಾಂಕ್ಷೆಗಳು ಇವರ ಮನಸ್ಸಿಗೆ ತಟ್ಟುವುದಿಲ್ಲ. ಅದರಿಂದಾಗಿ ಇವರು ಅಸ್ಪೃಶ್ಯರ ಬಯಕೆಗಳನ್ನು ನೇರವಾಗಿ ವಿರೋಧಿಸುತ್ತಾರೆ ಮತ್ತು ದ್ವೇಷಿಸುತ್ತಾರೆ. ಅಸ್ಪೃಶ್ಯರ ಆತ್ಮಪ್ರಜ್ಞೆ ಮತ್ತು ಆತ್ಮಗೌರವಕ್ಕೆ ಇಂಬುಕೊಡುವ ಅವರ ಎಲ್ಲ ಪ್ರಯತ್ನಗಳನ್ನು ಮೊಳಕೆಯಲ್ಲಿಯೇ ಚಿವುಟಿ ಹಾಕುತ್ತಾರೆ. ಜೊತೆಗೆ ಈ ಅಧಿಕಾರಿಗಳು ಹಿಂದೂಗಳ ಘನತೆ ಮತ್ತು ಗೌರವಗಳ ರಕ್ಷಣೆಗೆ ಮತ್ತು ಅಸ್ಪೃಶ್ಯರ ಮೇಲೆ ಅವರಿಗೆ ಅಧಿಕಾರ ಮತ್ತು ಹಿರಿಮೆ ಉಳಿಯಲು ನೆರವಾಗುತ್ತಾರೆ, ಹಿಂದೂಗಳು ಮತ್ತು ಅಸ್ಪೃಶ್ಯರ ನಡುವೆ ಯಾವುದೇ ಕಲಹವಾದಾಗಲೂ ಅವರು ಹಿಂದೂಗಳ ಪ್ರತಿನಿಧಿಯಂತೆ ನೇರವಾಗಿ, ನಾಚಿಕೆಯಿಲ್ಲದೆ ವರ್ತಿಸುತ್ತ ನ್ಯಾಯವೋ ಅನ್ಯಾಯವೋ ಹೇಗಾದರೂ ಮಾಡಿ "ಅಸ್ಪೃಶ್ಯರಿಗೆ ಪಾಠ ಕಲಿಸಿ" ಅವರನ್ನು ಸ್ವಸ್ಥಾನದಲ್ಲಿಡಬೇಕೆಂಬ ಹಿಂದೂಗಳ ಪ್ರಯತ್ನದಲ್ಲಿ ಭಾಗಿಗಳಾಗುತ್ತಾರೆ.

ಇದೆಲ್ಲದರ ಅತಿ ಕೆಟ್ಟ ಸ್ವರೂಪವೇನೆಂದರೆ ಈ ಎಲ್ಲ ರೀತಿಯ ಅನ್ಯಾಯ ಮತ್ತು ಕಿರುಕುಳವನ್ನು ಕಾನೂನಿನ ವ್ಯಾಪ್ತಿಯಲ್ಲಿಯೇ ಅವರು ನಡೆಸುತ್ತಾರೆ. ಒಬ್ಬ ಹಿಂದೂವು ಕಾನೂನಿಗೆ ವಿರೋಧವಾಗದ ರೀತಿಯಲ್ಲಿ ಅಸ್ಪೃಶ್ಯನೊಬ್ಬನನ್ನು ತನ್ನ ಕೆಲಸಕ್ಕೆ ಕರೆಯದೆ ಇರಬಹುದು. ಅವನಿಗೆ ಯಾವ ವಸ್ತುವನ್ನೂ ಮಾರದಿರಬಹುದು. ಅವನನ್ನು ತನ್ನ ಭೂಮಿಯ ಒಕ್ಕಲುತನದಿಂದ ಬಿಡಿಸಬಹುದು ಮತ್ತು ತನ್ನ ಹೊಲದ ಮೂಲಕ ದನವನ್ನು ಹೊಡೆದುಕೊಂಡು ಹೋಗದಂತೆ ತಡೆಯಬಹುದು. ಯಾವ ಉದ್ದೇಶದಿಂದ ಇವನು ಹೀಗೆಲ್ಲಾ ಮಾಡುತ್ತಾನೆಂಬುದನ್ನು ಕಾನೂನು ಗಮನಿಸುವುದಿಲ್ಲ. ಇದರಿಂದ ಅಸ್ಪೃಶ್ಯನಿಗೆ ಏನೆಲ್ಲ ತೊಂದರೆಯಾಗುತ್ತವೆಂಬುದನ್ನು ಕಾನೂನು ಲಕ್ಷಿಸುವುದಿಲ್ಲ. ಪೊಲೀಸರು ತಮ್ಮ ಅಧಿಕಾರ ಮತ್ತು ಬಲವನ್ನು ದುರುಪಯೋಗಪಡಿಸಿಕೊಳ್ಳಬಹುದು. ಅವರು ಉದ್ದೇಶಪೂರ್ವಕವಾಗಿಯೇ ದಾಖಲೆಗಳಲ್ಲಿ ಇಲ್ಲದ್ದನ್ನು ಸೇರಿಸಿ ಅಥವಾ ವಿರುದ್ಧವಾದದ್ದನ್ನು ಸೃಷ್ಟಿಸಿ ಅವುಗಳನ್ನು ಹುಸಿಮಾಡಬಹುದು. ತನಗೆ ಆಸಕ್ತಿ ಇರುವ ಪಕ್ಷದವರಿಗೆ ಅವರಿಗೆ ಬೇಕಾಗಿರುವ ಸಾಕ್ಷ್ಯಾಧಾರಗಳನ್ನು ಬಹಿರಂಗಪಡಿಸಬಹುದು. ಅವರನ್ನು ಬಂಧಿಸಲು ನಿರಾಕರಿಸಬಹುದು. ಅ ವ್ಯಾಜ್ಯದ ಸ್ವರೂಪವನ್ನು ಕೆಡಿಸಲು ನೂರೊಂದು ರೀತಿಯಲ್ಲಿ ನೆರವಾಗಬಹುದು. ಇದರಿಂದ ತನಗೆ ಹಾನಿಯಾದೀತೆಂಬ ಸ್ವಲ್ಪವೂ ಭಯವಿಲ್ಲದೆ ಅವನು ಈ ಎಲ್ಲ ಕೆಲಸಗಳನ್ನು ಮಾಡಬಹುದು.

ಕಾನೂನಿನಿಂದ ತಪ್ಪಿಸಿಕೊಳ್ಳುವ ಉಪಾಯಗಳು ಬೇಕಾದಷ್ಟಿವೆ ಮತ್ತು ಅವು ಅವನಿಗೆ ತಿಳಿದಿರುತ್ತವೆ. ನ್ಯಾಯಾಧೀಶನು ಪೊಲೀಸಿನವರ ಸ್ವಂತ ವಿವೇಚನೆಗೆ ಬೇಕಾದಷ್ಟು ಅವಕಾಶಗಳನ್ನು ಕೊಟ್ಟಿರುತ್ತಾನೆ. ಆ ಅವಕಾಶಗಳನ್ನು ಬಳಸುವ ಸ್ವಾತಂತ್ರ್ಯ ಇವನಿಗೆ ಇರುತ್ತದೆ. ಆ ಮೊಕದ್ದಮೆಯ ತೀರ್ಮಾನವು ಸಾಕ್ಷಿಯು ದೊರಕಿಸುವ ಆಧಾರವನ್ನು ಅವಲಂಬಿಸಿರುತ್ತದೆ. ಮೊಕದ್ದಮೆಯ ತೀರ್ಮಾನ ಸಾಕ್ಷಿಯು ನಂಬಿಕಸ್ಥನೆ ಅಲ್ಲವೆ ಎಂಬುದನ್ನು ಅವಲಂಬಿಸಿರುತ್ತದೆ. ನ್ಯಾಯಾಧೀಶರು ಒಂದು ಪಕ್ಷದ ಸಾಕ್ಷಿಯನ್ನು ನಂಬಿಕಸ್ಥನೆಂದು ನಂಬಿ, ಮತ್ತೊಂದು ಪಕ್ಷವನ್ನು ಬಿಡಬಹುದು. ಅವನು ಒಂದು ಪಕ್ಷವನ್ನು ನಂಬುವುದರಲ್ಲಿ ನಿರಂಕುಶಮತಿಯಾಗಿರಬಹುದು. ಅದು ಅವನ ಸ್ವಂತ ವಿವೇಚನೆಗೆ ಬಿಟ್ಟಿದ್ದರಿಂದ ಅದರಲ್ಲಿ ಯಾರೂ ಪ್ರವೇಶಿಸುವಂತಿಲ್ಲ. ನ್ಯಾಯಾಧೀಶರು ತಮ್ಮ ಈ ವಿವೇಚನೆಯನ್ನು ಅಸ್ಪೃಶ್ಯರಿಗೆ ವಿರೋಧವಾಗುವ ರೀತಿಯಲ್ಲಿ ಬಳಸಿರುವ ನಿದರ್ಶನಗಳು ಬೇಕಾದಷ್ಟಿವೆ. ಅಸ್ಪೃಶ್ಯರ ಸಾಕ್ಷಿಗಳು ಎಷ್ಟೇ ಸತ್ಯಸಂಧರಾಗಿದ್ದರೂ ನ್ಯಾಯಾಧೀಶರು "ನಾನು ಸಾಕ್ಷಿಯನ್ನು ನಂಬಲಾರೆ" ಎಂಬ ಸಾಮಾನ್ಯ ತೀರ್ಮಾನಕ್ಕೆ ಬಂದಿದ್ದರೆ ಯಾರೂ ಅವರ ಈ ವಿವೇಚನೆಯನ್ನು ಪ್ರಶ್ನಿಸುವುದಿಲ್ಲ. ಯಾವ ಶಿಕ್ಷೆಯನ್ನು ವಿಧಿಸಬೇಕೆಂಬುದೂ ನ್ಯಾಯಾಧೀಶರ ವಿವೇಚನೆಗೆ ಸೇರುತ್ತದೆ. ಮೇಲಿನ ನ್ಯಾಯಾಲಯದಲ್ಲಿ ಅಪೀಲು ಮಾಡುವಂತಹ ತೀರ್ಮಾನಗಳಿರುತ್ತವೆ. ಅಪೀಲು ಮಾಡದಂತಹ ತೀರ್ಮಾನಗಳು ಇರುತ್ತವೆ. ಅಪೀಲು ಮಾಡುವುದು ಪರಿಹಾರವನ್ನು ಪಡೆಯಲು ಒಂದು ಮಾರ್ಗ. ನ್ಯಾಯಾಧೀಶನು ಅಪೀಲು ಮಾಡಲು ಅವಕಾಶವಿಲ್ಲದಂತಹ ತೀರ್ಪನ್ನು ಇತ್ತು, ಯಾವ ಪರಿಹಾರಕ್ಕೂ ಅವಕಾಶವಿಲ್ಲದಂತೆ ಮಾಡಬಹುದು.

ಇಷ್ಟೆಲ್ಲ ವಿರುದ್ಧ ಶಕ್ತಿಗಳು ಹೋರಾಟಕ್ಕಿಳಿದ ಅಸ್ಪೃಶ್ಯರ ಎದುರು ಗರಿಗೆದರಿ ನಿಂತಿವೆ. ಇವುಗಳನ್ನು ನಿವಾರಿಸಲು ಮಾರ್ಗವೇ ಇಲ್ಲ. ಏಕೆಂದರೆ, ಕಾನೂನನ್ನು ಬದಿಗೊತ್ತಲು ವ್ಯವಸ್ಥಿತವಾಗಿ ಸಿದ್ಧಗೊಂಡಿರುವ ಸಮಾಜವನ್ನು ಕಾನೂನಿನ ಮೂಲಕ ಶಿಕ್ಷಿಸಲು ಸಾಧ್ಯವಿಲ್ಲ.

## V

ಈ ರೀತಿ ನಿವಾರಿಸಲಾರದ ಕಷ್ಟಗಳನ್ನು ಸ್ವಲ್ಪಮಟ್ಟಿಗೆ ಕಡಿಮೆಮಾಡಲು ಅಸ್ಪೃಶ್ಯರಿಗೆ ಒಂದು ಮಾರ್ಗ ತೆರೆದಿದ್ದಿತು. ಅದೇ ರಾಜಕೀಯದ ಮಾರ್ಗ ಮತ್ತು ರಾಜಕೀಯ ಶಕ್ತಿಯನ್ನು ಸಮರ್ಥವಾಗಿ ಬಳಸಬೇಕೆಂಬ ಮಾರ್ಗ. ಆದರೆ ವಿಚಾರದಲ್ಲಿ ಅಸ್ಪೃಶ್ಯರನ್ನು ದಾರಿ ತಪ್ಪಿಸಲಾಗಿದೆ.

* * * *

## ಅಧ್ಯಾಯ ೨೩

# ಅವರ ಬಯಕೆಗಳು ನಮಗೆ ಕಾನೂನಿದ್ದಂತೆ

೧) ಧರ್ಮಕ್ಕೆ ಅಧರ್ಮ
೨) ಮನು ಮತ್ತು ಧರ್ಮ
೩) ಆಧುನಿಕ ಪ್ರತಿರೂಪಗಳು
೪) ನಡತೆ ಮತ್ತು ಮನೋಧರ್ಮದ ಮೇಲೆ ಧರ್ಮದ ಪ್ರಭಾವ

ಅಸ್ಪೃಶ್ಯರ ಹೋರಾಟವನ್ನು ದಮನಮಾಡಲು ಹಿಂದೂಗಳು ಅನುಸರಿಸಿದ ಅನ್ಯಾಯದ ಮಾರ್ಗಗಳ ವಿಚಾರವನ್ನು ಯಾರಾದರೂ ಓದಿದರೆ ಅದರಿಂದ ಅವರಿಗೆ ಅಸಹ್ಯವಾಗುವುದು ಖಂಡಿತ. ಹಿಂದೂಗಳು ಇಷ್ಟೊಂದು ಅನ್ಯಾಯದ ಮಾರ್ಗವನ್ನು ಏಕೆ ಬಳಸಿರಬೇಕು ಎಂದು ಯಾರಾದರೂ ಖಂಡಿತ ಕೇಳಿಯೇ ಕೇಳುತ್ತಾರೆ ಮತ್ತು ಇಂತಹ ಪ್ರಶ್ನೆಯ ಔಚಿತ್ಯವನ್ನು ಯಾರೂ ಅಲ್ಲಗಳೆಯುವುದಿಲ್ಲ. ಒಬ್ಬ ಅಸ್ಪೃಶ್ಯನು ಒಂದು ಶುಭ್ರವಾದ ಬಟ್ಟೆಯನ್ನು ಧರಿಸಿದರೆ ಅವನನ್ನು ಏಕೆ ಪೀಡಿಸಬೇಕು ಮತ್ತು ಅದರಿಂದ ಹಿಂದೂಗಳಿಗಾಗುವ ನೋವು ಏನು? ಅಸ್ಪೃಶ್ಯರು ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸಿದರೆ ಅವರನ್ನೇಕೆ ಕಾಡಿಸಬೇಕು? ಅಸ್ಪೃಶ್ಯನೊಬ್ಬನು ತನ್ನ ಮನೆಗೆ ಹೆಂಚಿನ ಮೇಲ್ಛಾವಣಿಯನ್ನು ಹಾಕಿದರೆ ಅವನಿಗೇಕೆ ಕಿರುಕುಳ ಕೊಡಬೇಕು? ಅದರಿಂದ ಹಿಂದೂಗಳಿಗಾಗುವ ಹಾನಿ ಏನು? ಅಸ್ಪೃಶ್ಯನು ಸತ್ತ ಪ್ರಾಣಿಯನ್ನು ಹೊತ್ತುಕೊಂಡು ಹೋಗಿ ಅದರ ಕೊಳೆತ ಮಾಂಸವನ್ನು ತಿನ್ನುವಂತೆ ಮತ್ತು ಆಹಾರಕ್ಕಾಗಿ ಮನೆ ಮನೆಯಲ್ಲಿ ಬೇಡುವಂತೆ ಬಲವಂತ ಮಾಡಲು ಕಾರಣವೇನು? ಈ ಆಚರಣೆಗಳನ್ನು ಅಸ್ಪೃಶ್ಯರು ತೊರೆದರೆ ಹಿಂದೂಗಳಿಗಾಗುವ ನಷ್ಟವೇನು? ಅಸ್ಪೃಶ್ಯನು ತನ್ನ ಧರ್ಮವನ್ನು ಬದಲಾಯಿಸಲು ಬಯಸಿದರೆ ಹಿಂದೂಗಳೇಕೆ ಅಡ್ಡಿ ಬರಬೇಕು? ಅವನ ಮತಾಂತರದಿಂದ ಹಿಂದೂಗಳೇಕೆ ಗಾಬರಿಯಾಗಿ ಕೋಪಗೊಳ್ಳಬೇಕು? ಅಸ್ಪೃಶ್ಯನೊಬ್ಬನು ಗಂಭೀರವಾದ ಮತ್ತು ಗೌರವಯುತವಾದ ಹೆಸರಿನಿಂದ  ತನ್ನನ್ನು ಕರೆದುಕೊಂಡರೆ ಹಿಂದೂಗಳಿಗೇಕೆ ಅಸಹ್ಯವೆನಿಸಬೇಕು? ಅಸ್ಪೃಶ್ಯನು ಒಂದು ಒಳ್ಳೆಯ ಹೆಸರಿಟ್ಟುಕೊಂಡರೆ ಹಿಂದೂಗಳಿಗಾಗುವ ನಷ್ಟವೇನು? ಅಸ್ಪೃಶ್ಯನು ಹೆದ್ದಾರಿಗೆ ಅಭಿಮುಖವಾಗಿ ಮನೆಕಟ್ಟಿದರೆ ಹಿಂದೂಗಳೇಕೆ ಅದಕ್ಕೆ ಅಡ್ಡಿಪಡಿಸಬೇಕು? ಅದರಿಂದ ಇವರಿಗೇನು ತೊಂದರೆ? ಕೆಲವು ನಿರ್ದಿಷ್ಟ ದಿನಗಳಲ್ಲಿ ಅಸ್ಪೃಶ್ಯನ ಶಬ್ದ ಹಿಂದೂಗಳ ಕಿವಿಯ ಮೇಲೆ ಬಿದ್ದರೆ ಏನು ತಪ್ಪು? ಅದರಿಂದ ಅವರೇನೂ ಕಿವುಡರಾಗುವುದಿಲ್ಲ. ಅಸ್ಪೃಶ್ಯನು ಯಾವುದಾದರೂ ಉದ್ಯೋಗವನ್ನು ಹಿಡಿದರೆ, ಒಂದು ಅಧಿಕಾರವನ್ನು ಪಡೆದರೆ, ಒಂದು ಸ್ವಲ್ಪ ಭೂಮಿಯನ್ನು ಕೊಂಡರೆ, ವ್ಯಾಪಾರದಲ್ಲಿ ತೊಡಗಿದರೆ, ಆರ್ಥಿಕವಾಗಿ ಸ್ವತಂತ್ರನಾಗಿ ಶ್ರೀಮಂತನೆನಿಸಿದರೆ, ಹಿಂದೂಗಳಿಗೆ ಏಕೆ ಅಸಹನೆಯಾಗಬೇಕು? ಹಿಂದೂಗಳು ಅವರು ಅಧಿಕಾರಿಗಳಾಗಲಿ ಅಥವಾ ಅಧಿಕಾರೇತರರಾಗಲಿ, ಎಲ್ಲರೂ ಒಂದಾಗಿ ಅಸ್ಪೃಶ್ಯರನ್ನು ತುಳಿಯಲು ಏಕೆ ಯತ್ನಿಸಬೇಕು? ಪರಸ್ಪರ ತಮ್ಮಲ್ಲೇ ಕಚ್ಚಾಡುವ ಅನೇಕ ಜಾತಿಗಳು ಜೊತೆಗೂಡಿ, ಹಿಂದೂ ಎಂಬ ಹೆಸರಿನಲ್ಲಿ ಅಸ್ಪೃಶ್ಯರನ್ನು ತುಳಿಯಲು ಇವರು ಏಕೆ ಸಂಚು ಮಾಡಬೇಕು?

ಇದೆಲ್ಲಾ ಕಟ್ಟುಕಥೆಯಂತೆ ತೋರಬಹುದು. ಹಿಂದಿನ ಅಧ್ಯಾಯದಲ್ಲಿ ಕಾಣುವ ಹಿಂದೂಗಳ ದಬ್ಬಾಳಿಕೆಯ ಸಂಗತಿಗಳನ್ನು ಓದಿದವರಿಗೆ ತಿಳಿಯುತ್ತದೆ, ಈ ಪ್ರಶ್ನೆಗಳ ಹಿಂದೆ ವಾಸ್ತವಿಕ ಘಟನೆಗಳ ಆಧಾರವಿದೆ ಎಂಬುದು. ವಾಸ್ತವಿಕ ಸಂಗತಿಗಳು ಕಟ್ಟುಕಥೆಗಳಿಗಿಂತಲೂ ಆಶ್ಚರ್ಯಕರವಾಗಿವೆ. ಸಾಮಾನ್ಯವಾಗಿ ಹೇಡಿಗಳೆನಿಸುವಷ್ಟು ದುರ್ಬಲರಾದ ಹಿಂದೂಗಳು ಇಂತಹ ಕೆಲಸಗಳನ್ನು ಮಾಡಿರುವುದು ಮಹದಾಶ್ಚರ್ಯದ ವಿಚಾರ. ಸಾಧಾರಣವಾಗಿ ಹಿಂದೂಗಳು ಬಹು ಮೃದು ಸ್ವಭಾವದವರು. ಮಹಮದೀಯರಂತೆ ಕ್ರೌರ್ಯ ಅಥವಾ ಉಗ್ರ ಸ್ವಭಾವದವರಲ್ಲ. ಇಂತಹ ಮೃದು ಸ್ವಭಾವದ ಜನ ಅಸ್ಪೃಶ್ಯರ ಬಂಡಾಯವನ್ನು ನೋಡಿ ಹುಚ್ಚೆತ್ತಿ ನಾಚಿಕೆ ಅಥವಾ ಮರುಕವಿಲ್ಲದೆ ಹೆಂಗಸರು ಮಕ್ಕಳ ಮೇಲೆ ಅನ್ಯಾಯವಾಗಿ ಲೂಟಿ, ದಂಗೆ ಮತ್ತು ಹಿಂಸೆಗಿಳಿಯಬೇಕಾದರೆ, ಇದಕ್ಕೆ ಪ್ರೇರಕವಾದ ಮತ್ತಾವುದೋ ಆಳವಾದ ಕಾರಣವಿರಬೇಕು.

ಇಂತಹ ಆಶ್ಚರ್ಯದ ಮತ್ತು ಅಮಾನವೀಯ ಕೃತ್ಯಕ್ಕೆ ಏನಾದರೊಂದು ವಿವರಣೆ ಇರಲೇಬೇಕು. ಅದು ಏನು?

ನೀವು ಯಾರಾದರೂ ಒಬ್ಬ ಹಿಂದೂವನ್ನು, ನೀವು ಈ ರೀತಿ ಏಕೆ ಅನಾಗರಿಕರಾಗಿ ನಡೆದುಕೊಳ್ಳುತ್ತೀರಿ, ಅಸ್ಪೃಶ್ಯರು ಶುಚಿಯಾದ ಗೌರವಾನ್ವಿತ ಜೀವನವನ್ನು ನಡೆಸಲು ಪ್ರಯತ್ನಿಸಿದರೆ ನಿಮಗೇಕೆ ಇಷ್ಟು ಕೋಪ ಎಂದು ಕೇಳಿದರೆ ಅವನು ಕೊಡುವ ಉತ್ತರ ತುಂಬಾ ಸರಳವಾದದ್ದು. ಅವನು ಹೇಳುತ್ತಾನೆ "ನೀನು ಹೇಳೋ ಅಸ್ಪೃಶ್ಯರ ಸುಧಾರಣೆ ಅದು ನಿಜವಾಗಿಯೂ ಸುಧಾರಣೆಯಲ್ಲ; ಅದು ನಮ್ಮ ಧರ್ಮದ ಮೇಲಿನ ಅವರ ಆಕ್ರಮಣ". ಅವನ ಈ ಧರ್ಮ ಎಲ್ಲಿದೆ? ಎಂದು ನೀವು ಅವನನ್ನು ಕೇಳಿದರೆ ಅವರ ಉತ್ತರ ಮತ್ತಷ್ಟು ಸರಳ "ನಮ್ಮ ಧರ್ಮವು ಶಾಸ್ತ್ರಗ್ರಂಥದಲ್ಲಿ ಹೇಳಲಾಗಿದೆ" ಎಂದು. ನಿಷ್ಪಕ್ಷಪಾತ ಮನಸ್ಕನ ದೃಷ್ಟಿಯಲ್ಲಿ ಹಿಂದೂಗಳು ನಡೆಸುವ ಈ ದಮನ ಕಾರ್ಯವು, ಮೂಲತಃ ಕೆಟ್ಟದಾದ ಹಿಂಸೆ, ಲೂಟಿ, ಸುಲಿಗೆಯಿಂದ ಕೂಡಿದ್ದು. ಇದು ಹಿಂದೂಗಳ ಮಾತಿನಲ್ಲಿಯೇ ಹೇಳುವುದಾದರೆ, ಅಧರ್ಮ ಎಂದಾಗುತ್ತದೆ. ಆದರೆ ಹಿಂದೂಗಳು ಅದನ್ನು ಒಪ್ಪುವುದಿಲ್ಲ. ಹಿಂದೂಗಳ ನಂಬಿಕೆಯೇನೆಂದರೆ ಅಸ್ಪೃಶ್ಯನು ಧರ್ಮಶಾಸನವನ್ನು ಮೀರಿದ್ದರಿಂದ, ಧರ್ಮದ ರಕ್ಷಣೆಯ ಪವಿತ್ರ ಕಾರ್ಯದಲ್ಲಿ, ನಾವು ಈ ರೀತಿ ಮಾಡಬೇಕಾಗಿದೆ ಎಂಬುದು. ಹಿಂದೂಗಳ ಮನೋಧರ್ಮವನ್ನು ಬಲ್ಲವರು ಈ ಮಾತಿನ ಸತ್ಯವನ್ನು ನಿರಾಕರಿಸಲಾರರು. ಇದರಿಂದ ಮತ್ತೊಂದು ಪ್ರಶ್ನೆ ಮುಂದೆ ಬರುತ್ತದೆ : ಈ ಶಾಸ್ತ್ರಗಳು ವಿಧಿಸಿರುವ ಧರ್ಮಗಳು ಯಾವುವು ಮತ್ತು ಸಾಮಾಜಿಕ ಸಂಬಂಧಗಳ ನಿಯಮಗಳನ್ನು ಅವು ಹೇಗೆ ನಿರ್ಣಯಿಸುತ್ತವೆ? ಎಂಬುದು.

## II

ಧರ್ಮ ಎನ್ನುವ ಪದ ಸಂಸ್ಕೃತ ಮೂಲದ್ದು. ನಿರ್ದಿಷ್ಟವಾದ ನಿರೂಪಣೆಗೆ ನಿಲುಕದ ಸಂಸ್ಕೃತ ಪದಗಳಲ್ಲಿ ಇದೂ ಒಂದು. ಪುರಾತನ ಕಾಲದಲ್ಲಿ ಈ ಪದವನ್ನು ಇದಕ್ಕೆ ಸಮೀಪವಾದ ಅನೇಕ ಅರ್ಥಗಳಲ್ಲಿ ಬಳಸಲಾಗಿದೆ. ಧರ್ಮ ಎನ್ನುವ ಶಬ್ದದ ಅರ್ಥ ಹೇಗೆ ಕಾಲಕಾಲಕ್ಕೆ ಪರಿವರ್ತನೆಗೊಂಡಿದೆ[೧] ಎಂಬುದನ್ನು ಕಾಣಬಹುದು. ಅದರ ವಿವರಣೆಗೆ ಇದು ಸ್ಥಳವಲ್ಲ. ಧರ್ಮ ಎನ್ನುವ ಪದ ಬಹುಬೇಗ ಇಂದಿನ ಅದರ ನಿರ್ದಿಷ್ಟವಾದ ಅರ್ಥವನ್ನು ಪಡೆದುಕೊಂಡಿತು ಎಂಬುದನ್ನು ಹೇಳಿದರೆ ಸಾಕು. ಧರ್ಮ ಎಂಬ ಪದದಲ್ಲಿ ಒಬ್ಬ ಮನುಷ್ಯನ ಹಕ್ಕುಗಳು, ಕರ್ತವ್ಯ ಮತ್ತು ಹೊಣೆಗಾರಿಕೆಗಳು ಅವನು ಹಿಂದೂ ಸಮಾಜದ ಸದಸ್ಯನಾಗಿ,

---

೧. ಪಿ. ವಿ. ಕಾಣೆಯವರ *ಹಿಸ್ಟರಿ ಆಫ್ ಧರ್ಮಶಾಸ್ತ್ರ*, ನೋಡಿ ಪು. ೧–೨

ಅವನ ಜಾತಿ ಮತ್ತು ಆಶ್ರಮಕ್ಕನುಗುಣವಾಗಿ ನಿರ್ವಹಿಸಬೇಕಾದ ನೈತಿಕ ಜವಾಬ್ದಾರಿಗಳೂ ಸೇರುತ್ತವೆ.

ಎಲ್ಲ ಹಿಂದೂಗಳೂ ಒಪ್ಪಿರುವಂತೆ ಧರ್ಮದ ಪ್ರಮುಖ ಆಧಾರಗಳೇನೆಂದರೆ, ವೇದ, ಸ್ಮೃತಿ ಮತ್ತು ಸಂಪ್ರದಾಯಗಳು. ಧರ್ಮದ ವಿಚಾರದಲ್ಲಿ ವೇದ ಮತ್ತು ಸ್ಮೃತಿಗಳ ನಡುವೆ ಈ ವ್ಯತ್ಯಾಸವಿದೆ. ಇಂದು ನಾವು ಕಾಣುವ ಧರ್ಮದ ಬೇರು, ವೇದಗಳಲ್ಲಿ ಕಾಣುವುದರಿಂದ ವೇದಗಳೇ ಧರ್ಮದ ಮೂಲ ಎಂದು ಹೇಳುವುದರಲ್ಲಿ ಯಾವುದೇ ಸಂಶಯವೂ ಇಲ್ಲ. ಆದರೆ ವೇದಗಳು ತಾವು ಧರ್ಮದ ನಿರೂಪಣ ಗ್ರಂಥಗಳು ಎಂದು ಹೇಳಿಕೊಳ್ಳುವುದಿಲ್ಲ. ಧರ್ಮ (ವಿಧಿಗಳನ್ನು) ಕುರಿತಂತೆ ನಿರ್ದಿಷ್ಟವಾದ ವಿವರಣೆ ಅಲ್ಲಿ ಕಾಣುವುದಿಲ್ಲ. ಧರ್ಮಕ್ಕೆ ಸಂಬಂಧಿಸಿದ ಕೆಲವು ಪ್ರಸಂಗಗಳನ್ನು ಕುರಿತಂತೆ ಬಿಡಿಬಿಡಿಯಾದ ಮಾತುಗಳು ಅಲ್ಲಿ ಕಾಣುತ್ತವೆ. ಸ್ಮೃತಿಗಳಲ್ಲಾದರೋ, ಧರ್ಮವನ್ನು ಕುರಿತಂತೆ ವಿಧ್ಯುಕ್ತವಾದ ನಿರೂಪಣೆ ದೊರೆಯುತ್ತದೆ. ನಾವು ಅಲ್ಲಿ ಧಾರ್ಮಿಕ ಶಾಸನಗಳನ್ನೇ ಕಾಣುತ್ತೇವೆ. ನಿಜವಾದ ಅರ್ಥದಲ್ಲಿ ಅವು ಧಾರ್ಮಿಕ ಶಾಸನಗಳೆನಿಸುತ್ತವೆ. ಧರ್ಮ ಅಧರ್ಮಗಳ ನಡುವೆ ತಿಕ್ಕಾಟ ಬಂದಾಗ ಸ್ಮೃತಿಗಳ ಸಹಾಯದಿಂದ ಅದನ್ನು ಪರಿಹರಿಸಬಹುದು. ಸ್ಮೃತಿಗಳು ಧರ್ಮದ ಮೂಲಗಳೆನಿಸಿದ್ದು, ಧರ್ಮಾಧರ್ಮವನ್ನು ನಿರ್ಣಯಿಸುವ ಸಾಧನವಾಗಿರುವುದರಿಂದ ಅವುಗಳನ್ನು ಧರ್ಮವನ್ನು ವಿಧಿಸಬಲ್ಲ ಧರ್ಮಶಾಸ್ತ್ರಗಳೆಂದು ಕರೆಯಲಾಗಿದೆ.

ಪುರಾತನ ಕಾಲದಿಂದ ಬೆಳೆದುಬಂದಿರುವ ಸ್ಮೃತಿಗಳ ಸಂಖ್ಯೆಯನ್ನು ನಾನಾ ರೀತಿಯಲ್ಲಿ ಅಂದಾಜು ಮಾಡಲಾಗಿದೆ – ಅತಿ ಕಡಿಮೆ ಸಂಖ್ಯೆ ಐದು ಮತ್ತು ಅತಿ ಹೆಚ್ಚು ಸಂಖ್ಯೆ ನೂರು. ಈ ಎಲ್ಲ ಸ್ಮೃತಿಗಳೂ ಒಂದೇ ರೀತಿಯ ಪ್ರಮಾಣಗಳೆನಿಸಿಲ್ಲ ಎಂಬ ಅಂಶವನ್ನು ನಾವು ಮುಖ್ಯವಾಗಿ ಗಮನಿಸಬಹುದು. ಅವುಗಳಲ್ಲಿ ಅನೇಕವು ಅಸ್ಪಷ್ಟವಾಗಿವೆ. ಅವುಗಳಲ್ಲಿ ಕೆಲವನ್ನು ಮಾತ್ರ ಪ್ರಮಾಣಗ್ರಂಥಗಳೆಂದು ಗುರುತಿಸಿ, ಅವುಗಳಿಗೆ ಭಾಷ್ಯಗಳನ್ನು ಬರೆಯಲಾಗಿದೆ. ಸ್ಮೃತಿಗಳಿಗೆ ಬರೆಯಲಾದ ಭಾಷ್ಯಗಳನ್ನಾಧರಿಸಿ ಸ್ಮೃತಿಗಳ ಪ್ರಾಮುಖ್ಯ ಮತ್ತು ಹಿರಿಮೆಯನ್ನು ಗುರುತಿಸುವುದಾದರೆ ಆಗ ಮನುಸ್ಮೃತಿ, ಯಾಜ್ಞವಲ್ಕ್ಯಸ್ಮೃತಿ ನಾರದಸ್ಮೃತಿ– ಇವುಗಳನ್ನು ಪ್ರಮಾಣಬದ್ಧವೆಂದು ಕರೆಯಬಹುದು. ಅವುಗಳಲ್ಲಿ ಮನುಸ್ಮೃತಿಗೆ ಅತ್ಯಂತ ಹಿರಿದಾದ ಸ್ಥಾನವಿದೆ. ಎಲ್ಲ ಧರ್ಮಕ್ಕೂ ಅದು ಮೂಲಾಧಾರ.

ಹಿಂದೂಗಳು ಧರ್ಮದ ಹೆಸರಿನಲ್ಲಿ ಅಸ್ಪೃಶ್ಯರ ಮೇಲೆ ನಡೆಸುವ ಹೋರಾಟದ ಸರಿಯಾದ ಅರಿವು ಆಗಬೇಕಾದರೆ, ಸ್ಮೃತಿಗಳಲ್ಲಿ ಅದರಲ್ಲಿಯೂ ಮುಖ್ಯವಾಗಿ ಮನುಸ್ಮೃತಿಯಲ್ಲಿ ಹೇಳಿರುವ ಧರ್ಮಶಾಸನಗಳಾವುವು ಎಂಬುದನ್ನು ತಿಳಿಯಬೇಕು. ಈ ಶಾಸನಗಳ ಅರಿವಿಲ್ಲದಿದ್ದರೆ ಅಸ್ಪೃಶ್ಯರ ಬಂಡಾಯವನ್ನು ಹಿಂದೂಗಳು ಏಕೆ ವಿರೋಧಿಸುತ್ತಾರೆ ಎಂಬುದರ ಸರಿಯಾದ ಅರಿವು ನಮಗಾಗುವುದಿಲ್ಲ. ನಮ್ಮ ಈ ಉದ್ದೇಶಕ್ಕೆ ನಾವು ಸ್ಮೃತಿಗಳಲ್ಲಿ ಹೇಳಿರುವ ಧರ್ಮಶಾಸ್ತ್ರದ ಎಲ್ಲ ಶಾಖೆಗಳ ಪರಿಚಯವನ್ನು ಮಾಡಿಕೊಳ್ಳಬೇಕಾಗಿಲ್ಲ. ಆಧುನಿಕ ಪರಿಭಾಷೆಯಲ್ಲಿ ಹೇಳುವುದಾದರೆ ವ್ಯಕ್ತಿಗತವಾದ ಕಾನೂನು ಅಂದರೆ ವ್ಯಕ್ತಿಯ ಸ್ಥಾನಮಾನಗಳಿಗೆ ಅನುಗುಣವಾಗಿ ಅವನ ಹಕ್ಕುಗಳು ಮತ್ತು ಕರ್ತವ್ಯಗಳಿಗೆ ಸಂಬಂಧಿಸಿದ ಧರ್ಮಶಾಸ್ತ್ರದ ವಿಧಿ ನಿಷೇಧಗಳನ್ನು ನಾವು ತಿಳಿದರೆ ಸಾಕು.

ಆದ್ದರಿಂದ ಮನು ಗುರುತಿಸಿದ ಸಾಮಾಜಿಕ ವ್ಯವಸ್ಥೆ ಮತ್ತು ಆ ವ್ಯವಸ್ಥೆಯ ವಿವಿಧ ವರ್ಗದ ಜನರಿಗೆ ಅವನು ವಿಧಿಸಿದ ಹಕ್ಕುಗಳು ಮತ್ತು ಕರ್ತವ್ಯಗಳನ್ನು ಕುರಿತಾದ ಮೂಲದಲ್ಲಿನ ಅವನ ಮಾತುಗಳನ್ನು, ಮನುಸ್ಮೃತಿಯಿಂದಲೇ ನಾನು ಇಲ್ಲಿ ಪುನರುಚ್ಚರಿಸುತ್ತೇನೆ.

ಮನು ಸೂಚಿಸಿರುವ ಸಾಮಾಜಿಕ ಸ್ವರೂಪವನ್ನು ಬಹುಪಾಲು ಜನ ಸರಿಯಾಗಿ ಅರ್ಥಮಾಡಿಕೊಂಡಿಲ್ಲವಾದ್ದರಿಂದ, ನಾವು ಆ ತಪ್ಪು ಮಾಡದಂತೆ ಎಚ್ಚರ ವಹಿಸಬೇಕು. ಸಮಾಜವನ್ನು

ನಾಲ್ಕು ನಿರ್ದಿಷ್ಟ ಭಾಗಗಳಾಗಿ ವಿಂಗಡಿಸುವಂತಹ ಚಾತುರ್ವರ್ಣವೆಂಬ ಸಾಮಾಜಿಕ ಸಿದ್ಧಾಂತವನ್ನು ಮನು ಸ್ಥಾಪಿಸಿದನೆಂದು ಸಾಮಾನ್ಯವಾಗಿ ನಂಬಲಾಗಿದೆ. ಮನುಧರ್ಮಶಾಸ್ತ್ರವೆಂದರೆ ಇದಿಷ್ಟೇ ಎಂದು ಬಹು ಜನ ನಂಬುತ್ತಾರೆ. ಇದು ಅತ್ಯಂತ ತಪ್ಪು ತಿಳುವಳಿಕೆಯಾದ್ದರಿಂದ ಇದನ್ನು ತಿದ್ದದೆ ಹೋದರೆ, ಇದರಿಂದಾಗಿ ಮನುವಿನಿಂದ ನಿರೂಪಿತವಾದ ಸಾಮಾಜಿಕ ಸಿದ್ಧಾಂತವನ್ನು ಪೂರ್ತಿಯಾಗಿ ತಪ್ಪು ತಿಳಿದಂತಾಗುತ್ತದೆ.

ಆದ್ದರಿಂದ, ಮನುವನ್ನು ಪೂರ್ತಿಯಾಗಿ ಅಪಾರ್ಥಮಾಡಿಕೊಳ್ಳಲಾಗಿದೆಯೆಂದು ನಾನು ತಿಳಿದಿದ್ದೇನೆ. ಮನುವಿನ ದೃಷ್ಟಿಯಲ್ಲಿ ಚಾತುರ್ವರ್ಣಕ್ಕೆ ಸೇರಿದವರ ವಿಭಜನೆ ಅಷ್ಟು ಪ್ರಮುಖವಲ್ಲ. ಈ ವಿಭಜನೆಗೆ ಅವನಲ್ಲಿ ಎರಡನೆಯ ಸ್ಥಾನ. ಇದು ಚಾತುರ್ವರ್ಣಕ್ಕೆ ಸೇರಿದವರಲ್ಲಿ ಒಂದು ರೀತಿಯ ಪರಸ್ಪರ ಹೊಂದಾಣಿಕೆ ಅಷ್ಟೆ. ಒಬ್ಬ ಬ್ರಾಹ್ಮಣನೇ, ಕ್ಷತ್ರಿಯನೇ, ವೈಶ್ಯನೇ, ಶೂದ್ರನೇ ಎಂಬುದು ಅನೇಕರಿಗೆ ಮುಖ್ಯವಲ್ಲ. ಈ ರೀತಿಯ ವಿಭಜನೆ ಅವನಿಗಿಂತಲೂ ಮೊದಲೇ ಇದ್ದಿತು. ಮನುವು ತಾನು ಸ್ವಲ್ಪ ಸೇರಿಸಿ, ಇದನ್ನು ಹಿಗ್ಗಿಸಿ, ಈ ನಾಲ್ಕು ಸ್ತರಗಳನ್ನು ನಿರ್ದಿಷ್ಟವಾಗಿ ಬಿಗಿಗೊಳಿಸಿದನು. ಆದ್ದರಿಂದ ಈ ವಿಭಜನೆ ಅವನಿಂದ ಮೂಡಿ ಬರಲಿಲ್ಲ. ಅವನಿಂದ ಆರಂಭವಾದ ಹೊಸ ಸಿದ್ಧಾಂತವೇನೆಂದರೆ (೧) ಚಾತುರ್ವರ್ಣದ ವ್ಯಾಪ್ತಿಗೆ ಸೇರಿದವರು ಮತ್ತು (೨) ಚಾತುರ್ವರ್ಣದ ವ್ಯಾಪ್ತಿಯಿಂದ ಹೊರಗುಳಿದವರು, ಎಂಬುದು. ಈ ಹೊಸ ಸಾಮಾಜಿಕ ವಿಭಜನೆಯನ್ನು ಸೃಷ್ಟಿಸಿದವನು ಮನು. ಹಿಂದೂಗಳ ಪುರಾತನ ಧರ್ಮಕ್ಕೆ ಮನು ಕೊಟ್ಟ ಕಾಣಿಕೆ ಇದು. ಈ ವಿಭಜನೆ ಮನುವಿಗೆ ಬಹಳ ಮುಖ್ಯ, ಏಕೆಂದರೆ ಇದರ ಕರ್ತೃ ಅವನು ಮತ್ತು ಇದಕ್ಕೆ ಮನ್ನಣೆ ಕೊಟ್ಟವನು ಅವನು.

ಈ ವಿಷಯಕ್ಕೆ ಸಂಬಂಧಿಸಿದ ಗ್ರಂಥದ ಭಾಗವನ್ನು ಎರಡು ಗುಂಪುಗಳಾಗಿ ವಿಭಜಿಸಬೇಕು. (೧) ಚಾತುರ್ವರ್ಣದ ವ್ಯಾಪ್ತಿಯಲ್ಲಿರುವವರಿಗೆ ಸಂಬಂಧಿಸಿದ ಗ್ರಂಥಭಾಗ (೨) ಚಾತುರ್ವರ್ಣಕ್ಕೆ ಹೊರತಾದವರಿಗೆ ಸಂಬಂಧಿಸಿದ ಗ್ರಂಥಭಾಗ.

**೧) ಚಾತುರ್ವರ್ಣದ ವ್ಯಾಪ್ತಿಗೆ ಸೇರಿದವರು–ಅವರ ಉಗಮ ಮತ್ತು ಕರ್ತವ್ಯ**

೧) ಈ ವಿಶ್ವವು ಗಾಢಾಂಧಕಾರಕ್ಕೆ ಸಿಕ್ಕಿ ಯಾವ ವಿಚಾರಕ್ಕೂ ನಿಲುಕದ ಅಸ್ಪಷ್ಟವಾದ ಮುಸುಕಿನಲ್ಲಿ ಮುಳುಗಿ ದೀರ್ಘನಿದ್ರೆಯಲ್ಲಿದ್ದಿತು.

೨) ನಂತರ ಸ್ವಯಂಭುವೆನಿಸಿದ ಪರಮಾತ್ಮನು ತನ್ನ ಅನಂತಶಕ್ತಿಯನ್ನು ಆವಿರ್ಭವಿಸಿ ಪಂಚಭೂತಯುಕ್ತವಾದ, ಈ ವ್ಯಕ್ತ ಜಗತ್ತನ್ನು ಸೃಷ್ಟಿಸಿ, ಮೊದಲಿದ್ದ ಅಂಧಕಾರವನ್ನು ನೀಗಿದನು.

೩) ಈ ಜಗತ್ತಿನ ಅಭಿವೃದ್ಧಿಗಾಗಿ ಬ್ರಹ್ಮ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರರನ್ನು ಕ್ರಮವಾಗಿ ತನ್ನ ಬಾಯಿ, ತೋಳು, ತೊಡೆ ಮತ್ತು ಪಾದದಿಂದ ಸೃಷ್ಟಿಸಿದನು.

೪) ಈ ವಿಶ್ವವನ್ನು ಕಾಪಾಡಲೋಸುಗ ಸರ್ವಶಕ್ತನಾದ ಅವನು ಈ ರೀತಿ ಬಾಯಿ, ತೋಳು, ತೊಡೆ ಮತ್ತು ಪಾದದಲ್ಲಿ ಜನಿಸಿದವರನ್ನು ಬೇರೆ ಬೇರೆ ವೃತ್ತಿಗಳಲ್ಲಿ ನಿಯೋಜಿಸಿದನು.

೫) ಬ್ರಾಹ್ಮಣರು ವೇದಾಧ್ಯಯನ ಮತ್ತು ಪ್ರವಚನವನ್ನು ನಡೆಸುವುದು, ತಮ್ಮ ಮತ್ತು ಅನ್ಯರ ಹಿತಕ್ಕಾಗಿ ಯಜ್ಞಯಾಗಗಳನ್ನು ಮಾಡುವುದು, ಭಿಕ್ಷೆಯನ್ನು ಸ್ವೀಕರಿಸುವ ಮತ್ತು ನೀಡುವ ಕರ್ತವ್ಯಗಳನ್ನು ಅವನು ಅವರಿಗೆ ವಿಧಿಸಿದನು.

---

೧. ಮನು **I**, ೫; ೨. ಅದೇ **I**, ೬ ೩. ಮನು **I**, ೩೧;

೬) ಕ್ಷತ್ರಿಯರಿಗೆ ಪ್ರಜೆಗಳನ್ನು ರಕ್ಷಿಸುವ, ಯಜ್ಞಯಾಗಗಳನ್ನು ಮಾಡಿಸುವ, ದಾನಧರ್ಮ ಮಾಡುವ, ಭೋಗಾಪೇಕ್ಷೆಯಿಲ್ಲದೆ ವೇದಾಧ್ಯಯನ ಮಾಡುವ, ಕರ್ತವ್ಯವನ್ನು ವಹಿಸಿದನು.

೭) ವೈಶ್ಯರಿಗೆ ಗೋರಕ್ಷಕರಾಗಿ, ದಾನಧರ್ಮವನ್ನು ಮಾಡುತ್ತಾ, ವೇದಾಧ್ಯಯನ ಮತ್ತು ಯಜ್ಞ ಕರ್ಮಗಳನ್ನು ಮಾಡುತ್ತಾ, ವ್ಯವಸಾಯ, ವ್ಯಾಪಾರ ಮತ್ತು ಲೇವಾದೇವಿ ಮಾಡುವ ಕೆಲಸವನ್ನು ವಹಿಸಿದನು.

೮) ಶೂದ್ರರು ಮೇಲಿನ ಮೂರು ವರ್ಗದವರ ಸೇವೆಯಲ್ಲಿ ತೊಡಗಬೇಕೆಂದು ಅವನು ವಿಧಿಸಿದನು.

೯) ವಿದ್ಯಾರ್ಥಿ, ಉದ್ಯೋಗಾರ್ಥಿ, ಜೀತದಾರ ಮತ್ತು ಅಧಿಕಾರಿ– ಇವರನ್ನು ಕಾರ್ಮಿಕರೆಂದು ತಿಳಿಯುವುದು. ಯಜಮಾನರ ಮನೆಯಲ್ಲಿ ಮತ್ತಿತರ ಕಡೆ ಹುಟ್ಟಿದವರು ಗುಲಾಮರು.

೧೦) ಕಾನೂನಿನ ಪ್ರಕಾರ ಋಷಿಗಳು ಮೇಲಿನ ಐದು ವರ್ಗಗಳಿಂದಲೂ ಭಿನ್ನವಾದವರು ಮತ್ತು ವಿಶಿಷ್ಟವಾದವರು. ಮೇಲೆ ಹೇಳಿದ ನಾಲ್ಕು ವರ್ಗದ ಕಾರ್ಮಿಕರ ಜೊತೆಗೆ ಐದನೆಯವರಾದ ಗುಲಾಮರಲ್ಲಿ ಮತ್ತೆ ಈ ರೀತಿ ೧೫ ಪ್ರಭೇದಗಳುಂಟು.

೧೧) ಯಜಮಾನನ ಮನೆಯಲ್ಲಿ ಹುಟ್ಟಿದವರು, ಕೊಳ್ಳಲ್ಪಟ್ಟವರು, ಬಹುಮಾನವಾಗಿ ಬಂದವರು, ಪಿತ್ರಾರ್ಜಿತವಾಗಿ ಬಂದವರು, ಕ್ಷಾಮಕಾಲದಲ್ಲಿ ರಕ್ಷಿಸಲ್ಪಟ್ಟವರು, ತನ್ನ ಯಜಮಾನನಿಂದ ಅಡವಿಟ್ಟವರು.

೧೨) ಸಾಲ ಪಾವತಿ ಮಾಡಿ ಬಿಡಿಸಲ್ಪಟ್ಟವರು, ಹೋರಾಟದಲ್ಲಿ ಪಣವಾಗಿ ಗೆದ್ದವರು, ತಾನು ನಿಶ್ಯಕ್ತನೆಂದು ಬೇಡಿ ಬಂದವರು, ಜೂಜಿನಲ್ಲಿ ಗೆದ್ದುಕೊಂಡವರು, ಸನ್ಯಾಸದಿಂದ ಧರ್ಮಭ್ರಷ್ಟರಾದವರು, ಒಂದು ನಿರ್ದಿಷ್ಟ ಅವಧಿಗೆ ಗುಲಾಮರಾದವರು.

೧೩) ಜೀವನಾಂಶದ ಗಳಿಕೆಗಾಗಿ ಗುಲಾಮರಾದವರು, ಹೆಣ್ಣು ಗುಲಾಮಳ ಸಂಪರ್ಕದಿಂದಾಗಿ ಗುಲಾಮರಾದವರು, ಮತ್ತು ತನ್ನನ್ನೇ ತಾನು ಮಾರಿಕೊಂಡವರು; ಕಾನೂನಿನಂತೆ ಈ ಹದಿನೈದು ಜಾತಿಯ ಗುಲಾಮರುಂಟು.

೧೪) ಈ ಹದಿನೈದು ವರ್ಗದಲ್ಲಿ ಮೊದಲಿನ ನಾಲ್ಕು ವರ್ಗದವರಿಗೆ, ಯಜಮಾನನ ಕೃಪೆಯಿಂದ ಹೊರತು ಬೇರೆ ರೀತಿಯಿಂದ ಬಿಡುಗಡೆಯೆಂಬುದೇ ಇಲ್ಲ. ಅವರ ಗುಲಾಮಗಿರಿ ವಂಶಪಾರಂಪರ್ಯವಾದುದು.

೧೫) ಇವರೆಲ್ಲರೂ ಸಮಾನ ರೀತಿಯ ಪರಾವಲಂಬಿಗಳು ಎಂದು ಋಷಿಗಳು ಹೇಳಿದ್ದಾರೆ. ಆದರೆ ಅವರ ಸ್ಥಾನಮಾನ ಆದಾಯ ಇವು ಅವರವರ ಜಾತಿ ಮತ್ತು ವೃತ್ತಿಯನ್ನವಲಂಬಿಸಿರುತ್ತದೆ. (ಇದಿಷ್ಟು ಮನುಧರ್ಮದ ಮೂಲಪಾಠದ ಪುನರುಚ್ಚಾರ)

**೨) ಚಾತುರ್ವರ್ಣ್ಯಕ್ಕೆ ಹೊರತಾದವರು – ಅವರ ಉಗಮ ಮತ್ತು ಕರ್ತವ್ಯ**

ಅವರ ಹುಟ್ಟು ಮತ್ತು ಸ್ಥಾನದ ವಿಚಾರದಲ್ಲಿ ಮನು ಈ ರೀತಿ ಹೇಳುತ್ತಾನೆ :

---

೪. ಅದೇ **I**, ೮೭; ೫. ಅದೇ **I**, ೮೮; ೬. ಅದೇ **I**, ೮೯; ೭. ಅದೇ **I**, ೯೦; ೮. ಅದೇ **I**, ೯೧; ೯. ನಾರದ **V**, ೩; ೧೦. ಅದೇ **V**, ೨; ೧೧. ಅದೇ **V**, ೨೬; ೧೨. ಮನು **V**, ೨೭; ೧೩. ನಾರದ **V**, ೨೮; ೧೪. ಅದೇ **V**, ೨೯;

೧) ಬ್ರಹ್ಮನ ಬಾಯಿ, ತೋಳು, ತೊಡೆ ಮತ್ತು ಪಾದಗಳಿಂದ ಹುಟ್ಟಿದ ಜನಾಂಗಕ್ಕೆ ಹೊರತಾದ ಬುಡಕಟ್ಟಿನ ಜನರನ್ನು ದಸ್ಯುಗಳೆಂದು ಕರೆಯಲಾಗಿದೆ ಮತ್ತು ಅವರು ಅನಾಗರಿಕ ಭಾಷೆ ಅಥವಾ ಆರ್ಯರ ಭಾಷೆಯನ್ನು ಆಡುತ್ತಾರೆ.

೨) ಗೊತ್ತಾದ ಮರ ಅಥವಾ ಸ್ಮಶಾನಗಳ ಬಳಿ, ಬೆಟ್ಟದ ಮೇಲೆ ಅಥವಾ ಮರಗಳ ನಡುವೆ, ತಮ್ಮ ಕೆಲವು ಸಂಕೇತಗಳನ್ನಿಟ್ಟುಕೊಂಡು ತಮ್ಮ ತಮ್ಮ ವೃತ್ತಿಯಿಂದ ಬದುಕಬಹುದು.

೩) ಚಂಡಾಲರು ಮತ್ತು ಶ್ವಪಚರು ಗ್ರಾಮಗಳಿಂದ ಹೊರಗಿರುವರು ಮತ್ತು ಅಪವಿತ್ರರೆನಿಸುವರು. ಅವರಿಗೆ ನಾಯಿ ಮತ್ತು ಕತ್ತೆಗಳೇ ಆಸ್ತಿ.

೪) ಹೆಣದ ಬಟ್ಟೆಗಳನ್ನು ತೊಡುವವರು ಇವರು. ಒಡೆದ ಮಡಕೆಯಲ್ಲಿ ಊಟಮಾಡುತ್ತಾ ಕಬ್ಬಿಣದ ಆಭರಣಗಳನ್ನು ತೊಟ್ಟು ಇವರು ಊರಿಂದ ಊರಿಗೆ ಅಲೆಯುತ್ತಿರಬೇಕು.

೫) ಧಾರ್ಮಿಕ ವಿಧಿಗಳನ್ನು ಆಚರಿಸುವ ಯಾವ ಮನುಷ್ಯನೂ ಇವರೊಂದಿಗೆ ಸಂಭೋಗ ಮಾಡುವಂತಿಲ್ಲ. ಮದುವೆ ಮತ್ತು ಕೊಳ್ಳು ಕೊಡುವ ವ್ಯವಹಾರಗಳು ಅವರ ಸಮಾನಸ್ಕಂಧರಲ್ಲಿಯೇ ನಡೆಯಬೇಕು.

೬) ಬೇರೆಯವರು ಅವರಿಗೆ ಒಡೆದ ಪಾತ್ರೆಯಲ್ಲಿ ಆಹಾರ ಕೊಡಬೇಕು. ರಾತ್ರಿಯ ವೇಳೆ ಹಳ್ಳಿಗಳಲ್ಲಿ ಅಥವಾ ನಗರಗಳಲ್ಲಿ ಅವರು ತಿರುಗಾಡಕೂಡದು.

೭) ರಾಜನಿಂದ ದೊರೆತಿರುವ ಲಾಂಛನವನ್ನು ಧರಿಸಿ ಅವರು ಹಗಲು ಹೊತ್ತು ತಮ್ಮ ತಮ್ಮ ಕೆಲಸಗಳಿಗೆ ಹೋಗಬಹುದು. ಬಂಧುಗಳಿಲ್ಲದ ಅನಾಥ ಹೆಣಗಳನ್ನು ಒಪ್ಪ ಮಾಡುವುದು ಅವರ ವಿಧಿವತ್ತಾದ ಕರ್ತವ್ಯ.

೮) ರಾಜಾಜ್ಞೆಯಂತೆ ಮರಣದಂಡನೆಗೊಳಗಾದ ಪಾತಕಿಗಳನ್ನು ಗಲ್ಲಿಗೇರಿಸಿ ಆ ಪಾತಕಿಗಳು ಧರಿಸಿದ ಒಡವೆ, ಹಾಸಿಗೆ, ಆಭರಣಗಳನ್ನು ತಾವು ಧರಿಸಬೇಕು.

೯) ಅತ್ಯಂತ ಕೀಳುಜಾತಿಯವರೊಂದಿಗೆ ಸಂಪರ್ಕವಿಟ್ಟುಕೊಂಡವನಿಗೆ ಮರಣದಂಡನೆಯಾಗಬೇಕು.

೧೦) ಕೀಳು ಜಾತಿಗೆ ಸೇರಿದ ಚಂಡಾಲನೇ ಮೊದಲಾದ ಅಸ್ಪೃಶ್ಯನು ಉದ್ದೇಶಪೂರ್ವಕವಾಗಿ ಬ್ರಾಹ್ಮಣನನ್ನು ಮುಟ್ಟಿದರೆ ಅವನಿಗೆ ಮರಣದಂಡನೆಯಾಗಬೇಕು.

ನಾನು ಈ ಮೊದಲೇ ಹೇಳಿರುವಂತೆ ಚಾತುರ್ವರ್ಣದ ವ್ಯಾಪ್ತಿಗೆ ಸೇರಿದವರು ಮತ್ತು ಚಾತುರ್ವರ್ಣಕ್ಕೆ ಹೊರತಾದವರು– ಇವರುಗಳ ನಡುವಿನ ಪ್ರಭೇದವು ಮನುವಿನ ದೃಷ್ಟಿಯಲ್ಲಿ ಸತ್ಯವಾದದ್ದು. ಇದು ಎಷ್ಟರಮಟ್ಟಿಗೆ ಸತ್ಯ ಎಂದರೆ ಮನುವು ಅವರನ್ನು 'ಬಾಹ್ಯರು' ಅಂದರೆ ಹೊರತಾದವರು ಅಥವಾ ಚಾತುರ್ವರ್ಣದಿಂದ ಹೊರಗಿರುವವರು ಎಂದು ಹೆಸರಿಸುತ್ತಾನೆ. ಇದರಿಂದಾಗಿ ಅವರು ಬಹುಗಂಭೀರವಾದ ಪರಿಣಾಮಗಳನ್ನು ಅನುಭವಿಸಬೇಕಾಯಿತು. ಈ ವಿಭಜನೆಯ ಉದ್ದೇಶ ಅವರುಗಳ ನಡುವೆ ಸ್ಥಾನಮಾನ ಮತ್ತು ನಾಗರಿಕ ಹಕ್ಕುಗಳಲ್ಲಿ ವ್ಯತ್ಯಾಸವಿರಬೇಕೆಂಬುದು. ವರ್ಣಧರ್ಮದ ವ್ಯಾಪ್ತಿಗೆ ಸೇರಿದವರೆಲ್ಲಾ ಸಮಾನರೇನಲ್ಲ. ಚಾತುರ್ವರ್ಣದಲ್ಲಿ ಸೇರಿದ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರ ಮತ್ತು ಗುಲಾಮ–

---

೧೫. ಅದೇ **V,** ೪;

೧. ಮನು **X,** ೪೫; ೨. ಅದೇ **X,** ೫೦; ೩. ಅದೇ **X,** ೫೧; ೪. ಅದೇ **X,** ೫೨; ೫. ಅದೇ **X,** ೫೩; ೬. ಅದೇ **X,** ೫೪; ೭. ಅದೇ **X,** ೫೫; ೮. ಅದೇ **X,** ೫೬; ೯. ವಿಷ್ಣು **V,** ೪೩; ೧೦. ಅದೇ **V** ೧೦೪;

ಇವರಲ್ಲಿ ಬೇರೆ ಬೇರೆ ದರ್ಜೆಯುಂಟು. ಆದರೂ ಅವರೆಲ್ಲರೂ ಚಾತುರ್ವರ್ಣದ ವ್ಯಾಪ್ತಿಗೆ ಸೇರಿರುತ್ತಾರೆ. ಮನುವಿನ ದೃಷ್ಟಿಯಲ್ಲಿ ಮತ್ತು ಸಾರ್ವಜನಿಕ ದೃಷ್ಟಿಯಲ್ಲಿ ಚಾತುರ್ವರ್ಣಕ್ಕೆ ಸೇರಿದವರಿಗೆ ಹಿರಿಮೆಯುಂಟು. ಅದರಿಂದ ಹೊರತಾದವರಿಗೆ ಸಮಾಜದಲ್ಲಿ ಗೌರವವಿಲ್ಲ. ನಾಗರಿಕ ಹಕ್ಕುಗಳ ವಿಚಾರದಲ್ಲಿಯೂ ವ್ಯತ್ಯಾಸವಿದೆ. ಚಾತುರ್ವರ್ಣಕ್ಕೆ ಸೇರಿದವರಿಗೆ ಹಕ್ಕು ಬಾಧ್ಯತೆಗಳಿದ್ದು ಅವುಗಳಿಗಾಗಿ ಅವರು ಹೋರಾಡಬಹುದು. ಚಾತುರ್ವರ್ಣದ ಹೊರತಾದವರಿಗೆ ಹಕ್ಕುಗಳೂ ಇಲ್ಲ, ಮತ್ತು ಅವುಗಳಿಗೆ ಪರಿಹಾರವೂ ಇಲ್ಲ.

ಚಾತುರ್ವರ್ಣದ ವ್ಯಾಪ್ತಿಗೆ ಸೇರಿದವರು ಮತ್ತು ಹೊರತಾದವರ ನಡುವಿನ ಸಂಬಂಧ ಪುರಾತನ ರೋಮನ್ ಕಾನೂನಿನಲ್ಲಿ ಬರುವ ನಾಗರಿಕರು ಮತ್ತು ನಾಗರಿಕರಲ್ಲದ ಪ್ರಭೇದಕ್ಕೆ ಸಮಾನವೆನಿಸುತ್ತದೆ. ರೋಮನ್ ಕಾನೂನು ಕೇವಲ ವ್ಯಕ್ತಿಗತವಾದದ್ದೇ ಹೊರತು ಪ್ರಾಂತೀಯವಾದುದಲ್ಲ. ಒಬ್ಬ ವ್ಯಕ್ತಿ, ಆ ಸಂಸ್ಥೆಗಳ ಲಾಭ ಮತ್ತು ರಕ್ಷಣೆಯನ್ನು ಪಡೆದದ್ದು ರೋಮನ್ ಚಕ್ರಾಧಿಪತ್ಯದಲ್ಲಿ ವಾಸಿಸುತ್ತಾನೆಂಬ ಕಾರಣದಿಂದಲ್ಲ. ಅವನು ಆ ಸಾಮ್ರಾಜ್ಯದ ಪ್ರಜೆಯಾದ್ದರಿಂದ ಅವನಿಗಾಗಿ, ಅವನಿಂದಲೇ ರೂಪುಗೊಂಡ ಈ ಕಾನೂನುಗಳ ಲಾಭ ಪಡೆಯುತ್ತಾನೆ. ಪುರಾತನ ಸಾಮ್ರಾಜ್ಯದಲ್ಲಿದ್ದ (ಜುಸ್ ಜಿಟಿಯಂ) ಸ್ಥಿತಿ ಏನೆಂದರೆ ಯಾರಾದರೂ ಒಬ್ಬ ಮನುಷ್ಯ ಅನ್ಯರಾಷ್ಟ್ರದಲ್ಲಿ ಸ್ವಲ್ಪ ಕಾಲ ವಾಸಿಸುತ್ತಿದ್ದರೆ, ಆಗ ಅವನು ಆ ರಾಷ್ಟ್ರ ಮತ್ತು ಅಲ್ಲಿನ ಪ್ರಜೆಗಳ ಕೃಪೆಯಿಂದ ಬದುಕಬೇಕು. ಅವನನ್ನು ಗುಲಾಮನೆಂದು ತಿಳಿದು ಅವನಿಗೆ ಸೇರಿದ ವಸ್ತುಗಳನ್ನೆಲ್ಲಾ ಅವನಿಗೆ ಮೊದಲು ಅಲ್ಲಿ ವಾಸಿಸುತ್ತಿದ್ದವರು ಕಿತ್ತುಕೊಳ್ಳಬಹುದು. ಏಕೆಂದರೆ, ಅವನು ಕಾನೂನಿನ ವ್ಯಾಪ್ತಿಗೆ ಹೊರತಾದವನು. ರೋಮನ್ ನಾಗರಿಕತೆಗೆ ಸೇರಿದ ವ್ಯಕ್ತಿಗತ ಹಕ್ಕುಗಳನ್ನು ಗಹನವಾದ ಈ ಮೂರು ಪದಗಳಲ್ಲಿ ಸಮೀಕರಿಸಿದ್ದಾರೆ. ಆ ಪದಗಳಾವುವೆಂದರೆ, ಕನ್ಯುಬಿಯಂ, ಕಮ್ಮರೆಸಿಯಂ ಮತ್ತು ಆಕ್ಟಿಯೋ. ಕನ್ಯುಬಿಯಂ ಎಂದರೆ ವಂಶೋದ್ಧಾಶದ ಉದ್ದೇಶದಿಂದ ಮದುವೆಯಾಗಿ ಜನಿಸಿದ ಸಜಾತಿಯ ಮಕ್ಕಳಿಗೆ ಆಸ್ತಿಯ ಹಕ್ಕು ಮತ್ತು ರಕ್ಷಣೆ ದೊರೆಯಬೇಕೆಂಬ ನಿಯಮ. ಕಮ್ಮರೆಸಿಯಂ ಎಂದರೆ ಆಸ್ತಿಯ ಹಕ್ಕನ್ನು ಗಳಿಸುವ ಮತ್ತು ಅದನ್ನು ಮಾರುವ ಹಕ್ಕು. ಆಕ್ಟಿಯೋ ಎಂದರೆ ಮೇಲೆ ಹೇಳಿದ ತನ್ನ ಹಕ್ಕುಗಳನ್ನು ಪ್ರತಿಪಾದಿಸಲು ಅಥವಾ ರಕ್ಷಿಸಲು ನ್ಯಾಯಾಲಯವನ್ನು ಕೋರುವ ಹಕ್ಕು. ಈ ಮೂರು ಹಕ್ಕುಗಳೂ ರೋಮನ್ ನಾಗರಿಕರಿಗೆ ಮಾತ್ರ ದೊರೆತಿದ್ದವು. ರೋಮನ್ ನಾಗರಿಕನಲ್ಲದವನಿಗೆ ಇವು ಯಾವುವೂ ಸಲ್ಲುತ್ತಿರಲಿಲ್ಲ.

## III

ಚಾತುರ್ವರ್ಣದ ಒಳಗಿರುವ ವಿವಿಧ ವರ್ಗಗಳೂ ಮತ್ತು ಅದರ ಹೊರಗಿರುವ ಜಾತಿಗಳ ನಡುವಿನ ಪ್ರಭೇದ ಮೂಲಭೂತವಾಗಿರುವುದಲ್ಲದೆ ಅದು ಬಹು ಪುರಾತನವಾದುದು. ಚಾತುರ್ವರ್ಣದ ವ್ಯವಸ್ಥೆ ಈ ಕಾನೂನಿನಂತೆ ಈಗ ರೂಢಿಯಲ್ಲಿಲ್ಲ. ಆದ್ದರಿಂದ ಚಾತುರ್ವರ್ಣದ ಒಳಗಿನ ವರ್ಗಗಳೂ ಮತ್ತು ಹೊರಗಿನ ವರ್ಗಗಳನ್ನು ಕುರಿತು ಮಾತನಾಡುವುದು ಕೇವಲ ಪಾಂಡಿತ್ಯದ ಮಾತಾಗಿದೆ. ಹಿಂದಿನ ವರ್ಗಗಳಿಗೆ ಸರಿಸಮನಾಗುವ ಇಂದಿನ ಘಟಕಗಳು ಯಾವುವು ಎಂದು ಪ್ರಶ್ನೆ ಕೇಳುತ್ತಾರೆ. ಮನುವಿನ ಶಾಸನ ಇಂದಿನ ಹಿಂದೂ ಸಮಾಜದ ಅನ್ಯಾಯವಾದ ಆಚರಣೆಗಳಿಗೆ ಹೇಗೆ ಕಾರಣವಾಯಿತೆಂಬುದನ್ನು ವಿವರಿಸಬೇಕಾದ ನನಗೆ ಈ ಪ್ರಶ್ನೆ ತುಂಬಾ ಯುಕ್ತವಾದದ್ದು ಎಂದೆನಿಸುತ್ತದೆ. ನಾನೂ ಪುರಾತನ ಭಾಷೆಯನ್ನೇ ಬಳಸುತ್ತಿದ್ದರೂ ನನ್ನ ಪ್ರತಿಪಾದನೆಗೆ ಎರಡು ಕಾರಣಗಳಿವೆ. ಮೊದಲನೆಯದು ಹಿಂದೆ ಮನು ಮಾಡಿದ್ದ ಸಾಮಾಜಿಕ ವಿಭಜನೆಗೆ ಸರಿಸಮನಾದ ವರ್ಗೀಕರಣ ಇಂದಿನ ಸಮಾಜದಲ್ಲಿಯೂ ಇದೆ ಎಂಬುದು. ಅಂದಿನ

ಸವರ್ಣೀಯರು ಅವರ್ಣೀಯರು ಇಂದಿನ ಹಿಂದೂಗಳು ಮತ್ತು ಅಸ್ಪೃಶ್ಯರು. ಯಾರನ್ನು ಹಿಂದೆ ಮನುವು ಚಾತುರ್ವರ್ಣದಲ್ಲಿ ಸೇರಿದವರು ಎಂದು ಕರೆದನೋ ಅವರೇ ಇಂದಿನ ಹಿಂದೂಗಳು. ಯಾರನ್ನು ಮನುವು ಬಾಹ್ಯರು ಅಥವಾ ಚಾತುರ್ವರ್ಣಕ್ಕೆ ಹೊರತಾದವರು ಎಂದು ಕರೆದನೋ ಅವರೇ ಇಂದಿನ ಅಸ್ಪೃಶ್ಯರು. ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರ ಈ ವರ್ಗಗಳ ನಡುವಿನ ಭಿನ್ನತೆ ಸ್ವಲ್ಪ ಮಸುಕಾಗಿ ಅವರ ನಡುವೆ ಈಗ ಸ್ವಲ್ಪ ಮಿಶ್ರಣವಾಗಿದೆ. ಆದರೆ ಚಾತುರ್ವರ್ಣಕ್ಕೆ ಸೇರಿದ ಸವರ್ಣೀಯರು ಮತ್ತು ಅದರಿಂದ ಹೊರತಾದ ಅವರ್ಣೀಯರ ನಡುವಿನ ವಿಭಜನೆ ಮಾತ್ರ ಸ್ವಲ್ಪವೂ ಮಾಸದೆ ಇಂದಿಗೂ ಅಭೇದ್ಯವಾಗಿದೆ. ಆ ಪ್ರಭೇದ ಹಿಂದೂಗಳನ್ನು ಮತ್ತು ಅಸ್ಪೃಶ್ಯರನ್ನು ಇಂದಿಗೂ ಸ್ಪಷ್ಟವಾಗಿ ಬೇರ್ಪಡಿಸುತ್ತಿದೆ. ಇದರಿಂದ ಸ್ಪಷ್ಟವಾದ ವಿಚಾರವೆಂದರೆ ಸನಾತನರ ಸಾಮಾಜಿಕ ವಿಭಜನೆ ಇಂದಿಗೂ ಉಳಿದುಬಂದಿದೆ ಎಂಬುದು. ಬದಲಾವಣೆ ಏನಾದರೂ ಆಗಿದ್ದರೆ ಅದು ಹೆಸರಿನಲ್ಲಿ ಮಾತ್ರ.

ಮನು ಬಾಹ್ಯರಿಗೆ ವಿಧಿಸಿದ್ದ ಶಾಸನಗಳಲ್ಲಿ ಏನಾದರೂ ಸಮಾನತೆಯಿದ್ದು ಇಂದಿನ ಹಿಂದೂಗಳು ಮತ್ತು ಅಸ್ಪೃಶ್ಯರ ನಡುವಿನ ಸಂಬಂಧದಲ್ಲಿ ಅವುಗಳು ಉಳಿದುಬಂದಿವೆಯೇ ಎಂಬುದು ಎರಡನೆಯ ಪ್ರಶ್ನೆ. ಈ ವಿಚಾರದಲ್ಲಿ ಯಾರಿಗಾದರೂ ಸಂಶಯವಿದ್ದರೆ ಅವರು ಈ ಕೆಳಗಿನ ಕೆಲವು ಘಟನೆಗಳನ್ನು ಆಲೋಚಿಸಲಿ. ಈ ಕೆಳಗಿನ ಘಟನೆ ಮದ್ರಾಸು ಪ್ರಾಂತದ ರಾಮನಾಡು ಜಿಲ್ಲೆಯಲ್ಲಿ ನಡೆದದ್ದು.

೧೯೩೦ನೆಯ ಡಿಸೆಂಬರ್ ತಿಂಗಳಲ್ಲಿ ರಾಮನಾಡಿನ ಕಲ್ಲರ್ ಜನಾಂಗದವರು ಅಸ್ಪೃಶ್ಯರ ಮೇಲೆ ಎಂಟು ರೀತಿಯ ನಿಷೇಧಗಳನ್ನು ವಿಧಿಸಿದರು ಮತ್ತು ಈ ನಿಷೇಧಗಳನ್ನು ಅಸ್ಪೃಶ್ಯರು ಪಾಲಿಸಲಿಲ್ಲವೆಂದು ಅವರ ಮೇಲೆ ದಂಗೆಯೆದ್ದು ಅವರ ಗುಡಿಸಲುಗಳು ಮತ್ತು ಕಣಜಗಳಿಗೆ ಬೆಂಕಿಯಿಟ್ಟು ಅವರ ದನಕರು ಆಸ್ತಿಪಾಸ್ತಿಗಳನ್ನು ಲೂಟಿ ಮಾಡಿದರು. ಅವರು ವಿಧಿಸಿದ ಎಂಟು ನಿಷೇಧಗಳು ಈ ರೀತಿ ಇವೆ.

೧) ಆದಿದ್ರಾವಿಡರು ಚಿನ್ನ ಅಥವಾ ಬೆಳ್ಳಿಯ ಒಡವೆಗಳನ್ನು ತೊಡಬಾರದು.
೨) ಅವರಲ್ಲಿಯ ಗಂಡಸರು ಮೊಳಕಾಲಿನಿಂದ ಕೆಳಗೆ ಮತ್ತು ಸೊಂಟದಿಂದ ಮೇಲೆ ಬಟ್ಟೆ ಧರಿಸಬಾರದು.
೩) ಅವರಲ್ಲಿ ಗಂಡಸರು ಕೋಟು, ಷರಟು, ಬನಿಯನ್ ಧರಿಸಕೂಡದು.
೪) ಯಾವ ಆದಿದ್ರಾವಿಡನು ತನ್ನ ತಲೆ ಕೂದಲನ್ನು ಕ್ರಾಪ್ ಮಾಡಿಸಕೂಡದು.
೫) ಆದಿದ್ರಾವಿಡರು ತಮ್ಮ ಮನೆಗಳಲ್ಲಿ ಮಣ್ಣಿನ ಪಾತ್ರೆಗಳಲ್ಲದೆ ಬೇರೆ ಪಾತ್ರೆಗಳನ್ನು ಬಳಸಬಾರದು.
೬) ಅವರ ಹೆಂಗಸರು ತಮ್ಮ ಶರೀರದ ಮೇಲ್ಭಾಗವನ್ನು ರವಿಕೆ ಅಥವಾ ದಾವಣಿ ಬಳಸಿ ಮುಚ್ಚಬಾರದು.
೭) ಅವರ ಹೆಂಗಸರು ಹೂವು ಮುಡಿಯುವುದಾಗಲೀ ಅರಿಶಿನ, ಕುಂಕುಮ ಧರಿಸುವುದಾಗಲಿ ಕೂಡದು.
೮) ಅವರ ಗಂಡಸರು ಬಿಸಿಲು, ಮಳೆಗಾಗಿ ಛತ್ರಿಯನ್ನು ಬಳಸಬಾರದು ಮತ್ತು ಕಾಲಿಗೆ ಚಪ್ಪಲಿ ಹಾಕಬಾರದು.

ಈ ಎಂಟು ನಿಷೇಧಗಳನ್ನು ಅಸ್ಪೃಶ್ಯರು ಸರಿಯಾಗಿ ಪಾಲಿಸಲಿಲ್ಲ ಎಂಬ ಕಾರಣ ಕಲ್ಲರ್ ಸಮಾಜ ೧೯೩೧ನೆಯ ಜೂನ್ ತಿಂಗಳಲ್ಲಿ ಮತ್ತೊಮ್ಮೆ ಸಭೆ ಸೇರಿ ಹಿಂದಿನವುಗಳಿಗಿಂತಲೂ ಹೆಚ್ಚು ಪ್ರತಿಗಾಮಿಯಾದ ೧೧ ರೀತಿಯ ನಿಷೇಧಗಳನ್ನು ಸಾರಿ ಅವರು ಅವುಗಳನ್ನು ಪಾಲಿಸಲಿಲ್ಲವೆಂಬ ಕಾರಣದಿಂದ ಹಿಂಸಾಚಾರಕ್ಕಿಳಿದರು. ಆ ಹನ್ನೊಂದು ನಿಷೇಧಗಳಾವುವೆಂದರೆ :

೧) ಆದಿದ್ರಾವಿಡರು ಮತ್ತು ದೇವೇಂದ್ರ ಕುಲದ ವೆಲ್ಲಲಾರುಗಳು ತಮ್ಮ ಮೊಣಕಾಲಿನ ಕೆಳಕ್ಕೆ ಪಂಚೆ ಉಡಬಾರದು.
೨) ಮೇಲೆ ಹೇಳಿದ ದಲಿತ ಜನಾಂಗದ ಸ್ತ್ರೀ ಪುರುಷರು ಚಿನ್ನದ ಆಭರಣಗಳನ್ನು ಧರಿಸಬಾರದು.

೩) ಹೆಂಗಸರು ಮಣ್ಣಿನ ಗಡಿಗೆಯಲ್ಲಿ ನೀರು ತರಬೇಕೇ ಹೊರತು ತಾಮ್ರ ಅಥವಾ ಹಿತ್ತಾಳೆ ಬಿಂದಿಗೆಯಲ್ಲಿ ನೀರು ತರಬಾರದು. ನೀರಿನ ಕೊಡಗಳನ್ನು ಹೊತ್ತು ತರಲು ಹುಲ್ಲಿನ ಸಿಂಬಿಯನ್ನು ಬಳಸಬೇಕೇ ಹೊರತು ಬಟ್ಟೆಯ ಸಿಂಬಿಯನ್ನು ಬಳಸಬಾರದು.

೪) ಅವರ ಮಕ್ಕಳು ಓದು ಬರಹ ಕಲಿತು ಅಕ್ಷರಸ್ಥರಾಗಬಾರದು.

೫) ಅವರ ಮಕ್ಕಳು ಜಮೀನ್ದಾರರ ದನಕರುಗಳನ್ನು ಕಾಯಬೇಕು.

೬) ಅವರ ಹೆಂಗಸರು ಗಂಡಸರೆಲ್ಲರೂ ಜಮೀನ್ದಾರರ ಬಳಿ ಗುಲಾಮರಾಗಿ ಅವರ ಜಮೀನುಗಳಲ್ಲಿ ದುಡಿಯಬೇಕು.

೭) ಜಮೀನ್ದಾರರಿಂದ ವಾರಕ್ಕಾಗಲೀ ಅಥವಾ ಗುತ್ತಿಗೆಗಾಗಲೀ ಜಮೀನುಗಳನ್ನು ಪಡೆದು ಅವರು ಬೇಸಾಯ ಮಾಡಬಾರದು.

೮) ಅವರು ತಮ್ಮ ಜಮೀನನ್ನೆಲ್ಲಾ ಜಮೀನ್ದಾರರಿಗೆ ಕಡಿಮೆ ಬೆಲೆಗೆ ಮಾರಬೇಕು. ಅವರು ಹಾಗೆ ಮಾಡದಿದ್ದರೆ ಅವರ ಜಮೀನಿಗೆ ನೀರನ್ನು ಬಿಡದಂತೆ ತಡೆಯಲಾಗುವುದು. ಮಳೆ ನೀರಿನಿಂದಲೇ ಅವರು ಯಾವುದಾದರೂ ಬೆಳೆಯನ್ನು ಬೆಳೆದರೆ ಅದು ಫಸಲಿಗೆ ಬಂದಾಗ ಅದನ್ನು ಲೂಟಿ ಮಾಡಲಾಗುವುದು.

೯) ಅವರು ಬೆಳಿಗ್ಗೆ ಏಳು ಗಂಟೆಯಿಂದ ಸಂಜೆ ಆರು ಗಂಟೆಯವರೆಗೆ ಜಮೀನ್ದಾರರ ಜಮೀನಿನಲ್ಲಿ ದುಡಿಯಬೇಕು. ಅವರಲ್ಲಿ ಗಂಡಸರಿಗೆ ದಿನಕ್ಕೆ ನಾಲ್ಕಾಣೆ ಕೂಲಿಯಾದರೆ ಹೆಂಗಸರಿಗೆ ಎರಡಾಣೆ ಕೂಲಿ.

೧೦) ಮೇಲೆ ಹೇಳಲಾದ ದಲಿತವರ್ಗದ ಜನ ತಮ್ಮ ಮನೆಯ ಮದುವೆಗಳಲ್ಲಿ ಮತ್ತಿತರ ಸಮಾರಂಭಗಳಲ್ಲಿ ಮೇಳವಾದ್ಯಗಳನ್ನು ಬಾರಿಸಬಾರದು.

೧೧) ಅವರು ಮದುವೆಯಲ್ಲಿ ಮಾಂಗಲ್ಯಧಾರಣೆಗೆ ಮುನ್ನ ಮದುಮಗನನ್ನು ಕುದುರೆಯ ಮೇಲೆ ಉತ್ಸವದಲ್ಲಿ ಕೊಂಡೊಯ್ಯಬಾರದು ಮತ್ತು ಅವರ ಮನೆಯ ಬಾಗಿಲನ್ನೇ ಮೆರವಣಿಗೆಯ ಪಲ್ಲಕ್ಕಿಯಂತೆ ಬಳಸಬೇಕೇ ಹೊರತು ಯಾವ ವಿಧವಾದ ವಾಹನವನ್ನು ಬಳಸಬಾರದು."

ಅಸ್ಪೃಶ್ಯರ ಮೇಲೆ ರಾಮನಾಡಿನ ಹಿಂದೂಗಳು ವಿಧಿಸಿದ ಈ ನಿಷೇಧಗಳನ್ನೂ ಈ ಮೊದಲೇ ವಿವರಿಸಿರುವ ಮನುಧರ್ಮ ಶಾಸ್ತ್ರದ ನಿಷೇಧಗಳೊಂದಿಗೆ ಹೋಲಿಸಿ ನೋಡಿ.

ಮನು ಬಾಹ್ಯರಿಗೆ ವಿಧಿಸಿದ ನಿಷೇಧಗಳಿಗೂ ಕಲ್ಲರ್ ಜನಾಂಗದವರು ೧೯೩೧ರಲ್ಲಿ ಅಸ್ಪೃಶ್ಯರ ಮೇಲೆ ವಿಧಿಸಿದ ನಿಷೇಧಗಳಿಗೂ ಏನಾದರೂ ವ್ಯತ್ಯಾಸವಿದೆಯೇ ನೋಡಿ? ಈ ನಿದರ್ಶನವನ್ನು ಕಂಡಮೇಲೆ ಅವರ್ಣೀಯರಿಗೆ ಈ ರೀತಿ ಅಧರ್ಮವನ್ನು ಮಾಡುತ್ತಿರುವ ವರ್ಣೀಯರು, ಅಸ್ಪೃಶ್ಯರು ಮನುಧರ್ಮ ಶಾಸ್ತ್ರದಂತೆ ಧರ್ಮವನ್ನು ಪಾಲಿಸಬೇಕು ಎಂದು ಬೋಧಿಸಿದರೆ ಇವರನ್ನು ಯಾರು ತಾನೇ ನಂಬಿಯಾರು?

ಮತ್ತೊಂದು ನಿದರ್ಶನವನ್ನು ನೋಡಿ. ಮಧ್ಯಭಾರತದ ಬಲಯಿಸರಿಗೆ ಸಂಬಂಧಿಸಿದ್ದು ಇದು. ಬಲಯಿಸರು ಅಸ್ಪೃಶ್ಯ ಜನಾಂಗಕ್ಕೆ ಸೇರಿದವರು. ತಮ್ಮ ಜನಾಂಗದ ಸಾಮಾಜಿಕ ಪ್ರಗತಿಗಾಗಿ ಬಲಯಿಸರು ಸುಮಾರು ೧೯೨೭ರಲ್ಲಿ ತಮ್ಮ ಘನತೆಗೆ ಅಡ್ಡಿ ಬರುವ ಕೆಲವು ರೀತಿಯ ಕೆಲಸಗಳನ್ನು ಮಾಡದಂತೆ ಮತ್ತು ತಾವೆಲ್ಲರೂ ಒಂದೇ ರೀತಿಯ ಉಡುಪನ್ನು ಧರಿಸುವಂತೆ ನಿಯಮಗಳನ್ನು ಮಾಡಿಕೊಂಡರು. ಈ ನಿಯಮಗಳಿಂದ ಸವರ್ಣೀಯರಿಗೆ ಯಾವ ತೊಡಕೂ ಆಗುವಂತಿರಲಿಲ್ಲ. ಬಲಯಿಸರು ಹಿಂದಿನಿಂದ ಬಂದ ಸಂಪ್ರದಾಯಬದ್ಧವಾದ ತಮ್ಮ ಸ್ಥಾನದಿಂದ ಮೇಲೇರಲು ಪ್ರಯತ್ನಿಸುತ್ತಾರೆಂದು ತಿಳಿದ ಸವರ್ಣೀಯ

ಹಿಂದೂಗಳು ಬಲಯಿಸರ ಈ ಉದ್ಧಟತನಕ್ಕೆ ತಕ್ಕ ರೀತಿಯಲ್ಲಿ ಪ್ರತೀಕಾರ ಮಾಡಲು ನಿರ್ಧರಿಸಿದರು.[೧] ಪತ್ರಿಕೆಯಲ್ಲಿ ಸವರ್ಣೀಯ ಹಿಂದೂಗಳು ಬಂಡಾಯಗಾರರಾದ ಬಲಯಿಸರ ಮೇಲೆ ಪ್ರತೀಕಾರ ತೆಗೆದುಕೊಂಡ ವಿವರ ಈ ರೀತಿ ವರದಿಯಾಗಿದೆ.

**ಹಿಂದೂಗಳ ಕ್ರೂರ ಶಾಸನ**
**ಬಲಯಿಸರಿಗೆ ನಿಬಂಧನೆಗಳು**
**ಜೀವನವಿಧಾನದ ನಿರ್ದೇಶನ**

"೧೯೨೭ನೆಯ ಮೇ ತಿಂಗಳಲ್ಲಿ ಇಂದೂರ್ ಜಿಲ್ಲೆಗೆ ಸೇರಿದ ಕನಾರಿಯ, ಬಿಚೋಲಿ ಹಪ್ಸಿ, ಮರ್ದನ ಮತ್ತು ಇತರ ಹದಿನೈದು ಗ್ರಾಮಗಳ ಸವರ್ಣೀಯ ಹಿಂದೂಗಳಾದ ಕಲೋಟರು, ರಜಪೂತರು, ಬ್ರಾಹ್ಮಣರು, ಪಟೇಲರು ಮತ್ತು ಪಟ್ವಾರಿಗಳು ತಮ್ಮ ತಮ್ಮ ಹಳ್ಳಿಗಳಲ್ಲಿದ್ದ ಬಲಯಿಸರಿಗೆ ಇನ್ನು ಮುಂದೆ ನೀವು ನಮ್ಮ ನಡುವೆ ಇರಬೇಕಾದರೆ ಈ ನಿಯಮಗಳನ್ನು ಪಾಲಿಸಬೇಕು ಎಂದು ಕೆಲವು ನಿಯಮಗಳನ್ನು ವಿಧಿಸಿದರು :

೧) ಬಲಯಿಸರು ಚಿನ್ನದ ಅಂಚುಗಳುಳ್ಳ ಪಗರಿಗಳನ್ನು ಧರಿಸಬಾರದು;
೨) ಅವರು ಬಣ್ಣದ ಅಥವಾ ಆಕರ್ಷಕವಾದ ಅಂಚುಳ್ಳ ಪಂಚೆಗಳನ್ನು ಧರಿಸಬಾರದು;
೩) ಹಿಂದೂಗಳು ಯಾರಾದರೂ ಸತ್ತರೆ ಆ ವಾರ್ತೆಯನ್ನು ಅವರ ಬಂಧುಗಳಿಗೆ, ಅವರು ಅದೆಷ್ಟೇ ದೂರವಿರಲಿ, ಅವರಿಗೆ ತಲುಪಿಸುವ ಕರ್ತವ್ಯ ಬಲಯಿಸರಿಗೆ ಸೇರಿದ್ದು;
೪) ಹಿಂದೂಗಳ ಮದುವೆಗಳಲ್ಲಿ ಬಲಯಿಸರು ಉತ್ಸವದಲ್ಲಿ ವಾದ್ಯ ನುಡಿಸಬೇಕು;
೫) ಬಲಯಿಸ ಹೆಂಗಸರು ಚಿನ್ನ ಬೆಳ್ಳಿಯ ಆಭರಣಗಳನ್ನು ಧರಿಸಬಾರದು ಮತ್ತು ಅವರು ಆಕರ್ಷಕವಾದ ನಿಲುವಂಗಿ ಅಥವಾ ಜಾಕೆಟ್‌ಗಳನ್ನು ಧರಿಸಬಾರದು;
೬) ಹಿಂದೂ ಹೆಂಗಸರ ಹೆರಿಗೆ ಕಾಲದಲ್ಲಿ ಬಲಯಿಸ ಹೆಂಗಸರು ಸೇವೆ ಮಾಡಬೇಕು;
೭) ಬಲಯಿಸರು ಯಾವ ಸಂಭಾವನೆಯನ್ನೂ ಕೇಳದೆ ಹಿಂದೂಗಳ ಸೇವೆ ಮಾಡಬೇಕು; ಅವರು ಪ್ರೀತಿಯಿಂದ ಏನನ್ನು ಕೊಡುತ್ತಾರೋ ಅದನ್ನು ಸ್ವೀಕರಿಸಬೇಕು;
೮) ಈ ಕರಾರುಗಳಿಗೆ ಒಪ್ಪದ ಬಲಯಿಸರು ಹಳ್ಳಿಯಿಂದ ಹೊರಟುಹೋಗಬೇಕು.

**ಅನುಸರಿಸಲು ನಿರಾಕರಿಸಿದ ಬಲಯರು**

"ಬಲಯಿಸರು ಈ ನಿಯಮಗಳನ್ನು ಅನುಸರಿಸಲು ನಿರಾಕರಿಸಿದರು. ಅವರ ಮೇಲೆ ಹಿಂದೂಗಳು ಪ್ರತಿರೋಧವನ್ನು ಮುಂದುವರಿಸಿದರು. ಬಲಯಿಸರು ಹಳ್ಳಿಯ ಬಾವಿಗಳಿಂದ ನೀರು ಸೇದುವುದನ್ನು ವಿರೋಧಿಸಿದರು ಮತ್ತು ಅವರ ದನಗಳ ಮೇವಿಗೆ ಅಡ್ಡಿಪಡಿಸಿದರು. ಬಲಯಿಸರು ತಮ್ಮ ಜಮೀನುಗಳಿಗೆ ಹಿಂದೂಗಳ ಜಮೀನುಗಳ ಮೂಲಕ ಹೋಗದಂತೆ ಹಿಂದೂಗಳು ತಡೆದರು ಮತ್ತು ಅದರಿಂದಾಗಿ ಹಿಂದೂಗಳ ಜಮೀನಿನಿಂದ ಸುತ್ತುವರಿದ ತಮ್ಮ ಜಮೀನುಗಳಿಗೆ ಬಲಯಿಸರು ಹೋಗದಂತಾಯಿತು. ಹಿಂದೂಗಳು ಬಲಯಿಸರ ಜಮೀನಿನಲ್ಲಿ ತಮ್ಮ ದನಕರುಗಳನ್ನು ಮೇಯಲು ಬಿಟ್ಟರು. ಬಲಯಿಸರು

---

೧. ಟೈಮ್ಸ್ ಆಫ್ ಇಂಡಿಯಾದ ೧೦–೨–೧೯೩೮ ಮತ್ತು ೧–೪–೧೯೩೮ರ ವರದಿಯನ್ನು ಪತ್ರಿಕೆಯಿಂದ ತೆಗೆದುಕೊಂಡಿದೆ.

ತಮಗಾದ ಕಿರುಕುಳವನ್ನು ಕುರಿತು ರಾಜರಿಗೆ ದೂರಿತ್ತರು. ಸಕಾಲದಲ್ಲಿ ಯಾವ ಪರಿಹಾರವೂ ದೊರೆಯದೆ ಕಿರುಕುಳ ಮುಂದುವರಿದಿದ್ದರಿಂದ, ಬಲಯಿಸರು ತಾವು ಶತಮಾನಗಳಿಂದ ಬದುಕಿದ್ದ ಮನೆಮಠಗಳನ್ನು ತೊರೆದು, ಹೆಂಗಸರು ಮಕ್ಕಳೊಂದಿಗೆ ನೆರೆ ಪ್ರಾಂತಗಳಾದ ಧರ್, ದೇವಸ್, ಭೋಪಾಲ್, ಗ್ವಾಲಿಯರ್ ಮುಂತಾದ ಕಡೆ ಹಳ್ಳಿಗಳಿಗೆ ವಲಸೆ ಹೋದರು.

**ಒತ್ತಾಯದ ಒಪ್ಪಂದ**

ಇಂದೋರ್‌ನಿಂದ ಉತ್ತರಕ್ಕೆ ಏಳು ಮೈಲಿ ದೂರದಲ್ಲಿರುವ ರಿಪೋಟಿ ಎಂಬ ಹಳ್ಳಿಯ ಹಿಂದೂಗಳು ಬಲಯಿಸರ ಮೇಲೆ ಬೇರೆ ಹಳ್ಳಿಗಳಲ್ಲಿ ವಿಧಿಸಿದ್ದ ನಿಯಮಗಳನ್ನು ಛಾಪಾಕಾಗದದ ಮೇಲೆ ಬರೆದು ರುಜುಹಾಕುವಂತೆ ಬಲಯಿಸರಿಗೆ ಆಜ್ಞೆಮಾಡಿದರು. ಅದಕ್ಕೆ ಬಲಯಿಸರು ಒಪ್ಪಲಿಲ್ಲ. ಅದಕ್ಕಾಗಿ ಕೆಲವು ಬಲಯರನ್ನು ಹೊಡೆಯಲಾಯಿತು. ಮತ್ತು ಅವರಲ್ಲೊಬ್ಬನನ್ನು ಕಂಬಕ್ಕೆ ಕಟ್ಟಿಹಾಕಿ ಕಾಗದಕ್ಕೆ ರುಜು ಹಾಕುವವರೆಗೂ ಬಿಡುವುದಿಲ್ಲವೆಂದರು. ಅವನು ರುಜು ಹಾಕಿದ ನಂತರ ಅವನನ್ನು ಬಿಟ್ಟರು. ಈ ಹಳ್ಳಿಯ ಕೆಲವು ಬಲಯಿಸರು ಮರುದಿನ ಅಂದರೆ ಡಿಸೆಂಬರ್ ೨೦ ರಂದು ಪ್ರಧಾನಿಯ ಬಳಿಗೆ ಓಡಿಹೋಗಿ ರಿಪೋಟಿಗ್ರಾಮದ ಹಿಂದೂಗಳಿಂದ ತಮಗಾದ ಕಿರುಕುಳದ ಬಗ್ಗೆ ದೂರುಕೊಟ್ಟರು. ಅವರನ್ನು ಡಿಸ್ಟ್ರಿಕ್ಟ್ ಸುಭೇದಾರನ ಬಳಿ ಕಳುಹಿಸಲಾಯಿತು. ಈ ಅಧಿಕಾರಿಯು ಪೊಲೀಸಿನವರೊಂದಿಗೆ ಹಳ್ಳಿಗೆ ಹೋಗಿ ವಿಚಾರಣೆ ನಡೆಸಿ ಹಿಂದೂಗಳ ಮೇಲೆ ಕಾಯಿದೆ ३४೨ ಮತ್ತು ೧४೭ ರ ಮೇರೆಗೆ ಕ್ರಮ ಜರುಗಿಸಬೇಕೆಂದು, ಬಲಯಿಸರ ಮೇಲೆ ಭಾರತದ ದಂಡ ಸಂಹಿತೆ ೧४೭ರ ಪ್ರಕಾರ ಕ್ರಮ ಜರುಗಿಸುವಂತೆ ಶಿಫಾರಸು ಮಾಡಿದನು.

**ಬಲಯಿಸರು ಹಳ್ಳಿಗಳನ್ನು ತೊರೆದರು.**
**ಉತ್ತಮ ಜಾತಿಯವರ ಕಿರುಕುಳ ಮತ್ತು**
**ಕಾನೂನಿನ ಅಜ್ಞಾನವೇ ಒಂದು ಪ್ರತಿಬಂಧಕ.**

“ಕೆಲವು ಹಳ್ಳಿಗಳಲ್ಲಿ ಬಲಯಿಸರನ್ನು ನೋಡಿಕೊಳ್ಳುವ ರೀತಿಯಲ್ಲಿ ಯಾವ ಹೆಚ್ಚಿನ ಪ್ರಗತಿಯೂ ಇಲ್ಲ. ಮೊದಲೇ ವರದಿ ಮಾಡಿರುವಂತೆ ಉನ್ನತ ಜಾತಿಯ ಹಿಂದೂಗಳು ಬಲಯಿಸರಿಗೆ ಕಿರುಕುಳ ಕೊಡುತ್ತಿದ್ದಾರೆ. ಇಂದೋರ್ ಜಿಲ್ಲೆಯ ಡೋಪಲ್‌ಪುರ ಪರ್‌ಗಣ ಒಂದರಲ್ಲಿಯೇ ಅನೇಕ ಬಲಯಿಸರು ತಮ್ಮ ಮನೆಮಠಗಳನ್ನು ತೊರೆದು ಪಕ್ಕದ ಪ್ರಾಂತಗಳಲ್ಲಿ ಆಶ್ರಯ ಪಡೆಯಬೇಕಾಯಿತು. ಬಲಯಿಸರನ್ನು ಹೊರದೂಡಿದ ಹಳ್ಳಿಗಳೆಂದರೆ ಬಡೋಲಿ, ಅಹಿರ್, ಕರಾಲ್, ಪಿಫ್‌ಲೋಡ, ಮೊರಕೇರ, ಪಾಮಲ್‌ಪುರ, ಕರೋಡ, ಚತ್ವಾಡ, ನೆವರಿ, ಪಾನ್, ಸನೌಡ, ಅಜನೋಟಿ, ಖತೇಡಿ ಮತ್ತು ಸನವಾಡ. ಪಾಮಲ್‌ಪುರ ಗ್ರಾಮದಲ್ಲಿ ಹೆಣ್ಣು ಗಂಡು ಮಕ್ಕಳಾದಿಯಾಗಿ ಎಲ್ಲ ಬಲಯಿಸರೂ ಖಾಲಿಯಾಗಿದ್ದರು. ಮೇಲಿನ ಒಂದು ಹಳ್ಳಿಯವನಾದ, ನಂದಬಲಯ ಎಂಬುವನನ್ನು ಹಿಂದೂಗಳು ಕ್ರೂರವಾಗಿ ಬಡಿದರಂತೆ. ಇನ್ನೊಂದು ಹಳ್ಳಿಯಲ್ಲಿ ಹಿಂದೂಗಳು ಬಲಯಿಸರ ಮನೆಗಳನ್ನೆಲ್ಲಾ ಸುಟ್ಟರೂ ಅವುಗಳನ್ನು ಸುಟ್ಟವರಾರು ಎಂಬುದು ಇಂದಿಗೂ ಪತ್ತೆಯಾಗಿಲ್ಲ.

“ಮುಗ್ಧರಾದ ಹಳ್ಳಿಯ ಬಲಯಿಸರು ಕಾನೂನಿನ ವಿಚಾರದಲ್ಲಿ ಅಜ್ಞಾನಿಗಳಾಗಿದ್ದು, ಸರ್ಕಾರಕ್ಕೆ ಒಂದು ಅರ್ಜಿಯನ್ನು ಸಲ್ಲಿಸಿದ ಮಾತ್ರಕ್ಕೆ ಉಳಿದೆಲ್ಲ ಕೆಲಸಗಳು ತಾನಾಗಿಯೇ ನಡೆಯುತ್ತವೆ ಎಂದು

ನಂಬುತ್ತಾರೆ. ತಾವು ಕೊಟ್ಟ ಅರ್ಜಿಯನ್ನು ಕೊನೆಯವರೆಗೂ ಮುಂದುವರಿಸಬೇಕೆಂಬ ಅರಿವು, ಸೌಲಭ್ಯ, ಮತ್ತು ವ್ಯವಧಾನ ಅವರಿಗಿಲ್ಲವಾದ್ದರಿಂದ ಅವರು ಕೊಟ್ಟ ಅರ್ಜಿಗಳಿಗೆ ಬೇಕಾದ ಸಾಕ್ಷಿಗಳನ್ನು ಒದಗಿಸದ ಕಾರಣ, ನ್ಯಾಯಾಧೀಶರು ಬೇರೆ ಮಾರ್ಗವಿಲ್ಲದೆ, ಅವರ ಅರ್ಜಿಗಳನ್ನು ವಜಾಮಾಡಿರುವ ಕೆಲವು ನಿದರ್ಶನಗಳುಂಟು."

ಧರ್ಮ ಅಧರ್ಮಗಳ ದೃಷ್ಟಿಯಿಂದ ನೋಡುವುದಾದರೆ, ಅಸ್ಪೃಶ್ಯರನ್ನು ನಿರ್ದಯವಾಗಿ ಮತ್ತು ಅನ್ಯಾಯವಾಗಿ ತುಳಿಯುವ, ಈ ಹಿಂದೂಗಳ ಪ್ರಯತ್ನದ ಹಿಂದೆ, ತಾವು ನಂಬಿರುವ ಧರ್ಮದ ರಕ್ಷಣೆಯಲ್ಲಿ ತಾವು ತೊಡಗಿದ್ದೇವೆ ಎಂಬ ಅವರ ನಂಬಿಕೆ ಖಂಡಿತ ಅಡಗಿದೆ.

## IV

ಮನುಧರ್ಮದಲ್ಲಿ ಈಗ ಎಷ್ಟು ಭಾಗ ಶಾಸನವಾಗಿ ಆಚರಣೆಯಲ್ಲಿ ಉಳಿದಿದೆ ಎಂಬುದನ್ನು ಕುರಿತು ಯೋಚಿಸಬೇಕು. ಶಾಸನ ಅಂದರೆ ನ್ಯಾಯಾಧೀಶರು ತಮ್ಮ ನ್ಯಾಯನಿರ್ಣಯದಲ್ಲಿ ಬಳಸುವ ಕಾನೂನು ಎಂಬ ಅರ್ಥದಲ್ಲಿ ಮನುಧರ್ಮವು ಮದುವೆ ಮತ್ತು ಉತ್ತರಾಧಿಕಾರದಂತಹ ವ್ಯಕ್ತಿಗತ ವಿಷಯಗಳಲ್ಲಿ ಮಾತ್ರ ಬಳಕೆಯಲ್ಲಿದೆ. ಸಾಮಾಜಿಕ ನಡತೆ ಮತ್ತು ನಾಗರಿಕ ಹಕ್ಕುಗಳನ್ನು ನಿರ್ಣಯಿಸುವಲ್ಲಿ ಇದು ಜಾರಿಯಲ್ಲಿಲ್ಲ. ಅದು ಇಂದು ಕಾನೂನಾಗಿ ಉಳಿದಿಲ್ಲವಾದರೂ ಅದು ಒಂದು ಸಂಪ್ರದಾಯವಾಗಿ ಉಳಿದಿದೆ.

ಕಾನೂನಿಗೆ ಹೋಲಿಸಿ ನೋಡಿದಾಗ ಸಂಪ್ರದಾಯವು ಕಡಿಮೆ ಮಹತ್ವದ್ದೇನಲ್ಲ. ಕಾನೂನನ್ನು ರಾಷ್ಟ್ರವು ತನ್ನ ಪೊಲೀಸ್ ಬಲದಿಂದ ಜಾರಿಗೊಳಿಸುತ್ತದೆ ನಿಜ. ಆದರೆ ಸಂಪ್ರದಾಯವು ತನ್ನ ಅಂತರ್ಗತ ಮೌಲ್ಯದಿಂದ ಮಾತ್ರ ಉಳಿಯುತ್ತದೆ. ಆದರೆ ಆಚರಣೆಯಲ್ಲಿ ಇವುಗಳ ವ್ಯತ್ಯಾಸ ಅಷ್ಟೊಂದು ಮಹತ್ವದ್ದಲ್ಲ. ಸಂಪ್ರದಾಯಗಳನ್ನು ಜನರು ರಾಷ್ಟ್ರದ ಕಾನೂನಿಗಿಂತಲೂ ಪರಿಣಾಮಕಾರಿಯಾಗಿ ಜಾರಿಗೊಳಿಸುತ್ತಾರೆ. ಏಕೆಂದರೆ ಒಂದು ಸಂಘಟಿತ ಜನಾಂಗದ ಒತ್ತಾಯ ರಾಷ್ಟ್ರದ ಒತ್ತಾಯಕ್ಕಿಂತಲೂ ಪ್ರಬಲವಾಗಿರುತ್ತದೆ.

ಮನುಧರ್ಮ ಶಾಸ್ತ್ರವು ರಾಷ್ಟ್ರದ ದೃಷ್ಟಿಯಲ್ಲಿ ಕಾನೂನು ಎಂದೆನಿಸದಿದ್ದರೂ, ಅದಕ್ಕಿರುವ ಸನ್ನಿವೇಶ ಬಲದಿಂದಾಗಿ ಅದರ ಪ್ರಾಯೋಗಿಕ ಶಕ್ತಿ ಮಾತ್ರ ಸ್ವಲ್ಪವೂ ಕುಂದಿಲ್ಲ.

ಸನ್ನಿವೇಶ ಬಲ ಎಂದಾಗ ಮೊದಲನೆಯದೇ ಸಂಪ್ರದಾಯ. ಎಲ್ಲ ಸಮಾಜದ ಸಮುದಾಯದಲ್ಲಿಯೂ ತಮ್ಮ ಕ್ರಿಯಾಶೀಲತೆಯನ್ನು ಮಾತ್ರವಲ್ಲದೆ ತಮ್ಮ ಭಾವನೆಗಳು, ನಂಬಿಕೆ, ಮೌಲ್ಯಮಾಪನ, ಒಪ್ಪಿಗೆ ನಿರಾಕರಣೆಗಳನ್ನೆಲ್ಲಾ ಒಳಗೊಂಡ ಮಾನಸಿಕ ಪ್ರವೃತ್ತಿಯೊಂದು ಬೆಳೆದು ಬಂದಿರುತ್ತದೆ. ಹುಟ್ಟಿನಿಂದಲೋ ಅಥವಾ ಪರಿವರ್ತನೆಯಿಂದಲೋ ಈ ಸಮುದಾಯಕ್ಕೆ ಸೇರಿದ ಪ್ರತಿಯೊಬ್ಬ ವ್ಯಕ್ತಿಯೂ ಈ ಸಾಮೂಹಿಕ ಪ್ರವೃತ್ತಿಯೊಂದಿಗೆ ಸಮರಸಗೊಳ್ಳುತ್ತಾನೆ. ಪ್ರತಿಯೊಂದು ಸಮೂಹದಲ್ಲಿಯೂ ಇಂತಹ ಸಾಮೂಹಿಕ ಮಾನಸಿಕ ಪ್ರವೃತ್ತಿಗಳನ್ನು, ಹೊಸದಾಗಿ ಸೇರಿದವರ ಮೇಲೆ ಸತತವಾಗಿ ಹೊರಿಸುವ ಪ್ರಯತ್ನ ನಡೆಯುತ್ತದೆ. ಈ ರೀತಿ ಹೊಸದಾಗಿ ಸೇರಿದವರ ಮಾನಸಿಕ ಮತ್ತು ಕ್ರಿಯಾತ್ಮಕ ವ್ಯಕ್ತಿತ್ವವನ್ನು ಸಮಾಜೀಕರಣಗೊಳಿಸುವ ಪ್ರಯತ್ನ ಪ್ರತಿ ಸಮಾಜದಲ್ಲಿಯೂ ನಡೆಯುತ್ತದೆ. ಸಮೂಹವನ್ನವಲಂಬಿಸಿ ಬದುಕಬೇಕಾದ ವ್ಯಕ್ತಿಯು, ಸಾಮೂಹಿಕವಾದ ಇಂತಹ ಮಾನಸಿಕ ಪ್ರವೃತ್ತಿಯನ್ನು ವಿರೋಧಿಸುವ ಬದಲು, ತನ್ನ ಜಾತಿಯ ಪರಿಸರಕ್ಕನುಗುಣವಾಗಿ ತನ್ನನ್ನು ನಿಬಂಧನೆಗೊಳಿಸುತ್ತಾನೆ. ವ್ಯಕ್ತಿಯು ಸಮೂಹದ ಮೇಲೆ ಅದೆಷ್ಟೊಂದು ಅವಲಂಬಿತನಾಗಿರುತ್ತಾನೆಂದರೆ ಅವನು ತನ್ನ ಮಾನಸಿಕ ನಿರ್ಣಯಗಳನ್ನು ಮರೆತು ಸಾಮೂಹಿಕ ಸ್ವಭಾವಗಳಿಗೆ

ಸುಲಭವಾಗಿ ಮಣಿಯುತ್ತಾನೆ. ಸಮೂಹದಿಂದ ವ್ಯಕ್ತಿಯಲ್ಲಾಗುವ ಈ ಸಾಮಾಜೀಕರಣದ ಸ್ವರೂಪವನ್ನು ಗ್ರೋಟೆಯು ಈ ರೀತಿ ಕಣ್ಣಿಗೆ ಕಟ್ಟುವಂತೆ ವಿವರಿಸಿದ್ದಾನೆ. ಅವನು ಹೇಳುತ್ತಾನೆ :

"ವ್ಯಕ್ತಿಯ ನೈತಿಕ, ಧಾರ್ಮಿಕ, ಸೌಂದರ್ಯಾತ್ಮಕ ಮತ್ತು ಸಾಮಾಜಿಕ ವಿಚಾರಗಳಲ್ಲಿ, ಸರಿ–ತಪ್ಪು, ಸಾಧ್ಯ–ಅಸಾಧ್ಯ, ನ್ಯಾಯ–ಅನ್ಯಾಯ, ಶುದ್ಧ–ಅಶುದ್ಧ, ಸುಂದರ–ಕುರೂಪಿ, ಯುಕ್ತ–ಆಯುಕ್ತ, ಯೋಗ್ಯ–ಅಯೋಗ್ಯ ಮುಂತಾದ ಗುಣಗಳು ಹಾಗೂ ವ್ಯಕ್ತಿಗಳ ಸಾಮಾಜಿಕ ಸ್ಥಾನಮಾನಗಳ ವಿಚಾರ ಹಾಗೂ ವಿನೋದ ವಿಹಾರಗಳ ವಿಚಾರದಲ್ಲಿ ಸಾಮೂಹಿಕವಾದ ನಂಬಿಕೆ ಮತ್ತು ಒಲವುಗಳು ಪ್ರತಿಯೊಬ್ಬ ವ್ಯಕ್ತಿಯಲ್ಲಿಯೂ ಅದು ಹೇಗೋ ಚಿಕ್ಕಂದಿನಿಂದಲೂ ಅಭಿವ್ಯಕ್ತಗೊಂಡು ಬೆಳೆಯುತ್ತವೆ. ಪ್ರತಿಯೊಬ್ಬ ವ್ಯಕ್ತಿಯೂ ತನ್ನ ಸ್ವಭಾವ, ಮಾನಸಿಕ ಅಭ್ಯಾಸ ಅಥವಾ ನಿರ್ದಿಷ್ಟವಾದ ಮಾನಸಿಕ ಪ್ರವೃತ್ತಿ ಇವುಗಳಿಗನುಗುಣವಾಗಿ ಅವನು ತನ್ನ ಪ್ರತಿಯೊಂದು ಅನುಭವವನ್ನು ಅರ್ಥೈಸುತ್ತಾನೆ ಮತ್ತು ವ್ಯಕ್ತಿಗಳ ಗುಣವನ್ನು ನಿರ್ಣಯಿಸುತ್ತಾನೆ. ತನ್ನ ಸಾಮಾಜಿಕ ನಂಬಿಕೆಗಳಿಂದ ಭಿನ್ನವಾದ ವ್ಯಕ್ತಿಯನ್ನು ಆ ಸಮೂಹವು ವಿರೋಧಿಸುತ್ತದೆ, ನಿರಾಕರಿಸುತ್ತದೆ ಮತ್ತು ದೂರವಿಡುತ್ತದೆ. ಅವರ ವಿರೋಧ ನಾನಾ ರೀತಿಯಲ್ಲಿ ಅಭಿವ್ಯಕ್ತವಾಗುತ್ತದೆ..... ಅಂತಹವರ ನಡುವೆ ಬದುಕಬೇಕಾದರೆ ಹಿರಿದಾದ ಸಹನಶೀಲತೆ, ಸೌಹಾರ್ದರ, ಮತ್ತು ಕ್ಷಮಾಶೀಲತೆ ಇಲ್ಲದಿದ್ದರೆ ವ್ಯಕ್ತಿಯ ಜೀವನ ಅಸಹ್ಯವಾಗುತ್ತದೆ."[೧]

ಇಂತಹ ಪರಿಣಾಮವು ಲಭಿಸಬೇಕಾದರೆ ಅದಕ್ಕೆ ನೆರವಾಗುವ ಅಂಶಗಳು ಯಾವುವು? ಗ್ರೋಟಿಯೆ ಈ ಪ್ರಶ್ನೆಗೆ ಉತ್ತರ ಹೇಳಿದ್ದಾನೆ. ಅವನ ಉತ್ತರ ಏನೆಂದರೆ "ಎಲ್ಲಕ್ಕೂ ರಾಜನಂತಿರುವ ಕಾನೂನು ಮತ್ತು ಸಂಪ್ರದಾಯ" ಇವು ವ್ಯಕ್ತಿಯ ಲೌಕಿಕ ಮತ್ತು ಆಧ್ಯಾತ್ಮಿಕ ಸ್ತರಗಳ ಮೇಲೆ ಸಮಗ್ರವಾಗಿ ಪ್ರಭಾವ ಬೀರಿ ಅವನ ಬುದ್ಧಿ ಮತ್ತು ಭಾವನೆಗಳನ್ನು, ಅಭ್ಯಾಸ ಮತ್ತು ಸ್ವಯಂಪ್ರವೃತ್ತಿಯೆಂಬ ಹೆಸರಿನಲ್ಲಿ ಸ್ಥಳೀಯ ಭಾವನೆಗಳಿಗೆ ಹೊಂದುವಂತೆ ಮಾಡುತ್ತವೆ.

ಇದರ ಒಟ್ಟು ಸಾರಾಂಶವೇನೆಂದರೆ, ಯಾವುದೇ ಒಂದು ಸಮೂಹದಲ್ಲಿ, ಅದರ ಭಾವನೆ, ನಂಬಿಕೆ, ಕಾರ್ಯವಿಧಾನ, ಒಪ್ಪುವುದು ನಿರಾಕರಿಸುವುದು ಮುಂತಾದ ಭಾವನಾತ್ಮಕ ಅನಿಸಿಕೆಗಳು ಒಂದು ಸಂಪ್ರದಾಯ ಮತ್ತು ಅಭ್ಯಾಸಗತವಾದ ಪರಂಪರೆಗೆ ಅಧೀನವಾಗಿರುತ್ತವೋ ಅಲ್ಲಿ ಇವುಗಳ ಆಚರಣೆಗೆ ಯಾವ ಕಾನೂನಿನ ಮನ್ನಣೆಯೂ ಬೇಕಾಗುವುದಿಲ್ಲ. ಸಂಘಟಿತ ಬದುಕಿನಿಂದ ಉದಿಸುವ ಸಾಮೂಹಿಕ ಶಕ್ತಿಯೂ ಆ ಪರಂಪರೆಯನ್ನು ಯಾರೂ ಮುರಿಯದಂತೆ ನೋಡಿಕೊಳ್ಳುತ್ತದೆ.

ಮನುವು ಹೇಳಿದ ಧರ್ಮದ ಪಾಲನೆಗೂ ಇದೇ ನಿಯಮ ಒಪ್ಪುತ್ತದೆ. ಮನುಧರ್ಮವು ಅನೇಕ ಶತಮಾನಗಳಿಂದ ತಾನು ಗಳಿಸಿದ ಪ್ರಭಾವದಿಂದಾಗಿ, ಹಿಂದೂ ಸಮಾಜದ ಸಂಪ್ರದಾಯ ಮತ್ತು ಪರಂಪರೆಯ ಒಂದು ಪ್ರಮುಖ ಅಂಗವೆನಿಸಿದೆ. ಅದು ಅವರೊಂದಿಗೆ ಸಮರಸಗೊಂಡು ರಕ್ತಗತವಾಗಿದೆ. ಅದು ಕಾನೂನಿನ ರೂಪದಲ್ಲಿ ಹಿಂದೂಗಳ ಬದುಕನ್ನೆಲ್ಲಾ ನಿಯಂತ್ರಿಸುತ್ತದೆ. ಅದು ಈಗ ಸಂಪ್ರದಾಯವೆನಿಸಿದ್ದರೂ ಅದರ ಪ್ರಭಾವವೇನೂ ಕಡಿಮೆಯಾಗಿಲ್ಲ. ಅದು ತಲೆ ತಲೆಮಾರುಗಳಿಂದಲೂ ಅವರ ನಡತೆ ಮತ್ತು ಜೀವನದೃಷ್ಟಿಯನ್ನು ರೂಪಿಸುತ್ತಾ ಬಂದಿದೆ.

ಮನುಧರ್ಮದ ಪ್ರಭಾವ ಕ್ಷೀಣಿಸದಂತಿರಲು ಮತ್ತೊಂದು ಕಾರಣವೆಂದರೆ, ಅದರ ಪ್ರಚಾರವನ್ನು ಕಾನೂನು ವಿರೋಧಿಸುವುದಿಲ್ಲ. ಅನೇಕ ಜನರ ಮನಸ್ಸಿಗೆ ಇದರ ಈ ಮಹತ್ವ ಹೊಳೆದಿಲ್ಲ. ಬ್ರಿಟಿಷರ

---

೧. *ಪ್ಲೇಟೋ ಮತ್ತು ಸಾಕ್ರಟೀಸನ ಇತರ ಸಹಚರರು* : ಗ್ರೋಟಿ, ಸಂ. ೧ ಪು. ೨೪೯.

ಆಳ್ವಿಕೆಯಿಂದಾದ ಪ್ರಯೋಜನಗಳಲ್ಲಿ ಒಂದೆಂದರೆ, ಮನುಸ್ಮೃತಿಯು ರಾಜಕೀಯ ಶಾಸನ ಸ್ಥಾನವನ್ನು ತಾನು ಕಳೆದುಕೊಂಡದ್ದು. ಮನುಸ್ಮೃತಿಯಲ್ಲಿ ಅಡಕವಾಗಿರುವ ಶಾಸನಗಳನ್ನು ನ್ಯಾಯಾಲಯವು ಬಲಾತ್ಕಾರವಾಗಿ ಜಾರಿಮಾಡಬಾರದೆಂಬುದು ಒಂದು ದೊಡ್ಡ ಅನುಗ್ರಹ. ಇದರ ತುಳಿತಕ್ಕೆ ಸಿಕ್ಕಿದವರ ಹೊರತು ಬೇರೆಯವರು ಇದರ ಮಹತ್ವವನ್ನು ಪೂರ್ಣವಾಗಿ ಅರಿಯಲಾರರು. ಅಸ್ಪೃಶ್ಯರ ದೃಷ್ಟಿಯಲ್ಲಿ ಇದು ಯೂರೋಪಿನಲ್ಲಿ ಬಂದ ಸಾಮಾಜಿಕ ಮತ್ತು ಧಾರ್ಮಿಕ ಸುಧಾರಣೆಯಷ್ಟು ಅನುಗ್ರಹದಾಯಕ. ಯೂರೋಪಿನ ಸುಧಾರಣೆಯನ್ನು ಅನುಸರಿಸಿ ಪ್ರಾಟೆಸ್ಟೆಂಟರ ಕ್ರಾಂತಿ ಬರದೆ ಹೋಗಿದ್ದರೆ ಈ ಸುಧಾರಣೆ ಶಾಶ್ವತವಾಗಿ ಉಳಿಯುತ್ತಿರಲಿಲ್ಲ. ನನಗೆ ತಿಳಿದಂತೆ ಈ ಪ್ರಾಟೆಸ್ಟೆಂಟರ ಕ್ರಾಂತಿಯ ಪ್ರಮುಖ ಅಂಶಗಳೆಂದರೆ (೧) ರಾಷ್ಟ್ರದ ಪರಮಾಧಿಕಾರ ನಿತ್ಯವಾದದ್ದು ಮತ್ತು ಚರ್ಚು ಅದಕ್ಕೆ ಅಧೀನವಾಗಿರಬೇಕು. (೨) ಚರ್ಚಿನಲ್ಲಿ ಬೋಧಿಸುವ ಸಿದ್ಧಾಂತಕ್ಕೆ ರಾಷ್ಟ್ರದ ಒಪ್ಪಿಗೆ ಬೇಕು. (೩) ಪಾದ್ರಿಗಳು ರಾಷ್ಟ್ರದ ಸೇವಕರಿದ್ದಂತೆ ಮತ್ತು ಅವರು ರಾಷ್ಟ್ರದ ಕಾನೂನುಗಳನ್ನು ಮೀರಿದರೆ ಅಥವಾ ನೈತಿಕ ಅಪರಾಧವನ್ನು ಎಸಗಿದರೆ ಅಥವಾ ರಾಷ್ಟ್ರದ ಮನ್ನಣೆ ಇಲ್ಲದ ಸಿದ್ಧಾಂತಗಳನ್ನು ಬೋಧಿಸಿದರೆ ಅವರು ಶಿಕ್ಷಾರ್ಹರಾಗುತ್ತಾರೆ. ವೈಯಕ್ತಿಕವಾಗಿ ಹೇಳುವುದಾದರೆ ನಾನು "ವ್ಯವಸ್ಥಿತ ಧರ್ಮಸಂಸ್ಥೆಯಲ್ಲಿ" ನಂಬಿಕೆಯುಳ್ಳವನು. ಅದು ಬೇರೆ ಬೇರೆಯವರು ಬೋಧಿಸುವ ತಪ್ಪಾದ ಅಥವಾ ಶಿಕ್ಷಾರ್ಹವಾದ ಸಿದ್ಧಾಂತಗಳ ವಿರುದ್ಧವಾಗಿ ಜನತೆಗೆ ರಕ್ಷಣೆ ಮತ್ತು ಭದ್ರತೆಯನ್ನು ಒದಗಿಸುತ್ತದೆ. "ವ್ಯವಸ್ಥಿತ ಧರ್ಮ ಸಂಸ್ಥೆಯನ್ನು" ವಿರೋಧಿಸುವವರಿದ್ದಾರೆ ಎಂಬುದನ್ನು ನಾನು ಬಲ್ಲೆ. ಇಂತಹ "ವ್ಯವಸ್ಥಿತ ಧರ್ಮ ಸಂಸ್ಥೆ" ಒಳ್ಳೆಯದೋ ಕೆಟ್ಟದ್ದೋ, ಆದರೆ ಮನು ಬೋಧಿಸಿದ ಧರ್ಮದ ಪ್ರಚಾರವನ್ನು ರಾಷ್ಟ್ರದ ಕಾನೂನು ಎಲ್ಲಿಯೂ ವಿರೋಧಿಸಿಲ್ಲ. ನ್ಯಾಯಾಲಯ ಅದನ್ನು ಶಾಸನವೆಂದು ಕರೆಯುವುದಿಲ್ಲ ನಿಜ. ಆದರೆ ಕಾನೂನು ಅದನ್ನು ನ್ಯಾಯಬಾಹಿರ ಎಂದು ಗುರುತಿಸಿಲ್ಲ. ಪ್ರತಿದಿನವೂ ಪಂಡಿತರು ಪ್ರತಿ ಹಳ್ಳಿಯಲ್ಲಿಯೂ ತಂದೆ ತಾಯಿಯರಿಗೆ ಇದನ್ನು ಬೋಧಿಸುತ್ತಾರೆ ಮತ್ತು ತಂದೆ ತಾಯಿಯರು ಅದನ್ನು ಮಕ್ಕಳಿಗೆ ಬೋಧಿಸುವರು. ಆದ್ದರಿಂದ ಇದರ ಪ್ರಭಾವವು ಮಸುಕಾಗುವುದೆಲ್ಲಿ ಬಂತು? ಇದರ ಪಾಠಗಳು ಪ್ರತಿ ದಿನವೂ ಮನಸ್ಸಿನಲ್ಲಿ ಬೇರೂರಿ ನಿಲ್ಲುವುದರಿಂದ, ಅಸ್ಪೃಶ್ಯತೆ ಎಂಬುದು ಧರ್ಮ ಸಮ್ಮತವಾದದ್ದು, ಎಂಬುದನ್ನು ಯಾರೂ ಮರೆಯುವದಿಲ್ಲ.

ಪ್ರತಿದಿನವೂ ಮಾಡುವ ಮನುಧರ್ಮಶಾಸ್ತ್ರದ ಪ್ರಚಾರದಿಂದಾಗಿ ಹೆಂಗಸರು ಗಂಡಸರು ಮತ್ತು ಮಕ್ಕಳ ಮನಸ್ಸು ಈ ಸೋಂಕಿಗೆ ಗುರಿಯಾಗಿದೆ. ಅಷ್ಟೇ ಅಲ್ಲ, ಇದು ನ್ಯಾಯಾಧೀಶರ ಮನಸ್ಸನ್ನು ಪ್ರಭಾವಶಾಲಿಯಾಗಿ ಮುಟ್ಟಿದೆ. ಅಂತಹ ಒಂದು ನಿದರ್ಶನ ಕಲ್ಕತ್ತದಿಂದ ವರದಿಯಾಗಿದೆ.[೧] ನೊಬಿನ್ ದೋಮೆ ಎಂಬ ಒಬ್ಬ ಅಸ್ಪೃಶ್ಯನನ್ನು ಮೇಕೆಯನ್ನು ಕದ್ದನೆಂಬ ಕಾರಣದಿಂದ ಬಂಧಿಸಲಾಯಿತು. ಅವನು ಅಪರಾಧಿಯಲ್ಲ ಎಂದು ಮುಂದೆ ಸಾಬೀತಾಯಿತು. ಅವನು ಫಿರ್ಯಾದಿಯ ಮೇಲೆ ಮಾನನಷ್ಟಕ್ಕೆ ಮೊಕದ್ದಮೆ ಹೂಡಿದನು. ನ್ಯಾಯಾಧೀಶನು ಇವನು ಕೀಳು ಜಾತಿಗೆ ಸೇರಿದವನಾದ ಕಾರಣ ಇವನಿಗೆ ಮಾನವೆಂಬುದೆ ಇಲ್ಲ ಎಂದು ಆ ಮೊಕದ್ದಮೆಯನ್ನು ವಜಾ ಮಾಡಿದನು. ಆಗ ಉಚ್ಚ ನ್ಯಾಯಾಲಯ ಇದರಲ್ಲಿ ಪ್ರವೇಶ ಮಾಡಿ, ನ್ಯಾಯಶಾಸನದ ಎದುರು ಎಲ್ಲರೂ ಸಮಾನವಾದ್ದರಿಂದ, ನ್ಯಾಯಾಧೀಶರ ತೀರ್ಪು ತಪ್ಪು ಎಂದು ಆದೇಶಿಸಿತು. ಆದರೆ, ಆ ನ್ಯಾಯಾಧೀಶರು ಅಸ್ಪೃಶ್ಯರಿಗೆ ಮರ್ಯಾದೆ ಎಂಬುದೇ ಇಲ್ಲ ಎಂಬ

---

೧. ೨ ಡಬ್ಲ್ಯುಆರ್. (ದಂಡಸಂಹಿತೆ) ೩೫, ಕ್ವೀನ್ ವಿರುದ್ಧ ನೋಬಿನ್ ದೋಮ್

ತೀರ್ಮಾನಕ್ಕೆ ಹೇಗೆ ಬಂದರು? ಎಂಬ ಪ್ರಶ್ನೆಯನ್ನು ನಾವು ಗಮನಿಸಬೇಕು. ಖಂಡಿತ ಇದಕ್ಕೆ ಮನುಸ್ಮೃತಿಯ ಬೋಧನೆಯೇ ಕಾರಣ.

ಮನುಧರ್ಮಶಾಸ್ತ್ರವು ಯಾವಾಗಲೂ ಗತಕಾಲಕ್ಕೆ ಸೇರಿದ್ದು ಎಂದೆನಿಸಿಲ್ಲ. ಅದು ಇದೀಗ ಜಾರಿಗೆ ಬಂದಿದೆಯೇನೋ ಎನ್ನುವಷ್ಟು ಹೊಸದಾಗಿದೆ. ಅದು ಮುಂದೆಯೂ ಪ್ರಭಾವಶಾಲಿಯಾಗಿ ಉಳಿಯುವಂತೆ ಕಾಣುತ್ತದೆ. ಅದು ಮುಂದೆ ಕೆಲವು ಕಾಲ ಮಾತ್ರ ಉಳಿಯುತ್ತದೋ ಅಥವಾ ಶಾಶ್ವತವಾಗಿ ನಿಲ್ಲುತ್ತದೋ ಎಂಬುದು ಕಾಲವೇ ನಿರ್ಣಯಿಸಬೇಕಾದ ಪ್ರಶ್ನೆ.

* * * *

## ಅಧ್ಯಾಯ ೨೪

# ಶ್ರೀಮಾನ್ ಗಾಂಧಿಯ ಮುಂಜಾಗ್ರತೆಯ ನೆರಳಲ್ಲಿ

**I ಕಾಂಗ್ರೆಸ್ ಮೂಲಕ ಅವರ ಕೆಲಸ**

೧) ವಿಚಿತ್ರ ಸ್ವಾಗತ

೨) ದೊಡ್ಡ ಪರಿತ್ಯಾಗ

೩) ಆಪಾದನೆಯ ಪಟ್ಟಿ

೪) ಈ ಆಪಾದನೆಗೆ ಆಧಾರ

೫) ಗಾಂಧಿಯ ದುರಂತ

೬) ಭಾರತಕ್ಕೆ ಮತ್ತು ಅಸ್ಪೃಶ್ಯರಿಗೆ ಗಾಂಧಿ ಬಿಟ್ಟು ಹೋದ ಆಸ್ತಿ

ಲಂಡನ್ನಿನಲ್ಲಿ ನಡೆದ ಎರಡನೆ ದುಂಡುಮೇಜಿನ ಪರಿಷತ್ತಿಗೆ ಪ್ರತಿನಿಧಿಯಾಗಿ ಹೋಗಿದ್ದ ಶ್ರೀಮಾನ್ ಗಾಂಧಿ ಭಾರತಕ್ಕೆ ಹಿಂದಿರುಗಿದರು. ದುಂಡುಮೇಜಿನ ಪರಿಷತ್ತಿನಲ್ಲಿ ಶ್ರೀಮಾನ್ ಗಾಂಧಿಯು ವೈಯಕ್ತಿಕವಾಗಿ ಹಾಗೂ ರಾಜಕಾರಣಿಯಾಗಿ ಲಜ್ಜಾಸ್ಪದವಾದ ಸೋಲನ್ನು ಅನುಭವಿಸಿದರು. ಹಿಂದೂಗಳು ನನ್ನ ಈ ಅಭಿಪ್ರಾಯವನ್ನು ಒಪ್ಪುವುದಿಲ್ಲ ಎಂಬುದು ನನಗೆ ಗೊತ್ತು. ದುರದೃಷ್ಟದ ವಿಚಾರವೇನೆಂದರೆ ನನ್ನ ಈ ಅಭಿಪ್ರಾಯವು ಶ್ರೀಮಾನ್ ಗಾಂಧಿಯ ಆಪ್ತ ಮಿತ್ರರಿಬ್ಬರ ಅಭಿಪ್ರಾಯಕ್ಕೆ ಹೊಂದುತ್ತದೆ. ದುಂಡುಮೇಜಿನ ಪರಿಷತ್ತಿನಲ್ಲಿ ಶ್ರೀಮಾನ್ ಗಾಂಧಿಯೊಂದಿಗೆ ನಿಕಟ ಸಂಪರ್ಕವನ್ನು ಇಟ್ಟಿದ್ದಂತಹ ಶ್ರೀಮಾನ್ ಯೆವರ್ ಅವರು ಗಾಂಧಿ ಲಂಡನ್ನಿನ ಪರಿಷತ್ತಿನಲ್ಲಿ ನಿರ್ವಹಿಸಿದ ಪಾತ್ರವನ್ನು ಕುರಿತು ಈ ರೀತಿ ಬರೆಯುತ್ತಾರೆ :

"ಗಾಂಧಿಯು ಸೆಂಟ್ ಜೇಮ್ಸ್ ಅರಮನೆಯಲ್ಲಿ ಬಹು ಪ್ರಮುಖವಾದ ಪಾತ್ರವಹಿಸಿದ್ದನ್ನು ನೋಡಿ ಅವರಲ್ಲಿ ಹಿರಿದಾದ ನಿರೀಕ್ಷೆಯನ್ನಿಟ್ಟವರಿಗೆ ತುಂಬಾ ನಿರಾಶೆಯನ್ನು ಉಂಟುಮಾಡಿದರು.....ಅವರು ತಮ್ಮ ಮೂಲೋದ್ದೇಶವನ್ನೇ ಮರೆತರು."

* * * * *

"ತಮ್ಮ ಮೊದಲನೆಯ ಭಾಷಣದಲ್ಲಿ, ದುಃಖತಪ್ತರಾದ ಸಹಸ್ರಾರು ಭಾರತೀಯರ ನೋವನ್ನು ಅತಿಭಾವುಕತೆಯಿಂದ ಹಾಗೂ ವಿನಯದಿಂದ ನಿರೂಪಿಸುವಲ್ಲಿ ಶ್ರೀಮಾನ್ ಗಾಂಧಿ ಅಷ್ಟೇನೂ ಪ್ರಭಾವ ಬೀರಲಿಲ್ಲ. ಅವರ ಪ್ರಾಮಾಣಿಕತೆಯನ್ನು ಯಾರೂ ಅನುಮಾನಪಡಲಿಲ್ಲ, ನಿಜ. ಆದರೆ ಅದೇನು ಕಾರಣವೊ ಅಂತೂ ಅವರ ನಿರೂಪಣೆ ಸಪ್ಪೆಯೆನಿಸಿತು. ಅವರು ಹೇಳಿದ ವಿಷಯ ಸರಿಯಾಗಿದ್ದಿತು. ಆದರೆ ಅವರು ಹೇಳಿದ ರೀತಿ ಸರಿಯಾದದ್ದಲ್ಲ. ಅಲ್ಲದೆ ಅವರು ಸಮ್ಮೇಳನದಲ್ಲಿ ಮುಂದೆ ಮಾಡಿದ ಪ್ರಸ್ತಾಪಗಳು ಪ್ರಭಾವಶಾಲಿಯಾಗಿರಲಿಲ್ಲ. ಬ್ರಿಟಿಷ್ ಸರ್ಕಾರವು ನವಭಾರತದ ಸಂವಿಧಾನದ ನಕ್ಷೆಯನ್ನು ತಯಾರಿಸಿಲ್ಲ ಎಂಬ ಗಾಂಧಿಯ ಆಕ್ಷೇಪಣೆಯನ್ನು ಕಂಡು ಅವರೊಂದಿಗೆ ಇದ್ದ ರಾಷ್ಟ್ರೀಯ ಕಾಂಗ್ರೆಸ್ಸಿನ ಇತರ ಪ್ರತಿನಿಧಿಗಳು ಗಾಬರಿಯಾದರು. ಏಕೆಂದರೆ ಭಾರತದ ರಾಷ್ಟ್ರೀಯ ಕಾಂಗ್ರೆಸ್ಸಿನ ಪ್ರತಿನಿಧಿಗಳೆನಿಸಿ, ಸ್ವತಂತ್ರ ಭಾರತದ

ಸಂವಿಧಾನದ ರಚನೆಗೆ ಬ್ರಿಟಿಷ್ ಮಂತ್ರಿಗಳ ಸಲಹೆ ಮತ್ತು ಮಾರ್ಗದರ್ಶನ ಬಯಸುವುದು ಅವರಿಗೆ ಅಸಹಜವೆನಿಸಿತು. ರೂಪಾಯಿಯನ್ನು ಪೌಂಡಿನೊಂದಿಗೆ ಸರಿದೂಗಿಸುವ ಸಲಹೆಯನ್ನು ಗಾಂಧಿ ವಿರೋಧಿಸಿದ್ದು ಯಾವ ಪರಿಣಾಮವನ್ನೂ ಬೀರಲಿಲ್ಲ. ಪೌರರ ಹಕ್ಕು ಬಾಧ್ಯತೆಗಳು ಮುಂತಾದ ವಿಚಾರಗಳನ್ನು ಕುರಿತ ಚರ್ಚೆಯಲ್ಲಿಯೂ, ಇವರ ಸಲಹೆಗಳು ಗಮನೀಯವಾಗಿರಲಿಲ್ಲ. ತೆರೆಯ ಮರೆಯಲ್ಲಿ ಹಿಂದೂ ಮುಸ್ಲಿಮರ ಸಾಮರಸ್ಯದ ಪ್ರಯತ್ನವನ್ನು ಇವರು ನಡೆಸುತ್ತಲೇ ಇದ್ದರೂ ಅದರಿಂದ ಹೆಚ್ಚಿನ ಪ್ರಯೋಜನವಾಗಲಿಲ್ಲ. ಸಮ್ಮೇಳನದ ಚರ್ಚೆಯನ್ನು ಪ್ರಭಾವಶಾಲಿಯಾಗಿ ಒಂದು ಕ್ಷಣವೂ ನಿಯಂತ್ರಿಸಲು ಗಾಂಧಿಗೆ ಸಾಧ್ಯವಾಗಲಿಲ್ಲ. ಸಮ್ಮೇಳನದಲ್ಲಿ ಒಮ್ಮೊಮ್ಮೆ ಮಾತನಾಡುತ್ತಾ ಮಿಕ್ಕಂತೆ ಸುಮ್ಮನೆ ಕುಳಿತ ಗಾಂಧಿಯು, ಒಂದು ವೇಳೆ ಅಲ್ಲಿ ಇಲ್ಲದಿದ್ದರೂ ಸಮ್ಮೇಳನವು ಹೀಗೆಯೇ ನಡೆಯುತ್ತಿದ್ದಿತು ಎನಿಸಿತು."[೧]

ಇದು, ದುಂಡುಮೇಜಿನ ಪರಿಷತ್ತಿನಲ್ಲಿ ಶ್ರೀಮಾನ್ ಗಾಂಧಿಯ ಸಾಧನೆಯನ್ನು ಕುರಿತು ಬೋಲ್ಟನ್ ಹೇಳಿದ ಮಾತು.

ಶ್ರೀಮಾನ್ ಗಾಂಧಿ ಒಬ್ಬ ರಾಜಕಾರಣಿಯಾಗಿ ಮತ್ತು ರಾಜನೀತಿಜ್ಞನಾಗಿ ನಡೆದುಕೊಂಡ ರೀತಿ ಹೇಗಿದ್ದಿತು?

ದುಂಡು ಮೇಜಿನ ಪರಿಷತ್ತಿನ ಮೊದಲನೆ ಅಧಿವೇಶನದಲ್ಲಿ ಪರಿಹಾರ ದೊರೆಯದ ಮೂರು ಪ್ರಶ್ನೆಗಳು ಉಳಿದಿದ್ದುವು. ಅಲ್ಪಸಂಖ್ಯಾತರ ಪ್ರಶ್ನೆ, ಸಂಯುಕ್ತ ಸಂಸ್ಥಾನಗಳ ಪ್ರಶ್ನೆ ಮತ್ತು ಬ್ರಿಟಿಷ್ ಚಕ್ರಾಧಿಪತ್ಯದಲ್ಲಿ ಭಾರತದ ಸ್ಥಾನ – ಈ ಮೂರು ಪ್ರಶ್ನೆಗಳ ವಿಚಾರದಲ್ಲಿ ಭಿನ್ನಾಭಿಪ್ರಾಯವಿದ್ದಿತು. ಇವುಗಳನ್ನು ಪರಿಹರಿಸಲು ಉನ್ನತ ಮಟ್ಟದ ರಾಜನೀತಿಜ್ಞತೆ ಬೇಕಾಗಿದ್ದಿತು. ಕಾಂಗ್ರೆಸ್ಸಿನ ಪರವಾಗಿ ಅಧಿಕಾರಯುತವಾಗಿ ಮಾತನಾಡಬಲ್ಲ ಪ್ರಾಜ್ಞರು ದುಂಡುಮೇಜಿನ ಪರಿಷತ್ತಿನ ಮೊದಲನೆ ಅಧಿವೇಶನದಲ್ಲಿ ಭಾಗವಹಿಸದೆ ಇರುವುದೇ ಈ ಸಮಸ್ಯೆಗಳಿಗೆ ಪರಿಹಾರ ದೊರೆಯದಿರಲು ಕಾರಣ ಎಂದು ಹಲವರು ಹೇಳಿದರು. ಎರಡನೆ ಅಧಿವೇಶನಕ್ಕೆ ಕಾಂಗ್ರೆಸ್ಸಿನ ಪರವಾಗಿ ಶ್ರೀಮಾನ್ ಗಾಂಧಿ ಬಂದದ್ದರಿಂದ ಆ ಅಭಾವ ತುಂಬಿದಂತಾಯಿತು. ಆದರೆ ಬಗೆಹರಿಯದೆ ಉಳಿದಿದ್ದ ಹಿಂದಿನ ಸಮಸ್ಯೆಗಳಲ್ಲಿ ಒಂದನ್ನೂ ಅವರು ಬಗೆಹರಿಸಲಿಲ್ಲ. ಶ್ರೀಮಾನ್ ಗಾಂಧಿ ಬಂದದ್ದರಿಂದ ಮತ್ತಷ್ಟು ಅನೈಕ್ಯ ಉಂಟಾಯಿತು ಎಂದರೆ ತಪ್ಪಲ್ಲ. ಅವರು ಪ್ರತಿಯೊಬ್ಬ ಭಾರತೀಯ ಪ್ರತಿನಿಧಿಯನ್ನು ಕುರಿತು, ಮಕ್ಕಳಂತೆ ಪರಿಹಾಸ್ಯ ಮಾಡತೊಡಗಿದರು. ಅವರುಗಳ ಪ್ರಾತಿನಿಧ್ಯ ಮತ್ತು ಪ್ರಾಮಾಣಿಕತೆಯನ್ನೇ ಪ್ರಶ್ನೆ ಮಾಡಿದರು. ಉದಾರವಾದಿಗಳನ್ನು ಆರಾಮಕುರ್ಚಿಯ ರಾಜಕಾರಣಿಗಳು ಮತ್ತು ಅನುಯಾಯಿಗಳಿಲ್ಲದ ಮುಂದಾಳುಗಳು ಎಂದೆಲ್ಲಾ ಗೇಲಿ ಮಾಡಿದರು. ಮಹಮದೀಯ ಮುಂದಾಳುಗಳನ್ನು ಕುರಿತು ಶ್ರೀಮಾನ್ ಗಾಂಧಿ ತಾವು ಮುಸ್ಲಿಂ ಸಮೂಹವನ್ನು ಅವರಿಗಿಂತ ಚೆನ್ನಾಗಿ ಪ್ರತಿನಿಧಿಸುತ್ತೇನೆ ಎಂಬುದಾಗಿ ಹೇಳಿದರು. ದಲಿತ ವರ್ಗದ ಪ್ರತಿನಿಧಿಗಳು ನಿಜವಾದ ದಲಿತರ ಪ್ರತಿನಿಧಿಗಳಲ್ಲ, ತಾನೇ ಅವರ ನಿಜವಾದ ಪ್ರತಿನಿಧಿ ಎಂದು ಹೇಳಿಕೊಂಡರು. ತಮ್ಮ ಪ್ರತಿಯೊಂದು ಭಾಷಣದ ಕೊನೆಯಲ್ಲಿಯೂ ಈ ಮಾತನ್ನು ಹೇಳುತ್ತಲೇ ಬಂದರು. ಶ್ರೀಮಾನ್ ಗಾಂಧಿಯ ಈ ಅವಿವೇಕ ಮತ್ತು ಬಿಂಕದ ಮಾತನ್ನು ಸಹಿಸಿ ಸಹಕರಿಸಿ, ಅವರ ತಪ್ಪಿನಿಂದ ರಾಷ್ಟ್ರಕ್ಕೆ ಮತ್ತು ವೈಯಕ್ತಿಕವಾಗಿ ಅವರಿಗೆ ಆಗುತ್ತಿದ್ದ ಹಾನಿಯಿಂದ ಅವರನ್ನು ತಪ್ಪಿಸಿದ ಕಾಂಗ್ರೆಸ್ಸೇತರ ಪ್ರತಿನಿಧಿಗಳಿಗೆ ಸತ್ಯಸಂಧರ ಎಲ್ಲ ವಂದನೆ ಸಲ್ಲಬೇಕು. ತನ್ನ ಸಹ ಪ್ರತಿನಿಧಿಗಳಿಗೆ ತೋರಿಸಿದ ಅಗೌರವದ ಮಾತಿರಲಿ, ಕೊನೆಯ ಪಕ್ಷ ಶ್ರೀಮಾನ್ ಗಾಂಧಿ ತಾವು ಯಾವ

೧. *ಲಂಡನ್ನಿನಲ್ಲಿ ಗಾಂಧಿ* – ಏಷ್ಯ, ಫೆಬ್ರವರಿ ೧೯೩೨.

ಉದ್ದೇಶಕ್ಕಾಗಿ ಬಂದಿದ್ದರೋ ಆ ಉದ್ದೇಶಕ್ಕಾಗಿ ನಿಂತು ಹೋರಾಡಿದರೆ? ಅದನ್ನೂ ಮಾಡಲಿಲ್ಲ. ಅವರು ವಿಷಯಗಳನ್ನು ನಿರೂಪಿಸಿದ ರೀತಿ ಬೇರೆಯವರು ತಲೆತಗ್ಗಿಸುವಂತಿದ್ದಿತು. ತಾನು ಪ್ರತಿಪಾದಿಸಬೇಕಾದ ಅನೇಕ ಯೋಗ್ಯವಾದ ವಿಷಯಗಳ ಬಗ್ಗೆ ಹೋರಾಡುವ ಬದಲು, ಸೋತು ಸಂಧಾನಕ್ಕೆ ಹೋದರು. ಸಂಯುಕ್ತ ಶಾಸನಸಭೆಗೆ ಪ್ರತಿನಿಧಿಗಳನ್ನು ರಾಜನೇ ನಾಮಕರಣ ಮಾಡಬೇಕೆಂಬ ಬ್ರಿಟಿಷ್ ಸಾಮ್ರಾಜ್ಯದ ಇಚ್ಛೆಗೆ ಒಪ್ಪಿದ ಗಾಂಧಿ, ಆ ಪ್ರತಿನಿಧಿಗಳು ಚುನಾಯಿತರಾಗಬೇಕೆಂಬ ನಿಲುವನ್ನು ಮರೆತರು. ಸಂಪ್ರದಾಯವಾದಿಗಳಿಗೆ ಮಣಿದ ಗಾಂಧಿ, ಪ್ರಾಂತ್ಯಗಳ ಮಟ್ಟದ ಸ್ವರಾಜ್ಯಕ್ಕೆ ಒಪ್ಪಿ, ಕೇಂದ್ರದಲ್ಲಿಯೂ ಸ್ವಯಂ ಆಡಳಿತ ಬೇಕೆಂಬುದಕ್ಕೆ ಒತ್ತಾಯ ಮಾಡಲಿಲ್ಲ ಮತ್ತು ಇದಕ್ಕಾಗಿ ಲಕ್ಷಾಂತರ ಜನ ಜೈಲು ಸೇರಿದರೆಂಬುದನ್ನು ಮರೆತರು. ಅವರು ಅಲ್ಪಸಂಖ್ಯಾತರೊಂದಿಗೆ ಸ್ವಲ್ಪವೂ ಸಹಕರಿಸಲು ಸಿದ್ಧರಿರಲಿಲ್ಲ. ಆ ಪಕ್ಷಗಳೊಂದಿಗೆ ಸಹಕರಿಸಿದ್ದರೆ ಅವರಿಗೂ ಗೌರವ ಬರುತ್ತಿದ್ದಿತು ಮತ್ತು ರಾಷ್ಟ್ರಕ್ಕೂ ಒಳ್ಳೆಯದಾಗುತ್ತಿದ್ದಿತು.

ದುಂಡುಮೇಜಿನ ಪರಿಷತ್ತಿಗೆ ಹೋದದ್ದರಿಂದ ಶ್ರೀಮಾನ್ ಗಾಂಧಿಯ ಘನತೆಗೆ ಆದಷ್ಟು ಹಾನಿ ಬೇರೆ ಯಾವುದರಿಂದಲೂ ಆಗಲಿಲ್ಲ. ದುಂಡುಮೇಜಿನ ಪರಿಷತ್ತಿನಲ್ಲಿ ಕಾಣುತ್ತಿದ್ದ ಶ್ರೀಮಾನ್ ಗಾಂಧಿಯ ಕನ್ನಡಕ ಅವರ ಸ್ನೇಹಿತರನೇಕರಿಗೆ ನೋವನ್ನುಂಟು ಮಾಡಿತು. ಅವರು ನಿರ್ವಹಿಸಲು ಬಂದ ಕಾರ್ಯಕ್ಕೆ ಬೇಕಾದ ಅರ್ಹತೆ ಅವರಿಗೆ ಇರಲಿಲ್ಲ. ಒಂದು ರಾಷ್ಟ್ರದ ಸಂವಿಧಾನದ ರಚನೆಗೆ ಸೂಕ್ತ ಶಿಕ್ಷಣ ಮತ್ತು ಸಿದ್ಧತೆ ಇಲ್ಲದ, ಇಂತಹ ಪ್ರತಿನಿಧಿಯನ್ನು, ಸಂವಿಧಾನವನ್ನು ರೂಪಿಸಲು ಯಾವ ರಾಷ್ಟ್ರವೂ ಎಂದೂ ಕಳುಹಿಸಿರಲಾರದು. ನರಸಿಂಹ ಮೆಹತಾರ ಒಂದು ಹಾಡನ್ನು ಹಾಡುತ್ತಾ ಗಾಂಧಿ ದುಂಡುಮೇಜಿನ ಪರಿಷತ್ತಿಗೆ ಪ್ರವೇಶಿಸಿದರು. ಅವರು ಸಂವಿಧಾನ ಶಾಸನಗಳ ತುಲನಾತ್ಮಕ ಜ್ಞಾನವನ್ನುಳ್ಳ ಕೃತಿಯೊಂದನ್ನು ತಮ್ಮ ಕೈಯಲ್ಲಿ ಹಿಡಿದು ಪರಿಷತ್ತಿಗೆ ಹೋಗಿದ್ದರೆ, ಅವರಿಗೂ ಮತ್ತು ಅವರ ರಾಷ್ಟ್ರಕ್ಕೂ ಒಳ್ಳೆಯದಾಗುತ್ತಿದ್ದಿತು. ತಾವು ನಿರ್ವಹಿಸಬೇಕಾದ ವಿಷಯದಲ್ಲಿ ಯಾವ ಜ್ಞಾನವೂ ಇಲ್ಲದ ಇವರು, ಬ್ರಿಟಿಷರು ಮುಂದಿಟ್ಟ ಸಲಹೆಗಳನ್ನು ಸೂಕ್ತವಾಗಿ ಎದುರಿಸಿ, ಅದಕ್ಕಿಂತಲೂ ಉತ್ತಮವಾದ ಪರಿಹಾರವನ್ನು ಸೂಚಿಸಲು ಅಸಮರ್ಥರಾದರು. ಶ್ರೀಮಾನ್ ಗಾಂಧಿಯನ್ನು ತನ್ನ ಅನುಯಾಯಿಗಳ ಸಮೂಹದಿಂದ ಹೊರತೆಗೆದು, ರಾಜಕಾರಣಿಗಳ ನಡುವೆ ಕೂಡಿಸಿದ್ದರೆ, ಅವರಿಗೆ ಏನು ಹೇಳಲೂ ತೋಚುತ್ತಿರಲಿಲ್ಲ. ಪ್ರತಿಯೊಂದು ಚರ್ಚೆಯ ತಿರುವಿನಲ್ಲಿಯೂ, ಅವರು ಅಡ್ಡಾದಿಡ್ಡಿ ಯೋಚನೆ ಮಾಡಿ, ಕೊನೆಗೆ ಆ ಅವ್ಯವಸ್ಥೆಯನ್ನು ಮುಂದುವರಿಸಲಾರದೆ ಭಾರತಕ್ಕೆ ಹಿಂದಿರುಗಿದರು.

ಶ್ರೀಮಾನ್ ಗಾಂಧಿಯವರು ಭಾರತಕ್ಕೆ ಹಿಂದಿರುಗಿದಾಗ, ಅವರನ್ನು ಸ್ವಾಗತಿಸಿದ್ದಾದರೂ ಹೇಗೆ ? ಶ್ರೀಮಾನ್ ಗಾಂಧಿಯ ಭಕ್ತರಲ್ಲದ ಹೊರಗಿನವರಿಗೆ ಈ ವಿವರಣೆ ಅಸಹಜವೆನಿಸಬಹುದು. ಆದರೆ ಅದು ಸತ್ಯ. ೧೯೩೧ರ ಡಿಸೆಂಬರ್ ೨೮ರಂದು ಬೆಳಿಗ್ಗೆ ೮ ಗಂಟೆಗೆ ಶ್ರೀಮಾನ್ ಗಾಂಧಿ ಪ್ರಯಾಣ ಮಾಡಿದ ಹಡಗು ಎಸ್.ಎಸ್. ಪಿಲ್ಸ್‌ನರ್ ಬೊಂಬಾಯಿಯ ಬಂದರನ್ನು ತಲುಪಿದಾಗ, ಸಾವಿರಾರು ಜನ ಗಂಡಸರು ಹೆಂಗಸರು ಗುಂಪು ಗುಂಪಾಗಿ ಅವರನ್ನು ಸ್ವಾಗತಿಸಿ ಅವರ ದರ್ಶನ ಪಡೆಯಲು ಅಲ್ಲಿ ನೆರೆದಿದ್ದರು. ಆ ವೈಭವಯುತ ಸ್ವಾಗತದ ವಿವರಗಳನ್ನು ಟೈಂಸ್ ಆಫ್ ಇಂಡಿಯಾ ಮತ್ತು ಈವ್ನಿಂಗ್ ನ್ಯೂಸ್ ಆಫ್ ಬಾಂಬೆ ಪತ್ರಿಕೆಗಳ ಕೆಳಗಿನ ವರದಿಯಲ್ಲಿ ಕಾಣಬಹುದು :

"ಎಸ್ ಎಸ್ ಪಿಲ್ಸ್‌ನರ್ ಹಡಗು, ಕೇಸರಿ ಬಣ್ಣದ ಸೀರೆಯನ್ನುಟ್ಟ ದೇಶಸೇವಿಕೆಯರ ಪಹರೆಯಲ್ಲಿ (ಕಾಂಗ್ರೆಸ್ ಸ್ವಯಂಸೇವಕಿಯರು) ಹಡಗು ನಿಲ್ದಾಣವನ್ನು ಪ್ರವೇಶಿಸಿತು.

ಹಡಗು ನಿಲ್ದಾಣಕ್ಕೆ ಬಂದ ಕೂಡಲೆ ಒಂದೆರಡು ಹಾರಾಡುವ ವಿಮಾನಗಳಿಂದ ಹಡಗಿನ ಮೇಲೆ ಹೂಮಳೆಗರೆಯುವಂತೆ ಬೊಂಬಾಯಿ ವಿಮಾನ ಹಾರಾಟದ ಸಂಘಕ್ಕೆ ಕಾಂಗ್ರೆಸ್ ಸಮಿತಿ ಕೇಳಿಕೊಂಡಿದ್ದಿತು.

ರಾಜಕೀಯದಿಂದ ಹೊರಗುಳಿದ ಅವರು ಆ ರೀತಿ ಮಾಡಲು ಒಪ್ಪಲಿಲ್ಲ. ಹಡಗು ನಿಲ್ದಾಣದ ವಿಶಾಲವಾದ ಸಭಾಂಗಣವನ್ನು ತಳಿರು ತೋರಣಗಳಿಂದ ಶೃಂಗರಿಸಿ ಎಲ್ಲೆಲ್ಲಿಯೂ ಕಾಂಗ್ರೆಸ್ ಬಾವುಟವನ್ನು ಕಟ್ಟಿದ್ದರು. ಅಲ್ಲಿ ಎತ್ತರವಾದ ವೇದಿಕೆಯನ್ನು ಸಿದ್ಧಗೊಳಿಸಿ, ಎಲ್ಲ ಸಂಘ ಸಂಸ್ಥೆಗಳ ಪ್ರತಿನಿಧಿಗಳು ಕೂಡಲು ಆಸನಗಳನ್ನು ಸಿದ್ಧಗೊಳಿಸಿದ್ದರು, ಮತ್ತು ಅವರೆಲ್ಲರಿಗೂ ಪಾಸುಗಳನ್ನು ಕೊಟ್ಟಿದ್ದರು.

ಹಡಗಿನಿಂದ ಈ ಸ್ವಾಗತ ಭವನಕ್ಕೆ ಬರುವ ದಾರಿ ಮತ್ತು ನಗರದಿಂದ ಈ ಭವನಕ್ಕೆ ಬರುವ ದಾರಿಗಳೆರಡರಲ್ಲಿ ಇಕ್ಕೆಲದಲ್ಲಿ ದೇಶ ಸೇವಕರು ರಾಷ್ಟ್ರೀಯ ಧ್ವಜವನ್ನು ಬೀಸುತ್ತಾ ನಿಂತಿದ್ದರು ಮತ್ತು ಸ್ತ್ರೀ ಸ್ವಯಂಸೇವಕಿಯರು ಸಭಾಭವನದ ಒಳಗಡೆ ವೇದಿಕೆಯ ಮೇಲ್ವಿಚಾರಣೆ ನೋಡಿಕೊಳ್ಳುತ್ತಿದ್ದರು.

ಶ್ರೀಮಾನ್ ಗಾಂಧಿಯು ಕಾಂಗ್ರೆಸ್ ನಾಯಕರ ಪಹರೆಯಲ್ಲಿ ಭವ್ಯ ಸ್ವಾಗತದೊಂದಿಗೆ ವೇದಿಕೆಗೆ ಬಂದರು. ಅವರು ವೇದಿಕೆಯನ್ನು ಹತ್ತುತ್ತಿದ್ದಂತೆ ಸ್ವಾಗತದ ತಂತಿ ವಾರ್ತೆಗಳು ಒಂದಾದ ಮೇಲೆ ಒಂದರಂತೆ ಬರಲಾರಂಭಿಸಿದವು.

ಅವರು ವೇದಿಕೆಯನ್ನು ಏರಿದ ಮೇಲೆ ಅನೇಕ ಸಂಘ ಸಂಸ್ಥೆಗಳ ಪ್ರತಿನಿಧಿಗಳು ಈ ಮೊದಲೇ ಸಿದ್ಧಗೊಳಿಸಿದ್ದ ಪಟ್ಟಿಯಂತೆ ಒಬ್ಬೊಬ್ಬರಾಗಿ ಹಾರಗಳನ್ನು ಹಾಕಿದರು.

ಕಾರ್ಯಕ್ರಮದ ನಡಾವಳಿಗಳು ಕೊನೆಯಲ್ಲಿ ಹಾರಾರ್ಪಣದೊಂದಿಗೆ ಮುಕ್ತಾಯವಾದುವು.

ಶ್ರೀಮಾನ್ ಗಾಂಧಿಯನ್ನು ಮೆರವಣಿಗೆಯಲ್ಲಿ ಕೊಂಡೊಯ್ಯಲು ಸಿದ್ಧಗೊಳಿಸಿದ್ದ ರಥದ ಮುಂದೆ ನಾಲ್ಕು ನಾಲ್ಕು ಜನರಂತೆ ನೆರೆದಿದ್ದ ಜನ ಸಾಲುಗಟ್ಟಿ ನಿಂತರು. ಶೃಂಗರಿಸಲಾದ ರಥದ ಮೇಲೆ ವಲ್ಲಭಭಾಯಿ ಪಟೇಲರು ಎಡಕ್ಕೆ, ವಿಠಲಭಾಯಿ ಪಟೇಲರು ಬಲಕ್ಕೆ, ಬೊಂಬಾಯಿ ಪ್ರಾಂತ್ಯದ ಕಾಂಗ್ರೆಸ್‌ನ ಅಧ್ಯಕ್ಷರಾದ ಕೆ. ಎಫ್. ನಾರಿಮನ್ನರು ಮುಂದುಗಡೆ ಇವರೆಲ್ಲರ ನಡುವೆ ಶ್ರೀಮಾನ್ ಗಾಂಧಿಯು ಉಲ್ಲಾಸದಿಂದ ಕುಳಿತಿದ್ದರು.

ಮುಂದೆ ಮಾರ್ಗದರ್ಶಕರು ಕಾರು, ಅದರ ಹಿಂದೆ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಸದಸ್ಯರು ಕುಳಿತ ಕಾರುಗಳನ್ನು ಅನುಸರಿಸಿ, ಈ ಮೆರವಣಿಗೆಯು ಕಾಂಗ್ರೆಸ್ ಸಲಹೆಯಂತೆ ಶೃಂಗರಿಸಲಾಗಿದ್ದ ಬಲ್ಲಾರ್ಡ್‌ಪಿಯರ್ ರಸ್ತೆ, ಹಾರ್ನ್‌ರೋಡ್, ಕಲ್ಬಾದೇವಿ ರಸ್ತೆಯನ್ನು ದಾಟಿ ಜನಸಮೂಹದ ಘೋಷಣೆಗಳೊಂದಿಗೆ "ಮಣಿ ಭುವನ್ ಗಾಮದೇವಿಯನ್ನು" ತಲಪಿತು.

ಈ ಸ್ವಾಗತ ಸಮಾರಂಭದ ಯಾವ ಹಂತದಲ್ಲಿಯೂ ಸ್ವಾಗತವನ್ನು ಸ್ವೀಕರಿಸಲು ಶ್ರೀಮಾನ್ ಗಾಂಧಿಯವರು ಬಾಯಿ ತೆರೆಯಲಿಲ್ಲ. ವ್ರತನಿಷ್ಠರಾದ ಅವರು ಅಂದು ಭಾನುವಾರದ ಮೌನಾಚರಣೆಯಲ್ಲಿದ್ದು ಆ ಜನಸಮೂಹದ ಉತ್ಸಾಹ ಮತ್ತು ಸಂಭ್ರಮವನ್ನು ಕಂಡಾದರೂ, ಬಾಯಿ ತೆರೆಯುವ ಸೌಜನ್ಯವನ್ನು ತೋರಿಸಲಿಲ್ಲ.

ಕಾಂಗ್ರೆಸ್ಸಿನ ಅಧಿಕೃತ ಇತಿಹಾಸಕಾರರು ಶ್ರೀಮಾನ್ ಗಾಂಧಿಗೆ ನೀಡಿದ ಈ ಸ್ವಾಗತ ಸಮಾರಂಭವನ್ನು ಕುರಿತು ಈ ರೀತಿ ವಿವರಿಸಿದ್ದಾರೆ.[೧]

"ಜನಮನವನ್ನು ಗೆದ್ದ ಈ ನಾಯಕನಿಗೆ ಸೂಕ್ತವಾದ ಸ್ವಾಗತ ಕೋರಲು ರಾಷ್ಟ್ರದ ಎಲ್ಲ ಸಂಘ ಸಂಸ್ಥೆಗಳು ಎಲ್ಲ ಪ್ರಾಂತಗಳಿಂದಲೂ ಬಂದು ಬೊಂಬಾಯಿಯಲ್ಲಿ ನೆರೆದಿದ್ದರು. ಹಡಗಿನಲ್ಲಿ ತಮ್ಮನ್ನು ಸ್ವಾಗತಿಸಲು ಬಂದ ಸ್ನೇಹಿತರನ್ನು ಗಾಂಧಿ ಆಲಂಗಿಸಿ, ಬೆನ್ನು ಚಪ್ಪರಿಸಿ ನಮಸ್ಕರಿಸಿದರು. ಮತ್ತು ಮಾನ್ಯ

---

೧. ಪಟ್ಟಾಭಿರಾಮಯ್ಯ – *ಹಿಸ್ಟರಿ ಆಫ್ ದಿ ಕಾಂಗ್ರೆಸ್*, ಪು. ೮೫೭

ಅಬ್ಬಾಸ್ ತಾಯಬ್ಜಿಯವರನ್ನು ಅವರ ಗಡ್ಡ ನೇವರಿಸಿ ವಂದಿಸಿದರು. ಸುಂಕದಕಟ್ಟೆಯ ಭವನ ಒಂದರಲ್ಲಿ ವಿಧ್ಯುಕ್ತವಾದ ಸ್ವಾಗತ ಸಮಾರಂಭ ನಡೆದು ನಂತರ ಅವರ ಮೆರವಣಿಗೆ ಬೊಂಬಾಯಿ ನಗರದ ಬೀದಿಗಳಲ್ಲಿ ಒಂದು ರಾಷ್ಟ್ರದ ರಾಜನೂ ನೋಡಿ ಅಸೂಯೆಪಡಬಹುದಾದ ರೀತಿಯಲ್ಲಿ ಅದ್ಧೂರಿಯಾಗಿ ನಡೆಯಿತು."

ಈ ವಿವರಣೆಯನ್ನು ಓದಿದ ಮೇಲೆ ಕೇವಲ ಹತ್ತು ವರ್ಷದ ಹಿಂದೆ ೧೯೨೧ರಲ್ಲಿ ಶ್ರೀಮಾನ್ ಲಾಯಡ್ ಜಾರ್ಜ್‌ರವರ ಆಹ್ವಾನದ ಮೇರೆಗೆ ಐರ್ಲೆಂಡಿನ ಸ್ವಯಂ ಆಡಳಿತವನ್ನು ನಿರ್ಣಯಿಸಲು ಲಂಡನ್ನಿಗೆ ಹೋದ ಐರ್ಲೆಂಡಿನ ಸಿಯಿನ್‌ಫಿಯಿನ್ ನಿಯೋಗದ ಜ್ಞಾಪಕ ಬರುತ್ತದೆ. ಎಲ್ಲರಿಗೂ ತಿಳಿದಿರುವಂತೆ ಐರ್ಲೆಂಡ್ ನಿಯೋಗವು ಬ್ರಿಟಿಷ್ ಮಂತ್ರಿಮಂಡಲದಿಂದ ಗಳಿಸಿದ ಒಪ್ಪಂದಕ್ಕೆ ೧೯೨೧ನೆಯ ಡಿಸೆಂಬರ್ ೮ ರಂದು ರುಜು ಹಾಕಲಾಯಿತು. ಈ ಒಪ್ಪಂದವನ್ನು ೧೯೨೧ನೆಯ ಡಿಸೆಂಬರ್ ೧೪ ರಿಂದ ೧೯೨೨ನೆಯ ಜನವರಿ ೭ ರ ರವರೆಗೆ ನಡೆದ ಐರ್ಲೆಂಡಿನ ಶಾಸನ ಸಭೆಯ ಮುಂದೆ ಅದರ ಒಪ್ಪಿಗೆಗಾಗಿ ಮಂಡಿಸಲಾಯಿತು. ಜನವರಿ ೭ ರಂದು ಓಟಿಗೆ ಹಾಕಲಾಯಿತು. ಆ ಒಪ್ಪಂದದ ಪರವಾಗಿ ೬೪ ಮತಗಳೂ ಅದಕ್ಕೆ ವಿರೋಧವಾಗಿ ೫೭ ಮತಗಳೂ ಬಂದುವು. ಈ ಒಪ್ಪಂದಕ್ಕೆ ಕಾರಣವಾದ ಐರ್ಲೆಂಡಿನ ನಿಯೋಗಕ್ಕೆ ದೊರೆತ ಸ್ವಾಗತವಾದರೂ ಎಂತಹುದು? ಈ ನಿಯೋಗದ ಮುಂದಾಳಾಗಿದ್ದ ಆರ್ಥರ್ ಗ್ರಿಫಿತ್ ಮತ್ತು ಅವನ ನೆಚ್ಚಿನ ಸಂಗಾತಿಯಾಗಿದ್ದ ಮೈಕೆಲ್ ಕೊಲಿನ್ಸ್ ಇವರನ್ನು ವಿರೋಧಿ ಬಣದವರು ಅನುಕ್ರಮವಾಗಿ ೧೯೨೨ನೆಯ ಆಗಸ್ಟ್ ೧೨ ರಂದು ಮತ್ತು ೨೨ ರಂದು ಗುಂಡಿಟ್ಟು ಕೊಂದರು. ಈ ಒಪ್ಪಂದದ ವ್ಯಾಪ್ತಿಯಲ್ಲಿ ಅಲ್‌ಸ್ಟರ್ ಪ್ರಾಂತ ಮತ್ತು ಐರ್ಲೆಂಡಿನ ಪ್ರಜಾಪ್ರಭುತ್ವದ ವಿವರಗಳು ಸೇರಿರಲಿಲ್ಲ, ಅಷ್ಟೇ. ಈ ಎರಡು ಅಂಶಗಳು ಒಪ್ಪಂದದ ವ್ಯಾಪ್ತಿಯಿಂದ ಹೊರತಾದವು ಎಂಬ ಷರತ್ತಿನೊಂದಿಗೆ ಮಾತುಕತೆಗಳು ಆರಂಭವಾಗಿದ್ದು, ಬೇಕೆಂದರೆ ಅವು ಮುಂದೆ ಸೇರಲು ಅವಕಾಶವಿದ್ದುದರಿಂದ, ಇದರಲ್ಲಿ ಐರಿಷ್ ನಿಯೋಗದ ತಪ್ಪೇನೂ ಇರಲಿಲ್ಲ. ಐರಿಷ್ ನಿಯೋಗದ ಒಪ್ಪಂದವನ್ನು ವಿರೋಧಿಸಿದವರಿಗೆ ಆ ರೀತಿ ಮಾಡಲು ಯಾವ ನೈತಿಕ ಹಕ್ಕು ಇರಲಿಲ್ಲ. ಮತ್ತು ಅರ್ಥರ್ ಗ್ರಿಫಿತ್ ಮತ್ತು ಮೈಕೇಲ್ ಕೊಲಿನ್ಸ್ ಇವರನ್ನು ಕೊಂದದ್ದಂತೂ ಯಾವ ವಿವೇಚನೆಗೂ ಒಪ್ಪುವಂತಹುದಲ್ಲ.

ಅದೇನಾದರೂ ಇರಲಿ, ಶ್ರೀಮಾನ್ ಗಾಂಧಿ ನಿಯೋಗವು ಭಾರತ ಸ್ವಾತಂತ್ರ್ಯವನ್ನು ಗಳಿಸಲು ಮತ್ತು ಗ್ರಿಫಿತ್ ಮತ್ತು ಕೊಲಿನ್ಸ ನಿಯೋಗವು ಐರ್ಲೆಂಡ್ ಸ್ವಾತಂತ್ರ್ಯಗಳಿಸಲು ಇಂಗ್ಲೆಂಡಿಗೆ ಹೋಗಿದ್ದವು. ಗ್ರಿಫಿತ್ ಮತ್ತು ಕೊಲಿನ್ಸ್ ನಿಯೋಗವು ಬಹುಮಟ್ಟಿಗೆ ತನ್ನ ಉದ್ದೇಶದಲ್ಲಿ ಯಶಸ್ವಿಯಾಗಿದ್ದಿತು ಮತ್ತು ಗಾಂಧಿಯವರು ಸೋತು ಅವಮಾನಿತರಾಗಿ ಹಿಂದಿರುಗಿದ್ದರು. ಆದರೂ ಕೊಲಿನ್ಸ್ ಮತ್ತು ಗ್ರಿಫಿತ್‌ರನ್ನು ಕೊಂದರು. ಗಾಂಧಿಗೆ ರಾಜನಿಗೂ ದೊರೆಯಲಾರದ ಸ್ವಾಗತವನಿತ್ತರು. ಕೊಲಿನ್ಸ್ ಮತ್ತು ಗ್ರಿಫಿತ್‌ರವರಿಗೆ ಕಾದಿದ್ದ ಕ್ರೂರ ವಿಧಿಗೂ ಗಾಂಧಿಗೆ ದೊರೆತ ಸ್ವಾಗತಕ್ಕೂ ಅದೆಷ್ಟು ವಿರೋಧ? ಭಾರತದ ರಾಷ್ಟ್ರಪ್ರೇಮಿಗಳು ಐರ್ಲೆಂಡಿನ ರಾಷ್ಟ್ರಪ್ರೇಮಿಗಳಿಗಿಂತಲೂ ಭಿನ್ನವೆ? ಜನಸಮೂಹವು ಕೇವಲ ಅಂಧಭಕ್ತಿಯಿಂದ ಈ ರೀತಿ ಮಾಡಿದರೋ ಅಥವಾ ಶ್ರೀಮಾನ್ ಗಾಂಧಿಯ ಸೋಲನ್ನು ಸ್ವಾರ್ಥಿಗಳಾದ ಪತ್ರಿಕೆಗಳು ಜನತೆಗೆ ತಿಳಿಸಲೇ ಇಲ್ಲವೋ? ಇದಕ್ಕೆ ನಾನು ಉತ್ತರ ಕೊಡಲಾರೆ.[೧]

---

೧. ಕಾಂಗ್ರೆಸ್ಸಿನ ಅಧಿಕೃತ ಇತಿಹಾಸಕಾರರು ಶ್ರೀಮಾನ್ ಗಾಂಧಿಗೆ ದೊರಕಿದ ಈ ಸ್ವಾಗತವು ಅವರ ರಾಜಕೀಯ ಸಾಧನೆಯ ಆಧಾರದ ಮೇಲೆ ಎಂಬುದನ್ನು ಒಪ್ಪಿ ಹೇಳುತ್ತಾರೆ. (ಸೀತಾರಾಮಯ್ಯ ಅವರ ಹೇಳಿಕೆಯನ್ನು ಹಸ್ತ ಪ್ರತಿಯಲ್ಲಿ ನೀಡಿಲ್ಲ – ಸಂ.)

# II

ಶ್ರೀಮಾನ್ ಗಾಂಧಿಯವರಿಗೆ ಇಷ್ಟು ದೊಡ್ಡ ಸ್ವಾಗತ ನಡೆಯುತ್ತಿದ್ದಾಗ ಬೊಂಬಾಯಿಯ ಅಸ್ಪೃಶ್ಯರು ಶ್ರೀಮಾನ್ ಗಾಂಧಿಯನ್ನು ವಿರೋಧಿಸಲು ಬೊಂಬಾಯಿ ಹಡಗು ನಿಲ್ದಾಣಕ್ಕೆ ಬಂದಿದ್ದರು. ಇದನ್ನು ಕುರಿತು ವೃತ್ತಪತ್ರಿಕೆಯ ವರದಿ ಹೀಗಿದೆ :

"ಬಲ್ಲಾರ್ಡ ಹಡಗುಕಟ್ಟೆಯ ಹೊರಗೆ ತುಂಬಾ ಉದ್ರೇಕದ ವಾತಾವರಣವಿದ್ದಿತು. ಒಂದು ಕಡೆ ಸಮವಸ್ತ್ರವನ್ನು ಧರಿಸಿ ಕೈಯಲ್ಲಿ ಕಪ್ಪು ಬಾವುಟವನ್ನು ಹಿಡಿದ ಅಸ್ಪೃಶ್ಯರ ಸ್ವಯಂ ಸೇವಕರು ಶ್ರೀಮಾನ್ ಗಾಂಧಿಗೆ ವಿರುದ್ಧವಾಗಿ ಕೂಗುತ್ತ ತಮ್ಮ ನಾಯಕರಿಗೆ ಜಯಘೋಷ ಮಾಡುತ್ತಿದ್ದರೆ, ಮತ್ತೊಂದು ಕಡೆ ಕಾಂಗ್ರೆಸ್ ಅನುಯಾಯಿಗಳು ಇದಕ್ಕೆ ವಿರುದ್ಧವಾಗಿ ಕೂಗುತ್ತಿದ್ದರು."

ಅಸ್ಪೃಶ್ಯರ ಪ್ರದರ್ಶನದಲ್ಲಿ ಹೆಂಗಸರು, ಗಂಡಸರೆಲ್ಲಾ ಸೇರಿದ್ದರು. ಶ್ರೀಮಾನ್ ಗಾಂಧಿಗೆ ವಿರೋಧ ಸೂಚಕವಾಗಿ ಪ್ರದರ್ಶನಕಾರರು ಕೈಯಲ್ಲಿ ಕಪ್ಪುಬಾವುಟವನ್ನು ಬೀಸುತ್ತಿದ್ದರು. ಅವರು ದೃಢ ಸಂಕಲ್ಪವುಳ್ಳವರಾಗಿದ್ದು ಹಿರಿಯ ಕಾಂಗ್ರೆಸ್ ನಾಯಕರು ಗಾಂಧಿಯನ್ನು ಸ್ವಾಗತಿಸುವಂತೆ ಎಷ್ಟೇ ಪ್ರೇರೇಪಿಸಿದ್ದರೂ ಅವರು ಶ್ರೀಮಾನ್ ಗಾಂಧಿಯ ವಿರುದ್ಧ ಕೂಗುತ್ತಿದ್ದರು. ಇದರಿಂದಾಗಿ ಪರಸ್ಪರ ಘರ್ಷಣೆಯಾಗಿ ರಕ್ತಪಾತವಾಯಿತು. ಎರಡೂ ಕಡೆಯೂ ಸೇರಿ ನಲ್ವತ್ತು ಜನರಿಗೆ ಗಾಯಗಳಾದುವು.

ತನ್ನ ಎದುರಿಗೂ ಕಪ್ಪುಬಾವುಟದ ಪ್ರದರ್ಶನವಾಗಬಲ್ಲದು ಎಂಬುದು ಶ್ರೀಮಾನ್ ಗಾಂಧಿಗೆ ಮೊತ್ತಮೊದಲಿಗೆ ಅರಿವಾಯಿತು. ಅದನ್ನು ಕಂಡು ಅವರು ನಡುಗಿರಬೇಕು. ಅದನ್ನು ಕುರಿತು ಕೇಳಿದ ಪ್ರಶ್ನೆಗೆ ತಾನು ಅಸ್ಪೃಶ್ಯರೊಂದಿಗೆ ನನ್ನ ಮೂಳೆ ಮಾಂಸಗಳೊಡನೆ ಭೌತಿಕವಾಗಿಯೂ ಐಕ್ಯವಾಗಿರುವುದರಿಂದ ಇದರಿಂದ ನನಗೆ ಕೋಪವೆನಿಸಲಿಲ್ಲ ಎಂದರು. ಇದು ಸತ್ಯವನ್ನು ಮರೆಮಾಚುವ ಮಹಾತ್ಮರ ಮಾರ್ಗ ಅಷ್ಟೇ. ಗುಂಪು ಯಾವಾಗಲೂ ತನ್ನ ನಾಯಕನಿಗೆ ವಿಧೇಯವಾಗಿರುತ್ತದೆ ಎಂಬುದನ್ನು ಸದಾ ನಂಬಲಾಗುವುದಿಲ್ಲ ಎಂಬ ಅರಿವಿರುವವರೆಗೂ, ಇಂತಹ ಅನುಕೂಲವಾದ ಸಾಂಪ್ರದಾಯಿಕ ಸುಳ್ಳನ್ನು ಯಾರೂ ಗಮನಿಸುವುದಿಲ್ಲ. ಭಾರತದ ಕಾಂಗ್ರೆಸ್ಸಿಗರಿಗೆ ಕ್ರಾಮ್‌ವೆಲ್ಲನಿಗಿದ್ದಂತಹ ವಾಸ್ತವಿಕ ಪ್ರಜ್ಞೆ ಇಲ್ಲವೆಂಬುದನ್ನು ಬಹು ದುಃಖದಿಂದ ನಾವು ಗಮನಿಸಬೇಕಾಗಿದೆ. ಕ್ರಾಮ್‌ವೆಲ್ಲನು ಮಹಾಯುದ್ಧದ ನಂತರ ಹಿಂದಿರುಗಿದಾಗ ಜನಸಮೂಹ ಅವನನ್ನು ಸ್ವಾಗತಿಸಲು ಬಂದಿದ್ದಿತಂತೆ. ಆ ಜನಸಮೂಹದ ಬಾಹುಳ್ಯವನ್ನು ವಿವರಿಸಲು ಅವನ ಮಿತ್ರನೊಬ್ಬನು ಮುಂದೆ ಬಂದನಂತೆ. ಆಗ ಕ್ರಾಮ್‌ವೆಲ್ಲನು "ಅಹುದು ನನ್ನನ್ನು ಗಲ್ಲಿಗೇರಿಸುತ್ತಾರೆಂದರೆ ಅದನ್ನು ನೋಡಲು ಇದಕ್ಕಿಂತಲೂ ಹೆಚ್ಚು ಜನ ಬರುತ್ತಾರೆ" ಎಂಬುದಾಗಿ ಹೇಳಿ ಆ ಮಾತನ್ನು ಮರೆಸಿದನಂತೆ. ಕ್ರಾಮ್‌ವೆಲ್ಲನ ವಾಸ್ತವಿಕ ಪ್ರಜ್ಞೆಯು ಯಾವ ಕಾಂಗ್ರೆಸ್ಸಿಗನಿಗೂ ಇಲ್ಲ. ಗಲ್ಲಿಗೇರಿಸುವ ದಿನ ಎಂದಿಗೂ ಬರುವುದೇ ಇಲ್ಲ ಎಂದು ಕಾಂಗ್ರೆಸ್ಸಿಗನು ತಿಳಿಯುತ್ತಾನೆ ಅಥವಾ ಭಾರತದ ಜನಸಮೂಹ ಎಂದಿಗೂ ವಿವೇಕಿಗಳಾಗುವುದಿಲ್ಲ ಎಂದು ಅವನು ತಿಳಿಯುತ್ತಾನೆ. ಭಾರತೀಯ ಜನಸಮೂಹದಲ್ಲಿ ಒಂದು ಭಾಗದ ಜನರಾದರೂ ವಿವೇಕಶಾಲಿಗಳಾಗಿದ್ದಾರೆ ಎಂಬುದನ್ನು ೨೮ ರಂದು ಶ್ರೀಮಾನ್ ಗಾಂಧಿಯನ್ನು ಕಪ್ಪು ಬಾವುಟದೊಂದಿಗೆ ಸ್ವಾಗತಿಸಿದ ಅಸ್ಪೃಶ್ಯರು ತೋರಿಸಿಕೊಟ್ಟರು.

ಅಸ್ಪೃಶ್ಯರು ಗಾಂಧಿಯನ್ನು ವಿರೋಧಿಸಿದ್ದು ಏಕೆ? ಈ ಪ್ರಶ್ನೆಗೆ ಉತ್ತರ ಪ್ರದರ್ಶನದ ವ್ಯವಸ್ಥಾಪಕರು ಆ ದಿನ ಹಂಚಿದ ಕರಪತ್ರದಲ್ಲಿ ನಮಗೆ ದೊರೆಯುತ್ತದೆ. ಅದರ ನಕಲು ಹೀಗಿದೆ:

**"ಗಾಂಧೀಜಿ ಮತ್ತು ಕಾಂಗ್ರೆಸ್ಸಿನ ಮೇಲೆ ನಮ್ಮ ಆಪಾದನೆಗಳು"**

**"ನಿಮ್ಮ ಬಾಯಿಮಾತಿನ ಕರುಣೆ ಮತ್ತು ಪ್ರೋತ್ಸಾಹ ಸಾಕು. ನಮಗೆ ನ್ಯಾಯ ಮತ್ತು ಸಮಾನಾವಕಾಶ ಬೇಕು"**

೧) ಕಾಂಗ್ರೆಸ್ಸಿನ ರಚನಾತ್ಮಕ ಕಾರ್ಯಕ್ರಮದಲ್ಲಿ ಅಸ್ಪೃಶ್ಯತಾ ನಿವಾರಣೆ ಎಂಬುದು ಸೇರಿದ್ದರೂ ಅದರ ಸಾಧನೆಯಲ್ಲಿ ಯಾವ ಪ್ರಗತಿಯೂ ಆಗಿಲ್ಲ ಮತ್ತು ಮಹದ್ ಮತ್ತು ನಾಸಿಕದಲ್ಲಿ ನಾವು ಮಾಡಿದ ಪ್ರಯತ್ನಕ್ಕೆ ಅಲ್ಲಿಯ ಕಾಂಗ್ರೆಸ್ಸಿಗರೇ ಪರಮ ವಿರೋಧಿಗಳಾಗಿದ್ದರು.

೨) ದುಂಡುಮೇಜಿನ ಪರಿಷತ್ತಿನಲ್ಲಿ ದಲಿತ ಜನಾಂಗದ ಮತ್ತು ಅದರ ನಂಬಿಕಸ್ಥ ಪ್ರತಿನಿಧಿಯಾದ ಡಾ. ಅಂಬೇಡ್ಕರ್‌ರವರು ಪ್ರತಿಪಾದಿಸಿದ ಹಕ್ಕುಗಳ ವಿಚಾರದಲ್ಲಿ ಗಾಂಧೀಜಿಯ ಪ್ರತಿಕ್ರಿಯೆಯು ಅತ್ಯಂತ ಅವಿವೇಕದ, ಹಟಮಾರಿತನದ ಹಾಗೂ ಅಸ್ವಾಭಾವಿಕ ಸ್ವರೂಪದ್ದಾಗಿದ್ದಿತು.

೩) ಕಾಂಗ್ರೆಸ್ ಪರವಾಗಿ ಗಾಂಧೀಜಿಯು ಮಹಮದೀಯರು ಮತ್ತು ಸಿಖ್ಖರಿಗೆ "ಐತಿಹಾಸಿಕ ಕಾರಣದಿಂದ" ಪ್ರತ್ಯೇಕ ಪ್ರಾತಿನಿಧ್ಯವನ್ನು ನೀಡಲು ಒಪ್ಪಿದ್ದರೂ, ದಲಿತವರ್ಗದವರಿಗೆ ಸಾರ್ವತ್ರಿಕ ಚುನಾವಣೆಯಲ್ಲಿ ಮೀಸಲಾತಿ ಸ್ಥಾನಗಳಿರಬೇಕೆಂಬ ಅವರ ಬೇಡಿಕೆಗೆ ಒಪ್ಪಲು ಸಿದ್ಧರಿರಲಿಲ್ಲ. ಮೀಸಲಾತಿ ಇಲ್ಲದ್ದಿದ್ದರೆ ಸವರ್ಣ ಹಿಂದೂಗಳ ಕೃಪೆಯಲ್ಲಿರಬೇಕಾದ ದಲಿತರ ಸ್ಥಿತಿ ಹೇಗಿರುತ್ತದೆಂಬುದು ಗಾಂಧೀಜಿಗೆ ತಿಳಿಯದ ವಿಚಾರವಲ್ಲ.

* * * * *

೯) ದಲಿತರಿಗೆ ಮೀಸಲಾತಿ ಸ್ಥಾನಗಳು ಬೇಕೆಂಬ ಅವರ ಬೇಡಿಕೆಯನ್ನು ವಿರೋಧಿಸುವಾಗ, ಗಾಂಧೀಜಿಯು ಹಿಂದೂ ಸಮಾಜವನ್ನು ಒಡೆಯುವ ಅಥವಾ ವಿಭಜಿಸುವ ಕಾರ್ಯ ಕೂಡದು ಎಂದು ಕೂಗಾಡಿದರು. ಆದರೆ ಈಗ ಕಾಂಗ್ರೆಸ್ಸು ಅಸ್ಪೃಶ್ಯರ ಒಂದು ಗುಂಪನ್ನು ಮತ್ತೊಂದು ಗುಂಪಿಗೆ ಎದುರಾಗಿ ಹೋರಾಡಲು ಬಿಟ್ಟು ಅದನ್ನು ಒಡೆಯುತ್ತಿದೆ. ಗಾಂಧೀಜಿ ಮತ್ತು ಕಾಂಗ್ರೆಸ್ಸು ಯಾವಾಗಲೂ ನೇರವಾಗಿ ವ್ಯವಹರಿಸುತ್ತಿಲ್ಲ. ವಿಶ್ವಾಸಘಾತಕರಾದ ಮಿತ್ರರಿಗಿಂತ ನೇರವಾದ ಶತ್ರುಗಳೇ ಮೇಲು.

೧೦) ಕಾಂಗ್ರೆಸ್ಸು ಮತ್ತು ಗಾಂಧೀಜಿ ಮಾತ್ರವೇ ದಲಿತ ವರ್ಗದ ಪ್ರತಿನಿಧಿಗಳು ಎಂಬುದನ್ನು ಅವರ ಹಂಗಿಗೊಳಗಾಗದವರು ಮತ್ತು ಅವರಿಂದ ಮೋಸಹೋದವರು ಕೆಲವರು ಅರ್ಪಿಸುವ ಬಿನ್ನವತ್ತಳೆಗಳಿಂದ ಜನತೆಗೆ ತೋರಿಸುವ ಪ್ರಯತ್ನ ನಡೆಯಿತು. ಈಗ ಸಾವಿರಾರು ಸಂಖ್ಯೆಯಲ್ಲಿ ಹೊರಬಂದು ಸತ್ಯವೇನೆಂಬುದನ್ನು ಪ್ರದರ್ಶಿಸಿ ತೋರಿಸುವುದು ನಮ್ಮ ಕರ್ತವ್ಯವಲ್ಲವೇ? ಗಾಂಧೀಜಿ ಮತ್ತು ಕಾಂಗ್ರೆಸ್ ಸಂಸ್ಥೆಯ ಮೇಲೆ ಇವು ನಮ್ಮ ಆಪಾದನೆಗಳು.

ಅಂಧರಾದ ವ್ಯಕ್ತಿಪೂಜಕರು ಮತ್ತು ಅಂಧಾನುಯಾಯಿಗಳಲ್ಲದ ಜನ ವಿಚಾರ ಮಾಡಿ ತೀರ್ಮಾನಿಸಲಿ.

ಕಾರ್ಯದರ್ಶಿ
ದಲಿತ ಜನಾಂಗದ ಸಂಸ್ಥೆ

## III

ಶ್ರೀಮಾನ್ ಗಾಂಧಿಯ ಮೇಲಿನ ಈ ಆಪಾದನೆ ಸರಿಯೆ? ಶ್ರೀಮಾನ್ ಗಾಂಧಿಯು ಭಾರತದ ರಾಜಕೀಯ ನೇತಾರನೆಂದು ಮಾತ್ರವಲ್ಲದೆ ಅಸ್ಪೃಶ್ಯರ ವೀರನಾಯಕ ಎಂದು ವಿಶ್ವದಲ್ಲೆಲ್ಲಾ ಪ್ರಸಿದ್ಧರಾಗಿದ್ದಾರೆ. ಹೊರಜಗತ್ತು ಶ್ರೀಮಾನ್ ಗಾಂಧಿಯ ವಿಚಾರದಲ್ಲಿ ಹೆಚ್ಚು ಆಸಕ್ತಿ ವಹಿಸುವುದು ಅವರು ಅಸ್ಪೃಶ್ಯರ ವೀರನಾಯಕ ಎಂದೇ ಹೊರತು ರಾಜಕಾರಣಿ ಎಂದಲ್ಲ. ಉದಾಹರಣೆಗೆ ಹೇಳುವುದಾದರೆ ಇತ್ತೀಚೆಗೆ ಮ್ಯಾನ್‌ಚಸ್ಟರ್ ಗಾರ್ಡಿಯನ್ ಪತ್ರಿಕೆ ಶ್ರೀಮಾನ್ ಗಾಂಧಿಯ ಅಸ್ಪೃಶ್ಯತಾ ಕಾರ್ಯಗಳನ್ನು ಕುರಿತು ಒಂದು ಪುಟದಷ್ಟು ಸಂಪಾದಕೀಯವನ್ನು ಬರೆಯಿತು.

ಈ ವಿಚಾರಗಳನ್ನೆಲ್ಲಾ ಗಮನಿಸಿ ನೋಡಿದರೆ ಆ ಆಪಾದನೆ ಖಂಡಿತ ನಿರಾಧಾರವೆಂದೆನಿಸಬಹುದು. ಅಸ್ಪೃಶ್ಯತೆಯನ್ನು ನಿವಾರಿಸುವುದು ಕಾಂಗ್ರೆಸ್ಸಿನ ಕರ್ತವ್ಯ ಎಂದು ಗಾಂಧೀಜಿ ಸಾರಲಿಲ್ಲವೆ? ಕಾಂಗ್ರೆಸ್ಸು ಶ್ರೀಮಾನ್ ಗಾಂಧಿಯ ಹಿಡಿತಕ್ಕೆ ಬರುವ ಮುನ್ನ ತಾನು ಯಾವ ಸಾಮಾಜಿಕ ಸಮಸ್ಯೆಗಳನ್ನೂ ಕುರಿತು ಚಿಂತಿಸುವುದು ಬೇಡ ಎಂದು ಕಾಂಗ್ರೆಸ್ಸು ನಿರ್ಣಯಿಸಿದ್ದಿತು. ರಾಜಕೀಯ ಮತ್ತು ಸಾಮಾಜಿಕ ಸಮಸ್ಯೆಗಳ ನಡುವೆ ಸ್ಪಷ್ಟವಾದ ಪ್ರಭೇದವನ್ನು ಮಾಡಿ ಕಾಂಗ್ರೆಸ್ಸು ಕೇವಲ ರಾಜಕೀಯ ಸಮಸ್ಯೆಗಳಿಗೆ ಮಾತ್ರ ಸೀಮಿತಗೊಳ್ಳುವಂತೆ ಆಗ ನೋಡಿಕೊಳ್ಳಲಾಗಿದ್ದಿತು. ಹಿಂದಿನ ಕಾಂಗ್ರೆಸ್ಸು ಅಸ್ಪೃಶ್ಯರನ್ನು ಗಮನಿಸುವುದಕ್ಕೇ ಹೋಗಲಿಲ್ಲ. ೧೯೧೭* ರಲ್ಲಿ ಹಿಂದಿನ ಕಾಂಗ್ರೆಸ್ ಅತಿ ಪ್ರಯಾಸದಿಂದ ಅಸ್ಪೃಶ್ಯರನ್ನು ಕುರಿತಾದ ಚರ್ಚೆಗೆ ಅವಕಾಶಕೊಟ್ಟು ಈ ಕೆಳಗಿನ ನಿರ್ಣಯ ಮಾಡಲು ಅನುಗ್ರಹ ತೋರಿದ್ದಿತು:

"ಸಂಪ್ರದಾಯದ ಹೆಸರಿನಲ್ಲಿ ದಲಿತವರ್ಗದವರ ಮೇಲೆ ನಾನಾ ರೀತಿಯ ದೌರ್ಬಲ್ಯಗಳನ್ನು ಹೊರಿಸಿ ಅವರನ್ನು ಪೀಡಿಸಿ, ದುರ್ಬಲಗೊಳಿಸಿ ತೊಂದರೆ ಪಡಿಸುತ್ತಿರುವುದನ್ನು ಭಾರತೀಯರು ನಿಲ್ಲಿಸುವುದು ನ್ಯಾಯಸಮ್ಮತ ಹಾಗೂ ಧರ್ಮಸಮ್ಮತ ಎಂದು ಭಾರತದ ಜನತೆಯನ್ನು ಕಾಂಗ್ರೆಸ್ಸು ಒತ್ತಾಯಪಡಿಸುತ್ತದೆ."[೨]

೧೯೨೦ರಲ್ಲಿ ಕಾಂಗ್ರೆಸ್ ಶ್ರೀಮಾನ್ ಗಾಂಧಿ ಕೈಗೆ ಸಿಕ್ಕಿತು ಮತ್ತು ತನ್ನ ನಾಗಪುರದ ಸಾಧಾರಣ ಅಧಿವೇಶನದಲ್ಲಿ ಈ ಕೆಳಗಿನ ನಿರ್ಣಯ ಮಾಡಿತು.

**ಅಂತರ್ಜಾತಿ ಐಕ್ಯತೆ**

"ಕೊನೆಯದಾಗಿ ಖಿಲಾಫತ್ ಮತ್ತು ಪಂಜಾಬಿನಲ್ಲಾದ ಅನ್ಯಾಯಗಳನ್ನು ಸರಿಪಡಿಸಲು ಮತ್ತು ಒಂದು ವರ್ಷದೊಳಗಾಗಿ ಸ್ವರಾಜ್ಯ ಸ್ಥಾಪನೆಯಾಗಲು, ಈ ಕಾಂಗ್ರೆಸ್ ಸಮ್ಮೇಳನ ಎಲ್ಲ ಸಾರ್ವಜನಿಕ ಸಂಸ್ಥೆಗಳನ್ನು ಅವು ಕಾಂಗ್ರೆಸ್ಸಿನ ಅಂಗ ಸಂಸ್ಥೆಗಳಾಗಿರಲಿ ಇಲ್ಲದಿರಲಿ, ಅವುಗಳನ್ನು ಒತ್ತಾಯಿಸುವುದೇನೆಂದರೆ – ಅವು ಸರ್ಕಾರದೊಂದಿಗೆ ಅಹಿಂಸಾತ್ಮಕವಾದ ಅಸಹಕಾರ ಚಳುವಳಿಯಲ್ಲಿ ತೊಡಗಲು ತಮ್ಮ ಪೂರ್ಣ ಗಮನವನ್ನು ಹರಿಸಬೇಕು. ಈ ಅಸಹಕಾರ ಚಳುವಳಿಯು ಯಶಸ್ವಿಯಾಗಬೇಕಾದರೆ ಭಾರತೀಯ ಜನತೆಯಲ್ಲಿ ಪರಸ್ಪರ ಐಕ್ಯತೆ ಇರುವುದು ಆವಶ್ಯಕವಾದ್ದರಿಂದ, ಹಿಂದೂ ಮುಸ್ಲಿಮರಲ್ಲಿ ಮತ್ತು ಹಿಂದೂಗಳೇ ಆದ ಬ್ರಾಹ್ಮಣರು ಅಬ್ರಾಹ್ಮಣರಲ್ಲಿ ಯಾವ ಕಲಹಕ್ಕೂ ಅವಕಾಶವಾಗದಂತೆ ಐಕ್ಯತೆಯನ್ನು ಸಾಧಿಸಬೇಕಲ್ಲದೆ, ಹಿಂದೂಧರ್ಮಕ್ಕೆ ಅಂಟಿರುವ ಅಸ್ಪೃಶ್ಯತೆಯ ಕಳಂಕವನ್ನು ಪರಿಹರಿಸಲು ವಿಶೇಷ ಪ್ರಯತ್ನ ಮಾಡಬೇಕು ಹಾಗೂ ದಲಿತವರ್ಗದವರ ವಿಚಾರದಲ್ಲಿ ಹಿಂದೂ ಧರ್ಮವು ತನ್ನನ್ನು ತಾನು ಸುಧಾರಿಸಿಕೊಳ್ಳಬೇಕೆಂಬುದನ್ನು ಧರ್ಮಾಧಿಕಾರಿಗಳಿಗೆ ಮನವರಿಕೆ ಮಾಡಿಕೊಡಬೇಕು".

ಜೊತೆಗೆ, ಅಸ್ಪೃಶ್ಯತಾ ನಿವಾರಣೆ ರಾಷ್ಟ್ರದ ಸ್ವಾತಂತ್ರ್ಯದ ಗಳಿಕೆಗೆ ಒಂದು ಪೂರ್ವ ನಿಬಂಧನೆ ಎಂದು ಶ್ರೀಮಾನ್ ಗಾಂಧಿ ಹೇಳಲಿಲ್ಲವೆ? ೧೯೨೦ರ ಡಿಸೆಂಬರ್ ೨೯ನೆಯ ಯಂಗ್ ಇಂಡಿಯಾ ಪತ್ರಿಕೆಯಲ್ಲಿ ಶ್ರೀಮಾನ್ ಗಾಂಧಿ ಈ ರೀತಿ ಬರೆದಿದಾರೆ :

"ಸರ್ಕಾರದೊಂದಿಗೆ ಅಸಹಕಾರ ಎಂದರೆ ಪ್ರಜೆಗಳ ನಡುವೆ ಸಹಕಾರ ಎಂದರ್ಥ ಮತ್ತು ಹಿಂದೂಗಳು

---

* ಹಸ್ತ ಪ್ರತಿಯಲ್ಲಿ ವರ್ಷವನ್ನು ನಮೂದಿಸಿಲ್ಲ – ಸಂ.

೨. ಈ ಉದ್ಧೃತವನ್ನು ಲೇಖಕರ *'ವಾಟ್ ಕಾಂಗ್ರೆಸ್ ಅಂಡ್ ಗಾಂಧೀ ಹ್ಯಾವ್ ಡನ್ ಟು ದಿ ಅನ್‌ಟಚಬಲ್ಸ್'* ನ ಪು. ೧ ರಿಂದ ಆರಿಸಿಕೊಂಡಿದೆ. ಇದನ್ನು ಈ ಪ್ರಬಂಧದ ಹಸ್ತಪ್ರತಿಯಲ್ಲಿ ಬೆರಳಚ್ಚಿಸಿಲ್ಲ – ಸಂ.

ಅಸ್ಪೃಶ್ಯತೆಯು ಪಾಪವನ್ನು ತೊಡೆದುಹಾಕದಿದ್ದರೆ ಒಂದು ವರ್ಷದಲ್ಲಿ ಅಲ್ಲ ನೂರು ವರ್ಷವಾದರೂ.........ಭಾರತಕ್ಕೆ ಸ್ವರಾಜ್ಯ ಲಭಿಸುವುದಿಲ್ಲ."

ಸ್ವರಾಜ್ಯಕ್ಕೆ ಬೇಕಾದ ಪೂರ್ವ ನಿಬಂಧನೆಗಳನ್ನು ಕುರಿತು ಫೆಬ್ರವರಿ ೨೩, ೧೯೨೧ರಲ್ಲಿ ಈ ರೀತಿ ಹೇಳಿದರು :

"ಈ ಕೆಲವು ಸರಳವಾದ ನಿಬಂಧನೆಗಳು ಈಡೇರುವುದಾದರೆ ಮುಂದಿನ ಅಕ್ಟೋಬರ್ ತಿಂಗಳೊಳಗಾಗಿ ಸ್ವರಾಜ್ಯ ಲಭಿಸಬಲ್ಲದು. ನನ್ನ ಈ ನಿಬಂಧನೆಗಳು ತುಂಬಾ ಸರಳವಾಗಿರುವುದರಿಂದ ಮತ್ತು ರಾಷ್ಟ್ರದ ಪರಿಸ್ಥಿತಿಗೆ ತುಂಬಾ ಪ್ರೇರಕವಾಗಿ ಕಂಡದ್ದರಿಂದ ನಾನು ಒಂದು ವರ್ಷದೊಳಗಾಗಿ ಸ್ವರಾಜ್ಯ ಸಾಧ್ಯವಾಗುತ್ತದೆ ಎಂಬುದಾಗಿ ಹೋದ ಸೆಪ್ಟೆಂಬರ್ ತಿಂಗಳಲ್ಲಿ ಹೇಳಿದ್ದೆನು. ಈ ಐದು ತಿಂಗಳ ಅನುಭವ ಇದನ್ನು ಮತ್ತಷ್ಟು ದೃಢಪಡಿಸಿದೆ. ಸ್ವರಾಜ್ಯ ಸ್ಥಾಪನೆಗೆ ಈ ರಾಷ್ಟ್ರ ಹಿಂದೆ ಯಾವಾಗಲೂ ಇಷ್ಟೊಂದು ಚೆನ್ನಾಗಿ ಸಿದ್ಧವಾಗಿರಲಿಲ್ಲ ಎಂಬುದು ನನಗೆ ಈಗ ಮನವರಿಕೆಯಾಗಿದೆ."

"ಈ ನಿಬಂಧನೆಗಳನ್ನು ನಾವು ಆದಷ್ಟು ಸೂಕ್ಷ್ಮವಾಗಿ ಅರಿಯಬೇಕು. ಅಹಿಂಸಾ ಮಾರ್ಗದಲ್ಲಿಯೇ ನಡೆಯಬೇಕೆಂಬುದು ಬಹು ಮುಖ್ಯವಾದ ಹಾಗೂ ಆವಶ್ಯಕವಾದ ನಿಯಮ."

"ಪ್ರತಿ ಹಳ್ಳಿಯಲ್ಲಿಯೂ ಕಾಂಗ್ರೆಸ್ಸಿನ ಒಂದು ಕೇಂದ್ರವಿರಬೇಕು ಎಂಬುದು ಮತ್ತೊಂದು ನಿಬಂಧನೆ."

"ಎಲ್ಲರಿಗೂ ಅನ್ವಯಿಸುವಂತಹ ಕೆಲವು ವಿಚಾರಗಳಿವೆ. ಅವುಗಳಲ್ಲಿ ಬಹುಮುಖ್ಯವಾದದ್ದು ಸ್ವದೇಶ. ಪ್ರತಿಯೊಂದು ಮನೆಯಲ್ಲಿಯೂ ಒಂದು ಚರಕ ಇರಬೇಕು.......ಮತ್ತು ಪ್ರತಿಯೊಂದು ಹಳ್ಳಿಯೂ ವ್ಯವಸ್ಥಿತವಾಗಿ ಸ್ವಯಂಪೂರ್ಣವಾಗಬೇಕು."

"ಪ್ರತಿಯೊಬ್ಬ ಸ್ತ್ರೀ ಪುರುಷರೂ ತಿಲಕ್ ಸ್ವರಾಜ್ ಫಂಡಿಗೆ ಸ್ವಲ್ಪವಾದರೂ.........ಹಣ ಕೊಡಬೇಕು. ನಮ್ಮ ಈ ಕಾರ್ಯಕ್ರಮಗಳಿಗೆ ಹಣಕಾಸಿನ ಅಡಚಣೆಯೇ ಇರಬಾರದು."

"ಹಿಂದೂ ಮಹಮದೀಯರ ಐಕ್ಯತೆ ಮತ್ತು ಅಸ್ಪೃಶ್ಯತೆಯೆಂಬ ವಿಷಸರ್ಪದ ವಿನಾಶ ಈ ಎರಡೂ ಕೈಗೂಡದೆ ನಾವು ಏನನ್ನೂ ಸಾಧಿಸಲಾರೆವು........"

"ಇಂತಹ ಒಂದು ಸಾಧಾರಣವಾದ ಕಾರ್ಯಕ್ರಮವನ್ನು ನಿರ್ವಹಿಸಲುಬೇಕಾದ ಪ್ರಾಮಾಣಿಕ, ನಿಷ್ಠಾವಂತ, ಉದ್ಯೋಗಶೀಲ ಹಾಗೂ ದೇಶಪ್ರೇಮಿ ಯುವಕರಿದ್ದಾರೆಯೇ? ಅಂತಹವರು ಇರುವುದಾದರೆ ಬರುವ ಅಕ್ಟೋಬರ್ ತಿಂಗಳ ಒಳಗಾಗಿ ಭಾರತದಲ್ಲಿ ಸ್ವರಾಜ್ಯ ಸ್ಥಾಪನೆ ಖಂಡಿತ."

ಇಷ್ಟಾದ ಮೇಲೆ ಅಸ್ಪೃಶ್ಯರಿಗೆ ಮತ್ತೇನು ಬೇಕು? ಅಸ್ಪೃಶ್ಯರ ಮಿತ್ರನೆನಿಸಿದ ಶ್ರೀಮಾನ್ ಗಾಂಧಿ ಇಲ್ಲಿದ್ದಾರೆ. ಅಸ್ಪೃಶ್ಯರ ಸೇವಕನೆಂದು ಶ್ರೀಮಾನ್ ಗಾಂಧಿಯವರು ಹೆಮ್ಮೆಯಿಂದ ಹೇಳಿಕೊಳ್ಳುತ್ತಿದ್ದಾರೆ. ತಮ್ಮನ್ನು ಹರಿಜನರ ಪ್ರತಿನಿಧಿಯೆಂದು ಒಪ್ಪಿಕೊಳ್ಳುವಂತೆ ಹೋರಾಡುತ್ತಾರೆ. ಇಷ್ಟಾದರೂ ಶ್ರೀಮಾನ್ ಗಾಂಧಿಯಲ್ಲಿ ಅಸ್ಪೃಶ್ಯರಿಗೆ ಏಕೆ ನಂಬಿಕೆ ಸಾಲದಾಗಿದೆ?

ಕೇವಲ ಅವರ ಮಾತಿನ ಆಧಾರದ ಮೇಲೆ ಹೇಳುವುದಾದರೆ ಅವರ ಮೇಲಿನ ಆಪಾದನೆ ನಿರಾಧಾರವಾದದ್ದು ಎಂದೆನಿಸುತ್ತದೆ. ಆದರೆ ಅವರ ಕೃತಿಗಳನ್ನು ಗಮನಿಸಿದಾಗ ಅದು ಇಷ್ಟೇ ನಿರಾಧಾರವೆನಿಸುತ್ತದೆಯೇ? ಶ್ರೀಮಾನ್ ಗಾಂಧಿಯವರ ಕಾರ್ಯಗಳನ್ನು ಈಗ ಪರೀಕ್ಷಿಸೋಣ.

ಶ್ರೀಮಾನ್ ಗಾಂಧಿ ಮತ್ತು ಅವರ ಸ್ನೇಹಿತರ ಅಸ್ಪೃಶ್ಯರಿಗಾಗಿ ಮಾಡಿರುವ ಕಾರ್ಯಗಳನ್ನು ಎರಡು ಸ್ತರಗಳಲ್ಲಿ ಗುರುತಿಸಬಹುದು. – (೧) ಪೂನಾ ಒಪ್ಪಂದಕ್ಕೆ ಮೊದಲಿನ ಕಾರ್ಯಗಳು ಮತ್ತು (೨) ಪೂನಾ ಒಪ್ಪಂದದ ನಂತರದ ಕಾರ್ಯಗಳು ಎಂದು. ಮೊದಲನೆಯ ಹಂತದ ಕಾರ್ಯಗಳನ್ನು ಬಾರ್ಡೋಲಿ

ಕಾರ್ಯಕ್ರಮಗಳೆಂದೂ, ಎರಡನೆಯ ಹಂತದ ಕಾರ್ಯಗಳನ್ನು ಹರಿಜನ ಸೇವಕ ಸಂಘದ ಕಾರ್ಯಗಳೆಂದೂ ಕರೆಯಬಹುದು.

## ಮೊದಲನೆಯ ಹಂತ

ನಮ್ಮ ಈ ಚಿಂತನೆಯನ್ನು ಬಾರ್ಡೋಲಿ ಕಾರ್ಯಕ್ರಮದೊಂದಿಗೆ ಆರಂಭಿಸೋಣ. ಬಾರ್ಡೋಲಿ ಕಾರ್ಯಕ್ರಮ ಅಥವಾ ಕಾಂಗ್ರೆಸ್ಸಿನ ರಚನಾತ್ಮಕ ಕಾರ್ಯಕ್ರಮ ಎಂಬುದು, ಕಾಂಗ್ರೆಸ್ಸು ರಾಷ್ಟ್ರದ ರಾಜಕೀಯ ಬೇಡಿಕೆಗಳನ್ನು ಗಳಿಸಲು ಅನುಸರಿಸಿದ, ನೂತನ ಕಾರ್ಯವಿಧಾನದ ಒಂದು ಫಲ. ೧೯೨೦ರಲ್ಲಿ ನಾಗಪುರದಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದಲ್ಲಿ ಕಾಂಗ್ರೆಸ್ಸು ಈ ರೀತಿ ಘೋಷಿಸಿತು :

"ಭಾರತದ ಪ್ರಜೆಗಳು ಸ್ವರಾಜ್ಯ ಸ್ಥಾಪನೆಗೆ ಈಗ ದೃಢ ಸಂಕಲ್ಪ ಮಾಡಿದ್ದಾರೆ ; ಮತ್ತು

"ಭಾರತದ ರಾಷ್ಟ್ರೀಯ ಕಾಂಗ್ರೆಸ್ಸಿನ ಈ ಅಧಿವೇಶನಕ್ಕೆ ಮೊದಲು ಭಾರತೀಯರು ತಮ್ಮ ಸ್ವಾತಂತ್ರ್ಯ ಮತ್ತು ಹಕ್ಕುಗಳಿಗಾಗಿ ಮಾಡಿದ ಎಲ್ಲ ಪ್ರಯತ್ನಗಳೂ ಸೋತುಹೋಗಿವೆ ;

"ಇಂದಿನ ಈ ಕಾಂಗ್ರೆಸ್ಸು, ಹಿಂದೆ ಕಲ್ಕತ್ತಾದಲ್ಲಿ ನಡೆದ ಕಾಂಗ್ರೆಸ್ ಸಮ್ಮೇಳನದಲ್ಲಿ ಮಾಡಿದ ಅಹಿಂಸೆ ಮತ್ತು ಅಸಹಕಾರದ ಕಾರ್ಯಕ್ರಮಗಳನ್ನು, ಕರ ನಿರಾಕರಣೆ ಮುಂತಾದ ರೂಪದಲ್ಲಿ ಪೂರ್ಣವಾಗಿಯೋ ಅಥವಾ ಹಂತಹಂತವಾಗಿಯೋ, ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಅಥವಾ ಅಖಿಲಭಾರತ ಕಾಂಗ್ರೆಸ್ ಸಮಿತಿಯ ಕರೆಯಂತೆ ಕಾರ್ಯಗತಗೊಳಿಸಲು ಜನತೆಗೆ ಸೂಚಿಸುತ್ತದೆ."

೧೯೨೧ರಲ್ಲಿ ಅಹಮದಾಬಾದಿನಲ್ಲಿ ನಡೆದ ಕಾಂಗ್ರೆಸ್ ಸಮ್ಮೇಳನದಲ್ಲಿ ಈ ರೀತಿ ಘೋಷಿಸಿತು:

"ಶಸ್ತ್ರಾಸ್ತ್ರಗಳ ಬಳಕೆಯ ಯುದ್ಧಕ್ಕಿಂತ ಶಾಂತಿಯುತ ಶಾಸನೋಲ್ಲಂಘನೆಯ ಮೂಲಕ ಹೋರಾಡುವುದು ಹೆಚ್ಚು ಪರಿಣಾಮಕಾರಿಯಾದ ಹಾಗೂ ಸುಸಂಸ್ಕೃತ ನಾಗರಿಕ ಮಾರ್ಗ ಎಂದು ಈ ಕಾಂಗ್ರೆಸ್ಸು ಅಭಿಪ್ರಾಯಪಡುತ್ತದೆ ಮತ್ತು ಎಲ್ಲ ಕಾಂಗ್ರೆಸ್ ಕಾರ್ಯಕರ್ತರಿಗೂ ವೈಯಕ್ತಿಕವಾಗಿ ಮತ್ತು ಸಾಮೂಹಿಕವಾಗಿ ಅಸಹಕಾರ ಚಳುವಳಿಯನ್ನು ವ್ಯವಸ್ಥೆಗೊಳಿಸುವಂತೆ ಸೂಚಿಸುತ್ತದೆ."

ಅಸಹಕಾರ ಮತ್ತು ಶಾಂತಿಯುತ ಶಾಸನೋಲ್ಲಂಘನೆಯ ಚಳುವಳಿಯನ್ನು ಕಾರ್ಯಗತಗೊಳಿಸಲು ಮತ್ತು ಜನತೆಯನ್ನು ಅದರಲ್ಲಿ ಪಾಲ್ಗೊಳ್ಳುವಂತೆ ಮಾಡಲು ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ೧೯೨೨ರ ಫೆಬ್ರವರಿಯಲ್ಲಿ ಬಾರ್ಡೋಲಿಯಲ್ಲಿ ಸೇರಿ ಈ ಕೆಳಗಿನ ಕಾರ್ಯಕ್ರಮಗಳನ್ನು ರಚಿಸಿತು.

"ಕಾಂಗ್ರೆಸ್ಸಿನ ಎಲ್ಲ ಸಂಸ್ಥೆಗಳು ಈ ಕೆಳಗಿನ ಕಾರ್ಯಕ್ರಮದಲ್ಲಿ ತಮ್ಮನ್ನು ತೊಡಗಿಸಿಕೊಳ್ಳಬೇಕೆಂದು ಕಾರ್ಯಕಾರಿ ಸಂಸ್ಥೆಯು ಸಲಹೆ ಮಾಡುತ್ತದೆ.

೧) ಒಂದು ಕೋಟಿಯಷ್ಟು ಕಾಂಗ್ರೆಸ್ ಸದಸ್ಯರನ್ನಾದರೂ ನೊಂದಾಯಿಸುವುದು.

೨) ಚರಕದ ಬಳಕೆಯನ್ನು ಜನಪ್ರಿಯಗೊಳಿಸಿ, ಕೈಯಿಂದ ನೆಯ್ದ ಖಾದಿ ಬಟ್ಟೆಯ ಉತ್ಪಾದನೆಯನ್ನು ಪ್ರೋತ್ಸಾಹಗೊಳಿಸುವುದು.

೩) ರಾಷ್ಟ್ರೀಯ ಶಾಲೆಗಳನ್ನು ಸಂಘಟಿಸುವುದು.

೪) ದಲಿತವರ್ಗದ ಜನರ ಸಾಮಾಜಿಕ, ಮಾನಸಿಕ ಮತ್ತು ನೈತಿಕ ಸ್ಥಿತಿಗತಿಗಳನ್ನು ಉತ್ತಮಪಡಿಸಲು ಅವರು ತಮ್ಮ ಮಕ್ಕಳನ್ನು ರಾಷ್ಟ್ರೀಯ ಶಾಲೆಗಳಿಗೆ ಕಳುಹಿಸುವಂತೆ ಪ್ರೋತ್ಸಾಹಿಸಿ, ಬೇರೆಯವರು ಅನುಭವಿಸುವ ಎಲ್ಲ ಸೌಲಭ್ಯಗಳನ್ನು ಇವರೂ ಅನುಭವಿಸುವಂತೆ ವ್ಯವಸ್ಥೆ ಮಾಡುವುದು.

ಗಮನಿಸಿ : ಅಸ್ಪೃಶ್ಯರ ವಿಚಾರದಲ್ಲಿ ವಿರೋಧವು ತುಂಬಾ ಬಿರುಸಾಗಿರುವ ಜಾಗಗಳಲ್ಲಿ ಪ್ರತ್ಯೇಕ ಶಾಲೆ ಮತ್ತು ಬಾವಿಗಳನ್ನು ಕಾಂಗ್ರೆಸ್ ಖರ್ಚಿನಲ್ಲಿಯೇ ವ್ಯವಸ್ಥೆ ಮಾಡಿ ಮತ್ತು ಅಸ್ಪೃಶ್ಯರ ಮಕ್ಕಳನ್ನು ಸಾರ್ವಜನಿಕ

ಶಾಲೆಗಳಿಗೆ ಸೇರಿಸುವ ಹಾಗೂ ಅಸ್ಪೃಶ್ಯರು ಸಾರ್ವಜನಿಕ ಬಾವಿಯಲ್ಲಿ ನೀರನ್ನು ತರುವಂತೆ ಮಾಡುವ ನಿಮ್ಮ ಸರ್ವ ಪ್ರಯತ್ನವನ್ನು ಮುಂದುವರಿಸಿರಿ.

೫) ಸಂಯಮ ಸಾಧನೆಯ ಅಂಗವಾಗಿ ಕುಡಿತದ ಅಭ್ಯಾಸವಿರುವ ಮನೆಮನೆಗೂ ಹೋಗಿ ಸೂಕ್ತ ರೀತಿಯಲ್ಲಿ ಸಲಹೆಕೊಟ್ಟು ಅವರ ಮನಸ್ಸನ್ನು ಪರಿವರ್ತನೆ ಮಾಡುತ್ತಿರಿ, ಏಕೆಂದರೆ ಪಿಕೆಟಿಂಗ್‌ಗಿಂತಲೂ ಇದು ಹೆಚ್ಚು ಪರಿಣಾಮಕಾರಿಯಾಗುತ್ತದೆ.

೬) ಗ್ರಾಮ ಮತ್ತು ನಗರ ಪಂಚಾಯಿತಿಗಳ ಮೂಲಕ ಎಲ್ಲರ ಕಲಹಗಳನ್ನು ಪರಿಹರಿಸುವಂತೆ ಮತ್ತು ಸಾರ್ವಜನಿಕ ಅಭಿಪ್ರಾಯಕ್ಕೆ ಮನ್ನಣೆ ಕೊಡುವಂತೆ ಜನತೆಗೆ ಸೂಕ್ತ ರೀತಿಯ ಸಲಹೆ ಕೊಡುತ್ತಿರಿ.

೭) ಅಸಹಕಾರ ಚಳುವಳಿಯ ಮೂಲ ಉದ್ದೇಶವಾಗಿ ಎಲ್ಲ ಜಾತಿ ಮತ್ತು ಬುಡಕಟ್ಟಿನ ಜನರ ನಡುವೆ ಐಕ್ಯತೆ ಮತ್ತು ಸಹಕಾರ ಮನೋಭಾವವನ್ನು ಪ್ರಚೋದಿಸಿರಿ. ಜೊತೆಗೆ ರೋಗರುಜಿನ ಮತ್ತು ಆಕಸ್ಮಿಕಗಳು ಸಂಭವಿಸಿದಾಗ ಮತ್ತು ಎಲ್ಲ ಕಾಲದಲ್ಲಿಯೂ ನೆರವಾಗುವಂತಹ ಸಮಾಜ ಸೇವಾ ಸಂಸ್ಥೆಯನ್ನು ಸ್ಥಾಪಿಸುವುದಕ್ಕೆ ಪ್ರಯತ್ನಿಸಿರಿ.

೮) ತಿಲಕ್ ಸ್ಮಾರಕ ನಿಧಿಗೆ ಬೇಕಾದ ಹಣಸಂಗ್ರಹ ಕಾರ್ಯಕ್ಕೆ ಪ್ರತಿಯೊಬ್ಬ ಕಾಂಗ್ರೆಸ್ಸಿಗರು ಮತ್ತು ಅದರಲ್ಲಿ ಸಹಾನುಭೂತಿಯಿರುವವರು ೧೯೨೧ನೆಯ ಇಸವಿಯ ತಮ್ಮ ಗಳಿಕೆಯಲ್ಲಿ ಕೊನೆಯ ಪಕ್ಷ ನೂರರಲ್ಲಿ ಒಂದು ಭಾಗವನ್ನು ವಂತಿಗೆಯಾಗಿ ಕೊಡುವಂತೆ ಮಾಡಿ. ಪ್ರತಿ ಪ್ರಾಂತ್ಯವೂ ತಾನೂ ತಿಲಕ್ ಸ್ಮಾರಕ ನಿಧಿಗೆ ಸಂಗ್ರಹಿಸಿದ ಹಣದಲ್ಲಿ ಶೇಕಡಾ ೨೫ರಷ್ಟನ್ನು ಅಖಿಲ ಭಾರತ ಕಾಂಗ್ರೆಸ್ ಸಮಿತಿಗೆ ಕೊಡಬೇಕು.

ಈ ನಿರ್ಣಯಗಳನ್ನು ಮುಂದೆ ಸೇರುವ ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಸಮ್ಮೇಳನದಲ್ಲಿ ಆವಶ್ಯಕವೆನಿಸಿದರೆ ಸೂಕ್ತ ಮಾರ್ಪಾಡುಗಳಿಗಾಗಿ ಮಂಡಿಸಲಾಗುವುದು.

ಈ ಕಾರ್ಯಕ್ರಮ ೧೯೨೨ನೆಯ ಫೆಬ್ರವರಿ ೨೦ರಂದು ದೆಹಲಿಯಲ್ಲಿ ಸೇರಿದ ಅಖಿಲ ಭಾರತ ಕಾಂಗ್ರೆಸ್ ಕಮಿಟಿಯ ಸಭೆಯಲ್ಲಿ ಅಂಗೀಕೃತವಾಯಿತು. ಇದು ಬಹು ವ್ಯಾಪಕವಾದ ಕಾರ್ಯಕ್ರಮವಾಗಿದ್ದು ಅದು ಹೇಗೆ ಸ್ವೀಕಾರವಾಯಿತು ಮತ್ತು ಎಷ್ಟರ ಮಟ್ಟಿಗೆ ಕಾರ್ಯಗತವಾಯಿತು ಎಂಬ ವಿವರಗಳಿಗೆ ನಾನು ಪ್ರವೇಶಿಸುವುದಿಲ್ಲ. ಅದರಲ್ಲಿ ದಲಿತ ಜನಾಂಗಕ್ಕೆ ಸಂಬಂಧಿಸಿದ ವಿಚಾರ ಒಂದನ್ನು ಮಾತ್ರ ನನ್ನ ವಿವರಣೆಗೆ ಆರಿಸಿಕೊಳ್ಳುತ್ತೇನೆ.

ಅಖಿಲ ಭಾರತ ಕಾಂಗ್ರೆಸ್ ಸಭೆಯಲ್ಲಿ ಅಂಗೀಕೃತವಾದ ಮೇಲೆ ಅದರ ಕಾರ್ಯಕಾರಿ ಸಮಿತಿಯು ಲಕ್ನೊದಲ್ಲಿ ೧೯೨೨ನೆಯ ಜೂನ್ ತಿಂಗಳಲ್ಲಿ ಸೇರಿ ಈ ಕೆಳಗಿನ ನಿರ್ಣಯವನ್ನು ಅಂಗೀಕರಿಸಿತು :

"ಈ ಸಮಿತಿಯು ಸ್ವಾಮಿ ಶ್ರದ್ಧಾನಂದಜಿ, ಶ್ರೀಮತಿ ಸರೋಜಿನಿ ನಾಯ್ಡು, ಶ್ರೀ ಐ.ಕೆ. ಯಾಗ್ನಿಕ್ ಮತ್ತು ಶ್ರೀ ಜಿ.ಬಿ. ದೇಶಪಾಂಡೆಯವರನ್ನೊಳಗೊಂಡ ಉಪಸಮಿತಿಯೊಂದನ್ನು ರಚಿಸಿ, ಆ ಸಮಿತಿಯು ಈ ರಾಷ್ಟ್ರದ ಎಲ್ಲ ಅಸ್ಪೃಶ್ಯರ ಸ್ಥಿತಿಗತಿಗಳನ್ನು ಉತ್ತಮಪಡಿಸಲು ಕ್ರಿಯಾತ್ಮಕವಾದ ಸಲಹೆಗಳನ್ನು ಸಿದ್ಧಗೊಳಿಸಿ, ಅದಕ್ಕೆ ಸದ್ಯಕ್ಕೆ ಬೇಕಾಗುವ ಎರಡು ಲಕ್ಷ ರೂಪಾಯಿಗಳನ್ನು ಸಂಗ್ರಹಿಸಲು ಸಾಧನ ಮಾರ್ಗವನ್ನು ಸೂಚಿಸಿ, ಸೂಕ್ತ ವಿವರಗಳನ್ನುಳ್ಳ ನಿರ್ಣಯವನ್ನು ನಮ್ಮ ಮುಂದಿನ ಸಭೆಯಲ್ಲಿ ಮಂಡಿಸತಕ್ಕದ್ದು."

ಈ ನಿರ್ಣಯವನ್ನು ೧೯೨೨ರ ಜೂನ್‌ನಲ್ಲಿ ಲಕ್ನೋದಲ್ಲಿ ಸೇರಿದ ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಮುಂದೆ ಮಂಡಿಸಲಾಯಿತು. ಕಾರ್ಯಕಾರಿ ಸಮಿತಿಯ ಈ ನಿರ್ಣಯದಲ್ಲಿ ಹೇಳಿದ್ದ ಎರಡು ಲಕ್ಷ ರೂಪಾಯಿಗೆ ಬದಲು ಸದ್ಯಕ್ಕೆ ಅದನ್ನು ಐದು ಲಕ್ಷ ರೂಪಾಯಿಗೆ ಏರಿಸಲಾಗಿದೆ ಎಂಬ

ಮಾರ್ಪಾಡಿನೊಂದಿಗೆ ನಿರ್ಣಯವು ಅಂಗೀಕಾರ ಪಡೆಯಿತು. ಈ ಕಾರ್ಯಕ್ರಮ ಹೇಗೆ ಸಾಗಿತು? ಆ ಸಮಿತಿಯು ಸೂಚಿಸಿದ ಕ್ರಿಯಾತ್ಮಕ ಸಲಹೆಗಳಾವುವು ಮತ್ತು ಅವುಗಳನ್ನು ಸಾಧಿಸಿದ ರೀತಿ ಹೇಗೆ? ಶ್ರೀಮಾನ್ ಗಾಂಧಿ ಮತ್ತು ಕಾಂಗ್ರೆಸ್ ಸಮಿತಿ ಅಸ್ಪೃಶ್ಯರಿಗೆ ಮಾಡಿದ ಸೇವೆಯನ್ನು ಅರಿಯಲು ನಾವು ಈ ಪ್ರಶ್ನೆಗಳನ್ನು ಕೇಳಬೇಕಾಗುತ್ತದೆ.

ಈ ಸಮಿತಿಯ ರಚನೆಯ ನಿರ್ಣಯ ಕಾರ್ಯಕಾರಿ ಸಮಿತಿಯ ಒಪ್ಪಿಗೆಯನ್ನು ಪಡೆಯುವ ಮುನ್ನವೇ ಆ ಸಮಿತಿಯ ಸದಸ್ಯರಲ್ಲಿ ಒಬ್ಬರಾದ ಸ್ವಾಮಿ ಶ್ರದ್ಧಾನಂದರು ತಮ್ಮ ಸದಸ್ಯತ್ವಕ್ಕೆ ರಾಜೀನಾಮೆ ನೀಡಿದ್ದರು. ಕಾರ್ಯಕಾರಿ ಸಮಿತಿಯ ಈ ನಿರ್ಣಯವನ್ನು ಅಂಗೀಕರಿಸಿದ ಸಭೆಯಲ್ಲಿಯೇ ಈ ಕೆಳಗಿನಂತೆ ಮತ್ತೊಂದು ನಿರ್ಣಯವನ್ನು ಅಂಗೀಕರಿಸಲಾಯಿತು.

"ಸ್ವಾಮಿ ಶ್ರದ್ಧಾನಂದರು ದಲಿತ ವರ್ಗದವರನ್ನು ಕುರಿತ ಕಾರ್ಯಕ್ರಮಗಳನ್ನು ರಚಿಸಲು ಸ್ವಲ್ಪ ಮುಂಗಡ ಹಣ ಬೇಕೆಂದು ೧೯೨೨ನೆಯ ಜೂನ್ ೮ ರಂದು ಬರೆದ ಕಾಗದವನ್ನು ಓದಲಾಯಿತು. ಆ ಉದ್ದೇಶಕ್ಕಾಗಿ ಶ್ರೀಮಾನ್ ಗಂಗಾಧರ ದೇಶಪಾಂಡೆಯವರನ್ನು ಉಪಸಮಿತಿಯ ಸಂಚಾಲಕರಾಗಿ ನೇಮಿಸಿ ಆದಷ್ಟು ಬೇಗ ಉಪಸಮಿತಿಯ ಸಭೆಯನ್ನು ಕರೆದು ಸ್ವಾಮಿ ಶ್ರದ್ಧಾನಂದರ ಕಾಗದವನ್ನು ಅದರಲ್ಲಿ ಮಂಡಿಸಬೇಕೆಂದು ನಿರ್ಣಯಿಸಿತು."

ಕಾರ್ಯಕಾರಿ ಸಮಿತಿಯು ಮತ್ತೊಮ್ಮೆ ಜುಲೈ ತಿಂಗಳಲ್ಲಿ ಬೊಂಬಾಯಿಯಲ್ಲಿ ಸೇರಿತು ಮತ್ತು ಈ ಕೆಳಗಿನ ನಿರ್ಣಯ ಮಾಡಿತು :

"ಸ್ವಾಮಿ ಶ್ರದ್ಧಾನಂದರು ನೀಡಿರುವ ರಾಜೀನಾಮೆಯನ್ನು ಹಿಂತೆಗೆದುಕೊಳ್ಳುವಂತೆ ಅವರನ್ನು ಪ್ರಾರ್ಥಿಸುವಂತೆ ಕಾರ್ಯದರ್ಶಿಯವರಿಗೆ ಸೂಚಿಸಿ ಆ ಉಪಸಮಿತಿಯ ಸಂಚಾಲಕರಾದ ಶ್ರೀಮಾನ್ ಜಿ. ಬಿ. ದೇಶಪಾಂಡೆಯವರಿಗೆ ದಲಿತ ವರ್ಗದ ಉಪಸಮಿತಿಯ ಸಾದಿಲ್ವಾರು ಖರ್ಚಿಗಾಗಿ ೫೦೦ ರೂ.ಗಳನ್ನು ಕೊಡುವುದು ಎಂದು ನಿರ್ಣಯಿಸಿತು."

ದಲಿತ ವರ್ಗದವರನ್ನು ಕುರಿತಂತೆ ಬಾರ್ಡೋಲಿ ಕಾರ್ಯಕ್ರಮದಲ್ಲಿ ಯಾವ ಹೆಚ್ಚಿನ ಪ್ರಗತಿಯೂ ಇಲ್ಲದಂತೆಯೇ ೧೯೨೨ನೆಯ ವರ್ಷ ಕಳೆದುಹೋಯಿತು. ೧೯೨೩ನೆಯ ವರ್ಷವೂ ಬಂದಿತು. ೧೯೨೩ನೆಯ ಜನವರಿಯಲ್ಲಿ ಕಾರ್ಯಕಾರಿ ಸಮಿತಿಯು ಗಯೆಯಲ್ಲಿ ಸೇರಿ ಈ ಕೆಳಗಿನ ನಿರ್ಣಯವನ್ನು ಅಂಗೀಕರಿಸಿತು."

"ಸ್ವಾಮಿ ಶ್ರದ್ಧಾನಂದರ ರಾಜೀನಾಮೆಯ ವಿಚಾರದಲ್ಲಿ ಹೇಳುವುದಾದರೆ ಅವರನ್ನು ಬಿಟ್ಟು ಉಳಿದ ಸದಸ್ಯರಷ್ಟೇ ಆ ಉಪಸಮಿತಿಯ ಸದಸ್ಯರೆಂದು ಅಂಗೀಕರಿಸಿ, ಶ್ರೀ ಯಾಗ್ನಿಕರು ದಲಿತ ಸಮಿತಿಯ ಸಂಚಾಲಕರೆಂದು ನಿರ್ಣಯಿಸಲಾಯಿತು."

ಅಖಿಲ ಭಾರತ ಕಾಂಗ್ರೆಸ್ ಸಮಿತಿಯು ೧೯೨೩ನೆಯ ಫೆಬ್ರವರಿಯಲ್ಲಿ ಬೊಂಬಾಯಿಯಲ್ಲಿ ಸೇರಿದಾಗ ಆ ಉಪಸಮಿತಿಯಿಂದ ಯಾವ ಕಾರ್ಯವೂ ಆಗಿಲ್ಲದಿರುವುದನ್ನು ಕಂಡು ಈ ಕೆಳಗಿನ ನಿರ್ಣಯವನ್ನು ಅಂಗೀಕರಿಸಿತು:

"ಅಸ್ಪೃಶ್ಯರ ಸ್ಥಿತಿಗತಿಗಳನ್ನು ಕುರಿತ ಪ್ರಶ್ನೆಯನ್ನು ಸೂಕ್ತ ಕಾರ್ಯಕ್ರಮಗಳಿಗಾಗಿ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಗಮನಕ್ಕೆ ತರುವುದು."

ಮುಂದೆ ಕಾರ್ಯಕಾರಿ ಸಮಿತಿಯು ಏನು ಮಾಡಿತು? ಅದು ಪೂನಾದಲ್ಲಿ ೧೯೨೩ನೆಯ ಏಪ್ರಿಲ್ ೧೭ರಂದು ಸೇರಿ ಈ ರೀತಿ ನಿರ್ಣಯಿಸಿತು.

"ಅಸ್ಪೃಶ್ಯರ ವಿಚಾರದಲ್ಲಿ ಕಾಂಗ್ರೆಸ್ಸಿನ ಧೋರಣೆಯ ಫಲವಾಗಿ ಅಸ್ಪೃಶ್ಯರನ್ನು ಜನತೆ ನೋಡಿಕೊಳ್ಳುವ

ವಿಚಾರದಲ್ಲಿ ಸ್ವಲ್ಪ ಪ್ರಗತಿ ಕಂಡುಬಂದಿದ್ದರೂ ಇನ್ನೂ ಆಗಬೇಕಾದ ಕೆಲಸ ಬಹಳವಿದೆ ಎಂಬುದನ್ನು ಈ ಸಮಿತಿ ಗಮನಿಸಿದೆ. ಅಸ್ಪೃಶ್ಯತೆ ಎಂಬುದು ಹಿಂದೂ ಸಮಾಜಕ್ಕೆ ನೇರವಾಗಿ ಸಂಬಂಧಿಸಿದ ವಿಚಾರವಾದ್ದರಿಂದ ಅಖಿಲ ಭಾರತ ಹಿಂದೂ ಮಹಾಸಭೆಯೂ ಇಂತಹ ಅನಿಷ್ಟ ಪದ್ಧತಿಯನ್ನು ತೊಡೆದು ಹಾಕಲು ಶ್ರಮಿಸಬೇಕೆಂದು ಈ ಸಮಿತಿಯೂ ಅವರನ್ನು ಪ್ರಾರ್ಥಿಸುತ್ತದೆ."

ಈ ರೀತಿ ಅಸ್ಪೃಶ್ಯರ ಪ್ರಗತಿಗಾಗಿ ಕಾಂಗ್ರೆಸ್ ಮತ್ತು ಶ್ರೀಮಾನ್ ಗಾಂಧಿಯವರು ನಡೆಸಿದ ರಚನಾತ್ಮಕ ಕಾರ್ಯಕ್ರಮ ಮುಕ್ತಾಯವಾಯಿತು. ಅಸ್ಪೃಶ್ಯರಿಗಾಗಿ ನಡೆಸಿದ ಬಾರ್ಡೋಲಿ ಕಾರ್ಯಕ್ರಮ ಯಾವ ದೃಷ್ಟಿಯಿಂದಲೂ ಕ್ರಾಂತಿಕಾರಿಯಾಗಿರಲಿಲ್ಲ. ಅದು ಜಾತಿಯ ವ್ಯೂಹವನ್ನು ಭೇದಿಸಲು ಪ್ರಯತ್ನಿಸಲಿಲ್ಲ. ಅಂತರಜಾತಿ ವಿವಾಹ ಅಥವಾ ಸಹಪಂಕ್ತಿ ಭೋಜನದಂತಹ ಆಚರಣೆಗಳ ಮಾತೇ ಅಲ್ಲಿರಲಿಲ್ಲ. ಅಸ್ಪೃಶ್ಯರಿಗೆ ಬೇರೆ ಪ್ರತ್ಯೇಕ ಬಾವಿಗಳು ಮತ್ತು ಶಾಲೆಗಳಿರಬೇಕೆಂಬುದನ್ನು ಅಲ್ಲಿ ಒಪ್ಪಲಾಗಿದೆ. ಅದು ಒಂದು ರೀತಿಯ ಸುಧಾರಣಾ ಮಾರ್ಗವಷ್ಟೆ. ಆದರೂ ಅಂತಹ ಅಪಾಯಕಾರಿಯಲ್ಲದ ಬಹು ಸರಳವಾದ ಕಾರ್ಯಕ್ರಮವನ್ನೂ ಅದು ಆಚರಣೆಗೆ ತರಲಿಲ್ಲ.

ಈ ವೇಳೆಯಲ್ಲಿ ಕಾಂಗ್ರೆಸ್ಸು ಮಹತ್ವದ ಹೋರಾಟದಲ್ಲಿ ತೊಡಗಿದ್ದಿತೆಂಬುದನ್ನು ನಾವು ಗಮನಿಸಬೇಕು. ಬ್ರಿಟಿಷ್ ಸಾಮ್ರಾಜ್ಯಶಾಹಿಯ ಎದುರು ತನ್ನ ನಿಶ್ಚಿತ ಹೋರಾಟದಲ್ಲಿ ಸಮಾಜದ ಎಲ್ಲ ವರ್ಗದವರನ್ನು ತನ್ನೊಂದಿಗೆ ಜೊತೆಗೂಡಿಸಿಕೊಳ್ಳುವುದು ಆವಶ್ಯಕವಾಗಿದ್ದಿತು. ಕಾಂಗ್ರೆಸ್ಸು ತಾನು ಮಹಮದೀಯರ ಸಮಸ್ಯೆಯಲ್ಲಿ ಎಷ್ಟು ಆಸಕ್ತಿ ಹೊಂದಿದೆಯೋ ಅಷ್ಟೇ ಆಸಕ್ತಿಯನ್ನು ಅಸ್ಪೃಶ್ಯರ ಸಮಸ್ಯೆ ಮತ್ತು ಸೇವೆಯಲ್ಲಿ ಹೊಂದಿದೆ ಎಂಬುದನ್ನು ತೋರಿಸಲು ಇದು ಒಳ್ಳೆಯ ಅವಕಾಶವಾಗಿದ್ದಿತು. ಅಸ್ಪೃಶ್ಯರ ವಿಚಾರದಲ್ಲಿ ತಮಗಿರುವ ದ್ವೇಷಾಸೂಯೆಗಳನ್ನು ಮರೆತು ಅವರ ಸೇವೆಯಲ್ಲಿ ತೊಡಗಿಸಲು ಇದಕ್ಕಿಂತ ಉತ್ತಮ ಅವಕಾಶ ಹಿಂದೂಗಳಿಗೆ ದೊರೆಯಲಾರದು. ಇಂತಹ ಸದಾವಕಾಶವೂ ಸಹ ಕಾಂಗ್ರೆಸ್ಸಿಗರನ್ನು ಅಸ್ಪೃಶ್ಯರ ಸೇವೆಯಲ್ಲಿ ತೊಡಗಿಸಲು ಅಶಕ್ತವಾಯಿತು. ಸ್ವರಾಜ್ಯವನ್ನು ಗಳಿಸುವಂತಹ ಉನ್ನತ ಆದರ್ಶ ಮತ್ತು ಸಾಧ್ಯತೆಯ ನಡುವೆಯೂ ಹಿಂದೂಗಳು ಅಸ್ಪೃಶ್ಯರ ವಿಚಾರದಲ್ಲಿ ತಮಗಿರುವ ಸಾಮಾಜಿಕ ದ್ವೇಷವನ್ನು ತೊಡೆದುಹಾಕಲು ಸಿದ್ಧರಿಲ್ಲವೆಂದ ಮೇಲೆ, ಅದರ ಗಾಢತೆಯೆಷ್ಟೆಂಬುದನ್ನು ನಾವು ಊಹಿಸಬಹುದು. ಅಸ್ಪೃಶ್ಯರ ಸೇವಾ ಕಾರ್ಯಕ್ರಮಗಳನ್ನು ಸಮರ್ಥ ರೀತಿಯಲ್ಲಿ ನಿರ್ವಹಿಸಿದ, ಕಾಂಗ್ರೆಸ್ಸಿನ ನಾಚಿಕೆಯಿಲ್ಲದ ಸೋತ ಮನೋಭಾವದಿಂದ, ಪರಿಸ್ಥಿತಿ ಮತ್ತಷ್ಟು ಗಂಭೀರವಾಯಿತು.

ಅಸ್ಪೃಶ್ಯರ ನ್ಯೂನತೆಗಳನ್ನು ಪರಿಹರಿಸುವ ಕಾರ್ಯವನ್ನು ಅಶಕ್ತರ ಕೈಗೆ ವಹಿಸಬಾರದಾಗಿದ್ದಿತು. ಅಸ್ಪೃಶ್ಯರ ಸಮಸ್ಯೆಗಳನ್ನು ನಿರ್ವಹಿಸಲು ಅತ್ಯಂತ ಅಸಮರ್ಥ ಸಂಸ್ಥೆಯೊಂದಿರುವುದಾದರೆ ಅದು ಹಿಂದೂ ಮಹಾಸಭೆ. ಅದು ಹೋರಾಟದ ಮನೋಭಾವದ ಒಂದು ಸಂಸ್ಥೆ. ಹಿಂದೂ ಧರ್ಮದ ಎಲ್ಲ ಧಾರ್ಮಿಕ ಮತ್ತು ಸಾಂಸ್ಕೃತಿಕ ಪರಂಪರೆಗಳನ್ನು ಕಾಪಾಡಿಕೊಂಡು ಬರುವುದೇ ಅದರ ಮೂಲ ಉದ್ದೇಶ. ಅದು ಸಾಮಾಜಿಕ ಸುಧಾರಣಾ ಸಂಘವಲ್ಲ. ಅದು ಪೂರ್ಣವಾಗಿ ರಾಜಕೀಯ ಸಂಸ್ಥೆಯಾಗಿದ್ದು ಭಾರತದ ರಾಜಕೀಯದಲ್ಲಿ ಮಹಮದೀಯರ ಪ್ರಭಾವವನ್ನು ಮೊಟಕುಗೊಳಿಸುವುದೇ ಅದರ ಉದ್ದೇಶವಾಗಿದೆ. ಅದರ ರಾಜಕೀಯ ಪ್ರಾಬಲ್ಯವನ್ನು ಕಾಪಾಡಲು ಅದು ತನ್ನ ಸಾಮಾಜಿಕ ಸಂಘಟನೆಯನ್ನು ಕಾಪಾಡಿಕೊಳ್ಳಬೇಕಾಗಿದೆ ಮತ್ತು ಆ ಕಾರಣದಿಂದಲೇ ಅದು ಜಾತಿ ಅಥವಾ ಅಸ್ಪೃಶ್ಯತೆಯ ನಿವಾರಣೆಯನ್ನು ಕುರಿತು ಮಾತನಾಡುವುದಿಲ್ಲ. ಅಂತಹ ಒಂದು ಸಂಸ್ಥೆಯನ್ನು ಅಸ್ಪೃಶ್ಯರ ಸಮಸ್ಯೆಯನ್ನು ಸುಧಾರಿಸಲು ಕಾಂಗ್ರೆಸ್ಸು ಆರಿಸಿದ್ದು ನನಗೆ ಅತ್ಯಂತ ಆಶ್ಚರ್ಯಕರವಾಗಿದೆ. ಕಾಂಗ್ರೆಸ್ಸು ತನಗೆ ಅನಾನುಕೂಲವೆನಿಸಿದ

ಸಮಸ್ಯೆಯನ್ನು ಅದು ಹೇಗೋ ಪರಿಹರಿಸಿ ಕೈತೊಳೆದುಕೊಳ್ಳ ಬಯಸಿತೆಂಬುದು ಇದರಿಂದ ಅರಿವಾಗುತ್ತದೆ. ಅಸ್ಪೃಶ್ಯರ ಸಮಸ್ಯೆಯನ್ನು ಹಿಂದೂ ಮಹಾಸಭೆಯವರು ನಿರ್ವಹಿಸಬೇಕೆಂಬ ಒಂದು ಬುದ್ಧಿವಂತಿಕೆಯ ನಿರ್ಣಯವನ್ನು ಕಾಂಗ್ರೆಸ್ ಮಾಡಿತೇ ಹೊರತು, ಅದಕ್ಕೆ ಬೇಕಾದ ಹಣಕಾಸಿನ ನೆರವನ್ನು ಅವರಿಗೆ ನೀಡಲಿಲ್ಲವಾಗಿ, ಹಿಂದೂ ಮಹಾಸಭೆ ಈ ಕಾರ್ಯವನ್ನು ಕೈಗೆತ್ತಿಗೊಳ್ಳಲಿಲ್ಲ. ಹೀಗಾಗಿ ಈ ಒಟ್ಟು ಕಾರ್ಯಕ್ರಮ ಶೋಚನೀಯವೂ ಹಾಗೂ ಲಜ್ಜಾಸ್ಪದವಾದ ರೀತಿಯಲ್ಲಿ ಕೊನೆಗೊಂಡಿತು. ಇಷ್ಟಾದರೂ ಸಾವಿರಾರು ಜನ ಕಾಂಗ್ರೆಸ್ಸಿಗರು, ಕಾಂಗ್ರೆಸ್ಸು ಅಸ್ಪೃಶ್ಯತಾ ನಿವಾರಣೆಗಾಗಿ ಹೋರಾಡುತ್ತಿದೆ ಎಂದು ನಾಚಿಕೆಯಿಲ್ಲದೆ ಹೇಳಿಕೊಳ್ಳುತ್ತಿರುವುದು ಮಾತ್ರವಲ್ಲದೆ, ಸಿ. ಎಫ್. ಆಂಡ್ರೂಸ್‌ರಂತಹ ಶ್ರೀಮಾನ್ ಗಾಂಧಿಯ ಮಿತ್ರರ ಸುಳ್ಳು ಪ್ರಚಾರದಿಂದಾಗಿ ಮತ್ತು ಪಾಶ್ಚಿಮಾತ್ಯ ಜಗತ್ತಿನಲ್ಲಿ ಶ್ರೀಮಾನ್ ಗಾಂಧೀಯ ಘನತೆಯನ್ನು ಹೆಚ್ಚಿಸುವ ಅವರ ಪ್ರಯತ್ನದಿಂದಾಗಿ ಪಾಶ್ಚಿಮಾತ್ಯರಲ್ಲಿ ಹಲವರು ಈ ಮಾತನ್ನು ನಂಬುವಂತಾಯಿತು.[೧]

ಅಸ್ಪೃಶ್ಯರ ಉದ್ಧಾರದ ಈ ಪ್ರಯತ್ನ ಸೋತು ಸುಮ್ಮನಾಯಿತು ಎಂದು ಹೇಳಿದರೆ ಸಾಲದು. ಸ್ವಾಮಿ ಶ್ರದ್ಧಾನಂದರು ಆ ಉಪಸಮಿತಿಯ ಸದಸ್ಯರಾಗಿರಲು ಒಪ್ಪದೆ ಏಕೆ ರಾಜೀನಾಮೆ ಕೊಟ್ಟರು ಎಂಬುದನ್ನು ಕುರಿತು ಸ್ವಲ್ಪ ವಿಚಾರಿಸುವುದು ಆವಶ್ಯಕ. ಅವರ ರಾಜೀನಾಮೆಗೆ ಸರಿಯಾದ ಕಾರಣ ಇರಲೇಬೇಕು. ಸ್ವಾಮಿಯವರು ಆರ್ಯಸಮಾಜದ ಪ್ರಜ್ಞಾವಂತ ಸದಸ್ಯರಾಗಿದ್ದು ಅಸ್ಪೃಶ್ಯತಾ ನಿವಾರಣೆಯಲ್ಲಿ ಪೂರ್ಣ ವಿಶ್ವಾಸವಿದ್ದವರು. ಕಾಂಗ್ರೆಸ್ ಕಾರ್ಯದರ್ಶಿಯವರಿಗೂ ಮತ್ತು ಸ್ವಾಮಿಯವರಿಗೂ ನಡುವೆ ನಡೆದ ಪತ್ರವ್ಯವಹಾರವು ಕಾಂಗ್ರೆಸ್ಸಿಗರ ಮನೋಧರ್ಮದ ವಿಚಾರದಲ್ಲಿ ಸಾಕಷ್ಟು ಬೆಳಕು ಚೆಲ್ಲುತ್ತದ್ದಾದ್ದರಿಂದ ಅದನ್ನು ಇಲ್ಲಿ ಮಂಡಿಸಲು ನಾನು ಹಿಂಜರಿಯುವುದಿಲ್ಲ.

**ಸ್ವಾಮೀಜಿಯವರ ಪತ್ರ**

ಕಾರ್ಯದರ್ಶಿಯವರಿಗೆ
ಅಖಿಲ ಭಾರತ ಕಾಂಗ್ರೆಸ್ ಸಮಿತಿ
(ಮುಕ್ಕಾಂ) ಡೆಲ್ಲಿ.

ಅಸ್ಪೃಶ್ಯತೆಯನ್ನು ಕುರಿತಾದ ಎ.ಐ.ಸಿ.ಸಿ. ಯ ಮತ್ತು ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ನಿರ್ಣಯಗಳನ್ನೊಳಗೊಂಡ ನಿಮ್ಮ ಕ್ರಮ ಸಂಖ್ಯೆ ೩೩೧ ಮತ್ತು ೩೩೨ರ ಪತ್ರಗಳು ತಲುಪಿದವು. ಕಾರ್ಯಕಾರಿ ಸಮಿತಿಯು ಅನುಮೋದಿಸಿದ ಎಲ್ಲ ಅಂಶಗಳೂ ಎ.ಐ.ಸಿ.ಸಿ.ಯ ನಿರ್ಣಯದಲ್ಲಿ ಸೇರಿಲ್ಲವೆಂಬುದನ್ನು ಬಹು ದುಃಖದಿಂದ ಗಮನಿಸಿದ್ದೇನೆ.

ವಾಸ್ತವಾಂಶ ಇದಿಷ್ಟು, ನಾನು ಅಂದಿನ ಕಾಂಗ್ರೆಸ್ ಕಾರ್ಯದರ್ಶಿಯವರಾಗಿದ್ದ ಶ್ರೀ ವಿಠಲಭಾಯಿ ಪಟೇಲರಿಗೆ ೧೯೨೨ನೆಯ ಮೇ ೨೩ ರಂದು ಈ ಕೆಳಗಿನ ಕಾಗದವನ್ನು ಕಳುಹಿಸಿದೆನು ಮತ್ತು ಆ ಕಾಗದವು ದೇಶದ ಪ್ರಮುಖ ದೈನಂದಿನ ಪತ್ರಿಕೆಗಳಲ್ಲಿಯೂ ಪ್ರಕಟಗೊಂಡಿತು.

"ನನ್ನ ಪ್ರೀತಿಯ ಶ್ರೀಮಾನ್ ಪಾಟೀಲರೆ, ಮಹಾತ್ಮಾಜಿಯವರು ಅಸ್ಪೃಶ್ಯತೆಯನ್ನು ಕಾಂಗ್ರೆಸ್ ಕಾರ್ಯಕ್ರಮದ ಮೊತ್ತಮೊದಲ ಸ್ಥಾನದಲ್ಲಿಟ್ಟ ಕಾಲ ಒಂದಿದ್ದಿತು. (೧೯೨೧ನೆಯ ಮೇ ೨೫ರ ಯಂಗ್ ಇಂಡಿಯಾ ಪ್ರಕಾರ) ಈಗ, ಅಸ್ಪೃಶ್ಯರ ಉದ್ಧಾರದ ಪ್ರಶ್ನೆಯನ್ನು ಒಂದು ಮೂಲೆಗೆ ತಳ್ಳಿದಂತೆ ಕಾಣುತ್ತದೆ.

೧. ಶ್ರೀಮಾನ್ ಆಂಡ್ರೂಸರು ಒಮ್ಮೆ ಹಿಂದೂಗಳಲ್ಲಿರುವ ಜಾತಿ ವಾದವನ್ನು ಒಪ್ಪಿ ಪ್ರತಿಪಾದಿಸಿದುದೂ ಉಂಟು.

ಖಾದಿ ಕೈಗಾರಿಕೆಗಾಗಿ ಈ ವರ್ಷ ಸಾಕಷ್ಟು ಹಣ ಒದಗಿಸಿ ಉತ್ತಮ ಕಾರ್ಯಕರ್ತರನ್ನು ತೊಡಗಿಸಲಾಗಿದೆ ಮತ್ತು ರಾಷ್ಟ್ರೀಯ ಶಿಕ್ಷಣಕ್ಕಾಗಿ ಒಂದು ಪ್ರಬಲವಾದ ಉಪ ಸಮಿತಿಯನ್ನು ರಚಿಸಿ ಹಣದ ಸಂಗ್ರಹಕ್ಕಾಗಿ ವಿಶೇಷವಾಗಿ ಕರೆ ಕೊಡಲಾಗಿದೆ. ಆದರೆ ಅಸ್ಪೃಶ್ಯತಾ ನಿವಾರಣೆಗೆಂದು ಅಹಮದಾಬಾದ್, ಅಹಮದ್‌ನಗರ ಮತ್ತು ಮದರಾಸಿಗೆ ಸ್ವಲ್ಪ ಹಣ ಮಾತ್ರ ಒದಗಿಸಿ, ಆ ಯೋಜನೆಯನ್ನು ಮೂಲೆಗೊತ್ತಲಾಗಿದೆ. ನಮ್ಮ ವಿರುದ್ಧ ಆರು ಕೋಟಿ ಜನ ಸೋದರರನ್ನು ನಿರಂಕುಶ ಪ್ರಭುತ್ವವು ಎತ್ತಿಕಟ್ಟಿರುವುದರಿಂದ ಖಾದಿಯ ಕೈಗಾರಿಕೆಯೂ ಪೂರ್ಣವಾಗಿ ಯಶಸ್ವಿಯಾಗುತ್ತದೆಂದು ನನಗನಿಸುವುದಿಲ್ಲ. ನಾವು ದಮನಿತ ಈ ಸೋದರರು ಖಾದಿಯನ್ನು ತೊರೆದು ಅಗ್ಗದ ಪರದೇಶಿ ಬಟ್ಟೆಗಳನ್ನು ಕೊಳ್ಳುತ್ತಿದ್ದಾರೆಂಬುದನ್ನು ಕಾರ್ಯಕಾರಿ ಸಮಿತಿಯ ಸದಸ್ಯರು ತಿಳಿದಿರುವಂತೆ ಕಾಣುವುದಿಲ್ಲ. ಜೂನ್ ೭ರಂದು ಲಕ್ನೋದಲ್ಲಿ ನಡೆಯುವ ಅಖಿಲ ಭಾರತ ಕಾಂಗ್ರೆಸ್ ಸಮಿತಿ ಸಭೆಯಲ್ಲಿ ನಾನು ಈ ಕೆಳಗಿನ ನಿರ್ಣಯವನ್ನು ಮಂಡಿಸಲಿದ್ದೇನೆ.

"ದಲಿತವರ್ಗದವರಿಗೆ ಸಂಬಂಧಿಸಿದ ನಿರ್ಣಯವನ್ನು ಕಾರ್ಯಗತಗೊಳಿಸಲು ಎ.ಐ.ಸಿ.ಸಿ.ಯ ಮೂರು ಜನ ಸದಸ್ಯರುಳ್ಳ ಒಂದು ಉಪ ಸಮಿತಿಯನ್ನು ರಚಿಸಿ ಅದರ ಪ್ರಚಾರ ಕಾರ್ಯಗಳಿಗೆ ಐದು ಲಕ್ಷ ರೂ.ಗಳನ್ನು ತೆಗೆದಿಡಬೇಕು ಮತ್ತು ಇನ್ನು ಮುಂದೆ ಹಣಕಾಸಿನ ಎಲ್ಲ ಬೇಡಿಕೆಗಳನ್ನು ನಿರ್ಣಯಿಸಲು ಆ ಉಪ ಸಮಿತಿಗೆ ವಹಿಸತಕ್ಕದ್ದು."

ಕಾರ್ಯಕಾರಿ ಸಮಿತಿಯು ನನ್ನ ಈ ಸಲಹೆಯನ್ನು ಈ ರೀತಿ ತಿದ್ದುಪಡಿ ಮಾಡಿತು.

"ಈ ಸಮಿತಿಯು ಸ್ವಾಮಿ ಶ್ರದ್ಧಾನಂದಜಿ, ಶ್ರೀಮತಿ ಸರೋಜಿನಿ ನಾಯ್ಡು ಶ್ರೀ ಐ. ಕೆ. ಯಾಗ್ನಿಕ್ ಮತ್ತು ಶ್ರೀ ಜಿ.ಬಿ. ದೇಶಪಾಂಡೆಯವರನ್ನೊಳಗೊಂಡ ಉಪ ಸಮಿತಿಯೊಂದನ್ನು ರಚಿಸಿ, ಆ ಸಮಿತಿಯು ಈ ರಾಷ್ಟ್ರದ ಎಲ್ಲ ಅಸ್ಪೃಶ್ಯರ ಸ್ಥಿತಿಗತಿಗಳನ್ನು ಉತ್ತಮಪಡಿಸಲು ಕ್ರಿಯಾತ್ಮಕವಾದ ಸಲಹೆಗಳನ್ನು ಸ್ಥಿರಗೊಳಿಸಿ, ಅದಕ್ಕೆ ಸದ್ಯಕ್ಕೆ ಬೇಕಾಗುವ ಎರಡು ಲಕ್ಷ ರೂ.ಗಳನ್ನು ಸಂಗ್ರಹಿಸಿಲು ಸಾಧನ ಮಾರ್ಗವನ್ನು ಸೂಚಿಸಿ, ಸೂಕ್ತ ವಿವರಗಳನ್ನೊಳಗೊಂಡ ನಿರ್ಣಯವನ್ನು ನಮ್ಮ ಮುಂದಿನ ಸಭೆಯಲ್ಲಿ ಮಂಡಿಸತಕ್ಕದ್ದು."

ಶ್ರೀಮಾನ್ ಪಟೇಲರು ಕಾರ್ಯಕಾರಿ ಸಮಿತಿಯ ಈ ಸಲಹೆಯನ್ನು ಪೂರ್ಣವಾಗಿ ಒಪ್ಪುವಂತೆ ನನಗೆ ಹೇಳಿದರು. ಕಾರ್ಯಕಾರಿ ಸಮಿತಿಯ ತೀರ್ಮಾನವನ್ನು ಒಪ್ಪಲು ನಾನು ನಿರಾಕರಿಸಿದೆನು. ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಮೊದಲನೆಯ ಸಭೆಯಲ್ಲಿಯೇ ೨ ಲಕ್ಷದ ಬದಲು ೫ ಲಕ್ಷಕ್ಕೆ ಹೆಚ್ಚಿಸಿ, ಅದರಲ್ಲಿ ಒಂದು ಲಕ್ಷವನ್ನು ಎ.ಐ.ಸಿ.ಸಿ.ಯು ತನ್ನ ಕೈಯಲ್ಲಿರುವ ಹಣದಿಂದಲೇ ನಗದಾಗಿ ಕೊಡಬೇಕೆಂದು ಮತ್ತು ಉಳಿದ ಹಣಕ್ಕೆ ಸಾರ್ವಜನಿಕರಿಂದ ವಂತಿಗೆ ಕೇಳಬೇಕೆಂದು ತೀರ್ಮಾನಿಸಿತು.

ಕಾಂಗ್ರೆಸ್‌ಫಂಡಿನಿಂದ ಕೊಡಬೇಕಾದ ಹಣವನ್ನು ಈಗಲೇ ನಿಗದಿಪಡಿಸುವ ಬದಲು ಕಾರ್ಯಕಾರಿ ಸಮಿತಿಯು ಈ ಕಾರ್ಯಕ್ರಮವನ್ನು ಒಪ್ಪಿದ ಕೂಡಲೇ ಅದಕ್ಕೆ ಸೂಕ್ತವಾದ ಹಣವನ್ನು ಆ ಸಮಿತಿಯೇ ಮಂಜೂರು ಮಾಡಬಹುದೆಂದು ಶ್ರೀಮಾನ್ ರಾಜಗೋಪಾಲಾಚಾರಿಯವರು ಕಾರ್ಯಕಾರಿ ಸಮಿತಿಯ ಪರವಾಗಿ ಸೂಚಿಸಿದರು. ಈ ಮೇಲಿನ ತಿದ್ದುಪಡಿಯನ್ನು ಒಪ್ಪುವಾಗ ಬಳಸಿದ ನಿರ್ದಿಷ್ಟ ಪದಗಳ ಸ್ಮರಣೆ ಈಗ ನನಗಿಲ್ಲದಿದ್ದರೂ ಈ ತಿದ್ದುಪಡಿಯನ್ನು ಒಪ್ಪಲಾಯಿತೆಂಬುದಂತೂ ನಿಜ.

ಇದಾದ ನಂತರ, ಎ.ಐ.ಸಿ.ಸಿ.ಯಲ್ಲಿ ಈಗ ಉಳಿದಿರುವ ನಗದು ಹಣ ಎಷ್ಟು ಎಂಬ ಪ್ರಶ್ನೆಗಳ ಕೂಗಾಟ ಎಲ್ಲ ಕಡೆಯಿಂದಲೂ ಕೇಳಿ ಬಂದಿತು. ಆಗ ಅಧ್ಯಕ್ಷರು ನನ್ನನ್ನು ಪಕ್ಕಕ್ಕೆ ಕರೆದು ಈಗ ಸಮಿತಿಯ ಲೆಕ್ಕದಲ್ಲಿ ಬಹಳ ಕಡಿಮೆ ಹಣ ಉಳಿದಿರುವುದರಿಂದ ಮತ್ತು ಸಿ.ಐ.ಡಿ.ಗಳು ಸೇರಿದಂತೆ ಹೊರಗಿನವರನೇಕರು ಇಲ್ಲಿ ನೆರೆದಿರುವುದರಿಂದ, ಅದನ್ನು ಪ್ರಕಟಿಸಿದರೆ ಸಮಿತಿಗೆ ಕೆಡಕಾಗುತ್ತದೆಂದು ನಾನು ನಂಬುವಂತೆ

ಪ್ರಮಾಣಪೂರ್ವಕವಾಗಿ ಹೇಳಿದರು. ನಂತರ, ನನ್ನ ಸಲಹೆಯನ್ನು ಅನುಮೋದಿಸಿದವರು ಮತ್ತು ಬೆಂಬಲಿಸಿದವರು ಬೇಡವೆಂದರೂ ನಾನು ಶ್ರೀಮಾನ್ ರಾಜಗೋಪಾಲಾಚಾರಿಯವರ ತಿದ್ದುಪಡಿಯನ್ನು ಒಪ್ಪಿಕೊಂಡೆನು. ಆದರೆ ದೈನಿಕದಲ್ಲಿ ಅಸೋಸಿಯೇಟೆಡ್ ಪ್ರೆಸ್ಸಿನ ವರದಿಯನ್ನು ಓದಿದಾಗ, ಆ ಠರಾವಿನಲ್ಲಿ ಶ್ರೀಮಾನ್ ರಾಜಗೋಪಾಲಾಚಾರಿಯವರ ತಿದ್ದುಪಡಿಗೆ ಕತ್ತರಿ ಪ್ರಯೋಗವಾಗಿದ್ದಿತು.

ಈ ಠರಾವು ಅಂಗೀಕೃತವಾದ ಮೇಲೆ ಈ ಉಪ ಸಮಿತಿಗೆ ಒಬ್ಬ ಸಂಚಾಲಕರನ್ನು ನೇಮಿಸಬೇಕೆಂದು ಬಯಸಿದ ಹಲವರು ಅದಕ್ಕೆ ನನ್ನ ಹೆಸರನ್ನು ಸೂಚಿಸಿದರು. ಆಗ ಕಾಂಗ್ರೆಸ್ ಕಾರ್ಯದರ್ಶಿಗಳಾಗಿ ಶ್ರೀಮಾನ್ ವಿಠಲಭಾಯಿಪಟೇಲರು, "ಸ್ವಾಮಿ ಶ್ರದ್ಧಾನಂದರ ಹೆಸರು ಮೊದಲು ಸೂಚಿತವಾಗಿರುವುದರಿಂದ ಅವರೇ ಆ ಸಮಿತಿಯ ಸಂಚಾಲಕರಾಗಿರುತ್ತಾರೆ ಮತ್ತು ಅದಕ್ಕಾಗಿ ಮತ್ತೊಂದು ಠರಾವು ಬೇಕಿಲ್ಲ ಎಂದರು."

ದೇಶದ ಎಲ್ಲ ಕಡೆಯಿಂದಲೂ ಕಾಂಗ್ರೆಸ್ ಸದಸ್ಯರಿಂದ ತಮ್ಮ ಪ್ರಾಂತ್ಯದಲ್ಲಿ ಕಾಣುವ ಅಸ್ಪೃಶ್ಯತೆಯ ಸ್ವರೂಪವನ್ನು ಕುರಿತಂತೆ ವರದಿಗಳು ನನಗೆ ಬಂದುವು ಮತ್ತು ನಾನು ಅಲ್ಲಿಗೆ ಭೇಟಿಕೊಡುವಂತೆಯೂ ಅವರು ಬಯಸಿದರು. ಆಗ ನಾನು ಅವರಿಗೆ ಭೇಟಿಕೊಡುವ ಭರವಸೆಗಳನ್ನು ಕೊಟ್ಟೆನು. ಸ್ಥಳ ಪರೀಕ್ಷೆ ಮತ್ತು ವಿಚಾರಣೆಗಾಗಿ ಬೇರೆಕಡೆ ಹೋದಾಗ ಕೈಯಲ್ಲಿ ಸ್ವಲ್ಪ ಹಣವಿಲ್ಲದಿದ್ದರೆ ಸೂಕ್ತವಾದ ಕಾರ್ಯಕ್ರಮಗಳನ್ನು ರೂಪಿಸಲು ಸಾಧ್ಯವಾಗುವುದಿಲ್ಲವೆಂಬುದನ್ನು ಆಗ ನಾನು ಅರಿತೆನು. ಅಷ್ಟರಲ್ಲಿ ಕಾರ್ಯಕಾರಿ ಸಮಿತಿಯು ಅಲಹಾಬಾದಿನ "ದಿ ಇಂಡಿಪೆಂಡೆಂಟ್" ಮತ್ತು ಡೆಲ್ಲಿಯ ಉರ್ದು ದೈನಿಕ "ದಿ ಕಾಂಗ್ರೆಸ್" ಈ ಎರಡು ಪತ್ರಿಕೆಗಳಿಗೆ ಹಕಿಂ ಅಜಮಲ್‌ಖಾನ್ ಮತ್ತು ಡಾ. ಅನ್ಸಾರಿಯವರ ಸಲಹೆಯಂತೆ ಕ್ರಮವಾಗಿ ೨೫,೦೦೦ ಮತ್ತು ೧೦,೦೦೦ ರೂ.ಗಳ ಮಂಜೂರಾತಿಗೆ ಒಪ್ಪಿಗೆ ಕೊಟ್ಟಿದೆ ಎಂಬ ವಿಚಾರ ತಿಳಿಯಿತು. ಹಾಗಾದರೆ ಕಾಂಗ್ರೆಸ್ಸಿಗೆ ಅಷ್ಟೊಂದು ಹಣದ ಮುಗ್ಗಟ್ಟಿರಲಾದೆಂದರಿತು, ಅಸ್ಪೃಶ್ಯತಾ ಉಪ ಸಮಿತಿಗೆ ಅದರ ಆರಂಭದ ಖರ್ಚುಗಳಿಗಾಗಿ ಹತ್ತು ಸಾವಿರ ರೂ.ಗಳನ್ನು ಕೊಡುವಂತೆ ಅಧ್ಯಕ್ಷರಿಗೆ ಪತ್ರ ಬರೆದೆನು.

ಇದೆಲ್ಲ ಆದ ನಂತರ, ನಿಮ್ಮ ಪತ್ರದ ಸಂಖ್ಯೆ ೩೩೧ರ ಜೊತೆಯಲ್ಲಿ ಕಳುಹಿಸಿರುವ ಕಾರ್ಯಕಾರಿ ಸಮಿತಿಯ ಈ ಕೆಳಗಿನ ಠರಾವನ್ನು ಆಶ್ಚರ್ಯದಿಂದಲೇ ಓದಿದೆನು.

"ಸ್ವಾಮಿ ಶ್ರದ್ಧಾನಂದರು ದಲಿತ ವರ್ಗದವರನ್ನು ಕುರಿತು ಕಾರ್ಯಕ್ರಮಗಳನ್ನು ರಚಿಸಲು ಸ್ವಲ್ಪ ಮುಂಗಡ ಬೇಕೆಂದು ೧೯೨೨ನೆಯ ಜೂನ್ ೮ ರಂದು ಬರೆದ ಕಾಗದವನ್ನು ಓದಲಾಯಿತು. ಆ ಉದ್ದೇಶಕ್ಕಾಗಿ ಶ್ರೀಮಾನ್ ಗಂಗಾಧರ ದೇಶಪಾಂಡೆಯವರನ್ನು ಆ ಉಪ ಸಮಿತಿಯ ಸಂಚಾಲಕರಾಗಿ ನೇಮಿಸಿ, ಆದಷ್ಟು ಬೇಗ ಆ ಉಪಸಮಿತಿಯನ್ನು ಕರೆದು ಸ್ವಾಮಿ ಶ್ರದ್ಧಾನಂದರ ಕಾಗದವನ್ನು ಅದರಲ್ಲಿ ಮಂಡಿಬೇಕೆಂದು ನಿರ್ಣಯಿಸಿತು."

ಇದರಲ್ಲಿ ನನ್ನ ವಿವರಣೆಗೆ ನಿಲುಕದ ಮತ್ತೊಂದು ವಿಚಾರವೂ ಇದೆ. ನನ್ನ ಮೊದಲನೆಯ ಕಾಗದ ಸಂದಿದೆಯೆಂದು ತಿಳಿದ ಮೇಲೆ ನಾನು ಹರಿದ್ವಾರದಿಂದ ಮತ್ತೊಂದು ಕಾಗದವನ್ನು ೧೯೨೨ನೆಯ ಜೂನ್ ೩ ರಂದು ಬರೆದೆನು :

"ನನ್ನ ಪ್ರೀತಿಯ ಪಟೇಲರೆ, ನಾನು ನಾಡಿದ್ದು ಹರಿದ್ವಾರವನ್ನು ಬಿಟ್ಟು ಲಕ್ನೋವನ್ನು ಜೂನ್ ೬ ರಂದು ತಲುಪುತ್ತೇನೆ. ದಲಿತ ವರ್ಗದ ವಿಚಾರದಲ್ಲಿ ನನ್ನ ಮನಸ್ಸು ತವಕಗೊಂಡಿದೆ ಎಂಬ ವಿಚಾರ ನಿಮಗೆ ಇಷ್ಟರಲ್ಲಿ ಅರಿವಾಗಿರಬಹುದು. ರಚನಾತ್ಮಕ ಕಾರ್ಯದ ಈ ಅಂಶದ ಬಗ್ಗೆ ಪಂಜಾಬಿನಲ್ಲಿಯೂ ಗಮನಾರ್ಹವಾದ ಆಸಕ್ತಿ ನನಗೆ ಕಂಡುಬರುತ್ತಿಲ್ಲ. ಉತ್ತರ ಪ್ರದೇಶದಲ್ಲಂತೂ ಇದು ಬಹು ಪ್ರಯಾಸದ ಕೆಲಸ. ಇದರಲ್ಲಿ ಮತ್ತೊಂದು ಗಂಭೀರವಾದ ತೊಂದರೆಯಿದೆ.

ಬಾರ್ಡೋಲಿ ಕಾರ್ಯಕ್ರಮದ ನಾಲ್ಕನೆಯ ಐಟಂ ಪ್ರಕಾರ ಎಲ್ಲೆಲ್ಲಿ ಅಸ್ಪೃಶ್ಯರ ವಿಚಾರದಲ್ಲಿ ತುಂಬ ಪಕ್ಷಪಾತವಿದೆಯೋ ಅಲ್ಲಿ ಅಸ್ಪೃಶ್ಯರಿಗಾಗಿ ಪ್ರತ್ಯೇಕವಾದ ಸ್ಕೂಲು ಮತ್ತು ಬಾವಿಗಳನ್ನು ಕಾಂಗ್ರೆಸ್ ಖರ್ಚಿನಲ್ಲಿಯೇ ವ್ಯವಸ್ಥೆ ಮಾಡುವುದು ಎಂದು ಹೇಳಲಾಗಿದೆ. ಇದರಿಂದಾಗಿ ಅಸ್ಪೃಶ್ಯರ ವಿಚಾರದಲ್ಲಿ ಪಕ್ಷಪಾತಿಗಳಾದ ಅಥವಾ ದುರ್ಬಲ ಮನಸ್ಕರಾದ ಕಾಂಗ್ರೆಸ್ ಕಾರ್ಯಕರ್ತರಿಗೆ, ತಪ್ಪಿಸಿಕೊಳ್ಳಲು ಒಂದು ನೆಪ ದೊರೆತಂತಾಗಿ, ಅಸ್ಪೃಶ್ಯರನ್ನು ಸಾರ್ವಜನಿಕ ಬಾವಿಯಲ್ಲಿ ನೀರು ಸೇದಲು ಬಿಡುವಂತೆ ಸವರ್ಣ ಹಿಂದೂಗಳ ಮನ ಒಲಿಸುವ ಪ್ರಯತ್ನ ಪ್ರಗತಿ ಕಾಣದಂತಾಗಿದೆ. ನಾನು ತಿಳಿದಂತೆ ಬಿಜನೂರು ಜಿಲ್ಲೆಯಲ್ಲಿ ಅಸ್ಪೃಶ್ಯರು ಸಾರ್ವಜನಿಕ ಬಾವಿಗಳಿಂದ ಯಾವ ಅಡ್ಡಿಯೂ ಇಲ್ಲದೆ ನೀರು ಸೇದುತ್ತಿದ್ದರಂತೆ. ಬಾರ್ಡೋಲಿ ನಿರ್ಣಯದ ಈ ಹೊಸ ಅವಕಾಶದಿಂದಾಗಿ ಕೆಲವು ಕಡೆ ಇಲ್ಲದ ಸಮಸ್ಯೆಗಳು ಹುಟ್ಟಿಕೊಂಡಿವೆ. ನಾನು ಇತ್ತೀಚೆಗೆ ಅಂಬಾಲ ಕಂಟೋನ್‌ಮೆಂಟ್, ಲೂಧಿಯಾನ, ಬಟಾಲ, ಲಾಹೋರ್, ಅಮೃತಸರ ಮತ್ತು ಜಂಡಿಯಾಲಗಳಿಗೆ ಭೇಟಿಕೊಟ್ಟಾಗ ಅಲ್ಲಿಯವರು ಅಸ್ಪೃಶ್ಯರ ಸಮಸ್ಯೆಗಳನ್ನು ಪರಿಹರಿಸುವ ಕಾರ್ಯಗಳನ್ನು ಅಲಕ್ಷಿಸಿದ್ದು ಕಂಡುಬಂದಿತು. ದೆಹಲಿಯಲ್ಲಿ ಮತ್ತು ಅದರ ಸುತ್ತಮುತ್ತ ನಾನು ಅಧ್ಯಕ್ಷನಾಗಿರುವ ದಲಿತೋದ್ಧಾರ ಸಭೆಯವರು ಮೆಚ್ಚುವಂತಹ ಕಾರ್ಯ ಮಾಡಿದ್ದಾರೆಯೇ ಹೊರತು, ಕಾಂಗ್ರೆಸ್ಸಿಗರಲ್ಲ. ಬಾರ್ಡೋಲಿ ರಚನಾತ್ಮಕ ಕಾರ್ಯಕ್ರಮದಲ್ಲಿ ನನಗೆ ಬಹು ಪ್ರಮುಖವೆನಿಸಿದ, ನಾಲ್ಕನೆ, ಐಟಂನಲ್ಲಿ ಸೂಕ್ತ ರೀತಿಯ ತಿದ್ದುಪಡಿ ಮಾಡದ ಹೊರತು ಕಾಂಗ್ರೆಸ್ಸಿನ ಉದ್ದೇಶ ಸಾರ್ಥಕವಾಗುತ್ತದೆಂದು ನನಗನಿಸುವುದಿಲ್ಲ.

ಈ ಕೆಳಗಿನ ಸೂಚನೆಯನ್ನು ದಯವಿಟ್ಟು ಅಧ್ಯಕ್ಷರ ಮುಂದಿಡಿ, ಅದಕ್ಕೆ ಅವರ ಒಪ್ಪಿಗೆ ದೊರೆತರೆ ನಾನು ಅದನ್ನು ಮುಂದಿನ ಎ.ಐ.ಸಿ.ಸಿ. ಸಭೆಯಲ್ಲಿ ಮಂಡಿಸುತ್ತೇನೆ. ಬಾರ್ಡೋಲಿ ಕಾರ್ಯಕ್ರಮದ ನಾಲ್ಕನೆ ಐಟಂಗೆ ಬದಲಾಗಿ ಈ ಮುಂದಿನ ಟಿಪ್ಪಣಿಯನ್ನು ಸೇರಿಸಿ "ದಲಿತರ ಈ ಕೆಳಗಿನ ಬೇಡಿಕೆಗಳನ್ನು ಕೂಡಲೆ ಮನ್ನಿಸಬೇಕು. ಅವುಗಳಾವುವೆಂದರೆ

(ಅ) ಬೇರೆ ನಾಗರಿಕರಂತೆ ಅವರೂ ಒಂದೇ ಜಮಖಾನದ ಮೇಲೆ ಕೂಡುವ ಅವಕಾಶವಿದೆ

(ಆ) ಸಾರ್ವಜನಿಕರ ಬಾವಿಯಿಂದ ನೀರನ್ನು ಸೇದಲು ಅವರಿಗೂ ಅವಕಾಶವಿದೆ

(ಇ) ಅವರ ಮಕ್ಕಳಿಗೆ ರಾಷ್ಟ್ರೀಯ ಶಾಲೆ, ಕಾಲೇಜುಗಳಿಗೆ ಸೇರುವ ಅವಕಾಶವಿದ್ದು ಉತ್ತಮ ಜಾತಿಯ ಮಕ್ಕಳೊಂದಿಗೆ ಬೆರೆತು ಓಡಾಡುವ ಸ್ವಾತಂತ್ರವಿರುತ್ತದೆ." ಎ.ಐ.ಸಿ.ಸಿ.ಯ ಸದಸ್ಯರಿಗೆ ಈ ಟಿಪ್ಪಣಿಯ ಮಹತ್ವವನ್ನು ಚೆನ್ನಾಗಿ ಮನವರಿಕೆ ಮಾಡಿಕೊಡಬೇಕೆಂಬುದು ನನ್ನ ಉದ್ದೇಶ. ದಲಿತವರ್ಗದವರು ಉನ್ನತ ಜಾತಿಯವರ ದಬ್ಬಾಳಿಕೆಯೊಂದಿಗೆ ನೇರ ಹೋರಾಟಕ್ಕಿಳಿದ ನಿದರ್ಶನಗಳನ್ನು ನಾನು ಬಲ್ಲೆನಾದ್ದರಿಂದ ಈ ಮೇಲಿನ ಅವರ ಬೇಡಿಕೆಗಳು ಕೈಗೂಡದಿದ್ದರೆ ಅವರು ನೌಕರಶಾಹಿಯ ದಬ್ಬಾಳಿಕೆಗೆ ಬಲಿಯಾಗುವ ಸಾಧ್ಯತೆಯಿದೆ. ನನ್ನ ಮೊದಲನೆಯ ಸೂಚನೆಗೆ ಜೂನ್ ೭ರ ಲಕ್ನೋ ಎ.ಐ.ಸಿ.ಸಿ. ಸಭೆಯಲ್ಲಿ ಒಪ್ಪಿಗೆ ದೊರೆತ ಮೇಲೆ ಬಾರ್ಡೋಲಿ ಕಾರ್ಯಕ್ರಮದ ನಾಲ್ಕನೆ ಐಟಂಗೆ ನಾನು ಸೂಚಿಸಿರುವ ತಿದ್ದುಪಡಿಯನ್ನು ಮಂಡಿಸಲು ನನಗೆ ಅವಕಾಶಬೇಕೆಂದು ನಾನು ಶ್ರೀಮಾನ್ ಪಟೇಲರನ್ನು ಕೇಳಿದೆನು. ಕಾರ್ಯಕಾರಿ ಸಮಿತಿಯು ಉಪ ಸಮಿತಿಯ ಒಪ್ಪಿಗೆ ಪಡೆಯಬೇಕಾದ್ದರಿಂದ ಅದರ ಮಂಡನೆಗೆ ಈಗ ಒತ್ತಾಯ ಮಾಡಬಾರದೆಂದು ಅವರು ನನಗೆ ಸೂಚಿಸಿದರು. ಅದಕ್ಕೆ ನಾನು ಒಪ್ಪಿದೆ. ಆದರೆ ನನ್ನ ಸೂಚನೆಯನ್ನು ಅಸ್ಪೃಶ್ಯರ ಉಪ ಸಮಿತಿಗೆ ಕಳುಹಿಸಿದ ಕಾರ್ಯಕಾರಿ ಸಮಿತಿಯ ನಿರ್ಣಯದ ಪ್ರತಿ ನನಗೆ ಬಂದಿಲ್ಲ.

ಅಸ್ಪೃಶ್ಯರ ಸಮಸ್ಯೆ ದೆಹಲಿ ಮತ್ತು ಅದರ ಸಮೀಪದಲ್ಲಿ ಬಹಳ ಗಂಭೀರಕರವಾಗಿರುವುದರಿಂದ ನಾನು ಈ ಕೂಡಲೇ ಅದರ ಪರಿಹಾರಕ್ಕಾಗಿ ಶ್ರಮಿಸಬೇಕಾಗಿದೆ. ಅಸ್ಪೃಶ್ಯತೆಯನ್ನು ಮೂಲೋತ್ಪಾಟನ

ಮಾಡಲು ಬೇಕಾದ ಕಾರ್ಯಕ್ರಮಗಳನ್ನು ಕಾಂಗ್ರೆಸ್ಸು ಅನುಸರಿಸುವ ಮುನ್ನ ಕಾರ್ಯಕಾರಿ ಸಮಿತಿಯು ಅನೇಕ ರೀತಿಯ ರಾಜಕೀಯ ಪರಿಸ್ಥಿತಿಗಳನ್ನು ಗಮನಿಸಬೇಕಾಗುತ್ತದೆ. ಆದ್ದರಿಂದ ಉಪ ಸಮಿತಿಯು ಯಾವ ಪೂರ್ವಸಿದ್ಧತೆ ಇಲ್ಲದೆ ಈ ಕಾರ್ಯಕ್ಕೆ ಕೈಹಾಕುವಂತಿಲ್ಲ. ಇಂತಹ ಪರಿಸ್ಥಿತಿಯಲ್ಲಿ, ನನ್ನಿಂದ ಈ ಉಪ ಸಮಿತಿಗೆ ಯಾವ ಪ್ರಯೋಜನವೂ ಆಗುವಂತಿಲ್ಲವಾದ್ದರಿಂದ ನಾನು ಆ ಸಮಿತಿಗೆ ರಾಜೀನಾಮೆ ಕೊಡುತ್ತಿದ್ದೇನೆ.

ದೆಹಲಿ, ಜನವರಿ ೩೦

ತಮ್ಮ ವಿಶ್ವಾಸಿ,
ಶ್ರದ್ಧಾನಂದ ಸನ್ಯಾಸಿ

**ಕಾರ್ಯದರ್ಶಿಗಳ ಉತ್ತರ**

ಪ್ರೀತಿಯ ಸ್ವಾಮೀಜಿಯವರಿಗೆ,

ತಮ್ಮ ೧೯೨೨ನೆಯ ಜೂನ್ ತಿಂಗಳ ಪತ್ರ ಅದೇ ತಿಂಗಳು ೩೦ರಂದು ನಮ್ಮ ಆಫೀಸು ತಲುಪಿ, ಬೊಂಬಾಯಿಯಲ್ಲಿ ನಡೆದ ಕಾರ್ಯಕಾರಿ ಸಮಿತಿಯ ಒಪ್ಪಿಗೆಯೊಂದಿಗೆ ಈಗ ನನಗೆ ಬಂದಿದೆ, ಇದರ ವಿಚಾರದಲ್ಲಿ ಇರುವ ನಿಜಸ್ಥಿತಿಯನ್ನು ತಮಗೆ ವಿವರಿಸಿ, ತಾವು ದಲಿತರ ಉಪ ಸಮಿತಿಗೆ ನೀಡಿರುವ ರಾಜಿನಾಮೆಯನ್ನು ಹಿಂತೆಗೆದುಕೊಳ್ಳಬೇಕೆಂದು ಪ್ರಾರ್ಥಿಸಲು ನನಗೆ ವಹಿಸಲಾಗಿದೆ.

ನಾನು ಜೈಲಿನಿಂದ ಬಿಡುಗಡೆಯಾಗುವ ಮುನ್ನ ನಡೆದ ಘಟನೆಗಳ ನೇರವಾದ ಅರಿವು ನನಗಿಲ್ಲವೆಂಬುದನ್ನು ತಾವು ಬಲ್ಲಿರಿ. ಆದರೆ ಶ್ರೀಮಾನ್ ದೇಶಪಾಂಡೆಯವರನ್ನು ಉಪಸಮಿತಿಯ ಸಂಚಾಲಕರನ್ನಾಗಿ ನಿಯೋಜಿಸಿ ೧೯೨೨ನೇ ಜೂನ್ ೧೦ರಂದು ನಿರ್ಣಯ ಮಾಡಿದ ಕಾರ್ಯಕಾರಿ ಸಮಿತಿಯ ಸಭೆಯಲ್ಲಿ, ನಾನು ಹಾಜರಿದ್ದೆ. ಆಗ ನಿರ್ದಿಷ್ಟವಾಗಿ, ಯಾವ ಒಬ್ಬ ಸದಸ್ಯರೂ ಆ ಸಮಿತಿಯ ಸಂಚಾಲಕರಾಗಿರತಕ್ಕದೆಂದು ಅಲ್ಲಿ ಹೇಳಿರಲಿಲ್ಲವಾದ್ದರಿಂದ, ಆ ಸಮಿತಿಗೆ ಹಣವನ್ನು ಕೊಡಲು ಇಂತಹ ನೇಮಕಾತಿ ಆವಶ್ಯಕವಾಗಿದ್ದರಿಂದ, ಇಂತಹ ಠರಾವನ್ನು ಮಾಡಲಾಯಿತು. ಶ್ರೀಮಾನ್ ದೇಶಪಾಂಡೆಯವರನ್ನು ಸಂಚಾಲಕರಾಗಿ ನೇಮಿಸಿ ಅವರ ಪೂರ್ವಭಾವಿ ಖರ್ಚುಗಳಿಗಾಗಿ ೫೦೦ ರೂಪಾಯಿಗಳನ್ನು ಮಂಜೂರು ಮಾಡಲಾಯಿತು. ಪ್ರಮಾದವಶಾತ್ ಆ ಠರಾವಿನಲ್ಲಿ ಐದುನೂರು ರೂಪಾಯಿ ಮಂಜೂರಾದ ಮಾತು ಬಿಟ್ಟುಹೋಗಿದೆ. ಕಾರ್ಯಕಾರಿ ಸಮಿತಿಯು ಈ ರೀತಿ ಠರಾವು ಮಾಡಲು ಕಾರಣ, ನಾನು ಈ ಮೇಲೆ ವಿವರಿಸಿರುವುದೇ ಹೊರತು ಅಸ್ಪೃಶ್ಯತಾ ಕಾರ್ಯಕ್ರಮಕ್ಕೆ ೧೦,೦೦೦ ರೂಪಾಯಿಗಳನ್ನು ಕೊಡಬಾರದು ಎಂಬುದಲ್ಲ ಎಂಬ ಅಂಶಗಳನ್ನು ತಾವು ಗಮನಿಸಬೇಕು. ಈ ಉಪ ಸಮಿತಿಗೆ ವಹಿಸಿರುವ ಕಾರ್ಯಕ್ರಮ ಮತ್ತು ತಾವು ಅದರ ವಿಚಾರದಲ್ಲಿ ಕೊಟ್ಟಿರುವ ಅಮೂಲ್ಯ ಸಲಹೆಗಳನ್ನು ಕಾರ್ಯಕಾರಿ ಸಮಿತಿಯು ಗೌರವಿಸುವುದಕ್ಕಿಂತಲೂ ಹೊರತಾದ ಬೇರೆ ಮಾತು ಅಲ್ಲಿಲ್ಲ. ನಮ್ಮ ಪತ್ರವನ್ನು ಹಿಂದಿನ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಮಂಡಿಸಿದಾಗ ೫೦೦ ರೂಪಾಯಿ ಮಂಜೂರಾತಿಯ ವಿಚಾರದಲ್ಲಿ ಆಗಿದ್ದ ಲೋಪವನ್ನು ಸರಿಪಡಿಸಲಾಯಿತು ಮತ್ತು ಈ ವಿಚಾರವನ್ನು ಕುರಿತು ತಮ್ಮೊಂದಿಗೆ ವ್ಯವಹರಿಸಲು ನನಗೆ ಅಪ್ಪಣೆ ಮಾಡಲಾಯಿತು. ಅಸ್ಪೃಶ್ಯತೆಯ ವಿಚಾರದಲ್ಲಿ ತಮಗಿರುವ ವಿಶೇಷ ಜ್ಞಾನದ ಲಾಭ ಈ ಉಪ ಸಮಿತಿಗೆ ಇಲ್ಲವಾದರೆ ಅದರಿಂದ ತುಂಬಾ ನಷ್ಟವಾಗುತ್ತದೆಂಬ ಕಾರಣದಿಂದ, ತಾವು ಸಾರ್ವಜನಿಕ ಹಿತವನ್ನು

ಗಮನಿಸಿ, ಉಪಸಮಿತಿಗೆ ತಾವು ನೀಡಿರುವ ರಾಜೀನಾಮೆಯನ್ನು ಹಿಂತೆಗೆದುಕೊಳ್ಳುವ ತಮ್ಮ ನಿರ್ಣಯವನ್ನು ಅಲಹಾಬಾದಿನ ನನ್ನ ಆಫೀಸಿಗೆ ತಂತಿ ಮೂಲಕ ಕಳುಹಿಸಬೇಕೆಂದು ಬಯಸುತ್ತೇನೆ. ನಿಮ್ಮ ಉಪಸಮಿತಿಯು ಮಾಡಿರುವ ಎಲ್ಲ ನಿರ್ಣಯಗಳನ್ನು ಕಾರ್ಯಕಾರಿ ಸಮಿತಿಯು ಸೂಕ್ತ ರೀತಿಯಲ್ಲಿ ಮನ್ನಿಸುವುದೆಂದು, ಮತ್ತೊಮ್ಮೆ ಹೇಳುವ ಆವಶ್ಯಕತೆಯೇ ಇಲ್ಲ.

ಬೇರೆ ಬಾವಿ ಮತ್ತು ಸ್ಕೂಲುಗಳನ್ನು ಕುರಿತಂತೆ ಕಾರ್ಯಕಾರಿ ಸಮಿತಿಯ ಮಾಡಿರುವ ನಿರ್ಣಯವನ್ನು ತಿದ್ದುಪಡಿ ಮಾಡಲು ಸೂಕ್ತವಾದ ಮಾರ್ಗವೆಂದರೆ, ಉಪಸಮಿತಿಯವರು ಆ ಬದಲಾವಣೆಯನ್ನು ಕುರಿತು ಶಿಫಾರಸು ಮಾಡಿದರೆ ಕಾರ್ಯಕಾರಿ ಸಮಿತಿಯು ಸುಲಭವಾಗಿ ಒಪ್ಪುತ್ತದೆ.

ಅಲಹಾಬಾದಿನ "ದಿ ಇಂಡಿಪೆಂಡೆಂಟ್" ಮತ್ತು ದೆಹಲಿಯ "ದಿ ಕಾಂಗ್ರೆಸ್" ಪತ್ರಿಕೆಗಳಿಗೆ ನೀಡಿದ ಧನಸಹಾಯದ ವಿಚಾರದಲ್ಲಿ ನಿಮಗೆ ತಪ್ಪು ತಿಳುವಳಿಕೆಯಿರುವಂತಿದೆ. ಮೊದಲನೆಯದರ ವಿಚಾರದಲ್ಲಿ ನಡೆದಿರುವುದೇನೆಂದರೆ ಯು. ಪಿ. ಪ್ರಾಂತೀಯ ಕಾಂಗ್ರೆಸ್ ಸಮಿತಿಗೆ ಈ ಮೊದಲೆ ಮಂಜೂರಾಗಿರುವ ಹಣದಲ್ಲಿ ಆ ಪ್ರಾಂತೀಯ ಕಾಂಗ್ರೆಸ್ಸಿನ ಬಯಕೆಯಂತೆ ೨೫,೦೦೦ ರೂಪಾಯಿಗಳನ್ನು "ನ್ಯಾಷನಲಿಸ್ಟ್ ಜರ್ನಲ್ ಲಿಮಿಟೆಡ್"ಗೆ ಕೊಡಲಾಗಿದೆ ಮತ್ತು ಎರಡನೆಯದಕ್ಕೆ ಯಾವ ರೀತಿಯ ಸಾಲವನ್ನೂ ಮಂಜೂರು ಮಾಡಿಲ್ಲ.

ಬೊಂಬಾಯಿ<br>೨೩ನೆಯ ಜುಲೈ ೧೯೨೨

ತಮ್ಮ ವಿಶ್ವಾಸಿ,<br>**ಮೋತಿಲಾಲ್ ನೆಹರು**<br>ಕಾರ್ಯದರ್ಶಿ

## ಸ್ವಾಮೀಜಿಯವರ ಪ್ರತ್ಯುತ್ತರ

ನನ್ನ ಪ್ರೀತಿಯ ಮೋತಿಲಾಲ್‌ಜಿಯವರೇ,

ಅಸ್ಪೃಶ್ಯತಾ ಉಪ ಸಮಿತಿಗೆ ನಾನು ಕೊಟ್ಟ ರಾಜೀನಾಮೆಯನ್ನು ಕುರಿತಂತೆ, ನೀವು ಬೊಂಬಾಯಿನಿಂದ ೨೩ನೆಯ ಜೂನ್ ೧೯೨೨ ರಂದು ಬರೆದ ಕಾಗದ ತಲುಪಿತು. ನಾನು ನನ್ನ ಮೊದಲನೇ ಕಾಗದದಲ್ಲಿ ಸೂಚಿಸಿದ ಕೆಲವು ಸತ್ಯಾಂಶಗಳನ್ನು ಪೂರ್ಣವಾಗಿ ಕಡೆಗಣಿಸಿರುವುದರಿಂದ ನಾನು ನನ್ನ ರಾಜೀನಾಮೆಯನ್ನು ಪುನಃ ಪರಿಶೀಲಿಸಲು ಸಿದ್ಧನಿಲ್ಲ ಎಂಬುದನ್ನು ದುಃಖದಿಂದ ಹೇಳುತ್ತೇನೆ.

೧) ಎ.ಐ.ಸಿ.ಸಿ.ಯ ಮೂಲನಿಧಿಯಿಂದ ಒಂದು ಲಕ್ಷ ರೂಪಾಯಿಯನ್ನು ಈ ಉದ್ದೇಶಕ್ಕೆ ನಗದಾಗಿ ಕೊಡುವಂತೆ ನಾನು ಅಂದು ಸೂಚಿಸಲಿಲ್ಲವೆ ಎಂಬ ವಿಚಾರವನ್ನು, ಶ್ರೀಮಾನ್ ರಾಜಗೋಪಾಲಾಚಾರಿಯವರನ್ನು ಕೇಳಿ ತಿಳಿದುಕೊಳ್ಳಿ ಮತ್ತು ಅಸ್ಪೃಶ್ಯತಾ ಉಪ ಸಮಿತಿಯು ರೂಪಿಸಿದ ಕಾರ್ಯಕ್ರಮವನ್ನು ಕಾರ್ಯಕಾರಿ ಸಮಿತಿಯು ಒಪ್ಪಿದ ಕೂಡಲೆ, ಅದಕ್ಕೆ ಬೇಕಾದ ಹಣವನ್ನು ಅಸ್ಪೃಶ್ಯತಾ ಸಮಿತಿಗೆ ಬಿಡುಗಡೆ ಮಾಡತಕ್ಕದ್ದು ಎಂಬ ತಿದ್ದುಪಡಿಯನ್ನು ಅವರು ಸೂಚಿಸಲಿಲ್ಲವೇ ಎಂಬ ವಿಚಾರವನ್ನು ಅವರಿಂದ ತಿಳಿದುಕೊಳ್ಳಿ ಮತ್ತು ಅಧ್ಯಕ್ಷರು ನನ್ನನ್ನು ಪಕ್ಕಕ್ಕೆ ಕರೆದು ಸಮಿತಿಯ ಹಣಕಾಸಿನ ಸ್ಥಿತಿಯನ್ನು ವಿವರಿಸಿದ ಮೇಲೆ ನಾನು ಈ ತಿದ್ದುಪಡಿಯನ್ನು ಒಪ್ಪಲಿಲ್ಲವೆ ಎಂಬ ವಿಚಾರವನ್ನು ಅವರಿಂದ ತಿಳಿದುಕೊಳ್ಳಿ. ನಿಜ ಸ್ಥಿತಿ

ಇದಾದ ಮೇಲೆ ಮೂಲ ಠರಾವಿನೊಂದಿಗೆ ಈ ತಿದ್ದುಪಡಿಯೂ ಏಕೆ ಸೇರಿಬರಲಿಲ್ಲ?

೨) ಎ.ಐ.ಸಿ.ಸಿ. ಸದಸ್ಯರು ನನ್ನನ್ನು ಆ ಉಪಸಮಿತಿಗೆ ಸಂಚಾಲಕರಾಗಿ ಸೂಚಿಸಿದಾಗ ಶ್ರೀಮಾನ್ ವಿಠಲಭಾಯಿ ಜಿ. ಪಟೇಲರು "ಸ್ವಾಮಿ ಶ್ರದ್ಧಾನಂದರ ಹೆಸರು ಮೊದಲನೆಯದಾದ್ದರಿಂದ ಸಹಜವಾಗಿಯೇ ಅವರು ಸಂಚಾಲಕರಾಗುತ್ತಾರಾದ್ದರಿಂದ, ಅದಕ್ಕಾಗಿ ಮತ್ತೊಂದು ಠರಾವನ್ನು ಮಾಡುವುದು ಬೇಡ" ಎಂದು ಹೇಳಲಿಲ್ಲವೇ ಎಂಬ ವಿಚಾರವನ್ನು ಅವರಿಂದ ತಿಳಿಯಿರಿ. ನಾನು ಈ ವಿಚಾರವಾಗಿ ಡಾ. ಅನ್ಸಾರಿಯವರನ್ನು ಕೇಳಿದಾಗ ಅವರು ನನ್ನನ್ನು ಸಂಚಾಲಕರಾಗಿ ನಿಯೋಜಿಸಲಾಗಿದೆ ಎಂಬುದಾಗಿ ೧೯೨೨ನೆಯ ಜೂನ್ ೧೭ರ ಕಾಗದದಲ್ಲಿ ತಿಳಿಸಿದರು. ಡಾ. ಅನ್ಸಾರಿಯವರು ನಿಮ್ಮೊಂದಿಗಿರುವುದರಿಂದ ಅವರಿಂದ ಅದರ ಸತ್ಯತೆಯನ್ನು ತಿಳಿಯಿರಿ. ಶ್ರೀಮಾನ್ ಪಟೇಲರು ಈ ವಿಚಾರಗಳನ್ನೆಲ್ಲಾ ಮರೆತಿರಲಾರರೆಂದು ನಾನು ತಿಳಿಯುತ್ತೇನೆ.

೩) ಇಲ್ಲಿನ ಅಸ್ಪೃಶ್ಯರ ನಡುವಿನ ಕೆಲಸ ಬಹಳ ಜರೂರಿನದಾದ್ದರಿಂದ ನಾನು ಅದನ್ನು ಯಾವ ಕಾರಣದಿಂದಲೂ ನಿಧಾನ ಮಾಡಲಾರೆ. ದಯವಿಟ್ಟು ಮುಂದಿನ ಕಾರ್ಯಕಾರಿ ಸಮಿತಿಯ ಸಭೆಯಲ್ಲಿ ನನ್ನ ರಾಜೀನಾಮೆಯನ್ನು ಒಪ್ಪಿಬಿಡಿ ಮತ್ತು ಅದರಿಂದ ನಾನು ಅಸ್ಪೃಶ್ಯತಾ ನಿವಾರಣೆಗಾಗಿ ನನಗೆ ಸೂಕ್ತ ಕಂಡ ರೀತಿಯಲ್ಲಿ ಕಾರ್ಯಮಾಡಲು ಸ್ವತಂತ್ರನಾಗುತ್ತೇನೆ. ಹಿಂದಿನ ಜುಲೈ ಕೊನೆಯಲ್ಲಿ ನಾನಿದ್ದ ಸ್ಥಿತಿ ಇದು. ನಾನು ಅಮೃತಸರ ಮತ್ತು ಮೈನವಾಲಿ ಜೈಲಿನಲ್ಲಿದ್ದಾಗ ನಾನು ಸಂಗ್ರಹಿಸಿದ ವಿಷಯಗಳಿಂದಾಗಿ ಹಿಂದೂ ಸಮಾಜದಲ್ಲಿ ಅಸ್ಪೃಶ್ಯತಾ ನಿವಾರಣೆ ಮತ್ತು ಪುರಾತನ ಆರ್ಯ ಸಂಸ್ಕೃತಿಯಲ್ಲಿ ಸೂಚಿಸಿರುವಂತೆ ಬ್ರಹ್ಮಚರ್ಯಪಾಲನೆ ಇವು ಆಗದ ಹೊರತು ಕಾಂಗ್ರೆಸ್ ಆಗಲಿ ಅಥವಾ ಯಾವುದೇ ರಾಷ್ಟ್ರಪ್ರೇಮವುಳ್ಳ ಸಂಸ್ಥೆಯಿಂದಾಗಲಿ, ಸ್ವರಾಜ್ಯ ಸ್ಥಾಪನೆ ಯಾಗಲಾರದೆಂಬ ನನ್ನ ನಂಬಿಕೆ ಈಗ ಸದೃಢಗೊಂಡಿದೆ. ಸ್ವರಾಜ್ಯ ಸ್ಥಾಪನೆಯಾಗದೆ ರಾಷ್ಟ್ರದ ಆತ್ಮ ಸಾಕ್ಷಾತ್ಕಾರ ಮತ್ತು ಪೌರುಷಯುಕ್ತವಾದ ಅನುಭವಗಳು ಲಭಿಸುವುದಿಲ್ಲವಾದ್ದರಿಂದ ಸನ್ಯಾಸಿಯಾದ ನಾನು ನನ್ನ ಉಳಿದ ಜೀವನವನ್ನು ಬ್ರಹ್ಮಚರ್ಯಸಾಧನೆ ಮತ್ತು ರಾಷ್ಟ್ರಐಕ್ಯತೆಗಾಗಿ ವಿನಿಯೋಗಿಸುತ್ತೇನೆ.

ದೆಹಲಿ                                                                 ತಮ್ಮ ವಿಶ್ವಾಸಿ,

೨೩ ಜುಲೈ ೧೯೨೨                                                    **ಶ್ರದ್ಧಾನಂದ ಸನ್ಯಾಸಿ**

ಅಸ್ಪೃಶ್ಯರ ಉದ್ಧಾರದ ಕಾರ್ಯಗಳಲ್ಲಿ ಕಾಂಗ್ರೆಸ್ಸಿಗರಿಗಿದ್ದ ಆಸಕ್ತಿ ಎಷ್ಟೆಂಬುದನ್ನು ಇದು ತೋರಿಸುತ್ತದೆ.

## II

ಇದಿಷ್ಟು ಕಾಂಗ್ರೆಸ್‌ನಿಂದಾದ ನೇರವಾದ ಸ್ವಯಂಸೇವೆ. ಅಸ್ಪೃಶ್ಯರು ತಮ್ಮವರ ಉದ್ಧಾರಕ್ಕಾಗಿ ಮಾಡುತ್ತಿದ್ದ ಪ್ರಯತ್ನಗಳಿಗೆ ಕಾಂಗ್ರೆಸ್ಸಿಗರು ಅಥವಾ ಶ್ರೀಮಾನ್ ಗಾಂಧಿಯವರಿಂದ ಮತ್ತು ಕಾಂಗ್ರೆಸ್ಸಿನಿಂದ ದೊರೆತ ನೆರವು ಯಾವುದು? ಇಷ್ಟರಲ್ಲಿ ಅಸ್ಪೃಶ್ಯರೂ ಹೋರಾಟಕ್ಕಿಳಿದಿದ್ದರು. ಸಾಮಾಜಿಕ ಮತ್ತು ಸಾರ್ವಜನಿಕ ಹಕ್ಕುಗಳಿಗಾಗಿ ಅವರು ಹಿಂದೂಗಳೊಂದಿಗೆ ಅಸಹಕಾರಕ್ಕಿಳಿದಿದ್ದರು. ಈ ವೇಳೆಗೆ ಬೊಂಬಾಯಿ ಪ್ರಾಂತ್ಯದ ಅಸ್ಪೃಶ್ಯರು ಮಹಾಡ್ ನಗರದಲ್ಲಿ ಸಾರ್ವಜನಿಕ ಕೆರೆಯಿಂದ ನೀರನ್ನು ತರುವ ಮತ್ತು ನಾಸಿಕದಲ್ಲಿ ಹಿಂದೂ ದೇವಾಲಯಕ್ಕೆ ಪ್ರವೇಶ ಮಾಡುವ ಹಕ್ಕಿಗಾಗಿ ಸತ್ಯಾಗ್ರಹ ಹೂಡಿದ್ದರು. ಸವರ್ಣ ಹಿಂದೂಗಳಿಗೆ ವಿರೋಧವಾಗಿ

ಅಸ್ಪೃಶ್ಯರು ನಡೆಸಿದ ಈ ಸತ್ಯಾಗ್ರಹವನ್ನು ಶ್ರೀಮಾನ್ ಗಾಂಧಿಯವರು ಹೇಗೆ ಗಮನಿಸಿದರು? ಶ್ರೀಮಾನ್ ಗಾಂಧಿಯವರು ಇದನ್ನು ಬಹು ವಿಲಕ್ಷಣ ರೀತಿಯಿಂದ ನೋಡಿದರು ಎಂದರೆ ಸಾಕು ಮತ್ತು ಅದಕ್ಕಿಂತ ಹೆಚ್ಚು ಹೇಳುವುದು ಬೇಡ.

ಅಸ್ಪೃಶ್ಯರು ಸವರ್ಣ ಹಿಂದೂಗಳ ಮೇಲೆ ನಡೆಸಿದ ಈ ಸತ್ಯಾಗ್ರಹವನ್ನು ಶ್ರೀಮಾನ್ ಗಾಂಧಿಯವರು ಖಂಡಿಸಿದರು. ಅವರು ಅದಕ್ಕೆ ಉತ್ತೇಜನ ಕೊಡಲಿಲ್ಲ. ಆದರೆ ಈ ವಿಚಾರ ಭೇದದಲ್ಲಿ ಅಸ್ಪೃಶ್ಯರು ಅತ್ಯಂತ ತರ್ಕಬದ್ಧವಾಗಿದ್ದರು. ಭಾರತ ಸ್ವಾತಂತ್ರ್ಯವನ್ನು ಗಳಿಸಲು ಹಿಂದೂಗಳು ಬ್ರಿಟಿಷರ ವಿರುದ್ಧ ಸತ್ಯಾಗ್ರಹದ ಅಸ್ತ್ರವನ್ನು ಬಳಸುವುದು ಶ್ರೀಮಾನ್ ಗಾಂಧಿಯ ದೃಷ್ಟಿಯಲ್ಲಿ ನ್ಯಾಯಸಮ್ಮತವೆಂದಾದರೆ, ಅಸ್ಪೃಶ್ಯರು ತಮ್ಮ ಬಿಡುಗಡೆಗಾಗಿ ಸವರ್ಣ ಹಿಂದೂಗಳ ಎದುರು ಸತ್ಯಾಗ್ರಹ ಮಾರ್ಗವನ್ನು ಅನುಸರಿಸುವುದು ಏಕೆ ನ್ಯಾಯಸಮ್ಮತವೆನಿಸುವುದಿಲ್ಲ ಎಂಬುದು ಅಸ್ಪೃಶ್ಯರ ವಾದ. ಈ ವಾದ ಎಷ್ಟೇ ಚೆನ್ನಾಗಿ ಕಂಡರೂ, ಶ್ರೀಮಾನ್ ಗಾಂಧಿಗೆ ಅದು ಸಮ್ಮತವೆನಿಸಲಿಲ್ಲ. ಅಸ್ಪೃಶ್ಯರ ಈ ವಾದವನ್ನು ಅವರು ತಮ್ಮ ವಾದದಿಂದ ಎದುರಿಸಲು ಯತ್ನಿಸಿದರು. ಗಾಂಧೀಜಿಯವರ ಪ್ರಕಾರ ಅಸ್ಪೃಶ್ಯತೆ ಎಂಬುದು ಸವರ್ಣ ಹಿಂದೂಗಳು ಮಾಡಿದ ಪಾಪದ ಫಲ. ಹಿಂದೂಗಳು ತಮ್ಮ ಪಾಪಕ್ಕಾಗಿ ಪ್ರಾಯಶ್ಚಿತ್ತವನ್ನು ಅನುಭವಿಸಬೇಕು. ಆದ್ದರಿಂದ ಅವರು ಸತ್ಯಾಗ್ರಹವನ್ನಾಚರಿಸಿ ಅಸ್ಪೃಶ್ಯತೆಯನ್ನು ನಿರ್ಮೂಲ ಮಾಡಬೇಕು. ಸತ್ಯಾಗ್ರಹವನ್ನು ಅಸ್ಪೃಶ್ಯರು ಮಾಡಬೇಕಾಗಿಲ್ಲ, ಏಕೆಂದರೆ ಅವರು ಪಾಪಿಗಳಲ್ಲ. ಅಸ್ಪೃಶ್ಯರ ವಿರುದ್ಧ ಸವರ್ಣ ಹಿಂದೂಗಳು ಈ ಪಾಪವನ್ನು ಮಾಡಿದ್ದಾರೆ. ಇದು ಅರಿಸ್ಟಾಟಲ್‌ನ ತರ್ಕವಲ್ಲ. ಇದು ಮಹಾತ್ಮರ ತರ್ಕ ಅಥವಾ ಕುತರ್ಕಕ್ಕೆ ಮತ್ತೊಂದು ಹೆಸರು. ಮಹಾತ್ಮರ ಈ ತರ್ಕ ಕೇವಲ ಅಸಂಬದ್ಧವಾದದ್ದು ಎಂಬುದು ಸುಲಭವೇದ್ಯ. ಇದಕ್ಕೆ ಅಸ್ಪೃಶ್ಯರು ಕೊಟ್ಟ ಉತ್ತರವೇನೆಂದರೆ ಶ್ರೀಮಾನ್ ಗಾಂಧಿಯವರ ದೃಷ್ಟಿಯಲ್ಲಿ ಸತ್ಯಾಗ್ರಹ ಎಂಬುದು ಪಾಪಿಗಳು ತಮ್ಮ ಪಾಪಕ್ಕೆ ಮಾಡುವ ಪ್ರಾಯಶ್ಚಿತ್ತ ಎಂದಾದರೆ, ಬ್ರಿಟಿಷರ ಎದುರು ಹಿಂದೂಗಳು ಸತ್ಯಾಗ್ರಹ ಮಾಡುವುದು ಯಾವ ನ್ಯಾಯ? ಬ್ರಿಟಿಷರ ಸಾಮ್ರಾಜ್ಯಶಾಹಿ ಎಂಬುದು ಬ್ರಿಟಿಷರು ಹಿಂದೂ ದೇಶಕ್ಕೆ ಮಾಡುತ್ತಿರುವ ಒಂದು ಪಾಪದ ಕೆಲಸವಾದ್ದರಿಂದ, ಬ್ರಿಟಿಷರು ತಮ್ಮ ಪಾಪಕ್ಕಾಗಿ ಸತ್ಯಾಗ್ರಹ ಮಾಡಬೇಕೇ ಹೊರತು, ಭಾರತೀಯರಲ್ಲ. ಅಸ್ಪೃಶ್ಯರು ಮಹಾತ್ಮರ ತರ್ಕವನ್ನು ತಮ್ಮ ತರ್ಕದಿಂದ ಸೋಲಿಸಿದರು. ಸವರ್ಣ ಹಿಂದೂಗಳ ವಿರುದ್ಧ ಅಸ್ಪೃಶ್ಯರು ನಡೆಸಿದ ಸತ್ಯಾಗ್ರಹದ ವಿಚಾರದಲ್ಲಿ ಶ್ರೀಮಾನ್ ಗಾಂಧಿಯವರಿಗೆ ಯಾವುದೋ ದೃಷ್ಟಿದೋಷ ಅಥವಾ ತಾರ್ಕಿಕ ದೋಷವಿದೆ ಅಥವಾ ಅಪ್ರಾಮಾಣಿಕತೆಯಿದೆ ಎಂಬುದು ಸ್ಪಷ್ಟವಾಯಿತು. ಆದರೆ ಶ್ರೀಮಾನ್ ಗಾಂಧಿಯವರು ತಳೆದ ಈ ವಿರುದ್ಧದ ನಿಲುವಿನಿಂದ ಅವರನ್ನು ಬದಲಿಸಲು ಅಸ್ಪೃಶ್ಯರಿಗೆ ಸಾಧ್ಯವಾಗಲಿಲ್ಲ.

ಅಸ್ಪೃಶ್ಯರು ಸವರ್ಣ ಹಿಂದೂಗಳ ಮೇಲೆ ಮಹಡ್ ಮತ್ತು ನಾಸಿಕ್‌ನಲ್ಲಿ ಹಾಗೂ ವೈಕಂನಲ್ಲಿ ನಡೆಸಿದ ಸತ್ಯಾಗ್ರಹದ ವಿಚಾರದಲ್ಲಿ ಶ್ರೀಮಾನ್ ಗಾಂಧಿಯವರು ತೋರಿಸಿದ ಪ್ರತಿಕ್ರಿಯೆಯಲ್ಲಿ ಮತ್ತೊಂದು ಅಸಂಬದ್ಧತೆ ಕಾಣುತ್ತದೆ. ವೈಕಂನಲ್ಲಿ ನಡೆದ ಸತ್ಯಾಗ್ರಹದ ವಿಚಾರದಲ್ಲಿ ಶ್ರೀಮಾನ್ ಗಾಂಧಿಯವರಿಗೆ ಒಪ್ಪಿಗೆಯಿದೆ. ಅವರು ಅದನ್ನು ಹರಸಿ ಪ್ರೋತ್ಸಾಹಿಸಿದರು. ಆದರೆ ಮಹಡ್ ಮತ್ತು ನಾಸಿಕದ ಸತ್ಯಾಗ್ರಹವನ್ನು ಅವರು ಏಕೆ ವಿರೋಧಿಸಿದರು? ಇವುಗಳ ನಡುವೆ ಏನಾದರೂ ವ್ಯತ್ಯಾಸವಿದೆಯೇ? ಅಹುದು, ವ್ಯತ್ಯಾಸವಿದ್ದಿತು. ವೈಕಂ ಸತ್ಯಾಗ್ರಹವು ಅಸ್ಪೃಶ್ಯರು ಕಾಂಗ್ರೆಸ್ ನೇತೃತ್ವದಲ್ಲಿ ನಡೆಸಿದ ಸತ್ಯಾಗ್ರಹ. ಉಳಿದೆರಡು ಸತ್ಯಾಗ್ರಹಗಳು ಅಸ್ಪೃಶ್ಯರು ಕಾಂಗ್ರೆಸ್ ಬಿಟ್ಟು ಸ್ವತಂತ್ರವಾಗಿ ನಡೆಸಿದ ಸತ್ಯಾಗ್ರಹಗಳು. ಶ್ರೀಮಾನ್ ಗಾಂಧಿಯ ವಿರೋಧಕ್ಕೆ ಈ ವ್ಯತ್ಯಾಸವೇನಾದರೂ ಕಾರಣವಿರಬಹುದೆ? ಶ್ರೀಮಾನ್ ಗಾಂಧಿ ಇದಕ್ಕೆ ಯಾವ ಉತ್ತರವನ್ನೂ

ಕೊಟ್ಟಿಲ್ಲದ ಕಾರಣ ಇದನ್ನು ಓದುಗರ ಊಹೆಗೆ ಬಿಡುತ್ತೇನೆ. ಬಹುಶಃ ತನ್ನನ್ನು ಕುರುಬನೆಂದು ನಂಬದ ಕುರಿಗಳನ್ನು ರಕ್ಷಿಸಲು ಶ್ರೀಮಾನ್ ಗಾಂಧಿ ಸಿದ್ಧರಿರಲಿಲ್ಲವೆಂದು ಕಾಣುತ್ತದೆ. ಅಸ್ಪೃಶ್ಯರ ಈ ಸತ್ಯಾಗ್ರಹಕ್ಕೆ ಶ್ರೀಮಾನ್ ಗಾಂಧಿಯ ಆಶೀರ್ವಾದ ಯಾವಾಗ ದೊರೆಯಲಿಲ್ಲವೂ ಆಗ, ಸವರ್ಣ ಹಿಂದೂಗಳ ಎದುರಿನ ಅಸ್ಪೃಶ್ಯರ ಈ ಸತ್ಯಾಗ್ರಹಕ್ಕೆ ಯಾವ ಕಾಂಗ್ರೆಸ್ಸಿಗನ ಸಹಾಯವೂ ದೊರೆಯುವುದಿಲ್ಲ ಎಂಬುದು ಮೊದಲೇ ತಿಳಿದ ವಿಚಾರ. ಶ್ರೀಮಾನ್ ಗಾಂಧಿಯ ಈ ನಿಲುವಿನಿಂದಾಗಿ ಕಾಂಗ್ರೆಸ್ಸಿನ ಹಿಂದೂಗಳು ಸವರ್ಣ ಹಿಂದೂಗಳ ಜೊತೆ ಸೇರಿದರು. ಏಕೆಂದರೆ ಅವರಿಬ್ಬರ ಜೊತೆ ಹೆಚ್ಚಿನ ಭೇದವಿರಲಿಲ್ಲವಾಗಿ ಅವರಿಬ್ಬರೂ ಜೊತೆಗೂಡಿ ಅಸ್ಪೃಶ್ಯರನ್ನು ನಿಸ್ಸಂಕೋಚವಾಗಿ ವಿರೋಧಿಸಿದರು. ಶ್ರೀಮಾನ್ ಗಾಂಧಿಯ ಕುತರ್ಕದಿಂದಾಗಿ ನಡೆದ ಅನಾಹುತ ಇಷ್ಟಕ್ಕೆ ನಿಲ್ಲಲಿಲ್ಲ. ಹಿಂದೂಗಳ ವಿರುದ್ಧ ಅಸ್ಪೃಶ್ಯರ ಈ ಸತ್ಯಾಗ್ರಹದಲ್ಲಿ ಹಿಂದೂಗಳಲ್ಲದವರಾರೂ ಅಸ್ಪೃಶ್ಯರಿಗೆ ನೆರವಾಗಬಾರದೆಂದು ಶ್ರೀಮಾನ್ ಗಾಂಧಿ ಬಹಿರಂಗವಾಗಿ ಹೇಳಿದರು. ಮಹಮದೀಯರು, ಕ್ರೈಸ್ತರು, ಪಾರ್ಸಿಗಳು, ಜ್ಯೂಗಳು ಮಾತ್ರವಲ್ಲದೆ, ಸುಧಾರಣಾ ಮನೋಭಾವದವರಾದ ಸಿಖ್ಖರು ಸಹ ಅಸ್ಪೃಶ್ಯರ ನೆರವಿಗೆ ಬರದಂತೆ ಅವರು ವಿರೋಧಿಸಿದರು. ಇಲ್ಲಿಯೂ ಅವರ ವಾದ ಅಷ್ಟೇ ಅಸಂಗತವಾಗಿದ್ದಿತು. ಅಸ್ಪೃಶ್ಯತೆಯೆಂಬುದು ಸವರ್ಣ ಹಿಂದೂಗಳು ಎಸಗಿರುವ ಒಂದು ಪಾಪ. ಅದಕ್ಕಾಗಿ ಹಿಂದೂಗಳು ಪ್ರಾಯಶ್ಚಿತ್ತವೆಸಗಬೇಕು. ಅಸ್ಪೃಶ್ಯರಿಗೆ ನೆರವಾಗುವುದು ಹಿಂದೂಗಳು ಮಾಡಬೇಕಾದ ಪ್ರಾಯಶ್ಚಿತ್ತ; ಪ್ರಾಯಶ್ಚಿತ್ತ ಮಾಡುವುದು ಪಾಪಿಯ ಕೆಲಸವಾದ್ದರಿಂದ, ಪಾಪಿಗಳು ಮಾತ್ರ ಸತ್ಯಾಗ್ರಹ ಮಾಡಬೇಕು. ಮಹಮದೀಯರು, ಕ್ರೈಸ್ತರು, ಪಾರ್ಸಿಗಳು, ಜ್ಯೂಗಳು ಮತ್ತು ಸಿಖ್ಖರು ಅಸ್ಪೃಶ್ಯರ ವಿಚಾರದಲ್ಲಿ ಪಾಪಿಗಳಲ್ಲವಾದ್ದರಿಂದ ಅವರು ಅಸ್ಪೃಶ್ಯತಾ ನಿವಾರಣೆಗಾಗಿ ಸತ್ಯಾಗ್ರಹ ಮಾಡಬೇಕಾಗಿಲ್ಲ. ಶ್ರೀಮಾನ್ ಗಾಂಧಿಯವರು ಅದನ್ನು ಅಸ್ಪೃಶ್ಯರ ದೃಷ್ಟಿಯಿಂದ ನೋಡುತ್ತಿಲ್ಲ. ಅಸ್ಪೃಶ್ಯತೆಯ ಈ ಪಾಪದ ಕೆಲಸಕ್ಕೆ ಹಿಂದೂಗಳೇ ಕಾರಣವಾಗಿದ್ದರೂ, ಅದು ಅಸ್ಪೃಶ್ಯರಿಗೆ ಗುಲಾಮಗಿರಿಯಾಗಿದೆ. ಪಾಪಿಗಳಿಗೆ ಪ್ರಾಯಶ್ಚಿತ್ತ ಮಾಡಿಕೊಳ್ಳುವ ಹಕ್ಕಿರುವಂತೆ ಗುಲಾಮರಿಗೆ ತಮ್ಮ ಗುಲಾಮಗಿರಿಯ ಬಂಧನವನ್ನು ಕಿತ್ತೊಗೆಯಲು ಹಕ್ಕಿದೆ ಮತ್ತು ಸ್ವಾತಂತ್ರ್ಯದಲ್ಲಿ ನಂಬಿಕೆಯಿರುವ ಎಲ್ಲ ಜಾತಿಯ ಮತ್ತು ವರ್ಗದ ಜನರೂ ಅವರಿಗೆ ನೆರವಾಗಬೇಕು. ಖಿಲಾಫತ್ ಪ್ರಶ್ನೆ ಬಂದಾಗ ಶ್ರೀಮಾನ್ ಗಾಂಧಿ ಅನುಸರಿಸಿದ ದೃಷ್ಟಿಕೋನವೇ ಇದು. ಖಿಲಾಫತ್ ಅನ್ನು ಬಯಸಿದ ಮಹಮದೀಯರು ತುರ್ಕಿಯ ಪ್ರಾಂತೀಯ ಸಂಘಟನೆಯನ್ನು ಕಾಪಾಡಲು ಬಯಸಿದರು. ತುರ್ಕಿಯ ಪ್ರಾಂತೀಯ ಸಂಘಟನೆ ಅಸಾಧ್ಯವಾದ ಬೇಡಿಕೆಯಾಗಿದ್ದಿತು. ಏಕೆಂದರೆ ಇದರಿಂದಾಗಿ ಅರೇಬಿಯನ್ನರು ತುರ್ಕೀಯರಿಗೆ ಅಧೀನರಾಗಿರಬೇಕಾಗಿದ್ದಿತು. ಆದರೂ ಮಹಮದೀಯರು ಇದನ್ನು ಆಗಲೇಬೇಕೆಂದು ಬಯಸಿದರು. ಮತ್ತು ಇಂತಹ ಅಸಾಧ್ಯ ಮತ್ತು ಅನೀತಿಯ ಬೇಡಿಕೆಗೆ ಹಿಂದೂಗಳ ಮತ್ತು ಕಾಂಗ್ರೆಸ್ಸಿಗರೆಲ್ಲರ ಬೆಂಬಲವನ್ನು ಶ್ರೀಮಾನ್ ಗಾಂಧಿ ಒದಗಿಸಿಕೊಟ್ಟರು. ತುರ್ಕಿಯ ಪ್ರಾಂತೀಯ ಸಂಘಟನೆಗೆ ಹೋರಾಡುವುದು ಮಹಮದೀಯರ ಧಾರ್ಮಿಕ ಕರ್ತವ್ಯ ಎಂದಾದರೆ, ಆಗ ಅವರಿಗೆ ಸಹಾಯ ಮಾಡುವುದು ಹಿಂದೂಗಳ ಕರ್ತವ್ಯವಾಗುತ್ತದೆ, ಎಂಬುದಾಗಿ ಶ್ರೀಮಾನ್ ಗಾಂಧಿ ವಾದಿಸಿದರು.[೧]

---

೧. ೧೯೨೦ರಲ್ಲಿ ಕಾಂಗ್ರೆಸ್ಸಿನ ವಿಶೇಷಾಧಿವೇಶನ ಕಲ್ಕತ್ತಾದಲ್ಲಿ ನಡೆದು ಅಲ್ಲಿ ಅಂಗೀಕಾರವಾದ ನಿರ್ಣಯ ಒಂದರ ಭಾಗ ಈ ರೀತಿಯಿದೆ.

"ಖಿಲಾಫತ್ ಪ್ರಶ್ನೆ ವಿಚಾರದಲ್ಲಿ ಭಾರತ ಸರ್ಕಾರ ಮತ್ತು ಬ್ರಿಟಿಷ್ ಚಕ್ರಾಧಿಪತ್ಯಗಳೆರಡೂ ಭಾರತದ ಮಹಮದೀಯರಿಗೆ ಕರ್ತವ್ಯಲೋಪವೆಸಗಿರುವುದರಿಂದ ಮತ್ತು ಪ್ರಧಾನಿಯು ಅವರಿಗೆ ಕೊಟ್ಟ ಮಾತಿಗೆ ತಪ್ಪಿರುವುದರಿಂದ ಮಹಮದೀಯರಲ್ಲದ ಎಲ್ಲ ಭಾರತೀಯರೂ ತಮ್ಮ ಮಹಮದೀಯ ಸೋದರರ ನೆರವಿಗೆ ಹೋಗಿ ಅವರಿಗೆ ಧಾರ್ಮಿಕವಾಗಿ ಆಗಿರುವ ಅನ್ಯಾಯವನ್ನು ತೊಡೆದುಹಾಕಬೇಕು."

ಮಹಮದೀಯರಿಗೆ ಒದಗಿದ ಈ ತರ್ಕದ ಲಾಭವನ್ನು ಶ್ರೀಮಾನ್ ಗಾಂಧಿಯವರು ಹರಿಜನರಿಗೆ ದೊರಕಿಸಲು ಸಿದ್ಧರಿರಲಿಲ್ಲ. ಆ ವಿಚಾರದಲ್ಲಿ ಅವರು ದೃಢ ನಿಶ್ಚಯ ತಾಳಿದರು. ಹಿಂದೂಗಳಲ್ಲದವರು ಹಿಂದೂಗಳಿಗೆ ನೆರವಾಗಬಹುದು. ಹಿಂದೂಗಳು ಹಿಂದೂಗಳಲ್ಲದವರಿಗೆ ನೆರವಾಗಬಹುದು. ಆದರೆ ಅಸ್ಪೃಶ್ಯರಿಗೆ ಯಾರೂ ನೆರವಾಗಬಾರದು.[೧] ಶ್ರೀಮಾನ್ ಗಾಂಧಿಯ ಸ್ನೇಹಿತರನೇಕರು ಅವರ ತರ್ಕದ ತೀವ್ರತೆಯನ್ನು ಮೃದುಗೊಳಿಸುವ ತಮ್ಮ ಉತ್ಸಾಹದಲ್ಲಿ ಅಸ್ಪೃಶ್ಯರಿಗಿದ್ದ ನ್ಯೂನತೆಗಳ ಸ್ವರೂಪವೇ ಬೇರೆ ಎಂದು ಅವರಿಗೆ ತೋರಿಸಲು ಪ್ರಯತ್ನಿಸಿದರು. ಅಸ್ಪೃಶ್ಯರು ಅನುಭವಿಸುವ ಕೆಲವು ಅನರ್ಹತೆಗಳು ನಾಗರಿಕ ಸ್ವರೂಪದವಾದರೆ ಮತ್ತೆ ಕೆಲವು ಧಾರ್ಮಿಕ ಸ್ವರೂಪದವುಗಳು. ನಾಗರಿಕ ಸ್ವರೂಪದ ಅನರ್ಹತೆಗಳ ಎದುರು ಸತ್ಯಾಗ್ರಹ ನಡೆಸುವಾಗ ಹಿಂದೂಗಳು ಅಸ್ಪೃಶ್ಯರ ಜೊತೆಗೆ ಸೇರಿ ಅವರಿಗೆ ನೆರವಾಗಬೇಕು ಎಂದು ವಾದಿಸಿದರು. ಇದನ್ನು ಒಪ್ಪಲು ಶ್ರೀಮಾನ್ ಗಾಂಧಿ ಸಿದ್ಧರಿರಲಿಲ್ಲ. ಈ ಪ್ರಭೇದವನ್ನು ಒಪ್ಪದ ಶ್ರೀಮಾನ್ ಗಾಂಧಿ ಒಟ್ಟಾರೆ ಅದನ್ನು ವಿರೋಧಿಸಿದರು. ಈ ರೀತಿ "ಅಸ್ಪೃಶ್ಯರ ಮಿತ್ರರಾದ" ಶ್ರೀಮಾನ್ ಗಾಂಧಿ, ಅಸ್ಪೃಶ್ಯರಿಗೆ ಹೊರಗಿನವರ ನೆರವನ್ನೆಲ್ಲಾ ತಪ್ಪಿಸಿ, ಅವರನ್ನು ಹೋರಾಟದಲ್ಲಿ ದುರ್ಬಲಗೊಳಿಸಿದರು.

## III

ಕಾಂಗ್ರೆಸ್ಸು ಅಸ್ಪೃಶ್ಯರ ಉದ್ಧಾರದ ಯೋಚನೆಯನ್ನು, ಹೃದಯದಲ್ಲಿ ಯಾವ ರೀತಿಯ ಪಶ್ಚಾತ್ತಾಪವೂ ಇಲ್ಲದೆ ತ್ಯಜಿಸಿತು ಎಂಬುದನ್ನು ಈವರೆಗೆ ನಾನು ವಿವರಿಸಿದೆನು. ಅವರ ಉದ್ಧಾರದ ಕೆಲಸವನ್ನು ಅದು ಕೈಗೆತ್ತಿಕೊಳ್ಳಲೇ ಇಲ್ಲ. ಎರಡನೆಯದಾಗಿ, ಶ್ರೀಮಾನ್ ಗಾಂಧೀಯವರು ಅಸ್ಪೃಶ್ಯರು ಸವರ್ಣ ಹಿಂದೂಗಳ ಎದುರು ನಡೆಸಿದ ಸತ್ಯಾಗ್ರಹದಲ್ಲಿ ಅವರಿಗೆ ನೆರವಾಗಲಿಲ್ಲ ಮಾತ್ರವಲ್ಲದೆ ಅವರು ತಮ್ಮ ವಿಲಕ್ಷಣವಾದ ತರ್ಕದಿಂದ ಬೇರೆಯವರೂ ಅಸ್ಪೃಶ್ಯರಿಗೆ ನೆರವಾಗದಂತೆ ಮಾಡಿದರು. ಈ ವೇಳೆಯಲ್ಲಿ ನಡೆದ ಮೂರನೆಯ ಹಾಗೂ ಕೊನೆಯ ಘಟನೆಯೊಂದನ್ನು ನಾವೀಗ ದಾಖಲಿಸಬೇಕಾಗಿದೆ. ಈ ಘಟನೆ ಕಾಲದ ದೃಷ್ಟಿಯಲ್ಲಿ ಕೊನೆಯದಾದರೂ ಅದರ ಮಹತ್ವದ ದೃಷ್ಟಿಯಲ್ಲಿ ಮೊದಲನೆಯದು. ಶ್ರೀಮಾನ್ ಗಾಂಧಿ ಅಸ್ಪೃಶ್ಯರ ಸ್ನೇಹಿತ ಎಂಬುದು ಈ ಘಟನೆಯಿಂದ ಸ್ಥಾಪಿತವಾಗುತ್ತದೆ ಇಲ್ಲವೆ ಸುಳ್ಳಾಗುತ್ತದೆ.

ಈ ಸಂಗತಿ ಯಾವುದೆಂದರೆ, ಭಾರತೀಯ ದುಂಡುಮೇಜಿನ ಪರಿಷತ್ತಿನಲ್ಲಿ ದಲಿತ ವರ್ಗದ ಪ್ರತಿನಿಧಿಗಳು ಹೊಸ ಸಂವಿಧಾನದಲ್ಲಿ ಅಸ್ಪೃಶ್ಯರಿಗೆ ರಾಜಕೀಯ ರಕ್ಷಣೆಬೇಕೆಂದು ಬಯಸಿದಾಗ, ಶ್ರೀಮಾನ್ ಗಾಂಧಿಯವರು ಪ್ರತಿಕ್ರಿಯಿಸಿದ ರೀತಿ. ಅವರ ಬೇಡಿಕೆಯಲ್ಲಿ ಬಹು ಮುಖ್ಯವಾದದ್ದೆಂದರೆ, ಶಾಸನಸಭೆಗಳಲ್ಲಿ ದಲಿತವರ್ಗದವರಿಗಿರಬೇಕಾದ ಪ್ರಾತಿನಿಧ್ಯವನ್ನು ಕುರಿತದ್ದು. ದಲಿತವರ್ಗದ ಪ್ರತಿನಿಧಿಗಳು ಮಂಡಿಸಿದ ಬೇಡಿಕೆಗಳು ಈ ರೀತಿ ಇದ್ದವು.

**ಶಾಸನ ಸಭೆಗಳಲ್ಲಿ ಸೂಕ್ತವಾದ ಪ್ರಾತಿನಿಧ್ಯ**

ದಲಿತವರ್ಗದ ಜನರಿಗೆ ಶಾಸನಸಭೆ ಮತ್ತು ಬೇರೆ ಬೇರೆ ಕಾರ್ಯಕಾರಿ ಸಮಿತಿಗಳಲ್ಲಿ ತಮ್ಮ ಹಿತರಕ್ಷಣೆ ಮಾಡಿಕೊಳ್ಳಲು ಆವಶ್ಯಕವಾದ ಸೂಕ್ತ ರಾಜಕೀಯ ಶಕ್ತಿಯನ್ನು ದೊರಕಿಸಿಕೊಡಬೇಕು. ಅದಕ್ಕಾಗಿ ಚುನಾವಣಾ ಕಾನೂನಿನಲ್ಲಿ ಸೂಕ್ತವಾದ ಅವಕಾಶಗಳಿರಬೇಕೆಂದು ಅವರು ಒತ್ತಾಯಿಸಿದರು.

---

೧. ಯಂಗ್ ಇಂಡಿಯಾ

೧) ಪ್ರಾಂತೀಯ ಮತ್ತು ಕೇಂದ್ರ ಶಾಸನಸಭೆಗಳಲ್ಲಿ ಸೂಕ್ತ ಪ್ರಾತಿನಿಧ್ಯವನ್ನು ಹೊಂದುವ ಹಕ್ಕು ಅವರಿಗಿರಬೇಕು.

೨) ತಮ್ಮ ಜನವನ್ನೇ ತಮ್ಮ ಪ್ರತಿನಿಧಿಗಳಾಗಿ ಆರಿಸುವ ಹಕ್ಕು ಅವರಿಗಿರಬೇಕು.

  ಎ) ವಯಸ್ಕ ಮತದಾನದ ಮೂಲಕ ಮತ್ತು

  ಬಿ) ಮೊದಲು ಹತ್ತು ವರ್ಷ ಪ್ರತ್ಯೇಕ ಮತದಾನದಿಂದ ಅನಂತರ ಜಂಟಿ ಮತದಾನದ ಮೀಸಲು ಕ್ಷೇತ್ರದ ಮೂಲಕ ಇದು ನಡೆಯಬೇಕು. ವಯಸ್ಕ ಮತದಾನದ ಜಂಟಿ ಮತದಾನ ಕ್ರಮವನ್ನು ದಲಿತರ ಒಪ್ಪಿಗೆಯಿಲ್ಲದೆ ಅವರ ಮೇಲೆ ಬಲವಂತವಾಗಿ ಹೇರಬಾರದು.

ದಲಿತವರ್ಗದವರ ಈ ನಿರ್ದಿಷ್ಟವಾದ ಬೇಡಿಕೆಯಿಂದೆದ್ದ ಬಿರುಗಾಳಿ, ಭಾರತದ ರಾಜಕೀಯ ವ್ಯವಸ್ಥೆ ಮತ್ತು ಹಿಂದೂಸಮಾಜದ ಸ್ವರೂಪವನ್ನೇ ನಡುಗಿಸುವಷ್ಟು ಪ್ರಾಮುಖ್ಯ ಪಡೆಯಿತು.

ದಲಿತವರ್ಗದವರ ಈ ಬೇಡಿಕೆಗಳು ಸೈಮನ್ ಕಮೀಷನ್ನಿನ ಸಲಹೆಯನ್ನಾಧರಿಸಿದ್ದುವು. ದಲಿತವರ್ಗದವರ ಸಮಸ್ಯೆಯನ್ನು ಎಚ್ಚರವಾಗಿ ಪರಿಶೀಲಿಸಿದ ಸೈಮನ್ ಕಮೀಷನ್, ನೂತನ ಸಂವಿಧಾನದಲ್ಲಿ ಅವರ ಸ್ಥಾನ ಹೇಗಿರಬೇಕೆಂಬ ಬಗ್ಗೆ ಈ ರೀತಿ ವರದಿ ಮಾಡಿತ್ತು :

"ಮತದಾನದ ಹಕ್ಕನ್ನು ಮತ್ತಷ್ಟು ತಗ್ಗಿಸಿದರೂ.....ದಲಿತ ವರ್ಗದ ಜನ ವಿಶೇಷವಾದ ಸೌಲಭ್ಯಗಳಿಲ್ಲದೆ, ಸಾರ್ವತ್ರಿಕ ಚುನಾವಣೆಯಲ್ಲಿ ತಮ್ಮ ನೇರ ಪ್ರತಿನಿಧಿಗಳನ್ನು ಆರಿಸಿಕಳುಹಿಸುವುದು ಸಾಧ್ಯವಾಗದೆಂಬುದು ಬಹುಸ್ಪಷ್ಟ. ಜಂಟಿ ಮತದಾನದಲ್ಲಿ ಯಾವ ವಿಶೇಷ ಸೌಲಭ್ಯಗಳಿಲ್ಲದಿದ್ದರೂ, ಅವರು ತಮ್ಮ ಅಸ್ತಿತ್ವವನ್ನು ಉಳಿಸಿಕೊಳ್ಳುವಂತೆ ನೋಡಿಕೊಳ್ಳಬೇಕಾಗಿದೆ. ಕೇವಲ ನಾಮಕರಣದಿಂದ ಅವರ ಪ್ರಾತಿನಿಧ್ಯವನ್ನು ಕಾಪಾಡುವುದರಿಂದ ರಾಜಕೀಯ ರಂಗದಲ್ಲಿ ಅವರು ಹೆಚ್ಚು ಪ್ರಗತಿ ಸಾಧಿಸಲಾರರು, ಏಕೆಂದರೆ ನಾಮಕರಣವು ರಾಜಕೀಯಕ್ಕೆ ಬೇಕಾದ ತಯಾರಿಯನ್ನು ಅವರಿಗೆ ದೊರಕಿಸಿಕೊಡುವುದಿಲ್ಲ. ಈಗಿರುವ ಸೀಮಿತ ಮತದಾನದಲ್ಲಿಯೂ ಸಾಕಷ್ಟು ಜನ ಅಸ್ಪೃಶ್ಯ ಮತದಾರರಿದ್ದು ಚುನಾವಣೆಯನ್ನು ಸಾಧ್ಯಗೊಳಿಸುವಂತಿದೆ.

ಆದ್ದರಿಂದ ನಮ್ಮ ಉದ್ದೇಶವೇನೆಂದರೆ ದಲಿತವರ್ಗದ ಜನರನ್ನು ಚುನಾಯಿತ ಪ್ರತಿನಿಧಿಗಳ ವೃತ್ತದೊಳಗೆ ತರಲು ಆರಂಭ ಮಾಡಬೇಕು. ಇದನ್ನು ಮಾಡುವುದಾದರೂ ಹೇಗೆ? ನಮ್ಮ ಮುಂದೆ ಬಂದ ಅನೇಕ ದಲಿತಸಂಸ್ಥೆಗಳು, ತಮ್ಮ ಜನಸಂಖ್ಯೆಗನುಗುಣವಾಗಿ ನಿರ್ದಿಷ್ಟ ಸ್ಥಾನಗಳನ್ನು ನಿಗದಿಪಡಿಸಿ, ದಲಿತರ ವಿಶ್ವಾಸ ಗಳಿಸಿದವರನ್ನು ಆರಿಸುವ ಪ್ರತ್ಯೇಕ ಚುನಾವಣೆ ನಮಗಿರಬೇಕೆಂದು ಬಯಸಿದರು. ಆದರೆ ದಲಿತವರ್ಗದವರನ್ನು ಸವರ್ಣ ಹಿಂದೂಗಳಿಂದ ಪ್ರತ್ಯೇಕಿಸಿ ರಾಜಕೀಯವಾಗಿ ಇವರುಗಳು ಒಂದಾಗಲು ಅಡ್ಡಿಬರುವ ಈ ವ್ಯವಸ್ಥೆಯನ್ನು ನಾವು ಒಪ್ಪುವುದಿಲ್ಲ.

ಆದ್ದರಿಂದ ನಮ್ಮ ಸಲಹೆಯೇನೆಂದರೆ, ಎಲ್ಲ ಎಂಟು ಪ್ರಾಂತಗಳಲ್ಲಿಯೂ ದಲಿತವರ್ಗದವರಿಗೆ ಕೆಲವು ಸ್ಥಾನಗಳನ್ನು ಮೀಸಲಿಡಬೇಕು.

ನಮ್ಮ ಈ ಯೋಜನೆಯ ಪರಿಣಾಮವಾಗಿ ದಲಿತವರ್ಗದವರ ಪ್ರತಿನಿಧಿಗಳು ಎಲ್ಲ ಪ್ರಾಂತಗಳಲ್ಲಿಯೂ ಚುನಾಯಿತರಾಗಿ ಬರುವಂತಾಗುತ್ತದೆ......ಮೀಸಲು ಇಡಬೇಕಾದ ಸ್ಥಾನಗಳ ಸಂಖ್ಯೆ ಎಷ್ಟೆಂಬುದು ಆ ಪ್ರಾಂತದಲ್ಲಿರುವ ದಲಿತವರ್ಗದ ಜನಸಂಖ್ಯೆಯನ್ನು ಅವಲಂಬಿಸುತ್ತದೆ. ಮೀಸಲಿಡಬೇಕಾದ ಸ್ಥಾನಗಳ ಸಂಖ್ಯೆಯ ವಿಚಾರ ಹೇಳಬೇಕಾದರೆ..... ಚುನಾವಣೆ ನಡೆಯುವ ಪ್ರಾಂತದ ಒಟ್ಟು ಮತದಾರರಲ್ಲಿ ದಲಿತವರ್ಗದ ಜನಸಂಖ್ಯೆಯ ಶೇಕಡಾವಾರು ಪ್ರಾತಿನಿಧ್ಯದ ಮುಕ್ಕಾಲು ಭಾಗದಷ್ಟನ್ನು ಮೀಸಲಿಡಬೇಕೆಂಬುದು ನಮ್ಮ ಸಲಹೆ......."[೧]

೧. ಅ. ಶಿಫಾರಸ್ಸಿನ ಪರಿಚ್ಛೇದ ೨ ಪುಟ ೬೫–೬೬

ನಿಜ ಹೇಳಬೇಕಾದರೆ, ಶಾಸನ ಸಭೆಗಳಲ್ಲಿ ತಮ್ಮವರು ತಮಗಾಗಿ ತಮ್ಮಿಂದಲೇ ಪ್ರತ್ಯೇಕವಾಗಿ ಚುನಾಯಿತರಾಗಬೇಕೆಂಬ ದಲಿತವರ್ಗದವರ ಈ ಬೇಡಿಕೆಯಲ್ಲಿ ಹೊಸದೇನೂ ಇರಲಿಲ್ಲ ಮತ್ತು ಸೈಮನ್ ಕಮಿಷನ್ ಇದನ್ನು ಮಾನ್ಯತೆ ಮಾಡಿದ್ದರಲ್ಲಿ ಹೆಚ್ಚಿನ ಅಂಶವೇನೂ ಕಾಣಲಿಲ್ಲ.

೧೯೧೯ರಲ್ಲಿ ಈ ಬೇಡಿಕೆಯನ್ನು ಮುಂದಿಡಲಾಯಿತು.

೧೯೧೯ರ ಶಾಸನದಲ್ಲಿ ಅಂತರ್ಗತವಾದ ಸುಧಾರಣೆಗಳನ್ನು ಕುರಿತು ಚರ್ಚಿಸುವಾಗ ಮಾಂಟೆಗೋ ಚಲ್ಮ್‌ಸ್‌ಫರ್ಡ್ ವರದಿಯ ಕರ್ತೃಗಳು ಅಸ್ಪೃಶ್ಯರ ಸಮಸ್ಯೆಯನ್ನು ಚೆನ್ನಾಗಿ ಮನಗಂಡು, ಅವರಿಗೆ ಶಾಸನಸಭೆಗಳಲ್ಲಿ ಸೂಕ್ತ ಪ್ರಾತಿನಿಧ್ಯವನ್ನು ವ್ಯವಸ್ಥೆ ಮಾಡಲು ಪಣತೊಟ್ಟರು. ಆದರೆ ಲಾರ್ಡ್ ಸೌತ್‌ಬರೋರವರ ಅಧ್ಯಕ್ಷತೆಯಲ್ಲಿ, ಮತದಾನ ಮತ್ತು ಚುನಾವಣೆಯ ಸ್ವರೂಪವನ್ನು ನಿರ್ಣಯಿಸಲು ನೇಮಕಗೊಂಡ ಸಮಿತಿಯು, ಈ ವಿಚಾರಗಳನ್ನು ಗಮನಿಸಲೇ ಇಲ್ಲ. ಅವರ ಈ ಧೋರಣೆಯನ್ನು ಒಪ್ಪದ ಭಾರತ ಸರ್ಕಾರ ಅದನ್ನು ಈ ಕೆಳಗಿನಂತೆ ಟೀಕೆ ಮಾಡಿತು :

"ಅಸ್ಪೃಶ್ಯರು ಒಟ್ಟು ಜನಸಂಖ್ಯೆಯಲ್ಲಿ ಐದನೆಯ ಒಂದು ಭಾಗದಷ್ಟಿದ್ದರೂ ಮಾರ್ಲೆಮಿಂಟೋ ಸಮಿತಿಯಲ್ಲಿ ಅವರ ಪ್ರತಿನಿಧಿಗಳೇ ಇಲ್ಲ. ಆ ಸಮಿತಿಯ ವರದಿಯಲ್ಲಿ ಅಸ್ಪೃಶ್ಯರನ್ನು ಕುರಿತಂತೆ ಎರಡು ಸಾರಿ ಮಾತು ಬರುತ್ತದೆಯಾದರೂ, ಅದು ಅಸ್ಪೃಶ್ಯರಿಗೆ ಚುನಾವಣೆಯಲ್ಲಿ ಸೂಕ್ತ ಪ್ರಾತಿನಿಧ್ಯ ದೊರೆಯದಿದ್ದರೆ ಅವರಿಗೆ ನಾಮಕರಣದಿಂದ ಅವಕಾಶ ಕೊಡಬೇಕು ಎಂಬುದನ್ನು ಹೇಳಲು ಮಾತ್ರ. ಅದು ಇವರ ಸ್ಥಿತಿಗತಿಗಳನ್ನು ಕುರಿತು ವಿವರಿಸಲಾಗಲಿ, ಅಥವಾ ಅವರು ತಮ್ಮ ಕ್ಷೇಮವನ್ನು ಅವರು ನೋಡಿಕೊಳ್ಳಬಲ್ಲರೆಂಬುದನ್ನು ಚಿಂತಿಸುವುದಕ್ಕಾಗಲಿ ಅಲ್ಲ, ಅಥವಾ ಅವರಿಗಿರಬೇಕಾದ ನಾಮಕರಣದ ಅವಕಾಶ ಎಷ್ಟೆಂಬುದನ್ನು ಹೇಳುವುದಕ್ಕೂ ಅಲ್ಲ. ಬ್ರಿಟಿಷ್ ಭಾರತದ ಜನಸಂಖ್ಯೆಯ ಐದನೆಯ ಒಂದು ಭಾಗದಷ್ಟಿರುವ ಅಸ್ಪೃಶ್ಯರಿಗೆ, ಒಟ್ಟು ಇರುವ ಎಂಟುನೂರು ಪ್ರಾತಿನಿಧ್ಯದಲ್ಲಿ ಕೇವಲ ಏಳು ಸ್ಥಾನಗಳನ್ನು ಮೀಸಲಿಡಲು ಆ ಸಮಿತಿ ಸೂಚಿಸಿತು. ಎಲ್ಲ ಪ್ರತಿನಿಧಿ ಸಭೆಗಳಲ್ಲಿಯೂ ಇರುವ ಒಟ್ಟು ಸಂಖ್ಯೆಯ ಆರನೆಯ ಒಂದು ಭಾಗದಷ್ಟು ಸರ್ಕಾರದ ಅಧಿಕಾರಿ ಸದಸ್ಯರಿದ್ದು ಅವರು ಅಸ್ಪೃಶ್ಯರ ಹಿತವನ್ನು ಗಮನಿಸುತ್ತಾರೆಂಬುದೇನೋ ನಿಜ. ಆದರೆ ಅದನ್ನು ಸುಧಾರಣಾ ವರದಿ ಗಮನಿಸಬಾರದೆಂಬುದು ನಮ್ಮ ಅಭಿಪ್ರಾಯ. ಅಸ್ಪೃಶ್ಯರು ತಮ್ಮನ್ನು ತಾವು ರಕ್ಷಿಸಿಕೊಳ್ಳುವ ಶಕ್ತಿಯನ್ನು ಗಳಿಸಬೇಕು ಎಂಬುದಾಗಿ ಸುಧಾರಣಾ ಸಮಿತಿಯ ಕರ್ತೃಗಳು ಹೇಳಿದ್ದಾರೆ. ಆದರೆ ಅರವತ್ತು ಅಥವಾ ಎಪ್ಪತ್ತು ಸದಸ್ಯರಿರುವ ಪ್ರತಿನಿಧಿ ಸಭೆಯಲ್ಲಿ ಒಬ್ಬ ಅಸ್ಪೃಶ್ಯರ ಪ್ರತಿನಿಧಿಯಿದ್ದು ತನ್ನನ್ನು ರಕ್ಷಿಸಿಕೊಳ್ಳಲಿ ಎಂಬುದು ತಮಾಷೆಯಾಗಿ ಕಾಣುತ್ತದೆ. ಈ ವರದಿಯ ಉದ್ದೇಶಗಳನ್ನು ಸಾರ್ಥಕಗೊಳಿಸಲು ನಾವು ಅಂತ್ಯಜರನ್ನು ಹೆಚ್ಚು ಉದಾರವಾಗಿ ನೋಡಿಕೊಳ್ಳಬೇಕು."

ಈ ಸಮಿತಿಯವರು ಅಸ್ಪೃಶ್ಯರಿಗೆ ಗೊತ್ತುಮಾಡಿರುವ ಸಂಖ್ಯೆಯನ್ನು ಎರಡರಷ್ಟು ಮಾಡಬೇಕೆಂದು ಸರ್ಕಾರ ಸೂಚಿಸಿತು. ಅದರಂತೆ ಅವರ ಸಂಖ್ಯೆಯನ್ನು ಏಳರಿಂದ ಹದಿನಾಲ್ಕಕ್ಕೆ ಏರಿಸಲಾಯಿತು.

ಪುನಃ ೧೯೨೪ರಲ್ಲಿ ಭಾರತದ ಕಾರ್ಯದರ್ಶಿಗಳು ಮುದ್ದಿಮನ್ ಕಮಿಟಿ ಎಂಬ ಹೆಸರಿನ ಮತ್ತೊಂದು ಸಮಿತಿಯನ್ನು ನೇಮಿಸಿದರು. ೧೯೧೯ರ ಶಾಸನದಂತೆ ರೂಪುಗೊಂಡ ಸಂವಿಧಾನವನ್ನು ಮೂಲ ಶಾಸನಕ್ಕೆ ಧಕ್ಕೆ ಬರದಂತೆ ಅದರ ಕಾರ್ಯಸೂತ್ರಗಳನ್ನು ಪುನರ್‌ರಚಿಸಿ ಹಿಗ್ಗಿಸುವುದೇ ಈ ಸಮಿತಿಯ ಮೂಲ ಉದ್ದೇಶವಾಗಿದ್ದಿತು. ಈ ಸಮಿತಿಯು ಕೆಲವು ಸೂಚನೆಗಳನ್ನು ಕೊಟ್ಟಿದಲ್ಲದೆ ಶಾಸನಸಭೆಗಳಲ್ಲಿ ಅಸ್ಪೃಶ್ಯರ ಪ್ರಾತಿನಿಧ್ಯವನ್ನು ಹೆಚ್ಚಿಸಲು ಸಲಹೆ ಮಾಡಿತು. ಈ ಸಲಹೆಯನ್ನು ಒಪ್ಪಿದ ಕಾರ್ಯದರ್ಶಿಗಳು

ಅವರ ಸಂಖ್ಯೆಯನ್ನು ಹೆಚ್ಚಿಸಿದರು.

ಹೀಗಾಗಿ ದಲಿತವರ್ಗದವರಿಗೆ ಶಾಸನಸಭೆಗಳಲ್ಲಿ ವಿಶೇಷ ಪ್ರಾತಿನಿಧ್ಯಬೇಕೆಂಬ ಅವರ ಹಕ್ಕು ಮನ್ನಣೆ ಪಡೆದು ಸಂವಿಧಾನದಲ್ಲಿಯೂ ಸೇರಿಹೋಯಿತು. ಈ ಸಿದ್ಧಾಂತ ಅದೆಷ್ಟು ಚೆನ್ನಾಗಿ ಮನ್ನಣೆ ಪಡೆಯಿತೆಂದರೆ ಅದರ ಕಾರ್ಯವ್ಯಾಪ್ತಿ ಜಿಲ್ಲಾ ಮತ್ತು ಸ್ಥಳೀಯ ಸಂಸ್ಥೆಗಳು, ಶಾಲಾ ಆಡಳಿತ ಮಂಡಲಿಗಳು, ಮತ್ತು ನಗರಸಭೆಗಳಿಗೂ ಹಬ್ಬಿತು.

ಅವರ ಈ ಬೇಡಿಕೆ ೧೯೧೯ರಲ್ಲಿ ಕಾನೂನಿನ ಮನ್ನಣೆ ಗಳಿಸಿದ್ದರಿಂದ, ಅದು ಪೂರ್ಣಗೊಂಡು, ದಲಿತವರ್ಗದ ಪ್ರತಿನಿಧಿಗಳು ತಮ್ಮ ಈ ಹಕ್ಕನ್ನು ಯಾವ ವಿರೋಧವೂ ಇಲ್ಲದೆ ಬಳಸುವಂತಾಯಿತು. ದಲಿತವರ್ಗದ ಈ ಹಕ್ಕನ್ನು ಕಾಂಗ್ರೆಸ್ಸಿನವರು ಪ್ರಬಲವಾಗಿ ವಿರೋಧಿಸುತ್ತಾರೆಂಬ ಭಯಕ್ಕೆ ಈಗ ಕಾರಣವೇ ಇಲ್ಲವಾಯಿತು. ನೆಹರು ಸಮಿತಿಯು ೧೯೨೮ರಲ್ಲಿ ರಚಿಸಿದ ಸ್ವರಾಜ್ಯದ ಸಂವಿಧಾನದಲ್ಲಿ ದಲಿತವರ್ಗದ ಈ ಹಕ್ಕನ್ನು ನಿರಾಕರಿಸಿತ್ತಾದರೂ, ಆ ಸಮಿತಿಯ ವರದಿಯು ಕಾಂಗ್ರೆಸ್ಸಿಗೆ ಶಾಸನವೆನಿಸಿರಲಿಲ್ಲ. ಶಾಸನಸಭೆಗಳ ಪ್ರಾತಿನಿಧ್ಯದ ವಿಚಾರದಲ್ಲಿ ಸಿಖ್ಖರಿಗಿದ್ದ ಭಯವನ್ನು ನಿವಾರಿಸಲು ೧೯೨೦ರ ನಾಗಪುರದ ಕಾಂಗ್ರೆಸ್ ಅಧಿವೇಶನದಲ್ಲಿ ಅಂಗೀಕರಿಸಿದ ಎಲ್ಲ ಅಲ್ಪಸಂಖ್ಯಾತರಿಗೂ ಶಾಸನಸಭೆಗಳಲ್ಲಿ ಸಮಾನ ಪ್ರಾತಿನಿಧ್ಯವಿರುತ್ತದೆ ಎಂಬ ನಿರ್ಣಯವನ್ನು ಮಾತ್ರ ಕಾಂಗ್ರೆಸ್ ಮೀರುವಂತಿರಲಿಲ್ಲ.[೧]

ಆದ್ದರಿಂದ ದಲಿತವರ್ಗದ ಪ್ರತಿನಿಧಿಗಳು ತಮ್ಮ ಬೇಡಿಕೆಗಳು ಯಾವ ಕಡೆಯಿಂದಲೂ ಯಾವ ರೀತಿಯ ವಿರೋಧವೂ ಇಲ್ಲದೆ, ಕೈಗೂಡುತ್ತವೆ ಎಂದು ನಂಬಿದ್ದುದು ನ್ಯಾಯಸಮ್ಮತವಾಗಿದೆ.

ಮೊದಲನೆಯ ದುಂಡುಮೇಜಿನ ಪರಿಷತ್ತಿನಲ್ಲಿ ಎಲ್ಲ ವ್ಯವಹಾರಗಳೂ ಸುಸೂತ್ರವಾಗಿಯೇ ನಡೆದುಹೋದವು. ಅಲ್ಲಿ ಅಲ್ಪಸಂಖ್ಯಾತರ ಬಗ್ಗೆ ಒಪ್ಪಂದ ಸಾಧ್ಯವಾಗದಿದ್ದರೂ, ದಲಿತವರ್ಗದವರ ವಿಶೇಷ ಪ್ರಾತಿನಿಧ್ಯದ ವಿಚಾರದಲ್ಲಿ, ದುಂಡುಮೇಜಿನ ಪರಿಷತ್ತಿಗೆ ಬಂದ ಎಲ್ಲ ಪ್ರತಿನಿಧಿಗಳೂ ತಮ್ಮ ಸಮ್ಮತಿ ಸೂಚಿಸಿದರು. ಅಲ್ಪಸಂಖ್ಯಾತರ ಉಪ ಸಮಿತಿಯ ನಿರ್ಣಯಗಳನ್ನು ಪರಿಷತ್ತಿನ ಸಾಮಾನ್ಯ ವರದಿಯಲ್ಲಿ ಸೇರಿಸಲಾಯಿತು. ಆ ವರದಿಯ ಸಾರಾಂಶ ಈ ರೀತಿಯಿದೆ :

"ಉಪ ಸಮಿತಿಯ ಎರಡನೆಯ ಸಲಹೆಯಾದ (ಪ್ರಾಂತೀಯ ಸಂವಿಧಾನ) ಪ್ರಾಂತೀಯ ಕಾರ್ಯಾಂಗದಲ್ಲಿ ಪ್ರಮುಖ ಅಲ್ಪಸಂಖ್ಯಾತರ ಪ್ರಾತಿನಿಧ್ಯವಿರುವುದು ಹೊಸ ಸಂವಿಧಾನದ ಪೂರ್ಣ ಯಶಸ್ಸಿಗೆ ಆವಶ್ಯಕವೆಂದೂ ಮತ್ತು ಅದೇ ಕಾರಣದಿಂದ ಮಹಮದೀಯ ಪ್ರತಿನಿಧಿಗಳು ಸಂಯುಕ್ತ ಕಾರ್ಯಾಂಗದಲ್ಲಿರಬೇಕೆಂದೂ ಸರ್ವರೂ ಒಪ್ಪಿದರು. ಅಲ್ಪಸಂಖ್ಯಾತರ ಸಣ್ಣ ವರ್ಗಗಳು ತಮಗೆ ವೈಯಕ್ತಿಕವಾಗಿ ಅಥವಾ ಸಮಷ್ಟಿಯಾಗಿ ಪ್ರಾಂತೀಯ ಮತ್ತು ಸಂಯುಕ್ತ ಶಾಸಕಾಂಗಗಳಲ್ಲಿ ಪ್ರಾತಿನಿಧ್ಯವಿರಬೇಕೆಂದು ಒತ್ತಾಯಿಸಿದರು. ಒಂದು ವೇಳೆ ಈ ಬಯಕೆ ಈಡೇರದಿದ್ದರೆ ಕೊನೆಯ ಪಕ್ಷ ಅಲ್ಪಸಂಖ್ಯಾತರ ಹಿತರಕ್ಷಣೆಯನ್ನು ನೋಡಿಕೊಳ್ಳಲು, ಮಂತ್ರಿಮಂಡಲದಲ್ಲಿ ಒಬ್ಬ ಪ್ರತ್ಯೇಕ ಮಂತ್ರಿಯಿರಬೇಕೆಂದು ಬಯಸಿದರು.

(ಮೇಲಿನ ವರದಿಯಲ್ಲಿ ಮಹಮದೀಯ ಪ್ರತಿನಿಧಿಗಳು ಎಂಬ ಮಾತಿನ ನಂತರ "ಮತ್ತು ಇತರ

---

೧. ಆ ನಿರ್ಣಯದ ಮೂಲ ಪಾಠ ಹೀಗಿದೆ :
"ಸಿಖ್ಖರು : ಭವಿಷ್ಯ ಭಾರತದ ರಾಜಕೀಯದಲ್ಲಿ ಸಿಖ್ ಜನಾಂಗದ ಸ್ಥಾನಮಾನದ ವಿಚಾರದಲ್ಲಿ ಸಿಖ್ಖರಿಗೆ ಅನುಮಾನಗಳಿರುವುದರಿಂದ, ಅವರಿಗೆ ಕಾಂಗ್ರೆಸ್ ಕೊಡುವ ಭರವಸೆಯೇನೆಂದರೆ ಸ್ವತಂತ್ರ ಭಾರತದಲ್ಲಿ ಪಂಜಾಬ್ ಹೊರತು ಮಿಕ್ಕೆಲ್ಲ ಪ್ರಾಂತಗಳಲ್ಲಿ, ಅಲ್ಪಸಂಖ್ಯಾತರಾದ ಮಹಮದೀಯರೇ ಮೊದಲಾದವರಿಗೆ ಯಾವ ರಕ್ಷಣೆ ದೊರೆಯುತ್ತದೋ ಅದೇ ರಕ್ಷಣೆ ಸಿಖ್ಖರಿಗೂ ದೊರೆಯುತ್ತದೆ ಎಂಬುದಾಗಿ."

ಪ್ರಮುಖ ಅಲ್ಪಸಂಖ್ಯಾತರು"ಎಂಬುದಾಗಿ ಸೇರಿಸಬೇಕೆಂದು ಡಾ. ಅಂಬೇಡ್ಕರ್ ಮತ್ತು ಸರ್ದಾರ್ ಉಜ್ಜಲಸಿಂಗರು ಬಯಸಿದರು)

ಇಂತಹ ವ್ಯವಸ್ಥೆಯಲ್ಲಿ ಜಂಟಿ ಹೊಣೆಗಾರಿಕೆಯುಳ್ಳ ಶಾಸಕಾಂಗವು ಕೆಲಸ ಮಾಡುವುದರಲ್ಲಿರುವ ತೊಂದರೆಗಳನ್ನೂ ಗಮನಿಸಲಾಯಿತು."

"ಉಪ ಸಮಿತಿಯಲ್ಲಿ ನಡೆದ ಚರ್ಚೆಗಳು ಪರಿಷತ್ತಿನ ಪ್ರತಿನಿಧಿಗಳಿಗೆ ತಮ್ಮ ಈ ವ್ಯವಸ್ಥೆಯಲ್ಲಿರಬಹುದಾದ ತೊಂದರೆಗಳನ್ನು ಎದುರಿಸಬೇಕಾದ ಪೂರ್ವಸಿದ್ಧತೆಯನ್ನು ದೊರಕಿಸಿತಾದರೂ ಅವರು ಯಾವ ಒಮ್ಮತಕ್ಕೂ ಬರಲು ಸಾಧ್ಯವಾಗಲಿಲ್ಲ."

"ಬ್ರಿಟಿಷ್ ಸರ್ಕಾರವು ಯಾವುದೇ ಜನಾಂಗವು ವಿರೋಧಿಸುವಂತಹ ಚುನಾವಣಾ ಪದ್ಧತಿಯನ್ನು, ಯಾವ ಕಾರಣದಿಂದಲೂ ವಿಧಿಸುವುದಿಲ್ಲ ಎಂಬುದನ್ನು ಇಲ್ಲಿ ಸ್ಪಷ್ಟಪಡಿಸಲಾಯಿತು. ಒಮ್ಮತ ದೊರೆಯದ ಈ ಪ್ರತ್ಯೇಕ ಚುನಾವಣಾ ಪದ್ಧತಿಯಲ್ಲಿ ಅದೆಷ್ಟೇ ದೋಷವಿರಲಿ, ಹೊಸ ಸಂವಿಧಾನದ ಚುನಾವಣಾ ಪದ್ಧತಿಗೆ ಅದು ಆಧಾರ ಸ್ವರೂಪವಾಗಿರಬೇಕೆಂಬುದು, ಸ್ಪಷ್ಟವಾಗಿದ್ದಿತು. ಇದರಿಂದಾಗಿ ಪ್ರಾತಿನಿಧ್ಯದಲ್ಲಿ ಪರಸ್ಪರ ಪ್ರಮಾಣದ ಸಮಸ್ಯೆ ಮೂಡಿತು. ಈ ಹಿನ್ನೆಲೆಯಲ್ಲಿ ದಲಿತವರ್ಗದವರ ಬೇಡಿಕೆಯನ್ನು ಸೂಕ್ತ ರೀತಿಯಲ್ಲಿ ಪರಿಗಣಿಸಲೇಬೇಕಾಗಿದ್ದಿತು."

"ಉಪ ಸಮಿತಿಯು ಮಾಡಿದ ಸಲಹೆಗಳ ವಿಚಾರದಲ್ಲಿ ಪರಿಷತ್ತಿನ ಸದಸ್ಯರು ಒಮ್ಮತಕ್ಕೆ ಬರುವುದು ಅತ್ಯಾವಶ್ಯಕವೆಂಬುದನ್ನು ಅವರು ಮನಗಂಡು, ಪರಸ್ಪರ ಚಿಂತಿಸಿ, ತಮ್ಮ ಈ ಚಿಂತನೆಯ ಫಲವನ್ನು ಮುಂದಿನ ಸಭೆಗೆ ವರದಿ ಮಾಡಬೇಕೆಂದು ಉಪ ಸಮಿತಿಯು ಸೂಚಿಸಿತು." ಮೊದಲನೆಯ ದುಂಡುಮೇಜಿನ ಪರಿಷತ್ತನ್ನು ಕಾಂಗ್ರೆಸ್ ಬಹಿಷ್ಕರಿಸಿದ್ದರಿಂದ ಶ್ರೀಮಾನ್ ಗಾಂಧಿಯವರು ಅದರಲ್ಲಿ ಭಾಗವಹಿಸಿರಲಿಲ್ಲ. ಅವರು ಎರಡನೆಯ ದುಂಡುಮೇಜಿನ ಪರಿಷತ್ತಿನಲ್ಲಿ ಭಾಗವಹಿಸಿದರು. ದಲಿತವರ್ಗದವರ ಈ ಬೇಡಿಕೆಯ ವಿಚಾರದಲ್ಲಿ ಅವರು ತೆಗೆದುಕೊಂಡ ನಿಲುವಾದರೂ ಏನು?

ಸಂಧಾನ ಮತ್ತು ಚರ್ಚೆಯಿಂದ ರೂಪುಗೊಳ್ಳುತ್ತಿರುವ ಈ ಸಂವಿಧಾನದ ಭಾರತಕ್ಕೆ ಪೂರ್ಣ ಸ್ವರಾಜ್ಯವನ್ನು ದೊರಕಿಸಿಕೊಡುವಂತಿದ್ದುದರಿಂದ, ಶ್ರೀಮಾನ್ ಗಾಂಧಿಯವರು ಇದರಲ್ಲಿ ಹೆಚ್ಚು ಆಸಕ್ತಿಯನ್ನು ತಳೆಯುತ್ತಾರೆ ಹಾಗೂ ಅಲ್ಪಸಂಖ್ಯಾತರ ಪ್ರಾತಿನಿಧ್ಯದಂತಹ ಗೌಣ ವಿಚಾರದಲ್ಲಿ ಅವರು ಗಮನ ಹರಿಸಲಾರರೆಂದು, ಪ್ರತಿಯೊಬ್ಬರೂ ನಿರೀಕ್ಷಿಸಿದ್ದರು. ಆದರೆ ವಸ್ತುಸ್ಥಿತಿ ಈ ನಿರೀಕ್ಷೆಯನ್ನು ಪೂರ್ಣವಾಗಿ ಸುಳ್ಳು ಮಾಡಿತು. ಶ್ರೀಮಾನ್ ಗಾಂಧಿಯವರು ಬ್ರಿಟಿಷ್ ಸಾಮ್ರಾಜ್ಯದ ವಿರುದ್ಧದ ತಮ್ಮ ಹೋರಾಟವನ್ನೇ ಮರೆತರು. ಪೂರ್ಣ ಸ್ವರಾಜ್ಯವನ್ನು ದೊರಕಿಸಿಕೊಡುವ ಸಂವಿಧಾನವನ್ನು ರೂಪಿಸಲು ನಿಯೋಜಿತರಾಗಿ ತಾವು ಬಂದಿದ್ದೇವೆ ಎಂಬ ಅಂಶವನ್ನು ಸಹ ಅವರು ಮರೆತೇಬಿಟ್ಟರು.[೧]

೧. ಕಾಂಗ್ರೆಸ್ ಶ್ರೀಮಾನ್ ಗಾಂಧಿಯನ್ನು ತಮ್ಮ ಪ್ರತಿನಿಧಿಯಾಗಿ ಆರಿಸಿದಾಗ ಅವರಿಗೆ ವಹಿಸಿದ ಹೊಣೆಗಾರಿಕೆಯ ಸ್ವರೂಪವನ್ನು ಈ ಕೆಳಗಿನ ಠರಾವಿನಲ್ಲಿ ನಾವು ಕಾಣಬಹುದು : (ಕರಾಚಿಯಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದಲ್ಲಿ ಅಂಗೀಕಾರವಾದ್ದು ಇದು.)

"ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಮತ್ತು ಬ್ರಿಟಿಷ್ ಸರ್ಕಾರದ ನಡುವೆ ಆದ ಪೂರ್ವಭಾವಿ ಒಪ್ಪಂದಗಳನ್ನು ಕಾಂಗ್ರೆಸ್ ಸರ್ವಸದಸ್ಯರ ಸಭೆಯಲ್ಲಿ ಪರಿಶೀಲಿಸಿ, ಪೂರ್ಣ ಸ್ವರಾಜ್ಯವೇ ಕಾಂಗ್ರೆಸ್‌ನ ಗುರಿ ಎಂಬುದನ್ನು ಮತ್ತೊಮ್ಮೆ ಸ್ಪಷ್ಟಪಡಿಸುತ್ತದೆ. ಕಾಂಗ್ರೆಸ್ಸಿಗೆ ಮತ್ತಾವುದಾದರೂ ದಾರಿ ತೆರವಾಗಿ, ತಮ್ಮ ಪ್ರತಿನಿಧಿಗಳು ಬ್ರಿಟಿಷ್ ಸರ್ಕಾರದ ಪ್ರತಿನಿಧಿಗಳೊಂದಿಗೆ ಯಾವುದಾದರೂ ಸಮಿತಿಯಲ್ಲಿ ಚರ್ಚಿಸುವುದಾದರೆ ಆಗ ಅವರು ಮೇಲಿನ ಅಂಶವನ್ನು ಗಮನದಲ್ಲಿಟ್ಟುಕೊಂಡು, ಸೈನ್ಯ ಅಂತರರಾಷ್ಟ್ರೀಯ ವ್ಯವಹಾರ, ಹಣಕಾಸಿನ ವ್ಯವಹಾರ, ಆರ್ಥಿಕ ಸಿದ್ಧಾಂತಗಳು–

ಶ್ರೀಮಾನ್ ಗಾಂಧಿಯವರು ಮುಖ್ಯ ವಿಚಾರವನ್ನೇ ಮರೆತು ಅಲ್ಪಸಂಖ್ಯಾತರೊಂದಿಗೆ ಹೋರಾಡುತ್ತ ಅಸ್ಪೃಶ್ಯರು ಪ್ರತ್ಯೇಕ ಪ್ರಾತಿನಿಧ್ಯವನ್ನು ಬಯಸಿದ ವಿಚಾರದಲ್ಲಿ ಕೆಂಡ ಕಾರಲು ಆರಂಭಿಸಿದ್ದು ನಮಗೆ ಆಶ್ಚರ್ಯವೆನಿಸಿತು. ಅವರು ದಲಿತವರ್ಗದ ಪ್ರತಿನಿಧಿಗಳನ್ನು ಖಂಡತುಂಡವಾಗಿ ವಿರೋಧಿಸಿದರು. ಅಸ್ಪೃಶ್ಯರ ಬೇಡಿಕೆಯನ್ನು ಗಮನಿಸಲು ಅವರು ಸಿದ್ಧರಿರಲಿಲ್ಲ. ಅದನ್ನು ಅಸ್ಪೃಶ್ಯರ ಉದ್ಧಟತನವೆಂದರಿತು. ಶ್ರೀಮಾನ್ ಗಾಂಧಿ ಕಿಡಿಕಿಡಿಯಾದರು. ಇದನ್ನು ಕಂಡು ಒಟ್ಟು ಪರಿಷತ್ತೇ ಆಶ್ಚರ್ಯಗೊಂಡಿತು. ಅಸ್ಪೃಶ್ಯರ ಮಿತ್ರರೆನಿಸಿದ ಇವರು, ಅವರ ಬೇಡಿಕೆಗಳನ್ನು ಇಷ್ಟೊಂದು ತೀವ್ರವಾಗಿ ವಿರೋಧಿಸಿದುದು ಎಲ್ಲರಿಗೂ ಆಶ್ಚರ್ಯವೆನಿಸಿತು. ಅವರ ಮಿತ್ರರಂತೂ ಗಾಬರಿಗೊಂಡರು, ಮಹಮದೀಯರು ಮತ್ತು ಸಿಖ್ಖರು ಇಂತಹುದೇ ಬೇಡಿಕೆಯನ್ನು ಮುಂದಿಟ್ಟಾಗ ಅದನ್ನು ಒಪ್ಪಿದ ಗಾಂಧಿಯವರು, ಕ್ರೈಸ್ತರು, ಐರೋಪ್ಯರು ಮತ್ತು ಆಂಗ್ಲೋ ಇಂಡಿಯನ್ನರು ಇದನ್ನೇ ಬೇಡಿದಾಗ ವಿರೋಧಿಸದೆ ಸುಮ್ಮನಿದ್ದರು. ಅಸ್ಪೃಶ್ಯರು ಇದನ್ನು ಬೇಡಿದಾಗ ಮಾತ್ರ ಶ್ರೀಮಾನ್ ಗಾಂಧಿಯವರು ಏಕೆ ವಿರೋಧಿಸುತ್ತಾರೆಂಬುದನ್ನು ಅವರ ಮಿತ್ರರೂ ತಿಳಿಯದಾದರು. ಮಹಮದೀಯರು ಸಿಖ್ಖರು, ಕ್ರೈಸ್ತರು, ಐರೋಪ್ಯರು ಮತ್ತು ಆಂಗ್ಲೋ ಇಂಡಿಯನ್ನರು– ಇವರು ಎಲ್ಲ ರೀತಿಯಲ್ಲಿಯೂ ಅಸ್ಪೃಶ್ಯರಿಗಿಂತ ಉತ್ತಮ ಸ್ಥಿತಿಯಲ್ಲಿದ್ದರು. ಆರ್ಥಿಕವಾಗಿ ಅವರೆಲ್ಲರೂ ಸಬಲರಾಗಿದ್ದರು. ಅಸ್ಪೃಶ್ಯರಾದರೋ ಬಡವರಲ್ಲಿ ಕಡುಬಡವರಾಗಿದ್ದರು. ಶೈಕ್ಷಣಿಕವಾಗಿ ಮೊದಲಿನವರೆಲ್ಲಾ ಬಹಳ ಮುಂದುವರಿದಿದ್ದರೆ, ಇವರು ಹಿಂದೆ ಬಿದ್ದಿದ್ದರು. ಸಾಮಾಜಿಕವಾಗಿ ಅವರೆಲ್ಲರೂ ಗೌರವ ಸ್ಥಾನದಲ್ಲಿದ್ದರೆ, ಅಸ್ಪೃಶ್ಯರು ಎಲ್ಲೆಲ್ಲಿಯೂ ಬಹಿಷ್ಕೃತರಾಗಿದ್ದರು. ಅವರೆಲ್ಲ ಸ್ವತಂತ್ರವಾದ ಪ್ರಜೆಗಳೆನಿಸಿದ್ದರೆ, ಅಸ್ಪೃಶ್ಯರು ನಾನಾ ರೀತಿಯ ನ್ಯೂನತೆಗಳಿಂದ ಬಳಲಿದ್ದರು. ಅಸ್ಪೃಶ್ಯರಿಗೆ ಸಾಮಾಜಿಕ ದಂಡನೆ ಮತ್ತು ಬಹಿಷ್ಕಾರಗಳು ದಿನನಿತ್ಯದ ವಿಧಿಯಾಗಿದ್ದರೆ, ಮಿಕ್ಕವರಿಗೆ ಅಂತಹ ತೊಡಕುಗಳಾವುವೂ ಇರಲಿಲ್ಲ. ಈ ವ್ಯತ್ಯಾಸಗಳನ್ನೆಲ್ಲಾ ಗಮನಿಸಿದಾಗ ಭಾರತದ ಜನತೆಯಲ್ಲಿ ಯಾರಿಗಾದರೂ ವಿಶೇಷವಾದ ರಕ್ಷಣೆ ಬೇಕೆನಿಸುವುದಾದರೆ, ಅದು ಅಸ್ಪೃಶ್ಯರಿಗೆ ದೊರೆಯಬೇಕು, ಎಂಬುದರಲ್ಲಿ ಯಾವ ಅನುಮಾನವೇ ಇರಲಾರದು. ಗಾಂಧಿಯವರ ಐರೋಪ್ಯ ಸ್ನೇಹಿತರು ಈ ವಿಚಾರವಾಗಿ ಶ್ರೀಮಾನ್ ಗಾಂಧಿಯೊಂದಿಗೆ ಸಂವಾದಕ್ಕಿಳಿದಾಗ, ಅವರು ಉದ್ರೇಕಗೊಳ್ಳುತ್ತಿದ್ದರು ಮತ್ತು ನಾನು ಕಂಡಂತೆ ಅವರ ಆತ್ಮೀಯರಾದ ಇಬ್ಬರೊಂದಿಗೆ ಇವರಿಗೆ ವಿರಸವೇ ಬೆಳೆಯಿತು.

ಅಸ್ಪೃಶ್ಯರ ಬೇಡಿಕೆಯನ್ನು ಅಸ್ಪೃಶ್ಯರ ಹಿತದೃಷ್ಟಿಯಿಂದಲೇ ನಾನು ಪ್ರಾಮಾಣಿಕವಾಗಿ ವಿರೋಧಿಸುತ್ತಿದ್ದೇನೆ ಎಂಬುದನ್ನು, ಶ್ರೀಮಾನ್ ಗಾಂಧಿಯವರು ತಮ್ಮ ಎದುರಾಳಿಗಳಿಗೆ ಒಪ್ಪುವಂತೆ ವಿವರಿಸಲು ಅಶಕ್ತರಾದಾಗ, ಅವರಿಗೆ ಕೋಪ ಬರುತ್ತಿದ್ದಿತು. ತಾನು ದಲಿತವರ್ಗದವರ ಬೇಡಿಕೆಯನ್ನು ಏಕೆ ವಿರೋಧಿಸುತ್ತಿದ್ದೇನೆಂಬುದಕ್ಕೆ ಅವರು ಎಲ್ಲಿಯೂ ಸಮಂಜಸವಾದ ವಿವರಣೆಯನ್ನು ಕೊಡಲಿಲ್ಲ. ಅವರು ಲಂಡನ್ನಿನಲ್ಲಿದ್ದಾಗ ತಮ್ಮ ಈ ನಿಲುವನ್ನು ಸಮರ್ಥಿಸಲು ಮೂರು ವಾದಗಳನ್ನು ಮುಂದಿಡುತ್ತಿದ್ದರು. ದುಂಡುಮೇಜಿನ ಪರಿಷತ್ತಿನ ಸಂಯುಕ್ತರ ಚುನಾವಣಾ ಸಮಿತಿಯ ಸದಸ್ಯರಾಗಿ ಶ್ರೀಮಾನ್ ಗಾಂಧಿಯವರು ಈ ರೀತಿ ಹೇಳಿದರು :

"ಕಾಂಗ್ರೆಸ್ ತಾನು ಆರಂಭವಾದಂದಿನಿಂದಲೂ ಅಸ್ಪೃಶ್ಯರೆನಿಸಿದವರ ಸಮಸ್ಯೆಯನ್ನು ಕೈಗೆತ್ತಿಕೊಂಡಿದೆ. ಕಾಂಗ್ರೆಸ್ಸು ತನ್ನ ವಾರ್ಷಿಕ ಸಮ್ಮೇಳನಗಳಲ್ಲಿ ಗತಿಸಿದ ರಾನಡೆಯವರಿಗೆ ಅತಿ ಮಹತ್ವದ್ದೆನಿಸಿದ ಸಾಮಾಜಿಕ

ಇವುಗಳ ಮೇಲೆ ರಾಷ್ಟ್ರಕ್ಕೆ ಪೂರ್ಣ ನಿಯಂತ್ರಣವಿದ್ದು ಭಾರತದಲ್ಲಿ ಬ್ರಿಟಿಷ್ ಸರ್ಕಾರವು ನಡೆಸುವ ಆರ್ಥಿಕ ವ್ಯವಹಾರಗಳನ್ನು ನಿಷ್ಪಕ್ಷಪಾತವಾದ ನ್ಯಾಯಮಂಡಲಿಯಿಂದ ಪರಿಶೀಲಿಸುವ ಮತ್ತು ಭಾರತ ಮತ್ತು ಬ್ರಿಟಿಷ್ ಸರ್ಕಾರಗಳ ನಡುವಿನ ಒಪ್ಪಂದಗಳನ್ನು ಭಾರತದ ಹಿತಸಾಧನಕ್ಕೆ ಅನುಗುಣವಾಗಿ ಮುಂದುವರಿಸುವ ಅಥವಾ ಅಂತ್ಯಗೊಳಿಸುವ, ಸ್ವಾತಂತ್ರ್ಯ ಕಾಂಗ್ರೆಸ್ ಪ್ರತಿನಿಧಿಗಳಿಗಿರುತ್ತದೆ."

ಸುಧಾರಣೆಯ ಕಾರ್ಯಕ್ರಮಗಳಲ್ಲಿ ಅಸ್ಪೃಶ್ಯರಿಗೆ ಸಂಬಂಧಿಸಿದ ಸುಧಾರಣೆಗೆ ಬಹುಮಹತ್ವದ ಸ್ಥಾನವನ್ನು ಕೊಡುತ್ತಿದೆ. ೧೯೨೦ರಲ್ಲಿ ಕಾಂಗ್ರೆಸ್ಸು ಈ ದಿಶೆಯಲ್ಲಿ ಒಂದು ಮಹತ್ವದ ಹೆಜ್ಜೆಯನ್ನಿಟ್ಟು, ಅಸ್ಪೃಶ್ಯತಾ ನಿವಾರಣೆಯನ್ನು ತನ್ನ ರಾಜಕೀಯ ಕಾರ್ಯಕ್ರಮದ ಒಂದು ಚಳುವಳಿಯಾಗಿ ಸ್ವೀಕರಿಸಿತು. ಹಿಂದೂ ಮುಸ್ಲಿಮರ ಐಕ್ಯ, ಅಂದರೆ ಎಲ್ಲ ವರ್ಗಗಳ ಸಮಾನತೆಯೂ ಪೂರ್ಣ ಸ್ವರಾಜ್ಯ ಸ್ಥಾಪನೆಗೆ ಅತ್ಯಾವಶ್ಯಕ ಎಂದು ಕಾಂಗ್ರೆಸ್ ಹೇಗೆ ತಿಳಿಯಿತೋ ಹಾಗೆಯೇ, ಅಸ್ಪೃಶ್ಯತಾ ನಿವಾರಣೆ ಪೂರ್ಣ ಸ್ವರಾಜ್ಯ ಸ್ಥಾಪನೆಗೆ ಅನಿವಾರ್ಯ ಎಂದು ಗುರುತಿಸಿತು."

ದುಂಡುಮೇಜಿನ ಪರಿಷತ್ತಿನ ಅಲ್ಪಸಂಖ್ಯಾತರ ಉಪ ಸಮಿತಿಯಲ್ಲಿ ಶ್ರೀಮಾನ್ ಗಾಂಧಿ ಮತ್ತೊಂದು ವಾದವನ್ನು ಮುಂದಿಟ್ಟರು.

"ಇತರ ಅಲ್ಪಸಂಖ್ಯಾತರು ಮಂಡಿಸಿದ ವಾದವನ್ನೇನೋ ನಾನು ಅರ್ಥಮಾಡಿಕೊಳ್ಳಬಲ್ಲೆ, ಆದರೆ ಅಸ್ಪೃಶ್ಯರು ಮಂಡಿಸಿದ ಹಕ್ಕೊತ್ತಾಯ ನನಗೆ "ಅತ್ಯಂತ ಕ್ರೂರವಾಗಿ" ಕಾಣುತ್ತದೆ. ಅದರಿಂದಾಗಿ ಅವರು ಶಾಶ್ವತವಾಗಿ ಹಿಂದೂಗಳಿಂದ ಪ್ರತ್ಯೇಕಗೊಂಡಂತಾಗುತ್ತದೆ. ಅಸ್ಪೃಶ್ಯರ ಮಹತ್ವದ ಹಿತಾಸಕ್ತಿಯನ್ನು, ಭಾರತದ ಸ್ವಾತಂತ್ರ್ಯದ ಗಳಿಕೆಗಾಗಿಯಾದರೂ ತ್ಯಾಗ ಮಾಡಲು ನಾನು ಸಿದ್ಧನಿಲ್ಲ. ನಾನು ವೈಯಕ್ತಿಕವಾಗಿ ಎಲ್ಲ ಅಸ್ಪೃಶ್ಯರ ಪ್ರತಿನಿಧಿ ಎಂದು ವಾದಿಸುತ್ತೇನೆ. ನಾನು ಇಲ್ಲಿ ಕಾಂಗ್ರೆಸ್‌ನ ಪರವಾಗಿ ಮಾತ್ರವೇ ಮಾತನಾಡುತ್ತಿಲ್ಲ. ನನ್ನ ಪರವಾಗಿಯೂ ಮಾತನಾಡುತ್ತಿದ್ದೇನೆ ಮತ್ತು ಅಸ್ಪೃಶ್ಯರ ಮತವನ್ನು ಎಣಿಸಿ ಅವರ ಪ್ರಾತಿನಿಧ್ಯವನ್ನು ನಿರ್ಣಯಿಸುವುದಾದರೆ ನನಗೆ ಅತ್ಯಂತ ಹೆಚ್ಚು ಮತ ದೊರೆಯುತ್ತದೆಂಬುದು ನನ್ನ ವಾದ. ಪ್ರತ್ಯೇಕ ಚುನಾವಣೆ ಮತ್ತು ಪ್ರತ್ಯೇಕ ಮೀಸಲಾತಿಯಿಂದ ಅಸ್ಪೃಶ್ಯತೆಯಂತಹ ದುಷ್ಟಪದ್ಧತಿಯನ್ನು ಪರಿಹರಿಸಲು ಸಾಧ್ಯವಿಲ್ಲ. ಅಸ್ಪೃಶ್ಯತೆಯಿಂದ ನಾಚಿಕೆ ಪಡಬೇಕಾದವರು ಅಸ್ಪೃಶ್ಯರಲ್ಲ ಸವರ್ಣ ಹಿಂದೂಗಳು ಎಂಬ ಅಂಶವನ್ನು ಭಾರತದ ಒಂದು ತುದಿಯಿಂದ ಮತ್ತೊಂದು ತುದಿಯವರೆಗೂ ನಾನು ಪ್ರಚಾರ ಮಾಡುತ್ತೇನೆ. ಅಸ್ಪೃಶ್ಯತೆಯಂತಹ ದುಷ್ಟ ಪದ್ಧತಿಯನ್ನು ತೊಡೆದುಹಾಕಲು ಕಂಕಣಬದ್ಧರಾದ ಹಿಂದೂ ಸುಧಾರಕರ ಗುಂಪು ಈಗ ಸಿದ್ಧವಾಗಿದೆ ಎಂಬ ಅಂಶವನ್ನು ಈ ಸಮಿತಿ ಮತ್ತು ಇಂದಿನ ಜಗತ್ತೆಲ್ಲಾ ಮನಗಾಣಲಿ. ನಮ್ಮ ಸರ್ಕಾರಿ ದಾಖಲೆ ಪುಸ್ತಕ ಮತ್ತು ಜನಗಣತಿಯಲ್ಲಿ ಅಸ್ಪೃಶ್ಯರನ್ನು ಪ್ರತ್ಯೇಕ ವರ್ಗವೆಂದು ವರ್ಗೀಕರಿಸುವುದನ್ನು ನಾವು ಬಲ್ಲೆವು. ಸಿಖ್ಖರು ಎಲ್ಲ ಕಾಲಕ್ಕೂ ಹಾಗೇ ಉಳಿಯಬಹುದು. ಮಹಮದೀಯರು ಮತ್ತೆ ಐರೋಪ್ಯರೂ ಬೇರೆಯಾಗಿ ಉಳಿಯಬಹುದು. ಅಸ್ಪೃಶ್ಯರು ನಿರಂತರವಾಗಿ ಅಸ್ಪೃಶ್ಯರಾಗಿಯೇ ಉಳಿಯುತ್ತಾರೆಯೇ? ಅಸ್ಪೃಶ್ಯತೆ ಸದಾ ಉಳಿಯುವುದೇ ಆದರೆ, ನಾನು ಹಿಂದೂಧರ್ಮ ನಾಶವಾಗಲೆಂದು ಬಯಸುತ್ತೇನೆ. ಡಾ. ಅಂಬೇಡ್ಕರರ ವ್ಯಕ್ತಿತ್ವ ಮತ್ತು ಸಾಮರ್ಥ್ಯವನ್ನು ಗೌರವಿಸುತ್ತಾ ಅಸ್ಪೃಶ್ಯರ ಏಳಿಗೆಗಾಗಿ ಅವರ ಪ್ರಯತ್ನವನ್ನು ಮನ್ನಿಸಿ ಅತ್ಯಂತ ನಮ್ರತೆಯಿಂದ ನಾನು ಹೇಳುವುದೇನೆಂದರೆ ಅವರು ತಮ್ಮ ಕಹಿ ಅನುಭವಗಳಿಂದಾಗಿ, ಈ ಕ್ಷಣ ಇಂತಹ ಒಂದು ತಪ್ಪು ನಿರ್ಣಯದ ಕಡೆ ವಾಲಿದ್ದಾರೆಯಷ್ಟೆ. ಈ ಮಾತನ್ನು ನಾನು ತುಂಬ ನೊಂದ ಹೃದಯದಿಂದ ಹೇಳುತ್ತಿದ್ದೇನೆ. ಆದರೆ ಇದನ್ನು ಹೇಳದೆ ಹೋದರೆ ನನಗೆ ನನ್ನ ಜೀವನದಷ್ಟು ಪ್ರಿಯವಾದ ಅಸ್ಪೃಶ್ಯತಾ ಸಮಸ್ಯೆಗೆ ಅಪಚಾರ ಮಾಡಿದಂತಾಗುತ್ತದೆ. ವಿಶ್ವದ ಸಾಮ್ರಾಜ್ಯವೇ ನಮಗೆ ದೊರೆಯುವಂತಾದರೂ ನಾನು ಅವರ ಹಕ್ಕುಗಳನ್ನು ಬಲಿಗೊಡಲಾರೆ. ಡಾ. ಅಂಬೇಡ್ಕರ್‌ರವರು ಭಾರತದ ಎಲ್ಲ ಅಸ್ಪೃಶ್ಯರ ಪರವಾಗಿ ತಮ್ಮ ವಾದವನ್ನು ತಾನು ಮುಂದಿಟ್ಟಿದ್ದೇನೆ ಎಂಬುದಾಗಿ ಹೇಳುವುದಾದರೆ ಅದು ಸರಿಯಾದ ಬೇಡಿಕೆಯಲ್ಲ ಎಂದು ನಾನು ಅತಿ ಜವಾಬ್ದಾರಿಯಿಂದಲೇ ಹೇಳಬಯಸುತ್ತೇನೆ. ಇದರಿಂದಾಗಿ ಹಿಂದೂ ಧರ್ಮದಲ್ಲಿ ಒಡಕುಂಟಾಗುತ್ತದೆ ಮತ್ತು ಅದನ್ನು ನಾನು ಎಂದೂ ತೃಪ್ತಿಯಿಂದ

ಬಯಸಲಾರೆ. ಅಸ್ಪೃಶ್ಯರು ಇಸ್ಲಾಂ ಅಥವಾ ಕ್ರೈಸ್ತ ಧರ್ಮಕ್ಕೆ ಮತಾಂತರಗೊಂಡರೂ ನಾನು ನಿಷೇಧಿಸಲಾರೆ. ಹಿಂದೂಧರ್ಮವು ಒಡೆದು ಹಳ್ಳಿ ಹಳ್ಳಿಯಲ್ಲಿಯೂ ಎರಡು ಭಾಗಗಳಾಗುವುದಕ್ಕಿಂತ ಅದನ್ನೇ ನಾನು ಸಹಿಸಿಯೇನು. ಅಸ್ಪೃಶ್ಯರ ರಾಜಕೀಯ ಸಮಾಜ ಇಂದು ಹೇಗೆ ರೂಪುಗೊಂಡಿದೆ ಎಂಬುದರ ಅರಿವೇ ಇಲ್ಲ. ಆದ್ದರಿಂದ ನನ್ನಲ್ಲಿರುವ ಎಲ್ಲ ಸಾಮರ್ಥ್ಯವನ್ನೂ ವಿನಿಯೋಗಿಸಿ ನಾನೊಬ್ಬನೇ ಈ ಬೇಡಿಕೆಯನ್ನು ವಿರೋಧಿಸುವುದಾದರೂ, ನಾನು ನನ್ನ ಜೀವನವನ್ನೇ ಪಣವಿಟ್ಟು ಇದನ್ನು ವಿರೋಧಿಸುತ್ತೇನೆ ಎಂಬುದನ್ನು ಸ್ಪಷ್ಟವಾಗಿ ಹೇಳುತ್ತೇನೆ."

ಲಂಡನ್ನಿನ ಮಿತ್ರರೊಬ್ಬರ ಮನೆಯ ಸಭೆಯೊಂದರಲ್ಲಿ ಶ್ರೀಮಾನ್ ಗಾಂಧಿಯವರು ಬೇರೊಂದು ರೀತಿಯ ಉತ್ತರಕೊಟ್ಟರು. ಅದೇನೆಂದರೆ :[೧]

"ನನ್ನ ಮನಸ್ಸಿನ ಅಶಾಂತಿಗೆ ಕಾರಣವಾದದ್ದೇನೆಂಬುದನ್ನು ಹೇಳುತ್ತೇನೆ. ಅಲ್ಪಸಂಖ್ಯಾತರ ಹಕ್ಕುಗಳನ್ನು ಒತ್ತೆಯಿಡಲು ಕಾಂಗ್ರೆಸ್ ಸಿದ್ಧವಿಲ್ಲ ಎಂದು ಇದರಿಂದ ನೀವು ತಿಳಿಯಬಹುದು. ಅಸ್ಪೃಶ್ಯರನ್ನು ನಾನು ಚೆನ್ನಾಗಿ ಬಲ್ಲೆ ಎಂದು ಹೇಳುವಷ್ಟರ ಮಟ್ಟಿಗೆ ಬಲ್ಲೆ. ಅವರಿಗೇ ಪ್ರತ್ಯೇಕ ಚುನಾವಣೆ ಬೇಕೆಂದು ಒಪ್ಪುವುದು ಅವರನ್ನು ಕೊಂದಂತಾಗುತ್ತದೆ. ಸದ್ಯದಲ್ಲಿ ಅವರು ಉನ್ನತ ಜಾತಿಯವರ ಅಧೀನದಲ್ಲಿದ್ದಾರೆ. ಉತ್ತಮ ಜಾತಿಯವರು ತಮ್ಮ ಅಧೀನದಲ್ಲಿರುವ ಅಸ್ಪೃಶ್ಯರನ್ನು ತುಳಿದು, ಅವರ ಮೇಲೆ ಸೇಡು ತೀರಿಸಿಕೊಳ್ಳುವ ಸಾಧ್ಯತೆಯಿರುವುದರಿಂದ, ಅದನ್ನು ತಪ್ಪಿಸಲು, ನಾನು ಅವರಿಗೆ ಪ್ರತ್ಯೇಕ ಪ್ರಾತಿನಿಧ್ಯ ಬೇಡವೆಂದು ಹೋರಾಡುತ್ತಿದ್ದೇನೆ. 'ನಾನು ಈ ಮಾತನ್ನು ಹೇಳುವಾಗ ನನ್ನ ಕಳಂಕವನ್ನು ಬಯಲು ಮಾಡುತ್ತಿದ್ದೇನೆಂಬುದನ್ನು ಬಲ್ಲೆ. ಆದರೆ ಇಂದಿನ ಈ ಸ್ಥಿತಿಯಲ್ಲಿ ನಾನು ಅವರ ವಿನಾಶಕ್ಕೆ ಆಹ್ವಾನಕೊಡಲೆ? ನಾನು ಆ ಪಾಪಕ್ಕೆ ಹೊಣೆಗಾರನಾಗಲಾರೆ. ಅಷ್ಟೊಂದು ಸಮರ್ಥರಾದ ಡಾ. ಅಂಬೇಡ್ಕರ್‌ರವರು ದೌರ್ಭಾಗ್ಯದಿಂದ ಈ ಪ್ರಶ್ನೆ ವಿಚಾರದಲ್ಲಿ ತಲೆ ಕೆಡಿಸಿಕೊಂಡಿದ್ದಾರೆ. ಅವರು ಅಸ್ಪೃಶ್ಯರನ್ನು ಪ್ರತಿನಿಧಿಸುತ್ತಾರೆಂಬುದನ್ನು ನಾನು ನಿರಾಕರಿಸುತ್ತೇನೆ.'[೨]

ಅವರ ಯಾವ ವಾದದಲ್ಲಿಯೂ ದೃಢವಾದ ನಿಶ್ಚಯವಿರಲಿಲ್ಲ. ಅಲ್ಲಿ ಅವರಿಗೆ ಸಾಧ್ಯವೂ ಇರಲಿಲ್ಲ. ಅವೆಲ್ಲಾ ಬಿಡಿಬಿಡಿಯಾದ ತಮ್ಮ ಸಮರ್ಥನೆಯ ವ್ಯೂಹದಂತಿದ್ದುವು.

ಅವರ ಮೊದಲನೆಯ ವಾದ ಕಾಂಗ್ರೆಸ್ಸು ಅಸ್ಪೃಶ್ಯರ ಯೋಗಕ್ಷೇಮವನ್ನು ನೋಡಿಕೊಳ್ಳಲು ಮತ್ತು ಅಸ್ಪೃಶ್ಯತೆಯನ್ನು ತೊಡೆದುಹಾಕಲು ಪಣತೊಟ್ಟಿದೆ ಎಂಬುದು. ಈ ವಾದದಲ್ಲಿ ಸತ್ಯವಿದೆ ಎಂಬುದಾಗಿ ಶ್ರೀಮಾನ್ ಗಾಂಧಿಯವರು ಜಗತ್ತಿಗೆಲ್ಲಾ ಸಾರುತ್ತಿದ್ದಾರೆ ಮತ್ತು ತಮ್ಮ ಮುಂದೆ ಇರುವ ಕಾಂಗ್ರೆಸ್ಸು ಮಾಡಲೊಲ್ಲದ್ದನ್ನು ಗಾಂಧಿಯವರು ಅವರಿಂದ ಮಾಡಿಸಲು ಯತ್ನಿಸುತ್ತಿದ್ದಾರೆ. ಅಂತಹ ಒಂದು ಸುಳ್ಳು ಅಭಿಪ್ರಾಯ ಇಷ್ಟೊಂದು ವ್ಯಾಪಕವಾಗಿ ಹಬ್ಬಲು ಹೇಗೆ ಸಾಧ್ಯವಾಯಿತು, ಎಂಬುದು ನನಗೆ ಆಶ್ಚರ್ಯ.

೧. 'ಯಂಗ್ ಇಂಡಿಯಾ', ನವೆಂಬರ್ ೧೯, ೧೯೩೧

೨. ಇದರಿಂದ ಬರುವ ಅಭಿಪ್ರಾಯವೇನೆಂದರೆ ಶ್ರೀಮಾನ್ ಗಾಂಧಿಯವರು ಪ್ರತ್ಯೇಕ ಪ್ರಾತಿನಿಧ್ಯಕ್ಕೆ ಮಾತ್ರ ವಿರೋಧವಾಗಿದ್ದರು. ಜಂಟಿ ಚುನಾವಣೆ ಮತ್ತು ಅಸ್ಪೃಶ್ಯರಿಗೆ ಮೀಸಲಾತಿ ಸ್ಥಾನಕ್ಕೆ ದುಂಡುಮೇಜಿನ ಪರಿಷತ್ತಿನಲ್ಲಿ ಅವರು ಒಪ್ಪಿದ್ದರು, ಎಂಬಂತೆ ಕಾಣುತ್ತದೆ. ಅಲ್ಪಸಂಖ್ಯಾತರ ಉಪ ಸಮಿತಿಯಲ್ಲಿ ಅವರು ಮಾಡಿದ ಭಾಷಣದ ಸಂಗ್ರಹವನ್ನು ನಾನಿಲ್ಲಿ ಕೊಡುತ್ತೇನೆ :

"ಕಾಂಗ್ರೆಸ್ಸು ಹಿಂದೂಗಳು, ಮುಸಲ್ಮಾನರು ಮತ್ತು ಸಿಖ್ಖರಿಗೆ ಸಮ್ಮತವಾಗುವ ಯಾವ ಪರಿಹಾರವನ್ನಾದರೂ ಸದಾ ಒಪ್ಪುತ್ತದೆ, ಆದರೆ ಮತ್ತೆ ಯಾವುದೇ ಅಲ್ಪಸಂಖ್ಯಾತರಿಗಾಗಲಿ ವಿಶೇಷ ಮೀಸಲಾತಿ ಕೊಡುವುದಕ್ಕೆ ಅದು ಸಮ್ಮತಿಸುವುದಿಲ್ಲ, ಎಂಬ ನನ್ನ ಹಿಂದಿನ ಮಾತನ್ನು ಇನ್ನೊಮ್ಮೆ ಹೇಳುತ್ತೇನೆ."

೧೯೨೦ರ ನಾಗಪುರದ ಕಾಂಗ್ರೆಸ್ ಅಧಿವೇಶನದಲ್ಲಿ ಮಾಡಿದ ನಿರ್ಣಯವೇ ಶ್ರೀಮಾನ್ ಗಾಂಧಿ ಮತ್ತು ಅವರ ಸ್ನೇಹಿತರ ಈ ಪ್ರತಿಪಾದನೆಗೆ ಆಧಾರವಾದ್ದರಿಂದ, ನಾನು ನಿರ್ಣಯವನ್ನು ಪದೇ ಪದೇ ಓದಿ ನೋಡಿದ್ದೇನೆ ಮತ್ತು ಬೇರೆಯವರೂ ಓದಿ ನೋಡಿದರೂ ಸಹ ಆ ನಿರ್ಣಯದ ಪೂರ್ಣ ಪಾಠದಲ್ಲಿ ಇವರ ಈ ಪ್ರತಿಪಾದನೆಗೆ ಯಾವ ಆಧಾರವೂ ಇಲ್ಲವೆಂಬುದು ತಿಳಿಯುತ್ತದೆ. ಆ ನಿರ್ಣಯವು ಶ್ರೀಮಾನ್ ಗಾಂಧಿಯವರ ಬುದ್ಧಿ ಕುಶಲತೆಗೆ ಒಂದು ಒಳ್ಳೆಯ ನಿದರ್ಶನ. ಅಸ್ಪೃಶ್ಯರನ್ನು ಹಿಂದೂಗಳ ರಕ್ಷಣೆಯಲ್ಲಿಯೇ ಇಟ್ಟು ಕಾಪಾಡಬೇಕೆಂದು ಶ್ರೀಮಾನ್ ಗಾಂಧಿಯವರು ಮೊದಲಿನಿಂದಲೂ ಪ್ರಯತ್ನಿಸಿದ್ದಾರೆ. ಮಹಮದೀಯರು ಅಥವಾ ಕ್ರೈಸ್ತರು ಅಸ್ಪೃಶ್ಯರ ವಿಚಾರದಲ್ಲಿ ಆಸಕ್ತಿವಹಿಸಲು ಶ್ರೀಮಾನ್ ಗಾಂಧಿಯವರು ಬಿಡುವುದಿಲ್ಲ. ಬ್ರಿಟಿಷರಿಗೆ ಅಂಟಿದ ಅಸ್ಪೃಶ್ಯರು ಅವರಿಂದ ಬೇರ್ಪಟ್ಟು ಹಿಂದೂಗಳಿಗೆ ಅಂಟಿಕೊಳ್ಳಬೇಕೆಂಬುದು ಅವರ ಬಯಕೆ. ಈ ಎರಡನೆಯ ಉದ್ದೇಶ ಸಾಧ್ಯವಾಗಬೇಕಾದರೆ, ಕಾಂಗ್ರೆಸ್ ವೇದಿಕೆಯಿಂದ ಅಸ್ಪೃಶ್ಯತಾ ನಿವಾರಣೆಯನ್ನು ಕುರಿತಂತೆ ನಿರ್ಣಯಗಳನ್ನು ಪದೇ ಪದೇ ಅಂಗೀಕರಿಸುತ್ತಿರಬೇಕು. ಇದನ್ನು ಸಾಧಿಸಲು ಹಿಂದೂಗಳು ಈ ಕರ್ತವ್ಯವನ್ನು ನಿರ್ವಹಿಸಬೇಕು. ಅಲ್ಲಿ ಅಂಗೀಕರಿಸಿದ ನಿರ್ಣಯದ ಉದ್ದೇಶವೇ ಇದು. ಕುಟಿಲನೀತಿಯ ರಾಜಕಾರಣಿಗಳ ಚಮತ್ಕಾರ ಇದು. ಕಾಂಗ್ರೆಸ್ಸು ಸಂಪೂರ್ಣವಾಗಿ ಈ ನಿರ್ಣಯದ ಹಿಂದೆ ಇಲ್ಲ. ಎರಡನೆಯದಾಗಿ ಈ ನಿರ್ಣಯದಲ್ಲಿ ಕಡ್ಡಾಯವಾಗಿ ಅನುಸರಿಸಬೇಕಾದ ಅಂಶವೇನೂ ಇದರಲ್ಲಿಲ್ಲ. ಇದು ಒಂದು ಪ್ರತಿಜ್ಞೆ ಅಥವಾ ಪ್ರಮಾಣವಲ್ಲ. ಇದರಲ್ಲಿ ನೈತಿಕ ಪ್ರಬೋಧನೆಯಿದೆ ಅಷ್ಟೆ. ಅಸ್ಪೃಶ್ಯತೆಯನ್ನು ನಿರ್ಮೂಲ ಮಾಡುವುದು ಹಿಂದೂಗಳ ಕರ್ತವ್ಯ ಎಂದು ಇದರಲ್ಲಿ ಸಲಹೆ ಕೊಡಲಾಗಿದೆ. ಕಾಂಗ್ರೆಸ್ ಸದಸ್ಯತ್ವಕ್ಕೆ ಬೇಕಾದ ಅರ್ಹತೆಗಳನ್ನು ಒಮ್ಮೆ ಶ್ರೀಮಾನ್ ಗಾಂಧಿಯವರು ಬದಲಾಯಿಸಿದರು. ವರ್ಷಕ್ಕೆ ನಾಲ್ಕು ಆಣೆ ಸದಸ್ಯತ್ವದ ಶುಲ್ಕಕ್ಕೆ ಬದಲಾಗಿ ಈ ಕೆಳಗಿನ ಎರಡು ನಿಬಂಧನೆಗಳನ್ನು ಶ್ರೀಮಾನ್ ಗಾಂಧಿಯವರು ವಿಧಿಸಲು ಬಯಸಿದರು: ಒಂದು ಅಸ್ಪೃಶ್ಯತಾ ನಿವಾರಣೆ ಮತ್ತು ಎರಡನೆಯದು ನೂಲುವುದು. ಕಾಂಗ್ರೆಸ್ಸಿಗರು ಈ ಎರಡನೆಯ ನಿಯಮವಾದ ನೂಲಬೇಕೆಂಬ ನಿಬಂಧನೆಯನ್ನು ಒಪ್ಪಲು ಸಿದ್ಧರಿದ್ದರು. ಆದರೆ ಅಸ್ಪೃಶ್ಯತಾ ನಿವಾರಣೆಯನ್ನು ಒಂದು ನಿಯಮವಾಗಿ ಒಪ್ಪಲು ಸಿದ್ಧರಿರಲಿಲ್ಲ. ಈ ನಿಬಂಧನೆಗಳನ್ನು ಒಪ್ಪಲೇಬೇಕೆಂದು ಶ್ರೀಮಾನ್ ಗಾಂಧಿಯವರು ಬಯಸುವುದಾದರೆ, ಆಗ ಕಾಂಗ್ರೆಸ್ ಸಮಿತಿಗಳನ್ನೆಲ್ಲಾ ಮುಚ್ಚಬೇಕಾಗುತ್ತದೆಂದು, ಕಾಂಗ್ರೆಸ್ ಸದಸ್ಯರು ಅವರಿಗೆ ಹೇಳಿದರು. ಅದಕ್ಕಿದ್ದ ಪ್ರಬಲ ವಿರೋಧವನ್ನು ನೋಡಿದ ಶ್ರೀಮಾನ್ ಗಾಂಧಿಯವರು, ತಮ್ಮ ಸೂಚನೆಯನ್ನು ಹಿಂದಕ್ಕೆ ತೆಗೆದುಕೊಂಡರು. ವಸ್ತುಸ್ಥಿತಿ ಹೀಗಿರುವಾಗ ಶ್ರೀಮಾನ್ ಗಾಂಧಿಯವರು ದುಂಡುಮೇಜಿನ ಪರಿಷತ್ತಿನಲ್ಲಿ, ಕಾಂಗ್ರೆಸ್ಸಿಗರು ಅಸ್ಪೃಶ್ಯತಾ ನಿವಾರಣೆಗೆ ಪಣತೊಟ್ಟಿದ್ದಾರಾದ್ದರಿಂದ ಅಸ್ಪೃಶ್ಯರು ಹಿಂದೂಗಳ ಕೃಪೆಯಲ್ಲಿ ಕ್ಷೇಮದಿಂದಿರಬಹುದು ಎಂಬ ಅವರ ವಾದ, ಸತ್ಯವನ್ನು ನಾಶಗೊಳಿಸುವಷ್ಟು ಕ್ಷೀಣಿಸಲು ಶ್ರೀಮಾನ್ ಗಾಂಧಿಯವರು ಸಿದ್ಧರಿದ್ದಾರೆ ಎಂಬುದನ್ನು ತೋರಿಸುತ್ತದೆ.

ಶ್ರೀಮಾನ್ ಗಾಂಧಿಯವರ ಮುಂದಿನ ವಾದವೆನಿಸಿದ ಅಸ್ಪೃಶ್ಯತೆ ನಿವಾರಣೆಯಾಗದೆ ಭಾರತಕ್ಕೆ ಪೂರ್ಣ ಸ್ವರಾಜ್ಯ ಸಾಧ್ಯವಿಲ್ಲ ಎಂಬುದು ಕೇವಲ ಒಂದು ಕೋರಿಕೆಯ ಮಾತೇ ಹೊರತು, ಅದನ್ನು ಕಾಂಗ್ರೆಸ್ಸು ಮತ್ತು ಶ್ರೀಮಾನ್ ಗಾಂಧಿ ಯಾರೊಬ್ಬರೂ ಪ್ರಾಮಾಣಿಕವಾಗಿ ನಂಬಿರಲಿಲ್ಲ. ಅಸ್ಪೃಶ್ಯತೆಯ ಆಚರಣೆ ಎಂದಿನ ಪ್ರಮಾಣದಲ್ಲಿಯೇ ವ್ಯಾಪಿಸಿದ್ದರೂ ಕಾಂಗ್ರೆಸ್ಸು ಮತ್ತು ಗಾಂಧಿಯವರು ಸ್ವಾತಂತ್ರ್ಯದ ಬೇಡಿಕೆಯನ್ನು ಮುಂದಿಟ್ಟರು. ಇದರಿಂದಾಗಿ ಶ್ರೀಮಾನ್ ಗಾಂಧಿ ತಾವು ಆಡಿದ ಮಾತಿನಲ್ಲಿ ವಿಶ್ವಾಸವಿಟ್ಟಿದ್ದರು ಎನಿಸುವುದಿಲ್ಲ. ಅಸ್ಪೃಶ್ಯತೆ ನಿವಾರಣೆಯಾಗದೆ ಭಾರತಕ್ಕೆ ಸ್ವಾತಂತ್ರ್ಯ ಬೇಡ ಎಂಬ ಕಾಂಗ್ರೆಸ್ಸಿನ ಮತ್ತು ಶ್ರೀಮಾನ್ ಗಾಂಧಿಯವರ ಮಾತನ್ನು ಯಾವ ಭಾರತೀಯನೂ, ಅದರಲ್ಲಿಯೂ ಯಾವ ಅಸ್ಪೃಶ್ಯನೂ

ನಂಬಿರಲಿಲ್ಲ. ದುಂಡುಮೇಜಿನ ಪರಿಷತ್ತಿಗೆ ಬಹಳ ಮೊದಲೆ ಶ್ರೀಮಾನ್ ಗಾಂಧಿಯವರಿಗೆ ಈ ಮಾತಿನಲ್ಲಿರುವ ನಂಬಿಕೆ ಎಷ್ಟು ಎಂಬುದನ್ನು ಪರೀಕ್ಷಿಸುವ ಎರಡು ಅವಕಾಶಗಳು ಬಂದುವು ಮತ್ತು ಆ ಎರಡು ಸಾರಿಯೂ ಅವರು ಕೊಟ್ಟ ಉತ್ತರಗಳಿಂದ ಅವರಿಗೂ ಇದರಲ್ಲಿ ನಂಬಿಕೆಯಿರಲಿಲ್ಲವೆಂಬುದು ವೇದ್ಯವಾಗುತ್ತದೆ.

೧೯೨೦ರಲ್ಲಿ ಒಬ್ಬ ಪತ್ರಿಕೆಯ ಬಾತ್ಮೀದಾರ ಶ್ರೀಮಾನ್ ಗಾಂಧಿಯವರನ್ನು ಈ ರೀತಿ ಪ್ರಶ್ನಿಸಿದ[೧]:

"ಹಿಂದೂಗಳಾದ ನಾವು ಬ್ರಿಟಿಷರನ್ನು ತಮ್ಮ ಪಾಪದ ರಕ್ತದ ಕಲೆಯಿಂದ ನಿಮ್ಮನ್ನು ತೊಳೆದುಕೊಳ್ಳಿ ಎಂದು ಹೇಳುವ ಮುನ್ನ, ನಮ್ಮ ಪಾಪದ ರಕ್ತದ ಕಲೆಯಿಂದ ನಾವು ನಮ್ಮನ್ನು ತೊಳೆದುಕೊಳ್ಳಬೇಡವೆ?"

ಇದಕ್ಕೆ ಶ್ರೀಮಾನ್ ಗಾಂಧಿ ಈ ರೀತಿ ಉತ್ತರಿಸಿದರು :

"ನಾನು ಅಸ್ಪೃಶ್ಯರಿಗಾಗಿ ಮಾಡುತ್ತಿರುವ ಕೆಲಸಗಳನ್ನು ಕುರಿತಂತೆ ನನ್ನ ಪತ್ರ ಒಂದನ್ನು ನೆನಪಿಸುತ್ತ, ಕುಪಿತನಾದ ಒಬ್ಬ ಪತ್ರಕರ್ತನು ನನಗೆ ಕರುಣಾಜನಕವಾದ ಒಂದು ಕಾಗದವನ್ನು ಬರೆದನು. ಆ ಪತ್ರಕರ್ತನು ಕೊಟ್ಟ ಶೀರ್ಷಿಕೆಯೊಂದಿಗೆ ಆ ಕಾಗದವನ್ನು ನಾನು ಇಲ್ಲಿ ಕೊಡುತ್ತೇನೆ. "ಹಿಂದೂಗಳಾದ ನಾವು ಬ್ರಿಟಿಷರನ್ನು ತಮ್ಮ ಪಾಪದ ರಕ್ತದ ಕಲೆಯಿಂದ ನಿಮ್ಮನ್ನು ತೊಳೆದುಕೊಳ್ಳಿ, ಎಂದು ಹೇಳುವ ಮುನ್ನ ನಮ್ಮ ಪಾಪದ ರಕ್ತದ ಕಲೆಯನ್ನು ನಾವು ತೊಳೆದುಕೊಳ್ಳಬೇಡವೇ" ಇದು ವಿವೇಕಯುತವಾದ ಹಾಗೂ ಸೂಕ್ತವಾದ ಪ್ರಶ್ನೆ. ಪರಾಧೀನವಾದ ಒಂದು ರಾಷ್ಟ್ರದ ಪ್ರಜೆಯು ತನ್ನ ರಾಷ್ಟ್ರವು ಸ್ವತಂತ್ರವಾಗುವ ಮುನ್ನವೇ ತನ್ನ ಗುಲಾಮರಿಗೆ ಸ್ವಾತಂತ್ರ್ಯ ಕೊಡಬೇಕು ಎನ್ನುವುದಾದರೆ ನಾನು ಈ ದಿನವೇ ಅದನ್ನು ಮಾಡುತ್ತೇನೆ. ಆದರೆ ಅದು ಅಸಾಧ್ಯವಾದ ಕೆಲಸ....."

ಈ ಮಾತನ್ನು ನೋಡಿದ ಮೇಲೆ ಶ್ರೀಮಾನ್ ಗಾಂಧಿ ಮತ್ತು ಕಾಂಗ್ರೆಸ್ಸು ಅಸ್ಪೃಶ್ಯತೆ ನಿವಾರಣೆಯಾಗದ ಹೊರತು ಸ್ವರಾಜ್ಯ ಸಾಧ್ಯವಿಲ್ಲ ಎಂದು ಹೇಳುವ ಮಾತು ಪ್ರಾಮಾಣಿಕವಾದ ಮಾತು ಎಂದೆನಿಸುತ್ತದೆಯೆ? ಮುಂದೆ ಒಮ್ಮೆ ಒಬ್ಬ ಪತ್ರಕರ್ತ ಶ್ರೀಮಾನ್ ಗಾಂಧಿಯವರನ್ನು, ಹಿಂದೂಗಳು ಸ್ವರಾಜ್ಯವನ್ನು ಗಳಿಸುವವರೆಗೆ ನೀವು ಅಸ್ಪೃಶ್ಯರ ಸಮಸ್ಯೆಯನ್ನು ಏಕೆ ಬದಿಗಿಡಬಾರದು ಎಂದು ಕೇಳಿದಾಗ, ಗಾಂಧಿಯವರು ಅವನನ್ನು ಗೇಲಿ ಮಾಡಿದುದೇ ಅವರ ವಾದ ಪ್ರಾಮಾಣಿಕ ಮನುಷ್ಯನೊಬ್ಬನ ವಾದವಲ್ಲ ಎಂಬುದನ್ನು ಹೇಳುತ್ತದೆ.

ಶ್ರೀಮಾನ್ ಗಾಂಧಿಯನ್ನು ಎರಡನೆಯ ಸಾರಿ ಪ್ರಶ್ನಿಸಿದ್ದು ಅವರು ೧೯೩೦ನೆಯ ಮಾರ್ಚ್ ತಿಂಗಳು, ಕಾನೂನನ್ನು ಮುರಿದು ಉಪ್ಪಿನ ಸತ್ಯಾಗ್ರಹಕ್ಕಾಗಿ ದಂಡಿಯಾತ್ರೆ ಹೊರಟಾಗ ಕೆಲವು ಅಸ್ಪೃಶ್ಯರು ದಂಡಿಗೆ ಹೋಗಿ ಅವರನ್ನು ಈ ರೀತಿ ಪ್ರಶ್ನಿಸುತ್ತಾರೆ. ಅಸ್ಪೃಶ್ಯತೆ ನಿವಾರಣೆಯಾಗದೆ ಸ್ವರಾಜ್ಯ ಸಾಧ್ಯವಿಲ್ಲ ಎಂಬ ನಿಮ್ಮ ಮಾತು ಈಗ ಏನಾಯಿತು ಎಂದು ಅವರು ಕೇಳಿದಾಗ, ಶ್ರೀಮಾನ್ ಗಾಂಧಿಯವರು ಈ ಕೆಳಗಿನ ರೀತಿಯಲ್ಲಿ ಹೇಳಿದರೆಂದು ನನಗೆ ವರದಿಯಾಗಿದೆ :

"ಅಸ್ಪೃಶ್ಯರು ಪೂರ್ಣದಲ್ಲಿ ಒಂದು ಅಂಶ. ನಾನು ಪೂರ್ಣದ ಒಳಿತಿಗಾಗಿ ಹೋರಾಡುತ್ತಿದ್ದೇನಾದ್ದರಿಂದ, ನಾನು ಅದರ ಭಾಗವಾದ ಅಸ್ಪೃಶ್ಯರ ಒಳಿತಿಗಾಗಿಯೂ ಹೋರಾಡುತ್ತಿದ್ದೇನೆಂದು ನಂಬುತ್ತೇನೆ."

ಈ ಮಾತನ್ನು ದೃಢಪಡಿಸಲು ಶ್ರೀಮಾನ್ ಗಾಂಧಿಯವರನ್ನು ದಂಡಿಯಲ್ಲಿ ನೋಡಿ ಬಂದವರು ನನಗೆ ಮಾಡಿದ ವರದಿಯ ಹೊರತು ನನ್ನ ಬಳಿ ಬೇರೆ ಆಧಾರವಿಲ್ಲ. ಆದರೆ ಶ್ರೀಮಾನ್ ಗಾಂಧಿ ಅಂತಹುದೇನನ್ನೋ ಹೇಳಿದ್ದಾರೆಂಬುದರಲ್ಲಿ ನನಗೆ ಅನುಮಾನವಿಲ್ಲ. ಏಕೆಂದರೆ ಅವರು ಹೇಳಿದರು ಎಂದು ವರದಿಯಾದ ಈ ಮಾತು, ಯಂಗ್ ಇಂಡಿಯಾದಲ್ಲಿ ಅವರು ಪತ್ರಕರ್ತನಿಗೆ ಕೊಟ್ಟಿರುವ

---

೧. 'ಯಂಗ್ ಇಂಡಿಯಾ', ೨೭–೧೦–೧೯೨೦.

ಉತ್ತರದೊಂದಿಗೆ ಹೋಲಿಕೆಯಾಗುತ್ತದೆ. ಆಗ ಗಾಂಧಿ ಹೀಗೆ ಹೇಳಿದರು:

"......ಪಂಚಮರನ್ನು ಕುರಿತಾದ ಸಮಸ್ಯೆ ನನಗೆ ನನ್ನ ಪ್ರಾಣದಷ್ಟು ಪ್ರಿಯವಾದರೂ ನಾನು ಈಗ ಅಸಹಕಾರ ಚಳುವಳಿಯ ವಿಚಾರದಲ್ಲಿ ನನ್ನ ಪೂರ್ಣ ಗಮನವನ್ನು ಹರಿಸುವುದರಲ್ಲಿ ತೃಪ್ತನಾಗಿದ್ದೇನೆ. ದೊಡ್ಡದರಲ್ಲಿ ಸಣ್ಣದು ಐಕ್ಯಗೊಂಡಿರುತ್ತದೆ ಎಂಬುದರಲ್ಲಿ ನನಗೆ ವಿಶ್ವಾಸವಿದೆ."

ಈ ಮಾತುಗಳು ಒಬ್ಬ ಪ್ರಾಮಾಣಿಕ ಮನುಷ್ಯನು ಕೊಡುವ ಉತ್ತರಗಳೆ ? ಯಾವ ಪ್ರಾಮಾಣಿಕ ಮನುಷ್ಯನಾದರೂ ಅಸ್ಪೃಶ್ಯರು ಪೂರ್ಣದ ಒಂದು ಅಂಗ ಎಂದು ನಂಬಲು ಸಾಧ್ಯವೆ.

ಅಸ್ಪೃಶ್ಯರಿಗೆ ವಿಶೇಷ ಪ್ರಾತಿನಿಧ್ಯ ಕೊಡುವುದರಿಂದ ಅಸ್ಪೃಶ್ಯರು ಮತ್ತು ಸ್ಪೃಶ್ಯರ ನಡುವೆ ಈಗ ಇರುವ ಪ್ರತ್ಯೇಕತೆಯನ್ನೇ ಮುಂದುವರಿಸಲು ಅವಕಾಶವಾಗುತ್ತದೆಂಬ ಶ್ರೀಮಾನ್ ಗಾಂಧಿಯ ವಾದ ಅರ್ಥಹೀನವಾದದ್ದು. ಅಸ್ಪೃಶ್ಯತೆಯನ್ನು ನಿವಾರಿಸಲು ಇರುವ ಮಾರ್ಗವೆಂದರೆ, ಅಂತರ್ಜಾತಿ ವಿವಾಹ ಮತ್ತು ಸಹಪಂಕ್ತಿ ಭೋಜನಕ್ಕೆ ಪ್ರೋತ್ಸಾಹ ಕೊಡುವುದು. ಅಸ್ಪೃಶ್ಯರಿಗಿರುವ ನ್ಯೂನತೆಗಳನ್ನು ಪರಿಹರಿಸಲು ಅವರನ್ನು ಸಾರ್ವಜನಿಕ ಬಾವಿಗಳು ಮತ್ತು ಸಾರ್ವಜನಿಕ ಶಾಲೆಗಳಿಗೆ ಸ್ವೀಕರಿಸಬೇಕು. ಅವರಿಗೆ ಪ್ರತ್ಯೇಕ ಪ್ರಾತಿನಿಧ್ಯ ಕೊಡುವುದರಿಂದ, ಅಂತರ್ಜಾತಿ ವಿವಾಹ, ಸಹಪಂಕ್ತಿ ಭೋಜನ, ಸಾರ್ವಜನಿಕ ಬಾವಿ ಮತ್ತು ಶಾಲೆಗಳ ಪ್ರವೇಶಕ್ಕೆ ಅಡ್ಡಿಯಾಗುತ್ತದೆಂದು ಹೇಳುವುದು ಅರ್ಥವಿಲ್ಲದ ಮಾತು. ಈ ಎಲ್ಲ ಆಚರಣೆಗಳನ್ನು ಜಾರಿಗೆ ತಂದಾಗ ಮಾತ್ರ ಅವರಿಗೆ ರಾಜಕೀಯವಾಗಿ ಪ್ರತ್ಯೇಕ ಪ್ರಾತಿನಿಧ್ಯದ ಆವಶ್ಯಕತೆ ಇಲ್ಲ ಎಂದು ತೋರಿಸಬಹುದು. ಶ್ರೀಮಾನ್ ಗಾಂಧಿಯಾಗಲಿ ಅಥವಾ ಕಾಂಗ್ರೆಸ್ ಸಂಸ್ಥೆಯಾಗಲಿ ಈ ದಿಕ್ಕಿನಲ್ಲಿ ಏನಾದರೂ ಸಾಧನೆ ಮಾಡಿದ್ದಾರೆಯೆ? ಬಾರ್ಡೋಲಿ ನಿರ್ಣಯಕ್ಕೆ ಕೊಟ್ಟ ವಿವರಣಾ ರೂಪದ ಟಿಪ್ಪಣಿಯೇ ಹೇಳುತ್ತದೆ ಗಾಂಧಿಯವರು ಮತ್ತು ಕಾಂಗ್ರೆಸ್ ಪಕ್ಷ ಈ ದಿಕ್ಕಿನಲ್ಲಿ ಎಷ್ಟು ದೂರ ಹೋಗಲು ಸಿದ್ಧರಿದ್ದಾರೆ ಎಂಬುದನ್ನು. ಆ ಟಿಪ್ಪಣಿ ಈ ರೀತಿ ಇದೆ:

"ಅಸ್ಪೃಶ್ಯರ ವಿಚಾರದಲ್ಲಿ ಪಕ್ಷಪಾತ ಭಾವ ಎಲ್ಲಿ ಪ್ರಬಲವಾಗಿದೆಯೋ ಅಂತಹ ಕಡೆ ಪ್ರತ್ಯೇಕವಾದ ಸ್ಕೂಲು ಮತ್ತು ಬಾವಿಯ ವ್ಯವಸ್ಥೆಯನ್ನು ಕಾಂಗ್ರೆಸ್ ಖರ್ಚಿನಲ್ಲಿಯೇ ವ್ಯವಸ್ಥೆ ಮಾಡಬೇಕು. ಜೊತೆಗೆ ಅವರ ಮಕ್ಕಳನ್ನು ರಾಷ್ಟ್ರೀಯ ಸ್ಕೂಲುಗಳಿಗೆ ಸೇರಿಸುವಂತಹ ಪ್ರಯತ್ನ ಮಾಡುತ್ತಿರಬೇಕು ಹಾಗೂ ಅಸ್ಪೃಶ್ಯರಿಗೆ ಸಾರ್ವಜನಿಕ ಬಾವಿಗಳಲ್ಲಿ ನೀರು ಸೇದುವ ಅವಕಾಶ ಕೊಡುವಂತೆ ಜನತೆಯ ಮನಸ್ಸನ್ನು ಪರಿವರ್ತಿಸುವ ಪ್ರಯತ್ನವನ್ನು ಮುಂದುವರಿಸಬೇಕು."

ಪ್ರತ್ಯೇಕವಾದ ಸ್ಕೂಲು ಮತ್ತು ಬಾವಿಯ ವ್ಯವಸ್ಥೆ ಮಾಡುವ ಈ ಜನರ ಬಾಯಿನಲ್ಲಿ, ಪ್ರತ್ಯೇಕ ಪ್ರಾತಿನಿಧ್ಯ ಕೊಡುವುದರಿಂದ ಅಸ್ಪೃಶ್ಯರನ್ನು ಪ್ರತ್ಯೇಕಗೊಳಿಸಿದಂತಾಗುತ್ತದೆ ಎಂದು ಹೇಳಲು ಹೇಗೆ ಸಾಧ್ಯವಾಯಿತು? ಈ ಭೇದಭಾವನೆಯನ್ನು ಪೂರ್ಣವಾಗಿ ತೊಡೆದುಹಾಕಬೇಕೆಂಬ ದೃಢ ಸಂಕಲ್ಪವುಳ್ಳವರು ಮಾತ್ರ ಪ್ರತ್ಯೇಕ ಪ್ರಾತಿನಿಧ್ಯದ ವಿರುದ್ಧ ಪ್ರಾಮಾಣಿಕವಾಗಿ ಮಾತನಾಡಲು ಅರ್ಹರಾಗುತ್ತಾರೆ ಮತ್ತು ಅವರ ಮಾತನ್ನು ನಂಬಲೂಬಹುದು.

ಶ್ರೀಮಾನ್ ಗಾಂಧಿಯವರ ಕೊನೆಯ ವಾದ ಬಹು ವಿಲಕ್ಷಣವಾದದ್ದು. ಉತ್ತಮ ಕುಲದವರು ಅಸ್ಪೃಶ್ಯರನ್ನು ತುಳಿದು ಅವರ ಮೇಲೆ ಸೇಡು ತೀರಿಸಿಕೊಳ್ಳುತ್ತಾರೆ ಎನ್ನುವುದಾದರೆ ಅದೇ ಕಾರಣಕ್ಕಾಗಿಯೆ ಅಸ್ಪೃಶ್ಯರಿಗೆ ಪ್ರತ್ಯೇಕ ಪ್ರಾತಿನಿಧ್ಯಕ್ಕೆ ಅವಕಾಶ ಮಾಡಿಕೊಟ್ಟು ಅವರು ಉತ್ತಮ ಕುಲದವರ ದಬ್ಬಾಳಿಕೆಯನ್ನು ವಿರೋಧಿಸಲು ನೆರವಾಗಬೇಕಲ್ಲವೆ. ಶ್ರೀಮಾನ್ ಗಾಂಧಿಯವರು ಹತಾಶರಾಗಿ, ಮಾನಸಿಕ ಸಮತೋಲನವನ್ನೇ ಕಳೆದುಕೊಂಡು, ತಮ್ಮ ವಾದಗಳು ತಮ್ಮನ್ನು ಯಾವ ದಿಕ್ಕಿಗೆ ಕೊಂಡೊಯ್ಯುತ್ತವೆಂಬುದನ್ನೇ ಮರೆತಿದ್ದರು.

ತಮ್ಮ ಈ ವಾದದಿಂದ ತಾನು ಅಸ್ಪೃಶ್ಯರನ್ನು ಹಿಂದೂಗಳ ನಿರಂತರ ದಾಸ್ಯಕ್ಕೆ ಈಡುಮಾಡುತ್ತಿದ್ದೇನೆ, ಎಂಬುದನ್ನೇ ಅವರು ಮರೆತರು. ಶ್ರೀಮಾನ್ ಗಾಂಧಿಯವರ ಈ ವಾದವನ್ನು ಸಂಕ್ಷಿಪ್ತವಾಗಿ ಹೇಳುವುದಾದರೆ "ನೀನು ನಿನ್ನ ಸ್ವಾತಂತ್ರ್ಯವನ್ನು ಬಯಸಬೇಡ, ಏಕೆಂದರೆ ಅದರಿಂದ ನಿನ್ನ ಯಜಮಾನನಿಗೆ ಕೋಪ ಬಂದು ಅವನು ನಿನಗೆ ಕಿರುಕುಳ ಕೊಡುತ್ತಾನೆ" ಎಂದಂತಿದೆ. ಇಂತಹ ವಾದವನ್ನು ಬೇರೆ ಯಾರಾದರೂ ಮಂಡಿಸಿದ್ದರೆ, ಅವರನ್ನು ಟೊಳ್ಳು ಮಾತಿನ ಅಪ್ರಾಮಾಣಿಕರು ಎಂದು ಕರೆಯಲಾಗುತ್ತಿದ್ದಿತು.

ಅಸ್ಪೃಶ್ಯರ ಬೇಡಿಕೆಯ ಪ್ರಾಮಾಣಿಕತೆಯನ್ನು ವಿರೋಧಿಸಲಾಗದ ಶ್ರೀಮಾನ್ ಗಾಂಧಿಯವರು, ಕೊನೆಗೆ ಅಸ್ಪೃಶ್ಯರ ಪ್ರತಿನಿಧಿಗಳನ್ನು ಪ್ರತ್ಯೇಕಿಸಿ, ಅವರಿಗೆ ಬೇರೆ ಯಾವ ಸದಸ್ಯರ ಸಹಕಾರ ಮತ್ತು ಬೆಂಬಲವೂ ದೊರೆಯದಂತೆ ಮಾಡಲು ನಿರ್ಣಯಿಸಿದರು. ಅಸ್ಪೃಶ್ಯರು ಮತ್ತು ಮಹಮದೀಯರ ನಡುವೆ ಸಾಧ್ಯವೆನಿಸಿದ ಹೊಂದಾಣಿಕೆಯನ್ನು ಮುರಿಯಲು ಶ್ರೀಮಾನ್ ಗಾಂಧಿ ಯೋಜಿಸಿದರು. ಈ ಯೋಜನೆಯ ಅಂಗವಾಗಿ ಮಹಮದೀಯರೊಂದಿಗೆ ಒಂದು ಒಪ್ಪಂದ ಮಾಡಿಕೊಂಡು ಅವರನ್ನು ತಮ್ಮ ಕಡೆ ಸೆಳೆದುಕೊಳ್ಳುವುದು ಅವರ ಉದ್ದೇಶವಾಗಿದ್ದಿತು. ಅವರ ಈ ಒಪ್ಪಂದದ ಪ್ರತಿಗಳನ್ನು ಮಹಮದೀಯ ಪ್ರತಿನಿಧಿಗಳಿಗೆ ಹಂಚಲಾಗಿದ್ದಿತು ಮತ್ತು ನನಗೆ ದೊರೆತ ಅದರ ಪ್ರತಿಯನ್ನು ನಾನಿಲ್ಲಿ ಕೊಟ್ಟಿದ್ದೇನೆ.

(ಇದರ ಮೂಲ ಪಾಠವು ಡಾ. ಅಂಬೇಡ್ಕರ್‌ರ – "ಕಾಂಗ್ರೆಸ್ ಮತ್ತು ಗಾಂಧಿ ಅಸ್ಪೃಶ್ಯರಿಗೆ ಮಾಡಿದುದೇನು" ಎಂಬ ಗ್ರಂಥದ ಪುಟ ೭೨–೭೩ರ ಪುನರುಕ್ತಿ ಇದು. ಹಸ್ತಪ್ರತಿಯಲ್ಲಿ ಬೆರಳಚ್ಚಾಗಿಲ್ಲ – ಸಂ.)

**ಗಾಂಧೀ ಮುಸ್ಲಿಂ ಒಪ್ಪಂದದ ಕರಡು[೧]**

ದುಂಡುಮೇಜಿನ ಪರಿಷತ್ತಿನ ಮಹಮದೀಯ ಪ್ರತಿನಿಧಿಗಳು[೨]

ದೂರವಾಣಿ : ವಿಕ್ಟೋರಿಯ ೨೩೬೦ — ಕ್ವೀನ್ಸ್ ಹೌಸ್
ಟೆಲಿಗ್ರಾಮ್ಸ್ : "ಕೊರ್ಪ್ಲೈಕ್" ಲಂಡನ್ — ೫೭, ಸೆಂಟ್ ಜೇಮ್ಸ್ ಕೋರ್ಟ್
ಬಕಿಂಗ್‌ಹ್ಯಾಮ್ ಗೇಟ್, ಲಂಡನ್
ಎಸ್.ಡಬ್ಲ್ಯು.ಐ. ೬ನೇ ಅಕ್ಟೋಬರ್ ೧೯೩೧

ಈ ಕೆಳಗಿನ ಸಲಹೆಗಳನ್ನು ಕುರಿತು ಶ್ರೀಮಾನ್ ಗಾಂಧಿ ಮತ್ತು ಮುಸ್ಲಿಂ ಪ್ರತಿನಿಧಿಗಳು ನಿನ್ನೆ ರಾತ್ರಿ ೧೦ ಗಂಟೆಯಲ್ಲಿ ಚರ್ಚಿಸಿದ್ದರು. ಆ ಸಲಹೆಗಳನ್ನು ಎರಡು ಭಾಗಗಳಾಗಿ ವಿಂಗಡಿಸಲಾಗಿದೆ – ಮುಸ್ಲಿಮರು ತಮ್ಮ ಹಕ್ಕು ರಕ್ಷಣೆಗಾಗಿ ಮಾಡಿದ ಸಲಹೆಗಳು ಮತ್ತು ಕಾಂಗ್ರೆಸ್ ನೀತಿಯಂತೆ ಶ್ರೀಮಾನ್ ಗಾಂಧಿ ಮಾಡಿದ ಸಲಹೆಗಳು. ಶ್ರೀಮಾನ್ ಗಾಂಧಿಯ ಒಪ್ಪಿಗೆಯನ್ನು ಪಡೆದ ಈ ಕೆಳಗಿನ ಸಲಹೆಗಳನ್ನು ಮುಸ್ಲಿಂ ಪ್ರತಿನಿಧಿಗಳ ಒಪ್ಪಿಗೆಗಾಗಿ ಕಳುಹಿಸಲಾಗಿದೆ :

---

೧. ಈ ದಾಖಲೆಯನ್ನು ನಾನು ೧೯೪೦ರಲ್ಲಿ ಬರೆದ "ಪಾಕಿಸ್ತಾನವನ್ನು ಕುರಿತ ಚಿಂತನೆಗಳು" ಎಂಬ ಕೃತಿಯ ಪರಿಶಿಷ್ಟದಲ್ಲಿ ಸೇರಿಸಿ ಅಚ್ಚು ಹಾಕಿಸಿದ್ದೆನು. ಆಗ ಅದು ಮೊತ್ತಮೊದಲಿಗೆ ಬೆಳಕನ್ನು ಕಂಡಿತು. ಅದರ ಪ್ರಾಮಾಣಿಕತೆಯನ್ನು ಯಾವಾಗಲೂ ಪ್ರಶ್ನಿಸಿಲ್ಲ. ಮುಸ್ಲಿಂ ಲೀಗ್‌ನ ರಹಸ್ಯಗಳನ್ನು ಗಳಿಸುತ್ತಿದ್ದ ದುಂಡುಮೇಜಿನ ಪರಿಷತ್ತಿನ ಹಿಂದೂ ಪ್ರತಿನಿಧಿಯೊಬ್ಬರಿಂದ ನಾನು ಇದರ ಪ್ರತಿಯನ್ನು ಪಡೆದೆನು.

೨. ಇದು ಮುಸ್ಲಿಂ ಲೀಗ್‌ನ ಪ್ರತಿನಿಧಿಗಳಿಗೆ ದೊರಕಿಸಿದ್ದ ಲೇಖನ ಸಾಮಗ್ರಿಯನ್ನು ಬಳಸಿ ಬೆರಳಚ್ಚು ಮಾಡಲಾಗಿದ್ದಿತೆಂಬುದು ತಿಳಿಯುತ್ತದೆ.

**ಮುಸ್ಲಿಮರ ಸಲಹೆಗಳು**

೧. ಪಂಜಾಬ್ ಮತ್ತು ಬಂಗಾಲ ಪ್ರಾಂತಗಳಲ್ಲಿ ಶೇ. ಒಂದರಷ್ಟು ಮಹಮದೀಯರ ಬಹುಮತವಿರುವುದರಿಂದ ಅಲ್ಲಿ ಜಂಟಿ ಮತದಾನವಿರಬೇಕೆ ಅಥವಾ ಶೇ. ೫೧ರಷ್ಟು ಮೀಸಲಾತಿ ಇರಬೇಕೆ ಎಂಬುದನ್ನು ನಿರ್ಣಯಿಸಲು ಮುಸ್ಲಿಂ ಮತದಾರರಿಗೆ ಅವಕಾಶಕೊಟ್ಟು ಅವರ ತೀರ್ಮಾನದಂತೆ ಹೊಸ ಸಂವಿಧಾನದಲ್ಲಿ ಅದು ಅಂತರ್ಗತವಾಗಬೇಕು.

೨. ಮಹಮದೀಯರು ಅಲ್ಪಸಂಖ್ಯಾತರಾಗಿರುವ ಮಿಕ್ಕ ಪ್ರಾಂತಗಳಲ್ಲಿ ಅವರಿಗೆ ಸರಿತೂಗಿಸಲು ಕೊಟ್ಟಿರುವ ಸೌಲಭ್ಯಗಳು ಮುಂದುವರಿಯುವುದು. ಅವರ ಪ್ರಾತಿನಿಧ್ಯವು ಜಂಟಿ ಚುನಾವಣೆಯಲ್ಲಿ ಮೀಸಲಾತಿಯಿಂದ ನಿರ್ಣಯವಾಗಬೇಕೇ ಅಥವಾ ಅವರಿಗೇ ಪ್ರತ್ಯೇಕ ಚುನಾವಣೆ ಇರಬೇಕೇ ಎಂಬುದು ಮುಸ್ಲಿಂ ಮತದಾರರ ಮತ ಸಂಗ್ರಹದಿಂದ ನಿರ್ಣಯವಾಗಿ ಹೊಸ ಸಂವಿಧಾನದಲ್ಲಿ ಅಂತರ್ಗತವಾಗಬೇಕು.

೩. ಕೇಂದ್ರೀಯ ಶಾಸನ ಸಭೆಗಳೆರಡರಲ್ಲಿಯೂ ಬ್ರಿಟಿಷ್ ಭಾರತದ ಪ್ರತಿನಿಧಿಗಳ ಶೇಕಡಾ ೨೬ರಷ್ಟು ಮುಸ್ಲಿಂ ಪ್ರತಿನಿಧಿಗಳಿರಬೇಕು ಮತ್ತು ಭಾರತದ ಸಂಸ್ಥೆಗಳ ಪ್ರಾತಿನಿಧ್ಯದಲ್ಲಿ ಶೇ. ೭ರಷ್ಟು ಸ್ಥಾನಗಳು ಮಹಮದೀಯರಿಗೆ ಅನೂಚಾನವಾಗಿ ದೊರೆಯಬೇಕು. ಒಟ್ಟಿನಲ್ಲಿ ಶಾಸನಸಭೆಯ ಒಟ್ಟು ಪ್ರಾತಿನಿಧ್ಯದಲ್ಲಿ ಮೂರರಲ್ಲಿ ಒಂದು ಭಾಗದಷ್ಟು ಮುಸ್ಲಿಮರ ಸ್ಥಾನವಿರಬೇಕು.

೪. ಉಳಿದ ಅಧಿಕಾರಗಳು ಬ್ರಿಟಿಷ್ ಭಾರತದ ಸಂಯುಕ್ತ ಸಂಸ್ಥಾನಗಳ ಕೈಯಲ್ಲಿರಬೇಕು.

೫. ಈ ಕೆಳಗಿನ ಉಳಿದ ವಿಷಯಗಳಲ್ಲಿಯೂ ಸಮ್ಮತಿಸಲಾಗಿದೆ :[೧]
   - ೧. ಸಿಂಧ್
   - ೨. ಎನ್.ಡಬ್ಲ್ಯು ಎಫ್.ಪಿ.[೨]
   - ೩. ಸೇವೆ[೩]
   - ೪. ಮಂತ್ರಿಮಂಡಲ[೪]
   - ೫. ಮೂಲಭೂತ ಹಕ್ಕುಗಳ ಹಾಗೂ ಧರ್ಮ ಮತ್ತು ಸಂಸ್ಕೃತಿಯ ರಕ್ಷಣೆ
   - ೬. ಯಾವುದೇ ಜಾತಿಗೆ ಧಕ್ಕೆ ತರುವ ಶಾಸನಗಳ ವಿರುದ್ಧ ರಕ್ಷಣೆ.

**ಶ್ರೀಮಾನ್ ಗಾಂಧಿಯ ಸಲಹೆಗಳು**

೧. ವಯಸ್ಕ ಮತದಾನದ ಮೇಲೆ ಚುನಾವಣೆಯ ಸ್ವರೂಪ ನಿರ್ಣಯವಾಗಬೇಕು.

೨. ಸಿಖ್ಖರು ಮತ್ತು ಹಿಂದೂ ಅಲ್ಪಸಂಖ್ಯಾತರ ಹೊರತು ಬೇರೆ ಯಾರಿಗೂ ವಿಶೇಷ ಮೀಸಲಾತಿ ಇರಕೂಡದು.

**ಕಾಂಗ್ರೆಸ್ಸಿನ ಬೇಡಿಕೆಗಳು**

ಎ. ಪೂರ್ಣ ಸ್ವಾತಂತ್ರ್ಯ

ಬಿ. ರಕ್ಷಣಾ ವ್ಯವಸ್ಥೆಯ ಮೇಲೆ ಈ ಕೂಡಲೇ ಪೂರ್ಣ ಅಧಿಕಾರ.

ಸಿ. ವಿದೇಶೀ ವ್ಯವಹಾರಗಳ ಪೂರ್ಣ ಅಧಿಕಾರ

ಡಿ. ಆರ್ಥಿಕ ವ್ಯವಹಾರದ ಪೂರ್ಣ ಅಧಿಕಾರ

ಇ. ಸಾರ್ವಜನಿಕ ಸಾಲ ಮತ್ತು ಹೊಣೆಗಾರಿಕೆಯನ್ನು ಸೂಕ್ತವಾದ ಮಂಡಲಿಯಿಂದ ತನಿಖೆ ಮಾಡಿಸುವುದು

ಎಫ್. ಪಾಲುದಾರಿಕೆಯ ವ್ಯವಹಾರದ ರೀತಿಯಲ್ಲಿ ಎರಡೂ ಪಕ್ಷಗಳ ಹಕ್ಕುಗಳನ್ನು ನಿರ್ಣಯಿಸುವುದು.

---

೧. ಸಿಂಧ್ ಪ್ರಾಂತ್ಯ ಪ್ರತ್ಯೇಕವಾಗಿರುವುದು.

೨. ಪ್ರಾಂತೀಯ ಸ್ವಯಮಾದಿತ್ವ ಮತ್ತು ಎನ್.ಡಬ್ಲು.ಎಫ್. ಪ್ರಾಂತಕ್ಕೆ ಜವಾಬ್ದಾರಿಯ ಸರ್ಕಾರ.

೩. ಸೇವೆಯಲ್ಲಿ ಪ್ರಾತಿನಿಧ್ಯ.

೪. ಮಂತ್ರಿಮಂಡಲದಲ್ಲಿ ಪ್ರಾತಿನಿಧ್ಯ.

ಶ್ರೀಮಾನ್ ಗಾಂಧಿಯವರು ಮುಸಲ್ಮಾನರೊಂದಿಗೆ ಈ ಒಪ್ಪಂದ ಮಾಡಿಕೊಳ್ಳಲು ಸಿದ್ಧರಾಗಿದ್ದರು. ಈ ಒಪ್ಪಂದದಿಂದ ಮುಸಲ್ಮಾನರು ಬಯಸಿದ ಹದಿನಾಲ್ಕು ಬೇಡಿಕೆಗಳನ್ನೂ ನೀಡಲು ಶ್ರೀಮಾನ್ ಗಾಂಧಿ ಸಿದ್ಧರಿದ್ದರು ಎಂಬುದು ತಿಳಿಯುತ್ತದೆ. ಇದಕ್ಕೆ ಪ್ರತಿಯಾಗಿ ಮುಸಲ್ಮಾನರು, ಹಿಂದೂಗಳು, ಸಿಖ್ಖರು ಮತ್ತು ಮುಸಲ್ಮಾನರ ವಿಶೇಷ ಪ್ರಾತಿನಿಧ್ಯಕ್ಕೆ ಮನ್ನಣೆ ಕೊಡಬೇಕೆಂದು ಗಾಂಧಿ ಬಯಸಿದರು. ಈ ಒಪ್ಪಂದದಲ್ಲಿ ತಪ್ಪೇನಿದೆ ಎಂಬುದಾಗಿ ಯಾರಾದರೂ ಕೇಳಬಹುದು. ಈ ಮೂವರಿಗೆ ಹೊರತು ಬೇರೆ ಯಾರಿಗೂ ಜಾತಿಯ ಪ್ರಾತಿನಿಧ್ಯ ಕೊಡಲು ತಾನು ಸಿದ್ಧವಿಲ್ಲ ಎಂದು ಕಾಂಗ್ರೆಸ್ ಮೊದಲೆ ಹೇಳಿಲ್ಲವೆ? ಇಂತಹ ಕಲ್ಪನೆಯನ್ನು ಕೇವಲ ಪೊಳ್ಳು ಕಲ್ಪನೆ ಎಂದು ಹೇಳಲಾಗುವುದಿಲ್ಲ. ಇದರಲ್ಲಿ ಯಾವ ತಪ್ಪೂ ಇಲ್ಲ ಎನ್ನುವವರು ಎರಡು ಪ್ರಶ್ನೆಗಳಿಗೆ ಉತ್ತರ ಹೇಳಬೇಕಾಗುತ್ತದೆ. ಮೊದಲನೆಯದು ಇದು. ಬೇರೆ ಅಲ್ಪಸಂಖ್ಯಾತರು ಮತ್ತು ಅಸ್ಪೃಶ್ಯರಿಗೆ ವಿಶೇಷ ಪ್ರಾತಿನಿಧ್ಯವನ್ನು ಕೊಡಲು ಕಾಂಗ್ರೆಸ್ಸು ಸಿದ್ಧವಿಲ್ಲ ಎಂಬ ಅದರ ಧೋರಣೆಗೆ, ಮಹಮದೀಯರ ಒಪ್ಪಿಗೆಯನ್ನು ಪಡೆಯುವ ಅವಶ್ಯಕತೆ ಶ್ರೀಮಾನ್ ಗಾಂಧಿಗೆ ಏಕೆ ಬಂದಿತು. ಉಳಿದ ಅಲ್ಪಸಂಖ್ಯಾತರಿಗೆ, ಕಾಂಗ್ರೆಸ್ಸು ಹೇಳುವಂತೆ ಅವರ ಬೇಡಿಕೆಯನ್ನು ಒಪ್ಪಲು ತಾನು ಸಿದ್ಧವಿಲ್ಲ ಎಂದು ಗಾಂಧಿ ಹೇಳ ಬಹುದಾಗಿತ್ತು. ಅವರ ಬೇಡಿಕೆಯನ್ನು ವಿರೋಧಿಸಲು ಮಹಮದೀಯರು 'ತಮ್ಮ ಜೊತೆ ಸೇರಬೇಕೆಂದು ಶ್ರೀಮಾನ್ ಗಾಂಧಿ ಏಕೆ ಬಯಸಿದರು? ಇದು ಗಾಂಧಿಯವರ ಉದ್ದೇಶವಲ್ಲದಿದ್ದರೆ, ತಾವು ಮಹಮದೀಯರಿಗೆ ಕೊಟ್ಟದ್ದಕ್ಕೆ ಪ್ರತಿಯಾಗಿ ಮಹಮದೀಯರು ಹೀಗೆ ಮಾಡಬೇಕೆಂದು ಏಕೆ ಬಯಸಿದರು?

ಎರಡನೆಯದಾಗಿ ಇಂತಹ ಸಂದಿಗ್ಧ ಕಾಲದಲ್ಲಿ ಶ್ರೀಮಾನ್ ಗಾಂಧಿಯವರು ಮಹಮದೀಯರ ಹದಿನಾಲ್ಕು ಬೇಡಿಕೆಗಳನ್ನು ಏಕೆ ಒಪ್ಪಿದರು? ಮಹಮದೀಯರ ಈ ಹದಿನಾಲ್ಕು ರಾಜಕೀಯ ಬೇಡಿಕೆಗಳನ್ನು ಒಳ್ಳೆಯದಕ್ಕೊ ಅಥವಾ ಕೆಟ್ಟದ್ದಕ್ಕೊ, ಅಂತೂ ಎಲ್ಲರೂ ನಿರಾಕರಿಸಿದ್ದರು. ಅವುಗಳನ್ನು ಹಿಂದೂ ಮಹಾಸಭೆಯವರು ನಿರಾಕರಿಸಿದ್ದರು. ಸೈಮನ್ ಕಮಿಷನ್ ಕೂಡ ಅವುಗಳನ್ನು ನಿರಾಕರಿಸಿದ್ದಿತು. ಕಾಂಗ್ರೆಸ್ಸು ಸಹ ನಿರಾಕರಿಸಿದ್ದಿತು. ಮಹಮದೀಯರ ಈ ೧೪ ಬೇಡಿಕೆಗಳಿಗೆ ಯಾವ ಕಡೆಯಿಂದಲೂ ಮನ್ನಣೆ ದೊರೆತಿರಲಿಲ್ಲ. ಇತರ ಅಲ್ಪಸಂಖ್ಯಾತರ ಮತ್ತು ಅಸ್ಪೃಶ್ಯರ ಬೇಡಿಕೆಯನ್ನು ಮಹಮದೀಯರ ಸಹಕಾರದೊಂದಿಗೆ ಸಮರ್ಥವಾಗಿ ವಿರೋಧಿಸಬೇಕೆಂಬ ಉದ್ದೇಶವಲ್ಲದೆ, ಬೇರೆ ಯಾವ ಕಾರಣಕ್ಕಾಗಿ ಶ್ರೀಮಾನ್ ಗಾಂಧಿಯವರು ಮಹಮದೀಯರ ಈ ಬೇಡಿಕೆಗಳಿಗೆ ಸಮ್ಮತಿ ಸೂಚಿಸಿದರು?

ನನ್ನ ದೃಷ್ಟಿಯಲ್ಲಿ ಈ ಸನ್ನಿವೇಶದಲ್ಲಿ ಶ್ರೀಮಾನ್ ಗಾಂಧಿಯವರು ನಂಬಿಕೆಗೆ ಅರ್ಹವಾದ ಒಪ್ಪಂದದಲ್ಲಿ ತೊಡಗಿದ್ದರು ಎಂದೆನಿಸುವುದಿಲ್ಲ. ಸಣ್ಣ ಅಲ್ಪಸಂಖ್ಯಾತರು ಮತ್ತು ಅಸ್ಪೃಶ್ಯರ ವಿರುದ್ಧ ತಮ್ಮ ಪಿತೂರಿಯಲ್ಲಿ ತಮ್ಮೊಂದಿಗೆ ಸಹಕರಿಸಲು ಮುಸಲ್ಮಾನರನ್ನು ಅವರು ಈ ರೀತಿ ಪ್ರಚೋದಿಸುತ್ತಿದ್ದರು. ಅದು ಅಸ್ಪೃಶ್ಯರ ವಿರುದ್ಧ ಒಂದು ಸಂಚು ಅಷ್ಟೆ. ಅದು ಮುಸಲ್ಮಾನರೊಂದಿಗೆ ಒಪ್ಪಂದವಲ್ಲ, ಅದು ಅದಕ್ಕಿಂತಲೂ ಕಡೆ, ಬೆನ್ನಿಗೆ ಹಾಕಿದ ಚೂರಿ, ಅಷ್ಟೆ.

ಅಸ್ಪೃಶ್ಯರಿಗೆ ಪ್ರತ್ಯೇಕ ಪ್ರಾತಿನಿಧ್ಯ ಬೇಡ ಎಂಬುದನ್ನು ಒಪ್ಪಲು ಮಹಮದೀಯರು ಸಿದ್ಧರಿರಲಿಲ್ಲವಾದ್ದರಿಂದ ಈ ಎಲ್ಲ ಸಂಧಾನವೂ ವಿಫಲವಾಯಿತು. ಇಂತಹ ಯೋಜನೆಗೆ ಮಹಮದೀಯರು ಹೇಗೆ ಒಪ್ಪಿಯಾರು? ಮುಸಲ್ಮಾನರಿಗೆ ವಿಶೇಷ ಪ್ರಾತಿನಿಧ್ಯಬೇಕೆಂದು ಅವರು ಹೋರಾಡುತ್ತಿದ್ದರು. ಅವರು ವಿಶೇಷ ಪ್ರಾತಿನಿಧ್ಯಕ್ಕೆ ಮಾತ್ರವೇ ಹೋರಾಡುತ್ತಿರಲಿಲ್ಲ, ತಮಗೆ ಸರಿತೂಗಿಸುವಂತಹ ಪ್ರಾತಿನಿಧ್ಯ ಬೇಕೆಂದು ಬಯಸಿದ್ದರು. ಭಾರತವು ಮುಸ್ಲಿಮರಿಂದ ಆಳಲ್ಪಟ್ಟಿದ್ದರಿಂದ ಅವರಿಗೆ ರಾಜಕೀಯ ಮಹತ್ವವಿದ್ದು ಶಾಸನ ಸಭೆಗಳ

ಚುನಾವಣೆಯಲ್ಲಿ ಹಿಂದೂಗಳು ಮಹಮದೀಯರಿಗೆ ಪಕ್ಷಪಾತ ಮಾಡಿ, ಅವರಿಗೆ ಶಾಸನಸಭೆಗಳಲ್ಲಿ ಸಾಕಷ್ಟು ಪ್ರಾತಿನಿಧ್ಯ ದೊರೆಯದಂತೆ ಮಾಡುವ ಸಾಧ್ಯತೆಯಿರುವುದರಿಂದ, ಅಂತಹ ರಾಜಕೀಯ ದುರ್ಗತಿಯಿಂದ ಅವರನ್ನು ರಕ್ಷಿಸಲೋಸುಗ, ಅವರಿಗೆ ವಿಶೇಷ ಪ್ರಾತಿನಿಧ್ಯ ಬೇಕೆಂದು ಬಯಸುವುದು ಮಹಮದೀಯರ ಧ್ಯೇಯವಾಗಿದ್ದಿತು. ಮಹಮದೀಯರಿಗಿದ್ದ ಈ ಒಂದು ಮೂಲ ಕಾರಣಕ್ಕೆ ಎದುರಾಗಿ ಅಸ್ಪೃಶ್ಯರ ಬೇಡಿಕೆಗೆ ಆಧಾರವಾಗಿ ನೂರಾರು ಮೂಲ ಕಾರಣಗಳಿದ್ದವು. ಅಸ್ಪೃಶ್ಯರ ಬೇಡಿಕೆಯನ್ನು ಮಹಮದೀಯರು ಯಾವ ಮುಖದಿಂದ ವಿರೋಧಿಸಿಯಾರು?

ಮುಸಲ್ಮಾನರು ತಮ್ಮ ಮಾನಸಿಕ ಸಮಚಿತ್ತತೆ ಅಥವಾ ಮರ್ಯಾದೆಯನ್ನು ಮರೆತಿರಲಿಲ್ಲ. ಸಾರ್ವಜನಿಕವಾಗಿ ಸಮರ್ಥಿಸಿಕೊಳ್ಳಲಾರದಂತಹ ಈ ವ್ಯವಹಾರಕ್ಕೆ ಅವರು ಭಾಗಿಗಳಾಗಲು ಒಪ್ಪಲಿಲ್ಲ. ಶ್ರೀಮಾನ್ ಗಾಂಧಿಯವರು ಮಹಮದೀಯರನ್ನು ಒತ್ತಾಯ ಮಾಡುತ್ತಲೇ ಬಂದರು. ತಮ್ಮ ಹದಿನಾಲ್ಕು ಬೇಡಿಕೆಗಳನ್ನು ಒಪ್ಪಲು ಶ್ರೀಮಾನ್ ಗಾಂಧಿ ಸಿದ್ಧರಿದ್ದರೂ ಜಗತ್ತು ಅದನ್ನು ಪಾಪದ ಕಾಣಿಕೆಯೆಂದು ಗುರುತಿಸುತ್ತದೆ ಎಂದು ತಿಳಿದ ಮಹಮದೀಯರು, ಕೊನೆಗೂ ಅದಕ್ಕೆ ಮಣಿಯಲಿಲ್ಲ. ಆಗ ಗಾಂಧಿಯವರು ಮಹಮದೀಯರ ಧಾರ್ಮಿಕ ಶ್ರದ್ಧೆಯ ಮೊರೆಹೊಕ್ಕರು. ದುಂಡುಮೇಜಿನ ಪರಿಷತ್ತಿನ ಅಲ್ಪಸಂಖ್ಯಾತರ ಉಪ ಸಮಿತಿಗೆ, ಅಲ್ಪಸಂಖ್ಯಾತರ ಒಪ್ಪಂದದ ಕರಾರನ್ನು ನೀಡುವ ೧೯೩೧ನೆಯ ನವೆಂಬರ್ ೧೮ರ ಮುನ್ನಾ ದಿನ, ಶ್ರೀಮಾನ್ ಗಾಂಧಿಯು ಕುರಾನ್ ಪ್ರತಿಯೊಂದಿಗೆ, ಗೌರವಾನ್ವಿತ ಹೆಚ್.ಹೆಚ್. ಆಗಾಖಾನರು ಇಳಿದುಕೊಂಡಿದ್ದ ಪಿಕೆಡೆಲ್ಲಿಯ ರಿಟ್ಜ್ ಹೋಟೆಲ್‌ಗೆ ಹೋಗಿ, ಅಲ್ಲಿ ಮಹಮದೀಯರ ಪ್ರತಿನಿಧಿಗಳನ್ನು ಭೇಟಿಯಾದರು.[೧] ಮುಸ್ಲಿಂ ಪ್ರತಿನಿಧಿಗಳನ್ನು ಶ್ರೀಮಾನ್ ಗಾಂಧಿ ಕೇಳಿದರು – "ಅಸ್ಪೃಶ್ಯರಿಗೆ ಪ್ರತ್ಯೇಕ ಪ್ರಾತಿನಿಧ್ಯ ಬೇಕೆಂದು ಒಪ್ಪಿ ನೀವು ಹಿಂದೂ ಜನಾಂಗವನ್ನು ಏಕೆ ಒಡೆಯುತ್ತಿದ್ದೀರಿ? ಇಂತಹ ನಿಮ್ಮ ಕೃತಿಗೆ ಕುರಾನಿನಲ್ಲಿ ಮನ್ನಣೆಯಿದೆಯೇ? ಅದು ಎಲ್ಲಿ ಹೇಳಿದೆ ನನಗೆ ತೋರಿಸಿ? ತೋರಿಸಲಾಗದಿದ್ದರೆ ನೀವು ನಿಮ್ಮ ಸೋದರ ಸಮಾಜದ ಮೇಲೆ ಮಾಡುತ್ತಿರುವ ಈ ಪಾಪವನ್ನು ಏಕೆ ನಿಲ್ಲಿಸಬಾರದು?"[೨] ಗಾಂಧಿಯ ಈ ಪ್ರಶ್ನೆಗೆ ಮಹಮದೀಯ ಪ್ರತಿನಿಧಿಗಳು ಏನು ಉತ್ತರ ಕೊಟ್ಟರೆಂಬುದು ನನಗೆ ತಿಳಿಯದು. ಅದಕ್ಕೆ ಉತ್ತರ ಹೇಳುವುದು ಅವರಿಗೆ ತುಂಬಾ ಕಷ್ಟವಾಗಿರಬಹುದು. ಪವಿತ್ರ ಪ್ರವಾದಿಗೂ ಇಂತಹ ಸಂದಿಗ್ಧವಾದ ಸಮಸ್ಯೆ ಮೂಡಿಲಾರದಾದ್ದರಿಂದ ಅವನು ಅದಕ್ಕೆ ಸ್ಪಷ್ಟವಾಗಿ ಉತ್ತರಿಸಲಾರನು. ಆದರೆ ಇಂತಹ ಸಂದಿಗ್ಧತೆಗಳು ಬರಬಹುದೆಂದು ನಿರೀಕ್ಷಿಸಿದ ಅವನ ಅನುಯಾಯಿಗಳು, ಅಂತಹ ಪರಿಸ್ಥಿತಿ ಬಂದಾಗ ನಾವು ಹೇಗೆ ನಡೆದುಕೊಳ್ಳಬೇಕು ಎಂದು ಪ್ರವಾದಿಯನ್ನು ಕೇಳಿದಾಗ ಅದಕ್ಕೆ ಪ್ರವಾದಿಯು ರೂಢಿ ಮೂಲವಾದ ಒಂದು ಉತ್ತರವನ್ನು ಕೊಟ್ಟಿದ್ದಾನೆ. ಅದಕ್ಕೆ ಪ್ರವಾದಿಯು ಕೊಟ್ಟ ಉತ್ತರ "ಕಾಫಿರರು ಹೇಗೆ ನಡೆದುಕೊಳ್ಳುತ್ತಾರೋ ಅದಕ್ಕೆ ವಿರುದ್ಧವಾಗಿ ನಡೆದುಕೊಳ್ಳಿ"[೩] ಎಂದು. ಮುಸ್ಲಿಂ ಪ್ರತಿನಿಧಿಗಳು ಇದನ್ನಾಧರಿಸಿ ಶ್ರೀಮಾನ್ ಗಾಂಧಿಗೆ ಉತ್ತರ ಹೇಳಿದರೇ ಎಂಬುದನ್ನು ನಾನು ಹೇಳಬೇಕಾಗಿಲ್ಲ. ನಂಬಲರ್ಹವಾದ ಮೂಲದಿಂದ ಕೇಳಿದ್ದನ್ನು ನಾನು ಇಲ್ಲಿ ಹೇಳಿದ್ದೇನೆ. ಶ್ರೀಮಾನ್ ಗಾಂಧಿ ತಮ್ಮ ಈ ಪ್ರಯತ್ನದಲ್ಲಿಯೂ ಸೋತರು. ಏಕೆಂದರೆ ಮರುದಿನ ಸೇರಿದ ಸಮಿತಿಯ ಸಭೆಯಲ್ಲಿ ಗಾಂಧಿಯವರು

---

೧. ಬಿ.ಆರ್. ಅಂಬೇಡ್ಕರ್–ಕಾಂಗ್ರೆಸ್ ಮತ್ತು ಗಾಂಧಿ ಅಸ್ಪೃಶ್ಯರಿಗೆ ಮಾಡಿರುವುದೇನು? ಎಂಬ ಗ್ರಂಥದ ಪುಟ ೬೭.
೨. ಅದೇ ಪರಿಶಿಷ್ಟ III ಪು. ೩೦೭–೧೧.
೩. ಕುರಾನ್ ನೋಡಿ.

ಅಸ್ಪೃಶ್ಯರ ಮೇಲೆ ಕೆರಳಿ, ಕೂಗಾಡಿದಾಗ ಮಹಮದೀಯರು ಮಾತೇ ಆಡಲಿಲ್ಲ.

ಶ್ರೀಮಾನ್ ಗಾಂಧಿಯ ಇಂತಹ ನಡತೆಯ ವಿಚಾರದಲ್ಲಿ ಏನು ಹೇಳೋಣ? ಶ್ರೀಮಾನ್ ಬರ್ನಾಡ್ ಷಾ ಹೇಳಿದ್ದಾರೆ. ಬ್ರಿಟಿಷರು ಪ್ರತಿಯೊಂದು ಕೆಲಸವನ್ನು ನಿಯಮಾನುಸಾರವಾಗಿಯೇ ಮಾಡುತ್ತಾರೆ.

ಅದೇ ರೀತಿ ಶ್ರೀಮಾನ್ ಗಾಂಧಿ ಹೇಳುತ್ತಾರೆ, ತಾವು ಎಲ್ಲ ಕೆಲಸಗಳನ್ನು ನೀತಿ ಮತ್ತು ಧರ್ಮಕ್ಕೆ ಅನುಗುಣವಾಗಿಯೇ ಮಾಡುತ್ತೇನೆ ಎಂದು; ಶ್ರೀಮಾನ್ ಗಾಂಧಿಯ ಈ ಕೃತಿಗಳು ನ್ಯಾಯ ಮತ್ತು ಧರ್ಮ ಸಮ್ಮತವೆನಿಸುತ್ತವೆಯೆ? ನನಗಂತೂ ಇದು ಆಶ್ಚರ್ಯ. ನಾನು ಇನ್ನೂ ಕೆಲವು ನಿದರ್ಶನಗಳನ್ನು ಕೊಡಬಯಸುತ್ತೇನೆ.

ನಾನು ಮೊದಲನೆಯ ದುಂಡುಮೇಜಿನ ಪರಿಷತ್ತಿನಲ್ಲಿ ಭಾಗವಹಿಸಲು ಲಂಡನ್ನಿಗೆ ಹೊರಡುವ ಮುನ್ನ ಶ್ರೀಮಾನ್ ಗಾಂಧಿಯನ್ನು ಬೊಂಬಾಯಿಯಲ್ಲಿ ಭೇಟಿ ಮಾಡಿದ್ದೆನು. ನಾನು ದುಂಡುಮೇಜಿನ ಪರಿಷತ್ತಿನಲ್ಲಿ ಅಸ್ಪೃಶ್ಯರಿಗೆ ವಿಶೇಷ ಪ್ರಾತಿನಿಧ್ಯ ಬೇಕೆಂದು ಕೇಳುತ್ತೇನೆ ಎಂದು ಅವರಿಗೆ ಹೇಳಿದ್ದೆನು. ಅದನ್ನು ಅವರು ಒಪ್ಪಲಿಲ್ಲ. ಆದರೆ ನಾನು ಅದನ್ನು ವಿರೋಧಿಸುವುದಿಲ್ಲ ಎಂದು ಅವರು ಆಗ ಹೇಳಿದರು. ಅದು ಕೇವಲ ಅಭಿಪ್ರಾಯ ಭೇದವಿರಬಹುದು ಎಂದು ನಾನಂದುಕೊಂಡೆ. ಎರಡನೆಯ ದುಂಡುಮೇಜಿನ ಪರಿಷತ್ತಿನಲ್ಲಿ ನಾನು ಅವರನ್ನು ಎರಡು ಸಾರಿ ಭೇಟಿಯಾದೆ. ಒಮ್ಮೆ ನಾನೊಬ್ಬನೇ ನೋಡಿದೆ, ಮತ್ತೆ ಇನ್ನೊಮ್ಮೆ ಸಣ್ಣ ಅಲ್ಪಸಂಖ್ಯಾತರ ಪ್ರತಿನಿಧಿಗಳೊಂದಿಗೆ. ನಮ್ಮ ಮೊದಲನೆಯ ಭೇಟಿಯಲ್ಲಿ ಶ್ರೀಮಾನ್ ಗಾಂಧಿಯವರು ನೂಲುತ್ತಾ ಇದ್ದರು, ನಾನು ಮಾತನಾಡುತ್ತಾ ಇದ್ದೆ. ನಾನು ಒಂದು ಗಂಟೆ ಪೂರ್ತಿ ಮಾತನಾಡಿದರೂ ಅವರು ಒಂದು ಮಾತನ್ನೂ ಆಡಲಿಲ್ಲ. ಕೊನೆಯಲ್ಲಿ ಇಷ್ಟು ಮಾತ್ರ ಹೇಳಿದರು.

'ನಾನು ಈಗ ನಿಮ್ಮ ಅಭಿಪ್ರಾಯವನ್ನು ಕೇಳಿದ್ದೇನೆ. ನೀವು ಹೇಳಿದ್ದನ್ನು ಕುರಿತು ಆಲೋಚಿಸುತ್ತೇನೆ'. ನಮ್ಮ ಎರಡನೆಯ ಭೇಟಿಯಲ್ಲಿಯೂ ಅವರು ನಾನು ಹೇಳಿದ್ದನ್ನು ಆಸಕ್ತಿಯಿಂದಲೇ ಕೇಳಿದರು ಮತ್ತು ಸಣ್ಣ ಅಲ್ಪಸಂಖ್ಯಾತರ ಪ್ರತಿನಿಧಿಗಳು ಹೇಳಿದ್ದನ್ನೂ ಕೇಳಿದರು. ಕೊನೆಯಲ್ಲಿ, ಅಸ್ಪೃಶ್ಯರ ಪರವಾಗಿ ನಾನು ಮುಂದಿಟ್ಟ ಬೇಡಿಕೆಗಳಿಗೆ ತಮ್ಮ ಸಮ್ಮತಿಯಿಲ್ಲ ಎಂದು ಹೇಳಿದರು. ಆದಾದ ಮೇಲೆ ಅಲ್ಪಸಂಖ್ಯಾತರ ಉಪ ಸಮಿತಿಯನ್ನು ೧೯೩೧ನೆಯ ಸೆಪ್ಟೆಂಬರ್ ೨೮ರಂದು ಕರೆಯಲಾಯಿತು. ಉಪ ಸಮಿತಿಯ ೧೯೩೧ನೇ ಅಕ್ಟೋಬರ್ ಒಂದರ ಸಭೆಯಲ್ಲಿ ಈ ಕೆಳಗಿನ ಮನವಿಯನ್ನು ಶ್ರೀಮಾನ್ ಗಾಂಧಿಯವರು ಮುಂದಿಟ್ಟರು:

*"ಪ್ರಧಾನಿಯವರೆ, ಅತಿ ಮಾನ್ಯರಾದ ಆಗಾಖಾನರು ಮತ್ತು ಇತರ ಮಹಮದೀಯ ಮಿತ್ರರೊಂದಿಗೆ ನಿನ್ನೆ ರಾತ್ರಿ ಮಾತನಾಡಿದ ಮೇಲೆ, ನಮ್ಮ ಈ ಸಮಾವೇಶದ ಉದ್ದೇಶ ಸಾರ್ಥಕವಾಗಬೇಕಾದರೆ ನಮ್ಮ ಈ ಸಭೆಯನ್ನು ಒಂದು ವಾರ ಮುಂದೂಡುವುದು ಸೂಕ್ತವೆಂಬ ನಿರ್ಣಯಕ್ಕೆ ಬಂದಿದ್ದೇವೆ. ನಾನು ನನ್ನ ಉಳಿದ ಸಹ ಸದಸ್ಯರೊಂದಿಗೆ ಸಮಾಲೋಚಿಸಲು ಅವಕಾಶವಾಗಲಿಲ್ಲವಾದರೂ, ಅವರೂ ನನ್ನ ಈ ಸಲಹೆಗೆ ಒಪ್ಪುತ್ತಾರೆಂದು ಭಾವಿಸುತ್ತೇನೆ."

ಈ ಸಲಹೆಯನ್ನು ಆಗಾಖಾನರು ಅನುಮೋದಿಸಿದರು. ನಾನು ಆ ಕೂಡಲೇ ಎದ್ದು ಈ ಸಲಹೆಯನ್ನು ವಿರೋಧಿಸಿದೆನು ಮತ್ತು ಅದಕ್ಕೆ ಪೋಷಕವಾಗಿ ಈ ಕೆಳಗಿನ ಮಾತನ್ನು ಹೇಳಿದೆನು.

"ಡಾ. ಬಿ. ಆರ್. ಅಂಬೇಡ್ಕರ್: ಈ ಸಮಿತಿಯು ಬಗೆಹರಿಸಬೇಕಾದ ಸಮಸ್ಯೆಯು ಮಹಾತ್ಮಾ ಗಾಂಧಿಯವರು ಸೂಚಿಸಿರುವ ಸಲಹೆಯಿಂದ ಪರಿಹಾರವಾಗುವಂತಿದ್ದರೆ ನಾನು ಅದಕ್ಕೆ ಯಾವ

* 'ವಿಧ್ಯುಕ್ತವಲ್ಲದ ಸಮಾವೇಶ' ಪದದವರೆಗೆ ಕಾಂಗ್ರೆಸ್ ಮತ್ತು ಗಾಂಧಿ ಅಸ್ಪೃಶ್ಯರಿಗೆ ಮಾಡಿರುವುದೇನು ಗ್ರಂಥದಲ್ಲಿನ ಪುನರುಕ್ತಿ ಪು. ೬೦–೬೨. ಹಸ್ತ ಪ್ರತಿಯಲ್ಲಿ ಬೆರಳಚ್ಚಾಗಿಲ್ಲ – ಸಂ.

ರೀತಿಯಿಂದಲೂ ಅಡ್ಡಿ ಬರಲು ಬಯಸುವುದಿಲ್ಲ. ಅದಕ್ಕೆ ನನ್ನ ವಿರೋಧವಂತೂ ಇಲ್ಲ. ಆದರೆ ಅಸ್ಪೃಶ್ಯರ ಪ್ರತಿನಿಧಿಯಾಗಿ ನನಗೆ ಒಂದು ಸಮಸ್ಯೆ ಕಾಡುತ್ತಿದೆ. ಈ ಸಮಿತಿಯನ್ನು ಮುಂದೂಡುವ ಒಂದುವಾರದ ಅವಧಿಯ ನಂತರ ಮಹಾತ್ಮಾ ಗಾಂಧಿಯವರು ರಚಿಸ ಬಯಸುವ ಸಮಿತಿಯಲ್ಲಿ ಅಸ್ಪೃಶ್ಯರಿಗೆ ಪ್ರಾತಿನಿಧ್ಯವಿರುತ್ತದೆಯೇ ಎಂಬುದನ್ನು ತಿಳಿಯ ಬಯಸುತ್ತೇನೆ."

"ಶ್ರೀಮಾನ್ ಗಾಂಧೀ : ಖಂಡಿತವಾಗಿಯೂ"

"ಡಾ. ಅಂಬೇಡ್ಕರ್ : ತಮಗೆ ವಂದನೆಗಳು, ಆದರೆ ಇಂದು ನಾನಿರುವ ಸ್ಥಿತಿಯಲ್ಲಿ ನೀವು ಸೂಚಿಸುವ ಸಮಿತಿಯಲ್ಲಿ ಕೆಲಸ ಮಾಡುವುದು ನನಗೆ ಉಪಯೋಗವಾಗುತ್ತದೆ ಎಂದೆನಿಸುವುದಿಲ್ಲ. ಅದು ಈ ಕಾರಣದಿಂದ. ಅದೇನೆಂದರೆ ಮಹಾತ್ಮಾ ಗಾಂಧಿಯವರು ಸಂಯುಕ್ತ ರಚನಾ ಸಮಿತಿಯಲ್ಲಿ ಮೊದಲ ದಿನ ಮಾತನಾಡಿದಾಗ, ಭಾರತ ರಾಷ್ಟ್ರೀಯ ಕಾಂಗ್ರೆಸ್ ಪ್ರತಿನಿಧಿಯಗಿ ಮಹಮದೀಯರು ಮತ್ತು ಸಿಖ್ಖರಿಗೆ ಹೊರತಾಗಿ ಬೇರೆ ಯಾವ ಸಮಾಜಕ್ಕೂ ರಾಜಕೀಯ ಮಾನ್ಯತೆಯನ್ನು ಕೊಡಲು ತಾವು ಸಿದ್ಧರಿಲ್ಲ ಎಂದು ಹೇಳಿದ್ದರು. ಅವರು ಆಂಗ್ಲೋ ಇಂಡಿಯನ್ನರು, ಅಸ್ಪೃಶ್ಯರು ಮತ್ತು ಕ್ರಿಶ್ಚಿಯನ್ನರನ್ನು ಮನ್ನಿಸಲು ಸಿದ್ದರಿಲ್ಲ. ಸಭ್ಯತೆಗೆ ಚ್ಯುತಿ ಬರದಂತೆ ಹೇಳಬೇಕಾದರೆ, ನಾನು ಒಂದು ವಾರದ ಹಿಂದೆ ಮಹಾತ್ಮಾ ಗಾಂಧಿಯವರನ್ನು ಸಂಧಿಸಿ ದಲಿತವರ್ಗದವರ ಸಮಸ್ಯೆಯನ್ನು ಅವರೊಂದಿಗೆ ಚರ್ಚಿಸಿದಾಗ ಮತ್ತು ಉಳಿದ ಅಲ್ಪಸಂಖ್ಯಾತರ ಸದಸ್ಯರೊಂದಿಗೆ ನಿನ್ನೆ ತಾನೆ ಅವರನ್ನು ಅವರ ಆಫೀಸಿನಲ್ಲಿ ಸಂಧಿಸಿದಾಗ, ಅವರು ತಾವು ಸಂಯುಕ್ತ ಸಮಿತಿಯಲ್ಲಿ ತಳೆದ ನಿಲುವು ಖಚಿತವೂ ವಿವೇಚನಾಯುಕ್ತವೂ ಆಗಿದೆ ಎಂದು ನೇರವಾದ ಮಾತಿನಲ್ಲಿ ಹೇಳಿದರು. ನಾನು ಹೇಳ ಬಯಸುವುದೇನೆಂದರೆ, ಭಾರತದ ಮುಂದಿನ ಸಂವಿಧಾನದಲ್ಲಿ ದಲಿತವರ್ಗದವರನ್ನು ರಾಜಕೀಯ ಹಕ್ಕುಗಳಿಗಾಗಿ ಅರ್ಹತೆ ಪಡೆದ ಒಂದು ಸಮಾಜ ಎಂದು ಗುರುತಿಸುವುದು ನನಗೆ ಮನದಟ್ಟಾಗದ ಹೊರತು, ನಾನು ಮಹಾತ್ಮಾ ಗಾಂಧಿಯವರು ರಚಿಸಬಯಸುವ ಇದಕ್ಕೆ ಸಂಬಂಧಿಸಿದ ಸಮಿತಿಯಲ್ಲಿ ಕೆಲಸ ಮಾಡುವುದು ಉಪಯುಕ್ತವೆನಿಸದು. ಆದ್ದರಿಂದ ಅಲ್ಪಸಂಖ್ಯಾತರ ಉಪ ಸಮಿತಿಯು, ನೂತನ ಸಂವಿಧಾನದಲ್ಲಿ ಸೇರಲು ಅರ್ಹವೆಂದು ಹಿಂದಿನ ವರ್ಷ ಸೂಚಿಸಿದ ಸಮಾಜಗಳನ್ನೆಲ್ಲಾ ಈಗ ಪರಿಗಣಿಸಲು ಈ ಮುಂದಿನ ಸಮಿತಿ ಸಿದ್ಧವಿದೆ ಎಂಬ ಆಶ್ವಾಸನೆ ನನಗೆ ದೊರೆಯದ ಹೊರತು, ನಾನು ಹೃದಯಪೂರ್ವಕವಾಗಿ ಈ ನಿಲುಗಡೆಗೆ ಸಮ್ಮತಿಸಲಾರೆ ಮತ್ತು ಮುಂದೆ ರಚಿಸಬೇಕೆಂದಿರುವ ಸಮಿತಿಯೊಂದಿಗೆ ಮನಃಪೂರ್ವಕವಾಗಿ ಸಹಕರಿಸಲಾರೆ. ಈ ಮಾತನ್ನು ನಾನು ಸ್ಪಷ್ಟಪಡಿಸಲು ಬಯಸುತ್ತೇನೆ."

* * *

"ಡಾ. ಅಂಬೇಡ್ಕರ್ : ನನ್ನ ನಿಲುವನ್ನು ಮತ್ತಷ್ಟು ಸ್ಪಷ್ಟಪಡಿಸಲು ಬಯಸುತ್ತೇನೆ. ನಾನು ಹೇಳಿದ ವಿಚಾರದಲ್ಲಿ ಸ್ವಲ್ಪ ತಪ್ಪು ಕಲ್ಪನೆ ಇರುವಂತೆ ಕಾಣುತ್ತದೆ. ಈ ಸಭೆಯನ್ನು ಮುಂದೂಡಲು ನಾನು ವಿರೋಧಿಸುತ್ತಿಲ್ಲ. ಈ ವಿಷಯವನ್ನು ಪರಿಶೀಲಿಸಲು ರಚಿಸಬೇಕೆಂದಿರುವ ಸಮಿತಿಯ ಸದಸ್ಯನಾಗಿ ಕೆಲಸ ಮಾಡಲೂ ನನ್ನ ವಿರೋಧವಿಲ್ಲ. ನನಗೆ ಆ ಸಮಿತಿಯ ಸದಸ್ಯನಾಗಿ ಕೆಲಸ ಮಾಡುವ ಗೌರವ ದೊರೆತರೆ ನಾನು ಆ ಹೊಣೆಗಾರಿಕೆಯನ್ನು ಸ್ವೀಕರಿಸುವ ಮುನ್ನ ಆ ಸಮಿತಿಯು ಪರಿಶೀಲಿಸಬೇಕಾದ ವಿಷಯವಾದರೂ ಏನು, ಎನ್ನುವುದನ್ನು ತಿಳಿಯಬಯಸುತ್ತೇನೆ. ಹಿಂದೂಗಳಿಗೆ ಎದುರಾಗಿ ಮಹಮದೀಯರ ಸಮಸ್ಯೆಗಳನ್ನು ಮಾತ್ರ ಪರಿಶೀಲಿಸಬೇಕೇ? ಮಹಮದೀಯರಿಗೆ ಎದುರಾಗಿ ಸಿಖ್ಖರು ಮತ್ತು ಪಂಜಾಬಿಗಳ ಸಮಸ್ಯೆಯನ್ನು ಪರಿಶೀಲಿಸಬೇಕೆ? ಅಥವಾ ಕ್ರಿಶ್ಚಿಯನರು ಆಂಗ್ಲೋ ಇಂಡಿಯನ್ನರು ಮತ್ತು ದಲಿತವರ್ಗದವರ ಸಮಸ್ಯೆಯನ್ನು ಪರಿಶೀಲಿಸುವುದೇ?"

"ನಾವು ಆರಂಭದಲ್ಲಿಯೇ, ಆ ಸಮಿತಿಯು ಹಿಂದೂ ಮತ್ತು ಮಹಮದೀಯರ, ಹಿಂದೂ ಮತ್ತು ಸಿಖ್ಖರ ಸಮಸ್ಯೆಗಳನ್ನು ಪರಿಶೀಲಿಸಲು ಮಾತ್ರ ಸೀಮಿತವಾಗದೆ, ದಲಿತ ವರ್ಗದವರು, ಆಂಗ್ಲೋ ಇಂಡಿಯನ್ನರು, ಮತ್ತು ಕ್ರೈಸ್ತರ ಸಮಸ್ಯೆಗಳನ್ನು ಪರಿಶೀಲಿಸುತ್ತದೆ ಎಂಬುದನ್ನು ಅರಿತು ಹೊರಡುವುದಾದರೆ ಆ ನಿಲುಗಡೆಯ ನಿರ್ಣಯವನ್ನು ಯಾವ ಅಡ್ಡಿಯೂ ಇಲ್ಲದೆ ಅಂಗೀಕರಿಸಲು ನಾನು ಸಿದ್ಧನಿದ್ದೇನೆ, ಆದರೆ ನಾನು ಹೇಳ ಬಯಸದ ಒಂದು ಮಾತೇನೆಂದರೆ, ನನ್ನ ಈ ಬೇಡಿಕೆಯನ್ನು ಅನಾದರಿಸಿ, ಈ ಮುಂದೂಡಿಕೆಯಿಂದ ದೊರೆಯುವ ವಿರಾಮವನ್ನು ಹಿಂದೂ ಮತ್ತು ಮಹಮದೀಯರ ಸಮಸ್ಯೆಯನ್ನು ಪರಿಹರಿಸಲು ಮಾತ್ರ ಬಳಸುವುದಾದರೆ, ಆಗ ಕೆಲವು ಅಲ್ಪಸಂಖ್ಯಾತರಾದ ನಮ್ಮ ಸಮಸ್ಯೆಯನ್ನು ವಿಧ್ಯುಕ್ತವಲ್ಲದ ಯಾವುದೋ ಒಂದು ಸಮಿತಿಗೆ ವಹಿಸದೆ, ಅಲ್ಪಸಂಖ್ಯಾತರ ಉಪ ಸಮಿತಿಯೇ ನೇರವಾಗಿ ಪರಿಹರಿಸಬೇಕೆಂದು ಒತ್ತಾಯಿಸುತ್ತೇನೆ."

ಅಲ್ಪ ಸಂಖ್ಯಾತರ ಉಪ ಸಮಿತಿಯ ಅಧ್ಯಕ್ಷರಾದ ಪ್ರಧಾನ ಮಂತ್ರಿಗಳು ನನ್ನ ಈ ಸಂದೇಹಕ್ಕೆ ಉತ್ತರವಾಗಿ ತಮ್ಮ ನಿಲುವೇನೆಂದು ಶ್ರೀಮಾನ್ ಗಾಂಧಿಯವರನ್ನು ಕೇಳಲು ಆಗ ಶ್ರೀಮಾನ್ ಗಾಂಧಿಯವರು ಈ ರೀತಿ ವಿವರಿಸಿದ್ದರು :[೧]

"ಪ್ರಧಾನ ಮಂತ್ರಿಗಳೇ ಮತ್ತು ಸ್ನೇಹಿತರೆ, ನಮ್ಮ ಮುಂದೆ ನಾವು ವಿವೇಚನೆಗೆ ಇಟ್ಟುಕೊಂಡಿರುವ ಸಮಸ್ಯೆಯ ವ್ಯಾಪ್ತಿಯ ಬಗ್ಗೆ ಕೆಲವರಿಗೆ ಅಪನಂಬಿಕೆಯಿರುವಂತೆ ಕಾಣುತ್ತದೆ. ಡಾ. ಅಂಬೇಡ್ಕರ್‌ರವರು ಕರ್ನಲ್ ಗಿಡ್ನೆ ಮತ್ತು ಇತರ ಸ್ನೇಹಿತರು ಮುಂದೇನಾಗುತ್ತದೋ ಎಂದು ಅನಾವಶ್ಯಕವಾಗಿ ಭಯಭೀತರಾಗುವಂತೆ ನನಗೆ ಕಾಣುತ್ತದೆ. ಭಾರತದ ಯಾವುದೇ ಒಂದು ವರ್ಗ, ಸಮಾಜ ಅಥವಾ ವ್ಯಕ್ತಿಗೆ ರಾಜಕೀಯ ಸ್ಥಾನಮಾನವನ್ನು ನಿರಾಕರಿಸಲು ನಾನು ಯಾರು? ನಾನು ಕಾಂಗ್ರೆಸ್ಸಿನ ಪ್ರತಿನಿಧಿಯಾಗಿ, ರಾಷ್ಟ್ರದ ಹಿತಸಾಧನೆಯ ಯಾವ ಒಂದು ಅಂಶವನ್ನು ಅನಾದರಿಸಿದರೂ ಆಗ ಕಾಂಗ್ರೆಸ್ಸು ನನ್ನಲ್ಲಿ ಇಟ್ಟಿರುವ ನಂಬಿಕೆಗೆ ನಾನು ಅನರ್ಹನಾಗುತ್ತೇನೆ. ಈ ವಿಚಾರಗಳಲ್ಲಿ ನನ್ನ ಸ್ವಂತ ಅಭಿಪ್ರಾಯವೇನೆಂಬುದನ್ನು ನಾನು ನಿಸ್ಸಂಶಯವಾಗಿ ಈಗಾಗಲೇ ಹೇಳಿದ್ದೇನೆ. ನಾನು ಆ ಅಭಿಪ್ರಾಯಗಳಿಗೆ ಬದ್ಧನಾಗಿರುತ್ತೇನೆಂಬುದನ್ನು ಈಗ ಹೇಳಬಯಸುತ್ತೇನೆ. ಪ್ರತಿಯೊಂದು ಸಮಸ್ಯೆಯ ಹಿತರಕ್ಷಣೆಗೂ ಅನೇಕಾನೇಕ ರೀತಿಯಲ್ಲಿ ರಕ್ಷಣೆ ಕೊಡಲು ಸಾಧ್ಯ. ಇದಕ್ಕೊಂದು ಕಾರ್ಯಕ್ರಮವನ್ನು ರೂಪಿಸುವುದು, ಇದರ ಪರಿಹಾರಕ್ಕಾಗಿ ಸಮಾವೇಶಗೊಂಡಿರುವ ನಮಗೆ ಸೇರಿದ್ದು. ವಿಧ್ಯುಕ್ತವಲ್ಲದ ಆ ಸಮಿತಿಯ ಸಮಾಲೋಚನೆಯಲ್ಲಿ ಪ್ರತಿಯೊಬ್ಬರೂ ತಮ್ಮ ಅಭಿಪ್ರಾಯಗಳನ್ನು ಕುರಿತು ಒತ್ತಾಯಿಸಲು ಸ್ವತಂತ್ರರಾಗಿರುತ್ತಾರೆ.

"ಆದ್ದರಿಂದ ಯಾರೊಬ್ಬರೂ ತಮ್ಮ ಅಭಿಪ್ರಾಯವನ್ನು ಮಂಡಿಸಲು ಮತ್ತು ಸಮರ್ಥಿಸಲು ಹೆದರಬೇಕಾಗಿಲ್ಲ ಎಂದು ನಾನು ತಿಳಿಯುತ್ತೇನೆ. ಅಲ್ಲಿ ನನ್ನ ಪಾತ್ರ, ಉಳಿದವರ ಪಾತ್ರಕ್ಕೆ ಸರಿಸಮವಾದದ್ದು; ಅದಕ್ಕೆ ಹೆಚ್ಚಿನ ತೂಕವೇನೂ ಇಲ್ಲ ; ಬೇರೊಬ್ಬರ ಅಭಿಪ್ರಾಯಕ್ಕೆ ವಿರುದ್ಧವಾಗಿ ನನ್ನ ಅಭಿಪ್ರಾಯವನ್ನು ಹೊರಿಸುವ ಸಾಧ್ಯತೆ ನನಗಿಲ್ಲ. ರಾಷ್ಟ್ರದ ಹಿತದೃಷ್ಟಿಯಿಂದ ನಾನು ನನ್ನ ಅಭಿಪ್ರಾಯಗಳನ್ನು ಸರಳವಾಗಿ ಹೇಳಿದ್ದೇನೆ ಮತ್ತು ಅವಕಾಶ ದೊರೆತಾಗಲೆಲ್ಲಾ ನಾನು ಅವುಗಳನ್ನು ಹೇಳುತ್ತಿರುತ್ತೇನೆ. ಈ ಅಭಿಪ್ರಾಯಗಳನ್ನು

---

೧. *ಕಾಂಗ್ರೆಸ್ಸು ಮತ್ತು ಗಾಂಧೀ ಅಸ್ಪೃಶ್ಯರಿಗೆ ಮಾಡಿದುದೇನು?* ಎಂಬ ಗ್ರಂಥದ ೬೦ ಮತ್ತು ೬೧ನೇ ಪುಟವನ್ನು ನೋಡಿ

(ಮೇಲಿನ ಎರಡೂ ಉದ್ಧೃತಗಳೂ ಹಸ್ತಪ್ರತಿಯಲ್ಲಿ ಉಲ್ಲೇಖಿಸಿಲ್ಲ – ಸಂ.)

ಒಪ್ಪುವುದು ಅಥವಾ ಬಿಡುವುದು ನಿಮಗೆ ಬಿಟ್ಟ ವಿಚಾರ. ಆದ್ದರಿಂದ ನಾನು ಕಲ್ಪಿಸಿಕೊಂಡಿರುವ ವಿಧ್ಯುಕ್ತವಲ್ಲದ ಸಮಾವೇಶದಲ್ಲಿ ಎಲ್ಲರ ಅಭಿಪ್ರಾಯಗಳನ್ನು ಹೊಸಕಿಹಾಕಲಾಗುತ್ತದೆ ಎಂಬ ನಿಮ್ಮ ಭಾವನೆಗಳನ್ನು ದಯವಿಟ್ಟು ನಿಮ್ಮ ಮನಸ್ಸಿನಿಂದ ದೂರವಿಡಿ. ಈ ಮೇಜಿನ ಮುಂದೆ ವಿಧ್ಯುಕ್ತವಾಗಿ ಬಿಗಿಗಟ್ಟಿಕುಳಿತು ವ್ಯವಹರಿಸುವ ಬದಲು, ನಾನು ಸೂಚಿಸಿದಂತೆ ವಿಧ್ಯುಕ್ತವಲ್ಲದ ಸಮಾವೇಶದಲ್ಲಿ ಕುಳಿತು ಮಾನಸಿಕ ಸಾಮೀಪ್ಯದಿಂದ, ವಿಚಾರ ಮಾಡುವುದು ಸೂಕ್ತವೆನಿಸಿದರೆ ಆಗ ಈ ನಿಲುಗಡೆಯ ಸೂಚನೆಗೆ ತಾವು ಮನಃಪೂರ್ವಕವಾಗಿ ಸಮ್ಮತಿ ಸೂಚಿಸಿರಿ."

* * *

ಆಗ ನಾನು ನನ್ನ ವಿರೋಧವನ್ನು ಹಿಂತೆಗೆದುಕೊಂಡೆನು.

ಅಸ್ಪೃಶ್ಯರ ಬೇಡಿಕೆಯನ್ನು ಮನ್ನಿಸಲು ಉಳಿದವರೆಲ್ಲರೂ ಒಪ್ಪಿದರೆ, ತಾವು ಅದನ್ನು ವಿರೋಧಿಸುವುದಿಲ್ಲ ಎಂದು ಶ್ರೀಮಾನ್ ಗಾಂಧಿಯವರು ಬಹಿರಂಗವಾಗಿ ಈ ಸಭೆಯಲ್ಲಿ ಒಪ್ಪಿದಂತಾಯಿತು. ಈ ರೀತಿ ಮಾತುಕೊಟ್ಟ ಮೇಲೆ ಶ್ರೀಮಾನ್ ಗಾಂಧಿಯವರು ಅಸ್ಪೃಶ್ಯರ ಬೇಡಿಕೆಗೆ ಮಾನ್ಯತೆ ಕೊಡಬೇಡಿ ಎಂದು ತಾವು ಒಪ್ಪಿದ ಮಾತಿಗೆ ವಿರುದ್ಧವಾಗಿ ಅವರಿವರನ್ನು ಪ್ರಚೋದಿಸಲು ನಾನಾ ರೀತಿಯಲ್ಲಿ ಪ್ರಯತ್ನಿಸಿದರು. ಇದು ನಂಬಿಕೆಗೆ ಅರ್ಹವಾದ ನಡತೆಯೇ ಅಥವಾ ದ್ರೋಹವೇ? ಇದನ್ನು ದ್ರೋಹ ಎಂದು ಕರೆಯದಿದ್ದರೆ, ಮತ್ತಾವುದನ್ನು ದ್ರೋಹ ಎಂದು ಕರೆಯಬೇಕೆಂಬುದು ನನಗೆ ತಿಳಿಯದು.

ಅನಂತರ ನಾನು ಅಲ್ಪ ಸಂಖ್ಯಾತರ ಒಪ್ಪಂದಕ್ಕೆ ರುಜು ಹಾಕಿದ್ದೇನಾದ್ದರಿಂದ ಈಗ ನಾನು ಎಲ್ಲರ ಅವಹೇಳನಕ್ಕೆ ಗುರಿಯಾದೆ. ನಾನೊಬ್ಬ ವಿಶ್ವಾಸಘಾತಕ ಎನ್ನುವಂತಾಯಿತು. ಆ ಒಪ್ಪಂದಕ್ಕೆ ರುಜುಹಾಕಿದ್ದಕ್ಕಾಗಿ ನನಗೆಂದೂ ಅಸಮಾಧಾನವಾಗಿರಲಿಲ್ಲ ನನ್ನನ್ನು ನಿಂದಿಸುತ್ತಿದ್ದವರನ್ನು ಕಂಡು ನನಗೆ ಮರುಕವೆನಿಸಿತು. ಐರ್ಲೆಂಡಿನ ಸ್ವರಾಜ್ಯದ ವಿಚಾರದಲ್ಲಿ ಉಲ್‌ಸ್ಟರ್‌ಮನ್‌ರವರು ತಳೆದ ನಿಲುವನ್ನೇ ಅಲ್ಪಸಂಖ್ಯಾತರೂ ತಳೆಯಲು ಸಾಧ್ಯವಿದ್ದಿತು ಎಂಬುದನ್ನು ಈ ಜನ ಮರೆತರು. ಮನ್ನರಿಗೆ ರೆಡ್‌ಮಂಡನು ಯಾವ ರೀತಿಯ ರಕ್ಷಣೆಯನ್ನು ಬೇಕಾದರೂ ನೀಡಲು ಸಿದ್ಧನಿದ್ದನು. ಉಲ್‌ಸ್ಟರ್‌ಮನ್ನರು ಕೊಟ್ಟ ಉತ್ತರವೇನೆಂದರೆ "ನೀವು ದೊರಕಿಸುವ ರಕ್ಷಣೆಗೆ ಬೆಂಕಿಯಿಡಿ, ನಾವು ನಿಮ್ಮಿಂದ ಆಳಿಸಿಕೊಳ್ಳಲು ಸಿದ್ಧರಿಲ್ಲ." ಇಂತಹ ಯಾವ ನಿಲುವನ್ನೂ ಅಲ್ಪಸಂಖ್ಯಾತರು ತಳೆಯಲಿಲ್ಲವಾದ್ದರಿಂದ ಹಿಂದೂಗಳು ಅವರನ್ನು ವಂದಿಸಬೇಕಾಗಿದ್ದಿತು. ಆ ಒಪ್ಪಂದದಲ್ಲಿದ್ದುದು ಕೇವಲ ರಕ್ಷಣೆಗಳೇ ಹೊರತು ಮತ್ತೇನಲ್ಲ. ಶ್ರೀಮಾನ್ ಗಾಂಧಿಯವರು ಅದಕ್ಕಾಗಿ ಅವರನ್ನು ವಂದಿಸುವ ಬದಲು ಅಲ್ಪಸಂಖ್ಯಾತರ ಒಪ್ಪಂದ ಮತ್ತು ಅದರ ಕರ್ತೃವಿನ ಮೇಲೆ ಈ ರೀತಿ ತನ್ನ ಕೋಪದ ಕೆಂಡವನ್ನೇ ಕಾರಿದರು.

"ಈ ದಾಖಲೆಯನ್ನು ಕುರಿತು ಹೇಳುವುದಾದರೆ ಸರ್ ಹರ್ಬರ್ಟ್‌ಕಾರ್‌ರವರು ನನಗೆ ಸಲ್ಲಿಸಿರುವ ವಂದನೆಗಳನ್ನು ನಾನು ಸ್ವೀಕರಿಸುತ್ತೇನೆ. ಆ ಹೊಣೆಗಾರಿಕೆಯನ್ನು ನಾನು ಹೊತ್ತಾಗ ನಾನು ಅಲ್ಲಿ ಮಾಡಿದ ಟೀಕೆಯಿಲ್ಲದಿದ್ದರೆ, ಅದಕ್ಕೆ ನನ್ನಿಂದ ಯಾವ ಪರಿಹಾರವೂ ಸಾಧ್ಯವಿಲ್ಲ ಎಂದು ಖಂಡಿತವಾಗಿ ಹೇಳದೇ ಹೋಗಿದ್ದರೆ, ಸರ್ ಹರ್ಬರ್ಟ್‌ಕಾರ್ ಸೂಕ್ತವಾಗಿ ಹೇಳಿರುವಂತೆ, ಮಿಕ್ಕ ಅಲ್ಪಸಂಖ್ಯಾತರು ಜೊತೆಗೂಡಿ ಶ್ಲಾಘನೀಯವಾದ ಒಂದು ಪರಿಹಾರವನ್ನು ಸೂಚಿಸಿ, ಅದನ್ನು ಈ ಸಮಿತಿಯ ಪರಿಶೀಲನೆಗೆ ಮಂಡಿಸಿ, ಕೊನೆಯಲ್ಲಿ ಸಾರ್ವಭೌಮರ ಸರ್ಕಾರದ ಮನ್ನಣೆಗೆ ಕಳುಹಿಸಲು ಸಾಧ್ಯವಾಗುತ್ತಿರಲಿಲ್ಲ"[೧]

---

೧. ಅಲ್ಪ ಸಂಖ್ಯಾತರ ಒಪ್ಪಂದ

"ಸರ್ ಹರ್ಬರ್ಟ್‌ಕಾರ್ ರವರು ಮತ್ತು ಸಹಚರರಿಗೆ ದೊರೆತಿರುವ ತೃಪ್ತಿಯ ಭಾವನೆಗೆ ಅಡ್ಡಿ ಬರಲು ನಾನು ಬಯಸುವುದಿಲ್ಲ. ಆದರೆ ನನ್ನ ದೃಷ್ಟಿಯಲ್ಲಿ ಅವರು ಸತ್ತ ಪ್ರಾಣಿಯ ಮುಂದೆ ಕುಳಿತು ಅದನ್ನು ಪಾಲುಮಾಡುವಂತಹ ಮೆಚ್ಚಿಗೆಯ ಕೆಲಸ ಮಾಡಿದ್ದಾರೆ."

ಶ್ರೀಮಾನ್ ಗಾಂಧಿ ಈ ರೀತಿ ಕುಪಿತರಾಗಲು ಏನಾದರೂ ಕಾರಣವಿದೆಯೆ? ನೈತಿಕವಾಗಿ ತನಗೆ ಅಪಚಾರವಾಯಿತೆಂದು ಹೇಳಲು ಅವರಿಗೆ ಏನಾದರೂ ಕಾರಣವಿದೆಯೆ? ಅಲ್ಪಸಂಖ್ಯಾತರ ಮೇಲೆ ಕಲ್ಲು ತೂರಲು ಅವರಿಗೆ ಹಕ್ಕಿದೆಯೆ? ಈ ವಿಚಾರದಲ್ಲಿ ಅಲ್ಪಸಂಖ್ಯಾತರಷ್ಟೇ ತಾನೂ ಪಾಪವೆಸಗಿದ್ದೇನೆಂಬುದನ್ನು ಶ್ರೀಮಾನ್ ಗಾಂಧಿಯವರು ಮರೆತರು ಮತ್ತು ಅದಕ್ಕಿಂತಲೂ ಕೆಟ್ಟದೆಂದರೆ ಅವರು ನ್ಯಾಯದ ಪ್ರಜ್ಞೆಯೇ ಇಲ್ಲದೆ ಆ ಪಾಪವೆಸಗಿದ್ದರು. ಏಕೆಂದರೆ, ಅಲ್ಪಸಂಖ್ಯಾತರು ಸತ್ತ ಪ್ರಾಣಿಯನ್ನು ಹಂಚಿಕೊಳ್ಳುತ್ತಿದ್ದರೆ ಆಗ ಶ್ರೀಮಾನ್ ಗಾಂಧಿ ತಾವು ಏನು ಮಾಡುತ್ತಿದ್ದರು? ಅವರೂ ಸಹ ಸತ್ತ ಪ್ರಾಣಿಯ ಹಂಚಿಕೆಯಲ್ಲಿಯೇ ನಿರತರಾಗಿದ್ದರು. ಶ್ರೀಮಾನ್ ಗಾಂಧೀ ಮತ್ತು ಅಲ್ಪಸಂಖ್ಯಾತರ ನಡುವೆ ಇದ್ದ ವ್ಯತ್ಯಾಸವೇನೆಂದರೆ, ಶ್ರೀಮಾನ್ ಗಾಂಧಿಯವರು ಆ ಸತ್ತ ಪ್ರಾಣಿಯನ್ನು ಹಿಂದೂಗಳು, ಮಹಮದೀಯರು, ಮತ್ತು ಸಿಖ್ಖರು ಈ ಮೂರು ಜನವೇ ಹಂಚಿಕೊಳ್ಳಬೇಕೆಂದು ಬಯಸಿದ್ದರು. ಇದರಲ್ಲಿ ಯಾವ ಪಕ್ಷದ ಕಡೆ ನ್ಯಾಯವಿದೆ? ಸತ್ತ ಪ್ರಾಣಿಯ ಹಂಚಿಕೆಯು ತಿಂದು ಕೊಬ್ಬಿದ ಪ್ರಬಲವಾದ ತೋಳಗಳ ನಡುವೆ ನಡೆಯಬೇಕೆಂದು ಬಯಸಿದ ಶ್ರೀಮಾನ್ ಗಾಂಧಿಯ ಕಡೆಗೋ, ಅಥವಾ ಹಸಿದ ಬಡಕಲಾದ ಕುರಿಮರಿಗೂ ಒಂದು ಚೂರು ದೊರಕಬೇಕೆಂದು ಬಯಸಿದ ಅಲ್ಪಸಂಖ್ಯಾತರ ಕಡೆಗೋ? ಈ ವಿವಾದದಲ್ಲಿ ಖಂಡಿತವಾಗಿಯೂ ನ್ಯಾಯ ಶ್ರೀಮಾನ್ ಗಾಂಧಿಯ ಕಡೆಗಿರಲಿಲ್ಲ.

ಅಸ್ಪೃಶ್ಯರಾಗಿ ಹುಟ್ಟಿದವರಿಗಿಂತಲೂ ತಾನೂ ಅಸ್ಪೃಶ್ಯರ ಪಕ್ಷಪಾತಿ ಎಂಬುದಾಗಿ ಶ್ರೀಮಾನ್ ಗಾಂಧಿ ಪ್ರತಿಪಾದಿಸುತ್ತಿದ್ದರು. ಅಸ್ಪೃಶ್ಯರ ಪಕ್ಷಪಾತಿಯೆನಿಸಿಕೊಂಡ ಶ್ರೀಮಾನ್ ಗಾಂಧಿ ಮಹಮದೀಯರು, ಹಿಂದೂಗಳು ಮತ್ತು ಸಿಖ್ಖರಿಗೆ ಸಾಕಷ್ಟು ರಾಜಕೀಯ ಶಕ್ತಿಗಳನ್ನು ದೊರಕಿಸಲು ಸಿದ್ಧರಿದ್ದು; ಸಾಮಾಜಿಕ ತುಳಿತ ಮತ್ತು ಪೀಡನೆಗೊಳಗಾಗಿದ್ದ ಅಸ್ಪೃಶ್ಯರು ತಮಗೆ ತಮ್ಮ ರಕ್ಷಣೆಗಾಗಿ ವಿಶೇಷ ಪ್ರಾತಿನಿಧ್ಯಬೇಕೆಂದು ಪ್ರತಿಪಾದಿಸಿದಾಗ, ಯಾವ ನ್ಯಾಯ, ನೀತಿ ಮತ್ತು ಔಚಿತ್ಯ ಪ್ರಜ್ಞೆಯೇ ಇಲ್ಲದೆ, ಅದನ್ನು ನಿರಾಕರಿಸಿದರು. ಉತ್ತಮ ಸ್ಥಿತಿಯಲ್ಲಿದ್ದ ಬೇರೆಯವರು ತಮ್ಮ ರಾಜಕೀಯ ಶಕ್ತಿಗಾಗಿ ಪ್ರತಿಪಾದಿಸುತ್ತಿದ್ದಾಗ, ಯಾವ ರಕ್ಷಣೆಯೂ ಇಲ್ಲದೆ ಪ್ರತಿಕ್ಷಣವೂ ಅಪಾಯ ಮತ್ತು ಅಪಮಾನಕ್ಕೆ ತುತ್ತಾಗಿದ್ದ ಅಸ್ಪೃಶ್ಯರು ಮಾತ್ರ ಕಾಂಗ್ರೆಸ್ಸು ಮತ್ತು ಶ್ರೀಮಾನ್ ಗಾಂಧಿಯವರ ಕೃಪೆಯಲ್ಲಿ ಬದುಕಬೇಕೆಂದು ಗಾಂಧಿ ಬಯಸಿದರು. ಅಸ್ಪೃಶ್ಯರು ತಮ್ಮ ರಕ್ಷಣೆಗಾಗಿ ಬೇರೆಯವರ ನೆರವಿಗಾಗಿ ಹುಡುಕುತ್ತಿದ್ದಾರೆಂಬುದನ್ನು ಶ್ರೀಮಾನ್ ಗಾಂಧಿಯವರು ತಿಳಿದಾಗ, ಅವರು ಇಂತಹ ದಾರುಣವಾದ ದ್ರೋಹದಲ್ಲಿ ತೊಡಗಿದರು. ದುಂಡುಮೇಜಿನ ಪರಿಷತ್ತಿನಿಂದ ಶ್ರೀಮಾನ್ ಗಾಂಧಿ ಬೊಂಬಾಯಿಗೆ ಹಿಂತಿರುಗಿದಾಗ, ಅವರಿಗೆ ವಿರುದ್ಧವಾಗಿ ಅಸ್ಪೃಶ್ಯರು ತಮ್ಮ ಆಪಾದನೆಗಳ ಪಟ್ಟಿಯನ್ನು ಜಗತ್ತಿನ ಮುಂದೆ ಮಂಡಿಸಿದ್ದು, ಈಗ ಅನ್ಯಾಯವೆನಿಸುತ್ತಿದೆಯೆ?

* * * *

## ಅಧ್ಯಾಯ ೨೫

# ಗಾಂಧೀಜಿ ಮತ್ತು ಅವರ ಉಪವಾಸ ಸತ್ಯಾಗ್ರಹ

೧) ಪೂನಾ ಒಪ್ಪಂದ

೨) ಹರಿಜನ ಸೇವಕ ಸಂಘ

೩) ದೇವಾಲಯಗಳು ಮತ್ತು ಅಸ್ಪೃಶ್ಯರು

೪) ಗಾಂಧೀಮಾರ್ಗ

ಭಾರತೀಯ ದುಂಡುಮೇಜಿನ ಪರಿಷತ್ತು, ಜಾತೀಯತೆ ಎಂಬ ಹೆಬ್ಬಂಡೆಗೆ ಅಪ್ಪಳಿಸಿ ನುಚ್ಚು ನೂರಾಯಿತು. ಅಲ್ಪಸಂಖ್ಯಾತ ಮತೀಯರ ಮತ್ತು ಬಹುಸಂಖ್ಯಾತ ಮತೀಯರ ನಡುವೆ ಯಾವ ಒಪ್ಪಂದವೂ ಏರ್ಪಡದ ಕಾರಣ ಸಮಾವೇಶವು ಮುರಿದು ಬಿತ್ತು. ಸ್ವರಾಜ್ಯ ದೊರೆತ ಮೇಲೆ ಅಲ್ಪಸಂಖ್ಯಾತರ ಸ್ಥಾನ ಸಂರಕ್ಷಣೆಯಾಗಲು ಅವರಿಗೆ ಶಾಸಕಾಂಗದಲ್ಲಿ ಪ್ರಾತಿನಿಧ್ಯ ಸಿಗಬೇಕೆಂಬುದು ಅಲ್ಪಸಂಖ್ಯಾತರ ಆಗ್ರಹವಾಗಿತ್ತು. ಆದರೆ ಈ ರೀತಿಯ ಪ್ರಾತಿನಿಧ್ಯ ಮುಸ್ಲಿಮರಿಗೆ ಮತ್ತು ಸಿಖ್ಖರಿಗೆ ಹೊರತು ಬೇರೆ ಯಾರಿಗೂ ಸಲ್ಲದು ಎಂದು ಕಾಂಗ್ರೆಸ್ಸಿನ ಪ್ರತಿನಿಧಿಯಾಗಿ ಸಮಾವೇಶದಲ್ಲಿ ಪಾಲ್ಗೊಂಡಿದ್ದ ಗಾಂಧೀಜಿಯವರ ವಾದವಾಗಿತ್ತು. ಆದರೂ ಮುಸ್ಲಿಂ ಮತ್ತು ಸಿಖ್ಖರ ವಿಷಯದಲ್ಲಿ ಪ್ರತಿನಿಧಿಗಳ ಸಂಖ್ಯೆ ಮತ್ತು ಮತದಾರರ ಸ್ವಭಾವದ ಬಗ್ಗೆ ಯಾವ ನಿರ್ಣಯವನ್ನೂ ಕೈಗೊಳ್ಳಲಾಗಲಿಲ್ಲ.

ಯಾವುದೇ ನಿರ್ಣಯಕ್ಕೆ ಬರುವ ಸಾಧ್ಯತೆಯೇ ಇಲ್ಲವಾದ ಮೇಲೆ ಪ್ರಧಾನ ಮಂತ್ರಿಯವರ ತೀರ್ಪನ್ನು ಅವಲಂಬಿಸಬೇಕಾಯಿತು. ನನ್ನನ್ನು ಬಿಟ್ಟು ಮಿಕ್ಕವರೆಲ್ಲ ಇದಕ್ಕೆ ಒಪ್ಪಿದ್ದರು. ಆಗ ಪ್ರಧಾನ ಮಂತ್ರಿಗಳಾಗಿದ್ದ ಶ್ರೀಮಾನ್ ರಾಮ್ಸೇ ಮ್ಯಾಕ್ಡೊನಾಲ್ಡ್ ಅವರ ನಿರ್ಧಾರವನ್ನೇ ಅವಲಂಬಿಸಬೇಕಾಯಿತು.

ಮೊದಲನೆಯ ದುಂಡುಮೇಜಿನ ಪರಿಷತ್ತಿನಲ್ಲಿ, ಭಾರತದ ಪ್ರತಿನಿಧಿಗಳು ಜಾತೀಯತೆ ಬಗೆಗಿನ ಪ್ರಶ್ನೆಗಳಿಗೆ ಪರಿಹಾರ ಕಂಡುಕೊಳ್ಳುವಲ್ಲಿ ಒಮ್ಮತಕ್ಕೆ ಬರಲಿಲ್ಲವಾದ್ದರಿಂದ ಗಾಂಧೀಜಿಯವರ ಅನುಯಾಯಿಗಳು “ಇಂಥವರಿಂದ ಇನ್ನೇನು ತಾನೆ ಸಾಧ್ಯ?” ಎಂದುಕೊಂಡರು. ಅವರೆಲ್ಲ ಯಾರನ್ನೂ ಪ್ರತಿನಿಧಿಸದೆ, ಯಾರಿಗೂ ಜವಾಬ್ದಾರರಾಗದೆ, ಕೇವಲ ಬ್ರಿಟಿಷರಿಂದ ನೇಮಕಗೊಂಡ ಬ್ರಿಟಿಷರ ಬಾಲಗಳಾಗಿ ಭಾರತದ ಪ್ರತಿನಿಧಿಗಳ ಮಧ್ಯೆ ಉದ್ದೇಶಪೂರ್ವಕವಾಗಿ ಬಿಕ್ಕಟ್ಟನ್ನು ತರಲು ಹವಣಿಸುತ್ತಿದ್ದಾರೆ. ಗಾಂಧೀಜಿಯವರು ಬಂದ ಮೇಲೆ ಅವರ ರಾಜನೀತಿ ಕೌಶಲದಿಂದ ಬಿಕ್ಕಟ್ಟು ನಿವಾರಿಸಿಕೊಳ್ಳಬಹುದು ಎಂದು ಇಡೀ ಪ್ರಪಂಚಕ್ಕೆ ಸಾರಲಾಯಿತು. ಇದರಿಂದ ಗಾಂಧೀಜಿಯವರ ಗೆಳೆಯರಿಗೆ ಅವಮಾನವಾದಂತಾಯ್ತು. ಅವರೆಲ್ಲರ ಪ್ರಕಾರ, ಗಾಂಧೀಜಿಯವರು ತಮ್ಮ ದೌರ್ಬಲ್ಯವನ್ನು ಒಪ್ಪಿಕೊಂಡು ಪ್ರಧಾನ ಮಂತ್ರಿಯವರೇ ತೀರ್ಪು ನೀಡಬೇಕೆಂಬ ಬೇಡಿಕೆ ಸಲ್ಲಿಸಬೇಕಿತ್ತು.

ಸಮಾವೇಶ ನಿಷ್ಪ್ರಯೋಜಕವಾಯಿತೆಂದರೆ ಅದು ಸಂಪೂರ್ಣವಾಗಿ ಗಾಂಧೀಜಿಯವರದೇ ತಪ್ಪಿನಿಂದಾಗಿ. ಒಂದು ಸಂವಿಧಾನ ರಚನೆಯ ಸಲುವಾಗಿ, ಭಾರತದ ವಿಭಿನ್ನ ಅಭಿಪ್ರಾಯ ಆಸಕ್ತಿಗಳಲ್ಲಿ ಒಮ್ಮತ ತರುವ ಸಲುವಾಗಿ ಕರೆದಿದ್ದ ಸಮಾವೇಶದಲ್ಲಿ ಪ್ರತಿನಿಧಿಸಲು ಗಾಂಧೀಜಿಯವರಿಗಿಂತ ಮೂಢ

ಮತ್ತು ವಿವೇಕವಿಹೀನ ವ್ಯಕ್ತಿ ಬಹುಶಃ ಇನ್ಯಾರೂ ಇರಲಾರರು. ಗಾಂಧೀಜಿಯವರಿಗೆ ಸಂವಿಧಾನಾತ್ಮಕ ಕಾನೂನಾಗಲಿ ಅರ್ಥಶಾಸ್ತ್ರವಾಗಲಿ ಎಳ್ಳಷ್ಟೂ ತಿಳಿದಿರಲಿಲ್ಲ. ಅವರಿಗೆ ಬೌದ್ಧಿಕ ಸಿದ್ಧತೆಗಳಲ್ಲಿ ನಂಬಿಕೆಯಿರಲಿಲ್ಲ. ಬದಲಾಗಿ ಅತಿಯಾದ ದ್ವೇಷ ಇತ್ತು. ಹೀಗಾಗಿ ಎಷ್ಟೋ ಸಮಸ್ಯೆಗಳಿಗೆ ಅವರು ನೀಡಿರುವ ಪರಿಹಾರ ಕೇವಲ ಸೊನ್ನೆ. ಅವರೆಷ್ಟು ವಿವೇಕಹೀನರಾಗಿದ್ದರು ಎಂದರೆ ಸಮಾವೇಶಕ್ಕೆ ಬಂದಿದ್ದ ಪ್ರತಿನಿಧಿಗಳನ್ನು 'ನೀವೆಲ್ಲ ಅಸ್ತಿತ್ವಹೀನರು' ಎಂದು ಪದೇ ಪದೇ ಹೀಯಾಳಿಸುತ್ತಿದ್ದರು. ಇದ್ದವರಲ್ಲಿ ಎಲ್ಲರಿಗಿಂತ ತಾವೇ ಗಣನೀಯ ವ್ಯಕ್ತಿ, ತಾವೊಬ್ಬರೇ ಗುರಿಸಾಧಿಸಬಲ್ಲವರು ಎಂದು ಭಾವಿಸಿಕೊಂಡಿದ್ದರು. ಮೊದಲನೆಯ ದುಂಡುಮೇಜಿನ ಪರಿಷತ್ತಿನಲ್ಲಿ ಮತೀಯ ಸಮಸ್ಯೆಯ ಬಗ್ಗೆ ಪ್ರತಿನಿಧಿಗಳು ಯಾವುದೇ ಪರಿಹಾರದ ಬಗ್ಗೆ ನಿರ್ಧಾರ ಕೈಗೊಳ್ಳಲಿಲ್ಲ. ಆದರೆ ಸಮಾವೇಶ ಮುಗಿಯುವ ವೇಳೆಗೆ ಅವರೆಲ್ಲ ನಿರ್ಧಾರ ತೆಗೆದುಕೊಳ್ಳುವ ಹಂತದವರೆಗೂ ಬಂದಿದ್ದರು. ತಮ್ಮ ಊರುಗಳಿಗೆ ಹೊರಟು ನಿಂತಿದ್ದಾಗಲೂ ನಿರ್ಧಾರದ ಬಗ್ಗೆ ಆಶಾಭಾವನೆ ಹೊಂದಿದ್ದರು ಎನ್ನುವುದಂತೂ ನಿಜ. ಆದರೆ ಎರಡನೆಯ ದುಂಡುಮೇಜಿನ ಪರಿಷತ್ತು ಮುಗಿಯುವ ವೇಳೆಗೆ ಗಾಂಧೀಜಿಯವರು ಎಂತಹ ವಾತಾವರಣ ಸೃಷ್ಟಿ ಮಾಡಿದ್ದರು ಎಂದರೆ ಒಮ್ಮತಕ್ಕೆ ಬರಲು ಇದ್ದ ಸಾಧ್ಯತೆಗಳೆಲ್ಲ ಇಲ್ಲವಾಗಿ, ಪ್ರಧಾನ ಮಂತ್ರಿಯವರ ತೀರ್ಪಿಗೆ ಕಾಯುವುದು ಅನಿವಾರ್ಯವಾಯಿತು.

ಮತೀಯ ಸಮಸ್ಯೆಯ ಬಗ್ಗೆ ಪ್ರಧಾನಮಂತ್ರಿಯವರ ತೀರ್ಪು ೧೯೩೨ರ ಆಗಸ್ಟ್ ೧೭ರಂದು ಪ್ರಕಟವಾಯಿತು. ಅಸ್ಪೃಶ್ಯರ ಬಗ್ಗೆ ಕೈಗೊಳ್ಳಲಾಗಿದ್ದ ನಿರ್ಣಯದ ಷರತ್ತುಗಳು ಹೀಗಿದ್ದವು :

ಮತೀಯತೆಯ ಬಗ್ಗೆ ಪ್ರಭುಗಳ ಸರ್ಕಾರದ ತೀರ್ಮಾನ – ೧೯೩೨

೧) "ಎರಡನೆಯ ದುಂಡುಮೇಜಿನ ಪರಿಷತ್ತಿನ ಕೊನೆಯಲ್ಲಿ ಕಳೆದ ಡಿಸೆಂಬರ್ ಒಂದರಂದು ಪ್ರಭುಗಳ ಸರ್ಕಾರದ ಪರವಾಗಿ ಪ್ರಧಾನ ಮಂತ್ರಿಗಳು ನೀಡಿದ ಹೇಳಿಕೆಯನ್ನು ಸಂಸತ್ತಿನ ಎರಡೂ ಸದನಗಳು ತಕ್ಷಣವೇ ಅನುಮೋದಿಸಿದವು. ಈ ಹೇಳಿಕೆಯ ಪ್ರಕಾರ ಭಾರತದ ಎಲ್ಲ ಜನಾಂಗಗಳು ಮತೀಯ ವಿಷಯಗಳಲ್ಲಿ ಎಲ್ಲ ಪಕ್ಷಗಳಿಗೂ ಒಪ್ಪಿಗೆಯಾಗುವಂತಹ ಒಪ್ಪಂದಕ್ಕೆ ಬರಲಾಗದಿದ್ದರೆ ಆ ಕಾರಣಕ್ಕಾಗಿ ಭಾರತದ ಸಂವಿಧಾನಾತ್ಮಕ ಪ್ರಗತಿಗೆ ಅಡ್ಡಿಯನ್ನು ಒಡ್ಡಬಾರದೆಂದು, ಅದರ ಪರಿಹಾರಕ್ಕಾಗಿ ತಾತ್ಕಾಲಿಕ ಯೋಜನೆಯೊಂದನ್ನು ಪ್ರಭುಗಳ ಸರ್ಕಾರ ರಚಿಸುವಂತೆ ನಿರ್ಧರಿಸಲಾಗಿತ್ತು.

೨) ಎಲ್ಲ ಜನಾಂಗಗಳು ಯಾವ ಒಮ್ಮತಕ್ಕೂ ಬರಲಾಗದಿರುವ ಕಾರಣ ಹೊಸ ಸಂವಿಧಾನ ರಚನೆ ಕಾರ್ಯಕ್ಕೆ ಅಡ್ಡಿಯುಂಟಾಗುತ್ತಿರುವುದು ಪ್ರಭುಗಳ ಸರ್ಕಾರಕ್ಕೆ ತಿಳಿದು ಎಲ್ಲ ವಿವಾದಾತ್ಮಕ ಮತ್ತು ಕಷ್ಟಕರ ವಿಷಯಗಳನ್ನು ಪುನರ್ ಪರಿಶೀಲನೆ ಮಾಡುವುದಾಗಿ ಒಂದು ಹೇಳಿಕೆಯನ್ನು ಕಳೆದ ಮಾರ್ಚ್ ೧೯ರಂದು ನೀಡಿತು. ಅಲ್ಪಸಂಖ್ಯಾತರ ಸ್ಥಾನಮಾನಗಳಿಗೆ ಸಂಬಂಧಿಸಿದ ಕೆಲವು ವಿಷಯಗಳ ಬಗ್ಗೆ ಏನಾದರೂ ನಿರ್ಧಾರ ತೆಗೆದುಕೊಳ್ಳದ ವಿನಾ ಸಂವಿಧಾನ ರಚನೆ ಕಾರ್ಯದಲ್ಲಿ ಮುನ್ನಡೆ ಸಾಧಿಸಲಾಗುವುದಿಲ್ಲ ಎಂದು ನಂಬಲಾಗಿತ್ತು.

೩) ಸಂಸತ್ತಿನ ಮುಂದಿಡಬೇಕಾದ ಭಾರತೀಯ ಸಂವಿಧಾನಕ್ಕೆ ಸಂಬಂಧಿಸಿದ ಈ ಕೆಳಗೆ ಸೂಚಿಸಿರುವ ಯೋಜನೆಯನ್ನು ಕಾರ್ಯಗತ ಮಾಡಲು ಅನುಕೂಲವಾಗುವ ಎಲ್ಲ ಅವಕಾಶಗಳನ್ನು ಒಳಗೊಳ್ಳುವುದಾಗಿ ಪ್ರಭುಗಳ ಸರ್ಕಾರ ನಿರ್ಧಾರ ತೆಗೆದುಕೊಂಡಿದೆ. ಈ ಯೋಜನೆಯ ಪರಿಧಿ ಪ್ರಾಂತೀಯ ಶಾಸಕಾಂಗಗಳಲ್ಲಿ ಬ್ರಿಟಿಷ್ ಭಾರತೀಯ ಜನಾಂಗಗಳ ಪ್ರಾತಿನಿಧ್ಯಕ್ಕೆ ಮಾತ್ರ ಸೀಮಿತವಾಗಿದೆ. ಕೇಂದ್ರ ಶಾಸಕಾಂಗದಲ್ಲಿ ಪ್ರಾತಿನಿಧ್ಯದ ಪ್ರಶ್ನೆಯ ಕೆಳಗೆ ೨೦ನೇ ಪ್ಯಾರಾಗ್ರಾಫ್‌ನಲ್ಲಿ ಕೊಟ್ಟಿರುವ ಕಾರಣಗಳಿಂದಾಗಿ ಆಗಿದೆ. ಈ ಯೋಜನೆಯ ಪರಿಧಿಯನ್ನು ಸೀಮಿತಗೊಳಿಸಿರುವುದರಿಂದ ಅಲ್ಪಸಂಖ್ಯಾತರ ಮುಖ್ಯ

ಸಮಸ್ಯೆಗಳ ಬಗ್ಗೆ ತೀರ್ಮಾನ ತೆಗೆದುಕೊಳ್ಳುವಂತೆ ಮಾಡುವಲ್ಲಿ ಸಂವಿಧಾನ ರಚನಾ ಕ್ರಮವು ಸೋತಿದೆ ಎಂದು ಭಾವಿಸಬೇಕಾಗಿಲ್ಲ. ಬದಲಾಗಿ ಪ್ರಾತಿನಿಧ್ಯದ ಕ್ರಮ ಹಾಗೂ ಪ್ರಮಾಣದ ಬಗ್ಗೆ ಒಂದು ಸಲ ಘೋಷಣೆ ಮಾಡಿದರು ಎಂದರೆ, ಹಿಂದೆಂದೂ ಯೋಚಿಸಿರದಂಥ ಮತೀಯ ಸಮಸ್ಯೆಗಳು ಮುಂದೆ ಎಂದಾದರೂ ಉದ್ಭವಿಸಿದಾಗ ಆಯಾ ಜನಾಂಗವೇ ಪರಿಹಾರ ಕಂಡುಕೊಳ್ಳುವ ಸಾಧ್ಯತೆ ಸೃಷ್ಟಿಯಾಗುತ್ತದೆ.

೪) ಪ್ರಭುಗಳ ಸರ್ಕಾರದ ತೀರ್ಮಾನಗಳ ಪುನರ್ ಪರಿಶೀಲನೆಗಾಗಿ ಯಾವುದೇ ಪಕ್ಷ ಹುಟ್ಟಿಕೊಂಡರೆ, ಸರ್ಕಾರ ಇದರಲ್ಲಿ ಭಾಗಿಯಾಗುವುದಿಲ್ಲ. ಈ ನಿರ್ಧಾರದಲ್ಲಿ ಬದಲಾವಣೆ ತರಲು ನಿರ್ಧಾರದಿಂದ ತೊಂದರೆಗೀಡಾದ ಎಲ್ಲ ಪಕ್ಷಗಳ ಬೆಂಬಲದಿಂದ ಪ್ರಾತಿನಿಧ್ಯ ಮುಂದೆ ಬರದ ಹೊರತು ಸರ್ಕಾರವು ಬದಲಾವಣೆಗಳ ಬಗ್ಗೆ ಗಮನ ಹರಿಸುವುದಿಲ್ಲ. ಆದರೆ ಒಪ್ಪಂದಗಳ ಮೂಲಕ ಯಾರಾದರೂ ಬದಲಾವಣೆ ತರಲು ಮುಂದೆ ಬಂದರೆ ಅವರಿಗಾಗಿ ಬಾಗಿಲು ಸದಾ ತೆರೆದಿರುತ್ತದೆ. ಒಂದು ವೇಳೆ ಗವರ್ನರ್‌ಗಳ ಪ್ರಾಂತ್ಯಗಳಲ್ಲಿ ಅಥವಾ ಇಡೀ ಬ್ರಿಟಿಷರ ಭಾರತದಲ್ಲಿ ಇರುವ ಜನಾಂಗಗಳೆಲ್ಲ ಈಗ ಹಾಕಿಕೊಂಡಿರುವ ನಮ್ಮ ಯೋಜನೆಗಿಂತ ಭಿನ್ನ ಹಾಗೂ ಬದಲಿ ಯೋಜನೆಗೆ ಸಿದ್ಧರಿದ್ದರೆ, ಹೊಸ ಭಾರತ ಸರ್ಕಾರ ವಿಧಿಯು (Act) ಶಾಸನವಾಗಿ ಅಂಗೀಕಾರ ಪಡೆಯುವುದಕ್ಕೆ ಮುಂಚೆ ಯಾರಾದರೂ ಈ ಬದಲಿ ಯೋಜನೆಯನ್ನು ಸಂಸತ್ತಿಗೆ ಪರಿಚಯಿಸಬಹುದಾಗಿದೆ.

೫) * * *

೬) * * *

೭) * * *

೮) * * *

೯) ಮತ ಚಲಾಯಿಸಲು ಅರ್ಹರಾದ ಶೋಷಿತವರ್ಗದ ಸದಸ್ಯರು ಸಾಮಾನ್ಯ ಮತ ಕ್ಷೇತ್ರದಲ್ಲಿ ಮತ ಚಲಾಯಿಸಬೇಕು. ಇನ್ನೂ ಕೆಲವು ಕಾಲವಾದರೂ ಈ ಕ್ರಮದ ಮೂಲಕ ಈ ವರ್ಗದವರು ತಮ್ಮ ಪ್ರಾತಿನಿಧ್ಯ ಪಡೆಯಲು ಸಾಧ್ಯವಿರದ ಕಾರಣ ಅವರಿಗಾಗಿ ಅನೇಕ ವಿಶೇಷ ಸ್ಥಾನಗಳನ್ನು ಪಟ್ಟಿಯಲ್ಲಿ ತೋರಿಸಿರುವ ಕ್ರಮದಲ್ಲಿ ಕೊಡಲಾಗುವುದು. ವಿಶೇಷ ಮತ ಕ್ಷೇತ್ರಗಳ ಮೂಲಕ ಈ ಸ್ಥಾನಗಳಿಗೆ ಚುನಾವಣೆ ನಡೆದು, ಇದರಲ್ಲಿ ಕೇವಲ ಶೋಷಿತ ವರ್ಗದ ಅರ್ಹ ಮತದಾರರು ಮಾತ್ರ ಮತ ಚಲಾಯಿಸುವರು. ಈ ವಿಶೇಷ ಮತ ಕ್ಷೇತ್ರಗಳಲ್ಲಿ ಮತ ಚಲಾಯಿಸಬಲ್ಲ ಯಾವುದೇ ವ್ಯಕ್ತಿಗೆ ಸಾಮಾನ್ಯ ಮತ ಕ್ಷೇತ್ರದಲ್ಲಿ ಕೂಡ ಮತಚಲಾಯಿಸುವ ಹಕ್ಕಿದೆ. ಇಂಥ ಮತಕ್ಷೇತ್ರಗಳು ಶೋಷಿತ ವರ್ಗದವರು ಹೆಚ್ಚಾಗಿರುವ ಕೆಲವು ಆಯ್ದ ಪ್ರದೇಶಗಳಲ್ಲಿ ರಚನೆಯಾಗಬೇಕೆಂಬ ಗುರಿ ಹೊಂದಲಾಗಿದೆ. ಅಲ್ಲದೆ ಮದರಾಸಿನ ಹೊರತು ಯಾವುದೇ ಇಡೀ ಪ್ರಾಂತ್ಯವನ್ನು ಇದು ಆಕ್ರಮಿಸದಂತೆ ನೋಡಿಕೊಳ್ಳಲಾಗುವುದು.

ಬಂಗಾಳದ ಕೆಲವು ಸಾಮಾನ್ಯ ಮತ ಕ್ಷೇತ್ರಗಳ ಬಹುಪಾಲು ಮತದಾರರು ಶೋಷಿತ ವರ್ಗಕ್ಕೆ ಸೇರಿರಲಿಕ್ಕೆ ಸಾಧ್ಯವೆಂದು ತಿಳಿದುಬಂದಿದೆ. ಹಾಗಾಗಿ ಈ ಪ್ರಾಂತ್ಯದ ವಿಶೇಷ ಶೋಷಿತ ವರ್ಗ ಮತ ಕ್ಷೇತ್ರಗಳಿಂದ ಎಷ್ಟು ಜನ ಸದಸ್ಯರು ಚುನಾಯಿತರಾಗಬೇಕೆಂಬ ವಿಷಯವನ್ನು ಪರಿಶೀಲನೆಯ ನಂತರ ನಿರ್ದಿಷ್ಟಗೊಳಿಸಲಾಗುವುದು. ಬಹುಶಃ ಬಂಗಾಳ ಶಾಸಕಾಂಗದಲ್ಲಿ ಶೋಷಿತ ವರ್ಗದವರ ಸ್ಥಾನಗಳ ಸಂಖ್ಯೆ ಹತ್ತಕ್ಕಿಂತ ಕಡಿಮೆಯಾಗಲಾರದು.

ವಿಶೇಷ ಶೋಷಿತ ವರ್ಗ ಮತ ಕ್ಷೇತ್ರಗಳಲ್ಲಿ ಮತ ಚಲಾವಣೆಗೆ ಅರ್ಹರಾದವರಲ್ಲಿ ಯಾರು ಯಾರು ಮತ ಚಲಾಯಿಸಬಲ್ಲರು ಎನ್ನುವುದನ್ನು ಇನ್ನೂ ಅಂತಿಮವಾಗಿ ನಿರ್ಧರಿಸಿಲ್ಲ. ಇದು ಮತ ಚಲಾವಣೆ ಹಕ್ಕು ಸಮಿತಿಯ ವರದಿ ನೀಡುವ ಅಂಶಗಳನ್ನು ಅವಲಂಬಿಸಿದೆ. ಉತ್ತರ ಭಾರತದ ಕೆಲವು ಪ್ರಾಂತ್ಯಗಳ ವಿಷಯದಲ್ಲಿ ಈ ಅಂಶಗಳನ್ನು ಬದಲಿಸಬೇಕಾಗಿ ಬರಬಹುದು. ಯಾಕೆಂದರೆ ಅಸ್ಪೃಶ್ಯತೆ ಬಗ್ಗೆ ಸಾಮಾನ್ಯ ನಿರ್ಣಯವು ಆ ಪ್ರಾಂತ್ಯದಲ್ಲಿ ಅನ್ವಯವಾಗುವುದಿಲ್ಲ.

ಈ ರೀತಿಯ ವಿಶೇಷ ಶೋಷಿತ ವರ್ಗ ಮತ ಕ್ಷೇತ್ರಗಳು ಸೀಮಿತ ಸಮಯಕ್ಕಿಂತ ಹೆಚ್ಚು ಕಾಲ ಅವಶ್ಯವಿರಲಾರದು ಎಂದು ಪ್ರಭುಗಳ ಸರ್ಕಾರದ ಅಭಿಪ್ರಾಯ. ಪ್ಯಾರಾಗ್ರಾಫ್ ೬ರಲ್ಲಿ ಹೇಳಿರುವ ಚುನಾವಣೆ ಪುನರ್ವಿಮರ್ಶೆಗೆ ಸಾಮಾನ್ಯ ಅಧಿಕಾರದಡಿಯಲ್ಲಿ ಇದನ್ನು ಬೇಕಾದಾಗ ರದ್ದುಪಡಿಸಬಹುದು. ಹಾಗಿಲ್ಲದಿದ್ದ ಪಕ್ಷದಲ್ಲಿ ಈ ಕ್ರಮವು ಇಪ್ಪತ್ತು ವರ್ಷಗಳ ನಂತರ ರದ್ದಾಗುವುದು.

ಬೇರೆ ಅಲ್ಪಸಂಖ್ಯಾತರ ವಿಷಯದಲ್ಲಿ ಈ ಮತೀಯ ವಿಭಜನೆ ಎಲ್ಲರಿಗೂ ಒಪ್ಪಿಗೆಯಾಗಿ, ಭಿನ್ನಾಭಿಪ್ರಾಯಗಳು ಕೊನೆಗೊಂಡವು. ಆದರೆ ಅಸ್ಪೃಶ್ಯರ ವಿಷಯದಲ್ಲಿ ಭಿನ್ನಾಭಿಪ್ರಾಯಗಳಿನ್ನೂ ಇದ್ದವು. ಅವು ಕೊನೆಗೊಳ್ಳಲು ಗಾಂಧೀಜಿಯವರು ಅವಕಾಶ ಕೊಡುತ್ತಿರಲಿಲ್ಲ. ಸಮಾವೇಶ ಮುಗಿಸಿಕೊಂಡು ಗಾಂಧೀಜಿಯವರು ಭಾರತಕ್ಕೆ ಬಂದ ತಕ್ಷಣ ಬ್ರಿಟಿಷ್ ಸರ್ಕಾರ ಅವರನ್ನು ಜೈಲಿಗೆ ಕಳಿಸಿತು. ಬ್ರಿಟಿಷ್ ಸರ್ಕಾರ ಮಾನ್ಯ ಮಾಡಿದ್ದ ಅಸ್ಪೃಶ್ಯರಿಗೆ ಪ್ರಾತಿನಿಧ್ಯ ನೀಡುವ ಬೇಡಿಕೆಯನ್ನು ತಡೆಗಟ್ಟಬೇಕೆನ್ನುವುದನ್ನು ಗಾಂಧೀಜಿ ಯರವಾಡ ಜೈಲಿನಲ್ಲಿದ್ದಾಗಲೂ ಮರೆಯಲಿಲ್ಲ. ದುಂಡು ಮೇಜಿನ ಪರಿಷತ್ತಿನಲ್ಲಿ ಗಾಂಧೀಜಿಯವರು ತಮ್ಮ ಜೀವವನ್ನೇ ಪಣವಾಗಿಟ್ಟು ಇದನ್ನು ವಿರೋಧಿಸಿದ್ದರೂ, ತಾವಿಲ್ಲದ ಸಮಯ ನೋಡಿಕೊಂಡು ಬ್ರಿಟಿಷ್ ಸರ್ಕಾರ ಅದನ್ನು ಎಲ್ಲಿ ಜಾರಿಗೊಳಿಸಿ ಬಿಡುವುದೋ ಎಂದು ಹೆದರಿದ್ದರು. ಹಾಗಾಗಿ ತಮ್ಮನ್ನು ಸೆರೆಗೆ ಕಳಿಸಿದ ಬ್ರಿಟಿಷ್ ಸರ್ಕಾರದೊಂದಿಗೆ ಮಾತುಕತೆಗಾಗಿ ಹಾತೊರೆಯತೊಡಗಿದರು.

೧೯೩೨ರ ಮಾರ್ಚ್ ೧೧ ರಂದು ಗಾಂಧೀಜಿ ಅಂದಿನ ಭಾರತದ ರಾಜ್ಯಾಂಗ ಕಾರ್ಯದರ್ಶಿಯಾಗಿದ್ದ ಸರ್ ಸ್ಯಾಮುಯೆಲ್ ಹೋರ್ ಅವರಿಗೆ ಪತ್ರ ಬರೆದರು :

ಪ್ರಿಯ ಸರ್ ಸ್ಯಾಮುಯೆಲ್ ಅವರೆ,

ಬಹುಶಃ ತಮಗೆ ನೆನಪಿರಬಹುದು : ದುಂಡು ಮೇಜಿನ ಸಮಾವೇಶದಲ್ಲಿ ಅಲ್ಪಸಂಖ್ಯಾತರು ತಮ್ಮ ಬೇಡಿಕೆ ಸಲ್ಲಿಸಿದಾಗ ನಾನು ಹೇಳಿದ್ದೆ, ನನ್ನ ಜೀವವನ್ನು ಪಣವಾಗಿಟ್ಟಾದರೂ ಶೋಷಿತ ವರ್ಗದವರಿಗೆ ಪ್ರತ್ಯೇಕ ಮತದಾರ ಸಮೂಹ (Separate electorates) ಸಿಕ್ಕದ ಹಾಗೆ ಹೋರಾಡುತ್ತೇನೆಂದು. ಇದು ನಾನು ಚರ್ಚೆಯ ಬಿಸಿ ಕ್ಷಣಗಳಲ್ಲಿ ಅಕಸ್ಮಾತ್ತಾಗಿ ಹೇಳಿದ ಮಾತಲ್ಲ ಅಥವಾ ಕೇಳಲು ಚೆನ್ನಾಗಿರುತ್ತದೆ ಎನ್ನುವ ಕಾರಣದಿಂದಲೂ ಹೇಳಿದ ಮಾತಲ್ಲ. ನಾನು ಹೇಳಿದ್ದು ಈ ಮಾತನ್ನು ಗಂಭೀರವಾಗಿ ಪರಿಗಣಿಸಲಿ ಎನ್ನುವ ಉದ್ದೇಶದಿಂದ. ನಾನು ಅಂದ ಮಾತನ್ನು ಕಾರ್ಯರೂಪಕ್ಕೆ ತರಲೋಸ್ಕರ ಭಾರತಕ್ಕೆ ಮರಳಿದ ಕೂಡಲೆ ಜನಾಭಿಪ್ರಾಯವನ್ನು ಪ್ರತ್ಯೇಕ ಮತದಾರ ಸಮೂಹದ ವಿರುದ್ಧ ಮೂಡಿಸಬೇಕೆಂದು ಆಶಿಸಿದ್ದೆ. ಆದರೆ ಹಾಗಾಗಲಿಲ್ಲ.

ಪ್ರಭುಗಳ ಸರ್ಕಾರವು ಯಾವ ಕ್ಷಣದಲ್ಲಾದರೂ ತನ್ನ ನಿರ್ಣಯವನ್ನು ಪ್ರಕಟಿಸಬಹುದೆಂದು ಇಲ್ಲಿ ನನಗೆ ಲಭ್ಯವಾಗಿರುವ ಪತ್ರಿಕೆಗಳ ಮೂಲಕ ನನಗೆ ತಿಳಿದುಬಂದಿದೆ. ನನಗೆ ತಕ್ಷಣ ಅನಿಸಿದ್ದು: ಈ ನಿರ್ಣಯದ ಪ್ರಕಾರ ಒಂದು ವೇಳೆ ಶೋಷಿತ ವರ್ಗದವರಿಗೆ ಪ್ರತ್ಯೇಕ ಮತದಾರ ಸಮೂಹ ಸೃಷ್ಟಿಯಾದರೆ

ನಾನು ಮಾಡಿದ ಪ್ರಮಾಣವನ್ನು ಕಾರ್ಯಗತಗೊಳಿಸಲು ಅನುವಾಗಬೇಕು. ಆದರೆ ಈಗ, ಯಾವ ಮುನ್ಸೂಚನೆಯೂ ಇಲ್ಲದೆ ಹಾಗೆ ಮಾಡುವುದರಿಂದ ಬ್ರಿಟಿಷ್ ಸರ್ಕಾರಕ್ಕೆ ದ್ರೋಹ ಬಗೆದಂತಾಗುವುದು ಎನಿಸುತ್ತಿದೆ. ಏಕೆಂದರೆ ನಾನು ಈ ವಿಷಯಕ್ಕೆ ಕೊಡುವಷ್ಟು ಮಹತ್ವವನ್ನು ಸಹಜವಾಗಿ ಬ್ರಿಟಿಷ್ ಸರ್ಕಾರ ಕೊಡಲಾರದು.

**ಪ್ರತ್ಯೇಕ ಮತದಾರ ಸಮೂಹದ ಅಪಾಯಗಳು**

ಶೋಷಿತ ವರ್ಗಗಳಿಗೆ ಪ್ರತ್ಯೇಕ ಮತದಾರ ಸಮೂಹ ಕಲ್ಪಿಸುವುದರ ವಿರುದ್ಧ ನಾನು ಈ ಮೊದಲೇ ಹೇಳಿದ್ದನ್ನು ಇಲ್ಲಿ ಪುನರುಚ್ಚರಿಸುವ ಆವಶ್ಯಕತೆಯಿಲ್ಲವೆಂದುಕೊಂಡಿದ್ದೇನೆ. ಅವರಲ್ಲಿ ನಾನು ಒಬ್ಬನಾಗಿದ್ದೇನೆ ಎಂದು ನನ್ನ ಭಾವನೆ. ಈ ವರ್ಗದವರ ವಿಷಯ ಬೇರೆಯವರದಕ್ಕಿಂತ ಭಿನ್ನವಾದುದು. ಶಾಸಕಾಂಗಗಳಲ್ಲಿ ಇವರ ಪ್ರಾತಿನಿಧ್ಯಕ್ಕೆ ನನ್ನದೇನೂ ಆಕ್ಷೇಪಣೆಯಿಲ್ಲ. ಪ್ರತಿಯೊಬ್ಬ ವ್ಯಕ್ತಿಯೂ–ವಿದ್ಯಾವಂತನಿರಲಿ, ಅವಿದ್ಯಾವಂತನಿರಲಿ; ಸ್ಥಿತಿವಂತನಿರಲಿ, ಬಡವನಾಗಿರಲಿ–ಹೆಣ್ಣು – ಗಂಡೆಂಬ ಭೇದವಿಲ್ಲದೆ ಮತ ನೀಡಲು ಮುಂದೆ ಬಂದು ತಮ್ಮ ಹೆಸರು ನೊಂದಾಯಿಸಿಕೊಳ್ಳಬೇಕೆಂಬುದು ನನ್ನ ಅಭಿಪ್ರಾಯ ಕೂಡ. ಆದರೆ, ರಾಜಕೀಯ ದೃಷ್ಟಿಕೋನದಿಂದ ಅದೇನೇ ಇರಲಿ, ಈ ಕ್ರಮ ಅವರಿಗೂ ಹಿಂದೂ ಧರ್ಮಕ್ಕೂ – ಎರಡಕ್ಕೂ ಹಾನಿಕರ. ಪ್ರತ್ಯೇಕ ಮತ ಸಮೂಹವನ್ನು ಅನುಮೋದಿಸುವ ಮುಂಚೆ, ಶೋಷಿತ ವರ್ಗದವರು ಸವರ್ಣೀಯ ಹಿಂದೂಗಳ ನಡುವೆ ಹೇಗೆ ಹಂಚಿಹೋಗಿದ್ದಾರೆ ಹಾಗೂ ಸವರ್ಣೀಯ ಹಿಂದೂಗಳನ್ನು ಅವರು ಎಷ್ಟು ಅವಲಂಬಿಸಿದ್ದಾರೆ ಎನ್ನುವುದನ್ನು ನಾವು ಗಮನಿಸಬೇಕು. ಹಿಂದೂ ಧರ್ಮದ ದೃಷ್ಟಿಕೋನದಲ್ಲಿ ನೋಡಿದರೆ ಪ್ರತ್ಯೇಕ ಮತದಾರ ಸಮೂಹವು ಜಾತಿಜಾತಿಗಳ ಮಧ್ಯೆ ಬಿರುಕು ಮೂಡಿಸುತ್ತದೆ, ಅಷ್ಟೆ.

ನನ್ನ ಪ್ರಕಾರ ಇದು ನೈತಿಕ ಹಾಗೂ ಧಾರ್ಮಿಕ ಪ್ರಶ್ನೆಯಾಗಿದೆ. ನೈತಿಕ ಹಾಗೂ ಧಾರ್ಮಿಕ ದೃಷ್ಟಿಕೋನಗಳ ಎದುರಿನಲ್ಲಿ ರಾಜಕೀಯ ದೃಷ್ಟಿಕೋನ, ಎಷ್ಟೇ ಪ್ರಬಲವಾಗಿದ್ದರೂ ಕೂಡ ಕಡಿಮೆ ಮಹತ್ವದ್ದಾಗುತ್ತದೆ.

ನನಗೆ ಬಾಲ್ಯದಿಂದಲೂ ಈ ವರ್ಗದವರ ಬಗ್ಗೆ ತುಂಬಾ ಆಸ್ಥೆ ಇದ್ದು, ಅನೇಕ ಸಲ ಅವರಿಗೋಸ್ಕರ ನಾನು ನನ್ನ ಹಿತವನ್ನೇ ಮರೆತು ಕಷ್ಟ ಸಹಿಸಿದ್ದೇನೆ. ನನ್ನ ಈ ಭಾವನೆಗಳನ್ನು ನೀವೂ ಅನುಮೋದಿಸಬೇಕು. ನನ್ನ ಬಗ್ಗೆ ನಾನು ಜಂಬಕೊಚ್ಚಿಕೊಳ್ಳುತ್ತಿಲ್ಲ. ಏಕೆಂದರೆ ಹಿಂದೂಗಳು ಎಷ್ಟೇ ಪಶ್ಚಾತ್ತಾಪಪಟ್ಟು, ಎಷ್ಟೇ ತಪಸ್ಸನ್ನಾಚರಿಸಿದರೂ ಶತಮಾನಗಳಿಂದ ಶೋಷಿತ ವರ್ಗದವರಿಗೆ ಮಾಡಿದ ಅನ್ಯಾಯಗಳನ್ನು ಪರಿಹರಿಸಿದಂತಾಗುವುದಿಲ್ಲ.

**"ಆಮರಣಾಂತ ಉಪವಾಸ ಮಾಡುವೆ"**

ಆದರೆ ಪ್ರತ್ಯೇಕ ಮತದಾರ ಸಮೂಹವು ಶೋಷಿತರು ಪಟ್ಟಿರುವ ಅವಮಾನಗಳಿಗೆ ಪ್ರಾಯಶ್ಚಿತ್ತವೂ ಅಲ್ಲ, ಪರಿಹಾರವೂ ಅಲ್ಲ. ಆದ್ದರಿಂದ ಪ್ರಭುಗಳ ಸರ್ಕಾರಕ್ಕೆ ನನ್ನ ವಿನಮ್ರ ಪ್ರಾರ್ಥನೆಯೆಂದರೆ, ಅವರ ನಿರ್ಧಾರ ಹೊರಬಂದ ಕೂಡಲೆ ನಾನು ಉಪವಾಸ ಸತ್ಯಾಗ್ರಹ ಕೈಗೊಳ್ಳುತ್ತೇನೆಂದು ತಿಳಿಯಿರಿ.

ನಾನು ಜೈಲು ವಾಸಿಯಾಗಿರುವಾಗ ಈ ಹೆಜ್ಜೆ ಇಡುತ್ತಿರುವುದರಿಂದ ಪ್ರಭುಗಳ ಸರ್ಕಾರಕ್ಕೆ ಇರುಸು ಮುರುಸಿನ ಸ್ಥಿತಿಯುಂಟಾಗುತ್ತದೆಂದು ತಿಳಿದು ನನಗೆ ನೋವಾಗುತ್ತಿದೆ. ಬೇರೆಯವರು "ಹುಚ್ಚು' ಎಂದು ಕರೆಯಬಹುದಾದ ಕ್ರಮಗಳನ್ನು ರಾಜಕೀಯ ಕ್ಷೇತ್ರದಲ್ಲಿ ಜಾರಿಗೊಳಿಸಲು ಈ ಸ್ಥಿತಿಯಲ್ಲಿರುವ ನನ್ನಂಥವನು, ಈ ರೀತಿ ಹಠ ಮಾಡುವುದು ಕೆಲವರಿಗೆ ಸರಿಯೆನಿಸದು. ಅಂಥವರಿಗೆ ನಾನು ಹೇಳಬಯಸುವುದು ಇಷ್ಟೆ. ನಾನು ಈಗ ಹಿಡಿದೆತ್ತಿರುವ ವಿಷಯ ಕೇವಲ ಒಂದು ಕಾರ್ಯಕ್ರಮವಲ್ಲ, ಅದು ನನ್ನ ಜೀವನದ ಅವಿಚ್ಛಿನ್ನ

ಭಾಗವಾಗಿದೆ. ನನ್ನ ಅಂತರಾತ್ಮದ ಮಾತನ್ನು ನಾನೆಂದೂ ಮೀರಲಾರೆ. ಜನ ನನ್ನನ್ನು "ಹುಚ್ಚ' ಎಂದರೂ ಸರಿ, ನನ್ನನ್ನು ಜೈಲಿನಿಂದ ಬಿಡುಗಡೆ ಮಾಡಿದರೂ ಕೂಡ ಸತ್ಯಾಗ್ರಹದ ಕರ್ತವ್ಯದಿಂದ ನಾನು ಹೊರಳುವುದಿಲ್ಲ. ನನ್ನ ಭಯ–ಅನಿಸಿಕೆಗಳಾವುವೂ ಸತ್ಯವಾಗದಿದ್ದರೆ ಸಾಕೆಂದು ಆಶಿಸುತ್ತಿದ್ದೇನೆ. ಶೋಷಿತ ವರ್ಗದವರಿಗೆ ಪ್ರತ್ಯೇಕ ಮತದಾರ ಸಮೂಹ ರಚಿಸುವ ಯಾವ ಉದ್ದೇಶವೂ ಬ್ರಿಟಿಷ್ ಸರ್ಕಾರಕ್ಕಿಲ್ಲವೆಂದು ಆಶಿಸುತ್ತೇನೆ.

* * *

## ಗಾಂಧೀಜಿಯವರಿಗೆ ರಾಜ್ಯಾಂಗ ಕಾರ್ಯದರ್ಶಿಗಳಿಂದ ಬಂದ ಉತ್ತರ

ಇಂಡಿಯಾ ಆಫೀಸ್, ವೈಟ್ ಹಾಲ್
ಏಪ್ರಿಲ್ ೧೩, ೧೯೩೨

ಪ್ರಿಯ ಶ್ರೀ ಗಾಂಧೀಜಿ ಅವರೆ,

ನಿಮ್ಮ ೧೧ನೆಯ ತಾರೀಖಿನ ಪತ್ರಕ್ಕೆ ಉತ್ತರ. ಶೋಷಿತ ವರ್ಗದವರಿಗೆ ಪ್ರತ್ಯೇಕ ಮತದಾರ ಸಮೂಹದ ವಿಷಯದ ಬಗ್ಗೆ ನಿಮ್ಮ ಅನಿಸಿಕೆಗಳು ನನಗೆ ಅರ್ಥವಾಗುತ್ತಿವೆ. ಆದ್ದರಿಂದ ನಾನು ಇಷ್ಟು ಮಾತ್ರ ಹೇಳಬಲ್ಲೆ. ನಮ್ಮ ನಿರ್ಧಾರ ಆವಶ್ಯಕತೆ ಹಾಗೂ ಔಚಿತ್ಯವನ್ನು ಅವಲಂಬಿಸಿರುತ್ತದೆ. ನಿಮಗೆ ತಿಳಿದಿರುವಂತೆ ಲಾರ್ಡ್ ಲೋಥಿಯನ್ ಅವರ ಸಮಿತಿ ತನ್ನ ಪ್ರವಾಸವನ್ನು ಇನ್ನೂ ಪೂರ್ತಿಗೊಳಿಸಿಲ್ಲ. ಅದರ ಅಂತಿಮ ನಿರ್ಧಾರಗಳು ನಮಗೆ ದೊರೆಯಲು ಇನ್ನೂ ಕೆಲವು ವಾರಗಳಾದರೂ ಬೇಕಾಗಬಹುದು. ಅದರ ವರದಿ ಕೈಗೆ ಸಿಕ್ಕ ಮೇಲೆ ಸಮಿತಿಯ ಶಿಫಾರಸುಗಳಿಗೆ ನಾವು ಗಮನ ಕೊಡಬೇಕಾಗುವುದು. ಸಮಿತಿಯ ಶಿಫಾರಸು ಮತ್ತು ತಮ್ಮ–ತಮ್ಮಂಥವರ ಅಭಿಪ್ರಾಯಗಳನ್ನು ಗಮನಿಸಿ ನಂತರವೇ ನಮ್ಮ ತೀರ್ಪು ಹೊರಬೀಳುವುದು. ಒಂದು ವೇಳೆ ನೀವೇ ನಮ್ಮ ಜಾಗದಲ್ಲಿದ್ದರೂ ನೀವೂ ಇದೇ ರೀತಿ ಮಾಡುತ್ತಿದ್ದಿರೆಂದು ನಮಗೆ ಗೊತ್ತು. ಸಮಿತಿಯ ವರದಿಗೆ ಕಾಯುತ್ತಿದ್ದು, ಬಂದ ಮೇಲೆ ಅದನ್ನು ಚೆನ್ನಾಗಿ ಅಭ್ಯಾಸ ಮಾಡಿ, ನಿರ್ಧಾರ ತೆಗೆದುಕೊಳ್ಳುವುದಕ್ಕೆ ಮುಂಚೆ ವಿಷಯದ ಪರ–ವಿರೋಧ ಧೋರಣೆಗಳನ್ನು ಗಮನಿಸಿ, ಆಮೇಲೆ ತೀರ್ಪು ನೀಡಲಾಗುವುದು. ಇದಕ್ಕಿಂತ ಹೆಚ್ಚಿಗೆ ಏನನ್ನೂ ಹೇಳಲಾರೆ. ನೀವೂ ಇನ್ನೇನನ್ನೂ ನಿರೀಕ್ಷಿಸುತ್ತಿಲ್ಲ ಎಂದು ಭಾವಿಸಿದ್ದೇನೆ.

* * *

ಈ ಸೂಚನೆ ಕೊಟ್ಟ ಮೇಲೆ ಗಾಂಧೀಜಿಯವರು ಇದನ್ನು ಮರೆತೇಬಿಟ್ಟರು. ಉಪವಾಸ ಸತ್ಯಾಗ್ರಹ ಮಾಡುತ್ತೇನೆಂದು ಇನ್ನೊಂದು ಸಲ ಬ್ರಿಟಿಷ್ ಸರ್ಕಾರಕ್ಕೆ ಬೆದರಿಕೆ ಹಾಕಿದರೆ ಸಾಕು, ಅದು ತತ್ತರಿಸಿ, ಅಸ್ಪೃಶ್ಯರಿಗೆ ವಿಶೇಷ ಪ್ರಾತಿನಿಧ್ಯ ಕೊಡುವ ನಿರ್ಧಾರವನ್ನು ಹಿಂದೆ ತೆಗೆದುಕೊಳ್ಳುತ್ತದೆ ಎಂದು ಗಾಂಧೀಜಿಯವರು ಯೋಚಿಸಿದ್ದರು. ೧೯೩೨ರ ಆಗಸ್ಟ್ ೧೭ ರಂದು ಮತೀಯ ವಿಭಜನೆಯನ್ನು ಘೋಷಿಸಿದ ಮೇಲೆ ಗಾಂಧೀಜಿಯವರಿಗೆ ತಮ್ಮ ಬೆದರಿಕೆ ತಂತ್ರ ಏನೇನೂ ಪರಿಣಾಮ ಬೀರಿಲ್ಲ ಎನ್ನುವುದು ತಿಳಿಯಿತು. ಮತೀಯ ವಿಭಜನೆಯ ಷರತ್ತುಗಳನ್ನು ಬದಲಾಯಿಸಲು ಮೊದಲು ಪ್ರಯತ್ನಿಸಿದರು. ಈ ವಿಷಯವಾಗಿ ಪ್ರಧಾನ ಮಂತ್ರಿಯವರಿಗೆ ಪತ್ರ ಬರೆದರು :

ಯರವಾಡಾ ಜೈಲು
೧೯೩೨, ಆಗಸ್ಟ್ ೧೮

ಪ್ರಿಯ ಮಿತ್ರರೆ,

ಶೋಷಿತ ವರ್ಗದವರ ಪ್ರಾತಿನಿಧ್ಯ ಕುರಿತು ನಾನು ಮಾರ್ಚ್ ೧೧ ರಂದು ಸರ್ ಸಾಮ್ಯುಯೆಲ್ ಹೋರ್ ಅವರಿಗೆ ಬರೆದ ಪತ್ರವನ್ನು ಅವರು ನಿಮಗೂ, ನಿಮ್ಮ ಮಂತ್ರಿ ಮಂಡಲಕ್ಕೂ ತೋರಿಸಿರುವರೆಂದು ನಂಬಿದ್ದೇನೆ. ಆ ಪತ್ರವನ್ನು ಈ ಪತ್ರದ ಮೊದಲ ಭಾಗವೆಂದು ತಿಳಿದು ಎರಡನ್ನೂ ಒಟ್ಟಿಗೆ ಓದತಕ್ಕದ್ದು.

**ಉಪವಾಸಕ್ಕೆ ನಿರ್ಧಾರ**

ಅಲ್ಪ ಸಂಖ್ಯಾತರ ಪ್ರಾತಿನಿಧ್ಯ ಕುರಿತ ಬ್ರಿಟಿಷ್ ಸರ್ಕಾರದ ನಿರ್ಧಾರವನ್ನು ಓದಿದೆ. ಸರ್ ಸಾಮ್ಯುಯೆಲ್‌ಗೆ ಬರೆದ ಪತ್ರವನ್ನು ಮುಂದುವರಿಸುತ್ತ, ಮತ್ತು ಜೇಮ್ಸ್ ಪ್ಯಾಲೇಸ್‌ನಲ್ಲಿ ನವೆಂಬರ್ ೧೩ರಂದು ನಡೆದ ದುಂಡುಮೇಜಿನ ಪರಿಷತ್ತಿನಲ್ಲಿ ಅಲ್ಪ ಸಂಖ್ಯಾತರ ಸಮಿತಿಯ ಮುಂದೆ ನಾನು ಕೊಟ್ಟ ಹೇಳಿಕೆಯನ್ನು ಮುಂದುವರಿಸುತ್ತ ನಾನು ಹೇಳಬಯಸುವುದೇನೆಂದರೆ, ನಿಮ್ಮ ನಿರ್ಧಾರವನ್ನು ನನ್ನ ಜೀವವನ್ನೇ ಪಣವಾಗಿಟ್ಟು ವಿರೋಧಿಸುತ್ತೇನೆ. ಉಪ್ಪು–ಸೋಡ ಬೆರೆಸಿದ ಅಥವಾ ಬೆರಸದ ನೀರನ್ನು ಬಿಟ್ಟರೆ ಮತ್ತೇನನ್ನೂ ಸೇವಿಸದೆ ಆಮರಣಾಂತ ಉಪವಾಸ ಸತ್ಯಾಗ್ರಹವನ್ನು ಘೋಷಿಸುವುದೊಂದೇ ಇದನ್ನು ಸಾಧ್ಯವಾಗಿಸುವ ಮಾರ್ಗ. ಒಂದು ವೇಳೆ ಬ್ರಿಟಿಷ್ ಸರ್ಕಾರ ಸ್ವಇಚ್ಛೆಯಿಂದ ಅಥವಾ ಜನರ ಆಗ್ರಹದಿಂದ ತನ್ನ ನಿರ್ಧಾರವನ್ನು ಬದಲಾಯಿಸಿ ಈ ಯೋಜನೆಯನ್ನು ಹಿಂದೆ ತೆಗೆದುಕೊಂಡ ಪಕ್ಷದಲ್ಲಿ ಮಾತ್ರ ಉಪವಾಸವನ್ನು ನಿಲ್ಲಿಸಲಾಗುವುದು. ಶೋಷಿತ ವರ್ಗದ ಪ್ರತಿನಿಧಿಗಳು ಸಾರ್ವಜನಿಕ ಮತದಾರ ಸಮೂಹದಿಂದ ಸಾರ್ವಜನಿಕ ಮತ ಚಲಾವಣೆ ಮೂಲಕವೇ ಆಯ್ದು ಬರಬೇಕು.

ಮೇಲೆ ಹೇಳಿದ ರೀತಿಯಲ್ಲಿ ನಿರ್ಧಾರವನ್ನು ಬದಲಾಯಿಸುವ ದಿಸೆಯಲ್ಲಿ ಪರಿಶೀಲನೆ ಕಾರ್ಯ ಸದ್ಯದಲ್ಲೇ ಆರಂಭವಾಗದಿದ್ದರೆ ಮೇಲೆ ಹೇಳಿದ ಉಪವಾಸ ವ್ರತವು ಸೆಪ್ಟೆಂಬರ್ ೨೦ರ ಮಧ್ಯಾಹ್ನದಿಂದ ಜಾರಿಗೆ ಬರುವುದು.

ನಿಮಗೆ ಇದರ ಸೂಚನೆ ಸಿಗಲೆಂದು ಈ ಪತ್ರದ ಒಕ್ಕಣೆಯನ್ನು ತಂತಿ ಮೂಲಕ ಕಳಿಸಿಕೊಡಿ ಎಂದು ಇಲ್ಲಿನ ಅಧಿಕಾರಿಗಳನ್ನು ಕೇಳಿಕೊಳ್ಳುತ್ತಿದ್ದೇನೆ. ಒಂದು ವೇಳೆ ಅತಿ ಮಂದಗತಿಯಲ್ಲಿ ಇದು ರವಾನೆಯಾದರೂ ಈ ಪತ್ರ ನಿಮಗೆ ಸಾಕಷ್ಟು ಮುಂಚಿತವಾಗಿ ಸಿಗುವಂತೆ ಈ ಏರ್ಪಾಟು ಮಾಡಿದ್ದೇನೆ.

ನನ್ನ ಇನ್ನೊಂದು ಬೇಡಿಕೆಯೆಂದರೆ ಈ ಪತ್ರವನ್ನು ಮತ್ತು ಸರ್ ಸಾಮ್ಯುಯೆಲ್ ಹೋರ್ ಅವರಿಗೆ ಬರೆದ ಪತ್ರವನ್ನು ಅದಷ್ಟು ಬೇಗ ಪ್ರಕಟಮಾಡಿ. ನಾನು ನನ್ನ ಅನಿಸಿಕೆಗಳನ್ನು ಮತ್ತು ಈ ಪತ್ರಗಳ ಒಕ್ಕಣೆಯನ್ನು ನನ್ನ ಇಬ್ಬರು ಜೊತೆಗಾರರಾದ ಸರ್ದಾರ್ ವಲ್ಲಭಭಾಯಿ ಪಟೇಲ್ ಮತ್ತು ಮಹದೇವ ದೇಸಾಯಿ – ಇಬ್ಬರಿಗೆ ಬಿಟ್ಟರೆ ಇನ್ಯಾರಿಗೂ ತಿಳಿಸದೆ ಜೈಲಿನ ಕಾನೂನುಗಳನ್ನು ಚಾಚೂ ತಪ್ಪದೆ ಪಾಲಿಸಿದ್ದೇನೆ. ಆದರೆ ನನ್ನ ಪತ್ರವು ಜನರ ಅಭಿಪ್ರಾಯಗಳನ್ನು ತಿದ್ದಬೇಕೆಂದು ಆಶಿಸುತ್ತೇನೆ. ಅದು ನಿಮ್ಮ ಕೈಲಿದೆ. ಇದನ್ನು ಆದಷ್ಟು ಬೇಗ ಪ್ರಕಟಿಸಿ ಎಂದು ನನ್ನ ಬೇಡಿಕೆ.

**ಬಿಡುಗಡೆ ಪಡೆಯದಿರುವುದು**

ನಾನು ತೆಗೆದುಕೊಂಡ ನಿರ್ಧಾರದ ಬಗ್ಗೆ ನನಗೆ ವಿಷಾದವಿದೆ. ಆದರೆ ಧಾರ್ಮಿಕ ಮನೋಭಾವವುಳ್ಳವನಾದ ನನ್ನಂಥವನಿಗೆ ಬೇರೆ ದಾರಿಯೇ ಇಲ್ಲ. ಸರ್ ಸಾಮ್ಯುಯೆಲ್ ಹೋರ್

ಅವರಿಗೆ ಬರೆದಿರುವಂತೆ, ಒಂದು ವೇಳೆ ತಮ್ಮ ಇರುಸುಮುರುಸುತನವನ್ನು ಮುಚ್ಚಿಕೊಳ್ಳಲು ನೀವು ನನ್ನನ್ನು ಬಿಡುಗಡೆ ಮಾಡಿದರೂ ಕೂಡ ನಾನು ಉಪವಾಸ ಕೈಗೊಳ್ಳುವುದಂತೂ ನಿಶ್ಚಿತ. ಯಾವುದೇ ಕಾರಣಕ್ಕೂ ನಿರ್ಧಾರದಿಂದ ಹಿಂಜರಿಯುವ ಆಸೆ ನನಗಿಲ್ಲ. ನನ್ನ ಬಿಡುಗಡೆಯು ಗೌರವಪೂರ್ವಕ ರೀತಿಯಲ್ಲಿ ಹೊರತು ಇನ್ಯಾವುದೇ ರೀತಿಯಲ್ಲಿ ಆಗಬೇಕೆಂದು ನಾನು ಇಚ್ಛಿಸುವುದಿಲ್ಲ.

ಶೋಷಿತ ವರ್ಗದವರಿಗೆ ಪ್ರತ್ಯೇಕ ಮತದಾರ ಸಮೂಹ ರಚಿತವಾದರೆ ಅದರಿಂದ ಹಿಂದೂ ಧರ್ಮಕ್ಕೂ, ಶೋಷಿತ ವರ್ಗದವರಿಗೂ ತೊಂದರೆ ಉಂಟಾಗಬಹುದಾದ್ದೆಂದು ಅದನ್ನು ವಿರೋಧಿಸುವ ನನ್ನ ನಿರ್ಧಾರ ತಪ್ಪಾಗಿರಬಹುದು. ನನ್ನ ನಿರ್ಧಾರ ತಪ್ಪೇ ಆಗಿದ್ದರೆ ಜೀವನದ ಬಗ್ಗೆ ನನಗಿರುವ ಇತರ ಆದರ್ಶಗಳೂ ತಪ್ಪಾಗಿರಬಹುದು. ಉಪವಾಸ ಮಾಡಿ ಒಂದು ವೇಳೆ ನಾನು ಸತ್ತರೆ ನನ್ನ ತಪ್ಪಿನ ಪ್ರಾಯಶ್ಚಿತ್ತ ಮಾಡಿಕೊಂಡಂತಾಗುತ್ತದೆ; ಅಲ್ಲದೆ, ಅಸಂಖ್ಯಾತ ಹೆಂಗಸರು, ಗಂಡಸರು ನನ್ನ ಬಗ್ಗೆ ಇಟ್ಟುಕೊಂಡಿರುವ ಮುಗ್ಧ ನಂಬುಗೆಯ ಭಾರ ನನ್ನ ಮೇಲಿಂದ ಇಳಿದಂತಾಗುತ್ತದೆ. ಒಂದು ವೇಳೆ ನಾನು ತಿಳಿದಿರುವಂತೆ ಈ ನನ್ನ ನಿರ್ಧಾರ ಸರಿಯಾಗಿದ್ದರೆ, ಇದು ಸುಮಾರು ಕಾಲ ಶತಮಾನದಿಂದ ಆಚರಣೆಗೆ ತರಲು ಪ್ರಯತ್ನಿಸುತ್ತಿರುವ ಜೀವನ ವಿಧಾನದ ಮೊದಲ ಹೆಜ್ಜೆಯಾಗುತ್ತದೆ.

ತಮ್ಮ ವಿಶ್ವಾಸಪಾತ್ರನಾದ ಮಿತ್ರ
ಎಮ್.ಕೆ. ಗಾಂಧಿ

ಪ್ರಧಾನ ಮಂತ್ರಿಯವರ ಉತ್ತರ ಹೀಗಿತ್ತು :

೧೦, ಡೌನಿಂಗ್ ಸ್ಟ್ರೀಟ್
೧೯೩೨, ಸೆಪ್ಟೆಂಬರ್ ೮

ಪ್ರಿಯ ಶ್ರೀ ಗಾಂಧೀಜಿ ಅವರೆ,

ನಿಮ್ಮ ಪತ್ರ ನೋಡಿ ನನಗೆ ಬಹಳ ಆಶ್ಚರ್ಯ ಹಾಗೂ ಖೇದವಾಯಿತು. ಶೋಷಿತ ವರ್ಗದವರ ಬಗ್ಗೆ ಪ್ರಭುಗಳ ಸರ್ಕಾರದ ನಿರ್ಧಾರ ಏನು ಸೂಚಿಸುತ್ತೆ ಎನ್ನುವುದನ್ನು ನೀವು ತಪ್ಪಾಗಿ ಅರ್ಥಮಾಡಿಕೊಂಡು ಪತ್ರ ಬರೆದಿದ್ದೀರೆಂದು ತಿಳಿದುಬರುತ್ತದೆ. ಹಿಂದೂ ಸಮೂಹದಿಂದ ಶೋಷಿತ ವರ್ಗದವರನ್ನು ಸದಾಕಾಲಕ್ಕೆ ಬೇರ್ಪಡಿಸುವ ವಿಷಯದ ವಿರುದ್ಧ ನಿಮ್ಮ ನಿರ್ಧಾರವನ್ನು ಬದಲಾಯಿಸಲು ಅಸಾಧ್ಯವೆಂದು ನಮಗೆ ತಿಳಿದಿದೆ. ನಿಮ್ಮ ಈ ನಿರ್ಧಾರವನ್ನು ದುಂಡು ಮೇಜಿನ ಪರಿಷತ್ತಿನ ಅಲ್ಪಸಂಖ್ಯಾತರ ಸಮಿತಿಯ ಮುಂದೆ ನೀವು ವಿಶದಪಡಿಸಿದ್ದೀರಿ ಮತ್ತು ಸರ್ ಸಾಮ್ಯುಯೆಲ್ ಹೋರ್ ಅವರಿಗೆ ಬರೆದ ಪತ್ರದಲ್ಲೂ ಇದನ್ನು ಹೇಳಿದ್ದೀರಿ. ನಿಮ್ಮ ಈ ಅಭಿಪ್ರಾಯವನ್ನು ಅನೇಕ ಹಿಂದೂಗಳು ಅನುಮೋದಿಸುವ ವಿಷಯವೂ ನಮಗೆ ಗೊತ್ತಿದೆ. ಆದ್ದರಿಂದ ಶೋಷಿತ ವರ್ಗದವರ ಪ್ರಾತಿನಿಧ್ಯದ ವಿಷಯ ಸಮಾಲೋಚಿಸುವಾಗ ಇದನ್ನು ತುಂಬಾ ಎಚ್ಚರಿಕೆಯಿಂದ ಗಮನಿಸಿದ್ದೇವೆ.

**ಸರ್ಕಾರದ ನಿರ್ಧಾರದ ವಿವರಣೆ**

ಶೋಷಿತ ವರ್ಗ ಸಂಘಟನೆಗಳಿಂದ ನಮಗೆ ಬಂದಿರುವ ಅಸಂಖ್ಯಾತ ಬೇಡಿಕೆಗಳು ಮತ್ತು ನೀವು ಈಗಾಗಲೆ ಗುರುತಿಸಿರುವ ಅವುಗಳ ಊನಗಳ ಹಿನ್ನೆಲೆಯಲ್ಲಿ, ನಾವು ಶಾಸಕಾಂಗಗಳಲ್ಲಿ ಶೋಷಿತ ವರ್ಗಗಳಿಗೆ ಸಿಕ್ಕಬೇಕಾದ ನ್ಯಾಯಬದ್ಧ ಪ್ರಾತಿನಿಧ್ಯದ ಸಂರಕ್ಷಣೆಯನ್ನು ನಮ್ಮ ಕರ್ತವ್ಯವೆಂದುಕೊಂಡಿದ್ದರೂ ಆ ವರ್ಗಗಳು ಹಿಂದೂಗಳ ಲೋಕದಿಂದ ಬೇರಾಗುವಂತೆ ನಾವು ಯಾವುದನ್ನೂ ಮಾಡಿಲ್ಲ. ಮಾರ್ಚ್

೧೧ರಂದು ಬರೆದ ಪತ್ರದಲ್ಲಿ ಶಾಸಕಾಂಗದಲ್ಲಿ ಅವರ ಪ್ರಾತಿನಿಧ್ಯಕ್ಕೆ ನಿಮ್ಮ ವಿರೋಧವಿಲ್ಲವೆಂದು ನೀವೇ ಹೇಳಿಕೊಂಡಿದ್ದೀರಿ.

ಸರ್ಕಾರದ ಯೋಜನೆಯ ಪ್ರಕಾರ ಶೋಷಿತ ವರ್ಗದವರು ಹಿಂದೂ ಜನಾಂಗದಲ್ಲಿ ಒಂದಾಗಿಯೇ ಇರುತ್ತಾರೆ; ಅಲ್ಲದೆ ಹಿಂದೂ ಮತದಾರರಾಗಿ ಮತ ಚಲಾಯಿಸುತ್ತಾರೆ. ಮೊದಲ ಇಪ್ಪತ್ತು ವರ್ಷಗಳು ಅವರು ಹಿಂದೂ ಮತದಾರ ಸಮೂಹದಲ್ಲಿ ಒಂದಾಗಿರುತ್ತಾರೆ. ಇದಲ್ಲದೆ ಒಂದು ನಿರ್ದಿಷ್ಟ ಸಂಖ್ಯೆಯ ವಿಶೇಷ ಮತ ಕ್ಷೇತ್ರಗಳನ್ನು ನಿರ್ಮಿಸಲಾಗಿ ಅದರ ಮೂಲಕ ಅವರ ಹಕ್ಕು-ಆಸಕ್ತಿಗಳನ್ನು ಕಾಪಾಡುವುದು ಈಗಿನ ಸಂದರ್ಭದಲ್ಲಿ ಆವಶ್ಯಕ ಎಂದು ಭಾವಿಸಿದ್ದೇವೆ.

ಇಂಥ ಮೀಸಲು ಕ್ಷೇತ್ರಗಳಲ್ಲಿ ಶೋಷಿತ ವರ್ಗದ ಸದಸ್ಯರು ಹಿಂದೂ ಮತದಾರ ಸಮೂಹದ ಮೂಲಕ ಮತ ಚಲಾಯಿಸುವುದಲ್ಲದೆ ಅವರಿಗೆ ಎರಡು ಮತ ಚಲಾಯಿಸುವ ಅವಕಾಶವಿದೆ. ಹೀಗಾಗಿ ಹಿಂದೂ ಸಮೂಹದ ಸದಸ್ಯರಾಗಿರುವುದಕ್ಕೆ ಅವರಿಗೆ ಯಾವ ಅಡ್ಡಿ ಆತಂಕಗಳೂ ಇರುವುದಿಲ್ಲ.

ನಾವು ಕೂಡ ಉದ್ದೇಶಪೂರ್ವಕವಾಗಿ ಶೋಷಿತ ವರ್ಗದವರಿಗಾಗಿ ಮತೀಯ ಮತದಾರ ಸಮೂಹ ನಿರ್ಮಿಸುವುದರ ವಿರುದ್ಧ ನಿರ್ಧಾರ ತೆಗೆದುಕೊಂಡಿದ್ದೇವೆ. ಎಲ್ಲಾ ಶೋಷಿತ ವರ್ಗದ ಮತದಾರರನ್ನು ಸಾರ್ವಜನಿಕ ಅಥವಾ ಹಿಂದೂ ಮತ ಕ್ಷೇತ್ರಗಳ ಮತದಾರರ ಜೊತೆಯಲ್ಲಿ ಸೇರಿಸಿದ್ದೇವೆ. ಹೀಗಾಗಿ ಚುನಾವಣೆ ಸಮಯದಲ್ಲಿ ಉಚ್ಚ ಜಾತಿಯ ಅಭ್ಯರ್ಥಿಗೆ ಶೋಷಿತ ವರ್ಗದವರ ಮತ್ತು ಶೋಷಿತ ವರ್ಗದ ಅಭ್ಯರ್ಥಿಗೆ ಉಚ್ಚ ಜಾತಿಯವರ ಮತಗಳ ಆವಶ್ಯಕತೆ ಬರುತ್ತದೆ. ಈ ರೀತಿ ಹಿಂದೂ ಸಮಾಜದ ಏಕತೆಯ ರಕ್ಷಣೆಗಾಗಿ ಎಲ್ಲ ಕ್ರಮಗಳನ್ನೂ ಕೈಗೊಂಡಂತಾಗಿದೆ.

**ತಾತ್ಕಾಲಿಕವಾದ ಸಂರಕ್ಷಣೆ**

ಶಾಸಕಾಂಗದಲ್ಲಿ ಬಹುಮತ ಬೆಂಬಲ ಪಡೆದಿರುವವರ ಕೈಗೆ ಅಧಿಕಾರ ಬಂದು, ಈ ಹೊಣೆಗಾರಿಕೆ ಸರ್ಕಾರದ ಮೊದಲ ದಿನಗಳಲ್ಲಿ, ನೀವು ತಿಳಿಸಿರುವಂತೆ ಶತಮಾನಗಳಿಂದ ಸವರ್ಣೀಯ ಹಿಂದೂಗಳಿಂದ ವ್ಯವಸ್ಥಿತವಾಗಿ ನಡೆದ ಅಪಚಾರಕ್ಕೀಡಾದ ಶೋಷಿತ ವರ್ಗದವರಿಗೆ ಒಂಬತ್ತು ಪ್ರಾಂತ್ಯಗಳಲ್ಲಿ ಏಳಕ್ಕೆ ಕೆಲವು ನಿರ್ದಿಷ್ಟ ಸಂಖ್ಯೆಯ ಪ್ರಾತಿನಿಧ್ಯ ನೀಡಲಾಗುವುದು. ಇದರಿಂದ ಆ ವರ್ಗದವರ ಕಷ್ಟಗಳನ್ನು, ಆದರ್ಶಗಳನ್ನು ಪ್ರಕಟಪಡಿಸುವಂತಾಗಬೇಕು. ಅಂದರೆ, ಪ್ರತಿಯೊಬ್ಬ ನ್ಯಾಯಬದ್ಧ ವ್ಯಕ್ತಿಯೂ ಒಪ್ಪುವಂತೆ ತಮ್ಮ ವರ್ಗದವರ ಒಳಿತಿಗಾಗಿ ಮಾತನಾಡಬಲ್ಲ, ಬೇಡಿಕೆ ಸಲ್ಲಿಸಬಲ್ಲ ಸ್ಥಾನವನ್ನು ಪ್ರತಿನಿಧಿಗಳಿಗೆ ನೀಡುವಂತಾಗಬೇಕು. ಈಗಿನ ಸಂದರ್ಭದಲ್ಲಿ ಯಾವುದೇ ಚುನಾವಣಾ ಕ್ರಮದಲ್ಲಿಯೂ ಮೀಸಲು ಸ್ಥಾನಗಳನ್ನು ಸೃಷ್ಟಿಮಾಡಿ ವಿಶೇಷ ಪ್ರತಿನಿಧಿಗಳನ್ನು ಆಯ್ಕೆ ಮಾಡುವ ವಿಷಯವನ್ನು ಗಮನಿಸಲು ಸಾಧ್ಯವಾಗಿಲ್ಲ ; ಅಂಥ ಪ್ರತಿನಿಧಿಗಳು ಉಚ್ಚ ಜಾತಿಯ ಹಿಂದೂಗಳೂ ಸೇರಿದಂತೆ ಬಹುಸಂಖ್ಯಾತರಿಂದ ಚುನಾಯಿತರಾಗುವುದರಿಂದ, ಅವರು ತಮ್ಮ ವರ್ಗದವರನ್ನು ನಿಜವಾದ ರೀತಿಯಲ್ಲಿ ಪ್ರತಿನಿಧಿಸಿ, ಅವರಿಗೆ ಜವಾಬ್ದಾರರಾಗಬೇಕು.

**ಕನಿಷ್ಠ ಮೀಸಲಾತಿ**

ಮುಸಲ್ಮಾನರಿಗೆ ಇನ್ನೂ ಹೆಚ್ಚಿನ ಪ್ರಾಂತೀಯ ಸ್ಥಾನಗಳನ್ನು ನೀಡಲು ಸಾಧ್ಯವಿಲ್ಲದ ಕಾರಣ, ಮತ್ತು ಅನೇಕ ಪ್ರಾಂತ್ಯಗಳಲ್ಲಿ ಅವರ ಜನಸಂಖ್ಯೆ ಪ್ರಮಾಣಕ್ಕೆ ನೀಡಬೇಕಿದ್ದಕ್ಕಿಂತ ಹೆಚ್ಚಿನ ಪ್ರಾಮುಖ್ಯ ಪಡೆದುಕೊಂಡಿರುವ ಕಾರಣ ಅವರಿಗೆ ನೀಡಲಾಗಿರುವ ಸ್ಥಾನಗಳ ಸಂಖ್ಯೆಯನ್ನು ಮಿತಗೊಳಿಸಲಾಗಿದೆ. ಶೋಷಿತ ವರ್ಗ ಮತಕ್ಷೇತ್ರಗಳಲ್ಲಿ ನಿಗದಿಪಡಿಸಿರುವ ವಿಶೇಷ ಸ್ಥಾನಗಳ ಸಂಖ್ಯೆ ಕಡಿಮೆಯೆಂದು ತಿಳಿದುಬಂದಿದೆ. ಈ

ಸಂಖ್ಯೆ ನಿಗದಿ ಕ್ರಮದ ಪ್ರಕಾರ ನೋಡಿದರೆ, ಅದು ಇಡೀ ಶೋಷಿತ ವರ್ಗದವರಿಗೆ ಪೂರ್ಣ ಪ್ರಾತಿನಿಧ್ಯ ಸಿಗದಂತೆ ಮಾಡಲಾಗಿದೆ ಎಂದು ತಿಳಿದುಬರುತ್ತದೆ. ಹೀಗೆ ಮಾಡಿರುವುದರ ಉದ್ದೇಶ, ಶೋಷಿತ ವರ್ಗದವರಿಂದಲೇ ಆಯ್ಕೆಯಾಗಿರುವ ಮತ್ತು ಶಾಸಕಾಂಗದಲ್ಲಿ ಅವರ ವಕ್ತಾರರಾಗಿರುವ ಕನಿಷ್ಠ ಪ್ರತಿನಿಧಿಗಳನ್ನು ಮಾತ್ರ ಪಡೆಯುವುದು ಹಾಗೂ ವಿಶೇಷ ಸ್ಥಾನಗಳ ಸಂಖ್ಯೆಯ ಪ್ರಮಾಣವು ಶೋಷಿತ ವರ್ಗದವರ ಜನಸಂಖ್ಯೆಯ ಶೇಕಡಾಂಶಕ್ಕಿಂತಲೂ ಬಹಳ ಕಡಿಮೆಯಿದೆ.

ಶೋಷಿತ ವರ್ಗದವರಿಗೆ ಇತರ ಹಿಂದೂಗಳ ಜೊತೆ ಮತದಾರರಾಗುವ ಹಕ್ಕನ್ನು ದೊರಕಿಸಿಕೊಡಲೆಂದು ನೀವು ಕೈಗೊಳ್ಳುತ್ತಿರುವ ಆಮರಣಾಂತ ಉಪವಾಸ ಅತಿರೇಕವೆಂದು ನನ್ನ ಅನಿಸಿಕೆ. ಏಕೆಂದರೆ ಅದನ್ನು ಈಗಾಗಲೇ ಮಂಜೂರು ಮಾಡಲಾಗಿದೆ. ಹಿಂದೂಗಳ ಒಗ್ಗಟ್ಟನ್ನು ಕಾಪಾಡುವ ನೆವ ಹೂಡುವುದಾದರೆ, ನಾವು ಈಗಾಗಲೆ ಅದನ್ನೂ ಆಗಗೊಟ್ಟಿದ್ದೇವೆ. ಆದರೆ, ಇವತ್ತಿಗೂ ಅನ್ಯಾಯಗಳನ್ನೇ ಅನುಭವಿಸುತ್ತಿರುವ ಶೋಷಿತ ವರ್ಗದವರು ತಮ್ಮವರೇ ಆದ ಕೆಲವು ಪ್ರತಿನಿಧಿಗಳನ್ನು ಆರಿಸಿಕೊಂಡು ತಮ್ಮ ಭವಿಷ್ಯ ನಿರ್ಮಿಸುವುದನ್ನು ತಪ್ಪಿಸುವುದಕ್ಕೋಸ್ಕರ ನೀವು ಈ ಉಪವಾಸ ಕೈಗೊಳ್ಳುತ್ತಿದ್ದೀರೆಂದು ನನ್ನ ಅನಿಸಿಕೆ.

ಇಂಥ ಕೆಲವು ನ್ಯಾಯಬದ್ಧ ಹಾಗೂ ಜಾಗರೂಕ ಪ್ರಸ್ತಾಪಗಳ ದೃಷ್ಟಿಯಲ್ಲಿ ನೋಡಿದರೆ ನೀವು ಕೈಗೊಂಡ ನಿರ್ಧಾರದ ಹಿಂದಿನ ಕಾರಣ ನನಗೆ ಅರ್ಥವಾಗುತ್ತಿಲ್ಲ. ನೀವು ವಾಸ್ತವ ವಿಚಾರಗಳನ್ನು ಅಪಾರ್ಥ ಮಾಡಿಕೊಂಡಿದ್ದೀರೆಂದೇ ನನ್ನ ಭಾವನೆ.

**ಸರ್ಕಾರದ ನಿರ್ಧಾರಗಳು ಬದಲಾಗುವುದಿಲ್ಲ**

ಅಲ್ಪ ಸಂಖ್ಯಾತರ ವಿಷಯದಲ್ಲಿ ಭಾರತೀಯರು ಯಾವುದೇ ಒಮ್ಮತಕ್ಕೆ ಬರಲಾಗದ ಕಾರಣ, ಸರ್ಕಾರವೇ–ಸಾರ್ವಜನಿಕ ಬೇಡಿಕೆ ಮೇರೆಗೆ – ನಿರ್ಧಾರ ತೆಗೆದುಕೊಳ್ಳಲು ಮುಂದೆ ಬಂದಿದೆ. ಸರ್ಕಾರವು ಈಗಾಗಲೇ ನಿರ್ಣಯಗಳನ್ನು ನೀಡಿದ್ದು, ಮೇಲೆ ಹೇಳಿರುವ ಕಾರಣಗಳ ಹೊರತಾಗಿ ಇನ್ನಾವುದೇ ಕಾರಣಕ್ಕೂ ಅದನ್ನು ಬದಲಾಯಿಸುವುದಿಲ್ಲ. ಆದ್ದರಿಂದ ನಾನು ನಿಮಗೆ ಹೇಳುವುದಿಷ್ಟೆ : ಸರ್ಕಾರದ ನಿರ್ಧಾರಗಳು ಅಂತಿಮವಾದದ್ದು; ಸರ್ಕಾರವು ಪ್ರಾಮಾಣಿಕ ಪ್ರಯತ್ನದ ಮೂಲಕ ಮಾಡಿರುವ ಈ ಚುನಾವಣೆ ವ್ಯವಸ್ಥೆಯಲ್ಲಿ ಬದಲಾವಣೆ ಅವಶ್ಯವಾದರೆ, ಅದು ಕೇವಲ ಎಲ್ಲ ಜನಾಂಗಗಳ ಒಪ್ಪಂದದ ಮೇರೆಗೆ ಮಾತ್ರ ಸಾಧ್ಯ.

ನೀವು ಮಾರ್ಚ್ ೧೧ ರಂದು ಸರ್ ಸಾಮ್ಯುಯೆಲ್ ಹೋರ್ ಅವರಿಗೆ ಬರೆದ ಪತ್ರ ಮತ್ತು ನನಗೆ ಬರೆದಿರುವ ಪತ್ರವನ್ನು ಪ್ರಕಟಿಸಿ ಎಂದು ಕೇಳಿದ್ದೀರಿ. ನೀವು ಜೈಲುವಾಸದಲ್ಲಿರುವುದರಿಂದ ಜನತೆಗೆ ನಿಮ್ಮ ಉಪವಾಸ ಸತ್ಯಾಗ್ರಹದ ಕಾರಣಗಳನ್ನು ವಿವರಿಸಿ ಮನವರಿಕೆ ಮಾಡಲು ಸಾಧ್ಯವಾಗುತ್ತಿಲ್ಲ ಎನ್ನುವ ಕಾರಣದಿಂದ ಈ ಕೋರಿಕೆ ಸಲ್ಲಿಸಿರುವುದಾದರೆ, ಅದನ್ನು ಈಡೇರಿಲಸಲು ನಾನು ಸಿದ್ಧ. ಆದರೆ, ನೀವು ನಿಮ್ಮ ನಿರ್ಧಾರವನ್ನು ಮತ್ತೊಮ್ಮೆ, ವಿಚಾರ ಮಾಡಬೇಕು. ಸರ್ಕಾರದ ನಿರ್ಧಾರಗಳ ವಿವರಗಳನ್ನು ನೀವು ಮತ್ತೊಮ್ಮೆ ಗಮನಿಸಿ. ನೀವು ಕೈಗೊಳ್ಳುತ್ತಿರುವ ಕ್ರಮ ನ್ಯಾಯಸಮ್ಮತವೇ ಎಂದು ನೀವೇ ಕೇಳಿಕೊಳ್ಳಿರೆಂದು ನನ್ನ ಒತ್ತಾಯಪೂರ್ವಕ ಕೋರಿಕೆ.

ತಮ್ಮವನೇ ಆದ

ಜೆ. ರಾಮ್ಸೇ ಮ್ಯಾಕ್ಡೋನಾಲ್ಡ್

ಏನು ಮಾಡಿದರೂ ಪ್ರಧಾನ ಮಂತ್ರಿಯವರು ಜಗ್ಗುವುದಿಲ್ಲವೆಂದು ತಿಳಿದು ಗಾಂಧೀಜಿಯವರು ತಮ್ಮ ಆಮರಣಾಂತ ಉಪವಾಸವನ್ನು ಕೈಗೊಂಡೇ ತೀರುವ ನಿರ್ಧಾರ ತಿಳಿಸುತ್ತ ಈ ಪತ್ರ ಕಳಿಸಿದರು :

ಯರವಾಡಾ ಕೇಂದ್ರಿಯ ಕಾರಾಗೃಹ
೧೯೩೨, ಸೆಪ್ಟೆಂಬರ್ ೯

ಪ್ರಿಯ ಮಿತ್ರರೆ,

ನಿಮ್ಮ ಬಿಚ್ಚು ಮನಸ್ಸಿನ ಪತ್ರದ ಪೂರ್ಣ ಪಾಠ ತಂತಿ ಮೂಲಕ ಬಂದು ಸೇರಿದೆ. ಅದಕ್ಕಾಗಿ ವಂದನೆಗಳು. ನಾನಂದುಕೊಂಡಂತೆ ನನ್ನ ಕ್ರಮಗಳನ್ನು ನೀವು ತಪ್ಪಾಗಿ ವ್ಯಾಖ್ಯಾನಿಸಿರುವುದಕ್ಕೆ ನನಗೆ ವಿಷಾದವೆನಿಸುತ್ತದೆ. ನಾನು ಯಾವ ಹಿತಾಸಕ್ತಿ ಹೊಂದಿದ್ದೇನೋ ಅದನ್ನು ನೀವು ಪಕ್ಕಕ್ಕಿಟ್ಟು, ಉಪವಾಸ ಕೈಗೊಳ್ಳಲು ನನಗೆ ಇಷ್ಟವಿರುವುದರಿಂದ ಹೀಗೆ ಮಾಡುತ್ತಿದ್ದೇನೆ ಎಂದು ಆರೋಪಿಸಿದ್ದೀರಿ. ಮಾತುಕತೆ ಮೂಲಕ ಇತ್ಯರ್ಥವಾಗದ್ದನ್ನು ದಿಟ್ಟ ಹೆಜ್ಜೆ ಇಡುವ ಮೂಲಕ ಸಾಧಿಸಿ ನೀವು ನೀಡಿರುವಂಥ ವ್ಯಾಖ್ಯಾನಗಳನ್ನು ನಿವಾರಿಸಬೇಕೆಂಬುದು ನನ್ನ ಎಣಿಕೆಯಾಗಿತ್ತು. ನಾನು ಮತ್ತೊಮ್ಮೆ ಹೇಳಬಯಸುವುದೇನೆಂದರೆ, ಈಗ ಚರ್ಚೆಯಾಗುತ್ತಿರುವ ವಿಷಯ ಕೇವಲ ಧರ್ಮಸಂಬಂಧಿಯಾದದ್ದು. ಶೋಷಿತ ವರ್ಗದವರಿಗೆ ಎರಡು ಮತ ಚಲಾಯಿಸುವ ಹಕ್ಕನ್ನು ಕೊಡುವುದರಿಂದ ಬಿರುಕು ಉಂಟಾಗುವುದೇ ಹೊರತು ಇತ್ತ ಶೋಷಿತ ವರ್ಗದವರನ್ನೂ ರಕ್ಷಿಸಿದಂತಾಗುವುದಿಲ್ಲ, ಅತ್ತ ಹಿಂದೂಗಳನ್ನೂ ರಕ್ಷಿಸಿದಂತಾಗುವುದಿಲ್ಲ. ಶೋಷಿತ ವರ್ಗದವರಿಗೆ ಪ್ರತ್ಯೇಕ ಮತದಾರ ಸಮೂಹ ನಿರ್ಮಿಸುವುದರಿಂದ ಹಿಂದೂ ಧರ್ಮವನ್ನು ನಾಶಗೊಳಿಸುವ ವಿಷ ಬೀಜವನ್ನು ಬಿತ್ತಿದಂತಾಗುತ್ತದೆ. ನೀವು ಎಷ್ಟೇ ದಯಾಳುಗಳಾಗಿದ್ದರೂ ಕೂಡ ಸಂಬಂಧಪಟ್ಟವರಿಗೆ ಅತಿ ಮುಖ್ಯ ಎನಿಸುವ ಹಾಗೂ ಧರ್ಮಸಂಬಂಧವೆನಿಸುವ ವಿಷಯಗಳ ಬಗ್ಗೆ ನೀವು ಸರಿಯಾದ ನಿರ್ಧಾರ ತೆಗೆದುಕೊಳ್ಳಲು ಖಂಡಿತಾ ಸಾಧ್ಯವಿಲ್ಲವೆಂದು ನನ್ನ ನಂಬಿಕೆ.

ಶೋಷಿತ ವರ್ಗದ ಪ್ರತಿನಿಧಿಗಳ ಸಂಖ್ಯೆಯನ್ನು ಅತಿಯಾಗಿ ಏರಿಸಿದರೂ ಸರಿ, ಅದಕ್ಕೆ ನನ್ನ ವಿರೋಧವಿಲ್ಲ. ಅವರು ಹಿಂದೂಗಳಾಗಿ ಇರಲು ಬಯಸುವವರೆಗೂ ಅವರಿಗಾಗಿ ಹಿಂದೂ ಮತದಾರ ಸಮೂಹದಿಂದ ಹೊರತುಪಡಿಸಿದ ಮತ್ತೊಂದು ಮತದಾರ ಸಮೂಹ ರಚಿಸುವುದನ್ನು ಮಾತ್ರ ನಾನು ವಿರೋಧಿಸುತ್ತೇನೆ. ಒಂದು ವೇಳೆ ನಿಮ್ಮ ನಿರ್ಧಾರವೇ ಅಂತಿಮವಾಗಿ, ಆ ಸಂವಿಧಾನವೇ ಜಾರಿಗೆ ಬಂದರೆ, ನೊಂದ ಸೋದರರ ಉನ್ನತಿಗಾಗಿ ದುಡಿಯುತ್ತಿರುವ ಅನೇಕ ಹಿಂದೂ ಸುಧಾರಕರ ಕಾರ್ಯ ಸಾಧನೆಗಳನ್ನು ತಟಸ್ಥಗೊಳಿಸಿದಂತಾಗುತ್ತದೆ ಎಂದು ನಿಮಗೆ ತಿಳಿಯದೆ?

**ಬದಲಾಗದ ನಿರ್ಧಾರ**

ಹೀಗಾಗಿ ಈಗಾಗಲೆ ತಿಳಿಸಿದ ನನ್ನ ನಿರ್ಧಾರಕ್ಕೆ ನಾನು ಬದ್ಧನಾಗಿರುತ್ತೇನೆ. ಶೋಷಿತ ವರ್ಗದವರ ವಿಷಯವನ್ನು ಕೂಲಂಕಷವಾಗಿ ಗಮನಿಸಿ ಎಂದು ಪ್ರತ್ಯೇಕವಾಗಿ ಮತ್ತೊಮ್ಮೆ ಹೇಳುತ್ತಿರುವೆ. ಹಾಗೆಂದ ಮಾತ್ರಕ್ಕೆ ನಿಮ್ಮ ನಿರ್ಧಾರದಲ್ಲಿ ಸೂಚಿತವಾದ ಇತರ ಅಂಶಗಳನ್ನು ಒಪ್ಪಿಕೊಂಡಿರುವೆ ಎಂದು ಭಾವಿಸಬಾರದು. ನನ್ನ ಪ್ರಕಾರ ಅದರ ಅನೇಕ ಭಾಗಗಳು ಗಂಭೀರವಾದ ಪರಿಶೀಲನೆಗೆ ಯೋಗ್ಯವಾಗಿವೆ. ಆದರೆ ಶೋಷಿತ ವರ್ಗದವರ ವಿಚಾರದಷ್ಟು ಅವು ಯಾವುವೂ ನನ್ನ ಆತ್ಮಬಲಿದಾನ ಬೇಡುವಷ್ಟು ಗಹನವಾಗಿಲ್ಲವೆಂದು ನನ್ನ ಭಾವನೆ.

ತಮ್ಮ ಮಿತ್ರನಾದ
ಎಂ.ಕೆ. ಗಾಂಧೀ

ಹೀಗಾಗಿ ಗಾಂಧೀಜಿಯವರು ಅಸ್ಪೃಶ್ಯರಿಗಾಗಿ ಪ್ರತ್ಯೇಕ ಮತದಾರ ಸಮೂಹ ಕೊಡುಗೆಯ ವಿರುದ್ಧ ೧೯೩೨ರ ಸೆಪ್ಟೆಂಬರ್ ೨೦ರಂದು ಆಮರಣಾಂತ ಉಪವಾಸ ಶುರುಮಾಡಿದರು.

ಈ ಉಪವಾಸದ ಕತೆಯನ್ನು ಶ್ರೀ ಪ್ಯಾರೆಲಾಲ್ ಅವರು ತಮ್ಮ 'ಉಪವಾಸ ಮಹಾಕಾವ್ಯ' ವೆಂಬ ವರ್ಣರಂಜಿತ ಗ್ರಂಥದಲ್ಲಿ ಹೇಳಿದ್ದಾರೆ. ಈ ಹುಚ್ಚು ದಿನಗಳ ಬಗ್ಗೆ ಏನೆಲ್ಲ ತಿಳಿಯಬೇಕೆಂದು ಬಯಸುವ ಪ್ರತಿಯೊಬ್ಬ ಕುತೂಹಲಿಗೂ ಈ ಪುಸ್ತಕದ ಪುಟಗಳಲ್ಲಿ ಅವೆಲ್ಲವೂ ಸಿಗುತ್ತವೆ. ಆದ್ದರಿಂದ ಅದರ ಬಗ್ಗೆ ನಾನು ಇಲ್ಲಿ ಹೇಳುವ ಆವಶ್ಯಕತೆಯಿಲ್ಲ. ಇಷ್ಟು ಹೇಳಿದರೆ ಸಾಕೆನಿಸುತ್ತದೆ : ಆಮರಣಾಂತ ಉಪವಾಸ ಮಾಡಲು ಹೊರಟ ಗಾಂಧೀಜಿಯವರಿಗೆ ಸಾಯುವುದು ಖಂಡಿತಾ ಬೇಕಿರಲಿಲ್ಲ. ಅವರಿಗೆ ಜೀವನದ ಮೇಲೆ ತುಂಬಾ ಆಸೆ.

ಆದ್ದರಿಂದ ಈ ಉಪವಾಸ ಒಂದು ಸಮಸ್ಯೆಯುಂಟುಮಾಡಿತು. ಅದೇನೆಂದರೆ, ಗಾಂಧೀಜಿಯವರನ್ನು ಉಳಿಸುವ ಬಗೆ ಏನು? ಇದ್ದ ಒಂದೇ ಮಾರ್ಗವೆಂದರೆ ಮತೀಯ ವಿಭಜನೆಯಲ್ಲಿ ಬದಲಾವಣೆ ಮಾಡಿ ಗಾಂಧೀಜಿಯವರ ಅಂತರಾತ್ಮಕ್ಕೆ ನೋವಾಗದ ಹಾಗೆ ಪರಿಹಾರ ಕಾಣಿಸುವುದು. ಆದರೆ, ಬ್ರಿಟಿಷ್ ಮಂತ್ರಿಮಂಡಲವು ಅದನ್ನು ಹಿಂತೆಗೆದುಕೊಳ್ಳುವುದಾಗಲಿ ಅಥವಾ ಬದಲಾಯಿಸುವುದಾಗಲಿ ಅಸಾಧ್ಯವೆಂದೂ, ಒಂದು ವೇಳೆ ಅಸ್ಪೃಶ್ಯರು ಮತ್ತು ಸವರ್ಣೀಯ ಹಿಂದೂಗಳು ಒಪ್ಪಿದರೆ ಮಾತ್ರ ಬದಲಿ ಸೂತ್ರವನ್ನು ಅಂಗೀಕರಿಸುವುದೆಂದೂ ಪ್ರಧಾನ ಮಂತ್ರಿಯವರು ಸ್ಪಷ್ಟಪಡಿಸಿದ್ದರು. ದುಂಡು ಮೇಜಿನ ಸಮಾವೇಶದಲ್ಲಿ ನಾನು ಅಸ್ಪೃಶ್ಯರನ್ನು ಪ್ರತಿನಿಧಿಸಿದ್ದರಿಂದ ನನ್ನ ಒಪ್ಪಿಗೆ ದೊರಕದ ಹೊರತು ಬೇರೆ ಅಸ್ಪೃಶ್ಯರು ಒಪ್ಪಿಗೆ ನೀಡುವುದಿಲ್ಲವೆಂಬುದು ಎಲ್ಲರಿಗೂ ತಿಳಿದ ವಿಷಯವಾಗಿತ್ತು. ಸದ್ಯದಲ್ಲಿ ಭಾರತದ ಅಸ್ಪೃಶ್ಯರ ಪ್ರತಿನಿಧಿಯಾಗಿ ನನ್ನ ಸ್ಥಾನವನ್ನು ಪ್ರಶ್ನಿಸದೇ ಎಲ್ಲರೂ ಅದನ್ನು ವಾಸ್ತವವಾಗಿ ಒಪ್ಪಿಕೊಂಡಿದ್ದರು. ಹೀಗಾಗಿ, ಈಗ ನಾನು ತಪ್ಪಿತಸ್ಥನಂತೆ ಜನ ನನ್ನನ್ನು ನೋಡತೊಡಗಿದರು. ಗಾಂಧೀಜಿಯವರ ಜೀವ ನನ್ನ ಕೈಲಿದೆಯೆಂದು ಹೇಳುತ್ತಿದ್ದರು. ಅಂದು ನನ್ನಷ್ಟು ಸಂದಿಗ್ಧ ಪರಿಸ್ಥಿತಿಗೆ ಸಿಕ್ಕವರು ಇನ್ಯಾರೂ ಇರಲಿಲ್ಲವೆಂದರೆ ಅತಿಶಯೋಕ್ತಿಯೇನಲ್ಲ. ಏನು ಮಾಡಬೇಕೆಂದು ತಿಳಿಯದ ಪರಿಸ್ಥಿತಿ. ಎರಡು ವಿಭಿನ್ನ ಆಯ್ಕೆಗಳಲ್ಲಿ ಒಂದನ್ನು ಆರಿಸಬೇಕಿತ್ತು. ಒಂದು ಕಡೆ ಸಾಮಾನ್ಯ ಮನುಷ್ಯನಾಗಿ ನಾನು ಗಾಂಧೀಜಿಯವರನ್ನು ಸಾವಿನಿಂದ ತಪ್ಪಿಸಬೇಕಾದ ಕರ್ತವ್ಯ; ಇನ್ನೊಂದು ಕಡೆ ಅಸ್ಪೃಶ್ಯರಿಗಾಗಿ ಪ್ರಧಾನ ಮಂತ್ರಿಯವರು ಕೊಟ್ಟಿರುವ ರಾಜಕೀಯ ಹಕ್ಕುಗಳನ್ನು ಕಾಪಾಡಬೇಕಾಗಿರುವ ಸಮಸ್ಯೆ. ಕೊನೆಗೆ, ಮನುಷ್ಯತ್ವದ ಕರೆಗೆ ಓಗೊಟ್ಟು ಗಾಂಧೀಜಿಯವರ ಜೀವವನ್ನು ರಕ್ಷಿಸಲೆಂದು ಮತೀಯ ವಿಭಜನೆಯ ಬದಲಾವಣೆಗಳಿಗೆ ಒಪ್ಪಿಗೆ ಸೂಚಿಸಿದೆ. ಈ ಒಪ್ಪಂದವನ್ನು 'ಪೂನಾ ಒಪ್ಪಂದ'ವೆಂದು ಕರೆದರು.

ಪೂನಾ ಒಪ್ಪಂದದ ಕ್ರಮಗಳು ಈ ರೀತಿ ಇದ್ದವು :

೧. ಸಾರ್ವತ್ರಿಕ ಚುನಾವಣೆಗಳಲ್ಲಿ ಶೋಷಿತ ವರ್ಗದ ಅಭ್ಯರ್ಥಿಗಳಿಗಾಗಿ ಸ್ಥಾನಗಳನ್ನು ಮೀಸಲಾಗಿಡಲಾಗುವುದು. ಪ್ರಾಂತೀಯ ಶಾಸಕಾಂಗಗಳಲ್ಲಿನ ಸ್ಥಾನಗಳ ವಿವರ ಹೀಗಿರುತ್ತದೆ:

| | |
|---|---|
| ಮದರಾಸು | ೩೦ |
| ಸಿಂಧ್ ಒಳಗೊಂಡ ಮುಂಬಯಿ | ೧೫ |
| ಪಂಜಾಬ್ | ೮ |
| ಬಿಹಾರ್ ಮತ್ತು ಒರಿಸ್ಸಾ | ೧೮ |
| ಕೇಂದ್ರೀಯ ಪ್ರಾಂತ್ಯಗಳು | ೨೦ |
| ಅಸ್ಸಾಮ್ | ೭ |
| ಬಂಗಾಳ | ೩೦ |

| | |
|---|---|
| ಉತ್ತರ ಪ್ರದೇಶ | ೨೦ |
| ಒಟ್ಟು | ೧೪೮ |

ಈ ಅಂಕಿ ಅಂಶಗಳು ಪ್ರಧಾನ ಮಂತ್ರಿಗಳ ನಿರ್ಧಾರದಲ್ಲಿ ಘೋಷಿತವಾದ ಪ್ರಾಂತೀಯ ಆಲೋಚನಾ ಸಭೆಗಳ ಒಟ್ಟು ಸಂಖ್ಯೆಯನ್ನು ಅವಲಂಬಿಸಿವೆ.[೧]

೨. ಈ ಸ್ಥಾನಗಳಿಗೆ ಚುನಾವಣೆ ನಡೆಯುವುದು ಜಂಟಿ ಮತದಾರ ಸಮೂಹದ ಮೂಲಕ, ಮತ್ತು ಈ ಕೆಳಗಿನ ಪ್ರಕಾರವಾಗಿ :

ಶೋಷಿತ ವರ್ಗಕ್ಕೆ ಸೇರಿದ ಯಾವುದೇ ಮತಕ್ಷೇತ್ರದ ಮತದಾರ ಪಟ್ಟಿಯಲ್ಲಿ ಹೆಸರು ನೊಂದಣಿ ಮಾಡಿಕೊಂಡಿರುವ ಎಲ್ಲ ಸದಸ್ಯರೂ ಸೇರಿ ಪ್ರತಿಯೊಂದು ಮೀಸಲು ಸ್ಥಾನಕ್ಕೂ ಒಬ್ಬ ಪ್ರಜೆ – ಒಂದು ಮತ ಕ್ರಮದಲ್ಲಿ, ನಾಲ್ಕು ಜನರ ತಂಡವನ್ನು ಆರಿಸಿಕೊಂಡು, ಈ ಪ್ರಾಥಮಿಕ ಚುನಾವಣೆಯಲ್ಲಿ ಯಾವ ನಾಲ್ಕು ವ್ಯಕ್ತಿಗಳಿಗೆ ಹೆಚ್ಚು ಮತ ಬಂದಿರುತ್ತದೋ ಅವರುಗಳನ್ನು ಸಾರ್ವತ್ರಿಕ ಚುನಾವಣೆಯಲ್ಲಿ ಸ್ಪರ್ಧಿಸುವ ಅಂತಿಮವಾದ ಅಭ್ಯರ್ಥಿಗಳೆಂದು ನಿರ್ಧರಿಸುವುದು.

೩. ಕೇಂದ್ರಿಯ ಶಾಸಕಾಂಗಕ್ಕೆ ಶೋಷಿತ ವರ್ಗದವರ ಪ್ರತಿನಿಧಿಗಳ ಆಯ್ಕೆ ಜಂಟಿ ಮತದಾರರ ಸಮೂಹದ ಮೂಲಕವೂ, ಮತ್ತು ಪ್ರಾಂತೀಯ ಶಾಸಕಾಂಗಗಳ ಮೀಸಲು ಸ್ಥಾನಗಳಿಗೆ ಪ್ರಾಥಮಿಕ ಚುನಾವಣೆಯ ಮೂಲಕ ಕಲಂ ೨ರಲ್ಲಿ ಸೂಚಿಸಿರುವ ರೀತಿ ನಡೆಯಬೇಕು.

೪. ಬ್ರಿಟಿಷ್ ಭಾರತದಲ್ಲಿ ಸಾರ್ವತ್ರಿಕ ಮತದಾರ ಸಮೂಹದಿಂದ ಆಯ್ಕೆಯಾಗುವ ಸ್ಥಾನಗಳಲ್ಲಿ ಶೇಕಡಾ ೧೮ರಷ್ಟನ್ನು ಕೇಂದ್ರೀಯ ಶಾಸಕಾಂಗದಲ್ಲಿ ಶೋಷಿತ ವರ್ಗದವರಿಗಾಗಿ ಮೀಸಲಾಗಿಡುವುದು.

೫. ಕೇಂದ್ರೀಯ ಮತ್ತು ಪ್ರಾಂತೀಯ ಶಾಸಕಾಂಗಗಳ ಚುನಾವಣೆಗೆ ನಿಲ್ಲುವ ಅಭ್ಯರ್ಥಿಗಳ ತಂಡವನ್ನು ಆರಿಸುವ ಪ್ರಾಥಮಿಕ ಚುನಾವಣಾ ಕ್ರಮವು ಈ ಮೊದಲೇ ತಿಳಿಸಿದಂತೆ ಮೊದಲ ಹತ್ತು ವರ್ಷಗಳ ನಂತರ ಕೊನೆಗೊಳ್ಳುತ್ತದೆ. ಆದರೆ ಈ ಕೆಳಗೆ ನೀಡಿರುವ ಕಲಂ ೬ರಂತೆ ಪರಸ್ಪರ ಒಪ್ಪಿಗೆಯ ಮೂಲಕ ಈ ಕ್ರಮವನ್ನು ಮುಂಚಿತವಾಗಿ ಬೇಕಾದರೆ ಕೊನೆಗಾಣಿಸಬಹುದು.

೬. ಕಲಂ ೧ ಮತ್ತು ೪ ರಲ್ಲಿ ಹೇಳಿರುವ ಮೀಸಲು ಸ್ಥಾನಗಳ ಮೂಲಕ ಕೇಂದ್ರೀಯ ಹಾಗೂ ಪ್ರಾಂತೀಯ ಶಾಸಕಾಂಗಗಳಿಗೆ ಶೋಷಿತ ವರ್ಗದ ಪ್ರತಿನಿಧಿಗಳ ಆಯ್ಕೆ ಕ್ರಮಗಳು ಆಯಾ ಜಾತಿಗಳ ನಡುವೆ ಒಪ್ಪಂದವೇರ್ಪಟ್ಟು ಬದಲಾಗದ ಹೊರತು ಅದು ಎಂದಿನಂತೆ ಜಾರಿಯಲ್ಲಿರುತ್ತದೆ.

೭. ಕೇಂದ್ರೀಯ ಹಾಗೂ ಪ್ರಾಂತೀಯ ಶಾಸಕಾಂಗಗಳಿಗೆ ಶೋಷಿತವರ್ಗದವರ ಚುನಾವಣೆ ಲೋಥಿಯನ್ ಸಮಿತಿಯ ವರದಿಯ ಅನುಸಾರ ನಡೆಯತಕ್ಕದ್ದು.

೮. ಶೋಷಿತ ವರ್ಗಕ್ಕೆ ಸೇರಿದ ಕಾರಣದಿಂದ ಯಾವುದೇ ಅಭ್ಯರ್ಥಿಯನ್ನು ಅನರ್ಹನೆಂದು ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಾಗಲಿ, ಸಾರ್ವಜನಿಕ ಹುದ್ದೆಗಳ ನೇಮಕಾತಿಯಲ್ಲಾಗಲಿ ಪರಿಗಣಿಸಲಾಗುವುದಿಲ್ಲ.

ವಿದ್ಯಾರ್ಹತೆ ಆಧಾರದ ಮೇಲೆ ಶೋಷಿತ ವರ್ಗದವರಿಗೂ ತಕ್ಕ ಪ್ರಾತಿನಿಧ್ಯ ದೊರಕಿಸಿಕೊಡಲು ಎಲ್ಲ ಪ್ರಯತ್ನ ಮಾಡಲಾಗುವುದು.

---

೧. ೧೪೮ ಸ್ಥಾನಗಳನ್ನು ಬಿಹಾರ ಮತ್ತು ಒರಿಸ್ಸಾದಲ್ಲಿ ಸ್ಥಾನ ಹೊಂದಾಣಿಕೆ ಆದ ಮೇಲೆ ೧೫೧ಕ್ಕೆ ಏರಿಸಲಾಯಿತು.

೯. ಪ್ರತಿಯೊಂದು ಪ್ರಾಂತ್ಯದ ವಿದ್ಯಾನಿಧಿಯಿಂದ ಶೋಷಿತ ವರ್ಗದ ಜನರಿಗೆ ವಿದ್ಯಾಭ್ಯಾಸ ಸೌಕರ್ಯಗಳನ್ನು ಕಲ್ಪಿಸಲು ಸಾಕಷ್ಟು ಹಣ ತೆಗೆದಿಡಲಾಗುವುದು.

ಒಪ್ಪಂದದ ಈ ಕ್ರಮಗಳನ್ನು ಗಾಂಧೀಜಿಯವರು ಒಪ್ಪಿದ ಮೇಲೆ ಸರ್ಕಾರವು ಭಾರತ ಸರ್ಕಾರ ವಿಧಿಯಲ್ಲಿ ಇದನ್ನು ಸೇರಿಸಿಕೊಂಡು ಜಾರಿಯಲ್ಲಿ ತಂದಿತು.

ಆಮರಣಾಂತ ಉಪವಾಸ ಕ್ರಮವನ್ನು ಗಾಂಧೀಜಿಯವರು ಒಂದು ತಂತ್ರವನ್ನಾಗಿ ಉಪಯೋಗಿಸಿಕೊಳ್ಳುತ್ತಿದ್ದರು. ಆಮರಣಾಂತ ಉಪವಾಸದ ಬೆದರಿಕೆಯಿಂದ ನಾನು ಮತ್ತು ನನ್ನೊಂದಿಗಿದ್ದ ಶೋಷಿತ ವರ್ಗದ ಇತರರು ನಡುಗಿ ಶರಣಾಗತರಾಗುತ್ತೇವೆಂದು ಅವರು ಭಾವಿಸಿದ್ದರು. ಆದರೆ ಅದು ಸುಳ್ಳೆಂದು ಬೇಗನೆ ಕಂಡುಕೊಂಡರು. ಅಸ್ಪೃಶ್ಯರೂ ತಮ್ಮ ಹಕ್ಕಿಗಾಗಿ ಅವರಂತೆ ಕಡೆಯವರೆಗೂ ಹೋರಾಡಬಲ್ಲರೆಂದು ಅರಿತುಕೊಂಡರು. ಗಾಂಧೀಜಿಯವರ ಬೆಂಬಲಿಗರನ್ನು ಬಿಟ್ಟು ಬೇರೆ ಯಾರಿಗೂ ಅವರ ಆಮರಣಾಂತ ಉಪವಾಸದ ಹಿಂದೆ ನೈತಿಕ ನಿಲುವಿದೆ ಎಂದು ಅನಿಸಿರಲಿಲ್ಲ. ಅವರಿಗೆ ಉಪವಾಸದ ನಂತರ ಪುನರ್ಜೀವನ ಲಭಿಸಿತು ಎನ್ನುವುದು ನಿಜವಾದರೆ ಅದು ಕೇವಲ ಅಸ್ಪೃಶ್ಯರ ಧಾರಾಳತನ ಹಾಗೂ ಸದ್ಭಾವನೆಯಿಂದ ಮಾತ್ರ.

ಈಗಿರುವ ಪ್ರಶ್ನೆಯೆಂದರೆ ಪೂನಾ ಒಪ್ಪಂದಕ್ಕೆ ಒಳಪಟ್ಟ ಮೇಲೆ ಅಸ್ಪೃಶ್ಯರಿಗಾದ ಅನುಕೂಲಗಳೇನು? ಇದನ್ನು ಅರ್ಥಮಾಡಿಕೊಳ್ಳಬೇಕೆಂದರೆ, ಶಾಸಕಾಂಗಗಳಿಗೆ ನಡೆದ ಚುನಾವಣೆ ಫಲಿತಾಂಶಗಳನ್ನು ಗಮನಿಸಬೇಕಾಗುತ್ತದೆ. ಭಾರತ ಸರ್ಕಾರ ವಿಧಿಯು ೧೯೩೭ ಏಪ್ರಿಲ್ ೧ರಂದು ಜಾರಿಗೆ ಬಂತು. ೧೯೩೭ರ ಫೆಬ್ರವರಿಯಲ್ಲಿ ಹೊಸ ಶಾಸಕಾಂಗಕ್ಕೆ ಆ ವಿಧಿಯ ಅನುಸಾರ ಚುನಾವಣೆಗಳು ನಡೆದಿದ್ದವು. ಅಸ್ಪೃಶ್ಯರ ಪ್ರಕಾರ ೧೯೩೭ರ ಫೆಬ್ರವರಿಯಲ್ಲಿ ನಡೆದ ಚುನಾವಣೆ ಪೂನಾ ಒಪ್ಪಂದಕ್ಕೆ ಅನುಗುಣವಾಗಿತ್ತು. ವಿವಿಧ ಪ್ರಾಂತ್ಯಗಳ ವಿಧಾನ ಸಭೆಗಳಿಗೆ ನಡೆದ ಚುನಾವಣೆಯಲ್ಲಿ ಅಸ್ಪೃಶ್ಯರ ಮೀಸಲು ಸ್ಥಾನಗಳ ವಿಶ್ಲೇಷಣೆ ಕೆಳಕಂಡಂತಿದೆ:

**ಪಟ್ಟಿ***

| ಪ್ರಾಂತ್ಯ | ಅಸ್ಪೃಶ್ಯರಿಗೆ ಮೀಸಲಾದ ಒಟ್ಟು ಸ್ಥಾನಗಳ ಸಂಖ್ಯೆ | ಕಾಂಗ್ರೆಸ್ ಪಡೆದ ಒಟ್ಟು ಸ್ಥಾನಗಳ ಸಂಖ್ಯೆ |
|---|---|---|
| ೧) ಸಂಯುಕ್ತ ಪ್ರಾಂತ್ಯಗಳು | ೨೦ | ೧೬ |
| ೨) ಮದರಾಸು | ೩೦ | ೨೬ |
| ೩) ಬಂಗಾಳ | ೩೦ | ೬ |
| ೪) ಕೇಂದ್ರೀಯ ಪ್ರಾಂತ್ಯಗಳು | ೨೦ | ೭ |
| ೫) ಮುಂಬಯಿ | ೧೫ | ೪ |
| ೬) ಬಿಹಾರ್ | ೧೫ | ೧೧ |
| ೭) ಪಂಜಾಬ್ | ೮ | ಸೊನ್ನೆ |
| ೮) ಅಸ್ಸಾಮ್ | ೭ | ೪ |
| ೯) ಒರಿಸ್ಸಾ | ೬ | ೪ |
| **ಒಟ್ಟು** | **೧೫೧** | **೭೮** |

ಈ ವಿಶ್ಲೇಷಣೆ ನೋಡಿದರೆ ಪೂನಾ ಒಪ್ಪಂದಕ್ಕೆ ಮಣಿದು ಗಾಂಧೀಜಿಯವರ ಜೀವ ಉಳಿಸಿದ್ದಕ್ಕೆ ಅಸ್ಪೃಶ್ಯರಿಗೆ ಸಿಕ್ಕಿದ್ದೇನು ಎಂದು ಕೇಳುವಂತಾಗುತ್ತದೆ. ಪೂನಾ ಒಪ್ಪಂದದಿಂದಾಗಿ ಅಸ್ಪೃಶ್ಯರು ಸವರ್ಣೀಯ ಹಿಂದೂಗಳ ಜೀತದಾಳುಗಳಾದ ಹಾಗೆ ಕಾಣುತ್ತದೆ.

ಈ ವಿಶ್ಲೇಷಣೆಯಿಂದ ತಿಳಿದುಬರುವ ಇನ್ನೊಂದು ವಿಷಯವೆಂದರೆ, ಆಯ್ದು ಬಂದ ಅನೇಕರು ಕಾಂಗ್ರೆಸ್ಸಿಗೆ ಸೇರಿದ್ದರಿಂದ ಮಾತ್ರ ಚುನಾಯಿತರಾಗಿದ್ದಾರೆ. ಆದರೆ ಅಸ್ಪೃಶ್ಯರು ಈ ಆಸೆಯಿಂದ ಕಾಂಗ್ರೆಸ್ಸನ್ನಾಗಲಿ ಅಥವಾ ಇನ್ನಾವುದೇ ದೊಡ್ಡ ರಾಜಕೀಯ ಪಕ್ಷವನ್ನಾಗಲಿ ಸೇರಿಕೊಂಡರೆ ಅದು ಅವರಿಗೆ ಮಾರಕವಾಗುತ್ತದೆ ಎಂದು ನಾನು ನಂಬಿದ್ದೇನೆ.

ಅಸ್ಪೃಶ್ಯರಿಗೆ ತಮ್ಮ ತಪ್ಪುಗಳ ಅರಿವಾಗಬೇಕಾದರೆ ಅವರಲ್ಲಿ ಒಂದು ಚಳುವಳಿ ಉಂಟಾಗಬೇಕು. ಅವರಲ್ಲಿ ಸಿಡಿದೇಳುವ ಪ್ರವೃತ್ತಿ ಜಾಗೃತವಾಗಬೇಕು. ಸವರ್ಣೀಯ ಹಿಂದೂಗಳು ಅವರ ವಿರುದ್ಧ ಅಪಚಾರ ನಡೆಸಿದ್ದಾರೆಂದು, ಅದೇ ಅಸ್ಪೃಶ್ಯರ ದುರಂತವೆಂದು ಸವರ್ಣೀಯ ಹಿಂದೂಗಳಿಗೆ ತಿಳಿಸಿ ಹೇಳಬೇಕು. ಕಾಂಗ್ರೆಸ್ಸಿನಲ್ಲಿರುವ ಮುಸಲ್ಮಾನರನ್ನು ನೋಡಿದರೆ ಕಾಂಗ್ರೆಸ್ಸು ಕೇವಲ ಕೆಂಪು ರಕ್ತದ ಧೀರ ಹಿಂದೂಗಳ ಪಕ್ಷವಲ್ಲ, ಅದೊಂದು ದೊಡ್ಡಸ್ತಿಕೆಯ ಜಬರುದಸ್ತಿನ ಹಿಂದೂಗಳ ಪಕ್ಷವೆಂದು ತಿಳಿದುಬರುತ್ತದೆ. ಏಕೆಂದರೆ ಅದರಲ್ಲಿ ಸವರ್ಣೀಯ ಹಿಂದೂಗಳೇ ಹೆಚ್ಚಾಗಿದ್ದಾರೆ. ಅಸ್ಪೃಶ್ಯರ ಹೋರಾಟ ಸವರ್ಣೀಯ ಹಿಂದೂಗಳ ವಿರುದ್ಧದ ಒಂದು ಸಮರವೇ ಆಗಿರುವಾಗ ಕಾಂಗ್ರೆಸ್ಸಿನೊಳಗೆ ಈ ಹೋರಾಟ ಅಸಾಧ್ಯದ ಮಾತು ಎಂದಾಯಿತು. ಇದು ಒಳಜಗಳಗಳನ್ನು ಹುಟ್ಟುಹಾಕುತ್ತದೆಯಾದ್ದರಿಂದ ತನ್ನ ಹಿತಾಸಕ್ತಿ ರಕ್ಷಣೆಯ ದೃಷ್ಟಿಯಿಂದ ಕಾಂಗ್ರೆಸ್ಸು ಇದನ್ನು ಆಗಗೊಡದು.

ಹೈಕಮಾಂಡ್ ಒಪ್ಪಿಗೆ ಪಡೆಯದ ಯಾವುದೇ ಅಸ್ಪೃಶ್ಯರ ಚಳುವಳಿಯನ್ನು ಕಾಂಗ್ರೆಸ್ ಪಕ್ಷ ಮೊದಲೇ ನಿಷೇಧಿಸಿದೆ. ಇದರ ಪರಿಣಾಮ : ಯಾವ ಯಾವ ಪ್ರಾಂತ್ಯಗಳಲ್ಲಿ ಅಸ್ಪೃಶ್ಯರು ಕಾಂಗ್ರೆಸ್ ಸೇರಿದ್ದಾರೋ, ಅಲ್ಲೆಲ್ಲ ಅಸ್ಪೃಶ್ಯರ ಚಳುವಳಿ ಸತ್ತಂತೆ.

ಅಸ್ಪೃಶ್ಯರು ಶಾಸಕಾಂಗಗಳಲ್ಲಿ ತಮ್ಮ ವಾಕ್ ಸ್ವಾತಂತ್ರ್ಯ ಹಾಗೂ ಕೃತಿ ಸ್ವಾತಂತ್ರ್ಯಗಳನ್ನು ಉಳಿಸಿಕೊಂಡರೆ ಮಾತ್ರ ಅವರು ತಮ್ಮ ಕಷ್ಟಗಳನ್ನು ಹೊರಗೆಡುವುದರಲ್ಲಿ ಹಾಗೂ ರಾಜಕೀಯ ಪರಿಹಾರ ಕಂಡುಕೊಳ್ಳುವಲ್ಲಿ ಸಫಲರಾಗುತ್ತಾರೆ. ಆದರೆ, ಕಾಂಗ್ರೆಸ್‌ಗೆ ಸೇರಿರುವ ಅಸ್ಪೃಶ್ಯರು ಇವೆರಡನ್ನೂ ಕಳೆದುಕೊಂಡಿರುತ್ತಾರೆ. ಅವರು ತಮಗೆ ಬೇಕಾದ ಹಾಗೆ ಮತ ಚಲಾಯಿಸಲಾರರು, ತೋಚಿದ ಹಾಗೆ ಮಾತಾಡಲಾರರು, ಒಂದು ಪ್ರಶ್ನೆಯನ್ನೂ ಕೇಳಲಾರರು, ಒಂದು ನಿರ್ಣಯವನ್ನು ಜಾರಿಗೆ ತರಲಾರರು, ಒಂದು ಠರಾವನ್ನೂ ಮುಂದಿಡಲಾರರು. ಅವರು ಕಾಂಗ್ರೆಸ್ ಪಕ್ಷದ ಕಾರ್ಯಾಂಗಕ್ಕೆ ಸಂಪೂರ್ಣ ಅಧೀನರಾಗುತ್ತಾರೆ. ಕಾಂಗ್ರೆಸ್ ಕಾರ್ಯಾಂಗ ಕೊಟ್ಟಷ್ಟು ಸ್ವಾತಂತ್ರ್ಯ ಮಾತ್ರ ಅವರಿಗಿರುತ್ತದೆ. ಪರಿಣಾಮವಾಗಿ ಅಸ್ಪೃಶ್ಯರ ದುಃಖಗಳ ಸರಮಾಲೆ ಬೆಳೆಯುತ್ತಲೇ ಹೋಗುತ್ತದೆ. ಆದರೂ ಅಸ್ಪೃಶ್ಯ ಸದಸ್ಯರು ಅವುಗಳ ಬಗ್ಗೆ ಪ್ರಶ್ನಿಸುವಂತಿಲ್ಲ. ಅವರ ಸ್ಥಿತಿ ಎಷ್ಟು ಕರುಣಾಜನಕವಾಗಿದೆ ಎಂದರೆ ಒಂದು ಮಸೂದೆಯಿಂದ ಅಸ್ಪೃಶ್ಯರಿಗೆ ಸಹಾಯವಾಗುತ್ತೆಂದು ಅಸ್ಪೃಶ್ಯ ಸದಸ್ಯರಿಗೆ ಗೊತ್ತಿದ್ದರೂ ಕೂಡ ಕಾಂಗ್ರೆಸ್ ಪಕ್ಷ ಅದರ ವಿರುದ್ಧ ಮತ ಹಾಕಬೇಕೆಂದು ಸೂಚನೆ ನೀಡಿದ್ದರೆ, ಆ ಸದಸ್ಯರು ಹಾಗೇ ಮಾಡಬೇಕಾಗಿ ಬರುತ್ತದೆ. ಇಂಥ ಒಂದು ಘಟನೆ ಇತ್ತೀಚೆಗೆ ಮದರಾಸಿನಲ್ಲಿ

---

* ಈ ಪಟ್ಟಿಯನ್ನು ಡಾ. ಅಂಬೇಡ್ಕರ್‌ರ 'ಕಾಂಗ್ರೆಸ್ ಮತ್ತು ಗಾಂಧೀ ಅಸ್ಪೃಶ್ಯರಿಗೆ ಮಾಡಿದ್ದೇನು' ಎನ್ನುವ ಪುಸ್ತಕದ ೯೪ನೇ ಪುಟದಿಂದ ಪುನರ್ ಮುದ್ರಣ ಮಾಡಲಾಗಿದೆ. ಇದು ಹಸ್ತ ಪ್ರತಿಯಲ್ಲಿ ಟೈಪಾಗಿರಲಿಲ್ಲ– ಸಂ.

ನಡೆಯಿತು. ಮದರಾಸಿನ ಶಾಸಕಾಂಗದಲ್ಲಿ ಸದಸ್ಯರಾದ ರಾವ್ ಬಹಾದ್ದೂರ್ ರಾಜಾ ಎನ್ನುವವರು ಆ ಪ್ರಾಂತ್ಯದ ಅಸ್ಪೃಶ್ಯರಿಗೆ ದೇವಸ್ಥಾನ ಪ್ರವೇಶ ಹಕ್ಕನ್ನು ಕಲ್ಪಿಸಿ ಕೊಡುವ ಮಸೂದೆಯನ್ನು ಮಂಡಿಸಿದರು. ಕಾಂಗ್ರೆಸ್ ಪಕ್ಷ ಇದಕ್ಕೆ ಬೆಂಬಲಿಸುವುದಾಗಿ ಮೊದಲು ಹೇಳಿಕೊಂಡಿತ್ತು. ಆದರೆ ಮದರಾಸಿನ ಕಾಂಗ್ರೆಸ್ ಸರ್ಕಾರ ತನ್ನ ಅಭಿಪ್ರಾಯ ಬದಲಿಸಿ ಮಸೂದೆ ವಿರೋಧಿಸಿದಾಗ ಮದರಾಸಿನ ಶಾಸಕಾಂಗದ ಅಸ್ಪೃಶ್ಯ ಸದಸ್ಯರಿಗೆ ಸಂದಿಗ್ಧ ಪರಿಸ್ಥಿತಿ ಒದಗಿ ಬಂತು. ಅವರಿಗೆ ಬೇರೆ ಮಾರ್ಗವಿರಲಿಲ್ಲ. ಕಾಂಗ್ರೆಸಿಗರ ಜೊತೆ ಒಂದಾಗಿ ಆ ಮಸೂದೆಯ ವಿರುದ್ಧ ಮತ ಹಾಕಿದರು. ಅಸ್ಪೃಶ್ಯ ಸದಸ್ಯರು ಇಡೀ ಅಸ್ಪೃಶ್ಯ ಜನಾಂಗಕ್ಕೆ ಕಾವಲು ಪಡೆ ಆಗುವುದರ ಬದಲು ಕಾಂಗ್ರೆಸ್ ಸೇರಿದ ಕಾರಣ ಪುಕ್ಕಲು ನಾಯಿಗಳಂತಾದರು. ಕಚ್ಚುವುದಿರಲಿ, ಅವರು ಬೊಗಳುವಂತೆಯೂ ಇಲ್ಲ. ಅಸ್ಪೃಶ್ಯರ ಈ ವಾಕ್ ಹಾಗೂ ಕೃತಿ ಸ್ವಾತಂತ್ರ್ಯ ಹರಣಕ್ಕೆ ಕಾರಣ ಅವರು ಕಾಂಗ್ರೆಸ್ ಪಕ್ಷ ಸೇರಿ ಕಾಂಗ್ರೆಸ್ ನಿಯಮಗಳಿಗೆ ತಮ್ಮನ್ನು ತಾವೇ ಒಡ್ಡಿಕೊಂಡಿದ್ದು.

ಅಸ್ಪೃಶ್ಯರು ಕಾಂಗ್ರೆಸ್ ಪಕ್ಷ ಸೇರಿದ್ದರಿಂದ ಆದ ಮೂರನೆಯ ಪ್ರಮಾದವೆಂದರೆ, ಅಸ್ಪೃಶ್ಯರಿಗೆ ಯಾವುದೇ ಸೌಕರ್ಯ –ಸೌಲಭ್ಯಗಳನ್ನು ಕಲ್ಪಿಸಲು ಅಸಮರ್ಥರಾದದ್ದು. ಇದಕ್ಕೆ ಎರಡು ಕಾರಣಗಳಿವೆ: ಮೊದಲನೆಯದಾಗಿ ಕಾಂಗ್ರೆಸ್ ರ್‍ಯಾಡಿಕಲ್ ಪಕ್ಷವಲ್ಲ, ಕ್ರಾಂತಿಕಾರಿ ಪಕ್ಷ. ಅದರ ಸಂಪೂರ್ಣ ಸ್ವಾತಂತ್ರ್ಯ ನೀತಿ, ನಾಗರಿಕ ಹಕ್ಕು ಅವಿಧೇಯತೆ ಮತ್ತು ಭೂಕರ ನಿರಾಕರಣೆ ಮುಂತಾದ ಕ್ರಮಗಳಿಂದಾಗಿ ಅದು ಕ್ರಾಂತಿಕಾರಿ ಪಕ್ಷವೆನಿಸಿಕೊಂಡಿದೆ. ಆದರೆ ಪ್ರತಿ ಕ್ರಾಂತಿಕಾರಿ ಪಕ್ಷವು ರ್‍ಯಾಡಿಕಲ್ ಕೂಡ ಆಗಿರಬೇಕಿಲ್ಲ ಎನ್ನುವುದನ್ನು ಅನೇಕರು ಮರೆತಿರುತ್ತಾರೆ. ಹಾಗಾಗಬೇಕೆಂದರೆ, ಅದು ಕ್ರಾಂತಿಕಾರಿ ಪ್ರವೃತ್ತಿಗೆ ಕಾರಣವಾದ ಸಾಮಾಜಿಕ ಹಾಗೂ ವಾಸ್ತವ ಸ್ಥಿತಿಗಳನ್ನು ಅವಲಂಬಿಸಿರುತ್ತದೆ. ಸೈಮನ್ ಡಿ ಮಾಂಡ್‌ಫೋರ್ಟ್‌ನ ಮುಂದಾಳತ್ವದಲ್ಲಿ ೧೨೧೫ರಲ್ಲಿ ಕಿಂಗ್‌ಜಾನ್‌ನ ವಿರುದ್ಧ ದಂಗೆ ಎದ್ದು ಅವನಿಂದ ಮ್ಯಾಗ್ನಕಾರ್ಟಾಗೆ ಸಹಿ ಹಾಕಿಸಿಕೊಂಡ ಇಂಗ್ಲೆಂಡಿನ ಬ್ಯಾರನ್‌ಗಳು; ವಾಟ್ ಟೈಲರ್‌ನ ಮುಂದಾಳತ್ವದಲ್ಲಿ ೧೩೮೧ರಲ್ಲಿ ತಮ್ಮ ಒಡೆಯರ ವಿರುದ್ಧ ಬಂಡೆದ್ದು ಗಲ್ಲು ಶಿಕ್ಷೆಗೆ ಗುರಿಯಾದ ರೈತರು ಇವರೆಲ್ಲ ಕ್ರಾಂತಿಕಾರಿಗಳಾಗಿದ್ದರು. ಆದರೆ ಕ್ರಾಂತಿಕಾರಿಗಳಾಗಿದ್ದ ಕಾರಣದಿಂದ ಆ ಬ್ಯಾರನ್‌ಗಳು ರ್‍ಯಾಡಿಕಲ್ ಕೂಡ ಆಗಿದ್ದರು ಅನ್ನಲಾದೀತೆ? ಬ್ಯಾರನ್‌ಗಳು ತಮ್ಮ ವರ್ಗದವರ ಸ್ವಾತಂತ್ರ್ಯಕ್ಕಾಗಿ ರಾಜನ ವಿರುದ್ಧ ದಂಗೆ ಎದ್ದರು. ಅವರಿಗೆ ಅಧಿಕಾರ ದೊರಕದೆ ಅತೃಪ್ತರಾದವರ ಸಾಮಾಜಿಕ ಭಾವನೆಗಳ ಬೆಂಬಲ ಸಿಕ್ಕಿತು. ಆದರೆ, ರೈತರ ವಿಷಯದಲ್ಲಿ ಅವರ ಸಹಾಯಕ್ಕೆ ಬಂದವರು ನೊಂದವರು, ಅನ್ನ–ಸ್ವಾತಂತ್ರ್ಯಕ್ಕಾಗಿ ಹಂಬಲಿಸುತ್ತಿದ್ದರು. ಆದ್ದರಿಂದ ಈ ರೈತರು ಕ್ರಾಂತಿಕಾರಿಗಳೂ ಆಗಿದ್ದರು. ರ್‍ಯಾಡಿಕಲ್ ಕೂಡ ಆಗಿದ್ದರು ಎಂದು ಹೇಳಬಹುದು. ಕಾಂಗ್ರೆಸ್ಸಿನವರ ದಂಗೆ ಈ ರೈತರ ದಂಗೆಯ ತರಹದ್ದು. ಗಾಂಧೀಜಿಯವರ ನೇತೃತ್ವದ ಕಾಂಗ್ರೆಸ್ ಸೈಮನ್ ಡಿ ಮಾಂಡ್‌ಫೋರ್ಟ್ ನೇತೃತ್ವದ ಬ್ಯಾರನ್‌ಗಳಂತೆ. ಬ್ಯಾರನ್‌ಗಳ ದಂಗೆಯ ಹಿಂದೆ ದುಡಿಯುವವರ, ಹಸಿದವರ ಬೆಂಬಲಕ್ಕೆ ಬದಲಾಗಿ ಅಧಿಕಾರಾಕಾಂಕ್ಷಿಗಳ ಸಾಮಾಜಿಕ ಭಾವನೆಗಳಿದ್ದಂತೆ ಕಾಂಗ್ರೆಸ್ಸಿನವರ ಬ್ರಿಟಿಷ್ ವಿರೋಧಿ ದಂಗೆ ಕೂಡ. ಕಾಂಗ್ರೆಸ್‌ಗೆ ಸಹಸ್ರಾರು ಜನರ ಬೆಂಬಲವಿರುವುದು ನಿಜವಾದರೂ ಅದು ಸಾಮಾನ್ಯವಾಗಿ ಎಲ್ಲ ಭಾರತೀಯರಿಗೂ ಇರುವ ಬ್ರಿಟಿಷ್–ವಿರೋಧಿ ಭಾವನೆಗಳಿಂದಾಗಿ; ಅನ್ನ–ಸ್ವಾತಂತ್ರ್ಯಗಳಿಂದ ವಂಚಿತರಾದ ಜನಗಳ ಭಾವನೆಗಳಿಂದಾಗಿ. ಆದರೆ ಇವರ ಹಾಗೂ ಸಾಮಾಜಿಕವಾಗಿ ಮುಂದುವರೆದ ಮತ್ತು ಸ್ಥಿತಿವಂತರ ಭಾವನೆಗಳ–ನಡುವೆ ಘರ್ಷಣೆ ಇದೆ. ಮೇಲಾಗಿ ಈ ಎರಡನೆಯ ಗುಂಪಿನವರೇ ಕಾಂಗ್ರೆಸ್ಸಿನಲ್ಲಿ ಮುಂದಾಳುಗಳಾಗಿದ್ದಾರೆ. ಮಿಕ್ಕವರೆಲ್ಲ ಬರೀ ಅನುಯಾಯಿಗಳು. ಆ ಮುಂದಾಳುಗಳ ಭಾವನೆಗಳೇ ಕಾಂಗ್ರೆಸ್ಸನ್ನು ರೂಪಿಸುತ್ತಿರುವುದು. ಅವರೆಲ್ಲ ಅಧಿಕಾರದಾಹಿಗಳು. ಇದೆಲ್ಲ

ನೋಡಿದರೆ, ಕಾಂಗ್ರೆಸ್ ಕ್ರಾಂತಿಕಾರಿ ಪಕ್ಷವೇ ಹೊರತು ರ್‍ಯಾಡಿಕಲ್ ಅಲ್ಲ ಎಂದು ತಿಳಿಯುತ್ತದೆ. ಇದರ ಸತ್ಯಾಸತ್ಯಗಳನ್ನು ತಿಳಿಯಲು ಕಾಂಗ್ರೆಸ್ ಸರ್ಕಾರದ ದಾಖಲೆಗಳನ್ನು ಪರಿಶೀಲಿಸಬಹುದು. ಅಧಿಕಾರಕ್ಕೆ ಬಂದ ಮೇಲೆ ಆಗಿರುವ ಸಾಧನೆಗಳೆಲ್ಲ ಕೇವಲ ಸಣ್ಣಪುಟ್ಟವು : ಬ್ರಿಟಿಷರಿಗಿಂತ ಹೆಚ್ಚು ಉತ್ಸಾಹದಿಂದ ಅನೇಕ ಕಾರ್ಮಿಕರನ್ನು ಅವರು ಕೊಂದಿದ್ದಾರೆ; ಉಚ್ಚ ನ್ಯಾಯಾಲಯದ ಅನುಸಾರ ಜೈಲು ಸೇರಿದ ಅಪರಾಧಿಗಳನ್ನು ಬಿಡುಗಡೆ ಮಾಡಿಸಿದ್ದಾರೆ. ಇದಕ್ಕೆಲ್ಲ ಕಾರಣ ಅವರ ಕೈಯಲ್ಲಿ ಅಧಿಕಾರವಿದೆ. ಇಂಗ್ಲೆಂಡಿನ ಟೋರಿಗಳ ಸಮಾನಸ್ಕಂಧರಂತೆ ಇಷ್ಟು ಬೇಗ ಇವರೆಲ್ಲ ತಮ್ಮ ನಿಜವಾದ ಬಣ್ಣ ತೋರಿಸಿರುವುದು ನನಗೆ ಆಶ್ಚರ್ಯ ತರುತ್ತಿದೆ. ಕಾಂಗ್ರೆಸ್ ಅಧಿಕಾರಿಗಳಿಗೆ ಕ್ರಾಂತಿಯ ಬಗ್ಗೆ, ಬ್ರಿಟಿಷರನ್ನು ಹೊಡೆದಟ್ಟುವ ಬಗ್ಗೆ ಇದ್ದ ಎಲ್ಲಾ ಉತ್ಸಾಹವೂ ಇಳಿದುಹೋಗಿದೆ. ಜನರ ಮೇಲೆ ದಬ್ಬಾಳಿಕೆ ನಡೆಸಬಹುದಾದ್ದರಿಂದ ಅವರು ಅಧಿಕಾರಕ್ಕೆ ಕಚ್ಚಿಕೊಂಡಿದ್ದಾರೆ. ವಸಾಹತುಶಾಹಿ ವಿರೋಧವಾದದ ಬಗ್ಗೆ ತಲೆಕೆಡಿಸಿಕೊಳ್ಳಲು ಅವರಿಗೆ ಮನಸ್ಸೇ ಇಲ್ಲವಾಗಿದೆ.

ಕಾಂಗ್ರೆಸ್ ರ್‍ಯಾಡಿಕಲ್ ಪಕ್ಷವಲ್ಲದ ಮೇಲೆ ಅದು ಸಾಮಾಜಿಕ ಹಾಗೂ ಆರ್ಥಿಕ ಪುನರ್ ನಿರ್ಮಾಣಕ್ಕಾಗಿ ರ್‍ಯಾಡಿಕಲ್ ಕಾರ್ಯಕ್ರಮಗಳನ್ನು ಹಾಕಿಕೊಳ್ಳುವುದಿಲ್ಲ. ಆದರೆ ಇಂಥ ಕಾರ್ಯಕ್ರಮಗಳಿಲ್ಲದೆ ಅಸ್ಪೃಶ್ಯರ ಉದ್ಧಾರ ಅಸಾಧ್ಯದ ಮಾತು. ಹೀಗಿರುವಾಗ ಅಸ್ಪೃಶ್ಯರು ಕಾಂಗ್ರೆಸ್ ಪಕ್ಷ ಸೇರುವುದು ನಿರರ್ಥಕವಷ್ಟೇ ಅಲ್ಲ, ಮೂರ್ಖತನವೂ ಹೌದು. ಯಾಕೆಂದರೆ ಕಾಂಗ್ರೆಸ್ ಅಸ್ಪೃಶ್ಯರ ಹಿತಕ್ಕೆ ಇನ್ನೇನು ಮಾಡದಿದ್ದರೂ ಅವರನ್ನು ಚೆನ್ನಾಗಿ ಬಳಸಿಕೊಳ್ಳುತ್ತದೆ.

ಸಂದರ್ಭದ ಒತ್ತಡಗಳಿಂದ ಕಾಂಗ್ರೆಸ್ ಅಸ್ಪೃಶ್ಯರಿಗಾಗಿ ಅಷ್ಟಿಷ್ಟನ್ನು ಬೇಕಾದರೆ ಮಾಡುತ್ತದೆ. ಅದಕ್ಕೆ ಕಾರಣ ಶಾಸಕಾಂಗದಲ್ಲಿ ತನ್ನ ಬಹುಮತಕ್ಕಾಗಿ ಅದು ಅಸ್ಪೃಶ್ಯ ಪ್ರತಿನಿಧಿಗಳ ಸಂಖ್ಯೆಯನ್ನು ಅವಲಂಬಿಸಿರುವುದು. ಅಸ್ಪೃಶ್ಯರು ತಮ್ಮ ನಿಲುವು–ನಿರ್ಧಾರಗಳನ್ನು ಕಾಂಗ್ರೆಸ್ಸಿನ ಮೇಲೆ ಹೇರಿದ ಪಕ್ಷದಲ್ಲಿ ಕಾಂಗ್ರೆಸ್ ಅವನ್ನು ಖಂಡಿತಾ ಒಪ್ಪಿಕೊಳ್ಳುತ್ತದೆ. ಇಂಥ ಸಂದರ್ಭಗಳಲ್ಲಿ ಅಸ್ಪೃಶ್ಯರು ಕಾಂಗ್ರೆಸ್ ಜೊತೆ ಒಡಂಬಡಿಕೆಗೆ ಒಪ್ಪಬಹುದು. ಆದರೆ ಇವತ್ತು ಎಲ್ಲೆಲ್ಲೂ ಕಾಂಗ್ರೆಸ್ಸಿಗೆ ಬಹುಮತವಿರುವುದರಿಂದ ಎಲ್ಲ ಶಾಸಕಾಂಗಗಳಲ್ಲಿ ತನಗೆ ತಾನೇ ನಾಯಕನಾಗಿಬಿಟ್ಟಿದೆ. ಅದಕ್ಕೆ ಹೊರಗಿನವರ ಸಹಕಾರಬೇಕಾಗಿಲ್ಲ. ಹಾಗಾಗಿ ಅಸ್ಪೃಶ್ಯರಿಗೆ ಕಾಂಗ್ರೆಸ್‌ನ ಬಾಲದ ತುದಿಯಲ್ಲಿ ಜಾಗ ಕೊಡಲಾಗಿದೆ. ಅದರ ಬಾಲ ಅತಿ ಉದ್ದವಾಗಿರುವುದರಿಂದ ಅದಕ್ಕೆ ಚಾಲನೆಯೇ ಇಲ್ಲವಾಗಿದೆ. ಅಸ್ಪೃಶ್ಯರು ಕಾಂಗ್ರೆಸ್ ಸೇರಿದರೆ ಅಸ್ಪೃಶ್ಯರಿಗೆ ಯಾವ ಲಾಭವೂ ಇರುವುದಿಲ್ಲ ಎನ್ನುವುದಕ್ಕೆ ಇದು ಎರಡನೆಯ ಕಾರಣ.

ಅಸ್ಪೃಶ್ಯರು ಕಾಂಗ್ರೆಸ್ ಸೇರಿದರೆ ಆಗುವ ಪ್ರಮಾದಗಳು ಹೀಗಿವೆ ನೋಡಿ. ಇವು ಕೇವಲ ಪ್ರಮಾದಗಳಲ್ಲ, ಕೆಟ್ಟ ಪರಿಣಾಮಗಳೆಂದೇ ಹೇಳಬೇಕು. ಏಕೆಂದರೆ ಎಲ್ಲ ಸಾಮಾಜಿಕ ಚಳುವಳಿಗಳೂ ಈಗ ಸತ್ತಿವೆ ; ಎಲ್ಲ ರಾಜಕೀಯ ಶಕ್ತಿಗಳೂ ಅತ್ತಿತ್ತ ಓಲಾಡುತ್ತಿವೆ. ಹೊಸ ಸಂವಿಧಾನದಡಿಯಲ್ಲಿ ಅಸ್ಪೃಶ್ಯರು ಸದವಕಾಶಕ್ಕಾಗಿ ಸುಮ್ಮನೆ ಕಾಯುತ್ತ ಕೂರಬೇಕಾಗಿದೆ. ವಾಸ್ತವಾಂಶವೆಂದರೆ ಅವರೆಲ್ಲ ಬಂದಿಗಳಾಗಿದ್ದಾರೆ.

ಈಗ ಒಂದು ಪ್ರಶ್ನೆ ಉದ್ಭವಿಸುತ್ತದೆ. : ಕಾಂಗ್ರೆಸ್ ಸೇರಿದರೆ ಹೀಗೆಲ್ಲ ಆಗುವುದಾದರೆ ಅಸ್ಪೃಶ್ಯರು ಕಾಂಗ್ರೆಸ್ ಸೇರಿದ್ದೇಕೆ? ಚುನಾವಣೆಯಲ್ಲಿ ಸ್ವತಂತ್ರರಾಗಿ ಮತ್ತು ಕಾಂಗ್ರೆಸ್‌ಗೆ ವಿರೋಧವಾಗಿ ಏಕೆ ಸ್ಪರ್ಧಿಸಲಿಲ್ಲ? ಏಕೆಂದರೆ, ಕಾಂಗ್ರೆಸ್ ಟಿಕೆಟ್ಟಿನ ಮೇಲೆ ಚುನಾವಣೆಗಿಳಿದ ಅಸ್ಪೃಶ್ಯರೆಲ್ಲ ಕೇವಲ ಸಮಯಸಾಧಕರು; ತಮಗೂ ಒಂದು ಪದವಿ, ಅಧಿಕಾರ ಸಿಗಬಹುದೆಂಬ ಆಸೆ ಇಟ್ಟುಕೊಂಡವರು. ಯಾರ ಸಹಾಯದಿಂದ ತಾವು ಮೇಲೇರಿದ್ದು ಎನ್ನುವುದರ ಬಗ್ಗೆ ಅವರಿಗೆ ಕಾಳಜಿ ಇರುವುದಿಲ್ಲ. ಕಾಂಗ್ರೆಸ್ ಅತಿ ದೊಡ್ಡ ಪಕ್ಷವೆಂದೂ, ಅದರ ಪರವಾನಗಿ ಪಡೆದರೆ ಶಾಸಕಾಂಗ ಸೇರಬಹುದೆಂದೂ ನಂಬಿ ಚುನಾವಣೆಯಲ್ಲಿ ಗೆದ್ದುಬರಬೇಕೆಂಬ

ಆಸೆಯಿಂದ ಈ ಕಾರ್ಯಸಾಧಕರು ಕಾಂಗ್ರೆಸ್ ಸೇರಿರುತ್ತಾರೆ. ಅವರಿಗೆ ಕಾಂಗ್ರೆಸ್ ವಿರೋಧಿಗಳಾಗಿ ಕಣಕ್ಕಿಳಿದರೆ ಎಲ್ಲಿ ಸೋಲುತ್ತೇವೋ ಎನ್ನುವ ಭಯ. ಇದರಿಂದ ಅವರ ಗುರಿ ಏನೆಂದು ಸ್ಪಷ್ಟವಾಗುತ್ತದೆ. ಒಂದು ವೇಳೆ ಕಾಂಗ್ರೆಸ್ ಸಹಾಯವಿಲ್ಲದೆ ಚುನಾವಣೆ ಗೆಲ್ಲುವ ಅವಕಾಶವಿದ್ದಿದ್ದರೆ ಅವರು ಕಾಂಗ್ರೆಸ್ ಸೇರುತ್ತಿರಲಿಲ್ಲ. ಈ ರೀತಿ ಚುನಾವಣೆಯಲ್ಲಿ ಗೆಲ್ಲಲು ಕಾಂಗ್ರೆಸ್ ಪಕ್ಷ ಸೇರಲೇಬೇಕಾದ ಪರಿಸ್ಥಿತಿ ಉಂಟಾಗಲು ಕಾರಣ ಪೂನಾ ಒಪ್ಪಂದದಲ್ಲಿ ಜಾರಿಯಾದ ಜಂಟಿ ಮತದಾರ ಸಮೂಹ ಕ್ರಮ.

ಅಲ್ಪ ಸಂಖ್ಯಾತರಿಗೆ ಮತ್ತು ಬಹುಸಂಖ್ಯಾತರಿಗೆ ಸೇರಿ ಒಂದೇ ಮತದಾರ ಸಮೂಹ ರಚಿತವಾದರೆ ಅಲ್ಪಸಂಖ್ಯಾತರಿಗೆ ತೊಂದರೆ ಉಂಟಾಗದೆ ಮತ್ತೇನು? ಅಲ್ಪ ಸಂಖ್ಯಾತ ಅಭ್ಯರ್ಥಿಯ ಹಿಂದೆ ಎಲ್ಲ ಅಲ್ಪಸಂಖ್ಯಾತರ ಬೆಂಬಲವಿದ್ದರೂ ಆ ಅಭ್ಯರ್ಥಿ ಸಫಲನಾಗುವುದಿಲ್ಲ. ಅಲ್ಪ ಸಂಖ್ಯಾತರಿಗಾಗಿ ಒಂದು ಸ್ಥಾನವನ್ನೇ ಮೀಸಲಾಗಿಟ್ಟಲ್ಲಿ ಅಲ್ಪಸಂಖ್ಯಾತ ಪ್ರತಿನಿಧಿಯೊಬ್ಬ ಆಯ್ದು ಬಂದೇ ಬರುತ್ತಾನೆಂಬ ಖಾತ್ರಿ ಇರುತ್ತದೆ. ಜಂಟಿ ಮತದಾರ ಸಮೂಹದ ಮೂಲಕ ಗೆದ್ದುಬರುವ ಅಲ್ಪಸಂಖ್ಯಾತರ ಅಭ್ಯರ್ಥಿಯು ಅಲ್ಪಸಂಖ್ಯಾತರೇ ಆರಿಸಿ ನಿಲ್ಲಿಸಿದ ಅಭ್ಯರ್ಥಿಯಾಗಿರುತ್ತಾನೆ ಎಂದು ಹೇಳಲು ಬರುವುದಿಲ್ಲ. ಅಲ್ಪಸಂಖ್ಯಾತ ಸದಸ್ಯನಿಗೆಂದು ಒಂದು ಸ್ಥಾನವನ್ನೇ ಮೀಸಲಾಗಿಟ್ಟರೂ ಆ ಸ್ಥಾನಕ್ಕೆ ಬಹುಸಂಖ್ಯಾತರು ತಮಗೆ ಬೇಕಾದ ಅಲ್ಪಸಂಖ್ಯಾತನೊಬ್ಬನನ್ನು ಆರಿಸಿ ಗೆಲ್ಲಿಸಬಹುದು. ಇದರ ಪರಿಣಾಮ : ಗೆದ್ದ ಪ್ರತಿನಿಧಿಯು ಅಲ್ಪಸಂಖ್ಯಾತರ ಪರವಾದಿಯಾಗದೆ ಬಹುಸಂಖ್ಯಾತರ ಕೈಗೊಂಬೆಯಾಗುತ್ತಾನೆ.

ಶಾಸಕಾಂಗಕ್ಕೆ ನಡೆಯುವ ಚುನಾವಣೆಗೆ ಈಗ ಸಿದ್ಧವಾಗಿರುವ ಕ್ರಮದಲ್ಲಿ ಅಸ್ಪೃಶ್ಯ ಮತದಾರರು ಸವರ್ಣೀಯ ಮತದಾರರಿಗಿಂತ ಅಲ್ಪ ಸಂಖ್ಯೆಯಲ್ಲಿದ್ದಾರೆ. ಇವರಿಬ್ಬರ ನಡುವಿನ ಅಂತರವನ್ನು ಹಲವಾರು ಚುನಾವಣಾ ಕ್ಷೇತ್ರದಲ್ಲಿ ಗಮನಿಸೋಣ.

ಜಂಟಿ ಮತದಾರ ಸಮೂಹ ಕ್ರಮದ ಚುನಾವಣೆಯಲ್ಲಿ ಬಹುಸಂಖ್ಯಾತರಿಗೆ ದೊರೆಯುವ ಅಧಿಕಾರವು ಏಕಸದಸ್ಯ ಮತಕ್ಷೇತ್ರ ಕ್ರಮದಲ್ಲಿ ಇನ್ನೂ ಹೆಚ್ಚಾಗುತ್ತದೆ.

ಅಲ್ಪಸಂಖ್ಯಾತರಿಗೆ ಮೀಸಲಿಡುವ ಜಂಟಿ ಮತದಾರ ಸಮೂಹ ಕ್ರಮದಲ್ಲಿ ಪ್ರತಿ ಕ್ಷೇತ್ರವೂ ಬಹುಪ್ರತಿನಿಧಿ ಕ್ಷೇತ್ರವಾಗಬೇಕು. ಅಂದರೆ ಅಲ್ಪ ಸಂಖ್ಯಾತರಿಗೆ ಒಂದು ಸ್ಥಾನವಿದ್ದರೆ ಬಹುಸಂಖ್ಯಾತರಿಗೆ ಕನಿಷ್ಠ ಒಂದು ಸ್ಥಾನವಾದರೂ ನಿಗದಿಯಾಗಿರಬೇಕು. ಇಂಥ ಬಹುಪ್ರತಿನಿಧಿ ಕ್ಷೇತ್ರ ಚಿಕ್ಕ ಮತಕ್ಷೇತ್ರವಾಗಿದ್ದರೆ, ಬಹುಸಂಖ್ಯಾತರಿಗೆ ಎರಡು ಸ್ಥಾನಗಳನ್ನು ಅಲ್ಪಸಂಖ್ಯಾತರಿಗೆ ಒಂದು ಸ್ಥಾನವನ್ನು ನಿಗದಿಮಾಡಬೇಕು. ಅದು ದೊಡ್ಡ ಮತಕ್ಷೇತ್ರವಾಗಿದ್ದರೆ ಬಹುಸಂಖ್ಯಾತರಿಗೆ ಇನ್ನೂ ಹೆಚ್ಚು ಸ್ಥಾನಗಳನ್ನು ನಿಗದಿಮಾಡಬೇಕು. ಇದು ಬಹು ಮುಖ್ಯ. ಏಕೆಂದರೆ ಬಹುಸಂಖ್ಯಾತರಿಗೆ ಸ್ಥಾನಗಳ ಸಂಖ್ಯೆ ಕಡಿಮೆಯಾದಷ್ಟೂ ಅವರ ಕುಚೇಷ್ಟೆಗಳಿಗೆ ಶಕ್ತಿ ಹೆಚ್ಚಾಗುತ್ತದೆ. ಬಹುಸಂಖ್ಯಾತರಿಗೆ ಕೆಲವೇ ಸ್ಥಾನಗಳಿದ್ದರೆ ಅದು ತನ್ನ ಶಕ್ತಿಯನ್ನೆಲ್ಲ ಒಗ್ಗೂಡಿಸಿ ಮೀಸಲು ಕ್ಷೇತ್ರದಲ್ಲಿ ತಮಗೆ ಬೇಕಾದ ಅಲ್ಪಸಂಖ್ಯಾತನನ್ನು ನಿಲ್ಲಿಸಿ ಗೆಲ್ಲಿಸುತ್ತದೆ. ಅಲ್ಪಸಂಖ್ಯಾತರು ನಿಲ್ಲಿಸಿದವನು ಸೋಲುತ್ತಾನೆ. ಒಂದು ವೇಳೆ ಬಹುಸಂಖ್ಯಾತರಿಗೆ ಹೆಚ್ಚು ಸ್ಥಾನ ನಿಗದಿಪಡಿಸಿದರೆ, ಅಭ್ಯರ್ಥಿಗಳ ನಡುವೆ ಸ್ಪರ್ಧೆ ಹೆಚ್ಚಾಗಿ, ಅಲ್ಪಸಂಖ್ಯಾತರ ಮೀಸಲು ಸ್ಥಾನ ತುಂಬಲು ಅವರ ಅಲ್ಪಸಂಖ್ಯಾತ ಅಭ್ಯರ್ಥಿಗೆ ಬೆಂಬಲ ಸೂಚಿಸಲು ಕೆಲವರೇ ಉಳಿಯುತ್ತಾರೆ. ಹಾಗಾಗಿ ಜಂಟಿ ಮತದಾರ ಸಮೂಹ ಕ್ರಮದಲ್ಲಿ ಅಲ್ಪಸಂಖ್ಯಾತರಿಗೆ ರಕ್ಷಣೆ ದೊರೆಯಬೇಕೆಂದರೆ ಬಹುಸಂಖ್ಯಾತರ ಕಡೆಯಿಂದ ಅನೇಕ ಅಭ್ಯರ್ಥಿಗಳು ಸ್ಪರ್ಧಿಸುವಂತಾಗಬೇಕು. ಇಲ್ಲದಿದ್ದರೆ ಬಹುಸಂಖ್ಯಾತರದ್ದೇ ಮೇಲುಗೈ ಆಗುತ್ತದೆ.

ಈಗ ಸವರ್ಣೀಯ ಹಿಂದೂಗಳಿಗಾಗಿ ತಯಾರಾಗಿರುವ ಚುನಾವಣೆ ಏಕ ಸದಸ್ಯ ಮತಕ್ಷೇತ್ರ

ಕ್ರಮವನ್ನು ಅನುಸರಿಸಿದೆ. ಒಟ್ಟಾರೆ ನೋಡಿದರೆ ಒಂದು ಇಡೀ ಮತಕ್ಷೇತ್ರವು ಬಹುಸದಸ್ಯ ಮತಕ್ಷೇತ್ರವೇ ಆಗಿರುತ್ತದೆ ಎನ್ನುವುದು ನಿಜವೇ. ಆದರೆ ವಾಸ್ತವವಾಗಿ ಸವರ್ಣೀಯ ಹಿಂದೂಗಳ ಮತಕ್ಷೇತ್ರಗಳು ಏಕ ಸದಸ್ಯ ಮತಕ್ಷೇತ್ರವೇ ಆಗಿರುತ್ತದೆ. ಇದರ ಪರಿಣಾಮವಾಗಿ ಹಿಂದೂಗಳು ತಮ್ಮ ಅಧಿಕ ಮತಗಳನ್ನು ಅಸ್ಪೃಶ್ಯರ ಮೀಸಲು ಸ್ಥಾನಕ್ಕೆ ಬಹು ಪ್ರಮಾಣದಲ್ಲಿ ನೀಡಿ, ಆ ಮೀಸಲು ಸ್ಥಾನದಲ್ಲೂ ತಮ್ಮ ಆಯ್ಕೆಯವನೇ ಇರುವಂತೆ ನೋಡಿಕೊಳ್ಳುತ್ತಾರೆ.

ಪೂನಾ ಒಪ್ಪಂದ ಮಾಡಿಕೊಟ್ಟ ಅನುಕೂಲಗಳನ್ನು ನಿರರ್ಥಕಗೊಳಿಸಲು ಹಿಂದೂಗಳು ತಮ್ಮ ಪ್ರಯತ್ನಗಳನ್ನು ಮುಂದುವರಿಸಿದರು. ಪೂನಾ ಒಪ್ಪಂದವು ಅವಸರದಲ್ಲಿ ಮುಕ್ತಾಯಗೊಂಡ ಕಾರಣ ಅನೇಕ ವಿಷಯಗಳನ್ನು ಅದು ಯಾವ ವಿವರಣೆಯನ್ನೂ ನೀಡದೆ ಉಳಿಸಿತ್ತು. ಅವುಗಳಲ್ಲಿ ಬಹು ಚರ್ಚಿತವಾದುವೆಂದರೆ (೧) ಪ್ರಾಥಮಿಕ ಚುನಾವಣೆಯಲ್ಲಿ ಚುನಾಯಿತರಾಗುವ 'ನಾಲ್ಕು ಸದಸ್ಯರ ಮಂಡಲಿ' ಎನ್ನುವಲ್ಲಿ 'ನಾಲ್ಕು' ಕನಿಷ್ಠವೇ? ಗರಿಷ್ಠವೇ? (೨) ಹಿಂದೂಗಳನ್ನು ಒಳಗೊಂಡು ಅಂತಿಮ ಜಂಟಿ ಮತದಾರ ಸಮೂಹ ಪದ್ಧತಿಯಲ್ಲಿ ಮತಚಲಾವಣೆ ಕ್ರಮಗಳೇನು? ಇವೆರಡೂ ಪ್ರಶ್ನೆಗಳಿಗೆ ಸವರ್ಣೀಯ ಹಿಂದೂಗಳದ್ದು ಒಂದು ದೃಷ್ಟಿಕೋನವಾದರೆ ಅಸ್ಪೃಶ್ಯರದ್ದು ಇನ್ನೊಂದು. ಈ ವಿಷಯ ಇದರ ಮೇಲೆ ನಿರ್ಧಾರ ತೆಗೆದುಕೊಳ್ಳಬೇಕಿದ್ದ ಹ್ಯಾಮಂಡ್ ಸಮಿತಿಯವರಿಗೆ ತಿಳಿದುಬಂತು. ಅಂತಿಮವಾಗಿ ಸವರ್ಣೀಯ ಹಿಂದೂಗಳ ಪರವಾಗಿ 'ನಾಲ್ಕು ಜನರ ಮಂಡಲಿ' ಎನ್ನುವಲ್ಲಿ ನಾಲ್ಕು ಕನಿಷ್ಠ ಸಂಖ್ಯೆಯೆಂದು ನಿರ್ಧರಿಸಲಾಯಿತು. ಒಂದು ವೇಳೆ ನಾಲ್ಕು ಅಭ್ಯರ್ಥಿಗಳೇನಾದರೂ ಮುಂದೆ ಬರದಿದ್ದರೆ ಪ್ರಾಥಮಿಕ ಚುನಾವಣೆ ರದ್ದಾಗಬೇಕೆಂದು ತೀರ್ಮಾನವಾಯಿತು. ಹಾಗಾದ ಪಕ್ಷದಲ್ಲಿ ಮೀಸಲು ಸ್ಥಾನಕ್ಕೆ ಚುನಾವಣೆ ನಡೆಯುವಂತಿರಲಿಲ್ಲ. ಆ ಸ್ಥಾನವನ್ನು, ಅವರ ಅಭಿಪ್ರಾಯದಂತೆ, ತೆರವಾಗಿಟ್ಟರೆ ಅಸ್ಪೃಶ್ಯರಿಗೆ ಪ್ರಾತಿನಿಧ್ಯ ಇಲ್ಲವಾಗುತ್ತಿತ್ತು. ಆದ್ದರಿಂದ ಅಸ್ಪೃಶ್ಯರು ನಾಲ್ಕು ಗರಿಷ್ಠ ಮಿತಿಯಾಗಿರಬೇಕೆಂದು ವಾದಿಸಿದರು. ಪೂನಾ ಒಪ್ಪಂದದಲ್ಲಿ ನಾಲ್ಕು ಎನ್ನುವುದರ ಅರ್ಥ 'ನಾಲ್ಕನ್ನು ಮೀರದಂತೆ' ಎಂದಿತ್ತು. 'ನಾಲ್ಕಕ್ಕಿಂತ ಕಡಿಮೆಯಿರದೆ' ಎಂದು ಅದರ ಅರ್ಥವಲ್ಲ. ಮತಚಲಾವಣೆ ವಿಷಯದಲ್ಲಿ ಸವರ್ಣೀಯ ಹಿಂದೂಗಳು ಕಡ್ಡಾಯ ಮತಗಳ ಹಂಚಿಕೆ ಕ್ರಮವೇ ಸರಿಯೆಂದು ವಾದಿಸಿದರು. ಅಸ್ಪೃಶ್ಯರು ಮತಗಳ ಒಗ್ಗೂಡಿಕೆ ಕ್ರಮವೇ ಸೂಕ್ತವೆಂದು ಆಗ್ರಹಪಡಿಸಿದರು.

ಹ್ಯಾಮಂಡ್ ಸಮಿತಿಯು ಅಸ್ಪೃಶ್ಯರ ಅಭಿಪ್ರಾಯವನ್ನು ಒಪ್ಪಿ ಸವರ್ಣೀಯ ಹಿಂದೂಗಳ ಅಭಿಪ್ರಾಯವನ್ನು ತಿರಸ್ಕರಿಸಿತು. ಆದರೂ, ಹಿಂದೂಗಳು ಆ ಅಭಿಪ್ರಾಯಪಟ್ಟಿದ್ದೇಕೆ ಎನ್ನುವುದು ಕುತೂಹಲಕಾರಿಯಾಗಿದೆ.

ಮಂಡಲಿಯಲ್ಲಿ ನಾಲ್ಕು ಜನ ಮಾತ್ರ ಇರಬೇಕು. ಕಡಿಮೆಯಿರಬಾರದೆನ್ನುವ ಹಿಂದೂಗಳ ವಾದಕ್ಕೆ ಕಾರಣ ಸ್ಪಷ್ಟವಾಗಿದೆ. ಅಂತಿಮ ಚುನಾವಣೆಯಲ್ಲಿ ಚುನಾಯಿತನಾಗುವ ಅಸ್ಪೃಶ್ಯ ಪ್ರತಿನಿಧಿಯು ಹಿಂದೂಗಳ ಮತ್ತು ಹಿಂದೂ ಧರ್ಮದ ಜೊತೆ ಹೊಂದಾಣಿಕೆ ಮಾಡಿಕೊಳ್ಳಲು ಸಿದ್ಧನಾಗಿರಬೇಕೆನ್ನುವುದು. ಅಂಥವನನ್ನು ಮೊದಲು ಮಂಡಲಿಯಲ್ಲಿ ಒಬ್ಬನನ್ನಾಗಿ ಮಾಡಬೇಕು. ಅವರೊಂದಿಗೆ 'ರಾಜಿ' ಮಾಡಿಕೊಳ್ಳಬಲ್ಲಂಥ ಒಬ್ಬ ಅಸ್ಪೃಶ್ಯ ಸದಸ್ಯ ಮಂಡಲಿಯೊಳಕ್ಕೆ ಬರಬೇಕೆಂದರೆ ಮಂಡಲಿಯ ಸದಸ್ಯರ ಸಂಖ್ಯೆ ಹೆಚ್ಚಾಗಿರಬೇಕು.

ಮಂಡಲಿಯಲ್ಲಿ ಒಬ್ಬನೇ ಅಭ್ಯರ್ಥಿ ಇರುವುದಾದರೆ ಆ ಒಬ್ಬ ಅಭ್ಯರ್ಥಿಯು ಅಸ್ಪೃಶ್ಯರ ಕಟ್ಟಾ ಪ್ರತಿನಿಧಿಯಾಗಿರುತ್ತಾನೆ. ಹಿಂದೂಗಳ ಪ್ರಕಾರ ಅವನು 'ಅಸಾಧ್ಯ'ದವನಾಗಿರುತ್ತಾನೆ. ಇಬ್ಬರು ಅಭ್ಯರ್ಥಿಗಳಿದ್ದರೆ, ಎರಡನೆಯವ ಮೊದಲನೆಯವನಿಗಿಂತ ಕಡಿಮೆ ಸದೃಢನಾಗಿರುತ್ತಾನೆ. ಹಿಂದೂಗಳ ಪ್ರಕಾರ ಇದು ಮಧ್ಯಮ. ಮೂರು ಜನರಿದ್ದರೆ ಇನ್ನೂ ಕಡಿಮೆ ಸದೃಢನಾದ ಅಭ್ಯರ್ಥಿಯಿರುತ್ತಾನೆ; ಇದು ಅವರ ಪ್ರಕಾರ ಉತ್ತಮ.

ನಾಲ್ಕು ಜನರಿದ್ದರಂತೂ, ನಾಲ್ಕನೆಯವನು ಮೂರನೆಯವನಿಗಿಂತ ಕಡಿಮೆ ದೃಢನಾಗಿರುವುದರಿಂದ ಹಿಂದೂಗಳಿಗೆ ಇದು ಅತ್ಯುತ್ತಮವಾಗಿರುತ್ತದೆ. ನಾಲ್ಕು ಜನರ ಮಂಡಲಿಯಿಂದ ಹಿಂದೂಗಳ ಮತ್ತು ಹಿಂದೂ ಧರ್ಮದ ಜೊತೆ ಹೆಚ್ಚು ರಾಜಿ ಮಾಡಕೊಳ್ಳುವಂಥ ಅಸ್ಪೃಶ್ಯ ಪ್ರತಿನಿಧಿಯೊಬ್ಬ ಸಿಕ್ಕಂತಾಗುತ್ತದೆ. ಆದ್ದರಿಂದಲೇ ಮಂಡಲಿಯಲ್ಲಿ ಕನಿಷ್ಠ ನಾಲ್ಕು ಅಭ್ಯರ್ಥಿಗಳಿರಲಿ ಎಂದು ಅವರ ಆಗ್ರಹ.

ಕಡ್ಡಾಯ ಮತಹಂಚಿಕೆ ಕ್ರಮಕ್ಕಾಗಿ ಮತ್ತು ಕನಿಷ್ಠ ನಾಲ್ಕು ಮಂದಿಯ ಮಂಡಲಿಗಾಗಿ ನಡೆಸಿದ ಆಗ್ರಹದ ಹಿಂದಿನ ಗುರಿಗಳು ಒಂದಕ್ಕೊಂದು ಪೂರಕವಾಗಿವೆ. ಅದು ಹೇಗೆಂದರೆ, ಮತಗಳ ಒಗ್ಗೂಡಿಕೆ ಕ್ರಮದಲ್ಲಿ ಪ್ರತಿ ಮತದಾರರನಿಗೆ ಸ್ಥಾನಗಳ ಸಂಖ್ಯೆಯಷ್ಟೇ ಮತಗಳಿರುತ್ತವೆ. ಅವನು ಬೇಕಾದರೆ ಎಲ್ಲ ಮತಗಳನ್ನು ಒಬ್ಬ ಅಭ್ಯರ್ಥಿಗೇ ನೀಡಬಹುದು ಅಥವಾ ತನಗೆ ಬೇಕಾದ ಇಬ್ಬರು ಅಥವಾ ಅದಕ್ಕಿಂತ ಹೆಚ್ಚಿನ ಅಭ್ಯರ್ಥಿಗಳಿಗೆ ಹಂಚಬಹುದು. ಮತ ಹಂಚಿಕೆಯ ಕ್ರಮದಲ್ಲಿ ಪ್ರತಿಯೊಬ್ಬ ಮತದಾರನಿಗೆ ಸ್ಥಾನಗಳ ಸಂಖ್ಯೆಯಷ್ಟೇ ಮತಗಳಿದ್ದರೂ ಒಂದು ಮತವನ್ನು ಒಬ್ಬ ಅಭ್ಯರ್ಥಿಗೆ ಮಾತ್ರ ನೀಡಬೇಕು. ಇವೆರಡು ಪದ್ಧತಿಗಳು ಭಿನ್ನವಾಗಿ ಕಂಡರೂ ವಾಸ್ತವವಾಗಿ ಅಂಥ ವ್ಯತ್ಯಾಸವೇನೂ ಇಲ್ಲ. ಮತ ಒಗ್ಗೂಡಿಕೆ ಪದ್ಧತಿಯಲ್ಲೂ ಮತದಾರ ತನ್ನ ಮತಗಳನ್ನು ಹಂಚಬಹುದು ; ಒಂದು ಮತವನ್ನು ಒಬ್ಬ ಅಭ್ಯರ್ಥಿಗೆ ಖಂಡಿತಾ ಕೊಡಬಹುದು. ಆದರೆ ಹಿಂದೂಗಳಿಗೆ ಜಂಟಿ ಮತದಾರ ಸಮೂಹ ಪದ್ಧತಿಯ ಚುನಾವಣೆಯಲ್ಲಿ ಅವಕಾಶ ಕಳೆದುಕೊಳ್ಳುವಷ್ಟು ಧೈರ್ಯವಿರಲಿಲ್ಲ. ಸವರ್ಣೀಯ ಹಿಂದೂಗಳ ಅಧಿಕ ಮತಗಳನ್ನು ತಾವೇ ಸೂಚಿಸಿರುವ ಅಸ್ಪೃಶ್ಯ ಅಭ್ಯರ್ಥಿಗೆ ಕೊಡಿಸುವುದರ ಮೂಲಕ ಅಸ್ಪೃಶ್ಯರ ಮೀಸಲು ಸ್ಥಾನಕ್ಕೂ ತಮ್ಮವರೇ ಆಯ್ದು ಬರಬೇಕೆನ್ನುವುದು ಅವರ ಮುಖ್ಯ ಗುರಿ; ಅಸ್ಪೃಶ್ಯರೇ ಸೂಚಿಸಿದ ಅಭ್ಯರ್ಥಿಯು ಆಯ್ಕೆಯಾಗದಿರಬೇಕೆನ್ನುವುದು ಅವರ ಉದ್ದೇಶ. ಸವರ್ಣೀಯ ಹಿಂದೂ ಮತದಾರರ ಅಧಿಕ ಮತಗಳು ಅಸ್ಪೃಶ್ಯ ಅಭ್ಯರ್ಥಿಗೆ ಬೀಳದೆ ಇದು ಸಾಧ್ಯವಾಗುವುದಿಲ್ಲ. ಮತ ಹಂಚಿಕೆ ಕ್ರಮದ ಮೂಲಕ ಇದು ಸಾಧ್ಯವಾಗಬಹುದೇ ಹೊರತು ಮತ ಒಗ್ಗೂಡಿಕೆ ಕ್ರಮದ ಮೂಲಕ ಇದು ಆಗದು. ಮತಹಂಚಿಕೆ ಕ್ರಮದಲ್ಲಿ ಸವರ್ಣೀಯ ಹಿಂದೂ ಮತದಾರ ತನ್ನ ಮತಗಳಲ್ಲಿ ಒಂದನ್ನು ಮಾತ್ರ ಸವರ್ಣೀಯ ಹಿಂದೂ ಅಭ್ಯರ್ಥಿಗೆ ಕೊಡಬಲ್ಲ. ಇನ್ನೊಂದು ಮತ ಸವರ್ಣೀಯ ಹಿಂದೂ ಅಭ್ಯರ್ಥಿಗೆ ಅವಶ್ಯವಿಲ್ಲದ್ದರಿಂದ ಅದನ್ನು ಅಸ್ಪೃಶ್ಯ ಅಭ್ಯರ್ಥಿಗೆ ಕೊಡಬೇಕಾಗುತ್ತದೆ. ಮತಹಂಚಿಕೆ ಕ್ರಮ ಜಾರಿಯಲ್ಲಿದ್ದರೆ ಅಸ್ಪೃಶ್ಯರ ಮೀಸಲು ಸ್ಥಾನಗಳಿಗೂ ತಮ್ಮ ಮತಗಳನ್ನೇ ನುಗ್ಗಿಸುವ ಸೌಲಭ್ಯ ಇರುವುದರಿಂದ ಅವರಿಗೆ ಮತ ಒಗ್ಗೂಡಿಕೆಗಿಂತ ಮತ ಹಂಚಿಕೆ ಕ್ರಮವೇ ಹೆಚ್ಚು ಪ್ರಿಯವಾಗಿತ್ತು. ಆದರೆ ಅವರ ದೃಷ್ಟಿಕೋನದಿಂದ ನೋಡಿದಾಗಲೂ ಮತಹಂಚಿಕೆ ಕ್ರಮದಲ್ಲಿ ಲೋಪದೋಷಗಳಿದ್ದೇ ಇವೆ. ಮತಹಂಚಿಕೆ ಕ್ರಮದಲ್ಲಿ ಮತದಾರ ತನ್ನೆಲ್ಲ ಮತಗಳನ್ನೂ ಚಲಾಯಿಸಲೇಬೇಕೆಂಬ ನಿಯಮವಿಲ್ಲ. ಮತದಾರ ತನ್ನ ಮತಗಳಲ್ಲಿ ಒಂದನ್ನು ಸವರ್ಣೀಯ ಹಿಂದೂ ಅಭ್ಯರ್ಥಿಗೆ ಹಾಕಿ ಮಿಕ್ಕ ಮತಗಳನ್ನು ಚಲಾಯಿಸದೆ ಇರಬಹುದು. ಹೀಗೇ ಆದರೆ ಸವರ್ಣೀಯ ಹಿಂದೂಗಳು ಆರಿಸಿದ ಅಸ್ಪೃಶ್ಯ ಸದಸ್ಯ ಸೋಲುತ್ತಾನೆ. ಈ ರೀತಿಯ ಆಕಸ್ಮಿಕಗಳಿಗೆ ಆಸ್ಪದ ಕೊಡದಂತೆ ಹಿಂದೂಗಳು ಮತಹಂಚಿಕೆ ಕ್ರಮ ಕಡ್ಡಾಯವಾಗಲಿ ಎಂದು ಆಗ್ರಹಪಡಿಸಿದರು. ಹೀಗಾದರೆ ಸವರ್ಣೀಯ ಮತದಾರ ತನಗಿಷ್ಟವಿರಲಿ ಇಲ್ಲದಿರಲಿ ಅಂತೂ ತನ್ನ ಮತಗಳಲ್ಲಿ ಒಂದನ್ನು ಹಿಂದೂಗಳೆ ಹೆಸರಿಸಿದ ಅಸ್ಪೃಶ್ಯ ಅಭ್ಯರ್ಥಿಗೆ ಹಾಕಲೇಬೇಕಾಗುತ್ತದೆ.

ಇವೆರಡು ಅಭಿಪ್ರಾಯಗಳು ಹಿಂದೂಗಳ ಕುತಂತ್ರ ಜಾಲದಲ್ಲಿ ಭಾಗಿಗಳಾಗಿದ್ದವು. ಹ್ಯಾಮಂಡ್ ಸಮಿತಿ ಇವನ್ನು ತಿರಸ್ಕರಿಸಿಬಿಟ್ಟಿತು. ಆದರೆ ಪೂನಾ ಒಪ್ಪಂದದಲ್ಲೇ ಸಾಕಷ್ಟು ಕುಚೇಷ್ಟೆಗಳು ಸೇರಿಕೊಂಡಿದ್ದರಿಂದ

ಇವೆರಡು ಅಭಿಪ್ರಾಯಗಳು ತಿರಸ್ಕೃತವಾದರೂ ಅಸ್ಪೃಶ್ಯರು ತಮ್ಮ ಪ್ರತಿನಿಧಿಗಳನ್ನು ಆರಿಸಿಕೊಳ್ಳುವ ಹಕ್ಕನ್ನು ನಿಷ್ಪರಿಣಾಮಕಾರಿ ಮಾಡುವ ಅವರ ಶಕ್ತಿಗೆ ಕುಂದುಂಟಾಗಲಿಲ್ಲ.

ಪೂನಾ ಒಪ್ಪಂದದ ಪರಿಣಾಮವಾಗಿ ಅಸ್ಪೃಶ್ಯರಿಗೆ ರಾಜಕೀಯವಾಗಿ ಅನೇಕ ಅನರ್ಥಗಳು ಉಂಟಾಗಿದ್ದರೂ 'ಪೂನಾ ಒಪ್ಪಂದವು ಅಸ್ಪೃಶ್ಯರಿಗೆ ಒಂದು ವರದಾನ' ಅನ್ನುವ ಗಾಂಧೀಜಿಯವರೆ ಗೆಳೆಯರಿಗೇನೂ ಕೊರತೆಯಿಲ್ಲ.

ಮೊದಲನೆಯದಾಗಿ ಮತೀಯ ವಿಭಜನೆ ಅಸ್ಪೃಶ್ಯರಿಗೆ ನೀಡಿದ್ದಕ್ಕಿಂತ ಹೆಚ್ಚಿನ ಸ್ಥಾನಗಳನ್ನು ಪೂನಾ ಒಪ್ಪಂದ ನೀಡಿದೆ. ಮತೀಯ ವಿಭಜನೆ ಕೇವಲ ೭೮ ಸ್ಥಾನಗಳನ್ನು ನೀಡಿದ್ದರೆ ಪೂನಾ ಒಪ್ಪಂದ ಆ ಸಂಖ್ಯೆಯನ್ನು ೧೫೧ಕ್ಕೆ ಏರಿಸಿತ್ತು. ಈ ಆಧಾರದ ಮೇಲೆ ಮತೀಯ ವಿಭಜನೆಗಿಂತ ಪೂನಾ ಒಪ್ಪಂದವೇ ಹೆಚ್ಚು ಸ್ಥಾನ ಕೊಟ್ಟಿದೆ ಎಂದು ಬಿಟ್ಟರೆ, ವಾಸ್ತವವಾಗಿ ಮತೀಯ ವಿಭಜನೆ ಅಸ್ಪೃಶ್ಯರಿಗೆ ಕೊಟ್ಟಿರುವುದನ್ನು ನಿರ್ಲಕ್ಷಿಸಿದಂತಾಗುತ್ತದೆ.

ಮತೀಯ ವಿಭಜನೆ ಪ್ರಕಾರ ಅಸ್ಪೃಶ್ಯರಿಗೆ ಎರಡು ರೀತಿಯ ಅನುಕೂಲಗಳು ಸಿಕ್ಕಿವೆ. (೧) ಅಸ್ಪೃಶ್ಯರ ಪ್ರತ್ಯೇಕ ಮತಸಮೂಹದ ಮೂಲಕ ಅಸ್ಪೃಶ್ಯ ಸದಸ್ಯರಿಂದಲೇ ಭರ್ತಿಯಾಗಬೇಕಾದ ಸ್ಥಾನಗಳ ನಿರ್ದಿಷ್ಟ ಸಂಖ್ಯೆ. (೨) ಒಂದು ಮತವನ್ನು ಪ್ರತ್ಯೇಕ ಮತಸಮೂಹದಲ್ಲೂ, ಮತ್ತೊಂದನ್ನು ಸಾರ್ವತ್ರಿಕ ಮತಸಮೂಹದಲ್ಲೂ ಉಪಯೋಗಿಸಬಹುದಾದ ಜೋಡಿಮತಗಳು.

ಒಂದು ವೇಳೆ ಪೂನಾ ಒಪ್ಪಂದವು ನಿರ್ದಿಷ್ಟ ಸ್ಥಾನಗಳ ಸಂಖ್ಯೆಯನ್ನು ಏರಿಸಿದರೆ ಅದು ಜಂಟಿಮತದಾನದ ಹಕ್ಕನ್ನು ಕಸಿದುಕೊಳ್ಳುತ್ತದೆ. ಹಾಗೆ ನೋಡಿದರೆ ಹಕ್ಕನ್ನು ಕಸಿದುಕೊಂಡು ಬದಲಿಗೆ ಸಂಖ್ಯೆ ಏರಿಸಿದರೆ ಅದು ಸಮವಾಗುವುದಿಲ್ಲ. ಮತೀಯ ವಿಭಜನೆ ನೀಡಿದ ಎರಡನೇ ಮತದ ಹಕ್ಕು ಬೆಲೆಕಟ್ಟಲಾಗದ್ದು, ರಾಜಕೀಯ ಅಸ್ತ್ರವಾಗಿ ಕೂಡ ಅದರ ಬೆಲೆ ಕಟ್ಟಲಿಕ್ಕಾಗದ್ದು.

ಯಾವುದೇ ಸವರ್ಣೀಯ ಹಿಂದೂ ಅಭ್ಯರ್ಥಿಯು ತನ್ನ ಕ್ಷೇತ್ರದ ಅಸ್ಪೃಶ್ಯರನ್ನು ಉಪೇಕ್ಷೆ ಮಾಡುವಂತಿರಲಿಲ್ಲ. ಒಂದು ವೇಳೆ ಅವನೇನಾದರೂ ಹಾಗೆ ಮಾಡಿದರೆ ಅಸ್ಪೃಶ್ಯ ಮತಗಳ ಮೇಲೆ ಅವನ ಭವಿಷ್ಯ ನಿರ್ಧಾರವಾಗುತ್ತಿತ್ತು. ಮತೀಯ ವಿಭಜನೆ ಕೊಟ್ಟಿರುವುದಕ್ಕಿಂತ ಹೆಚ್ಚಿನ ಸ್ಥಾನಗಳು ಈಗ ಅಸ್ಪೃಶ್ಯರಿಗೆ ಸಿಕ್ಕಿವೆಯಾದರೂ, ಅವರಿಗಾಗಿರುವ ಲಾಭ ಇಷ್ಟೆ : ಪ್ರತಿ ಸದಸ್ಯನೂ ಉದಾಸೀನವಲ್ಲದಿದ್ದರೂ ನಿರಾಸಕ್ತನಂತೂ ಆಗಿದ್ದಾನೆ. ಜೋಡಿ ಮತದ ಹಕ್ಕನ್ನು ನೀಡಿದ ಮತೀಯ ವಿಭಜನೆ ಜಾರಿಯಲ್ಲಿದ್ದಿದ್ದರೆ ಅಸ್ಪೃಶ್ಯರ ಸ್ಥಾನಗಳ ಸಂಖ್ಯೆ ಕಡಿಮೆಯೇನೊ ಆಗುತ್ತಿತ್ತು. ಆದರೆ ಎಲ್ಲ ಪ್ರತಿನಿಧಿಗಳು ಅಸ್ಪೃಶ್ಯರನ್ನೂ ಪ್ರತಿನಿಧಿಸುತ್ತಿದ್ದರು. ಹಾಗಾಗಿ ಅಸ್ಪೃಶ್ಯರ ಸ್ಥಾನಗಳ ಸಂಖ್ಯೆ ಏರಿದ್ದು ವಾಸ್ತವದಲ್ಲಿ ಒಳಿತೇನೂ ಆಗಲಿಲ್ಲ.

ಒಂದು ವೇಳೆ ಪೂನಾ ಒಪ್ಪಂದವು ಅಸ್ಪೃಶ್ಯರಿಗೆ ಹೆಚ್ಚು ಸ್ಥಾನ ಕೊಟ್ಟಿದ್ದರೂ, ಹೆಚ್ಚುವರಿ ಸ್ಥಾನಗಳು ಯಾವ ಪುರುಷಾರ್ಥಕ್ಕೆ ಎನ್ನುವ ಪ್ರಶ್ನೆ ಮಾತ್ರ ಉಳಿದುಕೊಂಡಿದೆ. ರಾಜಕೀಯ ಸಂರಕ್ಷಣೆಗಾದರೆ ಮತಚಲಾಯಿಸುವ ಹಕ್ಕೇ ಸಾಕಾಗಿತ್ತು. ಆದರೆ ಅಸ್ಪೃಶ್ಯರ ವಿಷಯದಲ್ಲಿ ಕೇವಲ ಮತಚಲಾಯಿಸುವ ಹಕ್ಕೊಂದೇ ಸಾಲದು. ಅಸ್ಪೃಶ್ಯರಿಂದ ಆರಿಸಲ್ಪಡುವ ಸದಸ್ಯ ಸ್ವತಃ ಅಸ್ಪೃಶ್ಯನಾಗಿರದಿದ್ದರೆ ಆಸಕ್ತಿ ವಹಿಸಿ ದುಡಿಯುತ್ತಾನೆ ಎನ್ನುವುದಕ್ಕೆ ಏನು ಖಾತ್ರಿ? ಅವನು ಅವರಿಗೆ ವಂಚಿಸುತ್ತಾನೆ ಎಂಬ ಭಯವೇ ಹೆಚ್ಚಿರುತ್ತದೆ. ಅವನು ಅಸ್ಪೃಶ್ಯನೇ ಆಗಿದ್ದರೆ ಮಾತ್ರ ಶಾಸಕಾಂಗದಲ್ಲಿ ಅಸ್ಪೃಶ್ಯರ ಕಷ್ಟ–ನಷ್ಟಗಳ ಬಗ್ಗೆ ದನಿಯೆತ್ತುವವನಾಗಿರುತ್ತಾನೆ. ಅದನ್ನು ಸಾಧಿಸಬಹುದಾದ ಒಂದು ಮಾರ್ಗವೆಂದರೆ ಶಾಸಕಾಂಗದಲ್ಲಿ ಕೆಲವು ನಿರ್ದಿಷ್ಟ ಸ್ಥಾನಗಳನ್ನು ಅಸ್ಪೃಶ್ಯರ ಅಸ್ಪೃಶ್ಯ ಪ್ರತಿನಿಧಿಗಾಗಿ ಮೀಸಲಿಡುವುದು. ಆದರೆ ಈ ಸಾಧ್ಯತೆಯ ಆಶಾಭಂಗ ಈಗ ಉಂಟಾಗಿದೆ.

ಮತೀಯ ವಿಭಜನೆಯಿಂದ ಕೆಲವು ಸ್ಥಾನಗಳು ಸಿಕ್ಕಿದ್ದೇನೊ ನಿಜ. ಆದರೆ ಆಗ ಅವನ್ನು ಸ್ವತಂತ್ರ ವ್ಯಕ್ತಿಗಳಿಂದ ಭರಿಸಬಹುದಿತ್ತು. ಈಗ ಪೂನಾ ಒಪ್ಪಂದ ಹೆಚ್ಚು ಸ್ಥಾನಗಳನ್ನೇ ಕೊಟ್ಟಿದೆ. ಆದರೆ ಈ ಸ್ಥಾನಗಳಲ್ಲಿ ಇರುವವರೆಲ್ಲ ಬರೀ ಜೀತದಾಳುಗಳು. ಜೀತದಾಳುಗಳ ಸೇನೆ ಇರುವುದರಿಂದ ನಮಗೆ ಒಳಿತಿದೆ ಎನ್ನುವುದಾದರೆ ಪೂನಾ ಒಪ್ಪಂದ ನಮಗೆ ಒಳ್ಳೆಯದನ್ನೇ ಮಾಡಿದೆ ಎಂದು ಧಾರಾಳವಾಗಿ ಹೇಳಬಹುದು.

ಪೂನಾ ಒಪ್ಪಂದದ ಪರವಾದ ಎರಡನೆ ವಾದವೆಂದರೆ ಪ್ರತ್ಯೇಕ ಮತದಾರ ಸಮೂಹವನ್ನು ರದ್ದು ಮಾಡಿ ಅಸ್ಪೃಶ್ಯರಿಗೆ 'ಅಸ್ಪೃಶ್ಯರು' ಎನ್ನುವ ಹಣೆಪಟ್ಟಿಯನ್ನು ತೆಗೆದುಹಾಕಿದೆ ಎನ್ನುವುದು. ಗಾಂಧೀಜಿಯವರು ಲಂಡನ್ನಿನಲ್ಲಿ ಒಂದು ಭಾಷಣದಲ್ಲಿ ಹೇಳಿದರು :

"ಮುಸ್ಲಿಮರು, ಸಿಖ್ಖರು ಸುಸಂಘಟಿತರಾಗಿದ್ದಾರೆ. ಆದರೆ ಅಸ್ಪೃಶ್ಯರು ಹಾಗಲ್ಲ. ಅವರಲ್ಲಿ ರಾಜಕೀಯ ಅರಿವು ಇನ್ನೂ ಮೂಡಿಲ್ಲ. ಅವರನ್ನು ಬಹಳ ಕೆಟ್ಟದಾಗಿ ನಡೆಸಿಕೊಳ್ಳಲಾಗುತ್ತಿದೆ. ನಾನು ಅವರನ್ನು ಅವರಿಂದಲೇ ರಕ್ಷಿಸಬೇಕಾಗಿದೆ. ಅವರಿಗೆ ಪ್ರತ್ಯೇಕ ಮತದಾರ ಸಮೂಹ ಸಿಕ್ಕರೆ ಹಿಂದೂ ಮತಾಂಧತೆಯ ಹಿಡಿತದಲ್ಲಿರುವ ಊರುಗಳಲ್ಲಿ ಅವರ ಜೀವನ ಇನ್ನೂ ಹದಗೆಟ್ಟು ಹೋಗುವುದು. ಹಿಂದೂ ಮೇಲ್ವರ್ಗದವರೆಲ್ಲ ಯುಗಯುಗಗಳಿಂದ ಅಸ್ಪೃಶ್ಯರನ್ನು ನಿರ್ಲಕ್ಷಿಸಿದ್ದಕ್ಕೆ ಇಂದು ನಾವು ಪ್ರಾಯಶ್ಚಿತ್ತ ಮಾಡಿಕೊಳ್ಳಬೇಕು. ಇದನ್ನು ಹೆಚ್ಚು ಸಕ್ರಿಯ ಸಾಮಾಜಿಕ ಸುಧಾರಣೆ ಮತ್ತು ಅಸ್ಪೃಶ್ಯರ ಬದುಕನ್ನು ಹೆಚ್ಚು ಸಹ್ಯವನ್ನಾಗಿಸುವುದರ ಮೂಲಕ ಮಾಡಬೇಕೇ ಹೊರತು ಅವರಿಗಾಗಿ ಪ್ರತ್ಯೇಕ ಮತದಾರ ಸಮೂಹ ರಚನೆಯಾಗಗೊಡುವುದರ ಮೂಲಕವಲ್ಲ. ಪ್ರತ್ಯೇಕ ಮತದಾರ ಸಮೂಹ ರಚಿಸುವುದರಿಂದ ಅಸ್ಪೃಶ್ಯರ ಮತ್ತು ಸಂಪ್ರದಾಯಸ್ಥರ ನಡುವೆ ಬಿರುಕು ಮೂಡುತ್ತದೆ.

ಮುಸಲ್ಮಾನರಿಗೆ ಮತ್ತು ಸಿಖ್ಖರಿಗೆ ವಿಶೇಷ ಪ್ರಾತಿನಿಧ್ಯ ಒಂದು ರೀತಿಯ ಅನಿವಾರ್ಯ ಕೇಡು. ಆದರೆ ಇದು ಅಸ್ಪೃಶ್ಯರಿಗೆ ಖಂಡಿತಾ ಅಪಾಯಕಾರಿ. ಅಸ್ಪೃಶ್ಯರಿಗಾಗಿ ಪ್ರತ್ಯೇಕ ಮತದಾರ ಸಮೂಹ ಎನ್ನುವುದು ಸರಕಾರ ಹುಟ್ಟುಹಾಕಿದ ಹೊಸ ವಿಚಾರ ಎನ್ನುವುದರಲ್ಲಿ ನನಗೆ ಸಂಶಯವಿಲ್ಲ. ಈಗ ಆಗಬೇಕಾಗಿರುವುದು ಇಷ್ಟು : ಅಸ್ಪೃಶ್ಯರನ್ನು ಮತದಾರ ಪಟ್ಟಿಯಲ್ಲಿ ಸೇರಿಸಿಕೊಂಡು ಸಂವಿಧಾನದಲ್ಲಿ ಅವರಿಗೂ ಮೂಲಭೂತ ಹಕ್ಕುಗಳನ್ನು ನೀಡುವುದು. ಒಂದು ವೇಳೆ ಅವರಿಗೆ ಹಾಗೂ ಅನ್ಯಾಯವಾದಲ್ಲಿ, ಅವರ ಪ್ರತಿನಿಧಿಯನ್ನು ಉದಾಸೀನ ಮಾಡಿದರೆ ಅವರಿಗಾಗಿ ಒಂದು ವಿಶೇಷ ಚುನಾವಣಾ ನ್ಯಾಯಸ್ಥಾನದ ಹಕ್ಕನ್ನು ನೀಡಿದರೆ ಸಂಪೂರ್ಣ ರಕ್ಷಣೆ ಸಿಕ್ಕಂತಾಗುತ್ತದೆ. ಆ ನ್ಯಾಯಸ್ಥಾನ ಅಂಥ ಚುನಾಯಿತ ವ್ಯಕ್ತಿಯನ್ನು ವಜಾ ಮಾಡಲು ಅಥವಾ ದೂರವಿರಿಸಲಾದ ವ್ಯಕ್ತಿಯ ಚುನಾವಣೆಯನ್ನು ರದ್ದುಪಡಿಸುವ ನಿರ್ಧಾರ ತೆಗೆದುಕೊಳ್ಳಲು ಸಮರ್ಥವಾಗಿರಬೇಕು."

"ಅಸ್ಪೃಶ್ಯರಿಗೆ ಪ್ರತ್ಯೇಕ ಮತದಾರ ಸಮೂಹ ಕೊಟ್ಟಲ್ಲಿ ಅವರಿಗೆ ಬಿಡುಗಡೆ ಮಾರ್ಗ ಶಾಶ್ವತವಾಗಿ ಮುಚ್ಚಿದಂತೆ. ಮುಸಲ್ಮಾನರಿಗೆ ಪ್ರತ್ಯೇಕ ಮತದಾರ ಸಮೂಹ ದೊರಕಿದ್ದರೂ ಅವರು ಎಂದಿಗೂ ಮುಸಲ್ಮಾನರೇ. ಅದೇ ರೀತಿ ಅಸ್ಪೃಶ್ಯರು ಎಂದೆಂದಿಗೂ ಅಸ್ಪೃಶ್ಯರಾಗೇ ಉಳಿಯಬೇಕೆಂದು ನೀವು ಬಯಸುತ್ತೀರ? ಹೌದು, ಪ್ರತ್ಯೇಕ ಮತದಾರ ಸಮೂಹ ಆ ಕಳಂಕವನ್ನು ಮುಂದುವರಿಸಿಕೊಂಡು ಹೋಗುತ್ತದೆ. ನಾವು ಈಗ ಮಾಡಬೇಕಿರುವುದು ಅಸ್ಪೃಶ್ಯತೆಯ ನಾಶವನ್ನು. ಅದನ್ನು ಸಾಧಿಸಿದ ಮೇಲೆ, ಕೊಬ್ಬಿದ ಮೇಲ್ವರ್ಗದವರು ಕೆಳವರ್ಗದವರ ಮೇಲೆ ಹೇರಿರುವ ನಿಷೇಧಗಳೆಂಬ ಹಿಡುಗನ್ನು ನಿವಾರಿಸುವುದು. ಅದನ್ನು ಸಾಧಿಸಿದ ಮೇಲೆ ಪ್ರತ್ಯೇಕ ಮತದಾರ ಸಮೂಹದ ಸವಲತ್ತನ್ನು ಇನ್ನು ಯಾರಿಗೆ ಕೊಡುತ್ತೀರಿ? ಯೂರೋಪಿನ ಚರಿತ್ರೆಯನ್ನೇ ಗಮನಿಸಿ. ಅಲ್ಲಿ ದುಡಿಯುವ ವರ್ಗಕ್ಕಾಗಲಿ, ಮಹಿಳೆಯರಿಗಾಗಲಿ ಪ್ರತ್ಯೇಕ ಮತದಾರ

ಸಮೂಹ ಮಾಡಲಾಗಿದೆಯೆ? ಮತದಾನದ ಹಕ್ಕಿನ ಮೂಲಕ ಅಸ್ಪೃಶ್ಯರಿಗೆ ಪೂರ್ಣ ಭದ್ರತೆ ಸಿಗುತ್ತದೆ. ಆಗ ಸಂಪ್ರದಾಯಸ್ಥರು ಕೂಡ ಮತಗಳಿಗಾಗಿ ಅವರ ಬಳಿಗೆ ಬರುವಂತಾಗುತ್ತದೆ."

"ಹಾಗಾದರೆ ಅವರ ಪ್ರತಿನಿಧಿಯಾದ ಡಾ. ಅಂಬೇಡ್ಕರರು ಪ್ರತ್ಯೇಕ ಮತದಾರ ಸಮೂಹ ಬೇಕೇ ಬೇಕೆಂದು ಒತ್ತಾಯಿಸುತ್ತಿರುವುದೇಕೆ ಎಂದು ನೀವು ಕೇಳಬಹುದು. ನನಗೆ ಡಾ. ಅಂಬೇಡ್ಕರ್ ಕಂಡರೆ ತುಂಬಾ ಗೌರವ ಇದೆ. ಹಾಗೆ, ಮನಸ್ಸು ಕಹಿಮಾಡಿಕೊಳ್ಳಲು ಅವರು ಸರ್ವಸ್ವತಂತ್ರರು. ಅವರಿನ್ನೂ ನಮ್ಮ ತಲೆಗಳನ್ನು ಹೊಡೆದು ಹಾಕಿಲ್ಲವೆನ್ನುವುದು ಅವರ ಸಂಯಮ ಎಷ್ಟಿದೆ ಎಂದು ತೋರಿಸುತ್ತದೆ. ಇವತ್ತು ಅವರ ಮನಸ್ಸು ಸಂಶಯ–ಶಂಕೆಗಳಿಂದ ಎಷ್ಟು ಭರ್ತಿಯಾಗಿದೆಯೆಂದರೆ ಅವರು ಮಿಕ್ಕಿದ್ದಕ್ಕೆ ಕುರುಡಾಗಿದ್ದಾರೆ. ಪ್ರತಿಯೊಬ್ಬ ಹಿಂದೂವು ಅವರಿಗೆ ಅಸ್ಪೃಶ್ಯರ ಬದ್ಧದ್ವೇಷಿಯಂತೆ ಕಾಣುತ್ತಾನೆ. ಹೀಗಾಗುವುದು ಸ್ವಾಭಾವಿಕವೇ. ನಾನು ದಕ್ಷಿಣ ಆಫ್ರಿಕದಲ್ಲಿದ್ದಾಗ ಯೂರೋಪಿಯನ್ನರು ನಾನು ಹೋದಲ್ಲೆಲ್ಲಾ ಬೆನ್ನು ಹತ್ತುತ್ತಿದ್ದರು; ಆಗ ನನಗೂ ಇದೇ ರೀತಿ ಭಾವನೆಗಳು ಬರುತ್ತಿದ್ದವು. ಅವರು ತಮ್ಮ ಸಿಟ್ಟನ್ನು ಹೊರಗೆಡಹುತ್ತಿರುವುದು ಸ್ವಾಭಾವಿಕವೇ. ಆದರೆ ಅವರು ಕೇಳುತ್ತಿರುವ ಪ್ರತ್ಯೇಕ ಮತಸಮೂಹದಿಂದ ಸಮಾಜ ಪರಿವರ್ತನೆಯಂತೂ ಆಗುವುದಿಲ್ಲ. ಒಂದು ವೇಳೆ ಅವರೇ ಅಧಿಕಾರ–ಸ್ಥಾನಮಾನ ಪಡೆದರೂ ಅಸ್ಪೃಶ್ಯರಿಗೆ ಅದರಿಂದ ಪ್ರಯೋಜನವೇನೂ ಆಗುವುದಿಲ್ಲ. ಈ ಮಾತನ್ನು ನಾನು ಅನೇಕ ವರ್ಷಗಳು ಅಸ್ಪೃಶ್ಯರ ಜೊತೆ ವಾಸಮಾಡಿ ಅವರ ನೋವು–ನಲಿವುಗಳನ್ನು ಹಂಚಿಕೊಂಡ ಆಧಾರದ ಮೇಲೆ ಹೇಳುತ್ತಿದ್ದೇನೆ."

(ಮುಂದೆ ಕೊಟ್ಟಿರುವ ಭಾಗಗಳು ಹಸ್ತಪ್ರತಿಯಿಂದ ಆಯ್ದದ್ದಲ್ಲ. ಡಾ. ಅಂಬೇಡ್ಕರರ "ಕಾಂಗ್ರೆಸ್ ಮತ್ತು ಗಾಂಧೀ ಅಸ್ಪೃಶ್ಯರಿಗೆ ಮಾಡಿದ್ದೇನು" (ಅನುಬಂಧ ೬ ಪುಟ ೩೨೭)ರಿಂದ ಆಯ್ದು ಇಲ್ಲಿ ಕೊಡಲಾಗಿದೆ – ಸಂ)

(ಸೈಮನ್ ಸಮಿತಿಯ ವರದಿಯ ಎರಡನೆಯ ಭಾಗದಿಂದ ಆಯ್ದಭಾಗ)

೭೮–––––ಮತ ಹಾಕಲು ಯೋಗ್ಯರಾದ ಶೋಷಿತ ವರ್ಗದವರ ಸಂಖ್ಯೆಯನ್ನು ಇನ್ಯಾವ ಪ್ರಾಂತ್ಯದಲ್ಲೂ ಅಂದಾಜು ಮಾಡಲಾಗಿಲ್ಲ. ವಿಶೇಷ ಅನುಕೂಲತೆಗಳನ್ನು ಒದಗಿಸಿದ ಪಕ್ಷದಲ್ಲಿ, ಮತಚಲಾವಣೆ ಹಕ್ಕನ್ನು ಪಡೆವ ಜನರ ಸಂಖ್ಯೆಯನ್ನು ಕಡಿಮೆಮಾಡಿ, ಪರಿಣಾಮವಾಗಿ ಶೋಷಿತ ವರ್ಗದ ಮತದಾರರ ಪರಿಮಾಣವನ್ನು ಹೆಚ್ಚಿಸಿದರೂ ಕೂಡ, ಸಾಮಾನ್ಯ ಮತಕ್ಷೇತ್ರಗಳಿಂದ ಆ ಶೋಷಿತ ವರ್ಗದವರು ತಮ್ಮ ಪ್ರತಿನಿಧಿಗಳನ್ನು ಆರಿಸುವುದು ವಿಶೇಷ ಅನುಕೂಲಗಳನ್ನು ಕಲ್ಪಿಸದ ಹೊರತು ಸಾಧ್ಯವಾಗದ ಮಾತು. ತಮ್ಮ ರಾಜಕೀಯ ಪ್ರಭಾವದ ಮೂಲಕ ಆಗಬಹುದಾದ ಶೋಷಿತ ವರ್ಗದವರ ಉದ್ಧಾರವು, ಇತರೆ ಜನ ವಿಭಾಗಗಳು ಇವರ ಸಹಾಯ ಕೋರುವಂತೆಯೂ ಹಾಗೂ ಇವರ ಆವಶ್ಯಕತೆಗಳ ಬಗ್ಗೆ ಗಮನ ಹರಿಸುವಂತೆಯೂ ಮಾಡಬಲ್ಲಂಥ ಹೆಚ್ಚಿನ ಸ್ಥಾನ ಸಂಪಾದಿಸುವುದನ್ನು ಅವಲಂಬಿಸಿದೆ.

೮೦ –––– ಶೋಷಿತ ವರ್ಗದವರ ಒಟ್ಟು ಜನಸಂಖ್ಯೆ ಆಧಾರದ ಮೇಲೆ ಸ್ಥಾನಗಳನ್ನು ನಿಗದಿ ಮಾಡುವುದನ್ನು ನಾವು ಅನುಮೋದಿಸುವುದಿಲ್ಲ. ಸೂಚಿತವಾಗಿರುವ ಮೀಸಲು ಪ್ರಾತಿನಿಧ್ಯ ಕ್ರಮದಂತೆ ಶೋಷಿತವರ್ಗದವರಂಥ ಆಯ್ದ ವಿಧಾನ ಪರಿಷತ್ ಸದಸ್ಯರ ಸಂಖ್ಯೆ ಗಣನೀಯವಾಗಿ ಹೆಚ್ಚಿದೆ. ಇವರಲ್ಲಿರುವ ಬಡತನ ಮತ್ತು ಶಿಕ್ಷಣದ ಕೊರತೆ ನೋಡಿದರೆ ಇವರು ಸಾಕಷ್ಟು ಸುಸಜ್ಜಿತರಾದ ಪ್ರತಿನಿಧಿಗಳನ್ನು ಚುನಾಯಿಸಬಲ್ಲರೆ? ಎನಿಸುತ್ತದೆ. ಅರ್ಹತೆಯುಳ್ಳ ವಕ್ತಾರರಿಂದ ಆರಿಸಲ್ಪಟ್ಟ ಪ್ರತಿನಿಧಿಯು ಅಸಂಖ್ಯ ನಿಷ್ಪ್ರಯೋಜಕರಿಂದ ಆರಿಸಿಬಂದ ಪ್ರತಿನಿಧಿಗಿಂತ ವಾಸಿ. ಏಕೆಂದರೆ ಅವರಲ್ಲಿ ಬಹುಪಾಲು ಜನ ಹೆಚ್ಚಾಗಿ ಮೇಲು ಜಾತಿಯವರಿಗೆ ಶರಣಾಗಿರುವವರೇ ಆಗಿರುತ್ತಾರೆ. ಅನೇಕ ತರಹದ ಪ್ರತಿನಿಧಿಗಳ ನಡುವೆ ಈಗ

ನಡೆಯುತ್ತಿರುವ ಸ್ಥಾನಗಳ ಮರುಹಂಚಿಕೆ ಶಾಶ್ವತವಾದದ್ದಲ್ಲ. ಇದರ ಪುನರ್ ಪರಿಶೀಲನೆ ಸಾಧ್ಯವಾಗುವಂಥ ಅನುಕೂಲಗಳನ್ನು ಮಾಡಬೇಕು. ಸದ್ಯಕ್ಕೆ ನಮ್ಮ ಸಲಹೆ ಸೂಚನೆಗಳೇ ಸಾಕೆಂದು ತೋರುತ್ತದೆ. ಏಕೆಂದರೆ, ಈ ವಾದ ಅರ್ಥಹೀನ ಎನ್ನುವುದರಲ್ಲಿ ಸಂಶಯವಿಲ್ಲ. ಒಬ್ಬ ವ್ಯಕ್ತಿಯನ್ನು ಪ್ರತ್ಯೇಕವಾಗಿ ವರ್ಗೀಕರಿಸಿದರೆ ಅದು ತಪ್ಪೇ ಆಗಿರಬೇಕಿಲ್ಲ. ಆ ರೀತಿ ವರ್ಗೀಕರಿಸುವುದು ಒಳ್ಳೆಯದೊ ಕೆಟ್ಟದ್ದೊ ಅನ್ನುವುದು ಅದರ ಹಿಂದಿನ ಧ್ಯೇಯದಲ್ಲಿದೆ. ಆ ವ್ಯಕ್ತಿಯ ಹಕ್ಕುಗಳನ್ನು ಕಸಿದುಕೊಳ್ಳಲು ಹಾಗೆ ಮಾಡಿದ್ದರೆ ಅದು ಘೋರ ಅಪರಾಧವಲ್ಲದೆ ಮತ್ತೇನಲ್ಲ. ಆದರೆ ಸೌಕರ್ಯವೊಂದನ್ನು ಪಡೆಯಲು ಅನರ್ಹನಾಗಿಸಲು ಅವನನ್ನು ಪ್ರತ್ಯೇಕಿಸಿದರೆ ಅದು ತಪ್ಪಲ್ಲ, ಬದಲಾಗಿ ಉಪಕಾರ. ಒಬ್ಬ ಅಸ್ಪೃಶ್ಯನ ಹೆಸರನ್ನು ಪ್ರತ್ಯೇಕ ಮತ ಸಮೂಹದಲ್ಲಿ ನೊಂದಾಯಿಸಿದ ಕಾರಣ ಅವನ ಮತಚಲಾವಣೆ ಹಕ್ಕಿಗೆ ಚ್ಯುತಿ ಬಂದರೆ ಅದು ಖಂಡನಾರ್ಹ. ಆದರೆ ಪ್ರತ್ಯೇಕ ಮತ ಸಮೂಹದಲ್ಲಿ ಅವನ ಹೆಸರನ್ನು ನೊಂದಾಯಿಸಿ ಅವನಿಗೆ ಪ್ರತ್ಯೇಕ ಪ್ರತಿನಿಧಿ ಆಯ್ಕೆಯ ಸೌಲಭ್ಯ ನೀಡುವುದಾದರೆ ಅದರಿಂದ ಅವನಿಗೇ ಅನುಕೂಲ. ಅಂತಿಮ ಗುರಿಯನ್ನು ಮನಸ್ಸಿನಲ್ಲಿಟ್ಟು ನೋಡಿದರೆ ಅಸ್ಪೃಶ್ಯರ ಮಿತ್ರನೆಂದು ಹೇಳಿಕೊಳ್ಳುವ ಯಾವ ವ್ಯಕ್ತಿಯೇ ಆಗಲಿ ಪ್ರತ್ಯೇಕ ಮತ ಸಮೂಹವನ್ನು ಖಂಡಿಸಿದರೆ ಅವನನ್ನು ನಂಬದಿರಿ. ಪ್ರತ್ಯೇಕ ಮತ ಸಮೂಹದ ಬಗ್ಗೆ ಗಾಂಧೀಜಿ ಅವರ ವಾದ ಕೇವಲ ಅರ್ಥಹೀನವಷ್ಟೇ ಅಲ್ಲ. ಅಪ್ರಾಮಾಣಿಕ ಕೂಡ. ಅಸ್ಪೃಶ್ಯರಿಗೆ ಹಣೆಪಟ್ಟಿ ಬೀಳಬಾರದೆಂಬ ಕಾರಣದಿಂದ ಗಾಂಧೀಜಿ ಅವರು ಪ್ರತ್ಯೇಕ ಮತ ಸಮೂಹದ ರಚನೆಯನ್ನು ವಿರೋಧಿಸಿದರು. ಆದರೆ ಜಂಟಿ ಮತದಾರ ಸಮೂಹದಲ್ಲಿ ಅಸ್ಪೃಶ್ಯರಿಗೆ ಮೀಸಲಿಡುವ ಸ್ಥಾನದ ವಿಷಯದಲ್ಲಿ ವಿಶೇಷ ಅನುಕೂಲಗಳನ್ನು ಪಡೆಯಬಯಸುವವನು ಕಾನೂನು ರೀತ್ಯಾ ತಾವು ಅಸ್ಪೃಶ್ಯನೆಂದು ಘೋಷಿಸಿಕೊಳ್ಳಲೇ ಬೇಕಾದ್ದರಿಂದ ಈ ಹಣೆಪಟ್ಟಿ ಅನಿವಾರ್ಯ. ಇಷ್ಟರಮಟ್ಟಿಗಾದರೂ ಜಂಟಿ ಮತದಾರ ಸಮೂಹದಲ್ಲಿ ಈ ಹಣೆಪಟ್ಟಿ ಅನಿವಾರ್ಯವಾಗೇ ಇರುತ್ತದೆ. ಅಂದ ಮೇಲೆ ಗಾಂಧೀಜಿ ಅವರು ಪ್ರತ್ಯೇಕ ಮತದಾರ ಸಮೂಹವನ್ನು ಎಷ್ಟು ಖಾರವಾಗಿ ವಿರೋಧಿಸುತ್ತಿದ್ದಾರೋ ಅಷ್ಟೇ ಜೋರಿನಿಂದ ನಾವು ಜಂಟಿ ಮತದಾರ ಸಮೂಹವನ್ನು ವಿರೋಧಿಸಬೇಕಾಗುತ್ತದೆ. ಇದೆಲ್ಲದರಿಂದ ಗಾಂಧೀಜಿ ಅವರು ಅಪ್ರಾಮಾಣಿಕರಾಗಿದ್ದಾರೆ ಅಥವಾ ಅವರೇನು ಮಾತಾಡುತ್ತಿದ್ದಾರೆಂದು ಅವರಿಗೆ ಗೊತ್ತಿಲ್ಲ ಎಂದು ತಿಳಿದುಬರುತ್ತದೆ.

ಪೂನಾ ಒಪ್ಪಂದದ ಪ್ರಕಾರ ಅಸ್ಪೃಶ್ಯರು ತಮ್ಮ ಯಾವ ಪ್ರತಿನಿಧಿಗಳನ್ನು ಆರಿಸಿ ಶಾಸಕಾಂಗಕ್ಕೆ ಕಳಿಸಿದ್ದರೊ, ಆ ಪ್ರತಿನಿಧಿಗಳು ತಮ್ಮ ವರ್ಗದವರಿಗಾಗಿ ಹೋರಾಟ ನಡೆಸಿದ್ದರೆ, ಅದರಲ್ಲಿ ಎಷ್ಟು ಸಫಲರಾಗಿದ್ದಾರೆ – ಇತ್ಯಾದಿ ವಿಚಾರಗಳ ಬಗ್ಗೆ ಗಾಂಧೀಜಿ ಅವರ ಹಿಂಬಾಲಕರು ಯೋಚಿಸುವುದೇ ಇಲ್ಲ. ಒಂದು ವೇಳೆ ಅವರು ಈ ವಿಷಯಗಳ ಬಗ್ಗೆ ಆಲೋಚಿಸತೊಡಗಿದರೆ ಜಂಟಿ ಮತ ಸಮೂಹ ಮತ್ತು ಪೂನಾ ಒಪ್ಪಂದದ ಪರವಾಗಿ ಜಯಕಾರ ಹಾಕುವುದಕ್ಕೆ ಹೇಸಿ ಸುಮ್ಮನಾಗುತ್ತಾರೆ. ಕಾಂಗ್ರೆಸ್ ಮತ್ತು ಹಿಂದೂಗಳಿಬ್ಬರೂ ಬಹುಸಂಖ್ಯಾತ ಜನಾಂಗದವರಾಗಿ ತಮ್ಮ ಅಧಿಕಾರ ಹಾಗೂ ಸಂಪನ್ಮೂಲಗಳನ್ನು ದುರುಪಯೋಗಪಡಿಸಿಕೊಂಡಿದ್ದಾರೆ. ಅಸ್ಪೃಶ್ಯರು ತಮ್ಮ ಪ್ರತಿನಿಧಿಗಳನ್ನು ಆರಿಸಿಕೊಳ್ಳದಂತೆ ಮಾಡಿರುವುದಷ್ಟೇ ಅಲ್ಲ ತಮ್ಮ ಹೆಚ್ಚುವರಿ ಮತಗಳನ್ನು ಉಪಯೋಗಿಸಿಕೊಂಡು ತಾವೇ ನಿಯುಕ್ತಿಸಿದವರನ್ನು ಆರಿಸಿಕೊಂಡಿರುವುದಷ್ಟೇ ಅಲ್ಲ. ಪ್ರಪಂಚದ ಯಾವುದೇ ಮರ್ಯಾದಸ್ಥ ಪಕ್ಷವು ನಾಚಿಕೆಯಿಂದ ತಲೆತಗ್ಗಿಸಬೇಕಾದಂತಹ ಕೆಲಸ ಮಾಡಿದ್ದಾರೆ. ಅಸ್ಪೃಶ್ಯರ ಮೀಸಲು ಸ್ಥಾನ ಭರ್ತಿಮಾಡಲು ಕಾಂಗ್ರೆಸ್ ತನಗೆ ಬೇಕಾದ ಅಸ್ಪೃಶ್ಯ ಅಭ್ಯರ್ಥಿಯನ್ನು ಆರಿಸಿಕೊಂಡು ತನ್ನ ಪುಕ್ಕಲುತನ ಮತ್ತು ಲುಚ್ಛತನವನ್ನು ತೋರಿಸಿಕೊಂಡಿದೆ.

ಕಾಂಗ್ರೆಸ್ಸು (ಇದು ಹಿಂದೂಗಳ ರಾಜಕೀಯ ಹೆಸರಷ್ಟೆ) ಪೂನಾ ಒಪ್ಪಂದ ನಿಗದಿಪಡಿಸಿದ್ದಕ್ಕಿಂತ

ಹೆಚ್ಚು ಸ್ಥಾನಗಳನ್ನು ಅಸ್ಪೃಶ್ಯರಿಗೆ ನೀಡಬಹುದಾಗಿತ್ತು. ಹೇಗೆಂದರೆ ಸಾಮಾನ್ಯ ಸ್ಥಾನಗಳಲ್ಲೂ ಅಸ್ಪೃಶ್ಯರನ್ನೆ ಅಭ್ಯರ್ಥಿಗಳಾಗಿ ನಿಲ್ಲಿಸಬಹುದಾಗಿತ್ತು. ಇದನ್ನು ಯಾವ ಕಾನೂನೂ ತಡೆಯುತ್ತಿರಲಿಲ್ಲ. ಆದರೆ ಕಾಂಗ್ರೆಸ್ ಅಂಥ ಕೆಲಸಗಳನ್ನೇ ಮಾಡುವುದಿಲ್ಲ. ಇದೆಲ್ಲ ನೋಡಿದರೆ ಮೀಸಲಾತಿ ಸಿಗದಿದ್ದರೆ ಒಬ್ಬ ಅಸ್ಪೃಶ್ಯನನ್ನು ಆರಿಸಲೂ ಹಿಂದೂಗಳು ಮನಸ್ಸುಮಾಡುತ್ತಿರಲಿಲ್ಲ. ಸ್ಥಾನಗಳು ಮೀಸಲಾಗಿರುವ ಕಾರಣ ಈಗ ಹಿಂದೂಗಳು ಅದನ್ನು ಕೆಡಿಸಲೆಂಬಂತೆ ಆ ಸ್ಥಾನಗಳಿಗೆ ತಮ್ಮ ಗುಲಾಮನಾಗಲು ಒಪ್ಪುವ ಅಸ್ಪೃಶ್ಯನನ್ನು ನಿಲ್ಲಿಸಲು ಹವಣಿಸುತ್ತಿದ್ದಾರೆ. ಹೀಗಾಗಿ ರಾಜಕೀಯ ಹಕ್ಕುಗಳಿಗಾಗಿ ಅಸ್ಪೃಶ್ಯರ ಹೋರಾಟ ದುರಂತದಲ್ಲಿ ಕೊನೆಗೊಂಡಿದೆ. ಈ ದುರಂತಕ್ಕೆ ಗಾಂಧೀಜಿ ಅವರೊಬ್ಬರೇ ಕಾರಣವೆಂದು ನಾನು ಯಾವ ಹಿಂಜರಿಕೆಯಿಲ್ಲದೆ ಹೇಳಬಲ್ಲೆ.

ಪ್ರತ್ಯೇಕ ಮತಸಮೂಹ ಒದಗಿಸಿದ ಮತೀಯ ವಿಭಜನೆ ವಿರುದ್ಧ ಗಾಂಧೀಜಿ ಅವರು ಎತ್ತಿದ ದನಿ ಹುಸಿಯಾದದ್ದು. ಅವರ ಉಪವಾಸ ಸತ್ಯಾಗ್ರಹ ಹಿಂದೂಗಳ ತಲೆ ಕೆಡಿಸದಿದ್ದರೆ ಅದರ ಹಿಂದಿನ ಸತ್ಯ ಅವರಿಗೂ ಗೋಚರವಾಗಿರುತ್ತಿತ್ತು. ಮತೀಯ ವಿಭಜನೆಯಲ್ಲಿ ಪ್ರತ್ಯೇಕ ಮತದಾರ ಸಮೂಹಕ್ಕಲ್ಲದೆ ಜಂಟಿ ಮತದಾರ ಸಮೂಹಕ್ಕೂ ಅವಕಾಶವಿತ್ತು. ಸಾರ್ವತ್ರಿಕ ಚುನಾವಣೆಗಳಲ್ಲಿ ಅಸ್ಪೃಶ್ಯರಿಗಿದ್ದ ಎರಡನೆಯ ಮತವನ್ನು ಸವರ್ಣೀಯ ಹಿಂದೂ ಅಭ್ಯರ್ಥಿಗೆ ನೀಡಬೇಕಿತ್ತು. ಇದು ಜಂಟಿ ಮತದಾನ ಪದ್ಧತಿಯಲ್ಲದೆ ಮತ್ತೇನು? ಮತೀಯ ವಿಭಜನೆ ಮತ್ತು ಪೂನಾ ಒಪ್ಪಂದಗಳ ನಡುವಿನ ವ್ಯತ್ಯಯ ಕೇವಲ ಮತದಾರರ ಸ್ವಭಾವದಲ್ಲಿದೆ. ಎರಡು ಒಪ್ಪಂದಗಳು ಜಂಟಿ ಮತದಾನ ಕ್ರಮವನ್ನು ಅನುಮೋದಿಸುತ್ತವೆ. ಆದರೆ ಅವುಗಳ ನಡುವಿನ ವ್ಯತ್ಯಾಸವಿರುವುದು ಇಲ್ಲಿ : ಮತೀಯ ವಿಭಜನೆ ಹೇಳಿದ ಜಂಟಿ ಮತದಾರ ಸಮೂಹದಿಂದಾಗಿ ಅಸ್ಪೃಶ್ಯರು ಸವರ್ಣೀಯ ಹಿಂದೂ ಅಭ್ಯರ್ಥಿಗಳ ಚುನಾವಣೆಯಲ್ಲಿ ಭಾಗಿಯಾಗುವುದು ಹಾಗೂ ಪ್ರಭಾವ ಬೀರುವುದು ಸಾಧ್ಯವಿತ್ತು. ಆದರೆ ಪೂನಾ ಒಪ್ಪಂದ ಹೇಳಿದ ಜಂಟಿ ಮತದಾನ ಕ್ರಮದಲ್ಲಿ ಸವರ್ಣೀಯ ಹಿಂದೂಗಳು ಅಸ್ಪೃಶ್ಯ ಅಭ್ಯರ್ಥಿಗಳ ಚುನಾವಣೆಯಲ್ಲಿ ಭಾಗಿಯಾಗುವ ಹಾಗೂ ಪ್ರಭಾವ ಬೀರುವ ಸಾಧ್ಯತೆ ಪಡೆದಿದ್ದಾರೆ. ಇದೇ ಇವೆರಡರ ನಡುವಿನ ನಿಜವಾದ ವ್ಯತ್ಯಾಸ.

ಈಗ ಅಸ್ಪೃಶ್ಯರ ಮಿತ್ರನೆನಿಸಿಕೊಂಡವನು ಆರಿಸುವುದು ಯಾವುದನ್ನು? ಮತೀಯ ವಿಭಜನೆ ನೀಡಿದ ಜಂಟಿ ಮತದಾನ ಕ್ರಮವನ್ನೊ ಅಥವಾ ಪೂನಾ ಒಪ್ಪಂದ ಮಾನ್ಯ ಮಾಡಿದ ಜಂಟಿ ಮತದಾನ ಕ್ರಮವನ್ನೊ? ಅಸ್ಪೃಶ್ಯರ ನಿಜವಾದ ಉದ್ಧಾರ ಆಗಬೇಕಾದರೆ ಹಿಂದೂಗಳು ಅವರ ಮತವನ್ನು ಅವಲಂಬಿಸಿರುವಂತೆ ಮಾಡಬೇಕು. ಮತೀಯ ವಿಭಜನೆ ಇದನ್ನೇ ಮಾಡಿತ್ತು. ಅಸ್ಪೃಶ್ಯರು ಹಿಂದೂಗಳ ಮತಗಳನ್ನು ಅವಲಂಬಿಸುವಂತೆ ಮಾಡುವುದರಿಂದ ಈಗಿರುವಂತೆ ಅಸ್ಪೃಶ್ಯರು ಜೀತದಾಳುಗಳಾಗೇ ಮುಂದುವರಿಯುತ್ತಾರೆ. ಪೂನಾ ಒಪ್ಪಂದ ಇದೇ ಕೆಲಸ ಮಾಡಿತು. ಮತೀಯ ವಿಭಜನೆ ಅಸ್ಪೃಶ್ಯರಿಗೆ ಹಿಂದೂಗಳ ಗುಲಾಮಗಿರಿಯಿಂದ ಮುಕ್ತಿ ದೊರಕಿಸಿಕೊಡುವ ಉದ್ದೇಶ ಇಟ್ಟುಕೊಂಡಿತ್ತು. ಆದರೆ ಪೂನಾ ಒಪ್ಪಂದದ ಯೋಜನೆ ಅಸ್ಪೃಶ್ಯರನ್ನು ಹಿಂದೂಗಳ ದಬ್ಬಾಳಿಕೆಯಡಿಯಲ್ಲಿ ಇಟ್ಟಿರುವುದೇ ಆಗಿದೆ.

ಗಾಂಧೀಜಿಯವರು ಮಾಡಿದ ಆಮರಣಾಂತ ಉಪವಾಸವನ್ನು ಅವರ ಗೆಳೆಯರೂ ಆರಾಧಕರೂ ದೇಶದಲ್ಲಿ ಹಾಗೂ ದೇಶದ ಹೊರಗೆಲ್ಲ ವೈಭವೀಕರಿಸಿ ಕೊಂಡಾಡಿ, "ಇಮ್ಮಡಿ ಶಿಲುಬೆಯೇರಿಸುವಿಕೆ" "ಹುತಾತ್ಮತೆ" ಮತ್ತು "ವಿಜಯಶಾಲೀ ಹೋರಾಟ" ಎಂದು ಕರೆದಿದ್ದಾರೆ. ಗಾಂಧೀಜಿಯವರ ಅಮೆರಿಕನ್ ಮಿತ್ರರೊಬ್ಬರು ಅಮೆರಿಕಾದವರಿಗೆ ಹೇಳಿದರಂತೆ : ತಮ್ಮ ಜೀವವನ್ನೆ ಹೀಗೆ ಪಣವಾಗಿಟ್ಟ ಗಾಂಧೀಜಿಯವರು 'ವಂಚಕರೂ' ಅಲ್ಲ ಕೋಲು ಹಿಡಿದ 'ಪುಢಾರಿ'ಯೂ ಅಲ್ಲ. ಇನ್ನೊಬ್ಬ ಅಮೆರಿಕನ್ ತನ್ನ ಅತ್ಯುತ್ಸಾಹದಲ್ಲಿ ಅವರನ್ನು "ಜಗತ್ತಿನ ಎದುರುನಿಂತ ಏಕಾಂಗವೀರ"ನ ಅವತಾರವೆಂದು ಬಣ್ಣಿಸಿದ್ದಾರೆ. ಆದರೆ ಗಾಂಧೀಜಿಯವರ

ಉಪವಾಸದ ಬಗ್ಗೆ ನನ್ನದೇ ಅಭಿಪ್ರಾಯವೊಂದಿತ್ತು. ಅದೊಂದು ರಾಜಕೀಯ ನಾಟಕ ಎಂದು ಬಣ್ಣಿಸಿದೆ. ಅವರ ಮಾತುಗಳಲ್ಲಿ ನನಗೆ ಯಾವಾಗಲೂ ಅಪ್ರಾಮಾಣಿಕತೆಯ ಹಾಗೂ ಸುಳ್ಳಿನ ಎಳೆಗಳು ಕಾಣಿಸುತ್ತವೆ. ಮತೀಯ ವಿಭಜನೆ ವಿರೋಧಿಸುವ ಗಾಂಧೀಜಿ ಅವರು ಹಿಂದೂಗಳಿಂದ ಅಸ್ಪೃಶ್ಯರನ್ನು ರಕ್ಷಿಸುವ ಉದ್ದೇಶದಿಂದ ಉಪವಾಸ ಕೈಗೊಂಡರೆಂದು ನನಗೆ ಎಂದೂ ಅನಿಸಿರಲಿಲ್ಲ. ರಾಜಕೀಯವಾಗಿ ಅಸ್ಪೃಶ್ಯರು ಹಿಂದೂಗಳ ಅಡಿಯಾಳಾದರೂ ಚಿಂತೆಯಿಲ್ಲ; ಅಂತೂ ಉಪವಾಸ ಮಾಡಬೇಕು ಎಂದುಕೊಂಡು ಗಾಂಧೀಜಿ ಉಪವಾಸ ಮಾಡಿದ್ದಾರೆ. ಅಂತರ್ಯುದ್ಧ ಮುಗಿದ ಮೇಲೆ ದಕ್ಷಿಣದವರು ನೀಗ್ರೋಗಳ ಮತದಾನ ಹಕ್ಕನ್ನು ವಿರೋಧಿಸಿದಂತೆ ಗಾಂಧೀಜಿ ಅವರು ಪೂನಾ ಒಪ್ಪಂದ ವಿರೋಧಿಸುತ್ತಿದ್ದಾರೆ. 'ಸ್ಟೇಟ್ಸ್‌ಮನ್' ಮತ್ತು 'ನೇಶನ್' ರವರೂ ಇದೇ ನಿರ್ಧಾರಕ್ಕೆ ಬಂದಿದ್ದಾರೆ. ಅದರಲ್ಲಿ ಹೀಗಿದೆ : (ಹಸ್ತಪ್ರತಿಯಲ್ಲಿ ಇದನ್ನು ಉಲ್ಲೇಖಿಸಲಾಗಿಲ್ಲ. ಇದು ಬೇರೆಲ್ಲೂ ಕೂಡ ಸಿಕ್ಕಿಲ್ಲ –ಸಂ)

ಆ ಸಮಯದಲ್ಲಿ ನನ್ನ ಅಭಿಪ್ರಾಯಗಳ ಜೊತೆ ಹೊಂದಾಣಿಕೆಯಾಗುವ ಒಂದೇ ಒಂದು ಉದಾಹರಣೆಯಿತ್ತು. ಅನೇಕ ಗಣ್ಯ ಅಸ್ಪೃಶ್ಯರೂ ಗಾಂಧೀಜಿಯವರನ್ನು ಬೆಂಬಲಿಸುತ್ತಿದ್ದರು. ಆದರೆ ಶ್ರೀ ರಾಜಾ ಅವರ ವಿಷಯವೇ ಬೇರೆ. ತಾವು ಕೇಂದ್ರೀಯ ಸಂಸತ್ತಿನ ಸದಸ್ಯರಾಗಿಯೂ ದುಂಡುಮೇಜಿನ ಸಮಾವೇಶಕ್ಕೆ ತಮ್ಮನ್ನು ಪ್ರತಿನಿಧಿಯನ್ನಾಗಿ ಆರಿಸಲಿಲ್ಲವೆನ್ನುವುದು ಅವರಿಗೆ ನೋವುಂಟುಮಾಡಿತ್ತು. ಅವರೂ ಪ್ರತ್ಯೇಕ ಮತದಾರ ಸಮೂಹಕ್ಕಾಗಿ ಹೋರಾಡುತ್ತಿದ್ದವರೇ. ಆದರೆ, ಇದ್ದಕ್ಕಿದ್ದಂತೆ ಈಗ ತಮ್ಮ ನಿಲುವು ಬದಲಾಯಿಸಿ ಗಾಂಧೀಜಿ ಅವರ ಪರವಾಗಿ ದೊಣ್ಣೆ ಹಿಡಿದಿದ್ದಾರೆ. ಪ್ರತ್ಯೇಕ ಮತಸಮೂಹ ಬೇಕೆಂದ ನನ್ನ ಹಾಗೂ ಅದನ್ನು ಪ್ರದಾನ ಮಾಡಿದ ಬ್ರಿಟಿಷ್ ಸರ್ಕಾರದ ವಿರುದ್ಧ ಗರ್ಜಿಸತೊಡಗಿದ್ದಾರೆ. ಅವರು ಗಾಂಧೀಜಿ ಅವರ ಬಗ್ಗೆ ಎಷ್ಟು ಗಾಢ ಪ್ರೇಮವನ್ನು ಹಾಗೂ ಹಿಂದೂಗಳ ಬಗ್ಗೆ ಎಷ್ಟು ಗಾಢ ವಿಶ್ವಾಸವನ್ನು ಬೆಳೆಸಿಕೊಂಡರೆಂದರೆ ಯಾರೂ ಅವರೊಬ್ಬ ಕೂಲಿ ಆಳು ಎಂದು ಸಂಶಯಪಡಲು ಸಾಧ್ಯವಾಗುತ್ತಿರಲಿಲ್ಲ. ೧೯೩೨ರ ಸೆಪ್ಟೆಂಬರ್ ೧೩ರಂದು ಕೇಂದ್ರಿಯ ಶಾಸಕಾಂಗದ "ಮುಂದೂಡಿಕೆ ಸೂಚನೆ' ಸಮಯದ ತಮ್ಮ ಭಾಷಣದಲ್ಲಿ ಗಾಂಧೀಜಿ ಅವರ ಉಪವಾಸ ಕುರಿತು ಹೀಗೆ ಹೇಳಿದ್ದಾರೆ :

"ಶೋಷಿತ ವರ್ಗದವರ ಪ್ರಸ್ತಾಪ ಇಂದು ಪಡೆದಿರುಷ್ಟು ಪ್ರಾಮುಖ್ಯವನ್ನು ಭಾರತದ ಚರಿತ್ರೆಯಲ್ಲಿ ಹಿಂದೆಂದೂ ಪಡೆದಿರಲಿಲ್ಲ. ಇದಕ್ಕಾಗಿ ಶೋಷಿತ ವರ್ಗಕ್ಕೆ ಸೇರಿದವರಾದ ನಾವೆಲ್ಲ ಮಹಾತ್ಮ ಗಾಂಧಿಯವರಿಗೆ ಕೃತಜ್ಞರಾಗಿರಬೇಕು. ನಮ್ಮವರ ಉದ್ಧಾರವೇ ಅವರ ಜೀವನದ ಪರಮಗುರಿಯೆಂದು ಅವರು ಇಡೀ ಪ್ರಪಂಚಕ್ಕೆ ಸಾರಿದ್ದಾರೆ. ಈಗ ಶೋಷಿತ ವರ್ಗದವರ ಸ್ಥಿತಿ ಉತ್ತಮಪಡಿಸುವುದಕ್ಕಾಗಿ ಇಡೀ ಪ್ರಪಂಚದ ಅಂತರಾತ್ಮವನ್ನು ಜಾಗೃತಗೊಳಿಸದಿದ್ದರೆ ಮಾನವೀಯ ಭಾವನೆಗಳೆಲ್ಲ ಸತ್ತಿವೆ ಎಂದೇ ಅರ್ಥ."

* * *

"ಈಗ ಸದನದ ಮುಂದೆ ಪ್ರಶ್ನೆ ಉದ್ಭವವಾಗಿರುವುದು ಶೋಷಿತ ವರ್ಗದವರಿಗಾಗಿ ಸಿದ್ಧವಾಗಿರುವ ಜಾತೀಯ ಮತದಾರ ಸಮೂಹದ ವಿರುದ್ಧ ಗಾಂಧೀಜಿ ಅವರು ದನಿಯೆತ್ತಿರುವುದರಿಂದಾಗಿ. ಇಂಥ ಮಹಾನ್ ವ್ಯಕ್ತಿಗಳು ತಮ್ಮ ಜೀವವನ್ನೇ ಪಣವಾಗಿಡಬೇಕಾಗಿರುವ ಸಂದರ್ಭ ಒದಗಿರುವುದಕ್ಕೆ ವಿಷಾದಿಸದ ಮಾನ್ಯ ಸದಸ್ಯರಾರೂ ಇಲ್ಲವೆಂದು ನನಗೆ ಖಂಡಿತಾ ತಿಳಿದಿದೆ. ಆದರೆ ಸರ್ಕಾರಕ್ಕೆ 'ಎಚ್ಚರಿಕೆ'ಗಳು ಬಂದಿದ್ದವೆಂದು ತಿಳಿದುಬಂದಿದೆ. ಅಂಥವರು ಸಭೆಗಳಲ್ಲಿ ನಾವು ವ್ಯಕ್ತಪಡಿಸಿದ ವಿಷಯಗಳಿಗೆ ಹಾಗೂ ನಾನು ರುಜು ಹಾಕಿ ಹಿಂದೂ ಮಹಾಸಭಾದ ಅಧ್ಯಕ್ಷರೊಡನೆ ಮಾಡಿಕೊಂಡ ರಾಜ–ಮೂಂಜೆ ಒಪ್ಪಂದದ ವಿವರಗಳಿಗೆ ಮಹತ್ವ ಕೊಡದಿದ್ದರೂ, ಕಡೇ ಪಕ್ಷ ಮಹಾತ್ಮ ಗಾಂಧಿ ಅವರ ಎಚ್ಚರಿಕೆಗಳಿಗಾದರೂ

ಕಿವಿಗೊಟ್ಟು ಪ್ರತ್ಯೇಕ ಮತದಾರ ಸಮೂಹ ರಚನೆಯನ್ನು ತಡೆಯಬೇಕಿತ್ತು."

* * *

ಪ್ರೀಮಿಯರ್ ಅವರು ಗಾಂಧೀಜಿಯವರಿಗೆ ಬರೆದ ಪತ್ರಕ್ಕೆ ನನ್ನ ಆರೋಪಗಳಲ್ಲಿ ಮುಖ್ಯವಾದುದು: ನಾವು ಕನಿಷ್ಠ ಸ್ಥಾನಗಳನ್ನು ಪಡೆದು ನಮ್ಮ ಅಭಿಪ್ರಾಯಗಳನ್ನು ಸರ್ಕಾರದ ಮುಂದಿಡುವಷ್ಟು ಶಕ್ತರಾಗಲು ನಮಗೆ ಹನ್ನೆರಡು ವರ್ಷ ಪ್ರತ್ಯೇಕ ಮತದಾನ ಸಮೂಹದ ಸೌಲಭ್ಯ ಕಲ್ಪಿಸಿಕೊಡಲಾಗಿದೆಯೆಂದು ಅವರು ಹೇಳುತ್ತಾರೆ. ಆದರೆ ಈ ಸೌಲಭ್ಯ ಮಾಂಟ್ ಫೋರ್ಡ್ ಸುಧಾರಣೆಗಳಡಿಯಲ್ಲಿ ಸಿಕ್ಕಿತ್ತೆಂದೂ, ಅನೇಕ ಸ್ಥಾನೀಯ ಸಂಸ್ಥೆ ಮತ್ತು ಪ್ರಾಂತ್ಯಗಳ ಹಾಗೂ ಕೇಂದ್ರ ಶಾಸಕಾಂಗಗಳಲ್ಲಿ ನಮಗೆ ಪ್ರಾತಿನಿಧ್ಯ ಈಗಾಗಲೆ ಸಿಕ್ಕಿತೆಂದೂ ನನ್ನ ವಾದ. ಈ ದಿಸೆಯಲ್ಲಿ ನಾವೀಗಾಗಲೆ ಸಾಕಷ್ಟು ಸಂಘಟಿತರಾಗಿದ್ದೇವೆ ಮತ್ತು ಯಾವುದೇ ವಿಶೇಷ ಬೇಡಿಕೆ ಅಥವಾ ನೀಡಿಕೆಗಳ ಆವಶ್ಯಕತೆ ನಮಗಿಲ್ಲ. ಭವಿಷ್ಯದಲ್ಲಿ ನಮ್ಮ ಉದ್ಧಾರಕ್ಕೆ ನಮಗೆ ಬೇಕಿರುವುದು ನಮ್ಮ ಪ್ರತಿನಿಧಿಗಳನ್ನು ಸಾಮಾನ್ಯ ಮತಕ್ಷೇತ್ರಗಳಿಂದ ಆರಿಸುವಂತಾಗಿ, ತಮ್ಮ ಪ್ರತಿಯೊಂದು ಕೆಲಸಕ್ಕೂ ಅವರು ನಮಗೆ ಜವಾಬ್ದಾರರಾಗಿರುವಂತೆ ಮಾಡುವ ನಿಜವಾದ ಶಕ್ತಿ. ಮೀಸಲು ಸ್ಥಾನಗಳುಳ್ಳ ಜಂಟಿ ಮತದಾನ ಯೋಜನೆಯನ್ನು ಪ್ರಧಾನಮಂತ್ರಿಯವರು ಅಸಾಧ್ಯವೆಂದು ಏಕೆ ಭಾವಿಸಿದ್ದಾರೊ ತಿಳಿಯದು. ಮದರಾಸಿನ ಸ್ಥಾನೀಯ ಸಂಸ್ಥೆಗಳು ಮತ್ತು ಕೆಲವು ಪ್ರಾಂತ್ಯಗಳಲ್ಲಿ ಈಗಾಗಲೇ ಇದು ಸಮಾಧಾನಕರವಾಗಿ ಕೆಲಸ ಮಾಡಿದೆ. ಜಾತೀಯತೆ ಆಧರಿಸಿದ ಯೋಜನೆಗಳಲ್ಲಿ ನಮ್ಮನ್ನು ದೂರವಿರಿಸಿ ರಾಜಕೀಯ ಅಸ್ಪೃಶ್ಯರನ್ನಾಗಿಸಲಾಗಿದೆ ಎಂದು ನಾನು ವಾದಿಸಲಿಚ್ಛಿಸುತ್ತೇನೆ. ನಮ್ಮ ಮತಗಳನ್ನು ಅವಲಂಬಿಸಿರುವ ಸವರ್ಣೀಯ ಹಿಂದೂಗಳಿಗೆ ಮತ ನೀಡಿದರೆ ನಮ್ಮನ್ನು ಪ್ರತ್ಯೇಕಿಸಿದಂತಾಗುವುದಿಲ್ಲವೆಂಬ ಪ್ರಧಾನಮಂತ್ರಿಯವರ ವಾದ ನನಗೆ ಆಶ್ಚರ್ಯ ಉಂಟು ಮಾಡುತ್ತಿದೆ. ಆದರೆ, ಸ್ವಾಮಿ, ಶೋಷಿತ ವರ್ಗದ ಪ್ರತಿನಿಧಿಗಳಿಗೆ ಮೇಲ್ಜಾತಿಯವರ ಮತ ಅಪೇಕ್ಷಿಸದ ಸಂದರ್ಭದಲ್ಲಿ ನಾಗರಿಕತ್ವದ ಸಾಮಾನ್ಯ ಆದರ್ಶವನ್ನು ನಿಜವಾಗಿಸುವುದಾದರೂ ಹೇಗೆ?

"ನಮ್ಮ ಜನಾಂಗದವರು ಸವರ್ಣೀಯ ಹಿಂದೂಗಳ ಕಡೆಯಿಂದ ತುಂಬಾ ಕಷ್ಟಗಳನ್ನು ಅನುಭವಿಸಿದ್ದಾರೆಂದು ಸವರ್ಣೀಯ ಹಿಂದೂಗಳೇ ಒಪ್ಪಿಕೊಂಡಿದ್ದಾರೆ. ಅವರಲ್ಲಿಯೂ ಅನೇಕ ಜನ ನಮ್ಮ ಸ್ಥಾನಮಾನಗಳನ್ನು ಉತ್ತಮಪಡಿಸುವುದಕ್ಕೋಸ್ಕರ ಸರ್ವ ಪ್ರಯತ್ನವನ್ನು ನಡೆಸಿದ್ದಾರೆನ್ನುವುದನ್ನೂ ನಾನು ಒಪ್ಪುತ್ತೇನೆ. ಅವರ ಮನಸ್ಸು, ದೃಷ್ಟಿಕೋನಗಳು ಬದಲಾಗಿವೆಯೆನ್ನುವುದನ್ನೂ ನಾನು ಒಪ್ಪುತ್ತೇನೆ. ಶೋಷಿತ ವರ್ಗದವರಾದ ನಾವು ಇತರ ಸವರ್ಣೀಯ ಹಿಂದುಗಳಷ್ಟೆ ಹಿಂದೂಗಳೆಂದು ತಿಳಿದಿದ್ದೇವೆ. ನಮ್ಮ ಹಿಂದೂ ಮನಸ್ಸು ಎಷ್ಟು ಜಾಗೃತವಾಗಿದೆಯೆಂದರೆ ನಮಗೆ ಮುಕ್ತಿ ಸಿಗಬೇಕೆಂದರೆ ಅದು ಇಡೀ ಹಿಂದೂ ಸಮಾಜದಲ್ಲಿ ಬದಲಾವಣೆ ತರುವುದರಿಂದ ಮಾತ್ರ ಸಾಧ್ಯ; ನಮ್ಮನ್ನು ದೂರವಿಟ್ಟುಕೊಳ್ಳುವುದರಿಂದ ಅಲ್ಲವೆಂಬ ನಿರ್ಧಾರಕ್ಕೆ ಬಂದಿದ್ದೇವೆ. ಸರ್ಕಾರದ ನೀತಿಯಿಂದ ಈ ಮಹೋನ್ನತ ಚಳುವಳಿಯ ಸಾಧನೆಗೆ ತಡೆ ಉಂಟಾಗಿದೆ. ಆದ್ದರಿಂದ ಸ್ವಾಮಿ, ಪ್ರಧಾನ ಮಂತ್ರಿಯವರ ಪತ್ರದ ಸಾರ ಮತ್ತು ಅದನ್ನು ಹೇಳುವ ರೀತಿ– ಇವೆರಡೂ ನನಗೆ ನಿರಾಶೆ ತಂದಿದೆ ಎಂದು ಹೇಳಬಯಸುತ್ತೇನೆ."

* * *

"ಇಂದು ನಾವು ಎದುರಿಸುತ್ತಿರುವ ಬಿಕ್ಕಟ್ಟು ತುಂಬಾ ಗಂಭೀರತರವಾದದ್ದು. ನಮ್ಮ ಕಾಲದ ಮಹಾನ್ ಭಾರತೀಯನ ಜೀವವು ತಕ್ಕಡಿಯನ್ನು ಒಂದು ಕಡೆ ವಾಲಿಸುತ್ತಿದ್ದರೆ, ಮತ್ತೊಂದು ಕಡೆ ಶೋಷಣೆಗೊಳಗಾದ ಈ ದೇಶದ ಕೋಟ್ಯನುಕೋಟಿ ಜನರ ಭವಿಷ್ಯವಿದೆ. ಸರ್ಕಾರವು ಆ ಒಬ್ಬ ವ್ಯಕ್ತಿಯ ಸಾವಿನ ಜವಾಬ್ದಾರಿ

ಹೊರುವುದೊ? ಅದು ಬುದ್ಧಿವಂತಿಕೆಯಿಂದ ಆಯ್ಕೆ ಮಾಡುವಂತಾಗಲಿ ಎಂದು ಆಶಿಸುತ್ತೇನೆ."

* * *

ಶ್ರೀ ರಾಜಾ ಅವರು ಪೂನಾ ಒಪ್ಪಂದವನ್ನು ಬೆಂಬಲಿಸಿದ್ದೇ ಅಲ್ಲದೆ, ಹಿಂದೂಗಳು ಅಸ್ಪೃಶ್ಯರ ರಾಜಕೀಯ ಗುಲಾಮಗಿರಿತನವನ್ನು ಖಚಿತ ಹಾಗೂ ಖಾಯಂಗೊಳಿಸಲು ಪಿತೂರಿ ನಡೆಸಿ ಅವರ ವಿರುದ್ಧ ಮತಹಂಚಿಕೆ ಪದ್ಧತಿಗಾಗಿ ಹೋರಾಡಿದರು. ಗಾಂಧೀಜಿ ಹಾಗೂ ಹಿಂದೂಗಳ ಬಗ್ಗೆ ತಮಗೆ ಹೊಸದಾಗಿ ಮೂಡಿದ ವಿಶ್ವಾಸದಿಂದ ಶ್ರೀ ರಾಜಾ ಅವರು ಎಷ್ಟು ಸಂತೋಷಪಟ್ಟರೆಂದರೆ ಹ್ಯಾಮಂಡ್ ಸಮಿತಿ ವಿಷಯವನ್ನು ಮುಚ್ಚಿಹಾಕಿದ್ದರಿಂದ ಇವರಿಗೆ ಅಸಮಾಧಾನವಾಯಿತು. ಮದರಾಸು ಸಂಸತ್ತಿನಲ್ಲಿ ಮತಹಂಚಿಕೆ ಪದ್ಧತಿಯ ಪರವಾಗಿ ವಿಷಯವನ್ನು ಮತ್ತೆ ಪ್ರಸ್ತಾಪಿಸಿದರು.[೧]

ಆದರೆ ಇವತ್ತು ಪೂನಾ ಒಪ್ಪಂದದಿಂದ ಆಗಿರುವ ಬೆಳವಣಿಗೆಗಳನ್ನು ನೋಡಿ ಶ್ರೀ ರಾಜಾ ಅವರಿಗೆ ಬಹುಶಃ ಭ್ರಮನಿರಸನವಾಗಿರಬೇಕು. ಅವರು ತಾವಾಗೇ ಕಂಡುಕೊಂಡ ಸತ್ಯವನ್ನು ನಂಬಿಕೊಂಡು ಎಷ್ಟು ಕಾಲ ಇರುತ್ತಾರೆಂದು ನಾನು ಹೇಳಲಾರೆ. ಆದರೆ ಪೂನಾ ಒಪ್ಪಂದಕ್ಕೆ ತಮ್ಮ ಕಟುವಿರೋಧವನ್ನು ಘೋಷಿಸಿದ್ದಾರೆ. ೧೯೩೮ರ ಆಗಸ್ಟ್ ೨೫ರಂದು ಗಾಂಧೀಜಿ ಅವರಿಗೆ ಬರೆದ ಪತ್ರದಲ್ಲಿ ಹೀಗೆ ಹೇಳಿದ್ದಾರೆ:

ನಮ್ಮವರು ತಾವು ಶಾಸಕಾಂಗಗಳಲ್ಲಿ ಪ್ರಾಮಾಣಿಕವಾಗಿ ಹಾಗೂ ಪರಿಣಾಮಕಾರಿಯಾಗಿ ತಮ್ಮ ಅನಿಸಿಕೆಗಳನ್ನು ಪ್ರಕಟಪಡಿಸುವುದಕ್ಕೋಸ್ಕರ ಪ್ರತ್ಯೇಕ ಮತದಾನ ಪದ್ಧತಿಯನ್ನು ಬಯಸುತ್ತಿದ್ದ ಕಾಲದಲ್ಲಿ ನೀವು ಅಸ್ಪೃಶ್ಯರನ್ನು ಹಿಂದೂ ಸಮಾಜದೊಳಕ್ಕೆ ರಾಜಕೀಯ, ಸಾಮಾಜಿಕ ಹಾಗೂ ಧಾರ್ಮಿಕವಾಗಿ ಸೇರಿಸಿಕೊಳ್ಳುವುದರ ಸಲುವಾಗಿ ನಿಮ್ಮ ಜೀವವನ್ನೇ ಪಣವಾಗಿಟ್ಟಿದ್ದಿರಿ ಎಂಬುದು ನೆನಪಿದೆಯಷ್ಟೆ. ನಮ್ಮ ನೋವುಗಳನ್ನು, ಆಕಾಂಕ್ಷೆಗಳನ್ನು ಪ್ರಾಮಾಣಿಕವಾಗಿ ಪ್ರತಿನಿಧಿಸಬಲ್ಲ ಮಂದಿಯನ್ನು ನಾವೇ ಆರಿಸಿಕೊಳ್ಳುವಲ್ಲಿ ಯಾವ ಅಡತಡೆಯೂ ಇರುವುದಿಲ್ಲವೆಂಬ ಪರಸ್ಪರ ತಿಳುವಳಿಕೆ ಮೂಲಕ ನನ್ನ ಜನ ಸವರ್ಣೀಯ ಹಿಂದೂಗಳ ಜೊತೆ ಜಂಟಿ ಮತದಾರ ಸಮೂಹವನ್ನು ಅನುಮೋದಿಸುವಂತೆ ಮಾಡುವುದರಲ್ಲಿ ನನ್ನ ಪಾತ್ರವೂ ಸಾಕಷ್ಟಿದೆ.

ಈ ಆದರ್ಶದಿಂದಲೇ ನಾವು ನಾಲ್ಕು ಸದಸ್ಯರ ಮಂಡಲಿ ಚುನಾವಣೆಯನ್ನು ರಚಿಸಿದ್ದು.

"ಇದೆಲ್ಲ ನನಗೂ ತಿಳಿದಿದೆ. ನಿಮಗೂ ತಿಳಿದಿದೆ. ಆದರೆ ಈ ವಿಷಯವನ್ನು ನಾನು ಮತ್ತೆ ಪ್ರಸ್ತಾಪಿಸುತ್ತಿರುವುದು ಏಕೆಂದರೆ, ನಾವು ನಮ್ಮ ಕಡೆಯಿಂದ ಪೂನಾ ಒಪ್ಪಂದಕ್ಕೆ ಬೆಂಬಲಿಗರಾಗೇ ಇದ್ದು ಪ್ರತ್ಯೇಕ ಮತದಾರ ಸಮೂಹಕ್ಕಾಗಿ ಹೋರಾಟ ಹಿಂತೆಗೆದುಕೊಂಡಿದ್ದರೂ ಸವರ್ಣೀಯ ಹಿಂದೂಗಳನ್ನು ಪ್ರತಿನಿಧಿಸುವ ಮದ್ರಾಸಿನ ಕಾಂಗ್ರೆಸ್ ಪಕ್ಷದವರು ಒಪ್ಪಂದದಿಂದ ದೂರವಾಗಿದ್ದಾರೆ. ಎಷ್ಟರಮಟ್ಟಿಗೆ ಎಂದರೆ ವಿಧಾನಸಭೆಯಲ್ಲಿ ನಮ್ಮ ಜನಾಂಗವು ಮಂತ್ರಿ ಸಭೆಯ ಎಲ್ಲ ವಿಷಯಗಳಲ್ಲೂ ಸವರ್ಣೀಯರನ್ನು ಕುರುಡರಂತೆ ಹಿಂಬಾಲಿಸಬೇಕಾಗಿದೆ ಮತ್ತು ನಮ್ಮ ಜನಾಂಗದ ಹಿತದೃಷ್ಟಿಯಿಂದ ಭಿನ್ನವಾದ ವಿಷಯಗಳಿಗೂ ಅವರಂತೆ ಮತ ಹಾಕಬೇಕಾಗಿದೆ."

"ಶೋಷಿತ ವರ್ಗದವರಿಂದ ಮಂಡಲಿ ಚುನಾವಣೆಗಾಗಿ ಕಾಂಗ್ರೆಸ್ ಸಮಿತಿಯವರು ಅಭ್ಯರ್ಥಿಗಳನ್ನು ನಿಲ್ಲಿಸುವುದನ್ನು ಚುನಾವಣೆಗಳ ಆರಂಭದಲ್ಲೆ ನಾನು ವಿರೋಧಿಸಿದ್ದು ಬಹುಶಃ ನಿಮಗೆ ನೆನಪಿರಬಹುದು. ಶ್ರೀ ಎಸ್. ಸತ್ಯಮೂರ್ತಿಯವರು ಮಂಡಿಸಿದ ಕೆಲವು ನಿಬಂಧನೆಗಳ ಪ್ರಕಾರ ನನ್ನ ಜನಾಂಗವು ಕಾಂಗ್ರೆಸ್‌ಗೆ

---

೧. ಮದ್ರಾಸ್ ಲೆಜಿಸ್ಲೇಟೀವ್ ಅಸೆಂಬ್ಲಿ ಡಿಬೇಟ್ಸ್

ಸೇರಲು ಅನುವು ಮಾಡಿಕೊಡಬೇಕೆಂದು ನೀವು ನನ್ನನ್ನು ಕೇಳಿದ್ದೀರಿ. ಈ ನಿಬಂಧನೆಗಳಲ್ಲಿ ಒಂದು : "ನಮ್ಮ ಜನಾಂಗಕ್ಕೆ ಸಂಬಂಧಿಸಿದ ವಿಷಯ ಪ್ರಸ್ತಾಪಕ್ಕೆ ಬಂದಾಗ ಇತರ ಕಾಂಗ್ರೆಸ್ ಸದಸ್ಯರ ಹಾಗೆ ಶೋಷಿತ ವರ್ಗದ ಕಾಂಗ್ರೆಸ್ ಸದಸ್ಯರೂ ಮತಹಾಕಬೇಕಿಲ್ಲ. ಬದಲಾಗಿ ತಮ್ಮ ನಿರ್ಧಾರದ ಪ್ರಕಾರವಾಗಿ ಮತ ಚಲಾಯಿಸಬಹುದು."

"ದೇವಸ್ಥಾನ ಪ್ರವೇಶ ಮಸೂದೆಯ ಮೇಲೆ ಇತ್ತೀಚೆಗೆ ಮದ್ರಾಸಿನ ವಿಧಾನಸಭೆಯಲ್ಲಿ ನಡೆದ ಚರ್ಚೆಯಲ್ಲಿ ಹೊರಬಂದ ಒಂದು ಅಪ್ರಿಯ ಸತ್ಯವೆಂದರೆ ಕಾಂಗ್ರೆಸ್ ಪಕ್ಷದ ನಿಯಮಗಳ ಅನುಯಾಯಿಗಳಾದ, ಶೋಷಿತವರ್ಗದ ಸದಸ್ಯರೆಲ್ಲರೂ ನಾನು ಮಸೂದೆಯನ್ನು ಇದಕ್ಕಾಗೇ ರಚಿಸಿರುವ ಒಂದು ಆಯ್ದ ಸಮಿತಿಗೆ ವಹಿಸಬೇಕೆಂದು ಮಾಡಿದ ಸೂಚನೆಯ ವಿರುದ್ಧ ಮತ ಹಾಕಿದರು. ಸವರ್ಣೀಯ ಹಿಂದೂಗಳ ಪ್ರತಿನಿಧಿ ಶ್ರೀ ರಾಜಗೋಪಾಲಾಚಾರಿ ಅವರ ದಬ್ಬಾಳಿಕೆಗೆ ನನ್ನ ಜನಾಂಗದವರು ಸಿಕ್ಕಿದ್ದಾರೆ ಅನ್ನುವುದನ್ನು ಸಾಬೀತು ಮಾಡುವ ಈ ವಿಷಯಕ್ಕಿಂತ ಅಸ್ವಾಭಾವಿಕವಾದದ್ದು ಬೇರೆ ಇನ್ಯಾವುದಿರಲು ಸಾಧ್ಯ?"

"ಮಸೂದೆಯಲ್ಲಿ ಮಾಡಿರುವ ಅನುಕೂಲಗಳು ನಿಮಗೆ ತಿಳಿದಿವೆ. ಅದು ಬಹುಸಂಖ್ಯಾತ ಭಕ್ತರು ಹರಿಜನರಿಗೂ ತಮ್ಮಂತೆ ದೇವಾಲಯಗಳಲ್ಲಿ ಪೂಜೆ ಮಾಡಲು ಅನುವು ಮಾಡಿಕೊಡುವ ಒಂದು ಚಿಕ್ಕ ಶಾಸನವಷ್ಟೆ. ಅದರಲ್ಲಿ ಯಾವುದೇ ರೀತಿಯ ಒತ್ತಾಯವಾಗಲಿ ಬಲವಂತವಾಗಲಿ ಇರಲಿಲ್ಲ. ಈ ಮಸೂದೆಗೆ ನಿಮ್ಮ ಆಶೀರ್ವಾದವೂ ಇತ್ತು. ಇದನ್ನು ರಚನೆ ಮಾಡಿದವರು ಸ್ವತಃ ಶ್ರೀ ರಾಜಗೋಪಾಲಾಚಾರಿ ಅವರೇ ಹಾಗೂ ಅನುಮೋದಿಸಿದವರು ನೀವೇ."

"ಸಂಸತ್ತಿನ ಹಿಂದಿನ ಸಭೆಯೊಂದರಲ್ಲಿ ಮೊದಲು ತಮ್ಮ ಪೂರ್ಣ ಸಹಕಾರ ಕೊಡಲು ಒಪ್ಪಿದ್ದ ಶ್ರೀ ರಾಜಗೋಪಾಲಾಚಾರಿ ಅವರ ಒಪ್ಪಿಗೆ ಪಡೆದ ಮೇಲೆ ನಾನು ಈ ಮಸೂದೆಯನ್ನು ಮಂಡಿಸಿದೆ. ಇದನ್ನು ನೀವೇ ಮಂಡಿಸಿರಿ ಎಂದು ಅವರನ್ನು ಕೇಳಿಕೊಂಡಾಗ ಅವರು ಆ ಕೆಲಸ ನಾನೇ ಮಾಡುವಂತೆ ಹೇಳಿದ್ದರು. ೧೯೩೮ರ ಜುಲೈ ೧೨ರಂದು ಅವರನ್ನು ಭೇಟಿಮಾಡಿ, 'ಆಯ್ದ ಸಮಿತಿ'ಗೆ ಮಸೂದೆ ಮಂಡಿಸುವೆನೆಂದು ಹೇಳಿದಾಗ ಅವರು ವಿರೋಧಿಸಲಿಲ್ಲ."

"ಆದರೆ ಈ ಮಧ್ಯೆ ಏನೇನು ಜರುಗಿತೊ ನನಗೆ ಗೊತ್ತಿಲ್ಲ. ಮಸೂದೆಯನ್ನು 'ಆಯ್ದ ಸಮಿತಿಗೆ' ವಹಿಸುವ ವಿಷಯ ಸದನದ ಮುಂದೆ ಬರುವ ಎರಡು ದಿನಗಳ ಹಿಂದೆ ಶ್ರೀ ರಾಜಗೋಪಾಲಾಚಾರಿ ಅವರು ನನ್ನನ್ನು ಬರಮಾಡಿಕೊಂಡು ಆ ಮಸೂದೆಯನ್ನು ತಕ್ಷಣ ಹಿಂತೆಗೆದುಕೊಳ್ಳಿ ಎಂದರು. ನಾನು ವಿರೋಧಿಸಿದೆ. ಮುಂದೆ ಮಸೂದೆಯ ಪರಿಶೀಲನೆಗಾಗಿ ಸೂಚಿಸಿದಾಗ ಶ್ರೀ ರಾಜಗೋಪಾಲಾಚಾರಿ ಅವರು ಎದ್ದು ನಿಂತು ಮಸೂದೆಯನ್ನು ವಿರೋಧಿಸಿದರು. ಅದನ್ನು ವಾಪಸ್ಸು ತೆಗೆದುಕೊಳ್ಳಿ ಎಂದು ಮತ್ತೆ ನನ್ನನ್ನು ಕೇಳಿಕೊಂಡರು. ಅಲ್ಲದೆ ತಾವು ಮಲಬಾರ್‌ನಲ್ಲಿ ದೇವಸ್ಥಾನ ಪ್ರವೇಶ ಮಸೂದೆಯನ್ನು ಮೇಲಿನ ಮಸೂದೆಯ ರೀತಿಯಲ್ಲೇ ಮಂಡಿಸುವವರಿದ್ದಾರೆಂದು ಹೇಳಿದರು."

'ಶ್ರೀ ರಾಜಗೋಪಾಲಾಚಾರಿ ಅವರ ಭಾಷಣದ ಪರಿಣಾಮ ನನ್ನ ಜನಾಂಗದವರ ಸಾಮಾಜಿಕ ಹಾಗೂ ಧಾರ್ಮಿಕ ಉದ್ಧಾರಕ್ಕಾಗಿ ನಾನು ಮಂಡಿಸಿದ್ದನ್ನು ನನ್ನ ಜನಾಂಗದವರದೇ ವಿರೋಧದಿಂದ ಸೋಲಿಸಿ, ಇದರ ಪರಿಣಾಮವಾಗಿ ದೇವಾಲಯ ಪ್ರವೇಶ ವಿಷಯದಲ್ಲಿ ಇಡೀ ದೇಶದವರ ವಿರೋಧ ಬಲಪಡಿಸುವ ದಿಸೆಯಲ್ಲಿ ಜರುಗಿತ್ತು.'

"ಇವೆಲ್ಲ ಗಮನಿಸಿದಾಗ ನಾವು ಸಾಮಾಜಿಕ ಹಾಗೂ ಧಾರ್ಮಿಕ ಸ್ವಾತಂತ್ರ್ಯ ಪಡೆಯಲು ಕಾಂಗ್ರೆಸ್ ಪಕ್ಷ ನಿಜವಾಗಿಯೂ ಸಹಾಯ ಮಾಡುತ್ತದೆಂದು ನಂಬಿ ಪೂನಾ ಒಪ್ಪಂದದಲ್ಲಿ ಭಾಗಿಯಾಗಿದ್ದು ಎಷ್ಟು

ಸರಿ ಎಂದು ತಿಳಿದು ಖೇದವಾಗುತ್ತದೆ. ನಾವು ಹಿಂದೂಗಳ ಜೊತೆ ಕಾಂಗ್ರೆಸ್ ನಾಯಕತ್ವದಲ್ಲಿ ಜಂಟಿಮತದಾರ ಸಮೂಹಕ್ಕೆ ಒಪ್ಪಿಕೊಂಡಿದ್ದರಿಂದ ನಮಗೆ ಒಳ್ಳೆಯದಾಗುವುದಿರಲಿ, ಸವರ್ಣೀಯ ಹಿಂದೂಗಳು ನಡೆಸುತ್ತಿರುವ ಕಾಂಗ್ರೆಸ್‌ಗಂತೂ ನಮ್ಮ ಸ್ವಾತಂತ್ರ್ಯ ಹರಣ ಮಾಡುವ ಹಾಗೂ ನಮ್ಮ ಕತ್ತನ್ನು ನಾವೇ ಕೊಯ್ದುಕೊಳ್ಳುವಂತೆ ಮಾಡುವ ಶಕ್ತಿ ಸಿಕ್ಕಂತಾಗಿದೆ."

"ವಿವಾದದ ಕಾಲದಲ್ಲಿ ನಾನು ಶ್ರೀ ರಾಜಗೋಪಾಲಾಚಾರಿ ಅವರನ್ನು ಅವರ ಈ ಹೊಸ ಅಭಿಪ್ರಾಯದ ಬಗ್ಗೆ ನಿಮ್ಮ ಒಪ್ಪಿಗೆ ಪಡೆದಿದ್ದೀರಾ ಎಂದು ಕೇಳಿದೆ. ಅಷ್ಟರಲ್ಲಿ ನಾನು ಮಾತು ಮುಗಿಸಿದ ನಂತರ ಅವರು ನನ್ನ ಪ್ರಶ್ನೆಗೆ ಉತ್ತರ ನೀಡಬಹುದೆಂದು ಸ್ಪೀಕರ್ ಅವರು ಆದೇಶ ಕೊಟ್ಟರು. ಈ ಅನುಕೂಲ ಮಾಡಿಕೊಟ್ಟರೂ ಅವರು ನನ್ನ ಪ್ರಶ್ನೆಯನ್ನು ದೂರವಿಟ್ಟು ಉತ್ತರವನ್ನೇ ಕೊಡಲಿಲ್ಲ."

"ಮದರಾಸಿನ ಕಾಂಗ್ರೆಸ್ ಮಂತ್ರಿಮಂಡಲ ಹರಿಜನೋದ್ಧಾರದ, ಹೆಚ್ಚಾಗಿ ದೇವಾಲಯ ಪ್ರವೇಶ ವಿಷಯದಲ್ಲಿ ಈ ಅಭಿಪ್ರಾಯ ಏಕೆ ತಳೆದಿದೆ ಎನ್ನುವುದರ ಕೂಲಂಕಷ ಪರೀಕ್ಷೆಯಲ್ಲಿ ನೀವಾದರೂ ಮಾಡುತ್ತೀರೆಂದು ತಿಳಿದಿದ್ದೇನೆ. ನನ್ನ ಜನಾಂಗದವರು ಈ ವಿಷಯದಲ್ಲಿ ಅತಿ ಉತ್ಸುಕರಾಗಿದ್ದು, ಪೂನಾ ಒಪ್ಪಂದವನ್ನು ರದ್ದುಗೊಳಿಸಿ ಒಂದು ಕ್ರಿಯಾಶೀಲ ಪ್ರತ್ಯೇಕ ಮತ ಸಮೂಹಕ್ಕಾಗಿ ಚಳುವಳಿ ನಡೆಸುವವರಿದ್ದು ಅವರ ಪ್ರಶ್ನೆಗಳಿಗೆ ನಾನು ಉತ್ತರಿಸುವ ಮುನ್ನ ನಿಮ್ಮ ಅಭಿಪ್ರಾಯ ತಿಳಿಯಬಯಸುತ್ತೇನೆ."

ಶ್ರೀ ರಾಜಾ ಅವರು ಕೂಡ ೧೯೩೮ರ ಸೆಪ್ಟೆಂಬರ್ ೧೨ರಂದು ಗಾಂಧೀಜಿ ಅವರಿದ್ದ ವಾರ್ಧಾ ವಿಳಾಸಕ್ಕೆ ತಂತಿ ಕಳಿಸಿದರು :

"ಮಂತ್ರಿಮಂಡಲ ವಿರುದ್ಧ ಚಳುವಳಿ. ನನ್ನ ಮಸೂದೆ ತಿರಸ್ಕೃತ. ಕಷ್ಟದ ಪರಿಸ್ಥಿತಿ. ನನ್ನ ವಿರುದ್ಧದ ಒತ್ತಡಗಳನ್ನು ತಡೆಯಿರಿ–ಉತ್ತರಕ್ಕಾಗಿ ಕಾಯುತ್ತಿದ್ದೇನೆ."

೧೯೩೮ರ ಸೆಪ್ಟೆಂಬರ್ ೧೪ರಂದು ಗಾಂಧೀಜಿ ಅವರು ಶ್ರೀ ರಾಜಾ ಅವರಿಗೆ ಉತ್ತರ ಬರೆದರು:
ಪ್ರಿಯ ಮಿತ್ರರೆ,

ತಡವಾಗಿ ಉತ್ತರಿಸುತ್ತಿರುವುದಕ್ಕೆ ನನ್ನನ್ನು ಕ್ಷಮಿಸಿ. ಅನೇಕ ಕೆಲಸಗಳ ಒತ್ತಡ. ನಿಮ್ಮ ತಂತಿ ನನ್ನ ಕೈ ಸೇರಿದೆ. ನೀವು ಸಿ. ರಾಜಗೋಪಾಲಾಚಾರಿ ಅವರಲ್ಲಿ ನಂಬಿಕೆಯಿರಿಸಿ, ಅವರ ಕೈಲಾದದ್ದನ್ನು ಮಾಡಲು ಬಿಡಿ ಎಂದು ನಾನು ಸಲಹೆ ಮಾಡುತ್ತೇನೆ. ಅವರಿಗಿಷ್ಟ ಬಂದಂತೆ ಮಾಡಲು ನೀವು ಅವಕಾಶ ಕೊಡಬೇಕು. ನಿಮಗೆ ವಿಶ್ವಾಸವಿಲ್ಲದಿದ್ದರೆ ನಿಮಗೆ ತೋಚಿದ ಹಾದಿಯಲ್ಲಿ ಖಂಡಿತವಾಗಿ ಹೋಗಬಹುದು. ನನಗೆ ತಿಳಿದಿರುವ ಮಟ್ಟಿಗೆ ಹರಿಜನರಿಗೆ ಅವರಿಗಿಂತ ಒಳ್ಳೆಯ ಮಿತ್ರರು ಇನ್ನೊಬ್ಬರಿಲ್ಲ. ನೀವು ಅವರ ಹತ್ತಿರ ಹೋಗಿ, ಚರ್ಚೆಮಾಡಿ. ಅವರನ್ನು ಒಪ್ಪಿಸಲು ಸಾಧ್ಯವಾಗದಿದ್ದರೆ ಅವರ ಅಭಿಪ್ರಾಯಗಳಿಗೆ ಸಹನೆ ತೋರಿ, ಇದೇ ನನ್ನ ಉಪದೇಶ."

೧೯೩೮ರ ಸೆಪ್ಟೆಂಬರ್ ೨೧ರಂದು ಶ್ರೀ ರಾಜಾ ಅವರು ಗಾಂಧೀಜಿ ಅವರಿಗೆ ಪತ್ರ ಬರೆದರು:

"ಯರವಾಡಾ ಉಪವಾಸ ಕಾಲದಲ್ಲಿ ನೀವು ನನ್ನ ಜನಾಂಗಕ್ಕೆ ಕೊಟ್ಟ ಆಶ್ವಾಸನೆ ಮತ್ತು ಪೂರ್ಣಾಧಿಕಾರವುಳ್ಳ ನಿಮ್ಮ ಮದರಾಸಿನ ರಾಯಭಾರಿಗಳು ಅದನ್ನು ಕೈಗೊಂಡಿರುವ ರೀತಿಯ ಬಗ್ಗೆ ನೀವು ಹೆಚ್ಚು ಗಮನವಹಿಸಬೇಕು ಎಂದು ನನ್ನ ಬೇಡಿಕೆ. ಅಸ್ಪೃಶ್ಯತೆ ನಿವಾರಣೆಗೆ ಸರ್ವಪ್ರಯತ್ನ ಮಾಡುವ ದಿಸೆಯಲ್ಲಿ ಮತೀಯ ವಿಭಜನೆಯಡಿಯಲ್ಲಿ ನೀಡಲಾಗಿದ್ದ ಪ್ರತ್ಯೇಕ ಮತಸಮೂಹಕ್ಕೆ ಬದಲಾಗಿ ಸವರ್ಣೀಯ ಹಿಂದೂಗಳ ಜೊತೆಯಲ್ಲಿ ಜಂಟಿ ಮತಸಮೂಹ ಪದ್ಧತಿ ತರುವಂತಹ ಬದಲಾವಣೆಗಾಗಿ ನೀವು ಉಪವಾಸ ಕೈಗೊಂಡಿದ್ದಿರಿ. ಅಲ್ಲದೆ ಅಸ್ಪೃಶ್ಯತಾ ನಿವಾರಣೆಗೆ ದೇವಾಲಯ ಪ್ರವೇಶವು ಅತಿ ಮುಖ್ಯವೆಂದು ನೀವು

ಅನೇಕ ಸಲ ಹೇಳಿದ್ದೀರಿ."

"ಹಾಗಾಗಿ ನಾವು ಸವರ್ಣೀಯ ಹಿಂದೂಗಳ ಜೊತೆ ಜಂಟಿ ಮತದಾರ ಸಮೂಹ ಸೇರುವ ವಿಷಯ ಹಾಗೂ ಕಾಂಗ್ರೆಸ್ ಮಂತ್ರಿಮಂಡಲಕ್ಕೆ ನಮ್ಮ ಜನಾಂಗದ ಸಾಮಾಜಿಕ ಮತ್ತು ಧಾರ್ಮಿಕ ಉದ್ಧಾರಗಳ ಬಗ್ಗೆ ಇರುವ ಭಾವನೆ – ಇವೆರಡಕ್ಕೂ ಪರಸ್ಪರ ಅತಿಮುಖ್ಯ ಸಂಬಂಧವಿದೆ."

"ನಾವು ಹಿಂದೂ ದೇವಾಲಯ ಪ್ರವೇಶಿಸುವಂತಿಲ್ಲವೆಂದ ಮೇಲೆ ನಾವು ಹಿಂದೂಗಳೇ ಅಲ್ಲ ಎಂದಾಯಿತು. ನಾವು ಹಿಂದೂಗಳಲ್ಲ ಎಂದ ಮೇಲೆ ಹಿಂದೂಗಳ ಜೊತೆ ಜಂಟಿ ಮತದಾರ ಸಮೂಹಕ್ಕೆ ಯಾಕೆ ಸೇರಬೇಕು? ಹಿಂದೂಗಳ ಸಂಖ್ಯೆ ಮುಸ್ಲಿಂ ಅಥವಾ ಇತರ ಜನಾಂಗದವರಿಗಿಂತ ಹೆಚ್ಚಾಗಬೇಕೆಂಬ ಕಾರಣಕ್ಕೆ ನಾವು ಅವರೊಂದಿಗೆ ಸೇರಬೇಕೆ?"

"ಮದ್ರಾಸಿನ ಪರಿಸ್ಥಿತಿಯನ್ನು ಈ ದೃಷ್ಟಿಕೋನದಿಂದ ನೋಡಿದರೆ ದೇವಾಲಯ ಪ್ರವೇಶ ಮಸೂದೆ ತಿರಸ್ಕರಿಸುವುದರಿಂದ ಮದರಾಸಿನ ಕಾಂಗ್ರೆಸ್ ಸರ್ಕಾರ ಶೋಷಿತರಿಗೆ ಮಾಡಿದ ಅನ್ಯಾಯ ಏನೆಂದು ನಿಮಗೇ ತಿಳಿಯುತ್ತದೆ."

"ನಮ್ಮ ಜನಾಂಗದವರ ಆರ್ಥಿಕ ಪರಿಸ್ಥಿತಿ ಉತ್ತಮಪಡಿಸಲು ನೀವು ಸಾರ್ವಜನಿಕ ನಿಧಿ ಅಥವಾ ಖಾಸಗಿಯವರ ಸಂಪನ್ಮೂಲದಿಂದ ಎಷ್ಟೇ ಹಣ ಖರ್ಚು ಮಾಡಿದರೂ ದೇವಾಲಯ ಪ್ರವೇಶದ ಮೂಲಕ ಅಸ್ಪೃಶ್ಯತೆ ನಿವಾರಿಸುವುದಕ್ಕೆ ಸಮವಾಗುವುದಿಲ್ಲ. ದೇವಾಲಯ ಪ್ರವೇಶ ವಿಷಯವು ಹಿಂದೂಗಳ ಪ್ರಾಮಾಣಿಕತೆಯನ್ನು ಪರೀಕ್ಷಿಸುವಂಥ ಆಸಿಡ್–ಟೆಸ್ಟ್‌ನಂತೆ ಎಂದು ನೀವೇ ಒಮ್ಮೆ ಹೇಳಿದ್ದಿರಿ."

"ಶ್ರೀ ರಾಜಗೋಪಾಲಾಚಾರಿ ಅವರು ಮಸೂದೆಯ ಜಾರಿಗೆ ಆಯ್ದುಕೊಡಿರುವ ಜಿಲ್ಲೆಯನ್ನು ನೋಡಿದರೆ, ನಮ್ಮ ಜನಾಂಗದವರು ಸವರ್ಣೀಯ ಹಿಂದೂಗಳ ದಾಸರಾಗೇ ಇರಬೇಕೆನಿಸುತ್ತದೆ. ಹರಿಜನ ಸೇವಕ ಸಂಘದ ಸವರ್ಣೀಯ ಹಿಂದೂಗಳಿಗೆ ನನ್ನ ಜನರ ಭವಿಷ್ಯ ನಿರ್ಧರಿಸಲು ಸರ್ಕಾರಿ ಸೌಲಭ್ಯಗಳನ್ನು ನೀಡಿ ಲೇಬರ್ ಕಮೀಷನರಿಗೆ ಸಹಾಯಕವಾದ ಸಲಹಾ ಮಂಡಲಿಗಳಲ್ಲಿ ನೇಮಿಸಿ ಶೋಷಿತ ವರ್ಗದವರು ಸವರ್ಣೀಯರಿಗೆ ದಾಸರಾಗೇ ಇರುವಂಥ ಕಾನೂನಿಗೆ ಪುಷ್ಟಿ ನೀಡಿದ್ದಾರೆ. ಮದರಾಸು ದೇವಾಲಯ ಪ್ರವೇಶ ಮಸೂದೆ ತಿರಸ್ಕೃತವಾದ ನಂತರ ಶ್ರೀ ರಾಜಗೋಪಾಲಾಚಾರಿ ಅವರ ಇತ್ತೀಚಿನ ಕ್ರಮಗಳ ಬಗ್ಗೆ ನನ್ನ ಅಭಿಪ್ರಾಯಗಳನ್ನು ನೀವೂ ಒಪ್ಪಬೇಕೆಂದು ನಾನು ಬಯಸುತ್ತಿಲ್ಲ : ನಾನು ಕೇಳುತ್ತಿರುವುದು ಇಷ್ಟನ್ನೇ: ನಿಮ್ಮ ಮಹತ್ತರ ಉಪವಾಸ ಕಾಲದಲ್ಲಿ ಶೋಷಿತರಿಗೆ ನೀಡಿದ ಭಾಷೆಯ ಬಗ್ಗೆ ನೀವು ಇನ್ನೂ ಹೆಚ್ಚು ಗಮನ ನೀಡಬೇಕು."

"ಈ ವಿಷಯ ಕೇವಲ ರಾಜಕೀಯ ತಂತ್ರವಲ್ಲ. ಅಂತರಾತ್ಮಕ್ಕೆ ಸಂಬಂಧಿಸಿದ್ದು ಎನ್ನುವುದನ್ನು ದೃಢಪಡಿಸುವ ನೈತಿಕ ಹಕ್ಕು ನಿಮ್ಮ ಮೇಲಿದೆ. ಅಸ್ಪೃಶ್ಯತೆ ಮತ್ತು ದೇವಾಲಯ ಪ್ರವೇಶ ವಿಷಯಗಳ ಬಗ್ಗೆ ನೀವು 'ಒಳಬೆಳಕನ್ನು' ಕಂಡುಕೊಂಡು ಅದನ್ನು ಬೇರೆಯವರಿಗೆ ತಿಳಿಯಪಡಿಸಿ, ಅದಕ್ಕೆ ಬೇಕಾದ ತ್ಯಾಗವನ್ನು ಮಾಡಿದರೆ ನಿಮ್ಮ ಅನುಯಾಯಿಗಳಿಗೆ ತಿಳುವಳಿಕೆ ಬರುತ್ತದೆಂದು ನನ್ನ ನಂಬಿಕೆ.

"ಈ ಪತ್ರವನ್ನು ಪತ್ರಿಕೆಗಳಿಗೆ ಬಿಡುಗಡೆ ಮಾಡಬೇಕೆಂದುಕೊಂಡಿದ್ದೇನೆ. ಆದರೆ ನಿಮ್ಮ ಉತ್ತರಕ್ಕಾಗಿ ಈ ತಿಂಗಳ ಕೊನೆಯವರೆಗೂ ಕಾಯುತ್ತೇನೆ."

ಇದಕ್ಕೆ ಗಾಂಧೀಜಿ ಅವರು ೧೯೩೮ರ ಅಕ್ಟೋಬರ್ ೫ ರಂದು ಉತ್ತರ ಬರೆದರು :

ಪ್ರಿಯ ಮಿತ್ರರೆ,

ಅನೇಕ ತೊಂದರೆಗಳ ನಡುವೆಯೂ ನಾನು ಕೆಲಸಗಳನ್ನು ಮಾಡುತ್ತಿರುವೆ. ಈ ಪತ್ರವನ್ನು ಪೇಶಾವರ್‌ಗೆ

ಹೋಗುವಾಗ ರೈಲಿನಲ್ಲಿ ಬರೆಯುತ್ತಿದ್ದೇನೆ.

ನಮ್ಮ ನಡುವಿನ ಪತ್ರಗಳನ್ನು ನಿಮಗೆ ಬೇಕಾದಾಗ ಪ್ರಕಟಿಸಬಹುದು.

ನಿಮ್ಮ ಪತ್ರ ನೋಡಿದರೆ ಅಪಾರ್ಥಮಾಡಿಕೊಂಡಿರುವವರು ನೀವು ಎಂದು ತಿಳಿದುಬರುತ್ತದೆ. ಹಾಗೆಂದ ಮಾತ್ರಕ್ಕೆ ನಾನು ರಾಜಾಜಿ ಪರ ಎಂದೇನಲ್ಲ. ಅಸ್ಪೃಶ್ಯತೆ ವಿಷಯದಲ್ಲಿ ಅವರು ನನ್ನಷ್ಟೇ ನಿಶ್ಚಲರು ಎಂದು ನಾನು ಬಲ್ಲೆ. ಮಾಡಬೇಕಾದುದರ ಬಗ್ಗೆ ಅವರ ತೀರ್ಮಾನಕ್ಕೆ ನನ್ನ ಬೆಂಬಲ ಇದೆ. ಆದರೆ ಅವರ ಕಾರ್ಯಗಳ ಬಗ್ಗೆ ಇಷ್ಟು ದೂರದಿಂದ ನಾನು ಎಂಥ ತೀರ್ಮಾನವನ್ನೂ ತೆಗೆದುಕೊಳ್ಳಲಾರೆ. ಸನಾತನಿಗಳ ಮನಸ್ಸನ್ನು ಬದಲಾಯಿಸುವುದಕ್ಕಾಗಿಯೇ ಈ ಚಳುವಳಿ ಎಂದು ನಿಮಗೆ ತೋರುವುದಿಲ್ಲವೆ? ಬದಲಾವಣೆ ಕ್ರಮಗಳನ್ನು ಒತ್ತಾಯಪೂರ್ವಕವಾಗಿ ಶೀಘ್ರಗೊಳಿಸದಿದ್ದರೆ ಆ ಕ್ರಮಗಳೆಲ್ಲ ಬಲಿಯಾಗಿ ಬಿಟ್ಟಾವು. ಇದು ಈಗಾಗಲೆ ಭರದಿಂದ ಸಾಗುತ್ತಿದೆ.

"ದೇವಾಲಯ ಪ್ರವೇಶ ಒಂದು ಮಹತ್ತರವಾದ ಧಾರ್ಮಿಕ ಬದಲಾವಣೆಯ ವಿಷಯ. ನಿಮ್ಮ ಧಾರ್ಮಿಕ ಮನೋಭಾವವನ್ನು ಇದರಲ್ಲಿ ಸ್ವಲ್ಪ ತೊಡಗಿಸಿಕೊಂಡು ವಿಷಯವನ್ನು ಗಮನಿಸಿ ಎಂದು ನಿಮ್ಮಲ್ಲಿ ಕೇಳಿಕೊಳ್ಳುತ್ತೇನೆ. ಹಾಗೆ ಮಾಡಿದಲ್ಲಿ ನೀವಾಗೇ ರಾಜಾಜಿಯವರಿಗೆ ಮನಃಪೂರ್ವಕ ಬೆಂಬಲ ನೀಡುತ್ತೀರಿ, ಅವರ ಪ್ರಯತ್ನಗಳು ಫಲಿಸುವಂತೆ ಮಾಡುತ್ತೀರಿ ಎಂದು ನನಗೆ ನಂಬಿಕೆಯಿದೆ."

ಉತ್ತರ ಪ್ರದೇಶದ ಅಸ್ಪೃಶ್ಯರು ಕೂಡ ಪೂನಾ ಒಪ್ಪಂದಕ್ಕೆ ತಮ್ಮ ಅಸಂತೃಪ್ತಿ ವ್ಯಕ್ತಪಡಿಸಿದ್ದಾರೆ. ರಾಜ್ಯಾಂಗ ಉಪ ಕಾರ್ಯದರ್ಶಿಗಳಾದ ಕರ್ನಲ್ ಮುಯಿರ್‌ಹೆಡ್ ಅವರಿಗೆ ಸಲ್ಲಿಸಿದ ಮನವಿಯಲ್ಲಿ ಹೀಗೆ ತಿಳಿಸಲಾಗಿದೆ : (ಮನವಿಯನ್ನು ಮೂಲ ಹಸ್ತಪ್ರತಿಯಲ್ಲಿ ಟೈಪ್ ಮಾಡಿರಲಿಲ್ಲ – ಸಂ)

ಪೂನಾ ಒಪ್ಪಂದವು ಕೇವಲ ಒಂದು ತಂತ್ರವಾಗಿದ್ದು, ಬ್ರಿಟಿಷ್ ಸರ್ಕಾರ ನೀಡಿದ ಮತೀಯ ವಿಭಾಗವನ್ನು ಪೂನಾ ಒಪ್ಪಂದದ ಮೂಲಕ ಬದಲಾಯಿಸಿ, ನಮ್ಮನ್ನು ಸ್ವಾತಂತ್ರ್ಯದಿಂದ ಗುಲಾಮಗಿರಿಗೆ ತಳ್ಳಲಾಗಿದೆಯೆಂದು ಇಡೀ ಭಾರತದ ಎಲ್ಲ ಅಸ್ಪೃಶ್ಯರಿಗೂ ತಿಳಿದಿದೆ.

ಪೂನಾ ಒಪ್ಪಂದವು ಜರುಗಿದ್ದು ೧೯೩೨ರ ಸೆಪ್ಟೆಂಬರ್ ೨೪ ರಂದು. ೧೯೩೨ರ ಸೆಪ್ಟೆಂಬರ್ ೨೫ ರಂದು ಇದಕ್ಕೆ ಹಿಂದೂಗಳ ಬೆಂಬಲ ಬಯಸಿ ಒಂದು ಬಹಿರಂಗ ಸಭೆ ಕರೆಯಲಾಗಿತ್ತು. ಆ ಸಭೆಯಲ್ಲಿ ತೆಗೆದುಕೊಂಡ ನಿರ್ಧಾರಗಳು ಹೀಗಿದ್ದವು :

"ಸವರ್ಣೀಯ ಹಿಂದೂಗಳ ಮತ್ತು ಶೋಷಿತ ವರ್ಗಗಳ ನಡುವೆ ೧೯೩೨ರ ಸೆಪ್ಟೆಂಬರ್ ೨೪ರಂದು ಪೂನಾದಲ್ಲಿ ನಡೆದ ಒಪ್ಪಂದವನ್ನು ಈ ಸಭೆ ದೃಢೀಕರಿಸುತ್ತದೆ. ಬ್ರಿಟಿಷ್ ಸರ್ಕಾರವು ಹಿಂದೂಗಳ ಮಧ್ಯೆ ಪ್ರತ್ಯೇಕ ಮತದಾರ ಸಮೂಹ ಕಲ್ಪಿಸುವ ತನ್ನ ನಿರ್ಧಾರವನ್ನು ಬದಲಿಸಿ ಈ ಒಪ್ಪಂದವನ್ನು ಬೆಂಬಲಿಸುವುದೆಂಬ ವಿಶ್ವಾಸ ನಮಗಿದೆ. ಈ ದಿಸೆಯಲ್ಲಿ ಸಮಯ ಮೀರುವುದಕ್ಕೆ ಮುಂಚೆ ಸರ್ಕಾರವು ಮಹಾತ್ಮಾಗಾಂಧಿಯವರು ತಾವೇ ಹಾಕಿಕೊಂಡ ಚೌಕಟ್ಟಿನೊಳಗೆ ತಮ್ಮ ಉಪವಾಸ ನಿಲ್ಲಿಸುವಂತೆ ಸರಿಯಾದ ಕ್ರಮ ಕೈಗೊಳ್ಳಲು ಸಭೆ ಸರ್ಕಾರವನ್ನು ಆಗ್ರಹಪಡಿಸುತ್ತದೆ. ಎಲ್ಲ ಜನಾಂಗದ ಮುಂದಾಳುಗಳು ಈ ಒಪ್ಪಂದದಲ್ಲಿ ಅಡಗಿರುವ ಒಳಿತುಗಳ ಕಡೆ ಹಾಗೂ ನಿರ್ಧಾರದ ಕಡೆ ಗಮನ ಹರಿಸಿ ಅವುಗಳನ್ನು ಕಾರ್ಯಗತಮಾಡಲು ಎಲ್ಲ ಪ್ರಯತ್ನ ಮಾಡಬೇಕೆಂದು ಸಭೆ ಒತ್ತಾಯಪಡಿಸುತ್ತದೆ.

ಇನ್ನು ಮುಂದೆ ಹುಟ್ಟಿನ ಆಧಾರದ ಮೇಲೆ ಯಾವ ಹಿಂದೂವು ಅಸ್ಪೃಶ್ಯನೆನಿಸಿಕೊಳ್ಳುವುದಿಲ್ಲ. ಇಲ್ಲಿಯವರೆಗೆ ಅಸ್ಪೃಶ್ಯನೆನಿಸಿಕೊಂಡ ಪ್ರತಿಯೊಬ್ಬನಿಗೂ ಸಾರ್ವಜನಿಕ ಬಾವಿ, ಶಾಲೆ, ರಸ್ತೆ ಮುಂತಾದ ಎಲ್ಲ ಸಾರ್ವಜನಿಕ ಬಳಕೆಯಲ್ಲಿ ಇತರ ಹಿಂದೂಗಳಷ್ಟೇ ಸಮಾನ ಹಕ್ಕಿರುತ್ತದೆ. ಈ ಹಕ್ಕಿಗೆ ಸಾಧ್ಯವಾದಷ್ಟು ಬೇಗ

ಕಾನೂನಿನ ಮನ್ನಣೆ ಸಿಗುವುದಲ್ಲದೆ, ಸ್ವರಾಜ್ಯ ದೊರಕಿದ ಮೇಲೂ ಇದು ವಿಧಿಯಾಗಿಲ್ಲದಿದ್ದರೆ ಸ್ವರಾಜ್ಯದ ಸಂಸತ್ತಿನಲ್ಲಿ ಆದಷ್ಟು ಬೇಗ ಇದು ವಿಧಿರೂಪ ಪಡೆಯುತ್ತದೆ.

ಅಲ್ಲದೆ, ದೇವಾಲಯ ಪ್ರವೇಶ ನಿಷೇಧವನ್ನು ಒಳಗೊಂಡಂತೆ ಇಷ್ಟು ಕಾಲ ರೂಢಿಗತವಾಗಿ ಅಸ್ಪೃಶ್ಯರ ಮೇಲೆ ಹೇರಲಾದ ಶೋಷಣೆ ಮುಂತಾದ ಸಾಮಾಜಿಕ ಕಳಂಕಗಳ ನಿವಾರಣೆಯನ್ನು ಸಾಧ್ಯವಿರುವ ಎಲ್ಲಾ ನ್ಯಾಯ ಹಾಗೂ ಶಾಂತಿಯುತ ರೀತಿಯಲ್ಲಿ ಮಾಡುವ ಕರ್ತವ್ಯ ಪ್ರತಿಯೊಬ್ಬ ಹಿಂದೂ ಮುಂದಾಳುವಿನ ಮೇಲಿದೆ ಎನ್ನುವ ಅಭಿಪ್ರಾಯವನ್ನು ಸಭೆ ಅಂಗೀಕರಿಸಿದೆ.''

ಗಾಂಧೀಜಿ ಅವರಿಗೆ ಕೇವಲ ಅಸ್ಪೃಶ್ಯರ ಸಮಸ್ಯೆಗಳಿಗೆ ಸೀಮಿತವಾದ ಒಂದು ಸಂಘದ ಆವಶ್ಯಕತೆ ಕಂಡುಬಂದಿತು. ಅದರಂತೆ ೧೯೩೨ರ ಸೆಪ್ಟೆಂಬರ್ ೨೮ರಂದು 'ಅಖಿಲ ಭಾರತ ಅಸ್ಪೃಶ್ಯತಾ ವಿರೋಧಿ ಸಂಘ'ವು ಅಸ್ತಿತ್ವಕ್ಕೆ ಬಂತು. ಸಂಘದ ಹೆಸರು ಗಾಂಧೀಜಿ ಅವರಿಗೆ ಹಿಡಿಸಲಿಲ್ಲವಾದ್ದರಿಂದ ೧೯೩೨ರ ಡಿಸೆಂಬರ್‌ನಲ್ಲಿ 'ಅಸ್ಪೃಶ್ಯ ಸಮಾಜ ಸೇವಕರು' ಎಂಬ ಹೊಸ ಹೆಸರನ್ನು ಇಡಲಾಯಿತು. ಈ ಹೆಸರೂ ಗಾಂಧೀಜಿ ಅವರು ಬಯಸಿದಷ್ಟು ಚೆನ್ನಾಗಿರಲಿಲ್ಲ. ಮತ್ತೆ ಬದಲಾಯಿಸಿ 'ಹರಿಜನ ಸೇವಕ ಸಂಘ' ಎಂದು ಹೆಸರಿಟ್ಟರು.

ಗಾಂಧೀಜಿ ಅವರು ತಂದ ಬದಲಾವಣೆಗಳಲ್ಲಿ ಮೊದಲನೆಯದು : ಹೆಸರು ಬದಲಾವಣೆ. 'ಅಸ್ಪೃಶ್ಯರು' ಎನ್ನುವ ಬದಲಾಗಿ 'ಹರಿಜನ' ಎಂದರು. ಗಾಂಧೀಜಿ ಅವರು ಸ್ವಜಾತಿ ಪ್ರೇಮಿಗಳಾದ್ದರಿಂದ ವೈಷ್ಣವಧರ್ಮ ಪ್ರಚಾರಕ್ಕೆ 'ಹರಿಜನ' ಎಂಬ ಹೆಸರಿಟ್ಟರು ಎಂದು ಕೆಲವು ಅಸ್ಪೃಶ್ಯರು ಅಭಿಪ್ರಾಯಪಟ್ಟರು. ಅವರಿಗೆ ಶಿವನ ಆರಾಧಕರಾದ 'ಹರಜನ' ಎಂದು ಕರೆಸಿಕೊಳ್ಳಬೇಕಿತ್ತಂತೆ. ಈ ಆರೋಪಕ್ಕೆ ಗಾಂಧೀಜಿ ಅವರು ವಿವರಣೆ ನೀಡಿದರು. : 'ಹರಿ' ಎನ್ನುವುದು ಕೇವಲ ದೇವರು ಎನ್ನುವ ಅರ್ಥದಲ್ಲಿ, ವಿಷ್ಣು ಎನ್ನುವ ಅರ್ಥದಲ್ಲಲ್ಲ. 'ಹರಿಜನ' ಎಂದರೆ 'ದೇವರ ಮಕ್ಕಳು' ಎಂದರ್ಥ ಮಾತ್ರ.

ಅಸ್ಪೃಶ್ಯರಿಗೆ 'ಹರಿಜನ' ಎನ್ನುವ ಪದ ಕಂಡರಾಗದು. ಅದರ ವಿರುದ್ಧ ಅನೇಕರು ಆಕ್ಷೇಪಣೆಯೆತ್ತಿದ್ದಾರೆ. ಮೊದಲನೆಯ ಆಕ್ಷೇಪ : ಇದರಿಂದ ಅಸ್ಪೃಶ್ಯರ ಸ್ಥಿತಿಯಂತೂ ಸುಧಾರಣೆಯಾಗಿಲ್ಲ; ಹಿಂದೂಗಳ ಕಣ್ಣಲ್ಲಿ ಅವರು ಉತ್ತಮರೆನಿಸಿಕೊಂಡಿಲ್ಲ. ಹೊಸ ಹೆಸರು ಹಳೆಯ ರೂಢಿಗೆ ತಕ್ಕುದೆ ಆಗಿದೆ. 'ಹರಿಜನ' ಎಂದರೆ ಅಸ್ಪೃಶ್ಯರೇ ಹೊರತು ಬೇರೆ ಯಾರೂ ಅಲ್ಲ ಎಂದು ಎಲ್ಲರಿಗೂ ಗೊತ್ತು. ಹೊಸ ಹೆಸರು ಕೊಟ್ಟಾಕ್ಷಣ ಅಸ್ಪೃಶ್ಯತೆಯ ಶಾಪದಿಂದ ಅವರು ಮುಕ್ತರಾಗಲಿಲ್ಲ. ಹಳೆಯ ಹೆಸರಿದ್ದಾಗ ಅವರು ಎಷ್ಟು ನಿಕೃಷ್ಟರಾಗಿದ್ದರೊ ಹೊಸ ಹೆಸರಿನಲ್ಲೂ ಅಷ್ಟೇ ನಿಕೃಷ್ಟರಾಗಿದ್ದಾರೆ. ಎರಡನೆಯದಾಗಿ ಅವರಿಗೆ 'ಅಸ್ಪೃಶ್ಯರು' ಎಂದೇ ಕರೆಸಿಕೊಳ್ಳಲು ಇಷ್ಟ. ಅವರ ವಾದವೆಂದರೆ, ಕೆಟ್ಟದ್ದನ್ನೂ ಅದರ ಹೆಸರು ಹಿಡಿದು ಕರೆದರೇ ಸರಿ. ರೋಗಿಗೆ ತನ್ನ ಕಾಯಿಲೆ ಏನೆಂದು ತಿಳಿದಿದ್ದರೆ ಉತ್ತಮ. ಅನ್ಯಾಯ ಇದ್ದಷ್ಟೂ ಕಾಲ ಅದನ್ನು ನಿವಾರಿಸುವ ಒಳ್ಳೆ ಪ್ರಯತ್ನಗಳನ್ನು ಮಾಡುತ್ತಿರಬಹುದಲ್ಲ. ಇದ್ದ ವಿಷಯಗಳನ್ನು ಬಚ್ಚಿಟ್ಟರೆ ವಾಸ್ತವದ ಬಗ್ಗೆ ತಪ್ಪು ಅಭಿಪ್ರಾಯಗಳು ಮೂಡಬಹುದು. ಹೊಸ ಹೆಸರಿನಿಂದ ಸತ್ಯವನ್ನು ಬಚ್ಚಿಡಲು ಪ್ರಯತ್ನಿಸಿದರೆ ಅದು ಅಸ್ಪೃಶ್ಯರಿಗೆ ಎಸಗಿದ ಅನ್ಯಾಯ ಮತ್ತು ಹಿಂದೂಗಳಿಗೆ ತಕ್ಕುದಲ್ಲದ ಹೊಗಳಿಕೆ ಸಿಕ್ಕಂತೆ. ಮೂರನೆಯದಾಗಿ, 'ಹರಿಜನ' ಎನ್ನುವ ಹೆಸರು ದಯೆ–ಅನುಕಂಪಗಳನ್ನು ಸೂಚಿಸುವಂಥದು. ಯೆಹೂದಿಯರು ತಮ್ಮನ್ನ 'ದೇವರಿಂದ ಆರಿಸಲಾದ ಜನ' ಎಂದು ಕರೆದುಕೊಳ್ಳುವ ಹಾಗೆ 'ಹರಿಜನ' ಎಂಬ ಶಬ್ದವು ಆ ಅರ್ಥ ಸೂಚಿಸದಿದ್ದರೆ ಅದು ಬೇರೆ ವಿಷಯ. ಆದರೆ 'ದೇವರ ಮಕ್ಕಳು' ಎಂದು ಕರೆಸಿಕೊಂಡು ತಮ್ಮ ಅಸಹಾಯಕತೆ, ಪರಾವಲಂಬನೆಯನ್ನು ತೋರಿಸಿ ತಮ್ಮನ್ನು ಕೆಟ್ಟದಾಗಿ ನಡೆಸಿಕೊಳ್ಳುವವರಿಂದ ಅನುಕಂಪ ಬೇಡಿದಂತಾಗುತ್ತದೆ. ಅಸ್ಪೃಶ್ಯ ಗಣ್ಯರೆಲ್ಲರು ಈ

ಹೆಸರಿನಲ್ಲಿ ಸೂಚಿತವಾಗಿರುವ ಅವಮಾನಕರ ಅರ್ಥಗಳನ್ನು ವಿರೋಧಿಸಿದ್ದಾರೆ. ಈ ಹೊಸ ಹೆಸರಿನ ಬಗ್ಗೆ ಅಸ್ಪೃಶ್ಯರಿಗೆ ಎಷ್ಟು ವಿರೋಧವೆಂದರೆ ಮುಂಬಯಿ ಶಾಸಕಾಂಗ ಸಭೆಯಲ್ಲಿ 'ಹರಿಜನ' ಎಂಬ ಪದಕ್ಕೆ ಕಾನೂನಿನ ಸಮರ್ಥನೆ ನೀಡಲು ಕಾಂಗ್ರೆಸ್ ಸರ್ಕಾರ ಮಸೂದೆ ಮಂಡಿಸಿದಾಗ ಎಲ್ಲಾ ಅಸ್ಪೃಶ್ಯ ಸದಸ್ಯರೂ ಸಭಾತ್ಯಾಗ ಮಾಡಿ ವಿರೋಧ ಸೂಚಿಸಿದರು.

ಗಾಂಧೀಜಿಯವರ ಹಾಗೂ ಅವರೇ ಸೃಷ್ಟಿಸಿದ ಕಾಂಗ್ರೆಸ್ ಸರ್ಕಾರ ಪತನವಾಗುವವರೆಗೂ 'ಹರಿಜನ' ಎನ್ನುವ ಹೆಸರು ಹೋಗುವುದಿಲ್ಲ. ಈ ಹೆಸರನ್ನು ಗಾಂಧೀಜಿ ಅವರೇ ಅಸ್ಪೃಶ್ಯರ ಮೇಲೆ ಹೇರಿದ್ದು, ಮತ್ತು ಇದರಿಂದ ಒಳ್ಳೆಯದೇನೂ ಆಗಿಲ್ಲವೆನ್ನುವ ಸತ್ಯದ ಬಗ್ಗೆ ಎರಡು ಮಾತಿಲ್ಲ.

ಹೊಸ ಹೆಸರಿನ ವರದಾನದ ಬಗ್ಗೆ ವಿಚಾರಮಾಡಿದ ಮೇಲೆ ಈಗ ಹರಿಜನ ಸೇವಕ ಸಂಘದ ಕಾರ್ಯ ಚಟುವಟಿಕೆಗಳನ್ನು ಗಮನಿಸಬೇಕಾಗಿದೆ. ಗಾಂಧೀಜಿಯವರು ಅಸ್ಪೃಶ್ಯರಿಗಾಗಿ ದುಡಿದದ್ದರ ಸ್ಮರಣಾರ್ಥ ಈ ಸಂಘ ಸ್ಥಾಪನೆಯಾಯಿತೆಂದು ಕೆಲವರ ಅಭಿಪ್ರಾಯ. ಈ ಸಂಘದ ಸಾಧನೆಗಳೇನು?

ಸಂಘವು ಅಖಿಲ ಭಾರತ ಮಟ್ಟದ ಸಂಘಟನೆ. ಇದಕ್ಕೊಂದು ಕೇಂದ್ರೀಯ ಮಂಡಲಿ ಇದೆ. ಅಲ್ಲದೆ ಪ್ರಾಂತೀಯ ಮಂಡಲಿಗಳು, ಅವುಗಳ ಕೆಳಗೆ ಜಿಲ್ಲಾ ಹಾಗೂ ಸ್ಥಾನೀಯ ಸಮಿತಿಗಳೂ ಇವೆ. ಅವುಗಳ ಸಂಖ್ಯೆ ಈ ಕೆಳಗಿನಂತಿದೆ :

ಸಂಘದ ಆರ್ಥಿಕ ಸಂಪನ್ಮೂಲವೆಂದರೆ ಗಾಂಧೀಜಿ ಅವರು ೧೯೩೩ರ ನವೆಂಬರ್‌ನಿಂದ ೧೯೩೪ರ

| | ೧೯೩೨–೩೩ | ೧೯೩೩–೩೪ | ೧೯೩೪–೩೫ |
|---|---|---|---|
| ಪ್ರಾಂತೀಯ ಮಂಡಲಿಗಳು | ೨೬ | ೨೬ | ೨೯ |
| ಜಿಲ್ಲಾ ಹಾಗೂ ಸ್ಥಾನೀಯ ಸಮಿತಿಗಳು | ೨೧೩ | ೩೧೩ | ೩೭೨ |

ಜುಲೈವರೆಗೆ ಅಖಿಲ ಭಾರತ ಸಂಚಾರ ಮಾಡಿ ಇದಕ್ಕಾಗಿ ಧನಸಂಗ್ರಹ ಮಾಡಿದ್ದು. ಸಂಗ್ರಹವಾದ ಒಟ್ಟು ಧನ ಸುಮಾರು ೮ ಲಕ್ಷ ರೂಪಾಯಿಗಳು; ಅದರ ಹೆಸರು 'ಗಾಂಧೀ ಪರ್ಸ್‌ಫಂಡ್'. ಇದೇ ಸಂಘದ ಮುಖ್ಯವಾದ ಮೂಲ. ವರ್ಷ ವರ್ಷ ದಾನಿಗಳಿಂದ ಬರುವ ಹಣ ಇತರ ಮೂಲಗಳು.

| ಸಂಘದ ಒಟ್ಟು ಖರ್ಚಿನ ಲೆಕ್ಕ ಈ ರೀತಿಯಿದೆ : | | | |
|---|---|---|---|
| ೧೯೩೨–೩೩ | ೧೯೩೩–೩೪ | ೧೦೩೪–೩೫ | ೧೯೩೫–೩೬ |
| ರೂ. ೨,೩೧,೦೩೯–೦೦ | ೩,೩೧,೭೯೧–೦೦ | ೪,೪೮,೪೨೨–೦೦ | ೩,೯೯,೩೫೪–೦೦ |

೧೯೩೪–೩೫ನೆಯ ಸಾಲಿನ ವಾರ್ಷಿಕ ವರದಿಯಲ್ಲಿ ಸಂಘದ ಮುಖ್ಯ ಕಾರ್ಯದರ್ಶಿ ಹೀಗೆ ವರದಿ ಮಾಡಿದ್ದರು : "೧೯೩೫ರ ಜುಲೈಯಲ್ಲಿ ಗಾಂಧೀಪರ್ಸ್ ಫಂಡಿನಲ್ಲಿರುವ, ಒಟ್ಟು ಧನವನ್ನು, ಅಂದರೆ ಸುಮಾರು ಎಂಟು ಲಕ್ಷ ರೂಪಾಯಿಗಳನ್ನೂ ಇದೇ ವರ್ಷದಲ್ಲಿ ಖರ್ಚು ಮಾಡಲಾಗುತ್ತದೆ." ಐದನೆಯ ವಾರ್ಷಿಕ ವರದಿಯಲ್ಲಿ ಕಾರ್ಯದರ್ಶಿ ಹೀಗೆ ತಿಳಿಸುತ್ತಾರೆ : "ಹೋದ ವರ್ಷದ ಖರ್ಚಿಗೆ ಹೋಲಿಸಿದರೆ ಒಟ್ಟು ಒಂದು ಲಕ್ಷದಷ್ಟು ಕಡಿಮೆ ಖರ್ಚಾಗಿದೆ. ಇದಕ್ಕೆ ಬಹುಶಃ ಗಾಂಧೀಪರ್ಸ್ ಫಂಡಿನ ಹಣ ಕಡಿಮೆಯಾಗುತ್ತಿರುವುದು, ಚುನಾವಣೆ ಸಮಯದಲ್ಲಿ ಸ್ಥಾನೀಯ ಸಂಗ್ರಹಣೆಯಲ್ಲಾದ ಬದಲಾವಣೆಗಳು ಇತ್ಯಾದಿ ಕಾರಣಗಳಿರಬಹುದು. ಮೇಲಾಗಿ ಕೇಂದ್ರ ಕಚೇರಿಯ ಆರ್ಥಿಕ ಸ್ಥಿತಿ ಸಮಾಧಾನಕರವಾಗಿರಲಿಲ್ಲ.

(ಶಾಖೆಗಳಿಗೆ ನೀಡಿದ ಧನಸಹಾಯವೂ ಸೇರಿದಂತೆ) ಕೇಂದ್ರ ಕಛೇರಿಯ ಒಟ್ಟು ಖರ್ಚು ೮೬,೬೧೦–೧೪–೮ ರೂಗಳು. ಆದಾಯ ೪೨,೪೮೫–೪–೯ ರೂ.ಗಳು. ೪೪,೧೨೫–೯–೧೧ ರೂ.ಗಳುಷ್ಟು ಖೋತಾವನ್ನು ಸಾರ್ವಜನಿಕ ನಿಧಿಯ ಮೂಲಕ ನಿಭಾಯಿಸಲಾಯಿತು. ಈ ನಿಧಿಯಲ್ಲಿ ಸಂಗ್ರಹವಾಗಿದ್ದ ದಾನದ ಮೊತ್ತ ಕೇವಲ ೨೬,೧೭೩–೪ ರೂ.ಗಳು.

ಹರಿಜನ ಸೇವಕ ಸಂಘವು ತುಂಬಾ ಸಣ್ಣದು, ಮತ್ತು ಪತ್ರಿಕೆಯವರು ಕೊಡುತ್ತಿರುವ ಪ್ರಚಾರದಿಂದ ಮಾತ್ರ ಜನರಿಗೆ ಅದರ ಅಸ್ತಿತ್ವದ ವಿಷಯ ಗೊತ್ತಿರುವುದೆಂದು ತಿಳಿದೇ ಇದೆ. ಭಾರತವು ಸುಮಾರು ೬,೯೬,೮೩೧.* ಹಳ್ಳಿಗಳಿರುವ ದೊಡ್ಡ ದೇಶ. ಅಸ್ಪೃಶ್ಯರು ನಾಡಿನ ತುಂಬಾ ಹಂಚಿಹೋಗಿದ್ದಾರೆ. ಅಸ್ಪೃಶ್ಯರು ಇಲ್ಲದ ಹಳ್ಳಿಗಳೇ ಇಲ್ಲ. ಕೇವಲ ೩೭೨ ಸಮಿತಿಗಳ ಮೂಲಕ ಎಷ್ಟು ಜನ ಅಸ್ಪೃಶ್ಯರನ್ನು ತಲುಪಲು ಸಾಧ್ಯ? ಅದೊಂದು ಮಹಾಸಾಗರದಲ್ಲಿನ ಒಂದು ಕಣದಂತೆ. ಅದಕ್ಕೆ ಸಮಸ್ಯೆಗಳನ್ನೆದುರಿಸುವ ಸಾಮರ್ಥ್ಯದ ಕೊರತೆ ಮಾತ್ರವಲ್ಲ. ಅಸ್ಪೃಶ್ಯರಿಗೆ ಸಾಕಷ್ಟು ಪರಿಹಾರ ಕೊಡಲು ಅದರಲ್ಲಿ ಸಂಪನ್ಮೂಲಗಳೂ ಇಲ್ಲ. ಸಂಘದ ಸ್ಥಾಯಿ ನಿಧಿಯೆಂಬುದೂ ಇಲ್ಲ. ಇದ್ದದ್ದನ್ನು ಈ ಮೊದಲೆ ಖರ್ಚುಮಾಡಿಕೊಂಡು ಬಿಟ್ಟಿದೆ. ಹಾಗಾಗಿ ವಾರ್ಷಿಕ ಚಂದಾವನ್ನು ಮಾತ್ರ ಅವಲಂಬಿಸಬೇಕಾಗಿದೆ. ಈಗ ಅದೂ ಖರ್ಚಾಗಿ ಹೋಗಿರುವುದರಿಂದ ಕೇವಲ ಖೋತಾ ಮಾತ್ರ ಇದೆ. ಸಂಘವು ದಿವಾಳಿ ಸ್ಥಿತಿಯಲ್ಲಿದೆ. ಇಷ್ಟರಲ್ಲಿ ಅದರ ಚಟುವಟಿಕೆಗಳೆಲ್ಲ ನಿಂತುಹೋಗಿರಬೇಕಿತ್ತು. ಸಂಘವು ಇನ್ನೂ ಜೀವಂತವಾಗಿದೆಯೆನ್ನುವುದಾದರೆ ಅಸ್ಪೃಶ್ಯರ ಉನ್ನತಿಗಾಗಿ ಹಿಂದೂಗಳು ನೀಡಿದ ಹಣದಿಂದ ಅಲ್ಲ, ಪ್ರಾಂತ್ಯಗಳಲ್ಲಿ ಸ್ಥಾಪಿತವಾಗಿರುವ ಕಾಂಗ್ರೆಸ್ ಸರ್ಕಾರಗಳು ಸಂಘದ ನೆರವಿಗೆ ಬಂದಿರುವ ಕಾರಣದಿಂದ. ಹಿಂದಿನ ಸರ್ಕಾರವು ಸರ್ಕಾರಿ ಇಲಾಖೆಗಳಿಗೆ ವಹಿಸಿ ಕೊಟ್ಟಿದ್ದ ಹಲವಾರು ಸಮಾಜ ಕಲ್ಯಾಣ ಕಾರ್ಯಕ್ರಮಗಳನ್ನು ಈ ಕಾಂಗ್ರೆಸ್ ಸರ್ಕಾರಗಳು ಈ ಸಂಘಕ್ಕೆ ಧನಸಹಾಯದ ಜೊತೆಗೆ ವಹಿಸಿಕೊಟ್ಟಿವೆ. ಹಾಗಾಗಿ ಸಂಘವು ಸರ್ಕಾರದ ಆರ್ಥಿಕ ನೆರವಿನಿಂದಾಗಿ ಬದುಕುಳಿದಿದೆ. ಅಸ್ಪೃಶ್ಯರ ಮೇಲಿನ ಕರುಣೆಯಿಂದ ಹಿಂದೂಗಳು ನೀಡಿದ ದಾನದ ಮೇಲೆ ಹಿಂದೂಗಳೇ ನಡೆಸುತ್ತಿರುವ ಸಂಸ್ಥೆಯಾಗಿ ಸಂಘವು ಖಂಡಿತಾ ಉಳಿದಿಲ್ಲ.

ಗಾಂಧೀಜಿ ಅವರ ಉಪವಾಸದಿಂದ ಉಂಟಾದ ಗಲಾಟೆ – ಅಬ್ಬರ ಕಿವಿ ಕಿವುಡಾಗಿಸುವಂತಿತ್ತು. ಅವರ ಜೀವ ಉಳಿಸಲು ಏನು ಬೇಕಾದರೂ ತ್ಯಾಗ ಮಾಡಿ ಅಸ್ಪೃಶ್ಯರ ಗೆಳೆತನ ಮಾಡಿಕೊಳ್ಳುವ ಹುಮ್ಮಸ್ಸನ್ನು ನೋಡಿದರೆ ಆಶ್ಚರ್ಯವಾಗುತ್ತಿತ್ತು. ಈಗ ಅದೆಲ್ಲ ಮರೆಯಾಗಿ ಅಸ್ಪೃಶ್ಯರು ಅದೇ ಸ್ಥಿತಿಗೆ ಬಂದಿದ್ದಾರೆ. ತಮ್ಮ ಕರ್ತವ್ಯವೆಂದು ತಿಳಿದು ಸಂಘಕ್ಕೆ ದಾನ ನೀಡುವ ಹಿಂದೂಗಳ ಆಸ್ಥೆಯು ಅವರ ಮನಃಪರಿವರ್ತನೆಯ ದ್ಯೋತಕವಾಗಿತ್ತು ಎಂದುಕೊಂಡರೆ, ಈಗ ಅದು ಸತ್ತುಹೋಯಿತೆಂದು ತಿಳಿಯಬೇಕು. ಏಕೆಂದರೆ ಗಾಂಧೀಜಿ ಅವರು ಉಪವಾಸವನ್ನು ನಿಲ್ಲಿಸಿದ್ದೇ ತಡ. ಹಿಂದೂ ತನಗೆ ಆಗ ತಾನೆ ಉಂಟಾಗಿದ್ದ ಅಸ್ಪೃಶ್ಯರ ಬಗೆಗಿನ ಪ್ರೇಮವನ್ನು ಕಳೆದುಕೊಂಡು ಬಿಟ್ಟನು.

ಸಂಘವು ಬಲಿಯುವುದಕ್ಕೆ ಮುಂಚೆಯೇ ಕೊಳೆತುಹೋದ್ದರಿಂದ ಅದರ ಕಾರ್ಯಸಾಧನೆಯನ್ನು ಪರಿಗಣಿಸುವ ಆವಶ್ಯಕತೆಯೇ ಇಲ್ಲ. ಆದರೆ ಸಂಘವು ಒಂದು ರೀತಿಯಲ್ಲಿ ಗಾಂಧೀಜಿ ಅವರ ಸ್ಮಾರಕವಾಗಿದೆ, ಆದ್ದರಿಂದ ಸಂಘದ ಕಾರ್ಯಸಾಧನೆ ಹಾಗೂ ಅವುಗಳ ಹಿಂದಿನ ಆದರ್ಶಗಳನ್ನು ಗಮನಿಸಬೇಕಾಗಿದೆ.

ಸಂಘದ ಕೆಲಸಕಾರ್ಯಗಳು ಕೆಲವು ನಿರ್ದಿಷ್ಟ ಧ್ಯೇಯಗಳನ್ನು ಅನುಸರಿಸಿವೆ.

---

* ೧೯೩೧ರ ಜನಗಣತಿ ವರದಿಯ ಪ್ರಕಾರ (ಹಸ್ತಪ್ರತಿಯಲ್ಲಿ ಸಂಖ್ಯೆ ನಮೂದಿಸಿರಲಿಲ್ಲ–ಸಂ)

ಶೈಕ್ಷಣಿಕ ಕ್ಷೇತ್ರದಲ್ಲಿ ಸಂಘವು ಕಲೆ, ತಾಂತ್ರಿಕ ಹಾಗೂ ಉದ್ಯೋಗ ಆಧಾರಿತ ಪಠ್ಯಕ್ರಮದ ಅಸ್ಪೃಶ್ಯ ವಿದ್ಯಾರ್ಥಿಗಳಿಗೆ ಸಹಾಯಧನ ಒದಗಿಸಿ ಅವರ ವಿದ್ಯಾಭ್ಯಾಸಕ್ಕೆ ಉತ್ತೇಜನ ನೀಡಿದೆ. ಹೈಸ್ಕೂಲು ವಿದ್ಯಾರ್ಥಿಗಳಿಗೂ ಈ ರೀತಿ ಸಹಾಯಧನ ನೀಡಿದೆ. ಕಾಲೇಜು–ಹೈಸ್ಕೂಲುಗಳಲ್ಲಿ ಓದುತ್ತಿದ್ದ ಅಸ್ಪೃಶ್ಯ ವಿದ್ಯಾರ್ಥಿಗಳಿಗಾಗಿ ಸಂಘವು ವಿದ್ಯಾರ್ಥಿನಿಲಯಗಳನ್ನು ನಡೆಸಿತು. ಹತ್ತಿರದಲ್ಲಿ ಸಾರ್ವಜನಿಕ ಶಾಲೆಗಳಿಲ್ಲದ ಊರುಗಳಲ್ಲಿ ಹಾಗೂ ಅಂಥ ಶಾಲೆಗಳಿದ್ದೂ ಅಸ್ಪೃಶ್ಯ ಮಕ್ಕಳಿಗೆ ಅವು ತೆರೆದಿಲ್ಲದಿದ್ದರೆ, ಅಂಥ ಊರುಗಳಲ್ಲಿ ಪ್ರಾಥಮಿಕ ಹಂತದ ಮಕ್ಕಳಿಗಾಗಿ ಶಾಲೆಗಳನ್ನು ತೆರೆಯುವುದು ಸಂಘದ ಆ ಕ್ಷೇತ್ರದ ಚಟುವಟಿಕೆಗಳಲ್ಲಿ ಮುಖ್ಯವಾಗಿತ್ತು.

ಇದಾದ ಮೇಲೆ ಅಭಿವೃದ್ಧಿ ಕಾರ್ಯಗಳು. ಇದರಲ್ಲಿ ಅಸ್ಪೃಶ್ಯರಿಗಾಗಿ ವೈದ್ಯಕೀಯ ನೆರವು ಮುಖ್ಯವಾದದ್ದು. ಸಂಘದ ಸಂಚಾರಿ ಕಾರ್ಯಕರ್ತರು ಹರಿಜನ ಬಸ್ತಿಗಳಿಗೆ ಹೋಗಿ ರೋಗಿಗಳಿಗೆ ವೈದ್ಯಕೀಯ ನೆರವು ನೀಡುತ್ತಿದ್ದರು. ಅಸ್ಪೃಶ್ಯರಿಗೆ ಮೀಸಲಾದ ಕೆಲವು ಆಸ್ಪತ್ರೆಗಳನ್ನೂ ನಡೆಸುತ್ತಿದ್ದರು. ಆದರೂ ಇವೆಲ್ಲ ಸಂಘದ ಒಟ್ಟು ಚಟುವಟಿಕೆಗಳಲ್ಲಿ ಅತಿ ಚಿಕ್ಕದ್ದು.

ಸಂಘದ ಅಭಿವೃದ್ಧಿ ಕಾರ್ಯಗಳಲ್ಲಿ ಬಹು ಮುಖ್ಯವಾದದ್ದು ನೀರು ಸರಬರಾಜಿಗೆ ಸಂಬಂಧಿಸಿದ್ದು.

೧) ಅಸ್ಪೃಶ್ಯರ ಉಪಯೋಗಕ್ಕಾಗಿ ಹೊಸ ಬಾವಿಗಳನ್ನು ತೋಡುವುದು ಅಥವಾ ತೂಬು ಬಾವಿಗಳನ್ನು, ಪಂಪುಗಳನ್ನು ಜೋಡಿಸಿ ಕೊಡುವುದು.

೨) ಹಳೆಯದು ಕೆಟ್ಟಿದ್ದರೆ ಅವುಗಳನ್ನು ರಿಪೇರಿ ಮಾಡುವುದು

೩) ಆಯಾ ಪ್ರಾಂತ್ಯದ ಸರ್ಕಾರಗಳನ್ನು, ಸಂಘಗಳನ್ನು ಅಸ್ಪೃಶ್ಯರಿಗಾಗಿ ಬಾವಿ ತೋಡಿಸಿ ಅಥವಾ ರಿಪೇರಿ ಮಾಡಿಸಿ ಎಂದು ಒತ್ತಾಯಿಸುವುದು.

ಈ ರೀತಿಗಳಲ್ಲಿ ಅದು ಕೆಲಸ ನಿರ್ವಹಿಸಿತ್ತು.

ಮೂರನೆಯದಾಗಿ ಆರ್ಥಿಕ ಕ್ಷೇತ್ರದ ಚಟುವಟಿಕೆಗಳು. ಸಂಘವು ಕೆಲವು ಕೈಗಾರಿಕಾ ಶಾಲೆಗಳನ್ನು ನಡೆಸಿ, ಈ ಶಾಲೆಗಳು ಅನೇಕ ಕುಶಲಕರ್ಮಿಗಳಿಗೆ ತರಬೇತಿ ನೀಡಿದೆ ; ತರಬೇತಿ ಪಡೆದ ಈ ಕರ್ಮಿಗಳು ತಮ್ಮ ಕಾಲ ಮೇಲೆ ನಿಂತುಕೊಳ್ಳಲು ಶಕ್ತರಾಗಿದ್ದಾರೆ ಎಂದು ಹೇಳಲಾಗಿದೆ. ಆದರೆ ವರದಿಗಳ ಪ್ರಕಾರ ನಿಜವಾದ ಹಾಗೂ ಹೆಚ್ಚು ಫಲಕಾರಿಯಾದ ಕೆಲಸ ನಡೆದಿರುವುದು ಅಸ್ಪೃಶ್ಯರ ಸಂಘಟನೆ ಹಾಗೂ ಸಹಕಾರಿ ಸಂಘಗಳ ಮೇಲ್ವಿಚಾರಣೆಯ ನಿಟ್ಟಿನಲ್ಲಿ ಎಂದು ತಿಳಿದುಬಂದಿದೆ.

ಇವಿಷ್ಟು ಸಂಘದ ಕೆಲಸಗಳ ಸಂಕ್ಷಿಪ್ತ ವರದಿ. ಇದರಲ್ಲಿ ಹೆಚ್ಚಿನವು ಸವರ್ಣೀಯ ಹಿಂದೂಗಳ ನಿರ್ದೇಶನದಲ್ಲಿ ನಡೆದಿವೆ. ಸಂಘದ ಚಟುವಟಿಕೆಗಳ ನಿರ್ದೇಶನದ ಬಗ್ಗೆ ಮಾತಾಡಬಲ್ಲ ಅಸ್ಪೃಶ್ಯರು ಬಹಳ ಕಡಿಮೆಯಿದ್ದಾರೆ. ನನಗೂ ಸಂಘಕ್ಕೂ ಯಾವುದೇ ಸಂಬಂಧವಿರಲಿಲ್ಲ. ಆದರೆ ಸಂಘದ ಸ್ಥಾಪನೆ ಕಾಲದಲ್ಲಿ ಅದರೊಂದಿಗೆ ಶಾಮೀಲಾಗಲು ನನ್ನನ್ನು ಆಹ್ವಾನಿಸಲಾಗಿತ್ತು. ಹಿಂದೂಗಳ ಸಹಕಾರದೊಂದಿಗೆ ಅಸ್ಪೃಶ್ಯತೆ ನಿವಾರಿಸಲು ನಾನು ತುಂಬ ಉತ್ಸಾಹ ಹೊಂದಿದ್ದೆ. ಈ ಕೆಲಸ ಸಾಧನೆಗಾಗಿ ಸಂಘವು ಆಯ್ದುಕೊಳ್ಳಬೇಕಾದ ನನ್ನದೇ ಆದ ನೀತಿ ಹಾಗೂ ಕಾರ್ಯಕ್ರಮಗಳೂ ಇದ್ದವು. ಸಂಘ ಸ್ಥಾಪನೆಯಾದ ತಕ್ಷಣ ನಾನು ದುಂಡುಮೇಜಿನ ಸಮಾವೇಶದಲ್ಲಿ ಭಾಗವಹಿಸಲು ಲಂಡನ್ನಿಗೆ ಹೋಗಬೇಕಾಗಿ ಬಂತು. ಹಾಗಾಗಿ ಸಂಘದ ಇತರ ಸದಸ್ಯರ ಜೊತೆ ಈ ವಿಷಯವನ್ನು ಮಾತನಾಡಲು ಅವಕಾಶ ಸಿಗಲಿಲ್ಲ. ಆದರೆ ಎಂ. ವಿ. 'ವಿಕ್ಟೋರಿಯ' ಹಡಗಿನಲ್ಲಿ ಪ್ರಯಾಣ ಮಾಡುತ್ತಿರುವಾಗ ೧೯೩೨ರ ನವೆಂಬರ್ ೧೪ರಂದು ಸಂಘದ ಮುಖ್ಯ ಕಾರ್ಯದರ್ಶಿ ಶ್ರೀ ಠಕ್ಕರ್ ಅವರಿಗೆ ಪತ್ರವನ್ನು ಬರೆದುಹಾಕಿದೆ. ಆ ಪತ್ರದ ಚಿಕ್ಕದಾದ ಮೊದಲ

ಮಾತುಗಳನ್ನು ಬಿಟ್ಟು ಇನ್ನೆಲ್ಲ ವಿವರಗಳ ಪಾಠವನ್ನು ಇಲ್ಲಿ ಕೊಡುತ್ತಿದ್ದೇನೆ.

"ನನ್ನ ಅಭಿಪ್ರಾಯದಲ್ಲಿ ಶೋಷಿತ ವರ್ಗದವರ ಉದ್ಧಾರ ಕಾರ್ಯಕ್ಕೆ ಎರಡು ಮಾರ್ಗಗಳಿವೆ. ಒಂದು ವಾದದ ಪ್ರಕಾರ ಶೋಷಿತ ವರ್ಗಕ್ಕೆ ಸೇರಿದ ಒಬ್ಬ ವ್ಯಕ್ತಿಯ ಭವಿಷ್ಯ ಅವನ ವೈಯಕ್ತಿಕ ಗುಣವನ್ನು ಅವಲಂಬಿಸಿರುತ್ತದೆ. ಅವನೇನಾದರೂ ಬಡತನ-ಬವಣೆಗಳಿಂದ ನರಳುತ್ತಿದ್ದರೆ ಅದಕ್ಕೆ ಅವನ ದುರ್ಗುಣ, ಪಾಪಗಳೇ ಕಾರಣ. ಈ ಕಲ್ಪನೆಯ ಆಧಾರದ ಮೇಲೆ ಈ ವಿಚಾರವಾದದ ಸಮಾಜ ಕಾರ್ಯಕರ್ತರು ತಮ್ಮೆಲ್ಲ ಶ್ರಮ ಹಾಗೂ ಸಂಪನ್ಮೂಲಗಳನ್ನು ವೈಯಕ್ತಿಕ ಗುಣಗಳನ್ನು ಬೆಳೆಸುವ ಕಾರ್ಯಕ್ರಮದ ಮೇಲೆ ಕೇಂದ್ರೀಕರಿಸಿ ವ್ಯಕ್ತಿಯನ್ನು ಉತ್ತಮನನ್ನಾಗಿ ಹಾಗೂ ಸದ್ಗುಣ ಸಂಪನ್ನನನ್ನಾಗಿ ಮಾಡುವಂತಹ ಸಹಿಷ್ಣುತೆ, ಗರಡಿವಿದ್ಯೆ, ಸಹಕಾರ, ಗ್ರಂಥಾಲಯ, ಶಾಲೆಗಳು ಮುಂತಾದವನ್ನು ಒಳಗೊಂಡ ಯೋಜನೆ ಹಾಕಿಕೊಳ್ಳಲಾಗುತ್ತದೆ. ನನ್ನ ಪ್ರಕಾರ ಇದೇ ಸಮಸ್ಯೆಯ ನಿವಾರಣೆಗೆ ಇನ್ನೊಂದು ಮಾರ್ಗವೂ ಇದೆ. ಈ ವಾದ : ವ್ಯಕ್ತಿಯ ಭವಿಷ್ಯ ಅವನು ಜೀವಿಸುತ್ತಿರುವ ಪರಿಸರ ಹಾಗೂ ಸಂದರ್ಭಗಳನ್ನು ಅವಲಂಬಿಸಿದೆ ಮತ್ತು ಅವನೇನಾದರೂ ಬಡತನ-ಬವಣೆಗಳಿಂದ ನರಳುತ್ತಿದ್ದರೆ ಅದಕ್ಕೆ ಕಾರಣ ಅವನ ಪರಿಸರ ಪ್ರತಿಕೂಲವಾಗಿರುವುದು.

"ಇವೆರಡರಲ್ಲಿ ಎರಡನೆಯ ವಾದ ಹೆಚ್ಚು ಸರಿಯಾದದ್ದು ಎನ್ನುವುದರಲ್ಲಿ ನನಗೆ ಯಾವ ಸಂದೇಹವೂ ಇಲ್ಲ. ಮೊದಲನೆಯದರ ಮೂಲಕ ಕೇವಲ ಕೆಲವು ಮಂದಿಗಳನ್ನು ಅವರು ಇರುವ ಮಟ್ಟದಿಂದ ಮೇಲೆತ್ತಬಹುದು. ಆದರೆ ಇಡೀ ವರ್ಗವನ್ನು ಮೇಲೆತ್ತಲು ಸಾಧ್ಯವಾಗುವುದಿಲ್ಲ. ನನ್ನ ಅಭಿಪ್ರಾಯದಲ್ಲಿ ಅಸ್ಪೃಶ್ಯತಾ ವಿರೋಧಿ ಸಂಘ ಅಸ್ತಿತ್ವಕ್ಕೆ ಬಂದಿರುವುದು ಅಲ್ಲೊಬ್ಬ ಇಲ್ಲೊಬ್ಬ ಅಸ್ಪೃಶ್ಯನ ಉದ್ಧಾರ ಮಾಡಲು ಅಲ್ಲ, ಇಡೀ ಅಸ್ಪೃಶ್ಯ ವರ್ಗವನ್ನೇ ಮೇಲೆತ್ತಲು ಎಂಬುದನ್ನು ಗುರಿಯನ್ನಾಗಿ ಇಟ್ಟುಕೊಳ್ಳಬೇಕು. ಸಂಘವು ವೈಯಕ್ತಿಕ ಸದ್ಗುಣಗಳ ಪೋಷಣೆಗಾಗಿ ತನ್ನ ಬಲವನ್ನೆಲ್ಲ ಹಂಚಿಬಿಡುವುದು ಸರಿಯೆನಿಸುವುದಿಲ್ಲ. ಬದಲಾಗಿ ಶೋಷಿತ ವರ್ಗದವರ ಸಾಮಾಜಿಕ ಪರಿಸರದಲ್ಲಿ ಬದಲಾವಣೆ ತರುವಂಥ ಯೋಜನೆಯ ಮೇಲೆ ಸಂಘದ ಎಲ್ಲ ಶಕ್ತಿ-ಸಾಮರ್ಥ್ಯಗಳೂ ಕೇಂದ್ರೀಕೃತವಾಗಬೇಕು. ನನ್ನ ದೃಷ್ಟಿಯಲ್ಲಿ ಸರಿಯೆನಿಸಿದ್ದರ ಬಗ್ಗೆ ಸಾಮಾನ್ಯ ವಿಚಾರಗಳನ್ನು ತಿಳಿಸಿ ಈಗ ಸಂಘವು ಕೈಗೆತ್ತಿಕೊಳ್ಳಬೇಕಾದ ಕಾರ್ಯಗಳು ಕೆಲವೊಂದು ವಾಸ್ತವಿಕ ಅಂಶಗಳನ್ನು ತಿಳಿಸುತ್ತೇನೆ."

"ಮೊದಲನೆಯದಾಗಿ ಗ್ರಾಮಗಳಲ್ಲಿ ಶೋಷಿತ ವರ್ಗದವರು ಸಾರ್ವಜನಿಕ ಬಾವಿಗಳಿಂದ ನೀರನ್ನು ಪಡೆಯುವ, ಶಾಲೆಗೆ ಸೇರುವ, ಗ್ರಾಮಚಾವಡಿಗಳಲ್ಲಿ ಪ್ರವೇಶ ಪಡೆಯುವ, ಸಾರ್ವಜನಿಕ ವಾಹನಗಳನ್ನು ಉಪಯೋಗಿಸುವ ಮುಂತಾದ ನಾಗರಿಕ ಹಕ್ಕು ಪಡೆಯುವಂತೆ ಸಂಘವು ರಾಷ್ಟ್ರಾದ್ಯಂತ ಘೋಷಣೆ ಹೊರಡಿಸಬೇಕೆಂದು ನನ್ನ ಅಭಿಪ್ರಾಯ."

"ಇಂಥ ಯೋಜನೆಯನ್ನು ಹಳ್ಳಿಗಳಿಗೆ ತಲುಪಿಸಿದರೆ ಮಾತ್ರ ನಾವು ಬಯಸುವ ಸಾಮಾಜಿಕ ಬದಲಾವಣೆ ಹಿಂದೂ ಸಮಾಜದಲ್ಲಿ ಉಂಟಾಗಲು ಸಾಧ್ಯ. ಇಲ್ಲದಿದ್ದರೆ ಶೋಷಿತ ವರ್ಗದವರಿಗೆ ಸಮಾನ ಸಾಮಾಜಿಕ ಹಕ್ಕುಗಳು ದುರ್ಲಭವಾಗುತ್ತವೆ. ಈ ಘೋಷಣೆಯನ್ನು ಕಾರ್ಯಗತ ಮಾಡುವಲ್ಲಿ ಯಾವ ಯಾವ ತೊಂದರೆಗಳು ಉಂಟಾಗಬಹುದೆನ್ನುವುದನ್ನು ಮಂಡಲಿಯು ಗಮನಿಸಬೇಕು. ಈ ಮಾತನ್ನು ಏಕೆ ಹೇಳುತ್ತಿದ್ದೇನೆಂದರೆ, ಇಂಥದೇ ಯೋಜನೆಯನ್ನು ಶೋಷಿತ ವರ್ಗದವರ ಇನ್‌ಸ್ಟಿಟ್ಯೂಟ್ ಮತ್ತು ಸಾಮಾಜಿಕ ಸಮಾನತೆ ಸಂಘಗಳು ಬಾಂಬೆ ಪ್ರೆಸಿಡೆನ್ಸಿಯ ಕೊಲಾಬಾ ಮತ್ತು ನಾಸಿಕ್‌ಗಳಲ್ಲಿ ಹಾಕಿಕೊಂಡಾಗ ಏನಾಯಿತೆಂದು ಅಧ್ಯಕ್ಷನಾಗಿ ನನಗೆ ತಿಳಿದಿರುವ ಅನುಭವದಿಂದ ತಿಳಿದಿದೆ."

ಎಲ್ಲಕ್ಕಿಂತ ಮೊದಲು ಸವರ್ಣೀಯ ಹಿಂದೂ ಹಾಗೂ ಶೋಷಿತ ವರ್ಗದವರ ನಡುವೆ ಗಲಭೆ ಉಂಟಾಗಿ ತಲೆ ಒಡೆಯುವುದು ಮುಂತಾದವು ಹಾಗೂ ಕ್ರಿಮಿನಲ್ ಪ್ರಾಸಿಕ್ಯೂಷನ್‌ಗಳು ಒದಗಿಬರುತ್ತವೆ. ಈ ಗಲಾಟೆಯಲ್ಲಿ ಶೋಷಿತ ವರ್ಗದವರೇ ಹೆಚ್ಚು ನೋವಿಗೆ ಒಳಗಾಗುತ್ತಾರೆ. ಇವೆರಡೂ ಜಿಲ್ಲೆಗಳಲ್ಲಿ ಉಂಟಾದ ಸಾಮಾಜಿಕ ಚಳುವಳಿಗಳಲ್ಲಿ ನ್ಯಾಯ ಶೋಷಿತ ವರ್ಗದವರ ಕಡೆಗೇ ಇದ್ದರೂ, ಪೊಲೀಸರಾಗಲಿ ನ್ಯಾಯಾಧಿಕಾರವಾಗಲಿ ಒಮ್ಮೆ ಕೂಡ ಇವರ ಸಹಾಯಕ್ಕೆ ಮುಂದೆ ಬಂದಿರುವ ಉದಾಹರಣೆಯೇ ಇಲ್ಲ. ಎರಡನೆಯದಾಗಿ ಶೋಷಿತ ವರ್ಗದವರು ಸಮಾನ ಹಕ್ಕುಗಳಿಗಾಗಿ ಹವಣಿಸುತ್ತಿರುವ ವಿಷಯ ತಿಳಿದ ತಕ್ಷಣ ಹಳ್ಳಿಯವರೆಲ್ಲ ಈ ವರ್ಗದವರಿಗೆ ಸಾಮೂಹಿಕ ಬಹಿಷ್ಕಾರ ಹಾಕುತ್ತಾರೆ.

"ಸಂಘವು ನಾಗರಿಕ ಹಕ್ಕುಗಳಿಗಾಗಿ ನಡೆಸುವ ಚಳುವಳಿ ಸಫಲವಾಗಬೇಕಾದರೆ ಎದುರಿಸಬೇಕಾದ ಅನೇಕ ಅಡೆತಡೆಗಳಲ್ಲಿ ಇಲ್ಲಿ ಕೇವಲ ಎರಡನ್ನು ಮಾತ್ರ ತಿಳಿಸಿದ್ದೇವೆ. ಆದ್ದರಿಂದ ಸಂಘವು ಹಳ್ಳಿ ಪ್ರದೇಶಗಳಲ್ಲಿ ಒಂದು ಸೈನ್ಯವನ್ನಿಟ್ಟುಕೊಂಡು ನಾಗರಿಕ ಹಕ್ಕುಗಳಿಗಾಗಿ ಹೋರಾಡುವ ಶೋಷಿತ ವರ್ಗದವರಿಗೆ ಪ್ರೋತ್ಸಾಹಿಸುತ್ತ ಕಾನೂನು ಕ್ರಮಗಳೇನಾದರೂ ಉದ್ಭವವಾದಲ್ಲಿ ಸೂಕ್ತ ಸಹಾಯ ನೀಡುವಂತಿರಬೇಕು. ಈ ಕಾರ್ಯಕ್ರಮದಡಿಯಲ್ಲಿ ಸಾಮಾಜಿಕ ಗಲಭೆಗಳು, ಹಿಂಸಾಚಾರಗಳು ನಡೆಯುತ್ತವೆನ್ನುವುದು ನಿಜ. ಆದರೆ ಅವು ನಿವಾರಿಸಬಲ್ಲವುವೆಂದು ನನಗನಿಸುವುದಿಲ್ಲ. ಇದರ ಬದಲಿ ಕ್ರಮವಾದ ವಿರೋಧವನ್ನೇ ತೋರಿಸದ ದಾರಿಯ ಬಗ್ಗೆಯೂ ನನಗೆ ತಿಳಿದಿದೆ. ಆದರೆ ಅದು ಅಸ್ಪೃಶ್ಯತೆಯನ್ನು ಬುಡಮೇಲು ಮಾಡುವುದರಲ್ಲಿ ಪರಿಣಾಮಕಾರಿಯಾಗುವುದಿಲ್ಲ ಎಂದು ನನಗೆ ಚೆನ್ನಾಗಿ ತಿಳಿದಿದೆ. ಮೊದಲನೆಯದಾಗಿ ಎಲ್ಲಾ ಮನುಷ್ಯರಂತೆ ಸವರ್ಣೀಯ ಹಿಂದೂಕೂಡ ಅಸ್ಪೃಶ್ಯತೆಯನ್ನು ರೂಢಿಗತವಾದ ಪದ್ಧತಿ ಎನ್ನುವಂತೆ ಪಾಲಿಸಿಕೊಂಡು ಬರುತ್ತಾನೆ. ಸಾಮಾನ್ಯವಾಗಿ ಜನ ತಮ್ಮ ರೂಢಿ, ಪದ್ಧತಿಗಳನ್ನು ಅದನ್ನು ವಿರೋಧಿಸಿ ಯಾರೋ ಬೋಧಿಸುತ್ತಿದ್ದಾರೆಂದು ಅಷ್ಟು ಸುಲಭವಾಗಿ ಬಿಟ್ಟುಕೊಡುವುದಿಲ್ಲ."

ಸವರ್ಣೀಯ ಹಿಂದೂಗಳು ತಮ್ಮ ರೀತಿನೀತಿಗಳನ್ನು ಬದಲಾಯಿಸಿಕೊಳ್ಳಬೇಕೆಂಬ ಆಲೋಚನೆ, ಅನಿಸಿಕೆಗಳಿಂದ ಮಾತ್ರ ಶೋಷಿತ ವರ್ಗದವರಿಗೆ ಮುಕ್ತಿ ಸಾಧ್ಯ. ಅದಕ್ಕಾಗಿ ಹಿಂದೂಗಳ ರೂಢಿಗತ ತಿಳುವಳಿಕೆಗಳ ವಿರುದ್ಧ ನೇರ ಹೋರಾಟ ನಡೆಸಿ ಬಿಕ್ಕಟ್ಟನ್ನು ಉಂಟು ಮಾಡಬೇಕು. ಈ ಬಿಕ್ಕಟ್ಟಿನಿಂದಾಗಿ ಹಿಂದೂವು ಆಲೋಚನೆ ಮಾಡಲು ಒತ್ತಾಯ ಉಂಟಾಗುತ್ತದೆ; ಹೀಗೆ ಒಮ್ಮೆ ಆಲೋಚಿಸಲು ಶುರುಮಾಡಿದರೆ ಬದಲಾವಣೆ ಹೊಂದಲು ಮೊದಲಿಗಿಂತಲೂ ಹೆಚ್ಚು ಉತ್ಸುಕನಾಗಿ ಬಿಡುತ್ತಾನೆ.

ಕನಿಷ್ಠ ವಿರೋಧ ಮತ್ತು ತರ್ಕಬದ್ಧ ವಿಚಾರಗಳ ಸದ್ದಿಲ್ಲದ ಬೋಧನೆ ನೀತಿಯ ದೋಷಗಳೆಂದರೆ ಅವು ಬಿಕ್ಕಟ್ಟನ್ನು ಉಂಟುಮಾಡದ ಕಾರಣ ಯಾವ ಒತ್ತಾಯವನ್ನೂ ತರವು. ಮಿಲಿಯನ್ ದಿನಗಳ ಬೋಧನೆಯಿಂದ ಸಾಧಿಸಲಾಗದ್ದನ್ನು ಮಹಾದ್‌ನ ಚಾದರ್ ಕೆರೆಯಲ್ಲಿ, ನಾಸಿಕ್‌ನ ಕಾಲಾರಾಮ್ ದೇವಸ್ಥಾನದಲ್ಲಿ ಮತ್ತು ಮಲಬಾರಿನ ಗುರುವಾಯೂರ್ ದೇವಸ್ಥಾನದಲ್ಲಿ ಮಾಡಿದೆ.

"ಈ ಅಸ್ಪೃಶ್ಯತಾ ವಿರೋಧಿ ಸಂಘವು ಮಾಡಬೇಕಾದ ಎರಡನೆಯ ವಿಷಯವೇನೆಂದರೆ ಶೋಷಿತ ವರ್ಗದವರಿಗೆ ಸಮಾನ ಅವಕಾಶಗಳನ್ನು ಕಲ್ಪಿಸುವುದು. ಶೋಷಿತ ವರ್ಗದವರ ಬಡತನ ಬವಣೆಗಳಿಗೆ ಮುಖ್ಯ ಕಾರಣವೆಂದರೆ ಅವರಿಗೆ ಸಮಾನಾವಕಾಶವಿಲ್ಲದಿರುವುದು; ಇದಕ್ಕೆ ಮುಖ್ಯ ಕಾರಣವೆಂದರೆ ಅಸ್ಪೃಶ್ಯತೆ. ಯಾರಾದರೂ ಮಾಡಬಹುದಾದಂಥ ತರಕಾರಿ, ಹಾಲು, ಬೆಣ್ಣೆ ಮಾರಿ ಜೀವನ ಹೊರೆಯುವ ಕೆಲಸಗಳನ್ನು ಶೋಷಿತ ವರ್ಗದವರು ಮಾತ್ರ ಯಾವುದೇ ಹಳ್ಳಿಗಳಲ್ಲಿ ಹಾಗೂ ಕೆಲವು ಊರುಗಳಲ್ಲಿ ಮಾಡುವಂತಿಲ್ಲವೆನ್ನುವ ವಿಷಯ ನಿಮಗೂ ತಿಳಿದಿರಬಹುದು. ಸವರ್ಣೀಯ ಹಿಂದೂ ಈ ವಸ್ತುಗಳನ್ನು

ಬೇಕಾದರೆ ಹಿಂದೂವಲ್ಲದ ಇನ್ನೊಬ್ಬನಿಂದ ಕೊಂಡುಕೊಳ್ಳಬಲ್ಲ, ಆದರೆ ಶೋಷಿತ ವರ್ಗದವರಿಂದ ಮಾತ್ರ ಕೊಳ್ಳುವುದಿಲ್ಲ. ಉದ್ಯೋಗದ ವಿಷಯದಲ್ಲಿ ಅವನ ಸ್ಥಿತಿ ಇನ್ನೂ ಕೀಳಾದದ್ದು."

"ಅಮೆರಿಕದ ನೀಗ್ರೋಗಳಂತೆ ಸಮೃದ್ಧಿಯ ದಿನಗಳಲ್ಲಿ ಕೂಡ ಇವನಿಗೆ ಕೆಲಸ ಸಿಗದಿದ್ದರೂ, ದುರ್ಭಿಕ್ಷ ದಿನಗಳಲ್ಲಿ ಮೊದಲು ಬಲಿಯಾಗುವವನು ಇವನೇ. ಒಂದು ವೇಳೆ ಕಾಲೂರಲು ಜಾಗ ಸಿಕ್ಕರೂ ಅವನ ಭವಿಷ್ಯವೇನು? ಬಾಂಬೆ, ಅಹಮದಾಬಾದ್‌ನ ಹತ್ತಿಮಿಲ್ಲುಗಳಲ್ಲಿ ತೀರಾ ಕಡಿಮೆ ಸಂಬಳ ಅಂದರೆ ತಿಂಗಳಿಗೆ ರೂ. ೨೫-೦೦ ಪಡೆಯುವವರಲ್ಲಿ ಇವನೂ ಒಬ್ಬ. ಹೆಚ್ಚು ಸಂಬಳ ನೀಡುವ ನೇಯ್ಗೆ ವಿಭಾಗಗಳು ಮುಂತಾದವು ಇವನಿಗೆ ಯಾವತ್ತೂ ತೆರೆದಿರುವುದಿಲ್ಲ. ಮಾಲೀಕನ ಹುದ್ದೆ ಸವರ್ಣೀಯ ಹಿಂದೂಗಾಗಿ ಮೀಸಲಾಗಿರುತ್ತದೆ. ಶೋಷಿತ ವರ್ಗದವ ಎಷ್ಟೇ ಹಿರಿಯನಾಗಿದ್ದರೂ, ಎಷ್ಟೇ ಉತ್ತಮ ಕಸುಬುದಾರನಾಗಿದ್ದರೂ ಅವನು ಮಾಲೀಕನ ನಾಯಿಯಂತೆ ದುಡಿಯುತ್ತಿರಬೇಕಾಗುತ್ತದೆ."

"ದಾರ ಸುತ್ತುವ ವಿಭಾಗಗಳಲ್ಲಿ ದುಡಿಯುತ್ತಿರುವ ನೂರಾರು ಶೋಷಿತ ವರ್ಗದ ಮಹಿಳೆಯರು ನನ್ನ ಬಳಿ ಬಂದು ತಮ್ಮ ಅಳಲನ್ನು ತೋಡಿಕೊಂಡಿದ್ದಾರೆ. ಅಲ್ಲಿನ ಒಡತಿಯರು ಕಚ್ಚಾ ಪದಾರ್ಥವನ್ನು ಎಲ್ಲ ಹೆಣ್ಣಾಳುಗಳಿಗೂ ಸಮಾನವಾಗಿ ಹಂಚಬೇಕಿದ್ದರೂ ಅವರು ಸವರ್ಣೀಯ ಹಿಂದೂಗಳಿಗೆ ಬಹುಪಾಲು ಕೊಡುವುದರಿಂದ ಈ ಹೆಂಗಸರು ಖಾಲಿ ಕೂರುವ ಪ್ರಸಂಗಗಳು ಬರುತ್ತವೆಯಂತೆ."

"ಆದ್ದರಿಂದ ಅಸ್ಪೃಶ್ಯತಾ ವಿರೋಧಿ ಸಂಘವು ಇಂಥ ಪ್ರಶ್ನೆಗಳನ್ನೆತ್ತಿಕೊಂಡು ಇವುಗಳ ವಿರುದ್ಧ ಜನಾಭಿಪ್ರಾಯ ಮೂಡಿಸಬೇಕು ಮತ್ತು ಅಸಮಾನತೆ ವಿಷಯಗಳನ್ನು ಕೈಗೆತ್ತಿಕೊಳ್ಳಲು ವಿಭಾಗಗಳನ್ನು ಸ್ಥಾಪಿಸಬೇಕು."

"ಕೊನೆಯದಾಗಿ ಸ್ಪೃಶ್ಯರು ಅಸ್ಪೃಶ್ಯರ ಬಗ್ಗೆ ಪಡುವ ಅಸಹ್ಯ ಭಾವನೆಯನ್ನು ಸಂಘವು ಹೋಗಲಾಡಿಸಬೇಕು. ಇದೇ ಕಾರಣದಿಂದ ಇವೆರಡು ವಿಭಾಗಗಳು ಭಿನ್ನ ಹಾಗೂ ಪ್ರತ್ಯೇಕವಾಗಿಯೇ ಉಳಿದುಕೊಂಡುಬಿಟ್ಟಿವೆ. ನನ್ನ ಅಭಿಪ್ರಾಯದಲ್ಲಿ ಇವರಿಬ್ಬರ ನಡುವೆ ಉತ್ತಮ ಸಂಬಂಧವನ್ನು ಏರ್ಪಡಿಸಲೇಬೇಕು. ಇವರಿಬ್ಬರೂ ಎದುರು ಬದುರಾದಾಗ ಬರುವ ವಿಚಿತ್ರ ಭಾವನೆಗಳನ್ನು ಇವರು ಮೀರಬೇಕೆಂದರೆ ಇಬ್ಬರಿಗೂ ಸಾಮಾನ್ಯವಾದ ಸಹಭಾಗಿತ್ವದ ಪುನರಾವರ್ತನೆಯೊಂದೇ ಇದನ್ನು ಸಾಧಿಸಬಹುದಾದ ಮಾರ್ಗ. ಸವರ್ಣೀಯ ಹಿಂದೂಗಳು ಶೋಷಿತ ವರ್ಗದವರನ್ನು ತಮ್ಮ ಮನೆಗಳಿಗೆ ಅತಿಥಿಗಳಾಗಿಯೊ ಅಥವಾ ಸೇವಕರಾಗಿಯಾದರೂ ಬಿಟ್ಟುಕೊಳ್ಳಬೇಕೆಂದು ನನ್ನ ಅಭಿಪ್ರಾಯ."

"ಈ ರೀತಿಯ ಜೀವಂತ ಸಂಪರ್ಕದಿಂದಾಗಿ ಎರಡೂ ಕಡೆಯವರು ಸಾಮಾನ್ಯ ಹಾಗೂ ಹೊಂದಾಣಿಕೆಯ ಜೀವನಕ್ಕೆ ಪರಿಚಿತರಾಗಿ ನಾವೆಲ್ಲ ಪಡೆಯಲು ಹೋರಾಡುತ್ತಿರುವ ಒಗ್ಗಟ್ಟಿಗೆ ದಾರಿ ಮಾಡಿದಂತಾಗುತ್ತದೆ. ವಿಷಾದವೆಂದರೆ ಇದನ್ನು ತಾತ್ವಿಕವಾಗಿ ಒಪ್ಪುವ ಅನೇಕರು ಕಾರ್ಯಗತಗೊಳಿಸುವುದಕ್ಕೆ ಮಾತ್ರ ತಯಾರಿಲ್ಲ."

"ಇಡೀ ಭಾರತವನ್ನೇ ನಡುಗಿಸಿದ ಮಹಾತ್ಮ ಅವರ ಉಪವಾಸದ ಆ ಹತ್ತು ದಿನಗಳಲ್ಲಿ, ವಿಲ್ಲೆ ಪಾರ್ಲೆ ಮತ್ತು ಮಹಾಡ್‌ನಲ್ಲಿ ಸವರ್ಣೀಯ ಹಿಂದೂ ಸೇವಕರು ತಮ್ಮ ಒಡೆಯರು ಅಸ್ಪೃಶ್ಯರಿಗೆ ಸದರ ತೋರಿಸಿ ಅವರ ಮೇಲಿನ ನಿಷೇಧಗಳನ್ನು ಮೀರಿದ್ದಾರೆಂದು ಮುಷ್ಕರ ಆರಂಭಿಸಿದರು. ಆಗ ನಾನು ಬಯಸಿದ್ದೇನೆಂದರೆ, ಆ ತಪ್ಪಿತಸ್ಥ ಸೇವಕರಿಗೆ ಬುದ್ಧಿ ಕಲಿಸುವಂತೆ ಅವರ ಜಾಗಗಳಲ್ಲಿ ಶೋಷಿತ ವರ್ಗದವನ್ನು ನೇಮಿಸಿಕೊಳ್ಳುತ್ತಾರೆಂದು. ಆದರೆ ಅದಕ್ಕೆ ಬದಲಾಗಿ ಸಂಪ್ರದಾಯಪರ ಶಕ್ತಿಗಳ ಜೊತೆ ರಾಜಿ ಮಾಡಿಕೊಂಡು ಅವುಗಳನ್ನು ಬಲಪಡಿಸಿದರು. ಶೋಷಿತವರ್ಗದವರ ಈ ಗೆಳೆಯರು ಎಷ್ಟರ ಮಟ್ಟಿಗೆ ಸಹಾಯ

ಮಾಡುವಂಥವರು ಎಂದು ತಿಳಿಯದು."

"ಕಷ್ಟದಲ್ಲಿರುವ ಜನರಿಗೆ ತಮ್ಮ ಬಗ್ಗೆ ಅನುಕಂಪ ತೋರುವವರಿದ್ದಾರೆನ್ನುವುದು ಇನ್ನೇನಲ್ಲದಿದ್ದರೂ ಒಂದಿಷ್ಟು ಸಮಾಧಾನ ತರುವ ವಿಷಯವಾಗಿರುತ್ತದೆ. ಆದರೆ ಇಂಥ ಅನುಕಂಪ ತೋರುವ ಸವರ್ಣೀಯ ಹಿಂದೂಗಳು, ಉತ್ತರದ ಬಿಳಿಯರು ನೀಗ್ರೋಗಳ ಒಳಿತಿಗಾಗಿ ತಮ್ಮ ಸಂಬಂಧಿಕರಾದ ದಕ್ಷಿಣದ ಬಿಳಿಯರ ವಿರುದ್ಧ ಸೆಟೆದು ನಿಂತಂತೆ ತಮ್ಮ ಸಂಬಂಧಿಕರಾದ ಇತರ ಸವರ್ಣೀಯ ಹಿಂದೂಗಳ ವಿರುದ್ಧ ಶೋಷಿತ ವರ್ಗದವರ ಪರವಾಗಿ ಎಂಥ ಯುದ್ಧಕ್ಕೂ ತಯಾರಾಗದಿದ್ದರೆ ಅಂಥವರ ಪ್ರಾಮಾಣಿಕತೆಯಿಂದ ಶೋಷಿತ ವರ್ಗದವರಿಗೆ ಸಮಾಧಾನ ಸಿಗುವುದಿಲ್ಲವೆಂದು ನಾನು ಸಂಘಕ್ಕೆ ತಿಳಿಸಬಯಸುತ್ತೇನೆ."

"ಸಂಘವು ಈ ಕಾರ್ಯಕ್ರಮವನ್ನು ಜಾರಿಗೊಳಿಸಲು ಅನೇಕ ಜನರನ್ನು ನೇಮಿಸಿಕೊಳ್ಳಬೇಕು. ಸಮಾಜ ಕಾರ್ಯಕರ್ತರ ನೇಮಕಾತಿ ವಿಷಯ ಅಮುಖ್ಯವಾದ್ದು. ಯಾವುದೇ ನಿರ್ದಿಷ್ಟ ಕೆಲಸ ಮಾಡಲು ಹಣ ಪಡೆದು ಮಾಡುವ ಮಂದಿ ಬೇಕಾದಷ್ಟಿದ್ದಾರೆ. ಆದರೆ ಅಂಥ ದುಡ್ಡಿಗಾಗಿ ದುಡಿಯುವ ಕೆಲಸಗಾರರಿಂದ ಸಂಘದ ಕಾರ್ಯಕ್ರಮಗಳನ್ನು ಸಫಲಗೊಳಿಸಲು ಸಾಧ್ಯವಿಲ್ಲ. ಟಾಲ್‌ಸ್ಟಾಯ್ ಹೇಳಿದಂತೆ : 'ಪ್ರೀತಿಯುಳ್ಳವರು ಮಾತ್ರ ಸೇವೆ ಮಾಡಬಲ್ಲರು. ನನ್ನ ಅಭಿಪ್ರಾಯದಲ್ಲಿ ಈ ಕೆಲಸಗಾರರು ಶೋಷಿತ ವರ್ಗಕ್ಕೆ ಸೇರಿದವರಾದರೆ ಮಾತ್ರ ನಾವು ಸಫಲರಾದಂತೆ. ಆದ್ದರಿಂದ ಯಾರನ್ನು ನೇಮಿಸಿಕೊಳ್ಳಬೇಕು, ಯಾರನ್ನು ನೇಮಿಸಿಕೊಳ್ಳಬಾರದು ಎನ್ನುವುದನ್ನು ಮನಸ್ಸಿನಲ್ಲಿಟ್ಟುಕೊಂಡು ನಿರ್ಧಾರ ತೆಗೆದುಕೊಳ್ಳಬೇಕೆಂದು ನಾನು ಸಂಘವನ್ನು ಕೇಳಿಕೊಳ್ಳುತ್ತೇನೆ. ಸಮಾಜ ಸೇವೆಯನ್ನು ತಮ್ಮ ಕೊನೆಯಾಸರೆಯನ್ನಾಗಿ ಮಾಡಿಕೊಂಡಿಲ್ಲದ ದುಷ್ಟರು ಶೋಷಿತ ವರ್ಗದಲ್ಲಿ ಯಾರೂ ಇಲ್ಲವೆಂದು ನಾನು ಹೇಳುತ್ತಿಲ್ಲ. ಆದರೆ ಒಟ್ಟಾರೆ ಹೇಳಬೇಕೆಂದರೆ ನೊಂದ ವರ್ಗಕ್ಕೆ ಸೇರಿದ ಸೇವಕ ತನ್ನ ಕೆಲಸವನ್ನು ಪ್ರೀತಿಯಿಂದ ಮಾಡುತ್ತಾನೆ ಹಾಗೂ ಸಂಘದ ಸಾಫಲ್ಯಕ್ಕೆ ಇದು ಆವಶ್ಯಕವಾಗಿದೆ."

"ಎರಡನೆಯದಾಗಿ, ವರ್ಗ–ಧೋರಣೆಗಳ ಗಡಿಗಳನ್ನು ಹಾಕಿಕೊಳ್ಳದೆ ಒಂದು ರೀತಿಯ ಸಮಾಜ ಸೇವೆಯಲ್ಲಿ ತೊಡಗಿರುವ ಅನೇಕ ಸಂಘ ಸಂಸ್ಥೆಗಳಿವೆ. ಅವು ತಮ್ಮ ಕಾರ್ಯಚಟುವಟಿಕೆಗಳನ್ನು ಹೆಚ್ಚಿಸಿಕೊಳ್ಳಲು ಬೇಕಾದರೆ ಅಸ್ಪೃಶ್ಯತಾ ವಿರೋಧಿ ಸಂಘದ ಕೆಲಸಗಳನ್ನು ಧನಸಹಾಯ ನೀಡಿದರೆ ಕೈಗೊಳ್ಳುತ್ತವೆ. ಈ ರೀತಿ ಬಾಡಿಗೆ ಮೇಲೆ ಸೇವೆ ಸ್ವೀಕರಿಸಲು ಕ್ರಮ ಬಹುಕಾಲ ನಿಲ್ಲುವ ಒಳಿತನ್ನು ಮಾಡಲಾರದು. ಒಂದು ಏಜೆನ್ಸಿಯೆಂದ ಮೇಲೆ ಎಲ್ಲರಿಗೂ ಒಂದೇ ಗುರಿಯ ಕಡೆ ಒಮ್ಮತವಾದ ಶ್ರದ್ಧೆಯಿರಬೇಕು. ನಮಗೆ ಬೇಕಾಗಿರುವುದು ಗುರಿಯ ಬಗ್ಗೆ ಅತ್ಯುತ್ಸಾಹ ಹೊಂದಿರುವ ಸಂಘ–ಸಂಸ್ಥೆಗಳು. ಶೋಷಿತ ವರ್ಗದವರಿಗೇ ಮೀಸಲಾಗಿ ದುಡಿಯುವವರಿಗೆ ಮಾತ್ರ ನಾವು ಕೆಲಸ ಹಂಚಬೇಕು."

"ಈ ಪತ್ರ ಮುಗಿಸುವುದಕ್ಕೆ ಮುಂಚೆ ಹೇಳಬೇಕಾದ ಇನ್ನೊಂದು ಮಾತಿದೆ. ಇದು ಬಹುಶಃ ಬಾಲ್ಫೋರ್ ಹೇಳಿದ ಮಾತು: ಬ್ರಿಟಿಷ್ ಸಾಮ್ರಾಜ್ಯವನ್ನು ಒಂದಾಗಿಟ್ಟುಕೊಳ್ಳಬಲ್ಲದ್ದು ಶಾಸನವಲ್ಲ, ಪ್ರೀತಿ. ಈ ಮಾತುಗಳೂ ಹಿಂದೂ ಸಮಾಜಕ್ಕೂ ಅನ್ವಯವಾಗುತ್ತೆನಿಸುತ್ತದೆ.

"ಸ್ಪೃಶ್ಯರು ಮತ್ತು ಅಸ್ಪೃಶ್ಯರನ್ನು ಕಾನೂನಿನ ಮೂಲಕ ಒಂದಾಗಿ ಹಿಡಿದಿಟ್ಟುಕೊಳ್ಳಲು ಸಾಧ್ಯವಿಲ್ಲ. ಪ್ರತ್ಯೇಕ ಮತ ಸಮೂಹದ ಬದಲಾಗಿ ಜಂಟಿ ಮತ ಸಮೂಹ ಕಲ್ಪಿಸುವ ಚುನಾವಣಾ ಕಾಯ್ದೆಯ ಮೂಲಕವಂತೂ ಇದು ಖಂಡಿತಾ ಸಾಧ್ಯವಿಲ್ಲ. ಅವರಿಬ್ಬರನ್ನು ಒಂದಾಗಿಟ್ಟುಕೊಳ್ಳುವ ಒಂದೇ ಮಾರ್ಗವೆಂದರೆ ಅದು ಕೇವಲ ಪ್ರೀತಿಯಿಂದ ಮಾತ್ರ."

"ಕುಟುಂಬದ ಹೊರಗೆ ಪ್ರೀತಿಯನ್ನು ಉಂಟುಮಾಡಬೇಕೆಂದರೆ ಅದು ನ್ಯಾಯದ ಮೂಲಕ ಮಾತ್ರ ಸಾಧ್ಯ. ಸ್ಪೃಶ್ಯರು ಅಸ್ಪೃಶ್ಯರ ಬಗ್ಗೆ ನ್ಯಾಯದಿಂದ ನಡೆದುಕೊಳ್ಳುವ ಹಾಗೆ ಮಾಡುವುದು ಅಸ್ಪೃಶ್ಯತಾ ವಿರೋಧಿ

ಸಂಘದ ಕೆಲಸ. ಇದಲ್ಲದೆ ಇನ್ಯಾವುದೇ ಕಾರಣವಿದ್ದರೆ ಸಂಘದ ಗುರಿ ಮತ್ತು ಅಸ್ತಿತ್ವವೇ ಶಂಕಾಸ್ಪದವಾಗುತ್ತದೆ."

ಈ ಪತ್ರ ತಲುಪಿದ್ದಕ್ಕೆ ಕಾರ್ಯದರ್ಶಿಯಿಂದ ಒಂದು ಅಂಗೀಕಾರ ಪತ್ರ ಕೂಡ ಬರಲಿಲ್ಲ. ಅಂದಮೇಲೆ ನನ್ನ ಸೂಚನೆಗಳಲ್ಲಿ ಒಂದನ್ನೂ ಅಂಗೀಕರಿಸಲಿಲ್ಲವೆಂದು ಬೇರೆ ನಾನು ಹೇಳಬೇಕಾಗಿಲ್ಲ. ಸೇವಕರನ್ನು ಹೆಚ್ಚಾಗಿ ಶೋಷಿತ ವರ್ಗದಿಂದಲೇ ಆರಿಸಿಕೊಳ್ಳತಕ್ಕದೆಂಬ ಸೂಚನೆಯನ್ನೂ ಒಪ್ಪಿಕೊಳ್ಳಲಾಗಲಿಲ್ಲ. ಹರಿಜನ ಸೇವಕ ಸಂಘವು ದುಡ್ಡಿಗಾಗಿ ದುಡಿಯುವ ಹಿಂದೂಗಳ ಗುಂಪಾಗಿದೆಯೆಂಬ ವಿಷಯವನ್ನು ಗಾಂಧೀಜಿ ಅವರ ಗಮನಕ್ಕೆ ತಂದಾಗ, ಅವರು ಈ ಕ್ರಮವನ್ನು ಸತ್ಯದಿಂದ ದೂರಾದ ಜಾಣತನದಿಂದ ಸಮರ್ಥಿಸಿಕೊಂಡರು. ಅಸ್ಪೃಶ್ಯರ ನಿಯೋಗಕ್ಕೆ ಹೀಗೆಂದು ತಿಳಿಸಿದರು:[೧]

"ಅಸ್ಪೃಶ್ಯತೆಯೆಂಬ ಪಾಪಕ್ಕೆ ಪ್ರಾಯಶ್ಚಿತ್ತವಾಗಿ ಹಿಂದೂಗಳು ಅಸ್ಪೃಶ್ಯರ ಕ್ಷೇಮಾಭಿವೃದ್ಧಿ ಕೆಲಸಗಳನ್ನು ಮಾಡಬೇಕು. ಇದಕ್ಕಾಗಿ ಸಂಗ್ರಹಣೆಯಾದ ಹಣ ಹಿಂದೂಗಳು ನೀಡಿದ್ದು. ಇವೆರಡೂ ದೃಷ್ಟಿಕೋನಗಳಿಂದ ನೋಡಿದರೆ ಸಂಘವನ್ನು ಹಿಂದೂಗಳೇ ನಡೆಸಬೇಕು. ಸಂಘದ ಮಂಡಲಿಯಲ್ಲಿ ಅಸ್ಪೃಶ್ಯರು ಸ್ಥಾನ ಬಯಸುವುದು ತಾತ್ವಿಕವಾಗಿ ಕೂಡ ಸರಿಯಲ್ಲ."

ನನ್ನ ಸಲಹೆಗಳನ್ನು ಗಾಂಧೀ ಮತ್ತು ಹಿತೈಷಿಗಳು ತಿರಸ್ಕರಿಸಿದ್ದು ಮಾತ್ರವಲ್ಲ. ಸಂಘದ ಸಂವಿಧಾನ, ಗೊತ್ತು ಗುರಿಗಳನ್ನು ನಿರ್ಧರಿಸುವಾಗ ನನ್ನ ಸಲಹೆಗಳಿಗೆ ವ್ಯತಿರಿಕ್ತವಾದದ್ದನ್ನೇ ಆಯ್ದುಕೊಂಡರು. ೧೯೩೨ ರ ಸೆಪ್ಟೆಂಬರ್ ೩೦ ರಂದು[೨] ಬಾಂಬೆಯ ಕೌವಾಸ್‌ಜೀ ಜೆಹಾಂಗಿರ್ ಹಾಲ್‌ನಲ್ಲಿ ನಡೆದ ಸಭೆಯಲ್ಲಿ ಗೊತ್ತುಪಡಿಸಿದ ಸಂಘದ ಗುರಿ ಹೀಗಿದೆ :

"ಅಸ್ಪೃಶ್ಯತೆಯ ವಿರುದ್ಧದ ಘೋಷಣೆಗಳನ್ನು ಎಲ್ಲೆಡೆ ಸಾರಿ, ಎಷ್ಟು ಸಾಧ್ಯವೋ ಅಷ್ಟು ಬೇಗ ಎಲ್ಲ ಸಾರ್ವಜನಿಕ ಬಾವಿ, ಧರ್ಮಶಾಲೆ, ರಸ್ತೆ, ಶಾಲೆ, ಶವದಹನಾಗಾರ, ಸುಡುಗಾಡು ಮತ್ತು ಎಲ್ಲಾ ಸಾರ್ವಜನಿಕ ದೇವಾಲಯಗಳನ್ನು ಶೋಷಿತ ವರ್ಗದವರಿಗೂ ತೆರೆದಿಡುವ ಕ್ರಮ ಕೈಗೊಳ್ಳುವುದು. ಆದರೆ ಯಾರ ಮೇಲೂ ಒತ್ತಾಯ ಒತ್ತಡಗಳನ್ನು ಹೇರದೆ ಶಾಂತಿಯುತವಾಗಿ ಮನವೊಲಿಸುವ ಕ್ರಮದಿಂದ ಈ ಗುರಿ ಸಾಧಿಸುವುದು."

ಆದರೆ ಉದ್ಘಾಟನೆಯಾದ ಎರಡು ತಿಂಗಳ ಬಳಿಕ ಅಂದರೆ ನವೆಂಬರ್ ೩ ರಂದು ಶ್ರೀ ಜಿ. ಡಿ. ಬಿರ್ಲಾ ಮತ್ತು ಶ್ರೀ ಎ. ವಿ. ಠಕ್ಕರ್ ಇವರು ಹೊರಡಿಸಿದ ಹೇಳಿಕೆ ಹೀಗಿದೆ :

"ಕೆಲವು ಬುದ್ಧಿವಂತ ಸನಾತನಿಗಳು ಅಸ್ಪೃಶ್ಯತೆ ನಿವಾರಣೆಯ ವಿರೋಧಿಗಳೇನಲ್ಲ; ಆದರೆ ಅಂತರ್ಜಾತಿ ಭೋಜನಕೂಟ ಹಾಗೂ ವಿವಾಹಗಳ ವಿರೋಧಿಗಳಾಗಿದ್ದರೆಂದು ಸಂಘದ ಅಭಿಪ್ರಾಯ. ಸಂಘವು ತಾನೆ ಹಾಕಿಕೊಂಡ ಪರಿಧಿಯಾಚೆ ಕಾರ್ಯಕ್ರಮ ವಿಸ್ತರಿಸಲು ಬಯಸುವುದಿಲ್ಲವಾದ್ದರಿಂದ ಅದು ಹಿಂದೂಗಳ ಮನವೊಲಿಸುವುದರ ಮೂಲಕ ಅಸ್ಪೃಶ್ಯತೆಯ ಕಣಕಣವನ್ನೂ ನಿವಾರಿಸಹೊರಟಿರುವಾಗ, ಅದು ತಿಳಿಯಲೇಬೇಕಾದ ವಿಷಯವೆಂದರೆ, ಅದರ ಕಾರ್ಯ ವೈಖರಿಯ ಮುಖ್ಯದಾರಿಯು ರಚನಾತ್ಮಕವಾಗಿದ್ದು, ಶೋಷಿತ ವರ್ಗದವರನ್ನು ಶೈಕ್ಷಣಿಕವಾಗಿ, ಆರ್ಥಿಕವಾಗಿ, ಸಾಮಾಜಿಕವಾಗಿ ಉದ್ಧಾರ ಮಾಡುವ ಕಡೆ ಇರಬೇಕು. ಇವರಿಂದ ಅಸ್ಪೃಶ್ಯತೆ ಸಾಕಷ್ಟು ನಿವಾರಣೆಯಾಗುತ್ತದೆ. ಇಂಥ ಕೆಲಸಗಳಾದರೆ ಎಂಥ ಕಟ್ಟಾ

---

೧. ಈ ಹೇಳಿಕೆಯನ್ನು ಅಂಬೇಡ್ಕರ್‌ರವರ *ವಾಟ್ ಕಾಂಗ್ರೆಸ್ ಅಂಡ್ ಗಾಂಧೀ ಹ್ಯಾವ್ ಡನ್ ಟು ದಿ ಅನ್‌ಟಚ್ಚಬಲ್ಸ್* ಪುಸ್ತಕ ಪು. ೧೪೨ ರಿಂದ ತೆಗೆದುಕೊಳ್ಳಲಾಗಿದೆ. ಇದು ಹಸ್ತಪ್ರತಿಯಲ್ಲಿ ನಮೂದಿತವಾಗಿರಲಿಲ್ಲ – ಸಂ.

೨. ಇದೇ ಪುಸ್ತಕದ ಪುಟ ೧೪೦–೪೧ ರಿಂದ ತೆಗೆದುಕೊಳ್ಳಲಾಗಿದೆ.

ಸನಾತನಿಗೂ ಅನುಕಂಪದ ಹೊರತು ಮತ್ತ್ಯಾವ ಭಾವನೆಯೂ ಬರುವುದಿಲ್ಲ. ಅಂಥ ಕೆಲಸ ಸಾಧನೆಗಾಗಿಯೇ ಸಂಘವನ್ನು ಸ್ಥಾಪಿಸಲಾಗಿದೆ. ಜಾತೀಯತೆ ನಿವಾರಣೆ, ಅಂತರ್ಜಾತಿ ಭೋಜನ ಇತ್ಯಾದಿ ಸಾಮಾಜಿಕ ಬದಲಾವಣೆಗಳು ಸಂಘದ ಪರಿಮಿತಿಯಿಂದ ಹೊರತಾಗಿವೆ."

ಸಂಘದ ವಾರ್ಷಿಕ ವರದಿಯೊಂದರಲ್ಲಿ ಅದರ ಗೊತ್ತುಗುರಿಗಳನ್ನು ಹೀಗೆ ವಿವರಿಸಲಾಗಿದೆ:[೧]

"ಸಂಘದ ಸಂವಿಧಾನದ ಪ್ರಕಾರ ಹುಟ್ಟಿದ ಕಾರಣದಿಂದ ಅಸ್ಪೃಶ್ಯರೆನಿಸಿಕೊಳ್ಳುವ ಅಸ್ಪೃಶ್ಯತೆಯನ್ನು ನಿವಾರಿಸುವುದು ಹಾಗೂ ಸಾರ್ವಜನಿಕ ದೇವಾಲಯ, ಬಾವಿ, ಶಾಲೆ ಮತ್ತು ಇತರ ಸಾರ್ವಜನಿಕ ಸಂಸ್ಥೆಗಳಲ್ಲಿ ಹರಿಜನರಿಗೂ ಸಮಾನ ಹಕ್ಕನ್ನು ದೊರಕಿಸಿಕೊಡುವುದೂ ಸಂಘದ ಗುರಿಯಾಗಿದೆ."

ಈ ಗುರಿಯ ಸಾಧನೆಗಾಗಿ ಈ ಸಮಾಜವು ಎರಡು ರೀತಿಯ ಕಾರ್ಯಗಳನ್ನು ಹಮ್ಮಿಕೊಂಡಿದೆ. ಮೊದಲನೆಯದು, ಈ ಸಮಾಜವು ಸವರ್ಣೀಯ ಹಿಂದೂಗಳ ಭಾವನೆ ಮತ್ತು ಅಭಿಪ್ರಾಯಗಳಲ್ಲಿ ರ್‍ಯಾಡಿಕಲ್ಲಾದ ಬದಲಾವಣೆ ತಂದು ಎಲ್ಲ ಹರಿಜನರಿಗೂ ನಾಗರಿಕ ಹಕ್ಕುಗಳನ್ನು ಅನುಭವಿಸುವ ಅವಕಾಶ ಮಾಡಿಕೊಡಬೇಕು. ಎರಡನೆಯದಾಗಿ, ಹರಿಜನರ ಶೈಕ್ಷಣಿಕ ಆರ್ಥಿಕ ಹಾಗೂ ಸಾಮಾಜಿಕ ಉನ್ನತಿಗಾಗಿ ಈ ಸಮಾಜವು ತನ್ನೆಲ್ಲ ಪ್ರಯತ್ನ ಮತ್ತು ನಿಧಿಗಳನ್ನು ವಿನಿಯೋಗಿಸಬೇಕು."

ಹಾಕಿಕೊಂಡ ಗುರಿಗಳನ್ನು ಮತ್ತು ಸಾಧಿಸಲಾದ ಕಾರ್ಯಗಳನ್ನು ಪಕ್ಕ ಪಕ್ಕ ಇಟ್ಟು ನೋಡಿದಾಗ ಎರಡು ಪ್ರಶ್ನೆಗಳು ಉದ್ಭವವಾಗುತ್ತವೆ. ಮೊದಲನೆಯದಾಗಿ, ಈ ವರದಿಯಿಂದ ಸಂಘ ಹೆಮ್ಮೆಪಟ್ಟುಕೊಳ್ಳಬಹುದೆ? ಎರಡನೆಯದಾಗಿ ಅದರ ಕೆಲಸ ಕಾರ್ಯಗಳು ಗುರಿಗಳಿಗೆ ತಕ್ಕವಾಗಿವೆಯೆ? ವರದಿ ಬಹಳ ನಿರಾಶಾದಾಯಕವಾಗಿದೆ.

ಇದು ಕೇವಲ ಉದ್ದುದ್ದ ಮಾತುಗಳ ಸರಣಿ.

ಸಂಘವು ಪೈಪೋಟಿ ನಡೆಸುತ್ತಿರುವ ಕ್ರಿಶ್ಚಿಯನ್ ಮಿಶನ್‌ಗಳಿಗೆ ಹೋಲಿಸಿದರೆ ತನ್ನ ಸಾಧನೆ ವರದಿಗಳಿಂದ ಸಂಘ ಹೆಮ್ಮೆಪಟ್ಟುಕೊಳ್ಳಬೇಕಾದದ್ದಿಲ್ಲ. ಬದಲಾಗಿ ಅದು ದುಃಖವನ್ನುಂಟು ಮಾಡುತ್ತದೆ. ಎರಡನೆಯ ಪ್ರಶ್ನೆ ಬಹಳ ಮೂಲಭೂತವಾದದ್ದರಿಂದ ಅದನ್ನು ಕೂಲಂಕಷವಾಗಿ ಗಮನಿಸಬೇಕು. ಅಸ್ಪೃಶ್ಯರ ಒಳಿತಿಗಾಗಿ ಸಂಘವು ಶ್ರಮಿಸುತ್ತಿದೆಯೆನ್ನುವುದೇನೊ ಸರಿ. ಆದರೆ ಆ ಶ್ರಮವನ್ನು ಯೋಜಿತ ರೂಪದಲ್ಲಿ ಕೈಗೊಂಡಾಗ ಮಾತ್ರ ಅಸ್ಪೃಶ್ಯತೆ ನಿವಾರಣೆಯಾಗುತ್ತದೆ.

ಈ ದಿಸೆಯಲ್ಲಿ ಗಮನಿಸಹೊರಟಾಗ, ಸಂಘವು ಮಾಡಿರುವ ಕೆಲಸಗಳ ಬಗ್ಗೆ ಏನು ಹೇಳಬೇಕು? ಸಂಘದವರು ರಾಜಾರೋಷವಾಗಿ ಅಸ್ಪೃಶ್ಯರಿಗಾಗಿ ಪ್ರತ್ಯೇಕ ಶಾಲೆಗಳನ್ನು, ಪ್ರತ್ಯೇಕ ವಿದ್ಯಾರ್ಥಿನಿಲಯಗಳನ್ನು ಪ್ರತ್ಯೇಕ ಆಸ್ಪತ್ರೆಗಳನ್ನು ಮತ್ತು ಪ್ರತ್ಯೇಕ ಬಾವಿಗಳನ್ನು ಬೆಂಬಲಿಸುತ್ತಿದ್ದಾರೆ. ನನ್ನ ಅಭಿಪ್ರಾಯದಲ್ಲಿ ಈ ಕ್ರಮಗಳಿಂದ ಅಸ್ಪೃಶ್ಯತೆಯನ್ನು ಖಂಡಿತವಾಗಿಯೂ ಜಾರಿಯಲ್ಲಿಡಬಹುದು. ಒಂದು ಆಶ್ಚರ್ಯವೇನೆಂದರೆ ಅಸ್ಪೃಶ್ಯರನ್ನು ಬೇರ್ಪಡಿಸುವ ಕಾರಣದಿಂದ ಪ್ರತ್ಯೇಕ ಮತದಾರ ಸಮೂಹದ ವಿರುದ್ಧ ಆಮರಣಾಂತ ಉಪವಾಸ ಕೈಗೊಳ್ಳುವ ಬೆದರಿಕೆ ಹಾಕಿದ ಗಾಂಧೀಜಿಯವರೇ ಪ್ರತ್ಯೇಕತೆಯನ್ನು ಜಾರಿಯಲ್ಲಿಡುವಂತಹ ಈ ಕ್ರಮಕ್ಕೆ ಒಪ್ಪಿಗೆ ಸೂಚಿಸಿದ್ದಾರೆ. ಅಸ್ಪೃಶ್ಯರಿಗೆ ಈ ರೀತಿ ಸಮಾಜಸೇವೆ ಸಲ್ಲಿಸುವಲ್ಲಿ ಗಾಂಧೀಜಿ ಮತ್ತು ಸಂಘದವರು ಅಸ್ಪೃಶ್ಯರಿಗೆ ನಿಜವಾಗಿ ಅವಶ್ಯವಾದದ್ದೇನೆಂದು ಮರೆತಿದ್ದಾರೆ. ಅಸ್ಪೃಶ್ಯರಿಗೆ ಬೇಕಾಗಿರುವುದು ಶಿಕ್ಷಣವಲ್ಲ, ಸಾರ್ವಜನಿಕ ಶಾಲೆಗಳಲ್ಲಿ ಸೇರುವ ಹಕ್ಕು. ಅಸ್ಪೃಶ್ಯರಿಗೆ ಬೇಕಾಗಿರುವುದು ವೈದ್ಯಕೀಯ ನೆರವಲ್ಲ,

---

೧. ೧೯೩೨–೩೩ ರ ವರದಿ.

ಸಾರ್ವಜನಿಕ ಆಸ್ಪತ್ರೆಗಳಲ್ಲಿ ಸಮಾನ ಹಕ್ಕಿನೊಂದಿಗೆ ದಾಖಲಾಗುವ ಹಕ್ಕು. ಅಸ್ಪೃಶ್ಯರಿಗೆ ಬೇಕಿರುವುದು ನೀರಲ್ಲ, ಸಾರ್ವಜನಿಕ ಬಾವಿಗಳಿಂದ ನೀರನ್ನು ಸೇದಿಕೊಳ್ಳುವ ಹಕ್ಕು. ಅಸ್ಪೃಶ್ಯರಿಗೆ ತಮ್ಮ ಕಷ್ಟಗಳಿಗೆ ಪರಿಹಾರ ಬೇಕಾಗಿಲ್ಲ. ಬದಲಾಗಿ ಮರ್ಯಾದಸ್ಥ ವ್ಯಕ್ತಿತ್ವ ಮತ್ತು ಕಳಂಕ ನಿವಾರಣೆಯಾಗಬೇಕು. ಕಳಂಕವು ಒಮ್ಮೆ ನಿವಾರಣೆಯಾದರೆ ಅವರ ಕಷ್ಟಗಳು ತಾವಾಗೇ ಪರಿಹಾರವಾಗುತ್ತವೆ. ಹರಿಜನ ಸೇವಕ ಸಂಘವು ಈ ವಿಷಯವನ್ನು ಮನಗಂಡಂತಿಲ್ಲ. ಸಂಘವು ಅಸ್ಪೃಶ್ಯರ ಮಿತ್ರನೆಂದೂ ಸಂಪ್ರದಾಯಸ್ಥ ಹಿಂದೂಗಳು ಅಸ್ಪೃಶ್ಯರ ಶತ್ರುವೆಂದೂ ಹೇಳಲಾಗುತ್ತಿದೆ. ಆದರೆ ಶತ್ರು ಮಾಡದ್ದನ್ನು ಮಿತ್ರನೆನೆಸಿಕೊಂಡವ ಮಾಡಿದ್ದಾನೆಯೆ? ಎಂದು ತಿಳಿಯುತ್ತಿಲ್ಲ. ಅಸ್ಪೃಶ್ಯರಿಗೆ ಪ್ರತ್ಯೇಕ ಶಾಲೆ, ಪ್ರತ್ಯೇಕ ಆಸ್ಪತ್ರೆ, ಪ್ರತ್ಯೇಕ ಬಾವಿಗಳಿರಬೇಕೆಂದು ಸಂಪ್ರದಾಯಸ್ಥ ಹಿಂದೂಗಳು ಒತ್ತಾಯಿಸುತ್ತಿದ್ದಾರೆ. ಸಂಘವು ಅವರಿಗೆಲ್ಲ 'ತಮ್ಮಿಚ್ಛೆಯಂತಾಗಲಿ' ಎನ್ನುತ್ತಿದೆ. ಸಂಪ್ರದಾಯಸ್ಥ ಹಿಂದೂಗಳು ಅಸ್ಪೃಶ್ಯತೆಯನ್ನು ನಂಬುತ್ತಾರೆ. ಸಂಘವು ನಂಬುವುದಿಲ್ಲ. ಈ ಒಂದು ವ್ಯತ್ಯಾಸ ಬಿಟ್ಟರೆ ಈ ಮಿತ್ರ ಮತ್ತು ಶತ್ರುಗಳ ರೀತಿಯಲ್ಲಿ ಯಾವ ವ್ಯತ್ಯಾಸವಿದೆ? ಇವೆರಡರ ಪ್ರಕಾರದಲ್ಲೂ ಅಸ್ಪೃಶ್ಯ ಪ್ರತ್ಯೇಕ ಶಾಲೆ, ಪ್ರತ್ಯೇಕ ವಿದ್ಯಾರ್ಥಿನಿಲಯ, ಪ್ರತ್ಯೇಕ ಬಾವಿಗಳ ಮೊರೆಹೋಗಬೇಕು. ಹೀಗಿರುವಾಗ ಗಾಂಧೀಜಿ ಮತ್ತು ಹರಿಜನ ಸೇವಕ ಸಂಘವು ಸಂಪ್ರದಾಯಸ್ಥ ಹಿಂದೂಗಳ ಮೇಲೆ ಒತ್ತಾಯ ತರಲು ಸಾಧ್ಯವಾಗದಿದ್ದ ಮೇಲೆ ಏಕೆ ಅವರ ಜೊತೆ ಜಗಳ ತೆಗೆಯುತ್ತಿದ್ದಾರೆಂದು ತಿಳಿಯುತ್ತಿಲ್ಲ.

ಹಿಂದೂ ಶಾಸ್ತ್ರಗಳಲ್ಲಿ ಅಸ್ಪೃಶ್ಯತೆ ಮನ್ನಣೆ ಪಡೆದಿದೆಯೆ ಇಲ್ಲವೆ ಎನ್ನುವುದು ಗಾಂಧೀಜಿ ಮತ್ತು ಸಂಪ್ರದಾಯಸ್ಥ ಹಿಂದೂಗಳ ನಡುವೆ ನಡೆಯುತ್ತಿರುವ ಪಾಂಡಿತ್ಯಪೂರ್ಣ ವಾಗ್ಯುದ್ಧ. ಇದರಿಂದ ವ್ಯಾವಹಾರಿಕ ಪರಿಹಾರವೇನೂ ಸಿಗುವುದಿಲ್ಲ. ಬದಲಾಗಿ ಇದರಿಂದ ಅಸ್ಪೃಶ್ಯರಿಗಂತೂ ತುಂಬಾ ತೊಂದರೆಯಾಗಿದೆಯೆಂದು ಹೇಳಲು ನಾನು ಸಿದ್ಧ.

ಮೊದಲನೆಯದಾಗಿ ಇದು ಅಸ್ಪೃಶ್ಯರ ಮತ್ತು ಸಂಪ್ರದಾಯಸ್ಥ ಹಿಂದೂಗಳ ನಡುವೆ ವೈಷಮ್ಯ ಬೆಳೆಸಿದೆ. ಗಾಂಧೀಜಿ ಅವರು ಈ ಅನವಶ್ಯ ಜಗಳ ತೆಗೆಯುವ ಮೊದಲು ಅಸ್ಪೃಶ್ಯ ಮತ್ತು ಹಿಂದೂಗಳ ಸಂಬಂಧ ಅಸಾಮಾಜಿಕವಾಗಿತ್ತು. ಈ ಜಗಳದಿಂದಾಗಿ ಈಗ ಸಮಾಜ ವಿರೋಧಿ ಸಂಬಂಧವಾಗಿಬಿಟ್ಟಿದೆ. ಎರಡನೆಯದಾಗಿ ಒಂದು ವೇಳೆ ಈ ಜಗಳ ಉಂಟಾಗದೆ ಅಸ್ಪೃಶ್ಯತೆಯನ್ನು ಇಷ್ಟು ದೊಡ್ಡ ವಿಷಯವನ್ನಾಗಿ ಮಾಡಿದೆ; ಗಾಂಧೀಜಿ ಅವರಂತೂ ಇದಕ್ಕೆ ಸಿದ್ಧರಿಲ್ಲ. ಅದಕ್ಕೆ ಬದಲಾಗಿ ಅಸ್ಪೃಶ್ಯರ ಕಷ್ಟ ಪರಿಹಾರ ಮಾಡಿ ಎಂದು ಅವರು ಹಿಂದೂಗಳಲ್ಲಿ ಮೊರೆಯಿಟ್ಟಿದ್ದರೆ, ಅನೇಕ ಹಿಂದೂಗಳು ಈ ಕೆಲಸಕ್ಕಾಗಿ ಮುಂದೆ ಬರುತ್ತಿದ್ದರೆಂದು ನನಗೆ ಗೊತ್ತು. ಸಂಘವನ್ನು ಸ್ಥಾಪಿಸಿದ ಹೆಗ್ಗಳಿಕೆಯನ್ನು ಗಾಂಧೀಜಿಯೇನೊ ಸಂಪಾದಿಸಿದರು. ಆದರೆ ಸಂಘವು ಅಸ್ಪೃಶ್ಯರ ಕಷ್ಟ ಪರಿಹಾರವನ್ನೂ ಮಾಡಿಲ್ಲ ಅಥವಾ ಆ ದಿಸೆಯಲ್ಲಿ ಯಾವುದೇ ಸಹಾಯ ಮಾಡಿಲ್ಲ.

ಸಂಘವು ಏಕೆ ಸೋತಿದೆ ? ನನ್ನ ಉತ್ತರ ಖಂಡಿತವಾದದ್ದು : ಸಂಘ ಸೋತಿರುವುದು ಅದರ ತಪ್ಪು ರಾಜಕೀಯದಿಂದಾಗಿ.

"ಹರಿಜನ ಸೇವಕ ಸಂಘ ಒಂದು ರಾಜಕೀಯ ಸಂಘವೆಂದು ಸಾಮಾನ್ಯವಾಗಿ ಎಲ್ಲರು, ಹೇಳುತ್ತಾರೆ. ಗಾಂಧೀಜಿಯವರೇನೋ ಇಂಥ ಅಪವಾದವನ್ನು ನಿರಾಕರಿಸುತ್ತ ಆ ಅಭಿಪ್ರಾಯ ತಪ್ಪೆಂದು ಸಾರುತ್ತಿದ್ದಾರೆ. ಸಂಘದ ಮುಖ್ಯ ಕಾರ್ಯದರ್ಶಿ ಕೂಡ ಇದಕ್ಕೆ ವಿರೋಧ ಸೂಚಿಸಿದ್ದಾರೆ. ಅವರದೇ ಮಾತಿನಲ್ಲಿ ಹೇಳುವುದಾದರೆ, ಸಂಘವು ಒಂದು ರಾಜಕೀಯ ಒಪ್ಪಂದದ ಉತ್ತರಾರ್ಧವಾಗಿದ್ದರೂ, ಸಂಘದೊಳಗೆ ಮಾತ್ರ ಯಾವುದೇ ರಾಜಕೀಯವಿಲ್ಲ."

ಗಾಂಧೀಜಿಯವರ ಸಿಟ್ಟಿಗಾಗಲಿ, ಅವರ ಕಾರ್ಯದರ್ಶಿಗಳ ವಿರೋಧಕ್ಕಾಗಲಿ ಕಾರಣವೇನೆಂದು ನನಗೆ ತಿಳಿಯುತ್ತಿಲ್ಲ. ಸಂಘವು ರಾಜಕೀಯ ಸಂಘವಾಗಿದ್ದರೇ ಚೆನ್ನಾಗಿತ್ತೆನಿಸುತ್ತದೆ. ಅಸ್ಪೃಶ್ಯರಿಗೆ ರಾಜಕೀಯ ಅಧಿಕಾರದಲ್ಲಿ ಭಾಗ ಸಿಕ್ಕಿದೆ. ಆದರೆ ಅದರ ಅರಿವೇ ಇಲ್ಲದ ಅಧಿಕಾರ ಅಧಿಕಾರವೇ ಅಲ್ಲ. ಆದರೆ ಸುಸಂಘಟಿತವಲ್ಲದ ಅಧಿಕಾರ ಅಧಿಕಾರವೇ ಅಲ್ಲ. ಹರಿಜನ ಸೇವಕ ಸಂಘವು ಅಸ್ಪೃಶ್ಯರಿಗೆ ರಾಜಕೀಯ ಸಂಘಟನೆ ಮಾಡಿ ಸ್ವತಂತ್ರ ರಾಜಕೀಯ ಪಕ್ಷ ಕಟ್ಟಿ ಚುನಾವಣೆಯಲ್ಲಿ ಹೋರಾಡಲು ಸಹಾಯ ಮಾಡಿದ್ದರೆ ಸಂಘವು ಬಹಳ ಪ್ರಯೋಜನಕಾರಿಯಾಗುತ್ತಿತ್ತು. 'ಸಂಘದಲ್ಲಿ ರಾಜಕೀಯವಿಲ್ಲ' ಎನ್ನುವ ಗಾಂಧೀಜಿ ಮತ್ತು ಅವರ ಕಾರ್ಯದರ್ಶಿಗಳ ಹೇಳಿಕೆಯನ್ನು ನಾನಂತೂ ನಂಬುವುದಿಲ್ಲ. ಬದಲಾಗಿ, ಅದರಲ್ಲಿ ತನ್ನದೇ ರೀತಿಯ ರಾಜಕೀಯವಿದೆ ಹಾಗೂ ಅದು ಅಸ್ಪೃಶ್ಯರ ಬಗ್ಗೆ ದುರಾಗ್ರಹ ಹೊಂದಿದೆ.

ಸಂಘದಲ್ಲಿ ರಾಜಕೀಯವಿಲ್ಲವೆಂದು ಗಾಂಧೀಜಿಯವರು ಹೇಳಿರುವುದರಿಂದ ಸಾಕ್ಷಿಗಾಗಿ ಉದಾಹರಣೆಗಳನ್ನು ಹುಡುಕಿ ತೆಗೆಯಬೇಕು. ಸಾಂದರ್ಭಿಕ ಪುರಾವೆಗಳು ಕೇವಲ ಮಾತಿನ ಪುರಾವೆಗಿಂತ ಉತ್ತಮ. ಏಕೆಂದರೆ ಮನುಷ್ಯ ಸುಳ್ಳು ಹೇಳಬಹುದು, ಆದರೆ ಸಂದರ್ಭಗಳು ಸುಳ್ಳು ಹೇಳುವುದಿಲ್ಲ. ಈ ಸಂದರ್ಭದಲ್ಲಿ ಸಂಘದ ಸಂವಿಧಾನದ ಕಲಂ ಒಂದನ್ನು ನನ್ನ ವಾದದ ಪರವಾದ ಸಾಕ್ಷಿಯನ್ನಾಗಿ ಬಳಸುತ್ತೇನೆ. ಈ ಕಲಂ ಸಂಘವು ಅಸ್ಪೃಶ್ಯತಾ ನಿವಾರಣೆಗಾಗಿ, ಅಸ್ಪೃಶ್ಯರಿಗೆ ಹಿಂದೂಗಳ ಜೊತೆ ಸಮಾನ ಹಕ್ಕು ಕಲ್ಪಿಸುವುದಕ್ಕಾಗಿ ಯಾವ ಮಾರ್ಗ ಅನುಸರಿಸಬೇಕೆನ್ನುವುದನ್ನು ಹೇಳುತ್ತದೆ. ಅದು ಹೀಗಿದೆ :

"ಸಮಾನ ಹಕ್ಕುಗಳನ್ನು ಪಡೆಯುವಾಗ ಯಾವುದೇ ಒತ್ತಾಯವಿರಕೂಡದು ಮತ್ತು ಶಾಂತಿಯುತವಾಗಿ ಮನವೊಲಿಸುವುದೊಂದೇ ನಮ್ಮ ಮಾರ್ಗ."

ಇದು ಸಂಘದ ಮುಖ್ಯ ಆದರ್ಶ. ನನಗೆ ಇದು ಬಹಳ ವಿಚಿತ್ರವಾಗಿ ಕಾಣುತ್ತಿದೆ. ಮಿಕ್ಕವೂ ಹೀಗೇ ವಿಚಿತ್ರವಾಗಿದೆಯಾದ್ದರಿಂದ ನಾನು ಅವನ್ನೆಲ್ಲ ಇಲ್ಲಿ ಉದ್ಧರಿಸುವುದಿಲ್ಲ. ನಾನು ಕೇಳುವ ಪ್ರಶ್ನೆಯೆಂದರೆ ಸವರ್ಣೀಯ ಹಿಂದೂಗಳ ಶಾಂತಿಯುತ ಮನವೊಲಿಸುವಿಕೆಯೊಂದನ್ನು ಮಾತ್ರ ಅಸ್ಪೃಶ್ಯತಾ ನಿವಾರಣಾ ಕಾರ್ಯದ ಒಂದೇ ಮಾರ್ಗವೆಂದು ಸಂಘವು ತನಗೆ ತಾನೇ ಯಾಕೆ ನಿರ್ಮಿತಿಯನ್ನು ಹಾಕಿಕೊಂಡಿದೆ?

ಧಾರ್ಮಿಕ ಅಥವಾ ತಾರ್ಕಿಕವಾದ ಅನೇಕ ಸಮಾಜ ಸುಧಾರಕರು ಅಧಿಕಾರದಲ್ಲಿರುವ ಜನಕ್ಕೆ ಅವರ ನಿಲುವು ಹಾಗೂ ಕಾರ್ಯಗಳು ಸಮಾಜ ವಿರೋಧಿ ರೀತಿಯವು ಎಂದು ತಾವು ಹೇಳಿದ ತಕ್ಷಣ ಅಂಥವರು ತಮ್ಮ ಸೋಗುಗಳನ್ನು ಮತ್ತು ಜುಲುಮೆಗಳನ್ನು ನಿಲ್ಲಿಸಿಬಿಡುತ್ತಾರೆಂದು ತಿಳಿದುಕೊಂಡಿದ್ದಾರೆ. ಆದರೆ ಪ್ರೊ. ನೈಜುರ್ ಹೇಳುವಂತೆ* ಇಂಥ ಸುಧಾರಕರು ಮಾನವ ಸಮುದಾಯಗಳ ನಡಾವಳಿಗಳನ್ನು ಎಲ್ಲ ಸಮುದಾಯಗಳ ಸಂಬಂಧವನ್ನು ಆಳುವ ಸ್ವಹಿತಾಸಕ್ತಿಗಳ ಶಕ್ತಿ ಮತ್ತು ಸಾಂಘಿಕವಾದ ಅಹಮಿಕೆಗಳನ್ನು ಅರ್ಥಮಾಡಿಕೊಳ್ಳದೆ ಹೋಗುತ್ತಾರೆ. ಅಲ್ಲದೆ ಜನಾಂಗ, ರಾಷ್ಟ್ರ ಹಾಗೂ ವರ್ಗಗಳು ವ್ಯಕ್ತಿಗಳಿಗಿಂತ ಕಡಿಮೆ ನೈತಿಕವಾಗಿರುತ್ತವೆ ಹಾಗೂ ಎರಡು ಗುಂಪಿನ ನಡುವೆ ನ್ಯಾಯ ಸ್ಥಾಪಿಸಲು ಶೈಕ್ಷಣಿಕ ಮಾರ್ಗದಿಂದ ಮಾತ್ರ ಸಾಧ್ಯ ಎನ್ನುವ ವಿಷಯಗಳನ್ನೂ ಅವರು ಮರೆತಿರುತ್ತಾರೆ. ಪರಿಣಾಮವಾಗಿ ಉಂಟಾಗುವ ಚಳುವಳಿಗಳಲ್ಲಿ ಆತ್ಮಸಾಕ್ಷಿ ಮತ್ತು ತರ್ಕವನ್ನು ಸೇರಿಸಿಕೊಂಡರೆ ಆಗ ಅನ್ಯಾಯುವನ್ನು ಹೋಗಲಾಡಿಸಲಾಗದಿದ್ದರೂ ಅದನ್ನು ಗುರುತಿಸುವಂತಾಗುತ್ತದೆ. ಅನ್ಯಾಯವನ್ನು ಹೋಗಲಾಡಿಸಬೇಕೆಂದರೆ ಮೊದಲು ಅದನ್ನು ವಿರೋಧಿಸಬೇಕು. ಅನ್ಯಾಯವು ಸಮಷ್ಟಿ ಶಕ್ತಿಯಿಂದ ಉಂಟಾಗಿದ್ದರೆ, ಸಾಮ್ರಾಜ್ಯಶಾಹೀ

---

* "ನೈತಿಕ ಮನುಷ್ಯ ಮತ್ತು ಅನೈತಿಕ ಸಮಾಜ" ಬೇರೆಡೆಗಳಲ್ಲೂ ಕಂಡು ಬರುತ್ತದೆ.

ಅಥವಾ ವರ್ಗದ ಆಳ್ವಿಕೆ ಮುಂತಾದ ಯಾವುದೇ ಸ್ವರೂಪದಲ್ಲಿರಲಿ, ಅದನ್ನು ಅಧಿಕಾರದಿಂದ ವಿರೋಧಿಸಬೇಕು. ಪಟ್ಟಭದ್ರ ಶಕ್ತಿಯ ಹಿಡಿತದಲ್ಲಿರುವ ಯಾವುದೇ ವರ್ಗವನ್ನು ಪಲ್ಲಟಮಾಡಬೇಕೆಂದರೆ ಅದರ ವಿರುದ್ಧ ಶಕ್ತಿ ಪ್ರಯೋಗವಾಗಲೇಬೇಕು. ಬಲಿಷ್ಠರು ದುರ್ಬಲರ ಮೇಲೆ ಎಸಗುತ್ತಿರುವ ಅತ್ಯಾಚಾರವನ್ನು ತಡೆಯುವ ಒಂದೇ ಮಾರ್ಗವೆಂದರೆ ಇದೇ.

ಸವರ್ಣೀಯ ಹಿಂದೂಗಳ ಆಧಿಪತ್ಯದ ವಿರುದ್ಧದ ಹೋರಾಟದಲ್ಲಿ ಗಾಂಧೀಜಿ ಮತ್ತು ಹರಿಜನ ಸೇವಕ ಸಂಘವು ಕೇವಲ ಶಾಂತಿಯುತ ಮನವೊಲಿಸುವ ಕಾರ್ಯಕ್ಕೆ ತಮ್ಮನ್ನು ಸೀಮಿತಗೊಳಿಸಿಕೊಂಡಿರುವುದಕ್ಕೆ ಕಾರಣವೇನು? ಸವರ್ಣೀಯ ಹಿಂದೂಗಳು ಎಸಗುತ್ತಿರುವ ಅನ್ಯಾಯವನ್ನು ನೇರ ಕ್ರಿಯೆಯ ಮೂಲಕ ಏಕೆ ಎದುರಿಸುತ್ತಿಲ್ಲ? ನನಗೆ ಗೊತ್ತು. ಅನ್ಯಾಯದ ವಿರುದ್ಧ ಸಂಘಟನೆ ಮಾಡಬೇಕೆಂದರೆ ಯಾವ ರೀತಿ ಹೋರಾಟ ಮಾಡಿದರೆ ಈಗ ಸಿಗುತ್ತಿರುವ ನೈತಿಕ ನೆರವು ಕಳೆದುಹೋಗದಿರುವುದು ಎಂದು ವಿವೇಚಿಸಿ ಸಂಘಟನೆ ಮಾಡಬೇಕಾಗುತ್ತದೆ. ಆದರೆ ಅದೇನು ಅಷ್ಟೊಂದು ಕಷ್ಟಕರವಲ್ಲ. ಗಾಂಧೀಜಿ ಅವರು ಕಂಡುಹಿಡಿದಿರುವ ಸತ್ಯಾಗ್ರಹ ಅಥವಾ ಶಾಂತವಾದ ವಿರೋಧ ಕ್ರಮಗಳು ನೈತಿಕವಾಗಿ ಯಾವುದೇ ದೋಷವನ್ನು ಮೆಟ್ಟಿರುವಂಥದ್ದು. ಹಾಗಿದ್ದ ಮೇಲೆ ಅಸ್ಪೃಶ್ಯರ ವಿರುದ್ಧ ನಡೆಯುತ್ತಿರುವ ಅನ್ಯಾಯದ ವಿರುದ್ಧ ಸವರ್ಣೀಯ ಹಿಂದೂಗಳ ವಿರುದ್ಧ ಅಸ್ಪೃಶ್ಯರಿಂದ ಸತ್ಯಾಗ್ರಹವನ್ನು ಗಾಂಧೀಜಿ ಏಕೆ ಮಾಡಿಸಿಲ್ಲ? ಅವರು ಬ್ರಿಟಿಷ್ ಸಾಮ್ರಾಜ್ಯದ ವಿರುದ್ಧ ಸತ್ಯಾಗ್ರಹ ಹೂಡಿ ಎಂದು ಭಾರತದ ಜನತೆಗೆ ಕರೆಕೊಟ್ಟರು. ಅದೇ ಮಾರ್ಗವನ್ನು ಅಸ್ಪೃಶ್ಯರ ಹಿತಕ್ಕಾಗಿ ಸವರ್ಣೀಯ ಹಿಂದೂಗಳ ವಿರುದ್ಧ ಅನುಸರಿಸಲು ಏಕೆ ಹಿಂಜರಿದಿದ್ದಾರೆ?

ಈ ಪ್ರಶ್ನೆಗೆ ಗಾಂಧೀಜಿ ಅವರು ಏನೆಂದು ಉತ್ತರಿಸಬಲ್ಲರು? ಬಹುಶಃ ಅವರ ಒಂದೇ ಉತ್ತರ ಏನೆಂದರೆ ಅದು ತಮ್ಮ ರಾಜಕೀಯದಲ್ಲಿ ಅಡ್ಡಬರಬಹುದು ಎಂದು. ಗಾಂಧೀಜಿ ಅವರಿಗೆ ತಾವು ರಾಷ್ಟ್ರದ ನಾಯಕರಾಗಿ ಇರಬೇಕೆಂದು ತುಂಬಾ ಆಸೆ. ಒಂದು ವೇಳೆ ರಾಷ್ಟ್ರದ ನಾಯಕತ್ವದಿಂದ ಅವರೇನಾದರೂ ಚ್ಯುತರಾದರೆ ಅವರಿಗೆ ಜೀವನವೇ ಬೇಸರವಾಗಬಹುದು. ಅವರು ತಮ್ಮ ಮಿತ್ರರೆಂದು ಕರೆಯುವವರೇ ಅವರ ಪ್ರತಿಸ್ಪರ್ಧಿಗಳಾಗಿರುತ್ತಾರೆಂದು ನನಗೆ ಗೊತ್ತು. ರಾಷ್ಟ್ರದ ಮುಂಚೂಣಿಯಲ್ಲಿರಬೇಕೆಂದರೆ ಕಾಂಗ್ರೆಸ್‌ನ್ನು ಒಟ್ಟಾಗಿ ಹಿಡಿದಿಟ್ಟಿರಬೇಕು. ಕಾಂಗ್ರೆಸ್‌ನಲ್ಲಿ ಶೇ. ೯೯ರಷ್ಟು ಹಿಂದೂಗಳೇ ಇದ್ದಾರೆ. ಅಸ್ಪೃಶ್ಯರಿಗಾಗಿ ಹಿಂದೂಗಳ ವಿರುದ್ಧ ಸತ್ಯಾಗ್ರಹ ಮಾಡಿಸಿದಲ್ಲಿ ಗಾಂಧೀಜಿ ಕಾಂಗ್ರೆಸ್ ಪಕ್ಷದ ಒಗ್ಗಟ್ಟನ್ನು ಕಾಯ್ದಿಡುವಲ್ಲಿ ಹೇಗೆ ತಾನೆ ಸಫಲರಾಗುವರು? ಹಿಂದೂಗಳು ಕಾಂಗ್ರೆಸ್ ಪಕ್ಷ ತ್ಯಜಿಸುವರು ಮತ್ತು ಕಾಂಗ್ರೆಸ್ ಪಕ್ಷ ಚೂರು ಚೂರಾಗಿ ಒಡೆದು ಹೋಗುತ್ತದೆ. ಇವೆಲ್ಲ ಗಾಂಧೀಜಿ ಅವರ ಹಿತಾಸಕ್ತಿಗಳಿಗೆ ವಿರುದ್ಧವಾದವು. ಗಾಂಧೀಜಿ ಮತ್ತು ಸಂಘವು ಶಾಂತಿಯುತ ಮನವೊಲಿಸುವಿಕೆ ಮಾರ್ಗವನ್ನು ಅಸ್ಪೃಶ್ಯತಾ ನಿವಾರಣೆಗೆ ಒಂದೇ ಮಾರ್ಗವೆಂದು ತಿಳಿದಿದ್ದಾರೆ ಎನ್ನುವುದಕ್ಕೆ ಇದೇ ವಿವರಣೆ ಸಾಕು. ಈ ಮಾರ್ಗದಿಂದ ಹಿಂದೂಗಳಿಗಾಗಲಿ ಕಾಂಗ್ರೆಸ್‌ನವರಿಗಾಗಲಿ ಎಳ್ಳಷ್ಟೂ ನೋವಾಗುವುದಿಲ್ಲವಲ್ಲ. ದೊಡ್ಡ ವಿಷಯಗಳಿರಲಿ, ಸಣ್ಣ ಸಣ್ಣ ವಿಷಯಗಳಲ್ಲಿ ಕೂಡ ಸಂಘವು ಹಿಂದೂಗಳ ಮನಸ್ಸಿಗೆ ನೋವಾಗಲಿ ಕಿರಿಕಿರಿಯಾಗಲಿ ಉಂಟಾಗದಂತೆ ಬಹಳ ಎಚ್ಚರಿಕೆ ವಹಿಸುತ್ತದೆ. ಉದಾಹರಣೆಗೆ ವಿದ್ಯಾರ್ಥಿವೇತನವನ್ನು ವಿದ್ಯಾರ್ಥಿಗಳಿಗೆ ನೀಡುವಲ್ಲಿ ಅರ್ಜಿದಾರನು ರಾಜಕೀಯವಾಗಿ ಯಾರ ಬೆಂಬಲಿಗನಾಗಿದ್ದಾನೆ ಎಂದು ವಿಚಾರಿಸಲಾಗುತ್ತದೆ. ಆ ಅರ್ಜಿದಾರನು ಕಾಂಗ್ರೆಸ್‌ನ ಅಥವಾ ಹಿಂದೂಗಳ ವಿರೋಧಿಯೆಂದು ತಿಳಿದುಬಂದರೆ ಸಂಘದಿಂದ ಅವನಿಗೆ ಯಾವ ಸಹಾಯವೂ ಸಿಗುವುದಿಲ್ಲ.

ಗಾಂಧೀಜಿ ಮತ್ತು ಅವರ ಅನುಯಾಯಿಗಳು ಕೇವಲ ಶಾಂತಿಯುತ ಮನವೊಲಿಸುವಿಕೆ ಮಾರ್ಗ ಅನುಸರಿಸುವಲ್ಲಿ ಅವರು ಹಿಂದೂಗಳಿಗೆ ಕಿರಿಕಿರಿಯುಂಟುಮಾಡಬಾರದು ಮತ್ತು ಕಾಂಗ್ರೆಸ್ಸನ್ನು ಒಡೆಯದಂತೆ

ರಾಜಕೀಯ ಹಿತಾಸಕ್ತಿಗಳಿಗೆ ಬಲಿಯಾಗಿದ್ದಾರೆನ್ನುವುದರಲ್ಲಿ ಇನ್ನೂ ಯಾರಿಗಾದರೂ ಸಂಶಯವಿದ್ದಲ್ಲಿ ನನಗೆ ಅಚ್ಚರಿಯುಂಟಾಗುತ್ತದೆ. ನಾನು ಮೊದಲೇ ಹೇಳಿದಂತೆ ರಾಜಕೀಯ ಹಾಗೂ ತಪ್ಪು ರಾಜಕೀಯದಿಂದ ಸಂಘವು ಸೋತಿದೆ ಎಂದರೆ ಇದೇ. ತಪ್ಪು ರಾಜಕೀಯವೆನ್ನುವ ಪದ ಬಹಳ ಲಘುವಾಗಿದೆ ಎಂದು ನನಗೆ ಗೊತ್ತು. ತನ್ನ ಅನುಯಾಯಿಯ ಹಿತಾಸಕ್ತಿಯನ್ನು ಅವನ ಯಜಮಾನನೇ ಬಿಟ್ಟುಕೊಡುವುದನ್ನು ವಂಚನೆ ಎಂದು ಕರೆಯದಿದ್ದರೆ ಘೋರ ಅಪರಾಧವಾಗುತ್ತದೆ.

ಅನೇಕ ಸಲ ಗಾಂಧೀಜಿಯವರನ್ನು ಅವರ ಭಾರತೀಯ ಹಾಗೂ ಯೂರೋಪಿಯನ್ ಗೆಳೆಯರು ಯೇಸು ಕ್ರಿಸ್ತನಿಗೆ ಹೋಲಿಸುತ್ತಾರೆ. ಈ ವಿಚಿತ್ರ ಹೋಲಿಕೆಗೆ ಆಧಾರವೇನು? ಒಂದು ವಿಷಯದಲ್ಲಿ ನೋಡಿದರೆ ಇಬ್ಬರಿಗೂ ಅಜಗಜಾಂತರ ವ್ಯತ್ಯಾಸ. ಗಾಂಧಿ ಮತ್ತು ಯೇಸು ಇಬ್ಬರೂ ಕೀಳಾದವರ ಸೇವೆ ಮಾಡುವುದಾಗಿ ಹೇಳಿಕೊಂಡಿದ್ದಾರೆ. ಈ ಸ್ನೇಹಮಯ ದೃಷ್ಟಿಯನ್ನು ಮೇಲ್ವರ್ಗದವರು ಇಬ್ಬರಲ್ಲೂ ವಿರೋಧಿಸಿದ್ದಾರೆ. ಅದಕ್ಕೆ ಇವರಿಬ್ಬರು ಹೇಗೆ ಪ್ರತಿಕ್ರಿಯೆ ತೋರಿಸಿದ್ದಾರೆ. ಫಾರಸೀಗಳು ಯೇಸುವನ್ನು ಅಣಕಿಸಿದಾಗ ಯೇಸು ಹೇಳಿದರಂತೆ. "ರೋಗಿಗಳಿಗೆ ವೈದ್ಯನ ಉಪಚಾರ ಬೇಕೇ ಹೊರತು ಆರೋಗ್ಯವಂತರಿಗಲ್ಲ." ಗಾಂಧೀಜಿ ಮತ್ತು ಯೇಸುವಿನ ನಿಲುವುಗಳಲ್ಲಿ ಎಷ್ಟೊಂದು ವ್ಯತ್ಯಾಸ. ಯೇಸು ಆರೋಗ್ಯವಂತರ ಬಗ್ಗೆ ತಲೆ ಕೆಡಿಸಿಕೊಳ್ಳಲಿಲ್ಲ. ಆದರೆ ಸಂಪೂರ್ಣ ಆರೋಗ್ಯವಂತರಿಗಾಗಿ ಹಾಗೂ ರೋಗಿಗಳ, ಪಾಪದವರ ಬಗ್ಗೆ ಪಾಪಕೃತ್ಯ ಎಸಗಿದವರಿಗಾಗಿ ಗಾಂಧೀಜಿ ಕೈಕಟ್ಟಿ ನಿಂತಿದ್ದಾರೆ. ಗಾಂಧೀಜಿ ಅಸ್ಪೃಶ್ಯರಿಗೆ ವೈದ್ಯರೇನೂ ಅಲ್ಲ. ಹೆಚ್ಚು ಅಂದರೆ ಅಸ್ಪೃಶ್ಯರ ಬಗ್ಗೆ ಸಹಾನುಭೂತಿ ಹೊಂದಿದವರಲ್ಲದೆ ಮತ್ತೇನೂ ಅಲ್ಲ.

ಅಸ್ಪೃಶ್ಯರಿಗೆ ಸಹಾನುಭೂತಿ ತೋರಿಸುವಾಗಲೂ ಗಾಂಧೀಜಿ ಎರಡು ವಿಷಯಗಳಿಂದ ತಮ್ಮನ್ನು ಸೀಮಿತಗೊಳಿಸಿಕೊಂಡಿದ್ದಾರೆ : ಅವರ ಸಾಮಾಜಿಕ ಗುರಿಗಳು ಮತ್ತು ಅವರ ರಾಜಕೀಯ. ಈ ಮಾತಿನಲ್ಲಿ ನಂಬಿಕೆ ಬಾರದಿದ್ದರೆ ನಾನು ಎರಡು ಉದಾಹರಣೆ ನೀಡಬಲ್ಲೆ. ಇವೆರಡರಲ್ಲಿ ಒಂದು ಬಹಳ ಇತ್ತೀಚೆಗೆ ಘಟಿಸಿದ್ದು. ಕೇಂದ್ರ ಪ್ರಾಂತ್ಯದ ಶೇಗಾಂವ್ ಸಮೀಪ ಗಾಂಧೀಜಿ ಅವರು ಇರುವ ಊರಿನಲ್ಲೇ ನಡೆದದ್ದು.

ಮೊದಲ ಉದಾಹರಣೆಯನ್ನು ರಾಷ್ಟ್ರದಲ್ಲೆಲ್ಲಾ ಹೆಸರು ಮಾಡಿರುವ ಖರೆಯವರ ಘಟನೆಯಿಂದ ಶುರು ಮಾಡುತ್ತೇನೆ. ೧೯೩೮ರಲ್ಲಿ ಕಾಂಗ್ರೆಸ್ ಮಂತ್ರಿಮಂಡಲ ಆಡಳಿತದಲ್ಲಿದ್ದ ಕೇಂದ್ರ ಪ್ರಾಂತ್ಯಗಳ ಮಂತ್ರಿಮಂಡಲದಲ್ಲಿ ಬಿಕ್ಕಟ್ಟು ಎದ್ದಿತ್ತು. ಪ್ರಧಾನ ಮಂತ್ರಿ ಡಾ. ಖರೆ ಅವರ ಸಹದ್ಯೋಗಿಗಳಿಂದ ದೂರವಾದರು. ಉಳಿದವರನ್ನು ರಾಜೀನಾಮೆ ಕೊಡುವಂತೆ ಪ್ರಧಾನಮಂತ್ರಿಯಾಗಿ ಕೇಳಿಕೊಂಡರು. ಆದರೆ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಒಪ್ಪಿಗೆಯಿಲ್ಲದೆ ರಾಜೀನಾಮೆ ಕೊಡಲು ಅವರು ಸಿದ್ಧರಿರಲಿಲ್ಲ. ಕಡೆಗೂ ಡಾ. ಖರೆಯವರ ಒತ್ತಾಯದ ಮೇರೆಗೆ ರಾಜೀನಾಮೆ ಕೊಟ್ಟರು. ಆಗ ಡಾ. ಖರೆ ಮತ್ತೊಂದು ಕಾಂಗ್ರೆಸ್ ಮಂತ್ರಿಮಂಡಲ ರಚಿಸಿಕೊಂಡು ತಮಗೆ ಬೇಕಾದವರನ್ನು ಮಂತ್ರಿಮಂಡಲದ ಕಛೇರಿಗಳಲ್ಲಿ ಸೇರಿಸಿಕೊಂಡರು. ಈ ಹೊಸ ಮಂತ್ರಿಮಂಡಲದಲ್ಲಿ ಡಾ. ಖರೆ ಒಬ್ಬ ಅಸ್ಪೃಶ್ಯನನ್ನು ಮಂತ್ರಿಯನ್ನಾಗಿ ಸೇರಿಸಿಕೊಂಡರು. ಈ ರೀತಿ ಕಾಂಗ್ರೆಸ್ ಸಂಸತ್ ಮಂಡಲಿಯ ಒಪ್ಪಿಗೆಯಿಲ್ಲದೆ ಹಳೆ ಮಂತ್ರಿಮಂಡಲವನ್ನು ರದ್ದುಪಡಿಸಿ ಹೊಸದನ್ನು ರಚಿಸುವ ಡಾ. ಖರೆಯವರ ನಿಯಮಬಾಹಿರ ಕ್ರಮದ ವಿಷಯ ಕೊನೆಗೆ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯಲ್ಲಿ ವಿಚಾರಣೆಗೆ ಬಂತು. ಪಕ್ಷದ ನಿಯಮಗಳನ್ನು ಉಲ್ಲಂಘಿಸಿದ ಆರೋಪದ ಮೇಲೆ ಅವರನ್ನು ಅಧಿಕಾರದಿಂದ ತೆಗೆದುಹಾಕಲಾಯಿತು. ಗಾಂಧೀಜಿ ಅವರು ಡಾ. ಖರೆ ವಿರುದ್ಧ ಮಾಡಿದ ಆಪಾದನೆಗಳಲ್ಲಿ ಒಬ್ಬ ಅಸ್ಪೃಶ್ಯರನ್ನು ಮಂತ್ರಿಮಂಡಲಕ್ಕೆ ಸೇರಿಸಿಕೊಂಡಿರುವುದೂ ಒಂದಾಗಿತ್ತು. ಈ ವಿಷಯವಾಗಿ ಗಾಂಧೀಜಿ

ಅವರು ಡಾ. ಖರೆ ಅವರಿಗೆ ಹೇಳಿದ ಮಾತಿನ ಸಂಪೂರ್ಣ ಪಾಠ ಹೀಗಿದೆ. ಇದನ್ನು ಡಾ. ಖರೆ ನನಗಾಗಿ ಲಿಖಿತ ರೂಪದಲ್ಲಿ ಬರೆದುಕೊಟ್ಟಿದ್ದಾರೆ.

"ನನ್ನ ಎರಡನೆಯ ಮಂತ್ರಿಮಂಡಲದಲ್ಲಿ ಹರಿಜನನೊಬ್ಬನನ್ನು ಸೇರಿಸಿಕೊಂಡಿದ್ದಕ್ಕೆ ಮಹಾತ್ಮಾಜಿ ನನ್ನನ್ನು ತರಾಟೆಗೆ ತೆಗೆದುಕೊಂಡರು. ಯಾವ ಹರಿಜನೋದ್ಧಾರಕ್ಕಾಗಿ ಮಹಾತ್ಮಾಜಿ ಆಮರಣಾಂತ ಉಪವಾಸ ಕೈಗೊಂಡಿದ್ದರೋ ಅದೇ ಕಾಂಗ್ರೆಸ್ ಕಾರ್ಯಕ್ರಮದ ಮುಂದುವರಿಕೆಗಾಗಿ ನಾನು ಸಿಕ್ಕ ಸಂದರ್ಭವನ್ನು ಉಪಯೋಗಿಸಿಕೊಂಡು ಹಾಗೆ ಮಾಡಿದೆನೆಂದೂ, ಇದರಲ್ಲಿ ಯಾವ ತಪ್ಪನ್ನೂ ನಾನು ಮಾಡಿಲ್ಲವೆಂದೂ ಅವರಿಗೆ ಉತ್ತರಕೊಟ್ಟೆ. ಆಗ ನಾನು ಸ್ವಾರ್ಥದ ಆಸೆಯಿಂದಾಗಿ ಹಾಗೆ ಮಾಡಿದೆನೆಂದು ಮಹಾತ್ಮಾಜಿ ಆರೋಪಿಸಿದರು. ನಾನು ಸ್ವಾರ್ಥದ ಕಾರಣಗಳಿಂದ ಆ ರೀತಿ ಮಾಡಿದ್ದರೆ ನನ್ನ ರಾಜೀನಾಮೆಯೇ ಅದನ್ನು ನಿರಾಧಾರ ಎಂದು ತೋರಿಸುತ್ತದೆಂದು ಆರೋಪವನ್ನು ಅಲ್ಲಗಳೆದೆ. ಆಗ ಮಹಾತ್ಮಾಜಿ, ನನ್ನ ಈ ಕೆಲಸದಿಂದಾಗಿ ಆ ನಿಷ್ಕಪಟ ಜನಾಂಗದ ಸದಸ್ಯರುಗಳ ನಡುವೆ ಬಿರುಕು ಉಂಟಾಯಿತೆಂದೂ, ಈ ರೀತಿ ಆಸೆ ಆಮಿಷಗಳನ್ನು ಅವರಿಗೆ ಒಡ್ಡಿ ಕಾಂಗ್ರೆಸ್‌ಗೆ ದ್ರೋಹ ಬಗೆದೆನೆಂದೂ ಆರೋಪಿಸಿದರು."*

ಒಬ್ಬ ಅಸ್ಪೃಶ್ಯನನ್ನು ಮಂತ್ರಿಮಂಡಲಕ್ಕೆ ಸೇರಿಸಿಕೊಂಡಿದ್ದರ ವಿರುದ್ಧ ಗಾಂಧೀಜಿ ಪ್ರತಿಭಟಿಸಿದರು ಎನ್ನುವುದಕ್ಕೆ ಸಾಕ್ಷಿಯೆನ್ನುವಂತೆ ಕೇಂದ್ರೀಯ ಪ್ರಾಂತ್ಯಗಳಲ್ಲಿ ಹೊಸ ಮಂತ್ರಿಮಂಡಲ ಸ್ಥಾಪಿತವಾದಾಗ ಒಂದೇ ದಿನ ಮಂತ್ರಿಯಾಗಿದ್ದ ಆ ಅಸ್ಪೃಶ್ಯ ಮಂತ್ರಿಯನ್ನು ಈ ಸಲ ಕೈಬಿಡಲಾಗಿತ್ತು. ತೋರಿಕೆಗಾದರೂ ಅವರನ್ನು ಸೇರಿಸಿಕೊಳ್ಳಬೇಕಿತ್ತು. ಆದರೆ ಹಾಗೆ ಮಾಡಿಲ್ಲವಾದ್ದರಿಂದ ಗಾಂಧೀಜಿ ಎಷ್ಟು ವಿರೋಧಿಗಳಾಗಿದ್ದರು ಎಂದು ತಿಳಿದುಬರುತ್ತದೆ.

ಡಾ. ಖರೆ ಮಂತ್ರಿಮಂಡಲಕ್ಕೆ ಆರಿಸಿದ್ದ ಕೇಂದ್ರೀಯ ಪ್ರಾಂತ್ಯದ ವಿಧಾನ ಸಭೆಯ ಸದಸ್ಯರಾಗಿದ್ದ ಅಸ್ಪೃಶ್ಯ ಪದವೀಧರ, ಕಾಂಗ್ರೆಸ್ಸಿಗ ಹಾಗೂ ಪಕ್ಷದ ಧುರೀಣ. ಇಂಥ ವ್ಯಕ್ತಿಯನ್ನು ಕಾಂಗ್ರೆಸ್ ಮಂತ್ರಿಮಂಡಲಕ್ಕೆ ಸೇರಿಸಿಕೊಂಡಿದ್ದಕ್ಕೆ ಗಾಂಧೀಜಿ ಏಕೆ ವಿರೋಧಿಸಬೇಕಿತ್ತು? ಹಾಗೆ ನೋಡಿದರೆ ಅಸ್ಪೃಶ್ಯರ ಬಗ್ಗೆ ಗಾಂಧೀಜಿಯವರಿಗೆ ನಿಜವಾದ ಭಾವನೆಗಳಿದ್ದರೆ ಎಲ್ಲ ಕಾಂಗ್ರೆಸ್ ಪ್ರಧಾನ ಮಂತ್ರಿಗಳಿಗೂ ತಮ್ಮ ಮಂತ್ರಿಮಂಡಲದಲ್ಲಿ ಒಬ್ಬರಾದರೂ ಅಸ್ಪೃಶ್ಯರನ್ನು ಸೇರಿಸಿಕೊಳ್ಳಬೇಕೆಂದು ಸೂಚಿಸಿರುತ್ತಿದ್ದರು, ಇನ್ನಾವ ಕಾರಣಕ್ಕಲ್ಲದಿದ್ದರೂ ಅಸ್ಪೃಶ್ಯರ ಹಾಗೂ ಹಿಂದೂಗಳ ಮೇಲೆ ಮಾನಸಿಕ ಪ್ರಭಾವ ಬೀರಲಿಕ್ಕಾಗಿಯಾದರೂ; ಅವರು ಯಾವ ಪಕ್ಷದ ಬೆಂಬಲಿಗರಾಗಿದ್ದರೂ ಹೀಗೆ ಮಾಡಬಹುದಿತ್ತು. ಕಾಂಗ್ರೆಸ್ ಬಹುಮತವಿಲ್ಲದ ಪ್ರಾಂತ್ಯಗಳಲ್ಲಿ ಕಾಂಗ್ರೆಸ್ಸೇತರ ಪಕ್ಷಗಳ ಜೊತೆ ಸಮ್ಮಿಶ್ರವಾಗಿ ಅಧಿಕಾರ ಪಡೆಯುವ ವಿಷಯದಲ್ಲಿ ಗಾಂಧೀಜಿ ಅವರ ವಿರೋಧವಿರಲಿಲ್ಲ. ಅಂಥ ಸಮ್ಮಿಶ್ರ ಸರ್ಕಾರಗಳಲ್ಲಿ ಕಾಂಗ್ರೆಸ್ಸೇತರರಿಗೂ ಮಂತ್ರಿ ಪದವಿ ಕೊಡಲು ಅನುಮತಿ ನೀಡಿದ್ದಾರೆ. ಕಾಂಗ್ರೆಸ್ ತನ್ನ ಜಾತಿ–ವರ್ಣಗಳನ್ನು ಕಳೆದುಕೊಳ್ಳದೆ ಹೀಗೆ ಮಾಡಲು ಸಮ್ಮತಿಸಿದ ಗಾಂಧೀಜಿ ಅಸ್ಪೃಶ್ಯರಿಗೆ ತಮ್ಮ ಪ್ರೀತಿ ತೋರಿಸುತ್ತಿರುವುದಾಗಿ ಹೇಳುತ್ತಿದ್ದರೂ ತಮ್ಮ ಕಾಂಗ್ರೆಸ್ ಮಂತ್ರಿಮಂಡಲದಲ್ಲಿ ಒಬ್ಬ ಅಸ್ಪೃಶ್ಯರನ್ನು ಸೇರಿಸಿಕೊಳ್ಳಿ ಎಂದು ಕಾಂಗ್ರೆಸ್ ಪ್ರಧಾನ ಮಂತ್ರಿಗಳಿಗೆ ಅವರು ಯಾಕೆ ನಿರ್ದೇಶಿಸಲಿಲ್ಲವೊ ತಿಳಿಯದು. ಕೇಂದ್ರೀಯ ಪ್ರಾಂತ್ಯದಲ್ಲಿ ಪರಿಸ್ಥಿತಿ ಬೇರೆಯಾಗಿತ್ತು. ಇಲ್ಲಿ ಮಂತ್ರಿಯಾಗಿ ಸೇರಿಸಿಕೊಂಡಿದ್ದ ವ್ಯಕ್ತಿ ಕಾಂಗ್ರೆಸ್ಸಿಗರೂ ಆಗಿದ್ದರು. ಪದವೀಧರರೂ ಆಗಿದ್ದರು. ಅರ್ಹತೆಯ ಕೊರತೆಯಾಗಲಿ, ರಾಜಕೀಯ

* ಈ ಹೇಳಿಕೆಯನ್ನು ಡಾ. ಖರೆ ಬಾಂಬೆಯ 'ಸರ್ವೆಂಟ್ಸ್ ಆಫ್ ಇಂಡಿಯಾ' ಸೊಸೈಟಿಯ ಹಾಲಿನಲ್ಲಿ ಮಾತನಾಡುತ್ತಾ ತಮ್ಮ ನೀತಿಯನ್ನು ಸಮರ್ಥಿಸಿಕೊಳ್ಳುತ್ತ ಪುನರುಚ್ಚರಿಸಿದರು.

ತತ್ವಗಳ ನಂಬಿಕೆಯ ಕೊರತೆಯಾಗಲಿ ಇಲ್ಲಿ ಅಡ್ಡಬರುವಂತಿರಲಿಲ್ಲ. ಹಾಗಿದ್ದ ಮೇಲೂ ಗಾಂಧೀಜಿ ಅವರ ಸೇರ್ಪಡೆಗೆ ವಿರೋಧಿಸಿದ್ದೇಕೆ? ಅಸ್ಪೃಶ್ಯರ ಒಂದು ಗುಂಪು ಗಾಂಧೀಜಿಯನ್ನು ಭೇಟಿಮಾಡಿ ಇದಕ್ಕೆ ವಿವರಣೆ ಕೇಳಲು ಶೇಗಾಂವ್‌ಗೆ ಹೋಯಿತು. ಹೀಗಾಗುತ್ತೆಂದು ಮೊದಲೇ ಊಹಿಸಿದ್ದ ಗಾಂಧೀಜಿ ಮೌನ ಆಚರಣೆ ಶುರು ಮಾಡಿಬಿಟ್ಟಿದ್ದರು. ಹಾಗಾಗಿ ಯಾವ ವಿವರಣೆಯೂ ದೊರೆಯಲಿಲ್ಲ. ಕೇಂದ್ರೀಯ ಪ್ರಾಂತ್ಯದ ಕಾಂಗ್ರೆಸ್ ಮಂತ್ರಿಮಂಡಲದಲ್ಲಿ ಅಸ್ಪೃಶ್ಯರನ್ನು ಸೇರಿಸಿಕೊಂಡಿಲ್ಲವೆಂದು ಅಸ್ಪೃಶ್ಯರು ಗಾಂಧೀಜಿ ಅವರ ವಿರುದ್ಧ ಸತ್ಯಾಗ್ರಹ ಶುರು ಮಾಡಿದರು. ಅವಮಾನ ಸಹಿಸಲಾರದೆ ಗಾಂಧೀಜಿ ಅವರು ಶೇಗಾಂವ್ ಬಿಟ್ಟು ಪಠಾಣರಿಗೆ ಅಹಿಂಸೆ ಬೋಧಿಸಲು ವಾಯವ್ಯ ಸೀಮೆಯ ಪ್ರಾಂತ್ಯಗಳಿಗೆ ಪ್ರವಾಸ ಹೊರಟರು. ಈ ವಿಷಯದಲ್ಲಿ ಗಾಂಧೀಜಿ ಅವರು ಮೌನವಾಗಿದ್ದು ದೇವರ ಜೊತೆ ಸಂಭಾಷಿಸುವುದಕ್ಕಾಗಿ ಅಲ್ಲವೆಂದು ನನಗೆ ಚೆನ್ನಾಗಿ ಗೊತ್ತು. ಅಸ್ಪೃಶ್ಯರ ಬಗ್ಗೆ ಅವರಲ್ಲಿದ್ದ ಆಳವಾದ ಭಾವನೆಗಳು ತೀವ್ರ ಪರೀಕ್ಷೆಯ ಬಿಸಿಯಲ್ಲಿ ಹೊರಬೀಳಬಹುದೆಂಬ ಭಯದಿಂದಾಗಿ ಅದರಿಂದ ತಪ್ಪಿಸಿಕೊಳ್ಳಲು ಒಂದು ನೆಪ ಹುಡುಕಿಕೊಂಡರು, ಅಷ್ಟೆ. ಅಂತೂ ಈ ವಿಷಯದ ಬಗ್ಗೆ ಗಾಂಧೀಜಿ ಅವರಿಂದ ಯಾವ ಉತ್ತರವೂ ದೊರಕಿಲ್ಲ. ನನ್ನ ಪ್ರಕಾರ ಇರುವುದು ಒಂದೇ ಉತ್ತರ; ಗಾಂಧೀಜಿ ಒಂದು ವೇಳೆ ಬಾಯಿ ಬಿಟ್ಟಿದ್ದರೂ ಇದಲ್ಲದೆ ಬೇರೆ ಉತ್ತರ ನೀಡುತ್ತಿರಲಿಲ್ಲ. ಅದೇನೆಂದರೆ ಅಸ್ಪೃಶ್ಯರ ಬಗ್ಗೆ ಗಾಂಧೀಜಿಗಿರುವ ಆದರ್ಶ ಬಹಳ ಕೀಳುಮಟ್ಟದ್ದು. ಅವರು ಬಯಸುವುದಿಷ್ಟನ್ನೆ : ಅಸ್ಪೃಶ್ಯರನ್ನು ಜನ ಮುಟ್ಟಬೇಕು, ಮುಟ್ಟಿದ ಮೇಲೆ ಸ್ನಾನ ಮಾಡಿಕೊಳ್ಳದೇ ಇರಬೇಕು. ಇಷ್ಟಾದರೆ ಸಾಕು. ಅಸ್ಪೃಶ್ಯರಿಗಾಗಿ ಇನ್ನೇನೂ ಮಾಡಬೇಕಾದುದಿಲ್ಲ. ಒಂದು ವೇಳೆ ಗಾಂಧೀಜಿ ಪ್ರಯತ್ನಪಟ್ಟೂ ಸೋತಿದ್ದರೆ ಅವರನ್ನು ಕ್ಷಮಿಸಬಹುದಿತ್ತು. ಆದರೆ ಇಂಥ ಕೀಳು ಆದರ್ಶವನ್ನು ಅನುಸರಿಸಿ ಹೊರಟಿರುವ ಅವರನ್ನು ಕ್ಷಮಿಸಲು ಹೇಗೆ ಸಾಧ್ಯ ? ಕೀಳಾದ ಆದರ್ಶ ಸೋಲಿಗಿಂತಲೂ ದೊಡ್ಡ ಅಪರಾಧ.

ಎರಡನೆಯ ಉದಾಹರಣೆಯಾಗಿ ಬಾಚುಮ ಘಟನೆಯನ್ನು ಇಲ್ಲಿ ಉದ್ಧರಿಸುತ್ತೇನೆ. ಮೊದಲನೆ ಉದಾಹರಣೆ ಗಾಬರಿ ಮೂಡಿಸುವಂತಿದ್ದರೆ ಇದು ಭಯಂಕರವಾಗಿದೆ. ಎಷ್ಟು ಭಯಂಕರವಾಗಿದೆಯೆಂದು ನಾನು ಇಲ್ಲಿ ಕೊಡುವ ಸಾರಾಂಶದಿಂದ ನೀವೇ ತಿಳಿದುಕೊಳ್ಳಬಹುದು. ಬಾಚುಮ, ಹನ್ನೆರಡು ವರ್ಷದ ಹುಡುಗಿ. ವಾರ್ಧಾ (ಈ ಹೆಸರು ಮೂಲಪ್ರತಿಯಲ್ಲಿರಲಿಲ್ಲವಾದ್ದರಿಂದ ನಂತರ ಸೇರಿಸಿದ್ದು – ಸಂ) ದಲ್ಲಿ ವಾಸವಾಗಿದ್ದ ಅಸ್ಪೃಶ್ಯ ಕುಟುಂಬವೊಂದಕ್ಕೆ ಸೇರಿದವಳು. ಒಂದು ಸಂಜೆ ಅವಳನ್ನು ಮರುಳು ಮಾಡಿ ಮುಸಲ್ಮಾನನಾದ ಒಬ್ಬ ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ಮನೆಗೆ ಕರೆದುಕೊಂಡು ಹೋಗಲಾಯಿತು. ಅವಳನ್ನು ರಾತ್ರಿ ಆ ಮನೆಯಲ್ಲೇ ಇರಿಸಿಕೊಂಡು ಮೂರು ಜನ ಮುಸಲ್ಮಾನರು ಅವಳ ಮೇಲೆ ಅತ್ಯಾಚಾರ ಎಸಗಿದರು. ಒಬ್ಬ ಸ್ವತಃ ಪೊಲೀಸ್ ಸಬ್ ಇನ್ಸ್‌ಪೆಕ್ಟರ್; ಎರಡನೆಯವನು ಶಿಕ್ಷಣ ವಿಭಾಗದ ಸಬ್ ಇನ್ಸ್‌ಪೆಕ್ಟರ್; ಮತ್ತು ಮೂರನೆಯವ ಒಬ್ಬ ವಕೀಲ. ಮೂವರನ್ನೂ ನ್ಯಾಯಾಲಯದಲ್ಲಿ ವಿಚಾರಣೆ ನಡೆಸಿ, ಇಬ್ಬರಿಗೆ ಎರಡು ವರ್ಷ ಕಠಿಣ ಸಜ ವಿಧಿಸಲಾಯಿತು. ಆದರೆ ಹುಡುಗಿ ಗುರುತಿಸಲು ಅಸಮರ್ಥಳಾದ್ದರಿಂದ ವಕೀಲನನ್ನು ಬಿಡುಗಡೆ ಮಾಡಿದರು. ಶಿಕ್ಷೆಗೆ ಗುರಿಯಾದ ಇಬ್ಬರು ಉಚ್ಚ ನ್ಯಾಯಾಲಯಕ್ಕೆ ಅಪೀಲು ಹೋದರು. ಉಚ್ಚ ನ್ಯಾಯಾಲಯ ಅವರ ಅಪೀಲನ್ನು ತಿರಸ್ಕರಿಸಿ ಶಿಕ್ಷೆ ಖಾಯಂ ಮಾಡಿತು. ಜೈಲಿನಲ್ಲಿದ್ದುಕೊಂಡೇ ಅವರು ಗೌರ್ನರ್–ಇನ್–ಕೌನ್ಸಿಲ್ ಅವರಿಗೆ ಕ್ಷಮಾದಾನಕ್ಕೆ ಅರ್ಜಿಯನ್ನು ಕಳಿಸಿದರು. ಅದೂ ನಿರಾಕರಿಸಲ್ಪಟ್ಟಿತು. ಇಷ್ಟು ನಡೆದದ್ದು ಕಾಂಗ್ರೆಸ್ ಅಧಿಕಾರಕ್ಕೆ ಬರುವುದಕ್ಕೆ ಮೊದಲು. ಕಾಂಗ್ರೆಸ್ ಅಧಿಕಾರಕ್ಕೆ ಬಂದ ಮೇಲೆ ಅವರಿಬ್ಬರು ಹೊಸದಾಗಿ ನಾಮಪತ್ರಗಳನ್ನು ಸಂಬಂಧಪಟ್ಟ

ಮಂತ್ರಿಗೆ ಕಳಿಸಿದರು. ಆ ಮಂತ್ರಿ ಕೂಡ ಮುಸಲ್ಮಾನನಾಗಿದ್ದರಿಂದ ಮುಸಲ್ಮಾನನೊಬ್ಬ ಅಸ್ಪೃಶ್ಯ ಹುಡುಗಿಯ ಮೇಲೆ ಅತ್ಯಾಚಾರವೆಸಗಿರುವುದರಲ್ಲಿ ಯಾವುದೇ ತಪ್ಪಿಲ್ಲವೆಂದು ಆರೋಪಿಗಳನ್ನು ಬಿಡುಗಡೆ ಮಾಡಿಸಲಿಕ್ಕೆ ಹೊರಟ. ಈಗ ಬಿಡುಗಡೆ ಹೊಂದಿರುವ ಸಬ್ ಇನ್ಸ್‌ಪೆಕ್ಟರ್‌ನ ನಾಮಪತ್ರವನ್ನು ಮಾನ್ಯ ಮಾಡಿ ಅವನಿಗೆ ಮುಸಲ್ಮಾನರ ರಾಜ್ಯವೊಂದರ ಶಿಕ್ಷಣ ವಿಭಾಗದಲ್ಲಿ ದೊಡ್ಡ ಕೆಲಸ ಕೊಡಿಸಿದನು. ಇನ್ನೊಬ್ಬ ಅಪರಾಧಿಯನ್ನೂ ಬಿಡುಗಡೆ ಮಾಡಿಸುವವಷ್ಟರಲ್ಲಿ ಅವನ ವಿರುದ್ಧ ಚಳುವಳಿ ಎಷ್ಟು ಜೋರಾಯಿತೆಂದರೆ ಆ ಮಂತ್ರಿ ರಾಜೀನಾಮೆ ಕೊಡಬೇಕಾಗಿ ಬಂತು. ಈ ಮಂತ್ರಿಯ ನಾಚಿಕೆಗೇಡಿನ ಕೆಲಸವನ್ನು ಎಲ್ಲರೂ ವಿರೋಧಿಸಿದರು. ಆದರೆ ಗಾಂಧೀಜಿ ಮಾತ್ರ ಸುಮ್ಮನಿದ್ದರು. ಇಲ್ಲಿಯವರೆಗೆ ಈ ಮಂತ್ರಿಯ ವಿರುದ್ಧ ಗಾಂಧೀಜಿ ಒಂದು ಮಾತನ್ನೂ ಆಡಿಲ್ಲ. ಬದಲಾಗಿ ಆ ಪದಚ್ಯುತ ಮಂತ್ರಿಯನ್ನು ಖಾಲಿ ಇರುವ ಅದೇ ಹುದ್ದೆಗೆ ಮತ್ತೆ ಸೇರಿಸಿಕೊಳ್ಳುವ ಬಗ್ಗೆ ಅವರೀಗ ಹವಣಿಸುತ್ತಿದ್ದಾರೆ. ಈಗ ಗಾಂಧೀಜಿಯವರನ್ನು ನಾನು ಕೇಳುವ ಪ್ರಶ್ನೆ ಇದು : ಮೂರು ಜನ ಮುಸಲ್ಮಾನರಿಂದ ಅತ್ಯಾಚಾರಕ್ಕೆ ಒಳಗಾದ ಆ ಅಸ್ಪೃಶ್ಯ ಹುಡುಗಿಯ ಜಾಗದಲ್ಲಿ ಗಾಂಧೀಜಿಯವರ ಮಗಳೇ ಒಂದು ವೇಳೆ ಇದ್ದಿದ್ದರೆ ಗಾಂಧೀಜಿ ಆಗಲೂ ಹೀಗೆ ಸುಮ್ಮನಿದ್ದು ಬಿಡುತ್ತಿದ್ದರೆ? ಇದಕ್ಕೆ ಎರಡು ಉತ್ತರ ಸಾಧ್ಯವಿದೆ. ಒಂದು ಗಾಂಧೀಜಿವರು ಅಸ್ಪೃಶ್ಯರಲ್ಲ. ಅವರು ಹುಟ್ಟಿನಿಂದ ಅಸ್ಪೃಶ್ಯರಾಗಿರಬೇಕಿತ್ತು. ಎರಡನೆಯದಾಗಿ ಆ ಮುಸಲ್ಮಾನ ಮಂತ್ರಿಯನ್ನು ಖಂಡಿಸಿದರೆ ಕಾಂಗ್ರೆಸ್ ರಾಜಕೀಯದ ಮೂಲತತ್ವವಾದ ಹಿಂದೂ–ಮುಸಲ್ಮಾನ ಏಕತೆಗೆ ಚ್ಯುತಿ ಬರುತ್ತದೆ. ಇದರಿಂದ ಅಸ್ಪೃಶ್ಯರ ಬಗ್ಗೆ ಗಾಂಧೀಜಿಯವರಿಗಿರುವ ಸಹಾನುಭೂತಿ ಅವರ ರಾಜಕೀಯದಿಂದ ನಿರ್ಧರಿಸಲ್ಪಟ್ಟಿದೆ ಎಂದು ವಿದಿತವಾಗುವುದಿಲ್ಲವೆ?

ತನ್ನ ಅಂತರಾತ್ಮದ ಪ್ರಕಾರ ಸಹಾನುಭೂತಿ ಸೂಚಿಸುವಷ್ಟು ಸ್ವತಂತ್ರನಲ್ಲದ ಮನುಷ್ಯ ಯಾವ ಪುರುಷಾರ್ಥ ಸಾಧಿಸಬಲ್ಲ?

ಈಗ ದೇವಸ್ಥಾನ ಪ್ರವೇಶದ ವಿಷಯಕ್ಕೆ ಗಾಂಧೀಜಿಯವರು ಇದನ್ನು ಅಸ್ಪೃಶ್ಯರಿಗೆ ಸಿಕ್ಕ ಒಂದು ವರಪ್ರಸಾದವೆಂದೇ ಪ್ರಚಾರ ಮಾಡಿಸಿದ್ದಾರೆ.

ದೇವಸ್ಥಾನ ಪ್ರವೇಶದ ಪ್ರಶ್ನೆಯು ೧೯೩೨ರ ಸೆಪ್ಟೆಂಬರ್ ೨೫ರಂದು ಹಿಂದೂಗಳ ಸಾರ್ವಜನಿಕ ಸಭೆಯಲ್ಲಿ ಅಂಗೀಕಾರ ಪಡೆಯಿತು; ಇದೇ ಸಭೆಯು ಹರಿಜನ ಸೇವಕ ಸಂಘದ ಸ್ಥಾಪನೆಗೆ ನಾಂದಿಯಾಯಿತು. ಅಸ್ಪೃಶ್ಯರಿಗೆ ಹಿಂದೂಗಳು ಕೊಟ್ಟ ಸಾಲಗಳ ಬಗ್ಗೆ ಮಸೂದೆ ಸೂಚಿಸಿತು. ಈ ಪಟ್ಟಿಯಲ್ಲಿ ಹಿಂದೂ ದೇವಾಲಯಗಳ ಅಸ್ಪೃಶ್ಯರ ಪ್ರವೇಶ ನಿಷೇಧವನ್ನು ವಿರೋಧಿಸುವ ವಿಷಯವನ್ನು ಸೇರಿಸಲಾಗಿತ್ತು.

ಮಸೂದೆಯಲ್ಲಿ ದೇವಾಲಯ ಪ್ರವೇಶದ ಆಶ್ವಾಸನೆ ಇದ್ದರೂ ಅದು ತಕ್ಷಣವೇ ಜಾರಿಗೆ ಬರಬೇಕೆಂದು ಅಸ್ಪೃಶ್ಯರೇನೂ ಒತ್ತಾಯ ಮಾಡಲಿಲ್ಲ. ಅಸ್ಪೃಶ್ಯರಲ್ಲಿ ಅನೇಕರಿಗೆ ದೇವಾಲಯ ಪ್ರವೇಶ ಬೇಕಾಗಿರಲಿಲ್ಲ. ಗಾಂಧೀಜಿಯವರು ಈ ವಿಷಯದಲ್ಲಿ ನನ್ನ ಅಭಿಪ್ರಾಯ ಕೇಳಿದಾಗ ಒಂದು ಹೇಳಿಕೆಯ ರೂಪದಲ್ಲಿ ನನ್ನ ಅಭಿಪ್ರಾಯವನ್ನು ಕೊಟ್ಟೆ. ಇದನ್ನು ಪತ್ರಿಕೆಗಳಿಗೆ ೧೯೩೩ರ ಫೆಬ್ರವರಿ ೧೦ರಂದು ಬಿಡುಗಡೆ ಮಾಡಿದೆ. ಅದು ಹೀಗಿದೆ :

## ದೇವಾಲಯ ಪ್ರವೇಶದ ಬಗ್ಗೆ ಹೇಳಿಕೆ

ದೇವಾಲಯದ ಪ್ರವೇಶ ವಿಷಯವು ಸನಾತನಿಗಳ ಹಾಗೂ ಮಹಾತ್ಮಾ ಗಾಂಧಿಯವರ ನಡುವಿನ ವಿವಾದವಾಗಿದ್ದರೂ ಈ ವಿಷಯದಲ್ಲಿ ಶೋಷಿತ ವರ್ಗದವರ ಪಾತ್ರ ಸಾಕಷ್ಟು ಮುಖ್ಯವೆನಿಸಿದೆ. ಹೇಗೆಂದರೆ ಅಂತಿಮವಾಗಿ ಇವರ ಅಭಿಪ್ರಾಯದ ಮೇಲೆ ವಿವಾದದ ತಕ್ಕಡಿಯಲ್ಲಿ ಯಾವ ಪಕ್ಷದ್ದು ಯಾವ ಸ್ಥಿತಿಯೆನ್ನವುದು ಇತ್ಯರ್ಥವಾಗುವುದು. ಆದ್ದರಿಂದ ಇವರ ದೃಷ್ಟಿಕೋನವನ್ನು ವಿವರವಾಗಿ ತಿಳಿಸಿ ಯಾವ ಭಿನ್ನಾಭಿಪ್ರಾಯಕ್ಕೂ

ಆಸ್ಪದ ಕೊಡದಿರುವುದು ಅವಶ್ಯವಾಗಿದೆ.

ಈಗ ರೂಪಿತವಾಗಿರುವ ಶ್ರೀರಂಗ ಐಯ್ಯರ್ ಅವರ ದೇವಾಲಯ ಪ್ರವೇಶ ಮಸೂದೆಗೆ ಶೋಷಿತ ವರ್ಗದವರು ಬೆಂಬಲಿಸುವುದು ಸಾಧ್ಯವಾಗಲಿಕ್ಕಿಲ್ಲ. ಈ ಮಸೂದೆಯ ಮುಖ್ಯ ಅಂಶವೆಂದರೆ ಯಾವುದೇ ದೇವಾಲಯದ ಅಸುಪಾಸಿನ ಪುರಸಭೆ ಹಾಗೂ ಸ್ಥಾನೀಯ ಸಂಸ್ಥೆಯ ಬಹುಸಂಖ್ಯಾತ ಮತದಾರರು ಶೋಷಿತ ವರ್ಗದವರು ದೇವಾಲಯ ಪ್ರವೇಶ ಮಾಡಬಹುದೆಂದು ಪ್ರಜಾಮತ ಸಂಗ್ರಹದ ಮೂಲಕ ನಿರ್ಧರಿಸಿದ ಪಕ್ಷದಲ್ಲಿ ಆಯಾ ದೇವಾಲಯದ ಟ್ರಸ್ಟಿಗಳು ಅಥವಾ ಮ್ಯಾನೇಜರನು ಈ ನಿರ್ಧಾರವನ್ನು ಜಾರಿಗೊಳಿಸಬಹುದು. ಇದು ಬಹುಸಂಖ್ಯಾತರ ಆಳ್ವಿಕೆಯ ಒಂದು ಸಾಮಾನ್ಯ ಲಕ್ಷಣ. ಇದರಲ್ಲಿ ಯಾವುದೇ ರ್‍ಯಾಡಿಕಲ್ ಅಥವಾ ಕ್ರಾಂತಿಕಾರೀ ಅಂಶವಿಲ್ಲ. ಸನಾತನಿಗಳು ಬುದ್ಧಿವಂತರಾಗಿದ್ದರೆ ಈ ಕ್ರಮವನ್ನು ಚಕಾರವಿಲ್ಲದೆ ಒಪ್ಪುತ್ತಾರೆ.

ಈ ಮಸೂದೆಯನ್ನು ಶೋಷಿತ ವರ್ಗದವರು ಬೆಂಬಲಿಸದಿರುವುದಕ್ಕೆ ಎರಡು ಕಾರಣಗಳಿವೆ. ಮೊದಲನೆಯದಾಗಿ, ಈ ಮಸೂದೆಯಿಂದ ನೊಂದವರ್ಗದವರ ದೇವಸ್ಥಾನ ಪ್ರವೇಶ ತ್ವರಿತಗತಿಯಲ್ಲಿ ಜಾರಿಯಾಗದೆ, ಯಥಾಗತಿಯಲ್ಲಿ ಸಾಗುತ್ತದೆ. ಬಹುಸಂಖ್ಯಾತರ ನಿರ್ಧಾರಕ್ಕನುಗುಣವಾಗಿ ದೇವಸ್ಥಾನದ ಬಾಗಿಲು ತೆರೆಯುವ ಟ್ರಸ್ಟಿ ಅಥವಾ ಮ್ಯಾನೇಜರ್‌ನ ವಿರುದ್ಧ ಅಲ್ಪಸಂಖ್ಯಾತರು ಆಜ್ಞೆ ಹೊರಡಿಸುವಂತಿಲ್ಲ. ಈ ವಿಷಯವನ್ನು ಮತಚಲಾವಣೆ ಮೂಲಕ ನಿರ್ಧರಿಸಹೊರಟರೆ ದೇವಸ್ಥಾನ ಪ್ರವೇಶದ ಪರವಾಗಿ ಬಹುಮತ ಬರಬಹುದೆಂದು ನಂಬಿ, ಇದರಿಂದ ನಾವು ಸಮಾಧಾನಪಟ್ಟುಕೊಂಡು ಮಸೂದೆ ರಚಿಸಿದವನನ್ನು ಅಭಿನಂದಿಸಬೇಕಾಗಿದೆ. ದೇವಾಲಯ ಪ್ರವೇಶದ ಪರವಾಗಿ ಬಹುಮತ ಬರುತ್ತದೆಂದು ಯಾವುದೇ ಭ್ರಮೆಗಳನ್ನಿಟ್ಟುಕೊಂಡರೆ ನಿರಾಶೆಯಾಗುವುದು ಖಂಡಿತ. ಬಹುಸಂಖ್ಯಾತರು ಇದನ್ನು ವಿರೋಧಿಸುತ್ತಾರೆನ್ನುವುದರಲ್ಲಿ ಸಂಶಯವೇ ಇಲ್ಲ. ಇದು ಮಸೂದೆ ಕರ್ತೃವಿಗೂ ಗೊತ್ತೆಂದು ಅವರ ಮತ್ತು ಶಂಕರಾಚಾರ್ಯರ ನಡುವಿನ ಪತ್ರಗಳ ಮೂಲಕ ತಿಳಿದುಬರುತ್ತದೆ. ಮಸೂದೆಯನ್ನು ಜಾರಿಗೊಳಿಸಿದ ಮೇಲಿನ ಸಂದರ್ಭದಲ್ಲಿ ಬಹುಸಂಖ್ಯಾತರು ಬೇರೆ ರೀತಿಯಲ್ಲಿ ವರ್ತಿಸುವುದಿಲ್ಲ ಎನ್ನುವುದಕ್ಕೆ ಯಾವ ಆಧಾರಗಳಿವೆ? ನನಗಂತೂ ಯಾವುದೂ ಕಾಣುತ್ತಿಲ್ಲ. ಗುರುವಾಯೂರು ದೇವಸ್ಥಾನದ ವಿಚಾರದಲ್ಲಿ ನಡೆದ ಪ್ರಜಾಮತ ಸಂಗ್ರಹಣೆ ವಿಷಯ ನನಗೆ ಖಂಡಿತ ನೆನಪಾಗುತ್ತದೆ. ಆದರೆ ಮಹಾತ್ಮಾ ಗಾಂಧಿಯವರ ಜೀವದಿಂದಾಗಿ ಆ ರೀತಿಯ ಪ್ರಜಾಮತ ಸಂಗ್ರಹಣೆಯನ್ನು ನಡೆಸಿದ್ದನ್ನು ನಾನು ಒಪ್ಪಲಾರೆ. ಅಂಥಾ ಸಂದರ್ಭದಲ್ಲಿ ಮಹಾತ್ಮಾ ಗಾಂಧೀಯವರ ಜೀವನ ತೂಕವನ್ನರಿತು ಖಂಡಿತಾ ಪಕ್ಕಕ್ಕಿಡಬೇಕಾಗುತ್ತದೆ. ಎರಡನೆಯದಾಗಿ ದೇವಾಲಯದ ವಿಷಯಗಳಲ್ಲಿ ಅಸ್ಪೃಶ್ಯತೆ ಒಂದು ಪಾಪಮಯ ಸಂಪ್ರದಾಯವೆಂದು ಈ ಮಸೂದೆ ಒಪ್ಪಿಕೊಳ್ಳುವುದಿಲ್ಲ. ಅದರ ಪ್ರಕಾರ ಅಸ್ಪೃಶ್ಯತೆ ಕೇವಲ ಸಾಮಾಜಿಕ ಕಳಂಕವಾಗಿದ್ದು, ಬೇರೆ ಸಾಮಾಜಿಕ ಕಳಂಕಗಳಿಗಿಂತ ಭಿನ್ನವಲ್ಲವಾಗಿದೆ. ಯಾಕೆಂದರೆ ಅಸ್ಪೃಶ್ಯತೆ ಕಾನೂನು ಬಾಹಿರವೆಂದು ಅದು ಎಲ್ಲೂ ಘೋಷಿಸಿಲ್ಲ. ಬಹುಸಂಖ್ಯಾತರು ಮನಸ್ಸು ಮಾಡಿದರೆ ಅದನ್ನು ನಿರುಪಯುಕ್ತಗೊಳಿಸಬಹುದಾಗಿದೆ. ಪಾಪ ಮತ್ತು ಅನೈತಿಕತೆಗಳನ್ನು ಬಹುಸಂಖ್ಯಾತರು ಆಚರಿಸಬಯಸುತ್ತಾರೆಂಬ ಕಾರಣಕ್ಕಾಗಿ ಅಥವಾ ಬಹುಸಂಖ್ಯಾತರು ಅದಕ್ಕೆ ಒಗ್ಗಿಹೋಗಿದ್ದಾರೆಂಬ ಕಾರಣಕ್ಕಾಗಿ ನಾವು ಸುಮ್ಮನಿರಲಾಗುವುದಿಲ್ಲ. ಅಸ್ಪೃಶ್ಯತೆಯು ಒಂದು ಪಾಪ ಮತ್ತು ಅನೈತಿಕ ಆಚರಣೆಯೆಂದಾದರೆ, ಶೋಷಿತ ವರ್ಗದವರ ಹಿತದೃಷ್ಟಿಯಲ್ಲಿ ಅದನ್ನು ಯಾವ ಹಿಂಜರಿಕೆಯೂ ಇಲ್ಲದೆ ನಾಶಮಾಡಬೇಕು, ಬಹುಸಂಖ್ಯಾತರು ಒಪ್ಪದಿದ್ದರೂ ಕೂಡ. ಎಲ್ಲ ನ್ಯಾಯಾಲಯಗಳೂ ಯಾವುದೇ ಅನೈತಿಕ ಸಂಪ್ರದಾಯ ಅಥವಾ ಸಾರ್ವಜನಿಕ ಹಿತಾಸಕ್ತಿಗೆ

ವಿರೋಧವಾಗಿರುವ ಸಂಪ್ರದಾಯದ ಬಗ್ಗೆ ಇದೇ ಕ್ರಮ ತೆಗೆದುಕೊಳ್ಳಬೇಕು. ಆದರೆ ಮೇಲೆ ಹೇಳಿದ ಮಸೂದೆಯು ಮಾತ್ರ ಇದನ್ನು ಮಾಡುತ್ತಿಲ್ಲ. ಕುಡಿತದ ವಿಷಯದಲ್ಲಿ ಮಿತಪಾನಿ ಸಮಾಜ ಸುಧಾರಕನೊಬ್ಬ ಬದಲಾವಣೆ ತರಲು ಪಡುವುದಕ್ಕಿಂತ ಹೆಚ್ಚಿನ ಶ್ರಮವನ್ನೇನೂ ಈ ಮಸೂದೆಯ ಕರ್ತೃ ಪಡುತ್ತಿಲ್ಲ. ಇವೆರಡು ಸಮಸ್ಯೆಗಳ ನಡುವಿನ ಸಾಮ್ಯದಿಂದ ಅವನು ಎಷ್ಟು ಪ್ರಭಾವಿತನಾಗಿದ್ದಾನೆಂದರೆ ಮಿತಪಾನಿಗಳಾದ ಸಮಾಜ ಸುಧಾರಕರು ಆರಿಸಿಕೊಂಡ ಕುಡಿತ ವಿರೋಧಿ ಕ್ರಮಗಳನ್ನಷ್ಟೆ ತಾನೂ ಆರಿಸಿಕೊಂಡಿದ್ದಾನೆ. ಅಸ್ಪೃಶ್ಯತೆಯನ್ನು ಕುಡಿತಕ್ಕಿಂತ ಹೆಚ್ಚು ಕೆಟ್ಟದ್ದೆಂದು ಭಾವಿಸದ ಅಂಥ ಶೋಷಿತ ವರ್ಗದ ಗೆಳೆಯನ ಬಗ್ಗೆ ಬಹಳ ಕೃತಜ್ಞರಾಗಬೇಕಾಗಿಲ್ಲ. ಕೆಲವೇ ತಿಂಗಳ ಹಿಂದೆ ಅಸ್ಪೃಶ್ಯತೆ ನಿವಾರಣೆಯಾಗದಿದ್ದರೆ ಆಮರಣಾಂತ ಉಪವಾಸ ಮಾಡಲು ಮಹಾತ್ಮಾಗಾಂಧಿ ಸಿದ್ಧರಿದ್ದರೆಂಬ ವಿಷಯ ಶ್ರೀರಂಗ ಐಯ್ಯರ್ ಮರೆತಿರದಿದ್ದರೆ ಈ ಶಾಪವನ್ನು ಅವರು ಬಹಳ ಗಂಭೀರವಾಗಿ ಪರೀಕ್ಷಿಸಿ, ಹೆಚ್ಚು ಪಕ್ಕಾದ ಬದಲಾವಣೆ ಕ್ರಮದಿಂದ ಅಸ್ಪೃಶ್ಯತೆಯನ್ನು ಬುಡಸಮೇತ ನಿವಾರಿಸುವ ಕಾರ್ಯಕ್ರಮವನ್ನು ಮುಂದಿಡುತ್ತಿದ್ದರು. ಮಸೂದೆಯಲ್ಲಿ ಕಾರ್ಯ ಸಾಧಿಸುವಂತಹ ಶಕ್ತಿಯ ಕೊರತೆಯಿದ್ದರೂ ಕೂಡಾ ಶೋಷಿತ ವರ್ಗದವರು ಅಸ್ಪೃಶ್ಯತೆಯನ್ನು ಪಾಪವನ್ನಾಗಿ ಪರಿಗಣಿಸಬೇಕೆಂದು ಮಾತ್ರ ಬಯಸುತ್ತಿದ್ದರು. ಅಸ್ಪೃಶ್ಯತೆ ನಿಜವಾಗಿಯೂ ಒಂದು ಪಾಪವೆಂದು ನಂಬಿದ್ದ ಮಹಾತ್ಮಾ ಗಾಂಧಿಯವರು ಈ ಮಸೂದೆಯಿಂದ ಹೇಗೆ ತೃಪ್ತಿಹೊಂದಿದ್ದಾರೆಂದು ನನಗೆ ತಿಳಿಯುತ್ತಿಲ್ಲ. ಆ ಮಸೂದೆ ಒಳ್ಳೆಯದೋ ಕೆಟ್ಟದ್ದೋ ಅಥವಾ ಸಾಕಷ್ಟು ಶಕ್ತವೊ ಅಶಕ್ತವೊ ಎನ್ನುವುದು ಕೇವಲ ಉಪ ಪ್ರಶ್ನೆಗಳು. ಮುಖ್ಯ ಪ್ರಶ್ನೆಯೆಂದರೆ, ನೊಂದವರ್ಗದವರು ದೇವಾಲಯ ಪ್ರವೇಶ ಬಯಸುತ್ತಾರೋ ಇಲ್ಲವೋ ಎನ್ನುವುದು. ಈ ಮುಖ್ಯ ಪ್ರಶ್ನೆಯನ್ನು ಶೋಷಿತ ವರ್ಗದವರು ಎರಡು ದೃಷ್ಟಿಕೋನಗಳಿಂದ ನೋಡುತ್ತಾರೆ. ಮೊದಲನೆಯದು ಭೌತಿಕವಾದ ದೃಷ್ಟಿಕೋನ. ಇಲ್ಲಿಂದ ಮೊದಲಾಗಿ ಶೋಷಿತ ವರ್ಗದವರು ಉನ್ನತ ಶಿಕ್ಷಣ, ಉನ್ನತ ಉದ್ಯೋಗ ಮತ್ತು ಒಳ್ಳೆಯ ಜೀವನಾವಕಾಶಗಳಿಂದ ತಮ್ಮ ಉದ್ಧಾರ ಖಂಡಿತ ಎಂದು ನಂಬಿದ್ದಾರೆ. ಸಾಮಾಜಿಕ ಜೀವನದ ಏಣಿಯಲ್ಲಿ ಒಮ್ಮೆ ತಾವು ಒಳ್ಳೆಯ ಸ್ಥಾನ ಗಿಟ್ಟಿಸಿಕೊಂಡರೆ ಮರ್ಯಾದಸ್ಥರಾಗುತ್ತಾರೆಂದು, ಒಮ್ಮೆ ತಾವು ಮರ್ಯಾದಸ್ಥರಾದರೆ ಸಂಪ್ರದಾಯಸ್ಥರ ಧಾರ್ಮಿಕ ದೃಷ್ಟಿ ತಮ್ಮ ಬಗ್ಗೆ ಬದಲಾಗುತ್ತೆಂದೂ ನಂಬಿದ್ದಾರೆ. ಇದೇ ರೀತಿ ಯೋಚಿಸುವ ಶೋಷಿತ ವರ್ಗದವರು ತಮ್ಮ ಸಂಪನ್ಮೂಲಗಳನ್ನು ದೇವಾಲಯ ಪ್ರವೇಶದಂತಹ ಕ್ಷುಲ್ಲಕ ವಿಷಯಕ್ಕೆ ಖರ್ಚುಮಾಡುವುದಿಲ್ಲವೆಂದು ಹೇಳುತ್ತಾರೆ. ಹೋರಾಟಕ್ಕೆ ಅವರು ಯಾಕೆ ಮುಂದೆ ಬರುವುದಿಲ್ಲವೆನ್ನುವುದಕ್ಕೆ ಮತ್ತೊಂದು ಕಾರಣ ಇದೆ. ಅದು ಆತ್ಮ ಗೌರವಕ್ಕೆ ಸಂಬಂಧಿಸಿದ ಮಾತು. ಇತ್ತೀಚಿನವರೆಗೂ ಯೂರೋಪಿನವರು ನಡೆಸುತ್ತಿದ್ದ ಕ್ಲಬ್ ಮುಂತಾದ ಸಾರ್ವಜನಿಕ ಸ್ಥಳಗಳ ಬಾಗಿಲಿನಲ್ಲಿ 'ಭಾರತೀಯರು ಹಾಗೂ ನಾಯಿಗಳಿಗೆ ಪ್ರವೇಶವಿಲ್ಲ' ಎಂಬ ಫಲಕಗಳನ್ನು ಹಾಕುತ್ತಿದ್ದರು. ಈದಿನ ಹಿಂದೂ ದೇವಾಲಯಗಳು ಈ ರೀತಿಯ ಫಲಕಗಳನ್ನು ಹೊತ್ತಿವೆ. ಒಂದೇ ವ್ಯತ್ಯಾಸವೆಂದರೆ ಹಿಂದೂ ದೇವಾಲಯಗಳ ಮುಂದಿರುವ ಫಲಕಗಳು "ಅಸ್ಪೃಶ್ಯರನ್ನು ಹೊರತು ಎಲ್ಲ ಪ್ರಾಣಿಗಳಿಗೂ, ಎಲ್ಲ ಹಿಂದೂಗಳಿಗೂ ಪ್ರವೇಶವುಂಟು" ಎಂದು ಹೇಳುತ್ತವೆ. ಇವೆರಡೂ ವಿಷಯಗಳು ಒಂದೇ ತೆರನಾದವು. ಯೂರೋಪಿನವರು ಹುಂಬತನದಿಂದ ಹಾಕಿದ ನಿಷೇಧವನ್ನು ವಿರೋಧಿಸಿ ಹಿಂದೂಗಳು ಆ ಜಾಗಗಳಿಗೆ ಬಲವಂತ ಪ್ರವೇಶ ಬೇಡಲಿಲ್ಲ. ಹಾಗಿದ್ದ ಮೇಲೆ ಹಿಂದೂಗಳ ಹುಂಬತನ ಅಸ್ಪೃಶ್ಯರ ದೇವಾಲಯ ಪ್ರವೇಶ ವಿರೋಧಿಸಿದರೆ ಅಸ್ಪೃಶ್ಯರು ಪ್ರವೇಶ ಅಪೇಕ್ಷಿಸಿ ಅವರನ್ನು ಯಾಕೆ ಬೇಡಿಕೊಳ್ಳಬೇಕು? ಇದು ಭೌತಿಕ ಹಿತಾಸಕ್ತಿ ಹೊಂದಿದ ಶೋಷಿತ ವರ್ಗದವನ ವಾದಸರಣಿ. ಅವನು ಹಿಂದೂಗಳನ್ನುದ್ದೇಶಿಸಿ. ಹೀಗೆ ಹೇಳಬಲ್ಲ: "ದೇವಾಲಯವನ್ನು ತೆರೆಯಬೇಕೊ ಬೇಡವೊ ಎನ್ನುವುದು ನಿನಗೆ ಸೇರಿದ ವಿಷಯ.

ಅದರ ಬಗ್ಗೆ ನಾನಂತೂ ಕಳವಳಪಡುವುದಿಲ್ಲ. ವ್ಯಕ್ತಿಯ ವ್ಯಕ್ತಿತ್ವದ ಪಾವಿತ್ರ್ಯಕ್ಕೆ ಮರ್ಯಾದೆ ಕೊಡದಿರುವುದು ದುರ್ನಡತೆ ಎನಿಸಿದರೆ, ಬರೀ 'ಹಿಂದೂ' ಆಗಿರುತ್ತೇನೇ ಎಂದುಕೊಂಡರೆ, ಬಾಗಿಲು ಮುಚ್ಚಿಕೊಂಡು ಹಾಳಾಗಿ ಹೋಗು. ನನಗೆ ಒಳಕ್ಕೆ ಬರಲು ಆಸಕ್ತಿಯೇನಿಲ್ಲ."

ಈ ವಾದವನ್ನು ನಾನು ಈ ರೀತಿ ಮಂಡಿಸುತ್ತಿರುವುದಕ್ಕೆ ಕಾರಣ ಶೋಷಿತ ವರ್ಗದವರು ತಮ್ಮಂಥವರ ಆಶ್ರಯ ಬಯಸುತ್ತಾರೆಂದು ತಿಳಿದಿರುವ ಪಂಡಿತ ಮದನಮೋಹನ ಮಾಳವೀಯರಂಥವರಿಗೆ ವಾಸ್ತವವೇನೆಂದು ತಿಳಿಯಪಡಿಸಬೇಕು. ಎರಡನೆಯದು ಪಾರಮಾರ್ಥಿಕ ದೃಷ್ಟಿಕೋನ. ಧಾರ್ಮಿಕ ಮನೋಭಾವವುಳ್ಳ ಶೋಷಿತ ವರ್ಗದವರು ದೇವಾಲಯ ಪ್ರವೇಶ ಬಯಸುತ್ತಾರೋ ಅಥವಾ ಇಲ್ಲವೋ ಎಂಬುದೇ ಈಗಿನ ಪ್ರಶ್ನೆ. ಭೌತಿಕ ದೃಷ್ಟಿಕೋನವು ಎಲ್ಲೆಡೆ ಇರುವುದಾದರೆ ಆ ವಿಷಯವೇ ಬೇರೆ. ಆದರೆ ಪಾರಮಾರ್ಥಿಕ ದೃಷ್ಟಿಕೋನದಿಂದ ನೋಡುವುದಾದರೆ ಅಸ್ಪೃಶ್ಯರು ದೇವಾಲಯ ಪ್ರವೇಶ ವಿಷಯದಲ್ಲಿ ಅನಾಸಕ್ತರೇನಲ್ಲ. ಆದರೆ ಅವರ ಅಂತಿಮ ಮಾತು, ಮಹಾತ್ಮಾ ಗಾಂಧಿ ಮತ್ತು ಹಿಂದೂಗಳು ಈ ಕೆಳಗಿನ ಪ್ರಶ್ನೆಗೆ ನೀಡುವ ಉತ್ತರವನ್ನು ಅವಲಂಬಿಸಿರುತ್ತದೆ.

ದೇವಾಲಯ ಪ್ರವೇಶದ ಹಿಂದಿರುವ ಪ್ರೇರಣೆಯೇನು? ಹಿಂದೂಗಳ ದೊಡ್ಡಿಯಲ್ಲಿರುವ ಶೋಷಿತ ವರ್ಗದವರ ಸಾಮಾಜಿಕ ಸ್ಥಿತಿ ಉತ್ತಮಪಡಿಸಲು ಮುಟ್ಟಲೇಬೇಕಾದ ಅಂತಿಮ ಗುರಿ ಈ ದೇವಾಲಯ ಪ್ರವೇಶವೇ? ಅಥವಾ ಇದು ಕೇವಲ ಮೊದಲ ಹೆಜ್ಜೆಯೇ? ಹೌದಾದರೆ, ಅಂತಿಮ ಗುರಿ ಯಾವುದು? ದೇವಾಲಯ ಪ್ರವೇಶವೇ ಅಂತಿಮ ಗುರಿ ಎನ್ನುವ ಆದರ್ಶವನ್ನು ಶೋಷಿತ ವರ್ಗದವರು ಬೆಂಬಲಿಸಲು ಸಾಧ್ಯವಿಲ್ಲ. ಅದನ್ನು ತಿರಸ್ಕರಿಸುವುದು ಮಾತ್ರವಲ್ಲ. ತಮ್ಮನ್ನು ಹಿಂದೂಗಳಿಂದ ತಿರಸ್ಕೃತರಾದವರು ಎಂದೇ ಭಾವಿಸಿ, ತಮ್ಮ ಭವಿಷ್ಯವನ್ನು ಎಲ್ಲಿ ಬೇಕಾದರೂ ರೂಪಿಸಿಕೊಳ್ಳಲು ಸ್ವತಂತ್ರರೆಂದು ತಿಳಿಯುತ್ತಾರೆ. ಇದು ಕೇವಲ ಮೊದಲ ಹೆಜ್ಜೆಯಾಗಿದ್ದರೆ ಬಹುಶಃ ಇದನ್ನು ಬೆಂಬಲಿಸುತ್ತಿದ್ದರು. ಆಗ ಪರಿಸ್ಥಿತಿ ಭಾರತದ ರಾಜಕೀಯದಲ್ಲಾಗುತ್ತಿರುವುದಕ್ಕೆ ಸಮಾನಾಂತರವಾಗುತ್ತದೆ. ಭಾರತಕ್ಕೆ ಡೊಮಿನಿಯನ್ ಸ್ಥಾನಮಾನ ಸಿಗಬೇಕೆಂಬುದು ಭಾರತೀಯರೆಲ್ಲರ ಆಗ್ರಹ. ಆದರೆ ಸಂವಿಧಾನದಲ್ಲಿ ವಾಸ್ತವವಾಗಿ ಡೊಮಿನಿಯನ್ ಸ್ಥಾನಮಾನ ನೀಡಲಾಗಿಲ್ಲ; ಹಾಗಿದ್ದೂ ಅನೇಕ ಭಾರತೀಯರು ಇದನ್ನು ಒಪ್ಪುತ್ತಾರೆ. ಯಾಕೆ? ಇದಕ್ಕೆ ಉತ್ತರ : ಅಂತಿಮ ಗುರಿ ನಿರ್ಧಾರವಾಗಿದೆ, ಅದನ್ನು ಹಂತ ಹಂತವಾಗಿ ಮುಟ್ಟಬೇಕೇ ಹೊರತು ಒಂದೇ ಜಿಗಿತಕ್ಕೆ ಅಲ್ಲ. ಒಂದು ವೇಳೆ ಬ್ರಿಟಿಷರು ಡೊಮಿನಿಯನ್ ಸ್ಥಾನಮಾನ ನೀಡಲು ಒಪ್ಪಿಲ್ಲದಿದ್ದರೆ, ಈ ಕೆಲವು ಸುಧಾರಣಾ ಕ್ರಮಗಳಿಗೆ ಯಾರೂ ಸಮ್ಮತಿಸುತ್ತಿರಲಿಲ್ಲ. ಅದೇ ರೀತಿ ಮಹಾತ್ಮಾಗಾಂಧಿ ಮತ್ತು ಸಮಾಜಸುಧಾರಕರು ಶೋಷಿತ ವರ್ಗದವರ ಸಾಮಾಜಿಕ ಏಳಿಗೆಗಾಗಿ ಹಮ್ಮಿಕೊಂಡಿರುವ ತಮ್ಮ ಗೊತ್ತುಗುರಿಯನ್ನು ಬಹಿರಂಗಪಡಿಸಿದರೆ, ದೇವಾಲಯ ಪ್ರವೇಶದ ವಿಷಯದಲ್ಲಿ ತಮ್ಮ ನಿಲುವನ್ನು ಘೋಷಿಸುವುದಕ್ಕೆ ಶೋಷಿತ ವರ್ಗದವರಿಗೆ ಸುಲಭವಾಗುತ್ತಿತ್ತು. ಸಂಬಂಧಪಟ್ಟವರಿಗೆಲ್ಲ ತಿಳಿಯಲು ಹಾಗೂ ಗಮನಹರಿಸಲು ಅನುಕೂಲವಾಗಲು ಶೋಷಿತ ವರ್ಗದವರ ಧ್ಯೇಯವನ್ನು ಇಲ್ಲಿ ತಿಳಿಸುತ್ತೇನೆ. ಶೋಷಿತ ವರ್ಗದವರಿಗೆ ಬೇಕಾಗಿರುವುದು ಸಾಮಾಜಿಕ ಸ್ಥಾನಮಾನಗಳಲ್ಲಿ ಸಮಾನತೆ ಕಲ್ಪಿಸುವಂಥ ಒಂದು ಧರ್ಮ. ಅಪಾರ್ಥ ಉಂಟಾಗದಿರಲೆಂದು ಈ ವಿಷಯವನ್ನು ವಿವರಿಸಿ, ಎರಡು ರೀತಿಯ ಸಾಮಾಜಿಕ ಪಿಡುಗುಗಳ ನಡುವಿನ ವ್ಯತ್ಯಾಸ ಗುರುತಿಸಬಯಸುತ್ತೇನೆ. ಇವು ಜಾತಿಯ ಹಾಗೂ ಧರ್ಮದ ಕಾರಣಗಳಿಂದ ಉಂಟಾಗುವ ಸಾಮಾಜಿಕ ಪಿಡುಗುಗಳು. ಸುಸಂಸ್ಕೃತವಾದ ಸಮಾಜದಲ್ಲಿ ಎಂಥ ಸಾಮಾಜಿಕ ಪಿಡುಗುಗಳಿಗೂ ಪರವಾನಗಿ ಸಿಗುವುದಿಲ್ಲ. ಆದರೆ ಧರ್ಮದ ಹೆಸರಿನಲ್ಲಿ ಉಳಿದುಕೊಂಡು ಬಂದಿರುವ ಸಾಮಾಜಿಕ

ಪಿಡುಗುಗಳಿಗೆ ಸಮ್ಮತಿ ಸಿಕ್ಕರೆ ಅದಕ್ಕಿಂತ ಅಸಹ್ಯವಾದದ್ದು ಕೆಟ್ಟದ್ದು ಇನ್ಯಾವುದೂ ಇರಲಾರದು. ಶೋಷಿತ ವರ್ಗದವರು ತಾವು ಅನುಭವಿಸುತ್ತಿರುವ ಈ ಅನ್ಯಾಯವನ್ನು ನಿವಾರಿಸಲು ಸಾಧ್ಯವಾಗಲಾರದು. ಆದರೆ ಇಂಥ ಅನ್ಯಾಯಗಳು ಮುಂದುವರೆಗೊಡುವ ಧರ್ಮವನ್ನು ಇನ್ನು ಮುಂದೆ ಬೆಂಬಲಿಸುವುದಿಲ್ಲ ಎಂದು ಅವರು ಮನಸ್ಸು ಮಾಡಿದ್ದಾರೆ. ಹಿಂದೂ ಧರ್ಮ ಅವರ ಧರ್ಮವಾಗಬೇಕೆಂದರೆ ಈ ಸಾಮಾಜಿಕ ನ್ಯಾಯವನ್ನು ಒಳಗೊಂಡ ಧರ್ಮ ಅದಾಗಬೇಕು. ಹಿಂದೂ ಧರ್ಮದ ನಿಯಮಗಳ ತಿದ್ದುಪಡಿ ಮಾಡಿ ದೇವಾಲಯ ಪ್ರವೇಶ ಸೌಲಭ್ಯ ಕಲ್ಪಿಸಿದ ಮಾತ್ರಕ್ಕೆ ಅದು ಸಮಾನ ಸಾಮಾಜಿಕ ಸ್ಥಾನಮಾನಗಳನ್ನು ಕಲ್ಪಿಸುವ ಧರ್ಮ ಎನಿಸಿಕೊಳ್ಳುವುದಿಲ್ಲ. ರಾಜಕೀಯದಲ್ಲಿ ತುಂಬಾ ಪರಿಚಿತವಾದ ಪದಗಳನ್ನು ಉಪಯೋಗಿಸಿ ಹೇಳುವುದಾದರೆ ಅದು ಅವರನ್ನು ಪರದೇಶಿ ಅನ್ನುವುದರ ಬದಲು ಕೇವಲ ಪ್ರಜೆಗಳೆಂದು ಪರಿಗಣಿಸುತ್ತದೆ. ಇದರಿಂದ ಅವರು ಸ್ವಾತಂತ್ರ್ಯ ಹಾಗೂ ಸಮಾನತೆಯಿರುವ, ಯಾರಿಗೂ ಮೇಲು ಅಥವಾ ಕೀಳಾದ ಸ್ಥಾನ ಪಡೆಯುತ್ತಾರೆಂದು ಅರ್ಥವಲ್ಲ. ಕಾರಣ ತುಂಬ ಸರಳವಾಗಿದೆ: ಹಿಂದೂ ಧರ್ಮವು ಸಾಮಾಜಿಕ ಸ್ಥಾನಮಾನಗಳಲ್ಲಿ ಸಮಾನತೆಯನ್ನು ಒಪ್ಪುವುದಿಲ್ಲ. ಬದಲಾಗಿ ಜನರನ್ನು ಬ್ರಾಹ್ಮಣರು, ಕ್ಷತ್ರಿಯರು, ವೈಶ್ಯರು ಹಾಗೂ ಶೂದ್ರರೆಂಬ ವರ್ಗಗಳನ್ನು ಮಾಡಿ ಅಸಮಾನತೆಯನ್ನು ಪೋಷಿಸುತ್ತದೆ, ಈ ವರ್ಗಗಳು ದ್ವೇಷ, ದಳ್ಳುರಿಗಳಿಂದಾಗಿ ಒಂದಕ್ಕೊಂದು ವೈರಿಗಳಾಗಿ ಎದುರು ಬದುರಾಗಿ ನಿಂತಿವೆ. ಹಿಂದೂ ಧರ್ಮವು ಸಾಮಾಜಿಕ ಸಮಾನತೆಯ ಧರ್ಮ ಎನಿಸಿಕೊಳ್ಳಬೇಕೆಂದರೆ ದೇವಾಲಯ ಪ್ರವೇಶದ ವಿಷಯ ಒಳಗೊಂಡ ಅದರ ನಿಯಮಗಳ ತಿದ್ದುಪಡಿಯಷ್ಟೆ ಸಾಲದು. ಚಾತುರ್ವರ್ಣ ನೀತಿಯನ್ನು ಅದು ಬಿಟ್ಟುಕೊಡಬೇಕು. ಎಲ್ಲ ಅಸಮಾನತೆಯ ಮೂಲ ಅದೇ ಆಗಿದೆ. ಜಾತಿಪದ್ಧತಿ, ಅಸ್ಪೃಶ್ಯತೆಯೆಂಬ ಅಸಮಾನ ಪದ್ಧತಿಗಳಿಗೂ ಅದೇ ಮೂಲವಾಗಿದೆ. ಇದಾಗದ ಹೊರತು ಶೋಷಿತ ವರ್ಗದವರು ದೇವಾಲಯ ಪ್ರವೇಶವೊಂದನ್ನು ಮಾತ್ರವಲ್ಲ, ಇಡೀ ಹಿಂದೂ ಧರ್ಮವನ್ನೇ ತಿರಸ್ಕರಿಸುತ್ತಾರೆ. ಚಾತುರ್ವರ್ಣ ಹಾಗೂ ಜಾತಿಪದ್ಧತಿ ಶೋಷಿತ ವರ್ಗದವರ ಆತ್ಮಗೌರವಕ್ಕೆ ಧಕ್ಕೆ ತರುತ್ತದೆ. ಎಲ್ಲಿಯವರೆಗೆ ಇದನ್ನು ಮುಖ್ಯವೆಂದು ಪರಿಗಣಿಸುತ್ತಾರೊ ಅಲ್ಲಿಯವರೆಗೆ ಶೋಷಿತ ವರ್ಗದವರನ್ನು ಕೀಳಾಗಿ ನೋಡಲಾಗುತ್ತೆ. ತಾವು ಹಿಂದೂಗಳೆಂದು ಹೇಳಿಕೊಂಡಾಗಲೆಲ್ಲ ಶೋಷಿತ ವರ್ಗದವರಿಗೆ ತಮ್ಮ ಕೀಳಾದ ಸ್ಥಾನಮಾನವನ್ನು ತಮ್ಮ ಬಾಯಿಂದ ತಾವೇ ಸೂಚಿಸುತ್ತಿರುವಂತಾಗಿದೆ. ಚಾತುರ್ವರ್ಣ ನೀತಿ ಮತ್ತು ಜಾತಿಪದ್ಧತಿಯನ್ನು ಹಿಂದೂ ಧರ್ಮವು ಕಿತ್ತೊಗೆದು, ಶಾಸ್ತ್ರಗಳಿಂದ ಅಳಿಸಿಹಾಕಿದಾಗ ಮಾತ್ರ ಅವರು ತಮ್ಮನ್ನು ಹಿಂದೂಗಳೆಂದು ಕರೆದುಕೊಳ್ಳಬಲ್ಲರು. ಮಹಾತ್ಮಾಗಾಂಧಿ ಹಾಗೂ ಹಿಂದೂ ಸುಧಾರಕರು ಇದನ್ನು ತಮ್ಮ ಗುರಿಯನ್ನಾಗಿ ಮಾಡಿಕೊಂಡು ಇದನ್ನು ಕಾರ್ಯಗತಗೊಳಿಸುವ ಸಾಹಸ ತೋರುವರೆ? ತುಂಬಾ ಆಸ್ಥೆವಹಿಸಿ ಈ ವಿಷಯಗಳನ್ನು ತಿಳಿಸಿರುವುದರಿಂದ ಅವರ ಹೇಳಿಕೆಗಳಿಗಾಗಿ ದಾರಿ ನೋಡುತ್ತಿರುತ್ತೇನೆ, ಮಹಾತ್ಮಾಗಾಂಧಿ ಹಾಗೂ ಹಿಂದೂಗಳು ಇದಕ್ಕೆ ಸಿದ್ಧರಿರಲಿ ಬಿಡಲಿ, ಆದರೂ ಇದಕ್ಕಿಂತ ಕಡಿಮೆಯಾದ ಯಾವುದೇ ಸುಧಾರಣೆಯಿಂದ ಶೋಷಿತ ವರ್ಗದವರು ಸಮಾಧಾನವನ್ನು ಹೊಂದುವುದಿಲ್ಲ ಹಾಗೂ ದೇವಾಲಯ ಪ್ರವೇಶವನ್ನು ಅಂಗೀಕರಿಸುವುದಿಲ್ಲವೆಂದು ತಿಳಿಯಪಡಿಸುತ್ತೇನೆ. ಒಂದು ವೇಳೆ ದೇವಾಲಯ ಪ್ರವೇಶವನ್ನು ಒಪ್ಪಿಕೊಂಡು ಅಷ್ಟರಿಂದ ಸಂತೃಪ್ತರಾದರೆ ಪಿಡುಗಿನ ಜೊತೆ ರಾಜಿಮಾಡಿಕೊಂಡಂತಾಗುತ್ತದೆ; ಮಾನವ ವ್ಯಕ್ತಿತ್ವದ ಪಾವಿತ್ರತೆಯನ್ನು ಮಾರಿಕೊಂಡಂತಾಗುತ್ತದೆ.

ನನ್ನ ಅಭಿಪ್ರಾಯದ ವಿರುದ್ಧ ಮಹಾತ್ಮಾಗಾಂಧಿ ಮತ್ತು ಹಿಂದೂ ಸುಧಾರಕರು ಒಂದು ವಾದವನ್ನು ಎತ್ತಬಹುದು. "ಈಗ ದೇವಾಲಯ ಪ್ರವೇಶಕ್ಕೆ ಸಮ್ಮತಿಸಿ, ನಂತರ ಶೋಷಿತ ವರ್ಗದವರು ಚಾತುರ್ವರ್ಣ

ನೀತಿ ಮತ್ತು ಜಾತಿಪದ್ಧತಿಯನ್ನು ವಿರೋಧಿಸಿ ಚಳುವಳಿಯನ್ನು ಮಾಡಬಹುದಲ್ಲ" ಎಂದು ಹೇಳಬಹುದು. ಇದೇ ಅವರ ಧ್ಯೇಯವಾಗಿದ್ದರೆ, ಇದೇ ಹಂತದಲ್ಲಿ ಅವರೊಡನೆ ವಾದಕ್ಕೆ ಇಳಿದು ಈ ವಿಷಯವನ್ನು ಇಲ್ಲಿಗೇ ಮುಚ್ಚಿ, ಮುಂದೆ ಅಭಿವೃದ್ಧಿಗೆ ದಾರಿ ಹಸನು ಮಾಡುತ್ತೇನೆ. ಅವರಿಗೆ ನನ್ನ ಉತ್ತರ ಹೀಗಿದೆ : ಇಂದು ನಾವು ದೇವಾಲಯ ಪ್ರವೇಶಕ್ಕೆ ಒಪ್ಪಿಕೊಂಡ ಪಕ್ಷದಲ್ಲಿ ಚಾತುರ್ವರ್ಣ ಹಾಗೂ ಜಾತಿಪದ್ಧತಿಯ ವಿರುದ್ಧ ಹೋರಾಡುವ ಹಕ್ಕನ್ನು ಆಮೇಲೆ ಕಳೆದುಕೊಳ್ಳುವುದಿಲ್ಲ, ಸರಿ. ಆದರೆ ಪ್ರಶ್ನೆ ಇದು : ಮುಂದೆ ಪ್ರಶ್ನೆ ಎದ್ದಾಗ ಮಹಾತ್ಮಾಗಾಂಧಿ ಯಾರ ಪಕ್ಷ ವಹಿಸುತ್ತಾರೆ? ಮುಂದೆ ನನ್ನ ವಿರೋಧಿಗಳ ಪಕ್ಷದಲ್ಲಿ ಇರುತ್ತಾರೆಂದರೆ ನಾನಂತೂ ಈಗಿನಿಂದಲೇ ಅವರ ಪಕ್ಷದಲ್ಲಿರುವುದಿಲ್ಲ. ನನ್ನೊಂದಿಗೆ ಇರುತ್ತಾರೆಂದು ಹೇಳಿದರೆ ಅವರು ಈಗಿನಿಂದಲೇ ನನ್ನ ಜೊತೆಗಿರಬೇಕು.

ನನ್ನ ಮಿತ್ರರಾದ ದಿವಾನ್ ಬಹಾದೂರ್ ಆರ್. ಶ್ರೀನಿವಾಸನ್ ಅವರು ಕೂಡ ದೇವಾಲಯದ ಪ್ರವೇಶದ ವಿಷಯದಲ್ಲಿ ಇದೇ ರೀತಿಯ ಅಭಿಪ್ರಾಯವ್ಯಕ್ತಪಡಿಸಿದರು. ಅವರೆಂದರು :

"ಶೋಷಿತ ವರ್ಗದ ಸದಸ್ಯನೊಬ್ಬನನ್ನು ಸವರ್ಣೀಯ ಹಿಂದೂಗಳು ದೇವಾಲಯದೊಳಕ್ಕೆ ಬಿಟ್ಟುಕೊಂಡ ಮಾತ್ರಕ್ಕೆ ಅವನನ್ನು ನಾಲ್ಕರಲ್ಲಿ ಯಾವುದಾದರೊಂದು ಜಾತಿಗೆ ಸೇರಿಸಿಕೊಂಡಂತಾಗುವುದಿಲ್ಲ. ಬದಲಾಗಿ ಪಂಚಮ ಅಥವಾ ಕಡೆಯವ ಅಥವಾ ಅತ್ಯಂತ ಕೀಳು ಜಾತಿಯವ, ಎನ್ನುವುದು ಅಸ್ಪೃಶ್ಯನೆನ್ನುವುದಕ್ಕಿಂತ ಹೆಚ್ಚು ಕಳಂಕ ಹಚ್ಚಿದಂತಾಗುತ್ತದೆ. ಜೊತೆಗೆ ಅನೇಕ ಜಾತೀಯ ನಿಬಂಧನೆಗಳಿಗೆ ಹಾಗೂ ಕೀಳುಕಟ್ಟಳೆಗಳಿಗೆ ಒಳಗಾಗಬೇಕಾಗುತ್ತದೆ. ಆ ರೀತಿ ಪ್ರವೇಶ ಮಾಡಿದವನನ್ನು ಶೋಷಿತ ವರ್ಗದವರು ಸವರ್ಣೀಯ ಎಂದು ದೂರಮಾಡುತ್ತಾರೆ. ಹಾಗಾಗಿ ಶೋಷಿತ ವರ್ಗದ ಕೋಟ್ಯಂತರ ಜನರು ಇಂಥ ಜಾತೀಯ ನಿಬಂಧನೆಗಳಿಗೆ ಒಳಪಡಲು ಇಚ್ಛಿಸುವುದಿಲ್ಲ. ಹಾಗೇನಾದರೂ ಆದಲ್ಲಿ ಅವರಲ್ಲೆ ಪಂಗಡಗಳು ಉಂಟಾಗುತ್ತವೆ."

ದೇವಾಲಯ ಪ್ರವೇಶವನ್ನು ಕಾನೂನಿನ ಮೂಲಕ ಹೇರಲು ಸಾಧ್ಯವಿಲ್ಲ. ಹಾಗೆ ಮಾಡಿದರೆ ಸವರ್ಣೀಯ ಹಳ್ಳಿಗರು ಕಾನೂನನ್ನು ನೇರ ಅಥವಾ ಪರೋಕ್ಷವಾಗಿ ಉಲ್ಲಂಘಿಸುತ್ತಾರೆ. ಅದೇನಿದ್ದರೂ ಹಳ್ಳಿಯ ಶೋಷಿತ ವರ್ಗದವರಿಗೆ ಕಾಗದದ ಮೇಲೆ 'ಸಕ್ಕರೆ' ಎಂದು ಬರೆದು 'ಇದನ್ನು ಸವಿ' ಎಂದು ಕೈಗಿಟ್ಟಂತೆ.

ದೇಶದಲ್ಲಿ ಯಾವುದೇ ಗಲಭೆ ಅಥವಾ ಗೊಂದಲಗಳು ಆಗುವುದನ್ನು ತಡೆಯಲು ಈ ಮೇಲಿನ ಸಂಗತಿಗಳನ್ನು ಸಕಾಲದಲ್ಲಿ ಸಾರ್ವಜನಿಕರ ಮುಂದಿಡಲಾಗಿದೆ ಆದರೆ ಗಾಂಧೀಜಿಯವರು ಇದಕ್ಕೆ ವಿರೋಧಿಸಿ, ದೇವಾಲಯ ಪ್ರವೇಶವು ಹಿಂದೂಗಳ ಋಣವೆಂದೂ, ಅದನ್ನು ಮೊದಲು ಕಾರ್ಯಗತ ಮಾಡಬೇಕೆಂದೂ ಅಭಿಪ್ರಾಯಪಟ್ಟರು. ಅದರಂತೆ ಪೂನಾ ಒಪ್ಪಂದ ಆದ ತಕ್ಷಣ ದೇವಾಲಯಗಳ ಬಾಗಿಲನ್ನು ಅಸ್ಪೃಶ್ಯರಿಗಾಗಿ ತೆರೆದಿಡುವಂತೆ ಹಿಂದೂಗಳಲ್ಲಿ ಮನವಿ ಮಾಡಿಕೊಂಡರು.

ಗಾಂಧೀಜಿಯವರು ಇದರಲ್ಲಿ ಎಷ್ಟರಮಟ್ಟಿಗೆ ಸಫಲರಾದರು ಎನ್ನುವ ಪ್ರಶ್ನೆ ಕೇಳತಕ್ಕುದಾಗಿದೆ. ನಿಜಾಂಶ ತಿಳಿಯುವುದು ತುಂಬಾ ಕಷ್ಟ. ಉಪವಾಸದ ಪರಿಣಾಮವಾಗಿ ಅನೇಕ ದೇವಾಲಯಗಳನ್ನು ಅಸ್ಪೃಶ್ಯರಿಗಾಗಿ ಹಿಂದೂಗಳು ತೆರೆದಿಟ್ಟರು ಎಂಬ ವರದಿಗಳು ಬಂದಿವೆ. ಇದು ಎಷ್ಟರಮಟ್ಟಿಗೆ ಸತ್ಯ ಎಷ್ಟರಮಟ್ಟಿಗೆ ಇದು ಆ ಕಾಂಗ್ರೆಸ್ಸಿಗರ ಸುಳ್ಳು ಪ್ರಚಾರಗಳಲ್ಲಿ ಒಂದಾಗಿದೆ? ಹೇಳಲು ಸಾಧ್ಯವಿಲ್ಲ. ಉಪವಾಸದ ಪರಿಣಾಮವಾಗಿ ತೆರೆಯಲಾದ ದೇವಾಲಯಗಳನ್ನು ನಂತರ ಶುಚಿಗೊಳಿಸಿ ಮುಚ್ಚಿಕೊಂಡರು ಎನ್ನುವ ಸತ್ಯವನ್ನು ಪ್ರಶ್ನಿಸುವಂತಿಲ್ಲ; ಅಲ್ಲದೆ, ದೇವಾಲಯಗಳನ್ನು ತೆರೆದಿಡುವುದು ಅರ್ಥಹೀನ ಎಂದು ಅನಿಸಿರಬಹುದು. ದೇಶದಲ್ಲಿ ಪೂಜೆ ಕಾರ್ಯಗಳು ನಡೆಯದ ನೂರಾರು ಸಾವಿರಾರು ದೇವಾಲಯಗಳಿವೆ.

ಅವುಗಳಲ್ಲಿ ಬರೀ ಕತ್ತೆಗಳು ವಾಸವಾಗಿವೆ. ಉದಾಹರಣೆಗೆ ಅಂಥ ದೇವಾಲಯಗಳನ್ನು ನಾಸಿಕ್ ಮತ್ತು ವಾಯ್‌ನ ಪುಣ್ಯ ಕ್ಷೇತ್ರಗಳಲ್ಲಿ ಹೇರಳವಾಗಿ ನೋಡಬಹುದು. ಅಂಥ ದೇವಾಲಯಗಳನ್ನು 'ತೆರೆಯಲಾಗಿದೆ' ಎಂದು ಘೋಷಿಸಿದರೆ ಅದು ಅರ್ಥಹೀನ ಮಾತ್ರವಲ್ಲ, ಅಸ್ಪೃಶ್ಯರಿಗೆ ಅವಮಾನಕರವೂ ಹೌದು. ಅಲ್ಲದೆ ಒಂದು ದೇವಾಲಯವನ್ನು ಅಸ್ಪೃಶ್ಯರಿಗಾಗಿ ತೆರೆದಿಡಬಹುದು; ಆದರೆ ಆ ದೇವಾಲಯವನ್ನು ಪೂಜೆಗೆ ಅನರ್ಹವೆಂದು ಸವರ್ಣೀಯ ಹಿಂದೂಗಳು ತಿರಸ್ಕರಿಸಿದರೆ, ಆಗ "ಹಿಂದೂಗಳೇ ಸ್ವತಃ ಅಸ್ಪೃಶ್ಯರಿಗಾಗಿ ದೇವಾಲಯವನ್ನು ತೆರೆದಿಟ್ಟರು" ಎಂದು ಹೇಳಲು ಸಾಧ್ಯವೆ? ಯಾವುದೇ ನಿರ್ಧಾರಕ್ಕೆ ಬರುವ ಮುಂಚೆ ಅದರ ಇನ್ನೊಂದು ಸಾಧ್ಯತೆಯನ್ನೂ ನಾವು ಗಮನದಲ್ಲಿಟ್ಟುಕೊಳ್ಳಬೇಕು. ಲಂಡನ್ನಿನ ರಿಟ್ಜ್ ಹೋಟೆಲ್ ಅನ್ನು ಎಲ್ಲರಿಗೂ ತೆರೆದಿಟ್ಟಿರುವಂತೆ ದೇವಾಲಯವೊಂದನ್ನು ಅಸ್ಪೃಶ್ಯರಿಗೆ ತೆರೆದಿಡಬಹುದು. ಆದರೆ ನಮಗೆ ಗೊತ್ತು. ರಿಟ್ಜ್ ಹೋಟೆಲ್‌ನ್ನು ವಾಸ್ತವವಾಗಿ ಎಲ್ಲರಿಗೂ ತೆರೆದಿಟ್ಟಿಲ್ಲವೆಂದು; ಯಾಕೆಂದರೆ ಕೈಗೆಟಕುವವರಿಗೆ ಮಾತ್ರ ಅದು ತೆರೆದಿದೆ. ಅದೇ ರೀತಿ ದೇವಾಲಯವು ಅಸ್ಪೃಶ್ಯರಿಗೆ ತೆರೆದಿರಬಹುದು. ಆದರೆ ವಾಸ್ತವದಲ್ಲಿ ದೇವಾಲಯ ಪ್ರವೇಶಿಸಬಲ್ಲ ಅಸ್ಪೃಶ್ಯರಿಗೆ ಮಾತ್ರ ಅದು ತೆರೆದಿರುತ್ತದೆ. ದೇವಾಲಯ ಪ್ರವೇಶದಿಂದ ಹಲ್ಲೆ ಅಥವಾ ಸಾಮಾಜಿಕ ಬಹಿಷ್ಕಾರವನ್ನು ಅನುಭವಿಸಬೇಕಾದರೆ ಅದಕ್ಕೆ ಪರಿಹಾರ ದೇವಾಲಯವನ್ನು ನಿಷೇಧಿಸುವುದು. ಹೆಸರಿಗೆ ಮಾತ್ರ ತೆರೆದಿದ್ದ ದೇವಾಲಯಗಳನ್ನು ವಾಸ್ತವದಲ್ಲು ಮುಚ್ಚಿದಂತಾಗುತ್ತದೆ. ಹಲ್ಲೆ ಮತ್ತು ಸಾಮಾಜಿಕ ಬಹಿಷ್ಕಾರ ಹಿಂದೂಗಳ ಸರ್ವೇ ಸಾಮಾನ್ಯ ತಂತ್ರ. ಮುಂದೊಂದು ದಿನ ತಮಗಾಗಿ ತೆರೆದ ದೇವಾಲಯ ಪ್ರವೇಶ ಮಾಡಲು ಧೈರ್ಯ ಮಾಡಿದ ಅಸ್ಪೃಶ್ಯರನ್ನು ಹಿಂದೂಗಳು ಬಹಿಷ್ಕರಿಸಿದರೆ ಆಶ್ಚರ್ಯವೇನಿಲ್ಲ. ಈ ರೀತಿ ಆಗುವುದಾದರೆ ಇದೊಂದು ಕುತಂತ್ರವಲ್ಲವೇನು?

ಯಾವ ವರ್ಗದವರು ಹೆಚ್ಚು ಸಂಖ್ಯೆಯಲ್ಲಿದ್ದಾರೆಂದು ಸರಿಯಾಗಿ ಹೇಳುವುದು ಸಾಧ್ಯವಿಲ್ಲ. ಆದರೆ ಕೆಲವು ಅಂಕಿ ಅಂಶಗಳ ಆಧಾರದ ಮೇಲೆ ಊಹೆ ಮಾಡಬಹುದು. ಈಗ ಭಾರತದಲ್ಲಿ ಎರಡು ವರ್ಗದ ಜನರಿದ್ದಾರೆ – ರಾಜಕೀಯಕ್ಕಿಂತ ಧರ್ಮಕ್ಕೆ ಜಾಸ್ತಿ ಮಹತ್ವ ಕೊಡುವ ಸಂಪ್ರದಾಯಸ್ಥ ಹಿಂದೂಗಳು ಮತ್ತು ಧರ್ಮಕ್ಕಿಂತ ರಾಜಕೀಯಕ್ಕೆ ಜಾಸ್ತಿ ಮಹತ್ವಕೊಡುವ ಕಾಂಗ್ರೆಸ್ ಹಿಂದೂಗಳು. ಮೊದಲನೆ ವರ್ಗದವರು ಯಾವುದೇ ರಾಜಕೀಯ ಗುರಿ ಹೊಂದಿಲ್ಲವಾದ್ದರಿಂದ ಎಷ್ಟೇ ತಪ್ಪಾದ ನಂಬಿಕೆ ಇದ್ದರೂ, ತಾವು ನಂಬಿರುವುದಕ್ಕೆ ತಕ್ಕನಾಗಿರುವವರು. ಎರಡನೆ ವರ್ಗದವರು ರಾಜಕೀಯ ಗುರಿಗಳನ್ನು ಸಾಧಿಸಬೇಕಿರುವುದರಿಂದ ಪ್ರಾಮಾಣಿಕ ದೃಷ್ಟಿ ಬೆಳೆಸಿಕೊಳ್ಳಲು ಸಾಧ್ಯವಾಗದೆ ಅಪ್ರಾಮಾಣಿಕ ಹಾದಿ ಹಿಡಿದಿರುವವರು. 'ಮೊದಲನೆಯ ವರ್ಗದವರ ತಿರಸ್ಕಾರ ಪ್ರಾಮಾಣಿಕವಾದರೂ ಹಿಂದೂ ಜನಾಂಗಕ್ಕೆ ಜಗತ್ತಿನ ಕಣ್ಣಲ್ಲಿ ಅವಮಾನ ತರುವಂಥದ್ದು. ಹಾಗಾಗಿ ಇದು ರಾಜಕೀಯವಾಗಿ ಅನುಚಿತ. ಎರಡನೆಯ ಕ್ರಮ : ಹಿಂದೂಗಳು (ಈ ಪದವನ್ನು ಹಸ್ತಪ್ರತಿಯಲ್ಲಿ ಖಾಲಿ ಬಿಟ್ಟ ಜಾಗದಲ್ಲಿ ನಂತರ ನಾವು ಸೇರಿಸಿದ್ದು – ಸಂ) ನಾಮಕಾವಾಸ್ತೆ ದೇವಾಲಯಗಳನ್ನು ತೆರೆಯುವುದು ಹಾಗೂ ನಿಜವಾದ ಅರ್ಥದಲ್ಲಿ ಮುಚ್ಚುವುದು. ಇದು ರಾಜಕೀಯವಾಗಿ ತುಂಬಾ ಅನುಕೂಲಕರವಾದ ತಂತ್ರ. ಒಳಿತು ಎಲ್ಲರಿಗೂ ಎಟಕುವಂತಿದೆ ಎಂದು ಪ್ರಪಂಚಕ್ಕೆ ಸಾರುತ್ತ ಈ ವ್ಯವಸ್ಥೆಗೆ ಒಳ್ಳೆಯ ಹೆಸರನ್ನು ತರುವಂಥದ್ದು; ಆದರೆ ಯಾರ ಒಳಿತಿಗಾಗಿ ತೆರೆಯಲಾಗಿರುತ್ತದೊ ಅವರಿಗಂತೂ ಈ ಸೌಲಭ್ಯ ಸಿಗದಂತೆ, ಗೌಪ್ಯವಾಗಿ ತಡೆಯುವಂಥದ್ದಾಗಿದೆ. ಸಂಪ್ರದಾಯಸ್ಥ ಹಿಂದೂಗಳಿಗಿಂತ ಕಾಂಗ್ರೆಸ್ ಹಿಂದೂಗಳೇ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಅಂದಮೇಲೆ ಮೊದಲನೆಯ ವರ್ಗದವರಿಗಿಂತ ಎರಡನೆಯ ವರ್ಗದವರೇ ಹೆಚ್ಚು ಸಂಖ್ಯೆಯಲ್ಲಿದ್ದಾರೆ ಎಂದಾಯಿತು.

ದೇವಾಲಯಗಳನ್ನು ತೆರೆಯುವ ಬಗ್ಗೆ ನಿಜವಾದ ಆಸ್ಥೆಯುಳ್ಳವರ ಉದಾಹರಣೆಗಳು ಕೆಲವೇ

ಕೆಲವೆಂದೂ, ದೇವಾಲಯಗಳನ್ನು ತೆರೆದಿಟ್ಟ ವಿಚಾರವಾಗಿ ಪ್ರಕಟವಾದ ವರದಿಗಳಲ್ಲಿ ಹೆಚ್ಚಿನವು ಕೇವಲ ಸುಳ್ಳು ಪ್ರಚಾರವೆಂದೂ ತಿಳಿದುಬಂದಿದೆ. ಶ್ರೀರಂಗ ಐಯ್ಯರ್ ಅವರು ಕೇಂದ್ರೀಯ ಶಾಸಕಾಂಗದಲ್ಲಿ ೧೯೩೪ರಲ್ಲಿ ಮಂಡಿಸಿದ ದೇವಾಲಯ ಪ್ರವೇಶ ಮಸೂದೆಯ ಗತಿಯನ್ನು ನೋಡಿದರೆ ವಿಷಯ ತಾನೇ ತಿಳಿಯುತ್ತದೆ. ಆ ಮಸೂದೆಯ ವಿಚಾರವಾಗಿ ಇನ್ನೊಂದು ಸಂದರ್ಭದಲ್ಲಿ ಮಾತನಾಡುತ್ತೇನೆ.

ಇಷ್ಟು ಹೇಳಿ ಈ ವಿಷಯದ ಮೇಲಿನ ಚರ್ಚೆಯನ್ನು ಇಲ್ಲಿಗೆ ಮುಗಿಸಬಹುದಿತ್ತು. ಆದರೆ ಗಾಂಧೀಜಿಯವರು ಹಿಂದೂಗಳಲ್ಲಿ ಒಂದು ಆಧ್ಯಾತ್ಮಿಕ ಜಾಗೃತಿ ಉಂಟಾಗಿದೆಯೆಂದು ಒತ್ತಿ ಒತ್ತಿ ಹೇಳತೊಡಗಿದ್ದಾರೆ; ಅಲ್ಲದೆ ಟ್ರಾವಂಕೂರ್‌ನ ದೇವಾಲಯ ಪ್ರವೇಶದ ಘೋಷಣೆಯನ್ನು ನಿಜವೆಂದು ನಂಬಿಬಿಟ್ಟಿದ್ದಾರೆ. ಆದ್ದರಿಂದ ಇವರ ವಾದಗಳ ಬಗ್ಗೆ ನಾನು ಇನ್ನೂ ವ್ಯವಹರಿಸಬೇಕಿದೆ.

ತೆರೆದಿಟ್ಟ ದೇವಾಲಯಗಳ ಸಂಖ್ಯೆಯ ಆಧಾರದ ಮೇಲೆ ದೇವಾಲಯ ಪ್ರವೇಶ ವಿಷಯವು ಎಷ್ಟು ಫಲಪ್ರದವಾಗಿದೆ ಎಂದು ಹೇಳಲು ಬರುವುದಿಲ್ಲ. ಇದರ ಹಿಂದಿನ ಉದ್ದೇಶದ ಆಧಾರದ ಮೇಲೆ ನಿರ್ಧರಿಸಲು ಸಾಧ್ಯವಿದೆ. ಅದು ಪಾರಮಾರ್ಥಿಕ ಉದ್ದೇಶವೆ?

ದೇವಾಲಯ ಪ್ರವೇಶವು ಪಾರಮಾರ್ಥಿಕ ವಿಷಯವಲ್ಲ. ಕೇವಲ ರಾಜಕೀಯಕ್ಕೆ ಸಂಬಂಧಿಸಿದ್ದು ಎಂದು ನಾನು ಹೇಳಬಲ್ಲೆ.

ಗಾಂಧೀಜಿಯವರು ಆಧ್ಯಾತ್ಮಿಕ ಉದ್ದೇಶವಿಟ್ಟುಕೊಂಡಿರುವರೆ? ಗಾಂಧೀಜಿಯವರು ಹಿಂದೂಗಳಲ್ಲಿ ಮನವಿಮಾಡಿಕೊಳ್ಳುತ್ತ ಹೇಳಿದರು :

"ನನ್ನ ಈ ಮನವಿಯನ್ನು ನಿಮ್ಮಲ್ಲಿ ಮಾಡಿಕೊಳ್ಳುತ್ತಿದ್ದೇನೆ. ಇದು ನನ್ನ ಆತ್ಮದ ಕೊರಗಿನಿಂದ ಹೊರಬಂದದ್ದು. ಈ ನೋವನ್ನು, ಅವಮಾನವನ್ನು ನನ್ನೊಂದಿಗೆ ಹಂಚಿಕೊಳ್ಳಿ, ನನ್ನ ಜೊತೆ ಸಹಕರಿಸಿ ಎಂದು ಕೇಳಿಕೊಳ್ಳುತ್ತೇನೆ. ಏಕೆಂದರೆ ಸನಾತನ ಧರ್ಮವು ಪುನರುಜ್ಜೀವನಕ್ಕಿಂತ ಹೆಚ್ಚಿನ ಧ್ಯೇಯ ಇನ್ನಾವುದೂ ಕಾಣುತ್ತಿಲ್ಲ. ಈ ಧರ್ಮದ ಈಗ ತಿರಸ್ಕೃತವಾಗಿರುವ ಕೋಟ್ಯಂತರ ಜನರ ಜೀವನದಲ್ಲಿ ಉಳಿದುಕೊಂಡು ಬರಬೇಕು."

ಈ 'ಆತ್ಮದ ಕೊರಗು' ಪೂನಾ ಒಪ್ಪಂದದ ನಂತರ ಹುಟ್ಟಿಕೊಂಡದ್ದು. ಪೂನಾ ಒಪ್ಪಂದಕ್ಕೆ ಮೊದಲು ದೇವಾಲಯ ಪ್ರವೇಶ ಸಮಸ್ಯೆಯ ವಿಷಯವಾಗಿ ಗಾಂಧೀಜಿಯವರ ಅಭಿಪ್ರಾಯ ಏನಾಗಿತ್ತು.? ಪೂನಾ ಒಪ್ಪಂದಕ್ಕೆ ಮುಂಚೆ ಈ ವಿಷಯದಲ್ಲಿ ಗಾಂಧೀಜಿಯವರ ಅಭಿಪ್ರಾಯ ಬೇರೆಯೇ ಆಗಿತ್ತು. ಅವರ ಅಭಿಪ್ರಾಯವನ್ನು ಪೂನಾ ಒಪ್ಪಂದಕ್ಕೆ ಸ್ವಲ್ಪ ಮುಂಚೆ ಪ್ರಕಟಪಡಿಸಿದ್ದರು. ಹಿಂದೂಗಳಿಗೆ ಮೇಲೆ ಹೇಳಿದ ಮನವಿ ಸಲ್ಲಿಸುವ ಸ್ವಲ್ಪ ಮುಂಚೆ, ಅದರಿಂದ ನಾನು.......(ಅದನ್ನು "ಗಾಂಧೀ ಶಿಕ್ಷಣ"ದ ಸಂಚಿಕೆ – ೨, ಪುಟ ೧೩೭ರಲ್ಲಿ ವಿವರಿಸಲಾಗಿತ್ತು) ಆಗಿನ ಅವರ ಅಭಿಪ್ರಾಯದಲ್ಲಿ ಅಸ್ಪೃಶ್ಯರಿಗಾಗಿ ಪ್ರತ್ಯೇಕ ದೇವಾಲಯಗಳನ್ನು ಕಟ್ಟಿಸಬೇಕಾಗಿತ್ತು.

ಗಾಂಧೀಜಿಯವರು ಹೇಳಿದರು :*

"ಅಂತ್ಯಜರಿಗೆ (ಅಸ್ಪೃಶ್ಯರಿಗೆ) ಈಗಿರುವ ದೇವಾಲಯಗಳನ್ನು ಪ್ರವೇಶಿಸುವ ಹಕ್ಕನ್ನು ಕೊಡಲು ಹೇಗೆ ಸಾಧ್ಯ? ಹಿಂದೂ ಧರ್ಮದಲ್ಲಿ ಜಾತಿ, ವರ್ಣಾಶ್ರಮಗಳಿಗೆ ಎಲ್ಲಿಯವರಿಗೂ ಸ್ಥಾನವಿರುತ್ತದೋ

---

* ಕಾಂಗ್ರೆಸ್ ಮತ್ತು ಗಾಂಧೀ ಅಸ್ಪೃಶ್ಯರಿಗೆ ಮಾಡಿದ್ದೇನು ಪುಸ್ತಕದಿಂದ ಉಲ್ಲೇಖ. ಪುಟ ೧೦೭ – ಇದು ಹಸ್ತ ಪ್ರತಿಯಲ್ಲಿರಲಿಲ್ಲ.

ಅಲ್ಲಿಯವರೆಗೆ ಪ್ರತಿ ಹಿಂದೂವು ಎಲ್ಲ ದೇವಸ್ಥಾನ ಪ್ರವೇಶಿಸಬಲ್ಲ ಅನ್ನುವುದು ಅಸಾಧ್ಯದ ಮಾತು.''

ಇದರಿಂದ ದೇವಾಲಯ ಪ್ರವೇಶವು ಗಾಂಧೀಜಿಯವರ ಸ್ವಂತ ಅಭಿಪ್ರಾಯವೂ ಅಲ್ಲ ಪಾರಮಾರ್ಥಿಕ ವಿಷಯವೂ ಅಲ್ಲ ಎಂದು ಸ್ಪಷ್ಟವಾಗುತ್ತದೆ; ಅಸ್ಪೃಶ್ಯರು ಪ್ರತ್ಯೇಕ ಮತದಾರ ಸಮೂಹಬೇಕೆಂದು, ಆಗ್ರಹಪಡಿಸುತ್ತಿರುವುದರಿಂದ ಅವರಿಗೆ ಗಂಭೀರವಾದ ಪ್ರಚೋದನೆ ಉಂಟಾಗಿ ಈ 'ನೋವು' ಕಾಣಿಸಿಕೊಂಡಿದೆ. ಪ್ರತ್ಯೇಕ ಮತದಾರ ಸಮೂಹ ವಿಚಾರದ ಹಿಂದಿನ ಆದರ್ಶಕ್ಕೆ ಗಾಂಧೀಜಿಯವರು ಹೆದರಿದ್ದಾರೆ. ಈ ಆದರ್ಶವು ಮುಂದೊಂದು ದಿನ ಕೊನೆಗೆ ಹಿಂದೂ ದೊಡ್ಡಿಯಿಂದ ಅಸ್ಪೃಶ್ಯರ ಪ್ರತ್ಯೇಕತೆ ಹಾಗೂ ಅಂತ್ಯಕ್ಕೆ ದಾರಿಮಾಡಿಕೊಡುತ್ತದೆ ಎಂದುಕೊಂಡಿದ್ದರು. ಆದ್ದರಿಂದ ಇದನ್ನು ವಿರೋಧಿಸಲು ತಮ್ಮ ಅಭಿಪ್ರಾಯ ಬದಲಿಸಿಕೊಂಡು ದೇವಾಲಯ ಪ್ರವೇಶಕ್ಕೆ ಬಂದುಬಿಟ್ಟಿದ್ದಾರೆ. ಗಾಂಧೀಜಿಯವರದ್ದು ರಾಜಕೀಯ ಉದ್ದೇಶ, ಅದರಲ್ಲಿ ಪಾರಮಾರ್ಥಿಕವಾದದ್ದೇನೂ ಇಲ್ಲ.

ಗಾಂಧೀಜಿಯವರ ಬಗ್ಗೆ ಇದೊಂದೇ ಸಾಕ್ಷಿ ಹೇಳಿ ಇಲ್ಲಿಗೆ ನನ್ನ ಮಾತುಗಳನ್ನು ನಿಲ್ಲಿಸಲು ನನಗೆ ಇಷ್ಟವಿಲ್ಲ. ನನ್ನ ಅಭಿಪ್ರಾಯಕ್ಕೆ ಪುಷ್ಟಿಕೊಡುವ ಎಷ್ಟೋ ಸಾಕ್ಷಿಗಳಿವೆ.

ಮೊದಲನೆಯದಾಗಿ ಕೆಲ್ಲಪ್ಪನ್ ಅನ್ನುವವರು ಅಸ್ಪೃಶ್ಯರಿಗೆ ಗುರುವಾಯೂರು ದೇವಾಲಯ ತೆರೆಯಬೇಕೆಂದು ಶುರುಮಾಡಿದ ಗುರುವಾಯೂರು ದೇವಾಲಯ ಸತ್ಯಾಗ್ರಹದ ವಿಷಯ. ಈ ಘಟನೆಯ ಬಗೆಗಿನ ಕೆಲವು ಅಂಶಗಳು ಆಸಕ್ತಿ ಕೆರಳಿಸುವಂಥವು.

ಇದರಲ್ಲಿ ಮುಖ್ಯವಾದ ವಿಷಯವೆಂದರೆ ಸಂಪ್ರದಾಯಸ್ಥ ಹಿಂದೂಗಳ ಮುಖಂಡರು ಗಾಂಧೀಜಿಯವರ ಬಳಿ ಬಂದು ಸಡ್ಡು ಹೊಡೆದ ಮೇಲೆ ಅವರು ಅಂತಿಮವಾಗಿ ತೆಗೆದುಕೊಂಡ ನಿಲುವನ್ನು ಗಮನಿಸಬೇಕು. ಗಾಂಧೀಜಿಯವರು ಸಂಪ್ರದಾಯಸ್ಥರ ಜೊತೆ ರಾಜಿಗೆ ಸಿದ್ಧವಾದರು. ಆ ರಾಜಿಯ ವಿವರಗಳನ್ನು ಗಾಂಧೀಜಿಯವರೇ ಪತ್ರಿಕೆಗಳಿಗೆ ಹೇಳಿದಂತೆ ಅವರ ಮಾತುಗಳಲ್ಲೇ ಇಲ್ಲಿ ಉಲ್ಲೇಖಿಸುತ್ತಿದ್ದೇನೆ :*

"ದಿನದ ಕೆಲವು ನಿರ್ದಿಷ್ಟ ಗಂಟೆಗಳ ಕಾಲ ಗುರುವಾಯೂರು ದೇವಾಲಯಗಳನ್ನು ಹರಿಜನರಿಗಾಗಿ ಹಾಗೂ ಹರಿಜನರ ಪ್ರವೇಶ ವಿರೋಧಿಸದ ಹಿಂದೂಗಳಿಗಾಗಿ ತೆರೆದಿಡಬೇಕು. ಇನ್ನೂ ಕೆಲವು ನಿರ್ದಿಷ್ಟ ಗಂಟೆಗಳ ಕಾಲವನ್ನು ಹರಿಜನರ ಪ್ರವೇಶ ವಿರೋಧಿಸುವ ಹಿಂದೂಗಳಿಗಾಗಿ ತೆರೆದಿಡಬೇಕು. ಈ ಸಲಹೆಯನ್ನು ಅಂಗೀಕರಿಸಿದಲ್ಲಿ ಯಾವುದೇ ತೊಂದರೆ ಇರುವುದಿಲ್ಲ. ಏಕೆಂದರೆ ಕೃತ್ತಿಕಾಯ್ ಏಕಾದಶಿ ಹಬ್ಬದ ಸಮಯದಲ್ಲಿ ಹರಿಜನರು ಹಿಂದೂಗಳು ಒಟ್ಟೊಟ್ಟಿಗೆ ದೇವಾಲಯ ಪ್ರವೇಶ ಮಾಡಬಹುದಾಗಿದ್ದು ನಂತರ ದೇವಾಲಯ ಅಥವಾ ವಿಗ್ರಹವನ್ನು ಪವಿತ್ರಗೊಳಿಸುವ ಕಾರ್ಯ ಹೀಗೆ ನಡೆಯುತ್ತಲೆ ಬಂದಿದೆ."

ಪ್ರತಿದಿನ ಹರಿಜನರು ದೇವಾಲಯ ಪ್ರವೇಶ ಮಾಡಿದ ನಂತರ ಈ ಪವಿತ್ರಗೊಳಿಸುವ ಕಾರ್ಯ ಪ್ರತಿದಿನ ನಡೆಯುವುದೆ ಎಂದು ಕೇಳಿದಾಗ, ಗಾಂಧೀಜಿಯವರು ಉತ್ತರಿಸಿದರು.

"ವೈಯಕ್ತಿಕವಾಗಿ ನಾನು ಈ ಪವಿತ್ರಗೊಳಿಸುವ ಕಾರ್ಯವನ್ನು ವಿರೋಧಿಸುತ್ತೇನೆ. ಆದರೆ ಇದರಿಂದ ವಿರೋಧಿಗಳ ಮನಸ್ಸಿಗೆ ಸಮಾಧಾನ ಸಿಗುವುದಾದರೆ ಈ ವಿಷಯದಲ್ಲಿ ವೈಯಕ್ತಿಕ ವಿರೋಧ ಸೂಚಿಸುವುದಿಲ್ಲ. ಹರಿಜನರು ಪ್ರವೇಶಿಸಲಿ ಬಿಡಲಿ, ಅನೇಕ ಪುಸ್ತಕಗಳಲ್ಲಿ ಹೇಳಿರುವಂತೆ ಅನೇಕ ಕಾರಣಗಳಿಂದ ದೇವಾಲಯವನ್ನು ದಿನನಿತ್ಯ ಶುಚಿಮಾಡಬೇಕಾಗಿರುವುದರಿಂದ, ನಾನು ಅದನ್ನು ವಿರೋಧಿಸುವುದಿಲ್ಲ."

ಇದಂತೂ ಖಂಡಿತವಾಗಿ ಪಾರಮಾರ್ಥಿಕ ಅಭಿಪ್ರಾಯವಲ್ಲ. ವ್ಯಾವಹಾರಿಕವಾಗಿ ಗಾಂಧೀಜಿಯವರೂ

---

* ಟೈಮ್ಸ್ ಆಫ್ ಇಂಡಿಯಾ, ೧೯೩೩ರ ಜನವರಿ ೩.

ಹಾಗೆಂದು ಒಪ್ಪಿಕೊಳ್ಳುತ್ತಾರೆ. ಅವರು ಸೂಚಿಸಿದ ಹೊಂದಾಣಿಕೆ ಕ್ರಮದಲ್ಲಿ ಅಸ್ಪೃಶ್ಯರು ಮತ್ತು ಸವರ್ಣೀಯರ ನಡುವೆ ಅಂತರ ಇರುವುದರ ಬಗ್ಗೆ ಕೇಳಿದಾಗ ಅವರು ಹೀಗೆ ಹೇಳಿದರೆಂದು ವರದಿ :

"ಹರಿಜನರ ನಿಲುವು ಹೀಗಿರಬೇಕು : 'ನನ್ನ ಇರುವಿಕೆ ವಿರೋಧಿಸುವ ವ್ಯಕ್ತಿ ಯಾರಾದರೂ ಇದ್ದರೆ, ಅವನ ವಿರೋಧವನ್ನು ನಾನು ಗೌರವಿಸುತ್ತೇನೆ. ಆದರೆ ಅದರಿಂದ ನನಗೆ ಸೇರಿದ ಹಕ್ಕನ್ನು ಆ ವಿರೋಧಿ ಕಸಿದುಕೊಳ್ಳಬಾರದು ಹಾಗೂ ನನ್ನ ಇರುವಿಕೆ ವಿರೋಧಿಸಿದವರ ಜೊತೆ ಜೊತೆಯಲ್ಲಿ ನ್ಯಾಯಸಮ್ಮತವಾದ ನನ್ನ ಪಾಲಿನ ಪೂಜೆಯನ್ನು ಮಾಡಲು ನನಗೆ ಅವಕಾಶ ಇರಬೇಕು. ಅಷ್ಟರಿಂದ ನಾನು ಸಂತೃಪ್ತಿ ಹೊಂದುವೆ."

ಆತ್ಮಗೌರವವುಳ್ಳ ಯಾವನೇ ಅಸ್ಪೃಶ್ಯ ಗಾಂಧೀಜಿಯವರು ಹೇಳಿದ ಈ ನಿಲುವನ್ನು ಒಪ್ಪಿಕೊಳ್ಳುವನೆ? ಎಂದು ನನ್ನ ಶಂಕೆ. ಮೇಲೆ ಹೇಳಿದ ಷರತ್ತುಗಳ ಪ್ರಕಾರ, ಮನುಷ್ಯರು ಇಲ್ಲದ ಸಮಯದಲ್ಲಿ ನಾಯಿ–ಬೆಕ್ಕುಗಳೂ ದೇವಾಲಯ ಪ್ರವೇಶಮಾಡುತ್ತವೆ. ದೇವರ ವಾಸಸ್ಥಾನವನ್ನು ಎರಡು ವಿರೋಧಿ ಗುಂಪುಗಳ ವಿರುದ್ಧ ಬೇಡಿಕೆಗಳನ್ನು ಒಂದು ಮಾಡಲು, ಕಾಲದಲ್ಲಿಯಾಗಲಿ ಅಥವಾ ದೇಶದಲ್ಲಿಯಾಗಲೀ ಒಡೆಯುವುದೆಂದರೆ ಇದು ಅತಿ ವಿಲಕ್ಷಣ ಹಾಗೂ ವಿಕರಾಳವಾದ ಉಪಾಯ. ಒಂದೇ ದೇವಾಲಯದಲ್ಲಿ ಪೂಜೆ ಸಲ್ಲಿಸುವುದು ಹಾಗೂ ಒಟ್ಟಿಗೆ ಪೂಜೆ ಸಲ್ಲಿಸುವುದು – ಇವೆರಡರ ನಡುವಿನ ವ್ಯತ್ಯಾಸವನ್ನೇ ಗಾಂಧೀಜಿಯವರು ಮರೆತುಬಿಟ್ಟಿದ್ದಾರೆ. ದೇವಾಲಯ ಪ್ರವೇಶವು ಪಾರಮಾರ್ಥಿಕ ವಿಷಯವಾಗಬೇಕೆಂದರೆ ಅದು ಎರಡನೆ ರೀತಿಯಲ್ಲಿ ಕಾರ್ಯಗತವಾಗಬೇಕು. ಮೊದಲನೆಯ ರೀತಿಯಲ್ಲಿ ಒಂದು ಗುಂಪಿನ ಜನರ ಇರುವಿಕೆ ಇನ್ನೊಂದು ಗುಂಪಿನ ಜನರಿಗೆ ಬೇಸರ ಉಂಟುಮಾಡುತ್ತದೆ. ಎರಡನೆಯದರ ಪ್ರಕಾರ ಎರಡು ವರ್ಗದವರಿಗೂ ಪರಸ್ಪರ ಬೇಸರಿಕೆ ಇರುವುದಿಲ್ಲ ಹಾಗೂ ಮಾನವತ್ವದ ಸಾಮಾನ್ಯ ಅಂಶವು ಇಬ್ಬರಲ್ಲೂ ಇದೆ ಎಂದು ಮನಗಂಡಿರುತ್ತಾರೆ.

ಇದರಿಂದ ಗಾಂಧೀಜಿಯವರು ಪಾರಮಾರ್ಥಿಕ ಉದ್ದೇಶಗಳಿಂದ ಪ್ರಚೋದಿತರಾಗಿಲ್ಲ ಎಂದು ಸಿದ್ಧವಾಗುತ್ತದೆ. ಅಸ್ಪೃಶ್ಯರನ್ನು ಓಡಿಹೋಗಗೊಡದೆ ಹಿಂದೂಗಳ ಲಾಯಕ್ಕೆ ಕರೆದುಕೊಂಡು ಬರಬೇಕೆಂದು ಅತಿ ಉತ್ಸುಕರಾಗಿದ್ದಾರೆ.

ಗಾಂಧೀಜಿಯವರು ತಾವು ಹೇಳಿಕೊಂಡಂತೆ ಪಾರಮಾರ್ಥಿಕ ಉದ್ದೇಶಗಳಿಂದ ಪ್ರಚೋದಿತರಾಗಿಲ್ಲ ಎನ್ನುವುದಕ್ಕೆ ಇನ್ನೊಂದು ಸಾಕ್ಷಿ. ಶ್ರೀರಂಗ ಐಯ್ಯರ್ ಅವರ 'ದೇವಾಲಯ ಪ್ರವೇಶ ಮಸೂದೆ' ಬಗ್ಗೆ ಗಾಂಧೀಜಿಯವರು ನಡೆದುಕೊಂಡ ರೀತಿ. ಇದನ್ನು ನೋಡಿದರೆ 'ಆತ್ಮದ ಕೊರಗು' ಕೇವಲ ವರ್ಣರಂಜಿತ ಪದಪುಂಜವೇ ಹೊರತು ಸತ್ಯದಿಂದ ದೂರವಾದುದು ಎಂದು ತಿಳಿದುಬರುತ್ತದೆ.

ಮಸೂದೆ ರಚಿಸಿದ ಶ್ರೀರಂಗ ಐಯ್ಯರ್ ಅವರ ದುರಂತವನ್ನು ಅರ್ಥಮಾಡಿಕೊಳ್ಳಲು ಆ ಮಸೂದೆಯ ಚರಿತ್ರೆಯನ್ನು ಸ್ವಲ್ಪ ತಿಳಿಯಬೇಕು.

ಹೊಸ ಸಂವಿಧಾನ ಜಾರಿಗೆ ಬಂದಾಗಿನಿಂದ ಕಾಂಗ್ರೆಸ್ ಸರ್ಕಾರ ಇರುವ ಎರಡು ಪ್ರಾಂತ್ಯಗಳಲ್ಲಿ ಎರಡು ವಿಧಿಗಳನ್ನು ಜಾರಿಗೊಳಿಸಲಾಗಿದೆ. ಒಂದು ಮುಂಬೈಯಲ್ಲಿ ಇನ್ನೊಂದು ಮದ್ರಾಸಿನಲ್ಲಿ. ಆ ವಿಧಿಗಳಲ್ಲಿ ಏನೇನೂ ತಿರುಳಿಲ್ಲ. ದೇವಾಲಯಗಳನ್ನು ತೆರೆದಿಡುವ ಘೋಷಣೆಯೂ ಅದರಲ್ಲಿಲ್ಲ. ತಮ್ಮ ಆಡಳಿತದಲ್ಲಿರುವ ದೇವಾಲಯಗಳಲ್ಲಿ ಆಯಾ ಟ್ರಸ್ಟಿಗಳು ಬಯಸಿದರೆ ಪ್ರವೇಶ ಸಾಧ್ಯವೆಂದು ಅವಕಾಶ ನೀಡಿದೆಯೆ ಹೊರತು ಆ ಟ್ರಸ್ಟಿಗಳು ಹಾಗೇ ಮಾಡಬೇಕೆಂದು ಒತ್ತಾಯ ತರುವ ಕ್ರಮಗಳೇನೂ ಅವುಗಳಲ್ಲಿಲ್ಲ. ಆ ವಿಧಿಗಳು ಕೇವಲ ಕಾಗದದ ಚೂರುಗಳಿಗಿಂತ ಹೆಚ್ಚೇನೂ ಅಲ್ಲ. ಮದ್ರಾಸಿನ ವಿಧಿಯು ಒಗಟಿನಂಥ

ಚರಿತ್ರೆ ಹೊಂದಿದೆ. ಈ ವಿಧಿಯನ್ನು ಜಾರಿ ಮಾಡಿದವರು ಮದ್ರಾಸಿನ ಪ್ರಧಾನಮಂತ್ರಿ ಶ್ರೀ ರಾಜಗೋಪಾಲಾಚಾರಿ ಅವರು. ಕಾಂಗ್ರೆಸ್ಸಿನಲ್ಲಿ ಅವರು ಎಷ್ಟು ಎತ್ತರದ ಸ್ಥಾನ ಆಕ್ರಮಿಸಿದ್ದಾರೆಂದರೆ ಅವರನ್ನು ಉಪ ಮಹಾತ್ಮಾ ಎಂದೇ ಕರೆಯಲಾಗುತ್ತಿದೆ. ಒಗಟನ್ನು ಬಿಡಿಸಬಲ್ಲವನಿಗೆ ವಿಧಿಯ ಕರ್ತೃವಿನ ಮನಸ್ಸಿನಲ್ಲಿರುವುದು ಮತ್ತು ಇದೆಲ್ಲದರ ಹಿಂದಿನ ಚಾಲನಶಕ್ತಿಯಾಗಿರುವ ಗಾಂಧೀಜಿಯವರ ಮನಸ್ಸಿನಲ್ಲಿರುವುದು ತಂತಾನೆ ತಿಳಿದುಬರುತ್ತದೆ.

ಟ್ರಾವಂಕೂರ್ ದೇವಾಲಯ ಪ್ರವೇಶದ ವಿಷಯಕ್ಕೆ ಬರೋಣ. ಮಹಾರಾಜರು ದೇವಾಲಯವನ್ನು ಅಸ್ಪೃಶ್ಯರಿಗೆ ತೆರೆದಿಡುತ್ತ ೧೯೩೬ ರ ನವೆಂಬರ್ ೧೨ರಂದು ಹೊರಡಿಸಿದ ಘೋಷಣೆ ಒಂದು ಭವ್ಯ ದಾಖಲೆ. ಅದು ಹೀಗಿದೆ :

"ನಮ್ಮ ಧರ್ಮದ ಸತ್ಯ ಮತ್ತು ಶಕ್ತಿಯಲ್ಲಿ ನಂಬಿಕೆಯಿರಿಸಿ, ದೈವಿಕ ಮಾರ್ಗ ದರ್ಶನ ಮತ್ತು ಸರ್ವವ್ಯಾಪಿ ಸಹನೆ ಮೇಲೆ ಅದು ನಿಂತಿದೆಯೆಂದು ನಂಬಿ, ಶತಮಾನಗಳಿಂದ ತನ್ನ ಆಚರಣೆಯಲ್ಲಿ ಅದು ಕಾಲಕ್ಕೆ ತಕ್ಕಂತೆ ಹೊಂದಿಕೊಳ್ಳುತ್ತಿದೆಯೆಂದೂ ತಿಳಿದು, ಹುಟ್ಟು ಜಾತಿ ಅಥವಾ ಜನಾಂಗದ ಕಾರಣದಿಂದ ಯಾವ ಹಿಂದೂ ಪ್ರಜೆಯೂ ಹಿಂದೂ ಧರ್ಮ ನೀಡುವ ಸಮಾಧಾನ-ಸಂತೃಪ್ತಿಯಿಂದ ವಂಚಿತರಾಗಬಾರದೆಂದು ಅರಿತು, ಒಂದು ನಿರ್ಧಾರಕ್ಕೆ ಬಂದು ಈ ಘೋಷಣೆ ಹೊರಡಿಸುತ್ತಿದ್ದೇವೆ. ಇದು ಘೋಷಣೆಯೂ ಹೌದು, ಆಜ್ಞೆಯೂ ಹೌದು, ನಿಯಮವೂ ಹೌದು : ಸೂಕ್ತ ವಾತಾವರಣವನ್ನು ಕಾಪಾಡಲು ಹಾಗೂ ಸಂಸ್ಕಾರ-ಆಚರಣೆಗಳನ್ನು ಪೋಷಿಸಲು ನಾವು ಅನುಷ್ಠಾನಕ್ಕೆ ತರುವ ಕಾನೂನು ನಿಯಮಗಳ ಪ್ರಕಾರ, ಯಾವ ಹಿಂದೂವಿನ ಮೇಲೆ ಅವನ ಹುಟ್ಟು ಅಥವಾ ಧರ್ಮದ ಕಾರಣದಿಂದ ನಮ್ಮ ಅಥವಾ ಸರ್ಕಾರದ ಅಡಿಯಲ್ಲಿರುವ ದೇವಾಲಯಗಳನ್ನು ಪ್ರವೇಶಿಸಲು ಅಥವಾ ಅಲ್ಲಿ ಪೂಜೆ ಸಲ್ಲಿಸಲು ಯಾವುದೇ ನಿರ್ಬಂಧವಿರುವುದಿಲ್ಲ."

ಈ ಘೋಷಣೆಯಲ್ಲಿ ಯಾವ ಪಾರಮಾರ್ಥಿಕತೆಯಿದೆ?

ಈ ಘೋಷಣೆಯನ್ನು ಟ್ರಾವಂಕೂರ್ ಮಹಾರಾಜರ ಹೆಸರಿನಲ್ಲಿ ಹೊರಡಿಸಲಾಗಿತ್ತು. ಆದರೆ ಪರದೆಯ ಹಿಂದಿನ ಚೈತನ್ಯವೆಂದರೆ ಪ್ರಧಾನಮಂತ್ರಿಗಳಾದ ಸರ್.ಸಿ.ಪಿ. ರಾಮಸ್ವಾಮಿ ಅಯ್ಯರ್ ಅವರು. ಅವರ ಉದ್ದೇಶಗಳನ್ನು ನಾವೀಗ ಅರ್ಥಮಾಡಿಕೊಳ್ಳಬೇಕು. ೧೯೩೩ರಲ್ಲಿ ಸರ್ ಸಿ.ಪಿ. ಆರ್. ಅಯ್ಯರ್ ಟ್ರಾವಂಕೂರ್‌ನ ಪ್ರಧಾನ ಮಂತ್ರಿಗಳಾಗಿದ್ದರು. ೧೯೩೩ರಲ್ಲೆ ಗುರುವಾಯೂರು ದೇವಾಲಯವನ್ನು ಅಸ್ಪೃಶ್ಯರಿಗೆ ತೆರೆಸಲು ಗಾಂಧೀಜಿಯವರೂ ಹೋರಾಡುತ್ತಿದ್ದರು. ದೇವಾಲಯ ಪ್ರವೇಶ ವಿಷಯದ ವಿವಾದಗಳಲ್ಲಿ ಭಾಗವಹಿಸಿದವರಲ್ಲಿ ಸರ್.ಸಿ.ಪಿ. ರಾಮಸ್ವಾಮಿ ಅಯ್ಯರ್ ಕೂಡ ಒಬ್ಬರು. ಈ ವಿಷಯ ಈಗ ಯಾರಿಗೂ ನೆನಪಿದ್ದಂತೆ ಕಾಣುತ್ತಿಲ್ಲ. ಆದರೆ ಈಗ ಅದನ್ನು ನೆನಪು ಮಾಡಿಕೊಳ್ಳುವ ಆವಶ್ಯಕತೆಯಿದೆ. ಯಾಕೆಂದರೆ ಈ ಘೋಷಣೆ ಹೊರಡಿಸಲು ಅವರು ಮಹಾರಾಜರನ್ನು ಯಾಕೆ ಬಲವಂತಪಡಿಸಿದರು ಎನ್ನುವ ಉದ್ದೇಶ ತಿಳಿಯಲು ಸಹಾಯವಾಗುತ್ತದೆ. ೧೯೩೩ರಲ್ಲಿ ಸರ್ ಸಿ.ಪಿ. ರಾಮಸ್ವಾಮಿ ಅಯ್ಯರ್ ಅವರು ಈ ವಿಷಯದಲ್ಲಿ ಯಾವ ನಿಲುವು ತಳೆದಿದ್ದರು? ಅವರ ಪತ್ರಿಕಾ ಹೇಳಿಕೆಯಿಂದ ನಮಗೆ ಅದು ಸ್ಪಷ್ಟವಾಗುತ್ತದೆ.[೧]

"ವೈಯಕ್ತಿಕವಾಗಿ ನಾನು ಜಾತೀಯತೆಯನ್ನು ಆಚರಿಸುವುದಿಲ್ಲ. ಈಗ ಚಾಲ್ತಿಯಲ್ಲಿರುವ ದೇವಾಲಯ ಪೂಜೆ ಮತ್ತು ಇತರ ವಿವರಗಳ ವ್ಯವಸ್ಥೆ ದೈವ ನಿಯಾಮಕ ಎಂದು ನಂಬಿರುವ ಜನರಿಗೆ ಈ ವಿಷಯದ

---

೧. *ಕಾಂಗ್ರೆಸ್ ಹಾಗೂ ಗಾಂಧೀ ಅಸ್ಪೃಶ್ಯರಿಗೆ ಮಾಡಿದ್ದೇನು* ಪುಸ್ತಕದಿಂದ ಈ ಹೇಳಿಕೆ ತೆಗೆದುಕೊಳ್ಳಲಾಗಿದೆ. ಪು. ೩೧೮. ಇದು ಹಸ್ತ ಪ್ರತಿಯಲ್ಲಿರಲಿಲ್ಲ. - ಸಂ.

ಬಗ್ಗೆ ಗಾಢವಾದ ಭಾವನೆಗಳಿವೆ ಎಂದು ನಾನು ಬಲ್ಲೆ. ಪರಸ್ಪರ ಹೊಂದಾಣಿಕೆ ತರುವುದರ ಮೂಲಕ, ಹಿಂದೂ ಸಮಾಜದ ಧಾರ್ಮಿಕ ಹಾಗೂ ಸಾಮಾಜಿಕ ಧುರೀಣರನ್ನು ಸದ್ಯದ ಪರಿಸ್ಥಿತಿಯ ಬಗ್ಗೆ ಮತ್ತು ಹಿಂದೂ ಜನಾಂಗದ ಒಗ್ಗಟ್ಟನ್ನು ಕಾಯ್ದಿಡುವುದರ ಆವಶ್ಯಕತೆ ಬಗ್ಗೆ ಜಾಗೃತಗೊಳಿಸುವುದರ ಮೂಲಕ ನಾವು ಈ ಸಮಸ್ಯೆಯನ್ನು ಶಾಶ್ವತವಾಗಿ ನಿವಾರಿಸಬಲ್ಲವು."

"ತಲ್ಲಣಗೊಳಿಸುವಂಥ ಚಿಕಿತ್ಸಾಕ್ರಮದಿಂದ ನಮ್ಮ ಗುರಿ ಸಾಧಿಸಲಾಗುವುದಿಲ್ಲ. ರಾಜಕೀಯ ರಂಗಕ್ಕಿಂತ ಹೆಚ್ಚಾಗಿ ಈ ರಂಗದಲ್ಲಿ ನೇರ ಹೋರಾಟವು ಅಪಾಯಕಾರಿಯಾಗಬಹುದು. ದೇವಾಲಯ ಪ್ರವೇಶ ವಿಷಯವು ಅಂತರ್ಭೋಜನ ಮುಂತಾದ ಸಮಸ್ಯೆಗಳಿಗಿಂತ ಬೇರೆ ಎನ್ನುವ ಗಾಂಧೀಜಿಯವರಿಗಿಂತ ನನ್ನ ಅಭಿಪ್ರಾಯ ಭಿನ್ನವಾಗಿರುವುದು ಶೋಚನೀಯ. ಶೋಷಿತ ವರ್ಗದವರ ಸಾಮಾಜಿಕ ಹಾಗೂ ಆರ್ಥಿಕ ಉದ್ಧಾರವೇ ನಮ್ಮ ಸದ್ಯದ ಕಾರ್ಯಕ್ರಮವಾಗಬೇಕು ಎಂದು ಅಭಿಪ್ರಾಯ ಪಡುವ ಡಾ. ಅಂಬೇಡ್ಕರರ ವಾದವನ್ನು ನಾನು ಅನುಮೋದಿಸುತ್ತೇನೆ."

೧೯೩೩ರಲ್ಲಿ ಸರ್. ಸಿ. ಪಿ. ರಾಮಸ್ವಾಮಿಯವರು ಯಾವುದೇ ಪಾರಮಾರ್ಥಿಕ ವಿಷಯಗಳಿಂದ ವಿಚಲಿತರಾಗಿರಲಿಲ್ಲ ಎಂದು ಈ ಹೇಳಿಕೆಯಿಂದ ತಿಳಿದುಬರುತ್ತದೆ. ಪಾರಮಾರ್ಥಿಕ ಗುರಿಗಳು ೧೯೩೩ರ ನಂತರ ಜಾರಿಗೆ ಬಂದದ್ದು ಈ ಪಾರಮಾರ್ಥಿಕ ಗುರಿಗಳ ಬಗ್ಗೆ ೧೯೩೬ರಲ್ಲಿ ಆಲೋಚನೆಗಳು ಪ್ರಾರಂಭವಾಗಿದ್ದಕ್ಕೆ ಏನಾದರೂ ವಿಶೇಷ ಕಾರಣವಿರಬಹುದೆ?

ಯಿಯೋಲಾದಲ್ಲಿ ೧೯೩೫ರಲ್ಲಿ ನಾನು ಪ್ರಸ್ತಾಪಿಸಿದ್ದ ಮತಾಂತರ ವಿಷಯವನ್ನು ೧೯೩೬ರಲ್ಲಿ ಯೆಜೆವಾ ಜನಾಂಗದವರು ಟ್ರಾವಂಕೂರ್‌ನಲ್ಲಿ ಏರ್ಪಡಿಸಿದ್ದ ಸಮಾವೇಶದಲ್ಲಿ ಚರ್ಚೆಗೆ ಎತ್ತಿಕೊಂಡರು ಎನ್ನುವ ವಿಷಯವನ್ನು ಗಮನದಲ್ಲಿಟ್ಟುಕೊಂಡರೆ ಮಾತ್ರ ಮೇಲಿನ ಪ್ರಶ್ನೆಗೆ ಉತ್ತರ ಸಿಗಬಹುದು. ಯೆಜೆವಾಗಳು ಮಲಬಾರಿನಲ್ಲಿ ಹಂಚಿಹೋಗಿರುವ ಅಸ್ಪೃಶ್ಯ ಜನಾಂಗದವರು. ಇವರು ವಿದ್ಯಾವಂತರು ಹಾಗೂ ಆರ್ಥಿಕವಾಗಿ ಸಾಕಷ್ಟು ಸ್ಥಿತಿವಂತರು. ಇದು ಸಾಮಾಜಿಕ, ಧಾರ್ಮಿಕ ಹಾಗೂ ರಾಜಕೀಯ ಹಕ್ಕಿಗಾಗಿ ರಾಜ್ಯದಲ್ಲಿ ಹೋರಾಟ ನಡೆಸಿ, ಒಂದು ಅಭಿವ್ಯಕ್ತಿಶೀಲ ಜನಾಂಗವೆನಿಸಿದೆ. ಇವರದು ಒಂದು ಅತಿ ದೊಡ್ಡ ಜನಾಂಗವೇ ಸರಿ. ಇಷ್ಟು ದೊಡ್ಡ ಜನಾಂಗವು ಅಂತ್ಯಗೊಂಡರೆ ಹಿಂದೂಗಳ ಗತಿ ಮುಗಿದಂತೆಯೇ. ಸಮಾವೇಶವು ಈ ಅಪಾಯದ ವಾಸ್ತವತೆಯನ್ನು ಈ ಕ್ಷಣವೇ ನಮ್ಮ ಮುಂದೊಡ್ಡಿದೆ. ಇದರಿಂದಾಗಿ ಸರ್. ಸಿ.ಪಿ. ರಾಮಸ್ವಾಮಿ ಐಯ್ಯರ್ ಅವರ ಅಭಿಪ್ರಾಯ ಬದಲಾವಣೆ ಹೊಂದಿತು. ಪಾರಮಾರ್ಥಿಕ ಪರಿಭಾವನೆ ಕೇವಲ ಒಂದು ನೆಪ. ಅದು ಅದರ ಉದ್ದೇಶವೇನಲ್ಲ.

ಈ ಘೋಷಣೆ ಎಷ್ಟರಮಟ್ಟಿಗೆ ವಾಸ್ತವವನ್ನು ಬದಲಾಯಿಸಿತು, ಎಷ್ಟರಮಟ್ಟಿಗೆ ತೋರಿಕೆಯಾಗಿ ಉಳಿಯಿತು? ವಾಸ್ತವಾಂಶವೆಲ್ಲ ಟ್ರಾವಂಕೂರಿನಲ್ಲೆ ಇರುವುದರಿಂದ ಅವು ನಮಗೆ ದುರ್ಲಭವಾದವು. ಮದ್ರಾಸ್ ವಿಧಾನಸಭೆಯಲ್ಲಿ ಮಲಬಾರ್ ದೇವಾಲಯ ಪ್ರವೇಶ ಮಸೂದೆ ಚರ್ಚೆಯಾಗುತ್ತಿರುವಾಗ ಸರ್ ಟಿ. ಪನ್ನೀರ್‌ಸೆಲ್ವನ್ ಅವರು ಟ್ರಾವಂಕೂರಿಗೆ ಸಂಬಂಧಪಟ್ಟ ಕೆಲವು ವಿಷಯಗಳನ್ನು ಪ್ರಸ್ತಾಪಿಸಿದರು. ಅವರು ಹೇಳಿದ್ದು ನಿಜವಾದರೆ ಅದೆಲ್ಲ ಶುದ್ಧ ಟೊಳ್ಳು ಎಂದು ತಿಳಿದುಬರುತ್ತದೆ.

ಸರ್ ಟಿ. ಪನ್ನೀರ್‌ಸೆಲ್ವನ್ ಹೇಳಿದರು:

"ಆ ಕ್ರಮವನ್ನು ಅನುಮೋದಿಸುತ್ತ ಪ್ರೀಮಿಯರ್ ಅವರು ಮುಂದಿಟ್ಟ ವಾದಗಳಲ್ಲಿ, ಟ್ರಾವಂಕೂರ್‌ನಲ್ಲಿ ದೇವಾಲಯಗಳನ್ನು ಅಸ್ಪೃಶ್ಯರಿಗಾಗಿ ತೆರೆದಿಡಲಾಗಿದೆ ಎನ್ನುವುದೂ ಒಂದು. ನಿರಂಕುಶ ಅಧಿಕಾರ ಪಡೆದ ಯಾರೊ ಒಬ್ಬ ಮಹಾರಾಜ ಈ ರೀತಿಯ ಒಂದು ಕಾನೂನು ಹೊರಡಿಸಿದ್ದಾರೆ. ಆದರೆ ಅದು ಅಲ್ಲಿ

ಎಷ್ಟರ ಮಟ್ಟಿಗೆ ಕಾರ್ಯರೂಪಕ್ಕೆ ಬಂದಿದೆ? ಸಿಕ್ಕ ಮನವಿಗಳ ಪ್ರಕಾರ ಮೊದಮೊದಲು ಅತ್ಯುತ್ಸಾಹದಿಂದಿದ್ದ ಅಸ್ಪೃಶ್ಯರು ಬರಬರುತ್ತ ದೇವಾಲಯಗಳಿಗೆ ಹೋಗುವುದನ್ನೆ ನಿಲ್ಲಿಸಿದ್ದಾರೆಂದು, ಹರಿಜನರಿಗೆ ಪ್ರವೇಶ ನೀಡುವ ಮುಂಚೆ ಬಂದು ಪೂಜೆ ಸಲ್ಲಿಸುತ್ತಿದ್ದ ಜನರೂ ಈಗ ದೇವಾಲಯಗಳಲ್ಲಿ ಪೂಜೆ ಸಲ್ಲಿಸುವುದನ್ನು ನಿಲ್ಲಿಸಿದ್ದಾರೆಂದು ತಿಳಿದುಬಂತು. ಈ ಕ್ರಮವು ಟ್ರಾವಂಕೂರ್‌ನಲ್ಲಿ ಸಫಲವಾಗಿದೆಯೆ? ಎಂದು ಸರ್ಕಾರವೇ ತಿಳಿಸಬೇಕೆಂದು ಅವರು ಕೇಳುತ್ತಿದ್ದಾರೆ."

ಮಸೂದೆಯನ್ನು ಮೂರನೆಯ ಬಾರಿಗೆ ಓದಿದ ಮೇಲೆ ಸರ್ ಟಿ. ಪನ್ನೀರ್‌ಸೆಲ್ವನ್ ಕೊಟ್ಟ ಹೇಳಿಕೆ ಅನೇಕರಿಗೆ ಆಶ್ಚರ್ಯವುಂಟುಮಾಡುವಂಥದ್ದು. ಅವರು ಹೀಗೆ ಹೇಳುತ್ತಾರೆ :

"ಹಿರಿಯ ಮಹಾರಾಣಿಯವರ ವೈಯಕ್ತಿಕ ದೇವಾಲಯಗಳು ಘೋಷಣೆಯಿಂದ ಹೊರತಾದವೆ ಎಂದು ಅವರು ತಿಳಿಯಬಯಸುತ್ತಾರೆ. ಅದಕ್ಕೆ ಕಾರಣವೇನು? ಅಲ್ಲದೆ, ಹಿರಿಯ ಮಹಾರಾಣಿಯ ಮಗಳ ಮದುವೆ ಸಂದರ್ಭದಲ್ಲಿ ಆ ದೇವಾಲಯದ ಪವಿತ್ರೀಕರಣ ಕಾರ್ಯ ನಡೆಯಬೇಕಾಗಿ ಬಂತು. ಇಂಥ ಪವಿತ್ರೀಕರಣ ಕಾರ್ಯಗಳು ನಡೆಯುತ್ತಲೇ ಇದ್ದರೆ ಘೋಷಣೆಯ ಅರ್ಥವೇನಾಯಿತು?"

ಪ್ರಧಾನ ಮಂತ್ರಿಯವರು ಈ ವಿಷಯಗಳನ್ನು ಪ್ರಶ್ನಿಸಲಿಲ್ಲ. ಯಾಕೆಂದರೆ ಅವನ್ನು ಪ್ರಶ್ನಿಸುವಂತಿಲ್ಲ. ಅವುಗಳ ಬಗ್ಗೆ ಯಾರೂ ಎದುರು ಮಾತಾಡಬಾರದಿದ್ದರೆ ಪಾರಮಾರ್ಥಿಕ ಗುರಿಯುಳ್ಳ ಮಲಬಾರ್ ದೇವಾಲಯ ಪ್ರವೇಶ ಘೋಷಣೆ ವಿಷಯವಾಗಿ ಏನೂ ಹೇಳದಿರುವುದೇ ಲೇಸು.

ಈ ದೇವಾಲಯ ಪ್ರವೇಶ ಚಳುವಳಿಯ ಬಗ್ಗೆ ಕೆಲವು ಅಸ್ಪೃಶ್ಯರು ಹೊಂದಿರುವ ಭಯದ ಬಗ್ಗೆ ಏನೂ ಹೇಳದೆ ನನ್ನ ವಾದವನ್ನು ಇಷ್ಟಕ್ಕೆ ನಿಲ್ಲಿಸಿದರೆ ಸರಿಯಲ್ಲ. ಇದು ಕೇವಲ ಸಾಮಾಜಿಕ ಚಳುವಳಿಯೆ ಅಥವಾ ಕುತಂತ್ರವೆ?

ರಾಜಕೀಯ, ಶಿಕ್ಷಣ, ಉದ್ಯೋಗ ಮುಂತಾದ ಕ್ಷೇತ್ರಗಳಲ್ಲಿ ವಿಶೇಷ ಸೌಲಭ್ಯಗಳನ್ನು ಅಸ್ಪೃಶ್ಯರು ಪಡೆದಿರುವುದಕ್ಕೆ ಕಾರಣ ಅವರು ಅಸ್ಪೃಶ್ಯರಾಗಿರುವುದು. ಅವರು ಇನ್ನು ಮುಂದೆ ಅಸ್ಪೃಶ್ಯರಾಗುಳಿಯದಿದ್ದರೆ ಈ ವಿಶೇಷ ಸವಲತ್ತುಗಳನ್ನು ಪ್ರಶ್ನಿಸಲಾಗುತ್ತದೆ. ಅಸ್ಪೃಶ್ಯತೆಯನ್ನು ತೆಗೆದುಹಾಕಿಬಿಟ್ಟರೆ ಇವರೆಲ್ಲ ಹಿಂದುಳಿದವರು, ಬಡವರು ಆಗಿ ಉಳಿಯುತ್ತಾರೆ. ಆದರೆ ಹಿಂದುಳಿದವರಾಗಿ ಹಾಗೂ ಬಡವರಾಗಿ ಅವರು ಯಾವುದೇ ವಿಶೇಷ ಸವಲತ್ತುಗಳನ್ನು ಪಡೆಯಲು ಅರ್ಹರಾಗುವುದಿಲ್ಲ. ದೇವಾಲಯ ಪ್ರವೇಶದ ಕಾರ್ಯಕರ್ತರ ತಂತ್ರ ಏನಿರಬಹುದು? ದೇವಾಲಯಗಳನ್ನು ತೆರೆದಿಡುವುದು ಮಾತ್ರವೊ ಅಥವಾ ಅಂತಿಮವಾಗಿ ಎಲ್ಲ ಸೌಲಭ್ಯಗಳನ್ನು ಕಿತ್ತುಕೊಳ್ಳುವುದೊ? ಆಲೋಚಿಸಬಲ್ಲ ಅನೇಕ ಅಸ್ಪೃಶ್ಯರ ಮನಸ್ಸಿನಲ್ಲಿ ಈ ಭಯ ಮನೆಮಾಡಿದೆ. ಟ್ರಾವಂಕೂರಿನಲ್ಲಿ ನಡೆಯುತ್ತಿರುವುದನ್ನು ನೋಡಿದರೆ, ಆ ಭಯ ನಿಜವಾಗಲೂ ಭಯಂಕರವಾದದ್ದೆಂದು ತಿಳಿದುಬರುತ್ತದೆ. ಅಖಿಲ ಟ್ರಾವಂಕೂರ್ ಪುಲಾಯಾರ್ ಚೆರಮಾರ್ ಐಕಿಯ ಮಹಾ ಸಂಘಂನ ಪ್ರತಿನಿಧಿ ನನ್ನ ಬಾತ್ಮೀದಾರನೊಬ್ಬ ೧೯೩೮ರ ನವೆಂಬರ್ ೨೪ರಂದು ನನಗೆ ಬರೆದ ಪತ್ರವೊಂದರಲ್ಲಿ ಹೀಗೆ ಬರೆದಿದ್ದಾನೆ. ಅವನು ರವಾನಿಸಿದ ಪತ್ರದ ಪೂರ್ಣ ಪಾಠವನ್ನು ಇಲ್ಲಿ ನೀಡಿದ್ದೇನೆ :

ಡಾ॥ ಅಂಬೇಡ್ಕರ್ ಅವರಿಗೆ ಕ್ಯಾಂಪ್ ವಯ್ಯಾನಾಡ್, ೨೪–೧೧–೧೯೩೮

ಮುಂಬೈ ಕ್ವಿಲಾನ್

ಮಾನ್ಯರೆ,

ಈ ಕೆಳಕಂಡ ವಿವರಗಳನ್ನು ತಮ್ಮ ಗಮನಕ್ಕೆ ತಂದು ಆ ಬಗ್ಗೆ ನಿಮ್ಮ ಅಮೂಲ್ಯ ಸಲಹೆಗಳನ್ನು ಪಡೆದುಕೊಳ್ಳಲು ನನಗೆ ಸಂತೋಷವೆನಿಸುತ್ತದೆ. ಟ್ರಾವಂಕೂರಿನ ಹರಿಜನ ಜನಾಂಗದ ಮುಖಂಡನಾಗಿ

ಈ ರಾಜ್ಯದ ಹರಿಜನರು ಎದುರಿಸುತ್ತಿರುವ ಎಲ್ಲ ಕಷ್ಟನಷ್ಟಗಳನ್ನು, ಸ್ಪಷ್ಟವಾಗಿ ನಿಮಗೆ ತಿಳಿಸುವುದು ನನ್ನ ಮುಖ್ಯ ಕರ್ತವ್ಯವೆಂದು ಭಾವಿಸಿದ್ದೇನೆ.

೧) ಮಹಾರಾಜರು ಹೊರಡಿಸಿದ ದೇವಾಲಯ ಪ್ರವೇಶ ಘೋಷಣೆಯು ಹರಿಜನರಿಗೆ ಒಂದು ವರದಾನವೇ ಸರಿ. ಆದರೆ ದೇವಾಲಯ ಪ್ರವೇಶ ಹೊರತು ಮಿಕ್ಕೆಲ್ಲ ಸಾಮಾಜಿಕ ದೌರ್ಬಲ್ಯಗಳನ್ನೂ ಹರಿಜನರು ಅನುಭವಿಸುತ್ತಿದ್ದಾರೆ. ಈ ಘೋಷಣೆಯಿಂದಾಗಿ ನಮಗೆ ಸಿಗುತ್ತಿದ್ದ ರಿಯಾಯಿತಿಗಳಿಗೆ ಇನ್ನು ಮುಂದೆ ತಡೆ ಹಾಕಿದಂತಾಗಿದೆ. ಇನ್ನು ಹರಿಜನೋದ್ಧಾರಕ್ಕಾಗಿ ಸರ್ಕಾರವು ಯಾವ ಕ್ರಮವನ್ನೂ ಕೈಗೊಳ್ಳುವುದಿಲ್ಲ.

೨) ೧೫ ಲಕ್ಷ ಹರಿಜನರಲ್ಲಿ ಕೆಲವೇ ಕೆಲವು ಮಂದಿ ಪದವೀಧರರು, ಅರ್ಧ ಡಜನ್ ಪದವಿಪೂರ್ವರು ಹಾಗೂ ೫೦ ಜನ ಸ್ಕೂಲಿನಲ್ಲಿ ಕೊನೆಯ ವರ್ಷದಲ್ಲಿ ಓದುತ್ತಿರುವವರು ಮತ್ತು ಇನ್ನೂರಕ್ಕೂ ಹೆಚ್ಚು ಜನ ಪ್ರಾಂತೀಯ ಪ್ರಶಸ್ತಿ ಪತ್ರ ಹೊಂದಿರುವವರಿದ್ದಾರೆ. ಸರ್ಕಾರವು ಲೋಕಸೇವಾ ಆಯೋಗವನ್ನು ರಚಿಸಿದ್ದರೂ ಕೂಡ ಹರಿಜನರ ನೇಮಕಾತಿ ಬಹಳ ಕಡಿಮೆ ಸಂಖ್ಯೆಯಲ್ಲಿ ಆಗುತ್ತಿದೆ. ಎಲ್ಲ ನೇಮಕಾತಿಯನ್ನೂ ಸವರ್ಣೀಯರಿಗೆ ನೀಡಲಾಗುತ್ತಿದೆ. ಹರಿಜನನೊಬ್ಬನನ್ನು ನೇಮಕ ಮಾಡಿದ್ದರೆ ಅದು ಕೇವಲ ಒಂದು ಅಥವಾ ಎರಡು ವಾರಗಳ ಮಟ್ಟಿಗೆ ಮಾತ್ರ. ಲೋಕಸೇವಾ ಆಯೋಗದ ನಿಯಮಗಳ ಪ್ರಕಾರ ಅಭ್ಯರ್ಥಿಯು ವರ್ಷಕ್ಕೆ ಒಂದು ಬಾರಿ ಮಾತ್ರ ಅರ್ಜಿ ಹಾಕಬಹುದು. ಆದರೆ ಅಷ್ಟರಲ್ಲಿ ಸವರ್ಣೀಯನೊಬ್ಬನನ್ನು ಒಂದು ವರ್ಷ ಅಥವಾ ಅದಕ್ಕಿಂತ ಹೆಚ್ಚು ಕಾಲಕ್ಕೆ ನೇಮಿಸಿಕೊಂಡು ಬಿಟ್ಟಿರುತ್ತಾರೆ. ನೇಮಕಾತಿ ಪಟ್ಟಿಯನ್ನು ವಿಧಾನಸಭೆಯ ಮುಂದೆ ಇಡುವ ಸಂದರ್ಭದಲ್ಲಿ ನೇಮಕಾತಿ ಸಂಖ್ಯೆ ಜಾತೀಯ ಪ್ರಾತಿನಿಧ್ಯ ನೀತಿಗೆ ಸರಿಯಾಗಿರುತ್ತದೆ. ಆದರೆ ಎಲ್ಲ ಹರಿಜನ ಹುದ್ದೆಯ ಒಟ್ಟು ಕಾಲಾವಧಿಯು ಒಬ್ಬ ಸವರ್ಣೀಯನ ಒಟ್ಟು ಕಾಲಾವಧಿಗೆ ಸಮವಾಗಿರುತ್ತದೆ. ಈ ರೀತಿಯ ಮೋಸಗಳನ್ನು ಅಧಿಕಾರಿಗಳೇ ಮಾಡುತ್ತಿದ್ದಾರೆಂದು ಹೇಳಲಾಗಿದೆ. ಹೀಗಾಗಿ ಲೋಕಸೇವಾ ಆಯೋಗವು ಸವರ್ಣೀಯರಿಗೆ ತಮ್ಮ ಸಾಮಾನ್ಯ ಆಸ್ತಿಯಾಗಿ ಬಿಟ್ಟಿದೆ. ಒಬ್ಬ ಹರಿಜನನಿಗೂ ಇದರಿಂದ ಒಳಿತಾಗಿಲ್ಲ.

೩) ಕೆಲವು ವರ್ಷಗಳ ಹಿಂದೆ, ಪ್ರತಿಯೊಬ್ಬ ಹರಿಜನನಿಗೂ ಮೂರು ಎಕರೆ ಜಮೀನನ್ನು ವಾಸಮಾಡಲು ನೀಡಬೇಕೆಂದು ಮಹಾರಾಜರು ಘೋಷಣೆ ಹೊರಡಿಸಿದ್ದರು. ಆದರೆ ಸವರ್ಣೀಯರಾದ ಅಧಿಕಾರಿಗಳು ಘೋಷಣೆಯನ್ನು ಜಾರಿಗೆ ತರಲು ಮನಸ್ಸು ಮಾಡಲಿಲ್ಲ. ಊರ ಹತ್ತಿರದ ದೊಡ್ಡ ಜಾಗವನ್ನೂ ಕೊಡಲಾಗಿಲ್ಲ. ಹರಿಜನರು ಸವರ್ಣೀಯರ ಮನೆಯ ಆವರಣದೊಳಗೇ ಇನ್ನೂ ಇದ್ದು ಅನೇಕ ತೆರನಾದ ಕಷ್ಟಗಳನ್ನು ಅನುಭವಿಸುತ್ತಿದ್ದಾರೆ. ಎಷ್ಟೋ ಭೂಮಿಯನ್ನು ಮೀಸಲಾಗಿ ಇಡಲಾಗಿದ್ದರೂ, ಹರಿಜನರ ಭೂಮಿ ಬೇಡಿಕೆ ಮನವಿಗಳನ್ನು ಮುಖ್ಯವೆಂದು ಪರಿಗಣಿಸಲಾಗಿಲ್ಲ. ಈ ಭೂಮಿಯ ಹೆಚ್ಚು ಉಪಯೋಗ ಆಗುತ್ತಿರುವುದು ಸವರ್ಣೀಯರಿಗೆ.

೪) ಸಂಸತ್ ಸದಸ್ಯರ ಚುನಾವಣೆಗೆ ಪ್ರತಿವರ್ಷ ಸರ್ಕಾರವು ಪ್ರತಿಯೊಂದು ಹರಿಜನ ಜನಾಂಗದಿಂದ ಒಬ್ಬರನ್ನು ಹೆಸರಿಸುತ್ತದೆ. ಹರಿಜನರ ದುಃಖ ದುಮ್ಮಾನಗಳನ್ನು ಸಂಸತ್ತಿನ ಮುಂದಿಡಲೆಂದು ಅವರನ್ನು ಆರಿಸಿದ್ದರೂ ಕೂಡ ಅವರೆಲ್ಲ ಸರ್ಕಾರದ ಯಂತ್ರ ಅಂದರೆ ಸವರ್ಣೀಯ ಅಧಿಕಾರಿಗಳ ಕೈಗೊಂಬೆಗಳಾಗಿ ಬಿಡುತ್ತಾರೆ. ಹಾಗಾಗಿ ಹರಿಜನರ ಕಷ್ಟಗಳ ಪರಿಹಾರ ಯಾವ ರೀತಿಯಲ್ಲೂ ಸಾಧ್ಯವಾಗುತ್ತಿಲ್ಲ.

೫) ಟ್ರಾವಂಕೂರಿನ ಎಲ್ಲ ಹರಿಜನರೂ ಹೊಲಗಳಲ್ಲಿ ಅಥವಾ ಮನೆಗಳ ಆವರಣಗಳಲ್ಲಿ ಕೂಲಿಗಳಾಗಿದ್ದಾರೆ. ಅವರು ಸವರ್ಣೀಯರ ಸೇವಕರು; ಅವರನ್ನು ಪಶುಗಳಂತೆ ಕಾಣಲಾಗುತ್ತಿದೆ. ಅವರನ್ನು ರಕ್ಷಿಸುವವರೂ ಇಲ್ಲ, ಉಪಚರಿಸುವವರೂ ಇಲ್ಲ. ರಾಜ್ಯದ ಅನೇಕ ಕಡೆಗಳಲ್ಲಿ ಪ್ರತಿ ಹರಿಜನನಿಗೂ ಒಂದು ಆಣೆ ಕೂಲಿ ಸಿಗುತ್ತಿದೆ. ದೇವಾಲಯ ಪ್ರವೇಶದ ನಂತರವೂ ಅವರ ಸಾಮಾಜಿಕ ದೌರ್ಬಲ್ಯಗಳು ಮುಂಚಿನಂತೆ ಇವೆ. ಟ್ರಾವಂಕೂರ್ ರಾಜ್ಯದ ಅನೇಕ ಕಾರ್ಖಾನೆಗಳಲ್ಲಿನ ಕಾರ್ಮಿಕರು, ರಾಜ್ಯದ ಅಧಿಕಾರಿಗಳು ಎಲ್ಲರೂ ಸವರ್ಣೀಯರೆ. ಅವರು ಸದ್ಯ ಜವಾಬ್ದಾರಿ ಸರ್ಕಾರ ಬೇಕೆಂದು ಚಳುವಳಿ ನಡೆಸಿದ್ದಾರೆ. ಹರಿಜನರು ಈಗ ಸರ್ಕಾರದಲ್ಲಿ ಹಾಗೂ ಕಾರ್ಖಾನೆಗಳಲ್ಲಿ ಕೆಲಸ ಬೇಕೆಂದು ಬೇಡಿಕೆ ಸಲ್ಲಿಸುತ್ತಿದ್ದಾರೆ. ಆದರೆ ಟ್ರಾವಂಕೂರ್‌ನಲ್ಲಿ ನಡೆಯುತ್ತಿರುವುದು ಸವರ್ಣೀಯರ ಚಳುವಳಿ. ಇದರಿಂದಾಗಿ ಹರಿಜನರನ್ನು ಸಾರ್ವಜನಿಕ ಸೇವೆಗಳಿಂದ ಹಾಗೂ ಕಾರ್ಖಾನೆಗಳಿಂದ ದೂರವಿಡಲು ಅವರು ಪ್ರಯತ್ನ ನಡೆಸಿದ್ದಾರೆ. ಅವರು ಹೆಚ್ಚು ಸಂಬಳ, ಹೆಚ್ಚು ಸೌಲಭ್ಯಗಳನ್ನು ಕೇಳುತ್ತಿದ್ದಾರೆ. ಟ್ರಾವಂಕೂರ್‌ನ ಜನತೆ ಕಾರ್ಖಾನೆಗಳ ಕಾರ್ಮಿಕರ ಚಳುವಳಿಯಿಂದ ಹುಚ್ಚೆದ್ದಿದ್ದರೂ ಹರಿಜನ ಕೂಲಿಗಳ ಒಳಿತಿಗೆ ಮಾತ್ರ ನಿರ್ಲಕ್ಷ್ಯವನ್ನೇ ತೋರುತ್ತಿದ್ದಾರೆ. ಹರಿಜನ ಕೂಲಿಗಳ ಸಂಬಳಕ್ಕಿಂತ ಕಾರ್ಖಾನೆ ಕಾರ್ಮಿಕರ ಸಂಬಳ ಸುಮಾರು ಮೂರರಷ್ಟಿದೆ.

೬) ಉಪವಾಸ ಹಾಗೂ ಜೀವನೋಪಾಯವಿಲ್ಲದಿರುವುದರಿಂದ ಹರಿಜನ ಮಕ್ಕಳ ತಲೆಗಳೂ ಬಿಸಿಯೇರಿರುವುದರಿಂದ ಶಾಲೆಯಲ್ಲಿ ಅವರು ಪಾಸಾಗದಿರುವ ಸಾಧ್ಯತೆ ಒದಗಿಬಂದಿದೆ. ಘೋಷಣೆಗೆ ಮುಂಚೆ ಪ್ರೌಢಶಾಲೆಗಳಲ್ಲಿ ಓದುವ ವಿದ್ಯಾರ್ಥಿಗೆ ಆರು ವರ್ಷ ರಿಯಾಯಿತಿ ಸಿಗುತ್ತಿತ್ತು ; ಆದರೆ ಈಗ ಮೂರು ವರ್ಷಕ್ಕೆ ಇಳಿಸಿಬಿಟ್ಟಿದ್ದಾರೆ. ಇದರಿಂದ ನಪಾಸಾದ ಅನೇಕ ವಿದ್ಯಾರ್ಥಿಗಳು ತಮ್ಮ ಶಿಕ್ಷಣವನ್ನೇ ನಿಲ್ಲಿಸಿಬಿಡುತ್ತಿದ್ದಾರೆ.

೭) ಶೋಷಿತ ವರ್ಗದವರ ಇಲಾಖೆಯೊಂದು ಇಲ್ಲಿದೆ. ಅದರ ಮುಖ್ಯಸ್ಥರು (ಹಿಂದುಳಿದ ಜನಾಂಗದವರ ರಕ್ಷಕರಾದ) ಶ್ರೀ ಓ. ಸಿ. ದಾಮೋದರನ್ ಅವರು. ಪ್ರತಿವರ್ಷ ಇದರ ಖರ್ಚಿಗೆ ದೊಡ್ಡ ಮೊತ್ತದ ಹಣವನ್ನು ನೀಡಲಾಗುತ್ತಿದ್ದರೂ. ವರ್ಷದ ಕಡೆಯಲ್ಲಿ ನೋಡಿದರೆ ೨/೩ ಭಾಗದಷ್ಟು ಅತಿಜಾಣತನದಿಂದ ಸೋರಿಹೋಗಿರುತ್ತದೆ. ಈ ಹಣವನ್ನು ಖರ್ಚು ಮಾಡುವ ಬಗೆಯೇ ಇಲ್ಲವೆಂದು ಸರ್ಕಾರಕ್ಕೆ ಅವರು ವರದಿಗಳನ್ನು ಕಳಿಸುತ್ತಲೇ ಇರುತ್ತಾರೆ. ಶೋಷಿತ ವರ್ಗದವರಿಗಾಗಿ ನಿಗದಿಯಾದ ಹಣದಲ್ಲಿ ಶೇಕಡ ೯೫ರಷ್ಟು ಕೇವಲ ಸವರ್ಣೀಯರಾದ ಅಧಿಕಾರಿಗಳ ಸಂಬಳಕ್ಕಾಗಿ ವಿನಿಯೋಗವಾಗಿರುತ್ತದೆ. ಶೇ. ೫ ರಷ್ಟು ಮಾತ್ರ ಉಪಯೋಗವಾಗಿರುತ್ತದೆ. ಈಗ ಸರ್ಕಾರವು ಟ್ರಾವಂಕೂರಿನ ಮೂರು ಭಾಗಗಳಲ್ಲಿ ಕೆಲವು ಕಾಲನಿಗಳನ್ನು ಮಾಡುವುದರಲ್ಲಿದೆ. ಇಲ್ಲಿಯೂ ಅಧಿಕಾರಿಗಳು ಸವರ್ಣೀಯರೇ. ನನ್ನ ಪ್ರಕಾರ ಈ ಯೋಜನೆ ಸಫಲವಾಗುವುದಿಲ್ಲ. ಕೊಚ್ಚಿನ್ ಸರ್ಕಾರವು ಹರಿಜನರಿಗೆ ಒಂದು ರೂಪಾಯಿ ಖರ್ಚು ಮಾಡುವಲ್ಲಿ ಟ್ರಾವಂಕೂರ್ ಸರ್ಕಾರ ಕೇವಲ ಒಂದು ಆಣೆಯನ್ನು ಖರ್ಚು ಮಾಡುತ್ತಿರುವುದನ್ನು ನೋಡಿ ವಿಷಾದವೆನಿಸುತ್ತದೆ.

ಟ್ರಾವಂಕೂರ್‌ನ ಬಹುಪಾಲು ಪ್ರಜೆಗಳು ಜವಾಬ್ದಾರಿ ಸರ್ಕಾರ ಬೇಕೆಂದು "ರಾಜ್ಯ ಕಾಂಗ್ರೆಸ್" ಎಂಬ ಸಂಘ ಕಟ್ಟಿಕೊಂಡು ದೊಡ್ಡ ಚಳುವಳಿಯನ್ನೇ ನಡೆಸಿದ್ದಾರೆ. ಈ ಜನಪ್ರಿಯ ಸಂಘದ ಮುಂದಾಳುಗಳು ನಾಲ್ಕು ಬಹುಸಂಖ್ಯಾತ ಜನಾಂಗಗಳಾದ ನಾಯರ್, ಮಹಮದೀಯ, ಕ್ರೈಸ್ತ ಹಾಗೂ ಯೆಜಾವಾ ಜನಾಂಗಗಳಿಗೆ ಸೇರಿದವರಾಗಿದಾರೆ. ರಾಜ್ಯ ಕಾಂಗ್ರೆಸ್‌ನ ಅಧ್ಯಕ್ಷರಾದ ಶ್ರೀ ಥಾನು ಪಿಳ್ಳೈ ಅವರು ಶೋಷಿತ

ವರ್ಗದವರಿಗೆ ವಿಶೇಷ ರಿಯಾಯಿತಿ ನೀಡುವುದಾಗಿ ಒತ್ತಿ ಹೇಳುವ ಒಂದು ಹೇಳಿಕೆಯನ್ನು ಹೊರಡಿಸಿದರು. ಶೋಷಿತ ವರ್ಗದ ಮುಖಂಡರೆಲ್ಲ ರಾಜ್ಯ ಕಾಂಗ್ರೆಸ್‌ನ ನಿಲುವುಗಳನ್ನು ನೋಡಲು ಕಾಯುತ್ತಿದ್ಧಾರೆ. ಈಗ ಈ ಮುಖಂಡರ ಅಣೆ ಪ್ರಮಾಣಗಳಲ್ಲಿ ಸತ್ಯಾಂಶವು ಸ್ವಲ್ಪವೂ ಇರುವುದಿಲ್ಲ ಎಂದು ನಮಗೆ ತಿಳಿದುಬಂದಿದೆ.

ಶೋಷಿತ ವರ್ಗದವರ ಹಿತಾಸಕ್ತಿಗಳನ್ನು ಈ ಮುಖಂಡರು ಅಲಕ್ಷ್ಯ ಮಾಡಿದ್ದಾರೆ ಎಂದು ಈಗ ನನಗೆ ಖಾತ್ರಿಯಾಗಿದೆ. ರಾಷ್ಟ್ರೀಯತೆ ಆದರ್ಶದ ಮೇಲೆ ರಾಜ್ಯ ಕಾಂಗ್ರೆಸ್ಸನ್ನು ಶುರು ಮಾಡಲಾಯಿತು. ಆದರೆ ಅದು ಈಗ ಜಾತೀಯತೆಯ ಸಂಘವಾಗಿ ಬಿಟ್ಟಿದೆ. ಮುಖಂಡರಲ್ಲಿ ಜಾತೀಯ ಭಾವನೆಗಳೇ ಹೆಚ್ಚು ಕೆಲಸ ಮಾಡುತ್ತಿವೆ. ಪ್ರತಿಯೊಂದು ಸಾರ್ವಜನಿಕ ಭಾಷಣ, ಹೇಳಿಕೆ ಅಥವಾ ಲೇಖನಗಳಲ್ಲಿ ಆ ಮುಖಂಡರು ಕೇವಲ ಈ ನಾಲ್ಕು ಜನಾಂಗಗಳನ್ನಷ್ಟೇ ಹೆಸರಿಸುತ್ತಾರೆ. ಅವರಿಗೆ ನಮ್ಮ ಬಗ್ಗೆ ಆಲೋಚನೆಗಳೇ ಬರುವುದಿಲ್ಲ. ಟ್ರಾವಂಕೂರಿನ ರಾಜಕೀಯ ಚಳುವಳಿಯ ಮುಂದಾಳುಗಳ ಗತಿ ಹೀಗೇ ಆದರೆ ಜವಾಬ್ದಾರಿ ಸರ್ಕಾರ ಬಂದಮೇಲೆ ಶೋಷಿತ ವರ್ಗದವರ ಸ್ಥಿತಿ ಇನ್ನೂ ಚಿಂತಾಜನಕವಾಗುತ್ತದೆಂಬ ಹೆದರಿಕೆ ನನಗಿದೆ. ಆಗ ಸರ್ಕಾರವು ಮೇಲೆ ಹೇಳಿದ ಜಾತಿಗಳ ಹಿಡಿತದಲ್ಲಿರುತ್ತದೆ. ಆ ಜನಾಂಗದವರು ಶೋಷಿತ ವರ್ಗದವರ ಹಕ್ಕು ಬಾಧ್ಯತೆಗಳನ್ನು ನುಂಗಿ ಹಾಕಿಬಿಡುತ್ತಾರೆ. ರಾಜ್ಯ ಕಾಂಗ್ರೆಸ್‌ನ ಕಾರ್ಯಕಾರಿ ಸಮಿತಿಯ ಸಭೆಗಳಲ್ಲಿ ೨/೩ ಭಾಗದಷ್ಟು ಸಮಯವನ್ನು ಅಲೆಪ್ಪೀ ಕ್ವಾಯಿರ್ ಕಾರ್ಖಾನೆಯಲ್ಲಿ ನಡೆದ ಮುಷ್ಕರದ ಬಗ್ಗೆ ಚರ್ಚಿಸುತ್ತ ಕಳೆಯಲಾಗುತ್ತದೆ. ಆದರೆ ಅನೇಕ ರೀತಿಯ ಕಷ್ಟಗಳನ್ನು ಎದುರಿಸುತ್ತಿರುವ ಹರಿಜನ ಕೆಲಸಗಾರರ ಬಗ್ಗೆ ಒಂದು ಮಾತನ್ನೂ ಯಾರೂ ಆಡುವುದಿಲ್ಲ. ಕಾರ್ಖಾನೆಯ ಕಾರ್ಮಿಕರು ಸವರ್ಣೀಯರು. ಅಲ್ಲದೆ ಜವಾಬ್ದಾರಿ ಸರ್ಕಾರ ಬೇಕೆಂದು ನಡೆಯುತ್ತಿರುವ ಚಳುವಳಿ ಒಂದು ರೀತಿಯಲ್ಲಿ ಹರಿಜನ ವಿರೋಧಿ ಚಳುವಳಿ. ರಾಜ್ಯ ಕಾಂಗ್ರೆಸ್‌ನ ಪ್ರತಿ ಮುಖಂಡನ ಉದ್ದೇಶವೆಂದರೆ ಸವರ್ಣೀಯನ ಸ್ಥಿತಿಯನ್ನು ಮತ್ತಷ್ಟು ಸುಧಾರಿಸುವುದು. ಬಹುಸಂಖ್ಯಾತ ಜನಾಂಗದ ಮುಖಂಡರಿಗೆ ಇರುವ ಹಣದಾಸೆಯಿಂದಾಗಿ ತಮ್ಮ ಉದ್ಧಾರಕ್ಕಾಗಿ ಅವರು ಶೋಷಿತ ವರ್ಗವನ್ನು ಬಲಿಯಾಗಿಸುತ್ತಾರೆ.

ರಾಜ್ಯದ ಶೋಷಿತ ವರ್ಗದವರ ಪರಿಸ್ಥಿತಿ ಹೀಗಿದೆ. ರಾಜ್ಯದಲ್ಲಿ ನಮ್ಮ ಹಕ್ಕನ್ನು ಸ್ಥಾಪಿಸಲು ನಾವು ಯಾವ ಮಾರ್ಗ ಅನುಸರಿಸಬೇಕು? ಈ ಸಂದರ್ಭದಲ್ಲಿ ನಿಮ್ಮ ಅಮೂಲ್ಯ ಸಲಹೆಗಳನ್ನು ನನಗೆ ನೀಡುವಷ್ಟು ಕೃಪೆ ಮಾಡಿ ಎಂದು ನಿಮ್ಮಲ್ಲಿ ಬೇಡಿಕೆ. ನಿಮ್ಮ ಉತ್ತರಕ್ಕಾಗಿ ಕಾಯುತ್ತಿರುವೆ.

ನಿಮಗೆ ತೊಂದರೆ ಕೊಡುತ್ತಿರುವುದಕ್ಕೆ ಕ್ಷಮಿಸಿರಿ.

ನಿಮ್ಮವ,

ಶ್ರೀ ನಾರಾಯಣಸ್ವಾಮಿ

ಒಂದು ವೇಳೆ ದೇವಾಲಯ ಪ್ರವೇಶವು ಅಸ್ಪೃಶ್ಯರಿಗೆ ಕಾನೂನು ರೀತ್ಯಾ ಸಿಕ್ಕಿರುವ ಹಕ್ಕುಗಳನ್ನು ಕಿತ್ತುಕೊಳ್ಳುವ ಉಪಾಯವಾಗಿದ್ದರೆ, ಆಗ ಚಳುವಳಿಯು ಪಾರಮಾರ್ಥಿಕವಲ್ಲ ಎನ್ನುವುದು ಮಾತ್ರವಲ್ಲ, ಬದಲಾಗಿ ಅದು ಖಂಡಿತವಾಗಿಯೂ ಕುತಂತ್ರದಿಂದ ಕೂಡಿದೆ ಎಂದು ದೃಢವಾಗುವುದು. ಎಲ್ಲ ಪ್ರಾಮಾಣಿಕ ಜನರ ಕರ್ತವ್ಯ 'ಗಾಂಧೀಜಿ ಬಗ್ಗೆ ಜಾಗ್ರತೆಯಾಗಿರಿ' ಎಂದು ಅಸ್ಪೃಶ್ಯರಿಗೆ ಮುನ್ನೆಚ್ಚರಿಕೆ ಕೊಡುವುದೇ ಆಗಿದೆ.

## ಅಧ್ಯಾಯ ೨೬

# ಅಸ್ಪೃಶ್ಯರಿಗೊಂದು ಎಚ್ಚರಿಕೆ

ವ್ಯವಸ್ಥೆಯ ವಿರುದ್ಧ ತಿರುಗಿಬೀಳುವುದು, ಬಂಡೇಳುವುದು ಸಹಜ. ಇದು ಎಲ್ಲ ರಾಷ್ಟ್ರಗಳ ಬಡವರ ಚರಿತ್ರೆಯ ಒಂದು ಭಾಗ. ಬಡವರ ಚರಿತ್ರೆಯನ್ನು ಓದುವ ವಿದ್ಯಾರ್ಥಿ, ತಮಗೆ ದೊರೆಯುವ ವಿಜಯದ ಬಗ್ಗೆ ಬಡವರ ಮನಸ್ಸಿನಲ್ಲಿ ಸುಳಿಯುವ ಆಲೋಚನೆಗಳನ್ನು ಕಂಡು ದಂಗುಬಡಿದು ಹೋಗುತ್ತಾನೆ. ಧಾರ್ಮಿಕ ಯುಗದಲ್ಲಿ ಪಾರಮಾರ್ಥಿಕ ಶಕ್ತಿಗಳು, ದುರ್ಬಲರಿಗೆ ಜಗತ್ತನ್ನೇ ತಂದೊಪ್ಪಿಸುತ್ತವೆ ಎಂಬ ಭ್ರಮೆಯೊಳಗೆ ಅವರು ಜೀವಿಸುತ್ತಿದ್ದರು. ಧರ್ಮನಿರಪೇಕ್ಷ ಯುಗ ಅಥವಾ ಆಧುನಿಕ ಯುಗದಲ್ಲಿ ಚಾರಿತ್ರಿಕ ಭೌತಿಕವಾದದ ಶಕ್ತಿಗಳು ಬಲವಾನರ ಶಕ್ತಿಯನ್ನು ಹೀರಿ ಬಲಹೀನರು ಅವರ ಸ್ಥಾನ ಆಕ್ರಮಿಸುವಂತೆ ಮಾಡುತ್ತಾರೆಂಬ ಭ್ರಮೆಯೊಳಗೆ ಜೀವಿಸುತ್ತಿದ್ದಾರೆ.

ಈ ಮನಃಶಾಸ್ತ್ರೀಯ ಅಂಶಗಳ ಬೆಳಕಿನಲ್ಲಿ ಅಸ್ಪೃಶ್ಯರನ್ನು ಹಿಂದೂ ಸಾಮಾಜಿಕ ವ್ಯವಸ್ಥೆಯ ವಿರುದ್ಧದ ದಂಗೆಕೋರರ ಪಾತ್ರದಲ್ಲಿ ನೋಡಿದಾಗ, ಪಾರಮಾರ್ಥಿಕ ಅಥವಾ ಚಾರಿತ್ರಿಕ ಶಕ್ತಿಗಳಾವುವೂ ತಮಗೆ ಸುವರ್ಣ ಯುಗವನ್ನು ದೊರಕಿಸಿಕೊಡುವುದಿಲ್ಲ ಎಂದು ಅರಿತಿರುವುದನ್ನು ನೋಡಿದಾಗ ಅವರನ್ನು ಅಭಿನಂದಿಸಬೇಕೆನಿಸುತ್ತದೆ. ಹಿಂದೂ ಸಾಮಾಜಿಕ ವ್ಯವಸ್ಥೆ ಕೆಳಗುರುಳಲೇಬೇಕೆಂದರೆ ಅದು ಎರಡು ಸಂದರ್ಭಗಳಲ್ಲಿ ಮಾತ್ರ ಸಾಧ್ಯವೆಂದು ಅವರು ತಿಳಿದುಕೊಂಡಿದ್ದಾರೆ. ಮೊದಲನೆಯದು, ಸಾಮಾಜಿಕ ವ್ಯವಸ್ಥೆಯು ದಿನನಿತ್ಯವೂ ಆಘಾತಗಳನ್ನು ಎದುರಿಸುವಂತಾಗಬೇಕು. ಎರಡನೆಯದು, ಆಲೋಚನೆಗಳಲ್ಲಿ ಹಾಗೂ ಕೆಲಸ ಕಾರ್ಯಗಳಲ್ಲಿ ಹಿಂದೂಗಳಿಂದ ಭಿನ್ನ ಹಾಗೂ ಸ್ವತಂತ್ರರಾಗದ ಹೊರತು ದಿನನಿತ್ಯ ಆಘಾತಗಳನ್ನು ಸೃಷ್ಟಿಮಾಡುವುದು ಸಾಧ್ಯವಾಗುವುದಿಲ್ಲ. ಈ ಕಾರಣದಿಂದಲೇ ಅಸ್ಪೃಶ್ಯರು ತಮಗೆ ಪ್ರತ್ಯೇಕ ಮತದಾರ ಸಮೂಹ ಹಾಗೂ ಪ್ರತ್ಯೇಕ ವಾಸಸ್ಥಾನಬೇಕೆಂದು ಆಗ್ರಹಪಡಿಸುತ್ತಿರುವುದು.

ಆದರೆ ಹಿಂದೂಗಳು, ಅಸ್ಪೃಶ್ಯರು ತಮ್ಮ ಉದ್ಧಾರಕ್ಕಾಗಿ ಹಿಂದೂಗಳನ್ನೇ ಅವಲಂಬಿಸಬೇಕು ಎಂದು ಹೇಳುತ್ತಿದ್ದಾರೆ. ಶಿಕ್ಷಣವನ್ನು ಸಾರ್ವಜನಿಕರಿಗೆ ಪಸರಿಸುವುದರಿಂದ ಹಿಂದೂಗಳು ತರ್ಕಬದ್ಧವಾಗಿ ನಡೆದುಕೊಳ್ಳುತ್ತಾರೆಂದು ಅಸ್ಪೃಶ್ಯರಿಗೆ ಹೇಳಲಾಗುತ್ತಿದೆ. ಅಸ್ಪೃಶ್ಯತೆಯ ವಿರುದ್ಧ ಸುಧಾರಕರು ಸದಾಕಾಲ ಬೋಧನೆ ಮಾಡುವುದರಿಂದ ಹಿಂದೂಗಳಲ್ಲಿ ನೈತಿಕ ಪರಿವರ್ತನೆ ಉಂಟಾಗಿ ಅವರ ವಿವೇಚನಾ ಶಕ್ತಿಯಲ್ಲಿ ಜಾಗೃತಿ ಉಂಟಾಗುವುದು. ಹಿಂದೂಗಳ ಸದ್ಭಾವನೆ ಮತ್ತು ಕರ್ತವ್ಯಪರತೆಯನ್ನು ಅಸ್ಪೃಶ್ಯರು ನಂಬಬೇಕು. ಇಂಥ ಟೊಳ್ಳು ಮಾತನ್ನು ಯಾವ ಅಸ್ಪೃಶ್ಯನೂ ನಂಬುವುದಿಲ್ಲ. ಆ ರೀತಿ, ನಂಬುವವರೇನಾದರೂ ಇದ್ದರೆ ಅವರು ಕಪಟಿಗಳು; ತಮಗೆ ಮೀಸಲಾದ ಜಾಗದಲ್ಲಿದ್ದು ಹಿಂದೂಗಳು ಕರುಣೆ ತೋರಿಸಿದರೆ ಮಾತ್ರ ಸಾಕು, ಅವರು ಹೇಳಿದ್ದನ್ನೆಲ್ಲ ಒಪ್ಪಿಬಿಡುತ್ತಾರೆ. ಅಂಥವರು ಯಾವುದೇ ರೀತಿಯಲ್ಲಾದರೂ ಸರಿ, ತಮ್ಮ ಹಾದಿಯನ್ನು ಸುಗಮ ಮಾಡಿಕೊಳ್ಳುವ ಅಸ್ಪೃಶ್ಯ ದರೋಡೆಕೋರರು.

ಈ ರೀತಿಯ ಹುಸಿ ಪ್ರಚಾರಗಳಿಂದ ಅಸ್ಪೃಶ್ಯ ಮೋಸಹೋಗುವುದಿಲ್ಲ. ಆದ್ದರಿಂದ ಈ ವಿಚಾರದ ಬಗ್ಗೆ ಟೀಕೆ ಮಾಡುವುದು ಅನಾವಶ್ಯಕ. ಅಲ್ಲದೇ ಈ ಪ್ರಚಾರ ಎಷ್ಟು ಆಕರ್ಷಕವಾಗಿದೆಯೆಂದರೆ ಅದು ಸ್ವಲ್ಪ

ಎಚ್ಚರ ತಪ್ಪಿದ ಅಸ್ಪೃಶ್ಯನನ್ನೂ ತನ್ನ ಬುಟ್ಟಿಗೆ ಹಾಕಿಕೊಂಡು ಬಿಡುತ್ತದೆ. ಆದ್ದರಿಂದ ಅಸ್ಪೃಶ್ಯರಿಗೆ ಎಚ್ಚರಿಕೆ ಕೊಡುವುದು ಅನಿವಾರ್ಯವಾಗಿದೆ.

ಸಾಮಾಜಿಕ ನ್ಯಾಯವನ್ನು ಪಡೆಯಲು ಸಾಮಾಜಿಕ ಆದರ್ಶವಾದಿಗಳು ಸಾಮಾನ್ಯವಾಗಿ ಎರಡು ಏಜೆನ್ಸಿಗಳ ಮೊರೆ ಹೋಗುತ್ತಾರೆ. ಒಂದು ತರ್ಕ, ಮತ್ತೊಂದು ಧರ್ಮ.

ವೈಚಾರಿಕತೆಯ ಪವಿತ್ರ ಉದ್ದೇಶವನ್ನು ಎತ್ತಿಹಿಡಿಯುವ ವಿಚಾರವಾದಿಗಳು ಬುದ್ಧಿಶಕ್ತಿಯನ್ನು ಹೆಚ್ಚು ಮಾಡುವುದರಿಂದ ಅನ್ಯಾಯವನ್ನು ಹೋಗಲಾಡಿಸಬಹುದೆಂದು ನಂಬಿದ್ದಾರೆ. ಮಧ್ಯಯುಗದಲ್ಲಿ ಸಾಮಾಜಿಕ ಅನ್ಯಾಯ ಹಾಗೂ ಮೂಢನಂಬಿಕೆಗಳು ಪರಸ್ಪರ ಸಂಬಂಧ ಹೊಂದಿದ್ದವು. ಆದ್ದರಿಂದ ಮೂಢನಂಬಿಕೆಯ ನಾಶದಿಂದ ಅನ್ಯಾಯವನ್ನು ನಿವಾರಿಸಬಹುದೆಂದು ವಿಚಾರವಾದಿಗಳು ನಂಬಿರುವುದು ಸ್ವಾಭಾವಿಕವೆ. ಅದರ ಪರಿಣಾಮಗಳಿಂದಾಗಿ ಈ ನಂಬಿಕೆಗಳು ಮತ್ತಷ್ಟು ಗಾಢವಾದವು. ಇವತ್ತು ಇದು ಶಿಕ್ಷಣತಜ್ಞರು, ತತ್ವಜ್ಞಾನಿಗಳು ಮನಶ್ಶಾಸ್ತ್ರಜ್ಞರು ಹಾಗೂ ಸಮಾಜ ವಿಜ್ಞಾನಿಗಳ ನಂಬಿಕೆಯಾಗಿಬಿಟ್ಟಿದೆ; ಸಾರ್ವತ್ರಿಕ ಶಿಕ್ಷಣ ಹಾಗೂ ಮುದ್ರಣ ಮತ್ತು ಪತ್ರಿಕೆಗಳನ್ನು ಉತ್ತಮಪಡಿಸುವುದರಿಂದ ಆದರ್ಶ ಸಮಾಜ ಸೃಷ್ಟಿಯಾಗಿ ಅದರಲ್ಲಿ ಪ್ರತಿವ್ಯಕ್ತಿಗೂ ಸಾಮಾಜಿಕ ಅನ್ಯಾಯಗಳು ಎಂದಿಗೂ ಇರಬಾರದೆಂಬ ಜ್ಞಾನೋದಯವಾಗಿರುತ್ತದೆ.

ಈ ಅಂಥ ವಿಶ್ವಾಸಕ್ಕೆ ಭಾರತದ ಅಥವಾ ಯೂರೋಪಿನ ಚರಿತ್ರೆ ಸಂಪೂರ್ಣ ಬೆಂಬಲ ಕೊಡುವುದಿಲ್ಲ. ಯೂರೋಪಿನಲ್ಲಿ ೧೮ನೆಯ ಶತಮಾನಕ್ಕೆ ಸೇರಿರುವಂಥ ಹಳೆ ಸಂಪ್ರದಾಯಗಳು ಮತ್ತು ಮೂಢನಂಬಿಕೆಗಳೇ ಅನ್ಯಾಯಕ್ಕೆ ಮೂಲವೆಂದು ಅವುಗಳನ್ನು ಸಂಪೂರ್ಣವಾಗಿ ನಿವಾರಿಸಲಾಗಿದೆ. ಆದರೂ ಕೂಡ ಸಾಮಾಜಿಕ ಅನ್ಯಾಯಗಳು ಎಲ್ಲ ಕಡೆ ತಾಂಡವವಾಡುತ್ತಲೇ ಇವೆ, ನಿಮಿಷ ನಿಮಿಷಕ್ಕೂ ಭೂತಾಕಾರವಾಗಿ ಬೆಳೆಯುತ್ತಲೇ ಇವೆ. ಭಾರತದಲ್ಲಿ ಪ್ರತಿಯೊಬ್ಬ ಬ್ರಾಹ್ಮಣನೂ – ಹೆಂಗಸರು, ಗಂಡಸರು, ಮಕ್ಕಳು ಮೊದಲಾಗಿ ಎಲ್ಲರೂ ಶಿಕ್ಷಿತರಾಗಿದ್ದಾರೆ. ಆದರೆ ಎಷ್ಟು ಜನ ಬ್ರಾಹ್ಮಣರು ಅಸ್ಪೃಶ್ಯತೆ ನಂಬಿಕೆಯಿಂದ ಮುಕ್ತರಾಗಿದ್ದಾರೆ? ಎಷ್ಟು ಜನರು ಅಸ್ಪೃಶ್ಯತೆ ವಿರುದ್ಧ ಸಮರಕ್ಕೆ ಮುಂದೆ ಬಂದಿದ್ದಾರೆ? ಅನ್ಯಾಯದ ವಿರುದ್ಧ ಹೋರಾಡುತ್ತಿರುವ ಅಸ್ಪೃಶ್ಯರ ಜೊತೆ ಎಷ್ಟು ಜನರ ಬೆಂಬಲಿಗರಾಗಿ ನಿಲ್ಲಲು ಸಿದ್ಧರಿದ್ದಾರೆ? ಸಂಕ್ಷಿಪ್ತವಾಗಿ ಹೇಳಬೇಕೆಂದರೆ, ಅಸ್ಪೃಶ್ಯರ ಹಿತವೇ ತಮ್ಮ ಹಿತವೆಂದು ನಂಬಿರುವವರು ಎಷ್ಟು ಜನರಿದ್ದಾರೆ? ಬಹುಶಃ ಇಂಥ ಜನರ ಸಂಖ್ಯೆ ನೋಡಿ ದಿಗಿಲಾಗಬಹುದು.

ಸಾಮಾಜಿಕ ನ್ಯಾಯವನ್ನು ತಂದುಕೊಡಲು ತರ್ಕವು ಯಾಕೆ ಅಸಮರ್ಥವಾಗಿದೆ? ಇದಕ್ಕೆ ಉತ್ತರ: ತನ್ನ ಸ್ವಹಿತಾಸಕ್ತಿಗೆ ಎಲ್ಲಿಯವರೆಗೆ ತೊಂದರೆ ಉಂಟಾಗುವುದಿಲ್ಲವೊ ಅಲ್ಲಿಯವರೆಗೆ ತರ್ಕ ಕೆಲಸ ಮಾಡಬಲ್ಲದು. ಸ್ವಹಿತಾಸಕ್ತಿಗಳ ಜೊತೆ ಸಂಘರ್ಷವುಂಟಾದಾಗ ಅದು ಸೋಲುತ್ತದೆ. ಅಸ್ಪೃಶ್ಯತೆ ವಿಷಯದಲ್ಲಿ ಅನೇಕ ಹಿಂದೂಗಳಿಗೆ ಒಂದಲ್ಲ ಒಂದು ಸ್ವಹಿತಾಸಕ್ತಿ ಇದ್ದೇ ಇರುತ್ತದೆ. ಈ ಹಿತಾಸಕ್ತಿಯು ಸಾಮಾಜಿಕ ಮೇಲರಿಮೆ ಭಾವನೆಗಳ ಅಥವಾ ಆರ್ಥಿಕ ಶೋಷಣೆಯ ರೂಪ ತಾಳುತ್ತದೆ; ಇದರಿಂದ ಹಿಂದೂಗಳು ಅಸ್ಪೃಶ್ಯತೆ ವಿಷಯದಲ್ಲಿ ಸ್ವಹಿತಾಸಕ್ತಿ ಹೊಂದಿರುವುದು ಸಾಬೀತಾಗುತ್ತದೆ. ಈ ಹಿತಾಸಕ್ತಿಗಳು ತರ್ಕದ ಆದೇಶಗಳಿಗೆ ಶರಣಾಗದಿರುವುದು ಸ್ವಾಭಾವಿಕವೆ. ಆದ್ದರಿಂದ ತರ್ಕದ ಸಾಧ್ಯತೆಗಳಿಗೂ ಮಿತಿಯೆಂಬುದಿದೆ ಎನ್ನುವುದನ್ನು ಅಸ್ಪೃಶ್ಯರು ತಿಳಿದಿರಬೇಕು.

ಧರ್ಮದ ಯಶಸ್ಸನ್ನು ನಂಬಿರುವ ಧರ್ಮಾನುಯಾಯಿ ನೀತಿವಾದಿಗಳು, ಧರ್ಮವು ಮಾನವನಲ್ಲಿ ಬಿತ್ತುವ ನೈತಿಕ ಒಳನೋಟವು ಅವನಲ್ಲಿರುವ ಪಾಪಮಯ ಅಂಶಗಳನ್ನು ಅರಿತುಕೊಳ್ಳುವಂತೆ ಮಾಡಿ ನ್ಯಾಯದ ಪರ ಅವನ ಕರ್ತವ್ಯವನ್ನು ಪ್ರಚೋದಿಸುತ್ತದೆ. ಇವೇ ಧರ್ಮದ ಕೆಲಸವೆನ್ನುವುದನ್ನು ಯಾರೂ

ಅಲ್ಲಗಳೆಯುವುದಿಲ್ಲ. ಈ ಕಾರ್ಯದಲ್ಲಿ ಸ್ವಲ್ಪಮಟ್ಟಿಗೆ ಧರ್ಮವು ಸಫಲವೂ ಆಗಬಹುದು. ಆದರೆ ಇಲ್ಲಿ ಕೂಡ ಧರ್ಮದ ಕಾರ್ಯವ್ಯಾಪ್ತಿಗೆ ಸೀಮೆ ಉಂಟು. ಒಂದು ಜನಾಂಗದ ಒಳಗೆ ನ್ಯಾಯವನ್ನು ಕಲ್ಪಿಸಿಕೊಡುವುದು ಧರ್ಮಕ್ಕೆ ಸಾಧ್ಯವಾಗಬಹುದು. ಆದರೆ ಜನಾಂಗಗಳ ನಡುವೆ ನ್ಯಾಯವನ್ನು ಸ್ಥಾಪಿಸುವುದು ಧರ್ಮದಿಂದ ಸಾಧ್ಯವಿಲ್ಲ. ಧರ್ಮವು ಸಂಯುಕ್ತ ರಾಷ್ಟ್ರಗಳಲ್ಲಿ ನೀಗ್ರೋಗಳ ಹಾಗೂ ಬಿಳಿಯರ ನಡುವೆ ನ್ಯಾಯ ಸ್ಥಾಪಿಸಲು ಅಸಮರ್ಥವಾಗಿದೆ. ಧರ್ಮವು ಜರ್ಮನ್ನರ ಮತ್ತು ಫ್ರೆಂಚರ ನಡುವೆ ಮತ್ತು ಇತರ ದೇಶಗಳ ನಡುವೆ ನ್ಯಾಯ ಸ್ಥಾಪಿಸಲು ಅಸಮರ್ಥವಾಗಿದೆ. ನ್ಯಾಯಕ್ಕಾಗಿ ರಾಷ್ಟ್ರದ ಕರೆ ಮತ್ತು ಜನಾಂಗದ ಕರೆಯೇ ಧರ್ಮದ ಕರೆಗಿಂತ ಹೆಚ್ಚು ಪ್ರಬಲವಾಗಿದೆ.

ಅಸ್ಪೃಶ್ಯರು ಎರಡು ವಿಷಯಗಳನ್ನು ಮನಸ್ಸಿನಲ್ಲಿಟ್ಟುಕೊಳ್ಳಬೇಕು. ಮೊದಲನೆಯದು, ಸಾಮಾಜಿಕ ನ್ಯಾಯವನ್ನು ಸ್ಥಾಪಿಸುವಲ್ಲಿ ಹಿಂದೂ ಧರ್ಮವು ಸಮರ್ಥವಾಗಿದೆ ಎಂದು ಭಾವಿಸುವುದೇ ತಪ್ಪು. ಅಂಥ ಕೆಲಸವನ್ನು ಬೇಕಾದರೆ ಇಸ್ಲಾಂ ಧರ್ಮ, ಕ್ರೈಸ್ತ ಧರ್ಮ ಅಥವಾ ಬೌದ್ಧ ಧರ್ಮಗಳು ಮಾಡಬಲ್ಲವು. ಹಿಂದೂ ಧರ್ಮವು ಸ್ವತಃ ಅಸ್ಪೃಶ್ಯರ ವಿರುದ್ಧ ಅಸಮಾನತೆ ಹಾಗೂ ಅನ್ಯಾಯಗಳ ಸಾಕಾರ ರೂಪವಾಗಿದೆ. ಅದು ನ್ಯಾಯದ ಬಗ್ಗೆ ಉಪದೇಶ ನೀಡಿದರೆ ತನ್ನ ಅಸ್ತಿತ್ವದ ವಿರುದ್ಧ ಹೋದಂತೆ. ಇದು ಸಾಧ್ಯವಾಗುತ್ತದೆ ಎಂದು ಕನಸು ಕಾಣುವುದೂ ಒಂದೇ, ಪವಾಡಕ್ಕೆ ಕಾಯುವುದೂ ಒಂದೇ. ಎರಡನೆಯದಾಗಿ, ಹಿಂದೂ ಧರ್ಮವು ಈ ಕೆಲಸವನ್ನು ಕೈಗೆತ್ತಿಕೊಂಡಿದ್ದರೂ ಕೂಡ ಇದನ್ನು ಸಾಧಿಸುವುದು ಮಾತ್ರ ಅಸಾಧ್ಯದ ಮಾತಾಗಿದೆ. ಹಿಂದೂಗಳ ಮತ್ತು ಅಸ್ಪೃಶ್ಯರ ನಡುವಿನ ಸಾಮಾಜಿಕ ವ್ಯತ್ಯಾಸಗಳು ಹಿಂದೂಗಳು ಹಾಗೂ ಅವರ ಜನರ ನಡುವಿನ ವ್ಯತ್ಯಾಸಕ್ಕಿಂತ ಹೆಚ್ಚಾಗಿದೆ. ಒಂದು ಜನಾಂಗ ಅಥವಾ ರಾಷ್ಟ್ರದ ಮಿತಿಯೊಳಗೆ ಧರ್ಮವು ಎಷ್ಟೇ ಅಚ್ಚುಕಟ್ಟಾಗಿದ್ದರೂ ಕೂಡ ಅದು ಈ ವ್ಯತ್ಯಾಸಗಳೆಂಬ ಅಡ್ಡಗೋಡೆಗಳನ್ನು ಉರುಳಿಸಿ ಎರಡನ್ನೂ ಒಂದು ಮಾಡುವಲ್ಲಿ ಅಶಕ್ತವಾಗಿದೆ.

ಅಸ್ಪೃಶ್ಯರು ಧರ್ಮ ಹಾಗೂ ತರ್ಕವೆನ್ನುವ ಏಜೆನ್ಸಿಗಳನ್ನಷ್ಟೆ ಅಲ್ಲದೆ, ಹಿಂದೂಗಳ ವಿಶೇಷ ಹಕ್ಕು ಪಡೆದ ವರ್ಗಗಳ ಸ್ವಹಿತಾಸಕ್ತಿಗಳನ್ನು ಮತ್ತು ಬಡಪಾಯಿ ಹಿಂದೂಗಳ ಪಿತೃತ್ವವನ್ನು ಗೌರವಿಸಬೇಕೆಂದು ಬಯಸುತ್ತಾರೆ.

ವಿಶೇಷ ಹಕ್ಕು ಪಡೆದ ವರ್ಗದವರು ಕರುಣೆಯಿಂದ ಕೂಡಿದ ಸರ್ವಾಧಿಕಾರವನ್ನು ಚಲಾಯಿಸುವರೆನ್ನುವುದು ಅವರ ಬಗ್ಗೆ ನಂಬಲರ್ಹವಾದ ಏಕೈಕ ವಿಷಯವಾಗಿದೆ. ಅವರಿಗೆ ಅವರದೇ ಆದ ವರ್ಗಹಿತಾಸಕ್ತಿಗಳಿರುತ್ತವೆ. ಅವನ್ನು ಅವರು ಸಾಮಾನ್ಯರ ಹಿತಾಸಕ್ತಿಗಾಗಿ ಅಥವಾ ಸಾರ್ವತ್ರಿಕ ಮೌಲ್ಯಗಳಿಗಾಗಿ ಬಿಟ್ಟುಕೊಡಲು ಸಿದ್ಧರಿರುವುದಿಲ್ಲ. ಬದಲಾಗಿ, ಸಾಮಾನ್ಯರ ಹಿತಾಸಕ್ತಿ ಮತ್ತು ತಮ್ಮ ವರ್ಗಹಿತಾಸಕ್ತಿಗಳನ್ನು ಒಂದು ಮಾಡಿ, ತಮಗೆ ಸಿಕ್ಕಿರುವ ವಿಶೇಷ ಹಕ್ಕುಗಳೇನಿದ್ದರೂ, ತಮ್ಮ ಉಪಯುಕ್ತ ಹಾಗೂ ಬೆಲೆಬಾಳುವ ಕಾರ್ಯಕ್ಕಾಗಿ ಸಿಕ್ಕ ಸಂಭಾವನೆ ಎಂದು ಪರಿಗಣಿಸುತ್ತಾರೆ. ಅವರು ಅಸ್ಪೃಶ್ಯರೊಂದಿಗೆ ಜೊತೆಗಾರರಾಗಿರುವರೆಂಬುವುದು ಕಷ್ಟ ಸಾಧ್ಯ ಅನ್ನುವುದನ್ನು ಅಸ್ಪೃಶ್ಯರು ತಮ್ಮ ಮತ್ತು ಅವರ ಸಂಘರ್ಷದಲ್ಲಿ ಕಂಡುಕೊಂಡಿದ್ದಾರೆ.

ಹಿಂದೂ ಕಾರ್ಮಿಕ ವರ್ಗಗಳ ಸಹಾಯವಾದರೂ ತಮಗೆ ಸಿಗುತ್ತದೆ ಎಂಬುದು ಅಸ್ಪೃಶ್ಯರ ಒಂದು ಭ್ರಮೆ ಮಾತ್ರ. ಭಾರತದ ಕಮ್ಯುನಿಸ್ಟರು 'ಹಿಂದೂ ಕಾರ್ಮಿಕ ವರ್ಗಗಳ ಜೊತೆ ಒಂದಾಗಿ' ಎಂದು ಅಸ್ಪೃಶ್ಯರಿಗೆ ಮನವಿ ಮಾಡಿಕೊಂಡಿದ್ದಾರೆ; ಆದರೆ ಇದು ತಾನು ಬೇರೆಯವರ ಜೊತೆ ಹಂಚಿಕೊಳ್ಳಲಾಗದ ಯಾವುದೇ ಅನುಕೂಲಗಳನ್ನು ಬಯಸುವುದಿಲ್ಲ ಎಂಬ ಅನಿಸಿಕೆಯನ್ನು ಆಧಾರವಾಗಿಟ್ಟುಕೊಂಡಿದೆ. ಈ

ಅನಿಸಿಕೆ ನಿಜವೇ? ಯೂರೋಪಿನಲ್ಲಿ ಕೂಡ ಕಾರ್ಮಿಕರದು ಒಂದೇ ತೆರನಾದ ವರ್ಗವಾಗಿಲ್ಲ. ಅವರಲ್ಲೂ ವರ್ಗ ರಚನೆಯ ಆಧಾರದ ಮೇಲೆ ಉಚ್ಚರು, ನೀಚರು ಎಂಬ ಭೇದಗಳಿವೆ. ಸಾಮಾಜಿಕ ಬದಲಾವಣೆಗಳ ಮೇಲಿನ ಅವರ ಅಭಿಪ್ರಾಯಗಳನ್ನು ನೋಡಿದಾಗ ಈ ವಿಷಯ ತಿಳಿಯುತ್ತದೆ: ಉಚ್ಚರು ಸುಧಾರಕರು ನೀಚರು ಕ್ರಾಂತಿಕಾರಿಗಳು, ಆದ್ದರಿಂದ ಈ ಅನಿಸಿಕೆ ಸರಿಯಲ್ಲ. ಭಾರತದ ವಿಷಯದಲ್ಲಂತೂ ಇದು ಖಂಡಿತವಾಗಿ ತಪ್ಪು. ಇವರಿಗೆ ಸಾಮಾನ್ಯವಾದ ಅಂಶ ಬಹಳ ಕಡಿಮೆ. ಸಾಮಾಜಿಕವಾಗಿ ಇವರಿಬ್ಬರ ನಡುವೆ ಘರ್ಷಣೆ ಆಗೇ ಆಗುವುದು. ಆರ್ಥಿಕವಾಗಿ ನೋಡಿದರೆ ಮೈತ್ರಿಕೂಟಕ್ಕೆ ಇದರಲ್ಲಿ ಆಸ್ಪದವಿದ್ದಂತಿಲ್ಲ. ಅಸ್ಪೃಶ್ಯರು ಯಾವುದಕ್ಕಾಗಿ ಹೋರಾಡಬೇಕು? ಶಿಕ್ಷಣ ಹಾಗೂ ಜ್ಞಾನದ ಪ್ರಸಾರ–ಇವೆರಡಕ್ಕಾಗಿ ಅವರು ಹೋರಾಡಬೇಕು. ವಿಶೇಷ ಹಕ್ಕು ಪಡೆದ ವರ್ಗದವರ ಶಕ್ತಿ ಜನರ ನಡುವೆ ಎಡೆಬಿಡದೆ ಪ್ರಚಾರಗೊಂಡಿರುವ ಸುಳ್ಳುಗಳ ಮೇಲೆ ನಿಂತಿದೆ. ಆ ಶಕ್ತಿಗಳನ್ನು ಸಮರ್ಥಿಸಿಕೊಳ್ಳುವ ಸುಳ್ಳುಗಳ ವಿರೋಧವನ್ನು ಒಪ್ಪಿಕೊಳ್ಳಲು ಸಾಧ್ಯವೇ ಇಲ್ಲ. ಮೊದಲ ಮತ್ತು ಪ್ರಮುಖ ಸಂರಕ್ಷಣಾಸ್ತ್ರವಾದ ಈ ಸುಳ್ಳುಗಳು ಆರೋಗ್ಯಪೂರ್ಣವಾಗಿರುವಾಗ ಇದರ ವಿರುದ್ಧದ ದಂಗೆ ಸಾಧ್ಯವಿಲ್ಲವಾಗಿದೆ. ಯಾವುದೇ ಅನ್ಯಾಯ, ಅನರ್ಥ ಅಥವಾ ಅನಾಚಾರಗಳನ್ನು ವಿರೋಧಿಸುವುದಕ್ಕೆ ಮುಂಚೆ ಅದರ ಆಧಾರವಾದ ಸುಳ್ಳನ್ನು ಬಯಲು ಮಾಡಿ, ಅದು ವಾಸ್ತವವಾಗಿ ಏನೆಂದು ಅರಿತುಕೊಳ್ಳಬೇಕು. ಇದು ಶಿಕ್ಷಣದ ಮೂಲಕ ಮಾತ್ರ ಸಾಧ್ಯ.

ಎರಡನೆಯದಾಗಿ, ಅವರು ಅಧಿಕಾರಕ್ಕಾಗಿ ಹೋರಾಡಬೇಕು. ನಿಜವಾದ ಹಿತಾಸಕ್ತಿಗಳಿಗಾಗಿ ಹಿಂದೂಗಳ ಹಾಗೂ ಅಸ್ಪೃಶ್ಯರ ನಡುವೆ ಘರ್ಷಣೆಯಿದೆ ಮತ್ತು ತರ್ಕದಿಂದ ಘರ್ಷಣೆ ನಿವಾರಣೆಯಾಗುವುದಿದ್ದರೂ ಅದು ಘರ್ಷಣೆಯ ಅನಿವಾರ್ಯತೆಯನ್ನು ನಿವಾರಿಸಲು ಅಸಮರ್ಥ ಎಂಬುದನ್ನು ಮರೆಯಬಾರದು. ಒಂದು ಹಿತಾಸಕ್ತಿಯು ಇನ್ನೊಂದು ಹಿತಾಸಕ್ತಿಯನ್ನು ಹಿಡಿತದಲ್ಲಿ ಇಟ್ಟುಕೊಳ್ಳಲು ಯಾಕೆ ಬಯಸುತ್ತದೆ? ಹಾಗಿದ್ದ ಮೇಲೆ ಒಂದು ಶಕ್ತಿಯನ್ನು ನಾಶಗೊಳಿಸಲು ಇನ್ನೊಂದು ಶಕ್ತಿಯ ಆವಶ್ಯಕತೆಯಿದೆ ಎಂದಾಯಿತು. ನೈತಿಕ ಶಕ್ತಿಯನ್ನು ಯಾವ ರೀತಿ ಬಳಸಬೇಕೆನ್ನುವ ಸಮಸ್ಯೆ ಇದೆ. ಆದರೆ, ಆ ಕಡೆಯ ಅಧಿಕಾರವನ್ನು ನಾಶಪಡಿಸಲು ಈ ಕಡೆಯೂ ಅಧಿಕಾರದ ಆವಶ್ಯಕತೆಯಿದೆ ಎನ್ನುವುದರ ಬಗ್ಗೆ ಸಂಶಯವಿಲ್ಲ. ಅಧಿಕಾರವು ರಾಜಕೀಯ ಅಥವಾ ಆರ್ಥಿಕ ಸ್ವರೂಪದ್ದಾಗಿರುತ್ತದೆ. ಮಿಲಿಟರಿ ಶಕ್ತಿ ಇಂದು ಶಕ್ತಿಯೇ ಅಲ್ಲ. ಯಾಕೆಂದರೆ ಅದು ಒಂದು ಸ್ವತಂತ್ರ ಶಕ್ತಿಯಲ್ಲ. ದುಡಿಯುವ ವರ್ಗದವರ ಆರ್ಥಿಕ ಶಕ್ತಿಯೇ ಮುಷ್ಕರದಲ್ಲಿ ಕಂಡುಬರುವ ನಿಜವಾದ ಶಕ್ತಿ, ದುಡಿಯುವ ವರ್ಗದವರಲ್ಲಿ ಅಸ್ಪೃಶ್ಯರು ಒಂದಾದರೆ ಅವರಿಗೆ ಆರ್ಥಿಕ ಶಕ್ತಿ ಬಿಟ್ಟು ಇನ್ಯಾವ ಶಕ್ತಿಯೂ ಸಿಗುವುದಿಲ್ಲ. ಈ ಶಕ್ತಿಯು ದುಡಿಯುವ ವರ್ಗದವರ ಹಿತಾಸಕ್ತಿಗಳನ್ನು ರಕ್ಷಿಸುವಷ್ಟು ಹೆಚ್ಚಿನದಾಗಿರುವುದಿಲ್ಲ. ಕಾನೂನುಗಳಿಂದ ಇದು ಕುಂಠಿತಗೊಂಡಿರುತ್ತದೆ. ಅಲ್ಲದೆ ಆಜ್ಞೆ, ತೀರ್ಪು, ಯುದ್ಧನೀತಿಗಳಿಗೆ ಮತ್ತು ಸೈನ್ಯಕ್ಕೂ ಬದ್ಧವಾಗಿರಬೇಕು. ಅಸ್ಪೃಶ್ಯರ ಮುಷ್ಕರ ಮಾಡುವ ಅಧಿಕಾರವಂತೂ ಯಾವ ಕೆಲಸಕ್ಕೂ ಸಾಲದಾಗುತ್ತದೆ.

ಹೀಗಾಗಿ ಆದಷ್ಟು ರಾಜಕೀಯ ಶಕ್ತಿಯನ್ನು ಪಡೆದುಕೊಳ್ಳುವುದು ಅಸ್ಪೃಶ್ಯನಿಗೆ ಅತ್ಯಗತ್ಯವಾಗಿದೆ. ಕೆಲಸಕ್ಕೆ ಬಾರದ ಈ ಸಾಮಾಜಿಕ ಹಾಗೂ ಆರ್ಥಿಕ ಶಕ್ತಿಯ ಏರುತ್ತಿರುವ ಕೊರತೆಯನ್ನು ಗಮನದಲ್ಲಿಟ್ಟುಕೊಂಡ ಅಸ್ಪೃಶ್ಯ ಸಾಕಷ್ಟು ರಾಜಕೀಯ ಶಕ್ತಿಯನ್ನು ಪಡೆಯಲಾರ. ಎಷ್ಟೇ ರಾಜಕೀಯ ಶಕ್ತಿ ಸಂಪಾದಿಸಿದರೂ, ಹಿಂದೂಗಳಿಗಿರುವ ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯ ಶಕ್ತಿಯ ಅಗಾಧತೆಯ ಮುಂದೆ ಅಲ್ಪವೇ ಅನಿಸುತ್ತದೆ.

ಅಸ್ಪೃಶ್ಯನಿಗೆ ಎಷ್ಟೇ ಅನಂತವಾದ ರಾಜಕೀಯ ಶಕ್ತಿ ಸಿಕ್ಕಿದರೂ ಕೂಡ, ಅವನು ಶಾಸಕಾಂಗದಲ್ಲಿ ತನ್ನ ಪ್ರಾತಿನಿಧ್ಯಕ್ಕೆ ಹಿಂದೂಗಳನ್ನೇ ಅವಲಂಬಿಸಿದ್ದರೆ, ಅದೆಲ್ಲ ಯಾವ ಉಪಯೋಗಕ್ಕೂ ಬರುವುದಿಲ್ಲ; ಯಾಕೆಂದರೆ, ಹಿಂದೂಗಳ ರಾಜಕೀಯ ಜೀವನ ಅಸ್ಪೃಶ್ಯರ ಆರ್ಥಿಕ ಹಾಗೂ ಸಾಮಾಜಿಕ ಹಿತಾಸಕ್ತಿಗಳಿಗೆ ತದ್ವಿರುದ್ಧವಾದ ಆಸಕ್ತಿಗಳನ್ನು ಅವಲಂಬಿಸಿದೆ.

* * * *

# ಭಾಗ – ನಾಲ್ಕು

# ಧಾರ್ಮಿಕ

ಅಸ್ಪೃಶ್ಯರ ಮತಾಂತರ ಡಾ. ಅಂಬೇಡ್ಕರ್ ಅವರ ಯೋಜನೆಗಳಲ್ಲಿ ಒಂದು. ಈ ಯೋಜನೆ ಕೆಳಗಿನ ಅಧ್ಯಾಯಗಳನ್ನು ಒಳಗೊಂಡಿದೆ.

೧) ಪ್ರಚಾರಕ ಧರ್ಮವಾಗಿ ಹಿಂದೂ ಧರ್ಮ

೨) ಅಸ್ಪೃಶ್ಯರನ್ನು ಕ್ರೈಸ್ತರನ್ನಾಗಿಸುವುದು

೩) ಮತಾಂತರಿಯ ಸ್ಥಿತಿ

೪) ಸಾರ್ವಕಾಲಿಕ ವಾಸ್ತವತೆ

೫) ಅಸ್ಪೃಶ್ಯರು ಮತ್ತು ಅವರ ಹಣೆಬರಹ

ಈ ಪ್ರಬಂಧಗಳಲ್ಲಿ ಕ್ರ. ಸಂ. ೨, ೩, ಶ್ರೀ ಎಸ್. ಎಸ್. ರೇಗೆ ಅವರಿಂದ ದೊರೆತಿವೆ. ಕ್ರ. ಸಂ. ೧ ನಮ್ಮ ಬಳಿಯಿದ್ದ ಕಾಗದಗಳಲ್ಲಿಯೇ ದೊರೆತಿದೆ. ಅದು ಮೂಲತಃ ತೆಲುಗು ಸಮಾಚಾರದ ೧೯೨೬ರ ನವೆಂಬರ್ ವಿಶೇಷಾಂಕದಲ್ಲಿ 'ಜಾತಿ ಮತ್ತು ಮತಾಂತರ' ಎಂಬ ತಲೆಬರಹದಿಂದ ಪ್ರಕಟಗೊಂಡಿತ್ತು. ಮತ್ತೊಂದು 'ಹಿಂದೂಗಳಿಂದ ದೂರ' ಎನ್ನುವ ಬೆರಳಚ್ಚುಗೊಂಡ ಪ್ರಬಂಧ ಕೂಡ ಅಸ್ಪೃಶ್ಯರ ಧಾರ್ಮಿಕ ಪರಿವರ್ತನೆಯ (ಮತಾಂತರ) ವಿಷಯವನ್ನೇ ಒಳಗೊಂಡಿದ್ದು, ಅದನ್ನೂ ಈ ಪುಸ್ತಕದಲ್ಲಿ ಸೇರಿಸಲಾಗಿದೆ.

ಮೇಲಿನ ಯೋಜನೆಯಲ್ಲಿ ವಿವರಿಸಲಾದ ಇತರ ಪ್ರಬಂಧಗಳು ಲಭ್ಯವಾಗಿಲ್ಲ.

– ಸಂಪಾದಕ

# ಅಧ್ಯಾಯ ೨೭

# ಹಿಂದೂಗಳಿಂದ ದೂರ

ತಮ್ಮ ಸಮಸ್ಯೆ ಕುರಿತು ಆಲೋಚಿಸುವ ಸಾಮರ್ಥ್ಯವುಳ್ಳ ಬಹುಸಂಖ್ಯಾತ ಅಸ್ಪೃಶ್ಯರು, ಹಿಂದೂ ಧರ್ಮ ತ್ಯಜಿಸಿ, ಇತರ ಧರ್ಮಕ್ಕೆ ಮತಾಂತರ ಹೊಂದುವುದು, ಅಸ್ಪೃಶ್ಯತೆಯ ಸಮಸ್ಯಾ ಪರಿಹಾರಕ್ಕೆ ಒಂದು ದಾರಿ ಎಂದು ನಂಬುತ್ತಾರೆ. ೧೯೩೬ರ ಮೇ ೩೧ರಂದು ಮುಂಬೈಯಲ್ಲಿ ಜರುಗಿದ 'ಮಹಾರ್' ಸಮುದಾಯದ ಒಂದು ಸಮ್ಮೇಳನದಲ್ಲಿ[೧] ಇಂಥ ಒಂದು ಒಮ್ಮತದ ನಿರ್ಣಯ ಪಾಸಾಯಿತು. ಆ ಸಮ್ಮೇಳನ, ಮಹಾರ್ ಸಮುದಾಯಕ್ಕೆ ಸೀಮಿತವಾದ ಸಮ್ಮೇಳನವಾಗಿದ್ದರೂ, ಅಂದು ಕೈಗೊಂಡ ನಿರ್ಣಯಕ್ಕೆ ಭಾರತದ ಉದ್ದಗಲಕ್ಕೂ ನೆಲೆಸಿರುವ ಬಹು ದೊಡ್ಡ ಸಂಖ್ಯೆಯ ಅಸ್ಪೃಶ್ಯರ ಬೆಂಬಲವಿತ್ತು. ಮತ್ತಾವುದೇ ನಿರ್ಣಯವು ಇಂಥ ಕೋಲಾಹಲ ಉಂಟು ಮಾಡಿರಲಿಲ್ಲ. ಹಿಂದೂ ಮತದ ಬುನಾದಿಯೇ ಅಲುಗಾಡಿತು ಮತ್ತು ಈ ನಿರ್ಣಯದ ಹಿಂದಿದ್ದ ಅಸ್ಪೃಶ್ಯರ ವಿರುದ್ಧ ಶಾಪ, ಅಭಿಶಾಪಗಳನ್ನು ತೂರಲಾಯಿತು; ಬೆದರಿಕೆ ಹಾಕಲಾಯಿತು.

ಅಸ್ಪೃಶ್ಯರ ಮತಾಂತರದ ವಿರೋಧಿಗಳ ನಾಲ್ಕು ಮುಖ್ಯ ಆಕ್ಷೇಪಣೆಗಳೆಂದರೆ:

೧) ಮತಾಂತರದಿಂದ ಅಸ್ಪೃಶ್ಯರಿಗೆ ಏನು ಲಾಭವಿದೆ? ಮತಾಂತರ ಅಸ್ಪೃಶ್ಯರ ಸ್ಥಾನಮಾನದಲ್ಲಿ ಯಾವ ಬದಲಾವಣೆಯನ್ನು ಉಂಟು ಮಾಡಿತು?

೨) ಎಲ್ಲ ಧರ್ಮಗಳೂ ಸತ್ಯ; ಎಲ್ಲ ಧರ್ಮಗಳೂ ಒಳ್ಳೆಯವು. ಧರ್ಮವನ್ನು ಬದಲಿಸುವುದು ವ್ಯರ್ಥ.

೩) ಅಸ್ಪೃಶ್ಯರ ಮತಾಂತರ ರಾಜಕೀಯ ಸ್ವರೂಪದ್ದಾಗಿದೆ.

೪) ಅಸ್ಪೃಶ್ಯರ ಮತಾಂತರ ನಿಜವಲ್ಲ; ಏಕೆಂದರೆ ಅದು ಯಾವುದೇ ಶ್ರದ್ಧೆಯನ್ನು ಆಧರಿಸಿಲ್ಲ.

ಈ ಆಕ್ಷೇಪಣೆಗಳು ಅರ್ಥಶೂನ್ಯ ಮತ್ತು ಅಸಫಲ ಎನ್ನುವುದನ್ನು ವಿವರಿಸಿ ತೋರಿಸಲು ಬಹಳ ಚರ್ಚೆಗೆ ಕಾರಣವೇ ಇಲ್ಲ. ಕೊನೆಯ ಆಕ್ಷೇಪಣೆಯನ್ನು ಮೊದಲು ಎತ್ತಿಕೊಳ್ಳೋಣ. ಯಾವುದೇ ಧಾರ್ಮಿಕ ಉದ್ದೇಶವಿಲ್ಲದೆ ಮತಾಂತರ ಜರುಗಿದ ಅನೇಕ ಘಟನೆಗಳು ಚರಿತ್ರೆಯಲ್ಲಿ ಹೇರಳವಾಗಿ ದೊರೆಯುತ್ತವೆ. ಕ್ಲೋವಿಸ್ ಮತ್ತು ಆತನ ಪ್ರಜೆಗಳು ಕ್ರೈಸ್ತರಾಗಿ ಪರಿವರ್ತನೆಗೊಂಡ ರೀತಿ ಯಾವುದು?

ಎಥೆಲ್ಬರ್ಟ್ ಮತ್ತು ಆತನ ಕೆಂಟಿಷ್ ಪ್ರಜೆಗಳು ಕ್ರೈಸ್ತರಾದುದು ಹೇಗೆ? ಅವರ ಹೊಸ ಧರ್ಮ ಸ್ವೀಕೃತಿಗೆ ಯಾವುದಾದರೂ ಧಾರ್ಮಿಕ ಉದ್ದೇಶವಿತ್ತೇ? ಮಧ್ಯಕಾಲೀನ ಅವಧಿಯಲ್ಲಿ ಜರುಗಿದ ಕ್ರಿಶ್ಚಿಯನ್ ಮತಾಂತರದ ಸ್ವರೂಪವನ್ನು ರೆ. ರೀಚೆಲ್ ಹೀಗೆ ವಿವರಿಸುತ್ತಾರೆ:[೨]

---

೧. ಆ ಸಮ್ಮೇಳನ 'ಮಹಾರ್' ಸಮುದಾಯಕ್ಕೆ ಸೀಮಿತವಾಗಿದ್ದರೂ ಅದಕ್ಕೆ ಹೊಂದಿಕೊಂಡ ಇತರ ಗುಂಪುಗಳ ಜನರ ಭಾವತೀವ್ರತೆಯನ್ನು ಪರೀಕ್ಷಿಸುವುದು ಮತ್ತು ಆಯಾ ವೃಂದಗಳ ಅನಿಸಿಕೆಗಳನ್ನು ಗ್ರಹಿಸುವುದೇ ಅದರ ಮುಖ್ಯ ಗುರಿಯಾಗಿತ್ತು.

೨. *'ದಿ ಸೀ ಆಫ್ ರೋಮ್'*, ಪು. ೧೪೩–೪೫.

"ಒಂದರ ಬಳಿಕ ಮತ್ತೊಂದರಂತೆ ಯೂರೋಪಿನ ಅನೇಕ ದೇಶಗಳು ಈ ಧರ್ಮಕ್ಕೆ ಪರಿವರ್ತಿತರಾದರು. ಅವರ ಮತಾಂತರ ಎಂದೂ ಜನಪ್ರೇರಿತವೆನಿಸಲಿಲ್ಲ; ಅದು ಉಚ್ಚ ಶಕ್ತಿ ಪ್ರೇರಿತ ಅನಿಸಿತು. ಬಿಷಪ್ ರೆಮಿಗಿಯನ್ ಅವರಿಗೆ ಕ್ಲೊಮಿಯನ್ (ಧಾರ್ಮಿಕವಾಗಿ) ಶರಣಾಗತನಾದನು. ಆ ಬಳಿಕ ಮೂರು ಸಾವಿರ ಫ್ರಾಂಕರು ದೀಕ್ಷೆ ಹೊಂದಿದರು. ಅಗಸ್ಟಿನ್ ಮತಬೋಧೆಯ ಪ್ರಭಾವಕ್ಕೆ ಎಥೆಲ್ಬರ್ಟ್ ಒಳಗಾದ. ಅವನ ಬೆನ್ನ ಹಿಂದೆಯೇ ಎಲ್ಲ ಕೆಂಟ್ ಜನತೆ ಅವನನ್ನು ಅನುಸರಿಸಿದರು. ಅವನ ಮಗ ಇಯದ್ಬಾಲ್ಡ್ ಸ್ವಧರ್ಮ ತ್ಯಜಿಸಿದಾಗ, ಕೆಂಟ್ ಜನ ಕೂಡ ಸ್ವಧರ್ಮ ತ್ಯಜಿಸಿದರು. ಸಿಗೆಬರ್ಟ್ ಅರಸು ಮತಾಂತರದ ನಂತರವೇ ಎಸ್ಸೆಕ್ಸ್ ಗೆದ್ದುಕೊಂಡದ್ದು. ಸಿಗೆಬರ್ಟ್ ದೀಕ್ಷೆ ಹೊಂದಿದ್ದು ಮತ್ತೊಬ್ಬ ಅರಸು ಓಸ್ವೇನ ಪ್ರಭಾವಕ್ಕೆ ಒಳಗಾಗಿ. ನಾರ್ತಂಬರ್ ಲ್ಯಾಂಡ್ ತಾತ್ಪೂರ್ತಿಕವಾಗಿ ಅಧೀನವಾದದ್ದು ಅಲ್ಲಿಯ ಅರಸು ಎಡ್ವಿನ್‌ನ ಮತಾಂತರದ ನಂತರ. ಆದರೆ ಎಡ್ವಿನ್ ಮರಣದ ತಕ್ಷಣ ಅದು ಮತ್ತೆ ಕೈಜಾರಿತು. ನಂತರ ಬಂದ ಅರಸ ಒಸ್ವಾಲ್ಡ್ ಹೊಸದಾಗಿ ರಾಜ್ಯ ವಿಸ್ತರಣೆ ಕೈಗೊಂಡಾಗ ಮತ್ತೆ ಮತಾಂತರ ಹೊಂದಿತು. ಜರ್ಮನ್ ಜನತೆಯ ಮತಾಂತರ ಕಾರ್ಯದಲ್ಲಿ ಪ್ರಮುಖ ಪಾತ್ರ ವಹಿಸಿದ ಮುಖ್ಯ ವ್ಯಕ್ತಿ, ಆ ದೇಶದ ಚಾರ್ಲ್ಸ್ ಮಾರ್ಟಿನ್, ಪೆಪಿನ್ ಮುಂತಾದ ಅರಸರ ಜೊತೆ ನಿಕಟ ಸಂಪರ್ಕ ಹೊಂದಿದ್ದ ಬಾನಿಫೇಸ್ ಎನ್ನುವ ಬಿಷಪ್. ಪೆಪಿನ್ ನೀಡಿದ ರಾಜಾಶ್ರಯಕ್ಕೆ ಪ್ರತಿಯಾಗಿ ಸೊಯಿನ್ಸನ್ಸ್‌ದ ಚರ್ಚ್ ಅವನ ಬಲಪ್ರಯೋಗದಿಂದ ರಾಜ್ಯಾಪಹರಣ ಮಾಡುವ ಕ್ರಮಕ್ಕೆ ಮಂಜೂರಿ ನೀಡಿತು. ಡೆನ್ಮಾರ್ಕ್ ಮೇಲಿನ ಗೆಲುವು, ಅಲ್ಲಿಯ ರಾಜರುಗಳಾದ ಹೆರಾಲ್ಡ್ ಕ್ರ್ಯಾಗ್, ಹೆರಾಲ್ಡ್ ಬ್ಲ್ಯಾಸ್ಟ್ಯಾಂಡ್ ಮತ್ತು ಕಾನೂಟ್ ಮೊದಲಾದವರ ಧರ್ಮ ಪರಿವರ್ತನೆಯ ಮೂಲಕ ಸಾಧ್ಯವಾಯಿತು. ಸ್ವೀಡನ್ ಅಲ್ಲಿಯ ಓಲೋಫ್ ಮೂಲಕ ಮತ್ತು ರಶಿಯನ್ ಅಲ್ಲಿಯ ಅಧಿಪತಿ ವಾಲ್ದಿಮೀರ್ ಮತಾಂತರಗಳಿಂದಾಗಿ, ಎಲ್ಲ ಕಡೆಗೂ ಕ್ರಿಶ್ಚಿಯನ್ ಧರ್ಮ ಮೊದಲು ಅರಸರು ಮತ್ತು ಅಧಿಪತಿಗಳ ಜೊತೆಗೆ ವ್ಯವಹರಿಸುವುದು ಕಂಡುಬರುತ್ತದೆ; ಎಲ್ಲ ಕಡೆಗೂ ಬಿಷಪ್ ಮತ್ತು ಮಠಾಧಿಕಾರಿಗಳು ತಾವು ಮಾತ್ರ ಆ ಧರ್ಮದ ಪ್ರತಿನಿಧಿಗಳೆಂದು ತೋರಿಸಿಕೊಳ್ಳುತ್ತಾರೆ.

ಇಷ್ಟೇ ಅಲ್ಲ; ಒಂದು ಸಲ ಒಬ್ಬ ದೊರೆ ಈ ಧರ್ಮಕ್ಕೆ ಅಧೀನನಾದ ಬಳಿಕ, ಅಲ್ಲಿ ಮಧ್ಯಕಾಲೀನ ಧರ್ಮ ಪ್ರಚಾರಕ ತಂಡಗಳಿಗೆ ಯಾವ ತಾರತಮ್ಯವಿಲ್ಲದೆ, ತಮ್ಮ ಮತಾಂತರ ಕಾರ್ಯ ಮುಂದುವರಿಸಲು ಯಾವ ಅಡೆತಡೆಗಳೂ ಇರಲಿಲ್ಲ. ತಮ್ಮ ಅರಸು ಕ್ಲೋವಿಸ್‌ನನ್ನು ಅನುಸರಿಸಿ ಮೂರುಸಾವಿರ ಯೋಧರು ಏಕಕಾಲಕ್ಕೆ ಮತಾಂತರ ದೀಕ್ಷೆ ಪಡೆದರು. ಎಥೆಲ್ಬರ್ಟ್ ಅರಸನ ಮತಾಂತರದ ಬಳಿಕ, ಯಾವುದೇ ಸಿದ್ಧತೆ ಸೂಚನೆಗಳಿಲ್ಲದೆ ಅಲ್ಲಿಯ ಪ್ರಜೆಗಳನ್ನು ಮತಾಂತರಗೊಳಿಸಲಾಯಿತು. ಇತರರ ಉದಾಹರಣೆಯನ್ನು ಅನುಸರಿಸುವಲ್ಲಿ ಜರ್ಮನರು ಮಾತ್ರ ಅಷ್ಟು ಅವಸರಪಡಲಿಲ್ಲ. ರಶಿಯಾದ ವಾಲ್ದಿಮೀರ್, ಮತದೀಕ್ಷೆಯ ಬಳಿಕ ಅಲ್ಲಿಯ ಜನ ಹಿಂಡುಗಟ್ಟಿ ದೀಕ್ಷೆ ಪಡೆಯಲು ಎಷ್ಟು ತೀವ್ರಾಸಕ್ತರಾಗಿದ್ದರೆಂದರೆ, ಒಂದೇ ಕಾಲಕ್ಕೆ ನೂರಾರು ಜನರಿಗೆ ಮತ ಸಂಸ್ಕಾರ ನೀಡುವಂತಾಯಿತು."

ಒತ್ತಾಯ ಮತ್ತು ವಂಚನೆಗಳ ಮೂಲಕ ಕೂಡ ಮತಾಂತರ ನಡೆದ ಸಂಗತಿಗಳು ಚರಿತ್ರೆಯಲ್ಲಿ ದಾಖಲಾಗಿವೆ.

ಇಂದು ಧರ್ಮ, ಹಿರಿಯರ ಆಸ್ತಿಪಾಸ್ತಿಯ ಒಂದು ಭಾಗವಾಗಿದೆ. ತಂದೆಯಿಂದ ಮಗನಿಗೆ ಸಾಗಿ ಬರುವ ಪಿತ್ರಾರ್ಜಿತ ವಸ್ತುವಾಗಿದೆ. ಈ ಬಗೆಯ ಮತಾಂತರಗಳಿಗೆ ಯಾವ ಅರ್ಥವಿದೆ? ಅದರಲ್ಲಿ ಯಾವ ಸ್ವಾಭಾವಿಕತೆಯಿದೆ? ಒಂದು ವೇಳೆ ಅಸ್ಪೃಶ್ಯರ ಮತಾಂತರ ಘಟಿಸುವುದಾದರೆ, ಅವರಿಗೆ ಧಾರ್ಮಿಕ

ಮೌಲ್ಯಗಳ ಪೂರ್ಣ ಸಮಾಲೋಚನೆ ಮತ್ತು ವಿವಿಧ ಧರ್ಮಗಳ ಉದಾತ್ತತೆಯ ಚಿಂತನೆಗಳ ಬಳಿಕ ಮಾತ್ರ. ಈ ಬಗೆಯ ಮತಾಂತರವನ್ನು ಸಹಜ ಮತಾಂತರವೆಂದು ಯಾಕೆ ಕರೆಯಲಾಗುವುದಿಲ್ಲ? ಪ್ರತಿಯಾಗಿ, ಈ ಬಗೆಯ ಮತಾಂತರ ವಿಧಾನ, ಇತಿಹಾಸದಲ್ಲಿಯೇ ಪ್ರಥಮ ಯಥಾರ್ಥ ಘಟನೆಯಾಗಿ ದಾಖಲೆಗೊಳ್ಳುವುದು. ಕಾರಣ ಅಸ್ಪೃಶ್ಯರ ಮತಾಂತರದ ಯಥಾರ್ಥ ಸ್ವರೂಪವನ್ನು ಅರಿತುಕೊಳ್ಳುವುದು ಕಷ್ಟ ಮತ್ತು ಯಾರಿಗಾದರೂ ಇದರ ಬಗ್ಗೆ ಸಂದೇಹ ಮೂಡಬಹುದಾಗಿದೆ.

ಮೂರನೆಯದು ಅಸಮರ್ಪಕ ಆಲೋಚನೆಯ ಆಕ್ಷೇಪಣೆ. ಮತಾಂತರದಿಂದ ಅಸ್ಪೃಶ್ಯರಿಗೆ ದೊರೆಯುವ ರಾಜಕೀಯ ಲಾಭ ಕುರಿತು ಯಾರೂ ವಿವರಿಸಿಲ್ಲ. ಒಂದು ಪಕ್ಷ ರಾಜಕೀಯ ಲಾಭವಿರುವುದಾದರೆ, ಅದು ಮತಾಂತರಕ್ಕೆ ನೇರ ಪ್ರಚೋದನೆ ಎಂದು ಯಾರೂ ಸಿದ್ಧಮಾಡಿಲ್ಲ.

ಮತಾಂತರ ವಿರೋಧಿಗಳಿಗೆ ಮತಾಂತರದ ನೇರ ಪ್ರಚೋದನೆಯ ಲಾಭ ಅಥವಾ ಅದರಿಂದಾಗುವ ಆಕಸ್ಮಿಕ ಪ್ರಯೋಜನ ಇವೆರಡರ ನಡುವಿನ ವ್ಯತ್ಯಾಸ ಕೂಡ ತಿಳಿದಂತಿಲ್ಲ. ಈ ರೀತಿಯ ವ್ಯತ್ಯಾಸದಲ್ಲಿ ಭೇದವಿಲ್ಲ ಎಂದು ಹೇಳಲುಬಾರದು. ಅಸ್ಪೃಶ್ಯರಿಗೆ ಮತಾಂತರದಿಂದ ರಾಜಕೀಯ ಲಾಭವಾಗಬಹುದು. ನೇರ ರಾಜಕೀಯ ಲಾಭಕ್ಕಾಗಿ ಆಗುವ ಮತಾಂತರವನ್ನು ಅನೈತಿಕ ಮತ್ತು ಅಪರಾಧ ಎಂದು ಖಂಡಿಸಬಹುದು. ಆದುದರಿಂದ ಎಲ್ಲಿಯವರೆಗೆ ಮತಾಂತರ ವಿರೋಧಿಗಳು, ಅಸ್ಪೃಶ್ಯರು ಅಪೇಕ್ಷಿಸುವ ಧರ್ಮಾಂತರ, ರಾಜಕೀಯ ಲಾಭಕ್ಕಾಗಿ, ಎನ್ನುವುದನ್ನು ಸಿದ್ಧ ಮಾಡುವುದಿಲ್ಲವೋ, ಅಲ್ಲಿಯವರೆಗೆ ಅವರ ಆಕ್ಷೇಪಣೆ ನಿರಾಧಾರ. ಒಂದು ವೇಳೆ ರಾಜಕೀಯ ಲಾಭ ಕೇವಲ ಆಕಸ್ಮಿಕವಾಗಿದ್ದರೆ ಮತಾಂತರದಲ್ಲಿ ಯಾವ ಅಪರಾಧವೂ ಇಲ್ಲ. ವಾಸ್ತವ ಸಂಗತಿಯೆಂದರೆ ಮತಾಂತರದಿಂದ ಅಸ್ಪೃಶ್ಯರಿಗೆ ಯಾವ ಹೊಸ ಲಾಭವೂ ಇಲ್ಲ. ಭಾರತೀಯ ಸಂವಿಧಾನ ಕಾಯಿದೆ ಪ್ರಕಾರ ಪ್ರತಿ ಧಾರ್ಮಿಕ ಗುಂಪಿಗೂ ಪ್ರತ್ಯೇಕ ರಾಜಕೀಯ ಸುರಕ್ಷಿತತೆಯಿದೆ. ಇಂದಿನ ಪರಿಸ್ಥಿತಿಯಲ್ಲಿ, ಅಸ್ಪೃಶ್ಯರು, ಮುಸ್ಲಿಮ್, ಕ್ರಿಶ್ಚಿಯನ್ ಗುಂಪಿನ ಜನರಿಗೆ ಸಮಾನವಾದ ರಾಜಕೀಯ ಹಕ್ಕುಗಳನ್ನು ಹೊಂದಿದವರಾಗಿದ್ದಾರೆ. ಒಂದು ವೇಳೆ ಅವರು ಧರ್ಮಾಂತರ ಮಾಡಿದರೆ, ಅದು ಈಗ ಇಲ್ಲದಿರುವ ಯಾವುದೇ ಹೊಸ ರಾಜಕೀಯ ಹಕ್ಕುಗಳನ್ನು ಪಡೆಯುವುದಕ್ಕಾಗಿ ಅಲ್ಲ. ಒಂದು ವೇಳೆ ಮತಾಂತರಿಗಳಾಗದಿದ್ದರೆ ಅವರಿಗಿರುವ ರಾಜಕೀಯ ಹಕ್ಕುಗಳನ್ನು ಎಂದಿನಂತೆ ಉಳಿಸಿಕೊಳ್ಳುತ್ತಾರೆ. ಮತಾಂತರಕ್ಕೂ ರಾಜಕೀಯ ಲಾಭಕ್ಕೂ ಸಂಬಂಧವಿಲ್ಲ. ಈ ರೀತಿ ಮಾಡಲಾದ ಭೀಕರ ಆರೋಪ, ತಿಳುವಳಿಕೆಯಿಲ್ಲದೆ ಮಾಡಿದುದಾಗಿದೆ.

ಎಲ್ಲ ಧರ್ಮಗಳ ಬೋಧೆಯೂ ಒಂದೇ ಎನ್ನುವುದು ಎರಡನೆಯ ಆಕ್ಷೇಪಣೆ. ಎಲ್ಲ ಧರ್ಮಗಳು ಬೋಧಿಸುವುದು ಅದನ್ನೇ ಎನ್ನುವ ತತ್ವದ ಆಧಾರದ ಮೇಲೆ ಧರ್ಮಗಳಲ್ಲಿ ತರತಮ ಮಾಡಲುಬಾರದು. ಸಕಲರ ಕಲ್ಯಾಣ ಸಾಧನೆಯೇ ಜೀವನದ ಸಾರ್ಥಕತೆ ಎನ್ನುವುದು ಎಲ್ಲ ಧರ್ಮಗಳ ಸಮಾನ ಗುರಿ ಎನ್ನುವ ತತ್ವವನ್ನು ಒಪ್ಪಬಹುದು. ಈ ಧೋರಣೆಯವರೆಗೆ, ಇಂಥ ತಾತ್ವಿಕ ಸಾಮರ್ಥ್ಯವನ್ನು ಸ್ವೀಕರಿಸಬಹುದು. ಆದರೆ ಈ ಬಗೆಯ ನಿಲವು ದಾಟಿ, ಕೇವಲ ಈ ತಾತ್ವಿಕತೆಯಿಂದಾಗಿಯೇ ಧರ್ಮ ಧರ್ಮಗಳಲ್ಲಿ ವ್ಯತ್ಯಾಸವಿಲ್ಲ ಎಂದು ಹೇಳಿದಾಗ, ಈ ತತ್ವ ಪೊಳ್ಳಾಗುತ್ತದೆ. ಸಕಲರ ಲೇಸು ಬಯಸುವ ನಿರಂತರ ಸಾಧನೆ ಜೀವನದ ಅರ್ಥ ಎಂದು ಬೋಧಿಸುವಲ್ಲಿ ಎಲ್ಲ ಧರ್ಮಗಳೂ ಒಂದೇ ಆಗಿರಬಹುದು. ಆದರೆ ಶ್ರೇಯಸ್ಸು ಎಂದರೇನು ಎನ್ನುವ ಪ್ರಶ್ನೆಗೆ, ಎಲ್ಲ ಧರ್ಮಗಳ ಉತ್ತರ ಒಂದೇ ಆಗಿಲ್ಲ. ಈ ದೃಷ್ಟಿಯಿಂದ ಅವು ಖಂಡಿತ ಒಂದಕ್ಕಿಂತ ಒಂದು ಭಿನ್ನ. ಒಂದು, ಸರ್ವರೂ ಸೋದರರು ಎನ್ನುವುದನ್ನು ಸಾರಿದರೆ, ಮತ್ತೊಂದು, ಜಾತಿ ಮತ್ತು ಅಸ್ಪೃಶ್ಯತೆ ಒಳ್ಳೆಯದು ಎಂದು ಹೇಳುತ್ತದೆ.

ಎಲ್ಲ ಧರ್ಮಗಳಿಗೂ ಒಂದೇ ಸ್ವರೂಪವಿಲ್ಲ ಎನ್ನುವುದು ಮತ್ತೊಂದು ವಾಸ್ತವಾಂಶ. ಧರ್ಮ–

ಕಲ್ಯಾಣವೆಂದರೆ ಏನು ಎನ್ನುವುದನ್ನು ವಿವರಿಸುವ ಅಧಿಕಾರದ ಜೊತೆಗೆ, ಕಲ್ಯಾಣ ವಿಕಾಸ ಮತ್ತು ಪ್ರಸರಣದ ಚಾಲಕಶಕ್ತಿಯೂ ಆಗಿದೆ. ಆದರೆ ಮಾನವ ಕಲ್ಯಾಣ ಸಾಧನೆ ಮತ್ತು ಪ್ರಸರಣಗಳನ್ನು ಪ್ರತಿಪಾದಿಸುವ ಧರ್ಮಗಳು ಅವುಗಳ ಸಾಧನೆಗಾಗಿ ಅನುಸರಿಸುವ ವಿಧಾನ ಕುರಿತು ಒಮ್ಮತ ತಾಳಿವೆಯೇ? ಪ್ರೊ. ಟೀಲೆ[೧] ಧರ್ಮವನ್ನು ಕುರಿತು ಎತ್ತಿ ತೋರಿಸಿದ ಮಾತುಗಳಂತೆ :

"ಧರ್ಮ ಮಾನವ ಪ್ರಪಂಚದ ಒಂದು ಪ್ರಚಂಡ ಶಕ್ತಿ. ರಾಷ್ಟ್ರಗಳನ್ನು ಛಿದ್ರಗೊಳಿಸಿದ್ದು ಮತ್ತು ಒಗ್ಗೂಡಿಸಿದ್ದು. ಸಾಮ್ರಾಜ್ಯಗಳು ಹರಿದು ಹಂಚಿಹೋಗುವಂತೆ ಮಾಡಿದ್ದು ಮತ್ತು ಸಂಯುಕ್ತಗೊಳಿಸಿದ್ದು ಅತ್ಯಂತ ಕ್ರೂರ ಪಾಶವೀ ಕೃತ್ಯಗಳಿಗೆ, ಪದ್ಧತಿಗಳಿಗೆ ಸಮ್ಮತಿ ನೀಡಿದ್ದು, ಧರ್ಮವೇ. ಅದ್ಭುತ ಶೌರ್ಯ. ಸಾಹಸ, ಪರಿತ್ಯಾಗ, ಭಕ್ತಿ, ಭೀಕರ ಯುದ್ಧ, ರಕ್ತಪಾತ, ಬಂಡಾಯ ಮತ್ತು ಶಿಕ್ಷೆಗಳು, ಜೊತೆಗೆ ರಾಷ್ಟ್ರಗಳ ಸ್ವಾತಂತ್ರ್ಯ, ಸಮೃದ್ಧಿ, ಶಾಂತಿ ಎಲ್ಲಕ್ಕೂ ಧರ್ಮವೇ ಪ್ರೇರಕ ಶಕ್ತಿ. ಒಮ್ಮೆ ದೌರ್ಜನ್ಯಗಳ ಪಕ್ಷಪಾತ, ಮತ್ತೊಮ್ಮೆ ಬಿಗಿದ ಶೃಂಖಲೆಗಳನ್ನು ಕತ್ತರಿಸುವುದು, ಮತ್ತೆ ವಾಸ್ತವ ಜೀವನದ ಹಿತಕ್ಕಾಗಿ ಸರ್ವ ಶ್ರೇಷ್ಠ ನಾಗರಿಕತೆಯ ಬೆಳವಣಿಗೆಗಾಗಿ ಕರೆ ಕೊಡುವುದು ಮತ್ತೆ ಕೆಲವು ಸಲ ಕಲೆ ವಿಜ್ಞಾನಗಳ ಪ್ರಗತಿಗೆ ಕಡು ವೈರಿಯಾಗುವುದು."

ಇಂಥ ಹೊಯ್ದಾಟಗಳಲ್ಲದೆ ಅವರು ಕಲ್ಪಿಸಿರುವ ಲೋಕಕಲ್ಯಾಣ ವಿಕಾಸದ ವಿಧಾನಗಳಲ್ಲಿ ಕೆಲವು ಸ್ಥಿರ, ಭೇದಗಳಿವೆ. ಹಿಂಸೆಯನ್ನು ಪ್ರತಿಪಾದಿಸುವ ಧರ್ಮಗಳಿಲ್ಲವೆ? ಅಹಿಂಸೆಯನ್ನು ಪ್ರತಿಪಾದಿಸುವ ಧರ್ಮಗಳಿಲ್ಲವೆ? ಈ ಸಂಗತಿಗಳನ್ನು ಗಮನಿಸಿದರೆ, ಎಲ್ಲ ಧರ್ಮಗಳೂ ಒಂದೇ; ಒಂದು ಹೆಚ್ಚು ಒಂದು ಕಡಿಮೆ ಅಲ್ಲ ಎನ್ನುವ ಮಾತನ್ನು ಹೇಗೆ ಹೇಳುವುದು?

ಎರಡನೆಯ ಆಕ್ಷೇಪಣೆಯನ್ನು ಎತ್ತುವುದರ ಮೂಲಕ ಯಾವುದೇ ಹಿಂದೂ ವ್ಯಕ್ತಿ, ಹಿಂದೂ ಧರ್ಮದ ಗುಣಪರೀಕ್ಷೆಯನ್ನು ತಪ್ಪಿಸಬಯಸುತ್ತಾನೆ. ಮತಾಂತರದ ವಾದ ವಿವಾದಗಳಲ್ಲಿ ಯಾವನೇ ಒಬ್ಬ ಹಿಂದೂ ಕೂಡ, ಹಿಂದೂ ಧರ್ಮದಲ್ಲಿ ಯಾವ ದೋಷವಿದೆ ಎಂದು ಸಿದ್ಧಮಾಡಿ ತೋರಿಸಲು ಯಾವ ಅಸ್ಪೃಶ್ಯರನ್ನೂ ಆಹ್ವಾನಿಸಲಿಲ್ಲ. ಹಿಂದೂಗಳು ಕೇವಲ ತೌಲನಿಕ ಧರ್ಮಜ್ಞಾನದಿಂದ ಹುಟ್ಟಿಕೊಂಡ ಧೋರಣೆಗಳ ಸೆರಗಿನಲ್ಲಿ ಆಸರೆ ಪಡೆಯಬಯಸುತ್ತಾರೆ. ತೌಲನಿಕ ಧರ್ಮಶಾಸ್ತ್ರ, ಅಪೌರುಷೇಯವೆಂದು ಸಾರಿಕೊಳ್ಳುವ ಎಲ್ಲ ಧರ್ಮಗಳ ವಾರಸುದಾರಿಕೆಯ ಅಹಂಕಾರವನ್ನು ಚೂರುಗೊಳಿಸಿದೆ; ಅಪೌರುಷೇಯ ವಾದ ತಮ್ಮ ಧರ್ಮವೇ ನಿಜ; ಇತರ ಧರ್ಮಗಳು ಪೊಳ್ಳು ಎನ್ನುವ ಮಾತನ್ನು ಹುಸಿಗೊಳಿಸಿವೆ. ಅಪೌರುಷೇಯ ಎನ್ನುವ ಮಾತು ತುಂಬ ಅಸ್ಥಿರ, ನಿರಂಕುಶ ರೂಪದ್ದಾಗಿತ್ತು ನಿಜ, ಧರ್ಮ ಮತ್ತು ಪೊಳ್ಳು ಧರ್ಮಗಳ ನಡುವಿನ ವ್ಯತ್ಯಾಸಗಳನ್ನು ಅರಿತುಕೊಳ್ಳುವ ಒರೆಗಲ್ಲಾಗುವ ಸತ್ವವನ್ನು ಹೊಂದಿರದ ಚಪಲ ಗುಣ ಹೊಂದಿತ್ತು; ಇದು ತೌಲನಿಕ ಧರ್ಮಶಾಸ್ತ್ರ, ಧಾರ್ಮಿಕ ವಿವೇಚನೆಗೆ ನೀಡಿದ ಮಹತ್ವದ ಕಾಣಿಕೆ. ಆದರೆ ಎಲ್ಲ ಧರ್ಮಗಳೂ ಒಳ್ಳೆಯವು; ಪರಸ್ಪರ ಮೇಲು ಕೀಳು ಎಂದು ವಿವೇಚಿಸುವುದು ನಿಷ್ಪ್ರಯೋಜಕ; ಹಿತಕಾರಿಯಲ್ಲ; ಈ ಬಗೆಯ ಭಾವನೆಗಳನ್ನು ಸಾರ್ವಜನಿಕರಲ್ಲಿ ಮೂಡಿಸಿದ ಅಶ್ರೇಯಸ್ಸು ಕೂಡ ತೌಲನಿಕ ಧರ್ಮಶಾಸ್ತ್ರಕ್ಕಿದೆ.

ಮೊದಲನೆಯ ಆಕ್ಷೇಪಣೆಯೊಂದೇ ಗಂಭೀರವಾಗಿ ಪರಿಗಣಿಸಬೇಕಾದಂಥದು. ಈ ಆಕ್ಷೇಪಣೆ, ಧರ್ಮ ಎನ್ನವುದು ಮನುಷ್ಯ ಮತ್ತು ದೇವರ ಮಧ್ಯೆ ಇರುವ ಕೇವಲ ವ್ಯಕ್ತಿಗತ ವಿಷಯ ಎನ್ನುವ ನಂಬಿಕೆಯನ್ನು ಅವಲಂಬಿಸಿದೆ. ಅದು ಅಲೌಕಿಕ. ಸಾಮಾಜಿಕಕ್ಕೂ ಅದಕ್ಕೂ ಯಾವ ಸಂಬಂಧವೂ ಇಲ್ಲ. ಇದು ನಿಸ್ಸಂದೇಹವಾಗಿ ಬುದ್ಧಿವಂತವಾದ. ಆದರೆ ಅದರ ಬುನಾದಿ ಪೊಳ್ಳಾಗಿದೆ. ಏನಿದ್ದರೂ ಇದು

---

೧. ಕ್ರೌಲೀ ತಮ್ಮ ಕೃತಿ *ಟ್ರೀ ಆಫ್ ಲೈಫ್* (ಪು. ೫) ದಲ್ಲಿ ಉಲ್ಲೇಖಿಸಿದ್ದು.

ಧರ್ಮದ ಏಕಪಕ್ಷೀಯ ಧೋರಣೆ; ಅದು ಕೂಡ, ಮೂಲಭೂತ ಅಂಶಗಳನ್ನು ಆಧರಿಸಿರದೆ ಕೇವಲ ಚಾರಿತ್ರಿಕ ಸಂಗತಿಗಳನ್ನು ಆಧರಿಸಿದೆ.

ಧರ್ಮದ ಕಾರ್ಯ ಮತ್ತು ಉದ್ದೇಶಗಳನ್ನು ಅರ್ಥ ಮಾಡಿಕೊಳ್ಳಲು, ಧರ್ಮವನ್ನು ನೀತಿ ಶಾಸ್ತ್ರದಿಂದ ಬೇರ್ಪಡಿಸುವುದು ಅಗತ್ಯ. ಪ್ರಯೋಜಕತೆ, ಅವಲೋಕನ, ಅನುಷ್ಠಾನ, ಸಂಸ್ಕಾರಗಳು ಮತ್ತು ಆಚರಣೆ ಮುಂತಾದುವು ಧರ್ಮದ ಪ್ರಾಥಮಿಕ ಸಂಗತಿಗಳಾಗಿವೆ. ನೀತಿ–ಶಾಸ್ತ್ರಕ್ಕೆ ದ್ವಿತೀಯ ಸ್ಥಾನ. ರಾಬರ್ಟ್ಸನ್[೧] ಹೇಳಿದಂತೆ ರಾಷ್ಟ್ರವ್ಯಾಪಿಗೊಳಿಸುವುದೇ ಅದರ ಗುರಿ.

"ನಿಖರವಾಗಿ ಹೇಳುವುದಾದರೆ ಆಚರಣೆ ಮತ್ತು ಪ್ರತ್ಯಕ್ಷ ಪ್ರಯೋಜನಗಳೇ ಪ್ರಾಚೀನ ಧರ್ಮಗಳ ಸಾರ. ಆದಿಮ ಕಾಲದಲ್ಲಿ ಧರ್ಮ ಎನ್ನುವುದು (ದೈನಂದಿನ) ಪ್ರತ್ಯಕ್ಷ ಜೀವನಕ್ಕೆ ಅನ್ವಯಗೊಳ್ಳಬಹುದಾದ ಕ್ರಮಬದ್ಧ ನಂಬುಗೆಗಳಿಂದ ಕೂಡಿರಲಿಲ್ಲ. ಸಮಾಜದ ಪ್ರತಿಯೊಬ್ಬ ವ್ಯಕ್ತಿಯೂ ಧೈರ್ಯದಿಂದ ಅನುಸರಿಸುವ ನಿರ್ದಿಷ್ಟಗೊಳಿಸಿದ ಪರಂಪರೆಗಳ ಒಂದು ಅಂಗವಾಗಿತ್ತು. ತಮ್ಮ ಕ್ರಿಯೆಗಳಿಗೆ ಒಂದು ಕಾರಣವಿಲ್ಲದೆ, ಪ್ರವೃತ್ತರಾಗಲು ಒಪ್ಪುವ ಮನುಷ್ಯರು ಮನುಷ್ಯರೆಂದು  ಪರಿಗಣಿತರಾಗುತ್ತಿರಲಿಲ್ಲ; ಆದರೆ ಪ್ರಾಚೀನ ಧರ್ಮದಲ್ಲಿ ಕಾರಣ ಎನ್ನುವುದು ಮೊದಲೆ ಒಂದು ಸಿದ್ಧಾಂತವಾಗಿ ರೂಪುಗೊಂಡು ಆ ಬಳಿಕ ಆಚರಣೆಯಲ್ಲಿ ವ್ಯಕ್ತಗೊಳ್ಳುತ್ತಿರಲಿಲ್ಲ. ಅದಕ್ಕೆ ವ್ಯತಿರಿಕ್ತವಾಗಿ ಮೊದಲು (ಆಚರಣೆ) ರೂಢಿ ಆ ಬಳಿಕ ಸಿದ್ಧಾಂತ."

ಧರ್ಮ ಎನ್ನುವುದು ಒಂದು ಅಲೌಕಿಕ ವಸ್ತು ಎಂದು ಭಾವಿಸದೆ ಇರುವುದು ಕೂಡ ಅಷ್ಟೇ ಮಹತ್ವದ್ದು. ಧರ್ಮದ ಪ್ರಾಥಮಿಕ ಕರ್ತವ್ಯ ಸಾಮಾಜಿಕ ಸಂತುಷ್ಟಿ ಎನ್ನುವ ವಾಸ್ತವಾಂಶವನ್ನು ಮರೆಯುವುದು ಧಾರ್ಮಿಕ ಅವಿವೇಕ. ಕಾಡು ಸಮಾಜಕ್ಕೆ ತನ್ನ ಜೀವನ ಮತ್ತು ಬದುಕನ್ನು ಕಾಪಾಡಿಕೊಂಡು ಬರುವಲ್ಲಿ ಹೆಚ್ಚಿನ ಕಾಳಜಿಯಿತ್ತು; ಮತ್ತು ಅದರ ಈ ಜೀವನ ಪ್ರಕ್ರಿಯೆಗಳೇ ಕಾಡು ಸಮಾಜದ ಧರ್ಮದ ಸತ್ವಗಳು ಮತ್ತು ಆಕರಗಳು. ಕಾಡು ಜನಸಮುದಾಯಗಳಿಗೆ ತಮ್ಮ ಜೀವನ ಮತ್ತು ಬದುಕನ್ನು ಕಾಪಾಡುತ್ತ ಮುಂದುವರೆಸುವಲ್ಲಿ ಎಷ್ಟು ಅಧಿಕ ಕಾಳಜಿಯಿತ್ತೆಂದರೆ ಅದೇ ಅವರ ಧರ್ಮದ ತಳಹದಿಯಾಯಿತು. ಈ ಕಾಡು ಜನಸಮಾಜದ ಧಾರ್ಮಿಕ ಜೀವನ ಪ್ರಕ್ರಿಯೆಗಳು ಎಷ್ಟು ಕೇಂದ್ರೀಕೃತವಾಗಿದ್ದುವೆಂದರೆ, ಅವರ ಮೇಲೆ ಪ್ರಭಾವ ಬೀರಿದ ಪ್ರತಿಯೊಂದು ಸಂಗತಿಯೂ ಅವರ ಧರ್ಮದ ಅಂಗವಾಯಿತು. ಹುಟ್ಟು, ಯೌವ್ವನ, ಮೈನೆರೆಯುವುದು, ಮದುವೆ, ರೋಗರುಜಿನ, ಯುದ್ಧ, ಸಾವು ಇತ್ಯಾದಿಗಳಲ್ಲದೆ ಆಹಾರ ಕೂಡ ಅವರ ಜೀವನ ವಿಧಿವಿಧಾನಗಳಾಗಿದ್ದುವು.

ದನಗಾಹಿ ಜನಸಮೂಹಕ್ಕೆ ದನಕರು, ಕುರಿಮಂದೆಗಳು ಪವಿತ್ರವಾಗಿದ್ದುವು. ಕೃಷಿ ಸಮುದಾಯದ ಜನ ತಮ್ಮ ಬೆಳೆಗಳ ಬೆಳವಣಿಗೆ ಮತ್ತು ರಕ್ಷಣೆಗೆ ಸಂಬಂಧಿಸಿ ಬಿತ್ತುವ ಮತ್ತು ಸುಗ್ಗಿಯ ಸಮಯದಲ್ಲಿ ಕೆಲವು ನಿರ್ದಿಷ್ಟ ಆಚರಣೆಗಳನ್ನು ನೆರವೇರಿಸುತ್ತಿದ್ದರು. ಬರ, ಮಾರಿಬೇನೆ, ಮುಂತಾದ ಪ್ರಕೃತಿಯ ವಿಕೋಪಗಳು ಕೂಡ ಅವರ ಕೆಲವು ಆಚರಣೆಗೆ ಸಂದರ್ಭಗಳಾಗುತ್ತಿದ್ದವು. ಪ್ರೊ. ಕ್ರಾವ್‌ಲೀ ಹೇಳಿದಂತೆ, ಕಾಡು ಜನರ ಧರ್ಮದ ಆರಂಭ ಮತ್ತು ಅಂತ್ಯ, ಜೀವನದ ಸಮರ್ಥನೆ ಮತ್ತು ಸಮರ್ಪಣೆಗಳಲ್ಲಿಯೇ.

"ಕಾರಣ ಕಾಡು ಜನರ ಧರ್ಮ, ಅವರ ಜೀವನ ಮತ್ತು ಜೀವನ ಸಂರಕ್ಷಣೆಗಳನ್ನು ಒಳಗೊಂಡಿದೆ. ಕಾಡುಜನರ ಧರ್ಮದ ಸತ್ಯ ಎಲ್ಲ ಧರ್ಮಗಳ ಸತ್ಯವೂ ಆಗಿದೆ. ಯಾವುದೇ ಧರ್ಮದ ಸಾರ ಕೂಡ ಇದೇ. ಇಂದಿನ ಸಮಾಜದಲ್ಲಿ  ಕೆಲವು ನೀತಿಶಾಸ್ತ್ರದ ಪರಿಷ್ಕರಣೆಗಳಿಂದಾಗಿ ಧರ್ಮದ ಈ ಬಗೆಯ ಸಾರ

---

*೧. ದಿ ರಿಲಿಜನ್ ಆಫ್ ದ ಸೆಮಿಟೀಸ್*

ಎದ್ದುಕಾಣದಂತೆ ಹುದುಗಿರುವುದು ನಿಜ; ಅಷ್ಟೇ ಅಲ್ಲ ಮರೆತು ಕೂಡ ಹೋಗಿದೆ. ಆದರೆ ಜೀವನ ಮತ್ತು ಜೀವನ ರಕ್ಷಣೆಗಳು ವರ್ತಮಾನಕಾಲದ ಸಮಾಜದ ಧಾರ್ಮಿಕ ಸ್ವರೂಪದ ಮುಖ್ಯಾಂಶಗಳೆನ್ನುವುದು ಪ್ರಶ್ನಾತೀತ. ವರ್ತಮಾನಕಾಲದ ಮನುಷ್ಯನ ಧಾರ್ಮಿಕ ಜೀವನ ಕುರಿತು ವಿವರಿಸುವ ಪ್ರೊ. ಕ್ರಾವ್‌ಲೀ ಅವರ ಮಾತು ಈ ವಿಷಯವನ್ನು ಸ್ಪಷ್ಟೀಕರಿಸುತ್ತವೆ; ಮನುಷ್ಯನ ಧರ್ಮ ಅವನ ವೃತ್ತಿಯ ಅಥವಾ ಸಾಮಾಜಿಕ ಕ್ಷಣಗಳನ್ನು ಪ್ರವೇಶಿಸುವುದಿಲ್ಲ; ಹಾಗೆಯೇ ಅವನ ವೈಜ್ಞಾನಿಕ ಅಥವಾ ಕಲಾತ್ಮಕ ಸನ್ನಿವೇಶಗಳಲ್ಲೂ ಪ್ರವೇಶಿಸುವುದಿಲ್ಲ. ಧರ್ಮದ ಮುಖ್ಯ ಪ್ರತಿಪಾದನೆಗಳು ವಾರದ ಒಂದು ದಿನದಲ್ಲಿ ನಿರ್ಣಯಗೊಳ್ಳುತ್ತವೆ. ಮತ್ತು ಬದುಕಿನ ಸಾಮಾನ್ಯ ಪ್ರಾಪಂಚಿಕ ವಿಷಯಗಳಿಂದ ಹೊರತಾಗಿರುತ್ತದೆ. ವಾಸ್ತವವಾಗಿ ವ್ಯಕ್ತಿಯ ಜೀವನ ಎರಡು ಭಾಗವಾಗಿ ತೋರುತ್ತದೆ; ಅವನ ಧರ್ಮದ ಸಂಬಂಧ ಪ್ರಾಥಮಿಕವೆನಿಸುತ್ತದೆ. ಜೀವನ ಮತ್ತು ಮರಣ ಕುರಿತ ಗಂಭೀರ ಚಿಂತನೆಯೇ ಸ್ಥೂಲವಾಗಿ ಆತನ ರವಿವಾರದ ಆಚರಣೆಯ ಮುಖ್ಯಾಂಶ; ಜೊತೆಗೆ, ಪ್ರಾರ್ಥನೆಯ ರೂಢಿ, ಊಟದ ಸಮಯದಲ್ಲಿ ಉಪಕಾರ ಸ್ಮರಣೆ ಮತ್ತು ಹುಟ್ಟು–ಸಾವು, ಆಯುಷ್ಯ, ಮದುವೆ ಇತ್ಯಾದಿಗಳೆಲ್ಲ ಧಾರ್ಮಿಕ ಸಂಸ್ಕಾರಗಳಿಂದ ದೀಕ್ಷಾಬದ್ಧವಾಗುತ್ತವೆ ಎನ್ನುವ ಸುಪ್ತಮನದ ಅನಿಸಿಕೆಗಳಾಗಿದ್ದು, ವ್ಯವಹಾರ, ಸುಖಭೋಗಗಳು ಒಂದು ಸೈದ್ಧಾಂತಿಕ ಮತ್ತು ಅತಿ ಧಾರ್ಮಿಕ ಭಾವನೆಗಳಿಂದ ತುಂಬಿತುಳುಕುತ್ತವೆ."[೧]

ಧರ್ಮದ ಹುಟ್ಟು ಮತ್ತು ಇತಿಹಾಸಗಳ ಅಧ್ಯಯನ ಮಾಡುವ ವಿದ್ಯಾರ್ಥಿಗಳು ಕಾಡು ಸಮಾಜಗಳ ಅಧ್ಯಯನ ಕೈಕೊಂಡಾಗ ಆ ಸಮಾಜದ ಮಂತ್ರ–ಮಾಟ, ನಿಷೇಧ, ಕುಲಸಂಕೇತ ವಿಧಿಕ್ರಿಯೆಗಳು ಮತ್ತು ಆರಾಧನೆಯ ಸಂಪ್ರದಾಯ ಸಮಾರಂಭಗಳಲ್ಲಿ ಎಷ್ಟು ತಲ್ಲೀನರಾದರೆಂದರೆ ಕಾಡು ಸಮಾಜದ ಸಾಮಾಜಿಕ ಪ್ರಕ್ರಿಯೆಗಳನ್ನು ಆ ಧರ್ಮದ ಪ್ರಾಥಮಿಕ ತಿರುಳಾಗಿ ಗ್ರಹಿಸುವುದರಲ್ಲಿ ಅಲಕ್ಷ್ಯ ತೋರಿದರು. ಅಷ್ಟೇ ಅಲ್ಲ, ಮಂತ್ರ–ಮಾಟ ಮತ್ತು ಇತರ ಅತಿಮಾನುಷ ಪ್ರಕ್ರಿಯೆಗಳ ಕಾರ್ಯ ವಿಧಾನವನ್ನು ಮೆಚ್ಚಿಕೊಳ್ಳುವಲ್ಲಿ ಕೂಡ ಅಸಮರ್ಥರಾದರು. ಇದು ಬಹು ದೊಡ್ಡ ತಪ್ಪು ಮತ್ತು ಇದರಿಂದ ಧರ್ಮ ಸಂಬಂಧದ ಆಲೋಚಕರಿಗೆ ತುಂಬಿಬಾರದ ಹಾನಿಯಾಯಿತು. ಇದರಿಂದಾಗಿಯೇ ಅನೇಕ ಜನರಲ್ಲಿ ಧರ್ಮದ ಬಗೆಗೆ ತುಂಬ ತಪ್ಪು ತಿಳುವಳಿಕೆಗಳು ಉಂಟಾದವು. ಮಾಟಕ್ಕಾಗಿ ಮಾಟ, ಮಾಟದಿಂದಲೇ ಧರ್ಮದ ಉಗಮ ಇತ್ಯಾದಿ ಬರುವ ಧರ್ಮ ವ್ಯಾಖ್ಯೆ ಕುರಿತ ಮಾತುಗಳಿಗಿಂತ ಅಧಿಕ ತಪ್ಪು ಮತ್ತಾವುದೂ ಇರಲಾರದು. ಕಾಡು ಸಮಾಜ 'ಮಾಟ' ವನ್ನು ಆಚರಿಸುತ್ತದೆ; ವಿಧಿ ನಿಷೇಧಗಳನ್ನು ನಂಬುತ್ತದೆ. ಕುಲಸಂಕೇತಗಳನ್ನು ಆರಾಧಿಸುತ್ತದೆ ಎನ್ನುವುದು ನಿಜ. ಆದರೆ ಇದಿಷ್ಟೇ ಧರ್ಮವನ್ನು ಅಥವಾ ಧರ್ಮದ ಮೂಲ ಸೆಲೆಯನ್ನು ರೂಪಿಸುತ್ತದೆ ಎಂದು ಇಂಥ ಒಂದು ದೃಷ್ಟಿಕೋನವನ್ನು ತಾಳುವುದರಿಂದ ತತ್ವದ ಆಕಸ್ಮಿಕ ಸ್ಥಿತಿ ಮೇಲ್ಮಟ್ಟಕ್ಕೆ ಏರಬಲ್ಲದು ಎಂದು ಭಾವಿಸುವುದು ತಪ್ಪು. ಹುಟ್ಟು, ಸಾವು, ಜೀವನ, ವಿವಾಹ ಮುಂತಾದ ಮಾನವ ಅಸ್ತಿತ್ವದ ಪ್ರಾಥಮಿಕ ವಾಸ್ತವಾಂಶಗಳು ಕಾಡು ಜನರ ಧರ್ಮದ ಮುಖ್ಯ ಸಂಗತಿಗಳಾಗಿವೆ; ಮಾಟ, ನಿಷೇಧ ಮತ್ತು ಕುಲಸಂಕೇತಗಳು ಅದರ ಅಂತಿಮ ಸಂಗತಿಗಳಲ್ಲ. ಅವು ಕೇವಲ ಸಾಧನಗಳು. ಜೀವನ ಮತ್ತು ಜೀವನ ರಕ್ಷಣೆ ಅಂತಿಮ (ಗುರಿ). ಮಾಟ, ನಿಷೇಧ, ಇತ್ಯಾದಿಗಳನ್ನು ಕಾಡು ಸಮಾಜ ಕೇವಲ ತಮ್ಮ ಸ್ವಾರ್ಥಕ್ಕಾಗಿ ಬಳಸುವುದಿಲ್ಲ. ಜೀವನ ಸಂರಕ್ಷಣೆಗಾಗಿ ಮತ್ತು ದುಷ್ಟ ಶಕ್ತಿಗಳು ಜೀವನಕ್ಕೆ ಅಪಾಯ (ಹಾನಿ) ಉಂಟುಮಾಡದಂತೆ ನೋಡಿಕೊಳ್ಳುವುದಕ್ಕಾಗಿ ಅವುಗಳನ್ನು ಆಶ್ರಯಿಸುತ್ತದೆ. ಸುಗ್ಗಿ, ಬರ ಇತ್ಯಾದಿಗಳು

---

೧. 'ರಿಲಿಜನ್' ಎನ್ನುವ ಶಬ್ದ ಮೂಲ ಹಸ್ತಪ್ರತಿಯಲ್ಲಿ ಬಳಕೆಗೊಂಡಿಲ್ಲ.

ಧಾರ್ಮಿಕ ಆಚರಣೆಯ ಸಂದರ್ಭಗಳಾಗಿ ಏಕೆ ರೂಪುಗೊಳ್ಳಬೇಕು? ಕಾಡು ಸಮಾಜದಲ್ಲಿ ಮಾಟ, ನಿಷೇಧ ಮತ್ತು ಕುಲಸಂಕೇತಗಳಿಗೆ ಅಷ್ಟೊಂದು ಪ್ರಾಮುಖ್ಯ ಯಾಕೆ? ಜೀವನ ಸಂರಕ್ಷಣೆಯ ಮೇಲೆ ಅವು ಪರಿಣಾಮ ಬೀರುತ್ತವೆ ಎನ್ನುವುದೊಂದೇ ಅದಕ್ಕೆ ಉತ್ತರ. ಜೀವನ ಪ್ರಕ್ರಿಯೆ ಮತ್ತು ಸಂರಕ್ಷಣೆಗಳೇ ಅದರ ಮುಖ್ಯ ಗುರಿ ಮತ್ತು ಅದು ಕಾಡು ಸಮಾಜದ ಧರ್ಮದ ತಿರುಳು ಮತ್ತು ಕೇಂದ್ರ. ಇಂದು 'ಮಾಟ'ದ ಸ್ಥಾನವನ್ನು 'ದೇವರು' ಆಕ್ರಮಿಸಿದ್ದರೂ, ಸಾಮಾಜಿಕ ನೆಲೆಯ ಜೀವನ ರಕ್ಷಣೆ ಮತ್ತು ಸಮರ್ಪಣೆಗಳ ದೃಷ್ಟಿಯಿಂದ, ಧರ್ಮವೊಂದೇ ಮುಖ್ಯ ಸಾಧನವಾಗಿ ಮುಂದುವರೆದಿದೆ.

ಮೇಲಿನ ಎಲ್ಲ ವಿವರಣೆ ಚರ್ಚೆಗಳಿಂದ ಒಂದು ಮಾತು ಸ್ಪಷ್ಟ ಮತ್ತು ಗಮನಾರ್ಹ : ಅದೇಂದರೆ, ಧರ್ಮವನ್ನು ಒಂದು ವೈಯಕ್ತಿಕ ಮತ್ತು ಖಾಸಗಿ ವಿಷಯವೆಂದು ಪರಿಗಣಿಸುವುದು ತಪ್ಪು ಎನ್ನುವುದು. ಒಬ್ಬ ವ್ಯಕ್ತಿಯಲ್ಲಿ, ಹುಟ್ಟಿನಿಂದ (ಅನುವಂಶೀಯವಾಗಿ) ಬಂದ ವಿಶೇಷ ಪ್ರವೃತ್ತಿಯಿಂದಾಗಿ ಧರ್ಮ ಅರಳುತ್ತದೆ ಎನ್ನುವ ಧೋರಣೆ ಕೂಡ ಅಷ್ಟೇ ತಪ್ಪಾದುದು. ಭಾಷೆಯಂತೆ ಧರ್ಮ ಕೂಡ ಒಂದು ಸಾಮಾಜಿಕ ಸಂಗತಿ ಎನ್ನುವುದು ಸರಿಯಾದ ದೃಷ್ಟಿ : ಏಕೆಂದರೆ ಸಾಮಾಜಿಕ ಜೀವನಕ್ಕೆ ಎರಡೂ ಅಗತ್ಯ. ಯಾವುದೇ ವ್ಯಕ್ತಿಗೆ ಧರ್ಮ ಆವಶ್ಯಕ. ಏಕೆಂದರೆ ಅದಿಲ್ಲದೆ ಅವನು ಸಾಮಾಜಿಕ (ಜೀವನ) ಕಾರ್ಯ ಚಟುವಟಿಕೆಗಳಲ್ಲಿ ಭಾಗಿಯಾಗಲಾರ.

"ಒಂದು ವೇಳೆ ಧರ್ಮ ಎನ್ನುವುದು ಸಾಮಾಜಿಕ ಮತ್ತು ಅದರ ಪ್ರಾಥಮಿಕ ಕಾಳಜಿ ಸಮಾಜಕ್ಕೆ ಸಂಬಂಧಿಸಿದ್ದು ಎಂದು ಹೇಳುವುದಾದರೆ ಧರ್ಮದ ಕ್ರಿಯೆ ಮತ್ತು ಉದ್ದೇಶಗಳೇನು ಎಂದು ಪ್ರಶ್ನಿಸುವುದು ಸಹಜ. ನನಗೆ ತಿಳಿದ ಮಟ್ಟಿಗೆ ಧರ್ಮದ ಉದ್ದೇಶವನ್ನು ಕುರಿತಂತೆ ಪ್ರೊ. ಚಾರ್ಲ್ಸ್ ಎ ಎಲ್‌ವುಡ್ ಅವರ ಅಭಿಪ್ರಾಯ ಅತ್ಯಂತ ಶ್ರೇಷ್ಠವಾಗಿದೆ.[೧] ಅವರು ಹೇಳುವಂತೆ ಧರ್ಮ, ಮಾನವ ವ್ಯಕ್ತಿತ್ವ ಮತ್ತು ಮಾನವ ಸಮಾಜದ ಸಾರಭೂತ ಮೌಲ್ಯಗಳನ್ನು, ವಿಶ್ವದ ಅಖಂಡತೆಯ ದೃಷ್ಟಿಯಿಂದ ಪ್ರತಿಪಾದಿಸುತ್ತದೆ. ಒಬ್ಬ ವ್ಯಕ್ತಿಗೆ ಈ ವಿಶ್ವ ಎಷ್ಟೇ ಸಣ್ಣದು ಮತ್ತು ಕ್ಷುಲ್ಲಕವಾದುದೆನಿಸಿದರೂ ಅದನ್ನು ಕುರಿತು ಅವನು ಮೌಲ್ಯಮಾಪನ ಮಾಡುವ ಧೋರಣೆ ತಾಳಿದಾಗಲೇ ಅವನಲ್ಲಿ ಅನಿವಾರ್ಯವಾಗಿ ಧರ್ಮ ಎನ್ನುವುದು ಮೂಡಿ ನಿಲ್ಲುತ್ತದೆ. ಅದು, ಮಾನವ ಜೀವನದ ವಿಶಿಷ್ಟ ಮಾನಸಿಕ, ಸಾಮಾಜಿಕ ವಿಷಯಗಳಂತೆ ಅವನ ಉನ್ನತ ಬೌದ್ಧಿಕ ಶಕ್ತಿಗಳಲ್ಲಿ ಒಡಮೂಡುವಂಥದು. ಮಾನವನೊಬ್ಬನೇ ಧಾರ್ಮಿಕ ಪ್ರಾಣಿ; ಏಕೆಂದರೆ ತನ್ನ ಅಮೂರ್ತ ಆಲೋಚನೆ ಮತ್ತು ತಾರ್ಕಿಕ ಶಕ್ತಿಗಳ ಮೂಲಕ ನಿಜವಾದ ಅರ್ಥದಲ್ಲಿ ಅವನೊಬ್ಬನೇ ಸಂಪೂರ್ಣ ಆತ್ಮ ಪ್ರಜ್ಞೆಯುಳ್ಳವನು. ಕಾರಣ ವಿಶ್ವದಲ್ಲಿ ಅವನೊಬ್ಬನೇ (ತನ್ನ) ಮೌಲ್ಯಗಳನ್ನು ಪ್ರತಿಪಾದಿಸುವ ಸಾಮರ್ಥ್ಯ ಹೊಂದಿದ್ದಾನೆ ಮತ್ತು ಅನುಸರಿಸುವ ಆವಶ್ಯಕತೆ ಕಂಡುಕೊಂಡಿದ್ದಾನೆ. ಬೇರೆ ಮಾತುಗಳಲ್ಲಿ ಹೇಳುವುದಾರೆ ತನ್ನ ಬೌದ್ಧಿಕ ಶಕ್ತಿಗಳಿಂದಾಗಿ ಅವನ ಮನಸ್ಸು ತಕ್ಷಣ ಆ ಮೌಲ್ಯ ಮತ್ತು ವಿಚಾರಗಳನ್ನು ಸಾರ್ವತ್ರೀಕರಣಗೊಳಿಸಲು ಆಲೋಚಿಸುತ್ತದೆ. ಬುದ್ಧಿ ತರ್ಕಗಳ ಪ್ರಕ್ರಿಯೆ, ಅವನಲ್ಲಿ ಸಾರ್ವತ್ರೀಕರಣದ (ಸಮಷ್ಟಿ ರೂಪದ) ವಿಚಾರಗಳನ್ನು ಮೂಡಿಸುವಂತೆ, ಅವನ ಧಾರ್ಮಿಕ ಪ್ರಕ್ರಿಯೆ ಅವನಲ್ಲಿ ವಿಶ್ವ ಮೌಲ್ಯಗಳ ಪ್ರಪಂಚವನ್ನು ಸೃಷ್ಟಿಸುತ್ತದೆ. ಮಾನವನ ಅನುಸರಣೆಯ ಸೂತ್ರ ನಿಯಮಗಳಿಗಿಂತ ಅವನ ಪ್ರವೃತ್ತಿ, ಉದ್ವೇಗ (ಭಾವ)ಗಳನ್ನು ತರ್ಕಸಮ್ಮತಗೊಳಿಸುವ ಪ್ರಕ್ರಿಯೆಯೇ ನಿಜವಾದ ಅರ್ಥದಲ್ಲಿ ಧಾರ್ಮಿಕ ಪ್ರಕ್ರಿಯೆಯಾಗಿದೆ. ತರ್ಕ ವಿಚಾರಗಳಿಗೆ ಪ್ರಚೋದಕವಾದರೆ, ಧರ್ಮ, ಭಾವನೆ–ಅನಿಸಿಕೆಗಳಿಗೆ ರೂಪಕೊಡುತ್ತದೆ.

---

೧. *ದಿ ರಿಲಿಜಿಯಸ್ ರಿಕನ್‌ಸ್ಟ್ರಕ್ಷನ್*, ಪು. ೩೯–೪೦.

ಅದರಿಂದ ಧರ್ಮ ಸಾರ್ವತ್ರಿಕ ಸ್ವರೂಪ ತಾಳುತ್ತದೆ. ಹೀಗೆ (ವಿಶ್ವ ಸಮ್ಮತ) ಸಾರ್ವತ್ರಿಕ ರೂಪ ಕೊಡುವಾಗ ಅದನ್ನು ಇಡೀ ವಾಸ್ತವತೆಯ ಜೊತೆಗೆ ಸಮರಸಗೊಳಿಸುತ್ತದೆ."

ಒಬ್ಬ ವ್ಯಕ್ತಿ ಸಮಾಜದ ಗೌರವ ಪಡೆಯಬೇಕಾದರೆ ಆತ, ಧರ್ಮ ಒತ್ತು ಕೊಡುವ ಸಾರ್ವತ್ರೀಕೃತ ಸಾಮಾಜಿಕ ಮೌಲ್ಯಗಳನ್ನು ಸದಾ ನೆನಪಿನಲ್ಲಿಟ್ಟುಕೊಂಡು ತನ್ನ ಎಲ್ಲ ಕಾರ್ಯಗಳಲ್ಲಿ ಅನುಸರಿಸುವುದು ಅಗತ್ಯ. ಆದರೆ ಧರ್ಮದ ಉದ್ದೇಶ ಇಷ್ಟಕ್ಕೇ ಸೀಮಿತವಾಗುವುದಿಲ್ಲ. ಅದು ವ್ಯಕ್ತಿಗಳನ್ನು ಆಧ್ಯಾತ್ಮೀಕರಣಗೊಳಿಸುತ್ತದೆ. ಪ್ರೊ. ಎಲ್‌ವುಡ್ ಹೇಳುವಂತೆ[೧] ಧಾರ್ಮಿಕ ನಡವಳಿಕೆಯ ಮಾನಸಿಕ ಮತ್ತು ಸಾಮಾಜಿಕ ಮೌಲ್ಯಗಳಿಗೆ ಜನ 'ಆಧ್ಯಾತ್ಮಿಕ' ಎನ್ನುತ್ತಾರೆ. ಇವುಗಳನ್ನು ಆಧ್ಯಾತ್ಮಿಕ ಮೌಲ್ಯಗಳೆಂದೂ ಕರೆಯಬಹುದು. ಅಂದರೆ ಇವು ಕೂಡ ವ್ಯಕ್ತಿಗಳ ನಡವಳಿಕೆ ಮತ್ತು ಸಾಮಾಜಿಕ ಬದುಕಿಗೆ ಒತ್ತುಕೊಡುವ ಮೌಲ್ಯಗಳೇ. ಪ್ರಪಂಚದ ವಾಸ್ತವತೆಯಲ್ಲಿ ಈ ಮೌಲ್ಯಗಳನ್ನು ಪ್ರತಿಪಾದಿಸುವುದು ಅದರ ಧರ್ಮದ ಗುರಿ. ಇದರಿಂದ ಮನುಷ್ಯನಿಗೆ ಉದ್ದೇಶರಹಿತವಾದ ಅಂಥ ನಾಟಕದ ಯಾಂತ್ರಿಕ ಕ್ರಿಯೆಗಿಂತ ಭಿನ್ನವಾದ ಒಂದು ಸಾಮಾಜಿಕ ಮತ್ತು ನೈತಿಕ ಪರಿಕಲ್ಪನೆಯ ಅರಿವು ಉಂಟಾಗುತ್ತದೆ. ಅನೇಕ ಸಲ ಧರ್ಮ ಪ್ರಾಥಮಿಕವಾಗಿ ಒಂದು ಸರ್ವಚೈತನ್ಯ ದರ್ಶನವೆಂದು ಹೇಳಲಾಗುತ್ತದೆ; ಅದೇನೇ ಹೇಳಿದರೂ, ಧರ್ಮ ಎಲ್ಲ ವಸ್ತುಗಳಲ್ಲಿಯೂ ಮನಸ್ಸು; ಚೈತನ್ಯ, ಬದುಕನ್ನು ಚಿಮ್ಮಿಸುತ್ತದೆ. ಅತ್ಯಂತ ಪ್ರಾದಿಮ ಧರ್ಮ ಕೂಡ ಈ ಕಾರ್ಯ ಮಾಡಿದೆ. ಏಕೆಂದರೆ ಪ್ರಾದಿಮ ಚೈತನ್ಯದ 'ಮಾನಾ' ಅಥವಾ 'ಮಾನಿಟು' ಮೊದಲಾದ ಪರಿಕಲ್ಪನೆಗಳಲ್ಲಿ ಅತೀಂದ್ರಿಯ ಶಕ್ತಿಯ ಭಾವನೆಯಿತ್ತು. ಇವೆಲ್ಲ ವ್ಯಕ್ತಿಗಳ ತೀರ ನಿಕಟ–ವೈಯಕ್ತಿಕ–ಸಂಗತಿಗಳಾಗಿದ್ದು ವ್ಯಕ್ತಿಯಿಂದ ವ್ಯಕ್ತಿಗೆ, ವಸ್ತುಗಳಿಗೆ ಅತಿ ಖಾಸಗಿ ವಿಧಾನದಲ್ಲಿ ಪರಿಚಲಿಸುವುವೆಂದು ಭಾವಿಸಲಾಗುತ್ತಿತ್ತು. ಆದ್ದರಿಂದ ಧರ್ಮವೆಂದರೆ ಆಧ್ಯಾತ್ಮಿಕ ಮೌಲ್ಯಗಳು ನಿಜವೆಂದು ನಂಬುವುದು ಮತ್ತು ಈ ಮೊದಲೇ ಹೇಳಿದಂತೆ ಅವುಗಳನ್ನು ಅಖಂಡ ಪ್ರಪಂಚದಲ್ಲಿ ಸ್ಥಾಪನೆಗೊಳಿಸುವುದು. ಎಲ್ಲ ಧರ್ಮಗಳು–ನಿರೀಶ್ವರವಾದಿಗಳೆಂದು ಹೇಳಿಕೊಳ್ಳುವ ಧರ್ಮಕೂಡ– ಆಧ್ಯಾತ್ಮಿಕತೆಗೆ ಒತ್ತು ಕೊಡುತ್ತವೆ. ಅದರ ದಟ್ಟ ಪ್ರಭಾವವನ್ನು ನಂಬುತ್ತವೆ, ಮತ್ತು ಅದರ ಆತ್ಯಂತಿಕ ಯಶಸ್ಸನ್ನು ಸಾರುತ್ತವೆ."[೨] ಸಮಾಜದಲ್ಲಿ ಧರ್ಮದ ಕರ್ತವ್ಯ ಏನು ಎನ್ನುವುದು ಅಷ್ಟೇ ಸ್ಪಷ್ಟ, ಪ್ರೊ. ಎಲ್‌ವುಡ್ ಪ್ರಕಾರ ಧರ್ಮದ ಕರ್ತವ್ಯವೆಂದರೆ, ಅದು ಸಮಾಜವನ್ನು ನಿಯಂತ್ರಿಸುವ ಶಕ್ತಿಯಾಗಿ ಪ್ರವರ್ತಿಸುವುದು. ಸಮುದಾಯದ ಮೂಲಕ ವ್ಯಕ್ತಿ ಜೀವನವನ್ನು ನಿಯಂತ್ರಿಸುವ ಶಕ್ತಿಯಾಗಿ ಪ್ರವರ್ತಿಸುವುದು. ಸಮುದಾಯದ ಮೂಲಕ ವ್ಯಕ್ತಿ ಜೀವನವನ್ನು ನಿಯಂತ್ರಿಸುವುದು. ಸಮುದಾಯಕ್ಕೆ ಹೆಚ್ಚು ಹೆಚ್ಚು ಕಲ್ಯಾಣ ಹಿತ ಬಯಸುವುದು. ಸಮುದಾಯಕ್ಕೆ ಸಮ್ಮತವಾಗದ, ವ್ಯಕ್ತಿಗತ ಅನಿಸಿಕೆ ಮತ್ತು ಮೌಲ್ಯಗಳ ಅಭಿವ್ಯಕ್ತಿಗಳಿಗೆ ಕಪ್ಪುಮಾಟ ಅಥವಾ ವಿಪತ್ಕಾರೀ ಮೂಢನಂಬಿಕೆಗಳೆಂದು ಮುದ್ರೆ ಒತ್ತಲಾಯಿತು. ಹೀಗೆ ಮಾಡದಿದ್ದರೆ ಸಮುದಾಯದ ಐಕ್ಯ ತೀವ್ರ ದುರ್ಬಲಗೊಳ್ಳುತ್ತದೆ ಎನ್ನುವುದು ಸ್ಪಷ್ಟ. ಇದರಿಂದ ಧರ್ಮದ ಸಾಮಾಜಿಕ ಗುಣಲಕ್ಷಣಗಳು ಪ್ರಕಟಗೊಂಡವು. ಸಾಮಾಜಿಕತೆಯನ್ನು ಹೊರತುಪಡಿಸಿದ ತೀರ ವ್ಯಕ್ತಿಗತ ಅಥವಾ ವೈಯಕ್ತಿಕ ಧರ್ಮ ಎನ್ನುವುದು ಯಾವುದೂ ಸಾಧ್ಯವಾಗಲಾರದು. ಏಕೆಂದರೆ ನಾವು ಬಾಳುವುದು ಸಾಮಾಜಿಕವಾಗಿ ಮತ್ತು ನಮ್ಮ ಬಹು ಮುಖ್ಯ ಕಾಳಜಿ ಸಮುದಾಯದ ಶ್ರೇಯಸ್ಸು."

ಅದೇ ಪ್ರಶ್ನೆಯನ್ನು ಕುರಿತು ಅವರು ಮತ್ತೊಂದೆಡೆ :[೩]

೧. ಅದೇ: ಪು. ೪೫–೪೬.

೨. ಅದೇ: ಪು. ೪೨–೪೩.

೩. *ಸೊಸಾಯಿಟಿ ಇನ್ ಸೈಕಾಲೋಜಿಕಲ್ ಆ್ಯಸ್ಪೆಕ್ಟ್ಸ್*, (೧೯೧೩) ; ಪು. ೩೫೬–೫೭.

"ಕಾಯಿದೆ ಮತ್ತು ಸರಕಾರದ ಕರ್ತವ್ಯವೇ ಧರ್ಮದ ಕರ್ತವ್ಯ. ಸಾಮಾಜಿಕ ಸ್ವಾಸ್ಥ್ಯವನ್ನು ಕಾಪಾಡಿಕೊಂಡು ಬರಲು ವ್ಯಕ್ತಿಯ ನಡವಳಿಕೆಯ ಮೇಲೆ ಸಮಾಜ ಹೊಂದುವ ನಿಯಂತ್ರಣಕ್ಕೆ ಅದು ಸಾಧನ. ವ್ಯಕ್ತಿಯ ಮೇಲೆ ಸಾಮಾಜಿಕ ನಿಯಂತ್ರಣ ಹೊಂದುವ ವಿಧಾನ ಎದ್ದು ಕಾಣುವಂಥದಾಗಿರಲಿಕ್ಕಿಲ್ಲ. ಆದರೂ ಧರ್ಮ ಎನ್ನುವುದು ಸಾಮಾಜಿಕ ನಿಯಂತ್ರಣದ ಸಾಧನ ಎನ್ನುವುದಕ್ಕೆ ಭಿನ್ನಾಭಿಪ್ರಾಯವಿಲ್ಲ. ಧರ್ಮದ ಜೊತೆ ತುಲನೆ ಮಾಡಿ ನೋಡಿದರೆ, ಸಾಮಾಜಿಕ ನಿಯಂತ್ರಣದ ದೃಷ್ಟಿಯಿಂದ, ಸರಕಾರ ಮತ್ತು ಕಾನೂನು ಅಸಮರ್ಪಕ ಸಾಧನಗಳೆನಿಸುತ್ತವೆ. ಕಾಯಿದೆ ಸುವ್ಯವಸ್ಥೆಯ ಮೂಲಕ ಕೈಕೊಳ್ಳುವ ನಿಯಂತ್ರಣ ವಿಧಾನ, ಸಾಮಾಜಿಕ ಸ್ವಾಸ್ಥ್ಯ ಸಂರಕ್ಷಣೆ ಕುರಿತು ಅಷ್ಟು ಆಳಕ್ಕೆ ಹೋಗುವುದಿಲ್ಲ. ಆದರೆ ಧರ್ಮ (ಸೂತ್ರ)ದ ಕಟ್ಟಳೆಗಳು ದೈವ ನಿಯಾಮಕ ಎನ್ನುವ ಭಾವನೆ ಇರುವುದರಿಂದ, ಸಾಮಾಜಿಕ ನಿಯಂತ್ರಣದ ದೃಷ್ಟಿಯಿಂದ ಅವು ಸರಕಾರ ಮತ್ತು ಅದರ ಕಾಯಿದೆಗಳಿಗಿಂತ ಹೆಚ್ಚು ಪ್ರಭಾವಶಾಲಿ ಸಾಧನವೆನಿಸುತ್ತವೆ. ಧರ್ಮದ ಬೆಂಬಲವಿಲ್ಲದೆ ಸಮರ್ಥ ಸಾಮಾಜಿಕ ನಿಯಂತ್ರಣ ಸಾಧ್ಯವಾಗಲಾರದು. ಧರ್ಮ, ಸಾಮಾಜಿಕ ನಿಯಂತ್ರಣದ ಪ್ರಬಲ ಗುರುತ್ವಾಕರ್ಷಣ; ಅದರ ಸಹಾಯವಿಲ್ಲದೆ ಸಮಾಜವನ್ನು ಅದರ ಕಕ್ಷೆಯಲ್ಲಿ ನಿಯಂತ್ರಿಸುವುದು ಅಸಾಧ್ಯ."

ಧರ್ಮ ಒಂದು ಸಾಮಾಜಿಕ ಸತ್ಯ; ಅದಕ್ಕೊಂದು ನಿಶ್ಚಿತವಾದ ಸಾಮಾಜಿಕ ಗುರಿಯಿದೆ. ಒಂದು ನಿರ್ದಿಷ್ಟ ಸಾಮಾಜಿಕ ಕರ್ತವ್ಯವಿದೆ ಎನ್ನುವುದನ್ನು ಸ್ಪಷ್ಟಪಡಿಸಲು ಮೇಲಿನ ಚರ್ಚೆಯನ್ನು ಮಾಡಲಾಯಿತಾದರೂ, ಧರ್ಮವನ್ನು ಸ್ವೀಕರಿಸಿ ಬದುಕುವ ವ್ಯಕ್ತಿಗೆ ಈ ಧರ್ಮದಿಂದ ಸಮಾಜಕ್ಕೆ ಎಷ್ಟರಮಟ್ಟಿಗೆ ಕಲ್ಯಾಣ ಸಾಧನೆಯಾಗಿದೆ ಎಂದು ಪ್ರಶ್ನಿಸುವ ಹಕ್ಕು ಇರಬೇಕಾದುದು ಅಗತ್ಯ.

ಈ ಹಿನ್ನೆಲೆಯನಲ್ಲಿ ಲಾರ್ಡ್ ಬ್ಯಾಲ್ಫೋರ್ 'ಖಂಡಿತ ವಾದ' – ಪೊಜಿಟಿವಿಜಮ್–ಒಪ್ಪಿಕೊಳ್ಳುವ ಮೊದಲು ಆ ಗುಂಪಿಗೆ ಕ್ರೈಸ್ತ ಧರ್ಮಕ್ಕಿಂತ ಖಂಡಿತತ್ವವಾದ' ಹೇಗೆ ಶ್ರೇಷ್ಠ ಎನ್ನುವುದನ್ನು ಕುರಿತು ನೇರ ಪ್ರಶ್ನೆ ಹಾಕಿದ್ದು ಯಥೋಚಿತವಾಗಿದೆ. ಅವರು ತುಂಬ ತೀಕ್ಷ್ಣ ಭಾಷೆಯಲ್ಲಿಯೇ ಪ್ರಶ್ನಿಸಿದರು. "ನಮ್ಮ ದೈನಂದಿನ ಅಗತ್ಯತೆ ಮತ್ತು ಸಣ್ಣಪುಟ್ಟ ಆವಶ್ಯಕತೆಗಳಿಗಾಗಿ ನಿರಂತರ ಪರಿಶ್ರಮ ಸಂಘರ್ಷಗಳಲ್ಲಿ ತೊಡಗಿರುವ ಅಥವಾ ಪರವಶರಾಗಿರುವ ಅಗಣಿತ ಸಂದಿಗ್ಧ ಜನಸಮುದಾಯಕ್ಕೆ ಇವರ (ಖಂಡಿತತ್ವವಾದಿಗಳ) ಉತ್ತರವೇನು? 'ಮಾನವತೆ'ಯ ಬಹು ದೊಡ್ಡ ನಾಟಕದಲ್ಲಿ ತಮ್ಮ ಪಾತ್ರ–ಹೊಣೆ–ನಿರ್ವಹಿಸುವಂತೆ ಆದೇಶ ಹೊಂದಿರುವ ಈ ಜನಸಮುದಾಯಕ್ಕೆ ಅದನ್ನು ಕುರಿತು ಪ್ರಶ್ನಿಸಲು, ಆಲೋಚಿಸಲು ಸಮಯವಿಲ್ಲ; ಮತ್ತು ಅದರ ಬಯಕೆಯೂ ಇರಲಾರದು. ಇಂಥವರು ಕಂಗಾಲಾಗಿ, ಧರ್ಮದ ಮಹತ್ವ ಅಥವಾ ಆಸಕ್ತಿಗಳನ್ನು ಕುರಿತು ಪ್ರಶ್ನಿಸುವ ಸ್ಥಿತಿಯಲ್ಲಿದ್ದಾರೆಯೇ? ದಿವ್ಯಲೋಕ ರಚಿಸಿದ ಸೃಷ್ಟಿಕರ್ತನ ದೃಷ್ಟಿಯಲ್ಲಿ ಯಾವ ವ್ಯಕ್ತಿಯೂ ಕ್ಷುಲ್ಲಕವಲ್ಲ; ಎಲ್ಲರೂ ಅನಂತ ಮೌಲಿಕತೆ ಹೊಂದಿದ್ದಾರೆ ಎನ್ನುವುದರ ಭರವಸೆಯನ್ನು ಅದು ನೀಡಲು ಶಕ್ತವಾಗಿದೆಯೇ? ಅಥವಾ ಮಾನವನ ಕ್ರಿಯೆಗಳು, ಈ ಭೌತಿಕ ಪ್ರಪಂಚ ಶೂನ್ಯದಲ್ಲಿ ಕುಸಿದು ಬಿದ್ದ ಎಷ್ಟೋ ಕಾಲದ ಬಳಿಕ ಕಾಲಾತೀತ ಕ್ಷಣದಲ್ಲಿ ಪರಿಣಾಮ ಬೀರುತ್ತವೆಯೇ? ಅದು ದುಃಖಿತರಿಗೆ ಸಾಂತ್ವನ, ದುರ್ಬಲರಿಗೆ ಶಕ್ತಿ, ಪಾಪಿಗಳಿಗೆ ಕ್ಷಮೆ ನೀಡುತ್ತದೆಯೇ? ಬದುಕಿನ ಭಾರ ಹೊತ್ತು ದಣಿದ ನಿಶ್ಯಕ್ತರಿಗೆ ದೀನರಿಗೆ ಶಾಂತಿ–ವಿಶ್ರಾಂತಿ ಕೊಡುತ್ತದೆಯೇ?"

ಲಾರ್ಡ್ ಬ್ಯಾಲ್ಫೋರ್ 'ನಿರ್ದಿಷ್ಟವಾದಿ'ಗಳಿಗೆ ಹಾಕಿದ ಪ್ರಶ್ನೆಗಳನ್ನೇ ಅಸ್ಪೃಶ್ಯರು ಹಿಂದೂ ಧರ್ಮದ ಮುಖಂಡರಿಗೆ ಹಾಕಬಹುದು. ಇಷ್ಟೇ ಅಲ್ಲ, ಅಸ್ಪೃಶ್ಯರು ಅನೇಕ ಪ್ರಶ್ನೆಗಳನ್ನು ಹಾಕಬಹುದು. ಅವರು ಕೇಳಬಹುದು. ಹಿಂದೂ ಧರ್ಮ ಅಸ್ಪೃಶ್ಯರನ್ನು ಮನುಷ್ಯ (ಪ್ರಾಣಿ) ಎಂದು ಗುರುತಿಸುತ್ತಾರೆಯೇ? ಅವರ

ಸಮಾನತೆಯನ್ನು ಅದು ಒಪ್ಪಿಕೊಳ್ಳುತ್ತದೆಯೇ? ಸ್ವಾತಂತ್ರ್ಯದ ಲಾಭಗಳನ್ನು ಅವರಿಗೂ ವಿಸ್ತರಿಸುತ್ತದೆಯೇ? ಕನಿಷ್ಠ ಪಕ್ಷ ಅಸ್ಪೃಶ್ಯರು ಮತ್ತು ಹಿಂದೂಗಳ ನಡುವೆ ಸೋದರತೆಯ ಸೌಹಾರ್ದ ಸಂಬಂಧವನ್ನಾದರೂ ಬೆಳೆಸಿಕೊಳ್ಳಲು ಬೋಧಿಸುತ್ತದೆಯೇ? ಅಸ್ಪೃಶ್ಯರು ತಮ್ಮ ಕರುಳ ಬಳ್ಳಿ ಎಂದು ಹಿಂದೂ ಧರ್ಮ ನಿಯಮಗಳಿಗೆ ಸಾರುತ್ತದೆಯೇ? ಅಸ್ಪೃಶ್ಯರನ್ನು ಇತ್ತ ಪಶುಗಳೂ ಅಲ್ಲ ಅತ್ತ ಮನುಷ್ಯರೂ ಅಲ್ಲ ಎನ್ನುವ ಹಾಗೆ ನಡೆಸಿಕೊಳ್ಳುವುದು ಪಾಪ ಎಂದು ಹಿಂದೂಗಳಿಗೆ ತಿಳಿಸುತ್ತದೆಯೇ? ಅಸ್ಪೃಶ್ಯರನ್ನು ಕೇವಲ ಮನುಷ್ಯರಂತಾದರೂ ಪರಿಗಣಿಸಲು ಹೇಳುತ್ತದೆಯೇ? ಅವರ ಜೊತೆ ಸ್ನೇಹಪರ ನಡವಳಿಕೆಯನ್ನು ತಮ್ಮಲ್ಲಿ ಅಳವಡಿಸಿಕೊಳ್ಳಲು ಆದೇಶಿಸುತ್ತದೆಯೇ? ಅಸ್ಪೃಶ್ಯರ ಜೊತೆ ಸಾತ್ವಿಕವಾಗಿ ವರ್ತಿಸಲು ಬೋಧಿಸುತ್ತದೆಯೇ? ಅಸ್ಪೃಶ್ಯರನ್ನು ಪ್ರೀತಿಯಿಂದ ಕಾಣಲು ಗೌರವಿಸಲು ಮತ್ತು ಅವರಿಗೆ ಅನ್ಯಾಯ ಬಗೆಯದಿರಲು ಹಿಂದೂಗಳಿಗೆ ವಿವರಿಸಿ ತಿಳಿಸುತ್ತದೆಯೇ? ಕೊನೆಯದಾಗಿ, ಹಿಂದೂ ಧರ್ಮ, ಮೇಲು ಕೀಳುಗಳಿಲ್ಲದಂತೆ ಜೀವನ ಮೌಲ್ಯವನ್ನು 'ಸಾರ್ವತ್ರೀಕರಣ'ಗೊಳಿಸುತ್ತದೆಯೇ?

ಮೇಲಿನ ಈ ಎಲ್ಲ ಪ್ರಶ್ನೆಗಳಿಗೂ, ಯಾವ ಹಿಂದೂವೂ ಸಕಾರಾತ್ಮಕ ಉತ್ತರ ಕೊಡುವ ಧೈರ್ಯ ಮಾಡಲಾರ. ಇದಕ್ಕೆ ವ್ಯತಿರಿಕ್ತವಾಗಿ ಹಿಂದೂಗಳಿಂದ ಅಸ್ಪೃಶ್ಯರ ಮೇಲಾಗುವ ಎಲ್ಲ ಅನ್ಯಾಯಗಳಿಗೂ ಹಿಂದೂ ಧರ್ಮದ–ಸಮ್ಮತಿಯಿದೆ–ಮಂಜೂರಾತಿಯಿದೆ. ಎಲ್ಲವೂ ಹಿಂದೂ ಧರ್ಮದ ಹೆಸರಿನಲ್ಲಿ ನಡೆಯುತ್ತದೆ; ಹಿಂದೂ ಧರ್ಮದ ಹೆಸರಿನಲ್ಲಿ ನ್ಯಾಯ ಸಮ್ಮತವೆನಿಸುತ್ತದೆ. ಹಿಂದೂಗಳಿಂದ ಅಸ್ಪೃಶ್ಯರ ಮೇಲಾಗುವ ಪುಂಡಾಟಿಕೆ ಅನ್ಯಾಯಗಳಿಗೆ ಹಿಂದೂ ಧರ್ಮದ ಬೋಧನೆಗಳಲ್ಲಿ ಆಧಾರಗಳಿದ್ದು ಅವೇ ಅವರ ಬೆಂಬಲಕ್ಕಿವೆ. ಹೀಗಿರುವಾಗ ಹಿಂದೂಗಳು ಅಸ್ಪೃಶ್ಯರನ್ನು ಹಿಂದೂ ಧರ್ಮದಲ್ಲಿ ಉಳಿಯುವಂತೆ ಮತ್ತು ಹಿಂದೂ ಧರ್ಮವನ್ನು ಸ್ವೀಕರಿಸುವಂತೆ ಕೇಳಲು ಹೇಗೆ ಸಾಧ್ಯ? ತಮ್ಮ ಅವಮಾನಕ್ಕೆ ಸಂಪೂರ್ಣ ಹೊಣೆಯಾಗಿರುವ ಹಿಂದೂ ಧರ್ಮದಲ್ಲಿ ಅಸ್ಪೃಶ್ಯರು ಸ್ಥಿರವಾಗಿರಲು ಹೇಗೆ ಸಾಧ್ಯ? ಅದರಲ್ಲಿಯೇ ಉಳಿಯುವುದು ಹೇಗೆ? ಒಬ್ಬ ವ್ಯಕ್ತಿಯ ಅವಮಾನದ ಅತ್ಯಂತ ಕೆಳಮಟ್ಟವೆಂದರೆ ಅಸ್ಪೃಶ್ಯತೆ. ಬಡವನಾಗಿರುವುದು ಕೆಟ್ಟದ್ದೇ; ಆದರೆ ಅಸ್ಪೃಶ್ಯನಾಗಿರುವಷ್ಟು ಕೀಳು ಅಲ್ಲ. ಬಡವನಿಗೆ ಆತ್ಮಾಭಿಮಾನವಿದೆ. ಅಸ್ಪೃಶ್ಯನಿಗೆ ಅದು ಸಾಧ್ಯವಿಲ್ಲ. ಕೆಳ ಮಟ್ಟದವನು ಅನಿಸಿಕೊಳ್ಳುವುದು ಕೆಟ್ಟದ್ದೇ, ಆದರೆ ಅಸ್ಪೃಶ್ಯ ಎನ್ನಿಸಿಕೊಳ್ಳುವಷ್ಟು ಕೀಳಲ್ಲ. ಕೆಳಮಟ್ಟದ ವ್ಯಕ್ತಿ ಒಂದು ಸ್ಥಾನಕ್ಕೆ ಏರಬಹುದು, ಅಸ್ಪೃಶ್ಯನಿಗೆ ಅದು ಸಾಧ್ಯವಿಲ್ಲ. ಯಾತನೆ ಪಡುವುದು ಕೆಟ್ಟದ್ದೇ; ಆದರೆ ಅಸ್ಪೃಶ್ಯನಾಗಿರುವಷ್ಟು ಹೀನವಲ್ಲ. ಕಷ್ಟಪಡುವವರಿಗೆ ಒಂದಲ್ಲ ಒಂದು ದಿನ ಸಾಂತ್ವನ ದೊರೆಯುತ್ತದೆ. ಅಸ್ಪೃಶ್ಯನಿಗೆ ಇದರ ಅವಕಾಶವೇ ಇಲ್ಲ; ಬಲಹೀನನಾಗಿರುವುದು ಕೆಟ್ಟದ್ದೇ; ಆದರೆ ಅಸ್ಪೃಶ್ಯನಾಗಿರುವಷ್ಟು ದುರ್ಬಲತೆ ಬೇರೊಂದಿಲ್ಲ. ಬಲಹೀನರಿಗೆ ವಂಶಗತವಾಗಿ ಭೂಮಿಯಿರಲಿಕ್ಕಿಲ್ಲ. ಆದರೆ ಅವರು ಶಕ್ತಿವಂತರಾಗಿರಬಹುದು. ಅಸ್ಪೃಶ್ಯನಿಗೆ ಇದಾವುದರ ನಿರೀಕ್ಷೆಯಿಲ್ಲ.

ಹಿಂದೂ ಧರ್ಮದಲ್ಲಿ ಅಸ್ಪೃಶ್ಯರಿಗೆ ಭವಿಷ್ಯವಿಲ್ಲ. ಆದರೆ ಅಸ್ಪೃಶ್ಯರು ಹಿಂದೂ ಧರ್ಮ ತ್ಯಜಿಸಲು ಇದೊಂದೇ ಕಾರಣ ಅಲ್ಲ. ಅಸ್ಪೃಶ್ಯರು ಹಿಂದೂ ಧರ್ಮ ತ್ಯಜಿಸಲು ಅತ್ಯಗತ್ಯವಾದುದು ಮತ್ತೊಂದು ಕಾರಣವಿದೆ. ಅಸ್ಪೃಶ್ಯತೆ ಹಿಂದೂ ಧರ್ಮದ ಒಂದು ಭಾಗವಾಗಿದೆ. ಅಸ್ಪೃಶ್ಯತೆ ಹಿಂದೂ ಧರ್ಮದ ಭಾಗವಾಗಿದೆಯೆನ್ನುವುದನ್ನು ಒಪ್ಪಿಕೊಳ್ಳದಂತೆ ನಟಿಸುವ ಬುದ್ಧಿವಂತ ಸುಧಾರಕರು ಕೂಡ ಅಸ್ಪೃಶ್ಯತೆಯನ್ನು ಆಚರಿಸುತ್ತಾರೆ. ಹಿಂದೂ ಆದವನು ಹಿಂದೂ ಧರ್ಮದಲ್ಲಿ ಶ್ರದ್ಧೆಯಿಡುವುದು ಮಹತ್ವವಲ್ಲ. ಲಕ್ಷಾಂತರ ಅಸ್ಪೃಶ್ಯರು ತನಗಿಂತ ಕೆಳಮಟ್ಟದಲ್ಲಿದ್ದಾರೆ ಎನ್ನುವ ಅವರ ಪ್ರಜ್ಞೆಯಿಂದಾಗಿ ಅವನಲ್ಲಿ ತಾನು ಶ್ರೇಷ್ಠ ಎನ್ನುವ ಭಾವನೆ ಬೆಳೆಯುತ್ತದೆ. ಆದರೆ ಒಬ್ಬ ಅಸ್ಪೃಶ್ಯ, ತನಗೆ ಹಿಂದೂ ಧರ್ಮದಲ್ಲಿ ನಂಬಿಕೆಯಿದೆ ಎಂದು

ಹೇಳಿಕೊಳ್ಳುವುದರಲ್ಲಿ ಯಾವ ಪುರುಷಾರ್ಥವಿದೆ? ಅದರ ಅರ್ಥ : ತಾನು ಒಬ್ಬ ಅಸ್ಪೃಶ್ಯ ಎನ್ನುವುದನ್ನು ಒಪ್ಪಿಕೊಳ್ಳುತ್ತಾನೆ; ಮತ್ತು ತಾನು ಅಸ್ಪೃಶ್ಯನಾಗಿರುವುದು ದೈವೇಚ್ಛೆ ಎಂದು ಸ್ವೀಕರಿಸುತ್ತಾನೆ. ಹಿಂದೂ ಧರ್ಮ ದೈವಾಜ್ಞೆ, ಆ ಕಾರಣದಿಂದಾಗಿ ಒಬ್ಬ ಅಸ್ಪೃಶ್ಯ ಒಬ್ಬ ಹಿಂದೂವಿಗೆ ದ್ರೋಹ ಬಗೆಯಲಾರ. ಆದರೆ ತಾನು ಅಸ್ಪೃಶ್ಯ ಎಂದು ಒಪ್ಪಿಕೊಳ್ಳುವುದನ್ನು ಅವನಿಂದ ನಿರೀಕ್ಷಿಸಲಾಗದು ಮತ್ತು ಅದು ಇರುವುದೇ ಹಾಗೆ. ಹಿಂದೂ ಧರ್ಮಕ್ಕೆ ಬದ್ಧನಾಗಿದ್ದು ಇಂಥ ಮೃತ ಆತ್ಮವುಳ್ಳ ಯಾವ ಅಸ್ಪೃಶ್ಯನಿಂದ ಇಂಥ ಸಮ್ಮತಿ ಸಾಧ್ಯ? ಅಸ್ಪೃಶ್ಯರ ಆತ್ಮಗೌರವ ಮತ್ತು ಸ್ವಾಭಿಮಾನ ಕುರಿತು ಹಿಂದೂ ಧರ್ಮದಲ್ಲಿರುವ ಈ ಬಗೆಯ ಅಸಂಗತ–ಅಸ್ಥಿರ–ಧೋರಣೆಗಳಿಂದಾಗಿ ಅಸ್ಪೃಶ್ಯರು ಇದಕ್ಕಿಂತ ಬೇರೊಂದು ಉದಾತ್ತವಾದ ಧರ್ಮಕ್ಕೆ ಪರಿವರ್ತನೆಗೊಳ್ಳುವುದು ನ್ಯಾಯಸಮ್ಮತ. ಮತಾಂತರ ವಿರೋಧಿಗಳು, ಅದರಿಂದ ಸಮಾಧಾನ ತಾಳಬಾರದೆಂದೇ ನಿಶ್ಚಯಿಸಿದ್ದಾರೆ. ಅಷ್ಟೇ ಅಲ್ಲ, ಅನೇಕ ಪ್ರಶ್ನೆಗಳ ಉತ್ತರಕ್ಕಾಗಿ ಒತ್ತಾಯಿಸುತ್ತಾರೆ. ಅವರು ಹೆಚ್ಚಾಗಿ ಯಾವಾಗಲೂ ಒಂದು ಪ್ರಶ್ನೆಯನ್ನು ಕೇಳಲು ಉತ್ಸುಕರಾಗಿದ್ದಾರೆ; ಅವರ ದೃಷ್ಟಿಯಲ್ಲಿ ಅದು ಅಸಾಧ್ಯ ಮತ್ತು ನಿರುತ್ತರ. ಅದೆಂದರೆ, ತಮ್ಮ ಧರ್ಮವನ್ನು ಬದಲಾಯಿಸುವುದರಿಂದ ಅಸ್ಪೃಶ್ಯರಿಗೆ ಆಗುವ ಭೌತಿಕ–ಪ್ರಾಪಂಚಿಕ–ಲಾಭವೇನು? ಈ ಪ್ರಶ್ನೆ ಉತ್ತರಿಸಲಾಗದಷ್ಟು ಅಸಾಧ್ಯವಾದುದಲ್ಲ. ಅದರ ಉತ್ತರ ಸರಳ. ಆರ್ಥಿಕ ಲಾಭದ ಒಂದು ಅವಕಾಶಕ್ಕಾಗಿ ಮತಾಂತರ ಮಾಡುವುದು ಅಸ್ಪೃಶ್ಯರ ಉದ್ದೇಶವಲ್ಲ. ನಿಜ, ಮತಾಂತರದಿಂದ ಅಸ್ಪೃಶ್ಯರಿಗೆ ಯಾವ ಸಂಪತ್ತಿನ ಲಾಭವೂ ಇಲ್ಲ. ಹಿಂದೂಗಳಾಗಿ ಉಳಿದು ಬಡವರಾಗಿಯೇ ತಮ್ಮ ಕೊನೆಗಾಣುವುದರಿಂದ ಅವರಿಗೆ ಅದರಿಂದ ಹಾನಿಯಿಲ್ಲ. ರಾಜಕೀಯವಾಗಿ ಅಸ್ಪೃಶ್ಯರಿಗೆ ಕೊಡಮಾಡಿದ ಹಕ್ಕುಗಳನ್ನು ಅಸ್ಪೃಶ್ಯರು ಕಳೆದುಕೊಳ್ಳುತ್ತಾರೆ. ಏನಾದರೂ ಇದು ಅಂಥ ನಿಜವಾದ ಹಾನಿಯಲ್ಲ. ಯಾವುದೇ ಧರ್ಮಕ್ಕೆ ಅವರು ಸೇರಿದರೂ ರಾಜಕೀಯ ಹಕ್ಕುಗಳಿಗೆ ಅನುಗುಣವಾಗಿ ಆಯಾ ಮತಕ್ಕೆ ಸಂಬಂಧಿಸಿದ ಮೀಸಲಾತಿಗಳು ಅವರಿಗೆ ದೊರೆಯುತ್ತವೆ. ರಾಜಕೀಯವಾಗಿ ಇದರಿಂದ ಲಾಭವೂ ಇಲ್ಲ, ಹಾನಿಯೂ ಇಲ್ಲ. ಆದರೆ ಸಾಮಾಜಿಕವಾಗಿ ಪೂರ್ಣರೂಪದ ಅಧಿಕ ಲಾಭ ದೊರೆಯುತ್ತದೆ. ಅಸ್ಪೃಶ್ಯರು ಧರ್ಮಾಂತರದ ಮೂಲಕ ಜೀವನದ ಎಲ್ಲ ಮೌಲ್ಯಗಳನ್ನು ಸರ್ವಸಮಾನಗೊಳಿಸಿದ ಸಾರ್ವತ್ರೀಕರಣಗೊಳಿಸಿದ ಮತವೊಂದರ ಸದಸ್ಯರಾಗುತ್ತಾರೆ. ಹಿಂದೂ ಧರ್ಮವನ್ನು ತಬ್ಬಿಕೊಂಡಿರುವವರೆಗೆ ಇಂಥ ಒಂದು ಅನುಗ್ರಹ ಕುರಿತು ಅವರಿಗೆ ಆಲೋಚಿಸಲು ಕೂಡ ಸಾಧ್ಯವಿಲ್ಲ. ಉತ್ತರವೇನೋ ಪರಿಪೂರ್ಣ. ಆದರೆ ಇದರ ಸೂತ್ರ ರೂಪದ ಸಂಕ್ಷಿಪ್ತತೆಯ ಕಾರಣ ಮತಾಂತರ ವಿರೋಧಿಗಳಿಗೆ ಇದರಿಂದ ಸಮಾಧಾನವಾಗಲಾರದು. ಅಸ್ಪೃಶ್ಯರಿಗೆ ಮೂರು ಸಂಗತಿಗಳ ಅಗತ್ಯವಿದೆ. ಸಾಮಾಜಿಕ ಏಕಾಕಿತನವನ್ನು ಕೊನೆಗೊಳಿಸುವುದು ಅವರ ಪ್ರಥಮ ಅಗತ್ಯತೆ. ಕೀಳರಿಮೆಯನ್ನು ಕೊನೆಗೊಳಿಸುವುದು ಅವರ ಎರಡನೇ ಆವಶ್ಯಕತೆ. ಮತಾಂತರ ಅವರ ಅಗತ್ಯತೆಗಳನ್ನು ಪೊರೈಸುತ್ತದೆಯೇ? ಮತಾಂತರ ವಿರೋಧಿಗಳ ದೃಷ್ಟಿಯಲ್ಲಿ ಮತಾಂತರ ಬೆಂಬಲಿಗರ ವಾದಕ್ಕೆ ನೆಲೆಯಿಲ್ಲ. ಆದ್ದರಿಂದಾಗಿ ಅವರು ಪ್ರಶ್ನೆ ಕೇಳುತ್ತಲೇ ಇರುತ್ತಾರೆ. ಮತಾಂತರ ಪರವಾದ ವ್ಯಾಖ್ಯೆ ಅತ್ಯಂತ ಬಲಶಾಲಿಯಾಗಿದೆ. ಇಷ್ಟೊಂದು ಸ್ಪಷ್ಟವಾಗಿರುವ ಈ ಸಂಗತಿಯನ್ನು ಸಿದ್ಧಮಾಡಿ ತೋರಿಸಲು ತುಂಬ ಸುದೀರ್ಘವಾದ ಚರ್ಚೆ ಮಾಡಬೇಕಾಗುತ್ತದೆ. ಆದರೆ ಎಲ್ಲ ಸಂದೇಹಗಳನ್ನು ಒಮ್ಮೆ ಕೊನೆಗೊಳಿಸುವುದು ಅಗತ್ಯವಾದುದರಿಂದ ಈ ವಿಷಯವನ್ನು ಮುಂದುವರೆಸಲು ನಾನು ಸಿದ್ಧ. ಪ್ರತಿಯೊಂದು ವಿಚಾರವನ್ನೂ ಬೇರೆ ಬೇರೆಯಾಗಿ ಚರ್ಚಿಸೋಣ.

“ಅವರು ತಮ್ಮ ಸಾಮಾಜಿಕ ಪ್ರತ್ಯೇಕತೆಯನ್ನು ಹೇಗೆ ಕೊನೆಗೊಳಿಸಬಹುದು? ಜಾತೀಯತೆಯಿಂದ ಮುಕ್ತವಾಗಿರುವ ಬೇರೊಂದು ಮತದಲ್ಲಿ ಸೇರಿಕೊಳ್ಳುವುದು ಮತ್ತು ಆ ಮತೀಯರ ಜೊತೆ ಸಲುಗೆ

ಸಂಬಂಧಗಳನ್ನು ಬೆಳೆಸುವುದೊಂದೇ ಅವರ ಸಾಮಾಜಿಕ–ಏಕಾಕಿತನ–ಪ್ರತ್ಯೇಕತೆಯನ್ನು ಅಂತ್ಯಗೊಳಿಸಲು ಇರುವ ಒಂದೇ ಒಂದು ಮಾರ್ಗ. ಉತ್ತರ ತುಂಬ ಸರಳ. ಆದರೂ ಅನೇಕರು ಇದನ್ನು ನ್ಯಾಯ ಸಮ್ಮತವಾದದ್ದು ಎಂದು ಕೂಡಲೇ ಒಪ್ಪಿಕೊಳ್ಳಲು ಸಿದ್ಧರಿಲ್ಲ. ಏಕೆಂದರೆ ಬಾಂಧವ್ಯದ ಬೆಲೆ ಮತ್ತು ಮಹತ್ವಗಳನ್ನು ತಿಳಿದವರು ತುಂಬ ಕಡಿಮೆ. ಆದರೂ ಅದರ ಮೌಲ್ಯ ಮತ್ತು ಪ್ರಾಮುಖ್ಯಗಳು ಅತ್ಯಧಿಕ. ಬಾಂಧವ್ಯ ಮತ್ತು ಅದು ಒಳಗೊಂಡಿರುವ ಅರ್ಥವನ್ನು ಪ್ರೊ. ರಾಬರ್ಟ್ಸನ್ ಸ್ಮಿತ್ ಈ ಕೆಳಗಿನಂತೆ ವಿವರಿಸುತ್ತಾರೆ :[೧] ರಕ್ತ ಸಂಬಂಧದ ಸದಸ್ಯರೆಲ್ಲ, ತಾವೆಲ್ಲ ಒಂದೇ ರಕ್ತ, ಮಾಂಸ ಮತ್ತು ಮೂಳೆಗಳ ಚೈತನ್ಯಪೂರ್ಣವಾದ ಒಂದು, ಜೀವಂತ ಸಮೂಹ ಎಂದು ಭಾವಿಸುತ್ತಾರೆ. ಎಲ್ಲರ ನೋವು ತಮ್ಮ ನೋವು ಎಂದು ತಿಳಿಯುತ್ತಾರೆ.

ಈ ವಿಷಯವನ್ನು ಆ ಸಮುದಾಯ ವ್ಯಕ್ತಿಗತ ಮತ್ತು ಸಾಮೂಹಿಕ ದೃಷ್ಟಿಯಿಂದ ಪರಿಶೀಲಿಸಬಹುದು. ಸಮೂಹದ ದೃಷ್ಟಿಯಿಂದ ಒಬ್ಬ ವ್ಯಕ್ತಿ ಕೇವಲ ವ್ಯಕ್ತಿಯಾಗಿರದೆ ಇಡೀ ಸಮುದಾಯದ ಒಂದು ಭಾಗ ಎನ್ನುವ ಅನಿಸಿಕೆಯೇ ಬಂಧುತ್ವದ ಅರ್ಥ. ವ್ಯಕ್ತಿಗತ ದೃಷ್ಟಿಯಿಂದ ಬಂಧುತ್ವವೆಂದರೆ ಅವನು ಸದಸ್ಯನಾಗಿರುವ ಯಾವುದೇ ಕುಟುಂಬಕ್ಕೆ ದೊರೆಯುವ ಎಲ್ಲ ಪ್ರಯೋಜನಗಳಿಗೆ ಅವನೂ ಅಷ್ಟೇ ಸಮಾನ–ಬಾಧ್ಯಸ್ಥ. ಕೌಟುಂಬಿಕ ಜೀವನ, ತಂದೆ ತಾಯಿಗಳ ವಾತ್ಸಲ್ಯ ಆರೈಕೆಗಳಲ್ಲಿ ಪೋಷಣೆ ಹೊಂದುವಂಥದು. ಪ್ರೊ. ಮ್ಯಾಕ್‌ಡು ಅಲ್ ಹೇಳುವಂತೆ :[೨]

"ಪಿತೃವಾತ್ಸಲ್ಯ – ಮಾರ್ದವತೆಯ ಈ ಮನೋಭಾವ ಮತ್ತು ಅದರ ಒಳ ಪ್ರೇರಣೆಯಿಂದ ಬರುವ ಪೋಷಣೆ ಉದಾರತೆ, ಕೃತಜ್ಞತೆ, ಪ್ರೀತಿ, ಅನುಕಂಪ, ಪರೋಪಕಾರ ಮತ್ತು ಪರಹಿತಾಸಕ್ತಿಯ ಎಲ್ಲ ಗುಣಗಳೂ ವ್ಯಕ್ತಿಗಳಲ್ಲಿ ಚಿಮ್ಮುತ್ತವೆ; ಇದೇ ಅವರ ಬದುಕಿನ ಮುಖ್ಯ ಬೇರು; ಅದಿಲ್ಲದೆ ಅವರು ಬದುಕಲಾರರು."

ಸಮುದಾಯವೆಂದರೆ ಸಮಾಜದ ಒಂದು ವಿಸ್ತೃತ ಕುಟುಂಬ ಅಷ್ಟೇ. ಆದ್ದರಿಂದ ಪ್ರೊ. ಮ್ಯಾಕ್‌ಡುಅಲ್ ಹೇಳಿರುವುದು ತುಂಬ ಸೂಕ್ತ. ಅಂದರೆ ಕುಟುಂಬ ಜೀವನದ ಎಲ್ಲ ವಿಶಿಷ್ಟ ಗುಣಗಳೂ ಸಮುದಾಯದ ಗುಣಲಕ್ಷಣಗಳಾಗಿವೆ. ಬಾಂಧವ್ಯದಿಂದ ಬಂಧಿತರಾದ ಸಮುದಾಯದಲ್ಲಿ ಪರಸ್ಪರ ವ್ಯತ್ಯಾಸ ಮಾಡಲಾಗುವುದಿಲ್ಲ. ತನ್ನ ಪರಿಧಿಯಲ್ಲಿರುವ ಎಲ್ಲರಿಗೂ ಸಮಾನ ಹಕ್ಕು ಎನ್ನುವುದನ್ನು ಸಮುದಾಯ ಮನ್ನಿಸುತ್ತದೆ. ಪ್ರಾಧ್ಯಾಪಕರುಗಳಾದ ಡ್ಯೂಯಿ ಮತ್ತು ಟಫ್ಟ್ಸ್ ಅವರ ವಿವರಣೆ ಹೀಗಿದೆ :

ಒಂದು ರಾಜ್ಯ ಮತ್ತೊಂದು ಬೇರೆ ದೇಶದ ನಾಗರಿಕನಿಗೆ ಭೂಮಿಯ ಒಡೆತನ ಹೊಂದಲು, ನ್ಯಾಯಾಲಯಗಳಲ್ಲಿ–ನ್ಯಾಯಕ್ಕಾಗಿ–ವ್ಯಾಜ್ಯ ಹೂಡಲು, ಅನುಮತಿ ನೀಡಬಹುದು ಮತ್ತು ಸಾಮಾನ್ಯವಾಗಿ ಕೆಳಮಟ್ಟಿಗಿನ ರಕ್ಷಣೆಯನ್ನೂ ಒದಗಿಸಬಹುದು. ಆದರೆ ಪ್ರಥಮ ಹಕ್ಕುಗಳು ಪರಿಮಿತವಾಗಿರುತ್ತವೆ. ಮುಖ್ಯ ನ್ಯಾಯಧೀಶ ಟ್ಯಾನೀ ಆದೇಶದ ವಿವರಣೆಯ ಕೆಲವೇ ವರ್ಷಗಳಿಂದ ಸಂಯುಕ್ತ ರಾಜ್ಯ (ಅಮೆರಿಕಾ)ದಲ್ಲಿ ಅಸ್ತಿತ್ವದಲ್ಲಿರುವ ನ್ಯಾಯತತ್ವದ ಪ್ರಕಾರ ಬಿಳಿಯನಿಗೆ ಇರುವ ಗೌರವ ಹಕ್ಕುಗಳು ನೀಗ್ರೋಗಳಿಗೆ ಇಲ್ಲ. ಜನಾಂಗ ಮತ್ತು ಇತರ ತಾರತಮ್ಯಗಳನ್ನು ಮನ್ನಿಸಿದ ನ್ಯಾಯ ವ್ಯವಸ್ಥೆಯಲ್ಲಿ ಕೂಡ 'ಅನ್ಯ'ರಿಗೆ ನ್ಯಾಯ ದೊರೆಯುವುದು ಕಷ್ಟವೇ. ಪ್ರಾದಿಮ ವೃಂದ ಅಥವಾ ಕುಟುಂಬ ಸಮೂಹದಲ್ಲಿ ಈ ತತ್ವಾನುಸರಣೆ

---

೧. *ದಿ ರಿಲಿಜಿಯಸ್ ಆಫ್ ಸೆಮೈಟ್ಸ್*, ಪು. ೨೭೩.
೨. *ಇಂಟ್ರೊಡಕ್ಷನ್ ಟು ಸೋಷಿಯಲ್ ಸೈಕಾಲೊಜಿ*

ಪೂರ್ಣ ಪ್ರಮಾಣದಲ್ಲಿದೆ. ಒಂದು ಸಮುದಾಯಕ್ಕೆ ಸೇರಿದ ವ್ಯಕ್ತಿಗೆ ಮಾತ್ರ ಅದಕ್ಕೆ ಸಂಬಂಧಿಸಿದ ನ್ಯಾಯ ಗೌರವ ದೊರೆಯುತ್ತದೆ. ಅದು ಅನ್ಯರಿಗೆ ಲಭ್ಯವಾಗದು. ಆ ಒಂದು 'ವಂಶ'ಕ್ಕೆ ಸೇರಿದ ವ್ಯಕ್ತಿ, ಕುಟುಂಬ ಅಥವಾ ಗ್ರಾಮೀಣ ಸಮುದಾಯ ತನ್ನ ಹಕ್ಕು ಕೇಳುವ ಅಧಿಕಾರ ಹೊಂದಿರುತ್ತದೆ; ಅನ್ಯರಿಗೆ ಯಾವ ನೆಲೆಯೂ ಇಲ್ಲ. ಅವನಿಗೆ ಅತಿಥಿ ಸತ್ಕಾರ ದೊರೆಯಬಹುದು; ಅದರೆ ತನ್ನ ಬಣವನ್ನುಳಿದು ಇತರ ಸಮುದಾಯದಲ್ಲಿ ನ್ಯಾಯ ಕೇಳುವಂತಿಲ್ಲ. ಒಂದು ಸಮುದಾಯದ ಕಕ್ಷೆಯೊಳಗೇ ಹಕ್ಕು ಸ್ಥಾಪನೆಯ ಪರಿಕಲ್ಪನೆಗೆ ಅನುಗುಣವಾಗಿ ಅದೇ ಮಾದರಿಯಲ್ಲಿ ಆಧುನಿಕ ನಾಗರಿಕ ಕಾನೂನುಗಳಿವೆ. ಒಂದು 'ವಂಶ' ಮತ್ತೊಂದು ವಂಶದ ಜೊತೆಗೆ ವ್ಯವಹರಿಸುವುದು ಯುದ್ಧ ಅಥವಾ 'ಮಧ್ಯಸ್ಥಿಕೆ'ಯ ವಿಷಯವೇ ಹೊರತು ಕಾಯಿದೆಗೆ ಸಂಬಂಧಿಸಿದ್ದಲ್ಲ. ಇತರ 'ವಂಶ'ದ ವ್ಯಕ್ತಿಗೆ ಹೆಸರು ದೆಸೆಯಿಲ್ಲ. ನ್ಯಾಯ ರಕ್ಷಣೆಯಿಂದಲೂ 'ಬಹಿಷ್ಕೃತ'.

ಬಾಂಧವ್ಯದಿಂದಾಗಿ, ಒಂದು ಸಮುದಾಯಕ್ಕೆ ಆ ಸಮುದಾಯದ ಯಾವುದೇ ವ್ಯಕ್ತಿಯ ಮೇಲಾದ ಅನ್ಯಾಯದ ಪ್ರತೀಕಾರ ತೆಗೆದುಕೊಳ್ಳುವ ಹೊಣೆಗಾರಿಕೆ ಇರುತ್ತದೆ. ಒಬ್ಬ ವ್ಯಕ್ತಿಯ ಮೇಲಾದ ಅನ್ಯಾಯದ ಪ್ರತೀಕಾರಕ್ಕಾಗಿ ರಕ್ತಪಾತ, ವಸ್ತುನಿಷ್ಠ ದೃಷ್ಟಿಯಿಂದ ಅದು ತಮ್ಮ ಬಂಧುವೊಬ್ಬನ ಮೇಲಾದ ಅನ್ಯಾಯಕ್ಕೆ ಪ್ರತಿಯಾಗಿ ಆ ಸಮುದಾಯ ಅವನ ಮೇಲೆ ತೋರುವ ಸ್ಪಷ್ಟ ಅನುಕಂಪೆಯಾಗಿದೆ. ಈ ಅನುಕಂಪಯುಕ್ತ ಪ್ರತೀಕಾರ ಮನೋಭಾವ, ಒಂದು ಮಗುವಿನ ಮೇಲಾದ ಅನ್ಯಾಯಕ್ಕೆ ತಂದೆ ತಾಯಿಗಳು ಮುಖಾಮುಖಿಯಾದಾಗ ಅದರ ಕೋಮಲ ಹೃದಯದಲ್ಲಿ ಪುಟಿಯುವ ಉದ್ವೇಗ ಕೋಪ–ತಾಪಗಳಂಥ ಒಂದು ಸಂಯುಕ್ತ 'ಆವೇಗ'ವಾಗಿದೆ. ಈ ಬಗೆಯ ಅನುಕಂಪಯುಕ್ತ ಪ್ರತಿಭಟನೆಗೆ, ಉದ್ವೇಗ ಕೋಪ–ತಾಪಗಳ ಸಂಯುಕ್ತ ಮನೋಭಾವನೆಗೆ ಬಾಂಧವ್ಯವೇ ಮೂಲ. ಒಬ್ಬ ವ್ಯಕ್ತಿಯ ದೃಷ್ಟಿಯಿಂದ ಇದೇನೂ ಸಣ್ಣ ಮೌಲ್ಯವಲ್ಲ. ಪ್ರೊ. ಮ್ಯಾಕ್‌ಡುಅಲ್ ಮಾತಿನಲ್ಲಿ : "ಕೋಮಲ ಭಾವನೆ ಮತ್ತು ಕೋಪಗಳ ನಡುವಣ ನಿಕಟ ಸಂಬಂಧ ಒಬ್ಬ ವ್ಯಕ್ತಿಯ ಸಾಮಾಜಿಕ ಜೀವನದ ದೃಷ್ಟಿಯಿಂದ ಬಹಳ ಮಹತ್ವದ್ದಾಗಿದೆ. ಮತ್ತು ಅದು ನೈತಿಕ ಭಾವನೆಗಳ ನಿಜವಾದ ಸಿದ್ಧಾಂತಕ್ಕೆ ಒಂದು ತಳಹದಿಯಾಗಿದೆ ಎಂದು ಅರಿತುಕೊಳ್ಳಬೇಕು; ಏಕೆಂದರೆ ಈ ರೀತಿ ಪ್ರಚೋದಿತ ಕೋಪ ಎಲ್ಲ ನೈತಿಕ ಸಂತಾಪಕ್ಕೆ ಪ್ರೇರಕ. ನ್ಯಾಯ ಮತ್ತು ಸಾರ್ವಜನಿಕ ಕಾಯ್ದೆ ಕಾನೂನುಗಳ ಬಹುಭಾಗ, ಈ ನೈತಿಕ ಸಂತಾಪದ ಅಡಿಪಾಯದ ಮೇಲೆಯೇ ನಿಂತಿದೆ."

ಒಂದು ಅನ್ಯಾಯವನ್ನು ತೊಡೆದುಹಾಕಲು, ಬಾಂಧವ್ಯದಿಂದ ಸ್ಫುರಿಸುವ ಉದಾರತೆ ಮತ್ತು ನೈತಿಕ ಸಂತಾಪಗಳು ಅಗತ್ಯವಾಗಿವೆ.

ಇಂದು, ಅಸ್ಪೃಶ್ಯರ ಮೇಲೆ ಹಿಂದೂಗಳಿಂದ ಆಗುತ್ತಿರುವ ದೌರ್ಜನ್ಯ ದಬ್ಬಾಳಿಕೆಗಳನ್ನು ಅವರು ಏಕಾಕಿಯಾಗಿ ಎದುರಿಸಬೇಕಾಗಿ ಬಂದಿರುವ ಸಂದರ್ಭದಲ್ಲಿ ತಾವು ಒಂದು ಬಳಗ ಎನ್ನುವ ಸಾಮುದಾಯಿಕ ಅರಿವು ಮೂಡಿಸಲು, ಬಾಂಧವ್ಯ ಒಂದು ಬೆಂಬಲ ನೀಡುವ ಇಚ್ಛಾಶಕ್ತಿಯಾಗಿದೆ. ಹಿಂದೂಗಳ ದಬ್ಬಾಳಿಕೆ ದೌರ್ಜನ್ಯಗಳನ್ನು ಅಸ್ಪೃಶ್ಯರು ಪರಿಣಾಮಕಾರಿಯಾಗಿ ಎದುರಿಸಬೇಕಾದರೆ ಅವರು ಬೇರೊಂದು ಸಮುದಾಯದ ಜೊತೆಗೆ ಬಾಂಧವ್ಯ ಬೆಳೆಸಿಕೊಳ್ಳುವುದು ಒಂದು ಅತ್ಯುತ್ತಮ ವಿಮೆಯಾಗಿದೆ.

ಅಸ್ಪೃಶ್ಯರು, ತಮ್ಮ 'ಪ್ರತ್ಯೇಕ ದೂರ'ವನ್ನು ಕೊನೆಗೊಳಿಸಬೇಕಾದರೆ, ಜಾತಿಯನ್ನು ಮಾನ್ಯ ಮಾಡದ ಬೇರೊಂದು ಸಮುದಾಯವನ್ನು ಸೇರಲೇಬೇಕು ಎನ್ನುವ ಮಾತನ್ನು ಒಪ್ಪಿಕೊಳ್ಳಲು, ಬಾಂಧವ್ಯ ಕುರಿತ ಮೇಲಿನ ಅರ್ಥವಿವರ ಗಮನಿಸಿದ ಯಾರಿಗೂ ಅಷ್ಟು ಕಷ್ಟವಾಗಲಾರದು.

ಬಾಂಧವ್ಯ, ಪ್ರತ್ಯೇಕತೆಯ ವಿರೋಧಿ ವಿಷಯ. ಅಸ್ಪೃಶ್ಯರು ಬೇರೊಂದು ಸಮುದಾಯಕ್ಕೆ ಸೇರಿಕೊಳ್ಳುವುದು

ಎಂದರೆ ಅದು ಸದ್ಯದ ತಮ್ಮ 'ಏಕಾಕಿತನ'ದ ಸ್ಥಿತಿಯನ್ನು ಅಂತ್ಯಗೊಳಿಸುವ, ಕೇವಲ ಬೇರೊಂದು ಹೆಸರಿನ ಪರಿವರ್ತನೆ ಮಾತ್ರ. ಹಿಂದೂಗಳಾಗಿ ಉಳಿದಿರುವವರೆಗೂ ಅವರ 'ಏಕಾಕಿತನ' ಕೊನೆಗೊಳ್ಳಲು ಸಾಧ್ಯವೇ ಇಲ್ಲ. ಹಿಂದೂಗಳೇ ಆಗಿ ಉಳಿದರೆ, ಅಸ್ಪೃಶ್ಯರ 'ಒಂಟಿತನ' ಅವರನ್ನು ಮುಂಬದಿಯಿಂದಲೂ ಹೊಡೆಯುತ್ತದೆ. ಹಿಂಬದಿಯಿಂದಲೂ ಹೊಡೆಯುತ್ತದೆ. ಅಸ್ಪೃಶ್ಯರು ಹಿಂದೂಗಳಾಗಿರುವ ಮಾತು ಒತ್ತಟ್ಟಿಗಿರಲಿ, ಅವರು ಹಿಂದುಗಳಿಂದ ಅನ್ಯರಾದ ಮುಸಲ್ಮಾನ ಮತ್ತು ಕ್ರೈಸ್ತರಿಂದಲೂ ದೂರವಾಗಿಯೇ ಉಳಿಯುತ್ತಾರೆ. (ಹಿಂದೂಗಳಿರಲಿ, ಹಿಂದೂಯೇತರರಾಗಿರಲಿ) ಈ 'ಏಕಾಕಿತನ' ಅಂತ್ಯಗೊಳ್ಳಲು ಒಂದೇ ಒಂದು ದಾರಿಯಿದೆ, ಮತ್ತೊಂದಿಲ್ಲ. ಅದೆಂದರೆ ಅಸ್ಪೃಶ್ಯರು ಯಾವುದಾದರೂ ಬೇರೊಂದು 'ಅ–ಹಿಂದು' ಸಮುದಾಯವನ್ನು ಸೇರುವುದು ಮತ್ತು ಅವರ ಬಳಗದಲ್ಲಿ ಕೂಡಿಕೊಳ್ಳುವುದು. 'ಏಕಾಕಿತನದ' ಹಾನಿಗಳನ್ನು ಮತ್ತು ಬಾಂಧವ್ಯದ ಪ್ರಯೋಜನಗಳನ್ನು ಅರಿತವರೆಲ್ಲರೂ ಇದೊಂದು ಅರ್ಥಶೂನ್ಯವಾದ ಮಂಡನೆ ಅಲ್ಲ ಎನ್ನುವುದನ್ನು ಒಪ್ಪಿಕೊಳ್ಳುತ್ತಾರೆ. 'ಏಕಾಕಿತನದ ಪರಿಣಾಮಗಳೇನು? ಪ್ರತ್ಯೇಕತೆಯೆಂದರೆ ಸಾಮಾಜಿಕ ಅನ್ಯಾಯ. ಪ್ರತ್ಯೇಕತೆಯೆಂದರೆ ರಕ್ಷಣೆಯ ನಿರಾಕರಣೆ. ಪ್ರತ್ಯೇಕತೆಯೆಂದರೆ ಅನುಕಂಪೆಯ ಬೇಡಿಕೆ; ಸಾಹಚರ್ಯದ ಬೇಡಿಕೆ ಮತ್ತು ಪರಿಶೀಲನೆಯ ಕೋರಿಕೆ. ಇಷ್ಟೇ ಅಲ್ಲ, ಪ್ರತ್ಯೇಕತೆಯೆಂದರೆ ಹಿಂದೂಗಳಿಂದ ತಿರಸ್ಕಾರ, ರೂಢಿಗತ ವೈರ. ಇದಕ್ಕೆ ವ್ಯತಿರಿಕ್ತವಾಗಿ, ಅಸ್ಪೃಶ್ಯರು ಇತರ ಸಮುದಾಯಕ್ಕೆ ಮತಾಂತರಗೊಂಡರೆ, ಇತರ ಸಮುದಾಯದೊಂದಿಗೆ ಸಂಬಂಧ ಬೆಳೆಸಿದರೆ, ಆ ಸಮುದಾಯದ ಒಳಗೇ ಇದ್ದು ಸಮಾನ ಸ್ಥಾನಮಾನ ಹೊಂದುತ್ತಾರೆ; ಸಮಾನ ರಕ್ಷಣೆ ಸಮಾನ ನ್ಯಾಯ ಪಡೆದು ಆ ಸಮುದಾಯದ ಪ್ರೀತಿ ವಿಶ್ವಾಸಗಳಿಗೆ ಬಾಧ್ಯರಾಗುತ್ತಾರೆ.

ಇದು, ವಿರೋಧಿಗಳು ಎತ್ತಿದ ಪ್ರಶ್ನೆಗೆ ನನ್ನ ಸ್ಪಷ್ಟ ಉತ್ತರ. ಮತಾಂತರದಿಂದ ಅಸ್ಪೃಶ್ಯರಿಗಾಗುವ ಲಾಭವನ್ನು ಇದು ತೋರಿಸುತ್ತದೆ. ಆದರೆ ವಿರೋಧಿಗಳು ಇದುವರೆಗೂ ಎತ್ತಿರದ, ಮುಂದೆ ಎತ್ತಬಹುದಾದ ಪ್ರಶ್ನೆಗೆ ಸಂಬಂಧಿಸಿದಂತೆ ಬೇರೊಂದು ವಿಷಯ ವಿವರಣೆ ಮುಂದುವರೆಸುವುದು ಅಪೇಕ್ಷಣೀಯ. ಬಾಂಧವ್ಯ ಸ್ಥಾಪನೆಗೆ ಮತಾಂತರದ ಅಗತ್ಯವಿದೆಯೇ? ಎನ್ನುವುದೇ ಎರಡನೆಯ ಪ್ರಶ್ನೆ.

ಸಮುದಾಯ ಮತ್ತು ಸಮಾಜ, ಬಾಂಧವ್ಯ ಮತ್ತು ನಾಗರಿಕತ್ವಗಳ ನಡುವಿನ ವ್ಯತ್ಯಾಸವನ್ನು ನಿಖರವಾಗಿ ಗಮನಿಸಿದರೆ, ಈ ಪ್ರಶ್ನೆಗೆ ಉತ್ತರ ತಾನೇ ತಾನಾಗಿ ದೊರೆಯುತ್ತದೆ. ಸಮುದಾಯವೆಂದರೆ–ಖಚಿತಾರ್ಥದಲ್ಲಿ–ಪರಸ್ಪರ ಬಂಧು ಬಳಗದ ಒಂದು ಗುಂಪು. ಇಂಥ ಅನೇಕ ವಿವಿಧ–ಸಮುದಾಯಗಳಿಂದ ಕೂಡಿದ ಸಮೂಹವೇ ಸಮಾಜ. ಒಂದು ಸಮುದಾಯವನ್ನು ಒಟ್ಟಾಗಿ ಕೂಡಿಸುವುದು ಬಾಂಧವ್ಯ; ಸಮಾಜ ಒಕ್ಕಟ್ಟಾಗಿರಿಸುವ ಬಂಧವೇ ನಾಗರಿಕತ್ವ.

ಒಂದು ಸಮಾಜದಲ್ಲಿ ಪೌರತ್ವವನ್ನು ಪಡೆಯುವ ಸಾಧನಗಳು, ಸಮುದಾಯದಲ್ಲಿ ಬಾಂಧವ್ಯ ಹೊಂದುವುದಕ್ಕಿಂತ ಭಿನ್ನವಾಗಿವೆ. ಸಹಜೀಕರಣ ಎಂದು ಯಾವುದನ್ನು ಕರೆಯುತ್ತೇವೆಯೋ ಅದರಿಂದ ದೊರೆಯುವಂಥದ್ದು ಪೌರತ್ವ. ಒಂದು ರಾಜ್ಯದ ರಾಜಕೀಯ ವಿಧೇಯತೆಯನ್ನು ಒಪ್ಪಿಕೊಳ್ಳುವುದು ನಾಗರಿಕತ್ವದ ಕರಾರು. ಆದರೆ ಬಾಂಧವ್ಯ ಬೆಳೆಸುವ ಹಿಂದಿನ ಕರಾರುಗಳು ಇದಕ್ಕಿಂತ ತೀರ ಭಿನ್ನ. ಮಾನವ ವಿಕಾಸದ ಒಂದು ಘಟ್ಟದಲ್ಲಿ ರಕ್ತಸಂಬಂಧದ ಐಕ್ಯವೇ ಆಪ್ತತ್ವ ಪೂರ್ವದ ಕರಾರುಗಳಾಗಿದ್ದುವು. ಬಂಧು ಬಳಗ ಎನ್ನುವುದು ಅನುವಂಶೀಯವಾಗಿ ಒಂದೇ ರಕ್ತಸಂಬಂಧಿಗಳೆಂದು ಭಾವಿಸಿದ ಒಂದು ಜನಸಮೂಹ. ವಾಸ್ತವ ಸಂಗತಿಯೆಂದರೆ, ಒಂದು ಗುಂಪು ತಮ್ಮ ರಕ್ತಸಂಬಂಧಿಯಲ್ಲದ ಒಬ್ಬ ಅಪರಿಚಿತನನ್ನು ತಮ್ಮ ಬಳಗದಲ್ಲಿ ಸೇರಿಸಿಕೊಂಡರಂತೆ. ಒಬ್ಬ ಅಪರಿಚಿತ ತನಗಿಂತ ಭಿನ್ನವಾದ ಒಂದೇ ಸಮುದಾಯದಲ್ಲಿ ಏಳು

ತಲೆಮಾರುಗಳವರೆಗೂ ಮದುವೆಯಾದರೆ ಅವನು ಆ ಸಮುದಾಯದ ಒಬ್ಬ ಸದಸ್ಯನಾದಂತೆ ಎನ್ನುವ ವಿಸ್ಮಯಕಾರಿ ಕಾಯಿದೆ ಇತ್ತಂತೆ. ಇದು ಕಥೆಯಾಗಿರಬಹುದು. ಆದರೆ ಇಲ್ಲಿ ರಕ್ತದ ಏಕತೆ ಬಂಧುತ್ವಪೂರ್ವದ ನಿಯಮವಾಗಿರುವುದು ಮುಖ್ಯ. ಮಾನವ ವಿಕಾಸದ ತರುವಾಯದ ಘಟ್ಟದಲ್ಲಿ ಒಂದೇ ರಕ್ತದವರಾಗಿರುವುದರ ಬದಲು, ಒಂದೇ ಧರ್ಮದವರಾಗಿರುವುದು ಬಾಂಧವ್ಯ ಪೂರ್ವದ ನಿಯಮವಾಗಿ ರೂಢಿಯಲ್ಲಿ ಬಂದಿತು. ಈ ವಿಷಯವಾಗಿ ಪ್ರೊ. ರಾಬರ್ಟ್ಸನ್ ಸ್ಮಿತ್[೧] ಅವರು ಹೇಳುವ ಮಾತು ಮಹತ್ವದ್ದಾಗಿದೆ, ಗಮನಾರ್ಹವಾಗಿದೆ: "ಒಂದು ಸಮುದಾಯದ ಸಾಮಾಜಿಕ ಗುಂಪಿನಲ್ಲಿ ಕೇವಲ ಮಾನವರಷ್ಟೇ ಇರಲಿಲ್ಲ; ಮಾನವರ ಜೊತೆ ದೇವಾನುದೇವತೆಗಳೂ ಸೇರಿಕೊಂಡರು. ಕಾರಣ ಒಬ್ಬ ಅಪರಿಚಿತ ಯಾವುದಾದರೂ ಸಮುದಾಯವನ್ನು ಸೇರಿಕೊಳ್ಳಬೇಕು. ಬಂಧುತ್ವ ಬೆಳೆಸಬೇಕು ಎಂದಾದರೆ ಅವನು ಅವರ ದೇವಾನುದೇವತೆಗಳನ್ನೂ ಒಪ್ಪಿಕೊಳ್ಳಬೇಕಾಗುತ್ತಿತ್ತು. ಹಳೆಯ ಒಡಂಬಡಿಕೆ–ಓಲ್ಡ್ ಟೆಸ್ಟಮೆಂಟ್ ದ ನಾವೊಮಿ ಎನ್ನುವವ ರುತ್‌ನಿಗೆ ಹೇಳುವ "ನಿನ್ನ ತಂಗಿ ದೇವಾನುದೇವತೆಗಳ ತನ್ನ ಜನತೆಯ ಕಡೆಗೆ ಮರಳಿ ಹೋದಳು' ಎಂಬ ಮಾತಿಗೆ, ರುತ್, 'ನಿನ್ನ ಜನವೇ ನನ್ನ ಜನ ಮತ್ತು ನಿನ್ನ ದೇವರು ನನ್ನ ದೇವರು' ಎಂದು ಉತ್ತರಿಸುತ್ತಾನೆ; ಅಥವಾ ಚೆಮೋಷನ ಪುತ್ರಪುತ್ರಿಯರಿಗೆ (ಮೊಬೈಟ್ಸ್) ಕೊಡುವ ಕರೆಯಾಗಲಿ ಇವೆಲ್ಲ ಒಂದು ಸಮುದಾಯದ ಬಾಂಧವ್ಯದ ನಿರ್ಬಂಧ, ಆ ಸಮುದಾಯದ ಒಂದು ಸಾರ್ವತ್ರಿಕ ಧರ್ಮಕ್ಕೆ ತೋರುವ ನಿಷ್ಠೆಯ ಫಲ ಎನ್ನುವುದಕ್ಕೆ ಸಾಕ್ಷಿಗಳಾಗಿವೆ. ಸಾರ್ವತ್ರಿಕ ಧರ್ಮವಿಲ್ಲದ ಹೊರತು ಬಾಂಧವ್ಯ ಸಾಧ್ಯವಾಗುವುದಿಲ್ಲ. ಮತಾಂತರದ ಪರವಾಗಿರುವ ವಾದದಲ್ಲಿ ತಪ್ಪು ಹುಡುಕಲು ಜನ ಕಾಯುತ್ತಿರುವಾಗ, ಯಾವುದೇ ವಿಧವಾದ ತಪ್ಪು ತಿಳುವಳಿಕೆ ಹುಟ್ಟಿಸಲು ಅಂಥವರಿಗೆ ಅದರ ಅವಕಾಶವಿಲ್ಲದಂತೆ ಮಾಡುವುದೇ ಮೇಲು. ಧರ್ಮ, ಯಾವ ರೀತಿಯಿಂದ ಬಾಂಧವ್ಯದ ಬಂಧವನ್ನು ನಯಗೊಳಿಸುತ್ತದೆ ಎನ್ನುವುದನ್ನು ವಿವರಿಸುವುದು ಒಳ್ಳೆಯದೆಂದು ತೋರುತ್ತದೆ. ಉತ್ತರ ಸರಳ. ಅದು, ಸಹಭೋಜನ–ಪಾನ–ದ ಮೂಲಕ ಈ ಕಾರ್ಯ ಪೂರೈಸುತ್ತದೆ. ಹಿಂದೂಗಳು ತಮ್ಮ ಜಾತಿ ಪದ್ಧತಿಯನ್ನು ಸಮರ್ಥಿಸಿಕೊಳ್ಳಲು ಸಹಪಂಕ್ತಿಭೋಜನದ ವಾದವನ್ನು ಅಪಹಾಸ್ಯಗೈಯ್ಯುತ್ತಾರೆ. ಸಹಭೋಜನದಲ್ಲಿ ಏನಿದೆ? ಎಂದು ಅವರ ಪ್ರಶ್ನೆ. ಸಾಮಾಜಿಕ ದೃಷ್ಟಿಯಿಂದ ಅದರಲ್ಲಿ ಎಲ್ಲವೂ ಅಡಕಗೊಂಡಿದೆ ಎನ್ನುವುದೇ ಅವರ ಪ್ರಶ್ನೆಗೆ ಉತ್ತರ. ಬಾಂಧವ್ಯ ಎನ್ನುವುದು ಭ್ರಾತೃತ್ವದ ಒಂದು ಸಾಮಾಜಿಕ ಒಪ್ಪಂದ. ಇದನ್ನು ಎಲ್ಲರಿಗೂ ನಿರ್ಬಂಧಗೊಳಿಸುವ ಮೊದಲು ಇತರ ಒಪ್ಪಂದಗಳ ಹಾಗೆಯೇ ಇದಕ್ಕೂ ರುಜು ಹಾಕಿಸಿ ಮೊಹರ್ ಬಂದ ಮಾಡಿಕೊಡುವುದು ಅಗತ್ಯ. ಅಂಕಿತ ಹಾಕುವುದು, ಮೊಹರ್ ಬಂದ ಮಾಡುವುದು ಇತ್ಯಾದಿ ಕ್ರಮಗಳು, ಧರ್ಮ, ವಿಧಿಸಿದ ಕ್ರಮದಂತೆ ಇರುತ್ತವೆ. ಬಲಿ ಕಾಣಿಕೆಯ ಭೋಜನದಲ್ಲಿ ಎಲ್ಲರೂ ಪಾಲುಗೊಳ್ಳುವುದೇ ಆ ಕ್ರಮ. ಪ್ರೊ. ಸ್ಮಿತ್ ಹೇಳುವಂತೆ:[೨]

"ಸಹಭೋಜನ ಮತ್ತು ಸಹಪಾನ ಏರ್ಪಟ್ಟಾಗ ಅದರಿಂದ ರೂಪುಗೊಳ್ಳುವ ಭ್ರಾತೃತ್ವದ ಅಂತಿಮ ಸ್ವರೂಪ ಎಂಥದು? ನಮ್ಮ ಜಟಿಲ ಸಮಾಜದಲ್ಲಿ ಭ್ರಾತೃತ್ವ ಅನೇಕ ಬಗೆಯಾಗಿದೆ; ಅನೇಕ ದರ್ಜೆಯದಾಗಿದೆ; ಕೆಲವು ಉದ್ದೇಶಗಳಿಗಾಗಿ ಕರ್ತವ್ಯ ಗೌರವಗಳ ದೃಷ್ಟಿಯಿಂದ ಜನ ಒಂದುಗೂಡಬಹುದು; ಆ ಬಳಿಕ ಇತರ ಎಲ್ಲ ಸಂದರ್ಭಗಳಲ್ಲಿ ಮತ್ತೆ ಬೇರೆ ಬೇರೆ ಆಗಬಹುದು. ಪ್ರಾಚೀನ ಕಾಲದಲ್ಲಿ ಸಹ ಕೆಲವು

---

೧. *ದಿ ರಿಲಿಜನ್ ಆಫ್ ದಿ ಸೆಮೈಟ್ಸ್* (ಉಪನ್ಯಾಸ ೨). ಇದರಲ್ಲಿ ಪ್ರಾಚೀನ ಮತ್ತು ಆಧುನಿಕ ಸಮಾಜದ ವ್ಯತ್ಯಾಸಗಳ ಚರ್ಚೆಯಿದೆ; ಸಮಾಜ ಮತ್ತು ಸಮುದಾಯದ ಭಿನ್ನತೆಗಳನ್ನು ಸ್ಪಷ್ಟಪಡಿಸಲಾಗಿದೆ.

೨. *ದಿ ರಿಲಿಜನ್ ಆಫ್ ಸೆಮೈಟ್ಸ್*, ಪು. ೨೭೦–೭೧ ಮತ್ತು ಪು. ೨೭೧–೨೭೨.

ಸಂಸ್ಕಾರಗಳಿಗಾಗಿ ವಿವಿಧ ಬಗೆಯಲ್ಲಿ ಜನ ಸಹಭೋಜನ ಮಾಡುತ್ತಿದ್ದ ಉದಾಹರಣೆಗಳಿವೆ. ಓಲ್ಡ್ ಟೆಸ್ಟ್‌ಮೆಂಟ್‌ದಲ್ಲಿ ಇಂಥದನ್ನು ಕಾಣಬಹುದು. ಅಲ್ಲಿ ಪ್ರತಿಯೊಂದೂ ಕಡ್ಡಾಯ ಮತ್ತು ಅನುಲ್ಲಂಘನೀಯ. ನೀತಿಶಾಸ್ತ್ರದ ಭಾಷೆಯಲ್ಲಿ ಅದನ್ನು ಮಾಡಲೇಬೇಕಾದ ಒಂದು ಕರ್ತವ್ಯ ಎಂದು ಕರೆಯಬಹುದು. ಅತ್ಯಂತ ಪ್ರಾದಿಮ ಸಮಾಜದಲ್ಲಿ ನಿರ್ದಿಷ್ಟ ಮತ್ತು ಮೀರಲು ಬಾರದ ಒಂದೇ ಒಂದು ವಿಧದ ಭ್ರಾತೃತ್ವವಿದೆ. ಪ್ರಾದಿಮ ಮನುಷ್ಯನಿಗೆ ಇತರ ಜನಸಮೂಹದಲ್ಲಿ ಎರಡೇ ವರ್ಗಗಳು : ತನ್ನ ಜೀವನ–ಯಾರಿಗಾಗಿ ಪವಿತ್ರ–ಮುಡಿಪಾಗಿದೆ, ಅವರದು ಒಂದು; ಯಾರಿಗಾಗಿ ತನ್ನ ಜೀವನ ಮುಡಿಪಾಗಿಲ್ಲ ಅವರದು ಮತ್ತೊಂದು. ಮೊದಲನೆಯ ವರ್ಗದವರು ತನ್ನವರು; ಎರಡನೆಯವರು ತನಗೆ ಅಪರಿಚಿತ ಮತ್ತು ಸಂಭವನೀಯ ವೈರಿಗಳು. ಎಲ್ಲಿಯವರೆಗೆ ಇಂಥವರು ಎಲ್ಲರಿಗೂ ಪ್ರತಿಯೊಬ್ಬ ವ್ಯಕ್ತಿಯ ಜೀವನ ಪವಿತ್ರ ಎನ್ನುವ ಭಾವನೆಯಿರುವ ಕಕ್ಷೆಯಲ್ಲಿ ಬರುವುದಿಲ್ಲವೋ ಅಲ್ಲಿಯವರೆಗೆ ಅಂಥವರ ಜೊತೆ ಯಾವುದೇ ವಿಧದ ಸಂಬಂಧ ಸ್ಥಾಪನೆಗಳನ್ನು ಕುರಿತು ಆಲೋಚಿಸುವುದು ಕೂಡ ಅಸಂಗತ."

ಕೇವಲ ಪೌರತ್ವದಿಂದ ಅಸ್ಪೃಶ್ಯರ ಪ್ರತ್ಯೇಕತೆ ಕಷ್ಟ ನಷ್ಟಗಳ ನಿವಾರಣೆ ಸಾಧ್ಯವಿಲ್ಲ ಎಂದಾದರೆ, ಬಾಂಧವ್ಯ ಒಂದೇ ಇದಕ್ಕೆ ಚಿಕಿತ್ಸೆ ಎನ್ನುವುದಾದರೆ, ಅವರಿಗೆ ತಾವು ರಕ್ತಸಂಬಂಧ ಬಯಸುವ ಸಮುದಾಯದ ಧರ್ಮವನ್ನು ಸ್ವೀಕರಿಸುವುದರ ಹೊರತು ಬೇರೆ ದಾರಿಯೇ ಇಲ್ಲ.

ಮತಾಂತರ ಅಸ್ಪೃಶ್ಯರ ಪ್ರತ್ಯೇಕತೆಯ ಸಮಸ್ಯೆಯನ್ನು ಹೇಗೆ ಅಂತ್ಯಗೊಳಿಸಬಲ್ಲದು ಎನ್ನುವುದನ್ನು ಎತ್ತಿ ತೋರಿಸುವುದಕ್ಕಾಗಿ ಇಷ್ಟೆಲ್ಲ ವಾದ ಮಂಡನೆಯಾಯಿತು. ಆಲೋಚಿಸಬೇಕಾದ ಇನ್ನೆರಡು ಪ್ರಶ್ನೆಗಳಿವೆ. ಒಂದು; ಮತಾಂತರ ಅವರ ಕೀಳರಿಮೆಯನ್ನು ತೊಡೆದುಹಾಕುತ್ತದೆಯೇ? ಇದನ್ನು ಸಿದ್ಧಾಂತಗೊಳಿಸಿ ಹೇಳಲಾಗದು. ಆದರೆ ಇದಕ್ಕೆ ಸಕಾರಾತ್ಮಕವಾಗಿ ಉತ್ತರಿಸಲು ಯಾವ ಸಂದೇಹವೂ ಇಲ್ಲ. ಅಸ್ಪೃಶ್ಯರಲ್ಲಿರುವ ಕೀಳರಿಮೆ, ಅವರ ಪ್ರತ್ಯೇಕತೆ, ಅವರನ್ನು ಕುರಿತ ಪಕ್ಷಪಾತ, ಸ್ನೇಹರಹಿತ ಮನೋಭಾವ ಇತ್ಯಾದಿ ಸಾಮಾಜಿಕ ಪರಿಸರದ ಪರಿಣಾಮ ಇದರಿಂದಾಗಿಯೇ ಅವರಲ್ಲಿ ಒಂದು ಅಸಹಾಯಕತೆ ಹುಟ್ಟಿಕೊಂಡು ಕೀಳರಿಮೆ ಮನೆಮಾಡಿ ಅವರ ಆತ್ಮಸ್ಥೈರ್ಯದ ಶಕ್ತಿಯನ್ನು ಮೆಟ್ಟಿಹಾಕಿದೆ.

ಧರ್ಮ, ಅಸ್ಪೃಶ್ಯರ ಈ ಮನೋಭಾವವನ್ನು ಬದಲು ಮಾಡಬಹುದೇ? ಒಂದು ವೇಳೆ ಅದು ಯೋಗ್ಯ ಮಾದರಿಯ ಧರ್ಮವಾಗಿದ್ದರೆ ಅದರಿಂದ ಅವರಿಗೆ ಯಶಸ್ವಿ ಚಿಕಿತ್ಸೆ ದೊರೆಯುತ್ತದೆ ಎನ್ನುವುದು ಮನೋವಿಜ್ಞಾನಿಗಳ ಅಭಿಪ್ರಾಯ. ಆ ಧರ್ಮ, ಅವನನ್ನು ಒಬ್ಬ ಕೀಳು ದರ್ಜೆಯ, ಹೀನ ಮಾನಗೇಡಿ ಬಹಿಷ್ಕೃತ ವ್ಯಕ್ತಿಯೆಂದು ಕಾಣದೆ ಅವನು ಕೂಡ ತಮ್ಮಂತೆ ಒಬ್ಬ ಮನುಷ್ಯ ಎಂದು ಪರಿಗಣಿಸಬೇಕು; ಆ ಧರ್ಮ ಅವನೂ ಇತರರಿಗೆ ಸಮಾನ ಎನ್ನುವ ವಾತಾವರಣ, ಭರವಸೆಯನ್ನು ಮೂಡಿಸಬೇಕು. ಆಗ ಅಂಥ ಧರ್ಮಕ್ಕೆ ಮತಾಂತರ ಹೊಂದುವುದರಿಂದ ಶತಶತಮಾನಗಳಿಂದ ಅಸ್ಪೃಶ್ಯರಲ್ಲಿ ಬೇರುಬಿಟ್ಟ ಕೀಳರಿಮೆ ತೊಡೆದು ಹೋಗದಿರಲು ಯಾವ ಕಾರಣವೂ ಇಲ್ಲ. ಪ್ರೊ. ಎಲ್‌ವುಡ್ ವಿವರಿಸುವಂತೆ :[೧]

"ಧರ್ಮ ಪ್ರಾಥಮಿಕವಾಗಿ ಮಾನವನ ವಿಚಾರಗಳಿಗಿಂತ ಅವನ ಇಚ್ಛಾಶಕ್ತಿ ಮತ್ತು ಭಾವನೆಗಳನ್ನು ಸಾರ್ವತ್ರಿಕಗೊಳಿಸುವ ಮೌಲ್ಯಮಾಪಕ ಧೋರಣೆ ಹೊಂದಿದೆ. ಹೀಗಾಗಿ ಅದು ಪ್ರಪಂಚದಲ್ಲಿ ಮನುಷ್ಯರನ್ನು ಅವರ ಇಚ್ಛಾಶಕ್ತಿ ಮತ್ತು ಭಾವನೆಗಳ ಪಾತಳಿಯಲ್ಲಿ ಸಮರಸಗೊಳಿಸುತ್ತದೆ. ಅದರ ಸಂಭಾವನೆಯೇ ನಿರಾಶಾವಾದ ಮತ್ತು ಹತಾಶೆಗಳು ಕಾಡು ಮಾನವನಿರಲಿ, ನಾಗರಿಕ ಮಾನವನಾಗಿರಲಿ ಎಲ್ಲರಿಗೂ

---

೧. *ದಿ ರಿಕನ್‌ಸ್ಟ್ರಕ್ಷನ್ ಆಫ್ ರಿಲಿಜನ್*, ಪು. ೪೦–೪೧.

ಜೀವನದ ಹೋರಾಟದಲ್ಲಿ ವಿಶ್ವಾಸ ತುಂಬುತ್ತದೆ; ಆಶೆಗಳನ್ನು ನೀಡುತ್ತದೆ. ಧರ್ಮ ವ್ಯಕ್ತಿಯ ಸತ್ವಯುತ ಅನಿಸಿಕೆಗಳನ್ನು ಬಿಗಿದಿಡುವುದರಿಂದ ಇದು ಸಾಧ್ಯವಾಗುತ್ತದೆ. ಮನೋವಿಜ್ಞಾನಿಗಳ ಪ್ರಕಾರ ಇದೊಂದು ಧಾರಣಾತ್ಮಕ ಪ್ರಕ್ರಿಯೆ. ಅದರಲ್ಲಿ ಜೀವನದ ಎಲ್ಲ ಅಧೋ ಕೇಂದ್ರಗಳನ್ನು ಎತ್ತಿ ಉದಾತ್ತ ಕೇಂದ್ರಗಳಲ್ಲಿ ಪ್ರತಿಷ್ಠಾಪಿಸಲಾಗುತ್ತದೆ. ಮೌಲ್ಯಗಳ ಸಾರ್ವತ್ರೀಕರಣ ಎನ್ನುವುದನ್ನು ಭೌತಿಕ ಮನೋಪರಿಭಾಷೆಯಲ್ಲಿ ಹೇಳುವುದಾದರೆ ಅಧೋನರಮಂಡಲಗಳು ತಮ್ಮ ಎಲ್ಲ ಶಕ್ತಿಗಳನ್ನು ಊರ್ಧ್ವ ನರಮಂಡಲಗಳಿಗೆ ತಂದು ಸುರಿಯುತ್ತವೆ. ಇದರಿಂದ ಅದರ ಆಂತರಿಕ ಪಾತಳಿಯಲ್ಲಿ ಜೀವನದ ಹೆಚ್ಚು ಹೆಚ್ಚು ಸತ್ವಪೂರ್ಣ ಸಾಮರ್ಥ್ಯಗಳನ್ನು ಸಮರಸಗೊಳಿಸುತ್ತದೆ. ಈ ರೀತಿಯಿಂದ, ಧರ್ಮ ಬದುಕಿನ ಬಿಕ್ಕಟ್ಟುಗಳನ್ನು ಎದುರಿಸಲು ಅಗತ್ಯವಾದ ಶಕ್ತಿಯ ಹೊಸ ಹಂತಗಳನ್ನು ತಟ್ಟುತ್ತದೆ. ಅದೇ ಸಮಯದಲ್ಲಿ ಅದು ವ್ಯಕ್ತಿಯ ಅಂತರಂಗ ಬಹಿರಂಗಗಳಲ್ಲಿ ಸಾಮರಸ್ಯ ಉಂಟುಮಾಡುತ್ತದೆ." ಮತಾಂತರ ಅಸ್ಪೃಶ್ಯರ ಸಾಮಾನ್ಯ ಸಾಮಾಜಿಕ ಸ್ಥಿತಿಯನ್ನು ಮೇಲೆತ್ತಬಹುದೇ? ಈ ಪ್ರಶ್ನೆಗೆ ಭಿನ್ನಾಭಿಪ್ರಾಯಗಳಿರುವುದು ಕಷ್ಟ.

ಮತ್ತೆ ಮತ್ತೆ ಉಲ್ಲೇಖಿಸಲಾಗುವ ಷೇಕ್ಸ್‌ಪಿಯರ್‌ನ 'ಹೆಸರಿನಲ್ಲೇನಿದೆ?' ಎನ್ನುವ ಮಾತು ಹೆಸರಿನ ಸಮಸ್ಯೆಯನ್ನು ಅಷ್ಟು ಸರಿಯಾಗಿ ಅರಿತುಕೊಂಡಿಲ್ಲ. ಗುಲಾಬಿಯನ್ನು ಬೇರೆ ಹೆಸರಿನಿಂದ ಕರೆದರೂ ಅದರ ಪರಿಮಳ ಭಿನ್ನವಾಗುವುದಿಲ್ಲ ಎನ್ನುವುದು ನಿಜ; ಅದರಿಂದ ಹೆಸರಿನಿಂದ ಯಾವ ಉದ್ದೇಶವೂ ಸಾಧಿಸುವುದಿಲ್ಲ ಎಂದು ಹೇಳಲು ಬಾರದು; ಒಂದು ವೇಳೆ ಜನ ಪ್ರತಿಯೊಂದು ಹೆಸರಿನ ವಸ್ತುವನ್ನೂ ಅದರ ಗುಣ ಲಕ್ಷಣಗಳ ಪರೀಕ್ಷೆಯ ಆಧಾರದ ಮೇಲೆ ಅದರ ಬಗ್ಗೆ ತಮ್ಮ ಅಭಿಪ್ರಾಯ, ಧೋರಣೆಗಳನ್ನು ರೂಪಿಸುತ್ತಾರೆ ಎನ್ನುವುದರ ಹಿನ್ನೆಲೆಯಲ್ಲಿ ಈ ಮಾತಿನ ವಿವೇಚನೆ ಅಗತ್ಯ. ದುರದೃಷ್ಟದಿಂದ 'ಹೆಸರುಗಳು' ಮಹತ್ವದ ಗುರಿ ಹೊಂದಿವೆ. ಸಾಮಾಜಿಕ ಅರ್ಥವ್ಯವಸ್ಥೆಯಲ್ಲಿ ಅವುಗಳ ಪಾತ್ರ ಹಿರಿದು. ಹೆಸರುಗಳೆಂದರೆ ಸಂಕೇತಗಳು. ಪ್ರತಿಯೊಂದು ಹೆಸರೂ ನಿರ್ದಿಷ್ಟ ವಸ್ತುವಿಗೆ ಸಂಬಂಧಿಸಿದ ವಿಚಾರ–ಕಲ್ಪನೆಗಳ ಸಾಹಚರ್ಯವನ್ನು ಪ್ರತಿನಿಧಿಸುತ್ತದೆ. ಅದೊಂದು ಹಣೆಪಟ್ಟಿ, ಆ ಪಟ್ಟಿಯಿಂದ ಜನ ಅದರ ಅರ್ಥ ಮಾಡಿಕೊಳ್ಳುತ್ತಾರೆ. ಅದರಿಂದಾಗಿ ಪ್ರತಿಯೊಂದು ವಿಷಯವನ್ನು ಸ್ವತಃ ಪರೀಕ್ಷಿಸುವ ಅದನ್ನು ಕುರಿತ ತಮ್ಮ ಧೋರಣೆ ಅಭಿಪ್ರಾಯಗಳನ್ನು ತೀರ್ಮಾನಿಸುವ, ಮತ್ತು ಅವುಗಳ ಸತ್ಯಾಸತ್ಯತೆಯನ್ನು ಮನಗಾಣುವ ಅವರ ಶ್ರಮ ತಪ್ಪುತ್ತದೆ. ಜನ ಹೆಸರಿನ ಮೂಲಕವೇ ವಿಷಯವನ್ನು ಗ್ರಹಿಸುತ್ತಾರೆ. ಈ ಕಾರಣದಿಂದಾಗಿಯೇ ಎಲ್ಲ ಜಾಹೀರಾತುದಾರರು ಒಂದು ಒಳ್ಳೆಯ ಹೆಸರು ಹುಡುಕಲು ಆಸಕ್ತರಾಗಿರುತ್ತಾರೆ. ಒಂದು ವೇಳೆ ಹೆಸರು ಆಕರ್ಷಕವಾಗಿರದಿದ್ದರೆ ಆ ವಸ್ತು ಹೆಚ್ಚು ಜನಪ್ರಿಯವಾಗಲಾರದು.

'ಅಸ್ಪೃಶ್ಯ' ಎನ್ನುವುದು ಒಂದು ಕೆಟ್ಟ ಹೆಸರು. ಅದರಲ್ಲಿ ನಿಷೇಧ, ತಿರಸ್ಕಾರ ಮತ್ತು ದುರ್ವಾಸನೆಗಳಿವೆ. 'ಅಸ್ಪೃಶ್ಯ' ಎಂದ ಕೂಡಲೇ ಅವನನ್ನು ಕುರಿತ ಒಬ್ಬ ಹಿಂದೂ ವ್ಯಕ್ತಿಯ ಧೋರಣೆ ಖಚಿತಗೊಂಡಿರುತ್ತದೆ. 'ಅಸ್ಪೃಶ್ಯ' ಹೆಸರಿನಲ್ಲಿ ಇಡಿಕಿರಿದ ದುರ್ವಾಸನೆಯಿಂದಲೇ ಅವನ ಧೋರಣೆ ನಿಶ್ಚಿತವಾಗಿರುತ್ತದೆ. ಒಬ್ಬ ಅಸ್ಪೃಶ್ಯ ಎಷ್ಟೇ ಸಮರ್ಥನಾಗಿದ್ದರೂ ಅವನ ವ್ಯಕ್ತಿಗತ ಸಾಮರ್ಥ್ಯ ಕುರಿತು ವಿವೇಚಿಸಲು ಕೂಡ ಅವರಿಗೆ ಮನಸ್ಸಿಲ್ಲ. ಎಲ್ಲ ಅಸ್ಪೃಶ್ಯರೂ ಇದನ್ನು ಅರಿತಿದ್ದಾರೆ. 'ಅಸ್ಪೃಶ್ಯ' ರನ್ನು ಬೇರೆ ಹೆಸರಿನಿಂದ ಕರೆಯುವ ಒಂದು ಪ್ರಯತ್ನ ಕೂಡ ನಡೆದಿದೆ. ಚಮ್ಮಾರರು ತಮ್ಮನ್ನು 'ಕಾವಿದರು' ಅಥವಾ 'ಜಾತವರು' ಎಂದು ಕರೆದುಕೊಳ್ಳುತ್ತಾರೆ. ಡೊಂಬರು ತಮ್ಮನ್ನು 'ಶಿಲ್ಪಕಾರರು' ಎಂದು ಕರೆದುಕೊಳ್ಳುತ್ತಾರೆ. 'ಪರಯಾ'ಗಳು ತಮ್ಮನ್ನು 'ಆದಿ–ದ್ರಾವಿಡ'ರೆಂದು, ಮಾದಿಗರು ತಮ್ಮನ್ನು 'ಅರುಂಧತ್ಯ'ರೆಂದು, ಮೆಹರರು ತಮ್ಮನ್ನು 'ಚೋಖಮೇಳ' ಅಥವಾ 'ಸೋಮವಂಶಿ' ಎಂದು 'ಭಂಗಿ'ಗಳು ತಮ್ಮನ್ನು 'ವಾಲ್ಮೀಕಿ'ಗಳೆಂದು ಕರೆದುಕೊಳ್ಳುತ್ತಾರೆ. ಇವರೆಲ್ಲರೂ

ತಮ್ಮ ಬಿಡಾರಗಳಿಂದ ದೂರವಾದಾಗ ತಮ್ಮನ್ನು ಕ್ರಿಶ್ಚಿಯನ್ ಎಂದು ಕರೆದುಕೊಳ್ಳುತ್ತಾರೆ. ತಾವು ಅಸ್ಪೃಶ್ಯರೆಂದು ಹೇಳಿದ ಕೂಡಲೇ ಹಿಂದೂಗಳ ಕೋಪ, ಪೂರ್ವಗ್ರಹಗಳಿಗೆ ಅವರು ತುತ್ತಾಗುತ್ತಾರೆ. ಆದ್ದರಿಂದ ಅವರು ಬೇರೆ ಹೆಸರಿನಿಂದ ತಮ್ಮನ್ನು ಕರೆದುಕೊಳ್ಳುತ್ತಾರೆ. ಆಗ ಅವರು "ವರ್ಣರಹಿತ' ರಕ್ಷಣೆಯ ಪ್ರಕ್ರಿಯೆಗೆ ಒಳಗಾಗುತ್ತಾರೆ.

ಈ ಬಗೆಯ ವರ್ಣರಾಹಿತ್ಯ ತನ್ನ ಗುರಿ ಸಾಧನೆಯಲ್ಲಿ ಪೂರ್ಣ ಸೋಲುವುದು ಅಪರೂಪವಲ್ಲ. ಏಕೆಂದರೆ 'ಹಿಂದೂ' ಆಗಿರುವುದು ಹಿಂದೂಗಳ ದೃಷ್ಟಿಯಲ್ಲಿ ಒಂದು ಅಂತಿಮ ಸಾಮಾಜಿಕ ವರ್ಗವಲ್ಲ. ಸಾಮಾಜಿಕ ಅಂತಿಮ ವರ್ಗ ಜಾತಿ; ಒಂದು ಉಪಜಾತಿಯಿದ್ದರೆ ಉಪಜಾತಿ. ಹಿಂದೂಗಳು ಭೆಟ್ಟಿಯಾದಾಗ ಕೇಳುವ ನಿಶ್ಚಿತ ಪ್ರಶ್ನೆ 'ನೀವು ಯಾರ ಪೈಕಿ ತಿಳಿಸುತ್ತೀರಾ?' ಎನ್ನುವುದು. 'ನಾನು ಹಿಂದೂ' ಎನ್ನುವುದು ಇದಕ್ಕೆ ತೃಪ್ತಿಕರ ಉತ್ತರವಲ್ಲ. ಅದನ್ನು ಅಂತಿಮ ಉತ್ತರ ಎಂದು ಖಂಡಿತ ಒಪ್ಪಿಕೊಳ್ಳಲಾರರು. ವಿಚಾರಣೆ ಹಾಗೇ ಮುಂದುವರೆಯುವುದು ನಿಶ್ಚಿತ. 'ಹಿಂದೂ' ಎನ್ನುವ ಉತ್ತರದ ಬೆನ್ನ ಹಿಂದೆಯೇ "ನಿಮ್ಮ ಜಾತಿ ಯಾವುದು?" ಎನ್ನುವ ಪ್ರಶ್ನೆ. ಮತ್ತೆ ಅದರ ಉತ್ತರದ ಬೆನ್ನ ಹಿಂದೆಯೇ ಬರುವ ಪ್ರಶ್ನೆ. 'ಯಾವ ಉಪ ಜಾತಿ?' ಒಂದು ಜಾತಿ ಅಥವಾ ಉಪಜಾತಿಯನ್ನು ಸೂಚಿಸುವವರೆಗೂ ಈ ಪ್ರಶ್ನಾವಳಿ ಮುಂದುವರೆದು, ಈ ಬಳಿಕ ಕೊನೆಗೊಳ್ಳುತ್ತದೆ.

ವರ್ಣರಾಹಿತ್ಯ ರಕ್ಷಣೆ ನೀಡುವ ಹೊಸ ಹೆಸರನ್ನು ಧರಿಸುವ ಅಸ್ಪೃಶ್ಯನಿಗೆ ಹೊಸ ಹೆಸರಿನಿಂದಲೂ ಸಹಾಯ ದೊರೆಯುವುದಿಲ್ಲ ಎನ್ನುವ ಅನುಭವವಾಗುತ್ತದೆ. ಒಂದೇ ಸಮನೆ ಅವನ ಮೇಲೆ ಎರಗುವ ಪ್ರಶ್ನೆಗಳ ಸುರಿಮಳೆಯಿಂದ ನೆಲಕ್ಕೆ ಕುಸಿದು ಕೊನೆಗೆ ತಾನು ಅಸ್ಪೃಶ್ಯ ಎಂದು ಬಹಿರಂಗಗೊಳಿಸಬೇಕಾಗುತ್ತದೆ. ಸ್ವತಃ ತಾನೇ ಈ ವಿಷಯ ಹೇಳುವುದಕ್ಕಿಂತ ಈ ರೀತಿ ಮೊದಲು ಮುಚ್ಚಿಟ್ಟು ವಿಚಾರಣೆಯಿಂದಾಗಿ ಬಹಿರಂಗಗೊಳಿಸುವ ವ್ಯಕ್ತಿ ಹೆಚ್ಚು ಕೋಪಕ್ಕೆ ಗುರಿಯಾಗಬೇಕಾಗುತ್ತದೆ.

ಈ ಚರ್ಚೆಯಿಂದ ಎರಡು ವಿಷಯಗಳು ಸ್ಪಷ್ಟ. ಮೊದಲನೆಯದು : ಅಸ್ಪೃಶ್ಯರ ಕೀಳು ಸ್ಥಾನಮಾನದಿಂದ ಖಚಿತವಾಗಿ ಆ ಹೆಸರೇ ದುರ್ವಾಸನೆಯಿಂದ ಕೂಡಿರುವುದು. ಹೆಸರು ಬದಲಾಗದ ಹೊರತು ಅವರ ಸಾಮಾಜಿಕ ಅಂತಸ್ತು ಮೇಲೇರುವ ಅಸಾಧ್ಯತೆ. ಮತ್ತೊಂದು ಹಿಂದೂ ಧರ್ಮದೊಳಗೇ ಯಾವುದಾದರೂ ಹೆಸರಿನ ಬದಲಾವಣೆ– ಅದರಿಂದಲೂ ಅದು ಸಾಧ್ಯವಾಗುವುದಿಲ್ಲ. ಅಂಥದೇನಾದರೂ ಹೆಸರು ಹೊತ್ತು ಬಂದರೆ, ಹಿಂದೂ ಆಗಿರುವವನು ಈ ಹೆಸರನ್ನು ಪರಿಚ್ಛೇದಿಸಿ, ಅವನು ಅಸ್ಪೃಶ್ಯ ಎಂದು ಹೇಳಿ ತಾನೇ ಅವನಿಗೆ ಆ ಬಿರುದು ಕೊಡುವಲ್ಲಿ ಹಿಂದೆ ಬೀಳಲಾರ.

ಹೆಸರಿಗೆ ಮಹತ್ವವಿದೆ; ಬಹಳ ಮಹತ್ವವಿದೆ. ಏಕೆಂದರೆ ಹೆಸರಿನ ಬದಲಾವಣೆ ಅಸ್ಪೃಶ್ಯರ ಅಂತಸ್ತಿನಲ್ಲಿ ಕ್ರಾಂತಿಯುಂಟು ಮಾಡಬಹುದು. ಆದರೆ ಆ ಹೆಸರು ಹಿಂದೂ ಧರ್ಮದ ಹೊರಗಿರುವ ಸಮುದಾಯವಾಗಿರಬೇಕು ಮತ್ತು ಅದರ ವಿನಾಶ, ಅವಮಾನಗಳು, ಹಿಂದೂ ಧರ್ಮಶಕ್ತಿಗೆ ಮೀರಿರಬೇಕು. ಅಸ್ಪೃಶ್ಯರು ಮತಾಂತರಗೊಂಡಾಗ ಮಾತ್ರ ಅಂಥ ಹೆಸರು ಅವರ ಆಸ್ತಿಯಾಗಬಲ್ಲುದು. ಹಿಂದೂ ಧರ್ಮದ ಕಕ್ಷೆಯ ಒಳಗೇ ಆಗುವ ಪರಿವರ್ತನೆ ಒಂದು ಒಳಸಂಚಿನ ಪರಿವರ್ತನೆ; ಅದರಿಂದ ಯಾವ ಪ್ರಯೋಜನವೂ ಇಲ್ಲ.

ಪರಿವರ್ತನೆಯನ್ನು ಕುರಿತ ಈ ಚರ್ಚೆ ಗಾಳಿಮಾತೆಂದು ತೋರಬಹುದು. ಹಾಗೆ ತೋರುವುದು ಸಹಜ. ಅಸ್ಪೃಶ್ಯರು ಪರಿವರ್ತನೆಗೊಳ್ಳುವ ಧರ್ಮದ ಆಯ್ಕೆ ಯಾವುದು ಎನ್ನುವುದು ತಿಳಿಯುವವರೆಗೆ ಇದಕ್ಕೆ ಅರ್ಥ ಬರುವುದಿಲ್ಲ. ಧರ್ಮಾಂತರದಿಂದ ಯಾವ ಪ್ರಯೋಜನಗಳು ಹರಿದುಬರುತ್ತವೆ ಎನ್ನುವುದು

ಆ ಧರ್ಮದ ಅನುಯಾಯಿಗಳ ಸಾಮಾಜಿಕ ಸ್ಥಾನಮಾನಗಳನ್ನು ಅವಲಂಬಿಸಿದೆ. ಒಂದು ಧರ್ಮ ಅವರಿಗೆ ಎಲ್ಲ ಮೂರೂ ಲಾಭಗಳನ್ನು ಕೊಡಮಾಡಬಹುದು; ಮತ್ತೊಂದು ಎರಡೇ; ಮೂರನೆಯದು ಕೇವಲ ಮತಾಂತರದ ಪ್ರಯೋಜನ ಮಾತ್ರ ಕೊಡಬಹುದು.

ಈ ಅಧ್ಯಾಯದ ಉದ್ದೇಶ, ಅಸ್ಪೃಶ್ಯರು ಯಾವ ಧರ್ಮವನ್ನು ಆಯ್ದುಕೊಳ್ಳಬೇಕು ಎನ್ನುವುದಲ್ಲ. ಮತಾಂತರ ಅಸ್ಪೃಶ್ಯತೆಯ ಸಮಸ್ಯೆಯನ್ನು ಪರಿಹರಿಸಲು ಸಾಧ್ಯವೇ ಎನ್ನುವುದು ಈ ಅಧ್ಯಾಯದ ಉದ್ದೇಶ. ಆ ಪ್ರಶ್ನೆಗೆ ಸ್ಪಷ್ಟ ಉತ್ತರ 'ಅದು ಸಾಧ್ಯ' ಎಂದು.

ಧರ್ಮವನ್ನು ಕುರಿತಾದ ಸಾಮಾನ್ಯ ದೃಷ್ಟಿಕೋನಕ್ಕಿಂತ ಭಿನ್ನವಾದ ದೃಷ್ಟಿಕೋನದಲ್ಲಿ ಈ ವಾದದ ಶಕ್ತಿ ಇದೆ. ಸಾಮಾನ್ಯ ದೃಷ್ಟಿಕೋನದಲ್ಲಿ ಧರ್ಮ, ದೇವರು ಮತ್ತು ಮನುಷ್ಯನ ಸಂಬಂಧಕ್ಕೆ ಮತ್ತು ಈ ಸಂಬಂಧ ಒಳಗೊಳ್ಳುವ ಎಲ್ಲ ಅರ್ಥಗಳ ಬಗ್ಗೆ ಆಸ್ಥೆ ವಹಿಸುತ್ತದೆ. ಈ ಭಿನ್ನ ದೃಷ್ಟಿಕೋನದ ಪ್ರಕಾರ, ಧರ್ಮ ಇರುವುದು ಆತ್ಮಗಳ ಉಳಿವಿಗಾಗಿ ಅಲ್ಲ; ಮಾನವ ಕಲ್ಯಾಣಕ್ಕಾಗಿ, ಸಮಾಜದ ಸಂರಕ್ಷಣೆಗಾಗಿ. ಮೊದಲನೆಯ ದೃಷ್ಟಿಕೋನ ಇಟ್ಟುಕೊಂಡವರಿಗೆ ಮತಾಂತರ ಅಸ್ಪೃಶ್ಯತೆಯ ಸಮಸ್ಯೆಯನ್ನು ಹೇಗೆ ಪರಿಹರಿಸಬಲ್ಲುದು ಎಂದು ತಿಳಿದುಕೊಳ್ಳುವುದು ಕಷ್ಟವಾಗುತ್ತದೆ. ಈ ಅಧ್ಯಾಯದಲ್ಲಿ ವಿವರಿಸಿದ ಮತಾಂತರ ಧೋರಣೆಯನ್ನು ಒಪ್ಪಿಕೊಳ್ಳುವವರಿಗೆ ಈ ಅಭಿಪ್ರಾಯದ ಔಚಿತ್ಯ ಒಪ್ಪಿಕೊಳ್ಳುವಲ್ಲಿ ಯಾವ ಆತಂಕವೂ ಇರಲಾರದು.

* * * *

## ಅಧ್ಯಾಯ ೨೮

# ಜಾತಿ ಮತ್ತು ಮತಾಂತರ*

ಹಿಂದೂ ಸಮುದಾಯದಲ್ಲಿ ಕಂಡು ಬರುವ ಅಸ್ವಸ್ಥತೆಗೆ, ತಳಮಳಕ್ಕೆ, ಸ್ವಸಂರಕ್ಷಣೆಯ ಪ್ರವೃತ್ತಿಯೇ ಹೊಣೆ. ಒಂದು ಕಾಲದಲ್ಲಿ ಆ ಸಮಾಜದ ಉತ್ತಮರೆನಿಸಿಕೊಂಡವರಿಗೆ ಅದರ ಸಂರಕ್ಷಣೆಯ ಬಗ್ಗೆ ಭಯವಿರಲಿಲ್ಲ. ಅವರ ವಾದವೇನೆಂದರೆ : ಹಿಂದೂ ಸಮುದಾಯ ಅನೇಕ ಅತ್ಯಂತ ಪ್ರಾಚೀನ ಸಮುದಾಯಗಳಲ್ಲಿ ಒಂದು; ಅದು ಅನೇಕ ವಿರೋಧೀಶಕ್ತಿಗಳನ್ನು ಎದುರಿಸುತ್ತಲೇ ಬಂದಿದೆ; ಕಾರಣ ಅದರ ಸಂಸ್ಕೃತಿ, ನಾಗರಿಕತೆ ಮತ್ತು ಸತ್ವದಲ್ಲಿ ತನ್ನದೇ ಒಂದು ಸ್ಥಳೀಯ ಶಕ್ತಿ ಇರಲೇಬೇಕು. ಆದ್ದರಿಂದಲೇ ಅದು ಸ್ಥಿರವಾಗಿ ಉಳಿದುಬಂದಿದೆ. ಈ ಕಾರಣಗಳಿಂದ ತಮ್ಮ ಸಮುದಾಯ ಸದಾ ಜೀವಂತವಾಗಿದೆ ಎನ್ನುವುದು ಅವರ ಬಲವಾದ ನಂಬಿಕೆ. ಇತ್ತೀಚಿನ ಘಟನೆಗಳು ಅವರ ಈ ನಂಬಿಕೆಯನ್ನು ಅಲುಗಾಡಿಸಿದಂತೆ ತೋರುತ್ತದೆ. ದೇಶದಲ್ಲಿ ನಡೆದ ಇತ್ತೀಚಿನ ಹಿಂದೂ ಮುಸ್ಲಿಮ್ ದಂಗೆಗಳಿಂದ, ಒಂದು ಸಣ್ಣ ಮುಸ್ಲಿಮ್ ಗುಂಪು ಹಿಂದೂಗಳಿಗೆ ಏಟು ಹಾಕಬಲ್ಲದು, ಬಹು ದೊಡ್ಡ ಏಟು ಹಾಕಬಲ್ಲದು ಎನ್ನುವುದು ತೋರಿ ಬಂದಿದೆ. ಕಾರಣ ತಮ್ಮ ಉಳಿವಿನ, ಅಸ್ತಿತ್ವದ ಹೋರಾಟಕ್ಕೆ ಏನಾದರೂ ಬೆಲೆಯಿದೆಯೇ ಎಂದು ಹಿಂದೂಗಳು ಹೊಸದಾಗಿ ಆಲೋಚಿಸಬೇಕಾಗಿ ಬಂದಿದೆ. ತಾವು ಜೀವಂತವಾಗಿ ಉಳಿದುಬಂದುದಕ್ಕೆ ತಮ್ಮ ಸಾಮರ್ಥ್ಯ ಯೋಗ್ಯತೆಗಳೇ ಕಾರಣ ಎನ್ನುವ ಅಂಶವನ್ನೇ ಉದಾಹರಣೆಯಾಗಿ ಸಾರುತ್ತ ಬಂದ ಗರ್ವಿಷ್ಠ ಹಿಂದೂಗಳು, ಅಸ್ತಿತ್ವ ಸ್ಥಿರತೆಗಳಲ್ಲಿ ಅನೇಕ ಬಗೆಗಳಿವೆ ಮತ್ತು ಎಲ್ಲವೂ ಒಂದೇ ಸಮಾನತೆ ಹೊಂದಿರುವುದಿಲ್ಲ ಎನ್ನುವುದನ್ನು ಕುರಿತು ಆಲೋಚಿಸುವುದನ್ನು ಎಂದೂ ನಿಲ್ಲಿಸಲಿಲ್ಲ. ಒಬ್ಬರು ಸ್ಥಿರವಾಗಿರಬೇಕಾದರೆ ವೈರಿಯ ವಿರುದ್ಧ ಹೋರಾಡಿ ವಿಜಯ ಸಾಧಿಸುವುದರಿಂದ, ಅಥವಾ ದಾಳಿಯಿಂದ ಕಾಲ್ತೆಗೆದು ಸುರಕ್ಷಿತ ಸ್ಥಿತಿಯಲ್ಲಿ ಅಡಗಿ ಕುಳ್ಳಿರುವುದರಿಂದ ಅದು ಸಾಧ್ಯ. ಈ ಎರಡು ಯಾವುದೇ ಸಂದರ್ಭದಲ್ಲಿ ಜೀವಂತವಾಗಿ ಉಳಿದಿರಬಹುದು. ಆದರೆ ನಿಶ್ಚಿತವಾಗಿ ಎರಡರ ಮೌಲ್ಯವೂ ಎರಡು ದಿಕ್ಕು. ಆದರೆ ಬದುಕಿ ಉಳಿದಿರುವ ಸಂಗತಿ ಮುಖ್ಯವಲ್ಲ. ಯಾವ ಪಾತಳಿಯಲ್ಲಿ ಬದುಕಿರುತ್ತಾರೆ ಎನ್ನುವುದು ಮುಖ್ಯ. ಹಿಂದೂಗಳು ಬದುಕಿರುತ್ತಾರೆ; ಆದರೆ ಸ್ವತಂತ್ರರಾಗಿಯೋ ಅಥವಾ ಗುಲಾಮರಾಗಿಯೋ ಎನ್ನುವುದು ವಿವಾದದ ಅಂಶ. ಆದರೆ ವಾಸ್ತವ ಸಂಗತಿ ತುಂಬ ಶೋಚನೀಯವಾಗಿರುವಂತೆ ಕಾಣುತ್ತದೆ. ಅವರು ಗುಲಾಮಗಿರಿಯಲ್ಲಿ ಬದುಕಿ ಉಳಿಯುವಲ್ಲಿ ಯಶಸ್ವಿಯಾದರೂ, ಹಿಂದೂಗಳಾಗಿ ಉಳಿಯುತ್ತಾರೆಯೇ ಎನ್ನುವುದು ನಿಶ್ಚಿತವಲ್ಲ. ಏಕೆಂದರೆ ಕೇವಲ ಶಾರೀರಿಕ ಹೋರಾಟದಲ್ಲಿ ಅಲ್ಲ, ಸಾಂಸ್ಕೃತಿಕ ಹೋರಾಟದಲ್ಲಿಯೂ ಮುಸ್ಲಿಮರಿಂದ ಅವರಿಗೆ ಸೋಲು ಉಂಟಾಗುತ್ತಿದೆ. ಇತ್ತೀಚಿನ ದಿನಗಳಲ್ಲಿ ಇಸ್ಲಾಂ ಸಂಸ್ಕೃತಿ ಪ್ರಚಾರದ ವ್ಯವಸ್ಥಿತ ಆಂದೋಲನ ರಭಸದಿಂದ ನಡೆಯುತ್ತಿದೆ. ಮತ್ತು ಈ ಕಾರ್ಯ ಮತಾಂತರದ ಮೂಲಕ ಎಂದು ಆಪಾದಿಸಲಾಗುತ್ತಿದೆ. ಇದರಿಂದ ಹಿಂದೂ ಧರ್ಮೀಯರಾದ ಬಹುಜನರನ್ನು ತಮ್ಮೆಡೆಗೆ ಸೆಳೆದುಕೊಂಡು ತಮ್ಮ ಜನಸಂಖ್ಯೆಯನ್ನೂ

---

* ಮೂಲತಃ 'ತೆಲಗು ಸಮಾಚಾರ್ ಸ್ಪೆಷಲ್ ನಂಬರ್', ನವೆಂಬರ್–೧೯೨೬ರಲ್ಲಿ ಪ್ರಕಟವಾದದ್ದು.

ಬೆಳೆಸುತ್ತಿದ್ದಾರೆ ಎನ್ನಲಾಗುತ್ತಿದೆ. ಮುಸ್ಲಿಮರ ಸುದೈವದಿಂದ ಬಹುಸಂಖ್ಯೆಯ ಸುಮಾರು ಏಳು ಕೋಟಿ ಅವರ್ಣಿತ ಜನರು ಹಿಂದೂಗಳ ವರ್ಗದಲ್ಲಿದ್ದಾರೆ; ಆದರೆ ಅವರಾರಿಗೂ ಹಿಂದೂ ಧರ್ಮದ ಮೇಲೆ ಅಂಥ ವಿಶೇಷ ಪ್ರೀತಿಯೇನೂ ಇಲ್ಲ; ಮತ್ತು ಆ ಧರ್ಮದಲ್ಲಿ ಅಂಥವರ ಸ್ಥಾನ ಎಷ್ಟು ಅಸಹನೀಯವಾಗಿದೆಯೆಂದರೆ ಅವರನ್ನು ಇಸ್ಲಾಂ ಧರ್ಮ ತಬ್ಬಿಕೊಳ್ಳುವಂತೆ ಸುಲಭವಾಗಿ ಪ್ರಚೋದಿಸಬಹುದು. ಇವರಲ್ಲಿ ಕೆಲವರು ಇಸ್ಲಾಂ ಧರ್ಮಕ್ಕೆ ಸೇರುತ್ತಿದ್ದಾರೆ; ಇನ್ನೂ ಅನೇಕರು ಸೇರುವವರಿದ್ದಾರೆ.

ಹಿಂದೂಗಳಲ್ಲಿ ಬುದ್ಧಿವಂತರೆನಿಸಿಕೊಂಡವರಿಗೆ, ಎಚ್ಚರಿಕೆಯ ಗಂಟೆಯಾಗಲು ಇಷ್ಟು ಸಾಕು. ಅಧಿಕ ಜನಸಂಖ್ಯೆಯ ಬಲದಿಂದಲೇ ಹಿಂದೂಗಳಿಗೆ ಮುಸ್ಲಿಮರನ್ನು ಎದುರಿಸಲು ಸಾಧ್ಯವಾಗದಿದ್ದರೆ, ಇಸ್ಲಾಂ ಧರ್ಮಕ್ಕೆ ಮತಾಂತರಗೊಳ್ಳುವ ಮೂಲಕ ಅವರ ಸಂಖ್ಯೆ ಕುಗ್ಗಿದಾಗ ಅವರ ಗತಿಯೇನಾದೀತು? ತಮ್ಮ ಜನ ತಮ್ಮ ಸಂಸ್ಕೃತಿ – ಧರ್ಮಗಳನ್ನು ಕಳೆದುಕೊಳ್ಳದಂತೆ ಅವರನ್ನು ಉಳಿಸಲೇಬೇಕು ಎನ್ನುವುದು ಹಿಂದೂಗಳ ಅನಿಸಿಕೆ.

ಇದೇ, ಜನರ ನಂಬುಗೆಯನ್ನು ಪುನಃ ಹಿಂದೂ ಧರ್ಮದಲ್ಲಿ ಸ್ಥಾಪಿಸುವ ಶುದ್ಧಿ ಆಂದೋಲನದ ಮೂಲ. ಕೆಲವು ಕಟ್ಟಾ ಸಂಪ್ರದಾಯವಾದಿಗಳು, ಹುಟ್ಟಿನಿಂದ ಹಿಂದೂ ಆಗಿರಬೇಕೇ ಹೊರತು ಹಿಂದೂ ಧರ್ಮ ಎಂದೂ ಪರಾವಲಂಬಿ–ಮತಾಂತರ ಧರ್ಮವಾಗಿರಲಿಲ್ಲ ಎನ್ನುವ ಆಧಾರದ ಮೇಲೆ ಈ ಆಂದೋಲನವನ್ನು ವಿರೋಧಿಸುತ್ತಾರೆ. ಈ ಧೋರಣೆಯ ಪರವಾಗಿ ಒಂದೆರಡು ಮಾತು. ಅನಾದಿ ಕಾಲದಿಂದಲೇ ಈ ಪರಂಪರೆಯನ್ನು ಎಷ್ಟು ಪ್ರಾಚೀನ ಕಾಲದಿಂದ ಗುರುತಿಸಬಹುದೋ ಅಂದಿನಿಂದಲೇ ಹಿಂದೂ ಧರ್ಮದಲ್ಲಿ ಎಂದೂ ಮತಾಂತರ ರೂಢಿಯಲ್ಲಿರಲಿಲ್ಲ. ಜರ್ಮನ್ ಪಂಡಿತ ಮತ್ತು ಪ್ರಾಚ್ಯಶಾಸ್ತ್ರ ವಿದ್ವಾಂಸ ಪ್ರೊ. ಮ್ಯಾಕ್ಸ್‌ಮುಲ್ಲರ್ ೧೮೭೩ ರ ಡಿಸೆಂಬರ್ ೩ ರಂದು ವೆಸ್ಟ್ ಮಿನಿಸ್ಟರ್ ಅಬ್ಬೆ ಹೆಸರಿನಲ್ಲಿ ಧರ್ಮಪ್ರಚಾರಕರಿಗೆ ಮಾಡಿದ ವಿಜ್ಞಾಪನೆಯಲ್ಲಿ ಹಿಂದೂ ಧರ್ಮ ಒಂದು ಅಪ್ರಚಾರಕ ಧರ್ಮ ಎಂದು ಸ್ಪಷ್ಟವಾಗಿ ಸಾರಿದರು. ಕಾರಣ ಇಂಥ ಕ್ಷಿಪ್ರತೆಯ ಅಗತ್ಯತೆಯಲ್ಲಿ ಸಂಪ್ರದಾಯವಾದಿಗಳಿಗೆ ನಂಬಿಕೆಯಿಲ್ಲ. ಅಂಥವರು ಶುದ್ಧಿ ಆಂದೋಲನ ವಿರೋಧಿಗಳಾಗಿರುವುದು ಸಹಜ. ಏಕೆಂದರೆ ಇದು ಹಿಂದೂ ಧರ್ಮದ ಮೂಲಭೂತ ಸಿದ್ಧಾಂತಕ್ಕೇ ವಿರೋಧಿಯೆಂದು ಅವರ ಅನಿಸಿಕೆ. ಆದರೆ ಶುದ್ಧಿ ಆಂದೋಲನ ಬೆಂಬಲಿಸುವ ಅನೇಕ ಅಷ್ಟೇ ಸಮರ್ಥ ಅಭಿಪ್ರಾಯಗಳೂ ಇವೆ. ಅವರ ಮಾತಿನಂತೆ ಹಿಂದೂ ಧರ್ಮ ಪ್ರಚಾರಕ–ಬೋಧಕ–ಧರ್ಮವಾಗಿತ್ತು; ಅಷ್ಟೇ ಅಲ್ಲ ಪ್ರಚಾರಕ ಧರ್ಮ ಆಗಿದೆ ಕೂಡ. ಪ್ರೊ. ಜಾಲ್ಲಿ ತಮ್ಮ 'DIE AUSBREITUNG DER INDISCHEN FULTUR'ಎನ್ನುವ ಲೇಖನದಲ್ಲಿ, ಪ್ರಾಚೀನ ಹಿಂದೂ ಅರಸರು ಮತ್ತು ಅರ್ಚಕರು, ದೇಶದ ಮೂಲ ನಿವಾಸಿಗಳಲ್ಲಿ ಹಿಂದೂ ಧರ್ಮ ಪ್ರಸಾರಗೊಳಿಸಲು ಕೈಗೊಂಡ ಉಪಕ್ರಮ ಮತ್ತು ಸಾಧನಗಳ ಚಿತ್ರಸ್ಥ ವಿವರ ನೀಡಿದ್ದಾರೆ. ದಿ ಸರ್ ಆಲ್ಫ್ರೆಡ್ ಲೈಯಲ್. ಪ್ರೊ. ಮ್ಯಾಕ್ಸ್‌ಮುಲ್ಲರ್ ಅವರಿಗೆ ಉತ್ತರ ಬರೆದು, ಹಿಂದೂ ಧರ್ಮ ಒಂದು ಪ್ರಚಾರಕ ಧರ್ಮವಾಗಿತ್ತು ಎನ್ನುವುದನ್ನು ಸಾಬೀತುಗೊಳಿಸಲು ಯತ್ನಿಸಿದರು. ವಸ್ತುಸ್ಥಿತಿ ನಿಶ್ಚಿತವಾಗಿ ಜಾಲ್ಲೀ ಮತ್ತು ಲೈಯಲ್ ಅವರ ಪರವಾಗಿಯೇ ಇರುವಂತಿದೆ. ಈ ಭೂಖಂಡದ ಬಹುಭಾಗದ ಭಿನ್ನ ಭಿನ್ನ ಸಂಸ್ಕೃತಿಯುಳ್ಳ ವಿವಿಧ ಜನಾಂಗಗಳು ಹಿಂದೂ ಧರ್ಮಕ್ಕೆ ಒಳಗಾಗಿರುವುದನ್ನು ನೋಡಿದರೆ ಈ ಧರ್ಮ ಮತಾಂತರ ಕಾರ್ಯವನ್ನು, ಕೆಲವು ಮಟ್ಟಿಗಾದರೂ ಖಂಡಿತ ಕೈಗೊಂಡಿದೆ ಎನ್ನುವುದು ತಿಳಿಯುತ್ತದೆ; ಇಲ್ಲವಾದರೆ ಈ ಧರ್ಮದ ಪ್ರಸರಣವನ್ನು ಸಮರ್ಥಿಸುವುದು ಸಾಧ್ಯವಾಗುವುದಿಲ್ಲ. ಆದೂ ಅಲ್ಲದೆ ಆ ಧರ್ಮದ ರೂಢಿಯಲ್ಲಿರುವ ಯಜ್ಞ ಯಾಗಾದಿಗಳನ್ನು ಗಮನಿಸಿದರೆ, ವ್ರಾತ್ಯರ ಶುದ್ಧಿಗಾಗಿ ಈ ವ್ರತಾಚರಣೆಗಳು ಪರಿಚಲಾವಣೆಯಿದ್ದಿತು

ಎಂದು ವಿವರಿಸುವುದು ಬಿಟ್ಟು ಬೇರೆ ಹಾದಿಯಿಲ್ಲ. ಕಾರಣ ಪ್ರಾಚೀನ ಕಾಲದಲ್ಲಿ ಹಿಂದೂ ಧರ್ಮ ಒಂದು ಪ್ರಚಾರಕ ಧರ್ಮವಾಗಿತ್ತು ಎಂದು ತರ್ಕಿಸಬಹುದು. ಆದರೆ ಕಾರಣಾಂತರಗಳಿಂದ ಚಾರಿತ್ರಿಕ ಗತಿ ವಿಧಿಯಲ್ಲಿ ಎಂದೋ ಒಮ್ಮೆ ಬಹು ಹಿಂದೆ ಮತಾಂತರ ಕಾರ್ಯ ನಿಂತುಹೋಯಿತು.

ಹಿಂದೂ ಧರ್ಮ ಯಾಕೆ ಪ್ರಚಾರಕ ಧರ್ಮವಾಗಿ ಉಳಿಯಲಿಲ್ಲ ಎನ್ನುವ ಪ್ರಶ್ನೆಯನ್ನು ಕುರಿತು ನಾನು ಆಲೋಚಿಸಬೇಕಾಗಿದೆ. ಇದಕ್ಕೆ ಅನೇಕ ವಿವರಣೆಗಳಿರಬಹುದು; ಮತ್ತು ಅದರ ಬೆಲೆ ಎಷ್ಟೇ ಇರಲಿ. ನನಗೆ ತಿಳಿದ ವಿವರಣೆಯನ್ನು ನಾನು ನೀಡಬಯಸುತ್ತೇನೆ. ಮಾನವ ಒಬ್ಬ ಸಾಮಾಜಿಕ ಜೀವಿ ಎಂದು ಅರಿಸ್ಟಾಟಲ್ ಹೇಳಿಕೆ. ಅರಿಸ್ಟಾಟಲ್‌ನ ಈ ಹೇಳಿಕೆಯ ನಿರ್ದಿಷ್ಟತೆಯ ಸಮರ್ಥನೆಗಳು ಏನೇ ಇರಲಿ, ಇಷ್ಟು ಮಾತ್ರ ನಿಜ : ಒಬ್ಬ ವ್ಯಕ್ತಿಯನ್ನು, ಅವನ ಸಮಾಜಬಾಂಧವರಿಂದ ಆಮೂಲಾಗ್ರವಾಗಿ ಬೇರ್ಪಡಿಸಿದರೆ, ಅವನೊಬ್ಬ ವ್ಯಕ್ತಿಯಾಗಿ ಜೀವನವನ್ನು ಆರಂಭಿಸುವುದು ಅಸಾಧ್ಯ. ಅವನ ಸ್ವಪ್ರಜ್ಞೆಯ ಬೆಳವಣಿಗೆಯಲ್ಲಿಯೇ, ಸಾಮಾಜಿಕ ಬಂಧ, ಬೇರುಬಿಟ್ಟಿರುತ್ತದೆ, ಸ್ಥಾಪಿತಗೊಂಡಿರುತ್ತದೆ. ಪ್ರತಿಯೊಬ್ಬನ ವ್ಯಕ್ತಿತ್ವ ಗ್ರಹಣಶಕ್ತಿ ಮತ್ತು ಆಸಕ್ತಿ ತನ್ನ ಸಹಬಾಂಧವರನ್ನು ಅವರ ಆಸಕ್ತಿಗಳನ್ನು ಗುರುತಿಸಿ ಮನ್ನಿಸುವುದರಲ್ಲಿ ತೊಡಗಿಕೊಂಡಿರುತ್ತವೆ; ಮತ್ತು ಅವನ ಉದಾರತೆ ಅಥವಾ ಸ್ವಾರ್ಥ ಯಾವುದೇ ಬಗೆಯ ಉದ್ದೇಶಗಳ ಸಾಧನೆ ಅಷ್ಟರಮಟ್ಟಿಗೆ ಇತರರ ಯತ್ನ ಸಾಧನೆಗಳೂ ಆಗಿರುತ್ತವೆ. ಎಲ್ಲ ಸ್ಥಿತಿ ಸಂದರ್ಭಗಳಲ್ಲಿಯೂ ಸಾಮಾಜಿಕ ಸಂಬಂಧ ವ್ಯಕ್ತಿಯ ಗುರಿ ಮತ್ತು ಆಸಕ್ತಿಗಳಿಂದೊಡಗೂಡಿದ ಬದುಕಿನ ಸಹಜ ಸಂಗತಿಯಾಗಿದೆ. ಇದರಿಂದ ತನ್ನ ಜೀವನದ ಎಲ್ಲ ಸಂದರ್ಭಗಳಲ್ಲಿಯೂ ಸಾಮಾಜಿಕ ಸಂಬಂಧಗಳ ಸತ್ವವನ್ನು ಗ್ರಹಿಸುತ್ತಾನೆ, ಅನುಭವಿಸುತ್ತಾನೆ. ಸಂಕ್ಷಿಪ್ತವಾಗಿ, ಸಮಾಜವಿಲ್ಲದೆ ಜೀವನ ನೀರಿನಿಂದ ತೆಗೆದೊಗೆದ ಮೀನಿನಂತೆ ಅಸಾಧ್ಯ.

ಈ ವಾಸ್ತವಾಂಶದ ಹಿನ್ನೆಲೆಯಲ್ಲಿರುವ ಅಗತ್ಯತೆಯೆಂದರೆ, ಇತರರನ್ನು ತನ್ನ ಧರ್ಮಕ್ಕೆ ಪರಿವರ್ತಿಸಿಕೊಳ್ಳುವ ಸಮಾಜ ಮೊದಲೇ ತನ್ನ ಸಂವಿಧಾನದಲ್ಲಿ ಮತಾಂತರಿಗಳಿಗೆ ಸಹಸದಸ್ಯರೆಂದು ಪರಿಗಣಿತರಾಗುವ ಅವಕಾಶ ಕಲ್ಪಿಸಿರಬೇಕು ಮತ್ತು ಅದರ ಸಾಮಾಜಿಕ ಜೀವನದಲ್ಲಿ ಪಾಲುಗೊಳ್ಳಲು ಸಮ್ಮತಿಸಿರಬೇಕು. ಅದರಲ್ಲಿ–ಮೂಲಧರ್ಮ– ಹುಟ್ಟಿದ ಮತ್ತು ಅದಕ್ಕೆ ಬಂದು ಸೇರಿದ ಬಳಿಕ ಹುಟ್ಟಿದ ಮಕ್ಕಳಲ್ಲಿ ಯಾವ ತಾರತಮ್ಯವನ್ನೂ ಮಾಡಕೂಡದು. ಎಲ್ಲ ಸಂದರ್ಭದಲ್ಲೂ ಅದು ಮುಕ್ತವಾಗಿರಬೇಕು. ಅದರ ಬದುಕಿನಲ್ಲಿ ಪ್ರವೇಶಿಸಲು ಸಮ್ಮತಿ ನೀಡಿ ಆ ಸಮಾಜದ ಒಬ್ಬ ಸದಸ್ಯನಾಗಿ – ಗೌರವದಿಂದ – ಬಾಳಲು ಸಾಧ್ಯವಾಗಿರಬೇಕು. ಧರ್ಮಾಂತರದ ಬಳಿಕ ಹೊರಗಿನವರಿಗೆ ಈ ಬಗೆಯ ಸೌಲಭ್ಯವಿಲ್ಲದೆ ಹೋದರೆ, ತಕ್ಷಣ ಮೂಡುವ ಪ್ರಶ್ನೆ : ಮತಾಂತರಿಯ ಸ್ಥಾನ ಯಾವುದು? ಒಂದು ವೇಳೆ ಧರ್ಮಾಂತರಿಗೆ ಸ್ಥಾನವಿಲ್ಲವಾದರೆ ಧರ್ಮಾಂತರಕ್ಕೆ ಆಮಂತ್ರಣವು ಇಲ್ಲ ಅಥವಾ ಅದನ್ನು ಒಪ್ಪಿಕೊಳ್ಳುವ ಪ್ರಶ್ನೆಯೂ ಇಲ್ಲ.

ಹಿಂದೂ ಧರ್ಮಕ್ಕೆ ಪರಿವರ್ತನೆಗೊಂಡವರಿಗೆ ಹಿಂದೂ ಸಮಾಜದಲ್ಲಿ ಏನಾದರೂ ಸ್ಥಾನವಿದೆಯೇ? ಇಂದು ಹಿಂದೂ ಸಮಾಜ ವ್ಯವಸ್ಥೆ, ಜಾತಿಗಳ ವಿಶಿಷ್ಟ ಗುಣ ಲಕ್ಷಣ ಘಟಿತವಾಗಿದೆ. ಪ್ರತಿ ಜಾತಿಯಲ್ಲೂ ಸಕುಲವಿವಾಹ ಪದ್ಧತಿಯೇ ಇದ್ದು ಪರಸ್ಪರ ವೈರುಧ್ಯ ಹಾಗೇ ಮುಂದುವರೆದಿದೆ. ಬೇರೆ ಮಾತಿನಲ್ಲಿ : ಒಂದು ಜಾತಿ ತನ್ನೊಳಗೆ ಹುಟ್ಟಿದವರು ಮಾತ್ರ ಅದರ ಸದಸ್ಯರು, ಹೊರಗಿಂದ ತಂದು ಸೇರಿಸಿಕೊಂಡವರಿಗೆ ಅಲ್ಲಿ ಪ್ರವೇಶವಿಲ್ಲ. ಹಿಂದೂ ಧರ್ಮ ಅನೇಕ ಜಾತಿಗಳ ಕೂಟವಾಗಿದ್ದು ಪ್ರತಿಯೊಂದು ತನ್ನ ಸುತ್ತ ಬೇಲಿ ಕಟ್ಟಿಕೊಂಡಿರುವುದರಿಂದ ಮತಾಂತರಿಗೆ ಅಲ್ಲಿ ಸ್ಥಾನವಿಲ್ಲ; ಏಕೆಂದರೆ ಯಾವ ಜಾತಿಯಲ್ಲೂ ಅವನಿಗೆ ಪ್ರವೇಶವಿಲ್ಲ. ಹಿಂದೂ ಧರ್ಮದಲ್ಲಿ ಈ ಜಾತಿ ಪದ್ಧತಿ ಬೆಳೆದುಬಂದುದರಿಂದ ಅದು ಪ್ರಚಾರಕ ಧರ್ಮವಾಗಿ ಉಳಿಯಲಿಲ್ಲ. ಜಾತಿ ಪದ್ಧತಿ ಮತಾಂತರಕ್ಕೆ ಸರಿಯಾದ ಸ್ಥಾನ ನೀಡಲು ಅಸಮರ್ಥವಾಗಿದೆ. ಹಿಂದೂ

ಧರ್ಮದಲ್ಲಿ ಮತಾಂತರ ಪದ್ಧತಿ ಚಲಾವಣೆಯಲ್ಲಿರುವವರೆಗೂ ಅದು ಸಾಮೂಹಿಕ ಮತಾಂತರ ಕಾರ್ಯಕೈಗೊಂಡಿತು; ಏಕೆಂದರೆ ಈ ಬಗೆಯ ಮತಾಂತರಿಗಳ ವಿವಿಧ ಗುಂಪುಗಳು ಬಹುಸಂಖ್ಯೆಯಲ್ಲಿದ್ದು ಈ ಹೊಸ ಸಮುದಾಯಗಳು ತಮ್ಮ ತಮ್ಮ ಗುಂಪಿನಲ್ಲಿಯೇ ಆಯಾ ಗುಂಪಿನವರಿಗೆ ಸಾಮಾಜಿಕ ಜೀವನದ ಅಂಶಗಳನ್ನು ನೀಡುವ ಸಾಮರ್ಥ್ಯ ಹೊಂದಿದ್ದುವು. ಆದರೆ ಸಾಮೂಹಿಕ ಮತಾಂತರ ಕ್ರಮ ಕೊನೆಗೊಂಡಾಗ, ಮತ್ತು ಪ್ರತ್ಯೇಕ ವ್ಯಕ್ತಿಯನ್ನು ಮತಾಂತರಗೊಳಿಸುವ ಪ್ರಶ್ನೆ ಬಂದಾಗ ಹಿಂದೂ ಧರ್ಮ ಅನಿವಾರ್ಯವಾಗಿ ತನ್ನ ಧರ್ಮ ಪ್ರಚಾರಕ ಸ್ವರೂಪಕ್ಕೆ ವಿದಾಯ ಹೇಳಬೇಕಾಯಿತು. ಏಕೆಂದರೆ ಹೀಗೆ ಒಳಬಂದ ಮತಾಂತರಿಗೆ ಅದರ ಸಾಮಾಜಿಕ ವ್ಯವಸ್ಥೆಯಲ್ಲಿ ಸ್ಥಾನ ಕಲ್ಪಿಸಿಕೊಡಲು ಅವಕಾಶವಿರಲಿಲ್ಲ.

ಹಿಂದೂ ಧರ್ಮ ಯಾಕೆ ಪ್ರಚಾರಕ ಧರ್ಮವಾಗಿ ಉಳಿಯಲಿಲ್ಲ ಎನ್ನುವುದನ್ನು ತೋರಿಸುವುದಕ್ಕಾಗಲೀ, ಏನೋ ಒಂದು ಹೊಸ ವಿಚಾರ ಹೊಸ ವಿವರಣೆ ಕೊಟ್ಟು ಖ್ಯಾತಿ ಪಡೆಯಬೇಕೆಂದಾಗಲಿ ನಾನು ಈ ಪ್ರಶ್ನೆಯನ್ನು ಪ್ರತಿಪಾದಿಸಲಿಲ್ಲ. ಶುದ್ಧಿ ಆಂದೋಲನದ ಮೇಲೆ ಈ ಎರಡೂ ವಿಷಯಗಳು ಮಹತ್ವದ ಪರಿಣಾಮ ಬೀರಿವೆಯೆನ್ನುವುದನ್ನು ಎತ್ತಿತೋರಿಸಲು ಇವುಗಳನ್ನು ಎತ್ತಿಕೊಂಡು ಚರ್ಚಿಸಿ ಉತ್ತರಿಸಿದ್ದೇನೆ. ಆ ಬಗೆಯ ಆಂದೋಲನಕ್ಕೆ ನನ್ನ ಅನುಮೋದನೆಯಿರುವುದಾದರೂ, ಆ ಚಳುವಳಿಯ ಪ್ರತಿಪಾದಕರು ತಮ್ಮ ಆಂದೋಲನದ ಯಶಸ್ಸಿಗೆ ಇರುವ ಆತಂಕಗಳನ್ನು ವಿಶ್ಲೇಷಿಸಿಲ್ಲ. ತಮ್ಮ ಜನಸಂಖ್ಯೆಯನ್ನು ಹೆಚ್ಚಿಸಿ ಹಿಂದೂ ಸಮಾಜದ ಶಕ್ತಿಯನ್ನು ವರ್ಧಿಸುವುದೇ ಶುದ್ಧಿ ಆಂದೋಲನದ ಹಿಂದಿರುವ ಗುರಿಯಾಗಿದೆ. ಒಂದು ಸಮಾಜ, ಕೇವಲ ಅದರ ಸಂಖ್ಯಾಬಲದಿಂದ ಶಕ್ತಿಶಾಲಿಯಾಗಿರುವುದಿಲ್ಲ. ಅದರಲ್ಲಿರುವ ಸಮರ್ಥ ವ್ಯಕ್ತಿಗಳಿಂದ ಅದು ಪ್ರಬಲ. ಒಂದು ಪ್ರಬಲ ವ್ಯವಸ್ಥಿತ ಮತಾಂಧ ಗುಂಪು, ಮತ್ತೊಂದು ಬಹುಸಂಖ್ಯಾತ ಅವ್ಯವಸ್ಥಿತ ಸೇನೆಯನ್ನು ದಾಳಿಯಲ್ಲಿ ಎದುರಿಸಿ ಹಿಮ್ಮೆಟ್ಟಿಸಿದ ಉದಾಹರಣೆಗಳು ಇಲ್ಲದಿಲ್ಲ. ಹಿಂದೂ ಮುಸ್ಲಿಮ್ ದಂಗೆಗಳಲ್ಲಿ ಕೂಡ, ಮುಸ್ಲಿಮರು ಹಿಂದೂಗಳನ್ನು ಅಲ್ಪ ಸಂಖ್ಯಾತರಾಗಿದ್ದಲ್ಲಿ ಮಾತ್ರ ಮೆಟ್ಟಿಲ್ಲ; ಹಿಂದೂಗಳ ಅತಿಶಯವಾಗಿರುವ ಸ್ಥಳಗಳಲ್ಲಿ ಕೂಡ ಅವರಿಗೆ ಏಟು ಹಾಕಿದ್ದಾರೆ. ಲೋಪ್ಲಾಹ್‌ಗಳ ಸ್ಥಿತಿ ಇಲ್ಲಿ ಪ್ರಸ್ತುತ ಸಂಗತಿ. ಹಿಂದೂಗಳ ಕಷ್ಟನಷ್ಟಗಳಿಗೆ ಜನಸಂಖ್ಯೆಯ ಅಭಾವಕ್ಕಿಂತ ಒಗ್ಗಟ್ಟಿನ ಅಭಾವವೇ ಕಾರಣ. ಹಿಂದೂ ಸಮಾಜದ ಏಕತೆಯನ್ನು ಸಂವರ್ಧಿಸಲು ಅದರ ಒಡಕಿಗೆ ಕಾರಣವಾದ ಶಕ್ತಿಗಳನ್ನು ಕಂಡುಹಿಡಿಯಬೇಕು. ಹಿಂದೂ ಸಮಾಜದ ಏಕತೆಯ ಸಂವರ್ಧನೆ ಬಿಟ್ಟು ಕೇವಲ ಶುದ್ಧಿ ಆಂದೋಲನ ಮುಂದುವರಿಸಿದರೆ, ಅದರಿಂದ ಬರೀ ಮುಸ್ಲಿಮರ ಕ್ರೋಧ ಹೆಚ್ಚುತ್ತದೆಯೇ ಹೊರತು ಹಿಂದುಗಳಿಗೆ ಯಾವ ಪ್ರಯೋಜನವೂ ಆಗಲಾರದು. ಅಷ್ಟೇ ಅಲ್ಲ ಅವರ ಅನೈಕ್ಯಕ್ಕೆ ಹೆಚ್ಚಿನ ಕಾರಣವೂ ಆಗಬಹುದು. ಇದು ನನ್ನ ಸಂದೇಹ. ಜಾತಿಗಳಿಂದ ಕೂಡಿದ ಸಮುದಾಯದಲ್ಲಿ ಶುದ್ಧೀಕರಣಗೊಂಡ ವ್ಯಕ್ತಿಗೆ ಯಾವ ನೆಲೆಯೂ ದೊರಕುವುದಿಲ್ಲ. ಮತ್ತು ಅವನು ಯಾರ ಬಳಿಗೂ ನಿಷ್ಠನಾಗಿರದೆ, ಯಾವುದರ ಜೊತೆಗೂ ಆತ್ಮೀಯತೆ ಬೆಳೆಸಿಕೊಳ್ಳದೆ ಪ್ರತ್ಯೇಕವಾಗಿ ಒಂಟಿಯಾಗಿ ಬದುಕುವುದು ಅನಿವಾರ್ಯವಾಗುತ್ತದೆ. ಶುದ್ಧೀಕರಣದ ಮೂಲಕ ಶ್ರದ್ಧಾನಂದರು ಹಿಡಿದು ತಂದ ಮಲ್ಕಾನಾದಂಥ ಗುಂಪಿನಿಂದ, ಹಿಂದೂ ಸಮಾಜದಲ್ಲಿ ಮತ್ತೊಂದು ಜಾತಿ ಬಂದು ಸೇರಿತೇ ಹೊರತು ಬೇರೇನೂ ಸಾಧಿಸಲಾಗದು. ಜಾತಿಗಳು ಹೆಚ್ಚಿದಷ್ಟೂ ಪ್ರತ್ಯೇಕತೆ ಹೆಚ್ಚುತ್ತದೆ ಮತ್ತು ಹಿಂದೂ ಸಮಾಜದ ಅಧಿಕ ದೌರ್ಬಲ್ಯಕ್ಕೆ ಕಾರಣವಾಗುತ್ತದೆ. ಹಿಂದೂ ಸಮಾಜಕ್ಕೆ ಸ್ಥಿರತೆ ಬರಬೇಕಾದರೆ ಕೇವಲ ಸಂಖ್ಯೆ ಬೆಳೆಸುವುದಕ್ಕಿಂತ ತನ್ನ ಒಗ್ಗಟ್ಟನ್ನು ಬೆಳೆಸುವ ಕಡೆಗೆ ಗಮನ ಹರಿಸಲೇಬೇಕು. ಅದೆಂದರೆ ಜಾತಿನಾಶ. ಜಾತಿಗಳ ನಾಶವೇ ನಿಜವಾದ ಸಂಘಟನೆ; ಜಾತಿ ವಿನಾಶದ ಮೂಲಕ ಸಂಘಟನೆ ಸಾಧ್ಯವಾದರೆ, 'ಶುದ್ಧೀ' ಅನಗತ್ಯ. ಒಂದು ವೇಳೆ ಅದನ್ನು ರೂಢಿಸಿದರೂ ಅದರಿಂದ ನಿಜವಾದ ಶಕ್ತಿಯ

ಲಾಭ. ಜಾತಿ ವ್ಯವಸ್ಥೆಯನ್ನು ಇರಿಸಿಕೊಂಡು ಅದರ ರೂಢಿಗಳು ಹೀಗೇ ಮುಂದುವರೆದರೆ ಹಿಂದೂ ಐಕ್ಯ ಮತ್ತು ಸಂಘಟನೆ ಅಸಾಧ್ಯ. ಆದರೆ, ಹಿಂದೂ ಸಮಾಜದ ಅತ್ಯಂತ ಉತ್ಸಾಹಿ ಸಮಾಜ ಸುಧಾರಕ ಕೂಡ ಜಾತಿ ಕಿತ್ತೆಸೆಯುವ ಪ್ರಶ್ನೆ ಬಂದಾಗ ಮಾತ್ರ ಸಂಕುಚಿತನಾಗುತ್ತಾನೆ; ಮತ್ತು ಮತಾಂತರಿ ಹಿಂದೂವಿನ ಪುನರ್ಮತಾಂತರ ಆಹಾರ ಬದಲಾವಣೆ ಮತ್ತು ಏಕಾದಶಿ ಮುಂತಾದ ಕ್ಷುಲ್ಲಕ ಉಪಾಯಗಳನ್ನು ಪ್ರತಿಪಾದಿಸುತ್ತಾನೆ. ಮುಂದೆ ಎಂದೋ ಒಂದು ದಿನ, ತಮ್ಮ ಸಮಾಜವನ್ನು ಉಳಿಸುವುದು ಮತ್ತು ಜಾತಿಯ ಸಂರಕ್ಷಣೆ ಮಾಡುವುದು ಎರಡೂ ಏಕಕಾಲಕ್ಕೆ ಸಾಧ್ಯವಾಗುವುದಿಲ್ಲ ಎಂದು ಕಣ್ಣು ತೆರೆಯುವ ಕಾಲ ಬರುತ್ತದೆ. ಆ ಕಾಲ ಬರುವ ದಿನ ದೂರವಿಲ್ಲ ಎಂದು ಆಶಿಸಲಾಗಿದೆ.

* * * *

## ಅಧ್ಯಾಯ ೨೯

# ಅಸ್ಪೃಶ್ಯರ ಕ್ರೈಸ್ತೀಕರಣ

(೧) ಭಾರತದಲ್ಲಿ ಕ್ರೈಸ್ತ ಧರ್ಮದ ಬೆಳವಣಿಗೆ, (೨) ಪ್ರಚಾರ ಪ್ರಯತ್ನಗಳಿಗಾಗಿ ವ್ಯಯಗೊಂಡ ಕಾಲ ಮತ್ತು ಹಣ, (೩) ಅದರ ನಿಧಾನಗತಿ ಬೆಳವಣಿಗೆಯ ಕಾರಣಗಳು.

## I

ಭಾರತದಲ್ಲಿ ಕ್ರೈಸ್ತ ಧರ್ಮ ಎಷ್ಟು ಹಳೆಯದು? ಭಾರತೀಯ ಜನರಲ್ಲಿ ಅದು ಸಾಧಿಸಿದ ಪ್ರಗತಿಯೇನು? ಅಸ್ಪೃಶ್ಯರಲ್ಲಿ ಆಸಕ್ತಿಯುಳ್ಳ ಯಾರೂ ಈ ಪ್ರಶ್ನೆಗಳನ್ನು ಕೇಳದೇ ಇರಲಾರರು. ಈ ಎರಡೂ ಪ್ರಶ್ನೆಗಳು ಪರಸ್ಪರ ನಿಕಟ ಸಂಬಂಧ ಹೊಂದಿವೆ. ಇಲ್ಲದೆ ಹೋದರೆ ಭಾರತದಲ್ಲಿ ಕ್ರೈಸ್ತ ಧರ್ಮ ಪ್ರಚಾರದ ಸ್ಥಿತಿ ತುಂಬ ನಿರಾಶಾದಾಯಕವಾಗುತ್ತಿತ್ತು. ಇಂಥ ಕಾರಣ ಮತ್ತು ತಮ್ಮದೇ ವಿಶಿಷ್ಟ ಪರಿಸ್ಥಿತಿಗಳಿಂದಾಗಿ ಅಸ್ಪೃಶ್ಯರ ಭಾರೀ ಸಮೂಹ ಕ್ರೈಸ್ತ ಧರ್ಮದ ಸಾಮಾಜಿಕ ಸಂದೇಶ ಒಪ್ಪಿಕೊಳ್ಳಲು ಕೂಡಲೇ ಸಿದ್ಧರಾಗಿರುತ್ತಾರೆ.

ಈ ಕೆಳಗಿನ ಅಂಕಿ ಸಂಖ್ಯೆಗಳು ೧೯೩೧ರ ಜನಗಣತಿಯ ಪ್ರಕಾರ ಇತರ ಭಾರತೀಯ ಜನಸಮುದಾಯದ ಜೊತೆ ಹೋಲಿಸಿ ನೋಡಿದರೆ ಭಾರತೀಯ ಕ್ರೈಸ್ತಮತೀಯರ ಜನಸಂಖ್ಯೆ ಎಷ್ಟು ಎನ್ನುವುದರ ಒಂದು ಅಂದಾಜು ಗೊತ್ತಾಗುತ್ತದೆ.

**ಭಾರತ ಮತ್ತು ಬರ್ಮಾ**

| ಪ್ರತಿ ಧರ್ಮದ ಜನಸಂಖ್ಯೆ | ೧೮೯೧ರ ಜನಗಣತಿ | ೧೯೨೧ರ ಜನಗಣತಿ | ೧೯೩೧ರ ಜನಗಣತಿ | ಏರು ಇಳಿತ |
|---|---|---|---|---|
| ಹಿಂದೂ | | ೨೧೬,೭೩೪,೫೮೬ | ೨೩೯,೧೯೫,೧೪೦ | ೧೦.೪ |
| ಮುಸ್ಲಿಮ್ | | ೬೮,೭೩೫,೨೩೩ | ೭೭,೬೭೭,೫೪೫ | ೧೩ |
| ಬೌದ್ಧರು | | ೧೧,೫೭೧,೨೬೮ | ೧೨,೭೮೬,೮೦೬ | ೧೦.೫ |
| ಸಿಖ್ | | ೩,೨೩೮,೮೦೩ | ೪,೩೩೫,೭೭೧ | ೩೩.೯ |
| ಪ್ರಾದಿಮ ಧರ್ಮಗಳು | | ೯,೭೭೪,೬೧೧ | ೮,೨೮೦,೩೪೭ | ೧೫.೩ |
| ಕ್ರೈಸ್ತ ಮತೀಯರು | | ೪,೭೫೪,೦೬೪ | ೬,೨೯೬,೭೬೩ | ೩೨.೫ |
| ಜೈನರು | | ೧,೧೭೮,೫೯೬ | ೧,೨೫೨,೧೦೫ | ೬.೨ |
| ಜೋರಾಷ್ಟ್ರಮತ (ಪಾರ್ಸಿ) | | ೧೦೧,೭೭೮ | ೧೦೯,೭೫೨ | ೭.೮ |
| ಜ್ಯೂ (ಯಹೂದಿ) | | ೨೧,೭೭೮ | ೨೪,೧೪೧ | ೧೦.೯ |
| ನಮೂದು ಇಲ್ಲದವರು | | ೧೮,೦೦೪ | ೨,೮೬೦,೧೮೭ | ...... |
| | **ಒಟ್ಟು** | **೩೧೬,೧೨೮,೭೨೧** | **೩೫೨,೮೧೮,೫೫೭** | **೧೦.೬** |

೧೯೨೧ ಮತ್ತು ೧೯೩೧ ರ ಕಾಲಾವಧಿಯಲ್ಲಿ ಕ್ರೈಸ್ತರ ಜನಸಂಖ್ಯೆಯ ಹೆಚ್ಚಾಗಿರುವುದು ನಿಜ. ಬೆಳವಣಿಗೆಯ ದೃಷ್ಟಿಯಿಂದ ಸಿಖ್ ಧರ್ಮಕ್ಕೆ ಮೊದಲ ಸ್ಥಾನ; ಎರಡನೆಯ ಸ್ಥಾನ ಕ್ರೈಸ್ತರಿಗೆ ಮೂರನೆಯ ಸ್ಥಾನ ಮತಾಂತರಿಗಳಿಗೆ. ಮೊದಲ ಮತ್ತು ಎರಡನೆಯ ಗುಂಪುಗಳ ನಡುವಿನ ವ್ಯತ್ಯಾಸ ತೀರ ಕಡಿಮೆ. ಅಂದರೆ ಎರಡನೆಯ ಸ್ಥಾನದ ಕ್ರೈಸ್ತರು ಮೊದಲನೆಯ ಸ್ಥಾನ ಹೊಂದಿದವರಷ್ಟೇ ಮುಖ್ಯರು. ಮುಸ್ಲಿಮರಿಗಿರುವ ಸ್ಥಾನ ಎರಡನೆಯ ಮತ್ತು ಮೂರನೆಯ ಗುಂಪುಗಳ ನಡುವಣ ವ್ಯತ್ಯಾಸಗಳ ದೃಷ್ಟಿಯಿಂದ ಎಷ್ಟು ಅಧಿಕವಾಗಿದೆಯೆಂದರೆ ಇಂಥ ಗಂಭೀರ ಎದುರಾಳಿಯಿಂದ ಅತಿದೂರವಾದುದಕ್ಕಾಗಿ ಕ್ರೈಸ್ತರು ಹೆಮ್ಮೆಪಡಬಹುದಾಗಿದೆ. ಇಷ್ಟಿದ್ದರೂ, ವಾಸ್ತವ ಸಂಗತಿಯೆಂದರೆ ಒಟ್ಟು ೩೫೨,೮೧೮,೫೫೭ ಜನಸಂಖ್ಯೆಯಲ್ಲಿ ಅವರ ಸಂಖ್ಯೆ ೬,೨೯೬,೭೬೩. ಅಂದರೆ ಭಾರತದಲ್ಲಿ ಕ್ರೈಸ್ತರ ಜನಸಂಖ್ಯೆ ಒಟ್ಟು ಜನಸಂಖ್ಯೆಯ ಪ್ರತಿಶತ ಸುಮಾರು ೧.೭ ರಷ್ಟು.

## II

ಇದೆಲ್ಲ ಎಷ್ಟು ವರ್ಷಗಳ ಬಳಿಕ ಮತ್ತು ಎಷ್ಟು ವೆಚ್ಚ ಮಾಡಿದ ತರುವಾಯ? ವೆಚ್ಚಕ್ಕೆ ಸಂಬಂಧಿಸಿ ಯಾವ ಲೆಕ್ಕವನ್ನೂ ಕೊಡಲು ಸಾಧ್ಯವಿಲ್ಲ. ೧೮೯೩ರಲ್ಲಿ ಪ್ರಕಟವಾದ ಜಾರ್ಜ್ ಸ್ಮಿತ್ ಅವರ "ದಿ ಕನ್ವರ್ಶನ್ ಆಫ್ ಇಂಡಿಯಾ' ಪುಸ್ತಕದಲ್ಲಿ ಕ್ರಿಶ್ಚಿಯನ್ ರಾಷ್ಟ್ರಗಳು ಅನ್ಯ ಧರ್ಮೀಯ ದೇಶಗಳ ಧರ್ಮಪ್ರಚಾರಕ್ಕಾಗಿ ಮಾಡಿದ ಖರ್ಚು ವೆಚ್ಚಗಳ ವಿವರಗಳನ್ನು ಗಮನಿಸಿದರೆ ಅದರ ಒಂದು ಅಂದಾಜು ದೊರೆಯುತ್ತದೆ. ಅವರ ಮಾತು ಹೀಗಿವೆ : "ಅವರು, ರಭಸದಿಂದ ಮತ್ತು ಅಗತ್ಯವಾಗಿ ಮಾಡುತ್ತಿರುವ ಪ್ರಯತ್ನಗಳನ್ನು ಗಮನಿಸುತ್ತಿಲ್ಲ. ವಿಶೇಷತಃ ಪೌರ್ವಾತ್ಯ ಚರ್ಚುಗಳ ಕಾರ್ಯ, ಅಮೆರಿಕನ್ನರಾಗಲಿ ಅಥವಾ ಕಟ್ಟಾ ಕ್ರೈಸ್ತ ನಿಷ್ಠೆಯ ಕ್ರೈಸ್ತರಾಗಲಿ, ಏಶಿಯಾ ಮತ್ತು ಉತ್ತರ ಆಫ್ರಿಕೆಯ ಪ್ರದೇಶಗಳ ಜನರನ್ನು ಕುರಿತು ಮಾಡುತ್ತಿರುವ ಕಾರ್ಯದಲ್ಲಿ ಏನೂ ನೆರವು ನೀಡದಿರುವ ಹಿನ್ನೆಲೆಯಲ್ಲಿ ಅವರು ಮಾಡುತ್ತಿರುವ ವಿಶೇಷ ಪ್ರಯತ್ನಗಳು, ಅದೂ ಅಲ್ಲದೆ ಧರ್ಮಪ್ರಚಾರಕರು, ತಮ್ಮನ್ನು ಪ್ರತಿನಿಧಿಸುತ್ತಿರುವ ತಮ್ಮ ಅನೇಕ ಪತ್ನಿಯರನ್ನು ಬಿಟ್ಟು ಕೈಕೊಂಡಿರುವ ಪ್ರಯತ್ನಗಳನ್ನು ಹಾಗೂ ಇವುಗಳನ್ನು ಕುರಿತ ಪರಿಣಾಮಗಳನ್ನು ಕೂಡ, ಡ್ಯಾನಿಷ್ ಧರ್ಮ ಪ್ರಚಾರಕ ಮಂಡಲಿಯ ಅಧ್ಯಕ್ಷ ರೆವ್ಹರೆಂಡ್ ಜೆ. ವಾಹ್ಲೆ ವಿವರಿಸಿದ್ದಾರೆ. ಅವರು ನೀಡುವ ಅಂದಾಜಿನ ವಿವರಗಳು ತುಂಬ ಅಚ್ಚುಕಟ್ಟಾಗಿವೆ ಮತ್ತು ಬಹಳ ಎಚ್ಚರಿಕೆಯಿಂದ ಸಂಗ್ರಹಿತವಾಗಿವೆ. ಈ ಅಂದಾಜು ಅನಿವಾರ್ಯವಾದುದನ್ನು ಒಳಗೊಂಡಿದೆ. ತುರ್ಕಸ್ತಾನ ಮತ್ತು ಈಜಿಪ್ತದಲ್ಲಿ ಕೇವಲ ಮುಸಲ್ಮಾನರ ಸಮುದಾಯದಲ್ಲಿ ಮಾಡಿದ ಲೆಕ್ಕಾಚಾರ ಹೀಗಿದೆ :

| | ೧೮೯೦ | ೧೮೯೧ |
|---|---|---|
| ಆದಾಯ (ಆಂಗ್ಲರ ಹಣ) | ೨,೪೧೨,೩೩೮ | ೨,೭೪೯,೩೪೦ |
| ಧರ್ಮಪ್ರಚಾರಕರು | ೪,೬೫೨ | ೫,೦೯೪ |
| ಅವಿವಾಹಿತ ಧರ್ಮಬೋಧಕಿಯರು | ೨,೧೧೮ | ೨,೪೪೫ |
| ಸ್ಥಳೀಯ ಧರ್ಮಪ್ರಚಾರಕರು | ೩,೪೨೪ | ೩,೭೩೦ |
| ಸ್ಥಳೀಯ ಇತರ ಸಹಾಯಕರು | ೩೬,೪೦೫ | ೪೦,೪೩೮ |
| ಸಂವಹನಕಾರರು | ೯೬೬,೮೫೬ | ೧,೧೬೮,೫೬೦ |

೧೮೯೨ರ ಪರಿಣಾಮದ ವಿವರಗಳು ಇಷ್ಟರಲ್ಲಿಯೇ ಹೊರಬೀಳಲಿರುವುದರಿಂದ ಅವುಗಳನ್ನು

ಇಲ್ಲಿ ನೀಡಲಾಗಿಲ್ಲ. ೧೮೯೩ನೆ ಸಾಲಿನಲ್ಲಿ ಇದಕ್ಕಿಂತ ಕಡಿಮೆ. ಅದನ್ನು ಪರಿಣತರು ತಾವೇ ಮಾಡಿಕೊಳ್ಳಬಹುದು. ಆದರೆ ಆ ಎರಡು ವರ್ಷಗಳಲ್ಲಿ ಸ್ಥಳೀಯ ಸಂವಹನಕಾರರ ಸಂಖ್ಯೆ ವಿಶೇಷತಃ ಭಾರತದಲ್ಲಿ ಅಧಿಕವಾಗಿದೆಯೆಂದು ಮಾತ್ರ ಹೇಳಬಹುದು. ಇದನ್ನು ಕೂಡಿಸಿದರೆ ಅವರ ಸಂಖ್ಯೆ ೧,೩೦೦,೦೦೦ ಆಗುತ್ತದೆ. ಇದರ ಜೊತೆಗೆ ಎಲ್ಲ ಕ್ಯಾಥೋಲಿಕ್ ಸಮುದಾಯವಲ್ಲದ ಪ್ರದೇಶದ ಪರಿಗಣನೆ ಮಾಡಿದಾಗ ಸ್ಥಳೀಯ ಒಟ್ಟು ಕ್ರೈಸ್ತ ಸಮುದಾಯ ೫,೨೦೦,೦೦೦ ದಷ್ಟಾಗುತ್ತದೆ.

ಡೀನ್ ವಹ್ಲ್ ಅವರು ನೀಡಿರುವ ಅಂಕಿಸಂಖ್ಯೆಗಳಲ್ಲಿ ೧೬೪೯ರ ಅಮೆರಿಕೆಗಾಗಿ ತೆರೆಯಲಾದ ಕ್ರಾಮ್‌ವೆಲ್ ನ್ಯೂ ಇಂಗ್ಲಂಡ್ ಕಂಪನಿಯಿಂದ ಮೊದಲುಗೊಂಡು ೧೮೯೧ರ ೩೦೪ ಧರ್ಮ ಪ್ರಚಾರಕ ಮಂಡಲಿಗಳು ಮತ್ತು ಕಾರ್ಯವಾಹಕ ಗುಂಪುಗಳಿಂದ ಸಂಗ್ರಹಿಸಲಾದ ವರದಿ–ಮಾಹಿತಿ ಕೂಡಿದೆ. ಹದಿನೇಳು ಪ್ರದೇಶಗಳ ಸುಧಾರಿತ ಕ್ರೈಸ್ತ ಪ್ರಪಂಚಕ್ಕಾಗಿ ಆದ ವೆಚ್ಚದ ವಿವರ ಹೀಗಿವೆ : ೧೮೯೧ರಲ್ಲಿ ಬ್ರಿಟಿಷ್ ಸಾಮ್ರಾಜ್ಯದ ೧೬೦ ಮಂಡಲಿ ಮತ್ತು ಇತರ ಸಮಾಜಗಳಿಂದ ಎತ್ತಿದ ಒಟ್ಟು ಹಣ ೧,೬೫೫,೮೩೦ ಪೌಂಡ್‌ಗಳು ಮತ್ತು ಅಮೆರಿಕಾದ ೫೭ ವಿಭಿನ್ನ ಮೂಲಗಳಿಂದ ೭೮೬,೯೭೨ ಪೌಂಡ್‌ಗಳು. ಈ ಎರಡೂ ಇಂಗ್ಲಿಷ್ ಮಾತಾಡುವ ಜನಸಮುದಾಯಗಳು ಕ್ರೈಸ್ತ ಧರ್ಮೀಯರಲ್ಲದವರ ಕ್ರೈಸ್ತೀಕರಣಕ್ಕಾಗಿ ವ್ಯಯಿಸಿದ ಒಟ್ಟು ಹಣ ೨,೪೪೬,೮೨೨ ಪೌಂಡುಗಳು. ಏಶಿಯಾದಲ್ಲಿ ಮತ್ತು ಫಿನ್ಲೆಂಡ್, ಸ್ವೀಡನ್, ನಾರ್ವೆ, ಫ್ರಾನ್ಸ್, ಡೆನ್ಮಾರ್ಕ್ ನೆದರ್ ಲ್ಯಾಂಡ್ಸ್, ಸ್ವಿಟ್ಜರ್ ಲ್ಯಾಂಡ್ ಮತ್ತು ಜರ್ಮನಿ ದೇಶದವರು ನೀಡಿದ ಕಾಣಿಕೆ ೩೦೨,೫೧೮.

ಬಳಸಲಾದ ಮೊತ್ತದ ವಿವಿಧ ಮೂಲಗಳ ವಿವರಗಳು ಇನ್ನೂ ಪ್ರಕಟವಾಗಿಲ್ಲ. ಕಾರಣ ಅವು ಲಭ್ಯವಿಲ್ಲ. ಆದರೆ ಈ ಲಕ್ಷ ಜನರ ಕ್ರೈಸ್ತೀಕರಣ ಕಾರ್ಯಕ್ಕೆ ಎಷ್ಟು ಕಾಲ ಬೇಕಾಯಿತು ಎನ್ನುವುದನ್ನು ತಿಳಿಸಲು ನಮ್ಮಲ್ಲಿ ಸಾಕಷ್ಟು ಅಂಕಿ ಸಂಖ್ಯೆಗಳಿವೆ.

ಭಾರತಕ್ಕೆ ಬಂದು ಕ್ರೈಸ್ತ ಧರ್ಮದ ಬೀಜ ಬಿತ್ತಿದ ಪ್ರಥಮ ಪ್ರಚಾರಕರ ಬಗ್ಗೆ ದಾಖಲೆಗಳಿಲ್ಲ. ಭಾರತದಲ್ಲಿ ಕ್ರೈಸ್ತ ಧರ್ಮ ಬರಲು ದೈವ ಪ್ರೇರಣೆ ಮೂಲವೆಂದು ನಂಬಲಾಗುತ್ತಿದೆ. ಮತ್ತು ಥಾಮಸ್ ಎನ್ನುವ ದೇವಪ್ರೇರಿತ ಪ್ರಚಾರಕ ಇದರ ಸ್ಥಾಪಕ ಎಂದು ಹೇಳಲಾಗುತ್ತಿದೆ. ದೇವಪ್ರೇರಿತ ವ್ಯಕ್ತಿಯ ಸಮಾಧಿ ಮದ್ರಾಸ್ ಬಳಿಯ ಸಂತ ಥಾಮಸ್ ಗುಡ್ಡದಲ್ಲಿ ಇರುವುದಾದರೂ ಇದು ದೈವ ಪ್ರೇರಣೆ ಎನ್ನುವ ಮಾತು ಕೇವಲ ಒಂದು ದಂತ ಕಥೆ. ಒಂದನೆಯ ಶತಮಾನದಲ್ಲಿ 'ಸುವಾರ್ತೆ'ಯನ್ನು ಕೂಡ ಭಾರತೀಯರಿಗೆ ಸಾರಲಾಗಿತ್ತು ಎನ್ನುವುದನ್ನು ತೋರಿಸುವ ವಿಶ್ವಾಸಾರ್ಹ ಸಾಕ್ಷಿಯಿಲ್ಲ. ಎರಡನೆಯ ಶತಮಾನದಲ್ಲಿ ದಕ್ಷಿಣ ಭಾರತದ ಕರಾವಳಿಯ ಕೋರಮಂಡಲ ಮತ್ತು ಮಲ್‌ಬಾರ್‌ದ ಬೇಸಾಯಗಾರರು, ಮತ್ತು ಕೊಂಗರಿಗೆ ಸುವಾರ್ತೆಯ ಸಂದೇಶ ಮುಟ್ಟಿತ್ತು ಎನ್ನುವುದಕ್ಕೆ ಸ್ವಲ್ಪ ಮಟ್ಟಿಗೆ ಸಾಕ್ಷಿಯಿದೆ. ಈಜಿಪ್ತದ ನಾವಿಕರು ತಂದ ಈ ಸುದ್ದಿ ಅಲೆಗ್ಸಾಂಡ್ರಿಯಾದ ಕ್ರೈಸ್ತರಲ್ಲಿಯೂ ಹರಡಿತು. ಭಾರತಕ್ಕೆ ಧರ್ಮ ಪ್ರಚಾರಕ ಮಂಡಲಿಯನ್ನು ಕಳಿಸಿದವರಲ್ಲಿ ಅಲೆಗ್ಸಾಂಡ್ರಿಯಾದವರೇ ಮೊದಲಿಗರು. ಅವರ ಹೆಸರು ಇತಿಹಾಸದಲ್ಲಿ ದಾಖಲಾಗಿದೆ. ಕ್ರೈಸ್ತನಾಗಿ ಮತಾಂತರಗೊಂಡ ಸ್ಟೋಯಿಕ್ ಪಂಥದ ಗ್ರೀಕ್ ವ್ಯಕ್ತಿ ಪ್ಯಾಂಟೊನಸ್ ಆ ವ್ಯಕ್ತಿ. ಅಲೆಗ್ಸಾಂಡ್ರಿಯಾದ ಬಿಷಪ್ ದೆಮೆತ್ರಿಯಸ್ ಇವನನ್ನು ಬೋಧನಾ ತರಬೇತಿ ಶಾಲೆಯ ಪ್ರಧಾನ ಏಕೈಕ ಬೋಧಕನೆಂದು ನೇಮಿಸಿ ಕಳಿಸಿದ. ಅನ್ಯ ಮತೀಯರಿಗೆ ಕ್ರೈಸ್ತ ಧರ್ಮದ ತತ್ವ ಸಿದ್ಧಾಂತಗಳ ತರಬೇತಿಗಾಗಿ ಈ ಶಾಲೆ ಸ್ಥಾಪಿಸಲ್ಪಟ್ಟಿತ್ತು. ಕ್ರಿ. ಶ. ೧೮೦ ಮತ್ತು ೧೯೦ ರ ಕಾಲಾವಧಿಯಲ್ಲಿ ಭಾರತೀಯರ ಕರೆಯ ಮೇರೆಗೆ ಅಲೆಗ್ಸಾಂಡ್ರಿಯಾದ ಬಿಷಪ್, ಪ್ರಚಾರಕ ಮಂಡಲಿ ಮತ್ತು ಪ್ಯಾಂಟೊನಸ್‌ರನ್ನು ಕಳಿಸಿಕೊಟ್ಟರು. ಅವನು ಭಾರತದಲ್ಲಿ ಎಲ್ಲೆಲ್ಲಿ ಇದ್ದು ಪ್ರಚಾರ ಕಾರ್ಯ ಮಾಡಿದ ಎನ್ನುವುದನ್ನು ತೋರಿಸಲು ಆಧಾರಗಳಿಲ್ಲ. ನಮಗೆ

ತಿಳಿದಿರುವ ಸಂಗತಿ ಇಷ್ಟು : ಅವನು ಕ್ರಿ.ಶ. ೨೧೧ರ ವರೆಗೂ ಭಾರತದಲ್ಲಿ ಆ ಶಾಲೆಯ ಪ್ರಿನ್ಸಿಪಾಲ ಎಂದು ಕಾರ್ಯನಿರ್ವಹಿಸುತ್ತ ಇದ್ದು ಬಳಿಕ ಅಲೆಗ್ಸಾಂಡ್ರಿಯಾಕ್ಕೆ ಮರಳಿ ಹೋದನು. ಭಾರತದಲ್ಲಿ ಜರುಗಿದ ಮೂರನೆಯ ಶತಮಾನದ ಕಾರ್ಯಪ್ರಗತಿಯ ವಿವರಗಳು ದೊರೆಯವುದಿಲ್ಲ. ಆದರೆ ಗಮನಾರ್ಹವಾದ ಒಂದು ಸಂಗತಿಯಿದೆ. ಕ್ರಿ. ಶ. ೩೨೫ರಲ್ಲಿ ಸಾಮ್ರಾಟ್ ಕಾನ್ಸ್ಟಂಟೈನ್ ಜೋಹಾನ್ನಸ್‌ನ ಮತಾಂತರದ ಬಳಿಕ ಜರುಗಿದ ನಿಕಾಶಾ ಪರಿಷತ್ತಿನಲ್ಲಿ ನೆರೆದ ಮಠಾಧಿಪತಿಗಳಲ್ಲಿ ಒಬ್ಬ ತನ್ನನ್ನು ತಾನು ಪರ್ಶಿಯನ್ ಮತ್ತು ಅಖಂಡ ಭಾರತದ ಧರ್ಮಾಧಿಕಾರಿ ಎಂದು ವರ್ಣಿಸಿಕೊಂಡ. ಈ ಸಂಗತಿಯಿಂದ, ಆ ಕಾಲದಲ್ಲಿ ಭಾರತದ ಕರಾವಳಿಯ ಮೇಲೆ ಕ್ರೈಸ್ತ ಚರ್ಚ್ ಗಮನಾರ್ಹವಾಗಿ ಬೇರುಬಿಟ್ಟಿತ್ತು ಎನ್ನುವುದರ ಸೂಚನೆ ದೊರೆಯುತ್ತದೆ. ಇದೂ ಅಲ್ಲದೆ ಈ ಸಂಗತಿಯಲ್ಲಿ ಬಹುಶಃ ಬಿಷಪ್ ಮೂಲದ ಹಕ್ಕು ಸಾಧನೆಗಿಂತ ಅಧಿಕ ವಿಷಯ ಅಡಗಿದೆ. "ಈಸ್ಥರ್ ಬುಕ್' ಸೂಚನೆಯಂತೆ ಇದು ಪರ್ಶಿಯನ್ ಸಾಮ್ರಾಜ್ಯದ ಒಂದು ಪ್ರಾಂತವೆಂದು ಪರಿಗಣಿಸಲ್ಪಟ್ಟಿದೆ. ಮೂರನೆಯ ಶತಮಾನ ಮೊದಲುಗೊಂಡು ಐದನೆಯ ಶತಮಾನದ ಕೊನೆಯ ಅವಧಿಯಲ್ಲಿ ಈ ಕಾರ್ಯ ಚಟುವಟಿಕೆ ಅಲೆಗ್ಸಾಂಡ್ರಿಯಾದಿಂದ ಆ್ಯಂಟಿಯೊಕ್‌ಗೆ ವರ್ಗಾವಣೆಗೊಳ್ಳುತ್ತದೆ. ಕ್ರಿಶ್ಚಿಯನ್ ಸಾಹಸದ ಭಾರವನ್ನು ತನ್ನ ಭುಜಗಳ ಮೇಲೆ ಹೊತ್ತುಕೊಂಡದ್ದು ಆ್ಯಂಟಿಯೊಕ್. ಕ್ರೈಸ್ತ ಧರ್ಮದ ಶಾಂತಿಯುತ ಪ್ರಚಾರಕ್ಕೆ ಆರನೆಯ ಶತಮಾನವೇ ಕೊನೆಯದು. ಬಹುಶಃ ಇದು ಒಂದು ಚಾರಿತ್ರಿಕ ಯುಗದ ಕೊನೆಯೆಂದು ತೋರುತ್ತದೆ. ಇದರ ಬೆಂಬಳಿಯಾಗಿ ಇಡೀ ಪಶ್ಚಿಮ ಏಶಿಯಾ, ಉತ್ತರ ಆಫ್ರಿಕಾದಲ್ಲೆಲ್ಲ ಮೊಹಮ್ಮದನ ಅನುಯಾಯಿಗಳು (ಸಾರಾಸೆನ್ಸ್) ಖಡ್ಗ ಮತ್ತು ಕುರಾನ್ ಹಿಡಿದು ಉದಿಸಿದರು. ವಿಯನ್ನಾ ಮತ್ತು ಸ್ಪೇನ್‌ದಿಂದ ಫ್ರಾನ್ಸ್‌ಗಳವರೆಗೆ ಮುಂದುವರೆದು ಇಡೀ ಯುರೋಪ್ ಖಂಡವನ್ನೇ ಭಯಭೀತಗೊಳಿಸಿದರು. ಇದರ ಪರಿಣಾಮವಾಗಿ ಎಲ್ಲ ಕ್ರಿಶ್ಚಿಯನ್ ಜನ ಮನೋವ್ಯಾಕುಲತೆಗೆ ಒಳಗಾಗಿ, ಮುಂದೆ ಅನೇಕ ಶತಮಾನಗಳವರೆಗೆ ಅವರ ಧರ್ಮಪ್ರಚಾರ ಪ್ರಯತ್ನಗಳು ಸ್ಥಗಿತಗೊಂಡವು.

ಭಾರತಕ್ಕೆ ೧೪೯೮ರಲ್ಲಿ ವಾಸ್ಕೊಡಗಾಮಾ ಬಂದಂದಿನಿಂದ ಈ ದೇಶದ ಕ್ರಿಶ್ಚಿಯನ್ ಧರ್ಮ ಪ್ರಚಾರಕ ಮಂಡಳಿಯ ಚರಿತ್ರೆಯಲ್ಲಿ ಒಂದು ಹೊಸ ಯುಗದ ಆರಂಭವಾಯಿತು. ಮತ್ತು ಈ ದಿಸೆಯ ಅತ್ಯಂತ ಗಂಭೀರ ಮತ್ತು ನಿಶ್ಚಿತ ಪ್ರಯತ್ನಗಳು ಪ್ರಾರಂಭಗೊಂಡದ್ದು ೧೫೪೨ರಲ್ಲಿ, ಬಹು ದೊಡ್ಡ ಬೋಧಕ-ಪ್ರಚಾರಕ ಫ್ರಾನ್ಸಿಸ್ ಝೇವಿಯರ್ ಆಗಮನದಿಂದ. ಪೂರ್ವ ರಾಷ್ಟ್ರಗಳಲ್ಲಿ ಮೊದಲು ತಮ್ಮ ಅಧಿಕಾರ ಸ್ಥಾಪಿಸಿದವರು ಪೋರ್ಚುಗೀಸರು ಮತ್ತು ಭಾರತದ ಸ್ಥಳೀಯರ ಕ್ರೈಸ್ತೀಕರಣ ಯತ್ನಗಳು, ಆಧುನಿಕ ಕಾಲದಲ್ಲಿ ಮೊತ್ತಮೊದಲು ನಡೆದದ್ದು ಅವರ ಉದಾರಾಶ್ರಯದಲ್ಲಿಯೇ. ಪೋರ್ಚುಗೀಸರು ಆಶ್ರಯದಲ್ಲಿ ನಡೆದ ಮತಾಂತರ ಕಾರ್ಯ, ರೋಮನ್ ಕ್ಯಾಥೋಲಿಕ್ ಪ್ರಚಾರಕ ಮಂಡಲಿ ತಮ್ಮ ಪಂಥಕ್ಕೆ ಜನರನ್ನು ಪರಿವರ್ತಿಸಿದ್ದು. ಅವರಿಗೆ ವೈರಿಗಳು ಹುಟ್ಟಿಕೊಳ್ಳಲು ಬಹಳ ಕಾಲ ಬೇಕಾಗಲಿಲ್ಲ. ಪ್ರಾಟಿಸ್ಟಂಟರು ಬೇಗನೆ ಈ ಕ್ಷೇತ್ರಕ್ಕೆ ಕಾಲಿಟ್ಟರು. ಡೆನ್ಮಾರ್ಕದ ಅರಸನ ಆಶ್ರಯದಿಂದಾಗಿ ೧೭೦೬ರಲ್ಲಿ ಟ್ರಾಂಕೊಬಾರ್‌ದಲ್ಲಿ ನೆಲೆಸಿದ ಲೂಥರನ್‌ರದೇ ಅತಿ ಮೊದಲ ಪ್ರಾಟಿಸ್ಟಂಟ್ ಪ್ರಚಾರ ತಂಡ. ಹದಿನೆಂಟನೆಯ ಶತಮಾನದ ದ್ವಿತೀಯ ಅರ್ಧ ಕಾಲಾವಧಿಯಲ್ಲಿ, ತಿರುಚನಾಪಲ್ಲಿ, ತಂಜಾವೂರುಗಳಲ್ಲಿ ಶ್ರಮಿಸಿದ ನಿಷ್ಠಾವಂತ ಸಮರ್ಥ ಬೋಧಕ ಶ್ವಾರ್ಟ್ಜ್ ಈ ಮಂಡಲಿಯ ಸದಸ್ಯನಾಗಿದ್ದ. ಆತನಿಂದ ನಡೆದ ಸುವಾರ್ತಾ ಪ್ರಸಾರ ಕಾರ್ಯ ಕಾಲಾನಂತರದಲ್ಲಿ ಸುವಾರ್ತಾ ಪ್ರಚಾರ ಸಮಾಜದಿಂದ ಮುಂದುವರೆಯಿತು. ಆ ಬಳಿಕ ಬಂದದ್ದು, ೧೭೯೩ರಲ್ಲಿ ಕಲ್ಕತ್ತಾ ನಗರಕ್ಕೆ ಬಂದಿಳಿದ ಕ್ಯಾರೀ ಎನ್ನುವವರ ಮುಖಂಡತ್ವದ ಬ್ಯಾಪ್ಟಿಸ್ಟ್ ಧರ್ಮ ಮಂಡಲಿ. ಕೊನೆಗೆ ಬಂದದ್ದು ಆ್ಯಂಗ್ಲಿಕನ್ ಚರ್ಚ್. ಅದು ೧೮೧೩ರಲ್ಲಿ ಪ್ರಚಾರ ಕಾರ್ಯ ಕೈಕೊಂಡಿತು. ಅಂದಿನಿಂದ

ಧರ್ಮ ಪ್ರಚಾರಕ ಮಂಡಲಿಯ ಕಾರ್ಯ ತ್ವರಿತಗತಿಯಲ್ಲಿ ಅವ್ಯಾಹತವಾಗಿ ವಿಸ್ತಾರಗೊಂಡಿತು.

ಹೀಗೆ ಭಾರತದಲ್ಲಿ ಕ್ರೈಸ್ತ ಧರ್ಮದ ಪ್ರಚಾರ ಕಾರ್ಯ ನಾಲ್ಕು ಶತಮಾನಗಳವರೆಗೆ ಅಬಾಧಿತವಾಗಿ ನಡೆದು, ಮುಂದೆ ಮಹಮ್ಮದೀಯರು ಸಾರಸೆನರು – ಬಂದ ಬಳಿಕ ಈ ಕಾರ್ಯಕ್ಕೆ ಅಡೆತಡೆ ಉಂಟಾಯಿತು. ಎಂಟು ಶತಮಾನಗಳ ಫಲವೆಂದರೆ ಒಟ್ಟು ಆರು ಮಿಲಿಯನ್ ಜನ. ಇದರಿಂದ ಫ್ರಾನ್ಸಿಸ್ ಝೇವಿಯರ್ ತುಂಬಾ ನಿರಾಶೆಗೊಂಡ. ಮುನ್ನೂರು ವರ್ಷದ ಬಳಿಕ ೧೮೨೩ರಲ್ಲಿ ಬಂದ ಅಬ್ಬೆದುಬ್ಬೈ ಕೂಡ ನಿರಾಶೆ ತಾಳಿದ. ಆತ ಒಂದೆಡೆ ಬರೆಯುತ್ತ ಹಿಂದೂಗಳನ್ನು ಕ್ರೈಸ್ತ ಮತಕ್ಕೆ ಪರಿವರ್ತನೆಗೊಳಿಸುವುದು ತುಂಬ ಶೋಚನೀಯ ನಿರೀಕ್ಷೆ ಎಂದು ಸಾರಿದ. ಈ ಕಾರಣಕ್ಕಾಗಿ ಆಗಿನ ಅತ್ಯಂತ ಆಶಾದಾಯಕ ಕ್ರೈಸ್ತ ಧರ್ಮ ಪ್ರಚಾರಕ ಮಂಡಲಿಯವರು ಅವನನ್ನು ತುಂಬ ಕಟುವಾಗಿ ಟೀಕಿಸಿದರು. ವಾಸ್ತವ ಸಂಗತಿಯೆಂದರೆ ಈ ಕಾಲಾವಧಿಯ ಕೊನೆಯಲ್ಲಿ ಒಟ್ಟು ೩೫೮ ಮಿಲಿಯ ಜನಸಂಖ್ಯೆಯಲ್ಲಿ ಕ್ರೈಸ್ತ ಮತೀಯರ ಸಂಖ್ಯೆ ಕೇವಲ ಆರು ಮಿಲಿಯ ಇತ್ತು. ಇದು ನಿಜವಾಗಿ ತುಂಬ ಮಂದಗತಿಯ ಬೆಳವಣಿಗೆ; ಈ ಮಂದಗತಿಗೆ ಕಾರಣಗಳೇನು?

## III

ನನಗೆ ತಿಳಿದಂತೆ ಕ್ರೈಸ್ತ ಧರ್ಮದ ಬೆಳವಣಿಗೆಯಲ್ಲಿ ಆತಂಕ ಉಂಟುಮಾಡಿದ ಕಾರಣಗಳು ಮೂರು : ಮೊದಲನೆಯ ಕಾರಣ ಈಸ್ಟ್ ಇಂಡಿಯಾ ಕಂಪನಿ ಭಾರತಕ್ಕೆ ಆರಂಭದಲ್ಲಿ ಕಳಿಸಿದ ವಿಶೇಷತಃ ಆಂಗ್ಲ ಜನರ ಶಿಥಿಲ ನೈತಿಕತೆ. ಈಸ್ಟ್ ಇಂಡಿಯಾ ಕಂಪನಿ ಭಾರತಕ್ಕೆ ಸೇವೆಗಾಗಿ ಕಳಿಸಿದ ಪುರುಷರ ಚಾರಿತ್ರ್ಯ ಕುರಿತು ಆ ಕಂಪನಿಯ ಮಿ. ಕಾಯೆ ಎನ್ನುವ ಒಬ್ಬ ಕಮಾರ್ಥಿ ತನ್ನ '*ಕ್ರಿಶ್ಚಿಯಾನಿಟಿ ಇನ್ ಇಂಡಿಯಾ*' ಎನ್ನುವ ಪುಸ್ತಕದಲ್ಲಿ ಹೀಗೆ ಹೇಳುತ್ತಾನೆ : "ಅವರಲ್ಲಿ ಮಧ್ಯಮ ವರ್ಗದ ಕೆಲವರು ಸಭ್ಯ ಮತ್ತು ಪ್ರಾಮಾಣಿಕ ವ್ಯಕ್ತಿಗಳಿದ್ದರು....ಆದರೆ ಅವರಲ್ಲಿ ಅನೇಕರು ಕೆಲವು ಸಮಕಾಲೀನ ಬರಹಗಾರರು ಬಹುಶಃ ಒಳ್ಳೆಯ ಮನೆತನದಿಂದ ಬಂದವರೆ ಕಂಪನಿಯ ವ್ಯಾಪಾರಕ್ಕೆ ಬಹಳ ತುಟ್ಟಿಯಾದರು, ಮತ್ತು ಕಳಂಕ ಉಂಟುಮಾಡಿದರು. ಅದರಿಂದುಂಟಾದ ಸದ್ದುಗದ್ದಲದಿಂದಾಗಿ ಅವರನ್ನು ದೂರವೇ ಇಡಲಾಯಿತು. ಅವರು ಪಶ್ಚಾತ್ತಾಪ ಹೊಂದಿ ಉತ್ತಮರಾಗಬಹುದೆಂದು ಆಸೆ ಮಾಡಲಾಯಿತು. ಆದರೆ ಅದು ಹಾಗಾಗಲಿಲ್ಲ. ತಮ್ಮ ದೇಶದಲ್ಲಿಯೇ ಕಳಂಕಿತರಾಗಿ ಬಾಳಿದ ಅವರು ವಿದೇಶಕ್ಕೆ ಹೋಗಿ ಶುದ್ಧ ಚಾರಿತ್ರರಾಗಿ ಬಾಳುವುದು ಸಾಧ್ಯವಿರಲಿಲ್ಲ."

* * *

"ವಾಸ್ತವವಾಗಿ ಇಂಥವರು ತಮ್ಮ ಸಭ್ಯತೆ ನೈತಿಕತೆಗಳನ್ನು ಕಾಪಾಡಿಕೊಳ್ಳಬೇಕು ಎನ್ನುವ ವಿಶೇಷ ಗುರಿ ಇರಲಿಲ್ಲ. ಕಾರಣ ಹೀಗೆ ಭಾರತಕ್ಕೆ ಎಲ್ಲರಿಗಿಂತ ಮೊದಲು ಬಂದು ನೆಲೆಸಿದ ಇವರು ತಮ್ಮ ದೇಶದಲ್ಲಿ ತಮ್ಮನ್ನು ಬಿಗಿದಿಟ್ಟ ಬಂಧನಕಾರಿ ನಿಯಮಗಳನ್ನು ಇಲ್ಲಿ ಕಿತ್ತೊಗೆದರು. ತಮ್ಮನ್ನು ತಾವೇ ಪ್ರತಿಷ್ಠಿತರೆಂದು ಭಾವಿಸಿದರು. ಜೀವನದ ಎಲ್ಲ ಬಗೆಯ ಸಭ್ಯತೆಗಳನ್ನು, ಧಾರ್ಮಿಕ ನೈತಿಕ ನಡವಳಿಕೆಗಳನ್ನು ಗಾಳಿಗೆ ತೂರುವುದು ತಮ್ಮ ಹಕ್ಕು ಎಂದು ಭಾವಿಸಿದರು.

ಮನಬಂದಂತೆ ವರ್ತಿಸಿದ ಈ ವ್ಯಕ್ತಿಗಳು ಮೇಲಿಂದ ಮೇಲೆ ಅಪಾಯಕಾರಿ ಸಾಹಸಗಳಲ್ಲಿ ತೊಡಗಿದರು. ಪೌರ್ವಾತ್ಯದೇಶದ ಬಂಗಾರ ಕಣಗಳಿಂದ ತಮ್ಮ ಭಗ್ನಗೊಂಡ ಭಾಗ್ಯ ಗಳಿಸಬಯಸಿದರು. ತಮ್ಮ ಕೆಟ್ಟ ಹೆಸರನ್ನು ವಿಸ್ಮೃತಿಯಲ್ಲಿ ಹುಗಿಯಲು, ಅಥವಾ ಕಾನೂನು ಮೀರಿ ಅಮಾಯಕ ದುರ್ಬಲರನ್ನು ಶೋಷಿಸಿ

ಸಂಪತ್ತು ಸಂಗ್ರಹಿಸಲು ತೊಡಗಿದರು. ಏಕೆಂದರೆ ಇವರಿಗೆ ತಮ್ಮ ದೇಶದಲ್ಲಿಯೇ ಪರಿಶ್ರಮದಿಂದ ಕಾರ್ಯಮಾಡಿ ಗಳಿಸುವ ಚಾರಿತ್ರ್ಯ ಅಥವಾ ಸಾಮರ್ಥ್ಯ ಇರಲಿಲ್ಲ. ಅವರು ವಂಚಿಸಿದರು; ಜೂಜಾಡಿದರು; ಪಾನಮತ್ತರಾದರು; ಎಲ್ಲ ಬಗೆಯ ವ್ಯಭಿಚಾರದಲ್ಲಿ ಮೆರೆದರು. ದುರಾಚಾರಿಗಳ, ಸುಲಿಗೆಗಾರರ ಒಂದು ತಂಡವೇ ರೂಪುಗೊಂಡಿತು. ಅವರಲ್ಲಿಯೇ ಮಾತ್ಸರ್ಯ ಹತಾಶೆಗಳು ಮೂಡಿದವು. ಇಂಥ ಕೆಲವೇ ಸಂಖ್ಯೆಯ ವ್ಯಕ್ತಿಗಳು ಒಂದು ಗುಂಪಾಗಿ ಸೇರಿದರೂ ಆ ಗುಂಪು ಕೇವಲ ಅಪರಾಧ ಕೃತ್ಯದ ಒಂದು ತಂಡವಾಗಿತ್ತು."

"ಇದೆಲ್ಲ ಹೊಸದಾಗಿ ಬಂದವರ ಸ್ಥಿತಿಯಾಗಿತ್ತು. ನೀತಿ ಭ್ರಷ್ಟರಾದವರಲ್ಲಿ ಸುಧಾರಣೆಯ ಆಸಕ್ತಿಯಿರಲಿಲ್ಲ. ಆದರೆ ಕೆಲವೇ ಉತ್ತಮರು ಮಾತ್ರ ವಿರಳವಾಗಿ ಭ್ರಷ್ಟಾಚಾರದಿಂದ ಪಾರಾದರು. ಅಂಥವರು ವಿನಾಶಕಾರಿ ತಪ್ಪು ಮಾಡಲು ಪ್ರೇರಿತರಾಗಿರಲಿ, ಒತ್ತಡಕ್ಕೆ ಮಣಿದಿರಲಿ, ಏನಿದ್ದರೂ ಅವರನ್ನು ಪರಿಸ್ಥಿತಿಯ ಬಲಿಪಶು ಎಂದು ಕರೆಯಬಹುದು." ಮಿ. ಕಾಯೆ ಅವರು ಉಲ್ಲೇಖಿಸಿದ ಕೆಲವು ಸಂದರ್ಭಗಳಿಂದ ಅಂದಿನ ಮೊದಲು ಬಂದ ಕ್ರೈಸ್ತ ಜನರ ನೀತಿ ನಡವಳಿಕೆ ಹೇಗಿದ್ದುವು ಎಂದು ತಿಳಿದುಕೊಳ್ಳಬಹುದು. "೧೬೭೮ರಲ್ಲಿ ಮುಂಬೈಯ ಡೆಪ್ಯೂಟಿ ಗವರ್ನರ್ ಹೀಗೆ ಆರೋಪಿಸಿದರು : ಸಬ್ಬಾತ್ ದಿನ ಸರ್ವಶಕ್ತ ದೇವರ ಪ್ರಾರ್ಥನೆ ಮಾಡುವ ಕರ್ತವ್ಯದ ಅವಧಿಯಲ್ಲಿಯೇ ಅವನು ಕುಡಿದಿರುತ್ತಾನೆ; ಕುಡಿಯುತ್ತಾನೆ. ಇತರರ ಇಚ್ಛೆಗೆ ವಿರೋಧವಾಗಿ ಅವರನ್ನು ತಡೆನಿಲ್ಲಿಸಿದ್ದಾನೆ. ಕುಡಿತ ಮುಂದುವರಿಸುತ್ತಾನೆ. ಮೊಳಕಾಲೂರಿ ಸುಳ್ಳು ಭಕ್ತಿ ನಟಿಸುತ್ತಾನೆ. ಸೇವೆಗಾಗಿ ನಿಗದಿತ ಸಮಯದಲ್ಲಿಯೂ ಅನುಚಿತವಾಗಿ ನಡೆದು ಅನೈಕ್ಯತೆಯ ಬೆಳವಣಿಗೆಗೆ ಕಾರಣನಾಗಿದ್ದಾನೆ."

"ದ್ವೀಪ ನಿವಾಸಿಗಳ ಕಳಂಕದ ಆರೋಪ ಕುರಿತು : ಮೂರ್ತಿಪೂಜಕರು ಮತ್ತು ಇತರ ಎಲ್ಲ ನೆರೆಹೊರೆಯವರ ಎದುರು ಪ್ರಾಟೆಸ್ಟಂಟ್ ಧರ್ಮ ನೀತಿಗೆ ವಿರೋಧವಾಗಿ ಮತ್ತೆ ಮತ್ತೆ ಮಿತಿಮೀರಿದ ಪಾನಕೂಟ ಏರ್ಪಡಿಸಿದ್ದಾನೆ. ಇಂಥ ಕೂಟ ಕೆಲವು ಸಲ ಬೆಳಗಿನ ಎರಡು ಮೂರು ಗಂಟೆಯವರೆಗೂ ನಡೆಯುತ್ತವೆ. ಅವನು ಗಡದ್ದಾಗಿ ನಿದ್ದೆ ಮಾಡುತ್ತಾನೆ. ಕಂಪನಿಯ ಕಾರ್ಯ ಸ್ಥಗಿತಗೊಂಡಿರುತ್ತದೆ. ಹೀಗೆ ಸಾಮಾನ್ಯವಾಗಿ ಫ್ಯಾಕ್ಟರಿಯ ಜನರ ಬಳಕೆಗಾಗಿ ಇದ್ದ ತಿಂಡಿ ತೀರ್ಥಗಳನ್ನು ತನ್ನ ವ್ಯಕ್ತಿಗತ ಆಸ್ತಿಯಾಗಿ ಪರಿವರ್ತಿಸಿ ಬಳಸುತ್ತಾನೆ." ಈ ಆರೋಪಗಳಿಂದಾಗಿ ಅವನು ಅಪರಾಧಿ ಎನ್ನುವುದು ಸರಿ. ಈಸ್ಟ್ ಇಂಡಿಯಾ ಕಂಪನಿಯ ಕಾರ್ಖಾನೆಗಳಲ್ಲಿ ಸಾಕಷ್ಟು ವಿಘಾತಕರ ಒಳಜಗಳಗಳಿದ್ದುವು ಮತ್ತು ಕಂಪನಿಯ ಕೆಲವು ಸಂಗತಿಗಳು ದೇವರ ನೀತಿ ಮತ್ತು ಮಾನವ ಸಭ್ಯತೆಗಳೆರಡನ್ನೂ ಗಾಳಿಗೆ ತೂರುವಂಥ ಅನೇಕ ಕಳಂಕಪೂರ್ಣ ನಡವಳಿಕೆಗಳಿಗೆ ಪೂರಕವಾಗಿದ್ದುವು. ಅವರು ತಮ್ಮ ತಮ್ಮಲ್ಲಿ ಭೀಕರವಾಗಿ ಹೊಡೆದಾಡುತ್ತಿದ್ದರು. ಬೈಗುಳಗಳು, ಹೊಡೆತಗಳು ಎಲ್ಲವೂ ಕಂಪನಿಯ ಅತ್ಯುನ್ನತ ಅಧಿಕಾರಿಗಳು ಕೂಡ ಕುಡಿತದ ಅಮಲಿನಲ್ಲಿ ತಮ್ಮ ಕೆಳಗಿನ ನೌಕರರಿಗೆ ಕಲಹದ ಒಂದು ಮಾದರಿ ತೋರಿಸುತ್ತಿದ್ದರು.

ಈ ಕೆಳಗಿನ ಘಟನೆಯ ವರದಿ ಸೂರತ್‌ದಲ್ಲಿದ್ದ ಕಂಪನಿಯ ದಾಖಲೆಗಳಿಂದ ಎತ್ತಿಕೊಂಡಿದ್ದಾಗಿದೆ:[೧] "ತಮ್ಮ ಸನ್ನಿಧಿಗೆ ಆಗಸ್ಟ್ ೨೧ ರಿಂದ ೧೬೬೭ರ ಡಿಸೆಂಬರ್ ೩೧ರ ವರೆಗಿನ ಸಲಹಾ ಪುಸ್ತಕ ಕಳಿಸುತ್ತಿದ್ದೇವೆ: ಅದರಲ್ಲಿ ಅಧ್ಯಕ್ಷ ಮತ್ತು ಅಂಗರಕ್ಷಕರ ಕೊಲೆ ಸಂಚಿನ ಸಂಗತಿಯಿದೆ. ಇದರಲ್ಲಿ ಮಿ. ವಾಕ್ಸ್ ಮತ್ತು ಅಪ್‌ಹಿಲ್ ಎಷ್ಟರ ಮಟ್ಟಿಗೆ ಭಾಗಿಗಳು ಎನ್ನುವುದನ್ನು ಇಲ್ಲಿ ನಮೂದಿಸಿದ ಸಾಕ್ಷ್ಯ ವಿವರ ಮತ್ತು ತಮ್ಮ ನಿರ್ಣಯಕ್ಕೆ ಬಿಡುತ್ತೇವೆ. ಮೊದಲು ಅಧ್ಯಕ್ಷರನ್ನು ಇರಿದು ಕೊಲೆ ಮಾಡಲು ಉದ್ದೇಶಿಸಲಾಗಿತ್ತು ಎನ್ನುವ

---

೧. *ಭಾರತದಲ್ಲಿ ಕ್ರೈಸ್ತ ಧರ್ಮ*, ಪು. ೧೦೬. ಕಾಯೆಯವರ ಹೇಳಿಕೆ.

ಬಲವಾದ ಊಹೆಯಿತ್ತು; ಎಂಫ್ರೇಮ್ ಬೆಂಡಾಲ್ ಅವರ ವಿಚಕ್ಷತೆಯಿಂದಾಗಿ ಅದನ್ನು ತಡೆಗಟ್ಟಲಾಯಿತು. ರಕ್ಷಕರನ್ನು ದ್ವಿಗುಣಗೊಳಿಸಿದ ಕಾರಣ ಈ ಸಂಚು ಅಯಶಸ್ವಿಯಾದಾಗ ವಿಷ ಹಾಕುವ ಯೋಜನೆಗೆ ಒಪ್ಪಲಾಯಿತು. ಗೌಪ್ಯರಕ್ಷಣೆಗೆ ಸಂಬಂಧಿಸಿದ ಇತರರೂ ಸೇರಿದಂತೆ ಎಡ್ಮಂಡ್ ಕ್ಲರ್ಕ್ ಅವರ ಸಾಕ್ಷ್ಯಗಳಿಂದ ಇದು ಸ್ಪಷ್ಟ. ಈ ಸಂಗತಿಯನ್ನು ಹೊರಗೆಡವಿದವನಿಗೆ ಭೀಕರ ನರಕಯಾತನೆ ಕಾದಿತ್ತು ಎನ್ನುವುದು ಕೂಡ, ಇತರರಿಗೂ ಇದೇ ಗತಿ."

"ತಮ್ಮಿಂದ (ಅಧ್ಯಕ್ಷರಿಂದ ) ನನ್ನ ತಲೆಗೆ ಎರಡು ಗಾಯಗಳಾಗಿವೆ. ಒಂದಂತೂ ಆಳವಾದ ಗಾಯ. ಅದಲ್ಲದೆ ನನ್ನ ಎಡ ತೋಳಿಗೆ ನಿಮ್ಮಿಂದ ಒಂದು ಭೀಕರ ಹೊಡೆತ. ಅದಕ್ಕೆ ಗಾಯವಾಗಿ ಸದ್ಯ ನಿರುಪಯುಕ್ತವಾಗಿದೆ. ನನ್ನ ಬಲಭಾಗದ ಪಕ್ಕೆಲುಬಿಗೆ ಬಿದ್ದ ಏಟಿನಿಂದಾಗಿ ನನಗೆ ಉಸಿರಾಡಲು ಕೂಡ ತೊಂದರೆಯಾಗುತ್ತಿದೆ. ನನಗೆ ನಾನೇ ಸಹಾಯ ಮಾಡಿಕೊಳ್ಳಲು ಕೂಡ ಸಾಧ್ಯವಾಗುತ್ತಿಲ್ಲ. ನನ್ನ ಎಡಚಪ್ಪೆಗೆ ಮತ್ತೊಂದು ಹೊಡೆತ. ಇದೆಲ್ಲಕ್ಕೂ ಮಿಗಿಲಾಗಿ ನನ್ನ ಹುಬ್ಬಿಗೆ ಗಾಯ."

ಇದು ಮೊದಲು ಬಂದು ಭಾರತದಲ್ಲಿ ನೆಲೆಸಿದ ಆಂಗ್ಲರ ಸ್ಥಿತಿಗತಿ. ಈ ನಿವಾಸಿಗಳು ೧೭ನೆಯ ಶತಮಾನದ ಮೊದಲ ೮೦ ವರ್ಷ ಯಾವ ಚರ್ಚ್ ಕಟ್ಟದೆ ತಮ್ಮ ಕಾರ್ಯ ನಿರ್ವಹಿಸಿದರು ಎಂದು ತಿಳಿದರೆ ಸಾಕು. ೧೮ನೆಯ ಶತಮಾನದಲ್ಲಿ ಈ ಸ್ಥಿತಿಯಲ್ಲಿ ಸುಧಾರಣೆಯಾಗಲಿಲ್ಲ. ಭಾರತದಲ್ಲಿದ್ದ ೧೮ನೆಯ ಶತಮಾನದ ಆಂಗ್ಲರ ನಡವಳಿಕೆ ಕುರಿತ ಕಾಯೆ ಅವರ ಮಾತು ಹೀಗಿವೆ : ವಾರನ್ ಹೇಸ್ಟಿಂಗ್ಸ್‌ನ ಸುದೀರ್ಘ ಆಡಳಿತಾವಧಿಯ ಆಂಗ್ಲೊ–ಇಂಡಿಯನ್ ಸಮಾಜದ ಸ್ಥಿತಿಯಲ್ಲಿ ಹೊಗಳುವಂಥದೇನೂ ಇಲ್ಲ......ಕ್ರೈಸ್ತ ಧರ್ಮಕ್ಕೆ ಆದರ್ಶವಾಗಿರ ಬೇಕಿದ್ದವರೇ ತಮ್ಮ ಕಾಯ್ದೆ ಬಾಹಿರ ನೀತಿಗಳಿಂದಾಗಿ ಭೀಕರ ತಪ್ಪು ಮಾಡುತ್ತ ಕೆಟ್ಟ ಉದಾಹರಣೆಗಳಾದರು. ಹೇಸ್ಟಿಂಗ್ಸ್ ಮತ್ತೊಬ್ಬನ ಹೆಂಡತಿಯನ್ನು ಅವಳ ಗಂಡನ ಅನುಮತಿ ಪಡೆದು ಕಿತ್ತುಕೊಂಡ. ಫ್ರಾನ್ಸಿಸ್ ಅದನ್ನೇ ಅನುಮತಿಯಿಲ್ಲದೆ ಮಾಡಿದ. ಸಮಾಜದ ಪ್ರಮುಖ ವ್ಯಕ್ತಿಗಳೇ ಹೀಗೆ ನಡೆದುಕೊಳ್ಳುತ್ತಿದ್ದಾಗ ಇತರ ಅಮುಖ್ಯ ಸದಸ್ಯರಿಂದ ನೈತಿಕತೆ ಶಿಸ್ತುಗಳ ನಿರೀಕ್ಷಣೆ ಕಷ್ಟ. ಭಾರತದ ಈ ಕಾಲಾವಧಿಯ ಆಂಗ್ಲರ ಕ್ರೈಸ್ತ ಧರ್ಮದ ಸ್ಥಿತಿ ತುಂಬ ನಿರಾಶಾದಾಯಕವಾಗಿತ್ತು ಎನ್ನುವುದು ವಾಸ್ತವ ಸತ್ಯ. ಇವರು ಭಾರೀ ಕುಡುಕರಾಗಿದ್ದರು ಮತ್ತು ಸೂಳೆಯರನ್ನು ಹೊಂದಿರುವುದು ಒಂದು ರೀತಿಯಲ್ಲಿ ಕಾಯ್ದೆಯೇ ಆಗಿತ್ತು. ಇದಕ್ಕೆ ಅಪವಾದಗಳಿದ್ದಂತೆ ಕಾಣುತ್ತಿಲ್ಲ. ಆಂಗ್ಲ ಸಭ್ಯಗೃಹಸ್ಥರು ಹೆಚ್ಚಿನ ಸಂಖ್ಯೆಯ 'ಜನಾನಾ' ಇಟ್ಟುಕೊಳ್ಳುತ್ತಿದ್ದುದು ಸಾಮಾನ್ಯವಾಗಿತ್ತು. ಅಂದಿನ ದಿನಮಾನಗಳಲ್ಲಿ ಪ್ರಚೋದಕ ಮನರಂಜನೆಗಳಿಗೆ ಕೊರತೆಯಿರಲಿಲ್ಲ. ನೃತ್ಯಕೂಟ, ಮೊಗವಾಡ ಮೇಳ, ಕುದುರೆ ಜೂಜು, ರಂಗಭೂಮಿ ಚಟುವಟಿಕೆ ಮುಂತಾದುವು ವಿಶೇಷತಃ ಚಳಿಗಾಲದಲ್ಲಿ ಮತ್ತು ಇತರ ಹಿತಕರ ವಾತಾವರಣದಲ್ಲಿ ಈ ಸಮುದಾಯಕ್ಕೆ ಆಮೋದ ನೀಡುತ್ತಿದ್ದುವು. ಅನೇಕರು ಸ್ವಲ್ಪಕಾಲವೇ ಇದ್ದರೂ, ಸಾಧ್ಯವಿದ್ದಷ್ಟು ಸುಖಾನುಭವದಿಂದಲೇ ಇರಬೇಕೆಂದು ನಿಶ್ಚಯಿಸಿದ್ದರು."

* * *

ಕುಡುಕತನ ಸರ್ವಸಾಮಾನ್ಯವಾಗಿದ್ದು ಸ್ಪಷ್ಟ ಆತಂಕಕಾರಿಯಾಗಿತ್ತು. ಅದು ಆ ಕಾಲಾವಧಿಯ ಒಂದು ಫ್ಯಾಷನ್ ಮತ್ತು ಸುತ್ತುವರೆದ ದೌರ್ಬಲ್ಯವಾಗಿತ್ತು. ಕಲ್ಕತ್ತಾದಂಥ ದೊಡ್ಡ ನಗರಗಳಲ್ಲಿ ಸದಾ ಮನರಂಜನೆಗಳನ್ನು ಏರ್ಪಡಿಸಲಾಗುತ್ತಿರಲಿಲ್ಲ. ನೃತ್ಯ, ಭೋಜನ ಕೂಟಗಳು ಕಾಮ ವ್ಯಾಪಾರಕ್ಕಿಂತ ಕಡಿಮೆಯೇನೂ ಆಗಿರಲಿಲ್ಲ. ಅವರಿಗೆ ಸಭ್ಯ ನೃತ್ಯಕೂಟ ಅಸಾಧ್ಯವಾಗಿತ್ತು; ಹೊಡೆದಾಟ ಅದರ ಜಾಗ ಆಕ್ರಮಿಸಿತ್ತು. ಸಾರ್ವಜನಿಕ ಕೂಟಗಳಲ್ಲಿ ಒಂದೆರಡು ದ್ವಂದ್ವ ಯುದ್ಧಗಳಾಗದಿದ್ದ ದಿನ ಅತ್ಯಂತ ಸಂತೋಷದ

ದಿನವೆಂದು ಭಾವಿಸಲಾಗುತ್ತಿತ್ತು. ಅಂದಿನ ದಿನಮಾನಗಳಲ್ಲಿ ಪ್ರಸಿದ್ಧವಾಗಿದ್ದ ಸೆಲ್ಬೀ ಕ್ಲಬ್‌ಗೆ ಕಲ್ಕತ್ತಾದ ಸಭ್ಯ ಗೃಹಸ್ಥರು ಕುಡಿಯಲು ಹೋಗುತ್ತಿದ್ದರು. ಕೆಲವು ಸಲ ಪಾನಮತ್ತರಾದ ಹಲವರು ತಮ್ಮ ಆಟ ವಿನೋದಗಳ ಸ್ಪರ್ಧೆಗಾಗಿ ಒಂದು ಸಾವಿರ ಬಂಗಾರ ಮೊಹರ್‌ವರೆಗೂ ಜೂಜು ಕಟ್ಟುವುದು; ಅತಿ ಕ್ಷುಲ್ಲಕ ವಿಷಯವೆಂದು ಅವರ ಭಾವನೆಯಾಗಿತ್ತು. ಇಸ್ಪೇಟಿನ ಆಟಕ್ಕಾಗಿ ಅನೇಕ ಸಲ ರಾತ್ರಿಯಿಡೀ ಕೂತಿದ್ದು ಆಕಸ್ಮಾತ್ ಅದು ಶನಿವಾರವಾಗಿದ್ದು ಬೆಳಗಾದರೆ ಮಾರನೆಯ ದಿನವಿಡೀ ಆಟ ಮುಂದುವರೆಯುತ್ತಿತ್ತು.

* * *

ಗೌರವಪೂರ್ಣ ಮದುವೆ ವಿರಳವಾಗಿತ್ತು.....ಈಸ್ಟ್ ಇಂಡಿಯಾ ಕಂಪನಿಯ ನಿರ್ದೇಶಕರು ತಮ್ಮ ಜನರ ನೀತಿ ಸುಧಾರಣೆಯ ಒಳ್ಳೆಯ ಕಾರ್ಯದಲ್ಲಿ ತೊಡಗಿದ್ದರು. ಗೌರವಪೂರ್ಣ ಮದುವೆಗಳಿಂದ ಇದು ಸಾಧ್ಯವೆಂದು ಭಾವಿಸಿದ್ದರು. ಸೈನಿಕರ ಪತ್ನಿಯರಿಗೆ ಪೂರೈಸುವ ಕಚ್ಚಾ ಸಾಮಗ್ರಿಗಳಷ್ಟೇ ಅಲ್ಲದೆ ಸಭ್ಯ ಮಹಿಳೆಯರೆಂದು ಕರೆಯುತ್ತಿದ್ದವರಿಗಾಗಿ ವ್ಯಾಪಾರಸ್ಥರಿಗೆ ಮತ್ತು ಫ್ಯಾಕ್ಟರಿಗಳಿಗೆ ಉತ್ತಮ ವಸ್ತು ಜಿನಸಿಗಳನ್ನು ಕೂಡ ಪೂರೈಸುತ್ತಿದ್ದರು. ಅದರಲ್ಲಿ ವಿವಾಹಾನುಕೂಲ ಸರಕು ಕೂಡ ಇರುತ್ತಿತ್ತು. ಇದು ಅಷ್ಟೊಂದು ಯಶಸ್ವಿಯಾಗಲಿಲ್ಲ. ಮದುವೆಯಾದ ಕೆಲವು ಮಹಿಳೆಯರು ವಿವಾಹ ಬಂಧನ ಕುರಿತು ಉದಾಸೀನ ನಡವಳಿಕೆ ತೋರಿದರು. ಅವಿವಾಹಿತರಾದವರ ವಿಚಾರವಂತೂ ಹೇಳುವಂತೆಯೇ ಇರಲಿಲ್ಲ. ಸಾರ್ವಜನಿಕ ಹಣ ಅವರಿಗಾಗಿ ಖರ್ಚಾಗುತ್ತಿತ್ತು. ಅದು ಅವರ ಕೇವಲ ಜೀವನ ನಿರ್ವಹಣೆಗೆ ಸಾಕಾಗುತ್ತಿರಲಿಲ್ಲ. ಹೀಗಾಗಿ ಅಂಥವರು ಏನೆಲ್ಲ ಅಪಮಾರ್ಗ ಹಿಡಿದರು, ಕುಡಿತದ ಚಟ ಅಂಟಿದವರ ದುಬಾರಿ ಮದ್ಯ ಇತ್ಯಾದಿಗಳಿಗಾಗಿ ಏನೆಲ್ಲ ನಡೆಯುತ್ತಿತ್ತು.

ಈ ಬಗೆಯ ಕಳಂಕಿತ ನಡವಳಿಕೆಗಳು ಎಲ್ಲ ಕಡೆಗೂ ಹರಡಿ ಕುಪ್ರಸಿದ್ಧಿ ಪಡೆದುವು. ಸೂರತ್‌ದ ಪ್ರೆಸಿಡೆಂಟ್ ಮತ್ತು ಕೌನ್ಸಿಲ್ ಸದಸ್ಯರು ಮುಂಬೈ ಡೆಪ್ಯೂಟಿ ಗವರ್ನರ್ ಮತ್ತು ಕೌನ್ಸಿಲ್ ಸದಸ್ಯರಿಗೆ ಹೀಗೆ ಬರೆದರು : "ನಮ್ಮ ಧರ್ಮ ಮತ್ತು ಸರಕಾರದ ದೃಷ್ಟಿಯಲ್ಲಿ ಕೆಲವು ಮಹಿಳೆಯರು ತಮ್ಮ ದುರ್ನಡತೆಯಿಂದ ಕೆಟ್ಟ ಹೆಸರು ತಂದಿದ್ದಾರೆ ಎಂದು ತಾವು ನಮಗೆ ನೋಟೀಸ್ ನೀಡಿದ ಪ್ರಕಾರ ಕೀರ್ತಿವೆತ್ತ ಕಂಪನಿಯ ಹೆಸರಿನಲ್ಲಿ ತಾವು ಎಲ್ಲರಿಗೂ ಒಂದು ಈ ರೀತಿಯ ಯೋಗ್ಯ ಎಚ್ಚರಿಕೆ ಕೊಡಬೇಕೆಂದು ನಾವು ಕೋರುತ್ತೇವೆ. ಎಲ್ಲರೂ ಹೆಚ್ಚು ಶಾಂತಿಪೂರ್ಣ ಕ್ರೈಸ್ತ ಧಾರ್ಮಿಕ ಕಾರ್ಯಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಳ್ಳಬೇಕು. ಇಲ್ಲವಾದರೆ ವಿದೇಶಗಳಿಗೆ ಹೋಗುವ ಅವರ ಸ್ವಾತಂತ್ರ್ಯವನ್ನು ಅವರಿಂದ ಕಿತ್ತುಕೊಳ್ಳಲಾಗುವುದು. ಇಂಗ್ಲೆಂಡ್‌ಗೆ ತೆರಳುವ ಹಡಗಿನ ವ್ಯವಸ್ಥೆಯಾಗುವವರೆಗೆ ಅವರೆಲ್ಲರಿಗೂ ಬರೀ ಬ್ರೆಡ್ ನೀರು ಕೊಡಲಾಗುವುದು.[೧]

ಸಮಕಾಲೀನ ದಾಖಲೆಗಳಿಂದ ಸಂಗ್ರಹಿಸಲಾದ ಈ ಕೆಳಗಿನ ಸಂಗತಿಗಳಿಂದ ಅಂದಿನ ಕ್ರಿಶ್ಚಿಯನ್ ಸಮುದಾಯದ ಕೆಲವರ ನಡವಳಿಕೆ ಮತ್ತು ನೀತಿಗಳು ಎಷ್ಟು ಅಧಃಪತನಗೊಂಡಿದ್ದುವು ಎನ್ನುವುದು ತಿಳಿಯುತ್ತದೆ. ೧೮೮೯ರಲ್ಲಿ ಪ್ರಕಟವಾದ ಕ್ಯಾ. ವಿಲಿಯಮ್ಸ್ ತಮ್ಮ *'ಇಂಡಿಯನ್ ವೇಡ್ ಮೆಕಮ್'* ಪುಸ್ತಕದಲ್ಲಿ ಹೀಗೆ ವಿವರಿಸಿದ್ದಾರೆ : "ನನಗೆ ಅನೇಕ ಪ್ರಸಂಗಗಳು ಗೊತ್ತು. ಇಬ್ಬರು ಮಹಿಳೆಯರು ಕೂಡಿಯೇ ಒಬ್ಬ ಹಿರಿಯ ಸೈನಿಕ ವ್ಯಕ್ತಿಯ ಅಧೀನದಲ್ಲಿದ್ದಾರೆ. ಈ ವ್ಯಕ್ತಿ ಕಿರಿಯ, ಮಧ್ಯ ವಯೋಮಾನದ ಕನಿಷ್ಠ ಹದಿನಾರು ಜನ ಮಹಿಳೆಯರನ್ನು ಕೂಡಿಹಾಕಿ ಸಮಾಧಾನಪಟ್ಟುಕೊಂಡಿದ್ದಾನೆ ಅವರ ಒಬ್ಬ ಮಿತ್ರ, 'ಇದೆಲ್ಲ ಹೇಗೆ ನಿಭಾಯಿಸುತ್ತೀ' ಎಂದು ಕೇಳಿದರೆ, 'ಅವರಿಗೆ ಒಂದಷ್ಟು ಅನ್ನ ಕೊಡಲಾಗುತ್ತದೆ ಅಷ್ಟೆ'

---

೧. *ಭಾರತದಲ್ಲಿ ಕ್ರೈಸ್ತ ಧರ್ಮ* : ಕಾಯೆ, ಪುಟ ೧೦೬

ಎಂದು ಉತ್ತರಿಸಿದ. ಇಂಗ್ಲೆಂಡ್‌ನಿಂದ ಬಂದ ಒಬ್ಬ ಲವಲವಿಕೆಯ ಯುವತಿಗೆ ಇದೇ ವ್ಯಕ್ತಿ ಈ ಮನೆಯ ವಿಳಾಸವನ್ನೇ ಕೊಟ್ಟಿದ್ದನಂತೆ. ಅವಳು ತಾನು ವಾಸವಾಗಿದ್ದ ಮನೆಯ ಯಜಮಾನಿಯನ್ನು ಕೇಳಿದಾಗ ಆ ವಿಳಾಸದ ಮನೆಯ ವಿವರ ಹೀಗಿತ್ತಂತೆ : 'ಆತ್ಮೀಯಳೇ ಹದಿನಾರರ ಒಂದು ಭಾಗ ನೀನು ಹೇಗೆ ಹಂಚಿಕೊಳ್ಳುತ್ತೀ?'

ಇದು, ಭಾರತದಲ್ಲಿದ್ದ ಆಂಗ್ಲ ಪುರುಷರ ಅಸ್ತವ್ಯಸ್ತ ಸ್ಥಿತಿ. ಬ್ರಿಟಿಷ್ ಜನರಿಗೆ ದೇವರಿದ್ದಾನೆಯೇ? ಅವರಿಗೆ ಯಾವುದಾದರೂ ರೀತಿ ನೀತಿಗಳಿವೆಯೇ? ಇತ್ಯಾದಿ ಕುರಿತು ಭಾರತೀಯರಿಗೆ ಅಚ್ಚರಿಯುಂಟಾಗಿದ್ದರೆ ಸೋಜಿಗವಲ್ಲ. ಕ್ರೈಸ್ತ ಧರ್ಮ ಮತ್ತು ಕ್ರೈಸ್ತರ ಬಗ್ಗೆ ಅವನ ಅನಿಸಿಕೆಯೇನು ಎಂದು ಒಬ್ಬ ಭಾರತೀಯನನ್ನು ಕೇಳಿದಾಗ ಅವನು ತನ್ನ ಹರುಕುಮುರುಕು ಇಂಗ್ಲೀಷ್‌ನಲ್ಲಿ ಉತ್ತರಿಸಿದ : ಕ್ರಿಶ್ಚಿಯನ್ ಧರ್ಮ ಭೂತದ ಧರ್ಮ; ಕ್ರಿಶ್ಚಿಯನ್‌ರು ಬಹಳ ಕುಡುಕರು. ಅವರು ಬಹಳ ತಪ್ಪು ಮಾಡುತ್ತಾರೆ, ಹೊಡೆದಾಡುತ್ತಾರೆ, ಬಹಳ ಬೈದಾಡುತ್ತಾರೆ." ಅಂದಿನ ಸ್ಥಿತಿಗತಿಗಳಿಗೆ ಈ ಮಾತು ವಿರೋಧವಾಗಿತ್ತೆಂದು ಯಾರು ಹೇಳಬಲ್ಲರು?

ಅಂದಿನ ದಿನಮಾನಗಳಲ್ಲಿ ಸ್ವತಃ ಇಂಗ್ಲೆಂಡ್‌ನಲ್ಲಿ ಕೂಡ ಅಷ್ಟೊಂದೂ ನೈತಿಕ ಕಟ್ಟುಕಟ್ಟಳೆಗಳ ಭಾರವಿರಲಿಲ್ಲ. ಇಂಗ್ಲಿಷ್ ಜನ ತಮ್ಮ ಗೃಹಜೀವನದ ಸಭ್ಯತೆಗಳಿಗಾಗಿ ಅಷ್ಟೊಂದು ಹೆಸರು ಪಡೆದಿರಲಿಲ್ಲ. ಸ್ವಸ್ಥಳದಲ್ಲಿಯೇ ಅವರು ಕುಬ್ಜರಾಗಿ, ಕೀಳಾಗಿರುತ್ತಿದ್ದರು; ಮತ್ತು ವಿದೇಶಗಳಿಗೆ ಹೋದಾಗ ದುಂದುವೆಚ್ಚ ಮಾಡುತ್ತಿದ್ದರು. ಇಡೀ ದೇಶ ವ್ಯಭಿಚಾರದಿಂದಾಗಿ ಮಲಿನಗೊಂಡಿದೆ. ವೈಟ್ ಹಾಲ್ ಮುದ್ರೆ ನಮ್ಮ ದಿನನಿತ್ಯದ ಬದುಕಿನ ಮೇಲೆ. ಕಂಪನಿ ಹಡಗಿನ ಜೀವನದಲ್ಲೂ ಇದು ಹಬ್ಬಿತು. ವಿಧರ್ಮೀಯ ದೇಶದಲ್ಲಿ ಇದೆಲ್ಲ ಬಹು ಸುಲಭವಾಗಿ ಪರಿಣಾಮ ಬೀರುವಲ್ಲಿ ಸಂಶಯವಿಲ್ಲ. ೧೭ ಮತ್ತು ೧೮ನೆಯ ಶತಮಾನದ ಆಂಗ್ಲರ ಈ ಅನೈತಿಕತೆಯ ಕಾರಣಗಳು ಏನೇ ಇರಲಿ, ಅದರಿಂದ ಕ್ರಿಶ್ಚಿಯನ್ ಧರ್ಮಕ್ಕೆ ಕೆಟ್ಟ ಹೆಸರು ಬಂದದ್ದು ಮತ್ತು ಅದರ ಪ್ರಚಾರಕ್ಕೆ ದೊಡ್ಡ ಅಡೆತಡೆಯುಂಟುಮಾಡಿದ್ದು ಮಾತ್ರ ನಿಜ.

ಕ್ರಿಶ್ಚಿಯನ್ ಧರ್ಮ ಪ್ರಚಾರದಲ್ಲಿ ಉಂಟಾದ ಮತ್ತೊಂದು ದೊಡ್ಡ ಆತಂಕವೆಂದರೆ ಮತಾಂತರ ಕ್ಷೇತ್ರದ ಆಧಿಪತ್ಯಕ್ಕಾಗಿ ಕ್ಯಾಥೋಲಿಕ್ ಮತ್ತು ಕ್ಯಾಥೋಲಿಕ್ ಅಲ್ಲದ ಪ್ರಚಾರಕ ಮಂಡಲಿಗಳ ನಡುವೆ ನಡೆದ ಹೋರಾಟ.

೧೫೪೧ರಲ್ಲಿ ಫ್ರಾನ್ಸಿಸ್ ಝೇವಿಯರ್ ಆಗಮನದಿಂದ ಭಾರತದಲ್ಲಿ ಕ್ಯಾಥೋಲಿಕ್ ಚರ್ಚ್ ಕ್ರೈಸ್ತ ಧರ್ಮ ಪ್ರಚಾರ ಕ್ಷೇತ್ರದಲ್ಲಿ ಕಾಲಿಟ್ಟಿತು. ಅವರು ಪೋಪ್ ಅವರ ಬೆಂಬಲಕ್ಕಾಗಿ ಸ್ಥಾಪಿತಗೊಂಡ ಹೊಸ 'ಯೇಸು ಸಮಾಜ'ದ ಪ್ರಥಮ ಧರ್ಮ ಪ್ರಚಾರಕರು. ಇದಕ್ಕೂ ಮೊದಲು ಭಾರತದಲ್ಲಿ ವಿಶೇಷತಃ ದಕ್ಷಿಣದಲ್ಲಿ ಸಿರಿಯನ್ ಚರ್ಚಿಗೆ ಸಂಬಂಧಿಸಿದ ಬಹುಸಂಖ್ಯೆಯ ಕ್ರಿಶ್ಚಿಯನ್ ಜನ ವಾಸವಾಗಿದ್ದರು. ಮಲಬಾರ್ ಕರಾವಳಿ ಗುಂಟ ನೆಲೆಸಿದ ಈ ಜನ ತಾವು ದೇವಪ್ರೇರಿತನಾಗಿ ಬಂದ ಥಾಮಸ್–ವಂಶಿಕ– ಅವರ ಮೂಲದವರೆಂದು ಹೇಳಿಕೊಳ್ಳುತ್ತಿದ್ದರು. ಈತನೇ ಸಿರಿಯಾ, ಸಿಲೀಸಿಯಾಗಳಿಗೆ ಹೋಗಿ ಚರ್ಚ್‌ಗಳನ್ನು ದೃಢಪಡಿಸಿದನೆಂದು ಅವರ ನಂಬಿಕೆಯಾಗಿತ್ತು. ಅವರ ದೃಷ್ಟಿಯಲ್ಲಿ ಸಿರಿಯಾ ಅವರ ಆಧ್ಯಾತ್ಮಿಕ ನೆಲೆಯಾಗಿತ್ತು. ಅವರು ಬ್ಯಾಬಿಲೋನ್ ಪಿತೃತ್ವದ ಪರಮಾಧಿಕಾರವನ್ನು ಒಪ್ಪಿಕೊಳ್ಳುತ್ತಿದ್ದರು. ರೋಮ್ ಅಥವಾ ಅಲ್ಲಿಯ ಪೋಪ್ ಬಗ್ಗೆ ಅವರಿಗೇನೂ ಗೊತ್ತೇ ಇರಲಿಲ್ಲ. ಮಹಮ್ಮದೀಯ ಶಕ್ತಿ ಪಪಸಿಯ ಊರ್ಜಿತ ಕಾಲದಲ್ಲಿ ಇತರ ದೇಶಗಳನ್ನು ಹಿಮ್ಮೆಟ್ಟಿಸಿ ಪಶ್ಚಿಮ ದೇಶಗಳಿಗಾಗಿ ಭಾರತದ ಬಾಗಿಲು ಮುಚ್ಚಲ್ಪಟ್ಟವು. ಇದರಿಂದಾಗಿ ಭಾರತದ ಸಿರಿಯನ್ ಚರ್ಚ್‌ಗಳು ರೋಮನ್ ಚರ್ಚ್‌ಗಳಿಂದ ಪಾರಾಗಿ ಉಳಿದುವು. ಸಿರಿಯನ್ ಮತ್ತು ರೋಮನ್ ಚರ್ಚ್ ಇವೆರಡರಲ್ಲಿ ನಿಜವಾದ ಕ್ರಿಶ್ಚಿಯನ್ ಧರ್ಮ ಯಾವುದು ಎನ್ನುವುದು ಇಲ್ಲಿ ಅಪ್ರಸ್ತುತ.

ಆದರೆ ಸಿರಿಯನ್ ಚರ್ಚ್ ಬಂದ ಮೇಲೆ ಭಾರತದಲ್ಲಿದ್ದ ಪೋರ್ಚುಗೀಸ್ ಜನ ಪ್ರತಿನಿಧಿಸುತ್ತಿದ್ದ ಕ್ಯಾಥೋಲಿಕ್ ಚರ್ಚ್ ಅನ್ನು ಅಪಖ್ಯಾತಿಗೀಡು ಮಾಡಿದರು. ತಮ್ಮದನ್ನು ಬಿಟ್ಟು ಇತರರದು ವಿಧರ್ಮೀಯ ಇತ್ಯಾದಿ ಪ್ರಸಾರ ಮಾಡಿದರು. ಪೋರ್ಚುಗಲ್‌ದ ರೋಮನ್ ಚರ್ಚಿನ ಉಲ್ಲಂಘನಾ ಧೋರಣೆಯಿಂದ ಸಿರಿಯನ್ ಕ್ರೈಸ್ತ ಜನರು ಕುಗ್ಗಿ ಗಾಬರಿಗೊಂಡರು ಮತ್ತು ತಾವೇ ನಿಜವಾದ ಕ್ರಿಶ್ಚಿಯನ್‌ರು, ಮೂರ್ತಿಪೂಜಕರಲ್ಲ ಎಂದು ಸಾರಿಕೊಂಡರು. ಮತ್ತೊಂದು ಸಂಗತಿ : ಮಲಬಾರ್ ಕ್ರಿಶ್ಚಿಯನ್ನರು ರೋಮನ್ ಪರಮಾಧಿಕಾರವನ್ನಾಗಲಿ, ರೋಮನ್ ಸಿದ್ಧಾಂತವನ್ನಾಗಲಿ ಎಂದೂ ಒಪ್ಪಿಕೊಳ್ಳಲಿಲ್ಲ. ಹೀಗೆ ಎರಡೂ ಚರ್ಚುಗಳಲ್ಲಿ ಘರ್ಷಣೆಯ ಅಂಶಗಳಿದ್ದವು ; ಮತ್ತು ಪರಸ್ಪರ ಸಂಧಾನ ಯತ್ನ ಅವರ ನಡುವಿನ ಅಧಿಕ ದಳ್ಳುರಿಗೆ ಮಾತ್ರ ಪುಟಕೊಟ್ಟಿತು.

ರೋಮನ್ ಚರ್ಚ್‌ದವರು ತಮ್ಮನ್ನು ಪಾಷಂಡಿಗಳೆಂದು ಪರಿಗಣಿಸುತ್ತಾರೆ ಎನ್ನುವುದನ್ನು ಅರಿತುಕೊಳ್ಳಲು ಗೋವಾದ ಅನುಸಂಧಾನಕಾರರಿಗೆ ಬಹಳ ಕಾಲ ಬೇಕಾಗಲಿಲ್ಲ. ರೋಮನ್ ಚರ್ಚ್ ಅವರ ಮೇಲೆ ತೋಳದಂತೆ ಎರಗಿತು. ಈ ವಿರೋಧ ಎಷ್ಟಿತ್ತು ಎನ್ನುವುದನ್ನು ಈಗಾಗಲೇ ಪ್ರಸ್ತಾಪಿಸಲಾಗಿರುವ ಕೃತಿಯಲ್ಲಿ ಶ್ರೀಮಾನ್ ಕಾಯೆ ಹೇಳಿದ್ದಾರೆ. ರೋಮ್ ಚರ್ಚಿನ ವಿರೋಧವನ್ನು ಎದುರಿಸಲು ಬಂದ ಮೊದಲ ಸೀರಿಯಾ ಚರ್ಚ್ ಬಿಷಪ್ ತನ್ನ ಕತ್ತಲ ನೆಲಮಾಳಿಗೆಯ ಸಂಧಾನದ ಸೆರೆಮನೆಯಲ್ಲಿ ತನ್ನ ಧೈರ್ಯ ಮತ್ತು ಪ್ರಾಮಾಣಿಕತೆಗಾಗಿ ಪಶ್ಚಾತ್ತಾಪಪಡಬೇಕಾಯಿತು. ಎರಡನೆಯವನಿಗೂ ಅದೇ ಗತಿ. ಮೂರನೆಯವನ ಕಷ್ಟ ನಷ್ಟ ಗಮನೀಯ. ಅನುಕಂಪಕ್ಕೆ ಅರ್ಹ. ಈತ ರೋಮ್‌ನ ಪೋಪನ ಪರಮಾಧಿಕಾರ ಒಪ್ಪಿಕೊಳ್ಳದೆ ಅನೇಕ ವಿಚಾರಣೆ ಕಷ್ಟ ತಾಪಗಳಿಗೆ ಗುರಿಯಾಗಿ ಕೊನೆಯುಸಿರೆಳೆದ. ರೋಮ್ ಚರ್ಚ್ ತನ್ನ ಬಲವಾದ ಹಸ್ತ ಚಾಚಲು ಹೊಂಚು ಹಾಕಿದ್ದ ಇಂಥ ಸಮಯದಲ್ಲಿಯೇ ಅಗತ್ಯವಾದ ಕೃಪಾದೃಷ್ಟಿ ಮತ್ತು ಬೆಂಬಲ ಒದಗಿಸಲು ಅವರ ಯಾವ ಚರ್ಚ್‌ಗಳಲ್ಲಿಯೂ ಬಿಷಪ್ ಇಲ್ಲದಂತಾಯಿತು.

ಮೊದಲು ಒಂದು, ಬಳಿಕ ಮತ್ತೊಂದು ಹೀಗೆ ಒಂದೊಂದೇ ಚರ್ಚ್ ಇವನಿಗೆ ಶರಣಾಗತವಾದುವು. ಆ ಜನರಿಗೆ ಅಪಾಯ ತೊಂದರೆಗಳ ದಾಳಿ. ಎಷ್ಟೋ ಸಲ ದಾಳಿ ಎದುರಾಯಿತು; ಎಷ್ಟೋ ಸಲ ಅದನ್ನು ಸೋಲಿಸಿದ. ಸಿರಿಯಾ ಚರ್ಚ್ ಶಕ್ತಿಯನ್ನು ಎದುರಿಸಲು ತನಗೆ ಅಸಾಧ್ಯವಾದಾಗ ಸ್ಥಳೀಯ ಆಳರಸರ ನೆರವು ಕೋರುತ್ತಿದ್ದ. ಪ್ರತಿಭಟನೆಗಳಿಗೆ ಬೇಸತ್ತು, ಬಹಿಷ್ಕಾರದ ಬೆದರಿಕೆಗೆ ಭಯಗೊಂಡು ಕೊನೆಗೆ ರೋಮನ್ ಪೀಠಾಧಿಕಾರಿಗೆ ಅಲ್ಲಿಯ ಕಿರಿ ಬಿಷಪ್ ಶರಣಾಗತನಾದ. ಮೆನೆಜಿಸ್, ಧರ್ಮಾಧಿಕಾರಿಗಳ ಸಭೆಗೆ ಆಜ್ಞೆ ಮಾಡಿದ. ೧೫೯೯ರ ಜೂನ್ ತಿಂಗಳು ದಿಯಾಮ್‌ಪರ್‌ದಲ್ಲಿ ಚರ್ಚ್ ಜನರ ಸಭೆ ಸೇರಿತು. ಮೊದಲ ಸಭೆ, ಒಳಗೊಳಗೆ ಗೊಣಗಾಟವಿದ್ದರೂ ಶಾಂತವಾಗಿಯೇ ಜರುಗಿತು. ಆಜ್ಞೆಗಳನ್ನು ಓದಲಾದ ಎರಡನೆಯ ಸಭೆಯ ಮಧ್ಯದಲ್ಲಿ ಆರ್ಚ್ ಬಿಷಪ್ ಬ್ಯಾಬಿಲಾನ್ ಪಿತೃತ್ವ ತೊರೆದು ಹೊಸ ನಿಷ್ಠೆಯನ್ನು ಸ್ಥಿರೀಕರಿಸುವ ಸಮಾರಂಭದ ಸಮಯದಲ್ಲಿ ತಡೆಯುಂಟಾಯಿತು. ಸಿರಿಯಾಕ್ಕೆ ಸಂಬಂಧಿಸಿದವರು ಬಹಿರಂಗವಾಗಿ ಸಿಡಿದೆದ್ದರು. ಶ್ರದ್ಧೆಯನ್ನು ಒಪ್ಪಿಕೊಳ್ಳುವ ಕ್ರಮವನ್ನು ಅವರು ಬಲವಾಗಿ ಪ್ರತಿಭಟಿಸಿ, ನೆರೆದ ಧರ್ಮಾಧಿಕಾರಿ ಬೋಧಕ ಜನಸಮೂಹದ ಎದುರು ಹೀಗೆ ನಿಷ್ಠೆಯನ್ನು ಒಪ್ಪಿಕೊಂಡರೆ ಅದಕ್ಕೂ ಮುಂಚೆ ತಾವು ಕ್ರೈಸ್ತ ಮತದವರಾಗಿರಲಿಲ್ಲ ಎಂದು ಅರ್ಥವಾಗುವುದಿಲ್ಲವೆ ಎಂದು ಪ್ರಶ್ನಿಸಿದರು. ಆದರೆ ಮೆನೆಜಿಸ್ ತಾನೇ ಸ್ವತಃ ಪೌರ್ವಾತ್ಯ ಚರ್ಚ್‌ಗಳ ಹೆಸರಿನಲ್ಲಿ ಸಾರ್ವಜನಿಕರೆದುರು 'ಒಪ್ಪಿಗೆ' ಸಾರಿ ಅವರ ಆತಂಕಗಳನ್ನು, ಸಂಶಯಗಳನ್ನು ನಿವಾರಿಸಿದ ಆಮೇಲೆ ವಿಖ್ಯಾತನಾಗಿ ಕಾರ್ಯನಿರ್ವಹಿಸಿದ ಸಿರಿಯನ್ ಪಾದ್ರಿ, 'ಒಪ್ಪಿಗೆ'ಯನ್ನು ಮಲಯಾಳಿ ಭಾಷೆಯಲ್ಲಿ ಓದಿ ಹೇಳಿದ. ನೆರೆದ ಜನ ಮೊಳಕಾಲೂರಿ, ಪ್ರತಿ ಶಬ್ದವನ್ನೂ ಪುನರುಚ್ಚರಿಸಿದರು.

ಹೀಗೆ ಸಿರಿಯಾ ಕ್ರಿಶ್ಚಿಯನ್‌ರು ಬಾಗಿ, ರೋಮ್‌ದ ನೊಗಕ್ಕೆ ತಮ್ಮ ಕತ್ತು ನೀಡಿದರು. ತನಗೆ ದೊರೆತ ಪ್ರಯೋಜನದ ಸದುಪಯೋಗ ಮಾಡಿಕೊಳ್ಳಲು ನಿರ್ಧರಿಸಿದ ಮೆನೆಜಿಸ್ ತನ್ನ ಸಾಧನೆಯ ಹೊಳಪಿನಲ್ಲಿ ಮೈಮರೆಯಲಿಲ್ಲ; ನಿಷ್ಕ್ರಿಯನಾಗಲಿಲ್ಲ. ಧಾರ್ಮಿಕ ನಿಷ್ಠೆಯಿಂದಾಗಿಯೋ ಅಥವಾ ಮಹತ್ವಾಕಾಂಕ್ಷೆಯ ಫಲವಾಗಿಯೋ ಒಟ್ಟು ಅವನು ಪ್ರಚೋದಿತನಾಗಿ ಸದಾ ಶ್ರಮಿಸಿದ. ಸಿರಿಯಾ ಕ್ರೈಸ್ತರ ಕತ್ತಿಗೆ ನೊಗ ಹೇರಿ ಸುಮ್ಮನಿರದೆ, ಎಲ್ಲ ಮಾರ್ಗಗಳಿಂದಲೂ ತನ್ನ ಕಾರ್ಯ ಮುಂದುವರಿಸಿದ. ಚರ್ಚ್‌ಗಳ ಶರಣಾಗತಿಯಲ್ಲಿ ಉದಾಸೀನತೆ ರೋಷಗಳಿದ್ದುವು. ಆದರೆ ಅವರಲ್ಲಿಯೂ ಕೆಲವು ಬುದ್ಧಿವಂತ ದೂರದೃಷ್ಟಿಯ ಜನರಿದ್ದರು. ಅವರು ೧೭ನೆಯ ಶತಮಾನದ ಆರಂಭದೊಡನೆಯೇ ಭವಿಷ್ಯದ ಬಗ್ಗೆ ಹೊಸ ಆಸೆ ತಾಳಿದರು. ಪೂರ್ವದಲ್ಲಿ ಪೋರ್ಚುಗೀಸರ ವೈಭವವನ್ನು ಮತ್ತೆ ಬೆಳಗಿಸುವ ಭರವಸೆ–ನಿರೀಕ್ಷೆ ಹೊಂದಿದವರಾಗಿದ್ದರು. ಮೆನೆಜಿಸ್ ಕೊಡುತ್ತಿದ್ದ ಹಿಂಸೆ ಭೀಕರವಾಗಿದ್ದುವು. ಪಾದ್ರಿಗಳನ್ನು ಅವರ ಪತ್ನಿಯರಿಂದ ಬೇರ್ಪಡಿಸಿದ; ಕ್ಷುಲ್ಲಕ ಕಾರಣಗಳಿಂದಾಗಿ ಬಹಿಷ್ಕಾರ ಹಾಕಿದ; ಮತ್ತು ಅವರ ಆ ಮೊದಲಿನ ನಿಷ್ಠೆಯನ್ನು ತೋರಿಸುವ ಎಲ್ಲ ದಾಖಲೆಗಳನ್ನು ಸಾಕ್ಷಿಗಳನ್ನು ನಾಶಪಡಿಸಿದ. ಈ ಬಗೆಯ ಎಂದೂ ದುರಸ್ತಿ ಮಾಡಲಾಗದಂಥ ಅನಾಗರಿಕ ಕ್ರೌರ್ಯಗಳನ್ನು ಮರೆಯುವಂತೆಯೂ ಇಲ್ಲ, ಕ್ಷಮಿಸುವಂತೆಯೂ ಇಲ್ಲ. ಆದರೆ ಈ ಎಲ್ಲ ಕಷ್ಟ ಕ್ರೌರ್ಯಗಳ ಮಧ್ಯದಲ್ಲಿಯೂ ಇದ್ದ ಒಂದು ಸಾಂತ್ವನವೆಂದರೆ ಈ ದೌರ್ಜನ್ಯ ಕೇವಲ ತಾತ್ಪೂರ್ತಿಕ ಎನ್ನುವುದು. ಗಿಬ್ಬನ್ ಆ ವಿಷಯವಾಗಿ ಹೀಗೆ ಬರೆಯುತ್ತಾನೆ : "ಅರವತ್ತು ವರುಷ ಬೂಟಾಟಿಕೆ ಗುಲಾಮಗಿರಿಯನ್ನು ತಾಳ್ಮೆಯಿಂದ ಸಹಿಸಬೇಕಾಯಿತು. ಡಚ್ ಜನರ ಧೈರ್ಯ ಪರಿಶ್ರಮಗಳು ಪೋರ್ಚುಗೀಸ್ ಸಾಮ್ರಾಜ್ಯವನ್ನು ಅಲುಗಿಸಿದ ಕೂಡಲೇ ಕಷ್ಟ ಸೋಸಿದ ಜನ ಅತಿ ಉತ್ಸಾಹ ಮತ್ತು ಧೈರ್ಯದಿಂದ ತಮ್ಮ ಪೂರ್ವಜರ ಧರ್ಮವನ್ನು ಪುನಃ ಪ್ರತಿಪಾದಿಸಿದರು. ತಾವು ದುರುಪಯೋಗಪಡಿಸಿಕೊಂಡ ಅಧಿಕಾರವನ್ನು ಸಮರ್ಥಿಸಿಕೊಳ್ಳುವುದು ಜೆಜ್ವಿಟ್ ಧರ್ಮ ಸಭೆಯವರಿಗೆ ಸಾಧ್ಯವಾಗಲಿಲ್ಲ.

ನಲವತ್ತು ಸಾವಿರ ಕ್ರಿಶ್ಚಿಯನ್ ಕುಸಿಯುತ್ತಿರುವ ಕ್ರೂರಿಗಳ ವಿರುದ್ಧ ಶಸ್ತ್ರ ಎತ್ತಿದರು. ಬ್ಯಾಬಿಲಾನ್ ಪಿತೃತ್ವದಿಂದ ಸಿರಿಯಾ ಧರ್ಮಪ್ರಚಾರಕರು ಆಡಳಿತಗಾರರು ಬರುವವರೆಗೂ ಭಾರತೀಯ ಕಿರಿ ಬಿಷಪ್‌ಗಳೇ ಬಿಷಪ್ ಅವರ ಕಾರ್ಯನಿರ್ವಹಿಸಿದರು. ಈ ಸಂಕ್ಷಿಪ್ತ ವಿವರಣೆಯ ಸಂಗತಿಗಳು ಮೆನೆಜಿಸ್ ದೌರ್ಜನ್ಯದ ಪರಿಣಾಮಗಳಾಗಿವೆ. ಆರು ತಿಂಗಳ ಕಾಲಾವಧಿಯಲ್ಲಿ ಈ ದುಷ್ಟ ಮಹಾತ್ವಾಕಾಂಕ್ಷೆಯ ಪೀಠಾಧಿಕಾರಿ ಸಿರಿಯಾದ ಚರ್ಚ್‌ನ್ನು ಗುಲಾಮಗಿರಿಗೆ ತಳ್ಳಿದ್ದು ಮುಂದೆ ಅರವತ್ತು ವರ್ಷಗಳವರೆಗೂ ರೋಮ್ ಸಂಕೋಲೆಗಳಿಂದ ಬಂಧಿತರಾಗಿ ಬಾಳಬೇಕಾಯಿತು. ಆದರೆ ಮೆನೆಝಿಸ್ ತನ್ನದೇ ಆದ ಶಕ್ತಿ ಹೊಂದಿದ್ದು ಲೌಕಿಕ ಅಧಿಕಾರಶಾಹಿಯನ್ನು ನೆಚ್ಚಿದ ಅವನೊಬ್ಬ ವಿಜಯಿಯಂತೆ ವರ್ತಿಸಿದ. ಮಿಸ್ಟರ್ ಹೋ ಎನ್ನುವವ ಒಂದೆಡೆ ಬರೆಯುತ್ತ "ಆತನ ಉದಾಹರಣೆಯನ್ನು ಮುಂದೆ ಬರುವ ಧರ್ಮಪ್ರಚಾರಕ ಮಂಡಲಿಗಳ ಒಂದು ಅಪಾಯದ ಮುನ್ನೆಚ್ಚರಿಕೆ ಎಂದು ಪರಿಗಣಿಸಬೇಕು. ಶ್ರದ್ಧೆ ಮತ್ತು ದೈವೀ ಭಾವಗಳಿಲ್ಲದೆ ಚರ್ಚ್‌ಗಳ ಉತ್ಕರ್ಷ ಸಾಧ್ಯವಿಲ್ಲ. ಈ ಯಾವ ಗುಣಗಳಿಗೂ ಬೆಲೆ ಕೊಡದ ಪೀಠಾಧಿಪತಿ ತನ್ನದೇ ಆದ ಐಹಿಕ ಆಮಿಷಗಳಿಂದ ಕೂಡಿದ್ದು ಅದನ್ನೇ ಭಾರೀ ಮಹತ್ವದ್ದೆಂದು ಭಾವಿಸಿದ್ದರಿಂದ ಅದರ ಪರಿಣಾಮ ಶೂನ್ಯವಾಯಿತು. ಈ ವ್ಯಕ್ತಿ ತನ್ನ ಸ್ಥಿರತೆಯ ಭದ್ರ ಬುನಾದಿ ಹಾಕಿದನೆಂದು ಭಾವಿಸಿದ ಕಾಲದಲ್ಲಿಯೇ ಪೋರ್ಚುಗೀಸರಿಗೆ ಭಾರತದಲ್ಲಿ ಅವನತಿ ಆರಂಭಗೊಂಡದ್ದನ್ನು ಒಂದು ದೈವೀಕೃಪೆಯೆಂದೇ ಭಾವಿಸಬೇಕು."

ಕೆಥೊಲಿಕ್ ಚರ್ಚ್ ಮತ್ತು ಪ್ರೊಟೆಸ್ಟಂಟ್ ಧರ್ಮ ಮಂಡಲಿಗಳಲ್ಲಿ ಅಂಥ ಘರ್ಷಣೆ ಇರಲಿಲ್ಲ.

ಆದರೂ ಅವರಲ್ಲಿ ಒಳಗೊಳಗೆ ಇದ್ದ ಪರಸ್ಪರ ದ್ವೇಷಾಸೂಯೆ, ಅಸಹಕಾರ ಮೋಸದ ಚಟುವಟಿಕೆಗಳು ಕ್ರೈಸ್ತ ಮತದ ತೀವ್ರ ಬೆಳವಣಿಗೆಯನ್ನು ಕುಂಠಿತಗೊಳಿಸಿದವು.

ಮೂರನೆಯ ಕಾರಣವೆಂದರೆ, ಕ್ರೈಸ್ತ ಮತ ಪ್ರಚಾರಕ್ಕಾಗಿ ನಿಯಾಮಕಗೊಂಡಿದ್ದ ಪ್ರಚಾರ ಮಂಡಲಿಗಳು ತಮ್ಮ ಕಾರ್ಯ ನಿರ್ವಹಣೆಯಲ್ಲಿ ಅನುಸರಿಸಿದ ತಪ್ಪು ಧೋರಣೆ. ಆರಂಭದ ಧರ್ಮ ಪ್ರಚಾರಕರು ಅಲ್ಲಲ್ಲಿ ಪ್ರಚಾರ ಕಾರ್ಯ ಮಾಡುವಾಗ ಸ್ಥಳೀಯ ಬ್ರಾಹ್ಮಣ ವಿದ್ವಾಂಸರ ಜೊತೆಗಿನ ವಾದ ವಿವಾದಕ್ಕೆ ತೊಡಗಿದರು. ಅವರ ಜೊತೆ ಕ್ರಿಶ್ಚಿಯನ್ ಮತ್ತು ಹಿಂದೂ ಧರ್ಮಗಳ ತುಲನೆ ಮಾಡಿ ತಮ್ಮ ಧರ್ಮದ ಹಿರಿಮೆಗಳನ್ನು ಎತ್ತಿತೋರಿಸಿ ಪ್ರಚಾರ ಕಾರ್ಯ ಆರಂಭಿಸಿದರು. ಆದರೆ ಈ ಕಾರ್ಯ ವಿಧಾನ ವಿಚಿತ್ರವಾಗಿ ತೋರಿದರೂ ಇದರ ಹಿಂದೆ ಒಂದು ಯೋಜನೆಯಿತ್ತು. ಹಿಂದೂ ಧರ್ಮದ ಉಚ್ಚವರ್ಗದ ಬ್ರಾಹ್ಮಣರನ್ನು ಮತಾಂತರಗೊಳಿಸಿದರೆ ಇತರರನ್ನು ಸಾಮೂಹಿಕವಾಗಿ ಧರ್ಮಾಂತರಗೊಳಿಸುವುದು ಸುಲಭವಾಗಬಹುದು ಎನ್ನುವುದು ಧರ್ಮಪ್ರಚಾರಕರ ಭಾವನೆಯಾಗಿತ್ತು. ಬ್ರಾಹ್ಮಣ ಮತ್ತು ಕ್ರೈಸ್ತ ಮತೀಯರಿಬ್ಬರೂ ಜನಸಮುದಾಯದ ಮೇಲೆ ಬಹಳ ಪ್ರಭಾವ ಬೀರುತ್ತಿದ್ದರು. ಬ್ರಾಹ್ಮಣರನ್ನು ವಾದದಲ್ಲಿ ಸೋಲಿಸಿ ಅವರ ಧರ್ಮದ ದೋಷಗಳನ್ನು ತೋರಿಸುವುದರಿಂದ ಮತಾಂತರ ಕಾರ್ಯ ಅತಿ ಸುಲಭ ಎಂದು ಕ್ರೈಸ್ತ ಮತ ಪ್ರಚಾರಕರು ನಂಬಿದರು. ಬ್ರಾಹ್ಮಣನಿಗಿಂತ ತಾನು ಶ್ರೇಷ್ಠ ಎಂದೂ ತೋರಿಸಿಕೊಳ್ಳಬೇಕಾಗಿತ್ತು. ಕ್ರಿಶ್ಚಿಯನ್ ಪ್ರಚಾರ ಮಂಡಲಿಗಳು ಯಾಕೆ ಇಷ್ಟೆಲ್ಲ ಶಾಲೆ, ಕಾಲೇಜು, ಆಸ್ಪತ್ರೆಗಳನ್ನು ಆರಂಭಿಸಿದರು ಎನ್ನುವುದಕ್ಕೆ ಬ್ರಾಹ್ಮಣ ಸಮುದಾಯದ ಜೊತೆ ಸಂಪರ್ಕ ಬೆಳೆಸುವುದೇ ಇದರ ಉದ್ದೇಶವಾಗಿತ್ತು ಎನ್ನುವುದನ್ನು ಬಿಟ್ಟು ಬೇರೆ ಯಾವ ವಿವರಣೆಯೂ ತೋಚುವುದಿಲ್ಲ.

ಒಂದು ರೀತಿಯಲ್ಲಿ ಕ್ರೈಸ್ತ ಮತ ಪ್ರಚಾರ ಮಂಡಲಿಗಳು ವಂಚನೆಗೊಳಗಾದವು ಎನ್ನುವುದು ತಿಳಿದ ಸಂಗತಿಯೇ. ಕ್ರಿಶ್ಚಿಯನ್ ಪ್ರಚಾರ ಮಂಡಲಿಗಳು ನಿರ್ವಹಿಸುತ್ತಿದ್ದ ಸಂಸ್ಥೆಗಳಿಂದ ಬ್ರಾಹ್ಮಣ ಮತ್ತು ಎಲ್ಲ ಮೇಲುವರ್ಗದ ಜನ ಅತ್ಯಧಿಕ ಪ್ರಯೋಜನ ಪಡೆದರು. ಆದರೆ ಈ ಸಂಸ್ಥೆಗಳನ್ನು ಸ್ಥಾಪಿಸಿದವರಲ್ಲಿ ಧರ್ಮ ಕುರಿತು ಆಲೋಚಿಸಿದವರು ವಿರಳ. ಇದರಲ್ಲಿ ಅಚ್ಚರಿಯಿಲ್ಲ. ಬ್ರಾಹ್ಮಣ ಮತ್ತು ಮೇಲುವರ್ಗದ ಜನರನ್ನು ಪರಿವರ್ತಿಸುವ ಧರ್ಮ ಮಂಡಲಿಯ ಪ್ರಯತ್ನಗಳು ಪಾತಾಳ ಕಾಣುವುದು ಸ್ಪಷ್ಟವಾಗಿತ್ತು. ಏಕೆಂದರೆ ಹಿಂದೂ ಧರ್ಮ ಮತ್ತು ಕ್ರೈಸ್ತ ಮತದ ನಡುವೆ ವಾದವಿವಾದಗಳಿಗೆ ಒಂದು ಸರ್ವಸಮ್ಮತ ಆಧಾರವಿರಲಿಲ್ಲ; ಎಲ್ಲಾದರೂ ಅಂಥ ಆಧಾರಗಳನ್ನು ಮುಂದಿಟ್ಟಾಗ ಹಿಂದೂಗಳು ಕ್ರಿಶ್ಚಿಯನ್ನರನ್ನು ಸೋಲಿಸುತ್ತಿದ್ದರು. ವೇದಾಂತ ಮತ್ತು ದರ್ಶನ ಶಾಸ್ತ್ರಗಳ ಸಂಬಂಧ ಕುರಿತು ಹಿಂದೂ ಮತ್ತು ಕ್ರೈಸ್ತರು ತೀರ ವಿಭಿನ್ನ ಧೋರಣೆ ಹೊಂದಿರುವುದೇ ಅವರ ವಾದ ವಿವಾದಗಳಿಗಾಗಿ ಯಾವುದೇ ಆಧಾರಗಳಿಲ್ಲದಿರುವುದಕ್ಕೆ ಕಾರಣ. ಮಿ. ಬರ್ನ್[೧] ಈ ಸಂಗತಿಯನ್ನು ಸರಿಯಾಗಿ ಗಮನಿಸಿದ್ದಾರೆ: "ವಿದ್ಯಾವಂತ ಹಿಂದೂ ಧಾರ್ಮಿಕ ಪ್ರಶ್ನೆಗಳು ಎದುರಾದಾಗ ವೇದಾಂತ ಮತ್ತು ದರ್ಶನಶಾಸ್ತ್ರವನ್ನು ಭಿನ್ನ ಭಿನ್ನ ಎಂದು ಭಾವಿಸುವುದಿಲ್ಲ. ವಿಶ್ವ ಸೃಷ್ಟಿಯ ಹಿನ್ನೆಲೆಯಲ್ಲಿ ಅದು ಸರಿ ಎಂದೇ ಆತನ ಅನಿಸಿಕೆ. ಹಿಂದೂ ಧರ್ಮ ಅನೇಕ ದೇವತಾವಾದಿ ಧೋರಣೆ ಹೊಂದಿದ್ದು ಕನಿಷ್ಠ ಎರಡು ಸಾವಿರ ವರ್ಷಗಳಿಂದ ಇದರಲ್ಲಿ ಅನೇಕ ಪಂಗಡಗಳು ಹುಟ್ಟಿಕೊಳ್ಳುತ್ತಲೇ ಇವೆ ಮತ್ತು ಈ ಧರ್ಮ ದೇವರು ಮತ್ತು ಆತ್ಮಗಳ ದ್ವೈತವನ್ನು ಸ್ವೀಕರಿಸುತ್ತ ಬಂದಿವೆ. ಈ ಜಗತ್ತು ಮಾಯೆಯಿಂದ ಉತ್ಪನ್ನವಾದ ಒಂದು ಭ್ರಮೆಯೆಂದು ಭಾವಿಸಿರುವುದರಿಂದ

---

೧. *ಸೆನ್ಸಸ್ ಆಫ್ ಇಂಡಿಯಾ,* ೧೯೦೧, ಸಂ. XVI ಎನ್. ಡಬ್ಲ್ಯು ಪಾಂಡ್‌ಬುಥ್, ಭಾಗ ೧ ಪು. ೯೮.

ಸರ್ವದೇವತಾರಾಧನೆಯ ಧೋರಣೆ ಮುಂದುವರೆದಿದೆ. ಒಬ್ಬ ಸಾಮಾನ್ಯ ಕ್ರೈಸ್ತ ಮತೀಯ ದರ್ಶನಶಾಸ್ತ್ರ ಕುರಿತು ಅಷ್ಟೊಂದು ಗಂಭೀರ ವಿಚಾರ ಮಾಡುವುದಿಲ್ಲ; ಮತ್ತು ಅದು ಹೆಚ್ಚಾಗಿ ಚಿಂತನಪರವೆಂದು ಮಾತ್ರ ಭಾವಿಸುತ್ತಾನೆ. ತನ್ನ ಧಾರ್ಮಿಕ ಶ್ರದ್ಧೆಗೆ ಅದು ಅಷ್ಟೊಂದು ಅಗತ್ಯವೆಂದು ತಿಳಿಯುವುದಿಲ್ಲ. ಅವನು ಬೆಳೆದುಬಂದ ಹಿನ್ನೆಲೆಯಲ್ಲಿ ವಿಚಾರ ವಿಧಾನಗಳು ಅವನ ತೀರ್ಮಾನಗಳ ಮೇಲೆ ಅನಿವಾರ್ಯವಾದ ಪರಿಣಾಮ ಬೀರುತ್ತವೆ. ನನಗೆ ತಿಳಿದಮಟ್ಟಿಗೆ, ಬಹುಪಾಲು ವಿದ್ಯಾವಂತ ಹಿಂದೂಗಳಿಗೆ ಈ ಬಗೆಯ ಕಾರಣಗಳು ಕ್ರೈಸ್ತ ಮತ ಸ್ವೀಕಾರಕ್ಕೆ ಆತಂಕಕಾರಿಯಾಗಿವೆ. ಒಂದು ಖಚಿತ ಉದಾಹರಣೆ ಕೊಡುವುದಾದರೆ, ಒಬ್ಬ ಸಾಮಾನ್ಯ ಸುಶಿಕ್ಷಿತ ಹಿಂದೂ, ಶೂನ್ಯದಿಂದ ದೇವರು ವಿಶ್ವ ಸೃಷ್ಟಿಮಾಡಿದ ಎನ್ನುವ ನಂಬಿಕೆಯನ್ನು ತಿಳಿದು ನಗುತ್ತಾನೆ. ಅವನಿಗೆ ಸೃಷ್ಟಿಯಲ್ಲಿ ನಂಬಿಕೆ ಉಂಟಾಗಬಹುದು. ಆದರೆ ಅದರ ಜೊತೆ ಒಂದು ಭೌತಿಕ ಕಾರಣ–ಸ್ಥೂಲ–ಮತ್ತು ಅದಕ್ಕೆ ಸಮರ್ಥ ಶಕ್ತಿ ಅಂದರೆ ಸೃಷ್ಟಿಕರ್ತನ ಅಗತ್ಯತೆ ಕುರಿತಾದ ಆಧಾರ ತರ್ಕಗಳನ್ನು ನಂಬುತ್ತಾನೆ. ಸರ್ವ ದೇವತಾರಾಧನೆಯ ತನ್ನ ಶ್ರದ್ಧೆಗಾಗಿ ಆತನಿಗೆ ಐತಿಹಾಸಿಕ ಸಾಕ್ಷ್ಯಾಧಾರ ಕುರಿತ ಗೌರವವಿಲ್ಲ. ಮತ್ತೊಂದು ಮೂಲಭೂತ ವ್ಯತ್ಯಾಸ ಅವನ ಪರಕಾಯ ಪ್ರವೇಶ–ಪುನರ್ಜನ್ಮಗಳ ನಂಬಿಕೆ, ಮನುಷ್ಯ ತನ್ನ ಮೋಕ್ಷಕ್ಕಾಗಿ ತಾನೇ ಹೊಣೆಗಾರನಾಗಿ ಕಾರ್ಯ ಮಾಡಬೇಕು. ಹೀಗೆ ದೈವೀ ಪಶ್ಚಾತ್ತಾಪವನ್ನು ಅವನು ಪೂರ್ಣ ನಿರಾಕರಿಸುವುದು."

ಹೀಗೆ ಹಿಂದೂ ದರ್ಶನಶಾಸ್ತ್ರದ ಹಿನ್ನೆಲೆಯಲ್ಲಿ ಮಾತಾಡುತ್ತಾನೆ; ಕ್ರೈಸ್ತಮತೀಯ ಪರಮಾರ್ಥ ಜ್ಞಾನದ ದೃಷ್ಟಿ ಪ್ರತಿಪಾದಿಸುತ್ತಾನೆ. ಹೀಗಾಗಿ ಮೌಲ್ಯಮಾಪನ, ಪ್ರಶಂಸೆ ಅಥವಾ ಖಂಡನೆಗಾಗಿ ಎರಡೂ ಧರ್ಮಗಳ ನಡುವೆ ಒಂದು ಸರ್ವಸಮ್ಮತ ನೆಲೆಯಿಲ್ಲ. ಎರಡೂ ಧರ್ಮಗಳಲ್ಲಿ ತತ್ತ್ವಜ್ಞಾನವಿದೆ. ಕ್ರಿಶ್ಚಿಯನ್‌ರಲ್ಲಿ ದೇವರು ಮತ್ತು ಆತನ ಪುತ್ರ ಜೀಸಸ್; ಹಿಂದೂಗಳಲ್ಲಿ ದೇವದೇವತೆಗಳು ಮತ್ತು ಅವತಾರಗಳು, ಈ ದೇವಾನುದೇವತೆಗಳ ಶ್ರೇಷ್ಠತೆ ಆಯಾ ದೇವತೆ ತೋರಿಸುವ ಪವಾಡಗಳನ್ನು ಆಧರಿಸುವಂಥದು. ಈ ವಿಷಯದಲ್ಲಿ ಹಿಂದೂ ವೇದಾಂತ ಕ್ರೈಸ್ತರನ್ನು ಹಿಂದೆ ಹಾಕುವುದು ಸ್ಪಷ್ಟ; ದರ್ಶನ ಶಾಸ್ತ್ರದ ಅಭಾವ ಕ್ರಿಶ್ಚಿಯನ್ ಧರ್ಮ ಸುಶಿಕ್ಷಿತ ಹಿಂದೂಗಳನ್ನು ಆಕರ್ಷಿಸುವಲ್ಲಿ ಸೋತುದಕ್ಕೆ ಇದು ಕಾರಣ. ಅದರಂತೆ ತೌಲನಿಕ ದೃಷ್ಟಿಯಿಂದ ಹಿಂದೂ ವೇದಾಂತದ ಪವಾಡಗಳ ಎದುರು ಕ್ರಿಶ್ಚಿಯನ್ ವೇದಾಂತ ಸಪ್ಪೆಯೆನಿಸಿದ್ದು ಕೂಡ. ರೋಮನ್ ಕೆಥೋಲಿಕ್ ಪಾದ್ರಿ ಫಾದರ್ ಗ್ರಿಗರೀ ಈ ಆತಂಕಗಳನ್ನು ಅರಿತಿದ್ದನೆಂದು ತೋರುತ್ತದೆ. ಅವನ ದೃಷ್ಟಿ ಧೋರಣೆಗಳು ಬೋಧಪ್ರದ, ಕುತೂಹಲಕಾರಿಯಾಗಿದ್ದು, ಕರ್ನಲ್ ಸ್ಲೀಮನ್ ತನ್ನ ಪುಸ್ತಕದಲ್ಲಿ ಹೇಳಿದ[೧] ಮಾತುಗಳನ್ನು ಇಲ್ಲಿ ಉಲ್ಲೇಖಿಸಿದ್ದೇನೆ.

"ರೋಮನ್ ಕೆಥೊಲಿಕ್ ಪಾದ್ರಿ ಫಾದರ್ ಗ್ರೆಗರೀ ಒಮ್ಮೆ ನಮ್ಮ ಜೊತೆ ಊಟ ಮಾಡುವಾಗ, ಮೇಜರ್ ಗಾಡ್ಬೀ ಅವರನ್ನು 'ನಮ್ಮ ಧರ್ಮ ಜನರಲ್ಲಿ ಎಷ್ಟು ಪ್ರಗತಿ ಸಾಧಿಸಿದೆ?' ಎಂದು ಕೇಳಿದ. ಅದಕ್ಕೆ ಅವರು 'ಪ್ರಗತಿ?, ನಾವು ಕ್ರೈಸ್ತನ ಪವಾಡ ಕುರಿತು ಮಾತಾಡತೊಡಗಿದ ಕ್ಷಣವೇ ಹಿಂದೂಗಳು ತಮ್ಮ ಕೃಷ್ಣ ಗೋವರ್ಧನಗಿರಿಯಲ್ಲಿ ಬೆಟ್ಟವನ್ನೇ ಕಿರುಬೆರಳ ಮೇಲೆತ್ತಿ ಗೊಲ್ಲರನ್ನು ಕಾಪಾಡಿದ ಇತ್ಯಾದಿ ಅಗಣಿತ ಪವಾಡಗಳನ್ನು ಹೇಳತೊಡಗುತ್ತಾರೆ. ಹಿಂದೂಗಳು ನಮ್ಮ ಹೊತ್ತಗೆಗಳಲ್ಲಿ ಹೇಳಲಾದ ಪವಾಡ ಮತ್ತು ಭವಿಷ್ಯ ವಾಣಿಗಳನ್ನು ಎಂದೂ ಸಂಶಯದಿಂದ ಕಾಣುವುದಿಲ್ಲ; ಆದರೆ ತಮ್ಮದೇ ಪುರಾಣ ಕತೆಗಳಲ್ಲಿ ಉಕ್ತವಾದ ಅನೇಕ ಅದ್ಭುತ ಸಂಗತಿಗಳು ಯಾವುದಕ್ಕೂ ಕಡಿಮೆಯಲ್ಲ ಎಂದು ನಂಬುತ್ತಾರೆ. ರಾಮ ಮತ್ತು

---

೧. *ರ್‍ಯಾಂಬಲ್ಸ್ ಅ್ಯಂಡ್ ರಿಕಲೆಕ್ಷನ್ಸ್*, ಸಂ. ೧, ಅಧ್ಯಾಯ ೫೩, ಪು. ೪೦೭.

ಕೃಷ್ಣ, ವಿಷ್ಣುವಿನ ಅವತಾರಗಳು. ಅವರ ಪ್ರಣಯ ಲೀಲೆ, ಯುದ್ಧಗಳು ವಾಸ್ತವವಾಗಿ ನಡೆದ ಸಂಗತಿಗಳು. ಐವತ್ತು ಸಾವಿರ ವರ್ಷ ಪೂರ್ವದ ಆ ಘಟನೆಗಳು ಇತಿಹಾಸವೇ; ಮತ್ತು ತಮ್ಮ ಪುರಾಣಗಳ ಭವಿಷ್ಯವಾಣಿಗಳು ಸತ್ಯವಾಗುತ್ತವೆ ಎಂದೂ ಅವರ ವಿಶ್ವಾಸ; ಅವರ ಇತರ ಹೊತ್ತಗೆಗಳು ಒಳಗೊಂಡ ಪವಾಡಗಳಲ್ಲಿ ಕೂಡ ಅವರ ನಂಬಿಕೆ ಅಚಲ.' ಒಂದು ವೇಳೆ ನಾವು ಕ್ರಿಶ್ಚಿಯನ್ನರು ಕೆಲವು ಕಾರಿಂಥಿಯನ್ ಸಂದೇಹಗಳ ನಿವಾರಣೆಗಾಗಿ ಸೇಂಟ್ ಪಾಲ್ ಯಾವ ಗ್ರಹಗಳಿಗೂ ಧಕ್ಕೆ ತಗಲದ ಹಾಗೆ ಸೂರ್ಯ ಚಂದ್ರರನ್ನು ಈ ಪೃಥ್ವಿಯ ಮೇಲೆ ತಂದಿರಿಸಿ ಮತ್ತೆ ಟೆನ್ನಿಸ್ ಚೆಂಡಿನ ಹಾಗೆ ಪುನಃ ಅವುಗಳ ಸ್ಥಾನದಲ್ಲಿರಿಸಿದ ಸಂಗತಿಗಳನ್ನು ವಿವರಿಸಿದರೆ ಹಿಂದೂಗಳು ಅದನ್ನು ನಂಬಲು ಯಾವ ಸಂಶಯವೂ ಇಲ್ಲ; ಆದರೆ ಅದೇ ಕಾಲಕ್ಕೆ ಅವರು ಅದಕ್ಕೂ ಮಿಗಿಲಾದ ಕೃಷ್ಣನ ಪವಾಡಗಳನ್ನು–ಗೋಪಿಕೆಯರು ಮತ್ತು ಇತರರ ಸಂದೇಹ ನಿವಾರಣೆಗೆ ಮಾಡಿದ ಅದಕ್ಕೂ ಅದ್ಭುತ ಪವಾಡಗಳನ್ನು ಅದರಲ್ಲಿ ತಮ್ಮ ಎಲ್ಲ ಸ್ಥಳೀಯ ರಮ್ಯ ಕಲ್ಪನೆಗಳನ್ನು ಸೇರಿಸಿ ವಿವರಿಸುತ್ತಾರೆ."

ಭಾರತದಲ್ಲಿ ಅವರು ಅನುಸರಿಸಿದ ಧೋರಣೆ ತಪ್ಪಾಗಿತ್ತು ಎನ್ನುವುದು ಸ್ಪಷ್ಟ. ಆದರೆ ಜೀಸಸ್ ಕ್ರೈಸ್ತ ಮತ್ತು ಆತನ ಅನುಯಾಯಿಗಳು ಅನುಸರಿಸಿದ ನೀತಿ ಖಂಡಿತ ಇದಕ್ಕೆ ಭಿನ್ನ, ವಿರುದ್ಧವಾಗಿತ್ತು. ರೋಮ್ ದೇಶದಲ್ಲಿ ಕ್ರೈಸ್ತ ಧರ್ಮದ ಬೆಳವಣಿಗೆಯ ವಿವರಗಳನ್ನು ಗಿಬ್ಬನ್ ಬರೆದಿದ್ದಾನೆ :ಅದರಿಂದ ಜೀಸಸ್ ಕ್ರೈಸ್ತ ಮತ್ತು ಆತನ ಅನುಯಾಯಿಗಳು ಯಾವ ದಿಕ್ಕಿನಿಂದ ತಮ್ಮ ಕಾರ್ಯ ಆರಂಭಿಸಿದರೆನ್ನುವುದು ಸ್ಪಷ್ಟವಾಗುತ್ತದೆ. ಆತ ಹೀಗೆ ಬರೆದಿದ್ದಾನೆ : "ಕ್ರಿಶ್ಚಿಯನ್ ಧರ್ಮ ಪ್ರಕ್ರಿಯೆಯ ಈ ಅಪೂರ್ಣವಾದರೂ ನಿಷ್ಪಕ್ಷಪಾತವಾದ ಸಮೀಕ್ಷೆಯಿಂದ ತೋರಿಬರುವ ಸಂಗತಿಯೆಂದರೆ ಈ ಮತದ ಅನೇಕ ಪೀಠಾಧಿಪತಿ (ಪ್ರಚಾರಕ)ಗಳ ಸಂಗತಿಗಳು ಒಂದೆಡೆ ಭಯ, ಒಂದೆಡೆ ನಿಷ್ಠೆಗಳಿಂದಾಗಿ ಅತಿ ಉತ್ಪ್ರೇಕ್ಷಿತವೆನಿಸುತ್ತದೆ."

'ಓರಿಜೆನ್'ದ ಪ್ರಮಾಣಗಳಿಗನುಗುಣವಾಗಿ, ನಿಜವಾದ ನಿಷ್ಠಾವಂತರ ಸಂಖ್ಯೆ, ನಿಷ್ಠೆಯಿಲ್ಲದ ಅಗಣಿತ ಜನಸ್ತೋಮದ ಪ್ರಮಾಣದಲ್ಲಿ ತುಂಬ ಕಡಿಮೆಯಾಗಿತ್ತು. ಆದರೆ ನಮಗೆ ಯಾವುದೇ ಖಚಿತ ತಿಳುವಳಿಕೆ ದೊರಕುತ್ತಿಲ್ಲವಾದ್ದರಿಂದ ಇದು ಹೀಗೇ ಎಂದು ಹೇಳಲುಬಾರದು. ಅಲ್ಲದೆ ಪ್ರಾದಿಮ ಕ್ರಿಶ್ಚಿಯನ್‌ರ ಸಂಖ್ಯೆ ಎಷ್ಟಿತ್ತು ಎಂದು ಹೇಳುವುದು ಕೂಡ ಕಷ್ಟ. ಆದರೆ, ಕಾನ್‌ಸ್ಟಂಟೈನದ ಮಹತ್ವದ ಮತಾಂತರ, ಘಟನೆಗೆ ಪೂರ್ವದಲ್ಲಿ, ರೋಮ್ ನಗರದ ಆಂಟಿಯಾಕ್ ಉದಾಹರಣೆಗಳ ಆಧಾರದ ಮೇಲೆ ಹೇಳುವುದಾದರೆ ಸಾಮ್ರಾಜ್ಯದ ಒಟ್ಟು ಜನಸಂಖ್ಯೆ ಪ್ರತಿಶತ ಇಪ್ಪತ್ತರಷ್ಟು ಜನ 'ಕ್ರಾಸ್ ಚಿಹ್ನೆ'ಗೆ ಬದ್ಧರಾಗಿದ್ದರೆಂದು ಊಹಿಸಬಹುದು. ಆದರೆ ಅವರ ನಡವಳಿಕೆ, ಉತ್ಸಾಹ ಮತ್ತು ಐಕ್ಯಗಳಿಂದಾಗಿ ಅವರ ಸಂಖ್ಯೆದ್ವಿಗುಣಗೊಳ್ಳುತ್ತ ನಡೆಯಿತು. ಇದೇ ಕಾರಣದಿಂದ ಅವರ ಸಂಖ್ಯೆ ಮತ್ತು ಶಕ್ತಿ ಪ್ರವರ್ಧಮಾನಗೊಂಡಿತು.

'ಇದು ನಾಗರಿಕ ಸಮಾಜದ ಸಂವಿಧಾನದ ನೀತಿ, ಕೆಲವರಿಗೆ ಮಾತ್ರ ಗೌರವ ಸಂಪತ್ತು, ಜ್ಞಾನ ಲಭ್ಯ; ಅದರ ಬಹುಸಂಖ್ಯಾತರು ಅಜ್ಞಾನ ಬಡತನಗಳಿಂದ ಬಳಲುವರು; ಅಂಧಕಾರದಲ್ಲಿದ್ದು ಖಂಡನೆಗೆ ಒಳಗಾಗುವರು. ತಾನು, ಅಖಂಡ ಮಾನವ ಜನಾಂಗಕ್ಕಾಗಿ ಎಂದು ಸಾರಿಕೊಳ್ಳುವ ಕ್ರಿಶ್ಚಿಯನ್ ಧರ್ಮ ತನ್ನ ಪ್ರಚಾರಾಧಿಕಾರಿಗಳನ್ನು ಕೇವಲ ಉಚ್ಚ ಶ್ರೀಮಂತವರ್ಗಗಳಿಂದ ಆಯ್ದುಕೊಳ್ಳದೆ ಕೆಳಸ್ತರದಿಂದಲೂ ಪೀಠಾಧಿಕಾರಿಗಳನ್ನು ನೇಮಿಸಬೇಕು. ಈ ಅಮಾಯಕ ಮತ್ತು ಸಹಜ ಸ್ಥಿತಿ ಅತ್ಯಂತ ದ್ವೇಷಪೂರಿತ ಆಪಾದನೆಯಾಗಿ ಬೆಳೆಯಿತೆಂದು ತೋರುತ್ತದೆ. ಇದನ್ನು ಕೆಲವರು ಒಪ್ಪುವುದಿಲ್ಲ; ಧರ್ಮ ವಿರೋಧಿಗಳಂತೂ ನಿರಾಕರಿಸುತ್ತಾರೆ. ಇದರ ಹಿನ್ನೆಲೆಯೆಂದರೆ 'ಹೊಸ ಕ್ರಿಶ್ಚಿಯನ್ ಮತ, ಪೂರ್ಣ ಪ್ರಮಾಣದಲ್ಲಿ ನಿರ್ಲಕ್ಷಿತರ, ಕೃಷಿಕರ, ವೃತ್ತಿ ಕುಲ ಕಸಬುಗಾರರ, ಹುಡುಗರು, ಮಹಿಳೆಯರು, ಭಿಕ್ಷುಕರು, ಗುಲಾಮರು ಇತ್ಯಾದಿ

ಜನರಿಂದ ರೂಪುಗೊಂಡಿದ್ದು, ಮತ್ತು ಇಂಥವರು ಕೆಲವು ಶ್ರೀಮಂತ ಮತ್ತು ಅತ್ಯುನ್ನತ ಮನೆತನಗಳಿಗೆ ಪರಿಚಿತರಾಗಿ, ಧರ್ಮಪ್ರಚಾರ ಕಾರ್ಯದಲ್ಲಿ ತೊಡಗಿದ್ದು, ಈ ಅಪ್ರಸಿದ್ಧ ಬೋಧಕರು (ಇದು ದ್ವೇಷಿ ಮತ್ತು ಅವಿಶ್ವಾಸಗಳ ಆರೋಪವಾಗಿತ್ತು) ತಮ್ಮ ವ್ಯಕ್ತಿಗತ ಜೀವನದಲ್ಲಿ ವಾಚಾಳಿಗಳೂ ಮತಾಂಧ ಶಾಸ್ತ್ರಜ್ಞರಾಗಿದ್ದು ಸಾರ್ವಜನಿಕರೆದುರು ಮೂಕರಾಗಿರುತ್ತಾರೆ. ತತ್ವಜ್ಞಾನಿಗಳಿಂದ ದೂರವೇ ಉಳಿಯುವ ಇವರು ಅನಾಗರಿಕ, ಅನಕ್ಷರಸ್ಥ ಜನ ಸಮುದಾಯದೊಡನೆ ಬೆರೆಯುತ್ತಾರೆ. ವಯಸ್ಸು, ಲಿಂಗ ಭೇದಗಳಿಲ್ಲದೆ ಶಿಕ್ಷಣದ ಅರ್ಹತೆಯೂ ಇಲ್ಲದ ಇಂಥ ಸಮುದಾಯದಲ್ಲಿ ಮೂಢನಂಬಿಕೆ ಭಯಗಳನ್ನು ಬಿತ್ತುವ ಮೂಲಕ ಸುಲಭವಾಗಿ ತಮ್ಮ ಪ್ರಭಾವ ಬೀರಬಲ್ಲವರಾಗಿದ್ದಾರೆ. "ಈ ಚಿತ್ರದ ಕೆಲವು ವಿವರಗಳು ಕೆಲವು ಮಟ್ಟಿಗೆ ಅಂದಿನ ಸ್ಥಿತಿಯನ್ನು ಹೋಲಬಹುದಾದರೂ ವಿಸಂಗತ ಮತ್ತು ಸತ್ಯ ದೂರವಾಗಿದ್ದು ಕೇವಲ ವಿರೋಧ ಮನೋಭಾವದಿಂದ ಕೂಡಿವೆ. ಜೀಸಸ್ ಕ್ರೈಸ್ತನ ವಿನಯಶೀಲ ಶ್ರದ್ಧೆಯಿಂದಾಗಿ ಅದು ಪ್ರಪಂಚದ ತುಂಬ ಹರಡಿತು. ಸಹಜ ಭಾಗ್ಯ ಪ್ರಯೋಜನ ಪರಿಣಾಮಗಳಿಂದಾಗಿ ಅನೇಕರು ಈ ಶ್ರದ್ಧೆಯನ್ನು ಸ್ವೀಕರಿಸಿದರು. ಸಾಮ್ರಾಟ್ ಹ್ಯಾಡ್ರಿಯನ್‌ಗೆ ಕ್ಷಮಾಪತ್ರ ಬರೆದುಕೊಟ್ಟ ಅರಿಸ್ಟೈಡಸ್ ಒಬ್ಬ ಅಥೇನಿನ ತತ್ವಜ್ಞಾನಿಯಾಗಿದ್ದ. ಜಸ್ಟಿನ್ ಮಾರ್ಟಿಯರ್ ಝೆನೊ, ಅರಿಸ್ಟಾಟಲ್, ಪೈಥಾಗೋರಸ್ ಮತ್ತು ಪ್ಲೇಟೋ ಮುಂತಾದವರ ಶಾಲೆಗಳಲ್ಲಿ ದೈವೀಜ್ಞಾನ ಪಡೆಯಲು ಉತ್ಸುಕನಾಗಿದ್ದ. ಅದಕ್ಕೂ ಮೊದಲು, ದೈವವಶಾತ್ ಅವನು ಪ್ರಾಚೀನರ ದೇವದೂತರ, ತತ್ವಜ್ಞಾನ–ಕುಶಲ ಸಂಭಾಷಣೆ ಹೊಂದಿದ್ದ ಮತ್ತು ಯಹೂದಿ ಪ್ರವಾದಿಗಳನ್ನು ಕುರಿತ ಅಧ್ಯಯನಕ್ಕೆ ಪ್ರೇರಿತನಾಗಿದ್ದ. ಅಲೆಗ್ಸಾಂಡ್ರಿಯಾದ ಜನ ಗ್ರೀಕ್ ಜ್ಞಾನ ಹೊಂದಿದವರಾಗಿದ್ದರು. ಟೆರ್ಟುಲಿಯನ್ನರು ಲ್ಯಾಟಿನ್, ಜ್ಯೂಲಿಯಸ್ ಆಫ್ರಿಕಾನಸ್ ಮತ್ತು ಓರಿಜೆನ್ ಜನರು ತಮ್ಮ ಸಮಕಾಲೀನ ಜ್ಞಾನ ಗಳಿಕೆಯಲ್ಲಿ ಮುಂದಿದ್ದರು. ಸಿಪ್ರಿಯನ್ ಶೈಲಿ ಲ್ಯಾಕ್ಟಾಂಟಿಯಸ್ ಶೈಲಿಗಿಂತ ಭಿನ್ನವಾಗಿದ್ದರೂ ಈ ಎರಡೂ ಸಮುದಾಯದ ಬೋಧಕರು ಒಳ್ಳೆಯ ಉಪನ್ಯಾಸಕರಾಗಿದ್ದರು. ಕ್ರೈಸ್ತ ಮತೀಯರಿಗೂ ಕೂಡ ತತ್ತ್ವಜ್ಞಾನ ಪರಿಚಯಿಸಲಾಯಿತು. ಆದರೆ ಅದು ಅಷ್ಟೊಂದು ಪ್ರಯೋಜನಕಾರಿ ಪರಿಣಾಮ ಬೀರಲಿಲ್ಲ. ಭಕ್ತಿಯಂತೆ ಜ್ಞಾನ ಕೂಡ ಅನೇಕ ಸಂದರ್ಭಗಳಲ್ಲಿ ನಾಸ್ತಿಕವಾದ ಸೂಚಕ ಎಂದು ಭಾವಿಸಲಾಗಿತ್ತು. ಅರ್ಟೆಮಾನ್ ಅನುಯಾಯಿಗಳಿಗಾಗಿ ರೂಪಿಸಲಾದ ವಿವರಗಳನ್ನು, ದೈವೀ ಪ್ರೇರಿತ ಹಿಂಬಾಲಕ ವಿರೋಧಿ ಅನೇಕ ಪಂಗಡಗಳಿಗೆ ಸಮಾನ ಔಚಿತ್ಯದೊಂದಿಗೆ ಅನ್ವಯಗೊಳಿಸಬಹುದು. 'ಅವರು ಪ್ರಾಚೀನ ಶ್ರದ್ಧೆಯ ಕಾನೂನುಗಳನ್ನು ತ್ಯಜಿಸಲು ಪವಿತ್ರ ಗ್ರಂಥಗಳನ್ನು ಬದಲಾಯಿಸಬಹುದೆಂದು ಭಾವಿಸುತ್ತಾರೆ ಮತ್ತು ತರ್ಕಗಳಿಗೆ ಅನುಗುಣವಾಗಿ ತಮ್ಮ ಅಭಿಪ್ರಾಯ ರೂಪಿಸಬಯಸುತ್ತಾರೆ. ಜ್ಯಾಮಿತಿಯ ಅಭ್ಯಾಸಕ್ಕಾಗಿ ಚರ್ಚ್ ಜ್ಞಾನದ ಅಧ್ಯಯನವನ್ನು ಕಡೆಗಣಿಸಲಾಗುತ್ತಿದೆ. ಇದರಿಂದಾಗಿ ಭೂಖಂಡವನ್ನು ಅಳೆಯುವ ಅವರು ದೇವಲೋಕವನ್ನು ಮರೆಯುತ್ತಾರೆ. ಯೂಕ್ಲಿಡ್ ಸದಾ ಅವರ ಕೈಯಲ್ಲಿ; ಅರಿಸ್ಟಾಟಲ್ ಮತ್ತು ಥಿಯೊಪ್ರಾಸ್ಟಸ್, ಅವರ ಮೆಚ್ಚುಗೆಯ ವಸ್ತು ಮತ್ತು ಗ್ಯಾಲೆನ್ ಕೃತಿಗಳೆಂದರೆ ಅವರಿಗೆ ಅಪರಿಮಿತ ಗೌರವ. ಅವರ ತಪ್ಪುಗಳು ಅಶ್ರದ್ಧಾವಂತರ ಕಲಾ–ವಿಜ್ಞಾನಗಳ ನಿರಾಕರಣದಿಂದ ಮೂಡಿದವಾಗಿವೆ, ಮತ್ತು ತರ್ಕದ ನಯಗಾರಿಕೆಯಿಂದ, ಸುವಾರ್ತೆಯ ಸರಳತೆಯನ್ನು ಭ್ರಷ್ಟಗೊಳಿಸುತ್ತಾರೆ.' "ಕ್ರಿಶ್ಚಿಯನ್ ಧರ್ಮದ ಪ್ರವಾದಿತ್ವದಿಂದ ಹುಟ್ಟು, ಭಾಗ್ಯದ ಪ್ರಯೋಜನಗಳನ್ನು ಸದಾ ಬೇರ್ಪಡಿಸಲಾಗುತ್ತದೆ ಎನ್ನುವುದನ್ನು ಆಧಾರ ಸಹಿತ ಸ್ಥಿರೀಕರಿಸಲಾಗುವುದಿಲ್ಲ. ಪ್ಲಿನೀ ನ್ಯಾಯ ಮಂಡಲಿಯ ಎದುರು ಅನೇಕ ರೋಮನ್ ನಾಗರಿಕರನ್ನು ತಂದು ನಿಲ್ಲಿಸಲಾಯಿತು. ಆದರೆ ಬಿಥೀನಿಯಾದ ಪ್ರತಿ ಸ್ತರದ ಬಹುಸಂಖ್ಯೆಯ ಜನರು ತಮ್ಮ ಪೂರ್ವಜರ ಧರ್ಮ ಶ್ರದ್ಧೆಯನ್ನು ಬರಡುಗೊಳಿಸಿದ್ದಾರೆಂದು ಅರಿಯಲು ಬಹಳ ಸಮಯ ಬೇಕಾಗಲಿಲ್ಲ. ಅವನ ಸಂಶಯರಹಿತವಾದ ಈ

ಪ್ರಸಂಗದ ಪುರಾವೆಗಳು ಟೆರ್ಟ್ಯುಲಿಯನ್ ಆಹ್ವಾನಗಳಿಗಿಂತ ಹೆಚ್ಚು ವಿಶ್ವಾಸಾರ್ಹವಾಗಬಹುದು. ಅವನು ಆಫ್ರಿಕಾದ ಗವರ್ನರ್ ಅವರ ಭಯದಿಂದ ಮತ್ತು ಮಾನವೀಯತೆ ದೃಷ್ಟಿಯಿಂದ ತನಗೆ ತಾನೇ ಹೇಳಿಕೊಳ್ಳುವ ಮಾತುಗಳಲ್ಲಿ ಇದು ಕಂಡುಬರುತ್ತದೆ. ಅದರಲ್ಲಿಯ ವಿವರಣೆ–ಒಂದು ವೇಳೆ ಇದೇ ಬಗೆಯ ಕ್ರೌರ್ಯ ಮುಂದುವರೆದರೆ ಶೌರ್ಯ ನೆಲೆ ಕಾರ್ತೇಜನ್ನು ನಾಶಮಾಡುವಂತಾಯಿತು ಮತ್ತು ಅದರಿಂದ ತನ್ನ ಶ್ರೇಣಿಯ ಉಚ್ಚ ಮೂಲದ ಸಿನೇಟರ್, ಮೇಟ್ರನ್‌ಗಳು, ಅವರ ಮಿತ್ರರು, ಬಂಧುಗಳು, ನಿಕಟವರ್ತಿಗಳು ಹೀಗೆ ಅನೇಕರ ಜೊತೆ ಅಪರಾಧಿ ಸ್ಥಾನದಲ್ಲಿ ನಿಲ್ಲಬೇಕಾದೀತು. ಏನಾದರೂ ಮುಂದೆ ನಲವತ್ತು ವರ್ಷಗಳ ಬಳಿಕ, ಸಾಮ್ರಾಟ್ ವೆಲೇರಿಯನ್ ಈ ಮಾತಿನ ಸತ್ಯತೆಯನ್ನು ಮನಗಾಣುವಂತಾಯಿತು. ಆತ ತನ್ನ ಒಂದು ತೀರ್ಪು ಲೇಖನದಲ್ಲಿ ರೋಮನ್ ವೀರರು, ಸೆನೇಟರುಗಳು ಮತ್ತು ಗಣ್ಯ ಮಹಿಳೆಯರು ಕ್ರಿಶ್ಚಿಯನ್ ಪಂಗಡದಲ್ಲಿ ಒಳಗೊಂಡ ವಿಷಯ ಸ್ಪಷ್ಟವಾಗಿ ದಾಖಲಿಸಿದ್ದಾನೆ. ಇಷ್ಟಾದರೂ ಚರ್ಚ್ ತನ್ನ ಬಾಹ್ಯಾಡಂಬರವನ್ನು ಮುಂದುವರೆಸಿತು. ಆದರೆ ಅದು ಆಗಲೇ ಆಂತರಿಕವಾಗಿ ತನ್ನ ಶುದ್ಧಿಯನ್ನು ಕಳೆದುಕೊಂಡಿತು. ಡೈಕ್ಲೇಟಿಯನ್ ಆಳ್ವಿಕೆಯ ಕಾಲದಲ್ಲಿ ಅರಮನೆ, ನ್ಯಾಯಾಲಯಗಳು, ಸೈನ್ಯವೂ ಸಹಿತ ವರ್ತಮಾನ ಮತ್ತು ಭವಿಷ್ಯ ಜೀವನದ ಆಸಕ್ತಿಗಳನ್ನು ಗಮನದಲ್ಲಿರಿಸಿ ಕಾರ್ಯನಿರತರಾದ ಕ್ರೈಸ್ತ ಮತೀಯರ ಸಮುದಾಯವನ್ನು ಗುಪ್ತವಾಗಿಟ್ಟಿತು.

ಆದರೂ ಇಂಥ ಸಂಗತಿಗಳು ಅಪವಾದ ಅಥವಾ ತೀರ ಇತ್ತೀಚಿನವು. ಇವು ಪ್ರಥಮ ಹಂತದ ಬೋಧಕರ ಮೇಲೆ ಅಹಂಕಾರದಿಂದ ಎರಚಲಾದ ಅಜ್ಞಾನ ಅಂಧಕಾರಗಳನ್ನು ಪೂರ್ಣ ಕಿತ್ತೆಸೆಯಲು ಮಾಡಿದ ಪ್ರಯತ್ನಗಳು. ನಮ್ಮ ವಾದದ ಸಮರ್ಥನೆಗಾಗಿ ಬಳಿಕ ಬಂದ ಕಟ್ಟು ಕಥೆಗಳನ್ನು ಬಳಸುವುದಕ್ಕಿಂತ, ಅಗೌರವ ಸಂದರ್ಭಗಳನ್ನು ಉದಾತ್ತ ನೀತಿಯಲ್ಲಿ ಪರಿವರ್ತಿಸುವುದು ಹೆಚ್ಚು ಉಪಯುಕ್ತ. ನಮ್ಮ ಗಂಭೀರ ಚಿಂತನೆಯ ಬೆಳಕಿನಲ್ಲಿ ಹೇಳುವುದಾದರೆ, ಗ್ಯಾಲಿಲೀಯದ ಅಂಬಿಗರ ಆಯ್ಕೆಗೆ, ದೈವೀ ಪ್ರೇರಣೆ, ದೈವೀ ಕೃಪೆಗಳು ಕಾರಣ. ಎಷ್ಟು ಎಷ್ಟು ನಾವು ಮೊದಲ ಕ್ರಿಶ್ಚಿಯನ್ನರ ಲೌಕಿಕ ಸಂಗತಿಗಳನ್ನು ಅರಿಯುತ್ತೇವೆ, ಅಷ್ಟಷ್ಟು ಹೆಚ್ಚು ಅವರ ಗುಣ ಮತ್ತು ಯಶಸ್ಸುಗಳನ್ನು ಮೆಚ್ಚಿಕೊಳ್ಳುತ್ತೇವೆ. ದೇವರ ಸಾಮ್ರಾಜ್ಯದ ಭರವಸೆ ನೀಡಿದ್ದು ಅಂತರಾರ್ಥದಲ್ಲಿ ಬಡವರಿಗಾಗಿ, ಯಾತನೆಗಳಿಂದ ಬಳಲುತ್ತಿರುವ ಜನಕ್ಕಾಗಿ ಮತ್ತು ಮಾನವರ ತಿರಸ್ಕಾರಗಳಿಗೆ ಒಳಗಾಗಿದ್ದವರು ಭವಿಷ್ಯ ಸುಖಜೀವನದ ಭರವಸೆಗಳನ್ನು ಕೇಳಿ ಉಲ್ಲಸಿತರಾಗಲಿ ಎಂದು. ಆದರೆ ಅದಕ್ಕೆ ಪ್ರತಿಯಾಗಿ, ಈ ಪ್ರಪಂಚದ ಸೊತ್ತುಗಳಿಗೆ ಒಡೆಯರಾಗಿ ಸಂತೃಪ್ತರಾದವರು ಭಾಗ್ಯವಂತರು ಮತ್ತು ಬುದ್ಧಿವಂತರು ಸಂಶಯಗ್ರಸ್ತರಾಗಿ ಎಲ್ಲವನ್ನೂ ಬೈಯುತ್ತ ತಮ್ಮ ತರ್ಕ ಜ್ಞಾನಗಳ ಶ್ರೇಷ್ಠತೆ ಸಾರುತ್ತ ವ್ಯರ್ಥವಾಗಿ ಕಾದಾಡುತ್ತಾರೆ."

ಅದೇ ರೀತಿ ಹಲ್ಲಮ್ ತನ್ನ 'ಮಧ್ಯಕಾಲೀನ ಇತಿಹಾಸ' ಕೃತಿಯಲ್ಲಿ ಆರಂಭಕಾಲದ ಕ್ರಿಶ್ಚಿಯನ್ನರು ಬಂದ ವರ್ಗಗಳನ್ನು ಕುರಿತು ವಿವರಿಸಿದ್ದಾನೆ. ಕ್ರೈಸ್ತ ಮತ, ರೋಮ್‌ನ ಎಲ್ಲ ನಾಗರಿಕರ– ಶ್ರೀಮಂತರೂ ಸೇರಿದಂತೆ – ಧರ್ಮವಾಗಿ ಸ್ವೀಕೃತವಾಗಲು ಎರಡು ಬಾಹ್ಯ ಕಾರಣಗಳು. ಮೊದಲನೆಯದು ಇತರ ಎಲ್ಲ ಧರ್ಮಗಳ ಬಹಿಷ್ಕಾರ ಮತ್ತು ಕ್ರಿಶ್ಚಿಯನ್ ಧರ್ಮ ಇಡೀ ರಾಜ್ಯದ ಧರ್ಮವೆಂದು ಸಾರಿದ್ದು; ಎರಡನೆಯದು ರೋಮನ್ ಸಾಮ್ರಾಟರು ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರಗೊಂಡ ಬಳಿಕ ಮಾಡಿದ ವಂಶಗಳ ಉತ್ತರಾಧಿಕಾರಿ ಕಾಯ್ದೆಯ ಬದಲಾವಣೆ; ಕ್ರಿಶ್ಚಿಯನ್ ಆದ ಮಗು ಪಿತ್ರಾರ್ಜಿತ ಆಸ್ತಿಗೆ ಉತ್ತರಾಧಿಕಾರಿಯಾಗುವ ಪ್ರಾಶಸ್ತ್ಯ, ಅಂದರೆ ಕ್ರೈಸ್ತ ಮತ ಹೆಚ್ಚು ಪ್ರಭಾವ ಬೀರಿದ್ದು ಬಡವರ್ಗದ ಜನರ ಮೇಲೆ. ಕ್ರೈಸ್ತ ಧರ್ಮ ಯಾವುದೇ ಕಾನೂನಿನ ನೆರವಿಲ್ಲದೆ, ಬಾಹ್ಯ ಪ್ರಯೋಜನಗಳಿಲ್ಲದೆ ಮೊದಲು ಹಬ್ಬಿದ್ದು ಈ ಬಗೆಯ

ಜನಸಮುದಾಯಗಳಲ್ಲಿಯೇ. ಈ ಸಹಜ ಕ್ರಮವನ್ನು ಆರಂಭಕಾಲದ ಪ್ರಸಾರಕರು ಹಿಮ್ಮುಖಗೊಳಿಸಿದರು. ಮಾನವ ಸ್ವಭಾವಕ್ಕೆ ಹೊಂದಿಕೊಳ್ಳುವುದರಿಂದ ಇದನ್ನು ಸಹಜ ಸ್ವಾಭಾವಿಕ ಎಂದು ಕರೆಯುತ್ತೇನೆ.

ಮನೋವಿಜ್ಞಾನದ ಪರಿಣತ ಥೋರ್ಡೋರ್ನ್‌ಡೈಕ್ ಅಭಿಪ್ರಾಯ ಇಲ್ಲಿ ಪ್ರಸ್ತುತ. "ಮನುಷ್ಯ ಆಲೋಚಿಸುವುದು ಒಂದು ಜೈವಿಕ ಸಂಗತಿ. ಆದರೆ ಅವನು ಏನು ಆಲೋಚಿಸುತ್ತಾನೆ ಎನ್ನುವುದು ಒಂದು ಸಾಮಾಜಿಕ ಸತ್ಯ."

ಆರಂಭಕಾಲದ ಧರ್ಮಪ್ರಚಾರಕರು ಈ ಸಮರ್ಥ ವಿಚಾರವನ್ನು ಪೂರ್ಣ ಕಡೆಗಣಿಸಿದರು. ಪ್ರತಿಯೊಂದು ಆಲೋಚನೆ ಪ್ರತಿಯೊಬ್ಬರಿಗೂ ಒಪ್ಪಿತವಾಗುವುದಿಲ್ಲ. ಶ್ರೀಮಂತರಿಗೆ ಬಂಡವಾಳ ಶಾಹಿ ಆಕರ್ಷಕವಾಗಿ ಬಡವರಿಗೆ ಆಕರ್ಷಕವಾಗದಿರುವ ಸಂಗತಿಯೇ ಇದಕ್ಕೆ ಸಾಕ್ಷಿ. ಇದಕ್ಕೆ ಪ್ರತಿಯಾಗಿ ಸಮಾಜವಾದ ಬಡವರಿಗೆ ಆಕರ್ಷಕ. ಶ್ರೀಮಂತರಿಗೆ ನಿರಾಕರ್ಷಕ. ಒಬ್ಬ ಮನುಷ್ಯನ ಆಲೋಚನೆ ಮತ್ತು ಆಸಕ್ತಿಗಳ ನಡುವಿನ ನಿಕಟ ಸಂಬಂಧವೇ ಅವರ ಆಸಕ್ತಿಗಳ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತವೆ ಎನ್ನುವುದೇ ಇದಕ್ಕೆ ಕಾರಣ. ತನಗೆ ಒಪ್ಪಿತವಾಗದ ಆಲೋಚನೆಗಳಿಗೆ ಅವನಲ್ಲಿ ಆಸ್ಪದವೇ ಇರುವುದಿಲ್ಲ. ಮಾನವ ಮನಸ್ಸಿನ ಈ ಆಲೋಚನಾ ವಿಧಾನವನ್ನು ಅನ್ವಯಗೊಳಿಸಿದರೆ ಬ್ರಾಹ್ಮಣ ಮತ್ತು ಇತರ ಉಚ್ಚ ವರ್ಗದ ಜನರಲ್ಲಿ ಕ್ರೈಸ್ತ ಧರ್ಮ ಸಿದ್ಧಾಂತಕ್ಕೆ ಎಂದೂ ಅನುಕೂಲಕರ ಪ್ರತಿಕ್ರಿಯೆ ಉಂಟಾಗಲು ಸಾಧ್ಯವಿಲ್ಲ. ಏಕೆಂದರೆ ಅದು ಮಾನವ ಭ್ರಾತೃತ್ವವನ್ನು ಬೋಧಿಸುತ್ತದೆ ಮತ್ತು ಅದನ್ನು ಅನ್ವಯಗೊಳಿಸಿದಾಗ ಮಾನವ ಸಮಾನತೆಗೆ ದಾರಿ ಮಾಡಿಕೊಡುತ್ತದೆ. ಚಾತುರ್ವರ್ಣ ಪದ್ಧತಿಯನ್ನು ಮುಂದುವರಿಸಿಕೊಂಡು ಹೋಗುವಲ್ಲಿಯೇ ಬ್ರಾಹ್ಮಣ ಮತ್ತು ಇತರ ಮೇಲುವರ್ಗದ ಜನರು ಆಸಕ್ತಿ ಹೊಂದಿದ್ದಾರೆ. ಈ ಪದ್ಧತಿಗೆ ಅಸಮಾನತೆಯೇ ಆಧಾರ. ಶ್ರೇಣಿಕೃತ ನೆಲೆಯಲ್ಲಿ ಅವರಿಗೆ ಪ್ರಥಮ ಸ್ಥಾನ ಅಂದರೆ ಇತರರ ಮೇಲೆ ತನ್ನ ಅಧಿಕಾರ ನಡೆಸಲು ಮತ್ತು ಅವರನ್ನು ಶೋಷಣೆಗೆ ಈಡು ಮಾಡಲು ಹೆಚ್ಚಿನ ಅವಕಾಶ. ಇಂಥವರು ಕ್ರಿಶ್ಚಿಯನ್ ಧರ್ಮ ಸ್ವೀಕರಿಸುತ್ತಾರೆಂದು ಹೇಗೆ ನಿರೀಕ್ಷಿಸುವುದು? ಒಪ್ಪುವುದೆಂದರೆ ಅವರ ಪ್ರತಿಷ್ಠೆ ಮತ್ತು ಶಕ್ತಿಗಳ ಶರಣಾಗತಿ. ಅವರ ಮನವೊಲಿಸುವ ಪ್ರಯತ್ನ ವ್ಯರ್ಥ. ಒಂದು ವೇಳೆ ಈ ಪ್ರಯತ್ನ ಹೀಗೆ ಮುಂದುವರೆದಿದ್ದರೆ, ಖಂಡಿತವಾಗಿ ಭಾರತದಲ್ಲಿ ಕ್ರಿಶ್ಚಿಯನ್ನರೇ ಉಳಿಯುತ್ತಿರಲಿಲ್ಲ. ಇಂದು ಭಾರತದಲ್ಲಿ ಕೆಲವು ಕ್ರೈಸ್ತ ಮತೀಯರು ಉಳಿದಿರುವುದಕ್ಕೆ ಕಾರಣವೆಂದರೆ ಈ ಸಂಗತಿಯನ್ನು ಕ್ರೈಸ್ತ ಧರ್ಮ ಪ್ರಸಾರಕರು ಬೇಗನೆ ಅರ್ಥಮಾಡಿಕೊಂಡದ್ದು. ಒಂದು ವೇಳೆ ಈ ವಿಷಯವನ್ನು ಮನಗಾಣದೆ ಕೆಳವರ್ಗದ ಜನರ ಮನವೊಲಿಸುವ ತಮ್ಮ ಪ್ರಯತ್ನವನ್ನು ಹಾಗೆಯೇ ಮುಂದುವರಿಸಿದ್ದರೆ ಭಾರತದಲ್ಲಿ ಕ್ರಿಶ್ಚಿಯನ್ನರು ಕಾಣಸಿಗುತ್ತಿರಲಿಲ್ಲ. ಇಂದಿಗೂ ನೂರಾರು, ಸಾವಿರಾರು ಮೇಲುವರ್ಗದ ಜನರು ಕ್ರಿಶ್ಚಿಯನ್ ಶಾಲೆ ಕಾಲೇಜು ಮತ್ತು ಕ್ರಿಶ್ಚಿಯನ್ ಆಸ್ಪತ್ರೆಗಳ ಪ್ರಯೋಜನ ಪಡೆಯುತ್ತಲೇ ಇದ್ದಾರೆ. ಈ ಲಾಭ ಪಡೆಯುವ ಎಷ್ಟು ಮಂದಿ ಕ್ರಿಶ್ಚಿಯನ್ ಆಗಿದ್ದಾರೆ? ಪ್ರತಿಯೊಬ್ಬರೂ ಲಾಭ ಪಡೆಯುತ್ತಾರೆ. ಓಡಿ ಹೋಗುತ್ತಾರೆ. ಆದರೆ ಒಂದು ಕ್ಷಣಕ್ಕಾದರೂ ನಿಂತು ಮಾನವ ಜನಾಂಗಕ್ಕೆ ಇಷ್ಟೊಂದು ಸೇವೆ ಸಲ್ಲಿಸುತ್ತಿರುವ ಧರ್ಮದ ಅರ್ಹತೆಗಳೇನಿರಬಹುದು ಎಂದು ಆಲೋಚಿಸುವುದಿಲ್ಲ.

* * * *

## ಅಧ್ಯಾಯ ೩೦

# ಮತಾಂತರಿಯ ಪರಿಸ್ಥಿತಿ

(೧) ಗಾಂಧೀ ಮತ್ತು ಅವರ ಕ್ರೈಸ್ತ ಧರ್ಮ ವಿರೋಧ
(೨) ಕ್ರೈಸ್ತ ಧರ್ಮ ಮತ್ತು ಸಾಮಾಜಿಕ ಸೇವೆ
(೩) ಕ್ರೈಸ್ತ ಧರ್ಮ ಮತ್ತು (ಪಾಗಾನಿಜಮ್) ಮಿಥ್ಯಾದೈವವಾದ
(೪) ಕ್ರೈಸ್ತ ಧರ್ಮ ಮತ್ತು ಮತಾಂತರದ (ಉದ್ದೇಶ) ಅರ್ಥ
(೫) ಕ್ರೈಸ್ತ ಮತ ಮತ್ತು ಅದರ ಸಾಮಾಜಿಕ ನೆಲೆ

೧೯೨೮ರಲ್ಲಿ 'ಇಂಟರ್‌ನ್ಯಾಷನಲ್ ಫೆಲೋಷಿಪ್'ದ ಒಂದು ಸಭೆ ನಡೆಯಿತು. ವಿವಿಧ ಧರ್ಮದ ಜನರಲ್ಲಿ ಸೋದರ ಮನೋಭಾವ ಸಂವರ್ಧನೆ ಈ ಸಂಘಟನೆಯ ಗುರಿ. ಈ ಸಭೆಗೆ ಕ್ರಿಶ್ಚಿಯನ್ನರು, ಮುಸಲ್ಮಾನರು ಮತ್ತು ಹಿಂದೂಗಳು ಕೂಡಿದ್ದರು. ಶ್ರೀ ಗಾಂಧೀ ಕೂಡ ಬಂದಿದ್ದರು. ಬೇರೆ ಬೇರೆ ಧರ್ಮದ ಜನ ಇನ್ನುಳಿದವರನ್ನು ತಮ್ಮ ತಮ್ಮ ಧರ್ಮಗಳಿಗೆ ಮತಾಂತರಗೊಳಿಸಿದರೆ ಈ ಸಂಘಟನೆಯ ನಿಜವಾದ ಆದರ್ಶವಾದ ಸಾಹಚರ್ಯ ಎಷ್ಟರಮಟ್ಟಿಗೆ ಸಾಧಿತವಾದೀತು ಎಂದು ಪ್ರಶ್ನೆ ಎತ್ತಲಾಯಿತು. ಚರ್ಚೆಯಲ್ಲಿ ಪಾಲ್ಗೊಂಡು, ಶ್ರೀ ಗಾಂಧೀ ಮಾತಾಡಿದರು. ಅವರ ಮಿತ್ರ ಮಿ. ಸಿ. ಎಫ್. ಆಂಡ್ರ್ಯೂಸ್ ಆ ಚರ್ಚೆಗೆ ಸಂಬಂಧಿಸಿ ಈ ಕೆಳಗಿನಂತೆ ಬರೆದಿದ್ದಾರೆ:[೧]

"ಈ ಪ್ರಶ್ನೆಯಲ್ಲಿ ಭಾರತದಲ್ಲಿರುವ ಕ್ರೈಸ್ತ ಧರ್ಮ ಪ್ರಚಾರಕ ಮಂಡಲಿಗಳ ಸ್ಥಾನ ಕುರಿತ ಒಂದು ನಿಶ್ಚಿತ ಆಹ್ವಾನ ಹುದುಗಿತ್ತು. ಸ್ವಲ್ಪ ಉದಾರ ಮನಸ್ಸಿನ ಧರ್ಮ ಪ್ರಚಾರಕರಿಗೆ ಫೆಲೋಷಿಪ್ ಸಂಘಟನೆಯಿಂದ ಖುಷಿಯಾಗಿತ್ತು...ಆಗ ಮಹಾತ್ಮಾ ಗಾಂಧೀ ಉದ್ಘೋಷಿಸಿದರು : 'ಫೆಲೋಷಿಪ್ ಸಂಘಟನೆ ಸೇರುವ ಯಾರದೇ ಮನಸ್ಸಿನಲ್ಲಿ ಇತರ ಸದಸ್ಯರನ್ನು ಮತಾಂತರಗೊಳಿಸುವ ಆ ರೀತಿ ಪ್ರಭಾವ ಬೀರುವ ತಿಲಮಾತ್ರ ವಿಚಾರವಿದ್ದರೂ ಅದು ಆ ಆಂದೋಲನದ ಸತ್ವವನ್ನೇ ನಾಶಗೊಳಿಸಬಹುದು. ಯಾರಲ್ಲಾದರೂ ಇಂಥ ಭಾವನೆಯಿದ್ದರೆ ಅವರು ಈ ಸಂಘಟನೆಯನ್ನು ಬಿಡಬೇಕಾಗಿತ್ತು. ಒಂದು ವೇಳೆ ಇವರಲ್ಲಿ (ಕ್ರೈಸ್ತ ಧರ್ಮಪ್ರಚಾರಕರಲ್ಲಿ) ಪ್ರಪಂಚದ ಅಮೂಲ್ಯ ಭಂಡಾರವಿದ್ದು ಅದನ್ನು ಇತರರ ಜೊತೆ ಹಂಚಿಕೊಳ್ಳಬೇಕೆಂದು ಅಪೇಕ್ಷಿಸಿದರೆ ತಪ್ಪೇ?' ಎಂದು ಕ್ರೈಸ್ತ ಧರ್ಮ ಪ್ರಚಾರಕರು ಪ್ರಶ್ನಿಸಿದಾಗ ಶ್ರೀ ಗಾಂಧೀ ತಕ್ಷಣ ಅವರ ಧಾರ್ಷ್ಟ್ಯಕ್ಕೆ ಮಾರುತ್ತರ ನೀಡಿದರು : 'ಅವರು ಅಭೇದ್ಯರಾಗಿದ್ದರು ; ಇಂಥ ಅಪೇಕ್ಷೆಯ ವಿಚಾರ ಕೂಡ ತಪ್ಪು'. ಇದು ಗಾಂಧೀಜಿಯ ನಿಲುವು ಎಂದು ಮಿ. ಆಂಡ್ರ್ಯೂಸ್ ವಿವರಿಸುತ್ತಾರೆ. ಮುಂದುವರೆದು ಹೇಳುತ್ತ ಅವರು ತಮ್ಮ ಈ ನಿಲವಿನಿಂದ ಎಳ್ಳಷ್ಟೂ ಕದಲಲಿಲ್ಲ."

ಗಾಂಧೀಯವರು ಕ್ರಿಶ್ಚಿಯನ್ ಮತಾಂತರ ವಿರೋಧಿಗಳು ಎನ್ನುವುದು ಈ ಸಮಯಕ್ಕಾಗಲೇ

---

೧. *ದಿ ಬೇಸಿಸ್ ಆಫ್ ಇಂಟರ್ ರಿಲಿಜಿಯಸ್ ಫೆಲೋಷಿಪ್* : ಸಿ.ಎಫ್. ಆ್ಯಂಡ್ರೂಸ್ : ದಿ ಯಂಗ್ ಮೆನ್ ಆಫ್ ಇಂಡಿಯಾ, ಬರ್ಮಾ ಆಂಡ್ ಸಿಲೋನ್, ಜೂನ್ ೧೯೨೮, ಸಂ ೧೧, ನಂ. ೬. ರಲ್ಲಿ

ಎಲ್ಲರಿಗೂ ಚೆನ್ನಾಗಿ ಗೊತ್ತಾಗಿತ್ತು. ೧೯೩೬ರಷ್ಟರ ಹೊತ್ತಿಗೆ ಅವರು ಎಲ್ಲ ಧರ್ಮಪ್ರಸಾರಕರ ಕಡುವಿರೋಧಿಯಾಗಿದ್ದರು. ಧರ್ಮ ಪ್ರಚಾರಕರು ಕ್ರೈಸ್ತ ಸುವಾರ್ತೆಯನ್ನು ವಿಶೇಷತಃ ಅಸ್ಪೃಶ್ಯರಲ್ಲಿ ಪಸರಿಸುವುದಕ್ಕೆ ಅವರು ಆಕ್ಷೇಪಿಸುತ್ತಿದ್ದರು. ಕ್ರಿಶ್ಚಿಯನ್ ಪ್ರಸಾರಕ ಮಂಡಲಿ ಮತ್ತು ಅಸ್ಪೃಶ್ಯರನ್ನು ಕ್ರೈಸ್ತ ಧರ್ಮಕ್ಕೆ ಮತಾಂತರಗೊಳಿಸುವ ವಿಷಯದ ಅವರ ವಿರೋಧ ಕೆಲವು ಯೋಜನೆಗಳನ್ನು ಆಧರಿಸಿದ್ದು. ಅದನ್ನು ಅವರು ಸ್ಪಷ್ಟ ಮಾತುಗಳಲ್ಲಿ ಪ್ರತಿಪಾದಿಸಿದ್ದಾರೆ. ಈ ಕೆಳಗಿನ ಅವರ ನಾಲ್ಕು ಸೂಚನೆಗಳಲ್ಲಿ ಅವರ ಅಭಿಪ್ರಾಯವನ್ನು ಸಂಕ್ಷೇಪಿಸಬಹುದು : ಅವರ ಮಾತುಗಳನ್ನೇ ಇಲ್ಲಿ ಕೊಡಲಾಗಿದೆ : ಅವರು ಹೇಳುವುದು:

೧) "ನನ್ನ ಅಭಿಪ್ರಾಯದಲ್ಲಿ ಮೂಲಭೂತವಾಗಿ ಎಲ್ಲ ಧರ್ಮಗಳೂ ಸಮಾನ. ನಮ್ಮ ಧರ್ಮದ ಬಗೆಗೆ ನಾವು ಇಟ್ಟುಕೊಂಡಿರುವ ಗೌರವವನ್ನೇ ಇತರ ಧರ್ಮಗಳ ಬಗೆಗೂ ತಾಳಬೇಕು. ನೆನಪಿರಲಿ, ಪರಸ್ಪರ ಸಹನಶೀಲತೆ ಅಷ್ಟೇ ಅಲ್ಲ ಸಮಾನಗೌರವವೂ ಇರಬೇಕು."[೧]

೨) ನಾನು ಬಯಸುವುದಿಷ್ಟೆ : ಧರ್ಮ ಪ್ರಸಾರಕರು ಕಾರ್ಯ ಮಾಡುವುದು ಎಂದರೆ ಕ್ರೈಸ್ತ ಮತದವರಾಗಿ ಜೀವಿಸುವುದು, ಟೀಕಿಸುವುದಲ್ಲ. ನಿಮ್ಮ ಬದುಕಿನ ರೀತಿ ನೀತಿ ನಮ್ಮ ಜೊತೆ ಮಾತಾಡಲಿ.[೨] ಗುಲಾಬಿ ಹೂ ನೋಡಲಾಗದ ಕುರುಡ ಅದರ ಪರಿಮಳವನ್ನು ಗ್ರಹಿಸುತ್ತಾನೆ. ಅದೇ ಗುಲಾಬಿ ಸುವಾರ್ತೆಯ ರಹಸ್ಯ. ಆದರೆ ಜೀಸಸ್ ಬೋಧಿಸಿದ ಸುವಾರ್ತೆ ಗುಲಾಬಿಯ ಸಂದೇಶಕ್ಕಿಂತ ಅತಿ ಸೂಕ್ಷ್ಮ ಮತ್ತು ಸುಗಂಧಯುಕ್ತವಾಗಿದೆ. ಗುಲಾಬಿ ಹೂವಿಗೆ ದಲ್ಲಾಳಿಯ ಅಗತ್ಯವಿಲ್ಲವೆಂದಾದರೆ ಜೀಸಸ್ ಸಂದೇಶಕ್ಕಾಗಿ ಅದಕ್ಕಿಂತ ಕಡಿಮೆ ಅಗತ್ಯವಿದೆ.[೩]

ಕ್ರೈಸ್ತ ಧರ್ಮ ಪ್ರಸಾರಕ ಮಂಡಲಿ ಕುರಿತು ಅವರ ಅಭಿಪ್ರಾಯ : "ಪ್ರಸಾರಕ ಮಂಡಲಿಗಳು ಕೈಗೊಂಡಿರುವ ಸಾಮಾಜಿಕ ಸೇವೆ ಕೇವಲ ಸೇವಾದೃಷ್ಟಿಯಿಂದ ಕೂಡಿಲ್ಲ; ಈ ಸೇವಾ ಪ್ರಯೋಜನ ಪಡೆದವರ ಮುಕ್ತಿಗಾಗಿ ಕೈಕೊಳ್ಳಲಾಗಿದೆ.....[೪] ವೈದ್ಯಕೀಯ ನೆರವು ಪಡೆದ ವ್ಯಕ್ತಿ ಕ್ರೈಸ್ತ ಮತೀಯನಾಗಬೇಕೆಂದು ಬಯಸುತ್ತೀರಿ".[೫]

ಅಸ್ಪೃಶ್ಯರನ್ನು ಕುರಿತು ಹೀಗೆ ಹೇಳುತ್ತಾರೆ : "ಅಪಾರ ಹರಿಜನ ಸಮುದಾಯ ಅಥವಾ ಭಾರತೀಯ ಜನಸಮುದಾಯ ಕ್ರೈಸ್ತ ಧರ್ಮದ ರೀತಿಯನ್ನು ಅರ್ಥ ಮಾಡಿಕೊಳ್ಳಲಾರದೆಂದೇ ನನ್ನ ಭಾವನೆ.........ಅಲ್ಲದೆ ಸಾಮಾನ್ಯವಾಗಿ ಹೇಳುವುದಾದರೆ ಈ ಮತಾಂತರ ಕಾರ್ಯ ಎಲ್ಲಿಯೇ ನಡೆದಿರಲಿ ಅದು ನಿಜವಾದ ಅರ್ಥದಲ್ಲಿ ಆಧ್ಯಾತ್ಮಿಕ ಕ್ರಿಯೆ ಆಗಿಲ್ಲ. ಅವು ಅನುಕೂಲದ ಮತಾಂತರಗಳು,[೬] ಅವರು (ಹರಿಜನ) ಇದರ ಸಂಬಂಧಾತ್ಮಕ ಗುಣಗಳನ್ನು ಒಂದು ಆಕಳಿಗಿಂತ ಹೆಚ್ಚು ಅರ್ಥ ಮಾಡಿಕೊಳ್ಳಲಾರರು. ಪರಮಾತ್ಮ ಮತ್ತು 'ಅ–ಪರಮಾತ್ಮ' ಇವೆರಡರ ನಡುವಿನ ಭೇದ ತಿಳಿದುಕೊಳ್ಳುವಷ್ಟು ಬುದ್ಧಿವಂತರಲ್ಲ. ಜಾಣರಲ್ಲ."[೭]

ಕ್ರಿಶ್ಚಿಯನ್ ಪ್ರಸಾರಕ ಮಂಡಲಿಗಳು ಯಾವ ರೀತಿ ಕಾರ್ಯ ಮಾಡಬೇಕೆನ್ನುವುದನ್ನು ಕುರಿತು ಸ್ವಲ್ಪ

---

೧. ಹರಿಜನ, ೧೯೩೬ ಪು. ೩೩೦.
೨. ಹರಿಜನ, ೧೯೩೬, ಪು. ೩೫೩.
೩. ಹರಿಜನ, ಏಪ್ರಿಲ್ ೧೯೩೭, ಪು. ೩೬.
೪. ಹರಿಜನ, ೧೯೩೭, ಪು. ೧೩೭.
೫. ಹರಿಜನ, ೧೮ ಜುಲೈ, ಪು. ೧೭೮.
೬. ಹರಿಜನ, ೧೯೩೬, ಪು. ೧೪೦–೪೧.
೭. ಹರಿಜನ, ೧೯೩೬, ಪು. ೩೬೦.

ಖಾರವಾಗಿಯೇ ಹೇಳಿದ್ದಾರೆ. "ಒಂದು ವೇಳೆ ಕ್ರಿಶ್ಚಿಯನ್ ಪ್ರಚಾರ ಮಂಡಲಿಗಳು ಈ ಆಟವನ್ನು ಪ್ರಾಮಾಣಿಕವಾಗಿ ಆಡಬೇಕೆಂದಿದ್ದರೆ...ಮತಾಂತರದ ಈ ಅಸಭ್ಯ ಸ್ಪರ್ಧೆಯಿಂದ ಹಿಂದೆಗೆಯಬೇಕು." ..."ಸುಮ್ಮನೆ.....ಮಾತಿಗಾಗಿ ನೀವು ವಿಧರ್ಮೀಯರ ದೇಶಕ್ಕೆ ಬಂದಿದ್ದೇವೆ ಎನ್ನುವುದನ್ನು ಮರೆತುಬಿಡಿ ಮತ್ತು ಅವರೂ ನಿಮ್ಮಷ್ಟೇ ಪರಮಾತ್ಮನ ಶೋಧದಲ್ಲಿದ್ದಾರೆಂದು ಭಾವಿಸಿ, ಸುಮ್ಮನೆ......ನೀವು ನಿಮ್ಮ ಆಧ್ಯಾತ್ಮಿಕ ಸಾಮಗ್ರಿಗಳನ್ನು ಅವರಿಗೆ ಕೊಡುತ್ತಿಲ್ಲ. ಆದರೆ ನಿಮ್ಮಲ್ಲಿ ಇರುವ ಲೌಕಿಕ ಸಾಮಗ್ರಿಗಳನ್ನು ಅವರ ಜೊತೆ ಹಂಚಿಕೊಳ್ಳಬಯಸುತ್ತೀರಿ ಎಂದು ಭಾವಿಸಿ. ಆಗ ನೀವು ಯಾವುದೇ ಮಾನಸಿಕ ಸಂಕೋಚಗಳಿಲ್ಲದೆ ನಿಮ್ಮ ಕಾರ್ಯ ಮಾಡುತ್ತೀರಿ; ಅದರ ಜೊತೆಗೆ ನಿಮ್ಮ ಆಧ್ಯಾತ್ಮಿಕ ನಿಕ್ಷೇಪಗಳನ್ನು ಹಂಚಿಕೊಳ್ಳುತ್ತೀರಿ. ನಿಮ್ಮ ಸೇವೆಗೆ ಪ್ರತಿಯಾಗಿ ಮತಾಂತರ ಅಪೇಕ್ಷಿಸುತ್ತೀರಿ ಎನ್ನುವ ಮಾನಸಿಕ ಸಂಕೋಚದ ತಿಳುವಳಿಕೆಯೇ ನಿಮ್ಮ ಮತ್ತು ನನ್ನ ನಡುವೆ ಒಂದು ಅಡೆತಡೆಯನ್ನು ಉಂಟುಮಾಡುತ್ತದೆ."

ಒಂದು ವೇಳೆ ಕ್ರಿಶ್ಚಿಯನ್ನರು ಭಾರತಕ್ಕೆ ಬಂದು ಇಲ್ಲಿಯೇ ನೆಲೆಸಿ, ತಮ್ಮಲ್ಲಿರಬಹುದಾದ ಮಾಧುರ್ಯ ಮೋಹಕತೆಗಳನ್ನು ನಮ್ಮಲ್ಲಿ ಹರಡಿದ್ದರೆ, ಭಾರತದ ಚರಿತ್ರೆಯೇ ಬೇರೆಯಾಗಿರುತ್ತಿತ್ತು. ಕ್ರಿಶ್ಚಿಯನ್ ಪ್ರಚಾರ ಮಂಡಲಿ ಕಾರ್ಯ ಕುರಿತ, ಗಾಂಧೀಜಿಯವರ ಈ ವಿರೋಧ ಮನೋಭಾವ ತೀರ ಇತ್ತೀಚಿನದು. ಯೆಯೋಲಾ ನಿರ್ಣಯದ ಮೊದಲು ಇದು ಕಂಡುಬಂದಂತಿಲ್ಲ. ಇದು ಇತ್ತೀಚಿನದು ಮತ್ತು ಆಶ್ಚರ್ಯಕರವಾದುದು. ಅಸ್ಪೃಶ್ಯರನ್ನು ಇಸ್ಲಾಂ ಧರ್ಮಕ್ಕೆ ಮತಾಂತರಿಸಿದಾಗ ಗಾಂಧೀಜಿ ಇಷ್ಟು ಸ್ಪಷ್ಟ ರೀತಿಯಲ್ಲಿ ಏನಾದರೂ ಘೋಷಣೆ ಮಾಡಿದ್ದರೆ ಅದು ನನಗೆ ತಿಳಿಯದು. ಮುಸ್ಲಿಮರು ಅಸ್ಪೃಶ್ಯರ ಮತಾಂತರದ ತಮ್ಮ ಯೋಜನೆಯನ್ನು ಗೌಪ್ಯವಾಗಿಟ್ಟಿಲ್ಲ. ೧೯೨೩ರ ಕೊಕೊನಾಡ (ಕಾಕಿನಾಡ)ದ ಕಾಂಗ್ರೆಸ್ ವಾರ್ಷಿಕ ಅಧಿವೇಶನದ ವೇದಿಕೆಯ ಮೇಲಿಂದಲೇ ದಿ. ಮೌಲಾನಾ ಮಹಮ್ಮದ ಅಲಿ ಬಹಿರಂಗವಾಗಿ ಆ ಯೋಜನೆಯನ್ನು ತಿಳಿಸಿದ್ದರು. ಮೌಲಾನಾ ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ ಸ್ಪಷ್ಟವಾಗಿ ವಿವರಿಸಿದ್ದರು : 'ಹಿಂದೂ ಮುಸಲ್ಮಾನರ ನಡುವೆ ಆಲದಮರ, ಅರಳಿಮರ ಮತ್ತು ವಾದ್ಯ ಮೆರವಣಿಗೆ ಕುರಿತ ಜಗಳಗಳು ನಿಜವಾಗಿ ಬಾಲಿಶ. ಒಂದು ವೇಳೆ ಜಾತೀಯ ಚಟುವಟಿಕೆಗಳು ಪರಸ್ಪರ ಸಮ್ಮತಿಯಿಂದ ನಿರ್ಣಯಗೊಳ್ಳದಿದ್ದರೆ, ಅದು ಆಕ್ಷೇಪಣೆಗಳಿಗೆ ಆಧಾರ ಸಂಗತಿಯಾಗಬಹುದು. ಒಂದು ವೇಳೆ ಹಿಂದೂ ಸಮಾಜ ತುಳಿತಕ್ಕೆ ಒಳಗಾದ ವರ್ಗಗಳನ್ನು ತಮ್ಮಲ್ಲಿ ತ್ವರಿತವಾಗಿ ಒಂದುಗೂಡಿಸಿಕೊಳ್ಳದಿದ್ದರೆ ಆಗ ಮತಾಂತರ ಪ್ರಶ್ನೆ ಏಳುತ್ತದೆ. ಕ್ರಿಶ್ಚಿಯನ್ ಪ್ರಚಾರ ಸಂಸ್ಥೆ ಈಗಾಗಲೇ ಈ ಕಾರ್ಯ ಮಾಡುತ್ತಿದ್ದು ಅವರೊಡನೆ ಯಾರೂ ಜಗಳ ಮಾಡುವುದಿಲ್ಲ. ಆದರೆ ಯಾವುದಾದರೂ ಮುಸಲ್ಮಾನ ಧರ್ಮ ಸಂಸ್ಥೆ ಇದೇ ಕಾರ್ಯ ಕೈಗೆತ್ತಿಕೊಂಡ ಕೂಡಲೇ ಹಿಂದೂ ಪತ್ರಿಕಾ ಮಾಧ್ಯಮ ಬೊಬ್ಬೆ ಹಾಕುತ್ತದೆ. ಒಬ್ಬ ಪ್ರಭಾವಿ, ಶ್ರೀಮಂತ ವ್ಯಕ್ತಿ, ಬಹು ದೊಡ್ಡ ಪ್ರಮಾಣದಲ್ಲಿ ತುಳಿತಕ್ಕೆ ಸಿಕ್ಕ ಜನರ ಮತಾಂತರ ಕಾರ್ಯಕ್ಕಾಗಿ ಒಂದು ಇಸ್ಲಾಂ ಧರ್ಮ ಪ್ರಚಾರ ಸಂಸ್ಥೆಯನ್ನು ಸಂಘಟಿಸುವ ಸಲಹೆ ನೀಡಿದ್ದಾನೆ. ಪ್ರಮುಖ ಹಿಂದೂ ನಾಯಕರೊಂದಿಗೆ ಒಂದು ಒಪ್ಪಂದ ನಿರ್ಣಯ ಮಾಡಿಕೊಳ್ಳಬೇಕು; ಅದಕ್ಕನುಗುಣವಾಗಿ ಹಿಂದೂ ಮತ್ತು ಮುಸಲ್ಮಾನ ಸಂಘಟನೆಗಳು ತಮ್ಮ ತಮ್ಮ ಕಾರ್ಯವನ್ನು ಮುಂದುವರೆಸಲು ಅನುಕೂಲವಾಗುವಂತೆ ದೇಶವನ್ನು ಪ್ರತ್ಯೇಕ ಪ್ರದೇಶಗಳಾಗಿ ವಿಭಾಗಿಸಬೇಕು. ಪ್ರತಿ ಧರ್ಮದವರೂ ತಮ್ಮ ತಮ್ಮ ವಾರ್ಷಿಕ ಕಾರ್ಯಕ್ರಮ ತಯಾರಿಸಿ ತಮ್ಮಲ್ಲಿ ಸೇರಿಸಿಕೊಳ್ಳುವ ಅಥವಾ ಮತಾಂತರಗೊಳಿಸುವ ಜನರ ಸಂಖ್ಯೆ ಇತ್ಯಾದಿಗಳನ್ನು ರೂಪಿಸಬೇಕು. ಈ ಎಲ್ಲ ಕಾರ್ಯ ಆಯಾ ಸಂಸ್ಥೆಯು ಹೊಂದಿರುವ ಬಂಡವಾಳ, ಕಾರ್ಯಕರ್ತರು ಮತ್ತು ಲಭ್ಯವಿರುವ ವಾಸ್ತವ ಅಂಕಿ ಸಂಖ್ಯೆಗಳನ್ನು ಅವಲಂಬಿಸಿದೆ. ಈ ರೀತಿಯಲ್ಲಿ ಪರಸ್ಪರ ಘರ್ಷಣೆಗೆ ಅವಕಾಶವಿಲ್ಲದೆ, ನಮ್ಮಲ್ಲಿ ಇತರರನ್ನು

ಸೇರಿಸಿಕೊಳ್ಳುವ, ಮತಾಂತರಿಸುವ ಅಥವಾ ಸುಧಾರಿಸುವ ಕಾರ್ಯವನ್ನು ಮುಂದುವರೆಸಬಹುದು. ಇದಕ್ಕಿಂತ ಸ್ಫುಟವಾದುದು ಬೇರಿಲ್ಲ. ಈ ಕಾಂಗ್ರೆಸ್ ವೇದಿಕೆಯ ಮೇಲಿಂದ ಇದಕ್ಕಿಂತ ವ್ಯಾವಹಾರಿಕ ಅಥವಾ ವಾಸ್ತವಿಕ ವಿವರಣೆ ಕೊಡಲು ಸಾಧ್ಯವಿಲ್ಲ. ಆದರೆ ನನಗೆ ತಿಳಿದಮಟ್ಟಿಗೆ ಕ್ರಿಶ್ಚಿಯನ್ ಪ್ರಚಾರಕರು ಮಾಡುತ್ತಿರುವ ಅಸ್ಪೃಶ್ಯರ ಮತಾಂತರ ಕಾರ್ಯವನ್ನು ಗಾಂಧೀಜಿ ಈಗ ಖಂಡಿಸುತ್ತಿರುವ ರೀತಿಯಲ್ಲಿ ಈ ಹಿಂದೆ ಖಂಡಿಸಿದ್ದು ತಿಳಿಯದು. ಗಾಂಧೀ ಗುಂಪಿನ ಯಾರೂ ಈ ಹೇಳಿಕೆಯನ್ನು ವಿರೋಧಿಸಲಿಲ್ಲ. ಬಹುಶಃ ಕಾಂಗ್ರೆಸ್ಸಿನಲ್ಲಿದ್ದ ಹಿಂದೂಗಳು, ಮುಸಲ್ಮಾನರಿಗೆ ಇದು ಒಂದು ಧಾರ್ಮಿಕ ಕರ್ತವ್ಯ, ಮತ್ತು ಅವರ ಈ ಕಾರ್ಯದಲ್ಲಿ ಅವರಿಗೆ ನೆರವಾಗುವುದು ತಮ್ಮ ಧಾರ್ಮಿಕ ಕರ್ತವ್ಯ ಎಂದು ಭಾವಿಸಿರಬೇಕು; ಮತ್ತು ಮುಸಲ್ಮಾನರು ಮಾಡುವ ಮತಾಂತರ ಕಾರ್ಯ ಧಾರ್ಮಿಕ ಕರ್ತವ್ಯ ಅಲ್ಲ ಎಂದು ನಿರಾಕರಿಸಲಾಗದು ಎನ್ನುವ ತಿಳುವಳಿಕೆ. ೧೯೨೦ರಲ್ಲಿ ಜಾರ್ಜ್ ಜೋಸೆಫ್ ಹೇಳುವಂತೆ ಜಜೀರುಲ್ ಅಲ್ ಅರಬ್‌ದ ಅರಬ ಜನರನ್ನು ಹಿಂದಿಕ್ಕಲು ತರ್ಕಿಷ್ ಖಿಲಾಫತ್ ನಿರ್ವಹಣೆಗಾಗಿ ಮುಸಲ್ಮಾನರಿಗೆ ಸಹಾಯ ಮಾಡುವುದು ತಮ್ಮ ಒಂದು ಧಾರ್ಮಿಕ ಕರ್ತವ್ಯ ಎಂದು ಹಿಂದೂಗಳು ಭಾವಿಸಿದ್ದರು. ಅದು ಅವರಿಗೆ ಮುಳುವಾಯಿತು. ಏಕೆಂದರೆ ಅದು ಅರಬರ ವಿರುದ್ಧ ಒಂದು ವಿದೇಶೀ ಸರಕಾರವನ್ನು ನಿರ್ವಹಣೆ ಮಾಡಿದಂತಾಯಿತು. ಆದರೆ ಹಿಂದೂಗಳು ಅದನ್ನು ಒಂದು ಧಾರ್ಮಿಕ ಕರ್ತವ್ಯ ಎಂದು ಭಾವಿಸಿದ್ದರಿಂದ, ತಾವೇ ಅದನ್ನು ನುಂಗಿಕೊಳ್ಳಬೇಕಾಯಿತು.[೧] ಒಂದು ವೇಳೆ ಇದು ಸರಿಯೆಂದಾದರೆ, ಕ್ರೈಸ್ತ ಮತಾಂತರ ಕಾರ್ಯ ಕೂಡ ಒಂದು ಧಾರ್ಮಿಕ ಕರ್ತವ್ಯದ ಪೂರೈಕೆಯಾಗಿರುವುದರಿಂದ ಅವರ ಈ ಕಾರ್ಯಕ್ಕೆ ಗಾಂಧೀಜಿ ಯಾಕೆ ನೆರವು ನೀಡಬಾರದು, ಕ್ರಿಶ್ಚಿಯನ್ನರಿಗೆ ಒಂದು ಮಾನದಂಡ, ಇತರರಿಗೆ ಬೇರೊಂದು ಯಾಕೆ? ಜಾರ್ಜ್ ಜೋಸೆಫ್ ಹೇಳುವ ಮಾತು ಸತ್ಯಕ್ಕೆ ಸಮೀಪವಾಗಿದೆ. "ಮುಸಲ್ಮಾನರ ಸಂಖ್ಯೆ ೭೫ ಮಿಲಿಯ ಮತ್ತು ಕ್ರೈಸ್ತ ಮತೀಯರ ಸಂಖ್ಯೆ ಕೇವಲ ಆರು ಮಿಲಿಯ ಇರುವುದೇ ಈ ವ್ಯತ್ಯಾಸಕ್ಕೆ ಕಾರಣ. ರಾಷ್ಟ್ರೀಯತೆಯ ದೃಷ್ಟಿಯಿಂದ ಅವರೊಂದು ಮುಳ್ಳಾಗಬಹುದು ಎನ್ನುವ ಕಾರಣದಿಂದ ಮುಸಲ್ಮಾನರ ಜೊತೆಗಿನ ಒಪ್ಪಂದ ಅರ್ಥಪೂರ್ಣ; ಸಂಖ್ಯೆಯಲ್ಲಿ ಕಡಿಮೆ ಇರುವ ಅಲ್ಪಸಂಖ್ಯಾತ ಕ್ರೈಸ್ತ ಮತೀಯರನ್ನು ಗಣನೆಗೆ ತೆಗೆದುಕೊಳ್ಳುವ ಅಗತ್ಯವಿಲ್ಲ." ಭಾರತದ ರಾಜಕಾರಣದ ದೃಷ್ಟಿಯಿಂದ ಮುಸಲ್ಮಾನ ಮತ್ತು ಕ್ರೈಸ್ರ ಮತೀಯರ ಸಂಖ್ಯಾಬಲದ ತೌಲನಿಕ ಸಂಬಂಧಗಳು ಗಾಂಧೀಜಿಯ ಮಾರ್ಗದರ್ಶಕ ಅಂಗಗಳಾಗಿದ್ದವು. ಗಾಂಧೀಜಿ ಅದನ್ನು 'ಹೀನ ಪ್ರಚಾರ' ಎಂದು ಖಂಡಿಸುವಲ್ಲಿಯೇ ಅದು ಸ್ಪಷ್ಟ. ಕ್ರೈಸ್ತ ಧರ್ಮ ಸಂಸ್ಥೆಗಳು ಮಾಡುವ ಪ್ರಚಾರ ಕಾರ್ಯವನ್ನು ಅವರು ಈ ಕೆಳಗಿನ ಮಾತುಗಳಲ್ಲಿ ಖಂಡಿಸುತ್ತಾರೆ. (ಹಸ್ತಪ್ರತಿಯಲ್ಲಿ ಉಲ್ಲೇಖ ನಮೂದಾಗಿಲ್ಲ)

ಆದರೆ ಇದಕ್ಕೆ ಪ್ರತಿಯಾಗಿ ಮುಸಲ್ಮಾನ ಧರ್ಮ ಪ್ರಚಾರ ನಡೆದಾಗ ಅವರು ಹೇಳುವುದು ಇಷ್ಟೆ:[೨] "ಜನರನ್ನು ಆಕರ್ಷಿಸುವುದಕ್ಕಾಗಿ ಧರ್ಮಪ್ರಚಾರದ ಮೂಲಕ ಧರ್ಮವನ್ನು ಒರಟು ಭೌತಿಕವಾದದ ತೀರ ಕೆಳಮಟ್ಟಕ್ಕೆ ಎಳೆದು ತರುತ್ತಿರುವುದು ಒಂದು ದುರಂತ. ಇದರಿಂದ ಲಕ್ಷಾಂತರ ಮಾನವ ಜೀವಿಗಳ ಅತ್ಯಂತ ಆಶಾದಾಯಕ ಭಾವನೆಗಳು ತುಳಿಯಲ್ಪಡುತ್ತವೆ. 'ಪ್ರಚಾರ ಪತ್ರಕ್ಕೆ ಯಾವ ವಿಚಾರವಂತ ಮುಸಲ್ಮಾನರೂ ಬೆಂಬಲಿಸುವುದಿಲ್ಲ ಎಂದು ನನ್ನ ನಂಬಿಕೆ. ಅಂಥವರು ಅದನ್ನು ಓದಿ ಇಂಥ ಪ್ರಚಾರಪತ್ರಗಳಿಂದುಂಟಾಗಬಹುದಾದ ಕುಚೇಷ್ಟೆಯನ್ನು ಅರ್ಥ ಮಾಡಿಕೊಳ್ಳಬೇಕು.'

---

೧. ಹರಿಜನ, ೮ ಫೆಬ್ರವರಿ ೧೯೩೬. ಪು. ೪೧೫.

೨. ಹರಿಜನ, ೮ ಆಗಸ್ಟ್ ೧೯೩೬.

ಈ ವಿಪತ್ತನ್ನು ಹೇಗೆ ಎದುರಿಸಬೇಕೆಂದು ವರದಿಗಾರ ನನ್ನನ್ನು ಕೇಳುತ್ತಾನೆ. ನನಗೆ ಒಂದು ಪರಿಹಾರ ಹೊಳೆದಿದೆ : ಹೀನ ಪ್ರಚಾರ ರೀತಿಯನ್ನು ಹೊಣೆಗಾರ ಮುಸಲ್ಮಾನ ಪ್ರಪಂಚದ ಗಮನಕ್ಕೆ ತರುವುದು. ಅಂಥವರೇ ಈ ಪ್ರಕಟನೆಯ ಸಂಗತಿಯನ್ನು ಸ್ಥಳೀಯ ಮುಸಲ್ಮಾನರ ಗಮನಕ್ಕೆ ತರುತ್ತಾರೆ. ಎರಡನೆಯ ಅತ್ಯಂತ ಮುಖ್ಯ ಸಂಗತಿಯೆಂದರೆ ನಮ್ಮೊಳಗೇ ಶುದ್ಧೀಕರಣ. ಅಸ್ಪೃಶ್ಯತೆ ಹಿಂದೂ ಧರ್ಮದ ಅಂಗವಾಗಿ ಉಳಿದಿರುವವರೆಗೂ ಅದು ಹೊರಗಿನ ದಾಳಿಗೆ ತುತ್ತಾಗುತ್ತಲೇ ಇರುತ್ತದೆ. ಅಸ್ಪೃಶ್ಯತೆಯ ಸಮಗ್ರ ನಿವಾರಣೆಯ ರೂಪದಲ್ಲಿ ಶುದ್ಧೀಕರಣದ ಮಜಬೂತಾದ ಮತ್ತು ಅಚಲವಾದ ಗೋಡೆಯ ನಿರ್ಮಾಣವಾದಾಗ ಇದನ್ನು ತಪ್ಪಿಸಲು ಸಾಧ್ಯ." ಕ್ರೈಸ್ತ ಧರ್ಮ ಪ್ರಚಾರ ಕುರಿತ ಭಾವನೆಗಳ ಉಗ್ರತೆ ಮತ್ತು ಮತ್ತೊಂದನ್ನು ಕುರಿತ ಮೃದುತ್ವ, ಪುಕ್ಕಲುತನಗಳು ಸುಸ್ಪಷ್ಟ. ಗಾಂಧೀಜಿಯನ್ನು ಒಬ್ಬ 'ವ್ಯಕ್ತಿಯ ಆರಾಧನಾ ತಂತ್ರಗಾರ' ಎಂದು ಖಂಡಿತ ಕರೆಯಬಹುದು.

ಆದರೆ ಗಾಂಧೀಜಿಯವರ ಮುಸ್ಲಿಮ್ ಮತ್ತು ಕ್ರಿಶ್ಚಿಯನ್ ಪ್ರಚಾರ ಕುರಿತ ಧೋರಣೆಗಳ ಭಿನ್ನತೆ ಏನೇ ಇರಲಿ, ಈ ಮೇಲೆ ಸಂಕ್ಷೇಪಿಸಲಾದ ಕ್ರೈಸ್ತ ಧರ್ಮ ಪ್ರಚಾರ ಕುರಿತ ಅವರ ವಾದಗಳಲ್ಲಿ ಏನಾದರೂ ಸತ್ವವಿದೆಯೇ? ಅವು ಕೇವಲ ಜಾಣ್ಮೆಯ ಮಾತು. ಅದರಲ್ಲಿ ಯಾವ ಗಾಢ ಚಿಂತನೆಯೂ ಇಲ್ಲ. ಅವು ಗೋಡೆಗೆ ತಳ್ಳಲ್ಪಟ್ಟ ಅಸಹಾಯಕ ವ್ಯಕ್ತಿಯ ವಾದಗಳಾಗಿವೆ. ಸಮಾನ ಸಹನಶೀಲತೆ ಮತ್ತು ಸಮಾನ ಗೌರವಗಳ ವ್ಯತ್ಯಾಸದೊಂದಿಗೆ ಗಾಂಧೀವಾದ ಮೊದಲಾಗುತ್ತದೆ. 'ಸಮಾನ ಗೌರವ' ಎನ್ನುವುದು ಒಂದು ಹೊಸ ನುಡಿಗಟ್ಟು. ಎರಡರ ನಡುವೆ ಅವರು ಕಾಣುವ ವ್ಯತ್ಯಾಸ ಯಾವುದೆಂದು ಹೇಳುವುದು ಕಷ್ಟ. ಆದರೆ ಹೊಸ ನುಡಿಗಟ್ಟಿಗೆ ಒಂದು ವಿಶಿಷ್ಟ ಲಕ್ಷಣವಿದೆ. 'ಸಮಾನ ಸಹನಶೀಲತೆ' ಎನ್ನುವ ಹಳೆಯ ನುಡಿಗಟ್ಟಿನಲ್ಲಿ ತಪ್ಪಿನ ಸಾಧ್ಯತೆಯ ಸೂಚನೆಗಳಿವೆ. ಆದರೆ 'ಸಮಾನ ಗೌರವ' ಪದ ಎಲ್ಲ ಧರ್ಮಗಳೂ ಸಮಾನವಾಗಿ ಸತ್ಯ ಮತ್ತು ಸಮಾನವಾಗಿ ಮಹತ್ವ ಪೂರ್ಣ ಎನ್ನುವುದಕ್ಕೆ ಆಧಾರ. ನಾನು ಒಂದು ವೇಳೆ ಅವರನ್ನು ಸರಿಯಾಗಿ ಅರ್ಥ ಮಾಡಿಕೊಂಡಿದ್ದೇನೆ ಎಂದಾದರೆ, ಅವರ ಹೇಳಿಕೆಗಳು ತಾರ್ಕಿಕವಾಗಿ ಚಾರಿತ್ರಿಕವಾಗಿ ದೋಷಪೂರ್ಣವಾಗಿವೆ. ದೇವರನ್ನು ಕಾಣುವುದು ಧರ್ಮದ ಗುರಿ – ನನಗೆ ಹಾಗೆ ಅನಿಸುವುದಿಲ್ಲ – ಮತ್ತು ಧರ್ಮ ಅವನನ್ನು ಮುಟ್ಟುವ ಒಂದು ದಾರಿ ಎಂದು ಭಾವಿಸಿದರೂ ದೇವನೆಡೆಗೆ ಕೊಂಡೊಯ್ಯುವ ಪ್ರತಿಯೊಂದು ದಾರಿ ಸರಿಯಾದದ್ದೇ ಎಂದು ನಿಶ್ಚಿತವಾಗಿ ಹೇಳಲಾಗದು; ಅಥವಾ ಸದ್ಯ ಅಸ್ತಿತ್ವದಲ್ಲಿರುವ ಎಲ್ಲ ಧರ್ಮಗಳೂ ಸುಳ್ಳು ಮತ್ತು ನಿಜವಾದ ಧರ್ಮ ಇನ್ನೂ ಮೂಡಿಬರಬೇಕಾಗಿದೆ ಎಂದೂ ಹೇಳಬಹುದು. ವಾಸ್ತವ ಸಂಗತಿಯೆಂದರೆ ಧರ್ಮಗಳಲ್ಲಿ ಎಲ್ಲವೂ ಸತ್ಯವಲ್ಲ. ಆದ್ದರಿಂದ ಯಾವುದೇ ಧರ್ಮದ ಜನರಿಗೆ, ಯಾವುದು ಸತ್ಯ ಎನ್ನುವದನ್ನು ತಪ್ಪು ಮಾಡುವ ತಮ್ಮ ಸ್ನೇಹಿತರಿಗೆ ಹೇಳುವ ಹಕ್ಕು ಇದೆ; ಮತ್ತು ಅದು ಅವರ ಕರ್ತವ್ಯವೂ ಹೌದು. ಅಸ್ಪೃಶ್ಯರು ಒಂದು ಆಕಳಿಗಿಂತ ಬುದ್ಧಿವಂತರಲ್ಲ ಎನ್ನುವುದು ಕೇವಲ ಒಬ್ಬ ತಿಳಿಗೇಡಿ ಅಥವಾ ದುರಹಂಕಾರಿ ಹೇಳುವ ಅಭಿಪ್ರಾಯ. ಇದು ಅತ್ಯಂತ ಬುದ್ಧಿಗೇಡಿತನ. ಶ್ರೀ ಗಾಂಧೀ ಹೀಗೆ ಹೇಳುವ ಧೈರ್ಯ ಮಾಡುವ ಕಾರಣವೆಂದರೆ ಆತ ತನ್ನನ್ನು ತಾನು ಬಹು ದೊಡ್ಡ ವ್ಯಕ್ತಿಯೆಂದೂ ಮತ್ತು ತನ್ನ ಘೋಷಣೆಗಳನ್ನು ಅಜ್ಞಾನಿ ಜನಸಮುದಾಯ ಪ್ರಶ್ನಿಸಲಾರದೆಂದೂ ಭಾವಿಸಿರುವುದು ಮತ್ತು ಅಪ್ರಾಮಾಣಿಕ ಬುದ್ಧಿಜೀವಿಗಳು, ತಾನು ಹೇಳಿದ್ದನ್ನೆಲ್ಲ ಎತ್ತಿಹಿಡಿಯುತ್ತಾರೆ ಎಂದು ತಿಳಿದುಕೊಂಡಿರುವುದು. ಅವರ ವಾದದ ಅತ್ಯಂತ ಆಶ್ಚರ್ಯಕರ ಅಂಶವೆಂದರೆ, ಕ್ರೈಸ್ತ ಧರ್ಮ ಪ್ರಚಾರ ಸಂಸ್ಥೆಗಳು ಕೊಡಬಹುದಾದ ಭೌತಿಕ ಸಾಮಗ್ರಿಗಳಲ್ಲಿ ಪಾಲುಗಾರರಾಗುವುದು. ಒಂದು ವೇಳೆ ಈ ಪ್ರಚಾರ ಸಂಸ್ಥೆಗಳು ತಮ್ಮಲ್ಲಿರುವ ಭೌತಿಕ ಸಾಮಗ್ರಿಗಳಲ್ಲಿ ಪಾಲು ನೀಡಿದರೆ, "ಯಾವ ಕೃತಜ್ಞತೆಯೂ ಇಲ್ಲದೆ" (ಅವರ ದೃಷ್ಟಿಯಲ್ಲಿ ಇದೊಂದು

ವಿನಿಮಯ) ಅವರ ಆಮಂತ್ರಣದ ಮೇರೆಗೆ ಅವರಲ್ಲಿರುವ ಅಧ್ಯಾತ್ಮದ ನಿಧಿಯಲ್ಲಿಯೂ ಪಾಲುಗಾರರಾಗಲು (ಗಾಂಧೀ) ಸಿದ್ಧ. ಕ್ರೈಸ್ತ ಧರ್ಮ ಸಂಸ್ಥೆಗಳು ಸಲ್ಲಿಸುವ ಸೇವೆ ಪ್ರಲೋಭನೆಗಳೆಂದೂ, ಕಾರಣ ಅವರ ಮತಾಂತರ ಕಾರ್ಯ ಅನುಕೂಲಕ್ಕಾಗಿ ಎಂದೂ, ಗಾಂಧೀಜಿ ಯಾಕೆ ವಾದಿಸುತ್ತಾರೆಂದು ತಿಳಿಯುವುದು ಕಷ್ಟ. ಕ್ರೈಸ್ತ ಧರ್ಮ ಸಂಸ್ಥೆಗಳು ದೀನದಲಿತರಿಗಾಗಿ ಕಷ್ಟ ಜೀವಿಗಳಿಗಾಗಿ ಸಲ್ಲಿಸುತ್ತಿರುವ ಸೇವೆ, ಅವರ ಧರ್ಮದ ಅತ್ಯಗತ್ಯ ಕರ್ತವ್ಯವೆಂದು ನಂಬಲು ಯಾಕೆ ಸಾಧ್ಯವಿಲ್ಲ? ಇಂಥ ಒಂದು ಪ್ರಕ್ರಿಯೆಯಿಂದಾಗಿ ಒಬ್ಬ ವ್ಯಕ್ತಿ ಕ್ರೈಸ್ತ ಧರ್ಮದಿಂದ ಆಕರ್ಷಿತನಾದರೆ ಅದು ತಪ್ಪೇ?

ಗಾಂಧೀಜಿಯ ಈ ಎಲ್ಲ ವಾದಗಳು ಹುಟ್ಟಿಕೊಂಡದ್ದು, ಕ್ರೈಸ್ತ ಧರ್ಮ ಸಂಸ್ಥೆಗಳು ಅಸ್ಪೃಶ್ಯರನ್ನು ಮತಾಂತರಗೊಳಿಸದಂತೆ ತಡೆಯುವುದಕ್ಕಾಗಿ. ಅಸ್ಪೃಶ್ಯರನ್ನು ಹಿಂದೂ ಧರ್ಮದಲ್ಲಿ ಉಳಿಸುವ ಗಾಂಧೀಜಿಯ ಹಕ್ಕನ್ನು ಯಾರೂ ನಿರಾಕರಿಸಲಾರರು. ಹಾಗಿದ್ದರೆ ಗಾಂಧೀಜಿ ಕ್ರೈಸ್ತ ಧರ್ಮಪ್ರಚಾರಕ ಸಂಸ್ಥೆಗಳಿಗೆ, "ನಿಮ್ಮ ಕಾರ್ಯವನ್ನು ನಿಲ್ಲಿಸಿ, ನಾವೇ ಅಸ್ಪೃಶ್ಯರನ್ನು ಉಳಿಸಬಯಸುತ್ತೇವೆ, ನಮಗೊಂದು ಅವಕಾಶ ಕೊಡಿ" ಎಂದು ಸ್ಪಷ್ಟವಾಗಿ ಹೇಳಿಬಿಡಬೇಕಿತ್ತು. ಕ್ರೈಸ್ತ ಧರ್ಮ ಪ್ರಚಾರಕರ ಈ ವಿಪತ್ತನ್ನು ಎದುರಿಸಲು ಈ ಪ್ರಾಮಾಣಿಕ ಧೋರಣೆ ತಾಳದಿದ್ದುದು ಶೋಚನೀಯ ಸಂಗತಿ. ಇತರರು ಏನೇ ಹೇಳಲಿ, ಗಾಂಧೀಜಿ ಕ್ರೈಸ್ತ ಧರ್ಮ ಸಂಸ್ಥೆಗಳ ಬಗ್ಗೆ ಒಟ್ಟಾರೆ ಅನ್ಯಾಯ ಬಗೆದಿದ್ದಾರೆ ಎನ್ನುವ ಅಭಿಪ್ರಾಯವನ್ನು ಎಲ್ಲ ಅಸ್ಪೃಶ್ಯರೂ ಮತಾಂತರ ಹೊಂದಿರಲಿ, ಹೊಂದದಿರಲಿ – ಒಪ್ಪುತ್ತಾರೆನ್ನುವುದರಲ್ಲಿ ನನಗೆ ಸಂದೇಹವಿಲ್ಲ. ಶತಮಾನಗಳವರೆಗೆ ಕ್ರೈಸ್ತ ಧರ್ಮ ಸಂಸ್ಥೆಗಳು ಅವರಿಗೆ ಆಶ್ರಯ ನೀಡದಿದ್ದರೂ, ರಕ್ಷಣೆ ಒದಗಿಸಿವೆ.

ಗಾಂಧೀಜಿಯ ಈ ಧೋರಣೆಯಿಂದ ಕ್ರೈಸ್ತ ಮತ ಪ್ರಚಾರಕರಾಗಲಿ ಅಥವಾ ಅಸ್ಪೃಶ್ಯರಾಗಲೀ ಭಯಪಡಬೇಕಾಗಿಲ್ಲ. ಕ್ರೈಸ್ತ ಧರ್ಮ ಭಾರತದಲ್ಲಿ ಸ್ಥಿರವಾಗಿರಲು ಬಂದಿದೆ. ಹಿಂದೂಗಳು ತಮ್ಮ ರಾಷ್ಟ್ರೀಯತೆಯ ಆವೇಶದಲ್ಲಿ ತಮ್ಮ ರಾಜಕೀಯ, ಸಾಮಾಜಿಕ ಮತ್ತು ಆರ್ಥಿಕ ಶಕ್ತಿಗಳ ದುರುಪಯೋಗದ ಮೂಲಕ ಅವನ್ನು ಹತ್ತಿಕ್ಕುವ ಪ್ರಯತ್ನ ಮಾಡುವವರೆಗೆ, ಕ್ರೈಸ್ತ ಧರ್ಮ, ಒಳ್ಳೆಯದಕ್ಕಾಗಿಯೇ ಉಳಿಯುತ್ತದೆ, ಮತ್ತು ಅಧಿಕ ಸಂಖ್ಯೆಯಲ್ಲಿ ಬೆಳೆಯುತ್ತದೆ.

## II

ಆದ್ದರಿಂದ ಭಾರತದಲ್ಲಿ ಕ್ರೈಸ್ತ ಧರ್ಮ ಸಾಧಿಸಿರುವುದೇನು ಎಂದು ಪರೀಕ್ಷೆಗೆ ಒಳಪಡಿಸುವುದು ಕ್ರೈಸ್ತ ಧರ್ಮ ಸಂಸ್ಥೆ ಮತ್ತು ಅಸ್ಪೃಶ್ಯರು ಎರಡೂ ದೃಷ್ಟಿಯಿಂದ ಯೋಗ್ಯ ವಿಷಯ. ಕ್ರಿಶ್ಚಿಯನ್ ಧರ್ಮ ಸಂಸ್ಥೆಗಳು ಭಾರತದ ಜನರಿಗೆ 'ಆರೋಗ್ಯಕರ ಮನಸ್ಸು' ಒದಗಿಸುವ ಮತ್ತು ತಮ್ಮ ತೆಕ್ಕೆಯೊಳಗೆ ಬಂದವರ 'ಸದೃಢ ಶರೀರ' ರೂಪಿಸುವ ಪ್ರಯತ್ನದಲ್ಲಿ ತೊಡಗಿರುವ ಸಂಗತಿಯನ್ನು ಅಲ್ಲಗಳೆಯಲಾಗದು. ಈ ಹಂತದಲ್ಲಿ, ಕ್ರೈಸ್ತ ಧರ್ಮ ಸಂಸ್ಥೆಗಳು ಭಾರತದಲ್ಲಿ ಕೈಗೊಂಡ ಎಲ್ಲ ಕಾರ್ಯ ಚಟುವಟಿಕೆಗಳನ್ನೂ ವಿವರಿಸುವುದು ಕಷ್ಟ ಸಾಧ್ಯ. ಈ ಧರ್ಮ ಸಂಸ್ಥೆಗಳು ಮಾಡಿದ ಕಾರ್ಯವನ್ನು ಐದು ಬಗೆಯಲ್ಲಿ ಕಾಣಬಹುದು '(೧) ಮಕ್ಕಳಿಗಾಗಿ (೨) ಯುವಕರಿಗಾಗಿ (೩) ಜನ ಸಮೂಹಕ್ಕಾಗಿ (೪) ಮಹಿಳೆಯರಿಗಾಗಿ ಮತ್ತು (೫) ಕಾಯಿಲೆಯಿಂದ ಬಳಲುವವರಿಗಾಗಿ ಮಾಡಿದ ಕಾರ್ಯ ವ್ಯಾಪಕವಾದುದು. ಈ ಕೆಳಗಿನ ಅಂಕಿಸಂಖ್ಯೆಗಳಿಂದ ಶಿಕ್ಷಣ ಕ್ಷೇತ್ರಕ್ಕಾಗಿ, ರೋಗಿಗಳ ಶುಶ್ರೂಷೆಗಾಗಿ ಯಾವ ಪ್ರಮಾಣದಲ್ಲಿ ಕಾರ್ಯ ಮಾಡಲಾಗಿದೆ ಎನ್ನುವುದರ ಒಂದು ಕಲ್ಪನೆ ಬರುತ್ತದೆ.

### I ಕ್ರಿಶ್ಚಿಯನ್ ವೈದ್ಯಕೀಯ ಕಾರ್ಯ[೧]

| | | |
|---|---|---|
| ೧) | ಆಸ್ಪತ್ರೆಗಳು | ೨೫೬ |
| ೨) | ಔಷಧಾಲಯಗಳು | ೨೫೦ |
| ೩) | ಸ್ಯಾನಿಟೋರಿಯಮ್ | ೧೦ |
| ೪) | ಕುಷ್ಠರೋಗಿ ಧಾಮಗಳು | ೩೮ |
| ೫) | ವೈದ್ಯಕೀಯ ಶಾಲೆಗಳು | ೩ |
| ೬) | ಆಸ್ಪತ್ರೆಯ ಹಾಸಿಗೆ ಸಂಖ್ಯೆ | ೧೨,೦೦೦ |
| ೭) | ಸ್ಯಾನಿಟೋರಿಯಮ್ ಹಾಸುಗೆಗಳು | ೭೫೫ |
| ೮) | ವಿದೇಶೀ ವೈದ್ಯರು | ೩೫೦ |
| ೯) | ರಾಷ್ಟ್ರೀಯ ವೈದ್ಯರು | ೩೯೦ |
| ೧೦) | ವಿದೇಶೀ ದಾದಿಯರು | ೩೦೦ |
| ೧೧) | ದೇಶೀ ದಾದಿಯರು | ೯೦೦ |
| ೧೨) | ವಿದ್ಯಾರ್ಥಿ ದಾದಿಯರು | ೧,೮೦೦ |
| ೧೩) | ಪ್ರಮುಖ ಶಸ್ತ್ರ ಚಿಕಿತ್ಸೆಗಳು | ೪೪,೦೦೦ |
| ೧೪) | ಒಟ್ಟು ಪ್ರಸವಗಳು | ೩೨,೦೦೦ |
| ೧೫) | ಒಳರೋಗಿಗಳು | ೨೮೫,೦೦೦ |
| ೧೬) | ಹೊರರೋಗಿಗಳು | ೨,೬೦೦,೦೦೦ |

### II ಕ್ರಿಶ್ಚಿಯನ್ ಶಿಕ್ಷಣ[೨]

| | ಸಂಸ್ಥೆಗಳು | ವಿದ್ಯಾರ್ಥಿಗಳು |
|---|---|---|
| ೧) ಪ್ರಾಥಮಿಕ ಶಾಲೆಗಳು | ೧೩,೩೩೦ | ೬೧೧,೭೩೦ |
| ೨) ಮಾಧ್ಯಮಿಕ ಶಾಲೆಗಳು | ೩೦೨ | ೬೭,೨೨೯ |
| ೩) ಕಾಲೇಜುಗಳು | ೩೧ | ೧೧,೧೬೨ |
| ೪) ಕಾಲೇಜು ಮತ್ತು ತರಬೇತಿ ಶಾಲೆಗಳು | ೨೫ | ೫೫೬ |
| ೫) ಬೈಬಲ್ ತರಬೇತಿ ಶಾಲೆಗಳು | ೭೪ | ೨,೮೫೫ |
| ೬) ಶಿಕ್ಷಕರ ತರಬೇತಿ ಶಾಲೆಗಳು | ೬೩ | ೩,೧೫೩ |

ಇದಕ್ಕೆ ಪ್ರತಿಯಾಗಿ ಹಿಂದೂಗಳಿಗೆ ತೋರಿಸುವುದೇನಿದೆ? ಹಿಂದೂ ಧರ್ಮ ಮತ್ತು ಹಿಂದೂಗಳಿಗೆ ಮಾನವತೆಯ ಸೇವೆ, ಐತಿಹಾಸಿಕವಾಗಿ ತೀರಾ ಪರಕೀಯ. ಹಿಂದೂ ಧರ್ಮ ಮುಖ್ಯವಾಗಿ ವ್ರತಾಚರಣೆ, ವಿಧಿ ಕ್ರಿಯೆಗಳನ್ನು ಒಳಗೊಂಡಿದೆ. ಅದೊಂದು ದೇವಾಲಯಗಳ ಧರ್ಮ. ಮಾನವ ಪ್ರೇಮಕ್ಕೆ ಅಲ್ಲಿ

೧. ಭಾರತ, ಬರ್ಮಾ ಮತ್ತು ಸಿಲೋನ್‌ಗಳಲ್ಲಿ
೨. ಭಾರತದಲ್ಲಿ

ಸ್ಥಳವಿಲ್ಲ. ಮಾನವ ಪ್ರೇಮಭಾವವಿಲ್ಲದೆ, ಮಾನವ ಸೇವೆಗೆ ಸ್ಫೂರ್ತಿ ಎಲ್ಲಿಂದ ಬರುತ್ತದೆ? ಹಿಂದೂ ದಾನ ದತ್ತಿಗಳ ಗುರಿ ಮತ್ತು ಉದ್ದೇಶಗಳಲ್ಲಿ ಇದು ಚೆನ್ನಾಗಿ ಪ್ರತಿಬಿಂಬಿತವಾಗಿದೆ. ಹಿಂದೂ ಕೊಡಮಾಡುವ ದತ್ತಿದಾನಗಳ ವ್ಯಾಪ್ತಿ ಮತ್ತು ಗುರಿಗಳನ್ನು ಜಾತೀಯತೆ ಎಷ್ಟರ ಮಟ್ಟಿಗೆ ನಿರ್ಣಯಿಸುತ್ತದೆ ಎನ್ನುವುದೂ ಭಾರತದಲ್ಲಿ ಕೂಡ ಕೆಲವೇ ಜನರಿಗೆ ತಿಳಿದಿದೆ. ಹಿಂದೂ ದಾನದತ್ತಿಗಳ ಪೂರ್ಣ ಮತ್ತು ಸಂಕ್ಷಿಪ್ತ ವಿವರಗಳು ಲಭ್ಯವಾಗುವುದು ಕಠಿಣ. ಏನೇ ಆಗಲಿ, ಅನೇಕ ವರ್ಷಗಳ ಹಿಂದೆ ಮುಂಬೈ ನಗರದಲ್ಲಿ ಸಂಗ್ರಹಿಸಿದ್ದ ಅಂಕಿಸಂಖ್ಯೆಗಳು ಈ ವಿಷಯದ ಮೇಲೆ ಬೆಳಕು ಚೆಲ್ಲುತ್ತವೆ (ಹಸ್ತ ಪ್ರತಿಯಲ್ಲಿ ದತ್ತಗಳಿಲ್ಲ). ೧೯೧೮ರ ಸಾಂಕ್ರಾಮಿಕ ಇನ್‌ಫ್ಲೂಯಂಜಾ ಕಾಯಿಲೆ ಪೀಡಿತ ರೋಗಿಗಳ ಶುಶ್ರೂಷೆಯ ಕಾಲದಲ್ಲಿ ರೋಗಿಗಳ ಜಾತಿ ಮುಂಬೈಯ ಕೆಲವು ವೈದ್ಯರ ಮೇಲೆ ಪ್ರಭಾವ ಬೀರಿದ ಆರೋಪವಿದೆ. ತೌಲನಿಕವಾಗಿ ಸಾಮಾಜಿಕ ಸೇವಾಕ್ಷೇತ್ರದಲ್ಲಿ ಕ್ರೈಸ್ತ ಧರ್ಮ ಸಂಸ್ಥೆಗಳು ಮಾಡಿದ ಕಾರ್ಯ ಗಣನೀಯವಾಗಿದೆ. ಕ್ರಿಶ್ಚಿಯನ್ನರನ್ನು ವಿರೋಧಿಸಲೇಬೇಕೆಂದು ನಿರ್ಧರಿಸಿದ ವ್ಯಕ್ತಿಯನ್ನುಳಿದ ಯಾರೂ ಸಂಶಯ ತಾಳಲಾರರು. ಈ ಬಹುಮುಖ ಸೇವೆಯನ್ನು ಒಪ್ಪಿಕೊಂಡರೂ ಎರಡು ಪ್ರಶ್ನೆಗಳನ್ನು ಎತ್ತಬಹುದು : ಭಾರತೀಯ ಕ್ರೈಸ್ತ ಮತೀಯರಿಗೆ ಈ ಸೇವೆಗಳ ಅಗತ್ಯವಿದೆಯೇ? ಇದುವರೆಗೂ ಸೇವಾ ಪ್ರಯೋಜನ ಪಡೆಯದ ಭಾರತೀಯ ಕ್ರೈಸ್ತ ಮತೀಯರಿಗೆ ಈ ಮಿಶನರಿಗಳ ಅಗತ್ಯವಿದೆಯೇ? ಭಾರತೀಯ ಕ್ರೈಸ್ತ ಮತಾವಲಂಬಿಗಳು ಹೆಚ್ಚಾಗಿ ಅಸ್ಪೃಶ್ಯ, ಮತ್ತು ಅತ್ಯಂತ ಕೆಳವರ್ಗದ ಶೂದ್ರರಾಗಿದ್ದಾರೆನ್ನುವುದನ್ನು ಲಕ್ಷ್ಯದಲ್ಲಿಡುವುದು ಅತ್ಯಗತ್ಯ. ಮಿಶನರಿಗಳ ಸಾಮಾಜಿಕ ಸೇವೆಯನ್ನು ಈ ವರ್ಗದ ಅಗತ್ಯತೆಗಳ ಬೆಳಕಿನಲ್ಲಿ ನೋಡಿ ತೀರ್ಮಾನಿಸುವುದು ಆವಶ್ಯಕ. ಆ ಆವಶ್ಯಕತೆಗಳು ಏನೇನು?

ಕ್ರಿಶ್ಚಿಯನ್ ಧರ್ಮ ಸಂಸ್ಥೆಗಳು ಶಿಕ್ಷಣ ಮತ್ತು ವೈದ್ಯಕೀಯ ಕ್ಷೇತ್ರಗಳಲ್ಲಿ ಸಲ್ಲಿಸಿದ ಸೇವೆ ಭಾರತೀಯ ಕ್ರೈಸ್ತ ಮತೀಯ ವ್ಯಾಪ್ತಿಯನ್ನು ಮೀರಿವೆ. ಅವುಗಳ ಪ್ರಯೋಜನ ಹೆಚ್ಚಾಗಿ ಉಚ್ಚ ಹಿಂದೂ ವರ್ಗದ ಜನರಿಗೇ ತಲುಪುತ್ತದೆ. ಭಾರತೀಯ ಕ್ರೈಸ್ತ ಮತೀಯರು ದಟ್ಟ ದರಿದ್ರ ಮತ್ತು ಮಹತ್ವಾಕಾಂಕ್ಷೆಗಳಿಲ್ಲದ ಜನ. ಆದ್ದರಿಂದ ಅವರು ಉನ್ನತ ಶಿಕ್ಷಣ ಸಾಧನೆಗೆ ತೊಡಗಲಾರರು. ಆದ್ದರಿಂದ, ಹೈಸ್ಕೂಲು, ಕಾಲೇಜು ಮತ್ತು ಹಾಸ್ಟೆಲ್‌ಗಳ ನಿರ್ವಹಣೆಗಾಗಿ ಈ ಧರ್ಮ ಸಂಸ್ಥೆಗಳು ಮಾಡುವ ವೆಚ್ಚ, ಭಾರತೀಯ ಕ್ರಿಶ್ಚಿಯನ್ನರ ಏಳಿಗೆಯ ದೃಷ್ಟಿಯಿಂದ ಹೆಚ್ಚಾಗಿ ನಿಷ್ಪ್ರಯೋಜನಕಾರಿ. ಅದೇ ರೀತಿ ಈ ಧರ್ಮಸಂಸ್ಥೆಗಳಿಂದ ಒದಗಿಸಲಾಗುವ ವೈದ್ಯಕೀಯ ನೆರವು ಕೂಡ ಹಿಂದೂ ಜಾತಿವಾದಿಗಳಿಗೇ ಹೋಗುತ್ತದೆ. ಆಸ್ಪತ್ರೆಗಳ ವಿಷಯದಲ್ಲಂತೂ ಇದು ಸತ್ಯ ಸಂಗತಿ.

ನನಗೆ ಗೊತ್ತು, ಅನೇಕ ಧರ್ಮಪ್ರಚಾರಕರಿಗೆ ಈ ಸಂಗತಿ ತಿಳಿದಿದೆ. ಅಷ್ಟೇ ಅಲ್ಲ, ಈ ವೆಚ್ಚ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಲೇ ನಡೆದಿದೆ. ಕ್ರೈಸ್ತ ಮತ ಪ್ರಚಾರಕರು ಮತ್ತು ಉಚ್ಚ ವರ್ಗದ ಹಿಂದೂಗಳ ನಡುವೆ ಸಂಪರ್ಕ ವರ್ಧಿಸುವುದು, ಈ ಸೇವೆಗಳ ಉದ್ದೇಶವಾಗಿದೆನ್ನುವುದು ನನಗೆ ತಿಳಿದಿದೆ. ನನಗೆ ತಿಳಿದಮಟ್ಟಿಗೆ, ಜಾತಿ ವಾದಿ ಹಿಂದೂಗಳನ್ನು ಕ್ರೈಸ್ತ ಮತಾಂತರಗೊಳಿಸುವ ತಮ್ಮ ಯತ್ನಗಳಿಂದ ಪ್ರಯೋಜನವಿಲ್ಲ, ಯಶಸ್ಸೂ ದೊರಕದು ಎನ್ನುವ ಮಾತನ್ನು ಇಂದು ಕ್ರೈಸ್ತ ಧರ್ಮಪ್ರಚಾರಕರು ಸ್ಪಷ್ಟವಾಗಿ ಅರಿತುಕೊಳ್ಳಲು ಇದು ಸಕಾಲ.

ಕ್ರೈಸ್ತ ಮತದ ಬಗೆಗೆ ಭಾರತದ ಬುದ್ಧಿಜೀವಿಗಳ ಸಮೀಕ್ಷೆ ಮಾಡಿದ ಮಿ. ವಿನ್‌ಸ್ಲೋ ನೀಡುವ ತೀರ್ಮಾನಗಳು ಸರಿಯಾಗಿವೆಯೆನಿಸುತ್ತದೆ :

"......ಡಫ್ ಮತ್ತು ಸೀರಮ್‌ಪೂರ (ಶ್ರೀರಾಮಪುರ?)ದ ಕ್ರೈಸ್ತ ಧರ್ಮ ಸಂಸ್ಥೆಗಳು ಕಾರ್ಯದ

ಫಲವಾಗಿ ಕೆಲವು ಗಮನಾರ್ಹ ಮತಾಂತರಗಳಾಗಿದ್ದು, ಇಂಗ್ಲಿಷ್ ಶಿಕ್ಷಣ ಪಡೆದ ಜನರಲ್ಲಿ ಈ ಕಾರ್ಯ ಇನ್ನೂ ಹೆಚ್ಚು ಹೆಚ್ಚು ಜನ ಕ್ರಿಶ್ಚಿಯನ್ ಚರ್ಚ್ ಸೇರಿಕೊಳ್ಳುತ್ತಾರೆ ಎನ್ನುತ್ತಿರುವಾಗಲೇ (ವಿರೋಧಿ) ಪ್ರತಿಕ್ರಿಯೆಗಳು ವ್ಯಕ್ತಗೊಂಡವು ಮತ್ತು ಜೊತೆಗೆ ಈ ಕಾರ್ಯಗಳು ಸ್ತಬ್ಧಗೊಂಡವು. ಅದರ ಸ್ಥಳವನ್ನು ವೇದಾಂತ ಜ್ಞಾನ ಸಮಾಜಗಳು ಆಕ್ರಮಿಸಿದುವು : ವಿಶೇಷತಃ ಪಾಶ್ಚಾತ್ಯ ವಿಚಾರ ಪ್ರಭಾವದಿಂದ ಪ್ರೇರಿತರಾಗಿ ಮೂರ್ತಿಪೂಜೆ ಮತ್ತು ಜಾತಿವಾದಗಳಿಂದ ಅತೃಪ್ತಗೊಂಡು, ಹಿಂದೂ ಧರ್ಮ ವ್ಯವಸ್ಥೆಯೊಳಗಿದ್ದುಕೊಂಡೇ ಇವೆಲ್ಲವುಗಳನ್ನು ತ್ಯಜಿಸಬಯಸಿದ್ದು ಬಂಗಾಲದ ಬ್ರಹ್ಮೋ ಸಮಾಜ. ಬ್ರಹ್ಮೋ ಸಮಾಜ ಕ್ರೈಸ್ತ ಧರ್ಮದ ಅರ್ಧ ದಾರಿಯನ್ನು ಸುಗಮಗೊಳಿಸುತ್ತದೆ, ಮತ್ತು ಆ ಸಮಾಜದ ಅನೇಕ ಸದಸ್ಯರು ಬೇಗನೆ ತಮ್ಮ ಮಧ್ಯಮ ಸ್ಥಿತಿಯನ್ನು ಅರಿತು ಅದರಿಂದ ಅತೃಪ್ತರಾಗಿ ಕ್ರೈಸ್ತ ಮತಕ್ಕೆ ಪರಿವರ್ತನೆಗೊಳ್ಳುತ್ತಾರೆ ಎಂದು ಕ್ರೈಸ್ತ ಧರ್ಮ ಸಂಸ್ಥೆಗಳು ಅನೇಕ ವರ್ಷಗಳವರೆಗೆ ನಂಬಿ ನಿರೀಕ್ಷಿಸಿದರು; ಆದರೆ ಈ ಸಮಾಜದ ಕೆಲವೇ ಗಮನಾರ್ಹ ಮತಾಂತರಗಳಾಗಿ, ಒಟ್ಟಾರೆ ಈ ನಿರೀಕ್ಷೆ ಪೂರ್ಣ ನಿರಾಶೆಯಲ್ಲಿ ಕೊನೆಗೊಂಡಿತು....."

* * *

ಹಾಗಾದರೆ ಜೀಸಸ್ ಕ್ರೈಸ್ತನನ್ನು ಕುರಿತು ಇಂದಿನ ಸುಶಿಕ್ಷಿತ ಭಾರತೀಯನ, ವಿಶೇಷತಃ ಬ್ರಾಹ್ಮಣನ ಅಭಿಪ್ರಾಯವೇನು? ಅದನ್ನು ಸಾರ್ವತ್ರೀಕರಣಗೊಳಿಸುವುದು ಮೂರ್ಖತನವಾದೀತು. ಆದರೂ ಅದರಲ್ಲಿ ಕೆಲವು ಸ್ಪಷ್ಟ ಸಂಗತಿಗಳನ್ನು ಗುರುತಿಸಬಹುದು. ಸಾಮಾನ್ಯವಾಗಿ ಕ್ರೈಸ್ತನ ಬೋಧೆ, ವಿಶೇಷತಃ ಆತನ ನೀತಿಬೋಧೆಗೆ ವ್ಯಾಪಕ ಸ್ವೀಕೃತಿ ಕಂಡುಬರುತ್ತದೆ. ಇತರ ಯಾವುದೇ ಆಕರಗಳಲ್ಲಿ ಅದಕ್ಕೆ ಸಮಾಂತರವಿಲ್ಲದ ವಿಶೇಷತಃ 'ಸೆರ್‌ಮನ್ ಆನ್ ದಿ ಮೌಂಟ್'ದಂಥ 'Sermon on the Mount' (ಸಿನಾಯ್ ಬೆಟ್ಟದ ಮೇಲೆ ಏಸುಕ್ರಿಸ್ತನು ಮಾಡಿದ ಉಪದೇಶ) ಪ್ರಸಂಗಗಳು ಅಪೂರ್ವವಾಗಿದ್ದು, ಮಾನವ ನಡವಳಿಕೆಯ ಒಂದು ಎಣೆಯಿಲ್ಲದ ದಿಗ್ದರ್ಶಿಎನ್ನುವುದನ್ನು ಎಲ್ಲರೂ ಒಪ್ಪಿಕೊಳ್ಳುತ್ತಾರೆ. ಕ್ರೈಸ್ತ ಬೋಧೆಯ ವ್ಯಾಪಕ ಸ್ವೀಕೃತಿಯ ಜೊತೆ ಜೊತೆಗೇ ಆತನ ಬದುಕು ಮತ್ತು ಚಾರಿತ್ರ್ಯದ ಬಗ್ಗೆ ಅಪಾರ ಗೌರವ ಕೂಡ ಮೂಡಿದೆ. ಆದರೆ ಕ್ರೈಸ್ತ, ಪೂರ್ಣ ಅರ್ಥದಲ್ಲಿ ದೇವಪುತ್ರ ಅಥವಾ ದಿವ್ಯತಾಸಂಭೂತನಾಗಿದ್ದ ಎನ್ನುವುದನ್ನು ಆತನ ಜೀವನದಿಂದ ಅತ್ಯಂತ ಪ್ರಭಾವಿತರಾದ ಅಧಿಕ ಸಂಖ್ಯೆಯ ಹಿಂದೂಗಳು ಕೂಡ ಒಪ್ಪುವುದಿಲ್ಲ. ತಮ್ಮ ಮಹಾಪ್ರವಾದಿ ಬುದ್ಧನ ಸಮಾನವೆಂದು ಪರಿಗಣಿಸುತ್ತಾರೆ. ಆದರೆ ಕ್ರೈಸ್ತ ಮತೀಯರು 'ಆತ, ಆತನೊಬ್ಬನೇ ದೇವನ ಸಾಕಾರ ರೂಪ, ಆತನ ಮೇಲೆ ಕೇವಲ ಆತನ ಮೇಲಿರುವ ಶ್ರದ್ಧೆಯ ಮೂಲಕ ಮಾತ್ರ ಮುಕ್ತಿ ಲಭ್ಯ ಎನ್ನುವ ಕ್ರೈಸ್ತ ಮತೀಯರ ಹಕ್ಕು ಪ್ರತಿಪಾದನೆಯನ್ನು, ಪ್ರತ್ಯೇಕ ಮತ್ತು ಸಂಕುಚಿತ ಎಂದು ನಿರಾಕರಿಸುತ್ತಾರೆ .......' ಹೀಗೆ ಮುಕ್ತಿಯ ಏಕೈಕ ಮಾರ್ಗ ಹೊಂದಿದ ಹಕ್ಕು ತಮ್ಮದು ಎನ್ನುವ ಕ್ರೈಸ್ತ ಮತೀಯರ ಪ್ರತಿಪಾದನೆ, ಭಾರತದಲ್ಲಿ ಸ್ವಾಭಾವಿಕ ವಿರೋಧ ಮನೋಭಾವವನ್ನು ಕೆರಳಿಸುತ್ತದೆ....ಇಂದಿಗೂ ಒಬ್ಬ ವಿದ್ಯಾವಂತ ಹಿಂದೂ ವ್ಯಕ್ತಿಯ ಧಾರ್ಮಿಕ ವಿಶಿಷ್ಟ ಗುಣಲಕ್ಷಣ ಮತ್ತು ಧೋರಣೆಗಳೆಂದರೆ ಕ್ರೈಸ್ತನ ಜೀವನ ಮತ್ತು ಆತನ ಮುಖ್ಯ ತತ್ವಬೋಧನೆಗಳ ಬಗ್ಗೆ ಗೌರವ, ಸ್ವೀಕೃತಿಗಳನ್ನು ತಾಳಿಕೊಂಡರೂ ಹಿಂದೂ ಆಗಿ ಉಳಿಯುವುದರಲ್ಲಿಯೇ ಆತನಿಗೆ ತೃಪ್ತಿ.

ಇದು ವಾಸ್ತವ ಸ್ಥಿತಿಯ ಸರಿಯಾದ ಗ್ರಹಿಕೆಯೆನ್ನುವುರಲ್ಲಿ ನನಗೆ ಸಂದೇಹವಿಲ್ಲ. ಹಾಗಾದರೆ ಕ್ರಿಶ್ಚಿಯನ್ ಸಂಸ್ಥೆಗಳು ಶಿಕ್ಷಣ ಮತ್ತು ವೈದ್ಯಕೀಯಕ್ಕಾಗಿ ವ್ಯಯಿಸಿದ ಹಣ ಮತ್ತು ಶಕ್ತಿಗಳು ವ್ಯರ್ಥ; ಮತ್ತು ಅದರಿಂದ ಭಾರತದ ಕ್ರೈಸ್ತ ಮತೀಯರಿಗೆ ನೆರವಾಗುವುದಿಲ್ಲ. ಭಾರತದ ಕ್ರೈಸ್ತ ಮತೀಯರಿಗೆ ಎರಡು ವಸ್ತುಗಳ ಆವಶ್ಯಕತೆಯಿದೆ: ಮೊದಲನೆಯದು ಅವರ ನಾಗರಿಕ ಹಕ್ಕುಗಳ ಸಂರಕ್ಷಣೆ; ಎರಡನೆಯದು

ಅವರ ಆರ್ಥಿಕ ಏಳ್ಗೆಯ ದಾರಿ ಮತ್ತು ಸಾಧನೆಗಳು. ಈ ಎಲ್ಲ ಆವಶ್ಯಕತೆಗಳನ್ನು ವಿವರವಾಗಿ ಚರ್ಚಿಸದಿರುವುದು ಸಾಧ್ಯವಿಲ್ಲ. ಕ್ರೈಸ್ತ ಧರ್ಮ ಸಂಸ್ಥೆಗಳು ಮಾಡುತ್ತಿರುವ ಸಾಮಾಜಿಕ ಕಾರ್ಯದಲ್ಲಿ ಇದೊಂದು ಬಹು ದೊಡ್ಡ ಕೊರತೆ ಎನ್ನುವುದನ್ನು ನಾನು ಎತ್ತಿ ತೋರಿಸಬಯಸುತ್ತೇನೆ.

## III

ಕ್ರೈಸ್ತಮತ ಸಂಸ್ಥೆಗಳು ಶಿಕ್ಷಣ ಮತ್ತು ವೈದ್ಯಕೀಯ ಕ್ಷೇತ್ರದಲ್ಲಿ ಗಣನೀಯ ಮತ್ತು ಸ್ತುತ್ಯರ್ಹವಾದ ಕಾರ್ಯ ಪೂರೈಸಿದ್ದರೂ, ಇನ್ನೂ ಒಂದು ಪ್ರಶ್ನೆಗೆ ಉತ್ತರ ಹುಡುಕಬೇಕಾಗಿದೆ. ಮತಾಂತರಿಯ ಮನೋಭಾವದ ಬದಲಾವಣೆಯ ದಿಸೆಯಲ್ಲಿ ಕ್ರೈಸ್ತ ಧರ್ಮ ಏನು ಸಾಧಿಸಿದೆ? ಅಸ್ಪೃಶ್ಯ ಮತಾಂತರಿಯು ಸ್ಪೃಶ್ಯನ ಸ್ಥಾನಕ್ಕೆ ಏರಿದ್ದಾನೆಯೇ? ಸ್ಪೃಶ್ಯ ಮತ್ತು ಅಸ್ಪೃಶ್ಯ ಮತಾಂತರಿಗಳು ಜಾತಿಯನ್ನು ತೊರೆದಿದ್ದಾರೆಯೇ? ಅವರು ತಮ್ಮ ಕ್ಷುದ್ರ ದೇವತೆಗಳ ಪೂಜೆ ಮಾಡುವುದನ್ನು ಬಿಟ್ಟಿದ್ದಾರೆಯೇ? ತಮ್ಮ ಹಳೆಯ ಮೂಢ ನಂಬಿಕೆಗಳ ಅನುಸರಣೆಯನ್ನು ತೊರೆದಿದ್ದಾರೆಯೆ? ಇವು ಬಹು ದೂರಗಾಮಿ ಪ್ರಶ್ನೆಗಳು. ಈ ಪ್ರಶ್ನೆಗಳಿಗೆ ಉತ್ತರ ದೊರೆಯಲೇಬೇಕು ಮತ್ತು ಈ ಪ್ರಶ್ನೆಗಳನ್ನು ಉತ್ತರಿಸುವುದರ ಮೂಲಕ ಭಾರತದಲ್ಲಿ ಕ್ರೈಸ್ತ ಧರ್ಮ ಇಲ್ಲಿ ಉಳಿಯಬೇಕು, ಇಲ್ಲ ಹಾಳಾಗಬೇಕು.

ದಕ್ಷಿಣ ಭಾರತೀಯ ಕ್ರಿಶ್ಚಿಯನ್ ಹಿಂದುಳಿದ ವರ್ಗದವರು, ಸೈಮನ್ ಕಮಿಶನ್‌ಗೆ ಒಪ್ಪಿಸಿದ ಮನವಿ ಪತ್ರದ ಕೆಲವು ಉಲ್ಲೇಖನಗಳು, ಕ್ರೈಸ್ತ ಮತಕ್ಕೆ ಸೇರಿದರೂ ಜಾತೀಯತೆಯನ್ನು ಎದುರಿಸಬೇಕಾಗಿ ಬಂದಿರುವ ಮತಾಂತರಿ ಅಸ್ಪೃಶ್ಯರ ಸ್ಥಾನಮಾನಗಳ ಮೇಲೆ ಸಾಕಷ್ಟು ಬೆಳಕು ಚೆಲ್ಲುತ್ತವೆ.

ಧರ್ಮದ ದೃಷ್ಟಿಯಿಂದ ನಾವು ಕ್ರೈಸ್ತ ಧರ್ಮೀಯರು. ಇದರಲ್ಲಿ ರೋಮನ್ ಕ್ಯಾಥೋಲಿಕ್ಸ್ ಇದ್ದಾರೆ, ಪ್ರಾಟಿಸ್ಟಂಟ್‌ರೂ ಇದ್ದಾರೆ. ಈ ಪ್ರದೇಶದ ಒಟ್ಟು ಕ್ರೈಸ್ತ ಮತೀಯ ಜನಸಂಖ್ಯೆಯಲ್ಲಿ ನಿಮ್ನ ವರ್ಗದ ಮತಾಂತರಿಗಳ ಸಂಖ್ಯೆ ಪ್ರತಿಶತ ಅರವತ್ತರಷ್ಟಿದೆ. ನಮ್ಮ ದೇಶದಲ್ಲಿ ಕ್ರೈಸ್ತಧರ್ಮಬೋಧೆ ಆರಂಭವಾದಾಗ ನಾವು–ಪಲ್ಲರು, ಪರಯಾ, ಮಾಲ, ಮಾದಿಗ ಇತ್ಯಾದಿ ಜನರು – ಕ್ರೈಸ್ತ ಧರ್ಮ ಅಪ್ಪಿಕೊಂಡೆವು. ಆದರೆ ನಮ್ಮ ಮೂಲ ಮತ್ತು ಗುಂಪಿನವರಾದ ಅನೇಕ ಹಿಂದೂ ಸಮಾಜದ ನಿಮ್ನ ವರ್ಗದ ಜನರು ತಾವು ಹಿಂದೂ ಧರ್ಮದ ಕಟ್ಟಾ ಅಭಿಮಾನಿಗಳೆಂದುಕೊಂಡು, ಮತಾಂತರಗೊಳ್ಳಲಿಲ್ಲ. ದೇವರ ದೃಷ್ಟಿಯಲ್ಲಿ ಮಾನವ ಸಮಾನತೆ, ದಾನಧರ್ಮಗಳ ಆವಶ್ಯಕತೆ, ನೆರೆಹೊರೆಯವರಿಗಾಗಿ ಪ್ರೀತಿ, ಪರಸ್ಪರ ಸಹಕಾರ ಮತ್ತು ದಯೆ ಮುಂತಾದ ಮೂಲಭೂತ ತತ್ವಗಳನ್ನು ನಮ್ಮ ಕ್ರೈಸ್ತ ಧರ್ಮ ಬೋಧಿಸುತ್ತಿದೆಯಾದರೂ, ನಿಮ್ನ ವರ್ಗದಿಂದ, ಮತಾಂತರಗೊಂಡ ನಾವು ಅನೇಕರು, ಇಂದಿಗೂ, ಹಿಂದೂ ನಿಮ್ನ ವರ್ಗದ ಜನರಂತೆ ಹೀನ ಸ್ಥಿತಿಯಲ್ಲಿಯೇ ಉಳಿದಿದ್ದೇವೆ. ಅನೇಕ ಸಂಗತಿಗಳು ಅತಿ ಮುಖ್ಯವಾದುದೆಂದರೆ ಕ್ರೈಸ್ತ ಧರ್ಮಕ್ಕೆ ಮತಾಂತರಗೊಂಡ ಕೆಲವರಲ್ಲಿರುವ ಪ್ರಬಲ ಹಿಂದೂ ಮನೋಧರ್ಮದ ಜಾತಿವಾದಿತ್ವ, ಮತ್ತು ಧರ್ಮ ಪ್ರಚಾರಕ ನಿರ್ಲಕ್ಷ್ಯ ಮನೋಭಾವ, ಅನಧಿಕಾರ, ಅಸ್ತವ್ಯಸ್ತತೆಗಳು ಇತ್ಯಾದಿಗಳಿಂದಾಗಿ ನಾವು ಕ್ರಿಶ್ಚಿಯನ್ನರಾಗುವುದಕ್ಕಿಂತ ಮೊದಲು ಹೇಗಿದ್ದೇವೋ ಇಂದಿಗೂ ಕ್ರಿಶ್ಚಿಯನ್ ಅಸ್ಪೃಶ್ಯರಾಗಿ ಹಾಗೆಯೇ ಇದ್ದೇವೆ. ಸಾಮಾಜಿಕ ಸ್ಥಾನಮಾನ ಪಡೆಯುವಲ್ಲಿ ಕಾನೂನುಗಳ ತೊಡಕು, ಉಚ್ಚಮತದ ಕ್ರಿಶ್ಚಿಯನ್ನರ ನಿರಾಕರಣ, ಜಾತಿಯಾಗಿ ಹಿಂದೂಗಳ ತಿರಸ್ಕಾರ ಮತ್ತು ನಮ್ಮವರೇ ಆಗಿದ್ದ ಹಿಂದೂ ನಿಮ್ನ ವರ್ಗದ ಸೋದರರಿಂದ ಪರಿತ್ಯಕ್ತತೆ–ಇವೆಲ್ಲ ನಮ್ಮ ಹೀನದೆಸೆಗೆ ಕಾರಣಗಳಾಗಿವೆ. ದಕ್ಷಿಣ ಭಾರತದ ಕ್ರೈಸ್ತ ಜನರ ಪ್ರತಿನಿಧಿಗಳು ಮದ್ರಾಸ್ ವಿಧಾನಪರಿಷತ್ತಿನಲ್ಲಿದ್ದಾರೆ; ಅವರು ಜಾತಿವಾದಿ ಕ್ರಿಶ್ಚಿಯನ್ನರು. ಈ ಪದ

ವಿರೋಧಾಭಾಸವೆನಿಸಿದರೂ ದುರ್ದೈವದಿಂದ ಇದು ಸರಿಯಾದ ಪದವೇ. ಏಕೆಂದರೆ ಇದು ಹಿಂದೂ ಧರ್ಮದ ಉಚ್ಚ ಶ್ರೇಣಿಯ ಮತಾಂತರಿಗಳ ಸರಿಯಾದ ವರ್ಣನೆಯಾಗಿದೆ. ಇಂಥವರು ತಮ್ಮ ಜಾತಿಯ ಎಲ್ಲ ನಡವಳಿಕೆ ಪ್ರತ್ಯೇಕತೆಗಳನ್ನು ಉಳಿಸಿಕೊಂಡೇ ಬಂದಿದ್ದಾರೆ. ವಿಶೇಷತಃ ನಮ್ಮ ಗ್ರಾಮೀಣ ಪ್ರದೇಶಗಳಲ್ಲಿ, ಯಾರು ನಮ್ಮ ಕ್ರೈಸ್ತ ಮತೀಯ ಸೋದರರಾಗಬೇಕಿತ್ತೋ ಅವರೇ ಎಲ್ಲ ಸಂಪ್ರದಾಯವಾದಿಗಳಾಗಿ ವಿಚಾರಶೂನ್ಯ ಜಾತಿ ಪ್ರತ್ಯೇಕತೆಯನ್ನು ಉಳಿಸಿಕೊಂಡಿದ್ದಾರೆ. ಅವರು ನಮ್ಮನ್ನು ಪಂಚಮ ಅಥವಾ ಪರಯಾಗಳೆಂದು ಹೀಗಳೆಯುತ್ತಾರೆ. ನಾವು ಕೂಡ ಕ್ರೈಸ್ತ ಮತೀಯರೆನ್ನುವುದನ್ನು ಅಲಕ್ಷಿಸಿ, ತಮ್ಮ ಅಧಿಕಾರ, ಗೌರವ, ಪ್ರತಿಷ್ಠೆಗಳ ಪ್ರಭಾವದಿಂದಾಗಿ ಬಡವರಾದ ನಮ್ಮಂಥವರನ್ನು ದೂರವಿಡುತ್ತಾರೆ......ಮೇಲಿಂದ ಮೇಲೆ ಘಟಿಸುವ ಪಂಚಮವಿರೋಧಿ ಆಕ್ರೋಶಕಾರಿ ಚಟುವಟಿಕೆಗಳು ದಕ್ಷಿಣ ಭಾರತದ ಕ್ರೈಸ್ತರ ಜೀವನಕ್ಕೆ ಕಳಂಕವಾಗಿವೆ. ನಾವು ನಮ್ಮ ಸ್ಥಿತಿಗತಿಗಳನ್ನು, ಅಭಿವೃದ್ಧಿ ಸಾಧನೆಯ ಮತ್ತು ನಮ್ಮ ಪ್ರಾಥಮಿಕ ಹಕ್ಕು ಸಾಧನೆಯ ಯಾವುದೇ ಸಣ್ಣ ಪ್ರಯತ್ನ ಕೈಗೊಂಡರೂ, ಹುಟ್ಟಿನಿಂದ ಶ್ರೇಷ್ಠರೆನಿಸಿಕೊಂಡ ಮೂರ್ಖರು – ಹಿಂದೂ, ಕ್ರೈಸ್ತ ಅಧಿಕಾರಿ, ಅನಧಿಕಾರಿ ಪ್ರತಿಯೊಬ್ಬರ ಆಕ್ರೋಶ, ಉಗ್ರ ಕೋಪಗಳಿಗೆ ತುತ್ತಾಗಬೇಕಾಗುತ್ತದೆ. ಕ್ರೈಸ್ತಧರ್ಮದ ಬುನಾದಿಯನ್ನೇ ಮರೆತು, ಪ್ರೀತಿ, ದಾನ, ಸೋದರತೆ ಇತ್ಯಾದಿ ತತ್ವಗಳಿಗೆ ವಿರೋಧವಾಗಿ ನಮ್ಮ ಕ್ರೈಸ್ತ ಬಾಂಧವರು ನಮ್ಮ ಚರ್ಚುಗಳಲ್ಲಿ ಕೂಡ ನಮ್ಮನ್ನು ಅಸ್ಪೃಶ್ಯರಂತೆ ಕಾಣುತ್ತಾರೆ. ನಾವು ಹತ್ತಿರ ಬಾರದಂತೆ ನೋಡಿಕೊಳ್ಳುತ್ತಾರೆ. ಪ್ರತ್ಯೇಕ ಆಸನವ್ಯವಸ್ಥೆ, ಅವರು ಕೂಡುವ ಸ್ಥಳಗಳಲ್ಲಿ ಇತರರಿಂದ ಬೇರ್ಪಡಿಸುವ ಕಬ್ಬಿಣ ಕಟಾಂಜನ, ಕಬ್ಬಿಣ ಸಳಿಗಳ ಅಡೆತಡೆ ಗೋಡೆ, ಬೇಲಿ ನಿರ್ಮಿತವಾಗುತ್ತದೆ. ಇಂಥ ಅನೇಕ ಚರ್ಚ್‌ಗಳಿವೆ. ಸಂಸ್ಕಾರಗಳ ಸ್ವೀಕೃತಿಯಲ್ಲಿ, ಮಾಲಿನ್ಯವನ್ನು ದೂರೀಕರಿಸಲೆಂದುಕೊಂಡ ಒಂದು ವಿಚಿತ್ರ ಪ್ರತ್ಯೇಕತೆಯ ಆಚರಣೆ ರೂಢಿಯಲ್ಲಿದೆ. ನಮ್ಮ ಮಕ್ಕಳನ್ನು ಜೀವನ ಸಾಧನೆಗಾಗಿ ತರಬೇತುಗೊಳಿಸುವ ಹಕ್ಕನ್ನು ನಿರ್ದಯವಾಗಿ ನಿರಾಕರಿಸಲಾಗುತ್ತದೆ ಮತ್ತು ಕೇವಲ ಮಾತ್ಸರ್ಯ ಭಾವದಿಂದಾಗಿ ಶಾಲೆ, ಹಾಸ್ಟೆಲ್ಸ್ ಮತ್ತು ವಿದ್ಯಾರ್ಥಿ ನಿಲಯಗಳಲ್ಲಿ ಪ್ರವೇಶ ದೊರೆಯುವುದಿಲ್ಲ. ಒಂದು ವೇಳೆ ದೊರೆತರೂ ಅವರಿಗೆ ಅವಮಾನಕಾರಕ ಪ್ರತ್ಯೇಕ ವಾಸದ ವ್ಯವಸ್ಥೆ ಮಾಡಲಾಗುತ್ತದೆ. ಮತಾಂತರಿಯ ಹಿಂದೂ ಉಚ್ಚ ಶ್ರೇಣಿಯ ಮೂಲವನ್ನು ಗುರುತಿಸಿ, ಕ್ರಿಶ್ಚಿಯನ್ ಜಾತಿವಾದಿ ಅದಕ್ಕನುಗುಣವಾದ ಸಾಮಾಜಿಕ ಅಂತಸ್ತು ಮತ್ತು ಸ್ಥಾನಮಾನ ನೀಡಿ ತನ್ನ ಹಿಂದೂ ಜಾತಿವಾದಿಗಳ ದೃಷ್ಟಿಯಲ್ಲಿ ಮೆಚ್ಚುಗೆ ಪಡೆಯುತ್ತಾನೆ. ಅವನು, ಹಿಂದೂ ಜಾತಿವಾದಿಗಳು ನಿಮ್ನ ವರ್ಗದವರ ಜೊತೆ ನಡೆದುಕೊಳ್ಳುವ ರೀತಿಯಲ್ಲಿಯೇ ಕ್ರೈಸ್ತ ನಿಮ್ನ ವರ್ಗದ ಜನರ ಜೊತೆ ನಡೆದುಕೊಳ್ಳುತ್ತಾನೆ. ಇಲ್ಲಿ ಹೇಳಲಾದ ಸಾಮಾನ್ಯ ರೀತಿಯ ವಿವರಗಳನ್ನು ಈ ಕೆಳಗಿನ ಎರಡು ನಿರ್ದಿಷ್ಟ ನಿದರ್ಶನಗಳೊಂದಿಗೆ ಪುಷ್ಟೀಕರಿಸಬಹುದು (ಘಟನೆಗಳ ವಿವರವಿಲ್ಲ). ಇದೊಂದು ಭೀಕರ ಘಟನೆ. ಇದು ಭಾರತದ ಎಲ್ಲ ಭಾಗಗಳಿಗೂ ಅನ್ವಯಗೊಳ್ಳುವುದಿಲ್ಲ ಅಥವಾ ಕ್ರೈಸ್ತ ಮತೀಯರ ಎಲ್ಲ ವರ್ಗಗಳಿಗೂ ಸಂಬಂಧಪಡುವುದಿಲ್ಲ ಎನ್ನುವುದೇ ಒಂದು ನೆಮ್ಮದಿಯ ಸಂಗತಿ. ಈ ಚಿತ್ರ ಪ್ರಾಟೆಸ್ಟಂಟ್ ಸಮುದಾಯಕ್ಕಿಂತ ಹೆಚ್ಚು ಕ್ಯಾಥೋಲಿಕ್ ಸಮುದಾಯಕ್ಕೆ ಅನ್ವಯಗೊಳ್ಳುವಂಥದು. ಇದು ಉತ್ತರ ಅಥವಾ ಮಧ್ಯ ಭಾರತಕ್ಕಿಂತ ಹೆಚ್ಚಾಗಿ ದಕ್ಷಿಣ ಭಾರತದ ನೈಜ ಸ್ಥಿತಿಯಾಗಿದೆ. ಆದರೆ ಕ್ರೈಸ್ತಧರ್ಮ, ಕ್ರೈಸ್ತ ಮತಾಂತರಿಗಳ ಜಾತೀಯತೆಯ ಭಾವನೆಗಳ ಸಮಸ್ಯೆಯನ್ನು ಪರಿಹರಿಸುವಲ್ಲಿ ಯಶಸ್ವಿಯಾಗಲಿಲ್ಲ ಎನ್ನುವುದು ವಸ್ತುಸ್ಥಿತಿ, ಸ್ಪೃಶ್ಯರು ಮತ್ತು ಅಸ್ಪೃಶ್ಯರ ನಡುವಿನ ಭೇದಭಾವ ಒಂದು ಮೂಲೆಗೆ ಸೀಮಿತವಾಗಿರಬಹುದು. ಚರ್ಚ್ ಶಾಲೆ ಎಲ್ಲರಿಗೂ ಮುಕ್ತವಾಗಿರಬಹುದು. ಇಷ್ಟಾದರೂ ಹಿಂದೂಗಳನ್ನು ಜಾತಿವಾದ ಆಳುವಂತೆ ಕ್ರಿಶ್ಚಿಯನ್ನರ ಜೀವನವನ್ನೂ ಅದು ಆಳುತ್ತದೆ ಎಂದು ಧಾರಾಳವಾಗಿ ಹೇಳಬಹುದು. ಬ್ರಾಹ್ಮಣ ಕ್ರಿಶ್ಚಿಯನ್ನರಿದ್ದಾರೆ;

ಅಬ್ರಾಹ್ಮಣ ಕ್ರಿಶ್ಚಿಯನ್ನರಿದ್ದಾರೆ. ಅಬ್ರಾಹ್ಮಣ ಕ್ರೈಸ್ತರಲ್ಲಿ ಮರಾಠಾ ಕ್ರೈಸ್ತರು, ಮಹರ್ ಕ್ರೈಸ್ತರು, ಮಾಂಗ್ ಕ್ರೈಸ್ತರು ಮತ್ತು ಭಂಗಿ ಕ್ರೈಸ್ತಮತೀಯರಿದ್ದಾರೆ. ಅದೇ ಪ್ರಕಾರ ದಕ್ಷಿಣದಲ್ಲಿ ಪರಯಾ, ಮಲ್ಲಾ ಮತ್ತು ಮಾದಿಗ ಕ್ರೈಸ್ತ ಮತೀಯರಿದ್ದಾರೆ. ಅವರಲ್ಲಿ ಪರಸ್ಪರ ಮದುವೆಗಳಾಗುವುದಿಲ್ಲ; ಅವರು ಪರಸ್ಪರ ಕೂಡಿ ಊಟ ಮಾಡುವುದಿಲ್ಲ. ಅವರು ಹಿಂದೂಗಳಷ್ಟೇ ಜಾತಿವಾದಿಗಳಾಗಿದ್ದಾರೆ. ಮತಾಂತರಿಗಳ ಕ್ಷುದ್ರ ದೈವಪೂಜೆಯನ್ನು ಅಳಿಸಿಹಾಕುವಲ್ಲಿ ಕ್ರೈಸ್ತ ಧರ್ಮ ಅದಕ್ಕೆ ತಕ್ಕ ಪರಿಣಾಮ ಬೀರಿಲ್ಲ ಎನ್ನುವುದನ್ನು ತೋರಿಸಲು ಮತ್ತೊಂದು ವಿಷಯ ಗಮನಾರ್ಹ. ಸ್ವಲ್ಪ ಹೆಚ್ಚು ಕಡಿಮೆ ಎಲ್ಲ ಮತಾಂತರಿಗಳೂ ಹಿಂದೂ ಆರಾಧನಾ ವಿಧಿಗಳನ್ನು ಉಳಿಸಿಕೊಂಡಿದ್ದಾರೆ ಮತ್ತು ಹಿಂದೂ ಮೌಢ್ಯಗಳನ್ನು ನಂಬುತ್ತಾರೆ. ಕ್ರೈಸ್ತ ಮತಕ್ಕೆ ಪರಿವರ್ತಿತನಾದ ವ್ಯಕ್ತಿ, ತನ್ನ ಕುಟುಂಬ ದೇವತೆಗಳನ್ನು ಪೂಜಿಸುತ್ತಾನೆ, ಜೊತೆಗೆ ಹಿಂದೂ ದೇವತೆಗಳಾದ ರಾಮ, ಕೃಷ್ಣ, ಶಂಕರ, ವಿಷ್ಣು ಮುಂತಾದವರನ್ನೂ ಪೂಜಿಸುತ್ತಾನೆ. ಕ್ರೈಸ್ತ ಮತಾಂತರಿ ಹಿಂದೂಗಳ ಪವಿತ್ರ ತೀರ್ಥಕ್ಷೇತ್ರಗಳ ಯಾತ್ರೆ ಕೈಕೊಳ್ಳುವುದನ್ನೂ ಕಾಣಬಹುದು. ಪಂಢರಪುರಕ್ಕೆ ಹೋಗಿ ಕಾಣಿಕೆಗಳನ್ನು ಸಲ್ಲಿಸುತ್ತಾನೆ. ಜಿಜೋರಿಗೆ ಹೋಗಿ ರಕ್ತಪಿಪಾಸು ದೇವತೆ ಖಂಡೋಬಾನಿಗೆ ಬಲಿ ಕೊಡುತ್ತಾನೆ. ಗಣೇಶ ಚತುರ್ಥಿಯ ದಿನ ಚಂದ್ರನನ್ನು ನೋಡುವುದಿಲ್ಲ; ಮತ್ತು ಗ್ರಹಣಗಳ ದಿನ ಸಮುದ್ರ ಸ್ನಾನ ಮಾಡುತ್ತಾನೆ. ಹೀಗೆ ಹಿಂದೂಗಳ ಎಲ್ಲ ಮೂಢ ಸಂಪ್ರದಾಯಗಳನ್ನೂ ಮತಾಂತರಿ ಆಚರಿಸುವುದನ್ನು ಕಾಣುತ್ತೇವೆ. ಹಿಂದೂಗಳ ಜನನ, ಮದುವೆ ಮತ್ತು ಮರಣ ಕಾಲದ ಎಲ್ಲ ಸಂಸ್ಕಾರಗಳನ್ನೂ ಕ್ರೈಸ್ತ ಮತಾಂತರಿಯೂ ಅನುಸರಿಸುತ್ತಿರುವುದು ಭೀಕರವಾಗಿದೆ. ಕ್ರಿಶ್ಚಿಯನ್ನರಲ್ಲಿರುವ ಹಿಂದೂ ಸಾಮಾಜಿಕ ಸಂಪ್ರದಾಯಗಳ ಆಚರಣೆಗಳಿಗೆ ಯಾವುದೇ ವಿಶೇಷ ಧಾರ್ಮಿಕ ಮಹತ್ವ ಇಲ್ಲದಿರುವುದರಿಂದ ಅದೇನೂ ಅಂಥ ಗಮನಾರ್ಹ ವಿಷಯವಲ್ಲ. ಆದರೆ ಇದೇ ಮಾತನ್ನು ಧಾರ್ಮಿಕ ಆಚರಣೆ ಕುರಿತು ಹೇಳಲು ಸಾಧ್ಯವಾಗುವುದಿಲ್ಲ. ಅವು ಕ್ರಿಶ್ಚಿಯನ್ ನಂಬಿಕೆ ಮತ್ತು ಜೀವನ ಕ್ರಮಕ್ಕೆ ಅಸಂಬದ್ಧವಾಗಿವೆ. ಕ್ರೈಸ್ತ ಧರ್ಮಕ್ಕೆ ಇವುಗಳನ್ನೆಲ್ಲ ಕಿತ್ತೊಗೆಯಲು ಯಾಕೆ ಸಾಧ್ಯವಾಗಿಲ್ಲ ಎನ್ನುವುದು ಪ್ರಶ್ನೆ.

ಇದಕ್ಕೆ ಉತ್ತರ ಇಷ್ಟೆ : ಕ್ರಿಶ್ಚಿಯನ್ ಧರ್ಮ ಸಂಸ್ಥೆಗಳು ಇತರರನ್ನು ಕ್ರೈಸ್ತ ಮತಕ್ಕೆ ಪರಿವರ್ತಿಸಲು ಆತುರವಾಗಿದೆ. ಆದರೆ ಮತಾಂತರಿಗಳ ಕ್ಷುದ್ರ ದೇವತಾರಾಧನೆ ಇತ್ಯಾದಿ ರೂಢಿಗಳನ್ನು ಬೇರುಸಹಿತ ಕಿತ್ತೆಸೆಯುವ ದೃಢ ಸಂಕಲ್ಪದ ಹೋರಾಟ ಮಾಡಿಲ್ಲ; ನಿಜ ಸಂಗತಿಯೆಂದರೆ ಅದನ್ನು ಅವರು ಸಹಿಸಿಕೊಂಡು ಬಂದಿದ್ದಾರೆ. ಕ್ರೈಸ್ತ ಮತಾಂತರಿಗಳಲ್ಲಿ ಉಳಿದುಕೊಂಡು ಬಂದಿರುವ ವಿಗ್ರಹ ಆರಾಧನವಾದ, ಆಧುನಿಕ ಕಾಲದಲ್ಲಿ ಮೊತ್ತಮೊದಲು ಈ ಕ್ಷೇತ್ರದಲ್ಲಿ ಕಾಲಿರಿಸಿದ ಕ್ರೈಸ್ತಪಂಥದ ಪ್ರಚಾರ ಮಂಡಲಿಗಳ ಪೂರ್ವಾರ್ಜಿತ ಫಲ–ಪ್ರಭಾವ.

ವಿಗ್ರಹಾರಾಧನೆ ಕುರಿತ ಕ್ಯಾಥೋಲಿಕ್ ಪಂಥದ ಧೋರಣೆಗಳು ಮಧುರೈ ಧರ್ಮ ಪ್ರಚಾರ ಮಂಡಲಿಯು ಅನುಸರಿಸಿದ ರೀತಿ ನೀತಿಗಳ ಫಲವಾಗಿ ಮೂಡಿಬಂದವುಗಳಾಗಿವೆ. ಈ ಧರ್ಮ ಮಂಡಲಿಯನ್ನು ಸ್ಥಾಪಿಸಿದ್ದು, ಒಬ್ಬ ಇಟಲಿಯ ಕ್ರೈಸ್ತಪಂಥದ ಫಾದರ್ ರಾಬರ್ಟ್ ದ ನೊಬಿಲಿ ಎನ್ನುವವರು. ಆತ ಭಾರತಕ್ಕೆ ಬಂದದ್ದು ೧೬೦೮ರಲ್ಲಿ. ಫ್ರಾನ್ಸಿಸ್ ಝೇವಿಯರ್ ಯಶಸ್ವಿಯಾಗಲಿಲ್ಲ ಎನ್ನುವುದನ್ನು ತಿಳಿದ ಆತ ಒಂದು ಹೊಸ ಯೋಜನೆ ಹಾಕಿಕೊಂಡ. ಆತ, ಎಲ್ಲ ವಸ್ತುಗಳನ್ನೂ ಎಲ್ಲರಿಗಾಗಿ ತರಬೇಕು ಅಂದರೆ ಕೆಲವರನ್ನಾದರೂ ರಕ್ಷಿಸಬಹುದು ಎಂದು ನಿರ್ಧರಿಸಿ ಕಾರ್ಯ ಮಾಡಿದ್ದ. ದೇವಪ್ರೇರಿತ ಪಾಲ್ ಹೆಜ್ಜೆಗಳಲ್ಲಿ ಹೆಜ್ಜೆಯಿಟ್ಟು ನಡೆಯಲು ಸಂಕಲ್ಪಿಸಿಕೊಂಡ. ಈ ದೃಢ ವಿಶ್ವಾಸವನ್ನು ಆಧರಿಸಿ ಮಧುರೆಯ ಅರಸು ಪೆರುಮಾಳ್ ನಾಯಕನನ್ನು ಕಂಡು, ಖ್ಯಾತವಾದ ಮಧುರೈ ಧರ್ಮ ಮಂಡಲಿ ಸ್ಥಾಪಿಸಿದ. ಆತ

ಕಾರ್ಯಾರಂಭಿಸಿದ ರೀತಿಯನ್ನು ಡಾ. ಜೆ. ಎನ್. ಒಗಿಲ್ವಿ ತನ್ನ "ಅಪಾಸ್ಟಲ್ಸ್ ಆಫ್ ಇಂಡಿಯಾ' ಎನ್ನುವ ಕೃತಿಯಲ್ಲಿ ಚಿತ್ರವತ್ತಾಗಿ ಈ ಕೆಳಗಿನಂತೆ ವಿವರಿಸಿದ್ದಾನೆ :

ಒಂದು ದಿನ ಮಧುರೆಯಲ್ಲಿ ಒಂದು ಆಶ್ಚರ್ಯಕರ ಸುದ್ದಿ ಹರಡಿತು : ದೂರದ ದೇಶದಿಂದ ಒಬ್ಬ ವಿಚಿತ್ರ ಸನ್ಯಾಸಿ, ಈ ನಗರದ ಕೀರ್ತಿ ವಾರ್ತೆಗಳಿಂದ ಆಕರ್ಷಿತನಾಗಿ ಇಲ್ಲಿ ಬಂದು, ನಗರದ ಬ್ರಹ್ಮನ್ ನೆಲೆಯಲ್ಲಿ ವಾಸವಾಗಿದ್ದಾನೆ; ಇತ್ಯಾದಿ. ಕೂಡಲೇ ಜನ ಗುಂಪುಗುಂಪಾಗಿ ಆ ಪವಿತ್ರ ಮಾನವನ ಮನೆಗೆ ಬಂದು ಅವನನ್ನು ಕಾಣಬಯಸಿದರು. ಆದರೆ ಬ್ರಹ್ಮನ್ ಸೇವಕರು ಜನರ ಪ್ರವೇಶಕ್ಕೆ ಅಡ್ಡಿ ಮಾಡಿದರು. "ಪ್ರಭುಗಳು ದೇವಧ್ಯಾನದಲ್ಲಿದ್ದಾರೆ; ಶಾಂತಿಭಂಗ ಮಾಡುವಂತಿಲ್ಲ ಎಂದು ಹೇಳಿದರು. ಈ ಸುದ್ದಿಯಿಂದ ಜನರ ಆಸಕ್ತಿ ಕೆರಳಿ ಏಕಾಂತತೆಯ ಖ್ಯಾತಿ ಮತ್ತಷ್ಟು ಪ್ರಸಾರಗೊಂಡಿತು. ಒಂದು ಎತ್ತರದ ಮಣೆಯ ಮೇಲೆ ಪದ್ಮಾಸನ ಭಂಗಿಯಲ್ಲಿ ಕುಳಿತ ಸನ್ಯಾಸಿ, ನೋಡಿದ ಜನರಿಗೆ ಬ್ರಹ್ಮನಂತೆಯೇ ಕಂಡ. ಭುಜದುದ್ದಕ್ಕೂ ಐದು ಎಳೆಯ ಪವಿತ್ರ ಸೂತ್ರ – ತ್ರಿಮೂರ್ತಿ ಸಂಕೇತವಾಗಿ ಮೂರು ಬಂಗಾರದ ಎಳೆ, ಎರಡು ಬೆಳ್ಳಿಯ ಎಳೆ ನಮ್ಮ ಪ್ರಭುವಿನ ಕಾಯ ಮತ್ತು ಆತ್ಮಗಳ ಪ್ರತೀಕ ಮತ್ತು ಆ ಹರಿಗುಂಟ ನೇತಾಡುವ ಒಂದು ಸಣ್ಣ ಕ್ರಾಸ್. ಸಂಭಾಷಣೆಯಿಂದ ಸನ್ಯಾಸಿಯ ವಿದ್ವತ್ತು ಮತ್ತು ಆಳವಾದ ಅವಲೋಕನ ವ್ಯಕ್ತವಾಗುವುದರ ಜೊತೆ ಆತನ ಸರಳ ಮತ್ತು ಪರಿಶುದ್ಧ ಜೀವನ ವಿಧಾನ ಕಂಡುಬರುತ್ತಿತ್ತು. ದಿನಕ್ಕೆ ಒಂದೇ ಊಟ; ಒಂದಷ್ಟು ಅನ್ನ, ಹಾಲು ಮತ್ತು ಒಂದಷ್ಟು ಹುಳಿ ತರಕಾರಿ ಇವಿಷ್ಟೆ. ಇದೆಲ್ಲ ಸುದ್ದಿ ಹಬ್ಬುತ್ತಿದ್ದಂತೆ ಎಲ್ಲ ಬ್ರಾಹ್ಮಣರೂ ಆತನಲ್ಲಿಗೆ ಬರತೊಡಗಿದರು. ಆದರೆ ಆಳರಸನಿಂದ ಅರಮನೆಯ ಆಮಂತ್ರಣ ಬಂದಾಗ ಆತನ ಖ್ಯಾತಿ ಮತ್ತಷ್ಟು ಅಧಿಕಗೊಂಡಿತು. ಅರಮನೆಗೆ ಹೋಗಿ ಅಂತಃಪುರದ ಸ್ತ್ರೀಯರನ್ನು ನೋಡಿದರೆ ತನ್ನ ಆತ್ಮದ ಪಾವಿತ್ರ್ಯ ಹಾಳಾಗುತ್ತದೆ ಎಂದು ಹೇಳಿ ಅರಸನ ಆಮಂತ್ರಣವನ್ನು ಸನ್ಯಾಸಿ ತಿರಸ್ಕರಿಸಿದ. ಇದರಿಂದ ಜನರು ಮಾತಾಡಿಕೊಳ್ಳತೊಡಗಿದರು. ಮಧುರೆಯಲ್ಲಿ ಎಂದೂ ಇವನಿಗಿಂತ ಪವಿತ್ರ ಸಂತನನ್ನು ಕಂಡಿರಲೇ ಇಲ್ಲ; ಆತನ ಜೀವನವೇ ಆತನ ಪಾವಿತ್ರ್ಯಕ್ಕೆ ಪ್ರಮಾಣವಾಗಿರುವಾಗ, ಆತನ ಬೋಧೆ ಸತ್ಯದ ಹೊರತು ಮತ್ತೇನೂ ಅಲ್ಲ. ತಾನೊಬ್ಬ ಅತ್ಯುನ್ನತ ವರ್ಗದ "ರೋಮನ್ ಬ್ರಹ್ಮ' ಎನ್ನುವ ಮಾತು ಜನರ ಸ್ವೀಕೃತಿ ಪಡೆಯಿತು. ಯಾರ ಮನಸ್ಸಿನಲ್ಲಾದರೂ ಉಳಿದಿರಬಹುದಾದ ಸಂದೇಹ ನಿವಾರಣೆಗೆ ಒಂದು ಹಳೆಯ ಬಣ್ಣಗೆಟ್ಟ ಚರ್ಮದ ಸುರುಳಿಯನ್ನು ತೋರಿಸಲಾಗುತ್ತಿತ್ತು. ಅದರಲ್ಲಿ 'ರೋಮನ್ ಬ್ರಹ್ಮರು ನೇರವಾಗಿ ಬ್ರಹ್ಮದೇವನಿಂದಲೇ ಉದಯಿಸಿದವರು ಮತ್ತು ಆ ವಂಶದ ಅತಿ ಶ್ರೇಷ್ಠ ಸಂತಾನ' ಮುಂತಾದ ಒಕ್ಕಣೆ ಬರೆಯಲಾಗಿತ್ತು. ಆ ದಾಖಲೆ ಅಧಿಕೃತವಾದುದೆಂದು ಸನ್ಯಾಸಿ ದೇವರಾಣೆಯಿಟ್ಟ. ಜನ ಆತನ ಬೋಧನೆಗಳನ್ನು ಮುಕ್ತ ಮನಸ್ಸಿನಿಂದ ಕೇಳಿದರು. "ಈ ದಿಟ್ಟ ಬರಹಗಾರ ಹಿಂದೂ ಧರ್ಮದಿಂದ ಚಿಗುರಿದ ತಿದ್ದುಪಡಿ ಹೊಂದಿದ ಕ್ರೈಸ್ತ ಧರ್ಮ ಸಿದ್ಧಾಂತ ಪ್ರತಿಪಾದಿಸುವ ಪುಸ್ತಕದ ಮೇಲೆ ಪುಸ್ತಕ ಬರೆದ. ಇವುಗಳಲ್ಲಿ ಗಮನಾರ್ಹವಾದ ಕೃತಿ ಖೊಟ್ಟಿಯಾಗಿ ಸೃಷ್ಟಿಸಲ್ಪಟ್ಟ 'ಐದನೆಯ ವೇದ'. ಇದು ದೇವಲೋಕದಿಂದ ನೇರವಾಗಿ ಬ್ರಹ್ಮದೇವನಿಗೆ ನಿರೂಪಿತಗೊಂಡ ಚತುರ್ವೇದಗಳಿಗೆ ಕಿರೀಟ ಎಂದು ಸಾರಲಾಯಿತು. ಇದೊಂದು ಅತ್ಯಾಶ್ಚರ್ಯಕರವಾದ, ದಿಟ್ಟ ಮತ್ತು ಅಪಾಯಕಾರಿ ಸಂಗತಿಯಾಗಿತ್ತು. ಕ್ರೈಸ್ತ ಮತೀಯರಿಗಾಗಿ ಸೃಷ್ಟಿಸಲ್ಪಟ್ಟ – ಹಿಂದೂಗಳಿಗೆ ಅಪಾಯಕಾರಿಯೆನಿಸಿದೆ – ಈ ಖೊಟ್ಟಿ ಕೃತಿ ನೂರೈವತ್ತು ವರ್ಷಗಳವರೆಗೆ ಒಂದು ಗಣನೀಯ ಮನ್ನಣೆ ಪಡೆದಿತ್ತು.

ಅನೇಕ ಜನ ಬ್ರಹ್ಮಶಿಷ್ಯರಾದರು. ಹಳೆಯ ಯೂರೋಪ್ ಧರ್ಮಬೋಧಕರ ದೀಕ್ಷಾ ವಿಧಿಗಳೇ ಸ್ವಲ್ಪ ಮಟ್ಟಿಗೆ ಅದರಲ್ಲಿ ಹುದುಗಿದ್ದರೂ, ವಿವಿಧ ಬಗೆಯ ಹೊಸ ದೀಕ್ಷಾ ಸಂಸ್ಕಾರಗಳನ್ನು ರೂಪಿಸಲಾಯಿತು.

ಪ್ರಚಾರಕರು ಈ ಪದ್ಧತಿ ಯಶಸ್ವಿಯಾಯಿತು. ಯಾವ ಸಂದೇಹಕ್ಕೂ ಆಸ್ಪದವಿಲ್ಲದ ರೀತಿಯಲ್ಲಿ ಗಣನೀಯವಾದ ಪ್ರಗತಿ ಸಾಧಿತವಾಯಿತು. ಹಿಂದೂ ಧರ್ಮ–ಜಾತಿ ಸಂಬಂಧದ ಧೋರಣೆ, ಮಹತ್ವದ ಸಾಧನವಾಯಿತು. ದನೊಬಿಲಿ ಹೇಳುವಂತೆ ಇದರಲ್ಲಿ ಜಾತಿಗೆ ವಿಶೇಷ ಮಹತ್ವವಿರಲಿಲ್ಲ. ಅದು ಬರೀ ಒಂದು ಸಾಮಾಜಿಕ ರೂಢಿಯಾಗಿತ್ತು. ಈ ಕಾರಣದಿಂದ ಮತಾಂತರ ಹೊಂದಿದವರ ಮೇಲೆ ತಮ್ಮ ಜಾತಿ ಸೋದರರಿಂದ ಬೇರೆಯಾಗುವಂತೆ ಮತ್ತು ವ್ರತ ಪಾಲನೆಗಳನ್ನು ತ್ಯಜಿಸುವಂತೆ ಒತ್ತಾಯ ಹೇಳುವ ಅಗತ್ಯ (ಬೋಧಕನಿಗೆ) ಕಾಣಲಿಲ್ಲ. ಈತನಿಂದ ಬಂದ ಮತಾಂತರಿಗಳು ತಮ್ಮ ಹಿಂದೂ ಜಾತಿ ಚಿಹ್ನೆ ಜುಟ್ಟನ್ನು ಹಾಗೇ ಉಳಿಸಿಕೊಂಡರು. ತಮ್ಮ ಇತರ ಹಿಂದೂ ಜನರ ಹಾಗೆ ಎದ್ದುಕಾಣುವಂತೆ ಜನಿವಾರ ಹಾಕದೇ ಸಾಧ್ಯವಾದಷ್ಟು ಅಡಗಿಸಿ ಧರಿಸಿರುತ್ತಾರೆ. ಹಣೆಗೆ ಮೊದಲು ಆಕಳ ಸೆಗಣಿಯಿಂದ ಸಿದ್ಧವಾದ ಗಂಧದ ನಾಮ (ಬೊಟ್ಟು) ಇಟ್ಟುಕೊಳ್ಳುತ್ತಿದ್ದರೆ ಮತಾಂತರಿಗಳು ಶ್ರೀಗಂಧ ಭಸ್ಮದಿಂದ ಸಿದ್ಧಗೊಂಡ ಗಂಧದ (ಬೊಟ್ಟು) ನಾಮ ಹಾಕಿಕೊಳ್ಳುತ್ತಾರೆ.

ನಲವತ್ತು ವರ್ಷ (ಈ ದೇಶದಲ್ಲಿ) ಬದುಕಿದ ನೊಬಿಲಿ ಬೇರೆಲ್ಲೂ ಹೋಲಿಕೆಯಿಲ್ಲದಂಥ ದೈನಂದಿನ ಕಷ್ಟನಷ್ಟ, ತ್ಯಾಗ ಮತ್ತು ಅವಮಾನಗಳನ್ನು ಅನುಭವಿಸಿದ ವ್ಯಕ್ತಿ. ಆತ ೧೬೫೬ರ ಫೆಬ್ರವರಿ ಆರರಂದು ತನ್ನ ಎಂಬತ್ತನೆಯ ವಯಸ್ಸಿನಲ್ಲಿ ನಿಧನ ಹೊಂದಿದ. ಪ್ರತ್ಯಕ್ಷವಾಗಿ ಅಥವಾ ಅಪ್ರತ್ಯಕ್ಷವಾಗಿ ಒಟ್ಟು ಒಂದುನೂರು ಸಾವಿರ ಜನರನ್ನು ಈತ ಮತಾಂತರಗೊಳಿಸಿದನೆನ್ನಲಾಗುತ್ತದೆ. ಉತ್ಪ್ರೇಕ್ಷೆಯನ್ನು ಒಪ್ಪಿದರೆ ಈ ಸಂಖ್ಯೆ ಇನ್ನೂ ಎಷ್ಟೋ ಹೆಚ್ಚಾಗಿರಲೇಬೇಕು. ಪೋರ್ಚುಗಲ್‌ನ ಅತ್ಯಂತ ಪ್ರತಿಷ್ಠಿತ ಮನೆತನಗಳಲ್ಲೊಂದಕ್ಕೆ ಸಂಬಂಧಿಸಿದ ಜಾನ್ ದ ಬ್ರಿಟ್ಟೊ ೧೬೭೩ರಲ್ಲಿ ಸಮುದ್ರಯಾನದ ಮೂಲಕ ಭಾರತಕ್ಕೆ ಬಂದ. ಈಗ ಆತ ರೋಮನ್ ಕ್ಯಾಥೋಲಿಕ್ ಚರ್ಚ್‌ನಲ್ಲಿ ಒಬ್ಬ ಸಂತ. ಅವನನ್ನು ಕುರಿತು ಲಂಡನ್ ಧರ್ಮ ಮಂಡಲಿಯ ನಮ್ಮ ಸಮಕಾಲೀನ ವಿಲಿಯಮ್ ರಾಬಿನ್‌ಸನ್, ಹೀಗೆ ಹೇಳುತ್ತಾನೆ : “ಶಿಷ್ಯನಾಗಿ, ಕೆಚ್ಚೆದೆಯವನಾಗಿ, ನಿಸ್ವಾರ್ಥ, ಸಹನಶೀಲ ಗುಣವುಳ್ಳ ವ್ಯಕ್ತಿಯಾಗಿ ಆತ ಪ್ರಾಮುಖ್ಯ ಪಡೆದಿದ್ದು, ಕ್ರೈಸ್ತಧರ್ಮದ ಬದುಕಿಗೆ ಅವನಿಂದ ಹೆಚ್ಚಿನ ಸತ್ವ ಮೂಡಿ ಬರುತ್ತದೆಯೆನ್ನುವುದು ನಿಶ್ಚಿತ. ಮಧುರೈಯ ಅರಸೊತ್ತಿಗೆ ನಾಶವಾಗಿ, ಸಣ್ಣ ಸಣ್ಣ ಸಂಸ್ಥಾನಗಳು ತಲೆಯೆತ್ತಿದಾಗ ಆತ ಮತ್ತು ಕ್ರೈಸ್ತ ಮತಾಂತರಿಗಳು ಕ್ರೂರ ಹಿಂಸೆಗೆ ಒಳಗಾದರು. ವೈರಿಗಳು ಮನಬಂದಂತೆ ಕಿರುಕುಳ ನೀಡಿದರೂ ಕಾರ್ಯಕರ್ತ ತನ್ನ ಕರ್ತವ್ಯದಿಂದ ವಿಮುಖನಾಗಲಿಲ್ಲ. ಹೋದಲ್ಲೆಲ್ಲ ಆತನಿಗೆ ಯಶಸ್ಸು ದೊರೆಯಿತು. ಸಂದೇಶದ ಶಕ್ತಿಗೆ ಸಂದೇಶಕಾರನ ಮೋಹಕತೆಯೂ ಸೇರಿಕೊಂಡಿತು. ಹೀಗಾಗಿ ಸಾವಿರಾರು ಮೊತ್ತದಲ್ಲಿ ಆತನ ಮತಾಂತರಿಗಳ ಸಂಖ್ಯೆ ಬೆಳೆಯಿತು. ಆತನಿಂದ ಮಾರು ಹೋದ ರಾಜಕುಮಾರ ತಾದಿಯಾ ತೇವಾರನ ಮತಾಂತರ ದೀಕ್ಷೆ ಜರುಗಿದಾಗ ಕೂಡಲೇ ದ ಬ್ರಿಟ್ಟೊನನ್ನು ಸಾಯಿಸುವ ಸಂಚು ಮಾಡಲಾಯಿತು. ೧೬೯೩ರ ಫೆಬ್ರುವರಿ ನಾಲ್ಕರಂದು ನಿರ್ದಯವಾಗಿ ಅವನನ್ನು ಸಾಯಿಸಲಾಯಿತು. ದ ಬ್ರಿಟ್ಟೋನ ತರುವಾಯ, ೧೭೦೭ರಲ್ಲಿ ಇಟಲಿಯ ಅರ್ಚಕ ಫಾದರ್ ಜೋಸೆಫ್ ಬೆಶ್ಚಿ ಭಾರತಕ್ಕೆ ಪ್ರಚಾರಕನಾಗಿ ಬಂದ. ಬೆಶ್ಚಿ, ‘ರೋಮ್ ಬ್ರಹ್ಮರ’ ನೀತಿಗೆ ಅಂಟಿಕೊಂಡಿದ್ದ. ಆದರೆ ತನ್ನ ಧರ್ಮಪ್ರಸಾರದ ಆಚರಣೆಯಲ್ಲಿ ಆತ ತನ್ನ ಪೂರ್ವಾಧಿಕಾರಿಗಳಿಗಿಂತ ಸಾಕಷ್ಟು ಭಿನ್ನನಾಗಿದ್ದ. ದ ನೊಬಿಲಿ, ಸಾಧ್ಯವಿರುವವರೆಗೆ ಒಬ್ಬ ಕಟ್ಟಾ ವಿರಕ್ತನ, ಒಬ್ಬ ಪವಿತ್ರ ಗುರುವಿನ ಪಾತ್ರ ನಿರ್ವಹಿಸಿದ; ದ ಬ್ರಿಟ್ಟೊ ಮುಖ್ಯವಾಗಿ ಅಲೆದಾಡುವ ಸನ್ಯಾಸಿ, ಪವಿತ್ರ ಯಾತ್ರಿಯಾಗಿದ್ದ. ತಮ್ಮ ವ್ಯಕ್ತಿಗತ ಬದುಕಿನಲ್ಲಿ , ಇಬ್ಬರೂ ಸರಳ ಸನ್ಯಾಸ ಜೀವನ ನಡೆಸಿದರು. ಆದರೆ ಫಾದರ್ ಬೆಶ್ಚಿ ಬೇರೆ ದಾರಿ ಹಿಡಿದರು. ಹಿಂದೂ ಧರ್ಮದಲ್ಲಿ ವಿರಕ್ತರಿದ್ದಂತೆ ಉನ್ನತ ಶ್ರೇಣಿಯ ಅರ್ಚಕರೂ ಉಂಟು. ಅವರದು ತುಂಬ ವೈಭವೋಪೇತ

ಸುಖಮಯ ಜೀವನ ಮತ್ತು ಅವರ ಬಹಿರಂಗ ಜೀವನ ಕೂಡ ಭಾರೀ ಆಡಂಬರ ಅಟ್ಟಹಾಸಗಳಿಂದ ಕೂಡಿತ್ತು. ಇದು ಬೆಶ್ಚಿ ಆಯ್ದುಕೊಂಡ ದಾರಿ; ಮಹಾ ವೈಭವ ನೋಡಿ ಜನ ಗಾಬರಿಗೊಳ್ಳುವಂತೆ ಮಾಡುತ್ತಿದ್ದ. ಪ್ರಯಾಣ ಮಾಡಬೇಕಾದರೆ ಅತಿ ಸುಸಜ್ಜಿತ, ಹೆಚ್ಚಿನ ಬೆಲೆಯ ಪಲ್ಲಕ್ಕಿಯೇ ಬೇಕು. ನೇರಳೆ ಬಣ್ಣದ ರೇಶಿಮೆ ಕೊಡೆ ಹಿಡಿದು ಮುಂದಾಗಿ ಒಬ್ಬ ಸೇವಕ ಹೋಗಬೇಕು ಮತ್ತು ಎರಡೂ ಬದಿ ಕೈಯಲ್ಲಿ ನವಿಲುಗರಿ ಬೀಸಣಿಕೆ ಹಿಡಿದ ಇಬ್ಬರು ಸೇವಕರು ಓಡುತ್ತಿರಬೇಕು; ಮತ್ತು ಪಲ್ಲಕ್ಕಿಯ ಒಳಗೆ ಹುಲಿ ಚರ್ಮದ ಹಾಸು, ಅದರ ಮೇಲೆ ನಯನಮನೋಹರ ಬಟ್ಟೆಧರಿಸಿ ಒರಗಿದ ಮಹಾಗುರು. ಆದರೆ ಬೆಶ್ಚಿ ಕೇವಲ ಬರಿತಲೆಯ ಪೋಜುಗಾರನಾಗಿರಲಿಲ್ಲ. ಜನರ ಮನೋಭಾವನೆಯ ಪೂರ್ಣ ತಿಳುವಳಿಕೆಯಿಂದಲೇ ಆತನ ಈ ಕ್ರಮ ರೂಪುಗೊಂಡಿತ್ತು ಮತ್ತು ಅದು ಒಳ್ಳೆಯ ಪ್ರಭಾವ ಬೀರಿತು. ಆತನ ಖ್ಯಾತಿ ಕೇವಲ ಈ ಬಹಿರಾಡಂಬರದ ಮೇಲೆ ನಿಂತಿರಲಿಲ್ಲ. ಆತನೊಬ್ಬ ಅದ್ಭುತ ವಿದ್ವಾಂಸನಾಗಿದ್ದ. ಹುಟ್ಟಾ ಭಾಷಾ ವಿಜ್ಞಾನಿಯಾದ ಆತ ತನ್ನ ಕಾಲದ ಅತಿ ಶ್ರೇಷ್ಠ ತಮಿಳು ವಿದ್ವಾಂಸ ಎಂದು ಹೇಳುವಷ್ಟು ತಮಿಳು ಭಾಷೆಯಲ್ಲಿ ಪರಿಣತಿ ಸಾಧಿಸಿದ್ದ. 'ಶುದ್ಧ' ಅಥವಾ 'ಸಾಮಾನ್ಯ' ತಮಿಳು ಭಾಷೆಯಲ್ಲಿ ಪರಿಣತಿ ಪಡೆದ ಯಾವ ಸ್ಥಳೀಯರೂ, ಆತನ ಸಮಾನ ವಿದ್ವಾಂಸರಾಗಿರಲಿಲ್ಲ. ಬ್ರಾಹ್ಮಣ ವಿದ್ವಾಂಸರ ತಮಿಳು ಮತ್ತು ಆಡುಮಾತಿನ ತಮಿಳು ಎರಡರಲ್ಲೂ ಬೆಶ್ಚಿ ತುಂಬ ಸಾಮರ್ಥ್ಯ ಹೊಂದಿದ್ದ. ಆತ ಶಬ್ದಕೋಶ, ವ್ಯಾಕರಣ, ಕಾವ್ಯ ಮತ್ತು ಸಿದ್ಧಾಂತ ವ್ಯಾಖ್ಯೆ ಹೀಗೆ ಅನೇಕ ಮೌಲಿಕ ಕೃತಿಗಳನ್ನು ರಚಿಸಿದ; ಇಂದಿಗೂ ಅವುಗಳನ್ನು ಜನ ಓದುತ್ತಾರೆ. ಅವು ಮೊದಲು ಪ್ರಕಟಗೊಂಡಾಗ ದಕ್ಷಿಣ ಭಾರತೀಯರಿಗೆ ತುಂಬ ಸಂತೋಷವಾಯಿತು. ಆತನನ್ನು ತನ್ನ ಪ್ರಾಂತದ ಬಹುದೊಡ್ಡ ಹುದ್ದೆಗೆ ನೇಮಕ ಮಾಡುವಷ್ಟು, ವೆಲ್ಲೂರಿನ ನವಾಬ ಚಂದಾಸಾಹೇಬನ ಮೇಲೆ ಆತನ ವಿದ್ವತ್ತು ಪ್ರಭಾವ ಬೀರಿತು ಮತ್ತು ಆತನ ಜೀವನಾಧಾರಕ್ಕಾಗಿ, ೧೨,೦೦೦ ರೂಪಾಯಿ ಉತ್ಪನ್ನದ ತಿರುಚಿನಾಪಲ್ಲಿ ಜಿಲ್ಲೆಯ ನಾಲ್ಕು ಹಳ್ಳಿಗಳನ್ನು ಆತನಿಗೆ ಕಾಣಿಕೆಯಾಗಿ ಕೊಟ್ಟನು. ಬೆಶ್ಚಿ ಈ ಎಲ್ಲ ಖ್ಯಾತಿ ಮತ್ತು ಸಾಂಪತ್ತಿಕ ಏಳಿಗೆಯನ್ನು ಶ್ರದ್ಧೆಯಿಂದ ಧರ್ಮಪ್ರಚಾರ ಕಾರ್ಯದ ಬೆಳವಣಿಗೆಗಾಗಿ ಬಳಸಿಕೊಂಡನು. ಅದರ ಖ್ಯಾತಿಯ ಕಾಲವೆಂದರೆ ಆತನ ಕಾರ್ಯಾವಧಿಯ ಕಾಲವೇ. ಅದರ ತೀವ್ರ ಇಳಿಮುಖ ಮತ್ತು ಕೊನೆಗೆ ಅದರ ಪೂರ್ಣ ಕುಸಿತ ಫಾದರ್ ಬೆಶ್ಚಿಯ ಮರಣ ಕಾಲಾವಧಿಯಲ್ಲಿ; ಆತ ನಿಧನ ಹೊಂದಿದ್ದು ೧೭೪೨ರಲ್ಲಿ."

ಮಧುರೆಯ ಪ್ರಚಾರಕರು, ಕ್ರೈಸ್ತ ಧರ್ಮವನ್ನು ಬೋಧಿಸುವ ತವಕದಲ್ಲಿ ಆತಂಕವುಂಟು ಮಾಡಬಹುದಾದ ಯಾವುದೇ ಪಾಶ್ಚಾತ್ಯ ಪದ್ಧತಿಗಳಿಂದ ಮತಾಂತರಿಗಳನ್ನು ಮುಕ್ತವಾಗಿಟ್ಟಿದ್ದರು; ಮತ್ತು ಮತಾಂತರಿಗಳಲ್ಲಿದ್ದ ಅನೇಕ ಹಿಂದೂ ಸಂಪ್ರದಾಯಗಳನ್ನು ಸಹಿಸಿಕೊಂಡು ಕೆಲವು ರಿಯಾಯಿತಿಗಳನ್ನೂ ನೀಡಿದ್ದರು. ಜನಿವಾರ ಹಾಕಿಕೊಳ್ಳುವುದು ಮತ್ತು ನಾಮ ಧರಿಸುವುದು, ಮೈನೆರೆಯುವ ಮೊದಲೇ ಮಕ್ಕಳ ಮದುವೆ, ನಿರ್ದಿಷ್ಟ ಸಂದರ್ಭಗಳಲ್ಲಿ, ಮಹಿಳೆಯರಿಗೆ ಮತ ಸಂಸ್ಕಾರಗಳ ನಿರಾಕರಣೆ, ಋತುಮತಿಯರ ಶುದ್ಧೀಕರಣ ಸ್ನಾನ ಮತ್ತು ತಮ್ಮ ಜಾತಿ ಬಿಟ್ಟು ಅನ್ಯರ ಜೊತೆ ಭೋಜನ, ವಿವಾಹ ಮಾಡಿಕೊಳ್ಳಲು ನಕಾರ ಇತ್ಯಾದಿ ಅವರು ನೀಡಿದ ರಿಯಾಯಿತಿಗಳು. ಇವುಗಳನ್ನು 'ಮಲಬಾರ್ ಹಕ್ಕುಗಳು' ಎಂದು ಕರೆಯಲಾಯಿತು. ೧೭೪೪ರ ಸೆಪ್ಟೆಂಬರ್ ೧೨ರಂದು ಪೋಪ್ ಬೆನಡಿಕ್ಟ್ XIV ಅವರು ಹೊರಡಿಸಿದ 'ಬುಲ್ ಓಮ್ನಿಯಮ್ ಸಾಲಿಸಿಟುಡಿನಮ್'[೧] ಇವುಗಳನ್ನು ರದ್ದುಪಡಿಸಲಾಯಿತು. ಅಂದಿನಿಂದ ಪ್ರತಿ ರೋಮನ್ ಕ್ಯಾಥೋಲಿಕ್

---

೧. '*ಕೃಷ್ಣಾ ಡಿಸ್ಟ್ರಿಕ್ ಮಾನ್ಯುಯಲ್*', ಪು. ೨೮೨.

ಬೋಧಕ ಈ 'ಬುಲ್' ಪಾಲನೆಗಾಗಿ, ಪ್ರತಿಜ್ಞಾವಿಧಿಗೆ ಒಳಗಾಗಬೇಕಾಗುತ್ತದೆ. ಈ ಪರಂಪರೆಗಳು ಉಳಿದುಕೊಂಡು ಬಂದದ್ದು, ಮೂರ್ತಿಪೂಜಕ ರೀತಿರಿವಾಜು ಮತ್ತು ನಂಬಿಕೆಗಳು ಕ್ರೈಸ್ತ ಧರ್ಮದ ಜೊತೆ ಅಸಂಬದ್ಧವಾಗಿರಲಿಲ್ಲ. ೧೬ನೆಯ ಶತಮಾನದ ಕ್ರೈಸ್ತ ಮತ ಪ್ರಚಾರ ಕಾರ್ಯಕ್ಕೆ ಬಹು ದೊಡ್ಡ ಆತಂಕ ಉಂಟಾದದ್ದು, ಕೆಟ್ಟ ಯುರೋಪಿಯನ್ನರ ಅನಿಷ್ಟ ಉದಾಹರಣೆಗಳಿಂದ ಎನ್ನುವುದು ನಿಜ. ಆದರೆ ಅದರ ಜೊತೆಗೆ, ಯುರೋಪಿಯನ್ ಸಂಪ್ರದಾಯಗಳನ್ನು ಹಿಂದೂ ಮತ್ತು ಮುಸಲ್ಮಾನರು ಒಂದೇ ರೀತಿಯಲ್ಲಿ ಮೆಚ್ಚಿಕೊಳ್ಳದಿದ್ದುದು ಕೂಡ ಅವರ ಕಾರ್ಯಕ್ಕೆ ಅಡ್ಡಿಯುಂಟಾಗಲು ಮತ್ತೊಂದು ಕಾರಣ. ಒಬ್ಬ ನೀತಿಗೆಟ್ಟ ಯುರೋಪಿಯನ್ ಕಳಂಕಕ್ಕೆ ಕಾರಣನಾದನು. ಸರಿ, ಆದರೆ ಒಬ್ಬ ಶ್ರದ್ಧಾವಂತ ಯುರೋಪಿಯನ್ ದನದ ಮಾಂಸ ತಿನ್ನುವುದು, ಕುಡಿಯುವುದು ಬ್ರಾಹ್ಮಣ ಮತ್ತು ಮುಸಲ್ಮಾನರ ಧರ್ಮ ತತ್ವಗಳ ವಿರೋಧವಾಗಿದ್ದು ಸ್ಥಳೀಯರ ಪೂರ್ವಕಲ್ಪಿತ ಭಾವನೆಗಳಿಗೆ ಆಘಾತ ಉಂಟು ಮಾಡಿದುವು. ಹೀಗೆ ಕ್ರೈಸ್ತ ಮತ 'ಫಿರಂಗಿ'ಯರ ಧರ್ಮ ಎಂದು ಕರೆಯಲಾಯಿತು. ಇದು ಯೂರೋಪಿಯನ್ನರನ್ನು ಕುರಿತ ತಿರಸ್ಕಾರ ತುಂಬಿದ ನುಡಿಗಟ್ಟಾಗಿತ್ತು. ಕ್ರೈಸ್ತ ಧರ್ಮ ಬೋಧಕರಲ್ಲಿ ಮನೆಮಾಡಿದ್ದ ಈ ಕೆಲವು ಅಶುದ್ಧ ಮತ್ತು ಅಸಂಬದ್ಧತೆಗಳು ಕ್ರೈಸ್ತ ಧರ್ಮಪ್ರಚಾರಕರಲ್ಲಿ ಕಂಡುಬರುತ್ತಿದ್ದುವು. ಅಂಥವುಗಳನ್ನು ಕಿತ್ತೆಸೆಯುವುದು ಆವಶ್ಯಕ ಮತ್ತು ನ್ಯಾಯ ಸಮ್ಮತ, ಪ್ರಶಂಸಾರ್ಹವಾಗಿತ್ತು. ಆದರೆ ಧರ್ಮ ಬೋಧಕರು ಇದಾವುದರ ಕಡೆಗೂ ಲಕ್ಷ್ಯ ಕೊಡದಿದ್ದುದು ನಾಚಿಕೆಗೇಡು ಮತ್ತು ಪಾಪಪೂರ್ಣ. ಈ ಜಜುಯಿಟ್ ಬೋಧಕರು ಮತಾಂತರಗೊಳಿಸುವ ತಮ್ಮ ಕಾತರತೆಯಲ್ಲಿ ಮತಾಂತರಿ ಹೇಗಿದ್ದಾನೆ, ಅವನ ಆಲೋಚನೆಗಳೇನು ಇತ್ಯಾದಿಗಳ ಕಡೆಗೆ ಗಮನವನ್ನೇ ಕೊಡಲಿಲ್ಲ. ಮತಾಂತರ ಹೊಂದುವ ವ್ಯಕ್ತಿ ಮತದೀಕ್ಷೆಗೆ ಮತ್ತು ಜೀಸಸ್‌ನೇ ತನ್ನ ರಕ್ಷಕ ಎಂದು ಒಪ್ಪಿಕೊಳ್ಳಲು ಸಿದ್ಧನಾಗಿದ್ದು, ತನ್ನನ್ನು ತಾನು ಕ್ರೈಸ್ತ ಮತೀಯ ಎಂದು ಕರೆದುಕೊಂಡರೆ ಅಷ್ಟೇ ಸಾಕಾಗಿತ್ತು. ಈ ಬಗೆಯ ಮಹತ್ವದ ಪ್ರಶ್ನೆಗಳನ್ನು ಕುರಿತು, ಮಧುರಾ ಮಿಶನ್ ಬಳಿಕ ಈ ಕ್ಷೇತ್ರದಲ್ಲಿ ಕಾಲಿರಿಸಿದ ಲೂಥರ್ನ್ ಮಿಶನ್, ಯಾವ ಧೋರಣೆ ತಳೆಯಿತು? ತನ್ನ ಪರಿಶುದ್ಧ ಜೀವನದಿಂದ ಖ್ಯಾತನಾಗಿ ಪರಸ್ಪರ ಯುದ್ಧದಲ್ಲಿ ತೊಡಗಿದ ಅರಸರ ಕಾಲದಲ್ಲಿ ಶಾಂತಿದೂತನಾಗಿ ಬಂದ ಅತಿಶ್ರೇಷ್ಠ ಬೋಧಕ ಸ್ವಾರ್ಟ್ಜ್, ಮಧುರೈ ಮಿಶನರಿಗಳು ತಾಳಿದ ಧೋರಣೆಗಳ ಪ್ರಚಾರಕನಾಗಿರಲಿಲ್ಲ. ಜಾತಿ(ಪದ್ಧತಿ) ಮತ್ತು ಕ್ರೈಸ್ತ ಧರ್ಮ ಎರಡೂ ಹೊಂದಿಕೆಯಾಗದ ಸಂಗತಿಗಳು. ಒಬ್ಬ ನಿಜವಾದ ಕ್ರೈಸ್ತ ಮತೀಯ ಜಾತಿ ಪದ್ಧತಿಯನ್ನು ನಂಬಕೂಡದು; ಅಷ್ಟೇ ಅಲ್ಲ ಅದನ್ನು ತನ್ನ ಜೀವನ ವಿಧಾನವಾಗಿ ರೂಪಿಸಿಕೊಳ್ಳುವುದೂ ಸಾಧ್ಯವಿಲ್ಲ. ಇದು ಆ ಮಹಾನುಭಾವನ ಧೋರಣೆಯಾಗಿತ್ತು. ಏನಿದ್ದರೂ ಆತ (ಪೂರ್ವದ ಧೋರಣೆಗಳನ್ನೂ) ಬೆಂಬಲಿಸಿ, ಪ್ರಚಾರ ಕೈಕೊಳ್ಳಲಿಲ್ಲ ಎನ್ನುವುದು ಖಚಿತ.

ಈ ವಿಷಯ ಕುರಿತು ಪ್ರಾಟಿಸ್ಟಂಟ್ ಬೋಧಕರ ಧೋರಣೆಗಳಾವುವು? ಅವರು ಒಂದು ವೇಳೆ ಅವುಗಳನ್ನು ಕುರಿತು ಯಾವ ಧೋರಣೆಯನ್ನೇ ತಾಳಿರಲಿ ಅವನ ಪರವಾದ ಕೋರಿಕೆಗೆ ಒಂದು ಮನ್ನಾ ಇದೆ : ಅದು ಅವರು ತಡವಾಗಿ ಈ ರಂಗದ ಮೇಲೆ ಕಾಣಿಸಿಕೊಂಡರು ಎನ್ನುವುದು. ೧೮೧೩ರ ವರೆಗೆ ಅವರು ಈ ಕ್ಷೇತ್ರವನ್ನು ಪ್ರವೇಶಿಸದಂತೆ ಅವರನ್ನು ತಡೆಹಿಡಿಯಲಾಯಿತು ಎನ್ನುವುದು ಒಂದು ಐತಿಹಾಸಿಕ ಸತ್ಯವಾಗಿರುವಂತೆ ತೋರುತ್ತದೆ. ಈಸ್ಟ್ ಇಂಡಿಯಾ ಕಂಪನಿಯು ತಮ್ಮ ಭಾರತೀಯ ನೆಲೆಗಳಲ್ಲಿ ಕ್ರೈಸ್ತ ಧರ್ಮ ಪ್ರಚಾರದ ಬಗೆಗೆ ತಾಳಿದ ಧೋರಣೆಯೇ ಇದೆಲ್ಲಕ್ಕೂ ಕಾರಣ.

ಭಾರತಕ್ಕೆ ಬಂದ ಎಲ್ಲ ಯೂರೋಪಿಯನ್ ಅಧಿಕಾರಿ–ಸಂಸ್ಥೆಗಳೂ ತಾವು ಬಂದ ಆರಂಭದಿಂದಲೇ ಭಾರತೀಯರನ್ನು ಕ್ರೈಸ್ತ ಧರ್ಮಕ್ಕೆ ಮತಾಂತರಗೊಳಿಸುವ ಅತ್ಯುತ್ಸಾಹ ಹೊಂದಿದವರಾಗಿದ್ದರು.

ಪೋರ್ಚುಗೀಸರು ಮೂರ್ತಿಪೂಜಾ ಸಮುದಾಯಗಳನ್ನು ಹತ್ತಿಕ್ಕಿ ಕ್ರೈಸ್ತ ಧರ್ಮ ಪ್ರಚಾರ ಕಾರ್ಯ ಮಾಡಲು ಕಟಿಬದ್ಧರಾಗಿದ್ದರು. ೧೫೧೦ರಲ್ಲಿ ಆಲ್ಬುಕರ್ಕ್ ಪೋರ್ಚುಗೀಸ ಆಡಳಿತ ಸೀಮೆಯ ಭಾರತದಲ್ಲಿ ಕೆಲವು ಮೊದಲಿನ ಸಾಮಾಜಿಕ ಅನಿಷ್ಟಗಳನ್ನು ತಡೆಗಟ್ಟಿದ ಮತ್ತು ವಿಲಿಯಂ ಬೆಂಟಿಂಕ್‌ಗಾಗಿ ಪೂರ್ಣ ಮುನ್ನೂರು ವರ್ಷಗಳನ್ನು ಕಾದ. ಹತಾಶನಾದ ಫ್ರಾನ್ಸಿಸ್ ಝೇವಿಯರ್ ಒತ್ತಾಯದ ಮತಾಂತರ ಕಾರ್ಯಕ್ಕಾಗಿ, ಪೋರ್ಚುಗಲ್‌ನ ಮೂರನೆ ಜಾನ್ ಅವರ ನೆರವು ಕೋರಿದಾಗ, ಕೂಡಲೇ ನೆರವು ಒದಗಿಸಲಾಯಿತು. ಪ್ರಾಟೆಸ್ಟಂಟ್ ಅನುಯಾಯಿ ಡಚ್ ಸರಕಾರದಿಂದ ಡಚ್ ಈಸ್ಟ್ ಇಂಡೀಜ್‌ದಲ್ಲಿ ಈ ಕಾರ್ಯಕ್ಕೆ ಸಂಬಂಧಿಸಿ ತೀವ್ರ ಉತ್ಸಾಹ, ಕ್ರಿಯಾಶೀಲ ಬಲಶಾಲಿ ಕ್ರಮ ಕೈಗೊಳ್ಳಲಾಯಿತು. ಡಚ್ಚರು, ೧೬೪೩ರಲ್ಲಿ ಸಿಲೋನ್ ದ್ವೀಪ ಆಕ್ರಮಿಸಿಕೊಂಡ ಕಾಲದಿಂದಲೇ ಕ್ರೈಸ್ತ ಮತ ಪ್ರಚಾರ ಸಹಾಯ ತತ್ವ ಸ್ವೀಕೃತವಾಗಿತ್ತು. ದೇವಾಲಯ ನಿರ್ಮಾಣ ಕಾರ್ಯ ಮತ್ತು ಮೂರ್ತಿಪೂಜಕ ತೀರ್ಥಯಾತ್ರೆಗಳು ನಿಷೇಧಿತಗೊಂಡವು. ಕ್ರೈಸ್ತ ಮತೀಯರಿಗೆ ನೇಮಕಾತಿಯಲ್ಲಿ ಮೀಸಲಾತಿ ನೀಡಲಾಯಿತು. ಮತ್ತು ಧಾರ್ಮಿಕ ಶಾಲೆಗಳ ಗೈರು ಹಾಜರಾತಿ 'ಪ್ರಾಂತದ ಅಪರಾಧ'ವೆಂದು ಪರಿಗಣಿತವಾಯಿತು. ೧೬೮೫ರ ಕಾಲಾವಧಿಗೆ ೩,೨೦,೦೦೦ ಸಿಂಹಳೀಯರು ಈ ಕ್ರಮಗಳಿಗೆ ತಮ್ಮನ್ನು ಒಪ್ಪಿಸಿಕೊಂಡರು. ಈಸ್ಟ್ ಇಂಡಿಯಾ ಕಂಪನಿ ಕೂಡ ಇದೇ ರೀತಿಯ ಧಾರ್ಮಿಕ ಅತ್ಯುತ್ಸಾಹ ತೋರಿಸಿತು. ಕಂಪನಿ ಹಡಗಿನ ಕ್ಯಾಪ್ಟನ್ ೧೬೧೪ರಲ್ಲಿ ಒಬ್ಬ ಭಾರತೀಯ ಹುಡುಗನನ್ನು ಲಂಡನ್ನಿಗೆ ಕರೆದೊಯ್ದ. ಆ ಹುಡುಗನಿಂದ ತನ್ನ ದೇಶದ ಜನರನ್ನು (ಕ್ರೈಸ್ತ) ಮತಾಂತರಗೊಳಿಸುವ ಕಾರ್ಯದಲ್ಲಿ ನೆರವು ದೊರೆಯಲಿ ಎನ್ನುವ ಉದ್ದೇಶದಿಂದಾಗಿ ಆ ಹುಡುಗನ ಶಿಕ್ಷಣದ ಎಲ್ಲ ವೆಚ್ಚವನ್ನೂ ಕಂಪನಿಯೇ ನಿರ್ವಹಿಸಿತು. ಪೊಪ್ಲಾರ್‌ದಲ್ಲಿ ಅವನಿಗೆ ದೀಕ್ಷೆ ಕೊಡಲಾಯಿತು. ಲಂಡನ್ ನಗರದ ಲಾರ್ಡ್ ಮೇಯರ್ ಮತ್ತು ಕಂಪನಿಯ ಡೈರೆಕ್ಟರ್‌ಗಳು ದೀಕ್ಷಾ ಸಮಾರಂಭದಲ್ಲಿ ಪಾಲುಗೊಂಡಿದ್ದರು. ಒಂದನೆಯ ಕಿಂಗ್ ಜೇಮ್ಸ್ ಆ ಹುಡುಗನಿಗೆ ಪೀಟರ್ ಎಂದು ನಾಮಕರಣ ಮಾಡಿದ ಮತ್ತು ಆ ಹುಡುಗನಿಗೆ ದೀಕ್ಷೆ ನೀಡಿದ ಅರ್ಚಕ ಆ ಹುಡುಗನನ್ನು 'ಭಾರತದ ಪ್ರಥಮ ಫಲ' ಎಂದು ಪ್ರೇಕ್ಷಕರಿಗೆ ಪರಿಚಯಿಸಿದ. ೧೬೧೭ರಲ್ಲಿ ಒಬ್ಬ ಮುಸಲ್ಮಾನನ (ಕ್ರೈಸ್ತ) ಮತಾಂತರ ಸೂರತ್‌ದಲ್ಲಿ ಜರುಗಿತು. ಹೀಗೆ ಕಂಪನಿಯ ವೃತ್ತಿ' ಮತಾಂತರ ಕಾರ್ಯವನ್ನು ಎರಡೂ ನಿಟ್ಟಿನಿಂದ ಪೂರೈಸಿತು. ಕಂಪನಿ ಡೈರೆಕ್ಟರುಗಳು, ಕಂಪನಿಯು ಭಾರತದಲ್ಲಿ ಸುವಾರ್ತಾ ಪ್ರಸಾರ ಕಾರ್ಯ ಚುರುಕುಗೊಳಿಸಲು ನಿರ್ಧರಿಸಿದೆ. ಆದ್ದರಿಂದ ಪಾದ್ರಿಗಳನ್ನು ಒದಗಿಸಬೇಕು ಎಂದು ೧೬೫೭ರಲ್ಲಿ ಕ್ಯಾಂಬ್ರಿಜ್ ಮತ್ತು ಆಕ್ಸ್‌ಫರ್ಡ್ ವಿಶ್ವವಿದ್ಯಾಲಯಗಳಿಗೆ ಅರ್ಜಿ ಸಲ್ಲಿಸಿದರು. ೧೬೯೮ರಲ್ಲಿ ಕಂಪನಿ ಅದಕ್ಕೆ ತಕ್ಕಂತೆ ತನ್ನ ನಿಯಮಾವಳಿಯಲ್ಲಿ ಅನುವು ಮಾಡಿಕೊಟ್ಟಿತು. ಕಂಪನಿಯ ಪಾದ್ರಿಗಳು ಆ ದೇಶದ ಭಾಷೆಗಳನ್ನು ಚೆನ್ನಾಗಿ ಕಲಿಯಬೇಕು, ಕಂಪನಿಯ ನೌಕರರು ಅಥವಾ ಏಜೆಂಟರಾಗಿರುವ ಪ್ರಾಟೆಸ್ಟಂಟ್ ಧರ್ಮದಲ್ಲಿರುವವರಿಗೆ ತರಬೇತಿ ಸಲಹೆ ಸೂಚನೆ ನೀಡಲು ಅನುಕೂಲವಾಗಬೇಕು. ೧೬೯೮ರಲ್ಲಿ ಒಮ್ಮಿಂದೊಮ್ಮೆಲೆ ಕಂಪನಿಯ ಧೋರಣೆ ಬದಲಾದಂತೆ ಕಾಣುತ್ತದೆ. ಪೋರ್ಚುಗಲ್ ಮತ್ತು ಡಚ್ ಸರಕಾರಗಳು ತೀವ್ರ ವೇಗದಲ್ಲಿ ಕಾರ್ಯ ಮಾಡುತ್ತಿದ್ದರೆ, ಈಸ್ಟ್ ಇಂಡಿಯಾ ಕಂಪನಿ ಮಂದಗತಿ ತಾಳಿದ್ದು ಕಂಡುಬರುತ್ತದೆ. ಅದೇ ವರ್ಷ ಈ ಕಾರ್ಯದ ವಿಷಯದಲ್ಲಿ ಕಂಪನಿ ಹಿಂದೆ ಮುಂದೆ ನೋಡಿದಂತೆ ಕಾಣುತ್ತದೆ. ಸ್ಥಳೀಯ ಭಾಷೆಗಳಲ್ಲಿ ಪಾದ್ರಿಗಳ ತರಬೇತಿ ತನ್ನ ಕರ್ತವ್ಯವೆಂದು ಒಪ್ಪಿಕೊಂಡ ಕಂಪನಿ (ತಮ್ಮ) ಪ್ರಚಾರ ಕಾರ್ಯದಲ್ಲಿ ಒಳ್ಳೆಯ ಸಾಧನವೆಂದು ಭಾವಿಸಿದ್ದರು. ಕಂಪನಿಗಾಗಿ ಒಂದು ಪ್ರಾರ್ಥನೆ ರೂಪಿಸಲಾಗಿತ್ತು. 'ನಮ್ಮ ಜೀವನ ಎಲ್ಲ ಸಂಗತಿಗಳಲ್ಲೂ ನಮ್ಮ ರಕ್ಷಕನ ಸಂದೇಶವನ್ನು ಆರಾಧಿಸುತ್ತ, ನಮ್ಮ ಒಳ್ಳೆಯ (ಸೇವಾ) ಕಾರ್ಯಗಳಿಂದಾಗಿ ನಾವು ವಾಸವಾಗಿರುವ ಭಾರತೀಯರ

ಮನವನ್ನು ಗೆಲ್ಲುವಂತಾಗಲಿ'. ೧೭೫೦ರ ವರೆಗೂ ಈ ಪ್ರಾರ್ಥನೆಯನ್ನು ಸಲ್ಲಿಸಲಾಗುತ್ತಿತ್ತು. ಈ ಪ್ರಾರ್ಥನೆಯ ಪದಗಳ ಸೂಕ್ಷ್ಮ ಪರಿಶೀಲನೆಯಿಂದ, ತಾನು ಮತಾಂತರ ಕಾರ್ಯದಲ್ಲಿ ನೇರವಾಗಿ ಭಾಗವಹಿಸುವ ಮೂಲ ಭಾವನೆಗಿಂತ ಭಿನ್ನವಾದ, ಆ ಕಾರ್ಯವನ್ನು ಪೂರಾ ತೊರೆಯದ ಒಂದು ಧ್ವನಿಯಿದೆ. ಕಂಪನಿಯ ಈ ಧೋರಣೆ ಕೂಡಲೇ ತೀವ್ರ ಚರ್ಚೆಯ ವಸ್ತುವಾಯಿತು. ೧೭೭೩ರ ರೆಗ್ಯೂಲೇಟಿಂಗ್ ಆ್ಯಕ್ಟ್ ಮತ್ತು ಪಿಟ್ ಅವರ ಈಸ್ಟ್ ಇಂಡಿಯಾ ಆ್ಯಕ್ಟ್ 'ವ್ಯಾಪಾರಿ ವೇಷದ ರಾಜ್ಯಕ್ಕೆ ಕೊನೆ ಹೇಳಿದುವು; ಕಂಪನಿಯನ್ನು ಪಾರ್ಲಿಮೆಂಟಿನ ಶಾಸನರಕ್ಷಿತ ಏಜೆಂಟ್ ಎಂದು ಪರಿಗಣಿಸಿ, ಭಾರತ ಪ್ರದೇಶಗಳ ಸರಕಾರದ ಕಾರ್ಯ ನಿರ್ವಹಿಸುವಂತೆ ಸೂಚಿಸಲಾಯಿತು. ಕಂಪನಿಯ ಈ ಬಗೆಯ ಒಪ್ಪಂದ ಕೇವಲ ಇಪ್ಪತ್ತು ವರ್ಷಗಳವರೆಗೆ ಮಾತ್ರ ಚಲಾವಣೆಯಲ್ಲಿದ್ದು, ಆ ಬಳಿಕ ಪುನಃ ಅದನ್ನು ನವೀಕರಣಗೊಳಿಸಿಕೊಳ್ಳತಕ್ಕದ್ದು ಎಂದು ಕರಾರು ಹಾಕಲಾಯಿತು. ೧೭೯೩ ಒಂದು ಅತಿ ಮಹತ್ವದ ವರ್ಷ. ಏಕೆಂದರೆ ಆ ವರ್ಷದ ಅವಧಿಯಲ್ಲಿ ಕಂಪನಿಯ ಒಪ್ಪಂದ ಪತ್ರ ಪರಿಷ್ಕರಣಗೊಳ್ಳುವುದಿತ್ತು. ಕ್ರಿಶ್ಚಿಯನ್ ಜ್ಞಾನ ಪ್ರಸರಣಕ್ಕೆ ಅನುಕೂಲಕರವಾಗಿರುವ ಜನರಿಗೆ ಆ ಕಾರ್ಯ ತುಂಬ ಸುಲಭ ಅನಿಸುತ್ತಿತ್ತು. ಆ ವಿಷಯದ ಕಾರ್ಯ ನಿರ್ವಾಹಕನಾಗಿದ್ದ ಎಲ್ಬರ್ ಫೋರ್ಸ್ ಪಾರ್ಲಿಮೆಂಟಿನಲ್ಲಿದ್ದ ಕೆಲವರ ಬೆಂಬಲ ಗಳಿಸಿದ್ದ. ಆತನಿಗೆ ಆರ್ಚ್ ಬಿಷಪ್ ಮೂರ್ ಅವರ ಆಶೀರ್ವಾದ ದೊರೆತಿತ್ತು. ಇದಕ್ಕಿಂತಲೂ ಮಹತ್ವದ ಸಂಗತಿಯೆಂದರೆ, ಆತ ಈಸ್ಟ್ ಇಂಡಿಯಾ ಕಂಪನಿಯ ಕರಾರು ಮಸೂದೆಯ ಕಾರ್ಯನಿರ್ವಾಹಕ ಮಂತ್ರಿಯ ಬೆಂಬಲದ ಭರವಸೆ ಪಡೆದುಕೊಂಡಿದ್ದ. ಮಸೂದೆ ಪಾಸಾಗುವ ಪೂರ್ವಭಾವಿಯಾಗಿ ಮಸೂದೆ ಒಳಗೊಳ್ಳುವ ಅದರಲ್ಲಿ ಸೇರಿಸಬೇಕಾಗಿರುವ ವಿಷಯವನ್ನು ಒಂದು ನಿರ್ಣಯದ ರೂಪದಲ್ಲಿ ಹೌಸ್ ಆಫ್ ಕಾಮನ್ಸ್ ಮುಂದೆ ತರಲಾಯಿತು. ಪಾಸಾದ ನಿರ್ಣಯ ಹೀಗಿತ್ತು: "ಬ್ರಿಟಿಷ್ ಆಧಿಪತ್ಯಕ್ಕೊಳಪಟ್ಟ ಭಾರತದಲ್ಲಿ ವಾಸವಾಗಿರುವ ಜನರ ಹಿತಾಸಕ್ತಿ ಸುಖ ಸಮೃದ್ಧಿಗಳಿಗಾಗಿ ಎಲ್ಲ ರೀತಿಯ ದೂರದೃಷ್ಟಿಯ ಮತ್ತು ನ್ಯಾಯ ಯುಕ್ತ ಸಾಧನೆಗಳನ್ನು ಕೈಗೊಳ್ಳುವುದು ಬ್ರಿಟಿಷ್ ಶಾಸನದ ವಿಶೇಷ ಬದ್ಧ ಕರ್ತವ್ಯವಾಗಿದೆ; ಈ ಗುರಿ ಸಾಧನೆಗಾಗಿ, ಅವರ ಉಪಯುಕ್ತ ಜ್ಞಾನ ಪ್ರಗತಿ, ಅಧಿಕ ಧಾರ್ಮಿಕ ಸುಧಾರಣೆಗಳ ದೃಷ್ಟಿಯಿಂದ ಅದಕ್ಕನುಗುಣವಾದ ಕ್ರಮಗಳನ್ನು ರೂಪಿಸುವುದು ಅಗತ್ಯ."

"ಕಾರಣ ಇದಕ್ಕೊಂದು ಕಾನೂನು ಮಾಡಲಾಗುವುದು. ಡೈರೆಕ್ಟರುಗಳ ಸಭೆಗೆ ಇದರನ್ವಯ ಕಾಲಕಾಲಕ್ಕೆ ಯೋಗ್ಯ, ಸಮರ್ಥ ವ್ಯಕ್ತಿಗಳನ್ನು ಸಾಕಷ್ಟು ಸಂಖ್ಯೆಯಲ್ಲಿ ನೇಮಕಗೊಳಿಸುವ (ಆದೇಶಕ್ಕೆ) ಹೊರಗೆ ಕಳಿಸುವ ಅಧಿಕಾರ ನೀಡಲಾಗಿದೆ. ಈ ಉದ್ದೇಶವನ್ನು ಈಡೇರಿಸುವ ದೃಷ್ಟಿಯಿಂದ ಶಾಲಾ ಶಿಕ್ಷಕರಾಗಿ, ಬೋಧಕರಾಗಿ ನೇಮಕಗೊಳ್ಳುವ ಪೂರ್ವದಲ್ಲಿ ಅಂಥ ವ್ಯಕ್ತಿಗಳು, ತಾತ್ಪೂರ್ತಿಕವಾಗಿ ಕ್ಯಾಂಟರ್‌ಬರೀಯ ಆರ್ಚ್ ಬಿಷಪ್ ಅವರಿಂದ ಅಥವಾ ಲಂಡನ್ನಿನ ಬಿಷಪ್ ಅವರಿಂದ, ಅಥವಾ ಕ್ರೈಸ್ತ ಧರ್ಮಾಭಿವೃದ್ಧಿ ಕುರಿತು ಲಂಡನ್ ಸೊಸೈಟಿಯಿಂದ ಅಥವಾ ಕ್ರೈಸ್ತ ಜ್ಞಾನ ಪ್ರಚಾರ ಸಂಬಂಧಿಸಿ ಸ್ಕಾಟ್‌ಲ್ಯಾಂಡ್‌ದ ಸೊಸೈಟಿಯಿಂದ ಈ ಉದ್ದೇಶ ಸಾಧನೆಯ ತಮ್ಮ ಪರಿಣತಿ ಕುರಿತು ಪ್ರಮಾಣಪತ್ರ ಅಥವಾ ಪ್ರಶಸ್ತಿ ಪತ್ರವನ್ನು ಡೈರಕ್ಟರುಗಳ ಮಂಡಲಿಗೆ ತಂದು ಒಪ್ಪಿಸಬೇಕು.

ಮತ್ತೆ ಈ ಕಾನೂನಿನನ್ವಯ ಡೈರೆಕ್ಟರುಗಳ ಮಂಡಲಿ, ಭಾರತದ ಪ್ರಾಂತ ಸರಕಾರಗಳಿಗೆ, ಹೀಗೆ ಕಳಿಸಲಾದ ವ್ಯಕ್ತಿಗಳ ಕಾರ್ಯಕ್ಷೇತ್ರ, ಉತ್ತಮ ಮಟ್ಟದ ಜೀವನ ನಿರ್ವಹಣೆಗಾಗಿ ಅಗತ್ಯವಾದ ಎಲ್ಲ ಸೌಲಭ್ಯಗಳನ್ನು ನೀಡುವಂತೆ ಆದೇಶ ಹೊರಡಿಸುವ ಅಧಿಕಾರ ಹೊಂದಿರುತ್ತದೆ. ಇದಲ್ಲದೆ. ಆಯಾ ಸರಕಾರಗಳಿಗೆ ಕಾರ್ಯಸಾಧನೆಯ ದೃಷ್ಟಿಯಿಂದ ಅಗತ್ಯವೆಂದು ಕಂಡುಬರುವ ಉಪಯುಕ್ತ ಕ್ರಮಗಳನ್ನು – ಅವರವರ ಯೋಗ್ಯತೆಗನುಗುಣವಾಗಿ, ಯುಕ್ತಾಯುಕ್ತತೆಯನ್ನು ನೋಡಿ – ಕೈಕೊಳ್ಳುವಂತೆ

ನಿರ್ದೇಶಿಸಬಹುದು". ಮುಖ್ಯವಾಗಿ ಡಂಡಸ್‌ನಂಥವನ ಬೆಂಬಲದಿಂದಲೇ ಈ ನಿರ್ಣಯ ನಿರಾತಂಕವಾಗಿ ಹೌಸ್ ಆಫ್ ಕಾಮನ್ಸ್ ಸ್ವೀಕೃತಿ ಪಡೆಯಿತು. ಇದು, ವಿಲ್ಬರ್ ಫೋರ್ಸ್ ಮೇಲೆ ತುಂಬ ಪರಿಣಾಮ ಬೀರಿತು. ಆತ ತನ್ನ ಪತ್ರಿಕೆಯಲ್ಲಿ "ಈಸ್ಟ್ ಇಂಡಿಯನ್ ವ್ಯವಹಾರಗಳಲ್ಲಿ ದೇವರ ಕೃಪೆ ಎಂದೂ ಇಷ್ಟು ಸ್ಪಷ್ಟವಾಗಿ ಮೂಡಿರಲಿಲ್ಲ" ಎಂದು ಬರೆದ. ಆತನ ಈ ನಂಬಿಕೆ ಅಪಕ್ವವಾಗಿತ್ತು. ಯಾಕೆಂದರೆ ಆ ಮಸೂದೆಯ ತೃತೀಯ ವಾಚನ ಕಾಲದಲ್ಲಿ ಡಂಡಸ್ ಸಮ್ಮತಿಯ ಮೇರೆಗೆ ಅದರ ವಾಕ್ಯಾಂಗಗಳನ್ನು ತೆಗೆದುಹಾಕಲಾಯಿತು. ವಿಲ್ಬರ್ ಫೋರ್ಸ್ ತನ್ನ ಸ್ನೇಹಿತ ಜಿಸ್ಬೋರ್ನ್ ಅವರಿಗೆ ಬರೆಯುತ್ತ. "ನನ್ನ ವಾಕ್ಯಾಂಗಗಳನ್ನು ಹೊರಗೆ ಬಿಸಾಡಿದರು...ಡಂಡಸ್ ಬಲು ಸುಳ್ಳುಗಾರ...ದ್ವಿಮುಖಿ...." ಎಂದು ತಿಳಿಸಿದ.

ಧೋರಣೆಯ ಈ ರೀತಿಯ ಬದಲಾವಣೆಗೆ ಈಸ್ಟ್ ಇಂಡಿಯಾ ಕಂಪನಿಯ ಡೈರಕ್ಟರುಗಳೇ ಕಾರಣರು. ವ್ಯಾಪಾರ ಈಸ್ಟ್ ಇಂಡಿಯಾ ಕಂಪನಿಯ ಗುತ್ತೇದಾರಿಕೆಯಾಗಿತ್ತು. ಕಂಪನಿಯ ಡೈರಕ್ಟರುಗಳ ಅನುಮತಿಯಿಲ್ಲದೆ ಈ ಪ್ರದೇಶದಲ್ಲಿ ಕಾಲಿಡಲು ಯಾವ ಆಂಗ್ಲ ವ್ಯಕ್ತಿಗೂ ಸಾಧ್ಯವಿರಲಿಲ್ಲ ಮತ್ತು ಹಾಗೆ ಯಾರಾದರೂ ಪ್ರವೇಶಿಸಿದ್ದು ಕಂಡುಬಂದರೆ ಅಂಥವರು ವಿಚಾರಣೆಗೆ ಒಳಪಡುತ್ತಿದ್ದರು. ಹೊಸ ವಾಕ್ಯಾಂಗಗಳ ಪರಿಣಾಮ ಏನಾದೀತು ಎನ್ನುವುದನ್ನು ಅರ್ಥ ಮಾಡಿಕೊಳ್ಳಲು ಕಂಪನಿಗೆ ಬಹಳ ಕಾಲ ಬೇಕಾಗಲಿಲ್ಲ. ಕಾನೂನಿನ ಈ ವಾಕ್ಯಾಂಗದಿಂದ ಭಾರತದಲ್ಲಿ ಧರ್ಮ ಪ್ರಚಾರದ ಹೊಸ ಬಾಗಿಲುಗಳು ತೆರೆದುಕೊಳ್ಳುತ್ತವೆ ಎನ್ನುವುದು ಕಂಪನಿಗೆ ತಿಳಿದಿತ್ತು. ಆದರೆ ಮಿಶನರಿಗಳಿಗೆ ಎಲ್ಲ ಬಗೆಯ ಸ್ವಾತಂತ್ರ್ಯ ಕೊಡಬೇಕೆ? ಎನ್ನುವುದು ಮುಖ್ಯ ಪ್ರಶ್ನೆಯಾಗಿತ್ತು. ಇದು ಸಹಜವಾಗಿ ಅಂದು ಅತ್ಯಂತ ಆಸಕ್ತಿಯನ್ನು ಕೆರಳಿಸಿದ ಚರ್ಚಾಸ್ಪದ ವಿಷಯವಾಗಿ ಪರಿಣಮಿಸಿತು. ಅದರ ವಿವರಗಳನ್ನು ತಿಳಿಯಬಯಸುವವರು ಅಂದಿನ ಎಡಿನ್‌ಬರೋ ರಿವ್ಯೂ.... ಇತ್ಯಾದಿ ಪತ್ರಿಕೆಗಳನ್ನು ನೋಡಬಹುದಾಗಿದೆ.

ಮೂರು ಪಕ್ಷಗಳಿಗೆ ಇದು ಚರ್ಚಾಸ್ಪದ ವಿಷಯವಾಗಿತ್ತು. ಈಸ್ಟ್ ಇಂಡಿಯಾ ಕಂಪನಿ ಡೈರೆಕ್ಟರುಗಳ ಪ್ರಾಥಮಿಕ ಆಸಕ್ತಿ, ಕಂಪನಿ ಷೇರುದಾರರ ಲಾಭ ಹೆಚ್ಚಿಸುವುದಾಗಿತ್ತು. ಈಸ್ಟ್ ಇಂಡಿಯಾ ವ್ಯಾಪಾರದಲ್ಲಿ ತಮ್ಮ ಮಕ್ಕಳನ್ನು ತೊಡಗಿಸಿ, ಆ ಪ್ರದೇಶ ಅವರ ಭವಿಷ್ಯದ ದೃಷ್ಟಿಯಿಂದ ತುಂಬ ಪ್ರಯೋಜನಕಾರಿ ಎಂದು ಭಾವಿಸಿದ ಆಂಗ್ಲ ಮಧ್ಯಮವರ್ಗದ ಜನ ಈ ಚರ್ಚಾಸ್ಪದ ವಿಷಯದ ಎರಡನೆಯ ಪಕ್ಷವಾಗಿತ್ತು. ಕ್ರೈಸ್ತ ಧರ್ಮ ಪ್ರಚಾರದ ಉದ್ದೇಶದಿಂದ ಸ್ಥಾಪಿತವಾದ ಚರ್ಚ್ ಬೋಧಕ ಮಂಡಲಿ ಮೂರನೆಯ ಪಕ್ಷ. ಮೊದಲಿನ ಎರಡೂ ಪಕ್ಷಗಳ ಆಸಕ್ತಿ ಒಂದೇ ಆಗಿತ್ತು. ಇವರಿಗೆ ಸಾಮ್ರಾಜ್ಯದ ಸ್ಥಿರತೆಯಲ್ಲಿ ಆಸಕ್ತಿಯಿದ್ದುದರಿಂದ ಸದಾ ಶಾಂತಿ, ಸಮಾಧಾನದ ಪರಿಸ್ಥಿತಿ ಬಯಸುತ್ತಿದ್ದರು. ಮೂರನೆಯ ಪಕ್ಷ ಕೂಡ ಶಾಂತಿಪ್ರಿಯವಾಗಿದ್ದರೂ, ಭಾರತೀಯರ ನಂಬುಗೆಗಳನ್ನು ಕ್ರೈಸ್ತ ಧರ್ಮದಲ್ಲಿ ಪರಿವರ್ತಿಸುವುದು ಅವರ ವಿಶೇಷ ಗುರಿಯಾಗಿತ್ತು. ಮೊದಲಿನ ಎರಡೂ ಪಕ್ಷಗಳು, ಮೂರನೆಯ ಪಕ್ಷದ ಎಲ್ಲ ವಿರೋಧಿಶಕ್ತಿಗಳನ್ನು ಒಂದುಗೂಡಿಸುವ ಕಾರ್ಯ ಮಾಡಿದವು. ಈ ಪ್ರಯತ್ನದಲ್ಲಿ ಇವರಿಗೆ ಗೆಲುವು ಮತ್ತು ಚರ್ಚ್ ಬೋಧಕ ಗುಂಪಿಗೆ ಸೋಲು. ಈ ವಿಷಯದಲ್ಲಿ ವಾದವಿವಾದಗಳನ್ನೆಬ್ಬಿಸಿ ಅದರಲ್ಲಿ ಯಶಸ್ವಿಯಾದ ಗುಂಪಿನ ವಾದ ತುಂಬ ಮಹತ್ವದ್ದೂ ಮತ್ತು ಅರ್ಥಪೂರ್ಣವೂ ಆಗಿದೆ.

ಕ್ರೈಸ್ತ ಧರ್ಮ ಪ್ರಚಾರ ಈ ಕೂಡಲೇ ಆರಂಭಗೊಳ್ಳಬೇಕು ಮತ್ತು ಅದನ್ನು ಎದ್ದುಕಾಣದ ರೀತಿಯಲ್ಲಿ ಅಷ್ಟಷ್ಟೇ ನಿಧಾನವಾಗಿ, ಯಾವುದೇ ಅಪಾಯಗಳಿಗೆ ಆಸ್ಪದ ಕೊಡದಂತೆ ಮಾಡಬೇಕು ಇತ್ಯಾದಿ ವಾದಗಳಿಗೆ, ಸಿಡ್ನಿ ಸ್ಮಿತ್ ಕೊಟ್ಟ ಉತ್ತರ ಮರಗಟ್ಟಿಸುವಂಥದಾಗಿದೆ : ಕ್ರೈಸ್ತನ ನಂತರ ಎಷ್ಟೋ ಶತಮಾನಗಳವರೆಗೆ ಮಾನವ ಪ್ರಪಂಚದ ಬಹುಭಾಗದ ಜನತೆ, ಪವಿತ್ರ ಸತ್ಯ ಸುವಾರ್ತೆಗಳ ಜ್ಞಾನವನ್ನು ಯಾವುದೇ ಮಾನವ

ಮೂಲದಿಂದ ಪಡೆಯದೆ ದೈವೇಚ್ಛೆಗೆ ಅನುಗುಣವಾಗಿ ಬದುಕಿದ್ದಾರೆ; ಸತ್ತಿದ್ದಾರೆ. ಕಾರಣ, ಇಡೀ ಪ್ರಪಂಚದ ತೀವ್ರ ಮತಾಂತರ ಕಾರ್ಯ, ಆ ಸರ್ವಶಕ್ತನ ಯೋಜನೆಯಾಗಿರುವಂತೆ ತೋರುತ್ತಿಲ್ಲ; ಇದು ನಮಗೆ ತೃಪ್ತಿ ನೀಡಬೇಕು; ನಾವು ಮತಾಂತರ ಕಾರ್ಯಕ್ಕಾಗಿ ನಮ್ಮ ಕೌಟುಂಬಿಕ ಕರ್ತವ್ಯಗಳನ್ನು ಹಾಳುಗೆಡವದಂತೆ ಇರುವುದು ಮತ್ತು ನಮ್ಮ ಸಹ–ದೇಶವೊಂದರ ಅಗಣಿತ ಜನಸಮೂಹದ ಲೌಕಿಕ ಸುಖ ನೆಮ್ಮದಿಗಳನ್ನು ಅಸ್ತವ್ಯಸ್ತಗೊಳಿಸದಂತೆ ಬದುಕಿದರೆ ಅದು ಆತನ ದೃಷ್ಟಿಯಲ್ಲಿ ಅಪರಾಧವಾಗಲಾರದು."

* * *

ಒಂದು ವೇಳೆ ಮತಾಂತರ ಕಾರ್ಯ ಅಂತಿಂಥ ಅರೆಬರೆ ತಿಳುವಳಿಕೆಯ ಬೋಧಕರಿಂದ ನಡೆಯಲು ಅವಕಾಶ ಕೊಟ್ಟರೆ, ಅದರಿಂದ ಡೈರೆಕ್ಟರುಗಳು ಕಂಪನಿಯ ಷೇರುದಾರರಿಗಾಗಲಿ ಅಥವಾ ಬ್ರಿಟಿಷ್ ರಾಷ್ಟ್ರಕ್ಕಾಗಲಿ ಉಪಕಾರ ಮಾಡಿದಂತಲ್ಲ. ಸ್ಥಳೀಯರಿಗೆ ನೀಡುವ ಧರ್ಮಬೋಧೆ, ಬೋಧೆ ಪಡೆದವರು, ಕೂಡಲೇ ರಾಜಕೀಯ ಉದ್ದೇಶಗಳಿಗೆ ಪ್ರೇರಣೆ ಪಡೆಯದಂತಿರುವ ರೀತಿ ಸಾತ್ವಿಕ ಸ್ವರೂಪದ್ದಾಗಿರಬೇಕು. ನಾವು ನಮ್ಮ ಮನೆತನ ಮತ್ತು ದೇಶಕ್ಕಾಗಿ ಮಾಡಬೇಕಾದ ಕರ್ತವ್ಯಗಳು ದೇವರಿಂದಲೇ ನಿರ್ಧಾರಿತಗೊಂಡಿವೆ. ದೂರದ ಅಪರಿಚಿತರಿಗೆ ಹೆಚ್ಚಿನ ಲಾಭಗಳನ್ನು ಒದಗಿಸಿಕೊಡುವುದಕ್ಕಾಗಿ, ನಮ್ಮದನ್ನು ಹಾಳುಮಾಡಿಕೊಳ್ಳುವ ಸ್ವಾತಂತ್ರ್ಯ ನಮಗಿಲ್ಲ.

ಪಾರ್ಲಿಮೆಂಟ್ ಸದಸ್ಯರಲ್ಲಿ ಮೂಡಿದ ಈ ರೀತಿಯ ವಾದ ವಿವಾದಗಳೇ ಕೊನೆಗೆ ೧೭೯೩ರಲ್ಲಿ ಈ ವಾಕ್ಯಾಂಗ ಬಿದ್ದುಹೋಗಲು ಕಾರಣವಾಯಿತು. ಕ್ರೈಸ್ತ ಧರ್ಮ ಅನುಕೂಲದ ಧರ್ಮವಲ್ಲ; ಅದು ಕಾನೂನಿನಿಂದ ಸ್ಥಾಪಿತಗೊಂಡ ಧರ್ಮ ಎಂದು ವಿಲ್ಬರ್ ಫೋರ್ಸ್ ಪಾರ್ಲಿಮೆಂಟ್ ಸದಸ್ಯರ ಗಮನ ಸೆಳೆದು ಅವರನ್ನು ಮೂದಲಿಸಿದರು. ಆದರೆ ಒಂದು ಕಡೆ ಸ್ಪಷ್ಟಗೊಳಿಸಿರುವಂತೆ ಹದಿನೆಂಟನೆಯ ಶತಮಾನದ ಪ್ರತಿಷ್ಠಿತರಿಗೆ, ರಾಜ್ಯ ಮತ್ತು ಸಮಾಜಗಳಿಂದ ಸ್ವೀಕೃತವಾದ ಧರ್ಮ, ಅವರವರ ಮನೆಗಳಲ್ಲಿ ಅನುಕೂಲತೆಗೆ ತಕ್ಕಂತಿರುವ ಧರ್ಮವಾಗಿತ್ತು. ಅದನ್ನು ವಿದೇಶಗಳಲ್ಲಿ ಮನಬಂದಂತೆ ಹರಡುವ ಅಗತ್ಯವಿಲ್ಲ. ಸಾಮಾನ್ಯವಾಗಿ, ಸಾಮಾಜಿಕ ಪರಿಸರ ಆಗಸ್ಟಸ್ ಆಡಳಿತ ಕಾಲದ ರೋಮ್ ದೇಶದ ಪರಿಸರಕ್ಕೆ ತುಂಬ ಹೋಲುತ್ತಿತ್ತು. ವಿಚಾರಶೀಲರ ದೃಷ್ಟಿಯಲ್ಲಿ ತಮ್ಮ ತಮ್ಮ ನೆಲೆಯಲ್ಲಿ ಎಲ್ಲ ಧರ್ಮಗಳೂ ಉಪಯುಕ್ತವಾಗಿದ್ದುವು.[೧]

ಧರ್ಮಬೋಧಕನಿಗಾಗಿ, ಬಾಗಿಲು ತೆರೆಯುವ ಪ್ರಯತ್ನಗಳು ಅಯಶಸ್ವಿಯಾದುವು ಮತ್ತು ೧೮೧೩ರ ವರೆಗೆ ಬೋಧಕನನ್ನು ಭಾರತದಿಂದ ಹೊರಗೇ ಇಡಲಾಯಿತು; ಅಷ್ಟೇ ಅಲ್ಲ, ಈಸ್ಟ್ ಇಂಡಿಯಾ ಕಂಪನಿ, ತಮ್ಮ ಅನುಮತಿಯಿಲ್ಲದೆ ಇಂಥ ಕಾರ್ಯಕ್ಕಾಗಿ ಭಾರತಕ್ಕೆ ಹೋಗಲು ಇಚ್ಛಿಸಿದ ಬೋಧಕರ ಚಟುವಟಿಕೆಗಳ ಮೇಲೆ ಸದಾ ಕಣ್ಣಿಟ್ಟಿತ್ತು.

೧೭೯೩ರಲ್ಲಿ ಡಾ. ಕ್ಯಾರೀ, ಅನುಮತಿ ಪಡೆಯದೆ ಪ್ರಕ್ಷಿಪ್ತ ಬೋಧಕನಾಗಿ ಹೋದ. ಕಲ್ಕತ್ತಾ ನಗರ ಪ್ರವೇಶಕ್ಕೆ ಆತನಿಗೆ ಅಡ್ಡಿ ಮಾಡಿದ್ದರಿಂದ, ಆತ ಅಲ್ಲಿಂದ ೧೪ ಮೈಲು ದೂರದ ಶ್ರೀರಾಮಪುರವನ್ನು ತನ್ನ ಕಾರ್ಯನಿರ್ವಹಣೆಗಾಗಿ ಆಯ್ದುಕೊಂಡ. ಅದು ಡಚ್ ಜನರ ನೆಲೆಯಾಗಿದ್ದು, ಅಲ್ಲಿ ಕ್ರೈಸ್ತ ಧರ್ಮ ಪ್ರಚಾರ ಕಾರ್ಯಕ್ಕೆ ಯಾವ ಆತಂಕಗಳನ್ನೂ ಡಚ್ಚರು ಒಡ್ಡಿರಲಿಲ್ಲ. ವಾಸ್ತವ ಸಂಗತಿಯೆಂದರೆ ಶ್ರೀರಾಮಪುರದ ಗವರ್ನರ್ ಈ ಧಾರ್ಮಿಕ ಕಾರ್ಯಕ್ಕೆ ನೇರವಾಗಿ ಸಹಾಯ ನೀಡಿದ. ಕ್ಯಾರೀ ಮತ್ತು ಆತನ ಸಹ ಪ್ರಚಾರಕರನ್ನು ಕಂಪನಿ ಸರಕಾರ ಯಾವಾಗಲೂ ಸಂಶಯದಿಂದಲೇ ಕಾಣುತ್ತಿತ್ತು. ೧೭೯೮ರಲ್ಲಿ ಶ್ರೀರಾಮಪುರ

---

೧. ಮೇ ಹ್ಯೂ : *ಕ್ರಿಶ್ಚಿಯಾನಿಟಿ ಮತ್ತು ಭಾರತ ಸರಕಾರ*, ಪು. ೫೧.

ಧರ್ಮಮಂಡಲಿ ಒಂದು ನಿರ್ಧಾರಕ್ಕೆ ಬಂದು, ೧೮೦೦ರಲ್ಲಿ ಬಂದ ನಾಲ್ಕು ಜನ ಬೋಧಕರನ್ನು ಕ್ರೈಸ್ತ ಧರ್ಮ ಪ್ರಚಾರ ಕಾರ್ಯದಲ್ಲಿ ತೊಡಗಿಸಿದರು. ಅವರು, ಶ್ರೀರಾಮಪುರದ ಡಚ್ ನೆಲೆಯಲ್ಲಿ ವಾಸಿಸಲು ಹೋದರು. ವಾಸ್ತವವಾಗಿ ಇವರಿಗೂ ಮತ್ತು ಗವರ್ನರ್ ಜನರಲ್ ಅವರಿಗೂ ಯಾವ ಸಂಬಂಧವೂ ಇರಲಿಲ್ಲ. ಆದರೆ ಈ ಅನುಮತಿಯಿಲ್ಲದ ಬೋಧಕರ ವಾಸದ ಸಂಗತಿಯನ್ನು ಕಂಪನಿಯ ಗವರ್ನರ್ ಜನರಲ್‌ರಿಗೆ ತಡೆದುಕೊಳ್ಳಲಾಗಲಿಲ್ಲ. ಲಾರ್ಡ್ ವೆಸ್ಲೀ ಶ್ರೀರಾಮಪುರದ ಗವರ್ನರ್‌ಗೆ ಪತ್ರ ಬರೆದ: "ಈ ಅನುಮತಿ ರಹಿತ ಬೋಧಕರು ಯಾವುದೇ ಕ್ಷಣದಲ್ಲಿ ಈಸ್ಟ್ ಇಂಡಿಯಾ ಕಂಪನಿ ಅಧಿಕಾರ ಹೊಂದಿರುವ ಪ್ರದೇಶಗಳಿಗೆ ನುಗ್ಗಿ ಬರುವ ಸಂಭವವಿರುವುದರಿಂದ, ಘನತೆವೆತ್ತ ತಾವು ಅವರನ್ನು ಅಲ್ಲಿಂದ ಹೊರದೂಡಲು ಕೋರುತ್ತೇನೆ." ಅದಕ್ಕೆ ಡಚ್ ಗವರ್ನರ್ "ಅಂಥದ್ದೇನನ್ನೂ ಮಾಡಲು ಸಾಧ್ಯವಿಲ್ಲ" ಎಂದು ಉತ್ತರಿಸಿದ.[೧] ೧೮೦೬ರಲ್ಲಿ ಅದೇ ಬಗೆಯ ಒಂದು ಪ್ರಸಂಗ ಜರುಗಿತು : ಕ್ರೀಟರಿಯಾನ್ ಹಡಗದ ಕ್ಯಾಪ್ಟನ್ ವಿಕ್ಸ್ ಕಲ್ಕತ್ತಾ ನಗರಕ್ಕೆ ಇಬ್ಬರು ಬೋಧಕರನ್ನು ಜೊತೆಗೆ ಕರೆತಂದ. ಆಗ ಜಾರ್ಜ್ ಬರ್ಲೋ ಗವರ್ನರ್ ಜನರಲ್ ಹುದ್ದೆಯಲ್ಲಿದ್ದ. ಅವನು ಈ ಇಬ್ಬರು ಪ್ರಚಾರಕರನ್ನು ಅಲ್ಲಿ ಇಳಿಯಗೊಡದಂತೆ ಅತಿ ಕಠಿಣ ಕ್ರಮ ಕೈಗೊಂಡ. ಆ ಹಡಗಿನ ಕ್ಯಾಪ್ಟನ್ ಜೊತೆಗೆ ಕರೆತಂದಿದ್ದ ಇಬ್ಬರು ಪ್ರಚಾರಕರನ್ನು ಮರಳಿ ಕರೆದೊಯ್ಯಲು ಒಪ್ಪುವವರೆಗೆ ಮರುಪ್ರಯಾಣಕ್ಕೆ ಸಂಬಂಧಿಸಿದ ಅನುಮತಿ ಪತ್ರಗಳನ್ನು ಆತನಿಗೆ ಕೊಡಲೇಬಾರದು ಎಂದು ಆಜ್ಞೆ ಹೊರಡಿಸಿದ. ಈ ಸಮಯಕ್ಕೆ ಮೊದಲೇ ಆ ಬೋಧಕರು ಶ್ರೀರಾಮಪುರಕ್ಕೆ ಹೋಗಿ ಡಚ್ ಅರಸೊತ್ತಿಗೆಯ ರಕ್ಷಣೆ ಪಡೆದಿದ್ದರೂ ಕೂಡ ಹೊರಡಿಸಲಾದ ಈ ರೀತಿಯ ಆಜ್ಞೆ, ಧರ್ಮಪ್ರಚಾರಕರ ಬಗೆಗೆ ಅವರು ತಾಳಿದ ಅವಿಚಾರದ ಧೋರಣೆ ಅಷ್ಟೇ ಅಲ್ಲ, ಅದೊಂದು ವಿಶ್ವಾಸದ್ರೋಹದ ಧೋರಣೆಯೆಂದು ಕೂಡ ಭಾವಿಸಲಾಗುತ್ತದೆ.[೨]

೧೮೦೬ರ ಭಾರತೀಯ ಸೈನಿಕರಲ್ಲಾದ ವೆಲ್ಲೂರ ದಂಗೆಯನ್ನು ತುಂಬ ತಪ್ಪಾಗಿ ಕ್ರೈಸ್ತ ಧರ್ಮ ಪ್ರಚಾರಕರಿಗೆ ಆರೋಪಿಸಲಾಗುತ್ತದೆ. ಹೀಗಾಗಿ ಸರ್ ಜಾರ್ಜ್ ಬರ್ಲೋ ಗಾಬರಿಯ ಸ್ಥಿತಿಯಲ್ಲಿ, ಶ್ರೀರಾಮಪುರ ಮಿಶನರಿ ಕಾರ್ಯ ಚಟುವಟಿಕೆಗಳ ಮೇಲೆ ಈ ಕೆಳಗಿನ ನಿರ್ಬಂಧಗಳನ್ನು ಹೇರಿದ :

೧) ಧರ್ಮಪ್ರಚಾರಕರು ಶ್ರೀರಾಮಪುರದಲ್ಲಿಯೇ ಉಳಿಯಬೇಕು.
೨) ಬೀದಿಯಲ್ಲಿ ನಿಂತು ಮತಬೋಧೆ ಮಾಡಲೇಕೂಡದು
೩) ದೇಶಿಯ ಮತಾಂತರಿಗಳು ಬೋಧೆ ಮಾಡಬಹುದು.

ಆದರೆ ಅಂಥವರು ಶ್ರೀರಾಮಪುರ ಪ್ರಚಾರಕ ಮಂಡಲಿಯ ಗೂಢಚಾರರಾಗಿ ಹೋಗಕೂಡದು.

೧೮೦೭ರಲ್ಲಿ ಶ್ರೀರಾಮಪುರ ಧರ್ಮಮಂಡಲಿ ಇಸ್ಲಾಮ್ ಕುರಿತ ಒಂದು ಪುಸ್ತಿಕೆ ಪ್ರಕಟಿಸಿ ಅದರಲ್ಲಿ ಅಸಂಗತ ವಿಷಯ ಕೂಡಿದ್ದು ಪ್ರವಾದಿ ಮಹಮ್ಮದ ಅವರನ್ನು ಒಬ್ಬ ತೆರಿಗೆದಾರ–ಮೋಸಗಾರ–ಎಂದು ಕರೆದುದರ ವಿರುದ್ಧ ಬಂಗಾಲ ಸರಕಾರ ತೋರಿದ ಉಗ್ರ ಪ್ರತಿಕ್ರಿಯೆ, ಈಸ್ಟ್ ಇಂಡಿಯಾ ಕಂಪನಿ ಈ ಧರ್ಮಬೋಧಕರ ಬಗ್ಗೆ ತಾಳಿದ ಧೋರಣೆಗೆ ಮತ್ತೊಂದು ಸಾಕ್ಷಿಯಾಗಿದೆ.

ಈ ವಿಷಯ ಕುರಿತ ಡಾ. ಕ್ಯಾರೀ ಕೇಳಿದ ಕ್ಷಮಾಪಣೆಯಿಂದ ತೃಪ್ತವಾಗದ ಕಂಪನಿ ಕ್ರೈಸ್ತ ಪ್ರಚಾರಕ

---

೧. ಜೆ. ಸಿ. ಮಾರ್ಷಮನ್ : *ಲೈಫ್ ಅ್ಯಂಡ್ ಟೈಮ್ಸ್ ಆಫ್ ಕ್ಯಾರೀ, ಮಾರ್ಷಮನ್ ಆಂಡ್ ವಾರ್ಡ್* ಸಂ. ೧, ಪು. ೩೦೭.

೨. ಅದೇ.

ಸಂಸ್ಥೆಯ ಪ್ರಕಟನೆಗಳ ಮೇಲೆ ನಿಯಂತ್ರಣ ಹೇರಲು, ಆ ಸಂಸ್ಥೆ ಹೊಂದಿದ ಮುದ್ರಣಾಲಯವನ್ನು ಶ್ರೀರಾಮಪುರದಿಂದ ಕಲ್ಕತ್ತಾ ನಗರಕ್ಕೆ ಸ್ಥಳಾಂತರಿಸಲು ಒತ್ತಾಯಿಸಿತು. ಈ ಸುದ್ದಿ ತಮ್ಮ ಕಾರ್ಯಕ್ಕೆ ಆಘಾತಕಾರಿ ಎಂದು ಭಾವಿಸಿದ ಪ್ರಚಾರ ಸಂಸ್ಥೆ ತುಂಬ ಭಯಭೀತಗೊಂಡಿತ್ತು. ಎಂದಿನಂತೆ ಡಚ್ ವಸಾಹತು ಭಯಗ್ರಸ್ತ ಸೇರಮ್‌ಪುರದ ಬೋಧಕರಿಗೆ ನೆರವು ನೀಡುವಲ್ಲಿ ಮುಂದಾಯಿತು; ಒಂದು ವೇಳೆ ಬಂಗಾಲ ಸರಕಾರ ನಿಮ್ಮ ಮುದ್ರಣಾಲಯವನ್ನು ಒತ್ತಾಯಪೂರ್ವಕವಾಗಿ ಕಲ್ಕತ್ತಾ ನಗರಕ್ಕೆ ಸಾಗಿಸಲೇಬೇಕು ಎಂದು ಒತ್ತಡ ತಂದರೆ ಅದರ ವಿರುದ್ಧ ನಾವು ಹೋರಾಟ ಮಾಡುತ್ತೇವೆ ಎಂದು ತೀವ್ರ ಪ್ರತಿಕ್ರಿಯೆ ವ್ಯಕ್ತಗೊಳಿಸಿದಾಗ (ಕಂಪನಿ) ಸರಕಾರ ತನ್ನ ಆಜ್ಞೆಯನ್ನು ಹಿಂದೆಗೆದುಕೊಂಡಿತು. ಆದರೆ ಕಂಪನಿ ಸರಕಾರ (ಧರ್ಮಪ್ರಚಾರ ಸಂಸ್ಥೆ) ಧರ್ಮಬೋಧಕರ ಮಿತ್ರನಾಗಿರಲಿಲ್ಲ ಎನ್ನುವುದು ಮಾತ್ರ ನಿಜ. ಇದೆಲ್ಲ ಬೋಧಕರು ವಿವರಿಸುವ ಸಂಗತಿಗಳ ಸಮರ್ಥನೆ. ಆದರೆ ೧೮೧೩ರ ನಂತರ ಈ ಕ್ಷೇತ್ರದಲ್ಲಿ ಅವರಿಗೆ ಪ್ರವೇಶ ದೊರೆತ ಮೇಲಾದರೂ  ಅವರ ನಿಲುವು ಯಾವ ರೀತಿಯದಾಗಿತ್ತು? ಮತಾಂತರಿಯ ಆಲೋಚನೆ ಮತ್ತು ಜೀವನದಲ್ಲಿ ಜಾತಿ ಪದ್ಧತಿ ಹೋಗಲೇಬೇಕು ಎಂದು ಯತ್ನಿಸಿದರೇ? ಅತಿ ಮೊದಲಿನ ಪ್ರಾಟಸ್ಟಂಟ್ ಬೋಧಕನ ನಿರ್ಧಾರಿತ ಅಭಿಪ್ರಾಯದಲ್ಲಿ ಇದಕ್ಕೆ ಸಮ್ಮತಿಸೂಚಕ ಉತ್ತರ ಕಾಣಸಿಗುವುದಿಲ್ಲ.

ಧರ್ಮಬೋಧಕರು ಜಾತಿ ಪದ್ಧತಿ ಸಹಿಸಿಕೊಂಡ ಬಗ್ಗೆ ೧೮೧೪ರಲ್ಲಿ ಡಾ. ಹೇಯ್ನ್ ಹೀಗೆ ಬರೆದಿದ್ದಾರೆ: "ತಮ್ಮ ಮತಪ್ರಚಾರದ ತೀವ್ರಾಸಕ್ತಿ ಮತ್ತು ಶೀಘ್ರ ಯಶಸ್ಸಿನಲ್ಲಿ ಆಸಕ್ತಿ ತಾಳಿದ ಬೋಧಕರು ಒಂದು ಅಪಾಯಕಾರಿ ತಪ್ಪು ಮಾಡಿದ್ದು, ಅನೇಕ ಪ್ರಸಂಗಗಳಿಂದ ಸಾಬೀತಾಗುತ್ತದೆ. ಒಬ್ಬ ಹಿಂದೂ ಕ್ರೈಸ್ತ ಮತಕ್ಕೆ ಪರಿವರ್ತನೆಗೊಂಡಾಗ, ಆ ಮತಾಂತರಿ ತನ್ನ ಮೂಲ ಮತ ಕಳೆದುಕೊಳ್ಳುತ್ತಾನೆ ಎನ್ನುವುದು ಬೋಧಕರ ಆಲೋಚನಾ ವಿಧಾನ. ಆದರೆ ಭಾರತದಲ್ಲಿ ಇದೊಂದು ಕಳಂಕ ಎಂದು ಪರಿಗಣಿಸಲಾಗುತ್ತಿದ್ದು ಮತಾಂತರ ಕಾರ್ಯದಲ್ಲಿ ಇದೊಂದು ಬಹು ದೊಡ್ಡ ಆತಂಕ. ಹಿಂದೂಗಳ ರಾಜಕೀಯ ವಿಭಜನೆ ಅವರ ಧಾರ್ಮಿಕ ತತ್ವಗಳ  ಒಂದು ಭಾಗವೆನಿಸುವುದಿಲ್ಲ; ಆದರೆ ಅನೇಕ ಬುದ್ಧಿವಂತರೂ ಈ ವಿಷಯ ತಪ್ಪಾಗಿ ಭಾವಿಸಿದ್ದಾರೆ. ಹಿಂದೂವನ್ನು ಕ್ರೈಸ್ತ  ಮತಾಂತರಗೊಳಿಸುವಾಗ ಅವರು ತಮ್ಮ ಮೊದಲಿನ ಜಾತಿ ಸ್ವರೂಪ ಉಳಿಸಿಕೊಂಡು ಬರಲು ಅನುಮತಿ ನೀಡಿದರೆ ಅವರಿಗೆ ಮತಾಂತರಗೊಳ್ಳಲು ಯಾವುದೇ ರೀತಿಯ ಸಂಕೋಚ ಬಾರದು. ಅನೇಕ ಸಂಖ್ಯೆಯಲ್ಲಿ ಜನ ಮತಾಂತರಗೊಳ್ಳಬಹುದು.[೧] ಆದರೆ ಕೇವಲ ಒಂದೇ ಒಂದು ನಿರ್ಧಾರಿತ ಅಭಿಪ್ರಾಯದ ಮೇಲೆಯೇ, ಇಂಥ ಮಹತ್ವದ ವಿಷಯ ಕುರಿತು ಪ್ರಾಟಿಸ್ಟಂಟ್ ಮತಬೋಧಕರು ತಾಳಿದ ಧೋರಣೆ ಕುರಿತು ನಾನು ನ್ಯಾಯ ತೀರ್ಮಾನ ಕೊಡಬಯಸುವುದಿಲ್ಲ.

ಒಮ್ಮೆ ಇಂಥ ಮಹತ್ವದ ವಿಷಯ ಕುರಿತ ಪ್ರಾಟಿಸ್ಟಂಟ್ ಮತ ಸಂಸ್ಥೆ ತಾಳಿದ ಉಚಿತವೆಂದು ಭಾವಿಸಲಾದ ಧೋರಣೆ ಕುರಿತು ತಮ್ಮ ಕಾರ್ಯ ವಿಸ್ತರಣೆಯ ದೃಷ್ಟಿಯಿಂದ ಒಂದು ಅಂತಿಮ ತೀರ್ಮಾನ ಖಚಿತಗೊಳಿಸುವಂತೆ ಕೇಳಿದ ಉದಾಹರಣೆಗಳಿವೆ. ಕಲ್ಕತ್ತಾ ನಗರಕ್ಕೆ ೧೮೨೩ರಲ್ಲಿ ರೆ. ಹೆಬರ್ ಬಿಷಪ್ ಎಂದು ನೇಮಕಗೊಂಡು ಕಾರ್ಯ ಆರಂಭಿಸಿದ. ಆಗ ಆತ ಭಾರತ ಮತ್ತು ಸಿಲೋನ್ ತುಂಬ ಧರ್ಮ ಸಂಸ್ಥೆಯ ಆಡಳಿತಾತ್ಮಕ ಕಾರ್ಯಕ್ಕಾಗಿ ಸುತ್ತಾಡಿದ. ಪ್ರಾಟಿಸ್ಟಂಟ್ ಮತ ಸಹನೆ ಕುರಿತ (ವಿರೋಧಿ) ತೀವ್ರ ಭಾವನೆಗಳನ್ನು ಅರಿತುಕೊಂಡ. ಮತಾಂತರಿಗಳ ಭಾವನೆಗಳನ್ನು ಗಮನಿಸಿದ.

---

೧. *'ಕೃಷ್ಣಾ ಡಿಸ್ಟ್ರಿಕ್ಟ್ ಮ್ಯಾನ್ಯುಯಲ್'*, ಪು. ೨೮೨.

ಆತ ಈ ಭಿನ್ನಾಭಿಪ್ರಾಯಗಳನ್ನು ನಿವಾರಿಸಲು ನಿರ್ಧರಿಸಿದ. ಆತ ಮಾಡಿದ ಕಾರ್ಯದ ಸಂಕ್ಷಿಪ್ತ ವಿವರಗಳನ್ನು ಮಿ. ಕಾಯೆ ಅವರ ಈ ಮಾತುಗಳಿಂದ ತಿಳಿಯಬಹುದು.

"ಬೋಧಕರಲ್ಲಿದ್ದ ಕೋಲಾಹಲವನ್ನು ಹೆಬರ್ ಶಮನಗೊಳಿಸಲು ಆಸಕ್ತನಾಗಿದ್ದ. ಆತ ಬಂಗಾಲ ಬಿಡುವ ಮೊದಲೇ ಈ ಪ್ರಶ್ನೆ ಆತನಿಗೆ ಎದುರಾಯಿತು. ಆತ ಈ ವಿಷಯವಾಗಿ ಆಮೂಲಾಗ್ರ ತಿಳುವಳಿಕೆ ಹೊಂದುವ ಪ್ರಯತ್ನ ಮಾಡಿದ. ಪೂರ್ವದ ಪ್ರಾಟೆಸ್ಟಂಟ್ ಮತಬೋಧಕರ ಅಭಿಪ್ರಾಯ ಮತ್ತು ಜಾತಿ ಸಂಸ್ಥೆಯ ನಿಜಸ್ವರೂಪಗಳ ಮಾಹಿತಿ ಪಡೆದ. ಆಗ ಬಿಷಪ್ ಕಾಲೇಜಿನಲ್ಲಿ ಕ್ರೈಸ್ತ ಧರ್ಮಕ್ಕೆ ಮತಾಂತರ ಹೊಂದಿದ ಕ್ರಿಶ್ಚಿಯನ್ ಡೇವಿಡ್ ಎನ್ನುವ ವ್ಯಕ್ತಿಯಿದ್ದ. ಆತ ಶ್ವಾರ್ಟ್ಸ್‌ನ ವಿದ್ಯಾರ್ಥಿ. ಅಸಾಧಾರಣ ವ್ಯಕ್ತಿಯಾಗಿದ್ದ. ಆತ ಬುದ್ಧಿವಂತನಾಗಿದ್ದಷ್ಟೇ ಪರಿಶುದ್ಧ ಚಾರಿತ್ರ್ಯವನ್ನೂ ಹೊಂದಿದ್ದ. ಬಿಷಪ್ ತನಗೆ ಯಾವುದೇ ಬಗೆಯ ಸಂದೇಹ ಸಮಸ್ಯೆಗಳು ಉಂಟಾದಾಗ ಪರಿಹಾರಕ್ಕಾಗಿ ಇತರರಿಗಿಂತ ಹೆಚ್ಚಾಗಿ ಈತನ ಸಲಹೆ ಸೂಚನೆಗಳನ್ನೇ ಪಡೆಯುತ್ತಿದ್ದ. ಕಾರಣ ಹೆಬರ್ ಒಂದು ಪ್ರಶ್ನಾವಳಿ ತಯಾರಿಸಿ ಅವೆಲ್ಲಕ್ಕೂ ಒಬ್ಬ ಸ್ಥಳೀಯ ಕ್ರಿಶ್ಚಿಯನ್‌ನಿಂದ ಉತ್ತರ ಪಡೆದಿದ್ದ. ಈ ಪ್ರಶ್ನಾವಳಿಗಾಗಿ ಬಳಸಲಾದ ಇಂಗ್ಲಿಷ್, ಶಕ್ತಿ, ಸಂಕ್ಷಿಪ್ತತೆ, ವಿಶಿಷ್ಟ ಗುಣಗಳ ಶ್ರೇಷ್ಠಮಟ್ಟದ ಭಾಷೆಯಾಗಿತ್ತು."

"ಮೊದಲನೆಯ ಜಾತಿಯ ಸ್ವರೂಪ ಕುರಿತು ಕ್ರಿಶ್ಚಿಯನ್ ಡೇವಿಡ್ ಹೇಳಿದ್ದು. ದಕ್ಷಿಣ ಭಾರತದ ಕ್ರೈಸ್ತ ಮತೀಯರಿಗೆ ಜಾತಿ ಒಂದು ಬರೀ ಲೌಕಿಕ ವಿಚಾರವೇ ಹೊರತು ಅವರ ತಲೆಯಲ್ಲಿ ಈ ಧರ್ಮ ನಿಜವಾದದ್ದು ಅಥವಾ ಜೊಳ್ಳಾದದ್ದು ಎನ್ನುವ ಭಾವನೆಗಳೇ ಇರುವುದಿಲ್ಲ. ಸ್ಥಳೀಯ ಉಚ್ಚ ವರ್ಗದ ಮತಾಂತರಿಗಳು, ಕೆಳವರ್ಗದವರ ಜೊತೆ ಲೈಂಗಿಕ ಇತ್ಯಾದಿ ಸಂಬಂಧ ಹೊಂದಲು ಸಮ್ಮತಿಸದೇ ಇರುವುದಕ್ಕೆ ಧಾರ್ಮಿಕ ಶ್ರದ್ಧೆಗಳಿಗಿಂತ ಸಾಮಾಜಿಕ ಸಂಗತಿಗಳೇ ಮುಖ್ಯ ಕಾರಣ ಮತ್ತು ಈ ಮೇಲು ಕೀಳು ಜಾತಿಭಾವನೆಗಳಿಗೆ ಅವರವರ ಪ್ರಾಪಂಚಿಕ (ಸಂಪತ್ತು) ಅಂತಸ್ತು ಆಧಾರವೇ ಹೊರತು, 'ಆದರ್ಶ' ಅದರ ಆಧಾರವಲ್ಲ. ಅವನು, ಸದಾ ಚುಚ್ಚುಮಾತು ಒರಟು ಭಾಷೆಯನ್ನೇ ಬಳಸುವ ಕೆಳವರ್ಗದ ಜನರನ್ನೇ ಪ್ರಚಾರ ಕಾರ್ಯಕ್ಕೆ ತೊಡಗಿಸಿದ. ಅಂಥವರ ರೀತಿನೀತಿಗಳಿಂದ ಉಚ್ಚವರ್ಗದ ಜನರ ಭಾವನೆಗಳು ಕೆರಳುತ್ತಿದ್ದುವು. ಅವರಿಗೆ ನೋವು ಕೂಡ ಉಂಟಾಗುತ್ತಿತ್ತು. ಶಿಕ್ಷಣ ಅವರ ಜೀವನವನ್ನು ಉನ್ನತಗೊಳಿಸಬಹುದು. ಒಬ್ಬ ಪರಯಾ ವಿದ್ಯಾವಂತನಾದರೆ ಅವನನ್ನು ಪಂಡಿತ ಎಂದು ಕರೆಯಲಾಗುವುದು ಮತ್ತು ಚರ್ಚ್ ಅವನನ್ನು ಗೌರವದಿಂದ ಕಾಣುತ್ತದೆ; ಆಗ ಅವನ ಸಹ ಮತಾಂತರಿಗಳು ಅವನ ಜೊತೆ ಕೂಡಿ ಕಳೆಯುತ್ತಾರೆ; ಲೌಕಿಕ ಪ್ರತಿಷ್ಠೆ ಭಯಗಳಿಂದ ಮುಕ್ತರಾಗಿ ಸಹಭೋಜನ ಮಾಡುತ್ತಾರೆ. ಜೀಜನ್ ಬಾಲ್ಗ್‌ನ ಕಾಲದಿಂದೀಚೆಗೆ ಅವರು ಚರ್ಚ್‌ನಲ್ಲಿ ಪ್ರತ್ಯೇಕ ಪ್ರತ್ಯೇಕವಾಗಿ ಕುಳಿತುಕೊಳ್ಳುವ ಮತ್ತು ದೇವರಿಗೆ ಪ್ರಾರ್ಥನೆ ಸಲ್ಲಿಸುವ ರೂಢಿ ಬೆಳೆದುಬಂದಿದೆ. ಅದೇ ಬಟ್ಟಲಿಂದ ಕುಡಿದರೂ ಮೇಲುವರ್ಗದ ಮತಾಂತರಿಗಳೇ ಮೊದಲು ಕುಡಿಯುತ್ತಾರೆ. ಆದರೂ ಇವೆಲ್ಲ ಕೇವಲ ದಕ್ಷಿಣದ ಕ್ರೈಸ್ತ ಸಮುದಾಯದಲ್ಲಿ ಕಾಣುವ ಲೌಕಿಕದ ನಡವಳಿಕೆಗಳಾಗಿದ್ದು, ಎಲ್ಲರನ್ನೂ ಒಂದೇ ಸ್ಮಶಾನದಲ್ಲಿ ಹುಗಿಯಲಾಗುತ್ತದೆ; ಮತ್ತು ಶವ ಸಂಸ್ಕಾರಗಳಲ್ಲಿ ಕೂಡಿ ಭಾಗಿಗಳಾಗುತ್ತಾರೆ. ಆಗ ಸಾವು ಎಲ್ಲರನ್ನೂ ಸಮಗೊಳಿಸುತ್ತದೆ ಎನ್ನುವ ಪ್ರಜ್ಞೆ ಅವರಲ್ಲಿ ಮೂಡಿರುವಂತೆ ತೋರುತ್ತದೆ."

ಕಠಿಣ ಕಾನೂನು ರಚನೆ, ಪಾಲನೆಗಳು, ಧರ್ಮಪ್ರಚಾರ ಕಾರ್ಯದಲ್ಲಿ ಬಹು ದೊಡ್ಡ ಆತಂಕಗಳೆಂದು ಸಿದ್ಧವಾಗಬಹುದಿತ್ತು. ಅದಕ್ಕಿಂತ ತಿಳುವಳಿಕೆ ಹೇಳಿ ಮನವೊಲಿಸುವ ರೀತಿ ಮೇಲೆಂದು ಅರಿತ ಹಿರಿಯ ಧರ್ಮಬೋಧಕರು ಈ ಮಾರ್ಗದಿಂದಲೇ ಕೇಡನ್ನು ನಿವಾರಿಸುವ ಯತ್ನ ಮಾಡಿದರು. ಕ್ರಿಶ್ಚಿಯನ್ ಡೇವಿಡ್, ಶ್ವಾರ್ಟ್ಸ್‌ನ ಕಾಲದಲ್ಲಿ ಈ ಬಗೆಯ ಕೇಡು ಸಾಕಷ್ಟು ಮಾಯವಾಗಿತ್ತು ಎಂದು ಸ್ಪಷ್ಟವಾಗಿ

ಹೇಳಿದ. ಆದರೆ ಚರ್ಚ್ ಧರ್ಮ ಪ್ರಚಾರಕ ಸಮುದಾಯದ, ಒಬ್ಬ ನಿಜವಾದ ಕಟ್ಟಾ ಕ್ರೈಸ್ತ ಮತೀಯ ಮಿ. ರ್ಹೇನಿಯಸ್ ಕ್ರೈಸ್ತ ಮತಬೋಧಕರ ಕರ್ತವ್ಯ ಕುರಿತು ಬೇರೆ ಅಭಿಪ್ರಾಯ ತಾಳಿದ್ದರಿಂದ ದಕ್ಷಿಣದ ಯುವ ಮತಬೋಧಕರ ಮನಸ್ಸು ಗೆದ್ದಿದ್ದ. ಅವರೆಲ್ಲರೂ, ಜಾತಿ ನಿರ್ಮೂಲನೆಗೆ ಒಪ್ಪುವುದು ಯಾವುದೇ ಸಂದರ್ಭದಲ್ಲಿ ಕ್ರಿಶ್ಚಿಯನ್ ಚರ್ಚ್ ಪ್ರವೇಶಕ್ಕೆ ಒಂದು ಅತ್ಯಗತ್ಯ ನಿರ್ಬಂಧವಾಗಬೇಕು ಎನ್ನುವ ಅಭಿಪ್ರಾಯ ತಾಳಿದ್ದರು. ಅಲ್ಲದೆ ಅವರು ತಮ್ಮ ಪೂರ್ವದ – ಹಿರಿಯರೂ ಸೇರಿ – ಪ್ರಚಾರಕರು ಇಂಥ ನಡವಳಿಕೆಗಳಿಗೆ ಅನುಮೋದನೆ ನೀಡಿ ಧರ್ಮಶುದ್ಧಿಗೆ ಧಕ್ಕೆ ತಂದಿದ್ದಾರೆ ಎಂದು ಅವರನ್ನು 'ಸಂದೇಶ ಭ್ರಷ್ಟಗೊಳಿಸಿದವರು' ಎಂದು ಮೂದಲಿಸಿದರು.

ಕ್ರಿಶ್ಚಿಯನ್ ಡೇವಿಡ್ ಇದೆಲ್ಲವನ್ನು ತುಂಬ ವಿಷಾದದಿಂದ ವಿವರಿಸಿದ್ದಾನೆ. ಸ್ವತಃ ಅವನ ವಿಚಾರಗಳು ಸ್ವಾಭಾವಿಕವಾಗಿ ತನ್ನ ಹಳೆಯ ಗುರು ಕ್ರಿಶ್ಚಿಯನ್ ಶ್ವಾರ್ಟ್ಜ್‌ನ ತತ್ವ ಆಚರಣೆಗಳ ಪರವಾಗಿಯೇ ಇದ್ದುವು. ಬಿಷಪ್ ಅವರ ಸೌಮ್ಯ ಮಧ್ಯಸ್ಥಿಕೆ ಮತ್ತು ವಾತ್ಸಲ್ಯಪೂರ್ಣ ಉಪದೇಶಗಳಿಂದ ಯುವ ಬೋಧಕರು ಹೆಚ್ಚು ಸಹನಶೀಲರಾಗುವಂತೆ ಅವರ ಮನವೊಲಿಸಬಹುದೆಂದು ಆತನ ಭಾವನೆಯಾಗಿತ್ತು.

"ಹೆಬರ್ ಮನಸ್ಸಿನಲ್ಲಿ ಯಾವಾಗಲೂ ಈ ಮಹತ್ವದ ವಿಷಯ ಕುರಿತ ಅತ್ಯಂತ ಪ್ರಜ್ಞಾಪೂರ್ವಕ ಚಿಂತನೆ ಸುತ್ತುತ್ತಲೇ ಇತ್ತು. ಇದು ಹಿರಿಯರ ಆಲೋಚನೆಗಳಿಗೆ ಗೌರವ ತೋರಿಸಬೇಕೆನ್ನುವ ಮಾನವ ಸಹಜ ಗುಣಕ್ಕೆ ಅನುಗುಣವಾದುದು. ಆದರೆ ಇದಕ್ಕೆ ಸಂಬಂಧಿಸಿದ ಅಧಿಕ ತಿಳುವಳಿಕೆ ಸಂಗತಿಗಳ ಸಂಗ್ರಹದ ಮತ್ತು ಹೆಚ್ಚು ಅರ್ಥಪೂರ್ಣ ನ್ಯಾಯದ ಅವಕಾಶ ಒದಗಿ ಬರುವವರೆಗೂ ಈ ವಿಷಯದ ಅಂತಿಮ ತೀರ್ಮಾನಕ್ಕೆ ಆತ ಒಪ್ಪಲಿಲ್ಲ. ಕಾರಣ ಆತ ದಕ್ಷಿಣ ಭಾರತಕ್ಕೆ ಭೇಟಿ ನೀಡಿದಾಗ ಕೆಲವು ಮುಖ್ಯ ಧರ್ಮಬೋಧಕರಿಗೆ ಪತ್ರ ಬರೆದ, ಮತ್ತು ಈ ವಿಷಯವಾಗಿ ಹೆಚ್ಚಿನ ವಿಚಾರಣೆ ಕೈಗೊಳ್ಳಲು ಕ್ರಿಶ್ಚಿಯನ್ ಜ್ಞಾನ ಸಮುದಾಯದ ಒಂದು ಸಮಿತಿ ನೇಮಕ ಮಾಡಿದ. ರೆವರೆಂಡ್ ಡಿ. ಸ್ಕ್ರೀವೊಗೆಲ್ ಅವರಿಗೆ ಬರೆದ ಪತ್ರ ಪ್ರಶ್ನಾವಳಿ ರೂಪದಲ್ಲಿದ್ದರೂ ಅದರಿಂದ ಅವರ ಅಭಿಪ್ರಾಯದ ಒಲವು ಗೊತ್ತಾಗುತ್ತದೆ. ಸುದೀರ್ಘ ಆಲೋಚನೆಯ ಬಳಿಕ, ಕರಾವಳಿಯ ಕ್ರೈಸ್ತ ಮತಾಂತರಿಗಳಲ್ಲಿ ಕಂಡುಬರುವ ಪ್ರತ್ಯೇಕತಾ ಜಾತಿ ಮನೋಭಾವ, ಕ್ರೈಸ್ತ ಧರ್ಮೀಯ ಅನ್ಯ ದೇಶಗಳಲ್ಲಿ ಕಾಣುವ ಸಂಸ್ಥೆಗಳ ಸಾಮಾಜಿಕ ವ್ಯವಸ್ಥೆಗಿಂತ ಅಷ್ಟೇನೂ ಭಿನ್ನವಾಗಿಲ್ಲ ಎನ್ನುವ ಸಂಗತಿ ತಿಳಿಯಿತು. ಯೂರೋಪ್‌ನಲ್ಲಿ ಜಾತಿ ಎನ್ನುವುದಿಲ್ಲವೇ ಎಂದು ಆತ ತಾನೇ ಪ್ರಶ್ನಿಸಿಕೊಂಡ. ಜಾತಿ ಎನ್ನುವುದು ಅಮೇರಿಕೆಯಲ್ಲಿಲ್ಲವೇ? ಎಂದು ಕೇಳಿದ. ಇಂಗ್ಲಿಷ್ ಚರ್ಚ್‌ಗಳಲ್ಲಿ ಮೇಲುವರ್ಗದ ಮತ್ತು ಕೆಳವರ್ಗದ ಜನರು ಪ್ರತ್ಯೇಕವಾಗಿ ಕುಳಿತುಕೊಳ್ಳುವುದಿಲ್ಲವೆ? ಒಳ್ಳೆ ಪೋಷಾಕಿನ ಮೇಲುಜಾತಿಯ ಜನ ಬಲಪೀಠದ ಬಳಿ ಪ್ರಾರ್ಥನೆ ಸಲ್ಲಿಸಲು ಇತರರಿಗಿಂತ ಮೊದಲು ಹೋಗುವುದಿಲ್ಲವೇ? ಮೇಲು ಕೆಳವರ್ಗದ ಜನರು ಕೂಡಿಯೇ ಊಟ ಮಾಡುತ್ತಾರೆಯೇ? – ಅವರವರ ಮಕ್ಕಳು ಒಂದೇ ಶಾಲೆಗೆ ಹೋಗುತ್ತಾರೆಯೇ? ನಮ್ಮಲ್ಲಿ ಕೂಡ 'ಪರಯಾ'ಗಳಿಲ್ಲವೇ? ಇತರ ಎಲ್ಲ ನಾಗರಿಕ ದೇಶಗಳಲ್ಲಿ, ಇತರ ಎಲ್ಲ ಬಗೆಯ ಸಾಮಾಜಿಕ ಲೌಕಿಕ ತಾರತಮ್ಯಗಳಲ್ಲದೆ ಜಾತಿ ಮನೋಭಾವ (ನಡವಳಿಕೆ) ತಿಳುವಳಿಕೆ ಕಂಡುಬರುವುದಿಲ್ಲವೇ?

ಸ್ಪ್ಯಾನಿಷ್ ವ್ಯಕ್ತಿ, ನೇತುಹಾಕಿಕೊಂಡಿರುವ ಗಡಿಯಾರದ ಕೆಳಗೆ ತನ್ನ ಶೌರ್ಯದ ವಿಶಿಷ್ಟ ಚಿಹ್ನೆ ಧರಿಸುವುದಿಲ್ಲವೇ? ಅತಿ ಶ್ರೀಮಂತ ಅತಿ ಬಡವ ಬಿಳಿಯನ ಸಾಹಚರ್ಯ ಹೊಂದಿದ್ದಾನೆಯೇ? ಭಿನ್ನ ಭಿನ್ನ ವರ್ಣದವರಾಗಿದ್ದರೂ ವಿಶೇಷತಃ ಎಲ್ಲರಲ್ಲೂ ಹರಿಯುವ ರಕ್ತ ಒಂದೇ ಆಗಿದೆ. ದೇವರ ದೃಷ್ಟಿಯಲ್ಲಿ ಎಲ್ಲ ಮಾನವರೂ ಸಮಾನ ಎನ್ನುವುದು ಕ್ರೈಸ್ತ ಧರ್ಮದ ತತ್ವದ ಒಂದು ಬುದ್ಧಿವಂತಿಕೆಯ ಮೆಚ್ಚಿಕೆಯ

ತತ್ವವಾಗಿದೆ. ಆದರೆ ಮಾನವನ ದೃಷ್ಟಿಯಲ್ಲಿ ಮಾತ್ರ ಎಲ್ಲರೂ ಸಮಾನರಲ್ಲ ಎನ್ನುವುದು ಅಷ್ಟೇ ಸತ್ಯ; ಮತ್ತು ಅವರೆಲ್ಲರೂ ಸಮಾನವಾಗಿರಬೇಕೆಂದು ದೇವರು ಎಂದೂ ಇಚ್ಛಿಸಿರಲಿಲ್ಲ ಎನ್ನುವುದು ಸ್ಪಷ್ಟವಾಗಿರುವಂತಿದೆ. ಸಾಮಾಜಿಕ ತರತಮಗಳು ಎಲ್ಲ ಕಡೆಗೂ ಅಸ್ತಿತ್ವದಲ್ಲಿವೆ. ಒಂದು ವೇಳೆ ದಕ್ಷಿಣ ಕರಾವಳಿಯಲ್ಲಿ ಕಂಡುಬರುವ ತರತಮಗಳು ಕೇವಲ ಸಾಮಾಜಿಕ ಸ್ತರದಲ್ಲಿ ಮಾತ್ರ ಕಂಡುಬಂದಾಗ, ಯಾವ ಮಾನವ ಸಮುದಾಯದಲ್ಲಿಯೂ ಇಲ್ಲದಿರುವ ಸಮಾನತೆಯ ಕಾಯ್ದೆಯನ್ನು ಒತ್ತಾಯದಿಂದ ಚಲಾವಣೆಯಲ್ಲಿ ತರುವ ಯತ್ನ ಮಾಡಿ, ನಮ್ಮ ಪ್ರಚಾರ ಕಾರ್ಯದ ಯಶಸ್ಸಿಗೆ ಅಪಾಯ ಉಂಟುಮಾಡಬೇಕು? ಎಂದು ಬಿಷಪ್ ವಾದಿಸಿದರು. ಬಿಷಪ್ ಹೆಬರ್, ಈ ವಿವೇಕದ ಆಲೋಚನೆಗಳನ್ನು ಮುಂದೆ ಮಾಡಿದ, ತಾನು ಒಂದು ವೇಳೆ ಕ್ರೈಸ್ತ ಧರ್ಮದ ಸೇವೆ ಮಾಡುವುದಾದರೆ ಒಬ್ಬ, ಸಮತೋಲ ವಿಚಾರದ, ಅತಿ ರಭಸಕ್ಕೆ ಹೋಗದ ನಯವಿನಯ ಪ್ರಧಾನ ಪ್ರಚಾರಕನಾಗಿ ಮಾತ್ರ ಎನ್ನುವುದನ್ನು ಮೊದಲಿನಿಂದಲೂ ಹೇಳುತ್ತ ಬಂದ. ಹಳೆಯ ಬಾಟ್ಲಿಗಳಲ್ಲಿ ಅತಿಯಾಗಿ ಹೊಸ ಮದಿರೆ ಸುರಿಯಬಾರದು ಎನ್ನುವ ಧೋರಣೆಗೆ ಪರವಾಗಿದ್ದು ಕಾರ್ಯ ಮಾಡುವುದು ಅಧಿಕಾರದ ಕರ್ತವ್ಯ ಎಂದು ಭಾವಿಸಿದ್ದ."

"೧೮೪೧ರಲ್ಲಿ ಮಚಲೀಪಟ್ಟಣದ ಇಂಗ್ಲೆಂಡ್ ಮಿಶನ್ ವರ್ಕ್‌ದ ಕಾರ್ಯ ನಿರ್ವಹಣಾಧಿಕಾರಿಯಾಗಿ ಬಂದ ಪ್ರಾಟಿಸ್ಟಂಟ್ ಬೋಧಕ ರೆ. ರಾಬರ್ಟ್ ನೋಬೆಲ್ ಅನುಸರಿಸಿದ ರೀತಿ ಹೆಚ್ಚು ರಭಸದಿಂದ ಕೂಡಿತ್ತು; ಆತ ತನ್ನ ಶಾಲೆಯಿಂದ ಪರಯಾ, ಸಮಗಾರ, ಭಂಗಿಗಳನ್ನು ಬೇರೆಯಾಗಿಡುವ ಒಂದು ಕಾಯಿದೆಯನ್ನೇ ಮಾಡಿದ. ಕ್ರೈಸ್ತ ಧರ್ಮದಲ್ಲಿ ಜಾತಿ ಪದ್ಧತಿಯನ್ನು ಹುಟ್ಟುಹಾಕಿದವನೆಂದು ತನ್ನ ಮೇಲೆ ಆರೋಪ ಬಂದಾಗ ತನ್ನ ನೀತಿಯ ಸಮರ್ಥನೆಯನ್ನು ಈ ಕೆಳಗಿನಂತೆ ವಿವರಿಸಿದ : ಇಂಗ್ಲೆಂಡ್‌ದ ಅತ್ಯಂತ ವಿನಯಶೀಲ ಮತ್ತು ಪರಿಶುದ್ಧ ಕ್ರೈಸ್ತ ತಂದೆತಾಯಿಗಳಿಗೆ ತಮ್ಮ ತಮ್ಮ ಮಕ್ಕಳು ಅದರಲ್ಲೂ ಹೆಣ್ಣುಮಕ್ಕಳು, ತಮ್ಮ ಕೆಲಸ ಕಾರ್ಯ ಮಾಡುವ ಕೈಕೆಳಗಿನ ಆಳು, ಅಡಿಗೆ ಕೆಲಸ ಇತ್ಯಾದಿ ಕೈಕೊಳ್ಳುವ ಸೇವಕರುಗಳ ಮಕ್ಕಳ ಜೊತೆ ಶಿಕ್ಷಣ ಪಡೆಯುವುದು ಇಷ್ಟವಿಲ್ಲ; ಅದಕ್ಕೆ ಅವರು ಸಮ್ಮತಿಸುವುದಿಲ್ಲ. ನಾನು ಬೇರಾವ ಕಾರಣಕ್ಕೂ ಅಲ್ಲ, ನಮ್ಮ ಹಳ್ಳಿಯ ಹುಡುಗರ ಜೊತೆ ಕದ್ದು ಆಡಲು ಹೋಗುತ್ತಿದ್ದುದಕ್ಕಾಗಿಯೇ ನನ್ನ ತಂದೆಯವರಿಂದ ಅನೇಕ ಬಾರಿ ಶಿಕ್ಷೆ ಅನುಭವಿಸಿದ್ದೇನೆ. ಅತಿ ಸುವ್ಯವಸ್ಥಿತ ಕ್ರೈಸ್ತ ಮನೆತನದಲ್ಲಿ ಮಕ್ಕಳನ್ನು ಕೆಲಸದವರ ಜೊತೆ ಮಾತಾಡಲು ಅಥವಾ ಮೇಲಂತಸ್ತಿನಿಂದ ಸೀದಾ ಅಡುಗೆ ಮನೆಗೆ ಇಳಿದುಬರಲು ಎಂದೂ ಅನುಮತಿಯಿರಲಿಲ್ಲವೆನ್ನುವುದು ನಾನು ಮನಗಂಡ ಸಂಗತಿ. ನನ್ನ ತಂದೆ ನಮ್ಮನ್ನು ಕೆಲಸದವರ ಮಕ್ಕಳ ಜೊತೆ ಬೆರೆಯಲು ಬಿಡುತ್ತಿರಲಿಲ್ಲ ಎನ್ನುವುದಾಗಲಿ, ಅಥವಾ ಕ್ರೈಸ್ತ ಸಂದೇಶ ಬೋಧೆ ಮಾಡುವ ಮೊದಲು (ನಮ್ಮಿಂದ ಭಿನ್ನವಾಗಿ) ಬ್ರಾಹ್ಮಣ ಮತ್ತು ಪರಯಾ ಭಂಗಿ ಎಲ್ಲರೂ ಒಂದೇ ಕಡೆಗೆ ಕುಳಿತುಕೊಳ್ಳಬೇಕೆನ್ನುವುದಾಗಲಿ, ಸರಿ ಎಂದು ಹೇಳುವುದಾಗಲಿ ಇದೆಲ್ಲ ನನ್ನ ದೃಷ್ಟಿಯಲ್ಲಿ ಅವೈಚಾರಿಕ ಮತ್ತು ಅಕ್ರೈಸ್ತೀಯ."

ಹೆಬರ್ ಅವರ ಕಾಲದಿಂದಲೂ ಅನೇಕ ಬುದ್ಧಿವಂತ ನಿಷ್ಠಾವಂತ ಕ್ರೈಸ್ತೀಯರ ದೃಷ್ಟಿಯಲ್ಲಿ ಆತ ಪೂರ್ಣ ತಪ್ಪುಗಾರನೆಂದು ಭಾವಿಸಿದ್ದು ನಿಜ; ಮತ್ತು ಕಾಲಾನಂತರದಲ್ಲಿ ಬಿಷಪ್ ವಿಲ್ಸನ್ ತನ್ನ ನಿರ್ಣಯವನ್ನು ಬದಲಿಸಿ, ಈ ಜಾತಿ ಪದ್ಧತಿ, ಹಿಂದೂ ಧರ್ಮದ ಅಂತರ್ಗತ ವಿಷಯವಾದ್ದರಿಂದ ಮೇಲುಕೀಳುಗಳನ್ನು ಕುರಿತು ಸಹನಶೀಲ ಧೋರಣೆಯ ವಿರುದ್ಧದ ವಿಚಾರಗಳನ್ನು ಖಂಡಿಸಿದ. ಆದರೆ ಪ್ರಾಟಿಸ್ಟಂಟ್ ಮಿಶನರಿ ಮತ್ತು ಇತರ ಸಾಮಾನ್ಯ ದೃಷ್ಟಿಯಲ್ಲಿ ಭಾರತದಲ್ಲಿರುವ ಭಾರತೀಯ ಕ್ರೈಸ್ತಮತೀಯರಲ್ಲಿ ಜಾತಿಯತೆ ಸ್ಥಿತಿ, ಇದ್ದ ಹಾಗೆ ಉಳಿಯಿತು.[೧]

ಹೀಗೆ ಭಾರತದಲ್ಲಿ ಕ್ರೈಸ್ತ ಧರ್ಮದ ವೇಗದ ಪ್ರಸರಣಕ್ಕಾಗಿ ಹಗುರಾದ ರೀತಿನೀತಿಗಳನ್ನು ಅನುಸರಿಸಬೇಕೆನ್ನುವುದಕ್ಕೆ ಎಲ್ಲ ಮಿಶನರಿಗಳೂ ಒಪ್ಪಿಗೆ ನೀಡಿದುವು. ಈ ವಿಷಯಕ್ಕೆ ಕ್ಯಾಥೋಲಿಕ್‌ದ ಲೂಥರ್ನ ಅಥವಾ ಪ್ರಾಟಿಸ್ಟಂಟರಲ್ಲಿ ಭಿನ್ನಾಭಿಪ್ರಾಯವಿರುವಂತೆ ತೋರುತ್ತದೆ. ಈ ಭಿನ್ನತೆ ಒಂದು ವಿಧದ ಶ್ರೇಣಿ. ಒಂದು ವೇಳೆ ಕ್ರೈಸ್ತ ಮತಾಂತರಿಗಳಲ್ಲಿ ಜಾತಿ ಪದ್ಧತಿ ಮತ್ತು ಈ ಬಗೆಯ ಸಂಗತಿಗಳು ಚಲಾವಣೆಯಲ್ಲಿರುವುದಕ್ಕೆ ಕ್ರೈಸ್ತ ಧರ್ಮ–ಪ್ರಚಾರವನ್ನು ಸುಲಭಗೊಳಿಸುವ ಧೋರಣೆಯೇ ಕಾರಣ. ಈ ನೀತಿಯನ್ನು ಅನುಸರಿಸುವಾಗ ಅಂದಿನ ಧರ್ಮಪ್ರಚಾರಕರು, ಮುಂದೆ ಎಂದಾದರೂ ಒಂದು ದಿನ ಯಾರಾದರೂ 'ಜಾತಿ ಪದ್ಧತಿ ನಾಶವಾಗದೆ ಒಬ್ಬ ಹಿಂದೂ ಕ್ರೈಸ್ತ ಧರ್ಮ ಸ್ವೀಕಾರ ಮಾಡಿದರೆ ಏನು ಬಂತು?' ಎಂದು ಕೇಳಬಹುದು ಎನ್ನುವ ಸಂಗತಿಯೇ ಹೊಳೆಯಲಿಲ್ಲ. ಒಬ್ಬ ವ್ಯಕ್ತಿಯನ್ನು ಕ್ರೈಸ್ತ ಧರ್ಮಕ್ಕೆ ಮತಾಂತರಗೊಳಿಸಿದರೆ ಅವನನ್ನು ಕ್ರಿಸ್ತನ ಅನುಯಾಯಿಯನ್ನಾಗಿ ಮಾಡಿದಂತೆಯೇ ಎಂದು ಅಂದಿನ ಧರ್ಮಮಂಡಲಿ ತಪ್ಪಾಗಿ ಭಾವಿಸಿತು.

## V

ಪ್ರಶ್ನೆಯ ಎರಡನೆಯ ಭಾಗ ಎತ್ತಿಕೊಳ್ಳೋಣ. ಅಸ್ಪೃಶ್ಯನಾಗಿ ಹುಟ್ಟಿದ ಪ್ರತಿಯೊಬ್ಬನ ಯಾತನೆ ಸಾವು ನೋವುಗಳನ್ನು ಅವನು ಮತಾಂತರಗೊಂಡ ಬಳಿಕಾದರೂ ಕಿತ್ತೊಗೆಯಲು, ಕ್ರೈಸ್ತ ಧರ್ಮಕ್ಕೆ ಸಾಧ್ಯವಾಗಿದೆಯೇ? ಅಸ್ಪೃಶ್ಯ ಮತಾಂತರಿಯೂ ಸಾರ್ವಜನಿಕ ಬಾವಿಯಿಂದ ನೀರೆತ್ತಲು ಸಾಧ್ಯವೇ? ಸಾರ್ವಜನಿಕ ಶಾಲೆಯಲ್ಲಿ ಅವನ ಮಕ್ಕಳಿಗೆ ಪ್ರವೇಶ ಇದೆಯೇ? ಮೊದಲು ಅವನಿಗಾಗಿ ಮುಚ್ಚಿದ್ದ ಅಂಗಡಿ ಗಡಂಗುಗಳಲ್ಲಿ ಒಳಹೋಗಬಹುದೇ? ಜಿನಸಿ ಅಂಗಡಿಯ ಒಳಭಾಗದಲ್ಲಿ ನಿಂತು ಸಾಮಾನು ಖರೀದಿಸಬಹುದೇ? ಒಬ್ಬ ಕ್ಷೌರಿಕ ಅವನನ್ನು ಮುಟ್ಟುತ್ತಾನೆಯೇ? ಒಬ್ಬ ಅಗಸ ಅವನ ಬಟ್ಟೆಗಳನ್ನು ತೊಳೆಯುತ್ತಾನೆಯೇ? ಅವನು ಬಸ್‌ನಲ್ಲಿ ಪಯಣಿಸಬಹುದೇ? ನಿರಾತಂಕವಾಗಿ ಸಾರ್ವಜನಿಕ ಕಾರ್ಯಾಲಯಗಳಲ್ಲಿ ಅವನಿಗೆ ಪ್ರವೇಶವುಂಟೇ? ಸ್ಪೃಶ್ಯರ ಮನೆಗಳಲ್ಲಿ ಅವನು ವಾಸ ಮಾಡಬಹುದೇ? ಹಿಂದೂಗಳು ಅವನಿಂದ ನೀರು ಸ್ವೀಕರಿಸುತ್ತಾರೆಯೇ? ಅವನ ಜೊತೆ ಊಟ ಮಾಡುತ್ತಾರೆಯೇ? ಅವನನ್ನು ಮುಟ್ಟಿದ ಹಿಂದೂ ಸ್ನಾನ ಮಾಡುವುದಿಲ್ಲವೇ? ಈ ಎಲ್ಲ ಪ್ರಶ್ನೆಗಳಿಗೂ ಉತ್ತರ ನಕಾರ ಎನ್ನುವುದು ಖಚಿತ. ಅಂದರೆ ಮತಾಂತರ ಅಸ್ಪೃಶ್ಯನ ಸಾಮಾಜಿಕ ಸ್ಥಿತಿಗತಿಯಲ್ಲಿ ಯಾವುದೇ ಬದಲಾವಣೆ ತಂದಿಲ್ಲ. ಹಿಂದೂ ಸಮುದಾಯದ ದೃಷ್ಟಿಯಲ್ಲಿ ಒಬ್ಬ ಅಸ್ಪೃಶ್ಯ ಕ್ರೈಸ್ತ ಧರ್ಮಕ್ಕೆ ಮತಾಂತರಗೊಂಡರೂ, ಅಸ್ಪೃಶ್ಯನಾಗಿಯೇ ಉಳಿಯುತ್ತಾನೆ. ಅಸ್ಪೃಶ್ಯ ಮತಾಂತರಿಯ ಅಂತಸ್ತು ವರ್ಧಿಸಲು ಕ್ರೈಸ್ತ ಧರ್ಮಕ್ಕೆ ಯಾಕೆ ಸಾಧ್ಯವಾಗಿಲ್ಲ ಎನ್ನುವುದು ಪ್ರಶ್ನೆ. ಈ ಸೋಲಿಗೆ ಕಾರಣಗಳಾವುವು? ಈ ಸಮಸ್ಯೆಯಲ್ಲಿ ಆಸಕ್ತಿಯುಳ್ಳವರೆಲ್ಲರೂ ನನ್ನ ವಾದಗಳನ್ನು ಒಪ್ಪಿಕೊಳ್ಳುತ್ತಾರೆ ಎಂದು ನನಗನಿಸುವುದಿಲ್ಲ.

ಆದರೆ ಅವಕ್ಕೆ ಬೆಲೆಯಿದೆಯೆಂದು ಅವುಗಳ ವಿಷಯ ಪ್ರಸ್ತಾಪಿಸಿದ್ದೇನೆ. ನನ್ನ ಮಾತುಗಳನ್ನು

---

೧. ಅಮೇರಿಕಾದ ಪ್ರಾಟಿಸ್ಟಂಟ್ ಮಿಶನರಿ ಇದಕ್ಕೆ ಒಂದು ಅಪವಾದ. ಈ ವಿಷಯ ಕುರಿತು ಅಮೆರಿಕೆಯ ಧರ್ಮಸಂಸ್ಥೆ ಒಂದು ಈ ಕೆಳಗಿನ ನಿರ್ಣಯ ಕೈಕೊಂಡಿತು:
"ಜಾತಿ, ಅನಾಗರಿಕ ಜೀವನದ ಒಂದು ಸಾರಭೂತ ಅಂಶವೆಂದು, ಧರ್ಮಮಂಡಲಿ ಪರಿಗಣಿಸುತ್ತದೆ. ಅವರ ವ್ಯಾವಹಾರಿಕ ಪೂರ್ಣ ನಿವಾರಣೆ ಅದಕ್ಕೆ ತಕ್ಕ ಸಾಕ್ಷಿ ಮತ್ತು ಶುದ್ಧಿಗಳನ್ನು ಅವಲಂಬಿಸಿದ್ದು, ಕನಿಷ್ಠ ಪಕ್ಷ, ಮತಾಂತರ ಬಯಸುವ ವ್ಯಕ್ತಿ ಒಳ್ಳೆಯ ಪರಿಸರವಿದ್ದಾಗಲಾದರೂ ಇತರ ಜಾತಿಗಳ ಜೊತೆ–ಕ್ರೈಸ್ತ ಧರ್ಮ ಸಮುದಾಯ –ಕೂಡಿ ಉಣ್ಣಲು ಒಪ್ಪಬೇಕು."

ತಿಳಿದು, ಮೆಚ್ಚಿಕೊಳ್ಳಬೇಕಾದರೆ ಒಂದು ಸಂಗತಿಯ ಸ್ಪಷ್ಟೀಕರಣ ನೀಡಬಯಸುತ್ತೇನೆ. ಮತಾಂತರಿಯ ಸಾಮಾಜಿಕ ಅಂತಸ್ತಿನ ಬದಲಾವಣೆಯೆಂದರೆ ಅದು ಎರಡು ರೀತಿಯ ಬದಲಾವಣೆ. ಮೊದಲು ಹಿಂದೂಗಳ ಧೋರಣೆಯಲ್ಲಿ ನಿಶ್ಚಿತ ಬದಲಾವಣೆಯಾಗಬೇಕು. ಎರಡನೆಯದಾಗಿ ಮತಾಂತರಿಯ ಮಾನಸಿಕ ಪರಿವರ್ತನೆ. ಅಂತಸ್ತು ಒಂದು ದ್ವಿವಿಧ ವಸ್ತು. ಇಬ್ಬರ ನಡುವೆ ಜರುಗುವಂಥದು. ಇಬ್ಬರೂ ತಮ್ಮ ತಮ್ಮ ಮೊದಲಿನ ನೆಲೆಯಿಂದ ಪರಿಚಲಿಸುವವರಿಗೆ ಪರಿವರ್ತನೆ ಸಾಧ್ಯವಿಲ್ಲ. ಕ್ರಿಶ್ಚಿಯನ್ ಧರ್ಮ ಇಬ್ಬರನ್ನೂ ತಮ್ಮ ತಮ್ಮ ಸ್ಥಾನಗಳಿಂದ ಕದಲಿಸುವ ಯಾವ ಬಗೆಯ ಪ್ರಯತ್ನ ಮಾಡಿದೆ? ಈ ಪ್ರಶ್ನೆಗಳ ಅರಿವು ಅಸ್ಪೃಶ್ಯ ಮತಾಂತರಿಯ ಸಾಮಾಜಿಕ ಅಂತಸ್ತನ್ನು ಹೆಚ್ಚಿಸುವಲ್ಲಿ ಕ್ರಿಶ್ಚಿಯಾನಿಟಿ ಯಾಕೆ ಸೋಲು ಅನುಭವಿಸಿತು ಎನ್ನುವುದನ್ನು ತಿಳಿಸಿಕೊಡಬಲ್ಲುದು.

ಹಂತ ಹಂತವಾಗಿ ಈ ಪ್ರಶ್ನೆಯನ್ನು ವಿವೇಚಿಸೋಣ. ಹಿಂದೂಗಳನ್ನು ಕದಲಿಸಲು ಕ್ರೈಸ್ತ ಧರ್ಮ ಯಾವ ಪ್ರಯತ್ನ ಕೈಗೊಂಡಿದೆ? ಅವರು ಅಂಥ ಯಾವ ಪ್ರಯತ್ನವನ್ನೂ ಮಾಡಿಲ್ಲ. ಅವರು ಈ ವಿಚಾರವಾಗಿ ಒಂದು ಪವಾಡವನ್ನು ನಂಬಿ ಕುಳಿತಿರುವಂತೆ ಕಾಣುತ್ತದೆ. ಪವಾಡದಿಂದ ಈ ಬಗೆಯ ಬದಲಾವಣೆಯಾದೀತು ಎನ್ನುವುದು ನಂಬಿಕೆಯ ವಿಚಾರ. ಆ್ಯಗೈಲ್ ಡ್ಯೂಕ್ ಹೇಳಿದ ಮಾತುಗಳಲ್ಲಿ ಸ್ಫುಟವಾಗಿದೆ. "ಸುಧಾರಣೆಗಾಗಿ ಇದಕ್ಕಿಂತ ಶಕ್ತಿಯುತ ಕ್ರಮ ಮತ್ತೊಂದಿಲ್ಲ. ಒಂದು ವೇಳೆ ಇದರ ಜೊತೆ ಜೊತೆಗೇ ಬೇರೆ ಯಾವುದಾದರೂ ಸುಳ್ಳು, ಭ್ರಷ್ಟನಂಬುಗೆ, ಕ್ರೂರ ಕುತಂತ್ರಗಳನ್ನು ಅನುಸರಿಸಿದರೆ ಅವು ಯಾವುದೇ ಸದ್ದಿಲ್ಲದೆ, ಘರ್ಷಣೆಯಿಲ್ಲದೆ ಆ ನಂಬಿಕೆ ಮತ್ತು ಪದ್ಧತಿಗಳು ಹಿಂದೂ ಆಲೋಚನೆಗೆ ದಾರಿ ಮಾಡಿಕೊಡಬಹುದು. ಹೀಗೆ ಕ್ರೈಸ್ತ ಧರ್ಮ ನೇರವಾಗಿ ದಾಳಿಮಾಡುವ ಒಂದು ಮಾತನ್ನೂ ಆಡದೆ ಅನಾಗರಿಕ ಜನಸಮೂಹದ ಪ್ರಪಂಚ ವ್ಯಾಪ್ತಿಯಾದ ಮತ್ತು ನಿರಂತರ ಆಳವಾಗುತ್ತ ನಡೆದಿರುವ ದಾಸ್ಯ ಎನ್ನುವ ಶಾಪವನ್ನು ನಿರ್ನಾಮ ಮಾಡಿದೆ."[೧]

ಈ ವಿಚಾರಕ್ಕೆ ಎಷ್ಟೇ ಮಹತ್ವವಿದ್ದರೂ ಇದನ್ನು ಕುರಿತ ತೀರ್ಮಾನಗಳಿಗೆ ಚರಿತ್ರೆಯಲ್ಲಿ ಆಧಾರ ದೊರೆಯುವುದಿಲ್ಲ. ರೋಮನ್ ಸಾಮ್ರಾಜ್ಯದಲ್ಲಿ ಗುಲಾಮಗಿರಿಯ ಅಂತ್ಯಕ್ಕೆ ಕ್ರೈಸ್ತ ಧರ್ಮದ ಪ್ರಭಾವ ಕಾರಣ ಎನ್ನುವುದು ಚರ್ಚಾಸ್ಪದ. ಕ್ರೈಸ್ತ ಧರ್ಮ ಒಂದು ಸಂಸ್ಥೆಯಾಗಿ ರೂಪುಗೊಂಡಾಗಲೂ ಯೂರೋಪ್‌ದಲ್ಲಿ ಗುಲಾಮಗಿರಿ ನೂರಾರು ವರ್ಷಗಳವರೆಗೆ ಮುಂದುವರೆದಿತ್ತು ಎನ್ನುವುದು ನಿಸ್ಸಂದೇಹ. ಯುನೈಟೆಡ್ ಸ್ಟೇಟ್ಸ್‌ದಲ್ಲಿ ನೀಗ್ರೋಗಳ ಗುಲಾಮಗಿರಿಯನ್ನು ಕೊನೆಗೊಳಿಸಲು ಕ್ರೈಸ್ತ ಧರ್ಮವೊಂದೇ ಸಾಕಾಗಲಿಲ್ಲ ಎನ್ನುವುದು ಅವಿರೋಧ ಸಂಗತಿ. ಕ್ರೈಸ್ತ ಮತೀಯರಿಂದ ನಿರಾಕರಿಸಲ್ಪಟ್ಟ ಸ್ವಾತಂತ್ರ್ಯ ಪಡೆಯಲು ನೀಗ್ರೋಗಳು ಒಂದು ನಾಗರಿಕ ಯುದ್ಧವನ್ನೇ ಹೂಡಬೇಕಾಯಿತು. ಆದ್ದರಿಂದ ಒಂದು ವಿಚಾರ ಬಿತ್ತುವುದು, ಅದು ಪವಾಡಗಳ ಮೂಲಕ ಫಲಿಸಲಿ ಎನ್ನುವ ಅವಲಂಬನೆಯ ಮನೋಭಾವ. ಈ ದಿಸೆಯ ಪ್ರಯತ್ನವಾದಿ ಕ್ರೈಸ್ತ ಧರ್ಮೀಯರಲ್ಲಿ ಮನೆಮಾಡಿದ್ದರಿಂದಲೇ ಕ್ರೈಸ್ತ ಮತಕ್ಕೆ ಪರಿವರ್ತನೆಗೊಂಡರೂ ಒಬ್ಬ ಅಸ್ಪೃಶ್ಯ ಅಸ್ಪೃಶ್ಯನಾಗಿಯೇ ಉಳಿದಿದ್ದಾನೆ. ಪ್ರಶ್ನೆಯ ಮತ್ತೊಂದು ಭಾಗ ಎತ್ತಿಕೊಳ್ಳೋಣ. ಕ್ರೈಸ್ತ ಧರ್ಮ ಅಸ್ಪೃಶ್ಯರ ಚಲನೆಗೆ ಪ್ರೇರಣೆ ನೀಡುತ್ತಿದೆಯೇ? ಇಲ್ಲ ಎಂದು ಬಲವಾಗಿ ಹೇಳಬೇಕಾಗಿದೆ. ನನಗೆ ತಿಳಿದ ಮಟ್ಟಿಗೆ ಕ್ರೈಸ್ತ ಧರ್ಮಬೋಧೆ ಅಸ್ಪೃಶ್ಯರ ವಾಸ್ತವಿಕ ಸುಧಾರಣೆಗಳ ಕಡೆಗೆ ಹೆಚ್ಚು ಲಕ್ಷ್ಯ ಕೊಡದೆ ಕ್ರೈಸ್ತ ಧರ್ಮದ ಸಾಮಾಜಿಕ ಧೋರಣೆಗಳ ಮೇಲೆ ಹೆಚ್ಚು ಒತ್ತುಕೊಟ್ಟಿತು. ಅಸ್ಪೃಶ್ಯರಿಗೆ ಮತಾಂತರ ಬೋಧೆ ಮಾಡುವ

---

ಉಲ್ಲೇಖಿತ : ಸಿ. ಎಫ್. ಆಂಡ್ರ್ಯೂಸ್, *ಕ್ರೈಸ್ಟ್ ಆ್ಯಂಡ್ ಲೇಬರ್*, ಪು. ೨೫.

ಧರ್ಮಪ್ರಚಾರಕರು ಕ್ರೈಸ್ತ ಧರ್ಮ, ಶುದ್ಧ ಆಧ್ಯಾತ್ಮಿಕ ಧರ್ಮ ಎಂದೇ ಬೋಧಿಸುತ್ತಾರೆ. ಕ್ರೈಸ್ತ ಧರ್ಮೀಯರು ಇತರರನ್ನು ಪ್ರೀತಿಸಬೇಕು ಎನ್ನುವುದು ನಿಸ್ಸಂದೇಹವಾಗಿ ಒಂದು ಬೆಲೆಯುಳ್ಳ ಬೋಧೆ. ಆದರೆ ಅಷ್ಟಕ್ಕೆ ನಿಂತು, ಅದರಲ್ಲಿ ಬೋಧಿತವಾಗಿರುವ ಆಧ್ಯಾತ್ಮಿಕತೆಗೂ ಮತ್ತು ಅದರ ಸಾಮಾಜಿಕ ಧೋರಣೆಯ ಭೌತಿಕ ಜೀವನಕ್ಕೂ ಯಾವ ಸಂಬಂಧವೂ ಇಲ್ಲ ಎನ್ನುವುದು ಮಾತ್ರ ಪೊಳ್ಳು ಸಿದ್ಧಾಂತದ ಬೋಧೆ. ತಪ್ಪುಗಾರನಿಗೆ ಪ್ರತಿದಿನ ದೋಷಮುಕ್ತಿ ನೀಡಿ ಇತರರಿಗೆ ಒಳ್ಳೆಯದು ಮಾಡು, ನ್ಯಾಯವಾಗಿ ವರ್ತಿಸು ಎಂದು ಬೋಧಿಸುವುದು ಮತ್ತು ಆ ತಪ್ಪುಗಾರ ತಪ್ಪು ಮಾಡುತ್ತಲೇ ಹೋಗುವುದು ಮತ್ತು ಆತನ ಮೇಲೆ ಯಾವುದೇ ಬಗೆಯ ಕ್ರಮ ಕೈಕೊಳ್ಳದಿರುವುದು, ಈ ಬಗೆಯ ಸ್ಥಿತಿಯಲ್ಲಿ ಪ್ರತಿದಿನದ ದೋಷಮುಕ್ತಿಯಿಂದ ಏನು ಪ್ರಯೋಜನವಿದೆ? ಮತಾಂತರ ಹೊಂದಿದ ಮೇಲೆ ಕೂಡ ಅಸ್ಪೃಶ್ಯನ ಮೇಲಾಗುತ್ತಿರುವ ಅನ್ಯಾಯಗಳ ನಿವಾರಣೆಗಾಗಿ ಯತ್ನಿಸುವುದು ತಮ್ಮ ಕರ್ತವ್ಯ ಎನ್ನುವುದನ್ನು ಕ್ರೈಸ್ತ ಧರ್ಮ ಪ್ರಚಾರಕರು ಎಂದೂ ಆಲೋಚಿಸಿಯೇ ಇಲ್ಲ. ಅಸ್ಪೃಶ್ಯರ ಸಾಮಾಜಿಕ ಬಂಧವಿಮುಕ್ತಿಯ ದಿಸೆಯಲ್ಲಿ ಧರ್ಮ ಸಂಸ್ಥೆಗಳು ಇಷ್ಟೊಂದು ನಿಷ್ಕ್ರಿಯವಾಗಿರುವುದು ತುಂಬ ದುಃಖದ ವಿಷಯ. ಆದರೆ ಇದಕ್ಕಿಂತಲೂ ನೋವಿನ ಸಂಗತಿ ಎಂದರೆ ಒಬ್ಬ ಅಸ್ಪೃಶ್ಯ ಕ್ರೈಸ್ತಧರ್ಮಕ್ಕೆ ಮತಾಂತರಗೊಂಡ ಮೇಲೆ ಕೂಡ ನಿಷ್ಕ್ರಿಯನಾಗಿರುವುದು. ಇದು ಅತ್ಯಂತ ದುಃಖದ ವಿಷಯ. ಅವನು, ಮತಾಂತರ ಪೂರ್ವದಲ್ಲಿ ಹಿಂದೂಗಳಿಂದ ಅನುಭವಿಸುತ್ತಿದ್ದ ಎಲ್ಲ ಯಾತನೆಗಳನ್ನು ಇಂದಿಗೂ ಅನುಭವಿಸುತ್ತಿದ್ದಾನೆ. ಕ್ರೈಸ್ತ ಧರ್ಮಕ್ಕೆ ಮತಾಂತರಗೊಳ್ಳದ ಅಸ್ಪೃಶ್ಯರೇ ತಮ್ಮ ಮೇಲಾಗುತ್ತಿರುವ ದೌರ್ಜನ್ಯಗಳ ವಿರುದ್ಧ ಹೋರಾಟ ನಡೆಸಿರುವುದು ಗಮನಾರ್ಹ ಸಂಗತಿ. ತಮ್ಮ ಮೇಲಾದ ಸಾಮಾಜಿಕ ಅನ್ಯಾಯಗಳ ನಿವಾರಣೆಗಾಗಿ ಅಸ್ಪೃಶ್ಯ ಕ್ರೈಸ್ತ ಮತಾಂತರಿಗಳು ಸಭೆ ಸಮ್ಮೇಳನ ಕರೆದದ್ದನ್ನು ನಾನು ಕಂಡೇ ಇಲ್ಲ. ಅವರಿಗೆ ಕುಂದುಕೊರತೆಗಳಿರುವುದು ಪ್ರಶ್ನಾತೀತ. ಅವರಲ್ಲಿ ಈ ಬಗೆಯ ಹೋರಾಟಗಳ ನಾಯಕತ್ವ ವಹಿಸುವಂಥ ಅನೇಕ ವಿದ್ಯಾವಂತರಿರುವುದೂ ನಿಜ. ಹಾಗಾದರೆ ತಮ್ಮ ಮೇಲಾಗುತ್ತಿರುವ ಕ್ರೌರ್ಯಗಳ ನಿವಾರಣೆಗೆ ಅವರು ಯಾಕೆ ಹೋರಾಡುತ್ತಿಲ್ಲ? ಕ್ರೈಸ್ತ ಅಸ್ಪೃಶ್ಯರು ಇಂಥ ಹೋರಾಟ ಕೈಕೊಳ್ಳುವಲ್ಲಿ ವಿಫಲರಾದುದಕ್ಕೆ ನನ್ನ ದೃಷ್ಟಿಯಲ್ಲಿ ಮೂರು ಕಾರಣಗಳಿವೆ. ಮೊದಲನೆಯದು, ವಿದ್ಯಾವಂತ ಕ್ರೈಸ್ತ ಮತೀಯರು ತಮ್ಮ ಸಮುದಾಯದ ಜನರಿಗಾಗಿ, ಇಂಥ ಒಂದು ಹೋರಾಟ ಕೈಕೊಳ್ಳುವ ನಿಶ್ಚಿತ ಅಪೇಕ್ಷೆಯ ಪೂರ್ಣ ಅಭಾವ. ನನ್ನ ದೃಷ್ಟಿಯಲ್ಲಿ, ಕ್ರೈಸ್ತ ಸಮುದಾಯದಲ್ಲಿಯೇ ವಿದ್ಯಾವಂತರು ಮತ್ತು ಅಶಿಕ್ಷಿತರ ನಡುವೆ ಸಲುಗೆ ಸಂಬಂಧಗಳು ಬೆಳೆಯದಿರುವುದೇ ಇದಕ್ಕೆ ಮೂಲ. ಕ್ರೈಸ್ತ ಮತ ಸಮುದಾಯ, ಅನೇಕ ಗುಂಪುಗಳಿಂದ ಕೂಡಿದ ಸಂಘಟಿತ ಸಮುದಾಯ. ಕೆಲವು ಕಡೆ ಅದು ಸ್ಪೃಶ್ಯ, ಅಸ್ಪೃಶ್ಯ ಎಂದು ವಿಭಜಿತಗೊಂಡಿದೆ. ಎಲ್ಲ ಸ್ಥಳಗಳಲ್ಲೂ ಉಚ್ಚ ಶ್ರೇಣಿ, ನಿಮ್ನ ಶ್ರೇಣಿಗಳಾಗಿ ವಿಂಗಡಿತಗೊಂಡಿದೆ. ಹೆಚ್ಚಾಗಿ ಅಸ್ಪೃಶ್ಯ ಗುಂಪಿನಿಂದಲೇ ಬಂದಿರುವ ವಿದ್ಯಾವಂತ ಸಮುದಾಯ, ಕೆಳವರ್ಗದ ಅಸ್ಪೃಶ್ಯರು ಕ್ರೈಸ್ತ ವರ್ಗದಿಂದ ನಿರ್ಲಿಪ್ತರಾಗಿದ್ದು ಕೆಳವರ್ಗದವರ ಆಶೆ ಆಕಾಂಕ್ಷೆ, ನೋವು, ತೊಳಲಾಟ, ಯಾತನೆಗಳಿಂದ ದೂರ ಇದ್ದಾರೆ. ಕಾರಣ ಅವರ ಆಕಾಂಕ್ಷೆಗಳನ್ನು ಕುರಿತು ಆಲೋಚಿಸುವುದಿಲ್ಲ. ಕಾರಣ ಅಸ್ಪೃಶ್ಯ ಕ್ರೈಸ್ತ ಸಮುದಾಯಕ್ಕೆ ನಾಯಕರೇ ಇಲ್ಲ. ಹೀಗಾಗಿ ತಮ್ಮ ಮೇಲಿನ ಅನ್ಯಾಯಗಳನ್ನು ಸರಿಪಡಿಸಲು ಅಗತ್ಯವಾದ ಜನಸಂಘಟನೆ ಮಾಡಲು ಅವರು ಅಸಮರ್ಥರಾಗಿದ್ದಾರೆ.

ಅಸ್ಪೃಶ್ಯ ಕ್ರೈಸ್ತ ಮತೀಯರಲ್ಲಿ ಕ್ರಿಯಾಶೀಲತೆ ಯಾಕಿಲ್ಲ ಎಂಬುದಕ್ಕೆ ಎರಡನೆಯ ಕಾರಣ, ಮತಾಂತರಿಗಳ ಮಾನಸಿಕ ಸ್ಥಿತಿಯಲ್ಲಿಯೇ ಇರುವ ದೋಷಗಳು. ಅಸ್ಪೃಶ್ಯ ಕ್ರೈಸ್ತ ಮತೀಯರಲ್ಲಿ ತಮ್ಮನ್ನು ಬಿಗಿದ ಸಂಕೋಲೆಗಳನ್ನು ಕಿತ್ತೆಸೆಯುವ ಯಾವುದೇ ಬಗೆಯ ಪ್ರೇರಣೆಯ ಅಭಾವ ಅವರ ಮಾನಸಿಕ ಧೋರಣೆಯ

ವಿಶೇಷ ಲಕ್ಷಣವಾಗಿದೆ. ಅಸ್ಪೃಶ್ಯ ಕ್ರೈಸ್ತರಲ್ಲಿ ಯಾವುದೇ ಬಗೆಯ ಪ್ರೇರಣೆಯ ಅಭಾವಕ್ಕೆ ಕಾರಣವೇನು? ನನ್ನ ದೃಷ್ಟಿಯಲ್ಲಿ ಅದಕ್ಕೆ ಮತ್ತೆ ಎರಡು ಕಾರಣಗಳಿವೆ. ಒಂದು ಒಬ್ಬ ಅಸ್ಪೃಶ್ಯ ಕ್ರೈಸ್ತ ಮತಕ್ಕೆ ಬರುವ ಮೊದಲಿನ ಅವನ ನಡವಳಿಕೆಗಳು. ಒಬ್ಬ ಅಸ್ಪೃಶ್ಯ, ಇಲ್ಲಿ ಕೆಲವು ಲಾಭಗಳಿಗಾಗಿ ಕ್ರೈಸ್ತ ಮತಕ್ಕೆ ಸೇರುತ್ತಾನೆ; ಇಲ್ಲವೇ ಬೈಬಲ್ ಸುವಾರ್ತೆಗಳ ಬೋಧೆಗಳನ್ನು ಆತ ಬಹುವಾಗಿ ಮೆಚ್ಚಿಕೊಂಡಿದ್ದಾನೆ ಎನ್ನುವುದಕ್ಕಾಗಿ. ಆದರೆ ಹಿಂದೂ ಧರ್ಮದ ಬೋಧೆಗಳಿಗೆ ಬೇಸತ್ತು, ಅವುಗಳಿಂದ ಅತೃಪ್ತನಾಗಿ, ಒಬ್ಬ ಅಸ್ಪೃಶ್ಯ, ಕ್ರೈಸ್ತ ಮತಕ್ಕೆ ಸೇರುವುದು ತುಂಬ ವಿರಳ. ಹೀಗಾಗಿ ಕ್ರೈಸ್ತ ಧರ್ಮ ಅವನ ಹಳೆಯ ಧರ್ಮಕ್ಕೆ ಕೇವಲ ಒಂದು ಅನುಬಂಧ ಮಾತ್ರವಾಗುತ್ತದೆ. ಅದು ಅವನ ಹಳೆಯ ಧರ್ಮಕ್ಕೆ ಪ್ರತಿನಿಧಾನವಾಗುವುದಿಲ್ಲ. ಅವನು ಎರಡರಲ್ಲು ವಿಶ್ವಾಸವಿಟ್ಟುಕೊಂಡು, ಪ್ರತಿಯೊಂದನ್ನೂ ಸಂದರ್ಭಕ್ಕೆ ತಕ್ಕಂತೆ ಆಚರಿಸುತ್ತಾನೆ. ಅವನಲ್ಲಿ ಪ್ರೇರಣೆಯ ಅಭಾವದ ಎರಡನೆಯ ಕಾರಣ – ಬಹುಶಃ ನನಗೆ ಸಂದೇಹ – ಕ್ರೈಸ್ತ ಚರ್ಚ್‌ಗಳ ಬೋಧೆ. ಮಾನವನ ಪತನಕ್ಕೆ ಅವನ ಮೂಲ ಪಾಪಗಳು ಕಾರಣ ಎಂದು ಚರ್ಚ್ ಬೋಧಿಸುತ್ತದೆ ಮತ್ತು ಕ್ರೈಸ್ತ ಮತದಲ್ಲಿ ಎಲ್ಲ ಪಾಪಗಳನ್ನು ಕ್ಷಮಿಸುವ ಭರವಸೆ ನೀಡಲಾಗಿರುವುದರಿಂದ, ಒಬ್ಬ ವ್ಯಕ್ತಿ ಕ್ರೈಸ್ತ ಮತಕ್ಕೆ ಸೇರಲೇಬೇಕಾಗುತ್ತದೆ. ಈ ತತ್ವದ ಧರ್ಮಶಾಸ್ತ್ರೀಯ ಮತ್ತು ಸುವಾರ್ತಾ ಬೋಧೆಯ ಆಧಾರಗಳು ಏನೇ ಇರಲಿ, ಸಾಮಾಜಿಕ ದೃಷ್ಟಿಯಿಂದ ಇದು ತುಂಬ ವಿಪತ್ಕಾರಿ ಸಿದ್ಧಾಂತ. ಮಾನವ ಪತನಕ್ಕೆ ಅವನ ಅಸಮತೋಲ ಪರಿಸರ ಕಾರಣವೇ ಹೊರತು ಅವನ ಪಾಪಗಳಲ್ಲ ಎಂದು ಸಾರುವ ಸಮಾಜ ಶಾಸ್ತ್ರಜ್ಞರಿಗೆ, ಕ್ರೈಸ್ತ ಬೋಧೆ ಒಂದು ನೇರ ಆಹ್ವಾನ. ಸಮಾಜಶಾಸ್ತ್ರೀಯ ದೃಷ್ಟಿ ಸರಿಯಾದ ದೃಷ್ಟಿಯಾಗಿದ್ದು ಕ್ರೈಸ್ತ ತತ್ತ್ವ ಕೇವಲ ತಪ್ಪುದಾರಿಗೆ ಕರೆದೊಯ್ಯುವಂಥದ್ದಾಗಿದೆ. ಅದು ಅವನನ್ನು ತಪ್ಪಾದ ಪೂರ್ವಭಾವಿ ಪ್ರಯತ್ನದಲ್ಲಿ ತೊಡಗಿಸುತ್ತದೆ. ಇದೇ ಅಸ್ಪೃಶ್ಯ ಕ್ರೈಸ್ತರ ಪಾಡು. ತನ್ನ ಅವನತಿಗೆ ತನ್ನ ಸುತ್ತಮುತ್ತಣ, ಕೆಟ್ಟ ಸಾಮಾಜಿಕ ಮತ್ತು ಧಾರ್ಮಿಕ ಪರಿಸರವೇ ಕಾರಣ, ಮತ್ತು ತನ್ನ ಸುಧಾರಣೆಗಾಗಿ ಅವನು ಪರಿಸರದ ಮೇಲೆ ದಾಳಿಮಾಡಬೇಕು ಎಂದು ಬೋಧಿಸುವುದನ್ನು ಬಿಟ್ಟು, ಮಾನವನ ಅವನತಿಗೆ ಅವನ ಪಾಪಗಳೇ ಕಾರಣ ಎಂದು ಬೋಧಿಸುತ್ತವೆ. ಇದರ ಫಲವಾಗಿ ಅಸ್ಪೃಶ್ಯ ಮತಾಂತರಿಯು, ತನ್ನೆಲ್ಲ ಶಕ್ತಿಗಳಿಂದ ಪರಿಸರ ಗೆಲ್ಲುವ ಯತ್ನ ಮಾಡುವ ಬದಲು, ತನ್ನ ಹಿಂದಿನ ಪೂರ್ವಜರು (ಆದಮ್) ಮಾಡಿದ ಪಾಪಗಳು – ತಾನು ಮಾಡದೆ ಇದ್ದರೂ – ತನ್ನ ಅವನತಿಗೆ ಕಾರಣವಾಗಿರುವುದರಿಂದ ನನ್ನ ಹೋರಾಟಕ್ಕೆ ಯಾವ ಪ್ರಯೋಜನವೂ ಇಲ್ಲ ಎನ್ನುವ ನಂಬಿಕೆಯಿಂದ ತೃಪ್ತನಾಗುತ್ತಾನೆ. ಹಿಂದೂ ಆಗಿದ್ದಾಗ ಕರ್ಮ, ಅವನ ಅವನತಿಗೆ ಕಾರಣವಾಗಿತ್ತು. ಕ್ರೈಸ್ತ ಧರ್ಮ ಸ್ವೀಕರಿಸಿದ ಬಳಿಕ ತನ್ನ ಪತನಕ್ಕೆ ತನ್ನ ಪೂರ್ವಜರ ಪಾಪಗಳು ಕಾರಣ ಎಂದು ತಿಳಿದುಕೊಳ್ಳುತ್ತಾನೆ. ಯಾವುದೇ ಸ್ಥಿತಿಯಲ್ಲಿಯೂ ಅವನಿಗೆ ಬಿಡುಗಡೆಯಿಲ್ಲ. ಮತಾಂತರ ಎನ್ನುವುದು ಹೊಸ ಜೀವನದ ಹುಟ್ಟೋ ಅಥವಾ ಹಳೆಯದರ ಖಂಡನೆಯೋ? ಎಂದು ಯಾರಾದರೂ ಕೇಳಬಹುದಾಗಿದೆ.

## VI

ಭಾರತದಲ್ಲಿ ಭಾರತೀಯ ಕ್ರೈಸ್ತ ಸಮುದಾಯ ಲೆಕ್ಕಕ್ಕಿದೆಯೇ? ದೇಶದ ಸಮಸ್ಯೆಗಳನ್ನು ನಿರ್ಣಯಿಸುವಲ್ಲಿ ಅದರ ಪ್ರಭಾವ ಮಹತ್ವಗಳು ಎಷ್ಟು? ಸಮಾಜ ಮತ್ತು ದೇಶ ಎರಡು ನೆಲೆಯಲ್ಲೂ ಅದರ ಮಹತ್ವ ಪ್ರಭಾವಗಳು ಇರಬೇಕಿತ್ತು. ಭಾರತದಲ್ಲಿ ಅದು ನಿಸ್ಸಂದೇಹವಾಗಿ ಅತಿ ಸುಶಿಕ್ಷಿತ, ಬುದ್ಧಿವಂತ ಸಮುದಾಯ. ಭಾರತದ ಇತರ ಯಾವುದೇ ಸಮುದಾಯಗಳಿಗಿಂತ ಭಾರತೀಯ ಕ್ರೈಸ್ತ ಸಮುದಾಯದ ಸಾಕ್ಷರತೆಯ ಪ್ರತಿಶತ ಪ್ರಮಾಣ ಅಧಿಕವಾಗಿದೆ. ಇಷ್ಟೇ ಅಲ್ಲ, ವಿಶ್ವವಿದ್ಯಾಲಯ ಪದವೀಧರರು, ವೈದ್ಯರು, ನ್ಯಾಯವಾದಿಗಳು ಇತ್ಯಾದಿ ಕೂಡ ಇತರ ಅತಿ ಉಚ್ಚವರ್ಗದ ಸಮುದಾಯಕ್ಕಿಂತ ಎಷ್ಟೋ ಪಟ್ಟು ಹೆಚ್ಚಿದ್ದಾರೆ. ಬರೀ

ಪುರುಷರಷ್ಟೇ ಅಲ್ಲ ಮಹಿಳೆಯರೂ ಸುಶಿಕ್ಷಿತರಾಗಿದ್ದಾರೆ. ಕ್ರೈಸ್ತ ಮತೀಯರು ಇಷ್ಟೆಲ್ಲ ವಿದ್ಯಾವಂತರಾಗಿದ್ದರೂ ಭಾರತಕ್ಕೆ ಸಂಬಂಧಿಸಿದ ವಿಚಾರ ಸಂಗತಿಗಳ ದೃಷ್ಟಿಯಿಂದ ಅವರು ಯಾವ ಲೆಕ್ಕಕ್ಕೂ ಇಲ್ಲ. ಈ ವಿಷಯವಾಗಿ ಒಂದಷ್ಟು ಭಿನ್ನಾಭಿಪ್ರಾಯಗಳಿರಬಹುದು. ಆದರೆ ನನ್ನ ಅತಿ ನಿಕಟ ಮತ್ತು ನಿಷ್ಪಕ್ಷಪಾತ ಅಧ್ಯಯನದ ಬಳಿಕ ನಾನು ಈ ತೀರ್ಮಾನಗಳಿಗೆ ಬರಲು ಸಾಧ್ಯವಾಗಿದೆ. ನನ್ನ ಅಭಿಪ್ರಾಯಗಳ ವಿರೋಧಿ, ನಾನು ತಪ್ಪು ಭಾವಿಸಿದ್ದೇನೆ ಅಥವಾ ತಪ್ಪಾಗಿ ನಿರೂಪಿಸಿದ್ದೇನೆ ಎಂದು ಹೇಳಬಹುದು. ಆದರೆ ಈ ನನ್ನ ಧೋರಣೆ ಮತ್ತು ವಿಷಾದಗಳಲ್ಲಿ ಭಾಗಿಗಳಾಗುವ ಕೆಲವು ಭಾರತೀಯ ಕ್ರಿಶ್ಚಿಯನ್ ಜನರಿದ್ದಾರೆ ಎಂದು ನಾನು ಸಮಾಧಾನಪಟ್ಟುಕೊಳ್ಳುತ್ತೇನೆ. ಯಂಗ್ ಇಂಡಿಯಾದ ಎರಡು ಪತ್ರಗಳನ್ನು ಇಲ್ಲಿ ಎತ್ತಿಕೊಳ್ಳುತ್ತೇನೆ : ಮೊದಲನೆಯದು ಗಾಂಧೀಜಿಗೆ ಒಬ್ಬ ಭಾರತೀಯ ಕ್ರೈಸ್ತ ಮತೀಯ ಬರೆದದ್ದು. ಅದು ಯಂಗ್ ಇಂಡಿಯಾ ಪತ್ರಿಕೆಯ ಆಗಸ್ಟ್ ೨೫, ೧೯೨೧ರ ಸಂಚಿಕೆಯಲ್ಲಿ ಪ್ರಕಟವಾದದ್ದು. ಆತ ಬರೆದದ್ದು ಹೀಗೆ : ನಿಮ್ಮ ನಮ್ಮನ್ನು, ಅಂದರೆ ಭಾರತೀಯ ಕ್ರೈಸ್ತ ಜನರನ್ನು ಭಾರತೀಯ ಜನತೆಯೆಂದು ಪರಿಗಣಿಸದಿರುವುದನ್ನು ಕಂಡು ನನಗೆ ತುಂಬ ವಿಷಾದವಾಯಿತು. ಅನೇಕ ಸಲ ನಾನು ಗಮನಿಸಿದ್ದೇನೆ, ನೀವು ಯಂಗ್ ಇಂಡಿಯಾ ಪತ್ರಿಕೆಯಲ್ಲಿ ಮುಸಲ್ಮಾನರು, ಹಿಂದೂಗಳು, ಸಿಖ್ ಮುಂತಾದವರ ಪ್ರಸ್ತಾಪ ಮಾಡುತ್ತೀರಿ. ಆದರೆ ಅದರಲ್ಲಿ ಕ್ರೈಸ್ತ ಮತೀಯರ ಉಲ್ಲೇಖವೇ ಇರುವುದಿಲ್ಲ. "ನಾವು ಭಾರತೀಯ ಕ್ರೈಸ್ತ ಮತೀಯರ ಕೂಡ ಭಾರತದ ಜನತೆಯೇ. ಮತ್ತು ಭಾರತದ ಸುದ್ದಿ ಸಂಗತಿಗಳಲ್ಲಿ ನಾವು ಕೂಡ (ವಿಶೇಷ) ಅಧಿಕ ಆಸಕ್ತಿ ತಾಳಿದವರಾಗಿದ್ದೇವೆ ಎನ್ನುವುದನ್ನು ನೀವು ನಂಬಬೇಕು ಎಂದು ಬಯಸುತ್ತೇನೆ."

ಈ ಪತ್ರಕ್ಕೆ ಗಾಂಧೀಜಿ ಬರೆದ ಟಿಪ್ಪಣಿ ಕೆಳಗಿನಂತಿದೆ :

"ಈ ಬಾತ್ಮೀದಾರ ಮತ್ತು ಇತರ ಎಲ್ಲ ಕ್ರೈಸ್ತ ಜನರಿಗೆ ನಾನು ಭರವಸೆ ಕೊಡುವುದೇನೆಂದರೆ, ಅಸಹಕಾರ ಯಾವುದೇ ಜಾತಿ, ಜನಾಂಗಗಳಿಗೆ ಗೌರವಯುತವಾದುದಲ್ಲ. ಅದು ಎಲ್ಲರನ್ನೂ ಆಮಂತ್ರಿಸುತ್ತದೆ, ತನ್ನಲ್ಲಿ ಎಲ್ಲರಿಗೂ ಪ್ರವೇಶ ನೀಡುತ್ತದೆ. ತಿಲಕ್ ಸ್ವರಾಜ್ಯ ಫಂಡಿಗೆ ಅನೇಕ ಭಾರತೀಯ ಕ್ರೈಸ್ತರು ಕಾಣಿಕೆ ಚಂದಾ ನೀಡಿದ್ದಾರೆ. ಕೆಲವು ಭಾರತೀಯ ಕ್ರೈಸ್ತರು ಅಸಹಕಾರ ತೋರಿಸುವುದರಲ್ಲಿ ಮುಂಚೂಣಿಯಲ್ಲಿದ್ದಾರೆ. ಇಲ್ಲಿಯವರೆಗೂ ಹಿಂದೂ ಮುಸಲ್ಮಾನರು ಪರಸ್ಪರ ವೈರಿಗಳೆಂದು ತಮ್ಮನ್ನು ತಾವೇ ಪರಿಗಣಿಸಿದ್ದರಿಂದ ಸದಾ ಅವರ ಪ್ರಸ್ತಾಪ ಬರುತ್ತದೆ. ಅದೇ ರೀತಿ, ಈ ಅಂಕಣಗಳಲ್ಲಿ ಯಾವುದಾದರೂ ಜನಾಂಗದ ವಿಶೇಷ ಪ್ರಸ್ತಾಪವಿದ್ದರೆ ಅದಕ್ಕೊಂದು ಕಾರಣವಿರುತ್ತದೆ."

ಅನೇಕ ಕ್ರೈಸ್ತರು ತಿಲಕ್ ಸ್ವರಾಜ್ಯ ಫಂಡಿಗೆ ಕಾಣಿಕೆ ನೀಡಿದ್ದಾರೋ ಇಲ್ಲವೋ ಮತ್ತು ಗಣ್ಯ ಕ್ರೈಸ್ತರು ಅಸಹಕಾರ ತೋರುವಲ್ಲಿ ಮುಂಚೂಣಿಯಲ್ಲಿದ್ದಾರೆನ್ನುವುದು ಎಷ್ಟರ ಮಟ್ಟಿಗೆ ನಿಜ ಇತ್ಯಾದಿ ಒಂದು ಕಡೆ ಇರಲಿ; ಆ ಬಾತ್ಮೀದಾರನ ಪತ್ರಕ್ಕೆ ಗಾಂಧೀಜಿ ಉತ್ತರ ತಪ್ಪುದಾರಿಗೆಳೆಯುವಂತೆ ಇಲ್ಲದಿದ್ದರೂ, ಸರಿಯಾದ ಉತ್ತರ ಅಲ್ಲ. ಹಿಂದೂಗಳ ವೈರಿಗಳೆಂದು ತಿಳಿದ ಮುಸಲ್ಮಾನರನ್ನು ಪ್ರಸ್ತಾಪಿಸಿದ್ದರೆ, ಸಿಖ್ಖರನ್ನೇಕೆ ಪ್ರಸ್ತಾಪಿಸಿದ್ದು? ಅವರಂತೂ ಖಂಡಿತವಾಗಿ ಹಿಂದೂಗಳನ್ನು ತಮ್ಮ ವೈರಿಗಳೆಂದು ಭಾವಿಸುತ್ತಿಲ್ಲ. ಆದರೂ ಅವರ ವಿಷಯ ಹೇಳಿದ್ದೇಕೆ? ಅಷ್ಟೇ ಅಲ್ಲ, ಅವರದು ಮುಖ್ಯ ಗುಂಪು; ಅವರ ಸಕ್ರಿಯ ಸಹಕಾರವಿಲ್ಲದೆ ಸ್ವರಾಜ್ಯ ಸಂಗ್ರಾಮವನ್ನು ಮುಂದುವರೆಸುವುದು ಸಾಧ್ಯವಿಲ್ಲ ಎಂದು ಕೂಡ ವಿವರಿಸಲಾಗಿದೆ. ಮತ್ತು ಸಿಖ್ಖರು ಬೇಷರತ್ತಾಗಿ ಸಹಕಾರ ನೀಡಿದವರಲ್ಲ ಎನ್ನುವುದನ್ನು ಮರೆಯುವಂತಿಲ್ಲ. ಸಿಖ್ಖರು ತಮ್ಮ ಸಹಕಾರಕ್ಕಾಗಿ

೧. 'ಯಂಗ್ ಇಂಡಿಯಾ', ಆಗಸ್ಟ್ ೪, ೧೯೨೧.

ಎರಡು ಷರತ್ತು ಮುಂದೆ ಮಾಡಿದ್ದರೆನ್ನುವುದು ಎಲ್ಲರಿಗೂ ಗೊತ್ತು.[೧] ಭಾರತದ ರಾಷ್ಟ್ರ ಧ್ವಜ ವಿನ್ಯಾಸ ರೂಪಿಸುವಾಗ, ಅದರಲ್ಲಿ ತಮ್ಮದೆಂದು ಹೇಳಿಕೊಂಡ ಕಪ್ಪುವರ್ಣವನ್ನು ಅಳವಡಿಸಬೇಕು ಎನ್ನುವುದು ಮೊದಲ ಷರತ್ತು. ಕಾಂಗ್ರೆಸ್ ಶಾಸನದಲ್ಲಿ ತಮಗೆ ಪ್ರಾತಿನಿಧ್ಯ ದೊರೆಯುವ ಬಗ್ಗೆ ನಿಶ್ಚಿತ ಭರವಸೆ ನೀಡಬೇಕು ಎನ್ನುವುದು ಎರಡನೆಯದು. ಹೀಗೆ ಸಿಖ್ಖರ ಪ್ರಸ್ತಾಪ ಮಾಡಿದ್ದಷ್ಟೇ ಅಲ್ಲ. ಜೊತೆಗೆ ಅವರನ್ನು ಸಂತೈಸಲಾಯಿತು. ಭಾರತೀಯ ಕ್ರೈಸ್ತರ ಪ್ರಸ್ತಾಪವಿಲ್ಲದ್ದಕ್ಕೆ ಎರಡು ಸಮಜಾಯಿಷಿಗಳು ಮಾತ್ರ ಇವೆ. ಇಲ್ಲ, ಅವರು ಕಾಂಗ್ರೆಸ್ ಕೈಕೊಂಡ ಸ್ವರಾಜ್ಯ ಸಂಗ್ರಾಮದಲ್ಲಿ ಅವರ ಜೊತೆಗಿದ್ದರು ಅಥವಾ ಪ್ರಸ್ತಾಪ ಮಾಡಬಹುದಾದಷ್ಟು ಅವರು ಮುಖ್ಯವಾಗಿರಲಿಲ್ಲ. ಕಾಂಗ್ರೆಸ್‌ನ ಸ್ವರಾಜ್ಯ ಹೋರಾಟದಲ್ಲಿ ಅವರು ಭಾಗಿಗಳಾಗಿರಲಿಲ್ಲ ಎಂದು ಹೇಳಲಾಗದು. 'ಇಂಡಿಯನ್ ಸೋಶಿಯಲ್ ರಿಫಾರ್ಮರ್' ಸಂಪಾದಕನಿಗೆ ಬರೆಯಲಾದ ಮತ್ತು ಯಂಗ್ ಇಂಡಿಯಾ ಪತ್ರಿಕೆಯಲ್ಲಿ ಪುನಃ ಮುದ್ರಿಸಲಾದ ಭಾರತೀಯ ಕ್ರೈಸ್ತನಿಂದ ಬರೆಯಲ್ಪಟ್ಟ ಪತ್ರ ಸ್ವರಾಜ್ಯ ಕುರಿತ ಅವರ ಧೋರಣೆಯನ್ನು ಸ್ಪಷ್ಟಪಡಿಸುತ್ತದೆ.

ಕ್ರೈಸ್ತ ಯುಗದ ೨ನೆಯ ಶತಮಾನದಿಂದಲೇ ಭಾರತದಲ್ಲಿ ಕ್ರೈಸ್ತರು ನೆಲೆನಿಂತ ಬಗ್ಗೆ ನಮ್ಮಲ್ಲಿ ಸ್ಪಷ್ಟವಾದ ದಾಖಲೆಗಳಿವೆ. ಕಾರಣ ಇಸ್ಲಾಮ್ ಹುಟ್ಟುವ ಪೂರ್ವದಲ್ಲಿ ಎಷ್ಟೋ ಶತಮಾನಗಳಿಂದ ಭಾರತದಲ್ಲಿ ತಾವು ಇದ್ದುದಾಗಿ ಕ್ರೈಸ್ತ ಮತೀಯರು ಹಕ್ಕು ಸಾಧಿಸಬಹುದು. ಪರಿಸ್ಥಿತಿ ಹೀಗಿರುವಾಗ, ಭಾರತೀಯರ ಕ್ರೈಸ್ತರು ಇದೇ ಭೂಮಿಯಲ್ಲಿ ಹುಟ್ಟಿ ಬೆಳೆದುದರಿಂದ ಶುದ್ಧ ಭಾರತೀಯ ಆನುವಂಶಿಕತೆ ಹೊಂದಿದ್ದು, ತಮ್ಮ ಧಾರ್ಮಿಕ ಧೋರಣೆಗಳಲ್ಲಿ ಭಿನ್ನತೆಯಿದ್ದಿರಬಹುದಾದರೂ ಅದರ ಸಂಸ್ಕೃತಿ, ಚರಿತ್ರೆ ಇತ್ಯಾದಿಗಳನ್ನು ರಕ್ತಗತ ಮಾಡಿಕೊಂಡಿಲ್ಲ ಎಂದು ಹೇಗೆ ಹೇಳಲು ಸಾಧ್ಯ? ತನ್ನ ಜೊತೆಗಿರುವ ಹಿಂದೂ ಅಥವಾ ಮುಸಲ್ಮಾನ ನಾಗರಿಕನಂತೆ ತನ್ನ ಮಾತೃಭೂಮಿಯ ಸಂಕೀರ್ಣ ಸಾಂಸ್ಕೃತಿಕ, ಸಾಮಾಜಿಕ, ರಾಜಕೀಯ ಸ್ಥಿತಿಗತಿಗಳನ್ನು ಗಮನಿಸಿಲ್ಲ; ಅವುಗಳ ಬೆಳವಣಿಗೆಗಳಿಗಾಗಿ ಆಶಿಸಿಲ್ಲ ಎಂದು ಹೇಳುವುದು ಸಾಧ್ಯವೇ? 'ವಂದೇ ಮಾತರಮ್' ರಾಷ್ಟ್ರೀಯ ಸ್ತರದಲ್ಲಿ ಕೇವಲ ಹಿಂದೂ ಮತ್ತು ಮುಸಲ್ಮಾನರಿಗೆ ಸೀಮಿತಗೊಂಡು, ಉಕ್ಕಿದ್ದು ಯಾಕೆ? ಮತ್ತು ಈ ವಿಷಯದಲ್ಲಿ ಭಾರತೀಯ ಕ್ರಿಸ್ತೀಯರನ್ನು ಅಲಕ್ಷಿಸಿದ್ದೇಕೆ?

ಭಾರತೀಯ ಕ್ರಿಸ್ತೀಯರ ಆಶೆ ಆಕಾಂಕ್ಷೆಗಳ ಬಗ್ಗೆ ಹಿಂದೂ ಮತ್ತು ಮುಸಲ್ಮಾನರು ಒಂದು ರೀತಿಯ ಅಪನಂಬಿಕೆಯ ಮನೋಭಾವ ಯಾಕೆ ತಾಳುತ್ತಾರೆ? ಮತ್ತು ನಿರಂತರ ಬೆಳೆಯುತ್ತಿರುವ ಭಾರತೀಯ ರಾಷ್ಟ್ರೀಯತೆಯನ್ನು ಕಂಡು ಭಾರತೀಯ ಕ್ರಿಸ್ತೀಯ ಕುಬ್ಜನಾಗುವುದು ಅಥವಾ ತನ್ನ ಭವಿಷ್ಯದ ಸುರಕ್ಷತೆಯ ದೃಷ್ಟಿಯಿಂದ ಅಸಹಾಯಕನಾಗಿ ಸಂದೇಹ ತಾಳುವುದು ಯಾಕೆ?[೧]

ಜಾರ್ಜ್ ಜೋಸೆಫ್, ಕೆ. ಟಿ. ಪಾಲ್ ಮತ್ತು ಡಾ. ಎಸ್. ಕೆ. ದತ್ತಾ ಇವರ ಮಾತು ಬಿಡಿ. ಭಾರತೀಯ ಕ್ರಿಸ್ತೀಯ ಸಮುದಾಯ ಸ್ವರಾಜ್ಯ ಸಂಗ್ರಾಮದಲ್ಲಿ ಸಕ್ರಿಯವಾಗಿ ಭಾಗವಹಿಸಲಿಲ್ಲ. ಅಷ್ಟೇ ಅಲ್ಲ, ಅವರು ಅದರ ಬಗ್ಗೆ ಭಯಭೀತರಾಗಿದ್ದರು. ಈ ಪತ್ರ ಭಾರತೀಯ ಕ್ರಿಸ್ತೀಯರ ನಿಜವಾದ ಧೋರಣೆಯನ್ನು ವ್ಯಕ್ತಪಡಿಸುತ್ತದೆ. ಆದ್ದರಿಂದ ಹಿಂದೂ ಮತ್ತು ಮುಸಲ್ಮಾನ ಮತ್ತು ಸಿಖ್ಖರ ಜೊತೆಗೆ ಕ್ರೈಸ್ತ ಮತೀಯರ ವಿಷಯ ಯಾಕೆ ಪ್ರಸ್ತಾವನೆಗೊಂಡಿಲ್ಲ ಎನ್ನುವುದು ಸ್ಪಷ್ಟ. ಭಾರತೀಯ ಕ್ರಿಸ್ತೀಯರ ಪ್ರಸ್ತಾಪವಾಗದಿರಲು ಸ್ವರಾಜ್ಯ ಹೋರಾಟದ ಮಿತ್ರತ್ವ ಇತ್ಯಾದಿ ಕಾರಣವಲ್ಲ. ಅವರು ಗಣನೆಗೆ ತೆಗೆದುಕೊಳ್ಳುವಷ್ಟು ಮಹತ್ವ

---

೧. 'ಯಂಗ್ ಇಂಡಿಯಾ', ೨೧ ಡಿಸೆಂಬರ್, ೧೯೨೨.

ಪಡೆದಿರಲಿಲ್ಲ ಎನ್ನುವುದು ಅದಕ್ಕೆ ಕಾರಣ. ಒಂದು, ಇಂಥ ಬುದ್ಧಿವಂತ ಸಮುದಾಯಕ್ಕೆ ದೇಶದ ಆಗುಹೋಗುಗಳ ವಿಷಯದಲ್ಲಿ ಮಹತ್ವವಿಲ್ಲ. ಪ್ರಭಾವವಿಲ್ಲ ಎನ್ನುವುದು ದುಃಖದ ಸಂಗತಿ.

ಈ ಸ್ಥಿತಿಗೆ ಕಾರಣಗಳೇನಿರಬಹುದು? ಅವರು ಅಲ್ಪಸಂಖ್ಯಾತರಾಗಿರುವುದೇ ಅದಕ್ಕೆ ಕಾರಣ ಎನ್ನುವುದು ಸುಸ್ಪಷ್ಟ. ಸಾರ್ವಜನಿಕ ಜೀವನದಲ್ಲಿ ಮುಸಲ್ಮಾನರು ಅಥವಾ ಹಿಂದುಳಿದ ವರ್ಗಗಳು ತಮ್ಮ ಸಂಖ್ಯಾಬಲದಿಂದ ತಮ್ಮ ಶಕ್ತಿ ಮತ್ತು ಅಸ್ತಿತ್ವವನ್ನು ತೋರಿಸಿಕೊಳ್ಳುವ ಹಾಗೆ ಇವರು ತಮ್ಮ ತೂಕ ತೋರಿಸುವಷ್ಟು ಸಂಖ್ಯಾಬಲ ಹೊಂದಿಲ್ಲ. ಆದರೆ ಅವರನ್ನು ಪೂರ್ಣ ಉಪೇಕ್ಷಿಸಲಾಗದು. ಇದಿಷ್ಟೇ ಕಾರಣ ಅಲ್ಲ. ನನಗೆ ಎರಡು ಕಾರಣಗಳು ಹೊಳೆಯುತ್ತವೆ: ಭಾರತೀಯ ಕ್ರಿಸ್ತೀಯರು ಬದುಕುತ್ತಿರುವುದು ಆಶ್ರಿತ–ನೀರು–ನೆಲೆಗಳಲ್ಲಿ. ಏನಿದ್ದರೂ ಅವರ ಅಧಿಕ ಸಂಖ್ಯಾತರು ಧರ್ಮ ಪ್ರಚಾರಕರ ಉಡಿಯಲ್ಲಿಯೇ ಬಾಳುತ್ತಾರೆ. ಶಿಕ್ಷಣ, ವೈದ್ಯಕೀಯ ಮತ್ತು ಧಾರ್ಮಿಕ ಮತ್ತು ಇತರ ಸಣ್ಣಪುಟ್ಟ ಆವಶ್ಯಕತೆ, ಅನುಸರಣೆಗಳಿಗಾಗಿ ಅವರು ಸರಕಾರದ ಮುಖ ನೋಡುವುದಿಲ್ಲ. ಧರ್ಮ ಮಂಡಲಿಗಳತ್ತ ನೋಡುತ್ತಾರೆ. ಒಂದು ವೇಳೆ ಅವರು ಸರಕಾರವನ್ನು ಆಶ್ರಯಿಸಿದ್ದರೆ ತಮ್ಮ ಅಗತ್ಯದ. ಪೂರೈಕೆಗಳಿಗಾಗಿ ರಾಜಕೀಯ ಕಾರ್ಯ ಸಾಧನೆಗೆಂದು ತಮ್ಮೆಲ್ಲ ಶಕ್ತಿಗಳನ್ನು ಸಂಘಟಿಸುತ್ತಿದ್ದರು. ಏಕೆಂದರೆ ಈ ಬಗೆಯ ಸಂಘಟನೆಯಿಲ್ಲದೆ ಯಾವ ಸರಕಾರವೂ ಜನರ ಅವಶ್ಯಕತೆಗಳ ಪೂರೈಕೆಯ ಕಡೆಗೆ ಕಣ್ಣೆತ್ತಿ ಕೂಡ ನೋಡಲಾರದು. ಅವರು ಮುಖ್ಯ ಪ್ರವಾಹದಲ್ಲಿಲ್ಲ. ಈ ಕಾರಣದಿಂದ ಸಾರ್ವಜನಿಕ ಜೀವನದ ಕಡೆಗೆ ಲಕ್ಷ್ಯ ಕೊಡುವುದಿಲ್ಲ. ಆದ್ದರಿಂದ ಸಾರ್ವಜನಿಕ ಜೀವನದಲ್ಲಿ ಮನ್ನಣೆ ಪಡೆದಿಲ್ಲ. ಇದು ಮೊದಲನೆಯ ಕಾರಣ.

ಎರಡನೆಯ ಕಾರಣವೆಂದರೆ, ಕ್ರಿಶ್ಚಿಯನ್ ಸಮುದಾಯ, ಐಕ್ಯತೆಯಿಲ್ಲದ ಸಮುದಾಯ ಎನ್ನುವುದಕ್ಕಿಂತ ಒಂದು ಕೂಡಿಕೊಳ್ಳದ ಸಮುದಾಯ ಎನ್ನುವುದು. ಎಲ್ಲರಿಗೂ ಸಾಮಾನ್ಯವಾಗಿರುವುದೆಂದರೆ ಒಂದು ಸರ್ವಸಮಾನ ಸ್ಫೂರ್ತಿಯ ಆಕರ. ಇದೊಂದನ್ನು ಬಿಟ್ಟರೆ ಮಿಕ್ಕುಳಿದ ಎಲ್ಲ ಸಂಗತಿಗಳಲ್ಲಿಯೂ ಅವರು ಪರಸ್ಪರ ಪ್ರತ್ಯೇಕ. ಇತರ ಭಾರತೀಯರ ಹಾಗೆ ಭಾರತೀಯ ಕ್ರೈಸ್ತರು ಕೂಡ ಜನಾಂಗ, ಜಾತಿ ಭಾಷೆಗಳ ಮೇಲೆ ಗುಂಪು ಗುಂಪಾಗಿದ್ದಾರೆ. ಭಾಷೆ ಜಾತಿ ಜನಾಂಗಗಳು ಕೇವಲ ಮೇಲುನೋಟದ ವ್ಯತ್ಯಾಸಗಳಾದರೂ ಅವರ ಧರ್ಮ ಅವೆಲ್ಲವುಗಳನ್ನೂ ಒಂದುಗೂಡಿಸುವಷ್ಟು ಶಕ್ತಿಶಾಲಿಯಾಗಿಲ್ಲ. ಇದಕ್ಕೆ ಪ್ರತಿಯಾಗಿ, ಅವರ ಒಂದೇ ಒಂದು ಬೆಸುಗೆಯ ಶಕ್ತಿಯಾಗಿರುವ ಧರ್ಮ, ಬೇರೆ ಬೇರೆ ಹೆಸರುಗಳ ಮತಮಾಲಿನ್ಯದಿಂದ ಕೂಡಿದೆ. ಇದರ ಪರಿಣಾಮವಾಗಿ, ಕ್ರೈಸ್ತರಲ್ಲಿ ಐಕ್ಯತೆಯಿಲ್ಲದಂತಾಗಿ ಎಲ್ಲರಿಗೂ ಒಂದು ಸಮಾನ ಗುರಿ, ಸಮಾನ ಮನಸ್ಸು, ಮತ್ತು ಸಮಾನ ಪ್ರಯತ್ನಗಳು ಸಾಧ್ಯವಾಗಿಲ್ಲ. ತಮಿಳು ನಾಡಿನ ಕ್ರೈಸ್ತ ಮತೀಯನಿಗೆ ಪಂಜಾಬದ ಕ್ರೈಸ್ತ ಮತೀಯನಿಗಿಂತ ತಮಿಳುನಾಡಿನ ಹಿಂದೂ ಹತ್ತಿರದವನಾಗುತ್ತಾನೆ; ಮಧ್ಯಪ್ರದೇಶದ ಕ್ರೈಸ್ತನಿಗೆ ಮಹಾರಾಷ್ಟ್ರದ ಕ್ರೈಸ್ತನಿಗಿಂತ ಮಧ್ಯಪ್ರದೇಶದ ಹಿಂದೂ ಸಮೀಪದವನಾಗುತ್ತಾನೆ. ಸಂಕ್ಷಿಪ್ತದಲ್ಲಿ ಭಾರತೀಯ ಕ್ರೈಸ್ತ ಎನ್ನುವುದು ಒಂದು ಸಂಖ್ಯಾತ್ಮಕ ನುಡಿಗಟ್ಟಾಗಿದೆ. ಒಂದು ಸಮುದಾಯದ ಅಸ್ತಿತ್ವದ ಒರೆಗಲ್ಲಾದ ಎಲ್ಲರನ್ನೂ ಒಂದುಗೂಡಿಸುವ ಪ್ರಜ್ಞೆಯಿಂದ ಜಾಗೃತರಾಗಿಲ್ಲ. ನಾನು ಹೇಳಿರುವ ಕ್ರೈಸ್ತ ಮತೀಯರ ಜೀವನವನ್ನು ವಿಷಮಯಗೊಳಿಸುವ ದೌರ್ಬಲ್ಯಗಳ ವಿಷಯಗಳನ್ನು ಕುರಿತು ಭಾರತೀಯ ಕ್ರೈಸ್ತರು ಏನು ಆಲೋಚಿಸುತ್ತಾರೋ ಕಾಣೆ. ಒಂದು ಮಾತು ಸ್ಪಷ್ಟವಾಗಿ ಹೇಳುತ್ತೇನೆ: ಭಾರತೀಯ ಕ್ರೈಸ್ತರು ಹೆಚ್ಚಾಗಿ ಅಸ್ಪೃಶ್ಯ ವರ್ಗದಿಂದಲೇ ಬಂದಿರುವುದರಿಂದ ಅವರಲ್ಲಿ ನನಗೆ ವಿಶೇಷ ಆಸಕ್ತಿಯಿದೆ. ನಾನು ಈ ಮಾತು ಹೇಳಿರುವುದು ಒಬ್ಬ ಮಿತ್ರನಾಗಿ. ಅವು ಆತಂಕಕಾರಿ ಟೀಕೆಗಳಲ್ಲ. ಅವರು ಶಕ್ತಿಶಾಲಿಗಳಾಗಬೇಕೆಂದು ಅವರ ದೌರ್ಬಲ್ಯಗಳ ಕಡೆಗೆ ಅವರ ಗಮನ ಸೆಳೆದಿದ್ದೇನೆ. ಅವರ ಭವಿಷ್ಯದಲ್ಲಿ

ಅನೇಕ ವಿಪತ್ತುಗಳು ಕಾದಿರುವುದರಿಂದ ಅವರು ಶಕ್ತಿಶಾಲಿಗಳಾಗಬೇಕೆಂದು ಬಯಸುತ್ತೇನೆ. ಕ್ರೈಸ್ತ ಧರ್ಮವು, ಭಾರತೀಯ ಸಾಮಾಜಿಕ ಸಂರಚನೆಯಲ್ಲಿ ಬೇರು ಬಿಡುವ ಸಂದರ್ಭದಲ್ಲಿ ಅವರು ಗಾಂಧೀಜಿಯ ಅಪನಂಬಿಕೆಯ ಅಪರೂಪದ ತೆರೆಯನ್ನು ಗುರುತಿಸಬೇಕಾಗಿದೆ.

ಅದರ ಜೊತೆಗೆ ಭಾರತೀಯ ರಾಷ್ಟ್ರೀಯತೆಯ ರೂಪದಲ್ಲಿ ಹಬ್ಬುತ್ತಿರುವ ಹಿಂದೂ ಧರ್ಮದ ಸೈನಿಕ ಪ್ರವೃತ್ತಿಯನ್ನೂ ಕುರಿತು ಆಲೋಚಿಸಬೇಕಾಗಿದೆ. ಹಿಂದೂ ಧರ್ಮದ ಸೈನಿಕ ಪ್ರವೃತ್ತಿ, ಕ್ರೈಸ್ತರಿಗೆ, ಕ್ರೈಸ್ತ ಮತೀಯರಿಗೆ ಏನು ಮಾಡಬಲ್ಲುದು ಎನ್ನುವುದಕ್ಕೆ ಇತ್ತೀಚೆಗೆ ಬೃಂದಾವನದಲ್ಲಿ ನಡೆದ ಘಟನೆಗಳೇ ಸಾಕ್ಷಿ. ವೃತ್ತಪತ್ರಿಕೆಯ ವರದಿಗಳು ನಿಜವೆಂದಾದರೆ : ಹಿಂದೂ ಧರ್ಮದ ಒಂದು ಗುಂಪು ಸದ್ದಿಲ್ಲದೆ ಹೋಗಿ, ಬೃಂದಾವನದ ಧರ್ಮ ಮಂಡಲಿ ಕಟ್ಟಡಗಳನ್ನು ಸುಟ್ಟುಹಾಕಿ, ಮತ್ತೊಮ್ಮೆ ಕಟ್ಟಿದರೆ ಪುನಃ ಬಂದು ಸುಟ್ಟು ಹಾಕುವುದಾಗಿ ಧರ್ಮಬೋಧಕರಿಗೆ ಎಚ್ಚರಿಕೆ ಕೊಟ್ಟಿತಂತೆ. ಇದು ಒಂದು ತಪ್ಪು ಭಾವನೆಯಿಂದ ಪ್ರೇರಿತರಾದ ದೇಶಪ್ರೇಮಿಗಳ ಕೃತ್ಯವಾಗಿರಬಹುದು ಅಥವಾ ಹಿಂದೂಗಳು, ಕ್ರೈಸ್ತರು ಮತ್ತು ಕ್ರೈಸ್ತ ಧರ್ಮವನ್ನು ಹೊರದೂಡಲು ಮಾಡಿರುವ ಹೊಂಚಿನ ಒಂದು ಸಣ್ಣ ಉದಾಹರಣೆಯಾಗಿರಬಹುದು. ಇದು ನಾಳೆ ಬರುವ ದಿನಗಳ ನೆರಳೆಂದಾದರೆ, ನಾನು ಎತ್ತಿ ತೋರಿದ ದೌರ್ಬಲ್ಯಗಳನ್ನು ಕಿತ್ತುಹಾಕದ ಹೊರತು ಅವರಿಗೆ ತಮ್ಮ ಕಾರ್ಯ ಮುಂದುವರೆಸುವುದು ಹೇಗೆ ಸಾಧ್ಯ?

ಎಲ್ಲ ಭಾರತೀಯ ಕ್ರೈಸ್ತ ಮತೀಯರೂ ಆಲೋಚಿಸಲಿ?

* * * *

# ವಿಷಯಸೂಚಿ


**ಅ**

ಅಂಬರೀಷ ೨೧೯, ೨೧೯, ೨೨೦
ಅಂಬಾತಾರಾ ೨೩೪
ಅಂಬಾರಾದಾರ್ ೨೩೩
ಅಂಬಾಲ ೬೭, ೨೩೭, ೩೧೩
ಅಂಬೇಡ್ಕರ್ ೬೧, ೧೬೮, ೩೦೩, ೩೨೩, ೩೨೫, ೩೨೬, ೩೩೦, ೩೩೪, ೩೩೫, ೩೩೬, ೩೬೧, ೩೯೮, ೩೯೯
ಅಂಬ್ರಾಣಿ ೧೭೦
ಅಗರ್ಸ್ ೯೪
ಅಗಸ್ಟಸ್ ೧೩, ೧೦೯
ಅಗಸ್ಟಿನ್ ೪೧೩
ಅಗಸ್ತ್ಯ ೨೧೪, ೨೨೮
ಅಗ್ರಫಕ್ಕಾ ೨೩೦
ಅಗ್ರಬಕ್ಷ ೨೩೬
ಅಛರಜಾ ೨೩೭
ಅಛೂತ್ ೩೯, ೪೬
ಅಜಕಿಯಾಜ ೨೨೭
ಅಜನೋಟಿ ೨೯೨
ಅಜಮಲ್‌ಖಾನ್ ೩೧೨
ಅಜಿಲ್ ೧೧೪
ಅಜ್ಜಮದ್ ೨೩೪
ಅಜ್ಮೀರ್ ೧೦
ಅಟಿಂಜೆರ್ ೧೧೫
ಅಟ್ಟುಕುಳಮ್ ೧೪೨
ಅಟ್ಲಾಂಟಾ ೧೭
ಅಟ್ಲಾಂಟಿಕ್ ೯೮
ಅಡನೂರ್ ೧೪೭
ಅತ್ರಿ ೨೧೧, ೨೧೨
ಅಥರ್ವಾ ೨೩೩
ಅಥರ್ವ ೨೨೬
ಅಥೆನ್ಸ್ ೧೬, ೧೭, ೪೫೦
ಅಧುರ್ಜ ೨೩೫
ಅನ್ಸಾನೌರಾ ೨೩೫
ಅನ್ಸಾರಿ ೩೧೨, ೩೧೬
ಅಪಾಸ್ಟಲ್ಸ್ ೪೬೫
ಅಫ್ರೋಡೀಸಿಯಸ್ ೧೩
ಅಬಿ ೨೬೬
ಅಬ್ಬಾಸ್ ೩೦೧
ಅಬ್ಬಾಸ್ ತಾಯಬ್ಜಿ ೩೦೧
ಅಬ್ಬೆದುಬ್ಬೈ ೪೪೦
ಅಬ್ರಾಹ್ಮಣ ೪೭೪
ಅಭೀರ ೨೨೬, ೨೨೮, ೨೩೭
ಅಭೈಪುರ ೬೭
ಅಮೃತಸರ ೨೨೯, ೩೧೩, ೩೧೬
ಅಮೆರಿಕ ೧೬, ೧೭, ೧೮, ೬೮, ೯೬, ೯೭, ೯೯, ೧೦೧, ೧೦೨, ೧೦೪, ೧೧೦, ೧೧೩, ೧೧೭, ೧೬೧, ೧೮೩, ೨೭೧, ೩೭೩, ೩೭೭, ೪೨೩, ೪೩೮, ೪೭೬
ಅಮೆರಿಕನ್ ೧೧೭
ಅಯೋಧ್ಯೆಯ ೨೧೯
ಅಯ್ಯಂಗಾರ್ ೧೩೧
ಅರಚಿ ೧೬೩
ಅರಬ ೯೪, ೯೬, ೪೫೬

ಅರಿಸ್ಟಾಟಲ್ ೩೧೭, ೪೩೩, ೪೫೦
ಅರಿಸ್ಟೈಡಸ್ ೪೫೦
ಅರುಂಧತ್ಯ ೪೨೮
ಅರ್ಜುನ ೨೨೨, ೨೨೩
ಅರ್ಟೆಮಾನ್ ೪೫೦
ಅಲ್ ೪೨೩, ೪೫೬
ಅಲಹಾಬಾದ್ ೫೬, ೭೦, ೩೧೨, ೩೧೫
ಅಲಿಫರ್ ೫೭, ೬೪
ಅಲಿಯಾಪೊಸ್ ೧೬೨
ಅಲಿಯೆ ೨೩೧
ಅಲೆಗ್ಸಾಂಡ್ರಿಯಾ ೪೩೮, ೪೩೯, ೪೫೦
ಅಲೆಪ್ಪೀ ೪೦೨
ಅಲ್ಫಜಲ್ ೩೯
ಅಲ್‌ಬೆರೂನಿ ೧೭೫, ೧೭೭, ೧೮೩
ಅಲ್ಸೇಸ್ ೪
ಅಲ್‌ಸ್ಟರ್ ೩೦೧
ಅವರ್ಣೀಯ ೧೮೯, ೧೯೦, ೧೯೧, ೧೯೨, ೨೮೯
ಅಸ್ಪೃಶ್ಯ ೮, ೧೯, ೨೫, ೨೭, ೨೯, ೩೦, ೩೬, ೪೦, ೪೩, ೫೨, ೬೫, ೬೬, ೭೪, ೯೧, ೧೦೬, ೧೦೭, ೧೧೦, ೧೧೪, ೧೧೮, ೧೨೮, ೧೩೦, ೧೩೧, ೧೩೮, ೧೫೫, ೧೬೬, ೧೭೦, ೧೭೧, ೧೭೨, ೨೧೦, ೨೪೯, ೨೫೦, ೨೫೧, ೨೫೩, ೨೫೫, ೨೫೬, ೨೫೭, ೨೫೮, ೨೬೨, ೨೬೬, ೨೬೭, ೨೭೧, ೨೭೬, ೨೭೭, ೩೧೭, ೩೧೯, ೩೨೪, ೩೩೪, ೩೫೨, ೩೫೭, ೩೫೯, ೩೬೫, ೩೭೦, ೩೭೩, ೩೮೦
ಅಸ್ಪೃಶ್ಯತೆ ೧೧, ೧೯, ೨೦, ೨೨, ೧೨೦, ೧೨೧, ೧೪೮, ೧೭೨, ೨೪೧, ೨೫೦, ೨೫೪, ೩೦೫, ೩೨೭, ೩೨೮, ೩೭೯, ೩೯೧, ೪೦೬
ಅಸ್ಸಾಂ ೧೦, ೧೫೬, ೨೪೮, ೩೫೦
ಅಸ್ಸೀರಿಯಾ ೧೬೨
ಅಹಮದಾಬಾದ್ ೩೬, ೪೯, ೫೦, ೫೧, ೧೬೮, ೧೬೯, ೨೭೩, ೨೭೪, ೩೦೬, ೩೧೧, ೩೭೭
ಅಹಮದ್‌ನಗರ ೩೧೧
ಅಹಲ್ಯೆ ೨೧೩

**ಆ**

ಆಂಗ್ಲ ೪೩೭, ೪೪೨, ೪೪೪
ಆಂಗ್ಲೋ ೩೨೪, ೩೩೫, ೩೩೬, ೪೪೨
ಆಂಟರ್ ೨೩೫
ಆಂಟಿಯಾಕ್ ೪೪೯
ಆಂಡ್ರ್ಯೂಸ್ ೩೧೦, ೪೫೩
ಆಂಧ್ರ ೨೨೫, ೨೨೬
ಆಕಾಶವಾಣಿ ೨೨೨
ಆಕಿನ್ ೨೩೪
ಆಕ್ಟಿಯೋ ೨೮೮
ಆಕ್ರಮಣವಾದಿ ೧೨೭
ಆಗ್ನೇಯಾಸ್ತ್ರ ೨೧೬
ಆದಮ್ ೪೮೧
ಆದಿದ್ರಾವಿಡ ೨೮೯
ಆದಿಪರ್ವ ೨೨೧
ಆದಿಮ ೧೭೨
ಆದಿಮಜನಾಂಗ ೧೭೧
ಆಧೋತ್ರೆ ೨೩೧
ಆಫ್ತಾಬ್ ೬೭
ಆಫ್ರಿಕ ೯೪, ೯೬, ೯೮, ೯೯, ೧೦೦, ೧೦೧, ೧೧೬, ೧೪೩, ೩೬೧, ೪೩೭, ೪೩೯
ಆಫ್ರಿಕಾನಸ್ ೪೫೦
ಆಮ್‌ಸ್ಟರ್‌ಡಾಮ್ ೫
ಆ್ಯಂಗ್ಲಿಕನ್ ೪೩೯
ಆ್ಯಂಟಿಯೊಕ್ ೪೩೯
ಆ್ಯಂತೋನಿ ೧೦೦
ಆ್ಯಗೈಲ್ ೪೭೯
ಆ್ಯಗ್ರೀಸ್ ೧೮೧

ಆರ್ಥರ್ ೩೦೧
ಆರ್ಬಿಲಿಯಸ್ ೧೩
ಆರ್ಮಡಾ ೯೯
ಆರ್ಯ ೮೬, ೮೭, ೨೮೭
ಆರ್ಯಸಮಾಜ ೪೬, ೫೪, ೫೫, ೩೧೦
ಆಲಂ ೬೭
ಆಲಿವರ್ ೧೮
ಆಲ್ಫ್ರೆಡ್ ೪೩೨
ಆಲ್ಬುಕರ್ಕ್ ೪೬೯
ಆಸ್ಪಸ್ ೧೨
ಆಸ್ಟ್ರೇಲಿಯಾ ೯೩, ೧೬೨

### ಇ

ಇಂಗ್ಲಿಷ್ ೨೪, ೯೩, ೯೫, ೯೯, ೪೩೮, ೪೪೪, ೪೬೧, ೪೭೫, ೪೭೬
ಇಂಗ್ಲೆಂಡ್ ೯೧, ೯೩, ೯೪, ೯೯, ೧೫೪, ೩೦೧, ೩೫೪, ೩೫೫, ೪೩೮, ೪೪೩, ೪೪೪, ೪೭೭
ಇಂಡಿಯನ್ ೭೧, ೯೭, ೯೮, ೧೬೨, ೩೨೪, ೩೩೫, ೩೩೬, ೪೪೨, ೪೪೩, ೪೭೧, ೪೮೩
ಇಂಡೀಸ್ ೧೦೨, ೪೬೯
ಇಂತಾರ್ ೨೩೫
ಇಂದುಲಾಲ್ ೩೬
ಇಂದೋರ್ ೫೮, ೫೯, ೨೯೧, ೨೯೨
ಇಂದ್ರ ೨೧೩, ೨೧೪, ೨೧೮, ೨೧೯, ೨೨೦, ೨೨೧, ೨೨೩
ಇಂದ್ರಾಣಿ ೨೧೩, ೨೧೪
ಇಕ್ಷ್ವಾಕು ೨೧೭, ೨೧೯
ಇಟಲಿ ೪, ೫, ೧೨, ೧೬೧, ೪೬೬, ೪೭೪
ಇಟಾವಾಲಾ ೨೨೮
ಇತಾರ್ ೨೩೫
ಇನೋಚಿಗೋರ್ ೨೨೬
ಇನ್‌ಫ್ಲೂಯಂಜಾ ೪೬೦
ಇನ್‌ಸ್ಟಿಟ್ಯೂಟ್ ೧೧೬, ೩೭೫
ಇಬ್ಬೆಟ್‌ಸನ್ ೧೮೩
ಇಯದ್ಬಾಲ್ಡ್ ೪೧೩
ಇರೋಕ್ಯುಯೋಸ್ ೧೯೪
ಇಶ್ವಿನ್ ೧೭೬
ಇಸಾಯಿ ೬೧
ಇಸಾರ್ ೨೩೦
ಇಸ್ರೇಲ್ ೧೬೫, ೨೦೯
ಇಸ್ಲಾಂ ೪೪, ೧೫೪, ೧೮೩, ೨೦೮, ೨೫೬, ೩೨೬, ೪೦೫, ೪೩೧, ೪೩೨, ೪೫೫, ೪೭೩, ೪೮೩
ಈಜಿಪ್ಟ್ ೧೬೨, ೧೬೪, ೨೦೮, ೪೩೭, ೪೩೮
ಈಸ್ಥರ್ ೪೫೯

### ಉ

ಉಂಥ್ ೨೩೩
ಉಖಾಲ್ ೨೩೩
ಉಜ್ಜಲಸಿಂಗ್ ೩೨೩
ಉಟ್ಟಪಾಲಂ ೬೫
ಉತಂಜಲಿ ೨೨೭
ಉತ್ಕಲ ೨೨೮, ೨೩೬
ಉದಂಬರಾ ೨೨೮
ಉದಯಪುರ ೬೯
ಉದಾರವಾದಿ ೨೯೮
ಉದಿಹಾಲ್ ೨೩೨
ಉಪನಿಷತ್ತು ೧೬೫
ಉಮಾರಿ ೨೩೪
ಉರುಗ್ವೆ ೯೭
ಉಲ್‌ಸ್ಟರ್‌ಮನ್ ೩೩೭
ಉಸ್ರೈನಾ ೨೩೪

### ಊ

ಊರ್ವಶಿ ೨೧೩, ೨೧೫

**ಋ**

ಋಗ್ವೇದ ೧೯೮
ಋಗ್ವೇದಿ ೨೨೬
ಋಗ್ವೇದಿಗಳು ೨೨೬
ಋಚೀಕ ೨೧೯, ೨೨೩

**ಎ**

ಎಂಫ್ರೇಮ್ ೪೪೨
ಎಟ್ಟಮಂಗಳಮ್ ೧೪೨
ಎಟ್ಟಿಕಕ್ಕನ್ ೧೪೬
ಎಡಿನ್‌ಬರೋ ೪೭೧
ಎಡ್ಮಂಡ್ ೪೪೨
ಎಡ್ವಿನ್ ೪೧೩
ಎಥೆಲ್ಬರ್ಟ್ ೪೧೨, ೪೧೩
ಎಲಿಜಬೆತ್ ೯೯
ಎಲ್ಬರ್ ೪೭೦
ಎಲ್‌ವುಡ್ ೪೧೮, ೪೧೯, ೪೨೭
ಎವೆಂಜೆಲಿಕಲ್ ೧೧೭
ಎಷವ ೬೫
ಎಸ್ಕಿಲೀನ್ ೧೪
ಎಸ್ಸೆಕ್ಸ್ ೪೧೩
ಎಹಿ ೨೧೧

**ಏ**

ಏಕದೇವತಾರಾಧನೆ ೨೦೨
ಏಕಪ್ರಭುತ್ವ ೧೩೭
ಏಕಸ್ವಾಮ್ಯ ೯೯
ಏಟಾ ೭೦
ಏಷ್ಯಾ ೯೬, ೧೦೧, ೪೩೭, ೪೩೮, ೪೩೯
ಏಸುಕ್ರಿಸ್ತ ೪೬೧

**ಐ**

ಐಕಿಯ ೩೯೯
ಐನಾಪೂರೆ ೧೯೨
ಐರಿಷ್ ೧೧೨, ೩೦೧
ಐರೋಪ್ಯ ೩೨೪, ೩೨೫
ಐರ್ಲೆಂಡ್ ೩, ೧೭, ೧೮, ೩೦೧, ೩೩೭

**ಒ**

ಒಗಿಲ್ವಿ ೪೬೫
ಒರಿಸ್ಸಾ ೧೦, ೨೩೬, ೨೫೨, ೩೫೦
ಒವಾಂಡೋ ೯೭
ಒಸ್ವಾಲ್ಡ್ ೪೧೩

**ಓ**

ಓಕ್ ೧೭
ಓಝಾ ೨೩೬
ಓಝೆ ೨೩೦
ಓಪಾಡ್ ೪೬
ಓಬೀರಾಯ ೧೧
ಓಸ್ವೇನ ೪೧೩
ಓಸ್ಡಿ ೨೩೦

**ಕ**

ಕಂಭಾನಿ ೨೩೪
ಕಂಡಾಲಾ ೧೭೬
ಕಂಡಾಹಾರಿ ೨೩೩
ಕಕ್ಕನ್ ೧೪೫, ೧೪೬
ಕಚ್ಚಿ ೨೨೭, ೨೩೦
ಕಭಾರಿ ೨೩೨
ಕಭಾರು ೨೧೦
ಕಟಯ್ಯಾಸ್ ೨೩೫
ಕಟಾರಿಯಾ ೨೩೩
ಕಟೀಮುರ್ ೪೯
ಕಡಲ್ಗಳ್ಳತನ ೯೯

ಕಡಾಲ್‌ಬಾಜು ೨೩೩
ಕಣಜ ೨೮೯
ಕಣ್ಣನ್ ೬೧
ಕನೇರಿಯ ೫೮
ಕನೋಜ ೨೩೩
ಕನೋಜಿಯಾ ೨೨೮
ಕನೋಲಿಯಾ ೨೨೮
ಕನೌಜ ೨೩೩
ಕನ್ಯಾಕುಬ್ಜ ೨೨೩, ೨೨೮, ೨೩೩, ೨೩೫
ಕನ್ಯುಬಿಯಂ ೨೮೮
ಕನ್ವರ್ ೬೨
ಕನ್ಹಯ್ಯಲಾಲ್ ೫೬
ಕಪಿಲನ ೨೦೪, ೨೦೫
ಕಪಿಲಾ ೨೨೮
ಕಪ್ಪುಮಾಟ ೪೧೯, ೪೮೩
ಕಬಾಬಿ ೨೩೨
ಕಮ್ಯುನಿಸಮ್ ೧೨೬
ಕರದಮ್ ೨೩೦
ಕರದ್ದಾಮ್ ೨೩೦
ಕರನಕಾಮುಲು ೨೨೬
ಕರಬಾಂಗಿ ೨೩೨
ಕರಾಡ ೨೨೬, ೨೩೦
ಕರಾಲ್ ೨೯೨
ಕರಾವಳಿ ೯೮, ೧೦೧, ೪೭೭
ಕರಿಯರು ೧೬, ೧೦೦, ೧೦೪
ಕರುಗಕೊಟ್ಟೈ ೧೪೭
ಕರುವಂಕುಲಮ್ ೧೪೭
ಕರ್ರೈಯಾ ೨೩೪
ಕರ್ನಾಟಕ ೨೨೫, ೨೨೮
ಕಲಾರಾಮನ ೨೬೩
ಕಲಾವಿದ ೧೮, ೧೩೧
ಕಲಿಂಗ ೨೩೬
ಕಲೋಟ ೫೮, ೨೯೧
ಕಲ್ಕತ್ತ ೨೯೫, ೩೦೬, ೪೩೯, ೪೪೨, ೪೪೩, ೪೭೨,
೪೭೩, ೪೭೪
ಕಲ್‌ಪೋಷ್ ೨೩೩
ಕಲ್ಬಾದೇವಿ ೩೦೦
ಕಲ್ಲರ್ ೨೮೯, ೨೯೦
ಕಲ್‌ವಿಟ್ ೨೩೩
ಕಲ್ಹನ್ ೨೩೦
ಕವಿತ ೨೭೩, ೨೭೪, ೨೭೫
ಕವೋಲಿಯನ್ ೧೪
ಕಶ್ಯಪ ೨೨೩
ಕಹರ್ ೬೭
ಕಳಿಂಗಾ ೨೨೮
ಕಾಂಕ್ವಿಸ್ಟಾಡರ್ಸ್ ೯೭
ಕಾಂಗಡಾ ೨೩೦
ಕಾಂಗ್ರೆಸ್ ೧೧೯, ೧೪೩, ೧೪೬, ೨೬೨, ೨೭೯,
೨೯೭, ೨೯೮, ೨೯೯, ೩೦೦, ೩೦೨, ೩೦೩,
೩೦೪, ೩೦೫, ೩೦೬, ೩೦೭, ೩೦೮, ೩೦೯,
೩೧೦, ೩೧೧, ೩೧೨, ೩೧೩, ೩೧೪, ೩೧೫,
೩೧೬, ೩೧೭, ೩೧೮, ೩೧೯, ೩೨೨, ೩೨೩,
೩೨೪, ೩೨೫, ೩೨೬, ೩೨೭, ೩೨೮, ೩೨೯,
೩೩೦, ೩೩೨, ೩೩೫, ೩೩೬, ೩೩೮, ೩೩೯,
೩೫೩, ೩೫೪, ೩೫೫, ೩೫೬, ೩೬೧, ೩೬೬,
೩೬೭, ೩೬೮, ೩೬೯, ೩೭೨
ಕಾಂಜಾ ೨೩೪
ಕಾಂಥ ೨೩೩
ಕಾಂಬೋ ೨೩೨
ಕಾಕರಿ ೨೩೫
ಕಾಕಿನಾಡ ೪೫೫
ಕಾಕ್ಲೆಯ ೨೩೧
ಕಾಜಾರ್ ೨೨೯
ಕಾಟೂ ೭೨

ಕಾಟ್‌ಪಾಲೆ ೨೨೯
ಕಾಣ್ಪರು ೨೨೬
ಕಾಣ್ವರು ೨೨೬
ಕಾತೋತ್ರೆ ೨೩೧
ಕಾತ್ಯಾಯನ ೭೫, ೮೦, ೮೧, ೧೩೬, ೧೬೪, ೨೧೦, ೨೧೧
ಕಾಥಿ ೬೫
ಕಾಥಿಯವಾಡ ೩೪
ಕಾನುಂಗೋ ೨೩೨
ಕಾನೂಟ್ ೪೧೩
ಕಾನ್ರಾಯ್ ೧೧೫
ಕಾನ್‌ಸ್ಟಂಟೈನ್ ೪೩೯
ಕಾಪಲೆ ೨೩೦
ಕಾಮಧೇನು ೨೧೬
ಕಾರಕೂನ ೩೬, ೩೭
ಕಾರಾ ೨೩೬
ಕಾರಿಂಥಿಯನ್ ೪೪೯
ಕಾರ್ತವೀರ್ಯ ೨೨೨, ೨೨೩
ಕಾರ್ತೇಜ ೪೫೧
ಕಾರ್ನೇಗಿ ೧೧೬
ಕಾರ್ಲಿಸ್ ೧೧೫
ಕಾರ್ಲ್‌ಮಾರ್ಕ್ಸ್ ೧೨೬
ಕಾಲಂದ ೯೧, ೧೦೧, ೧೬೫, ೨೩೦
ಕಾಲಸ್ ೨೩೦
ಕಾಲಾಂಕಿ ೨೨೬
ಕಾಲಾಂದರಿ ೨೩೨
ಕಾಲಾರಾಮ್ ೩೭೬
ಕಾಲಾಸ್ತ್ರ ೨೧೬
ಕಾಲೀ ೫೯
ಕಾವಡೆ ೨೩೨
ಕಾಶ್ಮೀರ ೨೨೯
ಕಾಶ್ಮೀರಿ ೧೩೧, ೨೩೦, ೨೩೨
ಕಾಶ್ಮೀರಿಪಂಡಿತ್ ೨೩೧
ಕಾಸ್ ೧೬೨
ಕಾಸರನಾಡು ೨೨೬
ಕಾಸರ್‌ವಾಡಿ ೩೬
ಕಾಸಸ್ ೯೭, ೯೮
ಕಾಸ್ಪರ್ ೧೦೦
ಕಾಸ್ತ ೨೨೬
ಕಾಹಿ ೨೩೩
ಕಾಳಿದಾಸ ೩೯
ಕಾಳುಪೂರ್ ೧೬೯
ಕಿಂಗ್ ೪೬೯
ಕಿಂಗ್‌ಜಾನ್ ೩೫೪
ಕಿಥಲಿ ೨೩೩
ಕಿಥಿಲು ೨೩೨
ಕಿಮ್ ೨೩೨
ಕಿರಪಾದ್ ೨೩೨
ಕಿರವಂತರು ೨೨೬
ಕಿರಾರ್ ೨೩೦
ಕಿರ್ಲೆ ೨೩೨
ಕಿಲ್‌ಮಕ್ ೨೩೩
ಕಿಸಿರಮನ್ ೨೩೫
ಕೀರ್ತನ್ಯಾ ೨೩೬
ಕೀರ್ವಾಲಿ ೬೭
ಕುಂಡು ೨೨೮
ಕುಂತಿ ೨೨೩
ಕುಂದನ್ ೨೩೨
ಕುಕಪರಿ ೨೩೨
ಕುಕರ್ ೨೩೨
ಕುಕುರ್ಗ್ಗ ೨೩೪
ಕುಭಾರಿ ೨೩೩
ಕುಭಾಲಾ ೨೩೪
ಕುಟಾಲಿಡಿಯ ೨೩೧

ಕುಡತಿನಿ ೪೪
ಕುಡವಾರೆ ೨೩೪
ಕುಡಾಲಡೇಶ್ಕರ್ ೨೨೬
ಕುತ್‌ವಾಲ್ ೨೩೦
ಕುನ್‌ಬಿಗೋರ್ ೨೨೬
ಕುಪ್ಪುಸ್ವಾಮಿ ಅಯ್ಯರ್ ೩೩
ಕುಬೇರ ೨೧೪
ಕುಮಾದಿಯ ೨೨೯
ಕುಮಾರ್ ೬೭
ಕುಮಾರಿಲ ೨೦೫, ೨೦೬
ಕುರಾನ್ ೩೩೩
ಕುರಾನ್‌ಥಿಯ ೨೩೨
ಕುರಾಲ್ ೨೨೯
ಕುರುಲಪಾಲ್ ೨೩೦
ಕುರೇಷಿ ೨೫೧
ಕುಲಾಭಾ ೨೨೮
ಕುವಭಂಡಾಸ ೨೩೩
ಕುಶನಾಭ ೨೧೫
ಕುಷ್ವಸ್ಥಲಿ ೨೨೬
ಕುಸಾರಿಟ್ ೨೩೦
ಕುಸುಂಬಿಯಾ ೨೩೫
ಕೂಲಿ ೧೬, ೨೧, ೨೮, ೫೧, ೬೬, ೬೭, ೭೬, ೨೬೮, ೨೭೮, ೨೯೦, ೪೦೧
ಕೃಷ್ಣಯಜುರ್ವೇದಿ ೨೨೬
ಕೆಂಟ್ ೧೧೫, ೪೧೩
ಕೆಂಟಿಷ್ ೪೧೨
ಕೆಂಪುವರ್ಣೀಯ ೨೦೭
ಕೆಥೋಲಿಕ್ ೪೪೬, ೪೪೮
ಕೆಲೋಸ್ಕರ್ ೨೨೬
ಕೆಲ್ಲಪ್ಪನ್ ೩೯೫
ಕೆಳಜಾತಿ ೧೮೧, ೧೮೮, ೧೮೯, ೧೯೨, ೧೯೭, ೨೨೯, ೨೩೧
ಕೇನ್ ೧೧೫
ಕೇರಳ ೧೪೮
ಕೇವಟಿ ೨೩೫
ಕೇವತಿ ೨೩೪
ಕೇಶವಜಿ ೧೬೮
ಕೇಸರ್ ೨೩೧
ಕೇಸರಿಲಾಲ್ ೬೯
ಕೈರಾ ೩೯, ೪೦
ಕೊಂಕಣಿ ೨೩೭
ಕೊಂಕಣಿಸ್ಥ ೨೨೬
ಕೊಂಗ ೪೩೮
ಕೊಕೊನಾಡ ೪೫೫
ಕೊಚ್ಚಿನ್ ೧೭೦, ೪೦೧
ಕೊಟ್ಟಗುಡಿ ೧೪೭
ಕೊಡಗಾ ೨೩೭
ಕೊಡಗು ೧೦
ಕೊಡ್ವಾ ೨೨೮
ಕೊತ್ತಲ ೨೪
ಕೊಪ್ರಾ ೧೩೯
ಕೊಮ್ ೧೫೬
ಕೊಮ್‌ಜಾಕ್ ೧೫೬
ಕೊಯಾನ್ವಾ ೯೩
ಕೊರ್ಪ್ವೈಕ ೩೩೦
ಕೊಲಂಬಸ್ ೧೭, ೯೬, ೯೭
ಕೊಲಾಬಾ ೨೫೯, ೨೬೦, ೨೬೧, ೨೭೩, ೩೭೫
ಕೊಲಿನ್ಸ್ ೩೦೧
ಕೊಲಿನ್ಸ ೩೦೧
ಕೋಟಾರ್ ೨೩೨
ಕೋಡಿಯಾ ೨೩೪
ಕೋತ್‌ಪಾಲ್ ೨೩೦
ಕೋರಮಂಡಲ ೪೩೮
ಕೋಲಿಗೋರ್ ೨೨೭

ಕೋಹಾನಾ ೬೬
ಕೌಲ ೨೩೨
ಕೌವಾಸ್‌ಜೀ ೩೭೯
ಕೌಶಿಕೀ ೨೨೦
ಕೌಸಿ ೨೩೪
ಕ್ಯಾಂಟರ್‌ಬರೀ ೪೭೦
ಕ್ಯಾಂಬ್ರಿಜ್ ೪೬೯
ಕ್ಯಾಟೋ ೨೦, ೨೧
ಕ್ಯಾಥೊಲಿಕ್ ೧೮, ೯೪, ೯೫, ೯೬, ೧೫೫, ೨೬೫, ೪೩೮, ೪೩೯, ೪೪೪, ೪೪೫, ೪೬೨, ೪೬೬, ೪೬೭, ೪೭೩, ೪೭೪, ೪೭೮
ಕ್ಯಾನಾಕಸ್ ೧೮೧
ಕ್ಯಾರವಾನು ೧೦೨
ಕ್ಯಾರೀ ೪೩೯, ೪೭೨, ೪೭೩
ಕ್ಯಾರೊಲೀನಾ ೧೬
ಕ್ಯಾಲಿಕಟ್ ೧೭೯
ಕ್ಯಾಲೆಟಸ್ ೧೮೧
ಕ್ಯುವೆಮ್ ೧೮೧
ಕ್ರಾಂಬಿ ೪೪
ಕ್ರಾಮ್‌ವೆಲ್ ೧೮, ೩೦೨, ೪೩೮
ಕ್ರಾವ್‌ಲೀ ೪೧೬, ೪೧೭
ಕ್ರಿಮಿ ೧೪೦
ಕ್ರಿಶ್ಚಿಯನ್ ೯೩, ೯೪, ೯೭, ೧೧೦, ೧೧೨, ೧೧೩, ೧೧೪, ೧೧೭, ೧೫೩, ೧೬೬, ೨೦೭, ೩೩೫, ೩೮೦, ೪೧೨, ೪೧೩, ೪೧೪, ೪೨೯, ೪೩೭, ೪೩೯, ೪೪೩, ೪೪೪, ೪೪೫, ೪೪೬, ೪೪೭, ೪೪೮, ೪೪೯, ೪೫೦, ೪೫೧, ೪೫೨, ೪೫೩, ೪೫೪, ೪೫೫, ೪೫೬, ೪೫೭, ೪೫೮, ೪೫೯, ೪೬೦, ೪೬೧, ೪೬೨, ೪೭೦, ೪೭೩, ೪೭೪, ೪೭೫, ೪೭೬, ೪೭೯, ೪೮೨, ೪೮೪
ಕ್ರಿಶ್ಚಿಯಾನಿಟಿ ೪೪೦, ೪೭೯
ಕ್ರಿಶ್ನೋರಾ ೨೨೭
ಕ್ರಿಸ್ತ ೯೩, ೩೮೪, ೪೭೮
ಕ್ರೀಟರಿಯಾನ್ ೪೭೩
ಕ್ರೈಸ್ತ ೧೮೪, ೨೦೯, ೩೧೮, ೩೨೪, ೩೨೭, ೩೩೬, ೪೧೨, ೪೨೫, ೪೩೭, ೪೩೮, ೪೪೪, ೪೪೬, ೪೪೭, ೪೪೮, ೪೫೦, ೪೬೧, ೪೭೧, ೪೭೩, ೪೭೪, ೪೮೦, ೪೮೧, ೪೮೨, ೪೮೩, ೪೮೪, ೪೮೫
ಕ್ರೈಸ್ತಧರ್ಮ ೨೦೭, ೪೬೬, ೪೭೩, ೪೮೦
ಕ್ರೈಸ್ತಧರ್ಮೀಯ ೩, ೪, ೫
ಕ್ರೈಸ್ತಪಂಥ ೪೭೪
ಕ್ರೈಸ್ತಮತ ೩, ೪೬೨
ಕ್ರೈಸ್ತಮತೀಯ ೪೩೬, ೪೪೮, ೪೭೪, ೪೭೭
ಕ್ರೈಸ್ರ ೪೩೬, ೪೫೬
ಕ್ಲಾಡಿನ್ ೧೧೫
ಕ್ಲಾನ್ ೬೮
ಕ್ಲಾವಿಸೆಸ್ ೧೨
ಕ್ಲಿಮೆಂಟ್ ೯೪
ಕ್ಲುಕ್ಸ್ ೬೮
ಕ್ಲೊಮಿಯನ್ ೪೧೩
ಕ್ಲೋವಿಸ್ ೪೧೨, ೪೧೩
ಕ್ವಾಯಿರ್ ೪೦೨
ಕ್ವಿಲಾನ್ ೩೯
ಕ್ವೀನ್ಸ್ ೩೩೦


## ಖ


ಖಂಡಿತತ್ವವಾದ ೪೨೦
ಖಂಡಿತತ್ವವಾದಿ ೪೨೦
ಖಂಡೇಲವಾಲಾ ೨೩೭
ಖಂಡೇವಾಲಾ ೨೩೬
ಖಂಡೈಲ್ ೨೩೪
ಖಂಡೋಬಾ ೪೭೪
ಖಜವಾಯಿ ೨೩೫

ಖತೇಡಿ ೨೯೨
ಖನ್ನಾ ೨೩೬
ಖಪಾಂಖೋ ೨೩೨
ಖಪಾರಿ ೨೩೨
ಖಬೀಸಾ ೨೩೫
ಖರೆ ೩೮೪
ಖರ್ಕೇಲಿಯಾ ೨೨೮
ಖಾಂಡವ ೨೨೩
ಖಾಂಬಾಟೀ ೨೨೭
ಖಾಖಯಿಖೋರ್ ೨೩೪
ಖಾಜುರಿವೆ ೨೩೧
ಖಾಜುರೆ ೨೩೧
ಖಾಜುಲೆ ೨೨೬
ಖಾಡವೆ ೨೨೬
ಖಾಡೋತ್ರೆ ೨೩೨
ಖಾತ್ಕಾನಾ ೭೩
ಖಾತ್ಯಯಾಸ್ ೪೯
ಖಾದಯತಾ ೨೨೮
ಖಾದಿ ೩೧೧
ಖಾನೋತ್ರೆ ೨೩೨
ಖಾನ್ಯಕಾತಿ ೨೩೩
ಖಾನ್ಯಾ ೨೩೩
ಖಾಪೂರ್ ೩೮
ಖಾಯಕಾನ ೨೭೦
ಖಾರ್ ೨೩೨
ಖಿಂಡಾರಿಯೆ ೨೨೯
ಖಿಂದಾದಿಯಾ ೨೩೧
ಖಿಂಧಯೆಪಾಥೆ ೨೩೨
ಖಿಜಾದಿಯಾ ೨೨೭
ಖಿಲಾಫತ್ ೩೦೪, ೩೧೮, ೪೫೬
ಖಿಸ್ತೀ ೨೨೬
ಖುಂಕಿ ೨೩೩
ಖುರಡಿ ೨೩೩
ಖುರವಧ ೨೩೧
ಖುರ್ವ ೬೪
ಖುಶ್ ೨೩೨
ಖೇಡವಲಾ ೨೨೭
ಖೋರಿಯಾ ೨೩೫
ಖೋಸಾ ೨೩೩

## ಗ

ಗಂಗಾಹರ್ ೨೨೯
ಗಂಜ್ ೧೧೩, ೨೩೨
ಗಂಧರ್ ೨೩೦
ಗಂಧರ್ವಕತೆ ೧೮೯
ಗಂಧರ್ವಲೋಕ ೨೧೩
ಗಂಧಾರಗಾಲ್ ೨೩೨
ಗಡವಾಲ್ ೫೩, ೫೪, ೧೧೪
ಗಡೋತ್ರೆ ೨೩೧
ಗಣತಿ ೭
ಗಣರಾಜ್ಯ ೧೨, ೨೪, ೩೦
ಗಣೇಶ ೪೭೪
ಗಯೆ ೩೦೮
ಗರಡಿವಿದ್ಯೆ ೩೭೫
ಗರಾಡಿಯೆ ೨೩೨
ಗರಾಸಿಯಾ ೩೪
ಗರೀಬ್ ೫೪, ೨೩೩
ಗರೋಕ್ ೨೩೨
ಗರೋಡಾ ೨೨೮
ಗರ್ಗ ೨೧೨
ಗರ್‌ವಾಲ್ ೬೨
ಗಲವಧ ೨೩೧
ಗಲ್‌ಹಾಲ್ ೨೩೨

ಗಷೇಷು ೨೩೦
ಗಾಂಡೆ ೨೩೦
ಗಾಂಧಿ ೩೪, ೪೭, ೫೧, ೫೨, ೧೯೨, ೨೧೦, ೨೬೨, ೨೭೫, ೨೭೭, ೨೯೭, ೨೯೮, ೨೯೯, ೩೦೦, ೩೦೧, ೩೦೨, ೩೦೩, ೩೦೪, ೩೦೫, ೩೦೯, ೩೧೦, ೩೧೬, ೩೧೭, ೩೧೮, ೩೧೯, ೩೨೩, ೩೨೪, ೩೨೬, ೩೨೭, ೩೨೮, ೩೨೯, ೩೩೦, ೩೩೨, ೩೩೩, ೩೩೪, ೩೩೫, ೩೩೬, ೩೩೭, ೩೩೮, ೩೩೯, ೩೪೦, ೩೪೨, ೩೪೪, ೩೪೬, ೩೪೮, ೩೪೯, ೩೫೦, ೩೫೨, ೩೫೩, ೩೫೪, ೩೫೯, ೩೬೦, ೩೬೧, ೩೬೪, ೩೬೫, ೩೬೬, ೩೬೮, ೩೬೯, ೩೭೧, ೩೭೨, ೩೭೩, ೩೭೯, ೩೮೦, ೩೮೧, ೩೮೨, ೩೮೩, ೩೮೪, ೩೮೫, ೩೮೬, ೩೮೭, ೩೮೮, ೩೮೯, ೩೯೨, ೩೯೪, ೩೯೫, ೩೯೬, ೩೯೭, ೩೯೮, ೪೦೨, ೪೫೩, ೪೫೫, ೪೫೬, ೪೫೭, ೪೫೮, ೪೮೨, ೪೮೪
ಗಾಂಧೀಪರ್ಸ್ ೩೭೨
ಗಾಂಧೀಮಾರ್ಗ ೩೩೯
ಗಾಂಧೀವಾದ ೪೫೭
ಗಾಂಧೆ ೨೩೦
ಗಾಗರ್ ೨೩೩
ಗಾಡಿರ್ ೨೩೩
ಗಾಡ್ಬೀ ೪೪೮
ಗಾಧಿ ೨೧೫, ೨೨೩
ಗಾಮಖರ್ ೨೩೨
ಗಾಮದೇವಿ ೩೦೦
ಗಾಯತ್ರಿ ೨೨೨
ಗಾರಿಯಲ್ ೨೩೨
ಗಾರಿಯಾ ೨೩೪
ಗಾರುಡಿಯಾ ೨೩೭
ಗಾರ್ಗೀಯಾ ೨೩೫
ಗಾರ್ಡಿಯನ್ ೩೦೩
ಗಾಲಿಕಾರಪ್ ೨೩೨
ಗಾವೇಧು ೨೧೦
ಗಿಡ್ನೆ ೩೩೬
ಗಿಬ್ಬನ್ ೪೪೬, ೪೪೯
ಗಿರಿನಾರರು ೨೨೭
ಗಿರ್ವಾರ್ ೬೪
ಗುಗ್ಲಿ ೨೨೮
ಗುಜರಾತ್ ೩೬
ಗುಜರಾತಿ ೧೫೩, ೨೨೭
ಗುಜರಾಥಿ ೨೨೭, ೨೨೮
ಗುರ್ಝುರಾಟೆ ೧೭೭
ಗುಪ್ತಾ ೧೩೭
ಗುಮ್ಮಟ ೧೬೫
ಗುರಾಲುಲಿ ೨೩೪
ಗುರಾಹ ೨೩೨
ಗುರುದಾಸಪುರ ೨೨೯
ಗುರುವಾಯೂರು ೩೭೬, ೩೮೮, ೩೯೫, ೩೯೭
ಗುರ್ಗಾಂವ್ ೬೦
ಗುರ್ಜರ ೨೨೫, ೨೨೬, ೨೩೬, ೨೩೭
ಗುರ್ದಾಸ್ಪುರ ೫೫
ಗುರ್ಹಾ ೨೩೩
ಗುಲಾಬಿ ೪೫೪
ಗುಲಾಮಕುಲ ೧೦೧
ಗುಲಾಮಗಿರಿ ೧೧, ೧೩, ೧೯, ೨೦, ೨೧, ೨೨, ೯೬, ೧೦೦, ೧೦೧, ೧೦೬, ೧೧೦, ೩೧೮, ೩೬೬
ಗುಹಾಲಿಯೆ ೨೩೨
ಗುಳೆ ೨೪, ೫೯
ಗೆಲಿಲಿಯೋ ೧೭
ಗೇಗಾ ೨೩೫
ಗೇಣಿಪದ್ಧತಿ ೧೦೬

ಗೈಂಧಾರ ೨೨೯
ಗೋಕುಲಿಯ ೨೩೨
ಗೋಪಾಲನ್ ೬೧
ಗೋಪಾಲಾ ೨೩೪
ಗೋಪಿಕೆ ೪೪೯
ಗೋಪಿನಾಥ ೨೩೪
ಗೋಬರಾಹ ೨೮
ಗೋಮತಾವಾಲಾ ೨೨೮
ಗೋಮಾಂಸ ೮, ೨೪೪
ಗೋಮಾಳ ೭೨
ಗೋರಖಪುರಿಯಾ ೨೩೪
ಗೋರತ್ ೨೩೫
ಗೋರಿರಾಮ್ ೫೫
ಗೋರ್ಖಿ ೬೦
ಗೋಲಾ ೬೩
ಗೋಲಾವಾಲಾ ೨೨೮
ಗೋವರ್ಧನಗಿರಿ ೪೪೮
ಗೋವರ್ಧನಾ ೨೩೪
ಗೋವಾ ೧೧೪, ೪೪೫
ಗೌಕರ್ಣ ೨೩೭
ಗೌಡ ೨೨೫, ೨೨೮, ೨೩೫, ೨೩೬
ಗೌತಮ ೧೬೪
ಗೌತಮಿ ೨೩೪
ಗೌಲ್ಡಿಂಗ್ ೩, ೧೧೨, ೧೧೩
ಗ್ಯಾಂಬ್ರಿಲ್ ೧೧೫
ಗ್ಯಾರೆಟ್‌ಸನ್ ೧೧೫
ಗ್ಯಾಲಿಲೀಯ ೪೫೧
ಗ್ಯಾಲೆನ್ ೪೫೦
ಗ್ರಾಂಧ್ರಾರಪಾಗೋರ್ ೨೨೭
ಗ್ರಾಂಬಾಸಿ ೨೩೪
ಗ್ರಾಗ ೨೩೪
ಗ್ರಾಡ್ ೨೩೩
ಗ್ರಾನ್ ೧೬
ಗ್ರಾಮಚಾವಡಿ ೧೪೪, ೩೭೫
ಗ್ರಾಮಸಭೆ ೧೪೪
ಗ್ರಾಮಸೇವಕ ೨೬೭
ಗ್ರಿಗರೀ ೪೪೮
ಗ್ರಿಫಿತ್ ೩೦೧
ಗ್ರಿಮ್ ೧೮೯
ಗ್ರೀಕ್ ೧೨, ೧೬೨, ೧೭೪, ೪೩೮, ೪೫೦
ಗ್ರೀಸ್ ೧೬೪, ೨೦೮
ಗ್ರೆಗರೀ ೪೪೮
ಗ್ರೋಟಿಯೆ ೨೯೪
ಗ್ರೋಟೆ ೨೯೪
ಗ್ವಾಲಿಯರ್ ೫೯, ೬೪, ೨೯೨

### ಘ

ಘನಶ್ಯಾಮ್ ೬೭
ಘೆಟ್ಟೋ ೯೩
ಘೋಗಾರಿ ೨೨೭
ಘೋಟಕೆ ೨೨೯
ಘೋಡ ೨೩೨
ಘೋಹಾಸನಿಯೆ ೨೩೧

### ಚ

ಚಂಡಾಲ ೨೮೭
ಚಂದನ್ ೨೩೦
ಚಂದಾಸಾಹೇಬ ೪೬೭
ಚಂದ್ರಗುಪ್ತ ೧೭೪
ಚತುರ್ವೇದ ೪೬೫
ಚತುರ್ವೇದಿ ೨೨೭
ಚತ್ವಾಡ ೨೯೨
ಚನಾಸ್ಮಾ ೪೭
ಚಮಾರ್ ೨೫೨

ಚಮ್ಮಾರ ೪೬, ೬೦
ಚಮ್ರೋಟ್ಟಿ ೭೩
ಚರಾಚರಶಕ್ತಿ ೧೯೮
ಚರಾಸ್ತಿ ೧೫೭
ಚರ್ಚ್ ೧೫೫, ೪೪೪, ೪೪೫, ೪೭೩, ೪೭೬
ಚರ್ಚ್ ವುಮನ್ಸ್ ೧೧೭
ಚರ್ತುವೇದಿ ೨೨೭
ಚಲ್ಮ್ಸ್‌ಫರ್ಡ್ ೨೪೭, ೩೨೧
ಚಾಂಡಾಲ ೨೧೭, ೨೧೮
ಚಾಂದ್ ೫೩, ೭೨
ಚಾಂದಯಾಲ್ ೬೨
ಚಾಂದವಾಲಾ ೬೨
ಚಾಂದಹಾರಿ ೨೩೬
ಚಾಂದ್ರಮಾನ ೭೯
ಚಾಂದ್ರಾವಾಲಾ ೨೩೫
ಚಾತುರ್ವರ್ಣ ೧೭೧, ೧೮೯, ೨೮೫, ೨೮೭, ೨೮೯
ಚಾತ್‌ಪಾಲಿಯ ೨೩೦
ಚಾರಣರು ೨೩೭
ಚಾವಡಿ ೧೪೧, ೧೪೨, ೧೪೪, ೧೪೫
ಚಾವಿಸ್ ೧೬
ಚಿಂಗಾಲಾ ೨೩೬
ಚಿಭವಾಲಿ ೨೩೨
ಚಿಟ್ ೨೩೦
ಚಿತ್ರೋಡಾ ೨೨೭
ಚಿರಂಜಿ ೭೦, ೭೧
ಚಿರಕ್ಕಲ್ ೬೧
ಚೀಲಗಲ್ಲಿ ೪೬
ಚುನಾವಣೆ ೯೫, ೨೪೩, ೨೪೭, ೨೪೯, ೨೫೦, ೩೦೩, ೩೨೦, ೩೨೧, ೩೩೧, ೩೩೩, ೩೫೦, ೩೫೧, ೩೫೨, ೩೫೫, ೩೫೬, ೩೫೭, ೩೫೮, ೩೬೦, ೩೬೬, ೩೭೩, ೩೮೨, ೪೦೦
ಚುನಿ ೫೭, ೨೨೯
ಚುನೀಭಾಯಿ ೪೭
ಚೆಮೋಷ ೪೨೬
ಚೆರಮಾರ್ ೩೯
ಚೆರುಮಾನ್ ೧೭೦
ಚೇರುಕುನ್ ೬೧
ಚೊಕ್ಕಮುದ್ರೆ ೨೪೫
ಚೊಟೂರಾಮ್ ೨೫೧
ಚೋಕಿ ೨೩೩
ಚೋಖಮೇಳ ೪೨೮
ಚೋರವಾಡಾ ೨೨೭
ಚೋವೀಸಾ ೨೨೮
ಚೌಧರಿ ೨೩೫, ೨೫೧
ಚೌಬೆ ೨೩೩, ೨೩೫

**ಛ**

ಛಂಗೈಲ್ ೨೩೧
ಛಂದನ್ ೨೩೨
ಛಂಪಾರನ್ ೨೩೩
ಛಮತ್‌ವಾಲ ೨೩೭
ಛಮಾರ್ ೨೩೬
ಛಾಂಡಾ ೨೩೪
ಛಾಂದ್ರಾ ೨೩೩
ಛಾಕೋತಾರ್ ೨೩೧
ಛಾಕೋತ್ರೆ ೨೩೨
ಛಾಛಿಹೈಲ್ ೨೩೨
ಛಾತ್ರಿ ೨೩೨
ಛಾನ್ ೨೩೨
ಛಾನನ್ ೨೨೯
ಛಾಪಿಲಾ ೨೨೮
ಛಾಪ್ರೋಹಿಯೆ ೨೩೧
ಛಾಮ ೨೩೨
ಛಾರಪಾಂಡ ೨೩೫

ಛಾರೋಸೀ ೨೨೭
ಛಾರ್‌ಗತ್ ೨೩೨
ಛಾಲಿವಾಲೆ ೨೩೧
ಛಾವ್ಡೆ ೨೩೦
ಛಿಬಾರ್ ೨೨೯, ೨೩೧
ಛಿಬ್ಬೆ ೨೩೧
ಛಿಬ್ಬೆ ೨೩೦
ಛಿರನೋಲ್ ೨೩೧
ಛುಟವನ್ ೨೩೧
ಛುರವಾನ್ ೨೩೦
ಛೋಟ್ ೨೩೦
ಛೋಟಾಭಾಯಿ ೩೯
ಛೋಟಾಭಾಯಿ ಪಟೇಲ್ ೩೯
ಛೌಖಾರ ೨೩೫

## ಜ

ಜಂಗೋತ್ರೆ ೨೩೨
ಜಂಟಿಮತದಾನದ ೩೫೯
ಜಂಡಿಯಾಲ ೩೧೩
ಜಗ್ವಾಲ್ ೩೫
ಜಜೀರುಲ್ ೪೫೬
ಜಜುವಿಟ್ ೪೬೮
ಜನಕರಾಜ ೨೦೪
ಜನಗಣತಿ ೨೪೨
ಜಮದಗ್ನಿ ೨೨೩
ಜಮಾದುವಾ ೨೩೫
ಜಮೀನುದಾರಿಕೆ ೨೦೯
ಜಮ್ಮು ೫೪, ೨೩೧
ಜಯಚಂದ್ ೨೩೦
ಜಯಪುರ ೧೩೯
ಜರದ್ ೨೩೨
ಜರೇಪ್ಕಿ ೧೧೫
ಜರ್ಮನ್ ೪೦೫, ೪೧೩, ೪೩೨
ಜರ್ಮನಿ ೪, ೫, ೧೬೧, ೪೩೮
ಜಲಂಧರ್ ೯, ೨೨೯
ಜಲಗಾರ ೨೬೭, ೨೬೮
ಜಲಪ್ ೨೨೯
ಜಲಮೂಲ ೧೬೫
ಜಲಾಶಯ ೧೯೭
ಜಲಾಸ್ತ್ರ ೨೧೬
ಜಲಿಯನ್‌ವಾಲಾಬಾಗ್ ೧೪೮
ಜಸ್ಟಿನ್ ೪೫೦
ಜಾಂಡ ೨೩೩
ಜಾಂಬಾದ್ ೬೫
ಜಾಂಬೆ ೨೩೨
ಜಾಕ್ ೧೫೬
ಜಾಖೋತ್ರೆ ೨೩೨
ಜಾಟ್ ೪೬, ೫೪, ೬೦, ೬೧, ೬೬, ೬೭
ಜಾಟವ ೫೬, ೬೩, ೬೪, ೬೬, ೬೭
ಜಾಟಿ ೨೩೨, ೨೩೩
ಜಾಟಿಶ್ ೨೩೨
ಜಾಟ್ಯಾ ೨೩೫
ಜಾಡ್ ೨೩೨
ಜಾಡತೋತ್ರೋತಿಯೆ ೨೩೧
ಜಾಡಮಾಲಿ ೨೬೬
ಜಾತವರು ೪೨೮
ಜಾತಿಧರ್ಮ ೧೫೪
ಜಾತಿನಾಶ ೪೩೪
ಜಾತಿಪದ್ಧತಿ ೧೧೯, ೧೯೪, ೨೦೩
ಜಾತಿಬಾಹಿರತೆ ೧೯೬, ೧೯೭, ೧೯೮
ಜಾತಿಭೇದ ೧೮೮, ೨೧೧, ೨೪೩
ಜಾತಿಯತೆ ೪೭೭
ಜಾತಿವಾದ ೪೬೧, ೪೭೩
ಜಾತಿವಾದಿ ೧೨೭, ೪೬೦, ೪೭೪

ಜಾತಿವಾದಿತ್ವ ೪೬೨
ಜಾತೀಯತೆ ೪೨೨
ಜಾಥೀ ೨೩೦
ಜಾನ್‌ಸ್ಮಿತ್ ೧೧೨
ಜಾಫರ್‌ವಾಲ್ ೩೫
ಜಾಮವಲ್ ೨೩೧
ಜಾರಂಗಲ್ ೨೩೨
ಜಾರಜ ೧೭೬
ಜಾರಾಬಿ ೨೩೩
ಜಾರ್ಜ್ ೧೧೬, ೩೦೧, ೪೩೭, ೪೫೬, ೪೭೩, ೪೮೩
ಜಾರ್ಜಿಯಾ ೧೬, ೧೭
ಜಾಲಪ ೨೩೦
ಜಾಲಾಪ್ ೨೩೦
ಜಾಲೋತ್ರೆ ೨೩೨
ಜಾಲ್‌ಪಾಟ್ ೨೩೦
ಜಾಲ್‌ಪುರಿ ೨೩೨
ಜಾಲ್ರಿರಿಯ ೨೩೧
ಜಾಲ್ಲೀ ೪೩೨
ಜಾವಲ ೨೨೬
ಜಾವಿ ೨೩೨
ಜಾಸ್ರವಾ ೨೩೦
ಜಾಸ್ರೋತಾ ೨೩೧
ಜಿಗ್ರ್ಯಾ ೨೩೩
ಜಿಜೋರಿ ೪೭೪
ಜಿಟಯಂ ೨೮೮
ಜಿಮಾಲ್‌ಪುರಿ ೨೩೪
ಜಿಸ್ಬೋರ್ನ್ ೪೭೧
ಜೀಜನ್ ೪೭೫
ಜೀತದಾಳು ೩೫೩, ೩೭೩
ಜೀತಪದ್ಧತಿ ೨೬೮
ಜೀಸಸ್ ೯, ೪೪೮, ೪೪೯, ೪೫೦, ೪೫೪, ೪೬೧, ೪೬೮
ಜುಕಂಡಸ್ ೧೫
ಜುಜಾವಾತಿಯಾರ್ ೨೩೫
ಜುಟಿಯಾ ೨೩೫
ಜುಡಿಯಾ ೧೬೪
ಜುನಾಗಡ ೨೨೭
ಜುವಾಲ್ ೨೩೧
ಜುಸ್ ೨೮೮
ಜೂಬಿ ೬೭
ಜೂಲಿಯಸ್ ೧೩, ೧೧೬
ಜೆಜ್ವಿಟ್ ೪೪೬
ಜೆಫರ್ಸನ್‌ನ ೧೭
ಜೆರಿ ೨೩೨
ಜೆರುಸಲೆಮ್ ೪
ಜೆಹಾಂಗಿರ್ ೩೭೯
ಜೇಂಟ್ರಾಲ್ ೩೭, ೩೮
ಜೇಟ್ಲಿ ೨೨೯
ಜೇಟ್ಲೆ ೨೨೯
ಜೇಠಿ ೨೩೪
ಜೇಠಿಮಲ್ ೨೨೭
ಜೇಮ್ಸ್ ೯, ೧೦೦, ೨೯೭, ೩೩೦, ೩೪೫, ೪೪೯
ಜೇಲಾಲಿ ೨೩೨
ಜೈಕ್ತೆ ೨೩೦
ಜೈಥ್ಯ ೨೩೫
ಜೈಪುರ ೫೭
ಜೋಗಿಯಾ ೨೩೪
ಜೋಟಿ ೨೩೦
ಜೋತಾಷಿ ೨೨೯
ಜೋಧ್‌ಪುರ್ ೬೨
ಜೋರವಾ ೨೩೫
ಜೋರಾಷ್ಟ್ರಮತ ೪೩೬
ಜೋಶಿ ೨೨೯

ಜೋಸೆಫ್ ೪೫೬, ೪೬೬, ೪೮೩
ಜೋಹಾನ್ನಸ್ ೪೩೯
ಜೋಹಾರ್ ೬೫
ಜ್ಞಾಪನ ೨೫೨
ಜ್ಞಾಪನಪತ್ರ ೨೫೦
ಜ್ಯೂ ೨೦೯, ೩೧೮, ೪೩೬
ಜ್ಯೂಲಿಯಸ್ ೪೫೦

## ಝ

ಝನಾದಿಯಾ ೨೩೪
ಝಮಾನ್ ೨೩೦
ಝಮುತಿಯಾರ್ ೨೩೧
ಝಾಂಗ ೨೨೯
ಝಾಡಮಾಲಿ ೨೨, ೩೦, ೫೩, ೫೭, ೧೧೪, ೧೩೦
ಝಾಡೆ ೨೨೬
ಝಾಪಾರು ೨೩೨
ಝಾಲು ೨೩೨
ಝಾಲೋರಾ ೨೨೮
ಝಾವಡು ೨೩೨
ಝಿಂಗನ್ ೨೨೯
ಝಿಂಗಾನ್ ೨೨೯
ಝಿಂದಾದ್ ೨೩೨
ಝೆನೊ ೪೫೦
ಝೇವಿಯರ್ ೪೩೯, ೪೪೦, ೪೪೪, ೪೬೯, ೪೭೪
ಝೋಲ್ ೨೩೧

## ಟ

ಟಕ್ ೨೩೧
ಟಫ್ಟ್ಸ್ ೪೨೩
ಟಾಗಲೆ ೨೩೦
ಟಾಣೂ ೬೫
ಟಾನೆ ೧೩೧
ಟಾಲ್ಸ್ಟಾಯ್ ೩೭೮
ಟಿಕ್ಕು ೨೩೨
ಟಿನುನಿ ೨೩೦
ಟೀಲೆ ೪೧೫
ಟುಕೆ ೨೩೪
ಟೆಂಗ ೨೩೨
ಟೆರ್ಕಾ ೨೩೪
ಟೆರ್ಟ್ಯೂಲಿಯನ್ ೪೫೦
ಟೆವುಂಟಾ ೨೩೩
ಟೆಸ್ಟಮೆಂಟ್ ೪೨೬, ೪೨೭
ಟೇಕಬಾರಾ ೨೩೬
ಟೈಲರ್ ೩೫೪
ಟೋಟೆ ೨೩೦
ಟೋರಿ ೧೫೪, ೩೫೫
ಟೋಲೆ ೨೩೦
ಟೋಲ್ಕಿಯಾ ೨೨೬
ಟ್ಯಾನೀ ೪೨೩
ಟ್ಯೂಅಸ್ ೧೮೧
ಟ್ರಾಂಕೊಬಾರ್ ೪೩೯
ಟ್ರಾಟನ್ ೧೧೫
ಟ್ರಾವಂಕೂರ್ ೩೯೪, ೩೯೭, ೩೯೮, ೩೯೯, ೪೦೧, ೪೦೨
ಟ್ರಿಗೇಮಿಮಸ್ ೧೪
ಟ್ರುಮರಾಯ ೨೩೨

## ಠ

ಠಾಕೂರ್ ೫೫, ೫೬, ೬೨, ೬೩, ೬೬, ೨೩೬

## ಡ

ಡಂಡಸ್ ೪೭೧
ಡಕೋಟಾ ೨೩೭

ಡಚ್ ೯೯, ೧೦೦, ೪೪೬, ೪೬೯, ೪೭೨, ೪೭೩,
೪೭೪
ಡಫ್ ೪೬೦
ಡರ್ಖೀಮ್ ೨೦೦, ೨೦೧
ಡಾಂಗಮಾರ್ ೨೩೧
ಡೂಮ್ಸ್‌ಡೇ ೯೩
ಡೆಂಝಿಲ್ ೧೮೩
ಡೆನ್ಮಾರ್ಕ್ ೧೬೧, ೪೧೩, ೪೩೮, ೪೩೯
ಡೆಲ್ಲಿ ೩೧೦, ೩೧೨
ಡೇನಿಯಲ್ ೧೧೬
ಡೇವಿಡ್ ೪೭೫, ೪೭೬
ಡೈಕ್ಲೇಟಿಯನ್ ೪೫೧
ಡೈಯರ್ಸ್ ೧೪೮
ಡೊಂಬರು ೪೨೮
ಡೋಗ್ರೆ ೨೩೧
ಡೋಪಲ್‌ಪುರ ೨೯೨
ಡೋಮ್ ೩೫
ಡೋಮರು ೧೭೬
ಡೋಲಕ್ ೨೭೩, ೨೭೪
ಡೌನ್ ೬೪
ಡ್ಯಾನಿಷ್ ೪೩೭
ಡ್ಯೂಕ್ ೧೧೫, ೪೭೯
ಡ್ಯೂಯಿ ೪೨೩
ಡ್ರಾಬಿ ೨೩೩
ಡ್ರಾಲ್ ೨೩೩
ಡ್ರೇಕನೂ ೯೯

## ಢ

ಢಾಂಗು ೬೪
ಢಾಲ ೧೮೦
ಢೋಲ್ಕಾ ೫೦

## ತ

ತಂಗಮಾದಿಯಾ ೨೨೮
ತಂಗಾನಿವಾತ್ ೨೩೦
ತಂಜಾವೂರು ೪೩೯
ತಂಡಿಕ್ ೨೩೧
ತಂಡುಲೋಧಾ ೨೨೭
ತಂಡೌಲಿ ೨೩೪
ತತ್ತ್ವಜ್ಞಾನ ೪೪೮
ತತ್ತ್ವಜ್ಞಾನಿ ೧೩, ೪೫೦
ತತ್ವಜ್ಞಾನ ೪೫೦
ತಪೋಣ್ರಾ ೨೨೮
ತರ್ಕಿಷ್ ೪೫೬
ತಲಾಠಿ ೩೬, ೩೭, ೩೮, ೩೯
ತಲ್ಲನ್ ೨೩೦
ತವಕಪುರಿ ೨೩೪
ತಾಂಬೋಲಿ ೨೩೬
ತಾಡ್ ೨೩೦
ತಾದಿಯಾ ೪೬೬
ತಾಮ್ರಲಿಪ್ತಕ ೨೨೩
ತಾಲವ ೨೩೫
ತಾಲಾಜಿಯಾ ೨೨೮
ತಿಖೆ ೨೨೯
ತಿತ್ರಾಗಾ ೨೨೮
ತಿನ್ನೇವಲ್ಲಿ ೧೬೮
ತಿನ್ಮಣಿ ೨೩೦
ತಿಪ್ಪಿ ೨೩೪
ತಿಬ್ಬೆಯಾ ೨೩೫
ತಿರಗುಲ ೨೨೬
ತಿರಗುವಾತಿ ೨೩೫
ತಿರಹತ್ ೨೩೬
ತಿರುಚಿನಾಪಲ್ಲಿ ೪೩೯, ೪೬೭
ತಿರುವಡೂರ್ ೧೪೨

ತಿರುವಾಂಕೂರು ೧೦, ೧೭೦, ೨೫೮
ತಿರ್‌ಫಾಲಾ ೨೩೫
ತಿಲಕ್ ೩೦೫, ೩೦೭, ೪೮೨
ತಿಲೋತಿಯಾ ೨೨೮
ತಿವಾಡಿ ೨೨೯
ತಿವಾರಾ ೨೨೯
ತಿವಾರಿ ೨೩೩, ೨೩೪
ತುಂಬುರ ೨೧೨
ತುಖಾರ ೨೧೨
ತುರ್ಕಸ್ತಾನ ೪೩೭
ತುರ್ಕಿ ೩೧೮
ತುಳ್ವ ೨೩೭
ತೆಂಗ್ ೨೩೩
ತೆಕ್ಕಿತೇರು ೧೪೨
ತೇಜ್ ೪೩, ೪೬, ೪೮
ತೇಜಪಾಲ್ ೨೨೯
ತೇಜಪಾಲ ೨೩೦
ತೇವರಾಸಿ ೨೩೪
ತೇವಾರ ೪೬೬
ತೇಹ್ಸಿಲ್‌ನ ೪೫
ತೈತ್ತಿರಿಯ ೨೦೦
ತೈಲಂಗಣಾ ೨೨೬
ತೈಲಿಂಗಾ ೨೨೮
ತ್ಯಾಹಯೆ ೨೩೧
ತ್ರಭಾಲ್ ೨೩೨
ತ್ರಾಕಾರಿ ೨೩೨
ತ್ರಿಪಾನೆ ೨೨೯
ತ್ರಿಪಾಲ ೨೨೭
ತ್ರಿಫಲಾ ೨೩೫
ತ್ರಿವಡಿ ೨೨೭
ತ್ರಿವೇದಿ ೨೨೭, ೨೩೪
ತ್ರಿಶಂಕು ೨೧೭, ೨೧೮, ೨೧೯

## ಥ

ಥಂಥಾರ್ ೨೩೨
ಥಗ್ಗರು ೧೫೭, ೧೫೮, ೧೫೯
ಥನ್‌ಮಾಥ್ ೨೩೨
ಥರ್ಸ್‌ಟನ್ ೧೬೭
ಥಾನು ಪಿಳ್ಳೈ ೪೦೧
ಥಾಪಲ್ ೨೩೨
ಥಾಪ್ಪೆ ೨೩೧
ಥಾಮಸ್ ೧೭, ೧೯೭, ೪೩೮, ೪೪೪
ಥಾವುರ್ ೨೩೨
ಥಿನೋಜಾ ೨೨೭
ಥಿಯಾ ೬೧
ಥಿಯೊಪ್ರಾಸ್ಟಸ್ ೪೫೦
ಥೋಲ್ಕಾ ೫೦

## ದ

ದಂಗಾವಲ ೨೨೯
ದಂಡಿಯಾತ್ರೆ ೩೨೮
ದಗಾಡು ೨೩೧
ದತ್ತಾತ್ರೇಯ ೨೨೨
ದತ್ತಾರಸುರ್ ೨೩೧
ದತ್ತಿದಾನ ೪೬೦
ದಧೀಛಾ ೨೨೮
ದನೊಬಿಲಿ ೪೬೬
ದರ್ಶನಶಾಸ್ತ್ರ ೪೪೭, ೪೪೮
ದಲಿತ ೧೪೩, ೨೫೨, ೨೭೮
ದಲಿತವರ್ಗ ೨೪೨, ೨೪೬, ೨೫೦, ೨೫೧, ೨೫೨, ೨೭೨, ೩೦೪, ೩೧೯, ೩೨೦, ೩೨೧, ೩೨೨, ೩೨೩, ೩೨೪, ೩೩೫
ದಲಿತಸಂಸ್ಥೆ ೩೨೦
ದಲೈ ೫೭
ದಲ್ಲಾಳಿ ೧೨೮, ೪೫೪

ದಶಹರಾ ೨೨೮
ದಹಿಮಾ ೨೩೭
ದಹೇಂದ್ರ ೨೩೫
ದಾದಬೊಹ್ಯೆ ೨೫೪
ದಾದರ್ ೩೬, ೨೫೮, ೨೫೯, ೨೬೦, ೨೬೧, ೨೬೨, ೨೬೩, ೨೭೨, ೩೭೬
ದಾದ್ರೋರಿಚ್ ೨೩೨
ದಾನಾಲ್ ೨೩೧
ದಾಬ್ ೨೩೨
ದಾಮ್ ೨೫೨
ದಾಮಾ ೨೩೪
ದಾಮು ೧೬೮, ೧೬೯
ದಾಮೋದರನ್ ೪೦೧
ದಾರದರು ೨೨೩
ದಾರ್ಜಿಗೋರ್ ೨೨೬
ದಾರ್ಶನಿಕ ೧೬೫
ದಾಲಭಾಲ್ಲಿ ೨೩೧
ದಾವುರಾವಾ ೨೩೪
ದಾಸ್ಯತ್ವ ೭೬, ೧೩೭
ದಾಸ್ಯವೃತ್ತಿ ೧೩೬
ದಾಹಿಮಾ ೨೨೮
ದಿಪ್ತಿ ೨೩೨
ದಿಯಾಮ್‌ಪರ್ ೪೪೫
ದಿಲಿಪಾಪಾರ್ ೨೩೫
ದಿವಾ ೨೩೭
ದಿವ್ಯವಾಣಿ ೧೬೫
ದಿವ್ಯಾತ್ಮ ೭೫
ದೀಕ್ಷಿತ್ ೨೩೦, ೨೩೩
ದುಧಾಗಾಮಿ ೨೩೪
ದುಧೋಲಿಯಾ ೨೩೫
ದುಬಾಯ್ಸನು ೨೬೬
ದುಬೆ ೨೩೧, ೨೩೩, ೨೩೪
ದುಭೆ ೨೩೧
ದುರಾನಿ ೨೩೩
ದುಲಿ ೨೩೩
ದುಸದ್ಯರು ೨೫೨
ದುಹಾಲ್ ೨೩೨
ದೃಶ್ಯಾಶೌಚ ೧೬೭, ೧೬೮
ದೆಮೆತ್ರಿಯಸ್ ೪೩೮
ದೆಹಲಿ ೧೦, ೪೩, ೬೩, ೩೦೭, ೩೧೩, ೩೧೪, ೩೧೫, ೩೧೬
ದೇಮಯಾ ೨೩೬
ದೇವಗೌಮ ೨೩೫
ದೇವತಾರಾಧನೆ ೪೭೪
ದೇವತಾವಾದಿ ೪೪೭
ದೇವದೂತ ೪೫೦
ದೇವನುಡಿ ೨೦೨
ದೇವಮಂದಿರ ೫
ದೇವರುಬಾ ೨೨೬
ದೇವರ್ರೈನ್ಯಾ ೨೩೫
ದೇವಸ್ ೫೯, ೨೯೨
ದೇವಾನೀ ೧೯೭
ದೇವೇಂದ್ರ ೨೨೦
ದೇಶಪಾಂಡೆ ೩೦೭, ೩೦೮, ೩೧೧, ೩೧೨, ೩೧೪
ದೇಶವಾಲ್ ೨೨೭
ದೇಹೈಡು ೨೩೧
ದೈದ್ರಿಯೆ ೨೩೦
ದೈವಜ್ಞಾನ ೨೧೨
ದೈವತ್ವ ೭೯
ದೈವಪೂಜೆ ೪೭೪
ದೈವಸಂಭೂತ ೨೦೩, ೨೦೫, ೨೦೭, ೨೦೯
ದೈವಾಜ್ಞೆ ೪೨೨
ದೈವಾದೇಶ ೨೦೫
ದೈವಾಸ್ತ್ರ ೨೧೬

ದೈವೀಜ್ಞಾನ ೨೧೮, ೪೫೦
ದೈವೀಪುರುಷ ೭೯
ದೈವೀಶಕ್ತಿ ೨೦೪, ೨೧೬
ದೈವೇಚ್ಛೆ ೪೭೨
ದೈವೋ ೨೦೦
ದೊಂಬರು ೧೭೬
ದ್ಯರಾಟೆ ೧೭೭
ದ್ಯಾಬುದು ೨೩೧
ದ್ರಾವಡೆ ೨೨೯
ದ್ರಾವಿಡ ೩೬, ೨೨೫, ೨೨೮, ೨೩೬
ದ್ರೊಫೇಡಾ ೧೮
ದ್ವಾರಕಾ ೧೭೦
ದ್ವಿಜ ೭೮, ೧೦೮
ದ್ವೈತ ೨೦೨, ೪೪೭

## ಧ

ಧನುಕರ ೨೫೧
ಧನೌರಿ ೬೪
ಧರ್ನ್ಸ್ಸ್ ೨೨೯
ಧರಮೋದಾ ೨೨೭
ಧರ್ಮ ೪೧೬, ೪೩೪, ೪೪೦
ಧರ್ಮಪ್ರಚಾರಕ ೪೫೩, ೪೬೮
ಧರ್ಮಪ್ರಸಾರಕ ೪೫೪
ಧರ್ಮಬಾಹಿರ ೮೦
ಧರ್ಮಬೋಧಕ ೪೬೫, ೪೭೨, ೪೭೩, ೪೭೪
ಧರ್ಮಭೀರುತನ ೧೨
ಧರ್ಮಮಂಡಲಿ ೪೭೩, ೪೭೮
ಧರ್ಮರಕ್ಷಕ ೧೯೮
ಧರ್ಮಶಕ್ತಿ ೪೨೯
ಧರ್ಮಶಾಲೆ ೫೬, ೫೭, ೬೦, ೧೧೪
ಧರ್ಮಶಾಸನ ೨೮೪
ಧರ್ಮಶಾಸ್ತ್ರ ೭೭, ೨೬೪, ೨೮೪, ೪೧೫, ೪೮೧
ಧರ್ಮಶಾಸ್ತ್ರಕಾರ ೧೧, ೭೫, ೮೬, ೧೩೬
ಧರ್ಮಸಂಹಿತೆ ೧೬೨
ಧರ್ಮಸೂತ್ರ ೧೨೦
ಧರ್ಮಾಂತರ ೪೨೨, ೪೨೯, ೪೩೩, ೪೪೭
ಧರ್ಯಾ ೩೮, ೪೦
ಧಾಂಡೆ ೨೩೦
ಧಾಕುರೆ ೨೩೨
ಧಾತುರಾ ೨೩೪
ಧಾನಿಕ್ ೨೩೧
ಧಾಮಿ ೨೨೯, ೨೩೦
ಧಾರ್ ೫೯
ಧಾರಿಯಾಂಭಾ ೨೩೨
ಧಾರ್ಮಿಕ ೮, ೪೧೮
ಧಿಂಡೆ ೨೩೦
ಧಿಗ್ವಾಥ ೨೩೪
ಧಿನೋಜಾ ೨೨೭
ಧುಸಿ ೨೩೨
ಧೂಮರು ೨೫೨
ಧೇಗ್ವಾ ೨೩೪
ಧೇಡ್ ೪೮
ಧೋಲಾಲ್ ೨೩೨
ಧೋಲೆ ೨೩೧
ಧೋಸೆ ೨೩೧

## ನ

ನಂದನರು ೨೩೭
ನಂದಬಲಯ ೨೯೨
ನಂದರಾಮ್ ೫೫, ೫೬
ನಂದಾ ೨೩೬
ನಂದಿಕೋವಿಲಪಟ್ಟಿ ೧೪೨
ನಂದೋದ್ರಾ ೨೨೮
ನಂಬೂದ್ರಿ ೨೩೭

ನಖಭೌರಿ ೨೩೫
ನಗರಸಭೆಯು ೨೫೯
ನಗರಸೇತ್ ೩೪
ನಜೀರ್ ೨೫೧
ನಟ್ಟಿಕಾ ೬೧
ನರವನಕರ್ ೨೨೬
ನರಸಿಂಹ ೨೯೯
ನರಸೀಪಾರಾ ೨೨೮
ನವಭಾರತ ೨೯೭
ನವಾಗಾಂವ್ ೪೯
ನವಾಜ್ ೫೪
ನವಾಲೆ ೨೨೯
ನವಿನಿಪಟ್ಟಿ ೧೪೨
ನಹುಷ ೨೧೩, ೨೧೪
ನಹ್ರು ೧೩೯
ನಾಕಿಬ ೨೩೩
ನಾಗದ ೨೩೫
ನಾಗಪುರ ೩೦೪, ೩೦೬, ೩೨೨, ೩೨೭
ನಾಗರಬ್ರಾಹ್ಮಣ ೨೨೬, ೨೨೭
ನಾಗರರು ೨೨೭
ನಾಗರಿ ೨೩೩
ನಾಗಾ ೧೫೬, ೨೩೦
ನಾಗಾರಿಯಾ ೨೩೩
ನಾಗೇ ೨೨೯
ನಾಚ್ ೬೫
ನಾಝಿ ೨೦೮
ನಾಡಕೂಟ ೧೯೪
ನಾಡಭಾಷೆ ೧೯೪
ನಾಡಿರ್ ೨೩೨
ನಾಡೌಲಿ ೨೩೪
ನಾಣ್ಯಮುದ್ರೆ ೧೫
ನಾಥಮ್ ೧೪೧
ನಾನಕ್‌ಚಂದ್ ೨೫೧
ನಾನ್‌ಬರ್ಟ್ ೧೧೫
ನಾಪಾಲಾ ೨೨೮
ನಾಭ ೨೩೦
ನಾಯಕವಾಲಾ ೨೨೮
ನಾಯಡಿ ೧೬೭
ನಾಯಪುರಾ ೨೩೫
ನಾಯರ್ ೧೭೯, ೧೮೦, ೧೮೧, ೧೮೨, ೪೦೧
ನಾಯರೆ ೧೭೯, ೧೮೦, ೧೮೧, ೧೮೨
ನಾರಕೀಯತೆ ೧೬೬
ನಾರಗಸೆ ೩೪
ನಾರದ್ ೨೩೦
ನಾರದ ೭೫, ೭೬, ೭೭, ೮೧
ನಾರದಸ್ಮೃತಿ ೨೮೪
ನಾರಾಯಣದೇವರ ಕೇರಿ ೪೪
ನಾರಾಯಣಸ್ವಾಮಿ ೪೦೨
ನಾರಿಮನ್ನರು ೩೦೦
ನಾರ್ತಂಬರ್ ೪೧೩
ನಾರ್ಮನ್ ೯೩
ನಾರ್ವೆ ೪೩೮
ನಾವೊಮಿ ೪೨೬
ನಾಸಿಕ್ ೩೦೩, ೩೧೬, ೩೧೭, ೩೭೫, ೩೭೬,
೩೯೩
ನಾಸ್ತಿಕ ೨೨೧
ನಾಸ್ತಿಕವಾದ ೨೦೪
ನಿಕಾಶಾ ೪೩೯
ನಿಕೇಟೋರಸ ೧೭೪
ನಿಕೋಲಾಸ್ ೯೭, ೧೧೫
ನಿಚ್ವೆ ೨೩೩
ನಿಝಾಮಬಾದ್ ೨೩೫
ನಿಮ್ನಜಾತಿ ೬೭
ನಿರಂಕುಶಮತಿ ೨೮೧

ನಿಶಾಂಕ ೨೩೬
ನಿಶಾದೇವತೆ ೨೧೪
ನಿಷಾಢ ೨೧೦
ನಿಷಾದ ೨೧೮
ನೀಗ್ರೊ ೯೮, ೯೯, ೧೦೦, ೧೦೪, ೧೧೬, ೧೧೭, ೩೭೭
ನೀಗ್ರೋಗಳ ೧೧೬
ನೀಚೆ ೨೩೫
ನೀತಿಸೂತ್ರ ೧೦೭, ೧೦೮
ನೆದರ್ ೪೩೮
ನೆಪೋಲಿಯನ್ ೪
ನೆವರಿ ೨೯೨
ನೆಸ್‌ಫೀಲ್ಡ್ ೨೦೩
ನೆಹರು ೩೧೫, ೩೨೨
ನೇಪಾಳ ೨೩೬
ನೇವರ್ಶಿಯಾ ೨೩೫
ನೇಹರ್ ೨೩೦
ನೈಜುರ್ ೩೮೨
ನೊಬಿನ್ ೨೯೫
ನೊಬಿಲಿ ೪೬೬, ೪೭೪
ನೋಕ್ ೨೩೧
ನೋಬೆಲ್ ೪೭೭
ನೌರಿ ೨೩೨
ನ್ಯಾಯತತ್ವ ೪೨೩
ನ್ಯಾಯಲಯ ೧೪೮
ನ್ಯಾಯಶಾಸನ ೨೯೫
ನ್ಯಾಯಸ್ಥಾನ ೩೬೦
ನ್ಯಾಯಾಧಿಕಾರ ೩೭೬
ನ್ಯಾಯಾಧಿಕಾರಿ ೨೭೩, ೨೭೯
ನ್ಯಾಷನಲಿಸ್ಟ್ ೩೧೫
ನ್ಯುಮೋನಿಯಾ ೩೪
ನ್ಯೂಟನ್ ೧೧೫
ನ್ಯೂಯಾರ್ಕ್ ೧೮

**ಪ**

ಪಂಚಕರ್ಣ ೨೩೦
ಪಂಚಗೌಡ ೨೩೬
ಪಂಚದ್ರಾವಿಡ ೨೨೫, ೨೨೮, ೨೩೬
ಪಂಚಮವಿರೋಧಿ ೪೭೩
ಪಂಚವರ್ಣ ೧೧೯
ಪಂಚಾಯಿತಿ ೬೦, ೧೪೪, ೧೪೮, ೩೦೭
ಪಂಥಾನಿ ೨೩೪
ಪಂಜ್ ೨೩೦
ಪಂಜಾನ್ ೨೨೯
ಪಂಜಾಬ್ ೧೦, ೨೮, ೪೬, ೫೯, ೧೮೩, ೨೨೯, ೨೫೦, ೨೫೧, ೨೫೫, ೨೫೬, ೨೬೮, ೩೦೪, ೩೧೨, ೩೩೧, ೩೫೦, ೪೮೪
ಪಂಜಾಬಿ ೩೩೫
ಪಂಡಾ ೨೩೬
ಪಂಢರಪುರಕ್ಕೆ ೪೭೪
ಪಂಬಾರ್ ೨೩೧
ಪಗಡಿ ೫೮
ಪಗರಿ ೨೯೧
ಪಠಾಹೇರ ೫೫
ಪಟೇಲ ೩೮, ೫೨, ೨೯೧
ಪಟ್ವಾರಿ ೩೬, ೫೮, ೬೪, ೨೯೧
ಪಠಾಣ್ ೨೪, ೨೩೩, ೩೮೬
ಪಡೋರ್ ೨೩೩
ಪನೀನ್ಸ್ ೧೮೨
ಪನೌಲಿ ೨೩೪
ಪನ್ನೀರ್‌ಸೆಲ್ವನ್ ೩೯೮, ೩೯೯
ಪನ್‌ಪಾಸಿ ೨೫೨
ಪನ್ಯಾಲು ೨೩೧
ಪಪಸಿಯ ೪೪೪

ಪರಗೋರಾ ೨೨೮
ಪರತಂತ್ರ ೭೭
ಪರತತ್ತ್ವ ೧೬೫
ಪರಬ್ರಹ್ಮ ೮೩
ಪರಮಾಧಿಕಾರ ೧೦೪, ೪೪೫
ಪರಮಾರ್ಥ ೧೬೫
ಪರಯಾ ೪೨೮, ೪೬೨, ೪೭೩, ೪೭೪, ೪೭೫, ೪೭೬, ೪೭೭
ಪರಯ್ಯಾ ೩೨, ೩೩, ೩೪, ೬೨, ೬೮
ಪರಶುರಾಮ ೨೦೪, ೨೨೩
ಪರಾಂಜೆ ೨೩೦
ಪರಾಶರಾ ೨೨೯
ಪರಾಶರಿಯಾ ೨೨೮
ಪರಾಶಾರಾ ೨೩೧
ಪರೀನ್ಸ್ ೧೮೨
ಪರೆಯ ೨೬೬
ಪರ್ಗಣ ೨೯೨
ಪರ್ಶಿಯನ್ ೪೩೯
ಪರ್ಶಿಯಾ ೨೦೮
ಪರ್ಸ್‌ಫಂಡ್ ೩೭೨
ಪಲ್ಲರು ೪೬೨
ಪಲ್ಲಿವಾಲಾ ೨೨೮, ೨೩೭
ಪಾಂಗೇ ೨೩೨
ಪಾಂಟೆ ೨೩೦
ಪಾಂಡೆಯವರು ೨೩೫
ಪಾಂಡೋತ್ರೆ ೨೩೧
ಪಾಂಥೆ ೨೩೦
ಪಾಂಪೇ ೧೫
ಪಾಗಾನಿಜಮ್ ೪೫೩
ಪಾಟಲ್ ೨೩೨
ಪಾಟಲು ೬೬
ಪಾಟಿಯಾಲ ೧೦, ೭೧
ಪಾಟೀಲ್ ೫೮
ಪಾಟೆ ೨೩೬
ಪಾಟ್ಲಯಾಲ್ ೨೩೩
ಪಾಟ್ಲಾಲ್ ೨೩೩
ಪಾತಕವಲಿಯಾ ೨೩೪
ಪಾಡೆ ೨೩೩
ಪಾಣಿನಿ ೧೬೪
ಪಾದ್ಮೀವಾಲಾ ೨೨೮
ಪಾದ್ರಾಸ್ ೪೭
ಪಾದ್ರಿ ೯೫, ೯೭, ೧೧೦, ೨೦೭, ೨೯೫, ೪೪೬, ೪೬೯
ಪಾಥೆ ೨೩೦, ೨೩೧
ಪಾಧ್ಯರು ೨೨೬
ಪಾನಯಾಲ್ ೨೩೧
ಪಾನ್ವಾ ೨೩೪
ಪಾಭಿ ೨೩೦
ಪಾಮಲ್‌ಪುರ ೨೯೨
ಪಾಯಸಿ ೨೩೩
ಪಾಯಾಲಾ ೬೫
ಪಾರನ್‌ಗ್ರಾಹಿ ೨೩೬
ಪಾರವಾ ೨೩೩, ೨೩೪
ಪಾರವಾಲಿಯಾ ೨೨೮
ಪಾರಸಾ ೨೩೪
ಪಾರಾಯನಾ ೨೩೩
ಪಾರಿಮ್ ೨೩೩
ಪಾರೀಖಾ ೨೩೭
ಪಾರೀಷಾ ೨೩೫
ಪಾರ್ಮಾರ್ ೩೯
ಪಾರ್ಲೆ ೩೭೭
ಪಾರ್ಸಿ ೧೬೬, ೪೩೬
ಪಾಲ್ಕಿ ೬೪
ಪಾಲ್ಫಾಟ್ ೧೭೦

ಪಾಲ್ತು ೨೩೦
ಪಿಂಗನ್ ೨೨೯
ಪಿಂಡಾದ್ ೨೩೨
ಪಿಂಡಾರಿ ೧೫೭, ೧೫೮
ಪಿಕೆಡೆಲ್ಲಿ ೩೩೩
ಪಿಚೌರಾ ೨೩೪, ೨೩೫
ಪಿಟ್ ೪೭೦
ಪಿತೃಪೂಜೆ ೧೫೭
ಪಿಪರ್ ೨೩೦
ಪಿಫ್‌ಲೋಡ ೨೯೨
ಪಿರ್ ೨೩೩
ಪಿರಮಿಡ್ಡು ೨೩, ೧೮೮, ೧೮೯
ಪಿಲ್ಸ್‌ನರ್ ೨೯೯
ಪಿಷಾನ್ ೨೩೩
ಪಿಸ್ತಾ ೨೩೨
ಪೀಟರ್ ೪೬೯
ಪುಕರ್ಣಿ ೨೨೯
ಪುಟಾವಾ ೨೩೪
ಪುಣೆ ೬೫
ಪುನರ್ಮತಾಂತರ ೪೩೫
ಪುರ್ ೫೪
ಪುರಡಾವಣ್ಣ ೧೬೮
ಪುರಭವನ ೪
ಪುರಸಭೆ ೧೫
ಪುರೂರವ ೨೧೨, ೨೧೩
ಪುರ್ನಿಯಾ ೨೩೬
ಪುಲಾಯಾರ್ ೩೯೯
ಪುಲಿಚಾತನ್ ೬೫
ಪುಲ್ಲಿಪಟ್ಟಿ ೧೪೭
ಪುಷ್ಕರರು ೨೩೭
ಪುಷ್ರತ್ ೨೨೯
ಪೂಸರಿ ೧೪೬
ಪೃಥಿಕ್ ೫೭
ಪೃಥ್ವಿ ೧೯೮, ೧೯೯, ೨೧೨, ೨೧೬, ೨೧೮, ೨೨೨, ೨೨೩, ೪೪೯
ಪೃಥ್ವಿಪಾಲ್ ೨೩೨
ಪೆಕ್ಯುಲಿಯಮ್ ೧೦೩
ಪೆನ್ಸಿಲ್ವೇನಿಯಾ ೧೮
ಪೆಪಿನ್ ೪೧೩
ಪೆಪ್ಸು ೭೧, ೭೨
ಪೆರು ೯೭
ಪೆರುಮಾಳ್ ೪೭೪
ಪೆಸಿಫಿಕ್ ೯೮
ಪೇಟನ್ ೧೧೮
ಪೇಟ್ಲಿ ೨೨೯
ಪೇಡ್ನೆಕರ್ ೨೨೬
ಪೇಪಾರಾ ೨೩೩
ಪೇಶಾವರ್ ೩೬೯
ಪೈಥಾಗೋರಸ್ ೪೫೦
ಪೈಹಿಯಾ ೨೩೫
ಪೊನ್ನಾನಿ ೬೧
ಪೊಪ್ಲಾರ್ ೪೬೯
ಪೊರಜ ೧೫೬
ಪೊಲಿನೇಸಿಯಾ ೧೬೨
ಪೋಖಾರ ೨೩೭
ಪೋಖಾರನಾ ೨೩೩
ಪೋತೀಸ್ ೨೩೭
ಪೋತೆದಾರ್ ೨೩೨
ಪೋತ್ರೆ ೨೨೯
ಪೋಪ್ ೯೪, ೯೯, ೪೪೪, ೪೪೫, ೪೬೭
ಪೋರ್ಚುಗಲ್ ೯೯, ೪೪೫, ೪೬೬, ೪೬೯
ಪೋರ್ಚುಗೀಸ್ ೯೭, ೯೮, ೧೭೭, ೧೮೩, ೪೩೯, ೪೪೫, ೪೪೬, ೪೬೯
ಪೋರ್ಟಿಕಸ್ ೧೪

ಪೋಲಿಯಾಸ್ ೧೮೨
ಪೌಂಡ್ ೨೯೮, ೪೩೮
ಪೌರತ್ವ ೪೨೭
ಪೌರಸಂಸ್ಥೆ ೭೩, ೨೭೧
ಪೌರಸಭೆ ೫೨, ೨೫೯
ಪ್ಯಾಂಟೊನಸ್ ೪೩೮
ಪ್ಯಾಡಿ ೩, ೪, ೧೧೨, ೧೧೩
ಪ್ಯಾರಿಸ್ ೪, ೧೨೬
ಪ್ಯಾರೆಲಾಲ್ ೩೫೦
ಪ್ಯಾಲ್ ೨೩೨
ಪ್ಯಾಲಟೈನ್ ೧೩
ಪ್ರಜಾಪತಿ ೨೧೨
ಪ್ರಜಾಪ್ರಭುತ್ವ ೬೨
ಪ್ರಣಾಲಿಕೆ ೨೦೦, ೨೦೩, ೨೦೫
ಪ್ರತಾಪ್ ೪೩, ೪೪, ೪೫, ೪೮, ೪೯, ೫೯, ೬೨, ೧೧೩
ಪ್ರಭುವರ್ಗ ೧೩೪, ೧೫೪
ಪ್ರಮಾಣಗ್ರಂಥ ೨೮೪
ಪ್ರವಾದಿ ೩೩೩, ೪೫೦
ಪ್ರವಾಸಕಥನ ೧೭೫
ಪ್ರಸಾದ್‌ಜೀ ೪೬
ಪ್ರಹೋತ್ ೨೩೧
ಪ್ರಾಚ್ಯಶಾಸ್ತ್ರ ೪೩೨
ಪ್ರಾ(ಪ್ರೊ)ಟಸ್ಟಂಟ್ ೯೬, ೨೯೫, ೪೩೯, ೪೪೬, ೪೪೧, ೪೬೨, ೪೬೮, ೪೬೯, ೪೭೪, ೪೭೫, ೪೭೭, ೪೭೮
ಪ್ರಾದಿಮ ೪೧೯, ೪೨೩, ೪೨೭, ೪೩೬, ೪೪೯
ಪ್ರಾಸಿಕ್ಯೂಷನ್ ೩೭೬
ಪ್ರಿನ್ಸ್‌ಟನ್ ೧೬
ಪ್ರಿಸ್‌ಬೈಟೇರಿಯನ್ ೧೧೭
ಪ್ರೇಂ ೬೪
ಪ್ರೇತಾವಾಲಾ ೨೨೮
ಪ್ರೋಟ್ ೨೩೧
ಪ್ಲಿನಿ ೧೨, ೪೫೦
ಪ್ಲೇಗು ೧೬೫
ಪ್ಲೇಟೋ ೨೭೬, ೪೫೦
ಪ್ಲೈಮತ್ ೯೯


## ಫ


ಫತೇಫರ್ ೫೬
ಫತೇಚಂದ್ ೬೩
ಫರಾಬಾದ್ ೧೫೬
ಫರೀದಾಬಾದ್ ೬೦
ಫರೂಕಾಬಾದ್ ೫೬
ಫಾಂಬ್ಬಿ ೨೩೩
ಫಾರಸೀ ೩೮೪
ಫಾಲುನ್‌ಫಾನ್ ೨೩೨
ಫಾಲೆನ್ಸಿಯಾ ೯೪
ಫಿನ್ಲೆಂಡ್ ೪೩೮
ಫಿಲಡೆಲ್‌ಫಿಯಾ ೧೭
ಫೂಕ್ಲಿಯಾನ್ ೪೫
ಫೆಡುಸ್ ೨೩೭
ಫೆಲ್ಪ್ಸ್ ೧೧೫, ೧೧೬
ಫೋಡೋರ್ನ್‌ಡೈಕ್ ೪೫೨
ಫೋರ್ಡ್ ೩೬೫
ಫೌಂಟನ್ ೩೯
ಫ್ರಾಂಕರು ೪೧೩
ಫ್ರಾನ್ಸ್ ೪, ೫, ೧೬೧, ೨೬೫, ೪೩೮, ೪೩೯
ಫ್ರಾನ್ಸಿಸ್ ೯೯, ೧೫೪, ೪೩೯, ೪೪೦, ೪೪೨, ೪೪೪, ೪೬೯, ೪೭೪
ಫ್ರೀಮೆನ್ ೧೧೭
ಫ್ರೆಂಚ್ ೨೬೫, ೪೦೫
ಫ್ಲಾಕಸ್ ೧೨
ಫ್ಲೋಡಾ ೫೨

ಬ

ಬಂಕನ್ ೨೩೩
ಬಂಗಾಳ ೧೦, ೧೯೭, ೨೩೫, ೨೫೨, ೨೫೬, ೩೩೧, ೩೪೧, ೩೫೦, ೪೬೧, ೪೭೩, ೪೭೪, ೪೭೫
ಬಂಡೋಆನ್ ೨೨೮
ಬಂಡೋಲ್ ೨೩೩
ಬಕಾರುವಾ ೨೩೪
ಬಕಿಂಗ್‌ಹ್ಯಾಂ ೧೭, ೧೧೬, ೩೩೦
ಬಕ್ಷ್ ೫೫
ಬಟಾಲ ೩೧೩
ಬಟಾವಿಯಾ ೫
ಬಟಾಳಾ ೨೨೯
ಬಡಾಕುಲಿವೆ ೨೩೨
ಬಡಿಯಾಲ್ ೨೩೧
ಬಡೋಲಿ ೨೯೨
ಬದಾಮ್ ೨೩೨
ಬಧಾತೌ ೧೭೬
ಬನಸಾಲೆ ೨೨೯
ಬನಿಯಾ ೧೭೭
ಬನೋಟ್ರೆ ೨೩೨
ಬನ್ನಿ ೬೩
ಬನ್ನೀಲಾಲ್ ೪೫
ಬನ್‌ಸ್ವಾರಾ ೧೩೯, ೧೪೦
ಬಯಾಬೇರ್‍ಸ್ ೧೮೧
ಬರಗೈನ್ಯ ೨೩೪
ಬರತ್ ೨೩೨
ಬರಬಾಹಿಯಾ ೨೩೪
ಬರೋ ೨೪೭
ಬರೋಡ ೪೭, ೪೯
ಬರ್ಟನ್ ೧೧೫
ಬರ್ಡೇಶಕರ್ ೨೨೬
ಬರ್ನ್ ೪೪೭
ಬರ್ನಾಡ್ ೩೩೪
ಬರ್ನಾಲಾ ೭೨
ಬರ್ಬಡಾಸ್ ೧೮
ಬರ್ಮಾ ೪೩೬
ಬರ್ಲಾ ೫೭
ಬರ್ಲೋ ೪೭೩
ಬಲಯ ೨೯೧, ೨೯೨
ಬಲಯಿಸ ೨೯೦, ೨೯೧, ೨೯೨
ಬಲೈ ೫೮, ೫೯
ಬಲ್ಲಾರ್ಡ ೩೦೨
ಬಲ್ಲಾರ್ಡ್‌ಪಿಯರ್ ೩೦೦
ಬಲ್ಲಿ ೨೩೨
ಬಲ್ಸಾದ್ ೪೭
ಬಸ್ತಿ ೩೭೪
ಬಸ್‌ನೋತ್ರೆ ೨೩೨
ಬಹಾದ್ದೂರ್ ೩೫೪
ಬಹಾಮಾ ೯೬
ಬಹಿಷ್ಕಾರ ೪೯, ೨೭೭, ೨೭೮, ೩೨೪, ೩೯೩, ೪೪೫
ಬಳೆ ೧೦೪, ೧೦೫
ಬಳ್ಳಾರಿ ೪೪
ಬಾಂಬಾವಲ್ ೨೩೧
ಬಾಂಬೆ ೨೭೨, ೨೭೩, ೨೯೯, ೩೭೫, ೩೭೭
ಬಾಕಾಯಿ ೨೩೨
ಬಾಕಿಯಾ ೨೩೪
ಬಾಗೆ ೨೨೯
ಬಾಗ್ಲಿ ೫೯
ಬಾಚುಮ ೩೮೬
ಬಾಭಾಲ್ ೨೩೨
ಬಾಜೆಯೆ ೨೩೨
ಬಾಜ್ವಾನ್ ೪೫

ಬಾಟಫಾಲಿ ೨೩೨
ಬಾಟ್ಯೈಲಿಯೆ ೨೩೨
ಬಾತುರೆ ೨೩೦
ಬಾತ್ರೋಲೋಮ್ ೯೭
ಬಾಧಲೆ ೨೩೧
ಬಾನಿಫೇಸ್ ೪೧೩
ಬಾಪಾ ೭೦
ಬಾಪುರಾವ್ ೧೬೮
ಬಾಬುರಾಮ್ ೨೫೧
ಬಾರಹದಿಯಾ ೨೩೫
ಬಾರಾಡಾ ೨೨೮
ಬಾರಿಖಪುರಿ ೨೩೪
ಬಾರೋವಿಸ್ ೨೩೩
ಬಾರ್ಗ್ಗೋತ್ರೆ ೨೩೨
ಬಾರ್ಡೋಲಿ ೩೦೫, ೩೦೬, ೩೦೮, ೩೦೯, ೩೧೩, ೩೨೯
ಬಾರ್ಬೋಸಾ ೧೭೭
ಬಾಲವೊಯೆ ೨೩೧
ಬಾಲಿ ೨೨೯, ೨೩೩
ಬಾಲ್ಜ್ ೪೭೫
ಬಾಲ್ಫೋರ್ ೩೭೮
ಬಾವಗೋತ್ರೆ ೨೩೧
ಬಾವ್ಡಾ ೬೫
ಬಾಸಗವಾ ೨೩೫
ಬಾಸುಲದಾಸ್ ೨೨೮
ಬಾಹೋಯೆ ೨೩೦
ಬಿಟ್ಟಿಕೂಲಿ ೬೭
ಬಿಥೀನಿಯಾದ ೪೫೦
ಬಿದಿರು ೧೫೬
ಬಿಪೋಲಿ ೫೭
ಬಿಬ್ಬೆ ೨೩೦
ಬಿರಹ ೨೩೪
ಬಿರ್ಕನ್‌ಹೆಡ್ ೨೪೮
ಬಿರ್ಲಾ ೩೭೯
ಬಿಲಾಸಪುರ ೧೦
ಬಿಷಪ್ ೯೭, ೪೧೩, ೪೩೮, ೪೩೯, ೪೪೫, ೪೪೬, ೪೭೦, ೪೭೪, ೪೭೫, ೪೭೬, ೪೭೭
ಬಿಷಾನ್ ೨೩೩
ಬಿಸೋಯ್ಯಾ ೨೩೫
ಬಿಸ್‌ಗೋತ್ರೆ ೨೩೨
ಬಿಹಾರ ೧೦, ೨೩೫, ೨೫೨, ೩೫೦
ಬಿಹಿ ೨೩೩
ಬೀಗಿ ೨೧೬
ಬೀಟೀ ೧೧೫
ಬುಂದಿ ೫೭
ಬುಡಕಟ್ಟುಜನ ೮೭
ಬುದ್ಧ ೨೦೪, ೨೦೬
ಬುರಹಿಯಾಬಾರಿ ೨೩೪
ಬುರಾ ೨೩೭
ಬುಲಾಕಿ ೨೩೨
ಬುಸದ್ ೨೫೨
ಬೂಟಾಸಿಂಗ್ ೨೫೧
ಬೂಟ್ಸ್ ೧೦೪
ಬೂತಲ್ ೨೩೨
ಬೃಂದಾವನ ೪೮೫
ಬೃಹಸ್ಪತಿ ೨೧೩, ೨೧೪
ಬೆಂಗಳೂರು ೬೨
ಬೆಂಡಾಲ್ ೪೪೨
ಬೆಟ್ಯೂನ್ಸ್ ೧೮೨
ಬೆನಡಿಕ್ಟ್ ೪೬೭
ಬೆಬಿಲೊನಿಯಾ ೧೬೨
ಬೆಬಿಲೋನ್ ೧೬೪
ಬೆರ್ಹಾಂಪುರ ೫೫
ಬೆಲವಾ ೨೩೪

ಬೆಲ್ಜಿಯಮ್ ೧೬೧
ಬೆಲ್ವ ೨೩೪
ಬೆಜ್ಜಿ ೪೬೬, ೪೬೭
ಬೆಸ್ಟಿಲ್ಲಾ ೨೬೫, ೨೬೬
ಬೆಸ್ತಾವಾಲಾ ೨೩೫
ಬೇಗಮ್ ೧೧೩
ಬೇಗಾರ್ ೬೪, ೬೬, ೬೭
ಬೇಡೇಸರ ೨೩೦
ಬೇನ್ಸ ೧೯೩
ಬೇರಾರ್ ೫೭
ಬೇಲಾ ೨೩೪
ಬೇಲಾವ್ ೨೩೨
ಬೈಖಾಂರೆ ೨೩೨
ಬೈಬಾರಿ ೨೩೩
ಬೊಂಡಾ ೧೫೬
ಬೊಂಬಾಯಿ ೨೬೧, ೨೬೭, ೨೬೯, ೨೯೯, ೩೦೦, ೩೦೨, ೩೦೮, ೩೧೪, ೩೧೫, ೩೩೪, ೩೩೮
ಬೋನಾದೇವಾ ೧೦೯
ಬೋರಸಿದ್ಧಾ ೨೨೮
ಬೋರ್ಡಿಯ ೬೯
ಬೋರ್ಸಾದ್ ೩೬, ೩೭, ೩೯, ೪೦
ಬೋಲ್ಬನ್ ೨೯೮
ಬೋಹ್ಲೆ ೨೨೯
ಬೌದ್ಧ ೧೫೩, ೨೦೫, ೪೩೬
ಬೌದ್ಧಧರ್ಮ ೨೦೫
ಬ್ಯಾನಿನ್ ೧೧೫
ಬ್ಯಾಪ್ಟಿಸ್ಟ್ ೧೧೬, ೪೩೯
ಬ್ಯಾಬಿಲಾನ್ ೪೪೪, ೪೪೫, ೪೪೬
ಬ್ಯಾರೋ ೧೧
ಬ್ಯಾಲ್ಫೊರ್ ೪೨೦
ಬ್ಯಾಲ್ಫೋರ್ ೪೨೦
ಬ್ರಹ್ಮ ೧೫೫, ೧೭೬, ೧೯೯, ೨೦೦, ೨೧೧, ೨೧೬, ೨೧೭, ೨೨೦, ೨೨೧, ೨೮೭, ೪೬೫, ೪೬೬
ಬ್ರಹ್ಮತತ್ತ್ವ ೧೫೫
ಬ್ರಹ್ಮತ್ವ ೨೨೦, ೨೨೧
ಬ್ರಹ್ಮದೇವ ೨೧೩, ೪೬೫
ಬ್ರಹ್ಮನ್ ೪೬೫
ಬ್ರಹ್ಮರ್ಷಿ ೨೧೫, ೨೨೧
ಬ್ರಹ್ಮಾಸಿಂಗ್ ೬೭
ಬ್ರಾಮಿಯೆ ೨೩೨
ಬ್ರಾರಿ ೨೩೨
ಬ್ರಾಹ್ಮಣ ೭೭, ೮೦, ೧೩೧, ೧೩೫, ೧೩೮, ೧೫೫, ೧೭೦, ೧೭೭, ೧೭೯, ೧೮೭, ೨೨೨, ೨೨೬, ೨೨೮, ೪೪೭
ಬ್ರಾಹ್ಮೀ ೨೨೯
ಬ್ರಿಟನ್ ೯೬
ಬ್ರಿಟಿಷರು ೭೦, ೧೨೬, ೧೫೯, ೨೯೪, ೨೯೯, ೩೧೭, ೩೨೭, ೩೨೮, ೩೩೪, ೩೩೯, ೩೪೧, ೩೫೫, ೩೯೦
ಬ್ರಿಟ್ಟೊ ೪೬೬
ಬ್ರೆಜಿಲ್ ೯೭, ೧೦೨
ಬ್ರೈಸ್ ೧೫೫
ಬ್ಲ್ಯಾಸ್ಪ್ಯಾಂಡ್ ೪೧೩

## ಭ

ಭಂಡಾರಿಪೊಳೆ ೧೬೯
ಭಗತ್ ೫೪
ಭಜನಮೇಳ ೧೬೮, ೧೬೯
ಭಜ್ಜು ೫೭
ಭಟ್ ೨೩೭
ಭಟ್ಟಾಚಾರ್ಯ ೧೮೩, ೧೮೪
ಭರಂಗೋಲ್ ೨೩೨
ಭಾಂಗೋತ್ರೆ ೨೩೧
ಭಾಂಬಿ ೨೩೦

ಭಾಗನಭಾಹಲ್ ೨೩೨
ಭಾಗವತರು ೨೨೬
ಭಾಗೋತ್ರೆ ೨೩೨
ಭಾಜಾ ೩೭
ಭಾಜಿ ೨೩೦
ಭಾಟ್ ೨೩೨
ಭಾಟಾ ೨೨೭
ಭಾಟೋಲ್ ೨೩೧
ಭಾಡೋ ೨೩೧
ಭಾತರೆ ೨೩೦
ಭಾತಾತ್ರೆ ೨೩೧
ಭಾತುರಿಯೆ ೨೨೯
ಭಾತೋಹಯೆ ೨೩೧
ಭಾನ್ ೨೩೧, ೨೩೨
ಭಾನೋಟ್ ೨೩೦
ಭಾಮ್‌ಪುರಿ ೨೩೪
ಭಾರಖಾರಿ ೨೨೯
ಭಾರತ್ ೪೦
ಭಾರತಾನಾ ೨೨೮
ಭಾರದ್ವಾಜಿ ೨೨೯
ಭಾರಯಾಲ್ ೨೩೧
ಭಾರ್ಗವಾ ೨೨೮, ೨೩೪
ಭಾಲವೇಲೇಕರ್ ೨೨೬
ಭಾಲುರ್‍ಹಾ ೨೩೫
ಭಾಲೋಕ್ ೨೩೨
ಭಾಸುಲ್ ೨೩೧
ಭಾಹ್ಯಾಜಿಯಾ ೨೩೪
ಭಿಂಡೆ ೨೨೯
ಭಿತ್ರಾ ೨೨೭
ಭುಕಾನಿಯಾ ೨೨೮
ಭುಟ್ ೨೩೨
ಭುಟಾ ೨೩೨
ಭುಯಿಹಾರಾ ೨೩೬
ಭುರಿಯೆ ೨೩೨
ಭುರೆ ೨೩೨
ಭುವನ್ ೩೦೦
ಭೂಕರ ೩೫೪
ಭೂಟಾ ೨೨೯
ಭೂಯಿಮಾಲಿ ೨೫೨
ಭೂಷಣ್ ೬೭
ಭೃಗು ೨೧೧, ೨೧೯, ೨೨೧, ೨೨೩
ಭೇಡಿ ೨೩೪
ಭೈರವಾ ೨೩೨
ಭೋಜಾ ೨೨೯

## ಮ

ಮಂಕುಲಮ್ ೧೪೩
ಮಂಗಲಾ ೨೨೮
ಮಂಗಲೀಪ್ರಸಾದ್ ೫೫, ೫೬
ಮಂಗವಾಡ ೨೭೦
ಮಂಗುಲಮ್ ೧೪೭
ಮಂಗುವುಥ ೨೩೩
ಮಂಗ್ರೈಥ ೨೩೪
ಮಂಗ್‌ವಾಡಾ ೭೩
ಮಂಜಾಹಾ ೨೩೩
ಮಂಜುವಾನಾ ೨೩೪
ಮಂಡಲ್ ೨೩೩
ಮಂದಾರ್ ೨೨೯
ಮಕಾವರ ೨೨೯
ಮಖಾನಿ ೨೩೩
ಮಚಲೀಪಟ್ಟಣ ೪೭೭
ಮಚ್ಛು ೨೩೦
ಮಜ್ಜು ೨೨೯
ಮಣಿಲಾಲ್ ೧೪೩

ಮತದೀಕ್ಷೆ ೪೧೩, ೪೬೮
ಮತಧರ್ಮ ೪
ಮತಬೋಧೆ ೪೧೩, ೪೭೩
ಮತಾಂತರ ೧೧೦, ೩೨೬, ೪೧೩, ೪೧೪, ೪೨೯, ೪೩೦, ೪೫೮, ೪೬೧, ೪೬೨, ೪೬೬, ೪೭೪, ೪೭೮, ೪೮೦
ಮತಾಂತರಿ ೪೧೪, ೪೩೩, ೪೩೪, ೪೩೫, ೪೩೭, ೪೫೩, ೪೬೨, ೪೬೬, ೪೬೭, ೪೬೮, ೪೭೩, ೪೭೪, ೪೭೫, ೪೭೬, ೪೭೮, ೪೭೯, ೪೮೦, ೪೮೧
ಮಥುರಾ ೨೨೮
ಮದನ್ ೨೩೨
ಮದರ್ ೬೮
ಮದಾರಖಂಬ್ ೨೩೦
ಮದಾರಿ ೬೭
ಮದ್ರಾಸ್ ೧೦, ೩೨, ೩೪, ೩೬, ೫೨, ೫೯, ೧೬೮, ೧೭೦, ೧೮೮, ೨೫೫, ೨೬೬, ೨೮೯, ೩೧೧, ೩೪೧, ೩೫೦, ೩೫೩, ೩೫೪, ೩೬೫, ೩೬೬, ೩೬೭, ೩೬೮, ೩೬೯, ೩೯೬, ೩೯೭, ೩೯೮, ೪೩೮, ೪೬೨
ಮಧಾರೆ ೨೩೦
ಮಧುರೆ ೫೨, ೧೪೫, ೧೪೭, ೪೬೫, ೪೬೭, ೪೭೪
ಮಧುರೈ ೧೪೧, ೧೪೩, ೪೬೬, ೪೬೮, ೪೭೪
ಮನು ೮೩, ೧೧೯, ೧೩೫, ೧೩೭, ೧೯೨, ೧೯೫, ೧೯೬, ೧೯೭, ೨೬೫, ೨೮೫, ೨೮೭, ೨೮೯, ೨೯೪
ಮನುಧರ್ಮ ೨೮೬, ೨೯೦, ೨೯೩, ೨೯೪
ಮನುಧರ್ಮಶಾಸ್ತ್ರ ೮೬, ೨೬೫, ೨೮೫, ೨೯೫, ೨೯೬
ಮನೋಹಾ ೨೩೪
ಮನ್‌ಧಾರ್ ೨೩೦
ಮನ್ರೋ ೧೭
ಮರಾಠ ೨೪, ೧೬೮, ೧೬೯, ೨೨೮, ೨೫೫, ೪೭೪
ಮರಾಠಿ ೧೫೩
ಮರಿಯಾ ೧೭೯
ಮರೀಚಿಯ ೨೧೨
ಮರು ೨೩೭
ಮರುದ್ ೨೩೦
ಮರ್ಸಿಲಿಯಾಟ್ ೧೧೫
ಮಲಬಾರ್ ೬೧, ೬೫, ೧೭೦, ೧೮೦, ೧೮೧, ೨೩೭, ೩೬೭, ೩೭೬, ೩೯೮, ೩೯೯, ೪೩೮, ೪೪೪, ೪೪೫, ೪೬೭
ಮಲಯಾಳಂ ೬೫
ಮಲಯಾಳಿ ೪೪೫
ಮಲ್ಕಾನಾದಂಥ ೪೩೪
ಮಲ್ಲಾ ೪೭೪
ಮಲ್ಲಿಕ್ ೨೫೨
ಮಸಾಲ್‌ದಾನ್ ೨೩೨
ಮಸೋದಾರೆ ೨೩೦
ಮಸೋನಾ ೨೩೫
ಮಹಡ್ ೨೫೯, ೨೬೧, ೨೬೩, ೨೬೫, ೨೬೮, ೨೭೨, ೩೧೭
ಮಹಬೂಬ್ ೬೭
ಮಹಮದ್ ೨೫೦
ಮಹಮದೀಯ ೧೫೪, ೧೬೬, ೨೪೧, ೨೪೨, ೨೪೩, ೨೪೪, ೨೫೦, ೨೫೧, ೨೫೫, ೨೫೬, ೨೭೬, ೨೮೩, ೨೯೮, ೩೦೩, ೩೦೫, ೩೦೯, ೩೧೮, ೩೧೯, ೩೨೨, ೩೨೪, ೩೨೫, ೩೨೭, ೩೩೦, ೩೩೧, ೩೩೨, ೩೩೩, ೩೩೪, ೩೩೫, ೩೩೬, ೩೩೮, ೪೦೧, ೪೪೦
ಮಹಮ್ಮದ ೨೦೯
ಮಹರ್ ೧೬೮, ೧೬೯, ೨೭೩, ೪೭೪

ಮಹರಾಜಿಯ ೬೭
ಮಹರ್ವಾಡ ೨೭೦
ಮಹಾಡ್ ೨೫೯, ೨೬೦, ೨೭೩, ೩೧೬, ೩೭೭
ಮಹಾತ್ಮಾಗಾಂಧಿ ೧೪೩, ೧೪೮, ೩೧೦, ೩೭೦, ೩೮೯, ೩೯೦, ೩೯೧, ೩೯೨
ಮಹಾದ್ ೩೭೬
ಮಹಾದೇವ ೨೧೬
ಮಹಾಪ್ರವಾದಿ ೪೬೧
ಮಹಾಭಾರತ ೨೧೧, ೨೧೨, ೨೧೩, ೨೨೧, ೨೨೨, ೨೨೩
ಮಹಾರ್ ೬೫, ೬೬, ೪೧೨
ಮಹಾರಾಣ ೫೯
ಮಹಾರ್ವಾಡಾ ೭೩
ಮಹಾಸ್ಥಾನಾ ೨೩೬
ಮಹೇಂದ್ರಪರ್ವತಕ್ಕೆ ೨೨೩
ಮಾಂಕರ್ ೧೮೨
ಮಾಂಕು ೧೮೧
ಮಾಂಗ್ ೪೭೪
ಮಾಂಗ್ರುಡಿಯ ೨೩೧
ಮಾಂಟ್ ೩೬೫
ಮಾಂಟೆಗೋ ೨೪೭, ೩೨೧
ಮಾಂಡ್‌ಫೋರ್ಟ್ ೩೫೪
ಮಾಕಡೆ ೨೩೧
ಮಾಕ್ಸ್‌ಮುಲರ್ ೨೦೮
ಮಾಖೋತ್ರೆ ೨೩೨
ಮಾಗಟಯಾಲಿಯೆ ೨೩೨
ಮಾಗಮಾರ್ಯಾ ೨೨೮
ಮಾಗ್‌ದೋಲ್ ೨೩೨
ಮಾಭಾರ್ ೨೩೨
ಮಾಜಗೌಮ್ ೨೩೫
ಮಾಟೇವಾಲ ೨೩೩
ಮಾಟೈನ್ಯಾ ೨೩೫
ಮಾಟೊಲ್ ೨೩೩
ಮಾಡೋತೆ ೨೩೧
ಮಾಡ್‌ಗಾಂವ್ ೫೫
ಮಾಥಾರ್ ೨೩೨
ಮಾದಿಕ ೪೭೪
ಮಾದಿಹಾತು ೨೩೦
ಮಾಧಬನಿ ೨೩೩
ಮಾಧೋತ್ರೆ ೨೩೨
ಮಾಧ್ವಾಚಾರಿ ೨೨೬
ಮಾನಟಿ ೨೩೩
ಮಾನದಂಡ ೨೪೪
ಮಾನಸೋತ್ರೆ ೨೩೧, ೨೩೨
ಮಾನಾ ೪೧೯
ಮಾನಿಟು ೪೧೯
ಮಾಪ್ಸೆ ೧೧೪
ಮಾಮಲೆದಾರ ೩೬, ೩೭, ೩೮, ೩೯
ಮಾಮ್‌ಖೋರ್ ೨೩೪
ಮಾರುಡ ೨೨೯
ಮಾರುದ್ ೨೩೦
ಮಾರೋತ್ರೆ ೨೩೨
ಮಾರ್‌ಕರಾ ೨೩೩
ಮಾರ್ಕ್ವಾಂಟ್ ೧೧೫
ಮಾರ್ಕ್ಸ್‌ವಾದಿ ೨೧೦
ಮಾರ್ಜಾನಿ ೨೩೩
ಮಾರ್ಟಿನ್ ೪೧೩
ಮಾರ್ಟಿನೋ ೧೭
ಮಾರ್ಟೆಯರ್ ೪೫೦
ಮಾರ್ತಿಕವತ ೨೨೩
ಮಾರ್ಲೆ ೨೪೩, ೨೪೭
ಮಾರ್ಲೆಮಿಂಟೋ ೨೪೩, ೩೨೧
ಮಾಲ ೨೩೩, ೪೬೨
ಮಾಲವ ೨೨೩

ಮಾಲವಿ ೨೨೮
ಮಾಸುವಾ ೨೩೪
ಮಾಸ್ತವಾ ೨೨೮
ಮಾಹಿಜಿಯೆ ೨೩೨
ಮಾಹಿತೆ ೨೩೧
ಮಾಹಿಷ್ಮತಿ ೨೨೨
ಮಾಳವೀಯ ೩೯೦
ಮಿಜ್ರೆ ೨೩೩
ಮಿಥಿಲಾ ೨೩೬
ಮಿಥ್ಯಾದೈವವಾದ ೪೫೩
ಮಿಥ್ಯಾವಾದ ೨೦೨
ಮಿಲಾಪ್ ೪೫, ೪೬, ೪೯, ೫೩, ೫೫, ೧೧೪
ಮಿಶನರಿ ೧೧೭, ೪೬೦, ೪೭೧, ೪೭೮
ಮಿಶಾರ್ ೨೩೧
ಮಿಶ್ರಾ ೨೩೧, ೨೩೩, ೨೩೬
ಮಿಶ್ರಿ ೨೩೦
ಮಿಸಾರಿ ೨೩೩
ಮೀರ್ ೫೪, ೧೧೩
ಮೀರತ್ ೪೩
ಮೀರಾತ್ ೨೩೧
ಮುಂಗರ್ ೧೧೫
ಮುಂಜಾಲ್ವಾ ೨೩೪
ಮುಂಬೈ ೩೫, ೩೬, ೫೦, ೬೫, ೧೮೮, ೧೯೨, ೧೯೭, ೩೯೬, ೩೯೯, ೪೧೨, ೪೪೧, ೪೪೩, ೪೬೦
ಮುಂಬೈ ಸಮಾಚಾರ್ ೩೫, ೬೫
ಮುಕತಿ ೨೩೧
ಮುಕಾದಮ್ ೨೩೨
ಮುಕ್ಕಾಂ ೩೧೦
ಮುಛಲೆ ೨೩೧
ಮುಜಾಫರ್ ೫೨
ಮುಜ್ವಾಲ ೨೨೯
ಮುಝಿ ೨೩೨
ಮುಟು ೨೩೨
ಮುಟ್ವಾದಸ್ ೨೩೭
ಮುಟ್ರಾ ೫೭
ಮುತಾಲಿಕ ೧೧೪
ಮುತ್ರಾ ೬೬
ಮುದ್ದಿಮನ್ ೩೨೧
ಮುನ್ನಾಲಾಲ್ ೬೭
ಮುಯಿರ್‌ಹೆಡ್ ೩೭೦
ಮುರಾಲಾ ೬೭
ಮುರುಕುನಾಡು ೨೨೬
ಮುಲರ್ ೧೫೫
ಮುಲ್ತಾನ್ ೨೨೯
ಮುಷರಾನ್ ೨೩೨
ಮುಷಹರ್ ೨೫೨
ಮುಸಲ್ಮಾನ ೩೪, ೪೬, ೬೦, ೬೧, ೧೭೭, ೧೮೪, ೨೫೩, ೨೫೬, ೩೩೨, ೩೩೩, ೩೪೭, ೩೫೩, ೩೬೦, ೩೮೬, ೩೮೭, ೪೨೫, ೪೩೭, ೪೫೩, ೪೫೫, ೪೫೬, ೪೫೭, ೪೬೮, ೪೬೯, ೪೮೨, ೪೮೩, ೪೮೪
ಮುಸ್ಲಿಂ ೮, ೧೧೩, ೧೫೩, ೧೫೪, ೧೫೫, ೧೫೯, ೨೦೯, ೨೫೩, ೨೭೬, ೨೯೮, ೩೦೪, ೩೨೫, ೩೩೦, ೩೩೧, ೩೩೨, ೩೩೩, ೩೩೯, ೩೬೦, ೩೬೯, ೪೧೪, ೪೩೧, ೪೩೨, ೪೩೪, ೪೩೬, ೪೩೭, ೪೫೫, ೪೫೭
ಮುಹಮ್ಮದ್ ೨೫೧
ಮೂಂಜೆ ೩೬೪
ಮೂಢನಂಬಿಕೆ ೧೬೫, ೧೭೨, ೪೦೪, ೪೧೯, ೪೫೦
ಮೂರ್ ೧೭೭, ೧೮೨, ೪೭೦
ಮೂರ್ತವಾದ ೨೩
ಮೂರ್ತಿಪೂಜಕ ೪೪೧, ೪೪೫, ೪೬೮, ೪೬೯

ಮೆಕಮ್ ೪೪೩
ಮೆಕ್ಸಿಕೋ ೯೭
ಮೆಗಾಸ್ತನೀಸ್ ೧೭೪, ೧೮೩
ಮೆಟ್‌ಕಾಫ್ ೨೪
ಮೆಥಾಡಿಸ್ಟ್ ೧೧೭
ಮೆನೆಜಿಸ್ ೪೪೫, ೪೪೬
ಮೆಹತ ೨೫೨
ಮೆಹತಾ ೨೯೯
ಮೆಹರರು ೪೨೮
ಮೆಹ್ರಾಜಿ ೬೭
ಮೇಘಾ ೪೫, ೪೬
ಮೇಡತ್‌ವಾಲಾ ೨೩೭
ಮೇಥಿಬರ್ ೨೩೪
ಮೇದಾರ ೧೭೬
ಮೇಧಾತವಾಲಾ ೨೨೮
ಮೇನಕೆ ೨೨೦
ಮೇನ್‌ಟೋಸ್ ೧೮೧
ಮೇಫ್ಲವರ್ ೯೯
ಮೇಯೋ ೬೮
ಮೇಲೂರು ೧೪೧, ೧೪೨, ೧೪೬, ೧೪೯
ಮೇವಾಡ ೨೨೭
ಮೇವಾರ್ ೬೯
ಮೇಸನ್ ೧೧೫
ಮೇಸೀ ೧೧೫
ಮೇಹಡ್ ೨೩೦
ಮೇಹುಲಿಯಾರ್ ೨೩೪
ಮೈಕೇಲ್ ೩೦೧
ಮೈತೆ ೨೩೧
ಮೈತ್ರಯಾನಿಯಾಸ ೨೨೬
ಮೈತ್ರಾ ೨೩೦
ಮೈಥಿಲಬ್ರಾಹ್ಮಣ ೨೨೮
ಮೈಥಿಲ್ಯಾ ೨೩೬
ಮೈನವಾಲಿ ೩೧೬
ಮೊಗಲ್ ೨೪
ಮೊಗೇರಸ್ ೧೮೧
ಮೊಬೈಟ್ಸ್ ೪೨೬
ಮೊಯ್ಲಾದ ೫೪
ಮೊರಕೇರ ೨೯೨
ಮೊರಿಯಾ ೧೫೭
ಮೊಹಮ್ಮದ ೪೩೯
ಮೊಹರ್ ೬೩, ೪೨೬, ೪೪೩
ಮೋಂಟಿಸೆಲ್ಲೋ ೧೭
ಮೋಚಿ ೨೫೧
ಮೋಟಾಲಾ ೨೨೮
ಮೋಠಾ ೨೨೭
ಮೋಡೆಸ್ಟಸ್ ೧೩
ಮೋತಿರಾಂ ೬೩
ಮೋತಿಲಾಲ್ ೩೧೫
ಮೋಧಾ ೨೨೭
ಮೋಲೆ ೨೨೯
ಮೋಹನ್ ೨೩೧
ಮೋಹನಾ ೨೨೯
ಮೋಹ್ಲೆ ೨೨೯
ಮೌರ್ಯ ೧೭೪
ಮ್ಯಾಕ್‌ಡುಅಲ್ ೪೨೩, ೪೨೪
ಮ್ಯಾಕ್ಡೊನಾಲ್ಡ್ ೩೩೯, ೩೪೮
ಮ್ಯಾಕ್ಸಿಮಾ ೧೧೯
ಮ್ಯಾಕ್ಸ್‌ಮುಲರ್ ೨೦೨, ೨೦೬, ೨೧೦, ೪೩೨
ಮ್ಯಾಗ್ನಕಾರ್ಟಾ ೩೫೪
ಮ್ಯಾನೆನ್ ೧೮೧
ಮ್ಯಾನ್‌ಚಸ್ಟರ್ ೩೦೩
ಮ್ಯಾಮಿಮಸ್ ೧೪

ಮ್ಯೂರ್ ೨೦೮
ಮ್ಯೂರೆಸ್ ೨೦

## ಯ

ಯಜುರ್ವೇದಿ ೨೨೬, ೨೨೭
ಯಜುಸ್ ೧೯೯
ಯಜ್ಞ ೮೪, ೧೩೫, ೧೯೯, ೨೧೦
ಯಜ್ಞವೇದಿಕೆ ೨೨೩
ಯಮನ ೨೧೭
ಯರವಾಡ ೩೪೨, ೩೬೮
ಯರವಾಡಾ ೩೪೫, ೩೪೯
ಯಹೂದಿ ೪೩೬, ೪೫೦
ಯಾಗ್ನಿಕ್ ೩೦೭, ೩೦೮, ೩೧೧
ಯಾಥ ೨೩೨
ಯಾಜ್ಞವಲ್ಕ್ಯ ೭೫, ೨೦೪, ೨೨೬
ಯಾಜ್ಞವಲ್ಕ್ಯಸ್ಮೃತಿ ೨೮೪
ಯಾಜ್ಞಿಕ್ ೩೬
ಯಾಮೆ ೨೩೦
ಯಿಯೋಲಾ ೩೯೮
ಯುರೋಪ್ ೨೯, ೨೬೫, ೪೩೯
ಯುರೋಪಿಯನ್ ೨೦೯, ೪೬೮
ಯೂಕ್ಲಿಡ್ ೪೫೦
ಯೂರೋಪ್ ೯೯, ೧೦೧, ೧೫೫, ೧೮೩, ೨೭೧, ೨೯೫, ೩೮೯, ೪೦೪, ೪೦೬, ೪೧೩, ೪೬೫, ೪೭೬, ೪೭೯
ಯೂರೋಪಿಯನ್ ೭೩, ೯೬, ೯೭, ೯೯, ೧೮೯, ೩೬೧, ೩೮೪, ೪೬೮
ಯೆಜೆವಾ ೩೯೮, ೪೦೧
ಯೆಯೋಲಾ ೪೫೫
ಯೆಹೂದಿ ೩, ೪, ೫, ೬, ೯೧, ೯೩, ೯೪, ೯೫, ೧೦೮, ೧೧೨, ೧೧೩, ೩೭೧
ಯೆಹೂದ್ಯ ೩, ೪, ೫, ೬
ಯೇಸು ೩೮೪, ೪೪೪

## ರ

ರಕ್ಷಸಾಸ್ ೨೩೩
ರಖ್ಯಾಸ್ ೨೩೨
ರಜಪೂತ ೪೫, ೫೫, ೫೮, ೬೪, ೬೮, ೨೩೭, ೨೯೧
ರತನ್ ೨೨೯
ರತನವಾಲಾ ೨೩೩
ರತನ್‌ಪಾಲ್ ೨೩೨
ರತ್ನಾಪುರಿ ೨೩೪
ರತ್‌ನಿಯೆ ೨೩೦
ರನದೇಹಾ ೨೨೯
ರಮ್ಯ ೪೪೯
ರವನಜಾಹಿಸ್ ೨೩೩
ರಷಿಯನ್ ೧೨೬, ೪೧೩
ರಾಂಭೋಡ್ ೧೬೮
ರಾಂಡಗೋಲಕ ೨೨೬
ರಾಂಬೆ ೨೩೧
ರಾಂ ಭರೋಸೆ ೬೭
ರಾಂ ಸಿಂಗ್ ೭೧
ರಾಕ್‌ಫೆಲ್ಲರ್ ೧೧೬
ರಾಜಗುರು ೨೩೭
ರಾಜಗೋಪಾಲಾಚಾರಿ ೩೧೧, ೩೧೨, ೩೧೫, ೩೬೭, ೩೬೮, ೩೬೯, ೩೯೭
ರಾಜದಾನ್ ೩೨
ರಾಜಸ್ತಾನ ೧೦
ರಾಜಾಜಿ ೩೭೦
ರಾಜಾಸ್ಥಾನ ೧೭೪
ರಾಜುನಿಯೆ ೨೩೨
ರಾಜುಲಿಯೆ ೨೩೨
ರಾಜೋಹ ೨೩೧

ರಾಡ್ ೨೩೨
ರಾನಗಡೆ ೨೩೦
ರಾನಿಪತಿ ೨೩೬
ರಾನೀಸರಪ್ ೨೩೫
ರಾಬರ್ಟ್ ೪೭೪, ೪೭೭
ರಾಬರ್ಟ್ಸ್ ೨೫೧
ರಾಬರ್ಟ್ಸನ್ ೪೧೬, ೪೨೩, ೪೨೬
ರಾಬಿನ್‌ಸನ್ ೪೬೬
ರಾಮ್ ೩೫, ೪೬, ೫೭
ರಾಮಕೃಷ್ಣ ೬೧
ರಾಮಕೃಷ್ಣ ವೈದ್ಯರ್ ಪಿ.ಸಿ. ೬೧
ರಾಮಚಂದ್ರನ್ ೨೫೧
ರಾಮತಲ್ ೨೩೦
ರಾಮನಾಡು ೨೩೭, ೨೮೯, ೨೯೦
ರಾಮಪುರ ೬೩
ರಾಮಪುರಾ ೨೩೫
ರಾಮಲಾಲ್ ೪೫
ರಾಮಸ್ವಾಮಿ ಅಯ್ಯರ್ ಸಿ.ಪಿ. ೩೯೭, ೩೯೮
ರಾಮಾನಂದಜಿ ೫೯
ರಾಮಾನುಜ ೨೨೬
ರಾಮಾಯಣ ೨೧೫, ೨೧೯
ರಾಮ್ಸೇ ೩೩೯, ೩೪೮
ರಾಯ್ ೬೮
ರಾಯಕಾವಲಾ ೨೨೭
ರಾಯಪುಲಾ ೨೨೮
ರಾಯಬಹದ್ದೂರ್ ೨೫೧
ರಾಯಸ್ಥಲಾ ೨೨೮
ರಾಯಾ ೨೩೬
ರಾಯಿ ೨೩೨
ರಾಯಿಸಾಹಿಬ್ ೨೫೧
ರಾರಗಾಡಿ ೨೩೫
ರಾವ್ ೩೫೪
ರಾವಡೆ ೨೨೯
ರಾವಲ್ ೨೩೩
ರಾವವಾಲಾ ೨೨೮
ರಾವಾನಿಯ ೩೮
ರಾಷ್ಟ್ರಕೂಟ ೧೯೪
ರಾಹಿಯಾನ್ ೪೫
ರಾಹುಗ್ರಹಣ ೧೭೨
ರಿಂಗ್ವಾರಿ ೫೩, ೫೪
ರಿಚ್‌ಮಂಡ್ ೧೭
ರಿಟ್ಜ್ ೩೩೩, ೩೯೩
ರಿಟ್ಸ್ ೧೩೨
ರಿಪೋಟಿ ೨೯೨
ರಿಷಿ ೨೨೯
ರಿಸ್ಲೆ ೨೦೩
ರೀಚೆಲ್ ೪೧೨
ರುಖೆ ೨೩೧
ರುತ್ ೪೨೬
ರುಥಾಡೆ ೨೩೦
ರುದ್ರರು ೨೧೪
ರೂಪಾಲ್ ೨೨೯
ರೆಡ್‌ಮಂಡ್ ೩೩೭
ರೆಮಿಗಿಯನ್ ೪೧೩
ರೆವೋಲಿನ್ಸ್ ೧೮೨
ರೆಸ್‌ಬುಟೋಸ್ ೧೭೭
ರೇಗೆ ೯೬
ರೇಡಾಥಿಯೆ ೨೩೨
ರೈನೆ ೨೩೦, ೨೩೧
ರೈಸಿ ೨೩೪
ರೋಢಾವಾಲಾ ೨೨೮
ರೋಮ್ ೧೧, ೧೨, ೧೪, ೧೮, ೨೦, ೨೧, ೧೧೧, ೧೬೪, ೨೦೮, ೪೪೪, ೪೪೫, ೪೪೬, ೪೪೯, ೪೫೧, ೪೬೬, ೪೭೨

ರೋಮನ್ ೧೩, ೯೧, ೯೨, ೯೫, ೯೬, ೧೦೩, ೧೦೯, ೧೧೦, ೧೫೫, ೧೬೨, ೧೯೪, ೨೭೬, ೨೮೮, ೪೩೯, ೪೪೪, ೪೪೫, ೪೪೮, ೪೫೦, ೪೫೧, ೪೬೨, ೪೬೫, ೪೬೬, ೪೬೭, ೪೭೯
ರೋಸೆನ್ ೧೧೫
ರೋಸೆನ್‌ವಾಲ್ಡ್ ೧೧೬
ರ್ವೆನಿಯಸ್ ೪೭೬

ಲ

ಲಂಡನ್ ೨೯೭, ೩೦೧, ೩೨೪, ೩೨೬, ೩೩೦, ೩೩೪, ೩೬೦, ೩೭೪, ೩೯೩, ೪೬೬, ೪೬೯, ೪೭೦
ಲಕ್ನೊ ೩೬, ೧೧೩, ೩೦೭, ೩೧೧, ೩೧೨, ೩೧೩
ಲಕ್ಷ್ಮಣ ೧೬೮, ೧೬೯
ಲಕ್ಷ್ಮಣರೇಖೆ ೧೭೧
ಲಖನ್ ೨೨೯
ಲಖನ್‌ಪಾಲ್ ೨೩೨
ಲಜಪತ್ ೬೮
ಲಜಪತರಾಯ್ ೧೧
ಲಟ್ಟಾ ೨೩೦
ಲಡಂಝುನ್ ೨೩೨
ಲಥ ೨೩೧
ಲಫಾಯೆತ್ ೧೬
ಲಬಾರಿ ೨೩೩
ಲರ್ಖಪಾಲ್ ೨೩೧
ಲಲಾಟಾ ೨೨೮
ಲಹದ್ ೨೩೧
ಲಹಾನಾ ೨೨೮
ಲಾಧಿಹಿ ೨೩೪
ಲಾಬೋತ್ರೆ ೨೩೨
ಲಾಯಡ್ ೩೦೧
ಲಾಲಡಿ ೨೨೯
ಲಾಲಾ ೧೧, ೪೬, ೬೮
ಲಾಲೋತ್ರೆ ೨೩೧
ಲಾಲ್‌ಜಿ ೪೫
ಲಾಲ್‌ದಿ ೨೩೦
ಲಾವಂತಿ ೨೩೨
ಲಾವಣಾ ೨೩೭
ಲಾವಾ ೨೨೯, ೨೩೧
ಲಾಹದ್ ೨೩೦
ಲಾಹೋರ್ ೨೨೯, ೩೧೩
ಲಾಹೋರಿನ ೪೮, ೬೩, ೬೪
ಲಿಡಾರಿಗರಿ ೨೩೨
ಲುಟಾರಿ ೨೩೩
ಲುಥೆರನ್ ೧೧೭
ಲುದ್ರಾ ೨೩೦
ಲುಧ್ ೨೩೦
ಲುಮಾದಿಯೆ ೨೨೯
ಲೂಥರನ್ ೪೩೯
ಲೂಥರ್ನ ೪೭೮
ಲೂಥರ್ನ್ ೪೬೮
ಲೂಧಿಯಾನ ೩೧೩
ಲೂಯಿ ೩
ಲೂಯಿಸ್ ೧೧೨
ಲೆನಿನ್ ೧೨೬
ಲೈ ೨೩೧
ಲೇಬರ್ ೩೬೯
ಲೈಯಲ್ ೪೩೨
ಲೋಥಿಯನ್ ೯, ೨೪೧, ೨೪೮, ೨೪೯, ೨೫೩, ೩೪೪, ೩೫೧
ಲೋಧಾರಿ ೫೭
ಲೋನಾಖ ೨೩೪
ಲೋನಾಪಾರ್ ೨೩೪
ಲೋಪ್ಲಾಹ್ ೪೩೪

ಲ್ಯಾಕ್ಟಾಂಟಿಯಸ್ ೪೫೦
ಲ್ಯಾಟಿನ್ ೧೨, ೪೫೦
ಲ್ಯಾನ್ಸ್ ೬೪

ವ

ವಂಗನ್ ೨೩೨
ವಡಂಪಿಲ್ಲಿ ೬೧
ವತ್ಸಗೋತ್ರ ೨೩೩
ವಯ್ಯಾನಾಡ್ ೩೯
ವರ್ಜೀನಿಯಾ ೯೯, ೧೦೦
ವರ್ಣಧರ್ಮ ೨೮೭
ವರ್ಣಪದ್ಧತಿ ೧೮೩
ವರ್ಣಬಾಹ್ಯ ೧೧೯
ವರ್ಣಭೇದ ೧೮೮
ವರ್ಣಾಶ್ರಮ ೧೯೧, ೧೯೨
ವರ್ಮಾ ೧೩೭
ವಸಾಹತುಶಾಹಿ ೩೧, ೩೫೫
ವಸಿಷ್ಠ ೨೧೫, ೨೧೬, ೨೧೭, ೨೧೮, ೨೧೯, ೨೨೧
ವಹ್ಲ್ ೪೩೮
ವಾಂಟಡೆ ೨೩೧
ವಾಕ್ಸ್ ೪೪೧
ವಾಗಾರಿ ೨೩೩
ವಾಗ್ಡೆಯಾ ೨೨೭
ವಾಗ್ನಾ ೨೩೨
ವಾಘೇಲ ೧೬೮
ವಾಚಸ್ಪತಿ ಮಿಶ್ರ ೨೦೪
ವಾಜಪೇಯ ೨೩೫
ವಾಜಪೇಯಿ ೨೩೩
ವಾರನ್ ೪೪೨
ವಾರಾಡಿ ೨೨೬
ವಾರಿಕಿ ೨೩೩
ವಾರ್ತಿಕಾ ೨೦೫
ವಾರ್ಧಾ ೩೮೬
ವಾರ್ನಾಸಾಲು ೨೨೬
ವಾಲಖಿಲ್ಯ ೨೧೨
ವಾಲಾದಾರು ೨೨೮
ವಾಲಾಪುರ ೬೫
ವಾಲೂಟಾ ೨೨೮
ವಾಲ್ಟೇರ್ ೨೬೫
ವಾಲ್ದಿಮೀರ್ ೪೧೩
ವಾಲ್ಮೀಕಾ ೨೨೮
ವಾಷಿಂಗ್ಟನ್ ೧೧೬
ವಾಸ್ಕೊಡಗಾಮಾ ೪೩
ವಾಹ್ಲೆ ೪೩೭
ವಿಂಧ್ಯ ೨೧೨, ೨೩೬
ವಿಕ್ಟೋರಿಯ ೩೩೦, ೩೭೪
ವಿಕ್ಸ್ ೪೭೩
ವಿಗ್ರಹಾರಾಧನೆ ೪೫
ವಿಗ್ಸ್ ೧೫೪
ವಿಠಲಭಾಯಿ ಪಟೇಲರು ೩೧೦, ೩೧೧, ೩೧೨, ೩೧೩, ೩೧೬
ವಿದೇಹ ೨೦೪
ವಿದ್ಯಾನಿಧಿ ೩೫೨
ವಿದ್ಯಾಭುವನ್ ೬೯
ವಿಧಾನಪರಿಷತ್ತು ೪೬೨
ವಿನ್‌ಸ್ಲೋ ೪೬೦
ವಿಯನ್ನಾ ೪೩
ವಿರಾಜ ೧೯೯
ವಿರಾಟ ೨೧೩
ವಿರಾದ ೨೩೦
ವಿಲಾಸ್ ೧೧೬
ವಿಲಿಯಂ ಬೆಂಟಿಂಕ್ ೯೩, ೯೫, ೪೬೯
ವಿಲಿಯಮ್ ೨೦೮, ೪೪೩, ೪೬೬

ವಿಲ್ಬರ್ ೪೭೧, ೪೭೨
ವಿಲ್ಲೆ ೩೭೭
ವಿಲ್ಸನ್ ೪೭೭
ವಿಲ್ಫ್ ೨೩೧
ವಿಶಾಲನಗರ ೨೨೭
ವಿಶ್ವಾಮಿತ್ರ ೨೦೪, ೨೧೫, ೨೧೬, ೨೧೭, ೨೧೮, ೨೧೯, ೨೨೦, ೨೨೧
ವಿಶ್ವೇಶ್ವರ ೨೭೨
ವಿಷ್ಣು ೪೪, ೨೧೩, ೨೧೬, ೨೨೦, ೪೪೮
ವಿಷ್ಣುಪುರಾಣ ೨೧೫
ವೀರನಾಯಕ ೩೦೩
ವುಡ್ ೧೧೫
ವೃತ್ರ ೨೧೩
ವೆಂಕಟಸುಬ್ಬಾರೆಡ್ಡಿ ೩೨, ೩೩, ೩೪
ವೆಂಗಿನಾಡು ೨೨೬
ವೆರಿಯಸ್ ೧೨
ವೆಲೇರಿಯನ್ ೪೫೧
ವೆಲ್ಲಲಾರು ೨೮೯
ವೆಲ್ಲೂರು ೪೬೭, ೪೭೩
ವೆಲ್ಸ್ ೧೬೩
ವೆಸ್ಪಾ ೧೮೯
ವೆಸ್ಲೀ ೪೭೩
ವೇಡ್ ೪೪೩
ವೇಡಿನಾಡು ೨೨೬
ವೇಣ ೨೧೨
ವೇದ ೨೦೨, ೨೦೩, ೨೦೫
ವೇದಪಾಠ ೧೩೬
ವೇದವ್ಯಾಸ ೨೨೧
ವೇದ್ವಿ ೨೩೦
ವೇನ ೨೧೧, ೨೧೨
ವೇಲಾಂಡು ೨೨೬
ವೈಕಂ ೪೩, ೨೫೮, ೩೧೭
ವೈದ್ಯನಾಥ್ ಅಯ್ಯರ್ ಎ.ಎಸ್ ೫೨, ೧೪೬
ವೈಶೇಷಿಕ ೨೦೫
ವೈಶ್ಯ ೭೬, ೭೭, ೭೮, ೮೦, ೮೧, ೮೨, ೮೩, ೮೪, ೮೬, ೧೩೬, ೧೩೭, ೧೭೧, ೨೧೦, ೨೧೧, ೨೮೫, ೨೮೬
ವೈಷ್ಣವ ೨೨೬
ವೈಷ್ಣವಧರ್ಮ ೩೭೧
ವೈಷ್ಣಿವಾ ೨೩೨
ವ್ರತನೋಂಪಿ ೧೫೫

## ಶ

ಶಂಕರನಾರಾಯಣ್ ಎಂ.ಎಸ್. ೬೧
ಶಂಕರಾಚಾರ್ಯ ೩೮೮
ಶಕ್ತಿವರುಣ ೨೧೫
ಶಖಧರ್ ೨೩೨
ಶಖಾರಾಜ ೨೩೪
ಶತಪಥ ೧೯೯, ೨೧೧
ಶರಗಲ್ ೨೩೨
ಶರ್ಮಾ ೧೩೭
ಶಷಾನಿ ೨೩೬
ಶಾಂತಾರಾಮ್‌ಜಿ ೪೮
ಶಾಂತಿಪರ್ವ ೨೧೧
ಶಾಕ್ತ ೨೨೬
ಶಾಕ್ಯ ೨೦೫
ಶಾಕ್ಯಮುನಿ ೨೦೪
ಶಾಮಾದಾಸಿ ೨೨೯
ಶಾಲ್‌ಬಾಬಿ ೨೩೩
ಶಾಹ ೨೩೩
ಶಾಹಾಪೂರ ೨೨೯
ಶಿಕಾವದರು ೨೩೭
ಶಿಯನ್ನೌತ್ ೧೯೭
ಶಿವ ೨೧೬, ೩೭೧

ಶಿವರಾಜಪುರ ೨೩೪
ಶಿವರಾಮ ೩೯
ಶಿವರಾಮನ್ ೬೫
ಶಿವಾಲಿ ೨೩೪
ಶಿವಿ ೨೨೩
ಶಿಹೋರ್ ೨೨೬
ಶುಕ್ಲ ೨೩೪
ಶುಕ್ಲಯಜುರ್ವೇದಿ ೨೨೬
ಶುಕ್ಲಾ ೨೩೩
ಶುಕ್ಲಾವಲಾ ೨೩೫
ಶುಧಮೇಘ ೫೪
ಶುನಶ್ಯೇಫ ೨೧೯
ಶೂದ್ರ ೮೦, ೮೧, ೧೧೯, ೧೩೪, ೧೩೬, ೧೮೯, ೧೯೦, ೨೦೦, ೨೧೧, ೨೮೫, ೪೬೦
ಶೆನ್ವಿ ೨೨೬
ಶೇಗಾಂವ್ ೩೮೪, ೩೮೬
ಶೇಟಪಾಲಸ್ ೨೩೩
ಶೇತ್ ೨೨೯
ಶೇವಡಾ ೨೨೮
ಶೊರನೂರ್ ೧೬೭
ಶೋಧನವಾದಿ ೧೮
ಶೋರಿ ೨೨೯
ಶೋಷಿತವರ್ಗ ೩೪೧, ೩೫೧, ೩೬೧, ೩೬೭, ೩೭೭
ಶ್ರದ್ಧಾನಂದ ೪೯, ೫೪, ೩೦೭, ೩೦೮, ೩೧೧, ೩೧೨, ೩೧೪, ೩೧೬
ಶ್ರೀಧರ್ ೨೩೧
ಶ್ರೀಧರಾ ೨೨೯
ಶ್ರೀನಗರ ೧೧೪
ಶ್ರೀನಿವಾಸನ್ ೩೯೨
ಶ್ರೀಮಂತಶಾಹಿ ೧೫೪
ಶ್ರೀಮಾಳಿ ೨೨೭, ೨೩೭
ಶ್ರೀರಂಗ ಐಯ್ಯರ್ ೩೮೮, ೩೮೯, ೩೯೪, ೩೯೬
ಶ್ರೀರಾಮಪುರ ೪೬೦, ೪೭೨, ೪೭೩, ೪೭೪
ಶ್ರುತಿ ೨೦೩, ೨೦೫, ೨೦೯
ಶ್ರೋತ್ರೀಯ ೮೫, ೨೩೬
ಶ್ವಾರ್ಟ್ಜ್ ೪೩೯, ೪೭೫, ೪೭೬


### ಷ


ಷಾ ೩೩೪
ಷಾಗೋತ್ರೆ ೨೩೨
ಷಿಕಾರ್‌ಪುರೀಸ್ ೨೩೩
ಷಿಲಿಂಗ್ ೯೬
ಷೇಕ್ಸ್‌ಪಿಯರ್ ೪೨೮


### ಸ


ಸಂಗದ್ ೨೨೯
ಸಂಗಾರ್ ೨೩೦
ಸಂಗ್ರಾಮ್ ೧೧೪
ಸಂಘಂ ೩೯
ಸಂವಿಧಾನ ೨೯೮
ಸಕತ್‌ಫರ್ ೫೭
ಸಕುಲವಿವಾಹ ೪೩೩
ಸಭೋಡಾ ೨೩೭
ಸಭೋರಾ ೨೨೮
ಸತ್ಯಮೂರ್ತಿ ೩೬೬
ಸತ್ಯವತಿ ೨೨೩
ಸಥೋದ್ರಾ ೨೨೭
ಸದ್ದುರ್ ೧೯೭
ಸನತ್ ೨೧೩
ಸನಧ್ಯಾಗೌಡ ೨೩೬
ಸನವನಾ ೨೨೭
ಸನವಾಡ ೨೯೨
ಸನಾಕಾದರು ೨೩೭
ಸನಾತನಿ ೩೮೦

ಸನೋದಿಯಾ ೨೨೮
ಸನೌಡ ೨೯೨
ಸನ್ನದು ೫
ಸನ್‌ಹೋಕ್ ೨೩೨
ಸಪೋಲಿಯೆ ೨೩೧
ಸಪ್ತರ್ಷಿ ೨೧೮
ಸಪ್ತಲೋಕ ೨೨೨
ಸಬ್ಬಾತ್ ೪೪೧
ಸಮ್ ೨೩೨
ಸಮಂತ ೨೨೩
ಸಮತಾ ೬೫
ಸಮ್ಮೋಲ್ ೨೩೧
ಸಯೀಜಾಪುರ್ ೩೮
ಸರದಾರ್ ೧೭೭, ೧೮೦, ೨೭೪
ಸರನ್ ೨೩೬
ಸರಮಾಯಿ ೨೩೧, ೨೩೨
ಸರಯೂ ೨೩೩
ಸರವಾರಿಯಾ ೨೨೮
ಸರಸ್ವತಿ ೨೧೧
ಸರಾಫ್ ೨೩೨
ಸರೋಜ್ ೨೩೧
ಸರೋಜಿನಿ ನಾಯ್ಡು ೩೦೭, ೩೧೧
ಸರ್ಗರೋ ೬೨
ಸರ್ದಾರ್ ವಲ್ಲಭಬಾಯಿ ಪಟೇಲ್ ೫೧, ೨೭೪, ೨೭೫, ೩೦೦, ೩೪೫
ಸರ್ರಾಸ್ ೭೦, ೭೧
ಸಲೀಲಿ ೨೩೦
ಸಲುರ್ನ್ ೨೩೨
ಸಲ್‌ಮಾನ್ ೨೩೩
ಸಲ್‌ವಹನ್ ೨೩೦
ಸವರ್ಣೀಯ ೪೭, ೧೮೯, ೧೯೦, ೧೯೨, ೨೮೯, ೪೦೦, ೪೦೧, ೪೦೨
ಸವಸಹಾರಿ ೨೩೨
ಸಹಜಪಾಲ್ ೨೩೦
ಸಹನ್‌ಕೋಲ್ ೨೩೫
ಸಳಿಗಳ ೪೭೩
ಸಾಂಖ್ಯತತ್ವ ೨೦೫
ಸಾಂಗ್ಡೆ ೨೩೨
ಸಾಂಡ್ ೨೩೧
ಸಾಂಡಾ ೨೨೯
ಸಾಂಧಿ ೨೩೦
ಸಾಕಿನಿ ೬೪
ಸಾಗ್‌ದೋಲೆ ೨೩೨
ಸಾಜಾವುಲ್ ೨೩೩
ಸಾತೋತ್ರೆ ೨೩೧
ಸಾಧಿ ೨೩೦
ಸಾಧುರಾಮ ೩೫
ಸಾಪೆ ೨೩೪
ಸಾಬಂ ೨೩೩
ಸಾಬಿನಸ್ ೧೨
ಸಾಮವೇದಿ ೨೨೬
ಸಾಮ್ಯುಯೆಲ್ ೩೪೫, ೩೪೬, ೩೪೮
ಸಾಮ್ರಾಜ್ಯಶಾಹಿ ೩೧೭
ಸಾರಸೆನರು ೪೪೦
ಸಾರಸ್ವತ ೨೧೧, ೨೧೨, ೨೨೮, ೨೨೯, ೨೩೧, ೨೩೨, ೨೩೩
ಸಾರಾಸೆನ್ಸ್ ೪೩೯
ಸಾರೋಚ್ ೨೩೨
ಸಾಲಿಸಿಟುಡಿನಮ್ ೪೬೭
ಸಾವಸ ೨೨೬
ಸಾಹಿಬ ೨೩೨
ಸಾಹೇಬ್ ೬೨, ೬೫
ಸಿಂಗ್ ೫೫, ೬೪, ೭೧, ೭೨
ಸಿಂಗಿಲಾವಾ ೨೩೪

ಸಿಂಘವಾ ೨೩೪
ಸಿಂಘೇ ೨೨೯
ಸಿಂಧ್ ೩೩೧, ೩೫೦
ಸಿಂಧವಾ ೨೨೮
ಸಿಂಹಳೀಯರು ೪೬೯
ಸಿಖ್ ೨೪, ೧೫೩, ೧೭೬, ೩೦೩, ೩೧೮, ೩೨೨, ೩೨೪, ೩೨೫, ೩೩೨, ೩೩೫, ೩೩೬, ೩೩೮, ೩೩೯, ೩೬೦, ೪೩೬, ೪೩೭, ೪೮೨, ೪೮೩
ಸಿಖ್ಖರಲ್ಲಿ ೨೫೧
ಸಿಗಾಡ್ ೨೩೨
ಸಿಗೆಬರ್ಟ್ ೪೧೩
ಸಿಡ್ನಿ ೪೭೧
ಸಿನಾಡಿಕಲ್ ೧೧೭
ಸಿನಾನಿ ೨೩೪
ಸಿನಾಯ್ ೪೬೧
ಸಿನೇಟರ್ ೪೫೧
ಸಿನ್‌ಸ್ಯೆಮ್ ೫
ಸಿಪ್ರಿಯನ್ ೪೫೦
ಸಿಬ್ಬಿ ೨೩೩
ಸಿಮ್ಲಾ ೫೯
ಸಿಯಿನ್‌ಫಿಯಿನ್ ೩೦೧
ಸಿರಖಂಡಿ ೨೩೨
ಸಿರಜಾಮ್ ೨೩೪
ಸಿರಾಜಪುರಿ ೨೩೪
ಸಿರಿಯನ್ ೪೪೪, ೪೪೫
ಸಿರಿಯಾ ೪೪೪, ೪೪೫, ೪೪೬
ಸಿಲಾ ೨೩೫
ಸಿಲೀಸಿಯಾ ೪೪೪
ಸಿಲೋನ್ ೪೬೯, ೪೭೪
ಸಿಸೋದ್ರಿ ೪೮
ಸಿಸ್ರಾ ೨೩೪
ಸಿಹಾರಿ ೨೩೩
ಸೀತಾಪುರ ೫೫
ಸೀತಾಪುರಿ ೨೩೪
ಸೀರಮ್‌ಪೂರ ೪೬೦
ಸೀರಿಯಾ ೪೪೫
ಸೀಸರ್ ೨೭೧
ಸೀಸರನಿಗೆ ೨೭೧
ಸುಂಕದಕಟ್ಟೆ ೩೦೧
ಸುಂದರ್ ೨೩೦
ಸುಕಾಂತಾ ೨೩೫
ಸುಖೆ ೨೩೨
ಸುಖ್‌ರಾಂ ೬೭
ಸುಗಂತಿ ೨೩೪
ಸುದಾನ್ ೨೩೨
ಸುಧಾತಿಯೆ ೨೩೧
ಸುನಹನ್ಲಾ ೨೩೪
ಸುನೀತಾ ೨೧೨
ಸುಬುರ್ತ್ರಾ ೧೪
ಸುಭೇದಾರ ೨೯೨
ಸುಮರ್ ೬೭
ಸುಮುಖರಾಜ ೨೧೫
ಸುರಟ ೨೨೭
ಸುರತಿ ೨೨೭
ಸುರನ್ ೨೩೦
ಸುರನ್‌ಭಾಲ್ ೨೩೨
ಸುಲೇಮಾನ್ ೬೭
ಸುವಾರ್ತಾ ೪೩೯, ೪೬೯, ೪೮೧
ಸುಸಾಡೆ ೨೩೨
ಸೂದನ್ ೨೩೦
ಸೂರತ್ ೪೮, ೧೬೯, ೪೪೧, ೪೪೩, ೪೬೯
ಸೆಂಟ್ ೨೯೭, ೩೩೦
ಸೆತ್‌ಪಾಲ್ ೨೨೯
ಸೆನಾರ್ಟ ೨೦೩

ಸೆನಿಡಾ ೧೨
ಸೆನೆಕಾ ೯೨
ಸೆನೆಟರ್ ೧೬, ೪೫೧
ಸೆರಾಸ್ ೧೧೯
ಸೆರ್ಮನ್ ೪೬೧
ಸೆಲಿಕೋಸ್ ೧೭೪
ಸೆಲ್ಬೀ ೪೪೩
ಸೆಸೀಲಿಯಸ್ ೧೫
ಸೇರಮ್‌ಪುರದ ೪೭೪
ಸೈನ್‌ಹಾಸನ್ ೨೩೨
ಸೈಲಿ ೨೩೦
ಸೊನೌರಾ ೨೩೪
ಸೊಯಿನ್ಸನ್ಸ್ ೪೧೩
ಸೊಹಗಾವುರಾ ೨೩೪
ಸೋಂಥ್ಯೆನ್ವಾ ೨೩೪
ಸೋತ್ರಿ ೨೩೦
ಸೋಧಿ ೨೨೯
ಸೋನಾರಬಾನಿ ೨೩೬
ಸೋನೆಮಳೆ ೫೨
ಸೋನೌರಾ ೨೩೪
ಸೋಪಾರಾ ೨೨೬
ಸೋಮವಂಶಿ ೧೬೯, ೪೨೮
ಸೋಯಾರಿ ೨೩೦
ಸೋರಥಿಯಾ ೨೨೮
ಸೋರಾಥಿ ೨೨೭
ಸೋರಾಥಿಯಾ ೨೨೮
ಸೋಲ್ಢೆ ೨೩೨
ಸೌತ್ ೨೪೭
ಸೌತ್‌ಬರೋ ೨೪೮, ೩೨೧
ಸೌನಪುರಿ ೨೩೨
ಸ್ಕಾಟಿಷ್ ೧೦೪, ೧೧೨, ೧೧೩
ಸ್ಕಾಟ್ಲೆಂಡ್ ೩, ೪, ೯೩, ೪೭೦
ಸ್ಕ್ರಿಬೇನಿಯ ೧೩
ಸ್ಕ್ರೀವೊಗೆಲ್ ೪೭೬
ಸ್ಟೋಕ್ಸ್ ೧೧೫, ೧೧೬
ಸ್ಟೋಯಿಕ್ ೪೩೮
ಸ್ಟ್ರಾಕ್ ೧೧೫
ಸ್ಟ್ರಾಸ್‌ಬರ್ಗ್ ೫
ಸ್ನೆಟೋನಿಯಸ್ ೧೨
ಸ್ಪೆಯಿನ್ ೯೪, ೯೮, ೯೯, ೪೩೯
ಸ್ಪ್ಯಾನಿಷ್ ೯೬, ೯೭, ೯೮, ೯೯, ೪೭೬
ಸ್ಮಿತ್ ೩, ೧೧೨, ೪೨೩, ೪೨೬, ೪೩೭, ೪೭೧
ಸ್ಮೃತಿ ೨೮೪
ಸ್ಯಾಂಗ್ ೨೩೦
ಸ್ಯಾನಿಟೋರಿಯಮ್ ೪೫೯
ಸ್ಯಾಮುಯೆಲ್ ೩೪೨
ಸ್ಲೀಮನ್ ೪೪೮
ಸ್ಲೇಟರ್ ೧೧೬
ಸ್ವರಾಜ್ ೩೦೫
ಸ್ವರ್ಗ ೯೮, ೨೧೮, ೨೧೯
ಸ್ವಾರ್ಟ್ಜ್ ೪೬೮
ಸ್ವಿಟ್ಜರ್ ೪೩೮
ಸ್ವೀಡನ್ ೪೧೩, ೪೩೮
ಸ್ವೀವರ್ಡ್ ೧೧೬

## ಹ

ಹಂದಿಮಾಂಸ ೧೪
ಹಕ್ ೨೩೨
ಹಕಚಾರ್ ೨೩೨
ಹಕಿಂ ೩೧೨
ಹಕೀಮ್ ೨೩೩
ಹಮ್ಮಿಂಗ್‌ಟನ್ ೧೧೫
ಹಯಾತ್ ೨೫೧
ಹರದಯಾಳ್ ೧೬೪

ಹರದಾಸಪುರ ೨೩೫
ಹರಪಾಲ್ ೫೫
ಹರಸಿ ೩೧೭
ಹರಿಗುಂಟ ೪೬೫
ಹರಿಚಂದ್ ೫೪
ಹರಿಜನ ೩೪, ೩೬, ೩೭, ೩೯, ೪೦, ೪೩, ೪೪, ೪೮, ೪೯, ೫೦, ೫೨, ೫೩, ೫೪, ೫೫, ೫೯, ೬೧, ೬೨, ೬೪, ೬೫, ೬೮, ೬೯, ೭೧, ೭೨, ೧೨೭, ೧೩೯, ೧೪೦, ೧೪೧, ೧೪೨, ೧೪೩, ೧೪೪, ೧೪೫, ೧೪೬, ೧೪೭, ೧೪೮, ೧೪೯, ೨೭೩, ೨೭೯, ೩೦೫, ೩೧೯, ೩೬೭, ೩೬೮, ೩೮೦, ೩೮೫, ೩೯೫, ೩೯೬, ೩೯೯, ೪೦೦, ೪೦೧
ಹರಿಜನೋದ್ಧಾರ ೪೬, ೩೮೫, ೪೦೦
ಹರಿದ್ವಾರ ೩೧೨
ಹರಿಯಾನಾ ೨೩೬
ಹರಿವಂಶ ೨೧೯
ಹರ್ರೈನ್ಯಾ ೨೩೫
ಹರ್ಕ್ಯುಲಸ್ ೧೦೯
ಹರ್ಗಾಂವ್ ೬೨
ಹರ್ಬರ್ಟ್‌ಕಾರ್ ೩೩೭, ೩೩೮
ಹಲ್ಲಮ್ ೪೫೧
ಹವಿಕಾ ೨೩೭
ಹಸಧೀರ ೨೨೯
ಹಸ್ತಪ್ರತಿ ೨೧೦, ೨೪೪, ೨೫೬, ೩೩೦, ೩೬೧, ೩೬೪, ೩೭೦, ೩೯೩, ೪೫೬
ಹಾಕಿನ್ಸ್ ೯೯
ಹಾರ್‌ಕರ್ ೨೩೩
ಹಾರ್ಕ್ನೆಸ್ ೧೧೫
ಹಾರ್ಟನ್ ೧೧೫
ಹಾರ್ನೆರೋಡ್ ೩೦೦
ಹಾಲ್ ೩೪೪, ೪೪೪
ಹಾಲೆಂಡ್ ೫
ಹಾಸ್ತಿವಾಲಿ ೨೩೨
ಹಿಂದುಸ್ತಾನ್ ೬೭
ಹಿಂದೂ ೩, ೫, ೭, ೮, ೯, ೧೧, ೨೨, ೨೩, ೨೪, ೨೫, ೨೬, ೨೭, ೨೮, ೨೯, ೩೦, ೩೨, ೩೩, ೩೪, ೩೫, ೩೬, ೩೭, ೩೯, ೪೦, ೪೩, ೪೪, ೪೫, ೪೬, ೫೦, ೫೧, ೫೨, ೫೩, ೫೪, ೫೫, ೫೬, ೫೭, ೫೮, ೬೨, ೬೫, ೬೬, ೬೮, ೬೯, ೭೫, ೯೧, ೧೦೬, ೧೦೭, ೧೦೮, ೧೧೧, ೧೧೨, ೧೧೩, ೧೧೪, ೧೧೫, ೧೧೮, ೧೧೯, ೧೨೦, ೧೨೧, ೧೨೬, ೧೨೮, ೧೩೦, ೧೩೧, ೧೩೩
ಹಿಂದೂಧರ್ಮ ೫೫, ೨೦೮, ೨೪೪, ೩೦೪, ೩೨೬
ಹಿಂದೂನಾಗರಿಕತೆ ೧೭೧
ಹಿಂದೂಸ್ತಾನ್ ೪೯, ೬೪, ೬೮
ಹಿರಾಮಾಜಿಯಾ ೨೨೮
ಹಿರಿನ್ಯ ೨೩೫
ಹೀನಜಾತಿ ೫೬, ೭೮
ಹುಂಕಾ ೬೭
ಹುಂಡಾ ೧೦೨
ಹುಂಡೋ ೨೩೨
ಹುಖಿ ೨೩೨
ಹುಸೇನ್ ೨೫೧
ಹೆಬರ್ ೪೭೪, ೪೭೫, ೪೭೬, ೪೭೭
ಹೆರಾಲ್ಡ್ ೫೩, ೪೧೩
ಹೆಸಿಯಾಡ್ ೧೨
ಹೇಯ್ಸ್ ೪೭೪
ಹೇಸ್ಟಿಂಗ್ಸ್ ೪೪೨
ಹೈಜಿನಸ್ ೧೩
ಹೈಟಿಯ ೯೭
ಹೈದರಾಬಾದ್ ೧೦
ಹೋದಾಲ್ ೫೭

ಹೋದಾಹ ೪೮
ಹೋಮರ್ ೧೨
ಹೋಮ್ಸ್ ೩೬
ಹೋಷಂಗಾಬಾದ್ ೪೯
ಹೋಸಿಯಾರಪುರ್ ೨೩೧
ಹ್ಯಾಂಡ್ ೧೧೬
ಹ್ಯಾಚರ್ ೧೧೫
ಹ್ಯಾದ್ರಿಯನ್ ೪೫೦
ಹ್ಯಾಮಂಡ್ ೩೫೭, ೩೫೮, ೩೬೬
ಹ್ಯಾರಿಯೆಟ್ ೧೭
ಹ್ಯಾರಿಸನ್ ೧೧೫
ಹ್ಯುಸೀನೀ ೨೨೬